Regd. No. M. 3619

ESTD. 1921 ಸ್ಥಾಪನೆ
31ನೆಯ ವರ್ಷ

7-8-1952

LICENCE No. 31
Licensed to Post without Prepayment

Founder. Sri A. B. Shetty
Minister for Medical & Public Health

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ

ಸಾರ್ವಜನಿಕ
ಆರೋಗ್ಯ ಮಂತ್ರಿ
ಶ್ರೀ.ಎ.ಬಿ.ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನವಯುಗ
ಪೋಸ್ಟ್ ಬಾಕ್ಸ್
ನಂಬ್ರ 22
ಉಡುಪಿ, ದ. ಕ.

ವಾರ್ಷಿಕ ಚಂದಾ
ರೂ. 5-12-0
6 ತಿಂಗಳಿಗೆ
ರೂ 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೪೮

NAVAYUGA WEEKLY Post Box No. 22 UDIPI.

Vol 31
No 48

ಮಧುಪರ್ಕ

ಕಾಶಿಯಲ್ಲಿ ಬ್ರಹ್ಮದತ್ತನು ರಾಜ್ಯಭಾರ ಮಾಡುತಿದ್ದನು. ನೆರೆ ರಾಜರೊಡನೆ ಆಗ ಘೋರ ಯುದ್ಧ ಸಂಭವಿಸಿತು.

ವೈರಿರಾಜನಲ್ಲಿ ಯುದ್ಧ ಶಿಕ್ಷಣ ಹೊಂದಿದ ಆನೆಯೊಂದಿತ್ತು. ಕಾಶಿಯ ಕೋಟೆಯ ಹೆಬ್ಬಾಗಿಲ ಬಳಿಗೆ ಅದು ಬರಲು, ಸೈನಿಕರು ಕುದಿಯುವ ದ್ರಾವಕಗಳನ್ನು ಅದರ ಮೇಲೆ ರಚಿಸಿದರು. ಶಸ್ತ್ರಾಸ್ತ್ರಗಳಿಂದ ತಿವಿದು, ಆನೆ ಹಿಮ್ಮೆಟ್ಟುವಂತೆ ಮಾಡಿದರು.

ಆಗ ಅದರ ಮಾವುತನು ಹುರಿದುಂಬಿಸಿದ—"ಎಲೈ ಹಸ್ತಿರಾಜ, ನೀನು ಮಹಾ ಸಾಹಸಿ! ಎಂದಮೇಲೆ, ವೀರೋಚಿತ ಕೃತ್ಯವನ್ನು ಮಾಡದೆ, ವಿಘ್ನಗಳಿಗೆ ಬಗ್ಗಿ ನಡೆಯುವಿಯಾ? ಛೆ, ಛೆ!"

ಇದರಿಂದ ನಾಚಿಗೊಂಡರೂ, ಮರುಕ್ಷಣಕ್ಕೆ ಆನೆಯು ಅದಮ್ಯ ಉತ್ಸಾಹದಿಂದ ಮುನ್ನುಗ್ಗಿತು. ಬಲವಾದ ಕೋಟೆಯ ಗೋಡೆಯನ್ನು ಕೆಡವಿ ಬಿಟ್ಟು ಕೃತಕೃತ್ಯವಾಯಿತು.

ಅತುಲ ಸಾಹಸ

ಈಜಬಲ್ಲವನನ್ನು ವಿಪುಲ ಜಲರಾಶಿಯು ಅಂಜಿಸಲಾರದು:—ನೀರಿಗೆ ಬಿದ್ದೊಡನೆಯೇ ಕೈಕಾಲು ಬಡಿದುಕೊಂಡು, ಪಾರಾಗಿ ದಡ ಸೇರುವನು. ಸಮುದ್ರದ ತೆರೆಯ ಮೇಲೂ ಅಂಥವನು ಅಧಿಪತ್ಯ ನಡೆಸಬಲ್ಲನು: ಅಷ್ಟು ಮಟ್ಟಿನ ಸಾಹಸಿ!

ಮಲಗುತ್ತಿರುವಾಗ "ಬೆಂಕಿ" "ಬೆಂಕಿ" ಎಂಬ ಬೊಬ್ಬೆ ಕೇಳಿಬಂದೊಡನೆಯೇ ನಾವೇನು ಮಾಡುತ್ತೇವೆ? —ಹಾಸಿಗೆಯಿಂದ ನೆಗೆದೆದ್ದು, ಅಗ್ನಿ ಜ್ವಾಲೆಯ ಬೇಗೆಯಿಂದ ಪಾರಾಗಲು ಓಡಿಹೋಗುತ್ತೇವೆ. ಆ ಗಳಿಗೆಗೆ ಬೇರೆಯವರೂ ನಮ್ಮ ಮನೆಯಲ್ಲಿರುವರೆಂಬ ನೆನಪು ಮರೆತುಹೋಗುತ್ತದೆ. ನಮ್ಮ ಪ್ರಾಣ ಉಳಿಸುವುದೊಂದೇ ಮಹಾ ಧ್ಯೇಯ: ಉರಿಯುವ ಬೆಂಕಿಯೆಡೆಯಿಂದ ಸುರಕ್ಷಿತ ಪಾರಾಗುವುದೂ ಮಹಾ ಸಾಹಸದ ಕಾರ್ಯ.

ಹೀಗೆ ಮೇಲಿನ ಉದಾಹರಣೆಗಳಲ್ಲಿ ಸ್ವಂತ ರಕ್ಷಣೆಯ ಉದ್ದೇಶದಿಂದಲೇ ಸಾಹಸದ ಕಾರ್ಯ ಜರಗಿದವು. ಎಂದ ಮಾತ್ರಕ್ಕೆ ಇವುಗಳ ಔಚಿತ್ಯದ ಬಗ್ಗೆ ಸಂದೇಹ ಪಡುವುದು ಅಗತ್ಯವಿಲ್ಲ. ಸ್ವಂತ ಜೀವದ ರಕ್ಷಣೆ ಮಾಡುವುದೂ, ಅದಕ್ಕೆ ಬೇಕಾದ ಶೌರ್ಯವಿರುವುದೂ ಬಹಳ ಅಪೇಕ್ಷಣೀಯ. ಆದರೆ ಇದಕ್ಕೂ ಮಿಕ್ಕಿದ ಬೆಲೆಯು ಇತರರ ರಕ್ಷಣೆಗಾಗಿ ಮಾಡುವ ಸಾಹಸಕ್ಕಿದೆ ಎಂಬುದು ನಿಶ್ಚಯ.

ಭವಭೂತಿಯು ಬರೆದೊಂದು ಪ್ರಸಂಗವನ್ನು ಇಲ್ಲಿ ಉಲ್ಲೇಖಿಸಬಹುದು: ದೇವೀ ಚಾಮುಂಡಿಯ ಸಮಕ್ಷಮದಲ್ಲಿ ಮಾಲತಿಯೆಂಬ ಸುಂದರ ಕನ್ಯೆಯನ್ನು ಬಲಿಕೊಯ್ಯುವವರಿದ್ದರು: ಆ ಕ್ಷಣ ಅವಳು ತನ್ನ ಪ್ರಣಯಿ ಮಾಧವನನ್ನು ನೆನೆದು "ಜನ್ಮಜನ್ಮಾಂತರಗಳಲ್ಲೂ ನಿನ್ನನ್ನೇ ಪತಿಯಾಗಿ ಪಡೆಯುವ ಭಾಗ್ಯ ನನ್ನದಾಗಲಿ! ಮಾಧವ, ನನ್ನ ಹೃದಯೇಶ್ವರ, ನನ್ನ ಮೃತ್ಯುವಿನ ಬಳಿಕವೂ ನಾನು ಬದುಕುಳಿಯುವೆನೆಂಬುದು ನಿಶ್ಚಯ: ಏಕೆಂದರೆ, ನಿನ್ನ ಮಧುರ ಪ್ರೇಮವು ಸದಾ ನನ್ನ ಸ್ಮರಣೆ ಮಾಡುತ್ತಿರುವುದು" ಎಂದುಕೊಂಡಳು. ಇದನ್ನು ಹೊರಗೆ ನಿಂತು ಕೇಳಿದ ಮಾಧವನು, ತಕ್ಷಣ ದೇವಿಯ ಗುಡಿಯನ್ನು ಹೊಕ್ಕು, ಬಲಿಕೊಡುತಿದ್ದ ಶಾಕ್ತನೊಡನೆ ಘೋರ ಯುದ್ಧಮಾಡಿ, ತನ್ನ ಪ್ರಣಯಿನಿಯ ರಕ್ಷಣೆ ಮಾಡಿದನು.

ಮಾಧವನು ಈ ಬಗೆಯ ಸಾಹಸವನ್ನು ತನಗಾಗಿಯೇ ತೋರಿಸಿದನು, ನಿಜ. ಆದರೆ ಇದರಿಂದೇ ಅವನ ಅತುಲ ಸಾಹಸದ ಕಾರಣವಾಗಿರಲಿಲ್ಲ. ಒಬ್ಬ ಅಸಹಾಯ ಸ್ತ್ರೀಗೆ ನೆರವು ನೀಡುವ ಉತ್ಕಟೇಚ್ಛೆಯೂ ಇದರೊಡನೆ ಸಮ್ಮಿಳಿತಗೊಂಡಿತ್ತು. ಆದುದರಿಂದ ಇದಕ್ಕೆ ಹೆಚ್ಚಿನ ವೈಶಿಷ್ಟ್ಯ.

ನಾವು ಜೀವನದ ಆಗುಹೋಗುಗಳನ್ನು ನಿರೀಕ್ಷಿಸಿದರೆ—ನಮ್ಮ ಕಣ್ಣುಗಳಿಂದಲೇ ಈ ಬಗೆಯ ಅನೇಕ ಘಟನೆಗಳನ್ನು ನೋಡಬಹುದು. ಭಯದ ಸೂಚನೆ ದೊರೆತೊಡನೆಯೇ ಬೇರೆಯವರ ರಕ್ಷಣಾರ್ಥ ಓಡಿಹೋಗುವ ಜನರು ಎಷ್ಟೋಮಂದಿ ಇರುವರು. ಸ್ವಂತ ಜೀವದ ಹಂಗನ್ನು ತೊರೆದು, ಅವರು ಭೀಷಣ ಸಾಹಸದಲ್ಲಿ ಧುಮುಕುವರು. ಅಗ್ನಿಶಾಮಕ ದಳದವರು ಅಗ್ನಿಯೊಡನೆ ಹೋರಾಡಲು ಹಿಂಜರಿಯುವುದಿಲ್ಲ. ಗಣಿಗಳಲ್ಲಿ ಗ್ಯಾಸುಗಳಿಂದ ಅಪಘಾತ ಸಂಭವಿಸಿದಾಗ—ಬಡಪಾಯಿ ಕೂಲಿಗಳ ರಕ್ಷಣೆಗೆ ಎಲ್ಲ ಕಾರ್ಮಿಕರೂ ಸೊಂಟ ಕಟ್ಟುವರು. ಭೂಕಂಪದಿಂದ ಕಟ್ಟಡಗಳು ಕುಸಿಯುತ್ತಿರುವಾಗ, ಸ್ವಯಂ ಸ್ಫೂರ್ತಿಯಿಂದಲೇ ಜನ ಸಾಹಸದಲ್ಲಿ ಧುಮುಕುವರು. ಪರದೇಶದ ಧಾಳಿಯಾದಾಗ ರಾಷ್ಟ್ರಾಭಿಮಾನಿಗಳೆಲ್ಲ ಒಟ್ಟಿಗೆ ಸೇರಿ ಆಕ್ರಮಣವನ್ನು ಎದುರಿಸುವರು. ಹೀಗೆ ಬಹಳ ಮಟ್ಟಿಗೆ ಸ್ವಂತ ರಕ್ಷಣೆಗಾಗಿ ಮತ್ತು ಪರರ ಹಿತಕ್ಕಾಗಿ ಎಂದು ಇಬ್ಬಗೆಯ ಸಾಹಸ ಕಾರ್ಯಗಳಿವೆ.

ಆದರೆ ಇನ್ನೂ ಒಂದು ತೆರನಾದ ಸಾಹಸವಿದೆ— ಮೇಲೆ ನಾವು ಕಂಡುದನ್ನು ಶಾರೀರಿಕ ಬಲದ ಪ್ರಾಧಾನ್ಯವಿರುವ ಸಾಹಸವೆಂದು ವರ್ಣಿಸಬಹುದು: ಮಾನಸಿಕ ಬಲವೇ ಮೂಲವಾಗಿರುವ ಸಾಹಸವು ಇವಕ್ಕಿಂತಲೂ ಹೆಚ್ಚು ಮಹತ್ವವುಳ್ಳದ್ದು. ರಾಮಾಯಣದಲ್ಲಿ ಅವಿವೇಕಿಗಳಿಂದ ಆವೃತನಾದ ರಾವಣನಿಗೆ ವಿಭೀಷಣನು ಹಿತವಾದವನ್ನು ನುಡಿಯುತ್ತಾನೆ—"ಅಣ್ಣಾ, ನೀವು ಸುಖ ಸಂತೋಷದಿಂದ ಇರಬಯಸುವಿರಾದರೆ, ಮತ್ತು ಸುಂದರವಾದ ಲಂಕೆಯ ಸಿಂಹಾಸನದ ರಕ್ಷಣೆ ಇಚ್ಛಿಸುವಿರಾದರೆ—ಸೀತಾ ಮಾತೆಯನ್ನು ಹಿಂದೆ ಕಳಿಸಿಕೊಡಿರಿ: ಅವಳು ಪರಸ್ತ್ರೀ; ಕಾರಣ ನಿಮಗವಳ ಮೇಲೆ ಅಧಿಕಾರವಿಲ್ಲ. ರಾಮನಬಳಿ ಸಾರಿ, ತಪ್ಪಿಗಾಗಿ ಕ್ಷಮೆ ಕೇಳಿರಿ. ದುಃಸಾಹಸಿಯೂ ದುರಭಿಮಾನಿಯೂ ಆಗಿ, ಬಾಳ್ವೆ ಕೆಡಿಸಿಕೊಳ್ಳಬೇಡಿರಿ."

ರಾವಣನು ಇದಕ್ಕೆ ಜಗ್ಗಲಿಲ್ಲ: ನೇತ್ರಗಳಿಂದ ಅಗ್ನಿಯನ್ನುಗುಳುತ್ತಾ, ಅವನು ವಿಭೀಷಣನನ್ನು ಶತ್ರುವೆಂದು ಜರಿದು ಭಂಗಿಸಿದ—ಎಡಕಾಲಿನಿಂದ ಒದ್ದು, "ನಡೆ" ಎಂದ.

ಮನಸ್ಸಿನಲ್ಲಿ ವ್ಯಥಿತನಾಗಿ ವಿಭೀಷಣನು ಅಲ್ಲಿಂದ ಎದ್ದು ಹೋದ— ಹೋಗುವಾಗ ಅಣ್ಣನಿಗೆ ಮರಳಿ ಹೇಳಿದ: "ಸ್ವಾಮಿ, ಪ್ರತಿಯೊಬ್ಬನ ಹೃದಯದಲ್ಲಿಯೂ ವಿವೇಕ ಮತ್ತು ಅವಿವೇಕ ಎರಡೂ ಮನೆಮಾಡಿವೆ: ವಿವೇಕದಿಂದ ಕೆಲಸಮಾಡುವವನು ಸುಖವುಣ್ಣುತ್ತಾನೆ. ಅವಿವೇಕದ ಬಲ ಹೆಚ್ಚಿದಲ್ಲಿ ದುಃಖ ಭೋಗಿಸುತ್ತಾನೆ. ನಿಮ್ಮ ಇನ್ನು ಮಂದಿ ಅನುಚರರು ನಿಮಗೆ ತಪ್ಪು ಸಲಹೆ ನೀಡುತ್ತಿರುವರು—ನೀವು ಕೂಡ ಅದರ ಔಚಿತ್ಯವನ್ನು ಪರೀಕ್ಷಿಸದೆ, ಅವಿವೇಕದೆಡೆಗೆ ಒಲವು ತೋರುತ್ತಿದ್ದೀರಿ. ಇದು ಸರ್ವಥಾ ಸಮಂಜಸವಲ್ಲ."

ತಿಲಮಾತ್ರವಾದರೂ ಭಯಗೊಳ್ಳದೆ, ರಾವಣನ ಕೋಪ ತಾಪಗಳಿಂದ ವಿಚಲಿತನಾಗದೆ—ಇಷ್ಟೆಲ್ಲ ಮಾತುಗಳನ್ನು ನಿರ್ದಿಷ್ಟ ರೀತಿಯಲ್ಲಿ ಹೇಳಿದ ವಿಭೀಷಣನ ಉದಾಹರಣೆ ಅನುಪಮ: ರಾವಣನ ಹಿಂಸೆಯನ್ನು ಸಹಿಸುವ ಶಾರೀರಿಕ ಸಾಮರ್ಥ್ಯ ವಿಭೀಷಣನಲ್ಲಿತ್ತು. ಜೊ

(೧೦ನೇ ಪುಟ ನೋಡಿರಿ)

ZANDU Mahayogaraja Guggula

ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ. 1 ತೊಲೆಗೆ ರೂ 3,- ಮಾತ್ರ.

ದೊರೆಯುವ ಸ್ಥಳಗಳು:
1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್. ಕೆಮಿಸ್ಟ್ಸ ಎಂಡ್ ಡ್ರಗ್ಗಿಸ್ಟ್ಸ. ಉಡುಪಿ
2 ಶ್ರೀ. ವಿ. ಪಿ ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್. ಎನ್. ಶರ್ಮ, ಹಜೂರು ರಸ್ತೆ ಮಂಗಳೂರು.
ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರಿ ಶರತ್ತು ವಗೈರೆಗಳಿಗೆ ಬರೆಯಿರಿ-

DAMODAR & CO.,
Nainiappa Naicken Street, Park Town—MADRAS 3.

ಸುಲಭದಲ್ಲಿ ಇಂಗ್ಲಿಷ್
ಆಂಗ್ಲ ಸ್ವಯಂಬೋಧಿನಿ

ಸಮೃದ್ಧಿಯ ರಾಜ್ಯ: ತಿರು-ಕೊಚ್ಚಿ

ರೊಕ್ಕದ ಪೈರೇ ಇಲ್ಲಿಯ ಮುಖ್ಯ ವೈಶಿಷ್ಟ್ಯ

ಭಾರತದ ನೈಋತ್ಯ ಭಾಗದಲ್ಲಿ ವಿಸ್ತರಿಸಿರುವ ತಿರು-ಕೊಚ್ಚಿ ರಾಜ್ಯವು ಆರ್ಥಿಕ ಮತ್ತು ಔದ್ಯೋಗಿಕ ಅಭಿವೃದ್ಧಿಗೆ ಹೆಚ್ಚಿನ ಸಲಕರಣೆ ಮತ್ತು ಅನುಕೂಲತೆಗಳಿಂದ ಕೂಡಿದೆ. ಇಲ್ಲಿ ರೊಕ್ಕದ ಪೈರಿಗೆ ಅತ್ಯಧಿಕ ಮಹತ್ವವನ್ನು ಕೊಡಲಾಗಿದೆ. ತೋಟಗಾರಿಕೆಯ ಮೂಲಕ ಯಶಸ್ವಿಯಾಗಿ ಬೆಳೆದ ಉತ್ಪನ್ನವನ್ನು ಲಾಭಪ್ರದವಾದ ರೀತಿ ಮಾರಾಟ ಮಾಡುವುದರಲ್ಲಿ ಇಲ್ಲಿಯ ಜನರದು ಎತ್ತಿದಕೈ. ವರ್ಷಕ್ಕೆ ಸುಮಾರು ಒಂದು ನೂರು ಕೋಟಿ ರುಪಾಯಿ ಬೆಲೆ ಬಾಳುವ ಸಾಮಗ್ರಿ ಇಲ್ಲಿಯ ಬಂದರುಗಳಿಂದ ವಿದೇಶಕ್ಕೆ ರಫ್ತಾಗುವ ಸಂಗತಿ ಕಡಿಮೆ ಮಹತ್ವದ್ದಲ್ಲ! ಭೌಗೋಲಿಕವಾಗಿಯೂ ಯೋಗ್ಯ ಅನುಕೂಲತೆಗಳಿರುವುದರಿಂದ-ವ್ಯವಸ್ಥಿತವಾದ ರೀತಿ ಪೈರನ್ನು ಬೆಳೆಯುವುದು ಸಾಧ್ಯವೆನಿಸಿದೆ. ಪ್ರಾಮುಖ್ಯವಾಗಿ ಗುಡ್ಡಗಾಡುಗಳ ತಪ್ಪಲಿನಲ್ಲಿ ಚಹಾ, ಕಾಫಿ, ರಬ್ಬರು, ಏಲಕ್ಕಿ, ಕರಿಮೆಣಸು ಮತ್ತು ಶುಂಠಿ ಬೆಳೆಯುತ್ತದೆ. ಬಯಲು ಭೂಮಿಯಲ್ಲಿ ಭತ್ತವೇ ಮುಖ್ಯ ವ್ಯವಸಾಯ. ಕರಾವಳಿಯಲ್ಲಿ ಉದ್ದಕ್ಕೂ ಮತ್ತು ಹಿನ್ನೀರಿನ ಪ್ರದೇಶದಲ್ಲೂ ತೆಂಗು, ಕಂಗು ಮತ್ತು ಗೇರುಬೀಜದ ಮರಗಳನ್ನು ಕಾಣುತ್ತೇವೆ. ಹೀಗೆ ಪ್ರಕೃತಿದತ್ತವಾದ ಸಮೃದ್ಧಿಯಿಂದ ಕೂಡಿದ ಈ ರಾಜ್ಯದಲ್ಲಿ ಕೊರತೆ ಏತರದು?

ಪ್ರಿಯವಾದ ಪೇಯ

ಜಗತ್ಪ್ರಸಿದ್ಧವಾದ ಕನನ್ ದೇವನ್ ಕಾಫಿಯ ಸ್ವಾದವನ್ನು ಸವಿಯದ ಜನ ನಮ್ಮಲ್ಲಿ ಹೆಚ್ಚು ಇರಲಿಕ್ಕಿಲ್ಲ: ಇದು ತಿರುಕೊಚ್ಚಿಯ ಉತ್ಪಾದನೆ. ಕಳೆದ ಹದಿನೈದು ವರ್ಷಗಳಲ್ಲಿ ಉತ್ಪಾದನೆಯಲ್ಲಾದ ಹೆಚ್ಚಳವನ್ನು ಕಂಡರೆ, ಕಾಫಿಯು ಹೆಚ್ಚು ಹೆಚ್ಚು ಜನಪ್ರಿಯವಾಗುತ್ತಾ ನಡೆದಿದೆ ಎಂಬುದು ತಾನಾಗಿ ವ್ಯಕ್ತವಾಗುತ್ತದೆ. ಸಮಸ್ತ ಭಾರತದಲ್ಲಿ ಕಾಫಿ ತೋಟದ ಪ್ರಮಾಣವು ಈ ಅವಧಿಯಲ್ಲಿ ಶೇಕಡಾ ಹನ್ನೆರಡರಷ್ಟು ಮಾತ್ರ ಹೆಚ್ಚಿದಾಗ, ತಿರುಕೊಚ್ಚಿಯಲ್ಲಿ ಅದು ಮೂರು ಪಟ್ಟು ಅಧಿಕಗೊಂಡಿತು! ಒಟ್ಟು ಉತ್ಪಾದನೆಯು ಭಾರತದಲ್ಲಿ ಒಂದುಮೂರನೇ ಅಂಶದಷ್ಟು ಹೆಚ್ಚಿಕೊಂಡಾಗ ಇಲ್ಲಿ ಒಂದೂವರೆ ಪಾಲು ಹೆಚ್ಚಿತು. ಇಷ್ಟಿದ್ದರೂ-೧೯೩೦ರ ಸುಮಾರಿನಲ್ಲಿ ಆದ ಉತ್ಪಾದನೆಯೊಡನೆ ಇದನ್ನು ಹೋಲಿಸುವುದೇ ಅನುಚಿತವೆಂದು ಈಗಲೂ ಅಭಿಪ್ರಾಯಪಡುತ್ತಾರೆ. ಅಂದಿನ ಸಮೃದ್ಧಿಯು ಮುಂದೆಂದಿಗೂ ಸಿದ್ಧಿಸದು ಎಂದು ನಿರಾಶೆಯೇ ಕವಿದಿದೆ.

ಕಾಫಿಯಂತೆ ಚಹಾ ಸೊಪ್ಪಿಗೂ ತಿರುಕೊಚ್ಚಿ ಖ್ಯಾತನಾಮವಾಗಿದೆ. ಹೆಚ್ಚಾಗಿ ೧೯೩೦ರ ಆರ್ಥಿಕ ಮುಗ್ಗಟ್ಟಿನಿಂದ ಸೋತು ಹೋದ ಕಾಫಿ ತೋಟಗಳೇ, ಚಹಾ ತೋಟಗಳಲ್ಲಿ ಪರಿವರ್ತನೆಗೊಂಡವೆನ್ನಬಹುದು. ಉತ್ತರ ಭಾರತದ ಚಹಾಗಿಂತಲೂ ಸಿಲೋನು ಚಹಾವನ್ನು ಇಲ್ಲಿಯದು ಹೋಲುತ್ತದೆ. ಹಿಂಗಾರು ಮತ್ತು ಮುಂಗಾರು ಎರಡೂ ಕಾಲದಲ್ಲಿ ಮಳೆ ಬೀಳುವುದರಿಂದ, ವರ್ಷವಿಡೀ ಸೊಪ್ಪನ್ನು ಕೊಯ್ಯುವ ಸೌಲಭ್ಯ ಈ ತೋಟಗಳಿಗಿದೆ. ಕಳೆದೆರಡು ದಶಕಗಳಲ್ಲಿ ಚಹಾ ವ್ಯವಸಾಯ ಕ್ಷೇತ್ರದ ಅಭಿವೃದ್ಧಿ ಗಮನೀಯವಿಲ್ಲದಿದ್ದರೂ-ಉತ್ಪಾದನೆಯು ಬಹಳ ವೃದ್ಧಿಗೊಂಡಿದೆ ಎಂಬುದನ್ನು ಒಪ್ಪಬೇಕು. ೧೯೩೦ರ ಸುಮಾರಿನಲ್ಲಿ ಎಕ್ರೆಗೆ ೪೦೦ ರಾತಲು ಬೆಳೆಯುತಿದ್ದ ಚಹಾ ೧೯೫೦ರ ಅವಧಿಯಲ್ಲಿ ೬೦೦ ರಾತಲಿಗೇರಿತೆಂಬುದು ಸುಲಭದ ಸಾಧನೆಯಲ್ಲ.

ರಬ್ಬರಿನ ತಾಯ್ನಾಡು

ಭಾರತದ ಅತ್ಯಂತ ಪ್ರಾಮುಖ್ಯವಾದ ರಬ್ಬರು ಉದ್ದಿಮೆಗಳಿಗೆ ತಿರುಕೊಚ್ಚಿಯೇ ತಾಯ್ನಾಡು. ಪೆಂಯಾರು ನದೀ ಪ್ರದೇಶದ ತಟ್ಟು ಕಾಡಿನಲ್ಲಿ ೧೮೭೭ರ ಸುಮಾರಿಗೆ ದಕ್ಷಿಣ ಅಮೇರಿಕೆಯ "ಪಾರಾ" ರಬ್ಬರು ಜಾತಿಯನ್ನು ಬೆಳೆಯುವ ತೋಟ ನಿರ್ಮಾಣಗೊಂಡಿತು. ಇಲ್ಲಿಯ ಮಣ್ಣು ಮತ್ತು ಹವೆ ಉಳಿದ ರಬ್ಬರು ಜಾತಿಗಿಂತ ಈ ವರ್ಗಕ್ಕೇನೇ ಹೆಚ್ಚು ಒಗ್ಗಿಕೊಂಡದ್ದು ಕಂಡುಬಂದಿದೆ. ರಬ್ಬರು ಉದ್ಯೋಗವು ಳ ಪ್ರಗತಿಯನ್ನು ಹೊಂದಿದ್ದು, ಭಾರತದ ಒಟ್ಟು ಉತ್ಪಾದನೆಯಲ್ಲಿ ಹತ್ತರಲ್ಲಿ ಒಂಭತ್ತು ಪಾಲು ಇಲ್ಲಿಂದಲೇ ಬರುತ್ತದೆ. ೧೯೫೧ನೇ ಇಸವಿಯ ಅಂಕ್ಯದಲ್ಲಿ ಸುಮಾರು ೧೩೬ ಸಾವಿರ ಎಕ್ರೆ ಜಾಗದಲ್ಲಿ ನಾಲ್ಕು ಕೋಟಿ ರಾತಲು ರಬ್ಬರು ಉತ್ಪಾದನೆಗೊಂಡಿತೆಂದು ಅಂದಾಜು ಮಾಡಿದ್ದಾರೆ.

ಅರಣ್ಯ ಸಂಪತ್ತು

ಈ ತೋಟಗಳ ನಡುವೆ ಇತರ ಉತ್ಪತ್ತಿಯನ್ನು ಮಾಡಿಕೊಳ್ಳುತ್ತಿರುವರು: ಇವುಗಳು ಹೆಚ್ಚಾಗಿ ಅರಣ್ಯದ ಸಂಪತ್ತು. ಕರಿಮೆಣಸು ಬೆಳೆಯುವ ತಿರುಕೊಚ್ಚಿಯ ಪ್ರದೇಶವು ಸುಮಾರು ೨೧ ಸಾವಿರ ಟನ್ನುಗಳಷ್ಟು, ಎಂದರೆ ಭಾರತದ ಒಟ್ಟು ಉತ್ಪಾದನೆಯ ಮುಕ್ಕಾಲಂಶದಷ್ಟನ್ನು, ಬೆಳೆಯುತ್ತದೆ. ಇದರಂತೆ ಗುಡ್ಡ ಬೆಟ್ಟಗಳ ಕಡಿದಾದ ತಪ್ಪಲುಗಳಲ್ಲಿ ಏಲಕ್ಕಿಯು ಬೆಳೆಯುತ್ತದೆ. ಭಾರತದ ಉತ್ಪಾದನೆಯ ಮೂರನೇ ಎರಡಂಶ ಇಲ್ಲಿಯೇ ಬೆಳೆಯುತ್ತದೆ. ಈಚೆಗೆ ಇದಕ್ಕೆ ದೊರೆಯುವ ದುಡ್ಡಿನ ಪರಮಾವಧಿ ಪ್ರಮಾಣದಿಂದ ಆಕರ್ಷಿತರಾಗಿ-ಕಾಡು ಪ್ರದೇಶಗಳಲ್ಲಿ ಏಲಕ್ಕಿಯ ತೋಟವನ್ನು ನಿರ್ಮಿಸುವ ಸಾಹಸಿಗರು ಹೆಚ್ಚಿದ್ದಾರೆ. ಅಲೆಪ್ಪಿ ಬಂದರದಿಂದ ಶ್ರೇಷ್ಠ ವರ್ಗದ ಏಲಕ್ಕಿಯನ್ನು ಐರೋಪ್ಯ ದೇಶಗಳಿಗೂ, ಸಾಮಾನ್ಯ ತರಗತಿಯದನ್ನು ಭಾರತದ ಇತರೆಡೆಗಳಿಗೂ ರಫ್ತು ಮಾಡುತ್ತಾರೆ. ಸರಕಾರದ ಸೊತ್ತಾಗಿ ಈ ವ್ಯಾಪಾರ ನಡೆಯುತಿದ್ದು-ಮಾಪಿಳ್ಳೆ ವರ್ತಕರು ಏಲಂನಲ್ಲಿ ಏಲಕ್ಕಿಯನ್ನು ವಹಿಸಿಕೊಂಡು, ವ್ಯವಹಾರ ಮಾಡುವುದು ವಾಡಿಕೆ.

ವರಮಾನದ ಮಾರ್ಗ

ಶುಂಠಿಗೂ ತಿರುಕೊಚ್ಚಿ ಹೆಸರಾಗಿದೆ--ಭಾರತದಲ್ಲಿಯೇ ಇಲ್ಲಿಯ ಶುಂಠಿ ಹೆಚ್ಚು ಒಳ್ಳೆಯದಂತೆ. ಸುಮಾರು ೧೭ ಸಾವಿರ ಟನ್ನುಗಳಷ್ಟು ಶುಂಠಿಯನ್ನು (ಭಾರತದ ಒಟ್ಟು ಉತ್ಪಾದನೆಯಲ್ಲಿ ೭೦%) ತಿರುಕೊಚ್ಚಿ ಬೆಳೆಯುತ್ತದೆ. ಹಾಗೆಯೇ ದಕ್ಷಿಣ ಅಮೇರಿಕದಿಂದ ವರದಾನವಾಗಿ ಭಾರತಕ್ಕೆ ಬಂದ ಗೇರು ಮರಗಳು, ಆರ್ಥಿಕ ದೃಷ್ಟಿಯಿಂದ ತುಂಬ ವರಮಾನವನ್ನು ತಂದಿದೆ. ಗೇರು ಬೀಜಕ್ಕೆ ವಿದೇಶಗಳಲ್ಲಿ ಹೆಚ್ಚು ಬೇಡಿಕೆ ಉಂಟಾದಂತೆ-ವಿಶಾಲವಾದ ತೋಟಗಳಲ್ಲಿ ಗೇರು ಮರಗಳು ಹಬ್ಬಿದುವು. ಯುದ್ಧಕ್ಕೆ ಮುಂಚೆ ಭಾರತದ ಉತ್ಪಾದನೆಯ ಒಂದು ಮೂರಂಶದಷ್ಟನ್ನು ತಿರುಕೊಚ್ಚಿ ಬೆಳೆಯುತಿತ್ತು. ಗೇರು ಬೀಜದ ರಫ್ತು ಬಹಳವಾಗಿ ಕ್ವಿಲೋನು ಬಂದರದ ಮೂಲಕ ಸಾಗುತ್ತದೆ. ಭಾರತದಲ್ಲಿ ತಾಂಬೂಲದ ಅಡಿಕೆಗೂ ಮಹತ್ವದ ಸ್ಥಾನವಿದೆ; ತಿರುಕೊಚ್ಚಿ ಇದನ್ನೂ ಬೆಳೆಯುತ್ತದೆ. ನಮ್ಮ ದೇಶದ ಉತ್ಪಾದನೆಯ ನಾಲ್ಕರಲ್ಲಿ ಒಂದಂಶ ಇಲ್ಲಿಯದೇ. ಕಲ್ಪವೃಕ್ಷಕ್ಕೂ ತಿರುಕೊಚ್ಚಿ ಪ್ರಖ್ಯಾತ: ಒಂದೊಂದೂ ನೂರರಿಂದ ಹತ್ತು ಸಾವಿರ ಕಾಯಿಯನ್ನು ತೆಗೆಯಬಹುದಾದ ತೆಂಗಿನ ಜಾತಿ ಇಲ್ಲಿದೆ. ಇಂಥ ಕೊಬ್ಬರಿಯಲ್ಲಿ ಎಣ್ಣೆಯಂಶವು ಅತ್ಯಧಿಕ (ಎಂದರೆ ೬೭%) ಪ್ರಮಾಣದಲ್ಲಿದೆ. ಈಗಿನ ಬೆಲೆಯನ್ನು ಗಮನಿಸಿ ಹೇಳುವುದಾದರೆ-ತೆಂಗಿನ ವ್ಯಾಪಾರವೊಂದರಿಂದಲೇ ತಿರುಕೊಚ್ಚಿಗೆ ನಲುವತ್ತು ಕೋಟಿ ರೂಪಾಯಿ ಆದಾಯವಿದೆ.

ಔದ್ಯಮಿಕ ಮುನ್ನಡೆ

ಕಚ್ಚಾ ಸರಕುಗಳಾಗಿ ದೊರೆಯಬಲ್ಲ ವಿಪುಲ ಸಾಮಗ್ರಿಗಳೂ, ಗುಡಿ ಕೈಗಾರಿಕೆಗೂ ಬೃಹತ್ ಉದ್ಯಮಕ್ಕೆ ಅನುಕೂಲವಾದ ವಾತಾವರಣವಿರುವುದೂ, ಅಗ್ಗದ ಕೂಲಿಯ ಅನುಕೂಲತೆ ಮತ್ತು ವಿದ್ಯುಚ್ಛಕ್ತಿ-ಇವೆಲ್ಲ ಒಟ್ಟಾಗಿ ತಿರುಕೊಚ್ಚಿಯನ್ನು ಔದ್ಯೋಗೀಕರಣದೆಡೆಗೆ ಮುಂದೂಡಿವೆ. ಔದ್ಯೋಗಿಕ ದೃಷ್ಟಿಯಿಂದ ರಬ್ಬರು ಪ್ರಥಮ ಪ್ರಾಶಸ್ತ್ಯವನ್ನು ಪಡೆಯುತ್ತದೆ: ಇದರೊತ್ತಿಗೆ ಗೇರುಬೀಜದ ಕಾರ್ಖಾನೆಗಳು ಬರುವುವು.

ತೆಂಗಿನ ಉತ್ಪತ್ತಿಗೆ ಹೇಳಿಸಿದ ರಾಜ್ಯ ತಿರುಕೊಚ್ಚಿಯೇ ಸೈ! ಭಾರತದಲ್ಲಿ ಕೊಬ್ಬರಿಯಿಂದ ಎಣ್ಣೆ ತೆಗೆಯುವ ಗಾಣಗಳ ಐದರಲ್ಲಿ ನಾಲ್ಕಂಶ ಇಲ್ಲಿವೆ ಎಂಬುದನ್ನು ಮರೆಯಲಾಗದು. ಸುಮಾರು ಒಂದು ಲಕ್ಷ ಟನ್ನಿನಷ್ಟು ತೆಂಗಿನ ನಾರು (ಕತ್ತ) ಇಲ್ಲಿ ಸಿದ್ಧವಾಗುತ್ತದೆ. ಒಂದು ಲಕ್ಷಕ್ಕೂ ಮಿಕ್ಕಿದ ಕುಟುಂಬಗಳಿಗೆ ಈ ಉದ್ಯೋಗವೇ ಜೀವನಾಧಾರ. ಗೃಹೋದ್ಯಮದ ಸ್ವರೂಪದಲ್ಲಿಯೂ ತೆಂಗಿನ ನಾರಿನ ಕೈಗಾರಿಕೆ ವಿಸ್ತರಿಸಿದೆ. ಕಾಲೊರಸುವ ಚಾಪೆಗಳು ಮತ್ತಿತರ ನೂರಾರು ಬಗೆಯ ನಿತ್ಯೋಪಯೋಗಿ ವಸ್ತುಗಳನ್ನು ಇಲ್ಲಿ ಸಿದ್ಧಗೊಳಿಸುವರು. ಅಲೆಪ್ಪಿ ಮತ್ತು ಕ್ವಿಲೋನುಗಳ ಆಸುಪಾಸು ತೆಂಗಿನ ನಾರಿನಿಂದಲೇ ಹೆಸರುಗಳಿಸಿದೆ.

ಇಷ್ಟಿದ್ದೂ ದಾರಿದ್ರ್ಯ

ಈ ಎಲ್ಲ ಉತ್ಪತ್ತಿಗಳನ್ನು ರಫ್ತುಮಾಡುವ ಬಂದರುಗಳಲ್ಲಿ ಕೊಚ್ಚಿ ಪ್ರಧಾನವಾದುದೆಂದು ಹೇಳುವುದೇ ಬೇಡ: ತೆಂಗಿನ ನಾರು ಮತ್ತದರಿಂದುಂಟಾದ ಸಿದ್ಧವಸ್ತುಗಳು, ಚಹಾ, ರಬ್ಬರು, ಗೇರುಬೀಜ, ಕಾಫಿ, ಕರಿಮೆಣಸು ಇಲ್ಲಿಯ ಮುಖ್ಯ ರಫ್ತು. ಸುಮಾರು ೧೨೭೬ ಲಕ್ಷ ರೂಪಾಯಿ ಬೆಲೆಯ ಚಹಾ ಮತ್ತು ೧೫೭೫ ಲಕ್ಷ ರೂಪಾಯಿ ಬೆಲೆಯ ಕರಿಮೆಣಸು ಇವೆರಡೇ ತಿರುಕೊಚ್ಚಿಯ ಈ ವರ್ಷದ ರಫ್ತಿನ ದರಲ್ಲಿ ದೂರಂಶವನ್ನು ಆಕ್ರಮಿಸಿದುವು. ಎರಡನೆ ಮಹಾ ಬಂದರವೆನಿಸಿದ ಅಲೆ ಕಾಫಿಯನ್ನು ಮತ್ತು ತೆಂಗು, ತೆಂಗಿ ನಾರು, ಏಲಕ್ಕಿ, ಕರಿಮೆಣಸು, ಶುಂ

ಉಡುಪಿ ಡಿ. ಮು. ಕೋರ್ಟಿನಲ್ಲಿ.

S. C. No. 220/1952

ಶಿವರಾಮ ಹೆಗ್ಡೆ ... ... ವಾದಿ

ಮತ್ತು

ಎ. ಟಿ. ನಾಥ್ ಅನಂದರಾಯರ ಮಗ
ಉಡುಪಿ ತಾಲೂಕು, ಪುತ್ತೂರು ಗ್ರಾಮದ ಗುಂಡಿಬೈಲು ... ಪ್ರತಿವಾದಿ,

ಇವರೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ--

ಪ್ರತಿವಾದಿಯು ವಾದಿಯಿಂದ ಪಡೆಕೊಂಡ ಉಂಡಿಗೆ ಮುಲ್ಲಿನಕ್ರಯದ ಐವೇಜು ವ ಅದಕ್ಕೆ ಮೇಲಣ ಬಡ್ಡಿ ಕೂಡ ವಸೂಲು ಕೇಳಿ ಮಾಡಿದ ಮೇಲ್ಕಂಡ ದಾವೆಯು ಪ್ರತಿವಾದಿಯ ನೋಟೀಸಿನ ಬಗ್ಗೆ 22-8-1952ಕ್ಕೆ ಇಡೋಣಾಗಿರುವದು. ಪ್ರತಿವಾದಿಗೆ ಆಕ್ಷೇಪ ಹೇಳತಕ್ಕದ್ದು ಇದ್ದರೆ ಆ ದಿವಸ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸೋಣಾಗಿದೆ.

Y. Dumanna Hegde.
Advocate for Plaintiff,
Udipi, 2-8-1952.

DO YOU KNOW?
THAT
THE VIJAYA BANK, LIMITED.

1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs. 10 lacks
3. Has granted an average dividend of 6% to the Shareholders for the past 20 years.
4. Has a net work of Branches in South Kanara and one each in Mercara and Fort, Bombay.
5. Offers attractive rates of interest on Deposits and Cash Certificates
6. Grants loans on easy terms to approved parties or on approved securities
7. Does afford full protection and rich return to all your monies.

ADOPT IT AS
"MY BANK"
THE VIJAYA BANK, LIMITED,
H. O., MANGALORE.

ವಿಶ್ವದಲ್ಲಿಯೇ ದೊಡ್ಡ ಮಟ್ಟಿನ ಅಣೆಕಟ್ಟು

ಭಾರತದ ಭಾಕರಾ ನಾಂಗಲಾ ಯೋಜನೆ

— ೧ —

ಹಿಮಾಲಯದ ಅಭೇದ್ಯ ಬಂಡೆಗಲ್ಲುಗಳನ್ನು ಕಡಿದು, ಎರಡು ವಿಶಾಲ ಸುರಂಗಗಳನ್ನು ಕೊರೆದಿದ್ದು—ಇವುಗಳ ಮೂಲಕ ಒಂದು ನದಿಯ ನೀರು ಬಹಳ ವೇಗದಿಂದ ಮುನ್ನುಗ್ಗಿ ಬರುತ್ತದೆ: ಸುರಂಗಗಳಿಂದ ಎಂಟು ಮೈಲ ಕೆಳಗಡೆ ಒಂದು ಗೊಂಡಾರಣ್ಯವಿದೆ. ಇಲ್ಲಿ ನೆಲದ ಅಡಿಯಲ್ಲಿ ಮನುಷ್ಯರು ಬರಹೋಗಲನುಕೂಲವಾಗುವಂತೆ ಮಾರ್ಗ ರಚಿಸಲಾಗಿದೆ- ಈ ಮಾರ್ಗದ ಮೇಲಿಂದ ನದಿಯು ಕಲಕಲರವದೊಡನೆ ಹರಿಯುತ್ತದೆ. ಈ ಸ್ಥಾನಗಳೇ—ದಿಲ್ಲಿಯಿಂದ ೨೨೦ ಮೈಲು ದೂರ ಉತ್ತರದಲ್ಲಿ ಪಂಜಾಬದ ಸರಹದ್ದಿನಲ್ಲಿರುವ ಭಾಕರಾ ಮತ್ತು ನಾಂಗಲ.

ಭಾಕರಾದ ಬಳಿಯಲ್ಲಿಯೇ ಸಟ್ಲೆಜ್ ನದಿಯು ನೈನಾದೇವಿ ಪರ್ವತಮಾಲೆಗಳನ್ನು ಕಡಿದು ಕೆಳಗಿನ ಮೈದಾನದ ಕಡೆಗೆ ಧುಮುಕಲು ಸಿದ್ಧವಾಗುತ್ತದೆ. ಭಾರತೀಯ ಇಂಜೀನಿಯರರು ಈ ಸ್ಥಾನದ ಸದುಪಯೋಗ ಪಡೆದುಕೊಂಡು ವಿಶ್ವದಲ್ಲಿಯೇ ದ್ವಿತೀಯ ಸ್ಥಾನ ಪಡೆಯುವ ಮಹತ್ವದ ಅಣೆಕಟ್ಟನ್ನು ಕಟ್ಟುವುದರಲ್ಲಿ ತೊಡಗಿದ್ದಾರೆ. ಅಮೇರಿಕಾದಲ್ಲಿ ಕೊಲೊರೆಡೋ ನದಿಯ ಬೋಲ್ಡರ್ ಅಣೆಕಟ್ಟಿನ ಬಳಿಕ ಬರುವಂಥದೇ ೬೮೦ ಅಡಿ ಎತ್ತರ, ೧೭೫ ಗಜ ಅಗಲದ ಭಾಕರಾ ಅಣೆಕಟ್ಟು.

— ೨ —

ಸಟ್ಲೆಜ್ ಮಳೆಗಾಲದ ನದಿ: ಮಳೆಗಾಲ ಕಳೆದ ಮೇಲೆ ನದಿಯಲ್ಲಿ ನೀರಿರುವುದೇ ಬಹಳ ಕಡಿಮೆ. ಆದುದರಿಂದ, ಅಣೆಕಟ್ಟನ್ನು ಕಟ್ಟಿ, ಮಳೆನೀರಿನ ಸಂಗ್ರಹಮಾಡಿ, ಕಾಲುವೆಗಳ ಮೂಲಕ ದೂರದೂರದ ಹೊಲಗಳಿಗೆ ನೀರೊದಗಿಸುವ ಪ್ರಯತ್ನ ಪಡಬೇಕಾಯಿತು ಇದರ ಜೊತೆಗೆ ೬೮೦ ಅಡಿ ಎತ್ತರದಿಂದ ಬೀಳುವ ಜಲಶಕ್ತಿಯನ್ನುಪಯೋಗಿಸಿ, ವಿದ್ಯುತ್ತನ್ನೂ ಉತ್ಪಾದಿಸಲಾಗುವುದು ಈ ಎರಡು ಉದ್ದೇಶಗಳನ್ನು ಸಾಧಿಸಲಿಕ್ಕೆ ಸುಮಾರು ೩೮,೦೦೦ ಎಕ್ರೆ ಕ್ಷೇತ್ರಫಲದ ಒಂದು ವಿಶಾಲ ಸಾಗರವನ್ನು ಕೃತ್ರಿಮ ರೂಪದಿಂದ ನಿರ್ಮಿಸಿದ್ದಾರೆ. ರಮ್ಯವಾದ ಪರ್ವತಾವಳಿಯಿಂದ ಆವೃತವಾಗಿರುವುದರಿಂದ ಈ ಮಹಾಸಾಗರ ಮನೋರಂಜನೆಯ ದೃಷ್ಟಿಯಿಂದಲೂ ಪ್ರೇಕ್ಷಣೀಯವೆನಿಸಿದೆ.

ಭಾಕರಾ ಅಣೆಕಟ್ಟಿನಿಂದ ಎಂಟು ಮೈಲುಗಳ ಕೆಳಗಡೆ ನಾಂಗಲ ಅಣೆಕಟ್ಟು ಇದೆ- ಇಲ್ಲಿ ಸಟ್ಲೆಜ್ ನದಿಯು ಮೂರು ಕವಲುಗಳಾಗಿ ಒಡೆದು-ಸುಮಾರು ೯೦ರಿಂದ ೧೦೦ ಅಡಿ ಎತ್ತರದಿಂದ ಕೆಳಗೆ ಧುಮುಕುತ್ತದೆ. ಈ ಅಣೆಕಟ್ಟು ೯೦ ಅಡಿ ಎತ್ತರವೂ ೯೫೫ ಅಡಿ ಅಗಲವೂ ಇದೆ. ಇದರ ಮೂಲಕ ಸಟ್ಲೆಜ್ ನದಿಯ ನೀರನ್ನು ಕಾಲುವೆಗಳಿಗೆ ಮುಟ್ಟಿಸಲಾಗುವುದು. ಒಂದು ಮಹಾ ಕಾಲುವೆಯು ಇಲ್ಲಿಂದ ನಲುವತ್ತು ಮೈಲು ದೂರದ ಟೋಪರ್ ವರೆಗೆ ಸಾಗುತ್ತದೆ: ಮತ್ತು ಅಲ್ಲಿಂದ ಕಾಲುವೆಗಳ ಬಲೆಯೇ ತೊಡಗುತ್ತದೆ. ಸುಮಾರು ೨೯೮೦ ಮೈಲುಗಳ ವರೆಗೆ ಕಾಲುವೆಗಳ ಮೂಲಕ ನೀರನ್ನು ಒಯ್ಯುವರು. ಮೊದಲು ಹೇಳಿದ ಮಹಾ ಕಾಲುವೆಯ ಪ್ರದೇಶದಲ್ಲಿ ಎರಡು ವಿದ್ಯುದುತ್ಪಾದನಾ ಕೇಂದ್ರಗಳು ನಿರ್ಮಾಣಗೊಳ್ಳುತ್ತವೆ-

— ೩ —

ಈ ಯೋಜನೆಗೆ ಸುಮಾರು ೧೫೬ ಕೋಟಿ ರುಪಾಯಿ ವೆಚ್ಚ ಬರುತ್ತದೆ: ಭಾರತದ ಔದ್ಯಮಿಕ ಪ್ರಗತಿ ಮತ್ತು ನೀರಾವರಿಯ ಹೆಚ್ಚಳವನ್ನು ಬಯಸಿ ತೊಡಗಿದ ಮೂರು ಮಹಾ ಯೋಜನೆಗಳಲ್ಲಿ ಇದು ಸರ್ವೋಚ್ಚ ಮಟ್ಟದ ಅಣೆಕಟ್ಟು: ಉಳಿದೆರಡು, ಪಶ್ಚಿಮ ಬಂಗಾಳದ ದಾಮೋದರ ನದೀ ಕಣಿವೆ, ಮತ್ತು ಒರಿಸ್ಸಾದ ಮಹಾನದೀ ಕಣಿವೆ (ಹಿರಾಕುಡ್) ಯೋಜನೆಗಳು. ಭಾಕರಾ—ನಾಂಗಲ ಯೋಜನೆ ಪೂರ್ತಿಗೊಂಡಾಗ-ಆದರಿಂದ ಕೃಷಿಯ ಮೇಲೆ ಬಹಳ ಹೆಚ್ಚು ಪ್ರಭಾವ ಬೀಳುವುದು ನಿಶ್ಚಯ. ಇಲ್ಲಿಯ ಕಾಲುವೆಗಳಿಂದಾಗಿ, ೭೦ ಲಕ್ಷ ಎಕ್ರೆ ಭೂಮಿ ನೀರುಣ್ಣುತ್ತದೆ: ಮತ್ತು ಇದರಿಂದಾಗಿ, ಹದಿಮೂರು ಲಕ್ಷ ಟನ್ನಿನಷ್ಟು ಅಧಿಕ ಆಹಾರೋತ್ಪಾದನೆಯಾಗುತ್ತದೆ. ಇದರ ಪರಿಣಾಮವಾಗಿ ಪ್ರಕೃತ ವಿದೇಶಗಳಿಂದ ಆಮದು ಮಾಡುತ್ತಿರುವ ಆಹಾರ ಧಾನ್ಯದಲ್ಲಿ ೫೬%ರಷ್ಟು ಕಡಿಮೆ ಮಾಡಬಹುದಾಗಿದೆ; ಪರದೇಶಕ್ಕೆ ಕೊಡುವ ೫೭ ಕೋಟಿ ರೂಪಾಯಿಯನ್ನು ದೇಶೋದ್ಧಾರದ ಕೆಲಸಕ್ಕೆ ವೆಚ್ಚ ಮಾಡಬಹುದಾಗಿದೆ-

ಅನ್ನಾಭಾವವನ್ನು ನೀಗಿಸುವುದರೊಡನೆ, ರೊಕ್ಕದ ಪೈರಿಗೂ ಪ್ರಾಧಾನ್ಯವನ್ನು ಕೊಡಲಾಗುವುದು. ಸಂಶೋಧನೆಗಳ ಫಲವಾಗಿ ಈ ಪ್ರದೇಶದಲ್ಲಿ ಉದ್ದೆಳೆಯ ಹತ್ತಿಯನ್ನು ಚೆನ್ನಾಗಿ ಬೆಳೆಯಬಹುದೆಂದು ಕಂಡುಬಂದಿದೆ- ಇದರಿಂದ ಎಂಟು ಲಕ್ಷ ಗಂಟುಗಳಷ್ಟು ಅರಳೆ ಪ್ರಾಪ್ತವಾದೀತು- ಹೀಗಾದಾಗ—ನೂಲು—ಬಟ್ಟೆಗಳಿಗಾಗಿ ವಿದೇಶಕ್ಕೆ ಕಳಿಸುವ ೨೧ ಕೋಟಿ ರುಪಾಯಿ ದೇಶದಲ್ಲಿಯೇ ಉಳಿಯುತ್ತದೆ.

ವಿದ್ಯುಚ್ಛಕ್ತಿಯ ಮಟ್ಟಿಗೆ-ನಾಲ್ಕು ಲಕ್ಷ ಕಿಲೋವಾಟುಗಳಷ್ಟನ್ನು ಇಲ್ಲಿ ಉತ್ಪಾದಿಸಲಾಗುವುದು, ಮೊದಮೊದಲಿಗೆ ಸುಮಾರು ೭೫ ನಗರಗಳ ಕಾರಖಾನೆಗಳಿಗಷ್ಟೆ ಶಕ್ತಿಯನ್ನು ಪೂರೈಸಿದರೂ, ಕ್ರಮೇಣ ಇದರ ಉಪಯೋಗ ಹೆಚ್ಚುವುದರಲ್ಲಿ ಸಂಶಯವಿಲ್ಲ ದಿಲ್ಲಿ ರಾಜ್ಯಕ್ಕೂ ಇಲ್ಲಿಂದ ವಿದ್ಯುಚ್ಛಕ್ತಿಯನ್ನು ಪೂರೈಸುವ ವಿಚಾರವಿದೆ. ವರ್ಷದಲ್ಲಿ ಐದಾರು ತಿಂಗಳು ಕಾಲವಾದರೂ—ಕೊಳವೆ ಬಾವಿಗಳನ್ನು ಕೆಲಸಕ್ಕೆ ಹಚ್ಚಲು ವಿದ್ಯುತ್ತನ್ನು ಬಳಸಬಹುದು. ಈ ರೀತಿಯ ವ್ಯವಸ್ಥೆಯಿಂದ-ಅಮೃತಸರ, ಜಲಂಧರಾ ಲುಧಿಯಾನಾ ಮುಂತಾದ ಜಿಲ್ಲೆಗಳಲ್ಲಿ ಕೃಷಿಗೆ ಸಾಕಷ್ಟು ಲಾಭ ವುಂಟಾಗುತ್ತದೆ. ಹೀಗೆ ನೀರಾವರಿ ವ್ಯವಸ್ಥೆಯ ಬಗ್ಗೆ ಖರ್ಚಾಗುತಿದ್ದ ೮೯ ಕೋಟಿ ರುಪಾಯಿ ಉಳಿಯುತ್ತದೆ.

— ೪ —

ಈ ಯೋಜನೆಯ ಚರಿತ್ರೆಯೂ ಮನೋಜ್ಞವಾಗಿದೆ: ೧೯೦೮ರಲ್ಲಿ ಮೊತ್ತಮೊದಲು ಈ ಯೋಜನೆಯನ್ನು ಮಾಡಲಾಯಿತು. ಆ ಸಮಯ ಪಂಜಾಬು ಅವಿಭಾಜ್ಯವಾಗಿತ್ತು. ಆದರೆ, ಆಗಿನ ಸರಕಾರಕ್ಕೆ ಅಣೆಕಟ್ಟಿನ ಬಗ್ಗೆ ಹಣ ವೆಚ್ಚಮಾಡುವುದು ಸರಿಕಾಣದಿದ್ದುದರಿಂದ, ಕೆಲಸವನ್ನು ತೊಡಗಲಿಲ್ಲ. ಎರಡನೆ ಮಹಾಯುದ್ಧದ ಬಳಿಕ, ಈ ಯೋಜನೆಯ ಕರಡನ್ನು ಪುನಃ ಪರಿಶೀಲಿಸಲಾಯಿತು. ಕಾರ್ಯವನ್ನು ತೊಡಗಿದರು. ಆದರೆ ದುರದೃಷ್ಟದಿಂದ-ಪಂಜಾಬು ಭಾರತ-ಪಾಕಿಸ್ತಾನಗಳಲ್ಲಿ ಹಂಚಿಹೋದುದರಿಂದ, ಮರಳಿ ಈ ಕೆಲಸಕ್ಕೆ ವಿಘ್ನ ಬಂತು

೧೯೪೮ರಲ್ಲಿ ಮೂರನೆಯ ಬಾರಿ ಈ ಯೋಜನೆಯನ್ನು ಕೈಗೆತ್ತಿಕೊಂಡರು. ಅಂದಿನಿಂದ ಇಂದಿನ ತನಕ ಕಾರ್ಯವು ಮುನ್ನಡೆಯುತ್ತಿದೆ. ಇದರಲ್ಲಿ ಭಾರತ ಸ್ಥಿತ ಪಂಜಾಬು, ರಾಜಸ್ಥಾನ ಮತ್ತು ಪೂರ್ವ ಪಂಜಾಬದ ಒಕ್ಕೂಟಗಳ ಕೈವಾಡವಿದೆ. ಈ ಯೋಜನೆಯಲ್ಲಿ ಈ ಮೂರು ರಾಜ್ಯಗಳ ಪಾಲು ಎಷ್ಟಿದೆಯೆಂಬ ಪ್ರಮಾಣವನ್ನು ಅನುಸರಿಸಿ ಕೇಂದ್ರ ಸರಕಾರವು ಅವುಗಳಿಗೆ ಸಾಲ ನೀಡಿದೆ.

ಅಣೆಕಟ್ಟಿನ ಯೋಜನೆ ಬಹಳ ವೇಗದಿಂದ ಮುನ್ನಡೆಯುತ್ತಿದೆ: ಭಾಕರಾದಲ್ಲಿ ಕೊರೆದ ಸುರಂಗಗಳು ಭಾರತೀಯ ಇಂಜೀನಿಯರರ ಕೌಶಲ್ಯವನ್ನು ಸ್ಪಷ್ಟವಾಗಿ ಸಾರುತ್ತವೆ; ಅವರ ಕಾರ್ಯ ಚಾತುರ್ಯದ ಪ್ರತೀಕದಂತಿವೆ. ವಿಶ್ವದಲ್ಲಿ ಬೇರೆಲ್ಲಿಯೂ ನಾವು ಇಷ್ಟು ಚಿಲೋದಾದ ಸುರಂಗಗಳನ್ನು ನೋಡಲಾರೆವು ನಾಂಗಲ ಯೋಜನೆಯು ಈಗೇನು, ಮುಗಿಯುವ ಎತ್ತುಗಡೆಯಲ್ಲಿದೆ ಎನ್ನುತ್ತಾರೆ.

ಭಾರತದ ಅಭ್ಯುದಯವನ್ನು ದೃಷ್ಟಿಯಲ್ಲಿಟ್ಟುಕೊಂಡು ನಡೆಯುವ ಈ ಬಗೆಯ ರಚನಾತ್ಮಕ ಕಾರ್ಯಕ್ಕೆ ಸರ್ವ ವಿಧದಿಂದಲೂ ನೆರವಾಗುವುದು ನಮ್ಮ ಕರ್ತವ್ಯ. ಹಿಂದಿನ ಕಾಲದಲ್ಲಿ ದೇಶವೆಲ್ಲ ಸುಖ ಸಮೃದ್ಧಿ ನೆಲೆಸಿದಾಗ, ಗುಡಿಗೋಪುರಗಳನ್ನು ಕಟ್ಟಿಸಿ, ಜನ ಸಂಸ್ಕೃತಿಯನ್ನು ಬೆಳೆಸಿದರು. ಆದರೆ ಇಂದು ಹೊಟ್ಟೆಗೇ ತತ್ವಾರವಾಗಿರುವಾಗ —ನಾವು ಅಣೆಕಟ್ಟುಗಳನ್ನು, ಕಾಲುವೆಗಳನ್ನು, ವಿದ್ಯುದುತ್ಪಾದನಾ ಕೇಂದ್ರಗಳನ್ನು ಮುಂತಾಗಿ ನಿರ್ಮಿಸುವುದು ಮುಖ್ಯ ಮುಂದಿನ ಪೀಳಿಗೆಯವರ ದೃಷ್ಟಿಯಲ್ಲಿ ಇವುಗಳಿಗಿರುವ ಮಹತ್ವ ಎಷ್ಟಕ್ಕೂ ಕಡಿಮೆಯಲ್ಲ.

ಮುಂತಾದುವನ್ನು ನಿರ್ಯಾತ ಮಾಡುತ್ತದೆ. ಕ್ವಿಲೋನ್ ಬಂದರದ ಮೂಲಕ ಪೋರ್ತುಗೀಜ ಪೂರ್ವ ಆಫ್ರಿಕಾದಿಂದ ಗೇರು ಬೀಜಗಳು ಆಮದಾಗುತ್ತವೆ- ಅವನ್ನೊಡೆದು, ತಿರುಳನ್ನು ರಫ್ತಿಗೆ ಸಿದ್ಧಗೊಳಿಸಿದ ಬಳಿಕ, ಇದೇ ಬಂದರದಿಂದ ಸಂಯುಕ್ತ ರಾಜ್ಯ ಅಮೇರಿಕೆಗೆ ಆಗಸ್ಟದಿಂದ ಮೇ ತಿಂಗಳ ವರೆಗೆ ಹಡಗದ ಮುಖಾಂತರ ಕಳಿಸುತ್ತಾರೆ.

ಒಟ್ಟಾರೆ ಹೇಳುವುದಾದರೆ- ಭಾರತದಲ್ಲಿಯೇ ತಿರು-ಕೊಚ್ಚಿಯು ಸಮೃದ್ಧವಾದ ರಾಜ್ಯ: ರೊಕ್ಕದ ಪೈರಿಗೆ ಹೇಳಿಸಿದ ಈ ರಾಜ್ಯದಲ್ಲಿ ಜನರು ಮಾತ್ರ ಬಡತನದಿಂದ ಕಂಗೆಟ್ಟಿರುವುದನ್ನು ನಂಬುವುದೇ ಕಷ್ಟವಾಗುತ್ತದೆ.

ದೇವರ ದಯೆ

ಅಕ್ಕಪಕ್ಕಗಳಲ್ಲಿ ರೆಕ್ಕೆಗಳಿದ್ದ ದೇವದೂತರು ನಮ್ಮನ್ನು ಕೈಹಿಡಿದು ಮುನ್ನಡೆಸುತ್ತಿದ್ದ ಕತೆ ಹಿಂದಿನ ಕಾಲದ ಸಂಗತಿ ಇದನ್ನು ದೇವರ ದಯೆ ಎಂಬುದಾಗಿ ಆಗ ಜನರು ಕೊಂಡಾಡುತ್ತಿದ್ದರು

ದೇವರ ದಯೆ ಈಗಲೂ ಇದೆ. ಆದರ ಸ್ವರೂಪದಲ್ಲಿ ಮಾತ್ರ ಪರಿವರ್ತನೆಯಾಗಿದೆ ಸ್ವರ್ಗದಿಂದ ದೇವದೂತರು ಇಳಿದು ಬಂದು ತಮ್ಮನ್ನು ಸುಧಾರಿಸಬೇಕೆಂದು ವಿವೇಕಿಗಳು ಈಗ ಅಪೇಕ್ಷಿಸುವುದಿಲ್ಲ ಈಗ ದೇವರ ದಯೆಯಿಂದ ನಮಗೆ ಅವಶ್ಯವೆನಿಸಿದ ವಿಮಾ ಸೌಲಭ್ಯವಿದೆ. ಇಂದೇ ವಿಮೆ ಇಳಿಸಿ, ನಿಮ್ಮ ಮತ್ತು ನಿಮ್ಮ ಕುಟುಂಬದ ರಕ್ಷಣೆಯನ್ನು ಮಾಡಿಕೊಳ್ಳಿರಿ. ತನ್ನ ರಕ್ಷಣೆ ತಾನು ಮಾಡಿಕೊಳ್ಳಬಲ್ಲವನನ್ನು ದೇವರು ಕೈಬಿಡುವುದಿಲ್ಲ

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ. ಸ್ಥಾಪನೆ: ೧೯೩೫
ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ ಕಂಪೆನಿ
The Canara Mutual Assurance Co. Ltd.
Head Office: UDIPI, S. INDIA. ESTD: 1935

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತಿದೆ, ಒಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಯಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ತೆರಿಗೆಯ ಸೂಚನೆಗಳು

ಅಭಿವೃದ್ಧಿ ಯೋಜನೆಗಳಿಗಾಗಿ ಸಾಲ

ಶಾಸನ ಸಭಾಧಿವೇಶನ

ಮದ್ರಾಸು ಶಾಸನ ಸಭೆಯ ಪ್ರಸ್ತುತದ ಅಧಿವೇಶನವು ಕಳೆದ ಬುಧವಾರ ದಿನ ಕೊನೆಗೊಂಡು ಐದು ವಾರಗಳ ವರೆಗೆ ಮುಂದುವರಿಯಿತು. ಸಪ್ಟಂಬರ ಆರನೇ ತಾರೀಕಿಗೆ ಮರಳಿ ಅಧಿವೇಶನವು ಸೇರುವುದು. ಈ ಅಧಿವೇಶನದ ವಿಮರ್ಶೆ ಮಾಡಿ ಹೇಳುವುದಾದರೆ, ನಮ್ಮ ರಾಜ್ಯದ ಮಟ್ಟಿಗೆ ಇದು ತೀರಾ ಸಂದಿಗ್ಧ ಕಾಲವಾಗಿತ್ತು. ಶಾಸನ ಸಭೆಯಲ್ಲಿ ಮುಂಗಡ ಪತ್ರದ ಚರ್ಚೆ ನಡೆಯಬೇಕಾಗಿತ್ತು. ಸರಕಾರವನ್ನು ಬೆಂಬಲಿಸುವವರ ಸಂಖ್ಯಾ ಪ್ರಮಾಣವೂ ಅಸ್ಥಿರವಾಗಿತ್ತು. ಕಾಂಗ್ರೆಸು ಸದಸ್ಯರ ಸಂಖ್ಯೆಯು ವಿರೋಧೀ ಗುಂಪಿನವರಿಗಿಂತ ಕಡಿಮೆಯಾಗಿದ್ದುದರಿಂದ ಈ ಅಂಜಿಕೆಗೆ ಆಸ್ಪದ ದೊರೆಯಿತು. ಆರಂಭದಲ್ಲಿ—ರಾಜಾಜಿ ತನ್ನ ಸರಕಾರದ ಮೇಲೆ ಸಭೆಗೆ ಪೂರ್ಣ ವಿಶ್ವಾಸವಿದೆ ಎಂಬ ಠರಾವನ್ನು ಮುಂದಿಟ್ಟರು. ಸುದೈವದಿಂದ ಅದಕ್ಕೆ ಬಹು ಜನರ ಬೆಂಬಲ ದೊರೆತುದರಿಂದ—ಮುಂಗಡ ಪತ್ರದ ಮೇಲಿನ ಚರ್ಚೆಯಲ್ಲಿ ಸರಕಾರದ ಪಾಲಿಗನೇ ಜಯ ದೊರೆಯಿತು. ವೆಚ್ಚದ ಪಟ್ಟಿಯನ್ನು ವಿವರವಾಗಿ ಚರ್ಚಿಸಿದ ಬಳಿಕ ಎಲ್ಲ ಕಡಿತದ ಸೂಚನೆಗಳನ್ನೂ ತಿರಸ್ಕರಿಸಿ, ಸಭೆಯು ಬೇಡಿಕೆಯನ್ನು ಮಂಜೂರು ಮಾಡಿತು. ಸದಸ್ಯರು ಎಷ್ಟೋ ಉಪಯುಕ್ತ ಸಲಹೆಗಳನ್ನು ನೀಡಿದರು; ವಿರೋಧೀ ಗುಂಪಿನವರು ಸರಕಾರದೊಡನೆ ಸಹಕಾರ ಭಾವವನ್ನು ತಳೆಯಲಿಲ್ಲವಾದರೂ— ಪ್ರಶಾಂತ ವಾತಾವರಣದಲ್ಲಿ ಸಭೆಯ ಕಾರ್ಯಕಲಾಪಗಳನ್ನು ನಡೆಯಗೊಟ್ಟರು. ತೀಕ್ಷ್ಣವಾದ, ಬಿಸಿಬಿಸಿಯಾದ ಚರ್ಚೆ ಮತ್ತು ಉಗ್ರವಾದ ಟೀಕೆಗಳು ನಡೆದರೂ—ಜನಸಾಮಾನ್ಯರ ಹಿತದ ಸದುದ್ದೇಶವು ಎಲ್ಲರ ಮುಂದಿತ್ತು. ಈ ಮಟ್ಟಿಗೆ ನಾವು ಭಾಗ್ಯಶಾಲಿಗಳೆನ್ನಬೇಕು.

ಕೊರತೆ ತುಂಬುವ ಸೂಚನೆ

ಕಳೆದ ಅಧಿವೇಶನದಲ್ಲಿ ಸರಕಾರದ ವೆಚ್ಚದ ಕೇಳಿಕೆಗಳಿಗೆ ಸಭೆಯ ಸಮ್ಮತಿ ದೊರೆತರೂ— ಆದಾಯದ ಬಾಬಿನಲ್ಲಿ ಇನ್ನೂ ಏನೊಂದೂ ನಿರ್ಣಯಕ್ಕೆ ಬಂದಿಲ್ಲ. ಮುಖ್ಯವಾಗಿ ಮುಂಗಡ ಪತ್ರದ ಕೊರತೆಯನ್ನು ಹೊಸ ತೆರಿಗೆಗಳಿಂದ ಭರ್ತಿಮಾಡುವ ಸಂಗತಿಯು ಈಗ ಅರ್ಧದಲ್ಲಿಯೇ ಉಳಿದಿದೆ. ಪೆಟ್ರೋಲಿನ ಕರವನ್ನು ಗೆಲನಿಗೆ ನಾಲ್ಕಾಣೆಯಿಂದ ಆರಾಣೆಗೇರಿಸುವ ಗವರ್ನರರ ಆರ್ಡಿನೆನ್ಸಿನ ಸ್ಥಾನದಲ್ಲಿ ತಂದ ಅದೇ ಆಶಯದ ಸೂಚನೆಯನ್ನು ಸಭೆಯು ಅಂಗೀಕರಿಸಿತು. ಆದರೆ ವಿರೋಧಿ ಗುಂಪಿನವರಿಂದ ಈ ಸೂಚನೆಯನ್ನು ತರುವುದಕ್ಕೆ ಆಕ್ಷೇಪ ಮುಂದು ಮಾಡಲ್ಪಟ್ಟಿತು. ಇಂಥ ಸೂಚನೆಯು ಘಟನೆಯ ಆದೇಶಕ್ಕೆ ಅನುಗುಣವಾಗಿಲ್ಲೆಂದೂ, ಪೆಟ್ರೋಲು ತೆರಿಗೆಯ ವಿಧಾನವನ್ನೆ ಬದಲಾಯಿಸಬೇಕೆಂದೂ ಪ್ರತಿಪಾದಿಸಲಾಯಿತು. ರಾಜಾಜಿ ಇದು ಘಟನಾತ್ಮಕವಾಗಿದೆ ಎಂದು ವಿವರಿಸಿದ ಬಳಿಕವೇ ಸಭೆಯು ತೆರಿಗೆ ಸೂಚನೆಯನ್ನು ಚರ್ಚೆಗೆ ತೆಗೆದುಕೊಂಡಿತು. ಬಜೆಟಿನ ಕೊರತೆಯನ್ನು ತುಂಬುವುದಕ್ಕೆ ಅತ್ಯಂತ ಸಹಾಯಕವಾದ ಮೂರು ಹೊಸ ತೆರಿಗೆಯ ಸೂಚನೆಗಳನ್ನು ಪರಿಶೀಲಕ ಸಮಿತಿಗೆ ಒಪ್ಪಿಸಲಾಗಿದೆ. ಬಸ್ ಪ್ರಯಾಣಿಕರ ಮೇಲೆ ಪ್ರತಿ ಮೈಲಿಗೆ ಒಂದು ಪೈಯಂತೆ ಸರ್ ಚಾರ್ಜನ್ನು ವಸೂಲು ಮಾಡುವ ಸೂಚನೆಯೇ ಇವುಗಳಲ್ಲಿ ಮಹತ್ವದ್ದೆಂದು ಹೇಳಬಹುದು. ಭೂಕಂದಾಯದ ಮೇಲೆ ಸರ್ ಚಾರ್ಜನ್ನು ಹೊರಿಸುವ ಹಾಗೂ ನೀರಾವರಿಯಿಂದ ಪ್ರಯೋಜನ ಹೊಂದಿದ ಭೂಮಿಗಳ ಮೇಲೆ ಹೆಚ್ಚು ತೆರಿಗೆ ಹೊರಿಸುವ ಎರಡು ಸೂಚನೆಗಳು ಆ ಬಳಿಕ ಬರುವುವು. ವಿರೋಧೀ ಗುಂಪಿನವರ ವಾದವು ಹೊಸ ತೆರಿಗೆಯೇ ಬೇಡವೆಂಬಲ್ಲಿ ವರೆಗೆ ಮುಟ್ಟಿದೆ.

ವಿವಂಚನೆ ಬೇಡ

ಇದನ್ನು ಎಷ್ಟರ ಮಟ್ಟಿಗೆ ಸಮಂಜಸವೆಂದು ಹೇಳಲು ಬರುವಂತಿಲ್ಲ, ಹೊಸ ತೆರಿಗೆಗಳು ನಮಗೆ ಭೀತಿಯನ್ನುಂಟು ಮಾಡಿದರೂ, ಸರಕಾರದ ಹೇಳಿಕೆಯಂತೆ, ಅವುಗಳನ್ನು ಹೊರಿಸದೆ, ಅಭಿವೃದ್ಧಿ ಕಾರ್ಯಗಳನ್ನು ನಡೆಸಲು ಬರುವುದಿಲ್ಲ. ರಾಜಾಜಿ ಹೇಳಿದಂತೆ,"ಸಭೆಯು ಸೂಕ್ಷ್ಮವಾಗಿ ಪರಿಶೀಲಿಸಿ, ಪ್ರತಿಯೊಂದೂ ಬಗೆಯ ವೆಚ್ಚಕ್ಕೆ ಅನುಮತಿಯನ್ನು ಕೊಟ್ಟಿದೆ. ಅಷ್ಟುವೆಚ್ಚವಾಗ ಬೇಕೆಂದಿರುವಾಗ, ತಕ್ಕ ಆದಾಯವೂ ಸರಕಾರಕ್ಕೆ ಇರಬೇಡವೇ ಮುಂಗಡ [illegible] ಂಡು ಬಂದಿದೆ. ಆದುದರಿಂದ ಹೊಸ ತೆರಿಗೆಗಳ ಸೂಚನೆ ತಾರದೆ ವಿಧಿಯಿಲ್ಲವಾಯಿತ.

"ವಿರೋಧಿ ಗುಂಪಿನವರು ಇನ್ನೊಂದು ವಾದವನ್ನು ಮುಂದಿಟ್ಟಿದ್ದಾರೆ: ಬಜೆಟಿನಲ್ಲಿ ತೋರಿಸಲಾದ ಆದಾಯದ ಪ್ರಮಾಣವು ಬಹಳ ಕಡಿಮೆ ನಿಜಕ್ಕೂ ಇಲ್ಲಿ ತೋರಿಸಿದುದಕ್ಕಿಂತ ಹೆಚ್ಚು ಆದಾಯ ಬರುವುದು. ಮಾರಾಟ ತೆರಿಗೆಯ ಮೇಲಿನ ಆದಾಯದ ಅಂದಾಜು ನಿಶ್ಚಯವಾಗಿಯೂ ಕಡಿಮೆ ಇದೆ. ಹೀಗೆ ಬೇಕೆಂದೇ ಕಡಿಮೆ ಆಯವನ್ನು ತೋರಿಸಿ, ಹೊಸ ತೆರಿಗೆಗಳ ಭಾರವನ್ನು ಜನತೆಯ ಮೇಲೆ ಹೊರಿಸುವುದು ಸಮವಲ್ಲ. ಈ ಆಕ್ಷೇಪಕ್ಕೂ ಸರಕಾರದ ಪರವಾಗಿ ಯೋಗ್ಯ ಉತ್ತರವನ್ನು ಕೊಡಲಾಗಿದೆ: ನಿಜವಾಗಿ ಕಡಿಮೆ ಆದಾಯವನ್ನು ಬಜೆಟಿನಲ್ಲಿ ತೋರಿಸಲಾಗಿಲ್ಲ. ಒಂದು ವೇಳೆ ಪರಿಸ್ಥಿತಿ ಸುಧಾರಿಸಿ, ಸದಸ್ಯರು ಹೇಳುವಂತೆ, ವರ್ಷಾಂತ್ಯದಲ್ಲಿ ಹೆಚ್ಚು ಆದಾಯ ಬಂದುದು ಕಂಡುಬಂದರೆ, ಸಂತೋಷವೇ ಸೈ. ಅದನ್ನು ಎಂದಿಗೂ ದುರುಪಯೋಗಗೊಳಿಸುವುದಿಲ್ಲ; ಅಥವಾ ದುಂದುಗಾರಿಕೆಯನ್ನೂ ಮಾಡುವುದಿಲ್ಲ ಬರುವ ವರ್ಷದ ಮುಂಗಡ ಪತ್ರದಲ್ಲಿಯಾದರೂ— ಜನರ ಮೇಲೆ ಹೆಚ್ಚಿನ ಭಾರ ಬೀಳುವುದು ತಪ್ಪೀತ.

ಮಿತ ವ್ಯಯದ ಪ್ರತ್ಯಕ್ಷಾನುಭವ

ಹೀಗೆ ಆಶ್ವಾಸನೆಯು ದೊರೆತಿದೆಯಾಗಿ— ನಾವು ಭಯ ವಿಹ್ವಲರಾಗಬೇಕಿಲ್ಲ. ಅಲ್ಲದೆ, ಸರಕಾರವು ವೈಯಕ್ತಿಕವಾದ ನಿತ್ಯ ಖರ್ಚುಗಳಿಗೆ ಹಣವನ್ನು ವಿನಿಯೋಗಿಸುವಾಗ ಬಹಳ ಜಾಗರೂಕತೆಯಿಂದ ವರ್ತಿಸುವ ಭರವಸೆಯು ನಮಗಿದೆ ರಾಜಾಜಿ ಹಿಂದೆಯೇ ಹೇಳಿದ್ದಾರೆ: ಸರ್ದಾರ ಪಟೇಲ ಮತ್ತು ನನ್ನನ್ನು ಮೀರಿಸಿದ ಮಿತವ್ಯಯಿಗಳಿಲ್ಲ ಎಂಬುದಾಗಿ ಇದರ ಪ್ರತ್ಯಕ್ಷಾನುಭವವು ಈಗಾಗಲೇ ಕಂಡು ಬಂದಿದೆ: ಆಹಾರ ಧಾನ್ಯಗಳ ವಿನಿಯಂತ್ರಣದ ಪರಿಣಾಮವಾಗಿ, ಆಡಳಿತ ಯಂತ್ರವನ್ನು ಪುನರ್ಘಟಿಸುವ ಆಲೋಚನೆಯು ಸರಕಾರಕ್ಕೆ ಇದೆ. ಆಹಾರ ಶಾಖೆಯನ್ನು ಮುಂದುವರಿಸುವ ಅಗತ್ಯವಿದೆಯೇ ಹೇಗೆ ಎಂಬುದೀಗಿನ ಪ್ರಶ್ನೆ. ಇದರ ಜೊತೆಗೆ ಆಡಳಿತದಲ್ಲಿ ಕಾರ್ಯ ಕ್ಷಮತೆ ಹೆಚ್ಚಲಿಕ್ಕೂ— ಮಿತವ್ಯಯವುಂಟಾಗಲಿಕ್ಕೂ ತಕ್ಕುದಾದ ಕ್ರಮಗಳನ್ನು ಕೈಗೊಳ್ಳುವ ವಿಚಾರವೂ ಸರಕಾರಕ್ಕಿದೆ. ಇವನ್ನು ಪರಿಶೀಲಿಸಿ ವರದಿ ಮಾಡಲು ಒಬ್ಬ ಮುಖ್ಯಾಧಿಕಾರಿಯನ್ನು ಈಗಾಗಲೇ ನೇಮಿಸಿರುವರು.

ಮೇಲಾಗಿ ಹೊಸ ತೆರಿಗೆಗಳಲ್ಲಿ ಮುಖ್ಯವಾದ ಮೂರು ಸೂಚನೆಗಳು ಪರಿಶೀಲಕ ಸಮಿತಿಯ ಕೈಗೆ ಹೋಗಿವೆ: ಸಮಿತಿಯಲ್ಲಿ ವಿರೋಧಿ ಗುಂಪಿನ ಸದಸ್ಯರ ಸಂಖ್ಯೆಯೂ ಸಾಕಷ್ಟು ಇದೆ. ಸಮಿತಿಯು ಪೂರ್ಣ ವಿಚಾರ ವಿನಿಮಯ ಮಾಡಿ, ಯೋಗ್ಯ ನಿರ್ಣಯಕ್ಕೆ ಬರುವುದೆಂಬಲ್ಲಿ ಅನುಮಾನವಿಲ್ಲ.

ಸರಕಾರಗಳ ಸಾಲ

ಎಷ್ಟೇ ಮಿತವ್ಯಯವನ್ನು ಸಾಧಿಸಿದರೂ ರಾಜ್ಯದ ಮೂಲಭೂತ ಆವಶ್ಯಕತೆಗಳನ್ನು ಕಡೆಗಣಿಸಲು ಬರುವುದಿಲ್ಲ: ತೆರಿಗೆಗಳು ಬೇಡವೆಂದು ಹೇಳುವ ಜನರೇ, ಸುಖ ಸೌಕರ್ಯಗಳು ಹೆಚ್ಚಬೇಕೆಂದು ಕೇಳುತ್ತಾರೆ. ಈ ದ್ವಂದ್ವದ ಇಕ್ಕಟ್ಟಿನಲ್ಲಿ ಸಿಕ್ಕ ಸರಕಾರ ನರಳಬೇಕಾಗುತ್ತದೆ. ಪ್ರಜಾ ಪ್ರಭುತ್ವದ ಪದ್ಧತಿಯ ಪ್ರಕಾರ ಈ ವೇದನೆಯನ್ನೂ ಆನಂದವೆಂದು ಗ್ರಹಿಸಿ ಸ್ವೀಕರಿಸಬೇಕು. ಪಂಚವಾರ್ಷಿಕ ಯೋಜನೆಯು ಘಾಂತಟ ಮುಂದಿದೆ: ಅಂತಿಮ ವರದಿಯು ಈ ಮಾಸಾಂತ್ಯದಲ್ಲಿ ಪ್ರಕಟವಾಗುವ ನಿರೀಕ್ಷೆ ಇದೆ. ಈಗಾಗಲೇ ಬೇರೆ ಬೇರೆ ಸರಕಾರಗಳು ಕೈಗೊಂಡಿರುವ

ದಕ್ಷಿಣ ಕನ್ನಡಾ ಎಡಿಶನಲ್ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ.

ಸ್ಮಾಲ್ ನಂಬ್ರ 16/1952.

ಅಬ್ದುಲ್ ಖಾದರ್ ಬ್ಯಾರಿ —ವಾದಿ.

ಮತ್ತು

1 ದಾಸು ಶೆಟ್ಟಿ, 2. ಗಿರಿಯ ಶೆಟ್ಟಿ, 3. ತ್ಯಾಗರಾಜ ಶೆಟ್ಟಿ, 4. ರಾಮಪ್ಪ ಶೆಟ್ಟಿ, 5. ಸಂಜೀವ ಶೆಟ್ಟಿ —ಪ್ರತಿವಾದಿಗಳು.

ಇವರೊಳಗೆ.

5ನೇ ಪ್ರತಿವಾದಿ ಮಂಗಳೂರು ತಾಲ್ಲೂಕು ಸೂರತ್ಕಲ್ ಗ್ರಾಮದಲ್ಲಿರುವ ಕೊಲ್ಲು ಯಾನೆ ಅಕ್ಕಮ್ಮ ಶೆಡ್ತಿ ಮಗ ಸಂಜೀವ ಶೆಟ್ರಿಗೆ—

ಪ್ರತಿವಾದಿಯು ಮತ್ತು ಮೃತಪಟ್ಟ ಕೊಲ್ಲು ಯಾನೆ ಅಕ್ಕಮ್ಮ ಶೆಡ್ತಿ ಕೂಡಿ ವಾದಿಗೆ ತಾ. 30-5 1949ರಲ್ಲಿ ರೂ 600/-ಕ್ಕೆ ಬರಕೊಟ್ಟ ಡಿ ಪ್ರೋ. ನೋಟು ಪ್ರಕಾರ ಅಸಲು ಬಡ್ಡಿ ಆದ ರೂ 690/-ನ್ನು ಪ್ರತಿವಾದಿಯಿಂದಲೂ, ಸದ್ರಿ ಮೃತ ಸದ್ರಿ ಕೊಲ್ಲು ಯಾನೆ ಅಕ್ಕಮ್ಮ ಶೆಡ್ತಿಯ ಸೊತ್ತಿನಿಂದಲೂ ವಸೂಲು ಮಾಡಿಕೊಳ್ಳುವರೆ ವಾದಿಯು ದಾಖಲು ಮಾಡಿದ ಮೇಲ್ಕಂಡ ದಾವೆಯು ತಾ. 26-8-52ಕ್ಕೆ ಪ್ರಥಮ ತನಿಖೆಗೆ ಇಟ್ಟಿರುತ್ತದೆಂದೂ ಆ ದಿವಸ 5ನೇ ಪ್ರತಿವಾದಿಯು ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗದಿದ್ರೆ ಎಕ್ಸಪಾರ್ಟಿಯಾಗಿ ತೀರ್ಮಾನಿಸಲ್ಪಡುವದೆಂದೂ ಈ ಮೂಲಕ ತಿಳಿಸಲಾಗುತ್ತದೆ.

(By order of the Court)

Srinivasa Rao, P.
B A B L
Advocate. Mangalore

Mangalore. 1-8-52.

Applications are invited from local influencial persons for the post of Regional Manager. on Rs. 300/-P.M. plus other facilities Educated persons with good connections and organising ability and who can invest Rs 501/-need only apply Interview at your own cost Applications must be addressed to Divisional Manager, M/S Purnima Pictures, Ltd., Mahathma Gandhi Road Chikmagalur, (Mysore State.)

ನೀವೇಕೆ ಸೇವಿಂಗ್ಸ್‌ಬೇಂಕ್ ಖಾತೆಯನ್ನು ತೆರೆಯಬೇಕು?

ಆರ್ಥಿಕ ವಹಿವಾಟಿಗೆ ಇದೊಂದು ಅತ್ಯುತ್ತಮ ಸಾಧನ ನಿಮ್ಮ ಸಂಬಳ, ಆಯವನ್ನೆಲ್ಲಾ ಸೇವಿಂಗ್ಸ್ ಬೇಂಕು ಲೆಕ್ಕಕ್ಕೆ ಜಮೆಮಾಡಿರಿ; ಸಲಬೇಕಾದುದನ್ನು, ವ್ಯಯವನ್ನು ಚೆಕ್ಕುಗಳ ಮೂಲಕವೇ ಪಾವತಿ ಮಾಡಿರಿ ಆಗ ನಿಮಗೆ ನಿಮ್ಮ ಆಯವ್ಯಯದ ಸಂಪೂರ್ಣ ತಿಳಿವಳಿಕೆಯುಂಟಾಗುವುದು ನಿಮ್ಮ ಪಾಸ್ ಪುಸ್ತಕವೇ ನಿಮಗಿದನ್ನು ತಿಳಿಸುವುದು ಆರ್ಥಿಕ ವ್ಯವಹಾರದಲ್ಲಿ ಇಷ್ಟು ನೈಜ ಮತ್ತು ಅನುಕೂಲಕ್ರಮ ಬೇರೊಂದಿಲ್ಲ ಮಾತ್ರವಲ್ಲ ಈ ಚೊಕ್ಕ ಹಾಗೂ ಆಧುನಿಕ ರೀತಿಯ ವ್ಯವಹಾರ ಕ್ರಮದಿಂದ ನಿಮ್ಮ ಮನಸ್ಸಿಗೆ ಗೌರವ—ಸಂತೃಪ್ತಿಗಳುಂಟಾಗುವುವು.

ದಿ ಕೆನರಾ ಇಂಡಸ್ಟ್ರಿಯಲ್
ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ.

The Canara Industrial & Banking Syndicate Limited.

Estd: 1925 H. O: UDIPI.

ಪರಿಶೀಲಕ ಸಮಿತಿಗೆ

ಸ್ಥಾನಬದ್ಧತೆಯ ಕುರಿತು ನೆಹರೂ

ಅಭಿವೃದ್ಧಿ ಯೋಜನೆಗಳನ್ನು ಮುಂದುವರಿಸುವುದಕ್ಕೆ ಹಣದ ಅಡಚಣೆಯೊದಗಿದೆ. ಇದನ್ನು ಮನಗಂಡ, ರಿಜರ್ವ್ ಬ್ಯಾಂಕಿನ ಮತ್ತು ಕೇಂದ್ರದ ಸಲಹೆಯನ್ನು ಪಡೆದುಕೊಂಡು, ನಾಲ್ಕು ರಾಜ್ಯ ಸರಕಾರಗಳು ಜನರಿಂದ ಸಾಲವನ್ನೆತ್ತಲು ನಿರ್ಧರಿಸಿವೆ. ಮದ್ರಾಸು ಸರಕಾರವು ಐದು ಕೋಟಿ ರೂಪಾಯಿಗಳನ್ನು ಸಾಲ ಎತ್ತುವುದು. ಮುಂಬಯಿ, ಪಶ್ಚಿಮ ಬಂಗಾಳ ಮತ್ತು ಉತ್ತರ ಪ್ರದೇಶದ ಸರಕಾರಗಳೂ ಈ ಬಗೆಯ ಸಾಲವನ್ನು ಪಡೆಯುವುವು. ಒಟ್ಟು ಹನ್ನೆರಡೂವರೆ ಕೋಟಿ ರೂಪಾಯಿಯನ್ನು ಸಾಲ ತೆಗೆದು, ವಿವಿಧ ಯೋಜನೆಗಳನ್ನು ಪೂರ್ಣಗೊಳಿಸಲು ನೋಡಲಾಗುವುದು. ಈ ಸಾಲದ ಅವಧಿಯು ಹನ್ನೆರಡು ವರ್ಷ: ಬಡ್ಡಿಯ ದರವನ್ನೂ ಹೆಚ್ಚಿಸಿದ್ದು, ಅದು ಶೇಕಡಾ ನಾಲ್ಕರಷ್ಟಿದೆ. ಮುಂಬಯಿ ಮತ್ತು ಪಶ್ಚಿಮ ಬಂಗಾಳದ ನೂರು ರೂಪಾಯಿ ಸಾಲ ಪತ್ರಗಳು ಅಷ್ಟೇ ಬೆಲೆಗೆ ಕೊಡಲ್ಪಟ್ಟರೆ, ಮದ್ರಾಸ ರಾಜ್ಯದ ಸಾಲಪತ್ರವು ನಾಲ್ಕಾಣೆ ಕಡಿಮೆಗೆ, ಉತ್ತರ ಪ್ರದೇಶದ್ದು ಎಂಟಾಣೆ ಕಡಿಮೆಗೆ ಕೊಡಲ್ಪಡುವುದು. ಸರಕಾರದ ಆಧಾರ ಪತ್ರಗಳ ಬೆಲೆಯಲ್ಲಿ ಈಗೀಗ ಅನಿಶ್ಚಿತ ರೂಪದಲ್ಲಿ ಏರಿಳಿತಗಳುಂಟಾಗುವುದನ್ನು ಕಂಡ, ಬ್ಯಾಂಕು ಮುಂತಾದ ಆರ್ಥಿಕ ವ್ಯವಹಾರದ ಸಂಸ್ಥೆಗಳೂ, ಸಾಮಾನ್ಯ ಜನರೂ ಕೂಡಿಯೇ ವಿವಂಚನೆಗೊಳಗಾಗಿದ್ದಾರೆ. ಆದರೂ ಸರಕಾರದ ಆದಾಯದ ಭದ್ರತೆ ಮತ್ತು ಬಡ್ಡಿ ಏರಿಕೆಯ ಆಕರ್ಷಣೆಯಿಂದಾಗಿ— ಈ ಸಾಲಗಳು ಬೇಗನೇ ತುಂಬಿಬಿಡುವುದು ಸಹಜ.

ನಾಗರಿಕನ ಪಾಲು

ಜೊತೆಗೆ ಈ ಬಾರಿಯ ಸಾಲಗಳಿಗೆ ಹೊಸ ವೈಶಿಷ್ಟ್ಯವನ್ನು ಆರೋಪಿಸಲಾಗಿದೆ: ಮದ್ರಾಸು ಮುಖ್ಯಮಂತ್ರಿ ರಾಜಗೋಪಾಲಾಚಾರಿಯವರು ಆಕಾಶವಾಣಿ ಭಾಷಣ ಮಾಡಿ, ಸಾಮಾನ್ಯ ಜನರೂ ಸರಕಾರದೊಡನೆ ಸಹಕರಿಸಿ, ಬೇಕಾದ ಹಣ ಸಹಾಯವನ್ನು ನೀಡಿ, ರಾಜ್ಯದ ಅಭಿವೃದ್ಧಿಯಲ್ಲಿ ಪಾಲುಗಾರರಾಗಬೇಕೆಂದು ಕೇಳಿಕೊಂಡರು. ಇಷ್ಟರವರೆಗೆ ವಿಮಾ ಕಂಪನಿಗಳಿಗೂ ಬ್ಯಾಂಕುಗಳಿಗೂ ದೊಡ್ಡ ದೊಡ್ಡ ಬಂಡವಾಳಿಗರಿಗೂ ಮಾತ್ರ ಅನ್ವಯಿಸುತ್ತಿದ್ದ ಈ ಪದ್ಧತಿಯು ಈ ಸಲ ಜನಸಾಮಾನ್ಯರ ಮುಂದೆ ಉಪಸ್ಥಿತಗೊಂಡಿತು. ಪ್ರಜಾಪ್ರಭುತ್ವ ಪದ್ಧತಿಯಂತೆ— ಸರಕಾರವು ಜನತೆಯದೇ ಆಗಿರುವುದರಿಂದ, ಜನತೆಯೇ ಮುಂದುವರಿದು ಈ ಸಾಲ ಪತ್ರಗಳನ್ನು ಕೊಂಡುಕೊಳ್ಳಬೇಕೆಂದು ನುಡಿದದ್ದು ಬಹಳ ಸಮಂಜಸ. ಒಬ್ಬ ಸಾಮಾನ್ಯ ನಾಗರಿಕನು ನೂರು ರೂಪಾಯಿಯ ಸಾಲ ಪತ್ರವನ್ನು ಕೊಂಡುಕೊಂಡರೆ— ಆ ಶಕ್ತಿ ಅವನಲ್ಲಿ ನಿಶ್ಚಯವಾಗಿಯೂ ಇದೆ— ಅವನ ಹೊಟ್ಟೆಗೆ ಹೆಚ್ಚಿನ ತೃಪ್ತಿಯೊದಗಿದಂತೆ, ಅಂಥ ಸಾವಿರಾರು ನಾಗರಿಕರ ಸಹಕಾರದಿಂದ ಸರಕಾರದ ಅಡಚಣೆಯೂ ದೂರಾಗುವುದು. ಜನತೆಯೊಡನೆ ನಿಕಟ ಸಂಪರ್ಕವನ್ನು ಇಟ್ಟುಕೊಂಡ, ಸರಕಾರವೇ ಜನತೆಯಂ [illegible] ಹೇರಿರಬೇಕು. ಮದ್ರಾಸು ರಾಜ್ಯದಲ್ಲಿ ಈ ಸಾಲವನ್ನು ನೀರಾವರಿ ಹಾಗೂ ವಿದ್ಯುಚ್ಛಕ್ತಿಯ ಯೋಜನೆಗಳಿಗಾಗಿ ವ್ಯಯಿಸಲಾಗುವುದೆಂದು ರಾಜಾಜಿ ಹೇಳಿದ್ದಾರೆ.

ಆಹಾರದ ಆಯಾತ

ಆಹಾರ ವಿನಿಯಂತ್ರಣದಿಂದ ಬೆಲೆ ಏರಿದೆ ಎಂಬ ದೂರು ಬಂದಿದೆ: ಬಹಿರಂಗ ಪೇಟೆಯಲ್ಲಿ ಈಗಿನ ಬೆಲೆಯು ನಿಯಂತ್ರಿತ ಬೆಲೆಗಿಂತ ಹೆಚ್ಚಿಗಿದೆ ಎಂಬುದೂ ಸತ್ಯ. ಹಾಗೆಂದು ಇದೇ ಸಮಯದಲ್ಲಿ—ಕಳೆದ ವರ್ಷ ಕಾಳಸಂತೆಯಲ್ಲಿ ಆಹಾರ ಧಾನ್ಯಗಳ ಬೆಲೆ ಎಷ್ಟು ಹೆಚ್ಚಿಗಿತ್ತು ಎಂಬುದನ್ನು ನೆನೆಸಿದರೆ, ಈಗಿನ ಬೆಲೆಗಳು ತುಂಬ ಸಮಾಧಾನಕರವಾಗಿವೆ ಎಂಬುದು ನಿಸ್ಸಂದೇಹ. ಬಡವರಿಗೆ ಕಷ್ಟ ಹೆಚ್ಚಿದೆ ಎಂಬ ಮಾತು ಸರಿಯಲ್ಲ. ನಿಯಂತ್ರಣವಿದ್ದಾಗ, ಪೇಟೆ ಪಟ್ಟಣಗಳಲ್ಲಿ ಮಾತ್ರ ಸರಕಾರದ ಅಂಗಡಿಯಿಂದ ಕಾರ್ಡುದಾರರಿಗೆ ಅಕ್ಕಿ ಹಂಚಲಾಗುತ್ತಿತ್ತು. ಹಳ್ಳಿಯಲ್ಲಿ ಆ ಸೌಲಭ್ಯವಿರಲಿಲ್ಲ. ಈಗ ವಿನಿಯಂತ್ರಣದ ಪರಿಣಾಮವಾಗಿ— ಹಳ್ಳಿಹಳ್ಳಿಗಳಲ್ಲೂ ಯೋಗ್ಯ ಬೆಲೆಯ ಅಂಗಡಿಗಳನ್ನು ವಿಸ್ತರಿಸಲಾಗಿದೆ. ಮೊದಲಿನ ರೇಶನು ಅಂಗಡಿಗಳು ಯೋಗ್ಯ ಬೆಲೆಯ ಅಂಗಡಿಗಳೆಂಬ ಹೊಸ ಹೆಸರಿನಿಂದ— ನಿಯಂತ್ರಿತ ದರದಲ್ಲಿ ಅಕ್ಕಿಯನ್ನು ಪೂರೈಸುತ್ತಿವೆ, ಗೋಧಿ ಮುಂತಾದ ಧಾನ್ಯಗಳ ಬೆಲೆಯನ್ನು ಸರಕಾರವೇ ಕಡಿಮೆ ಮಾಡಿದೆ. ಹೀಗೆ ಪರಿಸ್ಥಿತಿಯು ತುಂಬ ಸುಧಾರಿಸಿದ್ದು ಕಂಡು ಬಂದಿದೆ— ಈ ಆಶಾಪೂರ್ಣ ವಾತಾವರಣದಿಂದ ಉತ್ತೇಜಿತಗೊಂಡೆಂಬಂತೆ, ಭಾರತ ಸರಕಾರವು ವಿದೇಶಗಳಿಂದ ತರಿಸುವ ಆಹಾರಧಾನ್ಯಗಳ ಪ್ರಮಾಣವನ್ನು ಬರುವ ವರ್ಷ ೨೫ ಲಕ್ಷ ಟನ್ನುಗಳಿಗೆ ಇಳಿಸುವುದೆಂದು ಆಹಾರ ಮಂತ್ರಿ ಕಿದ್ವಾಯಿ ಹೇಳಿದ್ದಾರೆ. ಈ ವರ್ಷ ಮೊದಲು ೪೮ ಲಕ್ಷ ಟನ್ನುಗಳ ಬೇಡಿಕೆಯನ್ನು ಮುಂದೆ ಮಾಡಿದ್ದರೂ. ಈಗ ಅದನ್ನು ೪೦ ಲಕ್ಷ ಟನ್ನುಗಳಿಗೆ ಇಳಿಸಲಾಗಿದೆ. ಮುಂಬಯಿ ಮತ್ತು ಪಶ್ಚಿಮ ಬಂಗಾಳಗಳನ್ನು ಬಿಟ್ಟರೆ, ಉಳಿದೆಲ್ಲ ರಾಜ್ಯಗಳು ಸ್ವಾವಲಂಬಿಯಾಗುವುವೆಂದವರ ನಿರೀಕ್ಷೆ.

ಪರಿಶೀಲಕ ಸಮಿತಿಯ ವರದಿ

ಲೋಕಸಭೆಯಲ್ಲಿ ಕಾಶ್ಮೀರ ವಿಷಯ ಚರ್ಚೆ ನಡೆಯಬೇಕಿದ್ದ ಸಮಯವನ್ನು ಮುಂದು ಹಾಕಿ, ಪ್ರತಿಬಂಧಕ ಸ್ಥಾನಬದ್ಧತೆಯ ಮಸೂದೆಗೆ ಜೀವದಾನ ಮಾಡುವ ಕುರಿತು ಚರ್ಚೆ ನಡೆಯಲು ಎಡೆ ಮಾಡಿ ಕೊಡಲಾಗಿದೆ. ಪರಿಶೀಲಕ ಸಮಿತಿಯು ತನ್ನ ವರದಿಯಲ್ಲಿ ಮಹತ್ತರವಾದ ಮಾರ್ಪಾಟುಗಳೇನನ್ನೂ ಮಾಡಲಿಲ್ಲ. ಸ್ಥಾನಬದ್ಧನಿಗೆ ಆದಷ್ಟು ಬೇಗನೇ ಅವನ ಬಂಧನದ ಕಾರಣಗಳನ್ನು ತಿಳಿಸಬೇಕೆಂದಿದ್ದುದನ್ನು ಐದು ದಿನಗಳೊಳಗೆ ಎಂದು ನಿರ್ದಿಷ್ಟಗೊಳಿಸಲಾಗಿದೆ, ಸಲಹಾ ಮಂಡಳಿಗೆ ಸ್ಥಾನಬದ್ಧ ಪ್ರಕರಣವನ್ನು ಕಳಿಸುವುದಕ್ಕೆ ಇದ್ದ ಆರು ವಾರಗಳ ಅವಧಿಯನ್ನು 20 ದಿನಗಳಿಗೆ ಇಳಿಸಲಾಗಿದೆ. ಅಂಥ ಸಲಹಾ ಮಂಡಳದ ಅಧ್ಯಕ್ಷನಾಗಿ ಹೈಕೋರ್ಟ ನ್ಯಾಯಾಧೀಶನಿರಬೇಕೆಂದು ಸಮಿತಿಯು ಸೂಚಿಸಿದೆ; ಸ್ಥಾನಬದ್ಧತೆಯ ಹುಕುಮನ್ನು ಹೊರಡಿಸುವ ಅಧಿಕಾರಿಯು ಈ ವಿಷಯಕ್ಕೆ ಸಂಬಂಧಿಸಿದ ಎಲ್ಲ ವಿವರಗಳನ್ನೂ ಪೂರೈಸಬೇಕೆಂದು ಸಮಿತಿ ಹೇಳಿದೆ. ವಿರೋಧಿ ಗುಂಪಿನ ಪ್ರಮುಖ ಸದಸ್ಯರಾದ ಶ್ರೀ ಎ. ಕೆ. ಗೋಪಾಲನ್ ಮತ್ತು ಶ್ರೀ ಪಿ. ಸುಂದರಯ್ಯನವರು ಬೇರೆಯೇ ಅಭಿಪ್ರಾಯವನ್ನು ಈ ವರದಿಗೆ ಜೋಡಿಸಿದ್ದಾರೆ. ಸ್ಥಾನಬದ್ಧತೆಯ ಪ್ರಶ್ನೆಯೇ ಅನುಚಿತವೆಂದವರ ವಾದ. ಸರಕಾರವು ದಬ್ಬಾಳಿಕೆಯನ್ನು ನಡೆಸಲೆಂದೇ ಇಂಥ ಕರಾಳ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದವರು ದೂರಿದ್ದಾರೆ.

ವ್ಯಕ್ತಿ ಸ್ವಾತಂತ್ರ್ಯದ ಪ್ರಶ್ನೆ

ಇದು ಕುರಿತು ವಿವರವಾದ ಚರ್ಚೆ ನಡೆದ ಕಾಲದಲ್ಲಿ ಪ್ರಧಾನಿ ನೆಹರೂ ಭಾಗವಹಿಸಿ, ಹೇಳಿದ ಮಾತುಗಳು ಬಹಳ ಮರ್ಮಸ್ಪರ್ಶಿಯಾಗಿವೆ-ವೈಯಕ್ತಿಕ ಸ್ವಾತಂತ್ರ್ಯದ ಬಗ್ಗೆ ನಾವು ಅತ್ಯಂತ ಗೌರವ ತಳೆಯುವುದು ಸಹಜ. ಹಾಗೆಂದು ರಾಷ್ಟ್ರ ವಿಘಾತುಕ ಕಾರ್ಯಗಳಲ್ಲಿ ನಾಗರಿಕರು ತೊಡಗಿದರೆ—ಅಂಥ ಕೆಲ ಜನರ ವೈಯಕ್ತಿಕ ಸ್ವಾತಂತ್ರ್ಯವನ್ನು ಸಮಗ್ರ ದೇಶದ ಹಿತವನ್ನು ಲಕ್ಷಿಸಿ ನಿರ್ಬಂಧಿಸುವುದೇ ಸೂಕ್ತ ಎಂದವರು ಖಂಡಿತವಾಗಿ ಹೇಳಿದರು. ಅಪಹರಣವಾಗುವುದೆಂದು ಬೊಬ್ಬಿಡುವುದು ಸಹಜವಿದ್ದರೂ— ಆ ಸ್ವಾತಂತ್ರ್ಯವನ್ನು ದುರುಪಯೋಗಪಡಿಸುವ ಕಾಲದಲ್ಲಿ ಮಾತ್ರ ಸ್ಥಾನಬದ್ಧತೆಯ ಆಜ್ಞೆಯಂಥ ಕ್ರಮಗಳನ್ನು ಕೈಗೊಳ್ಳಲಾಗುವುದು. ಆದುದರಿಂದ ಜನರು, ರಾಷ್ಟ್ರನಿಷ್ಠೆಯಿಂದ, ಶಾಂತರೀತಿಯಿಂದಿದ್ದರೆ, ಈ ಅಧಿಕಾರವನ್ನು ಉಪಯೋಗಿಸುವ ಪ್ರಸಂಗವೇ ಬಾರದು. ಉಪಯೋಗವೇ ಘಟಿಸದಿದ್ದರೆ—ದುರುಪಯೋಗದ ಅಂಜಿಕೆ ಏತರದು? ಪ್ರಜಾಪ್ರಭುತ್ವದ ತತ್ವಗಳಿಗೆ ಅನುಗುಣವಾಗಿಯೇ ಈ ಸ್ಥಾನಬದ್ಧತೆಯ ತಿದ್ದುಪಡಿ ಮಸೂದೆ ಇದೆ ಎಂಬ ನೆಹರೂ ವಾದವನ್ನು ವಿರೋಧಿ ಗುಂಪು ಒಪ್ಪದಿದ್ದರೂ, ಮಸೂದೆ ಸ್ವೀಕೃತಗೊಳ್ಳುವುದಕ್ಕೆ ಅಡ್ಡಿ ಏನೂ ಒದಗಲಿಲ್ಲ

ಮಂತ್ರಿಗಳ ಸಂಬಳ

ಕೇಂದ್ರದ ಮಂತ್ರಿ ಮತ್ತು ಉಪಮಂತ್ರಿಗಳ ಸಂಬಳವನ್ನು ನಿರ್ಧರಿಸುವ ಮಸೂದೆಯೂ ಲೋಕಸಭೆಯಲ್ಲಿ ಪಾಸಾಯಿತು. ಸಂಬಳದ ಜೊತೆಗೆ ಕ್ಯಾಬಿನೆಟ್ ಮಟ್ಟದ ಮಂತ್ರಿಗಳಿಗೆ ಭತ್ತೆಯನ್ನೂ, ಎಲ್ಲರಿಗೂ ಪ್ರತ್ಯೇಕ ಔಷದೋಪಚಾರ, ಮತ್ತು ಮನೆಯನ್ನೂ ಕೊಡುವರು. ಕಮ್ಯೂನಿಸ್ಟ ಸದಸ್ಯರು ಮಂತ್ರಿಗಳ ಸಂಬಳ ಬಹಳ ಹೆಚ್ಚಿದೆ ಎನ್ನದೆ ಬಿಡಲಿಲ್ಲ. ಜನಸಾಮಾನ್ಯರು ಬಹಳ ಹೀನ ಬದುಕನ್ನು ನಡೆಸುವ ಕಾಲದಲ್ಲಿ-ಮಂತ್ರಿಗಳು ವೈಭವೋಪೇತನಾದ ಜೀವನ ಮಾಡುವುದು ಸರಿಯಲ್ಲ. ಇದು ದುಂದುಗಾರಿಕೆ ಎಂದರು.. ಪ್ರಧಾನಿ ನೆಹರು ಇದಕ್ಕೆ ಉಚಿತವಾದ ಸಮಾಧಾನ ಹೇಳಿದರು. ಮಂತ್ರಿಗಳ ವೆಚ್ಚಕ್ಕೆ ಖಾಸಗಿ ಹಣವನ್ನು ಉಪಯೋಗಿಸುವ ಪ್ರಸಂಗ ತಪ್ಪಬೇಕಾದರೆ ಈಗಿನ (೨೨೫೦ ರೂಪಾಯಿ ಮತ್ತು ೧೭೫೦ ರೂಪಾಯಿ) ಪ್ರಮಾಣವನ್ನು ಸ್ವೀಕರಿಸಬೇಕು ಎಂದವರು ನುಡಿದರು. ಮಂತ್ರಿಗಳ ಸಂಬಳವನ್ನು ಕಡಿಮೆ ಮಾಡಬೇಕೆನ್ನುವುದಕ್ಕಿಂತಲೂ-ಸರಕಾರದ ಅಸಂಖ್ಯ ಉನ್ನತಾಧಿಕಾರಿಗಳ ಸಂಬಳದಲ್ಲಿ ಕಡಿತಮಾಡುವುದು ಹೆಚ್ಚು ಅಪೇಕ್ಷಣೀಯವಲ್ಲವೆ?

ರಾಜ್ಯ ಸರಕಾರಗಳ ಸ್ಪರ್ಧೆ

ರಾಜ್ಯಾಂಗ ಘಟನೆಯಂತೆ, ಕೆಲವು ವಸ್ತುಗಳನ್ನು ಜೀವನಾವಶ್ಯಕವಾದುವುಗಳೆಂದು ಘೋಷಿಸುವ ಮತ್ತು ಅವುಗಳ ಮೇಲೆ ಮಾರಾಟ ಕರವನ್ನು ಹೇರುವ ಮಸೂದೆ ಮಾಡುವುದಕ್ಕೆ ಮುಂಚೆ ರಾಷ್ಟ್ರಾಧ್ಯಕ್ಷರ ಅನುಮತಿ ಪಡೆಯಬೇಕೆನ್ನುವ ಗೊತ್ತುವಳಿಯನ್ನು ರಾಜ್ಯ ಪರಿಷತ್ತು ಸ್ವೀಕರಿಸಿದೆ. ರಾಜ್ಯ ಸರಕಾರಗಳು ಮಾರಾಟಕರದ ಮಸೂದೆಯನ್ನು ಸ್ವಂತದಲ್ಲಿ ಪಾಸು ಮಾಡಿಕೊಳ್ಳುವ ಪ್ರವೃತ್ತಿ ತೋರಿಸಿವೆಯಾದುದರಿಂದ—ಈ ಮಸೂದೆಯನ್ನು ಕೂಡಲೇ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಶ್ರೀ ತ್ಯಾಗಿ ಕೇಳಿಕೊಂಡರು. ಮಾರಾಟಕರವೇ ರಾಜಾದಾಯದ ಮುಖ್ಯ ಸೂತ್ರವಾಗಿರುವ ರಾಜ್ಯಗಳು ಹೀಗೆ ಕೇಂದ್ರದೊಡನೆ ಸ್ಪರ್ಧೆಗಿಳಿಸಿವೆ ಎಂದವರು ಹೇಳಿದರು.

Latest Congress Publication

THE PILGRIMAGE & AFTER

RS. 2-8-0

It tells you:

How Congress prepared for and fought the Elections.

How Nehru toured the country carrying the message of the Congress.

It contains:

Full analysis of Election results.

List of Congress members of Parliament and State Assemblies.

Personnel of Congress Ministries

Charts—Tables—Maps—Photographs.

The only publication of its kind in the market.

Special terms offered on bulk orders from book sellers.

For further particulars write to:

The Publications Department

ALL INDIA CONGRESS COMMITTEE

7 Jantar Mantar Road, NEW DELHI

You Cannot But Choose
The Canara Banking Corporation Ltd.
for Ideal Banking
in the States of Madras, Mysore, Bombay, Coorg & U. S. T. C.
Estd: 1906. H. O.: UDIPI (S. I

ನವಯುಗ
ಚಂದಾ ವಿವರ
ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0
ಉಡುಪಿ, ಗುರುವಾರ ೭-೮-'೫೨

ವ್ಯವಸಾಯೋತ್ಪನ್ನ

ಜನಪದ ಅಭಿವೃದ್ಧಿಯೋಜನೆಗಳ ಅಧಿಕಾರಿಗಳನ್ನುದ್ದೇಶಿಸಿ ಮಾತನಾಡುವಾಗ, ಭಾರತದಲ್ಲಿ ಅಮೇರಿಕದ ರಾಯಭಾರಿ, ಚೆಸ್ಟರ ಬಾಲ್ಸರು ಕೆಲವು ಮನನೀಯ ವಿಚಾರಗಳನ್ನು ಮುನ್ನಿಡಿದರು: ಪಾಶ್ಚಾತ್ಯರಾದ ತಮಗೆ ಭಾರತದ ಜನಸಮುದಾಯವು ತನ್ನ ಸ್ವಂತ ಕಾಲ ಮೇಲೆ ನಿಲ್ಲಲು ಎಡೆಬಿಡದೆ ಪ್ರಯತ್ನಿಸುತ್ತಿರುವುದನ್ನು ಕಂಡು ತುಂಬ ಹರ್ಷವೆನಿಸುತ್ತಿದೆ ಎಂದವರು ಹೇಳಿದರು. ಯುದ್ಧಮಯವಾದ ವಾತಾವರಣದ ನಡುವೆ ಗಾಂಧೀಜಿಯ ಅಹಿಂಸಾ ಮಂತ್ರದಲ್ಲಿ ಜನರು ಅತ್ಯಂತ ಶ್ರದ್ಧೆ ತೋರಿಸುತಿದ್ದಂತೆ—ಸ್ವಾವಲಂಬನದ ಮಾರ್ಗದಲ್ಲಿಯೂ ದೃಢವಾಗಿ ಮುನ್ನಡೆಯಲು ಹವಣಿಸುತ್ತಿರುವುದು ಸ್ತುತ್ಯ ಎಂದವರು ಭಾರತೀಯರನ್ನು ಪ್ರಶಂಸಿಸಿದರು. ಪ್ರಜಾಪ್ರಭುತ್ವ ಪದ್ಧತಿಯ ಮೇರೆಗೆ ಅಧಿಕಾರಾರೂಢವಾದ ಭಾರತವು ಎಲ್ಲರೊಡನೆ ಸ್ನೇಹ ಸೌಹಾರ್ದಗಳಿಂದ ನಡೆದುಕೊಳ್ಳುತಿದ್ದಂತೆ ಅಭಿವೃದ್ಧಿಯನ್ನೂ ಕೈಗೂಡಿಸಬೇಕೆಂದು ಟೊಂಕ ಕಟ್ಟಿರುವುದು ಅಮೇರಿಕದ ದೃಷ್ಟಿಯಲ್ಲಿ ಹೆಚ್ಚು ಮಹತ್ವವನ್ನು ಗಳಿಸಿದೆ ಎಂದವರ ಅಭಿಪ್ರಾಯ. ಅಮೇರಿಕವು ಭಾರತಕ್ಕೆ ಅನ್ನಾಭಾವವನ್ನು ದೂರೀಕರಿಸುವ ಒಂದೇ ಒಂದು ಪ್ರಧಾನೋದ್ದೇಶವನ್ನು ಮುಂದಿಟ್ಟುಕೊಂಡು—ಆರ್ಥಿಕ ನೆರವನ್ನು ಕೊಡುತ್ತಿರುವುದಾಗಿ ಅವರು ಸ್ಪಷ್ಟಪಡಿಸಿದರು. ದೇಶವು ಔದ್ಯೋಗೀಕರಣವನ್ನು ಹೊಂದಬೇಕೆನ್ನುವುದು ಇಷ್ಟವಾದರೂ—ಮೊದಲಿಗೆ ಅನ್ನ ಪ್ರಶ್ನೆಯನ್ನು ಸಂತುಷ್ಟಿಗೊಳಿಸಬೇಕೆಂಬ ಸಂಗತಿಯನ್ನು ಉಪೇಕ್ಷಿಸಲಾರೆವು. ಆದುದರಿಂದ ವ್ಯವಸಾಯೋತ್ಪನ್ನವನ್ನು ಹೆಚ್ಚಿಸುವುದೇ ಈಗಿನ ನಮ್ಮ ಮೂಲಭೂತ ಆವಶ್ಯಕತೆ. ವ್ಯವಸಾಯದಲ್ಲಿ ಅಭಿವೃದ್ಧಿಯನ್ನು ಸಾಧಿಸಿದ ಬಳಿಕ—ವಿದೇಶಗಳಿಗೆ ಈ ಮಟ್ಟಿಗೆ ಕೊಡಬೇಕಾದ ಹಣ ಉಳಿಯುವುದರಿಂದ, ಅದನ್ನು ಔದ್ಯೋಗೀಕರಣಕ್ಕಾಗಿ ವಿನಿಯೋಗಿಸಲು ಬರುತ್ತದೆ. ಉಚ್ಚ ಜೀವನ ಮಟ್ಟಕ್ಕಾಗಿ ಹೆಸರಾದ ಅಮೇರಿಕೆಯಲ್ಲೂ ಪ್ರಥಮದಲ್ಲಿ ಕೃಷಿಯೇ ಪ್ರಧಾನವಾಗಿತ್ತೆಂಬ ಸತ್ಯವನ್ನು ನಾವು ಮರೆಯಲಾಗದು. ಪ್ರಕೃತ ಕೈಗೊಂಡಿರುವ ಜನಪದ ಅಭಿವೃದ್ಧಿಯೋಜನೆಗಳು ಈ ದಿಸೆಯಲ್ಲಿ ಮಹತ್ವದ ಹೆಜ್ಜೆ: ಕೇವಲ ಕೆಲವೇ ಸಾವಿರ ಹಳ್ಳಿಗಳನ್ನು ಪ್ರಾರಂಭಿಕ ರೂಪದಲ್ಲಿ ಈ ಯೋಜನೆಗಳು ಒಳಗೊಂಡರೂ, ಅವುಗಳು ಗ್ರಾಮ ನಿವಾಸಿಗಳ ನೆರವಿನಿಂದ ಸಂಪೂರ್ಣ ಯಶಸ್ಸನ್ನು ಪಡೆದರೆ—ಇನ್ನೂ ವಿಸ್ತರಿಸಲು ಅನುಕೂಲವಾಗುತ್ತದೆ. ಸರಕಾರವು ಈಗಾಗಲೇ ಸಾಕಷ್ಟು ಗಮನವನ್ನು ಈ ವಿಷಯದತ್ತ ಕೊಟ್ಟಿದೆ. ಮದ್ರಾಸು ಸರಕಾರದ ಗ್ರಾಮಾಭಿವೃದ್ಧಿ ಇಲಾಖೆಯನ್ನು ಇದಕ್ಕೆ ನಿದರ್ಶನವಾಗಿ ತೆಗೆದುಕೊಳ್ಳಬಹುದು. ಆದರೂ ಮೂಲತಃ ಬಡತನ ಮತ್ತು ಅನಕ್ಷರಸ್ಥರಾಗಿದುದರಿಂದ ಹಳ್ಳಿಗರಿಗೆ ಆಧುನಿಕ ವಿಜ್ಞಾನದ ಸಂಶೋಧನೆಗಳ ಲಾಭವುಂಟಾಗುತ್ತಿಲ್ಲ. ಸರಕಾರವು ತಗಾವಿ ಸಾಲಗಳನ್ನು ಒದಗಿಸುವುದರ ಮೂಲಕ, ಟ್ರಾಕ್ಟರುಗಳನ್ನು, ನೀರೆತ್ತುವ ಪಂಪುಗಳನ್ನು, ವಿದ್ಯುದುಪಕರಣಗಳನ್ನು ಪೂರೈಸುವದರ ಮೂಲಕ—ಕೆಲಮಟ್ಟಿಗೆ ರೈತರಿಗೆ ವ್ಯವಸಾಯಾಭಿವೃದ್ಧಿಯ ಕೆಲಸದಲ್ಲಿ ಸಹಾಯ ನೀಡುತ್ತಿದೆ. ಸುಮಾರು ಹನ್ನೆರಡು ಕೋಟಿ ರೂಪಾಯಿಯಷ್ಟು ಸಾಲವನ್ನು ರೈತರಿಗೆ ಕೊಡಲಾಗಿದೆ. ಆಧುನಿಕ ಯಂತ್ರೋಪಕರಣಗಳ ಬೇಡಿಕೆಯು ನಮ್ಮ ರಾಜ್ಯದಲ್ಲಿ ತುಂಬ ಹೆಚ್ಚುತ್ತಿದೆಯಾಗಿ ತಿಳಿದು ಬಂದಿದೆ. ಈ ಬೇಡಿಕೆಯ ಒತ್ತಡದಿಂದಾಗಿ, ಸರಕಾರಕ್ಕೆ ಉಪಕರಣಗಳ ಕೊರತೆ ಕಂಡು ಬರುತ್ತಿದೆಯಂತೆ. ಆದುದರಿಂದ ಸ್ವಲ್ಪ ಮಟ್ಟಿನ ಅನುಕೂಲತೆ ಇರುವ ರೈತರು ನೇರವಾಗಿಯೇ ತಮಗೆ ಬೇಕೆನಿಸಿದ ವ್ಯವಸಾಯದ [illegible] ತರಿಸಿಕೊಂಡರೆ ಕ್ಷೇಮವೆಂದು ಸರಕಾರ ಬಿನ್ನವಿಸುತ್ತಿದೆ. ಬಡವರಾದ ರೈತರು ಮಾತ್ರ ಸರಕಾರಕ್ಕೆ ಅರ್ಜಿ ಸಲಿಸಿದರೆ—ಅವರ ಬೇಡಿಕೆಗೆ ಪ್ರಾಶಸ್ತ್ಯವನ್ನು ಕೊಡಲು ಅನುಕೂಲವಾಗುವುದೆಂಬ ಮಾತು ನಿಜ. ಎಷ್ಟೇ ಹೇಳಿದರೂ—ನಮ್ಮ ಜನ ವ್ಯವಸಾಯದ ಮಟ್ಟಿಗೆ ಸರಕಾರವನ್ನು ಅಧಿಕತರವಾಗಿ ಹೊಂದಿಕೊಂಡಿಲ್ಲ ಎಂಬ ಸಂಗತಿಯನ್ನು ಹೆಮ್ಮೆಯಿಂದ ಹೇಳಬಹುದು. ಮದ್ರಾಸು ರಾಜ್ಯದಲ್ಲಿ ವ್ಯವಸಾಯೋತ್ಪತ್ತಿಗಾಗಿ ವಿನಿಯೋಗಿಸಲಾಗಿರುವ ಸಾಧನ ಸರಂಜಾಮುಗಳ ಹಾಗೂ ಎತ್ತು ಕೋಣಗಳ ಬೆಲೆಯೇ ಆರುನೂರು ಕೋಟಿ ರೂಪಾಯಿಗಳಾಗಬಹುದೆಂದು ಅಂದಾಜು. ಇಷ್ಟು ದೊಡ್ಡ ಮೊತ್ತದಲ್ಲಿ ಸರಕಾರ ನೀಡಿದ ಸಾಲ ಅಥವಾ ಸಹಾಯಧನ ಕೇವಲ ಹನ್ನೆರಡು ಕೋಟಿ ರೂಪಾಯಿ. ಸಂಗತಿ ಹೀಗಿರುವುದರಿಂದ—ರೈತರು ಸ್ವಂತ ಹುಮ್ಮಸ್ಸಿನಿಂದ ಹೆಚ್ಚು ಆಹಾರ ಬೆಳೆಯುವಲ್ಲಿ ಶ್ರದ್ಧೆವಹಿಸಿ ದುಡಿಯಬೇಕು. ವಿನಿಯಂತ್ರಣದ ಪರಿಣಾಮವಾಗಿ ರೈತರಿಗೆ ಎಷ್ಟೋ ಹಿತವುಂಟಾಗಿದೆ. ಸ್ವಂತ ಭೂಮಿ ಇಲ್ಲದ ರೈತರಿಗೆ ಒಕ್ಕಲೆಬ್ಬಿಸುವದೇ ಮುಂತಾದ ಪೀಡೆಗಳು ಬಂದೊದಗದಂತೆ ಸರಕಾರವು ಯೋಗ್ಯ ಕ್ರಮಗಳನ್ನು ಸದ್ಯದಲ್ಲಿಯೇ ಕೈಕೊಳ್ಳಲಿದೆ. ನಮ್ಮ ರೈತರು ಉತ್ಸಾಹದಿಂದ ಉತ್ಪತ್ತಿ ಹೆಚ್ಚಿಸಲು ಪ್ರಯತ್ನಪಟ್ಟರೆ ಅನ್ನಕ್ಷಾಮದ ಭೀತಿ ತೊಲಗುವುದು. ದೇಶದ ಆಹಾರ ಪರಿಸ್ಥಿತಿ ಸುಧಾರಿಸಿದೆ ಎಂದು ಕೇಂದ್ರದ ಮಂತ್ರಿ ಹೇಳಿದ್ದಾರೆ—ನಮ್ಮ ರೈತರು ಮನಸ್ಸು ಮಾಡಿದರೆ, ಅನ್ನ ಸಮಸ್ಯೆ ಎಂಬುದೇ ಉಳಿಯಲಿಕ್ಕಿಲ್ಲ.

ಮಧ್ಯಪೂರ್ವದ ಕ್ಷುಬ್ಧ ಪರಿಸ್ಥಿತಿ

ಕದಡಿದ ವಾತಾವರಣ ತಿಳಿಯಾಗುವ ಸೂಚನೆ

ಮಧ್ಯಪೂರ್ವದ ಮುಸ್ಲಿಂ ರಾಷ್ಟ್ರಗಳಲ್ಲಿ ಒಮ್ಮಿಂದೊಮ್ಮೆಗೆ ಉಂಟಾದ ಸ್ಫೋಟದ ಕ್ಷುಬ್ಧ ಪರಿಸ್ಥಿತಿಯು ಜಗತ್ತಿನ ದೃಷ್ಟಿಯನ್ನೆಲ್ಲ ತನ್ನೆಡೆಗೆ ಆಕರ್ಷಿಸಿದರ ಜೊತೆಗೆ—ರಾಜಕೀಯ ಕ್ಷೇತ್ರದಲ್ಲಿ ಅಲ್ಲೋಲ ಕಲ್ಲೋಲವನ್ನುಂಟುಮಾಡಿತು. ಆದರೀಗ ಸುಮಾರು ಎಂಟು—ಹತ್ತು ದಿನಗಳ ಬಳಿಕ ವಾತಾವರಣವು ಶಾಂತವಾಗುವ ಪರಿಸ್ಥಿತಿ ದೃಷ್ಟಿಗೋಚರವಾಗುತ್ತಿದೆ. ಈಜಿಪ್ಟ ಮತ್ತು ಇರಾಣಗಳಲ್ಲಿ ವ್ಯವಸ್ಥಿತವಾದ ಸರಕಾರಗಳು ನೆಲೆಗೊಂಡುದು ಕಂಡುಬರುತ್ತಿದೆ. ಟ್ಯುನೀಸಿಯಾದ ಬಗ್ಗೆಯೂ ಹೆಚ್ಚು ಕಳವಳಕ್ಕೆ ಎಡೆ ಇರುವುದಿಲ್ಲ. ಕೊರಿಯಾಯುದ್ಧದ ಮಟ್ಟಿಗೆ ಹೆಚ್ಚಿನ ಆಶೆ ಉಂಟಾಗಿಲ್ಲವಾದರೂ—ಶಾಂತಿಯ ಆಶೆ ಭಗ್ನಗೊಂಡಿಲ್ಲ ಎಂಬುದು ನಿಜ. ದಕ್ಷಿಣ ಆಫ್ರಿಕೆಯ ವರ್ಣಭೇದದ ನೀತಿಯು ಭಾರತೀಯರಿಗೆ ಮತ್ತು ಅಲ್ಲಿಯ ಮೂಲನಿವಾಸಿ ಆಫ್ರಿಕನರಿಗೆ ವೇದನೆ ಉಂಟುಮಾಡುತ್ತಿದೆ. ಕಾಶ್ಮೀರದ ಪ್ರಕರಣದಲ್ಲಿ ಪ್ರಗತಿಯ ಛಾಯೆ ಕಂಡುಬರುತ್ತಿದೆ—ಲೋಕದಲ್ಲಿ ವಿದ್ಯಮಾನವಿರುವ ಪರಿಸ್ಥಿತಿಯ ಸ್ಥೂಲ ರೂಪರೇಖೆಯನ್ನು ಹೀಗೆ ವಿವರಿಸಬಹುದು.

ಫರೂಕರ ಬದುಕು

ಈಜಿಪ್ಟದ ಅರಸ ಫರೂಕರು ರಾಜ್ಯತ್ಯಾಗದ ಬಳಿಕ ಈಗ ಕಾಪ್ರಿ ಎಂಬ ಪ್ರದೇಶಕ್ಕೆ ಬಂದಿಳಿದು, ಅಲ್ಲಿ ಸಾಮಾನ್ಯ ಜನರಂತೆ ಜೀವನ ಯಾಪನೆ ಮಾಡುತಿದ್ದಾರೆ. ಇಟಲಿಯ ಈ ಸ್ಥಳದಲ್ಲಿ ತಾನು ಕೆಲ ಸಮಯ ಇರುವುದಾಗಿ ಫರೂಕರು ಪತ್ರಿಕಾ ಪ್ರತಿನಿಧಿಗಳ ಪರಿಷತ್ತೊಂದನ್ನು ಉದ್ದೇಶಿಸಿ ಹೇಳಿದರು. ಈಗ ಅರಸುತನದ ವೈಭವವೊಂದೂ ತನಗುಳಿದಿಲ್ಲವೆಂದೂ ಐಶ್ವರ್ಯವಂತನಾದ ಮನುಷ್ಯನೂ ತಾನಾಗಿಲ್ಲನೆಂದೂ ಅವರು ತಿಳಿಸಿದರು. ಈಜಿಪ್ಟದ ಹಿತಕ್ಕಾಗಿಯೇ ತಾವು ಸಿಂಹಾಸನ ತ್ಯಾಗ ಮಾಡಿದುದಾಗಿ ಹೇಳಿ—ತನ್ನ ದೇಶದ ಬಗ್ಗೆ ತುಂಬ ಪ್ರೇಮವು ಅಚ್ಚಳಿಯದೆ ಉಳಿಯುವುದೆಂದು ಸ್ಪಷ್ಟಪಡಿಸಿದರು. ಸೈನ್ಯ ಕ್ರಾಂತಿಯ ನಾಯಕತ್ವವನ್ನು ವಹಿಸಿದ ನಾಗಿಬರು ಫರೂಕ ಅರಸರಿಗೆ ಸಿಂಹಾಸನ ತ್ಯಾಗ ಮಾಡಬೇಕೆಂದು ಕೇಳಿಕೊಂಡುದರ ಕಾರಣಗಳೂ ಈಗ ಪ್ರಕಟಗೊಂಡಿವೆ: ರಾಜ್ಯದ ಆಡಳಿತದಲ್ಲಿ ಕಾರ್ಯಕ್ಷಮತೆಯನ್ನು ಕಾಯ್ದುಕೊಳ್ಳದೆ ಗೊಂದಲಕ್ಕೆ ಎಡೆಕೊಟ್ಟಿದುದರಿಂದ, ಈಜಿಪ್ಟದ ಸ್ಥಾನಮಾನವು ಜಗತ್ತಿನ ದೃಷ್ಟಿಯಲ್ಲಿ ತಗ್ಗುವಂತೆ ವರ್ತಿಸಿದುದರಿಂದ, ಬಡವರು ಹಾಗೂ ಹಸಿದ ಜನರ ದುಃಖವನ್ನು ಕಡೆಗಣಿಸಿ ವಿಲಾಸಕ್ಕೆನೇ ಒಲಿದುದರಿಂದ ಫರೂಕರಿಗೆ ಈ ಗತಿ ಬಂತೆಂದು ಅದರಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ಈಗ ಫರೂಕರು ಹೊಸತೊಂದು ನಿವಾಸವನ್ನು ಹುಡುಕುತಿದ್ದಾರೆ.

ನಾಗಿಬರ ಸಂದೇಶ

ನಾಗಿಬರು ಬಹಳ ಬುದ್ಧಿವಂತ: ಸೈನ್ಯ ಕ್ರಾಂತಿಯನ್ನು ರಾಷ್ಟ್ರಾಭ್ಯುದಯದ ಸದುದ್ದೇಶದಿಂದ ಮಾಡಿದ ಬಳಿಕ, ಈಗ ದೇಶದೊಳಗೆ ಶಾಂತಿ ಮತ್ತು ಸುವ್ಯವಸ್ಥೆಯ ಪಾಲನೆಗಾಗಿ ಹೆಣಗುತ್ತಿರುವರು. ಫರೂಕರ ರಾಜ್ಯತ್ಯಾಗದ ಬಳಿಕ ಮಾಡಬೇಕಾದ ಸುಧಾರಣಾ ಕ್ರಮಗಳನ್ನು ಸರಕಾರದ ವಶ ಕೊಟ್ಟಿರುವರು. ಈ ವಿಷಯದಲ್ಲಿ ಸೈನ್ಯವು ಎಳ್ಳಷ್ಟೂ ಹಸ್ತಕ್ಷೇಪ ಮಾಡುವುದಿಲ್ಲವೆಂದವರು ಹೇಳಿದ್ದಾರೆ. ಬೀದಿ ಬೀದಿಗಳಲ್ಲಿ ವ್ಯವಸ್ಥೆಯನ್ನು ನೆಲೆಗೊಳಿಸಲು ನಿಂತಿದ್ದ ಸೈನ್ಯಗಳು ಈಗ ಮರೆಯಾಗಿ, ಕೇವಲ ಪೋಲೀಸು ಪಡೆಗಳಷ್ಟೆ ಇವೆ. ಶಾಂತಿಯ ವಾತಾವರಣದ ನಡುವೆ ನಾಗಿಬರು ಸೈನಿಕರಿಗೆ ದೇಶಭಕ್ತಿಯ ಉಪದೇಶವನ್ನೂ ಕೊಟ್ಟಿದ್ದಾರೆ. ರಾಷ್ಟ್ರದ ಹಿತವನ್ನನುಲಕ್ಷಿಸಿ, ಸರ್ವಸ್ವವನ್ನೂ ತ್ಯಾಗಮಾಡಲು ಸಿದ್ಧರಬೇಕಾದುದು ಪ್ರಥಮ ಕರ್ತವ್ಯವೆಂಬ ಸಂಗತಿಗೆ ಅವರು ಮಹಾತ್ಮಾ ಗಾಂಧೀಯ ಉದಾಹರಣೆಯನ್ನು ಮುಂದು ಮಾಡಿದರು. ಭಾರತದ ಸ್ವಾತಂತ್ರ್ಯ ಸಂಗ್ರಾಮವನ್ನು ಅವರು ಬಹಳ ಆಸಕ್ತಿಯಿಂದ ನೋಡಿದ್ದರು. ಗಾಂಧೀಜಿಯ ಆದರ್ಶಗಳ ಬಗ್ಗೆ ಅವರಿಗೆ ತುಂಬ ಶ್ರದ್ಧೆ ಇದೆ.

ನೂತನ ಸರಕಾರದ ಚಟುವಟಿಕೆ

ಅಲಿ ಮೆಹರರ ಸರಕಾರವು ಈಗಾಗಲೇ ಸುಧಾರಣಾ ಕ್ರಮಗಳ ಕಡೆಗೆ ಮುಂದುವರಿದಿದೆ: ಮಂತ್ರಿಗಳು ತಪ್ಪು ಮಾಡಿದರೆ ಅವರನ್ನು ವಿಚಾರಣೆಗೊಳಪಡಿಸುವ ಆಶಯದ ನಿರ್ಣಯವನ್ನು ಸರಕಾರವು ಅಂಗೀಕರಿಸಿದೆ. ಹೊಸ ಚುನಾವಣೆಗಳು ನಡೆದು, ಪಾರ್ಲಿಮೆಂಟು ಶಾಶ್ವತವಾದ ರೀಜೆನ್ಸಿ ಕೌನ್ಸಿಲನ್ನು ನೇಮಿಸುವ ನಡುಗಾಲದಲ್ಲಿ ಅರಸ ಫೌವದ ಹೆಸರಿನಲ್ಲಿ ರಾಜ್ಯಭಾರ ನಿರ್ವಹಿಸಲು ಮೂರು ಜನರ ಪರಿಷತ್ತನ್ನು ಘಟಿಸಲಾಗಿದೆ. ಈಜಿಪ್ಟದ ಜನತೆಗೆ ಘಟನಾತ್ಮಕ ರೀತಿಯಲ್ಲಿ ಆರ್ಥಿಕ ಅಭ್ಯುದಯವನ್ನೂ ಸಾಮಾಜಿಕ ಸುಧಾರಣೆಯನ್ನೂ ಒದಗಿಸುವುದರಲ್ಲಿ ಇದು ಪ್ರಾಥಮಿಕ ಹೆಜ್ಜೆ ಎಂಬುದಾಗಿ ನಾಗಿಬರು ಹೇಳಿದ್ದಾರೆ. ಈ ನಡುವೆ ಸುಡಾನದೊಡನೆ ಸಂಧಾನದ ಮಾತುಕತೆಗಳಿಗೆ ಹೊಸ ರೂಪ ಬಂದಿದೆ. ಈಜಿಪ್ತದಲ್ಲಿ ಜನ ಬೆಂಬಲವಿರುವ ವಾಫ್ದ ಪಕ್ಷವು ಕೊಟ್ಟಿರುವ ಘೋಷಣಾಪತ್ರದಲ್ಲಿ ನೈಲನದೀ ಕೊಳ್ಳದ ಏಕೀಕರಣವನ್ನು ಸುಡಾನದಲ್ಲಿ ನಿರಾತಂಕವಾದ ಜನಾಭಿಪ್ರಾಯ ಗಣನೆ ನಡೆಸಿ ಸಾಧಿಸಬೇಕೆಂದು ಹೇಳಿದೆ. ಹಾಗೆಯೇ ಮಧ್ಯಪೂರ್ವದ ರಕ್ಷಣಾ ಜಾಲದಲ್ಲಿ ಈಜಿಪ್ತವು ಸೇರದೆ, ಬ್ರಿಟನಿನ ಸೈನ್ಯ ಪಡೆಗಳೆಲ್ಲ ಹಿಂತಿರುಗುವವನಕ ಏನೊಂದೂ ಹೊಸ ಹೆಜ್ಜೆಯನ್ನಿಡಬಾರದೆಂದು ಸೂಚಿಸಿದೆ.

ಮುಸಾದಿಕರಿಗೆ ವಿಶೇಷಾಧಿಕಾರ

ಪರ್ಶಿಯಾದ ಪ್ರಧಾನಿ ಮುಸಾದಿಕರಿಗೆ ಈಗ ಸರ್ವಾಧಿಕಾರವೇ ದೊರೆತಿದೆ. ತನ್ನ ಒಂಭತ್ತು ಅಂಶಗಳ ಯೋಜನೆಯನ್ನು ಅವರು ಮಜ್ಲಿಸಿನ ಮುಂದೆ ಇಟ್ಟು, ಈ ಸಂಬಂಧದಲ್ಲಿ ತಮಗೆ ವಿಶೇಷಾಧಿಕಾರ ಬೇಕೆಂದು ಕೇಳಿದರು. ಸೈನ್ಯ ಶಾಖೆಯ ಬಗ್ಗೆ ಇಂಥ ಅಧಿಕಾರವನ್ನು ಮುಸಾದಿಕರು ಈ ಸಲ ಕೇಳಲಿಲ್ಲವಾದರೂ—ಪಾರ್ಲಿಮೆಂಟೇ ಅದನ್ನವರಿಗೆ ಒಪ್ಪಿಸಿಕೊಟ್ಟಿತು. ಪರ್ಶಿಯಾದ ಎಣ್ಣೆಯ ವಿವಾದವನ್ನು ಬಗೆಹರಿಸಲು ಸಮಾನ ಪೂರ್ವಕವಾದ ಯಾವುದೇ ಕ್ರಮವನ್ನು ಮುಸಾದಿಕರು ಸ್ವಾಗತಿಸುವರೆಂಬ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಲಂಡನಿನ "ವಿಕ್ಟೋರಿಯಲ್ ಪೋಸ್ಟ್" ಎಂಬ ಪತ್ರಿಕೆಯು ಕೇಳಿದ ಮೂರು ಪ್ರಶ್ನೆಗಳಿಗೆ ಮುಸಾದಿಕರು ಕೊಟ್ಟ ಉತ್ತರದ ಮೇಲಿಂದ ಈ ಸಂಗತಿಯ ನಿಚ್ಚಳ ಸ್ವರೂಪದ ಅರಿವಾಗುತ್ತದೆ: ಬ್ರಿಟನು ಎಣ್ಣೆಯ ಪ್ರಸಂಗವನ್ನು ಸಹಾನುಭೂತಿಯಿಂದ ನೋಡಬೇಕೆಂದೂ, ಎಣ್ಣೆ ಕಂಪೆನಿಯ ಬಗ್ಗೆ ಪರಿಹಾರ ಧನವನ್ನು ಅದರ ಯೋಗ್ಯತೆಯ ಮೇಲಿಂದ ನಿರ್ಣಯಿಸಬೇಕೆಂದೂ ಮುಸಾದಿಕರು ಅಭಿಪ್ರಾಯಪಡುತ್ತಾರೆ. ವಿಶ್ವನ್ಯಾಯಾಲಯಕ್ಕೆ ಈಗ ಈ ಪ್ರಸಂಗದಲ್ಲಿ ಕೈ ಹಾಕುವ ಅಧಿಕಾರ ಉಳಿದಿಲ್ಲವಾದುದರಿಂದ, ಏನಾದರೂ ತಂಟೆಗಳ ಇತ್ಯರ್ಥವಾಗಬೇಕಿದ್ದರೆ, ಪರ್ಶಿಯಾದ ನ್ಯಾಯಸ್ಥಾನವನ್ನೆ ಆಶ್ರಯಿಸಬೇಕೆಂದು ಮುಸಾದಿಕರ ಹೇಳಿಕೆ.

ಮುಗಿಯದ ಗೊಂದಲ

ಟ್ಯುನೀಸಿಯಾದಲ್ಲಿ ಸುಧಾರಣೆಗಳನ್ನು ನಡೆಸುವ ಸೂಚನೆಯನ್ನು ಫ್ರಾನ್ಸು ಸರಕಾರ ಮಾಡಿತ್ತಷ್ಟೆ! ಅಲ್ಲಿಯ ಬೇ ಅವರು ಈ ಸುಧಾರಣೆಗಳನ್ನು ಒಡನೆಯೇ ಜಾರಿಗೆ ತರಲು ಸಮ್ಮತಿಸಲಿಲ್ಲವೆಂಬುದು ತಿಳಿದು ಬಂದಿದೆ. ಈಚೆಗೆ ಬಂದ ವರದಿಯಂತೆ-ವಿವಿಧ ರಾಜಕೀಯ ಪಕ್ಷಗಳ ನಾಯಕರನ್ನು ಬೇ ತನ್ನ ಬಳಿಗೆ ಕರೆದುಕೊಂಡು ಈ ಸುಧಾರಣೆಗಳ ಸ್ವರೂಪವನ್ನು ವಿಮರ್ಶಿಸಿ, ತನಗೆ ಸೂಕ್ತ ಸಲಹೆ ನೀಡಬೇಕೆಂದು ಅವರು ಕೇಳಿದರು. ಮೂರು ವಾರಗಳ ಅವಧಿಯಲ್ಲಿ ರಾಜಕೀಯ ಧುರೀಣರು ತಮ್ಮ ಅಭಿಪ್ರಾಯವನ್ನು ತಿಳಿಸಬೇಕಾಗಿ ಸೂಚಿಸಲಾಗಿದೆಯಂತೆ. ಆದರೆ ಫ್ರೆಂಚರಿಗೆ ಇದರ ಮೇಲೆ ವಿಶ್ವಾಸವಿಲ್ಲ. ಅಕ್ಟೋಬರದಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯಾಧಿವೇಶನವು ಸೇರುವುದರಿಂದಲೂ, ಅಲ್ಲಿ ಟ್ಯುನೀಶಿಯಾದ ಪ್ರಶ್ನೆಯನ್ನು ಎತ್ತಲು ಭಾರತವೇ ಮೊದಲಾಗಿ ಏಶಿಯಾ ಅರಬ ರಾಷ್ಟ್ರಗಳು ಟೊಂಕ ಕಟ್ಟಿರುವುದರಿಂದಲೂ ಬೇ ಅಷ್ಟು ಸಮಯ ಕಳೆಯಬಹುದೆಂದು ಅವರಿಗೆ ಭಯವಿದೆ. ಭಾರತವು ಟ್ಯುನೀಸಿಯಾದ ಪ್ರಕರಣವನ್ನು ಅತ್ಯಂತ ಸಹಾನುಭೂತಿಯಿಂದ ನೋಡಬೇಕೆಂದು ಈಗ ಇಲ್ಲಿ ಸಂಚರಿಸುತ್ತಿರುವ ಟ್ಯುನೀಸಿಯಾದ ಪ್ರಮುಖ ಧುರೀಣರು ಬಿನ್ನವಿಸಿದ್ದಾರೆ.

ವಸಾಹತುಗಳಿಗೆ ಸ್ವಾಯತ್ತಾಧಿಕಾರ

ಸಂಯುಕ್ತ ರಾಷ್ಟ್ರ ಸಂಘದ ಆರ್ಥಿಕ ಹಾಗೂ ಸಾಮಾಜಿಕ ಮಂಡಳಿ ಒಂದು ನಿರ್ಣಯವನ್ನು ಅಂಗೀಕರಿಸಿತು. ಎಲ್ಲ ವಸಾಹತು ಪ್ರದೇಶಗಳಿಗೂ ಸ್ವಾಧಿಕಾರವನ್ನು ಕೇಳುವ ಹಕ್ಕು ಯಿದೆಯೆಂಬ ಸಾರ್ವತ್ರಿಕ ಜನಮತಗಣನೆಯ ಮೂಲಕ ಸ್ವಾಯತ್ತಾಧಿಕಾರ ಬೇಕೆಂಬ ವಿಷಯದಲ್ಲಿ ಕೊನೆಯ ನಿರ್ಣಯ ಮಾಡಬೇಕೆಂದು ಜನತೆ ಬೇಡಿಕೆಯನ್ನು ಮುನ್ನೀಡಬಹುದು. ಇದಲ್ಲದೆ, ವಿಶ್ವಸ್ತ ಮಂಡಳಿಗಳಿಗೊಳಪಟ್ಟ ಹಾಗೂ ವಸಾಹತು ಆಳಿಕೆಗೆ ಸೇರಿದ ರಾಜ್ಯಗಳ ಆಡಳಿತ ಕ್ರಮದ ಬಗ್ಗೆ ಸಂಯುಕ್ತ ರಾಷ್ಟ್ರ ಸಂಘಕ್ಕೆ ವರದಿಯನ್ನು ಒಪ್ಪಿಸಬೇಕೆಂಬ ಇನ್ನೊಂದು ಸೂಚನೆಯೂ ಅದರಲ್ಲಿದೆ. ನೂರಾರು ವರ್ಷಗಳ ವರೆಗೆ ಬ್ರಿಟಿಷರ ವಸಾಹತು ರಾಜ್ಯವಾಗಿ ನರಳುತ್ತಿದ್ದ ಭಾರತವು ಸಹಜವಾಗಿಯೇ ಈ ಬಗೆಯ ಉತ್ತಮ ನಿರ್ಣಯವನ್ನು ಸಮರ್ಥಿಸಿದೆ. ಸಂಯುಕ್ತ ರಾಜ್ಯ ಅಮೇರಿಕವೂ ಬೆಂಬಲ ಕೊಟ್ಟಿದೆ. ವಿರೋಧಿಸಿದ ರಾಜ್ಯಗಳು ಬ್ರಿಟನು, ಫ್ರಾನ್ಸು ಮತ್ತು ಬೆಲ್ಜಿಯಮು. ಬ್ರಿಟನಿನ ಪ್ರತಿನಿಧಿ ಗ್ಲಾಡ್‌ವಿನ್ ಜೆಬ್ಬರು "ಕಮ್ಯೂನಿಸ್ಟ ರಾಷ್ಟ್ರಗಳ ಜನರ ಸ್ಥಿತಿಗತಿಗಳಿಗಿಂತ ವಸಾಹತು ರಾಜ್ಯದ ಪ್ರಜೆಗಳು ತುಂಬ ಉನ್ನತಮಟ್ಟದಲ್ಲಿದ್ದಾರೆ" ಎಂದು ಹೇಳಿದರು. ಸಂಯುಕ್ತ ರಾಷ್ಟ್ರಸಂಘದ ಸಾಮಾನ್ಯಾಧಿವೇಶನಕ್ಕೆ ಈ ನಿರ್ಣಯವನ್ನು ಕಳುಹಲಾಗುವುದು. ಅಲ್ಲಿ ಇದು ಕೊನೆಯದಾಗಿ ಪಾಸಾದರೂ ತಾವು ವಸಾಹತು ಪ್ರದೇಶದ ಆಡಳಿತ ಕ್ರಮಗಳ ಬಗ್ಗೆ ವರದಿಕೊಡಲು ಸರ್ವಥಾ ಸಿದ್ಧವಿರುವುದಿಲ್ಲ ಎಂದು ಸಾಮ್ರಾಜ್ಯಶಾಹಿ ರಾಷ್ಟ್ರಗಳು ಹೇಳಿವೆ.

ಪ್ರಧಾನಿಗಳ ಪರಿಷತ್ತು

ಬ್ರಿಟನು ಸಾಮ್ರಾಜ್ಯವಾದಿ ರಾಷ್ಟ್ರ: ಹೆಚ್ಚಿನ ದೇಶಗಳಿಗದು ಈಗ ಸ್ವಾತಂತ್ರ್ಯವನ್ನು ಕೊಟ್ಟಿದೆ. ಆದರೂ ಹಿಂದಿನ ರಾಷ್ಟ್ರಕೂಟದ ಸಂಬಂಧವನ್ನು ಅದು ಕಡಿದುಕೊಂಡಿಲ್ಲ. ಬ್ರಿಟನಿನ ವ್ಯಾಪಾರ ವ್ಯವಹಾರಗಳ ಮೇಲೆ ರಾಷ್ಟ್ರಕೂಟಕ್ಕೆ ಸೇರಿದ ದೇಶಗಳ ಆರ್ಥಿಕ ಧೋರಣೆಯಿಂದ ಪ್ರಭಾವ ವುಂಟಾಗುವುದು ಸಹಜವಾಗಿದೆ. ಈಗ ಬ್ರಿಟನು ಆಯಾತ ಪ್ರಮಾಣವನ್ನು ಕಡಿಮೆ ಮಾಡಲೇ ಬೇಕಾದ ಪರಿಸ್ಥಿತಿಯೊದಗಿದೆ. ಯುದ್ಧ ಸನ್ನಾಹವನ್ನು ಮುಂದುವರಿಸುತ್ತಿದ್ದರೂ ಆರ್ಥಿಕ ತಾಪತ್ರಯಗಳಿಂದಾಗಿ ಮೊದಲಿನ ಕೂಲಿಗಾರ ಸರಕಾರದ ಎಣಿಕೆಗಿಂತ ಕಡಿಮೆ ಬಂಡವಾಳವನ್ನದು ಉಪಯೋಗಿಸಬೇಕಾಗಿ ಬಂದಿದೆ. ನಿರ್ಯಾತದ ಪ್ರಮಾಣವನ್ನು ಹೆಚ್ಚಿಸದೆ—ಸ್ಟರ್ಲಿಂಗು ವ್ಯವಹಾರದ ಸಮತೋಲನವನ್ನು ಕಾಯ್ದುಕೊಳ್ಳುವುದು ಕಷ್ಟ. ಇದನ್ನು ಮನಗಂಡು ಪ್ರಧಾನಿ ಚರ್ಚಿಲರು ರಾಷ್ಟ್ರಕೂಟದ ಸದಸ್ಯ ದೇಶಗಳ ಮುಖ್ಯ ಪ್ರಧಾನರು ಬರುವ ನವಂಬರಲ್ಲಿ ಸಭೆ ಸೇರಿ, ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳಬೇಕೆಂದು ಸೂಚನೆ ತಂದಿರುವರು. ನಮ್ಮ ಪ್ರಧಾನಿ ನೆಹರೂ ಮಾತ್ರ ಇದರಲ್ಲಿ ಭಾಗವಹಿಸುವುದಿಲ್ಲ. ಪಾರ್ಲಿಮೆಂಟಿನ ಮುಂದಿನ ಅಧಿವೇಶನವು ಇದೇ ಸಮಯದಲ್ಲಿ ಕೂಡುವುದರಿಂದ, ನೆಹರೂ ಇಲ್ಲಿ ಬಿಟ್ಟು ಹೋಗುವಂತಿಲ್ಲ. ಹೀಗಿದ್ದರೂ ಒಬ್ಬ ನಿರೀಕ್ಷಕರನ್ನು ಕಳಿಸಿ, ಸಭೆಯ ವಿಚಾರಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಲಾಗುವುದು.

ಸಂಧಿಯ ಮಾತುಕತೆ

ಕೊರಿಯದ ಕದನ ವಿರಾಮ ಮಾತುಕತೆಗಳಲ್ಲಿ ಈಗೀಗ ಸಂಯುಕ್ತ ರಾಷ್ಟ್ರ ಸಂಘದ ಪ್ರತಿನಿಧಿಗಳೇ ಅನಾಸ್ಥೆ ತೋರಿಸ ಹತ್ತಿರುವರು. ಕಳೆದ ವಾರ ಪೂರ್ಣಾಧಿವೇಶನವನ್ನು ಒಂದು ವಾರದ ವರೆಗೆ ಮುಂದೂಡಲಾಗಿತ್ತು. ಈ ವಾರ ಮರಳಿ ಸಭೆ ಸೇರಿದಾಗಲೂ, ಕೈದಿಗಳ ವಿನಿಮಯದ ಪ್ರಶ್ನೆಯಲ್ಲಿ ಹೊಸಸೂಚನೆ ಏನೂ ಇಲ್ಲವಾದುದರಿಂದ, ಇನ್ನೊಂದು ವಾರದ ನಂತರವೇ ಪೂರ್ಣಾಧಿವೇಶನ ನಡೆಯಲೆಂದು ಹೇಳಲಾಗಿದೆ. ಒಪ್ಪಂದದ ಸಾಮಾನ್ಯ ಕರಡನ್ನು ಇಕ್ಕಡೆಯ ಸಿಬಂಧಿಗಳೂ ಒಟ್ಟುಸೇರಿ ಈಗ ರಚಿಸುತ್ತಿದ್ದರೂ ಕೈದಿಗಳ ಪ್ರಶ್ನೆ ಇನ್ನೂ ಬಗೆಹರಿದಿಲ್ಲ. ಇತ್ತಂಡದವರೂ ಆರೋಪ-ಪ್ರತ್ಯಾರೋಪಗಳನ್ನು ಮಾಡುತ್ತಿದ್ದಾರೆ. ಅಮೇರಿಕದ ಒಬ್ಬಿಬ್ಬರು ಸಂಧಾನ ಸಾಧ್ಯವೇ ಇಲ್ಲವೆನ್ನುವವರೆಗೂ ಮುಟ್ಟಿದ್ದಾರೆ. ಕಮ್ಯೂನಿಸ್ಟರೂ ಈಗೀಗ ಹೆಚ್ಚಿನ ಪ್ರತಿಭಟನೆಯನ್ನು ತೋರಿಸುತ್ತಿದ್ದಾರೆ, ಯುದ್ಧ ರಂಗದಲ್ಲಿ ಅವರ ಚಟುವಟಿಕೆ ಹೆಚ್ಚಿದೆ. ಈ ನಡುವೆ ಮುಂಗಳವಾರದಿಂದ ದಕ್ಷಿಣ ಕೊರಿಯಾದಲ್ಲಿ ಅಧ್ಯಕ್ಷ ಚುನಾವಣೆಯು ತೊಡಗಿದೆ ಈಗ ಅಧ್ಯಕ್ಷರಾಗಿರುವ ಸಿಂಗಮನ್‌ರೀ ಅವರನ್ನೊಳಗೊಂಡು ಒಟ್ಟು ನಾಲ್ಕು ಜನ ಉಮೇದ್ವಾರರು ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಿದ್ದರೂ—ರೀಯವರೇ ಮರಳಿ ಚುನಾಯಿತರಾಗುವುದು ಹೆಚ್ಚು ಸಂಭಾವ್ಯ. ಶುಕ್ರವಾರದೊಳಗೆ ಇದರ ಪರಿಣಾಮ ತಿಳಿಯುವುದು, ಜನತೆಯೇ ಮತಾಧಿಕಾರವನ್ನುಪಯೋಗಿಸಿ ನೇರಾಗಿ ಅಧ್ಯಕ್ಷನನ್ನು ಆರಿಸುವುದು ಕೊರಿಯಾದಲ್ಲಿ ಇದೇ ಮೊದಲು. ಈ ಹಿಂದೆ ಪಾರ್ಲಿಮೆಂಟಿನ ಸದಸ್ಯರು ಅಧ್ಯಕ್ಷನನ್ನು ಆರಿಸುತ್ತಿದ್ದರು: ರೀ ಇದಕ್ಕೆ ಆಕ್ಷೇಪವೆತ್ತಿದ್ದರಿಂದ, ಹೊಸ ಕ್ರಮವನ್ನು ಅನುಸರಿಸಲಾಯಿತು

ಕಾಶ್ಮೀರ ಪ್ರಕರಣ

ಕಾಶ್ಮೀರದ ಸಂಬಂಧದಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಮಧ್ಯಸ್ಥಗಾರರಾದ ಡಾಂ ಗ್ರಹಾಮರಿಗೆ ಜಿನೀವಾದಲ್ಲಿ ಭಾರತ—ಪಾಕಿಸ್ತಾನಗಳೊಡನೆ ಉಚ್ಚ ಮಟ್ಟದ ಮಾತುಕತೆಗಳನ್ನು ತೊಡಗಬೇಕೆಂದೆನಿಸಿದೆ. ಅವರ ಹನ್ನೆರಡಂಶಗಳ ಯೋಜನೆಯಲ್ಲಿ ಅಡಕವಾದ ಸೂಚನೆಗಳಲ್ಲಿ ಮುಖ್ಯವಾದ ಯುದ್ಧವಿರಾಮ ರೇಖೆಯ ಇತ್ತಂಡದಲ್ಲಿ ಉಳಿಯಬೇಕಾದ ಸೈನ್ಯ ಪ್ರಮಾಣದ ಮೇಲೆ ಇನ್ನೂ ಬಿಕ್ಕಟ್ಟು ಉಳಿದಿದೆ. ಇದನ್ನು ಬಗೆಹರಿಸುವುದರಲ್ಲಿ ಯಶಸ್ವಿಯಾಗಬೇಕೆಂಬ ಪ್ರಮುಖ ಉದ್ದೇಶವನ್ನಿಟ್ಟುಕೊಂಡು ಗ್ರಹಾಮರು ಜಿನೀವಾದ ಮಾತುಕತೆಗಳಿಗೆ ಆಹ್ವಾನಕೊಟ್ಟಿದ್ದಾರೆ: ಆದರೆ ಭಾರತ ಸರಕಾರದ ನಿಚ್ಚಳ ನಿಲುಮೆಯಲ್ಲಿ ತಿಲಾಂಶವೂ ವ್ಯತ್ಯಾಸವಾಗಲಾರದಾದುದರಿಂದ, ಈ ಮಾತುಕತೆ ಅಸಫಲಗೊಳ್ಳುವ ಅಂಜಿಕೆ ಇದೆ.

ಉಡುಪಿ

ಉಡುಪಿಯ ಸುಪ್ರಸಿದ್ಧ ಜವುಳಿ ಸಾಹುಕಾರರಾದ ಶೇಠ್ ನೇಲ್ಜಿ ಕಲ್ಯಾಣಜಿಯವರ ಶೋಚನೀಯ ನಿಧನದ ಬಗ್ಗೆ ಸಂತಾಪವನ್ನು ಸೂಚಿಸಲು ಉಡುಪಿಯ ನಾಗರೀಕರ ಶೋಕ ಸಭೆಯು ಒಡಗುಪೇಟೆಯಲ್ಲಿರುವ ಸಾಹುಕಾರ್ ರಾಮಪ್ಪ ತಿಮ್ಮಪ್ಪ ಇವರ 'ಜವಳಿ ಮಹಾಲ್' ಕಟ್ಟಡದಲ್ಲಿ ತಾ. ೨೦ರಲ್ಲಿ ಶ್ರೀ ಟಿ. ಉಪೇಂದ್ರ ಅನಂತ ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು

ಅಧ್ಯಕ್ಷರು ಸಭೆಯ ಉದ್ದೇಶವನ್ನು ತಿಳಿಸಿದ ಬಳಿಕ ಶೇಠ್ ನೇಲಜಿಯವರ ಗುಣವಿಶೇಷಗಳನ್ನೂ ತನಗೆ ಅವರ ಮೇಲೆ ಇದ್ದ ಪೂಜ್ಯ ಭಾವವನ್ನೂ ವಿವರಿಸಿದರು. ಶ್ರೀ ಕೆ. ಶಿವರಾಯ ರಾಮಕೃಷ್ಣ ಪೈಗಳು ಮೃತರ ಸಾತ್ವಿಕ ಗುಣ, ಉದಾರ ಪ್ರಾಮಾಣಿಕತನದ ಜನತಾ ಸೇವೆಯನ್ನೂ ಕೊಂಡಾಡಿದರು

ಡಾ. ಟಿ. ಮಾಧವ ಪೈಯವರು ಸಕಲಭಾರವನ್ನು ದೇವರ ಮೇಲೆ ಇಟ್ಟು ಪ್ರಾಮಾಣಿಕತನದಿಂದ ನಡೆಯುವವರಿಗೆ ದೇವರು ಯಾವ ರೀತಿಯಲ್ಲಿ ಸಹಾಯ ಮಾಡ [illegible] ಕತೆಯೊಂದನ್ನು ಹೇಳಿ ವಿವರಿಸಿ ನೇಲ್ಜಿ ಶೇಠರ ಯೋಗ್ಯ ಸ್ಮಾರಕದ ವ್ಯವಸ್ಥೆಯನ್ನು ಮಾಡುವದು ಯೋಗ್ಯವೆಂದರು.

ಡಾ. ಸುಂದರರಾವ ಪೈಯವರು ನೇಲ್ಜಿ ಶೇಠರ ವ್ಯಾಪಾರವು ಉಡುಪಿಯ ಅಭಿವೃದ್ಧಿಗೆ ಎಷ್ಟು ಕಾರಣವಾಯಿತೆಂದೂ, ವ್ಯಾಪಾರದಲ್ಲಿ ಹಣವೂ ಉತ್ಸಾಹವೂ ಎಷ್ಟು ಅವಶ್ಯಕವೆಂಬುದನ್ನೂ ವಿವರಿಸಿದರು, ಕೆ. ಸುಬ್ರಾಯ ಶೆಣೈಯವರು ಸಹಾಯಕ್ಕೆ ಯೋಗ್ಯರೆಂದು ತಿಳಿದವರಿಗೆ ಅವರು ಹೇಗೆ ಸಹಾಯ ಮಾಡುತ್ತಿದ್ದರೆಂದು ತಿಳಿಸಿದರು.

ಮೌನ ಪ್ರಾರ್ಥನೆಯಾದ ಮೇಲೆ ಅವರ ಸ್ಮಾರಕದ ಬಗ್ಗೆ ಹತ್ತು ಜನರ ಕಮಿಟಿಯೊಂದು ನೇಮಕವಾಗಿ ತಾ. 8-9-1952ರ ಸಂಜೆ ಯೋಗ್ಯ ನಿರ್ಣಯವನ್ನು ಮಾಡುವರೇ ಪುನಃ ಸಭೆ ಸೇರುವುದೆಂದಾಯಿತು. ಅಧ್ಯಕ್ಷರು ಭಾಷಣ ಮಾಡಿ ವ್ಯಾಪಾರಿಗಳಿಗೆ ನೇಲ್ಜಿಯವರ ಜೀವನವು ಮಾದರಿಯಾಗಲೆಂದರು.

ಚಂದಾದಾರರಲ್ಲಿ ವಿನಂತಿ

ಇದೇ ಅಗೋಸ್ತು ತಿಂಗಳ ಅಂತ್ಯಕ್ಕೆ 'ನವಯುಗ'ದ 31ನೆಯ ವರ್ಷವು ಪೂರ್ತಿಯಾಗಿ ಸೆಪ್ಟಂಬರ ತಿಂಗಳಿಂದ 32ನೇ ವರ್ಷವು ಆರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವವರು ಈ ಮೊದಲೇ ಅವಧಿ ಮುಗಿದು ಚಂದಾ ಬಾಕಿ ಮಾಡಿಕೊಂಡವರು ಎಲ್ಲರೂ ತಮ್ಮ ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ತ್ವರ್ಯ ಮನಿಯಾರ್ಡರು ಮಾಡಿ ಕಳುಹಿಸಿಕೊಡಬೇಕಾಗಿ ಈ ಮೂಲಕ ಅಪೇಕ್ಷಿಸುತ್ತೇನೆ.

ಮೆನೇಜರ್, ನವಯುಗ ಉಡುಪಿ.

ನಡೆಯುವ ಚಿತ್ರ
ಅಡವಿಯ ಒಡವೆಗಳನ್ನು ತಂದು ಅದ್ಭುತವಾಗಿ ತೋರಿಸಿದ ಸಾರಿ ಮೌಂಟ್‌ನವರ
ಅರಣ್ಯ ಚಿತ್ರ
ದಿ ಕಿಂಗ್ ಓಫ್ ದಿ ಜಂಗಲ್
ಇಂಗ್ಲಿಷ್
ಮುಂದಿನ ಚಿತ್ರ ಸನಮ್
ದೇವ ಆನಂದ್, ಸುರೈಯ್ಯಾ, ಗೋಪ್,
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಶಿರ್ವ— ಶಿರ್ವ ಲೋಕಲ್ ಫಂಡ್ ಆಸ್ಪತ್ರೆಯ ಮೆಡಿಕಲ್ ಆಫೀಸರಾದ ಜನಪ್ರಿಯ ಡಾಕ್ಟರ್ ಕೆ. ಕೆ. ರೈಗಳವರಿಗೂ, ಅವರ ಧರ್ಮ ಪತ್ನಿಯವರಿಗೂ ವಿದಾಯ ಸತ್ಕಾರಕೂಟವೊಂದು ತಾ. 28-7-52ರಲ್ಲು ಹಿಂದೂ ಹೈಸ್ಕೂಲ್ ಮತ್ತು ಹಾಯರ್ ಎಲಿಮೆಂಟರಿ ಶಾಲಾ ಅಧ್ಯಾಪಕ ವೃಂದದವರಿಂದಲೂ, ಶಾಲಾ ಆಡಳಿತ ಸಮಿತಿಯವರಿಂದಲೂ ಕೊಡಲ್ಪಟ್ಟಿತು. ಶಾಲಾ ಮೆನೇಜರ್ ಶ್ರೀ ಕೆ. ಮುದ್ದು ಶೆಟ್ರವರೂ, ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಬಿ. ಜಯರಾಮ ಶೆಟ್ರು, ಅಲ್ಲದೆ ಶ್ರೀ ವಿಠಲ ಮಾರ್ಲರೂ ಮಾತಾಡುತ್ತಾ ಡಾಕ್ಟರ್ ರೈಗಳು ಶಾಲೆಗೂ ಊರಿಗೂ ಸಲ್ಲಿಸಿದ ಸೇವೆಯನ್ನು ಶ್ಲಾಘಿಸಿ ಅವರನ್ನು ಅಭಿನಂದಿಸಿದರು. ಡಾಕ್ಟರು ರೈಗಳು ಶಾಲೆ ಮತ್ತು ಊರಿನ ಶ್ರೇಯೋಭಿವೃದ್ಧಿಯನ್ನು ಕೋರಿದರು. ನಂತರ ಲಘು ಉಪಹಾರ ಮತ್ತು ಗ್ರೂಪ್ ಫೋಟೊದೊಂದಿಗೆ ಸಮಾರಂಭವು ಮುಕ್ತಾಯವಾಯಿತು.

ಹಿಂದೂ ಹೈಸ್ಕೂಲಿನ ವಿದ್ಯಾರ್ಥಿ ನಾಯಕ ಚುನಾವಣೆ ನಡೆದು ಕೆ. ವಿಜಯ ಶೆಟ್ಟಿ, ಮತ್ತು ವಿಶ್ವನಾಥಶೆಟ್ಟಿ ಇವರು ಮುಖ್ಯ ಮತ್ತು ಉಪ ಮುಖ್ಯ ಮಂತ್ರಿಗಳಾಗಿ ಚುನಾಯಿತರಾಗಿದ್ದಾರೆ.

ಭೈರಂಜೆ- ಶ್ರೀ ಶಾರದಾ ಎಯಿಡೆಡ್ ಎಲಿಮೆಂಟರಿ ಶಾಲೆಯಲ್ಲಿ ತಾ 21ರಲ್ಲು ಶ್ರೀ ವಾಣಿ ವಯಸ್ಕರ ಶಿಕ್ಷಣ ಕೂಟದ ಪ್ರಾರಂಭೋತ್ಸವವು ಶ್ರೀ ಎಮ್. ಗೋವಿಂದ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪಿ. ಗೋವಿಂದ ನಾಯ್ಕರು ಉದ್ಘಾಟನಾ ಭಾಷಣ ಮಾಡಿದರು. ಸಭಿಕರ ಮಾತುಗಳಾಗಿ ಶಾಲಾ ಮುಖ್ಯೋಪಾಧ್ಯಾಯರ ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಕಿನ್ನಿಗೋಳಿ- ಸ್ಥಳೀಯ ಹುಡುಗಿಯರ ಪ್ರೌಢ ಶಾಲೆಯಲ್ಲಿ ಪಂಚಾಯತ ಬೋರ್ಡಿನ ನೇತೃತ್ವದಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ ಅವರ ಅಧ್ಯಕ್ಷತೆಯಲ್ಲಿ ತಾ 30ರಂದು ವನಮಹೋತ್ಸವ ಸಮಾರಂಭ ನಡೆಯಿತು. ಇದೇ ಸಂದರ್ಭದಲ್ಲಿ ಅಧ್ಯಕ್ಷರು ವರ್ಗವಾಗಿ ಹೋಗಲಿರುವ ಕಾರಣ ಅವರನ್ನು ಬೀಳ್ಕೊಡುವ ಕಾರ್ಯಕ್ರಮವೂ ನಡೆಯಿತು, ಡಾ. ಚಂಪ, ಡಾ. ಗೋವಿಂದರಾವ್, ಡಾ. ಯು. ಪಿ. ಮಲ್ಯ, ಪಂಚಾಯತ್ ಆಫೀಸರ್, ಶ್ರೀ ಕೆ. ಶೀನ ಶೆಟ್ಟಿ, ಡಾ. ನಾಗಪ್ಪ ಆಳ್ವ ಮೊದಲಾದವರ ಭಾಷಣಗಳಾದುವು. ಕೊನೆಗೆ "ರಾಜರತ್ನಪುರ" ಎಂಬ 30--40 ಮನೆಗಳ ಕೊಲೊನಿಯನ್ನು ವಿದ್ಯಾಧಿಕಾರಿಗಳು ಉದ್ಘಾಟಿಸಿದರು.

In the Court of the District
Munsif of Kasaragod.

R. I. A. 517/52.

O. S. No. 324/1950.

K. Hussain Saheb ... Plaintiff.
versus
Bombran Andu Beary & Co. ... Defendants

The 8th defendant Abdulla Kunhi minor son of Iddinkunhi Beary and Kunhaluma residing in Koipady Village of Kasaragod Taluq take notice that the above suit for redemption of the arwar deed dated 22-11-1898 for Rs. 1000/- and other relief stands posted to 16-8-'52. R. I. A. No. 517/52 has been filed for appointment of the 2nd defendant Kunhaluma as guardian of the minor 8th defendant. If the proposed guardian of the defendant fails to appear before the above Court at 11 A. M. on that day and urges her objections, if any to her being appointed as such guardian the suit will be proceed after setting her exparte.

Sd **M. A. Krishna Rao,**
Advocate for Plaintiff

Kasaragod. 4-8-52.

ಕುಂಬಳೆ- ಸ್ಥಳೀಯ ಗ್ರಾಮಪಂಚಾಯತದವರು ಕಟ್ಟಿಸಿದ ಕಮ್ಯೂನಿಟಿ ಹಾಲನ್ನು ತಾ 31ರಂದು ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ ಅವರು ಉದ್ಘಾಟಿಸಿದರು. ಸಂಘದ ಅಧ್ಯಕ್ಷ ಡಾ. ಕೆ. ಎನ್. ನಾಯ್ಕರು ಸ್ವಾಗತ ಮಾತುಗಳನ್ನಾಡಿದರು. ಈ ಸಮಾರಂಭಕ್ಕೆ ಪುತ್ತೂರು ಡಿವಿಜನಲ್ ಆಫೀಸರ್ ಶ್ರೀ ಬಿ ಎನ್. ಹೆಗ್ಡೆ, ಜಿಲ್ಲಾ ಹರಿಜನ ವೆಲ್ಫೇರ್ ಆಫೀಸರ್ ಶ್ರೀ ಪಿ. ಎಸ್. ತಿಮ್ಮಪ್ಪ ಸೆಟ್ಟಿ ಮೊದಲಾದವರು ಆಗಮಿಸಿದ್ದರು.

ಉಡುಪಿ.

ತಾತ್ಕಾಲಿಕ ಒಡಂಬಡಿಕೆ— ನೇಯಿಗೆ ಮಾಲಕ—ಮಜೂರರೊಳಗಿನ ವಿವಾದದಿಂದಾಗಿ ಅನ್ನಸತ್ಯಾಗ್ರಹವನ್ನು ಕೈಕೊಂಡ ಶ್ರೀಗಳಾದ ದಾಸ ಸೇರಿಗಾರ ಮತ್ತು ಶೇಷಪ್ಪ ಮಡಿವಾಳರು ತಾ 3ರಂದು ತಮ್ಮ ಸತ್ಯಾಗ್ರಹವನ್ನು ನಿಲ್ಲಿಸಿದರು. ಕುಂದಾಪುರ ಡಿವಿಜನಿನ ಸಬ್ ಕಲೆಕ್ಟರ್ ಮೂಲಕ ಮಜೂರ ಪ್ರತಿನಿಧಿಗಳೊಡನೆ ಮಾತುಕತೆ ನಡೆಸಿ ಲೇಬರ್ ಕಮಿಶನರ್ ಬಂದು ಅವರು ತೀರ್ಮಾನ ಮಾಡುವ ವರೆಗೆ ತಾತ್ಕಾಲಿಕ ಒಡಂಬಡಿಕೆಯನ್ನು ಎರಡು ಪಂಗಡದವರೂ ಒಪ್ಪುವಂತೆ ಮಾಡಿದರು. ವಾರಿಗೆ 0-4-6ಪೈಯಂತೆ ಮಜೂರಿ ವಾರಕ್ಕೆ ತಲಾ ಒಂದರ ರೂ1-4-0 ರಂತೆ ಅಧಿಕಪ್ರತಿಫಲ ಕೊಡುವುದೇ ಒಡಂಬಡಿಕೆಯ ಮುಖ್ಯ ಅಂಶ; ಸಂಜೆ ಮಜೂರರ ಮೆರವಣಿಗೆಯಾಗಿ ರಥಬೀದಿಯಲ್ಲಿ ಶ್ರೀ ಕೃಷ್ಣ ಸೆಟ್ರ, ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು ಶ್ರೀ ಸಿಂಪ್ಸನ್ ಸೋನ್ಸರು ಅಧ್ಯಕ್ಷ ಭಾಷಣವಿತ್ತರು,

ಎಮ್. ಜಿ. ಎಮ್. ಕಾಲೇಜು ಯೂನಿಯನ್ – ಉದ್ಘಾಟನೆಯನ್ನು ತಾ 1ರಲ್ಲು ಸಂಜೆ ಮಂಗಳೂರಿನ ಸರಕಾರಿ ಟ್ರೈನಿಂಗ್ ಕಾಲೇಜ ಪ್ರಿನ್ಸಿಪಾಲ್ ಶ್ರೀ ಬಿ. ರಾಘವ ಬಾಳಿಗರು ನೆರವೇರಿಸಿದರು. ಕಾಲೇಜು ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು.

ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜು ಸಂಘಗಳ ಚುನಾವಣೆಯು— ಈಚೆಗೆ ನಡೆಯಿತು ಫಲಿತಾಂಶ ಹೀಗಿದೆ:- ಪ್ರಿನ್ಸಿಪಾಲ್ ಎಚ್. ಸುಂದರರಾಯರು ಎಲ್ಲಾ ಸಂಘಗಳಿಗೂ ಅಧ್ಯಕ್ಷರು ಕಾಲೇಜು ಯೂನಿಯನ್: ಶ್ರೀಗಳಾದ ಕೆ. ಎಸ್. ಕಾಮತ್ ಮತ್ತು ಎಮ್. ವಿ. ನಾರಾಯಣರಾವ್ [ಉಪಾಧ್ಯಕ್ಷರು], ಶ್ರೀ ಜೆ. ಸಿ. ರೇಗೊ ಮತ್ತು ಕುಮಾರಿ ಸುಮನ [ಜತೆ ಕಾರ್ಯದರ್ಶಿಯರು]. ಭಾಷಾ ಸಂಘ: ಶ್ರೀಗಳಾದ ಪಿ ಎನ್. ಅಯ್ಯಂಗಾರ್ ಮತ್ತು ಎಮ್. ಕೆ. ಟಿ. ಪಣ್ಣೀಕರ್ [ಉಪಾಧ್ಯಕ್ಷರು], ಶ್ರೀಗಳಾದ ಕೇಶವ ಪೈ ಮತ್ತು ಶೇಷಗಿರಿ ಪ್ರಭು [ಜತೆ ಕಾರ್ಯದರ್ಶಿಗಳು] ಕಲಾಸಂಘ: ಶ್ರೀ ಕು. ಶಿ. ಹರಿದಾಸ ಭಟ್ [ಉಪಾಧ್ಯಕ್ಷ], ಶ್ರೀ ಭಾಸ್ಕರ ಸೆಟ್ಟಿ [ಕಾರ್ಯದರ್ಶಿ] ವಿಜ್ಞಾನ ಸಂಘ: ಶ್ರೀ ಆರ್. ಎಸ್. ಮಾಧವರಾವ್ [ಉಪಾಧ್ಯಕ್ಷ] ಶ್ರೀ ರವಿರಾಜ [ಕಾರ್ಯದರ್ಶಿ]. ಕಾಲೇಜು ಆಟ: ಶ್ರೀ ಬಿ. ವಿ. ಆಚಾರ್ ಮತ್ತು ಕುಮಾರಿ ಶಾಲಿನಿ [ಉಪಾಧ್ಯಕ್ಷರು], ಶ್ರೀ ಆರ್. ಎಸ್. ಮೈಲಾರ ಮತ್ತು ಕುಮಾರಿ ಯಶವಂತಿ ಸೆಟ್ಟಿ [ಜತೆ ಕಾರ್ಯದರ್ಶಿಯರು]. ಪಂದ್ಯಾಟ: ಶ್ರೀ ಡಿ. ಎನ್. ಸೋಮಸುಂದರ್ [ಉಪಾಧ್ಯಕ್ಷ], ಶ್ರೀ ಯು. ದಾಮೋದರ ಮತ್ತು ಕುಮಾರಿ ಸಬಿತಾ [ಜತೆ ಕಾರ್ಯದರ್ಶಿಯರು].

ಕಟಪಾಡಿ – ಸ್ಥಳೀಯ ಎಸ್. ವಿ. ಎಸ್. ಹೈಸ್ಕೂಲಿನ ಹೊಸ ಕಟ್ಟಡದ ಪ್ರಥಮ ಬ್ಲೋಕಿನ ಪ್ರವೇಶ ಸಮಾರಂಭವು ತಾ 8ನೇ ಶುಕ್ರವಾರ ಸಂಜೆ 4 ಗಂಟೆಗೆ ಜಿಲ್ಲಾ ವಿದ್ಯಾಧಿಕಾರಿ ಶ್ರೀ. ರಾಘವ ನಾಯರರ ಅಧ್ಯಕ್ಷತೆಯಲ್ಲಿ ಜರಗಲಿದೆ.

ಕಳೆದ ತಾ 25ರಲ್ಲಿ ಕಾರ್ಕಳದಿಂದ ಉದ್ಯಾವರಕ್ಕೆ ಬರುವ ಹನುಮಾನ್ ಬಸ್ ಉದ್ಯಾವರ ಕಡವಿನ ಸಮೀಪ ಗದ್ದೆಗೆ ಮಗುಚಿಬಿದ್ದು ಕ್ಲೀನರಿಗೆ ಸ್ವಲ್ಪ ಪೆಟ್ಟಾಗಿದೆ, ಪ್ರಯಾಣಿಕರಿಗೆ ಹಾನಿಯಾಗಿಲ್ಲ.

ಭಜನಮಂಗಲ—ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಶ್ರೀ ವೆಂಕಟೇಶ ದೇವಳದಲ್ಲಿ ಕಳೆದ ಆದಿತ್ಯವಾರ ಪ್ರಾರಂಭವಾದ ಭಜನೆ ಸಪ್ತಾಹವು ತಾ. 3ರಲ್ಲು ಮಂಗಲವಾಗಿ ಕೊನೆಗೊಂಡಿತು ಸುಮಾರು 10ವರ್ಷಗಳಿಂದ ನಿಲ್ಲಿಸಲ್ಪಟ್ಟಿದ್ದ ಬೋಜನ ಸಮಾರಂಭವು ಈ ವರ್ಷ ಆರಂಭಿಸಲ್ಪಟ್ಟಿತು 6-7 ಸಾವಿರಜನರಿಗೆ ಸಂತರ್ಪಣೆಯಾಯಿತು.

The Vijaya Bank Ltd., Udipi.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್, ಉಡುಪಿ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದ ಈಡಿನ ಮೇಲೆ ಸಾಲ ಪಡಕೊಂಡು, ಕ್ಲಪ್ತ ವಾಯಿದೆಗೆ ಅಸಲು, ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿರುವುದರಿಂದಲೂ, ಸದ್ರಿ ಸಾಲವನ್ನು ಬರಮಾಡಿ ಕೊಳ್ಳುವರೆ ಅವರಿಗೆ ರಿಜಿಸ್ತ್ರಿ ನೋಟೀಸು ಬಿಟ್ಟಲ್ಲಿಯೂ, ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ತಾ. 16-8 52ನೇ ಶನಿವಾರ ಘಂಟೆ 2ಕ್ಕೆ ಸರಿಯಾಗಿ ಅಥವಾ ಬ್ಯಾಂಕಿಗೆ ಯುಕ್ತ ಕಂಡ ಇತರ ಯಾವುದೇ ದಿನಗಳಲ್ಲಿ ಪುನಹ ನೋಟೀಸು ಕೊಡದೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು ತಿಳಿದಿರಲಿ.

ಲೋನು ನಂಬ್ರ	ಹೆಸರು ಮತ್ತು ವಿಳಾಸ	ಅಸಲು ಮೊಬಲಗು ಬಡ್ಡಿ ಸಮೇತ 30-6-52 ರ ವರೆಗೆ	
		ರೂ.	ಆ.
45/51	ಕೆ. ಪಿ. ನಾರಾಯಣ ತಂತ್ರಿ, ಪದ್ಮನಾಭ ತಂತ್ರಿಗಳ ಮಗ; ಕೊರಂಗ್ರಪಾಡಿ, ಪೋಸ್ಟು ಕೊರಂಗ್ರಪಾಡಿ	190	1
182/51	ಕೃಷ್ಣಯ್ಯ ಸೆಟ್ಟಿ, ಸದಿಯ ಸೆಟ್ರ ಅಳಿಯ, ಹಾವಂಜೆ ಗ್ರಾಮ ದಾಸಬೆಟ್ಟು, ಪೋಸ್ಟು ಕೊಳಲಗಿರಿ	67	3
231/51	ಬಿ. ಅಣ್ಣಯ್ಯ ಸೆಟ್ಟಿ, ಬಾಬು ಸೆಟ್ರ ಮಗ C/o V C. & Ltd , Kalliapur	21	4
245/51	ಯುಮ್. ಯಸ್. ನೇಮರಾಜ ಭಂಡಾರಿ, ಯಚ್. ಸಿ. ಶಾಂತು ಅತಿಕಾರಿಗಳ ಮಗ, ಟಿಂಬರ್ ಮರ್ಚಂಟ್ ಮುನಿಯಾಲು, ಪೋಸ್ಟು ಮುನಿಯಾಲು	83	0
250/51	ಡಿ. ಸುಬ್ಬಯ ಹೆಗ್ಡೆ, ದಾಸ ಹೆಗ್ಡೆಯವರ ಅಳಿಯ ಬೊಮ್ಮರ್ಬೆಟ್ಟು ಗ್ರಾಮ, ಪೋಸ್ಟು ಹಿರಿಯಡ್ಕ	703	1
260/51	ಕೆ. ಯು. ಮಂದಾಕಿನಿ ಅಮ್ಮ C/o ಯಸ್. ವೆಂಕಟರಾಜ, ಅಜ್ಜರಕಾಡು, ಉಡುಪಿ	42	0
336/51	ಶೇಕ್ ಪೀರು ಸಾಹೇಬ್, ಶೇಕ್ ಹುಸೇನ್ ಸಾಹೇಬರ ಮಗ 76 ಬಡಗಬೆಟ್ಟು, [illegible] ಉಡುಪಿ	86	6
345/51	ಯಸ್. ವಿಠಲದಾಸ್, ಸುಬ್ಬಣ್ಣ ಯಾನೆ ರಾಮದಾಸರ ಮಗ, ಕಿನ್ನಿಮೂಲ್ಕಿ, ಉಡುಪಿ	48	3
408/51	ಕೆ. ಜಿ. ಶೀನಪ್ಪ ಶೆಟ್ಟಿ, ಬಪ್ಪ ಶೆಟ್ರ ಅಳಿಯ, ಆದಿಉಡುಪಿ, ಪೋಸ್ಟು ಉಡುಪಿ	90	3
429/51	ಲೆಟೀಸಿಯಾ ಮಿನೇಜಸ್, ಕಾಸ್ಮಿರ್ ಮೆನೇಜಸರ ಹೆಂಡತಿ ಕೋರ್ಟು ರಸ್ತೆ, ಉಡುಪಿ	53	11
11/52	ಮಂದಾಕಿನಿ ಅಮ್ಮ ಮಾಧವ ಆಚಾರ್ಯರ ಮಗಳು C/o ಯಸ್. ವೆಂಕಟರಾಜ, ಅಜ್ಜರಕಾಡು, ಉಡುಪಿ	151	5
40/52	ಯಚ್. ಡಿ. ಮೆಂಡನ್, ಅಕೌಂಟೆಂಟ್, ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್ ಉಡುಪಿ	96	7
45/52	ಅನಂತ ಸೆಟ್ಟಿ, ತಿಮ್ಮಪ್ಪ ಸೆಟ್ಟಿ ಮಗ, ಕೊಡವೂರು ಗ್ರಾಮ, ಕಾನ, ಪೋಸ್ಟು ಕೊಡವೂರು	155	4

Udipi,
2-8-52.

B. S. S. Hegde,
Agent, Udipi Branch.

For Protection and Provision

Consult

The New Guardian of India Life Insurance Co., Ltd.

Estd] Head office: **MADRAS** [1934

A Policy in this Progressive Life Office is good investment; its Agency is valuable business connection.

Applications for representation are invited from influential persons.

Please apply to:
The Branch Manager,
Diamond Building, Hampankatta,
MNGALORE, S. K.



ಮಂಗಳೂರು

ವಿದಾಯ ಸತ್ಕಾರ– ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ, ಅವರು ವರ್ಗವಾಗಿ ತೆರಳಲಿರುವುದರಿಂದ ಅವರನ್ನು ಬೀಳ್ಕೊಡುವ ಸತ್ಕಾರ ಸಮಾರಂಭವು ತಾ 31ರಂದು ಪಾವೂರು ಹರೇಕಳ ಗ್ರಾಮಾಭಿವೃದ್ಧಿ ಸಂಘದ ಕಡೆಯಿಂದ ಜರಗಿತು. ಡಾ| ಕೆ ನಾಗಪ್ಪ ಆಳ್ವ, ಶ್ರೀಗಳಾದ ತಿಮ್ಮಪ್ಪ ಸೆಟ್ಟಿ, ಎ. ಸಿ. ಮಥಾಯಿ ಮೊದಲಾದವರು ಶ್ರೀ ರಾಜರತ್ನಮರು ಜಿಲ್ಲೆಗೆ ಸಲ್ಲಿಸಿದ ಸೇವೆ ಮುಂತಾದ ಕೆಲಸಗಳ ಕುರಿತು ಮಾತನಾಡಿದರು. ಇದರಂತೆ ಸ್ಯಾಂಟ್ ಪಾಲ್ ಚರ್ಚಿನ ಸದಸ್ಯರೂ, ಭಗಿನಿ ಸಮಾಜದವರೂ ಶ್ರೀಯುತರಿಗೆ ಸತ್ಕಾರವನ್ನಿತ್ತು ಗೌರವಿಸಿದರು.

ನಗರ ಸಭೆಯು– ತಾ 26ರಲ್ಲು ಉಪಾಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ನಿವೃತ್ತರಾದ ದಫೇದಾರ ಬೊಗ್ಗು ಸೆಟ್ಟರು ತನಗೆ ಸಂಭಾವನೆಯಲ್ಲಿ ಅಧಿಕವೀಯಬೇಕೆಂಬ ಅರ್ಜಿಯನ್ನು ಈಗ್ಗೆ ಎರಡು ಸಭೆಗಳಲ್ಲಿ ಮುಂದುವರಿಸಲಾಗುತಿದ್ದುದು ಚರ್ಚಿಸಲ್ಪಟ್ಟು ನಿಯಮದಂತೆ ರೂ 500/- ಅಲ್ಲದೆ ಸುಮಾರು ರೂಪಾಯಿ 300/- ದಷ್ಟು ಕೊಡಲು ಸರಕಾರದ ಒಪ್ಪಿಗೆಗೆ ಬರೆಕೊಳ್ಳಲಾಯಿತು.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ವಿಶೇಷ ಮಹಾಸಭೆಯು ಪದಾಧಿಕಾರಿಗಳ ಹಾಗೂ ಕಾರ್ಯಕಾರಿ ಕಮಿಟಿಯ ಆಯ್ಕೆಗಾಗಿ ಇದೇ ತಾ. 11ರಲ್ಲು ಅಪರಾಹ್ನ 3 ಗಂಟೆಗೆ ಕಮಿಟಿಯ ಹೊಸ ಕಚೇರಿ ‹ಲ್ಯಾಟ್‌ಹೌಸ್ ಹಿಲ್ಲ್'ನಲ್ಲಿ ಜರಗಲಿರುವುದು.

ಆಸಿಸ್ಟ್ಯಾಂಟ್ ಬಿಶೋಪರ ನೇಮಕ– ಬೆಂದೂರು ಇಗರ್ಜಿಯ ಪ್ರಧಾನ ಗುರುಗಳಾದ ರೆ| ಫಾ| ಬಿ. ಎಸ್. ಪೆರೀಸ್ ರವರು ಅಸಿಸ್ಟ್ಯಾಂಟ್ ಬಿಶೋಪರಾಗಿಯೂ ಮತ್ತು ಅದೇ ಇಗರ್ಜಿಯ ಇನ್ನೊಬ್ಬ ಗುರುಗಳಾದ ರೆ| ಫಾ| ಎಮ್. ಫೆರ್ನಾಂಡಿಸರು ಶಂಕರನಾಡಿ ಆಸ್ಪತ್ರೆಯ ಅಸಿಸ್ಟ್ಯಾಂಟ್ ಡೈರೆಕ್ಟರರಾಗಿಯೂ ನೇಮಕಹೊಂದಿರುವರು.

ಆಸವಾರಿಷ್ಟಗಳ– ವಿಷಯ ವೈದ್ಯರ ಮನವಿಗಳಿಗೆ ಮಾನ್ಯ ಶ್ರೀ ರಾಜಾಜಿಯವರು ಸಹಾನುಭೂತಿಯಿಂದ ವಿಚಾರಿಸುವುದಾಗಿಯೂ ಹೊಸ ಹುಕುಮನ್ನು ಅಮಾನಾತಾಗಿರಿಸುವುದಾಗಿಯೂ ಭರವಸೆ ಇತ್ತಿದ್ದಾರೆಂದು ತಿಳಿದುಬರುತ್ತದೆ.

ಶ್ರೀ ಕಾರಂತರ ಭಾಷಣ– ಇಂಗ್ಲಂಡು, ಯುರೋಪುಗಳ ಪ್ರವಾಸವನ್ನು ಮುಗಿಸಿಬಂದ ಶ್ರೀ ಕೆ. ಶಿವರಾಮ ಕಾರಂತರು ತಾ 29ರಲ್ಲು ಸಂಜೆ ಕೆನರಾ ಹೈಸ್ಕೂಲಿನ ಭುವನೇಂದ್ರ ಹಾಲಿನಲ್ಲಿ ತಮ್ಮ ಅನುಭವಗಳ ಕುರಿತು ಭಾಷಣ ಮಾಡಿದರು. ಶ್ರೀ ಎಸ್. ಮುಕುಂದ ರಾಯರು ಧನ್ಯವಾದಗಳನ್ನರ್ಪಿಸಿದರು.

ರಾಜಿ ಪಂಚಾಯತಿಗೆ– ಮಂಗಳೂರಿನ ಐದು ಥಿಯೇಟರುಗಳ ಕೆಲಸಗಾರರಿಗೂ ಮಾಲಿಕರೊಳಗೂ ಕಳೆದ ಒಂದು ವರ್ಷದಿಂದ ನಡೆದಿದ್ದ ವಿವಾದವು ತಾ 25ರಲ್ಲು ಕೊಯಮುತ್ತೂರಿನ ಇಂಡಸ್ಟ್ರಿಯಲ್ ಟ್ರಿಬ್ಯೂನಲ್ ಜಡ್ಜರ ಸಮಕ್ಷಮ ಮಾಲಿಕ ಕೆಲಸಗಾರರ ಪ್ರತಿನಿಧಿಗಳ ರಾಜಿ ಪಂಚಾಯತಿಗೆಯಾಗಿ ತೀರ್ಮಾನವಾಯಿತು.

ನೇಮಕ– ಸೆಂಟ್ರಲ್ ಇಂಟೆಲಿಜೆನ್ಸ್ ಬ್ಯೂರೊ, ಮದ್ರಾಸಿನ ಸ್ಪೆಶಲ್ ಶಾಖಾ ಪೋಲಿಸ್ ಅಧಿಕಾರದಲ್ಲಿದ್ದ ಪೋಲೀಸು ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಶ್ರೀ ಎಮ್. ಕೃಷ್ಣಯ್ಯ ಸೆಟ್ಟರು ಭಾರತದ ಗೃಹವಿಚಾರದ ಇಂಟೆಲಿಜೆನ್ಸ್ ಬ್ಯೂರೊದಲ್ಲಿ ಡೆಪ್ಯುಟಿ ಡೈರೆಕ್ಟರ್ ಆಗಿ ನೇಮಕಹೊಂದಿರುವರು. ಶ್ರೀ ಸೆಟ್ಟರ ವಾಸಸ್ಥಳವು ಮದ್ರಾಸು ಆಗಿದ್ದು ಅವರ ಸುಪರ್ದಿಯಲ್ಲಿ ಮದ್ರಾಸು, ತಿರುವಾಂಕೂರು, ಕೊಚ್ಚಿಗಳನ್ನೊಳಗೊಂಡ ದಕ್ಷಿಣ ವಿಭಾಗವು ಇರುವುದಾಗಿ ತಿಳಿದುಬಂದಿದೆ. ಶ್ರೀಯುತರು ಈಗಾಗಲೇ ಅಲ್ಪಾವಧಿಯ ತರಬೇತಿಗಾಗಿ ಡೆಲ್ಲಿಗೆ ಹೋಗಿರುವರು.

ವರ್ಧಂತ್ಯುತ್ಸವ– ಶ್ರೀ ರಾಜನ್ ಅಯ್ಯರರು ನಡೆಸಿಕೊಂಡು ಬರುವ ನೃತ್ಯ ಕಲಾಲಯದ ವರ್ಧಂತ್ಯುತ್ಸವವು ತಾ. 3ರಂದು ಸಂಜೆ ಬಲ್ಮಠ ಜೋನ್‌ಟೋಸ್ಕೊ ಹಾಲಿನಲ್ಲಿ ಡಾ| ಕೆ, ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು.

ಕಮ್ಯೂನಿಟಿ ಪ್ರೊಜೆಕ್ಟ್– ಯೋಜನೆಯು ನಮ್ಮ ಜಿಲ್ಲೆಯಲ್ಲಿ ಮಂಗಳೂರು, ಕಾರ್ಕಳ ಮತ್ತು ಕುಂದಾಪುರ ತಾಲೂಕುಗಳ ಒಟ್ಟು 302 ಗ್ರಾಮಗಳಿಗೆ ಅನ್ವಯಿಸುವಂತೆ ಕೈಕೊಳ್ಳಲ್ಪಡುವುದು. ಇಷ್ಟು ಕ್ಷೇತ್ರದಲ್ಲಿರುವ ಪ್ರಜೆಗಳ ಸಂಖ್ಯೆ 6,18,000 ಅಂದರೆ ಜಿಲ್ಲೆಯ ಮೂರರಲ್ಲೊಂದು ಅಂಶ ಜನರಿಗೆ ಈ ಯೋಜನೆಯ ಪ್ರಯೋಜನ ದೊರೆಯುವುದು. ಆ 302 ಗ್ರಾಮಗಳ ಒಟ್ಟು ವಿಸ್ತೀರ್ಣ 7,18,500 ಎಕ್ರೆಗಳು. ಇದರ ವ್ಯಯಗಳಿಗೆ ಈಗ ಮಂಜೂರಾಗಿರುವ ಮೊಬಲಗು ಅರುವತ್ತೈದು ಲಕ್ಷ ರೂ. ಗಳು.

ಆರೋಪಿಗಳ ಬಿಡುಗಡೆ — ತಾ. 3-12-1951ರಲ್ಲು ರೈಲು ಓಡುತ್ತಿದ್ದಾಗ ಅದರ ಮೇಲೆ ಕಲ್ಲು ಬಿಸಾಡಿದುದರ ಫಲವಾಗಿ ಒಬ್ಬ ಪ್ರಯಾಣಿಕನಿಗೆ ಪೆಟ್ಟಾಗಿತ್ತು, ಎರಡನೇ ತರಗತಿ ಬಂಡಿಯ ಕಿಟಿಕಿಯ ಗಾಜು ಒಡೆಯಿತು–ಎಂಬೀ ಮೊಕದ್ದಮೆಯಲ್ಲಿ ಶಾಲೆಯ ಐವರು ಬಾಲಕರು (ಎಲ್ಲರೂ ಹನ್ನೆರಡು ವರ್ಷ ವಯಸ್ಸಿನೊಳಗಿನವರು) ಮಂಗಳೂರು ಎಡಿಶನಲ್ ಅಸಿಸ್ಟ್ಯಾಂಟ್ ಸೆಶನ್ಸ್ ಜಡ್ಜರಾದ ಶ್ರೀ ಎನ್. ರಾಮ ಮೂರ್ತಿಯವರ ಮುಂದೆ ನ್ಯಾಯಸ್ಥಾನದಲ್ಲಿ ವಿಚಾರಿಸಲ್ಪಟ್ಟು, ಕಳೆದ ವಾರ “ಅವರು ಸಮೀಪದ ಶಾಲೆಯ ಬಾಲಕರು; ಶಾಲೆಗೆ ಆಟದ ಬಯಲಿರಲಿಲ್ಲ. ಅವರು ಆಡುವಾಗ ಯಾರನ್ನೂ ಹಾನಿಗೊಳಿಸುವ ಉದ್ದೇಶವಿಲ್ಲದ ಕಲ್ಲುಗಳು ಬಂಡಿಗೆ ತಗಲಿರಬಹುದು” ಎಂಬೀ ತರ್ಕದಿಂದ ಅವರೆಲ್ಲರ ಬಿಡುಗಡೆಗೆ ಆಜ್ಞೆಯಾಗಿದೆ. (ಅಂದಿನ ಘಟನೆ ನಡೆದ ರೈಲು ಬಂಡಿಯಲ್ಲಿ ವಸತಿ ಮಂತ್ರಿ ಶ್ರೀ ಎ. ಬಿ. ಶೆಟ್ಟರು ಪ್ರಯಾಣ ಮಾಡುತಿದ್ದರಂತೆ)

ಗವರ್ನಮೆಂಟ್ ಟ್ರೈನಿಂಗ್ ಕಾಲೇಜು– ಶ್ರೀ ಅಚ್ಯುತನ್ ಪಿಳ್ಳೆ, ಪ್ರಿನ್ಸಿಪಾಲ್, ಗವರ್ನಮೆಂಟ್ ಕಾಲೇಜು, ಮಡಿಕೇರಿ, ಇವರು ತಾ 1ರಲ್ಲು ಸಂಜೆ ಸ್ಥಳೀಯ ಟ್ರೈನಿಂಗ್ ಕಾಲೇಜಿನಲ್ಲಿ ಭಾಷಣಮಾಡಿದರು. ಈಗಿನ ವಿದ್ಯಾವಂತರೆನ್ನಿಸಿಕೊಂಡವರು ಅವಿದ್ಯಾವಂತರೊಡನೆ ಬೆರೆತುಕೊಳ್ಳುವುದೇ ಇಲ್ಲ. ಇದರಿಂದ ನಮ್ಮ ದೇಶದಲ್ಲಿ ವಿದ್ಯಾವಂತ ಮತ್ತು ಅವಿದ್ಯಾವಂತರೆಂಬ ಎರಡು ಪಂಗಡಗಳೇ ಉಂಟಾಗಿವೆ ಪ್ರತಿಯೊಬ್ಬ ವಿದ್ಯಾವಂತನೆನಿಸಿಕೊಂಡವನು ಇನ್ನೊಬ್ಬ ಪ್ರೌಢ ಅವಿದ್ಯಾವಂತನಿಗೆ ವಿದ್ಯೆಯನ್ನು ಹೇಳಿಕೊಟ್ಟು ಇಡೀ ನಮ್ಮ ದೇಶವನ್ನು ವಿದ್ಯಾವಂತ ದೇಶವೆನಿಸಿಕೊಳ್ಳುವಂತೆ ಮಾಡಬೇಕು ಎಂದು ಹೇಳಿದರು.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 96/1952

ದಿ ಜನರಲ್ ಇನ್ವೆಸ್ಟ್‌ಮೆಂಟ್ಸ್ ಎಂಡ್ ಕಮ್ಮರ್ಶಿಯಲ್ ಕಾರ್ಪೊರೇಶನ್ ಲಿಮಿಟೆಡ್ ಉಡುಪಿ–ಇದರ ಕಡೆಯಿಂದ ಮೆನೇಜಿಂಗ್ ಡೈರೆಕ್ಟರ್ T. ರಮೇಶ ಪೈ ... ವಾದಿ

ಮತ್ತು

ಎನ್. ಎಸ್. ಹೆಗ್ಡೆ ಇತ್ಯಾದಿ — ಪ್ರತಿವಾದಿಯವರೊಳಗೆ

1ನೇ ಪ್ರತಿವಾದಿ ಎನ್. ಎಸ್. ಹೆಗ್ಡೆ– ಬರ್ಕಪ್ಪ ಹೆಗ್ಡೆರ ಮಗ ಉದ್ಯಾವರ ಗ್ರಾಮ –ಇವರಿಗೆ

ಪ್ರತಿವಾದಿಯು ವಾದಿಗೆ ತಾ 10-11-1951 ರಲ್ಲಿ ರುಪಾಯಿ 700/-ಕ್ಕೆ ಬರೆಕೊಟ್ಟ ಪ್ರಾಮಿಸರಿ ನೋಟಿನ ಅಸಲು ಹಾಗೂ ಬಡ್ಡಿ ಮತ್ತು ಕೋರ್ಟಿನ ಖರ್ಚು ಕೂಡಾ ರೂಪಾಯಿ 718-14-7ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದರಿ ದಾವೆಯ ತಾರೀಕು 20-8-1952ಕ್ಕೆ ಪ್ರಥಮ ತನಿಖೆ ಬಗ್ಗೆ ಯಿಡೋಣಾಗಿಯದೆ. ಆ ದಿವಸ 1ನೇ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉತ್ತರಿಸದೆ ಯಿದ್ದಲ್ಲಿ ಅತನ ಗೈರ್ ಹಾಜರಿಯಿಂದ ಸದರಿ ದಾವೆಯು ತೀರ್ಮಾನಿಸಲ್ಪಡುವದೆಂದು – ಸದ್ರಿ 1ನೇ ಪ್ರತಿವಾದಿಗೆ ಯಿದ ಮೂಲಕ ತಿಳಿಯಪಡಿಸೋಣಾಗಿಯದೆ.

M· Damodar Kamath·
Advocate for Plff·
ಉಡುಪಿ, ತಾರೀಕು 29 7 52

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಚಾಕುಕೊಳ್ಳುವುದು, ಚೇಳವಿಷ ಮುಂತಾದವು, ಒಸ್ವವಾತ, ಮೊಡವೆ ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ

SOVEREIGN-REMEDY
AMRUTANJAN
Best Indian Pain Balm
Amrutanjan Depot
BOMBAY, MADRAS

· BGD
ಬಳಕದ್ದಿ
ಮದ್ದು
ನಮ್ಮಲ್ಲಿ
ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್
ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ

In the High Court of Judicature at Madras

Ordinary Original Civil Jurisdiction.

O. P. No. 202 of 1952.

In the matter of the Indian Companies Act
and
In the matter of the Prabhakara Bank, Ltd.
The Prabhakara Bank, Ltd., Moodbidri, South Kanara
— Petitioner.

NOTICE is hereby given that a petition under section 12 of the Indian Companies Act of 1913 for confirmation of a resolution to shift the registered office of the Company to Bombay was presented by the Petitioner on the 22nd of July 1952 and that the same is directed to be heard by the Judge sitting in Chambers on 25th of August 1952. Any person desirous of supporting or opposing the making of an order as prayed in the Petition should appear at the time of hearing by himself or by his advocate; and a copy of the petition will be furnished to any person on payment of the regulated charge for the same.

1-A, Thomas Road,
T. Nagar, Madras 17.
31st July 1952.

A NARAYANA PAI.
Councel for Petitioner

NOTE:- Any person who intends to appear on the hearing of the said petition must serve on or send by post to the above named notice of his intention so to do. The notice must state the name and address of the person or if a firm the name and address of the firm and must be signed by the person or firm or his or their advocate and must be served and if posted must be sent by post so as to reach the abovenamed not later than 5 O'clock in the afternoon of 24th August 1952.

ಉಡುಪಿ ಶಹರಿನಲ್ಲಿ
ಚಲೋ ಮನೆ ಮಾರಾಟಕ್ಕಿದೆ.

ಉಡುಪಿ ಶಹರಿನ ಮಧ್ಯವರ್ತಿ ಸ್ಥಳದಲ್ಲಿ ವಾಸ್ತವ್ಯಕ್ಕೆ ಅನುಕೂಲವಾದ ಗಾಳಿ ಬೆಳಕು, ನೀರು ಇರುವ ಯೋಗ್ಯ ಉಪ್ಪರಿಗೆಯ ಮನೆ ಮಾರಾಟಕ್ಕಿದೆ ಖಾಯಿಸ ಉಳ್ಳವರು ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಕೂಡಲೇ ಬರೆದು ಕೊಳ್ಳುವುದು.

X C/O ಮೆಜೆಸ್ಟಿಕ್ ಸ್ಟೋರ್ಸ್.
ರಥಬೀದಿ, ಉಡುಪಿ

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 111/52

A ರಾಮಚಂದ್ರ ಕಿಣಿ --ವಾದಿ

ಮತ್ತು

ದಾಮೋದರ ಪ್ರಭು. ಇತ್ಯಾದಿ– ಪ್ರತಿವಾದಿಯವರೊಳಗೆ

ಸದ್ರಿ 1ನೇ ಪ್ರತಿವಾದಿ ದಾಮೋದರ ಪ್ರಭು- 3ನೆ ಶ್ರೀನಿವಾಸ ಪ್ರಭು– 5ನೆ ಸುಂದರ ಪ್ರಭು – ರಾಮ ಪ್ರಭುಗಳ ಮಕ್ಕಳು – ಉಡುಪಿ ತಾಲ್ಲೂಕು ಅಲೆವೂರು ಗ್ರಾಮ– ಇವರಿಗೆ ಯಾ ಮೂಲಕ ತಿಳಿಸುವದೇನೆಂದರೆ:–

ವಾದಿಯು-ಸೂಲಗೇಣಿ ದಾಖಲೆ ಮಾಡಿದ ಮೊಕದ್ದಮೆ–ವ್ಯಾಜ್ಯದ 1-3-5ನೆ ಪ್ರತಿವಾದಿರ ನೋಟಿಸಿನ ಬಗ್ಗೆ ತಾ. 25-8-52ಕ್ಕೆ ಯಿಡೋಣಾಗಿಯದೆ–ಸದ್ರಿ 1-3-5ನೆ ಪ್ರತಿವಾದಿರಿಗೆ ಆಕ್ಷೇಪ ಹೇಳತಕ್ಕದ್ದು ಯಿದ್ರೆ ಸದ್ರಿ ದಿವಸ ಮೇಲ್ಕಂಡ ಕೋರ್ಟಿನಮುಂದೆ ಹಾಜರಾಗಿ ಹಾಜರಿಯಮಾಡಿಕೊಳ್ಳತಕ್ಕದ್ದು.

N. V. Kamath.
Advocate for Plff
ಉಡುಪಿ 4 8-1952

ಲಕ್ಷ್ಮೀ
ಸಂತಾಲ್ ಮಾತ್ರೆ

ಇದರ ಉಪಯೋಗದಿಂದ ಉಷ್ಣದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರದ ಕಟ್ಟು, ಮೂತ್ರದೊಡನೆಯೂ ಮುಂದಾಗಿ ಬಿಳುಪು, ಅರಸಿನ ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವದು, ತೊಡೆ ಸಂದಿನಲ್ಲಿ ಗಂಟು ಬರುವದು, ಕಾಲುಗಂಟು ವೇದನೆ, ಕಣ್ಣನಲ್ಲಿ ಕೀವು ಬರುವದು, ಶರೀರದಲ್ಲಿ ಉಷ್ಣ, ಸ್ವಪ್ನೇಂದ್ರಿಯ, ಸ್ತ್ರೀಯರ ಬಿಳಿ ಸೆರಗು ಇವೆಲ್ಲಾ ಶೀಘ್ರವಾಗಿ ಗುಣ ಹೊಂದುವದು–ಇತರರು ಈಗಿನ ಉಷ್ಣಕಾಲದಲ್ಲಿ ಗವರ್ನಕಂಡುಬಂದರೆ ರಾತ್ರಿ ನಾಲ್ಕು ವಾಗ್ಗೆ ಒಂದು ಮಾತ್ರೆ ಸೇವಿಸಿ ಹಾಲು ಕುಡಿದರೆ ಸುಖವಾಗಿ ನಿದ್ರೆ ಬಂದು ಸುಖಿಗಳೆನಿಸುವದಲ್ಲದೆ ದೇಹದ ಉಷ್ಣ ಮಾಯವಾಗುವದು,

ಶೀಸೆ 1ಕ್ಕೆ ರೂ 1–0–0

ಏಜಂಟ್:
ಷಾ ಕಂಪೆನಿ. ಮಂಗಳೂರು.

ಅತುಲ ಸಾಹಸ

[೧ನೇ ಪುಟದಿಂದ ಮುಂದುವರಿದುದು]

ತೆಗೇ ಆತ್ಮ ನಿರ್ಭಯತೆಯೂ ಅವನ ಶಕ್ತಿಯನ್ನು ಹೆಚ್ಚಿಸಿತು. ಉಳಿದ ರಾಜದರ್ಬಾರಿಗಳಲ್ಲಿ ದೈಹಿಕ ಸಾಮರ್ಥ್ಯ ಅತ್ಯಧಿಕ ಪ್ರಮಾಣದಲ್ಲಿದ್ದಿರಬಹುದು—ಆದರೆ ಅಸತ್ಯವನ್ನು, ಕೆಟ್ಟದನ್ನು ಅವಿವೇಕವನ್ನು ಹಾಗೆಂದು ಪ್ರಕಟವಾಗಿ ಹೇಳುವ ಮಾನಸಿಕ ಬಲ ಅವರಲ್ಲಿರಲಿಲ್ಲ. ವಿಭೀಷಣನ ಸಾಹಸ ಕಾರ್ಯವು ಅತ್ಯಂತ ಪ್ರಶಂಸನೀಯ; ಅದನ್ನೆ ನೈತಿಕಬಲ ಎನ್ನುತ್ತೇವೆ. ನೈತಿಕ ಬಲಕ್ಕಿರುವ ಶಕ್ತಿ ಇನ್ನುಳಿದಾವುದಕ್ಕೂ ಇಲ್ಲ.

ಈ ಬಗೆಯ ನೈತಿಕ ಸಾಹಸವನ್ನು ಎಲ್ಲ ಮಹಾತ್ಮರೂ ತೋರಿದ್ದುಂಟು: ಇಸ್ರಾಯೇಲಿನ ಧುರೀಣ ಮೋಸೆಯು ಫೆರೋ ದೊರೆಯ ಮುಂದೆ ಯಹೂದಿಗಳನ್ನು ಪೀಡಿಸದೆ, ಸ್ವತಂತ್ರರಾಗಿರಿಸಿರಿ ಎಂದಾಗ ಈ ನಿರ್ಭೀಕತೆ ವ್ಯಕ್ತವಾಗಿತ್ತು. ತನ್ನ ಧಾರ್ಮಿಕ ವಿಚಾರ ಪ್ರಣಾಳಿಯನ್ನು ಪ್ರಥಮತಃ ಅರಬ ನಿವಾಸಿಗಳೆದುರು ಮಂಡಿಸಿದಾಗ, ಪೈಗಂಬರ ಮಹಮ್ಮದರಿಗೂ ನೈತಿಕ ಸಾಮರ್ಥ್ಯವೇ ಪ್ರೇರಣೆಯೊದಗಿಸಿತು. "ಪರಸ್ಪರ ಪ್ರೇಮಿಸಿರಿ" ಎಂದು ಸಾರಿದ ಯೇಸುವು ಶಿಲುಬೆಯೇರುವಾಗ ಅಂಜದಿರಲು—ನೈತಿಕ ಬಲವೇ ಕಾರಣ, ಗಾಂಧೀಯ ಪ್ರತಿ ಹೆಜ್ಜೆಗೂ ರಾಮನಾಮವೇ ರಕ್ಷಣೆಯಾಗಿತ್ತು: ನೌಖಾಲಿಯ ದಂಗೆ ಪ್ರದೇಶದಲ್ಲಿ ಪಾದ ಸಂಚಾರ ಮಾಡುವ ಸಾಹಸ ಬೇರೆ ಯಾವ ಮನುಷ್ಯನಲ್ಲಿತ್ತು?

ಅನ್ಯಾಯಿಯಾದ ಮನುಷ್ಯನನ್ನು ಇದ್ದುದಿದ್ದಂತೆ ಇದಿರಿಸುವ ಮತ್ತು ಸತ್ಯನಿಷ್ಠರಾಗಿ ವರ್ತಿಸುವ, ಸಾಹಸವೇ ಸರ್ವೋತ್ಕೃಷ್ಟವೆಂಬುದರಲ್ಲಿ ಪ್ರತಿಮಾತಿಲ್ಲ. ಸರಿಯಾದ ಮಾರ್ಗದಲ್ಲಿ ಮುನ್ನಡೆದು, ಕಷ್ಟನಷ್ಟಗಳನ್ನು ಗಣಿಸದೆ, ಒಳ್ಳೆಯದರ ಕಡೆಗೆ ಹೆಜ್ಜೆಯಿಕ್ಕುವ ನಿರಂತರ ಪ್ರಯತ್ನವು ಅತುಲ ಸಾಹಸವೆನ್ನಬಹುದು. ಈ ಸಾಹಸ ಒಬ್ಬ ಮನುಷ್ಯನಲ್ಲಿದ್ದರೆ—ಅದು ಸರ್ವತ್ರ ಹಬ್ಬುವುದ. ಅವನ ಸಂಪರ್ಕಕ್ಕೆ ಬಂದವರೂ ಧೀರರೂ ಶೂರರೂ ಆಗುವರು

ಭಾರತದ ವಿದೇಶ ಧೋರಣೆಯ ಸಂಬಂಧದಲ್ಲಿ ನೈತಿಕ ಬಲದ ಪ್ರಾಧಾನ್ಯವನ್ನೇ ನಾವು ಕಾಣಬಹುದು: ವಿಶ್ವದ ಪ್ರಬಲ ರಾಷ್ಟ್ರಗಳ ಸೈನ್ಯಸಾಮರ್ಥ್ಯದ ಮುಂದೆ ನಾವು ನಾಚಿ ತಲೆ ತಗ್ಗಿಸಬೇಕಾದೀತು. ಆದರೆ ಪ್ರತಿಯೊಂದು ಪ್ರಶ್ನೆಯನ್ನು ನ್ಯಾಯದ ತಕ್ಕಡಿಯಲ್ಲಿಟ್ಟು, ವಿವೇಕದ ಒರೆಗಲ್ಲಿಗೆ ಹಚ್ಚಿ, ವಿಶ್ವಮಾನವ್ಯದ ನವ್ಯ ದೃಷ್ಟಿಯಿಂದ ನೋಡುವ ನೆಹರೂ ಮಹಾ ಸಾಹಸಿ ಎಂಬಲ್ಲಿ ಸಂದೇಹ ಬೇಡ. ಅನ್ಯಾಯಕ್ಕೆ ಬಗ್ಗದೆ, ಸೋಲು-ಗೆಲವುಗಳಿಗೆ ಹೆದರದೆ, ಸತ್ಯವನ್ನು ಎತ್ತಿಹಿಡಿಯುವ ಭಾರತದ ಧೋರಣೆಯಿಂದಲೇ, ಜಗತ್ತು ನಮ್ಮೆಡೆಗೆ ಅಕ್ಕರೆಗಣ್ಣುಗಳಿಂದ ನೋಡುತ್ತಿದೆ. ಆದರೆ ಒಬ್ಬ ನೆಹರೂವಿನ ಸಾಹಸ—ಜಗತ್ತಿನ ಜನ ಜಂಗುಳಿಯ ಮೇಲೆ ಪೂರ್ಣ ಪ್ರಭಾವ ಬೀರಲಿಕ್ಕಿಲ್ಲ. ಭಾರತೀಯರೆಲ್ಲರೂ ನೆಹರೂನಂಥ ವಿಶಾಲ ಮನೋವೃತ್ತಿ ತಳೆದು, ಬದುಕನ್ನು ಸುಂದರವಾಗಿಸಿದರೆ—ಲೋಕದ ಕ್ಲೇಶ ನಿಂತು, ಸುಖ ಶಾಂತಿ, ಸಮೃದ್ಧಿಗಳು ನೆಲೆಗೊಂಡಾವು.

—ಓಂ ತತ್ಸತ್;

ಕುಂದಾಪುರ, ಡಿ. ಮು. ಕೋರ್ಟಿನಲ್ಲಿ

O. P. 40/52

ಅರ್ಜಿದಾರರು 1 ಪುಟ್ಟಿ, ಸೋಮಯ್ಯ ಮರಕಾಲನ ಹೆಂಡ್ತಿ- ಉಡುಪಿ ತಾಲ್ಲೂಕು ಕುಮ್ರಗೋಡು ಗ್ರಾಮದ ಬೆಣ್ಣೆಕುದ್ರುವಲ್ಲಿರುವವಳು.

2 ವೈನರ ಅಕ್ಕಯ್ಯ 17ವರ್ಷ, ಬಚ್ಚ ಮರಕಾಲನ ಮಗಳು ವ, ಶೀನ ಮರಕಾಲನ ವಿಧವೆ. ಇವಳ ಕ್ಷೇಮ ಚಿಂತಕ ತಂದೆ ಬಚ್ಚ ಮರಕಾಲ, ಉಡುಪಿ ತಾಲ್ಲೂಕು ಹನೆಹಳ್ಳಿ ಗ್ರಾಮದ ಕೂರಾಡಿಯಲ್ಲಿರುವವರು.

ಪೋಸ್ಟು ಬಾರ್ಕೂರು.

ಎದುರು ಯಿಲ್ಲಾ

ಈ ಮೂಲಕ ಎಲ್ಲರಿಗೂ ತಿಳಿಯಪಡಿಸುವದೇನೆಂದ್ರೆ

1ನೇ ಅರ್ಜಿದಾರಳ ಮಗ 2ನೇ ಅರ್ಜಿದಾರಳ ಗಂಡ ಶೀನ ಮರಕಾಲನಿಗೆ, ದಿ ಕೆನರಾ ಮ್ಯೂಚುವಲ್ ಯಿನ್ಸೂರೆನ್ಸ್ ಕಂಪೆನಿಯ 22419ನೇ ಪೋಲಿಸಿ ಬಾಬ್ತು ಬರತಕ್ಕ ಹ್ಯಾವಜಿನ ಬಗ್ಗೆ ಸದ್ರಿ ಕಂಪೆನಿಯ ಮೇಲೆ ಅರ್ಜಿದಾರರು ದಾಖಲ್ಲು ಮಾಡಿದ ಕುಂದಾಪುರ ಡಿ. ಮುನ್ಸೀಫ್-ಕೋರ್ಟು, O. S. 393/51ನೇ ಡಿಕ್ರಿ ಪ್ರಕಾರ ಬರತಕ್ಕ ಪೂರಾ ಹಣ ಬಡ್ಡಿ ಖರ್ಚು ವಗೈರೆಯನ್ನು ವಸೂಲು ಮಾಡು[illegible] ಅರ್ಜಿದಾರರ ಹೆಸರಿಗೆ ವಾರಿಸು ಸರ್ಟಿಫಿಕೇಟು ಕೊಡಬೇಕೆಂತ್ತ ದಾಖಲ್ಲು ಮಾಡಿದ ಮೇಲಿನ ಅರ್ಜಿಯು ತಾರೀಕು 16-8-1952ಕ್ಕೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ತನಿಕೆಗೆ ಯಿಟ್ಟಿರುತ್ತದೆ. ಆ ಕುರಿತು ಯೇನಾದ್ರೂ ಆಕ್ಷೇಪವಿದ್ದವರು ಸದ್ರಿ ದಿವ್ಸ 11ಗಂಟೆಗೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದ್ರೆ ಗೈರು ಹಾಜರಿಯಿಂದ ತೀರ್ಮಾನಿಸಲಾದೀತೆಂತ್ತ ಕೋರ್ಟು ಹುಕ್ಮಿನ ಪ್ರಕಾರ ತಿಳಿಸಿಯದ.

V. S. Shetty.
Advocate for petitioners
ತಾ. 26-7-52 ಕುಂದಾಪುರ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K

ಬೆಂಗ್ರೆಯಲ್ಲಿ ಬೀಕರ ಅನಾಹುತ!

ನಷ್ಟಕಷ್ಟಕ್ಕೊಳಗಾದವರಿಗೆ ಸಹಾಯದ ಆವಶ್ಯಕತೆ

ಪಂಚಮಹಾಭೂತಗಳಲ್ಲಿ ಪ್ರತಿಯೊಂದಕ್ಕೂ ಪ್ರಬಲವಾದ ಶಕ್ತಿ ಇದ್ದೇ ಇದೆ. 1948ರಲ್ಲಿ ಬೊಂಬಾಯಿಯಲ್ಲಿ ಬಿರುಗಾಳಿ ಎದ್ದು ಆದೆಷ್ಟು "ಅಮರ ಮಹಲ್" ಎಂದೆನ್ನಿಸಿಕೊಳ್ಳುವ ಮಹಾ ಮಹಾ ಏಳು ಮಹಡಿಯ ಕಟ್ಟಡಗಳನ್ನು ನೆಲಸಮವಾಗಿ ಮಾಡಲಿಲ್ಲ! ಅಸ್ಸಾಂ, ಕ್ವೆಟ್ಟಾ, ಮೊದಲಾದ ಪ್ರದೇಶಗಳಲ್ಲಿ ಮಹಾಪೂರ ಮತ್ತು ಭೂಕಂಪ ಮೊದಲಾದವುಗಳಿಂದ ಆದೆಷ್ಟು ಹಾನಿಯಾಗಲಿಲ್ಲ. ಇದರಂತೆಯೇ ನಮ್ಮ ಜಿಲ್ಲೆಯ ಉಡುಪಿ ತಾಲೂಕಿನ ಹಂಗಾರಕಟ್ಟೆಯ ಹತ್ತಿರ ಇರುವ "ಬೆಂಗ್ರೆ" ಎಂಬ ಸ್ಥಳದಲ್ಲಿಯೂ ಇತ್ತೀಚೆಗೆ ಎಷ್ಟೋ ಅನಾಹುತಗಳು ಸಮುದ್ರರಾಜನಿಂದ ಒದಗಿರುವುವು

ಬಹಳ ಹಿಂದೆ ಅಂದರೆ ಬಾರಕೂರು ರಾಜ್ಯಧಾನಿಯಾಗಿರುವಾಗ ಈ ಬೆಂಗ್ರೆ ಎನ್ನುವ ಜಾಗವು ಸಮುದ್ರವಾಗಿಯೇ ಇತ್ತಂತೆ ಕ್ರಮೇಣ ಅಲ್ಲಿ ಹೊಯ್ಗೆ ಬಂದು ನಿಂತು ಈಗ ಅದು ಬೆಂಗ್ರೆ ಎಂದೆನಿಸಿಕೊಂಡಿದೆ. ಈ ಬೆಂಗ್ರೆಯು ಇನ್ನು ಕೆಲವೇ ದಿನಗಳಲ್ಲಿ ಈ ಮೊದಲಿನ ರೂಪವನ್ನೇ ಹೊಂದುವುದೋ ಎಂಬ ಭೀತಿಗೆಡೆ ಇದೆ ಈಗ.

ಮರಗಿಡಗಳು ಉರುಳುವುದಕ್ಕೆ ಲೆಕ್ಕವೆ ಇಲ್ಲ. 6—7 ಸಾವಿರ ತೆಂಗಿನ ಮರಗಳೇ ಉರುಳಿರಬಹುದು, 40-50 ಎಕ್ರೆ ಬಾಗಾಯ್ತು ಕೊರೆಕೊರೆದು ಹೋಗಿ ಈಗ ಜಲಮಯವಾಗಿದೆ ಇದರಿಂದಲೂ ಸಮುದ್ರರಾಜನಿಗೆ ತೃಪ್ತಿಯಾಗದೆ ಮನೆ ಮಾರು, ಗುಡಿ, ಮೊದಲಾದುವನ್ನೂ ಕೆಡಹಿ ಅದನ್ನೂ ತನ್ನ ಉದರದಲ್ಲಡಗಿಸಿಕೊಂಡನು ಈ ವರೆಗೆ ಸಣ್ಣ ದೊಡ್ಡ 120ರಷ್ಟು ಮನೆಗಳು ಬಿದ್ದಿರಬಹುದು ಬೆಳಿಗ್ಗೆ ಇದ್ದ ಮರ ಮನೆ ಸಾಯಂಕಾಲವಿಲ್ಲ. ಒಂದೊಂದು ಅಲೆಯು ಎದ್ದು ಮಗುಚಿ ಅದರ ನೀರು ಈಚೆಗಿನ ಹಂಗಾರಕಟ್ಟೆಯ ಹೊಳೆಗೆ ಹರಿಯುತ್ತಿದೆ.

ದೈವದ ಮನೆಯೂ ಬಿದ್ದಿತು. ದೊಡ್ಡ ದೊಡ್ಡ ಮನೆಯೂ ಬಿದ್ದವು. ನೂತನ ಸಂಗ್ರಹಕ್ಕೆಂದು ಮಾಡಿದ ಕಪಟ ಎನ್ನುವ ಜಾಗವೂ ತೊಳೆದು ಹೋಯಿತು. ಹೀಗೆ ದಿನೇ ದಿನೇ ತನ್ನ ಶಕ್ತಿಯನ್ನು ಮೀರಿ ಕೆಲಸ ಮಾಡುತ್ತಿದೆ. ಆ ಬೆಂಗ್ರೆಯಲ್ಲಿ ಮೊದಲು ಸಮುದ್ರಕ್ಕೂ ಹೊಳೆಗೂ ನಡುವೆ ಸುಮಾರು ಅರ್ಧ ಮೈಲು ಅಗಲ ದಂಡೆ ಇತ್ತು-ಇದು ಕ್ರಮೇಣ ಕೊರೆಯುತ್ತಾ ಬರುತ್ತಿದೆ.

ಒಬ್ಬೊಬ್ಬರ ಮುಖದ ಮೇಲೆ ಒಂದಿಷ್ಟು ಕಳೆ ಎನ್ನುವುದೇ ಇಲ್ಲ ಇನ್ನೆಷ್ಟು ಹೊತ್ತಿನಲ್ಲಿ ತಮ್ಮ ಮನೆಯು ಬಲಿಯಾಗಲಿದೆಯೋ ಎಂಬ ಭೀತಿ ಆವರಿಸಿದೆ. ಪ್ರತಿಯೊಬ್ಬರಿಗೂ ಊಟ ಬೇಡ, ನಿದ್ರೆಯು ಮೊದಲೇ ಬರಲಾರದು. ಕರುಳು ಕತ್ತರಿಸುವ, ಕಣ್ಣು ಕತ್ತಲು ಬರುವ ಆ ನೋಟವನ್ನು ನೋಡಿದ ಎಂತವನೂ ಸ್ತಂಭಿತನಾಗಲೇಬೇಕು. ಈ ದೈವೀ ಶಕ್ತಿಯನ್ನು ಯಾರು ತಡೆಯುವರು? ಯಾವ ಪ್ರಬಲ ಶಕ್ತಿಯೂ ಅದರ ಮುಂದೆ ಹೋರಾಡಲಾರದು. ಅಂತೂ ಮನೆಮಾರು ಕಳಕೊಂಡು ಕಂಗಾಲಾಗಿರುವ ಜನರಿಗೆ ಸರಕಾರದ ಹಾಗೂ ಜನತೆಯ ಸಹಾಯ ಅಗತ್ಯ ನಮ್ಮ ಪ್ರತಿನಿಧಿಗಳು ಈ ಕಡೆಗೆ ಒಡನೆ ಗಮನ ಕೊಡಬೇಕೆಂದು ಹಾರೈಸುವ,

ಓರ್ವ ಪ್ರೇಕ್ಷಕ.
ಜಿ. ಶ್ರೀಕಂಠ ಉಪಾಧ್ಯ

ಹತ್ತು ಹಿತ ವಿಚಾರಗಳು

(ಅಮೇರಿಕಾದ ವೈದ್ಯರ ಸಂಘದ ಪತ್ರಿಕೆಯ 1952ನೇ ಫೆಬ್ರವರಿ ಸಂಚಿಕೆಯಿಂದ)

1. ಮಿತವ್ಯಯ ಅಲಕ್ಷಿಸಿ ಅಭಿವೃದ್ಧಿ ಹೇಗೆ ಸಾಧ್ಯ?
2. ಬಲಿಷ್ಠರನ್ನು ಕುಂದಿಸಿದರೆ ಅಬಲರು ಬಲವಂತರಾಗುವರೇ?
3. ದೊಡ್ಡ ಮನುಷ್ಯರನ್ನು ಕಿತ್ತು ಹಾಕಿದರೆ ಸಣ್ಣ ಮನುಷ್ಯರಿಗೆ ಸಹಾಯವಾದೀತೇ?
4. ಸಿರಿವಂತರ ಸಂಹಾರದಿಂದ ಬಡವರಿಗೆ ಸಹಾಯ ಸಿಕ್ಕೀತೇ?
5. ಮಜೂರಿ ಕೊಡುವಾತನನ್ನು ಕೆಳಕ್ಕೆಳೆದು ಹಾಕುವುದರಿಂದ ಮಜೂರರ ಉದ್ಧಾರವಾದೀತೇ?
6. ನಿಮ್ಮ ಆಯಕ್ಕೆ ಮಿಕ್ಕಿ ವ್ಯಯಿಸಿದರೆ ನಿಮ್ಮ ತಾಪತ್ರಯಗಳು ದೂರವಾಗುವವೆಂತು?
7. ವರ್ಗದ್ವೇಷದ ಉದ್ರೇಕದಿಂದ ಸಮಾಜದ ಸೋದರತೆಯು ಮುನ್ನಡೆ ಸಾಗುವುದು ಹೇಗೆ?
8. ಸಾಲದ ಹಣದಿಂದ ಸ್ಥಿರವಾದ ಭದ್ರತೆ ಸ್ಥಾಪಿಸಲು ಶಕ್ಯವಿದೆಯೆ?
9. ಯಾವನೊಬ್ಬ ಮನುಷ್ಯನ ಸ್ವಾವಲಂಬನೆ, ಸ್ವತಂತ್ರಗಳನ್ನು ಕಳಚಿ ಹಾಕಿ ಆತನನ್ನು ಸನ್ಮಾರ್ಗಿ ಹಾಗೂ ಧೈರ್ಯಶಾಲಿಯಾಗಿ ಮಾಡಲು ಶಕ್ಯವೇ?
10. ತಾವು ಮಾಡತಕ್ಕ ಹಾಗೂ ಮಾಡಲು ಶಕ್ಯವಿರುವ ಕ್ರಿಯೆಗಳನ್ನು ಅವರಿಗೋಸ್ಕರ ಬೇರೊಬ್ಬರು ಮಾಡುತ್ತಾ ಬಂದರೆ ಅಂಥವರಿಗೆ ಶಾಶ್ವತ ಸಹಾಯ ಮಾಡಿದಂತಾಗುವುದೇ?

ತಡವಾಗಿ ಮುಟ್ಟಾಗುವಿಕೆಗಾಗಿ ಗಾಬರಿಯಾಗಬೇಡಿರಿ

'ಋತುರಾಜ'ವನ್ನು ಸೇವಿಸಿರಿ. ನಾಲ್ಕೈದು ತಿಂಗಳ ಮುಟ್ಟಾಗದಿದ್ದರೂ, ಒಡನೆಯೇ ಋತುಸ್ರಾವವಾಗುವುದು. ಮುಟ್ಟು ದೋಷದ ಘೋರ ಗಂಡಾಂತರಗಳು ಕೂಡಾ 24 ತಾಸುಗಳೊಳಗೆ ಆಶ್ಚರ್ಯಕರವಾಗಿ ಪಾರಾಗುವವು. ಇದಕ್ಕೆ ಸಂಶಯ ಬೇಡ.

ಕಿಮ್ಮತ್ತು-ರೂ 7-8 0, ವಿ. ಪಿ. ರೂ. 1.
ಸ್ಪೆಶಲ್ ರೂ 24 ವಿ. ಪಿ. ರೂ. 1-12-0.

Binapani Oushadahalaya
15/1 Mooris Avenue, Calcutta-33.
ಏಜಂಟ್:-ವೈದ್ಯ ಸಿ. ಆರ್. ಅನಂತ್,
ಮಂಗಳೂರು.

ಋತುಸ್ರಾವ ನಿಂತಿತು

'ಕುಮಾರಿ' ಗುಳಿಗೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹಕೋಟಿಗೆ ಬರುವುದು. ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8-]ವಿ ಪಿ ಹನ್ನೆರಡಾಣೆ ಪ್ರತ್ಯೇಕ]

Mrs. D. DEVEE, F. DS. (N. J.)
Tollygunge CALCUTTA,
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು.

ಅಸಾಧಾರಣ ವಾಗ್ಮಿಗಳೂ ಗ್ರಂಥಕರ್ತರೂ ಆದ
ಶ್ರೀ. ಎಸ್. ಪಂಚಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್., ಬಾರ್.ಎಟ್.ಲಾ,
ಎಫ್. ಎಸ್. ಎಲ್. ಅವರು ಬರೆದ Tales of Ind ಎಂಬ ಕಥಾವಳಿಯ ಅನುವಾದ.

ಭಾರತೀಯ ಕತೆಗಳು

ಅನುವಾದಕರು—ಶ್ರೀ. ಕೊರಡ್ಕಲ್ ಶ್ರೀನಿವಾಸ ರಾವ್.

ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮ[illegible]ಬೇಕೆಂಬ ಹಿರಿಯಾಶೆ ಇದ್ದೇ ಇದೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸಂದರ್ಭೋಚಿತವಾದ ಉಪಮೆ, ಗಾದೆ, ಕಥೆ ದೃಷ್ಟಾಂತ ಇತ್ಯಾದಿಗಳು ಬರಬೇಕು. ಅಂತಹ ಅಮೂಲ್ಯ ಭಂಡಾಗಾರವೇ ಈ ಭಾರತೀಯ ಕತೆಗಳು.

ಎಲ್ಲರೂ ಆವಶ್ಯವಾಗಿ ಓದತಕ್ಕ ಅಪೂರ್ವ ಗ್ರಂಥ

151 ಕತೆಗಳು ಬೆಲೆ ರೂ. 1-12-0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಯಂತ್ರಗಳಿಗಿಂತ ಎತ್ತುಗಳು ಶ್ರೇಷ್ಠ

(ಲೇಖಕ: ವೈದ್ಯಗರು ಎಂ. ಆರ್. ಭಟ್,)

ದೇಶದ ಆರ್ಥಿಕ ವ್ಯವಸ್ಥೆಯು ನೂತನ ಯೋಜನೆಯ ಪ್ರಸರಣಕ್ಕೆ, ಹಬ್ಬಿದ ವಿಚಾರಗಳ ಕಾರಣ, ಕೃಷಿಯ ವಿಧಗಳಲ್ಲಿ ಮತ್ತು ಯಾತಾಯಾತದ ವಿಧಗಳಲ್ಲಿ ಅಲ್ಲಲ್ಲಿ ಯಂತ್ರಗಳಿಗೆ ಸ್ಥಾನ ಕೊಡಿಸುವ ಪರಿಸ್ಥಿತಿಯು ಎದ್ದು ಕಾಣಿಸುತ್ತದೆ; ನೂತನ ಯೋಜನೆಗಳ ಪಕ್ಷಪಾತಿಗಳ ಮನೋಕಾಮನೆಯು ಸಫಲವಾದರೆ, ದೇಶದಲ್ಲಿ ಎತ್ತುಗಳ ಚಿಹ್ನೆಯೇ ಉಳಿಯಲಾರದು. ನಾವು ಒಂದಾವರ್ತಿ ಪುನಃ ಈ ಸಕಲ ವಿಷಯಗಳನ್ನು ಯೋಚಿಸುವುದು, ಅತ್ಯಾವಶ್ಯಕ ಎತ್ತಿನ ವಿಷಯದಲ್ಲಿ ಸಕಾಲದಲ್ಲಿ ವಿಚಾರ ಮಾಡುವುದೇ ನಮಗಿಂದು ಶೋಭಿಸುವುದು.

ನಮ್ಮ ದೇಶದಲ್ಲಿ ಅದಷ್ಟು ಅಧಿಕ ಹಾಲು ಉತ್ಪನ್ನ ಮಾಡುವುದು ಆವಶ್ಯಕವೆಂಬ ವಿಷಯವು ಮೊದಲನೇಯದು; ಆದುದರಿಂದ ನಮಗೆ ದನಗಳ ಆವಶ್ಯಕತೆಯು ಇರುವುದು ನಿಜ; ದನಗಳಿರುವಾಗ, ಅವುಗಳೊಡನೆ, (ಎತ್ತು) ಹೋರಿಗಳು ಕೂಡ ಇರಬೇಕು; ಎತ್ತುಗಳಿಗೆ, ಪೂರ್ಣ ಕೆಲಸದ ಆವಶ್ಯಕತೆಯೂ ಇರುವುದು; ನಾವು ಹೊಲದಲ್ಲಿ ನೇಗಿಲಿನೊಡನೆ ಜೋಡಿಸಿ, ಅವುಗಳನ್ನು ಕೃಷಿಗೆ ಉಪಯೋಗಿಸುವುದರಿಂದ, ಸವಾರಿ ಮಾಡಲು ಎತ್ತುಗಳನ್ನು ಗಾಡಿಗೆ ಜೋಡಿಸುವುದರಿಂದ ಮತ್ತು ಗಾಣ ನಡಿಸಲು, ಎತ್ತುಗಳನ್ನು ಉಪಯೋಗಿಸುವುದರಿಂದ, ಎತ್ತುಗಳಿಗೆ ಪೂರ್ಣ ಕೆಲಸವು ಲಭಿಸಬಲ್ಲುದು. ನಾವು ಈ ಸಕಲ ಉಪಾಯಗಳಿಂದ ಎತ್ತುಗಳ ಉಪಯೋಗ ಮಾಡದಿದ್ದರೆ, ನಮ್ಮ ಅವಸ್ಥೆಯು ಪಾಶ್ಚಾತ್ಯ ದೇಶಗಳಂತೆ ಆಗುವುದು. ಅಲ್ಲಿ ದನಗಳ ವಂಶವನ್ನು ವೃದ್ಧಿಗೊಳಿಸಲು, ಅವಶ್ಯವಿದ್ದಷ್ಟು ಗಂಡು ಕರುಗಳನ್ನು ಮಾತ್ರ ಪರಿಪಾಲಿಸಿ, ಸಲಹಿ, ಹೋರಿಗಳಾಗಿ ಮಾಡುತ್ತಾರೆ; ಉಳಿದವುಗಳೆಲ್ಲಾ ವಧಿಸಲ್ಪಡುತ್ತವೆ

ಯಂತ್ರಗಳು ಹೊಲಗಳನ್ನು ವಿಶಾಲ ಪರಿಣಾಮ ರೂಪದಲ್ಲಿ ಹೂಳುತ್ತವೆ; ಹೊಲದಲ್ಲಿ ಹೂಳಲು ಉಪಯೋಗಿಸುವ "ಟ್ರೇಕ್ಟರ" ಒಂದು ಯಂತ್ರವಾಗಿದೆ. ಎತ್ತಿನಲ್ಲಿ ಅದರಶಕ್ತಿಯಿರುವುದಿಲ್ಲ; ಅದು ಯಂತ್ರವೇ ಆಗಿದೆ. ಎತ್ತು ಒಂದು ಜೀವಿಸುವ ಹಾಗೂ ಜಾಗೃತೆಯ ಯಂತ್ರವೆಂದು ನೆನಪಿಸಲ್ಪಡಬೇಕು ಅದು ಒಂದು ಪ್ರಾಣಿ, ಅದರಂತಹ-ಸರಳ ಸಾಧು ಪಶುಗಳೊಡನೆ ಮನುಷ್ಯರ ಸಂಬಂಧವು ಮಾನವೀಯ ಸಭ್ಯತೆಯ ವಿಕಾಸದಲ್ಲಿ ಒಂದು ವಿಶೇಷ ಮಹತ್ವದ ವಸ್ತುವಾಗಿದೆ; ಈ ವಿಷಯವು ಪ್ರಮಾಣಿಕವೂ ಆಗಿದೆ. ಪಶ್ಚಿಮಾ ಸಂಸ್ಕೃತಿಯ ವಿಶೇಷ ಚಿಹ್ನೆಯಲ್ಲಿ ಅನೇಕ ಒಡಕು ತೊಡಕುಗಳಿವೆ; ಅವುಗಳಲ್ಲಿ ಆಗಾಗ್ಗೆ ಸಂಭವಿಸುವ ರಕ್ತ ರಂಜಿತ ಯುದ್ಧವು ಒಂದಾಗಿದೆ ಈ ಯುದ್ಧಗಳ ಮಧ್ಯದಲ್ಲಿ ಮನುಷ್ಯನು ತನ್ನ ಮಾನವತೆಯನ್ನು ಮರೆತು, ಪಶುವಾಗುತ್ತಾನೆಂಬುದನ್ನು ನಾವು ನೋಡುತ್ತಲಿದ್ದೇವೆ. ಪಶ್ಚಿಮಾ ಜನರು ಪಶುಗಳ ಶಕ್ತಿಯ ಉಪಯೋಗವನ್ನು ಬಿಟ್ಟು ಬಿಟ್ಟು, ಅದರ ಬದಲು, ಜಡ ಹಾಗೂ ಅಚೇತನ ಯಂತ್ರಗಳನ್ನು ಸ್ಥಾಪಿಸಿರುವರು; ಅವುಗಳೇ ಈ ಸಕಲ ಕೆಡುಕು ಹಾಗೂ ಅವಗುಣಗಳ ಮೂಲವಾಗಿವೆ; ಇದರಲ್ಲಿ ಆಶ್ಚರ್ಯವೇನು?

ಮಾನವತೆಯ ಭಾವನೆಯ ಮೇಲೆ ಉಪಸ್ಥಿತಮಾಡಿದ ಯುಕ್ತಿಯಿದು; ಆದರೆ, ಇದಕ್ಕೆ ಆರ್ಥಿಕ ಯುಕ್ತಿಯ ಬೆಂಬಲ ನೀಡಿ ಪುಷ್ಟೀಕರಿಸುವುದು ಅವಶ್ಯಕ. ಆದುದರಿಂದ ಈಗ ನಾವು ಆರ್ಥಿಕಯುಕ್ತಿಗಳ ವಿಷಯ ವಿಚಾರಿಸುವಾ. ಇದಕ್ಕೋಸ್ಕರ, ನಾವು ಶ್ರೀಮಾನ್ ಎನ್. ಜಿ. ಆಪ್ಟೆಯವರ "ಫೋರ್ಟ್ಸ್ ಎಂಡ್ ವರ್ಕಶಿಟ್ ವಿಲ್ಲೇಜಸ್" ಎಂಬ ಹೆಸರಿನ ಪುಸ್ತಕದ ಉಪಯೋಗವನ್ನು ಯಥೇಷ್ಟ ಮಾಡಬೇಕಾಗಿದೆ; ಸಮರ್ಥ ಭಾರತ ಯಂತ್ರಾಲಯದ ಶ್ರೀಮಾನ್ ಸಂದೇ ಸಾಯಿಯವರೂ ಪೂನೆಯಿಂದ ಪ್ರಕಾಶಿಸಿದ "ಇಕೋನೊಮಿಕ್ಸ್ ಓಫ್ ದಿ ಬುಲ್ಲಕ್" ಎಂಬ ಶೀರ್ಷಕಭಾಗದ ಉಪಯೋಗವನ್ನು ಯಥೇಷ್ಟ ಮಾಡಬೇಕು.

ಎತ್ತು ಕೇವಲ ಚೇತನ ಟ್ರೇಕ್ಟರ ಮಾತ್ರವಲ್ಲ, ಅದು ಗೊಬ್ಬರದ ಒಂದು ಜೀವಂತ ಹಾಗೂ ಕಾರ್ಯಕಾರೀ ಕಾರಖಾನೆಯೂ ಆಗಿದೆ; ಅದು ನಮಗೆ ಗೋಷ್ಠದಿಂದ ಸಿಕ್ಕುವ ಅಮೂಲ್ಯ ಗೊಬ್ಬರ ಕೊಡುತ್ತದೆ; ಆ ಗೊಬ್ಬರವು ಪೃಥ್ವಿಗೆ 'ನಾಯಟ್ರೋಜನ್' ಎಂಬ ಒಂದು ಪದಾರ್ಥ ಕೊಡುತ್ತದೆ; ಅದರಿಂದ, ಭೂಮಿಯು ಮತ್ತು ಕಣಗಳ ಮಧ್ಯದಲ್ಲಿ ಸ್ವಲ್ಪ ಅಂತರವಿರುತ್ತದೆ; ಮತ್ತು ನೀರನ್ನು ಹಿಡಿದಿಡುವ ಭೂಮಿಯ ಶಕ್ತಿಯು ಹೆಚ್ಚಾಗುತ್ತದೆ; ಅದರ ಕಾರಣ, ಭೂಮಿಯಲ್ಲಿ ನೀರಿನ ಪಸೆ ಮತ್ತು ವಾಯು-ಇವೆರಡೂ ಪ್ರಚುರ ಪರಿಮಾಣದಲ್ಲಿ ತಯಾರಾಗುತ್ತಲಿವೆ. ವನಸ್ಪತಿಯ ಪೋಷಣ ಮತ್ತು ಅದರ ಬೆಳವಣಿಗೆಗೆ ಈ ಮೂರು ವಸ್ತುಗಳು ಅತ್ಯಾವಶ್ಯಕವಾಗಿವೆ, ಭೂಮಿಯನ್ನು ಉತ್ಕೃಷ್ಟವಾಗಿಡಲು ಇಚ್ಛಿಸುವವರು ಭಿನ್ನ ಭಿನ್ನ ತತ್ತ್ವಗಳನ್ನು ಒಟ್ಟುಗೂಡಿಸಿ, ಅದರ ತೀಕ್ಷ್ಣ ಗೊಬ್ಬರವನ್ನು ರಚಿಸಬೇಕು; ಮತ್ತು ಭೂಮಿಯಲ್ಲಿ ಯಥೇಷ್ಟ ಹಾಕಿದರೂ, ಅಥವಾ ಹೆಚ್ಚು ಹಾಕಿದರೂ, ಅದರಿಂದ ಹಾನಿಯು ಸಂಭವಿಸದು, ಅದರಿಂದ ವಾಯು ಮತ್ತು ಜಲವನ್ನು ಹೀರುವ ಅದರ ಶಕ್ತಿಯು ಹೆಚ್ಚಾಗಿ, ಆ ಗೊಬ್ಬರದಿಂದ ಹೆಚ್ಚು ಲಾಭವು ಸಂಭವಿಸುವುದು.

ಕೃತ್ರಿಮ ಗೊಬ್ಬರವು ಹಾನಿಕರವಾಗಿದೆ. ಅದಲ್ಲದೆ, ಸಣಬಿನಂತಹ ಎರಡು ದಳಗಳ ಜಾತಿಯ ಗಿಡಗಳು ಸ್ವಲ್ಪ ಬೆಳೆದೊಡನೆ, ಅವುಗಳನ್ನು ನವೀನ ಭೂಮಿಯಲ್ಲಿ ನಟ್ಟು ತಾಜಾ ಗೊಬ್ಬರವನ್ನು ಹಾಕುವ ಸಂಪ್ರದಾಯವು ನಮ್ಮಲ್ಲಿ ಪ್ರಚಲಿತವಾಗಿದೆ; ಆದರೆ, ಎಲ್ಲವನ್ನು ಪರೀಕ್ಷಿಸಿದನಂತರ ಗೋಷ್ಠದಿಂದ ಲಭಿಸುವ ಗೊಬ್ಬರದ ಸಮ್ಮುಖ, ಕೃತ್ರಿಮ ಗೊಬ್ಬರವು ನೀಚ ಜಾತಿದ್ದಾಗಿದೆ ಇದರ ಒಂದು ಕಾರಣವೇನಂದರೆ, ಬೀಜ ಬಿತ್ತುವ ಸಮಯದಿಂದ ಪ್ರಾರಂಭಿಸಿ, ಕತ್ತರಿಸಿದ ಸಸಿಗಳನ್ನು ಭೂಮಿಯಲ್ಲಿ ಹುಗಿದಿಟ್ಟು, ಅವುಗಳು ಕೊಳೆಯುವ ತನಕ, ಭೂಮಿಯು ಬಾಲಿ ಬೀಳುತ್ತದೆ; ಅದರ ಎರಡನೆಯ ಉಪಯೋಗವಾಗದು: ಈ ಹಸಿರು ಎಲೆಗಳು ಪಶುಗಳಿಗೆ ತಿನ್ನಿಸುವ ಕೆಲಸಕ್ಕೆ ಕೂಡ ಬರುವುದಿಲ್ಲ. ಇದಕ್ಕೆ ವಿಪರೀತವಾಗಿ, ಎತ್ತುಗಳು ಹನ್ನೆರಡು ತಿಂಗಳು ಕೆಲಸ ಮಾಡುತ್ತವೆ. ಸ್ವಯಂ ಹುಲ್ಲು ಮುಂತಾದವುಗಳನ್ನು ಮೇದು, ಅದನ್ನು ಸಗಣಿಯ ರೂಪದಲ್ಲಿ ಪುನಃ ನಮಗೆ ನೀಡುತ್ತವೆ. ಸಗಣಿಯ ಗೊಬ್ಬರವು ಭೂಮಿಯಲ್ಲಿ ಸರಳತೆಯಿಂದ ಮೆತ್ತಗಾಗಿ ಸೇರುತ್ತದೆ. ಭೋಜನದಂತೆ, ತಿಂದ ವಸ್ತುಗಳನ್ನು ರೂಪಾಂತರಿಸುವ ಕೆಲಸವು ಪ್ರಾಣಿಯ ದೇಹದೊಳಗೆ ಆಗುತ್ತಲಿರುತ್ತದೆ; ಆ ಕಾರಣದಿಂದ, ಅದರಲ್ಲಿ ನಾಯಟ್ರೋಜನ್ ಅಧಿಕ ಪರಿಮಾಣ ಪ್ರಮಾಣದಲ್ಲಿ ಉತ್ಪನ್ನವಾಗುತ್ತದೆ.

ಹುಲ್ಲಿನ ಮುಖಾಂತರ, ಎತ್ತು ತನ್ನ ಹೊಟ್ಟೆಯಲ್ಲಿ ಹಾಕಿದ ನಾಯಟ್ರೋಜನಿನ ಸತ್ವವು ನಮಗೆ ಅದರ ಸಗಣಿಯಿಂದ ಪುನಃ ಲಭಿಸುತ್ತದೆ; ಯಾಕಂದರೆ, ಕೆಲಸ ಮಾಡುತ್ತಿರುವ ಎತ್ತಿನ ಶರೀರದಲ್ಲಿ ಕೇವಲ ಪಿಷ್ಟಶರ್ಕರಾದಿ (Carbo-hydrates) ವಸ್ತುಗಳ ಉಪಯೋಗವೇ ಆಗುತ್ತದೆ ಗೊಬ್ಬರದ ರೂಪದಲ್ಲಿ ಈ ಕಾರ್ಬೋಹೈಡ್ರೇಟುಗಳು ಅಧಿಕ ಕೆಲಸ ಮಾಡುವುದಿಲ್ಲ; ಯಾಕಂದರೆ, ಹೂಳಿದ ನಂತರ ಬಿಗುಗಿಸಿದ ಹೊಲಕ್ಕೆ ಅವಶ್ಯವಿರುವಷ್ಟು, ಕಾರ್ಬೋಹೈಡ್ರೇಟನ್ನು ಬೆಳೆಯುತ್ತಿರುವ ಗಿಡಗಳು ವಾಯುವಿನಿಂದ ಗ್ರಹಣ ಮಾಡುತ್ತವೆ; ಭೂಮಿಯೊಳಗಿನಿಂದ ಹೀರಿ ತೆಗೆದುಕೊಳ್ಳುವ ಆವಶ್ಯಕತೆಯು ಅವುಗಳಿಗೆ ಬೀಳುವುದಿಲ್ಲ. ಹಸುರು ಗಿಡಗಳನ್ನು ಭೂಮಿಯೊಳಗೆ ಹುಗಿದಿಡುವುದರಿಂದ, ವ್ಯರ್ಥವಾಗುವ ಶಕ್ತಿಯನ್ನು ಎತ್ತು ತನ್ನ ದೇಹದಿಂದ ಅದನ್ನು ಪೂರ್ಣವಾಗಿ ಪ್ರಾಪ್ತಿಸುತ್ತದೆ. ಇದರ ಅತಿರಿಕ್ತ, ಗೋಷ್ಠದಿಂದ ಲಭಿಸುವ ಸಗಣಿ ಮುಂತಾದವುಗಳ ಕಾರಣ ಹಸುರು ಗೊಬ್ಬರಕ್ಕಿಂತ ಭೂಮಿಗೆ ಅಧಿಕ ಭೋಜನ ಮುಟ್ಟಿಸುತ್ತದೆ, ಯಾಕಂದರೆ, ಪ್ರಾಣಿಯ ಶರೀರದೊಳಗಿನಿಂದ ಚಲಿಸಿಬರುವಾಗ, ಹುಲ್ಲು ಮೇವುಗಳ ರೂಪದಲ್ಲಿ, ತನ್ನ ಶರೀರದೊಳಗೆ ಮುಟ್ಟಿಸುವ ವಸ್ತುಗಳನ್ನೆಲ್ಲಾ ಅದು ತನ್ನ ಶರೀರದ ರಸದಿಂದ ಪಾಚನಮಾಡಿ ಪ್ರತ್ಯೇಕ ಪ್ರತ್ಯೇಕವಾಗಿ ವಿಭಜಿಸಿ, ಸಿದ್ಧಪಡಿಸಿ, ಸೆಗಣಿಯ ರೂಪದಲ್ಲಿ ಹಾಗೂ ಗೊಬ್ಬರದ ರೂಪದಲ್ಲಿ ಭೂಮಿಗೆ ನೀಡುತ್ತದೆ.

ಯಂತ್ರಗಳಿಗಿಂತ, ಎತ್ತು ಶ್ರೇಷ್ಠವಾಗಿದೆ, ಹೊಲವನ್ನು ತಾಜಾ ಆಗಿಡಲು, ಉತ್ಕೃಷ್ಟ ಗೊಬ್ಬರ ಕೊಡುತ್ತದೆ; ಮಾತ್ರವಲ್ಲ, ಎತ್ತು ಹಲವು ಪ್ರಕಾರದ ಕೆಲಸ ಮಾಡುತ್ತದೆ; ಆ ಸಮಸ್ತ ಕಾರ್ಯಗಳನ್ನು ಮಾಡುವ ಒಂದು ಯಂತ್ರವನ್ನು ರಚಿಸುವುದು ಅಸಂಭವವೇ ಸರಿ; ಇದನ್ನು ನಾವು ತಿಳಿದಿರಬೇಕು. ಎತ್ತು ವೇಗದಿಂದಲೂ ಕೆಲಸಮಾಡಬಲ್ಲುದು; ಮೆಲ್ಲ ಮೆಲ್ಲಗೂ ಮಾಡುವುದು, ಅದು ಕೇವಲ ನೇಗಿಲಿನ ಸಹಾಯದಿಂದ ಹೊಲವನ್ನು ಹೂಳುವ ಕೆಲಸವನ್ನು ಮಾತ್ರ ಮಾಡುವುದಿಲ್ಲ, ಅದು ಧಾನ್ಯವನ್ನು ಹೊಡೆಯುತ್ತದೆ, ಧಾನ್ಯದ ಕಾಳುಗಳನ್ನು ವಿಂಗಡಿಸುವ ಕಾರ್ಯದಲ್ಲಿಯೂ ಸಹಾಯಕವಾಗುತ್ತದೆ; ಇದೇ ಪ್ರಕಾರ, ತಯಾರಿಸಿದ ಧಾನ್ಯವನ್ನು ಬಜಾರಿಗೆ ಕೊಂಡೊಯ್ಯಲು, ಗಾಡಿಗೆ ಜೋಡಿಸಲ್ಪಡುತ್ತದೆ, ಈ ಸಕಲ ಕಾರ್ಯಗಳೊಡನೆ, ಅದು ಬರಿದಾದ ಹೊಟ್ಟು, ಗೋಳಿ, ಒಣಹುಲ್ಲು ಮುಂತಾದ ವಸ್ತುಗಳನ್ನು ತಿನ್ನುತ್ತದೆ, ಅವುಗಳಿಂದ ಮನುಷ್ಯನು ತನ್ನ ಆಹಾರದ ಧಾನ್ಯ, ಅಕ್ಕಿ ಮತ್ತು ತೈಲವನ್ನು ಸಿದ್ಧಪಡಿಸುತ್ತಾನೆ ಒಂದು ಜೋಡು ಎತ್ತಿನ ಕ್ರಯವು ಸುಮಾರು 200 300 ರೂಪಾಯಿ ಆಗಬಹುದು, ಎತ್ತು ಮಾಡುವ ಸಕಲ ಕಾರ್ಯಗಳನ್ನು ಯಂತ್ರಗಳಿಂದ ಮಾಡುವುದಾದರೆ, ಕೃಷಿಕರಿಗೆ ಕಡಿಮೆ ಎಂದರೆ ಡಿಸೆಲ್ ಓಯ್ಲ ಇಂಜಿನ್, ಒಂದು ಮೋಟರ ಲೋರಿ, ಒಂದು ಟ್ರೇಕ್ಟರ್, ಮೋಟರಿಗೆ ಬೇಕಾಗುವ ಸಣ್ಣ ಸಣ್ಣ ಚಕ್ರಗಳು, ಮುಂತಾದ ಇನ್ನೂ ಅನೇಕ ವಸ್ತುಗಳು ಬೇಕಾಗಿವೆ ಇವುಗಳೆಲ್ಲವುಗಳ ಕ್ರಯವು ಎತ್ತಿನ ಕ್ರಯಕ್ಕಿಂತ ಬಹು ಅಧಿಕವಾಗಿದೆ ಅದರ ಅತಿರಿಕ್ತ, ಯಂತ್ರಗಳನ್ನು ನಡಿಸಲು, ಕಟ್ಟಿಗೆ ಬದಲಿಗೆ, ಕ್ರೂಡ್ ಓಯ್ಲ ಅಥವಾ ಪೆಟ್ರೋಲನ್ನು ಖರೀದಿ ಮಾಡಬೇಕಾಗಿದೆ. ಈ ಕ್ರೂಡ ಓಯ್ಲ ಅಥವಾ ಪೆಟ್ರೋಲು ದೇಶದಲ್ಲಿ ಇಂದು ಉತ್ಪನ್ನವಾಗುವುದೂ ಇಲ್ಲ, ದೇಶದಲ್ಲಿ ಯಥೇಷ್ಟ ಲಭಿಸುವುದೂ ಕಷ್ಟವಾಗಿದೆ, ಇದು ಕೂಡ ಒಂದು ವಿಚಾರಿಸಬೇಕಾದ ವಿಷಯವಾಗಿದೆ.

ಹೊಲದಲ್ಲಿ ವಿಶೇಷವಾಗಿ ನೇಗಿಲು ತಿರುಗಿಸುವುದು; ಮಣ್ಣನ್ನು ಮೇಲೆ ಕೆಳಗೆ ಮಾಡುವುದು, ಬೀಜ ಬಿತ್ತುವುದು, ಮುಂತಾದ ಕೆಲಸಗಳು ಇರುತ್ತವೆ ಈ ಸಮಸ್ತ ಕೆಲಸಗಳ ಕಾರಣದಿಂದ ಎತ್ತಿಗೆ ಒಂದು ವರ್ಷದಲ್ಲಿ ಮೂರು ನಾಲ್ಕು ತಿಂಗಳು ಮಾತ್ರ ಕೆಲಸವು ಲಭಿಸುತ್ತದೆ. ಉಳಿದ ಸಮಯದಲ್ಲಿ ಅದರ ಉಪಯೋಗವು ಸಾಮಾನು ಒಯ್ಯುವುದರಲ್ಲಿ, ಜನರನ್ನು ಒಂದು ಸ್ಥಾನದಿಂದ ಇನ್ನೊಂದು ಸ್ಥಾನಕ್ಕೆ ಕೊಂಡು ಹೋಗುವುದರಲ್ಲಿ, ಮತ್ತು ತೈಲ ಮುಂತಾದವುಗಳನ್ನು ಒತ್ತಿ ದೂಡುವುದರಲ್ಲಿ, ಮಾಡಲ್ಪಡುತ್ತದೆ, ಆದರೆ, ಯಂತ್ರಗಳು ಇಷ್ಟು ಕೆಲಸವನ್ನೇ ಮಾಡಬಲ್ಲವು; ಹೊಲವು (ಕೃಷಿಯು) ಕೆಲಸವು ಮುಗಿದನಂತರ, ಬಹು ದೀರ್ಘಕಾಲ ಕೆಲಸವಿಲ್ಲದೆ ಇರಬೇಕಾಗುವುದು.

ಯಂತ್ರಗಳಿಂದ ತೈಲ ತಯಾರಿಸುವುದರಿಂದ ಮೇಲಿಂದ ಮೇಲೆ ಲಾಭವು ಸ್ವಲ್ಪ ಗೋಚರವಾಗುತ್ತದೆ ಯಾಕಂದರೆ ಕೆಲಸವಿಲ್ಲದೆ, ಖಾಲಿಬೀಳುವ ಯಂತ್ರಗಳ ಕೃಷಿಕರು ಅನ್ಯ ಪ್ರಕಾರದ ಉಪಯೋಗವನ್ನು ಮಾಡಲಾರರು.

ಶ್ರೀಮಾನ್ ಆಪ್ಟೆಯವರ ಸಮಾಲೋಚ್ಯ ಮತ್ತು ಅಭ್ಯಾಸಪೂರ್ಣ ಸಂಪೂರ್ಣ ಗ್ರಂಥದಿಂದ ಈ ಕೆಳಗಿನ ವಿಷಯವನ್ನು ಉಲ್ಲೇಖಿಸಿ, ಉದ್ಧರಣವನ್ನು ಅಂತ್ಯಗೊಳಿಸುವೆನು:- "ಮನುಷ್ಯ ಮತ್ತು ಪ್ರಾಣಿಗಳಲ್ಲಿರುವ ಸಮಸ್ತ ಶಕ್ತಿಯ ಪೂರ್ಣಲಾಭವನ್ನು ಪಡೆದ ನಂತರವೇ, ಯಂತ್ರಗಳನ್ನು ನಾವು ಉಪಯೋಗಿಸಬೇಕು, ಅನಂತರ, ಯಂತ್ರವನ್ನು ಕೃಷಿಗೋಸ್ಕರ ಉಪಯೋಗಿಸುವ ಆವಶ್ಯಕತೆಯು ಇಂದು ಇರುವುದಿಲ್ಲ.

ಆಶ್ಚರ್ಯಕರ ಪರಿಣಾಮವನ್ನುಂಟುಮಾಡುವ
ಚಿರನೂತನ ಕಾದಂಬರಿ—

ಫಂಟಮಾರಾ

'ಅವಮಾನದಿದಿರು, ಅನ್ಯಾಯದಿದಿರು, ಯಾರೂ ತಗ್ಗಿ ನಡೆಯಬಾರದು' ಎಂಬ ನಿರ್ಮಲ ಮಾನವವಾದಿಯಾದ ಇಗ್ನೇಜಿಯೋ ಸಿಲೋನೆಯ ಪ್ರಖ್ಯಾತ ಇಟಾಲಿಯನ್ ಕಾದಂಬರಿಯ ಅನುವಾದ.

ಅನುವಾದಕರು:- ಶ್ರೀ ಕು. ಶಿ. ಹರಿದಾಸ ಭಟ್ಟರು, ಎಂ. ಎ.
ಪ್ರಕಾಶಕರು:- ಅಂತರಂಗ ಕಾರ್ಯಾಲಯ, ಉಡುಪಿ.

— ಕೆಲವು ಅಭಿಪ್ರಾಯಗಳು —

"ಈ ಶತಮಾನದ ಅತ್ಯಂತ ಮರ್ಮಸ್ಪರ್ಶಿ ಕಾದಂಬರಿಗಳಲ್ಲೊಂದು." —ಕರ್ಮವೀರ.

"ಅಂಥಹ ಕಷ್ಟದ ಲೇಖನಿಯನ್ನು ಕನ್ನಡದ ಶಾಯಿಯಲ್ಲಿ ಅದ್ದಿ ಶ್ರೀ ಭಟ್ಟರು ಅನುವಾದವನ್ನು ಮೂಲಗ್ರಂಥಕ್ಕೆ ಚ್ಯುತಿ ಇಲ್ಲದಂತೆ ಮಾಡಿದ್ದಾರೆ." —ಚಿತ್ರಗುಪ್ತ.

"ಮೂಲಗ್ರಂಥದ ವೈಶಿಷ್ಟ್ಯಗಳೆಲ್ಲ ಸಮರ್ಪಕವಾಗಿ ಕನ್ನಡಿಸಲ್ಪಟ್ಟಿರುವುದನ್ನು ನೋಡುವಾಗ ಅನುವಾದವು ಸರ್ವೋತ್ತಮವೆಂದು ಹೇಳಲು ಅಡ್ಡಿ ಇಲ್ಲ. ಅನುವಾದ ಮಾಡಿದ ಶ್ರೀ ಭಟ್ಟರೂ ಮಾಡಿಸಿದ ಪ್ರಕಾಶಕರೂ ಅಭಿನಂದನೀಯರು." —ಇಂಡಿಯನ್ ಎಕ್ಸ್‌ಪ್ರೆಸ್.

ನೀವು ತುಂಬ ಕಾದಂಬರಿಗಳನ್ನು ಓದಿರಬಹುದು. ಆದರೆ
ಇಂತಹ ಮರ್ಮಸ್ಪರ್ಶಿ ಕಾದಂಬರಿಯನ್ನು ಓದಿರಲಾರಿರಿ!
200 ಪುಟಗಳು! ಬೆಲೆ ರೂ. 2-0-0
ನವಭಾರತ ಪುಸ್ತಕ ಭಂಡಾರ ಉಡುಪಿ, ದ. ಕ.

ತಾರೀಕು 7-8-52 ರಿಂದ

ವಾರದ ಭವಿಷ್ಯ

ತಾರೀಕು 13-8-52 ವರೆಗೆ

ಮೇಷ—ನಿಮ್ಮ ಪರಿಸ್ಥಿತಿಯು ಈ ವಾರದಲ್ಲಿ ಬಹುಮಟ್ಟಿಗೆ ಸುಧಾರಿಸಲಿದೆ. ಬಂಧುವರ್ಗದವರ ಮತ್ತು ಸನ್ಮಿತ್ರರ ಸಹಾಯದಿಂದ ನಿಮ್ಮ ಬಯಕೆಗಳು ಈಡೇರುವವು. ಶತ್ರುಜನರ ಪೀಡೆಯು ಅಸಹನೀಯವಿದ್ದರೂ ಕಷ್ಟಸಹಿಷ್ಣುಗಳಾದ ನೀವು ಧೈರ್ಯದಿಂದ ಎದುರಿಸುವಿರಿ. ಕಫದೋಷದಿಂದ ದೇಹದಲ್ಲಿ ಅಲಸ್ಯ ಕಂಡುಬಂದೀತು. ತಾ. 7,8,11, 12 ಈ ದಿನಗಳಲ್ಲಿ ಲಾಭವಿಜಯಗಳನ್ನು ಪಡೆವಿರಿ.

ವೃಷಭ— ಕಳೆದ ವಾರಕ್ಕಿಂತ ಈ ವಾರದಲ್ಲಿ ನಿಮ್ಮ ಪರಿಸ್ಥಿತಿಯು ಕೊಂಚ ಬಿಕ್ಕಟ್ಟಿಗೆ ಬರಲಿದೆ. ಹಿಂದಿನ ನಿಮ್ಮ ಧೈರ್ಯ ಸಾಹಸಗಳು ಇಂದು ಕಾಣಲಾರವು. ದುಡಿಮೆಗಿಂತ ಖರ್ಚು ಅಧಿಕವಾಗುವದು. ಗೃಹಕೃತ್ಯದಲ್ಲಿ ಕ್ಷುದ್ರ ಕಲಹಗಳು ಏಳುವವು. ಮನಃಶ್ಚಾಂಚಲ್ಯ ಅಧಿಕವಾಗಲಿದೆ. ಆದರೂ ತಾ 7, 8, 9, 10,13 ಈ ದಿನಗಳಲ್ಲಿ ನೆಮ್ಮದಿಯಿರುವುದು, ಹಿರಿಯರ ಅನುಗ್ರಹದಿಂದ ಸುಖವನ್ನು ಕಾಣುವಿರಿ.

ಮಿಥುನ—ಸಂಸಾರ ದುಃಖಗಳಿಂದ ಅತಿಶಯ ಬೇಸರಗೊಂಡ ನಿಮಗಿಂದು ದುಃಖವಿಮುಕ್ತಿಯ ಕಾಲವೊದಗಿದೆ. ನಿಮ್ಮ ಇಷ್ಟಾರ್ಥಗಳು ಕಷ್ಟವಿಲ್ಲದೇನೇ ಕೈಗೂಡುವವು ಸಾಂಪತ್ತಿಕ ಪರಿಸ್ಥಿತಿಯಲ್ಲಿ ಬಹುತೇಕ ಸುಧಾರಿಸುವಿರಿ. ಸಾರ್ವಜನಿಕ ರಾಜಕೀಯ ಕ್ಷೇತ್ರಗಳ ಅದ್ವಿತೀಯ ಕೀರ್ತಿ ಲಾಭಗಳು ಲಭಿಸುವವು. ಚಂಚಲವಾದ ಮನಸ್ಸನ್ನು ಹಿಡಿತದಲ್ಲಿಡಿರಿ. ತಾ. 9. 10, 11, 12 ಅತ್ಯುತ್ತಮ ದಿನಗಳಾಗಿವೆ,

ಕರ್ಕಟ— ಸುಖ ಲಾಭಾಧಿಪತಿಯ ಅನುಗ್ರಹವು ನಿಮಗಿರುವುದಾದರೂ ಈ ವಾರದಲ್ಲಿ ಹೆಚ್ಚಿನ ಆರ್ಥಿಕ ಮುಗ್ಗಟ್ಟು ತಲೆದೋರಿ ಅದರಿಂದ ಸದಾ ಚಿಂತೆಗೀಡಾಗಲಿರುವಿರಿ. ಮನೆಯಲ್ಲಿನ ಅನಾರೋಗ್ಯ ವಿನಾಕಾರಣ ಪ್ರಾಪ್ತವಾಗತಕ್ಕ ಕಲಹಗಳು ಅನಿರೀಕ್ಷಿತವಾಗಿ ಸಂಭವಿಸತಕ್ಕ ಖರ್ಚು ವೆಚ್ಚಗಳು ನಿಮ್ಮನ್ನು ದಂಗುಬಡಿಸಲಿವೆ. ವಾರಾಂತ್ಯದ 3 ದಿನಗಳು ಇದ್ದುದರಲ್ಲಿ ಉತ್ತಮವೆನಿಸೀತು.

ಸಿಂಹ— ಗೃಹಸ್ಥಿತಿಯು ತೀರಾ ವಿಮುಖವಾಗಿ ನಿಂತಿದೆ ನಿಮಗೀವಾರದಲ್ಲಿ. ಎಷ್ಟೇ ದುಡಿಮೆಯಿದ್ದರೂ ದಿನಾಂತ್ಯದಲ್ಲಿ ಕೈಯಲ್ಲಿ ಕಾಸುಳಿಯದು. ದುರ್ಜನರ ಸಹವಾಸಕ್ಕೆ ಸಿಲುಕಿ ಕಷ್ಟನಷ್ಟಾದಿಗಳನ್ನು ಹೊಂದುವಿರಿ. ಶತ್ರುಗಳಿಂದ ಕೆಲವೊಮ್ಮೆ ಪರಾಜಯವುಂಟಾದೀತು. ಆದರೂ ಬೃಹಸ್ಪತ್ಯಾಚಾರ್ಯರ ಪೂರ್ಣ ಬೆಂಬಲವುಳ್ಳ ನಿಮಗೆ ತಾ. 7, 8, 13, ಈ ದಿನಗಳಲ್ಲಿ ಬಯಕೆಯಂತೆ ಕಾರ್ಯಗಳು ಫಲಿಸುವವು.

ಕನ್ಯಾ—ಕಷ್ಟದ ದಿನಗಳು ಕಳೆದು ಹೋದವು. ನಿಮ್ಮ ಬಯಕೆಯಂತೆ ಹೆಚ್ಚಿನ ಕಾರ್ಯಗಳು ನೆರವೇರುವವು. ತತ್ರಾಪಿ ರಾಜಕೀಯಕ್ಷೇತ್ರದಲ್ಲಿ ವಿಜಯಮಾಲೆಯು ನಿಮ್ಮ ಪಾಲಿಗೆ ಕಟ್ಟಿಟ್ಟ ಗಂಟೆನಿಸಹುದು. ಹಿಂದಿನ ಸಾಲಕಷ್ಟಗಳಿಂದ ಇಂದು ಮುಕ್ತರಾಗುವಿರಿ. ಎಂತಹ ಮಹತ್ಕಾರ್ಯವನ್ನೂ ಸಾಧಿಸಲು ಬೇಕಾದ ಶಕ್ತಿಸಾಹಸಗಳೂ ಜನ ಬೆಂಬಲವು ಲಭಿಸಲಿದೆ ವಾರಾದಿಯ 4 ದಿನಗಳು ಅಭೀಷ್ಟದಾಯಿಗಳಾಗಿವೆ.

ತುಲಾ — ಈ ವಾರದಲ್ಲಿ ಸುಖಿಗಳೆಂದರೆ ನೀವೇ ಸರಿ ಯಾವ ತರದ ತಾಪತ್ರಯಗಳೂ ನಿಮಗೆ ಸಂಭವಿಸಲಾರವು. ಜನತೆಯ ಸಂಪೂರ್ಣ ಬೆಂಬಲವುಳ್ಳ ನಿಮಗೆ ಎಂತಹ ಕಷ್ಟಸಾಧ್ಯವಾದ ಕಾರ್ಯವೂ ತೃಣ ಸಮವಾಗುವದು. ಸಾಮಾಜಿಕ ರಾಜಕೀಯಗಳಲ್ಲಿ ಬಳ್ಳಿಯ ಕೀರ್ತಿಭಾಗಿಗಳಾಗುವಿರಿ. ದೇಹಾರೋಗ್ಯ ಆರ್ಥಿಕ ಭಾಗಗಳು ಉತ್ತಮವಾಗಿರುವವು. ಕೆಲವೊಮ್ಮೆ ಅನಿರೀಕ್ಷಿತ ದುಃಖಗಳು ಕಂಡುಬಂದರೂ ತಾ 9ರಿಂದ 12ರ ದಿನಗಳು ಸುಖ ಇಷ್ಟಪ್ರದಗಳಾಗಿವೆ.

ವೃಶ್ಚಿಕ—ಕಾಲವು ಬಹಳ ವಿಪರೀತಾವಸ್ಥೆಗೆ ಬಂದಿದೆ. ಯಾವ ಕಾರ್ಯಕ್ಕೆ ಕೈಯಿಕ್ಕಿದರೂ ನಷ್ಟ ಕಷ್ಟಗಳೇ ಕಾಣಿಸುವವು. ಆರ್ಥಿಕ ಬಿಕ್ಕಟ್ಟು ಹೆಚ್ಚಿ ಮರ್ಯಾದೆಯಿಂದಿರಲು ನಿಮ್ಮನ್ನು ಬಿಡಲಾರದು. ಆಪ್ತೇಷ್ಟರೂ ಬಂಧು ವರ್ಗದವರೂ ಈ ಕಾಲದಲ್ಲಿ ನಿಮ್ಮ ಸಮೀಪ ಸುಳಿಯಲೊಲ್ಲರು. ಮಾತ್ರವಲ್ಲ ಹಣದ ನಿಮಿತ್ತವಾಗಿ ಕಲಹಗಳೂ ಉದ್ಭವಿಸಲಿವೆ. ಆದರೂ ಶನೀಶ್ವರನ ಅನುಗ್ರಹಕ್ಕೆ ಪಾತ್ರರಾದ ನಿಮಗೆ ವಾರಾಂತ್ಯದ 3 ದಿನಗಳಲ್ಲಿ ಹೆಚ್ಚಿನ ಪೀಡೆ ಯಿರದು

ಧನು—ವಿಶೇಷತಃ ಶುಭಂದ ಬುಧ ಗುರು ಶುಕ್ರರ ಕೃಪೆಗೆ ಪಾತ್ರರಾಗಿರುವಿರಿ ನೀವೀವಾರದಲ್ಲಿ. ಆದ ಕಾರಣ ಸತ್ಕಾರ್ಯ ಪ್ರವೃತ್ತರಾದ ಸದಾಚಾರಿಗಳಿಗೆ ಬಯಕೆಯಂತೆ ಕಾರ್ಯಸಿದ್ಧಿಸೀತು. ದೇಹಕ್ಕೆ ಸುಖವೂ ಮನಸ್ಸಿಗೆ ಶಾಂತಿಯೂ ಲಭಿಸಲಿದೆ. ಈ ಹಿಂದೆ ಇದ್ದ ಬಹುಮುಖದ ಆದಾಯವಿಂದು ಕಾಣಿಸದಾದರೂ ಆರ್ಥಿಕ ಭಾಗದಲ್ಲಿ ಹೆಚ್ಚಿನ ಪೀಡೆಯುಂಟಾಗದು. ತಾ 7, 8, 13, ಈ ದಿನಗಳಲ್ಲಿ ಇಚ್ಛೆಯಂತೆ ಕಾರ್ಯವು ನೆರವೇರುವದು.

ಮಕರ— ಸುಖ ಲಾಭ ಪತಿಯಾದ ಅಂಗಾರಕನು ಇಂದು ಲಾಭಸ್ಥಾನಕ್ಕೆ ಬಂದಿರುವನು. ತನ್ನಿಮಿತ್ತ ನಿಮ್ಮ ಹಣದ ಬಿಕ್ಕಟ್ಟು ಕೊಂಚ ದೂರವಾಗಲಿದೆ. ಅದರಿಂದಾಗಿ ಮನಸ್ಸಿಗೂ ನೆಮ್ಮದಿ ದೊರಕೀತು. ಬಂಧು ಜನರ ವಿರಹದಿಂದಲೂ ಆಕಸ್ಮಿಕ ಪರ್ಯಟನದಿಂದಲೂ ಕೆಲವೊಮ್ಮೆ ದುಃಖ ನಷ್ಟಗಳು ಕಂಡುಬಂದರೂ ತಾ 9, 10, ಈ ದಿನಗಳಲ್ಲಿ ಸನ್ಮಿತ್ರರ ಬೆಂಬಲದಿಂದ ಸುಖಿಗಳಾಗಿರುವಿರಿ.

ಕುಂಭ—ಯಾವ ಭಾಗದಲ್ಲಿ ನೋಡಿದರೂ ನಿರಾಶೆಯೇ ಮುಂದಾಗಿ ಕಾಣಿಸಲಿದೆ ಧನ ಜನಬಲವಿಲ್ಲದ ನೀವು ಹೆಚ್ಚಿನ ಕಾರ್ಯಗಳನ್ನು ಅರ್ಧದಲ್ಲೇ ನಿಲ್ಲಿಸುವ ಪ್ರಸಂಗ ಬರಬಹುದು. ಸ್ತ್ರೀಜನರಿಂದಾಗಿ ಕಷ್ಟ ನಷ್ಟ ಕಲಹ ಅವಮಾನಾದಿಗಳಿಗೂ ಅವಕಾಶವಿದೆ. ಕಾಯಕಷ್ಟ ಜೀವಿಗಳಿಗೆ ದಿನಯಾಪನೆಯು ಅತೀವ ಕಠಿಣವಾದೀತು. ತಾ 7, 8, 11, 12, ಈ ದಿನಗಳಲ್ಲಿ ನಿಮ್ಮ ದುಃಖಗಳು ಕೊಂಚ ಕಡಿಮೆಯಾದಾವು.

ಮೀನ— ಬಂದದ್ದೆಲ್ಲಾ ಬರಲಿ ಗೋವಿಂದನ ದಯೆಯೊಂದಿರಲಿ ಎಂದು ಹಿಂದಿನವರು ಹೇಳಿದ ಮಾತಿನಂತೆ ನಿಮಗೀವಾರದಲ್ಲಿ ಏನೇ ಆಪತ್ತುಗಳು ಪ್ರಾಪ್ತವಾಗುವದಾದರೂ ಆ ಸುರಗುರುಗಳ ಅನುಗ್ರಹದಿಂದಾಗಿ ಆಪತ್ತುಗಳನ್ನು ಅನಾಯಾಸದಿಂದ ಕಳೆ[illegible]ರಿ ಹಣದ ಅಡಚಣೆ ಸ್ವಲ್ಪ ಹೆಚ್ಚಲಿದೆ. ವ್ಯಾಪಾರಿಗಳಿಗೆ ಅನಿರೀಕ್ಷಿತ ನಷ್ಟವಾದೀತು. ತಾ 9 10, 13, ಈ ದಿನಗಳು ನಿಮ್ಮ ಭಾಗಕ್ಕೆ ಶ್ರೇಯೋದಾಯಿಯಾಗಿವೆ.

ತೃಪ್ತಿಕರವಾದ ತಿಂಡಿ— ಹಿತಕರವಾದ ಊಟ— ರುಚಿಕರವಾದ ಉಪಾಹಾರ
ಇವುಗಳಿಗೆ
ಆದರ್ಶ ನಿಲಯವೆಂದರೆ
ಫುಡ್ ಲೇಂಡ್ಸ್
ಉಡುಪಿ.
ಯಾತ್ರಿಕರಿಗೂ ಪ್ರಯಾಣಿಕರಿಗೂ
ಸರ್ವ ಅನುಕೂಲವಾಗುವಂತೆ
ನಗರದ ಕೇಂದ್ರ ಭಾಗದಲ್ಲಿದೆ.

ವಿವಿಧ ಪಾತ್ರೆಗಳು



ಯಾವತರ್ಹೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಸ್ತ್ರೀ ಪುರುಷ ಶಿಶುಗಳು ರೋಗದಿಂದ ನರಳಬೇಕಾಗಿಲ್ಲ!
ಲಕ್ಷಾಂತರ ಜನರು ಗುಣಹೊಂದಿದ್ದಾರೆ!
ಸರ್ ಜೀವನ್ ಶಿಲಾಜಿತ್ ಲೇಹ್ಯ
ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಸಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ. ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.
೪೮ದಿನದ ಲೇಹ್ಯ ರೂ ೫/೪, ೨೦ ದಿನದ ಲೇಹ್ಯ ರೂ ೩. ೪
(ಪೋಸ್ಟೇಜು ಮಾಫಿ)
ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

KING OF TONIC

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ
For up-to-date Lodging & Boarding
ROYAL MAHAL,
UDIPI S. Kanara

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ;
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತವ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ ಎಂ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಥಾನಿಕರು:—ಡಾ। ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

[illegible]

Shetty at the Navayuga Press, Udipi, S. India.

ನವಯುಗ

ಸ್ವಾತಂತ್ರ್ಯ ದಿನೋತ್ಸವ ಸಂಚಿಕೆ
14—8—1952

ಬೆಲೆ:
0 3—0

ಸ್ವಾತಂತ್ರ್ಯೋತ್ಸವದ ಶುಭದಿನದಂದು
ಆರ್ಥಿಕಸ್ವಾವಲಂಬನದ ಪ್ರತಿಜ್ಞೆ!

◎

ಗಳಿಸಿದುದನ್ನು ಉಳಿಸಲು,
ಉಳಿಸಿದುದರ ಪ್ರಯೋಜನ ಪಡೆಯಲು
ಜನಸಾಮಾನ್ಯರ ಕಾಮಧೇನುವೆನಿಸಿದ

"ಪಿಗ್ಮಿ"

ಯೋಜನೆಯಲ್ಲಿ ದಿನಕ್ಕೆರಡಾಣೆ
ಮುಡುಪು ಕಟ್ಟಿ 7 ವರುಷಗಳಲ್ಲಿ
350 ರೂಪಾಯಿ ಪಡೆಯುವ!

◎

ಪ್ರತಿಜ್ಞಾ ಪೂರೈಸುವವರು



ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ಸ್ಥಾಪನೆ: ೧೯೨೫

ಪ್ರಧಾನ ಕಚೇರಿ: ಉಡುಪಿ. ದ ಭಾರತ.

THE CANARA INDUSTRIAL & BANKING SYNDICATE LTD.

ತಾರೀಕು 7-8-52 ರಿಂದ

ವಾರದ ಭವಿಷ್ಯ

ತಾರೀಕು 13-8-52 ವರೆಗೆ

ಮೇಷ—ನಿಮ್ಮ ಪರಿಸ್ಥಿತಿಯು ಈ ವಾರದಲ್ಲಿ ಒಟ್ಟುಮಟ್ಟಿಗೆ ಸುಧಾರಿಸಲಿದೆ. ಬಂಧುವರ್ಗದವರ ಮತ್ತು ಸನ್ಮಿತ್ರರ ಸಹಾಯದಿಂದ ನಿಮ್ಮ ಬಯಕೆಗಳು ಈಡೇರುವವು. ಶತ್ರುಜನರ ಪೀಡೆಯು ಅಸಹನೀಯವಿದ್ದರೂ ಕಷ್ಟಸಹಿಷ್ಣುಗಳಾದ ನೀವು ಧೈರ್ಯದಿಂದ ಎದುರಿಸುವಿರಿ. ಕಫದೋಷದಿಂದ ದೇಹದಲ್ಲಿ ಅಲಸ್ಯ ಕಂಡುಬಂದೀತು, ತಾ. 7,8,11, 12 ಈ ದಿನಗಳಲ್ಲಿ ಲಾಭವಿಜಯಗಳನ್ನು ಪಡೆವಿರಿ.

ವೃಷಭ— ಕಳೆದ ವಾರಕ್ಕಿಂತ ಈ ವಾರದಲ್ಲಿ ನಿಮ್ಮ ಪರಿಸ್ಥಿತಿಯು ಕೊಂಚ ಬಿಕ್ಕಟ್ಟಿಗೆ ಬರಲಿದೆ. ಹಿಂದಿನ ನಿಮ್ಮ ಧೈರ್ಯ ಸಾಹಸಗಳು ಇಂದು ಕಾಣಲಾರವು. ದುಡಿಮೆಗಿಂತ ಖರ್ಚು ಅಧಿಕವಾಗುವದು. ಗೃಹಕೃತ್ಯದಲ್ಲಿ ಕ್ಷುದ್ರ ಕಲಹಗಳು ಏಳುವವು. ಮನಃಶ್ಚಾಂಚಲ್ಯ ಅಧಿಕವಾಗಲಿದೆ. ಆದರೂ ತಾ 7, 8, 9, 10, 13 ಈ ದಿನಗಳಲ್ಲಿ ನೆಮ್ಮದಿಯಿರುವುದು, ಹಿರಿಯರ ಅನುಗ್ರಹದಿಂದ ಸುಖವನ್ನು ಕಾಣುವಿರಿ.

ಮಿಥುನ—ಸಂಸಾರ ದುಃಖಗಳಿಂದ ಅತಿಶಯ ಬೇಸರಗೊಂಡ ನಿಮಗಿಂದು ದುಃಖಮುಕ್ತಿಯ ಕಾಲವೊದಗಿದೆ. ನಿಮ್ಮ ಇಷ್ಟಾರ್ಥಗಳು ಕಷ್ಟವಿಲ್ಲದೇನೇ ಕೈಗೂಡುವವು. ಸಾಂಪತ್ತಿಕ ಪರಿಸ್ಥಿತಿಯಲ್ಲಿ ಬಹುತೇಕ ಸುಧಾರಿಸುವಿರಿ. ಸಾರ್ವಜನಿಕ ರಾಜಕೀಯ ಕ್ಷೇತ್ರಗಳ ಅದ್ವಿತೀಯ ಕೀರ್ತಿ ಲಾಭಗಳು ಲಭಿಸುವವು. ಚಂಚಲವಾದ ಮನಸ್ಸನ್ನು ಹಿಡಿತದಲ್ಲಿಡಿರಿ. ತಾ. 9, 10, 11, 12 ಅತ್ಯುತ್ತಮ ದಿನಗಳಾಗಿವೆ.

ಕರ್ಕಟಿ— ಸುಖ ಲಾಭಾಧಿಪತಿಯ ಅನುಗ್ರಹವು ನಿಮಗಿರುವುದಾದರೂ ಈ ವಾರದಲ್ಲಿ ಹೆಚ್ಚಿನ ಆರ್ಥಿಕ ಮುಗ್ಗಟ್ಟು ತಲೆದೋರಿ ಆದರಿಂದ ಸದಾ ಚಿಂತೆಗೀಡಾಗಲಿರುವಿರಿ. ಮನೆಯಲ್ಲಿನ ಅನಾರೋಗ್ಯ ವಿನಾಕಾರಣ ಪ್ರಾಪ್ತವಾಗತಕ್ಕ ಕಲಹಗಳು ಅನಿರೀಕ್ಷಿತವಾಗಿ ಸಂಭವಿಸತಕ್ಕ ಖರ್ಚು ವೆಚ್ಚಗಳು ನಿಮ್ಮನ್ನು ದಂಗುಬಡಿಸಲಿವೆ. ವಾರಾಂತ್ಯದ 3 ದಿನಗಳು ಇದ್ದುದರಲ್ಲಿ ಉತ್ತಮವೆನಿಸೀತು.

ಸಿಂಹ— ಗೃಹಸ್ಥಿತಿಯು ತೀರಾ ವಿಮುಖವಾಗಿ ನಿಂತಿದೆ ನಿಮಗೀವಾರದಲ್ಲಿ. ಎಷ್ಟೇ ದುಡಿಮೆಯಿದ್ದರೂ ದಿನಾಂತ್ಯದಲ್ಲಿ ಕೈಯಲ್ಲಿ ಕಾಸುಳಿಯದು. ದುರ್ಜನರ ಸಹವಾಸದಿಂದ ಹಲವು ಕಷ್ಟನಷ್ಟಾದಿಗಳನ್ನು ಹೊಂದುವಿರಿ ಶತ್ರುಗಳಿಂದ ಕೆಲವೊಮ್ಮೆ ಪರಾಜಯವುಂಟಾದೀತು, ಆದರೂ ಬೃಹಸ್ಪತ್ಯಾಚಾರ್ಯರ ಪೂರ್ಣ ಬೆಂಬಲವುಳ್ಳ ನಿಮಗೆ ತಾ. 7, 8, 13, ಈ ದಿನಗಳಲ್ಲಿ ಬಯಕೆಯಂತೆ ಕಾರ್ಯಗಳು ಫಲಿಸುವವು.

ಕನ್ಯಾ—ಕಷ್ಟದ ದಿನಗಳು ಕಳೆದು ಹೋದವು. ನಿಮ್ಮ ಬಯಕೆಯಂತೆ ಹೆಚ್ಚಿನ ಕಾರ್ಯಗಳು ನೆರವೇರುವವು. ತತ್ರಾಪಿ ರಾಜಕೀಯಕ್ಷೇತ್ರದಲ್ಲಿ ವಿಜಯಮಾಲೆಯು ನಿಮ್ಮ ಪಾಲಿಗೆ ಕಟ್ಟಿಟ್ಟ ಗಂಟಿನಂತಿರುವುದು. ಹಿಂದಿನ ಕಾಲಕಡಗಳಿಂದ ಇಂದು ಮುಕ್ತರಾಗುವಿರಿ. ಎಂತಹ ದುಷ್ಕರಕಾರ್ಯವನ್ನೂ ಸಾಧಿಸಲು ಬೇಕಾದ ಶಕ್ತಿಸಾಹಸಗಳೂ ಜನ ಬೆಂಬಲವು ಲಭಿಸಲಿದೆ ವಾರಾದಿಯ 4 ದಿನಗಳು ಅಭೀಷ್ಟದಾಯಿಗಳಾಗಿವೆ.

ತುಲಾ – ಈ ವಾರದಲ್ಲಿ ಸುಖಿಗಳೆಂದರೆ ನೀವೇ ಸರಿ ಯಾವ ತರದ ತಾಪತ್ರಯಗಳೂ ನಿಮಗೆ ಸಂಭವಿಸಲಾರವು. ಜನತೆಯ ಸಂಪೂರ್ಣ ಬೆಂಬಲವುಳ್ಳ ನಿಮಗೆ ಎಂಥಹ ಕಷ್ಟಸಾಧ್ಯವಾದ ಕಾರ್ಯವೂ ತೃಣ ಸಮಾನವಾಗುವದು. ಸಾಮಾಜಿಕ ರಾಜಕೀಯಗಳಲ್ಲಿ ಒಳ್ಳೆಯ ಕೀರ್ತಿಭಾಗಿಗಳಾಗುವಿರಿ. ದೇಹಾರೋಗ್ಯ ಆರ್ಥಿಕ ಭಾಗಗಳು ಉತ್ತಮವಾಗಿರುವವು. ಕೆಲವೊಮ್ಮೆ ಅನಿರೀಕ್ಷಿತ ದುಃಖಗಳು ಕಂಡುಬಂದರೂ ತಾ 9ರಿಂದ 12ರ ದಿನಗಳು ಸುಖ ಇಷ್ಟಪ್ರದಗಳಾಗಿವೆ.

ವೃಶ್ಚಿಕ—ಕಾಲವು ಬಹಳ ವಿಪರೀತಾವಸ್ಥೆಗೆ ಬಂದಿದೆ, ಯಾವ ಕಾರ್ಯಕ್ಕೆ ಕೈಯಿಕ್ಕಿದರೂ ನಷ್ಟ ಕಷ್ಟಗಳೇ ಕಾಣಿಸುವವು, ಆರ್ಥಿಕ ಬಿಕ್ಕಟ್ಟು ಹೆಚ್ಚಿ ಮರ್ಯಾದೆಯಿಂದಿರಲು ನಿಮ್ಮನ್ನು ಬಿಡಲಾರದು. ಆಪ್ತೇಷ್ಟರೂ ಬಂಧುವರ್ಗದವರೂ ಈ ಕಾಲದಲ್ಲಿ ನಿಮ್ಮ ಸಮೀಪ ಸುಳಿಯಲೊಲ್ಲರು. ಮಾತ್ರವಲ್ಲ ಪಣದ ನಿಮಿತ್ತವಾಗಿ ಕಲಹಗಳೂ ಉದ್ಭವಿಸಲಿವೆ. ಆದರೂ ಶನೀಶ್ವರನ ಅನುಗ್ರಹಕ್ಕೆ ಪಾತ್ರರಾದ ನಿಮಗೆ ವಾರಾಂತ್ಯದ 3 ದಿನಗಳಲ್ಲಿ ಹೆಚ್ಚಿನ ಪೀಡೆ ಇರದು

ಧನು—ನಿಸರ್ಗತಃ ಶುಭರಾದ ಬುಧ ಗುರು ಶುಕ್ರರ ಕೃಪೆಗೆ ಪಾತ್ರರಾಗಿರುವಿರಿ ನೀವೀವಾರದಲ್ಲಿ. ಆದ ಕಾರಣ ಸತ್ಕಾರ್ಯ ಪ್ರವೃತ್ತರಾದ ಸದಾಚಾರಿಗಳಿಗೆ ಬಯಕೆಯಂತೆ ಕಾರ್ಯ ಸಿದ್ಧಿಸೀತು. ದೇಹಕ್ಕೆ ಸುಖವೂ ಮನಸ್ಸಿಗೆ ಶಾಂತಿಯೂ ಲಭಿಸಲಿದೆ. ಈ ಹಿಂದೆ ಇದ್ದ ಬಹುಮುಖದ ಆದಾಯವಿಂದು ಕಾಣಸದಾದರೂ ಆರ್ಥಿಕ ಭಾಗದಲ್ಲಿ ಹೆಚ್ಚಿನ ಪೀಡೆಯುಂಟಾಗದು. ತಾ 7, 8, 13, ಈ ದಿನಗಳಲ್ಲಿ ಇಷ್ಟದಂತೆ ಕಾರ್ಯವು ನೆರವೇರುವದು.

ಮಕರ— ಸುಖ ಲಾಭ ಪತಿಯಾದ ಅಂಗಾರಕನು ಇಂದು ಲಾಭಸ್ಥಾನಕ್ಕೆ ಬಂದಿರುವನು. ತನ್ನಿಮಿತ್ತ ನಿಮ್ಮ ಹಣದ ಬಿಕ್ಕಟ್ಟು ಕೊಂಚ ದೂರವಾಗಲಿದೆ. ಅದರಿಂದಾಗಿ ಮನಸ್ಸಿಗೂ ನೆಮ್ಮದಿ ದೊರಕೀತು. ಬಂಧು ಜನರ ವಿರಹದಿಂದಲೂ ಆಕಸ್ಮಿಕ ಪರ್ಯಟನದಿಂದಲೂ ಕೆಲವೊಮ್ಮೆ ದುಃಖ ನಷ್ಟಗಳು ಕಂಡುಬಂದರೂ ತಾ 9, 10, ಈ ದಿನಗಳಲ್ಲಿ ಸನ್ಮಿತ್ರರ ಬೆಂಬಲದಿಂದ ಸುಖಿಗಳಾಗಿರುವಿರಿ.

ಕುಂಭ—ಯಾವ ಭಾಗದಲ್ಲಿ ನೋಡಿದರೂ ನಿರಾಶೆಯೇ ಮುಂದಾಗಿ ಕಾಣಿಸಲಿದೆ ಧನ ಜನಬಲವಿಲ್ಲದ ನೀವು ಹೆಚ್ಚಿನ ಕಾರ್ಯಗಳನ್ನು ಅರ್ಧದಲ್ಲೇ ನಿಲ್ಲಿಸುವ ಪ್ರಸಂಗ ಬರಬಹುದು. ಸ್ತ್ರೀಜನರಿಂದಾಗಿ ಕಷ್ಟ ನಷ್ಟ ಕಲಹ ಅವಮಾನಾದಿಗಳಿಗೂ ಅವಕಾಶವಿದೆ ಕಾಯಕಷ್ಟ ಜೀವಿಗಳಾಗಿ ದಿನಯಾಪನೆಯು ಅತೀವ ಕಠಿಣವಾದೀತು. ತಾ 7, 8, 11 12, ಈ ದಿನಗಳಲ್ಲಿ ನಿಮ್ಮ ದುಃಖಗಳು ಕೊಂಚ ಕಡಿಮೆಯಾದಾವು.

ಮೀನ— ಬಂದದ್ದೆಲ್ಲಾ ಬರಲಿ ಗೋವಿಂದನ ದಯೆವೊಂದಿರಲಿ ಎಂದು ಹಿಂದಿನವರು ಹೇಳಿದ ಮಾತಿನಂತೆ ನಿಮಗೀವಾರದಲ್ಲಿ ಏನೇ ಆಪತ್ತುಗಳು ಪ್ರಾಪ್ತವಾಗುವದಾದರೂ ಆ ಸದ್ಗುರುಗಳ ಅನುಗ್ರಹದಿಂದಾಗಿ ಆಪತ್ತುಗಳನ್ನು ಅನಾಯಾಸದಿಂದ ಕಳೆ ರಿ ಹಣದ ಅಡಚಣೆ ಸ್ವಲ್ಪ ಹೆಚ್ಚಲಿದೆ. ವ್ಯಾ ರಿಗಳಿಗೆ ಅನಿರೀಕ್ಷಿತ ನಷ್ಟವಾದೀತು. ತಾ 10, 13, ಈ ದಿನಗಳು ನಿಮ್ಮ ಭಾಗಕ್ಕೆ ಶ ಯೋದಾಯಿಯಾಗಿವೆ.

ತೃಪ್ತಿಕರವಾದ ವಸತಿ- ಹಿತಕರವಾದ ಊಟ— ರುಚಿಕರವಾದ ಉಪಾಹಾರ
ಇವುಗಳಿಗೆ
ಆದರ್ಶ ನಿಲಯವೆಂದರೆ
ವುಡ್ ಲೇಂಡ್ಸ್
ಉಡುಪಿ-
ಯಾತ್ರಿಕರಿಗೂ ಪ್ರಯಾಣಿಕರಿಗೂ
ಸರ್ವ ಅನುಕೂಲವಾಗುವಂತೆ
ನಗರದ ಕೇಂದ್ರ ಭಾಗದಲ್ಲಿದೆ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ-
ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಸ್ತ್ರೀ ಪುರುಷ ಶಿಶುಗಳು ರೋಗದಿಂದ ನರಳಬೇಕಾಗಿಲ್ಲ!
ಲಕ್ಷಾಂತರ ಜನರು ಗುಣಹೊಂದಿದ್ದಾರೆ!
ಸರ್ ಜೀವನ್ ಶಿಲಾಜಿತ್ ಲೇಹ್ಯ
ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.
೪೦ ದಿನದ ಲೇಹ್ಯ ರೂ ೫/೪, ೨೦ ದಿನದ ಲೇಹ್ಯ ರೂ ೩-೪
(ಪೋಸ್ಟೇಜು ಮಾಫಿ)
ನೀಲಗಿರಿ ಡಿಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

KING OF TONIC
SILAJITH LAYHAM

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ
ಪ್ರೊಪ್ರೈಟರ್:— ಕೆ. ವೆಂಕಟಸುಬ್ರಮಣಭಟ್ಟ್
For up-to-date Lodging & Boarding
ROYAL MAHAL,
UDIPI S. Kanara

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.
ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ ಎಂ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:— ಡಾ। ಪಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

ವ್ಯಭಿಚಾರಿಣೀ ಯಾರು
ಎಲ್ಲರೂ ಓದಲೇಬೇಕಾದ
ಬರೆದ ಅತ್ಯಾಧುನಿಕ ಸಾಮಾಜಿಕ ನಾಟಕ ಪುಸ್ತಕ

Edited, Printed & Published By K. H. Shetty at the Navayuga Press, Udipi, S. India.

ನವಯುಗ

ಸ್ವಾತಂತ್ರ್ಯ ದಿನೋತ್ಸವ ಸಂಚಿಕೆ
14–8–1952

ಬೆಲೆ:
0 3–0



ಸ್ವಾತಂತ್ರ್ಯೋತ್ಸವದ ಶುಭದಿನದಂದು
ಆರ್ಥಿಕಸ್ವಾವಲಂಬನದ ಪ್ರತಿಜ್ಞೆ!

◎

ಗಳಿಸಿದುದನ್ನು ಉಳಿಸಲು,
ಉಳಿಸಿದುದರ ಪ್ರಯೋಜನ ಪಡೆಯಲು
ಜನಸಾಮಾನ್ಯರ ಕಾಮಧೇನುವೆನಿಸಿದ

"ಪಿಗ್ಮಿ"

ಯೋಜನೆಯಲ್ಲಿ ದಿನಕ್ಕೆರಡಾಣೆ
ಮುಡುಪು ಕಟ್ಟಿ 7 ವರುಷಗಳಲ್ಲಿ
350 ರೂಪಾಯಿ ಪಡೆಯುವ!

◎

ಪ್ರತಿಜ್ಞೆ ಪೂರೈಸುವವರು

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್,
ಸ್ಥಾಪನೆ: ೧೯೨೫
ಪ್ರಧಾನ ಕಚೇರಿ: ಉಡುಪಿ, ದ. ಭಾರತ.

THE CANARA INDUSTRIAL & BANKING SYNDICATE LTD.



ತಾರೀಕು 7-8-52 ರಿಂದ

ವಾರದ ಭವಿಷ್ಯ

ತಾರೀಕು 13-8-52 ವರೆಗೆ

ಮೇಷ—ನಿಮ್ಮ ಪರಿಸ್ಥಿತಿಯು ಈ ವಾರದಲ್ಲಿ ಒಟ್ಟುಮಟ್ಟಿಗೆ ಸುಧಾರಿಸಲಿದೆ. ಬಂಧುವರ್ಗದವರ ಮತ್ತು ಸನ್ಮಿತ್ರರ ಸಹಾಯದಿಂದ ನಿಮ್ಮ ಬಯಕೆಗಳು ಈಡೇರುವವು ಶತ್ರುಜನರ ಪೀಡೆಯು ಅಸಹನೀಯವಿದ್ದರೂ ಕಷ್ಟಸಹಿಷ್ಣುಗಳಾದ ನೀವು ಧೈರ್ಯದಿಂದ ಎದುರಿಸುವಿರಿ ಕಫದೋಷದಿಂದ ದೇಹದಲ್ಲಿ ಆಲಸ್ಯ ಕಂಡುಬಂದೀತು, ತಾ. 7, 8, 11, 12 ಈ ದಿನಗಳಲ್ಲಿ ಲಾಭವಿಜಯಗಳನ್ನು ಪಡೆವಿರಿ.

ವೃಷಭ— ಕಳೆದ ವಾರಕ್ಕಿಂತ ಈ ವಾರದಲ್ಲಿ ನಿಮ್ಮ ಪರಿಸ್ಥಿತಿಯು ಕೊಂಚ ಬಿಕ್ಕಟ್ಟಿಗೆ ಬರಲಿದೆ. ಹಿಂದಿನ ನಿಮ್ಮ ಧೈರ್ಯ ಸಾಹಸಗಳು ಇಂದು ಕಾಣಲಾರವು. ದುಡಿಮೆಗಿಂತ ಖರ್ಚು ಅಧಿಕವಾಗುವದು. ಗೃಹಕೃತ್ಯದಲ್ಲಿ ಕ್ಷುದ್ರ ಕಲಹಗಳು ಏಳುವವು. ಮನಶ್ಚಾಂಚಲ್ಯ ಅಧಿಕವಾಗಲಿದೆ. ಆದರೂ ತಾ 7, 8, 9, 10, 13 ಈ ದಿನಗಳಲ್ಲಿ ನೆಮ್ಮದಿಯಿರುವುದು, ಹಿರಿಯರ ಅನುಗ್ರಹದಿಂದ ಸುಖವನ್ನು ಕಾಣುವಿರಿ.

ಮಿಥುನ—ಸಂಸಾರ ದುಃಖಗಳಿಂದ ಅತಿಶಯ ಬೇಸಗೊಂಡ ನಿಮಗಿಂದು ದುಃಖಮುಕ್ತಿಯ ಕಾಲವೊದಗಿದೆ. ನಿಮ್ಮ ಇಷ್ಟಾರ್ಥಗಳು ಕಷ್ಟವಿಲ್ಲದೇನೇ ಕೈಗೂಡುವವು ಸಾಂಪತ್ತಿಕ ಪರಿಸ್ಥಿತಿಯಲ್ಲಿ ಬಹುತೇಕ ಸುಧಾರಿಸುವಿರಿ. ಸಾರ್ವಜನಿಕ ರಾಜಕೀಯ ಕ್ಷೇತ್ರಗಳ ಅದ್ವಿತೀಯ ಕೀರ್ತಿ ಲಾಭಗಳು ಲಭಿಸುವವು. ಚಂಚಲವಾದ ಮನಸ್ಸನ್ನು ಹಿಡಿತದಲ್ಲಿಡಿರಿ. ತಾ. 9. 10, 11, 12 ಅತ್ಯುತ್ತಮ ದಿನಗಳಾಗಿವೆ.

ಕರ್ಕಟ— ಸುಖ ಲಾಭಾಧಿಪತಿಯ ಅನುಗ್ರಹವು ನಿಮಗಿರುವುದಾದರೂ ಈ ವಾರದಲ್ಲಿ ಹೆಚ್ಚಿನ ಆರ್ಥಿಕ ಮುಗ್ಗಟ್ಟು ತಲೆದೋರಿ ಅದರಿಂದ ಸದಾ ಚಿಂತೆಗೀಡಾಗಲಿರುವಿರಿ. ಮನೆಯಲ್ಲಿನ ಅನಾರೋಗ್ಯ ವಿನಾಕಾರಣ ಪ್ರಾಪ್ತವಾಗತಕ್ಕ ಕಲಹಗಳು ಅನಿರೀಕ್ಷಿತವಾಗಿ ಸಂಭವಿಸತಕ್ಕ ಖರ್ಚು ವೆಚ್ಚಗಳು ನಿಮ್ಮನ್ನು ದಂಗುಬಡಿಸಲಿವೆ. ವಾರಾಂತ್ಯದ 3 ದಿನಗಳು ಇದ್ದುದರಲ್ಲಿ ಉತ್ತಮವೆನಿಸೀತು.

ಸಿಂಹ— ಗೃಹಸ್ಥಿತಿಯು ತೀರಾ ವಿಮುಖವಾಗಿ ನಿಂತಿದೆ ನಿಮಗೀವಾರದಲ್ಲಿ. ಎಷ್ಟೇ ದುಡಿಮೆಯಿದ್ದರೂ ದಿನಾಂತ್ಯದಲ್ಲಿ ಕೈಯಲ್ಲಿ ಕಾಸುಳಿಯದು. ದುರ್ಜನರ ಸಹವಾಸಕ್ಕೆ ಸಿಲುಕಿ ಕಷ್ಟನಷ್ಟಾದಿಗಳನ್ನು ಹೊಂದುವಿರಿ ಶತ್ರುಗಳಿಂದ ಕೆಲವೊಮ್ಮೆ ಪರಾಭವುಂಟಾದೀತು. ಆದರೂ ಬೃಹಸ್ಪತ್ಯಾಚಾರ್ಯರ ಪೂರ್ಣ ಬೆಂಬಲವುಳ್ಳ ನಿಮಗೆ ತಾ. 7, 8, 13, ಈ ದಿನಗಳಲ್ಲಿ ಬಯಕೆಯಂತೆ ಕಾರ್ಯಗಳು ಫಲಿಸುವವು.

ಕನ್ಯಾ—ಕಷ್ಟದ ದಿನಗಳು ಕಳೆದು ಹೋದವು. ನಿಮ್ಮ ಬಯಕೆಯಂತೆ ಹೆಚ್ಚಿನ ಕಾರ್ಯಗಳು ನೆರವೇರುವವು. ತತ್ರಾಪಿ ರಾಜಕೀಯಕ್ಷೇತ್ರದಲ್ಲಿ ವಿಜಯಮಾಲೆಯು ನಿಮ್ಮ ಪಾಲಿಗೆ ಕಟ್ಟಿಟ್ಟ ಗಂಟೆನಿಸುವುದು. ಹಿಂದಿನ ಸಾಲಕಡಗಳಿಂದ ಇಂದು ಮುಕ್ತರಾಗುವಿರಿ. ಎಂತಹ ಮಹತ್ಕಾರ್ಯವನ್ನೂ ಸಾಧಿಸಲು ಬೇಕಾದ ಶಕ್ತಿಸಾಹಸಗಳೂ ಜನ ಬೆಂಬಲವು ಲಭಿಸಲಿವೆ ವಾರಾದಿಯ 4 ದಿನಗಳು ಅಭೀಷ್ಟದಾಯಿಗಳಾಗಿವೆ.

ತುಲಾ – ಈ ವಾರದಲ್ಲಿ ಸುಖಿಗಳೆಂದರೆ ನೀವೇ ಸರಿ ಯಾವ ತರದ ತಾಪತ್ರಯಗಳೂ ನಿಮಗೆ ಸಂಭವಿಸಲಾರವು. ಜನತೆಯ ಸಂಪೂರ್ಣ ಬೆಂಬಲವುಳ್ಳ ನಿಮಗೆ ಎಂತಹ ಕಷ್ಟಸಾಧ್ಯವಾದ ಕಾರ್ಯವೂ ತೃಣ ಸಮವಾಗುವದು. ಸಾಮಾಜಿಕ ರಾಜಕೀಯಗಳಲ್ಲಿ ಒಳ್ಳೆಯ ಕೀರ್ತಿಭಾಗಿಗಳಾಗುವಿರಿ ದೇಹಾರೋಗ್ಯ ಆರ್ಥಿಕ ಭಾಗಗಳು ಉತ್ತಮವಾಗಿರುವವು ಕೆಲವೊಮ್ಮೆ ಅನಿರೀಕ್ಷಿತ ದುಃಖಗಳು ಕಂಡುಬಂದರೂ ತಾ 9ರಿಂದ 12ರ ದಿನಗಳು ಸುಖ ಇಷ್ಟಪ್ರದಗಳಾಗಿವೆ.

ವೃಶ್ಚಿಕ— ಕಾಲವು ಬಹಳ ವಿಪರೀತಾವಸ್ಥೆಗೆ ಬಂದಿದೆ, ಯಾವ ಕಾರ್ಯಕ್ಕೆ ಕೈಯಿಕ್ಕಿದರೂ ನಷ್ಟ ಕಷ್ಟಗಳೇ ಕಾಣಿಸುವವು, ಆರ್ಥಿಕ ಬಿಕ್ಕಟ್ಟು ಹೆಚ್ಚಿ ಮರ್ಯಾದೆಯಿಂದಿರಲು ನಿಮ್ಮನ್ನು ಬಿಡಲಾರದು. ಆಪ್ತೇಷ್ಟರೂ ಬಂಧು ವರ್ಗದವರೂ ಈ ಕಾಲದಲ್ಲಿ ನಿಮಗೆ ಸಮೀಪ ಸುಳಿಯಲೊಲ್ಲರು. ಮಾತ್ರವಲ್ಲ ಹಣದ ನಿಮಿತ್ತವಾಗಿ ಕಲಹಗಳೂ ಉದ್ಭವಿಸಲಿವೆ. ಆದರೂ ಶನೀಶ್ವರನ ಅನುಗ್ರಹಕ್ಕೆ ಪಾತ್ರರಾದ ನಿಮಗೆ ವಾರಾಂತ್ಯದ 3 ದಿನಗಳಲ್ಲಿ ಹೆಚ್ಚಿನ ಪೀಡೆ ಬಾರದು

ಧನು—ನಿಸರ್ಗತಃ ಶುಭರಾದ ಬುಧ ಗುರು ಶುಕ್ರರ ಕೃಪೆಗೆ ಪಾತ್ರರಾಗಿರುವಿರಿ ನೀವೀವಾರದಲ್ಲಿ. ಆದ ಕಾರಣ ಸತ್ಕಾರ್ಯ ಪ್ರವೃತ್ತರಾದ ಸದಾಚಾರಿಗಳಿಗೆ ಬಯಕೆಯಂತೆ ಕಾರ್ಯ ಸಿದ್ಧಿಸೀತು. ದೇಹಕ್ಕೆ ಸುಖವೂ ಮನಸ್ಸಿಗೆ ಶಾಂತಿಯೂ ಲಭಿಸಲಿದೆ. ಈ ಹಿಂದೆ ಇದ್ದ ಬಹುಮುಖದ ಅಪಾಯವಿಂದು ಕಾಣಿಸದಾದರೂ ಆರ್ಥಿಕ ಭಾಗದಲ್ಲಿ ಹೆಚ್ಚಿನ ಪೀಡೆಯುಂಟಾಗದು ತಾ 7, 8, 13. ಈ ದಿನಗಳಲ್ಲಿ ಇಚ್ಛೆಯಂತೆ ಕಾರ್ಯವು ನೆರವೇರುವದು.

ಮಕರ— ಸುಖ ಲಾಭ ಪತಿಯಾದ ಅಂಗಾರಕನು ಇಂದು ಲಾಭಸ್ಥಾನಕ್ಕೆ ಬಂದಿರುವನು ತನ್ನಿಮಿತ್ತ ನಿಮ್ಮ ಹಣದ ಬಿಕ್ಕಟ್ಟು ಕೊಂಚ ದೂರವಾಗಲಿದೆ. ಅದರಿಂದಾಗಿ ಮನಸ್ಸಿಗೂ ನೆಮ್ಮದಿ ದೊರಕೀತು. ಬಂಧು ಜನರ ವಿರಹದಿಂದಲೂ ಆಕಸ್ಮಿಕ ಪರ್ಯಟನದಿಂದಲೂ ಕೆಲವೊಮ್ಮೆ ದುಃಖ ನಷ್ಟಗಳು ಕಂಡುಬಂದರೂ ತಾ 9, 10, ಈ ದಿನಗಳಲ್ಲಿ ಸನ್ಮಿತ್ರರ ಬೆಂಬಲದಿಂದ ಸುಖಿಗಳಾಗಿರುವಿರಿ.

ಕುಂಭ—ಯಾವ ಭಾಗದಲ್ಲಿ ನೋಡಿದರೂ ನಿರಾಶೆಯೇ ಮುಂದಾಗಿ ಕಾಣಿಸಲಿದೆ ಧನ ಜನಬಲವಿಲ್ಲದ ನೀವು ಹೆಚ್ಚಿನ ಕಾರ್ಯಗಳನ್ನು ಅರ್ಧದಲ್ಲೇ ನಿಲ್ಲಿಸುವ ಪ್ರಸಂಗ ಬರಬಹುದು. ಸ್ತ್ರೀಜನರಿಂದಾಗಿ ಕಷ್ಟ ನಷ್ಟ ಕಲಹ ಅವಮಾನಾದಿಗಳಿಗೂ ಅವಕಾಶವಿದೆ. ಕಾಯಕಷ್ಟ ಜೀವಿಗಳಾಗಿ ದಿನಯಾಪನೆಯು ಅತೀವ ಕಠಿಣವಾದೀತು ತಾ 7, 8, 11, 12, ಈ ದಿನಗಳಲ್ಲಿ ನಿಮ್ಮ ದುಃಖಗಳು ಕೊಂಚ ಕಡಿಮೆಯಾದಾವು.

ಮೀನ—ಬಂದದ್ದೆಲ್ಲಾ ಬರಲಿ ಗೋವಿಂದನ ದಯೆವೊಂದಿರಲಿ ಎಂದು ಹಿಂದಿನವರು ಹೇಳಿದ ಮಾತಿನಂತೆ ನಿಮಗೀವಾರದಲ್ಲಿ ಏನೇ ಆಪತ್ತುಗಳು ಪ್ರಾಪ್ತವಾಗುವದಾದರೂ ಆ ಸುರಗುರುಗಳ ಅನುಗ್ರಹದಿಂದಾಗಿ ಆಪತ್ತುಗಳನ್ನು ಅನಾಯಾಸದಿಂದ ಕಳೆವಿರಿ ಹಣದ ಅಡಚಣೆ ಸ್ವಲ್ಪ ಹೆಚ್ಚಲಿದೆ. ವ್ಯಾಪಾರಿಗಳಿಗೆ ಅನಿರೀಕ್ಷಿತ ನಷ್ಟವಾದೀತು. ತಾ 9, 10, 13, ಈ ದಿನಗಳು ನಿಮ್ಮ ಭಾಗಕ್ಕೆ ಶ್ರೇಯೋದಾಯಿಯಾಗಿವೆ.

ತೃಪ್ತಿಕರವಾದ ವಸತಿ— ಹಿತಕರವಾದ ಊಟ— ರುಚಿಕರವಾದ ಉಪಾಹಾರ
ಇವುಗಳಿಗೆ
ಆದರ್ಶ ನಿಲಯವೆಂದರೆ
ವುಡ್ ಲೇಂಡ್ಸ್
ಉಡುಪಿ.
ಯಾತ್ರಿಕರಿಗೂ ಪ್ರಯಾಣಿಕರಿಗೂ
ಸರ್ವ ಅನುಕೂಲವಾಗುವಂತೆ
ನಗರದ ಕೇಂದ್ರ ಭಾಗದಲ್ಲಿದೆ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಣಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಸ್ತ್ರೀ ಪುರುಷ ಶಿಶುಗಳು ರೋಗದಿಂದ ನರಳಬೇಕಾಗಿಲ್ಲ!
ಲಕ್ಷಾಂತರ ಜನರು ಗುಣಹೊಂದಿದ್ದಾರೆ!
ಸರ್ ಜೀವನ್ ಶಿಲಾಜಿತ್ ಲೇಹ್ಯ
ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ, ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.
೪೪ ದಿನದ ಲೇಹ್ಯ ರೂ ೫/೪, ೨೨ ದಿನದ ಲೇಹ್ಯ ರೂ ೩/೪
(ಪೋಸ್ಟೇಜು ಮಾಫಿ)
ನೀಲಗಿರಿ ಡಿಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

KING OF TONIC
SHILAJITH LAYHAM

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿ ರುಚಿ ಹೇಳಬೇಕೆ
ಪ್ರೊಪ್ರೈಟರ್ “ನೇಜ” ಮಂಜಭಟ್ಟ್
For up-to-date Lodging & Boarding
ROYAL MAHAL,
UDIPI S. Kanara

“ಗೋಪಾಲ ಭೇಷಜಾಶ್ರಮ” ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಥಾನಿಕಸ್ಥರು:— ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

ಪ್ರಚಾರಿಣೀ ಯಾರು
ಎಲ್ಲರೂ ಓದಲೇಬೇಕಾದ
ಶ್ರೀ ಕೆ. ಕೆ. ಶೆಟ್ಟರು ಬರೆದ ಅತ್ಯಾಧುನಿಕ ಸಾಮಾಜಿಕ ನಾಟಕ ಪುಸ್ತಕ

Edited, Printed & Published By K. H. Shetty at the Navayuga Press, Udipi, S. India.

ನವಯುಗ

ಸ್ವಾತಂತ್ರ್ಯ ದಿನೋತ್ಸವ ಸಂಚಿಕೆ
14-8-1952

ಬೆಲೆ:
0-3-0

ಸ್ವಾತಂತ್ರ್ಯೋತ್ಸವದ ಶುಭದಿನದಂದು
ಆರ್ಥಿಕಸ್ವಾವಲಂಬನದ ಪ್ರತಿಜ್ಞೆ!

◎

ಗಳಿಸಿದುದನ್ನು ಉಳಿಸಲು,
ಉಳಿಸಿದುದರ ಪ್ರಯೋಜನ ಪಡೆಯಲು
ಜನಸಾಮಾನ್ಯರ ಕಾಮಧೇನುವೆನಿಸಿದ

"ಪಿಗ್ಮಿ"

ಯೋಜನೆಯಲ್ಲಿ ದಿನಕ್ಕೆರಡಾಣೆ
ಮುಡುಪು ಕಟ್ಟಿ 7 ವರುಷಗಳಲ್ಲಿ
350 ರೂಪಾಯಿ ಪಡೆಯುವ!

◎

ಪ್ರತಿಜ್ಞಾ ಪೂರೈಸುವವರು:

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್,
ಸ್ಥಾಪನೆ: ೧೯೨೫ ಪ್ರಧಾನ ಕಚೇರಿ: ಉಡುಪಿ, ದ ಭಾರತ.

THE CANARA INDUSTRIAL & BANKING SYNDICATE LTD.

ಐದು ವರ್ಷಗಳ ಸುಖ

ಸ್ವರಾಜ್ಯ ಪ್ರಾಪ್ತಿಯ ನಂತರ ಇದು ಐದು ಸಲ ಬಂದಂತಾಯಿತು: ಐದು ವರ್ಷಗಳ ಅವಧಿ ಕಳೆದು, ಆರನೆಯದು ತೊಡಗುವ ಗಡು ಇದು. ಸ್ವಾತಂತ್ರ್ಯದ ಫಲವನ್ನುಣ್ಣಿಸಿದ ಅಭೂತ ಪೂರ್ವ ದಿನ ಇದು. ಸಾವಿರಾರು ಮಂದಿ ರಾಷ್ಟ್ರ ಭಕ್ತರ, ಹುತಾತ್ಮರ—ಮತ್ತು ಬಾಪೂವಿನ ಅಂತರಿಕ ಬಯಕೆಯಾದ ಸ್ವರಾಜ್ಯ ಕೈಗೂಡಿ ಬಂದ ದಿನ ಅಗೋಸ್ತು ೧೫.

ಕಳೆದ ದಿನಗಳ ನೆನಪು ಸಿಹಿಯೇ ಕಹಿಯೋ—ಎಂಬುದರ ಸ್ಥೂಲ ವಿವೇಚನೆ ಈ ಶುಭ ದಿನದಲ್ಲಿ ಅಗತ್ಯವೆನಿಸಿದೆ: ಸಂಕ್ರಮಣ ಕಾಲದಲ್ಲಿ ನಾವು ಕಾಲಿಡುತ್ತಿದ್ದೇವೆ. ಮಾಡಿದುದೆಷ್ಟೋ, ಇನ್ನು ಮಾಡಲಿರುವುದೆಷ್ಟೊ—ಎಲ್ಲವನ್ನೂ ಕಣ್ಣು ಬಿಟ್ಟು ನೋಡಿ, ನಿರ್ಧರಿಸಬೇಕಾಗಿದೆ. ಐದು ವರ್ಷಗಳ ಈ ಅವಧಿಯಲ್ಲಿ ಸ್ವರಾಜ್ಯ ನಮಗೆ ತಂದುದೆಷ್ಟು—ಬಿಟ್ಟುದೆಷ್ಟು ಎಂಬುದನ್ನು ವಿಮರ್ಶಿಸಿ, ಕುಂದು ಕೊರತೆಗಳ ಅಳತೆ ಮಾಡ ಬೇಕಾಗಿದೆ.

ಐದು ವರ್ಷಗಳ ಸುಖವನ್ನು ದುಃಖವೆಂದು ಕರೆದರೆಯೇ ಚೆನ್ನ: ಏಕೆಂದರೆ, ಸ್ವರಾಜ್ಯದಿಂದ ಮನದ ಉಕ್ಕು ಹೊರಟಿತು, ಬೇರೇನು ಸುಖ ದೊರಕಿದೆ? ಈ ಬನ್ನ ಬವಣೆಗಳನ್ನು, ನಾವು ನೋವುಗಳನ್ನು ಕಂಡು ಮರುಗಿದ್ದೇವೆ: ನೊಂದಿದ್ದೇವೆ. ವಿದೇಶೀ ಸಾಮ್ರಾಜ್ಯವಾದಿಗಳ ಕಾಲದಲ್ಲಿಯಾದರೆ ಬಂಡೆದ್ದು ವಿದ್ರೋಹಕ್ಕೆಳಸುವಲ್ಲಿ—ಸ್ವರಾಜ್ಯದ ನೆನಪಿನಿಂದ ವಿಷವನ್ನು ನುಂಗಿ, ಜೀರ್ಣಿಸಿದ್ದೇವೆ. ಈ ಅವಧಿ ನಮ್ಮ ಪರೀಕ್ಷಾಕಾಲವಾಗಿತ್ತು: ಅತ್ಯಂತ ಕಠಿಣ ಸನ್ನಿವೇಶಗಳಲ್ಲಿ ನಾವು ಯಶಸ್ವಿಯಾಗಿ ಪಾರಾದೆವೆಂಬ ಹೆಮ್ಮೆಯೊಂದೇ ನಮಗಿರುವ ತೃಪ್ತಿ: ಸ್ಫೂರ್ತಿ.

ಜನತೆಗೆ ಕಷ್ಟ ಅನುಭವಿಸಬೇಕಾಗಿ ಬಂದಿದೆ—ಈ ಸ್ವರಾಜ್ಯ ವೈಭವಕ್ಕಿಂತ ಗುಲಾಮಗಿರಿಯೇ ಚೆನ್ನಾಗಿತ್ತೆಂದು, ಐದು ವರ್ಷ ಕಳೆದ ಬಳಿಕವೂ ನಾವು ಹೇಳುತ್ತಿದ್ದೇವೆ. ಜನಕ್ಕೆ ಇನ್ನೂ ಸ್ವಾತಂತ್ರ್ಯದ ನಿಜ ಜ್ಞಾನವಿಲ್ಲ: ಅದರ ಸುಖ—ಮುಕ್ತ್ಯ ಪ್ರಯೋಜನದ ಅರಿವಾಗಿಲ್ಲ: ಜೇನವನ್ನು ನೀರಿನಂತೆ ಕುಡಿದು ಜೀರ್ಣಿಸುವ ಬಲ ಸಂಪಾದಿಸಬೇಕೆಂದು ಜನ ತಿಳಿಯುವುದಿಲ್ಲ. ಸ್ವರಾಜ್ಯ ಪುಷ್ಪ ಶಯ್ಯೆ ಎಂಬ ಭ್ರಮೆಯನ್ನು ಜನರಿಗೆ ಹೋರಾಟದ ಸಮಯ ಉಂಟುಮಾಡಿದ್ದೇ ಇದಕ್ಕೆ ಕಾರಣವಿದ್ದೀತು. ಆದರೆ ಇಂದು—ಜನರ ಮನೋವೃತ್ತಿ ಮಾರ್ಪಡಬೇಕಾದ ಆವಶ್ಯಕತೆ ಬಂದಿದೆ, ಈ ಐದು ವರ್ಷಗಳಲ್ಲಿ ನಾವು ಕೆಲಮಟ್ಟಿಗೆ ಇದರಲ್ಲಿ ಯಶಸ್ಸು ಪಡೆದಿದ್ದೇವೆ.

ಮಧುಪರ್ಕ

ಒಂದು ದಿನ ಅಮೇರಿಕೆಯ ಅಧ್ಯಕ್ಷರಾಗಿದ್ದ ಅಬ್ರಹಾಮ ಲಿಂಕನರನ್ನು ಕಾಣಲು ಮಹನೀಯರೊಬ್ಬರು ಬಂದರು: ತುಂಬ ಹಳೆಯ ಮಿತ್ರರಾಗಿದ್ದುದರಿಂದ ಮುಂಚಿತವಾಗಿ ಹೇಳಿ ಕಳಿಸದೆ, ನೇರಾಗಿಯೇ ಅಧ್ಯಕ್ಷರಿದ್ದ ಕೋಣೆಗೆ ಈ ಮಹನೀಯರು ಧಾವಿಸಿದರು—ಅಲ್ಲಿ ನೋಡುತ್ತಾರೇನನ್ನು?— ಅಮೇರಿಕಾಧ್ಯಕ್ಷ ಅಬ್ರಹಾಮ ಲಿಂಕನ ತನ್ನ ಕೈಯಿಂದಲೇ ಬೂಟು ಪಾಲಿಶ ಮಾಡುವುದರಲ್ಲಿ ಮಗ್ನ!

ಮಿತ್ರರಿಗೆ ತುಂಬ ವಿಸ್ಮಯವಾಯಿತು! "ಏನಿದು, ನಿಮ್ಮ ಬೂಟುಗಳಿಗೆ ನಿಮ್ಮ ಕೈಯಿಂದಲೇ ಪಾಲಿಶು ಕೊಡುತ್ತಿದ್ದೀರಾ, ಆಶ್ಚರ್ಯ!" ಎಂದರು.

ಬುದ್ಧಿ ಪ್ರತಿಭೆಯಲ್ಲಿ ಲಿಂಕನ ಯಾರಿಗೆ ಕಡಿಮೆ? ಅಂಬಿನಂತೆ ಮಾರ್ನುಡಿ ಬಂದೇ ಬಂತು—

"ಬಹುಶಃ ನಿಮಗೆ ಇನ್ನೊಬ್ಬರ ಬೂಟು ಪಾಲಿಶ ಮಾಡುವುದೇ ಹೆಚ್ಚು ಇಷ್ಟವಿದ್ದೀತು, ಅಲ್ಲವೆ?"

ಸ್ವಾವಲಂಬನೆಯ ಪಾಠ ಕಲಿಸುವ ಈ ವ್ಯಂಗ್ಯದೆದುರು ಮಿತ್ರರು ನಾಚಿ, ಕೆಂಪಾದರು.

ಮರಳಿ ಅದೇ ಶುಭದಿನ-ಆ ೧೫

ರಾಷ್ಟ್ರದಲ್ಲಿ ಇಂದು ಪ್ರಜಾಪ್ರಭುತ್ವ ಪದ್ಧತಿ ದೃಢವಾಗಿ ನೆಲೆಗೊಂಡಿದೆ. ಹದಿನೇಳುಕೋಟಿ ಸಂಖ್ಯೆಯ ಪ್ರಬುದ್ಧ ಮತದಾರರು ಆರಿಸಿ ತಂದ ಸರಕಾರಗಳು ಇಂದು ಕೇಂದ್ರದಲ್ಲಿಯೂ ರಾಜ್ಯಗಳಲ್ಲಿಯೂ ಆಡಳಿತವನ್ನು ನಿರ್ವಹಿಸುತ್ತಿವೆ. ಚುನಾವಣೆಗಳು ಕಾಂಗ್ರೆಸಿಗೆ ಇನ್ನೂ ಜನ ಬೆಂಬಲವಿರುವುದನ್ನು ಎತ್ತಿ ತೋರಿಸಿದುವು. ಸ್ವಾತಂತ್ರ್ಯದ ಹೋರಾಟದಲ್ಲಿ ಧುರೀಣತ್ವವನ್ನು ವಹಿಸಿದ ಸಂಸ್ಥೆಯಲ್ಲಿ ಇನ್ನೂ ಜೀವಕಳೆ ಉಳಿದಿದೆ. ಎಂಬುದನ್ನು ಚುನಾವಣೆ ಸಿದ್ಧಪಡಿಸಿತು.

ಕಾಂಗ್ರೆಸು ಜನತೆಗೆ ಕೊಟ್ಟ ವಚನಗಳನ್ನು ಮುರಿದಿದೆಯೆ?— ಜನರಲ್ಲಿ ಕೆಲವೊಂದು ವರ್ಗ ಈ ಆಕ್ಷೇಪವನ್ನೆತ್ತುವರು. ಆದರೆ, ಕಾಲದ ಇತಿ-ಮಿತಿಯನ್ನು ಕಣ್ಣ ಮುಂದಿಟ್ಟುಕೊಂಡು ನಿರ್ಣಯಿಸುವುದಾದರೆ, ಕಳೆದ ಸಮಯ ಅತ್ಯಲ್ಪವಾಗಿದ್ದರೂ, ಮಾಡಿದ ಕೆಲಸ ಗಣ್ಯವಾಗಿತ್ತೆಂದು ನಿಃಸಂಶಯವಾಗಿ ಹೇಳಬರುವುದಿಲ್ಲವೆ? ಎಷ್ಟೋ ರಾಷ್ಟ್ರಾಭ್ಯುದಯದ ಯೋಜನೆಗಳಿಗೆ ಅಡಿಗಲ್ಲು ಹಾಕಲಾಗಿದೆ—ವಿದೇಶಗಳೊಡನೆ ಶಾಂತಿ ಸಂಬಂಧವನ್ನು ಬೆಳಗಿಸಲಾಗಿದೆ—ನಾಡಿನಲ್ಲಿ ಸು[illegible] ನೆಲೆಗೊಳ್ಳುವಂತೆ ನಿರಂತರ ಪ್ರಯತ್ನ ನಡೆಯುತ್ತಿದೆ. ಇವೆಲ್ಲ ಸಾಧಾರಣದ ಕೆಲಸವೇ?

ಸ್ವರಾಜ್ಯದಿಂದ ಸುರಾಜ್ಯಕ್ಕೆ ಹೋಗುವ ಮಾರ್ಗ ನಿರಾತಂಕವಾಗಿರಲಾರದು: ಸತ್ಯ ನಿಷ್ಠನಾದ ಯುಧಿಷ್ಠಿರನಿಗೂ ಜೀವಾವಧಿ ಕಷ್ಟ ಪಡಬೇಕಾಯಿತು. ಶ್ರೀ ರಾಮಚಂದ್ರನಿಗೂ ಅರಣ್ಯ ವಾಸದ ಪೀಡೆ ತಪ್ಪಲಿಲ್ಲ—ಇದರಿಂದ ನಾವು ತಿಳಿಯ ಬಹುದಾದುದೇನು? ಕಷ್ಟ ನಷ್ಟಗಳು ಪ್ರತಿಯೊಂದು ದೇಶಕ್ಕೂ, ಜನಕ್ಕೂ ಉಂಟಾಗುವಂಥವೇ: ಅದರ ಭಯಕ್ಕೆ ಹೆದರಿ, ಸ್ವರಾಜ್ಯವನ್ನು ದೂರುವುದಾಗಲೀ—ಸ್ವಕರ್ತವ್ಯವನ್ನು ಮರೆಯುವುದಾಗಲೀ ಚೆನ್ನಾದುದಲ್ಲ. ಬಂದುದನ್ನು ಅನುಭವಿಸಬೇಕೆಂದು ಹೇಳುವುದು ಅನುಚಿತವಲ್ಲವಾದರೂ—ಅಷ್ಟಕ್ಕೇ ಕೆಲಸ ಮುಗಿಯುವುದಿಲ್ಲ: ನಮ್ಮಲ್ಲಿ ಸಹನೆ—ಸಾಹಸಗಳು ಬಲವಾಗಬೇಕು: ಪರಿಶ್ರಮದ ಜೊತೆಗಿನ ಒಲವು ತುಂಬ ಬಲಿಯಬೇಕು,

ಸ್ವಾತಂತ್ರ್ಯದ ಐದು ವರ್ಷಗಳಲ್ಲಿ ನಾವು ತುಂಬ ನೊಂದಿದ್ದೇವೆ: ನಮ್ಮ ನೋವು ಕಂಡು, ನೊಂದವರೂ ಇದ್ದಾರೆ ಆದರೆ ಇನ್ನೊಬ್ಬರ ಎಂಜಲೆಲೆಗೆ ಕೈ ಮುಂದು ಮಾಡುವುದನ್ನು ಯಾರೊಬ್ಬರೂ ಒಳ್ಳೆಯದೆನ್ನಲಾರರು. ಅದು ಮುಂದರಿದರೆ—ನಮ್ಮ ವ್ಯಕ್ತಿತ್ವವನ್ನು ನಿಕೃಷ್ಟಾವಸ್ಥೆಗಿಳಿಸುವುದು ನಿಶ್ಚಯ: ಆದುದರಿಂದ, ಸ್ವಂತ ಶಕ್ತಿಯ ಮೇಲಿನ ಅವಲಂಬನ ಹೊಂದಿದಂದಲೇ ನಮ್ಮೆಲ್ಲ ಮಹಾಯೋಜನೆಗಳನ್ನು ಕಾರ್ಯರೂಪಕ್ಕೆ ಇಳಿಸುವುದು ಲೇಸು. ಜನರ ಸಹಕಾರ ಇಲ್ಲದಿದ್ದರೆ—ಜನರಿಂದ ಚುನಾಯಿತವಾದ ಸರಕಾರವಾದರೂ ಏನು ಮಾಡೀತ?

ಕಾರಣ—ಐದು ವರ್ಷಗಳ ಅವಧಿ ಕಳೆದ ಬಳಿಕವೂ, ಜನರಿಗೆ ಕೊಡುವ ಕರೆಯೊಂದೇ: ನಮ್ಮ ಸರಕಾರವೆಂಬ ಮಮತೆ ಇಟ್ಟು, ಅದರ ಪ್ರತಿಯೊಂದೂ ಕಾರ್ಯಕಲಾಪದಲ್ಲಿ ಸಹಕರಿಸುವ ಬುದ್ಧಿ ತೋರಿಸಿರಿ. ಟೀಕೆಗಾಗಿ ಟೀಕೆ ಎಂದಿರದೆ, ರಚನಾತ್ಮಕವಾದ ಸಲಹೆಯನ್ನೀಡುವುದು ನಿಮ್ಮ ಉದ್ದೇಶವಾಗಿರಲಿ. ಸ್ವಾವಲಂಬನಕ್ಕಿಂತ ಮಿಕ್ಕಿದ ಸುಖವಾಗಲೀ, ಸ್ವಾತಂತ್ರ್ಯಕ್ಕಿಂತ ಹೆಚ್ಚಿನ ವರದಾನವಾಗಲೀ, ಜಗತ್ತಿನಲ್ಲಿ ಬೇರಿಲ್ಲ: ನಮ್ಮ ನೂರಾರು ಸಂಕಷ್ಟಗಳಿಗೆ ಆಲಸ್ಯವೇ ಮೂಲ—ಆಲಸ್ಯಬಿಟ್ಟು, ಚಟುವಟಿಕೆಯಿಂದ ಕಾರ್ಯನಿರತರಾಗುವುದೇ ಇಂದಿನ ಅಗತ್ಯ.

ಅಗೋಸ್ತು ೧೫— ಆತ್ಮ ಪರೀಕ್ಷೆಯ ದಿನವೇ ಹೌದು, ಆತ್ಮ ಶ್ಲಾಘನೆಯದಲ್ಲ: ಪ್ರತಿಯೊಬ್ಬ ನಾಗರಿಕನೂ ತನ್ನಿಂದ ದೇಶಕ್ಕಾದ ಸೇವೆಯನ್ನು, ತಾನು ದೇಶಕ್ಕೆ ಸಲ್ಲಿಸಿದುದನ್ನೂ ತಕ್ಕಡಿಯಲ್ಲಿಟ್ಟು ತೂಗಿ ನೋಡಬೇಕು - ರಾಷ್ಟ್ರ ಕಲ್ಯಾಣಕ್ಕೆ ನೆರವಾದ ಮೊತ್ತವು ಹೆಚ್ಚೋ, ರಾಷ್ಟ್ರದಿಂದ ನೆರವು ಕೇಳಿದುದು ಹೆಚ್ಚೋ ಎಂಬುದನ್ನು ನಿರ್ಧರಿಸಬೇಕು. ಮೊದಲನೆಯದು ಹೆಚ್ಚಿದ್ದರೆ —ತುಂಬ ಸಂತೋಷ. ಅದರ ಫಲವಾಗಿ ನಾಡು ಸುಖಿಯಾಗುತ್ತದೆ. ಎರಡನೆಯದೇ ಹೆಚ್ಚಿದ್ದರೆ, ಸರಕಾರ ಪೇಚಿನಲ್ಲಿ ಸಿಕ್ಕಿಬೀಳುತ್ತದೆ— ಭಾರತ ಪರದಾಸ್ಯದ ಶೃಂಖಲೆಯೆಡೆಗೇ ಒಲಿಯುತ್ತಿರುವ ಭಯವನ್ನದು ಎತ್ತಿ ತೋರಿಸುತ್ತದೆ.

ಬ್ರಿಟಿಷರು ದೇಶಬಿಟ್ಟು ಹೋಗುವಾಗ—ಭಾರತೀಯರು ಅಂತಃ ಕಲಹದಿಂದಲೇ ಹೊಡೆದು ಬಡಿದುಕೊಂಡು ಸಾಯುವರು ಎಂದು ಭವಿಷ್ಯನುಡಿದಿದ್ದರು: ಆ ಆಹ್ವಾನವನ್ನು ಸ್ವೀಕರಿಸಿ, ಜಯಗಳದ್ದೇವೆ. ಈಗ ಆರ್ಥಿಕ ದಾಸ್ಯಕ್ಕೆ ಒಳಗಾಗಿದ್ದೇವೆ ಎಂಬ ಗುಲ್ಲೆದ್ದಿದೆ—ಅದಕ್ಕೂ ಚೆನ್ನಾದ ಉತ್ತರಕೊಡುವುದಕ್ಕೆ ನಾವು ಸಿದ್ಧರಾಗಬೇಕು. ದುಡಿದುಣ್ಣುವ ಬಾಳೆ ನಮ್ಮದೆಂಬುದನ್ನು ತೋರಿಸಿಕೊಡಬೇಕು

—ಓಂತಕ್ಷತ

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. P. No. 44 1952

ಅರ್ಜಿದಾರ ಚಂದಮ್ಮ ಶೆಡ್ತಿ ಮಾಜಿ ಪಟೇಲ ಚಂದಯ್ಯ ಶೆಟ್ಟಿರ ವಿಧವೆ ವ ಜೀವಿತ್ರ ಮಗಳು ಕುಂದಾಪುರ ತಾಲ್ಲೂಕು, ವಕ್ವಾಡಿ ಗ್ರಾಮದಲ್ಲಿ ಇರುವವಳು ಅರ್ಜಿದಾರಳು ರಹಿತಳು Post Tekkatte.

ಎದ್ರಿ - ಯಿಲ್ಲ.

ಈ ಮೂಲ್ಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದ್ರೆ,

ಅರ್ಜಿದಾರಳ ಗಂಡ ಹಾಲಿ ಮೃತ ನಾಗಯ್ಯ ಶೆಟ್ಟಿಯು ತಾರೀಖು 16 1 1939ರಲ್ಲಿ ರಿಜಿಸ್ಟ್ರ ಬರದಿಟ್ಟ ವೀಲು ಪ್ರಕಾರ ಆಕೆಗೆ ಬರತಕ್ಕ ಹಾಗೂ ಮಕ್ಕಳಿಗೆ ತಾನು ಹಕ್ಕುದಾರಳೆಂತಲೂ ತನಗೆ ಸಕ್ಸೆಸನ್ ಸರ್ಟಿಫಿಕೇಟು ಕೊಡಬೇಕಾಗಿಯೂ ಅರ್ಜಿದಾರಳು ಮೇಲಿನ ನಂಬ್ರಕ್ಕೆ ಅರ್ಜಿ ಕೊಟ್ಟಿರುತ್ತಾಳೆ. ಸದ್ರಿ ಅರ್ಜಿ ತಾ. 5 9 1952ಕ್ಕೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ತನಿಖೆಗೆ ಯಿಡೋಣಾಗಿರುತ್ತದೆ. ಈ ಮೂಲ್ಕ ಸರ್ವ ಜನರಿಗೆ ತಿಳಿಸೋಣಾಗಿರುತ್ತದೆ.

M. M. Hebbar.

Advocate for Petitioner.

ಮೊಕ್ಕಾಂ ಕುಂದಾಪುರ, ತಾ. 7-8-1952.

Congress Publication

FIFTH YEAR OF FREEDOM

August, 15, 1951—August, 15, 1952.

Summing up the achievements of the Congress ministries in the states and at the Centre.

Advertisements accepted till 30th August, 1952.

For rates and other Particulars write to:

The Publications Department.
All India Congress Committee,
7, Jantar Mantar Road, NEW DELHI.

★ ಸ್ವರಾಜ್ಯ ಶಾಸನದ ಶುಭ ಚಿಹ್ನೆ ★

ಮಾನವ ಕಲ್ಯಾಣದ ಅಮೂಲ್ಯ ಸಂದೇಶ



ಸ್ವರಾಜ್ಯ ಶಾಸನಾಧಿಕಾರದ ಚಿಹ್ನೆಯಾಗಿ ಭಾರತವು "ಧರ್ಮಚಕ್ರ"ವನ್ನು ಸ್ವೀಕರಿಸಿದೆ. ಸಿಂಹ ಮುಖಗಳನ್ನೊಳಗೊಂಡಿರುವ ಈ ಮಹಾ ಚಕ್ರವನ್ನು ನಾವು ರಾಷ್ಟ್ರನಿಷ್ಠೆಯಿಂದಷ್ಟೇ ಅಲ್ಲ—ಭಾರತೀಯ ಸಂಸ್ಕೃತಿ ಮತ್ತು ಧರ್ಮಜ್ಯೋತಿಯ ಕುರಿತಾದ ವಾತ್ಸಲ್ಯದಿಂದಲೂ ಮೆಚ್ಚಬೇಕು. ಪ್ರಕೃತ ನಮ್ಮ ಸರಕಾರವು ಬಳಸುತ್ತಿರುವ ಚಿಹ್ನೆಯು ಸಾರನಾಥದ ವಸ್ತು ಪ್ರದರ್ಶನಾಲಯದಿಂದ ಸಂಗ್ರಹಿಸಲ್ಪಟ್ಟ ಅಶೋಕನ ಸಿಂಹಸ್ತಂಭದ ಪ್ರತೀಕವಾಗಿದೆ. ಈ ಧರ್ಮಚಕ್ರವು ನೋಡಲಿಕ್ಕೆ ಸಾಧಾರಣವೆನಿಸಿದರೂ—ಇದರಲ್ಲಿ ಅದ್ವಿತೀಯ ಆಕರ್ಷಣೆ ಇದೆ. ಸುಂದರವಾದ ಅರ್ಥವಿದೆ; ಮತ್ತು ಘನತೆಯೂ ತುಂಬಿದೆ. ರಾಜಚಿಹ್ನೆಯಾಗಿ ಆರಿಸಿರುವ ಸಿಂಹಸ್ತಂಭದ ಮೂಲದಲ್ಲಿರುವ ಅಶೋಕ ಚಕ್ರವನ್ನು ನಮ್ಮ ತ್ರಿವರ್ಣದ ರಾಷ್ಟ್ರಧ್ವಜದಲ್ಲಿಯೂ ಅಂಕಿಸಲಾಗಿದೆ. ಸಾರನಾಥದ ಸಿಂಹಸ್ತಂಭದ ನಾಲ್ಕು ಮೂಲೆಗಳಲ್ಲಿ ಆನೆ, ಎತ್ತು, ಸಿಂಹ ಮತ್ತು ಕುದುರೆಗಳನ್ನು ಚಿತ್ರಿಸಿರುವ ವಲಯ ಪಟ್ಟಿಯ ಅಧಸ್ತದಿಂದ "ಧರ್ಮಚಕ್ರ ಪ್ರವರ್ತನಾಯ" ಎಂಬುದನ್ನು ವಿದ್ಯುದ್ದೀಪದಿಂದ ಬರೆದಿರುವುದನ್ನು ಕಾಣುತ್ತೇವೆ. ರಾಜ ಚಿಹ್ನೆಯಾಗಿ ಮತ್ತು ರಾಷ್ಟ್ರ ಧ್ವಜವೆಂದು ಸ್ವೀಕರಿಸಿರುವ 'ಧರ್ಮಚಕ್ರ" ತುಂಬ ಮಹತ್ವದ ಇತಿಹಾಸದಿಂದ ಕೂಡಿದೆ. ನಮಗೆ ಸ್ಫೂರ್ತಿಯ ನೆಲೆಯಾಗಿದ್ದಂತೆ, ಧರ್ಮಭೀರುಗಳನ್ನಾಗಿಯೂ ಮಾಡುತ್ತದೆ. ಈಗಂತೂ ರಾಜ ಚಿಹ್ನದ ಅಡಿಯಲ್ಲಿ "ಸತ್ಯಮೇವ ಜಯತೇ" ಎಂಬ ಉಪನಿಷದ್ ವಾಕ್ಯವನ್ನೂ ಕೆತ್ತಿ, ನೈತಿಕತೆಯ ವಿಸ್ತಾರವನ್ನು ಚೆನ್ನಾಗಿ ಬಿಂಬಿಸಿರುವರು.

ಧರ್ಮಚಕ್ರದ ಕೀರ್ತಿ

ಭೌತಿಕ ಶಾಸ್ತ್ರವು ಉನ್ನತಿಯನ್ನು ಹೊಂದಿದಂತೆಲ್ಲ ಯಂತ್ರಗಳ ಬಳಕೆ ಹೆಚ್ಚಿತು. ಮನುಷ್ಯನ ಕಲ್ಪನೆಗೆ "ಚಕ್ರ" ಸ್ವರೂಪ ಗೋಚರಿಸಿತು. ಚಲಿಸುವುದೇ ಚಕ್ರದ ಮೂಲಧರ್ಮ. ಬೌದ್ಧ ಧರ್ಮದಲ್ಲಿ ಚಕ್ರದ ವಿಶೇಷ ಬಳಕೆಯನ್ನು ಕಾಣುತ್ತೇವೆ. ಚಕ್ರ ಸದಾಗಮನಶೀಲವಾದುದರಿಂದ, ಅದು ಪ್ರಗತಿಯ ದ್ಯೋತಕವೆಂದು ಕರೆಯಲ್ಪಟ್ಟಿತು. "ಧರ್ಮಚಕ್ರ ಪ್ರವರ್ತನ"ವೆಂದರೆ, ಧರ್ಮವನ್ನು ಎತ್ತಿ ಹಿಡಿದು ಸದಾಕಾಲ ಅದನ್ನು ಅನುಷ್ಠಿಸುವುದು ಎನ್ನಬಹುದು.

ನಮ್ಮ ಧುರೀಣರ ದೃಷ್ಟಿಯಲ್ಲಿ ಧರ್ಮಚಕ್ರದ ಐತಿಹಾಸಿಕ ಮಹತ್ವಕ್ಕಿಂತಲೂ ಅದು ಬೀರುವ ಮಹಾ ಸಂದೇಶವೇ ಅಮೂಲ್ಯವಾದುದು, ಅಪೂರ್ವವಾದುದು. ಬೌದ್ಧ ಧರ್ಮದೊಡನೆ ಧರ್ಮಚಕ್ರದ ನಿಕಟ ಸಂಪರ್ಕವಿದೆ ಎಂಬುದು ನಿಜವಾದರೂ, ಭಾರತೀಯ ಸಂಸ್ಕೃತಿಯ ದೃಷ್ಟಿಯಲ್ಲಿ, ವಿಶ್ವದಲ್ಲಿ ಚಕ್ರದ ಕಲ್ಪನೆ ಒಂದಲ್ಲೊಂದು ರೂಪದಿಂದ ಸರ್ವಕಾಲದಲ್ಲಿದ್ದುದನ್ನು ಕಾಣುತ್ತೇವೆ. ಭಾರತೀಯ ದಾರ್ಶನಿಕರ ಅಭಿಪ್ರಾಯದಂತೆ, ಚಕ್ರವು ಅಧ್ಯಾತ್ಮ ಭಾವನೆಯ ಮತ್ತು ಪ್ರಗತಿಯ ಸೂಚಕವಾಗಿದೆ. ಭಗವಾನ್ ಬುದ್ಧನು ಎತ್ತಿ ಹಿಡಿದ ಚಕ್ರಕ್ಕೆ ಧರ್ಮಸಾಧನೆಯೇ ಬೆಂಗೋಲಾಗಿತ್ತು. ವೇದಾಂತದಲ್ಲಿ ದ್ವಾದಶಾರ-ಮಣಿ ನಾಭಿಚಕ್ರದ ಶ್ರೇಷ್ಠಕಲ್ಪನೆ ಇದೆ—ಹೃದಯಕಮಲವು ವಿಕಸಪೂರ್ಣವಾಗುವುದೆನ್ನುವ ಸುಂದರಕಲ್ಪನೆಯೂ ಚಕ್ರದ ಮಹಿಮೆಗೆ ಉದಾಹರಣೆ. ಚಕ್ರದ ಕುರಿತು ಕೆಲವು ಜನರು ಇದನ್ನು ಸೂರ್ಯನ ಪ್ರತಿಬಿಂಬವೆಂದೂ ಹೇಳುತ್ತಾರೆ. ಸೂರ್ಯನು ಕಲ್ಯಾಣಪ್ರದನೆಂದು ಪ್ರತೀತಿ ಇದೆ.

ಗತಿಶೀಲ ಧರ್ಮ

ಪಾಟಲೀಪುತ್ರದ ಮಹಾರಾಜ 'ಪ್ರಿಯದರ್ಶಿ' ಅಶೋಕನು ನೂರಾರು ಕಂಬಗಳನ್ನು ದೇಶದಾದ್ಯಂತ ನೆಡಿಸಿದನು. ಅವುಗಳಿಂದ ತುಂಬ ಜನರಿಗೆ ಹಿತೋಪದೇಶಗಳಿವೆ, ರಾಜಾಜ್ಞೆಯಿಂದ ಇವನ್ನು ಬರೆಯಲಾಗಿತ್ತು. ಪ್ರಿಯದರ್ಶಿ ಅಶೋಕನ ಈ ಶಿಲಾಸ್ತಂಭಗಳನ್ನು 'ಧರ್ಮಸ್ತಂಭಗಳೆಂದು ಸಂಬೋಧಿಸಿದರು. ಈ ಧರ್ಮಸ್ತಂಭಗಳ ತುತ್ತತುದಿಯಲ್ಲಿ ನಮ್ಮ ರಾಜಚಿಹ್ನೆಯಾಗಿರುವ ಸಿಂಹಗಳಿವೆ. ಪ್ರಾಯಶಃ ಈ ಸಿಂಹಮುಖಗಳ ಮೇಲ್ಭಾಗದಲ್ಲಿ "ಧರ್ಮಚಕ್ರವು" ಇದ್ದಿರಬೇಕು. ಕೇವಲ ಸೌಂದರ್ಯದ ದೃಷ್ಟಿಯಿಂದ ಸಿಂಹಗಳ ಪಾದಮೂಲದಲ್ಲಿ ಅದೇ ಧರ್ಮಚಕ್ರದ ಚಿತ್ರವನ್ನು ಕೆತ್ತಿದ್ದಿರಬೇಕು. ಐತಿಹಾಸಿಕ ಸಂಶೋಧಕರು ಧರ್ಮಚಕ್ರವು ಗತಿಶೀಲವಾಗಿರುವುದರಿಂದ, ಸಿಂಹದ ಮಸ್ತಕದ ಮೇಲೆಯೇ ಇರಿಸಿರಬೇಕೆಂದೂ, ಅವುಗಳನ್ನು ತಿರುಗಿಸಲೂ ಬರುತ್ತಿತ್ತೆಂದೂ ಹೇಳುವರು. ಆದರೆ ಕಾಲಗತಿಯಿಂದ ಯಾವ ಸ್ಥಿರ ಆಧಾರವೂ ಇಲ್ಲದೆ ನಿಂತ ಚಕ್ರಗಳು ಕೆಳಗೆ ಬಿದ್ದು ನಷ್ಟಗೊಂಡಿದ್ದಾವು. ಸಾಂಚಿಯಲ್ಲಿ ಕಂಡುಬಂದಿರುವ ಒಂದು ಸಿಂಹಸ್ತಂಭದಲ್ಲಿ ಸಿಂಹದ ಮಸ್ತಕದ ಮೇಲೆಯೇ ಧರ್ಮಚಕ್ರ ನಿಂತಿರುವುದನ್ನು ನೋಡಬಹುದು. ಹೀಗೆ ಧರ್ಮಚಕ್ರವು ನ್ಯಾಯಪರತೆಯನ್ನು, ಧರ್ಮನಿಷ್ಠೆಯನ್ನೂ, ಪಾಪಭಯವನ್ನೂ ಬಿಂಬಿಸುತ್ತದೆ.

ಸಿಂಹಸ್ತಂಭದ ಕಲ್ಪನೆ

ಶಿಲ್ಪಕಲೆಯು ಉನ್ನತಾವಸ್ಥೆಯನ್ನು ಮುಟ್ಟಿದ್ದರಿಂದ ಅಶೋಕನು ನೆಡಿಸಿದ ಸ್ತಂಭಗಳಲ್ಲಿ ಸೌಂದರ್ಯ ತಾನೇ ತಾನಾಗಿ ಮೆರೆಯುತ್ತದೆ. ಆದರೆ ಸಿಂಹಗಳ ಸೌಂದರ್ಯವೊಂದೇ ನಮಗೆ ಉಲ್ಲಾಸವನ್ನುಂಟುಮಾಡುವುದಲ್ಲ. ಜೊತೆಗೆ ಅದಕ್ಕಿಂತಲೂ ಅಮೂಲ್ಯವಾದ ಭಾವನಾಸಮುದಾಯಗಳಿವೆ. ನಮ್ಮ ಸಂಸ್ಕೃತಿಯಲ್ಲಿ ಸಿಂಹಗಳಿಗೆ ಪ್ರಾಚೀನಕಾಲದಿಂದಲೂ ಮಹತ್ವವನ್ನು ಕೊಡಲಾಗಿದೆ. ಶಾಸನಾಧಿಕಾರ ಮತ್ತು ಸಾಮರ್ಥ್ಯದ ಅರ್ಥದಲ್ಲಿ ಭಾರತೀಯ ಮತ್ತು ಈಜಿಪ್ತ ಸಂಸ್ಕೃತಿಯಲ್ಲಿ ಸಿಂಹ ಶಬ್ದದ ಬಳಕೆಯಾಗುತ್ತದೆ. ಅನಾದಿಕಾಲದಿಂದಲೂ ರಾಜಾಸನವನ್ನು 'ಸಿಂಹಾಸನ' ಎಂಬುದಾಗಿಯೇ ನಾವು ಕರೆಯುತ್ತಿದ್ದೇವೆ. ಶಕ್ತಿ ಮತ್ತು ಧೈರ್ಯಗಳಿಂದ ವೈರಿಗಳ ಎದೆನಡುಗಿಸುವವರನ್ನು ಸಿಂಹಹೃದಯಿಗಳೆಂದು ನಾವು ಕರೆಯುತ್ತಿಲ್ಲವೆ? ರಜಪೂತನ ವೀರರು ತಮ್ಮ ಹೆಸರಿನ ಜೊತೆಗೆ ಸಿಂಹ ಎಂಬ ಬಿರುದನ್ನು ಧರಿಸಿ ಅರಿರಾಜ ಭಯಂಕರ

ಮೌಲಾನಾ ಅಬ್ದುಲ್ ಕಲಾಂ ಆಜಾದರು

ವಿದೇಶಗಳೊಡನೆ ಭಾರತದ ಗೆಳೆತನ

ಶಾಂತಿ-ಸೌಹಾರ್ದದ ಪರಂಪರಾಗತ ಸಂಬಂಧ

ವಿಜಯಲಕ್ಷ್ಮಿ ಪಂಡಿತ್

ಭಾರತವು ಸ್ವತಂತ್ರವಾದ ದಿನದಿಂದ ವಿದೇಶಗಳೊಡನೆ ಸ್ನೇಹವನ್ನು ಬೆಳೆಸಲು ಅದು ತುಂಬ ಆತುರಗೊಂಡಿತು: ಸಣ್ಣ-ದೊಡ್ಡದೆನಿಸಿದ ಸಾಮಾನ್ಯ ಎಲ್ಲ ದೇಶಗಳೊಡನೆಯೂ ಈಗ ಭಾರತವು ರಾಯಭಾರಿ ಸಂಬಂಧವನ್ನು ಕಟ್ಟಿಕೊಂಡಿದೆ. ರಾಜಕೀಯ ನೀತಿಯಂತೆ, ರಾಯಭಾರಿ ಸಂಬಂಧವು ಬಹಳ ನಾಜೂಕಿನ ವಿಷಯ.: ತಾನು ಪ್ರತಿನಿಧೀಕರಿಸುವ ರಾಷ್ಟ್ರದ ಸಾಕ್ಷಾತ್ ಪ್ರತಿರೂಪವೇ ರಾಯಭಾರಿ ಎರಡೂ ದೇಶಗಳ ನಡುವೆ ಶಾಂತಿ ಮತ್ತು ಸೌಹಾರ್ದಮಯ ವಾತಾವರಣವನ್ನುಂಟು ಮಾಡುವ ಮಹತ್ವದ ಕರ್ತವ್ಯ ರಾಯಭಾರಿಗಿದೆ: ಜೊತೆಗೇ ಆಯಾ ಸರಕಾರದ ಚಲನವಲನಗಳನ್ನು ಸೂಕ್ಷ್ಮ ರೀತಿಯಿಂದ ಪರಿಶೀಲಿಸುವ ಚಾಣಾಕ್ಷ ಬುದ್ಧಿಯೂ ರಾಯಭಾರಿಗಿರಬೇಕಾಗಿದೆ ಜಗತ್ತಿನ ಮಹಾರಾಷ್ಟ್ರಗಳೆನಿಸಿದ ಚೀನಾ ರಶಿಯಾ, ಬ್ರಿಟನ್ನು, ಅಮೇರಿಕೆಯಂಥವುಗಳಲ್ಲಿರುವ ರಾಯಭಾರಿಗಳ ಯೋಗ್ಯತೆಯೆಷ್ಟಿರಬೇಡ? ಭಾರತದ ನಿಜಧೋರಣವನ್ನು ಅಲ್ಲಿಯ ಜನರ ಮೇಲೆ ಪ್ರಭಾವಶಾಲಿಯಾದ ರೀತಿಯಲ್ಲಿ ಬಿಂಬಿಸಿ, ಅವರ ಒಲವನ್ನು ಸಂಪಾದಿಸುವ ಚಾಕಚಕ್ಯತೆ ರಾಯಭಾರಿಗೇ ಸೇರಿದೆ. ವಿಜಯಲಕ್ಷ್ಮಿ ಪಂಡಿತ, ಸರ್ದಾರ್ ಪಣಿಕ್ಕರ, ಕೃಷ್ಣ ಮೆನನ್, ರಾಧಾಕೃಷ್ಣನ್-ಇವರೇ ಮೊದಲಾದ ರಾಯಭಾರಿಗಳು ನಮ್ಮ ದೇಶಕ್ಕೆ ತುಂಬ ಹಿತವನ್ನುಂಟು ಮಾಡಿದ್ದಾರೆ

ವರ್ಗ ಪ್ರಭೇದ

ಭಾರತದ ಐತಿಹಾಸಿಕ ಪರಂಪರೆಯನ್ನು ಸೂಕ್ಷ್ಮ ದೃಷ್ಟಿಯಿಂದ ಪರಿಶೀಲಿಸಿದರೆ-ಅತ್ಯಂತ ಪೂರ್ವಕಾಲದಲ್ಲಿ ಕೂಡ ಭಾರತೀಯರು ಕೂಪಮಂಡೂಕ ಮನೋವೃತ್ತಿಯನ್ನು ತಳೆದಿರದೆ-ವಿಶ್ವದೃಷ್ಟಿಯನ್ನಿಟ್ಟುಕೊಂಡಿದ್ದರೆಂಬುದು ಸಿದ್ಧವಾಗುತ್ತದೆ. ಎಷ್ಟೋಮಂದಿ ದೇಶ ದೇಶಾಂತರಗಳಿಗೆ ಹೋಗಿ, ಅಲ್ಲಿ ಪ್ರಗಾಢವಾದ ಮೈತ್ರಿ ಸಂಬಂಧವನ್ನೂ, ಸಾಂಸ್ಕೃತಿಕ ಪ್ರಚಾರದ ಪುನೀತ ಕಾರ್ಯವನ್ನೂ ಮಾಡಿ ಮಾತೃಭೂಮಿಗೆ ಕೀರ್ತಿ ತಂದರು. ಅಂತೂ ರಾಷ್ಟ್ರೀಯ ರಾಜಕೀಯದಲ್ಲಿ ಭಾರತವು ಚಿರಕಾಲದಿಂದಲೂ ತನ್ನ ವರ್ಚಸ್ಸನ್ನು ಬೀರುತ್ತಾ ಬಂದಿದೆ: ಪುರಾತತ್ವ ಇಲಾಖೆಯವರ ಸಂಶೋಧನಾನುಸಾರ, ಕ್ರಿಸ್ತಪೂರ್ವದಲ್ಲಿಯೇ ಸಾಂಸ್ಕೃತಿಕ ಕೇಂದ್ರಗಳಲ್ಲೆಲ್ಲ ಭಾರತದ ರಾಯಭಾರಿ ಸಂಬಂಧವಿದ್ದುದು ಕಂಡುಬರುತ್ತದೆ. ಆ ಬಳಿಕದ ರಾಮಾಯಣ ಮತ್ತು ಮಹಾಭಾರತಗಳ ಕಾಲದಲ್ಲಿ ರಾಯಭಾರಿ ಸಂಬಂಧದ ಸ್ಪಷ್ಟ ಉಲ್ಲೇಖವು ನಮಗೆ ಸಿಗುತ್ತದೆ: ಅಂಗದನು ರಾವಣನ ಸಭೆಗೆ ರಾಮನ ದೂತನಾಗಿ ಹೋದುದು, ಶ್ರೀಕೃಷ್ಣನು ಪಾಂಡವರ ರಾಯಭಾರಿಯಾಗಿ ಕೌರವನ ಆಸ್ಥಾನವನ್ನು ಪ್ರವೇಶಿಸಿದುದು-ಇವನ್ನು ತಿಳಿಯದವರು ಯಾರು?

ಆ ಕಾಲದಲ್ಲಿ ರಾಯಭಾರಿ (ಅಥವಾ ರಾಜದೂತ) ಯನ್ನು ಮೂರು ವರ್ಗಗಳಾಗಿ ವಿಂಗಡಿಸುತ್ತಿದ್ದರು ರಾಜನ ಪರಾಮರ್ಶೆಯನ್ನು ತೆಗೆದುಕೊಳ್ಳದೆನೇ ರಾಷ್ಟ್ರದ ಹಿತವನ್ನು ಕಣ್ಣಮುಂದಿಟ್ಟುಕೊಂಡು, ಸ್ವೇಚ್ಛೆಯಿಂದ ಯಾವುದೇ ಬಗೆಯ ಸಂಧಿ ಅಥವಾ ಮೈತ್ರಿಗೆ ಒಡಂಬಡುವ ಅಧಿಕಾರವಿರುವವನು ಉಚ್ಚ ಮಟ್ಟದ ರಾಯಭಾರಿ ಶಾಸಕನ ಅನುಮತಿಯಂತೆ ವಾರ್ತಾಲಾಪಗಳನ್ನು ನಡೆಸಿ, ಮಹತ್ವದ ನಿರ್ಣಯಗಳಲ್ಲಿ ಭಾಗವಹಿಸುವ ಅಧಿಕಾರವನ್ನು ಹೊಂದಿದವನು ಮಧ್ಯಮವರ್ಗದ ರಾಯಭಾರಿ, ಕನಿಷ್ಠ ವರ್ಗದ ರಾಯಭಾರಿ ಕೇವಲ ಸಂದೇಶವಾಹಕನು ಮಾತ್ರ. ಶಾಸಕನು ಯಾವ ಕಾರ್ಯವನ್ನು ಒಪ್ಪಿಸಿಕೊಟ್ಟಿದ್ದನೋ, ಅದನ್ನು ನೆರವೇರಿಸಿಬರುವುದಷ್ಟೆ ಅವನ ಕರ್ತವ್ಯ.

ಪ್ರಾಚೀನ ಕಾಲದಲ್ಲಿ

ರಾಜನ ದೌತ್ಯವನ್ನು ವಹಿಸಿ ಬಂದವರನ್ನು ಯಾರೂ ವಧೆಮಾಡಕೂಡದು; ಮತ್ತು ಅವನವಿತ್ತಜೀವಿತಗಳಿಗೆ ಹಾನಿ ಉಂಟುಮಾಡಲಾಗದು. ಇದು ಅನಾದಿಕಾಲದಿಂದಲೂ ಪ್ರಚುರವಾಗಿದ್ದ ನೀತಿ ಅವಮರ್ಯಾದೆಯಾಗಲೀ ತಿರಸ್ಕಾರವಾಗಲೀ, ಅವನು ಪ್ರತಿನಿಧೀಕರಿಸುವ ರಾಷ್ಟ್ರದ ಬಗ್ಗೆ ತೋರುವ ದುಷ್ಪ್ರವರ್ತನೆ ಎಂದೇ ಗಣಿಸಲ್ಪಡುತಿತ್ತು. ಆಧುನಿಕ ಯುಗದಲ್ಲಿಯೂ ಎಲ್ಲೆಡೆ ಈ ಪರಂಪರೆಯನ್ನು ಅನುಸರಿಸುತ್ತಾರೆ. ರಾಷ್ಟ್ರದ ಪ್ರತಿನಿಧಿಯಾಗಿ ಬಂದಿರುವ ರಾಯಭಾರಿಗೆ ಇನ್ನಿಲ್ಲದ ಸನ್ಮಾನವನ್ನು ಕೊಟ್ಟು ಗೌರವಿಸುವುದು ವಾಡಿಕೆ.

ಕೃಷ್ಣ ಮೆನನ್

ಕ್ರಿಸ್ತ ಪೂರ್ವ ಮೂರನೇ ಶತಮಾನ ಮೌರ್ಯ ಸಮ್ರಾಜ ಚಂದ್ರಗುಪ್ತನು ಗ್ರೀಕರ ಸೆಲ್ಯೂಕಸನನ್ನು ಸೋಲಿಸಿದ ಬಳಿಕ, ಮೈತ್ರಿಯ ಚಿಹ್ನೆಯಾಗಿ ಪರಸ್ಪರ ರಾಯಭಾರ ಸಂಬಂಧವನ್ನು ಬೆಳೆಸಿಕೊಳ್ಳಲು ಆಸ್ಪದ ಮಾಡಿಕೊಟ್ಟನು. ಮೆಗಸ್ತನೀಜನೆಂಬ ರಾಯಭಾರಿಯು ಆ ಕಾಲದಲ್ಲಿ ಭಾರತದಲ್ಲಿದ್ದುಕೊಂಡು, ಅಂದಿನ ಪರಿಸ್ಥಿತಿಯ ವಿವರ ವರ್ಣನೆಯನ್ನು ನಮಗೆ ಒದಗಿಸಿ ಕೊಟ್ಟಿರುವನು. ಚಂದ್ರಗುಪ್ತನ ಮಗ ಬಿಂದುಸಾರನ ಆಸ್ಥಾನದಲ್ಲಿಯೂ ಅಂತಿಓಕನೆಂಬ ರಾಯಭಾರಿ ಇದ್ದನು. ಆ ಬಳಿಕ ಅಶೋಕನ ಕಾಲದಲ್ಲಿಯಂತೂ-ಭಾರತವು ಅನೇಕ ದೇಶಗಳೊಡನೆ ಸ್ನೇಹ ಸಂಬಂಧವನ್ನು ಬೆಳೆಸಿ, ಸಾಂಸ್ಕೃತಿಕ ಪ್ರಚಾರದ ಕಾರ್ಯದಲ್ಲಿಯೂ ಯಶಸ್ವಿಯಾಯಿತು ಆಗಿನ ಶಿಲಾ ಲೇಖಗಳಲ್ಲಿ ಉತ್ತರ ಆಫ್ರಿಕದ ಮಗಸ, ಸಿರಿಯಾದ ಅಂತಿಒಕ, ಈಜಿಪ್ಟಿನ ತೋಲೆಮಿ ಇನ್ನೂ ಎಷ್ಟೋ ರಾಜರೊಡನೆ ಗೆಳೆತನ ಬೆಳೆಸಿದುದರ ಪ್ರಸ್ತಾಪವಿದೆ. ಸಂಘಮಿತ್ರೆ ಹಾಗೂ ಮಹೇಂದ್ರ ಎಂಬ ತನ್ನಿಬ್ಬರು ಮಕ್ಕಳನ್ನು "ಪ್ರಿಯದರ್ಶಿ"ಯಾದ ಅಶೋಕನು ಸಿಂಹಳ ದ್ವೀಪಕ್ಕೆ ಕಳಿಸಿ ಕೊಟ್ಟಿದ್ದನು. ಪ್ರಾಚೀನ ಕಾಲದ ವಿದಿಶಾ ನಗರದಲ್ಲಿ (ಈಗಿನ ಭಿಲಾಸಪುರದ ಎರಡು ಮೈಲಿಯ ಸಮೀಪ) ದೊರಕಿರುವ ಒಂದು ಶಿಲಾಸ್ತಂಭದಿಂದ, ತಕ್ಷಶಿಲೆಯ ಹೆಲಿಯೋದರನನ್ನು ಭಾರತೀಯ ರಾಜ ಭಾಗ ಭದ್ರನ

[೧೨ನೇ ಪುಟ ನೋಡಿರಿ]

[೩ನೇ ಪುಟದಿಂದ ಮುಂದುವರಿದುದು]

ರಾಗಿದ್ದರು. ರಾಜ ಪ್ರಾಸಾದದ ಮಹಾದ್ವಾರವನ್ನು ಸಿಂಹದ್ವಾರವೆಂದು ಕರೆಯುವುದೇ ವಾಡಿಕೆ.

ಭಾರತದಲ್ಲಿಯ ಹೇಳಿಲ್ಲ—ಜಾವಾ, ಸುಮಾತ್ರಾ, ಈಜಿಪ್ತ, ಮತ್ತು ಜರ್ಮನಿಯಲ್ಲಿಯೂ ಸಿಂಹದ ಕಲ್ಪನೆಯು ಕಾರ್ಯ-ಸಾಹಸಗಳಿಗೆ ಮೀಸಲಾಗಿತ್ತು. ನಮ್ಮ ದೇಶದಲ್ಲಿ ಅಶೋಕನ ಆಳಿಕೆಗೂ ಹಿಂದೆ, ರಾಜಮುದ್ರೆಯಾಗಿ ಸಿಂಹ ಮತ್ತು ಚಕ್ರವನ್ನು ಪಯೋಗಿಸುತ್ತಿದ್ದರು. ಮಹಾಕ್ಷಲಪ ಭೂಮಕನು (ಕ್ರಿಸ್ತಪೂರ್ವಕಾಲ ಇವನದ) ರಾಜಮುದ್ರೆಯಲ್ಲಿ ಚಕ್ರವನ್ನು ಅಂಕಿಸಿದ್ದನು ಸಿಂಹವನ್ನು ಸತ್ ರಜ ತಮಗಳ ಭವ್ಯ ಭಾವನೆಯಿಂದ ಕೊಂಡಾಡುತ್ತಿದ್ದರು. ಸಿಂಹ ನಿಜವಾಗಿ ಹಿಂಸ್ರಜಂತು. ತಮೋಗುಣದ ಪ್ರತೀಕವದು. ಆದರೆ ಶೌರ್ಯ ಮತ್ತು ಸಾಹಸಗಳಲ್ಲಿ ಸಿಂಹ ಅಪ್ರತಿಮವಾಗಿರುವುದರಿಂದ ಅದಕ್ಕೆ 'ಮೃಗರಾಜ"ನೆಂಬ ಉಪಾಧಿಯು ಲಭಿಸಿತು. ರಾಜ ಸಂಭಾವನೆಗೆ ಈ ವಿವರಣೆ ಸಾಕು

ಅಶೋಕನ ಸಂದೇಶ

ಸಮ್ರಾಟ ಅಶೋಕನು ಕಳಿಂಗ ಯುದ್ಧದ ಸಮಯ ಚಂಡ ಕೌಶಿಕನಂತೆ ಇದ್ದನು-ಯುದ್ಧಾನಂತರ ಪ್ರಿಯದರ್ಶಿಯಾಗಿ, ಕುಸುಮ ಕೋಮಲನಾಗಿ ಪರಿವರ್ತಿತನಾದನು - ರಕ್ತದೋಕುಳಿಯಲ್ಲಿ ತೃಪ್ತಿಗೊಳ್ಳುತ್ತಿದ್ದ ಅನೇಕ ಸಾಮಾನ್ಯ ಜಂತುವಿಗಾಗುವ ಪೀಡೆಯನ್ನು ಕಂಡು ಸಹಿಸಲಾರದ ಮೃದು ಮನನ್ನು ಪಡೆದನು. ರಜೋಗುಣ ತಮೋಗುಣಗಳ ಮೇಲೆ ಸತ್ವಗುಣವು ಪಡೆದ ವಿಜಯವಲ್ಲವೆ ಇದು? ಧರ್ಮಕ್ಕಿಂತ ಮಿಗಿಲಾದುದು ಇನ್ನೊಂದಿಲ್ಲ. ಎಂತಲೇ ತನ್ನ ಸ್ತಂಭಗಳಲ್ಲಿ ಶ್ರೇಷ್ಠತ್ವ ಸೂಚಕವಾದ "ಸಿಂಹ"ವನ್ನು ಕೆತ್ತಿಸಿದನು.

ಅಶೋಕನು ಪರಮ ದಯಾಳು' ಧರ್ಮಭೀರು. ಜನತಾಜನಾರ್ಧನನ ಸೇವೆಯಲ್ಲಿ ಅವನು ಹಿಂದುಳಿದಿರಲಿಲ್ಲ ಧರ್ಮವನ್ನು "ಮಾನವಧರ್ಮ" ಎಂಬ ವಿಶಾಲ ಅರ್ಥದಲ್ಲಿ ಅವನು ತೆಗೆದುಕೊಂಡನು. ಜನರ ಕಲ್ಯಾಣವಾಗಬೇಕೆಂದು ಬಯಸಿ, ಮನಃಪೂರ್ವಕ ಪ್ರಯತ್ನಿಸಿದನು. ದಯೆ, ದಾಕ್ಷಿಣ್ಯ, ಸತ್ಯ, ನ್ಯಾಯ. ದಾನ, ಸಹಾನುಭೂತಿ, ಅಹಿಂಸೆ ಎಂಬಿವೇ ಸತ್ವಗುಣಗಳ ಪ್ರತೀಕವಾಗಿ ಧರ್ಮ ಚಕ್ರವನ್ನೂ ಸಿಂಹಸ್ತಂಭವನ್ನೂ ಅವನು ಎತ್ತಿ ಹಿಡಿದನು. ಧರ್ಮ ವಿಜಯವನ್ನೇ ಸರ್ವತ್ರವೆಂದು ಬಗೆದಿದ್ದ ಅಶೋಕನು-ಸರ್ವಧರ್ಮ ಸಹಿಷ್ಣುತಾ ಭಾವವನ್ನೂ ತೋರಿದನು. ತನ್ನ ಶಿಲಾಲೇಖದಲ್ಲಿ ಸಕಲ ಧರ್ಮಾನುಯಾಯಿಗಳೂ ಒಟ್ಟಿಗೆ ಇರಬಲ್ಲರೆಂದೂ-ಎಲ್ಲ ಮತದ ಮೂಲಾಂಶಗಳೂ ಒಂದೇ ಎಂದೂ ಅವನು ಘೋಷಿಸಿರುವನು. ಭಾರತದಂಥ ದೇಶ ಸೌಭಾಗ್ಯಪ್ರದವಾದ ಈ ಚಿಹ್ನೆಯನ್ನು ಅಳವಡಿಸಿಕೊಂಡದ್ದು ಶ್ರೇಯಸ್ಕರವೇ ಸೈ.

ದೇವರ ದಯೆ

ಅಕ್ಕಪಕ್ಕಗಳಲ್ಲಿ ರೆಕ್ಕೆಗಳಿದ್ದ ದೇವದೂತರು ನಮ್ಮನ್ನು ಕೈಹಿಡಿದು ಮುನ್ನಡೆಸುತ್ತಿದ್ದ ಕತೆ ಹಿಂದಿನ ಕಾಲದ ಸಂಗತಿ ಇದನ್ನು ದೇವರ ದಯೆ ಎಂಬುದಾಗಿ ಆಗ ಜನರು ಕೊಂಡಾಡುತಿದ್ದರು.

ದೇವರ ದಯೆ ಈಗಲೂ ಇದೆ. ಆದರೆ ಸ್ವರೂಪದಲ್ಲಿ ಮಾತ್ರ ಪರಿವರ್ತನೆಯಾಗಿದೆ. ಸ್ವರ್ಗದಿಂದ ದೇವದೂತರು ಇಳಿದು ಬಂದು ತಮ್ಮನ್ನು ಸುಧಾರಿಸಬೇಕೆಂದು ವಿವೇಕಿಗಳು ಈಗ ಅಪೇಕ್ಷಿಸುವುದಿಲ್ಲ ಈಗ ದೇವರ ದಯೆಯಿಂದ ನಮಗೆ ಅವಶ್ಯವೆನಿಸಿದ ವಿಮಾ ಸೌಲಭ್ಯವಿದೆ. ಇಂದೇ ವಿಮೆ ಇಳಿಸಿ, ನಿಮ್ಮ ಮತ್ತು ನಿಮ್ಮ ಕುಟುಂಬದ ರಕ್ಷಣೆಯನ್ನು ಮಾಡಿಕೊಳ್ಳಿರಿ. ತನ್ನ ರಕ್ಷಣೆ ತಾನು ಮಾಡಿಕೊಳ್ಳ ಬಲವನನ್ನು ದೇವರು ಕೈಬಿಡುವುದಿಲ್ಲ-

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ. ಸ್ಥಾಪನೆ: ೧೯೩೫
ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ ಕಂಪೆನಿ
The Canara Mutual Assurance Co. Ltd.
1 Office: UDIPI, S. India. Estd. 1935.

ಸ್ವಾತಂತ್ರ್ಯಾಂದೋಲನದ ಧ್ಯೇಯ-ಸಮೃದ್ಧಿ

ಅವಿತರವಾದ ದುಡಿಮೆಯೇ ಭಾರತೀಯರ ಬದುಕು

ಗಾಂಧೀಜಿ ಹತ್ತು ವರ್ಷಗಳ ಹಿಂದೆ ಬ್ರಿಟಿಷರಿಗೆ "ಭಾರತದಿಂದ ನಡೆಯಿರಿ" ಎಂದು ಎಚ್ಚರಿಕೆ ಕೊಟ್ಟರು: ಬ್ರಿಟಿಷರು "ರಾಮರಾಜ್ಯ"ದ ಮಾರ್ಗದಲ್ಲಿ ಕಂಟಕಪ್ರಾಯರೆಂದು ಗಾಂಧೀ ತಿಳಿದುಕೊಂಡರು. ಗಾಂಧೀಜಿಯ ಅಭಿಪ್ರಾಯದಲ್ಲಿ ರಾಮರಾಜ್ಯದಲ್ಲಿ ಸುಖಸಮೃದ್ಧಿಗಳು ನೆಲೆಗೊಂಡಿದ್ದು, ಜನರಿಗೆ ತಿಂದುಣ್ಣಲು ಏನೂ ಕೊರತೆ ಇರುವುದಿಲ್ಲ. ವ್ಯಕ್ತಿಯು ಕುಟುಂಬಕ್ಕಾಗಿ, ಕುಟುಂಬ ಗ್ರಾಮಕ್ಕಾಗಿ, ಗ್ರಾಮ ಜಿಲ್ಲೆಗಾಗಿ, ಜಿಲ್ಲೆ ರಾಜ್ಯಕ್ಕಾಗಿ, ರಾಜ್ಯ ರಾಷ್ಟ್ರಕ್ಕಾಗಿ ಐಕ್ಯಮತ್ಯದಿಂದ ಬದುಕುವ ಉನ್ನತಾದರ್ಶದ ಪಾಲನೆಯಾಗುತ್ತ, ಜನರ ನಡುವೆ ಶಾಸನಾಧಿಕಾರಿಯಾಗಿ ರಾಮನು ಇದ್ದುಕೊಂಡು, ಜಾತಿಮತ ಭೇದವಿಲ್ಲದೆ ನ್ಯಾಯದಾನವನ್ನು ಕೊಡುತಿದ್ದ, ಜನರ ಜೀವನಾವಶ್ಯಕತೆಗಳನ್ನು ರಾಜ್ಯದ ಸಿಬ್ಬಂದಿಗಳ ಮೂಲಕ ಸಮಾನರೂಪದಿಂದ ಪೂರೈಸಲು ಹೆಣಗುತಿದ್ದ.

ಅಂದಿನ ಶಾಂತಿ ಹಾಗೂ ಸಮೃದ್ಧಿಯ ದಿನಗಳಲ್ಲಿ ಸುಖ-ಸಂತೋಷಗಳು ನಲಿದುವು. ಭಾರತವು ವೇದಭೂಮಿ ಎಂದು ಹೆಸರು ಪಡೆಯಿತು. ಉಪನಿಷತ್ತು, ಗೀತೆ, ಪುರಾಣಗಳು, ಇನ್ನೂ ಹಲವಾರು ಉತ್ಕೃಷ್ಟ ಸಾಹಿತ್ಯಗ್ರಂಥಗಳು ಬೆಳಕು ಕಂಡವು. ವೈಭವದ ಕಾಲವೂ ಉದಿಸಿತು-ಅಜಂತ ಮತ್ತು ಎಲ್ಲೋರದ ಸರ್ವೋಚ್ಚ ಭಿತ್ತಿಚಿತ್ರಗಳು ದೇಶ-ವಿದೇಶದ ರಸಿಕರ ಮನೋಲ್ಲಾಸಕ್ಕೆ ಕಾರಣವಾದುವು. ಮಧುರೆಯ ದೇವಾಲಯವೇ ಮುಂತಾದ ಗುಡಿಗೋಪುರಗಳು ಭವ್ಯ ಶಿಲ್ಪಕಲೆಯ ಪ್ರತೀಕವಾಗಿ ನಿಂತು—ಭಾರತೀಯರ ವೈಭವ ಸಾರಿದುವು.

ಹೋರಾಟದ ನೆನಪು

ಕಾಲಗತಿ ಸರಿದಂತೆ, ಈ "ಜೇನು ಸುರಿವ, ಹಾಲು ಹರಿವ" ಅನುಪಮ ಭೂಮಿ ವಿದೇಶಿಯರ ಜೈತ್ರಯಾತ್ರೆಗೆ ತಲೆಗೊಡಬೇಕಾಗಿ ಬಂತು: ಪಠಾಣರೂ ಮೊಗಲರೂ ನಮ್ಮ ರಾಷ್ಟ್ರದಲ್ಲಿ ರಾಜ್ಯಭಾರ ಮಾಡಿದರು. ಕ್ರಮೇಣ ಭಾರತವನ್ನು ತಮ್ಮದೇ ಮನೆಯಾಗಿಸಿಕೊಂಡು ಅವರು ಆಳಿದುದರಿಂದ, ಪ್ರಾಚೀನ ಹಾಗೂ ಅರ್ವಾಚೀನ ವೈಭವಗಳ ಸಂಗಮಕ್ಕೆ ಇದು ಅನುವನ್ನೊದಗಿಸಿತು. ಆದರೆ ಈ ಸ್ವರ್ಣಯುಗವೂ ಅಲ್ಪಾವಧಿಯದೆಂದು ಸಿದ್ಧಗೊಂಡಿತು: ಏಳು ಸಮುದ್ರದಾಚೆಯಿಂದ ವ್ಯಾಪಾರದ ನೆಪದಲ್ಲಿ ಬಂದ ಬ್ರಿಟಿಷರಿಗೆ ದಾಸ್ಯವನ್ನು ಸ್ವೀಕರಿಸಿ ನರಕದ ಬದುಕು ನೀಗುವ ದುರ್ದೆಶೆ ನಮ್ಮದಾಯಿತು. ಅವರು ಪರಕೀಯರಾಗಿದ್ದರು—ಅವರಿಗೆ ನಮ್ಮ ಸುಖ-ದುಃಖದ ಗೊಡವೆ ಬೇಕಿರಲಿಲ್ಲ. ಈ ಒದ್ದಾಟದಿಂದ ಕೊನೆಗೂ ಜನರು ಎಚ್ಚತ್ತುಕೊಂಡು, ಎದುರಿಸಿದರು. ಬದುಕುವ ಅಧಿಕಾರ ಬೇಕೆಂದು, ಬದುಕಲು ದುಡಿಯುವೆವೆಂದು, ದುಡಿದುದನ್ನು ಉಪಭೋಗಿಸುವೆವೆಂದು ನಾವು ಹಠತೊಟ್ಟೆವು.

ಗಾಂಧೀಜಿಯ ಧುರೀಣತ್ವವನ್ನು ಸ್ವೀಕರಿಸಿ, ಕೋಟಿಗಟ್ಟಳೆ ಜನ ಈ ಶಪಥವನ್ನು ಕೈಗೊಂಡರು ಸ್ವಾತಂತ್ರ್ಯಕ್ಕಾಗಿ, ಬದುಕಿಗಾಗಿ ನಾಡಿನ ಆ ತುದಿಯಿಂದ ಈ ತುದಿಯ ತನಕ ಆಂದೋಲನ ನಡೆಯಿತು. ನಮ್ಮ ಒಗ್ಗಟ್ಟಿನ ಬಲದ ಮುಂದೆ ದಬ್ಬಾಳಿಕೆ ಉಳಿಯಲಿಲ್ಲ. ಜೊತೆಗೆ ಲೋಕಗತಿಯೂ ನಮ್ಮ ಇಚ್ಛಾಪೂರ್ತಿಗೆ ನೆರವು ಕೊಟ್ಟಿತು. ಕೊನೆಗೆ ಆದಿನ—ಸ್ವಾತಂತ್ರ್ಯದ ಸಿಹಿಫಲವನ್ನು ಉಣ್ಣಿಸಿದ ಶುಭದಿನ—ಆಗೋಸ್ತು ೧೫, ೧೯೪೭ ಬಂದೇ ಬಂತು. ವಿದೇಶೀಯರು ನಮ್ಮನ್ನು ಸ್ನೇಹಿತರಂತೆ ಬೀಳ್ಕೊಟ್ಟು, ನಡೆದರು.

ಇನ್ನೂ ಬೇಕೆಂಬ ಪಲ್ಲವಿ

ಇಲ್ಲಿಗೆ ಪ್ರಥಮಾಧ್ಯಾಯ ಮುಗಿಯಿತು—ಆದರೆ ಬೆನ್ನಲ್ಲೆ ದ್ವಿತೀಯಾಧ್ಯಾಯವನ್ನು ತೊಡಗಿದೆವು: ಸಮೃದ್ಧಿಯನ್ನು ರಾಷ್ಟ್ರದಲ್ಲಿ ನೆಲೆಗೊಳಿಸುವುದು ನಮ್ಮ ಮುಂದಿನ ಉದ್ದೇಶ. ಅನ್ನದ ಸಮೃದ್ಧಿ, ಬಟ್ಟೆಬರೆಗಳ ಸಮೃದ್ಧಿ, ಮನೆ ಮಠದ ಸಮೃದ್ಧಿ, ಆರೋಗ್ಯ ವೃದ್ಧಿ, ಸುಖ ಸಂತೋಷದ ಬಾಳ್ವೆ-ಇವೆಲ್ಲವನ್ನೂ ಕೈಗೂಡಿಸುವ ಮಹತ್ವದ ಉತ್ತರದಾಯಿತ್ವವನ್ನು ತಪ್ಪಿಸಲುಂಟೆ?

ಎಂತಲೇ, ವಿಭಜನೆಯ ಕುಪರಿಣಾಮವಾಗಿ ಎಂಭತ್ತು ಲಕ್ಷ ನಿರಾಶ್ರಿತರಿಗೆ ಇರಲು ಮನೆಯನ್ನೂ ಬದುಕಿ ಬಾಳಲು ಉದ್ಯೋಗವನ್ನು ಒದಗಿಸಿಕೊಟ್ಟೆವು. ಆಡಳಿತ ಯಂತ್ರದಲ್ಲಿ ಎಷ್ಟೆಷ್ಟೋ ಬಗೆಯ ಸುಧಾರಣೆಗಳನ್ನು ಉಂಟುಮಾಡಿದೆವು. ಮಹಾ ಮಹಾ ಯೋಜನೆಗಳನ್ನು ಕಾರ್ಯಗತ ಮಾಡುವ ಸಾಹಸಕ್ಕೂ ಧುಮುಕಿದೆವು—ಕಾರ್ಖಾನೆಗಳು ತಲೆದೋರಿದುವು: ಚಿತ್ತರಂಜನದ ಉಕ್ಕಿನ ಕಾರ್ಖಾನೆ, ಸಿಂಧ್ರಿಯ ಗೊಬ್ಬರ ಕಾರ್ಖಾನೆ, ಬೆಂಗಳೂರಿನ ಯಂತ್ರ ಸಲಕರಣೆಯ ಕಾರ್ಖಾನೆ, ಹಿಂದುಸ್ತಾನ ವಿಮಾನ ಕಾರ್ಖಾನೆ, ವಿಶಾಖಪಟ್ಟಣದ ಹಡಗು ಕಟ್ಟುವ ಕೇಂದ್ರ, ರಾಸಾಯನಿಕ ಪ್ರಯೋಗ ಶಾಲೆಗಳು, ಇಂಜೀನಿಯರಿಂಗ್ ಶಾಲಾ ಕಾಲೇಜುಗಳು, ಚಿಕ್ಕ ದೊಡ್ಡ ನೀರಾವರಿ ಕೆಲಸಗಳು-ಇವಲ್ಲದೆ ಇನ್ನೂ ಇಂಥವೆಷ್ಟೋ ಕಾರ್ಯರೂಪಕ್ಕೆ ಇಳಿಯಲಿವೆ.

ಆದರೆ ಇವಿಷ್ಟು ಸಾಲವೆಂಬುದು ಸ್ಪಷ್ಟ: ದೊಡ್ಡ ನೀರಾವರಿ ಯೋಜನೆಗಳು ಬಹುಮುಖ ಪ್ರಯೋಜನವನ್ನುಂಟುಮಾಡುವುವೆಂಬುದು ನಿಜ. ನೀರಾವರಿಗೆ ಅಧಿಕ ಅನುಕೂಲತೆಯನ್ನೂ, ಕಾರ್ಖಾನೆಗಳಿಗೆ ಹೆಚ್ಚು ಯಂತ್ರಶಕ್ತಿಯನ್ನು, ಗ್ರಾಮ-ನಗರಗಳಿಗೆ ವಿದ್ಯುಚ್ಛಕ್ತಿಯ ಬೆಳಕನ್ನು ಇವು ಒದಗಿಸುವುವು. ಜೊತೆಗೆ ಟ್ರಾಕ್ಟರುಗಳು ಬಂಜರು ಭೂಮಿಯ ಮೇಲೆ ಕೆಲಸಮಾಡಬೇಕು. ಏರುತ್ತಿರುವ ಜನಸಂಖ್ಯೆಯನ್ನು ನೆಲೆಗೊಳಿಸಲು ಹೊಸಹೊಸ ನಗರಗಳನ್ನು ಕಟ್ಟಬೇಕು. ಈಗಿನ ಪ್ರಯತ್ನಗಳು ಸಾಕಷ್ಟು ಯಶಸ್ವಿಯಾಗಿದ್ದರೂ – ಇನ್ನೂ ಬೇಕು ಎಂಬ ಪಲ್ಲವಿ ತೊಲಗಿಲ್ಲ; ನಾವು ಕಟ್ಟಿದ ಸಮೃದ್ಧಿಯ ಕನಸು, ಇನ್ನೂ ನನಸಾಗಿಲ್ಲ.

ಶುಭಸಮಯದ ನಂದಾದೀಪ

ನಮಗೀಗ ದಿನಕ್ಕೆರಡು ಹೊತ್ತು ಉಣ್ಣಲು ಅನ್ನ ಬೇಕು: ಮೈಮುಚ್ಚಿ ದುಡಿಯಲು ಉದ್ಯೋಗಬೇಕು. ನಾವೀಗ ಹಸಿವಿನಿಂದ, ರೋಗರುಜೆಗಳಿಂದ ಪೀಡಿ

[illegible] ನೇ ಪುಟ ನೋಡಿರಿ]



ಚೆಲುವೆಯೂ ಚತುರೆಯೂ ಆದ [illegible] ಅವಳು. [illegible] ತಯಾರಿಕೆಯಲ್ಲೂ ಅತಿ [illegible] ಕೇವಲ 2 ಔನ್ಸ್ [illegible] ವಾಗಿಯೂ ಸೊಗಸಾದ ಚಹಾ ಒದಗುವುದೆಂಬುದು ನಿಮಗೆ ಗೊತ್ತುಂಟೇ? ಹೌದು, ಮತ್ತೊಂದು ಬಟ್ಟಲು ತೆಗೆದುಕೊಳ್ಳಿ— ಬ್ರೂಕ್ ಬಾಂಡ್ ಅಸಾಧಾರಣವಾದದ್ದು!

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

S C 251/1952

ವಾದಿ- -- ಮಂಜುನಾಥಯ್ಯ

ಪ್ರತಿವಾದಿ 1 ನಾರಾಯಣ ಸೆಟ್ಟಿ 2 ಸದಾಶಿವ ಸೆಟ್ಟಿ.

ಕುಂದಾಪುರ ತಾಲ್ಲೂಕು ಉಳ್ತೂರು ಗ್ರಾಮದಲ್ಲಿರುವ ಹೆಗ್ಡೆ ಮನೆ ಕಾವೇರಿ ಸೆಟ್ಟಿಂ ಮಗ ಸದಾಶಿವ ಸೆಟ್ಟಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಪ್ರತಿವಾದಿಯು ವಾದಿಗೆ ತಾ 30-5-49ರಲ್ಲಿ ರೂ. 100-0-0ಕ್ಕೆ ಬರಕೊಟ್ಟ ಡಿಮಾಂಡು ನೋಟಿನ ಅಸ್ಸು ಬಡ್ಡಿ ಕೂಡಾ ಹಣಗಳನ್ನು ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ. 21-8-1952ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜರಾಗಿ ವ್ಯಾಜ್ಯ ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

N. S. Parameshwariah.
Advocate for Pett.
Date. 7-8-52, Coondapoor.

ಸಮರಾಂಗಣದ ಧುರಂಧರರು

ಸ್ವಾತಂತ್ರ್ಯ ಚಳುವಳಿಯ ಕೆಲವು ಶಿಲ್ಪಿಗಳು

ಚಿತ್ತರಂಜನದಾಸರು

ಲಾಲ ಲಜಪತ ರೈಗಳು

ಮೋತಿಲಾಲ ನೆಹರು

ಸರೋಜಿನಿ ನಾಯಿಡು

ಸ್ವರಾಜ್ಯ ಸಂಪಾದನೆಯಲ್ಲಿ ಜೀವವನ್ನು ಮುಡುಪಾಗಿಟ್ಟು ಇಂದು ಸ್ವರ್ಗ ಸೇರಿರುವ ಹುತಾತ್ಮರು ಅಸಂಖ್ಯ— ಹಾಗೆಯೇ ನಮ್ಮ ಕಣ್ಣಮುಂದೆ ಬದುಕಿ, ರಾಷ್ಟ್ರದ ಕರ್ಣಧಾರರಾಗಿ ನಮ್ಮನ್ನು ಮುನ್ನಡೆಸುತ್ತಿರುವ ಧುರೀಣರೂ ಹಲವರು ಇವರೆಲ್ಲ ಪಟ್ಟ ಬನ್ನ ಮತ್ತು ಅನುಭವಿಸಿದ ನೋವುಗಳ ಪರಿಣಾಮವಾಗಿ ನಾವಿಂದು ಸ್ವತಂತ್ರರಾಗಿದ್ದೇವೆ ಸ್ವಾತಂತ್ರ್ಯಾಂದೋಲನದಲ್ಲಿ ಮಹತ್ವದ ಪಾತ್ರ ವಹಿಸಿದ ಕೆಲವು ಧುರಂಧರರ ನೆನಪು ಮಾಡಿಕೊಳ್ಳುವುದು ಈ ಸಮಯದಲ್ಲಿ ನಮಗೆ ಹಿತಕರವಾದೀತು.

ಭಾರತದಲ್ಲಿ ಸ್ವಾತಂತ್ರ್ಯದ ಚಳುವಳಿ ನಡೆದುದು ರಾಷ್ಟ್ರೀಯ ಕಾಂಗ್ರೆಸು ಸಂಸ್ಥೆಯ ನೇತೃತ್ವದಲ್ಲಿಯೇ—[illegible]ರುವವರಿಂದ ಸ್ವಾತಂತ್ರ್ಯ [illegible]ದ ಯೋಧರಲ್ಲಿ ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿ ಕಾಂಗ್ರೆಸು ಸಂಸ್ಥೆಯೊಂದಿಗೆ ಸಂಪರ್ಕವಿದ್ದವರೇ ಹಾಗೆಂದು ಇವತ್ತಿಗೆ ಆರುವತ್ತೇಳು ವರ್ಷಗಳಿಗೆ ಹಿಂದೆ (೧೮೮೫) ಕಾಂಗ್ರೆಸು ಸಂಸ್ಥೆ ಉದಯಗೊಂಡಾಗ-ಅದರ ಮುಂದೆ ಸ್ವರಾಜ್ಯ ಸ್ವಾತಂತ್ರ್ಯ ಎಂಬ ಉದ್ದೇಶವಿದ್ದಿರಲಿಲ್ಲ ಆಡಳಿತ ಯಂತ್ರಕ್ಕೂ ಜನಸಾಮಾನ್ಯಕ್ಕೂ ನಡುವೆ ಮಧುರ ಬಾಂಧವ್ಯವನ್ನು ಏರ್ಪಡಿಸುವುದು ಕಾಂಗ್ರೆಸಿನ ಧ್ಯೇಯವಾಗಿತ್ತು ನಡುವೆ ಇದು ಸಾಮ್ರಾಜ್ಯದ ಪೀಡಿಕೆಯನ್ನು ಮುನ್ನೋಡಿ ಸಮರಾಂಗಣದಲ್ಲಿ ಧುಮುಕಿತು ಜನಪ್ರಿಯ ಆಂದೋಲನವನ್ನು ಹೂಡಿ, ಕೊನೆಗೆ ಯಶಸ್ಸುಗಳಿಸಿತು, [illegible] ನಾವಿಂದು ಸ್ವತಂತ್ರ ಭಾರತದ ಸತ್ಪ್ರಜೆಗಳೆಂದು ಹೆಮ್ಮೆಪಟ್ಟುಕೊಳ್ಳುತ್ತೇವೆ ಆದರೆ ಕಾಂಗ್ರೆಸಿನ ಹಿಂದೆ ಹಾಗೂ ಜನತೆಯ ಮುಂದೆ ಇದನ್ನು [illegible] ಮಹಾ ಪುರುಷ ಆದರ್ಶ ವ್ಯಕ್ತಿತ್ವ ನಿಂತಿದೆ ಎಂಬುದನ್ನು ಮರೆಯುವಂತಿಲ್ಲ.

ನವರೋಜಿ ಮೆಹತಾ

[illegible] ಒಕ್ಟೇವಿಯನ್ ಹ್ಯೂಮರ ಕಲ್ಪನೆಯೇ ಕಾಂಗ್ರೆಸ್ ಸಂಸ್ಥೆಯ ಉದಯಕ್ಕೆ ಮೂಲಾಧಾರ ಉಮೇಶ ಚಂದ್ರ ಬ್ಯಾನರ್ಜಿ ಕಾಂಗ್ರೆಸಿನ ಪ್ರಥಮಾಧ್ಯಕ್ಷರು ದಾದಾಭಾಯಿ ನವರೋಜಿಯಂಥವರು ಮೊದಲಿಂದಲೇ ರಾಷ್ಟ್ರೀಯ ಕಾಂಗ್ರೆಸಿನೊಡನೆ ಸೇರಿ ಕೆಲಸಮಾಡಿದ್ದರು ಜನಹಿತವನ್ನುಂಟು ಮಾಡಲು, ಆಡಳಿತ ಯಂತ್ರದಲ್ಲಿ ಪ್ರವೇಶಿಸಿಯೂ ಪ್ರಯತ್ನಿಸುವುದು ಆಗತ್ಯ ಎಂದವರು ತಿಳಿದುಕೊಂಡರು ತತ್ಫಲವಾಗಿ ಇಂಗ್ಲೇಂಡಿಗೆ ತೆರಳಿ ಅಲ್ಲಿ ಪಾರ್ಲಿಮೆಂಟಿನ ಸದಸ್ಯತ್ವಕ್ಕೆ ಸ್ಪರ್ಧಿಸಿ, ಆಯ್ಕೆ ಹೊಂದಿದರು ಭಾರತೀಯರು ಸಂಪೂರ್ಣ ವಸಾಹತು ಸ್ವಾತಂತ್ರ್ಯವನ್ನು ಪಡೆದರೆ ಒಳ್ಳೆಯದೆಂದವರು ಅಭಿಪ್ರಾಯ ಪಟ್ಟಿದ್ದರು

ಮುಂಬಯಿ ಮರೆಯಲಾರದ ಸರ್ ಫಿರೋಜ ಶಹಾ ಮೆಹತಾರಂಥವರು ಕಾಂಗ್ರೆಸನ್ನು ಸರ್ವಾಂಗದಿಂದ ಪೋಷಿಸುತ್ತಿ[illegible] ಸಾಧನೆಯಲ್ಲಿ ಮುನ್ನಡೆಯಲು ಸಂಸ್ಥೆಗೆ ಬಲ ಬಂದಿತು. ಈ ಸಮಯದಲ್ಲಿ ಬಂಗಾಳದಲ್ಲಿ ವಂಗ ಭಂಗದ ಚಳುವಳಿಯು ಉಗ್ರ ಸ್ವರೂಪ ಧರಿಸಿದುದರಿಂದ-ಧುರೀಣರ ಗಮನ ಅತ್ತ ಕಡೆ ಸರಿಯಿತ ದೇಶದ ತುಂಬ ಆಂದೋಲನವು ನಡೆದ, ಕೊನೆಗೂ ಜನರ ಬೇಡಿಕೆಗೆ ಬೆಂಬಲ ದೊರೆಯಿತು.

ತಿಲಕ-ಗೋಖಲೆ

ಭಾರತೀಯರಲ್ಲಿ ನವ ಜಾಗೃತಿಯನ್ನುಂಟುಮಾಡಿ, ಹೊರದೆಬ್ಬಿಸಿದ ಮಹಾಪುರುಷ ಬಾಲ ಗಂಗಾಧರ ತಿಲಕರೇ ಸೈ "ಸ್ವರಾಜ್ಯ ನಮ್ಮ ಜನ್ಮಸಿದ್ಧ ಹಕ್ಕು" ಎಂಬುದಾಗಿ ಘಂಟಾಘೋಷವಾಗಿ ಸಾರಿದ ಈ ವ್ಯಕ್ತಿಯ ಕೆಚ್ಚನ್ನು ಮೆಚ್ಚದವರು ಯಾರು? ತಿಲಕ ರಾಜಕೀಯದಲ್ಲಿ ಆಧ್ಯಾತ್ಮಿಕತೆಯ ತೇಜಸ್ಸನ್ನೂ ಕೂಡಿಸಿದರು ಮಹಾರಾಷ್ಟ್ರದ ಶೌರ್ಯವನ್ನು ಇವರಲ್ಲಿ ಸ್ಪಷ್ಟವಾಗಿ ಕಾಣಬಹುದಿತ್ತು. ಸ್ವಭಾವದಿಂ[illegible]ರಿಗಳಾದ ತಿಲಕರು, ಛಲವಾದಿ ತಿಲಕರ ತೇಜಸ್ಸು ಹಾಗೂ ವರ್ಚಸ್ಸುಗಳ ಪ್ರಭಾವದಿಂದಲೇ ಜನ, ಮೈಕೊಡವಿಕೊಂಡು ಎದ್ದಿತೆನ್ನಲಡ್ಡಿಯಿಲ್ಲ

ಗೋಪಾಲಕೃಷ್ಣ ಗೋಖಲೆ ಇನ್ನೊಂದು ಮಹಾಜೀವ-ವಾಗ್ವೈಖರಿಯಲ್ಲಿ ಅವರನ್ನು ಸರಿಗಟ್ಟುವವರಿಲ್ಲ. ಅರ್ಥ ಶಾಸ್ತ್ರದಲ್ಲಿ ಅವರ ಜ್ಞಾನ ಅಪಾರ, ಶಿಕ್ಷಣ ತಜ್ಞ ಹಾಗೂ ಲೋಕ ಸೇವಕರಾಗಿ ಇವರು ಕಾಂಗ್ರೆಸಿನ ಮುನ್ನಡೆಯಲ್ಲಿ ಮಹತ್ವದ ಸೇವೆ ಸಲ್ಲಿಸಿದ್ದಾರೆ ಆಡಳಿತ ಯಂತ್ರದ

[೭ನೇ ಪುಟ ನೋಡಿರಿ]

ZANDU Mahayogaraja Guggula

ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಶಕ್ತಿ ಹಳೆಯ ದುರ್ಜಲಿತ ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ ಗೃಧ್ರಸೀ ನಡುಗೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ 1 ಕೊಲಿಗೆ ರೂ 3- ಮಾತ್ರ.

ದೊರೆಯುವ ಸ್ಥಳಗಳು

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್ ಕೆಮಿಸ್ಟ್ಸ ಎಂಡ ಡ್ರಗ್ಗಿಸ್ಟ್ಸ, ಉಡುಪಿ
2 ಶ್ರೀ ಪಿ ವಿ ಶೆಣೈ, ಕೆಮಿಸ್ಟ್, ಕಾರ್ಕಳ
3 ಶಾ ಕೇಶವಜಿ ಹಂಪನಕಟ್ಟೆ, ಮಂಗಳೂರು
4 ಎಲ್ ಎನ್ ಶರ್ಮ, ಪಜೂರು ರಸ್ತೆ, ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ

ಪ್ರತಿನಿಧಿಯಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ, ವ್ಯಾಪಾರ ಶರತ್ತುಗಳಿಗೆ ಬರೆಯಿರಿ

DAMODAR & CO.,
Nyniappa Naicken Street, Park Town—MADRAS 3

ಋತುಸ್ರಾವ ನಿಂತಿತು

'ಲುವಾಅ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಿಹಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು ಯಾವ ಬಾಧಕವೂ ಇಲ್ಲ ಸಾಧಾರಣ ರೋಗಿಗಳು ಮುಂದಿಗೆ ಶಾಶ್ವತ ಗುಣವಾಗಿದೆ—ಬೆಲೆ, ರೂ 3, ಸ್ಪೆಶಲ್ ರೂ. 5— ಅಧಿಕಾಧಿಕ ಸ್ಪೆಶಲ್ ರೂ, 8-]ವಿ ಪಿ ಹಣಪ್ರತ್ಯೇಕ]

Mrs P DEVEE, B DS (N. J.)
Tellygunge CALCUTTA.
ಸ್ಟಾಕಿಸ್ಟರು ಪಠಾಕಂಪನಿ, ಮಂಗಳೂರು.

ತಡವಾಗಿ ಮುಟ್ಟಾಗುವಿಕೆಗಾಗಿ ಗಾಬರಿಯಾಗಬೇಡಿರಿ

'ಋತುರಾಜ'ವನ್ನು ಸೇವಿಸಿರಿ ನಾಲ್ಕೈದು ತಿಂಗಳ ಮುಟ್ಟಾಗದಿದ್ದರೂ, ಒಡನೆಯೇ ಋತುಸ್ರಾವವಾಗುವುದು ಮುಟ್ಟುದೋಷದ ಇತರ ಗಂಡಾಂತರಗಳು ಕೂಡ 24 ತಾಸುಗಳೊಳಗೆ ಆಶ್ಚರ್ಯಕರವಾಗಿ ಮಾಯವಾಗುವುವು ಇದಕ್ಕೆ ಸಂಶಯ ಬೇಡ.

ಕಿಮ್ಮತ್ತು—ರೂ. 7-8-0, ವಿ ಪಿ ರೂ. 1
ಸ್ಪೆಶಲ್ ರೂ 24 ವಿ ಪಿ ರೂ 1-12-0

Binapani Oushadhalaya
151 Mooris Avenue Calcutta-33
ಏಜಂಟ್.—ವೈದ್ಯ ಸಿ ಆರ್ ಕಾಮತ್,
ಮಂಗಳೂರು.

ನೊಂದ ಜನತೆಗೆ ತುಂಬು ಜೀವನದ ಭರವಸೆ

ಅಭಾವದ ಅಂಜಿಕೆ ನೀಗಿಸಲು ಸರಕಾರದ ಅಚಲ ನಿರ್ಧಾರ.

ಭಾರತೀಯ ಸ್ವಾತಂತ್ರ್ಯ ಟೀಕಾಕಾರರ ದೃಷ್ಟಿಯಲ್ಲಿ ಕೇವಲ ನಗೆಚಾಟಿಕೆಯ ವಸ್ತು: ಸ್ವರ್ಗಸುಖದ ಕಲ್ಪನೆಯಿಂದ ಸ್ವರಾಜ್ಯವನ್ನು ಬಯಸಿದ ಜನಸಾಮಾನ್ಯರಿಗೆ ಸ್ವತಂತ್ರರಾದ ಮೇಲೂ ದುಡಿಯದೆ ಊಟ ದೊರೆಯದೆಂಬ ಸತ್ಯ ಕಟುವೆನಿಸಿತು. ಚುನಾವಣೆಯ ನೆವದಲ್ಲಿ ಅಸ್ತಿತ್ವಕ್ಕೆ ಬಂದ ಪಕ್ಷ ಪಂಗಡಗಳ ಸರಕಾರೀ ವಿರೋಧ ಪ್ರಚಾರಕ್ಕೆ ಅಸಮಾಧಾನದಿಂದ ತುಂಬಿ ತುಳುಕುತ್ತಿದ್ದ ಜನತೆ ಕಿವಿಗೊಟ್ಟಿತು: ಸರಕಾರ ಕರ್ತವ್ಯ ಪಾಲನೆಯಲ್ಲಿ ಹಿಂದುಳಿದಿದೆಯೆಂದೂ ಕಾರ್ಯಕ್ಷಮತೆಯನ್ನು ಕಾಪಾಡಿಕೊಂಡು ಬಂದಿಲ್ಲೆಂದೂ ಅದರ ಲೋಪ ದೋಷಗಳು ಮಹಾಪರಾಧಗಳೆಂದೂ ಗುಲ್ಲೆಬ್ಬಿಸುವುದು ಇಂದಿನ ಸರ್ವ ಸಾಧಾರಣ ಸಂಗತಿ. ಟೀಕೆ ಬೇಡೆನ್ನುವವರು ನಾವಲ್ಲ: ಆದರೆ ವಿಧಾಯಕವಾದ ಟೀಕೆಗಿರುವ ಬೆಲೆ ವಿನಾಶಕ ಹೇಳಿಕೆಗೆ ಎಂದೂ ಬರಲಾರದು. ಈ ಐದು ವರ್ಷಗಳಲ್ಲಿ ಜನತೆ ಕಷ್ಟ-ನಿಷ್ಠುರಗಳನ್ನು ಅನುಭವಿಸಿದೆ. ಅದರ ನೋವನ್ನು ದೂರ ಮಾಡಲು—ತುಂಬು ಜೀವನದ ಭರವಸೆ ಕೊಡಲು ಸರಕಾರ ಏನೇನೂ ಪ್ರಯತ್ನ ನಡೆಸಿಲ್ಲವೆ ಎಂಬುದು ಪ್ರಶ್ನೆ. ನಡೆಸಿದ್ದರೆ—ಅದು ಸಾಲದೆ? ಸಾಲದಿದ್ದರೆ ಕಾರ್ಯದ ಮುಂದಿರುವ ಅಡಚಣೆಯಾದರೂ ಏನು? ಸರಕಾರದ ಉದಾಸೀನತೆಯೋ ಅಥವಾ ಹಣಾಭಾವ ಹಾಗೂ ಜನತಾ ಸಹಕಾರದ ಕೊರತೆಯೋ ಎಂಬುದನ್ನು ನಿರ್ವಿಕಾರ ಮನಸ್ಸಿನಿಂದ ವಿಮರ್ಶಿಸಬೇಕು.

ಜಲಶಕ್ತಿಯ ಸದುಪಯೋಗ

ರಾಷ್ಟ್ರದ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಬೇಕು: ಜೊತೆಗೆ ಅಂತರಾಷ್ಟ್ರೀಯ ರಂಗ ಮಂಟಪದಲ್ಲಿ ಭಾರತದ ಪರಂಪರಾಗತ ವೈಶಿಷ್ಟ್ಯವನ್ನು ಕಳೆದುಕೊಂಡಿರಲಾಗದು. ದೇಶದ ಸರ್ವಾಂಗೀಣ ಉನ್ನತಿ ಬಯಸಬೇಕು. ಹಾಗೆಯೇ ಜನರ ಬದುಕು ಹಸನಾಗುವಂತೆ ಕಾರ್ಯರೂಪಿಸಬೇಕು. ಹೀಗೆ ಇನ್ನೂ ಎಳೆಯದಾದ ನಮ್ಮ ಸ್ವಾತಂತ್ರ್ಯದ ಕೂಸು ಸ್ವಂತ ಕಾಲಮೇಲೆ ತಲೆ ಎತ್ತಿ ನಿಲ್ಲಲು ಸಾಹಸಮಾಡುತ್ತಿದೆ.

ಹಸಿವನ್ನು, ರೋಗವನ್ನು, ಅಜ್ಞಾನವನ್ನು ಭಾಷಣಗಳ ಮೂಲಕ ಅಥವಾ ಮಾಯಾ ಮಂತ್ರದಿಂದ ಕಳೆಯಲು ಬರುವುದಿಲ್ಲವೆಂದು ಎಲ್ಲರೂ ಒಪ್ಪಬೇಕು. "ಸ್ವೀಯ ಶಕ್ತಿಯಿಂದಲೇ ಎಲ್ಲವೂ ಸಾಧ್ಯ: ನಮ್ಮ ನರನಾಡಿಗಳನ್ನು ಅದಕ್ಕಾಗಿ ತರಬೇತಿಗೊಳಿಸುವುದೂ ಸಾಧ್ಯ. ಇದಕ್ಕೆ ತಕ್ಕುದಾದ ಸನ್ನಿವೇಶಗಳನ್ನೂ ರಚಿಸಬಲ್ಲೆವು" ಎಂಬ ತತ್ವದ ಮೇಲೆಯೇ ಪ್ರಕೃತ ರಾಷ್ಟ್ರ ನಿರ್ಮಾಣದ ಕಾರ್ಯವು ಮುನ್ನಡೆಯಬೇಕು.

ಇಂಥದರಲ್ಲಿ ಭಾರತದ ಅಪಾರ ಜಲಶಕ್ತಿಯನ್ನು ಮಾನವನ ಉಪಯೋಗಕ್ಕೆ ಅಳವಡಿಸಿಕೊಳ್ಳಲು ಸರಕಾರದ ಕಡೆಯಿಂದ ನಡೆಯುತ್ತಿರುವ ಮಹಾಪ್ರಯತ್ನಗಳನ್ನು ಶ್ಲಾಘನೀಯವೆಂದು ಸ್ವಾಗತಿಸಬೇಕು. ಅನಾದಿಕಾಲದಿಂದಲೂ ಜಲಾಶಯಗಳನ್ನು ನಿರ್ಮಿಸಿ ಹಾಗೂ ನದಿಗಳಿಗೆ ಅಣೆಕಟ್ಟುಗಳನ್ನು ಹಾಕಿ, ಕೃಷಿಯ ಉತ್ಪನ್ನವನ್ನು ಹೆಚ್ಚಿಸುವುದು ಮನುಷ್ಯ ಸಂಸ್ಕೃತಿಗೆ ಒಗ್ಗಿ ಹೋಗಿತ್ತು. ಆಗಿನ ಜನ ಸಂಖ್ಯಾಪ್ರಮಾಣವನ್ನು ನೋಡಿದರೆ—ಜನರ ಪ್ರಯತ್ನದ ಬಾಹುಳ್ಯ ಅತ್ಯಧಿಕವೆಂದೆನ್ನಬೇಕಾಗುವುದು. ಆದರೆ ಕಾಲಚಕ್ರ ಸರಿದಂತೆ—ಕಳೆದ ಶತಮಾನದ ಉತ್ತರಾರ್ಧದಿಂದ ನಮ್ಮ ಜನ ಸಂಖ್ಯೆ ವ್ಯವಸಾಯೋತ್ಪನ್ನದ ಮಿತಿಯನ್ನು ಮೀರಿ ಬೆಳೆದುದರಿಂದ, ಆಹಾರ ಸ್ವಾವಲಂಬನದಲ್ಲಿ ವ್ಯತ್ಯಯವುಂಟಾಯಿತು. ಮೊದಲನೇ ಮಹಾಯುದ್ಧ ಮುಗಿದೊಡನೆಯೇ ಕೊರತೆ ಕಾಣಿಸಿಕೊಂಡಿತು: ಎರಡನೇ ಮಹಾಯುದ್ಧದ ಕಾಲದಲ್ಲಿ ಹಾಗೂ ಆ ಬಳಿಕ ಪರಿಸ್ಥಿತಿ ತೀರ ಉಲ್ಬಣಾವಸ್ಥೆಯನ್ನು ಮುಟ್ಟಿತು. ಇಂದು ನಮ್ಮ ವಾರ್ಷಿಕ ಆಹಾರದ ಕೊರತೆ ನಲುವತ್ತು ಲಕ್ಷ ಟನ್ನು. [illegible] ಕೊಂಡರೆ, ಈ ಕೊರತೆ ಅರುವತ್ತು—ಎಪ್ಪತ್ತು ಲಕ್ಷವನ್ನೂ ಮುಟ್ಟೀತು.

ಅಧಿಕ ಆಹಾರ ಬೆಳೆಯುವುದು

ಒಂದೇದಾರಿ. ಶತಮಾನಗಳ ಹಿಂದೆ ನೆರೆಹೊರೆಯ ಬರ್ಮಾ ಮತ್ತಿತರ ರಾಷ್ಟ್ರಗಳಿಂದ ಅಗ್ಗದರದಲ್ಲಿ ಆಹಾರ ಧಾನ್ಯಗಳು ದೊರೆಯುತ್ತಿದ್ದುವು. ಆದರೆ ದ್ವಿತೀಯ ಮಹಾಯುದ್ಧದ ಪ್ರತ್ಯಕ್ಷ ರಂಗಭೂಮಿಗಳಾಗಿ ಈ ಪ್ರದೇಶ ಮಾರ್ಪಟ್ಟುದರಿಂದ, ಆಹಾರಾಭಾವವೆಂಬುದು ೧೯೪೨ರಲ್ಲಿ ರಾಷ್ಟ್ರೀಯ ಸಮಸ್ಯೆಯ ಸ್ವರೂಪವನ್ನು ತಳೆಯಿತು. ಭಾರತದ ವಿಭಜನೆಯು ೧೯೪೭ರಲ್ಲಿ ಆದ ಬಳಿಕವಂತೂ ಕೃಷಿಸಂಪನ್ನ ಭೂಮಿಯಲ್ಲಿ ಪಾಕಿಸ್ಥಾನಕ್ಕೆ ಅಧಿಕಪಾಲು ಸಂದುದರಿಂದ—ನಾವು ಅನ್ನಬ್ರಹ್ಮನನ್ನು ಶಪಿಸುವಂತಾಯಿತು. ಮೊದಲು ರಾಜ್ಯ ಸರಕಾರಗಳ ನಿಯಂತ್ರಣಕ್ಕೆ ಒಳಪಟ್ಟ ಕಾಲುವೆಗಳಿಂದಾಗಿ ನೀರುಣ್ಣುತ್ತಿದ್ದ 220 ಲಕ್ಷ ಎಕ್ರೆ ಜಮೀನಿನಲ್ಲಿ ಅರೆವಾಸಿಗೂ ಮಿಕ್ಕಿದ ಅಂಶ ಈಗ ಪಾಕಿಸ್ಥಾನ ಪ್ರದೇಶದಲ್ಲಿ ಉಳಿದಿದೆ.

ಆದುದರಿಂದ ಭಾರತದ ಆಂತರಿಕ ಬೇಡಿಕೆಯನ್ನು ಪೂರೈಸುವುದಕ್ಕೆ ವಿದೇಶಗಳಿಂದ ತತ್ಕಾಲ ಆಹಾರಧಾನ್ಯಗಳ ಸರಬರಾಜನ್ನು ಮಾಡಿಕೊಳ್ಳುತ್ತಿದ್ದೇವೆ. ಜೊತೆಗೆ ಸರಕಾರದ ವತಿಯಿಂದ ಶಾಶ್ವತ ಪರಿಹಾರ ಮಾರ್ಗವೆಂದು, ಕೃಷಿಯೋಗ್ಯವಾದ ಭೂಮಿಯನ್ನಾಗಿ ಬಂಜರು ನೆಲವನ್ನು ಅಣಿಗೊಳಿಸುವುದು, ಉತ್ತಮ ತರದ ಬೀಜಗಳನ್ನು ಬಿತ್ತುವ ಮೂಲಕ ಕೃಷಿಯ ಉತ್ಪಾದನೆಯನ್ನು ಹೆಚ್ಚಿಸುವುದು, ಸುಧಾರಿತ ಯಂತ್ರಗಳನ್ನು ವೈಜ್ಞಾನಿಕ ಕ್ರಮಗಳನ್ನು ಅನುಸರಿಸುತ್ತ ಹೆಚ್ಚು ಫಸಲು ಕೈಗೆಬರುವಂತೆ ಮಾಡುವುದು ಮುಂತಾದ ಕೆಲಸಗಳ ಬಗ್ಗೆ ಜನತೆಗೆ ಪ್ರೋತ್ಸಾಹ ಕೊಡುವರು. ಇವುಗಳ ಕಡೆಗೆ ರೈತಬಾಂಧವರು ಕಣ್ಣೆತ್ತಿ ನೋಡಿದರೆ— ಅದರಿಂದ ತುಂಬಾ ಪ್ರಯೋಜನ ಉಂಟು, ಆದರೆ ಕೆಲವು ಸ್ಥಳಗಳಲ್ಲಿ ಅನಾವೃಷ್ಟಿ ಹಾಗು ಅತಿವೃಷ್ಟಿಗಳೆಂಬ ಪ್ರಾಕೃತಿಕ ಪ್ರಕೋಪಗಳಿಂದಾಗಿ ಕೃಷಿಯ ಉತ್ಪಾದನೆ ಕುಂಠಿತವಾಗುವುದು. ನೀರಾವರಿ ಯೋಜನೆಗಳನ್ನು ಕಾರ್ಯರೂಪಕ್ಕೆ ಇಳಿಸುವುದರಿಂದ ಅಲ್ಲಿಯ ರೈತರಿಗೆ ಉತ್ಸಾಹವನ್ನುಂಟುಮಾಡಲು ಶಕ್ಯವಾಗುವುದಲ್ಲದೆ—ಬೆಳೆಯನ್ನು ಎರಡುಪಟ್ಟು, ಕೆಲವೆಡೆ ಮೂರುಪಟ್ಟು, ವೃದ್ಧಿಗೊಳಿಸುವುದೂ ಸಾಧ್ಯ.

ನೀರಾವರಿ ಯೋಜನೆಗಳು

ಭಾರತದ ಹೊಳೆಗಳ ಮೂಲಕ ವರ್ಷಂಪ್ರತಿ ಸಾಗರಕ್ಕೆ ಹರಿದು ಹೋಗುವ ನೀರನ್ನು ನೆಲದ ಮೇಲೆಯೇ ಉಳಿಸಿಕೊಳ್ಳಬಲ್ಲೆವಾದರೆ, ದೇಶದ ತುಂಬ ಎರಡು ಅಡಿಯಷ್ಟು ನೀರು ನಿಂತೀತು. ಆದರೆ ಆಹಾರಕ್ಕಾಗಿ ಮತ್ತು ಕಾರ್ಖಾನೆಗಳಲ್ಲಿ ಯಂತ್ರ ಶಕ್ತಿಗಾಗಿ ಉಪಯೋಗಿಸಲ್ಪಡುವುದೆಷ್ಟು? ಕೇವಲ ಎರಡು ಇಂಚಿನಷ್ಟು ನೀರನ್ನು ಮಾತ್ರ. ಹೆಚ್ಚಿನ ನೀರು ಕೃಷಿಗೆ ದೊರಕುವುದು ಮಳೆಗಾಲದ ನಾಲ್ಕು ತಿಂಗಳಷ್ಟೆ. ಉಳಿದ ಸಮಯ ನೀರು ಬೇಕೆಂದಾದರೆ, ಆಗ ಬಿದ್ದುದನ್ನ ಯೋಗ್ಯ ರೀತಿಯಿಂದ ಜೋಪಾನ ಮಾಡಿಟ್ಟುಕೊಂಡು ಬಳಸಬೇಕು. ಹೀಗೆ ಮಾಡಿದರೆ ಬಗೆಬಗೆಯ ಲಾಭವುಂಟೆಂಬುದರಿಂದ—ನೀರಾವರಿ ಯೋಜನೆಯಂಥ ಸಾಹಸಕ್ಕೆ ಧುಮುಕಲು ಸರಕಾರ ನಿರ್ಧರಿಸಿದೆ: (೧) ಆಹಾರೋತ್ಪಾದನೆಯನ್ನು ಹೆಚ್ಚಿಸಬಹುದು (೨) ಲಕ್ಷಾಂತರ ಜನರಿಗೆ ಪ್ರಾಣ ಹಾನಿಯನ್ನೂ ಮನೆಮಾರುಗಳ ನಷ್ಟವನ್ನೂ ಉಂಟುಮಾಡುವ ನೆರೆಹಾವಳಿಯನ್ನು ನಿಯಂತ್ರಿಸಬಹುದು (೩) ಜಲ ವ್ಯಾಪಾರಕ್ಕೆ ಬೇಕೆನಿಸಿದ ರಹದಾರಿಗಳಾಗಿ ಕಾಲುವೆಗಳು ಉಪಯೋಗಕ್ಕೆ ಬೀಳುತ್ತವೆ. ಕಾರಣ, ಐಶ್ವರ್ಯ ವೃದ್ಧಿಗೆ ಇದು ಅನುಕೂಲ. (೪) ಜಲಶಕ್ತಿಯನ್ನುಪಯೋಗಿಸಿ ಅಗ್ಗದರದಲ್ಲಿ ವಿದ್ಯುತ್ತನ್ನು ಉತ್ಪಾದಿಸಬಹುದಾದುದರಿಂದ, ದೇಶದ ಔದ್ಯೋಗಿಕಕ್ಷೇತ್ರದ ಬೆಳವಣಿಗೆಗೆ ಇದು ತುಂಬ ಸಹಾಯಕರ.

ಆದುದರಿಂದ ಭಾರತದ ಅನ್ನ ಸಮಸ್ಯೆ ಹಾಗೂ ಔದ್ಯೋಗಿಕ ಮುನ್ನಡೆಯನ್ನು

[೧೦ನೇ ಪುಟ ನೋಡಿರಿ]

FOR QUALITY
WATCHES
CLOCKS
AND
TIMEPIECES
AND
ALLIED REPAIRS
Consult
MUBARAK & CO.
WATCH & CLOCK SPECIALISTS
RATTAN BAZAAR - - MADRAS 3

ರಾಮತೀರ್ಥ
ಬ್ರಾಹ್ಮಿ ತೈಲ
ಸ್ಪೆಶಲ್ ನಂ ೧] [ಮೆಡಿಕೇಟೆಡ್
ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ. ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.
ಸೀಸಿನ ಕ್ರಯ: ದೊಡ್ಡ ಬಾಟ್ಲಿಗೆ ರೂ 3—೮—೦
ಸಣ್ಣ ಬಾಟ್ಲಿಗೆ ರೂ 2—0—0
ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಜಿ. ಐ. ಪಿ.) ಮುಂಬಯಿ, ೧೪



ಕರಭಾರದ ಪುನರ್ವಿಮರ್ಶೆಗೆ

ರಾಷ್ಟ್ರೀಯ ಅಭಿವೃದ್ಧಿ ಮಂಡಳದ ಸ್ಥಾಪನೆ

ಸರಕಾರದ ಜನಪ್ರಿಯ ಸಾಲ

ರಾಜ್ಯ ಸರಕಾರಗಳಲ್ಲಿ ಕೆಲವು ಸಾರ್ವಜನಿಕರಿಂದ ಸಾಲ ಎತ್ತುವ ನಿರ್ಣಯ ಮಾಡಿದ್ದುವಷ್ಟೆ; ಈ ಸಾಲಗಳು ತುಂಬಿ ಬರಲಾರವೆಂದು ರಿಜರ್ವ ಬೇಂಕು ಸರಕಾರಗಳ ಕೂಡೆ ಸಂಶಯ ವ್ಯಕ್ತಪಡಿಸಿತ್ತು. ಆದರಲ್ಲೂ ಮದ್ರಾಸು ಸರಕಾರವು ಅತ್ಯಧಿಕ ಸಾಲದ ಬೇಡಿಕೆಯನ್ನು ಮುಂದಿಟ್ಟುದರಿಂದ (ಎಂದರೆ ಐದು ಕೋಟಿ ರೂಪಾಯಿ.) ಇದು ಬಹಳ ಹೆಚ್ಚಾಯಿತೆಂದು ಸರಕಾರದ ಆರ್ಥಿಕ ಸಲಹೆಗಾರರೆಲ್ಲರೂ ಅಭಿಪ್ರಾಯಗೊಂಡಿದ್ದರು. ಪರಿಣಾಮವಾಗಿ ಸಾಲ ಎತ್ತುವ ಯೋಜನೆ ಅಯಶಸ್ವಿಯಾಗುವ ಶಂಕಾಪೂರ್ಣ ವಾತಾವರಣವೇರ್ಪಟ್ಟಿತ್ತು. ಆದರೆ ಜನರ ಕೈಯಲ್ಲಿ ದುಡ್ಡಿಲ್ಲ ಎಂಬ ಮಾತೇ ಸುಳ್ಳೆಂಬುದು ಒಡನೆಯೇ ಸಿದ್ಧವಾಯಿತು. ಸರಕಾರದ ಸಾಲದಷ್ಟು ಭದ್ರತೆ ಬೇರಾವುದಕ್ಕೂ ಇಲ್ಲದಿರುವುದೂ ಬಡ್ಡಿ ದರವನ್ನು ೪%ಕ್ಕೆ ಏರಿಸಿದುದೂ ಜನತಾ ಸಹಕಾರ ಮುಂಬರಲು ಅನುಕೂಲವಾದುವು. ಮದ್ರಾಸು ರಾಜ್ಯದಲ್ಲಂತೂ ಈ ಸಾಲ ಎರಡೇ ದಿನಗಳಲ್ಲಿ ತುಂಬಿ ಬಂದುದಲ್ಲದೆ- ಅಷ್ಟರೊಳಗಾಗಿಯೇ ಬೇರೆ ಬೇರೆ ಜಿಲ್ಲೆಗಳಲ್ಲಿ ವಸೂಲಾದ ಮೊತ್ತವು ಸರಕಾರದ ಆವಶ್ಯಕತೆಗಿಂತ ಬಹಳಷ್ಟು ಹೆಚ್ಚಿತ್ತು. ಐದು ಕೋಟಿ ರೂಪಾಯಿ ಬೇಕಿರುವಾಗ ಆರು ಕಾಲು ಕೋಟಿಗೂ ಮಿಕ್ಕಿ ವಸೂಲಾಯಿತು. ರಾಜಾಜಿ ಇವರು ಈ ರೀತಿ ಅತ್ಯುತ್ಸಾಹದಿಂದ ಸಹಕರಿಸಿದ ಪಕ್ಕೆ ಉಪಕಾರ ಸ್ಮರಣೆ ಮಾಡಿರುವರು. ನಿಶ್ಚಿತ ಮೊತ್ತಕ್ಕಿಂತ ನೂರಕ್ಕೆ ಐದಂಶದಷ್ಟು ಹೆಚ್ಚು ಹಣ ಇಟ್ಟುಕೊಳ್ಳಲು ಸರಕಾರಕ್ಕೆ ಸಾಧ್ಯವಿದೆ ಆದರೆ ಅದಕ್ಕೂ ಮಿಕ್ಕಿ ಬೇಂಕುಗಳಲ್ಲಿ ಭರ್ತಿಯಾದ ಹಣವನ್ನು ವಾಪಾಸು ಮಾಡಲಾಗುವುದು. ಏನೇ ಇರಲಿ– ಹೆದರಿ ಹೆದರಿಯೇ ಇಟ್ಟ ಹೆಜ್ಜೆಗೆ ಈ ಮಾದರಿಯ ಅಭೂತಪೂರ್ವ ಸ್ವಾಗತ ದೊರಕುದು ಜನತಾ ಸಹಕಾರದ ಶುಭ ಚಿಹ್ನೆ ಮಾತ್ರವಲ್ಲ- ವೈಯಕ್ತಿಕವಾಗಿ ರಾಜಾಜಿ ಪ್ರತಿಯೊಬ್ಬನ ಮನ ಮುಟ್ಟುವಂತೆ ಸಾಲದ ಆವಶ್ಯಕತೆಯನ್ನು ಒತ್ತಿ ಹೇಳಿದುದೂ ಇದಕ್ಕೊಂದು ಕಾರಣ ಆರ್ಥಿಕ ತಜ್ಞರ ಸಲಹೆ ಜನತೆಯ ಸಹಕಾರದ ಮುಂದೆ ಸೋಲು ನುಂಗಿಕೊಳ್ಳುವ ಪ್ರಸಂಗ ಬಂದುದು–ಸರಕಾರಕ್ಕಿರುವ ಬೆಂಬಲವನ್ನೂ, ಅದರ ಜನಪ್ರಿಯತೆಯನ್ನೂ ಎತ್ತಿ ತೋರಿಸುತ್ತದೆ.

ಬಹುಮುಖ ಮಾರಾಟಕರ

ಜನರ ಕಿಸೆ ಬರಿದಾಗಿರುವ ಈ ಕಾಲದಲ್ಲಿ ಸಾಲದ ಯೋಜನೆಗೆ ಬೆಂಬಲದೊರೆಯದೆಂಬ ಅಂಜಿಕೆಇತ್ತು, ಆದರಲ್ಲೂ ಸರಕಾರದ ಕರಭಾರ ನೀತಿ ಮದ್ರಾಸು ಮತ್ತು ಅದಕ್ಕೂ ಹೆಚ್ಚಾಗಿ ಮುಂಬಯಿಯ ವಾತಾವರಣವನ್ನು ಕೆಡಿಸಿತ್ತು. ಹೆಚ್ಚು ಬಂಡವಾಳವನ್ನು ಸರಕಾರೀ ಸಾಲದಲ್ಲಿ ನಿಕ್ಷೇಪಿಸಲು ಸಾಧ್ಯವಿದ್ದ ವ್ಯಾಪಾರೀ ವರ್ಗ ಮುಂಬಯಿಯಲ್ಲೀಗ ಸರಕಾರದ ವಿರುದ್ಧ ಸಂಕಾಳವೇ ಮುಂದಾದ ಅಸಹಕಾರಾಸ್ತ್ರವನ್ನು ಹಿರಿದಿದೆ. ಆದರೂ ಜನಸಾಮಾನ್ಯರ ಬೆಂಬಲ ಕೇಳಿದುದರಿಂದಲೇ ಸಾಲಗಳು ಯಶಸ್ಸು ಪಡೆದುವು. ಮುಂಬಯಿಯಲ್ಲಿ ಏಕಸ್ಥಾನೀಯ ಕರ ಪದ್ಧತಿಯ ಬದಲು ಬಹುಮುಖಕರವನ್ನು ಹೇರುವ ವಿಚಾರಕ್ಕೆ ಸರಕಾರ ಬಂದುದೇ ವ್ಯಾಪಾರೀ ವರ್ಗದವರ ಅಸಹನೆಗೆ ಮೂಲಕಾರಣ ಇದರಿಂದ ಸಾಮಾನ್ಯ ಜನತೆಗೆ ಪೆಟ್ಟು ತಗಲುವುದೆಂದು ದೂರುವವರೂ ಇದ್ದಾರೆ. ಖೇದದ ಸಂಗತಿ ಎಂದರೆ–ಸರಕಾರದ ವಿರೋಧಿ ಗುಂಪುಗಳಷ್ಟೆ ಅಲ್ಲ, ಮುಂಬಯಿ ಪ್ರದೇಶ ಕಾಂಗ್ರೆಸು ಸಮಿತಿ ಕೂಡ ಸರಕಾರದ ಧೋರಣಕ್ಕೆ ಸಮ್ಮತಿಸದೆ, ಸಿಟ್ಟುಗೊಂಡಿದೆ. ಆದರೆ ಮುರಾರಜಿ ದೇಸಾಯಿ ಸರಕಾರ ಸ್ವಲ್ಪವೂ ವಿಚಲಿತವಾಗದೆ ಬಹುಮುಖ ಮಾರಾಟ ಕರದ ಗೊತ್ತುವಳಿಯನ್ನು ಪಾಸುಮಾಡಿಸಿಕೊಂಡಿತು. ಈ ಕಾಲದಲ್ಲಿ ವಿರೋಧಿ ಗುಂಪಿನ ೩೨ ಮಂದಿ ಸದಸ್ಯರು ಸಭಾತ್ಯಾಗದ ಮೂಲಕ ಅಸಂತೋಷವನ್ನು ತೋರಿದರೂ ಅದು ನಿರರ್ಥಕವಾಯಿತು. ಬಹುಮುಖ ಕರಭಾರ ಪದ್ಧತಿಯಿಂದ ಗ್ರಾಹಕನ ಮೇಲೆ ಹೆಚ್ಚಿನ ಒತ್ತಡ ಬೀಳುವುದೆಂಬುದರಿಂದ "ಹರಿಜನ"ದಂಥ ಆದರ್ಶ ಪತ್ರಿಕೆಯೂ ಮಸೂದೆಗೆ ವಿರೋಧ ಸೂಚಿಸಿದೆ. ರಾಜಾಜಿ ಈಚೆಗೊಂದು ಕಡೆ ಮದ್ರಾಸಿನಲ್ಲಿ ಏಕಸ್ಥಾನೀಯ ಕರ ಪದ್ಧತಿಯನ್ನ ತೊಡಗಬೇಕೆಂದು ಒಮ್ಮೊಮ್ಮೆ ಯೋಚಿಸಿದ್ದರೂ-ಮುಂಬಯಿಯಲ್ಲಿ ತದ್ವಿರುದ್ಧವಾಗಿ ಸರಕಾರ ನಿರ್ಧರಿಸಿದುದರಿಂದ, ಈಗಿನ ಬಹುಮುಖ ಮಾರಾಟಕರದ ನೀತಿಯನ್ನು ಮುಂದೆಯೂ ಅನುಸರಿಸುವ ಅಗತ್ಯ ಬಂತೆಂದು ನುಡಿದರು. ಏನಿದ್ದರೂ-ಮುಂಬಯಿಯ ಅರ್ಥಸಚಿವ ಡಾ| ಜೀವರಾಜ ಮೆಹತಾ ಬಡ ಜನರ ಮೇಲೆ ವರ್ಷಕ್ಕೆ ತಲಾ ಮೂರಾಣೆಗಿಂತ ಹೆಚ್ಚಿನ ತೆರಿಗೆ ಬೀಳದೆಂದು ಸಿದ್ಧಪಡಿಸಿ ತೋರಿಸಿರುವರಾಗಿ, ಅಷ್ಟಾಗಿ ಗಾಬರಿಗೊಳ್ಳುವ ಅಗತ್ಯವಿಲ್ಲ. ಮೂರಾಣೆಯನ್ನು ಸರಕಾರಕ್ಕೆ ಕರ ರೂಪದಲ್ಲಿ ಕೊಟ್ಟರೆ, ಹಾಗೆ ಒಟ್ಟಾದ ಎರಡು–ಮೂರು ಕೋಟಿ ರೂಪಾಯಿ, ರಾಜ್ಯಾಭಿವೃದ್ಧಿಯಲ್ಲಿ ಹೆಚ್ಚು ಉಪಯೋಗಕ್ಕೆ ಬಂದೀತೆಂದು ನಂಬಲೆಡೆಯಿದೆ.

ಕರ ಭಾರದ ವಿಚಾರಣೆ

ಪ್ರಕೃತದ ಕರ ಭಾರ ಪದ್ಧತಿಯಲ್ಲಿ ಲೋಪ ದೋಷಗಳು ಅನೇಕವಿವೆ ಎಂದು ಸರ್ವತ್ರ ದೂರು ಹಬ್ಬಿಕೊಂಡಿದೆ ಈ ಕುಂದು ಕೊರತೆಗಳನ್ನು ದೂರೀಕರಿಸಿ, ಕರದ ತೂಕವನ್ನು ನಿಯಮಿತಗೊಳಿಸುವ ಪ್ರಯತ್ನಗಳನ್ನು ಹಿಂದೊಮ್ಮೆ ೧೯೪೮ರಲ್ಲಿ ನಡೆಸಿದ್ದುಂಟು. ಆದರೆ ಆ ಸಮಿತಿ ಮಾಡಿದ ಶಿಫಾರಸುಗಳಲ್ಲಿ ಒಂದೂ ಕಾರ್ಯರೂಪಕ್ಕೆ ಇಳಿಯಲಿಲ್ಲ ವ್ಯವಸಾಯೋತ್ಪನ್ನವನ್ನು ಕರ ಭಾರದಿಂದ ಮುಕ್ತಗೊಳಿಸಬಾರದೆಂದು ಆ ಸಮಿತಿ ಸಲಹೆ ಮಾಡಿತ್ತು. ಇನ್ನೂ ಇಂಥದೆಷ್ಟೊ ಅಮೂಲ್ಯ ಸಲಹೆಗಳು ಮಣ್ಣು ತಿನ್ನುತ್ತ ಕೂತಿವೆ. ಇಂಥದರಲ್ಲಿ ಕೇಂದ್ರ ಸರಕಾರವು ಬಹುಶಃ ಮುಂದಿನ ವರ್ಷಾರಂಭದಲ್ಲಿ, ಎಂದರೆ ರಾಜಾದಾಯ ನಿಯೋಗದ ಕೆಲಸ ಮುಗಿದೊಡನೆಯೇ, ಕರವಿಚಾರಣಾ ಸಮಿತಿಯೊಂದನ್ನು ನೇಮಿಸುವುದಾಗಿ ತಿಳಿದು ಬರುತ್ತದೆ. ಕೇಂದ್ರ ಸರಕಾರದ ಈ ನಿರ್ಣಯ ಕೆಲ ಮಟ್ಟಿಗೆ ಸಾಂತ್ವನದಾಯಕವಿದೆ. ಸಮಿತಿ ಎರಡು-ಮೂರು ವರ್ಷ ಕಾಲ ಕೆಲಸ ಮಾಡಬೇಕಾದೀತು. ಆ ಬಳಿಕ ಆದಾಯವನ್ನು ಹೆಚ್ಚಿಸಲು ಅನುಕೂಲವಾಗುವಂತೆ ತೆರಿಗೆ ಧೋರಣದಲ್ಲಿ ಏನು ಬದಲಾವಣೆ ಮಾಡಬಹುದು, ಮತ್ತು ಮಾರಾಟ ಕರದಂಥ ಸಂಗತಿಯಲ್ಲಿ ಏಕರೂಪತೆಯನ್ನುಂಟುಮಾಡುವ ಬಗೆ ಮುಂತಾದುವನ್ನು ಇದು ಸೂಚಿಸುವುದು. ಜನತೆಯ ಮೇಲೆ ಕರ ಹಂಚಿಬಿದ್ದುದು ಯೋಗ್ಯವಿದೆಯೋ, ನ್ಯಾಯಸಮ್ಮತವಾದ ರೀತಿಯಲ್ಲಿ ತೆರಿಗೆ ಹೊರಿಸಲಾಗಿದೆಯೋ ಮುಂತಾಗಿ ಇದು ವಿಚಾರಿಸುವುದು. ಶ್ರೀ ದೇಶಮುಖರು ಈಚೆಗೆ ಬಹಿರಂಗಗೊಳಿಸಿದ ಇನ್ನೊಂದು ಮುಖ್ಯ ಸಂಗತಿ–ರಾಜ್ಯಗಳಿಗೆ ಆರ್ಥಿಕ ಸಹಾಯವನ್ನು ಹೆಚ್ಚು ಪ್ರಮಾಣದಲ್ಲಿ ನೀಡುವ ಕಾಲ ಬರಬಹುದು ಎಂಬುದಾಗಿದೆ. ಸದ್ಯಕ್ಕೆ ಕೇಂದ್ರ ಸರಕಾರಕ್ಕೆ ಮೀಸಲಿರುವ ಕೆಲವೊಂದು ಆದಾಯಲ್ಲಿ ರಾಜ್ಯ ಸರಕಾರಗಳಿಗೆ ಯೋಗ್ಯ ಪಾಲು ಕೊಡುವುದವಶ್ಯವೆಂದು ಈಗಾಗಲೇ ಕಾರ್ಯೋನ್ಮುಖವಾಗಿರುವ ಆರ್ಥಿಕ ಆಯೋಗ ಸಲಹೆ ನೀಡುವ ಸಂಭವ ಹೆಚ್ಚಿದೆ. ರಾಜಾಜಿ ಆ ಮೊದಲೇ ಜನಸಂಖ್ಯೆಯ ಪ್ರಮಾಣದ ಮೇಲೆ ವಿಶಿಷ್ಟ ಆದಾಯದ ಬಾಬುಗಳಲ್ಲಿ ಕೇಂದ್ರವು ರಾಜ್ಯ ಸರಕಾರಕ್ಕೆ ಪಾಲು ಕೊಡುವುದತ್ಯಗತ್ಯವೆಂದು ಒಂದಲ್ಲ, ಹಲವು ಬಾರಿ ಹೇಳಿದ್ದಾರೆ. ಮುಂಬಯಿ ಸರಕಾರವೂ ಹೆಚ್ಚು ಆದಾಯ ಬರುವ ಈ ತೆರನಾದ ಸೂಚನೆಯನ್ನು [illegible] ತಿಸಿದೆ.

ರಾಷ್ಟ್ರೀಯ ಅಭಿವೃದ್ಧಿ

ಕರಭಾರವು ಹೆಚ್ಚುಗೊಂಡರೆ, ಆದಾಯವು ಕುಸಿದು ಬೀಳುವ ಭಯವಿರುವುದು ನಿಜವಾದರೂ, ಪ್ರಕೃತ ಆ ಗಳಿಗೆ ಇನ್ನೂ ತುಂಬ ದೂರವಿದೆ ಎಂದು ಅರ್ಥಸಚಿವರು ತೃಪ್ತಿಪ್ರಕಟಿಸಿದರು. ಹಾಗೆಯೆ ಭಾರತದ ಸ್ಟರ್ಲಿಂಗ ಶಿಲ್ಕು ಕರಗುತ ಬಂದಿರುವುದರಿಂದ, ನಾಣ್ಯ ಸಂಗ್ರಹ

WANTED

THE POPULAR INSURANCE COMPANY LIMITED.

"Popular Buildings" MANGALORE 1.

Invites applications from experienced and intinental insurance men for the appointment of an INSPECTOR for UDIPI and COONDAPOOR area.

Apply with details of insurance experience and New Business undertaking

The Managing Director

SUKHA NIVAS

An up-to-date & Premier Boarding & Lodging House

UDIPI

* * *

ಸುಖನಿವಾಸ

ಹೆಸರೇ ಸೂಚಿಸುವಂತೆ ಸುಖಕರ ಉಪಾಹಾರ, ಭೋಜನ ಹಾಗೂ ಉಡುಪಿಯ ಅತಿ ಪುರಾತನ ವಸತಿ ಗೃಹ.

1932ರಲ್ಲಿ ಸ್ಥಾಪಿಸಲ್ಪಟ್ಟು ಇದೀಗ 20 ವರುಷಗಳಿಂದ ಅವಿರತವಾಗಿ ಜನತಾ ಸೇವೆಯನ್ನು ಮಾಡುತ್ತ ಬಂದಿರುವುದು. ಈ ಸೇವೆಯಿಂದಾಗಿಯೇ 'ಸುಖನಿವಾಸ'ವೆಂಬ ಅಚ್ಚು ಮೆಚ್ಚಿನ ಹೆಸರು ಎಳೆ ಬಾಲಕರು ಮೊದಲ್ಗೊಂಡು ವಯೋವೃದ್ಧರಿಗೂ ತಿಳಿದೇ ಇದೆ.

ಸುಖನಿವಾಸ

ನಿಮ್ಮನ್ನು ಸದಾ ಸ್ವಾಗತಿಸುತ್ತಿರುವುದು

ಕೋರ್ಟುರಸ್ತೆ, ಉಡುಪಿ.

ಸ್ಥಾಪನೆ: 1932

ಕೊಡಿಯಾಲಬೈಲು, ಮಂಗಳೂರು.

ವಿಚಾರಣಾ ಆಯೋಗ

ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಕಾಶ್ಮೀರ

ಪ್ರಶ್ನೆ ಸಮಸ್ಯಾತ್ಮಕ ರೂಪ ಧರಿಸಿದೆಂದೂ, ಈಗಿನ ಶಿಲ್ಕು ಇನ್ನು ಕೇವಲ ನಾಲ್ಕು ವರ್ಷಗಳಷ್ಟೇ ಸಾಕಾದೀತೆಂದೂ ಅಂಜಿಕೆ ವ್ಯಕ್ತಪಡಿಸಿದರು. ಹಾಗೆಂದು ಇತರ ದೇಶಗಳ ಸ್ಥಿತಿಗತಿಯೊಡನೆ ಹೋಲಿಸಿದಾಗ ನಾವು ಅಷ್ಟೊಂದು ಕೆಟ್ಟ ಪರಿಸ್ಥಿತಿಗೆ ಇಳಿದಿಲ್ಲ ಎಂಬುದಾಗಿ ದೇಶಮುಖರು ಸ್ಪಷ್ಟಗೊಳಿಸಿದರು. ಪಂಚವಾರ್ಷಿಕಯೋಜನೆಯ ಅಂತಿಮ ವರದಿ ಪ್ರಕಟವಾಗಲು ಇನ್ನೂ ವಿಳಂಬವಿದೆ. ಆರ್ಥಿಕ ನೆರವಿನ ಪ್ರಶ್ನೆಯನ್ನು ಸಮಾಧಾನಕರವಾಗಿ ಬಿಡಿಸಲು ಸಮರ್ಥರಾಗಿಲ್ಲದಿರುವುದೂ ಈ ವಿಳಂಬಕ್ಕೆ ಒಂದು ಪ್ರಬಲ ಕಾರಣ ಎಂದರು.

ಯೋಜನಾ ಆಯೋಗದ ಪಂಚವಾರ್ಷಿಕ ಯೋಜನೆಯ ವಿವಿಧ ಕಾರ್ಯಭಾಗಗಳನ್ನು ಸುಗಮವಾದ ರೀತಿ ಆಚರಣೆಗೆ ತರಲು, ಒಂದು ಸಲಹಾ ಮಂಡಳಿಯನ್ನು ನೇಮಿಸುವ ನಿರ್ಣಯವನ್ನು ಸರಕಾರ ಮಾಡಿದೆ. ಇದರಲ್ಲಿ ಯೋಜನಾ ಆಯೋಗದ ಸದಸ್ಯರು, ರಾಜ್ಯಸರಕಾರಗಳ ಮುಖ್ಯ ಮಂತ್ರಿಗಳೂ ಸದಸ್ಯರಾಗಿರುವ ಈ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯು ಯೋಜನೆಯನ್ನು ಸುಗಮತಾ ಪೂರ್ವಕ ಕಾರ್ಯಗತಗೊಳಿಸುವುದಕ್ಕೂ, ಆರ್ಥಿಕ ಹಾಗೂ ತಾಂತ್ರಿಕ ನೆರವು ಕ್ರಮ ಪ್ರಕಾರ ಪ್ರಾಪ್ತವಾಗುವಂತೆ ನೋಡಲಿಕ್ಕೂ, ಜನತಾ ಸಹಕಾರವು ಅತ್ಯಧಿಕ ಪ್ರಮಾಣದಲ್ಲಿ ದೊರಕುವಂತೆ ಪ್ರಯತ್ನ ನಡೆಸುವುದಕ್ಕೂ ಬದ್ಧವಾಗಿದೆ. ಯೋಜನೆಗಳು ಅನಾವಶ್ಯಕ ವಿಳಂಬವಾಗದೆ, ತ್ವರಿತಗತಿಯಿಂದ ಸಫಲಗೊಳ್ಳಲು ಏನೆಲ್ಲ ಅಗತ್ಯವಿದೆಯೋ—ಅವೆಲ್ಲದರ ಬಗ್ಗೆ ಆಗಿಂದಾಗ್ಗೆ ವಿಚಾರವಿನಿಮಯವನ್ನು ಕೈಗೊಂಡು, ರಾಷ್ಟ್ರಾಭ್ಯುದಯ ಕಾರ್ಯದಲ್ಲಿ ಹೆಚ್ಚಿನ ಕ್ಷಮತೆ ಉಂಟಾಗಲು ಮಂಡಳಿ ಪ್ರಯತ್ನಿಸುವುದು. ಯೋಜನಾ ಆಯೋಗವು ಈಗಾಗಲೇ "ಭಾರತ ಸೇವಕ ಸಮಾಜ" ಎಂಬ ಸರಕಾರೇತರ ಸಂಘಟನೆ ಮಾಡಲು ಶಿಫಾರಸು ಮಾಡಿದೆ. ಸರಕಾರ ರಚಿಸಿದ ಈ ಮಂಡಳಿ ಮತ್ತು ಭಾರತ ಸೇವಕ ಸಮಾಜಗಳು ಪರಸ್ಪರ ಸಹಕರಿಸಿ ನಡೆದರೆ ಪರಿಣಾಮ ತುಂಬ ಒಳ್ಳೆಯದಾದೀತು.

ಭೂಸುಧಾರಣೆಯ ಕುರಿತು ಚರ್ಚೆ

ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಮುಂಬರುವ ಅಧಿವೇಶನ ಸಪ್ಟಂಬರ ೧೩,೧೪ನೇ ದಿನ ಇಂದೋರಿನಲ್ಲಿ ಕೂಡಲಿದೆ. ಈಚೆಗೆ ಕಾಂಗ್ರೆಸಾಧ್ಯಕ್ಷ ಜವಾಹರಲಾಲ ನೆಹರೂ ಅವರ ನಿವಾಸಸ್ಥಾನದಲ್ಲಿ ಕಾಂಗ್ರೆಸಿನ ಕಾರ್ಯಕಾರಿ ಸಮಿತಿಯು ನಡೆಸಿದಾಗ—ಕೆಲವು ಮಹತ್ವದ ವಿಷಯಗಳು ಚರ್ಚೆಗೆ ಬಂದುವು. ಕಾಂಗ್ರೆಸಿನ ಘಟನೆಗೆ ತಿದ್ದುಪಡಿ ಮಾಡುವ ಹಲವು ಸೂಚನೆಗಳಿದ್ದುವು. ಅವುಗಳಲ್ಲಿ ಕಾಂಗ್ರೆಸಿನ ಧ್ಯೇಯ ಸಂಬಂಧದಲ್ಲಿ ತಿದ್ದುಪಡಿ ಮಾಡುವ ಸೂಚನೆಯೊಂದನ್ನು ಹೊರತು ಮಿಕ್ಕುಳಿದುದನ್ನೆಲ್ಲ ಕಾರ್ಯಕಾರಿ ಸಮಿತಿ ನಿರಾಕರಿಸಿತು. ಕಾಂಗ್ರೆಸಿಗೆ ಉಪಾಧ್ಯಕ್ಷರು ಬೇಡೆಂಬುದಾಗಿ ಅದು ಅಭಿಪ್ರಾಯಪಟ್ಟಿತು. ಆದರೆ ಇದಕ್ಕೂ ಹೆಚ್ಚು ಮಹತ್ವದ ವಿಷಯವಾಗಿ ಭೂಸುಧಾರಣೆಯ ಸೂಚನೆ ಇತ್ತು. ಸರಕಾರ ಮತ್ತು ಬೇಸಾಯಗಾರರ ನಡುವೆ ಮಧ್ಯವರ್ತಿಯಾದ ವರ್ಗ ಇರಬಾರದೆಂದು ಅಭಿಪ್ರಾಯಗೊಂಡರೂ, ಬೇರೆ ಬೇರೆ ರಾಜ್ಯಗಳಲ್ಲಿ ವಿದ್ಯಮಾನವಿರುವ ವಿಶಿಷ್ಟ ಪರಿಸ್ಥಿತಿಯನ್ನು ಅನುಸರಿಸಿಯೇ ಭೂಸುಧಾರಣಾ ಯೋಜನೆಗಳನ್ನು ಸಿದ್ಧಪಡಿಸುವುದಗತ್ಯ ಎಂಬ ನಿರ್ಣಯಕ್ಕೆ ಸಮಿತಿ ಬಂದಿದೆ.

ಭೂಸುಧಾರಣೆಯು ಮೂಲಭೂತ ಪ್ರಶ್ನೆಯಾಗಿರುವುದರಿಂದ ಶೀಘ್ರಾತಿಶೀಘ್ರವಾಗಿ ಅದು ಕಾರ್ಯಾನ್ವಿತಗೊಳ್ಳುವುದು ಅಪೇಕ್ಷಣೀಯ. ವಿರೋಧಿ ಗುಂಪುಕೃತರಿಗೆ ಕೊಟ್ಟಿರುವ ಪೊಳ್ಳು ಆಶ್ವಾಸನೆಗಳ ಸ್ಥಾನದಲ್ಲಿ ಅಧಿಕಾರಾರೂಢವಾಗಿರುವ ಸರಕಾರ ಪ್ರಾಮಾಣಿಕವಾದ ಭರವಸೆಯನ್ನು ಕೊಡುವುದಲ್ಲದೆ-ಭರವಸೆಯನ್ನು ಕಾರ್ಯರೂಪಕ್ಕೆ ಕೂಡ ಇಳಿಸುವುದಗತ್ಯ. ಕಾಶ್ಮೀರ ಸಂಬಂಧದಲ್ಲಿ ತಾನು ಕೊಟ್ಟ ಹೇಳಿಕೆಯನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಪಾರ್ಲಿಮೆಂಟಿನಲ್ಲಿ ನೆಹರೂ ಸೂಚನೆ ಮಂಡಿಸಿದಾಗ—ಕಮ್ಯೂನಿಸ್ಟ ಸದಸ್ಯರು ಸರಕಾರಕ್ಕೆ ತಮ್ಮ ಬೆಂಬಲವನ್ನು ಸೂಚಿಸಿದರು. ಕಾಶ್ಮೀರದಲ್ಲಿ ಆನುವಂಶಿಕವಾದ ಅರಸೊತ್ತಿಗೆಯನ್ನು ನಿರ್ಮೂಲಿಸಲು ಭಾರತ ಸರಕಾರ ಒಪ್ಪಿಕೊಂಡುದೂ—ಅಲ್ಲಿಯ ಭೂಸುಧಾರಣೆಗೆ ಸಮ್ಮತಿ ಸೂಚಕವಾಗಿ ತಲೆದೂಗಿದುದೂ—ಕಮ್ಯೂನಿಸ್ಟ ಬೆಂಬಲದ ಗುಟ್ಟು ಕಾಶ್ಮೀರಪ್ರಕರಣದಿಂದಸ್ಪಷ್ಟಗೊಂಡೆಂಬಂತೆ, ಲೋಕಸಭೆಯ ಹಲವು ಸದಸ್ಯರು ಸಭೆ ಸೇರಿ, ಎಲ್ಲ "ಬಿ" ವರ್ಗದ ರಾಜ್ಯಗಳಲ್ಲಿಯೂ ಆನುವಂಶಿಕ ಅರಸೊತ್ತಿಗೆಯನ್ನು ನಿರ್ಮೂಲಿಸುವ ಗೊತ್ತುವಳಿಯನ್ನು ಸ್ವೀಕರಿಸಿರುವರು. ಮೈಸೂರಿನವರಾದ ಹಾಗೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಈ ಸಭೆಯಲ್ಲಿ ಅಧ್ಯಕ್ಷತೆ ವಹಿಸಿದ್ದರು

ಪಾರ್ಲಿಮೆಂಟಿನ ಕಾರ್ಯಕಲಾಪ

ಕಾಶ್ಮೀರ ಸಂಬಂಧದಲ್ಲಿ ಪಾರ್ಲಿಮೆಂಟಿನಲ್ಲಿ ನೆಹರೂ ಕೊಟ್ಟ ಹೇಳಿಕೆಯನ್ನು ಸಾಮಾನ್ಯವಾಗಿ ಎಲ್ಲರೂ ಸ್ವಾಗತಿಸಿದರು. ಈ ಪ್ರಶ್ನೆಯು ದಿನದಿಂದ ದಿನಕ್ಕೆ ಕೊಳೆಯುತ್ತಾ ಹೋಗುತ್ತಿದೆ-ರಾಷ್ಟ್ರಸಂಘದ ಅನಾಸ್ಥೆಯಿಂದಾಗಿ ನ್ಯಾಯಸಮ್ಮತವಾದೊಂದು ಪರಿಹಾರ ದೂರದ ಗಂಟಾಗಿ ಉಳಿದಿದೆ ಎಂದು ಹಲವರ ಅಭಿಪ್ರಾಯ. ಸ್ವತಃ ನೆಹರೂ ಜಾಗತಿಕ ವಾತಾವರಣದಲ್ಲಿ ಕಾಶ್ಮೀರ ಸಮಸ್ಯೆಯು ಆಟದ ಚೆಂಡಿನಂತೆ ಬಿದ್ದಿದೆ ಎಂದು ಖೇದ ಪ್ರಕಟಿಸಿದರು. ವಿಶ್ವದ ಶಕ್ತಿ ಸಂಪನ್ನ ದೊಡ್ಡ ರಾಷ್ಟ್ರಗಳು ತಮ್ಮ ಮನಸ್ಸಿಗೆ ಬರಲಿಲ್ಲವಾದರೆ ಒಂದು ಪ್ರಶ್ನೆಯನ್ನು ಎಷ್ಟು ಉದ್ದಕ್ಕೆ ಬೆಳೆಸಲಿಚ್ಛಿಸುವರೆಂಬುದಕ್ಕೆ ಇದೊಂದು ಜೀವಂತ ಉದಾಹರಣೆ ಎಂದು ಉದ್ಗಾರ ಹೊರಡಿಸಿದರು. ಆದರೂ ಶಾಂತಿಪ್ರಿಯ ರಾಷ್ಟ್ರವಾದ ಭಾರತ ಸಂಯುಕ್ತ ರಾಷ್ಟ್ರಸಂಘದೊಡನೆ—ಮತ್ತು ಪ್ರಸ್ತುತ ಅದರ ಪ್ರತಿನಿಧಿ ಡಾ। ಫ್ರಾಂಕ ಗ್ರಹಾಮರೊಡನೆ ಸಂಪೂರ್ಣ ಸಹಕಾರ ನೀಡುವುದಾಗಿಯೂ—ಆಗಸ್ಟ ೨೫ರಿಂದ ಸಪ್ಟಂಬರ ಮಧ್ಯದ ವರೆಗೆ ಜಿನೀವಾದಲ್ಲಿ ನಡೆಯಬಹುದಾದ ಚರ್ಚೆಯಲ್ಲಿ ಭಾಗವಹಿಸಲು ಸಂರಕ್ಷಣಾ ಮಂತ್ರಿ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ ಹೋಗುವರೆಂದೂ ತಿಳಿಸಿದರು.

ರಾಜ್ಯ ಪರಿಷತ್ತು ಪ್ರತಿಬಂಧಕ ಸ್ಥಾನಬದ್ಧತೆಯ ಮಸೂದೆಗೆ ೧೯೫೪ರ ಅಂತ್ಯದವರೆಗೆ ಜೀವದಾನ ಕೊಡುವ ತಿದ್ದುಪಡಿಯನ್ನು ಅಂಗೀಕರಿಸಿದೆ. ಕಳೆದ ವಾರ ಲೋಕಸಭೆಯು ಪ್ರಚಂಡ ಬಹುಮತದಿಂದ ಈ ತಿದ್ದುಪಡಿಗೆ ಬೆಂಬಲ ನೀಡಿತ್ತು. ರಾಜ್ಯ ಪರಿಷತ್ತಿನ ಕಮ್ಯೂನಿಸ್ಟ ಪುಢಾರಿ ಶ್ರೀ ಪಿ. ಸುಂದರಯ್ಯನವರ ಭಾಷಣವು ಪ್ರತಿಬಂಧಕ ಸ್ಥಾನಬದ್ಧತೆ ಮಸೂದೆಯ ಬಗ್ಗೆ ಕೆಲವರಲ್ಲಿ ಇದ್ದ ಸಂದೇಹಗಳನ್ನೂ ಪರಿಹರಿಸಿ, ಸರಕಾರದೊಡನೆ ಸಹಕರಿಸುವ ಮನೋಪ್ರವೃತ್ತಿಗೆ ಪ್ರೇರಣೆ ಕೊಟ್ಟಿತು. ಕಮ್ಯೂನಿಸ್ಟರಿಂದ ಜೀವ ಹಾನಿಯಾಗಲೀ ಇತರ ತೊಂದರೆಗಳಾಗಲೀ ಆಗುವುದಿಲ್ಲವೆಂದು ಸರಕಾರ ಒಪ್ಪಿದರೆ-ಎಲ್ಲ ಶಸ್ತ್ರಾಸ್ತ್ರಗಳನ್ನೂ ಹಿಂದಕ್ಕೆ ಕೊಡಲಾಗುವುದು ಎಂದವರು ಸಾರಲು, ವಿಧ್ವಂಸಕ ಚಟುವಟಿಕೆಗಳು ನಡೆಯುವುದೆಂಬುದಕ್ಕೆ ಪ್ರತ್ಯಕ್ಷ ಸಾಕ್ಷಿಯೊದಗಿತು. ಆದರೆ, ಈ ಕರಾರಿಗೆ ಒಪ್ಪಿಗೆ ಮೂರ್ಖತೆಯನ್ನು ಡಾ। ಕಟಜೂ ತೋರಿಸಲಿಲ್ಲ. ಮಸೂದೆ ಒಂದು ವಿಶಿಷ್ಟ ಪಕ್ಷದ ವಿರುದ್ಧವಲ್ಲ. ವಿಧ್ವಂಸಕ ಚಟುವಟಿಕೆಗಳಲ್ಲಿ ತೊಡಗಿದ ವ್ಯಕ್ತಿಯ ಮಟ್ಟಿಗಿದೆ ಎಂದವರು ಸ್ಪಷ್ಟೀಕರಿಸಿದ್ದು ಚೆನ್ನಾಯಿತು. ಜೊತೆಗೆ, ಮುಂದಿನ ವರ್ಷದ ನವಂಬರದಲ್ಲಿ ಅಧಿಕೃತ ಗೊತ್ತುವಳಿಯ ಮೂಲಕ ಮಸೂದೆಯ ಪುನರ್ವಿಮರ್ಶೆಗೆ ಅವಕಾಶ ಒದಗಿಸಿ ಕೊಡಲಾಗುವುದೆಂದೂ ಅವರು ಆಶ್ವಾಸನೆ ನೀಡಿದುದು ಸಂತೋಷ.

own the best—
the new Remington
PORTABLE TYPEWRITER
for
Rs. 125
initial payment
THE GENERAL INVESTMENT & COMMERCIAL CORPORATION LTD
Udipi
HP2


ನಾರೀಹೃದಯ

ಸ್ವರ್ಗೀಯ ಪ್ರೇಮಚಂದ್ರರ ಧರ್ಮಪತ್ನಿ
ಶ್ರೀಮತಿ ಶಿವರಾಣೀ ದೇವಿಯವರ
ಕಥಾಮಾಲಿಕೆಯ ಅನುವಾದ
ನಾರೀಹೃದಯವನ್ನು ಚಿತ್ರಿಸುವ
ಅತ್ಯುತ್ತಮ ಕತೆಗಳ ಸಂಗ್ರಹ
ಸ್ತ್ರೀಯರಲ್ಲಿಯೂ ಪ್ರೇಮ, ಸ್ನೇಹ, ವೀರ
ಭಕ್ತಿ ತ್ಯಾಗ, ಬಲಿದಾನಾದಿ ಅಮೂಲ್ಯ
ಗುಣಗಳೂ ಇದ್ದೇ ಇವೆ ಎಂಬುದನ್ನು
ಚೆನ್ನಾಗಿ ನಿರೂಪಿಸಲಾಗಿದೆ
ನಾರಿಯರೂ, ಪುರುಷರೂ ಓದತಕ್ಕ ರೂ 1-8-0 ಬೆಲೆಯ ಪುಸ್ತಕ

ಬೇಕಾಗಿದ್ದಾರೆ

ಸಂಬಳದ ಮೇಲೆ ಯಾ ಕಮಿಶನಿನ ಮೇಲೆ ವಿಮಾ ಕೆಲಸ ಮಾಡಲು ಯೋಗ್ಯ ಏಜಂಟರು ಮತ್ತು ಸ್ಪೆಶಲ್ ಏಜಂಟರು ಬೇಕಾಗಿದ್ದಾರೆ

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಉಡುಪಿ
The
NEW KARNATAKA
Provident Insurance
Co Ltd. Udipi


ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

You Cannot But Choose
The Canara Banking Corporation Ltd.
for Ideal Banking
in the States of Madras, Mysore, Bombay,
Coorg & U. S. T. C
Estd: 1906. H. O.: UDIPI (S 1

ನವಯುಗ
ಚಂದಾ ವಿವರ
ವರ್ಷಕ್ಕೆ ರೂ 5—12—0
6 ತಿಂಗಳಿಗೆ ರೂ. 3—0—0
ಉಡುಪಿ, ಗುರುವಾರ ೧೪-೮-'೫೨

ಸ್ವಾತಂತ್ರ್ಯ ಪುಷ್ಪಶಯ್ಯೆಯಲ್ಲ.

ಸ್ವಾತಂತ್ರ್ಯದ ಐದು ವರ್ಷಗಳು ಕಳೆದು ಇದೀಗ ಆರನೆಯದು ಕಾಲಿರಿಸುತ್ತಿದೆ. ಈ ಸಂದರ್ಭದಲ್ಲಿ ಸ್ವಾಭಾವಿಕವಾಗಿ ನಾವು ನಡೆದು ಬಂದ ದಾರಿಯನ್ನು ದಿಟ್ಟಿಸಿನೋಡಿ, ಮುಂದೆ ಹೆಜ್ಜೆ ಹಾಕುತ್ತೇವೆ. ಸ್ವರಾಜ್ಯ, ಸ್ವಾವಲಂಬನವನ್ನೂ ಸಮೃದ್ಧಿಯನ್ನೂ ಪಡೆದು ರಾಮ ರಾಜ್ಯದ ಮಟ್ಟಕ್ಕೆ ಮುಟ್ಟಬೇಕೆಂಬುದೇ ಇದಕ್ಕಾಗಿ ಹೋರಾಡಿದ ದೇಶದ ಧುರೀಣರ ಮನೀಷೆಯಾಗಿತ್ತು. ಮಹಾತ್ಮಾ ಗಾಂಧೀಜಿಯವರೂ, ನಮ್ಮ ಪ್ರಧಾನಿ ನೆಹರುಗಳೂ ಇದೇ ಉದ್ದೇಶವನ್ನು ಬಿಟ್ಟುಬಿಡದೆ ಜನರ ಮುಂದೆ ಇಟ್ಟಿದ್ದಾರೆ. ಸ್ವಾತಂತ್ರ್ಯ ದೊರೆತ ಇಷ್ಟು ದಿನಗಳ ಬಳಿಕ, ನಾವು ಪ್ರತಿಜ್ಞೆ ಪೂರೈಸುವಲ್ಲಿ ಎಷ್ಟರ ಮಟ್ಟಿನ ಸಾಫಲ್ಯ ಪಡೆದಿದ್ದೇವೆ. ಇನ್ನೆಷ್ಟು ಕೆಲಸಗಳು ಮಾಡಲಿಕ್ಕಿವೆ ಎಂಬುದನ್ನು ವಿಮರ್ಶಾತ್ಮಕ ದೃಷ್ಟಿಯಿಂದ ನೋಡಿ ತಿಳಿದುಕೊಳ್ಳುವಲ್ಲಿ ಪ್ರತಿಯೊಬ್ಬ ನಾಗರಿಕನೂ ಹಿಂದುಳಿಯಲಾಗದು. ಹೀಗೆ ಸಾಧಾರಣವಾಗಿ ಹೇಳಬೇಕೆಂದರೆ-ಸ್ವಾತಂತ್ರ್ಯ ಜನರಿಗೆ ತೃಪ್ತಿಯನ್ನು ನೀಡಲಿಲ್ಲ: ನೊಗಹೇರುವ ಕೈ ಬದಲಿಸಿತೇ ಹೊರತು, ದುಡಿಯುವ ದಣಿವಿಗೆ ಮುಕ್ತಾಯ ಬರಲಿಲ್ಲ ಎಂದು ಪ್ರತಿಯೊಬ್ಬರೂ ಭಾವಿಸುವರು. ತಮ್ಮ ಕರ್ತವ್ಯವನ್ನು ಮರೆತುದೂ, ಸ್ವಾತಂತ್ರ್ಯದ ನಿಜವಾದ ರಹಸ್ಯವನ್ನರಿಯದೆ ಕಲ್ಪನೆಯ ಸ್ವರ್ಗವನ್ನೆ ಕಣ್ಣಿನಿಂದ ನೋಡುತ್ತಿರುವುದೂ ಇಂಥ ಅತೃಪ್ತಿಯ ವಾತಾವರಣದ ನಿರ್ಮಾಣಕ್ಕೆ ಹೇತು. ಸ್ವಾತಂತ್ರ್ಯದ ಹೋರಾಟದಲ್ಲಿ ಮಾತು ಮಾತಿಗೂ ವಿದೇಶೀಯರ ಆಳಿಕೆಯೇ ನಮ್ಮ ದೊಡ್ಡ ಆತಂಕವೆಂದು ಹೇಳಿದುದರ ಸಾರ್ಥವನ್ನು ಸರಿಯಾಗಿ ಅರಿತು ಕೊಳ್ಳಲು ಸಮರ್ಥರಾಗದ ಜನ, ಈಗ ಅಂದು ಕಟ್ಟಿದ ಗಾಳಿ ಗೋಪುರಗಳಿಗೆ ನೆಲೆ ಇಲ್ಲವೆಂದು ಹಲುಬುತ್ತಿರುವರು. ಪರಿಸ್ಥಿತಿಯು ಪ್ರಕೋಪಕ್ಕೇರುವಂತೆ ಚುನಾವಣೆಯ ನೆವದಲ್ಲಿ ವಿವಿಧ ಉದ್ದೇಶಗಳನ್ನು ಮುಂದಿಟ್ಟುಕೊಂಡ, ಅನೇಕ ಪಕ್ಷ ಪಂಗಡಗಳು ತಲೆ ಎತ್ತಿ, ಆಡಳಿತದ ಹೊಣೆ ಹೊತ್ತಿರುವ ಸರಕಾರದ ವಿರುದ್ಧ ಟೀಕೆಯ ಸುರಿಮಳೆಗರೆದುವು. ಜನತೆಗೆ ಪ್ರಜಾಪ್ರಭುತ್ವ ತತ್ವದ ಶಿಕ್ಷಣ ದೊರೆಯಬೇಕಾದ ಈ ಪವಿತ್ರ ಸಂದರ್ಭವನ್ನು ಎಷ್ಟೋ ವೇಳೆ ವ್ಯರ್ಥ ಟೀಕೆಗಳಿಗೂ ಹೊಲಸು ಮಾತುಗಳಿಗೂ ದುರುಪಯೋಗಪಡಿಸಲಾಯಿತು. ಹೀಗೆ ಆತಂಕ ಸಹಸ್ರ ಸಂಖ್ಯೆಯಲ್ಲಿದ್ದರೂ ರಾಷ್ಟ್ರದ ಒಳಗಿನ ಈ ಸೋಲಿನಿಂದ ಧೃತಿಗೆಡದೆ ಹಾಗೂ ಹೊರಗಿನ ಆರ್ಥಿಕ ಜಾಲದ ಮೋಸಕ್ಕೆ ಬಲಿಯಾಗದೆ-ರಾಷ್ಟ್ರ ಪುನರುದ್ಧಾರದ ಏಕಮೇವ ಉದ್ದೇಶ ಸಾಧನೆಗೆ ತನ್ನ ಲಕ್ಷ್ಯವನ್ನೆಲ್ಲವನ್ನೂ ಪೂರೈಸುತ್ತಿರುವ ಸರಕಾರವನ್ನು ಕೊಂಡಾಡಬೇಕು. ಇಷ್ಟು ಕಷ್ಟ ಬಂದರೂ—ಸಾಮಾನ್ಯ ನಾಗರಿಕನಿಗೆ ಟೀಕೆಗಳನ್ನು ಕೇಳಿ ಕೇಳಿ ತಲೆ ಬೇಸರ ಹಿಡಿಯುವಂಥ ವಾತಾವರಣವೇರ್ಪಟ್ಟರೂ-ಅವುಗಳನ್ನು ಲೆಕ್ಕಿಸದೆ ಸರಕಾರವು ರಚನಾತ್ಮಕವಾದ ಆರ್ಥಿಕ ಅಭಿವೃದ್ಧಿಯ ರಂಗದಲ್ಲಿ ಹೆಜ್ಜೆ ಇಡಲು ತೊಡಗಿದೆ ಇದು ನಿಜಕ್ಕೂ ಶ್ಲಾಘನೀಯ. ಪಂಚವಾರ್ಷಿಕ ಯೋಜನೆಯಂಥದನ್ನು. ಹಾಗೂ ಜನಪದ ಅಭಿವೃದ್ಧಿಯಂಥ ನವೋದ್ಯಮವನ್ನು ಕೈಗೊಂಡು ಇನ್ನು ಮುಂದಿನ ಐದು ವರ್ಷಗಳ ಅವಧಿಯಲ್ಲಿ ರಾಷ್ಟ್ರವು ಸಂಪನ್ನವಾಗುವಂತೆ ನೋಡಿಕೊಳ್ಳಲು ಸರಕಾರ ಬದ್ಧ ಕಂಕಣವಾಗಿದೆ. ಇದಕ್ಕಾಗಿ ಜನತೆಯ ಸಹಕಾರವು ಪಕ್ಷಪಂಗಡಗಳ ಭೇದದ ಬಲೆಯನ್ನು ಹರಿದುಬರಬೇಕೆಂದು ನೆಹರೂ ವಿನಂತಿ ಮಾಡಿಕೊಂಡಿರುವರು. ಇಂದಿನ ವಿಷಮ ದಿನಮಾನದಲ್ಲಿ—ಪಾಶ್ಚಾತ್ಯ ರಾಷ್ಟ್ರಗಳ ಉನ್ಮತ್ತ ಯುದ್ಧೋತ್ಸಾಹದ ಸುಳಿಗುಂಡಿಯಲ್ಲಿ-ಭಾರತದ ನೌಕೆಯನ್ನು ಧೈರ್ಯದಿಂದ ಮುನ್ನಡೆಸುತ್ತಾ, ಶಾಂತಿ ಗೀತೆಯನ್ನು ಸಹನೆಯಿಂದ ಹಾಡುತ್ತಾ ನೆಹರೂ ಸಾಗುತ್ತಿರುವುದು ನಮ್ಮೆಲ್ಲರ ಭಾಗ್ಯ ಎಂದೇ ಭಾವಿಸಬೇಕು. ಅನಾಯಕತ್ವ ಹಾಗೂ ಅನೈಕ್ಯ ಸ್ಥಿತಿಯೇ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಸರ್ವ ಪ್ರಥಮ ಗಂಡಾಂತರ. ಈ ಐದು ವರ್ಷಗಳಲ್ಲಿ—ಜನತಾಭಿಪ್ರಾಯವನ್ನು ತಿಳಿದುಕೊಳ್ಳಲು ಚುನಾವಣೆಯನ್ನು ನಡೆಸಿ, ಹಾಗೂ ಅದಕ್ಕೆ ಪೂರ್ವ ಭಾವಿಯಾಗಿ ರಾಜ್ಯಾಂಗ ಘಟನೆಯನ್ನು ರೂಪಿಸಿ, ಭಾರತವನ್ನು ಸಾರ್ವಭೌಮಾಧಿಕಾರವುಳ್ಳ ಗಣರಾಜ್ಯವೆಂದು ಘೋಷಿಸಿ-ನೆಹರೂಗೆ ಪಟ್ಟಕಟ್ಟುವುದರಲ್ಲಿ ಯಶಸ್ಸು ಗಳಿಸಿದೆವು. ಇದು ನಮ್ಮ ಮಹಾಸಾಹಸ. ಐದು ವರ್ಷಗಳಷ್ಟು ಕಾಲ ಈ ಕೆಲಸಕ್ಕೆ ಸಂದಿತು ಇನ್ನು ಮುಂದಿನ ಐದು ವರ್ಷಗಳಲ್ಲಿ, ಆರ್ಥಿಕ ರಂಗದಲ್ಲಿ ಕ್ರಾಂತಿಯನ್ನುಂಟು ಮಾಡುವುದು ನಮ್ಮ ಕರ್ತವ್ಯ. ಸಹನೆ, ತಾಳ್ಮೆಗಳಿಂದ ಇಷ್ಟರವರೆಗೆ ನಾವು ನಡೆದುಕೊಂಡೆವು. ಅದನ್ನು ಇನ್ನೂ ಪರಿಪಾಲಿಸಿಕೊಂಡು ಬರುವುದರ ಜೊತೆಗೆ, ದುಡಿಮೆಯಲ್ಲಿ ತೀವ್ರಾಸಕ್ತಿಯನ್ನೂ, ರಚನಾತ್ಮಕ ಕೆಲಸಗಳಲ್ಲಿ ಉತ್ಸಾಹವನ್ನೂ ತೋರಿಸಿ ಕೊಡುವುದು ನಮ್ಮೆಲ್ಲರ ಪ್ರತಿಜ್ಞೆಯಾಗಲಿ. ಸ್ವಾತಂತ್ರ್ಯವನ್ನು ಪುಷ್ಪಶಯ್ಯೆಯೆಂದು ಕರೆಯುವುದು ಸಮನಲ್ಲ. "ಕಿರೀಟ ಧರಿಸಿದ ತಲೆಗೆ ಸುಖ ನಿದ್ರೆ ಇಲ್ಲ" ಎಂಬ ಹಿತವಾಕ್ಯದಂತೆ, ಸ್ವಾತಂತ್ರ್ಯವನ್ನು ಆಶಿಸುವ ಜನತೆಗೆ ಆಲಸ್ಯದ ನಿದ್ರೆಗೂ ಅವಕಾಶವಿಲ್ಲ. ಇದು ಸೋಮಾರಿತನದಿಂದ ದಿನಗಳೆಯುವ ಸಮಯವಲ್ಲ-ಅದಮ್ಯ ಉತ್ಸಾಹದಿಂದ ರಾಷ್ಟ್ರ ಪುನರುದ್ಧಾರದ ಕೆಲಸದಲ್ಲಿ ಸಹಭಾಗಿಗಳಾಗಿ, ಪುಣ್ಯ ಸಂಪಾದಿಸಬೇಕಾದುದೇ ನಮ್ಮ ಕರ್ತವ್ಯ. ಇಷ್ಟು ಹೇಳಿ-ಇನ್ನು ಮುಂದಿನ ವರ್ಷ ನಮ್ಮ ಕಷ್ಟಗಳು ಕಡಿಮೆಯಾಗಿ — [illegible]ಲಿ ಎಂದೂ, ರಾಷ್ಟ್ರ ಉನ್ನತಿಯನ್ನು ಪಡೆಯಲೆಂದೂ ಹಾರೈಸುತ್ತೇವೆ.

ನೆರೆಯ ನೇಪಾಳದ ಗೊಂದಲ

ಮುಖ್ಯಮಂತ್ರಿ ಹಾಗೂ ಕಾಂಗ್ರೆಸು ವರಿಷ್ಠರೊಳಗೆ ತಿಕ್ಕಾಟ

ಭಾರತದ ನೆರೆರಾಷ್ಟ್ರ-ಆದರಲ್ಲೂ ಗಡಿಪ್ರಾಂತದಲ್ಲಿರುವ ನೇಪಾಳದಲ್ಲಿ ಈಗ ಸರಕಾರ ಹಾಗೂ ನೇಪಾಳೀ ಕಾಂಗ್ರೆಸದ ನಡುವೆ ತಿಕ್ಕಾಟವೆದ್ದುದರ ಪರಿಣಾಮವಾಗಿ ವಾತಾವರಣ ಗೊಂದಲಮಯವಾಗಿದೆ ಈ ಗೊಂದಲವು ಅಕಸ್ಮಾತ್ತಾಗಿ ಉಂಟಾಗಿದೆ. ಈಗ್ಗೆ ಕೆಲವು ತಿಂಗಳ ಹಿಂದೆಯೇ ಇದರ ವಿಷಬೀಜವನ್ನು ಬಿತ್ತಲಾಗಿತ್ತು. ಕಾಂಗ್ರೆಸ ವರಿಷ್ಠರು ಹಾಗೂ ಸರಕಾರದ ಮುಖ್ಯ ಮಂತ್ರಿಗಳ ನಡುವೆ ತಿಕ್ಕಾಟವೆದ್ದು, ಕಾಂಗ್ರೆಸು ಕಾರ್ಯಸಮಿತಿಯು ಮುಖ್ಯ ಮಂತ್ರಿ ಶ್ರೀ ಎಂ. ಪಿ. ಕೋಯಿರಾಲರನ್ನು ಮಂತ್ರಿಮಂಡಳದ ರಾಜೀನಾಮೆ ಕೊಡಬೇಕೆಂದು ಕೇಳಿಕೊಂಡಿತು ರಾಷ್ಟ್ರೀಯ ಕಾಂಗ್ರೆಸಿನ ಅಧ್ಯಕ್ಷರಾಗಿರುವ-ಮತ್ತವರು ಮುಖ್ಯಮಂತ್ರಿಯ ತಮ್ಮನೂ ಹೌದು-ಶ್ರೀ ಬಿ ಪಿ. ಕೋಯಿರಾಲಾರು ಸರಕಾರವು ಕಾಂಗ್ರೆಸು ಕಾರ್ಯಸಮಿತಿಯ ಆದೇಶವನ್ನು ಪರಿಪಾಲಿಸಲೇ ಬೇಕೆಂದು ಆಗ್ರಹಪಟ್ಟರು. ಸಹೋದರ ದ್ವಯರೊಳಗೆ ಮಾತಿನ ಕಿಡಿಗಳು ಹಾರಿದುದು ಮಾತ್ರವಲ್ಲ-ನೇಪಾಳಿ ಕಾಂಗ್ರೆಸು ಇಬ್ಬಣಗಳಲ್ಲಿ ಹಂಚಿಹೋಗುವ ಪರಿಸ್ಥಿತಿ ನಿರ್ಮಾಣಗೊಂಡಿತು. ಮಂತ್ರಿಮಂಡಳದಲ್ಲಿದ್ದ ಮೂವರು ರಾಜೀನಾಮೆ ಕೊಟ್ಟು, ಕಾಂಗ್ರೆಸಾಧ್ಯಕ್ಷರ ಕಡೆಗೆ ವಾಲಿಕೊಂಡರು. ಸಾರ್ವಜನಿಕ ಸಭೆಗಳ ಹಾಗೂ ಪತ್ರಿಕಾ ಹೇಳಿಕೆಗಳ ಮೂಲಕ ಕೋಯಿರಾಲಾ ಬಂಧುಗಳು ಒಬ್ಬರಿನ್ನೊಬ್ಬರ ಮೇಲೆ ಆಪಾದನೆ ಹೊರಿಸುವುದಕ್ಕೂ, ಪರಸ್ಪರ ಧೋರಣವನ್ನು ಖಂಡಿಸುವುದಕ್ಕೂ ಹಿಂಜರಿಯಲಿಲ್ಲ ಈ ಮುಂಚೆ ಇದೇ ಸಹೋದರರೊಳಗೆ ಮುಖ್ಯಮಂತ್ರಿ ಮತ್ತು ಕಾಂಗ್ರೆಸಾಧ್ಯಕ್ಷ ಪದಗಳಿಗಾಗಿ ಸ್ಪರ್ಧೆ ನಡೆದಿತ್ತು. ಆಗ ತಾತ್ಕಾಲಿಕವಾದೊಂದು ಒಡಂಬಡಿಕೆ ಮಾಡಿಕೊಂಡು ಸುಮ್ಮನಾದರು.

ಮಂತ್ರಿಮಂಡಳದ ರಾಜೀನಾಮೆ

ಆದರೆ ಈಗ ಮರಳಿ ಅಧಿಕಾರಸ್ಥಾನದ ಲಾಲಸೆ ಹೆಚ್ಚಾದುದರಿಂದಲೋ ಏನೋ-ಕಚ್ಚಾಡಲು ಮೊದಲು ಮಾಡಿದರು ಕಾಂಗ್ರೆಸಿನ ಬಲದಿಂದ ಅಧಿಕಾರಾರೂಢವಾದ ಸರಕಾರವು ಕಾಂಗ್ರೆಸು ಕಾರ್ಯ ಸಮಿತಿಯ ಆದೇಶದಂತೆ ವರ್ತಿಸಬೇಕು, ಎಂದರೆ, ರಾಜೀನಾಮೆ ಕೊಡಬೇಕೆಂದು ಒಂದು ಬೇಡಿಕೆ ಇದ್ದರೆ-ಕಾಂಗ್ರೆಸು ಸಂಸ್ಥೆಯೇ ಈ ವಿಷಯದಲ್ಲಿ ನಿರ್ಣಯಮಾಡಬೇಕಲ್ಲದೆ-ಕಾರ್ಯಸಮಿತಿಗೆ ಆ ಅಧಿಕಾರವಿಲ್ಲ ಎಂದು ಮುಖ್ಯಮಂತ್ರಿ ಅದಕ್ಕೆ ಉತ್ತರಿಸಿದರು. ಹೀಗೆ ವಾದ-ವಿವಾದಗಳು ಬೆಳೆದ ಮೇಲೆ-ಕೊನೆಯದಾಗಿ ಈಗ ಮುಖ್ಯಮಂತ್ರಿ ನೇಪಾಳಿ ಮಂತ್ರಿಮಂಡಳದ ರಾಜೀನಾಮೆಯನ್ನು ಅರಸ ತ್ರಿಭುವನರಿಗೆ ಸಲ್ಲಿಸಿದರು. ಇದರಿಂದ ಮುಂದೆ ಯಾವ ರೀತಿ ಆಡಳಿತ ನಡೆಸಲ್ಪಡುವುದು ಸಾಧ್ಯ ಎಂಬುದಿನ್ನೂ ನಿಶ್ಚಿತಗೊಂಡಿಲ್ಲ ಸಲಹೆಗಾರ ಮಂಡಳಿಯ ಮೂಲಕವೇ ಸರಕಾರದ ಕಾರ್ಯಕಲಾಪಗಳನ್ನು ಮುನ್ನಡೆಸುವುದರ ಹೊರತು ಬೇರೆ ಉಪಾಯ ಕಾಣುವುದಿಲ್ಲ. ಇಂಥದೊಂದು ಮಂಡಳದ ನೇಮಕವಾಗಬೇಕಾದರೆ ಸ್ವಾಭಾವಿಕವಾ ಕೆಲದಿನಗಳು ಹಿಡಿಯಬಹುದಾದುದರಿ

ಶ್ರೀ ಬಾಳ್ಕಟ್ಟೆ ಬೀಡು ಕೃಷ್ಣಯ್ಯ ಹೆಗ್ಡೇರು

ದೇಶದ ಸ್ವಾತಂತ್ರ್ಯ ಹೋ
ರಾಟದಲ್ಲಿ ನಮ್ಮ ಜಿಲ್ಲೆಯ
ಲ್ಲಿ ಭಾಗವಹಿಸಿದ ಪ್ರಮುಖ
ಯೋಧರಲ್ಲಿ ಒಬ್ಬರಾಗಿ
19 ೩೦ರಲ್ಲಿ ೬ತಿಂಗಳ ಸೆರೆ
ಗ ವಾಸವನ್ನು ಅನುಭವಿ
ದ್ದಾರೆ.

ಇಂದೀಗ ಕರ್ನಾಟಕ
ಪ್ರಾದೇಶಿಕ ಮತ್ತು ಜಿಲ್ಲಾ
ಕಾಂಗ್ರೆಸ್ ಕಮಿಟಿಗಳ ಸ
ಸ್ಯರಾಗಿರುವರಲ್ಲದೆ ಉಡು
ಸರ್ಕಲ್ ಕಾಂಗ್ರೆಸ್ ಕಮಿ
ಟಿಯ ಅಧ್ಯಕ್ಷರಾಗಿದ್ದಾ

ಜಿಲ್ಲಾ ಬೋರ್ಡಿನ,
ಲ್ಲಾ ವಿದ್ಯಾ ಸಂಘದ ಸದ
ರಾಗಿಯೂ ಸೇವೆ ಸಲ್ಲಿ
ದ್ದಾರೆ. ಈಗ ಜಿಲ್ಲಾ ಬೋ
ರ್ಡಿನ ವಿದ್ಯಾ ಕಮಿಟಿ
ಮೆಂಬರರಾಗಿಯೂ
ದ್ದಾರೆ.

ಉಡುಪಿಯ ನವನಿರ್ಮಾಣದ ಶಿಲ್ಪಿ
ಡಾ। ಟಿ. ಎಂ. ಎ. ಪೈಗಳು

ದ– ಅರಸರು ಮುಖ್ಯಮಂತ್ರಿ ಶ್ರೀ ಎಂ. ಪಿ. ಕೋಯಿರಾಲಾರಿಗೆ ಸಲಹೆಗಾರ ಮಂಡಳದ ನೇಮಕದ ವರೆಗೆಅಧಿಕಾರದಲ್ಲಿ ಉಳಿಯುವಂತೆ ಆಜ್ಞಾಪಿಸಿರುವರು.

ಸಂಘರ್ಷದ ಪರಿಣಾಮ

ರಾಜೀನಾಮೆಯನ್ನು ಕೊಡಲು ಪ್ರೇರಿಸಿದ ಹಿನ್ನೆಲೆಯನ್ನು ವಿವರಿಸುತ್ತಾ ಮುಖ್ಯಮಂತ್ರಿ ಹೀಗೆ ಹೇಳಿದರು–"ಎಲ್ಲ ಪಕ್ಷಗಳ, ಅಥವಾ ಒಂದೇ ಪಕ್ಷದ, ಇಲ್ಲವೆ ಪಕ್ಷಾತೀತವಾದ ಸರಕಾರವನ್ನು ರಚಿಸಬೇಕಾಗಿ ಬೇಡಿಕೆಗಳು ಬಂದವೆ. ಆದರೆ ಪ್ರಕೃತ ಪರಿಸ್ಥಿತಿಯಲ್ಲಿ ಇವೆಲ್ಲ ಅವ್ಯವಹಾರ್ಯ ಸೂಚನೆಗಳು. ಆದರೂ ಅರಸ ತ್ರಿಭುವನರು ಯೋಚಿಸಿ, ನಿರ್ಣಯಿಸಬೇಕಾದ ಸಂಗತಿ ಇದೆಂಬುದು ನಿಜ. ಯಾರಾದರೂ ಯೋಗ್ಯರು ಮಂತ್ರಿಮಂಡಳ ರಚಿಸುವುದು ಹಾದಾದರೆ, ನಾನೇಕೆ ಅಡ್ಡಿ ಬರಲಿ? ಕಾಂಗ್ರೆಸು ಸಂಸ್ಥೆಯೇ ತಿಕ್ಕಾಟದ ಬಗ್ಗೆ ನಿರ್ಣಯ ಕೊಡಲಿ"

ಇದನ್ನು ವಿಮರ್ಶಿಸುವಾಗ–ರಾಷ್ಟ್ರದಲ್ಲಿ ಐಕ್ಯಮತ್ಯವಿಲ್ಲದಿದ್ದರೆ ಗಂಡಾಂತರ ಉಂಟಾಗುವುದು ನಿಸ್ಸಂದೇಹವೆಂದು ಮನವರಿಕೆಯಾಗದಿರದು. ಭಾರತದ ಮಟ್ಟಿಗೆ ಹೇಳುವುದಾದರೆ, ಆಯಕಟ್ಟಿನ ಗಡಿ ಪ್ರದೇಶದಲ್ಲಿರುವ ನೇಪಾಳದಂಥ ರಾಜ್ಯದಲ್ಲಿ ಯಾವುದೇ ತರದ ಗೊಂದಲವು ಅಪಾಯಕಾರಿ ಪರಿಣಾಮವನ್ನುಂಟುಮಾಡಬಲ್ಲುದು. ಪರಚಕ್ರಧಾಳಿಯಿಂದ ಸಂರಕ್ಷಣೆ ಮಾಡಿಕೊಳ್ಳುವುದು ರಾಷ್ಟ್ರದ ಇಂದಿನ ಪ್ರಥಮಾವಶ್ಯಕತೆಯಾಗಿದೆ. ಇಂಥದರಲ್ಲಿ ವ್ಯರ್ಥ ಕಚ್ಚಾಟಗಳಿಗೆ ಕಟ್ಟು ಬಿದ್ದು, ನಮ್ಮ ನಮ್ಮೊಳಗೆ ಹೊಡೆದಾಡಿಕೊಂಡು, ರಾಷ್ಟ್ರದ ಬಲವನ್ನು ಕ್ಷೀಣಿಸಲು ನೋಡುವುದು ಸರ್ವಥಾ ಸಮಂಜಸವಲ್ಲ.

ಶಾಂತಿ ಸಾಗರದ ಯೋಜನೆ

ಈ ರೀತಿ ಒಂದೆಡೆ ಐಕ್ಯಮತ್ಯವಿಲ್ಲದೆ ರಾಷ್ಟ್ರದ ಬಲಗುಂದುತ್ತಿರುವುದನ್ನು ಕಂಡರೆ–ಪಾಶ್ಚಾತ್ಯ ರಾಷ್ಟ್ರಗಳು, ಅದರಲ್ಲಿ ಮುಖ್ಯವಾಗಿ ಅಮೇರಿಕ, ಪ್ರತಿಯೊಂದೂ ವಿಧದಿಂದ ಬಲವನ್ನು ಹೆಚ್ಚಿಸಿಕೊಳ್ಳಲು ನೋಡುತ್ತಿರುವುದನ್ನು ಕಾಣಬಹುದು. ಈಚೆಗೆ ನಡೆದ ಶಾಂತಿ ಸಾಗರದ ರಕ್ಷಣಾ ಯೋಜನೆಯ ಪರಿಷತ್ತನ್ನು ಇದಕ್ಕೆ ಉದಾಹರಣೆಯಾಗಿ ನಿರ್ದೇಶಿಸಬಹುದು. ಈ ಮೊದಲೇ ಅಮೇರಿಕವು ಅಟ್ಲಾಂಟಿಕ ಒಡಂಬಡಿಕೆಯನ್ನು ಮಾಡಿಕೊಂಡು ಯುರೋಪಿನ ಬಲಿಷ್ಠ ರಾಷ್ಟ್ರಗಳ (ರಶ್ಯಾ ಇದಕ್ಕೆ ಸೇರಿಲ್ಲ) ಕೂಡೆ ಸಖ್ಯವನ್ನು ಬೆಳೆಸಿಕೊಂಡಿದೆ. ಕಮ್ಯೂನಿಸ್ಟರ ಆಕ್ರಮಣದ ಭಯದಿಂದಲೇ ಅಮೇರಿಕವು ಈ ರೀತಿ ಅಪಾರ ಹಣವನ್ನು ಸಂರಕ್ಷಣಾ ಯೋಜನೆಗಳಿಗಾಗಿ ವ್ಯಯಿಸುತ್ತಿದೆ. ಕಮ್ಯೂನಿಸ್ಟರ ಕುರಿತಾದ ಭೀತಿಯು ಯುರೋಪಿಗಿಂತಲೂ ಈಗ ಪೂರ್ವದ ಆ ತುದಿಯಲ್ಲಿ ಅತಿ ಹೆಚ್ಚಾಗಿದೆ ಎಂದು ಪ್ರಾಯಶಃ ಅಮೇರಿಕಕ್ಕೆ ಮನವರಿಕೆಯಾಗಿದೆ. ರಶ್ಯದ ಕೈಗೊಂಬೆ ಎನ್ನಲಾರದಾದರೂ–ಕಮ್ಯೂನಿಸ್ಟ ತತ್ವಾದರ್ಶವನ್ನು ನೆಚ್ಚಿಕೊಂಡಿರುವ ಚೀನಾದ ಜನತಾ ರಾಜ್ಯವು ಅಮೇರಿಕಕ್ಕೆ ಇಲ್ಲದ ಭಯವನ್ನುಂಟುಮಾಡಿದೆ. ಅದರೆ ಶಾಂತಿ ಸಾಗರದ ಸಂರಕ್ಷಣಾ ಯೋಜನೆಯ ಉಳಿದೆರಡು ಸದಸ್ಯ ರಾಷ್ಟ್ರಗಳಾದ ನ್ಯೂಜೀಲೆಂಡ್ ಹಾಗೂ ಆಸ್ಟ್ರೇಲಿಯಗಳಿಗೆ ಚೀನಾಕ್ಕಿಂತಲೂ ಜಪಾನದ ಹೆದರಿಕೆಯೇ ವಿಶೇಷವೆನಿಸಿದೆ.

ಆಕ್ರಮಣದ ಭಯ

ಇದಕ್ಕೆ ಕಾರಣವಿಲ್ಲದೆಯೂ ಇಲ್ಲ–ಜಪಾನವು ಈಗ ಸ್ವತಂತ್ರ ರಾಷ್ಟ್ರವಾಗಿ ಮೆರೆಯುತ್ತಿದೆ. ಆರು ವರ್ಷಗಳಷ್ಟು ಕಾಲ ಅದನ್ನು ಅಮೇರಿಕವು ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದಿತು. ಈ ಬಿಗಿಮುಷ್ಟಿಯ ನಡುವೆಯೂ ಯುದ್ಧದಿಂದ–ಅದರಲ್ಲೂ ಅಣುಬಾಂಬು ಧಾಳಿಯಿಂದ–ತೀರಾ ಜರ್ಜರಿತವಾಗಿದ್ದ ಜಪಾನು ಅತ್ಯಲ್ಪ ಕಾಲದಲ್ಲಿಯೇ ಮರಳಿ ಚೇತರಿಸಿಕೊಂಡಿದೆ. ಇದನ್ನು ಪರಾಮರ್ಶಿಸಿದರೆ–ಜಪಾನೀಯರು ಅಂಥಿಂಥ ಆಲಸಿಗಳಲ್ಲ, ಅವರು ವೀರ್ಯವಂತರು, ಸಾಹಸಿಗರು ಎಂಬುದು ಸ್ಪಷ್ಟವಾಗುತ್ತದೆ. ಕಳೆದ ಆ ಮಹಾಯುದ್ಧದಲ್ಲಿ ಆಸ್ಟ್ರೇಲಿಯಕ್ಕೆ ಅಮೇರಿಕೆಯ ನೌಕಾಪಡೆಯು ಆಪತ್ಕಾಲದಲ್ಲಿ ಸಹಾಯಕ್ಕೆ ಧಾವಿಸಿ ಬರದಿರುತ್ತಿದ್ದರೆ– ಸ್ಥಿತಿ ಭಯಾನಕ ಮಟ್ಟಕ್ಕೆ ಮುಟ್ಟುತ್ತಿತ್ತು. ಆದುದರಿಂದ ಅಮೇರಿಕವು ಈಗ ನಾಗರ ಹಾವಿಗೆ ಹಾಲುಣ್ಣಿಸುವ ಅಭ್ಯಾಸ ಮಾಡಿಸಿಕೊಟ್ಟಿದ್ದರೂ ಸಮಯ ಬಂದಾಗ ಅದು ಬುಸ್ಸೆನ್ನುವುದು ನಿಶ್ಚಯ ಎಂಬ ಸಂಶಯವನ್ನು ಆಸ್ಟ್ರೇಲಿಯ ಬಿಡಲೊಲ್ಲದು. ಈ ಸಂದರ್ಭದಲ್ಲಿ ಪಶ್ಚಿಮ ಜರ್ಮನಿಗೆ ಸಾರ್ವಭೌಮಾಧಿಕಾರ ಕೊಡುವಾಗ ಫ್ರಾನ್ಸು ಇದೇ ಭಯದಿಂದ ವ್ಯಾಕುಲಗೊಂಡುದನ್ನು ಸ್ಮರಿಸಬಹುದು.

ಜಪಾನು ಏನಂತೆ?

ಆದುದರಿಂದ ಜಪಾನದ ಭವಿತವ್ಯದ ಬಗ್ಗೆ ಚಿಂತೆ ಉಂಟಾಗುವುದು ಸ್ವಾಭಾವಿಕ. ಜಪಾನು ಸಂಯುಕ್ತ ರಾಷ್ಟ್ರಸಂಘದ ಸದಸ್ಯ ರಾಷ್ಟ್ರವಾಗಿ ಸೇರಿದರೆ, ಆಗ ವಿಶ್ವಮಾನ್ಯತೆ ಪಡೆದಿರುವ ಆ ಸಂಘದ ಆದೇಶಾನುಸಾರ ಶಾಂತಿಯನ್ನು ಕಾಯ್ದುಕೊಳ್ಳಲು ಬದ್ಧವಾಗುತ್ತದೆ. ಶಾಂತಿ ಸಾಗರದ ರಕ್ಷಣಾ ಯೋಜನೆಯು ಯಾವುದೇ ರೀತಿಯಲ್ಲಿ ಸಂಯುಕ್ತ ರಾಷ್ಟ್ರಸಂಘದ ಶಾಸನಪಟವನ್ನು ಉಲ್ಲಂಘಿಸಿ ನಡೆಯುವುದಿಲ್ಲವಾದುದರಿಂದ– ಜಪಾನದೊಡನೆ ಸೌಹಾರ್ದ ಸಂಬಂಧವನ್ನು ಉಳಿಸಿಕೊಳ್ಳಲು ಸಾಧ್ಯವಾಗುವುದು. ಏನೇ ಇರಲಿ-ಅಮೇರಿಕದ ಭಯ ಹೆಚ್ಚಿದಂತೆ, ರಕ್ಷಣಾವ್ಯೂಹಗಳೂ ವಿಸ್ತಾರಗೊಳ್ಳುತ್ತಿವೆ. ಇದಕ್ಕೆ ವೆಚ್ಚವಾಗುವ ಹಣವಂತೂ ಲೆಕ್ಕವಿಲ್ಲದಷ್ಟು.

ಈಜಿಪ್ತದ ಚಟುವಟಿಕೆ

ಮಧ್ಯಪೂರ್ವದಲ್ಲಿ ಈಜಿಪ್ತದಲ್ಲಿ ಪ್ರತಿದಿನ ವಾತಾವರಣ ಬದಲುಗೊಳ್ಳುತ್ತಿದೆ: ಆದರೆ ಆ ರಾಷ್ಟ್ರದಲ್ಲಿ ಘಟನಾತ್ಮಕವಾದ ಹಾಗೂ ಶಾಂತಿಯ ಕ್ರಮಗಳು ನೆಲೆಗೊಳ್ಳುವುದಕ್ಕೆ ಅನುಕೂಲವಿವೆಯಾಗಿ, ಸಮಾಧಾನಹೊಂದಬಹುದು. ಈಜಿಪ್ತದಲ್ಲಿ ವಿವಿಧ ರಾಜಕೀಯ ಪಕ್ಷಗಳು ಕಸರತ್ತು ನಡೆಸುತ್ತಿವೆಯಷ್ಟೆ! ಇವುಗಳಲ್ಲಿ ಪ್ರತಿಯೊಂದೂ ಕಲುಷಿತವಿವೆ: ಜನತೆಯ ಆಸೆ ಆಕಾಂಕ್ಷೆಗಳನ್ನು ಪ್ರಾಮಾಣಿಕವಾಗಿ ಪೂರೈಸಲು ಸಮರ್ಥವಾಗಿಲ್ಲದಿರುವುದು. ಇವುಗಳ ಮುಖ್ಯ ಲಂಚಗುಳಿತನ ಮತ್ತು ಭ್ರಷ್ಟಾಚಾರಗಳಿಂದ ಚರಿತ್ರಹೀನರಾಗಿರುವ ಸದಸ್ಯರು ಇದ್ದಷ್ಟು ಕಾಲ-ಈ ಪಕ್ಷಗಳಿಂದ ಏನೂ ಪ್ರಯೋಜನಸಿಗುವಂತಿಲ್ಲ. ಆದುದರಿಂದ, ರಾಜಕೀಯ ಪಕ್ಷಗಳು ಶುದ್ಧೀಕರಣದ ಕಡೆಗೆ ತೀವ್ರ ಗಮನಕೊಡಬೇಕೆಂದು ಮುಖ್ಯಮಂತ್ರಿ ಅಲಿ ಮೆಹರರೂ ಸೈನ್ಯಾಧಿಪತಿ ಜನರಲ್ ನಾಗಿಬರೂ ವಿನಂತಿಸಿಕೊಂಡಿರುವರು. ಆದರೆ ಪಕ್ಷಗಳ ಶುದ್ಧೀಕರಣವೇನು ಸುಲಭಸಾಧ್ಯವೆ? ಅವುಗಳ ಘೋಷಣಾ ಪತ್ರದಲ್ಲಿ ಶುದ್ಧೀಕರಣದ ಬಗ್ಗೆ ಯೋಗ್ಯ ಕ್ರಮಗಳನ್ನು ಕೈಗೊಳ್ಳುವ ಉಲ್ಲೇಖವಿದ್ದರೂ ಅದು ಈಡೇರುವ ಸಂಭವ ಬಹಳ ಕಡಿಮೆ. ಈಡೇರಿದರೂ, ಆ ವೇಗ ತ್ವರಿತವಾಗಲಾರದು.

ಸರ್ವಾಧಿಕಾರ ಬರಬಹುದೇ?

ಆದುದರಿಂದ ನಾಗಿಬರು ಇನ್ನೊಂದು ಎಚ್ಚರಿಕೆಯನ್ನು ನೀಡಿದ್ದಾರೆ–ರಾಜಕೀಯ ಪಕ್ಷಗಳಲ್ಲಿರುವ ಕೊಳೆ ನಿರ್ಮೂಲನವಾಗದಿದ್ದರೆ, ಅವುಗಳನ್ನು ವಿಸರ್ಜಿಸಿಬಿಡಬೇಕೆಂದವರು ಸ್ಪಷ್ಟೋಕ್ತಿಯನ್ನಾಡಿರುವರು. ಪಾರ್ಲಿಮೆಂಟರಿ ಆಡಳಿತವು ಯಶಸ್ವಿಯಾಗಬೇಕಾದರೆ–ಕೊಳೆ ಸೇರಿಕೊಂಡಿರಲು ಯಾವುದೇ ಬಗೆಯ ಅವಕಾಶವನ್ನು ಕೊಡಕೂಡದು ಎಂದವರು ಹೇಳಿದ್ದು, ಪ್ರಸಂಗ ಬಂದರೆ ಈಜಿಪ್ತದಲ್ಲಿ ಸರ್ವಾಧಿಕಾರವನ್ನು ಪ್ರಸ್ಥಾಪಿಸಲೂ ಬಹುದೆಂದವರು ಅಭಿಪ್ರಾಯ ಪಟ್ಟರು. ಸರಕಾರವು ಈಗ ಭೂಸುಧಾರಣೆಯ ಹೆಜ್ಜೆಗಳನ್ನು ಪರ್ಯಾಲೋಚಿಸುತ್ತಿದೆ. ೨೦೦ ಎಕ್ರೆಗೂ ಮಿಕ್ಕು ಆಸ್ತಿ ಇರುವವರ ಭೂಮಿಯನ್ನು ರೈತರಿಗೆ ಮಾರಲಾಗುವುದೆಂದೂ, ಅಂಥ ಭೂಮಿಯ ಬಗ್ಗೆ ಜಮೀನುದಾರರಿಗೆ ೩೦ ವರ್ಷಗಳ ಅವಧಿಯಲ್ಲಿ ಪರಿಹಾರ ಕೊಡಲಾಗುವುದೆಂದೂ ಮಂತ್ರಿಮಂಡಳದ ಒಂದು ಸಭೆ ನಿರ್ಧರಿಸಿದೆ. ವಿದೇಶಗಳೊಡನೆ ಸ್ನೇಹ ಸಂಬಂಧವನ್ನು ಬೆಳೆಸಿಕೊಂಡಿರುವುದೂ ಸರಕಾರದ ಇಚ್ಛೆ ಎಂದು ಸಾಮಾನ್ಯ ಧೋರಣವನ್ನು ಪ್ರಕಟಿಸಲಾಗಿದೆ. ಹಾಗೆಂದೂ ಬ್ರಿಟನೊಡನೆ ಈ ಗೆಳೆತನ ಎಷ್ಟರ ಮಟ್ಟಿಗೆ ಕಂಡು ಬರಬಹುದೆಂದು ಹೇಳುವುದೂ ಕಷ್ಟ. ಸುಯೇಜ ಕಾಲುವೆಯ ಪ್ರದೇಶದಿಂದ ಬ್ರಿಟಿಷ ಸೇನೆಗಳು ಹೊರಬೀಳಬೇಕೆಂಬ ಈಜಿಪ್ತದ ನಿಲುಮೆ ಬದಲಾಗದು: ಹಾಗೆಯೇ ಮಧ್ಯಪೂರ್ವ ಸಂರಕ್ಷಣಾ ಯೋಜನೆಯ ಬಗ್ಗೆಯೂ ಈಜಿಪ್ತದ ವಿರೋಧವನ್ನು ಸ್ಪಷ್ಟ ಮಾತುಗಳಲ್ಲಿ ಈ ಹಿಂದೆಯೇ ತಿಳಿಸಲಾಗಿದೆ.

ಇರಾಣದ ಸಿನೇಟು ಸಭೆ

ಇರಾಣದ ಪರಿಸ್ಥಿತಿ ಚಿಂತಾಜನಕವಾಗಿಲ್ಲದಿದ್ದರೂ ಮುಸಾದಿಕರ ಸರ್ವಾಧಿಕಾರದ ಬಗ್ಗೆ ಸಿನೇಟು ಸಭೆ ಕೆಲಮಟ್ಟಿಗೆ ಅಸಂತುಷ್ಟಿಯನ್ನೇ ಸೂಚಿಸಿತು. ಕೊನೆಗೆ ದೀರ್ಘ ಚರ್ಚೆಯ ಬಳಿಕ, ಇಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಮುಸಾದಿಕರು ಕೈಬಿಟ್ಟರೆ, ಬೇರೆ ಮಾರ್ಗವಿಲ್ಲವೆಂದೋ ಎಂಬಂತೆ, ಸಿನೇಟು ವಿಶೇಷಾಧಿಕಾರ ನೀಡಲು ಸಮ್ಮತಿಸಿದೆ.

ಒಂದು ಮಾತು

[illegible] ಸಂಚಿಕೆಯನ್ನು ಒಂದು ವಿಶೇಷ ಸಂಚಿಕೆಯೆಂದು ಕರೆಯುವುದಿಲ್ಲ. ಇದು ಅದರ ಛಾಯೆ ಮಾತ್ರ. ನಾವು ನವಯುಗದ ಹೊಸ ವರ್ಷಾರಂಭದ ವಾರ್ಷಿಕ ವಿಶೇಷ ಸಂಚಿಕೆಯೊಂದನ್ನು ಹೊರಡಿಸುವ ಸಿದ್ಧತೆಯಲ್ಲಿದ್ದಾಗ ಅನಿರೀಕ್ಷಿತವಾಗಿ ಈ ಸಂಚಿಕೆಯನ್ನ ಹೊರಡಿಸುವ ನಿರ್ಧಾರ ಮಾಡಿದೆವು. ನಮ್ಮೀ ನಿರ್ಧಾರವು ನೆರವೇರಲು ನಮ್ಮ ಕೆಲವು ಹಿತೈಷಿ ಜಾಹೀರಾತುದಾರರ, ಮುಖ್ಯವಾಗಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಕಾರ್ಯಾಧ್ಯಕ್ಷ ಡಾ। ಟಿ. ಎಂ. ಎ. ಪೈಗಳ ನೆರವೇ ಕಾರಣವೆಂಬುದನ್ನಿಲ್ಲಿ ಹೇಳದಿರಲಾರೆವು.

ನಮ್ಮ ಮುದ್ರಕರು ಹೊಸ ಮುದ್ರಣ ಯಂತ್ರವನ್ನು ತರಿಸಿದ್ದು ಅದರಲ್ಲಿಯೇ ವಿಶೇಷ ಸಂಚಿಕೆಯನ್ನು ಮುದ್ರಿಸುವುದು ಸೂಕ್ತವೆನಿಸಿದ್ದರಿಂದ 4-9-52ಕ್ಕೆ ಹೊರಡಿಸಬೇಕೆಂದಿದ್ದ ವಾರ್ಷಿಕ ಸಂಚಿಕೆಯನ್ನು ಸ್ವಲ್ಪ ವಿಳಂಬವಾಗಿ ಪ್ರಕಟಿಸುವೆವು. ಇದಕ್ಕೆ ಎಲ್ಲರ ಸಹಕಾರವನ್ನು ಕೋರುತ್ತೇವೆ.



ಸಾರ್ವಜನಿಕ ಉಪದ್ರಗಳಲ್ಲೊಂದು–ಸಿಗರೇಟ್ ಸೇದಿ ಬೀದಿಗೆಸೆಯುವುದು

ಮಂಗಳೂರು

ಸ್ವಾತಂತ್ರ್ಯ ದಿನಾಚರಣೆಯು ಇದೇ ತಾ 15ರಲ್ಲು ಬೆಳಿಗ್ಗೆ 8 ಗಂಟೆಗೆ ಕೇಂದ್ರ ಮೈದಾನಿನಲ್ಲಿ ಜಿಲ್ಲಾ ಕಲೆಕ್ಟರರಿಂದ ಧ್ವಜಾರೋಹಣ ಧ್ವಜವಂದನೆ, ಪೋಲೀಸ್ ಪೆರೇಡ್, ಮಾರ್ಚ್ ಪಾಸ್ಟ್, ಸೆಮಿನರಿ ಬ್ಯಾಂಡ್, ಇತ್ಯಾದಿ, ಮಧ್ಯಾಹ್ನ 3ರಿಂದ 5, 30ರ ವರೆಗೆ ವಿವಿಧ ವೇಷಾವೆ, 6ಕ್ಕೆ ಶ್ರೀ N N ಸುವರ್ಣರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣಗಳೊಂದಿಗೆ ಜರಗಲಿದೆ

ಚುನಾವಣಾ ತಕ್ಷೀರು– ಕಳೆದ ಮಹಾ ಚುನಾವಣೆಯಲ್ಲಿ ತಮಗೆ ಕೆಲವೊಂದು ಅನ್ಯಾಯಗಳಾಗಿವೆ ಎಂಬುದಾಗಿ ಬ್ರಹ್ಮಾವರ ಮತದಾರ ಕ್ಷೇತ್ರದ ಕಾಂಗ್ರೆಸ್ ಉಮೇದ್ವಾರಿಗಳಾದ ಶ್ರೀ ಧ್ರಿ ಜಗಜೀವನದಾಸ ಶೆಟ್ಟರು ಶ್ರೀ. ಎಸ್. ಎಸ್. ಕೊಳ್ಕೆಬೈಲರ ಮೇಲೆಯೂ ಪುತ್ತೂರಲ್ಲಿ ಪ್ರಜಾಪಕ್ಷದ ಹುರಿಯಾಳುಗಳಾದ ಶ್ರೀ ಕೆ. ಶಿವರಾಮ ಕಾರಂತ ಮತ್ತು ರಾಮಣ್ಣ ನಾಯಕರು ಶ್ರೀಗಳಾದ ಕೆ ವೆಂಕಟ್ರಮಣ ಗೌಡ ಮತ್ತು ಕೆ. ಈಶ್ವರನವರ ಮೇಲೆಯೂ ಹೂಡಿದತಕ್ಷೀರಿನ ವಿಚಾರಣೆಗಾಗಿ ಸರಕಾರವು ಪಂಚಾಯತವನ್ನು ನೇಮಿಸಿದೆ, ಇದರಲ್ಲಿ ನಮ್ಮ ಜಿಲ್ಲಾ ಜಡ್ಜರಾದ ಶ್ರೀ, ಪಿ ಟಿ. ರಾಮನ್ ನಾಯರ, ಸಿವ್ಹಿತ್ತ, ಜಡ್ಜರಾದ ಶ್ರೀ ಎಂ. ಆರ್, ಚಂದರ್ ಮತ್ತು ಕಲ್ಲಿಕೋಟೆಯ ರಾ|ಬ| ಸೂರ್ಯನಾರಾಯಣರಾವ್ ಇವರು ಇರುತ್ತಾರೆ. ಇದೇ ತಾ 7ಕ್ಕೆ ವಿಚಾರಣೆಯು ಪ್ರಾರಂಭವಾಗಲಿದ್ದುದನ್ನು 22ಕ್ಕೆ ಮುಂದುವರಿಸಲಾಗಿದೆ ಎಂದು ತಿಳಿಯಬರುತ್ತದೆ.

ಭಾಷಣ– ಗವರ್ನಮೇಂಟ್ ತರಬೇತಿ ಕಲಾ ಶಾಲೆಯ ಸಂಘದಲ್ಲಿ ಕನ್ನಡ ಸಾಹಿತ್ಯದ ಪ್ರಾಚೀನತೆಯ ಕುರಿತು ಶಾಸ್ತ್ರಕವಿ ಮುಂಜೇಶ್ವರ ಗೋವಿಂದ ಪೈಗಳು ತಾ 8ರಲ್ಲಿ ಭಾಷಣವಿತ್ತರು.

ಜಿಲ್ಲಾ ಕಾಂ| ಕ| ಚುನಾವಣೆಯ ಬಗ್ಗೆ ತಾ 11ರಲ್ಲಿ ವಿಶೇಷ ಮಹಾಸಭೆಯು ಡಾ| ಯು. ಪಿ ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ಕಾಂಗ್ರೆಸ್ ಸಂಸ್ಥೆಯ ಮೇಲ್ಮೈಗಾಗಿ ಮಾಡಬೇಕಾದ ಕಾರ್ಯಗಳನ್ನು ವಿವರಿಸಿ ಐಕ್ಯಮತದಿಂದ ಅಧಿಕಾರಿ ವರ್ಗವನ್ನು ಆರಿಸಬೇಕೆಂದರು. ಕೆಲವು ಹೆಸರುಗಳು ಸೂಚಿಸಲ್ಪಟ್ಟು ಕೊನೆಗೆ ಶ್ರೀ ಎಫ್. ಎಕ್ಸ್. ಪಿಂಟೋರವರು ಸರ್ವಾನುಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಕಾರ್ಯಕಾರಿಮಂಡಳಿಯ ಸದಸ್ಯರನ್ನು ನಾಮಕರಣ ಮಾಡಲು ಅಧ್ಯಕ್ಷರಿಗೆ ಅಧಿಕಾರ ಕೊಡಲಾಯಿತು

ಕುಂದಾಪುರ ಡಿ ಮು ಕೋರ್ಟಿನಲ್ಲಿ

O. S. 113/52

ನಾರಾಯಣ ಶೆಟ್ಟಿ —ವಾದಿ
ಶೀನಮ್ಮ ಸೆಡ್ತಿ ಕೂಡಾ —ಪ್ರತಿವಾದಿಗಳು.

ಸದ್ರಿ ದಾವೆಯ 2ನೇ ಪ್ರತಿವಾದಿ ಉಡ್ಪಿ ತಾಲ್ಲೂಕು ಬಾರಕೂರಲ್ಲಿರುವ ಶೀನಮ್ಮ ಸೆಡ್ತಿ ಮಗ ಸಂಕಯ್ಯ ಸೆಟ್ಟಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ

ನೀವು ಕೂಡಾ 3ಜನರು ವಾದಿಯಿಂದ ಸಾಲವಾಗಿ ಪಡೆದ ಬಾಬ್ತು ವಾದಿಗೆ ಸಲತಕ್ಕದ್ದಾದ ರುಪ್ಯಾ 500 0-0ಕ್ಕೆ ತಾರೀಕು 20-4 50ರಲ್ಲು ಬರಕೊಟ್ಟ ಡಿಮಾಂಡು ನೋಟಿನ ಬಾಬ್ತು ಬರತಕ್ಕ ಅಸಲು ಬಡ್ಡಿ ಹಣಗಳ ವಸೂಲುಬಗ್ಗೆ ಮಾಡಿದ ಮೇಲಿನ ದಾವೆಯು ತಾರೀಕು 22-8-52ಕ್ಕೆ ತನ್ನಿಗೆ ಇಟ್ಟಿದೆ ಆ ಕುರಿತು ನಿಮ್ಮದೇನಾದ್ರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಹಗಲು 11ಗಂಟೆಗೆ ಮೇಲಿನ ಕೋರ್ಟಿನ ಮುಂದೆ ಹಾಜರು ಆಗಿ ಮನವಿಮಾಡಿಕೊಳ್ಳತಕ್ಕದ್ದು ತಪ್ಪಿದಲ್ಲಿ ನಿಮ್ಮ ಎಕ್ಸ್‌ಪಾರ್ಟಿ ದಾವೆಯನ್ನು ತೀರ್ಮಾನಿಸಲಾಗುತ್ತದೆಂಬ ಸದ್ರಿ ಕೋರ್ಟಿನ ಹುಕುಂ ಪ್ರಕಾರ, ಈ ಮೂಲಕ ತಿಳಿಸಲಾಗುತ್ತದೆ.

S. S. Kolkebail.
Advocate for Plaintiff.
Coondapoor, 2-8-52.

ಉಡುಪಿ

ಮುನಿಸಿಪಲ್ ಕೌನ್ಸಿಲ್ ಸಭೆಯು

ಇದೇ ತಾ 9ರಂದು ಶ್ರೀ ಎಂ ಮಂಜುನಾಥ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಮದ್ರಾಸು ಸರಕಾರದ ಸಾಲಕ್ಕೆ ರೂಪಾಯಿ 3000/-ನ್ನು ಕೊಟ್ಟುದನ್ನು ಮಂಜೂರು ಮಾಡಲಾಯಿತು ಸರಕಾರಿ ಆರ್ಡರುಗಳನ್ನು ರಿಕಾರ್ಡು ಮಾಡಲಾಯಿತು ಸ್ಥಳೀಯ ಭಾರತ ಸ್ಕೌಟ್ ಸಂಘಕ್ಕೆ ರೂಪಾಯಿ 25/-ಸಹಾಯ ಧನ ಕೊಡಬಹುದೆಂದಾಯಿತು ಅಂಬ್ಲುಪಾಡಿಗ್ರಾಮದಲ್ಲಿ 'Isolatin Ward'ನ್ನು ಕಟ್ಟುವರೆ ಮುನಿಸಿಪಾಲಿಟಿಗೆ ಕೆಲವೊಂದು ಎಕರ್ಗಳ ಮೇಲೆ ಸರ್ವೆ ನಂಬ್ರ 1/1 Aಜಾಗವನ್ನು ಸ್ವಾಧೀನಮಾಡಿಕೊಳ್ಳುವುದೆಂದಾಯಿತು (ಈ ವಾರ್ಡಿನ ಮೆಂಬರ್ ಶ್ರೀ ಎ ಶಂಭು ಸೆಟ್ಟರು ಇದಕ್ಕೆ ಒಪ್ಪಿಗೆ ಕೊಡಲಿಲ್ಲ) ಕಲ್ಲುಸಂಕ ಸೇತುವೆಯನ್ನು ಅಗಲಮಾಡಬೇಕಾಗುವುದು ಅತ್ಯಾವಶ್ಯಕವಿದ್ದು ಆ ಕಾರ್ಯವು ಬಹಳ ಹಿಂದೆ ಬಿದ್ದುದರಿಂದ ಅದನ್ನು ಬೇಗನೆ ಮಾಡುವಂತೆ ಹ್ಯಾವೇ ಇಲಾಖೆಯನ್ನು ಒತ್ತಾಯಿಸಲಾಯಿತು

ಸಿಟಿಬೀಡಿನ ಮುನಿಸಿಪಲ್ ಸಿಟಿ ಬಸ್ ಸ್ಟೆಂಡಿನ ಸ್ಥಳವನ್ನು ಸಮತಟ್ಟು ಮಾಡುವರೆ ರೂಪಾಯಿ 470/-ಅಂದಾಜು ವೆಚ್ಚ ಸಾಂಕ್ಷನ್ ಮಾಡಲಾಯಿತು

ಪಾರಿತೋಷ– ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ವಿದ್ಯಾರ್ಥಿನಿ ಕುಮಾರಿ ಟಿ ನಿರ್ಮಲಾ ಪೈ ಯವರು ಮದ್ರಾಸು ಯೂನಿವರ್ಸಿಟಿಯ ಕೃಷ್ಣಸ್ವಾಮಿ ಸತ್ಯನಾಥನ್ ಸ್ಮಾರಕ ಸುವರ್ಣ ಪದಕವನ್ನು ಇತರ ಪಾರಿತೋಷಕವನ್ನೂ ಪಡೆದಿರುತ್ತಾರೆ. ಈ ವಿದ್ಯಾರ್ಥಿನಿಯು 1951ನೆ ಯೂನಿವರ್ಸಿಟಿ ಇಂಟರ್ ಮೀಡಿಯಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಇಡೀ ಯೂನಿವರ್ಸಿಟಿಯಲ್ಲಿ ಇಂಗ್ಲಿಷಿನಲ್ಲಿ ಪ್ರಥಮ ಸ್ಥಾನವನ್ನು ಪಡೆದಿದ್ದಾರೆ ಪಾರಿತೋಷ ಕೊಡುವ ಸಮಾರಂಭವು ತಾ 11ರಲ್ಲಿ ಪ್ರಿನ್ಸಿಪಾಲ್ ಎಚ್ ಸುಂದರರಾಯರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ. ಕೆ. ಎಸ್. ಕಾಮತರ ಭಾಷಣವಾಯಿತು. ಕು| ನಿರ್ಮಲಾ ಪೈಯವರು ಆಭಾರಸೂಚಕ ಭಾಷಣವಿತ್ತರು.

ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮ—ವನ್ನು ನಿರ್ಧರಿಸುವರೆ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ತಾ 11ರಲ್ಲು ಸಂಜೆ ಡಿ| ಮುನ್ಸಿಪ್ ಶ್ರೀ ಟಿ. ವಿ ಬಿ. ಸಿ. ಕುಲಾಸೊ, ವರ ಅಧ್ಯಕ್ಷತೆಯಲ್ಲಿಸಭೆಯೊಂದು ಜರಗಿತು. ತಾ 15ರಲ್ಲು ಬೆಳಿಗ್ಗೆ ಅಜ್ಜರಕಾಡು ಮೈದಾನದಲ್ಲಿ ಶ್ರೀಮತಿ ಎಲ್. ಜೆ ಭಂಡಾರಿಗಳಿಂದ ಧ್ವಜಾರೋಹಣ, ಸಂಜೆ ಬೋರ್ಡು ಹೈಸ್ಕೂಲ್ ಸೀಪಲ್ಸ್ ಹಾಲಿನಲ್ಲಿ ಶ್ರೀ ಕೊಟ್ಟಕಾರ್ ಪದ್ಮನಾಭ ಪೈಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ—ಶ್ರೀಗಳಾದ ಟಿ. ಎ ಪೈ, ಎಮ್. ಎಲ್. ಎ ಮತ್ತು ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯವರ ಭಾಷಣ ಬೋರ್ಡು ಶಾಲೆಯ ಮತ್ತಿತರ ಶಾಲಾ ಮಕ್ಕಳ ವಿನೋದಾವಳಿ ಕಾರ್ಯಕ್ರಮಗಳಿಂದ ಸ್ವಾತಂತ್ರ್ಯ ದಿನಾಚರಣೆ ಆಚರಿಸಬೇಕೆಂದು ನಿರ್ಣಯಿಸಲಾಯಿತು.

ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿನಲ್ಲಿ—ನಡೆಯುವ ಸ್ವಾತಂತ್ರ್ಯೋತ್ಸವದ ಕೆಳಗಿನ ಕಾರ್ಯಕ್ರಮಗಳಿಗೆ ಊರಿನ ಎಲ್ಲ ಮಹನೀಯರಿಗೂ ಸುಸ್ವಾಗತವಿದೆ ಎಂಬುದಾಗಿ ಪ್ರಿನ್ಸಿಪಾಲ ಸುಂದರ ರಾಯರು ತಿಳಿಸುತ್ತಾರೆ.

ಬೆಳಿಗ್ಗೆ 8-30ಕ್ಕೆ ಧ್ವಜಾರೋಹಣ 9-0ಕ್ಕೆ ಉಪನ್ಯಾಸಗಳು. ವಿದ್ಯಾರ್ಥಿಗಳಿಂದ ಸಾಯಂ. 7-30ಕ್ಕೆ ವಿವಿಧ ವಿನೋದಾವಳಿ: ಎರಡು ಕನ್ನಡ ನಾಟಕಗಳು. Freedom's Fray ಎಂಬ ಆಂಗ್ಲ ಪ್ರಹಸನ. ಸಂಗೀತ ಇತ್ಯಾದಿ

ಚಂದಾದಾರರಲ್ಲಿ ವಿನಂತಿ.

ಇದೇ ಆಗೋಸ್ತು ತಿಂಗಳ ಅಂ
ತ್ಯಕ್ಕೆ 'ನವಯುಗ'ದ 31ನೆಯ ವ
ರ್ಷವು ಪೂರ್ತಿಯಾಗಿ ಸಪ್ಟೆಂಬರ
ತಿಂಗಳಿಂದ 32ನೇ ವರ್ಷವು ಆರಂ
ಭವಾಗುವುದು. ಈ ಸಮಯಕ್ಕೆ
ಚಂದಾ ಅವಧಿ ಮುಗಿಯುವವರು
ಈ ಮೊದಲೇ ಅವಧಿ ಮುಗಿದ
ಚಂದಾ ಬಾಕಿ ಮಾಡಿಕೊಂಡವರು
ಎಲ್ಲರೂ ತಮ್ಮ ತಮ್ಮ ಚಂದಾ ದ
ಣವನ್ನು ದಯಮಾಡಿ ಆದಷ್ಟು ತ್ವ
ರ್ಯ ಮನಿಯಾರ್ಡರುಮಾಡಿ
ಳುಹಿಸಿಕೊಡಬೇಕಾಗಿ ಈ ಮೂಲ
ಕ ಅಪೇಕ್ಷಿಸುತ್ತೇವೆ

ಮೆನೇಜರ್, ನವಯುಗ ಉಡುಪಿ

Read and Advertis
IN
NAVAYUGA ANNUA
Instructive
Interesting
Entertaining
Special features for ever
taste Best medium fo
lasting advertisements.
Further details on application
THE MANAGER,
NAVAYUGA
UDIPI

ಬಾಲಚಂದ್ರ
ಶಿಕ್ಷಣ ಸಂಬಂಧವಾದ ಮಾಸಪತ್ರಿ
ಸ್ಥಾಪಕರು
ಶ್ರೀ ಉಳ್ಯಾಲ ಮಂಗೇಶರಾವ
ಬಿ. ಎ. ಎಲ್.
ಸಂಪಾದಕರು.
ಕೆ.ಆರ್.ಶೆಣೈ ಮತ್ತು ಕೆ ಎಚ್.ರ
ಉಪಾಧ್ಯಾಯರಿಗೂ ಉಪಾಧ್ಯಾಯ
ಯರಿಗೂ ಅತ್ಯಾವಶ್ಯಕವಾದ ಪತ್ರಿಕೆ.
ವಾರ್ಷಿಕ ಚಂದಾ ರೂ 3-0-0
ಮೆನೇಜರ್,
ಬಾಲಚಂದ್ರ, ಉಡುಪಿ

All Secondary Schools m
Subscribe to "Navayuga" wee
Since it has been approved
the Director of Public Instr
n, Madras.

ಕಥೆ, ಕಾದಂಬರಿ, ನಾಟಕ, ಚಿತ್ರ. ಪ್ರಬಂಧಾದಿ ನಾನಾ ಬಗೆಯ

ಪುಸ್ತಕಗಳು.

ಅಂತರಂಗದ ಪ್ರಕಟಣೆಗಳು

ಬಿರುದಾವಳಿ	0	3	0
ಆ ಸುದ್ದಿ	0	4	0
ಹೈದರಾಬಾದ್ ವಿಜಯ	0	4	0
ಸೆರೆಯಾಳು	0	7	0
ಗಾಡಿಯ ಗಾಂಧಿ	0	3	0
ಶಾಂತಿಯ ಮಡಲಿನಲ್ಲಿ	0	3	0
ಬಲಿಪೀಠದಲ್ಲಿ	0	5	0
ಅಗಲಿದ ಆತ್ಮ ಸರೋಜಿನಿ	0	3	0
ನನ್ನ ಹೆಂಡತಿ	0	3	0
ಪುಣ್ಯಫಲ	0	4	0
ಸುಖದದಾರಿ	0	3	0
ಸುಕಾಂತ	0	3	0
ಪಂಚಮುಖಿ	0	5	0
ಬಿಕ'ಭೂತಕ್ಕೆ ಬಲಿ	0	5	0
ಜನಸೇವೆಯ ಸೋಗಿನಲ್ಲಿ	0	[illegible]	[illegible]
ನಾ ಕಂಡ ಅವಳು	0	3	0
ತ್ರಿವೇಣಿ	0	3	0
ನಿಲುವಂಗಿ	0	4	0
ಬಾಡಿಗೆಯ ಮನೆ	0	3	0
ವರ್ತಮಾನಕಾಲದ ನಾಲ್ವರು			
ಮಹಾನುಭಾವರು	0	4	0
ದೇವರ ನಾಮ ಮತ್ತು ಸಾಧನೆ	0	3	0
ಎರಡು ಕತೆಗಳು	0	4	0
ಸರಸ–ವಿರಸ	0	3	0
ಹೃದಯೇಶ್ವರಿ	0	4	0
ವಿವಿಧ ವಿಷಯ ಕೋಶ ಭಾಗ೧, ೨	0	6	0
ನುಡಿಮುತ್ತುಗಳು ೧, ೨, ೩	0	12	0
ಕುಲವಿಲ್ಲದ ಹೆಣ್ಣು	2	0	0
ತವರು ಮನೆಯಿಂದ	0	4	0
ಭಾಗ್ಯಲಕ್ಷ್ಮಿ	1	4	0
ಯುಗವಾಣಿ	0	8	0
ಸ್ತ್ರೀ ಹೃದಯ	0	4	0
ದ್ವೇಷ	0	3	0
ಎರಡು ಏಕಾಂಕ ನಾಟಕಗಳು	0	4	0
ಪ್ರಜಾಪ್ರಭುತ್ವವನ್ನು ಕುರಿತು	0	8	0
ಕಲಾವಿದನ ದಿನಚರಿ	0	3	0
ಆಧುನಿಕ ಭಾರತ	0	4	0
ಕಾಲವೇ ಬದಲಾಗಿದೆ	0	4	0
ಭಾರತದ ಸಾಹಿತ್ಯ ಕಲೆಗಳು	0	4	0
ಸ್ತ್ರೀಸ್ವಾತಂತ್ರ್ಯ ಬೇಕೆ?	0	4	0
ಸಂಬಳ	0	4	0
ಭಾರತಚಿತ್ರದ ಅಂಚೆಚೀಟುಗಳು	0	3	0
ತ್ರಿಶೂಲ	0	5	0
ಪುಸ್ತಕಪುರಾಣ	0	4	0
ಹಳ್ಳಿಯಲ್ಲಿ ನಡೆದ ನಾಟಕ	0	3	0
ನೆರೆಯ ಗಾಂಧಾರ	0	3	0
ಮಾತಿನಯುಗದ ಮಹಾಪ್ರಭಾವ	0	3	0
ವಿಜ್ಞಾನದ ಬೆಳವಣಿಗೆ	0	4	0
ಡಾ| ಹರ್ಡೀಕರ್	0	5	0
ತಿಂಗಿನ ತವರು	0	6	0
ಪ್ರಾಯಶ್ಚಿತ್ತ	0	3	0
ಪ್ರಭಾ	0	3	0
ಶವಗಳ ಸಾಗಾಟ	0	12	0
ಸ್ವಪ್ನಲೋಕ	0	6	0
ಮನೆಹೊರಗಿನಮಹಾಜೀವಿಗಳು	0	5	0
ಘಂಟನಾದಾ ೪ ಭಾಗಗಳು	2	0	0
[illegible]	0	5	0
ಭಾರತದ ರಾಷ್ಟ್ರಗೀತ	0	3	0
ನಮ್ಮ ಬಹು ದೊಡ್ಡ ಶತ್ರು	0	4	0
ಕೈಲಾಸ	0	3	0
ಖ್ಯಾತಿ	0	4	0
ಕತ್ತು ಕೊಯ್ದವರಾರು?	0	6	0
ಸಮಾಜದ ಅಗ್ನಿಕುಂಡ	0	4	0
ಬೆಳ್ಳಿಹಬ್ಬ	0	4	0
ಉಷಾ	0	4	0
ವಿಧಿಲೀಲೆ	0	4	0
ಪರಮಾಣು ಪ್ರಪಂಚ	0	4	0
ನೀತಿ ವಿನೋದ ಕತೆಗಳು	0	12	0
ಸಾಹಸ ಭೀಮ ವಿಜಯ	0	8	0
ಭಾರತದ ಗುರುಕುಲ	0	6	0
ಲತ್ತಪಗಡೆ	0	6	0
ಸೇವಾಪಥ	0	8	0
ಭರತೇಶ ದಿಗ್ವಿಜಯ	0	8	0
ಮನೋಪದೇಶ	0	8	0
ಜೀವನ ಕಲೆ	0	10	0
ಪ್ರತಿಜ್ಞಾ ಪೂರ್ತಿ	0	12	0
ಮಿಶ್ರ ಸಂತತಿ	0	6	0
[illegible]	0	8	0
ಸೌಂದರ್ಯ	0	5	0
ಸುಧಾ	0	8	0
ವಸಂತಕಾಲ	0	6	0
ನವೀನ ನಾಟಕಗಳು	0	7	0
ಪರ್ಲ್ ಎಸ್. ಬಕ್	0	7	0

ಕೆಟಲಾಗಿಗೆ ಬರೆಯಿರಿ **ನವಭಾರತ ಬುಕ್ ಡಿಪೋ, ಉಡುಪಿ.**



ಕಟಪಾಡಿ ಹೈಸ್ಕೂಲಿನ ಹೊಸ ಬ್ಲಾಕು ತೆರೆಯುವ ಸಮಾರಂಭ

ಕಟಪಾಡಿ ಎಸ್. ವಿ. ಎಸ್. ಹೈಸ್ಕೂಲಿನ ಹೊಸ ಕಟ್ಟಡದ ಪ್ರಥಮ ಬ್ಲಾಕನ್ನು ತೆರೆಯುವ ಸಮಾರಂಭವು ಇದೇ ತಾ. 8ರಂದು ಜಿಲ್ಲಾ ಎಡ್ಯುಕೇಶನಲ್ ಆಫೀಸರ್ ಶ್ರೀ ಟಿ. ರಾಘವನ್ ನಾಯರ್, ಅವರ ಮುಂದಾಳುತ್ವದಲ್ಲಿ ವಾದ್ಯಘೋಷಗಳೊಂದಿಗೆ ಜಯಶೀಲವಾಗಿ ನಡೆಯಿತು. ಪ್ರಾರ್ಥನೆಯಾದ ಬಳಿಕ ಎಸ್. ವಿ. ಎಸ್. ವಿದ್ಯಾವರ್ಧಕ ಸಂಘದ ಅಧ್ಯಕ್ಷ ಶ್ರೀ ಪಿ. ಉಪೇಂದ್ರ ಶ್ರೀನಿವಾಸ ನಾಯ್ಕರು ಸ್ವಾಗತ ಭಾಷಣ ಮಾಡಿ, ಸಂಘದ ಧ್ಯೇಯ ಧೋರಣೆ, ಅದು ಸಾಧಿಸಿದ ಕಾರ್ಯಗಳು, ಇನ್ನೂ ಸಾಧಿಸಬೇಕೆಂದಿರುವ ಬಯಕೆಗಳ ವಿಚಾರವನ್ನು ಸವಿಸ್ತಾರವಾಗಿ ತಿಳಿಸಿ ಕಟ್ಟಡಕ್ಕೆ ತನು ಮನ ಧನಗಳಿಂದ ಸಹಕಾರ ಬೆಂಬಲವನ್ನಿತ್ತ ಸರ್ವರ ಉಪಕಾರವನ್ನೂ ಸ್ಮರಿಸಿದರು. ಬಳಿಕ ಡಾ. ಕೆ. ಆರ್. ನಾಯಕರು ಸಮಾರಂಭಕ್ಕೆ ಶುಭವನ್ನು ಕೋರಿ ಬಂದ ಸಂದೇಶಗಳನ್ನು ಓದಿದರು.

ಶಾಲಾ ಹೆಡ್ಮಾಸ್ತರ್ ಶ್ರೀ ಪಿ. ರಾಮದಾಸ ನಾಯ್ಕರು ಶಾಲಾ ವರದಿಯನ್ನೋದಿದರು. ಎಸ್. ವಿ. ಎಸ್. ಹಾ. ಪ್ರಾ. ಶಾಲೆಯು ಹೇಗೆ ಹೈಸ್ಕೂಲಾಗಿ ಪರಿಣಮಿಸಿತು, ಜನತೆಯು ಸ್ವ-ಪ್ರಯತ್ನಗಳಿಂದ ಹೇಗೆ ಸಹಾಯವನ್ನಿತ್ತು, ಶಾಲೆಯು ಹೇಗೆ ಜನಪ್ರಿಯವಾಗಿದೆ, ಹೊಸ ಬ್ಲಾಕಿಗೆ ತಗಲಿದ ವೆಚ್ಚ, ಇನ್ನೂ ನಿರ್ಮಿಸಬೇಕೆಂದಿರುವ ಎರಡು ಬ್ಲಾಕುಗಳ ಯೋಜನೆಗೆ ಮುಂದೆ ಜನರ [illegible] ಆರ್ಥಿಕ ಬೆಂಬಲದ ಅವಶ್ಯಕತೆ ಇತ್ಯಾದಿಗಳು ವರದಿಯಲ್ಲಿ ಉಲ್ಲೇಖಿಸಲ್ಪಟ್ಟಿದ್ದವು. ಸಭಿಕರ ಪರವಾಗಿ ಶ್ರೀ ಗಣಪಾಡ ವಾಸುದೇವ ಕಾಮತ್ ಮತ್ತು ಪಾಂಗಾಳ ರಾಯಪ್ಪ ನಾಯ್ಕರು ಮಾತನಾಡಿದರು. ಅಧ್ಯಕ್ಷರು ಕಟ್ಟಡ ಕೆಲಸದ ಮೇಸ್ತ್ರಿಗಳಿಗೆ ಪಾರಿತೋಷಕಗಳನ್ನಿತ್ತು, ಶಾಲಾ ಆಡಳಿತ ಮಂಡಳಿಗೆ ಆಭಾರ ಸೂಚಿಸಿದರು. ಎಲಿಮೆಂಟರಿ ಮತ್ತು ಸೆಕೆಂಡರಿ ವಿದ್ಯಾಕ್ಷೇತ್ರದ ಪ್ರಗತಿಯ ಕುರಿತು ಮಾತನಾಡುತ್ತಾ ರಾಜ್ಯದ ಐದನೇ ಒಂದಂಶ ಉತ್ಪನ್ನವು ವಿದ್ಯಾಖಾತೆಗೆ ಉಪಯೋಗಿಸಲ್ಪಡುತ್ತದೆ. ಆದರೆ ಶಾಲಾ ಕಟ್ಟಡಗಳಿಗೆ ಅಲ್ಪಸ್ವಲ್ಪ ಗ್ರಾಂಟನ್ನು ಕೊಡುವುದಾದರೂ ಮಹಾಜನರು ಸರಕಾರದ ಆರ್ಥಿಕ ಕೊರತೆಯನ್ನು ಮನಗಂಡು ತಾವೇ ಕಟ್ಟಡಗಳನ್ನು ಕಟ್ಟಿಸಿ ಕೊಡುತ್ತಿರುವುದು ಸಂತೋಷಕರ. ಇದು ದ. ಕ. ಜಿಲ್ಲೆಯ ಜನತೆಯ ಉದಾರತೆಯನ್ನು ವ್ಯಕ್ತಪಡಿಸುತ್ತದೆ. ಈ ನೂತನ ಶಾಲಾ ಕಟ್ಟಡಕ್ಕೆ ನೆರವಾದ ಸ

ವರನ್ನೂ ಕೊನೆಯದಾಗಿ ವಂದಿಸಿ ತಮ್ಮ ಭಾಷಣ ಮುಗಿಸಿದರು. ಶ್ರೀ ಕೆ. ಆರ್. ಶೆಣೈಯವರು ಶ್ರೀ ನಾಯಕರ ಇಂಗ್ಲಿಷ್ ಭಾಷಣದ ಸಾರವನ್ನೂ ಕನ್ನಡದಲ್ಲಿ ತಿಳಿಸಿದರು. ಹೆಡ್‌ಮಾಸ್ತರ್ ಶ್ರೀ ಪಿ. ರಾಮದಾಸ ನಾಯ್ಕರ ಧನ್ಯವಾದರ್ಪಣೆಯಾಗಿ 'ಜನಗಣಮನ'ಗೀತೆಯೊಂದಿಗೆ ಸಮಾರಂಭ ಕೊನೆಗೊಂಡಿತು

ಬೆಳ್ಳೂರು— ಕಾಸರಗೋಡು ತಾಲೂಕಿನ ಬೆಳ್ಳೂರು ಬೋರ್ಡು ಹಾ. ಪ್ರಾ. ಶಾಲೆಯಲ್ಲಿ ಸ್ಥಳೀಯ ಪಂಚಾಯತ ಬೋರ್ಡಿನ ವತಿಯಿಂದ ಶ್ರೀ ಕೆ. ಲೋಕು ಪೂಜಾರಿಯವರ ಸಂಚಾಲಕತ್ವದಲ್ಲಿ ವಯಸ್ಕರ ಶಿಕ್ಷಣ ಕೂಟವೊಂದು ಈ ತಿಂಗಳಾರಂಭದಲ್ಲಿ ತೆರೆಯಲಾಯಿತು. ಈ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕುಂಞಣ್ಣ ಶೆಟ್ಟರು ವಹಿಸಿದ್ದು ಶ್ರೀ ಕೆ. ಬಿ. ಬಲ್ಲಾಳರು ಶಿಕ್ಷಣಕೂಟವನ್ನು ಉದ್ಘಾಟಿಸಿದರು

ಮೊಗವೀರ ವ್ಯವಸ್ಥಾಪಕ ಮಂಡಳಿ ಮುಂಬಯಿ.— ಇದರ 49 ನೇ ವಾರ್ಷಿಕೋತ್ಸವವೂ, ಮೊಗವೀರ ಧರ್ಮಾರ್ಥ ರಾತ್ರಿ ಶಾಲೆಯ ಪಾರಿತೋಷಕ ವಿತರಣ ಸಮಾರಂಭವೂ ಇದೇ ತಾ. 3 ರಲ್ಲಿ ಶ್ರೀ ಎಮ್. ಆರ್. ಮಸಾನಿ ಯವರ ಅಧ್ಯಕ್ಷತೆಯಲ್ಲಿ ಜರಗಿತು. ಮಂಡಳಿಯ ಅಧ್ಯಕ್ಷ ಶ್ರೀ ಬಿ ಎ ಕರ್ಕೇರರು ಸ್ವಾಗತಕೋರಿದರು. ಕಾರ್ಯದರ್ಶಿ ಎಚ್. ಕೆ. ಪುತ್ರನ್, ಅವರು ಹಲವಾರು ಮಹನೀಯರುಗಳಿಂದ ಬಂದ ಶುಭ ಸಂದೇಶಗಳನ್ನು ಓದಿದರು. ಕಳೆದ 50 ವರುಷಗಳಿಂದ ಮಂಡಳಿಯು ಸಲ್ಲಿಸುತ್ತಾ ಬಂದ ಜನತಾ ಸೇವೆಯನ್ನು ಪ್ರಶಂಸಿಸಿ ಅಧ್ಯಕ್ಷರು ಮಾತನಾಡಿದರು ಬಡವರ ಮಕ್ಕಳಿಗೆ ಧರ್ಮಾರ್ಥ ಶಿಕ್ಷಣ ನೀಡುವ ಈ ಸಂಸ್ಥೆಗೆ ಬೊಂಬಾಯಿ ಸರಕಾರವೂ ಜನತೆಯೂ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಹಾರೈಸಿದರು.. ಶಾಲಾ ಮಕ್ಕಳಿಂದ ಕನ್ನಡ ಸಾಮಾಜಿಕ ನಾಟಕ ಪ್ರದರ್ಶನವಾಗಿ ಸಭಾಂತ್ಯವಾಯಿತು.

ಮಲ್ಪೆ—ರಂಪಣಿ ಬಲೆಗಳ ಮೇಲಿನ ಸೇಲ್ಸ್ ಟೇಕ್ಸ್ ರದ್ದತಿ ಬಗ್ಗೆ ಸತತ ಪ್ರಯತ್ನಿಸಿದ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರನ್ನು ಅಭಿನಂದಿಸುವ ನಿರ್ಣಯವು ಇತ್ತೀಚೆ ಜರುಗಿದ ಮಲ್ಪೆ ಮೊಗವೀರ ಸಹಕಾರಿ ಸಂಘದ ಮಹಾ ಸಭೆಯಲ್ಲಿ ಸ್ವೀಕರಿಸಲಾಯಿತು. ಅಂತೆಯೇ ಮೊಗವೀರರ ಸಂಕಷ್ಟಗಳನ್ನು ಮನಗಂಡು ಸೇಲ್ಸ್ ಟೇಕ್ಸ್ ರದ್ದತಿಗೆ ಅನುಮತಿಯಿತ್ತ ಮದ್ರಾಸಿನ ಮುಖ್ಯಮಂತ್ರಿ ಶ್ರೀ ರಾಜಗೋಪಾಲಾಚಾರ್ಯರನ್ನೂ ಇಲಾಖಾ ಪ್ರಮುಖರನ್ನೂ ಅಭಿನಂದಿಸಲಾಯಿತು

ಕುಂಬಳೆ—ತಾ. 1ರಲ್ಲಿ ಜನಾಬ್ ಯು. ಹಸನ್ ಸಾಹೇಬರ ಅಧ್ಯಕ್ಷತೆಯಲ್ಲಿ ಉಪಾಧ್ಯಾಯರ ಕೇಂದ್ರ ಸಭೆ ಜರಗಿ ವಿದ್ವಾನ್ ಪಿ. ಕೇಶವ ಭಟ್ಟರು ತಾತ್ಕಾಲಿಕ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು.

ಬೈಂದೂರು— ಹೈಸ್ಕೂಲ್ ವಿದ್ಯಾರ್ಥಿ ನಾಯಕ ಚುನಾವಣೆಯು ತಾ. 8ರಲ್ಲಿ ನಡೆದು ಎಚ್. ಮೋಹನ ಹೆಬ್ಬಾರ್ ಆರಿಸಲ್ಪಟ್ಟಿರುವರು.

ತಾರಾನಾಥ ಆಯುರ್ವೇದ ಮಂದಿರ

'ಕಲಿಯುಗ' ವಾರಪತ್ರಿಕೆಯನ್ನು ಈಗ ಧಾರವಾಡದಿಂದ ಮಂಗಳೂರಿಗೆ ತರಲಾಗಿದೆ. ಅದರ ಸಂಪಾದಕರಾದ ಡಾ। ಎಂ. ಗೋಪಾಲ ಕೃಷ್ಣರಾವ್ ಅವರು ಕೂಡ ಈಗ ತಮ್ಮ 'ತಾರಾನಾಥ ಆಯುರ್ವೇದ ಮಂದಿರ' ಎಂಬ ಔಷಧಾಲಯವನ್ನು ಮಂಗಳೂರಿನಲ್ಲಿಯ ಹಂಪನ ಕಟ್ಟೆಯಲ್ಲಿ ಪೈಸ್ ಬಿಲ್ಡಿಂಗಿನ ಮಹಡಿಯಲ್ಲಿ ತೆರೆದಿದ್ದಾರೆ. ಅಲ್ಲಿ ಸಕಲ ರೋಗಗಳನ್ನು ಡಾ ಗೋಪಾಲ ಕೃಷ್ಣರಾಯರು ಸ್ವತಃ ಪರೀಕ್ಷಿಸಿ ಚಿಕಿತ್ಸೆ ಮಾಡುತ್ತಾರೆ. ಅಲ್ಲದೆ ದಿನಾಲು ಸಾಯಂಕಾಲ [illegible]ರಿಂದ 7 ಗಂಟೆಯ ವರೆಗೆ ಬಡವರಿಗೆ ಧರ್ಮಾರ್ಥವಾಗಿ ಔಷಧವನ್ನು ಕೊಡುತ್ತಾರೆ. ಉಬ್ಬಸ, ಗರ್ಭಕೋಶದ ರೋಗ ಮತ್ತು ವೀರ್ಯರೋಗಗಳಲ್ಲಿ ಡಾ. ಗೋಪಾಲಕೃಷ್ಣರಾಯರು ತುಂಬಾ ನಿಷ್ಣಾತರೆಂದು ಕರ್ನಾಟಕದಲ್ಲಿ ಪ್ರಸಿದ್ಧರಾಗಿದ್ದಾರೆ

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್
ಶ್ರೀನಿವಾಸ
ರಾವ್
ವಿರಚಿತ

ಸುಲಭದಲ್ಲಿ
ಇಂಗ್ಲಿಷ್

English Made Easy
ಆಂಗ್ಲ ಸ್ವಯಂಬೋಧಿನಿ ಪುಸ್ತಕ
ಅತ್ಯುಪಯುಕ್ತವಾದುದು
ಬೆಲೆ ರೂ. 1-[illegible]-0.
ವಿ. ಪಿ. ದ್ವಾರ ರೂ. 2-[illegible]
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳ ಸಿಗದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ
ನವಭಾರತ ಪುಸ್ತಕ ಭಂಡಾರ. ಉಡುಪಿ

ನವಯುಗದ ಬಳ್ಳಾರಿ ಏಜಂಟರ
ಬಿ. ಎಸ್. ಜೋಶಿ,
ನ್ಯೂಸ್ ಏಜಂಟ್, ಬಳ್ಳಾರಿ

● ನಿಮ್ಮ ಮನೆ ಮಂದಿಗೆಲ್ಲಾ ಮನೋರಂಜನೆಗೆ ಆಗಾಗ್ಗೆ ಅತ್ಯುತ್ತಮ ಚಿತ್ರಪ್ರದರ್ಶನ
○ ನಿಮ್ಮ ವಿಹಾರದ ಮೋಟಾರು ಕಾರುಗಳಿಗಾಗಿ ಬೆಟರಿ ಚಾರ್ಜಿಂಗ್
● ನಿಮ್ಮ ಕೂಟ ನಾಟಕಗಳ ಸಂಪೂರ್ಣತೆಗಾಗಿ ಧ್ವನಿವರ್ಧಕ ಮೈಕ್
○ ನಿಮ್ಮ ವ್ಯವಹಾರಾಭಿವೃದ್ಧಿಗಾಗಿ ಸ್ಲೈಡ್ ಪ್ರದರ್ಶನ
● ನಿಮ್ಮ ಮನೆಯ ಕಾಮಧೇನುವಿನ ಕುಲಾಭಿವೃದ್ಧಿಗಾಗಿ ಸಿಂಧಿ ಬೀಜದ ಎತ್ತು
ನಿಮಗೆ ಇವುಗಳ ಪ್ರಯೋಜನ ಲಭಿಸುವಂತೆ ಮಾಡಲು
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

[೭ನೇ ಪುಟದಿಂದ ಮುಂದುವರಿದುದು]

ದೃಷ್ಟಿಯಲ್ಲಿಟ್ಟುಕೊಂಡು ಯೋಜನೆಯ ರೂಪು ರೇಖೆಗಳನ್ನು ಹಾಕಿದಾಗ—ಸ್ವಾಭಾವಿಕವಾಗಿ, ನೀರಾವರಿ ಕೆಲಸಗಳಿಗೆ ಹೆಚ್ಚಿನ ಮಹತ್ವವನ್ನು ಕೊಟ್ಟರು. ಸುಮಾರು ೧೫೦೦ ಕೋಟಿ ರುಪಾಯಿ ವೆಚ್ಚ ಬಂದೀತೆಂದು ತೋರಿಸುವ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ೨೦೦ ಕೋಟಿ ರುಪಾಯಿ ಕೇವಲ ವಿವಿಧ ನದೀ ಕಣಿವೆಯ ಯೋಜನೆಗಳಿಗಾಗಿಯೇ ವ್ಯಯವಾಗುವ ನಿರೀಕ್ಷೆಇದೆ

ಮಹಾ ಸಾಹಸ ಕಾರ್ಯ

ಮುಂದಿನ ಐದು ವರ್ಷಗಳ ಅಂತ್ಯದಲ್ಲಿ ಈ ನೀರಾವರಿ ಯೋಜನೆಗಳಿಂದ ೮೭ ಲಕ್ಷ ಎಕ್ರೆಯಷ್ಟು ಜಾಗ ಅಭಿವೃದ್ಧಿಗೊಂಡು, ಆಹಾರಾಭಾವ ದೂರಾಗುವುದು. ಅಲ್ಲದೆ ಹತ್ತು ಲಕ್ಷ ಕಿಲೋವಾಟುಗಳಷ್ಟು ವಿದ್ಯುಚ್ಛಕ್ತಿ ಉತ್ಪನ್ನವಾಗಿ, ಔದ್ಯೋಗಿಕ ವಿಕಾಸಕ್ಕೆ ಪ್ರೋತ್ಸಾಹ ದೊರೆಯುವುದು.

ನದೀ ಕಣಿವೆ ಯೋಜನೆಗಳನ್ನು ಕನಸುಗಳೆಂದು ಅಲಕ್ಷಿಸುವಂತಿಲ್ಲ: ಅಮೆರಿಕೆಯ ಟೆನಿಸಿಕಂದರದಂಥ ಒಂದೊಂದು ಯೋಜನೆ ರಾಷ್ಟ್ರದಲ್ಲಿ ಸುಭಿಕ್ಷೆ ನೆಲೆಗೊಳಿಸಲು ಎಷ್ಟರಮಟ್ಟಿನ ಸಹಾಯ ಮಾಡುತ್ತದೆಂಬುದು ಅರ್ಥಶಾಸ್ತ್ರಜ್ಞರೇ ಬಲ್ಲರು! ಭಾರತದ ಪುನರ್ ನಿರ್ಮಾಣದ ಈ ಸಂಧಿಕಾಲದಲ್ಲಿ ನಾವು ಕಲಹ ಪ್ರಿಯರಾಗುವುದನ್ನು ಬಿಟ್ಟು—ಕೆಲಸ ಪ್ರಿಯರಾಗುವುದು ಅಗತ್ಯವಿದೆ. ವಿದೇಶೀಯರ ನೆರವು ಹಾಗೂ ಸ್ವಂತ ಆರ್ಥಿಕ ಬಲವನ್ನು ಅಳವಡಿಸಿಕೊಂಡು ಮತ್ತು ರಾಷ್ಟ್ರದ ಪ್ರಜೆಗಳ ಸಂಪೂರ್ಣ ಸಹಕಾರವನ್ನು ಅಪೇಕ್ಷಿಸಿ ಕೈಗೊಂಡಿರುವ ಕೆಲವು ಯೋಜನೆಗಳ ವಿವರ ಹೀಗಿದೆ: ಈ ಎಲ್ಲ ಯೋಜನೆಗಳ ಆರ್ಗಲ್ಲನ್ನು ಭಿಂತ ಸ್ವತಂತ್ರವಾದ ಮಂಡಲಿಯೇ ಹಾಕಲಾಯಿತೆಂಬುದು. ಸಂಸ್ಮರಣೀಯ

ದಾಮೋದರ ಕಣಿವೆ

ಈ ಯೋಜನೆಗೆ ನದೀ ಮುಖಜಭೂಮಿಯಲ್ಲಿ ಆಗಿಂದಾಗ್ಗೆ ನೆರೆ ಹಾವಳಿ ನಡೆದುದೇ ಪ್ರೇರಣೆಯೊದಗಿಸಿತು. ಪಾರ್ಲಿಮೆಂಟಿನ ಸಮ್ಮತಿಯಿಂದ ಒಂದು ಕಾರ್ಪೊರೇಶನು ಇಲ್ಲಿ ಆಡಳಿತ ನಿರ್ವಹಿಸುತ್ತಿದೆ. ಟೆನಿಸಿಕಂದರದ ಯೋಜನಾಧಿಕಾರಿಗಳ ಮಾದರಿಯಲ್ಲಿ ಈ ಸಮಿತಿ ರೂಪುಗೊಂಡಿದೆ.

ಬಿಹಾರ ಹಾಗೂ ಪಶ್ಚಿಮ ಬಂಗಾಲ ರಾಜ್ಯಗಳಿಗೆ ಇದರಿಂದ ತುಂಬ ಪ್ರಯೋಜನ ದೊರೆಯುವುದು. ಪ್ರಥಮ ಹೆಜ್ಜೆಯಾಗಿ ದಾಮೋದರ ನದಿಗೆ ನಾಲ್ಕು ಆಣೆಕಟ್ಟುಗಳನ್ನು ಹಾಕುವರು. ಈ ಎಲ್ಲ ಕಡೆ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರಗಳೂ ಸ್ಥಾಪಿತವಾಗುವುವು. ಸುಮಾರು ಹತ್ತುಲಕ್ಷ ಎಕ್ರೆಗೂ ಮಿಕ್ಕಿದ ಜಾಗವನ್ನು ಕಾಲುವೆ ನೀರಿನಿಂದ ಕೃಷಿಯೋಗ್ಯ ಮಾಡಲಾಗುವುವು. ರಾಣೀಗಂಜದ ಕಲ್ಲಿದ್ದಲು ಕ್ಷೇತ್ರದಿಂದ ಕಲ್ಕತ್ತೆಗೆ ವರ್ಷವಿಡೀ ಸಂಚಾರ ಯೋಗ್ಯವಾದ ಕಾಲುವೆಗಳಾಗಿ ಹಲವೊಂದು ರೂಪಿಸಲ್ಪಡಲಿವೆ.

ಹಿರಾಕುಡ ಯೋಜನೆ

ಒರಿಸ್ಸಾದ ಮಹಾನದಿಯ ನೀರನ್ನು ಬಳಸುವುದಕ್ಕೆ ಇದು ಉಪಾಯ ಇದುಕೂಡಾ ನೆರೆಯನ್ನು ನಿಯಂತ್ರಣದಲ್ಲಿಡುವುದು. ಜೊತೆಗೆ ೧೯ ಲಕ್ಷ ಎಕ್ರೆ ಜಮೀನನ್ನು ಒದ್ದೆಮಾಡಿ, ಎರಡು ಲಕ್ಷ ಕಿಲೋವಾಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದು. ವಿದ್ಯುದುತ್ಪಾದನಾ ಕೇಂದ್ರದ ಕೆಲಸಗಳು ಮುಗಿದಿವೆ. ಸುಮಾರು ೬೫೦ ಮೈಲು ಉದ್ದದ ಕಾಲುವೆಯಲ್ಲಿ ಮೂರನೇ ಒಂದಂಶದಷ್ಟು ಈಗಾಲೇ ಸಿದ್ಧವಾಗಿದೆ.

ಹಿರಾಕುಡ ಆಣೆಕಟ್ಟುಗಳ ಉಪಯೋಗಕ್ಕೆಂದು ಹೊಸತಾಗಿಯೇ ರಾಜಗಂಗಾಪುರದಲ್ಲಿ ಸರಕಾರದ ಸಿಮೆಂಟು ತಯಾರಿಯ ಒಂದು ಕಾರ್ಖಾನೆಯನ್ನು ಕಟ್ಟಿತು. ಇದು ಕಳೆದ ಜೂಲೈಯಿಂದ ಕೆಲಸವನ್ನು ತೊಡಗಿ, ದಿನಂಪ್ರತಿ ೫೦೦ ಟನ್ಸ್ ಸಿಮೆಂಟು ಉತ್ಪಾದಿಸುತ್ತಿದೆ. ಇದರ ಒಟ್ಟಿಗೆ ಮೂರು ಸಾವಿರ ಕಿಲೋವಾಟನಷ್ಟು ವಿದ್ಯುತ್ತನ್ನು ಉತ್ಪಾದಿಸಬಲ್ಲ ಒಂದು ಕೇಂದ್ರವೂ ನೆಲೆಗೊಂಡಿದೆ.

ಕರ್ನಾಟಕದ ಪಾಲು

ಕರ್ನಾಟಕದ ಬೆಳಗಾವಿ ಜಿಲ್ಲೆಯಲ್ಲಿ ಘಟಪ್ರಭಾನದಿಗೊಂದು ಆಣೆಕಟ್ಟು ಕಟ್ಟಲಾಗುತ್ತಿದೆ. ಎಡದಂಡೆಯಿಂದ ಸುಮಾರು ೪೪ ಮೈಲು ದೂರ ಕಾಲುವೆ ಹರಿಯುವುದು. ಒಂದು ಲಕ್ಷ ಎಕ್ರೆಗೆ ನೀರೊದಗುವುದು. ಈಗಾಗಲೇ ಎಂಟು ಮೈಲಿನಷ್ಟು ದೂರ ಕಾಲುವೆಯಲ್ಲಿ ನೀರು ಹರಿಯ ತೊಡಗಿದೆ:

ತುಂಗಭದ್ರೆಯನ್ನು ಮದ್ರಾಸು ಹಾಗೂ ಹೈದರಾಬಾದು ಸರಕಾರಗಳು ಜೊತೆ ಪ್ರಯತ್ನದಿಂದ ನೀರಾವರಿಗೆ ಉಪಯೋಗಿಸುತ್ತಿವೆ: ೧೬೦ ಅಡಿ ಎತ್ತರವೂ ೮೦೦೦ ಅಡಿ ಉದ್ದವೂ ಆದ ಈ ಆಣೆಕಟ್ಟಿನ ಬಲದಂಡೆಯಿಂದ ೨೨೫ ಮೈಲು ದೂರ ಮದ್ರಾಸು ರಾಜ್ಯದೊಳಗೆ ಕಾಲುವೆ ಬರುವುದು. ಎರಡೂವರೆ ಲಕ್ಷ ಎಕ್ರೆ ಭೂಮಿ ಸಾಗುವಳಿಗೊಳ್ಳುವುದು. ಎಡ ದಂಡೆಯಿಂದ ಹೈದರಾಬಾದು ರಾಜ್ಯದಲ್ಲಿ ಸಾಗುವ ಕಾಲುವೆ ೧೨೭ ಮೈಲಿನಷ್ಟಿದ್ದು ನಾಲ್ಕೂವರೆ ಲಕ್ಷ ಎಕ್ರೆ ಭೂಮಿಯನ್ನು ಹಸನಾಗಿಸುವುದು. ಮದ್ರಾಸಿನ ನೆಲದಲ್ಲಿ ೬೦,೦೦೦ ಕಿಲೋವಾಟುಗಳಷ್ಟು ಹಾಗೂ ಹೈದರಾಬಾದಿನ ಭಾಗದಲ್ಲಿ ೧,೧೦,೦೦೦ ಕಿಲೋವಾಟುಗಳಷ್ಟು ವಿದ್ಯುತ್ತನ್ನು ಉತ್ಪಾದಿಸುವ ಕೇಂದ್ರವಿದೆ.

ಆಣೆಕಟ್ಟಿನ ಕೆಲಸದಲ್ಲಿ ಎರಡು ಮೂರಾಂಶ ಪೂರ್ತಿಯಾಗಿದೆ. ೩೦೦ ಮೈಲಿನಷ್ಟು ಕಾಲುವೆ ನಿರ್ಮಾಣವಾಗಿದೆ. ೧೯೫೫—೫೬ರಲ್ಲಿ ಇದು ಪೂರ್ತಿಗೊಂಡೀತು.

ಬಂಡವಾಳ ಸಾಲದು

ಬರುವ ವರ್ಷ ಪೂರ್ಣಗೊಂಡೀತೆಂದು ಭಾವಿಸಿರುವ ಮಚಕುಂದ ಯೋಜನೆ, ಮದ್ರಾಸು-ಒರಿಸಾಗಳ ಗಡಿಯಲ್ಲಿ ರೂಪುಗೊಳ್ಳುತ್ತಿದೆ. ೧೯೪೭ರಲ್ಲಿ ಇದನ್ನು ಆರಂಭಿಸಿದರು. ಹಾಗೆಯೇ ಕಾವೇರಿಯ ಉಪನದಿ ಭವಾನಿಗೆ ಹಾಕಿದ ಆಣೆಕಟ್ಟು ೧೯೪೮ರಲ್ಲಿ ಆರಂಭಿಸಲ್ಪಟ್ಟಿದ್ದು, ಇಷ್ಟರಲ್ಲಿಯೇ ಪೂರ್ಣೋಪಯೋಗಕ್ಕೆ ಬರಲಿದೆ. ಎರಡು ಲಕ್ಷ ಎಕ್ರೆ ಭೂಮಿಗೆ ಇದು ನೀರೊದಗಿಸುವುದು.

ಇವಲ್ಲದೆ, ಇನ್ನೆಷ್ಟೋ ಯೋಜನೆಗಳು ಸರಕಾರದ ಕಣ್ಣ ಮುಂದಿವೆ. ದೇಶದ ಆಹಾರಾಭಾವವನ್ನು ದೂರೀಕರಿಸುವ ಹಾಗೂ ಔದ್ಯೋಗಿಕ ಅಭಿವೃದ್ಧಿಯನ್ನು ಸಾಧಿಸುವ ಈ ಯೋಜನೆಗಳನ್ನು ಕಾರ್ಯರೂಪಕ್ಕಿಳಿಸಲು ಹಣವಿಲ್ಲ. ಹೊರಗಿನವರ ಸಹಾಯ ಎಷ್ಟೇ ಬಂದರೂ ಇದು ಕೋಟಿಗಟ್ಟಳೆ ರುಪಾಯಿಯ ಬಾಬಾಗಿರುವುದರಿಂದ—ಒಂದೊಂದು ಆಣೆಕಟ್ಟನ್ನು ಪೂರ್ಣಗೊಳಿಸುವುದೂ ಕಷ್ಟ. ಕೋಸಿ, ಕೊಯಾನಾ, ಉಕಾಯಿ, ಚಂಬಲ, ಕೃಷ್ಣ-ಪೆನ್ನಾರ ಮುಂತಾದ ಯೋಜನೆಗಳಿಗೆ ಪ್ರಥಮ ಪ್ರಾಶಸ್ತ್ಯ ನೀಡಬೇಕೆಂದು ಸರಕಾರದ ಅಭಿಪ್ರಾಯ.

ಹೀಗೆಲ್ಲ ನದೀ ನೀರನ್ನು ಉಪಯೋಗಿಸುವುದು ವ್ಯವಸ್ಥಾಬದ್ಧವಾಗಿ ನಡೆಯಬೇಕಾದರೆ—ಅದರ ಕೂಲಂಕಷ ವಿವೇಚನೆಗೆ ಮೀಸಲಾಗಿರುವ ಒಂದು ಸಂಸ್ಥೆ ಅಗತ್ಯವೆನಿಸಿದೆ. ಈ ಉದ್ದೇಶದಿಂದ ಯೋಜನಾ ಆಯೋಗವು ವರ್ಷ ವರ್ಷವೂ ೪೦ ಲಕ್ಷ ರುಪಾಯಿಗಳನ್ನು ಇಂಥದೊಂದು ಸಂಸ್ಥೆಗಾಗಿ ವೆಚ್ಚಮಾಡುವುದುಚಿತ ಎಂದಿದೆ.

ವರ್ಷಕ್ಕೆ ೧೦೦ ಕೋಟಿ ರುಪಾಯಿ ಬಂಡವಾಳವನ್ನು ನುಂಗುವ ಈ ಯೋಜನೆಗಳಿಂದ (ಇಷ್ಟರವರೆಗೆ ಸಮಸ್ತ ಭಾರತದಲ್ಲಿ ಆದ ನೀರಾವರಿ ಯೋಜನೆಗಳಿಗೆ ತಗುಲಿದ ಒಟ್ಟು ವೆಚ್ಚ ಇಷ್ಟಿಲ್ಲ!) ರಾಷ್ಟ್ರ ಸಮೃದ್ಧಿಗೊಳ್ಳುವುದೆಂದು ನಂಬಲಾಗಿದೆ. ಕಳೆದ ವರ್ಷದಿಂದಲೇ ಮಯೂರಾಕ್ಷಿ ಯೋಜನೆಯಿಂದ ಒಂದು ಲಕ್ಷ ಎಕ್ರೆ ಜಮೀನು ಲಾಭಗೊಂಡಿದೆ. ಮುಂದಣ ವರ್ಷ ಇನ್ನೂ ಹೆಚ್ಚು ನಿರೀಕ್ಷಿಸಬಹುದು.

ಆಶ್ಚರ್ಯಕರ ಪರಿಣಾಮವನ್ನುಂಟುಮಾಡುವ
ಚಿರನೂತನ ಕಾದಂಬರಿ—
ಫಂಟಮಾರಾ
‘ಅವಮಾನದಿದಿರು, ಅನ್ಯಾಯದಿದಿರು, ಯಾರೂ ತಗ್ಗಿ ನಡೆಯಬಾರದು’ ಎಂಬ ನಿರ್ಮಲ ಮಾನವವಾದಿಯಾದ ಇಗ್ನೇಜಿಯೋ ಸಿಲೋನೇಯ ಪ್ರಖ್ಯಾತ ಇಟಾಲಿಯನ್ ಕಾದಂಬರಿಯ ಅನುವಾದ.
ಅನುವಾದಕರು: ಶ್ರೀ ಕು. ಶಿ. ಹರಿದಾಸ ಭಟ್ಟರು, ಎಂ. ಎ.
ಪ್ರಕಾಶಕರು. ಅಂತರಂಗ ಕಾರ್ಯಾಲಯ, ಉಡುಪಿ.
- ಕೆಲವು ಅಭಿಪ್ರಾಯಗಳು -
“ಈ ಶತಮಾನದ ಅತ್ಯಂತ ಮರ್ಮಸ್ಪರ್ಶಿ ಕಾದಂಬರಿಗಳಲ್ಲೊಂದು” —ಕರ್ಮವೀರ.
“ಅಂಥಹ ಹೆಚ್ಚಿನ ಲೇಖನಿಯನ್ನು ಕನ್ನಡದ ಶಾಯಿಯಲ್ಲಿ ಅದ್ದಿ ಶ್ರೀ. ಭಟ್ಟರು ಅನುವಾದವನ್ನು ಮೂಲಗ್ರಂಥಕ್ಕೆ ಚ್ಯುತಿ ಇಲ್ಲದಂತೆ ಮಾಡಿದ್ದಾರೆ.” —ಚಿತ್ರಗುಪ್ತ.
“ಮೂಲಗ್ರಂಥದ ವೈಶಿಷ್ಟ್ಯಗಳೆಲ್ಲ ಸಮರ್ಪಕವಾಗಿ ಕನ್ನಡಿಸಲ್ಪಟ್ಟಿರುವುದನ್ನು ನೋಡುವಾಗ ಅನುವಾದವು ಸರ್ವೋತ್ತಮವೆಂದು ಹೇಳಲು ಅಡ್ಡಿ ಇಲ್ಲ. ಅನುವಾದ ಮಾಡಿದ ಶ್ರೀ ಭಟ್ಟರೂ ಮಾಡಿಸಿದ ಪ್ರಕಾಶಕರೂ ಅಭಿನಂದನೀಯರು.” —ಇಂಡಿಯನ್ ಎಕ್ಸ್‌ಪ್ರೆಸ್.
ನೀವು ತುಂಬ ಕಾದಂಬರಿಗಳನ್ನು ಓದಿರಬಹುದು. ಆದರೆ ಇಂತಹ ಮರ್ಮಸ್ಪರ್ಶಿ ಕಾದಂಬರಿಯನ್ನು ಓದಿರಲಾರಿರಿ!
200 ಪುಟಗಳು! ಬೆಲೆ ರೂ. 2—0—0
ನವಭಾರತ ಪುಸ್ತಕ ಭಂಡಾರ ಉಡುಪಿ, ದ. ಕ

ತೃಪ್ತಿಕರವಾದ ವಸತಿ— ಹಿತಕರವಾದ ಊಟ— ರುಚಿಕರವಾದ ಉಪಾಹಾರ
ಇವುಗಳಿಗೆ
ಆದರ್ಶ ನಿಲಯವೆಂದರೆ
ವುಡ್ ಲೇಂಡ್ಸ್
ಉಡುಪಿ.
ಯಾತ್ರಿಕರಿಗೂ ಪ್ರಯಾಣಿಕರಿಗೂ
ಸರ್ವ ಅನುಕೂಲವಾಗುವಂತೆ
ನಗರದ ಕೇಂದ್ರ ಭಾಗದಲ್ಲಿದೆ.

ವಿನೋದಪ್ರಧಾನವಾಗಿರುವ
ನಾಟಕ
ರಂಗಭೂಮಿ
(ಎಸ್. ವೆಂಕಟರಾಜ)
- ನಡೆದ-ನಡೆಯುವ ವಿದ್ಯ-ಮಾನದ ಒಂದು ಪಡಿಯಚ್ಚು
- ಒಂದು ನಾಟಕವಾಡಲು ಸುಲಭದಲ್ಲಿ ಸಿಕ್ಕಿದ ಸಾಮಾನ್ಯ ಘಟನೆಯೊಂದರ ನೈಜ ಚಿತ್ರ
- ಆಕರ್ಷಕ ಪುಸ್ತಕ, ಬೆಲೆ 0 10 0

ನವಭಾರತ ಪುಸ್ತಕಭಂಡಾರ,
ಉಡುಪಿ.



Applauded as the BEST Rubber Stamp Makers all over India
CROWN RUBBER STAMP CO.
Mangalore
(ESTD. 1926)

[೬ನೇ ಪುಟದಿಂದ ಮುಂದುವರಿದುದು]

ಸೇರಿಕೊಂಡು, ಜನಹಿತ ಮಾಡುವುದು ಅವರಿಗೆ ಶಕ್ಯವಿತ್ತು. ಮಹಾತ್ಮಾ ಗಾಂಧೀಗೆ ಎಷ್ಟೋ ವೇಳೆ ಉಚಿತ ಸಲಹೆಗಳನ್ನು ಕೊಟ್ಟು, ನೆರವಾದ ವ್ಯಕ್ತಿ ಗೋಖಲೆ.

ಕರ್ಮಠರಾದ ಲಾಲ

"ಪಂಜಾಬ ಕೇಸರಿ" ಎಂದು ವಿಖ್ಯಾತರಾದ ಲಾಲಾ ಲಜಪತ ರಾಯರ ವ್ಯಕ್ತಿತ್ವವೂ ಅನುಪಮ. ತನ್ನದೆಲ್ಲವನ್ನೂ ಜನತೆಗೆ ಅರ್ಪಿಸಿದ ಕರ್ಮವೀರರು ಇವರು. ಉಗ್ರ ಪ್ರತಿಭಟನೆಯನ್ನು ತೋರುವುದರಲ್ಲಿ ಇವರದು ಎತ್ತಿದಕೈ. ದಾಕ್ಷಿಣ್ಯವೆಂಬುದಿಲ್ಲದಿದ್ದರೂ ವಿನಯ ಸಂಪನ್ನತೆ ಬಹಳವಿತ್ತು. ವಿದೇಶಗಳಲ್ಲಿ ಸಂಚರಿಸಿ, ಅಲ್ಲಿಯವರಿಗೆ ಭಾರತೀಯರ ಸಮಸ್ಯೆಗಳ ಸ್ಪಷ್ಟ ಕಲ್ಪನೆ ಮಾಡಿಸಲು ನೆರವಾಗಿದ್ದಾರೆ.

ಉಗ್ರಗಾಮಿಗಳಲ್ಲಿ ಬಂಗಾಳದ ಶ್ರೀ. ಚಿತ್ತರಂಜನ ದಾಸರೂ ಒಬ್ಬರು: ತಿಂಗಳಿಗೆ ಇವರು ಎಷ್ಟೋ ಸಾವಿರ ರೂಪಾಯಿಗಳಷ್ಟನ್ನು ವಕೀಲಿ ವೃತ್ತಿಯಿಂದ ಗಳಿಸುತ್ತಿದ್ದರಂತೆ. ಇದನ್ನು ದೇಶ ವಾತ್ಸಲ್ಯದಿಂದ ತೊರೆದುಬಿಟ್ಟು, ಸ್ವಾತಂತ್ರ್ಯದ ಚಳುವಳಿಗೆ ಶ್ರೀ ದಾಸರು ಧುಮುಕಿದರು. ರಾಜ್ಯಕ್ರಾಂತಿಯ ಅಭಿಯೋಗದಿಂದ ಅರವಿಂದ ಘೋಷ ಮೊದಲಾದವರ ಮೇಲೆ ಖಟ್ಲೆ ಹಾಕಿದಾಗ, ವಕಾಲತ್ತು ನಡೆಸಲು ಯಾರೂ ಮುಂಬರಲಿಲ್ಲ. ಅಂಥದರಲ್ಲಿ ದಾಸರು ಕೆಚ್ಚಿನಿಂದ ವಾದಿಸಲು ಒಪ್ಪಿದರು.

ಒಬ್ಬ ತತ್ವಜ್ಞಾನಿಯಾಗಿ ಕಾಣಿಸಿದ ಐರೋಪ್ಯ ಮಹಿಳೆ-ಆನಿಬೆಸೆಂಟರು ರಾಜಕೀಯ ಚಳುವಳಿಯ ಮುಖಂಡತ್ವವನ್ನು ವಹಿಸಿದುದು ಆಶ್ಚರ್ಯದ ಸಂಗತಿಯಾದರೂ, ನಿಜ. ಸ್ವರಾಜ್ಯ ಚಳುವಳಿಗೆ ಮೂರ್ತಸ್ವರೂಪ ಕೊಟ್ಟ ಕೀರ್ತಿ ಆನಿ ಬೆಸೆಂಟರಿಗಿದೆ

ಕವಿಪುಂಗವರ ಸೇವೆ

ಇವರಂತೆ ಭಾರತದ ಕೋಗಿಲೆಯು ಕ್ರಾಂತಿಯ ಪಲ್ಲವಿಯನ್ನು ಹಾಡಿದುದೂ ವಿಸ್ಮಯಕರ ಘಟನೆ: ಶ್ರೀಮತಿ ಸರೋಜಿನಿ ನಾಯುಡು ರಾಜಕೀಯಕ್ಕೆ ಕಲಾಸ್ವರೂಪವನ್ನು ಕೊಟ್ಟವರು. ಸ್ವಾತಂತ್ರ್ಯದ ಚಳುವಳಿಯಲ್ಲಿ ಸರೋಜಿನಿ ನಾಯುಡು ಹೆಜ್ಜೆ ಹೆಜ್ಜೆಗೂ ಸ್ಫೂರ್ತಿಯ ಚಿಲುಮೆ. ಶ್ಲೋಕ ಹಾಡಿ, ಹುರಿದುಂಬಿಸಿದ್ದಾರೆ. ಕಾಂಗ್ರೆಸಿನೊಡನೆ ಸಂಪರ್ಕ ಇಟ್ಟಿಲ್ಲದಿದ್ದರೂ-ದೇಶದ ನವ ಜಾಗರಣವನ್ನು ಕಂಡು, ಉಬ್ಬಿ, ನಲಿದು, ವಿಶ್ವ ಮಾನವ್ಯದ ಆದರ್ಶವನ್ನು ಎತ್ತಿ ಹಿಡಿಯುವ ಉಚ್ಚ ಪ್ರಯತ್ನಕ್ಕೆ ನೆರವಾದ ಇನ್ನೊಬ್ಬ ಕವಿಪುಂಗವ ರವೀಂದ್ರನಾಥ ಠಾಕೂರ.

ಗಾಂಧೀಜಿಯ ಆದರ್ಶ

ಆದರೆ ಇವರಲ್ಲಿ ಯಾರಿಗೂ ಮಹಾತ್ಮಾ ಗಾಂಧೀಯ ವ್ಯಕ್ತಿತ್ವವನ್ನು ತುಂಬಬಲ್ಲ ಚೈತನ್ಯವಿಲ್ಲ: ಗಾಂಧೀಜಿ ಅಸಹಕಾರ ಆಂದೋಲನವನ್ನು ಹೂಡಿದಾಗ, ಅವರಲ್ಲಿ ಅಪನಂಬುಗೆ ಇಟ್ಟ ಧುರೀಣರು ಇದ್ದರು. ಆದರೆ, ಕೊನೆಗೆ ಅಂಥವರು ಸೋಲನ್ನೊಪ್ಪಿಕೊಳ್ಳಬೇಕಾಯಿತು. ಸಂಪೂರ್ಣ ಅಹಿಂಸಾತ್ಮಕವಾದ ಸತ್ಯಾಗ್ರಹಶಾಸ್ತ್ರವನ್ನು ಹಿಡಿದು, ಗಾಂಧೀಜಿ, ರಾಷ್ಟ್ರದಲ್ಲಿ ಹೊಸ ಮನ್ವಂತರವನ್ನೇ ಪ್ರಾರಂಭಿಸಿದರು. ಒಗ್ಗಟ್ಟು ಮತ್ತು ಪರಸ್ಪರ ಶಾಂತಿ ಸೌಹಾರ್ದಗಳನ್ನು ಪ್ರಸ್ಥಾಪಿಸುವುದು ಗಾಂಧೀಜಿಯ ಬದುಕಿನ ಉಸಿರು. ಬೆಳಗಾವಿ ಅಧಿವೇಶನದ (೧೯೨೪) ಬಳಿಕ, ಅವರು ವಿಧಾಯಕ ಕಾರ್ಯಗಳ ಕಡೆಗೆ ವಿಶೇಷ ಗಮನವೀಯತೊಡಗಿದರು. ಕಾಂಗ್ರೆಸು ಸಂಸ್ಥೆಯ ನಾಲ್ಕಾಣೆ ಸದಸ್ಯತ್ವವಿಲ್ಲದಿದ್ದರೂ-ಕಾಂಗ್ರೆಸು ಮಾತ್ರ ಅವರ ಆದೇಶವನ್ನು ಅನುಸರಿಸಲು ತಪ್ಪಿದುದಾಗಲೀ-ಸಲಹೆ ಕೇಳದ ಸಂಗತಿಯಾಗಲೀ ಇರಲಿಲ್ಲ.

ಮಹಾತ್ಮರ ಶಿಷ್ಯಗಣ

ಗಾಂಧೀಜಿಯ ಮಾಯಾ ಮೋಡಿಗೆ ಸೆರೆಸಿಕ್ಕವರೆಷ್ಟೋ ಮಂದಿ—ಮೋತಿಲಾಲ ನೆಹರೂ ಇಂಥವರಲ್ಲಿ ಒಬ್ಬರು, ತನ್ನ ಸರ್ವಸ್ವವನ್ನು ಸ್ವಾತಂತ್ರ್ಯಾಂದೋಲನದ ನೆವದಲ್ಲಿ ರಾಷ್ಟ್ರ ಸಂಸ್ಥೆಗೆ ತ್ಯಾಗಮಾಡಿದ ಔದಾರ್ಯ ಚಿರಸ್ಮರಣೀಯ ಘಟನೆ. ಇವರ ಪುತ್ರ ಜವಾಹರಲಾಲ ಮೊದಲಿಗೆ ತಂದೆಯೊಡನೆ ವಕೀಲಿಯಲ್ಲಿ ಮಗ್ನರಾಗಿದ್ದರೂ- ಗಾಂಧೀಜಿಯ ಕರೆಗೆ ಓಗೊಡದಿರಲಾಗದೆ ಸಮರಾಂಗಣದಲ್ಲಿ ಧುಮುಕಿದರು ಅಂದಿನಿಂದ ಇಂದಿನವರೆಗಿನ ಅವರ ಜೀವನವನ್ನು ಏನೆಂದು ವರ್ಣಿಸ ಬಲ್ಲೆವು? ೧೯೨೯ರಲ್ಲಿ ಜವಾಹರಲಾಲರ ಅಧ್ಯಕ್ಷತೆಯಲ್ಲಿ ಸೇರಿದ ಲಾಹೋರ ಕಾಂಗ್ರೆಸ್ ಸಂಪೂರ್ಣ ಸ್ವರಾಜ್ಯದ ಗೊತ್ತುವಳಿಯನ್ನು ಸ್ವೀಕರಿಸಿತು. ಇಂಥದನ್ನು ರೂಢಿಸ ಬೇಕಾಗಿದೆ

ಅಸಹಕಾರ ಚಳುವಳಿಯ ಹಿಂದು ಮುಂದು ಗಾಂಧೀಜಿ ಮಾಡಿಕೊಂಡ ನಿಷ್ಠಾವಂತ ಶಿಷ್ಯರಲ್ಲಿ ಸರ್ದಾರ ಪಟೇಲ್ ಮತ್ತು ರಾಜೇಂದ್ರ ಪ್ರಸಾದರನ್ನು ಉಲ್ಲೇಖಿಸ ಬಹುದು. ಹಾಗೆಯೇ ಚಕ್ರವರ್ತಿ ರಾಜಗೋಪಾಲಾಚಾರ್ಯರೂ ಈ ಕಾಲದಿಂದ ಗಾಂಧಿಯ ಅನುಯಾಯಿಗಳಾಗಿ ದುಡಿಯ ತೊಡಗಿದರು

ಮುಸ್ಲಿಂ ಬಂಧುಗಳು

ಘನ ವಿದ್ವಾಂಸರಾದ ಮೌಲಾನಾ ಅಬುಲ್ ಕಲಾಂ ಆಜಾದರು ಹಿಂದೂ ಮುಸ್ಲಿಂ ಐಕ್ಯದ ಪ್ರತೀಕ ಎಲ್ಲಿಯೋ ಹುಟ್ಟಿ ಎಲ್ಲಿಯೋ ಬೆಳೆದ ಆಜಾದರು ಭಾರತದ ನಿಷ್ಠಾವಂತ ಸೇವಕ. ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷ ಪದವನ್ನು ಪ್ರಥಮತಃ ಅಲಂಕರಿಸಿದವರಲ್ಲಿ ಇಷ್ಟು ಕಿರಿಯರು ಯಾರೂ ಇಲ್ಲ ತಮ್ಮ ೩೫ನೇ ವಯಸ್ಸಿನಲ್ಲಿಯೇ ಈ ಸೌಭಾಗ್ಯವನ್ನವರು ಪಡೆದರು.

ಪ್ರಕೃತ ಪಾಕಿಸ್ಥಾನದ ಕಾರಾಗೃಹದಲ್ಲಿ ಕೊಳೆಯುತ್ತಿರುವ ಖಾನ್ ಅಬ್ದುಲ್ ಗಫಾರ್ ಖಾನರು ಗಡಿನಾಡ ಗಾಂಧಿ ಎಂದು ಖ್ಯಾತನಾಮರಾಗಿದ್ದಾರೆ. ಇವರು ಸ್ವಾತಂತ್ರ್ಯದ ಆಂದೋಲನದಲ್ಲಿ ಗಾಂಧೀಜಿಗೆ ಪೂರ್ಣ ಬೆಂಬಲಕೊಟ್ಟು ಸಹಕರಿಸಿದ್ದರು.

ವೀರ ಯೋಧರು

ಹಾಗೆಯೇ ಐ ಎನ್ ಎ. ಯಂಥ ವೀರ ಸೇನೆಯನ್ನು ಸಂಘಟಿಸಿ, ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಿದ ಸುಭಾಷ್ಚಂದ್ರ ಭೋಸರನ್ನು ಮರೆಯಲಾರೆವು ಅವರ ಶೌರ್ಯ, ಸಾಹಸಗಳಿಗೆ ಬೆರಳು ಕಚ್ಚಬೇಕು. ಗಾಂಧೀಜಿಯ ಆದೇಶವನ್ನು ಧಿಕ್ಕರಿಸಿ, ಪಟ್ಟಾಭಿ ಸೀತಾರಾಮಯ್ಯನವರ ಪ್ರತಿಸ್ಪರ್ಧಿಯಾಗಿ ನಿಂತ, ಅಧ್ಯಕ್ಷಸ್ಥಾನಕ್ಕೆ ೧೯೩೯ರಲ್ಲಿ ಆರಿಸಿಬಂದ ಈ ಪರಾಕ್ರಮಿಗೆ ಹೋರಾಟ ಬಹಳ ಪ್ರಿಯವಾಗಿತ್ತು

ಈ ಎಲ್ಲ ಹೋರಾಟಗಳಿಗೆ ಶಿಸ್ತು-ಸಂಯಮದ ಅಗತ್ಯವಿತ್ತೆಂದು ಬೇರೆ ಹೇಳಬೇಕಿಲ್ಲ. ಅಸಂಖ್ಯ ಸತ್ಯಾಗ್ರಹ ಸಮರಗಳೂ, ಆಂದೋಲನಗಳೂ ನಡೆಯುವಾಗ ಕಾಂಗ್ರೆಸಿನ ಘನತೆಯನ್ನೂ, ಚಳುವಳಿಯ ಅಹಿಂಸಾತ್ಮಕ ಸ್ವರೂಪವನ್ನೂ ಚ್ಯುತಿಯಿಲ್ಲದೆ ಕಾಯ್ದುಕೊಂಡು ಬರುವುದು ಗುರುತರ ಉತ್ತರದಾಯಿತ್ವದ ಕಾರ್ಯ. ಅಂಥದರಲ್ಲಿ "ಕಾಂಗ್ರೆಸು ಸೇವಾದಲ'ದಂಥ ಅತ್ಯುಚ್ಚ ಸಂಘಟನೆಗೆ ಕೈಹಚ್ಚಿದ ಸಾಹಸಿಗ ಕರ್ನಾಟಕದ ನಾ. ಸು. ಹರ್ಡೀಕರರು ಸ್ವರಾಜ್ಯ ಸ್ಥಾಪನಾನಂತರ ಅಸ್ತಿತ್ವದಲ್ಲಿ ಬಂದಿರುವ ಚುನಾಯಿತ ಪಾರ್ಲಿಮೆಂಟಿನ ಮೇಲ್ಮನೆಯ ಸದಸ್ಯರಾಗಿ ಇದೀಗ ಇವರ ಅವಿರೋಧ ಆಯ್ಕೆ ನಡೆದಿದೆ

ಸ್ತ್ರೀ ಪುರುಷ ಶಿಶುಗಳು ರೋಗದಿಂದ ನರಳಬೇಕಾಗಿಲ್ಲ'
ಅಸಂಖ್ಯಾತ ಜನರು ಗುಣಹೊಂದಿದ್ದಾರೆ'

ಸರ್ ಜೀವನ್ ಶಿಲಾಜಿತ್ ಲೇಹ್ಯ

KING OF TONIC
SILAJITH LATHYAM

ಶಿಲಾಜಿತ್ ಹಿಮಾಲಯದ ಔಷಧಿಗಳ ರಾಜ, ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ವೀರ್ಯಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲ ರೋಗಗಳಿಗೆ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರಕ್ತ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು
೪೮ ದಿನದ ಲೇಹ್ಯ ರೂ ೫/೪, ೨೪ ದಿನದ ಲೇಹ್ಯ ರೂ ೩೪
(ಪೋಸ್ಟೇಜು ಮಾಫಿ)

ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾಪು.

ಈ ಕೆಳಗೆ ಹೆಸರು ಕಾಣಿಸಿದ ಆಸಾಮಿಗಳು ಈ ಬೇಂಕಿನಿಂದ ಚಿನ್ನದಾಭರಣಗಳ ಆಧಾರದ ಮೇಲೆ ಪಡಕೊಂಡ ಈ ಕೆಳಗೆ ನಮೂದಿಸಿದ ಸಾಲದ ಅಸಲು ವ ಬಡ್ಡಿ ಇತ್ಯಾದಿಗಳನ್ನು ಬೇಂಕಿನ ಕ್ರಮಪ್ರಕಾರ ನೋಟೀಸು ವ ರಿಜಿಸ್ಟ್ರ ನೋಟೀಸು ಕೊಟ್ಟಾಗ್ಯೂ ಬಾಕಿ ಮಾಡಿಕೊಂಡಿರುವುದರಿಂದಲೂ ಕೆಲವರಿಗೆ ಕೊಟ್ಟ ನೋಟೀಸು ವ ರಿಜಿಸ್ಟ್ರ ನೋಟೀಸು ಕಾರಣಾಂತರದಿಂದ ವಾಪಾಸು ಬಂದಿರುವುದರಿಂದಲೂ, ಸದ್ರಿ ಸಾಲಗಳ ಸಂಬಂಧ ಬೇಂಕಿಗೆ ಸಲತಕ್ಕ ಸಂಪೂರ್ಣ ಐವೇಜುಗಳನ್ನು ಇದೇ ತಾರೀಕು 23-8-52 ನೇ ಶನಿವಾರದ ಒಳಗೆ ಸಲ್ಲಿಸದೆ ಇದ್ದಲ್ಲಿ, ಸದ್ರಿ ಸಾಲಗಳಲ್ಲಿ ಅಡವಿಟ್ಟ ಆಭರಣಗಳನ್ನು ಇದೇ ತಾರೀಕು 25-8 52ನೇ ಸೋಮವಾರ ಪೂರ್ವಾಹ್ನ ಘಂಟೆ 12ಕ್ಕೆ ಯಾ ಬೇಂಕಿಗೆ ಯುಕ್ತ ತೋರುವ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೇ ಈ ಬೇಂಕಿನ ಅಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು, ತಿಳಿದಿರಿ."

ತಾರೀಕು	ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಸಾಲದ ಮೊಬಲಗು ರೂ	ಅ.
29-12-49	355 49-50	ಮಾಧವ ಆಚಾರ್ಯ, ಕೃಷ್ಣ ಆಚಾರ್ಯರ ಮಗ, ಉಳಿಯಾರಗೋಳಿ, ಕಾಪು	20	8
9-10-50	18[illegible]1 50	ಬಿ ಜಗನ್ನಾಥ ರೈ, ಮಂಜಪ್ಪ ರೈಗಳ ಮಗ, C/o ಮಹಾಲಿಂಗೇಶ್ವರ ಟಾಕೀಸು ಕಾಪು	638	4
1[illegible]-7-51	70[illegible] 51	— Do —	595	4
28-5-52	[illegible]21 52	— Do —	25	4
12-3-51	217 51	ಇಮಾಮ್ ಹುಸೇನ್ ಸಾಹೇಬ, ಅಬ್ದುಲ್ ರಹಿಮಾನ್ ಸಾಹೇಬರ ಮಗ, ಕೋಟೆಬೆಟ್ಟು, ಉಚ್ಚಿಲ	51	4
21-5-51	402 51	— Do —	112	6
1-6-51	552 51	ಬಿ. ಪಿ ರಾಮಯ್ಯ, ಕೃಷ್ಣ ರಾಮಯ್ಯನವರ ಮಗ, ಉಪದೇಶಿ, ಪಾಂಗಾಳ ಗುಡ್ಡೆ	22	3
19-6-51	64[illegible] 51	ಯೋಗೇಂದ್ರಯ್ಯ, ರಾಘವಯ್ಯನವರ ಮಗ, ಉಳಿಯಾರಗೋಳಿ, ಕಾಪು	22	12
2[illegible]-6-51	675 51	ಗುಡ್ಡ ಮುಖಾರಿ, ಗುಜ್ಜ ಮುಖಾರಿಯ ಅಳಿಯ, ಮಳಬೂರು, ಪಾದೂರು ಪೋಸ್ಟು	22	9
11-8-51	946 51	ಸಯ್ಯದ್ ಮುರ್ತುಜ, ಸಯ್ಯದ್ ಇಬ್ರಾಹಿಮ್ ಸಾಹೇಬರ ಮಗ, ಮಲ್ಲಾರ ಪೋಸ್ಟು	11	7
22-10-51	1219 51	— Do —	117	5
22-[illegible]-51	103 51	ರಾಜಮ್ಮ ಶೆಡ್ತಿ, ಅಕ್ಕಯ್ಯ ಶೆಡ್ತಿಯವರ ಮಗಳು, ಬೆಳಪು ಕೆಳಮನೆ, ಉಚ್ಚಿಲ	22	13

The Vijaya Bank, Ltd., }
Kaup, 4—[illegible]—52 }
K. Sitharama Shetty.
ಏಜೆಂಟ್.

'ನವಯುಗ'ದ
ಬೆಳ್ತಂಗಡಿ ಏಜಂಟರು.
ಕೆ ಗೋಪಾಲಕೃಷ್ಣ ಶೆಟ್ಟಿ,
ನ್ಯೂಸ್ ಏಜೆಂಟ್, ಬಸ್‌ಸ್ಟ್ಯಾಂಡ್,
ಬೆಳ್ತಂಗಡಿ, ದ. ಕ.

ಮೂಲ್ಕಿ ಬೇಂಕ್.
ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K.

[ನಾಲ್ಕನೇ ಪುಟದಿಂದ ಮುಂದುವರಿದುದು]

ಸ್ವಾಗತಿಸಿದನೆಂದೂ, ಹೊಲಿಯೋದರನು ಅಂತಲಿಕಿತನೆಂಬ ರಾಜನ ರಾಯಭಾರಿಯಾಗಿದ್ದನೆಂದೂ ಕಂಡು ಬರುವುದು. ಹೊಲಿಯೋದರನು ತನ್ನನ್ನು ಪರಮ ಭಾಗವತನೆಂದು ಘೋಷಿಸಿ, ವಿದಿಶಾ ನಗರದಲ್ಲಿ ಗರುಡ ಧ್ವಜವನ್ನು ಸ್ಥಾಪಿಸಿದನು.

ಚೀನಾದೊಡನೆ

ಭಾರತೀಯ ರಾಯಭಾರಿ ಸಂಬಂಧವು ಕೇವಲ ರಾಜನೈತಿಕ ಮೈತ್ರಿಯೊಂದನ್ನೇ ಉದ್ದೇಶವಾಗಿಟ್ಟುಕೊಂಡಿರಲಿಲ್ಲ. ಸಾಂಸ್ಕೃತಿಕ ತಿಳುವಳಿಕೆಯನ್ನು ಹೆಚ್ಚಿಸುವುದೂ ಜ್ಞಾನ ಸಂವರ್ಧನೆಗೂ, ಧರ್ಮ ಪ್ರಚಾರಕ್ಕೂ ನೆರವಾಗುವುದೂ ಇದರೊಡನೆ ಸಮ್ಮಿಳಿತಗೊಂಡಿತ್ತು. ಇಂದಿಗೂ ಈ ಪದ್ಧತಿಯನ್ನು ನಾವು ಕಾಣಬಹುದಾಗಿದೆ ಅಮೇರಿಕನರಿಗಾಗಲೀ, ಬ್ರಿಟಿಷರಿಗಾಗಲಿ ಭಾರತದ ಪ್ರಕೃತ ಪರಿಸ್ಥಿತಿ ಮತ್ತು ವಿದ್ಯಮಾನಗಳ ಬಗ್ಗೆ ಯಥಾರ್ಥವಾದ ಪರಿಚಯ ಮಾಡಿಕೊಡುವ ಗುರುತರ ಹೊಣೆಗಾರಿಕೆ ರಾಯಭಾರಿಗಳಿಗೆ ಸೇರಿದೆ. ಹಿಂದಿನ ಕಾಲದಲ್ಲಿ ಚೀನದೊಡನೆ ತುಂಬ ಗೆಳೆತನವಿದ್ದಾಗ, ಇಲ್ಲಿಂದ ಬೌದ್ಧಧರ್ಮವು ಅಲ್ಲಿಯೆಲ್ಲ ಪಸರಿಸಿತು. ಭಾರತೀಯ ವಿದ್ವನ್ಮಂಡಳಿಗಳೆಷ್ಟೊ ಚೀನದಲ್ಲಿ ಸಂಚರಿಸಿ, ನಮ್ಮ ಸಂಸ್ಕೃತಿಯ ನಿಜಸ್ವರೂಪವನ್ನು ಚೀನೀಯರಿಗೆ ಮಾಡಿಸಿಕೊಟ್ಟವು. ಚೀನೀ ಸಮ್ರಾಜ ಹೋತಿ (ಕ್ರಿ.ಶ. ೮೯–೧೦೫)ಯ ಕಾಲದಲ್ಲಿ ಸರ್ವಪ್ರಥಮ ಭಾರತೀಯ ರಾಯಭಾರಿಯ ಸ್ವಾಗತ ಮಾಡಲಾಯಿತು. ಇದು ಮೊದಲ್ಗೊಂಡು ಎಷ್ಟೋ ಮಂದಿ ಚೀನಿಯಾತ್ರಿಕರು ಬೇರೆ ಬೇರೆ ಸಮಯ ಭಾರತಕ್ಕೆ ಬಂದರು. ಫಾಹಿಯಾನ, ಹ್ಯೂವೆನ್‌ತ್ಸೇಂಗ್, ಇತ್ಸಿಂಗ್ ಮುಂತಾದವರು ಇವರಲ್ಲಿ ಅಗ್ರಗಣ್ಯರು. ಬೌದ್ಧಮತ ಗ್ರಂಥಗಳನ್ನೆಷ್ಟೊ ಇವರು ಅಭ್ಯಾಸಿಸಿದರು. ಚೀನವೂ ಅರಸನ ಪ್ರಾರ್ಥನೆಯಂತೆ ಮಗಧರಾಜನು ಪಂಡಿತ ಪರಮಾರ್ಥನನ್ನು ತನ್ನ ರಾಯಭಾರಿಯಾಗಿ ಚೀನಕ್ಕೆ ಕಳಿಸಿಕೊಟ್ಟನು. ಅದರಂತೆ ಒಡಿಸಾದ ರಾಜ ಶುಭಾಕರನು ಕ್ರಿ.ಶ.೭೯೫ರಲ್ಲಿ ಸುಪ್ರಸಿದ್ಧ ಭಾರತೀಯ ಗ್ರಂಥ "ಗಂಡವ್ಯೂಹ"ದ ಒಂದು ಪ್ರತಿಯನ್ನು ಕೊಟ್ಟು ಚೀನಕ್ಕೆ ಒಬ್ಬ ರಾಯಭಾರಿಯನ್ನು ಕಳಿಸಿದ್ದನು

ಯೋಗ್ಯತೆಯ ಲಕ್ಷಣ

ಕನ್ನಡಿಗರೂ ಕಡಿಮೆಯವರಲ್ಲ: ಚಾಲುಕ್ಯರ ಪುಲಕೇಶಿಯ ಕಾಲದಲ್ಲಿ ವಿವಿಧ ರಾಜ್ಯಗಳೊಡನೆ ರಾಯಭಾರಿ ಸಂಬಂಧವಿತ್ತು. ಅಜಂತದ ಗುಹೆಗಳಲ್ಲಿ ಪುಲಕೇಶಿಯ ಆಸ್ಥಾನದಲ್ಲಿ ಪರ್ಶಿಯಾದ ಅರಸ ಖುಸ್ರೂವಿನ ರಾಯಭಾರಿಯನ್ನು ಸ್ವಾಗತಿಸುವ ರಮಣೀಯ ಚಿತ್ರವಿರುವುದನ್ನು ನಾವಿಂದು ಕಾಣಬಹುದು. ವಿಜಯನಗರದ ಅರಸರ ಕಾಲದಲ್ಲಿಯೂ ಪೋರ್ತುಗೀಸರು ಮುಂತಾದ ದೂರದ ವಿದೇಶೀಯರೊಡನೆ ರಾಜಕೀಯ ಸಂಬಂಧ ಏರ್ಪಟ್ಟಿತ್ತು. ರೋಮಿಗೂ ಭಾರತಕ್ಕೂ ಅತ್ಯಂತ ಪ್ರಾಚೀನ ಕಾಲದಿಂದಲೂ ಸ್ನೇಹ ಸಂಬಂಧವಿತ್ತು. ಸುಮಾತ್ರ, ಜಾವಾ, ಮುಂತಾದ ಪೂರ್ವ ಹಿಂದೀ ದ್ವೀಪಗಳಿಗೆ ಭಾರತೀಯ ಸಂಸ್ಕೃತಿ ಅಚ್ಚುಮೆಚ್ಚಾಗಿತ್ತು. ಮಗಧ ರಾಜದೇವ ಪಾಲನು ಸುಮಾತ್ರದ ರಾಜ ಬಲದೇವ ಪುತ್ರನ ರಾಯಭಾರಿಯನ್ನು ಸ್ವಾಗತಿಸಿ, ತುಂಬ ಆದರ ತೋರಿಸಿದ್ದ. ಈ ರಾಯಭಾರಿಯು ನಲಂದಾ ವಿಶ್ವವಿದ್ಯಾಲಯಕ್ಕೆ ಐದು ಹಳ್ಳಿಗಳ ದತ್ತಿಯನ್ನು ಬಿಟ್ಟಿದ್ದ.

ಸ್ವರಾಜ್ಯ ಪ್ರಾಪ್ತಿಯ ಬಳಿಕ, ನಮ್ಮ ರಾಯಭಾರಿಗಳ ಮೇಲೆ ಅತ್ಯಧಿಕ ಉತ್ತರದಾಯಿತ್ವ ಬಿದ್ದಿದೆ. ಭಾರತದ ಮಾನಮರ್ಯಾದೆಯ ಗಂಟನ್ನು ಅವರ ಕೈಗೆ ಕೊಡಲಾಗಿದೆ. ರಾಯಭಾರಿಗಳ ಕಾರ್ಯಕೌಶಲ, ಉತ್ಕಟವಾದ ಸ್ವದೇಶ ವಾತ್ಸಲ್ಯ, ರಾಷ್ಟ್ರಸೇವೆ, ಮೈತ್ರಿ ಭಾವ, ಧೈರ್ಯ ಮತ್ತು ಸಾಹಸ, ಕರ್ಪರ ಬುದ್ಧಿ, ವ್ಯವಹಾರ ನೈಪುಣ್ಯಗಳ ಮೇಲೆಯೇ ಎಲ್ಲವೂ ಆಧರಿಸಿ ನಿಂತಿದೆ. ಯುದ್ಧದ ಕಾರ್ಮೋಡಗಳು ವಿಶ್ವದ ದಿಗಂತದಲ್ಲಿ ದೃಷ್ಟಿಗೋಚರವಾಗುತ್ತಿರುವ ಈ ಸಂಧಿಕಾಲದಲ್ಲಿ-ಅಹಿಂಸೆಯ ಪ್ರಚಾರವನ್ನೂ, ಸ್ನೇಹದ ಸಂದೇಶವನ್ನೂ, ಶಾಂತಿಯ ಉಪದೇಶವನ್ನೂ ನೀಡಬಲ್ಲ ಏಕಮಾತ್ರ ರಾಷ್ಟ್ರವು ಭಾರತ ಎಂದೆಲ್ಲರೂ ಹೇಳುವರು. ನಮ್ಮ ರಾಯಭಾರಿಗಳು—ತಮ್ಮ ದಿಲ್ಲಿಯ ಸರಕಾರಕ್ಕಿಂತಲೂ ನೂರು ಪಾಲು ಹೆಚ್ಚು ಸಮರ್ಪಕವಾದ ರೀತಿಯಲ್ಲಿ ಈ ಘನೋದ್ದೇಶಕ್ಕೆ ನೆರವಾಗಬಲ್ಲರು.

[೫ನೇ ಪುಟದಿಂದ ಮುಂದುವರಿದುದು]

ತರಿದ್ದೇವೆ, ಹೆಚ್ಚಿನ ವಿದ್ಯಾಭ್ಯಾಸವಿಲ್ಲದೆ ವಿಜ್ಞಾನ ಯುಗದ ಈ ದಿನಗಳಲ್ಲಿ ವಿಶ್ವದ ಇತರ ರಾಷ್ಟ್ರಗಳೊಡನೆ ಎಷ್ಟಕ್ಕೂ ಸಪೋಟಿಗೆ ನಿಲ್ಲಲಾರದ ನಿಕೃಷ್ಟರಾಗಿದ್ದೇವೆ. ಇಂಥದರಲ್ಲಿ "ಸ್ವರಾಜ್ಯ" "ಸ್ವಾತಂತ್ರ್ಯ" ಎಂಬ ಶಬ್ದಗಳ ಮೇಲಿನ ವ್ಯಾಮೋಹ ಹೆಚ್ಚುಕಾಲ ಬಾಳಲಾರದು. ನಮ್ಮ ಹಸಿವು ಹಿಂಗಬೇಕು: ನಾವು ರೋಗ ಮುಕ್ತರಾಗಬೇಕು: ಅಜ್ಞಾನ ಕಳೆದು ಸುಜ್ಞಾನಾಮೃತಪಾನ ಮಾಡಬೇಕು. ಇದರ ಮಾರ್ಗವೇನು?

ಸಾಂಸ್ಕೃತಿಯ ದೃಷ್ಟಿಯಿಂದ ನಾವು ವಿಶ್ವಮಾನವ್ಯವನ್ನು ಎತ್ತಿಹಿಡಿಯುವ ಉಚ್ಚ ಪರಂಪರೆಯ ಸದಸ್ಯರು. ನಮ್ಮ ಪೂರ್ವಜರ "ಮಾಭಯ" (ಹೆದರಬೇಡ) ಎಂದು ಹಾಡಿದರು: ಆಧ್ಯಾತ್ಮ ಶಕ್ತಿಯಲ್ಲಿ ವಿಶ್ವಾಸವಿಟ್ಟು "ಸೋಹಂ" (ನಾನೇ ಅವನು) ಎಂದುಕೊಂಡರು. ಈ ಕೆಚ್ಚು ಈಗ ನಮಗೆ ಬಂದೀತೇ?

ಏಕಾಗದು ಎನ್ನುತ್ತೇವೆ: "ನಾಳೆಯೊಂದಿಹುದು" ಎಂಬ ಕವಿವಾಕ್ಯ ಸ್ವಾತಂತ್ರ್ಯೋತ್ಸವದ ಈ ಶುಭ ಮುಹೂರ್ತದಲ್ಲಿ ಸಸ್ಫೂರ್ತಿ ಕೊಡುತ್ತದೆ. ಹೊಲದಲ್ಲಿ ರೈತರು ಹಾಡಿನಲಿಯುವ ದಿನವನ್ನು ತಂದೇವು ಜಾನಪದ ನೃತ್ಯಗೀತಗಳಿಂದ ನಮ್ಮ ಹಳ್ಳಿಗಳು ಉಲ್ಲಾಸಗೊಂಡಾವು: ತಿಂಗಳು ಬೆಳಕಿನಲ್ಲಿ ಜನ ಬಯಲಾಟಗಳನ್ನು ನೋಡಿಯಾರು ವಿದೇಶಗಳ ಸುಖ ಕಂಡು ಹಲುಬದೆ, ಅಸೂಯಾಪರರಾಗದೆ—ನಮ್ಮ ಗೃಹದ್ವಾರಕ್ಕೆನೇ ಎಲ್ಲರನ್ನೂ ಸ್ವಾಗತಿಸುವ ವಾತಾವರಣ ಉಂಟಾದೀತು. ಹೊಸದರ್ಶನವನ್ನು ಕಂಡು, ಹೊಸ ಗೀತದ ಮಾಧುರ್ಯವಿದು, ತುಂಬು ಬಾಳ್ವೆನೀಗಿಯೇವು.

ಆ ಶುಭನವಯುಗ-ನಮ್ಮ ಗೋಸಂಪತ್ತು ಮಕ್ಕಳುಮರಿಗಳಂತೆಯೇ ಅತ್ಯಂತ ಪ್ರಿಯವಸ್ತುವಾಗುವುದು. ಬಾಲ ಅಡಿಸುತ್ತಿದ್ದಂತೆ, ಅವು ಆಳವಾಗಿ ಗಟ್ಟಿ ಉಳುವುವು. ಮಕ್ಕಳು ರಿಕೆಟ್ ಕಾಹಿಲೆಯಿಂದ ನರಳದೆ-ನಮ್ಮ ಕೆಲಸಗಳಲ್ಲಿ ಸಹಾಯಕರಾಗುವರು. ನಂದಿದ ದೀಪ ಮರಳಿ ನಂದಾದೀಪವಾಗುವುದು

ವಿಧಾಯಕ ಚಳುವಳಿ

ಭಾರತ ಸರಕಾರದ ಮುಂದಿರುವ ಪಂಚವಾರ್ಷಿಕ ಯೋಜನೆ ಇಂಥದೊಂದು ಚಳುವಳಿಗೆ ಸರ್ವಪ್ರಕಾರದ ಪ್ರೇರಣೆಯನ್ನು ಒದಗಿಸುತ್ತದೆ: ವಿದ್ಯುಚ್ಛಕ್ತಿ ಮತ್ತು ನೀರಾವರಿಗಾಗಿ ವಿವಿಧೋದ್ದೇಶದ ಯೋಜನೆಗಳು, ಮಲೇರಿಯಾ ಹಾಗೂ ನೆರೆಯ ನಿಯಂತ್ರಣ, ಉತ್ಪಾದನೆಯನ್ನು ಹೆಚ್ಚಿಸಲು ನೆರವಾಗುವ ಉದ್ಯಮಗಳು, ದಿನಬಳಕೆಯ ವಸ್ತುಗಳ ಉತ್ಪಾದನೆ, ಸಾರಿಗೆ ಸಂಪರ್ಕದ ಸೌಕರ್ಯ, ವಿದ್ಯಾಭ್ಯಾಸ-ಮತ್ತು ಜನಪದ ಅಭಿವೃದ್ಧಿ ಯೋಜನೆಗಳು-ಹೀಗೆ ವಿಸ್ತೃತ ಕಾರ್ಯಕ್ರಮವನ್ನು ಈ ಯೋಜನೆ ನಿರ್ದೇಶಿಸುತ್ತದೆ

ಜನಪ್ರಿಯ ಸರಕಾರವು ಕೆಲಸಮಾಡುವಾಗ-ಧೋರಣೆಗಳು ಮಾತ್ರ ಕೇಂದ್ರೀಕೃತವಿದೆಯೇ ಹೊರತು-ಕಾರ್ಯಪ್ರಣಾಳಿಯಲ್ಲ. ಅದು ಸರಕಾರದ ಸರ್ವೋಚ್ಚ ಅಧಿಕಾರಿಯಿಂದ-ಸಾಮಾನ್ಯ ನಾಗರಿಕನವರೆಗೆ ಇಳಿದು ಬರುತ್ತದೆ. ಅಲ್ಲಿ ಸಾಮಾನ್ಯ ಪ್ರಜೆಯು ತನ್ನ ಬದುಕನ್ನು ಹಸನಾಗಿಸಲು ಪ್ರತಿಯೊಂದೂ ರೀತಿಯಿಂದ ಪ್ರಯತ್ನಿಸಲು ಎಡೆಯಿದೆ-ಹೀಗೆ ಜನರು ಉನ್ನತ ಜೀವನವನ್ನು ಹೊಂದಿದರೆ, ಸರಕಾರದ ಜಿಜ್ಞಾಸೆ ಪೂರ್ಣ ಫಲಪ್ರದವಾಗುವುದು. ಅಧಿಕಾರಿ ವರ್ಗಗಳು ಜನಸೇವೆಯ ಉದ್ದೇಶದಿಂದ ದುಡಿಯಬೇಕೆಂದು ನಿರ್ದೇಶಿಸಲ್ಪಟ್ಟಿರುವುದರಿಂದ, ಪ್ರಜೆಗಳು ಸರಕಾರದ ಕೂಡೆ ಗೆಳೆತನದಿಂದಿರಬಹುದು. ಹಳ್ಳಿಗನು ಪೋಲೀಸು ಪಡೆಗೆ ಹೆದರುವುದಗತ್ಯವಿಲ್ಲ-ಅಥವಾ ಸರಕಾರಿ ಹೊಲದ ನಿರೀಕ್ಷಣೆ ಮಾಡಲು ರೈತ ಹಿಂಜರಿಯುವುದೂ ಬೇಡ.

ಕೃಷಿಗೆ ಪ್ರಥಮ ಪ್ರಾಶಸ್ತ್ಯ

ಅಧಿಕ ಆಹಾರ ಬೆಳೆಯುವ ಚಳುವಳಿ ನಮ್ಮ ಈಗಿನ ಅಗತ್ಯಗಳಲ್ಲಿ ಪ್ರಥಮ ಪ್ರಾಶಸ್ತ್ಯ ಪಡೆಯುತ್ತದೆ: ವರ್ಷಕ್ಕೆ ಮುನ್ನೂರು ಕೋಟಿ ರುಪಾಯಿಯಷ್ಟನ್ನು ನಾವು ವಿದೇಶಗಳಿಂದ ಆಯಾತ ಮಾಡಿದ ಆಹಾರದ ಬೆಲೆಯೆಂದು ಕೊಡುತ್ತಿದ್ದೇವೆ. ಇದನ್ನು ಉಳಿಸಲು ಶಕ್ತರಾದರೆ—ಉದ್ಯೋಗಕ್ಷೇತ್ರವನ್ನು ಬಹಳಷ್ಟು ವಿಸ್ತರಿಸಿ, ಉಚ್ಚಮಟ್ಟದ ಜೀವನ ನಿರ್ವಾಹಕ್ಕೆ ಬೇಕೆನಿಸಿದ ಸಾಧನ ಸಲಕರಣೆಗಳನ್ನು ಉತ್ಪಾದಿಸಬಹುದು.

ಆಹಾರವು ಮೂಲಭೂತ ಅವಶ್ಯಕತೆ: ನಮ್ಮ ದೇಶದಲ್ಲಿ ಆರ್ಥಿಕ ನೆಲಗಟ್ಟು ಭದ್ರವಾಗಬೇಕಾದರೆ, ಕೃಷಿಯ ಪ್ರಯತ್ನದಲ್ಲಿ ಸಾಮಂಜಸ್ಯ ನೆಲೆಗೊಳ್ಳಬೇಕು. ಇದನ್ನು ಅಮೇರಿಕದಂಥ ಸಮೃದ್ಧಿಯ ರಾಷ್ಟ್ರಗಳಿಗೂ ಅನ್ವಯಿಸಬಲ್ಲೆವು. ಕೃಷಿಯನ್ನು ತುಳಿದು, ಕೈಗಾರಿಕೆ ಬದುಕುವುದಿಲ್ಲ:-ಕೃಷಿಯಿಂದ ಹೊಟ್ಟೆಯ ತೃಪ್ತಿ ಬಗೆಹರಿಯುವುದಷ್ಟೆ ಅಲ್ಲ-ಕೈಗಾರಿಕೆಗೆ ಕಚ್ಚಾ ವಸ್ತುಗಳ ಪೂರೈಕೆಯೂ ನಡೆಯುತ್ತದಷ್ಟೆ!

ಇದಕ್ಕೆ ತುಂಬ ಪ್ರಯಾಸ ಪಡಬೇಕು—ಮಾಯಾಜಾಲದಿಂದಾಗಲೀ, ನಾಸಿಕದ ಸರಕಾರಿ ಮುದ್ರಣಾಲಯದಲ್ಲಿ ನೋಟು ಮುದ್ರಿಸುವುದರಿಂದಾಗಲೀ-ಅನ್ನ ಬೆ ಯುವುದಿಲ್ಲ. ಅದಕ್ಕೆ ಮೈಮುರಿದು, ಬೆ ರಿಳಿಸಿ, ಹೊಲದಲ್ಲಿ ದುಡಿಯಬೇಕು. ನಮ್ಮ ಪ್ರಾಚೀನ ವೈಭವದ ಘನತೆ ಉಳಿ ಬೇಕಾದರೆ-ಇನ್ನು ಕೆಲವು ತಲೆಮಾರು ಳ ವರೆಗೆ ನಾವು ಬೆವರಿಳಿಸುವುದಗತ್ಯ. ಹರೂ ಹಲವು ವರ್ಷಗಳ ಹಿಂದೆ ಬರೆ "ಅವಿರತ ದುಡಿಮೆಗೆ ಭಾರತೀಯರು ದ್ಧರು"—ಎಂಬ ಮಾತು ಸತ್ಯ. ಸ್ವಾತಂತ್ರ್ಯದ ಉತ್ಸಾಹದಲ್ಲಿ ಸಮೃದ್ಧಿಯ ಪ್ರ ಜ್ಞೆಯನ್ನು ಮರೆಯದೆ ಪೂರೈಸೋಣ!

ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು. ದ. ಕ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲವನ್ನು ಮರು ಪಾವತಿ ಮಾಡುವರೆ ರಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ಅಸ್ಲು-ವ-ಬಡ್ಡಿ ಯಾವುದನ್ನೂ ಈ ತನಕವೂ ಕೊಡದೆ ಬಾಕಿಮಾಡಿಕೊಂಡಿರುವುದರಿಂದ, ಸದ್ರಿಯವರು ನಮ್ಮ ಬೇಂಕಿನಲ್ಲಿ ಈಡು ಇಟ್ಟ ನಗಗಳನ್ನು ಇದೇ ಅಗೋಸ್ತು ತಿಂಗಳ ತಾ 22ನೇ ಶುಕ್ರವಾರ ಅಪರಾಹ್ನ ಗಂಟೆ 2-0ಕ್ಕೆ ಅಥವಾ-ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬಹಿರಂಗವಾಗಿ ಬೇಂಕಿನ ವಠಾರದಲ್ಲಿ ಹರಾಜು ಮಾಡಲಾದೀತು, ತಿಳಿದಿರಲಿ.

ಸಾಲದ ಜಂಜ್ರಾ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು	
		ರೂ.	ಆ.
117/50	ಶ್ರೀ ದಾಸನಾಡಿ ಮುತ್ತಯ್ಯ ಸೆಟ್ಟಿ, ಮಾಲಿಂಗ ಸೆಟ್ಟರ ಅಳಿಯ, ಶಿರೂರು	17	12
419/50	ಶ್ರೀ. ಜಡ್ಕಲ್ ವಾಮನ ರಾವ್, ಜನರಲ್ ಮರ್ಚಂಟ್ ಕಂಬದಕೋಣೆ	323	8
434/50	ಶ್ರೀ. ಹೋಬಳಿದಾರ ಮಂಜು ಸೇರುಗಾರ, ನಾರಾಯಣ ಸೇರುಗಾರರ ಮಗ, ವ್ಯಾಪಾರಿ ಪಡುವರಿ	104	3
1008/50	—do—	50	5
1051/50	ಶ್ರೀ ಗೋವಿಂದ ಸೆಟ್ಟಿ, ಕೃಷ್ಣ ಸೆಟ್ಟರ ಅಳಿಯ, ಕೃಷ್ಣ ಸೆಟ್ಟರ ಮನೆ, ನೆಲ್ಯಾಡಿ ತಗ್ಗರ್ಸೆ ಗ್ರಾಮ ಬೈಂದೂರು	66	8
1088/50	ಶ್ರೀ ದೊಂಡಿ ಸುಬ್ರಾಯ ಸೇಟ್, ಅಣ್ಣಪ್ಪ ಸೇಟರ ಮಗ, ಸೊನಗಾರ ಕೇರಿ, ಬೈಂದೂರು.	45	0
1182/50	ಶ್ರೀ. ಯು. ಮಂಜಯ್ಯ ಸೆಟ್ಟಿ, ವೀರಣ್ಣ ಸೆಟ್ಟರ ಅಳಿಯ ಮಾಡ್ಯ ಸೆಟ್ಟರ ಮನೆ, ಉಪ್ಪುಂದ.	72	4
1517/50	ಶ್ರೀ. ಕಿಯಾರ ನರಸಿಂಹ ಸೆಟ್ಟಿ, ಕಳವಾಡಿ ವೆಂಕಪ್ಪ ಸೆಟ್ಟರ ಮಗ, ಬೈಂದೂರು	27	1
407/51	ಶ್ರೀ ಜ. ಶೇಕ್, ದಾವುದ್ ಹಸನ್ ಸಾಹೇಬ್, ಫಕೀರ್ ಸಾಹೇಬರ ಮಗ, ವ್ಯಾಪಾರಿ ಶಿರೂರು	709	11
409/51	—do—	177	11
4/52	—do—	271	11
985/51	ಶ್ರೀ ಪೊನ್ನಯ್ಯನ ಮಂಜುನಾಥ ಸೇರುಗಾರ, ಅಣ್ಣಪ್ಪ ಸೇರುಗಾರರ ಮಗ, ಪಡುವರಿ	14	4
1109/51	ಶ್ರೀ ಸುಬ್ಬಯ್ಯ ಸೆಟ್ಟಿ, ಮುರ್ಡೇಶ್ವರ ನಾಗಪ್ಪ ಸೆಟ್ಟರ ಅಳಿಯ, ಮುರ್ಡೇಶ್ವರ (N K.)	96	12
1211/51	ಶ್ರೀ. ಹೋಬ್ಳಿದಾರ ನಾರಾಯಣ ಸೇರುಗಾರ, ಮಂಜುನಾಥ ಸೇರುಗಾರರ ಮಗ, ವ್ಯಾಪಾರಿ ಬೈಂದೂರು	50	0
989/51	ಶ್ರೀ. ನರಸಿಂಹ ಬಿಲ್ಲವ, [illegible], ಪೊಡ್ಡಮನೆ, ಉಪ್ಪುಂದ	39	14
1217/51	ಶ್ರೀ. ಯು. ವಾಸುದೇವ ಸೇಟ್, ಪುಟ್ಟಯ್ಯ ಸೇಟರ ಮಗ, ಉಪ್ಪುಂದ	8	8
1232/51	ಶ್ರೀ. ಅಣ್ಣಪ್ಪ ಗುಣಿಗ, ಮಂಜನ ಮಗ, ಬಂಕೇಶ್ವರ, ಬೈಂದೂರು	15	15

ಬೈಂದೂರು,
8—8—1952

ಎಚ್. ರಾಜೀವ ಸೆಟ್ಟಿ,
ಏಜಂಟ್,



ಕನ್ನಡಿಗನ ಕನಸು ಮನಸು

ಯು. ನಾ. ಉಡುಪ, ವಿದ್ವಾನ್, ಐರೋಡಿ

ಕರ್ನಾಟಕದ ಹಳ್ಳಿಗಳೆಂದರೆ ಭಾರತದ ಸಮಗ್ರ ಸಂಪತ್ತಿನ ಮತ್ತು ಸೌಂದರ್ಯದ ಟಿಪ್ಪಣಿಯೋ— ವ್ಯಾಖ್ಯಾನವೊ— ಆಗಿವೆ, ಇಲ್ಲಿ ಕಾಶ್ಮೀರವನ್ನು ತನ್ನ ಚೆಲುವಿನ ಚಿಲುಮೆಗಳಿಂದ ನಗುವ ಹಳ್ಳಿಗಳು ಬೇಕೆ? ಇದಕ್ಕಾಗಿ ಉತ್ತರ ದಕ್ಷಿಣ ಕನ್ನಡಗಳ ಪೂರ್ವದಲ್ಲಿ ಹಬ್ಬಿದ ಸಹ್ಯಾದ್ರಿಯ ಅಂಚಿನಲ್ಲಿ ಸಂಚರಿಸಬೇಕು. ಅಲ್ಲಿ ಪ್ರಕೃತಿ ಸೌಂದರ್ಯವು ಹೇಗೆ ಅಗ್ಗವಾಗಿ ಚೆಲ್ಲಿದೆಯೆಂಬುದನ್ನು ಕಾಣಬಹುದು. ಹಿಮಾಲಯದ ನಡುವೆ ಚದರಿಬಿದ್ದ ವಿಸ್ತಾರವಾದ ಜಲ ಸಂಗ್ರಹದ ಹಳ್ಳಿಗಳನ್ನು ಇಲ್ಲಿ ನೋಡಬೇಕೆ? ಇದಕ್ಕಾಗಿ ಮಲೆನಾಡಿಗೆ ಹೋಗಬೇಕು, ಅಲ್ಲಿ ತುರಂಗ ತರಂಗ ನರ್ತನದ ಕಾಳಗವೆಸಲು ಹಳ್ಳಿಗಳನ್ನು ಇಡೀ ವರ್ಷ ಹಾಸು ಹೊಕ್ಕಾಗಿ ಹಾಸಿರುವುದನ್ನು ಕಾಣಬಹುದು. ಖನಿಜ ಕೈಗಾರಿಕೆ ಶಾಲೆಗಳನ್ನವಲೋಕಿಸಬೇಕೆ? ಕೋಲಾರ ಭದ್ರಾವತಿಗಳಲ್ಲಿ ಸುತ್ತಾಡಬೇಕು. ಅಲ್ಲಿ ಭವಿಷ್ಯ ಕರ್ನಾಟಕದ ಸುವರ್ಣ ಸ್ವಪ್ನಗಳ ಕಿರಿವನಿಗಳಿವೆ. ವಿಪುಲ ವಿಶಾಲಕೃಷೀ ವಲಯಗಳಿಗಂತೂ ನಮ್ಮಲ್ಲಿ ಕಡಿಮೆ ಇಲ್ಲ. ಪೆದ್ದೂರಿ, ತುಂಗಭದ್ರೆ, ಕಾವೇರಿಗಳು— ಇವುಗಳಿಗೆ ಜಲಪಾನ ಮಾಡಿಸುತ್ತಾ ಅನಂತ ಕಾಲದಿಂದ ಸಾಗಿವೆ; ಇಲ್ಲಿಯ ಹೊಲಗಳು ಹತ್ತಿ, ಬತ್ತ, ಜೋಳ, ರಾಗಿ ಮೊದಲಾದ ಆಹಾರ ವಸ್ತುಗಳನ್ನು ಅಧಿಕವಾಗಿ ಬೆಳೆಯುತ್ತಿವೆ; ಇನ್ನು ಇಲ್ಲಿಯ ಕೆಲ ವೃಕ್ಷಗಳಿಗೆ ನೀರಸ ಫಲಗಳನ್ನು ಬಿಟ್ಟು ಗೊತ್ತೇ ಇಲ್ಲ. ಸುಮ ರಾಣಿಯಾದ ಮಲ್ಲಿಗೆಯು ಈ ನಾಡಿನಲ್ಲೇ ತನ್ನ ಅಜರಾಮರವಾದ ಯಶಸ್ಸನ್ನು ಬೆಳಗಿತು. ಶ್ರೀಗಂಧ ವೃಕ್ಷಗಳಂತೂ ಕರ್ನಾಟಕದಲ್ಲೇ ವಿಶೇಷ ಪಕ್ಷಪಾತತೆಯುಳ್ಳವುಗಳಾಗಿವೆ, ಹೆಚ್ಚೇಕೆ! ಇಲ್ಲಿ ನೀಲಗಿರಿಯಂಥಾ ತಂಪು ಹವೆಯ ಪ್ರದೇಶವಿದೆ, ಬಳ್ಳಾರಿಯಂಥಾ ಬೇಸಗೆಯ ಸುಡುವ ಪ್ರಾಂತಗಳಿವೆ, ಅಲ್ಲದೆ ಇದಕ್ಕೆ ಭದ್ರವಾದ ಇತಿಹಾಸವಿದೆ; ಹತ್ತು ಶತಮಾನಕ್ಕಿಂತಲೂ ಹಿಂದಿನ ಸುಂದರ ಸಾಹಿತ್ಯವಿದೆ; ಶಿಲ್ಪದಲ್ಲಿ ಕನ್ನಡಿಗರದ್ದೇ ಒಂದು ಮಾದರಿ; ಸಂಗೀತದಲ್ಲಿ ಕರ್ನಾಟಕದ್ದೇ ಒಂದು ಮಟ್ಟು ಇದೆ. ಹಾಗಾದರೆ ಇಂದಿನ ಕರ್ನಾಟಕವು ಭೂಸ್ವರ್ಗವೆ? ಇಲ್ಲಿ ಏತರ ಅಭಾವ? ಜನಜೀವನದ ಅಧಃಪತನವೇಕೆ? ಇಂಥಾ ಪ್ರಶ್ನೆಗಳೆಲ್ಲಾ ಅಚ್ಚ ಕನ್ನಡಿಗನ ಬಗೆಯ ಸಂತೆಯಲ್ಲಿ ಸಾಗಿ ಹೋಗುವುದು ಸ್ವಾಭಾವಿಕ.

ಕನ್ನಡ ನಾಡಿನ ಹಳ್ಳಿಹಳ್ಳಿಗಳು ಪ್ರಕೃತಿಯ ತೊಟ್ಟಿಲಲ್ಲಿ ನಲಿದಾಡುತ್ತಿದ್ದರೂ ಅದಕ್ಕೆ ಬಾಲಗ್ರಹ— ಜಕ್ಕಿಣಿ ಕಾಟದಂಥಾ ಕಿರುಕುಳಗಳು ಕಾಲಗತಿಯಿಂದ ಪ್ರಾಪ್ತವಾಗಿವೆ. ಇಡಿಯ ಒಂದೂವರೆ ಶತಮಾನದ ಆಂಗ್ಲರ ಆಳಿಕೆಯಿಂದ ಚೇತರಿಸುವ ಬದಲು ನಿಟ್ಟುಸಿರು ಬಿಡತೊಡಗಿತು! ನಾಯಕರು ಈ ಅಲ್ಪ ಕಾಲದಲ್ಲಿ ಕಲಿತುದು ಕೇವಲ ನೀಚ ಸ್ವಾರ್ಥ; ಮರೆತುದು ಮಾನವತ್ವದಲ್ಲಿ ಜೀವಾಳನ ಮಾಡಬೇಕಾದ ಸ್ವದೇಶಾಭಿಮಾನ. ಇವರು ಮನುಷ್ಯನ ಭಾರ ಹಗುರವನ್ನು ಗುಣದಲ್ಲಿ ಅಳೆಯುವುದನ್ನು ಮರೆತು, ಹಣದ ತಕ್ಕಡಿಯಿಂದ ತೂಗಲು ಕಲಿತರು; ಭಾಷಾಭಿಮಾನವನ್ನು ಸಾಧ್ಯವಾದಷ್ಟು ಮರೆತರು. ಆಂಗ್ಲ ಭಾಷೆಯನ್ನೇ— ಮತ್ತೊಂದನ್ನೋ— ಎತ್ತಿ ಹಿಡಿದು ಅದನ್ನೇ ತಮ್ಮ ಉಸಿರಾಟವಾಗಿ ಮಾಡಿಕೊಂಡು ಇದರಿಂದಲೇ ತಮಗೆ ಮೋಕ್ಷವಾಗಬೇಕೆಂಬುದನ್ನು ಕಲಿತರು; ಕನ್ನಡವು ಇದಿನವರೆಗೆ ಕಂಡು ಕೇಳರಿದ ಒಂದು ತರದ ಗುಲಾಮರ ಸಂಸ್ಥೆಯು ಇದರಿಂದ ನಿರ್ಮಿಟ್ಟಿತ್ತೆಂದು ತಿಳಿಯದೆ ಹೋದರು; ಕನ್ನಡ ಸಾಹಿತ್ಯದಲ್ಲಿ ಏನೇನಿದೆ ಎಂಬುದನ್ನು ತಿಳಿಯದೆ ಎಂಜಲವನ್ನೇ ಪರಮ ಪ್ರಸಾದವೆಂದು ತಿಳಿದರು. ಇದರಿಂದಲೇ— ಇಂಥವರಿಂದಲೇ— ಅಖಂಡ ಕರ್ನಾಟಕವು ಹಲವು ಚೂರುಗಳಾಗಿ ಒಡೆಯಿತು. ಕನ್ನಡಿಗರಿಗೆ ಇದರಿಂದಲೂ ಅತೃಪ್ತಿ ಉದಯಿಸಲಿಲ್ಲ' ಲಾರ್ಡ್ ಕರ್ಜನನ ಕಾಲದಲ್ಲಿ ಬಂಗಾಳವು ಎರಡು ಚೂರಾದುದಕ್ಕೆ ಬಂಗಾಳಿಗಳು ಆಕಾಶ ಪಾತಾಳವನ್ನೊಂದು ಮಾಡುವ ಹುಯಿಲನ್ನೆಬ್ಬಿಸಿದರು ಕನ್ನಡಿಗರು ಹಲವು ಚೂರಾದ ನಾಡನ್ನು ಕಂಡೂ ಸುಷುಪ್ತಿಗೆಯ್ದು ಮೋಜೆ ಮಲಗುತ್ತಿದ್ದಾರೆ; [illegible] ಆಲಸೆಯ ಕಳಶವನ್ನು ಶೋಧಿಸುತ್ತಿದ್ದಾರೆ; ಉದರ ನಿಮಿತ್ತಂ ಬಹುಕೃತ ವೇಷ' ವೆಂದು ಹೊಟ್ಟೆಯನ್ನೇ ನೋಡುತ್ತಿದ್ದಾರೆ! ನಮ್ಮ ದೌರ್ಬಲ್ಯವನ್ನು ಕಂಡೇ ಕೇಳಪ್ಪನವರು ಗೋಕರ್ಣದವರೆಗೆ ಮಲಬಾರು ಪ್ರಾಂತವಾಗಬೇಕು ಎನ್ನುತ್ತಿದ್ದಾರೆ' ಆದರೆ ಕನ್ನಡ ನಾಡಿನಿಂದಲೇ ಹೊಟ್ಟೆ ಹೊರೆದುಕೊಳ್ಳುವ ಮಲೆಯಾಳಿಗಳ ಕರ್ನಾಟಕ ಕ್ಷೇತ್ರದಲ್ಲೇ ಸುತ್ತಾಡುವ ಮಲೆಯಾಳಿಗಳ ಪ್ರಾಂತವು ಕರ್ನಾಟಕಕ್ಕೇ ಸೇರುವುದರಿಂದ ಅವರಿಗೆ ಸ್ವಂತ ಮನೆಯಲ್ಲೇ ಜೀವನ ನಡೆಸಿದಂತಾಗುತ್ತದೆಂದು ಆ ಮಹಾನುಭಾವರಿಗೆ ತಿಳಿಯದಿದ್ದುದು ಆಶ್ಚರ್ಯ. ತೆಂಗಿನ ಕಾಯಿ ವಿಶೇಷ ಬೆಳೆಯುವ ಮಲಬಾರು ಅದರ ಸೇವನೆಯ ಪರಿಣಾಮದಿಂದ ಏನೆಲ್ಲಾ ಅಂದೀತು- ಏನೆಲ್ಲಾ ಅನ್ನಲಾರದು- ಇವೆಲ್ಲವನ್ನೂ ಹೇಳುವುದು ಕಷ್ಟ, ಕನ್ನಡಿಗರು ಇವನ್ನೆಲ್ಲಾ ಕಂಡು ಕೇಳಿ ಸುಮ್ಮನಾಗಿ ನಿದ್ರಿಸುತ್ತಿದ್ದಾರೆ! ಕನ್ನಡಿಗರೇ' ನೀವೂ ಮನುಷ್ಯರಲ್ಲವೆ? ಕರ್ನಾಟಕ ಮಾತೆಯು ನಮ್ಮನ್ನು 2ಕಾಲಿನ ಪ್ರಾಣಿಗಳಾಗಿ ಹೆತ್ತಳೇನು? ಈ ಭಾರತದಲ್ಲಿ ನಿಮಗೆ ಮಾತ್ರ ಲಜ್ಜೆ, ಅಭಿಮಾನ, ಸ್ವತಂತ್ರ, ಪರಾಕ್ರಮಗಳಿಲ್ಲವೆಂದು ತೋರುತ್ತದೆ. ಒಂದೆಡೆಯಲ್ಲಿ ತಮಿಳರು, ಮತ್ತೊಂದು ಕಡೆಯಲ್ಲಿ ತೆಲುಗರು, ಇನ್ನೊಂದು ಬದಿಯಲ್ಲಿ ಮಹಾರಾಷ್ಟ್ರರು, ಮತ್ತೊಂದು ಸ್ಥಳದಲ್ಲಿ ಮಲೆಯಾಳಿಗಳು ತಮ್ಮ ಅಸ್ತಿತ್ವಕ್ಕಾಗಿ ಹೋರಾಟ ನಡೆಸುತ್ತಿದ್ದರೆ ಕನ್ನಡಿಗರಲ್ಲಿ ಹಲವರಿಗೆ ಈ ಏಕೀಕರಣದ ಅರ್ಥ- ಪ್ರಯೋಜನ ಇನ್ನೂ ತಿಳಿದಿಲ್ಲ!

ನಾವು ನಮ್ಮ ನಾಡಿನ ಹಳ್ಳಿಗಳಲ್ಲಿ ಸುತ್ತಾಡುವಾಗ ನಮ್ಮ ಕಣ್ಣಿಗೆ ಇಂದು ಎರಡು ವಿಧದ ದೃಶ್ಯಗಳು ಬೀಳುತ್ತಿವೆ. ಒಂದರಲ್ಲಿ, ಹಟ್ಟಿನ ಶ್ರೀಮಂತವರ್ಗವು ಅಕ್ಕಿಯ ಧಾರಣೆ ಇಳಿಮೊಗವಾಗುತ್ತಿರುವುದರಿಂದ ಹೊಟ್ಟೆ ಹಿಸುಕಿಕೊಳ್ಳುತ್ತಿರುವುದು, ಇನ್ನೊಂದರಲ್ಲಿ ಬಡ ಜನತೆಯು ದೈವದತ್ತವಾದ ಸಮಸ್ತ ಶಕ್ತಿಗಳನ್ನೂ ತನ್ನ ಸಂಸಾರ ಪೋಷಣೆಗೇ ವೆಚ್ಚ ಮಾಡುತ್ತಿರುವುದು ಕಂಡುಬರುತ್ತಿದೆ. ಈ ವಿಶಾಲವಾದ ಬಡ ಜನತೆಗೆ ಸಹಿಸಲಸದಳವಾದ ಸಂಸಾರ ಬೇಗೆಯಿಂದ ಅಂತರ್ಯದಲ್ಲೇ ವಿದ್ಯೆ ಬೇಕಾಗಿಲ್ಲ, ಜ್ಞಾನ ಹೊಟ್ಟೆ ತುಂಬಿಸುವುದೇ ಎಂದು ಇವರು ಪ್ರಸಿದ್ಧವಾಗಿ ಉಪಹಾಸ ಮಾಡುತ್ತಾರೆ. ಸರಕಾರಕ್ಕೆ ದೇಶದ ನೆಮ್ಮದಿಯ ಸ್ಥಿರಮಾರ್ಗವು ಹೊಳೆಯದ' ಹಳ್ಳಿಗಳ ಉದ್ಧಾರವೇ ಬೇಕೆನಿಸಿದ್ದು [illegible] ಹಲವು ಕಾಮಗಾರಿಗಳನ್ನು ಕೈಗೊಂಡಿದೆ. ಆದರೆ ವಿದ್ಯೆಗೆ ಆಂಗ್ಲರಂತೆಯೇ ಪ್ರಾಧಾನ್ಯವನ್ನು ನೀಡುವುದನ್ನು ಬಿಟ್ಟು; ಹಳ್ಳಿಗರಿಗೆ ವಿದ್ಯೆ ಇಲ್ಲದುದರಿಂದ ಸರಕಾರದ ಮಹಾ ಯೋಜನೆಗಳೂ ಅವರಿಗೆ ಅರ್ಥವಾಗುತ್ತಿಲ್ಲ, ಕರ್ನಾಟಕದ ಮೇಲೆ ಬಂದ ವಿಪತ್ತು ತಿಳಿಯುವುದಿಲ್ಲ. ಬರಹ ಬಲ್ಲವರನ್ನಾದರೂ ಹೊಡೆದೆಬ್ಬಿಸಬೇಕೆನ್ನುವ ಕನ್ನಡ ಪತ್ರಿಕೆಗಳಲ್ಲಿ ಹೆಚ್ಚಿನವು ಚಂದಾದಾರರ ನೆಂಪಿಲ್ಲದೆ ಬಿರುಗಾಳಿಯಲ್ಲಿಟ್ಟ ದೀಪಗಳಾಗಿವೆ. ಸ್ವಲ್ಪ ಕಾಲದಿಂದ ಕರ್ನಾಟಕದ ಸೇವೆ ಮಾಡುತ್ತಿದ್ದ ಪತ್ರಿಕೆಗಳಿಗಾದರೂ ಹಿಂದಿ, ಮರಾಠಿ, ಇಂಗ್ಲಿಷ್ ಪತ್ರಿಕೆಗಳಂತೆ ಒಂದೂ ಆಕರ್ಷಕ ಸಾಧನವಿಲ್ಲ. ಕನ್ನಡ ಪತ್ರಿಕೆಯೊಂದನ್ನು ನೋಡಿದೊಡನೆ ಕನ್ನಡಿಗರಿಗೆ ನಾಡನುಡಿಯಲ್ಲಿದ್ದ ಅಭಿಮಾನವು ಸ್ಫುರಣವಾಗುವುದು ಸಾಧ್ಯವೆ? ಕನ್ನಡಿಗರಲ್ಲಿ- ಅದರಲ್ಲೂ ಹಳ್ಳಿಗರಲ್ಲಿ- ಹೆಚ್ಚಿನವರು ಉದರ ವ್ಯಾಪಾರ ಮತ್ತು ಅದಕ್ಕೆ ಸಂಬಂಧಪಟ್ಟ ಕಾರ್ಯಭಾರಗಳಿಗಿಂತ ಒಂದಡಿಯಷ್ಟೂ ಮುಂದರಿದಿಲ್ಲ. ಈ ಸಂಧಿಕಾಲದಲ್ಲಿ ಕನ್ನಡ ಪತ್ರಿಕೆಗಳು ಆಕರ್ಷಕವಾಗಿ

In the Court of the District Munsif of Kasaragod

S C No. 76/1952.

Ganapathi Bhatta ... Plaintiff

vs.

M. Kunhi Ahmed, son of Bobbekere Moidin Beary, residing in Hosabettu village of Kasargod Talu ... ... Defendant.

The defendant to take notice the above suit for the recovery of the amount due under the pronote for Rs. 150/- dated 22-5-1949 executed by the defendant in favour of Malinga Belchappada and subsequently assigned to the plaintiff stands posted to 20-8-1952. If the defendant failed to appear before the above Court at 11 A. M. on that day the suit will be decreed exparte.

Sd. **M. A. Krishna Rao,**
Advocate for plaintiff.

Kasaragod, 6-8-1952.

THE BOMBAY LIFE ASSURANCE COMPANY, LTD.
ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೋ., ಲಿಮಿಟೆಡ್
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು
ಪ್ರಧಾನ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ
ಇವರ ಶಾಖಾ ಕಚೇರಿಗಳು.
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.
ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿವವರಾದ
ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ಮ ಸೇವೆಯನ್ನು
ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಲಕ್ಷ್ಮೀ
ಸಂತಾಲ್ ಮಾತ್ರೆ

ಇವುಗಳ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರದ ಕಟ್ಟು, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಿಶಿನ ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವದು, ತೊಡೆ ಸಂದಿನಲ್ಲಿ ಗಡ್ಡೆ ಬರುವದು, ಕಾಲುಗಂಟು ವೇದನೆ, ಕಣ್ಣುಗಳಲ್ಲಿ ಕೀವು ಬರುವದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ, ಸ್ತ್ರೀಯರ ಬಿಳೆ ಸೆರಗು ಇವೆಲ್ಲಾ ಖಾತ್ರಿಯಾಗಿ ಗುಣ ಹೊಂದುವವು. ಇತರರು ಈಗಿನ ಉಷ್ಣಕಾಲದಲ್ಲಿ ಗರ್ಮಿ ಕಂಡುಬಂದರೆ ರಾತ್ರೆ ಮಲಗುವಾಗ್ಗೆ ಒಂದು ಮಾತ್ರೆ ಸೇವಿಸಿ ಹಾಲು ಕುಡಿದರೆ ಸುಖವಾಗಿ ನಿದ್ರೆ ಬಂದು ಸುಖವಿರೇಚನವಾಗಿ ದೇಹದ ಉಷ್ಣ ಹೋಗುವದು.

ಶೀಸೆ 1ಕ್ಕೆ ರೂ 2-0-0

ಏಜಂಟ್:

ಶ್ರೀ ಕಂಪೆನಿ, ಮಂಗಳೂರು.

ಬೇಕು. ನಾಲ್ಕು ಜನರು ಕೂಡಿದಲ್ಲೆಲ್ಲಾ ಏಕೀಕರಣದ ಚರ್ಚೆ-ಘೋಷಣೆ-ಸಂಕಲ್ಪಪ್ರಕಾರವಾಗಿ ನಡೆಯಬೇಕು. ಇದು ಹೇಳುವಷ್ಟು ಸುಲಭವಲ್ಲ; ಕಠಿನವೆಂದು ಕೈಬಿಟ್ಟು ಕೂತು ಕೊಳ್ಳುವಂತೆಯೂ ಇಲ್ಲ. ಕ್ರೈಸ್ತ ಪಾದ್ರಿಗಳು ನಮ್ಮಲ್ಲಿ ಮತ ಪ್ರಚಾರಕ್ಕೆ ಯಾವ ಯಾವ ವೇಷ ಕೈಗೊಂಡರೂ ಅವನ್ನೆಲ್ಲಾ ನಾವಿಂದು ಏಕೀಕರಣಕ್ಕಾಗಿ ಅಭ್ಯಾಸ ಮಾಡಬೇಕು. ಇದಕ್ಕಾಗಿ ಹಳ್ಳಿಗಳಲ್ಲಿ ಮೊದಲು ನಿರಕ್ಷರತೆಯು ನಿರ್ಮೂಲವಾಗಬೇಕು. ಇದು ಕೇವಲ ಸರಕಾರದ ಅವಲಂಬನದಿಂದಲೇ ಆಗಬೇಕಾದರೆ ಅರ್ಧ ಶತಮಾನವಾದರೂ ಬೇಕಾದೀತು. ಅದಕ್ಕಾಗಿ ವಿದ್ಯಾವಂತರಾದ ತರುಣರು ನಿರಕ್ಷರತೆಯ ನಾಶಕ್ಕಾಗಿ ಸೊಂಟಕಟ್ಟಿ ಮಠ ಗುಡಿಗಳಲ್ಲಿ ಪುಕ್ಕಟೆಯಾಗಿ ವೈದಿಕ ಗ್ರಂಥಗಳ ಅಭ್ಯಾಸ ನಡೆಯುವಂತೆ ಈಗ ಅಕ್ಷರಾಭ್ಯಾಸದ ಪದ್ಧತಿಯೂ ಹಾಗೆಯೇ ನಡೆಯಬೇಕಾಗಿದೆ. ಸಾಕ್ಷರರ ಸಂಖ್ಯೆ ಹೆಚ್ಚಿದಂತೆ ಪತ್ರಿಕಾ ವಾಚನದ ಅಭಿರುಚಿಯೂ ಹೆಚ್ಚುವುದು. ಪತ್ರಿಕಾ ವಾಚನದಿಂದ ಏಕೀಕರಣವೆಂದರೇನು? ಅದರ ಉಪಯೋಗವೇನು? ಎಂಬುದು ಮುಂದಟ್ಟಾಗುವದು. ಈ ಮರ್ಮವನ್ನು ತಿಳಿದೇ ಆಂಗ್ಲರು ವಿದ್ಯಾಪ್ರಸಾರದ ನಟನೆಯನ್ನು ಮಾತ್ರ ನಟಿಸಿದರಲ್ಲದೆ, ತಮ್ಮ ದೇಶೀಯರಂತೆ ವಿದ್ಯೋದ್ಯೋಗದಲ್ಲಿ ಸಾಕ್ಷರರ ಸಂಖ್ಯೆ ಬೆಳೆಸಲಿಲ್ಲ. ಅವರಿಗೆ ತಾವು ಕೊಟ್ಟ ವಿದ್ಯೆಯೂ ಜಳ್ಳಾಗಬೇಕೆಂದು ಶಿಕ್ಷಕರ ರಕ್ತ ಮಾಂಸಗಳು ಬೇಗ ಒಣಗುವಂತೆ ಚಿಲ್ಲರೆ ಕಾಸನ್ನು ಅವರಿಗೆ ಸಂಬಳವಾಗಿ ಕೊಡತೊಡಗಿದರು. ಇದರಿಂದ ಶಿಕ್ಷಕರು ಕರ್ನಾಟಕದ ಉದ್ಧಾರದ ಕುರಿತು ಮಾತಾಡಲು ಶಕ್ತಿಸಾಲದೆ 'ಅನ್ನದೇವರಿಗಿಂತ ಇನ್ನು ದೇವರು ಇಲ್ಲ' ಎಂದು ಜನತೆಯ ಮುಂದೆ ಪುನಸ್ಸ್ಮರಣ ಮಾಡಬೇಕಾಯಿತು. ಅರೆಹೊಟ್ಟೆಯ ಉಪಾಧ್ಯಾಯನು ಇದಕ್ಕಿಂತ ಇನ್ನೇನು ಸಾಹಸ ತೋರಿಸಿಯಾನು?

ಈಚೀಚೆಗೆ ನಮ್ಮ ಹಳ್ಳಿಗಳಲ್ಲಿ ಇಡಿಕಿರಿದ ಜಮೀನುಗಳೆಲ್ಲಾ ವ್ಯವಸಾಯವಾಗಬೇಕೆಂಬ ಚಟುವಟಿಕೆ ಎದ್ದು, ಧನಿದೊಡ್ಡದಿದ್ದ ಶ್ರೀಮಂತನು ಗೋಚರವು ಭೂಮಿಗಳನ್ನೆಲ್ಲಾ ತನ್ನ ಬಗಲಿಗೆ ಹಾಕಿಕೊಂಡ. ಆದರಿಂದ ಬಡವರ ಹಸು ಸಂವರ್ಧನೆಗೆ ಅಡ್ಡಗಾಲು ಬಿದ್ದು ಸಿದ್ಧ ಸೊಲ್ಲಿಗೆಯ ಮಹಾಲಕ್ಷ್ಮಿಗಳು ತೀರ್ಥಗ [illegible] ಪುಣ್ಯವಂತೆಯರಾಗಿದ್ದಾರೆ. ಇದಕ್ಕೆ ಹೊಂದಿಕೆಯಾಗಿ ಹಳ್ಳಿಗಳಲ್ಲಿ ಅಲ್ಲಲ್ಲಿ ಕಟುಕರು ಸೇರಿಕೊಂಡು ತಮ್ಮ ದಲಾಲಿಗಳ ನೆರವಿನಿಂದ ಇಂಥಾ ಬಡ ದನಗಳನ್ನು ಇಲ್ಲದಂತೆ ಮಾಡುತ್ತಿದ್ದಾರೆ. ಸರಕಾರವು ಇದನ್ನು ನೋಡಿಯೂ ನೋಡದಂತಿದೆ.

ಕುಂದಾಪುರ ತಾಲೂಕಿನ ಹಳ್ಳಿ ಹೊಳೆಯಂಥಾ ಗ್ರಾಮಗಳೂ ಕರಾವಳಿಯವರಿಗಿದು ಬೇಕಾಗಿಲ್ಲ. ಅವರು ಕುಳಿತಲ್ಲೇ ಗೋಚರವು ಭೂಮಿಗಳನ್ನು ಬಡಿದು ಹಾಕಿಕೊಂಡು ಮುಂಗಾಳುನಗುತ್ತಿದ್ದಾರೆ. ಮಲೆನಾಡಿನ

ಹಳ್ಳಿಗಳ ಸುಧಾರಣೆಯಾಗಲಿ

ಸೆರಗಿನ ಹಳ್ಳಿಗಳಲ್ಲಿ ಇನ್ನೂ ಮಾನವ ಸಂಸ್ಕೃತಿ ಚೆನ್ನಾಗಿ ಹರಡದಿದ್ದುದೇ ಕರಾವಳಿಯವರಿಗೆ ಅಲ್ಲಿಗೆ ಹೋಗಲು ಬೇಸರದ ಮುಖ್ಯ ಕಾರಣ. ಈ ಯುಗದಲ್ಲೂ ಅವರು ಟಪ್ಪಾಲು ಪೇಟೆಯ ಮೊಗವನ್ನು ವಾರಕ್ಕೊಮ್ಮೆ ನೋಡಿದರೆ ವಿಶೇಷ, ಇನ್ನು ಅಲ್ಲಿಯ ವರ್ಗದಾರರು ಬಡವನನ್ನು ಪಗಡೆಯ ದಾಳದಂತೆ-ಒಂದು ಮೂಕ ಪ್ರಾಣಿಯಂತೆ-ನಡೆಸುವುದಿನ್ನೂ ಬಿಟ್ಟಿಲ್ಲ. ಆ ಬಡ ಪ್ರಾಣಿಗಳಿಗೆ ಬಾಳ್ವೆಯೇ ಕಠಮಂಚವಾಗಿರುವಾಗ ಏಕೀಕರಣದ ಘನಪ್ರಶ್ನೆಯಲ್ಲಿ ಅವರಿಗೆ ಹೇಗೆ ಅಭಿರುಚಿ ಹುಟ್ಟಿಸಬಹುದು? ಶಾಲೆಯೆಂದರೆ ಅವರಿಗೆ ಕನಸಿನ ಮಂಡಿಗೆ! ಏಕೀಕರಣದ ಪ್ರಶ್ನೆಯನ್ನು ಅಂಥಾ ಊರುಗಳಲ್ಲಿ ಒಬ್ಬ ಮಹಾನುಭಾವನೆತ್ತಿದನೆಂದರೆ, ಅಲ್ಲಿನ ಶ್ರೀಮಂತರು ತಮ್ಮ ಪಾಳೆಯಗಾರತನಕ್ಕೆಲ್ಲ ಭಂಗ ಬಂದೀತೊ ಎಂಬ ಆ ಮಹಾ ವಿಷಯದ ಕುರಿತೂ, ಆ ವ್ಯಕ್ತಿಯ ಕುರಿತೂ ಅಪಪ್ರಚಾರ ನಡೆಸುತ್ತಾರೆ; ಅಲ್ಲದೆ ಪಾಮರ ಸ್ತ್ರೀ ಪುರುಷರೊಂದಿಗೆ ಪತ್ರಿಕಾ ವಾಚನವು ಪಂಚಮಹಾಪಾತಕವನ್ನು ಮೀರಿದ ಒಂದು ಪಾಪವೆನ್ನುತ್ತಾರೆ. ಇಂಥಾ ಪಾಳೆಯಗಾರರ ಹಳ್ಳಿಗಳು ಕರ್ನಾಟಕದಲ್ಲಿ ಹಲವು ನೂರುಗಳಿಗೆ ಕಡಿಮೆ ಇರಲಾರದು.

ಸರಕಾರವು ಇದಕ್ಕಾಗಿ ತನ್ನ ಮಲೆನಾಡಿನ ತಾಲೂಕುಗಳಲ್ಲಿ ಮೂರು ಕೇಂದ್ರಗಳನ್ನಾಗಿ ಮಾಡಿಕೊಂಡು, ಕರಾವಳಿಯಲ್ಲಿ ಒಂದು ಕೇಂದ್ರವನ್ನೂ, ಮಲೆನಾಡಿನಲ್ಲಿ ರಡನ್ನೂ ತೆರೆದು ಪ್ರತಿ ಕೇಂದ್ರದಲ್ಲಿ ಸಂಚಾರಿ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳನ್ನೂ, ಅಲ್ಲದೆ ಇವುಗಳ ಜೊತೆಯಲ್ಲೇ ತಾಲೂಕು ಕಚೇರಿಯನ್ನೂ, ಒಂದೊಂದು ಸಂಚಾರಿ ಹೈಸ್ಕೂಲನ್ನೂ ಏರ್ಪಡಿಸಿಕೊಳ್ಳಬೇಕು. ಇವಾದರೂ ಎರಡು ವರ್ಷಕ್ಕಿಂತ ದೀರ್ಘ ಒಂದು ಕೇಂದ್ರದಲ್ಲಿ ನಿಲ್ಲದೆ ಬದಲಾಯಿಸುತ್ತಿರಬೇಕು. ಇದರಿಂದ ಸಾಮಾನ್ಯ ಜನತೆಯೂ ಮಲೆನಾಡಿಗೆ ಬಂದೇ ಬರುವುದು. ಹೀಗೆ ಸರಕಾರವೇ ಮಲೆನಾಡಿನಲ್ಲಿ ತಾನು ತಳಊರದ ವಿನಹ, ಜನರಿಗೆ ನೀವು ಮಲೆನಾಡಿಗೆ ಹೋಗಿ ಎಂದರೆ ಅದು ಸಾರ್ಥಕವಾದೀತೆನ್ನುವುದು ಕಷ್ಟ. ಮಲೆನಾಡೆಲ್ಲಾ ಸಾಗುವಿಗೆ ಬಂದ ವಿನಹ ನಮ್ಮ ಅನ್ನದಾರಿದ್ರ್ಯವು ಕಡಿಮೆಯಾಗುವಂತಿಲ್ಲ.

ಕೃಷಿ ಇಲಾಖೆಯೂ ಹಳ್ಳಿಗಳಲ್ಲಿ ಕೇವಲ ಪ್ರಚಾರದಿಂದಲೇ ಪ್ರಯೋಜನ ಹೊಂದಲಾರದು. ಅದು, ಪೂಗಹಿಗೊಂಡು ಹತ್ತಿಪ್ಪತ್ತು ಎಕ್ರೆ ವಿಸ್ತಾರದ ಹೊಲಗಳನ್ನು ತೆರೆದು ಒಕ್ಕಲಿಗರಿಗೆ ತಮ್ಮ ಸುಧಾರಣೆಯ ಬೀಜ ಮತ್ತು ಗೊಬ್ಬರಗಳ ಕಡೆಗೆ ಆದರ ದೃಷ್ಟಿ ಹರಿಯುವಂತೆ ಪೈರು ಬೆಳೆಸಿಯೇ ತೋರಿಸಬೇಕು. ಆದರ ಬದಲಿಗೆ ಬೀಜಗಳ ಮತ್ತು ಗೊಬ್ಬರಗಳ ಅಂಗಡಿ ತೆರೆದುಕೊಂಡಿದು ಉಪನ್ಯಾಸವನ್ನು ಪಸಂದಾಗಿ ಮಾಡುತ್ತಿದ್ದರೆ ಒಂದಲ್ಲ ಹತ್ತು ಶತಮಾನ ಕಳೆದರೂ ಕೃಷಿಯ ವರ್ಧನೆಯಾಗಲಾರದು. ಯಾರೂ ಉಪದೇಶದ ಪಾಂಡಿತ್ಯವನ್ನು ಮೆಚ್ಚುವುದಿಲ್ಲ. ಬಡವರ ಹೊಟ್ಟೆಯ ಬಡತನ ತಗ್ಗಿದರೆ ಅವರಿಗೆ ಏಕೀಕರಣದ ಅರ್ಥ ಸುಲಭದಲ್ಲಾಗುವುದು. ಸಾರಾಂಶ—ನಮ್ಮ ನಾಡಿನಲ್ಲಿ ಹೊಟ್ಟೆಯ ಸಮಸ್ಯೆ ಇನ್ನೂ ಪರಿಹಾರವಾಗಿಲ್ಲ.

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದ ಗಳಿಗೆಯಲ್ಲಿ ಕನ್ನಡಕ್ಕೆ ಸ್ವಲ್ಪ ಮನ್ನಣೆ ಬಂದಿತ್ತು. ಈಗೀಗ ಪುನಃ ಇಂಗ್ಲಿಷು ಕನ್ನಡದ ಎದೆಯ ಮೇಲೆ ತನ್ನ ಕಾಲುಗಳನ್ನು ಚಾಚುತ್ತಿದೆ! ಕನ್ನಡ ನಾಡಿನಲ್ಲೇ ಕನ್ನಡಕ್ಕೊಂದು ಹೇಳುವಂಥಾ ಪ್ರಾಧಾನ್ಯತೆ ಇಲ್ಲ. ನಾವಾದರೂ ಸ್ವಾತಂತ್ರ್ಯ ಯುಗದಲ್ಲಿದ್ದೇವೆ! ನಮ್ಮವರಿಗೆ ಇಂಗ್ಲಿಷ್ ಭಾಷೆಯ ಅಮಲನ್ನು ಇಳಿಸುವವರು ಬೇಕು. ಕನ್ನಡವು ಮುಂದಿದ್ದು, ಹಿಂದಿ ಹಿಂದಿದ್ದು ಇಂಗ್ಲಿಷು ಜೊತೆಯಲ್ಲಿ ಬರುತ್ತಿದ್ದರೆ ಯಾರಿಗೂ ನಷ್ಟವಿಲ್ಲ. ಅವತ ಇಂಗ್ಲಿಷನ್ನು ಬಿಟ್ಟರೆ ನಮ್ಮ ನಾಗರಿಕತೆ ಸಾಯುತ್ತದೆಂಬುದರಲ್ಲಿ ಅರ್ಥವಿಲ್ಲ. ಯುರೋಪಿನ ಎಷ್ಟೋ ಜನಾಂಗಗಳು ಇಂದು ಇಂಗ್ಲಿಷನ್ನು ಬಿಟ್ಟು ತಲೆಯೆತ್ತಿ ತಿರುಗುತ್ತಿವೆ.

ಸಾರಾಂಶ—ನಮ್ಮವರಲ್ಲಿ ಇಂಗ್ಲಿಷನ್ನು ಬಿಟ್ಟರೆ ಭಂಡವಳ ಶೂನ್ಯ. ಇನ್ನಾದರೂ ಜನತೆಯಲ್ಲಿ ನಾಡನುಡಿಯ ಒಲುಮೆ ಹೆಚ್ಚಲಿ!

ಇಂದೊಬ್ಬ ಕನ್ನಡಿಗನಿಗೆ ಇಂದು ಬೇಕಾದುದು ಕರ್ನಾಟಕ ಏಕೀಕರಣ. ಅದಕ್ಕಾಗಿ ನಮ್ಮ ಎಲ್ಲಾ ಕಾರ್ಯಗಳ ಮೊಗವೂ ಆ ಕಡೆಗೇ ತಿರುಗಬೇಕು. ಅದಕ್ಕೇ ಬೇಕಾದ ಶಿಕ್ಷಣ, ರಕ್ಷಣ, ಪ್ರಚಾರ—ಇವೆಲ್ಲಾ ನಾಡಿಗೆ ಹಿತಕರವಾಗುವಂತೆ ನಡೆಯಬೇಕು. ಪ್ರತಿಯೊಬ್ಬ ಕನ್ನಡಿಗನೂ ಬೆಳಿಗ್ಗೆ ಎದ್ದೊಡನೆ—"ನಾನು ಕನ್ನಡಿಗ, ಕನ್ನಡ ನಾಡು ನನ್ನದು. ನನ್ನ ದೌರ್ಬಲ್ಯದಿಂದ ಕನ್ನಡ ನಾಡು ಇಂದು ಹಲವು ಚೂರುಗಳಾಗಿ ಹಿಡಿದಿದೆ. ಇದು ಕನ್ನಡಿಗನಿಗೆ ಮರೆಯದ ಅಪಮಾನ. ನಾನು ಬದುಕಿದ್ದರೆ ಕರ್ನಾಟಕ ಏಕೀಕರಣವಾಗಲೇ ಬೇಕು. ಅದನ್ನು ನಾನು ಕಾಣಲೇಬೇಕು" ಎಂದು ಉಚ್ಚರಿಸುವುದರಿಂದ ಎಷ್ಟೋ ಹಿತವಿದೆ.

ಸಾರಾಂಶ—ಪ್ರಕೃತಿಯು ಕನ್ನಡ ನಾಡಿಗೆ ಅನುಕೂಲವಾಗಿದ್ದರೂ, ಪುರುಷರಲ್ಲಿ ಗುಲಾಮತನದ ಚಿಹ್ನೆ ಪರಿಣಾಮಗಳಿನ್ನೂ ಅಳಿದಿಲ್ಲ.

ಸಿರಿಗನ್ನಡಂ ಗೆಲ್ಗೆ.

ಮದ್ರಾಸಿನ ಪಬ್ಲಿಕ್ ಇನ್‌ಸ್ಟ್ರಕ್ಷನಿನ ಡೈರೆಕ್ಟರರಿಂದ ನವಯುಗ ವಾರಪತ್ರಿಕೆಯು ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಸೆಕೆಂಡರಿ ಶಾಲೆಗಳು ಅದನ್ನು ತರಿಸಿಕೊಳ್ಳಬಹುದಾಗಿದೆ.

For Protection and Provision

Consult

The New Guardian of India Life Insurance Co., Ltd.

Estd] Head office: **MADRAS** [1934

A Policy in this Progressive Life Office is good investment, its Agency is valuable business connection.

Applications for representation are invited from influential persons.

Please apply to:

The Branch Manager,
Diamond Building, Hampankatta,
MNGALORE, S. K.

ಅಸಾಧಾರಣ ವಾಗ್ಮಿಗಳೂ ಗ್ರಂಥಕರ್ತರೂ ಆದ ಶ್ರೀ ಎಸ್. ಪಂಚಪಕೇಶ ಅಯ್ಯರ್, ಎಂ. ಎ., ಐ. ಸಿ. ಎಸ್., ಬಾರ್ ಎಟ್ ಲಾ, ಎಫ್. ಎಸ್. ಎಲ್. ಅವರು ಬರೆದ Tales of Ind ಎಂಬ ಕಥಾವಳಿಯ ಅನುವಾದ.

ಭಾರತೀಯ ಕತೆಗಳು

ಅನುವಾದಕರು—ಶ್ರೀ. ಕೋಡ್ಕಲ್ ಶ್ರೀನಿವಾಸ ರಾವ್.

ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಬೇಕೆಂಬ ಹಿರಿಯಾಸೆ ಇದ್ದೇ ಇದೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸಂದರ್ಭೋಚಿತವಾದ ಉಪಮೆ ಗಾದೆ. ಕಥೆ ದೃಷ್ಟಾಂತ ಇತ್ಯಾದಿಗಳು ಒದಗಬೇಕು. ಅಂತಹ ಅಮೂಲ್ಯ ಭಂಡಾಗಾರವೇ ಈ ಭಾರತೀಯ ಕತೆಗಳು.

ಎಲ್ಲರೂ ಅವಶ್ಯವಾಗಿ ಓದತಕ್ಕ ಅಪೂರ್ವ ಗ್ರಂಥ

151 ಕತೆಗಳು ಬೆಲೆ ರೂ. 1-12-0

ನವಭಾರತ ಪುಸ್ತಕ ಭಂಡಾರ, ಉಡುಪಿ.

DO YOU KNOW?
THAT
THE VIJAYA BANK, LIMITED.

1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs 10 lacks
3. Has granted an average dividend of 6% to the Shareholders for the past 20 years
4. Has a net work of Branches in South Kanara and one each in Mercara and Fort, Bombay.
5. Offers attractive rates of interest on Deposits and Cash Certificates
6. Grants loans on easy terms to approved parties or on approved securities
7. Does afford full protection and rich return to all your monies.

ADOPT IT AS
"MY BANK"
THE VIJAYA BANK, LIMITED.
H. O., MANGALORE.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷ ಮುಂತಾದವು, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

SOVEREIGN REMEDY
AMRUTANJAN
Best Indian Pain Balm
Amrutanjan Depot
BOMBAY MADRAS

REGD

ಹುಳುಕಡ್ಡಿ
ಮದ್ದು
ನಮ್ಮಲ್ಲಿ
ಸಿಕ್ಕುತ್ತೆ.

ಅಮೃತಾಂಜನ ಲಿಮಿಟೆಡ್

ಮದ್ರಾಸ್, ಬೊಂಬಾಯಿ, ಕಲ್ಕತ್ತ

ವಾರದ ಭವಿಷ್ಯ

ತಾ 14—8—52ರಿಂದ 20—8—52ರ ವರೆಗೆ

ಮೇಷ —ಈ ವಾರದಲ್ಲಿ ಆರೋಗ್ಯ ವಿಚಾರದಲ್ಲಿ ಹೆಚ್ಚಿಗೆ ನಿಗಾಕೊಡಿರಿ. ದೇಹದಲ್ಲಿ ಗಾಯ ಕಜ್ಜಿ ಉಷ್ಣಾಧಿಕ್ಯದಿಂದಾಗಿ ಜ್ವರಾದಿಗಳೂ ಬರಬಹುದು. ಕೈ ಕೆಸರಾದರೆ ಬಾಯಿ ಮೊಸರಾದೀತೆಂಬಂತೆ ನಿಮ್ಮ ಪ್ರಯತ್ನಕ್ಕೆ ತಕ್ಕ ಫಲ ದೊರೆವುದು. ನೌಕರಿ ಜನಂಗೂ ವ್ಯಾಪಾರಿಗಳಿಗೂ ಈ ಕಾಲವು ಹೆಚ್ಚಿನ ಸುಖದಾಯಿಯಾಗದೆ ಸೇವಕ ವರ್ಗದವರು ತಾಪತ್ರಯವಿಲ್ಲದೆ ಕಾಲ ಕಳೆವರು. ತಾ 16, 17 ಈ 2 ದಿನಗಳು ಮಿಕ್ಕುಳಿದ ದಿನಗಳಿಗಿಂತ ಉತ್ತಮವಿವೆ.

ವೃಷಭ—ನಿಮ್ಮ ಶಕ್ತಿ ಸಾಹಸ ಪೌರುಷಾದಿಗಳೆಲ್ಲವೂ ಈ ವಾರದಲ್ಲಿ ನೀರಿನಲ್ಲಿ ಮಾಡಿದ ಹೋಮದಂತೆ ವ್ಯರ್ಥವಾದಾವು. ಉತ್ಪತ್ತಿಯು ಅತ್ಯಲ್ಪವಾಗಿದ್ದು ಖರ್ಚು ಅತಿರೇಕವಾಗಿ ಪರಿಣಮಿಸಿ ಸಿಕ್ಕ ಸಿಕ್ಕವರೊಡನೆ ಸಾಲ ಕಡಗಳನ್ನು ಮಾಡುವಿರಿ. ನೇತ್ರ ಪೀಡೆ ಉದರ ಶೂಲೆಗಳು ಕಾಣಿಸಬಹುದು, ಗಂಡ ಹೆಂಡಿರೊಳು ವೈಮನಸ್ಸುಂಟಾಗಲಿವೆ. ಆದರೂ ತಾ 14, 15, 18, 19 ಈ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳಿಗೆ ಗುರಿಯಾಗಲಾರಿರಿ.

ಮಿಥುನ—ಧನ್ಯರೆನ್ನಬೇಕು ನಿಮಗೇನೇ. ಕಾರಣ ಶನೈಶ್ಚರನೊಬ್ಬನನ್ನು ಹೊರತಾಗಿ ಮಿಕ್ಕ ಎಲ್ಲಾ ಗ್ರಹರ ಸಹಾನುಭೂತಿಯು ನಿಮಗಿದ್ದ ಮೇಲೆ ಯಾವ ಭಾಗದಲ್ಲಿ ಕೊರತೆಯುಂಟಾದೀತು? ನೀವು ಆಡಿದ್ದೇ ಮಾತು ಮಾಡಿದ್ದೆ ಕೃತಿಯೆಂದಾದೀತು. ಪ್ರತಿಯೊಂದು ಉದ್ಯಮದಲ್ಲೂ ಪ್ರಗತಿಯುಂಟಾಗುವದು, ಆಪ್ತೇಷ್ಟರು ಬಂಧು ಬಾಂಧವರಿಂದ ಕೂಡಿದ ನಿಮಗೆ ತಾ 15, 16, 17, 20 ಈ ದಿನಗಳಾದುದೇ ತಿಳಿಯಲೊಲ್ಲದು.

ಕರ್ಕಾಟ—ಕಳೆದ ವಾರಕ್ಕಿಂತ ನೀವೆಷ್ಟೋ ಆರ್ಥಿಕ ಭಾಗದಲ್ಲಿ ಸುಧಾರಿಸುವಿರಿ. ಹಿಡಿದ ಕಾರ್ಯವನ್ನು ವಿಘ್ನಗಳೆಷ್ಟೇ ಬಂದರೂ ಬಿಡದೆ ಮುಂದರಿಸುವಿರಿ, ಪ್ರಬಲರಾದ ಶತ್ರುಗಳನ್ನೂ ಎದುರಿಸುವ ಸಾಮರ್ಥ್ಯ ನಿಮಗಿರುವುದು. ಕೆಲವೊಮ್ಮೆ ನಿಷ್ಕಾರಣವಾಗಿ ಮಾತು ಮಾತಿಗೆ ಕಲಹ ಬೆಳೆದೀತು. ಮಕ್ಕಳು ಮರಿಗಳ ಆರೋಗ್ಯವೂ ಚೆನ್ನಾಗಿರದು. ತಾ 14, 18, 19 ಈ ದಿನಗಳಲ್ಲಿ ಮಿತ್ರ ಸಮಾಗಮ ನಾನಾ ವಿಧದಿಂದ ಧನ ಲಾಭವು ಕಾಣದು.

ಸಿಂಹ—ಕಾರ್ಯವನ್ನು ಸಾಧಿಸಲು ಬೇಕಾದ ಶಕ್ತಿ ಸಾಹಸಗಳು ನಿಮ್ಮಲ್ಲಿಲ್ಲದ ಕಾರಣ ಹೊಸತಾಗಿ ಯಾವ ಕಾರ್ಯಕ್ಕೂ ಕೈಯಿಕ್ಕಲಾರಿರಿ. ಆದರೂ ನೀವು ಕೈಗೊಂಡ ಕಾರ್ಯದಲ್ಲಿ ಫಲ ಲಾಭವು ಉತ್ತಮವಿರುವದು. ನಿಮ್ಮ ಸ್ವಂತ ಉಪಭೋಗಕ್ಕೆ ಯಾವ ಕೊರತೆ ಯಿರದು, ದುಡಿಮೆಯು ಹಣವು ಖರ್ಚಿಗೆ ಕಡಿಮೆಯಾದೀತು. ವಾರಾದಿಯ 4 ದಿನಗಳಲ್ಲಿ ಇಷ್ಟಪ್ರಾಪ್ತಿ ಸುಖ ಲಾಭಗಳಿವೆ.

ಕನ್ಯಾ—ನಿಮ್ಮ ವಿಕ್ರಮ ಕಾರಕನು ನಿಕ್ರಮ ಪತಿಯೂ ಆದ ಅಂಗಾರಕನಿಂದು ವಿಕ್ರಮ ಸ್ಥಾನಕ್ಕೆ ಬಂದಿರುವ ಕಾರಣ ನಿಮ್ಮ ಶೌರ್ಯ ಸಾಹಸಗಳು ಅಸಾಮಾನ್ಯವಾಗಿರುವವು. ಆದರೇನು ದೈವ ಬಲವು ಕಡಿಮೆಯಾಗಿರುವ ಈ ಕಾಲದಲ್ಲಿ ನಿಮ್ಮ ಕೃತಿಗೆ ತಕ್ಕ ಫಲ ಕಾಣಿಸದು. ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಕೊಡಿರಿ, ತಾ 16ರಿಂದ 19ರ ವರೆಗಿನ ದಿನಗಳು ಅನುಕೂಲವಿರುವವು.

ತುಲಾ— ವ್ಯಯ ಧನಗಳಲ್ಲಿರುವ ಶನ್ಯಂಗಾರಕರು ಸ್ವಲ್ಪಮಟ್ಟಿನ ಪ್ರತಿಕೂಲವನ್ನು ಮಾಡಲಿರುವರು, ಆದರೂ ಇತರ ಗ್ರಹರ ಬಲ ಸಂಪನ್ನರಾದ ನಿಮಗೆ ಈ ವಾರದಲ್ಲಿ ಯಾವ ತೊಂದರೆಯೂ ಉಂಟಾಗದು. ನೆನೆದಂತೆ ಕಾರ್ಯವು ಫಲಿಸುವದು. ಜನತೆಯಿಂದ ಗೌರವಾದರಗಳು ಲಭಿಸುವವು. ಆರ್ಥಿಕ ಭಾಗವು ಉತ್ತಮಸ್ಥಿತಿಗೆ ಬರಲಿದೆ. ವಾರಾಂತ್ಯದ 3 ದಿನಗಳು ಅತ್ಯುತ್ತಮವಿವೆ.

ವೃಶ್ಚಿಕ— ಹಿಂದಿನ ವಾರಕ್ಕಿಂತ ನೀವೆಷ್ಟೋ ಸುಧಾರಿಸುವಿರಿ ನಿಮ್ಮ ಪ್ರಯತ್ನಕ್ಕೆ ತಕ್ಕುದಾದ ಫಲವು ಲಭಿಸುವದು. ಆದರೂ ಖರ್ಚುಗಳು ಹೆಚ್ಚಾಗುವುದರಿಂದ ಸಾಲಮಾಡುವ ಪ್ರಸಂಗ ಬರಲಿದೆ. ವಿರೋಧಿಗಳು ಪ್ರತೀಕಾರ ಕ್ರಿಯೆಯಲ್ಲಿ ಆಸಕ್ತರಾಗುವ ಕಾರಣ ನಿಮ್ಮ ಮನಸ್ಸಿಗೆ ನೆಮ್ಮದಿಯಿರಲಾರದು. ವಾರದ ಆದ್ಯ ೩ ದಿನಗಳಲ್ಲಿ ನಿಮ್ಮ ಬಯಕೆಯು ಈಡೇರಲಿದೆ.

ಧನು— ಪಿತ್ಥ ದೋಷದಿಂದ ನಿದ್ರಾಭಾವ ನೇತ್ರ ಪೀಡಾದಿಗಳು ಕಾಣಿಸಬಹುದು. ಸ್ತ್ರೀಯರೊಡನೆ ಕಲಹವಾಗುವ ಸಂಭವವಿದೆ. ವಿದ್ಯಾ ಕೀರ್ತಿಗಳಿಗೆ ಕಳಂಕವು ಕೂಡ ಬರಬಹುದು. ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾದ ನಿಮಗೆ ಗೃಹಸುಖವು ಉತ್ತಮವಾಗಿದ್ದೀತು. ಖರ್ಚಿಗೆ ಸಾಕಷ್ಟು ಉತ್ಪತ್ತಿಯಿರುವುದರಿಂದ ದಿನಯಾಪನೆಯು ಸುಖಮಯವಾಗಲಿದೆ. ವಾರಾದಿಯ 4 ದಿನಗಳಲ್ಲಿ ಯಾನ ಮಾನಾದಿಗಳ ಲಾಭವಿದೆ.

ಮಕರ— ವ್ಯರ್ಥ ಖರ್ಚುಗಳು ಹೆಚ್ಚುವುದರಿಂದಲೂ ಪ್ರಯತ್ನಕ್ಕೆ ತಕ್ಕುದಾದ ಫಲವಿಲ್ಲದಿರುವುದರಿಂದಲೂ ಈ ವಾರದಲ್ಲಿ ನೀವು ದಿನಯಾಪನೆಗಾಗಿ ಸಾಲಮಾಡಬೇಕಾದೀತು. ಲಾಭಗತನಾದ ಕುಜನು ಬಹುತೇಕ ನಿಮಗೆ ಅನುಕೂಲಮಾಡಲಿರುವನು. ಬಂಧುಜನರು ನಿಮ್ಮ ಮೇಲೆ ಎರಡೆಣಿಸಲಿರುವರು. ಆಕಸ್ಮಿಕ ಪ್ರವಾಸವು ಪ್ರಾಪ್ತವಾಗಲಿದೆ. ತಾ. 16, 17, 18, 19 ಈ ದಿನಗಳು ಸ್ವಲ್ಪ ಸುಖಕಾರಿಗಳಿವೆ.

ಕುಂಭ —ಈ ವಾರದಲ್ಲಿ ಪರಿಸ್ಥಿತಿಯು ತೀರಾ ಬಿಕ್ಕಟ್ಟಿಗೆ ಬರಲಿದೆ. ಬುಧನನ್ನುಳಿದು ಎಲ್ಲಾ ಗ್ರಹರೂ, ಪ್ರತಿಕೂಲರಾಗಿ ನಿಂತಿರುವ ಕಾರಣ ಸಿಕ್ಕ ಸಿಕ್ಕವರೊಡನೆ ಜಗಳ ವಿರೋಧಗಳು ಹೆಚ್ಚುವವು ಹಿಡಿದ ಕಾರ್ಯದಲ್ಲಿ ನಷ್ಟವಾದೀತು, ರಾಜಕೀಯದಲ್ಲಿ ಪರಾಭವುಂಟಾಗುವದು. ಜನತೆಯ ಬೆಂಬಲಹೀನರಾದ ನಿಮಗೆ ವಾರಾಂತ್ಯದ 3 ದಿನಗಳಲ್ಲಿ ಹೆಚ್ಚಿನ ಕಷ್ಟ ಕಾಣಿಸಲಾರದು.

ಮೀನ— ಗೃಹ ತಾಪತ್ರಯಗಳಿಂದ ಒಮ್ಮೊಮ್ಮೆ ನಿಮಗೆ ವಿರಕ್ತಿ ತೋರಬಹುದೀ ಸಂಸಾರದಲ್ಲಿ. ಹೆಂಡಿರು ಮಕ್ಕಳ ಕಾಟವು ಅಸಹನೀಯವಾದೀತು, ಮನೋರೋಗ ಸಂಭವಾದಿಗಳಿಂದ ದುಃಖಿತರಾದ ನಿಮ್ಮ ದೇಹದಲ್ಲಿ ದೌರ್ಬಲ್ಯ ಶೌರ್ಯಗಳು ಕಾಣಿಸಲಿವೆ ಆದರೂ ಉದ್ಯೋಗದಲ್ಲಿ ಪ್ರಗತಿ ಕಂಡುಬರುವದು, ತಾ 14, 15, 20, ಈ ದಿನಗಳಲ್ಲಿ ನಿಮ್ಮ ಮನೋರಥವು ಸಿದ್ಧಿಸಲಿದೆ.

ಯೇಲಂ ನೋಟೀಸು

ದಕ್ಷಿಣ ಕನ್ನಡ ಸಬೋರ್ಡಿನೇಟ್ ಕೋರ್ಟಿನಲ್ಲಿ

ಕ್ರಮ ನಂಬ್ರ 165/1951.

R. I. A. ನಂ 1040/1952.

ಮಹಾಬಲ ಹೆಗಡೆ —ವಾದಿ

ಮತ್ತು

ವೆಂಕಪ್ಪ ಹೆಗಡೆ ವಗೈರೆಯು —ಪ್ರತಿವಾದಿರು

ಮೇಲ್ಕಂಡ ವ್ಯವಹರಣೆಯಲ್ಲಿ ನೇಮಕ ಹೊಂದಿದ ಕಮಿಶನರಾದ ಮಂಗಳೂರು ಶಹಾರ ಪೈಕಿ ಕೊಡಿಯಾಲಬೈಲಿನಲ್ಲಿರುವ ಎಡ್ವಕೇಟ್ ಕೆ. ಬಿ. ಜಿನರಾಜ ಹೆಗಡೆಯವರು ಸದರಿ ಕೋರ್ಟು R. I. A. ನಂಬ್ರ 1040/1952ರಲ್ಲಿ ಕೋರ್ಟಿನವರು ಮಾಡಿರುವ ಹುಕುಮು ಮೇರೆಗೆ ಕೆಳಗೆ ಕಾಣಿಸಿದ ಆಸ್ತಿಗಳಲ್ಲಿರುವ ಕಾಡಿನ ಮರಮಟ್ಟುಗಳನ್ನು ಈ ಕೆಳಗೆ ನಮೂದಿಸಿರುವ ಶರ್ತ ಕ್ರಮಗಳಿಗೆ ಅನುಸಾರವಾಗಿ ತಾರೀಖು 24-8-1952ನೇ ಆದಿತ್ಯವಾರ ದಿವಸ ಬೆಳಗ್ಗೆ ಘಂಟೆ 11ಕ್ಕೆ ಕುಂದಾಪುರ ತಾಲೂಕು ಬಿದ್ಕಲ್ಲು ಕಟ್ಟೆ ಹರ್ದಳ್ಳಿ ಅಂತಯ್ಯ ಶೆಟ್ರ ಭಂಡಸಾಲೆ ವಠಾರದಲ್ಲಿ ಬಹಿರಂಗವಾಗಿ ಯೇಲಂ ಮಾಡುವರು.

ಶರತಗಳು

1. ಯೇಲಮಿನಲ್ಲಿ ಸದರಿ ಕಾಡಿನಲ್ಲಿರುವ ಮರಮಟ್ಟುಗಳನ್ನು ಆಖೈರು ದರ್ಖಾಸ್ತಿಗೆ ಪಡೆದವರು ಯೇಲಂ ಕಾಯಂ ಆದ ಕೂಡಲೇ ಯೇಲಮಿನ ಹಣದ ಶೇಕಡಾ 25ರಷ್ಟು ಹಣವನ್ನು ಪಾವತಿ ಮಾಡತಕ್ಕದ್ದು. ಮತ್ತು ಬಾಕಿ ಹಣವನ್ನು ಯೇಲಂ ತಾರೀಕಿನಿಂದ 15 ದಿವಸಗಳ ಒಳಗೆ ಕಮಿಶನರಿಗೆ ಸಲಾಯಿಸತಕ್ಕದ್ದು.

2. ಸದ್ರಿ ಯೇಲವನ್ನು ಕೋರ್ಟಿನವರು ಕ್ರಮದಂತೆ ಕಾಯಂ ಮಾಡಿದ ಕೂಡಲೇ ಕಮಿಶನರು ಸದ್ರಿ ಯೇಲಮಿನ ಸಂಬಂಧ ಆಗತಕ್ಕ ಕ್ರಯಚೀಟು ಬರೆಕೊಡುವರು. ಆ ರೀತಿ ಬರೆಕೊಡುವ ಕ್ರಯ ಚೀಟಿನ ಬಗ್ಗೆ ಆಗತ್ಯವಿರುವ ರಶೆ ರಿಜಿಸ್ಟ್ರಿ ವಗೈರೆ ಖರ್ಚನ್ನು ಯೇಲಮುದಾರರೆ ಸಹಿಸಿಕೊಳ್ಳತಕ್ಕದ್ದು. ಕ್ರಯಚೀಟನ್ನು ದ ಕ. ಜಿಲ್ಲಾ ರಿ. ಆಫೀಸಿನಲ್ಲಿ ರಿಜಿಸ್ಟ್ರಿಮಾಡಿಸಿ ಕೊಡಲಾದೀತು

3. ಮೇಲೆ ಹೇಳಿದಂತೆ ಯೇಲಮಿನ ಹಣದ ಪೈಕಿ ರಿಯಾಯತಿ ಮ್ಯಾದೆಗೆ ತೆರತಕ್ಕ ಯೇಲಮಿನ ಹಣವನ್ನು ಯೇಲಮಿಗೆ ಪಡೆಕೊಂಡವರು ತೆರುವರೆ ತಪ್ಪಿದರೆ ಆ ಕಾರಣದಿಂದಾಗುವ ಎಲ್ಲಾ ನಷ್ಟ ತೆರುವರೆ ಹಾಗೆ ತಪ್ಪಿದವರು ಬದ್ಧರಾಗಿರುತ್ತಾರೆ.

4. ಮೇಲೆ ಹೇಳಿದಂತೆ ಯೇಲಂದಾರರು ಯೇಲಮಿನ ಹಣದ ಶೇಕಡಾ 25ರಷ್ಟು ಹಣವನ್ನು ಸಂದಾಯ ಮಾಡಿ ಬಾಕಿ ಹಣವನ್ನು ಮ್ಯಾದೆಯ ಒಳಗೆ ವಸೂಲು ಕೊಡುವರೆ ತಪ್ಪಿದರೆ ಅನಂತರ ಹಾಗೆ ಸಂದಾಯ ಮಾಡಿದ ಹಣವನ್ನು ವಾಪಾಸು ಕೇಳುವರೆ ಯೇಲಂದಾರರಿಗೆ ಹಕ್ಕಿರುವುದಿಲ್ಲ,

5. ಸದರಿ ಯೇಲಮಿನ ಸಂಬಂಧವಾಗಿ ಕೋರ್ಟಿನವರು ವಿಧಿಸುವ ಆಗಬಹುದಾದ ಹುಕುಮುಗಳಿಗೆ ಅನುಸಾರವಾಗಿ ನಡೆಯುವರೆ ಯೇಲಂದಾರರು ಬದ್ಧರಾಗಿರತಕ್ಕದ್ದು

6. ಯೇಲಂ ಕಾಯಂ ಆಗಿ ಆ ಸಂಬಂಧ ಮೇಲೆ ಹೇಳಿದಂತೆ ಕಮಿಶನರು ಬರೆದುಕೊಡುವ ಕ್ರಯಚೀಟು ತಾರೀಕಿನಿಂದ ಆರು ತಿಂಗಳ ಒಳಗೆ ಯೇಲಮಿನ ಮರಮಟ್ಟುಗಳನ್ನು ಕಡಿದುಕೊಂಡು ಹೋಗತಕ್ಕದ್ದು ಮತ್ತು ಹತ್ತು ಇಂಚು ಸುತ್ತಳತೆಗೆ ಕಮ್ಮಿಯಾದ ಮರಗಳನ್ನು ಕಡಿದರೆ ಯೇಲಮಿಗೆ ವಹಿಸಿಕೊಂಡವರು ಆ ಬಾಬಿನ ನಷ್ಟತೆರುವರೆ ಬಾಧ್ಯರಾಗುವರು.

ವಿವರ

1. ಕುಂದಾಪುರ ತಾಲೂಕು ಆಲಬಾಡಿ ಗ್ರಾಮದ ಸರ್ವೆ ನಂಬ್ರ 197-2- ಪುಂಜ ಎಕ್ರೆ 3-98 ವಿಸ್ತೀರ್ಣದ ಸ್ಥಳದಲ್ಲಿರುವ 1 ಇಂಚು ಸುತ್ತಳತೆ [ಅಂದರೆ ನೆಲದಿಂದ ಅಡಿ ಎತ್ತರದಲ್ಲಿ] ಮತ್ತು ಇದಕ್ಕೆ ಮೀರಿ ಮರಗಳನ್ನು ಕಡಿದು-ಕೊಂಡು ಹೋಗುವ ಹಕ್ಕು— ಇದನ್ನು ಪ್ರಥಮವಾರು ಕರೆಯುವ ಮೌಲ್ಯ ರೂಪಾಯಿ 100/-. ಆಗಿರುತ್ತದೆ.

2. ಕುಂದಾಪುರ ತಾಲ್ಲೂಕು ಯೆಡ್ಯಾಡಿ ಮತ್ಯಾಡಿ ಗ್ರಾಮದ ಸರ್ವೆ ನಂಬ್ರ 191/1 ಪುಂಜಾ ಎಕ್ರೆ 8 25 ವಿಸ್ತೀರ್ಣದ ಸ್ಥಳದಲ್ಲಿರು 10 ಇಂಚು ಸುತ್ತಳತೆ [ಅಂದರೆ ನೆಲದಿಂ 3 ಅಡಿ ಎತ್ತರದಲ್ಲಿ] ಮತ್ತು ಇದಕ್ಕೆ ಮೀರಿ ಮರಗಳನ್ನು ಕಡಿದು ಕೊಂಡುಹೋಗುವ ಹಕ್ಕು. ಇದನ್ನು ಪ್ರಥಮ ವಾರು ಕರೆಯುವ ಮೌಲ್ಯ ರೂಪಾಯಿ 1000/-.

K B. Jinaraja Hegde.
Commissioner

ಮಂಗಳೂರು, ತಾ. 2 8-1952.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

“ಗೋಪಾಲ ಭೇಷಜಾಶ್ರಮ” ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ



ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ ಎಂ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

ಶಾಲೆ, ಕಾಲೇಜುಗಳಿಗೂ
ಸಹಕಾರಿ ಸಂಘ, ಮುನ್ಸಿಫ್
ಕೋರ್ಟುಗಳಿಗೂ ಕೃಷಿಕ,
ವರ್ಗದಾರ, ವ್ಯಾಪಾರಿಗಳಿಗೂ
ಬೇಕಾಗುವ ಉತ್ತಮ ಕಾಗದದಲ್ಲಿ
ತಯಾರಿಸಿದ
ತರತರದ ಫಾರ್ಮುಗಳು,
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಹಳ್ಳಿಗಳ ಸುಧಾರಣೆಯಾಗಲಿ

ಬೇಕು. ನಾಲ್ಕು ಜನರು ಕೂಡಿದಲ್ಲೆಲ್ಲಾ ಏಕೀಕರಣದ ಚರ್ಚೆ-ಘೋಷಣೆ-ಪ್ರಚಾರವಾಗಿ ನಡೆಯಬೇಕು. ಇದು ಹೇಳುವಷ್ಟು ಸುಲಭವಲ್ಲ; ಕಠಿನವೆಂದು ಕೈಬಿಟ್ಟು ಕೂತುಕೊಳ್ಳುವಂತೆಯೂ ಇಲ್ಲ. ಕ್ರೈಸ್ತ ಪಾದ್ರಿಗಳು ನಮ್ಮಲ್ಲಿ ಮತ ಪ್ರಚಾರಕ್ಕೆ ಯಾವ ಯಾವ ವೇಷ ಕೈಗೊಂಡರೂ ಅವನ್ನೆಲ್ಲಾ ನಾವಿಂದು ಏಕೀಕರಣಕ್ಕಾಗಿ ಅಭ್ಯಾಸ ಮಾಡಬೇಕು. ಇದಕ್ಕಾಗಿ ಹಳ್ಳಿಗಳಲ್ಲಿ ಮೊದಲು ನಿರಕ್ಷರತೆಯು ನಿರ್ಮೂಲವಾಗಬೇಕು. ಇದು ಕೇವಲ ಸರಕಾರದ ಅವಲಂಬನದಿಂದಲೇ ಆಗ ಬೇಕಾದರೆ ಅರ್ಧ ಶತಮಾನವಾದರೂ ಬೇಕಾದೀತು. ಆದಕ್ಕಾಗಿ ವಿದ್ಯಾವಂತರಾದ ತರುಣರು ನಿರಕ್ಷರತೆಯ ನಾಶಕ್ಕಾಗಿ ಸೊಂಟಕಟ್ಟಿ ಮಠ ಗುಡಿಗಳಲ್ಲಿ ಪುಕ್ಕಟೆಯಾಗಿ ವೈದಿಕ ಗ್ರಂಥಗಳ ಅಭ್ಯಾಸ ನಡೆಯುವಂತೆ ಈಗ ಅಕ್ಷರಾಭ್ಯಾಸದ ಪದ್ಧತಿಯೂ ಹಾಗೆಯೇ ನಡೆಯಬೇಕಾಗಿದೆ. ಸಾಕ್ಷರರ ಸಂಖ್ಯೆ ಹೆಚ್ಚಿದಂತೆ ಪತ್ರಿಕಾ ವಾಚನದ ಅಭಿರುಚಿಯೂ ಹೆಚ್ಚುವುದು. ಪತ್ರಿಕಾ ವಾಚನದಿಂದ ಏಕೀಕರಣವೆಂದರೇನು? ಅದರ ಉಪಯೋಗವೇನು? ಎಂಬುದು ಮನದಟ್ಟಾಗುವದು. ಈ ಮರ್ಮವನ್ನು ತಿಳಿದೇ ಆಂಗ್ಲರು ವಿದ್ಯಾಪ್ರಸಾರದ ನಟನೆಯನ್ನು ಮಾತ್ರ ನಟಿಸಿದರಲ್ಲದೆ, ತಮ್ಮ ದೇಶೀಯರಂತೆ ವಿದ್ಯದ್ವೇಗದಲ್ಲಿ ಸಾಕ್ಷರರ ಸಂಖ್ಯೆ ಬೆಳೆಸಲಿಲ್ಲ. ಅವರಿಗೆ ತಾವು ಕೊಟ್ಟ ವಿದ್ಯೆಯೂ ಜಳ್ಳಾಗಬೇಕೆಂದು, ಶಿಕ್ಷಕರ ರಕ್ತ ಮಾಂಸಗಳು ಬೇಗ ಒಣಗುವಂತೆ ಚಿಲ್ಲರೆ ಕಾಸನ್ನು ಅವರಿಗೆ ಸಂಬಳವಾಗಿ ತೆರಕೊಡಗಿದರು. ಇದರಿಂದ ಶಿಕ್ಷಕರು ಕರ್ನಾಟಕದ ಉದ್ಧಾರದ ಕುರಿತು ಮಾತಾಡಲು ಶಕ್ತಿಸಾಲದೆ 'ಅನ್ನದೇವರಿಗಿಂತ ಇನ್ನು ದೇವರು ಇಲ್ಲ' ಎಂದು ಜನತೆಯ ಮುಂದೆ ಪುನಶ್ಚರಣ ಮಾಡಬೇಕಾಯಿತು. ಅರೆಪಕ್ಕದ ಉಪಾಧ್ಯಾಯನು ಇದಕ್ಕಿಂತ ಇನ್ನೇನು ಸಾಹಸ ತೋರಿಸಿಯಾನು?

ಈಚೀಚೆಗೆ ನಮ್ಮ ಹಳ್ಳಿಗಳಲ್ಲಿ ಹಡಿಲೆಡೆದ ಜಮೀನುಗಳೆಲ್ಲಾ ವ್ಯವಸಾಯವಾಗಬೇಕೆಂಬ ಚಟುವಟಿಕೆ ಎದ್ದು, ಧನಿಪಿಷ್ಟದಿಂದ ಶ್ರೀಮಂತನು ಗೋಚರವು ಭೂಮಿಗಳನ್ನೆಲ್ಲಾ ತನ್ನ ಬಗಲಿಗೆ ಹಾಕಿಕೊಂಡ. ಆದರಿಂದ ಬಡವರ ಪಶು ಸಂವರ್ಧನೆಗೆ ಅಡ್ಡಗಾಲು ಬಿದ್ದು ಹಿಪ್ಪೆ ಸೊಲ್ಲಿಗೆಯ ಮಹಾಲಕ್ಷ್ಮಿಗಳು ತೀರ್ಥದ ಸಾಟು ಚಮಚೆಯ ಪುಣ್ಯವಂತೆಯರಾಗಿದ್ದಾರೆ. ಇದಕ್ಕೆ ಹೊಂದಿಕೆಯಾಗಿ ಹಳ್ಳಿಗಳಲ್ಲಿ ಅಲ್ಲಲ್ಲಿ ಕಟುಕರು ಸೇರಿಕೊಂಡು ತಮ್ಮ ದಲ್ಲಾಳಿಗಳ ನೆರವಿನಿಂದ ಇಂಥಾ ಬಡ ದನಗಳನ್ನು ಇಲ್ಲದಂತೆ ಮಾಡುತ್ತಿದ್ದಾರೆ. ಸರಕಾರವು ಇದನ್ನು ನೋಡಿಯೂ ನೋಡದಂತಿದೆ.

ಕುಂದಾಪುರ ತಾಲೂಕಿನ ಹಳ್ಳಿ ಹೊಳೆಯಂಥಾ ಗ್ರಾಮಗಳೂ ಕರಾವಳಿಯವರಿಗಿಂದು ಬೇಡವಾಗಿಲ್ಲ. ಅವರು ಕುಳಿತಲ್ಲೇ ಗೋಚರದ ಭೂಮಿಗಳನ್ನು ಬಡಿದು ಹಾಕಿಕೊಂಡು ಮುಗುಳುನಗುತ್ತಿದ್ದಾರೆ. ಮಲೆನಾಡಿನ ಸೆರಗಿನ ಹಳ್ಳಿಗಳಲ್ಲಿ ಇನ್ನೂ ಮಾನವ ಸಂಸ್ಕೃತಿ ಚೆನ್ನಾಗಿ ಹರಡದಿದ್ದುದೇ ಕರಾವಳಿಯವರಿಗೆ ಅಲ್ಲಿಗೆ ಹೋಗಲು ಬೇಸರದ ಮುಖ್ಯ ಕಾರಣ. ಈ ಯುಗದಲ್ಲೂ ಅವರು ಟಪ್ಪಾಲು ಪೇಟಿಯ ಮೊಗವನ್ನು ವಾರಕ್ಕೊಮ್ಮೆ ನೋಡಿದರೆ ವಿಶೇಷ, ಇನ್ನು ಅಲ್ಲಿಯ ವರ್ಗದಾರರು ಬಡವನನ್ನು ಪಗಡೆಯ ದಾಳದಂತೆ- ಒಂದು ಮೂಕ ಪ್ರಾಣಿಯಂತೆ-ನಡೆಸುವುದಿನ್ನೂ ಬಿಟ್ಟಿಲ್ಲ. ಆ ಬಡ ಪಾಯಿಗಳಿಗೆ ಬಾಳ್ವೆಯೇ ಶರಮಂಚವಾಗಿರುವಾಗ ಏಕೀಕರಣದ ಘನಪ್ರಶ್ನೆಯಲ್ಲಿ ಅವರಿಗೆ ಹೇಗೆ ಅಭಿರುಚಿ ಹುಟ್ಟಿಸಬಹುದು? ಶಾಲೆಯೆಂದರೆ ಅವರಿಗೆ ಕನಸಿನ ಮಂಡಿಗೆ! ಏಕೀಕರಣದ ಪ್ರಶ್ನೆಯನ್ನು ಅಂಥಾ ಊರುಗಳಲ್ಲಿ ಒಬ್ಬ ಮಹಾನುಭಾವನೆತ್ತಿದನೆಂದರೆ, ಅಲ್ಲಿನ ಶ್ರೀಮಂತರು ತಮ್ಮ ಪಾಳೆಯಗಾರತನಕ್ಕೆಲ್ಲಿ ಭಂಗ ಬಂದೀತೂ ಎಂದು ಆ ಮಹಾ ವಿಷಯದ ಕುರಿತೂ, ಆ ವ್ಯಕ್ತಿಯ ಕುರಿತೂ ಅಪಪ್ರಚಾರ ನಡೆಸುತ್ತಾರೆ; ಅಲ್ಲದೆ ಪಾಮರ ಸ್ತ್ರೀ ಪುರುಷರೊಂದಿಗೆ ಪತ್ರಿಕಾ ವಾಚನವು ಪಂಚಮಹಾಪಾತಕವನ್ನು ಮೀರಿದ ಒಂದು ಪಾಪವೆನ್ನುತ್ತಾರೆ. ಇಂಥಾ ಪಾಳೆಯಗಾರರ ಹಳ್ಳಿಗಳು ಕರ್ನಾಟಕದಲ್ಲಿ ಹಲವು ನೂರುಗಳಿಗೆ ಕಡಿಮೆ ಇರಲಾರದು.

ಸರಕಾರವು ಇದಕ್ಕಾಗಿ ತನ್ನ ಮಲೆನಾಡಿನ ತಾಲೂಕುಗಳಲ್ಲಿ ನೂರು ಕೇಂದ್ರಗಳನ್ನಾಗಿ ಮಾಡಿಕೊಂಡು, ಕರಾವಳಿಯಲ್ಲಿ ಒಂದು ಕೇಂದ್ರವನ್ನೂ, ಮಲೆನಾಡಿನಲ್ಲೊಂದನ್ನೂ ತೆರೆದು ಪ್ರತಿ ಕೇಂದ್ರದಲ್ಲಿ ಸಂಚಾರಿ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳನ್ನೂ, ಅಲ್ಲದೆ ಇವುಗಳ ಜೊತೆಯಲ್ಲೇ ತಾಲೂಕು ಕಚೇರಿಯನ್ನೂ, ಒಂದೊಂದು ಸಂಚಾರಿ ಹೈಸ್ಕೂಲನ್ನೂ ಏರ್ಪಡಿಸಿಕೊಳ್ಳಬೇಕು. ಇವಾದರೂ ಎರಡು ವರ್ಷಕ್ಕಿಂತ ಹೆಚ್ಚು ಒಂದೇ ಕೇಂದ್ರದಲ್ಲಿ ನಿಲ್ಲದೆ ಬದಲಾಯಿಸುತ್ತಿರಬೇಕು. ಇದರಿಂದ ಸಾಮಾನ್ಯ ಜನತೆಯೂ ಮಲೆನಾಡಿಗೆ ಬಂದೇ ಬರುವುದು. ಹೀಗೆ ಸರಕಾರವೇ ಮಲೆನಾಡಿನಲ್ಲಿ ತಾನು ತಳಊರಿದ ವಿನಹ, ಜನರಿಗೆ ನೀವು ಮಲೆನಾಡಿಗೆ ಹೋಗಿ ಎಂದರೆ ಅದು ಸಾರ್ಥಕವಾದೀತೆನ್ನುವುದು ಕಷ್ಟ. ಮಲೆನಾಡೆಲ್ಲಾ ಸಾಗುವಳಿಗೆ ಬಂದ ವಿನಹ ನಮ್ಮ ಅನ್ನದಾರಿದ್ರ್ಯವು ಕಡಿಮೆಯಾಗುವಂತಿಲ್ಲ.

ಕೃಷಿ ಇಲಾಖೆಯೂ ಹಳ್ಳಿಗಳಲ್ಲಿ ಕೇವಲ ಪ್ರಚಾರದಿಂದಲೇ ಪ್ರಯೋಜನ ಹೊಂದಲಾರದು. ಅದು, ಮಾಗಣೆಗೊಂದು ಹತ್ತಿಪ್ಪತ್ತು ಎಕ್ರೆ ವಿಸ್ತಾರದ ಹೊಲಗಳನ್ನು ತೆರೆದು ಒಕ್ಕಲಿಗರಿಗೆ ತಮ್ಮ ಸುಧಾರಣೆಯ ಬೀಜ ಮತ್ತು ಗೊಬ್ಬರಗಳ ಕಡೆಗೆ ಅವರ ದೃಷ್ಟಿ ಹರಿಯುವಂತೆ ಪೈರು ಬೆಳೆಸಿಯೇ ತೋರಿಸಬೇಕು. ಅದರ ಬದಲಿಗೆ ಬೀಜಗಳ ಮತ್ತು ಗೊಬ್ಬರಗಳ ಅಂಗಡಿ ತೆರೆದುಕೊಂಡಿದು ಉಪನ್ಯಾಸವನ್ನು ಪಸಂದಾಗಿ ಮಾಡುತ್ತಿದ್ದರೆ ಒಂದಿಲ್ಲ ಹತ್ತು ಶತಮಾನ ಕಳೆದರೂ ಕೃಷಿಯ ವರ್ಧನೆಯಾಗಲಾರದು. ಯಾರೂ ಉಪದೇಶದ ಪಾಂಡಿತ್ಯವನ್ನು ಮೆಚ್ಚುವುದಿಲ್ಲ. ಬಡವರ ಹೊಟ್ಟೆಯ ಬಡತನ ಕುಗ್ಗಿದರೆ ಅವರಿಗೆ ಏಕೀಕರಣದ ಅರ್ಥ ಸುಲಭವಾಗುವುದು. ಸಾರಾಂಶ—ನಮ್ಮ ನಾಡಿನಲ್ಲಿ ಹೊಟ್ಟೆಯ ಸಮಸ್ಯೆ ಇನ್ನೂ ಪರಿಹಾರವಾಗಿಲ್ಲ.

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದ ಗಳಿಗೆಯಲ್ಲಿ ಕನ್ನಡಕ್ಕೆ ಸ್ವಲ್ಪ ಮನ್ನಣೆ ಬಂದಿತ್ತು. ಈಗೀಗ ಪುನಃ ಇಂಗ್ಲಿಷು ಕನ್ನಡದ ಎದೆಯ ಮೇಲೆ ತನ್ನ ಕಾಲುಗಳನ್ನು ಚಾಚುತ್ತಿದೆ! ಕನ್ನಡ ನಾಡಿನಲ್ಲೇ ಕನ್ನಡಕ್ಕೊಂದು ಹೇಳುವಂಥಾ ಪ್ರಾಧಾನ್ಯತೆಇಲ್ಲ. ನಾವಾದರೊ ಸ್ವಾತಂತ್ರ್ಯ ಯುಗದಲ್ಲಿದ್ದೇವೆ! ನಮ್ಮವರಿಗೆ ಇಂಗ್ಲಿಷ್ ಭಾಷೆಯ ಅಮಲನ್ನು ಇಳಿಸುವವರು ಬೇಕು. ಕನ್ನಡವು ಮುಂದಿದ್ದು, ಹಿಂದಿ ಹಿಂದಿದ್ದು, ಇಂಗ್ಲಿಷು ಜೊತೆಯಲ್ಲಿ ಬರುತ್ತಿದ್ದರೆ ಯಾರಿಗೂ ನಷ್ಟವಿಲ್ಲ. ಆದರೆ ಇಂಗ್ಲಿಷನ್ನು ಬಿಟ್ಟರೆ ನಮ್ಮ ನಾಗರಿಕತೆ ಸಾಯುತ್ತದೆಂಬುದರಲ್ಲಿ ಅರ್ಥವಿಲ್ಲ. ಯುರೋಪಿನ ಎಷ್ಟೋ ಜನಾಂಗಗಳು ಇಂದು ಇಂಗ್ಲಿಷನ್ನು ಬಿಟ್ಟು ತಲೆಯೆತ್ತಿ ತಿರುಗುತ್ತಿವೆ.

ಸಾರಾಂಶ—ನಮ್ಮವರಲ್ಲಿ ಇಂಗ್ಲಿಷನ್ನು ಬಿಟ್ಟರೆ ಭಂಡವಳ ಶೂನ್ಯ ಇನ್ನಾದರೂ ಜನತೆಯಲ್ಲಿ ನಾಡನುಡಿಯ ಒಲುಮೆ ಹೆಚ್ಚಲಿ!

[illegible] ನ್ನಡಿಗನಿಗೆ ಇಂದು ಬೇಕಾದುದು ಕರ್ನಾಟಕ ಏಕೀಕರಣ. ಆದಕ್ಕಾಗಿ ನಮ್ಮ ಎಲ್ಲಾ ಕಾರ್ಯಗಳ ಮೊಗವೂ ಆ ಕಡೆಗೇ ತಿರುಗಬೇಕು. ಅದಕ್ಕೇ ಬೇಕಾದ ಶಿಕ್ಷಣ, ರಕ್ಷಣ, ಪ್ರಚಾರ---ಇವೆಲ್ಲಾ ನಾಡಿಗೆ ಹಿತಕರವಾಗುವಂತೆ ನಡೆಯಬೇಕು. ಪ್ರತಿಯೊಬ್ಬ ಕನ್ನಡಿಗನೂ ಬೆಳಿಗ್ಗೆ ಎದ್ದೊಡನೆ—"ನಾನು ಕನ್ನಡಿಗ, ಕನ್ನಡ ನಾಡು ನನ್ನದ್ದು. ನನ್ನ ದೌರ್ಬಲ್ಯದಿಂದ ಕನ್ನಡ ನಾಡು ಇಂದು ಹಲವು ಚೂರುಗಳಾಗಿ ಸಿಡಿದಿವೆ. ಇದು ಕನ್ನಡಿಗನಿಗೆ ಮಾರಿಯಾದ ಅಪಮಾನ. ನಾನು ಬದುಕಿದ್ದರೆ ಕರ್ನಾಟಕ ಏಕೀಕರಣವಾಗಲೇಬೇಕು. ಅದನ್ನು ನಾನು ಕಾಣಲೇಬೇಕು" ಎಂದು ಉಚ್ಚರಿಸುವುದರಿಂದ ಎಷ್ಟೋ ಹಿತವಿದೆ.

ಸಾರಾಂಶ—ಪ್ರಕೃತಿಯು ಕನ್ನಡ ನಾಡಿಗೆ ಅನುಕೂಲವಾಗಿದ್ದರೂ, ಪುರುಷರಲ್ಲಿ ಗುಲಾಮತನದ ದುಷ್ಟ ಪರಿಣಾಮಗಳನ್ನೂ ಅರಿತಿಲ್ಲ.

ಸಿರಿಗನ್ನಡಂ ಗೆಲ್ಗೆ.

ಮದ್ರಾಸಿನ ಪಬ್ಲಿಕ್ ಇನ್‌ಸ್ಟ್ರಕ್ಷನಿನ ಡೈರೆಕ್ಟರರಿಂದ ನವಯುಗ ವಾರಪತ್ರಿಕೆಯು ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಸೆಕೆಂಡರಿ ಶಾಲೆಗಳು ಇದನ್ನು ತರಿಸಿಕೊಳ್ಳಬಹುದಾಗಿದೆ.

For Protection and Provision

Consult

The New Guardian of India Life Insurance Co., Ltd.

Estd] Head office: **MADRAS** [1934

A Policy in this Progressive Life Office is good investment; its Agency is valuable business connection.

Applications for representation are invited from influential persons.

Please apply to:

The Branch Manager,
Diamond Building, Hampankatta,
MNGALORE, S. K.

ಅಸಾಧಾರಣ ವಾಗ್ಮಿಗಳೂ ಗ್ರಂಥಕರ್ತರೂ ಆದ
ಶ್ರೀ. ಎಸ್. ಪಂಚಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್., ಬಾರ್-ಎಟ್-ಲಾ, ಎಫ್. ಎಸ್. ಎಲ್. ಅವರು ಬರೆದ Tales of Ind ಎಂಬ ಕಥಾವಳಿಯ ಅನುವಾದ.

ಭಾರತೀಯ ಕತೆಗಳು

ಅನುವಾದಕರು—ಶ್ರೀ. ಕೋಡ್ಕಲ್ ಶ್ರೀನಿವಾಸ ರಾವ್.

ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಬೇಕೆಂಬ ಹಿರಿಯಾಶೆ ಇದ್ದೇ ಇದೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸಂದರ್ಭೋಚಿತವಾದ ಉಪಮೆ, ಗಾದೆ, ಕಥೆ ದೃಷ್ಟಾಂತ ಇತ್ಯಾದಿಗಳು ಬರಬೇಕು. ಅಂ[illegible] ಅಮೂಲ್ಯ ಭಂಡಾಗಾರವೇ ಈ ಭಾರತೀಯ ಕತೆಗಳು.

ಎಲ್ಲರೂ ಅವಶ್ಯವಾಗಿ ಓದತಕ್ಕ ಅಪೂರ್ವ ಗ್ರಂಥ

151 ಕತೆಗಳು ಬೆಲೆ ರೂ. 1-12-0

ನವಭಾರತ ಪುಸ್ತಕ ಭಂಡಾರ, ಉಡುಪಿ.

DO YOU KNOW?
THAT

THE VIJAYA BANK, LIMITED.

1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs 10 lacks
3. Has granted an average dividend of 6% to the Share-holders for the past 20 years
4. Has a net work of Branches in South Kanara and one each in Mercara and Fort, Bombay.
5. Offers attractive rates of interest on Deposits and Cash Certificates
6. Grants loans on easy terms to approved parties or on approved securities
7. Does afford full protection and rich return to all your monies.

ADOPT IT AS
"MY BANK"
THE VIJAYA BANK, LIMITED,
H. O., MANGALORE.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷ ಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

SOVEREIGN-REMEDY
AMRUTANJAN
Best Indian Pain Balm
Amrutanjan Depot
BOMBAY MADRAS

REGD
ಹುಳುಕಡ್ಡಿ
ಮದ್ದು
ನಮ್ಮಲ್ಲಿ
ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್
[illegible] ಬೊಂಬಾಯಿ ಮತ್ತು ಕಲ್ಕತ್ತ

ವಾರದ ಭವಿಷ್ಯ

ತಾ 14—8—52ರಿಂದ 20—8—52ರ ವರೆಗೆ

ಮೇಷ — ನೀವೀವಾರದಲ್ಲಿ ಆರೋಗ್ಯ ವಿಚಾರದಲ್ಲಿ ಹೆಚ್ಚಿಗೆ ನಿಗಾಕೊಡಿರಿ. ದೇಹದಲ್ಲಿ ಗಾಯ ಕಜ್ಜಿ ಉಷ್ಣಾಧಿಕ್ಯದಿಂದಾಗಿ ಜ್ವರಾದಿಗಳೂ ಬರಬಹುದು. ಕೈ ಕೆಸರಾದರೆ ಬಾಯಿ ಮೊಸರಾದೀತೆಂಬಂತೆ ನಿಮ್ಮ ಪ್ರಯತ್ನಕ್ಕೆ ತಕ್ಕ ಫಲ ದೊರೆವುದು. ನೌಕರಿ ಜನಂಗೂ ವ್ಯಾಪಾರಿಗಳಿಗೂ ಈ ಕಾಲವು ಹೆಚ್ಚಿನ ಸುಖದಾಯಿಯಾಗಿದೆ ಸೇವಕ ವರ್ಗದವರು ತಾಪತ್ರಯವಿಲ್ಲದೆ ಕಾಲ ಕಳೆವರು. ತಾ 16, 17 ಈ 2 ದಿನಗಳು ಮಿಕ್ಕುಳಿದ ದಿನಗಳಿಗಿಂತ ಉತ್ತಮವಿವೆ.

ವೃಷಭ—ನಿಮ್ಮ ಶಕ್ತಿ ಸಾಹಸ ಪೌರುಷಾದಿಗಳೆಲ್ಲವೂ ಈ ವಾರದಲ್ಲಿ ನೀರಿನಲ್ಲಿ ಮಾಡಿದ ಹೋಮದಂತೆ ವ್ಯರ್ಥವಾದಾವು. ಉತ್ಪತ್ತಿಯು ಅತ್ಯಲ್ಪವಾಗಿದ್ದು ಖರ್ಚು ಅತಿರೇಕವಾಗಿ ಪರಿಣಮಿಸಿ ಸಿಕ್ಕ ಸಿಕ್ಕವರೊಡನೆ ಸಾಲ ಕಡಗಳನ್ನು ಮಾಡುವಿರಿ. ನೇತ್ರ ಪೀಡೆ ಉದರ ಶೂಲೆಗಳು ಕಾಣಿಸಬಹುದು. ಗಂಡ ಹೆಂಡಿರೊಳು ವೈಮನಸ್ಸುಂಟಾಗಲಿದೆ. ಅದರೂ ತಾ 14, 15, 18, 19 ಈ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳಿಗೆ ಗುರಿಯಾಗಲಾರಿರಿ.

ಮಿಥುನ — ಧನ್ಯರೆನ್ನಬೇಕು ನಿಮಗೇನೇ ಕಾರಣ ಶನೈಶ್ಚರನೊಬ್ಬನನ್ನು ಹೊರತಾಗಿ ಮಿಕ್ಕ ಎಲ್ಲಾ ಗ್ರಹರ ಸಹಾನುಭೂತಿಯು ನಿಮಗಿದ್ದ ಮೇಲೆ ಯಾವ ಭಾಗದಲ್ಲಿ ಕೊರತೆಯುಂಟಾದೀತು? ನೀವು ಆಡಿದ್ದೇ ಮಾತು ಮಾಡಿದ್ದೆ ಕೃತಿಯೆಂದಾದೀತು. ಪ್ರತಿಯೊಂದು ಉದ್ಯಮದಲ್ಲೂ ಪ್ರಗತಿಯುಂಟಾಗುವದು, ಆಪ್ತೇಷ್ಟರು ಬಂಧು ಬಾಂಧವರಿಂದ ಕೂಡಿದ ನಿಮಗೆ ತಾ 15, 16, 17, 20 ಈ ದಿನಗಳಾದುದೇ ತಿಳಿಯಬೊಲ್ಲದು.

ಕರ್ಕಟ—ಕಳೆದ ವಾರಕ್ಕಿಂತ ಲೇಶವಷ್ಟೇ ಆರ್ಥಿಕ ಭಾಗದಲ್ಲಿ ಸುಧಾರಿಸುವಿರಿ. ಹಿಡಿದ ಕಾರ್ಯವನ್ನು ವಿಘ್ನಗಳೆಷ್ಟೇ ಬಂದರೂ ಬಿಡದೆ ಮುಂದರಿಸುವಿರಿ. ಪ್ರಬಲರಾದ ಶತ್ರುಗಳನ್ನೂ ಎದುರಿಸುವ ಸಾಮರ್ಥ್ಯ ನಿಮಗಿರುವುದು. ಕೆಲವೊಮ್ಮೆ ನಿಷ್ಕಾರಣವಾಗಿ ಮಾತು ಮಾತಿಗೆ ಕಲಹ ಬೆಳೆದೀತು. ಮಕ್ಕಳು ಮರಿಗಳ ಆರೋಗ್ಯವೂ ಚೆನ್ನಾಗಿರದು. ತಾ 14, 18, 19 ಈ ದಿನಗಳಲ್ಲಿ ಮಿತ್ರ ಸಮಾಗಮ ನಾನಾ ವಿಧದಿಂದ ಧನ ಲಾಭವು ಕಾಣಸುವದು.

ಸಿಂಹ — ಕಾರ್ಯವನ್ನು ಸಾಧಿಸಲು ಬೇಕಾದ ಶಕ್ತಿ ಸಾಹಸಗಳು ನಿಮ್ಮಲ್ಲಿಲ್ಲದ ಕಾರಣ ಹೊಸತಾಗಿ ಯಾವ ಕಾರ್ಯಕ್ಕೂ ಕೈಯಿಕ್ಕಲಾರಿರಿ. ಆದರೂ ನೀವು ಕೈಗೊಂಡ ಕಾರ್ಯದಲ್ಲಿ ಫಲ ಲಾಭವು ಉತ್ತಮವಿರುವದು. ನಿಮ್ಮ ಸ್ವಂತ ಉಪಭೋಗಕ್ಕೆ ಯಾವ ಕೊರತೆಯಿರದು, ದುಡಿಮೆಯು ಹಣವು ಖರ್ಚಿಗೆ ಕಡಿಮೆಯಾದೀತು. ವಾರಾದಿಯ 4 ದಿನಗಳಲ್ಲಿ ಇಷ್ಟಪ್ರಾಪ್ತಿ ಸುಖ ಲಾಭಗಳಿವೆ.

ಕನ್ಯಾ—ನಿಮ್ಮ ವಿಕ್ರಮ ಕಾರಕನೂ ವಿಕ್ರಮ ಪತಿಯೂ ಆದ ಅಂಗಾರಕನಿಂದು ವಿಕ್ರಮ ಸ್ಥಾನಕ್ಕೆ ಬಂದಿರುವ ಕಾರಣ ನಿಮ್ಮ ಶೌರ್ಯ ಸಾಹಸಗಳು ಅನುಪಮವಾಗಿರುವವು. ಅದರೇನು ದೈವ ಬಲವು ಕಡಿಮೆಯಾಗಿರುವ ಈ ಕಾಲದಲ್ಲಿ ನಿಮ್ಮ ಕೃತಿಗೆ ತಕ್ಕ ಫಲ ಕಾಣಿಸದು. ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಕೊಡಿರಿ. ತಾ 16ರಿಂದ 19ರ ವರೆಗಿನ ದಿನಗಳು ಅನುಕೂಲವಿರುವವು.

ತುಲಾ— ವ್ಯಯ ಧನಗಳಲ್ಲಿರುವ ಶನ್ಯಂಗಾರಕರು ಸ್ವಲ್ಪಮಟ್ಟಿನ ಪ್ರತಿಕೂಲವನ್ನು ಮೂಡಲಿರುವರು. ಆದರೂ ಇತರ ಗ್ರಹರ ಬಲ ಸಂಪನ್ನರಾದ ನಿಮಗೆ ಈ ವಾರದಲ್ಲಿ ಯಾವ ತೊಂದರೆಯೂ ಉಂಟಾಗದು. ನೆನೆದಂತೆ ಕಾರ್ಯವು ಫಲಿಸುವದು. ಜನತೆಯಿಂದ ಗೌರವಾದರಗಳು ಲಭಿಸುವವು. ಆರ್ಥಿಕ ಭಾಗವು ಉತ್ತಮಸ್ಥಿತಿಗೆ ಬರಲಿದೆ. ವಾರಾಂತ್ಯದ 3 ದಿನಗಳು ಅತ್ಯುತ್ತಮವಿವೆ.

ವೃಶ್ಚಿಕ— ಹಿಂದಿನ ವಾರಕ್ಕಿಂತ ಲೇಶವಷ್ಟೇ ಸುಧಾರಿಸುವಿರಿ ನಿಮ್ಮ ಪ್ರಯತ್ನಕ್ಕೆ ತಕ್ಕುದಾದ ಫಲವು ಲಭಿಸುವದು. ಆದರೂ ಖರ್ಚುಗಳು ಹೆಚ್ಚಿರುವುದರಿಂದ ಸಾಲಮಾಡುವ ಪ್ರಸಂಗ ಬರಲಿದೆ. ವಿರೋಧಿಗಳು ಪ್ರತೀಕಾರ ಕ್ರಿಯೆಯಲ್ಲಿ ಆಸಕ್ತರಾಗುವ ಕಾರಣ ನಿಮ್ಮ ಮನಸ್ಸಿಗೆ ನೆಮ್ಮದಿಯಿರಲಾರದು. ವಾರದ ಆದ್ಯಂತ ದಿನಗಳಲ್ಲಿ ನಿಮ್ಮ ಬಯಕೆಯು ಈಡೇರಲಿದೆ.

ಧನು— ಪಿತ್ತ ದೋಷದಿಂದ ನಿದ್ರಾಭಾವ ನೇತ್ರ ಪೀಡಾದಿಗಳು ಕಾಣಿಸಬಹುದು. ಸ್ತ್ರೀಯರೊಡನೆ ಕಲಹವಾಗುವ ಸಂಭವವಿದೆ, ವಿದ್ಯಾ ಕೀರ್ತಿಗಳಿಗೆ ಕಳಂಕವು ಕೂಡ ಬರಬಹುದು, ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾದ ನಿಮಗೆ ಗೃಹಸುಖವು ಉತ್ತಮವಾಗಿದ್ದೀತು. ಖರ್ಚಿಗೆ ಸಾಕಷ್ಟು ಉತ್ಪತ್ತಿಯಿರುವುದರಿಂದ ದಿನಯಾಪನೆಯು ಸುಖಮಯವಾಗಲಿದೆ. ವಾರಾದಿಯ 4 ದಿನಗಳಲ್ಲಿ ಯಾನ ವಾಹನಾದಿಗಳ ಲಾಭವಿದೆ.

ಮಕರ— ವ್ಯರ್ಥ ಖರ್ಚುಗಳು ಹೆಚ್ಚುವುದರಿಂದಲೂ ಪ್ರಯತ್ನಕ್ಕೆ ತಕ್ಕುದಾದ ಫಲವಿಲ್ಲದಿರುವುದರಿಂದಲೂ ಈ ವಾರದಲ್ಲಿ ನೀವು ದಿನಯಾಪನೆಗಾಗಿ ಸಾಲಮಾಡಬೇಕಾದೀತು. ಲಾಭಗತನಾದ ಕುಜನು ಬಹುತೇಕ ನಿಮಗೆ ಅನುಕೂಲವಾಗಲಿರುವನು. ಬಂಧುಜನರು ನಿಮ್ಮ ಮೇಲೆ ಎರಡೆಣಿಸಲಿರುವರು. ಆಕಸ್ಮಿಕ ಪ್ರವಾಸವು ಪ್ರಾಪ್ತವಾಗಲಿದೆ. ತಾ. 16, 17, 18, 19 ಈ ದಿನಗಳು ಸ್ವಲ್ಪ ಸುಖಕಾರಿಗಳಿವೆ.

ಕುಂಭ — ಈ ವಾರದಲ್ಲಿ ಪರಿಸ್ಥಿತಿಯು ತೀರಾ ದಿಕ್ಕೆಟ್ಟಿಗೆ ಬರಲಿದೆ. ಬುಧನನ್ನುಳಿದು ಎಲ್ಲಾ ಗ್ರಹರೂ, ಪ್ರತಿಕೂಲರಾಗಿ ನಿಂತಿರುವ ಕಾರಣ ಸಿಕ್ಕ ಸಿಕ್ಕವರೊಡನೆ ಜಗಳ ವಿರೋಧಗಳು ಹೆಚ್ಚುವವು. ಹಿಡಿದ ಕಾರ್ಯದಲ್ಲಿ ನಷ್ಟವಾದೀತು, ರಾಜಕೀಯದಲ್ಲಿ ಪರಾಭವವುಂಟಾಗುವದು. ಜನತೆಯ ಬೆಂಬಲಹೀನರಾದ ನಿಮಗೆ ವಾರಾಂತ್ಯದ 3 ದಿನಗಳಲ್ಲಿ ಹೆಚ್ಚಿನ ಕಷ್ಟ ಕಾಣಿಸಲಾರದು.

ಮೀನ— ಗೃಹ ತಾಪತ್ರಯಗಳಿಂದ ಒಮ್ಮೊಮ್ಮೆ ನಿಮಗೆ ವಿರಕ್ತಿ ತೋರಬಹುದೀ ಸಂಸಾರದಲ್ಲಿ. ಹೆಂಡಿರು ಮಕ್ಕಳ ಕಾಟವು ಅಸಹನೀಯವಾದೀತು. ಮನೋರೋಗ ಪರಾಭವಾದಿಗಳಿಂದ ದುಃಖಿತರಾದ ನಿಮ್ಮ ದೇಹದಲ್ಲಿ ದೌರ್ಬಲ್ಯ ರೋಗಗಳು ಕಾಣಿಸಲಿವೆ ಆದರೂ ಉದ್ಯೋಗದಲ್ಲಿ ಪ್ರಗತಿ ಕಂಡುಬರುವದು, ತಾ 14, 15, 20, ಈ ದಿನಗಳಲ್ಲಿ ನಿಮ್ಮ ಮನೋರಥವು ಸಿದ್ಧಿಸಲಿದೆ.

ಯೋಲಂ ನೋಟೀಸು

ದಕ್ಷಿಣ ಕನ್ನಡ ಸಬೋರ್ಡಿನೇಟ್ ಕೋರ್ಟಿನಲ್ಲಿ

ಕ್ರಮ ನಂಬ್ರ 165/1951.
R. I. A. ನಂ 1040/1952.
ಮಹಾಬಲ ಹೆಗಡೆ —ವಾದಿ
ಮತ್ತು
ವೆಂಕಪ್ಪ ಹೆಗಡೆ ವಗೈರೆಯು —ಪ್ರತಿವಾದಿಯು

ಮೇಲ್ಕಂಡ ವ್ಯವಹರಣೆಯಲ್ಲಿ ನೇಮಕ ಹೊಂದಿದ ಕಮಿಶನರಾದ ಮಂಗಳೂರು ಬಹಾರ ಪೈಕಿ ಕೊಡಿಯಾಲಬೈಲಿನಲ್ಲಿರುವ ಎಡ್ವಕೇಟ್ ಕೆ. ಬಿ. ಜಿನರಾಜ ಹೆಗಡೆಯವರು ಸದರಿ ಕೋರ್ಟು R. I. A. ನಂಬ್ರ 1040/1952ರಲ್ಲಿ ಕೋರ್ಟಿನವರು ಮಾಡಿರುವ ಹುಕುಮಿನ ಮೇರೆಗೆ ಕೆಳಗೆ ಕಾಣಿಸಿದ ಆಸ್ತಿಗಳಲ್ಲಿರುವ ಕಾಡಿನ ಮರಮಟ್ಟುಗಳನ್ನು ಈ ಕೆಳಗೆ ನಮೂದಿಸಿರುವ ಶರ್ತ ಕ್ರಮಗಳಿಗೆ ಅನುಸಾರವಾಗಿ ತಾರೀಕು 24-8-1952ನೇ ಆದಿತ್ಯವಾರ ದಿವಸ ಬೆಳಿಗ್ಗೆ ಘಂಟೆ 11ಕ್ಕೆ ಕುಂದಾಪುರ ತಾಲೂಕು ಬದ್ದಕಲ್ಲು ಕಟ್ಟೆ ಹರ್ದಳ್ಳಿ ಅಂಕಯ್ಯ ಶೆಟ್ಟಿ ಭಂಡಸಾಲೆ ವಠಾರದಲ್ಲಿ ಬಹಿರಂಗವಾಗಿ ಯೋಲಂ ಮಾಡುವರು.

ಶರತುಗಳು

1. ಯೋಲಮಿನಲ್ಲಿ ಸದರಿ ಕಾಡಿನಲ್ಲಿರುವ ಮರಮಟ್ಟುಗಳನ್ನು ಅಪ್ಪರು ದರ್ಖಾಸ್ತಿಗೆ ಪಡೆದವರು ಯೋಲಂ ಕಾಯಂ ಆದ ಕೂಡಲೇ ಯೋಲಮಿನ ಹಣದ ಶೇಕಡಾ 25ರಷ್ಟು ಹಣವನ್ನು ಪಾವತಿ ಮಾಡತಕ್ಕದ್ದು. ಮತ್ತು ಬಾಕಿ ಹಣವನ್ನು ಯೋಲಂ ತಾರೀಕಿನಿಂದ 15 ದಿವಸಗಳ ಒಳಗೆ ಕಮಿಶನರಿಗೆ ಸಲಾಯಿಸತಕ್ಕದ್ದು.

2. ಸದ್ರಿ ಯೇಲಮನ್ನು ಕೋರ್ಟಿನವರು ಕ್ರಮದಂತೆ ಕಾಯಂ ಮಾಡಿದ ಕೂಡಲೇ ಕಮಿಶನರು ಸದ್ರಿ ಯೋಲಮಿನ ಸಂಬಾಧ ಆಗತಕ್ಕ ಕ್ರಯಚೀಟು ಬರಕೊಡುವರು. ಆ ರೀತಿ ಬರಕೊಡುವ ಕ್ರಯ ಚೀಟಿನ ಬಗ್ಗೆ ಆಗತ್ಯವಿರುವ ಠಸೆ ರಿಜಿಸ್ಟ್ರಿ ವಗೈರೆ ಖರ್ಚನ್ನು ಯೋಲಮುದಾರರೆ ಸಹಿಸಿಕೊಳ್ಳತಕ್ಕದ್ದು. ಕ್ರಯಚೀಟನ್ನು ದ. ಕ. ಜಿಲ್ಲಾ ರಿ. ಆಫೀಸಿನಲ್ಲಿ ರಿಜಿಸ್ಟ್ರಿಮಾಡಿಸಿ ಕೊಡಲಾದೀತು.

3. ಮೇಲೆ ಹೇಳಿದಂತೆ ಯೋಲಮಿನ ಹಣದ ಪೈಕಿ ರಿಯಾಯತಿ ಮ್ಯಾದೆಗೆ ತೆರತಕ್ಕ ಯೋಲಮಿನ ಹಣವನ್ನು ಯೋಲಮಿಗೆ ಪಡಕೊಂಡವರು ತೆರುವದೆ ತಪ್ಪಿದರೆ ಆ ಕಾರಣದಿಂದಾಗುವ ಎಲ್ಲಾ ನಷ್ಟ ತೆರುವದೆ ಹಾಗೆ ತಪ್ಪಿದವರು ಬದ್ಧರಾಗಿರುತ್ತಾರೆ.

4. ಮೇಲೆ ಹೇಳಿದಂತೆ ಯೋಲಂದಾರರು ಯೋಲಮಿನ ಹಣದ ಶೇಕಡಾ 25ರಷ್ಟು ಹಣವನ್ನು ಸಂದಾಯ ಮಾಡಿ ಬಾಕಿ ಹಣವನ್ನು ಮ್ಯಾದೆಯ ಒಳಗೆ ವಸೂಲು ಕೊಡುವದೆ ತಪ್ಪಿದರೆ ಅನಂತರ ಹಾಗೆ ಸಂದಾಯ ಮಾಡಿದ ಹಣವನ್ನು ವಾಪಾಸು ಕೇಳುವದೆ ಯೋಲಂದಾರರಿಗೆ ಹಕ್ಕಿರುವುದಿಲ್ಲ,

5. ಸದರಿ ಯೋಲಮಿನ ಸಂಬಂಧವಾಗಿ ಕೋರ್ಟಿನವರು ವಿಧಿಸುವ ಆಗಬಹುದಾದ ಹುಕುಮುಗಳಿಗೆ ಅನುಸಾರವಾಗಿ ನಡೆಯುವದೆ ಯೋಲಂದಾರರು ಬದ್ಧರಾಗಿರತಕ್ಕದ್ದು.

6. ಯೋಲಂ ಕಾಯಂ ಆಗಿ ಆ ಸಂಬಂಧ ಮೇಲೆ ಹೇಳಿದಂತೆ ಕಮಿಶನರು ಬರೆದು ಕೊಡುವ ಕ್ರಯಚೀಟು ತಾರೀಕಿನಿಂದ ಆರು ತಿಂಗಳ ಒಳಗೆ ಯೋಲಮಿನ ಮರಮಟ್ಟುಗಳನ್ನು ಕಡಿದುಕೊಂಡು ಹೋಗತಕ್ಕದ್ದು ಮತ್ತು ಹತ್ತು ಇಂಚು ಸುತ್ತಳತೆಗೆ ಕಮ್ಮಿಯಾದ ಮರಗಳನ್ನು ಕಡಿದರೆ ಯೋಲಮಿಗೆ ವಹಿಸಿಕೊಂಡವರು ಆ ಬಾಬಿನ ನಷ್ಟ ತೆರುವದೆ ಬಾಧ್ಯರಾಗುವರು.

ವಿವರ

1. ಕುಂದಾಪುರ ತಾಲೂಕು ಅಲಬಾಡಿ ಗ್ರಾಮದ ಸರ್ವೆ ನಂಬ್ರ 197-2- ಪುಂಜಾ ಎಕ್ರೆ 3-98 ವಿಸ್ತೀರ್ಣದ ಸ್ಥಳದಲ್ಲಿರುವ 10 ಇಂಚು ಸುತ್ತಳತೆ [ಅಂದರೆ ನೆಲದಿಂದ 3 ಅಡಿ ಎತ್ತರದಲ್ಲಿ] ಮತ್ತು ಇದಕ್ಕೆ ಮಿಕ್ಕಿದ ಮರಗಳನ್ನು ಕಡಿದು-ಕೊಂಡು ಹೋಗುವ ಹಕ್ಕು—ಇದನ್ನು ಪ್ರಥಮವಾರು ಕರೆಯುವ ಮೌಲ್ಯ ರೂಪ್ಯಾ 1000/- ಆಗಿರುತ್ತದೆ.

2. ಕುಂದಾಪುರ ತಾಲ್ಲೂಕು ಯಡ್ಯಾಡಿ ಮತ್ಯಾಡಿ ಗ್ರಾಮದ ಸರ್ವೆ ನಂಬ್ರ 191/1 ಪುಂಜಾ ಎಕ್ರೆ 8 25 ವಿಸ್ತೀರ್ಣದ ಸ್ಥಳದಲ್ಲಿರುವ 10 ಇಂಚು ಸುತ್ತಳತೆ [ಅಂದರೆ ನೆಲದಿಂದ 3 ಅಡಿ ಎತ್ತರದಲ್ಲಿ] ಮತ್ತು ಇದಕ್ಕೆ ಮಿಕ್ಕಿದ ಮರಗಳನ್ನು ಕಡಿದು ಕೊಂಡುಹೋಗುವ ಹಕ್ಕು-ಇದನ್ನು ಪ್ರಥಮ ವಾರು ಕರೆಯುವ ಮೌಲ್ಯ ರೂಪ್ಯಾ 1000/-.

K. B. Jinaraja Hegde.
Commissioner.
ಮಂಗಳೂರು, ತಾ. 2-8-1952.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಪುಟ ಹೇಳಬೇಕೆ
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

“ಗೋಪಾಲ ಭೇಷಜಾಶ್ರಮ” ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಋತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಥಾನಿಕಸ್ಥರು:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

ಶಾಲೆ, ಕಾಲೇಜುಗಳಿಗೂ
ಸಹಕಾರಿ ಸಂಘ, ಮುನ್ಸಿಫ್
ಕೋರ್ಟುಗಳಿಗೂ ಕೃಷಿಕ,
ವರ್ಗದಾರ, ವ್ಯಾಪಾರಿಗಳಿಗೂ
ಬೇಕಾಗುವ ಉತ್ತಮ ಕಾಗದದಲ್ಲಿ
ತಯಾರಿಸಿದ
ತರತರದ ಫಾರ್ಮುಗಳು,
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಹಳ್ಳಿಗಳ ಸುಧಾರಣೆಯಾಗಲಿ

ಬೇಕು. ನಾಲ್ಕು ಜನರು ಕೂಡಿದಲ್ಲೆಲ್ಲಾ ಏಕೀಕರಣದ ಚರ್ಚೆ-ಘೋಷಣೆ-ಏಕಪ್ರಕಾರವಾಗಿ ನಡೆಯಬೇಕು. ಇದು ಹೇಳುವಷ್ಟು ಸುಲಭವಲ್ಲ; ಕಠಿನವೆಂದು ಕೈಬಿಟ್ಟು ಕೂತುಕೊಳ್ಳುವಂತೆಯೂ ಇಲ್ಲ. ಕ್ರೈಸ್ತ ಪಾದ್ರಿಗಳು ನಮ್ಮಲ್ಲಿ ಮತ ಪ್ರಚಾರಕ್ಕೆ ಯಾವ ಯಾವ ವೇಷ ಕೈಗೊಂಡರೊ ಅವನ್ನೆಲ್ಲಾ ನಾವಿಂದು ಏಕೀಕರಣಕ್ಕಾಗಿ ಅಭ್ಯಾಸ ಮಾಡಬೇಕು. ಇದಕ್ಕಾಗಿ ಹಳ್ಳಿಗಳಲ್ಲಿ ಮೊದಲು ನಿರಕ್ಷರತೆಯು ನಿರ್ಮೂಲವಾಗಬೇಕು. ಇದು ಕೇವಲ ಸರಕಾರದ ಅವಲಂಬನದಿಂದಲೇ ಆಗಬೇಕಾದರೆ ಅರ್ಧ ಶತಮಾನವಾದರೂ ಬೇಕಾದೀತು. ಅದಕ್ಕಾಗಿ ವಿದ್ಯಾವಂತರಾದ ತರುಣರು ನಿರಕ್ಷರತೆಯ ನಾಶಕ್ಕಾಗಿ ಸೊಂಟಕಟ್ಟಿ ಮಠ ಗುಡಿಗಳಲ್ಲಿ ಪುಕ್ಕಟೆಯಾಗಿ ವೈದಿಕ ಗ್ರಂಥಗಳ ಅಭ್ಯಾಸ ನಡೆಯುವಂತೆ ಈಗ ಅಕ್ಷರಾಭ್ಯಾಸದ ಪದ್ಧತಿಯೂ ಹಾಗೆಯೇ ನಡೆಯಬೇಕಾಗಿದೆ. ಸಾಕ್ಷರರ ಸಂಖ್ಯೆ ಹೆಚ್ಚಿದಂತೆ ಪತ್ರಿಕಾ ವಾಚನದ ಅಭಿರುಚಿಯೂ ಹೆಚ್ಚುವುದು. ಪತ್ರಿಕಾ ವಾಚನದಿಂದ ಏಕೀಕರಣವೆಂದರೇನು? ಅದರ ಉಪಯೋಗವೇನು? ಎಂಬುದು ಮುಂದಟ್ಟಾಗುವದು. ಈ ಮಾರ್ಗವನ್ನು ತಿಳಿದೇ ಆಂಗ್ಲರು ವಿದ್ಯಾಪ್ರಸಾರದ ನಟನೆಯನ್ನು ಮಾತ್ರ ನಟಿಸಿದರಲ್ಲದೆ, ತಮ್ಮ ದೇಶೀಯರಂತೆ ವಿದ್ಯೋದ್ಯೋಗದಲ್ಲಿ ಸಾಕ್ಷರರ ಸಂಖ್ಯೆ ಬೆಳೆಸಲಿಲ್ಲ. ಅವರಿಗೆ ತಾವು ಕೊಟ್ಟ ವಿದ್ಯೆಯೂ ಜಳ್ಳಾಗಬೇಕೆಂದು, ಶಿಕ್ಷಕರ ರಕ್ತ ಮಾಂಸಗಳು ಬೇಗ ಒಣಗುವಂತೆ ಚಿಲ್ಲರೆ ಕಾಸನ್ನು ಅವರಿಗೆ ಸಂಬಳವಾಗಿ ತೆರತೊಡಗಿದರು. ಇದರಿಂದ ಶಿಕ್ಷಕರು ಕರ್ನಾಟಕದ ಉದ್ಧಾರದ ಕುರಿತು ಮಾತಾಡಲು ಶಕ್ತಿಸಾಲದೆ 'ಅನ್ನದೇವರಿಗಿಂತ ಇನ್ನು ದೇವರು ಇಲ್ಲ' ಎಂದು ಜನತೆಯ ಮುಂದೆ ಪುನಶ್ಚರಣ ಮಾಡಬೇಕಾಯಿತು. ಅರೆಪಕ್ವದ ಉಪಾಧ್ಯಾಯನು ಇದಕ್ಕಿಂತ ಇನ್ನೇನು ಸಾಹಸ ತೋರಿಸಿಯಾನು?

ಈಚೀಚೆಗೆ ನಮ್ಮ ಹಳ್ಳಿಗಳಲ್ಲಿ ಹಡಿಲಡದ ಜಮೀನುಗಳೆಲ್ಲಾ ವ್ಯವಸಾಯವಾಗಬೇಕೆಂಬ ಚಳುವಳಿ ಎದ್ದು, ಧನಿದೊಡ್ಡದಿದ್ದ ಶ್ರೀಮಂತನು ಗೋಚರವು ಭೂಮಿಗಳನ್ನೆಲ್ಲಾ ತನ್ನ ಬಗಲಿಗೆ ಹಾಕಿಕೊಂಡ. ಅದರಿಂದ ಬಡವರ ಪಶು ಸಂವರ್ಧನೆಗೆ ಅಡ್ಡಗಾಲು ಬಿದ್ದು ಸಿದ್ದೆ ಕೊಟ್ಟಿಗೆಯ ಮಹಾಲಕ್ಷ್ಮಿಗಳು ಶೀರ್ಣಗ ನಾಟು ಚಮಟೆಯ ಪುಣ್ಯವಂತೆಯರಾಗಿದ್ದಾರೆ. ಇದಕ್ಕೆ ಹೊಂದಿಕೆಯಾಗಿ ಹಳ್ಳಿಗಳಲ್ಲಿ ಅಲ್ಲಲ್ಲಿ ಕಟುಕರು ಸೇರಿಕೊಂಡು ತಮ್ಮ ದಲಾಲಿಗಳ ನೆರವಿನಿಂದ ಇಂಥಾ ಬಡ ದನಗಳನ್ನು ಇಲ್ಲದಂತೆ ಮಾಡುತ್ತಿದ್ದಾರೆ. ಸರಕಾರವು ಇದನ್ನು ನೋಡಿಯೂ ನೋಡದಂತಿದೆ.

ಕುಂದಾಪುರ ತಾಲೂಕಿನ ಹಳ್ಳಿ ಹೊಳೆಯಂಥಾ ಗ್ರಾಮಗಳೂ ಕರಾವಳಿಯವರಿಗಿಂದು ಬೇಕಾಗಿಲ್ಲ. ಅವರು ಕುಳಿತಲ್ಲೇ ಗೋಚರಾವು ಭೂಮಿಗಳನ್ನು ಬಡಿದು ಹಾಕಿಕೊಂಡು ಮುಗುಳುನಗುತ್ತಿದ್ದಾರೆ. ಮಲೆನಾಡಿನ ಸೆರಗಿನ ಹಳ್ಳಿಗಳಲ್ಲಿ ಇನ್ನೂ ಮಾನವ ಸಂಸ್ಕೃತಿ ಚೆನ್ನಾಗಿ ಹರಡದಿದ್ದುದೇ ಕರಾವಳಿಯವರಿಗೆ ಅಲ್ಲಿಗೆ ಹೋಗಲು ಬೇಸರದ ಮುಖ್ಯ ಕಾರಣ. ಈ ಯುಗದಲ್ಲೂ ಅವರು ಟಪ್ಪಾಲು ಪೇಟಿಯ ಮೊಗವನ್ನು ವಾರಕ್ಕೊಮ್ಮೆ ನೋಡಿದರೆ ವಿಶೇಷ, ಇನ್ನು ಅಲ್ಲಿಯ ವರ್ಗದಾರರು ಬಡವನನ್ನು ಪಗಡೆಯ ದಾಳದಂತೆ–ಒಂದು ಮೂಕ ಪ್ರಾಣಿಯಂತೆ–ನಡೆಸುವುದನ್ನೂ ಬಿಟ್ಟಿಲ್ಲ. ಆ ಬಡ ಪ್ರಾಣಿಗಳಿಗೆ ಬಾಳ್ವೆಯೇ ಶರಪಂಜರವಾಗಿರುವಾಗ ಏಕೀಕರಣದ ಘನಪ್ರಶ್ನೆಯಲ್ಲಿ ಅವರಿಗೆ ಹೇಗೆ ಅಭಿರುಚಿ ಹುಟ್ಟಿಸಬಹುದು? ಶಾಲೆಯೆಂದರೆ ಅವರಿಗೆ ಕನಸಿನ ಮಂಡಿಗೆ! ಏಕೀಕರಣದ ಪ್ರಶ್ನೆಯನ್ನು ಅಂಥಾ ಊರುಗಳಲ್ಲಿ ಒಬ್ಬ ಮಹಾನುಭಾವನೆತ್ತಿದನೆಂದರೆ, ಅಲ್ಲಿನ ಶ್ರೀಮಂತರು ತಮ್ಮ ಪಾಳಯಗಾರತನಕ್ಕೆಲ್ಲ ಭಂಗ ಬಂದೀತೊ ಎಂದು ಆ ಮಹಾ ವಿಷಯದ ಕುರಿತೂ, ಆ ವ್ಯಕ್ತಿಯ ಕುರಿತೂ ಅಪಪ್ರಚಾರ ನಡೆಸುತ್ತಾರೆ; ಅಲ್ಲದೆ ಪಾಮರ ಸ್ತ್ರೀ ಪುರುಷರೊಂದಿಗೆ ಪತ್ರಿಕಾ ವಾಚನವು ಪಂಚಮಹಾಪಾತಕವನ್ನು ಮೀರಿದ ಒಂದು ಪಾಪವೆನ್ನುತ್ತಾರೆ. ಇಂಥಾ ಪಾಳಯಗಾರರ ಹಳ್ಳಿಗಳು ಕರ್ನಾಟಕದಲ್ಲಿ ಹಲವು ನೂರುಗಳಿಗೆ ಕಡಿಮೆ ಇರಲಾರದು.

ಸರಕಾರವು ಇದಕ್ಕಾಗಿ ತನ್ನ ಮಲೆನಾಡಿನ ತಾಲೂಕುಗಳಲ್ಲಿ ಮೂರು ಕೇಂದ್ರಗಳನ್ನಾಗಿ ಮಾಡಿಕೊಂಡು, ಕರಾವಳಿಯಲ್ಲಿ ಒಂದು ಕೇಂದ್ರವನ್ನೂ, ಮಲೆನಾಡಿನಲ್ಲೆರಡನ್ನೂ ತೆರೆದು ಪ್ರತಿ ಕೇಂದ್ರದಲ್ಲಿ ಸಂಚಾರಿ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳನ್ನೂ, ಅಲ್ಲದೆ ಇವುಗಳ ಜೊತೆಯಲ್ಲೇ ತಾಲೂಕು ಕಚೇರಿಯನ್ನೂ, ಒಂದೊಂದು ಸಂಚಾರಿ ಹೈಸ್ಕೂಲನ್ನೂ ನಿರ್ಧರಿಸಿಕೊಳ್ಳಬೇಕು. ಇವಾದರೂ ಎರಡು ವರ್ಷಕ್ಕಿಂತ ಹೆಚ್ಚು ಒಂದು ಕೇಂದ್ರದಲ್ಲಿ ನಿಲ್ಲದೆ ಬದಲಾಯಿಸುತ್ತಿರಬೇಕು. ಇದರಿಂದ ಸಾಮಾನ್ಯ ಜನತೆಯೂ ಮಲೆನಾಡಿಗೆ ಬಂದೇ ಬರುವುದು. ಹೀಗೆ ಸರಕಾರವೇ ಮಲೆನಾಡಿನಲ್ಲಿ ತಾನು ತಳವೂರಿದ ವಿನಹ, ಜನರಿಗೆ ನೀವು ಮಲೆನಾಡಿಗೆ ಹೋಗಿ ಎಂದರೆ ಅದು ಸಾರ್ಥಕವಾದೀತೆನ್ನುವುದು ಕಷ್ಟ. ಮಲೆನಾಡೆಲ್ಲಾ ಸಾಗುವಳಿಗೆ ಬಂದ ವಿನಹ ನಮ್ಮ ಅನ್ನದಾರಿದ್ರ್ಯವು ಕಡಿಮೆಯಾಗುವಂತಿಲ್ಲ.

ಕೃಷಿ ಇಲಾಖೆಯೂ ಹಳ್ಳಿಗಳಲ್ಲಿ ಕೇವಲ ಪ್ರಚಾರದಿಂದಲೇ ಪ್ರಯೋಜನ ಹೊಂದಲಾರದು. ಅದು, ಮಾಗಣೆಗೊಂದು ಹತ್ತಿಪ್ಪತ್ತು ಎಕ್ರೆ ವಿಸ್ತಾರದ ಹೊಲಗಳನ್ನು ತೆರೆದು ಒಕ್ಕಲಿಗರಿಗೆ ತಮ್ಮ ಸುಧಾರಣೆಯ ಬೀಜ ಮತ್ತು ಗೊಬ್ಬರಗಳ ಕಡೆಗೆ ಅದರ ದೃಷ್ಟಿ ಹರಿಯುವಂತೆ ಪೈರು ಬೆಳೆಸಿಯೇ ತೋರಿಸಬೇಕು. ಅದರ ಬದಲಿಗೆ ಬೀಜಗಳ ಮತ್ತು ಗೊಬ್ಬರಗಳ ಅಂಗಡಿ ತೆರೆದುಕೊಂಡಿದು ಉಪನ್ಯಾಸವನ್ನು ಪಸಂದಾಗಿ ಮಾಡುತ್ತಿದ್ದರೆ ಒಂದಲ್ಲ ಹತ್ತು ಶತಮಾನ ಕಳೆದರೂ ಕೃಷಿಯು ವರ್ಧನೆಯಾಗಲಾರದು. ಯಾರೂ ಉಪದೇಶದ ಪಾಂಡಿತ್ಯವನ್ನು ಮೆಚ್ಚುವುದಿಲ್ಲ. ಬಡವರ ಹೊಟ್ಟೆಯ ಬಡತನ ತಗ್ಗಿದರೆ ಅವರಿಗೆ ಏಕೀಕರಣದ ಅರ್ಥ ಸುಲಭದಲ್ಲಾಗುವುದು. ಸಾರಾಂಶ–ನಮ್ಮ ನಾಡಿನಲ್ಲಿ ಹೊಟ್ಟೆಯ ಸಮಸ್ಯೆ ಇನ್ನೂ ಪರಿಹಾರವಾಗಿಲ್ಲ.

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದ ಗಳಿಗೆಯಲ್ಲಿ ಕನ್ನಡಕ್ಕೆ ಸ್ವಲ್ಪ ಮನ್ನಣೆ ಬಂದಿತ್ತು. ಈಗೀಗ ಪುನಃ ಇಂಗ್ಲಿಷು ಕನ್ನಡದ ಎದೆಯ ಮೇಲೆ ತನ್ನ ಕಾಲುಗಳನ್ನು ಚಾಚುತ್ತಿದೆ! ಕನ್ನಡ ನಾಡಿನಲ್ಲೇ ಕನ್ನಡಕ್ಕೊಂದು ಹೇಳುವಂಥಾ ಪ್ರಾಧಾನ್ಯತೆಯಿಲ್ಲ. ನಾವಾದರೂ ಸ್ವಾತಂತ್ರ್ಯ ಯುಗದಲ್ಲಿದ್ದೇವೆ! ನಮ್ಮವರಿಗೆ ಇಂಗ್ಲಿಷ್ ಭಾಷೆಯ ಅಮಲನ್ನು ಇಳಿಸುವವರು ಬೇಕು. ಕನ್ನಡವು ಮುಂದಿದ್ದು, ಹಿಂದಿ ಹಿಂದಿದ್ದು ಇಂಗ್ಲಿಷು ಜೊತೆಯಲ್ಲಿ ಬರುತ್ತಿದ್ದರೆ ಯಾರಿಗೂ ನಷ್ಟವಿಲ್ಲ. ಆದರೆ ಇಂಗ್ಲಿಷನ್ನು ಬಿಟ್ಟರೆ ನಮ್ಮ ನಾಗರಿಕತೆ ಸಾಯುತ್ತದೆಂಬುದರಲ್ಲಿ ಅರ್ಥವಿಲ್ಲ. ಯುರೋಪಿನ ಎಷ್ಟೋ ಜನಾಂಗಗಳು ಇಂದು ಇಂಗ್ಲಿಷನ್ನು ಬಿಟ್ಟು ತಲೆಯೆತ್ತಿ ತಿರುಗುತ್ತಿವೆ.

ಸಾರಾಂಶ—ನಮ್ಮವರಲ್ಲಿ ಇಂಗ್ಲಿಷನ್ನು ಬಿಟ್ಟರೆ ಭಂಡವಳ ಶೂನ್ಯ ಇನ್ನಾದರೂ ಜನತೆಯಲ್ಲಿ ನಾಡನುಡಿಯ ಒಲುಮೆ ಹೆಚ್ಚಲಿ!

ಪ್ರತಿಯೊಬ್ಬ ಕನ್ನಡಿಗನಿಗೆ ಇಂದು ಬೇಕಾದುದು ಕರ್ನಾಟಕ ಏಕೀಕರಣ. ಅದಕ್ಕಾಗಿ ನಮ್ಮ ಎಲ್ಲಾ ಕಾರ್ಯಗಳ ಮೊಗವೂ ಆ ಕಡೆಗೇ ತಿರುಗಬೇಕು. ಅದಕ್ಕೇ ಬೇಕಾದ ಶಿಕ್ಷಣ, ರಕ್ಷಣ, ಪ್ರಚಾರ—ಇವೆಲ್ಲಾ ನಾಡಿಗೆ ಹಿತಕರವಾಗುವಂತೆ ನಡೆಯಬೇಕು. ಪ್ರತಿಯೊಬ್ಬ ಕನ್ನಡಿಗನೂ ಬೆಳಿಗ್ಗೆ ಎದ್ದೊಡನೆ—"ನಾನು ಕನ್ನಡಿಗ, ಕನ್ನಡ ನಾಡು ನನ್ನದು. ನನ್ನ ದೌರ್ಬಲ್ಯದಿಂದ ಕನ್ನಡ ನಾಡು ಇಂದು ಹಲವು ಚೂರುಗಳಾಗಿ ಸಿಡಿದಿದೆ. ಇದು ಕನ್ನಡಿಗನಿಗೆ ಮರೆಯಾದ ಅಪಮಾನ. ನಾನು ಬದುಕಿದ್ದರೆ ಕರ್ನಾಟಕ ಏಕೀಕರಣವಾಗಲೇ ಬೇಕು. ಅದನ್ನು ನಾನು ಕಾಣಲೇಬೇಕು" ಎಂದು ಉಚ್ಚರಿಸುವುದರಿಂದ ಎಷ್ಟೋ ಹಿತವಿದೆ.

ಸಾರಾಂಶ—ಪ್ರಕೃತಿಯು ಕನ್ನಡ ನಾಡಿಗೆ ಅನುಕೂಲವಾಗಿದ್ದರೂ, ಪುರುಷರಲ್ಲಿ ಗುಲಾಮತನದ ಚಿಹ್ನೆ ಪರಿಣಾಮಗಳಿನ್ನೂ ಅಳಿದಿಲ್ಲ.

ಸಿರಿಗನ್ನಡಂ ಗೆಲ್ಗೆ.

ಮದ್ರಾಸಿನ ಪಬ್ಲಿಕ್ ಇನ್‌ಸ್ಟ್ರಕ್ಷನಿನ ಡೈರೆಕ್ಟರರಿಂದ ನವಯುಗ ಪತ್ರಿಕೆಯು ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಸೆಕೆಂಡರಿ ಶಾಲೆಗಳು ಅದನ್ನು ತರಿಸಿಕೊಳ್ಳಬಹುದಾಗಿದೆ.

For Protection and Provision
Consult
The New Guardian of India Life Insurance Co., Ltd.
Estd] Head office: MADRAS [1934
A Policy in this Progressive Life Office is good investment; its Agency is valuable business connection.
Applications for representation are invited from influential persons.
Please apply to:
The Branch Manager,
Diamond Building, Hampankatta,
MNGALORE, S. K.

ಅಸಾಧಾರಣ ವಾಗ್ಮಿಗಳೂ ಗ್ರಂಥಕರ್ತರೂ ಆದ ಶ್ರೀ. ಎಸ್. ಪಂಚಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್., ಬಾರ್. ಎಟ್. ಲಾ, ಎಫ್. ಎಸ್. ಎಲ್. ಅವರು ಬರೆದ Tales of Ind ಎಂಬ ಕಥಾವಳಿಯ ಅನುವಾದ.
ಭಾರತೀಯ ಕತೆಗಳು
ಅನುವಾದಕರು—ಶ್ರೀ. ಕೋಡ್ಕಲ್ ಶ್ರೀನಿವಾಸ ರಾವ್.
ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ ಪರಿಣಾಮಕಾರಿಯಾಗಬೇಕೆಂಬ ಹಿರಿಯಾಶೆ ಇದ್ದೇ ಇದೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸಂದರ್ಭೋಚಿತವಾದ ಉಪಮೆ, ಗಾದೆ, ಕಥೆ ದೃಷ್ಟಾಂತ ಇತ್ಯಾದಿಗಳು ಬರಬೇಕು. ಅಂತಹ ಅಮೂಲ್ಯ ಭಂಡಾಗಾರವೇ ಈ ಭಾರತೀಯ ಕತೆಗಳು.
ಎಲ್ಲರೂ ಅವಶ್ಯವಾಗಿ ಓದತಕ್ಕ ಅಪೂರ್ವ ಗ್ರಂಥ
151 ಕತೆಗಳು ಬೆಲೆ ರೂ. 1-12-0
ನವಭಾರತ ಪುಸ್ತಕ ಭಂಡಾರ, ಉಡುಪಿ.

DO YOU KNOW?
THAT
THE VIJAYA BANK, LIMITED.
1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs 10 lacks
3. Has granted an average dividend of 6% to the Shareholders for the past 20 years
4. Has a net work of Branches in South Kanara and one each in Mercara and Fort, Bombay.
5. Offers attractive rates of interest on Deposits and Cash Certificates
6. Grants loans on easy terms to approved parties or on approved securities
7. Does afford full protection and rich return to all your monies.
ADOPT IT AS
"MY BANK"
THE VIJAYA BANK, LIMITED,
H. O., MANGALORE.

ಅಮೃತಾಂಜನ
ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳುವಿಷ ಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

SOVEREIGN-REMEDY
AMRUTANJAN
Best Indian Pain Balm
Amrutanjan Depots
BOMBAY, MADRAS

REGD
ಹುಳುಕಡ್ಡಿ
ಮದ್ದು
ನಮ್ಮಲ್ಲಿ
ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್
ಮದರಾಸು, ಬೊಂಬಾಯಿ ನಾಗ್ಪುರ ಕಲ್ಕತ್ತ

ವಾರದ ಭವಿಷ್ಯ

ತಾ 14—8—52ರಿಂದ 20—8—52ರ ವರೆಗೆ

ಮೇಷ — ನೀವೀವಾರದಲ್ಲಿ ಆರೋಗ್ಯ ವಿಚಾರದಲ್ಲಿ ಹೆಚ್ಚಿಗೆ ನಿಗಾಕೊಡಿರಿ. ದೇಹದಲ್ಲಿ ಗಾಯ ಕಜ್ಜಿ ಉಷ್ಣಾಧಿಕ್ಯದಿಂದಾಗಿ ಜ್ವರಾದಿಗಳೂ ಬರಬಹುದು. ಕೈ ಕೆಸರಾದರೆ ಬಾಯಿ ಮೊಸರಾದೀತೆಂಬಂತೆ ನಿಮ್ಮ ಪ್ರಯತ್ನಕ್ಕೆ ತಕ್ಕ ಫಲ ದೊರೆವುದು. ನೌಕರಿ ಜನಂಗೂ ವ್ಯಾಪಾರಿಗಳಿಗೂ ಈ ಕಾಲವು ಹೆಚ್ಚಿನ ಸುಖದಾಯಕವಾಗಿದೆ ಸೇವಕ ವರ್ಗದವರು ತಾಪತ್ರಯವಿಲ್ಲದೆ ಕಾಲ ಕಳೆವರು. ತಾ 16, 17 ಈ 2 ದಿನಗಳು ಮಿಕ್ಕುಳಿದ ದಿನಗಳಿಗಿಂತ ಉತ್ತಮವಿವೆ.

ವೃಷಭ—ನಿಮ್ಮ ಶಕ್ತಿ ಸಾಹಸ ಪೌರುಷಾದಿಗಳೆಲ್ಲವೂ ಈ ವಾರದಲ್ಲಿ ನೀರಿನಲ್ಲಿ ಮಾಡಿದ ಹೋಮದಂತೆ ವ್ಯರ್ಥವಾದಾವು. ಉತ್ಪತ್ತಿಯು ಅತ್ಯಲ್ಪವಾಗಿದ್ದು ಖರ್ಚು ಅತಿರೇಕವಾಗಿ ಪರಿಣಮಿಸಿ ಸಿಕ್ಕ ಸಿಕ್ಕವರೊಡನೆ ಸಾಲ ಕಡಗಳನ್ನು ಮಾಡುವಿರಿ. ನೇತ್ರ ಪೀಡೆ ಉದರ ಶೂಲೆಗಳು ಕಾಣಿಸ ಬಹುದು. ಗಂಡ ಹೆಂಡಿರೊಳು ವೈಮನಸ್ಸುಂಟಾಗಲಿದೆ. ಆದರೂ ತಾ 14, 15, 18, 19 ಈ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳಿಗೆ ಗುರಿಯಾಗಲಾರಿರಿ.

ಮಿಥುನ—ಧನ್ಯರೆನ್ನಬೇಕು ನಿಮಗೇನೇ. ಕಾರಣ ಶನೈಶ್ಚರನೊಬ್ಬನನ್ನು ಹೊರತಾಗಿ ಮಿಕ್ಕ ಎಲ್ಲಾ ಗ್ರಹರ ಸಹಾನುಭೂತಿಯು ನಿಮಗಿದ್ದ ಮೇಲೆ ಯಾವ ಭಾಗದಲ್ಲಿ ಕೊರತೆಯುಂಟಾದೀತು? ನೀವು ಆಡಿದ್ದೇ ಮಾತು ಮಾಡಿದ್ದೆ ಕೃತಿಯೆಂದಾದೀತು. ಪ್ರತಿಯೊಂದು ಉದ್ಯಮದಲ್ಲು ಪ್ರಗತಿಯುಂಟಾಗುವದು, ಇಷ್ಟೇಷ್ಟರು ಬಂಧು ಭಾಂಧವರಿಂದ ಕೂಡಿದ ನಿಮಗೆ ತಾ 15, 16, 17, 20 ಈ ದಿನಗಳಾದುದೇ ತಿಳಿಯಲೊಲ್ಲದು.

ಕರ್ಕಟ—ಕಳೆದ ವಾರಕ್ಕಿಂತ ನೀವೆಷ್ಟೋ ಆರ್ಥಿಕ ಭಾಗದಲ್ಲಿ ಸುಧಾರಿಸುವಿರಿ. ಹಿಡಿದ ಕಾರ್ಯವನ್ನು ವಿಘ್ನಗಳೆಷ್ಟೇ ಬಂದರೂ ಬಿಡದೆ ಮುಂದರಿಸುವಿರಿ, ಪ್ರಬಲರಾದ ಶತ್ರುಗಳನ್ನು ಎದುರಿಸುವ ಸಾಮರ್ಥ್ಯ ನಿಮಗಿರುವುದು. ಕೆಲವೊಮ್ಮೆ ನಿಷ್ಕಾರಣವಾಗಿ ಮಾತು ಮಾತಿಗೆ ಕಲಹ ಬೆಳೆದೀತು. ಮಕ್ಕಳು ಮರಿಗಳ ಆರೋಗ್ಯವೂ ಚೆನ್ನಾಗಿಂದು. ತಾ 14, 18, 19 ಈ ದಿನಗಳಲ್ಲಿ ಮಿತ್ರ ಸಮಾಗಮ ನಾನಾ ವಿಧದಿಂದ ಧನ ಲಾಭವು ಕಾಣಿಸುವದು.

ಸಿಂಹ—ಕಾರ್ಯವನ್ನು ಸಾಧಿಸಲು ಬೇಕಾದ ಶಕ್ತಿ ಸಾಹಸಗಳು ನಿಮ್ಮಲ್ಲಿಲ್ಲದ ಕಾರಣ ಹೊಸತಾಗಿ ಯಾವ ಕಾರ್ಯಕ್ಕೂ ಕೈಯಿಕ್ಕಲಾರಿರಿ. ಆದರೂ ನೀವು ಕೈಗೊಂಡ ಕಾರ್ಯದಲ್ಲಿ ಫಲ ಲಾಭವು ಉತ್ತಮವಿರುವದು. ನಿಮ್ಮ ಸ್ವಂತ ಉಪಭೋಗಕ್ಕೆ ಯಾವ ಕೊರತೆ ಯಿರದು, ದುಡಿಮೆಯ ಹಣವು ಖರ್ಚಿಗೆ ಕಡಿಮೆಯಾದೀತು. ವಾರಾದಿಯ 4 ದಿನಗಳಲ್ಲಿ ಇಷ್ಟಪ್ರಾಪ್ತಿ ಸುಖ ಲಾಭಗಳಿವೆ.

ಕನ್ಯಾ—ನಿಮ್ಮ ವಿಕ್ರಮ ಕಾರಕನು ವಿಕ್ರಮ ಪತಿಯೂ ಆದ ಅಂಗಾರಕನಿಂದು ವಿಕ್ರಮ ಸ್ಥಾನಕ್ಕೆ ಬಂದಿರುವ ಕಾರಣ ನಿಮ್ಮ ಶೌರ್ಯ ಸಾಹಸಗಳು ಅನುಪಮವಾಗಿರುವವು. ಅದರೇನು ದೈವ ಬಲವು ಕಡಿಮೆಯಾಗಿರುವ ಈ ಕಾಲದಲ್ಲಿ ನಿಮ್ಮ ಕೃತಿಗೆ ತಕ್ಕ ಫಲ ಕಾಣಿಸದು. ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಕೊಡಿರಿ, ತಾ 16ರಿಂದ 19ರ ವರೆಗಿನ ದಿನಗಳು ಅನುಕೂಲವಿರುವವು.

ತುಲಾ— ವ್ಯಯ ಧನಗಳಲ್ಲಿರುವ ಶನ್ಯಂಗಾರಕರು ಸ್ವಲ್ಪಮಟ್ಟಿನ ಪ್ರತಿಕೂಲವನ್ನು ಮಾಡಲಿರುವರು. ಆದರೂ ಇತರ ಗ್ರಹರ ಬಲ ಸಂಪನ್ನರಾದ ನಿಮಗೆ ಈ ವಾರದಲ್ಲಿ ಯಾವ ತೊಂದರೆಯೂ ಉಂಟಾಗದು. ನೆನೆದಂತೆ ಕಾರ್ಯವು ಫಲಿಸುವದು. ಜನತೆಯಿಂದ ಗೌರವಾದರಗಳು ಲಭಿಸುವವು. ಆರ್ಥಿಕ ಭಾಗವು ಉತ್ತಮಸ್ಥಿತಿಗೆ ಬರಲಿದೆ. ವಾರಾಂತ್ಯದ 3 ದಿನಗಳು ಅತ್ಯುತ್ತಮವಿವೆ.

ವೃಶ್ಚಿಕ— ಹಿಂದಿನ ವಾರಕ್ಕಿಂತ ನೀವೆಷ್ಟೋ ಸುಧಾರಿಸುವಿರಿ ನಿಮ್ಮ ಪ್ರಯತ್ನಕ್ಕೆ ತಕ್ಕುದಾದ ಫಲವು ಲಭಿಸುವದು. ಆದರೂ ಖರ್ಚುಗಳು ಹೆಚ್ಚಿರುವುದರಿಂದ ಸಾಲಮಾಡುವ ಪ್ರಸಂಗ ಬರಲಿದೆ. ವಿರೋಧಿಗಳು ಪ್ರತೀಕಾರ ಕ್ರಿಯೆಯಲ್ಲಿ ಆಸಕ್ತರಾಗುವ ಕಾರಣ ನಿಮ್ಮ ಮನಸ್ಸಿಗೆ ನೆಮ್ಮದಿಯಿರಲಾರದು. ವಾರದ ಆದ್ಯಂತ ದಿನಗಳಲ್ಲಿ ನಿಮ್ಮ ಬಯಕೆಯು ಈಡೇರಲಿದೆ.

ಧನು— ಪಿತ್ಥ ದೋಷದಿಂದ ನಿದ್ರಾಭಾವ ನೇತ್ರ ಪೀಡಾದಿಗಳು ಕಾಣಿಸಬಹುದು. ಸ್ತ್ರೀಯರೊಡನೆ ಕಲಹವಾಗುವ ಸಂಭವವಿದೆ. ವಿದ್ಯಾ ಕೀರ್ತಿಗಳಿಗೆ ಕಳಂಕವು ಕೂಡ ಬರಬಹುದು. ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾದ ನಿಮಗೆ ಗೃಹಸುಖವು ಉತ್ತಮವಾಗಿದ್ದೀತು. ಖರ್ಚಿಗೆ ಸಾಕಷ್ಟು ಉತ್ಪತ್ತಿಯಿರುವುದರಿಂದ ದಿನಯಾಪನೆಯು ಸುಖಮಯವಾಗಲಿದೆ. ವಾರಾದಿಯ 4 ದಿನಗಳಲ್ಲಿ ಯಾನ ಮಾನಾದಿಗಳ ಲಾಭವಿದೆ.

ಮಕರ— ವ್ಯರ್ಥ ಖರ್ಚುಗಳು ಹೆಚ್ಚುವುದರಿಂದಲೂ ಪ್ರಯತ್ನಕ್ಕೆ ತಕ್ಕುದಾದ ಫಲವಿಲ್ಲದಿರುವುದರಿಂದಲೂ ಈ ವಾರದಲ್ಲಿ ನೀವು ದಿನಯಾಪನೆಗಾಗಿ ಸಾಲಮಾಡಬೇಕಾದೀತು. ಲಾಭಗತನಾದ ಕುಜನು ಬಹುತೇಕ ನಿಮಗೆ ಅನುಕೂಲಮಾಡಲಿರುವನು. ಬಂಧುಜನರು ನಿಮ್ಮ ಮೇಲೆ ಎರಡೆಣಿಸಲಿರುವರು. ಆಕಸ್ಮಿಕ ಪ್ರವಾಸವು ಪ್ರಾಪ್ತವಾಗಲಿದೆ. ತಾ. 16, 17, 18, 19 ಈ ದಿನಗಳು ಸ್ವಲ್ಪ ಸುಖಕಾರಿಗಳವೆ.

ಕುಂಭ — ಈ ವಾರದಲ್ಲಿ ಪರಿಸ್ಥಿತಿಯು ತೀರಾ ಬಿಕ್ಕಟ್ಟಿಗೆ ಬರಲಿದೆ. ಬುಧನನ್ನುಳಿದು ಎಲ್ಲಾ ಗ್ರಹರೂ, ಪ್ರತಿಕೂಲರಾಗಿ ನಿಂತಿರುವ ಕಾರಣ ಸಿಕ್ಕ ಸಿಕ್ಕವರೊಡನೆ ಜಗಳ ವಿರೋಧಗಳು ಹೆಚ್ಚುವವು. ಹಿಡಿದ ಕಾರ್ಯದಲ್ಲಿ ನಷ್ಟವಾದೀತು, ರಾಜಕೀಯದಲ್ಲಿ ಪರಾಭವವುಂಟಾಗುವದು. ಜನತೆಯ ಬೆಂಬಲಹೀನರಾದ ನಿಮಗೆ ವಾರಾಂತ್ಯದ 3 ದಿನಗಳಲ್ಲಿ ಹೆಚ್ಚಿನ ಕಷ್ಟ ಕಾಣಿಸಲಾರದು.

ಮೀನ— ಗೃಹ ತಾಪತ್ರಯಗಳಿಂದ ಒಮ್ಮೊಮ್ಮೆ ನಿಮಗೆ ವಿರಕ್ತಿ ತೋರಬಹುದೀ ಸಂಸಾರದಲ್ಲಿ. ಹೆಂಡಿರು ಮಕ್ಕಳ ಕಾಟವು ಅಸಹನೀಯವಾದೀತು. ಮನೋರೋಗ ಪರಾಭವಾದಿಗಳಿಂದ ದುರ್ಬಲರಾದ ನಿಮ್ಮ ದೇಹದಲ್ಲಿ ದೌರ್ಬಲ್ಯ ಶೌರ್ಯಗಳು ಕಾಣಿಸಲಿವೆ ಆದರೂ ಉದ್ಯೋಗದಲ್ಲಿ ಪ್ರಗತಿ ಕಂಡುಬರುವದು, ತಾ 14, 15, 20, ಈ ದಿನಗಳಲ್ಲಿ ನಿಮ್ಮ ಮನೋರಥವು ಸಿದ್ಧಿಸಲಿದೆ.

ಯೇಲಂ ನೋಟೀಸು

ದಕ್ಷಿಣ ಕನ್ನಡ ಸಬೋರ್ಡಿನೇಟ್ ಕೋರ್ಟಿನಲ್ಲಿ

ಕ್ರಮ ನಂಬ್ರ 165/1951-
R. I. A. ನಂ 1040/1952.
ಮಹಾಬಲ ಹೆಗಡೆ —ವಾದಿ
ಮತ್ತು
ವೆಂಕಪ್ಪ ಹೆಗಡೆ ವಗೈರೆಯು —ಪ್ರತಿವಾದಿರು

ಮೇಲ್ಕಂಡ ವ್ಯವಹರಣೆಯಲ್ಲಿ ನೇಮಕಹೊಂದಿದ ಕಮಿಶನರಾದ ಮಂಗಳೂರು ಶಹಾರ ಪೈಕಿ ಕೊಡಿಯಾಲಬೈಲಿನಲ್ಲಿರುವ ಎಡ್ವಕೇಟ್ ಕೆ. ಬಿ. ಜಿನರಾಜ ಹೆಗಡೆಯವರು ಸದರಿ ಕೋರ್ಟು R. I. A. ನಂಬ್ರ 1040/1952ರಲ್ಲಿ ಕೋರ್ಟಿನವರು ಮಾಡಿರುವ ಹುಕುಮಿನ ಮೇರೆಗೆ ಕೆಳಗೆ ಕಾಣಿಸಿದ ಆಸ್ತಿಗಳಲ್ಲಿರುವ ಕಾಡಿನ ಮರಮುಟ್ಟುಗಳನ್ನು ಈ ಕೆಳಗೆ ನಮೂದಿಸಿರುವ ಶರ್ತ ವ ಕ್ರಮಗಳಿಗೆ ಅನುಸಾರವಾಗಿ ತಾರೀಕು 24-8-1952ನೇ ಆದಿತ್ಯವಾರ ದಿವಸ ಬೆಳಿಗ್ಗೆ ಘಂಟೆ 11ಕ್ಕೆ ಕುಂದಾಪುರ ತಾಲೂಕು ಬಿದ್ಕಲ್ಲು ಕಟ್ಟೆ ಹರ್ದಳ್ಳಿ ಅಂತಯ್ಯ ಶೆಟ್ರ ಭಂಡಸಾಲೆ ವಠಾರದಲ್ಲಿ ಬಹಿರಂಗವಾಗಿ ಯೇಲಂ ಮಾಡುವರು.

ಶರತಗಳು

1. ಯೇಲಮಿನಲ್ಲಿ ಸದರಿ ಕಾಡಿನಲ್ಲಿರುವ ಮರಮುಟ್ಟುಗಳನ್ನು ಅಖೈರು ದರ್ಖಾಸ್ತಿಗೆ ಪಡೆದವರು ಯೇಲಂ ಕಾಯಂ ಆದ ಕೂಡಲೇ ಯೇಲಮಿನ ಹಣದ ಶೇಕಡಾ 25ರಷ್ಟು ಹಣವನ್ನು ಪಾವತಿ ಮಾಡತಕ್ಕದ್ದು. ಮತ್ತು ಬಾಕಿ ಹಣವನ್ನು ಯೇಲಂ ತಾರೀಕಿನಿಂದ 15 ದಿವಸಗಳ ಒಳಗೆ ಕಮಿಶನರಿಗೆ ಸಲ್ಲಾಯಿಸತಕ್ಕದ್ದು.

2. ಸದ್ರಿ ಯೇಲವನ್ನು ಕೋರ್ಟಿನವರು ಕ್ರಮದಂತೆ ಕಾಯಂ ಮಾಡಿದ ಕೂಡಲೇ ಕಮಿಶನರು ಸದ್ರಿ ಯೇಲಮಿನ ಸಂಬಂಧ ಆಗತಕ್ಕ ಕ್ರಯಚೀಟು ಬರಕೊಡುವರು. ಆ ರೀತಿ ಬರಕೊಡುವ ಕ್ರಯ ಚೀಟಿನ ಬಗ್ಗೆ ಅಗತ್ಯವಿರುವ ಛಾಪ ರಿಜಿಸ್ತ್ರಿ ವಗೈರೆ ಖರ್ಚನ್ನು ಯೇಲಮುದಾರರೆ ಸಹಿಸಿಕೊಳ್ಳತಕ್ಕದ್ದು. ಕ್ರಯಚೀಟನ್ನು ದ. ಕ. ಜಿಲ್ಲಾ ರಿ. ಆಫೀಸಿನಲ್ಲಿ ರಿಜಿಸ್ತ್ರಿಮಾಡಿಸಿ ಕೊಡಲಾದೀತು.

3. ಮೇಲೆ ಹೇಳಿದಂತೆ ಯೇಲಮಿನ ಹಣದ ಪೈಕಿ ನಿಯಮಿತ ಮ್ಯಾದೆಗೆ ತೆರತಕ್ಕ ಯೇಲಮಿನ ಹಣವನ್ನು ಯೇಲಮಿಗೆ ಪಡೆಕೊಂಡವರು ತೆರುವರೆ ತಪ್ಪಿದರೆ ಆ ಕಾರಣದಿಂದಾಗುವ ಎಲ್ಲಾ ನಷ್ಟ ತೆರುವರೆ ಹಾಗೆ ತಪ್ಪಿದವರು ಬದ್ಧರಾಗಿರುತ್ತಾರೆ.

4. ಮೇಲೆ ಹೇಳಿದಂತೆ ಯೇಲಂದಾರರು ಯೇಲಮಿನ ಹಣದ ಶೇಕಡಾ 25ರಷ್ಟು ಹಣವನ್ನು ಸಂದಾಯ ಮಾಡಿ ಬಾಕಿ ಹಣವನ್ನು ಮ್ಯಾದೆಯ ಒಳಗೆ ವಸೂಲು ಕೊಡುವರೆ ತಪ್ಪಿದರೆ ಅನಂತರ ಹಾಗೆ ಸಂದಾಯ ಮಾಡಿದ ಹಣವನ್ನು ವಾಪಾಸು ಕೇಳುವರೆ ಯೇಲಂದಾರರಿಗೆ ಹಕ್ಕಿರುವುದಿಲ್ಲ.

5. ಸದರಿ ಯೇಲಮಿನ ಸಂಬಂಧವಾಗಿ ಕೋರ್ಟಿನವರು ವಿಧಿಸುವ ಆಗಬಹುದಾದ ಹುಕುಮುಗಳಿಗೆ ಅನುಸಾರವಾಗಿ ನಡೆಯುವರೆ ಯೇಲಂದಾರರು ಬದ್ಧರಾಗಿರತಕ್ಕದ್ದು.

6. ಯೇಲಂ ಕಾಯಂ ಆಗಿ ಆ ಸಂಬಂಧ ಮೇಲೆ ಹೇಳಿದಂತೆ ಕಮಿಶನರು ಬರೆದು ಕೊಡುವ ಕ್ರಯಚೀಟು ತಾರೀಕಿನಿಂದ ಆರು ತಿಂಗಳ ಒಳಗೆ ಯೇಲಮಿನ ಮರಮುಟ್ಟುಗಳನ್ನು ಕಡಿದುಕೊಂಡು ಹೋಗತಕ್ಕದ್ದು ಮತ್ತು ಹತ್ತು ಇಂಚು ಸುತ್ತಳತೆಗೆ ಕಮ್ಮಿಯಾದ ಮರಗಳನ್ನು ಕಡಿದರೆ ಯೇಲಮಿಗೆ ವಹಿಸಿಕೊಂಡವರು ಆ ಬಾಬಿನ ನಷ್ಟತೆರುವರೆ ಬಾಧ್ಯರಾಗುವರು.

ವಿವರ

1. ಕುಂದಾಪುರ ತಾಲೂಕು ಅಲಬಾಡಿ ಗ್ರಾಮದ ಸರ್ವೆ ನಂಬ್ರ 197-2 ಪುಂಜಾ ಎಕ್ರೆ 3-98 ವಿಸ್ತೀರ್ಣದ ಸ್ಥಳದಲ್ಲಿರುವ 10 ಇಂಚು ಸುತ್ತಳತೆ [ಅಂದರೆ ನೆಲದಿಂದ 3 ಅಡಿ ಎತ್ತರದಲ್ಲಿ] ಮತ್ತು ಇದಕ್ಕೆ ಮೀರಿದ ಮರಗಳನ್ನು ಕಡಿದು-ಕೊಂಡು ಹೋಗುವ ಹಕ್ಕು—ಇದನ್ನು ಪ್ರಥಮವಾರು ಕರೆಯುವ ಮೌಲ್ಯ ರೂಪಾ 1000/- ಆಗಿರುತ್ತದೆ.

2. ಕುಂದಾಪುರ ತಾಲ್ಲೂ ಯಡ್ಯಾಡಿ ಮತ್ಯಾಡಿ ಗ್ರಾಮದ ಸರ್ವೆ ನಂಬ್ರ 191/1 ಪುಂಜಾ ಎಕ್ರೆ 8 25 ವಿಸ್ತೀರ್ಣದ ಸ್ಥಳದಲ್ಲಿರುವ 10 ಇಂಚು ಸುತ್ತಳತೆ [ಅಂದರೆ ನೆಲದಿಂದ 3 ಅಡಿ ಎತ್ತರದಲ್ಲಿ] ಮತ್ತು ಇದಕ್ಕೆ ಮೀರಿದ ಮರಗಳನ್ನು ಕಡಿದು ಕೊಂಡುಹೋಗುವ ಹಕ್ಕು. ಇದನ್ನು ಪ್ರಥಮ ವಾರು ಕರೆಯುವ ಮೌಲ್ಯ ರೂಪಾ 1000/-.

K B. Jinaraja Hegde.
Commissioner.
ಮಂಗಳೂರು, ತಾ. 2-8-1952.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ!
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ ಎಂ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

ಶಾಲೆ, ಕಾಲೇಜುಗಳಿಗೂ
ಸಹಕಾರಿ ಸಂಘ, ಮುನ್ಸಿಫ್
ಕೋರ್ಟುಗಳಿಗೂ ಕೃಷಿಕ,
ವರ್ಗದಾರ, ವ್ಯಾಪಾರಿಗಳಿಗೂ
ಬೇಕಾಗುವ ಉತ್ತಮ ಕಾಗದದಲ್ಲಿ
ತಯಾರಿಸಿದ
ತರತರದ ಫಾರ್ಮುಗಳು,
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಹಳ್ಳಿಗಳ ಸುಧಾರಣೆಯಾಗಲಿ

ಬೇಕು. ನಾಲ್ಕು ಜನರು ಕೂಡಿದಲ್ಲೆಲ್ಲಾ ಏಕೀಕರಣದ ಚರ್ಚೆ-ಘೋಷಣೆ:ಪಕ್ಷಪ್ರಚಾರವಾಗಿ ನಡೆಯಬೇಕು. ಇದು ಹೇಳುವಷ್ಟು ಸುಲಭವಲ್ಲ; ಕಠಿನವೆಂದು ಕೈಬಿಟ್ಟು ಕೂತುಕೊಳ್ಳುವಂತೆಯೂ ಇಲ್ಲ. ಕ್ರೈಸ್ತ ಪಾದ್ರಿಗಳು ನಮ್ಮಲ್ಲಿ ಮತ ಪ್ರಚಾರಕ್ಕೆ ಯಾವ ಯಾವ ವೇಷ ಕೈಗೊಂಡರೂ ಅವನ್ನೆಲ್ಲಾ ನಾವಿಂದು ಏಕೀಕರಣಕ್ಕಾಗಿ ಅಭ್ಯಾಸ ಮಾಡಬೇಕು. ಇದಕ್ಕಾಗಿ ಹಳ್ಳಿಗಳಲ್ಲಿ ಮೊದಲು ನಿರಕ್ಷರತೆಯು ನಿರ್ಮೂಲವಾಗಬೇಕು. ಇದು ಕೇವಲ ಸರಕಾರದ ಅವಲಂಬನದಿಂದಲೇ ಆಗಬೇಕಾದರೆ ಅರ್ಧ ಶತಮಾನವಾದರೂ ಬೇಕಾದೀತು. ಆದಕ್ಕಾಗಿ ವಿದ್ಯಾವಂತರಾದ ತರುಣರು ನಿರಕ್ಷರತೆಯ ನಾಶಕ್ಕಾಗಿ ಸೊಂಟಕಟ್ಟಿ ಮಠ ಗುಡಿಗಳಲ್ಲಿ ಪುಕ್ಕಟೆಯಾಗಿ ವೈದಿಕ ಗ್ರಂಥಗಳ ಅಭ್ಯಾಸ ನಡೆಯುವಂತೆ ಈಗ ಅಕ್ಷರಾಭ್ಯಾಸದ ಪದ್ಧತಿಯೂ ಹಾಗೆಯೇ ನಡೆಯಬೇಕಾಗಿದೆ. ಸಾಕ್ಷರರ ಸಂಖ್ಯೆ ಹೆಚ್ಚಿದಂತೆ ಪತ್ರಿಕಾ ವಾಚನದ ಅಭಿರುಚಿಯೂ ಹೆಚ್ಚುವುದು. ಪತ್ರಿಕಾ ವಾಚನದಿಂದ ಏಕೀಕರಣವೆಂದರೇನು? ಅದರ ಉಪಯೋಗವೇನು? ಎಂಬುದು ಮುಂದಟ್ಟಾಗುವದು. ಈ ಮರ್ಮವನ್ನು ತಿಳಿದೇ ಆಂಗ್ಲರು ವಿದ್ಯಾಪ್ರಸಾರದ ನಟನೆಯನ್ನು ಮಾತ್ರ ನಟಿಸಿದರಲ್ಲದೆ, ತಮ್ಮ ದೇಶೀಯರಂತೆ ವಿದ್ಯೋದ್ವೇಗದಲ್ಲಿ ಸಾಕ್ಷರರ ಸಂಖ್ಯೆ ಬೆಳೆಸಲಿಲ್ಲ. ಅವರಿಗೆ ತಾವು ಕೊಟ್ಟ ವಿದ್ಯೆಯೂ ಜಳ್ಳಾಗಬೇಕೆಂದು, ಶಿಕ್ಷಕರ ರಕ್ತ ಮಾಂಸಗಳು ಬೇಗ ಒಣಗುವಂತೆ ಚಿಲ್ಲರೆ ಕಾಸನ್ನು ಅವರಿಗೆ ಸಂಬಳವಾಗಿ ತೆರತೊಡಗಿದರು. ಇದರಿಂದ ಶಿಕ್ಷಕರು ಕರ್ನಾಟಕದ ಉದ್ಧಾರದ ಕುರಿತು ಮಾತಾಡಲು ಶಕ್ತಿಸಾಲದೆ 'ಅನ್ನದೇವರಿಗಿಂತ ಇನ್ನು ದೇವರು ಇಲ್ಲ' ಎಂದು ಜನತೆಯ ಮುಂದೆ ಪುನಶ್ಚರಣ ಮಾಡಬೇಕಾಯಿತು. ಅರೆಸತ್ವದ ಉಪಾಧ್ಯಾಯನು ಇದಕ್ಕಿಂತ ಇನ್ನೇನು ಸಾಹಸ ತೋರಿಸಿಯಾನು?

ಈಚೀಚೆಗೆ ನಮ್ಮ ಹಳ್ಳಿಗಳಲ್ಲಿ ಹದಿಕೆಡೆದ ಜಮೀನುಗಳೆಲ್ಲಾ ವ್ಯವಸಾಯವಾಗಬೇಕೆಂಬ ಚಟುವಟಿಕೆ ಎದ್ದು, ಧನಿದೊಡ್ಡದಿದ್ದ ಶ್ರೀಮಂತನು ಗೋಚರವು ಭೂಮಿಗಳನ್ನೆಲ್ಲಾ ತನ್ನ ಬಗಲಿಗೆ ಹಾಕಿಕೊಂಡ. ಅದರಿಂದ ಬಡವರ ಪಶು ಸಂವರ್ಧನೆಗೆ ಅಡ್ಡಗಾಲು ಬಿದ್ದು ಸಿದ್ದೆ ಕೊಟ್ಟಿಗೆಯ ಮಹಾಲಕ್ಷ್ಮಿಗಳು ತೀರ್ಥದ ಸಾಟು ಚವುಳಿಯ ಪುಣ್ಯವಂತೆಯರಾಗಿದ್ದಾರೆ. ಇದಕ್ಕೆ ಹೊಂದಿಕೆಯಾಗಿ ಹಳ್ಳಿಗಳಲ್ಲಿ ಅಲ್ಲಲ್ಲಿ ಕಟುಕರು ಸೇರಿಕೊಂಡು ತಮ್ಮ ದಲಾಲಿಗಳ ನೆರವಿನಿಂದ ಇಂಥಾ ಬಡ ದನಗಳನ್ನು ಇಲ್ಲದಂತೆ ಮಾಡುತ್ತಿದ್ದಾರೆ. ಸರಕಾರವು ಇದನ್ನು ನೋಡಿಯೂ ನೋಡದಂತಿದೆ.

ಕುಂದಾಪುರ ತಾಲೂಕಿನ ಹಳ್ಳಿ ಹೊಳೆಯಂಥಾ ಗ್ರಾಮಗಳೂ ಕರಾವಳಿಯವರಿಗಿಂದು ಬೇಕಾಗಿಲ್ಲ. ಅವರು ಕುಳಿತಲ್ಲೇ ಗೋಚರವು ಭೂಮಿಗಳನ್ನು ಬಡಿದು ಹಾಕಿಕೊಂಡು ಮುಗುಳುನಗುತ್ತಿದ್ದಾರೆ. ಮಲೆನಾಡಿನ ಸೆರಗಿನ ಹಳ್ಳಿಗಳಲ್ಲಿ ಇನ್ನೂ ಮಾನವ ಸಂಸ್ಕೃತಿ ಚೆನ್ನಾಗಿ ಹರಡದಿದ್ದುದೇ ಕರಾವಳಿಯವರಿಗೆ ಅಲ್ಲಿಗೆ ಹೋಗಲು ಬೇಸರದ ಮುಖ್ಯ ಕಾರಣ. ಈ ಯುಗದಲ್ಲೂ ಅವರು ಟಪ್ಪಾಲು ಪೇಟೆಯ ಮೊಗವನ್ನು ವಾರಕ್ಕೊಮ್ಮೆ ನೋಡಿದರೆ ವಿಶೇಷ. ಇನ್ನು ಅಲ್ಲಿಯ ವರ್ಗದಾರರು ಬಡವನನ್ನು ಪಗಡೆಯ ದಾಳದಂತೆ- ಒಂದು ಮೂಕ ಪ್ರಾಣಿಯಂತೆ-ನಡೆಸುವುದನ್ನು ಬಿಟ್ಟಿಲ್ಲ. ಆ ಬಡ ಬಾಯಿಗಳಿಗೆ ಬಾಳ್ವೆಯೇ ಶರಮಂಚವಾಗಿರುವಾಗ ಏಕೀಕರಣದ ಘನಪ್ರಶ್ನೆಯಲ್ಲಿ ಅವರಿಗೆ ಹೇಗೆ ಅಭಿರುಚಿ ಹುಟ್ಟಬಹುದು? ಶಾಲೆಯೆಂದರೆ ಅವರಿಗೆ ಕನಸಿನ ಮಂಡಿಗೆ! ಏಕೀಕರಣದ ಪ್ರಶ್ನೆಯನ್ನು ಅಂಥಾ ಊರುಗಳಲ್ಲಿ ಒಬ್ಬ ಮಹಾನುಭಾವನೆತ್ತಿದನೆಂದರೆ, ಅಲ್ಲಿನ ಶ್ರೀಮಂತರು ತಮ್ಮ ಪಾಳೆಯಗಾರತನಕ್ಕೆಲ್ಲ ಭಂಗ ಬಂದೀತೋ ಎಂದು ಆ ಮಹಾ ವಿಷಯದ ಕುರಿತೂ, ಆ ವ್ಯಕ್ತಿಯ ಕುರಿತೂ ಅಪಪ್ರಚಾರ ನಡೆಸುತ್ತಾರೆ; ಅಲ್ಲದೆ ಪಾಮರ ಸ್ತ್ರೀ ಪುರುಷರೊಂದಿಗೆ ಪತ್ರಿಕಾ ವಾಚನವು ಪಂಚಮಹಾಪಾತಕವನ್ನು ಮೀರಿದ ಒಂದು ಪಾಪವೆನ್ನುತ್ತಾರೆ. ಇಂಥಾ ಪಾಳೆಯಗಾರರ ಹಳ್ಳಿಗಳು ಕರ್ನಾಟಕದಲ್ಲಿ ಹಲವು ನೂರುಗಳಿಗೆ ಕಡಿಮೆ ಇರಲಾರದು.

ಸರಕಾರವು ಇದಕ್ಕಾಗಿ ತನ್ನ ಮಲೆನಾಡಿನ ತಾಲೂಕುಗಳಲ್ಲಿ ಮೂರು ಕೇಂದ್ರಗಳನ್ನಾಗಿ ಮಾಡಿಕೊಂಡು, ಕರಾವಳಿಯಲ್ಲಿ ಒಂದು ಕೇಂದ್ರವನ್ನೂ, ಮಲೆನಾಡಿನಲ್ಲೆರಡನ್ನೂ ತೆರೆದು ಪ್ರತಿ ಕೇಂದ್ರದಲ್ಲಿ ಸಂಚಾರಿ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳನ್ನೂ, ಅಲ್ಲದೆ ಇವುಗಳ ಜೊತೆಯಲ್ಲೇ ತಾಲೂಕು ಕಚೇರಿಯನ್ನೂ, ಒಂದೊಂದು ಸಂಚಾರಿ ನ್ಯಾ ಸ್ಥಳವನ್ನು ಏರ್ಪಡಿಸಿಕೊಳ್ಳಬೇಕು. ಇವಾದರೂ ಎರಡು ವರ್ಷಕ್ಕಿಂತ ಹೆಚ್ಚು ಒಂದು ಕೇಂದ್ರದಲ್ಲಿ ನಿಲ್ಲದೆ ಬದಲಾಯಿಸುತ್ತಿರಬೇಕು. ಇದರಿಂದ ಸಾಮಾನ್ಯ ಜನತೆಯೂ ಮಲೆನಾಡಿಗೆ ಬಂದೇ ಬರುವುದು. ಹೀಗೆ ಸರಕಾರವೇ ಮಲೆನಾಡಿನಲ್ಲಿ ತಾನು ತಳವೂರದ ವಿನಹ, ಜನರಿಗೆ ನೀವು ಮಲೆನಾಡಿಗೆ ಹೋಗಿ ಎಂದರೆ ಅದು ಸಾರ್ಥಕವಾದೀತೆನ್ನುವುದು ಕಷ್ಟ. ಮಲೆನಾಡೆಲ್ಲಾ ಸಾಗುವಳಿಗೆ ಬಂದ ವಿನಹ ನಮ್ಮ ಅನ್ನದಾರಿದ್ರ್ಯವು ಕಡಿಮೆಯಾಗುವಂತಿಲ್ಲ.

ಕೃಷಿ ಇಲಾಖೆಯೂ ಹಳ್ಳಿಗಳಲ್ಲಿ ಕೇವಲ ಪ್ರಚಾರದಿಂದಲೇ ಪ್ರಯೋಜನ ಹೊಂದಲಾರದು. ಅದು, ಮಾಗಣೆಗೊಂದು ಹತ್ತಿಪ್ಪತ್ತು ಎಕ್ರೆ ವಿಸ್ತಾರದ ಹೊಲಗಳನ್ನು ತೆರೆದು ಒಕ್ಕಲಿಗರಿಗೆ ತಮ್ಮ ಸುಧಾರಣೆಯ ಬೀಜ ಮತ್ತು ಗೊಬ್ಬರಗಳ ಕಡೆಗೆ ಆದರ ದೃಷ್ಟಿ ಹರಿಯುವಂತೆ ಸ್ಪರ್ಧೆ ಬೆಳೆಸಿಯೇ ತೋರಿಸಬೇಕು. ಅದರ ಬದಲಿಗೆ ಬೀಜಗಳ ಮತ್ತು ಗೊಬ್ಬರಗಳ ಅಂಗಡಿ ತೆರೆದುಕೊಂಡಿದು ಉಪನ್ಯಾಸವನ್ನು ಪಸಂದಾಗಿ ಮಾಡುತ್ತಿದ್ದರೆ ಒಂದಲ್ಲ ಹತ್ತು ಶತಮಾನ ಕಳೆದರೂ ಕೃಷಿಯು ವರ್ಧನೆಯಾಗಲಾರದು. ಯಾರೂ ಉಪದೇಶದ ಪಾಂಡಿತ್ಯವನ್ನು ಮೆಚ್ಚುವುದಿಲ್ಲ. ಬಡವರ ಹೊಟ್ಟೆಯ ಬಡತನ ಕುಗ್ಗಿದರೆ ಅವರಿಗೆ ಏಕೀಕರಣದ ಅರ್ಥ ಸುಲಭದಲ್ಲಾಗುವುದು. ಸಾರಾಂಶ- ನಮ್ಮ ನಾಡಿನಲ್ಲಿ ಹೊಟ್ಟೆಯ ಸಮಸ್ಯೆ ಇನ್ನೂ ಪರಿಹಾರವಾಗಿಲ್ಲ.

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದ ಗಳಿಗೆಯಲ್ಲಿ ಕನ್ನಡಕ್ಕೆ ಸ್ವಲ್ಪ ಮನ್ನಣೆ ಬಂದಿತ್ತು. ಈಗೀಗ ಪುನಃ ಇಂಗ್ಲಿಷು ಕನ್ನಡದ ಎದೆಯ ಮೇಲೆ ತನ್ನ ಕಾಲುಗಳನ್ನು ಚಾಚುತ್ತಿದೆ! ಕನ್ನಡ ನಾಡಿನಲ್ಲೇ ಕನ್ನಡಕ್ಕೊಂದು ಹೇಳುವಂಥಾ ಪ್ರಾಧಾನ್ಯತೆಯಿಲ್ಲ. ನಾವಾದರೋ ಸ್ವಾತಂತ್ರ್ಯ ಯುಗದಲ್ಲಿದ್ದೇವೆ! ನಮ್ಮವರಿಗೆ ಇಂಗ್ಲಿಷ್ ಭಾಷೆಯ ಅಮಲನ್ನು ಇಳಿಸುವವರು ಬೇಕು. ಕನ್ನಡವು ಮುಂದಿದ್ದು, ಹಿಂದಿ ಹಿಂದಿದ್ದು, ಇಂಗ್ಲಿಷು ಜೊತೆಯಲ್ಲಿ ಬರುತ್ತಿದ್ದರೆ ಯಾರಿಗೂ ನಷ್ಟವಿಲ್ಲ. ಆದರೆ ಇಂಗ್ಲಿಷನ್ನು ಬಿಟ್ಟರೆ ನಮ್ಮ ನಾಗರಿಕತೆ ಸಾಯುತ್ತದೆಂಬುದರಲ್ಲಿ ಅರ್ಥವಿಲ್ಲ. ಯುರೋಪಿನ ಎಷ್ಟೋ ಜನಾಂಗಗಳು ಇಂದು ಇಂಗ್ಲಿಷನ್ನು ಬಿಟ್ಟು ತಲೆಯೆತ್ತಿ ತಿರುಗುತ್ತಿವೆ.

ಸಾರಾಂಶ--ನಮ್ಮವರಲ್ಲಿ ಇಂಗ್ಲಿಷನ್ನು ಬಿಟ್ಟರೆ ಭಂಡವಳ ಶೂನ್ಯ. ಇನ್ನಾದರೂ ಕನ್ನಡಿಗರಲ್ಲಿ ನಾಡನುಡಿಯ ಒಲುಮೆ ಹೆಚ್ಚಲಿ [illegible] ಇಂದು ಬೇಕಾದುದು ಕರ್ನಾಟಕ ಏಕೀಕರಣ. ಅದಕ್ಕಾಗಿ ನಮ್ಮ ಎಲ್ಲಾ ಕಾರ್ಯಗಳ ಮೊಗವೂ ಅ ಕಡೆಗೇ ತಿರುಗಬೇಕು. ಅದಕ್ಕೇ ಬೇಕಾದ ಶಿಕ್ಷಣ, ರಕ್ಷಣ, ಪ್ರಚಾರ--ಇವೆಲ್ಲಾ ನಾಡಿಗೆ ಹಿತಕರವಾಗುವಂತೆ ನಡೆಯಬೇಕು. ಪ್ರತಿಯೊಬ್ಬ ಕನ್ನಡಿಗನೂ ಬೆಳಿಗ್ಗೆ ಎದ್ದೊಡನೆ—"ನಾನು ಕನ್ನಡಿಗ, ಕನ್ನಡ ನಾಡು ನನ್ನದ್ದು, ನನ್ನ ದೌರ್ಬಲ್ಯದಿಂದ ಕನ್ನಡ ನಾಡು ಇಂದು ಹಲವು ಚೂರುಗಳಾಗಿ ಸಿಡಿದಿವೆ. ಇದು ಕನ್ನಡಿಗನಿಗೆ ಮರೆಯದ ಅಪಮಾನ. ನಾನು ಬದುಕಿದ್ದರೆ ಕರ್ನಾಟಕ ಏಕೀಕರಣವಾಗಲೇಬೇಕು. ಅದನ್ನು ನಾನು ಕಾಣಲೇಬೇಕು" ಎಂದು ಉಚ್ಚರಿಸುವುದರಿಂದ ಎಷ್ಟೋ ಹಿತವಿದೆ.

ಸಾರಾಂಶ—ಪ್ರಕೃತಿಯು ಕನ್ನಡ ನಾಡಿಗೆ ಅನುಕೂಲವಾಗಿದ್ದರೂ, ಪುರುಷರಲ್ಲಿ ಗುಲಾಮ ತನದ ಚಿಹ್ನೆ ಪರಿಣಾಮಗಳಿನ್ನೂ ಅಳಿದಿಲ್ಲ.

ಸಿರಿಗನ್ನಡಂ ಗೆಲ್ಗೆ.

ಮದ್ರಾಸಿನ ಪಬ್ಲಿಕ್ ಇನ್‌ಸ್ಟ್ರಕ್ಷನಿನ ಡೈರೆಕ್ಟರರಿಂದ ನವಯುಗ ಪತ್ರಿಕೆಯು ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಸೆಕೆಂಡರಿ ಶಾಲೆಗಳು ಅದನ್ನು ತರಿಸಿಕೊಳ್ಳಬಹುದಾಗಿದೆ.

ಅಮೃತಾಂಜನ
ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷ ಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

SOVEREIGN-REMEDY
AMRUTANJAN
Best Indian Pain Balm
Amrutanjan Depot
BOMBAY, MADRAS

REGD
ಹಾಲುಕಡ್ಡಿ
ಮತ್ತು
ನಮ್ಮಲ್ಲಿ
ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್
ಮದ್ರಾಸ್ ೧, ಬೊಂಬಾಯಿ ಮತ್ತು ಕಲ್ಕತ್ತ

For Protection and Provision
Consult
The New Guardian of India Life Insurance Co., Ltd.
Estd] Head office: **MADRAS** [1934
A Policy in this Progressive Life Office is good investment; its Agency is valuable business connection.
Applications for representation are invited from influential persons.
Please apply to:
The Branch Manager,
Diamond Building, Hampankatta,
MNGALORE, S. K.

ಅಸಾಧಾರಣ ವಾಗ್ಮಿಗಳೂ ಗ್ರಂಥಕರ್ತರೂ ಆದ
ಶ್ರೀ. ಎಸ್. ಪಂಚಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್., ಬಾರ್. ಎಟ್. ಲಾ,
ಎಫ್. ಎಸ್. ಎಲ್. ಅವರು ಬರೆದ Tales of Ind ಎಂಬ ಕಥಾವಳಿಯ ಅನುವಾದ.

ಭಾರತೀಯ ಕತೆಗಳು

ಅನುವಾದಕರು—ಶ್ರೀ. ಕೋಡ್ಯಲ್ ಶ್ರೀನಿವಾಸ ರಾವ್.

ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಬೇಕೆಂಬ ಹಿರಿಯಾಶೆ ಇದ್ದೇ ಇದೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸಂದರ್ಭೋಚಿತವಾದ ಉಪಮೆ ಗಾದೆ, ಕಥೆ ದೃಷ್ಟಾಂತ ಇತ್ಯಾದಿಗಳು ಬರಬೇಕು. ಅಂತಹ ಅಮೂಲ್ಯ ಭಂಡಾಗಾರವೇ ಈ ಭಾರತೀಯ ಕತೆಗಳು.

ಎಲ್ಲರೂ ಅವಶ್ಯವಾಗಿ ಓದತಕ್ಕ ಅಪೂರ್ವ ಗ್ರಂಥ
151 ಕತೆಗಳು **ಬೆಲೆ ರೂ.** 1-12-0
ನವಭಾರತ ಪುಸ್ತಕ ಭಂಡಾರ, ಉಡುಪಿ.

DO YOU KNOW?
THAT
THE VIJAYA BANK, LIMITED.
1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs 10 lacks
3. Has granted an average dividend of 6% to the Shareholders for the past 20 years
4. Has a net work of Branches in South Kanara and one each in Mercara and Fort, Bombay.
5. Offers attractive rates of interest on Deposits and Cash Certificates
6. Grants loans on easy terms to approved parties or on approved securities
7. Does afford full protection and rich return to all your monies.
ADOPT IT AS
"MY BANK"
THE VIJAYA BANK, LIMITED,
H. O., MANGALORE.

ವಾರದ ಭವಿಷ್ಯ

ತಾ 14—8—52ರಿಂದ 20—8—52ರ ವರೆಗೆ

ಮೇಷ – ನೀವೀ ವಾರದಲ್ಲಿ ಆರೋಗ್ಯ ವಿಚಾರದಲ್ಲಿ ಹೆಚ್ಚಿಗೆ ನಿಗಾ ಕೊಡಿರಿ. ದೇಹದಲ್ಲಿ ಗಾಯ ಕಜ್ಜಿ ಉಷ್ಣಾಧಿಕ್ಯದಿಂದಾಗಿ ಜ್ವರಾದಿಗಳೂ ಬರಬಹುದು. ಕೈ ಕೆಸರಾದರೆ ಬಾಯಿ ಮೊಸರಾದೀತೆಂಬಂತೆ ನಿಮ್ಮ ಪ್ರಯತ್ನಕ್ಕೆ ತಕ್ಕ ಫಲ ದೊರೆವುದು. ನೌಕರಿ ಜನಂಗೂ ವ್ಯಾಪಾರಿಗಳಿಗೂ ಈ ಕಾಲವು ಹೆಚ್ಚಿನ ಸುಖದಾಯಿಯಾಗಿದೆ ಸೇವಕ ವರ್ಗದವರು ತಾಪತ್ರಯವಿಲ್ಲದೆ ಕಾಲ ಕಳೆವರು. ತಾ 16, 17 ಈ 2 ದಿನಗಳು ಮಿಕ್ಕುಳಿದ ದಿನಗಳಿಗಿಂತ ಉತ್ತಮವಿವೆ.

ವೃಷಭ—ನಿಮ್ಮ ಶಕ್ತಿ ಸಾಹಸ ಪೌರುಷಾದಿಗಳೆಲ್ಲವೂ ಈ ವಾರದಲ್ಲಿ ನೀರಿನಲ್ಲಿ ಮಾಡಿದ ಹೋಮದಂತೆ ವ್ಯರ್ಥವಾದಾವು. ಉತ್ಪತ್ತಿಯು ಅತ್ಯಲ್ಪವಾಗಿದ್ದು ಖರ್ಚು ಅತಿರೇಕವಾಗಿ ಪರಿಣಮಿಸಿ ಸಿಕ್ಕ ಸಿಕ್ಕವರೊಡನೆ ಸಾಲ ಕಡಗಳನ್ನು ಮಾಡುವಿರಿ. ನೇತ್ರ ಪೀಡೆ ಉದರ ಶೂಲೆಗಳು ಕಾಣಿಸಬಹುದು. ಗಂಡ ಹೆಂಡಿರೊಳು ವೈಮನಸ್ಸುಂಟಾಗಲಿವೆ. ಆದರೂ ತಾ 14, 15, 18, 19 ಈ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳಿಗೆ ಗುರಿಯಾಗಲಾರಿರಿ.

ಮಿಥುನ – ಧನ್ಯರಿನ್ನ ಬೇಕು ನಿಮಗೇನೇ. ಕಾರಣ ಶನೈಶ್ಚರನೊಬ್ಬನನ್ನು ಹೊರತಾಗಿ ಮಿಕ್ಕ ಎಲ್ಲಾ ಗ್ರಹರ ಸಹಾನುಭೂತಿಯು ನಿಮಗಿದ್ದ ಮೇಲೆ ಯಾವ ಭಾಗದಲ್ಲಿ ಕೊರತೆಯುಂಟಾದೀತು? ನೀವು ಆಡಿದ್ದೇ ಮಾತು ಮಾಡಿದ್ದೆ ಕೃತಿಯೆಂದಾದೀತು. ಪ್ರತಿಯೊಂದು ಉದ್ಯಮದಲ್ಲು ಪ್ರಗತಿಯುಂಟಾಗುವದು, ಆಪ್ತೇಷ್ಟರು ಬಂಧು ಬಾಂಧವರಿಂದ ಕೂಡಿದ ನಿಮಗೆ ತಾ 15, 16, 17, 20 ಈ ದಿನಗಳಾದುದೇ ತಿಳಿಯಲೊಲ್ಲದು.

ಕರ್ಕಟ—ಕಳೆದ ವಾರಕ್ಕಿಂತ ನೀವೆಷ್ಟೋ ಆರ್ಥಿಕ ಭಾಗದಲ್ಲಿ ಸುಧಾರಿಸುವಿರಿ. ಹಿಡಿದ ಕಾರ್ಯವನ್ನು ವಿಘ್ನಗಳೆಷ್ಟೇ ಬಂದರೂ ಬಿಡದೆ ಮುಂದರಿಸುವಿರಿ, ಪ್ರಬಲರಾದ ಶತ್ರುಗಳನ್ನೂ ಎದುರಿಸುವ ಸಾಮರ್ಥ್ಯ ನಿಮಗಿರುವುದು. ಕೆಲವೊಮ್ಮೆ ನಿಷ್ಕಾರಣವಾಗಿ ಮಾತು ಮಾತಿಗೆ ಕಲಹ ಬೆಳೆದೀತು. ಮಕ್ಕಳು ಮಂದಿಗಳ ಆರೋಗ್ಯವೂ ಚೆನ್ನಾಗಿರದು. ತಾ 14, 18, 19 ಈ ದಿನಗಳಲ್ಲಿ ಮಿತ್ರ ಸಮಾಗಮ ನಾನಾ ವಿಧದಿಂದ ಧನ ಲಾಭವು ಕಾಣಿಸುವದು.

ಸಿಂಹ – ಕಾರ್ಯವನ್ನು ಸಾಧಿಸಲು ಬೇಕಾದ ಶಕ್ತಿ ಸಾಧನಗಳು ನಿಮ್ಮಲ್ಲಿಲ್ಲದ ಕಾರಣ ಹೊಸತಾಗಿ ಯಾವ ಕಾರ್ಯಕ್ಕೂ ಕೈಯಿಕ್ಕಲಾರಿರಿ. ಆದರೂ ನೀವು ಕೈಗೊಂಡ ಕಾರ್ಯದಲ್ಲಿ ಫಲ ಲಾಭವು ಉತ್ತಮವಿರುವದು. ನಿಮ್ಮ ಸ್ವಂತ ಉಪಭೋಗಕ್ಕೆ ಯಾವ ಕೊರತೆ ಯಿರದು, ದುಡಿಮೆಯ ಹಣವು ಖರ್ಚಿಗೆ ಕಡಿಮೆಯಾದೀತು. ವಾರಾದಿಯ 4 ದಿನಗಳಲ್ಲಿ ಇಷ್ಟಪ್ರಾಪ್ತಿ ಸುಖ ಲಾಭಗಳಿವೆ.

ಕನ್ಯಾ—ನಿಮ್ಮ ವಿಕ್ರಮ ಕಾರಕನು ವಿಕ್ರಮ ಪತಿಯೂ ಆದ ಅಂಗಾರಕನಿಂದು ವಿಕ್ರಮ ಸ್ಥಾನಕ್ಕೆ ಬಂದಿರುವ ಕಾರಣ ನಿಮ್ಮ ಶೌರ್ಯ ಸಾಹಸಗಳು ಅನುಪಮವಾಗಿರುವವು. ಆದರೇನು ದೈವ ಬಲವು ಕಡಿಮೆಯಾಗಿರುವ ಈ ಕಾಲದಲ್ಲಿ ನಿಮ್ಮ ಕೃತಿಗೆ ತಕ್ಕ ಫಲ ಕಾಣಿಸದು. ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಕೊಡಿರಿ. ತಾ 16ರಿಂದ 19ರ ವರೆಗಿನ ದಿನಗಳು ಅನುಕೂಲವಿರುವವು.

ತುಲಾ— ವ್ಯಯ ಧನಗಳಲ್ಲಿರುವ ಶನ್ಯಂಗಾರಕರು ಸ್ವಲ್ಪಮಟ್ಟಿನ ಪ್ರತಿಕೂಲವನ್ನು ಮಾಡಲಿರುವರು. ಆದರೂ ಇತರ ಗ್ರಹರ ಬಲ ಸಂಪನ್ನರಾದ ನಿಮಗೆ ಈ ವಾರದಲ್ಲಿ ಯಾವ ತೊಂದರೆಯೂ ಉಂಟಾಗದು. ನೆನೆದಂತೆ ಕಾರ್ಯವು ಫಲಿಸುವದು. ಜನತೆಯಿಂದ ಗೌರವಾದರಗಳು ಲಭಿಸುವವು. ಆರ್ಥಿಕ ಭಾಗವು ಉತ್ತಮಸ್ಥಿತಿಗೆ ಬರಲಿದೆ. ವಾರಾಂತ್ಯದ 3 ದಿನಗಳು ಅತ್ಯುತ್ತಮವಿವೆ.

ವೃಶ್ಚಿಕ— ಹಿಂದಿನ ವಾರಕ್ಕಿಂತ ನೀವೆಷ್ಟೋ ಸುಧಾರಿಸುವಿರಿ ನಿಮ್ಮ ಪ್ರಯತ್ನಕ್ಕೆ ತಕ್ಕುದಾದ ಫಲವು ಲಭಿಸುವದು. ಆದರೂ ಖರ್ಚುಗಳು ಹೆಚ್ಚಾಗುವುದರಿಂದ ಸಾಲಮಾಡುವ ಪ್ರಸಂಗ ಬರಲಿದೆ. ವಿರೋಧಿಗಳು ಪ್ರತೀಕಾರ ಕ್ರಿಯೆಯಲ್ಲಿ ಆಸಕ್ತರಾಗುವ ಕಾರಣ ನಿಮ್ಮ ಮನಸ್ಸಿಗೆ ನೆಮ್ಮದಿಯಿರಲಾರದು. ವಾರದ ಆದ್ಯಂತ ದಿನಗಳಲ್ಲಿ ನಿಮ್ಮ ಬಯಕೆಯು ಈಡೇರಲಿದೆ.

ಧನು— ಪಿತ್ಥ ದೋಷದಿಂದ ನಿದ್ರಾಭಾವ ನೇತ್ರ ಪೀಡಾದಿಗಳು ಕಾಣಿಸಬಹುದು. ಸ್ತ್ರೀಯರೊಡನೆ ಕಲಹವಾಗುವ ಸಂಭವವಿದೆ. ವಿದ್ಯಾ ಕೀರ್ತಿಗಳಿಗೆ ಕಳಂಕವು ಕೂಡ ಬರಬಹುದು, ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾದ ನಿಮಗೆ ಗೃಹಸುಖವು ಉತ್ತಮವಾಗಿದ್ದೀತು. ಖರ್ಚಿಗೆ ಸಾಕಷ್ಟು ಉತ್ಪತ್ತಿಯಿರುವುದರಿಂದ ದಿನಯಾಪನೆಯು ಸುಖಮಯವಾಗಲಿದೆ. ವಾರಾದಿಯ 4 ದಿನಗಳಲ್ಲಿ ಯಾನ ವಾಹನಾದಿಗಳ ಲಾಭವಿದೆ.

ಮಕರ— ವ್ಯರ್ಥ ಖರ್ಚುಗಳು ಹೆಚ್ಚುವುದರಿಂದಲೂ ಪ್ರಯತ್ನಕ್ಕೆ ತಕ್ಕುದಾದ ಫಲವಿಲ್ಲದಿರುವುದರಿಂದಲೂ ಈ ವಾರದಲ್ಲಿ ನೀವು ದಿನಯಾಪನೆಗಾಗಿ ಸಾಲಮಾಡಬೇಕಾದೀತು. ಲಾಭಗತನಾದ ಕುಜನು ಬಹುತೇಕ ನಿಮಗೆ ಅನುಕೂಲವಾಗಲಿರುವನು. ಬಂಧುಜನರು ನಿಮ್ಮ ಮೇಲೆ ಎಗದೆಣಿಸಲಿರುವರು. ಆಕಸ್ಮಿಕ ಪ್ರವಾಸವು ಪ್ರಾಪ್ತವಾಗಲಿದೆ. ತಾ. 16, 17, 18, 19 ಈ ದಿನಗಳು ಸ್ವಲ್ಪ ಸುಖಕಾರಿಗಳವೆ.

ಕುಂಭ — ಈ ವಾರದಲ್ಲಿ ಪರಿಸ್ಥಿತಿಯು ತೀರಾ ದಿಕ್ಕೆಟ್ಟಿಗೆ ಬರಲಿದೆ. ಬುಧನನ್ನುಳಿದು ಎಲ್ಲಾ ಗ್ರಹರೂ, ಪ್ರತಿಕೂಲರಾಗಿ ನಿಂತಿರುವ ಕಾರಣ ಸಿಕ್ಕ ಸಿಕ್ಕವರೊಡನೆ ಜಗಳ ವಿರೋಧಗಳು ಹೆಚ್ಚುವವು. ಹಿಡಿದ ಕಾರ್ಯದಲ್ಲಿ ನಷ್ಟವಾದೀತು, ರಾಜಕೀಯದಲ್ಲಿ ಪರಾಭವವುಂಟಾಗುವದು. ಜನತೆಯ ಬೆಂಬಲಹೀನರಾದ ನಿಮಗೆ ವಾರಾಂತ್ಯದ 3 ದಿನಗಳಲ್ಲಿ ಹೆಚ್ಚಿನ ಕಷ್ಟ ಕಾಣಿಸಲಾರದು.

ಮೀನ— ಗ್ರಹ ತಾಪತ್ರಯಗಳಿಂದ ಒಮ್ಮೊಮ್ಮೆ ನಿಮಗೆ ವಿರಕ್ತಿ ತೋರಬಹುದೀ ಸಂಸಾರದಲ್ಲಿ. ಹೆಂಡಿರು ಮಕ್ಕಳ ಕಾಟವು ಅಸಹನೀಯವಾದೀತು. ಮನೋರೋಗ ಪರಾಭವಾದಿಗಳಿಂದ ದುಃಖಿತರಾದ ನಿಮ್ಮ ದೇಹದಲ್ಲಿ ದೌರ್ಬಲ್ಯ ರೌರ್ಯಗಳು ಕಾಣಿಸಲಿವೆ ಆದರೂ ಉದ್ಯೋಗದಲ್ಲಿ ಪ್ರಗತಿ ಕಂಡುಬರುವದು, ತಾ 14, 15, 20, ಈ ದಿನಗಳಲ್ಲಿ ನಿಮ್ಮ ಮನೋರಥವು ಸಿದ್ಧಿಸಲಿದೆ.

ಯೋಲಂ ನೋಟೀಸು

ದಕ್ಷಿಣ ಕನ್ನಡ ಸಬೋರ್ಡಿನೇಟ್ ಕೋರ್ಟಿನಲ್ಲಿ

ಕ್ರಮ ನಂಬ್ರ 165/1951.

R. I. A. ನಂ 1040/1952.

ಮಹಾಬಲ ಹೆಗಡೆ —ವಾದಿ

ಮತ್ತು

ವೆಂಕಪ್ಪ ಹೆಗಡೆ ವಗೈರೆಯು —ಪ್ರತಿವಾದಿಯು

ಮೇಲ್ಕಂಡ ವ್ಯವಹರಣೆಯಲ್ಲಿ ನೇಮಕ ಹೊಂದಿದ ಕಮಿಶನರಾದ ಮಂಗಳೂರು ಶಹಾರ ಪೈಕಿ ಕೊಡಿಯಾಲಬೈಲಿನಲ್ಲಿರುವ ಎಡ್ವಕೇಟ್ ಕೆ. ಬಿ. ಜಿನರಾಜ ಹೆಗಡೆಯವರು ಸದರಿ ಕೋರ್ಟು R. I. A. ನಂಬ್ರ 1040/1952ರಲ್ಲಿ ಕೋರ್ಟಿನವರು ಮಾಡಿರುವ ಹುಕುಮು ಮೇರೆಗೆ ಕೆಳಗೆ ಕಾಣಿಸಿದ ಆಸ್ತಿಗಳಲ್ಲಿರುವ ಕಾಡಿನ ಮರಮಟ್ಟುಗಳನ್ನು ಈ ಕೆಳಗೆ ನಮೂದಿಸಿರುವ ಶರ್ತು ಪ್ರಕ್ರಮಗಳಿಗೆ ಅನುಸಾರವಾಗಿ ತಾರೀಕು 24-8-1952ನೇ ಆದಿತ್ಯವಾರ ದಿವಸ ಬೆಳಿಗ್ಗೆ ಘಂಟೆ 11ಕ್ಕೆ ಕುಂದಾಪುರ ತಾಲೂಕು ಬಿದ್ಕಲ್ಲು ಕಟ್ಟೆ ಹರ್ಕೈ ಅಂತಯ್ಯ ಶೆಟ್ರ ಭಂಡಸಾಲೆ ವಠಾರದಲ್ಲಿ ಬಹಿರಂಗವಾಗಿ ಯೋಲಂ ಮಾಡುವರು.

ಶರತಗಳು

1. ಯೋಲಮಿನಲ್ಲಿ ಸದರಿ ಕಾಡಿನಲ್ಲಿರುವ ಮರಮಟ್ಟುಗಳನ್ನು ಅಪ್ಸೆಟು ಪರ್ಚಾಸ್ತಿಗೆ ಪಡೆದವರು ಯೋಲಂ ಕಾಯಂ ಆದ ಕೂಡಲೇ ಯೋಲಮಿನ ಹಣದ ಶೇಕಡಾ 25ರಷ್ಟು ಹಣವನ್ನು ಪಾವತಿ ಮಾಡತಕ್ಕದ್ದು. ಮತ್ತು ಬಾಕಿ ಹಣವನ್ನು ಯೋಲಂ ತಾರೀಕಿನಿಂದ 15 ದಿವಸಗಳ ಒಳಗೆ ಕಮಿಶನರಿಗೆ ಸಲಾಯಿಸತಕ್ಕದ್ದು.

2. ಸದ್ರಿ ಯೋಲಮನ್ನು ಕೋರ್ಟಿನವರು ಕ್ರಮದಂತೆ ಕಾಯಂ ಮಾಡಿದ ಕೂಡಲೇ ಕಮಿಶನರು ಸದ್ರಿ ಯೋಲಮಿನ ಸಂಬಂಧ ಆಗತಕ್ಕ ಕ್ರಯಚೀಟು ಬರಕೊಡುವರು. ಆ ರೀತಿ ಬರಕೊಡುವ ಕ್ರಯ ಚೀಟಿನ ಬಗ್ಗೆ ಆಗತ್ಯವಿರುವ ಠರೆ ರಿಜಿಸ್ಟ್ರೇಷು ವಗೈರೆ ಖರ್ಚನ್ನು ಯೋಲಮುದಾರರೆ ಸಹಿಸಿಕೊಳ್ಳತಕ್ಕದ್ದು. ಕ್ರಯಚೀಟನ್ನು ದ. ಕ. ಜಿಲ್ಲಾ ರಿ. ಆಫೀಸಿನಲ್ಲಿ ರಿಜಿಸ್ಟ್ರಮಾಡಿಸಿ ಕೊಡಲಾದೀತು.

3. ಮೇಲೆ ಹೇಳಿದಂತೆ ಯೋಲಮಿನ ಹಣದ ಪೈಕಿ ರಿಯಾಯತು ವಾಯಿದೆಗೆ ತೆರತಕ್ಕ ಯೋಲಮಿನ ಹಣವನ್ನು ಯೋಲಮಿಗೆ ಪಡಕೊಂಡವರು ತೆರುವದೆ ತಪ್ಪಿದರೆ ಆ ಕಾರಣದಿಂದಾಗುವ ಎಲ್ಲಾ ನಷ್ಟ ತೆರುವದೆ ಹಾಗೆ ತಪ್ಪಿದವರು ಬದ್ಧರಾಗಿರುತ್ತಾರೆ.

4. ಮೇಲೆ ಹೇಳಿದಂತೆ ಯೋಲಂದಾರರು ಯೋಲಮಿನ ಹಣದ ಶೇಕಡಾ 25ರಷ್ಟು ಹಣವನ್ನು ಸಂದಾಯ ಮಾಡಿ ಬಾಕಿ ಹಣವನ್ನು ವಾಯಿದೆಯ ಒಳಗೆ ವಸೂಲು ಕೊಡುವದೆ ತಪ್ಪಿದರೆ ಅನಂತರ ಹಾಗೆ ಸಂದಾಯ ಮಾಡಿದ ಹಣವನ್ನು ವಾಪಾಸು ಕೇಳುವದೆ ಯೋಲಂದಾರರಿಗೆ ಹಕ್ಕಿರುವುದಿಲ್ಲ,

5. ಸದರಿ ಯೋಲಮಿನ ಸಂಬಂಧವಾಗಿ ಕೋರ್ಟಿನವರು ವಿಧಿಸುವ ಆಗಬಹುದಾದ ಹುಕುಮುಗಳಿಗೆ ಅನುಸಾರವಾಗಿ ನಡೆಯುವದೆ ಯೋಲಂದಾರರು ಬದ್ಧರಾಗಿರತಕ್ಕದ್ದು.

6. ಯೋಲಂ ಕಾಯಂ ಆಗಿ ಆ ಸಂಬಂಧ ಮೇಲೆ ಹೇಳಿದಂತೆ ಕಮಿಶನರು ಬರೆದು ಕೊಡುವ ಕ್ರಯಚೀಟು ತಾರೀಕಿನಿಂದ ಆರು ತಿಂಗಳ ಒಳಗೆ ಯೋಲಮಿನ ಮರಮಟ್ಟುಗಳನ್ನು ಕಡಿದುಕೊಂಡು ಹೋಗತಕ್ಕದ್ದು ಮತ್ತು ಹತ್ತು ಇಂಚು ಸುತ್ತಳತೆಗೆ ಕಮ್ಮಿಯಾದ ಮರಗಳನ್ನು ಕಡಿದರೆ ಯೋಲಮಿಗೆ ವಹಿಸಿಕೊಂಡವರು ಆ ಬಾಬಿನ ನಷ್ಟ ತೆರುವದೆ ಬಾಧ್ಯರಾಗುವರು.

ವಿವರ

1. ಕುಂದಾಪುರ ತಾಲೂಕು ಆಲಬಾಡಿ ಗ್ರಾಮದ ಸರ್ವೆ ನಂಬ್ರ 197-2. ಪುಂಜಾ ಎಕ್ರೆ 3-98 ವಿಸ್ತೀರ್ಣದ ಸ್ಥಳದಲ್ಲಿರುವ 10 ಇಂಚು ಸುತ್ತಳತೆ [ಅಂದರೆ ನೆಲದಿಂದ 3 ಅಡಿ ಎತ್ತರದಲ್ಲಿ] ಮತ್ತು ಇದಕ್ಕೆ ಮೀರಿದ ಮರಗಳನ್ನು ಕಡಿದು-ಕೊಂಡು ಹೋಗುವ ಹಕ್ಕು— ಇದನ್ನು ಪ್ರಥಮವಾಗಿ ಕರೆಯುವ ಮೌಲ್ಯ ರೂಪಾಯಿ 1000/-. ಆಗಿರುತ್ತದೆ.

2. ಕುಂದಾಪುರ ತಾಲ್ಲೂಕು ಯೆಡ್ಯಾಡಿ ಮತ್ಯಾಡಿ ಗ್ರಾಮದ ಸರ್ವೆ ನಂಬ್ರ 191/1 ಪುಂಜಾ ಎಕ್ರೆ 8 25 ವಿಸ್ತೀರ್ಣದ ಸ್ಥಳದಲ್ಲಿರುವ 10 ಇಂಚು ಸುತ್ತಳತೆ [ಅಂದರೆ ನೆಲದಿಂದ 3 ಅಡಿ ಎತ್ತರದಲ್ಲಿ] ಮತ್ತು ಇದಕ್ಕೆ ಮೀರಿದ ಮರಗಳನ್ನು ಕಡಿದು ಕೊಂಡುಹೋಗುವ ಹಕ್ಕು. ಇದನ್ನು ಪ್ರಥಮ ವಾರ ಕರೆಯುವ ಮೌಲ್ಯ ರೂಪಾಯಿ 1000/-.

K. B. Jinaraja Hegde.
Commissioner.

ಮಂಗಳೂರು, ತಾ. 2-8-1952.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.
ಹೆಚ್ಚಿನ ಮಾಹಿತಿಗೆ—ಡಾ| ಯಂ. ಸಿ. ಶಾಸ್ತ್ರೀ, ಎಲ್. ಐ. ಎಂ
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:— ಡಾ| ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

ಶಾಲೆ, ಕಾಲೇಜುಗಳಿಗೂ
ಸಹಕಾರಿ ಸಂಘ, ಮುನ್ಸಿಫ್
ಕೋರ್ಟುಗಳಿಗೂ ಕೃಷಿಕ,
ವರ್ಗದಾರ, ವ್ಯಾಪಾರಿಗಳಿಗೂ
ಬೇಕಾಗುವ ಉತ್ತಮ ಕಾಗದದಲ್ಲಿ
ತಯಾರಿಸಿದ
ತರತರದ ಫಾರಮುಗಳು,
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

NAVAYUGA WEEKLY, UDIPI 14-8-1952 Regd. No. M. 3618. Licence No. 31
Licensed to Post without Prepayment

ಜನತೆಗೆ ಕರೆ

"ಸ್ವರಾಜ್ಯ ಸ್ವರ್ಗದಿಂದಿಳಿದು ಬರುವುದಿಲ್ಲ. ನಮ್ಮ ಸಹನೆಯ ಕಾರ್ಯಕ್ಷಮತೆಯ, ಅನವರತ ಪರಿಶ್ರಮದ, ವಾತಾವರಣವನ್ನು ತಿಳಿದು ನೋಡಿ ಮುನ್ನಡಿ ಇಡುವ ಜಾಣ್ಮೆಯ ಫಲವಾಗಿಯೇ ಸ್ವರಾಜ್ಯ ಲಭ್ಯ.

ಭಾರತ ನಿಜವಾಗಿಯೂ ಕರ್ಮಭೂಮಿ– ಭೋಗಭೂಮಿಯಲ್ಲ, ನನ್ನನ್ನು ಕರ್ಮಯೋಗಿ ಎಂದು ಕರೆದುಕೊಳ್ಳಲಾರೆನಾದರೂ, ಕೆಲಸವಿಲ್ಲದೆ ನಾನು ಒಂದು ಕ್ಷಣವೂ ಜೀವಿಸಲಾರೆನೆಂಬುದು ನಿಶ್ಚಯ: ದುಡಿಮೆಯೇ ಅತ್ಯಂತ ಉಚ್ಚ ಮಟ್ಟದ ತ್ಯಾಗ.

—ಗಾಂಧೀ.


ರಾಜೇಂದ್ರ ಪ್ರಸಾದ್

ಸುಭಾಷ್‌ಚಂದ್ರ ಬೋಸ್

ನಾವು ದೈಹಿಕ ಪರಿಶ್ರಮದ ಬಗ್ಗೆ ತುಂಬ ಗೌರವವನ್ನು ತೋರಬೇಕು: ಹೊಲದಲ್ಲಿಯಾಗಲೀ–ಕಾರ್ಖಾನೆಯಲ್ಲಾಗಲೀ, ದೇಹಶ್ರಮ ಪೂರ್ವಕವಾಗಿ ನಮ್ಮಲ್ಲಿ ಪ್ರತಿಯೊಬ್ಬನೂ ದುಡಿಯಬೇಕು. ದೇಶದ ಮುನ್ನಡೆಗೆ ಮತ್ತು ೩೫ ಕೋಟಿ ಪ್ರಜೆಗಳಿಗೆ ಮೇಲ್ತರಗತಿಯ ಬದುಕು ನೀಗಲಾಗುವಂತೆ ಮಾಡಬೇಕು.

— ನೆಹರೂ.

ಪಂಡಿತ ಪಂತರು


ಡಾ। ಪಟ್ಟಾಭಿ ಸೀತಾರಾಮಯ್ಯ

"ಭೂಮಿ ಹಾಗೂ ಎಲ್ಲ ಆಸ್ತಿ ಯಾವನು ಅದಕ್ಕಾಗಿ ದುಡಿಯುವನೋ ಅವನದೇ ಇರುವದು"

'ಖಾದಿಯು ಬಡವರ ಜೀವನದಲ್ಲಿ ಒಂದು ಆಶಾಕಿರಣ'

ಮ। ಗಾಂಧಿ

"ಉದ್ಯಮದಿಂದಲೆ
ಕಾರ್ಯಸಿದ್ಧಿ"

"ನನಗೆ ಸಂದೇಹಗಳು ಬರುವಾಗ, ನಿರಾಶೆಯು ನನ್ನ ಮುಂದೆ ನಿಂತಾಗ, ಮತ್ತು ಆಕಾಶ ಮಂಡಲದಲ್ಲಿ ಯಾವ ಜ್ಯೋತಿಯೂ ಗೋಚರಿಸದಿರುವಾಗ ನಾನು ಗೀತೆಯನ್ನು ಓದುತ್ತೇನೆ. ಆಗ ನನ್ನ ಮನಸ್ಸಿಗೆ ಶಾಂತಿಯನ್ನು ಕೊಡುವಂತಹ ಶ್ಲೋಕವು ಒಂದಿಲ್ಲದಿದ್ದರೆ ಮತ್ತೊಂದು ಸಿಕ್ಕುವುದು"— ಮ। ಗಾಂಧಿ.

ಗೀತೆಯ ಕೈಗನ್ನಡಿ
ಗೀತೆಯ ಸಮೂಲ ಭಾಷಾಂತರ
ನವಯುಗ ಪ್ರೆಸ್,
ಉಡುಪಿ.


ಸರ್ದಾರ್ ಪಟೇಲ್

"ಮೌನವು ಸತ್ಯ ಭಕ್ತನ ಆಧ್ಯಾತ್ಮಿಕ ಸಾಧನೆಯಲ್ಲಿ ಒಂದು ಮಹತ್ವದ ಅಂಗ"

'ಸತ್ಯವನ್ನು ಮೀರಿಸುವ ಧರ್ಮವನ್ನು ನಾನರಿಯೆ'

ಮ। ಗಾಂಧಿ

"ಶಾಂತಿಯೇ ನಿಜವಾದ
ವಿಜಯ"

Udipi. S. India.

Regd.No. M. 3618
LICENCE No. 31
Licensed to Post without Prepayment

ESTD. 1921 ಸ್ಥಾಪನೆ
31ನೆಯ ವರ್ಷ

21-8-1952

Founder: **Sri A. B. Shetty**
Minister for Medical & Public Health

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ

ಸಾರ್ವಜನಿಕ
ಆರೋಗ್ಯ ಮಂತ್ರಿ
.ಎ.ಬಿ ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನವಯುಗ
ಪೋಸ್ಟ್ ಬಾಕ್ಸ್
ನಂಬ್ರ 22
ಉಡುಪಿ, ದ. ಕ.

ವಾರ್ಷಿಕ ಚಂದಾ
ರೂ. 5-12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೫೦

NAVAYUGA WEEKLY Post Box No. 22 **UDIPI.**

Vol 31
No 50

ಮಧುಪರ್ಕ

ಇಟಲಿಯಲ್ಲಿ ಗ್ರೀವಾಲ್ಡಿ ಸುಪ್ರಸಿದ್ಧ ಹಾಸ್ಯ ಲೇಖಕನಾಗಿದ್ದ. ಬೇಸರದಲ್ಲಿ ಮುಳುಗೇಳುತಿದ್ದ ವ್ಯಕ್ತಿಯಾದರೂ, ಅವನದೊಂದು ಕೃತಿ ಓದಿದರೆ ಸಾಕು— ಗೊಳ್ಳೆಂದು ನಕ್ಕುಬಿಡುವ.

ಒಮ್ಮೆ ಗ್ರೀವಾಲ್ಡಿಯ ಆರೋಗ್ಯ ಸ್ವಲ್ಪ ಕೆಟ್ಟಿತು. ಆದುದರಿಂದ ವೈದ್ಯರೊಬ್ಬರನ್ನು ತನ್ನ ಬಳಿಗ ಕರೆಸಿಕೊಂಡ. ವೈದ್ಯರಿಗೆ ಗ್ರೀವಾಲ್ಡಿಯ ಪರಿಚಯವಿರಲಿಲ್ಲ-ಹಾಗೆಂದು ಅದನೆಲ್ಲ ಕೃತಿಗಳನ್ನು ಅವರು ಪಾರಾಯಣ ಮಾಡಿ ಬಿಟ್ಟಿದ್ದರು!

ಸಾಕಷ್ಟು ಸಮಯ ಪರೀಕ್ಷಿಸಿ ವೈದ್ಯರೆಂದರು— "ನಿಮ್ಮ ಅಸ್ವಾಸ್ಥ್ಯಕ್ಕೆ ಮನಸ್ಸಿನ ಕ್ಷೋಭೆಯೇ ಕಾರಣ—ನಿರರ್ಥಕ ಚಿಂತೆಯನ್ನು ಕಟ್ಟಿಕೊಂಡು ಹಣ್ಣಾಗಿದ್ದೀರಿ. ನಿಮ್ಮ ರೋಗಕ್ಕೆ ಒಂದೇ ಒಂದು ಔಷಧಿ ಇದೆ—ಪ್ರಸಿದ್ಧ ಹಾಸ್ಯ ಲೇಖಕ ಗ್ರೀವಾಲ್ಡಿಯ ಕೃತಿಗಳನ್ನು ಒಮ್ಮೆ ಓದಿ ಬಿಡಿ! ಅದನ್ನು ಓದಿದರೆ ಸಾಕು—ನಕ್ಕು ನಲಿಯುತ್ತಾ ಸ್ವರ್ಗಾನಂದವನ್ನು ಅನುಭವಿಸುವಿರಿ."

ವೈದ್ಯರ ಚಿಕಿತ್ಸೆಯನ್ನು ಕೇಳಿ—ಗ್ರೀವಾಲ್ಡಿ ಬಿದ್ದು ಬಿದ್ದು ನಗತೊಡಗಿದ. ಮುಂದೆ ವೈದ್ಯರಿಗೆ ಸತ್ಯ ಸ್ಥಿತಿ ತಿಳಿಯಲು—ಅವರ ನಗೆಗೂ ಮೇರೆ ಇರಲಿಲ್ಲ!

ಕುಲುಕುಲು ನಗು

ಚಿಕ್ಕಮಕ್ಕಳ ಮುದ್ದು ಮುಖದಲ್ಲಿ ನಗು ನಲಿಯುತ್ತಿರುವುದನ್ನು ಕಾಣದವರಾರು? ಕುಲು ಕುಲು ನಗುವಿನ ಸಂದರ್ಭಕ್ಕೆ ಬಂದವರೆಲ್ಲ ತಾವೂ ಮಗುವಾಗಿ, ಆಮೋದದಲ್ಲಿ ಮುಳುಗುವರು. ಮನಸ್ಸು ಪ್ರಫುಲ್ಲಿತಗೊಳ್ಳುವುದು; ಹೃದಯದ ಭಾರ ತೊಲಗಿ, ಹಗುರಾಗುವುದು. ಬೇಸರ-ನೋವು ಬೇನೆಗಳು ಬಿಡಾರ ಕೀಳುವುವು. ನಗು ನಿಜಕ್ಕೂ ದಿವ್ಯೌಷಧಿ; ಅದು ಸ್ವಾಭಾವಿಕವಾಗಿ ಸಾಂಕ್ರಾಮಿಕ. ನಗುವಿನ ಮಹಿಮೆಯನ್ನು ಜಪಾನಿ ಕವಿ ನಾಗೋಚೀ ಹೀಗೆ ವರ್ಣಿಸಿದ್ದಾನೆ: "ಜೀವನದ ಹಸುರು ಮಾಯವಾಗಿ ಒಣಗತೊಡಗಿದಾಗ, ಪಕ್ಷಿ ಸಂಕುಲದ ಕಲಕಲರವ ಮೌನಗೊಂಡಾಗ, ಸೂರ್ಯ ಬಿಂಬವು ಗ್ರಹಣದಿಂದ ಕಪ್ಪಾಗಿ ಕಂಡಾಗ, ನನ್ನ ಆತ್ಮೀಯರೂ ಬಂಧುಗಳೂ ನಡುದಾರಿಯಲ್ಲಿಯೇ ಕೈಬಿಟ್ಟು ತೊಲಗಿದಾಗ, ನನ್ನ ಭಾಗ್ಯವನ್ನು ಲೋಕದ ಕ್ರೌರ್ಯವೆಲ್ಲ ಆಕ್ರಮಿಸುತ್ತಿರುವಾಗ, ನನ್ನ ಪ್ರಭುವೇ, ನೀನು ನನಗೆ ಇಷ್ಟೊಂದು ಅನುಗ್ರಹ ಮಾಡು-ಆ ಗಳಿಗೆಗೆ ನನ್ನ ಅಧರಗಳ ಮೇಲೆ ನಸುನಗೆ ಮೂಡಲಿ!"

ಜೀವನದ ಮೂಲಭೂತ ಸಮಸ್ಯೆಯೊಂದನ್ನು ಹೃದಯಂಗಮವಾಗಿ ಕವಿ ವರ್ಣಿಸಿದ್ದಾನಲ್ಲವೆ? ಸಾಂಸಾರಿಕ ದುಃಖವನ್ನು ದೂರಗೊಳಿಸಲು ನಗುವಿನ ಮಿಂಚು ನಮಗೆಷ್ಟು ರೀತಿಯಿಂದ ನೆರವಾಗುವುದು! ಜಪಾನಿನ ಜನರಲ್ಲಿ ಇನ್ನೊಂದು ಮಾತು ರೂಢಿ ಇದೆ. "ಅಗ್ನಿಕುಂಡದ ಮೇಲೆ ಬಿದ್ದು ಬೇಯುತ್ತಿರುವಾಗಲೂ ನಾವು ನಗುತ್ತೇವೆ" ಎಂದವರು ಹೆಮ್ಮೆಯಿಂದ ಹೇಳುವಾಗ-ಆ ಜನದ ಯಥಾರ್ಥ ಪರಿಚಯ ನಮಗಾಗುತ್ತದೆ. ಅವರ ನಗು ಉನ್ಮುಕ್ತ ಸ್ವರೂಪವುಳ್ಳದ್ದು; ಸಾಂಕ್ರಾಮಿಕ ಪ್ರಭಾವವುಂಟುಮಾಡಬಲ್ಲುದು.

ನಕ್ಕು, ಮೂವತ್ತೆರಡೂ ಹಲ್ಲು ತೋರಿಸುವ ಹವ್ಯಾಸ ನಮಗಿದೆಯೆ ಎಂಬುದು ಪ್ರಶ್ನೆ; ಬದುಕಿನ ಕಷ್ಟ ಸಹಸ್ರಗಳನ್ನು ದೂರೀಕರಿಸಿ, ಶೂಲ ಪ್ರಾಯವಾದ ನೋವನ್ನು ಮರೆತು ಬಿಟ್ಟು, ಒಂದು ಕ್ಷಣದ ಮಟ್ಟಿಗಾದರೂ ಗೊಳ್ಳನೆ ನಗುವಷ್ಟು ಹಗುರ ಮನಸ್ಕರು ನಾವಾದರೆ ಬದುಕು ಬಂಗಾರವೆನಿಸುವುದು ನಿಶ್ಚಯ. ನಿಜ ಹೇಳಬೇಕೆಂದರೆ—ನಮ್ಮ ಮಾನಸಿಕ ಹಾಗೂ ಶಾರೀರಿಕ ಸ್ವಾಸ್ಥ್ಯವು ತಮ್ಮ ನಗುವಿನ ಪ್ರಮಾಣವನ್ನು ಹೊಂದಿಕೊಂಡಿದೆ, ಹಾಸ್ಯ ರಸವನ್ನು ಆಸ್ವಾದಿಸುವ ಭಾಗ್ಯಶಾಲಿಗೆ ಎಣೆಯಾರು? ಎಲ್ಲ ದುಃಖವನ್ನೂ, ಎಲ್ಲ ಕಟು ಅನುಭವಗಳನ್ನೂ, ಬೇಸರ ಬರಿಸುವ ಎಲ್ಲ ಸಮಸ್ಯೆಗಳನ್ನೂ ನಗುವಿನಲ್ಲಿ ಮುಳುಗಿಸಿಬಿಟ್ಟು, ನಿಶ್ಚಿಂತೆಯಿಂದ ಇರಬಲ್ಲೆವು. ಇದರಿಂದ ನಮ್ಮ ಸಮಸ್ಯೆಗಳಾಗಲೀ ಕಷ್ಟಗಳಾಗಲೀ ಸದಾಕಾಲ ದೂರಾಗಲಾರವೆಂಬುದು ನಿಜವೇ. ಆದರೆ ಕ್ಷಣಕಾಲದ ಮಟ್ಟಿಗಾದರೂ ಆ ನಗುವಿನ ಮಿಂಚು ಹೊಳೆದುದರ ಪರಿಣಾಮವಾಗಿ—ಸಮಸ್ಯೆಗಳನ್ನು ಬಿಡಿಸುವುದರಲ್ಲಿ ಅಧಿಕ ನೆರವು ದೊರೆಯುವುದಂತೂ ಖಂಡಿತ. ಮನೋವಿಜ್ಞಾನಿಗಳೂ ಡಾಕ್ಟರ ಜನರೂ ನಗುವನ್ನು ಮೀರಿಸುವ "ಟಾನಿಕ್." ಇನ್ನೊಂದಿಲ್ಲ ಎಂದು ಒಪ್ಪಿರುವರು.

ಗಂಭೀರ ಮುಖ ಮುದ್ರೆಯಲ್ಲಿ ಕುಳಿತಿರುವವರಬಳಿ ಸಾರಲು ಎಲ್ಲರೂ ಹಿಂಜರಿಯುವರು; ಅಂಜುವರೆಂದಲ್ಲ, ಆದರೆ ಮನಸ್ಸಿನ ಕವಾಟವನ್ನು ತೆರೆದು, ಮಾತಾಡಲು ವಾತಾವರಣ ಅನುಕೂಲವಿರುವುದಿಲ್ಲ. ಜೀವನದಲ್ಲಿ ಎಷ್ಟೋ ಆಪತ್ತುಗಳು ಬರುವುವು; ಅವುಗಳನ್ನು ಕಂಡು ಬೇಸರಪಡದೆ ನಕ್ಕುಬಿಡುವ ಬುದ್ಧಿವಂತರು ನಾವಾಗಿದ್ದೇವೆಯೆ? ಹಿಂದೊಮ್ಮೆ ಖುರಾಸಾನದಲ್ಲಿ ರಾಜ ಕುಮಾರನೊಬ್ಬನಿದ್ದ; ಅವನೊಂದು ದಿನ ಯುದ್ಧಕ್ಕೆ ಹೋಗುವಾಗ ತನ್ನ ಅಡುಗೆಯ ಸಾಮಾನುಗಳನ್ನು ಮುನ್ನೂರು ಒಂಟೆಗಳ ಮೇಲೆ ಹೇರಿಕೊಂಡು ಹೋದ. ಯುದ್ಧದಲ್ಲಿ ಸೋತು, ವೈರಿರಾಜನ ಕೈಸೆರೆ ಸಿಕ್ಕಿದ. ಹಸಿವು ಹೆಚ್ಚಾಗಲು ಅಡುಗೆ ಮಾಡು ಎಂದು ತನ್ನ ಜೊತೆ ಬಂದ ಬಾಣಸಿಗನಿಗೆಂದ. ಆದರೆ ಅವನೊಡನಿದ್ದುದು ಕೇವಲ ಒಂದು ತುಣುಕು ಮಾಂಸ ಮಾತ್ರ. ಅದನ್ನೆ ಅಡುಗೆಗೆಂದು ಅಣಿಗೊಳಿಸಿದ. ಅಷ್ಟರಲ್ಲಿ ಒಂದು ನಾಯಿ ಬಂತು; ಮಾಂಸದ ಪರಿಮಳ ಮೂಗಿಗೆ ಬಡಿಯಲು, ಪಾತ್ರೆಯೊಳಗೆ ಮೂತಿ ಹಾಕಿತು. ಮಾಂಸ ಬಾಯಿಗೆ ಸಿಕ್ಕಿತೋ ಇಲ್ಲವೋ-ಗಲ್ಲು ಕಿವಿಗೆ ಬೀಳಲು ಪಾತ್ರೆಯ ಸಮೇತ ಓಡತೊಡಗಿತು. ರಾಜ ಕುಮಾರ ಗೊಳ್ಳೆಂದು ನಕ್ಕುಬಿಟ್ಟ. ಕಾರಣ ವಿಚಾರಿಸಲು—"ಇಂದು ಮುಂಜಾನೆ ನನ್ನ ಅಡುಗೆಯ ಸಾಮಾನು ಹೊರಲು ಮುನ್ನೂರು ಒಂಟೆಗಳೂ ಸಾಲಲಿಲ್ಲ—ಆದರೆ ಈ ಸಂಜೆ ಒಂದು ನಾಯಿ ಹೊರುವಷ್ಟೂ ನನ್ನಲ್ಲಿ ಉಳಿದಿಲ್ಲ. ಅದಕ್ಕೆ ನಗುಬಂತು!" ಎಂದ. ನಗುವುದರಲ್ಲಿ ಆನಂದಕಾಣುವ ಮನಸ್ಸು ಬಹಳ ದೊಡ್ಡದು. [illegible]ಯಲ್ಲಿ ಮಕ್ಕಳಿಗೆ ಒಂದನೆ ತರಗತಿಯಲ್ಲಿಯೇ ಹೇಳಿಕೊಡುವ ಪದ್ಯದ ಸಾಲು ಇದು: "ನಗುತಿರು ನಗುತಿರು-ನೀ ನಗುತಿದ್ದರೆ ನಾಡೇ ನಗುವುದು ನಿನ್ನೊಡನೆ!" ಅದೇ ಹಾಡು ಹೀಗೂ ಹೇಳುತ್ತದೆ-"ಅಳುತಿರು-ಅಳುತಿರು-ನೀ ಅಳುತಿದ್ದರೆ, ಯಾರೂ ಸೇರರು ನಿನ್ನೊಡನೆ!" ನಗುಲಾಸ್ಯವಾಡುವ ಮುಖ ನೋಡುವವರಿಗೆಲ್ಲ ಹರ್ಷವುಂಟುಮಾಡುತ್ತದೆ; ನಗುವಿಲ್ಲದವರ ಬಳಿಯು ಮೃತ್ಯು ಕೂಡ ಕಹಿಯೆನಿಸುತ್ತದೆ. ನಮ್ಮ ವ್ಯಾಪಾರಿ ವರ್ಗವನ್ನೆ ನೋಡಬಾರದೆ? ಗ್ರಾಹಕರನ್ನು ಆಕರ್ಷಿಸಲು ಅವರು ತುಟಿಯ ಮೇಲೆ ಹೇಗೆ ನಗು ಕುಣಿಸುತ್ತಿರುವರು! ಆದರೆ ಇದಕ್ಕೂ ಹೆಚ್ಚಾಗಿ ಪ್ರಫುಲ್ಲವಾದ ಮುಖವು ಮನುಷ್ಯನ ಗುಣಶೀಲಗಳ ದ್ಯೋತಕವೂ ಹೌದು. ಹೃದಯದ ಕನ್ನಡಿ ಮುಖ ಎಂದು ಹೇಳುವುದನ್ನು ಕೇಳಿಲ್ಲವೆ?-ಪಾಪದ ಲವಲೇಶವೂ ಇಲ್ಲದ, ಪರಿಶುದ್ಧ ಮನಸ್ಕರ ಮುಖ ಮಂಡಲದಲ್ಲಿ ಆನಂದ ಸದಾಕಾಲ ನೆಲಸಿರುವುದು. ಯೋಗಿ ಶ್ರೇಷ್ಠರು ಧ್ಯಾನಸಮಾಧಿಯಲ್ಲಿ ಅನುಭವಿಸುವ ಸಚ್ಚಿದಾನಂದ ಪ್ರತಿಬಿಂಬವೇ ಮುಖ ಮಂಡಲದ ದಿವ್ಯ ತೇಜಸ್ಸು-ಮತ್ತು ಮಿಂಚುವ ನಸುನಗು ಎನ್ನಬಹುದು.

[೩ನೇ ಪುಟ ನೋಡಿರಿ]



FOR QUALITY
WATCHES
CLOCKS
AND
TIMEPIECES
AND
ALLIED REPAIRS
Consult:-
MUBARAK & CO.
WATCH & CLOCK SPECIALISTS
RATTAN BAZAAR - - MADRAS-3.

ನೂತನ ನಗರ-ಗಾಂಧೀಧಾಮ

ನಿರಾಶ್ರಿತರ ಉತ್ಸಾಹದ ಜ್ವಲಂತ ಪ್ರತೀಕ

ಗುಜರಾಥದ ಕಚ್ಛದಲ್ಲಿರುವ ಕಂಡಲಾ ಬಂದರ ಹಿಂದೊಮ್ಮೆ ರುಕ್ಷ ಪ್ರದೇಶವಾಗಿತ್ತು: ಆದರೆ ಇದೀಗ ನಾಲ್ಕುವರ್ಷಗಳಿಗೆ ಹಿಂದೆ, ಅಲ್ಲಿಯೊಂದು ನವನಗರದ ನಿರ್ಮಾಣವಾಗಿದೆ. ಸಿಂಧದ ಮನೆಮಾರುಗಳಿಲ್ಲದ, ಆಶಾ ಜ್ಯೋತಿ ದೃಷ್ಟಿಗೆ ಬೀಳದ, ಸಂಕಷ್ಟಕ್ಕೀಡಾದ ಸಾವಿರಾರು ಮಂದಿ ನಿರಾಶ್ರಿತರಿಗೆ ಇದು ಹೊಸ ಬದುಕಿನ ಸವಿಯನ್ನು ಈಗ ಉಣಿಸುತ್ತಿದೆ

ನವ ನಗರವನ್ನು "ಗಾಂಧೀ ಧಾಮ" ಎಂಬ ಹೃದಯಂಗಮವಾದ ಹೆಸರಿನಿಂದ ಕರೆಯುವರು; ಗಾಂಧೀ ಧಾಮ ಸ್ವಾವಲಂಬನೆಯ ಪ್ರಯತ್ನಕ್ಕೊಂದು ಅಪೂರ್ವ ನಿದರ್ಶನ. ನಿರಾಶ್ರಿತರೇ ಇದನ್ನು ನಿರ್ಮಿಸಿದರು: ಅದರ ಆಡಳಿತೆಯನ್ನು ತಮ್ಮ ಮೇಲೆಯೇ ತೆಗೆದುಕೊಂಡರು. ಸಿಂಧದ ನಿರಾಶ್ರಿತರು ತಮ್ಮ ಬದುಕನ್ನು ಹೊಸತಾಗಿ ಆರಂಭಿಸಲು ಮಾಡಿದ ಸಹಕಾರ ಪ್ರಯತ್ನದ ಫಲವೇ ಗಾಂಧೀ ಧಾಮ ಎಂಬುದಾಗಿ ನಾವು ಒಟ್ಟಿನಲ್ಲಿ ಹೇಳಬಹುದು.

ನಗರ ಶೋಭೆ

ಈ ನಗರದಲ್ಲಿರುವ ೧೨,೦೦೦ ನಿವಾಸಿಕರಿಗೆ ಆಧುನಿಕ ರೀತಿಯ ಸಕಲಾನುಕೂಲತೆಗಳನ್ನು ಒದಗಿಸಲಾಗಿದೆ: ಮಧ್ಯಮ ವರ್ಗದ ನಿರಾಶ್ರಿತ ಕುಟುಂಬಗಳ ಹಣದ ಅನುಕೂಲತೆಗೆ ಒಪ್ಪುವಂಥ ನಾಲ್ಕು ಸಾವಿರ ಬಾಡಿಗೆ ಮನೆಗಳಿವೆ. ನೀರನ್ನು ಸರಬರಾಜು ಮಾಡುವ ಕೇಂದ್ರಗಳಿವೆ ಪ್ರತಿಯೊಂದೂ ಮನೆಗೆ ವಿದ್ಯುಚ್ಛಕ್ತಿಯನ್ನು ಪೂರೈಸುವರು. ಅಲ್ಲದೆ-ಶಾಲೆಗಳು, ಆಸ್ಪತ್ರೆಗಳು, ರಸ್ತೆಗಳು, ಸಹಕಾರಿ ಬೇಂಕುಗಳು, ವಾಚನಾಲಯ ಹಾಗೂ ಪುಸ್ತಕ ಭಂಡಾರಗಳು, ೫೦೦ ಸೀಟುಗಳಿರುವ ಒಂದು ಥಿಯೇಟರು, ಹಾಲು ಪೂರೈಕೆಯ ಕೇಂದ್ರ, ಸರಕಾರಿ ಹೊಲಗಳು, ಪಶು ಸಾಕಣೆ ಎಲ್ಲವನ್ನೂ ಇದು ಒಳಗೊಂಡಿದೆ

ನಗರದ ಕೊಳಕು ನೀರನ್ನು ತರಕಾರಿ ಬೆಳೆಯಿಸಲಿಕ್ಕೂ ಹುಲ್ಲು ಸಂಪಾದಿಸಲಿಕ್ಕೂ ಉಪಯೋಗಿಸುವರು. ನೆಲದಡಿಯ ಚರಂಡಿ ಕ್ರಮವು ಇದೀಗ ಪೂರ್ಣ ರೂಪಗೊಳ್ಳುತ್ತಿದೆ. ನಗರದೊಳಗಿನ ೧೫ ಮೈಲುಗಳಷ್ಟು ಉದ್ದದ ರಸ್ತೆಗಳಲ್ಲಿ ಈಗಾಗಲೇ ೧೧೦೦೦ ಸಸಿಗಳನ್ನು ನೆಟ್ಟು, ಶೋಭೆ ಹೆಚ್ಚಿಸಿರುವರು.

ಶ್ಲಾಘನೀಯ ಪ್ರಯತ್ನ

ಸಿಂಧದ ಹೆಸರಾದ ವಿಧಾಯಕ ಕಾರ್ಯಕರ್ತ ಪ್ರತಾಪದಿಯಾಲದಾಸರಿಗೆ ೧೯೪೭ರ ಅಂತ್ಯದಲ್ಲಿ ಈ ನಗರ ನಿರ್ಮಾಣದ ಕಲ್ಪನೆ ಹೊಳೆಯಿತು, ತಮ್ಮ ಬದುಕನ್ನು ಸಾಂಸ್ಕೃತಿಕವಾಗಿಯೂ ಸಾಮಾಜಿಕವಾಗಿಯೂ ಸೌಂದರ್ಯಪೂರ್ಣವಾಗಿಸಲು- ಹಾಗೂ ಸ್ವಾವಲಂಬನದಿಂದ ಹಸನಾಗಿಸಲು ಸಿಂಧಿ ನಿರಾಶ್ರಿತರು ಈ ಬಗೆಯಾಗಿ ಪ್ರಯತ್ನಿಸಬಹುದೆಂಬ ಸತ್ಯವನ್ನು ಪ್ರತಾಪ ಮನಗಂಡರು ಈ ಯೋಜನೆಯು ಮಹಾತ್ಮಾಗಾಂಧೀ ಮತ್ತು ಸರ್ದಾರ ಪಟೇಲರಿಗೆ ಮೆಚ್ಚುಗೆಯಾಯಿತು. ಗಾಂಧೀಜಿಯ ಮಾತಿನಂತೆ, ಕಚ್ಛದ ಮಹಾರಾಜರು ೧೯೪೮ರ ಜನವರಿಯಲ್ಲಿ ಹೊಸ ನಗರವನ್ನು ನಿರ್ಮಿಸಲು ೧೫೦೦೦ ಎಕ್ರೆ ಜಾಗವನ್ನು ದಾನವಾಗಿ ಕೊಟ್ಟರು.

ಸಣ್ಣಮಟ್ಟಿನಲ್ಲಿಯೇ ತೊಡಗಿದ್ದರೂ ಈ ನಗರ ಒಂದಲ್ಲ ಒಂದುದಿನ ಕರಾಚಿಯಷ್ಟೇ ಪ್ರಸಿದ್ಧವಾದ ಸಿಂಧೀ ವ್ಯಾಪಾರೀ ಕ್ಷೇತ್ರವಾಗುವುದೆಂದು ಪ್ರತಾಪರ ಮನೀಷೆ. ಸಿಂಧದ ನಿರಾಶ್ರಿತರು ಎಲ್ಲಿದ್ದರೂ ಅವರನ್ನು ಕರೆದುಕೊಂಡು ಬಂದು ಇಲ್ಲಿ ನೆಲೆಗೊಳಿಸುವುದಷ್ಟೇ ಅಲ್ಲ-ಉದ್ಯೋಗವನ್ನು ಕಲ್ಪಿಸಿಕೊಟ್ಟು ಉಣ್ಣಲು ಅನ್ನ ಒದಗಿಸುವುದೂ ಅವರ ಹಂಬಲ. ಈ ಆಶೆಯನ್ನು ಪೂರ್ತಿಗೊಳಿಸುವುದಕ್ಕಾಗಿ ಅವರು ಅನವರತ ದುಡಿಯುತ್ತಿದ್ದಾರೆ. ನಗರ ಹಾಗೂ ಗೃಹ ನಿರ್ಮಾಣ ಸಮಿತಿಯ ಮೇಲ್ವಿಚಾರಣೆ ನೋಡಿಕೊಳ್ಳುವ ಸಿಂಧಿ ಪುನರ್ನಿವೇಶನ ಸಮಿತಿಯ ಗೌರವ ವ್ಯವಸ್ಥಾಪಕರೆಂದು ಅವರ ಸ್ಥಾನ.

ಈ ಸಮಿತಿಯನ್ನು ೧೯೪೮ರ ಆರಂಭದಲ್ಲಿ ರಚಿಸಲಾಯಿತು. ಒಂದು ಸಾವಿರ ರುಪಾಯಿಯ ೨೫೦೦೦ ಪಾಲುಗಳುಳ್ಳ ಭಂಡವಾಳದಿಂದ ಇದು ತೊಡಗಿತು. ಇಷ್ಟರ ವರೆಗೆ ೩೦೦೦೦ ಪಾಲುಗಳು ಮಾರಿಹೋಗಿದ್ದು, ಭಾರತ ಸರಕಾರವು ಕಾಲಂಶದಷ್ಟನ್ನು ತಾನು ಪಡೆದು ಕೊಂಡಿದೆ.

ನಿರಾಶ್ರಿತರ ಕೇಂದ್ರ

ಗೃಹ ನಿರ್ಮಾಣಕ್ಕೆ ಅಗತ್ಯವಿರುವ ಸಾಮಾನು ಸರಂಜಾಮುಗಳನ್ನು ಉತ್ಪಾದಿಸಲು ಈ ನಗರದಲ್ಲಿ ಸ್ವಂತ ಕಾರ್ಖಾನೆಗಳಿವೆ. ೩೫೦ ಮಂದಿ ಇಲ್ಲಿ ಉದ್ಯೋಗಕ್ಕಿದ್ದಾರೆ. ದಿನಕ್ಕೆ ಸಾಮಾನ್ಯ ಮಟ್ಟದ ಆರು ಮನೆಗಳಿಗೆ ಬೇಕಾಗುವಷ್ಟು ಕಾಂಕ್ರೀಟು ಗಟ್ಟಿಗಳನ್ನು ಉತ್ಪಾದಿಸಬಲ್ಲ ಒಂದು ಕಾರ್ಖಾನೆ ಇದೆ. ನಳ್ಳಿ ಹಾಗೂ ಕಂಭಗಳನ್ನು ತಯಾರಿಸುವ ಒಂದು ಕಾರ್ಖಾನೆ ಇದೆ. ೧೦೫೦ ಕಿಲೋ ವಾಟುಗಳಷ್ಟು ವಿದ್ಯುಚ್ಛಕ್ತಿಯನ್ನು ಒಂದು ಕೇಂದ್ರ ಉತ್ಪಾದಿಸುತ್ತಿದೆ.

ಸಿಂಧಿ ಪುನರ್ನಿವೇಶನ ಸಮಿತಿಯೇ ಇವೆಲ್ಲದರ ಒಡೆತನವನ್ನು ವಹಿಸಿಕೊಂಡಿದೆ. ಹಲವಾರು ಇಂಜೀನಿಯರರನ್ನೊಳಗೊಂಡು ಸುಮಾರು ೧೦೦೦ ವೇತನ ಪಡೆಯುವ ಕೆಲಸಗಾರರು ಅದರ ಅಧೀನದಲ್ಲಿರುವರು.

ಭಾರತ ಸರಕಾರದ ೧೧೦ಲಕ್ಷ ರುಪಾಯಿಯ ಭಂಡವಾಳದಿಂದ ನಿರ್ಮಿಸಲಾದ ನಾಲ್ಕುಸಾವಿರ ಬಾಡಿಗೆ ಮನೆಗಳು ೮೦೦ ಎಕ್ರೆ ಜಾಗವನ್ನು ಆಕ್ರಮಿಸಿವೆ: ಪ್ರತಿಯೊಂದೂ ಒಂದರಿಂದ ಮೂರು ಕೋಣೆಗಳಿಂದ ಕೂಡಿರುವುದಲ್ಲದೆ, ಒಂದು ಅಡಿಗೆ ಮನೆ, ಮತ್ತು ಸ್ವಲ್ಪ ಅಂಗಳವಿದೆ. ಆಯಾ ಮನೆಯನ್ನು ಹೊಂದಿಕೊಂಡು ಬೆಲೆಯು ೧೧೨೦೦ ರುಪಾಯಿಯಿಂದ ೧೫೦೦೦ ರುಪಾಯಿ ವರೆಗಿದೆ. ನಿರಾಶ್ರಿತರಿಗೆ ಬೆಲೆಯಲ್ಲಿ ಶೇಕಡಾ ಹತ್ತರಷ್ಟು ಕಡಿಮೆ ಇದನ್ನು ಒದಗಿಸಿ, ಉಳಿದುದನ್ನು ೨೫ ವರ್ಷಗಳಲ್ಲಿ ಸಮಕಂತಿನಲ್ಲಿ ಕೊಡುವಂತೆ ರಿಯಾಯಿತಿ ತೋರಿದ್ದಾರೆ.

ಅಭಿವೃದ್ಧಿಗೆ ಆಸ್ಪದ

ಮುಂದಿನ ಕೆಲವು ವರ್ಷಗಳಲ್ಲಿ ಗಾಂಧೀಧಾಮ ಜನಭರಿತವಾದ ನಗರದಲ್ಲಿ ಪರಿವರ್ತನೆಯಾಗುವ ಸರ್ವ ಲಕ್ಷಣಗಳೂ [illegible] ಮುಂಬಯಿಯ ಧಕ್ಕೆಗಳಿಗೆ ಆಗುತ್ತಿರುವ ಆಯಾಸ ಪರಿ

[೧೦ನೇ ಪುಟ ನೋಡಿ]

೧ನೇ ಪುಟದಿಂದ ಮುಂದುವರಿದುದು

ಕಿಲುಕಿಲು ನಗು

ವರ್ತಮಾನ ಕಾಲದ ಮಹಾಜೀವಿ ಗಾಂಧೀಜೀ ಅಪ್ರತಿಮ ನಗೆಗಾರರಾಗಿದ್ದರು. ಅಮೇರಿಕೆಯ ಪತ್ರಿಕೋದ್ಯಮಿ ಲೂಯಿ ಫಿಶರ್ ಒಮ್ಮೆ ಅವರೊಡನೆ "ನೀವು ಮಾತು ಮಾತಿಗೂ ನಕ್ಕುಬಿಡುತ್ತೀರಲ್ಲ-ಸಮಸ್ಯೆಗಳು ಜಟಿಲವಾಗಿರುವ ಪ್ರಸಂಗದಲ್ಲಿಯೂ ಉದಾಸೀನತೆಗೊಳಗಾಗದೆ-ಗೊಳ್ಳನೆ ನಕ್ಕುಬಿಡುವುದರ ರಹಸ್ಯವೇನು?" ಎಂದು ಕೇಳಿದ. ಗಾಂಧೀಜಿಗೆ ಈ ಮಾತನ್ನು ಕೇಳಿ ನಗು ಬಂತು. "ನಗು ಮನಸ್ಸಿನ ಗ್ರಂಥಿಗಳನ್ನು ಬಿಡಿಸಿ, ಸಡಿಲು ಮಾಡುತ್ತದೆ ಕೇವಲ ನನ್ನ ಮನಸ್ಸನ್ನಷ್ಟೆ ಅಲ್ಲ-ನಿಮ್ಮದನ್ನೂ ಸಹ!" ಎಂದು ಗಾಂಧೀಜಿ ಮಾರ್ನುಡಿದರು. ಗಾಂಧೀ ಮತ್ತು ನೆಹರೂ ಇಬ್ಬರೂ ಬಿದ್ದು ಬಿದ್ದು ನಗುತ್ತಿರುವ ಚಿತ್ರಪಟವನ್ನು ನಾವು ಕಂಡು, ನಕ್ಕುಬಿಟ್ಟಿಲ್ಲವೆ?

ನಮ್ಮ ಬದುಕು ಅಸಂಖ್ಯ ಚಿಂತಾಪದ್ಧರಿಯಿಂದಲೂ, ಜಟಿಲ ಸಂಗತಿಗಳಿಂದಲೂ ತುಂಬಿಕೊಂಡಿರುತ್ತವೆ. ಅದರಲ್ಲಿ ಚಿಂತೆಯಿದೆ, ಆಶೆಯಿದೆ, ವ್ಯಾಮೋಹವಿದೆ, ಇನ್ನೂ ಅನೇಕ ಭಾವಗಳು ಹುದುಗಿವೆ. ಆದುದರಿಂದ ಪ್ರತಿಕ್ಷಣವೂ ನಗುತಿದ್ದುಕೊಂಡು-ಭಾರವನ್ನು ದೂರೀಕರಿಸುವುದು ಬಹಳ ಒಳ್ಳೆಯದು. ನಗುವುದು ಬಹಳ ಸುಲಭವಾಗಿದ್ದರೂ—ನಮ್ಮಲ್ಲಿ ಎಷ್ಟೋ ಮಂದಿಗೆ ಆ ಅಭ್ಯಾಸವಿರುವುದಿಲ್ಲ ಇದಕ್ಕೆ ನಮ್ಮ ಔದಾಸೀನ್ಯವೇ ಕಾರಣ-ನಗುವುದು. ನಮ್ಮ ಮಾನಕ್ಕೆ ಕಡಿಮೆ ಎಂದುಕೊಳ್ಳುವವರಿದ್ದಾರೆ. ಆದರೆ ನಗುವಿಗೂ ಮಾನಾಪಮಾನಕ್ಕೂ ಸಂಬಂಧವೇನಿಲ್ಲ ಎಂಬುದನ್ನರಿಯರು. ಶ್ರೀ ರಾಮಚಂದ್ರನನ್ನು ದೇವರ ಅವತಾರವೆಂದು ಪೂಜಿಸುತ್ತೇವೆ; ರಾವಣನನ್ನು ಸಂಹರಿಸಿ, ವಿಜಯೋತ್ಸವದಲ್ಲಿ ಕಪಿ ಹಾಗೂ ಭಲ್ಲೂಕ ಗಣಗಳು ಮೈಮರೆತು ಇದ್ದಾಗ, ವಿಭೀಷಣನು ಅಸಂಖ್ಯ ಬಹುಮೂಲ್ಯ ಒಡವೆಗಳನ್ನು ವೀರ ಯೋಧರಿಗೆ ಕಾಣಿಕೆ ನೀಡಲೆಂದು ತಂದನು. ಶ್ರೀ ರಾಮಚಂದ್ರನು ಒಟ್ಟೊಟ್ಟನ್ನೇ ಬಳಿ ಕರೆದು ಹಂಚಬಹುದಿತ್ತು. ಆದರೆ, ಹಾಗೆ ಮಾಡದೆ ವಿಭೀಷಣನಿಗೆ-"ನೀನು ರಥವನ್ನು ಆಕಾಶದಲ್ಲಿ ಮೇಲೆತ್ತಿ, ಅಲ್ಲಿಂದಲೇ ಆಭರಣಗಳನ್ನು ಕೆಳಗೆ ಚೆಲ್ಲಿಬಿಡು. ಈ ವೀರ ಯೋಧರು ತಮಗೆ ಬೇಕೆನಿಸಿದುದನ್ನು ಆಯ್ದುಕೊಳ್ಳಲಿ" ಎಂದನು. ಹೀಗೆ ಒಡವೆಗಳು ಭೂಮಿಗೆ ಬೀಳುತ್ತಿರಲು, ಕಪಿಗಳೂ ಭಲ್ಲೂಕಗಳೂ ಚಂಗನೆ ಆಗಸಕ್ಕೆ ನೆಗೆದು, ನಡುದಾರಿಯಲ್ಲಿಯೇ ಆಭರಣಗಳನ್ನು ಕಸಿದುಕೊಳ್ಳಲು ಕಚ್ಚಾಡಿದವು. ಇದು ಕಂಡು ಸೀತಾದೇವಿಗೂ, ರಾಮಚಂದ್ರನಿಗೂ ಮಿತಿಮೀರಿದ ನಗು ಬಂತು ಅಷ್ಟೇ ಅಲ್ಲ-ಗಂಭೀರ ಸ್ವಭಾವದ ಲಕ್ಷ್ಮಣನೂ ತುಟಿ ಅಗಲಿಸಿ, ನಸುನಗು ತೋರಿಸಿದ.

ನಾವು ಯಾವಾಗಲೂ ನಗುತ್ತಿರಬೇಕೆಂದಿಲ್ಲ-ಆದರೆ ದಿನಕ್ಕೊಂದುಬಾರಿ ನಗುವುದು ರೋಗಕ್ಕೆ ರಾಮಬಾಣ ಔಷಧಿ ಎಂಬ ಡಾಕ್ಟರರ ವಚನವನ್ನೂ, ಮನಸ್ಸಿನ ಸ್ವಾಸ್ಥ್ಯಕ್ಕೆ ಅದರಿಂದ ದೊರಕುವ ಲಾಭವನ್ನೂ ಗಮನದಲ್ಲಿಟ್ಟುಕೊಂಡು ನಗುವ ಒಳ್ಳೆಯ ಅಭ್ಯಾಸವನ್ನು ಮಾಡಿದರೆ ಚಂದ. ಮಕ್ಕಳ ನಗು ಗೃಹಮಂದಿರವನ್ನು ಬೆಳಗುತ್ತದೆ. ದಾದಿಯ ನಸುನಗು ರೋಗಿಗೆ ಹರ್ಷವನ್ನುಂಟುಮಾಡುತ್ತದೆ. ಒಡೆಯನ ಒಂದು "ಶಾಭಾಸ್" ಪಡೆಯಲು ನೌಕರನು ಏನುಮಾಡುವುದಿಲ್ಲ? ಕೂಲಿಕಾರನ ನಗುವೇ ಅವನ ಬದುಕಿನ ಸರ್ವಸ್ವ. ರೈಲಿನಲ್ಲಿ ನಕ್ಕು ನಲಿಸುವ ಸಹಯಾತ್ರಿಕನಿದ್ದರೆ, ನಮಗಿಂತ ಹೆಚ್ಚಿನ ಅದೃಷ್ಟವಂತರಿಲ್ಲ!

ಕಾರಣ—ಸ್ವಾತಂತ್ರ್ಯದ ಬಳಿಕ ನಾವು ಅನುಭವಿಸಬೇಕಾಗಿ ಬಂದ ಕಷ್ಟಗಳಿಗಾಗಿ ಅಳುಮುಖರಾಗುವುದು ಬೇಡ—ನಗು ನಗುತ್ತಾ ದಿನಗಳೆಯುವ ಪ್ರವೃತ್ತಿ ಬೆಳೆದರೆ, ನಮ್ಮ ಸ್ವಾತಂತ್ರ್ಯದ ಸವಿಫಲವಾದ ಸಮೃದ್ಧಿಯನ್ನು ಭೋಗಿಸುವ ದಿನ ಹೆಚ್ಚು ದೂರವಿರಲಾರದು

—ಓಂಕಾರ್.

ನೀವೇಕೆ ಸೇವಿಂಗ್ಸ್‌ಬೇಂಕ್ ಖಾತೆಯನ್ನು ತೆರೆಯಬೇಕು?

ಆರ್ಥಿಕ ವಹಿವಾಟಿಗೆ ಇದೊಂದು ಅತ್ಯುತ್ತಮ ಸಾಧನ ನಿಮ್ಮ ಸಂಬಳ, ಆಯವನ್ನೆಲ್ಲಾ ಸೇವಿಂಗ್ಸ್ ಬೇಂಕು ಲೆಕ್ಕಕ್ಕೆ ಜಮೆಮಾಡಿರಿ; ಸಲಬೇಕಾದುದನ್ನು, ವ್ಯಯವನ್ನು ಚೆಕ್ಕುಗಳ ಮೂಲಕವೇ ಪಾವತಿ ಮಾಡಿರಿ. ಆಗ ನಿಮಗೆ ನಿಮ್ಮ ಆಯವ್ಯಯದ ಸಂಪೂರ್ಣ ತಿಳಿವಳಿಕೆಯುಂಟಾಗುವುದು ನಿಮ್ಮ ಪಾಸ್ ಪುಸ್ತಕವೇ ನಿಮಗಿದನ್ನು ತಿಳಿಸುವುದು. ಆರ್ಥಿಕ ವ್ಯವಹಾರದಲ್ಲಿ ಇಷ್ಟುಸ್ವಜ ಮತ್ತು ಅನುಕೂಲಕ್ರಮ ಬೇರೊಂದಿಲ್ಲ-ಮಾತ್ರವಲ್ಲ ಈ ಚೊಕ್ಕ ಹಾಗೂ ಆಧುನಿಕ ರೀತಿಯ ವ್ಯವಹಾರ ಕ್ರಮದಿಂದ ನಿಮ್ಮ ಮನಸ್ಸಿಗೆ ಗೌರವ—ಸಂತೃಪ್ತಿಗಳುಂಟಾಗುವುವು

ದಿ ಕೆನರಾ ಇಂಡಸ್ಟ್ರಿಯಲ್
ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ. 1925 ಹೆಡ್ ಆಫೀಸು. ಉಡುಪಿ

The Canara Industrial &
Banking Syndicate Limited.

Estd: 1925 H. O: UDIPI.

★ ಗ್ರಾಮಾಭಿವೃದ್ಧಿಯ ಪ್ರಯತ್ನ ★

ಗ್ರಾಮಸ್ವರಾಜ್ಯವೆಂಬುದು ಗಾಂಧೀಜಿ ನಮ್ಮ ಮುಂದಿಟ್ಟ ಆದರ್ಶಗಳಲ್ಲೆಲ್ಲ ಅದ್ವಿತೀಯವಾದುದು. ನಮ್ಮ ಮದ್ರಾಸು ಸರಕಾರವು ಗ್ರಾಮಾಭಿವೃದ್ಧಿಯ ಸಂಗತಿಯಲ್ಲಿ ಕೂಡ ಗಾಂಧೀಜಿಯ ಆ ಪರಮ ಉದ್ದೇಶಕ್ಕೆ ಕಿವಿಗೊಟ್ಟು ನಡೆದಿದೆ. ಗ್ರಾಮಾಭಿವೃದ್ಧಿ ಯೋಜನೆಯ ಮುಖ್ಯ ಉದ್ದೇಶವು ಜನರ ಜೀವನವನ್ನು ಸುಖಮಯವಾಗಿಸುವುದಾಗಿದೆ. ಇದಕ್ಕಾಗಿ ತಮ್ಮ ದೈನಂದಿನ ಸಮಸ್ಯೆಗಳನ್ನು ಸ್ವಂತ ಬುದ್ಧಿವಂತಿಕೆ ಮತ್ತು ಪ್ರಯತ್ನಗಳಿಂದ ಪರಿಹರಿಸುವುದಕ್ಕೆ ಉತ್ತೇಜನ ಕೊಟ್ಟು ಈ ರೀತಿ ಸ್ವಾವಲಂಬನ ಹಾಗೂ ಆತ್ಮ ವಿಶ್ವಾಸವನ್ನೂ ಉಂಟುಮಾಡುವರು. ಆರ್ಥಿಕ ಅಸಮತೆಯನ್ನು ದೂರಗೊಳಿಸುವುದಕ್ಕೂ ದಾರಿದ್ರ್ಯವನ್ನು ನಿವಾರಿಸಿ, ಹಾಗೂ ಆರೋಗ್ಯವನ್ನು ವರ್ಧಿಸಿ ಬದುಕಿನ ಬೇಸರ ಕಳೆಯುವುದಕ್ಕೂ ಗ್ರಾಮಾಭಿವೃದ್ಧಿ ಯೋಜನೆಯು ಸಹಕಾರಿ.

ಫಿರ್ಕಾ ಕೇಂದ್ರಗಳು

ಪ್ರತಿಯೊಬ್ಬ ಹಳ್ಳಿಗನೂ ತನ್ನ ವ್ಯಕ್ತಿತ್ವದ ವಿಕಾಸವನ್ನು ಪರಮಾವಧಿ ಮಟ್ಟದಲ್ಲಿ ಉಂಟುಮಾಡಲಾಗುವಂತೆ—ಮತ್ತು ಸಮಾಜದ ಜೊತೆಗಾರ ನಾಗರಿಕನಾಗಿ ಬಾಳುವಂತೆ ನೋಡುವುದು ಮುಖ್ಯ ಸಂಗತಿ. ಇದರ ಪರಿಣಾಮವಾಗಿ ಸುಖ ಸಂತೋಷಗಳು ಹೆಚ್ಚುವುದರ ಜೊತೆಗೆ—ಸಾಮಾಜಿಕ ಅಭಿವೃದ್ಧಿಯನ್ನೂ ಸಾಧಿಸಿದಂತಾಗುವುದು. ತಮ್ಮ ಬದುಕನ್ನು ಸುಧಾರಿಸಿಕೊಳ್ಳಲು ಗ್ರಾಮಸ್ಥರೆಲ್ಲ ಒಟ್ಟಾಗಿ, ಪರಸ್ಪರ ಸಹಕರಿಸಿ ದುಡಿಯಬೇಕೆಂಬ ಆದರ್ಶವನ್ನು ಕಾರ್ಯಸ್ಥಿತಗೊಳಿಸುವುದಗತ್ಯ. ಇದಕ್ಕಾಗಿಯೇ ಕೆಲವು ಗ್ರಾಮಗಳನ್ನು ಒಂದುಗೂಡಿಸಿ ಫಿರ್ಕಾ ಕೇಂದ್ರಗಳನ್ನಾಗಿ ಮಾಡಿರುವರು. ಪ್ರತಿಯೊಂದೂ ಫಿರ್ಕಾದಲ್ಲಿ ಹಳ್ಳಿಗರ ಅಗತ್ಯಗಳನ್ನು ಪರಿಶೀಲಿಸಿ ತೀರಾ ಅವಶ್ಯಕವೆನಿಸಿದುದಕ್ಕೆ ಪ್ರಾಶಸ್ತ್ಯ ಕೊಟ್ಟು ಕೆಲಸತೊಡಗುವರು. ಆರೋಗ್ಯ, ಶಿಕ್ಷಣ, ಕುಡಿಯುವ ನೀರು, ಕೃಷಿ, ಗೃಹೋದ್ಯಮಗಳು, ನೀರಾವರಿ, ಮಾರ್ಗ ಮತ್ತು ಸಂಪರ್ಕಾನುಕೂಲತೆಗಳು—ಹೀಗೆ ಇನ್ನೂ ಅನೇಕ ಆವಶ್ಯಕತೆಗಳನ್ನು ಸಾಮಾಜಿಕ ದೃಷ್ಟಿಕೋನದಿಂದ ನೋಡಿ, ತಕ್ಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಮದ್ರಾಸು ರಾಜ್ಯದಲ್ಲಿ ಸರ್ವಪ್ರಥಮವಾಗಿ ೧೯೪೬ರ ಅಂತ್ಯದಲ್ಲಿ ೩೪ ಫಿರ್ಕಾಗಳನ್ನು ಗ್ರಾಮಾಭಿವೃದ್ಧಿ ಯೋಜನೆಗೆ ಒಳಪಡಿಸಲಾಯಿತು. ೧೯೫೦ನೇ ಏಪ್ರಿಲಿನಿಂದ ಮತ್ತೂ ೫೦ ಫಿರ್ಕಾಗಳಿಗೆ ಇದನ್ನು ಅನ್ವಯಿಸಲಾಯಿತು. ಈ ವರ್ಷದಲ್ಲಿ ಇನ್ನೂ ೨೫ ಫಿರ್ಕಾಗಳಿಗೆ ಗ್ರಾಮಾಭಿವೃದ್ಧಿ ಯೋಜನೆಯನ್ನು ವಿಸ್ತರಿಸುವ ನಿಶ್ಚಯ ಮಾಡಿರುವರು.

ಕೃಷಿಕರಿಗೆ ಪ್ರೋತ್ಸಾಹ

ಕೃಷಿಕರಿಗೆ ಗ್ರಾಮಾಭಿವೃದ್ಧಿ ಯೋಜನೆಯನ್ವಯ ಬಹಳ ನೆರವು ದೊರೆಯುತ್ತದೆ: ಗೊಬ್ಬರವನ್ನು ಸಿದ್ಧಗೊಳಿಸುವುದು, ಭೂಮಿಯ ಸಾರವನ್ನು ಹೆಚ್ಚಿಸುವುದು, ಪಡು ಭೂಮಿಯನ್ನು ಸಾಗುವಳಿ ಮಾಡುವುದು, ಗಿಡಗಳನ್ನು ನೆಡುವುದು ಮುಂತಾದುವಕ್ಕೆ ತುಂಬ ಪ್ರೋತ್ಸಾಹ ಕೊಡುವರು. ಮುಖ್ಯ ಫಸಲನ್ನಲ್ಲದೆ ಬಟಾಟೆ ಮುಂತಾದ ಉಪಬೆಳೆಯನ್ನು ಮಾಡುವುದಕ್ಕೆ ಅಗ್ಗ ದರದಲ್ಲಿ ಬೀಜವನ್ನೊದಗಿಸುವ ಮೂಲಕ ಉತ್ಸಾಹ ತುಂಬುವರು. ನೀರೆತ್ತುವ ಪಂಪುಗಳ ಮಾರಾಟದಲ್ಲಿ ರಿಯಾಯತಿಯನ್ನು ತೋರಿಸುವರು. ಅಧಿಕ ಬೆಳೆ ನೀಡುವ ಸುಧಾರಿತ ಬೀಜಗಳನ್ನು ಕೃಷಿಕರಿಗೆ ಕೊಟ್ಟು, ಭತ್ತ, ಮತ್ತಿತರ ಧಾನ್ಯಗಳ ಉತ್ಪಾದನೆ ಹೆಚ್ಚುವಂತೆ ನೋಡುವರು. ಹಸುರೆಲೆ ಗೊಬ್ಬರ, ಅಮೋನಿಯಾದ ಸಲ್ಫೇಟು, ಫೋಸ್ಫೇಟು ಗೊಬ್ಬರಗಳು ಮುಂತಾದುವನ್ನು ಕೃಷಿಕರಿಗೆ ರಿಯಾಯತಿ ದರದಲ್ಲಿ ಪೂರೈಸುವರು. ಕೃಷಿಗೆ ಸಂಬಂಧಿಸಿದ ಉಪಕರಣಗಳನ್ನು ಬಡ ರೈತರಿಗೆ ಅರ್ಧ ದರದಲ್ಲಿ ಒದಗಿಸಿದ್ದೂ ಉಂಟು.

ಕೆಲವು ಆರಿಸಿದ ಫಿರ್ಕಾಗಳಲ್ಲಿ ನೀರಾವರಿ ಕೆಲಸಗಳಿಗೆ ಅಧಿಕ ಮಹತ್ವವನ್ನು ಕೊಡಲಾಗಿದೆ. ಹಳೆಯ ಕೆರೆ-ಬಾವಿಗಳನ್ನು ದುರಸ್ತಿಗೊಳಿಸಿದ್ದು, ಕಾಲುವೆಗಳನ್ನು ಹೊಸದಾಗಿ ತೋಡಲಾಗಿದೆ. ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸುವುದು ಇನ್ನೊಂದು ಮುಖ್ಯ ವಿಷಯ: ೧೧೫ ಗ್ರಾಮಗಳು ಪ್ರಕೃತ ವಿದ್ಯುಚ್ಛಕ್ತಿಯ ಸೌಲಭ್ಯವನ್ನು ಪಡೆದಿದ್ದು, ಕೃಷಿ ಹಾಗೂ ಉದ್ಯಮಗಳಲ್ಲಿ ಮುನ್ನಡೆಯುತ್ತಿವೆ.

ಶಿಕ್ಷಣ ಪ್ರಸಾರ

ಜಾನುವಾರುಗಳ ತಳಿ ಸುಧಾರಣೆಯ ಕಡೆಗೂ ಗ್ರಾಮಾಭಿವೃದ್ಧಿ ಯೋಜನೆ ಲಕ್ಷ್ಯ ಪೂರೈಸಿದೆ: ಆರಿಸಿದ ನಾಲ್ಕು ಫಿರ್ಕಾಗಳಲ್ಲಿ ಈ ಬಗ್ಗೆ ಕಾರ್ಯವನ್ನು ತೊಡಗಿರುವರು. ಇದಲ್ಲದೆ ಪಶು ಸಾಕಣೆ, ಹಾಗೂ ಕೋಳಿ ಮುಂತಾದವುಗಳ ಪಾಲನೆಯಲ್ಲಿ ಸುಧಾರಿತ ಕ್ರಮಗಳನ್ನು ಅನುಸರಿಸಲು ರೈತರಿಗೆ ಮಾರ್ಗದರ್ಶನವನ್ನು ಮಾಡುವರು.

ಗ್ರಾಮಸ್ಥರಲ್ಲಿ ಅಜ್ಞಾನ ಮತ್ತು ದಾರಿದ್ರ್ಯಗಳು ಇರುವುದಕ್ಕೆ ಅವಿದ್ಯೆಯೇ ಮೂಲ ಕಾರಣ: ಉತ್ತಮ ಜೀವನವನ್ನು ಸಾಗುವ ಅಭಿಲಾಷೆ ಇದ್ದರೂ, ಅದಕ್ಕೆ ಮಾರ್ಗವೇನೆಂಬುದರ ನಿಜವಾದ ತಿಳುವಳಿಕೆ ಇಲ್ಲದಿರುವುದೊಂದು ಪ್ರಮುಖ ಕೊರತೆ. ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಶಾಲೆಗಳನ್ನು ತೊಡಗಿದಂತೆ, ವಯಸ್ಕರ ಶಿಕ್ಷಣ ಕೇಂದ್ರಗಳು ಹೆಚ್ಚಿದಂತೆ, ವಾಚನಾಲಯ ಮತ್ತು ಪುಸ್ತಕ ಭಂಡಾರಗಳು ಸ್ಥಾಪಿತಗೊಂಡಂತೆ—ತಮ್ಮ ಕೆಲಸದ ನಿಜವಾದ ಹೊಲಬನ್ನು ಅರಿತುಕೊಳ್ಳಲು ಗ್ರಾಮಸ್ಥರು ಸಮರ್ಥರಾಗುವುದು ಮಾತ್ರವಲ್ಲದೆ, ಅವರಲ್ಲಿ ಹೊಸತಾಗಿ ಸ್ಫೂರ್ತಿಯೂ ಸಂಚರಿಸುವುದು. ಮೂಲ ಶಿಕ್ಷಣದ ಕೇಂದ್ರಗಳು, ಕೃಷಿ ಮತ್ತು ಉದ್ಯಮದ ಯೋಗ್ಯ ಮಾಹಿತಿ ಕೊಟ್ಟರೆ, ರೇಡಿಯೋ ಯಂತ್ರದ ಮೂಲಕ ಲೋಕ ವ್ಯವಹಾರದ ಜ್ಞಾನ ದೊರಕುವುದು.

ಆರೋಗ್ಯ ಪಾಠಗಳು

ವೈಯಕ್ತಿಕ ಹಾಗೂ ಸಮಾಜಿಕ ನೈರ್ಮಲ್ಯದ ಕಡೆಗೆ ಗ್ರಾಮಸ್ಥರ ಲಕ್ಷ್ಯವನ್ನು ಸೆಳೆಯುವುದು ಬಹಳ ಕಠಿಣವಾದ ಕೆಲಸ. ಗ್ರಾಮಾಭಿವೃದ್ಧಿಯ ಸಿಬಂದಿಗಳು ಈ ವಿಷಯದಲ್ಲಿ ತುಂಬಾ ಪರಿಶ್ರಮವನ್ನು ಹೆಚ್ಚಿನ ಆಸಕ್ತಿಯನ್ನು ವಹಿಸಬೇಕಾಗಿದೆ. ಅವರ ನಿರಂತರ ದುಡಿಮೆಯ ಪರಿಣಾಮವಾಗಿ, ಇದೀಗ ಹಳ್ಳಿಗಳಲ್ಲಿ ತಮ್ಮ ಊರಿನ ಮನೆಗಳನ್ನು ಚೊಕ್ಕಟವಾಗಿಡುವ ಹವ್ಯಾಸ ಉಂಟಾಗಿದೆ. ಆರೋಗ್ಯದ ಕುರಿತು ಶಿಕ್ಷಣ ಹಾಗು ಪ್ರಚಾರ ನಡೆಯುವಾಗ—ರೋಗಗಳನ್ನು ತಡೆಗಟ್ಟುವುದಕ್ಕೇನೇ ಮಹತ್ವ ಕೊಡಲಾಗುವುದು. ರೋಗ ಬಂದನಂತರವಾದರೂ ಹಳ್ಳಿ ಜನ ಸಾಯಬಾರದೆಂಬುವುದರಿಂದ ಉಪಶಮನದ ಉಚಿತ ಮಾರ್ಗಗಳನ್ನು ಉಪದೇಶಿಸುವರು. ಆಸ್ಪತ್ರೆಗಳು, ಹೆಂಗಸರಿಗಾಗಿಯೇ ಮೀಸಲಿರಿಸಿದ ಕೇಂದ್ರಗಳು, ಶಿಶು ವಿಹಾರಗಳು ಈಗ ಅಲ್ಲಲ್ಲಿ ಹೊಸತಾಗಿ ಕಂಡು ಬರುತ್ತವೆ.

ಮಾರ್ಗ ಸಂಚಾರದ ಅನುಕೂಲತೆ ಹೆಚ್ಚಿಸುವುದರಿಂದ—ವ್ಯಾಪಾರ ವಹಿವಾಟು ಅಧಿಕಗೊಳ್ಳುವುದಲ್ಲದೆ, ಗ್ರಾಮಸ್ಥರ ನಿತ್ಯವ್ಯವಹಾರಕ್ಕೂ ಪ್ರಯೋಜನ ಉಂಟಾಗುವುದು. ಇದಕ್ಕೆ ಬೇಕಾದ ಸಹಾಯವನ್ನೂ ಸರಕಾರವು ಜನತೆಯೂ ಕೂಡಿಯೇ ನೀಡಿದ ಉದಾಹರಣೆಗಳಿವೆ. ಮುಖ್ಯವಾಗಿ, ಸ್ವಯಂ ಸ್ಫೂರ್ತಿಯಿಂದ ಜನರು ಭೂದಾನವನ್ನು ನೀಡುವ ಮೂಲಕ ಮತ್ತು ಸ್ವತಃ ಇಂಥ ಸಾರ್ವಜನಿಕ ಉಪಯೋಗದ ಕೆಲಸದಲ್ಲಿ ದುಡಿಯಲು ಮುಂಬಂದು ನೆರವಾಗಿದ್ದಾರೆ.

ಗೃಹೋದ್ಯಮ

ಗೃಹೋದ್ಯಮಗಳನ್ನು ಉಳಿಸಿ ಬೆಳೆಸುವುದು ಅಗತ್ಯವೆಂಬುದರಿಂದ, ಒಂದು ಯೋಜನೆಯನ್ನು ಸಿದ್ಧಗೊಳಿಸಲಾಗಿದೆ. ಇದರನ್ವಯ ಶ್ರಮವುಳಿಸುವ ಸುಲಭ ಯಂತ್ರಗಳನ್ನು ಗೃಹೋದ್ಯಮಗಳಲ್ಲಿ ನಿರತರಾದವರಿಗೆ ಕೆಲವೆಡೆ ಧರ್ಮಾರ್ಥ ಹಂಚುವರು. ಈ ಆತ್ಯಾಧುನಿಕ ಉಪಕರಣಗಳನ್ನು ಉಪಯೋಗಿಸುವ ಕುರಿತು ಮಾಹಿತಿ ಕೊಡಲು ಕೆಲವು ಕೇಂದ್ರಗಳಿವೆ. ಒಂದು ಲಕ್ಷ ರೂಪಾಯಿ ಬೆಲೆಯ ಉಪಕರಣಗಳ ಹೊರತು, ಐದು ಲಕ್ಷ ರೂಪಾಯಿ ವೆಚ್ಚವನ್ನು ಇದಕ್ಕಾಗಿ ಸರಕಾರ ವಹಿಸುವುದು. ಹನ್ನೆರಡು ಲಕ್ಷ ರುಪಾಯಿ ಬೆಲೆಯ ಕಚ್ಚಾ ಸರಕುಗಳನ್ನು ಮೂಲ ಬೆಲೆಯಲ್ಲಿ ಸರಬರಾಜು ಮಾಡುವರು. ಎಂಟು ಮಾದರಿ ಕೇಂದ್ರಗಳು ಅತ್ಯುತ್ತಮ ಕೆಲಸ ನಡೆಸುತ್ತಿದ್ದು, ೪೮೦೦೦ ಕುಟುಂಬಗಳು ನೂಲುವ ಉದ್ಯೋಗದಲ್ಲಿವೆ.

ಮನೆ ಇಲ್ಲದ ಬಡವರಿಗೆ, ವಾಸಯೋಗ್ಯವಾದ ಮನೆಗಳನ್ನು ಕಟ್ಟಿಸಿಕೊಡಬೇಕೆಂಬುದೂ ಸರಕಾರದ ಇಚ್ಛೆ. ಪರಸ್ಪರ ಸಹಕಾರದಿಂದ ಈ ಕೆಲಸ ಮುನ್ನಡೆಯಬೇಕಷ್ಟೆ! ಸಹಕಾರಿ ಸಂಘಗಳು ಹೆಚ್ಚು ಕಡಿಮೆ, ಪ್ರತಿಯೊಂದೂ ಫಿರ್ಕಾದಲ್ಲಿವೆ. ಜನತಾ ಸಹಕಾರವೇ ಈ ಮಹದಾಯ ಪ್ರಯತ್ನಗಳಲ್ಲಿ ಅತಿ ಹೆಚ್ಚು ಮಹತ್ವವನ್ನು ಪಡೆಯುತ್ತದೆ: ಸರಕಾರ ಎಷ್ಟೆಂದರೂ ಮಾರ್ಗದರ್ಶನಕ್ಕಿಂತಲೂ ದೊಡ್ಡ ಕೆಲಸ ಮಾಡಲಾರದು.

ದೇವರ ದಯೆ

ಅಕ್ಕಪಕ್ಕಗಳಲ್ಲಿ ರೆಕ್ಕೆಗಳಿದ್ದ ದೇವದೂತರು ನಮ್ಮನ್ನು ಕೈಹಿಡಿದು ಮುನ್ನಡೆಸುತಿದ್ದ ಕತೆ ಹಿಂದಿನ ಕಾಲದ ಸಂಗತಿ ಇದನ್ನು ದೇವರ ದಯೆ ಎಂಬುದಾಗಿ ಆಗ ಜನರು ಕೊಂಡಾಡುತಿದ್ದರು.

ದೇವರ ದಯೆ ಈಗಲೂ ಇದೆ. ಆದರ ಸ್ವರೂಪದಲ್ಲಿ ಮಾತ್ರ ಪರಿವರ್ತನೆಯಾಗಿದೆ ಸ್ವರ್ಗದಿಂದ ದೇವದೂತರು ಇಳಿದು ಬಂದು ತಮ್ಮನ್ನು ಸುಧಾರಿಸಬೇಕೆಂದು ವಿವೇಕಿಗಳು ಈಗ ಅಪೇಕ್ಷಿಸುವುದಿಲ್ಲ. ಈಗ ದೇವರ ದಯೆಯಿಂದ ನಮಗೆ ಆವಶ್ಯವೆನಿಸಿದ ವಿಮಾ ಸೌಲಭ್ಯವಿದೆ. ಇಂದೇ ವಿಮೆ ಇಳಿಸಿ, ನಿಮ್ಮ ಮತ್ತು ನಿಮ್ಮ ಕುಟುಂಬದ ರಕ್ಷಣೆಯನ್ನು ಮಾಡಿಕೊಳ್ಳಿರಿ. ತನ್ನ ರಕ್ಷಣೆ ತಾನು ಮಾಡಿಕೊಳ್ಳ ಬಲ್ಲವನನ್ನು ದೇವರು ಕೈಬಿಡುವುದಿಲ್ಲ-

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ. ಸ್ಥಾಪನೆ: ೧೯೩೫
ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ ಕಂಪೆನಿ.
The Canara Mutual Assurance Co. Ltd.
Head Office: UDIPI, S. INDIA. Estd: 1935.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಈ ಸ್ವಾತಂತ್ರ್ಯೋತ್ಸವದ

ಕಣ್ಣೀರನ್ನೊರಸಿ ಸಂತೈಸುವ ಸಂಕಲ್ಪ

ಸ್ವಾತಂತ್ರ್ಯೋತ್ಸವ

ಸ್ವಾತಂತ್ರ್ಯದ ವರ್ಧಂತ್ಯುತ್ಸವವನ್ನು ಕಳೆದ ವಾರ ರಾಷ್ಟ್ರದ ಮೂಲೆ ಮೂಲೆಯಲ್ಲೂ ಆಚರಿಸಿದರು. ವಾತಾವರಣವು ಶಾಂತವೂ ಗಂಭೀರವೂ ಆಗಿದ್ದುದು ಈ ಬಾರಿಯ ವೈಶಿಷ್ಟ್ಯವೆನ್ನಬೇಕು. ಎಂದಿನಂತೆ ಸಡಗರ, ಗೊಂದಲಗಳಾಗಲೀ ಅನಾವಶ್ಯಕವಾದ ವೈಭವ ವಿಜೃಂಭಣೆಗಳಾಗಲೀ ಕಂಡುಬರದೆ, ಜನತೆ ಅನನ್ಯ ಶ್ರದ್ಧೆಯಿಂದ ಆತ್ಮನಿರೀಕ್ಷಣ ಮಾಡಿಕೊಳ್ಳುತ್ತಿದೆಯೋ ಎಂಬಂತೆ ಭಾಸವಾಗುತ್ತಿತ್ತು. ನಿಜವಾಗಿಯೂ ಈ ಸಂಧಿ ಕಾಲವು ಆತ್ಮನಿರೀಕ್ಷಣಾ ಕಾರ್ಯಕ್ಕೆ ಹೇಳಿಸಿದುದೇ ಸರಿಯಾಗಿ ಹದು. ವರ್ಷಗಳ ಹಿಂದೆ 'ಭಾರತ ಬಿಟ್ಟು ತೊಲಗಿರಿ' ಚಳುವಳಿಯು ಉಗ್ರ ಸ್ವರೂಪವನ್ನು ಧರಿಸಿ, ದೇಶದಲ್ಲಿ ನವ ಚೈತನ್ಯವನ್ನು ತುಂಬಿದ್ದಿತು. ಐದು ವರ್ಷಗಳಿಗೆ ಹಿಂದೆ ಆಳರಸರಾಗಿದ್ದ ಬ್ರಿಟಿಷರು ಸ್ನೇಹದಿಂದ ನಮ್ಮ ಕೈಮೇಲೆ ಸ್ವರಾಜ್ಯ ಪಟ್ಟವನ್ನು ಕಟ್ಟಿ ಹೋದರು. ಈ ಐದು ವರ್ಷಗಳಲ್ಲಿ ನಾವು ಸಾಧಿಸಿದುದು ಎಷ್ಟೇ ಅಲ್ಪವಿದ್ದರೂ ಚಾರಿತ್ರಿಕ ದೃಷ್ಟಿಯಲ್ಲಿ ಅವುಗಳಿಗೆ ಸ್ವಾಭಾವಿಕವಾಗಿ ಮಹತ್ವವಿದೆ. ಪರದೇಶಗಳ ಸುಲಿಗೆ ಹಾಗೂ ದಾಳಿಗಳ ಕಲಂಕವನ್ನು ಹೊತ್ತಿರುವ ಭಾರತದ ಇತಿಹಾಸದ ಪುನರಾವರ್ತನೆಯಾಗುವ ಭಯ ಎಲ್ಲರಿಗೂ ಇತ್ತು. ಆಂತರಿಕ ಕಲಹ ಗೊಂದಲಗಳಿಗಾಗಿ ಹಿಂದೀಯರು ಹೆಸರಾಗಿದ್ದರು–ಈ ಎಲ್ಲ ಸಂಶಯಗಳನ್ನೂ ಬುಡಮೇಲು ಮಾಡಿ, ಭಾರತದ ಸ್ವಾತಂತ್ರ್ಯ ತಲೆ ಎತ್ತಿ ನಿಂತುದು ಮಾತ್ರವಲ್ಲದೆ, ಮಹಾ ಚುನಾವಣೆಯನ್ನು ನಡೆಸಿ, ಪ್ರಜಾಪ್ರಭುತ್ವದ ಸ್ಥಿರವಾದ ನೆಲಗಟ್ಟನ್ನು ಹಾಕಿಕೊಟ್ಟಿತು. ಇನ್ನು ಮುಂದಿನ ಐದು ವರ್ಷಗಳಲ್ಲಿ ದೇಶದ ಸ್ವರೂಪವನ್ನೇ ಮಾರ್ಪಡಿಸಬಲ್ಲ ಪಂಚವಾರ್ಷಿಕ ಯೋಜನೆ ಕಾರ್ಯಗತಗೊಳಿಸಲ್ಪಡುವುದು. ಸರಕಾರ ಹಾಗೂ ಜನತೆಯು ಪರಸ್ಪರ ಸಹಕರಿಸಿ ದುಡಿದರೆ ಪರಿಣಾಮ ಅತ್ಯಂತ ಉಜ್ವಲವೂ ಶ್ರೇಯಸ್ಕರವೂ ಆಗುವುದು.

ಬಡವರ ಕಣ್ಣೀರು

ದಿಲ್ಲಿಯ ಕೆಂಪುಕೋಟೆ ಇತಿಹಾಸ ಪ್ರಸಿದ್ಧವಾದುದಷ್ಟೆ: ಮೊಗಲ ಅರಸರ ಕಾಲದಿಂದ ಅದಕ್ಕೆ ಪ್ರಾಶಸ್ತ್ಯ ಬಂದಿದೆ. ಪ್ರಧಾನಿ ನೆಹರೂ ಇದೀಗ ಆರನೆಯ ಸಲ ಸ್ವಾತಂತ್ರ್ಯ ದಿವಸದಂದು ರಾಷ್ಟ್ರಧ್ವಜವನ್ನಲ್ಲಿ ಅರಳಿಸಿದರು. ಈ ಸಮಯ ತನ್ನ ಭಾಷಣವನ್ನು ಕೇಳಲು ಹಾತೊರೆದು ಬಂದಿದ್ದ ಅಪಾರ ಜನತೆಯನ್ನುದ್ದೇಶಿಸಿ ಅವರು ಹೇಳಿದ ಸಂಗತಿಗಳು ಭಾರತ ಎತ್ತ ಸಾಗುತ್ತಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸಿಕೊಡುತ್ತವೆ: ನೆಹರೂ ಭಾರತದ ಧೀಮಂತ ವ್ಯಕ್ತಿ. ರಾಜಗೋಪಾಲಾಚಾರಿ ಹೇಳುವಂತೆ ದೇವರ ದಯೆಯಿಂದ ನಮಗೆ ಸ್ವಾತಂತ್ರ್ಯ ದೊರಕಿತು. ಹಾಗೆಯೇ ಸ್ವಾತಂತ್ರ್ಯದ ರಕ್ಷಣೆ ಮಾಡುತ್ತಾ ಭಾರತವನ್ನು ಉದ್ಧರಿಸುವ ಹೊಣೆ ಹೊರಲು ಜವಾಹರ ಇದ್ದಾರೆ. ನಾವೆಲ್ಲ ತಾಯಿಯ ಮಡಿಲಲ್ಲಿರುವ ಮಕ್ಕಳಂತೆ ಸುರಕ್ಷಿತರು: ಹಾಗೆಂದು ಸೋಮಾರಿಗಳಾಗತಕ್ಕದ್ದಲ್ಲ. ತಾಯಿಗೆ ಪ್ರಿಯವೆನಿಸುವ ಹಾಗೂ ಹರ್ಷದಾಯಕವಾದೆಲ್ಲ ಕಲ್ಯಾಣಕಾರಿ ಕೆಲಸಗಳಲ್ಲಿ ಮನಸ್ಸುಗೊಟ್ಟು ದುಡಿಯಬೇಕು. ನೆಹರೂ ಕೂಡ ಇದನ್ನೇ ಒತ್ತಿಹೇಳಿದರು. "ರಾಷ್ಟ್ರದ ಕೆಲಸ ಮುಗಿಯಿತೆಂದಿಲ್ಲ. ಒಂದು ಸಾವಿರ ಕೆಲಸ ಮಾಡಿ ಮುಗಿಸಿದರೂ, ಮತ್ತೂ ಅಷ್ಟು ಮಾಡದಿರುವುದು ಕಂಡುಬರುತ್ತದೆ. ಆದರೆ ನಾವೀಗ ಮಾಡಬೇಕಾದುದು ಬಹಳ ಮಹತ್ವದ ಕಾರ್ಯ ಬಡವರ ಕಣ್ಣಿನ ನೀರನ್ನು ಒರಸುವುದು ನಮ್ಮ ಕೆಲಸ. ಹಿಂದೆ ನಾವೇನು ಮಾಡಿರುವೆವೆಂಬುದನ್ನು ಅಭಿಮಾನದಿಂದ ನೋಡುವ ಬದಲಿಗೆ, ಮುಂದೆ ನೋಡಿ ನಡೆಯುವ ಕಾಲ ಈಗ ಸನ್ನಿಹಿತವಾಗಿದೆ. ನಮ್ಮ ಮುಂದೆ ಅರ್ಧಮರ್ಧ ಬಿದ್ದಿರುವ ಕೆಲಸ ಪೂರ್ಣಗೊಳಿಸಬೇಕಾಗಿದೆ. ಮಾಡದೆ ಇರುವಂಥವುಗಳನ್ನು ಕೈಗೆತ್ತಿಕೊಳ್ಳಬೇಕಾಗಿದೆ."

ಏಕಮಾತ್ರ ಮಾನದಂಡ

ನೆಹರೂ ಬಡಜನತೆಯ ಕುರಿತು ತುಂಬ ಕಳಕಳಿಯನ್ನು ವ್ಯಕ್ತಪಡಿಸಿದರು. ನಮ್ಮ ಎಲ್ಲ ಕೆಲಸಗಳ ಯೋಗ್ಯತೆಯನ್ನು ಅಳೆಯುವ ಒಂದೇ ಒಂದು ಮಾನದಂಡವಿದೆ– ನೊಂದ ಜನತೆಯ ಕಂಬನಿಯನ್ನೊರಸುವಲ್ಲಿ ನಾವೆಷ್ಟು ಮಟ್ಟಿಗೆ ಜಯಶೀಲರಾಗಿರುವೆವೆಂಬುದೇ ನಮ್ಮ ಕಾರ್ಯಕಲಾಪಗಳ ಔಚಿತ್ಯವನ್ನು ನಿರ್ಧರಿಸಬಲ್ಲುದು ಎಂದರವರು. ನೆಹರೂರ ಮಾತಿನಲ್ಲಿ ತುಂಬಿರುವ ಕರುಣೆಯು ಹೃದಯಸ್ಪರ್ಶಿಯಾಗಿದೆ. ವಿಧಾಯಕ ಕಾರ್ಯಕರ್ತರು ಇದನ್ನು ಕೇಳಿ ನವ ಸ್ಫೂರ್ತಿಯಿಂದ ಕಾರ್ಯಪ್ರವೃತ್ತರಾಗುವರೆಂದು ನಂಬಬಹುದು. ಹಾಗೆಯೇ ಸಾಮಾನ್ಯ ಜನತೆಯೂ ಮಾಡುವ ಕೆಲಸಗಳಿವೆ: ಅವುಗಳನ್ನು ಕರ್ತವ್ಯವೆಂದು ತಿಳಿದು ದುಡಿಯಬೇಕು. ಜಾತೀಯ ಅಸಹನೆ, ಯುದ್ಧದ ಉತ್ಸಾಹ ಮತ್ತು ಪರಸ್ಪರ ದ್ವೇಷದ ವಾತಾವರಣದಲ್ಲಿ ನಿಜ ಶಾಂತಿ ಲಭಿಸದಂತಾದರಿಂದ-ಅಂಥ ದುಷ್ಟ ಶಕ್ತಿಗಳ ಪ್ರಭಾವದಿಂದ ಮುಕ್ತರಿರಲು ನಾವು ಬಹಳ ಪ್ರಯತ್ನಪಡಬೇಕು. ಎರಡು ಸಾವಿರ ವರ್ಷಗಳಿಗೂ ಹಿಂದೆ ಭಾರತದಲ್ಲಿ ಏಕಚಕ್ರಾಧಿಪತ್ಯವನ್ನು ಸ್ಥಾಪಿಸಿ, ಮೆರೆದ ಅಶೋಕನ ಮಾತನ್ನು ನೆಹರೂ ಇಲ್ಲಿ ಉದಾಹರಿಸಿದರು: ಒಂದು ಧರ್ಮದ ಜನರು, ಜಾತಿಯ ಜನರು ಇನ್ನೊಂದು ಧರ್ಮವನ್ನು ಜಾತಿಯನ್ನೂ ಆದರಿಸಿ ನಡೆದರೆ, ಇದರಿಂದ ಪರಸ್ಪರ ಕಲ್ಯಾಣ ಮಾಡಿಕೊಳ್ಳುವರು ಎಂದ ಅಶೋಕನ ಮಾತಿನಲ್ಲಿ ಮೂಲಭೂತವಾದ, ಮಾನವೀಯವಾದ ಅಂಶ ಹುದುಗಿದೆ ಇದನ್ನು ಜನ ಮರೆಯಬಾರದು.

ಆಧ್ಯಾತ್ಮಿಕ ಸ್ವರೂಪ

ಸ್ವಾತಂತ್ರ್ಯದ ಉತ್ಸವಕ್ಕೆ ಈ ಬಾರಿ ಆಧ್ಯಾತ್ಮಿಕ ಸ್ವರೂಪ ಕೊಟ್ಟವರು ರಾಷ್ಟ್ರಾಧ್ಯಕ್ಷರಾದ ರಾಜೇಂದ್ರ ಪ್ರಸಾದ. ಜನತೆಯನ್ನುದ್ದೇಶಿಸಿ ಅವರು ಮಾಡಿದ ಆಕಾಶವಾಣಿ ಭಾಷಣದಲ್ಲಿ ವ್ಯಕ್ತಿಯ ಚಾರಿತ್ರ್ಯದ ಮಟ್ಟ ಉನ್ನತವಿರುವುದರ ಅಗತ್ಯವನ್ನು ಚೆನ್ನಾಗಿ ಬಿಂಬಿಸಿದರು. ಹಾಗೆಯೇ ಆದರ್ಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರಗತಿಪಥವನ್ನು ಅನುಸರಿಸಬೇಕೆಂದೂ ಅವರು ಕೇಳಿಕೊಂಡರು. ನೆಹರೂ ಕರ್ಮಯೋಗಿಯಂತೆ ಜನರ ಹೃದಯ ಕಲಕುವ ನುಡಿಗಳನ್ನಾಡಿದರೆ, ಪ್ರಸಾದ ಜ್ಞಾನಯೋಗಿಯಂತೆ ಮನಸ್ಸನ್ನು ಹುರಿದುಂಬಿಸುವ ಕೆಲಸದಲ್ಲಿ ಯಶಸ್ವಿಗಳಿಸಿದರು. ತ್ಯಾಗಗಳನ್ನು ಮಾಡಲು ಹಿಂದುಮುಂದು ನೋಡದ, ಸುಲಭ ವ್ಯಾಮೋಹಗಳಿಗೆ ಬಲಿಬೀಳದ, ಕಷ್ಟಪರಂಪರೆಗಳನ್ನು ಎದುರಿಸಿಕೊಂಡೂ ಸರಿಯಾದುದಕ್ಕೆ ಅಂಟಿಕೊಳ್ಳುವ, ಪರರ ಜೀವನದಲ್ಲಿ ಸಮರಸರಾಗಿ ಬೆರೆತು, ಅವರ ನೋವು ದುಃಖಗಳನ್ನು ತನ್ನದೆಂದೇ ತಿಳಿದು ನೆರವಾಗುತ್ತ, ಕೊಡುವುದಕ್ಕೆ ಸಿದ್ಧರಾಗಿದ್ದುಕೊಂಡು ತೆಗೆದುಕೊಳ್ಳಲು ಉತ್ಸುಕವಿಲ್ಲದ ಜನಾಂಗವು ಸುಖಸಮೃದ್ಧಿ ಸಂಪನ್ನವಾಗುವುದಲ್ಲದೆ, ಇತರರನ್ನೂ ಸುಖಿಗಳಾಗಿ ಮಾಡುವುದು ಎಂದು ರಾಷ್ಟ್ರಾಧ್ಯಕ್ಷರು ಭಾರತದ ಅನಾದಿ ಕಾಲದ ಉಚ್ಚಾದರ್ಶವನ್ನು ಜನತೆಗೆ ಮನದಟ್ಟು ಮಾಡಿದರು. ನಮ್ಮ ಸ್ವಾತಂತ್ರ್ಯದ ಹೋರಾಟಕ್ಕೆ ಹೊಸ ಸ್ವರೂಪವನ್ನೂ ಸ್ಫೂರ್ತಿಯನ್ನೂ ಒದಗಿಸಿಕೊಟ್ಟ ಅಹಿಂಸಾತ್ಮಕವಾದ ಕಾರ್ಯಕ್ರಮಗಳಿಗೆ ಈಗಲೂ ನಾವು ಅಂಟಿಕೊಂಡಿರುವುದಗತ್ಯ ಎಂದವರು ಉಪದೇಶಿಸಿದರು.

ಹೃದಯದ ಕನ್ನಡಿ

ಜನಾಂಗವನ್ನು ಕಟ್ಟುವವರು ವ್ಯಕ್ತಿಗಳೇ ಹೊರತು ಸರಕಾರವಲ್ಲ: ಸರಕಾರ ಒಂದು ರೀತಿಯಿಂದ ಯಂತ್ರ ಸಮಾನ. ಪ್ರಜಾಪ್ರಭುತ್ವದಲ್ಲಿಯಂತೂ ಚಾಲಕ ಶಕ್ತಿಯು ವ್ಯಕ್ತಿಯಲ್ಲಿ ಸಮಾಗತವಾಗಿದೆ. ಅವನು ಓಟುಕೊಟ್ಟು ಕಳಿಸಿದ ಸದಸ್ಯರ ಮೂಲಕವಾಗಿ ಸರಕಾರದ ಕೆಲಸ ಸುಗಮವಾಗಿ ನಡೆಯಲು ತಕ್ಕ ಚಾಲನೆ ದೊರೆಯುತ್ತದೆ. ಹೀಗಾಗಿ ವ್ಯಕ್ತಿಯ ಶೀಲ ಮತ್ತು ಸದಾಚಾರಗಳಿಗೆ ಇನ್ನಷ್ಟು ಮಹತ್ವ ಬಂದಿದೆ. ರಾಷ್ಟ್ರಾಧ್ಯಕ್ಷರು ಈ ವಿಷಯವನ್ನೂ ಪ್ರಸ್ತಾಪಿಸಿದರು. ಕೆಲವೊಂದು ನೈತಿಕ ಹಾಗೂ ಆಧ್ಯಾತ್ಮಿಕ ನಿಯಮಗಳಲ್ಲಿ ಗಹನವಾದ ಶ್ರದ್ಧೆ ಇಲ್ಲದ ಜನಾಂಗವು ಉನ್ನತಿಯನ್ನು ಸಾಧಿಸುವುದರಲ್ಲಿ ಹಿಂದುಳಿಯುವುದು ನಿಶ್ಚಯ ಎಂದರವರು ಮಹಾತ್ಮಾ ಗಾಂಧೀಜಿಯವರ ಆದರ್ಶ ಜೀವನವನ್ನು ಕಣ್ಣ ಮುಂದಿಟ್ಟು ರಾಷ್ಟ್ರಾಧ್ಯಕ್ಷರು ಪ್ರತಿಯೊಬ್ಬನೂ ತನ್ನ ಬದುಕನ್ನೂ ಕಾರ್ಯಕಲಾಪಗಳನ್ನೂ ಹೃದಯದ ಕನ್ನಡಿಯಲ್ಲಿಟ್ಟು ನಿರೀಕ್ಷಿಸಲಿ ಎಂದು ಕರೆಕೊಟ್ಟರು, ಸಾಮಾನ್ಯ ವ್ಯವಹಾರ [illegible] ಹಾಗೂ [illegible], ನಡವಳಿಕೆಗಳಲ್ಲಿ ಸಾಮಾಜಿಕ ಹಿತವನ್ನುಂಟುಮಾಡುವ ಹಾಗೂ ಸೇವೆಯ ಅಂತಸ್ಸನ್ನು ಮುಟ್ಟಬಲ್ಲದೇನನ್ನು ಮಾಡಿರುವೆನೆಂಬುದನ್ನು ಈ ರೀತಿ ತಿಳಿದುಕೊಳ್ಳಲಿ. ನಮ್ಮ ದೌರ್ಬಲ್ಯವನ್ನೂ ಕುಂದುಕೊರತೆಗಳನ್ನೂ ಕಂಡುಕೊಂಡು, ಅವುಗಳನ್ನು ದೂರೀಕರಿಸಿ ನಡೆದರೆ ಆದರ್ಶ ಜನಾಂಗವಾಗಿ ನಾವು ಬಾಳುವ ಭರವಸೆ ಇದೆ.

ಶೀಲ ಬಲವೇ ಸರ್ವ ಬಲ

ಶೀಲಬಲದ ಅಗತ್ಯವನ್ನು ರಾಜಕೀಯ ಕ್ಷೇತ್ರದಲ್ಲಿ ನಿರ್ಭಯವಾಗಿ ಸಾರ

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಒಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K

ZANDU Mahayogaraja Guggula.

ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಪ್ರತಿಮ ದಿವ್ಯಾಷಧ. 1 ತೊಲೆಗೆ ರೂ 3- ಮಾತ್ರ.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್.
ಕೆಮಿಸ್ಟ್ಸ ಎಂಡ್ ಡ್ರಗ್ಗಿಸ್ಟ್ಸ, ಉಡುಪಿ.
2 ಶ್ರೀ ವಿ ವಿ ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್ ಎನ್. ಶರ್ಮ, ಹಜೂರು ರಸ್ತೆ ಮಂಗಳೂರು.
ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ವಾತಿಕ್ಸರು ಬೇಕಾಗಿದ್ದಾರೆ. ವ್ಯಾಪಾರ ಶರತ್ತು ವಗೈರೆಗಳಿಗೆ ಬರೆಯಿರಿ-

DAMODAR & CO.,
Nainiappa Naicken Street, Park Town-MADRAS 3.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಅಥವಾ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಲಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಆಧ್ಯಾತ್ಮಿಕ ಸ್ವರೂಪ

ಉಜ್ವಲ ಚಾರಿತ್ರ್ಯವುಳ್ಳ ವ್ಯಕ್ತಿತ್ವದ ಅಗತ್ಯ

ತ್ತಿರುವ ಜನಾಂಗ ಭಾರತವೊಂದೇ ಎನ್ನಬಹುದು: ಮಹಾತ್ಮಾ ಗಾಂಧೀಯಿಂದ ಸ್ವಾತಂತ್ರ್ಯದ ನವಸ್ಫೂರ್ತಿಯನ್ನು ಪಡೆದ ನಾವು ಅವರ ಸತ್ಯನಿಷ್ಠೆ, ಅಹಿಂಸೆ ಮತ್ತು ಇತರ ಸಮಾಜಹಿತ ಕಾರ್ಯಗಳ ಮೂಲಕವೇ ಯಶಸ್ಸು ಸಂಪಾದಿಸಿದೆವು. ಸಹನೆಯ ಪಾಠವನ್ನು ಚಾರಿತ್ರ್ಯ ಸಂಪನ್ನತೆಯ ಉಪದೇಶವನ್ನೂ ಲೋಕಕ್ಕೆ ನೀಡಬಲ್ಲ ಏಕಮಾತ್ರ ಜನಾಂಗವಾಗಿ ಭಾರತವಿದೆ. ಮತ್ತು ನೆಹರೂರ ವಿದೇಶ ಧೋರಣೆಯಂತೂ ಸತ್ಯನಿಷ್ಠ ಆಚರಣೆಗೆ ಜ್ವಲಂತ ಉದಾಹರಣೆಯಾಗಿದೆ. ಜನರಲ್ಲಿ ಶೀಲಬಲ ಬೆಳೆಯಬೇಕಾದುದು ಬುದ್ಧಿ ಬಲಕ್ಕಿಂತಲೂ ಮಿಗಿಲಾಗಿ ಅಗತ್ಯ. ಇದಕ್ಕೆ ಪಕ್ಷ ಪಂಗಡಗಳ ಸಂಕುಚಿತ ವಾತಾವರಣ ಬೇಡ. ಯಾವುದೇ ಪಕ್ಷವಾಗಲೀ—ಮಾನವನ ನಿಜವಾದ ದುಃಖ ಪರಿಹರಿಸುವಲ್ಲಿ ಯಶಸ್ಸು ಸಂಪಾದಿಸುವುದು ಅದರ ಧ್ಯೇಯವಿರುವ ತನಕ ನಾವು ಅಂಜುವ ಅಗತ್ಯವಿಲ್ಲ. ಹಲವು ಮತ ಧರ್ಮಗಳನ್ನು ನೆಚ್ಚಿಕೊಂಡಿರುವ ವಿಶಾಲ ಜನಾಂಗವಾಗಿ ಭಾರತ ಬೆಳೆದಿದ್ದರೂ—ನಾವೆಲ್ಲ ಭಾರತೀಯರೆಂಬ ಐಕ್ಯ ಭಾವನೆ ತೊಲಗಿದೆಯೆ? ಹಾಗೆಯೇ ನಮ್ಮ ಎಲ್ಲ ಕಾರ್ಯಕ್ರಮಗಳ ಧ್ಯೇಯಾದರ್ಶಗಳೂ ಜನಪದದ ಅಭಿವೃದ್ಧಿಗಾಗಿ ಮೀಸಲು ಹೊಂದಿದಾಗ—ಸ್ವಾಭಾವಿಕವಾಗಿ ಭಾರತೀಯ ಭಾವವು ತುಂಬಿರುವುದು. ಈ ದೃಷ್ಟಿಯಿಂದ ನೋಡಿದರೆ ಈಚೆಗೆ ಮದ್ರಾಸು ಸರಕಾರವು ಕೆಲವೊಂದು ಒಳಸಂಚುಗಳಲ್ಲಿ ಭಾಗವಹಿಸಿದ್ದರೆಂಬ ಆರೋಪದ ಮೇಲೆ ಕೈದಿನಲ್ಲಿಟ್ಟ ಕೆಲವರನ್ನು ಬಿಡುಗಡೆ ಮಾಡಿದುದು ಚೆನ್ನಾಯಿತು: ಕಮ್ಯೂನಿಸ್ಟ ಪಕ್ಷವು ಘಟನಾತ್ಮಕವಾದ ರೀತಿಯಲ್ಲಿ ಕೆಲಸ ಮಾಡಲು ನಿರ್ಧರಿಸಿದೆಂಬುದು ಸರಕಾರಕ್ಕೆ ಗೋಚರಿಸಿದೆಯಾಗಿ ರಾಜಗೋಪಾಲಾಚಾರಿ ನುಡಿದರು.

ಧುರೀಣರ ವಿವೇಕ

ಪಕ್ಷ ಪಂಗಡಗಳ ಭೇದ ಭಾವವು ರಾಷ್ಟ್ರಾಭ್ಯುದಯದ ಯಾವ ಕೆಲಸಕ್ಕೂ ಅಡ್ಡ ಬಂಡೆಯಾಗಿ ನಿಲ್ಲಬಾರದು: ಸುದೈವದಿಂದ ಚುನಾವಣೆಯ ಕಾಲದಲ್ಲುಂಟಾದ ನೂರಾರು ಪಕ್ಷ ಪಂಗಡಗಳು ಅವು ಮುಗಿದ ಬೆನ್ನಿಗೇ ನಿರ್ನಾಮಗೊಂಡಿವೆ. ಹೀಗಿದ್ದರೂ ಪ್ರಾಮುಖ್ಯವಾದ ಮತಭೇದವುಳ್ಳ ಕೆಲವೊಂದು ಎಡಪಕ್ಷಗಳು ಉಳಿದುಕೊಂಡಿವೆ. ಲೋಕಸಭೆಯ ಅಧ್ಯಕ್ಷರಾದ ಶ್ರೀ ಮಾವಳಂಕರರ ಅಭಿಪ್ರಾಯದಂತೆ, ವಿರೋಧಿ ಗುಂಪೇ ಸದ್ಯದ ವೈಶಿಷ್ಟ್ಯವೆನ್ನಬಹುದು. ಸರಕಾರದ ಕಾರ್ಯಕಲಾಪಗಳ ಬಗ್ಗೆ ರಚನಾತ್ಮಕ ಟೀಕೆಯನ್ನು ಮುನ್ನೊಡ್ಡಿ ಸರಿದಾರಿಯಲ್ಲಿ ಸರಕಾರ ನಡೆಯುವಂತೆ ಒತ್ತಾಯಿಸುವುದು ವಿರೋಧಿ ಗುಂಪಿನ ಕರ್ತವ್ಯವಾಗುತ್ತದೆ. ಹಾಗೆಂದು ಪಂಚವಾರ್ಷಿಕ ಯೋಜನೆಯಂಥ ಮಹಾ ಕಾರ್ಯಗಳನ್ನು ಕಾರ್ಯರೂಪಕ್ಕೆ ಇಳಿಸುವಾಗ ಅಲ್ಲಸಲ್ಲದ ವಿಘ್ನವೊಡ್ಡುವುದು ಎಂದಿಗೂ ಚೆನ್ನಾದುದಲ್ಲತಾನೆ! ಸುದೈವದಿಂದ ನಮ್ಮ ಎಲ್ಲ ಪ್ರಮುಖ ಪಕ್ಷದ ಧುರೀಣರೂ ಇದನ್ನು ಮನಗಂಡಿರುವರು ರಾಷ್ಟ್ರಾಭ್ಯುದಯವು ಸರ್ವಾಂಗೀಣವಾಗುವಂತೆ ನೋಡುವ ಈ ಉಪಕ್ರಮದಲ್ಲಿ ಲೋಪದೋಷಗಳು ಕೆಲವಿದ್ದರೂ ಒಟ್ಟಿನಲ್ಲಿ ಇದು ಸ್ತುತ್ಯ ಉಪಕ್ರಮವೆಂಬುದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ.

ಸಂಪತ್ತಿನ ಸದ್ವಿನಿಯೋಗ

ಈಚೆಗೆ ಯೋಚಿಸಿದ ಭಾರತ ಸೇವಕ ಸಮಾಜದ ಸಂಘಟನೆ ಮತ್ತು ಜನತಾ ಸಹಕಾರವನ್ನು ದೊರಕಿಸುವ ಉದ್ದೇಶದಿಂದ ರಚಿಸಲ್ಪಟ್ಟ ರಾಷ್ಟ್ರೀಯ ಅಭಿವೃದ್ಧಿ ಸಲಹಾ ಮಂಡಳಿಗಳು ಯೋಗ್ಯ ಹೆಜ್ಜೆಗಳು. ಆರ್ಥಿಕ ಅಭಿವೃದ್ಧಿ ಸಾಮಾಜಿಕ ಸ್ಥೈರ್ಯ, ಜನಶಿಕ್ಷಣ, ರಾಷ್ಟ್ರೀಯ ಬಲ ಸಂವರ್ಧನ, ಆರೋಗ್ಯ, ನೈತಿಕ ಅಭ್ಯಾಸ, ಸೇವೆ ಮತ್ತು ಸಹಾಯ, ಸಂಪತ್ತಿನ ಸದ್ವಿನಿಯೋಗ ಮುಂತಾದ ಅಷ್ಟಾಂಶದ ಕಾರ್ಯಕ್ರಮವನ್ನು ಭಾರತ ಸೇವಕ ಸಮಾಜವೂ ಇಟ್ಟುಕೊಳ್ಳಬೇಕೆಂದು ಅಭಿವೃದ್ಧಿ ಮಂಡಳಿ ಸಲಹೆಮಾಡಿದೆ. ಈ ಸೇವಾ ಸಮಾಜದ ಸಂಘಟನೆಯು ರಾಜಕೀಯ ಧೂರ್ತತನಕ್ಕೆ ಕಟ್ಟುಬೀಳದೆ, ನಿಜವಾದ ಜನಹಿತವನ್ನುಂಟುಮಾಡುವುದರಲ್ಲಿ ಮುಂದಾಗಬೇಕಾದ ಅಗತ್ಯವನ್ನು ಡಾ| ಶ್ಯಾಮಪ್ರಸಾದ ಮುಖರ್ಜಿಯಂಥವರು ಒತ್ತಿಹೇಳಿದರು. ಜನತಾ ಸಹಕಾರವನ್ನು ಸಾಧ್ಯವಿದ್ದ ಎಲ್ಲ ರೀತಿಯಿಂದ ಸರಕಾರದ ಈ ಯೋಜನೆಗೆ ಒದಗಿಸಿ ಕೊಡುವ ವಿಶಾಲವಾದ ಕಾರ್ಯಭಾಗ ಭಾರತ ಸೇವಾ ಸಮಾಜಕ್ಕೆ ಇದೆ. ಸ್ವಯಂ ಸ್ಫೂರ್ತಿಯಿಂದ ರಚನಾತ್ಮಕ ಕಾರ್ಯಕರ್ತರು ಜನತೆಗೆ ಯೋಗ್ಯ ಶಿಕ್ಷಣ ಕೊಡುವುದು ಬಹಳ ಅಗತ್ಯವಾಗಿದೆ. ಜನರೊಡನೆ ನಿಕಟ ಸಂಪರ್ಕವನ್ನು ಇಟ್ಟುಕೊಳ್ಳದೆ, ಅವರ ಇಷ್ಟಾನಿಷ್ಟಗಳ ಸ್ಪಷ್ಟಕಲ್ಪನೆ ಇಲ್ಲದೆ ಮಾಡುವ ಕೆಲಸ ಯಶಸ್ವಿಯಾಗದು ಎಂದು ನೆಹರೂ ಪದೇಪದೇ ಎಚ್ಚರಹೇಳುತ್ತಿರುವರು. ಅರ್ಥ ಸಚಿವ ಶ್ರೀ ದೇಶಮುಖರು ದೊಡ್ಡ ಬಂಡವಾಳಿಗರಲ್ಲದೆ—ಮಧ್ಯಮ ವರ್ಗ ಹಾಗೂ ಸಾಮಾನ್ಯ ಜನರೂ ಉಳಿತಾಯದ ಹಣವನ್ನು ಸರಕಾರಕ್ಕೆ ಒದಗಿಸಿಕೊಟ್ಟು ನೆರವಾಗುವುದು ಪಂಚವಾರ್ಷಿಕ ಯೋಜನೆಯ ಯಶಸ್ಸಿಗೆ ಅಗತ್ಯವೆಂದಿರುವರು. ನೋಟುಗಳನ್ನು ಒಂದು ಇತಿಮಿತಿಯನ್ನು ಮೀರಿ ಮುದ್ರಿಸತೊಡಗಿದರೆ— ದೇಶದ ಹಣಕಾಸಿನ ಪರಿಸ್ಥಿತಿ ಕುಸಿದು ಬೀಳುವುದು ನಿಶ್ಚಯ ಎಂದವರು ಹೇಳಿದರು. ಪ್ರತ್ಯಕ್ಷ ೬೨೦ ಕೋಟಿ ರೂಪಾಯಿಗಳ ಕೊರತೆ ಕಂಡು ಬರುತ್ತಿದ್ದು, ವಿದೇಶೀ ನೆರವು ಇಷ್ಟು ದೊಡ್ಡ ಪ್ರಮಾಣದಲ್ಲಿ ದೊರೆಯುವ ಸಂಭವ ಬಹಳ ಕಡಿಮೆ.

ಲೋಕ ಸಭೆಯ ಅಧಿವೇಶನ

ಮೂರು ತಿಂಗಳಿಗೂ ಹೆಚ್ಚು ಸಮಯ ಅಧಿವೇಶನದಲ್ಲಿದ್ದ ಲೋಕ ಸಭೆ ಕಳೆದ ವಾರ ಅನಿಶ್ಚಿತ ಸಮಯದ ವರೆಗೆ ಮುಂದರಿಸಿತು. ಮೇ ತಿಂಗಳಲ್ಲಿ ರಾಷ್ಟ್ರಾಧ್ಯಕ್ಷರ ಆದೇಶದ ಮೇರೆಗೆ ರೈಲ್ವೆ ಆಯವ್ಯಯ ಪಟ್ಟಿಯನ್ನು ಸಾಮಾನ್ಯ ಮುಂಗಡ ಪತ್ರವನ್ನು ಚರ್ಚಿಸಲು ಇದು ಕೂಡಿತ್ತು. ಆದರೆ ಸರಕಾರದ ಮುಂದೆ ಇನ್ನು ಅನೇಕ ಮಹತ್ವದ ಸಂಗತಿಗಳಿದ್ದುದರಿಂದ ಅವುಗಳ ವಿವರವಾದ ಚರ್ಚೆಗೂ ಈ ಅಧಿವೇಶನದಲ್ಲಿ ಅವಕಾಶ ಮಾಡಿಕೊಡಲಾಯಿತು. ಒಟ್ಟು ಇಪ್ಪತ್ತೇಳು ಮಸೂದೆಗಳು ಇಲ್ಲಿ ಸ್ವೀಕೃತಗೊಂಡವು. ತೀವ್ರ ಅಸಂತೋಷ ಮತ್ತು ವಿವಾದಗಳಿಗೆ ಎಡೆಕೊಟ್ಟ ಪ್ರತಿಬಂಧಕ ಸ್ಥಾನಬದ್ಧತೆಯ ಮಸೂದೆ, ಕೆಲವೊಂದು ವಸ್ತುಗಳು ಜೀವನಾವಶ್ಯಕವೆಂದು ನಿರ್ಧರಿಸಿ, ಅವುಗಳ ಮೇಲೆ ಮಾರಾಟಕರ ಹೇರುವ ಮೊದಲು ರಾಷ್ಟ್ರಾಧ್ಯಕ್ಷರ ಅನುಮತಿ ಪಡೆಯಬೇಕೆನ್ನುವ ಮಸೂದೆ, ಲಂಚಗುಳಿತನ ನಿರ್ಮೂಲನ ಮಸೂದೆ, ವಿಮಾನ ಹಾಗೂ ನೌಕಾ ಪಡೆಗಳನ್ನು ಭೂದಳಗಳನ್ನಾಗಿ ಉಪಯೋಗಿಸುವ ಮಸೂದೆ ಮುಂತಾದ ಮುಖ್ಯ ಮುಖ್ಯ ವಿಷಯಗಳು ಚರ್ಚೆಗೆ ಬಂದು, ಸರಕಾರಕ್ಕೆ ಜಯ ತಂದುವು. ಬಹುಮತ ಪಕ್ಷವಾಗಿ ಕಾಂಗ್ರೆಸ್ ಇದ್ದು, ಅಧ್ಯಕ್ಷರು ಕಮ್ಯೂನಿಸ್ಟ ಪಕ್ಷಕ್ಕೆ ಮಾತ್ರ ವಿರೋಧಿ ಗುಂಪಿನ ಸ್ಥಾನಮಾನವನ್ನು ಕೊಟ್ಟಿರುವರು. ಸಭಾತ್ಯಾಗದಂಥ ಕೆಲವೊಂದು ಅಪ್ರಿಯ ಘಟನೆಗಳು ಜರುಗಿದರೂ ಒಟ್ಟಿನಲ್ಲಿ ಲೋಕಸಭೆಯ ಕಾರ್ಯಕ್ರಮಗಳು ಭಾರತಕ್ಕೆ ಭೂಷಣ ಪ್ರಾಯವಾಗಿದ್ದುವು.

ಕರ್ನಾಟಕದ ಗೌರವ

ಕೇಂದ್ರ ಮಂತ್ರಿಮಂಡಳವನ್ನು ಕಳೆದ ವಾರ ವಿಸ್ತರಿಸಿ, ಹತ್ತು ಜನ ಉಪಮಂತ್ರಿಗಳನ್ನು ನೇಮಿಸಲಾಗಿದೆ. ಅಲ್ಲದೆ ಉಪಮಂತ್ರಿಗಳಾಗಿದ್ದ ಇಬ್ಬರನ್ನು ರಾಜ್ಯ ಸಚಿವರ ಮಟ್ಟಕ್ಕೇ (ಕ್ಯಾಬಿನೆಟ್ ಸ್ಥಾನಮಾನವಿಲ್ಲ) ಏರಿಸಲಾಗಿದೆ. ಕರ್ನಾಟಕದವರಾದ ಶ್ರೀ ದಾತಾರ ಬಳವಂತರಾಯರು ಉಪಮಂತ್ರಿಗಳಾಗಿ ನೇಮಕಗೊಂಡಿದ್ದು, ಗೃಹಖಾತೆಯಲ್ಲಿ ಅವರು ದುಡಿಯುವರು: ಹಿಂದೆ ಉಪಮಂತ್ರಿಗಳಾಗಿದ್ದ ಕನ್ನಡಿಗ ಶ್ರೀ ದ. ಪ. ಕರಮರಕರರು ಈಗ ವಾಣಿಜ್ಯ ಖಾತೆಯ ರಾಜ್ಯ ಸಚಿವರಾಗಿದ್ದಾರೆ. ಮಂತ್ರಿ—ಉಪಮಂತ್ರಿಗಳಲ್ಲದೆ ಪ್ರಧಾನಿ ನೆಹರೂ ನಾಲ್ವರು ಪಾರ್ಲಿಮೆಂಟರಿ ಕಾರ್ಯದರ್ಶಿಯರ ನೇಮಕವನ್ನು ಮಾಡಿರುವರು.


BBG/52/LOT/4

ನನ್ನ ಪತಿಗೆ ಉತ್ತಮ ಚಹಾ ಕಂಡರೆ ಇಷ್ಟ!

ಆದರೆ ನಾನು ಮಿತವ್ಯಯಿಯಾಗಬೇಕೆಂಬುದೂ ಅವರ ಇಷ್ಟ.' ಬ್ರೂಕ್ ಬಾಂಡ ವಿಚಾರವನ್ನು ನನ್ನ ತಾಯಿಯು ನನಗೆ ಹೇಳದೇ ಹೋಗಿದ್ದಲ್ಲಿ, ಅವರನ್ನು ಸಂತೋಷಗೊಳಿಸುವುದು ಕಷ್ಟವಾಗುತ್ತಿತ್ತು. ಈಗ ನಾನವರಿಗೆ ಯಥಾರ್ಥವಾಗಿಯೂ ಉತ್ತಮವಾದ ಚಹಾ ಕೊಡಬಲ್ಲೆ ಮತ್ತು ಒಡನೆಯೇ ಹಣವನ್ನೂ ಉಳಿಸಬಲ್ಲೆ, ಏಕೆಂದರೆ ಕೇವಲ ಎರಡು ಔನ್ಸಿನ ಒಂದು ಬ್ರೂಕ್ ಬಾಂಡ್ ಪೊಟ್ಟಣವು 30 ಬಟ್ಟಲುಗಳ ಚಹಕ್ಕೆ ಸಾಕಾಗುತ್ತದೆ. ಚೆನ್ನಾಗಿ ಪರಿಚಿತವಾದ ಬ್ರೂಕ್ ಬಾಂಡ್ ಪೊಟ್ಟಣವು ನಮ್ಮ ಮನೆಯಲ್ಲಿ ಸದಾ ಕಾಲದಲ್ಲಿಯೂ ಇರುತ್ತದೆ

ಬ್ರೂಕ್
ಬಾಂಡ್
ಚಹಾ

ಭಾರತದ ಅತ್ಯುತ್ಕೃಷ್ಟ ಪಾನವು


ಪ್ರಸವ ವಿಜ್ಞಾನ

ಸ್ವರಸಿಂದ ಕಳುಹಿಸುತ್ತೇವೆ

ಸಾಧನ ಪ್ರಕಟನಾಲಯ

ಈ ಸ್ವಾತಂತ್ರ್ಯೋತ್ಸವದ

ಕಣ್ಣೀರನ್ನೊರಸಿ ಸಂತೈಸುವ ಸಂಕಲ್ಪ

ಸ್ವಾತಂತ್ರ್ಯೋತ್ಸವ

ಸ್ವಾತಂತ್ರ್ಯದ ವರ್ಧಂತ್ಯುತ್ಸವವನ್ನು ಕಳೆದ ವಾರ ರಾಷ್ಟ್ರದ ಮೂಲೆ ಮೂಲೆಯಲ್ಲೂ ಆಚರಿಸಿದರು. ವಾತಾವರಣವು ಶಾಂತವೂ ಗಂಭೀರವೂ ಆಗಿದ್ದುದು ಈ ಬಾರಿಯ ವೈಶಿಷ್ಟ್ಯವೆನ್ನಬೇಕು. ಎಂದಿನಂತೆ ಸಡಗರ, ಗೊಂದಲಗಳಾಗಲೀ ಅನಾವಶ್ಯಕವಾದ ವೈಭವ ವಿಜೃಂಭಣೆಗಳಾಗಲೀ ಕಂಡುಬರದೆ, ಜನತೆ ಅನನ್ಯ ಶ್ರದ್ಧೆಯಿಂದ ಆತ್ಮನಿರೀಕ್ಷಣ ಮಾಡಿಕೊಳ್ಳುತ್ತಿದೆಯೋ ಎಂಬಂತೆ ಭಾಸವಾಗುತ್ತಿತ್ತು. ನಿಜವಾಗಿಯೂ ಈ ಸಂಧಿ ಕಾಲವು ಆತ್ಮನಿರೀಕ್ಷಣಾ ಕಾರ್ಯಕ್ಕೆ ಮೀಸಲಿಡುವುದೇ ಸ್ತುತ್ಯ. ಸರಿಯಾಗಿ ಹತ್ತು ವರ್ಷಗಳ ಹಿಂದೆ 'ಭಾರತ ಬಿಟ್ಟು ತೊಲಗಿರಿ' ಚಳುವಳಿಯು ಉಗ್ರ ಸ್ವರೂಪವನ್ನು ಧರಿಸಿ, ದೇಶದಲ್ಲಿ ನವ ಚೈತನ್ಯವನ್ನು ತುಂಬಿತ್ತು. ಐದು ವರ್ಷಗಳ ಹಿಂದೆ ಅರಸರಾಗಿದ್ದ ಬ್ರಿಟಿಷರು ಸ್ನೇಹದಿಂದ ನಮ್ಮ ಕೈಮೇಲೆ ಸ್ವರಾಜ್ಯ ಪಟ್ಟವನ್ನು ಕೊಟ್ಟು ಹೋದರು. ಈ ಐದು ವರ್ಷಗಳಲ್ಲಿ ನಾವು ಸಾಧಿಸಿದುದು ಎಷ್ಟೇ ಅಲ್ಪವಿದ್ದರೂ ಚಾರಿತ್ರಿಕ ದೃಷ್ಟಿಯಲ್ಲಿ ಅವುಗಳಿಗೆ ಸ್ವಾಭಾವಿಕವಾಗಿ ಮಹತ್ವವಿದೆ. ಪರದೇಶಗಳ ಸಲಿಗೆ ಹಾಗೂ ದಾಳಿಗಳ ಕಳಂಕವನ್ನು ಹೊತ್ತಿರುವ ಭಾರತದ ಇತಿಹಾಸದ ಪುನರಾವರ್ತನೆಯಾಗುವ ಭಯ ಎಲ್ಲರಿಗೂ ಇತ್ತು. ಆಂತರಿಕ ಕಲಹ ಗೊಂದಲಗಳಿಗಾಗಿ ಹಿಂದೀಯರು ಹೆಸರಾಗಿದ್ದರು— ಈ ಎಲ್ಲ ಸಂಶಯಗಳನ್ನೂ ಬುಡಮೇಲು ಮಾಡಿ, ಭಾರತದ ಸ್ವಾತಂತ್ರ್ಯ ತಲೆ ಎತ್ತಿ ನಿಂತುದು ಮಾತ್ರವಲ್ಲದೆ, ಮಹಾ ಚುನಾವಣೆಯನ್ನು ನಡೆಸಿ, ಪ್ರಜಾಪ್ರಭುತ್ವದ ಸ್ಥಿರವಾದ ನೆಲೆಗಟ್ಟನ್ನು ಹಾಕಿಕೊಟ್ಟಿತು. ಇನ್ನು ಮುಂದಿನ ಐದು ವರ್ಷಗಳಲ್ಲಿ ದೇಶದ ಸ್ವರೂಪವನ್ನೇ ಮಾರ್ಪಡಿಸಬಲ್ಲ ಪಂಚವಾರ್ಷಿಕ ಯೋಜನೆ ಕಾರ್ಯಗತಗೊಳಿಸಲ್ಪಡುವುದು. ಸರಕಾರ ಹಾಗೂ ಜನತೆಯು ಪರಸ್ಪರ ಸಹಕರಿಸಿ ದುಡಿದರೆ ಪರಿಣಾಮ ಅತ್ಯಂತ ಉಜ್ವಲವೂ ಶ್ರೇಯಸ್ಕರವೂ ಆಗುವುದು.

ಬಡವರ ಕಣ್ಣೀರು

ದಿಲ್ಲಿಯ ಕೆಂಪುಕೋಟೆ ಇತಿಹಾಸ ಪ್ರಸಿದ್ಧವಾದುದಷ್ಟೆ: ಮೊಗಲ ಅರಸರ ಕಾಲದಿಂದ ಅದಕ್ಕೆ ಪ್ರಾಶಸ್ತ್ಯ ಬಂದಿದೆ. ಪ್ರಧಾನಿ ನೆಹರೂ ಇದೀಗ ಆರನೆಯ ಸಲ ಸ್ವಾತಂತ್ರ್ಯ ದಿನದಂದು ರಾಷ್ಟ್ರಧ್ವಜವನ್ನಲ್ಲಿ ಅರಳಿಸಿದರು. ಆ ಸಮಯ ತಮ್ಮ ಭಾಷಣವನ್ನು ಕೇಳಲು ಹಾತೊರೆದು ಬಂದಿದ್ದ ಅಪಾರ ಜನತೆಯನ್ನುದ್ದೇಶಿಸಿ ಅವರು ಹೇಳಿದ ಸಂಗತಿಗಳು ಭಾರತ ಎಚ್ಚರಾಗುತ್ತಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸಿಕೊಡುವಂತಿತ್ತು. ನೆಹರೂ ಭಾರತದ ಧೀಮಂತ ವ್ಯಕ್ತಿ. ರಾಜಗೋಪಾಲಾಚಾರಿ ಹೇಳುವಂತೆ ದೇವರ ದಯೆಯಿಂದ ನಮಗೆ ಸ್ವಾತಂತ್ರ್ಯ ದೊರಕಿದೆ. ಹಾಗೆಯೇ ಸ್ವಾತಂತ್ರ್ಯದ ರಕ್ಷಣೆ ಮಾಡುತ್ತ ಭಾರತವನ್ನು ಉದ್ಧರಿಸುವ ಹೊಣೆ ಹೊರಲು ಜವಾಹರು ಇದ್ದಾರೆ. ನಾವೆಲ್ಲ ತಾಯಿಯ ಮಡಿಲಲ್ಲಿರುವ ಮಕ್ಕಳಂತೆ ಸುರಕ್ಷಿತರು: ಹಾಗೆಂದು ಸೋಮಾರಿಗಳಾಗಿರತಕ್ಕದ್ದಿಲ್ಲ. ತಾಯಿಗೆ ಪ್ರಿಯವೆನಿಸುವ ಹಾಗೂ ಹರ್ಷದಾಯಕವಾದೆಲ್ಲ ಕಲ್ಯಾಣಕಾರಿ ಕೆಲಸಗಳಲ್ಲಿ ಮನಸ್ಸುಗೊಟ್ಟು ದುಡಿಯಬೇಕು. ನೆಹರೂ ಕೂಡ ಇದನ್ನೇ ಒತ್ತಿ ಹೇಳಿದರು. "ರಾಷ್ಟ್ರದ ಕೆಲಸ ಮುಗಿಯಿತೆಂದಿಲ್ಲ. ಒಂದು ಸಾವಿರ ಕೆಲಸ ಮಾಡಿ ಮುಗಿಸಿದರೂ, ಮತ್ತೂ ಅಷ್ಟು ಮಾಡದಿರುವುದು ಕಂಡುಬರುತ್ತದೆ. ಆದರೆ ನಾವೀಗ ಮಾಡಬೇಕಾದುದು ಬಹಳ ಮಹತ್ವದ ಕಾರ್ಯ ಬಡವರ ಕಣ್ಣಿನ ನೀರನ್ನು ಒರಸುವುದು ನಮ್ಮ ಕೆಲಸ. ಹಿಂದೆ ನಾವೇನು ಮಾಡಿರುವೆವೆಂಬುದನ್ನು ಅಭಿಮಾನದಿಂದ ನೋಡುವ ಬದಲಿಗೆ, ಮುಂದೆ ನೋಡಿ ನಡೆಯುವ ಕಾಲ ಈಗ ಸನ್ನಿಹಿತವಾಗಿದೆ. ನಮ್ಮ ಮುಂದೆ ಅರ್ಧಂಬರ್ಧ ಬಿದ್ದಿರುವ ಕೆಲಸ ಪೂರ್ಣಗೊಳಿಸಬೇಕಾಗಿದೆ. ಮಾಡದೆ ಇರುವಂಥವುಗಳನ್ನು ಕೈಗೆತ್ತಿಕೊಳ್ಳಬೇಕಾಗಿದೆ."

ಏಕಮಾತ್ರ ಮಾನದಂಡ

ನೆಹರೂ ಬಡಜನತೆಯ ಕುರಿತು ತುಂಬ ಕಳಕಳಿಯನ್ನು ವ್ಯಕ್ತಪಡಿಸಿದರು. ನಮ್ಮ ಎಲ್ಲ ಕೆಲಸಗಳ ಯೋಗ್ಯತೆಯನ್ನು ಅಳೆಯುವ ಒಂದೇ ಒಂದು ಮಾನದಂಡ ಇದೆ— ನೊಂದ ಜನತೆಯ ಕಂಬನಿಯನ್ನೊರಸುವಲ್ಲಿ ನಾವೆಷ್ಟು ಮಟ್ಟಿಗೆ ಜಯಶೀಲರಾಗಿರುವೆವೆಂಬುದೇ ನಮ್ಮ ಕಾರ್ಯಕಲಾಪಗಳ ಔಚಿತ್ಯವನ್ನು ನಿರ್ಧರಿಸಬಲ್ಲುದು ಎಂದರವರು. ನೆಹರೂರ ಮಾತಿನಲ್ಲಿ ತುಂಬಿರುವ ಕರುಣೆಯು ಹೃದಯಸ್ಪರ್ಶಿಯಾಗಿದೆ. ವಿಧಾಯಕ ಕಾರ್ಯಕರ್ತರು ಇದನ್ನು ಕೇಳಿ ನವ ಸ್ಫೂರ್ತಿಯಿಂದ ಕಾರ್ಯಪ್ರವೃತ್ತರಾಗುವರೆಂದು ನಂಬಬಹುದು. ಹಾಗೆಯೇ ಸಾಮಾನ್ಯ ಜನತೆಯೂ ಮಾಡುವ ಕೆಲಸ ಇವೆ: ಅವುಗಳನ್ನು ಕರ್ತವ್ಯವೆಂದು ಶಿರಸಾವಹಿಸಿ ದುಡಿಯಬೇಕು. ಜಾತೀಯ ಭಾವನೆ, ಯುದ್ಧದ ಉತ್ಸಾಹ ಮತ್ತು ಪರಸ್ಪರ ದ್ವೇಷದ ವಾತಾವರಣದಲ್ಲಿ ನಿಜ ಶಾಂತಿ ಲಭಿಸದೆಂಬುದರಿಂದ-ಅಂಥ ದುಷ್ಟ ಶಕ್ತಿಗಳ ಪ್ರಭಾವದಿಂದ ಮುಕ್ತರಿರಲು ನಾವು ಬಹಳ ಪ್ರಯತ್ನಪಡಬೇಕು. ಎರಡು ಸಾವಿರ ವರ್ಷಗಳಿಗೂ ಹಿಂದೆ ಭಾರತದಲ್ಲಿ ಏಕಚಕ್ರಾಧಿಪತ್ಯವನ್ನು ಸ್ಥಾಪಿಸಿ, ಮೆರೆದ ಅಶೋಕನ ಮಾತನ್ನು ನೆಹರೂ ಇಲ್ಲಿ ಉದಾಹರಿಸಿದರು: ಒಂದು ಧರ್ಮದ ಜನರು, ಜಾತಿಯ ಜನರು, ಇನ್ನೊಂದು ಧರ್ಮವನ್ನು ಜಾತಿಯನ್ನೂ ಆದರಿಸಿ ನಡೆದರೆ, ಇದರಿಂದ ಪರಸ್ಪರ ಕಲ್ಯಾಣ ಮಾಡಿಕೊಳ್ಳುವರು ಎಂದ ಅಶೋಕನ ಮಾತಿನಲ್ಲಿ ಮೂಲಭೂತವಾದ, ಮಾನವೀಯವಾದ ಅಂಶ ಹುದುಗಿದೆ. ಇದನ್ನು ಜನ ಮರೆಯಬಾರದು.

ಆಧ್ಯಾತ್ಮಿಕ ಸ್ವರೂಪ

ಸ್ವಾತಂತ್ರ್ಯದ ಉತ್ಸವಕ್ಕೆ ಈ ಬಾರಿ ಆಧ್ಯಾತ್ಮಿಕ ಸ್ವರೂಪ ಕೊಟ್ಟವರು ರಾಷ್ಟ್ರಾಧ್ಯಕ್ಷರಾದ ರಾಜೇಂದ್ರ ಪ್ರಸಾದ. ಜನತೆಯನ್ನುದ್ದೇಶಿಸಿ ಅವರು ಮಾಡಿದ ಆಕಾಶವಾಣಿ ಭಾಷಣದಲ್ಲಿ ವ್ಯಕ್ತಿಯ ಚಾರಿತ್ರ್ಯದ ಮಟ್ಟ ಉನ್ನತವಿರುವುದರ ಅಗತ್ಯವನ್ನು ಚೆನ್ನಾಗಿ ಬಿಂಬಿಸಿದರು. ಹಾಗೆಯೇ ಆದರ್ಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರಗತಿಪಥವನ್ನು ಅನುಸರಿಸಬೇಕೆಂದೂ ಅವರು ಕೇಳಿಕೊಂಡರು. ನೆಹರೂ ಕರ್ಮಯೋಗಿಯಂತೆ ಜನರ ಹೃದಯ ಕಲಕುವ ನುಡಿಗಳನ್ನಾಡಿದರೆ, ಪ್ರಸಾದ ಜ್ಞಾನಯೋಗಿಯಂತೆ ಮನಸ್ಸನ್ನು ಹುರಿದುಂಬಿಸುವ ಕೆಲಸದಲ್ಲಿ ಯಶಸ್ವಿಯಾದರು. ತ್ಯಾಗಗಳನ್ನು ಮಾಡಲು ಹಿಂದೆಮುಂದೆ ನೋಡದ, ಸುಲಭ ವ್ಯಾಮೋಹಗಳಿಗೆ ಬಲಿಬೀಳದ, ಕಷ್ಟಪರಂಪರೆಗಳನ್ನು ಎದುರಿಸಿಕೊಂಡೂ ಸರಿಯಾದುದಕ್ಕೆ ಅಂಟಿಕೊಳ್ಳುವ, ಪರರ ಜೀವನದಲ್ಲಿ ಸಮರಸರಾಗಿ ಬೆರೆತು, ಅವರ ನೋವು ದುಃಖಗಳನ್ನು ತನ್ನದೆಂದೇ ತಿಳಿದು ನೆರವಾಗುವ, ಕೊಡುವುದಕ್ಕೆ ಸಿದ್ಧರಾಗಿದ್ದುಕೊಂಡು ತೆಗೆದುಕೊಳ್ಳಲು ಉತ್ಸುಕರಿಲ್ಲದ ಜನಾಂಗವು ಸುಖಸಮೃದ್ಧಿಸಂಪನ್ನವಾಗುವುದಲ್ಲದೆ, ಇತರರನ್ನೂ ಸುಖಿಗಳಾಗಿ ಮಾಡುವುದು ಎಂದು ರಾಷ್ಟ್ರಾಧ್ಯಕ್ಷರು ಭಾರತದ ಅನಾದಿ ಕಾಲದ ಉಚ್ಚಾದರ್ಶವನ್ನು ಜನತೆಗೆ ಮನದಟ್ಟು ಮಾಡಿದರು. ನಮ್ಮ ಸ್ವಾತಂತ್ರ್ಯದ ಹೋರಾಟಕ್ಕೆ ಹೊಸ ಸ್ವರೂಪವನ್ನೂ ಸ್ಫೂರ್ತಿಯನ್ನೂ ಒದಗಿಸಿಕೊಟ್ಟ ಅಹಿಂಸಾತ್ಮಕವಾದ ಕಾರ್ಯಕ್ರಮಗಳಿಗೆ ಈಗಲೂ ನಾವು ಅಂಟಿಕೊಂಡಿರುವುದಗತ್ಯ ಎಂದವರು ಉಪದೇಶಿಸಿದರು.

ಹೃದಯದ ಕನ್ನಡಿ

ಜನಾಂಗವನ್ನು ಕಟ್ಟುವವರು ವ್ಯಕ್ತಿಗಳೇ ಹೊರತು ಸರಕಾರವಲ್ಲ: ಸರಕಾರ ಒಂದು ರೀತಿಯಿಂದ ಯಂತ್ರ ಸಮಾನ. ಪ್ರಜಾಪ್ರಭುತ್ವದಲ್ಲಿಯಂತೂ ಚಾಲಕ ಶಕ್ತಿಯು ವ್ಯಕ್ತಿಯಲ್ಲಿ ಸಮಾಗತವಾಗಿದೆ. ಅವನು ಓಟುಕೊಟ್ಟು ಕಳಿಸಿದ ಸದಸ್ಯರ ಮೂಲಕವಾಗಿ ಸರಕಾರದ ಕೆಲಸ ಸುಗಮವಾಗಿ ನಡೆಯಲು ತಕ್ಕ ಚಾಲನೆ ದೊರೆಯುತ್ತದೆ. ಹೀಗಾಗಿ ವ್ಯಕ್ತಿಯ ಶೀಲ ಮತ್ತು ಸದಾಚಾರಗಳಿಗೆ ಇನ್ನಷ್ಟು ಮಹತ್ವ ಬಂದಿದೆ. ರಾಷ್ಟ್ರಾಧ್ಯಕ್ಷರು ಈ ವಿಷಯವನ್ನು ಪ್ರಸ್ತಾಪಿಸಿದರು. ಕೆಲವೊಂದು ನೈತಿಕ ಹಾಗೂ ಆಧ್ಯಾತ್ಮಿಕ ನಿಯಮಗಳಲ್ಲಿ ಗಹನವಾದ ಶ್ರದ್ಧೆ ಇಲ್ಲದ ಜನಾಂಗವು ಉನ್ನತಿಯನ್ನು ಸಾಧಿಸುವುದರಲ್ಲಿ ಹಿಂದುಳಿಯುವುದು ನಿಶ್ಚಯ ಎಂದರವರು. ಮಹಾತ್ಮಾ ಗಾಂಧೀಜಿಯವರ ಆದರ್ಶ ಜೀವನವನ್ನು ಕಣ್ಣ ಮುಂದಿಟ್ಟು ರಾಷ್ಟ್ರಾಧ್ಯಕ್ಷರು ಪ್ರತಿಯೊಬ್ಬನೂ ತನ್ನ ಬದುಕನ್ನು, ಕಾರ್ಯಕಲಾಪಗಳನ್ನು ಹೃದಯದ ಕನ್ನಡಿಯಲ್ಲಿಟ್ಟು ನಿರೀಕ್ಷಿಸಲಿ ಎಂದು ಕರೆಕೊಟ್ಟರು, ಸಾಮಾನ್ಯ [illegible]ಗಳೂ ಹಾಗೂ ನಿತ್ಯ ಸರಕಾರ[illegible]ಗಳಲ್ಲಿ ಸಾಮಾನ್ಯ[illegible] ಹಿತವನ್ನು ಮಾಡುವ ಹಾಗೂ ಸೇವೆಯ ಅಂತಸ್ತನ್ನು ಮುಟ್ಟಿಸಬಲ್ಲದೇನನ್ನು ಮಾಡಿರುವೆನೆಂಬುದನ್ನು ಈ ರೀತಿ ತಿಳಿದುಕೊಳ್ಳಲಿ! ನಮ್ಮ ದೌರ್ಬಲ್ಯವನ್ನೂ ಕುಂದುಕೊರತೆಗಳನ್ನೂ ಕಂಡುಕೊಂಡು, ಅವುಗಳನ್ನು ದೂರೀಕರಿಸಿ ನಡೆದರೆ ಆದರ್ಶ ಜನಾಂಗವಾಗಿ ನಾವು ಬಾಳುವ ಭರವಸೆ ಇದೆ.

ಶೀಲ ಬಲವೇ ಸರ್ವ ಬಲ

ಶೀಲಬಲದ ಅಗತ್ಯವನ್ನು ರಾಜಕೀಯ ಕ್ಷೇತ್ರದಲ್ಲಿ ನಿರ್ಭಯವಾಗಿ ಸಾರ

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K.

ZANDU Mahayogaraja Guggula
ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಪ್ರತಿಮ ದಿವ್ಯೌಷಧ. 1 ತೊಲೆಗೆ ರೂ 3- ಮಾತ್ರ.

ದೊರೆಯುವ ಸ್ಥಳಗಳು:
1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್. ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್ ಉಡುಪಿ.
2 ಶ್ರೀ ಪಿ ಸಿ ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಪಂಪನಕಟ್ಟೆ, ಮಂಗಳೂರು
4 ಎಲ್. ಎಸ್. ಶರ್ಮ, ಹಜೂರು ರಸ್ತೆ ಮಂಗಳೂರು.
ಮತ್ತು ಇತರ ಸೇಲ್ ಏಜಂಟರಲ್ಲಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರ ಶರತ್ತು ವಗೈರೆಗೆ ಬರೆಯಿರಿ.

DAMODAR & CO.,
Nainiappa Naicken Street, Park Town-MADRAS 3.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಆಧ್ಯಾತ್ಮಿಕ ಸ್ವರೂಪ

ಉಜ್ವಲ ಚಾರಿತ್ರ್ಯವುಳ್ಳ ವ್ಯಕ್ತಿತ್ವದ ಅಗತ್ಯ

ತ್ತಿರುವ ಜನಾಂಗ ಭಾರತವೊಂದೇ ಎನ್ನಬಹುದು: ಮಹಾತ್ಮಾ ಗಾಂಧೀಯಿಂದ ಸ್ವಾತಂತ್ರ್ಯದ ನವಸ್ಫೂರ್ತಿಯನ್ನು ಪಡೆದ ನಾವು ಅವರ ಸತ್ಯನಿಷ್ಠೆ, ಅಹಿಂಸೆ ಮತ್ತು ಶರ ಸಮಾಜಹಿತ ಕಾರ್ಯಗಳ ಮೂಲಕವೇ ಯಶಸ್ಸು ಸಂಪಾದಿಸಿದೆವು. ಸಹನೆಯ ಪಾಠವನ್ನು ಚಾರಿತ್ರ್ಯ ಸಂಪನ್ನತೆಯ ಉಪದೇಶವನ್ನೂ ಲೋಕಕ್ಕೆ ನೀಡಬಲ್ಲ ಏಕಮಾತ್ರ ಜನಾಂಗವಾಗಿ ಭಾರತವಿದೆ. ಪಂ. ನೆಹರೂರವರ ವಿದೇಶ ಧೋರಣೆಯಂತೂ ಸತ್ಯನಿಷ್ಠ ಆಚರಣೆಗೆ ಜ್ವಲಂತ ಉದಾಹರಣೆಯಾಗಿದೆ. ಜನರಲ್ಲಿ ಶೀಲಬಲ ಬೆಳೆಯಬೇಕಾದುದು ಬುದ್ಧಿ ಬಲಕ್ಕಿಂತಲೂ ಮಿಗಿಲಾಗಿ ಅಗತ್ಯ. ಇದಕ್ಕೆ ಪಕ್ಷ ಸಂಗಡಗಳ ಸಂಕುಚಿತ ವಾತಾವರಣ ಬೇಡ. ಯಾವುದೇ ಪಕ್ಷವಾಗಲೀ—ಮಾನವನ ನಿಜವಾದ ದುಃಖ ಪರಿಹರಿಸುವಲ್ಲಿ ಯಶಸ್ಸು ಸಂಪಾದಿಸುವುದು ಅದರ ಧ್ಯೇಯವಾಗಿರುವ ತನಕ ನಾವು ಅಂಜುವ ಅಗತ್ಯವಿಲ್ಲ. ಹಲವು ಮತ ಧರ್ಮಗಳನ್ನು ನೆಚ್ಚಿಕೊಂಡಿರುವ ವಿಶಾಲ ಜನಾಂಗವಾಗಿ ಭಾರತ ಬೆಳೆದಿದ್ದರೂ—ನಾವೆಲ್ಲ ಭಾರತೀಯರೆಂಬ ಐಕ್ಯ ಭಾವನೆ ತೊಲಗಿದೆಯೇ? ಹಾಗೆಯೇ ನಮ್ಮ ಎಲ್ಲ ಕಾರ್ಯಕ್ರಮಗಳೂ ಧ್ಯೇಯಾದರ್ಶಗಳೂ ಜನಪದದ ಅಭಿವೃದ್ಧಿಗಾಗಿ ಮೀಸಲು ಇರಿಸಿದಾಗ—ಸ್ವಾಭಾವಿಕವಾಗಿ ಭಾರತೀಯ ಭಾವವು ತುಂಬಿರುವುದು. ಈ ದೃಷ್ಟಿಯಿಂದ ನೋಡಿದರೆ ಇತ್ತೀಚೆಗೆ ಮದ್ರಾಸು ಸರಕಾರವು ಕೆಲವೊಂದು ಒಳಸಂಚುಗಳಲ್ಲಿ ಭಾಗವಹಿಸಿದ್ದರೆಂಬ ಆರೋಪದ ಮೇಲೆ ಜೈಲಿನಲ್ಲಿಟ್ಟ ಕೆಲವರನ್ನು ಬಿಡುಗಡೆ ಮಾಡಿದುದು ಔಚಿತ್ಯಯುತ: ಕಮ್ಯೂನಿಸ್ಟ ಪಕ್ಷವು ಘಟನಾತ್ಮಕವಾದ ರೀತಿಯಲ್ಲಿ ಕೆಲಸ ಮಾಡಲು ನಿರ್ಧರಿಸಿದೆಂಬುದು ಸರಕಾರಕ್ಕೆ ಗೋಚರಿಸಿದ್ದರಿಂದಾಗಿ ರಾಜಗೋಪಾಲಾಚಾರಿ ನುಡಿದರು.

ಧುರೀಣರ ವಿವೇಕ

ಪಕ್ಷ ಸಂಗಡಗಳ ಭೇದ ಭಾವವು ರಾಷ್ಟ್ರಾಭ್ಯುದಯದ ಯಾವ ಕೆಲಸಕ್ಕೂ ಅಡ್ಡ ಬಂಡೆಯಾಗಿ ನಿಲ್ಲಬಾರದು. ಸುದೈವದಿಂದ ಚುನಾವಣೆಯ ಕಾಲದಲ್ಲುಂಟಾದ ನೂರಾರು ಪಕ್ಷ ಪಂಗಡಗಳು ಅವು ಮುಗಿದ ಬೆನ್ನಿಗೇ ನಿರ್ನಾಮಗೊಂಡಿವೆ. ಹೀಗಿದ್ದರೂ ಪ್ರಮುಖ್ಯವಾದ ಮತಭೇದವುಳ್ಳ ಕೆಲವೊಂದು ಎಡಪಕ್ಷಗಳು ಉಳಿದುಕೊಂಡಿವೆ. ಲೋಕಸಭೆಯ ಅಧ್ಯಕ್ಷರಾದ ಶ್ರೀ ಮಾವಳಣಕರರ ಅಭಿಪ್ರಾಯದಂತೆ ವಿರೋಧಿ ಗುಂಪೇ ಸದ್ಯದ ವೈಶಿಷ್ಟ್ಯವೆನ್ನಬಹುದು. ಸರಕಾರದ ಕಾರ್ಯಕಲಾಪಗಳ ಬಗ್ಗೆ ರಚನಾತ್ಮಕ ಟೀಕೆಯನ್ನು ಮುನ್ನೊಡ್ಡಿ ಸರಿದಾರಿಯಲ್ಲಿ ನಡೆಸುವ ನಡೆಯುವಂತೆ ಒತ್ತಾಯಿಸುವುದು ವಿರೋಧಿ ಗುಂಪಿನ ಕರ್ತವ್ಯವಾಗುತ್ತದೆ. ಹಾಗೆಂದು ಪಂಚವಾರ್ಷಿಕ ಯೋಜನೆಯಂಥ ಮಹಾ ಕಾರ್ಯಗಳನ್ನು ಕಾರ್ಯರೂಪಕ್ಕೆ ಇಳಿಸುವಾಗ ಅಲ್ಲಸಲ್ಲದ ವಿಘ್ನವೊಡ್ಡುವುದು ಎಂದಿಗೂ ಚೆನ್ನಾದುದಲ್ಲವಷ್ಟೆ! ಸುದೈವದಿಂದ ನಮ್ಮ ಎಲ್ಲ ಪ್ರಮುಖ ಪಕ್ಷದ ಧುರೀಣರೂ ಇದನ್ನು ಮನಗಂಡಿರುವರು. ರಾಷ್ಟ್ರಾಭ್ಯುದಯವು ಸರ್ವಾಂಗೀಣವಾಗುವಂತೆ ನೋಡುವ ಈ ಉಪಕ್ರಮದಲ್ಲಿ ಲೋಪದೋಷಗಳು ಕೆಲವಿದ್ದರೂ ಒಟ್ಟಿನಲ್ಲಿ ಇದು ಸ್ತುತ್ಯ ಉಪಕ್ರಮವೆಂಬುದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ.

ಸಂಪತ್ತಿನ ಸದ್ವಿನಿಯೋಗ

ಈಚೆಗೆ ಯೋಜಿಸಿದ ಭಾರತ ಸೇವಕ ಸಮಾಜದ ಸಂಘಟನೆ ಮತ್ತು ಜನತಾ ಸಹಕಾರವನ್ನು ದೊರಕಿಸುವ ಉದ್ದೇಶದಿಂದ ರಚಿಸಲ್ಪಟ್ಟ ರಾಷ್ಟ್ರೀಯ ಅಭಿವೃದ್ಧಿ ಸಲಹಾ ಮಂಡಳಿಗಳು ಯೋಗ್ಯ ಹೆಜ್ಜೆಗಳು. ಆರ್ಥಿಕ ಅಭಿವೃದ್ಧಿ ಸಾಮಾಜಿಕ ನೈರ್ಮಲ್ಯ, ಜನಶಿಕ್ಷಣ, ರಾಷ್ಟ್ರೀಯ ಬಲ ಸಂವರ್ಧನ, ಆರೋಗ್ಯ, ನೈತಿಕ ಅಭ್ಯಾಸ, ಸೇನೆ ಮತ್ತು ಸಹಾಯ, ಸಂಪತ್ತಿನ ಸದ್ವಿನಿಯೋಗ ಮುಂತಾದ ಅಷ್ಟಾಂಶದ ಕಾರ್ಯಕ್ರಮವನ್ನು ಭಾರತ ಸೇವಕ ಸಮಾಜವು ಇಟ್ಟುಕೊಳ್ಳಬೇಕೆಂದು ಅಭಿವೃದ್ಧಿ ಮಂಡಳಿ ಸಲಹೆ ಮಾಡಿದೆ. ಈ ಸೇವಾ ಸಮಾಜದ ಸಂಘಟನೆಯು ರಾಜಕೀಯ ಧೋರಣೆಗಳಿಗೆ ಕಟ್ಟು ಬೀಳದೆ, ನಿಜವಾದ ಜನಹಿತವನ್ನುಂಟುಮಾಡುವುದರಲ್ಲಿ ಮುಂದಾಗಬೇಕೆಂದ ಅಗತ್ಯವನ್ನು ಡಾ. ಶ್ಯಾಮ ಪ್ರಸಾದ ಮುಖರ್ಜಿಯಂಥವರು ಒತ್ತಿ ಹೇಳಿದರು. ಜನತಾ ಸಹಕಾರವನ್ನು ಸಾಧ್ಯವಿದ್ದ ಎಲ್ಲ ರೀತಿಯಿಂದ ಸರಕಾರದ ಈ ಯೋಜನೆಗೆ ಒದಗಿಸಿ ಕೊಡುವ ವಿಶಾಲವಾದ ಕಾರ್ಯಭಾಗ ಭಾರತ ಸೇವಾ ಸಮಾಜಕ್ಕೆ ಇದೆ. ಸ್ವಯಂ ಸ್ಫೂರ್ತಿಯಿಂದ ರಚನಾತ್ಮಕ ಕಾರ್ಯಕರ್ತರು ಜನತೆಗೆ ಯೋಗ್ಯ ಶಿಕ್ಷಣ ಕೊಡುವುದು ಬಹಳ ಅಗತ್ಯವಾಗಿದೆ. ಜನರೊಡನೆ ನಿಕಟ ಸಂಪರ್ಕವನ್ನು ಇಟ್ಟುಕೊಳ್ಳದೆ, ಅವರ ಇಷ್ಟಾನಿಷ್ಟಗಳ ಸ್ಪಷ್ಟ ಕಲ್ಪನೆ ಇಲ್ಲದೆ ಮಾಡುವ ಕೆಲಸ ಯಶಸ್ವಿಯಾಗದು ಎಂದು ನೆಹರೂ ಪದೇ ಪದೇ ಎಚ್ಚರಿಸುತ್ತಿರುವರು. ಅರ್ಥ ಸಚಿವ ಶ್ರೀ ದೇಶಮುಖರು ದೊಡ್ಡ ಬಂಡವಾಳಗಾರರಲ್ಲದೆ—ಮಧ್ಯಮ ವರ್ಗದವರೂ ಸಾಮಾನ್ಯ ಜನರೂ ಉಳಿತಾಯದ ಹಣವನ್ನು ಸರಕಾರಕ್ಕೆ ಒದಗಿಸಿಕೊಟ್ಟು ನೆರವಾಗುವುದು ಪಂಚವಾರ್ಷಿಕ ಯೋಜನೆಯ ಯಶಸ್ಸಿಗೆ ಅಗತ್ಯವೆಂದಿರುವರು. ನೋಟುಗಳನ್ನು ಒಂದು ಇತಿಮಿತಿಯನ್ನು ಮೀರಿ ಮುದ್ರಿಸಹೊರಟರೆ—ದೇಶದ ಹಣಕಾಸಿನ ಪರಿಸ್ಥಿತಿ ಕುಸಿದು ಬಿಡುವುದು ನಿಶ್ಚಯ ಎಂದವರು ಹೇಳಿದರು. ಪ್ರಕೃತ ೩೦೦ ಕೋಟಿ ರೂಪಾಯಿಗಳ ಕೊರತೆ ಕಂಡು ಬರುತ್ತಿದ್ದು, ವಿದೇಶೀ ನೆರವು ಇಷ್ಟು ದೊಡ್ಡ ಪ್ರಮಾಣದಲ್ಲಿ ದೊರೆಯುವ ಸಂಭವ ಬಹಳ ಕಡಿಮೆ.

ಲೋಕ ಸಭೆಯ ಅಧಿವೇಶನ

ಮೂರು ತಿಂಗಳಿಗೂ ಹೆಚ್ಚು ಸಮಯ ಅಧಿವೇಶನಗೊಂಡಿದ್ದ ಲೋಕ ಸಭೆ ಕಳೆದ ವಾರ ಅನಿಶ್ಚಿತ ಸಮಯದ ವರೆಗೆ ಮುಂದರಿಯಿತು. ಮೇ ತಿಂಗಳಲ್ಲಿ ರಾಷ್ಟ್ರಾಧ್ಯಕ್ಷರ ಆದೇಶದ ಮೇರೆಗೆ ರೈಲ್ವೆ ಆಯವ್ಯಯ ಪತ್ರವನ್ನೂ ಸಾಮಾನ್ಯ ಮುಂಗಡ ಪತ್ರವನ್ನೂ ಚರ್ಚಿಸಲು ಇದು ಕೂಡಿತ್ತು. ಆದರೆ ಸರಕಾರದ ಮುಂದೆ ಇನ್ನು ಅನೇಕ ಮಹತ್ವದ ಸಂಗತಿಗಳಿದ್ದುದರಿಂದ ಅವುಗಳ ವಿವರವಾದ ಚರ್ಚೆಗೂ ಈ ಅಧಿವೇಶನದಲ್ಲಿ ಅವಕಾಶ ಮಾಡಿಕೊಡಲಾಯಿತು. ಒಟ್ಟು ಇಪ್ಪತ್ತೇಳು ಮಸೂದೆಗಳು ಇಲ್ಲಿ ಸ್ವೀಕೃತಗೊಂಡವು. ತೀವ್ರ ಅಸಂತೋಷ ಮತ್ತು ವಿವಾದಗಳಿಗೆ ಎಡೆಗೊಟ್ಟ ಪ್ರತಿಬಂಧಕ ಸ್ಥಾನಬದ್ಧತೆಯ ಮಸೂದೆ, ಕೆಲವೊಂದು ವಸ್ತುಗಳು ಜೀವನಾವಶ್ಯಕವೆಂದು ನಿರ್ಧರಿಸಿ, ಅವುಗಳ ಮೇಲೆ ಮಾರಾಟಕರ ಹೇರುವ ಮೊದಲು ರಾಷ್ಟ್ರಾಧ್ಯಕ್ಷರ ಅನುಮತಿ ಪಡೆಯಬೇಕೆನ್ನುವ ಮಸೂದೆ, ಲಂಚಗುಳಿತನ ನಿರ್ಮೂಲನ ಮಸೂದೆ, ವಿಮಾನ ಹಾಗೂ ನೌಕಾ ಪಡೆಗಳನ್ನು ಭೂದಳಗಳನ್ನಾಗಿ ಉಪಯೋಗಿಸುವ ಮಸೂದೆ ಮುಂತಾದ ಮುಖ್ಯ ಮುಖ್ಯ ವಿಷಯಗಳು ಚರ್ಚೆಗೆ ಬಂದವು, ಸರಕಾರಕ್ಕೆ ಜಯ ಬಂದುದು. ಬಹುಮತ ಪಕ್ಷವಾಗಿ ಕಾಂಗ್ರೆಸು ಇದ್ದು, ಅಧ್ಯಕ್ಷರು ಕಮ್ಯೂನಿಸ್ಟ ಪಕ್ಷಕ್ಕೆ ಮಾತ್ರ ವಿರೋಧಿ ಗುಂಪಿನ ಸ್ಥಾನಮಾನವನ್ನು ಕೊಟ್ಟಿರುವರು. ಸಭಾತ್ಯಾಗದಂಥ ಕೆಲವೊಂದು ಅಪ್ರಿಯ ಘಟನೆಗಳು ಜರುಗಿದರೂ ಒಟ್ಟಿನಲ್ಲಿ ಲೋಕಸಭೆಯ ಕಾರ್ಯಕ್ರಮಗಳು ಭಾರತಕ್ಕೆ ಭೂಷಣ ಪ್ರಾಯವಾಗಿದ್ದುವು.

ಕರ್ನಾಟಕದ ಗೌರವ

ಕೇಂದ್ರ ಮಂತ್ರಿಮಂಡಳವನ್ನು ಕಳೆದ ವಾರ ವಿಸ್ತರಿಸಿ, ಹತ್ತು ಜನ ಉಪಮಂತ್ರಿಗಳನ್ನು ನೇಮಿಸಲಾಗಿದೆ. ಅಲ್ಲದೆ ಉಪಮಂತ್ರಿಗಳಾಗಿದ್ದ ಇಬ್ಬರನ್ನು ರಾಜ್ಯ ಸಚಿವರ ಮಟ್ಟಕ್ಕೇ (ಕೇಬಿನೆಟ್ ಸ್ಥಾನಮಾನವಿಲ್ಲ) ಏರಿಸಲಾಗಿದೆ. ಕರ್ನಾಟಕದವರಾದ ಶ್ರೀ ದಾತಾರ ಬಳವಂತ ರಾಯರು ಉಪಮಂತ್ರಿಗಳಾಗಿ ನೇಮಕಗೊಂಡಿದ್ದು, ಗೃಹಖಾತೆಯಲ್ಲಿ ಅವರು ದುಡಿಯುವರು. ಹಿಂದೆ ಉಪಮಂತ್ರಿಗಳಾಗಿದ್ದ ಕನ್ನಡಿಗ ಶ್ರೀ ದ. ಪ. ಕರಮಕರರು ಈಗ ವಾಣಿಜ್ಯ ಖಾತೆಯ ರಾಜ್ಯ ಸಚಿವರಾಗಿದ್ದಾರೆ. ಮಂತ್ರಿ-ಉಪಮಂತ್ರಿಗಳಲ್ಲದೆ ಪ್ರಧಾನಿ ನೆಹರೂ ನಾಲ್ವರು ಪಾರ್ಲಿಮೆಂಟರಿ ಕಾರ್ಯದರ್ಶಿಯರ ನೇಮಕವನ್ನು ಮಾಡಿರುವರು.


BBG/32/LOT/4

ನನ್ನ ಪತಿಗೆ ಉತ್ತಮ ಚಹಾ ಕಂಡರೆ ಇಷ್ಟ!

ಆದರೆ ನಾನು ಮಿತವ್ಯಯಿಯಾಗಿರಬೇಕೆಂಬುದೂ ಅವರ ಇಷ್ಟ. ಬ್ರೂಕ್ ಬಾಂಡ್ ವಿಚಾರವನ್ನು ನನ್ನ ತಾಯಿಯು ನನಗೆ ಹೇಳದೇ ಹೋಗಿದ್ದಲ್ಲಿ, ಅವರನ್ನು ಸಂತೋಷಗೊಳಿಸುವುದು ಕಷ್ಟವಾಗುತ್ತಿತ್ತು. ಈಗ ನಾನವರಿಗೆ ಯಥಾರ್ಥವಾಗಿಯೂ ಉತ್ತಮವಾದ ಚಹ ಕೊಡಬಲ್ಲೆ ಮತ್ತು ಒಡನೆಯೇ ಹಣವನ್ನೂ ಉಳಿಸಬಲ್ಲೆ ಏಕೆಂದರೆ ಕೇವಲ ಎರಡು ಔನ್ಸಿನ ಒಂದು ಬ್ರೂಕ್ ಬಾಂಡ್ ಪೊಟ್ಟಣವು 30 ಬಟ್ಟಲುಗಳ ಚಹಕ್ಕೆ ಸಾಕಾಗುತ್ತದೆ. ಚೆನ್ನಾಗಿ ಮಿಶ್ರಿತವಾದ ಬ್ರೂಕ್ ಬಾಂಡ್ ಪೊಟ್ಟಣವು ನಮ್ಮ ಮನೆಯಲ್ಲಿ ಸದಾ ಕಾಲದಲ್ಲಿಯೂ ಇರುತ್ತದೆ

ಬ್ರೂಕ್
ಬಾಂಡ್
ಚಹಾ

ಭಾರತದ ಅತಿ ಶ್ರೇಷ್ಠವಾದುದು


ಪ್ರಸವ ವಿಜ್ಞಾನ
[illegible]

You Cannot But Choose
The Canara Banking Corporation Ltd.
for Ideal Banking
in the States of Madras, Mysore, Bombay, Coorg & U. S. T. C.
Estd: 1906. H. O.: UDIPI (S I.

ನವಯುಗ
ಉಡುಪಿ, ಗುರುವಾರ ೨೧-೮-'೫೩

ಧನ ಸಂಚಯದ ಮಾರ್ಗ

ಭಾರತದಲ್ಲಿ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಗೊಳಿಸುವ ಕುರಿತು ಅಪಾರ ಹುಮ್ಮಸ್ಸು ತುಂಬಿದೆ. ಯೋಜನಾ ಆಯೋಗದ ಅಂತಿಮ ವರದಿ ಹೊರ ಬೀಳಲು ಇನ್ನೂ ಒಂದೆರಡು ತಿಂಗಳುಗಳ ವಿಳಂಬವಿದ್ದೀತು. ಈ ಮೊದಲು ಪ್ರಕಟಿಸಿದ ವರದಿಯನ್ನು ಪರಿಷ್ಕರಿಸುವುದರ ಜೊತೆಗೆ- ದೇಶದ ಉಳಿದ ಭಾಗಗಳಲ್ಲಿ ಆಗಬೇಕಿರುವ ಯೋಜನೆಗಳ ವಿವರವನ್ನು ಅದು ಒಳಗೊಳ್ಳುವುದು. ರಾಷ್ಟ್ರೀಯ ಪುನರ್ನಿರ್ಮಾಣದಂಥ ಮಹಾ ಹೊಣೆಗಾರಿಕೆಯನ್ನು ಹೊರಬೇಕಾದುದು ಅಭಿವೃದ್ಧಿ ಹಾಗೂ ಸಮೃದ್ಧಿಗಳ ದೃಷ್ಟಿಯಿಂದ ಅಗತ್ಯವಿದೆ. ಅಪಾರ ಹಣವನ್ನು ವ್ಯಯಿಸಿ ಪೂರೈಸುವ ಈ [illegible] ಯೋಜನೆಗಳನ್ನು ಪಕ್ಷಪಂಗಡಗಳ ಭೇದಭಾವವಿಲ್ಲದೆ ಎಲ್ಲರೂ ಸ್ವಾಗತಿಸಿರುವರು. ನಮ್ಮ ದೈನಂದಿನ ಜೀವನದ ವೆಚ್ಚವನ್ನು ಮತ್ತು ಮಟ್ಟವನ್ನು ಯುದ್ಧಪೂರ್ವ ಸ್ಥಿತಿಗೆ (೧೯೩೯) ತರಲು ಹೆಣಗುವುದೇ ಪಂಚವಾರ್ಷಿಕ ಯೋಜನೆಯ ಪ್ರಧಾನೋದ್ದೇಶವಾಗಿದೆ. ಆದರೆ ೧೯೩೯ರಲ್ಲಿಯಾದರೂ ಭಾರತ ಸಂಪೂರ್ಣ ಸ್ವಾವಲಂಬಿಯಾಗಿರಲಿಲ್ಲ- ಮತ್ತು ಸಮೃದ್ಧಿಯಿಂದ ತುಂಬಿತುಳುಕುತಿದ್ದಿಲ್ಲ ಎಂಬ ಸಂಗತಿಯನ್ನು ಮನಗಂಡರೆ- ಈ ಪಂಚವಾರ್ಷಿಕ ಯೋಜನೆಯಂಥ ಇನ್ನೂ ಕೆಲವು ಅಭಿವೃದ್ಧಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದು ಅಪೇಕ್ಷಣೀಯವಿದ್ದಂತೆ- ಅಗತ್ಯವಾಗಿಯೂ ಪರಿಗಣಿಸಬಹುದು. ಜನಪದ ಅಭಿವೃದ್ಧಿ ಯೋಜನೆಗಳ ಮೂಲಕ ಹಳ್ಳಿಯಲ್ಲಿ ನವಚೈತನ್ಯವನ್ನು ತುಂಬುವ ಪ್ರಯತ್ನ ನಡೆದಿದೆ. ಹಾಗೆಂದು ಭಾರತದ ವೈಶಾಲ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡರೆ ಈಗ ತೊಡಗಿದ ೫೫ ಕೇಂದ್ರಗಳು ಎಷ್ಟು ಮಾತ್ರಕ್ಕೂ ಸಾಲವು. ನಮ್ಮ ಅಭಿವೃದ್ಧಿಯ ಮಾರ್ಗದಲ್ಲಿರುವ ಮುಖ್ಯಕೊರತೆ ಅಗತ್ಯವಿರುವ ಬಂಡವಾಳದ ಪೂರೈಕೆಯಂತೂ ಹೌದು- ಅವರೊಂದಿಗೆ ಜನತಾ ಸಹಕಾರ ದುರ್ಲಭವಾಗುತ್ತಿರುವುದನ್ನು ಸೇರಿಸಬಹುದು. ಜಡಪ್ರವೃತ್ತಿಯ ಹಾಗೂ ಆಲಸ್ಯ ಮನೋವೃತ್ತಿಯ ಜನರು ಒಮ್ಮೆಲೇ ಎಚ್ಚತ್ತು ಚೇತರಿಸಿಕೊಳ್ಳುವ ವಾತಾವರಣ ಇನ್ನೂ ಉಂಟಾಗಿಲ್ಲ, ಭಾರತ ಸೇವಕ ಸಮಾಜದಂಥ ಸಂಘಟನೆಗಳು- ನಿಧಾಯಕ ಕಾರ್ಯಕರ್ತರೂ ಸಾಮಾನ್ಯ ಜೀವನ ಮಟ್ಟವನ್ನು ಎತ್ತರಿಸುವ ಯೋಜನೆಗಳ ಬಗ್ಗೆ ಜನತೆಗೆ ಜ್ಞಾನ ಲಾಭವನ್ನುಂಟು ಮಾಡುವುದಲ್ಲದೆ, ಕಾರ್ಯರಂಗದಲ್ಲಿ ಧುಮುಕಲು ಹುರಿದುಂಬಿಸಬೇಕು. ಇದು ಮಾನವ ಪ್ರಯತ್ನದ ವಿಷಯವೆಂಬುದು ಸ್ಪಷ್ಟ. ಆದರೆ ಬಂಡವಾಳವನ್ನು ಒದಗಿಸುವ ಪ್ರಶ್ನೆ ಇದಕ್ಕಿಂತ ಸ್ವಲ್ಪ ಜಟಿಲವಾಗಿದೆ ನಮ್ಮ ಸಂಪತ್ತು ಬಹಳ ಪರಿಮಿತವಿರುವುದರಿಂದ, ಈ ಮಿತಿಯನ್ನು ಕಡೆಗಣಿಸಿ ಯಾವ ಅಭಿವೃದ್ಧಿಯೋಜನೆಯನ್ನು ಕೈಗೊಳ್ಳುವಂತಿಲ್ಲ. ಪಂಚವಾರ್ಷಿಕ ಯೋಜನೆಯ ಮೊದಲನೆ ಘಟ್ಟದಲ್ಲಿಯೇ ನಾವು 200 ಕೋಟಿ ರೂಪಾಯಿಗಳ ಕೊರತೆಯನ್ನು ಅನುಭವಿಸುತ್ತಿದ್ದೇವೆ. ನೋಟುಗಳನ್ನು ಹೆಚ್ಚು ಪ್ರಮಾಣದಲ್ಲಿ ಮುದ್ರಿಸಿ, ಯೋಜನೆಗಳಿಗೊದಗಿಸುವುದರಿಂದ ಆರ್ಥಿಕಕ್ಷೇತ್ರದ ಬಿಗಿಯು ಕುಸಿಯುವುದರ ಜೊತೆಗೆ ರಾಷ್ಟ್ರದ ನೆಲಗಟ್ಟಿನ ಮೇಲೆ ದುಷ್ಪ್ರಭಾವ ಉಂಟಾಗುವುದು ಸ್ವಾಭಾವಿಕ. ಅರ್ಥಸಚಿವರಾದ ಶ್ರೀ ದೇಶಮುಖರು ಈ ಸಲಹೆ ಅನುಚಿತವೆಂದು ಸಾಧಾರವಾಗಿ ತೋರಿಸಿರುವರು. ವಿದೇಶಿ ನೆರವನ್ನು ಯಾಚಿಸುವುದು ನಮ್ಮ ಅಭಿಮಾನಕ್ಕೆ ಹಿತಕರವಾಗದು. ಸ್ವಾತಂತ್ರ್ಯವನ್ನು ಪ್ರಚ್ಛನ್ನ ರೂಪದಿಂದ ಪರದಾಸ್ಯತ್ವವನ್ನು ಸ್ವೀಕರಿಸುವ ಹೇಯ ಪ್ರಸಂಗ ಬಾರದಂತೆ ನಾವು ಸದಾ ಎಚ್ಚರ ವಹಿಸಬೇಕಾಗಿದೆ. ಇಂಥದರಲ್ಲಿ ನಮ್ಮಲ್ಲಿಯೇ ಬಂಡವಾಳವನ್ನು ಸರ್ವಾಧಿಕ ಶ್ರಮ ಪಟ್ಟಾದರೂ ಕೂಡಿಸಿ ತನ್ಮೂಲಕ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳುವ ಒಂದೇ ಒಂದು ಉಪಾಯ ಉಳಿಯುತ್ತದೆ. ಸರಕಾರವು ಈಗ ಅದನ್ನೇ ಆಶ್ರಯಿಸಿದಂತೆ ಕಂಡು ಬರುವುದು. ರಾಜ್ಯ ಸರಕಾರಗಳು ತಮ್ಮ ಪಾಲಿಗೆ ಬಂದಿರುವ ಅಭಿವೃದ್ಧಿ ಯೋಜನೆಗಳನ್ನು ಪೂರೈಸಲು ಧನಾಭಾವವು ಉಲ್ಬಣಾವಸ್ಥೆಗೆ ಮುಟ್ಟಿದೆ ಎಂದು ಚಿಂತಿಸುತ್ತಿವೆ. ಕೇಂದ್ರ ಸರಕಾರದ ಸಾಲ ರೂಪದ ಸಹಾಯಕ್ಕೂ ಒಂದು ಮಿತಿ ಇದೆ ಎಂದು ಅರ್ಥಸಚಿವ ದೇಶಮುಖರು ಹೇಳುತ್ತಾ ಬಂದಿದ್ದಾರೆ. ಹೀಗಿರುವುದರಿಂದ ರಾಜ್ಯ ಸರಕಾರಗಳು ಜನತಾ ಸಹಕಾರವನ್ನು ಹಿಂದೆಂದೂ ಇಲ್ಲದಷ್ಟು ಹೆಚ್ಚು ಪ್ರಮಾಣದಲ್ಲಿ ಬೇಡುತ್ತಿವೆ. ಅಲ್ಲದೆ ರಾಜ್ಯ ಸರಕಾರದ ಆದಾಯವನ್ನು ಹೆಚ್ಚಿಸುವ ಉದ್ದೇಶದಿಂದ ಕೇಂದ್ರ ಸರಕಾರಕ್ಕೆ ಬರುವ ಉತ್ಪನ್ನದ ಕೆಲವು ಅಂಶಗಳಲ್ಲಿ ಪಾಲನ್ನು ಕೇಳಿವೆ. ಉದಾಹರಣೆಗಾಗಿ ಮದ್ರಾಸು ಸರಕಾರವು ರಾಜ್ಯದಲ್ಲಿ ರಾಷ್ಟ್ರೀಯ ಉಳಿತಾಯ ಯೋಜನೆಯನ್ವಯ ಶೇಖರಗೊಂಡ ಹಣದಲ್ಲಿ ಪಾಲು ಸಿಗಬೇಕೆಂದಿದೆ. ಹಾಗೆಯೇ ರಸ್ತೆ ಸುಂಕದಲ್ಲಿಯೂ ತನ್ನೀ ಪಾಲನ್ನು ಯಾಚಿಸಿದೆ. ಶ್ರೀ ದೇಶಮುಖರು ಇದನ್ನೆಲ್ಲ ಸಹಾನುಭೂತಿಯಿಂದ ನೋಡುವುದಾಗಿ ಹೇಳಿದ್ದಾರೆ. ಆರ್ಥಿಕ ಆಯೋಗದ ವರದಿಯು ಸದ್ಯದಲ್ಲಿಯೇ ಪ್ರಕಟವಾಗಲಿದ್ದು- ರಾಜ್ಯ ಸರಕಾರಗಳು ಕೇಂದ್ರದಿಂದ ತಮಗೆ ಪಾಲು ಸಿಗಬೇಕೆಂಬ ಸಂಗತಿಯನ್ನು ಈ ಆಯೋಗದೆದುರು ಬಲವಾಗಿ ಪ್ರತಿಪಾದಿಸಿವೆ. ಇತ್ತ ಕೇಂದ್ರ ಸರಕಾರವು ವಾರಸು ತೆರಿಗೆ (ಮರಣ ತೆರಿಗೆ)ಯಂಥ ಮಹತ್ವದ ಮಸೂದೆಗೆ ಕಾಯಿದೆ ಸ್ವರೂಪ ಕೊಡಿಸುವ ಪ್ರಯತ್ನದಲ್ಲಿದೆ. ಇದನ್ನು ಕೃಷಿಕ್ಷೇತ್ರಕ್ಕೂ ಅನ್ವಯಿಸಲಾಗಿದೆಯಾಗಿ- ರಾಜ್ಯ ಸರಕಾರಗಳ ಉತ್ಪನ್ನ ಸ್ವಾಭಾವಿಕವಾಗಿ ಹೆಚ್ಚುವುದು. ಶ್ರೀಮಂತರನ್ನು ಬಡವರಾಗಿಸುವುದಕ್ಕೆ ಮತ್ತು ತನ್ಮೂಲಕ ಅಸಮತೆಯನ್ನು ಹೋಗಲಾಡಿಸುವುದಕ್ಕೆ ಇಂಥ ಮಸೂದೆ ನೆರವಾಗುವುದು. ಆದರೆ ರಾಜ್ಯಾಭಿವೃದ್ಧಿಯ ಯೋಜನೆಗೆ ಇದರಿಂದ ಹೆಚ್ಚು ಸಹಾಯ ದೊರಕುವುದು ದುರ್ಲಭ. ಚಿಕ್ಕಪುಟ್ಟ ಉಳಿತಾಯಗಳನ್ನು ವ್ಯವಸ್ಥಿತ ರೂಪದಲ್ಲಿ ಸಂಗ್ರಹಿಸುವ ಪ್ರಯತ್ನ ಮಾಡುವುದೊಂದೇ ಸದ್ಯಕ್ಕೆ ಅನುಸರಿಸಬಹುದಾದ ಯೋಗ್ಯ ಕ್ರಮ. ರಾಷ್ಟ್ರೀಯ ಉಳಿತಾಯದ ಚಳುವಳಿಯನ್ನು ಇನ್ನಷ್ಟು ಬಲಗೊಳಿಸುವುದರ ಜೊತೆಗೆ- ಜೀವ ವಿಮಾ ಕಂಪೆನಿಗಳ ಅಪಾರ ಧನಸಂಚಯವನ್ನು ರಾಷ್ಟ್ರಾಭ್ಯುದಯ ಯೋಜನೆಗೆ ವ್ಯಾಪಕ ರೀತಿಯಿಂದ ಬಳಸುವ ಹಂಚಿಕೆ ಮಾಡುವುದೊಳ್ಳಿತು. ಜನರಲ್ಲಿ ಉಳಿತಾಯದ ಪ್ರವೃತ್ತಿಯನ್ನು ಹೆಚ್ಚಿಸುವುದೊಂದೇ ಸರಕಾರದ ಹಣದ ಕೊರತೆ ನೀಗಿಸುವ ಪರಿಣಾಮಕಾರಿ ಮಾರ್ಗವೆನ್ನಬಹುದು.

ಅಹಿಂಸಾತ್ಮಕ ಸತ್ಯಾಗ್ರಹ

ದಕ್ಷಿಣ ಆಫ್ರಿಕೆಯಲ್ಲಿ ವ್ಯವಸ್ಥಿತ ಚಳುವಳಿ

ಮಾನವೀಯ ಅಧಿಕಾರದ ವ್ಯಾಪ್ತಿಯನ್ನು ಧಿಕ್ಕರಿಸಿ ನಡೆಯುವ ಉದ್ಧಟತನವನ್ನು ದಕ್ಷಿಣ ಆಫ್ರಿಕೆಯು ತೋರಿಸುತ್ತಾ ಬಂದಿರುವುದು ನಿಜಕ್ಕೂ ಶೋಚನೀಯ. ವಿಶ್ವರಾಷ್ಟ್ರಗಳಲ್ಲಿ ಕ್ಷೋಭೆಯನ್ನೂ ಅಸಂತೋಷವನ್ನೂ ಇದು ಹುಟ್ಟಿಸಿದ್ದು, ಇದರ ಪರಿಣಾಮವು ಭೀಕರವಾಗುವ ಅಂಜಿಕೆ ಇದೆ. ಮಲಾನ ಸರಕಾರದ ನೀತಿಯು ದಿನ ಹೋದಂತೆ ಉಗ್ರವೂ ಕಟುತರವೂ ಆಗಿ ಮಾರ್ಪಡುತ್ತಿದೆ ಲೋಕದ ಕಣ್ಣನ್ನು ಚುಚ್ಚಿ ನೋಯಿಸುವ ಚಪಲವನ್ನು ಅವರು ತೋರಿಸುತ್ತಿರುವುದು ವಿಷಾದಕರ. ವಿಶ್ವಸಂಸ್ಥೆಯು ಮಾನವನ ಹಕ್ಕುಬಾಧ್ಯತೆಗಳ ಕರಡನ್ನು ಸಿದ್ಧಗೊಳಿಸಿದಾಗ- ವರ್ಣಭೇದದಂಥ ಅನೈಸರ್ಗಿಕವಾದ ಮತ್ತು ಅವಮಾನನೀಯವಾದ ಪದ್ಧತಿಯನ್ನು ತಿರಸ್ಕರಿಸಿದ್ದರೂ, ಅದಕ್ಕೆ ಸಾಕಷ್ಟು ಮನ್ನಣೆ ದೊರೆತಿಲ್ಲ. ವರ್ಣದ್ವೇಷದ ಕಾಯಿದೆಗಳ ಬಿಗಿಯನ್ನು ಇನ್ನಷ್ಟು ಹೆಚ್ಚಿಸುವುದನ್ನೆ ಧ್ಯೇಯವಾಗುಳ್ಳ ದಕ್ಷಿಣ ಆಫ್ರಿಕೆಯ ಸರಕಾರೀ ನೀತಿಯು ಎಲ್ಲೆಡೆಯಿಂದಲೂ ಟೀಕೆಗೊಳಗಾಗಿದೆ. ಐರೋಪ್ಯ ಬಾಂಧವರೇ ಮಲಾನ ಸರಕಾರವನ್ನು ಕಟುವಾಗಿ ನಿಂದಿಸಿರುವರು ಸ್ಥಳೀಯ ಐರೋಪ್ಯೇತರ ನಿವಾಸಿಗಳು ಜೂನ್ ೨೬ನೇ ದಿನಾಂಕದಿಂದ ಇಂದಿನವರೆಗೂ ಅಹಿಂಸಾತ್ಮಕ ಚಳುವಳಿಯನ್ನು ಕ್ರಮಬದ್ಧವಾದ ರೀತಿಯಲ್ಲಿ ನಡೆಸುತ್ತಿರುವರು. ಪರಿಣಾಮವಾಗಿ ವಿಶ್ವದೃಷ್ಟಿಯು ಆಫ್ರಿಕೆಯಲ್ಲಿ ಕೇಂದ್ರೀಕೃತವಾಗುವ ಸರ್ವ ಲಕ್ಷಣಗಳೂ ವಿದ್ಯಮಾನವಿವೆ.

ಚಾಟಿ ಏಟಿನ ಶಿಕ್ಷೆ

ಸ್ವಾತಂತ್ರ್ಯೋತ್ಸವದ ಸಂದರ್ಭ ಮಾತನಾಡುವಾಗ ಭಾರತದ ಪ್ರಧಾನಿ ನೆಹರೂ ದಕ್ಷಿಣ ಆಫ್ರಿಕೆಯ ಪ್ರಶ್ನೆಯನ್ನೂ ಎತ್ತಿದರು ಭಾರತೀಯರಾದವರು ಅಲ್ಲಿ ಅನುಭವಿಸುತ್ತಿರುವ ಸಂಕಷ್ಟಗಳ ಕುರಿತು ಸಹಾನುಭೂತಿಯನ್ನವರು ತೋರಿದರು. ಜಗತ್ತಿನ ಕ್ಷೇಮಕ್ಕೆ ವರ್ಣದ್ವೇಷದಿಂದ ಎಷ್ಟರ ಮಟ್ಟಿನ ನಷ್ಟ ಉಂಟಾಗುತ್ತಿದೆ. ಎಂದವರು ವರ್ಣಿಸಿದರು. ಮಾನವೀಯವಾದ ಹಾಗೂ ಮೂಲಭೂತ ಸ್ವರೂಪದ ಅಧಿಕಾರ ಪ್ರಾಪ್ತಿಗಾಗಿ ಅಹಿಂಸಾತ್ಮಕ ಚಳುವಳಿ ಹೂಡಿದುದನ್ನು ಎಲ್ಲ ನಾಗರಿಕ ರಾಷ್ಟ್ರಗಳೂ ಸಮರ್ಥಿಸುವುದರಲ್ಲಿ ಆಶ್ಚರ್ಯವೇನಿದೆ? ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸು ಈಗಾಗಲೇ ರಾಷ್ಟ್ರದಾದ್ಯಂತ ಸಭೆಗಳನ್ನು ಕೂಡಿಸಿ, ಸತ್ಯಾಗ್ರಹಕ್ಕೆ ಸಂಪೂರ್ಣ ಬೆಂಬಲ ನೀಡುವ ಗೊತ್ತುವಳಿಗಳನ್ನು ಸ್ವೀಕರಿಸಬೇಕೆಂದು ಪರಿಪತ್ರ ಕಳಿಸಿದೆ ಕಮ್ಯೂನಿಸ್ಟರೆಂಬ ಆರೋಪದ ಮೇರೆಗೆ ಭಾರತೀಯ ಹಾಗೂ ಆಫ್ರಿಕದ ಧುರೀಣರನ್ನು ಬಂಧಿಸಿದ್ದು- ಚಳುವಳಿಯಲ್ಲಿ ಭಾಗವಹಿಸಿದವರನ್ನೆಲ್ಲ ನೆಟ್ಟಗೆ ಸೆರೆಮನೆಗೊಯ್ಯಲಾಗುತ್ತಿದೆ. ಈ ಬಾರಿಯ ಸತ್ಯಾಗ್ರಹದಲ್ಲಿ ಇಂದಿನ ವರೆಗೆ ೨೫೦೦ ಮಂದಿ ಜೈಲು ಕಂಡಿದ್ದಾರೆ. ಅರ್ಥ ದಂಡವನ್ನು ಕೊಡಲು ಯಾರೊಬ್ಬರೂ ಮುಂದಾಗದೆ, ಸ್ವೇಚ್ಛೆಯಿಂದ ಕಾರಾಗೃಹವನ್ನು ಸೇರುತ್ತಿರುವರು. ಈ ಚಳುವಳಿಯ ಸುವ್ಯವಸ್ಥೆಯು ನಿಜಕ್ಕೂ ಪ್ರಶಂಸನೀಯ. ಹಾಗೆಂದು ಚಳುವಳಿಗಾರರಿಗೆ ಕೋರ್ಟಿನಲ್ಲಿ ಹಿಂಸೆಯನ್ನನ [illegible]ಗಗಳೂ ಬಂದಿವೆ. ಚಾಟಿ ಏಟಿನಂಥ ಅಮಾನುಷ ಶಿಕ್ಷೆಯನ್ನು ವಿಧಿಸಿ, ಕ್ರೂರವಾಗಿ ದಂಡಿಸುವುದೂ ನಡೆದಿದೆ.

ಪೈಶಾಚಿಕ ಕೃತ್ಯ

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕೈದಿಗಳನ್ನು ಅತ್ಯಂತ ದುಷ್ಟರಾದವರನ್ನು ಕೂಡಾ ಮನುಷ್ಯರಂತೆ ನೋಡಿಕೊಂಡು ಅವರಲ್ಲಿ ಮಾನವೀಯತೆ ಮೊಳೆತುಚಿಗುರುವಂತೆ ಸುಧಾರಣೆಗಳನ್ನು ವಿಪುಲವಾಗಿ ಅನುಸರಿಸುತ್ತಿರುವರು. ಭಾರತದಂಥಾ ತೀರಾ ಹಿಂದುಳಿದ ಪೌರ್ವಾತ್ಯದೇಶಗಳಲ್ಲಿ ಕೂಡಾ- ಅಹಿಂಸೆಯ ನೆಪದಿಂದ ಮತ್ತು ಮಾನವಸಹಜವಾದ ಕರುಣೆಯಿಂದ ಜನರ ಈ ದುಷ್ಟವರ್ತನೆಯನ್ನು ಸಹನೆಯಿಂದ ಕಾಣುತ್ತಾರೆ. ಆದರೆ ದಕ್ಷಿಣ ಆಫ್ರಿಕೆಯ ಈಗಿನ ನೀತಿ ಪೈಶಾಚಿಕ, ಕೃತ್ಯವನ್ನೇ ಬಿಂಬಿಸುತ್ತದೆ. ಸಂಯುಕ್ತ ರಾಷ್ಟ್ರ ಸಂಘದಂಥ ಏಕಮೇವಾದ್ವಿತೀಯವಾದ ವಿಶ್ವಸಂಸ್ಥೆಯ ಆದೇಶವನ್ನು ತಿರಸ್ಕರಿಸಿ ನಡೆಯುವ ಮಲಾನ ಸರಕಾರ ಸ್ವಾತಂತ್ರ್ಯಪ್ರಿಯರಾಷ್ಟ್ರಗಳ ಅಭಿಮಾನಕ್ಕೆ ಧಕ್ಕೆ ತಗಲಿಸಿದೆ ಕಳೆದ ವರ್ಷದ ಪೇಸು ಅಧಿವೇಶನದಲ್ಲಾದ ನಿರ್ಣಯಕ್ಕೆ ಸಂ

ಯುಕ್ತ ರಾಷ್ಟ್ರಸಂಘ ಬದ್ಧವಿದೆಯಾಗಿ- ಈ ವರ್ಷದ ಸಾಮಾನ್ಯಾಧಿವೇಶನದಲ್ಲಿ ವರ್ಣಭೇಧ ನಡುವಳಿಕೆಯ ಪ್ರಶ್ನೆ ತುಂಬಾ ಪ್ರಾಶಸ್ತ್ಯ ಪಡೆಯುತ್ತದೆ. ಸತ್ಯಾಗ್ರಹ ಚಳುವಳಿಗಳು ನಡೆಯುವುದನ್ನು ಸಹಕಾರಿಯದೆ ಬಾಹಿರ ಗೊಳಿಸಲು ಹೊಸತೊಂದು ಕಾನೂನನ್ನು ರಚಿಸುವ ಹೊಂಚಿನಲ್ಲಿ ಮಲಾನ ಸರಕಾರ ಇದೆಯಂತೆ ಆದರೆ ಇನ್ನೊಂದೆಡೆ, ಪಾರ್ಲಿಮೆಂಟರಿ ಹೈಕೋರ್ಟನ್ನು ಸ್ಥಾಪಿಸುವ ಬಗ್ಗೆ ಸರಕಾರಕ್ಕಿರುವ ಅಧಿಕಾರವನ್ನು ಪ್ರಶ್ನಿಸಿ ನಾಲ್ವರು ಐರೋಪ್ಯೇತರರು ವರಿಷ್ಠ ನ್ಯಾಯಾಲಯದಲ್ಲಿ ದೂರು ತಂದಿರುವರು. ವರ್ಣ ಭೇಧ ನೀತಿಯನ್ನು ಸರಕಾರ ಅನುಸರಿಸಲಾಗದು ಎಂಬ ಸದಾಶಯಕ್ಕೆ ಪುಷ್ಟಿಕರವಾದ ವರಿಷ್ಠ ನ್ಯಾಯಾಲಯದ ಹಿಂದಿನ ತೀರ್ಪನ್ನು ಧಿಕ್ಕರಿಸುವ ಪ್ರಯತ್ನವನ್ನು ಸರಕಾರ ಮಾಡಬಹುದೆ?ಎಂದು ದೂರುತಂದವರು ಕೇಳಿರುವರು

ಪೌರ್ವಾತ್ಯರ ಜಾಗೃತಿ

ಅಮೆರಿಕೆಯಲ್ಲಿ ಭಾರತದ ರಾಯಭಾರಿಯಾಗಿರುವ ಶ್ರೀ ಬಿ ಆರ್ ಸೇನರ ಅಭಿಪ್ರಾಯದಂತೆ ಪೌರ್ವಾತ್ಯ ದೇಶಗಳಲ್ಲಿ ಈಗ ನವಜಾಗೃತಿ ಉಂಟಾಗಿದೆ ಎಂಬುದು ನಿಶ್ಚಯ ದಾರಿದ್ರ್ಯದ ಕಡು ಅನುಭವ ಪ್ರತಿಯೊಂದೂ ರಾಷ್ಟ್ರಕ್ಕಿದ್ದರೂ ಅದರ ಜೊತೆಗೆ ರಾಷ್ಟ್ರೀಯ ಭಾವನೆಯೂ ಇರುವುದರಿಂದ ಉತ್ಸಾಹ ಅಪರಿಮಿತ ಪ್ರಮಾಣದಲ್ಲಿ ಬೆಳೆಯಲು ತಕ್ಕುದಾದ ವಾತಾವರಣ ತುಂಬಿದೆ. ಇದನ್ನು ಕಡೆಗಣಿಸಿ, ಪಾಶ್ಚಾತ್ಯ ರಾಷ್ಟ್ರಗಳು ಹದಿನೆಂಟನೆಶತಮಾನದ ದಾಸ್ಯದ ನೊಗವನ್ನು ಇವುಗಳ ಮೇಲೆ ಹೇರಬಹುದೆಂದು ಎಷ್ಟು ಮಾತ್ರಕ್ಕೂ ಊಹಿಸಲಾಗದು- ಲಂಡನಿನಲ್ಲಿ ಭಾರತೀಯ ಸ್ವಾತಂತ್ರ್ಯೋತ್ಸವದ ನಿಮಿತ್ತ ಸೇರಿದ ಸಭೆಗಳಲ್ಲಿ ಹಿಂದೆ ಭಾರತದ ಕಾರ್ಯದರ್ಶಿಯಾಗಿದ್ದ ಲಾರ್ಡ ಲಿಸ್ಟೊವೆಲ್ ಹಾಗೂ ಪಾರ್ಲಿಮೆಂಟಿನ ಕೂಲಿಕಾರ ಸದಸ್ಯ ರೆಜಿನಾಲ್ಡ ಸೋರೆನ್ಸನ್ ಏಶಿಯಾ ಎಚ್ಚೆತ್ತಿದೆಂದೂ ಭಾರತ ಶಾಂತಿಯ ಸಂದೇಶ ಬೀರುತ್ತಿದೆಂದೂ ಸ್ಪಷ್ಟಾಭಿಪ್ರಾಯವನ್ನು ವ್ಯಕ್ತಪಡಿಸಿರುವರು ಭಾರತದ ವಿದೇಶ ಧೋರಣೆಯನ್ನು ಹೊಗಳದವರಲ್ಲಿ ಲಾರ್ಡ ಸಾಲ್ಸಬರಿ ಕೂಡ ಒಬ್ಬರು. ನೆಹರೂ ಧುರೀಣತ್ವದಲ್ಲಿ ಭಾರತವು ತಾಟಸ್ಥ್ಯ ವಹಿಸುತ್ತಿರುವ ಕೌಶಲಕ್ಕಾಗಿ ಅವರು ಅಭಿನಂದಿಸಿದರು.

ಭಾರತದ ನೀತಿ

ಹಾಗೆಂದು ಭಾರತ ಸದಾ ಕಾಲ ತಟಸ್ಥವಾಗಿ ಉಳಿಯ ಬಲ್ಲುದೆಂಬುದು ಸಂಶಯಾತ್ಮಕವಾದ ಪ್ರಶ್ನೆ: ಶಾಂತಿ ಸಾಗರದ ಒಪ್ಪಂದ ಯೋಜನೆಯಂಥ ಹೊಸ ಗುಂಡನ್ನು ರಚಿಸಲು ಅಮೇರಿಕೆಯಂಥ ದೊಡ್ಡ ರಾಷ್ಟ್ರಗಳು ಮುಂದಾಗಿವೆ. ಕಮ್ಯೂನಿಸ್ಟ ಚೀನಾದೊಡನೆ ಪ್ರಕಟ ವೈರವನ್ನು ಕಟ್ಟಿಕೊಂಡು ಈ ರೀತಿಯ ಹವ್ಯಾಸಕ್ಕೆ ಕಟ್ಟುಬಿದ್ದಿರುವಾಗ- ಭಾರತದ ತಾಟಸ್ಥ್ಯ ನೀತಿಯಲ್ಲಿ ಸ್ವಾಭಾವಿಕವಾಗಿ ಬದಲಾವಣೆ ಕಂಡು ಬಾರದಿರದು. ಚೀನಾದ ಪ್ರಜಾರಾಜ್ಯದ ಅಸ್ತಿತ್ವವನ್ನೆ ಅಲ್ಲಗಳೆದು- ಶಾಂತಿ ಸಾಗರದ ಸೀಮೆಯಲ್ಲಿ ಹೊಸತಾಗಿ ಪಾಳ್ಯವನ್ನು ಕಟ್ಟಲು ಅಮೇರಿಕ ಪ್ರಯತ್ನಿಸುವುದು ಭಾರತಕ್ಕೆ ವಿವಂಚನೆಯ ವಿಷಯ. ಒಂದು ಟೆಲಿವಿಜನ ಸಂದರ್ಶನದಲ್ಲಿ ಶ್ರೀ ಸೇನರು ಈ ಅಂಜಿಕೆಯನ್ನು ವ್ಯಕ್ತಪಡಿಸಿದರು. ಶಾಂತಿಯೇ ಭಾರತದ ನಿಜಧೋರಣೆ ಹೌದಾದರೂ- ಸ್ವಾತಂತ್ರ್ಯ ರಕ್ಷಣೆಯ ಆಯಕಟ್ಟಿನ ಪ್ರಸಂಗದಲ್ಲಿ ಒಂದು ಕಡೆಗೆ ವಾಲುವ ಪ್ರಸಂಗ ಬಂದೀತು.

ವಿಶ್ವ ದೃಷ್ಟಿ

ನಮಗೆ ಮನೆವಾರ್ತೆಯ ಸುಖದುಃಖದಷ್ಟು ರಾಜಕೀಯದ ಗೊಂದಲ ಹಿಡಿಸುವುದಿಲ್ಲೆಂಬುದು ಸ್ಪಷ್ಟ ಹಾಗೆಂದು ಲೋಕದ ಅಸಂಖ್ಯ ಮಾನವರು ಭಾರತವನ್ನು ಆಶಾದೃಷ್ಟಿಯಿಂದ ನೋಡುತ್ತಿರುವರು. ಏಶಿಯಾ ಹಾಗೂ ಆಫ್ರಿಕೆಯ ಎಚ್ಚೆತ್ತ ಜನಾಂಗಗಳು ಭಾರತದ ಮಾರ್ಗದರ್ಶನವನ್ನು ಅಪೇಕ್ಷಿಸಿವೆ. ಟ್ಯುನೀಸಿಯಾದ ಪ್ರಕರಣದಲ್ಲಿ ಭಾರತ ತೆಗೆದುಕೊಂಡ ಆಸ್ಥೆ ಇದಕ್ಕೊಂದು ನಿದರ್ಶನ. ಹಾಗೆಯೇ ಈಜಿಪ್ತ ಕೂಡ- ಭಾರತದೊಡನೆ ನಿಕಟ ಸ್ನೇಹ ಬೇಕೆಂದು ಘೋಷಿಸಿದೆ. ಕೆಲದಿನಗಳ ಹಿಂದೆ ನೆಹರೂರನ್ನು "ಏಶಿಯಾದ ಬೆಳಕು" ಎಂದು ಭಾರತದಲ್ಲಿದ್ದ ಈಜಿಪ್ತದ ರಾಯಭಾರಿ ಕರೆದಿದ್ದರು. ಕೊರಿಯಾದ ಪ್ರಸಂಗದಲ್ಲಿಯಂತೂ- ಪೂರ್ವಪಶ್ಚಿಮಗಳ ನಡುವೆ ಬೆಸುಗೆ ಹಾಕಲು ಭಾರತದ ಸಹಾಯ ಯಾಚನೆ ಮಾಡಲಾಗಿತ್ತು. ಇಂಥವರಲ್ಲಿ- ಕಾಶ್ಮೀರದಂಥ ಅಂತರಾಷ್ಟ್ರೀಯ ಪ್ರಶ್ನೆಯು ಇನ್ನೂ ಒಂದು ನಿಲುಗಡೆಗೆ ಬಂದಿದೆ. ಆಟದ ಚೆಂಡಿನಂತೆ ಇತ್ತೊಮ್ಮೆ ಅತ್ತೊಮ್ಮೆ ಉರುಳುತ್ತಿರುವುದನ್ನು ನೋಡಿ ಚಿಂತಿಸಬೇಕಾಗಿದೆ.

ಸ್ಥಾನಿಕ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಮತಕೊಡಬೇಕು.

ಮದ್ರಾಸಿನಲ್ಲಿ ಸ್ವಾತಂತ್ರ್ಯ ದಿನಾಚರಣೆಯಂದು ಶ್ರೀ ರಾಜಗೋಪಾಲಾಚಾರ್ಯರು ಭಾಷಣಮಾಡುತ್ತ, ಜನರು ಪಂಡಿತ ನೆಹರುಗಳಲ್ಲಿ ಸಂಪೂರ್ಣ ವಿಶ್ವಾಸವಿಟ್ಟು ಸ್ಥಾನಿಕ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಮತದಾನ ಮಾಡಬೇಕೆಂದು ವಿನಂತಿಸಿಕೊಂಡರು.

ಇನ್ನು ಮುಂದೆ ಸರಕಾರವು ರಾಜಕೀಯ ಪಕ್ಷಾನುಗುಣವಾಗಿಯೇ ನಡೆಸಲ್ಪಡಬೇಕೆಂಬುದು ನಿಶ್ಚಯ. ಆದುದರಿಂದ ಜನರು ಯಾವ ಪಕ್ಷವನ್ನು ಸೇರಬೇಕು ಅಥವಾ ಪ್ರೋತ್ಸಾಹಿಸಬೇಕೆಂಬುದು ಮುಖ್ಯವಾದುದು. ಈ ನಿರ್ಣಯ ಸ್ಥಳೀಯ ವಿಚಾರಗಳ ಪ್ರೇರಣೆಯಿಂದಾಗ ಕೂಡದು- ಅಖಿಲ ಭಾರತದ ಧುರೀಣರು ಯಾರು, ಅವರು ಸ್ವೀಕರಿಸಿದ ಪಕ್ಷಗಳಾವುವು ಎಂಬುದನ್ನು ವಿವೇಚಿಸಿ ತಾವು ಯಾವ ಪಕ್ಷವನ್ನು ಸೇರಬೇಕೆಂದು ನಿಶ್ಚಯಿಸಬೇಕು ಕಾಂಗ್ರೆಸನ್ನು ವಿರೋಧಿಸುವ ಪಕ್ಷಗಳಾವುವು ಎಂಬುದನ್ನು ಗೊತ್ತುಹಚ್ಚಿದರೆ ಯಾವ ಪಕ್ಷವನ್ನು ಸಮರ್ಥಿಸಬೇಕೆಂದು ಚೆನ್ನಾಗಿ ತಿಳಿಯುವುದು- ಪಂಡಿತ ನೆಹರುಗಳು ನಾಯಕರಾಗಿರುವ ಕಾಂಗ್ರೆಸ್ಸು ಯಾರಿಗೆ ಬೇಡ? ಆದರೆ ನೆಹರುಗಳ ಹಿಂದೆ ತಾವಿರುವೆವು ಎಂದು ಸುಮ್ಮನೆ ಕುಳಿತರೆ ಸಾಲದು; ಕಾಂಗ್ರೆಸ್ಸಿಗೆ ಓಟು ಕೊಡಬೇಕು. ಆಡಳಿತೆಯನ್ನು ಯಾವ ಪಕ್ಷ ವಹಿಸಬೇಕೆಂಬುದನ್ನು ನಿರ್ಣಯ ಮಾಡುವ ಚುನಾವಣೆಯು ಪ್ರಾಮುಖ್ಯವಾದುದು ಚುನಾವಣೆಯು ಸಮಯ ಅಸಡ್ಡೆ ತೋರಿಸಿ ಅನಂತರ ಪಶ್ಚಾತ್ತಾಪಪಡುವಂತಿರಕೂಡದು. ಸ್ಥಾನಿಕ ಚುನಾವಣೆಗಳಲ್ಲೂ ಮತದಾರರು ಕಾಂಗ್ರೆಸ್ಸನ್ನೇ ಪ್ರೋತ್ಸಾಹಿಸಬೇಕುಎಂದು ಮುಂತಾಗಿ.ರಾಜಾಜಿಯವರು ಭಾಷಣಮಾಡಿದರು.

ಉಡುಪಿ

ಕಸ್ತೂರಿಬಾ ಮೆಡಿಕಲ್ ಕಾಲೇಜು—ಈ ಕಾಲೇಜಿನ ಅಂಗೀಕಾರದ ಬಗ್ಗೆ ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನ್‌ನವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅರ್ಜಿಯ ಮೇಲೆ ವಿಶ್ವವಿದ್ಯಾಲಯದ ಪತಿಯಿಂದ ಉಡುಪಿಗೆ ಆಗಮಿಸಿದ್ದ ನಿಯೋಗ ಮಂಡಳಿಯವರ ವರದಿಯಂತೆ ಈ ಕಾಲೇಜನ್ನು ಅಂಗೀಕರಿಸಲು ವಿಶ್ವವಿದ್ಯಾಲಯ ತನ್ನ ಸಮ್ಮತಿಯನ್ನು ಸೂಚಿಸಿರುವುದಾಗಿ ಎಕೆಡೆಮಿಯ ರಜಿಸ್ಟ್ರಾರರಾದ ಡಾ। ಮಾಧವ ಪೈಗಳು ತಾರೀಕು 16ರಂದು ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಸುದ್ದಿಯನ್ನಿತ್ತರು. ಡಾ। ಪೈಗಳು ಮುಂದಿಸಿದ ಯೋಜನೆಯಲ್ಲಿ ವಿಶ್ವವಿದ್ಯಾಲಯದವರು ಕೋರಿದ ಮುಖ್ಯವಾದ ಬದಲಾವಣೆ ಎಂದರೆ ವರುಷ ವರುಷ 100ಜನ ವಿದ್ಯಾರ್ಥಿಗಳ ಬದಲಿಗೆ 50ಜನರಿಗೆ ಪ್ರವೇಶ ಕೊಡಬೇಕೆಂದು, ಇತ್ತ ಮದ್ರಾಸು ಸರಕಾರದವರೂ ಈ ಯೋಜನೆಯ ಕುರಿತು ಡಾ। ಪೈಗಳೊಂದಿಗೆ ಪರ್ಯಾಲೋಚಿಸುತ್ತಿರುವುದಲ್ಲದೆ, ಮಾನ್ಯ ಮಂತ್ರಿಗಳೂ, ಆರೋಗ್ಯ ಖಾತೆಯ ಅಧಿಕಾರಿಗಳೂ ತಮ್ಮ ಸಂಪೂರ್ಣ ಸಹಾನುಭೂತಿಯನ್ನು ಪ್ರದರ್ಶಿಸುತ್ತಿರುವರು. ವಿಶ್ವ ವಿದ್ಯಾಲಯದ ಅಂಗೀಕಾರ ಸಿಗದಿರುವಲ್ಲಿ, ಹಿಂದಿನ ಎಲ್. ಎಮ್. ಪಿ.ಗಿಂತ ಸ್ವಲ್ಪ ಉಚ್ಚ ತರಗತಿಯ 3-4 ವರ್ಷಗಳ ತರಬೇತಿಯ ಮೆಡಿಕಲ್ ಶಾಲೆಯನ್ನಾದರೂ ಎಕೆಡೆಮಿಯವರು ತೆರೆಯಬಹುದೆಂಬ ಸೂಚನೆಯೂ ಇತ್ತು. ಆದರೆ ಇದೀಗ ವಿಶ್ವವಿದ್ಯಾಲಯ ಈ ಯೋಜನೆಯಲ್ಲಿ ವಿಶ್ವಾಸ ತೋರಿಸಿ ಅಂಗೀಕಾರಕೊಡಲೊಪ್ಪಿದುದರಿಂದ, ಮದ್ರಾಸು ಸರಕಾರಕ್ಕೀಗ ಸಾಧ್ಯವಿರುವ ಸಹಾಯ ಧನ ಮಾತ್ರ ಕೊಟ್ಟರಾಯಿತು. ಹೀಗೆ ಮದ್ರಾಸು ಸರಕಾರದ ಸಂಪೂರ್ಣ ಸಹಾಯ ಮತ್ತು ಬೆಂಬಲ ಎಕೆಡೆಮಿಗಿದೆ ಎಂದು ವಿಶ್ವವಿದ್ಯಾಲಯದವರು ಮನಗಂಡರೆ 50ರ ಬದಲಿಗೆ 100ಜನ ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶ ದೊರೆಯಬಹುದು, ಈ ಎಲ್ಲಾ ವಿಷಯಗಳ ಕುರಿತು ಸ್ಪಷ್ಟವಾಗಿ ವಿಚಾರವಿನಿಮಯ ಮಾಡಲು ಡಾ॥ ಪೈಗಳು ಅದೇ ದಿನ ಮದ್ರಾಸಿಗೆ ತೆರಳಿರುವರು. ಸಾರ್ವಜನಿಕರ ಹಿತಕ್ಕಾಗಿ ಉತ್ಸಾಹದಿಂದ ಕೆಲಸ ಮಾಡುತ್ತಿರುವ ಡಾ। ಪೈಗಳು ಕೃತಕೃತ್ಯರಾಗಲೆಂದು ಹಾರ್ದಿಕವಾಗಿ ಆಶಿಸುತ್ತೇವೆ

ಸ್ವಾತಂತ್ರ್ಯ ದಿನೋತ್ಸವವು— ಉಡುಪಿಯಲ್ಲಿ ತಾ. 15ರಂದು ಬೆಳಿಗ್ಗೆ ಅಜ್ಜರಕಾಡು ಮೈದಾನಿನಲ್ಲಿ ಶ್ರೀಮತಿ ಎಲ್ ಜ. ಭಂಡಾರಿಗಳಿಂದ ಧ್ವಜವಂದನೆಯೊಂದಿಗೆ ಪ್ರಾರಂಭವಾಯಿತು. ಸಂಜೆ ಬೋರ್ಡ್ ಹೈಸ್ಕೂಲ್ ಪೀಪಲ್ಸ್ ಹಾಲಿನಲ್ಲಿ ಶ್ರೀ ಕೆ. ಪದ್ಮನಾಭ ಪೈಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ ಶ್ರೀಗಳಾದ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆ, ಟಿ. ಎ ಪೈ, ಎಮ್. ಎಲ್. ಎ. ಮೊದಲಾದವರ ಭಾಷಣಗಳಾದುವು ನೋದಾವಳಿಗಳಾಗಿ ಸಭಾಂತ್ಯವಾಯಿತು

ಸ್ಥಳೀಯ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಬೆಳಿಗ್ಗೆ ಧ್ವಜವಂದನೆಯಾಗಿ ವಿದ್ಯಾರ್ಥಿಗಳ ಸಭೆ, ಭಾಷಣಗಳಾದುವು. ಸಂಜೆ ಇಂಗ್ಲಿಷ್ ಕನ್ನಡ ನಾಟಕಗಳೂ ಗಾಯನ ಸಂಗೀತಗಳೂ ಆದುವು

ಶ್ರೀ ಉಪೇಂದ್ರ ನಾಯ್ಕರ ಔದಾರ್ಯ—ನಗರ ಸಭಾಧ್ಯಕ್ಷ ಶ್ರೀ ಉಪೇಂದ್ರ ಶ್ರೀನಿವಾಸ ನಾಯ್ಕರು ತಾ. 17ರ ಬೋರ್ಡ್ ಹೈಸ್ಕೂಲ್ ವಠಾರದಲ್ಲಿ ದೊಡ್ಡವರಿಗೆ ಅರ್ಧ ಸೇರು ಮತ್ತು ಎರಡಾಣೆ, ಚಿಕ್ಕವರಿಗೆ ಕಾಲು ಸೇರು ಮತ್ತು ಒಂದಾಣೆಯಂತೆ ಸಾಧಾರಣ ಆರೇಳು ಸಾವಿರ ಮಂದಿ ಸಾಧಾರಣ ಎಪ್ಪತ್ತು ಮುಡಿ ಅಕ್ಕಿ ಮತ್ತು ನಾಲ್ಕುನೂರು ರೂಪಾಯಿ ಹಣ ಧರ್ಮ ಮಾಡಿದರು. ಶ್ರೀ ನಾಯ್ಕರ ಸ್ತುತ್ಯ ಕಾರ್ಯವನ್ನು ಪ್ರಶಂಸಿಸಿ ಶ್ರೀ ಯು. ಎಸ್ ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ಚುನಾವಣಾ ಏಡ್ ಹಾಕ್ ಕಮಿಟಿ ಸಭೆ—ಬರುವ ನಗರ ಸಭಾ ಚುನಾವಣೆಗೆ ಕಾಂಗ್ರೆಸ್ ಉಮೇದ್ವಾರರನ್ನು ನಿಲ್ಲಿಸುವ ಕುರಿತು ವಿಚಾರ ವಿನಿಮಯ ಮಾಡುವರೆ ಇದೇ ತಾ. 17ರಲ್ಲು ಸಂಜೆ ಸರ್ಕಲ್ ಕಾಂಗ್ರೆಸ್ ಕಮಿಟಿ ಆಫೀಸಿನಲ್ಲಿ ವಕೀಲ ಶ್ರೀ ಎಮ್. ವಿಠಲ ಕಾಮತರ ಅಧ್ಯಕ್ಷತೆಯಲ್ಲಿ ಚುನಾವಣಾ ಏಡ್ ಹಾಕ್ ಕಮಿಟಿ ಸಭೆ ಜರಗಿತು. ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಮಾತನಾಡುತ್ತಾ ಚುನಾವಣೆಯಲ್ಲಿ ಕಾಂಗ್ರೆಸ್ ಭಾಗ ವಹಿಸಬೇಕಾದ ಅವಶ್ಯಕತೆಯನ್ನು ವಿವರಿಸಿದರು. ಈ ವಿಚಾರದಲ್ಲಿ ಮಾತುಕತೆಗಳು ನಡೆದು ಕೊನೆಗೆ ಬಹುಮತದಿಂದ ಕಾಂಗ್ರೆಸ್ ಹುರಿಯಾಳುಗಳನ್ನು ನಿಲ್ಲಿಸಬೇಕೆಂದು ನಿರ್ಣಯಮಾಡಿ, ಮುಂದಿನ ಕಾರ್ಯವನ್ನು ನೋಡಿಕೊಳ್ಳುವರೆ ಡಾ। ಕೆ. ಎಲ್. ಬಿಕ್ಕಾಳ್, ಎಮ್. ವಿಠಲ ಕಾಮತ್, ಕೊಟ್ಟಕಾರ್ ಪಾಂಡುರಂಗ ಪೈ, ಜೆ ಸಿ ರೇಗೋ, ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆ, ಬಿ ಮೈಕಲ್, ವಿ. ಹಿರಿಯಣ್ಣ ಹೆಗ್ಡೆ, ಕೆ ನರಹರಿ ಕಾಮತ್ ಇವರ ಸಿಲೆಕ್ಟ ಕಮಿಟಿಯೊಂದು ರಚಿಸಲ್ಪಟ್ಟಿತು

ಉಡುಪಿ ಮುನಿಸಿಪಲ್ ಚುನಾವಣೆ—ಸದ್ಯ ಜರಗಲಿರುವ ಮುನಿಸಿಪಲ ಚುನಾವಣೆಗಳಲ್ಲಿ ಕೊಂಗ್ರೆಸು ಪಾರ್ಟಿಯಿಂದ ಹುರಿಯಾಳುಗಳನ್ನು ನಿಲ್ಲಿಸಬೇಕಾಗಿ ದ. ಕ ಜಿಲ್ಲಾ ಕೊಂಗ್ರೆಸು ಕಮಿಟಿಯವರು ನಿಶ್ಚಯಿಸಿ ಆದೇಶಪತ್ರದಂತೆ ಉಡುಪಿ ಮುನಿಸಿಪಲ್ ಚುನಾವಣೆಯಲ್ಲಿ ಕೊಂಗ್ರೆಸು ಪಕ್ಷದಿಂದ ಹುರಿಯಾಳುಗಳನ್ನು ನಿಲ್ಲಿಸುವ ನಿರ್ಧಾರ ಮಾಡಿರುವುದರಿಂದ, ಸದರಿ ಚುನಾವಣೆಗೆ ಉಮೇದ್ವಾರರಾಗಲು ಬಯಸುವವರು ತಮ್ಮ ಅರ್ಜಿಗಳನ್ನು ಕಾರ್ಯದರ್ಶಿ, ಸರ್ಕಲ್ ಕೊಂಗ್ರೆಸು ಕಮಿಟಿ, ಉಡುಪಿ ಅವರಿಗೆ ಇದೇ ಅಗೋಸ್ತು ತಾ 30ರೊಳಗೆ ಸಲ್ಲಿಸತಕ್ಕದು ಯಾವತ್ತೂ ಮಾಹಿತಿಗಳ ಮೇಲಣ ವಿಳಾಸದಿಂದ ಪಡೆಯಬಹುದು.

ಚಂದಾದಾರರಲ್ಲಿ ವಿನಂತಿ.

ಇದೇ ಅಗೋಸ್ತು ತಿಂಗಳ ಅಂತ್ಯಕ್ಕೆ 'ನವಯುಗ'ದ 31ನೆಯ ವರ್ಷವು ಪೂರ್ತಿಯಾಗಿ ಸಪ್ಟಂಬರ ತಿಂಗಳಿಂದ 32ನೇ ವರ್ಷವು ಆರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವವರು ಈ ಮೊದಲೇ ಅವಧಿ ಮುಗಿದು ಚಂದಾ ಬಾಕಿ ಮಾಡಿಕೊಂಡವರು ಎಲ್ಲರೂ ತಮ್ಮ ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ತ್ವರೆಯಲ್ಲಿ ಮನಿಯಾರ್ಡರುಮೂಲಕ ಕಳುಹಿಸಿಕೊಡಬೇಕಾಗಿ ಈ ಮೂಲಕ ಅಪೇಕ್ಷಿಸುತ್ತೇವೆ

ಮೆನೇಜರ್, ನವಯುಗ ಉಡುಪಿ

ತಾರೀಕು 19-8-1952ರಿಂದ
ತಮಿಳು ಚಿತ್ರ:
ಮನ ಮಗಳ್ (ಮದುಮಗಳು
ಎನ್. ಎಸ್. ಕೃಷ್ಣನ್, ಟಿ ಎ. ಮಧುರಮ್, ಲಲಿತ-ಪದ್ಮಿನಿ, ಬಾಲಯ್ಯ, ಸಹಸ್ರನಾಮ್, ಡೋರಿರಾಜ, ಪುಳಿಮೂಟ್ಟು--ಮೊದಲಾದವರು.
ಅನಂತರ— ಚೋಟಿ ಬಾಬಿ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

You Cannot But Choose
The Canara Banking Corporation Ltd.
for Ideal Banking
in the States of Madras, Mysore, Bombay,
Coorg & U. S. T. C.
Estd: 1906. H. O.: UDIPI (S I.

ನವಯುಗ

ಉಡುಪಿ, ಗುರುವಾರ ೨೦-೮-'೫೩

ಧನ ಸಂಚಯದ ಮಾರ್ಗ

ಭಾರತದಲ್ಲಿ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಗೊಳಿಸುವ ಕುರಿತು ಅಪಾರ ಹುಮ್ಮಸ್ಸು ತುಂಬಿದೆ. ಯೋಜನಾ ಆಯೋಗದ ಅಂತಿಮ ವರದಿ ಹೊರಬೀಳಲು ಇನ್ನೂ ಒಂದೆರಡು ತಿಂಗಳುಗಳ ವಿಳಂಬವಿದ್ದೀತು. ಈ ಮೊದಲು ಪ್ರಕಟಿಸಿದ ವರದಿಯನ್ನು ಪರಿಷ್ಕರಿಸುವುದರ ಜೊತೆಗೆ- ದೇಶದ ಉಳಿದ ಭಾಗಗಳಲ್ಲಿ ಆಗಬೇಕಿರುವ ಯೋಜನೆಗಳ ವಿವರವನ್ನು ಅದು ಒಳಗೊಳ್ಳುವುದು. ರಾಷ್ಟ್ರೀಯ ಪುನರ್ನಿರ್ಮಾಣದಂಥ ಮಹಾ ಹೊಣೆಗಾರಿಕೆಯನ್ನು ಹೊರಬೇಕಾದುದು ಅಭಿವೃದ್ಧಿ ಹಾಗೂ ಸಮೃದ್ಧಿಗಳ ದೃಷ್ಟಿಯಿಂದ ಅಗತ್ಯವಿದೆ. ಅಪಾರ ಹಣವನ್ನು ವ್ಯಯಿಸಿ ಪೂರೈಸುವ ಈ ಎಲ್ಲ ಯೋಜನೆಗಳನ್ನು ಪಕ್ಷಪಂಗಡಗಳ ಭೇದಭಾವವಿಲ್ಲದೆ ಎಲ್ಲರೂ ಸ್ವಾಗತಿಸಿರುವರು. ನಮ್ಮ ದೈನಂದಿನ ಜೀವನದ ವೆಚ್ಚವನ್ನು ಮತ್ತು ಮಟ್ಟವನ್ನು ಯುದ್ಧಪೂರ್ವ ಸ್ಥಿತಿಗೆ (೧೯೩೯) ತರಲು ಹೆಣಗುವುದೇ ಪಂಚವಾರ್ಷಿಕ ಯೋಜನೆಯ ಪ್ರಧಾನೋದ್ದೇಶವಾಗಿದೆ. ಆದರೆ ೧೯೩೯ರಲ್ಲಿ ಯಾದರೂ ಭಾರತ ಸಂಪೂರ್ಣ ಸ್ವಾವಲಂಬಿಯಾಗಿರಲಿಲ್ಲ- ಮತ್ತು ಸಮೃದ್ಧಿಯಿಂದ ತುಂಬಿತುಳುಕುತಿದ್ದಿಲ್ಲ ಎಂಬ ಸಂಗತಿಯನ್ನು ಮನಗಂಡರೆ- ಈ ಪಂಚವಾರ್ಷಿಕ ಯೋಜನೆಯಂಥ ಇನ್ನೂ ಕೆಲವು ಅಭಿವೃದ್ಧಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದು ಅಪೇಕ್ಷಣೀಯವಿದ್ದಂತೆ- ಅಗತ್ಯವಾಗಿಯೂ ಪರಿಣಮಿಸಬಹುದು. ಜನಪದ ಅಭಿವೃದ್ಧಿ ಯೋಜನೆಗಳ ಮೂಲಕ ಹಳ್ಳಿಯಲ್ಲಿ ನವಚೈತನ್ಯವನ್ನು ತುಂಬುವ ಪ್ರಯತ್ನ ನಡೆದಿದೆ. ಹಾಗೆಂದು ಭಾರತದ ವೈಶಾಲ್ಯವನ್ನು ದೃಷ್ಟಿಯಲ್ಲಿಟ್ಟು ಕೊಂಡರೆ ಈಗ ತೊಡಗಿದ ೫೫ ಕೇಂದ್ರಗಳು ಎಷ್ಟು ಮಾತ್ರಕ್ಕೂ ಸಾಲವು. ನಮ್ಮ ಅಭಿವೃದ್ಧಿಯ ಮಾರ್ಗದಲ್ಲಿರುವ ಮುಖ್ಯಕೊರತೆ ಅಗತ್ಯವಿರುವ ಬಂಡವಾಳದ ಪೂರೈಕೆ ಯಂತೂ ಹೌದು- ಅವರೊಂದಿಗೆ ಜನತಾ ಸಹಕಾರ ದುರ್ಲಭವಾಗುತ್ತಿರುವುದನ್ನು ಸೇರಿಸಬಹುದು. ಜಡಪ್ರವೃತ್ತಿಯ ಹಾಗೂ ಆಲಸ್ಯ ಮನೋವೃತ್ತಿಯ ಜನರು ಒಮ್ಮೆಲೇ ಎಚ್ಚತ್ತು ಚೇತರಿಸಿಕೊಳ್ಳುವ ವಾತಾವರಣ ಇನ್ನೂ ಉಂಟಾಗಿಲ್ಲ, ಭಾರತ ಸೇವಕ ಸಮಾಜದಂಥ ಸಂಘಟನೆಗಳು- ವಿಧಾಯಕ ಕಾರ್ಯಕರ್ತರೂ ಸಾಮಾನ್ಯ ಜೀವನ ಮಟ್ಟವನ್ನು ಎತ್ತರಿಸುವ ಯೋಜನೆಗಳ ಬಗ್ಗೆ ಜನತೆಗೆ ಜ್ಞಾನ ಲಾಭವನ್ನುಂಟು ಮಾಡುವುದಲ್ಲದೆ, ಕಾರ್ಯರಂಗದಲ್ಲಿ ಧುಮುಕಲು ಹುರಿದುಂಬಿಸಬೇಕು. ಇದು ಮನಸ್ಯ ಪ್ರಯತ್ನದ ವಿಷಯವೆಂಬುದು ಸ್ಪಷ್ಟ. ಆದರೆ ಬಂಡವಾಳವನ್ನು ಒದಗಿಸುವ ಪ್ರಶ್ನೆ ಇದಕ್ಕಿಂತ ಸ್ವಲ್ಪ ಜಟಿಲವಾಗಿದೆ ನಮ್ಮ ಸಂಪತ್ತು ಬಹಳ ಪರಿಮಿತವಿರುವುದರಿಂದ, ಈ ಮಿತಿಯನ್ನು ಕಡೆಗಣಿಸಿ ಯಾವ ಅಭಿವೃದ್ಧಿಯೋಜನೆಯನ್ನು ಕೈಗೊಳ್ಳುವಂತಿಲ್ಲ. ಪಂಚವಾರ್ಷಿಕ ಯೋಜನೆಯ ಮೊದಲನೆ ಘಟ್ಟದಲ್ಲಿಯೇ ನಾವು 200 ಕೋಟಿ ರೂಪಾಯಿಗಳ ಕೊರತೆಯನ್ನು ಅನುಭವಿಸುತ್ತಿದ್ದೇವೆ. ನೋಟುಗಳನ್ನು ಹೆಚ್ಚು ಪ್ರಮಾಣದಲ್ಲಿ ಮುದ್ರಿಸಿ, ಯೋಜನೆಗಳಿಗೊದಗಿಸುವುದರಿಂದ ಆರ್ಥಿಕಕ್ಷೇತ್ರದ ಬಿಗಿಯು ಕುಸಿಯುವುದರ ಜೊತೆಗೆ ರಾಷ್ಟ್ರದ ನೆಲಗಟ್ಟಿನ ಮೇಲೆ ದುಷ್ಪ್ರಭಾವವುಂಟಾಗುವುದು ಸ್ವಾಭಾವಿಕ. ಅರ್ಥ ಸಚಿವರಾದ ಶ್ರೀ ದೇಶಮುಖರು ಈ ಸಲಹೆ ಅನುಚಿತವೆಂದು ಸಾಧಾರವಾಗಿ ತೋರಿಸಿರುವರು. ವಿದೇಶಿ ನೆರವನ್ನು ಯಾಚಿಸುವುದು ನಮ್ಮ ಅಭಿಮಾನಕ್ಕೆ ಹಿತಕರವಾಗದು. ಸ್ವಾತಂತ್ರ್ಯವನ್ನು ಪ್ರಚ್ಛನ್ನ ರೂಪದಿಂದ ಪಾರದಾಸ್ಯತ್ವವನ್ನು ಸ್ವೀಕರಿಸುವ ಹೇಯ ಪ್ರಸಂಗ ಬಾರದಂತೆ ನಾವು ಸದಾ ಎಚ್ಚರ ವಹಿಸಬೇಕಾಗಿದೆ. ಇಂಥದರಲ್ಲಿ ನಮ್ಮಲ್ಲಿಯೇ ಬಂಡವಾಳವನ್ನು ಸಾರ್ವಥಿಕ ಶ್ರಮ ಪಟ್ಟಾದರೂ ಕೂಡಿಸಿ ತನ್ಮೂಲಕ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳುವ ಒಂದೇ ಒಂದು ಉಪಾಯ ಉಳಿಯುತ್ತದೆ. ಸರಕಾರವು ಈಗ ಅದನ್ನೇ ಆಶ್ರಯಿಸಿದಂತೆ ಕಂಡು ಬರುವುದು. ರಾಜ್ಯ ಸರಕಾರಗಳು ತಮ್ಮ ಪಾಲಿಗೆ ಬಂದಿರುವ ಅಭಿವೃದ್ಧಿ ಯೋಜನೆಗಳನ್ನು ಪೂರೈಸಲು ಧನಾಭಾವವು ಉಲ್ಬಣಾವಸ್ಥೆಗೆ ಮುಟ್ಟಿದೆ ಎಂದು ಚಿಂತಿಸುತ್ತಿವೆ. ಕೇಂದ್ರ ಸರಕಾರದ ಸಾಲ ರೂಪದ ಸಹಾಯಕ್ಕೂ ಒಂದು ಮಿತಿ ಇದೆ ಎಂದು ಅರ್ಥಸಚಿವ ದೇಶಮುಖರು ಹೇಳುತ್ತಾ ಬಂದಿದ್ದಾರೆ. ಹೀಗಿರುವುದರಿಂದ ರಾಜ್ಯ ಸರಕಾರಗಳು ಜನತಾ ಸಹಕಾರವನ್ನು ಹಿಂದೆಲ್ಲೂ ಇಲ್ಲದಷ್ಟು ಹೆಚ್ಚು ಪ್ರಮಾಣದಲ್ಲಿ ಬೇಡುತ್ತಿವೆ. ಅಲ್ಲದೆ ರಾಜ್ಯ ಸರಕಾರದ ಆದಾಯವನ್ನು ಹೆಚ್ಚಿಸುವ ಉದ್ದೇಶದಿಂದ ಕೇಂದ್ರ ಸರಕಾರಕ್ಕೆ ಬರುವ ಉತ್ಪನ್ನದ ಕೆಲವು ಅಂಶಗಳಲ್ಲಿ ಪಾಲನ್ನು ಕೇಳಿವೆ. ಉದಾಹರಣೆಗಾಗಿ ಮದ್ರಾಸು ಸರಕಾರವು ರಾಜ್ಯದಲ್ಲಿ ರಾಷ್ಟ್ರೀಯ ಉಳಿತಾಯ ಯೋಜನೆಯನ್ವಯ ಶೇಖರಗೊಂಡ ಹಣದಲ್ಲಿ ಪಾಲು ಸಿಗಬೇಕೆಂದಿದೆ. ಹಾಗೆಯೇ ರಫ್ತು ಸುಂಕದಲ್ಲಿಯೂ ತನ್ನೀ ಪಾಲನ್ನು ಯಾಚಿಸಿದೆ. ಶ್ರೀ ದೇಶಮುಖರು ಇದನ್ನೆಲ್ಲ ಸಹಾನುಭೂತಿಯಿಂದ ನೋಡುವುದಾಗಿ ಹೇಳಿದ್ದಾರೆ. ಆರ್ಥಿಕ ಆಯೋಗದ ವರದಿಯು ಸದ್ಯದಲ್ಲಿಯೇ ಪ್ರಕಟವಾಗಲಿದ್ದು- ರಾಜ್ಯ ಸರಕಾರಗಳು ಕೇಂದ್ರದಿಂದ ತಮಗೆ ಪಾಲು ಸಿಗಬೇಕೆಂಬ ಸಂಗತಿಯನ್ನು ಈ ಆಯೋಗದೆದುರು ಬಲವಾಗಿ ಪ್ರತಿಪಾದಿಸಿವೆ. ಇತ್ತ ಕೇಂದ್ರ ಸರಕಾರವು ವಾರಸು ತೆರಿಗೆ (ಮರಣ ತೆರಿಗೆ)ಯಂಥ ಮಹತ್ವದ ಮಸೂದೆಗೆ ಶಾಸನದ ಸ್ವರೂಪ ಕೊಡಿಸುವ ಪ್ರಯತ್ನದಲ್ಲಿದೆ. ಇದನ್ನು ಕೃಷಿಕ್ಷೇತ್ರಕ್ಕೂ ಅನ್ವಯಿಸಲಾಗಿದೆಯಾಗಿ- ರಾಜ್ಯ ಸರಕಾರಗಳ ಉತ್ಪನ್ನ ಸ್ವಾಭಾವಿಕವಾಗಿ ಹೆಚ್ಚುವುದು. ಶ್ರೀಮಂತರನ್ನು ಬಡವರಾಗಿಸುವುದಕ್ಕೆ ಮತ್ತು ತನ್ಮೂಲಕ ಅಸಮತೆಯನ್ನು ಹೋಗಲಾಡಿಸುವುದಕ್ಕೆ ಇಂಥ ಮಸೂದೆ ನೆರವಾಗುವುದು. ಆದರೆ ರಾಜ್ಯಾಭಿವೃದ್ಧಿಯ ಯೋಜನೆಗೆ ಇದರಿಂದ ಹೆಚ್ಚು ಸಹಾಯ ದೊರಕುವುದು ದುರ್ಲಭ. ಚಿಕ್ಕಪುಟ್ಟ ಉಳಿತಾಯಗಳನ್ನು ವ್ಯವಸ್ಥಿತ ರೂಪದಲ್ಲಿ ಸಂಗ್ರಹಿಸುವ ಪ್ರಯತ್ನ ಮಾಡುವುದೊಂದೇ ಸದ್ಯಕ್ಕೆ ಅನುಸರಿಸಬಹುದಾದ ಯೋಗ್ಯ ಕ್ರಮ. ರಾಷ್ಟ್ರೀಯ ಉಳಿತಾಯದ ಚಳುವಳಿಯನ್ನು ಇನ್ನಷ್ಟು ಬಲಗೊಳಿಸುವುದರ ಜೊತೆಗೆ- ಜೀವ ವಿಮಾ ಕಂಪೆನಿಗಳ ಅಪಾರ ಧನಸಂಚಯವನ್ನು ರಾಷ್ಟ್ರಾಭ್ಯುದಯ ಯೋಜನೆಗೆ ವ್ಯಾಪಕ ರೀತಿಯಿಂದ ಬಳಸುವ ಹಂಚಿಕೆ ಮಾಡುವುದೊಳ್ಳಿತು. ಜನರಲ್ಲಿ ಉಳಿತಾಯದ ಪ್ರವೃತ್ತಿಯನ್ನು ಹೆಚ್ಚಿಸುವುದೊಂದೇ ಸರಕಾರದ ಹಣದ ಕೊರತೆ ನೀಗಿಸುವ ಪರಿಣಾಮಕಾರಿ ಮಾರ್ಗವೆನ್ನಬಹುದು.

ಅಹಿಂಸಾತ್ಮಕ ಸತ್ಯಾಗ್ರಹ

ದಕ್ಷಿಣ ಆಫ್ರಿಕೆಯಲ್ಲಿ ವ್ಯವಸ್ಥಿತ ಚಳುವಳಿ

ಮಾನವೀಯ ಅಧಿಕಾರದ ವ್ಯಾಪ್ತಿಯನ್ನು ಧಿಕ್ಕರಿಸಿ ನಡೆಯುವ ಉದ್ಧಟತನವನ್ನು ದಕ್ಷಿಣ ಆಫ್ರಿಕೆಯು ತೋರಿಸುತ್ತಾ ಬಂದಿರುವುದು ನಿಜಕ್ಕೂ ಶೋಚನೀಯ. ವಿಶ್ವರಾಷ್ಟ್ರಗಳಲ್ಲಿ ಕ್ಷೋಭೆಯನ್ನೂ ಅಸಂತೋಷವನ್ನೂ ಇದು ಹುಟ್ಟಿಸಿದ್ದು, ಇದರ ಪರಿಣಾಮವು ಭೀಕರವಾಗುವ ಅಂಜಿಕೆ ಇದೆ. ಮಲಾನ ಸರಕಾರದ ನೀತಿಯು ದಿನ ಹೋದಂತೆ ಉಗ್ರವೂ ಕಟುತರವೂ ಆಗಿ ಮಾರ್ಪಡುತ್ತಿದೆ ಲೋಕದ ಕಣ್ಣನ್ನು ಚುಚ್ಚಿ ನೋಯಿಸುವ ಚಪಲವನ್ನು ಅವರು ತೋರಿಸುತ್ತಿರುವುದು ವಿಷಾದಕರ. ವಿಶ್ವಸಂಸ್ಥೆಯು ಮಾನವನ ಹಕ್ಕುಬಾಧ್ಯತೆಗಳ ಕರಡನ್ನು ಸಿದ್ಧಗೊಳಿಸಿದಾಗ- ವರ್ಣಭೇದದಂಥ ಅನೈಸರ್ಗಿಕವಾದ ಮತ್ತು ಅವಾಂಛನೀಯವಾದ ಪದ್ಧತಿಯನ್ನು ತಿರಸ್ಕರಿಸಿದ್ದರೂ, ಅದಕ್ಕೆ ಸಾಕಷ್ಟು ಮನ್ನಣೆ ದೊರೆತಿಲ್ಲ. ವರ್ಣದ್ವೇಷದ ಕಾಯಿದೆಗಳ ಬಿಗಿಯನ್ನು ಇನ್ನಷ್ಟು ಹೆಚ್ಚಿಸುವುದನ್ನೆ ಧ್ಯೇಯವಾಗುಳ್ಳ ದಕ್ಷಿಣ ಆಫ್ರಿಕೆಯ ಸರಕಾರೀ ನೀತಿಯು ಎಲ್ಲೆಡೆಯಿಂದಲೂ ಟೀಕೆಗೊಳಗಾಗಿದೆ. ಐರೋಪ್ಯ ಬಾಂಧವರೇ ಮಲಾನ ಸರಕಾರವನ್ನು ಕಟುವಾಗಿ ನಿಂದಿಸಿರುವರು ಸ್ಥಳೀಯ ಐರೋಪ್ಯೇತರ ನಿವಾಸಿಕರು ಜೂನ್ ೨೬ನೇ ದಿನಾಂಕದಿಂದ ಇಂದಿನವರೆಗೂ ಅಹಿಂಸಾತ್ಮಕ ಚಳುವಳಿಯನ್ನು ಕ್ರಮಬದ್ಧವಾದ ರೀತಿಯಲ್ಲಿ ನಡೆಸುತ್ತಿರುವರು. ಪರಿಣಾಮವಾಗಿ ವಿಶ್ವದೃಷ್ಟಿಯು ಆಫ್ರಿಕೆಯಲ್ಲಿ ಕೇಂದ್ರೀಕೃತವಾಗುವ ಸರ್ವ ಲಕ್ಷಣಗಳೂ ವಿದ್ಯಮಾನವಿವೆ.

ಚಾಟಿ ಏಟಿನ ಶಿಕ್ಷೆ

ಸ್ವಾತಂತ್ರ್ಯೋತ್ಸವದ ಸಂದರ್ಭ ಮಾತನಾಡುವಾಗ ಭಾರತದ ಪ್ರಧಾನಿ ನೆಹರೂ ದಕ್ಷಿಣ ಆಫ್ರಿಕೆಯ ಪ್ರಶ್ನೆಯನ್ನೂ ಎತ್ತಿದರು. ಭಾರತೀಯರಾದವರು ಅಲ್ಲಿ ಅನುಭವಿಸುತ್ತಿರುವ ಸಂಕಷ್ಟದ ಕುರಿತು ಸಹಾನುಭೂತಿಯನ್ನವರು ತೋರಿದರು. ಜಗತ್ತಿನ ಕ್ಷೇಮಕ್ಕೆ ವರ್ಣದ್ವೇಷದಿಂದ ಎಷ್ಟರ ಮಟ್ಟಿನ ನಷ್ಟ ವುಂಟಾಗುತ್ತಿದೆ. ಎಂದವರು ವರ್ಣಿಸಿದರು. ಮಾನವೀಯವಾದ ಹಾಗೂ ಮೂಲಭೂತ ಸ್ವರೂಪದ ಅಧಿಕಾರ ಪ್ರಾಪ್ತಿಗಾಗಿ ಅಹಿಂಸಾತ್ಮಕ ಚಳುವಳಿ ಹೂಡಿದುದನ್ನು ಎಲ್ಲ ನಾಗರಿಕ ರಾಷ್ಟ್ರಗಳೂ ಸಮರ್ಥಿಸುವುದರಲ್ಲಿ ಆಶ್ಚರ್ಯವೇನಿದೆ? ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸು ಈಗಾಗಲೇ ರಾಷ್ಟ್ರದಾದ್ಯಂತ ಸಭೆಗಳನ್ನು ಕೂಡಿಸಿ, ಸತ್ಯಾಗ್ರಹಕ್ಕೆ ಸಂಪೂರ್ಣ ಬೆಂಬಲ ನೀಡುವ ಗೊತ್ತುವಳಿಗಳನ್ನು ಸ್ವೀಕರಿಸಬೇಕೆಂದು ಪರಿಪತ್ರ ಕಳಿಸಿದೆ. ಕಮ್ಯೂನಿಸ್ಟರೆಂಬ ಆರೋಪದ ಮೇರೆಗೆ ಭಾರತೀಯ ಹಾಗೂ ಆಫ್ರಿಕದ ಧುರೀಣರನ್ನು ಬಂಧಿಸಿದ್ದು- ಚಳುವಳಿಯಲ್ಲಿ ಭಾಗವಹಿಸಿದವರನ್ನೆಲ್ಲ ನೆಟ್ಟಗೆ ಸೆರೆಮನೆಗೊಯ್ಯಲಾಗುತ್ತಿದೆ. ಈ ಬಾರಿಯ ಸತ್ಯಾಗ್ರಹದಲ್ಲಿ ಇಂದಿನ ವರೆಗೆ ೨೩೦೦ ಮಂದಿ ಜೈಲು ಕಂಡಿದ್ದಾರೆ. ಅರ್ಥ ದಂಡವನ್ನು ಕೊಡಲು ಯಾರೊಬ್ಬರೂ ಮುಂದಾಗದೆ, ಸ್ವೇಚ್ಛೆಯಿಂದ ಕಾರಾಗೃಹವನ್ನು ಸೇರುತ್ತಿರುವರು. ಈ ಚಳುವಳಿಯ ಸುವ್ಯವಸ್ಥೆಯು ನಿಜಕ್ಕೂ ಪ್ರಶಂಸನೀಯ. ಹಾಗೆಂದು ಚಳುವಳಿಗಾರರಿಗೆ ಕೋರ್ಟಿನಲ್ಲಿ [illegible] ಅನುಭವಿಸುವ ಪ್ರಸಂಗಗಳೂ ಬಂದಿವೆ. [illegible] ಏಟಿನಂಥ ಅಮಾನುಷ ಶಿಕ್ಷೆಯನ್ನು ವಿಧಿಸಿ, ಕ್ರೂರವಾಗಿ ದಂಡಿಸುವುದೂ ನಡೆದಿದೆ.

ಪೈಶಾಚಿಕ ಕೃತ್ಯ

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕೈದಿಗಳನ್ನು ಅತ್ಯಂತ ದುಷ್ಟರಾದವರನ್ನು ಕೂಡಾ ಮನುಷ್ಯರಂತೆ ನೋಡಿಕೊಂಡು ಅವರಲ್ಲಿ ಮಾನವೀಯತೆ ಮೊಳೆತು ಬರುವಂತೆ ಸುಧಾರಣೆಗಳನ್ನು ವಿಪುಲವಾಗಿ ಅನುಸರಿಸುತ್ತಿರುವರು. ಭಾರತದಂಥಾ ತೀರಾ ಹಿಂದುಳಿದ ಪೌರ್ವಾತ್ಯದೇಶಗಳಲ್ಲಿ ಕೂಡಾ- ಅಹಿಂಸೆಯ ನೆಪದಿಂದ ಮತ್ತು ಮಾನವಸಹಜವಾದ ಕರುಣೆಯಿಂದ ಜನರ ಈ ದುಷ್ಟವರ್ತನೆಯನ್ನು ಸಹನೆಯಿಂದ ಕಾಣುತ್ತಾರೆ. ಆದರೆ ದಕ್ಷಿಣ ಆಫ್ರಿಕೆಯ ಈಗಿನ ನೀತಿ ಪೈಶಾಚಿಕ ಕೃತ್ಯವನ್ನೇ ಬಿಂಬಿಸುತ್ತದೆ. ಸಂಯುಕ್ತ ರಾಷ್ಟ್ರ ಸಂಘದಂಥ ಏಕಮೇವಾದ್ವಿತೀಯವಾದ ವಿಶ್ವಸಂಸ್ಥೆಯ ಆದೇಶವನ್ನು ತಿರಸ್ಕರಿಸಿ ನಡೆಯುವ ಮಲಾನ ಸರಕಾರ ಸ್ವಾತಂತ್ರ್ಯಪ್ರಿಯ ರಾಷ್ಟ್ರಗಳ ಅಭಿಮಾನಕ್ಕೆ ಧಕ್ಕೆ ತಗಲಿಸಿದೆ. ಕಳೆದ ವರ್ಷದ ಮೇಸು ಅಧಿವೇಶನದಲ್ಲಾದ ನಿರ್ಣಯಕ್ಕೆ ಸಂ

ಯುಕ್ತ ರಾಷ್ಟ್ರಸಂಘ ಬದ್ಧವಿಧಿಯಾಗಿ- ಈ ವರ್ಷದ ಸಾಮಾನ್ಯಾಧಿವೇಶನದಲ್ಲಿ ವರ್ಣಭೇಧ ನಡುವಳಿಕೆಯ ಪ್ರಶ್ನೆ ತುಂಬಾ ಪ್ರಾಶಸ್ತ್ಯ ಪಡೆಯುತ್ತದೆ. ಸತ್ಯಾಗ್ರಹ ಚಳುವಳಿಗಳು ನಡೆಯುವುದನ್ನು ಸಹ ಕಾಯಿದೆ ಬಾಹಿರ ಗೊಳಿಸಲು ಹೊಸತೊಂದು ಕಾನೂನನ್ನು ರಚಿಸುವ ಹೊಂಚಿನಲ್ಲಿ ಮಲಾನ ಸರಕಾರ ಇದೆಯಂತೆ ಆದರೆ ಇನ್ನೊಂದೆಡೆ, ಪಾರ್ಲಿಮೆಂಟರಿ ಹೈಕೋರ್ಟನ್ನು ಸ್ಥಾಪಿಸುವ ಬಗ್ಗೆ ಸರಕಾರಕ್ಕಿರುವ ಅಧಿಕಾರವನ್ನು ಪ್ರಶ್ನಿಸಿ ನಾಲ್ವರು ಐರೋಪ್ಯೇತರರು ಪರಿಷ್ಕೃ ನ್ಯಾಯಾಲಯದಲ್ಲಿ ದೂರುತಂದಿರುವರು. ವರ್ಣ ಭೇಧ ನೀತಿಯನ್ನು ಸರಕಾರ ಅನುಸರಿಸಲಾಗದು ಎಂಬ ಸದಾಶಯಕ್ಕೆ ಪುಷ್ಟಿಕರವಾದ ಪರಿಷ್ಕೃ ನ್ಯಾಯಾಲಯದ ಹಿಂದಿನ ತೀರ್ಪನ್ನು ಧಿಕ್ಕರಿಸುವ ಪ್ರಯತ್ನವನ್ನು ಸರಕಾರ ಮಾಡಬಹುದೆ?ಎಂದು ದೂರುತಂದವರು ಕೇಳಿರುವರು.

ಪೌರ್ವಾತ್ಯರ ಜಾಗ್ರತಿ

ಅಮೇರಿಕೆಯಲ್ಲಿ ಭಾರತದ ರಾಯಭಾರಿಯಾಗಿರುವ ಶ್ರೀ ಬಿ ಆರ್ ಸೇನರ ಅಭಿಪ್ರಾಯದಂತೆ ಪೌರ್ವಾತ್ಯ ದೇಶಗಳಲ್ಲಿ ಈಗ ನವಜಾಗ್ರತಿ ಉಂಟಾಗಿದೆ ಎಂಬುದು ನಿಶ್ಚಯ ದಾರಿದ್ರ್ಯದ ಕಡು ಅನುಭವ ಪ್ರತಿಯೊಂದೂ ರಾಷ್ಟ್ರಕ್ಕಿದ್ದರೂ ಅದರ ಜೊತೆಗೆ ರಾಷ್ಟ್ರೀಯ ಭಾವನೆಯೂ ಇರುವುದರಿಂದ ಉತ್ಸಾಹ ಅಪರಿಮಿತ ಪ್ರಮಾಣದಲ್ಲಿ ಬೆಳೆಯಲು ತಕ್ಕುದಾದ ವಾತಾವರಣ ತುಂಬಿದೆ. ಇದನ್ನು ಕಡೆಗಣಿಸಿ, ಪಾಶ್ಚಾತ್ಯ ರಾಷ್ಟ್ರಗಳು ಹದಿನೆಂಟನೆಶತಮಾನದ ದಾಸ್ಯದ ನೊಗವನ್ನು ಇವುಗಳ ಮೇಲೆ ಹೇರಬಹುದೆಂದು ಎಷ್ಟು ಮಾತ್ರಕ್ಕೂ ಊಹಿಸಲಾಗದು- ಲಂಡನಿನಲ್ಲಿ ಭಾರತೀಯ ಸ್ವಾತಂತ್ರ್ಯೋತ್ಸವದ ನಿಮಿತ್ತ ಸೇರಿದ ಸಭೆಗಳಲ್ಲಿ ಹಿಂದೆ ಭಾರತದ ಕಾರ್ಯದರ್ಶಿಯಾಗಿದ್ದ ಲಾರ್ಡ ಲಿಸ್ಟಾವೆಲ್ ಹಾಗೂ ಪಾರ್ಲಿಮೆಂಟಿನ ಕೂಲಿಕಾರ ಸದಸ್ಯ ರೆಜಿನಾಲ್ಡ ಸೋರೆನ್ಸನ್ ಏಶಿಯಾ ಎಚ್ಚತ್ತಿದೆಂದೂ ಭಾರತ ಶಾಂತಿಯ ಸಂದೇಶ ಬೀರುತ್ತಿದೆಂದೂ ಸ್ಪಷ್ಟಾಭಿಪ್ರಾಯವನ್ನು ವ್ಯಕ್ತಪಡಿಸಿರುವರು ಭಾರತದ ವಿದೇಶ ಧೋರಣೆಯನ್ನು ಹೊಗಳಿದವರಲ್ಲಿ ಲಾರ್ಡ ಸಾಲ್ಸಬರಿ ಕೂಡ ಒಬ್ಬರು. ನೆಹರೂ ಧುರೀಣತ್ವದಲ್ಲಿ ಭಾರತವು ತಾಟಸ್ಥ್ಯವಹಿಸುತ್ತಿರುವ ಕೌಶಲಕ್ಕಾಗಿ ಅವರು ಅಭಿನಂದಿಸಿದರು.

ಭಾರತದ ನೀತಿ

ಹಾಗೆಂದು ಭಾರತ ಸದಾ ಕಾಲ ತಟಸ್ಥವಾಗಿ ಉಳಿಯ ಬಲ್ಲದೆಂಬುದು ಸಂಶಯಾತ್ಮಕವಾದ ಪ್ರಶ್ನೆ: ಶಾಂತಿ ಸಾಗರದ ಒಪ್ಪಂದ ಯೋಜನೆಯಂಥ ಹೊಸ ಗುಂಡನ್ನು ರಚಿಸಲು ಅಮೇರಿಕೆಯಂಥ ದೊಡ್ಡ ರಾಷ್ಟ್ರಗಳು ಮುಂದಾಗಿವೆ. ಕಮ್ಯೂನಿಸ್ಟ ಚೀನಾದೊಡನೆ ಪ್ರಕಟ ವೈರವನ್ನು ಕಟ್ಟಿಕೊಂಡು ಈ ರೀತಿಯ ಹವ್ಯಾಸಕ್ಕೆ ಕಟ್ಟುಬಿದ್ದಿರುವಾಗ— ಭಾರತದ ತಾಟಸ್ಥ್ಯ ನೀತಿಯಲ್ಲಿ ಸ್ವಾಭಾವಿಕವಾಗಿ ಬದಲಾವಣೆ ಕಂಡು ಬಾರದಿರದು. ಚೀನಾದ ಪ್ರಜಾರಾಜ್ಯದ ಅಸ್ತಿತ್ವವನ್ನೆ ಅಲ್ಲಗಳೆದು- ಶಾಂತಿ ಸಾಗರದ ಸೀಮೆಯಲ್ಲಿ ಹೊಸತಾಗಿ ಬಾಳ್ವೆಯನ್ನು ಕಟ್ಟಲು ಅಮೇರಿಕ ಪ್ರಯತ್ನಿಸುವುದು ಭಾರತಕ್ಕೆ ವಿವಂಚನೆಯ ವಿಷಯ. ಒಂದು ಟೆಲಿವಿಜನ ಸಂದರ್ಶನದಲ್ಲಿ ಶ್ರೀ ಸೇನರು ಈ ಅಂಜಿಕೆಯನ್ನು ವ್ಯಕ್ತಪಡಿಸಿದರು. ಶಾಂತಿಯೇ ಭಾರತದ ನಿಜಧೋರಣೆ ಹೌದಾದರೂ- ಸ್ವಾತಂತ್ರ್ಯ ರಕ್ಷಣೆಯ ಅಯಕಟ್ಟಿನ ಪ್ರಸಂಗದಲ್ಲಿ ಒಂದು ಕಡೆಗೆ ವಾಲುವ ಪ್ರಸಂಗ ಬಂದೀತು.

ವಿಶ್ವ ದೃಷ್ಟಿ

ನಮಗೆ ಮನೆವಾರ್ತೆಯ ಸುಖದುಃಖದನ್ನು ರಾಜಕೀಯದ ಗೊಂದಲ ಹಿಡಿಸುವುದಿಲ್ಲೆಂಬುದು ಸ್ಪಷ್ಟ ಹಾಗೆಂದು ಲೋಕದ ಅಸಂಖ್ಯ ಮಾನವರು ಭಾರತವನ್ನು ಆಶಾದೃಷ್ಟಿಯಿಂದ ನೋಡುತ್ತಿರುವರು. ಏಶಿಯಾ ಹಾಗೂ ಆಫ್ರಿಕೆಯ ಎಚ್ಚತ್ತ ಜನಾಂಗಗಳು ಭಾರತದ ಮಾರ್ಗದರ್ಶನವನ್ನು ಅಪೇಕ್ಷಿಸಿವೆ. ಟ್ಯುನೀಸಿಯಾದ ಪ್ರಕರಣದಲ್ಲಿ ಭಾರತ ತೆಗೆದುಕೊಂಡ ಆಸ್ಥೆ ಇದಕ್ಕೊಂದು ನಿದರ್ಶನ. ಹಾಗೆಯೇ ಈಜಿಪ್ತ ಕೂಡ- ಭಾರತದೊಡನೆ ನಿಕಟ ಸ್ನೇಹ ಬೇಕೆಂದು ಘೋಷಿಸಿದೆ. ಕೆಲದಿನಗಳ ಹಿಂದೆ ನೆಹರೂರನ್ನು "ಏಶಿಯಾದ ಬೆಳಕು" ಎಂದು ಭಾರತದಲ್ಲಿದ್ದ ಈಜಿಪ್ತದ ರಾಯಭಾರಿ ಕರೆದಿದ್ದರು. ಕೊರಿಯಾದ ಪ್ರಸಂಗದಲ್ಲಿಯಂತೂ- ಪೂರ್ವಪಶ್ಚಿಮಗಳ ನಡುವೆ ಬೆಸುಗೆ ಹಾಕಲು ಭಾರತದ ಸಹಾಯ ಯಾಚನೆ ಮಾಡಲಾಗಿತ್ತು. ಇಂಥವರಲ್ಲಿ- ಕಾಶ್ಮೀರದಂಥ ಅಂತರಾಷ್ಟ್ರೀಯ ಪ್ರಶ್ನೆಯು ಇನ್ನೂ ಒಂದು ನಿಲುಗಡೆಗೆ ಬಂದಿದೆ ಆಟದ ಚೆಂಡಿನಂತೆ ಇತ್ತೊಮ್ಮೆ ಅತ್ತೊಮ್ಮೆ ಉರುಳುತ್ತಿರುವುದನ್ನು ನೋಡಿ ಚಿಂತಿಸಬೇಕಾಗಿದೆ.

ಸ್ಥಾನಿಕ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಮತಕೊಡಬೇಕು.

ಮದ್ರಾಸಿನಲ್ಲಿ ಸ್ವಾತಂತ್ರ್ಯ ದಿನಾಚರಣೆಯಂದು ಶ್ರೀ ರಾಜಗೋಪಾಲಾಚಾರ್ಯರು ಭಾಷಣಮಾಡುತ್ತ, ಜನರು ಪಂಡಿತ ನೆಹರುಗಳಲ್ಲಿ ಸಂಪೂರ್ಣ ವಿಶ್ವಾಸವಿಟ್ಟು ಸ್ಥಾನಿಕ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಮತದಾನ ಮಾಡಬೇಕೆಂದು ವಿನಂತಿಸಿಕೊಂಡರು.

ಇನ್ನು ಮುಂದೆ ಸರಕಾರವು ರಾಜಕೀಯ ಪಕ್ಷಾನುಗುಣವಾಗಿಯೇ ನಡೆಸಲ್ಪಡಬೇಕೆಂಬುದು ನಿಶ್ಚಯ. ಆದುದರಿಂದ ಜನರು ಯಾವ ಪಕ್ಷವನ್ನು ಸೇರಬೇಕು ಅಥವಾ ಪ್ರೋತ್ಸಾಹಿಸಬೇಕೆಂಬುದು ಮುಖ್ಯವಾದುದು. ಈ ನಿರ್ಣಯ ಸ್ಥಳೀಯ ವಿಚಾರಗಳ ಪ್ರೇರಣೆಯಿಂದಾಗ ಕೂಡದು- ಅಖಿಲ ಭಾರತದ ಧುರೀಣರು ಯಾರು, ಅವರು ಸ್ವೀಕರಿಸಿದ ಪಕ್ಷಗಳಾವುವು ಎಂಬುದನ್ನು ವಿವೇಚಿಸಿ ನಾವು ಯಾವ ಪಕ್ಷವನ್ನು ಸೇರಬೇಕೆಂದು ನಿಶ್ಚಯಿಸಬೇಕು. ಕಾಂಗ್ರೆಸನ್ನು ವಿರೋಧಿಸುವ ಪಕ್ಷಗಳಾವುವು ಎಂಬುದನ್ನು ಗೊತ್ತುಹಚ್ಚಿದರೆ ಯಾವ ಪಕ್ಷವನ್ನು ಸಮರ್ಥಿಸಬೇಕೆಂದು ಚೆನ್ನಾಗಿ ತಿಳಿಯುವುದು- ಪಂಡಿತ ನೆಹರುಗಳು ನಾಯಕರಾಗಿರುವ ಕಾಂಗ್ರೆಸ್ಸು ಯಾರಿಗೆ ಬೇಡ? ಆದರೆ ನೆಹರುಗಳ ಹಿಂದೆ ತಾವಿರುವೆವು ಎಂದು ಸುಮ್ಮನೆ ಕುಳಿತರೆ ಸಾಲದು; ಕಾಂಗ್ರೆಸ್ಸಿಗೆ ಓಟು ಕೊಡಬೇಕು. ಆಡಳಿತೆಯನ್ನು ಯಾವ ಪಕ್ಷ ವಹಿಸಬೇಕೆಂಬುದನ್ನು ನಿರ್ಣಯ ಮಾಡುವ ಚುನಾವಣೆಯು ಪ್ರಮುಖ್ಯವಾದುದು ಚುನಾವಣೆಯ ಸಮಯ ಅಸಡ್ಡೆತೋರಿಸಿ ಅನಂತರ ಪಶ್ಚಾತ್ತಾಪಪಡುವಂತಿರಕೂಡದು. ಸ್ಥಾನಿಕ ಚುನಾವಣೆಗಳಲ್ಲೂ ಮತದಾರರು ಕಾಂಗ್ರೆಸ್ಸನ್ನೇ ಪ್ರೋತ್ಸಾಹಿಸಬೇಕುಎಂದು ಮುಂತಾಗಿ ರಾಜಾಜಿಯವರು ಭಾಷಣಮಾಡಿದರು.

ಉ ಡು ಪಿ

ಕಸ್ತೂರಿಬಾ ಮೆಡಿಕಲ್ ಕಾಲೇಜು— ಈ ಕಾಲೇಜಿನ ಅಂಗೀಕಾರದ ಬಗ್ಗೆ ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನ್‌ನವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅರ್ಜಿಯ ಮೇಲೆ ವಿಶ್ವವಿದ್ಯಾಲಯದ ವತಿಯಿಂದ ಉಡುಪಿಗೆ ಆಗಮಿಸಿದ್ದ ನಿಯೋಗ ಮಂಡಳಿಯವರ ವರದಿಯಂತೆ ಈ ಕಾಲೇಜನ್ನು ಅಂಗೀಕರಿಸಲು ವಿಶ್ವವಿದ್ಯಾಲಯ ತನ್ನ ಸಮ್ಮತಿಯನ್ನು ಸೂಚಿಸಿರುವುದಾಗಿ ಎಕೆಡೆಮಿಯ ರಿಜಿಸ್ಟ್ರರರಾದ ಡಾ। ಮಾಧವ ಪೈಗಳು ತಾರೀಕು 16ರಂದು ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಸುದ್ದಿಯನ್ನಿತ್ತರು. ಡಾ। ಪೈಗಳು ಮಂಡಿಸಿದ ಯೋಜನೆಯಲ್ಲಿ ವಿಶ್ವವಿದ್ಯಾಲಯದವರು ಕೋರಿದ ಮುಖ್ಯವಾದ ಬದಲಾವಣೆ ಎಂದರೆ ವರುಷ ವರುಷ 100ಜನ ವಿದ್ಯಾರ್ಥಿಗಳ ಬದಲಿಗೆ 50ಜನರಿಗೆ ಪ್ರವೇಶ ಕೊಡಬೇಕೆಂದು, ಇತ್ತ ಮದ್ರಾಸು ಸರಕಾರದವರೂ ಈ ಯೋಜನೆಯ ಕುರಿತು ಡಾ। ಪೈಗಳೊಂದಿಗೆ ಪರ್ಯಾಲೋಚಿಸುತ್ತಿರುವುದಲ್ಲದೆ, ಮೂನ್ನ ಮಂತ್ರಿಗಳೂ, ಆರೋಗ್ಯಖಾತೆಯ ಅಧಿಕಾರಿಗಳೂ ತಮ್ಮ ಸಂಪೂರ್ಣ ಸಹಾನುಭೂತಿಯನ್ನು ಪ್ರದರ್ಶಿಸುತ್ತಿರುವರು. ವಿಶ್ವ ವಿದ್ಯಾಲಯದ ಅಂಗೀಕಾರ ಸಿಗದಿರುವಲ್ಲಿ, ಹಿಂದಿನ ಎಲ್. ಎಮ್. ಪಿ.ಗಿಂತ ಸ್ವಲ್ಪ ಉಚ್ಚ ತರಗತಿಯ 3-4 ವರ್ಷಗಳ ತರಬೇತಿಯ ಮೆಡಿಕಲ್ ಶಾಲೆಯನ್ನಾದರೂ ಎಕೆಡೆಮಿಯವರು ತೆರೆಯಬಹುದೆಂಬ ಸೂಚನೆಯೂ ಇತ್ತು. ಆದರೆ ಇದೀಗ ವಿಶ್ವವಿದ್ಯಾಲಯ ಈ ಯೋಜನೆಯಲ್ಲಿ ವಿಶ್ವಾಸ ತೋರಿಸಿ ಅಂಗೀಕಾರಕೊಡಲೊಪ್ಪಿದುದರಿಂದ, ಮದ್ರಾಸು ಸರಕಾರಕ್ಕೀಗ ಸಾಧ್ಯವಿರುವ ಸಹಾಯ ಧನ ಮಾತ್ರ ಕೊಟ್ಟರಾಯಿತು. ಹೀಗೆ ಮದ್ರಾಸು ಸರಕಾರದ ಸಂಪೂರ್ಣ ಸಹಾಯ ಮತ್ತು ಬೆಂಬಲ ಎಕೆಡೆಮಿಗಿದೆ ಎಂದು ವಿಶ್ವವಿದ್ಯಾಲಯದವರು ಮನಗಂಡರೆ 50ರ ಬದಲಿಗೆ 100ಜನ ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶ ದೊರೆಯಬಹುದು. ಈ ಎಲ್ಲಾ ವಿಷಯಗಳ ಕುರಿತು ಸ್ಪಷ್ಟವಾಗಿ ವಿಚಾರವಿನಿಮಯ ಮಾಡಲು ಡಾ॥ ಪೈಗಳು ಅದೇ ದಿನ ಮದ್ರಾಸಿಗೆ ತೆರಳಿರುವರು. ಸಾರ್ವಜನಿಕರ ಹಿತಕ್ಕಾಗಿ ಉತ್ಸಾಹದಿಂದ ಕೆಲಸ ಮಾಡುತ್ತಿರುವ ಡಾ ಪೈಗಳು ಕೃತಕೃತ್ಯರಾಗಲೆಂದು ಹಾರ್ದಿಕವಾಗಿ ಆಶಿಸುತ್ತೇವೆ

ಸ್ವಾತಂತ್ರ್ಯ ದಿನೋತ್ಸವವು— ಉಡುಪಿಯಲ್ಲಿ ತಾ. 15ರಂದು ಬೆಳಿಗ್ಗೆ ಅಜ್ಜರಕಾಡು ಮೈದಾನದಲ್ಲಿ ಶ್ರೀಮಾನ್ ಎಲ್ ಜೆ. ಭಂಡಾರಿಗಳಿಂದ ಧ್ವಜವಂದನೆಯೊಂದಿಗೆ ಪ್ರಾರಂಭವಾಯಿತು. ಸಂಜೆ ಬೋರ್ಡ ಹೈಸ್ಕೂಲ್ ಪೀಪಲ್ಸ್ ಹಾಲಿನಲ್ಲಿ ಶ್ರೀ ಕೆ. ಪದ್ಮನಾಭ ಪೈಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ ಶ್ರೀಗಳಾದ ಬಾಳ್ಕಟ್ಟ ವೀರು ಕೃಷ್ಣಯ್ಯ ಹೆಗ್ಡೆ, ಟಿ. ಎ ಪೈ, ಎಮ್. ಎಲ್ ಎ. ಮೊದಲಾದವರ ಭಾಷಣಗಳಾದುವು ವಿನೋದಾವಳಿಗಳಾಗಿ ಸಭಾಂತ್ಯವಾಯಿತು.

ಸ್ಥಳೀಯ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಬೆಳಿಗ್ಗೆ ಧ್ವಜವಂದನೆಯಾಗಿ ವಿದ್ಯಾರ್ಥಿಗಳ ಸಭೆ, ಭಾಷಣಗಳಾದುವು. ಸಂಜೆ ಇಂಗ್ಲಿಷ್ ಕನ್ನಡ ನಾಟಕಗಳೂ, ಗಾಯನ ಸಂಗೀತಗಳೂ ಆದುವು

ಶ್ರೀ ಉಪೇಂದ್ರ ನಾಯ್ಕರ ಧರ್ಮ— ನಗರ ಸಭಾಧ್ಯಕ್ಷ ಶ್ರೀ ಉಪೇಂದ್ರ ಶ್ರೀನಿವಾಸ ನಾಯ್ಕರು ತಾ. 17ರಲ್ಲಿ ಬೋರ್ಡ ಹೈಸ್ಕೂಲ್ ವಠಾರದಲ್ಲಿ ದೊಡ್ಡವರಿಗೆ ಅರ್ಧಸೇರು ಮತ್ತು ಎರಡಾಣೆ, ಚಿಕ್ಕವರಿಗೆ ಕಾಲು ಸೇರು ಮತ್ತು ಒಂದಾಣೆಯಂತೆ ಸಾಧಾರಣ ಅರೇಳು ಸಾವಿರ ಮಂದಿಗೆ ಸಾಧಾರಣ ಎಪ್ಪತ್ತು ಮುಡಿ ಅಕ್ಕಿ ಮತ್ತು ಐನೂರು ರೂಪಾಯಿ ಹಣ ಧರ್ಮ ಮಾಡಿದರು. ಶ್ರೀ ನಾಯ್ಕರ ಸತ್ಕಾರ್ಯವನ್ನು ಪ್ರಶಂಸಿಸಿ ಶ್ರೀ ಯು. ಎಸ್. ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ಚುನಾವಣಾ ಎಡ್ ಹಾಕ್ ಕಮಿಟಿ ಸಭೆ— ಬರುವ ನಗರ ಸಭಾ ಚುನಾವಣೆಗೆ ಕಾಂಗ್ರೆಸ್ ಉಮೇದ್ವಾರರನ್ನು ನಿಲ್ಲಿಸುವ ಕುರಿತು ವಿಚಾರ ವಿನಿಮಯ ಮಾಡುವರೆ ಇದೇ ತಾ. 17ರಲ್ಲು ಸಂಜೆ ಸರ್ಕಲ್ ಕಾಂಗ್ರೆಸ್ ಕಮಿಟಿ ಆಫೀಸಿನಲ್ಲಿ ವಕೀಲ್ ಶ್ರೀ ಎಮ್. ವಿಠಲ ಕಾಮತರ ಅಧ್ಯಕ್ಷತೆಯಲ್ಲಿ ಚುನಾವಣಾ ಎಡ್ ಹಾಕ್ ಕಮಿಟಿ ಸಭೆ ಜರಗಿತು. ಶ್ರೀ ಟಿ. ಎ ಪೈ, ಎಮ್. ಎಲ್. ಎ. ಅವರು ಮಾತನಾಡುತ್ತಾ ಚುನಾವಣೆಯಲ್ಲಿ ಕಾಂಗ್ರೆಸ್ ಭಾಗ ವಹಿಸಬೇಕಾದ ಆವಶ್ಯಕತೆಯನ್ನು ವಿವರಿಸಿದರು. ಈ ವಿಚಾರದಲ್ಲಿ ಮಾತುಕಥೆಗಳು ನಡೆದು ಕೊನೆಗೆ ಬಹುಮತದಿಂದ ಕಾಂಗ್ರೆಸ್ ಹುರಿಯಾಳುಗಳನ್ನು ನಿಲ್ಲಿಸಬೇಕೆಂದು ನಿರ್ಣಯವಾಯಿತು. ಮುಂದಿನ ಕಾರ್ಯವನ್ನು ರೂಪುಗೊಳಿಸುವರೆ ಡಾ। ಕೆ ಎಲ್ ಐತಾಳ್, ಎಮ್. ವಿಠಲ ಕಾಮತ್, ಕೊಟ್ಟಕಾರ್ ಪಾಂಡುರಂಗ ಪೈ, ಜಿ.ಸಿ ರೇಗೊ, ಬಾಳ್ಕಟ್ಟ ವೀರು ಕೃಷ್ಣಯ್ಯ ಹೆಗ್ಡೆ, ಬಿ ಮೈಕಾ, ಬಿ. ಹರಿಯಣ್ಣ ಹೆಗ್ಡೆ, ಕೆ. ನರಹರಿ ಕಾಮತ್ ಇವರ ಸಿಲೆಕ್ಷನ್ ಕಮಿಟಿಯೊಂದು ರಚಿಸಲ್ಪಟ್ಟಿತು.

ಉಡುಪಿ ಮುನಿಸಿಪಲ್ ಚುನಾವಣೆ— ಸದ್ಯ ಜರಗಲಿರುವ ಮುನಿಸಿಪಲ್ ಚುನಾವಣೆಗಳಲ್ಲಿ ಕಾಂಗ್ರೆಸು ಪಾರ್ಟಿಯಿಂದ ಹುರಿಯಾಳುಗಳನ್ನು ನಿಲ್ಲಿಸಬೇಕೆಂದು ದ. ಕ. ಜಿಲ್ಲಾ ಕಾಂಗ್ರೆಸು ಕಮಿಟಿಯವರು ನಿರ್ಣಯಿಸಿ ಆದೇಶವಿತ್ತಿರುವಂತೆ ಉಡುಪಿ ಮುನಿಸಿಪಲ್ ಚುನಾವಣೆಯಲ್ಲಿ ಕಾಂಗ್ರೆಸು ಪಕ್ಷದಿಂದ ಹುರಿಯಾಳುಗಳನ್ನು ನಿಲ್ಲಿಸುವ ನಿರ್ಧಾರ ಮಾಡಿರುವುದರಿಂದ, ಸದರಿ ಚುನಾವಣೆಗೆ ಉಮೇದ್ವಾರರಾಗಲು ಬಯಸುವವರು ತಮ್ಮ ಅರ್ಜಿಗಳನ್ನು ಕಾರ್ಯದರ್ಶಿ, ಸರ್ಕಲ್ ಕಾಂಗ್ರೆಸು ಕಮಿಟಿ, ಉಡುಪಿ ಅವರಿಗೆ ಇದೇ ಆಗೋಸ್ತು ತಾ 30ರೊಳಗೆ ಸಲ್ಲಿಸತಕ್ಕದ್ದು ಯಾವತ್ತೂ ಮಾಹಿತಿಗಳಿಗೆ ಮೇಲಣ ವಿಳಾಸದಿಂದ ಪಡೆಯಬಹುದು.

ಚಂದಾದಾರರಲ್ಲಿ ವಿನಂತಿ.

ಇದೇ ಆಗೋಸ್ತು ತಿಂಗಳ ಅಂತ್ಯಕ್ಕೆ ನವಯುಗ'ದ 31ನೆಯ ವರ್ಷವು ಪೂರ್ತಿಯಾಗಿ ಸಪ್ಟಂಬರ ತಿಂಗಳಿಂದ 32ನೇ ವರ್ಷವು ಆರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವವರು ಈ ಮೊದಲೇ ಅವಧಿ ಮುಗಿದು ಚಂದಾ ಬಾಕಿ ಮಾಡಿಕೊಂಡವರು ಎಲ್ಲರೂ ತಮ್ಮ ತಮ್ಮ ಚಂದಾ ಹಣವನ್ನು ದಯಮಾಡಿ ಅದಷ್ಟು ಶೀಘ್ರ ಮನಿಯಾರ್ಡರು ಮೂಲಕ ಕಳುಹಿಸಿಕೊಡಬೇಕಾಗಿ ಈ ಮೂಲಕ ಅಪೇಕ್ಷಿಸುತ್ತೇವೆ.

ಮೇನೇಜರ್, ನವಯುಗ ಉಡುಪಿ

ತಾರೀಕು 19-8-1952ರಂದ
ತಮಿಳು ಚಿತ್ರ:
ಮನ ಮಗಳ್ (ಮದುಮಗಳು
ಎನ್. ಎಸ್. ಕೃಷ್ಣನ್, ಟಿ ಎ. ಮಧುರಮ್, ಲಲಿತ-ಪದ್ಮಿನಿ, ಬಾಲಯ್ಯ, ಸಹಸ್ರನಾಮ್, ದೊರೈರಾಜ, ಪುಳಿಮೂಟ್ಟೈ--ಮೊದಲಾದವರು
ಅನಂತರ— ಚೋಟಿ ಬಾಬಿ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಮಂಗಳೂರು

ಸ್ವಾತಂತ್ರ್ಯ ದಿನಾಚರಣೆಯು— ಇದೇ ತಾ. 15ರಲ್ಲು ಬೆಳಿಗ್ಗೆ ಕೇಂದ್ರ ಮೈದಾನಿನಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಸಿ. ಎ. ರಾಮಕೃಷ್ಣನ್, ಅವರಿಂದ ಧ್ವಜಾರೋಹಣ, ವಂದನೆಗಳಿಂದ ಪ್ರಾರಂಭವಾಯಿತು. ಧ್ವಜಗೀತೆಯಾದೊಡನೆ ಸಮವಸ್ತ್ರ ದಳಗಳ ಗೌರವಗಮನವಾಯಿತು. ಸಂಜೆ ಪಂದ್ಯಾಟಗಳಾದ ನಂತರ ಸಾರ್ವಜನಿಕ ಸಭೆ ಆರಂಭವಾಗಲು ಭಾರೀ ಮಳೆ ಬಂದುದರಿಂದ ಅಧ್ಯಕ್ಷ ಶ್ರೀ ಎನ್. ಎನ್. ಸುವರ್ಣರು ಆ ದಿನದ ಮಹತ್ವವನ್ನು ನಾಲ್ಕು ಮಾತುಗಳಲ್ಲಿ ಹೇಳಿ ಸಭೆಯನ್ನು ಮುಕ್ತಾಯಗೊಳಿಸಿದರು.

ಬೆಸೆಂಟ್ ರಾಷ್ಟ್ರೀಯ ಬಾಲಿಕಾಪಾಠಶಾಲೆಯಲ್ಲಿ ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲೂ ಸರಕಾರಿ ಕಾಲೇಜಿನಲ್ಲಿ ಅಲ್ಲಿನ ಪ್ರಿನ್ಸಿಪಾಲರ ಸಮಕ್ಷಮದಲ್ಲಿ ಧ್ವಜವಂದನೆ, ಶ್ರೀ ಎಚ್. ವೀರಪ್ಪನವರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿಗಳ ಸಭೆಯಲ್ಲೂ ಸ್ವಾತಂತ್ರ್ಯ ದಿನೋತ್ಸವ ಆಚರಿಸಲಾಯಿತು. ಸೈಂಟ್ ಎಲೋಸಿಯಸ್ ಕಾಲೇಜಿನಲ್ಲಿ ಧ್ವಜವಂದನೆಯಾದುದಲ್ಲದೆ ಅಲ್ಲಿನ ಸೇವಾ ಸಮಾಜದವರು ಸುಮಾರು 800 ಬಡವರಿಗೆ ಅನ್ನದಾನದ ಕಾರ್ಯವನ್ನು ಕೈಕೊಂಡಿದ್ದರು. ಜಿಲ್ಲಾ ಕಲೆಕ್ಟರರು ಈ ಸಮಾರಂಭವನ್ನು ಉದ್ಘಾಟಿಸಿ ಬಟ್ಟೆ ಭಕ್ಷ್ಯಗಳಿಗೆ ಬಡಿಸಿದರು. ಅದರಂತೆ ಕಾಲೇಜಿನ ಲೆಕ್ಚರರೂ ಮಂಗಳೂರಿನ ಬಿಶೋಪರೂ ಶ್ರೀ ಬಿ. ವೈಕುಂಠ ಬಾಳಿಗ ದಂಪತಿಗಳೇ ಮೊದಲಾದವರು ಬಡಿಸುವ ಕಾರ್ಯದಲ್ಲಿ ಭಾಗವಹಿಸಿದ್ದರು. ಊಟವಾದ ಮೇಲೆ ಬಡವರಿಗೆಲ್ಲಾ ಒಂದೂವರೆ ಪಾವಿನಂತೆ ಅಕ್ಕಿ ಕೊಡಲಾಯಿತು.

ಎಲೋಸಿಯಸ್ ಕಾಲೇಜಿನ ಸಂಸ್ಕೃತ ಸಂಘದ ಉದ್ಘಾಟನೆಯನ್ನು ಶ್ರೀ ಕೆ.ಆರ್.ಆಚಾರ್ಯರು ನೆರವೇರಿಸಿದರು

ಮುನಿಸಿಪಲ್ ಪ್ರೋಗ್ರೆಸಿವ್ ಫ್ರಂಟ್ ಇದೇ ತಾ. 7ರಲ್ಲು ಶ್ರೀ ಎ. ಜಿ. ಪುತ್ರನ್, ಅವರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಇದೇ ಬರುವ ಅಕ್ಟೋಬರದಲ್ಲಿ ನಡೆಯಲಿರುವ ನಗರ ಸಭೆಯ ಚುನಾವಣೆಯ ಕುರಿತು ವಿಚಾರ ವಿನಿಮಯ ನಡೆಯಿತು. ಶ್ರೀಗಳಾದ ಡಿ ಮೋಹನ ರಾವ್, ಕೆ. ಕೃಷ್ಣ ರಾವ್ ಮತ್ತು ಡಾ। ಎಸ್. ಎಸ್. ಎ. ಶರ್ಮರೂ, ಸಭಾಧ್ಯಕ್ಷರೂ-ಸಾರ್ವಜನಿಕ ಸೇವೆಯೇ ಗುರಿಯಾಗಿಟ್ಟುಕೊಂಡು ಕೆಲಸ ಮಾಡಬಲ್ಲ ಮತ್ತು ಆಯಾಯ ವಾರ್ಡಿನ ಜನತೆಯ ವಿಶ್ವಾಸಕ್ಕೆ ಪಾತ್ರರಾದ ಯೋಗ್ಯ ಉಮೇದ್ವಾರರನ್ನೇ ಸಂಬಂಧಪಟ್ಟ ಪಕ್ಷಗಳ ಅಭಿಪ್ರಾಯವನ್ನು ತಿಳಿದು, ಅದಕ್ಕನುಸರಿಸಿ, ನಿಲ್ಲಿಸಬೇಕೆಂಬುದಾಗಿಯೂ ಈ ಬಗ್ಗೆ ಪಕ್ಷ ರಹಿತವಾದ ಮುನಿಸಿಪಲ್ ಪ್ರೋಗ್ರೆಸ್ಸಿವ್ ಫ್ರಂಟ್ ಒಂದನ್ನು ಸ್ಥಾಪಿಸುವುದು ಅವಶ್ಯವೆಂದೂ ಸೂಚಿಸಿದರು.

ಮುಂಬರುವ ನಗರ ಸಭಾ ಚುನಾವಣೆಗಳನ್ನು—ಎರಡು ಗುಂಪುಗಳಾಗಿ (ಎ ಮತ್ತು ಬಿ) ನಡೆಸುವುದಾಗಿ ಮದ್ರಾಸು ಸರಕಾರ ಪ್ರಕಟಿಸಿದೆ. ನಮ್ಮ ಜಿಲ್ಲೆಯು 'ಬಿ' ಗುಂಪಿನಲ್ಲಿದೆ. ಸಪ್ಟಂಬರ ತಾ 5 ಇಲ್ಲಿಯ ನಾಮಪತ್ರ ಸಲ್ಲಿಸುವ ದಿನ. ಅಕ್ಟೋಬರ್ ತಾ 6 ಮತದಾನ ನಡೆಯುವ ದಿನ. ಪ್ರಾಯಸ್ಥ ಮತದಾನದ ಹಕ್ಕಿನ ತಳಹದಿಯಲ್ಲಿ ನಡೆಯುವ ಮೊದಲ ನಗರ ಸಭಾ ಚುನಾವಣೆಯಿದು. ನಮ್ಮ ಜಿಲ್ಲೆಯಲ್ಲಿ ಮಂಗಳೂರ, ಉಡುಪಿಗಳ ಸಾಧಾರಣ 80,000 ಮತದಾರರು ತಮ್ಮ ನಗರ ಸಭೆಗಳಿಗೆ–ಮಂಗಳೂರಲ್ಲಿ 36 ಮಂದಿ ಪ್ರತಿನಿಧಿಗಳನ್ನೂ ಉಡುಪಿಯಲ್ಲಿ 16ಮಂದಿ ಪ್ರತಿನಿಧಿಗಳನ್ನೂ ಆರಿಸಬೇಕಾಗಿದೆ.

ಸರಕಾರಿ ಬುನಾದಿ ಶಿಕ್ಷಣ ತರಬೇತಿ ಶಾಲೆಯಲ್ಲಿ-ಸ್ವಾತಂತ್ರ್ಯ ದಿನಾಚರಣೆಯು ವಿಜೃಂಭಣೆಯಿಂದ ಜರಗಿತು. ವಿದ್ಯಾರ್ಥಿ ಅಧ್ಯಾಪಕರಿಂದ ಪ್ರಭಾತ ಫೇರಿಯಾದ ಮೇಲೆ ಶ್ರೀ ಸೂರ್ಯ ನಾರಾಯಣ ಅಡಿಗರು ಧ್ವಜವನ್ನೇರಿಸಿದರು. ಡಾ। ಕೆ. ನಾಗಪ್ಪಾಳ್ವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ, ವಿದ್ಯಾರ್ಥಿ ಅಧ್ಯಾಪಕ ಮತ್ತು ಶಾಲಾ ಅಧ್ಯಾಪಕರು ಮಾತನಾಡುತ್ತಾ ಶಿಸ್ತನ್ನು ಕಾಪಾಡಿಕೊಳ್ಳುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವೆಂದರು ಶ್ರೀ ಶಾಮ ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ದ. ಕ. ಜಿಲ್ಲೆಗೆ ಒಕ್ಕಲುತನ ಮಂತ್ರಿಗಳ ಆಗಮನ- ಮಧ್ರಾಸಿನ ಒಕ್ಕಲತನ ಮತ್ತು ಅರಣ್ಯ ಇಲಾಖೆಯ ಮಂತ್ರಿಗಳಾದ ಡಾ। ಆರ್, ನಾಗಣ್ಣ ಗೌಡರು ಇದೇ ತಾ 20ರಿಂದ ಪ್ರವಾಸ ಕೈಕೊಂಡಿದ್ದು ತಾ 25ನೆ ಸೋಮವಾರ ಬೆಳಿಗ್ಗೆ ನಿಲೇಶ್ವರಕ್ಕೆ ಆಗಮಿಸಿ ಅಲ್ಲಿಯ ತೆಂಗಿನ ಪ್ರದರ್ಶನ ತೋಟ ನಂಬ್ರ 2 ಮತ್ತು 3ನ್ನು ಸಂದರ್ಶಿಸುವರು. ಅಂದು ಮಧ್ಯಾಹ್ನ ಮಂಗಳೂರಿಗೆ ಬಂದು ಸಂಜೆ ಜಿಲ್ಲಾ ಪಶುವೈದ್ಯ ಶಾಲೆಯನ್ನು ಜ್ಞಾನೋದಯ ಫಿಶರೀಸ್ ಶಾಲೆ ಮೊದಲಾದುವನ್ನು ಭೆಟ್ಟಿಯಾಗುವರು. ತಾ 26ರಲ್ಲು ಬೆಳಿಗ್ಗೆ ಪುತ್ತೂರಿನ ಕಪ್ಯುಲಾ ಪಶುಕ್ಷೇತ್ರವನ್ನು ಸಂದರ್ಶಿಸಿ ಮಧ್ಯಾಹ್ನ ಉಡುಪಿಗೆ ಬರುವರು, ಅಪರಾಹ್ನ 2-30 ಗಂಟೆಯಿಂದ 5ಗಂಟೆಯ ತನಕ ಮಲ್ಪೆಯ ಫಿಶರೀಸ್ ಹ್ಯಾಸ್ಟಲನ್ನು ಮೀನುವಾರ್ಡನ್ನು ತಪಾಸಣೆ ನಡೆಸಿ ಸಂಜೆ 6 ಗಂಟೆಗೆ ಮಂಗಳೂರಿಗೆ ಪ್ರಯಾಣ ಬೆಳೆಸುವರು ತಾ 27ರಂದು ಬೆಳಗಿನ ಟ್ರೈನಿನಲ್ಲಿ ಮದ್ರಾಸಿಗೆ ಹೊರಟು ಹೋಗುವರು.

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಯಿ:— 9-8-52ಕ್ಕೆ 50ನೇ ವರ್ಷವನ್ನು ಸಂಪೂರ್ಣಗೊಳಿಸಿದ್ದರಿಂದ ಈ ಪುಣ್ಯದಿನವನ್ನು 9—8—52ರಲ್ಲಿ ಆಚರಿಸಲಾಯಿತು. ಪ್ರಾತಃಕಾಲ ಶ್ರೀ. ಬಿ. ಎ. ಕರ್ಕೇರರು ಧ್ವಜಾರೋಹಣಗೈದರು. ಮೊಗವೀರ ಗಾರ್ಡ್ಸಿನವರೂ, ಸ್ಕೌಟ್ ದಳದವರೂ, ಸದಸ್ಯರೂ ಸೇರಿ ಧ್ವಜಕ್ಕೆ ವಂದನೆಯನ್ನರ್ಪಿಸಿದರು ಅಪರಾಹ್ನ ಶ್ರೀ ರಾಮಭಜನಾ ಮಂಡಳಿಯವರಿಂದ ಭಜನೆಯ ಕಾರ್ಯಕ್ರಮವು ಜರಗಿಸಲ್ಪಟ್ಟಿತು. ಶ್ರೀ. ಬಿ. ಎ. ಕರ್ಕೇರರ ಅಧ್ಯಕ್ಷತೆಯಲ್ಲಿ ಸಭೆಯ ಕಾರ್ಯಕ್ರಮವು ಆರಂಭವಾಯಿತು.

ಪ್ರಧಾನ ಕಾರ್ಯದರ್ಶಿ ಶ್ರೀ, ಎಚ್. ಕೆ. ಪುತ್ರನ್‌ರು ಸಭಿಕರನ್ನು ಸ್ವಾಗತೀಕರಿಸಿ, ಮಂಡಳಿಯ 50ನೇ ಜನ್ಮದಿನಾಚರಣೆಯ ಆವಶ್ಯಕತೆಯನ್ನು ವಿವರಿಸಿದರು. ಸಭೆಯಲ್ಲಿ ಶ್ರೀಗಳಾದ ಪೈ ಕಾಂತಪ್ಪ ಎ. ಪುತ್ರನ್‌ರು ಪಾಪು ಪಿ. ಬಂಗೇರರು, ಮುತ್ತಪ್ಪ ಕೆ. ಕೋಟ್ಯಾನ್‌ಕಾರರು, ಜಿ. ಸಿ ಪುತ್ರನರು, ಜಿ.ಎನ್. ವೈದ್ಯರು, ಎಂ. ಎ ಬಿ. ಎಲ್. ಎ. ಅರನ್ನ ಮೊದಲಾದವರು ಪ್ರೋತ್ಸಾಹನೀಯ ಭಾಷಣವಿತ್ತರು.

ಅಧ್ಯಕ್ಷರ ರಸಭರಿತ ಭಾಷಣವಾದ ಮೇಲೆ ಧನ್ಯವಾದ, ಪ್ರಸಾದ ವಿತರಣೆಯೊಂದಿಗೆ ಸಮಾರಂಭವು ಕೊನೆಗೊಂಡಿತು.

ಬೊಂಬಾಯಿ—ಯಂಗ್‌ಮೆನ್ಸ್ ಎಜುಕೇಶನ್ ಸೊಸೈಟಿಯ ಸಪ್ತಮ ವರ್ಷಾಂತ್ಯೋತ್ಸವವೂ ಯಂಗ್‌ಮೆನ್ಸ್ ಫ್ರೀನೈಟ್ ಹೈಸ್ಕೂಲಿನ ಪಾರಿತೋಷಕ ವಿತರಣ ಸಮಾರಂಭವೂ ಇದೇ ತಾ. 24ರಲ್ಲು ಸರ್ ಕಾವಾಸ್ಜಿ ಜಹಾಂಗೀರ್ ಸಾರ್ವಜನಿಕ ಸಭಾ ಸದನದಲ್ಲಿ ಶ್ರೀ ಸರ್ವೋತ್ತಮ ದೇವದಾಸ ಪೈಗಳ ಅಧ್ಯಕ್ಷತೆಯಲ್ಲಿ ಜರಗುವುದು. ಶ್ರೀಮತಿ ಪೈಗಳವರು ಪಾರಿತೋಷಕಗಳನ್ನು ಹಂಚುವರು.

ಮೋಕ—ಬಳ್ಳಾರಿಯ ಬಳಿ ಮೋಕ
ದಲ್ಲಿ ತಾ ೧-೮-೫೨ರಲ್ಲಿ ಡ. ಕನ್ನಡದ ಜಾಂ
ತಾರಾಮ ಪ್ರಭು ಇವರ ತಾರಾನಾಥ ಚಿಕಿ
ತ್ಸಾಲಯದ ಉದ್ಘಾಟನಾ ಸಮಾರಂಭವು ವಿ
ಜೃಂಭಣೆಯಿಂದ ಜರಗಿತು ಶ್ರೀ ಶಿವರಾಮ
ಯ್ಯ, ಎಡ್ವೋಕೇಟ್, ಇವರು ಅಧ್ಯಕ್ಷತೆ ವ
ಹಿಸಿದ್ದರು. ಡಾ। ಬಿ.ಕೆ.ವಾರ್ದರು ಅತಿಥಿಗಳ
ನ್ನು ಸ್ವಾಗತಿಸುತ್ತಾ "......ಚಿಕಿತ್ಸೆಯು ಕೇ
ವಲ ಒಂದು ಉದ್ಯೋಗವಲ್ಲ, ಅದು ಅತಿ
ಪವಿತ್ರವಾದುದು, ಬೇನೆಯಿಂದ ಬಳಲುವ ಸ
ಹಸ್ರಾರು ರೋಗಿಗಳನ್ನು ರೋಗ ಮುಕ್ತ
ನ್ನಾಗಿ ಮಾಡಿ, ಅವರೂ ಜೀವನದಲ್ಲಿ ನೆಮ್ಮ
ದಿಯನ್ನು ಪಡೆಯುವಂತೆ ಮಾಡುವ ಪವಿತ್ರ
ಕರ್ತವ್ಯ, ಅದೇ ಜನತೆಯ ಸೇವೆ....."
ಮುಂತಾಗಿ ಹೇಳಿದರು. ಬಳಿಕ ಡಾ। ಅಚ್ಚು
ಯ್ಯ ತಾರಾನಾಥ ವಿದ್ಯಾಪೀಠದ ಪ್ರಿನ್ಸಿಪಾಲ
ರು, ಶ್ರೀ ಕೃಷ್ಣಯ್ಯ ಸೆಟ್ಟಿ, ಡಿ. ರಜಿಸ್ಟ್ರಾರ್
ಕೋ. ಓಪರೆಟಿವ್ ಸ್ಟೋರ್ಸ್, ಶ್ರೀ ಶಿವ
ರಾಮಯ್ಯ ಮೊದಲಾದವರು ಮನನೀಯ
ವಾಗಿ ಮಾತನಾಡಿದರು.

ಆಭಾರ ಮನ್ನಣೆಯಾದ ಬಳಿಕ ಲಘು ಉ
ಹಾರದೊಂದಿಗೆ ಸಮಾರಂಭ ಸಮಾ
ವಾಯಿತು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ
ಕ್ರಮ ನಂಬ್ರ 208/1952
ಐತ್ತಪ್ಪ ಗೌಡ —ವಾ
ಮತ್ತು
ಕುಂಡಡ್ಕ ಗುಡ್ಡಪ್ಪ ರೈ ಕೂಡಾ
—ಪ್ರತಿವಾದಿರ

ಮೇಲಿನ ದಾವೆಯ 6ನೇ ಪ್ರತಿವಾದಿ ಕಾ
ರ್ಕಳ ತಾಲೂಕು ಮೂಡಬಿದ್ರೆ ಕಸಬಾ
ಗ್ರಾಮದಲ್ಲಿರುವ ಕುಂಡಡ್ಕ ನಾರಾಯಣ
ರೈಗಳ ಅಳಿಯ ಠಾಕೂರ್ ಕಾಂತಪ್ಪ ಶೆಟ್ರಿ
ಈ ಮೂಲಕ ತಿಳಿಯಪಡಿಸುವುದೇನೆಂದ
ತಾ 6-5 1849ರಲ್ಲಿ ವಾದಿಯ ಹಿರಿಯ
ರು ಮಂಜಪ್ಪ ಗೌಡ ಮತ್ತು ತಿಮ್ಮಪ್ಪ ಗೌ
ಕೂಡಾ 2 ಜನರು 65 ವರ್ಷಗಳ ಅವ
ಯಿಂದ ರೂ. 200ಕ್ಕೆ ಪ್ರತಿವಾದಿರ ಕುಟುಂ
ಬದ ಹಿರಿಯನಾದ ಕುಂಡಡ್ಕ ವೈಂದ ಭಂಡ
ರಿ ಎಂಬವರಿಗೆ ಅವಾರ್ಗಬರೆಕೊಟ್ಟಿರುವ
ರಿಂದ ಸದ್ರಿ ಅರುಬಾರದ ಬಾಬ್ತು ಪ್ರತಿವಾ
ರಿಗೆ ನ್ಯಾಯವಾಗಿ ಸಲ್ಲತಕ್ಕದ್ದಾಗುವ ಐವೇ
ನ್ನು ವಾದಿಯಿಂದ ಕೊಡಿಸಿ ಪಿಗ್ತಿ ಸಮೇ
ದಾವಾ ಶೆಡ್ಯೂಲಿನ ಆಸ್ತಿ ಸವಾರ್ದಿಯ
ನ್ನು ದಾವಾ ಅವಾರ್ದಬಾರ ಕಳೆದಿಸಿ ವಾ
ಗೆ ಬಿಡಿಸಿ ಕೊಡಬೇಕಾಗಿ ನಾಳು ಮಾಡಿ
ದಾವೆಯು ತಾ 6 9-52ಕ್ಕೆ ಇರುವದರಿಂ
ಆ ಕುರಿತು ಆಕ್ಷೇಪವಿದ್ದ ಸ್ವತಃ ವಕೀ
ಲರ ಮೂಲಕ [illegible]
1। ಘಂಟೆಗೆ ಹಾಜರು ಮಾಡಿಕೊಳ್ಳ
ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದ
ನ್ಯಾಯವು ಏಕಪಕ್ಷವಾಗಿ ತೀರ್ಮಾನಿಸಲ
ಗುವುದು.

(ಕೋರ್ಟು ಹುಕುಂ ಪ್ರಕಾರ)

ಪಿ ಕೃಷ್ಣ ಭಟ್
ವಾದಿಕಡೆ ವಕೀಲ್.

ಪುತ್ತೂರು, 12-8-1952

ವಯಸ್ಕರ ಶಿಕ್ಷಣ

ಡಾ। ಲಾಬಕ್‌ರ ಚಾರ್ಟಿನ ಕ್ರಮದಂತೆ ಅನುಭವಶಾಲಿಗಳಿಂದ ಬರೆಯಲ್ಪಟ್ಟ ವಯಸ್ಕರ ಶಿಕ್ಷಣಕ್ಕೆ ಸಂಬಂಧಪಟ್ಟ "ಕ" ಅಕ್ಷರದಿಂದ ಪ್ರಾರಂಭಿಸಿ ಓದುವ ಎಲ್ಲಾ ಹಾಳೆಗಳು ದೊಡ್ಡಅಕ್ಷರದಿಂದ ದಪ್ಪಬಿಳಿ ಕಾಗದದಮೇಲೆ ಎರಡು ಬಣ್ಣಗಳಿಂದ ಕೂಡಿ ತಯಾರಾಗುತ್ತಿವೆ.

ಒಂದು ಹಾಳೆಗೆ 9ಪೈ. ಕ್ರಮನಂಬ್ರ 1ರಿಂದ 22ರ ವರೇಗಿನ 24 ಹಾಳೆಗಳ ಸೆಟ್ಟಿಗೆ ರೂಪಾಯಿ ಒಂದು ಮಾತ್ರ.

ಅವಶ್ಯವಿದ್ದವರು ಕೂಡಲೇ ಬರೆಯಬೇಕಾಗಿ ವಿನಂತಿ.

ವಿಳಾಸ:
ಜಯ ಪ್ರಿಂಟರ್ಸ್ & ಪಬ್ಲಿಷರ್ಸ್
ಮೂಡಬಿದ್ರಿ ದ. ಕ.

ಬಹಿರಂಗ ಏಲಂ

ಉಡುಪಿ ಶ್ರೀ ಅದಮಾರು ಮಠದ ಕಾಳೀಯ ಮರ್ದನ ಶ್ರೀ ಕೃಷ್ಣ ದೇವರ ಖಾತೆಗೆ ಒಪ್ಪಿದ ಬಾಬ್ತು ಈ ಕೆಳಗೆ ವಿವರಿಸಿದ ಸ್ಥಳದಲ್ಲಿರುವ ಕರ್ಮಾರು ವಗೈರೆ ಕಟ್ಟಿಗೆ ಜಾತಿಯ ಮರಮಟ್ಟುಗಳನ್ನು ಇದೇ ಬರುವ ತಾರೀಕು 30-8-'52ನೇ ಶನಿವಾರ ದಿನ ಸಂಜೆ ಘಂಟೆ 3ಕ್ಕೆ ಉಡುಪಿ ಶ್ರೀ ಅದಮಾರು ಮಠದಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲಾಗುತ್ತದೆ. ಅಗತ್ಯವುಳ್ಳ ಉಮೇದ್ವಾರರು ಸದ್ರಿ ಸಮಯಕ್ಕೆ ಸರಿಯಾಗಿ ಬರಬೇಕಾಗಿ ಅಪೇಕ್ಷಿಸುತ್ತೇವೆ ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ವಿಚಾರಿಸಬಹುದು

ಸ್ಥಳ ವಿವರ

ಕಾರ್ಕಳ ತಾಲೂಕು ಕಣಜಾರು ಗ್ರಾಮದ ಶ್ರೀ ಕಾಳೀಯ ಮರ್ದನ ಶ್ರೀ ಕೃಷ್ಣ ದೇವರ ಖಾತೆಗೆ ಒಪ್ಪಿದ ಬಾಬ್ತು-

ಸ. ನಂ.	ಡಿ. ನಂಬ್ರ	[illegible]	ವಿಸ್ತೀರ್ಣ
219	1	ಪುಂಜ	5-35
220	1	ಪುಂಜ	6-14
		ಜುಮ್ಲಾ	11 79

P Sripathi Rao.
Agent,
Sri Admar Mutt, Udipi.

DO YOU KNOW?
THAT
THE VIJAYA BANK, LIMITED.

1. Was established in the year 1931 with Rs. Eight thousand as its Paid up Capital.
2. Has now increased its Paid up Capital and reserves to Rs 10 lacks
3. Has granted an average dividend of 6% to the Shareholders for the past 20 years
4. Has a net work of Branches in South Kanara and one each in Mercara and Fort Bombay.
5. Offers attractive rates of interest on Deposits and Cash Certificates
6. Grants loans on easy terms to approved parties or on approved securities
7. Does afford full protection and rich return to all your monies.

ADOPT IT AS
"MY BANK"
THE VIJAYA BANK, LIMITED,
H. O., MANGALORE.

ಅಮೃತಾಂಜನ
ತಲೆವೇದನೆ, ಶಿರೋವೇದನೆ, ಉಳುಕು
ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎ
ನೋವು, ಗಾಯಗಳು, ಬಾತುಕೊಳ್ಳುವುದು
ಚೇಳುವಿಷ ಮುಂತಾದವು, ಪಕ್ಷವಾತ, ಮೊಡ
ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷ

SOVIREIGN REMEDY
AMRUTANJAN
Best Indian Pain Balm
Amrutanjan Depot
BOMBAY MADRAS

REGD
ಹುಳುಕ
ಮುಖ
ನಮ್ಮಲ್ಲಿ
ಸಿಕ್ಕುತ್ತ

ಅಮೃತಾಂಜನ ಲಿಮಿಟೆಡ
ಮದರಾಸು, ಬೊಂಬಾಯಿ ಮತ್ತು ಕಲ್ಕ

ಮೂಲ್ಕಿ:— ಪಂಚಾಯತ್ ಬೋರ್ಡ್ ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ. ಯು. ಸೋಮನಾಥರವರಿಗೆ ಇಲ್ಲಿಂದ ವರ್ಗವಾದ ನಿಮಿತ್ತ ಅವರನ್ನು ಬೀಳ್ಕೊಡುವ ಸಮಾರಂಭವನ್ನು ತಾ. 10-8-52ರಲ್ಲಿ ವಿದ್ವಾನ್ ಟಿ. ದಾಮೋದರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ದೊಡ್ಡಕೋಟೆ:— ಇಲ್ಲಿಯ 'ಗೆಳೆಯರ ಬಳಗ'ದ ವತಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ತಾ 15ರಂದು ಶ್ರೀ. ಎನ್. ಅಚ್ಯುತರಾಯರಿಂದ ಧ್ವಜಾರೋಹಣ, ಶ್ರೀ. ಕೆ. ಎಮ್. ಕೃಷ್ಣಭಟ್ಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ-ಭಾಷಣಗಳಿಂದ ನೆರವೇರಿತು.

ಹಿರಿಯಡಕ:— ಸ್ಥಳೀಯ ಆರ್ಯ ಸಮಾಜದ ವತಿಯಿಂದ ಬೋರ್ಡ್ ಹಾ। ಪ್ರಾ। ಶಾಲಾ ವಠಾರದಲ್ಲಿ ಡಾ. ಬಿ. ಚಂದಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಶ್ರೀ ಕೃಷ್ಣಜಯಂತಿಯುತ್ಸವವು ತಾ 13ರಲ್ಲು ಆಚರಿಸಲಾಯಿತು. ಹಲವರು ಶ್ರೀಕೃಷ್ಣ ಜಯಂತಿಯೂ ಆರ್ಯ ಸಮಾಜವೂ ಎಂಬೀ ವಿಷಯವನ್ನೆತ್ತಿ ಭಾಷಣ ಮಾಡಿದರು. ತಾ 14ರಲ್ಲು ಶ್ರೀ ಮಾಧವ ರಾವ್ ಹರಿದಾಸ್‌ರಿಂದ ಶ್ರೀ ಋಷಿ ದಯಾನಂದ ಸರಸ್ವತಿಯವರ ಜೀವನ ಚರಿತ್ರೆಯ ಕುರಿತು ಹರಿಕಥಾ ಕಾಲಕ್ಷೇಪ ನಡೆಯಿತು.

ಸೂಡಾ:— ಬೋರ್ಡ್ ಶಾಲೆಯಲ್ಲಿ ಸ್ಕೂಲ್ ಕಮಿಟಿ ಪ್ರೆಸಿಡೆಂಟ್ ಶ್ರೀ ಎಸ್. ನಾಗಣ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ ಆಚರಿಸಲ್ಪಟ್ಟಿತು. ಶ್ರೀಗಳಾದ ಎಸ್ ಸುಧಾಕರ ಸೆಟ್ಟಿ, ಎಸ್. ದೇಜಪ್ಪ ಸೆಟ್ಟಿ, ಕೆ. ತ್ಯಾಂಪಣ್ಣ ಸೆಟ್ರಿ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಅಧ್ಯಕ್ಷರ ಖರ್ಚಿನಿಂದ ಸರ್ವರಿಗೂ ಪಂಚಕಜ್ಜಾಯ ಹಂಚಲಾಯಿತು.

ಕುಂಬಳೆ:— ಸ್ವಾತಂತ್ರ್ಯ ದಿನಾಚರಣೆ ನಿಮಿತ್ತ ಜಿಲ್ಲಾ ಬೋರ್ಡ್ ಮೆಂಬರ್ ಶ್ರೀ ಬಿ. ದೇವಪ್ಪ ಆಳ್ವರು ಧ್ವಜಾರೋಹಣ ಮಾಡಿದರು. ಜನಾಬ್ ಎಮ್. ಎಸ್. ಮೊಗ್ರಾಲ್, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಭಾಷಣಗಳಾದುವು. ಮಾಯಿಪಾಡಿ ಸರಕಾರಿ ಬುನಾದಿ ಶಾಲೆಯಲ್ಲಿ ಅಖಂಡ ಸೂತ್ರಯಜ್ಞ ಮತ್ತು ಸಿ ತಿಮ್ಮಪ್ಪ ಸೆಟ್ರರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು.

ಕಾರ್ಕಳ:— ಸ್ಥಳೀಯ ಪಂಚಾಯತ ಬೋರ್ಡಿನ ಆಶ್ರಯದಲ್ಲಿ ಸ್ವಾತಂತ್ರ್ಯೋತ್ಸವವು ತಾ 15ರಲ್ಲು ಬೆಳಗ್ಗೆ ಸ್ಥಳೀಯ ಡಿ. ಮಾ. ಸ್ಕೂಲ್ ಶ್ರೀ. ಕೆ. ಚಂದ್ರಶೇಖರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಚ್ ಎಸ್. ಹುಸ್ಸೇನ್, ಸಂಡೆವೇದವ್ಯಾಸಾಚಾರ್ಯ, ಬಿ. ರಾಮರಾಯ ಸೆಟ್ಟಿ, ಆರ್. ಹರಿಶೆಟ್ಟಿಯವರು ಕಾಲೋಚಿತ ಮಾತುಗಳನ್ನಾಡಿದರು. ಶ್ರೀ ಕೆ. ಶ್ರೀನಿವಾಸ ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು. ಸ್ಥಳೀಯ ಎಸ್ ವಿ. ಟಿ. ಗರ್ಲ್ಸ್ ಹೈ ಸ್ಕೂಲಿನಲ್ಲಿ ಶ್ರೀ ಚಂದ್ರಶೇಖರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ವಿವಿಧ ವಿನೋದಾವಳಿ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿತು.

ಕೋಟೇಶ್ವರ ಪಂಚಾಯತ ಬೋರ್ಡ್ ಆಫೀಸಿನಲ್ಲಿ

ಶಿವ್ಹಿ ನಂಬ್ರ 20/195

ವಾದಿ—ದಿ ಕರ್ನಾಟಕ ಸ್ಟೋರ್ಸ್ ಲಿಮಿಟೆಡ್ ಬ್ರಾಂಚ್, ಕೋಟೇಶ್ವರ, ಕುಂದಾಪುರ ತಾಲೂಕು

ಪ್ರತಿವಾದಿ—ಸುಬ್ಬಣ್ಣಯ್ಯ ದೊಡ್ಡಮನೆ ಶೇಷಗಿರಿಯಪ್ಪನವರ ಮಗ, ವಡೇರ ಹೋಬಳಿ ಗ್ರಾಮ ಕುಂದಾಪುರ ತಾಲೂಕು

ಸದ್ರಿ ಪ್ರತಿವಾದಿ ಸುಬ್ಬಣ್ಣಯ್ಯಗೆ ಇದರಿಂದ ತಿಳಿಯಪಡಿಸುವದೇನೆಂದರೆ-

ಮೇಲ್ಕಂಡ ಕರ್ನಾಟಕ ಸ್ಟೋರ್ಸಿನ ಗುಡ್‌ವಿಲ್ ವೆಂಕಟಾಚಲಾಚಾರ್ಯನು ಸದ್ರಿ ಕರ್ನಾಟಕ ಸ್ಟೋರ್ಸಿನಲ್ಲಿ ನೀವು ತಾ. 10-10-49ರಲ್ಲು ನಡ್ಸಿದ ಲೇವಾದೇವಿ ಅಸಲು ಬಡ್ಡಿ ರೂ. 85-11-0ಕ್ಕೆ ನಿಮ್ಮ ಮೇಲೆ ಯೀ ಕೋರ್ಟಿನಲ್ಲಿ ದಾವಾ ಮಾಡಿರುತ್ತಾನೆ. ಸದ್ರಿ ದಾವೆಯ ಅಕ್ತೈರ ತನ್ಖಿ ತಾ. 24-9-52ಕ್ಕೆ ಯೀ ಕೋರ್ಟಿನಲ್ಲಿ ಯಿಟ್ಟಿರುತ್ತದೆ. ಸದ್ರಿ ತಾರೀಕಿನ ದಿನ ಮಧ್ಯಾಹ್ನ 2 ಗಂಟೆಗೆ ನೀವು ಯಾ ನಿಮ್ಮ ಕಡೆ ಮುಖ್ತಾಲಿಕ ಈ ಕೋರ್ಟಿಗೆ ಹಾಜ್ರಾಗಿ ನಿಮ್ಮ ಆಕ್ಷೇಪ ಉಜ್ರಾರ್ ಹಾಜ್ರುಪಡ್ಸತಕ್ಕದ್ದು ಯಿದಕ್ಕೆ ತಪ್ಪಿದಲ್ಲಿ ನಿಮ್ಮ ಗೈರಹಾಜ್ರಿಯಲ್ಲಿ ಯೆಕ್ಸಪಾರ್ಟಿಯಿಂದ ಸದ್ರಿದಾವೆ ತೀರ್ಮಾನ ಮಾಡಲಾಗುತ್ತದೆ. ತಿಳಿದಿರಲಿ.

H. Srinivas Rao,
President.

ಮೊಕ್ಕಾಂ ಕೋಟೇಶ್ವರ, ತಾ. 16-8-1952

ಉದಿಯಾವರ:— ಬಡಜನ ಪ್ರೇಮಿಗಳಾದ ಉದಿಯಾವರದ ಪ್ರಖ್ಯಾತ ಜಮೀನುದಾರರೂ ಆದ ಶ್ರೀಯುತ. ಸಡಿಯ ಸಾಹುಕಾರರು, ಉದಿಯಾವರ ಗ್ರಾಮದ ಮತ್ತು ನೆರೆಗ್ರಾಮಗಳ ಬಡಜನರಿಗೆ ಇದೇ ಆಗೋಸ್ತು ತಿಂಗಳ ತಾ. 6 ರಿಂದ ಸೇರು 1 ರ 0-8-0 ಪ್ರಕಾರ ಅಕ್ಕಿ ವಿತರಣೆ ಮಾಡುತ್ತಿರುವುದು ಅನುಸರಣೀಯವಿದೆ. ಶ್ರೀಯುತರಿಗೆ ದೇವರು ದೀರ್ಘಾಯುರಾರೋಗ್ಯವನ್ನು ಕರುಣಿಸಲೆಂದು ಬಾತ್ಮಿದಾರರೊಬ್ಬರು ಹಾರೈಸುತ್ತಾರೆ.

ಸಾಂತೂರು ಮುದರಂಗಡಿ:— ಸ್ಥಳೀಯ ಭಾರತವಾಚನಾಲಯದ ಸಭೆಯೊಂದು ತಾ. 10-8-52 ರಂದು ಪಟೇಲ್ ಸೀತಾರಾಮ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬೋಜ ಸೆಟ್ಟಿ ಶ್ರೀ ಸಾವೇರ್ ಶಾಸ್ತ್ರಿಲೇನರು ಮೊದಲಾದ ಸದಸ್ಯರು ಹಲವು ಹಿತಸೂಚನೆಗಳನ್ನಿತ್ತರು. ಅಧ್ಯಕ್ಷರ ಭಾಷಣವಾದ ಮೇಲೆ ಸ್ವಾತಂತ್ರ್ಯೋತ್ಸವವನ್ನು ಜರಗಿಸುವ ನಿರ್ಣಯವಾಯಿತು

ಹಿರೇಬೆಟ್ಟು:— ಇಲ್ಲಿಯ ಲೋಕಬಂಧು ವಯಸ್ಕರ ಶಾಲೆಯ ಕಕ್ಷೆಯಿಂದ ಅಂಗಡಿ ಬೆಟ್ಟಿನಲ್ಲಿ ತಾ 12-8-52 ರಂದು ಶ್ರೀ ಎಮ್. ವಾಸುದೇವ ಭಟ್ಟರ ಅಧ್ಯಕ್ಷತೆಯಲ್ಲಿ ಕೃಷ್ಣಜಯಂತಿಯನ್ನು ಆಚರಿಸಲಾಯ್ತು. ಮಾರ್ಟ ಗೋವಿಂದ ಸೆಟ್ರು ಮತ್ತು ಸದಾನಂದ ಸೆಟ್ರು ಶ್ರೀ ಕೃಷ್ಣನ ಜೀವನ ಚರಿತ್ರೆಯನ್ನು ತಿಳಿಸಿ ಭಾಷಣ ವಿತ್ತರು.

ಕಾಸರಗೋಡು:— ಸ್ಥಳೀಯ ಬಾಸೆಲ್ ಮಿಶನ್ ಹೈಸ್ಕೂಲಿನಲ್ಲಿ ಸ್ವಾತಂತ್ರ್ಯೋತ್ಸವವು ಮಂಜಾಬಲ ಭಂಡಾರಿ M A LL·B; ಎಡ್ವಕೇಟ್ ಇವರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ಜರಗಿತು. ನಮಗೆ ದೊರೆತ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಬಗೆಹೇಗೆ ಮತ್ತು ಸ್ವತಂತ್ರ ಭಾರತದಲ್ಲಿ ವಿದ್ಯಾರ್ಥಿಗಳ ಹೊಣೆಗಾರಿಕೆ ಎಷ್ಟು ಎಂಬ ವಿಷಯವಾಗಿ ಅಧ್ಯಕ್ಷರು ಸ್ಫೂರ್ತಿದಾಯಕ ಭಾಷಣವಿತ್ತರು. ವಿದ್ಯಾರ್ಥಿ ವಿದ್ಯಾರ್ಥಿನಿಯರ ವಿನೋದಾವಳಿ ಕಾರ್ಯಕ್ರಮಗಳು ತುಂಬಾ ಮನೋರಂಜಕವಾಗಿದ್ದುವು, ಅದೇ ದಿನ ಬೆಳಗ್ಗೆ ಡಾಕ್ಟರ್ ಕೇಶವನ್. ಕೆ. ಎ. ಶೆಟ್ಟರು ರಾಷ್ಟ್ರಧ್ವಜಾರೋಹಣವನ್ನು ಮಾಡಿದರು.

ನೀಲೇಶ್ವರ:— ತ್ರಿಕರಪ್ಪೂರದಲ್ಲಿ ಒಂದು ಹಿಂದಿ ಕ್ಲಾಸು ತೆರೆಯಲ್ಪಟ್ಟಿತು. 5ಗೊಬ್ಬರದ ಹೊಂಡಗಳು ಅಗೆಯಲ್ಪಟ್ಟವು ವನಮಹೋತ್ಸವ ಕಾಲದಲ್ಲಿ 3394ಗಿಡಗಳು ನೆಡಲ್ಪಟ್ಟವು. ನೂಲುವ ಪ್ರಚಾರ ಕಾರ್ಯ ನಡೆಯಿತು.

ಹಾಲಾಡಿ—ತಾ 30-7-1952ರಲ್ಲು ಹಾಲಾಡಿ ಗ್ರಾಮ ಸೇವಾ ಸಂಘದ ಸಾಮಾನ್ಯ ಸಭೆಯೊಂದು ಶ್ರೀ ಕಿರಾಡಿ ಹಿರಿಯಣ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಸೇರಿ, ಸಂಘದ ಸಹಾಯಾರ್ಥ ಕುಂದಾಪುರದಲ್ಲಿ ಆಡಿಸಿದ ನಾಟಕದ ಲೆಖ್ಖ ಪರಿಶೋಧನವಾಗಿ ರೂ 42-4-0 ಉಳಿಕೆಯಾಯಿತೆಂದು ಸಭೆಯು ಒಪ್ಪಿಕೊಂಡಿತು, ಸದ್ರಿ ಹಣವನ್ನು ಸೇವಾ ಸಂಘದ ವಾಚನಾಲಯ ಖಾತೆಗೆ ಜಮಾ ತೆಗೆದುಕೊಂಡು, ಪುಸ್ತಕಗಳನ್ನು ಕೊಂಡುಕೊಳ್ಳಬೇಕೆಂದಾಯಿತು.

ಮೂಲೂರು—ಪಾಡಿಕೆ ಸಂತೆ ಸ್ವಾತಂತ್ರ್ಯ ದಿನಾಚರಣೆಯು, ಮೂಲೂರು ಗ್ರಾಮಾಭಿವೃದ್ಧಿ ಸಂಘದ ನೇತೃತ್ವದಲ್ಲಿ, ಬಹು ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಪ್ರೊವಾರ್ಷ್ನ ಮಿಶನ್ ಶಾಲಾ ಮೈದಾನದಲ್ಲಿಯೂ, ಗ್ರಾಮಾಭಿವೃದ್ಧಿ ಸಂಘದ ವಠಾರದಲ್ಲಿಯೂ ಶ್ರೀಗಳಾದ ಮೂಲೂರು ಭೋಜ ಹೆಗ್ಡೆಯವರಿಂದಲೂ, ಯು. ಮ್. ಬಿ. ವಿಠಲ ಸೆಟ್ಟರವರಿಂದಲೂ ಧ್ವಜ ವಂದನೆಯಾಗಿ ಆಕರ್ಷಕ ಮೆರವಣಿಗೆಯಾಗಿ, ಗ್ರಾಮಾಭಿವೃದ್ಧಿ ಸಂಘದ ವಠಾರದಲ್ಲಿ ಪಟೇಲ್ ಮಹಾಬಲ ಶೆಟ್ಟರವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀಗಳಾದ ಉಚ್ಚಿಲ ಟಿ. ಎಮ್. ಸೋನ್ಸ್, ಯು. ಮ್. ಸಂಕಪ್ಪ ಸೆಟ್ಟಿ, ದೇವಿಡ್ ಸೋನ್ಸ್, ಮೂಲೂರು ಭೋಜಹೆಗ್ಡೆ ಮೊದಲಾದವರ ಭಾಷಣಗಳಾದುವು. ಸಿಹಿತಿಂಡಿ ಮಿಠಾಯಿಗಳನ್ನು ಹಂಚಿದ ಬಳಿಕ ಅಧ್ಯಕ್ಷರ ಭಾಷಣವಾಗಿ ಶ್ರೀ ಡಿ. ಐ ಸೋನ್ಸರಿಂದ ಧನ್ಯವಾದ ಸಮರ್ಪಣೆಯಾಗಿ ಸಭೆ ಮುಕ್ತಾಯವಾಯ್ತು.

ಅದಮಾರು:— ಸ್ಥಳೀಯ ಬೋರ್ಡ್ ಹೈಸ್ಕೂಲಿನಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶ್ರೀ ಎರ್ಮಾಳು ಶಾಂತಿರಾಜಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು ಧ್ವಜವಂದನೆ, ಶ್ರೀಗಳಾದ ಮಹಾಬಲ ಸೆಟ್ಟಿ, ಜಾನಕಿರಾಮ ರಾವ್ ಮೊದಲಾದವರ ಭಾಷಣ ಇತ್ಯಾದಿ ಕಾರ್ಯಕ್ರಮಗಳಾದುವು.

ಪಾಣೆಮಂಗಳೂರು:— ಸ್ಥಳೀಯ ಹಾ। ಪ್ರಾ। ಶಾಲೆಯಲ್ಲಿ ಶ್ರೀ ಎಚ್. ರಾಮರಾಯ ಮಲ್ಯರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ ಜರಗಿತು. ಶ್ರೀಗಳಾದ ಬಿ. ವಿ. ಬಾಳಿಗ, ಎಮ್. ಎಲ್ ಎ, ಮತ್ತು ಎಸ್. ಎನ್ ಹೊಳ್ಳರು ಭಾಷಣಮಾಡಿದರು. ಆಟಗಳಲ್ಲಿ ಗೆದ್ದವರಿಗೆ ಬಹುಮಾನವಿತರಣೆ, ಧನ್ಯವಾದಾರ್ಪಣೆಗಳಿಂದ ಸಭೆ ಕೊನೆಗೊಂಡಿತು.

ಜುಲೈ ತಿಂಗಳಲ್ಲಿ ಫಿರ್ಕಾ ಕ್ಷೇತ್ರಗಳಲ್ಲಾದ ಕೆಲಸಗಳ ಸಾರಾಂಶ

ಕುಂಬಳೆ—ಎರಡು ಸುಧಾರಿತ ಮಲ ವಿಸರ್ಜನೆ ಕೂಪಗಳು ಪೂರ್ಣಗೊಳಿಸಲಾದುವು. ವಯಸ್ಕರ ಶಿಕ್ಷಣ ತರಗತಿಯೊಂದು ಬೇಳ ನಲ್ಲಿ ತೆರೆಯಲ್ಪಟ್ಟಿತು. ಬೇಳದ ಲೋವರ್ ಎಲಿಮೆಂಟರಿ ಶಾಲೆಯನ್ನು ಹಾ। ಎಲಿಮೆಂಟರಿ ಶಾಲೆಯನ್ನಾಗಿ ಮಾಡಲಾಯಿತು. ರೂ 7000/-ಕ್ಕಿಂತಲೂ ಜಾಸ್ತಿ ಖರ್ಚಿನಿಂದ ಕಟ್ಟಿಸಲಾದ ಕಮ್ಯೂನಿಟಿ ಹಾಲನ್ನು ತೆರೆಯಲಾಯಿತು. ಈ ಮೊತ್ತದಲ್ಲಿ ಸರಕಾರಿ ಗ್ರಾಂಟು ದೊರೆತುದು ರೂಪಾಯಿ 1500/ ಮಾತ್ರ.

ಮಂಜೇಶ್ವರ—ರೈತರಿಗೆ ರೂ 260/ ತಕಾವಿಸಾಲಗಳಾಗಿ ಕೊಡಲ್ಪಟ್ಟಿತು. ಕುಂಬನೂರು ಎಯಿಡೆಡ್ ಶಾಲೆಯನ್ನು ಹಾ। ಎ। ಶಾಲೆಯನ್ನಾಗಿ ಮಾಡಲಾಯಿತು.

ಮೂಲ್ಕಿ:—6ಎಕ್ರೆ ಜಾಗವನ್ನು ಕೃಷಿ, ಬೇಸಾಯಕ್ಕೆ ಅನುಕೂಲವಾಗುವಂತೆ ಮಾಡಲಾಯಿತು.

ಬೈರಂಜೆ—ಶ್ರೀ ಶಾರದಾ ಎಯ್ಡೆಡ್ ಎಲಿಮೆಂಟರಿ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಹಿರಿಯಡಕ ಪಂಚಾಯತ್ ಬೋರ್ಡ್ ಪ್ರೆಸಿಡೆಂಟ್ ಶ್ರೀ ವಿಠಲ ಹೆಗ್ಡೆರವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು. ಶ್ರೀ ಪಿ. ನಾರಾಯಣ ಸೆಟ್ಟರು ಸಿಹಿತಿಂಡಿ ಹಂಚಿದರು

ಕೋಟೇಶ್ವರ ಪಂಚಾಯತ ಬೋರ್ಡ್ ಆಫೀಸಿನಲ್ಲಿ

ಶಿವ್ಹಿ ನಂಬ್ರ 17/1952

ವಾದಿ—ಸುಂದರ ಪೈ, ಅಳ್ವೆರೆ ನಾರಾಯಣ ಪೈಗಳ ಮಗ, ಕೋಟೇಶ್ವರ ಗ್ರಾಮ, ಕುಂದಾಪುರ ತಾಲ್ಲೂಕು.

ಪ್ರತಿವಾದಿ— ಬಿಲ್ಲವ, ದೇವ ಪೂಜಾರಿ, ಪರಿಕುದ್ರು-ಕರಿಯ ಪೂಜಾರಿ ಅಳಿಯ, ಕುಂದಾಪುರ, ತಾಲ್ಲೂಕು ಹೇರಿಕುದ್ರುಲ್ಲಿ ವಾಸ

ಸದ್ರಿ ಪ್ರತಿವಾದಿ ಬಿಲ್ಲವ ದೇವ ಪೂಜಾರಿಗೆ ಯಿದರಿಂದ ತಿಳಿಯಪಡಿಸುವದೇನೆಂದರೆ

ಮೇಲ್ಕಂಡ ವಾದಿ ಸುಂದರ ಪೈಯು ನಿಮ್ಮ ಮೇಲೆ ತಾ 1-5-49ರಲ್ಲು ನಡ್ಸಿದ ಲೇವಾದೇವಿ ಬಾಬ್ತು ಬಾಕಿ ಅಸಲು ಬಡ್ಡಿ ರುಪಾಯಿ 20-12-0ಕ್ಕೆ ಯೀ ಕೋರ್ಟಿನಲ್ಲಿ ದಾವಾ ಮಾಡಿರುತ್ತಾನೆ. ಸದ್ರಿ ದಾವೆಯ ಅಕ್ತೈರ ತನ್ಖಿಗೆ ತಾ. 24-9-52ಕ್ಕೆ ಯೀ ಕೋರ್ಟನಲ್ಲಿ ಯಿಟ್ಟಿರುತ್ತದೆ. ಸದ್ರಿ ತಾರೀಕಿನ ದಿನ ಮಧ್ಯಾಹ್ನ 2ಗಂಟೆಗೆ ನೀವು ಯಾ ನಿಮ್ಮ ಮುಖ್ತಾಲಿಕ ಈ ಕೋರ್ಟಿಗೆ ಹಾಜ್ರಾಗಿ ನಿಮ್ಮ ಆಕ್ಷೇಪ ಉಜಾರಣೆ ಹಾಜ್ರುಪಡ್ಸಬೇಕು ಯಿದಕ್ಕೆ ತಪ್ಪಿದಲ್ಲಿ ನಿಮ್ಮ ಗೈರಹಾಜ್ರಿಯಲ್ಲಿ ಸದ್ರಿದಾವೆ ಯೆಕ್ಸಪಾರ್ಟಿಯಿಂದ ತೀರ್ಮಾನಿಸಲಾಗುತ್ತದೆ. ತಿಳಿದಿರಲಿ

H. Srinivas Rao,
President.

ಮೊಕ್ಕಾಂ ಕೋಟೇಶ್ವರ ತಾ. 16-8-1952

ಉಡುಪಿ ಡಿ ಮು. ಕೋರ್ಟಿನಲ್ಲಿ

O. S No. 283/1952

ಪ್ರೊಕಾಡೆ ರಾಮಕೃಷ್ಣ ಭಟ್ಟ —ವಾದಿ,

ಮತ್ತು

1 ಕೆ. ನಾರಾಯಣ ಶೆಟ್ಟಿ 2 ಕೆ. ವಿಠಲ ಶೆಟ್ಟಿ.

—ಪ್ರತಿವಾದಿರು

ಇವರೊಳಗೆ

ಮೇಲ್ಕಂಡ ವ್ಯಾಜ್ಯದಲ್ಲಿ ಸದ್ರಿ ಪ್ರತಿವಾದಿರಿಗೆ ಅಗತ್ಯವ್ಯಾಜ್ಯದ ನೋಟೀಸಿನ ತಾರೀಕು 6-9-52ಕ್ಕೆ ಇಟ್ಟಿರುವದರಿಂದ ಪ್ರತಿವಾದಿರು ತಮ್ಮ ಆಕ್ಷೇಪಣೆ ಹೇಳುವವನ್ನು ಅಂದಿನ ಸದ್ರಿ ಕೋರ್ಟಿನಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

P. Padmanabha Rao

Vakil for plaintiff

Date 1 5 52 Udupi

ಅಸಾಧಾರಣ ವಾಗ್ಮಿಗಳೂ ಗ್ರಂಥಕರ್ತರೂ ಆದ
ಶ್ರೀ. ಎಸ್. ಪಂಚಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್, ಬಾರ್. ಎಟ್ ಲಾ,
ಎಫ್. ಎಸ್. ಎಲ್. ಅವರು ಬರೆದ Tales of Ind ಎಂಬ ಕಥಾವಳಿಯ ಅನುವಾದ.

ಭಾರತೀಯ ಕತೆಗಳು

ಅನುವಾದಕರು—ಶ್ರೀ. ಕೊರಡ್ಕಲ್ ಶ್ರೀನಿವಾಸ ರಾವ್.

ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಬೇಕೆಂಬ ಹಿರಿಯಾಸೆ ಇದ್ದೇ ಇದೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸಂದರ್ಭೋಚಿತವಾದ ಉಪಮೆ, ಗಾದೆ, ಕಥೆ ದೃಷ್ಟಾಂತ ಇತ್ಯಾದಿಗಳು ಬರಬೇಕು. ಅಂತಹ ಅಮೂಲ್ಯ ಭಂಡಾಗಾರವೇ ಈ ಭಾರತೀಯ ಕತೆಗಳು

ಎಲ್ಲರೂ ಅವಶ್ಯವಾಗಿ ಓದತಕ್ಕ ಅಪೂರ್ವ ಗ್ರಂಥ
151 ಕತೆಗಳು ಬೆಲೆ ರೂ 1-12-0
ನವಭಾರತ ಪುಸ್ತಕ ಭಂಡಾರ, ಉಡುಪಿ

೨ನೇ ಪುಟದಿಂದ ಮುಂದುವರಿದುದು

ನೂತನ ನಗರ-ಗಾಂಧೀಧಾಮ

ಹಾರ ಮಾಡಲು ಭಾರತ ಸರಕಾರವು ಪಶ್ಚಿಮ ಕರಾವಳಿಯಲ್ಲಿ ಕಾಂಡಲಾವನ್ನು ಪ್ರಬುದ್ಧ ಬಂದರವಾಗಿ ಬೆಳೆಸಬೇಕೆಂದು ನಿಶ್ಚಯಿಸಿದೆ. ಸುಮಾರು ೧೩ಕೋಟಿ ರುಪಾಯಿಗಳಷ್ಟು ವೆಚ್ಚಬರುವ ಈ ಯೋಜನೆಯನ್ನು ಈಗಾಗಲೇ ತೊಡಗಲಾಗಿದೆ. ೧೯೫೫ರ ಅಂತ್ಯದೊಳಗೆ ಈ ಯೋಜನೆಯು ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಬಂದರದ ಅಡಿಗಲ್ಲನ್ನು ಪ್ರಧಾನಿ ನೆಹರೂ ಆರು ತಿಂಗಳ ಹಿಂದೆ ಇಟ್ಟರು. ಹಳೆಯ ಬಂದರ ಪ್ರದೇಶದಿಂದ ಎರಡೂವರೆ ಮೈಲು ದೂರದಲ್ಲಿ ಹೊಸತಾದ ಬಂದರ ತಲೆಎತ್ತುವುದು.

ಇನ್ನೊಂದು ಆಶಾಜ್ಯೋತಿ ಎಂದರೆ- ಭಾರತದ ಉಳಿದೆಡೆಗಳೊಡನೆ ಗಾಂಧೀಧಾಮದ ರೈಲುಮೂಲಕ ಜೋಡಣೆ. ದೀಸಾ ಹಾಗೂ ಕಾಂಡಲಾಗಳ ನಡುವೆ ೧೭೩ ಮೈಲಿ ದೂರದ ಮೀಟರ ಗಾಜ್ ರೈಲು ಮಾರ್ಗವನ್ನು ಈಗಾಗಲೇ ತೊಡಗಲಾಗಿದೆ. ಅಕ್ಟೋಬರದಲ್ಲಿ ಈ ಹೊಸ ಮಾರ್ಗವನ್ನ ರೈಲು ಓಡಾಟಕ್ಕೆ ತೆರೆಯಬಹುದ. ಇದು ಕಾಂಡಲಾ ಬಂದರದ ವ್ಯಾಪಾರವನ್ನು ಇಮ್ಮಡಿಮಾಡುವುದಲ್ಲದೆ, ಗಾಂಧೀಧಾಮದ ಅಭಿವೃದ್ಧಿಯಲ್ಲಿ ಮಹತ್ವದ ಹೆಜ್ಜೆ ಇಡುವುದು ನಿಶ್ಚಯ.

ಅಮೇರಿಕೆಯ ನೆರವು

ಕಚ್ಛವು ರುಕ್ಷ ಪ್ರದೇಶವಾಗಿದ್ದರೂ- ಈ ಪ್ರದೇಶದ ವಾರ್ಷಿಕ ಮಳೆಯು ೧೩ ಇಂಚುಗಳಷ್ಟು ಅಲ್ಪವಿದ್ದರೂ--ಗಾಂಧೀಧಾಮದಲ್ಲಿ ವಿಪುಲ ಜಲವಿರುವುದು ಸೌಭಾಗ್ಯದ ಸಂಗತಿ. ನೀರಿನ ಕೊರತೆಯನ್ನು ಜಾರ್ಜ ಸಿ. ಟೇಲರ ಎಂಬ ಅಮೇರಿಕೆಯ ತಜ್ಞರ ನೆರವು ಪಡೆದು ಪರಿಹರಿಸಲಾಗಿದೆ. ಭಾರತ ಹಾಗೂ ಅಮೇರಿಕೆಯ ನಡುವೆ ನಡೆದ ತಾಂತ್ರಿಕ ಸಹಾಯದ ಒಡಂಬಡಿಕೆಯನ್ವಯ ಟೇಲರ ಸಹಾಯವು ದೊರಕಿದೆ. ಒಂದು ವರ್ಷಕ್ಕೂ ಮಿಕ್ಕಿ ಸಂಶೋಧನೆಗಳನ್ನು ನಡೆಸಿದ ಬಳಿಕ, ಗಾಂಧೀ ಧಾಮದಿಂದ ಏಳು ಮೈಲಿ ದೂರದಲ್ಲಿರುವ ಪರಿಯಲ್ಲಿ ಒರತೆ ತುಂಬಿರುವುದನ್ನು ಅವರು ಕಂಡುಕೊಂಡರು.

ಸಂಶೋಧನೆಯ ಪ್ರಕಾರ ೬೦೦ ಅಡಿಗಳಷ್ಟು ಆಳದ ವರೆಗೂ ತೂತು ಕೊರೆದರ. ೧೬ರಿಂದ ೧೯ ಇಂಚು ಅಗಲದ ಹಾಗೂ ೨೫೦ರಿಂದ ೩೦೦ಅಡಿ ಆಳದ ಐದು ಕೊಳವೆ ಬಾವಿಗಳನ್ನು ಇಷ್ಟರ ತನಕ ತೋಡಿರುವರು. ಪ್ರತಿಯೊಂದರಿಂದಲೂ ತಾಸಿಗೆ ೪೦,೦೦೦ ಗೆಲನು ನೀರು ಸೇದಬಹುದು. ೧೩ ಮೈಲುಗಳಷ್ಟು ಉದ್ದದ ನಳ್ಳಿಯ ಸಾಲುಗಳಿಂದ ಗಾಂಧೀಧಾಮ ಹಾಗೂ ಕಾಂಡಲಾಕ್ಕೆ ನೀರು ಬರುವುದು.

ಹೀಗೆಯೇ ನಾಲ್ಕೈದುಲಕ್ಷ ಜನರಿಗೆ ಇರಲು ಅನುಕೂಲವಾಗುವಂತೆ ಕೇಂದ್ರವನ್ನು ವಿಸ್ತರಿಸುವ ಯೋಜನೆಯನ್ನು ಅಮೇರಿಕದ ಗೃಹ ನಿರ್ಮಾಣ ತಜ್ಞರಾದ ಕಂಪೆನಿಯೊಂದು ಸಿದ್ಧಗೊಳಿಸಿದೆ.

ಉಜ್ವಲ ಭವಿಷ್ಯ

ನಗರವು ಮೂಲಭೂತವಾದ ಸಮಸ್ಯೆಗಳನ್ನು ಅರಿಸಿ, ಸಾಧಾರಣ ಜೀವನವನ್ನು ಸುಗಮತೆಯಿಂದ ಅನುಭವಿಸಲು ತಕ್ಕುದಿರುವಂತೆ—ಮನುಷ್ಯನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಭಾವನೆಗಳನ್ನೂ ಪೋಷಿಸಿಕೊಂಡು ಬರುವಂತೆ ನಿರ್ಮಾಣಗೊಂಡಿದೆ. ಈಗಾಗಲೇ ಎಂಟು ಪ್ರಾಥಮಿಕ ಶಾಲೆಗಳನ್ನೂ ಒಂದು ಮಾಧ್ಯಮಿಕ ಶಾಲೆಯನ್ನೂ ತೆರೆದಿರುವರು. ೮೦೦ ಮಂದಿ ವಿದ್ಯಾರ್ಥಿಗಳು ಇಲ್ಲಿ ಶಿಕ್ಷಣ ಪಡೆಯುತ್ತಿರುವರು.

ಇದಲ್ಲದೆ ನಿರಾಶ್ರಿತರ ಸಂಪೂರ್ಣ ಸಹಕಾರದಿಂದಲೂ, ಭಾರತ ಸರಕಾರದ ಸಾಲ ಹಾಗೂ ಸಹಾಯ ಧನಗಳ ನೆರವಿನಿಂದಲೂ, ದೀಸಾ-ಕಾಂಡಲಾಗಳ ನಡುವೆ ಓಡುವ ರೈಲಿನ ಮೂಲಕವಾಗಿಯೂ ಪ್ರಬುದ್ಧ ಬಂದರವಾಗಿ ಕಾಂಡಲಾ ಪರಿವರ್ತನೆಗೊಳ್ಳುವುದರಿಂದಲೂ—ಗಾಂಧೀ ಧಾಮದ ಭವಿಷ್ಯವು ತುಂಬ ಉಜ್ವಲವಾಗಿದೆ ಎಂಬಲ್ಲಿ ಸಂದೇಹವಿಲ್ಲ. ಪ್ರತಾಪದಿಯಾಲ ದಾಸರಿಗಂತೂ—ಈ ಕೇಂದ್ರ ನಿರಾಶ್ರಿತರ ಉತ್ಸಾಹ ಮತ್ತು ಸ್ವಾವಲಂಬನೆಯ ಜ್ವಲಂತದ್ಯೋತಕವೆಂದು ಬಹಳ ಹೆಮ್ಮೆ: ಇನ್ನೂ ಹೆಚ್ಚಿನ ಸಾಹಸಕ್ಕೆ ಇದು ಮತ್ತಷ್ಟು ಸ್ಫೂರ್ತಿ ನೀಡುವುದು ಖಂಡಿತ

In the Court of the
Subordinate Judge of
South Kanara.

O. S. No 50/1952

Between—
Daramma and others— Plaintiffs.
and
Somappa Shetty & others— Defendants.

To defendants—
11 Kittamma, 12 Manjayya, children of Nokku, 34 Girija, daughter of Veeramma, 49 Bhama, daughter of Rukku 11th defendant is residing in Parambala House in Padumarnad village of Karkal Taluk, 12th defendant is residing at Charni Road, Jan Mahammad Building Hindu Hotel, Bombay 4, 34th defendant is residing at Kalurguthu mane, Iruvail village of Karkal Taluk and 49th defendant is residing at Alexander Dock, Shed No. 4, Hindu Hotel Dock No. 4, Bompay 1.

Please take notice that the plaintiffs have filed the above suit for partition of the family properties and possession of their share etc. and the same stands posted to 29-8 52. Please also take notice that if you fail to appear before the above Court on the above date at 10 A M and plead your defence, if any, you will be declared exparte and the suit proceeded with.

K. S. Hegde,
Advocate for plaintiffs.
Mangalore, dated 13 8-52.

THE VIJAYA BANK LTD., BYNDOOR S. K.

ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು ದ. ಕ

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನಮೇಲೆ ಪಡೆದ ಸಾಲವನ್ನು ಮುಂಬ್ಲಾವತಿ ಮಾಡುವರೆ ರಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ಅಸ್ಲು-ವ-ಬಡ್ತಿ ಯಾವುದನ್ನೂ ಈ ತನಕವೂ ಕೊಡದೆ ಬಾಕಿಮಾಡಿಕೊಂಡಿರುವುದರಿಂದ ಸದ್ರಿಯವರು ಈಡಿಟ್ಟಿರುವ ನಗವನ್ನು ತಾರೀಕು 29-8-1952ನೇ ಶುಕ್ರವಾರ ಅಪರಾಹ್ನ ಗಂಟೆ 2ಕ್ಕೆ ಯಾ- ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಹರಾಜು ಮಾಡಲಾದೀತು, ತಿಳಿದಿರಲಿ.

ಸಾಲದ ಜಂಜ್ರಾ ನಂ	ಹೆಸರು ಮತ್ತು ವಿಳಾಸ	ಮೊಬಲಗು
		ರೂ. ಅ.
1558/50	ಶ್ರೀ H. ಸುಬ್ರಾಯ ಪೇದೆ, ದಿ ಕೆನರಾ ಇಂಡಸ್ಟ್ರಿಯಲ್ ಮತ್ತು ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್. ಬೈಂದೂರು	35 3
873/50	—do—	21 15
66/51	—do—	18 9
113/51	—do —	40 7
160/52	ಜ. ಶೇಕ್ ದಾವುದ್ ಹಸನ್ ಸಾಹೇಬ್, ಫಕೀರ ಸಾಹೇಬರ ಮಗ, ವ್ಯಾಪಾರಿ, ಶಿರೂರು	206 4
404/51	ಶ್ರೀ S ನರಸಿಂಹ ಸೆಟ್ಟಿ, ಸೇನಾಪುರ ನಾಗ್ಯ ಸೆಟ್ಟರ ಅಳಿಯ, ಹಾಲಿ ಲಂಬಾಗಿಲಲ್ಲಿರುವವರು, ಉಪ್ಪುಂದ	82 3
933 51	—do—	186 9
524/51	ಶ್ರೀ ಹೊನ್ನಯ್ಯನ ಮಂಜುನಾಥ ಸೇರುಗಾರ, ಅಣ್ಣಪ್ಪ ಸೇರುಗಾರರ ಮಗ, ಪಡುವರಿ	14 1
562/51	ಶ್ರೀ ಸೋಮನಮಾರ್ಗ ಖಾರ್ವಿ, ಅಳವೆಕೋಡಿದಾರರ ಮಗ, ತಾರಾಪತಿ, ಪಡುವರಿ	59 11
574/51	ಶ್ರೀ ಬಾಡ ಹೇರಂಭ ಜೋಷಿ, ಕೃಷ್ಣ ಜೋಯಿಸರ ಮಗ, ಬಾಡ, ಬೈಂದೂರು	25 11
963/51	—do—	325
611/51	ಶ್ರೀ ಕಲ್ಕಂಟ ರಾಮ್ಮ ಸೇರುಗಾರ್, ತಿಮ್ಮಪ್ಪ ಸೇರುಗಾರರ ಮಗ, ಕೋಟೆಬಾಗಿಲು, ಪಡುವರಿ	7
944/51	ಶ್ರೀ ಮಾಬಾರ ನಾರಾಯಣ ಸೇರುಗಾರ, ದಾಸ ಸೇರುಗಾರರ ಮಗ, ಕೋಟೆಬಾಗಿಲು, ಪಡುವರಿ	76 13
1333/51	ಶ್ರೀ ಪಾಂಡುರಂಗ ಸೇಟ್, ಸೇಶಪ್ಪ ಸೇಟರ ಮಗ, ಉಪ್ಪುಂದ	47 8
1387/51	ಶ್ರೀ K. G. ಶಿವರಾಮ ಸೇರುಗಾರ, ವೆಂಕಟ್ರಮಣ ಸೇರುಗಾರರ ಮಗ, ಕೋಟೆಬಾಗಿಲು ಪಡುವರಿ	94 11
38/51	ಶ್ರೀ S. ಶಣಿಯಪ್ಪಯ್ಯ, ದೇವಪ್ಪಯ್ಯನವರ ಮಗ, ಸೆಕ್ರೆಟರಿ, ಕೊಲ್ಲೂರ್ ಕಾರ್ ಸಹಕಾರ ಸಂಘ ಶಿರೂರು, [ಮೇಲ್ಬಂಗ್ಲೆ]	109 6
680/50	—do—	714 3

ಬೈಂದೂರು;
14-8—1952.

ಎಚ್. ರಾಜೀವ ಸೆಟ್ಟಿ.
ಏಜಂಟ್.

ಸ್ವೀಕಾರ ವಿಮರ್ಶೆ

ವರ್ತಮಾನ ಕಾಲದ ನಾಲ್ವರು ಮಹಾನುಭಾವರು— (ಬರೆದವರು: ಕು. ಶಿ. ಹರಿದಾಸ ಭಟ್ಟ. ಪ್ರಕಾಶಕರು: ಅಂತರಂಗ ಕಾರ್ಯಾಲಯ ಉಡುಪಿ. ಬೆಲೆ: ನಾಲ್ಕಾಣೆ)

ಈ ಕಿರು ಹೊತ್ತಿಗೆಯಲ್ಲಿ ಸರಸವಾದ ನಾಲ್ಕು ಜೀವನ ಚಿತ್ರಗಳಿವೆ: ರಾಜಕಾರಣಿಗಳೆನಿಸಿದ ಸ್ಟಾಫೋರ್ಡ ಕ್ರಿಪ್ಸ ಮತ್ತು ಆಂದ್ರೇ ಗ್ರೊಮಿಕೊ, ಸುಪ್ರಸಿದ್ಧ ನಾಟಕಕಾರ ಜಾರ್ಜ ಬರ್ನಾರ್ಡ ಷಾ ಮತ್ತು ವಿಶ್ವ ವಿಖ್ಯಾತ ಭೌತ ವಿಜ್ಞಾನಿ ಅಲ್ಬರ್ಟ ಐನ್‌ಸ್ಟೀನ್ ಇವರ ಕುರಿತು ಬರೆದ ಪರಿಚಯಾತ್ಮಕ ಲೇಖನಗಳಿವು: ಬಹಳ ಮನೋಜ್ಞವಾಗಿಯೂ ರಸಭರಿತವಾಗಿಯೂ ಬರೆಯಲಾಗಿವೆ ಜೊತೆಗೆ ವ್ಯಕ್ತಿಯನ್ನು ನೋಡುವ ಕಣ್ಣುಗಳಲ್ಲಿ ನಾವೀನ್ಯವೂ ಇದೆ.

ಮಿತ ಸಂತತಿ— (ಪ್ರಕಾಶಕರು: ಅಂತರಂಗ ಕಾರ್ಯಾಲಯ ಉಡುಪಿ. ಬೆಲೆ: ಆರ ಣೆ.)

“ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರಗಳೂ ಉಪಾಯಗಳೂ” ಈ ಪುಸ್ತಕದಲ್ಲಿ ಅಡಕವಾಗಿದೆ ಎಂಬುದನ್ನು ಯಾರೊಬ್ಬರೂ ಸರಿಯಾಗಿಯೇ ಊಹಿಸಬಹುದು. ಸಂತತಿ ವೃದ್ಧಿಗೆ ಮಿತಿಯು ಅಗತ್ಯವೆಂಬುದನ್ನು ಸರ್ವ ಪ್ರಥಮವಾಗಿ ಪ್ರತಿಪಾದಿಸಿ, ಜನನ ಮರಣ ಸಂಖ್ಯೆಗಳಲ್ಲಿ ಸಮತೋಲವಿದ್ದರೆ ಮಾತ್ರ ಲೋಕ ಕ್ಷೇಮ ನೆಲೆಸುವುದೆಂದು ಹೇಳಿದ್ದಾರೆ. ಹಾಗೆಂದು ಸಂತತಿ ವರ್ಧನೆಯನ್ನು ಸಿಕ್ಕಾಪಟ್ಟೆ ರೀತಿಯಿಂದ ಮಾಡಲು ಹವಣಿಸಿದರೆ ಅದರಿಂದ ಕೆಡುಕುಂಟಾದೀತೆಂದೂ ಲೇಖಕರು ಒಪ್ಪುವರು. ಆದುದರಿಂದ ಶಾಸ್ತ್ರೀಯವೂ ವೈಜ್ಞಾನಿಕವೂ ಆದ ರೀತಿನೀತಿಗಳಿಂದ ಗರ್ಭೋತ್ಪತ್ತಿಯಾಗದ ಹಾಗೆ ಏನು ಮಾಡಬಹುದೆಂದು ಚುಟುಕಾಗಿ ವಿವರಿಸಿರುವರು. ಸುಮಾರು ಒಂಭತ್ತು ಬಗೆಯ ಉಪಾಯಗಳನ್ನು ಇಲ್ಲಿ ಹೇಳಲಾಗಿದೆ. ಸಂಯಮ ಮತ್ತು ಬ್ರಹ್ಮಚರ್ಯದಂಥ ನೈತಿಕ ಸೂತ್ರಾವಲಂಬದಿಂದ ಮಿತಸಂತತಿಯನ್ನು ಸಾಧಿಸುವುದು ಸಾರ್ಥಕವೆನಿಸುವುದಿಲ್ಲ ಎಂಬ ಅನಂಬುಗೆ ಲೇಖಕರಿಗಿವೆ. ಇದನ್ನು ಸಂಪೂರ್ಣ ಅಲ್ಲಗಳೆಯಲು ಬರವುದಿಲ್ಲವಾದುದರಿಂದ-ಅದಕ್ಕಿಂದ ಸುಲಭದ ವೈಜ್ಞಾನಿಕ ಉಪಾಯಗಳಿಂದ ಮಿತಸಂತತಿಯೆಡೆಗೆ ಜನಸಮುದಾಯವು ಪ [illegible] ನಿಲ್ಲ

ಕಾಸರಗೋಡು ಡಿ. ಮುಂ
ಕೋರ್ಟಿನಲ್ಲಿ

S. C. No. 100/52

ಕೆ ಮಾಧವ ಮಲ್ಯ ಅಪ್ಪು ಮಲ್ಯರ ಮ
ಗ ಕಾಸರಗೋಡು ಪೇಟೆಯಲ್ಲಿ ವ್ಯಾಪಾ
ಮಾಡುವವರು —ವಾ

ಮತ್ತು

ಜೆ. ಶಂಕ್ರ ನಾರ್ಣಪ್ಪಯ್ಯ ಜೊಕಲ ರ
ಮಕೃಷ್ಣಪ್ಪಯ್ಯನವರ ಮಗ, ಕಾಫಿ ಹೋ
ಲ್ ಕೀಪರ ಕಾಸರಗೋಡು ಕ್ಯಬೆಯ
ವ್ಯಾಪಾರಸ್ತ. —ಪ್ರತಿವಾ

ಪ್ರತಿವಾದಿಯಾದ ವಾದಿಗೆ ಬರ ರೂಪಾ
102-13-9ನ್ನು ಬರಮಾಡಿ ಕೊಳ್ಳುವರೆ ದ
ಳ್ಲ ಮಾಡಿದ ಮೇಲ್ಕಂಡ ವ್ಯಾಜ್ಯವು ತಾ
ಕು 30-8-1952ಕ್ಕೆ ಪ್ರತಿವಾದಿಯ ನೋ
ಸಿನ ಬಗ್ಗೆ ಯಿಟ್ಟದೆಯಂತ ಈ ಮೂಲ
ಪ್ರತಿವಾದಿಗೆ ತಿಳಿಸಲಾಗಿದೆ.

(K. Devadas Shena
ವಾದಿಯ ವಕೀಲ
ಕಾಸರಗೋಡು 15-8-52

Read
'NAVAYUGA' Week
Voice of the people Excelle
Media and Reading Valu

ಭಾರತೀಯ ಸಂಗೀತವು ಎತ್ತ?

(ಲೇಖಕ: ವೈದ್ಯಗುರು ಎಂ. ಆರ್. ಭಟ್)

ಫಿಲ್ಮ್-ಇಂಡಿಯಾ-ರೇಡಿಯೊದಲ್ಲಿ, ಫಿಲ್ಮ್ ಸಂಗೀತವು ಮೆಲ್ಲಮೆಲ್ಲಗೆ ಕಡಿಮೆ ಮಾಡಲ್ಪಡುವುದು: ಹಾಗೂ ಶಾಸ್ತ್ರೀಯ ಸಂಗೀತಕ್ಕೆ ಪ್ರಮುಖ ಸ್ಥಾನವು ನೀಡಲ್ಪಡುವುದೆಂದು ಘೋಷಣೆ ಮಾಡಿದಂದಿನಿಂದ, ವಿಭಿನ್ನ ಸಮಾಚಾರ ಪತ್ರಗಳಲ್ಲಿ, ವಿವಿಧ ಪ್ರಕಾರದ ವಿಚಾರಗಳು ವ್ಯಕ್ತಮಾಡಲ್ಪಟ್ಟವು. ಶಾಸ್ತ್ರೀಯ ಸಂಗೀತವು ಸಂಗೀತವಲ್ಲವೆಂದು ಭಾವಿಸುತ್ತ, ಅದನ್ನು ಕೇವಲ ಕೆಲವು ರೂಢಿವಾದಿಗಳು ಹೇಂ ಹೇಂ ಅನ್ನುವದೆಂದು ಭಾವಿಸಿದರು; ಇನ್ನೊಂದೆಡೆಯಲ್ಲಿ, ಕೆಲವರು ಫಿಲ್ಮ್ ಸಂಗೀತವನ್ನು ತಿರಸ್ಕಾರ ದೃಷ್ಟಿಯಿಂದ ನೋಡುವರು: ಕಾರಣವೇನಂದರೆ, ಅದರಲ್ಲಿ ಸ್ವಲ್ಪ ಮಟ್ಟಿಗೆ ಸಂಗೀತದ ಪಾಶ್ಚಾತ್ಯ ಛಟ ನೀಡಿರುವರು; ಮತ್ತು ಅದು ಶಾಸ್ತ್ರೀಯ ನಿಯಮಗಳ ಪಾಲನೆಕೂಡ ಮಾಡಲಿಲ್ಲ: ಇದೇ ಮಾತ್ರವಲ್ಲ: ಶಾಸ್ತ್ರೀಯ ಸಂಗೀತಜ್ಞರಲ್ಲಿಯೂ ಸ್ವಯಂ ಮತಭೇದವಿದೆ; ಮಾತ್ರವಲ್ಲ ದೊಡ್ಡ ವಿವಾದವು ಉಪಸ್ಥಿತವಾಗಿದೆ; ಇಂತಹ ಸ್ಥಿತಿಯಲ್ಲಿ ಯಥಾರ್ಥ ನಿಷ್ಕರ್ಷ ಮಾಡುವುದು ಕಠಿಣ ಸಾಧ್ಯಕಾರ್ಯವೆನ್ನಬೇಕಾಗಿದೆ ಈ ಕಾರಣದಿಂದ, ಇದೇ ಸ್ಥಿತಿಯನ್ನು ನಿಷ್ಪಕ್ಷರೂಪದಿಂದ ವಿಮರ್ಶಿಸುವುದು ಅವಶ್ಯಕ. ವಾಸ್ತವದಲ್ಲಿ ನಮ್ಮ ಸಂಗೀತದ ಗುಣದೋಷಗಳುಯಾವುವು? ಎಂಬುದನ್ನು ನಾವು ಕಂಡು ಹಿಡಿಯಬೇಕು.

ಮೊತ್ತಮೊದಲು ನಾವು ಫಿಲ್ಮ್ ಸಂಗೀತವನ್ನೇ ತೆಗೆದು ಕೊಳ್ಳುವ. ಇಂದಿನ ಫಿಲ್ಮ್ ಸಂಗೀತವು ಸರ್ವಸಾಧಾರಣ ಜನರಲ್ಲಿ ಲೋಕಪ್ರಿಯವಾದರೂ, ಅದನ್ನು ಸಂಗೀತವೆಂದು ಹೇಳಲು ಬರುವುದಿಲ್ಲ. ಫಿಲ್ಮ್ ಗೀತಗಳನ್ನು ಅವರ ಸಂಗೀತದ ಕಾರಣ ಜನರು ಹೆಚ್ಚಾಗಿ ಹಾಡುವುದಲ್ಲ. ಆದರೆ ಸಾಮಾನ್ಯರೂಪದಿಂದ ಅವರ ಮನಸ್ಸಿನಲ್ಲಿ ಉಲ್ಲಾಸ ಹಾಗು ಪ್ರಫುಲ್ಲತೆಯನ್ನು ಉತ್ಪನ್ನ ಮಾಡುವ ಅದರ ಭಾವಗಳ ಕಾರಣದಿಂದಲೇ ಜನರು ಹಾಡುತ್ತಾರೆ. ಸಕಲ ಫಿಲ್ಮ್ ಗೀತಗಳನ್ನು ಈ ಸಂಗತಿಯಲ್ಲಿ ಹಾಕಲು ಸಾಧ್ಯವಿಲ್ಲ ಎಂಬುದನ್ನು ಒಪ್ಪಬೇಕಾಗಿದೆ; ಆದರೆ ಫಿಲ್ಮ್ ಸಂಗೀತದಲ್ಲಿ ಒಳ್ಳೇತಾಳ, ಹಾಗು ಉತ್ತಮ ಭಾವನೆಗಳು ಅಪರೂಪ ಕಾಣಸಿಗುತ್ತವೆ. ಗತ ಎರಡು ಮೂರು ವರ್ಷಗಳಿಂದ ಫಿಲ್ಮ್ ಸಂಗೀತದ ಮಟ್ಟವು ಪೂರ್ಣ ಇಳಿಯುತ್ತಲಿದೆ.

ಇನ್ನೊಂದೆಡೆಯಲ್ಲಿ, ನಮ್ಮ ಶಾಸ್ತ್ರೀಯ ಸಂಗೀತಜ್ಞರ ಕಲಾತ್ಮಕ ಮಲ್ಲಯುದ್ಧದಲ್ಲಿ ಸಾಮಾನ್ಯ ಜನರಿಗೆ ಯಾವರಸವೂ ಲಭಿಸುವುದಿಲ್ಲ: ಮಾತ್ರವಲ್ಲ ಕಲೆಯು ಕಾಣಸಿಗುವಿಲ್ಲ ಈ ಸಂಗೀತಜ್ಞರು ಒಂದಾವರ್ತಿ ಮಂಚದ ಮೇಲೆ ಆರೂಢರಾದೊಡನೆ, ಜಿಗಿದಾಡಿ ಕುಣಿದಾಡಿ, ಮುಖವನ್ನು ಕೆಡಿಸಿಬಿಟ್ಟು, ಹಾವಭಾವದಿಂದ ಕೈಗಳನ್ನು ಬೀಸು ಮಾಡಿ ಯಥೇಷ್ಟ ಕಾಲ ತಮ್ಮ ಕಲೆಯ ಸಕಲ ಚಾತುರ್ಯಹಾಗು ಕೌಶಲ್ಯವನ್ನು ಜನರಿಗೆ ಬೇಸರವಾಗುವಂತೆ ಹಾಡಿ ತೋರಿಸಲು, ತಮ್ಮ ಜನ್ಮಸಿದ್ಧ ಅಧಿಕಾರವೆಂದು ಭಾವಿಸುತ್ತಾರೆ. ಮಾಧುರ್ಯವು ಅವರನ್ನು ಸ್ಪರ್ಶಿಸುವುದಿಲ್ಲ. ಮಂಚದ ಸುತ್ತಲೂ ಕೂತುಕೊಂಡಿರುವ ಜಾಣರ ಶಹಬಾಸುಗಳನ್ನು ಹೊಂದುವುದೇ ಅವರ ಮುಖ್ಯ ಉದ್ದೇಶವೆಂದು ಕಾಣಿಸುತ್ತದೆ, ಆದರಿಂದ, ಅವರು ಕೃತ್ರಿಮ ಕರ್ಣಕಟು ಶೈಲೀ ವಿಸ್ತಾರಮಾಡಿ ಅಥವಾ ಕೌಶಲ ಪ್ರದರ್ಶನ ಮಾಡಿ, ನಿಲ್ಲುತ್ತಾರೆ; ಅದರ ಪರಿಣಾಮವೇನಂದರೆ, ಸಾಮಾನ್ಯವ್ಯಕ್ತಿಯು ಶಾಸ್ತ್ರೀಯ ಸಂಗೀತವನ್ನು ಕಂಠದ ಗರಗರಿಯೆಂದು ಭಾವಿಸಿ, ಅವರ ಪರಿಹಾಸ ಮಾಡುತ್ತಾನೆ: ಜನರಿಗೆ ಮೊದಲೇ ಸಂಗೀತದ ವಿಷಯದಲ್ಲಿ ಏನೂ ಜ್ಞಾನವಿಲ್ಲ: ಫಿಲ್ಮುಗಳು ಹಾಗೂ ರೇಡಿಯೋಗಳು ಅವರ ಅಭಿರುಚಿಯನ್ನು ಇನ್ನೂ ಅಧಿಕ ಕೆಡಿಸಿವೆ: ಮತ್ತು ಆದರಿಂದ, ಆ ಜನರು ಅತಿ ಉತ್ಕೃಷ್ಟ ಸ್ವರವೈಚಿತ್ರ್ಯ ಹಾಗೂ ನಾದ ಮಾಧುರ್ಯದ ಚಮತ್ಕಾರವನ್ನು ತಿಳಿಯುವ ಬದಲಿಗೆ, ಕಾವಲು ನಾಯಿಯಂತೆ ಗುರುಗುರೆನ್ನುತ್ತಾರೆ: ಇದರಿಂದ, ಸಂಗೀತ ಜಗತ್ತಿನಲ್ಲಿ ಪದಾರ್ಪಣ ಮಾಡಲು, ಅವರು ಅಸಮರ್ಥರಾಗುತ್ತಾರೆ. ಕವಿತೆಯಲ್ಲಿಯೂ ಗಾಬರಿಯಾಗುತ್ತಾರೆ.

ಸಂಗೀತಕ್ಕೆ ಹಲವು ರಹಸ್ಯಗಳಿವೆ: ರಾಗ, ತಾಳ, ಅರ್ಥ ಹಾಗೂ ಮಾಧುರ್ಯ: ಫಿಲ್ಮ್ ಗೀತಗಳಲ್ಲಿ ಅರ್ಥವೇ ಕಾಣಸುತ್ತವೆ; ರಾಗ, ತಾಳ ಹಾಗೂ ಮಾಧುರ್ಯಗಳು ನ್ಯೂನವಾಗಿವೆ. ಶಾಸ್ತ್ರೀಯ ಸಂಗೀತದಲ್ಲಿಯೂ, ಅರ್ಥ ಮತ್ತು ಮಾಧುರ್ಯದ ಲೋಪವಿರುತ್ತದೆ; ಎರಡು ಅಥವಾ ನಾಲ್ಕು ಶಬ್ದಗಳನ್ನು ತಕ್ಕೊಂಡು ಒಂದುವರೆ ಘಂಟೆ ಹೇಂ ಹೇಂ ಕರಿಸುವುದನ್ನೇ ಸಂಗೀತವೆಂದು ತಿಳಿಯುತ್ತಾರೆ, ಕವಿತೆಯ ಭಾವಗಳ ಅನುಸಾರ ರಾಗ ಹಾಗು ಲಯವನ್ನು ಅರಿಸಿ, ಅನಂತರ ಹಾಡುವಕಾಲದಲ್ಲಿ ಭಾವಗಳನ್ನು ಅರಿತು ನಮ್ಮ ಕಂಠಧ್ವನಿಯನ್ನು ಆ ಭಾವದ ಅನುಸಾರ ಹೆಚ್ಚಿಸುವುದು. ಅಥವಾ ಕಡಿಮೆ ಮಾಡುವುದು (increase or decrease the volume of our voice) ಅವಶ್ಯಕ; ದುಃಖ ಪೂರ್ಣ ರಾಗವನ್ನು ಹಾಗು ಶೋಕ ಮತ್ತು ವಿರಹದ ಹಾಡನ್ನು ದ್ರುತಲಯದಲ್ಲಿ ನಾಲ್ಕಾಡಿ ತಾನಗಳೊಡನೆ ಹಾಡುತ್ತಾರೆ; ಪ್ರಸನ್ನತೆ ಪ್ರಕಟಿಸುವ ಹಾಡುಗಳನ್ನು ಸ್ಮರಣರೂಪದಲ್ಲಿ ವಿಲಂಬಿತಲಯದಲ್ಲಿ ಅತ್ತೂ ಅತ್ತೂ ಹಾಡುವುದೂ ಕಾಣಬರುತ್ತದೆ; ಮತ್ತು ಅವುಗಳುಕೂಡಾ ಗಂಭೀರ ಪ್ರಕೃತಿಯ ರಾಗಗಳಲ್ಲಿ ಹಾಡಲ್ಪಡುತ್ತವೆ; ಹಾಡುವ ಮುಂಚಿತವಾಗಿ ಜನರಿಗೆ ಹೆಚ್ಚುಕಡಿಮೆ ರಾಗದ ಪರಿಚಯ ನೀಡುವುದೂ ಅವಶ್ಯಕವಾಗಿದೆ. ಒಮ್ಮೆ ಒಬ್ಬ ಗಾಯಕನು ತಾನು ದೀಪಕರಾಗವನ್ನು ಹಾಡುವೆನೆಂದು ಹೇಳಿ ತಬಲಾ ಮತ್ತು ಸಾರಂಗಿ ಬಾರಿಸುವವರ ಕಡೆಗೆ ನೋಡಿ ನೋಡಿ ಕೈಯಿಂದ ತಾಳಹಾಕುತ್ತಾ, ಕುಣಿದು ಕುಣಿದು ಗಲಾಟೆ ಎಬ್ಬಿಸಿ ಅರುಚಿಯ ಸ್ಥಾನದಲ್ಲಿ ಕ್ರೋಧವು ತುಂಬಾ ಉಂಟಾಯಿತು; ದೀಪಕರಾಗದ ಪ್ರಭಾವ ಸ್ವರೂಪದ ಸಿಡಿಲು ಗರ್ಜನೆಯು ಕೇಳಿಸಿತು.

ಸಂಗೀತವು ಒಂದು ಲಲಿತಕಲೆ. ಅದರ ಉದ್ದೇಶವು ಶ್ರೋತೃ ಜನರ ಮನೋರಂಜನೆ ಮಾಡುವುದಾಗಿದೆ. ಇದು ಈಶ್ವರ ಪ್ರಾಪ್ತಿಯ ಮಾರ್ಗವೆಂದು ಕೆಲವರು ಭಾವಿಸುತ್ತಾರೆ. ಆದರೆ, ಕರ್ಣಕಟು ಸಂಗೀತವು ಶ್ರೋತೃ ಜನರ ಮನೋರಂಜನೆ ಮಾಡುವುದಿಲ್ಲವಾದರೆ ಈಶ್ವರ ಪ್ರಾಪ್ತಿಯನ್ನೂ ದೊರಕಿಸಲಾರದು. ಇಂದು ಜಗತ್ತಿನಲ್ಲಿ ವೃದ್ಧಿಯಾಗುತ್ತಲಿರುವ ಪಾಪಗಳ ಮತ್ತು ವಿಪತ್ತುಗಳ ಕಾರಣದಿಂದಲೂ, ಸ್ವರಗಳ ಉತ್ತಮ ಉಪಯೋಗವಾಗುವುದಿಲ್ಲವೆಂಬುದರಲ್ಲಿ ಕೆಲವರು ವಿಶ್ವಾಸವಿಡುತ್ತಾರೆ.

ಸಂಗೀತಕ್ಕೆ ಮೂರು ಅಂಗಗಳಿವೆ:-ಗಾಯನ, ವಾದನ ಮತ್ತು ನರ್ತನ. ಇಷ್ಟರ ಒಳಗೆ ಗಾಯನ ವಿಷಯದಲ್ಲಿ ಚರ್ಚಿಸಿದೆವು; ಮುಂದೆ, ವಾದನ ಹಾಗೂ ನರ್ತನದ ವಿಷಯದಲ್ಲಿ ಚರ್ಚಿಸುವಾ. ಭಾರತೀಯ ಸಂಗೀತದ ಇತಿಹಾಸದಲ್ಲಿ ವೀಣಾ, ವಂಶೀ, ಮೃದಂಗ, ಮಚತಾಳ, ಢೋಲ, ನಗಾರಿ, ಸನಾದಿ, ಬೀಜ್, ಹಾಗೂ ಜಲತರಂಗ ಮುಂತಾದ ಅತಿ ಪ್ರಾಚೀನವಾದ್ಯ ಅಥವಾ ಉಪಕರಣಗಳು ಹೇಳಲ್ಪಟ್ಟಿವೆ. ತಬಲಾ, ಸಾರಂಗಿ, ಸಿತಾರ, ಇಸರಾಜ ಮುಂತಾದವುಗಳು ಯವನಕಾಲದಲ್ಲಿ ನಮ್ಮ ಸಂಗೀತದಲ್ಲಿ ಸ್ಥಾನಪಡೆದಿವೆ. ಅದರ ನಂತರ, ಯುರೋಪಿನ ಸಂಪರ್ಕದಿಂದ, ನಮ್ಮಲ್ಲಿ ವಾಯುಲಿನ್ ಅಥವಾ ಫಿಡಿಲ್, ಬೆಂಜೋ, ಕ್ಲೆರೋನೇಟ್, ಹಾಗೂ ಅನ್ಯ ಅನ್ಯ ಪ್ರಕಾರದ ಉಪಕರಣಗಳು ರೂಢಿಯಲ್ಲಿ ಹಾಗೂ ಉಪಯೋಗದಲ್ಲಿ ಬಂದವು.

ಭಾರತೀಯ ಸಂಗೀತದ ಉತ್ಕೃಷ್ಟತೆಯನ್ನು ತಿಳಿದು ಮುಸಲ್ಮಾನರು ಕೂಡ ಅದನ್ನು ಸಿದ್ಧಾಂತ ಹಾಗು ವ್ಯವಹಾರ ರೂಪದಲ್ಲಿ ಅಭ್ಯಸಿಸಿ, ಕಲಿತುಕೊಂಡರು; ಉತ್ತರ ಭಾರತೀಯ ಸಂಗೀತದ ಮೇಲೆ ಅವರ ಪ್ರಭಾವವು ಬೀಳದಿರಲಿಲ್ಲ. ಠುಮರಿ, ಗಜಲ ಮುಂತಾದುವುಗಳ ಚಲನವು ಮೊಗಲ ಕಾಲದಿಂದಲೇ ಪ್ರಾರಂಭವಾಯಿತು ಈ ಪದ್ಧತಿಗಳಿಂದಲೇ ಒಂದು ಸ್ಮರಣೀಯ ವಿಷಯವೇನಂದರೆ ಉತ್ತರ ಭಾರತೀಯ ಸಂಗೀತದಲ್ಲಿ ಮೃದಂಗ ಮತ್ತು ವೀಣೆಗಳ ಬದಲಿಗೆ, ತಬಲಾ ಮತ್ತು ಸಿತಾರುಗಳು ರೂಢಿಯಲ್ಲಿ ಬಂದವು.

ಇಂದು ನಮ್ಮ ವಾದನದಲ್ಲಿಯೂ, ದೋಷಗಳು ಒಳಸೇರಿ, ಬಾಧಿರುತ್ತವೆ. ಈ ಸಕಲ ಉಪಕರಣಗಳ ಉಪಯೋಗವು ಸಂಗತಗೋಸ್ಕರ ಮಾಡಲ್ಪಡುತ್ತದೆ; ಆದರೆ ಹೆಚ್ಚಾಗಿ ನಾವು ಕಾಣುವುದೇನಂದರೆ, ಸಂಗತಮಾಡುವ ತಬಲೆಯವನು ಅಥವಾ ಸಾರಂಗಿ ವಾದಕನು ತನ್ನ ಕಲಾ ಕೌಶಲ್ಯವನ್ನು ತೋರಿಸಲು ಅತ್ಯಂತ ಗದ್ದಲ ಎಬ್ಬಿಸಿ, ಸಂಗೀತವು ಒಂದು ಗದ್ದಲದಂತೆ ನಡಿಯುತ್ತಲಿದೆ: ಒಂದು ಕಾರಖಾನೆಯ ಮಾಳಿಗೆಯು ತವರಿ (tin) ನದು ಇದ್ದು ಅದರ ಮೇಲೆ ಆಣೆಕಲ್ಲುಗಳು ಬೀಳುತ್ತಲಿದ್ದು, ಅದರೊಳಗೆ ಸಾವಿರಾರು ಯಂತ್ರಗಳ ಬಡಬಡ ಕಫ ಕಫ ಶಬ್ದವಾಗುವ ಯಂತ್ರಾಲಯಕ್ಕೆ ಭಾರತೀಯ ಸಂಗೀತವನ್ನು ಬೆವರ್ಲೇ ನಿಕೋಲಸರು ಹೋಲಿಸಿರುವರು ; ಅವರ ಈ ಹೇಳಿಕೆಯು, ಭಾರತದ ಪ್ರತಿ ಅವರ ತಿರಸ್ಕಾರ ಭಾವವನ್ನು ಪ್ರದರ್ಶಿಸುತ್ತದೆಯೆಂದು ನಾವು ಅವಶ್ಯ ಹೇಳಬೇಕಾಗಿದೆ ಆದರೆ ಒಬ್ಬ ಮಸ್ತಾನಿಯು (ಮಸ್ತಾನನು) ತನ್ನ ಇಬ್ಬರು ಶಿಷ್ಯರ ಕೈಯಲ್ಲಿ ಎರಡು ತಂಬೂರಿಗಳನ್ನು ನಿಲ್ಲಿಸಿ, ಒಂದುಕಡೆಯಲ್ಲಿ ತಬಲಾ ವಾದಕ ಹಾಗೂ ಇನ್ನೊಂದೆಡೆಯಲ್ಲಿ ಸಾರಂಗಿ ವಾದಕರನ್ನು ಕುಳ್ಳಿರಿಸಿ, ವಿರಾಜಮಾನನಾಗಿ, ಒಮ್ಮೊಮ್ಮೆ ತನ್ನೊಡನೆ ಸಿತಾರ ಅಥವಾ ವಾಯುಲಿನ್ ಮುಂತಾದವುಗಳನ್ನೂ ಬಾರಿಸುವಂತೆ ಮಾಡುತ್ತ, ತನ್ನ ಕಲೆಯ ಪ್ರದರ್ಶನಾರ್ಥ ಕೈಯಿಂದ ತಾಳ ಹಾಕುತ್ತ ಹಾಕುತ್ತಾ, ತನ್ನ ಶಿಷ್ಯರೊಡನೆ ಹಾಡುವಾಗ, ತಮ್ಮ ಯಥೇಷ್ಟ ಬಲದಿಂದ ಸಂಗತ ಮಾಡುವವರೂ ತಮ್ಮ ತಮ್ಮ ವಾದ್ಯಗಳನ್ನು ಬಾರಿಸುತ್ತಾರೆ. ಆ ಸಮುದಾಯದಲ್ಲಿ ಹೊರಟು ಬರುವ ಧ್ವನಿಯನ್ನು ಸಂಗೀತವೆಂದು ಹೇಳಲು ಕಷ್ಟಸಾಧ್ಯವೆಂದು ನಿಕೋಲಸರು ಹೇಳುತ್ತಾರೆ

ಆದುದರಿಂದ ಗಾಯಕನು ಭಾಷೆ ಮತ್ತು ಮಾಧುರ್ಯವನ್ನು ಧ್ಯಾನದಲ್ಲಿಡಬೇಕಾಗಿದೆ; ವಾದ್ಯವಾದಕರೂ, ತಮ್ಮ ಉದ್ದೇಶವು ಸಂಗೀತವನ್ನು ಮಧುರಂಪಡಿಸುವುದೆಂದು ತಿಳಿದು ಹಾಗೂ ಧ್ಯಾನದಲ್ಲಿಟ್ಟು, ಗದ್ದಲ ಎಬ್ಬಿಸದೆ, ಈ ಉದ್ದೇಶವನ್ನು ಸಾಧಿಸಬೇಕಾಗಿದೆ. ಇದು ಅವಶ್ಯಕವೇ ಸರಿ.

ಭಾರತೀಯ ನೃತ್ಯವು ಇಂದಿಗೂ ಯಥೇಚ್ಛ ಪರಿಮಾಣದಲ್ಲಿ ವಿದೇಶೀ ಪ್ರಭಾವಗಳಿಂದ ಸಂರಕ್ಷಿತವಾಗಿ ಮೆರೆಯುತ್ತವೆ. ಇದು ಈಶ್ವರ ಕೃಪೆಯೇ ಸರಿ. ಭಾರತ ನಾಟ್ಯವು ಭಾವ, ಸ್ವರ ಹಾಗೂ ತಾಳಗಳ ಒಂದು ಉತ್ತಮ ಸಮ್ಮಿಶ್ರಣವಾಗಿದೆ; ಇದು ಈಗಲೂ ಶುದ್ಧರೂಪದಲ್ಲಿ ಪ್ರದರ್ಶಿಸಲ್ಪಡುತ್ತಲಿದೆ. ದಕ್ಷಿಣ ಭಾರತದಲ್ಲಿ ಸಂಗತಗೋಸ್ಕರ ಇಂದಿಗೂ ವೀಣಾ, ಮೃದಂಗ, ಮುಖ್ತೆ, ಘಟ ಹಾಗೂ ಗಂಜೀರಾ ಮುಂತಾದವುಗಳ ಪ್ರಯೋಗವು ಕಾಣಸುತ್ತದೆ; ಕಥಕಲೀ, ಮಣಿಪುರಿನೃತ್ಯ ಮುಂತಾದುವುಗಳು ಕೂಡಾ ಈಗಲೂ ಯಥೇಷ್ಟ ಶುದ್ಧರೂಪದಲ್ಲಿ ನರ್ತಿಸಲ್ಪಡುತ್ತಲಿವೆ. ಹೀಗಾದರು ನಮ್ಮ ಫಿಲ್ಮ್ ನಿರ್ಮಾಪಕರು ಭಾರತೀಯ ಪದಚಾಪಗಳಿಂದ ನರ್ತಿಸುವ ನರ್ತಕಿಯನ್ನು 'ಡಾನ್ಸಿಂಗ್ ಗೌನ್' ಹಾಕಿಸಿ, ಅವಳ ಕೈಯಲ್ಲಿ ವಾಕಿಂಗ್ ಸ್ಟಿಕ್ ಅಥವಾ ಕೊಡೆಯನ್ನು ಕೊಟ್ಟು ನರ್ತಿಸಲಿದ್ದಾರೆ.

ಇಂದಿನ ಗಾಯಕರಲ್ಲಿ ಲೋಕ ಗೀತಗಳ ಚಲನವು ನಿಂತು ಹೋಗಿದೆ; ಭಾರತೀಯ ಸಂಗೀತ ಪದ್ಧತಿಯಲ್ಲಿ ಇದು ಒಂದು ದೊಡ್ಡ ತುಟಿಯಾಗಿದೆ. ರಾಜಪುತಾನೆಗಳ ಪ್ರಾಂತ ಸಂಗೀತಜ್ಞರು ಇಂದು ಸಹ ಹೋರೀ (ಹೋಳಿ) ಮುಂತಾದವುಗಳನ್ನು ಅವಶ್ಯ ಹಾಡುತ್ತಿರುತ್ತಾರೆ; ಈ ಲೋಕಗೀತಗಳು ಲೋಪವಾಗುವುದರಿಂದ, ನಮ್ಮ ಸಭ್ಯತೆ ಹಾಗೂ ಕಲೆಗೆ ದೊಡ್ಡ ಹಾನಿಯು ಪರಿಣಮಿಸುವುದು

ಫಿಲ್ಮ್ ಸಂಗೀತವು ಒಂದು ಸಂಗೀತವೆಂದು ನಾವು ಮನ್ನಿಸುವುದಿಲ್ಲ ಅದನ್ನು ಶಪಿಸುವುದರಿಂದ, ಲಾಭವಾಗದು.

ಶಾಸ್ತ್ರೀಯ ಸಂಗೀತವನ್ನೇ ಮನೋರಂಜಕ, ಹಾಗೂ ಚಿತ್ತಾಕರ್ಷಕವಾಗಿ ಮಾಡುವುದು ಅವಶ್ಯಕವೇ ಸರಿ. ನಮ್ಮ ಸಂಗೀತದ ವೈಶಿಷ್ಟ್ಯವು ನಷ್ಟವಾಗದಂತೆ, ನಮ್ಮ ಸಂಗೀತವನ್ನು ವಿದೇಶೀ ಪ್ರಭಾವಗಳಿಂದ ಉಳಿಸಬೇಕಾಗಿದೆಯೆಂಬ ಕರ್ತವ್ಯವನ್ನು ನಿರಂತರ ಧ್ಯಾನದಲ್ಲಿಟ್ಟು ವರ್ತಿಸಬೇಕಾಗಿದೆ. ಇದು ಸಂಕುಚಿತ ದೃಷ್ಟಿಕೋಣದಿಂದ ಹೇಳುವುದಲ್ಲ; ಸ್ವಯಂ ಪಶ್ಚಿಮದ ಸರ್ವಶ್ರೇಷ್ಠ ಹಾಗೂ ಸರ್ವೋತ್ತಮ ವಾಯುಲಿನಿಸ್ಟ್ ಯಹೂದೀಮೆನ್ಯುಹಿನ್'ರು ಸಹ ಇದನ್ನು ಸಮರ್ಥಿಸುತ್ತಾರೆ

ತಡವಾಗಿ ಮುಟ್ಟಾಗುವಿಕೆಗಾಗಿ ಗಾಬರಿಯಾಗಬೇಡಿರಿ

'ಋತುರಾಜ'ವನ್ನು ಸೇವಿಸಿರಿ. ನಾಲ್ಕೈದು ತಿಂಗಳು ಮುಟ್ಟಾಗದಿದ್ದರೂ, ಒಡನೆಯೇ ಋತುಸ್ರಾವವಾಗುವುದು. ಮುಟ್ಟು ದೋಷದ ಇತರ ಗಂಡಾಂತರಗಳು ಕೂಡಾ 24 ತಾಸುಗಳೊಳಗೆ ಆಶ್ಚರ್ಯಕರವಾಗಿ ವಾಸಿಯಾಗುವುವು. ಇದಕ್ಕೆ ಸಂಶಯ ಬೇಡ.

ಸಾಮಾನ್ಯ ರೂ 7-8-0, ವಿ. ಪಿ. ರೂ. 1. ಸ್ಪೆಶಲ್ ರೂ 24 ವಿ ಪಿ ರೂ. 1-12-0.

Binapani Oushadhalaya
Moons Avenue Calcutta-33
ಏಜಂಟ್:- ನೈಸ್ ಸಿ ಆರ್, ಕಾಮತ್,
ಮಂಗಳೂರು.

For Protection and Provision

Consult

The New Guardian of India Life Insurance Co., Ltd.

Estd, Head office' MADRAS 1904

A Policy in this Progressive Life Office is good investment
its Agency is valuable business connection

Applications for representation are invited
from influential persons

Please apply to:

The Branch Manager,
Diamond Building, Hampankatta,
MNGALORE, S. K.

Applauded as the
BEST
Rubber Stamp Makers
all over India

CROWN RUBBER STAMP CO.
Mangalore

ವಾರದ ಭವಿಷ್ಯ

ತಾರೀಕು 21-8-52 ರಿಂದ ತಾರೀಕು 27-8-52 ವರೆಗೆ

ಮೇಷ— ನಿಮ್ಮ ಕಾರ್ಯಕಲಾಪಗಳಿಗೆ ವಿರೋಧಿಗಳ ಪ್ರಬಲವಾದ ತಡೆಯುಂಟಾದರೂ ಕಾರ್ಯವನ್ನು ಅರ್ಧದಲ್ಲೇ ಕೈಬಿಡಲಾರಿರಿ. ಆದರೂ ನಿರೀಕ್ಷಿಸಿದಷ್ಟು ಫಲವು ಲಭಿಸದು. ದಿನನಿತ್ಯದ ಖರ್ಚುವೆಚ್ಚಗಳಿಗಾಗಿ ಹೆರವರನ್ನಾಶ್ರಯಿಸಬೇಕಾಗಿ ಬರಲಾರದು. ಪಿತ್ತದೋಷದಿಂದ ಅನಾರೋಗ್ಯ ತಲೆದೋರೀತು. ಬಂಧುಜನರ ನೆರವುಳ್ಳ ನಿಮಗೆ ಶ್ರಮಸಾಧ್ಯ ಕಾರ್ಯಗಳಲ್ಲಿ ವಿಜಯವಿದೆ. ವಾರಾಂತ್ಯದ 5 ದಿನಗಳು ತಕ್ಕಷ್ಟು ಉತ್ತಮವೇ ಎಂದರೆ ತಪ್ಪಾಗದು.

ವೃಷಭ—ಗ್ರಹಗಳು ಪ್ರತಿಕೂಲಸ್ಥಿತಿಯಲ್ಲೇ ಹೆಚ್ಚಾಗಿರುವುದರಿಂದ ಪೌರುಷದಿಂದಲೇ ಕಾರ್ಯವನ್ನು ಸಾಧಿಸಬೇಕಾಗಿದೆ. ನಿಮ್ಮ ಶ್ರಮಕ್ಕೆ ತಕ್ಕ ಫಲವು ಲಭಿಸಲಾರದು. ಸಾಂಸಾರಿಕ ತಾಪತ್ರಯಗಳಿಂದಲೂ ದೇಹಾಲಸ್ಯದಿಂದಲೂ ನಿಮ್ಮ ತನುಮನಗಳಿಗೆ ಸುಖಶಾಂತಿಯಿರಲಾರದು. ವಿದ್ಯೋಪಜೀವಿಗಳಿಗೂ ಸೇವಕ ವರ್ಗದವರಿಗೂ ಕಾಲವು ಪ್ರತಿಕೂಲವಾಗಿಯೇ ಪರಿಣಮಿಸೀತು. ವಾರಾಂತ್ಯದ 3 ದಿನಗಳು ಇದ್ದುದರಲ್ಲಿ ಉತ್ತಮವೆನಿಸೀತು.

ಮಿಥುನ—ದೈವವು ಅತ್ಯುತ್ತಮವಿರುವುದು. ಇಂತಹ ಸುಸಂಧಿಯಲ್ಲಿ ನೀವು ಮಾಡಬೇಕಾದ ಕಾರ್ಯವನ್ನು ಅವಶ್ಯವಾಗಿ ಕೈಗೊಳ್ಳಿರಿ. ಪ್ರತಿಯೊಂದು ಕಾರ್ಯದಲ್ಲೂ ವಿಜಯಶ್ರೀಯು ನಿಮ್ಮನ್ನೇ ವರಿಸಲಿರುವಳು. ಪುಣ್ಯಕಾಲವೆಲ್ಲಾ ಸಂಕಲ್ಪದಲ್ಲೇ ಹೋಯ್ತೆಂಬ ಗಾದೆಯಂತಾಚರಿಸದಿರಿ. ಯಾವ ಭಾಗದಲ್ಲೂ ನಿಮ್ಮಲ್ಲಿ ಕುಂದು ಕೊರತೆಗಳು ಕಾಣವು. ತಾ 21, 22 ಇದೇ ವಾರದಲ್ಲೇ ಉತ್ತಮ ದಿನಗಳು.

ಕರ್ಕಾಟಕ-ಆಪ್ತೇಷ್ಟರಲ್ಲಿ ಅವಿಶ್ವಾಸವು ಹುಟ್ಟಿ ಪರಸ್ಪರ ಮನಸ್ತಾಪಕ್ಕೆ ಕಾರಣವಾದೀತು. ಕೈಯಲ್ಲಿನ ಹಣವೆಲ್ಲವೂ ಖರ್ಚಾಗುವದಲ್ಲದೆ ಸಾಲಮಾಡುವ ಪ್ರಸಕ್ತಿ ಬರಲಿದೆ. ಕುಟುಂಬ ನಿಮಿತ್ತವಾಗಿ ಚಿಂತೆಗೀಡಾಗುವಿರಿ. ನಿಷ್ಠುರಭಾಷಿಗಳಾಗಿ ಜನತೆಯಲ್ಲಿ ಕಲಹ ದ್ವೇಷಗಳನ್ನು ಬೆಳೆಸಿಕೊಳ್ಳಲಿರುವಿರಿ. ತಾ. 23, 24, ಈ ದಿನಗಳಲ್ಲಿ ವಿಜಯಗೃಹ ಸುಖ ಧನಲಾಭಾದಿಗಳ ಯೋಗವಿದೆ.

ಸಿಂಹ—ಧನಲಾಭಾಧಿಪನಾದ ಬುಧನು ವ್ಯಯಗತನಾಗಿರುವುದರಿಂದ ನಿಮ್ಮ ದುಡಿಮೆಗಿಂತ ಅಧಿಕ ವ್ಯಯವು ಪ್ರಾಪ್ತವಾದೀತು. ಮಾತ್ರವಲ್ಲ ಹೆಚ್ಚಿನ ನಿಮ್ಮ ಹಣವು ವ್ಯರ್ಥ ಖರ್ಚುಗಳಿಗೆ ಹೋಗಲಿದೆ. ಮಿತ್ರರ ಸೋಗು ಹಾಕಿಕೊಂಡ ಶತ್ರುಗಳು ನಿಮ್ಮ ಅಧಃಪತನಕ್ಕೆ ಯತ್ನಿಸುತ್ತಿರುವರು. ಆದರೂ ಸುರಗುರುಗಳ ಅನುಗ್ರಹವುಳ್ಳ ನಿಮಗೆ ತಾ 21, 22, 25, 26, 27 ಈ ದಿನಗಳು ಕೊಂಚ ಉತ್ತಮವೆನಿಸುವವು.

ಕನ್ಯಾ—ಎಂತಹ ಅನಿವಾರ್ಯವಾದ ವಿಘ್ನಗಳೇ ಬಂದರೂ ಹಿಡಿದ ಕಾರ್ಯವನ್ನು ನೀವೆಂದೂ ಬಿಡಲಾರಿರಿ. ನಿರುದ್ಯೋಗಿಗಳೂ ಕೂಡ ಸದುದ್ಯಮ ಪ್ರವೃತ್ತರಾಗುವರು. ನಷ್ಟವಾಗಿ ಕೈಬಿಟ್ಟು ಹೋದ ವಸ್ತು ವಡವೆಗಳೂ ಕೈಸೇರಲಿವೆ. ಆರೋಗ್ಯದ ವಿಚಾರವಾಗಿ ಸ್ವಲ್ಪ ಜಾಗರೂಕತೆಯಿಂದಿರುವದೊಳಿತು. ಆಪ್ತೇಷ್ಟ ವಿರಹ ದುಃಖಿತರಾದ ನಿಮಗೆ ತಾ. 23, 4, ರಲ್ಲಿ ಮನಶ್ಶಾಂತಿ ಧನಲಾಭ ಭೋಗಗಳು ಲಭಿಸುವುವು.

ತುಲಾ —ಪಾಪಿದ್ವಯರ ನಡುವೆ ಸಿಲುಕಿದ ನಿಮಗೆ ಬೇರೆಲ್ಲಾ ಗ್ರಹರ ಬೆಂಬಲವೂ ಲಭಿಸಿರುವುದು. ತಥಾಪಿ ಗುರುವಿನ ವಿಶೇಷ ಅನುಗ್ರಹದಿಂದಾಗಿ ಯಾವತರದ ಪೀಡೆಗೂ ಸಿಲುಕಲಾರಿರಿ. ನಿಮ್ಮ ಆರ್ಥಿಕ ಸಂಪತ್ತು ಬಹು ತೀವ್ರ ವೃದ್ಧಿಗೊಳ್ಳಲಿದೆ. ಪಿತ್ತೋಷ್ಣ ವಿಕಾರದಿಂದ ಕೊಂಚ ದೇಹಾಲಸ್ಯ ತೋರಿದರೂ ಹೆಚ್ಚು ಕಾಲ ನಿಲ್ಲಲಾರದು. ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾದ ನಿಮಗೆ ತಾ. 21, 22, 25, 26, 27 ಈ ದಿನಗಳು ಸುಖಸಂತೋಷಗಳನ್ನೀಯಲಿವೆ.

ವೃಶ್ಚಿಕ—ಸೇವಕ ಜನತೆಗೀ ಕಾಲವು ಉತ್ತಮವಾಗಿರುವದು. ಹಿಡಿದ ಕಾರ್ಯದಲ್ಲಿ ವಿಜಯ ಲಭಿಸುವದು. ವ್ಯಾಪಾರೀ ವರ್ಗಕ್ಕೂ ವಿದ್ಯೋಪಜೀವಿಗಳಾದ ನೌಕರಿ ಜನಾಂಗಕ್ಕೂ ಈ ಕಾಲವು ಪ್ರತಿಕೂಲವಿದೆ. ಮಿತಭಾಷಿಯಾಗಿದ್ದರೂ ವಾಕ್ಕಲಹ ಬೇರೆ ತಪ್ಪಲಾರದು. ಆಕಸ್ಮಿಕ ಅಪಘಾತಗಳಿಗವಕಾಶವಿದ್ದ ಕಾರಣ ವೃಕ್ಷಾರೋಹಣ ವಾಹನಗಳಲ್ಲಿನ ಪ್ರಯಾಣಗಳನ್ನು ಬಹಿಷ್ಕರಿಸಿರಿ. ವಾರಾದಿಯ 4 ದಿನಗಳು ಬೇರೆ ದಿನಗಳಿಗಿಂತ ಲೇಸು.

ಧನು—ಆಕಸ್ಮಿಕ ಅನರ್ಥಗಳೊದಗಲಿವೆ. ಕುಮಾರ್ಗದೆಡೆಗೆ ಮನಸ್ಸು ಹರಿಯುವದು. ಅದರಿಂದಾಗಿ ಜನಾಪವಾದಕ್ಕೆ ಸಿಲುಕುವಿರಿ. ನಿಮ್ಮ ಆದಾಯವು ಖರ್ಚಿಗೆ ತಕ್ಕಷ್ಟಿರುವುದರಿಂದ ಹಣದ ಅಭಾವವುಂಟಾಗದು. ಗೃಹಸ್ಥರಿಗೆ ಪುತ್ರ ಸಂತತಿಯ ಯೋಗವಿದೆ. ಗೃಹಪರಿವಾರವು ನಿರ್ದುಷ್ಟವಾಗಿದ್ದು ದಿನಯಾಪನೆಯು ಸುಗಮವಾಗುವದು. ವಾರಾಂತ್ಯದ 5 ದಿನಗಳಲ್ಲಿ ಸುಖ ಇಷ್ಟಸಿದ್ಧಿ ಸನ್ಮಾನಲಾಭ ಸಂತೋಷಗಳಿವೆ.

ಮಕರ—ಸುಖಲಾಭಪತಿಯಾದ ಕುಜನಿಂದಾಗಿ ನಾನಾವಿಧ ಲಾಭ ಸುಖ ಜನತೆಯಿಂದ ಗೌರವಾದರಗಳು ಲಭಿಸಲಿವೆ. ಆದರೆ ಇತರ ಗ್ರಹರೆಲ್ಲರೂ ವಿಮುಖರಾಗಿದ್ದುದರಿಂದ ಈ ಲಾಭಾದಿಗಳಿಗೆ ಹೆಚ್ಚಿನ ವಿಘ್ನಗಳುಪಸ್ಥಿತವಾಗಬಹುದು. ಧರ್ಮಕರ್ಮಗಳಲ್ಲೂ ಗುರುಹಿರಿಯರಲ್ಲೂ ಅನಾದರ ತಿರಸ್ಕಾರಗಳುಂಟಾಗಲಿವೆ. ವಾರಾಂತ್ಯದ 3 ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಕಾಣಿಸವು.

ಕುಂಭ—ಮೇಲಿಂದ ಮೇಲೆ ಬರತಕ್ಕ ವಿಪತ್ಪರಂಪರೆಗಳಿಂದ ಕಿಂಕರ್ತವ್ಯತಾಮೂಢರಾಗುವಿರಿ. ಅವಯವಗಳಲ್ಲಿ ಸಂದುಗೊಂದುಗಳಲ್ಲಿ ನೋವು ಕಾಣಿಸುವವು. ಹೆಂಡಿರು ಮಕ್ಕಳ ವಿರಹವಾದೀತು. ಸ್ತ್ರೀಯರಿಂದ ಕಲಹ ಅಪವಾದಗಳು ಪ್ರಾಪ್ತವಾಗುವವು. ತಥಾಪಿ ಆರ್ಥಿಕ ಬಿಕ್ಕಟ್ಟಿನಿಂದ ಮಾನವುಳಿಸಿಕೊಳ್ಳುವದೇ ದುಸ್ತರವಾದೀತು. ವಾರಾದಿಯ 2 ದಿನಗಳು ಮಿಕ್ಕ [illegible]ಳಿಗಿಂತ ಲೇಸಾಗುವವು.

ಮೀನ—ನಿಮ್ಮ ಉದ್ಯೋಗದಲ್ಲಿ ಪ್ರಗತಿಯುಂಟಾದೀತು. ದೇಹಾಲಸ್ಯವು ಸ್ವಲ್ಪ ಕಂಡುಬರುವದಾದರೂ ವಿಶೇಷ ಅಪಾಯವನ್ನುಂಟು ಮಾಡದು. ಸಂಸಾರದಲ್ಲಿ ಕ್ಷುಲ್ಲವಿಷಯ ನಿಮಿತ್ತ ಕಲಹ ವಾಗ್ವಾದಗಳುದ್ಭವಿಸಲಿವೆ. ಕುಟುಂಬ ಕಲಹ ಹೆಚ್ಚುವುದು. ರಾಜಕೀಯ ಕ್ಷೇತ್ರದಲ್ಲಿ ಸಾಮಾಜಿಕ ರಂಗದಲ್ಲಿ ಒಳ್ಳೆಯ ಯಶಸ್ಸಿದೆ. ವಾರಾದಿಯ 4 ದಿನಗಳು ಸುಖಲಾಭದಾಯಿಗಳಾಗಿವೆ.

ಸ್ತ್ರೀ ಪುರುಷ ಶಿಶುಗಳು ರೋಗದಿಂದ ನರಳಬೇಕಾಗಿಲ್ಲ!
ಲಕ್ಷಾಂತರ ಜನರು ಗುಣಹೊಂದಿದ್ದಾರೆ!

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ನ್ಯೂನತೆ, ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೪ ದಿನದ ಲೇಹ್ಯ ರೂ ೫/೪, ೨೨ ದಿನದ ಲೇಹ್ಯ ರೂ ೩/೪
(ಪೋಸ್ಟೇಜು ಮಾಫಿ)

ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಕಥೆ, ಕಾದಂಬರಿ, ನಾಟಕ, ಚಿತ್ರ, ಪ್ರಬಂಧಾದಿ ನಾನಾಬಗೆಯ ಪುಸ್ತಕಗಳು

ಅಂತರಂಗದ ಪ್ರಕಟಣೆಗಳು:

ಬಿರುದಾವಳಿ	0	3	0
ಆ ಸುದ್ದಿ	0	4	0
ಹೈದರಾಬಾದ್ ವಿಜಯ	0	4	0
ಸೆರೆಯಾಳು	0	7	0
ಗಾಡಿಯ ಗಾಂಧಿ	0	3	0
ಶಾಂತಿಯ ಮಡಿಲಿನಲ್ಲಿ	0	3	0
ಬಲಿಪೀಠದಲ್ಲಿ	0	5	0
ಅಗಲಿದ ಆತ್ಮ ಸರೋಜಿನಿ	0	3	0
ನನ್ನ ಹೆಂಡತಿ	0	3	0
ಪುಣ್ಯಫಲ	0	4	0
ಸುಖದದಾರಿ	0	3	0
ಸುಶಾಂತ	0	3	0
ಪಂಚಮುಖಿ	0	5	0
ಜಾತೀಭೂತಕ್ಕೆ ಬಲಿ	0	3	0
ಜನಸೇವೆಯ ಸೋಗಿನಲ್ಲಿ	0	3	0
ನಾ ಕಂಡ ಅವಳು	0	3	0
ತ್ರಿವೇಣಿ	0	3	0
ನಿಲುವಂಗಿ	0	4	0
ಬಾಡಿಗೆಯ ಮನೆ	0	3	0
ವರ್ತಮಾನಕಾಲದ ನಾಲ್ವರು ಮಹಾನುಭಾವರು	0	4	0
ದೇವರ ನಾಮ ಮತ್ತು ಸಾಧನೆ	0	3	0
ಎರಡು ಕತೆಗಳು	0	4	0
ಸರಸ ವಿರಸ	0	3	0
ಹೃದಯೇಶ್ವರಿ	0	4	0
ವಿವಿಧ ವಿಷಯ ಕೋಶ ಭಾಗ೧,೨	0	6	0
ನುಡಿಮುತ್ತುಗಳು ೧, ೨, ೩	0	12	0
ಕುಲವಿಲ್ಲದ ಹೆಣ್ಣು	2	0	0
ತವರು ಮನೆಯಿಂದ	0	4	0
ಭಾಗ್ಯಲಕ್ಷ್ಮಿ	1	4	0
ಯುಗವಾಣಿ	0	8	0
ಸ್ತ್ರೀ ಹೃದಯ	0	4	0
ದ್ವೇಷ	0	3	0
ಎರಡು ಏಕಾಂಕ ನಾಟಕಗಳು	0	4	0
ಪ್ರಜಾಪ್ರಭುತ್ವನ್ನು ಕುರಿತು	0	8	0
ಕಲಾವಿದನ ದಿನಚರಿ	0	3	0
ಆಧುನಿಕ ಭಾರತ	0	4	0
ಕಾಲವೇ ಬದಲಾಗಿದೆ	0	4	0
ಭಾರತದ ಸಾಹಿತ್ಯ ಕಲೆಗಳು	0	4	0
ಸ್ತ್ರೀಸ್ವಾತಂತ್ರ್ಯ ಬೇಕೆ?	0	4	0
ಹಂಬಲ	0	4	0
ಭಾರತಚಿತ್ರದ ಅಂಚೆಚೀಟುಗಳು	0	3	0
ತ್ರಿಶೂಲ	0	5	0
ಪುಸ್ತಕಪುರಾಣ	0	4	0
ಹಳ್ಳಿಯಲ್ಲಿ ನಡೆದ ನಾಟಕ	0	3	0
ನರೆಯ ಗಾಂಧಾರ	0	3	0
ನೂತನಯುಗದ ಮಹಾಪ್ರಭಾವ	0	3	0
ವಿಜ್ಞಾನದ ಬೆಳವಣಿಗೆ	0	4	0
ಡಾ| ಹರ್ಡೀಕರ್	0	5	0
ತೆಂಗಿನ ತವರು	0	6	0
ಪ್ರಾಯಶ್ಚಿತ್ತ	0	3	0
ಪ್ರಭಾ	0	3	0
ಕವಿಗಳ ಸಂಗಾಟ	0	12	0
ಸ್ವಪ್ನಲೋಕ	0	6	0
ಮನೆಹೊರಗಿನಮಹಾಜೀವಿಗಳು	0	5	0
ಘಂಟಿಮ[illegible] ಭಾಗಗಳು	2	0	0
ಮಾಪಾರ್ಟ	0	5	0
ಭಾರತದ ರಾಷ್ಟ್ರಗೀತ	0	3	0
ನಮ್ಮ ಬಹು ದೊಡ್ಡ ಶತ್ರು	0	4	0
ಕೈಲಾಸ	0	3	0
ಚೌತಿ	0	4	0
ಕತ್ತು ಕೊಯ್ಯುವರಾರು?	0	6	0
ಸಮಾಜದ ಅಗ್ನಿಕುಂಡ	0	4	0
ಬೆಳ್ಳಿಹಬ್ಬ	0	4	0
ಉಷಾ	0	4	0
ವಿಧಿಲೀಲೆ	0	4	0
ಪರಮಾಣು ಪ್ರಪಂಚ	0	4	0
ನೀತಿ ವಿನೋದ ಕತೆಗಳು	0	12	0
ಸಾಹಸ ಭೀಮ ವಿಜಯ	0	8	0
ಭಾರತದ ಗುರುಕುಲ	0	6	0
ಲತ್ತಸಗಡೆ	0	6	0
ಸೇವಾಪಥ	0	8	0
ಭರತೇಶ ದಿಗ್ವಿಜಯ	0	8	0
ಮನೋಪದೇಶ	0	8	0
ಜೀವನ ಕಲೆ	0	10	0
ಪ್ರತಿಜ್ಞಾ ಪೂರ್ತಿ	0	12	0
ಮಿತ ಸಂತತಿ	0	6	0
ಗುಪ್ತರೋಗ ನಿವಾರಣೆ	0	8	0
ಸೌಂದರ್ಯ	0	5	0
ಸುಭಾ	0	8	0
ವಸಂತಕಾಲ	0	6	0
ನವೀನ ನಾಟಕಗಳು	0	7	0
ಪರ್ಲ್ ಎಸ್. ಬಕ್	0	7	0

ಕೆಟಲಾಗಿಗೆ ಬರೆಯಿರಿ **ನವಭಾರತ ಬುಕ್ ಡಿಪೊ, ಉಡುಪಿ.**

ಲಕ್ಷ್ಮೀ
ಸಂತಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರದ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವದು, ತೊಡೆ ಸಂದಿನಲ್ಲಿ ಗರಳೆ ಬರುವದು, ಕಾಲುಗಂಟು ವೇದನೆ, ಕಣ್ಣಿನಲ್ಲಿ ಕೀವು ಬರುವದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ, ಸ್ತ್ರೀಯರ ಬಿಳಿ ಸೆರಗು ಇವೆಲ್ಲಾ ಖಾತ್ರಿಯಾಗಿ ಗುಣ ಹೊಂದುವದು–ಇತರರು ಈಗಿನ ಉಷ್ಣಕಾಲದಲ್ಲಿ ಗರ್ಮಿ ಕಂಡುಬಂದರೆ ರಾತ್ರಿ ಮಲಗುವಾಗ್ಯೆ ಒಂದು ಮಾತ್ರೆ ಸೇವಿಸಿ ಹಾಲು ಕುಡಿದರೆ ಸುಖವಾಗಿ ನಿದ್ರೆ ಬಂದು ಸುಖವಿರೇಚನೆಯಾಗಿ ದೇಹದ ಸುಸ್ತು ಹೋಗುವದು.

ಶೀಸೆ 1ಕ್ಕೆ ರೂ. 2-0-0

ಏಜಂಟ್ಸ್:
ಷಾ ಕಂಪೆನಿ, ಮಂಗಳೂರು.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಕಟ್ಟಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ; ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8-] ವಿ ಪಿ [illegible] ಪ್ರತ್ಯೇಕ]

Mis. D. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟ್ [illegible]. ಶಹಾಕಂಪೆನಿ, ಮಂಗಳೂರು

ಯಕ್ಷಗಾನ ಪ್ರಪಂಚದಲ್ಲಿ
ಕ್ರಾಂತಿಯನ್ನೆಬ್ಬಿಸಿದ
ಕವಿಭೂಷಣ

ಶ್ರೀ ಕೆ. ಪಿ. ವೆಂಕಪ್ಪ ಶೆಟ್ಟರ
ನವೀನ ಯಕ್ಷಗಾನ ನಾಟಕಗಳು!

ಸಾಹಸ ಭೀಮ ವಿಜಯ	0	8	0
ಭಾರತದ ಗುರುಕುಲ	0	6	0
ಲತ್ತಸಗಡೆ	[illegible]	[illegible]	[illegible]
ಭರತೇಶ ದಿಗ್ವಿಜಯ	0	8	0

ಅಭ್ಯಾಸಿಗಳಿಗೆ ತಕ್ಕ ಸೂಚನೆಗಳಿವೆ.
ಯಕ್ಷಗಾನ ಪ್ರಿಯರಿಗೆ 'ಅಂತರಂಗ'ದ
ಅಮೂಲ್ಯ ಕಾಣಿಕೆ!
ನವಭಾರತ ಪುಸ್ತಕ ಭಂಡಾರ ಉಡುಪಿ.

Edited, Printed & Published By K. H. Shetty at the Navayuga Press, Udipi, S. India.

Regd. No. M. 3618
LICENCE No. 31
Licensed to Post without Prepayment

ESTD. 1921 ಸ್ಥಾಪನೆ
31ನೆಯ ವರ್ಷ

28-8-1952
Founder: **Sri A. B. Shetty**
Minister for Medical & Public Health

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ

ಸಾರ್ವಜನಿಕ
ಆರೋಗ್ಯ ಮಂತ್ರಿ
ಶ್ರೀ.ಎ.ಬಿ ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನವಯುಗ
ಪೋಸ್ಟ್ ಬಾಕ್ಸ್
ನಂಬ್ರ 22
ಉಡುಪಿ, ದ. ಕ.

ವಾರ್ಷಿಕ ಚಂದಾ
ರೂ. 5-12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೫೧

NAVAYUGA WEEKLY Post Box No. 22 **UDIPI.**

Vol 31
No 51

ಮಧುಪರ್ಕ

ಡಿಲ್ಲಿಯ ಬಾದಶಹನು ದರಬಾರಿಗಳಿಕ್ಕೆ ಬಿರುದುಬಾವಲಿ ಹಂಚುವದಿನ: ಸಮಯ ಮೀರಿದರೂ ಒಬ್ಬ ಸರದಾರನು ಇನ್ನೂ ಆಸ್ಥಾನಕ್ಕೆ ಬಂದಿಲ್ಲ.

ಬಾದಶಹನು ದರಬಾರನ್ನು ಮುಗಿಸಿ ಸಿಂಹಾಸನವನ್ನು ಬಿಟ್ಟೇಳುವಷ್ಟರಲ್ಲಿ, ಆ ಯುವಕ ಸರದಾರನು ಬಂದು, ವಂದಿಸಿ, ಕುಳಿತನು "ಏಕೆ ತಡವಾಯಿತು?" ಎಂದು ಬಾದಶಹ ಕೇಳಿದನು.

"ಮಹಾಸ್ವಾಮಿ, ಇಂದು ಬೆಳಿಗ್ಗೆ ನಾನು ಹಾಸಿಗೆಯಿಂದ ಏಳುವಾಗ ಸ್ವಲ್ಪ ವಿಳಂಬವಾಯಿತು, ಕ್ಷಮಿಸಬೇಕು'' ಎಂದು ಯುವಕ ಕೈ ಜೋಡಿಸಿದ.

ಎಲ್ಲ ಸರದಾರರೂ ಆಶ್ಚರ್ಯಾನ್ವಿತರಾದರು: ಛೆ, ಛೆ, ಬಾದಶಹನೆದುರು ಇಂಥ ಉದ್ಧಟತನ! ಇದೂ ಒಂದು ನೆಪವೇ? ಈ ಮಾತನ್ನು ಇಲ್ಲಿ ಆಡಬಹುದೇ''— ಎಂದವರು ಚಿಂತಿಸಿದರು. ಬಾದಶಹನು ಏನು ಶಿಕ್ಷೆ ವಿಧಿಸುವನೋ ಎಂದು ದಂಗುಬಡೆದರು

ಬಾದಶಹ ಒಂದು ಕ್ಷಣ ಯೋಚಿಸಿದ— ಬಳಿಕ, ಮುಂದೆದ್ದು ಬಂದು, ಸರದಾರನ ಬೆನ್ನು ಚಪ್ಪರಿಸಿ "ಶಾಭಾಸ್— ನಿನ್ನ ಸತ್ಯ ಪ್ರಿಯತೆಗೆ ಮೆಚ್ಚಿದೆ" ಎಂದ. ಅನೇಕ ಉಡುಗೊರೆಗಳನ್ನಿತ್ತು ಸನ್ಮಾನ ಮಾಡಿದ.

ಸ್ವಚ್ಛ ಹೃದಯ

ಗಾಂಧೀಜಿಯವರು ಮೊದಲಾಗಿ ವಿಶ್ವದ ಮಹಾತ್ಮರೆಲ್ಲ ಜನರಿಗೆ ಸತ್ಯಪ್ರಿಯರಾಗಿರಲು ಬೋಧಿಸಿದರು: "ಸತ್ಯವೇ ದೇವರು" ಎಂಬುದಾಗಿ ಅವರು ಸಾರಿದರು. ಪ್ರತಿಯೊಂದೂ ಧರ್ಮದ ಆದೇಶವು ಸುಳ್ಳನ್ನೂ ಕಪಟವನ್ನೂ ತ್ಯಜಿಸಿ ಸತ್ಯವನ್ನು ಆಡಬೇಕೆಂಬುದಾಗಿತ್ತು. ಇದರಿಂದ ವೈಯಕ್ತಿಕ ಶ್ರೇಯಸ್ಸು ಕೈಗೂಡುವುದೆಂದೂ ಮಾನಸಿಕ ಕ್ಲೇಶವು ತೊಲಗುವುದೆಂದೂ ಕಂಡುಬಂದಿದೆ. ಸಾವಿರ ಸುಳ್ಳು ಹೇಳಿದರೂ—ಒಂದಲ್ಲ ಒಂದುದಿನ ಸತ್ಯ ಸ್ಥಿತಿಯು ತನ್ನಿಂದತಾನೆ ಪ್ರಕಟಗೊಳ್ಳುವುದು. ಕಪಟವನ್ನು ಆಶ್ರಯಿಸಿ ಮೋಸ ಮಾಡಲು ಯತ್ನಿಸಿದವನ ಮೇಲೆ ನಮ್ಮ ವಿಶ್ವಾಸವು ನಿಶ್ಚಯವಾಗಿಯೂ ಹಾರಿಹೋಗುವುದು. ಬದುಕು ಸುಗಮವಾಗಬೇಕಾದರೆ ನಮ್ಮ ನಡವಳಿಕೆಗಳು ಸರಳವೂ ನೇರಾದವೂ ಇರುವುದೊಳಿತು. ಸ್ವಚ್ಛ ಹೃದಯದ ಪಾವಿತ್ರ್ಯ ವಾತಾವರಣವನ್ನು ಮಂಗಲಮಯಗೊಳಿಸುವುದು.

ನಮ್ಮ ಕೋರ್ಟು ಕಛೇರಿಗಳಲ್ಲಿ ನಡೆಯುತ್ತಿರುವ ಸಾವಿರಾರು ವ್ಯವಹರಣೆಗಳ ಮೂಲವು ಅಸತ್ಯ ಮತ್ತು ಕಪಟ ಭಾವಗಳಲ್ಲಿದೆ: ಒಬ್ಬನು ಕಪಟದಿಂದ ವರ್ತಿಸಿದನು ಮತ್ತೊಬ್ಬನ ಹೃದಯ ಕೊಳಕಿನಿಂದ ತುಂಬಿತ್ತು. ಹೀಗಾಗಿ ಆಸ್ತಿಯಲ್ಲಿ ವಂಚನೆಯೂ, ಕುತ್ತಿಗೆ ಹಿಚುಕಿ ಕೊಲ್ಲುವುದೂ ನಡೆಯಿತು. ಈಗ ಬಂಧನ ಗೃಹದಲ್ಲಿ ಕೊಳೆಯುತ್ತಿರುವವರಷ್ಟೆ ಅಲ್ಲ. ಕಠಿಣ ದಂಡಕ್ಕೂ ಅವರು ಭಾಗಿಗಳಾಗುವರು ಆದರೆ ಅಲ್ಲಿರುವ ಪೋಲೀಸರ ಏಟಿಗೂ ಬೆದರಿಕೆಗೂ ಬಗ್ಗದ ಜನರು ಇದ್ದಾರಲ್ಲವೇ? ಶಿಕ್ಷೆಯ ಭಯ ಮತ್ತು ಹೊಡೆತಗಳ ನೋವಿಗೆ ಬಾಯಿಬಿಡದವರೂ ಇದ್ದಾರೆ ಹಿಂದೆ ಒಂದು ಕಾಲದಲ್ಲಿ ರಾಜದರ್ಬಾರಿನಲ್ಲಿ ಅಪರಾಧಿಗಳ ವಿಚಾರಣೆಯಾಗುತ್ತಿದ್ದಾಗ- ಯಾರಾದರೂ ಅಸತ್ಯ ನುಡಿದದ್ದೇ ಆದರೆ - ರಾಜನ ಸಿಂಹಾಸನವನ್ನು ಹೊತ್ತ ಸಿಂಹಮೂರ್ತಿಗಳು ಘರ್ಜಿಸುತ್ತಿದ್ದುವಂತೆ ಉಗುರುಗಳನ್ನು ಚಾಚಿ, ಬಾಲವನ್ನು ನೆಲಕ್ಕೆ ಟಪ್ಪನೆ ಬಡಿದು ಅಂಜಿಸುತ್ತಿದ್ದುವಂತೆ. ಇದರಿಂದಭಯ ವಿಹ್ವಲನಾಗಿ ಅಪರಾಧಿ ಸತ್ಯಸ್ಥಿತಿಯನ್ನು ಮರೆಮಾಚದೆ ತಿಳಿಸುತ್ತಿದ್ದನು ಆದರೆಸತ್ಯವನ್ನು ಹೊರಗೆಡಹಲು ಈ ಮಾರ್ಗ ಸರಿಯಾದುದೇ ಎಂಬುದು ಪ್ರಶ್ನೆ, ಭಯ ಯಾವಾಗಲೂ ದುಃಖದಾಯಕವಿದೆ. ಉಗ್ರತರವಾದ ಶಿಕ್ಷೆಯ ಅಂಜಿಕೆಯನ್ನು ನೀಡಿದಾಗ—ಮನುಷ್ಯ ಭಯಗೊಂಡು ಆ ಕ್ಷಣಕ್ಕೆ ಸತ್ಯಾನುವರ್ತಿಯಾದಾನೇ ಹೊರತು ಅವನಲ್ಲಿ ಶಾಶ್ವತವಾಗಿ ಸತ್ಯಪ್ರಿಯತೆ ನೆಲೆಗೊಳ್ಳದು.

ಸತ್ಯವನ್ನು ನುಡಿಯುವ ಅಭ್ಯಾಸ ನಮಗಾಗ ಬೇಕಾದರೆ ಪೋಲೀಸರ ಚಾಟಿ ಏಟಾಗಲೀ ರಾಜಸಿಂಹಾಸನದ ಭಯವಾಗಲೀ ಅಗತ್ಯವಿಲ್ಲ: ಸತ್ಯದ ಸಿಂಹಾಸನವು ನಮ್ಮ ಹೃತ್ಕಮಲವೇ ಸೈ. ನಮ್ಮ ಆತ್ಮದಲ್ಲಿ ಸತ್ಯಪ್ರಿಯತೆಯ ಭಾವ ಅಂಕುರಿಸಿದರೆ ಸಾಕು— ನಮ್ಮ ಮಾತನ್ನು ಕೃತಿಯನ್ನು ಆಗ ಸತ್ಯತುಂಬುವುದು ಆಗ ಮನುಷ್ಯ ಗುರುವಿನ ಚಿತ್ತದ ಬೆದರಿಕೆಗೊಳಪಟ್ಟು, ಅಥವಾ ನ್ಯಾಯಾಧೀಶ ವಿಧಿಸಬಹುದಾದ ಕಠಿಣ ಶಿಕ್ಷೆಗೆ ಅಂಜಿ ಸತ್ಯವನ್ನಾಡದೆ-ಮನುಷ್ಯನ ಶ್ರೇಯಸ್ಸಿಗೆ ಸತ್ಯ ಕಲ್ಯಾಣ ಪ್ರದವೆಂದೂ, ಸತ್ಯವನ್ನಾಡುವುದೇ ತನ್ನ ಸ್ವಭಾವವೆಂದೂ ತಿಳಿದು ನುಡಿಯುವನು. ಈ ಬಗೆಯ ಸತ್ಯ ಪ್ರೇಮ ವಿದ್ದಾತನು ಎಲ್ಲ ಭಯಗಳಿಂದಲೂ ದೂರವಿರುವನು ಕಷ್ಟ ಕಾರ್ಪಣ್ಯಗಳನ್ನು ಅವನು ಲೆಕ್ಕಿಸದೆ—ಆ ಕ್ಷಣದಲ್ಲಿ ಉಚಿತವಾದುದನ್ನೆ ನುಡಿಯುವನು.

ನಮ್ಮ ಶಿಕ್ಷಣ ಹಾಗೂ ಶಿಕ್ಷಾಪದ್ಧತಿಯಲ್ಲಿರುವ ಮುಖ್ಯದೋಷ: ಭಯತೋರಿಸಿ ವರ್ತನೆಯನ್ನು ಸರಿಪಡಿಸುವ ಕ್ರಮ. ಇದು ಎಷ್ಟುಮಾತ್ರಕ್ಕೂ ಸಮನಲ್ಲ. ಮಕ್ಕಳು ಸತ್ಯ ನುಡಿಯಬೇಕೆಂದು ಅಂಜಿಸಹೊರಟರೆ, ಅವು ಭೀತಿಯಿಂದ ಸುಳ್ಳನ್ನಾಡುವುದೇ ನಿಜ. ಹಾಗೆಯೇ ಸತ್ಯ ನುಡಿದಾಗ ನಾವು ಅದನ್ನು ಕಡೆಗಣಿಸಿ ಕೋಪ ತೋರಿಸಿದರೆ—ಸುಳ್ಳಿನಿಂದಾದರೂ ನಮ್ಮ ಪ್ರೀತಿಗಳಿಸಲು ನೋಡಬಹುದು. ಒಂದು ಸಿಂಹ ತೋಳ ಮತ್ತೊಂದು ನರಿ ಒಟ್ಟಿಗೆ ಒಂದು ಕತ್ತೆ, ಜಿಂಕೆ ಮತ್ತೊಂದು ಮೊಲವನ್ನು ಕೊಂದವಂತೆ ಆಗ ಸಿಂಹ ತೋಳನೊಡನೆ ಬೇಟೆಯನ್ನು ಹೇಗೆ ಹಂಚೋಣ ಎಂದು ಕೇಳಿತು ತೋಳ—ಕತ್ತೆಯನ್ನು ಸಿಂಹವೂ, ತಾನು ಜಿಂಕೆಯನ್ನೂ, ನರಿ ಮೊಲವನ್ನೂ ತಿನ್ನೋಣ ಎಂದಿತು ಇದರಿಂದ ಕುಪಿತನಾಗಿ ಸಿಂಹ ತೋಳವನ್ನು ಉಗುರಿನಿಂದ ಹೊಡೆದು ಕೊಂದಿತು. ಮತ್ತೆ ನರಿಯೊಡನೆ ಅದೇ ಪ್ರಶ್ನೆ ಕೇಳಿತು. ನರಿಯಂತೂ ಕುತಂತ್ರಿ: "ಸ್ವಾಮಿ, ಕತ್ತೆಯನ್ನು ಮುಂಜಾನೆಯ ಊಟಕ್ಕೂ, ಜಿಂಕೆಯನ್ನೂ ಸಂಜೆಯ ಭೋಜನಕ್ಕೂ ಉಪಯೋಗಿಸಿ, ನಡುವೆ ಅಲ್ಪಾಹಾರವೆಂದು ಮೊಲವನ್ನು ಸ್ವೀಕರಿಸಿರಿ, ಇದೇ ಸರಿ" ಎಂದಿತು. ಸಿಂಹ ಸಂತುಷ್ಟಗೊಂಡು "ನರಿರಾಯಾ, ಈ ರೀತಿ ನ್ಯಾಯ ಪ್ರಿಯತೆಯನ್ನೂ ಬುದ್ಧಿವಂತಿಕೆಯನ್ನೂ ನಿನಗೆ ಕಲಿಸಿಕೊಟ್ಟವನಾರಯ್ಯ?'' ಎಂದು ಕೇಳಿತು ಅದಕ್ಕೆ ನರಿಕೊಟ್ಟ ಉತ್ತರ— "ತೋಳ, ಸ್ವಾಮಿ!''

ನರಿ ಏಕೀಗ ಹೀಗೆಂದಿತು? ತನ್ನ ಸತ್ಯಭಾವನೆಯನ್ನು ವ್ಯಕ್ತಪಡಿಸಲು ಸಿಂಹದ ಹೆದರಿಕೆಯಿಂದ ಅದಕ್ಕೆ ಸಾಧ್ಯವಾಗಲಿಲ್ಲ. ಹಾಗೆಂದು ಸಿಂಹವನ್ನು ಪ್ರಸನ್ನಗೊಳಿಸಬೇಕೆಂಬ ನಿಜವಾದ ಅಭಿಲಾಷೆಯೂ ಅದಕ್ಕಿರಲಿಲ್ಲ. ಇದ್ದುದೊಂದೇ—ಸಿಂಹನಬಗೆ ಭಯ! ಕೊನೆಗೆ ಸಿಂಹವಾದರೂ, ನರಿಯನ್ನು ಹೊಗಳಿದುದು ಪ್ರೀತಿಯಿಂದಲ್ಲ—ಮಾಂಸವೆಲ್ಲ ತನಗೇ ತಿನ್ನಲು ದೊರೆತ ಸ್ವಾರ್ಥದ ಜಯದಿಂದಾಗಿಯೇ, ಆದರೆ ಇದೆಲ್ಲ ತಾತ್ಕಾಲಿಕವೇ ಹೊರತು ಸತ್ಯಪ್ರಿಯರು ಎಂದಿಗೂ ಇಂಥದನ್ನು ಮೆಚ್ಚುವುದಿಲ್ಲ: ವಿನೋದಕ್ಕಾದರೂ ಸುಳ್ಳು ಹೇಳಬಾರದೆನ್ನುವವರು—ಸ್ವಾರ್ಥ ವಶದಿಂದ ನುಡಿದ ಅಸತ್ಯವನ್ನು ಒಪ್ಪಲಿಕ್ಕೇ ಇಲ್ಲ. ಎಷ್ಟೋ ಮಂದಿ ಸತ್ಯ ನುಡಿದರೆ ಕಷ್ಟ ತಪ್ಪದು ಎನ್ನುವರು. ಆದರೆ ಸತ್ಯಕ್ಕೆ ಸತ್ಫಲ ದೊರೆತೇ ತೀರುವುದೆಂಬ ಅನುಭವ

(೩ನೇ ಪುಟ ನೋಡಿರಿ)

FOR QUALITY

WATCHES

CLOCKS

AND

TIMEPIECES

AND

ALLIED REPAIRS

Consult:-

MUBARAK & CO.

WATCH & CLOCK SPECIALISTS

RATTAN BAZAAR - - MADRAS-3

ಪ್ರಜಾಪ್ರಭುತ್ವದ ಯಶಸ್ಸು

ಸಾರ್ವಜನಿಕ ಪುಸ್ತಕ ಭಂಡಾರಗಳ ಉಪಯೋಗ

ರಾಷ್ಟ್ರದಲ್ಲಿ ಇದೀಗ ಪ್ರಜಾ ಪ್ರಭುತ್ವವು ಮೂರ್ತ ಸ್ವರೂಪವನ್ನು ತಳೆದು ನಿಂತಿದೆ. ರಾಜ್ಯ ಸರಕಾರವೂ ಜನತೆಯೂ ಕೂಡಿಯೇ ಪ್ರಜಾ ಪ್ರಭುತ್ವವನ್ನು ಚೆನ್ನಾದ ರೀತಿಯಲ್ಲಿ ಕಾಯ್ದುಕೊಳ್ಳುವ ಅಗತ್ಯವಿದೆ. ಚಾರಿತ್ರಿಕವಾಗಿ, ಪ್ರಜಾ ಪ್ರಭುತ್ವ ಪದ್ಧತಿಯು ನಮ್ಮ ಜನಕ್ಕೆ ಅಪರಿಚಿತವಾದುದೇನೂ ಇಲ್ಲ. ಆರಂಭಕಾಲದ ವೈದಿಕ ಸಾಹಿತ್ಯದಲ್ಲಿ ಅರಸು ಇಲ್ಲದ ಸರಕಾರಗಳ ಕುರಿತು ಉಲ್ಲೇಖವಿದೆ. ಇಂಥ ರಾಜ್ಯಗಳಲ್ಲಿ ಆಯಾ ಜನರೇ ರೂಪಿಸಿಕೊಂಡ ಸಾಮಾನ್ಯ ಪ್ರಜಾಪ್ರಭುತ್ವ ಪದ್ಧತಿ ಅಸ್ತಿತ್ವದಲ್ಲಿತ್ತು.

ಪ್ರಜಾಪ್ರಭುತ್ವ ಪದ್ಧತಿ

ರಚನೆಯಲ್ಲೂ, ಸಂಘಟನೆಯಲ್ಲೂ, ಕಾರ್ಯ ಪ್ರಣಾಳಿಯಲ್ಲೂ ಪ್ರಜಾಪ್ರಭುತ್ವ ಪದ್ಧತಿಯೇ ಜೀವಾಳವಾಗಿರುವ ಗ್ರಾಮ ಪಂಚಾಯತುಗಳು ಇಂಥ ರಾಜ್ಯಗಳ ಮೂಲ ಘಟಕಗಳಾಗಿದ್ದುವು. ದಕ್ಷಿಣ ಭಾರತದಲ್ಲಿಯೂ ಈ ಮಾದರಿಯ ಪಂಚಾಯತು ರಾಜ್ಯವು ಬಹಳ ಪೂರ್ವಕಾಲದಿಂದಲೇ ಪ್ರವರ್ಧಮಾನಗೊಂಡಿತ್ತು. ಡಾ| ಜಾನ್ ಮಥಾಯಿಯವರು ತಮ್ಮ "ಗ್ರಾಮಾಡಳಿತ"ವೆಂಬ ಪುಸ್ತಕದಲ್ಲಿ ಇದಕ್ಕೆ ಬಲವಾದ ಉದಾಹರಣೆಗಳನ್ನು ಕೊಟ್ಟಿರುವರು. ಈ ಪಂಚಾಯತುಗಳನ್ನು ಮತದಾನ ಕ್ರಮದಿಂದ ಆರಿಸಲಾಗುತಿದ್ದು, ಉಪಸಮಿತಿಗಳ ಮೂಲಕ ಅವು ಕೆಲಸ ನಿರ್ವಹಿಸುತಿದ್ದುವು. ಹೇಗೆ ಉದ್ಯಾನವನ ಸಮಿತಿ, ನೀರಾವರೀ ಸಮಿತಿ, ನ್ಯಾಯ ಸಮಿತಿ ಎಂದು ಮುಂತಾದುವಿದ್ದುವು. ಈ ಸಮಿತಿಗಳ ಸದಸ್ಯೆಯರಾಗಿ ದುಡಿಯಲು ಸ್ತ್ರೀಯರೂ ಅರ್ಹರಿದ್ದರು. ಪಂಚಾಯತುಗಳ ಸಾಮಾನ್ಯಾಧಿವೇಶನದಲ್ಲಿ ಸಮಿತಿಗಳ ಕೆಲಸಕ್ಕೆ ಸಮ್ಮತಿ ಸೂಚಿಸಲಾಗುತಿತ್ತು. ಇವು ನಂಜಣಕಾಗಿ ಹಾಗೂ ಚಾತುರ್ಯದಿಂದ ಕೆಲಸವನ್ನು ಸಾಗಿಸಿಕೊಂಡು, ಜನರ ಪ್ರಜಾಪ್ರಭುತ್ವದ ಭಾವನೆಯನ್ನು ಪೋಷಿಸುತಿದ್ದುವು. ಮತದಾರರು ತಾಡವತ್ರಗಳನ್ನು ಒಂದು ಮಣ್ಣಿನ ಗಡಿಗೆಯೊಳಗೆ ಹಾಕಿ ಮತದಾನ ಮಾಡುತಿದ್ದರೆಂಬುದಕ್ಕೆ ೧೧ನೇ ಶತಮಾನದಲ್ಲಿ ಚೋಳ ರಾಜರ ಆಳಿಕೆಗೆ ಒಳಪಟ್ಟಿದ್ದ ಉತ್ತರಮೇರೂರು (ಚೆಂಗಲ್ಪಟ್ಟು ಜಿಲ್ಲೆ) ಎಂಬಲ್ಲಿ ನಿದರ್ಶನವಿದೆ. ಆದರೆ ಕಳೆದ ಎರಡು ಶತಕಗಳಿಂದ—ವಿದೇಶೀ ರಾಜ್ಯಭಾರಕ್ಕೆ ಒಳಗಾಗಿ, ಭಾರತವು ರಾಜ್ಯಭಾರ ಕ್ರಮವನ್ನೇ ಬದಲಾಯಿಸಿಕೊಂಡಿತು. ಜನ ಪ್ರಜಾಪ್ರಭುತ್ವ ಪದ್ಧತಿಯನ್ನು ಮರೆತೇ ಬಿಟ್ಟಿತು. ಅನಕ್ಷರಸ್ಥರು ಹಾಗೂ ಸಾಮಾನ್ಯಮಟ್ಟದ ತಿಳುವಳಿಕೆ ಕೂಡ ಇಲ್ಲದವರಾಗಿ ನಾವು ಬಾಳಿದೆವು

ಆದರ್ಶ ಚಳುವಳಿ

ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡ ಬಳಿಕವೇ— ನಾವು ಹೊಸತಾಗಿ ಪ್ರಜಾಪ್ರಭುತ್ವ ಪದ್ಧತಿಯನ್ನು ಆಶ್ರಯಿಸಿದೆವು. ಪಾರ್ಲಿಮೆಂಟಿನ ಪ್ರಜಾ ಪ್ರಭುತ್ವವನ್ನು ರಾಜ್ಯಾಂಗ ಘಟನೆಯನ್ನೂ ನಾವು ಶಿರಸಾ ವಹಿಸಿದ್ದೇವೆ. ಈ ಮಾದರಿಯ ರಾಜ್ಯಭಾರ ಕ್ರಮವು ಯಶಸ್ವಿಯಾಗಬೇಕಾದರೆ, ಮತದಾರರು ಸಾಕಷ್ಟು ಶಿಕ್ಷಿತರಿರುವುದೂ ಜ್ಞಾನಿಗಳಿರುವುದೂ ಅಗತ್ಯ. ಭಾರತದಲ್ಲಿ ಸ್ಥಿತಿ ಇದಕ್ಕೆ ತೀರ ವಿಪರ್ಯಾಸವಿದೆ. ೨೦% ದಷ್ಟು ಜನ ಅಕ್ಷರಸ್ಥರಿರುವುದಿಲ್ಲ! ಹೀಗಾಗಿ ರಾಜ್ಯ ಸರಕಾರಗಳು ಸರ್ವಪ್ರಥಮವಾಗಿ ವಿದ್ಯಾಭ್ಯಾಸವನ್ನು ಎಲ್ಲರಿಗೂ ಒದಗಿಸುವ ಪ್ರಯತ್ನಕ್ಕೆ ಕೈಹಚ್ಚಬೇಕಾಗಿದೆ ಈಗಾಗಲೇ ಈ ದಿಸೆಯಲ್ಲಿ ಸಾಕಷ್ಟು ಪ್ರಗತಿ ಕಂಡುಬಂದಿದೆ. ಇನ್ನು ಮುಂದಿನ ಕೆಲವು ವರ್ಷಗಳಲ್ಲಿ ಈ ಚಳುವಳಿ ಅಧಿಕವೇಗದಿಂದ ಮುನ್ನಡೆಯುವುದು ಅವಶ್ಯವಿದೆ.

ಸ್ತುತ್ಯ ಉದ್ದೇಶ

ಆದರೆ ಒಮ್ಮೆ ಅಕ್ಷರಸ್ಥರೆನಿಸಿದ ಜನ ಅಕ್ಷರವನ್ನು ಮರೆತು ಬಿಟ್ಟು, ಮರಳಿ ಅನಕ್ಷರಸ್ಥರ ಸಾಲಿಗೆ ಸೇರದಂತೆ ನೋಡಬೇಕೆಂದುದನ್ನು ಈ ಸಂದರ್ಭದಲ್ಲಿ ಎಷ್ಟಕ್ಕೂ ಮರೆಯಲಾಗದು. ನಮ್ಮ ದೇಶದಲ್ಲಿ ಈ ಹಿಂದಿನ ಅಕ್ಷರಾಭ್ಯಾಸ ಪ್ರಚಾರದ ಕಾರ್ಯ ವಿಫಲವಾದುದಕ್ಕೆ ಇದು ಒಂದು ಪ್ರಬಲ ಕಾರಣ. ಈ ಅಪಾಯವನ್ನು ನಿವಾರಿಸುವುದೇ ಸಾರ್ವಜನಿಕ ಪುಸ್ತಕ ಭಂಡಾರಗಳ ಉದ್ದೇಶ. ಒಂದು ಭವ್ಯವಾದ ಭವನವನ್ನು ನಿರ್ಮಿಸಿ ಮುಂದೆ ಅದನ್ನು ನೋಡಿಕೊಳ್ಳುವವರಿಲ್ಲದೆ ಹೋದರೆ—ಭವನದ ಸ್ಥಿತಿ ನೆಟ್ಟಗಿರಲಾರದು. ನಾವು ಯಾವಾಗಲೂ ಅದನ್ನು ಚೆನ್ನಾದ ರೀತಿಯಲ್ಲಿ ಇಟ್ಟುಕೊಂಡರೆ ಮಾತ್ರ, ನಮ್ಮ ಉಪಯೋಗಕ್ಕೆ ಅದು ಬರುವುದು. ಹಾಗೆಯೇ ಸಾರ್ವಜನಿಕ ಪುಸ್ತಕ ಭಂಡಾರಗಳು ಒಮ್ಮೆ ಅಕ್ಷರಸ್ಥರಾದ ಜನರ ವಿದ್ಯೆಯ ಮೋಹ ತೊಲಗದಂತೆ ನೋಡಿಕೊಳ್ಳುವುವು. ಜನರ ತಿಳುವಳಿಕೆಯನ್ನು ಹೆಚ್ಚಿಸುವುದಕ್ಕೂ, ತಕ್ಕ ರೀತಿಯ ಶಿಕ್ಷಣ ನೀಡುವುದಕ್ಕೂ—ತನ್ಮೂಲಕ ಪ್ರಜಾ ಪ್ರಭುತ್ವ ಪದ್ಧತಿಯನ್ನು ಯಶಸ್ವಿಗೊಳಿಸುವುದಕ್ಕೂ ಇದರಿಂದ ತುಂಬ ನೆರವಾಗುವುದು. ಈ ಭಂಡಾರಗಳನ್ನು ಸ್ವಾತಂತ್ರ್ಯ ಪ್ರಾಪ್ತಿಗೂ ಹಿಂದೆ ತೊಡಗಿತ್ತು—ಮತ್ತು ಸರಕಾರ ಸಹಾಯಧನವನ್ನು ಕೊಟ್ಟು ಪೋಷಿಸುತಿತ್ತು. ಆದರೆ ಇದೀಗ ಪುಸ್ತಕ ಭಂಡಾರಗಳ ಉಪಯೋಗವು ಅತ್ಯಧಿಕ ಪ್ರಮಾಣದಲ್ಲಿ ವಿಪುಲ ಜನರಾಶಿಗೆ ಆಗುವ ರೀತಿ ಸುಧಾರಣೆಗಳನ್ನು ಕೈಗೊಳ್ಳಲಾಗಿದೆ- ಹಳ್ಳಿಹಳ್ಳಿಗೂ ಪುಸ್ತಕಗಳನ್ನು ತ್ವರಿತದಲ್ಲಿಯೇ ಒದಗಿಸಿ ಕೊಡುವ ಹಾಗೂ ಎಲ್ಲ ಪುಸ್ತಕ ಭಂಡಾರಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಸ್ತುತ್ಯ ಉದ್ದೇಶವಿದೆ.

ಸರಕಾರದ ಪ್ರಯತ್ನ

ಮದ್ರಾಸು ಸರಕಾರವು ಈ ಬಗ್ಗೆ ೧೯೪೮ರಲ್ಲಿ ಒಂದು ಕಾಯಿದೆ ಮಾಡಿದೆ— ಪ್ರತಿಯೊಂದು ಜಿಲ್ಲೆಯಲ್ಲಿ ಪುಸ್ತಕ ಭಂಡಾರಗಳನ್ನು ತೆರೆದ, ಶಾಲೆಯನ್ನು ಬಿಡುವ ಮಕ್ಕಳಿಗೂ ಸಾಮಾನ್ಯ ಜನತೆಗೂ ತಕ್ಕ ಮಟ್ಟದ ಜ್ಞಾನವನ್ನು ಜೀವನದ ವಿವಿಧ ಮುಖಗಳ ಬಗ್ಗೆ ತಿಳುವಳಿಕೆಯನ್ನು ಉಂಟುಮಾಡುವ ಪುಸ್ತಕಗಳಿಂದ ಸುಸಜ್ಜಿತಗೊಳಿಸುವ ಉಪಕ್ರಮವನ್ನು ಕೈಗೊಂಡಿದೆ. ಜಿಲ್ಲೆಗೊಬ್ಬ ಮುಖ್ಯಾಧಿಕಾರಿಯನು [illegible] ಜನಿಕ ಪುಸ್ತಕ ಭಂಡಾರಗಳಿಗೆ ಕಟ್ಟಡವನ್ನೂ ಇತರ

(೧೦ನೇ ಪುಟ ನೋಡಿರಿ)

[೧ನೇ ಪುಟದಿಂದ ಮುಂದುವರಿದುದು]

ಸ್ವಚ್ಛ ಹೃದಯ

ಜನ್ಮ ಮಾತನ್ನು ಮರೆಯಲಾಗದು. ಕಷ್ಟ ಪರಂಪರೆಗಳು ಮೊದಲಿಗೆ ಬಂದಾವು. ಆದರೆ ಕೊನೆಯವರೆಗೆ ಅಸತ್ಯದ ರಾಜ್ಯಭಾರ ನಡೆಯದು. ಸತ್ಯ ಹರಿಶ್ಚಂದ್ರನ ಕತೆಯನ್ನು ಕೇಳದವರಾರು?

ಕಷ್ಟಕ್ಕೆ ಒಳಗಾಗದೆ ಯಾವಾಗಲೂ ಸತ್ಯಕ್ಕೇ ಕಟ್ಟುಬಿದ್ದು ನಡೆಯಲು ಸುಲಭೋಪಾಯ ಒಂದಿದೆ—ಗೋಪ್ಯವಾಗಿ ಇಡಬೇಕಾಗುವ ಯಾವುದೇ ಕೆಲಸವನ್ನು ನಾವು ಮಾಡದಿದ್ದರೆ ಸುಳ್ಳನ್ನಾಶ್ರಯಿಸುವ ಸಂದರ್ಭವೇ ಬರಲಾರದು. ಪ್ರತಿಕ್ಷಣವೂ ನಮ್ಮನ್ನು ದೇವರು ನಿರೀಕ್ಷಿಸುತ್ತಿರುವನೆಂಬ ಪವಿತ್ರಭಾವನೆ ನಮ್ಮಲ್ಲಿ ಇದ್ದರೆ- ಆಗ ಸತ್ಯವು ನಮ್ಮ ಸ್ವಭಾವವಾಗಿಯೇ ಮಾರ್ಪಡುವುದು. ಅವಾಚ್ಯವಾದ ಶಬ್ದವನ್ನು ಉಚ್ಚರಿಸಲು ಒಡಂಬಡದವನು ಹೇಯ ಕಾರ್ಯಗಳನ್ನು ಕೈಗೊಳ್ಳಲಾರನು. ಮನೋವಾಕ್ಕಾಯಗಳಿಂದ ಮನುಷ್ಯನು ಸತ್ಯವನ್ನು ನೆಚ್ಚಿಕೊಂಡರೆ— ಬದುಕು ಹಸನಾಗುವುದು.

ಎಷ್ಟೋಮಂದಿ ಜನರು ನೋಡಲು ಸುಂದರರು ವಿನಯಶೀಲರೂ ಆಗಿರುವರು. ಆದರೆ ಅವರ ಕೃತಿಯೊಂದು ಮಾತು ಅಸತ್ಯದಿಂದ ಕೂಡಿರುವುದು. ಅವರು ಕೇವಲ ತೋರಿಕೆಗಾಗಿಯಷ್ಟೇ ಒಳ್ಳೆಒಳ್ಳೆಯ ಮಾತು ಹೇಳುವರು. ಮನಸ್ಸು ಬೇರೆಯೇ ಚಿಂತಿಸುವುದು ಅವರಲ್ಲಿರುವ ಈ ದೌರ್ಬಲ್ಯವನ್ನು ಕಣ್ಣಮುಂದಿಟ್ಟುಕೊಂಡು - ಅಂಥವರ ಭರವಸೆಯನ್ನು ಮಾಡದಿರುವುದೇ ಒಳ್ಳೇದು ಶ್ರೀ ಕೃಷ್ಣನು ಸಂಧಾನಕ್ಕಾಗಿ ಹಸ್ತಿನಾವತಿಗೆ ಬಂದಾಗ ದುರ್ಯೋಧನನ ಸ್ವಾಗತವನ್ನು ಸ್ವೀಕರಿಸದೆ ವಿದುರನ ಮನೆಗೆ ಭೋಜನಕ್ಕೆ ಹೋದನು ಅಲ್ಲಿದೊರೆತದು ಒಂದು ಲೋಟ ಹಾಲು.ಆದರೂ ಪಕ್ವಾನ್ನಗಳನ್ನುಂಡ ಸವಿಯಿಂದ ಸಂತುಷ್ಟನಾದನು, ವಿದುರನು ಕೊಟ್ಟ ಹಾಲಿನಲ್ಲಿ ನಿಜವಾದ ಪ್ರೇಮಭಾವವಿತ್ತು ಅದು ಅಮೃತದ ರುಚಿಯನ್ನು ಕೊಟ್ಟಿತು. ದುರ್ಯೋಧನನು ಕೇವಲ ಆಡಂಬರ ಪ್ರದರ್ಶಿಸಲು ಭಾರಿ ಔತಣವನ್ನೇರ್ಪಡಿಸಿದನು. ಹೊರತು ಹೃದಯ ಕಲುಷಿತವಾಗಿತ್ತು, ಮದೋನ್ಮತ್ತವಾಗಿತ್ತು. ಇದೇ ಉದಾಹರಣೆ ರಾಮಾಯಣದಲ್ಲಿಯೂ ದೊರಕುವುದು: ಶಬರಿಯು ರಾಮನಿಗೆ ಎಂಜಲು ಮಾಡಿದ ಕಾಡು ಹಣ್ಣುಗಳನ್ನು ಕೊಟ್ಟಳು. ಅದರಲ್ಲಿದ್ದ ಸ್ವಾದ ಇನ್ನೆಲ್ಲಿಯೂ ಇರಲಿಲ್ಲ! ಮಹಮ್ಮದ ಪೈಗಂಬರರ ಬಗ್ಗೆಯೂ ಒಂದು ಕತೆ ಇದೆ. ಒಮ್ಮೆ ಅವರಿಗೆ ಬಹಳ ಅಸ್ತ್ರಶಸ್ತ್ರಗಳ ಅಗತ್ಯ ಬೀಳಲು ದೊಡ್ಡ ದೊಡ್ಡವರೆಲ್ಲ— ಬಹಳಷ್ಟು ಸಾಮಗ್ರಿಗಳನೊದಗಿಸಿದರು. ಒಬ್ಬ ಬಡವಿಗೂ ಪೈಗಂಬರರಿಗೆ ನೆರವಾಗುವ ಉತ್ಕಟೇಚ್ಛೆಯಿತ್ತು— ಅವಳು ತನ್ನ ಸರ್ವಸ್ವವನ್ನು, ಎಂದರೆ ಒಂದು ರೊಟ್ಟಿ ಮತ್ತು ಮೂರು ಖರ್ಜೂರಗಳನ್ನು, ತಂದೊಪ್ಪಿಸಿದಳು. ಸೇವಕರು ಇದನ್ನು ನೋಡಿ ನಕ್ಕುಬಿಟ್ಟರು, ಪೈಗಂಬರ ಆಗ ಹೀಗೆಂದರು—"ನಿನ್ನೆ ರಾತ್ರಿ ನನಗಿದೇ ಸ್ವಪ್ನವಾಯಿತು: ಈ ಹೆಂಗುಸು ಕೊಟ್ಟ ಅಲ್ಪ ವಸ್ತುಗಳನ್ನು ಒಂದು ತಟ್ಟೆಯಲ್ಲಿ ಮತ್ತು ಉಳಿದ ಎಲ್ಲ ಮಹಾವಸ್ತುಗಳನ್ನು ಇನ್ನೊಂದರಲ್ಲಿ ಇಟ್ಟು, ದೇವದೂತರು ತಕ್ಕಡಿ ತೂಗಿದರು. ಇವಳ ತಟ್ಟೆಯೇ ಬಹಳ ಭಾರವಾಗಿತ್ತು!"

ಮನುಷ್ಯನ ಎಲ್ಲ ಆಶೋತ್ತರಗಳ ಅಂತಿಮ ಗುರಿಯಾಗಿ ಸತ್ಯವಿದೆ. ಪ್ರತಿಯೊಂದು ವಿಷಯದ ಜಿಜ್ಞಾಸು ಸತ್ಯಾನ್ವೇಷಿಯಾಗಿರುತ್ತಾನೆ ಅಂಧ ವಿಶ್ವಾಸಗಳೂ ಕಷ್ಟ ಕಾರ್ಪಣ್ಯಗಳೂ ನಮಗೆ ತೊಂದರೆ ಕೊಡಬಹುದು. ಹಾಗೆಂದು—ಸ್ಥಿರ ಬುದ್ಧಿಯಿಂದ, ಸ್ವಚ್ಛ ಹೃದಯದಿಂದ, ಸತ್ಯಪ್ರಿಯರಾಗಿ ವರ್ತಿಸಿದರೆ ಜಯ ಕಟ್ಟಿಟ್ಟದ್ದೇ. ಸತ್ಯಕ್ಕೇ ಜಯ. ಎಂಬುದನ್ನು ಮರೆಯದೆ ವರ್ತಿಸೋಣ—ಈಗ ನಮ್ಮ ಸಮಾಜ ಹಾಗೂ ರಾಜಕೀಯದಲ್ಲಿ ತುಂಬಿರುವ ಕಲ್ಮಶಗಳು ತನ್ನಿಂದತಾನೆ ದೂರಾಗುವುವು ಕಾಶ್ಮೀರ ವಿಷಯದಲ್ಲಿ ಪಾಕಿಸ್ತಾನ ಅಸತ್ಯವಾದದು—ಕಳ್ಳಾಟಗಳು ಕಪಟದಿಂದ ನಡೆಯಿತು

—ಹಿಂತಕ್ಸತ್.

ನೀವೇಕೆ ಸೇವಿಂಗ್ಸ್‌ಬೇಂಕ್ ಖಾತೆಯನ್ನು ತೆರೆಯಬೇಕು?

ಆರ್ಥಿಕ ವಹಿವಾಟಿಗೆ ಇದೊಂದು ಅತ್ಯುತ್ತಮ ಸಾಧನ ನಿಮ್ಮ ಸಂಬಳ, ಆಯವನ್ನೆಲ್ಲಾ ಸೇವಿಂಗ್ಸ್ ಬೇಂಕು ಲೆಕ್ಕಕ್ಕೆ ಜಮಮಾಡಿರಿ; ಸಲಬೇಕಾದುದವನ್ನು, ವ್ಯಯವನ್ನು ಚೆಕ್ಕುಗಳ ಮೂಲಕವೇ ಪಾವತಿ ಮಾಡಿರಿ ಆಗ ನಿಮಗೆ ನಿಮ್ಮ ಆಯವ್ಯಯದ ಸಂಪೂರ್ಣ ತಿಳುವಳಿಕೆಯುಂಟಾಗುವುದು ನಿಮ್ಮ ಪಾಸ್ ಪುಸ್ತಕವೇ ನಿಮಗಿದನ್ನು ತಿಳಿಸುವುದು. ಆರ್ಥಿಕ ವ್ಯವಹಾರದಲ್ಲಿ ಇಷ್ಟು ನೈಜ ಮತ್ತು ಅನುಕೂಲಕ್ರಮ ಬೇರೊಂದಿಲ್ಲ- ಮಾತ್ರವಲ್ಲ ಈ ಚೊಕ್ಕ ಹಾಗೂ ಆಧುನಿಕ ರೀತಿಯ ವ್ಯವಹಾರ ಕ್ರಮದಿಂದ ನಿಮ್ಮ ಮನಸ್ಸಿಗೆ ಗೌರವ—ಸಂತೃಪ್ತಿಗಳುಂಟಾಗುವುವು

ದಿ ಕೆನರಾ ಇಂಡಸ್ಟ್ರಿಯಲ್
ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ

The Canara Industrial &
Banking Syndicate Limited.

ESTD: 1925 H. O: UDIPI.

ಭೂದಾನ ಮಾಡುವ ದೇವ - ವಿನೋಬಾ

ಪಾಶ್ಚಾತ್ಯರ ದೃಷ್ಟಿಯಲ್ಲಿ ಭೂದಾನ ಯಜ್ಞ

ಜಗತ್ತು ಭಾರತದ ಮಾರ್ಗದರ್ಶನವನ್ನು ನಿರೀಕ್ಷಿಸುತ್ತಿದೆ; ಭಾರತದ ಕಾರ್ಯಕಲಾಪಗಳಲ್ಲಿ ವಿಶ್ವದ ನಾಗರಿಕರು ಒಳ್ಳೆಯ ಆಸ್ಥೆಯನ್ನೂ ಉತ್ಸಾಹವನ್ನೂ ತೋರುತ್ತಿರುವರು. ಭಾರತೀಯರ ಯಾವುದೊಂದು ಅಪೂರ್ವ ಕೀರ್ತಿಯ ಮೂಲಕ ಇಡೀ ಜಗತ್ತಿಗೆ ಹಿತಕರವಾದ ವಿಧಾನದೊಂದು ಹೊಸ ಉಪಾಯ ತೋರಹೊಮ್ಮಬಹುದೆಂದು ಅವರು ಬಗೆದಿರುವರು. ಇಂಥವರಲ್ಲಿ ಗಾಂಧೀ ಶಿಷ್ಯರಲ್ಲಿ ಅಗ್ರಗಣ್ಯರೆನಿಸಿದ ಆಚಾರ್ಯ ವಿನೋಬಾ ಭಾವೆ ಒಂದು ಅಪೂರ್ವ ಚಳುವಳಿಯನ್ನು ಹತ್ತು ತಿಂಗಳ ಹಿಂದೆ ತೊಡಗಿದರು: ಭೂದಾನ ಯಜ್ಞವೆಂಬ ಹೆಸರಿನ ಈ ಸೇವೆಯ ಕಡೆಗೆ ಇಂದು ಜಗತ್ತಿನ ದೃಷ್ಟಿ ಆಕರ್ಷಿತವಾಗಿದೆ ಎಂಬುದು ಹೆಮ್ಮೆ. "ಭೂ ಸಮಸ್ಯೆಯ ಬಗ್ಗೆ ವಿನೋಬಾರವರು ವ್ಯಯಿಸುತ್ತಿರುವ ಶಕ್ತಿ, ಉತ್ಸಾಹ ಮತ್ತು ಶ್ರದ್ಧೆಗಳಲ್ಲಿ ನೂರಕ್ಕೆ ಒಂದಂಶವನ್ನು ಕೂಡ ಯಾವುದೇ ಸರಕಾರ ಅಥವಾ ಸರಕಾರೇತರ ಸಂಸ್ಥೆ ತೋರಿಸುತ್ತಿಲ್ಲ" ಎಂದು "ಹರಿಜನ" ಪತ್ರಿಕೆಯ ಸಂಪಾದಕ ಶ್ರೀ ಮಶ್ರೂವಾಲಾ ನುಡಿದರು. ವಿಶ್ವ ವಿಖ್ಯಾತವಾದ "ರೀಡರ್ಸ್ ಡೈಜೆಸ್ಟ್" ಮಾಸಪತ್ರಿಕೆಯಲ್ಲಿ ಸರ್ ರಾಬರ್ಟ್ ಟ್ರಂಬುಲ್ ಬರೆದ ಲೇಖನ ತೀರಾ ರೋಮಾಂಚಕವಾಗಿದೆ. ಪಾಶ್ಚಾತ್ಯರು ಭಾರತವನ್ನು ನೋಡುವ ದೃಷ್ಟಿಯ ಪರಿಚಯವನ್ನದು ಕೊಡುತ್ತದೆ. ಭಾರತದ ಅಹಿಂಸಾತ್ಮಕ ಚಳುವಳಿ ಪದ್ಧತಿಯೇ ಯುದ್ಧದ ಹಿಂಸೆಯಿಂದ ಜರ್ಜರಿತ ರಾಷ್ಟ್ರಗಳಿಗೆ ಇರುವ ಏಕಮಾತ್ರ ಆಶ್ರಯವೆಂದು ಇದರಿಂದ ಮನಗಾಣಬಹುದು.

ಭಾರತದ ಗೌರವ

"ಮೈಗೊಂದು ತುಂಡು ಬಟ್ಟೆ, ಕಾಲಿಗೊಂದು ಜೊತೆ ಚಪ್ಪಲಿ ಇಷ್ಟನ್ನು ಮಾತ್ರ ಧರಿಸಿ, ಹಳ್ಳಿಯಿಂದ ಹಳ್ಳಿಗೆ ಕಾಲ್ನಡಿಗೆಯಲ್ಲಿ ನಡೆದು, ನಿರ್ಗತಿಕರಾದವರಿಗೆ ಧನಿಕರು ತಮ್ಮಲ್ಲಿದ್ದುದನ್ನು ಕೊಡಬೇಕೆಂದು ನೀತಿಬೋಧನೆ ಮಾಡುತ್ತ ಮುಂದುವರಿಯುವ ಅಪ್ಪಟ ಸನ್ಯಾಸಿಯೊಬ್ಬನನ್ನು ಮಹಾ ಮಹಾ ರಾಜಕೀಯ ನಾಯಕರೂ ಗೌರವಿಸುವುದು ಭಾರತದಲ್ಲಿಯಲ್ಲದೆ, ಇನ್ನೆಲ್ಲಿ?" ಎಂದು ಆ ಪಾಶ್ಚಾತ್ಯ ಲೇಖಕ ಕೌತುಕ ತೋರುತ್ತಾರೆ. ಮಹಾತ್ಮಾ ಗಾಂಧಿಯವರ ತತ್ವಗಳನ್ನು ಪ್ರತಿಪಾದಿಸುತ್ತ ಸಾಗುವ ಆಚಾರ್ಯ ವಿನೋಬಾ ಭಾವೆಯವರು ಭಾರತದ ರಾಜಕೀಯ ಜೀವನದಲ್ಲಿ ಒಬ್ಬ ಮುಖ್ಯ ವ್ಯಕ್ತಿಯಾಗಿದ್ದಾರೆ. ಜನತೆಯಲ್ಲಿ ಕಾರುಣ್ಯವನ್ನು ಹುಟ್ಟಿಸುವ ಒಂದೇ ಮಾರ್ಗದಿಂದ ಅವರು ಸಾಧಿಸಿದ ಕಾರ್ಯವನ್ನು ನೋಡಿದರೆ, ಎಂಥವರೂ ಆಶ್ಚರ್ಯಪಡುವಂತಿದೆ.

ದೇಶದ ಆರ್ಥಿಕ ಜಾಡ್ಯಕ್ಕೆ ಅಹಿಂಸೆಯೇ ಶ್ರೇಷ್ಠ ಔಷಧ ಎಂದವರ ತತ್ವ. ಇದರಿಂದ, ಬಡತನದಲ್ಲಿ ಬಳಲುತ್ತಿದ್ದ ಸಾವಿರಾರು ರೈತರನ್ನು ಅವರು ಉದ್ಧರಿಸಲು ಸಮರ್ಥರಾಗಿದ್ದಾರೆ. ಭಾರತದ ಅತಿ ಕಠಿಣ ಸಮಸ್ಯೆಗಳಲ್ಲಿ ಒಂದಾದ ಭೂಮಿಯನ್ನು ಹಂಚುವ ಕಾರ್ಯದಲ್ಲಿ ಏಕಾಕಿಯಾಗಿ, ಬಂಗ್ಯೆಗಳಿಂದಲೇ ಹೋರಾಟ ನಡೆಸಿ, ಯಾವ ಒತ್ತಾಯಕ್ಕೂ ಒಳಗಾಗದೆ, ಯಾವ ಪ್ರತಿಫಲವನ್ನೂ ನಿರೀಕ್ಷಿಸದೆ—ಭೂಮಿಯ ಒಡೆಯರು ತಾವೇ ಉಳಲು ಭೂಮಿಯಿಲ್ಲದ ತಮ್ಮ ಆಳು ಮಕ್ಕಳಿಗೆ ೨೫ ಸಾವಿರ ಎಕರೆ ಭೂಮಿಯನ್ನು ಹಂಚುವಂತೆ ಮಾಡಿದ್ದಾರೆ. ಈ ಸ್ತುತ್ಯ ಕಾರ್ಯಕ್ರಮವನ್ನು ಮೆಚ್ಚಿ ಕೇಂದ್ರ ಸರಕಾರದ ಆಹಾರ ಹಾಗೂ ವ್ಯವಸಾಯದ ಮಂತ್ರಿಗಳು ಬೆಳೆಬೆಳೆಸಲು ಯೋಗ್ಯವಾದ ಒಂದು ಕೋಟಿ ಎಕರೆ ಭೂಮಿಯನ್ನು ಭೂಮಿಯಿಲ್ಲದ ಬಡಜನರಿಗೆ ಹಂಚಲು ಕೊಟ್ಟು ಬಿಟ್ಟಿದ್ದಾರೆ.

ಆತ್ಮ ಶಕ್ತಿಯ ಗುರಾಣಿ

ಮಹಾತ್ಮ ಗಾಂಧಿಯ ಅನುಯಾಯಿಗಳಾದ ಆಚಾರ್ಯ ವಿನೋಬಾ ಗುರುವಿನಂತೆಯೇ ಧಾರ್ಮಿಕ ಜೀವನವನ್ನು ನಡೆಸುತ್ತಿದ್ದಾರೆ, ರೂಪಿನಲ್ಲಿಯೂ ಅವರು ಗಾಂಧಿಯನ್ನು ಹೋಲುತ್ತಾರೆ. ಪಾಶ್ಚಾತ್ಯ ದೇಶಗಳಲ್ಲಾಗಿದ್ದರೆ ಇಂಥ ಅರೆಬತ್ತಲೆಯ ವಿಚಿತ್ರ ವ್ಯಕ್ತಿಯನ್ನು, ಅವರು ಬೋಧಿಸುತ್ತಿರುವ ಆರ್ಥಿಕ ಸುಧಾರಣೆಯ ಗೊಡ್ಡು ವೇದಾಂತವನ್ನು ಅಪಹಾಸ್ಯಕ್ಕೀಡು ಮಾಡುತ್ತಿದ್ದರು!

ಪ್ರಪಂಚದಲ್ಲಿ ಎಲ್ಲೂ ಇರದಂಥ ಜಮೀನಿನ ದಾರಿಪದ್ಧತಿ ಹೈದರಾಬಾದು ರಾಜ್ಯದ ತೆಲಂಗಾಣ ಪ್ರಾಂತ್ಯಗಳಲ್ಲಿದ್ದು - ಅಲ್ಲಿ ಕಮ್ಯುನಿಸ್ಟರು ರಕ್ತಪಾತವನ್ನುಂಟುಮಾಡಿ ನಿರ್ಗತಿಕರಾದ ರೈತರನ್ನು ಪ್ರಚೋದಿಸಿ, ಜಮೀನ್ದಾರರನ್ನು ಕೊಲೆಗೈದು, ಅವರ ಆಸ್ತಿಪಾಸ್ತಿಗಳನ್ನು ವಶಪಡಿಸಿಕೊಳ್ಳುವ ಧೂರ್ತಕೃತ್ಯ ನಡೆಯಲು ಅವಕಾಶ ಕೊಟ್ಟರು. ಅದೊಂದು ಭಯಾನಕ ಕ್ರಾಂತಿಯಾಗಿತ್ತು! ಪೋಲೀಸರೇ ಕಾಲಿಡಲು ಕತ್ತರಿಸುತ್ತಿದ್ದ ಆ ಪ್ರಾಂತ್ಯಕ್ಕೆ ೧೯೫೧ನೆಯ ಏಪ್ರಿಲ್‌ನಲ್ಲಿ ವಿನೋಬಾ ಭಾವೆ ಕೆಲವು ಅನುಯಾಯಿಗಳೊಡನೆ ತಮ್ಮ ಆತ್ಮಶಕ್ತಿಯ ಬಲವನ್ನೇ ನಚ್ಚಿ ನುಗ್ಗಿದರು. ಆಗ ಅವರು "ನನ್ನ ಜೀವದ ಬಗ್ಗೆ ಹೆದರಿಕೆಯನ್ನೆಲ್ಲ ಬಿಡಿ. ಅದೆಷ್ಟು ಬೆಲೆಯ '?" ಎಂದು ನಿರ್ಧರಿಸಿದರು. ಕೊಲೆಗಡುಕರಿಂದ ರಕ್ಷಿಸಿಕೊಳ್ಳಲು ಆ ಆತ್ಮಶಕ್ತಿಯೊಂದೇ ಅವರ ಗುರಾಣಿಯಾಗಿದ್ದಿತು!

ಧರ್ಮನಿಷ್ಠ ಜೀವ

೫೭ ವರ್ಷ ವಯಸ್ಸಿನ, ಫಕೀರನಂತಿರುವ ಈ ಸಮಾಜೋದ್ಧಾರಕ ಭಾರತದ ಕೆಲವು ರಾಜ್ಯಗಳಲ್ಲಿ ಆನಂತರ ಎರಡು ಸಾವಿರ ಮೈಲುಗಳನ್ನು ಕಾಲ್ನಡಿಗೆಯಲ್ಲಿ ಸಂಚರಿಸಿದರು. ಅಸಂಖ್ಯಾತ ಅನುಯಾಯಿಗಳನ್ನು ಕೂಡಿಸಿಕೊಂಡರು. ಈ ಯಾತ್ರೆ ನಡೆಯುವ ರಸ್ತೆಯ ಅಕ್ಕಪಕ್ಕದ ಹಳ್ಳಿಯ ಜನರು ಭಾವೆಯವರನ್ನು ಸನ್ಮಾನಿಸಲು, ಮನೆಗಳನ್ನು ತಳಿರುತೋರಣಗಳಿಂದ ಅಲಂಕರಿಸಿ, ಅವರ ದರ್ಶನಕ್ಕೆ ಗುಂಪುಗುಂಪಾಗಿ ನೆರೆದು, ಅವರಿಗೆ ನಮಸ್ಕಾರ ಮಾಡಿ ಹೂ ಹಣ್ಣುಗಳನ್ನು ಒಪ್ಪಿಸುತ್ತಿದ್ದರು. ಆ ಬಡ ಜನರಿಗೆ ಶ್ರೀ ವಿನೋಬಾ ಭೂದಾನ ಮಾಡುವ ದೇವರಾಗಿದ್ದರು.

ಆಚಾರ್ಯರ ದಿನಚರಿಯೂ ಪ್ರಾತಃಕಾಲ ೩ ಗಂಟೆಗೆ ಪ್ರಾರಂಭವಾಗುತ್ತದೆ. ಒಂದೂವರೆ ತಾಸು ಪ್ರಾರ್ಥನೆ ಮತ್ತು ಧ್ಯಾನ ಮಾಡಿಯೇ ದಿನದ ಕಾರ್ಯಕ್ರಮಗಳು ತೊಡಗುತ್ತವೆ. ಭಾವೆ ಬಹಳ ವೇಗವಾಗಿ ನಡೆಯುತ್ತಾರೆ. ಅನಾಯಾಸವಾಗಿಯೇ ತಾಸಿಗೆ ಸರಾಸರಿ ಐದು ಮೈಲು ನಡೆದುಬಿಡುತ್ತಾರೆ! ಮಧ್ಯಾಹ್ನದ ವೇಳೆಗೆ ಅವರು ಸೇರಬೇಕೆಂದು ನಿರ್ಧರಿಸಿದ ಊರನ್ನು ಸೇರುವರು. ಜರಿಯ ಮಜ್ಜಿಗೆ ಮತ್ತು "ಗುರ್" (ಒಂದು ಬಗೆಯ ಕೈ ತಯಾರಿಕೆಯ ಸಕ್ಕರೆ) ಯನ್ನು ಸೇವಿಸುತ್ತಾರೆ. ಅವರು ಶಾಕಾಹಾರಿಗಳೆಂದು ಬೇರೆ ಹೇಳುವುದಗತ್ಯವಿಲ್ಲ.

ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು ಸಾಯಂಕಾಲ ಮೂರು ಗಂಟೆಯ ಹೊತ್ತಿಗೆ ಒಂದು ಸಭೆಯನ್ನೇರ್ಪಡಿಸುತ್ತಾರೆ. ಆಗ ಹಳ್ಳಿಯ ಜನರು ತಮ್ಮ ಬೇಡಿಕೆ ಹಾಗೂ ಕೊರತೆಗಳನ್ನು ಭಾವೆಯವರ ಮುಂದಿಡುತ್ತಾರೆ. ಧನಿಕರಿಗೆ ಹಾಗೂ ಆಳುಜನರಿಗೆ, ಅನ್ಯಾಯದ ಆಡಕೊತ್ತಿನಲ್ಲಿ ನವೆದವರಿಗೆ ಆಚಾರ್ಯರ ಸಭೆಯು ನ್ಯಾಯ ಧರ್ಮ ಪೋಷಣೆಮಾಡುವ ಆಸ್ಥಾನವಾಗುತಿತ್ತು. ಇಂಥ ಸಭೆಗಳಿಂದ ಬಹುಕಾಲಗಳಿಂದ ಬೆಳೆದುಬಂದ ಸಂಸಾರದ ಒಳಜಗಳಗಳನ್ನು ಮರೆತು, ಏಕತ್ರ ಜೀವನ ನಡೆಸುವಂತೆ, ಬಡತನದಲ್ಲಿ ನರಳುವ ಕೂಲಿಕಾರರಿಗೆ ಧನಿಕರು ಋಣ ಕೊಡುವಂತೆ ಮಾಡುತ್ತಾರೆ.

ಆಚಾರ್ಯರ ಪವಾಡ

ಸಾಯಂಕಾಲ ಐದು ಗಂಟೆಗೆ ಮತ್ತೆ ಪ್ರಾರ್ಥನೆ-ಪ್ರಾರ್ಥನೋತ್ತರ ಭಾಷಣಗಳಲ್ಲಿ ಹಿಂದೂ ಧರ್ಮದ ಮುಖ್ಯ ತತ್ವವಾದ ಸಂಸಾರದ ಸಹಕಾರ ಹಾಗೂ ಭದ್ರತೆಯನ್ನೆ ಬೋಧಿಸುತ್ತಾರೆ. ಜಮೀನುದಾರರೊಡನೆ ಭೂಮಿಯನ್ನು ಕೇಳುವಾಗ "ನನ್ನನ್ನೂ ನಿಮ್ಮ ಒಬ್ಬ ಮಗನೆಂದು ತಿಳಿದು, ನನ್ನ ಭಾಗವನ್ನು ಈ ಬಡ ಜನರಿಗೆ ಕೊಡಿರಿ" ಎನ್ನುತ್ತಾರೆ. ಎಷ್ಟೋ ಮಂದಿ ತಕ್ಷಣವೇ ಭೂಮಿಯನ್ನು ದಾನ ಮಾಡಿ ಬಿಡುವರು.

ಈ ಭೂಮಿಯನ್ನು ಹೊಲವಿಲ್ಲದ ಬಡವರಿಗೆ ಹಾಗೂ ಹರಿಜನರಿಗೆ ಹಂಚುವರು. ಪ್ರತಿಯೊಂದೂ ಸಂಸಾರಕ್ಕೆ ಐದು ಎಕರೆ ಭೂಮಿ ಹಂಚಲೇಬೇಕೆಂದು ಅವರ ಅಭಿಪ್ರಾಯ. ಒಂಭತ್ತು ತಿಂಗಳ ಅವಧಿಯಲ್ಲಿ ಅವರು ಮೂರು ಲಕ್ಷಕ್ಕಿಂತ ಹೆಚ್ಚು ಎಕರೆ ಭೂಮಿಯನ್ನು ಸಂಪಾದಿಸಿದ್ದಾರೆ. ಜನರನ್ನು ಈ ಬಗೆಯ ಸನ್ಮಾರ್ಗಕ್ಕೆ ತಂದ ಆಚಾರ್ಯರ ಪವಾಡವನ್ನು ಕಂಡ. ಕೇಳಿ ಪ್ರಧಾನಿ ನೆಹರೂ ಇವರನ್ನು ಪಂಚವಾರ್ಷಿಕ ಯೋಜನೆಗೆ ಸಲಹೆಗಳನ್ನು ಕೊಡಲು ದಿಲ್ಲಿಗೆ ಆಹ್ವಾನಿಸಿದರು. ಆಗ ಒಡಕಲು ದೇಹದ ಜನನಾಯಕ ಭಾವೆ ೭೫೦ ಮೈಲು ದೂರದ ರಾಜಧಾನಿಗೆ ಕಾಲ್ನಡಿಗೆಯಲ್ಲೇ! ಪ್ರಯಾಣ ಬೆಳೆಸಿದರು. ಅವರು ದಿಲ್ಲಿಗೆ ಆಗಮಿಸಿ ಪ್ರಥಮ ದಿನವೇ ಅಧ್ಯಕ್ಷ ಪ್ರಸಾದರ ಸಂದರ್ಶನ ತೆಗೆದುಕೊಂಡರು. ಅಲ್ಲಿಂದ ಹಿಂತಿರುಗುವ ಮೊದಲು ತಮ್ಮ ಸ್ವಂತ ಆಸ್ತಿಯ ಸ್ವಲ್ಪ ಭಾಗವನ್ನು ದಾನಮಾಡುವುದಾಗಿ ನಿರ್ಧರಿಸಿದರು. ಪ್ರಧಾನಿ ನೆಹರು ನಂಬ

ದೇವರ ದಯೆ

ಅಕ್ಕಪಕ್ಕಗಳಲ್ಲಿ ರೆಕ್ಕೆಗಳಿದ್ದ ದೇವದೂತರು ನಮ್ಮನ್ನು ಕೈಹಿಡಿದು ಮುನ್ನಡೆಸುತ್ತಿದ್ದ ಕತೆ ಹಿಂದಿನ ಕಾಲದ ಸಂಗತಿ ಇದನ್ನು ದೇವರ ದಯೆ ಎಂಬುದಾಗಿ ಆಗ ಜನರು ಕೊಂಡಾಡುತ್ತಿದ್ದರು.

ದೇವರ ದಯೆ ಈಗಲೂ ಇದೆ. ಆದರೆ ಸ್ವರೂಪದಲ್ಲಿ ಮಾತ್ರ ಪರಿವರ್ತನೆಯಾಗಿದೆ ಸ್ವರ್ಗದಿಂದ ದೇವದೂತರು ಇಳಿದು ಬಂದು ತಮ್ಮನ್ನು ಸುಧಾರಿಸಬೇಕೆಂದು ವಿವೇಕಿಗಳು ಈಗ ಅಪೇಕ್ಷಿಸುವುದಿಲ್ಲ ಈಗ ದೇವರ ದಯೆಯಿಂದ ನಮಗೆ ಅವಶ್ಯವೆನಿಸಿದ ವಿಮಾ ಸೌಲಭ್ಯವಿದೆ ಇಂದೇ ವಿಮೆ ಇಳಿಸಿ, ನಿಮ್ಮ ಮತ್ತು ನಿಮ್ಮ ಕುಟುಂಬದ ರಕ್ಷಣೆಯನ್ನು ಮಾಡಿಕೊಳ್ಳಿರಿ ತನ್ನ ರಕ್ಷಣೆ ತಾನು ಮಾಡಿಕೊಳ್ಳಬಲ್ಲವನನ್ನು ದೇವರು ಕೈಬಿಡುವುದಿಲ್ಲ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ. ಸ್ಥಾಪನೆ: ೧೯೩೫
ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ ಕಂಪೆನಿ
The Canara Mutual Assurance Co. Ltd.
Head Office: UDIPI, S. India. Estd: 1935

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಯಾಂಪಲ್ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಜಿ. ಐ. ಪಿ.) ಮುಂಬಯಿ. ೧೮

ಪ್ರಯಾಣಿಕರಿಗೆ ಪಾಸಪೋರ್ಟ

ಭಾರತ ಮತ್ತು ಪಾಕಿಸ್ತಾನಗಳ ಸಂಬಂಧ ಈಚೆಗೆ ಕೆಲಸಮಯದಿಂದ ಕೆಡಗೆಟ್ಟಿತ್ತಷ್ಟೆ! ಈಚೆಗೆ ಆದ ವಾಣಿಜ್ಯ ಒಡಂಬಡಿಕೆಯಿಂದ ಇದು ಸ್ವಲ್ಪಮಟ್ಟಿಗೆ ಸುಧಾರಿಸಿದೆ. ಅಲ್ಲದೆ–ಪಾಕಿಸ್ತಾನವು ಎರಡೂ ರಾಷ್ಟ್ರಗಳ ನಡುವೆ ಸಂಚಾರಾನುಕೂಲತೆಯನ್ನೊದಗಿಸಲು ಪಾಸಪೋರ್ಟ ಮತ್ತು ವೀಸಾ ಪದ್ಧತಿಗಳನ್ನು ಅನುಸರಿಸಬೇಕೆಂಬುದಾಗಿ ಕಳೆದ ಎಪ್ರಿಲಿನಲ್ಲಿ ಮಾಡಿದ ಸೂಚನೆಗೆ ಭಾರತವೂ ಒಪ್ಪಿಕೊಂಡಿದೆ. ನಿಜವಾಗಿ ಭಾರತಕ್ಕೆ ಹಾಗೆ ಹೊಸತೊಂದು ಕ್ರಮವನ್ನು ಕೈಗೊಳ್ಳುವ ಇಚ್ಛೆಯಿದ್ದಿಲ್ಲ–ಆದರೆ ಪಾಕಿಸ್ತಾನದೊಡನೆ ಕ್ಷುಲ್ಲಕ ಕಾರಣಗಳಿಗಾಗಿ ವೈಮನಸ್ಸು ಬೇಡವೆಂಬುದರಿಂದ, ಪ್ರಾಸ್ತಾವಿಕ ಮಾತುಕತೆಗಳಲ್ಲಿ ಭಾಗವಹಿಸಿ ಇದೀಗ ಬರುವ ಅಕ್ಟೋಬರದ ೧೪–೧೫ನೇ ದಿನಾಂಕ ಮಧ್ಯರಾತ್ರಿಯಿಂದ ಹೊಸ ಪದ್ಧತಿ ಜಾರಿಗೆ ಬರುವುದೆಂದು ಘೋಷಿಸಿದೆ. ಪೂರ್ವ ಪಾಕಿಸ್ತಾನದ ಪರಿಸ್ಥಿತಿಯು ಪಶ್ಚಿಮ ಪಾಕಿಸ್ತಾನಕ್ಕಿಂತ ತೀರ ಭಿನ್ನವಾಗಿದೆ: ಅಲ್ಲಿಯ ಜನಕ್ಕೆ ಪಶ್ಚಿಮ ಬಂಗಾಳಕ್ಕೆ ಯಾವಾಗಲೂ ಬಂದುಹೋಗಬೇಕಾಗುತ್ತದೆ. ಬಂಧು ಬಳಗದವರು ಇರುವರೆಂಬುದಕ್ಕಾಗಿ, ಆಸ್ತಿಪಾಸ್ತಿಯ ಉಸ್ತುವಾರಿ ನೋಡಿಕೊಳ್ಳಲೆಂದು, ಅಥವಾ ವ್ಯಾಪಾರ ವ್ಯವಹಾರಕ್ಕೆಂದು ಪೂರ್ವಪಾಕಿಸ್ತಾನ ಮತ್ತು ಪಶ್ಚಿಮ ಬಂಗಾಳಗಳ ಜನ ಪರಸ್ಪರ ನಿಕಟ ಸಂಪರ್ಕದಲ್ಲಿರುವುದು ಅತ್ಯವಶ್ಯವೂ ಅನಿವಾರ್ಯವೂ ಆಗಿದೆ. ಪಾಸಪೋರ್ಟ ಹಾಗೂ ವೀಸಾ ಪದ್ಧತಿಯನ್ನು ಬಹಳ ಉದಾರನಿಬಂಧನೆಗಳ ಮೇಲೆ ರೂಪಿಸಿರುವುದರಿಂದ ಆಗಬಹುದಾದ ಅನಾನುಕೂಲತೆಗಳು ಸಾಧ್ಯವಿದ್ದಷ್ಟು ಕಡಿಮೆ ಪ್ರಮಾಣದಲ್ಲಿರುವುವು. ಪಾಕಿಸ್ತಾನ ಸರಕಾರವು ಈ ಮಾರ್ಚಿಯೇ ಹೊಸಕ್ರಮದ ಘೋಷಣೆಯನ್ನು ಮಾಡಿರುತ್ತದೆ.

ಲಿಯಾಖತರ ಕೊಲೆ

ಪಾಕಿಸ್ತಾನದಲ್ಲಿ ಈಚೆಗೆ ಎದ್ದಿರುವ ಹೊಸ ಗದ್ದಲ ಮಾಜಿ ಪ್ರಧಾನಿ ಲಿಯಾಖತ ಆಲಿಖಾನ ಕೊಲೆಯ ಸಂಬಂಧದ ವರದಿ. ಕಳೆದ ವರ್ಷ ಲಿಯಾಖತ ಆಲಿಖಾನರನ್ನು ರಾವಳಪಿಂಡಿಯ ಒಂದು ಸಾರ್ವಜನಿಕ ಸಭೆಯಲ್ಲಿ ಗುಂಡಿಕ್ಕಿ ಕೊಲ್ಲಲಾಯಿತಷ್ಟೆ: ಆ ಸಮಯ ಅಲ್ಲಿದ್ದ ಪೋಲೀಸ ಇನ್ಸಪೆಕ್ಟರನು ಬುದ್ಧಿಗೆಟ್ಟೋ ಎಂಬಂತೆ–ಕೊಲೆಗಡುಕ ಸೈಯದ ಅಕಬರನನ್ನು ಅಲ್ಲಿಯೇ ಹೊಡೆದು ಕೊಂದುದರಿಂದ, ತಿಳಿಯಬಹುದಾಗಿದ್ದ ಅನೇಕ ಮಾಹಿತಿಗಳು ದೊರೆಯದಂತಾದುವು. ಹೀಗಾಗಿ ಲಿಯಾಖತರ ಕೊಲೆಯ ನಿರ್ದಿಷ್ಟ ಕಾರಣವನ್ನು ಹೇಳಲು ಅಸಾಧ್ಯವಾಗಿದೆ. ಸೈಯದ ಅಕಬರನು ವೈಯಕ್ತಿಕ ಕಾರಣಗಳಿಗಾಗಿ ಹೀಗೆ ಮಾಡಿದನೇ ಅಥವಾ ಅದರ ಹಿಂದೆ ಒಳಸಂಚು ಇತ್ತು ಎಂಬ ಬಗ್ಗೆ ಸಾಕಷ್ಟು ಸಾಕ್ಷ್ಯವಿಲ್ಲ. ಆದರೂ–ಲಿಯಾಖತರ ಕೊಲೆಗೆ ಪೋಲೀಸ ಅಧಿಕಾರಿಗಳ ನಿರ್ಲಕ್ಷ್ಯತನ ಮತ್ತು ಕೊಲೆಗಾರ ಸೈಯದ ಅಕಬರನ ಪ್ರಾಣೋತ್ಕ್ರಮಣಾವಸ್ಥೆಯಲ್ಲಿದ್ದಾಗ ಹೆಚ್ಚಿದ್ದು ಭಲ್ಲೆಯಿಂದ ತಿವಿದದ್ದು ಶಿರಾಧಾರವಿದೆ. ಲಿಯಾಖತರ ಕೊಲೆಗೂ ಮುಂಚೆ ಪಾಕಿಸ್ತಾನದಲ್ಲಿ ಒಳಸಂಚುಗಳು ನಡೆಯುತ್ತಿವೆ ಎಂಬ ಅನುಮಾನ ಪೋಲೀಸರಿಗೆ ಬಂದಿತ್ತು. ಹೀಗಿರುವಾಗ– ಪ್ರಧಾನಿಯ ರಕ್ಷಣೆಗಾಗಿ ಸಮರ್ಪಕವಾದ ಮುನ್ನೆಚ್ಚರಿಕೆಯನ್ನು ಇಟ್ಟುಕೊಳ್ಳದಿದ್ದುದು ದೊಡ್ಡ ಮಟ್ಟಿನ ಉಪೇಕ್ಷೆಯಾಯಿತು ಎಂದು ಸಮಿತಿಯು ಸಾರಿಕೊಂಡಿದೆ. ವರದಿಯು ತನ್ನ ಪತಿಯ ಕೊಲೆಯ ಸಂಬಂಧದಲ್ಲಿ ಹೆಚ್ಚಿನದೇನನ್ನೂ ಗೊತ್ತುಹಚ್ಚಲಾರದುದಕ್ಕಾಗಿ ಬೇಗಂ ಲಿಯಾಖತ ಆಲಿಖಾನರು ಸರಕಾರವನ್ನು ಆರೋಪಿಸಿರುವರು. ‘‘ಡಾನ’’ ಪತ್ರಿಕೆಯು ಪೋಲೀಸರ ಅಲಕ್ಷ್ಯದ ಸಂಬಂಧದಲ್ಲಿ ಸರಕಾರ ನಿಷ್ಕ್ರಿಯವಾಗಿರುವುದನ್ನು ಕಟುವಾಗಿ ಟೀಕಿಸಿದೆ. ಈಚೆಗೆ ಪತ್ರಿಕೆ ಉದ್ಯೋಗಿಗಳು ಪ್ರಧಾನಿ ನಾಜಿಮುದ್ದೀನರೊಡನೆ ಪೋಲೀಸರ ಕರ್ತವ್ಯಚ್ಯುತಿಯ ಬಗ್ಗೆ ನೀವೇನು ಕ್ರಮ ಕೈಗೊಳ್ಳುವಿರೆಂಬ ಆಶಯದ ಪ್ರಶ್ನೆ ಮಾಡಿದ್ದಕ್ಕೆ–ಇದು ಪಶ್ಚಿಮ ಪಂಜಾಬ ಸರಕಾರದ ಹೊಣೆ ಎಂದೂ, ತಾನು ಇದರಲ್ಲಿ ಪ್ರವೇಶಿಸಿದರೆ, ರಾಜ್ಯದ ಅಂತರಂಗ ವಿಷಯದಲ್ಲಿ ಹಸ್ತಕ್ಷೇಪ ಮಾಡಿದಂತಾಗುವುದೆಂದೂ ನುಡಿದರು. ಏನೇ ಇರಲಿ– ಸಮಿತಿಯ ವರದಿಯಲ್ಲಿ ಜನರ ಉದ್ವೇಗ ತಣಿಸುವ ಕೌತುಕದ ಸಂಗತಿಗಳಿಲ್ಲದೆ ಇರುವುದರಿಂದ–ಮನಸ್ಸು ಅಸಮಾಧಾನಗೊಂಡಿರುವುದು ಸಹಜ.

ಇನ್ನೂ ಶ್ರೀ ಭಾವೆಯವರು ಸಂಚಾರದಲ್ಲಿದ್ದಾರೆ– ಕಾಶಿಯಲ್ಲಿ ಈಗ ನಿಂತು ತಮ್ಮ ಭೂದಾನ ಯಜ್ಞವನ್ನು– ಇಲ್ಲದವರಿಗೆ ಇದ್ದವರಿಂದ ದಾನ ಮಾಡಿಸಿ, ಕಮ್ಯೂನಿಸಂ ವಿರುದ್ಧ ತಮ್ಮ ಧರ್ಮಯುದ್ಧವನ್ನು ಹೂಡಿದ್ದಾರೆ. ಈ ಸನ್ಯಾಸಿ ಪ್ರತಿದಿನ ಸರಾಸರಿ ಮುನ್ನೂರು ಎಕರೆ ಭೂಮಿಯನ್ನು ಪಡೆದು ಹಂಚುತ್ತಿದ್ದರು ಪ್ರತಿಯೊಂದೂ ಪಕ್ಷ ಮತ್ತು ಪ್ರತಿಯೊಬ್ಬ ಕಾರ್ಯಕರ್ತ ಇದೇ ರೀತಿಯಲ್ಲಿ ಕಾರ್ಯೋನ್ಮುಖನಾದರೆ–ಈ ಸಮಸ್ಯೆಯನ್ನು ನಾವು ಮುಂದಿನ ೫ ವರ್ಷಗಳಲ್ಲಿ ಬಗೆಹರಿಸಬಹುದು. ವಿನೋಬಾ ಒಂದೆಡೆ ಹೇಳಿದಂತೆ ೧೭೫೭ ಮತ್ತು ೧೮೫೭ ಭಾರತದಲ್ಲಿ ರಕ್ತಮಯ ಕ್ರಾಂತಿಯ ವರ್ಷಗಳು. ಅವುಗಳ ಪರಿಣಾಮವಾಗಿ ಭಾರತ ವಿದೇಶಿಯರ ಪಾಲಾಯಿತು. ಈಗ ವಿದೇಶಿಯರಿಲ್ಲ – ಜನರ ವಿಮೋಚನೆ ಮಾತ್ರ ಇನ್ನೂ ನಡೆಯಬೇಕು. ಅಹಿಂಸಾ ಪದ್ಧತಿಯಿಂದ ವಿನೋಬರ ಅದ್ಭುತ ಹೃದಯ ಪರಿವರ್ತನೆಯ ಕಾರ್ಯಕ್ರಮದಿಂದ ಇದನ್ನು ೧೯೫೭ರೊಳಗಾಗಿ ಸಾಧಿಸೋಣ!

ದೇಶದ ಏಳಿಗೆಗೆ

ಒಗ್ಗಟ್ಟಿನಿಂದ ಕಾರ್ಯೋನ್ಮುಖರಾಗುವ ಪ್ರತಿಜ್ಞೆ

ಸೇನಾಪತಿಯ ಸಲಹೆ

ಮನುಷ್ಯನಲ್ಲಿ ಬುದ್ಧಿ ಇರುವಾಗ–ಮತ್ತು ಮಹತ್ವದ ಹೊಣೆಗಾರಿಕೆ ಮೈಮೇಲೆ ಬಿದ್ದಿರುವಾಗ ಕೆಲವೊಮ್ಮೆ ಹೀಗೆ ಬುದ್ಧಿಗೇಡಿಗಳಂತೆ ವರ್ತಿಸುವುದು ಆಶ್ಚರ್ಯ: ಸದಸದ್ವಿವೇಕವು ಆಯಕಟ್ಟಿನ ಪ್ರಸಂಗಗಳಲ್ಲಿ ನಮ್ಮ ಕೈಬಿಡುವುದು ಚೆನ್ನಾದುದಲ್ಲ ಎಂದು ಗೊತ್ತಿದ್ದರೂ–ಅಂಥ ಪರಾಭವದಿಂದ ನಮ್ಮನ್ನು ಉಳಿಸಿಕೊಳ್ಳುವ ಚಾಣಾಕ್ಷತೆ ನಮ್ಮಲ್ಲಿ ಹೆಚ್ಚಿನವರಿಗಿಲ್ಲ. ವ್ಯಕ್ತಿತ್ವವು ಪೂರ್ಣರೂಪದಲ್ಲಿ ವಿಕಸನಗೊಂಡರೆ–ಆಗ ಈ ದಿಸೆಯಲ್ಲಿ ನಾವು ಪ್ರಗತಿಪರ ಹೆಜ್ಜೆ ಇಟ್ಟಂತಾಗುತ್ತದೆ. ಉದ್ವೇಗಕ್ಕಿಂತ ಸಂಯಮ ಮೇಲೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ನಡೆಯುವುದಿಲ್ಲ, ಭಾರತದ ಮಹಾದಂಡನಾಯಕ ಜನರಲ್ ಕಾರ್ಯಪ್ಪನವರು ಈಚೆಗೆ ಮದ್ರಾಸು ಮತ್ತಿತರ ಕಡೆಗಳಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಹೇಳಿದ ಸಂಗತಿಗಳು ತುಂಬ ಮನೋಜ್ಞವೂ ಬೋಧಪ್ರದವೂ ಆಗಿವೆ. ಮನುಷ್ಯನು ಹತ್ತರಿಂದ ಇಪ್ಪತ್ತು ವರ್ಷಗಳ ಅವಧಿಯಲ್ಲಿ ವಿದ್ಯಾಸಂಪನ್ನನಾಗಬಹುದು: ಈ ಅಮೂಲ್ಯ ಸಮಯವನ್ನು ತನ್ನ ವ್ಯಕ್ತಿತ್ವವನ್ನು ಯೋಗ್ಯ ನೆಲಗಟ್ಟಿನ ಮೇಲೆ ಕಟ್ಟಿಕೊಳ್ಳುವುದಕ್ಕೂ–ದೇಶದ ಕಲ್ಯಾಣಕ್ಕೆ ಮುಂದೆ ಅದನ್ನು ಉಪಯೋಗಿಸಲಾಗುವಂತೆ ರಕ್ಷಿಸುವುದಕ್ಕೂ ವಿನಿಯೋಗಿಸಬೇಕು. ಸೈನಿಕರಂತೆ ದೇಶಸೇವಾ ಕಾರ್ಯಕ್ಕೆ ಟೊಂಕಕಟ್ಟಬೇಕು. ಪರದೇಶದ ವಾದಗಳಿಗೆ ಮಾರುಹೋಗದೆ–ಭಾರತೀಯ ವಾದವನ್ನು ಮೆಚ್ಚಿಕೊಂಡು ಬದುಕುವುದು ಶ್ರೇಯಸ್ಕರ. ನಮ್ಮ ದೇಶವು ಸತ್ವಪೂರ್ಣವಾದುದು: ಬುದ್ಧ ಅಶೋಕ ಶಿವಾಜಿಯಂಥ ಮಹಾ ಜೀವಿಗಳ ಜನ್ಮಭೂಮಿಗೆ ಉರ್ಜಿತವಾದ ರೀತಿಯಲ್ಲಿ ನಾವು ವರ್ತಿಸುವ ಪ್ರತಿಜ್ಞೆ ಮಾಡೋಣ ಎಂದು ಸೇನಾಪತಿ ಕರೆಕೊಟ್ಟರು. ಜನರಲ್ ಕಾರ್ಯಪ್ಪನವರು ಬರುವ ಜನೆವರಿ ೧೫ರಂದು ನಿವೃತ್ತರಾಗುವರು: ಅವರ ಹುದ್ದೆಯನ್ನು ಪ್ರಕೃತ ದಕ್ಷಿಣ ವಿಭಾಗದ ವರಿಷ್ಠ ಸೈನ್ಯಾಧಿಕಾರಿಗಳಾದ ಲೆ. ಜ. ರಾಜೇಂದ್ರ ಸಿಂಹಜಿಯವರು ವಹಿಸುವರು. ಕಾರ್ಯಪ್ಪನವರ ತಾಯ್ನಾಡು ಕನ್ನಡದ ಕೊಡಗು ರಾಜ್ಯ.

ಸೈನ್ಯದ ಮೇಲ್ಮೆ

ಸೈನ್ಯವು ಜನಸಾಮಾನ್ಯರ ಮೇಲ್ಮೆಗಾಗಿ ಅಭಿವೃದ್ಧಿ ಕೆಲಸದಲ್ಲಿ ದುಡಿಯಬಾರದೇಕೆ ಎಂದು ಕೆಲವರು ಪ್ರಶ್ನಿಸುವುದುಂಟು: ಚೀನಾದಂಥ ದೇಶಗಳಲ್ಲಿ ಈ ಕಾರ್ಯವನ್ನು ಸೈ [illegible] ಯಶಸ್ವಿಯಾಗಿ ಮಾಡಿ ತೋರಿಸಿರುವರೆಂದೂ ಪ್ರತೀತಿ. ಆದರೆ ಭಾರತದ ಸೈನ್ಯವು ಬಹಳ ಸಣ್ಣದೆಂಬುದನ್ನು ಅವಶ್ಯ ಸೇರಿಸಿಕೊಳ್ಳಬೇಕು. ದೇಶದ ಗಡಿರಕ್ಷಣೆಯನ್ನೇ ಅದು ಮುಖ್ಯ ಧ್ಯೇಯವಾಗಿಟ್ಟುಕೊಂಡಿದೆ, ಪರದೇಶಗಳಿಂದ ಆಕ್ರಮಣವಾಗದಂತೆ ನೋಡುವ ಮಹತ್ವದ ಜವಾಬ್ದಾರಿ ಅದಕ್ಕೆ ಇದೆ. ಭಾರತದ ವಿಸ್ತಾರವನ್ನು ನೋಡಿದರೆ–ನಮ್ಮ ಸೈನ್ಯದ ಪ್ರಮಾಣ ಅತ್ಯಲ್ಪವೆಂಬುದು ಸ್ವಯಂವೇದ್ಯವಾಗುವುದು. ಜನರಲ್ ಕಾರ್ಯಪ್ಪನವರು ಇದನ್ನೂ ಪ್ರಸ್ತಾಪಿಸಿದರು: ‘‘ನನಗೆ ಒಂದು ಮಿಲಿಯ ಜನರನ್ನು ಕೊಡಿರಿ– ಮತ್ತೆ ನಾನೇನು ಮಾಡಿ ತೋರಿಸುವೆನೆಂಬುದನ್ನು ನೋಡಿರಿ’’ ಎಂದರು. ವಿದ್ಯಾರ್ಥಿಗಳು ಆರೋಗ್ಯವಂತರಾಗಿ– ದೈಹಿಕವಾಗಿಯೂ ಮಾನಸಿಕವಾಗಿಯೂ ಬಲ ಧೈರ್ಯ ಬೆಳೆಯಬೇಕೆಂದು ಅವರ ಆಶೆ. ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಸೈನಿಕ ಶಿಕ್ಷಣ ಕೊಡುವುದವಶ್ಯವೆಂದಾದರೆ–ಸೈನ್ಯ ಅದಕ್ಕೆ ಸದಾ ಸಿದ್ಧವಿದೆ ಎಂದವರು ಸೂಚಿಸಿದರು. ಭಾರತೀಯ ಸೈನ್ಯವು ಮೇಲ್ಮಟ್ಟದ್ದಿದೆ: ಅದರ ಕಾರ್ಯಕೌಶಲ ಕೂಡ ಪ್ರಶಂಸನೀಯವಿದೆ. ಹಾಗೆಂದು ಅದು ಆಯುಧ

WANTED
THE POPULAR INSURANCE COMPANY LIMITED.
"Popular Buildings" MANGALORE 1.
Invites applications from experienced and influential insurance men for the appointment of an INSPECTOR for UDIPI and COONDAPOOR area.
Apply with details of insurance experience and New Business undertaking
The Managing Director

ZANDU Mahayogaraja Guggula
ಝಂಡೂ ಮಹಾಯೋಗರಾಜ ಗುಗ್ಗುಳ
ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ. 1 ತೊಲೆಗೆ ರೂ 3- ಮಾತ್ರ.
ದೊರೆಯುವ ಸ್ಥಳಗಳು:
1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್. ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ.
2 ಶ್ರೀ. ವಿ. ವಿ ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್. ಎನ್. ಶರ್ಮ, ನ್ಯೂಚಿತ್ರ ರಸ್ತೆ ಮಂಗಳೂರು.
ಮತ್ತಿತರ ಸೇಲ್ ಏಜಂಟರಲ್ಲಿ.
ಪ್ರತಿನಿಧಿಯಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರ ಶರತ್ತುಗಳಿಗೆ ಬರೆಯಿರಿ.
DAMODAR & CO.,
Nainiappa Naicken Street, Park Town–MADRAS 3.

ಧುರೀಣರ ಸಲಹೆ

ನಿರುದ್ಯೋಗದ ಸಮಸ್ಯೆಯಲ್ಲಿ ಶಿಕ್ಷಣದ ಪಾತ್ರ

ಮತ್ತು ಉಪಕರಣಗಳಿಗಾಗಿ ಸ್ವಾವಲಂಬಿತವಾಗದೆ ಭಾರತಕ್ಕೆ ಶೋಭೆಬಾರದು. ನಮಗೆ ಬೇಕಾದ ಶಸ್ತ್ರಾಸ್ತ್ರಗಳಲ್ಲಿ ನೂರಕ್ಕೆ ಎಂಭತ್ತರಷ್ಟಾದರೂ ಇಲ್ಲಿಯೇ ಉತ್ಪಾದನೆಗೊಳ್ಳುವಂತಾಗಬೇಕು. ಮೋಟಾರು ವಾಹನಗಳು, ಸೈಕಲುಗಳು, ಹಾಗೂ ಕೃಷಿಗೆ ಉಪಯುಕ್ತವಿರುವ ಟ್ರಾಕ್ಟರು ಮುಂತಾದ ಹತ್ಯಾರುಗಳನ್ನು ಉತ್ಪಾದಿಸುವ ಕಾರ್ಖಾನೆಗಳಿಗೀಗ ಪ್ರಾಶಸ್ತ್ಯವಿದೆ.

ದೇಶಮುಖರ ನಿರ್ಧಾರ

ಆದರೆ ಇದಕ್ಕೆಲ್ಲ ಸುರುವಲು ನಮ್ಮಲ್ಲಿ ಹಣದ ಅನುಕೂಲತೆ ಇದೆಯೆಎಂಬುದು ಮುಖ್ಯ ಪ್ರಶ್ನೆ. ಭಾರತದ ಅರ್ಥಸಚಿವ ಶ್ರೀ ಚಿಂತಾಮಣಿ ದೇಶಮುಖರು 'ಮದ್ರಾಸಿನಲ್ಲಿ ವಾಣಿಜ್ಯ ಸಂಸ್ಥೆಯೊಂದರಲ್ಲಿ ಮಾತನಾಡುವಾಗ ಹಣಾಭಾವದ ಪ್ರಶ್ನೆಯನ್ನು ಪೃಥಕ್ಕರಿಸಿದರು: ಪರಿಸ್ಥಿತಿ ಬದಲಾಗುತ್ತ ನಡೆದಿದೆಯಾಗಿ, ವರ್ತಕ ವರ್ಗದವರೂ ಅದಕ್ಕೆ ಹೊಂದಿಕೊಂಡು ನಡೆಯುವ ಮನೋವೃತ್ತಿಯನ್ನು ತೋರಬೇಕು. ಲಾಭಾಂಶವನ್ನು ಇಳಿಸಬೇಕೆಂದು ವರ್ತಕರಿಂದ ಹಿಡಿದು ಸಾಮಾನ್ಯ ಜನರ ವರೆಗೂ ಬೇಡಿಕೆಯಿರುವುದು ಸ್ವಾಭಾವಿಕ. ಆದರೆ ಸರಕಾರವು ವಸೂಲುಮಾಡದ ಹಣವು ಅಯೋಗ್ಯರೀತಿಯಲ್ಲಿ ವೆಚ್ಚವಾಗುವುದಿಲ್ಲ ಎಂಬುದನ್ನು ಅವಶ್ಯ ಸ್ಮರಿಸಬೇಕು. ಅಭ್ಯುದಯ ಯೋಜನೆಗಳಿಗೆ ಕೋಟಿಗಟ್ಟಲೆ ರೂಪಾಯಿ ಬೇಕಿದ್ದು—ಅವನ್ನು ಒಂದೋ ಸಾಲ, ಇಲ್ಲವೇ ಕರದ ರೂಪದಿಂದ ಪಡೆಯಬೇಕಾಗುವುದು. ಸಾಲ ದೊರೆಯದಿದ್ದರೆ ಅನಿವಾರ್ಯವಾಗಿ ಕರಭಾರವನ್ನು ಹೊರಿಸುವ ಪ್ರಸಂಗ ಬರುತ್ತದೆ. ಮಾರಾಟ ಕರದಲ್ಲಿ ಏಕರೂಪತೆ ಇರಬೇಕೆಂದು ವರ್ತಕರು ಬಯಸಿದರೂ ಇದು ವ್ಯವಹಾರ್ಯವಾಗಲಾರದೆಂದು ಅರ್ಥಸಚಿವರು ಸಂಶಯ ತೋರಿದರು. ರಾಜ್ಯ ಸರಕಾರಗಳ ಆದಾಯದ ಮುಖ್ಯ ಸ್ರೋತವಿದಾಗಿರುವುದರಿಂದ—ತಂತಮ್ಮ ಪರಿಸ್ಥಿತಿಗನುಗುಣವಾಗಿ ಈ ಕರದಲ್ಲಿ ಹೆಚ್ಚು ಕಡಿಮೆ ಇರುವುದು ಸ್ವಾಭಾವಿಕ. ಆದರೂ ಬರುವ ಅಕ್ಟೋಬರದಲ್ಲಿ ಸೇರಲಿರುವ ಅರ್ಥಸಚಿವರ ಸಮ್ಮೇಳನದಲ್ಲಿ ಈ ವ್ಯತ್ಯಾಸವನ್ನು ಕೆಲಮಟ್ಟಿಗೆ ಬಾಯಿಗೂಡಿಸುವ ಪ್ರಯತ್ನ ನಡೆಯಬಹುದು.

ನಿರುದ್ಯೋಗದ ಜಾಡ್ಯ

ವ್ಯಾಪಾರ ವಹಿವಾಟುಗಳು ತ್ವರಿತ ಗತಿಯಿಂದ ಬೆಳೆಯುವ ಅಗತ್ಯ ಇದೀಗ ಬಹಳ ಹೆಚ್ಚಿದೆ: ದೇಶದಲ್ಲಿ ನಿರುದ್ಯೋಗ ವಶರಾದ ವಿದ್ಯಾವಂತರ ಸಂಖ್ಯೆಯು ತುತ್ತತುದಿಯನ್ನು ಮುಟ್ಟಿದೆ. ಸೆಕೆಂಡರಿ ಹಾಗೂ ಕಾಲೇಜು ವಿದ್ಯಾಭ್ಯಾಸವನ್ನು ಪಡೆದಿರುವ ಯುವಜನಾಂಗ ಇಂದು ನೂರಕ್ಕೆ ೫೦ಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ನಿರುದ್ಯೋಗದ ಜಾಡ್ಯಕ್ಕೆ ಬಲಿಬಿದ್ದಿರುವರು. ವಿದೇಶಗಳಿಗೆ ಹೋಗಿ ಸಹಸ್ರಾರು ರೂಪಾಯಿಗಳನ್ನು ವೆಚ್ಚಮಾಡಿ ಉಚ್ಚಶಿಕ್ಷಣ ಪಡೆದು ಮಾತೃಭೂಮಿಗೆ ಮರಳಿದ ಜನಾಂಗ—ಇಲ್ಲಿ ಯೋಗ್ಯವಾದ ಕೆಲಸವು ದೊರೆಯುವುದಿಲ್ಲ. ಈ ಪರಿಸ್ಥಿತಿ ಹೀಗೆಯೇ ಮುಂದೆ ಸಾಗಿದರೆ-ಕೆಲಸ ಮಾಡಬಲ್ಲವರ—ಆದರೆ ಕೆಲಸವಿಲ್ಲದವರ ಹೊಟ್ಟೆತುಂಬಿಸುವ ಹೊಣೆಯನ್ನು ಸರಕಾರ ಹೊರಬೇಕಾಗಿ ಬಂದೀತು. ವಿಪುಲ ಪ್ರಕೃತಿಕ ಸಂಪತ್ತು ಇದ್ದು, ಕೈಗಾರಿಕೋದ್ಯಮಗಳಿಗೆ ಬೆಳೆಯುವ ವಿಶಾಲವಾದ ಕ್ಷೇತ್ರವಿದ್ದೂ ನಮ್ಮ ಗತಿ ಹೀಗೆ! ಇದಕ್ಕೆ ಕೆಲವೊಂದು ಮಟ್ಟಿಗೆ ವಿದ್ಯಾರ್ಥಿಗಳ ಮನೋವೃತ್ತಿ ಹಾಗೂ ಶಿಕ್ಷಣ ಕ್ರಮದ ದೋಷಗಳು ಕಾರಣವಿವೆ: ಶಾಲಾ ಕಾಲೇಜುಗಳಲ್ಲಿ ಶಿಕ್ಷಣ ಪಡೆದ ಬಳಿಕ—ಸಾಮಾನ್ಯ ಹಳ್ಳಿಗನಂತೆ ಹೊಲದಲ್ಲಿ ದುಡಿದು ಉಣ್ಣಲು ಬಯಸದೆ—ಕುರ್ಚಿಯ ಮೇಲಿನ ವ್ಯಾಮೋಹದಿಂದ ಕುಳ್ಳಿರುವ ಬುದ್ಧಿ ವಿದ್ಯಾರ್ಥಿಗಳಿಗಿರಬಾರದು. ಇನ್ನು ಎರಡನೆಯದಾಗಿ ಶಿಕ್ಷಣ ಪದ್ಧತಿಯು ಈಗಿರುವಂತೆ ಕಾರಕೂನಿಕೆಯ ಅಭ್ಯಾಸಕ್ಕೆ ಯೋಗ್ಯವಾಗಿದೆಯೇ ಹೊರತು— ತಾಂತ್ರಿಕ ತರಬೇತಿಯಾಗಲೀ, ವೈಜ್ಞಾನಿಕ ಕ್ಷೇತ್ರದ ಪರಿಜ್ಞಾನವಾಗಲೀ ಸಾಕಷ್ಟು ಪ್ರಮಾಣದಲ್ಲಿ ದೊರೆಯುವುದಿಲ್ಲ. ಇದನ್ನು ಗುಜರಾಥ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದ ಸಂದರ್ಭದಲ್ಲಿ ಮುಂಬಯಿಯ ಗವರ್ನರ ಶ್ರೀ ಗಿರಿಜಾ ಶಂಕರ ಬಾಜಪೆಯವರು ಒತ್ತಿ ಹೇಳಿದರು. ಅಹಮ್ಮದಾಬಾದದಂಥ ಹತ್ತಿಯ ಗಿರಣಿಗಳಿಗೆ ಹೆಸರಾದ ಪ್ರದೇಶದಲ್ಲಿ ನೆಲಸಿರುವ ಈ ಸಂಸ್ಥೆ— ರಸಾಯನ ಶಾಸ್ತ್ರದಲ್ಲಿ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿಯನ್ನೊದಗಿಸುವುದರಿಂದ, ಶಿಕ್ಷಣವಂತರಾಗಿ ಹೊರಬಂದ ಜನ ತಮ್ಮ ಬುದ್ಧಿವಂತಿಕೆಯಿಂದ ಹತ್ತಿಯ ಉದ್ಯಮವನ್ನು ವೈಭವೋಪೇತವಾಗಿಸಲು ಪ್ರಯತ್ನಿಸಬಹುದು. ಹಾಗೆಯೇ ಸಾಮಾಜಿಕ ಹಿತದ ಬಗ್ಗೆಯೂ ಯೋಗ್ಯಶಿಕ್ಷಣ ಕೊಟ್ಟರೆ—ಸಾವಿರಾರು ಕೂಲಿಕಾರರ ಸ್ಥಿತಿಸುಧಾರಿಸುವ ಅಪೂರ್ವ ಸಂದರ್ಭ ದೊರೆಯುವುದು

ವ್ಯಾಪಾರೋದ್ಯಮದಲ್ಲಿ ಪ್ರಗತಿ

ಹೀಗೆ ಪರಿಸ್ಥಿತಿಯನ್ನು ಹೊಂದಿಕೊಂಡು ಪ್ರತಿಯೊಂದೂ ಕ್ಷೇತ್ರದಲ್ಲಿ ಪುನರ್ನಿರ್ಮಾಣವಾಗಬೇಕು. ಇದ್ದ ಅಲ್ಪ ಬಂಡವಾಳವನ್ನೇ ಪರಿಣಾಮಕಾರಿಯಾದ ರೀತಿಯಲ್ಲಿ ಉಪಯೋಗಿಸಲು ನಾವು ಕಲಿಯುವುದೊಳ್ಳೆಯದು. ಯೋಜನಾ ಆಯೋಗದ ಮುಂದೆ ಇರುವ ಮುಖ್ಯೋದ್ದೇಶ ಕೃಷಿಯ ಉತ್ಪಾದನೆಯನ್ನು ಹೆಚ್ಚಿಸಿ, ಆಹಾರ ಸ್ವಾವಲಂಬನೆಯನ್ನು ಸಾಧಿಸುವುದಾಗಿದೆ. ಹಾಗೆಂದು—ಇಷ್ಟು ಮಾತ್ರದಿಂದ ಜನರ ಜೀವನಮಟ್ಟ ಏರುವುದೆಂದು ನಂಬಲು ಎಡೆಯಿಲ್ಲ. ಔದ್ಯೋಗಿಕ ವಿಕಾಸದ ವೇಗವನ್ನು ಹೊಂದಿಕೊಂಡು ನಮ್ಮ ನಿರುದ್ಯೋಗ ಹಾಗೂ ದಾರಿದ್ರ್ಯದ ಸಮಸ್ಯೆಗಳ ಪರಿಹಾರ ನಿಂತಿದೆ. ಭಾರತದ ಆಯಾತವು ನಿರ್ಯಾತಕ್ಕಿಂತ ಹೆಚ್ಚಾಗಿರುವುದರಿಂದ ಈ ರೀತಿಯಲ್ಲೂ ನಮಗೆ ಅಪಾರ ಹಾನಿಯಿದೆ. ಅಂಥದರಲ್ಲಿ ವಿದೇಶೀ ಹಡಗುಗಳೇ ಹೆಚ್ಚಿನ ವ್ಯಾಪಾರವನ್ನು ನಿರ್ವಹಿಸುವುದು ಇನ್ನೊಂದು ಕೊರತೆ. ಯೋಜನಾ ಆಯೋಗದ ಸದಸ್ಯರೂ, ಅಮೇರಿಕೆಯಲ್ಲಿ ಭಾರತದ ರಾಯಭಾರಿಯೆಂದು ಸೇವೆಕೊಂಡಿದವರೂ ಆದ ಶ್ರೀ ಜಿ. ಎಲ್. ಮೆಹತಾ ಯೋಜನಾ ಆಯೋಗವು ಔದ್ಯೋಗಿಕ ಪ್ರಗತಿಗೆ ಮೀಸಲಾಗಿಟ್ಟ ಹಣದಲ್ಲಿ ೨೫% ದಷ್ಟನ್ನು ಹಡಗುಗಳ ಅಭಿವೃದ್ಧಿಗೆ ವಿನಿಯೋಗಿಸಲಾಗುವುದೆಂದರು. ಸುತ್ತಲೂ ಕರಾವಳಿಯಿಂದಾವೃತವಾಗಿರುವ ಭಾರತದ ಅಭಿವೃದ್ಧಿಗೆ ಬಲವಾದ ಹಡಗುಗಳು ಬೇಕೇಬೇಕು. ವಿದೇಶಗಳೊಡನೆ ಸ್ಪರ್ಧೆಯನ್ನು ಕಟ್ಟುವ ಹಂಬಲವಿಲ್ಲದಿದ್ದರೂ—ದೇಶದ ಅವಶ್ಯಕತೆಯ ಪೂರೈಕೆಗಾದರೂ ಈ ವಿಷಯದಲ್ಲಿ ಆಸ್ಥೆವಹಿಸುವ ಕಾಲ ಬಂದಿದೆ. ಖಾಸಗಿ ಕಂಪೆನಿಗಳು ರಾಷ್ಟ್ರೀಕರಣದ ಭಯವಿಲ್ಲದೆ ಇರುವ ಈ ಸಂದರ್ಭವನ್ನು ಚೆನ್ನಾಗಿ ಉಪಯೋಗಿಸಿಕೊಂಡು, ಬೆಳವಣಿಗೆಯ ಅವಕಾಶವಿರುವ ಕ್ಷೇತ್ರಗಳಲ್ಲಿ ಕೈಯೂರಬೇಕ.

ಐಕ್ಯಮತ್ಯದ ಅಗತ್ಯ

ಜನತೆಯೂ ಸರಕಾರವೂ ಕೂಡಿಯೇ ಈ ತೆರನಾದ ಪುನರ್ನಿರ್ಮಾಣ ಯೋಜನೆಯನ್ನು ಯಶಸ್ವಿಯಾಗಿಸಬೇಕಲ್ಲವೆ? ಸರಕಾರವು ರೂಪಿಸಿದ ಧೋರಣೆಯ ಉಚಿತಾನುಚಿತ ಪ್ರಸಂಗವನ್ನು ಚರ್ಚಿಸಲು ನಾವು ಉತ್ಸುಕರಾಗಬೇಕು. ಹಾಗೆಯೇ ಒಮ್ಮೆ ನಿರ್ಣಯಾತ್ಮಕ ಹಂತಕ್ಕೆ ಮುಟ್ಟಿದ ಮೇಲೆ ಭುಜಕ್ಕೆ ಭುಜಕೊಟ್ಟು ನಡೆಯಲು ಹಿಂಜರಿಯಬಾರದು. ಉತ್ತರಪ್ರದೇಶದ ಪೂರ್ವಭಾಗದ ಕೆಲವೆಡೆ ಕ್ಷಾಮದ ಹಾವಳಿ ಇದೆ ಎಂದು ಕಂಡಬಂದೊಡನೆಯೇ ಸರಕಾರ—ಪರಿಹಾರೋಪಾಯಗಳನ್ನು ಚಿಂತಿಸಿತು. ಮುಖ್ಯಮಂತ್ರಿ ಗೋವಿಂದ ವಲ್ಲಭಪಂತರು ಹಸಿವಿನಿಂದ ಒಬ್ಬನೂ ಸಾಯದಂತೆ ನೋಡಿಕೊಳ್ಳುವುದು ನನ್ನ ಆದ್ಯ ಕರ್ತವ್ಯ ಎಂದರು. ಎಷ್ಟೇ ಮಹತ್ವದ ಅಭಿವೃದ್ಧಿ ಕಾರ್ಯಗಳಲ್ಲಿ ಸರಕಾರ ಮುಳುಗಿದ್ದರೂ—ಹಸಿವಿನ ಹಾವಳಿಯ ಮುಂದೆ ಅವೆಲ್ಲ ಕ್ಷುಲ್ಲಕ ಎಂದವರು ಅಭಿಪ್ರಾಯ ಪಟ್ಟರು. ಅಗತ್ಯಬಿದ್ದರೆ, ಅವನ್ನು ಸ್ಥಗಿತಗೊಳಿಸಿಯಾದರೂ—ಅನ್ನದ ಸಮಸ್ಯೆ ನೀಗುವೆನೆಂದವರು ಭರವಸೆ ಕೊಟ್ಟರು. ಜನಭೇದ ಭಾವವನ್ನು ತೊರೆದು ಏಕಸೂತ್ರಿಯಾದ ನಡೆಯಬೇಕೆಂದು ಸರಕಾರ ಅಪೇಕ್ಷಿಸುತ್ತದೆ. ಐಕ್ಯ ಮತ್ಯ

[೬ ನೇ ಪುಟ ನೋಡಿರಿ]



ಹೌದು, ಅದು ಬ್ರೂಕ್ ಬಾಂಡ್ ಪೊಟ್ಟಣವಾಗಿದ್ದಲ್ಲಿ ಪೊಟ್ಟಣದಲ್ಲಿನ ಚಹವನ್ನು ಕೊಳ್ಳುವುದು ಯಥಾರ್ಥವಾಗಿಯೂ ಅಗ್ಗ!

ಬ್ರೂಕ್ ಬಾಂಡ್ ಚಹವು ಯಥಾರ್ಥವಾಗಿಯೂ ತಾಜಾವಾದುದು, ಮನೋರಂಜನೀಯ ಸುವಾಸನೆಯುಳ್ಳದ್ದು ಎಂಬುದನ್ನು ಖಾತ್ರಿ ಮಾಡುವುದೇ ಅಲ್ಲದೆ ಈ ದಿವ್ಯವಾದ ಪೊಟ್ಟಣವು ಈ ಗುಣಗಳನ್ನು ಕಾದಿಟ್ಟು ನಿಮ್ಮ ಹಣದ ಸಂಪೂರ್ಣ ಬೆಲೆಗೆ ತಕ್ಕ [illegible] ಉತ್ತಮ ಚಹಾ ನಿಮಗೆ ದೊರೆಯುವುದೆಂಬುದಕ್ಕೆ [illegible] ಈ ಹೆಸರುವಾಸಿಯಾದ ಪೊಟ್ಟಣದಲ್ಲಿನ ಹೆಸರುವಾಸಿಯಾದ ಚಹವನ್ನು ಕೊಂಡು, ನೀವೂ ಕೂಡ ಹಣವನ್ನುಳಿಸಬಹುದು

1906 ರಲ್ಲಿ ಸ್ಥಾಪಿಸಲ್ಪಟ್ಟ
ಸರ್ವತೋಮುಖವಾಗಿ ಅಭಿವೃದ್ಧಿ ಹೊಂದುತ್ತಲಿರುವ
"ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್"
ಇದನ್ನೇ ಸಹಸ್ರಾರು ಜನರು ತಮ್ಮ ಅಚ್ಚುಮೆಚ್ಚಿನ ಬ್ಯಾಂಕನ್ನಾಗಿ
ಆರಿಸಿರುವರು. ನೀವೂ ಇಂದೇ ಒಂದು ಖಾತೆಯನ್ನು ತೆರೆದು
ಬ್ಯಾಂಕಿನ ಗ್ರಾಹಕರಲ್ಲಿ ಒಬ್ಬರಾಗಿರಿ.
THE CANARA BANKING CORPORATION LIMITED.
ಪ್ರಧಾನ ಕಾರ್ಯಾಲಯ, ಉಡುಪಿ. (ದ ಭಾರತ)

ನವಯುಗ
ಉಡುಪಿ, ಗುರುವಾರ ೨೮-೮-'೫೩

ನಡೆದು ಬಂದ ದಾರಿ

ಈ ಸಂಚಿಕೆಯೊಂದಿಗೆ ನಮ್ಮ ಮೂವತ್ತೊಂದು ವರ್ಷಗಳ ಸೇವೆ ಪೂರೈಸಿದಂತಾಯಿತು. ಪತ್ರಿಕಾ ಪ್ರಪಂಚದಲ್ಲಿ, ಅದರಲ್ಲೂ ಕರ್ನಾಟಕದಲ್ಲಿ, ಇಷ್ಟೊಂದು ಸುದೀರ್ಘ ಕಾಲಾವಧಿಯಲ್ಲಿ ಬದುಕಿ ಬೆಳೆದ ಸುಯೋಗ ನಮಗೆ ಬಂದುದಕ್ಕೆ ಹೆಮ್ಮೆ ಎನಿಸುವುದು ಸ್ವಾಭಾವಿಕವೇ. ಕನ್ನಡದಲ್ಲಿ ಪತ್ರಿಕೋದ್ಯಮವು ಇನ್ನೂ ಶೈಶವಾವಸ್ಥೆಯಲ್ಲಿದ್ದಾಗ—ಮತ್ತು ರಾಷ್ಟ್ರವು ದಾಸ್ಯವನ್ನು ಪ್ರತಿಭಟಿಸಿ ಆಂದೋಲನವನ್ನು ಹೂಡಿದ್ದಾಗ "ನವಯುಗ"ವು ಜನ್ಮವೆತ್ತು. ಈ ವರೆಗೆ ತನ್ನಿಂದ ಆದಷ್ಟು ಮಟ್ಟಿಗೆ ರಾಷ್ಟ್ರದ ಪುರೋಗತಿಗಾಗಿ ಸೇವೆ ನೀಡಿದೆ. ರಾಷ್ಟ್ರ ವಿಘಾತುಕ ಶಕ್ತಿಗಳ ಬಗೆಗೆ ಜನರ ಒಲವು ಏರಿಯಕೂಡದೆಂದೂ ದೇಶಾಭ್ಯುದಯವನ್ನೇ ಧ್ಯೇಯವಾಗಿಟ್ಟುಕೊಂಡು ಪ್ರತಿಯೊಬ್ಬ ರಾಷ್ಟ್ರಿಕನೂ ದುಡಿಯಬೇಕೆಂದೂ ನಾವು ಪ್ರತಿಪಾದಿಸಿದ್ದೇವೆ. ಕಾಂಗ್ರೆಸು ಸಂಸ್ಥೆಯೊಂದಿಗೆ ಭಾರತದ ಆಧುನಿಕ ಇತಿಹಾಸ ಸಾಮರಸ್ಯವನ್ನು ಸ್ಥಾಪಿಸಿರುವಂತೆ— ನವಯುಗ ಕೂಡ ಈ ತೆರನಾದ ಸಾಮಂಜಸ್ಯವನ್ನು ಕಾಯ್ದುಕೊಂಡಿದೆ. ಜನರ ಉದ್ವೇಗ ಕೆರಳಿಸುವ ರೀತಿ ಅಗ್ಗದ ಟೀಕೆಗಳಲ್ಲಿ ನಮಗೆ ಆಸಕ್ತಿಯಿಲ್ಲ. ಹಾಗೆಯೇ ಸರಕಾರದ ಒಂದು ವರ್ಗದ ಅಥವಾ ಆಳುವ ಪಕ್ಷಪಾತಿಯಾಗಿದ್ದುಕೊಂಡು ನ್ಯಾಯವನ್ನು ಧಿಕ್ಕರಿಸುವ ದೌರ್ಬಲ್ಯವನ್ನೂ ನಾವು ತೋರಿಲ್ಲ. ನಯದಿಂದ ನೋಡಿ, ನ್ಯಾಯ ದೃಷ್ಟಿಯಿಂದ ವಿವೇಚಿಸಿ, ಪ್ರತಿಯೊಂದೂ ಪ್ರಸಂಗದ ಯೋಗ್ಯತೆಯನ್ನು ತಕ್ಕಡಿಯಲ್ಲಿಟ್ಟು ತೂಗುವ ಬುದ್ಧಿಯನ್ನು ನಾವು ತೋರಿಸಿದ್ದೇವೆ. ತನ್ಮೂಲಕ ಪತ್ರಿಕೋದ್ಯಮದ ಉಚ್ಚಾದರ್ಶವನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ಎತ್ತಿ ಹಿಡಿದುಕೊಂಡು ಬಂದಿದ್ದೇವೆ.

ರಾಷ್ಟ್ರದ ಪಾಲಿಗೆ ಕಳೆದ ಮೂರು ದಶಕಗಳ ಅವಧಿ ಹೇಗೆ ತೀರ ಸಂದಿಗ್ಧವಾದುದಾಗಿತ್ತೋ-ಅದರಂತೆ "ನವಯುಗ"ಕ್ಕೂ ಕಷ್ಟನಷ್ಟಗಳು ಒದಗಿ ಬಂದಿದ್ದವು. ಆದರೆ ನಿಷ್ಠೆಯಿಂದ ಪತ್ರಿಕೆಯ ಉತ್ಕರ್ಷವನ್ನೆ ಕಣ್ಣಮುಂದಿಟ್ಟುಕೊಂಡು, ನಿರಂತರ ಶ್ರಮಿಸಿದ್ದೇವೆ. ಶ್ರಮ ಪಡುವುದರಲ್ಲಿ ಆನಂದವನ್ನು ಕಂಡು, ಕಷ್ಟ ನೋವುಗಳನ್ನು ಮರೆಯಲು ಯತ್ನಿಸಿದ್ದೇವೆ. ರಾಷ್ಟ್ರೀಯತ್ವವನ್ನು ಜನತೆಗೆ ಮೈಗೂಡಿಸುವುದಕ್ಕೂ ರಚನಾತ್ಮಕವಾದ ಪ್ರವೃತ್ತಿಯನ್ನು ದೃಢಗೊಳಿಸುವುದಕ್ಕೂ ಶಕ್ಯವಾದ ರೀತಿ "ನವಯುಗ"ವನ್ನು ಉಚ್ಚ ಮಟ್ಟದ ಲೇಖನಗಳಿಂದ ತುಂಬಿದ್ದೇವೆ. **ಟೀಕೆಗಾಗಿ ಟೀಕಿಸದೆ—ವಿಧಾಯಕ ಹಾಗೂ ಪರಿಣಾಮಕಾರಿಯಾದ ರೀತಿಯಲ್ಲಿ ಈ ಅಮೂಲ್ಯ ಆಯುಧದ ಉಪಯೋಗವಾಗಬೇಕೆಂದು ನಮ್ಮ ನಂಬುಗೆ.** ವಿಷಯ ವೈವಿಧ್ಯವನ್ನು ಸಾಕಷ್ಟು ಮಟ್ಟಿಗೆ ಓದುಗರಿಗೆ ಒದಗಿಸಲು ಪ್ರಯತ್ನಪಟ್ಟಿದ್ದೇವೆ—ಇವೆಲ್ಲದರ ಮಟ್ಟ ಹಾಗೂ ಒಳಿತು ಕೆಡುಕುಗಳ ನಿಜವಾದ ಅರಿವು ನಮ್ಮ ಸಹೃದಯ ಓದುಗರಿಗೇನೇ ಇರಬೇಕು. ನಮ್ಮ ಮಟ್ಟಿಗೆ ಹೇಳುವುದಾದರೆ—ಕರ್ತವ್ಯ ಬುದ್ಧಿಯಿಂದ ಪ್ರೇರಿತರಾಗಿ,ಧರ್ಮಕ್ಕೆ ಲೋಪ ಬಾರದಂತೆ ಶಕ್ತಿಮೀರಿ ಹೆಣಗಿದ್ದೇವೆ. ನಮ್ಮ ದೃಷ್ಟಿಯಲ್ಲಿರುವ ದೋಷ, ಪ್ರಯತ್ನಗಳಲ್ಲಿರುವ ಕೊರತೆ, ಬರವಣಿಗೆಯಲ್ಲಿರುವ ತಪ್ಪು ಮುಂತಾದವನ್ನು ಹೊಟ್ಟೆಗೆ ಹಾಕಿಕೊಂಡು ಕ್ಷಮಿಸುವುದರ ಜೊತೆಗೆ—ಅವುಗಳ ಜ್ಞಾನವನ್ನು ನಮಗಾಗಿಸುವ ಜವಾಬ್ದಾರಿಯೂ ನಿಮ್ಮದೇ. ಹಾಗೆ ನೀವು ಸಹಕರಿಸದೆ—ನಮ್ಮ ಕೆಲಸ ಪೂರ್ಣಗೊಂಡಂತಾಗುವುದಿಲ್ಲ.

ಕೊನೆಯದಾಗಿ— ನಡೆದುಬಂದ ದಾರಿ ಬಹಳ ದೀರ್ಘವಿದೆ: ನಡೆಯಬಲ್ಲವನಿಗೆ ಆ ದಾರಿ ಅನಂತವಾಗಿದೆ. ಜಗ್ಗದೆ, ಕುಗ್ಗದೆ ಮುನ್ನಡೆಯುವ ಹಂಬಲ ನಮಗಿದೆ- ಇದರೊಂದಿಗೆ ಕನ್ನಡಿಗರು ಸ್ವಯಂಸ್ಫೂರ್ತಿಯಿಂದ ಸಹಕರಿಸಿದರೆ, ಆರ್ಥಿಕ ಮುಗ್ಗಟ್ಟಿನ ಈ ಕಠಿಣ ಕಾಲದಲ್ಲಿ—ಎಡವದೆ ನಡೆಯಲು ತುಂಬ ನೆರವು ದೊರಕುವುದು. ನೀವೆಲ್ಲರೂ ನಮ್ಮ ಹಿತೈಷಿಗಳು: ನಿಮಗೆಲ್ಲರಿಗೂ ವಂದನೆಗಳು!

ಚಂದಾದಾರರಲ್ಲಿ ವಿನಂತಿ.

ಇದೇ ಅಗೋಸ್ತು ತಿಂಗಳ ಅಂಕಕ್ಕೆ 'ನವಯುಗ'ದ 31ನೆಯ ವರ್ಷವು ಪೂರ್ತಿಯಾಗಿ ಸಪ್ಟಂಬರ ತಿಂಗಳಿಂದ 32ನೇ ವರ್ಷವು ಆರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವವರು ಈ ಮೊದಲೇ ಅವಧಿ ಮುಗಿದು ಚಂದಾ ಬಾಕಿ ಮಾಡಿಕೊಂಡವರು ಎಲ್ಲರೂ ತಪ್ಪದೆ ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ತ್ವರ್ಯ ಮನಿಯಾರ್ಡರುಮಾಡಿ ಕಳುಹಿಸಿಕೊಡಬೇಕಾಗಿ ಮತ್ತೊಮ್ಮೆ ಅಪೇಕ್ಷಿಸುತ್ತೇವೆ.

ಅಂತೂ ಸಕಾಲದಲ್ಲಿ ಹಣಬಾರದಿದ್ದಲ್ಲಿ ನಾವು ಕಳಿಸುವ ವಿ. ಪಿ. ಯನ್ನು ಪಡಕೊಳ್ಳಬೇಕಾಗಿ ವಿನಂತಿ

ಆಂಧ್ರ ಪ್ರಾಂತ ನಿರ್ಮಾಣ

ಮದ್ರಾಸು ನಗರವನ್ನು ಬಿಟ್ಟುಕೊಟ್ಟರೆ ಸಾಧ್ಯ.

ಮದ್ರಾಸಿನಲ್ಲಿ ಮೊನ್ನೆ ಶನಿವಾರ ಐದನೆಯ ತಮಿಳು ಮಹೋತ್ಸವವು ಜರಗಿತು. ಉತ್ಸವದ ಉದ್ಘಾಟನೆಯನ್ನು ಮುಖ್ಯ ಮಂತ್ರಿ ರಾಜಗೋಪಾಲಾಚಾರ್ಯರು ಮಾಡಿದರು. ಸ್ವಾಭಾವಿಕವಾಗಿ ತಾಯ್ನುಡಿಯ ಮೇಲಿರುವ ಉಚ್ಚ ಮಟ್ಟದ ಅಭಿಮಾನದಿಂದ ಶ್ರೀ ಆಚಾರ್ಯರು ಪ್ರೇರಿತಗೊಂಡು, ತಮಿಳರ ಭವ್ಯ ಇತಿಹಾಸವನ್ನು ಹೃದಯಂಗಮವಾಗಿ ಬಣ್ಣಿಸಿದರು. ಆಗ ಪ್ರಾಸಂಗಿಕವಾಗಿ ಮದ್ರಾಸು ನಗರದ ವಿಷಯ ಬಂತು. ಮಹೋತ್ಸವದ ಸ್ವಾಗತಾಧ್ಯಕ್ಷ ಮಾಜಿ ಮಂತ್ರಿ ಶ್ರೀ ಭಕ್ತವತ್ಸಲಂ ತಮ್ಮ ಭಾಷಣದಲ್ಲಿ ಮದ್ರಾಸು ಪ್ರಾಚೀನ ಕಾಲದಿಂದಲೂ ತಮಿಳು ಸಂಸ್ಕೃತಿಯ ಕೇಂದ್ರವಾಗಿತ್ತೆಂದು ಬಲವಾಗಿ ಪ್ರತಿಪಾದಿಸಿದ್ದರು. ಇದರ ಕಡೆಗೆ ಹೊರಳಿ ಮುಖ್ಯ ಮಂತ್ರಿ ಹೀಗೆಂದರು— "ತಮಿಳು ಆಳ್ವಾರರ ಹಾಗೂ ಕವಿಪುಂಗವರ ಕೃತಿಗಳ ಮೇಲಿಂದ ಮದ್ರಾಸು ನಗರ ತಮಿಳರಿಗೆ ಸೇರಿದ್ದೆಂದು ಸಿದ್ಧವಾಗುತ್ತದೆ. ಈಗಿದ್ದಂತೆ ನೋಡಿದರೂ ನಗರದ ನಿವಾಸಿಕರಲ್ಲಿ ಹತ್ತು ಲಕ್ಷ ತಮಿಳರೇ ತುಂಬಿದ್ದಾರೆ. ತೆಲುಗು ಜನ ಇರುವುದು ಆರು ಲಕ್ಷ ಮಾತ್ರ. ಈಗ ತೆಲುಗರು ತಮಗೆ ಬೇರೆಯೇ ಪ್ರಾಂತಬೇಕೆನ್ನುತ್ತಾರೆ. ಅವರು ಹಾಗೆ ನಮ್ಮಿಂದ ಸಿಡಿದು ಹೋಗುವುದಕ್ಕೆ ಆಕ್ಷೇಪವಿಲ್ಲ. ಆದರೆ—ಮದ್ರಾಸ ನಗರದ ಮೇಲಿನ ಹಕ್ಕನ್ನು ಅವರು ಬಿಟ್ಟರೆ ಮಾತ್ರ ಆಂಧ್ರ ಪ್ರಾಂತ ನಿರ್ಮಾಣ ಸಾಧ್ಯವಾಗುವುದು." ಹೀಗೆ ರಾಜಗೋಪಾಲಾಚಾರ್ಯರು— ಇವರು ಭಾಷಾನುಗುಣ ಪ್ರಾಂತವನ್ನು ವಿರೋಧಿಸುವುದಿಲ್ಲ— ಆಂಧ್ರರು ಕಚ್ಚಾಡುತ್ತಿರುವ ಪ್ರಶ್ನೆಯ ಮೇಲೆ ಸ್ಪಷ್ಟವಾದ ಪ್ರಕಾಶ ಚೆಲ್ಲಿದ್ದಾರೆ. ಈ ಹಿಂದೆ ೧೯೪೯ರ ಕೊನೆಯಲ್ಲಿ ಆಂಧ್ರ ಪ್ರಾಂತ ರಚನೆಯಾಯಿತು ಎನ್ನುವ [illegible] ವಿಷಯ. ಮುಂದರಿದಾಗ— ಅದು ಒಮ್ಮೆಗೇ ನಿಂತುಬಿಟ್ಟುದು ಮದ್ರಾಸು ನಗರದ ಭವಿಷ್ಯದ ನೆಪದಿಂದಲೇ. ಇತ್ತ ಆ ಮಂಡಳಿಯಲ್ಲಿ ಸೇರಿದ ಭಾಷಾನುಗುಣ ಪ್ರಾಂತರಚನೆಯ ಪುರಸ್ಕರ್ತರು ಒಂದು ನಿರ್ಣಯದ ಮೂಲಕ ಅದನ್ನು ಸಮರ್ಥಿಸಿದ್ದಾರೆ. ಹಾಗೆಯೇ ಸ್ವಾಮಿ ಸೀತಾರಾಮರು ಕೈಗೊಂಡಿರುವ ಸತ್ಯಾಗ್ರಹವೂ ತಡೆಯಿಲ್ಲದೆ ಮುನ್ನಡೆಯುತ್ತಿದೆ. ಸ್ಥಳೀಯ ಸರಕಾರೀ ಕಛೇರಿಗಳಲ್ಲಿ ಎಲ್ಲ ವ್ಯವಹಾರವನ್ನು ಮಾತೃಭಾಷೆಯಾದ ತೆಲುಗಿನಲ್ಲಿ ನಡೆಸಬೇಕೆಂಬುದಾಗಿ ಬೇಡುವ ಹೊಸ ರೂಪ ಈ ಚಳುವಳಿಗೆ ಬಂದಿದೆ

ಭಾಷಾ ವಿವಾದ

ಈ ಭಾಷಾ ವಿವಾದದಿಂದಾಗಿ ದೇಶದ ಭದ್ರತೆಗೆ ಕುಂದಿದೆ ಎನ್ನುವ ಜನವಿದ್ದಂತೆ- ಹಿಂದೀಯನ್ನು ದಾಕ್ಷಿಣಾತ್ಯದ ಮೇಲೆ ಹೇರುವ ಔತ್ತರೇಯರ ಉದ್ಧಟತನವನ್ನು ಬಹಿರಂಗವಾಗಿ ಹಾಗೂ ಕ್ರಿಯಾತ್ಮಕವಾಗಿ ಪ್ರತಿಭಟಿಸುವ ಕಚ್ಚನ್ನು ದ್ರಾವಿಡಸ್ಥಾನದ ನಾಯಕರು ತೋರಿದ್ದಾರೆ. ಈಚೆಗೆ ಹಲವಾರು ಸ್ವಯಂ ಸೇವಕರು ರೈಲ್ವೆ ಬೋರ್ಡುಗಳಲ್ಲಿರುವ ಹಿಂದೀ ಹೆಸರುಗಳನ್ನು ಅಳಿಸುವ ಹುಚ್ಚು ಉದ್ಯಮಕ್ಕೆ ಕೈಹಾಕಿದುದನ್ನು ಇದಕ್ಕೆ ನಿದರ್ಶನವೆನ್ನಬಹುದು. ಆದರೆ ತಮಿಳು ಮಹೋತ್ಸವ ಪ್ರಸಂಗದಲ್ಲಿಯೂ ಈ ಬಗ್ಗೆ ಅಸಂತುಷ್ಟಿಯನ್ನು ಪ್ರದರ್ಶಿಸಲಾಯಿತು. ಉತ್ತರದವರು ದ್ರಾವಿಡ ಭಾಷೆಗಳನ್ನು ಹೀನಾಯವಾಗಿ ನೋಡುತ್ತಿರುವರು ಎಂಬ ದೂರನ್ನು ಅಲ್ಲಿಯ ಭಾಷಣಕರ್ತರು ಪುರಸ್ಕರಿಸಿದರು. ಅದೇ ಸಮಯ ದಕ್ಷಿಣದ ಭಾಷೆಗಳನ್ನು ಉಪೇಕ್ಷಿಸದೆ, ತಿರಸ್ಕರಿಸದೆ ಶ್ರದ್ಧೆಯಿಂದ ನೋಡಬೇಕೆಂದು ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ದಿಲ್ಲಿಯಲ್ಲಿ ಹೇಳಿದರು. ಅವರು ದಿಲ್ಲಿ ವಿಶ್ವವಿದ್ಯಾಲಯದ "ಡಾಕ್ಟರ್ ಆಫ್ ಲೆಟರ್ಸ್" ಎಂಬ ಗೌರವ ಉಪಾಧಿಯನ್ನು ಸರದಾರ ಪಣಿಕ್ಕರರಿಗೆ ನೀಡುತ್ತಿದ್ದರು. ಮಲೆಯಾಳಿ ಭಾಷಾ ಸಾಹಿತ್ಯದಲ್ಲಿ ತುಂಬ ಕೆಲಸ ಮಾಡಿದುದರ ಗೌರವಾರ್ಥವಾಗಿ ಈ ಸನ್ಮಾನ ಮಾಡಿದುದಾಗಿರುತ್ತದೆ- ಆಗ ಸರದಾರ ಪಣಿಕ್ಕರರೂ ಸಂದರ್ಭೋಚಿತವಾಗಿ ಮಾತನಾಡಿದರು; ದಕ್ಷಿಣದ ಭಾಷೆಗಳನ್ನು ಗೌರವ ಹಾಗೂ ಆದರದಿಂದ ನೋಡುವ ಕಾಲ ಬಂದಿದೆ ಎಂದು ಅವರು ಹೇಳಿದರು. ಭಾಷಾ ವಿವಾದವನ್ನು ಒತ್ತಾಯದಿಂದ ಬಗೆಹರಿಸಲು ಸಾಧ್ಯವಿಲ್ಲ. ಮನಸ್ಸನ್ನು ಜಯಿಸಿದ ಮೇಲೆಯೇ ಯಶಸ್ಸು ಕೈಗೂಡುವುದು ಎಂದು ಪ್ರಧಾನಿ ನೆಹರೂ ಹತ್ತು ಹಲವಾರು ಸಲ ಹೇಳಿದ್ದಾರೆ.

ಮಾಲಕ-ಮಜೂರ ಸಂಬಂಧ

ಭಾರತದಲ್ಲಿ ಒಡೆಯ ಹಾಗೂ ಕಾರ್ಮಿಕರ ಸಂಬಂಧವನ್ನು ಹೇಗೆ ಸೌಹಾರ್ದಪೂರ್ಣವಾಗಿಸಬಹುದೆಂಬುದರ ಬಗ್ಗೆ ತಜ್ಞ ಮಾಹಿತಿಯನ್ನೂ ಸಲಹೆಯನ್ನೂ ಕೊಡುವುದಕ್ಕಾಗಿ ಕೇಂದ್ರ ಕೂಲಿಕಾರ ಸಚಿವಾಲಯವು ಒಂದು ಪ್ರಶ್ನಾವಳಿಯನ್ನು ಹೊರಡಿಸಿದೆ. ಮುಂದಿನ ವರ್ಷದ ಫೆಬ್ರುವರಿಯಲ್ಲಿ ಈ ಸಂಬಂಧ ಮಂಡಿಸಲಾಗುವ ಮಸೂದೆಗೆ ಇದು ಪೂರ್ವಭಾವಿಯಾಗಿದೆ. ಜನಮತವನ್ನು ತಿಳಿದುಕೊಂಡು—ಹಾಗೂ ಈ ಪ್ರಶ್ನೆಯಲ್ಲಿ ಒಳಗೊಂಡ ಎಲ್ಲ ಪಕ್ಷಗಳ ಅಭಿಪ್ರಾಯವನ್ನೂ ಮನಗಂಡು—ಸ್ವಭಾವಿಯಾದ ರೀತಿಯಲ್ಲಿ ಮಸೂದೆಯನ್ನು ರೂಪಿಸಬೇಕೆಂದು ಮಂತ್ರಿ ಗಿರಿಯವರ ಆಶೆಯಾಗಿದೆ. ಕೇಂದ್ರಸರಕಾರವು ತನ್ನ ಅಭಿಪ್ರಾಯವೇನನ್ನೂ ಪ್ರಶ್ನಾವಳಿಯಲ್ಲಿ ಸೂಚಿಸದೆ—ಅನೇಕ ಪ್ರಶ್ನೆಗಳ ಮೂಲಕ ಜನಾಭಿಪ್ರಾಯವನ್ನೂ—ಮಾಲಿಕ ಹಾಗೂ ಮಜೂರರ ಮನವೊಲವನ್ನೂ ಸಂಗ್ರಹಿಸಲು ಅಪೇಕ್ಷಿಸಿದೆ. ಸರಕಾರದ ಮಸೂದೆಯಿಂದ ಜನ ತಬ್ಬಿಬ್ಬಾಗಕೂಡದೆಂದೂ, ಯಾರೊಬ್ಬರೂ ತಮಗೆ ಅನ್ಯಾಯವಾಯಿತೆಂದು ದೂರಲು ಅವಕಾಶವಿರಬಾರದೆಂದೂ ಭಾವಿಸಿ-ಈ ಹೊಸ ಉಪಕ್ರಮವನ್ನು ಕೈಗೊಂಡಂತಿದೆ. ಕೈಗಾರಿಕೋದ್ಯಮಗಳು ಮಿತಿಮೀರಿ ಬೆಳೆಯುವುದು ಅತ್ಯಂತ ಅಗತ್ಯವಾಗಿರುವ ಈ ಸಮಯದಲ್ಲಿ ಸಂಪು ಹಾಗೂ ಹರತಾಳಗಳಿಂದ ಪರಿಸ್ಥಿತಿ ಕೆಡದಂತೆ ನೋಡಬೇಕಿರುವಂತೆ—ಎರಡೂ ವರ್ಗಗಳ ಸಂಬಂಧ ನಯವಾಗಿರುವಂತೆ ಮಾಡಬೇಕಾದುದೂ ಅಗತ್ಯವೇ.

ಜಿನೀವಾ ಮಾತುಕತೆ

ಕಾಶ್ಮೀರ ಪ್ರಶ್ನೆಯಲ್ಲಿ ಉಚ್ಚವಟ್ಟಿದ ಮಾತುಕತೆ ೨೫ನೇ ದಿನಾಂಕದಿಂದ ಜಿನೀವಾದಲ್ಲಿ ತೊಡಗಿದೆ. ಭಾರತ ಸರಕಾರದ ಪರವಾಗಿ ಸಂರಕ್ಷಣಾ ಮಂತ್ರಿ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ ಮತ್ತು ಪಾಕಿಸ್ತಾನದ ಕಡೆಯಿಂದ ಡಾ|| ಜಾಫರುಲ್ಲಖಾನ ಇದರಲ್ಲಿ ಭಾಗವಹಿಸಿದ್ದಾರೆ. ಸಂಯುಕ್ತ ರಾಷ್ಟ್ರ ಸಂಘದ ಕಾಶ್ಮೀರ ವಿಷಯದ ಮಧ್ಯಸ್ಥ ಡಾ|| ಫ್ರಾಂಕ ಗ್ರಹಾಮರ ಅಧ್ಯಕ್ಷತೆಯಲ್ಲಿ ಸೇರುವ ಈ ಮಾತುಕತೆ-ಪ್ರಕೃತ ಬಗೆಹರಿಯದೆ ಉಳಿದಿರುವ ನಾಲ್ಕು ಮುಖ್ಯಾಂಶಗಳಲ್ಲಿ ಒಮ್ಮತವುಂಟಾಗಲು ಪ್ರಯತ್ನಿಸುವುದು ಯುದ್ಧವಿರಾಮ ರೇಖೆಯ ಇಕ್ಕಡೆಯಲ್ಲಿರುವ ಸೈನ್ಯದ ಪ್ರಮಾಣ ಮತ್ತು ಜನತಾಭಿಪ್ರಾಯವನ್ನು ತಿಳಿದುಕೊಳ್ಳುವ ಅಧಿಕಾರಿಯ ನೇಮಕ ಮತ್ತು ಕಾರ್ಯಗಳ ಬಗ್ಗೆ ಈಗ ಭಿನ್ನಾಭಿಪ್ರಾಯವಿದೆ. ಜಾಫರುಲ್ಲಖಾನರು ಮಾತುಕತೆಗಳ ಯಶಸ್ಸಿನ ಬಗ್ಗೆ ನಿರಾಶೆಯನ್ನೆ ಸೂಚಿಸಿದ್ದಾರೆ. ಶಾಂತಿ ಮತ್ತು ಸಂಧಾನಕ್ಕೆ ತಾವು ಸಿದ್ಧರಿದ್ದೇವೆಂಬುದನ್ನು ತೋರಿಸುವುದಕ್ಕೆ ಮಾತ್ರ ಈ ಮಾತುಕತೆಗೊಪ್ಪಿದರೆಂಬಂತೆ— ಅವರು ಆಡುತಿದ್ದಾರೆ. ಪಾಕಿಸ್ಥಾನದ ಅಭಿಪ್ರಾಯದಂತೆ — ಭಾರತದ ನಿಲುಮೆಯೇ ಕಾಶ್ಮೀರ ಸಮಸ್ಯೆಯ ಅಡ್ಡಬಂಡೆ, ಆದರೆ ಪ್ರಧಾನಿ ನೆಹರೂ ನಮ್ಮ ನಿಲುಮೆ ನ್ಯಾಯಬದ್ಧವಾದುದೆಂದು ಪದೇ ಪದೇ ಹೇಳುತ್ತಾ ಬಂದಿರುವರೆಂಬುದನ್ನು ನಾವು ಮರೆಯಬಾರದು.

ಅಪೂರ್ವ ಚಳುವಳಿ

ದಕ್ಷಿಣ ಆಫ್ರಿಕದಲ್ಲಿ ವರ್ಣಭೇದ ಶಾಸನದ ವಿರುದ್ಧ ನಡೆಯುತ್ತಿರುವ ಚಳುವಳಿ ಅವ್ಯಾಹತವಾಗಿ ಸಾಗಿದೆ. ಭಾರತೀಯ ಕಾಂಗ್ರೆಸಿನ ಹಾಗೂ ಆಫ್ರಿಕನ ರಾಷ್ಟ್ರೀಯ ಕಾಂಗ್ರೆಸಿನ ಧುರೀಣರನ್ನು ಈಗ ಜೊಹಾನ್ಸಬರ್ಗದಲ್ಲಿ ವಿಚಾರಣೆಗೆ ಗುರಿಪಡಿಸಲಾಗಿದೆ. ಪ್ರದರ್ಶನಕಾರರು ಕೋರ್ಟಿನೆದುರು ನಿಷೇಧವನ್ನು ವ್ಯಕ್ತಪಡಿಸಿದರೂ-ವಿಚಾರಣೆಗೇನೂ ಆತಂಕ ಒದಗಲಿಲ್ಲ. ಮಲಾನ ಸರಕಾರವು ಅನುಸರಿಸುತ್ತಿರುವ ಉಗ್ರ ನೀತಿಯು ಹಿಂದೀಯರ ಪ್ರತಿಭಟನೆಯನ್ನು ಮತ್ತಷ್ಟು ಉಗ್ರವಾಗಿಸುವುದೆಂದೂ, ಅವರ ನೈತಿಕ ಶಕ್ತಿಯನ್ನೂ ಉತ್ಸಾಹವನ್ನೂ ವರ್ಧಿಸುವುದೆಂದೂ ಮಹಾತ್ಮಾ ಗಾಂಧೀಜಿಯವರ ಪುತ್ರ ಶ್ರೀ ಮಣಿಲಾಲ ಗಾಂಧೀ ಬರೆದಿದ್ದಾರೆ. ಲಂಡನಿನ "ಟೈಮ್ಸ", "ಮೆಂಚೆಸ್ಟರ ಗಾರ್ಡಿಯನ್" ಮುಂತಾದ ಪತ್ರಿಕೆಗಳು ಸಂಪಾದಕೀಯ ಲೇಖನಗಳನ್ನು ಬರೆದು. ಮಲಾನ ಸರಕಾರದ ನೀತಿ ರಾಷ್ಟ್ರಕೂಟದ ಹಿತಕ್ಕೆ ಧಕ್ಕೆ ಉಂಟುಮಾಡುವಂತಿದೆ ಎಂಬ ನಾಸ್ತಿಯ ಆಶೆ ಆಕಾಂಕ್ಷೆಗಳನ್ನು ಹತ್ತಿಕ್ಕುವ ನಿಷ್ಫಲ ಕೆಲಸವನ್ನದು ಬಿಟ್ಟುಗೊಡುವುದೊಳಿತು. ಎಂಬ ಜಾಗತಿಕ ಅಭಿಪ್ರಾಯವನ್ನು ಸಮರ್ಥಿಸಿವೆ. ಭಾರತದಲ್ಲಿಯೂ ಸಭೆಗಳನ್ನು ಜರುಗಿಸಿ, ಆಫ್ರಿಕದ ಈ ಅಪೂರ್ವ ಹೋರಾಟಕ್ಕೆ ನೈತಿಕ ಬೆಂಬಲವನ್ನು ನೀಡುವ ಗೊತ್ತುವಳಿಗಳನ್ನು ಸ್ವೀಕರಿಸಲಾಗಿದೆ. ಇಂಥದೊಂದು ಸಭೆಯಲ್ಲಿ ಹಾಜರಿದ್ದ ಕೇಂದ್ರ ಮಂತ್ರಿ ಶ್ರೀ ಜಗಜೀವನರಾಮರು ಭಾರತವು ಸತ್ಯಾಗ್ರಹಿಗಳ ನೆರವಿಗೆ ಧಾವಿಸುವುದೆಂದು ಮಾತ್ರ ಯಾರೊಬ್ಬರೂ ಹೇಳಲಾಗದು ಎಂಬುದು ಅರ್ಥಗರ್ಭಿತವಿದೆ.

ಮೋಸ್ಕೋದಲ್ಲಿ

ಚೀನಾದ ಪ್ರಜಾರಾಜ್ಯದ ಮುಖ್ಯಮಂತ್ರಿ ಚೌ. ಎನ್ ಲಾಯಿ ಮೋಸ್ಕೋವಿಗೆ ಆಗಮಿಸಿರುವ ಸಂಗತಿ ಲೋಕದ ಇತರೆಡೆ ಊಹಾಪೋಹಗಳಿಗೆ ಎಡೆಕೊಟ್ಟಿದೆ. ತನ್ನೆರಡು ರಾಷ್ಟ್ರಗಳ ನಡುವೆ ಸೌಹಾರ್ದ ಸಂಬಂಧವನ್ನು ಬಲಗೊಳಿಸುವ ಮತ್ತು ಪರಸ್ಪರ, ನೆರವಿತ್ತು ಸಹಕರಿಸುವ ಉದ್ದೇಶದಿಂದ ತಾವು ಬಂದುದಾಗಿ ಚೌ ಎನ್. ಲಾಯಿಯು ಹೇಳಿದ್ದರೂ ಮಾತುಕತೆಗಳು ಅದಕ್ಕೂ ವ್ಯಾಪಕವಾಗುವವೆನ್ನೀಕ್ಷೆ ಇದೆ. ಶಾಂತ ಸಾಗರದಲ್ಲಿ ಸಂಯುಕ್ತರಾಜ್ಯ ಅಮೇರಿಕವು ಹೊಸತೊಂದು ಠಾಣ್ಯವನ್ನು ಸ್ಥಾಪಿಸಲು ಪ್ರಯತ್ನಿಸಿದುದರಿಂದ-ಚೀನಾವು ರಶಿಯಾದ ಸಹಾಯ ಪಡೆಯಲು ತ್ವರೆಯಿಂದ ಧಾವಿಸಿರಬೇಕು. ಅಲ್ಲದೆ, ಅಮೇರಿಕದಲ್ಲಿ ಉಕ್ಕಿನ ಕೆಲಸಗಾರರು ಮಾಡಿರುವ ಸಂಪು ಮುಗಿದುದರಿಂದ ಕೋರಿಯಾದಲ್ಲಿ ಹೋರಾಡುವ ಸಂಯುಕ್ತರಾಷ್ಟ್ರ ಸಂಘದ ಸೈನಿಕರಿಗೆ ಇನ್ನು ಶಸ್ತ್ರಾಸ್ತ್ರಗಳ ಕೊರತೆಯಾಗದು ಹೀಗೆ ಚೀನಾಕ್ಕೆ ಈಗ ಯುದ್ಧೋಪಕರಣಗಳ ಶೀಘ್ರ ಪೂರೈಕೆ ಅಗತ್ಯವಿದೆ. ಇದರ ಜೊತೆಗೆ ಚೀನಾ ರಶಿಯಾ ಸಂಬಂಧವನ್ನು ಔದ್ಯೋಗಿಕ ಕ್ಷೇತ್ರದಲ್ಲೂ ಬಿಗಿಗೊಳಿಸುವ ಉದ್ದೇಶವೂ ಇದೆ. ಕಮ್ಯೂನಿಸ್ಟ ನೀತಿಯು ಕೊರಿಯಾ ಯುದ್ಧದ ಬಗ್ಗೆ ಹೇಗೆ ತಿರುಗಿಕೊಳ್ಳುವುದೆಂದು ಹೇಳಲು ಬಾರದು. ಅಲ್ಲದೆ ಮೋಸ್ಕೋದಲ್ಲಿ ಅಕ್ಟೋಬರದಲ್ಲಿ ಸೇರಲಿರುವ ಕಮ್ಯೂನಿಸ್ಟ ಕಾರ್ಯನಿರ್ವಾಹಕ ಕೇಂದ್ರಗಳ ಮಹಾಪರಿಷತ್ತಿನಲ್ಲಿ ಮಹತ್ವಪೂರ್ಣವಾದ ನಿರ್ಣಯವಾಗುವ ಸಂಭವವಿದೆ. ಇದರಲ್ಲಿ ಈ ತನಕ ಕಮ್ಯೂನಿಸ್ಟ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಮೆರೆದ ಜನರಲ್ ಸ್ಟಾಲಿನರು ನಿವೃತ್ತಿಗೊಂಡು-ಅವರ ಸ್ಥಾನವನ್ನು ಮೊಲೋಟೋವ ವಹಿಸುವರೆಂಬುದೂ ಒಂದು. ರಶಿಯಾ ೧೯೫೦ರಿಂದಲೂ ವಿವಿಧ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿದೆ. ಇದೀಗ ೧೯೫೧-೫೫ ಅವಧಿಯ ಬಗ್ಗೆ ಹೊಸ ಯೋಜನೆ ರೂಪಗೊಂಡಿದೆ ಎಂದೂ-ಆ ವಿಷಯ ಚರ್ಚೆ ನಡೆಯಲಿದೆ ಎಂದೂ ತಿಳಿದು ಬರುತ್ತದೆ.

ಕೀರ್ತಿಶೇಷ ಎಂ. ಜಿ. ಕಿಣಿಯವರು— ಈ ಜಿಲ್ಲೆಯ ಗೌಡ-ಸಾರಸ್ವತ ಸಮಾಜದವರಾದ ಸುಪ್ರಸಿದ್ಧ ಡಾ. ಎಂ. ಜಿ. ಕಿಣಿಯವರು ತಮ್ಮ ೮೫ನೇ ವರ್ಷದಲ್ಲಿ ಬೊಂಬಾಯಿಯಲ್ಲಿ ದಿವಂಗತರಾದರು. ಇವರು ಮದ್ರಾಸ್ ಸ್ಟೇನ್ಲಿ ಆಸ್ಪತ್ರೆಯ ನಿವೃತ್ತ ಸೂಪರಿಂಟೆಂಡೆಂಟರು; ನಿವೃತ್ತರಾದಮೇಲೆ ಬೊಂಬಯಿ ಅಂಗ ಚಿಕಿತ್ಸಾ ಕೇಂದ್ರದ ಡೈರೆಕ್ಟರರು; ಸೇನೆಯ ಸೇವೆಗಾಗಿ ಬಿರುದಾಂಕಿತರು; ಎಡಿನ್‌ಬರೋ ಲಿವರ್‌ಪೂಲುಗಳಲ್ಲಿ ವ್ಯಾಸಂಗ ಮಾಡಿ ಕಾಲೇಜ್ ಪ್ರೊಫೆಸರರಾಗಿ ಮದ್ರಾಸ್ ವಿಶಾಖಪಟ್ಟಣ ಮೊದಲಾದ ಕಡೆ ಕೆಲಸ ಮಾಡಿದವರು. ಅಸ್ಥಿಪರೀಕ್ಷೆ ಚಿಕಿತ್ಸೆಗಳಲ್ಲಿ ಅದ್ವಿತೀಯ ನಿಪುಣ ,ವಿದ್ವಾಂಸರಾಗಿ ಅಂತರ್ ಜನಾಂಗ ಖ್ಯಾತಿಯನ್ನೂ ಸಂಪಾದಿಸಿದವರು. ಹಲವು ಕಮಿಟಿ ಸಮ್ಮೇಳನದಲ್ಲಿ ಭಾಗವಹಿಸಿದವರು. ಅವರ ನಿಧನದಿಂದ ಜಿಲ್ಲೆಗೂ ಸಾವಿರಾರು ಮಂದಿ ರೋಗಿಗಳಿಗೂ ಅಪಾರ ನಷ್ಟವಾಗಿದೆ.

ಉಡುಪಿ

ಮಂತ್ರಿ ನಾಗಣ್ಣ ಗೌಡರರ ಆಗಮನ— ಕಳೆದವಾರ ಪ್ರಕಟವಾದ ಮಂತ್ರಿಗಳ ಕಾರ್ಯಕ್ರಮದಲ್ಲಿ ಸ್ವಲ್ಪ ಬದಲಾವಣೆಯಾಗಿದ್ದು ತಾ.27ರಂದು ರಾತ್ರಿ 9 ಘಂಟೆಗೆ ಉಡುಪಿಗೆ ಆಗಮಿಸಿ, ಮರುದಿನ ಬೆಳಗ್ಗೆ ಮಲ್ಪೆಯ ಕಾರ್ಯಕ್ರಮ ಜರಗಿಸಿ, ಎಮ್. ಜಿ. ಎಮ್. ಕಾಲೇಜನ್ನು ಸಂದರ್ಶಿಸಿ. ನಗರಸಭೆಯ ಮಾನಪತ್ರ ಸ್ವೀಕರಿಸಿ ಅಪರಾಹ್ನ ಕಾರ್ಕಳ, ಮೂಡುಬಿದ್ರೆ ಮಾರ್ಗವಾಗಿ ಮಂಗಳೂರಿಗೆ ಪ್ರಯಾಣ ಮಾಡುವರು.

ಮುನಿಸಿಪಲ್ ಸಭೆಯು:— ತಾ. 25. ರಲ್ಲು ಚೆಯರ್ ಮೆನ್ ಶ್ರೀ ಯು. ಎಸ್ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ ಮುಖ್ಯ ಮಂತ್ರಿಗಳಿಗೆ ಮಾನಪತ್ರ ನೀಡುವ ನಿರ್ಣಯ ಮಾಡಲಾಯಿತು.

ಕಾಂಗ್ರೆಸ್ ಕಮಿಟಿ ಸಭೆಯು:— ತಾ. 20 ರಲ್ಲು ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಮುಂದಿನ ತಿಂಗಳಲ್ಲಿ ಜರಗಲಿರುವ ಉಡುಪಿ ಮುನ್ಸಿಪಲ್ ಚುನಾವಣೆಯಲ್ಲಿ ಕಾಂಗ್ರೆಸ್ ಹುರಿಯಾಳುಗಳನ್ನು ನಿಲ್ಲಿಸಬೇಕೆನ್ನುವ ಕಾಂಗ್ರೆಸ್ ಎಡ್‌ಹಾಕ್ ಕಮಿಟಿ ನಿರ್ಣಯವನ್ನು ಬಹುಮತದಿಂದ ಮಂಜೂರು ಮಾಡಲಾಯಿತು,

---

ಉಳಿಯಾರಗೋಳಿ ಪಂಚಾಯತ ಬೋರ್ಡ್ ಪ್ರೆಸಿಡೆಂಟರಿಂದ ಟೆಂಡರ್ ನೋಟಿಸ.—

ಮೇಲ್ಕಾಣಿಸಿದ ಪಂಚಾಯ್ತ್ ಬೋರ್ಡಿಗೆ ಸಂಬಂಧಪಟ್ಟ ಉಳಿಯಾರಗೋಳಿಯಲ್ಲಿರುವ ಕಾಲುಸೇತುವೆಯನ್ನು ದಕ್ಷಿಣ ಕನ್ನಡ ಡಿವಿಜನಲ್ ಇಂಜಿನಿಯರ್, ಪ್ಯಾವೇಸ್, ಇವರ ಸಂಖ್ಯೆ 18052 B/2/48 ತಾ. 8-11-49 ನೇ ಎಸ್ಟಿಮೇಟ್ ಮೇರೆಗೆ ರೂಪ್ಯ 2350/- ರ ಒಳಗೆ ಕಟ್ಟುವರೆ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿ ಬಗ್ಗೆ ವೈಸ್ ಪ್ರೆಸಿಡೆಂಟ್, ಪಂಚಾಯ್ತ್ ಬೋರ್ಡ್, ಉಳಿಯಾರಗೋಳಿ ಇವರನ್ನು ವಿಚಾರಿಸುವುದು. ಟೆಂಡರುಗಳು ತಾ. 15-9-52 ಸಾಯಂ. ಗಂಟೆ 6ರ ಒಳಗೆ ತಲುಪುವುದು.

(Sd.) **U. Rama Rao,**
Vice President,
Uliargoli Pt. Board.

MAHATMA GANDHI MEMORIAL COLLEGE, UDIPI.

Vacancy in a post on the clerical establishment of the College. Should have experience in accounts and office work, and must be a fast and accurate Typist. S. S. L. C. or Intermediate. Age above 21. Salary 45-5-80 plus D A. Only qualified Candidates should apply or interview the Principal.

ರಂಗಭೂಮಿಯ
ರಂಗಿನ ತರಂಗ



ಎಸ್. ವೆಂಕಟರಾಜರು ಬರೆದ
ವಿನೋದಪ್ರಧಾನ ನಾಟಕ

- ನಡೆದ-ನಡೆಯುವ ವಿದ್ಯ - ಮಾನದ ಒಂದು ಪಡಿಯಚ್ಚು
- ಒಂದು ನಾಟಕವಾಡಲು ಸುಲಭದಲ್ಲಿ ಸಿಕ್ಕಿದ ಸಾಮಾನ್ಯ ಘಟನೆಯೊಂದರ ನೈಜ ಚಿತ್ರ
- ಆಕರ್ಷಕ ಪುಸ್ತಕ, ಬೆಲೆ 0 10 0

ನಾರೀಹೃದಯ

ಸ್ವರ್ಗೀಯ ಪ್ರೇಮಚಂದ್ರರ ಧರ್ಮಪತ್ನಿ
ಶ್ರೀಮತಿ ಶಿವರಾಣಿ ದೇವಿಯರ
ಕಥಾಮಾಲಿಕೆಯ ಅನುವಾದ.

ನಾರೀಹೃದಯವನ್ನು ಚಿತ್ರಿಸುವ ಅತ್ಯುತ್ತಮ ಕತೆಗಳ ಸಂಗ್ರಹ

ಸ್ತ್ರೀಯರಲ್ಲಿಯೂ ಸಾಹಸ, ಸ್ನೇಹ, ದೇಶಭಕ್ತಿ, ತ್ಯಾಗ, ಬಲಿದಾನಾದಿ ಅಮೂಲ್ಯ ಗುಣಗಳೂ ಇದ್ದೇ ಇವೆ ಎಂಬುದನ್ನು ಚೆನ್ನಾಗಿ ವಿವರಿಸಿಗುವ ನವೀನ ಕತೆಗಳು.

ನಾರಿಯರೂ, ಪುರುಷರೂ ಓದತಕ್ಕ
ರೂ 1-3 0 ಬೆಲೆಯ ಪುಸ್ತಕ

[೫ನೇ ಪುಟದಿಂದ ಮುಂದುವರಿದುದು]

ವೇ ಉದ್ಧಾರದ ಚಿಹ್ನೆಯಾಗಿರುವಾಗ—ಪ್ರಕೃತ ಮುಂಬಯಿಯಲ್ಲಿ ಕಂಡುಬಂದಿರುವ ಕಾಂಗ್ರೆಸ ಸರಕಾರ ಹಾಗೂ ಕಾಂಗ್ರೆಸ ಸಮಿತಿಗಳ ನಡುವಿನ ಘರ್ಷಣೆ ತುಂಬ ವಿಷಾದಕರ. ಮುಂಬಯಿ ಪ್ರದೇಶ ಕಾಂಗ್ರೆಸ ಸಮಿತಿಯ ಮುಖ್ಯ ಅಧ್ಯಕ್ಷರಾದ ಶ್ರೀ ಎಸ್. ಕೆ. ಪಾಟೀಲ ಹಾಗೂ ಮುಖ್ಯಮಂತ್ರಿ ಶ್ರೀ ಮುರಾರಜಿ ದೇಸಾಯರ ನಡುವೆ ಈ ಬಿಕ್ಕಟ್ಟು ಉಂಟಾಗಿದೆ. ಶ್ರೀ ಪಾಟೀಲರು ಕಳೆದ ಚುನಾವಣೆಯಲ್ಲಿ ಕಾಂಗ್ರೆಸು ಜಯಶೀಲವಾಗುವಂತೆ ತುಂಬ ಉತ್ಸಾಹದಿಂದ ಕೆಲಸ ಮಾಡಿದ್ದರು. ಬಹುಶಃ ಅವರ ಒಂದು ಕಣ್ಣು ಮುಖ್ಯ ಮಂತ್ರಿಪದದ ಮೇಲೆ ಇದ್ದಿರಲೂ ಸಾಕು. ಅಂಥದರಲ್ಲಿ ಶ್ರೀ ಮುರಾರಜಿಯವರಿಗೆ ಸರಕಾರ ನಿರ್ವಹಿಸುವ ಹೊಣೆ ಬೀಳಲು—ಪಾಟೀಲರ ವರ್ಚಸ್ಸು ಸರಕಾರದ ಮೇಲೆ ಸ್ವಾಭಾವಿಕವಾಗಿ ತಗ್ಗಿತು.

ಪರಸ್ಪರ ತಿಕ್ಕಾಟ

ಹೀಗೆ ಆರಂಭದಲ್ಲಿಯೇ ಇದ್ದ ಮನಸ್ತಾಪ ಪ್ರಥಮದಲ್ಲಿ ಅವ್ಯಕ್ತ ರೂಪದಲ್ಲಿದ್ದದ್ದು ಈಗ ಪ್ರತ್ಯಕ್ಷವಾಗಿ ಕಂಡುಬಂದಿದೆ. ಮುಂಬಯಿ ಸರಕಾರದವರು ಬಹುಮುಖ ಮಾರಾಟಕರ ಪದ್ಧತಿಯನ್ನು ತರಬೇಕೆಂದು ನಿರ್ಣಯಿಸಿದುದು ಆಜ್ಯಾಹುತಿಯ ಕೆಲಸ ಮಾಡಿದೆ. ಶ್ರೀ ಪಾಟೀಲರು ಇದರಿಂದ ಜನತೆಯ ಮೇಲೆ ಹೆಚ್ಚಿನ ಹೊರೆಬೀಳುವುದೆಂದೂ—ಆದುದರಿಂದ ಕರಭಾರವು ಅನಪೇಕ್ಷಿತವೆಂದೂ ಮೊದಲೇ ನುಡಿದಿದ್ದರು. ಸರಕಾರ ಈ ಹೆಜ್ಜೆ ಇಡಬಾರದೆಂದವರು ಮನವಿಮಾಡಿಕೊಂಡರೂ—ಮುರಾರಜಿಯವರ ಸರಕಾರ ಅದನ್ನು ಧಿಕ್ಕರಿಸಿ ನಡೆದುದರಿಂದ—ಪಾಟೀಲರ ಅಭಿಮಾನಕ್ಕೆ ಧಕ್ಕೆ ತಗುಲಿತು. ಗಿರಿಗಾಂವ ಕಾಂಗ್ರೆಸ ಸಮಿತಿಯಲ್ಲಿ ಅವರು ಬಹಿರಂಗವಾಗಿ ಕಾಂಗ್ರೆಸ್ ಸರಕಾರದ ಮೇಲೆ ವಾಗ್ಬಾಣ ಪ್ರಯೋಗ ಮಾಡಿದರು- ಸರಕಾರದ ಮೇಲೆ ಕಾಂಗ್ರೆಸ್ ಸಮಿತಿಗಳಿಗೆ ನಿಯಂತ್ರಣವಿರುವುದು ಅವಶ್ಯ ಎಂದವರು ಪ್ರತಿಪಾದಿಸಿದರು. ಕಾಂಗ್ರೆಸರ ಹೆಸರು ಹೇಳಿ, ಮತದಾರರನ್ನು ಕಾಂಗ್ರೆಸ್ಸಿನ ವರ್ಚಸ್ಸಿನಿಂದ ಒಲಿಸಿ ಅಧಿಕಾರಕ್ಕೆ ಬಂದ ಸರಕಾರ-- ಸಮಿತಿಯ ಒಲವನ್ನು ಅರಿತುಕೊಳ್ಳದೆ ನಡೆಯುವುದು ಹಿತಕರವಲ್ಲ ಎಂದರವರು. ಇದರಿಂದ ಸರಕಾರ ಮಾಡಿದ ತಪ್ಪುಗಳಿಗಾಗಿ- ಕಾಂಗ್ರೆಸ್ ಸಂಸ್ಥೆಗೆ ಕೆಟ್ಟ ಹೆಸರು ಬರುವುದೆಂದವರು ಎಚ್ಚರಿಸಿದರು. ಕಾಂಗ್ರೆಸಾಧ್ಯಕ್ಷ ಪಂಡಿತ ನೆಹರೂ ಹಾಗೂ ಶ್ರೀ ಪಾಟೀಲರೊಳಗೆ ಈ ಸಂಬಂಧದಲ್ಲಿ ಪತ್ರ ವ್ಯವಹಾರ ನಡೆಯುತ್ತಿದೆ. ಕಾಂಗ್ರೆಸ್ ಸಮಿತಿ ಹಾಗೂ ಸರಕಾರಗಳ ನಡುವೆ ನಿಕಟ ಸಂಪರ್ಕವನ್ನು ಕಾಯ್ದುಕೊಳ್ಳಲು-- ಹಾಗೂ ಸರಕಾರದ ಮೇಲೆ ಕಾಂಗ್ರೆಸ್ಸಿನ ವರ್ಚಸ್ಸಿಗೆ ಚ್ಯುತಿ ಬಾರದಂತೆ ಮಾಡಲು ಒಂದು ಮಧ್ಯವರ್ತಿಯಾದ ಅಂಗವನ್ನು ನಿರ್ಮಿಸಬೇಕೆಂಬ ಮಹತ್ವದ ಸೂಚನೆಯನ್ನು ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಮುಂಬರುವ ಅಧಿವೇಶನದಲ್ಲಿ ಶ್ರೀ ಪಾಟೀಲರು ತರುವರು. ಘಟನೆಯ ತಿದ್ದುಪಡಿಯನ್ನೊಳಗೊಂಡಿರುವ ಹಾಗೂ ಮೂಲಭೂತವಾದ ಈ ಪ್ರಶ್ನೆಗೆ ಈಗ ಮಹತ್ವದ ಸ್ವರೂಪ ಬಂದಿದೆ.

ಮಂಗಳೂರು

ಮುನಿಸಿಪಲ್ ಕೌನ್ಸಿಲು ಸಭೆಯು—ತಾ. 16ರಲ್ಲು ಜರಗಿ 1951-52ನೆ ವರ್ಷದ ಆಡಳಿತ ವರದಿ ಸ್ವೀಕರಿಸಲಾಯಿತು. ವರದಿಯಲ್ಲಿ ಹೇಳಲಾದ ಮುಖ್ಯಾಂಶಗಳು ಹೀಗಿವೆ. ವರದಿ ವರುಷದಲ್ಲಿ 29 ಸಭೆಗಳು ಜರಗಿದ್ದುವು. ನಗರ ಸಭೆಯ ಕಾರ್ಯಕ್ಷೇತ್ರದ ವಿಸ್ತೀರ್ಣವು 7895 ಚದರ ಮೈಲು. ಜನಸಂಖ್ಯೆಯು 1,17,095. ಮುನಿಸಿಪಾಲಿಟಿಯಲ್ಲಿ 57½ ಮೈಲು ರಸ್ತೆಗಳಿವೆ. 7½ ಮೈಲು ರಸ್ತೆಗೆ ತಾರು ಹಾಕಲಾಗಿದೆ. ರಸ್ತೆಗಳಿಗಾಗಿ ಒಟ್ಟು ರೂ. 1,33,244 ವೆಚ್ಚವಾಗಿದೆ. ಮುನಿಸಿಪಲ್ ಕ್ಷೇತ್ರದಲ್ಲಿ 1482 ವಿದ್ಯುದ್ದೀಪಗಳೂ 520 ಎಣ್ಣೆ ದೀಪಗಳೂ ಉರಿಯುತ್ತಿವೆ. ಇವುಗಳಿಗಾಗಿ ರೂ. 61,991 ತೆರಿಗೆ ವಸೂಲಾಗಿದೆ. ವಿದ್ಯುದ್ದೀಪ ಒಂದರ ರೂ. 27-2-11 ಮತ್ತು ಎಣ್ಣೆ ದೀಪ ಒಂದರ ರೂ. 25/- ವೆಚ್ಚ ತಗಲಿದೆ.

ಮುನಿಸಿಪಾಲಿಟಿಯ ಕೈಕೆಳಗೆ ಒಟ್ಟು 21 ಪ್ರಾಥಮಿಕ ಶಾಲೆಗಳಿವೆ. ಇವುಗಳಲ್ಲಿ 5,661 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. 170 ಉಪಾಧ್ಯಾಯರು ಕಲಿಸುತ್ತಿದ್ದಾರೆ. ಪ್ರತಿಯೊಬ್ಬ ಉಪಾಧ್ಯಾಯರಿಗೆ ಸರಾಸರಿ ರೂ 802 ವೆಚ್ಚವಾಗಿದೆ. ವರದಿ ವರ್ಷದಲ್ಲಿ ಶಾಲೆಗಳಿಗಾಗಿ ರೂ 52,765 ವೆಚ್ಚವಾಗಿದೆ. ನಗರ ಸಭೆಯು ಐದು ಧರ್ಮಾರ್ಥ ಔಷಧಾಲಯಗಳಿಗಾಗಿ ರೂ. 25,000. ಆರೋಗ್ಯ ಖಾತೆಯ ಒಟ್ಟು ವೆಚ್ಚವು ರೂ. 2,86,093. ಹಂಪನಕಟ್ಟೆ ಮೋಟರ್ ನಿಲ್ದಾಣದಿಂದ ರೂ. 25,454 ಮತ್ತು ಇತರ ಸಂತೆಗಳಿಂದ ರೂ. 83,233 ತೆರಿಗೆ ಸಂಗ್ರಹವಾಗಿದೆ. ಈ ಖಾತೆಗಾಗಿ ರೂ. 4759 ವೆಚ್ಚವಾಗಿದೆ. ನಗರ ಸಭೆಯ ಒಟ್ಟು ಆದಾಯ ವೆಚ್ಚವು ರೂ. 14 ಲಕ್ಷ.

ಶ್ರೀ ಶಿವರಾಮ ಕಾರಂತರಿಗೆ ಸತ್ಕಾರ—ಮಂಗಳೂರ ಪತ್ರಿಕೋದ್ಯೋಗಿ ಸಂಘದ ಕಡೆಯಿಂದ ತಾ. 17ರಲ್ಲು ಶ್ರೀ ಆರ್. ಕೆ ಪ್ರಭುಗಳ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಶ್ರೀ ಕೆ. ಶಿವರಾಮ ಕಾರಂತರನ್ನು ಸ್ವಾಗತಿಸಿ ಸತ್ಕರಿಸಲಾಯಿತು. ಶ್ರೀ ಎಚ್. ಭೀಮರಾಯರು ಸ್ವಾಗತ ಬಯಸಿದ ಮೇಲೆ ಕಾರಂತರು ತಮ್ಮ ಭಾಷಣದಲ್ಲಿ ಯುರೋಪಿನಲ್ಲಿ ರಾಜಕೀಯದ ಗಡಿಬಿಡಿ ತೋರುವುದಿಲ್ಲವೆಂದೂ ಸಾಹಿತ್ಯ, ಕಲೆ, ಸಂಸ್ಕೃತಿ, ಧರ್ಮ ಮೊದಲಾದ ಪ್ರತಿಯೊಂದು ಅಂಗದಲ್ಲೂ ಆಳವಾಗಿ ಅಭ್ಯಾಸಮಾಡುವುದೇ ಅವರ ಜೀವಾಳವೆಂಬುದನ್ನೂ ತಿಳಿಸಿದರು. ಅಲ್ಲದೆ ಯುರೋಪು ಇಂದು ಕಮ್ಯೂನಿಜಮಿಗೆ ಹೆದರಿದೆ ಎಂದೂ, ಭಾರತವೆಲ್ಲಿ ಆ ದಾರಿ ಹಿಡಿಯುವುದೋ ಎಂಬ ಭಯ ಅವರಿಗಿದೆಯೆಂದೂ ತಿಳಿಸಿದರು. ಶ್ರೀ ಪ್ರಭುಗಳು ತಮ್ಮ ಉಪಸಂಹಾರ ಭಾಷಣದಲ್ಲಿ ಕಾರಂತರೊಂದು ಪ್ರವಾಸ ಗ್ರಂಥ ಬರೆದು ಅವರ ಅನುಭವವನ್ನು ಜನರ ಮುಂದಿಡಬೇಕೆಂದು ಕೇಳಿಕೊಂಡರು.

ವಾರ್ಷಿಕ ಸಭೆ— ಶ್ರೀ ಕಾರಂತರ ಸತ್ಕಾರ ಪೂರ್ವದಲ್ಲಿ ಸಂಘದ ವಾರ್ಷಿಕ ಸಭೆಯು ಶ್ರೀ ಡಿ. ಪುಟ್ಟುಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರಗಿತು. ವರದಿ ವಾಚನ, ಲೆಕ್ಕ ಪತ್ರ ಪರಿಶೀಲನೆಗಳಾಗಿ ಹೊಸ ವರುಷದ ಅಧಿಕಾರಿಗಳ ಚುನಾವಣೆ ನಡೆಯಿತು. ಶ್ರೀಗಳಾದ ಡಿ. ಪುಟ್ಟುಸ್ವಾಮಿ, ಆರ್. ಕೆ. ಪ್ರಭು ಮತ್ತು ಯು. ನರಸಿಂಹರಾಯರು, ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಕಾರ್ಯದರ್ಶಿಗಳಾಗಿ ಅನುಕ್ರಮವಾಗಿ ಆರಿಸಲ್ಪಟ್ಟರು.

ಕಾಲೇಜಿನಲ್ಲಿ ಸೇನಾ ಶಿಕ್ಷಣ— ಸ್ಥಳೀಯ ಸರಕಾರಿ ಕಾಲೇಜಿನಲ್ಲಿ ರಾಷ್ಟ್ರೀಯ ಸೇನೆಯ ವಿದ್ಯಾರ್ಥಿದಳ (ನೇಶನಲ್ ಕೆಡೆಟ್ ಕೋರ್)ದ ಶಾಖೆಯು ಕ್ಯಾಪ್ಟನ್ ವಿ. ವಿ. ಕೆ. ನಂಬಿಯಾರ್, ಅವರಿಂದ ತಾ. 23ರಂದು ತೆರೆಯಲ್ಪಟ್ಟಿತು.

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಳಿಗೆ— ಅಧ್ಯಕ್ಷ ಶ್ರೀ ಎಫ್. ಎಕ್ಸ್. ಡಿ. ಪಿಂಟೋರವರು ಈ ಕೆಳಗಿನವರನ್ನು ಆರಿಸಿರುತ್ತಾರೆ. ಡಾ। ಯು. ಪಿ. ಮಲ್ಯ, ಶ್ರೀ ಎಲ್. ಸಿ. ಪಾಯಸ್, ಉಪಾಧ್ಯಕ್ಷರು, ಶ್ರೀ ಬಿ. ವೈಕುಂಠ ಬಾಳಿಗ, ಎಮ್.ಎಲ್.ಎ. ಕೋಶಾಧಿಕಾರಿ, ಶ್ರೀ ಬಿ. ಆರ್ ಕರ್ಕೇರ ಪ್ರಧಾನ ಕಾರ್ಯದರ್ಶಿ, ಶ್ರೀ ಎಚ್. ಕೆ. ಶಿಂಗಳಾಯ ಮತ್ತು ಡಾ। ಯು. ಪಿ. ಕೃಷ್ಣ ಜತೆ ಕಾರ್ಯದರ್ಶಿಗಳು; ಶ್ರೀಗಳಾದ ಬಿ. ಎಸ್. ಬಾಸ್ಕರ ರೈ, ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆ, ಎಸ್. ಎಸ್. ಕಿಲ್ಲೆ, ವಿಠಲದಾಸ ಸೆಟ್ಟಿ, ವೇಣು ಗೋಪಾಲ ನಾಯಕ್, ದೇವಪ್ಪ ಆಳ್ವ, ಜನಾಬ್ ಹಕೀಮ್ ಹಾಜಿ ಹಸನ್ ಸಾಹೇಬ್ ಮತ್ತು ಹಾಲಾಡಿ ಮಹಾಬಲ ಸೆಟ್ಟಿ, ಇತರ ಸದಸ್ಯರು.

ಒಮ್ಮೆಗೆ ಎರಡು ಕರುಗಳು — ಡಾ। ಎಮ್. ವಿ. ಶಾಸ್ತ್ರಿಗಳ ಮನೆಯಲ್ಲಿ ತಾ 22ರಂದು ರಾತ್ರಿ ಅವರ ಮನೆಯ ದನವು ಒಮ್ಮೆಗೇ ಎರಡು ಕರುಗಳನ್ನು ಹಾಕಿದೆಯಾಗಿಯೂ ಎರಡೂ ಗಂಡುಕರುಗಳು ಸೌಖ್ಯವಾಗಿರುವವಾಗಿಯೂ ಹೇಳಲಾಗಿದೆ.

ಮುನಿಸಿಪಲ್ ಚುನಾವಣೆ ಸಮಿತಿ

ಇದೇ ತಾ. 23ರಂದು ಜರಗಿದ ಕಾಂಗ್ರೆಸ್ ಬೆಂಬಲಿಗರ ಮಹಾಜನ ಸಭೆಯ ಅಭಿಪ್ರಾಯದ ಮೇರೆಗೆ ಮುನಿಸಿಪಲ್ ಚುನಾವಣೆಗೆ ಕಾಂಗ್ರೆಸ್ ಹುರಿಯಾಳುಗಳಾಗಿ ನಿಲ್ಲಬಯಸುವವರ ಅರ್ಜಿಗಳನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಿಗೆ ತಾ 25ರೊಳಗೇ ಕಳುಹಿಸಬೇಕೆಂದಿದ್ದುದನ್ನು ತಾ 28ರ ರಾತ್ರೆ ಘಂಟೆ 8ರ ವರೆಗೆ ಮುಂದರಿಸಲಾಗಿದೆ.

(ಸಹಿ) ಬಿ. ಬಿ. ಶೆಟ್ಟಿ, ಕಾರ್ಯದರ್ಶಿ
ಮುನಿಸಿಪಲ್ ಚುನಾವಣೆ ಸಮಿತಿ
ಮಂಗಳೂರು.

ಬೇಕಾಗಿದ್ದಾರೆ

ಸಂಬಳದ ಮೇಲೆ ಯಾ ಕಮಿಶನಿನ ಮೇಲೆ ವಿಮಾ ಕೆಲಸ ಮಾಡಲು ಯೋಗ್ಯ ಏಜಂಟರು ಮತ್ತು ಸ್ಪೆಶ್ಯಲ್ ಏಜಂಟರು ಬೇಕಾಗಿದ್ದಾರೆ.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಉಡುಪಿ.

The
NEW KARNATAKA
Provident Insurance
Co., Ltd. Udipi.

ತೃಪ್ತಿಕರವಾದ ವಸತಿ— ಹಿತಕರವಾದ ಊಟ— ರುಚಿಕರವಾದ ಉಪಾಹಾರ
ಇವುಗಳಿಗೆ
ಆದರ್ಶ ನಿಲಯವೆಂದರೆ
ವುಡ್ ಲೇಂಡ್ಸ್
ಉಡುಪಿ.
ಯಾತ್ರಿಕರಿಗೂ ಪ್ರಯಾಣಿಕರಿಗೂ
ಸರ್ವ ಅನುಕೂಲವಾಗುವಂತೆ
ನಗರದ ಕೇಂದ್ರಭಾಗದಲ್ಲಿದೆ

ಅಸಾಧಾರಣ ವಾಗ್ಮಿಗಳೂ ಗ್ರಂಥಕರ್ತರೂ ಆದ
ಶ್ರೀ. ಎಸ್. ಪಂಚಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್, ಬಾರ್. ಎಟ್ ಲಾ,
ಎಫ್. ಎಸ್. ಎಲ್. ಅವರು ಬರೆದ Tales of Ind ಎಂಬ ಕಥಾವಳಿಯ ಅನುವಾದ

ಭಾರತೀಯ ಕತೆಗಳು

ಅನುವಾದಕರು— ಶ್ರೀ. ಕೊರಡ್ಕಲ್ ಶ್ರೀನಿವಾಸ ರಾವ್.

ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಬೇಕೆಂಬ ಹಿರಿಯಾಶೆ ಇದ್ದೇ ಇದೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸಂದರ್ಭೋಚಿತವಾದ ಉಪಮೆ, ಗಾದೆ, ಕಥೆ ದೃಷ್ಟಾಂತ ಇತ್ಯಾದಿಗಳು ಬರಬೇಕು. ಅಂತಹ ಅಮೂಲ್ಯ ಭಂಡಾಗಾರವೇ ಈ ಭಾರತೀಯ ಕತೆಗಳು

ಎಲ್ಲರೂ ಅವಶ್ಯವಾಗಿ ಓದತಕ್ಕ ಅಪೂರ್ವ ಗ್ರಂಥ
151 ಕತೆಗಳು ಬೆಲೆ ರೂ. 1-12-0
ನವಭಾರತ ಪುಸ್ತಕ ಭಂಡಾರ, ಉಡುಪಿ.

ನಡಿಯುವ ಚಿತ್ರ
ಚುನಾವಣೆ ಗೊಂದಲಕ್ಕಿಂತ ಬಿಗುವಾದುದು ಸಂಸಾರದ ಗೊಂದಲ. ಈ ಗೊಂದಲದಿಂದ ಪಾರಾದವನೇ ಪುಣ್ಯ ಪುರುಷ ಇಂತಹ ಪುಣ್ಯ ಪುರುಷರ ಜೀವನ ಚರಿತ್ರೆಯೇ:—
ಬಡೇ ಬಯ್ಯ (ದೊಡ್ಡಣ್ಣ)
ಆಗಾ, ಯಾಕೂಬ್, ನಿರೂಪಾ ರಾಯ್, ಸುರೇಶ್,
ಮುಂದಿನ ಚಿತ್ರ— ನಿರಾಲಾ
ಮಧುಬಾಲ ಮತ್ತು ದೇವ ಆನಂದ್
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಋತುಸ್ರಾವ ನಿಂತಿತು
'ಕುಮಾರಿ' ಪಿಲ್ಲ್‌ಗಳನ್ನು ಉಪಯೋಗಿಸಿದರೆ ಪದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3-] ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8-]ವಿ ಪಿ ಹನ್ನೆರಡಾಣೆ ಪ್ರತ್ಯೇಕ]
MIS D. DEVEE, F. DS. (N. J.)
Tollyguoge CALCUTTA.
ಸ್ಟಾಕಿಸ್ಟರು: ಕಹಾಕಂಪೆನಿ, ಮಂಗಳೂರು

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಕಲ್ಮಡ್ಕ– ಸ್ಥಳೀಯ ಶಾಲಾ ವಠಾರದಲ್ಲಿ ತಾ 15ರಂದು ಸ್ವಾತಂತ್ರ್ಯ ದಿನಾಚರಣೆಯು ಶ್ರೀ ಕೆ. ಎಸ್. ಶರ್ಮರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ಜರಗಿತು.

ಸುರತ್ಕಲ್– ಕಳೆದ ಮೂರು ತಿಂಗಳುಗಳಿಂದ ಇಲ್ಲಿಯ ಗುಡ್ಡೆ ಕೊಪ್ಪಲ ಮೊಗವೀರ ಸಮಾಜದ ನೇತೃತ್ವದಲ್ಲಿ ಶ್ರೀಗಳಾದ ಎಚ್. ನಾರಾಯಣ ರಾವ್ ಮತ್ತು ಶ್ರೀಧರಾಚಾರ್ಯರಿಂದ ಅನುಕ್ರಮವಾಗಿ ಕನ್ನಡ ಭಾರತ ವಾಚನ ಮತ್ತು ಅರ್ಥ ವಿವರಣೆಗಳು ಸಾಂಗವಾಗಿ ಜರಗಿ ತಾ 21ರಲ್ಲು ಮಂಗಳಾಚರಣೆಯೊಂದಿಗೆ ಮುಕ್ತಾಯವಾಯಿತು. ಶ್ರೀ ಐ. ನಾರಾಯಣರಾವ್ ಮಾಸ್ತರರು ಸಂದರ್ಭೋಚಿತ ಮಾತುಗಳನ್ನಾಡಿದರು. ಪ್ರವಚನಗಾರರಿಗೆ ಸಂಭಾವನೆ ಕೊಡಲಾಯಿತು.

ಸುರತ್ಕಲ್ ಮುಕ್ಕ– ಅಲ್ಲಿನ ಕರಿಡಾ। ಎ। ಶಾಲೆ ಮತ್ತು ಮಿತ್ರ ಪಟ್ಣ ಮೊಗವೀರ ಧರ್ಮಾರ್ಥ ರಾತ್ರಿ ಶಾಲೆಗಳ ಸಂಯುಕ್ತ ಕೂಡುವಿಕೆಯಿಂದ ವಿವಿಧ ಕಾರ್ಯಕ್ರಮಗಳಿಂದ ಸ್ವಾತಂತ್ರ್ಯ ದಿನಾಚರಣೆ ಜರಗಿತು

ಸೂಡಾ– ಇಲ್ಲಿಯ ಪಂಚಾಯತ ಬೋರ್ಡಿನ ತಾಬೆಯಲ್ಲಿರುವ ಒಂದು ಕಡಪಿನಲ್ಲಿ ಹಳೆ ಮತ್ತು ಹೊಸ ಕಂಟ್ರಾಕ್ಟರರಿಬ್ಬರೂ ದೋಣಿಗಳನ್ನಿಟ್ಟಿರುತ್ತಾರೆಂದೂ ಜನರು ಎರಡು ದೋಣಿಗೆ ಕಾಲಿಟ್ಟು ಗಂಡಾಂತರಕ್ಕೀಡಾಗಿದ್ದಾರೆಂದೂ ಪಂಚಾಯತಬೋರ್ಡಿನವರು ಈ ಕಡೆ ನಿಗಾ ಕೊಡಬೇಕೆಂದೂ ಗ್ರಾಮಸ್ಥರೊಬ್ಬರು ಬರೆಯುತ್ತಾರೆ.

ನಡೂರು– ಸ್ವಾತಂತ್ರ್ಯ ದಿನಾಚರಣೆಯು ತಾ 15ರಂದು ಶ್ರೀ ಬಿ. ಶಿವರಾಮ ಸೆಟ್ಟಿ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ಉಳ್ತೂರು– ಕುಂದಾಪುರ ತಾಲೂಕು ಉಳ್ತೂರು ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ತಾ 15ರಂದು ಸ್ವಾತಂತ್ರ್ಯ ದಿನಾಚರಣೆಯು ಪ್ರಭಾತಫೇರಿ, ಧ್ವಜವಂದನೆ, ಭಾಷಣ ಮೊದಲಾದ ಕಾರ್ಯಕ್ರಮಗಳಿಂದ ನೆರವೇರಿತು.

ಸಾಂತೂರು– ಇಲ್ಲಿಯ ಪಂಚಾಯತ ಬೋರ್ಡಿನ ಭಾರತ ವಾಚನಾಲಯದ ಸಮಿತಿಯ ಆಶ್ರಯದಲ್ಲಿ ಸ್ವಾತಂತ್ರ್ಯ ದಿನಾಚರಣೆಯು ವಿಜೃಂಭಣೆಯಿಂದ ಜರಗಿತು. ಶಾಲಾ ಮಕ್ಕಳಿಗೆ ಸಿಹಿತಿಂಡಿ ಹಂಚಲಾಯಿತು.

ತೋನ್ಸೆ ತಿಮ್ಮಣ್ಣ ಕುದುರು– ಇಲ್ಲಿಯ ‹ದಿ ತೋನ್ಸೆ ರೋಣಿ ಸೊಸೈಟಿ ನೇತೃತ್ವದಲ್ಲಿ ಸ್ವಾತಂತ್ರ್ಯ ದಿನಾಚರಣೆಯು

ತೆಕ್ಕಟ್ಟೆ ಪಂಚಾಯತ ಬೋರ್ಡಿನಲ್ಲಿ

ಸಿವಿಲ್ ವ್ಯಾಜ್ಯ ನಂಬ್ರ 8/52

ವಾದಿ—ಬಡಿಯ ಶೆಟ್ಟಿ, ಉಳ್ತೂರು ಬೈಲು ಮನೆ ಲಿಂಗಮ್ಮ ಶೆಡ್ತಿಯ ಮಗ ಮಳ್ಳಾಡಿ ಗ್ರಾಮ

ಪ್ರತಿವಾದಿಯು— 1 ಮತ್ತು ಹೆಂಗುಸು ಪಡುಮನೆ ಕೇಸಿ ಹೆಂಗ್ಸಿನ ಮಗಳು. 2 ಶಿಟ್ಟಿ, 1ನೇ ಪ್ರತಿವಾದಿಯ ಮಗ, ಕುಂದಾಪುರ ತಾಲೂಕು ಉಳ್ತೂರು ಗ್ರಾಮದಲ್ಲಿರುವವರು

ಸದ್ರೀ ದಾವೆ 1 ಮತ್ತು 2ನೇ ಪ್ರತಿವಾದಿಯವರಿಗೆ

ವಾದಿಯು ಪ್ರತಿವಾದಿಯರು ವಾದಿಗೆ ತಾ. 22-6-49ರಲ್ಲು ರೂ. 45/-ಕ್ಕೆ ಬರೆಸಿಕೊಟ್ಟ ದಿವಾಂಡು ನೋಟಿನ ಬಾಬ್ತು ಅಸಲು ಬಡ್ಡಿ, ಪ್ರತಿವಾದಿಯರಿಗೆ ಬಿಟ್ಟ ರಿ। ನೋಟೀಸಿನ ಖರ್ಚು ವಗೈರೆಗಳನ್ನು ಬರಮಾಡಿಕೊಳ್ಳಲು ದಾವೆಯನ್ನು ಈ ಕೋರ್ಟಿನಲ್ಲಿ ದಾಖಲು ಮಾಡಿರುತ್ತಾನೆ. ಇದಕ್ಕೆ ನಿಮ್ಮ ಉದಾಹರಣೆಯನ್ನು ತಾ 21-9-52ನೇ ದಿವಸ ಅಪರಾಹ್ನ ಘಂಟೆ 2ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಯುಕ್ತ ಕಂಡಂತೆ ನಿಮ್ಮ ಗೈರುಹಾಜರಿನಲ್ಲಿ ತೀರ್ಮಾನಿಸಲಾದೀತು,

ಮಾದಯ್ಯ ಶೆಟ್ಟಿ,
ಅಧ್ಯಕ್ಷ,
ತೆಕ್ಕಟ್ಟೆ ಪಂಚಾಯತ ಬೋರ್ಡ್.

ತೆಕ್ಕಟ್ಟೆ, 24-8-52

ಶ್ರೀ ಟಿ. ಇಬ್ರಾಹಿಮ್ ಹುಸೇನ್‌ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಗೋವಿಂದ ಉಡುಪರು ಧ್ವಜಾರೋಹಣ ಮಾಡಿದರು. ಕೆಮ್ಮಣ್ಣು ಹಾ। ಎ। ಶಾಲೆಯಲ್ಲಿ ಈ ತನಕ ಪಠ್ಯಪುಸ್ತಕಗಳನ್ನು ಪಡಕೊಳ್ಳದಿದ್ದ ವಿದ್ಯಾರ್ಥಿಗಳಿಗೆ ಸೊಸೈಟಿ ಕಡೆಯಿಂದ ಪುಸ್ತಕಗಳನ್ನು ಧರ್ಮಾರ್ಥ ಹಂಚಲಾಯಿತು.

ಪುತ್ತೂರು— ತಾ ೧೫ರಲ್ಲು ಪುತ್ತೂರಲ್ಲಿ ಕರ್ನಾಟಕ ಸಂಘ ಸ್ಥಾಪಿಸುವ ಸಭೆಯು ಶ್ರೀ ಉಗ್ರಾಣ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ ಶಿವರಾಮ ಕಾರಂತರು ಸಂಘದ ಉದ್ದೇಶ ಹಾಗೂ ಚಟುವಟಿಕೆಗಳನ್ನು ಕುರಿತು ಮಾತನಾಡುತ್ತ, ಆಗಾಗ್ಗೆ ಸಾಹಿತ್ಯ ಕೂಟಗಳನ್ನು ಜರುಗಿಸಿ ಜ್ಞಾನಾಭಿವೃದ್ಧಿಗೊಳಿಸುವುದೇ ಇದರ ಉದ್ದೇಶವೆಂದರು. ಸಂಘದ ಅಧಿಕಾರಿ ವರ್ಗಕ್ಕೆ ಶ್ರೀಗಳಾದ ಬಿ. ರಾಮಚಂದ್ರ ರಾವ್, ಅಧ್ಯಕ್ಷ; ಕೆ. ನಾರಾಯಣ ಐತಾಳ, ಮತ್ತು ಟಿ. ನಾಗೇಶ ರಾವ್, ಜತೆಕಾರ್ಯದರ್ಶಿಗಳು; ಡಾ। ಬಿ. ಕೃಷ್ಣ ಭಟ್, ಕೋಶಾಧಿಕಾರಿ; ಬಿ ಎಮ್. ಶರ್ಮಾ ಮತ್ತು ಶ್ರೀಮತಿ ಲೀಲಾ ಕಾರಂತರು, ಆರಿಸಲ್ಪಟ್ಟರು.

ಬೆಳ್ಳಾರೆ— ತಾ. 15ರಂದು ಸ್ಥಳೀಯ ಹೈಸ್ಕೂಲಿನಲ್ಲಿ ಸ್ವಾತಂತ್ರ್ಯ ದಿನೋತ್ಸವವು ಪಟೇಲ್ ಶ್ರೀ ನಾರಾಯಣ ಶೇಕರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಯಥಾಸಾಂಗವಾಗಿ ಜರುಗಿತು.

ಸೋಶಲಿಸ್ಟ್ ಪಾರ್ಟಿ ಪ್ರಚಾರ ಸಭೆಗಳು– ಇದೇ ತಾ 10 ಮತ್ತು 11ರಲ್ಲು ಕಲ್ಯಾಣಪುರ ಮತ್ತು ಬ್ರಹ್ಮಾವರದಲ್ಲಿ ಶ್ರೀಗಳಾದ ನರಸಿಂಹ ಪಿರಲಕಾಪುಜ್ ವಕೀಲ್ ಉಡುಪಿ ಮತ್ತು ಎಚ್. ಟಿ. ಆನಂದ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಅನುಕ್ರಮವಾಗಿ ಜರುಗಿದವು. ತಾ 17ರಲ್ಲು ಕಾರ್ಕಳದಲ್ಲಿ ಜನಾಬ್ ಎಚ್. ಎಸ್. ಹುಸ್ಸೇನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಕುಂದಾಪುರ ಎಡ್ವೊಕೇಟ್ ಶ್ರೀ ವಿ. ಶ್ರೀನಿವಾಸ ಸೆಟ್ಟಿ ಡಾ। ಸಂಜೀವನಾಥ ಮೊದಲಾದವರು ಮಾತನಾಡಿದರು.

ಕುಂಜಿಬೆಟ್ಟು– ದಕ್ಷಿಣಭಾರತ ಹಿಂದೀ ಪ್ರಚಾರ ಸಭಾ ಮದ್ರಾಸು ಇವರಿಂದ ಏರ್ಪಡಿಸಲಾಗುತ್ತಿರುವ ಹಿಂದೀ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಧರ್ಮಾರ್ಥ ತರಬೇತಿಗೊಳಿಸುವ ತರಗತಿಯನ್ನು ತೆರೆಯುವ ಸಮಾರಂಭವು ತಾ 19ರಲ್ಲು ಶ್ರೀ ಕೆ. ವಾದಿರಾಜ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಗಳಾದ ಕೆ. ಯು. ನಾಗಪ್ಪರಾವ್, ಕೆ ಕೃಷ್ಣ ತಂತ್ರಿ, ಜಿ. ರಾವ್, ಹಿಂದೀ ಕಲಿಯುವಿಕೆಯ ಅವಶ್ಯಕತೆಯನ್ನೆತ್ತಿ ಮಾತನಾಡಿದರು.

ಬಂಟ್ವಾಳ– ಸ್ಥಳೀಯ ಎಸ್ ವಿ ಎಸ್. ಹೈಸ್ಕೂಲಲ್ಲಿ ಸ್ವಾತಂತ್ರ್ಯ ದಿನೋತ್ಸವವು ಶ್ರೀ ಬಿ ವೈಕುಂಠ ಬಾಳಿಗ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ಜರಗಿತು. ಶ್ರೀಗಳಾದ ಎಚ್. ರಾಮರಾಯ ಮಲ್ಯ, ಲಕ್ಷ್ಮೀನಾರಾಯಣ ಅಳ್ವ, ಎನ್. ಎಸ್. ಹೊಳ್ಳ ಮೊದಲಾದವರು ಭಾಷಣವಿತ್ತರು. ಈ ಸಮಾರಂಭ ಮುಹೂರ್ತದಲ್ಲಿ ಪಂಚಾಯತಬೋರ್ಡ್ ಆಫೀಸಿನ ವಠಾರದಲ್ಲಿ ತೆಂಗಿನ ಸಸಿಗಳನ್ನು ನೆಡಲಾಯಿತು.

ಕೊಯಮುತ್ತೂರಲ್ಲಿ ಡಾ। ಟಿ ಎಮ್. ಎ. ಪೈಗಳಿಗೆ ಸತ್ಕಾರ

ಉಡುಪಿಯ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಮೆನೇಜಿಂಗ್ ಡೈರೆಕ್ಟರ್ ಡಾ। ಟಿ ಎಮ್. ಎ. ಪೈಗಳಿಗೆ ತಾ 22ರಂದು ಸಂಜೆ, ಬೇಂಕಿನ ಕೊಯಮುತ್ತೂರು ಶಾಖೆಯ ಏಜಂಟರೂ ನೌಕರರೂ ಸತ್ಕಾರಕೂಟವೊಂದನ್ನೇರ್ಪಡಿಸಿದರು. ನೂರಕ್ಕೂ ಮಿಕ್ಕಿ ಆಮಂತ್ರಿತರಿದ್ದರು. ಶ್ರೀ ಟಿ. ಟಿ. ಆರ್. ಪಿಳ್ಳೆ, ಎಡ್ವೊಕೇಟ್, ಅವರು ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಡಾ। ಪೈಗಳಿಗೆ ಮಾನಪತ್ರವೊಂದು ಅರ್ಪಿಸಲಾಯಿತು, ಅದರಲ್ಲಿ ಡಾ। ಪೈಗಳ ಸೇವಾಬುದ್ಧಿ, ದಯೆ ಮೊದಲಾದ ಪ್ರಶಂಸನೀಯ ಗುಣಗಳನ್ನು ಉಲ್ಲೇಖಿಸಲಾಗಿತ್ತು ಡಾ। ಪೈಗಳು ಉತ್ತರವೀಯುತ್ತಾ ಪ್ರತಿಯೊಬ್ಬರೂ ಬೇಂಕುಗಳಲ್ಲಿ ಹಣ ಇಡಬೇಕೆಂದೂ, ಬೇಂಕಿಂಗ್ ಆಕ್ಟಿನ ಮಸೂದೆಯಿಂದ ಭಯಪಡಬೇಕಾಗಿಲ್ಲವೆಂದೂ, ಅನೇಕ ಸಮಸ್ಯೆಗಳನ್ನು ಸರಕಾರಕ್ಕೆ ಬಿಡುವುದಕ್ಕಿಂತ ವ್ಯಕ್ತಿಗಳಿಗೆ ಬಿಟ್ಟರೆ ಅವು ಸಂಪತ್ತಿಯಾಗುವುದೆಂದೂ ಹೇಳಿದರು. ಶ್ರೀ ಜಿ. ವಿ ಮುತ್ತುಸ್ವಾಮಿಯವರು ಎಡಾಷಿಸಿ। ಒಫ್ ಜನರಲ್ ಎಜ್ಯುಕೇಶನ್ ಸಂಸ್ಥೆಗೆ ಒಂದು ಚೆಕ್ ಕೊಟ್ಟರು ಧನ್ಯವಾದಾರ್ಪಣೆಯೊಂದಿಗೆ ಸತ್ಕಾರ ಸಮಾರಂಭ ಕೊನೆಗೊಂಡಿತು.

ಮದ್ರಾಸು– ಕರ್ನಾಟಕ ಸಂಘದ ಆಶ್ರಯದಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶ್ರೀ ಎನ್. ಸಿ. ತಿಮ್ಮ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಪಾರ್ವತಿ ಬಿ. ಸೆಟ್ಟಿ, ಶ್ರೀ ಎಮ್. ಎಸ್. ಭಟ್, ಡಾ। ಎಮ್. ಆರ್. ಪೈಲ್, ಪಿ ಎಸ್ ವೆಂಕಟರಾಯರ ಭಾಷಣ, ಶ್ರೀ ಎಸ್. ಪಿ ಶಂಕರನಾರಾಯಣರಾಯರ ಸ್ವಾತಂತ್ರ್ಯ ಗೀತೆ, ಭಾಪೂಜಿಯವರ ಭಾವಚಿತ್ರ ಅನಾವರಣ ಮುಂತಾದ ಕಾರ್ಯಕ್ರಮಗಳಾದುವು.

ಮದ್ರಾಸು ಸರಕಾರದ ಗ್ರಂಥ ಸ್ಪರ್ಧೆ– 1951-52ರಲ್ಲಿ ಮದ್ರಾಸು ಸರಕಾರವು ನಡೆಸಿದ ಗ್ರಂಥ ಸ್ಪರ್ಧೆಯಲ್ಲಿ ಶ್ರೀ ಕೆ. ಶಿವರಾಮ ಕಾರಂತರ ‹ಕುಡಿಯರ ಕೂಸು› ಕಾದಂಬರಿಗೂ ಶ್ರೀ ಎಮ್. ಶಂಕರನಾರಾಯಣ ಭಟ್ಟರ ‹ಕುಂದ ಮಾಲೆ› ನಾಟಕಕ್ಕೂ, ಶ್ರೀ ಬಳ್ಳಾರಿ ಬೀಟಿಯವರ ‹ತಿಮ್ಮನ ತಲೆ› ವಿಡಂಬನ ಸಾಹಿತ್ಯಕ್ಕೂ ಬಹುಮಾನ ಕೊಡಲು ನಿರ್ಣಯವಾಗಿದೆ ಎಂದು ತಿಳಿದು ಬರುತ್ತದೆ.

THE BOMBAY LIFE ASSURANCE COMPANY, LTD.
ದಿ ಬೋಂಬೆ ಲ್ಯಾಫ್ ಎಶ್ಯೂರೆನ್ಸ್ ಕೋ., ಲಿಮಿಟೆಡ್
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು
ಪ್ರಧಾನ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ
ಇವರ ಶಾಖಾ ಕಚೇರಿಗಳು:
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.
ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿವವರಾದ
ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು
ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

DO YOU KNOW?
THAT
THE VIJAYA BANK, LIMITED.
1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs. 10 lacks.
3. Has granted an average dividend of 6% to the Shareholders for the past 20 years.
4. Has a net work of Branches in South Kanara and one each in Mercara and Fort, Bombay.
5. Offers attractive rates of interest on Deposits and Cash Certificates
6. Grants loans on easy terms to approved parties or on approved securities
7. Does afford full protection and rich return to all your monies
ADOPT IT AS
"MY BANK"
THE VIJAYA BANK LIMITED.
H. O., MANGALORE.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ
1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು
The Moolky Bank Ltd.,
Moolky, S K

ಮುಟ್ಟು ತಪ್ಪಿದರೆ ಚಿಂತೆ ಬೇಡ
'ಸುತರಾಜ್' ಸೇವಿಸಿರಿ. ಋತುಸ್ರಾವ ಪ್ರಾರಂಭವಾಗುವುದು. 4-5 ತಿಂಗಳು ನಿಂತಿದ್ದರೂ ಮುಟ್ಟು ಯಾವ ಅಪಾಯವನ್ನೂ ಕಾಣದೆ 24 ಘಂಟೆಯೊಳಗೆ ಗ್ಯಾರಂಟಿಯಿಂದ ಪ್ರಾರಂಭವಾಗುವುದು. ಬೆಲೆ ರೂ. 7 8 ವಿ. ಪಿ. ಖರ್ಚು ರೂ. 1. ವಿಶೇಷ ರೂ. 24 ವಿ ಪಿ 1/12
BINAPANI AUSHADHALAYA N 1)
15/1 Moore Avenue CALCUTTA, 33
ಸ್ಥಳೀಯ ಏಜಂಟರು:
ವೈದ್ಯ ಸಿ ಆರ್. ಕಾಮತ್,
ಮಂಗಳೂರು.



[೨ನೇ ಪುಟದಿಂದ ಮುಂದುವರಿದುದು]

ಪ್ರಜಾ ಪ್ರಭುತ್ವದ ಯಶಸ್ಸು

ಸಲಕರಣೆಗಳನ್ನೂ ಒದಗಿಸುವ, ವಿವಿಧ ಪುಸ್ತಕಗಳಿಂದಲೂ ಪತ್ರಿಕೆಗಳು ಮತ್ತು ಪ್ರಕಟಣೆಗಳಿಂದಲೂ ಅವನ್ನು ಸುಸಜ್ಜಿತಗೊಳಿಸುವ, ಸಾಮಾನ್ಯ ಜನರ ಜ್ಞಾನ ವರ್ಧನೆಗೆ ನೆರವಾಗುವ ರೀತಿ ಉಪನ್ಯಾಸಗಳನ್ನು ಏರ್ಪಡಿಸುವ ಮುಖ್ಯ ಕೆಲಸ ಇವರದು.

ಪ್ರತಿಯೊಂದೂ ಮುಖ್ಯ ಪುಸ್ತಕ ಭಂಡಾರದಿಂದ ಅನೇಕ ಶಾಖೆಗಳನ್ನು ತೆರೆದು ಸಾರ್ವಜನಿಕರಿಗೆ ಹೆಚ್ಚು ಹೆಚ್ಚು ತ್ವರ್ಯವಾಗಿ ಪುಸ್ತಕಗಳನ್ನೊದಗಿಸುವರು. ಇದಕ್ಕಾಗಿ ಅನೇಕ ಅಧಿಕಾರಿಗಳಿರುವರು. ಸಾರ್ವಜನಿಕ ಶಿಕ್ಷಣ ಇಲಾಖೆಯ ಡೈರೆಕ್ಟರರೇ ಪುಸ್ತಕ ಭಂಡಾರಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವರು.

ಆರ್ಥಿಕ ಅಭಾವ

ಜನರಿಂದ ತೆರಿಗೆ ಎತ್ತುವ ಹಣದಿಂದ ಈ ಪುಸ್ತಕ ಭಂಡಾರಗಳಿಗೆ ನಿಧಿಯನ್ನೊದಗಿಸುವರು. ಹಾಗೆಂದು ಇದು ಸಾಲುವುದಿಲ್ಲ. ಇಷ್ಟೇ ಹಣವನ್ನು ಸರಕಾರವು ನೀಡುವುದಲ್ಲದೆ ವಿಶೇಷ ಸಹಾಯ. ಧನವನ್ನೂ ಕೊಟ್ಟು ಪುಸ್ತಕ ಭಂಡಾರಗಳ ಕೆಲಸ ಸುಗಮವಾಗುವಂತೆ ನೋಡಿಕೊಳ್ಳುವುದು. ಆದರೂ ಆರ್ಥಿಕ ಕೊರತೆಯೊಂದು ಎಲ್ಲಿಲ್ಲದ ಅಡ್ಡ ಬಂದೆಯಾಗಿದೆ. ಪ್ರಯತ್ನವೇನೋ ಉತ್ಸಾಹದಿಂದ ಮುನ್ನಡೆಯುತ್ತಿದೆ. ರಾಜ್ಯದ ಎಲ್ಲ ಭಾಷೆಗಳಲ್ಲಿಯೂ ಪ್ರಕಟವಾದ ಪುಸ್ತಕಗಳ ಪಟ್ಟಿಯನ್ನು ತಯಾರಿಸುವ ಕೆಲಸ ಮುಗಿಯುತ್ತಾ ಬಂದಿದೆ. ಪುಸ್ತಕ ಭಂಡಾರ ಶಾಸ್ತ್ರದಲ್ಲಿ ತಕ್ಕ ಶಿಕ್ಷಣವನ್ನು ನೀಡುವ ಏರ್ಪಾಡೂ ಇದೆ. ಏನೇ ಆದರೂ ಮೊದಲಿನ ತೊಡಕುಗಳನ್ನು ಯಶಸ್ವಿಯಾಗಿ ನಿವಾರಿಸಿದರೆ ಮುಂದೆ ಅತ್ಯಂತ ದೂರದ ಹಳ್ಳಿಗೂ ಪುಸ್ತಕಭಂಡಾರವನ್ನು ವಿಸ್ತರಿಸುವ ಯೋಜನೆ ಕಾರ್ಯರೂಪಕ್ಕಿಳಿಯುವುದು ನಿಶ್ಚಯ.

ಜನತಾ ಸಹಕಾರ

ಇಂಥ ಪ್ರಸಂಗಗಳಲ್ಲಿ ಸಾರ್ವಜನಿಕ ಸಹಾಯವನ್ನು ಯಾಚಿಸುವುದು ಸ್ವಾಭಾವಿಕ. ಒಂದನೆಯದಾಗಿ ಪುಸ್ತಕ ಭಂಡಾರಗಳ ಸರ್ವ ಲಾಭವನ್ನೂ ಮಾಡಿಕೊಳ್ಳಲು ಜನತೆಯೇ ಮುಂಬರಬೇಕು. ಎರಡನೆಯದಾಗಿ ಪುಸ್ತಕ ಭಂಡಾರಗಳನ್ನು ವಿಸ್ತರಿಸಲು ಹಣವನ್ನು ಜನತೆಯೇ ಕೊಡಬೇಕು. ಸರಕಾರವು ಒದಗಿಸಿಕೊಟ್ಟ ಅನುಕೂಲತೆಗಳನ್ನು ಚೆನ್ನಾದ ರೀತಿಯಲ್ಲಿ ಉಪಯೋಗಿಸಿಕೊಂಡು ಪುಸ್ತಕ ಭಂಡಾರಗಳ ಮೂಲೋದ್ದೇಶಕ್ಕೆ ಜಯ ತಂದು ಕೊಡುವುದು ಪ್ರಜೆಗಳ ಕರ್ತವ್ಯ. ಪೌರ್ವಾತ್ಯ ದೇಶಗಳಲ್ಲಿ ಪ್ರಜಾ ಪ್ರಭುತ್ವದ ಯಶಸ್ಸಿನ ಬಗ್ಗೆ ಸಂಶಯ ಪ್ರಕಟಿಸುವವರೇ ಹೆಚ್ಚು. ಹೀಗಿರುವಾಗ ನಮ್ಮ ಜನರು ಪ್ರಜಾ ಪ್ರಭುತ್ವ ಪದ್ಧತಿಯಲ್ಲಿ ಹೆಚ್ಚು ನುರಿತವರಾಗಿ, ಅನುಭವಿಗಳಾಗಿ, ಜಯ ಹೊಂದುವುದು ಸರ್ವ ರೀತಿಯಿಂದಲೂ ಉಚಿತ. ಪ್ರಜಾಪ್ರಭುತ್ವ ಪದ್ಧತಿಯು ಕೊನೆಗೆ ಸರ್ವಾಧಿಕಾರವನ್ನೆ ಕರೆತಂದ ಅಪ್ರಿಯ ಉದಾಹರಣೆಗಳೂ ಆಧುನಿಕ ಇತಿಹಾಸದಲ್ಲಿವೆ. ಆದರೆ ಆ ಬಳಿಕ ಅಲ್ಲಿಯ ಜನ ಅನುಭವಿಸಿದ ಕಷ್ಟನಷ್ಟಗಳನ್ನು ನೆನೆದರೆ--ಮೈ ಜುಮ್ಮೆನ್ನುವುದು. ಇಂಥವರಿಂದ ಪಾಠ ಕಲಿತು, ಮುನ್ನಡೆಯಬೇಕು. ರಾಜ್ಯದ ಕಡೆಗೆ ತನ್ನ ಕರ್ತವ್ಯವೇನೆಂಬುದನ್ನು ತಿಳಿದು ವರ್ತಿಸಬೇಕು. ಇದಕ್ಕೆಲ್ಲ ಪುಸ್ತಕಭಂಡಾರಗಳು ಯೋಗ್ಯ ರೀತಿಯಲ್ಲಿ ನೆರವಾಗುವುವು.

ವಿನಂತಿ

ಉಡುಪಿಯಲ್ಲಿ ಸುಮಾರು 40 ವರ್ಷಗಳಿಂದ ಜವಳಿ ವ್ಯಾಪಾರ ಮಾಡುತ್ತಿದ್ದ ದಿವಂಗತ ಸೇಟ್ ವೇಲ್ಜಿ ಕಲ್ಯಾಣಜಿಯವರ ಪರಿಚಯವಿಲ್ಲದವರು ವಿರಳ. ಸರ್ವರ ಬಾಂಧವ್ಯ ಕಲ್ಪಿಸಿಕೊಂಡಿದ್ದ ಸೇಟರ ಪ್ರಾಮಾಣಿಕತೆ ಮತ್ತು ಔದಾರ್ಯವನ್ನು ಇವರೊಂದಿಗೆ ಸಂಪರ್ಕವಿರುವವರೆಲ್ಲರೂ ಚೆನ್ನಾಗಿ ಬಲ್ಲರು. ಇವರಿಂದ ಬೇಡಿದ ಬಾಯಿ, ನೀಡಿದ ಹಸ್ತ ಬರಿದಾಗಿ ಹಿಂದಿರುಗುತ್ತಿದ್ದಿಲ್ಲ. ಜನೋಪಕಾರೀ ಯಾವುದೇ ಚಟುವಟಿಕೆಗಳಿಗಾಗಿ ಸೇಟರ ಹಾರ್ದಿಕ ಬೆಂಬಲ ಸಿಕ್ಕಿಯೇ ಸಿಗುತ್ತಿತ್ತು. ಆದುದರಿಂದ ಸೇಟರ ನಿಧನ ಸಹಸ್ರಾರು ಜನರಲ್ಲಿ ಶೋಕವನ್ನುಂಟುಮಾಡಿತು. ಜಾತಿ ನೀತಿ, ಹುಟ್ಟು-ಊರು--ಅದು ಯಾವುದಿದ್ದರೂ ಮನುಷ್ಯ ಯೋಗ್ಯನಾಗಿದ್ದು ಜನರ ಪ್ರೀತಿ, ವಿಶ್ವಾಸಗಳಿಸಿದ್ದರೆ, ಅವನು ತನ್ನ ಇಹದ ವ್ಯಾಪಾರ ಮುಗಿಸಿದರೂ ಆತನ ಹೆಸರು ಚಿರಸ್ಥಾಯಿಯಾಗಿ ಜನರ ಹೃದಯದಲ್ಲಿ ಉಳಿಯುವುದು ಎಂಬುದನ್ನು ತೋರಿಸಿದ ಆದರ್ಶ ಮೂರ್ತಿಯೇ ಸೇಟ್ ವೇಲ್ಜಿಯವರು. ಇವರ ಒಂದು ಯೋಗ್ಯ ಸ್ಮಾರಕವನ್ನು ನಿರ್ಮಿಸಲು ಒಂದು ನಿಧಿಯನ್ನು ತಾ. 7-9-1952ರ ಒಳಗೆ ಶೇಖರಿಸಬೇಕಾಗಿ ತಾ. 7-8-1952ರಲ್ಲಿ [illegible] ಜನರ ಸಭೆಯಲ್ಲಿ ನಿರ್ಣಯವಾಗಿ ಅದಕ್ಕಾಗಿ ಒಂದು ಸಮಿತಿಯನ್ನು ನಿಯಮಿಸಿರುವರು. ಆದುದರಿಂದ ಮಹಾಜನರೆಲ್ಲ ಉದಾರಹಸ್ತದಿಂದ 7-9-1952ರ ಒಳಗೆ ತಮ್ಮ ಯಥಾನುಶಕ್ತಿ ಸಹಾಯಧನವನ್ನು ಕಾರ್ಯದರ್ಶಿಯವರಿಗೆ ಕಳುಹಿಸಬೇಕಾಗಿ ವಿನಂತಿ.

ಉಪೇಂದ್ರ ಅನಂತ ಪೈ,
ಅಧ್ಯಕ್ಷ

ಶಿವರಾಯ ರಾಮಕೃಷ್ಣ ಬಾಳಿಗಾ,
ಒಡಗುಪೇಟೆ, ಉಡುಪಿ, ಕಾರ್ಯದರ್ಶಿ.

ಹಳ್ಳಿಯ ಏಳಿಗೆಯೇ ದೇಶದ ಕಲ್ಯಾಣ.

ಲೇಖಕ: ವಿ. ಸೀತಾರಾಮಯ್ಯ, ಕಲ್ಮಡ್ಕ

ನಮ್ಮ ದೇಶದಲ್ಲಿ ಹಳ್ಳಿಗಳೇ ಹೆಚ್ಚಾಗಿವೆ. ಹಳ್ಳಿಯಲ್ಲಿ ವಾಸಿಸುವವರು ವಿಶೇಷವಾಗಿ ಕೃಷಿಕರೇ ಆಗಿರುತ್ತಾರೆ. ಸದಾ ಕಾಲದಲ್ಲಿಯೂ, ತನ್ನ ಪೂರ್ವಿಕರಿಂದ ನಡೆಸಿಕೊಂಡು ಬಂದ ಬೇಸಾಯ ವಗೈರೆ ಕೆಲಸಗಳನ್ನು ನೆರವೇರಿಸುತ್ತಾ ಬರುವುದೇ ಇವರ ನಿತ್ಯ ಜೀವನದ ಕಸುಬಾಗಿದೆ.

ಈಗ ನಮ್ಮ ದೇಶವು ಸ್ವಾತಂತ್ರ್ಯವನ್ನು ಹೊಂದಿದಂದಿನಿಂದ ಸರಕಾರದವರು ಹಳ್ಳಿಯ ಏಳಿಗೆಗಾಗಿ ತುಂಬಾ ಶ್ರಮ ವಹಿಸುತ್ತಾರೆ. ಅಲ್ಲಲ್ಲಿ ಶಾಲೆಗಳು ಮತ್ತು ಹೈಸ್ಕೂಲುಗಳು ತೆರೆಯಲ್ಪಟ್ಟಿವೆ. ವಿದ್ಯೆ ಕಲಿತು ಏನೂ ಪ್ರಯೋಜನವಿಲ್ಲೆಂದು ಹೇಳುತ್ತಿದ್ದ ಜನರೇ ಈಗ ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಒತ್ತಾಯಿಸುತ್ತಿದ್ದಾರೆ. ಪ್ರತಿಯೊಬ್ಬ ಹಳ್ಳಿಗನೂ ಈ ರೀತಿ ಅವರವರ ಮಕ್ಕಳನ್ನು ಶಾಲೆಗೆ ಕಳಿಸಿ, ಪ್ರಾಥಮಿಕ ವಿದ್ಯಾಭ್ಯಾಸವನ್ನು ಮಾಡಿಸಿದ್ದಲ್ಲಿ ಮುಂದಕ್ಕೆ ತುಂಬಾ ಪ್ರಯೋಜನವಾಗಬಹುದು. ಈಗ ನಮ್ಮ ಹಳ್ಳಿಗಳಲ್ಲಿ ಎಷ್ಟೋ ಮಂದಿ ಬರಹವಿಲ್ಲದವರನ್ನು ನಾವು ಕಾಣುತ್ತೇವೆ. ಆದರೆ ತಮಗೆ ಬರಹವಿಲ್ಲವಲ್ಲಾ ನಮ್ಮ ಹಿರಿಯರು ವಿದ್ಯೆ ಕಲಿಸಲಿಲ್ಲವಲ್ಲಾ ಎಂಬುದಾಗಿ ಜನರು ತುಂಬಾ ಬೇಸರಪಟ್ಟುಕೊಳ್ಳುತಿದ್ದಾರೆ.

ಹಳ್ಳಿಯಲ್ಲಿ ಹೆಚ್ಚಾಗಿ ಬಡ ಜನರೇ ಇರುತ್ತಾರೆ. ಊರಲ್ಲಿಯ ಶ್ರೀಮಂತ ವರ್ಗದವರು ಈ ಬಡವರ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಕಳಿಸುವಂತೆ ಒತ್ತಾಯಿಸಬೇಕು. ಮತ್ತು ಸಾಧ್ಯವಾದ ಮಟ್ಟಿಗೆ ಅವರಿಗೆ ಸಹಾಯವನ್ನು ಕೂಡಾ ಕೊಡಬೇಕಾಗಿದೆ. ಈಗ ನಮ್ಮ ಮದ್ರಾಸು ಸರಕಾರದವರು ಆಹಾರ ಧಾನ್ಯಗಳ ನಿಯಂತ್ರಣವನ್ನು ತೆಗೆದುದರಿಂದಾಗಿ ಪ್ರತಿ ಹಳ್ಳಿಗಳಲ್ಲಿಯೂ ಆಹಾರ ಧಾನ್ಯಗಳ ಬೆಲೆಯು ಇಳಿಮುಖವಾಗುತ್ತಿದೆ. ಇದು ನಮ್ಮ ಸರಕಾರವು ಮಾಡಿದ ಉತ್ತಮ ಕೆಲಸಗಳಲ್ಲೊಂದಾಗಿದೆ.

ಮದ್ರಾಸು ಸರಕಾರವು ಹಳ್ಳಿಗಳ ಉದ್ಧಾರಕ್ಕಾಗಿ ಪ್ರಯತ್ನ ಮಾಡುತ್ತಲಿದೆ. ನಾವು ಸರಕಾರವನ್ನು ದೂರಿ ಏನೂ ಪ್ರಯೋಜನವಿರುವುದಿಲ್ಲ. ಪ್ರತಿ ಗ್ರಾಮಗಳ ನಿವಾಸಿಗಳು ದೂರದೃಷ್ಟಿಯಿಟ್ಟು ಯಾವ, ಯಾವ ಕೆಲಸಗಳು ಯಾವರೀತಿಯಲ್ಲಿ ಆಗಬೇಕು ಎಂಬುದನ್ನು ನಿರ್ಧರಿಸಿಕೊಂಡು ಕೆಲಸಮಾಡಿದರೆ ಸರಕಾರ ಕೂಡಾ ಸಹಾಯ ಮಾಡಬಹುದು. ಎಲ್ಲಾ ಕೆಲಸವನ್ನು, ಎಲ್ಲಾ ಜನರ ಬೇಡಿಕೆಯನ್ನು ಒಮ್ಮೆಯೇ ಪೂರೈಸಿಕೊಡುವರೆ ಯಾವ ಸರಕಾರಕ್ಕೂ ಅಸಾಧ್ಯವಾದ ಕೆಲಸವಾಗಿದೆ. ಹೀಗಿರುವಾಗ ಸಣ್ಣ, ಸಣ್ಣ ವಿಷಯಗಳ ಬಗ್ಗೆ ಸರಕಾರದವರನ್ನು ಕೇಳಿ ಪ್ರಯೋಜನವಿಲ್ಲ.

ಪ್ರತಿಯೊಂದು ಹಳ್ಳಿಯ ಆಡಳಿತವನ್ನು ಸಾಧ್ಯವಾದಷ್ಟು ಮಟ್ಟಿಗೆ ಗ್ರಾಮ ಪಂಚಾಯತುಗಳು ನಡೆಸಿ ಕೊಂಡು ಬರುವಂತಾದರೆ, ಹಳ್ಳಿಯ ಸ್ಥಿತಿಯು ಉತ್ತಮಗೊಳ್ಳುವುದರಲ್ಲಿ ಸಂದೇಹವಿಲ್ಲ. ಗ್ರಾಮ ಪಂಚಾಯತದ ಆಡಳಿತದವರು ಏನಾದರು ತಪ್ಪು ಮಾಡಿದಲ್ಲಿ ಅಲ್ಲಿನ ನಿವಾಸಿಗಳು ಅವರಲ್ಲೇ ಹೇಳಿ ಅವರ ತಪ್ಪನ್ನು ತಿದ್ದಿಕೊಳ್ಳಬಹುದು. ಹಳ್ಳಿಯಲ್ಲಿರುವ ಪ್ರತಿಯೊಬ್ಬ ವಿದ್ಯಾವಂತರು ಹಳ್ಳಿಯ ಬಡಜನರಿಗಾಗಿ ದುಡಿದು ಅವರ ಕಷ್ಟಗಳನ್ನು ಆದಷ್ಟು ಮಟ್ಟಿಗೆ ತೊಲಗಿಸುವಂತೆ ಮಾಡಿದ್ದಲ್ಲಿ ಹಳ್ಳಿಗಳ ಉದ್ಧಾರದೊಂದಿಗೆ ನಮ್ಮ ದೇಶವೇ ಕಲ್ಯಾಣವಾಗುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ.

ಮಂಗಳೂರು ಸಬ್ ಜಡ್ಜರ ಕೋರ್ಟಿನಲ್ಲಿ

O. S. ನಂಬ್ರ 82 of 1952.

ಎಸ್. ಸುಬ್ಬಯ್ಯ ಶೆಟ್ಟಿ —ವಾದಿ
ಮತ್ತು
1. ಅಂತಕ್ಕ ರೈತಿ. 2. ಪ್ರತಾಪ ಶೆಟ್ಟಿ. 3. ಬಾಬು ಶೆಟ್ಟಿ. 4. ಬೇಬಿ 5. ಪುಷ್ಪ.
—ಪ್ರತಿವಾದಿಗಳು.

2, 3, 4, 5ನೇ ಪ್ರತಿವಾದಿಗಳು ಮೈನರರು. 1ನೇ ಅಂತಕ್ಕ ರೈತಿಯು ಗಾರ್ಡಿಯನ್ ಆಡ್ ಲೈಟಮ್. ಆಗಿ ಕೂಡಾ

1ನೇ ಪ್ರತಿವಾದಿಯು ಮುಂಡಬೆಟ್ಟು ಗುತ್ತು ಮನ್ಮಕ್ಕ ಹೆಂಗಸಿನ ಮಗಳು, ಮೂಡು ಪೆರಾರ ಗ್ರಾಮದ ಮುಂಡಬೆಟ್ಟು ಗುತ್ತಿನಲ್ಲಿ ವಾಸ್ತವ್ಯ. 2ರಿಂದ 5ನೇ ಪ್ರತಿವಾದಿಗಳು 1ನೇ ಪ್ರತಿವಾದಿಯ ಮಕ್ಕಳು.

ಮೇಲ್ಕಂಡ ಪ್ರತಿವಾದಿಗಳಿಗೆ ಈ ಮೂಲಕ ಕೂಡಾ ತಿಳಿಸುವದೇನೆಂದರೆ ವಾದಿಯು ತನಗೆ 1ನೇ ಪ್ರತಿವಾದಿಯೂ ಮತ್ತು ಸಾಕಿ ಮುತ್ತಯ್ಯ ಶೆಟ್ಟಿಯೂ ಕೂಡಾ ಅಸಲು ರೂಪಾಯಿ 1900/ ಕ್ಕೂ ಬಡ್ಡಿಗೂ ಕೂಡಾ ತಾ. 16-2 1946ರಲ್ಲಿ ಬರಕೊಟ್ಟ ರಿಜಿಸ್ಟ್ರಿ ಆದ ಅಡವು ದಸ್ತಾವೇಜಿನ ಬಾಬ್ತು ಬಾಕಿ ಬರ ರೂಪಾಯಿ 4492-10-0 ಮುಂದಿನ ಬಡ್ಡಿ ಕೋರ್ಟು ಖರ್ಚು ವಗೈರೆ ಐವೇಜುಗಳನ್ನು ವಸೂಲು ಮಾಡುವರೇ ದಾಖಲುಪಡಿಸಿದ [illegible] ವ್ಯಾಜ್ಯವನ್ನು ನಿಮ್ಮ ಹಾಜರಾತಿ ಬಗ್ಗೆ ತಾ. 30-8 1952ಕ್ಕೆ ಮುಂದರಿಸಿಟ್ಟಿರುತ್ತದೆ. ಆ ದಿನ ಹಗಲು ಗಂಟೆ 11ಕ್ಕೆ ಸದರೀ ಕೋರ್ಟಿನಲ್ಲಿ ನೀವು ಖುದ್ದಿನಿಂದಾಗ್ಲೀ ಕ್ರಮವಾಗಿ ಅಧಿಕಾರಹೊಂದಿದ ಪ್ಲೀಡರ್ ಮೂಲಕವಾಗಿಯಾಗ್ಲೀ ಹಾಜರಾಗಿ ಉದಹರಿಸದಿದ್ರೆ ನಿಮ್ಮ ಗೈರುಹಾಜರಿನಲ್ಲಿಯೇ ಸದ್ರಿ ವ್ಯಾಜ್ಯದ ತೀರ್ಮಾನವಾಗುವದೆಂತ ಈ ಮೂಲಕ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

D. Mohan Rao,
ವಾದಿ ಪರ ವಕೀಲರು.
ಮಂಗಳೂರು, 19-8 1952.

All Secondary Schools may Subscribe to "Navayuga" weekly Since it has been approved by the Director of Public Instruc-

“ಗೋಪಾಲ ಭೇಷಜಾಶ್ರಮ” ಮಂಗಳೂರು-
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇದೇ!
ನವಜೀವಾತು
ಎಂಬ
ಪೋಷಿಕಾ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಪ್ರಾತಿನಿಧ್ಯರು:—ಡಾ| ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಡ್ರಿಂಕ್ಸ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ
ಪ್ರೊಪ್ರೈಟರ್:—ಕೆ. ವೆಂಕಟ್ರಮಣಭಟ್ಟ

ದಯಮಾಡಿ ಹೊಗಳಬೇಡಿ

ಲೇ:– ಎ. ರಾಮಣ್ಣ ಶೆಟ್ಟಿ, ಧರ್ಮಸ್ಥಳ, ದ ಕ.

'ಹೊಗಳಿಕೆ' ಅನ್ನೋದು ಒಂದು ಗ್ಯಾಸ್ ಇದ್ದಂತೆ. ಎಂಥ ಅಚೇತನ ವಸ್ತುವಿಗಾದರೂ ಗ್ಯಾಸ್ ತುಂಬಿಸಿದರೆ ಕುಣಿದಾಡುವುದಿಲ್ಲವೇ? ಹಾಗೆಯೇ ಹೊಗಳಲ್ಪಟ್ಟ ಮನುಷ್ಯನ ಪಾಡು. ಅರಸರ ಸಭೆಗಳಲ್ಲಿ ಹೊಗಳುವುದಕ್ಕಾಗಿಯೇ ಮೊದಲು ವಂದಿಮಾಗಧರು ಇದ್ದರು, ಸಭೆಗೆ ಬಂದು ಅರಸನು ಸಿಂಹಾಸನಾರೂಢನಾದ ಕೂಡಲೇ ಮೊದಲು ವಂದಿಮಾಗಧರ ಹೊಗಳಿಕೆಯ ಗ್ಯಾಸಿನಿಂದ ಭರ್ತಿಗೊಳಿಸಲ್ಪಟ್ಟ ಮೇಲೆಯೇ ಮಿಕ್ಕ ಕಾರ್ಯಕ್ರಮಗಳ ಪ್ರಾರಂಭ, ಆ ಮೇಲೆ ಕವಿಗಳು, ಗಾಯಕರು, ನರ್ತಕರು, ಮಾಂಡಲೀಕರು ವಿವಿಧವಾಗಿ ಹೊಗಳುವರು. ಇದು ಹಿಂದಿನ ಕಾಲದ ಪದ್ಧತಿ.

ಆ ಮೇಲೆ ಶಾಸ್ತ್ರಕಾರರು, ಮಹಾ ಕವಿಗಳು, ಕಲಾವಿದರು, ರಾಜನ ಮೆಚ್ಚುಗೆಗಾಗಿ ಶಾಸ್ತ್ರ, ಪುರಾಣ, ಕಥೆ, ನಾಟಕ, ಕಾದಂಬರಿಗಳನ್ನು ಬರೆಯತೊಡಗಿದರು. ರಾಜರ ಪ್ರಾಧಾನ್ಯತೆ ಕಡಿಮೆಯಾಗುವವರೆಗೂ ಈ ಪದ್ಧತಿ ನಡೆಯಿತು. ಬ್ರಿಟಿಷರ ಸಾಮ್ರಾಜ್ಯ ಸ್ಥಾಪನೆಯಾದ ಮೇಲೆ ಅದರ ರೂಪ ಬದಲಾಯಿತು. ಫೋಟೋ ಅನಾವರಣ, ಮಾನಪತ್ರ, ಕಟ್ಟಡದ ಉದ್ಘಾಟನೆ, ಕಟ್ಟಡದ ಶಂಕು ಸ್ಥಾಪನೆ, ಬಿರುದುಗಳ ಸುರಿಮಳೆ, ಚಿನ್ನ ಬೆಳ್ಳಿಯ ಪದಕಗಳು, ಸರ್ಟಿಫಿಕೇಟುಗಳು, ಹೀಗೆ ನಾನಾ ವಿಧವಾಗಿ ಹೊಗಳುವ ಕೆಲಸ ನಡೆಯಿತು. ಒಬ್ಬನ ಸಾರ್ವಜನಿಕ ಸೇವೆ, ಜನಪ್ರೀತಿ, ಸಚ್ಚಾರಿತ್ರ್ಯ, ಆತ್ಮಶಕ್ತಿ, ಬುದ್ಧಿಯ ಮಹತ್ವ, ವಿದ್ಯಾಪರಿಣತಿ, ಕರ್ತವ್ಯ ದಕ್ಷತೆ, ವ್ಯಕ್ತಿತ್ವ ಇವುಗಳನ್ನು ತಿಳಿಯುವುದಕ್ಕೆ ಮೇಲಿನ ವಿಷಯಗಳೇ ಒರೆಗಲ್ಲಾಯಿತು. ಇದರಿಂದ ಸಹಜತೆಯು ಮಾಯವಾಗಿ ಕೃತಕತೆಯು ತಲೆ ಎತ್ತಿತು. ಸತ್ಯದ ಬದಲಾಗಿ ಸುಳ್ಳಿನ ತಾಂಡವವಾಯಿತು. 'ಸೇವೆ' ಅನ್ನುವ ಶಬ್ದಕ್ಕೆ "Shave" ಎಂಬ ಅರ್ಥ ಬಂತು. ಯಾರು ಬಹಳ ಹೆಚ್ಚು ಮಂದಿಯನ್ನು ತನ್ನವರನ್ನಾಗಿ ಮಾಡಿಕೊಂಡು, ತನ್ನ ಸ್ವಾರ್ಥದ ಬೊಕ್ಕಸವನ್ನು ಧಾರಾಳವಾಗಿ ತುಂಬಿಸಿಕೊಳ್ಳಬಲ್ಲನೋ ಅವನೇ ಮಹಾ "ಪುಢಾರಿ" ಎನ್ನಿಸಿದನು. ಹೊಂಗೆ ಮಾತ್ರ ಹೆಚ್ಚು ಬಿರುದು ಮಾನಪತ್ರ, ಸರ್ಟಿಫಿಕೇಟು, ಪದಕಗಳನ್ನು ಪಡೆದರೆ ಸಾಕು. ಇದರಿಂದ ಹೃದಯಕ್ಕೂ, ಮಾತಿಗೂ ಕರ್ತವ್ಯಕ್ಕೂ, ಇರತಕ್ಕ ಮೈತ್ರಿಗೂ ಭಂಗ ಬಂದಿತು.

ಹೆಚ್ಚು ಬಿರುದು, ಬಹುಮಾನ. ಹೊಗಳಿಕೆ, ಗಳಿಸಿದವನು ಬಹಳ ಗೌರವಕ್ಕೆ ಪಾತ್ರನಾಗಿ, ಉಳಿದವರು ಅತನಿಗೆ ತಲೆಬಗ್ಗಿಸಬೇಕಾಯಿತು. ಅಂಥ ಗೌರವಸ್ಥ ಮನುಷ್ಯನು ದಾರಿ ತಪ್ಪಿದರೆ ಅದನ್ನು ಎದುರಿಸಲು ಎಲ್ಲರಿಗೂ ಭಯ. ಎದುರಿಸಿದರೆ ಹಾನಿ, ಸುಮ್ಮನಾದರೆ ಸಮಾಜದ ಪತನ. ಹೀಗೆ ಹೊಗಳಿಕೆ ಎಂಬ ವರಪ್ರಧಾನ ಪಡೆದ ವ್ಯಕ್ತಿಯು ಭಸ್ಮಾಸುರನಾಗಿ ವರ್ತಿಸಿದರೆ ಆಗ ಅವನನ್ನು ಮೇಲಕ್ಕೆತ್ತಿದವರ ಸಮೂಲನಾಶವಾಗುವ ದುರಂತಸಂಧರ್ಭವೂ ಒದಗುವುದು.

ಒಬ್ಬ ಕವಿ, ಒಬ್ಬ ಕಲಾವಿದ, ಒಬ್ಬ ಉದಾರಿ, ಒಬ್ಬ ದೇಶಭಕ್ತ, ಒಬ್ಬ ವಿಜ್ಞಾನಿ, ಒಬ್ಬ ರಾಜಕಾರಣಿ, ಒಬ್ಬ ಮೇಧಾವಿ, ಒಬ್ಬ ಮುಂದಾಳು, ತನ್ನ ಸ್ವಾರ್ಥವನ್ನು ಬದಿಗಿಟ್ಟು ಸಮಾಜದ ಹಿತವನ್ನು ಬಹುವಾಗಿ ಬಯಸಿದರೆ, ಬಯಸಿದಂತೆ ಮಾಡಿದರೆ ಜನತೆ ಅವನ ಸೇವಕರಾಗಿ ವರ್ತಿಸುವುದಕ್ಕಿಂತಲೂ ಹೆಚ್ಚಿನ ಬಿರುದು ಬಾವಲಿ, ಹೊಗಳಿಕೆಗಳ ಸುರಿಮಳೆಯೇಕೆ? ಗಾಂಧೀಜಿ ಅಂಥ ತ್ಯಾಗ, ನಿಸ್ವಾರ್ಥವನ್ನು ತೋರಿಸಿ ಮಹಾತ್ಮರೆನಿಸಿದರು. ಕಡೆಯವರೆಗೂ ಆದರ್ಶಮಾನವನಾಗಿ ನಡೆದುಕೊಂಡರು. ಅಂಥ ಸ್ವಭಾವ ಎಲ್ಲರಲ್ಲೂ ಇರಬಹುದೇ? ಹತ್ತು, ನೂರು, ಸಾವಿರ ಮಂದಿ ಹೊಗಳಿದರೆ ತಾಳತಪ್ಪಿ ಮೇಳವಿಲ್ಲದ ನಾಟ್ಯಮಾಡುವ ಸಂಕುಚಿತ ಹೃದಯವೇ ಬಹಳ ಮಂದಿ ಎಂಬುದನ್ನು ನಾವು ಮರೆಯಬಾರದು, ಹೊಗಳಿಕೆಗೆ ಮೈಮರೆತು ಮಾಡುವ ನಾಟ್ಯ, ಜನತೆಯ ಹೃದಯದ ಮೇಲೆ ಆಘಾತವನ್ನುಂಟುಮಾಡುತ್ತದೆಂಬುದನ್ನು ತಿಳಿಯದಷ್ಟು ಹೊಗಳಿಕೆಯ ಅಮಲೇರುವವರನ್ನು ಸರ್ವಥಾ ಹೊಗಳಬಾರದು.

ನಿಜವಾಗಿ ಯಾರು ಸತ್ಯಸೇವಕನಾಗಿ, ಪ್ರತಿಭಾವಂತನಾಗಿ, ನಿಸ್ವಾರ್ಥನಾಗಿ, ಕಲಾಭಿಜ್ಞನಾಗಿ, ಸಹೃದಯನಾಗಿ ಸಮಾಜದ ಹಿತವನ್ನು ಮಾಡುವನೋ ಅವನಿಗೆ ಯಾರ ಹೊಗಳಿಕೆ, ಬಿರುದು ಬಾವಲಿಗಳ ಹೊರೆಯು ಬೇಡವಾಗಿದೆ. ಅವನು ತನ್ನ ಆತ್ಮದ ಪ್ರೇರೇಪಣೆಯಂತೆ, ಯಾವುದೇ ಪ್ರತಿಫಲವನ್ನು ಬಯಸದೆ, ಸದಾ ಸರ್ವರ ಹಿತವನ್ನೇ ಮಾಡುತ್ತಿರುವನು.

ಒಬ್ಬನು ಜನಪ್ರೀತಿಯ ಯಾವುದೇ ಕಾರ್ಯಕಲಾಪಗಳಲ್ಲಿ ಮುಂದುವರೆಯುವಾಗ ಅವನು ಜನತೆಯಿಂದ ನಿರೀಕ್ಷಿಸುವುದೇನು? ಎಂಬುದನ್ನು ಜನತೆ ಅನಿಮೇಷ ನೇತ್ರದಿಂದ ಪರೀಕ್ಷಿಸುತ್ತಿರಬೇಕು. ತಾನು ಜನತೆಗೆ ನೀಡುವುದಕ್ಕಿಂತ ಹೆಚ್ಚಿನದನ್ನು ಜನತೆಯಿಂದ ಬಯಸುವನೇ? ತನ್ನದಕ್ಕೆ ಸರಿಯಾಗಿ ಜನತೆಯಿಂದ ಬೇಡುವನೇ? ತನ್ನದೆ [illegible] ಜನತೆಯಿಂದ ವಸ್ತು ಸುವರ್ಣದೃಷ್ಟಿಯನ್ನು ನಿರೀಕ್ಷಿಸುವನೇ? ಎಂಬುದನ್ನು ಸಮಾಜದ ಹಿರಿಯರು ಒರೆಹಚ್ಚಿ ನೋಡುತ್ತಿರಬೇಕು. ಅವನ ನಿಸ್ವಾರ್ಥವನ್ನು ತಿಳಿಯುವವರೆಗೂ ಜನತೆ ಅವನೊಡನೆ ಸಮೀಪದ ಸಂಬಂಧವನ್ನು ಬೆಳೆಸಬಾರದು. ನಿಜವಾದ ಅವನ ಕಾರ್ಯಕಲಾಪಗಳ ಉದಯವೇ ಜನತೆಗೆ ಮನದಟ್ಟಾದ ಮೇಲೆ ಧಾನವಾಗಿ ಅವನೊಡನೆ ಜನತೆ ಸಂಬಂಧನ್ನಿಡಬೇಕು.

ಹೊಗಳಿಕೆಯ ದಂಡಿಗೆಯಲ್ಲಿ ಯಾರನ್ನಾದರೂ ಕುಂಡ್ರಿಸಿ, ಹೆಗಲು ಮುರಿಯುವವರೆಗೂ ಹೊತ್ತುಕೊಳ್ಳಿರಿ ಅಡ್ಡಿಯಿಲ್ಲ, ಆದರೆ ದಂಡಿಗೆಯಿಂದಲೇ ಅವನ ಕಾಲು ನಿಮ್ಮ ತಲೆಯನ್ನು ತುಳಿಯುವಾಗ ಅವನನ್ನು ದಂಡಿಗೆಯಿಂದ ಕೆಳಗೆ ಇಳಿಸಿ ಬಿಡುವ ಚೇತನವನ್ನು ಮಾತ್ರ ನೀವು ಇಟ್ಟುಕೊಳ್ಳಿರಿ. ಹೊಗಳಿಕೆಯ ಹಿಮಾಲಯದಷ್ಟು ನೀವು ಶಿವನಾಗಿ ಮಾಡಿ ಪೂಜಿಸಿರಿ, ಅಡ್ಡಿಯಿಲ್ಲ. ಅವನ ಪಡೆಯು ನಿಮ್ಮನ್ನು ಸುಡುವಾಗ, ಪರ್ವತದೊಂಗೆ ಅವನನ್ನೇ ಕೆಳಗಿಳಿಸುವ ವಜ್ರಾಸ್ತ್ರವು ನಿಮ್ಮ ಕೈಯಲ್ಲಿರಲಿ. ನಿಮ್ಮ ದೇಶ ರಕ್ಷಣೆ, ಶಕ್ತಿ, ಸಾಮರ್ಥ್ಯಗಳು ನಿಮ್ಮಲ್ಲಿ ಸಮೃದ್ಧವಾಗಿರುವಷ್ಟು ಕಾಲ ನೀವು ನಿರ್ಭಯವಾಗಿ ಯಾರನ್ನೂ ಎಷ್ಟೂ ಹೊಗಳಬಹುದು. ಹೊಗಳಿಕೆಗೆ ಹಿಗ್ಗಿ ಅವನ ಮೋಹಿನೀ ರೂಪ ಸೋತು, ನಿಮ್ಮ ಸರ್ವಸ್ವವನ್ನೂ ಅವನ ಬರಿ ಕೈಯಲ್ಲಿ ಕಣ್ಣು ಮುಚ್ಚಿಸುವ ಹುಂಬರಾಗಬೇಡಿ. ಮಾನವ ಚಿತ್ತ, ಬುದ್ಧಿ, ಜ್ಞಾನ ಸ್ವಭಾವಗಳೆಲ್ಲಾ ಬದಲಾವಣೆಯ ಪ್ರವಾಹಕ್ಕೆ ಬಲಿಯಾಗತಕ್ಕವು. ಆದ್ದರಿಂದ ದಯಮಾಡಿ ಯಾರನ್ನೂ ಹೊಗಳಬೇಡಿ, ಹೊಗಳಿ ಪರಾಜಿತರಾಗಬೇಡಿ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

ಸ್ಮಾಲ ನಂಬ್ರ 111/1952

ವಾದಿ ಯಾಚ್ ದಾಸಂದಾಳುವ

ಪ್ರತಿವಾದಿ ಮೋರ ಗುರುವರ್, ಮೋರ ಬೋವನ ಮಗ ಪುತ್ತೂರು ತಾಲೋಕು ಪಡುವನ್ನೂರು ಗ್ರಾಮ

ಸದ್ರಿ ಪ್ರತಿವಾದಿಗೆ ಮೇಲಿನ ವ್ಯಾಜ್ಯದಲ್ಲಿ ವಾದಿಯಾಗಿದ್ದ ದಾಸಂದಾಳ್ವರು ತನ್ನ ಕೋರ್ಟು ರಿಸೀವರಿಕೆಯನ್ನು ಬಿಟ್ಟ ಕಾರಣ ಅವರ ರಿಸೀವರಿಕೆಯ ಸ್ಥಾನಕ್ಕೆ ದ. ಕ ಸಬ್ ಕೋರ್ಟು ಕ್ರಮ ನಂಬ್ರ 236/1951ರಲ್ಲಿ ಮಂಗಳೂರು ಶಹರದಲ್ಲಿರುವ ವಕೀಲ ಶ್ರೀ ಯಮ್. ನಾರಾಯಣ ಭಟ್ಟರು ನೇಮಿಸಲ್ಪಟ್ಟಂತೆ, ವಾದಿಯ ಸ್ಥಾನದಲ್ಲಿ ತನಗೆ ಕೊಡಿಸಬೇಕೆಂತ ಸದ್ರಿ ಶ್ರೀ ಯಮ್. ನಾರಾಯಣ ಭಟ್ಟರು S. I. A. ನಂಬ್ರ 147/1952 ನೇದಾಗಿ ಕೊಟ್ಟ ಅರ್ಜಿಯೂ ಮೇಲೆ ಹೇಳಿದ ಸ್ಮಾಲ್ ನಂಬ್ರ 111/1952ನೇ ವ್ಯಾಜ್ಯವೂ ಬರುವ ತಾ 12-9 1952ಕ್ಕೆ ತನ್ನಿಗೆ ಇಟ್ಟಿರುತ್ತದೆ. ಸದ್ರಿ ಅರ್ಜಿಯ ಕುರಿತು ವ ವ್ಯಾಜ್ಯದ ಕುರಿತು ಪ್ರತಿವಾದಿಯ ಆಕ್ಷೇಪಗಳಿದ್ದರೆ ಮೇಲ್ಕಂಡ ವ್ಯಾದೆಯ ದಿವ್ಸ ಹಗಲು ಘಂಟೆ 11ಕ್ಕೆ ಯೀ ಕೋರ್ಟು ಮುಂದೆ ಹಾಜರಾಗಿ ಉಪದರಿಸತಕ್ಕದ್ದು. ತಪ್ಪಿದ್ದಲ್ಲಿ ಸದ್ರಿ ಅರ್ಜಿ ವ ವ್ಯಾಜ್ಯ ಏಕಪಕ್ಷ ನಿಚಾರಣೆಯಿಂದ ತೀರ್ಮಾನಿಸಲ್ಪಡುವುದು ಎಂತ ಯಿದರ ಮೂಲಕ ತಿಳಿಸೋಣಾಗುತ್ತದೆ.

By ordar of Court

H. Sanjiva Shetty.

Advocate for Petr.

ಪುತ್ತೂರು, ತಾ 18-8-1952.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಳುಕ್ಕಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಚಾತುಕೊಳ್ಳುವುದು, ಚೇಳುವಿಷ ಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

SOVEREIGN-REMEDY
AMRUTANJAN
Best Indian Pain Balm
AmrutanjanDepot
BOMBAY MADRAS

EGD
ಹ್ದ
ಮಚ್ಚು
ನಮ್ಮಲ್ಲಿ
ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ

For Protection and Provision

Consult

The New Guardian of India Life Insurance Co., Ltd.

Estd] Head office: **MADRAS** [1934

A Policy in this Progressive Life Office is good investment; its Agency is valuable business connection.

Applications for representation are invited from influential persons.

Please apply to:

The Branch Manager,
Diamond Building, Hampankatta,
MNGALORE, S. K.

Sri B. Manjayya Hegde B. A. B. L.

President, Dist. Board, S K.

ಏಲಂ

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರ ಪ್ರಕಟಣೆ—

[1] 1952—1953ನೇ ವರುಷಕ್ಕೆ ಎಂದ್ರೆ [1—12—1952ರಿಂದ 31—3—53ರ ವರೆಗೆ] ಕುಂದಾಪುರ ತಾಲೂಕಿನ ಕಟಗುಂಟಿ ಕಾರಿಯ **ಗುತ್ತಿಗೆಯ ಮಾರಾಟದ** ಕುರಿತು [1] 1890ನೇ ಇಸವಿ ನಂಬ್ರ IIನೇ ಮದ್ರಾಸು ಪಬ್ಲಿಕ್ ಫೆರೀಸ್ ಎಂಬ ಕಾಯಿದೆಗಳ ವ ಸರಕಾರಿ ದಾರಿಗಳ ಕುರಿತಾದ ಆಕ್ಟು ಮೇರೆಗೆ IIನೇ ಕ್ಲಾಸು ದಾರಿಯಾಗಿ ವಿಂಗಡಿಸಲ್ಪಟ್ಟು ಈ ಬೋರ್ಡಿನ ಆಡಳಿತೆಗೆ ಒಪ್ಪಿಸಲ್ಪಟ್ಟಿರುವ ಕಟಗುಂಟಿ ದಾರಿಯಲ್ಲಿ 1952 ಇಸವಿ ದಶಂಬರ ತಿಂಗಳ ಒಂದನೇ ತಾರೀಕಿನಿಂದ 1953ನೆ ಇಸವಿ ಮಾರ್ಚ್ ತಿಂಗಳ 31ನೇ ತಾರೀಕಿನ ವರೆಗೆ ದರ ವಸೂಲು ಮಾಡುವ ಹಕ್ಕನ್ನು ಸದರಿ ಆಕ್ಟು ಮತ್ತು ಅದಕ್ಕನುಸರಿಸಿ ಮಾಡಲ್ಪಟ್ಟ ನಿಯಮಗಳ ಮೇರೆಗೆ 1951ನೆ ಇಸವಿ ದಶಂಬರ ತಿಂಗಳ ಜಿಲ್ಲಾ ಗಜೇಟಿನಲ್ಲಿ ಪ್ರಕಟಿಸಲ್ಪಟ್ಟ 1952—53ನೆ ವರುಷದ ದಾರಿ ಗುತ್ತಿಗೆಗಳ ಏಲಂ ಇಸ್ತಿಹಾರಿನಲ್ಲಿ ನಮೂದಿಸಿರುವ ಶರ್ತಗಳಿಗೊಳಪಟ್ಟು ಉಡ್ಪಿ ಡ್ಯಾವೇ. ಅಸಿಸ್ಟ್ಯಾಂಟು ಇಂಜಿನಿಯರಿಂದ ಕುಂದಾಪುರ ಸಬ್‌ಡಿವಿಜನ್ ಆಫೀಸಿನಲ್ಲಿ 1952ನೇ ಸಪ್ಟಂಬರ ತಿಂಗಳ 19ನೇ ತಾರೀಕಿಗೆ ಶುಕ್ರವಾರ ದಿನ ಬಹಿರಂಗವಾಗಿ ಹರಾಜು ಮೂಲಕ ಮಾರಾಟ ಮಾಡಲಾದೀತು.

[2] ಮೇಲೆ ಹೇಳಿದ ಪ್ರಕಟಣೆಯೊಂದಿಗೆ ಲಗ್ತು ಇರುವ Iನೇ ಶೆಡ್ಯೂಲಿನಲ್ಲಿ IIನೇ ಕ್ಲಾಸು ದಾರಿಗಳ ಬಗ್ಗೆ ನಮೂದಿಸಿರುವ ಶರ್ತಗಳು ಈ ದಾರಿಗೂ ಲಗ್ತುವಾಗುತ್ತವೆ.

[3] ಮೇಲೆ ಹೇಳಿದ ಪ್ರಕಟಣೆಯ "A" ಫೋರ್ಮಿನಲ್ಲಿ ಕಾಣಿಸಿದ ಮೇರೆಗೆ IIನೇ ಕ್ಲಾಸು ದಾರಿಗಳಲ್ಲಿ ಜಾರಿಯಲ್ಲಿರತಕ್ಕ ವಸೂಲಿನ ದರಗಳು ಈ ದಾರಿಗೂ ಲಗ್ತುವಾಗುತ್ತವೆ.

S K Dt Bd. Office,
Mangalore 19-8-52

M. Sunder Rao.
For President Dt Bd.

[illegible]

ಸಂತ್ರಾಲ್ ಮಾತ್ರೆ

ಇದರ ಉಪಯೋಗದಿಂದ [illegible] ಬಿದ್ದ ನೋವು, [illegible] ಮೂತ್ರ ಉರಿ, ಮೂತ್ರದ ಕಟ್ಟು, ಮೂತ್ರದೊಡನೆ ಕೀವು ಮುಂದಾಗಿ ಬೀಳುವುದು, ಅರಸಿನ ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವದು, ತೊಡೆ ಸಂದಿನಲ್ಲಿ ಗಂಟೆ ಬರುವದು, ಕಾಲುಗಂಟು ವೇದನೆ, ಕಣ್ಣಿನಲ್ಲಿ ಕೀವು ಬರುವದು, ಶರೀರದಲ್ಲಿ ಉಷ್ಣತೆ, ಸ್ವಪ್ನ [illegible] ಸ್ತ್ರೀಯರ ಬಿಳಿ ಸೆರಗು ಇವೆಲ್ಲಾ ಪೂರ್ತಿಯಾಗಿ ಗುಣ ಹೊಂದುವದು. ಈಗಿನ ಉಷ್ಣಕಾಲದಲ್ಲಿ ಗನೋರಿಯಾ ಕಂಡುಬಂದರೆ ರಾತ್ರೆ ಮಲಗುವಾಗ ಒಂದು ಮಾತ್ರೆ ಸೇವಿಸಿ ಹಾಲು ಕುಡಿದರೆ ಸುಖವಾಗಿ ನಿದ್ರೆ ಬಂದು ಸುಖವಿರೇಚನೆಯಾಗಿ ದೇಹದ ಉಷ್ಣ ಹೋಗುವದು.

ಶೀಸೆ 1ಕ್ಕೆ ರೂ 2-0-0

ಏಜಂಟ್:

ಷಾ ಕಂಪೆನಿ, ಮಂಗಳೂರು.


Applauded as the BEST Rubber Stamp Makers all over India
CROWN RUBBER STAMP CO.
Mangalore

ವಾರದ ಭವಿಷ್ಯ

ತಾರೀಕು 28-8-52 ರಿಂದ
ತಾರೀಕು 4-9-52 ವರೆಗೆ

ಮೇಷ— ಈ ವಾರದಲ್ಲಿ ನಿಮ್ಮ ದೈವವು ಅತೀವ ದುರ್ಬಲ ವಿರುವುದು. ಶನಿಯನ್ನು ಬಿಟ್ಟು ಮಿಕ್ಕೆಲ್ಲಾ ಗ್ರಹರೂ ಪ್ರತಿಕೂಲ ಸ್ಥಾನಗತರಾದ ಕಾರಣ ನಿಮ್ಮ ಪ್ರಯತ್ನವು ವಿಫಲವಾಗಲಿದೆ, ನಿಮ್ಮಲ್ಲಿನ ಧೈರ್ಯವು ಅದೆಲ್ಲೋ ಮಾಯವಾಗುವದು. ಗಂಡಹೆಂಡಿರೊಳು ತಂದೆ ಮಕ್ಕಳೊಳು ಕಲಹವುಂಟಾದೀತು. ಶತ್ರುಜನರ ಪೀಡೆಯಿಂದಾಗಿ ಧನಮಾನಗಳಿಗೆ ಧಕ್ಕೆಯಿದೆ, ವಾರಾಂತ್ಯದ ಮೂರು ದಿನಗಳಲ್ಲಿ ಕೊಂಚ ಅನಿಷ್ಟಗಳು ಕಡಿಮೆಯಾದಾವು.

ವೃಷಭ— ಕಳೆದ ವಾರಕ್ಕಿಂತ ಈ ವಾರವು ಆರ್ಥಿಕ ವಿಚಾರದಲ್ಲಿ ಕೊಂಚ ಉತ್ತಮವಿದೆ. ಬಂಧು ಮಿತ್ರರ ನೆರವಿಂದಾಗಿ ನಿಮ್ಮ ಕೆಲವೊಂದು ಕಾರ್ಯಗಳು ಸಫಲಗೊಂಡಾವು. ಗ್ರಹತಾಪತ್ರಯಗಳು ಹೆಚ್ಚಲಿವೆ ದುಡಿಮೆಯ ಬಹ್ವಂಶವು ಸದ್ವ್ಯಯವಾಗುವುದು, ವ್ಯಾಪಾರ ಉದ್ಯೋಗಗಳಲ್ಲಿ ಫಲವು ತೃಪ್ತಿಕರವಿರುವುದು. ಆರೋಗ್ಯದ ಮಟ್ಟಿಗೆ ಈ ವಾರವೂ ಉತ್ತಮ ವಿರದು. ತಾ. 28, 29, 3, ಈ ದಿನಗಳು ಉಳಿದ ದಿನಗಳಿಗಿಂತ ಲೇಸು.

ಮಿಥುನ— “ಉದ್ಯೋಗಿನಂ ಪುರುಷ ಸಿಂಹ ಮುಪೈತಿ ಲಕ್ಷ್ಮೀ” ಎಂಬ ಆರ್ಯೋಕ್ತಿಯಂತೆ ಕೆಲಸಗಾರನನ್ನು ಲಕ್ಷ್ಮಿಯು ಸದಾ ಹೊಂದಿರುವಳು ಈ ಮಾತನ್ನು ನೆನಪಿನಲ್ಲಿಟ್ಟುಕೊಳ್ಳಿರಿ. ನಿಮ್ಮ ಪೌರುಷ ಪ್ರದರ್ಶನಕ್ಕೆ ಇದು ತಕ್ಕ ಸಮಯವು. ಯಾವ ಭಾಗದಲ್ಲೂ ನೀವು ಹೆರವರಿಗೆ ತಲೆ ಬಾಗ ಬೇಕಾಗಿ ಬರಲಾರದು, ಶತ್ರುಜನರು ನಿಮ್ಮ ಶರಣು ಬರಲಿರುವರು. ನಿಮ್ಮ ಸಕಲ ಅಭೀಷ್ಟಗಳು ಅನಾಯಾಸದಿಂದ ನೆರವೇರಲಿದೆ. ವಾರಾದಿಯ ನಾಲ್ಕು ದಿನಗಳು ತುಂಬಾ ಅನುಕೂಲಗಳಾಗಿವೆ.

ಕರ್ಕಟಿ— ಕಳೆದ ದಿನಗಳಿಗಿಂತ ಈ ಸಮಯವು ಉತ್ತಮವಾಗಿರುವದು. ನಿಮ್ಮ ಪರಿಶ್ರಮಕ್ಕೆ ತಕ್ಕಫಲವು ಲಭಿಸಲಿದೆ ಅನುದಿನದ ಖರ್ಚು ವೆಚ್ಚಗಳಿಗೆ ಸಾಕಷ್ಟು ಧನವನ್ನು ಸ್ವಯಂ ದುಡಿಯುವಿರಿ. ಮಿತ್ರವರ್ಗದವರಲ್ಲಿ ಕೆಲವೊಮ್ಮೆ ಮನಸ್ತಾಪ ಹುಟ್ಟೀತು ಸಂಸಾರದಲ್ಲಿ ಅಲಕ್ಷ್ಯವು ತಲೆದೋರುವ ಸಂಭವವಿದೆ ತಾ. 30, 31, 1, 2, ಈ ದಿನಗಳಲ್ಲಿ ಯಾನವಾಹನವಸನಾದಿಗಳ ಲಾಭವಿದೆ.

ಸಿಂಹ— ಪರಿಸ್ಥಿತಿಯು ಕೊಂಚ ಬಿಕ್ಕಟ್ಟಿಗೆ ಬರಲಿದೆ, ಆಯಕ್ಕಿಂತ ದ್ವಿಗುಣವ್ಯಯ ವಾಗುವುದರಿಂದ ಹೆರವರ ಕೂಡೆ ಸಾಲ ಮಾಡುವ ಪ್ರಸಂಗ ಬಂದೀತು. ಜನಾನುರಾಗವನ್ನು ಸಂಪಾದಿಸಿದ ನಿಮಗೆ ಸಮಾಜದಲ್ಲಿ ಗಣ್ಯಸ್ಥಾನ ಲಭಿಸಲಿದೆ. ಕುಜನರ ಸಂಸರ್ಗದಿಂದಾಗಿ ಕಷ್ಟನಷ್ಟಾನಿಷ್ಟಗಳೊದಗುವ ಸಂಭವವಿದೆ, ವಾರಾಂತ್ಯದ 3 ದಿನ ಇಲ್ಲಿ ನಿಮ್ಮ ಕಾರ್ಯವು ಯಶಸ್ವಿಯಾಗಲಿದೆ.

ಕನ್ಯ— ಪ್ರಯತ್ನಕ್ಕೆ ತಕ್ಕ ಫಲ ವಿಲ್ಲವು ಶ್ರಮವಹಿಸಿ ದುಡಿಯುವಿರಿ ಆದರೆ ನಿಮ್ಮ ಪರಿಶ್ರಮವನ್ನು ನೀರಿನಲ್ಲಿ ಹೋಮದಂತೆ ವಿಫಲ ವಾಗುವದು. ಆಕಸ್ಮಿಕವಾಗಿ ಪ್ರಾಪ್ತವಾಗತಕ್ಕ ಪರ್ಯಟನವು ನಷ್ಟಕಷ್ಟಗಳಿಗೆ ಕಾರಣವಾದೀತು. ಆರೋಗ್ಯಕ್ಕೂ ಹೆಚ್ಚಿನ ಧಕ್ಕೆಯಿದೆ. ವಿದ್ಯೋಪಜೀವಿ ನೌಕರಿವರ್ಗಕ್ಕೆ ಈ ಕಾಲವು ಉಚಿತವಲ್ಲ ತಾ. 28, 29, 3, ಈ ದಿನಗಳು ಉಳಿದ ದಿನಗಳಿಗಿಂತ ಲೇಸು.

ತುಲಾ— ನಿಮ್ಮ ಅದೃಷ್ಟವಿಂದ ಉತ್ತಮವಿರುವದು. ನೀವು ನಿರೀಕ್ಷಿಸಿದುದಕ್ಕಿಂತ ಹೆಚ್ಚಿನ ಫಲವನ್ನು ಪಡೆವಿರಿ, ಸಮಾಜದಲ್ಲಿ ಗೌರವಾದರಗಳು ಲಭಿಸುವವು. ನಿಮ್ಮ ವಾಕ್ಚತುರತೆಗೆ ಮೆಚ್ಚಿದ ಜನವು ಸರ್ವತೋಮುಖದಿಂದ ಸಹಕಾರ ನೀಡಲು ಬದ್ಧರಿರುವರು. ಶ್ರಮಜೀವೀ ವರ್ಗಕ್ಕೆ ಸದ್ಯದ ಸಮಯವು ಪ್ರತಿಕೂಲವಿದೆ. ತಾ 30-31 ಈ ದಿನಗಳಲ್ಲಿ ವಿಜಯ ನಾನಾ ವಿಧದಿಂದ ಧನಾಪ್ತಿಗಳೂ ಆಗಲಿವೆ.

ವೃಶ್ಚಿಕ— ಅನೇಕ ಸಮಯಗಳಿಂದ ಕಷ್ಟನಷ್ಟ ದುಃಖಾದಿಗಳಿಂದ ಕಂಗಾಲಾದ ನಿಮಗೆ ಇಂದಿನ ದಿನಗಳು “ದುಃಖಸ್ಯಾನಂತರಂ ಸುಖಂ” ಎಂಬ ನಾಣ್ಣುಡಿಯನ್ನು ನೆನಪಿಗೆ ತರಲಿವೆ. ಬಂಧು ಮಿತ್ರರ ಬೆಂಬಲವು ಉತ್ತಮವಾಗಿರುವದು, ಅನಿರೀಕ್ಷಿತವಾಗಿ ಸ್ತ್ರೀ ಧನ ಲಭಿಸುವ ಯೋಗವಿದೆ. ಆದರೆ ನಿಮ್ಮ ಆರೋಗ್ಯದ ಸಲುವಾಗಿ ಹೆಚ್ಚಿನ ಜಾಗರೂಕತೆಯಿಂದಿರಿ, ತಾ. 28-29-1-2 ಈ ದಿನಗಳು ಸುಖಲಾಭ ದಾಯಿಗಳಿವೆ.

ಧನು— ಒಮ್ಮೆಗೇ ನಿಮ್ಮ ಜೀವನದ ಮೇಲೆ ದೊಡ್ಡ ಆಘಾತವಾದಂತಾದೀತು. ಈ ವರೆಗೆ ನಿಮಗಿದ್ದ ಸುಖ ಸೌಲಭ್ಯಗಳು ಒಂದು ಮಾಯವಾಗುವವು. ಸಿಕ್ಕ ಸಿಕ್ಕವರೊಡನೆ ಕಲಹ, ದೇಹಾಲಸ್ಯ, ಆರ್ಥಿಕ ಬಿಕ್ಕಟ್ಟುಗಳು ಒಂದೇ ಸವನೆ ಪೀಡಿಸಲಿವೆ. ಲೇವಾದೇವಿ ನಿಮಿತ್ತ ಕೋರ್ಟು ಕಛೇರಿಗಳಿಗೆ ಹೋಗುವ ಪ್ರಸಕ್ತಿಯೂ ಬಂದೀತು. ಬೃಹಸ್ಪತಿಯ ಅನುಗ್ರಹದಿಂದ ತಾ 30-31-3 ಈ ದಿನಗಳಲ್ಲಿ ಸ್ವಲ್ಪ ಸುಖ ನೆಮ್ಮದಿ ಪಡೆವಿರಿ.

ಮಕರ— ಈ ವಾರದಲ್ಲಿ ನೀವು ಆದೆಷ್ಟೋ ಸುಧಾರಿಸಲಿರುವಿರಿ. ಆಕಸ್ಮಿಕ ಧನ [illegible]ವ ಯೋಗವಿದೆ, ನಿಮ್ಮ ಉದ್ಯಮಗಳೆಲ್ಲವೂ ಹೆಚ್ಚಿನಂಶ ಸಫಲಗಳಾಗುವವು. ಜನತೆಯಿಂದ ಮಾನ ಮನ್ನಣೆಗಳನ್ನು ಪಡೆವಿರಿ. ಸಾಹಸಿಗಳಿಗೂ ನೌಕರಿ ಜನರಿಗೂ ವ್ಯಾಪಾರೀ ವರ್ಗದವರಿಗೂ ನಿರೀಕ್ಷಿಸಿದ ಫಲವು ಅನಾಯಾಸದಿಂದ ಲಭಿಸೀತು. ತಾ 28-29-1-2 ಈ ದಿನಗಳಲ್ಲಿ ಮಿತ್ರ ಭೆಟ್ಟಿ ಲಾಭ ಸುಖ ಸಂತೋಷಗಳಿವೆ.

ಕುಂಭ— ನೀವು ಶ್ರಮಪಟ್ಟು ದುಡಿಯುವಿರಿ, ಆದರೆ ಫಲ ಮಾತ್ರ ವಿಪರೀತವಾಗಿರುವದು, ಆತ್ಮೀಯರೂ ಕೂಡ ಈ ಕಾಲದಲ್ಲಿ ವಿರೋಧಿಗಳಾಗಿ ಪರಿಣಮಿಸುವರು. ಪರ್ಯಟನಗಳ ದೆಸೆಯಿಂದ ದೇಹಾಲಸ್ಯ ಕಷ್ಟನಷ್ಟಗಳು ಪ್ರಾಪ್ತವಾಗಲಿವೆ. ವಿಜಾತಿಯವರೊಡನೆ ಕಲಹವಾದೀತು, ತಾ 1-2 ಉಳಿದು ಮಿಕ್ಕ ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗಲಾರವು.

ಮೀನ— ಸದ್ಯ ನಿಮ್ಮ ತಾಪತ್ರಯಗಳು ದೂರವಾಗುವವು, ನಿಮ್ಮ ಬಯಕೆಯು ಅನಾಯಾಸದಿಂದ ಫಲಿಸಲಿದೆ, ಉದ್ಯೋಗದಲ್ಲಿ ಪ್ರಗತಿ ಆರ್ಥಿಕ ಅಭಿವೃದ್ಧಿ ಆರೋಗ್ಯಾದಿಗಳೂ ಲಭಿಸುವವು, ಸ್ತ್ರೀ ಜನತೆಯೊಡನೆ ವಿರೋಧ ಹುಟ್ಟೀತು. ಕೆಲವೊಮ್ಮೆ ಶತ್ರುಗಳ ಮಾಯಾ ಜಾಲಕ್ಕೆ ಸಿಲುಕಲಿರುವಿರಿ. ತಾ 30 31-1-2 ಈ ದಿನಗಳು ಅಭೀಷ್ಟ ಪ್ರದಗಳಿವೆ.

ಸ್ತ್ರೀ ಪುರುಷ ಶಿಶುಗಳು ರೋಗದಿಂದ ನರಳಬೇಕಾಗಿಲ್ಲ!
ಲಕ್ಷಾಂತರ ಜನರು ಗುಣಹೊಂದಿದ್ದಾರೆ!

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯದ ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮುಟ್ಟು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೪ ದಿನದ ಲೇಹ್ಯ ರೂ ೫/೪, ೨೨ ದಿನದ ಲೇಹ್ಯ ರೂ ೩/೪
(ಪೋಸ್ಟೇಜು ಮಾಫ್)

ನೀಲಗಿರಿ ಡಿಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಅಂತರಂಗದ ಪ್ರಕಟಣೆಗಳು:

ವಿರುದಾವಳಿ	0	3	0
ಆ ಸುದ್ದಿ	0	4	0
ಹೈದರಾಬಾದ್ ವಿಜಯ	0	4	0
ಸೆರೆಯಾಳು	0	7	0
ಗಾದೆಯ ಗಾಂಧಿ	0	3	0
ಶಾಂತಿಯ ಮಡಲಿನಲ್ಲಿ	0	3	0
ಬಲಿಪೀಠದಲ್ಲಿ	0	5	0
ಅಗಲಿದ ಅಕ್ಕ ಸರೋಜಿನಿ	0	3	0
ನನ್ನ ಹೆಂಡತಿ	0	3	0
ಪುಣ್ಯಫಲ	0	4	0
ಸುಖದದಾರಿ	0	3	0
ಸುಕಾಂತ	0	3	0
ಪಂಚಮುಖಿ	0	5	0
ಜಾತೀಭೂತಕ್ಕೆ ಬಲಿ	0	3	0
ಜನಸೇವೆಯ ಸೋಗಿನಲ್ಲಿ	0	3	0
ನಾ ಕಂಡ ಅವಳು	0	3	0
ತ್ರಿವೇಣಿ	0	3	0
ನಿಲುವಂಗಿ	0	4	0
ಬಾಡಿಗೆಯ ಮನೆ	0	3	0
ವರ್ತಮಾನಕಾಲದ ನಾಲ್ವರು			
ಮಹಾನುಭಾವರು	0	4	0
ದೇವರ ನಾಮ ಮತ್ತು ಸಾಧನೆ	0	3	0
ಎರಡು ಕತೆಗಳು	0	4	0
ಸರಸ-ವಿರಸ	0	3	0
ಹೃದಯೇಶ್ವರಿ	0	4	0
ವಿವಿಧ ವಿಷಯ ಕೋಶ ಭಾಗ ೧,೨	0	6	0
ಸ್ವಾತಿಮುತ್ತುಗಳು ೧, ೨, ೩	0	12	0
ಕುಲವಿಲ್ಲದ ಹೆಣ್ಣು	2	0	0
ತವರು ಮನೆಯಿಂದ	0	4	0
ಭಾಗ್ಯಲಕ್ಷ್ಮಿ	1	4	0
ಯುಗವಾಣಿ	0	8	0
ಸ್ತ್ರೀ ಹೃದಯ	0	4	0
ದ್ವೇಷ	0	3	0
ಮೂರು ಏಕಾಂಕ ನಾಟಕಗಳು	0	4	0
ಪ್ರಜಾಪ್ರಭುತ್ವ ಕುರಿತು	0	8	0
ಕಲಾವಿದನ ದಿನಚರಿ	0	3	0
ಆಧುನಿಕ ಭಾರತ	0	4	0
ಕಾಲವೇ ಬದಲಾಗಿದೆ	0	4	0
ಭಾರತದ ಸಾಹಿತ್ಯ ಕಲೆಗಳು	0	4	0
ಸ್ತ್ರೀಸ್ವಾತಂತ್ರ್ಯ ಬೇಕೆ?	0	4	0
ಹಂಬಲ	0	4	0
ಭಾರತಚಿತ್ರದ ಅಂಚೆಟಿಕೇಟುಗಳು	0	3	0
ತ್ರಿಶೂಲ	0	5	0
ಪುಸ್ತಕಪುರಾಣ	0	4	0
ಹಳ್ಳಿಯಲ್ಲಿ ನಡೆದ ನಾಟಕ	0	3	0
ನೆರೆಯ ಗಾಂಧಾರ	0	3	0
ಮಾತಿನಯುಗದ ಮಹಾಪ್ರಭಾವ	0	3	0
ವಿಜ್ಞಾನದ ಬೆಳವಣಿಗೆ	0	4	0
ಡಾ। ಹರ್ಡೀಕರ್	0	5	0
ತೆಂಗಿನ ತವರು	0	6	0
ಪ್ರಾಯಶ್ಚಿತ್ತ	0	3	0
ಪ್ರಭಾ	0	3	0
ಶವಗಳ ಸಾಗಾಟ	0	12	0
ಸ್ವಪ್ನಲೋಕ	0	6	0
ಮನೆಹೊರಗಿನಮಹಾಜೀವಿಗಳು	0	5	0
ಘಂಟಿಮಾರಾ ೪ಭಾಗಗಳು	2	0	0
ಮಾಪಾರ್ಟಿ	0	5	0
ಭಾರತದ ರಾಷ್ಟ್ರಗೀತ	0	3	0
ನಮ್ಮ ಬಹು ದೊಡ್ಡ ನಷ್ಟ	0	4	0
ಕೈಲಾಸ	0	3	0
ಜ್ಯೋತಿ	0	4	0
ಕತ್ತು ಕೊಯ್ದವರಾರು?	0	6	0
ಸಮಾಜದ ಅಗ್ನಿಕುಂಡ	0	4	0
ಬೆಳ್ಳಿಹಬ್ಬ	0	4	0
ಉಷಾ	0	4	0
ವಿಧಿಲೀಲೆ	0	4	0
ಪರಮಾಣು ಪ್ರಪಂಚ	0	4	0
ನೀತಿ ವಿನೋದ ಕತೆಗಳು	0	12	0
ಸಾಹಸ ಭೀಮ ವಿಜಯ	0	8	0
ಭಾರತದ ಗುರುಕುಲ	0	6	0
ಲತ್ತಪಗಡೆ	0	6	0
ಸೇವಾಪಥ	0	8	0
ಭರತೇಶ ದಿಗ್ವಿಜಯ	0	8	0
ಮನೋಪದೇಶ	0	8	0
ಜೀವನ ಕಲೆ	0	10	0
ಪ್ರತಿಜ್ಞಾ ಪೂರ್ತಿ	0	12	0
ಮಿಶ್ರ ಸಂತತಿ	0	6	0
ಗುಪ್ತರೋಗ ನಿವಾರಣೆ	0	8	0
ಸೌಂದರ್ಯ	0	5	0
ಸುಧಾ	0	8	0
ವಸಂತಕಾಲ	0	6	0
ನವೀನ ನಾಟಕಗಳು	0	7	0
ಪರ್ಲ್ ಎಸ್, ಬಕ್	0	7	0

ಕಿರಿಯರಪ್ರಪಂಚದ ಪ್ರಕಟಣೆಗಳು.

ಸ್ವತಂತ್ರ ಜೀವನೋಪಾಯ	0	3	0
ಸಂತೆಯ ಪಿಶಾಚಿ	0	10	0
ನಾಡಕತೆಗಳು	0	4	0
ಕುಶಲವ	0	8	0

ಕಾವ್ಯಸಾಮ್ರಾಜ್ಯ	1	8	0
ಮಧುವನ	3	0	0
ಮುಂದಿನ ದೇವರು	0	4	0
ವ್ಯಭಿಚಾರಿಣಿ ಯಾರು	1	4	0
ಹೆಂಡ್ತಿ ಗಂಡನಾದರೆ	0	4	0
ಪುರುಷ ವಧು	0	4	0
ಸನ್ಯಾಸಿಯ ಸೋಗಿನಲ್ಲಿ	0	12	0
ನಂದಾದೀಪ	1	0	0
ದೇಶಭಕ್ತ	1	8	0
ಪ್ರೇಮವಿಜಯ	1	0	0
ರಂಗಭೂಮಿ	0	10	0
ಸೇವಾಪಥ	0	8	0
ನಾರೀ ಹೃದಯ	1	8	0
ಭಾರತೀಯ ಕಥೆಗಳು	1	12	0
ಪ್ರಕಾಶ	2	8	0
ಮೂರು ಪ್ರಹಸನಗಳು	1	0	0
ಅನ್ನದೇವರು ಮತ್ತಿತರ ಕತೆಗಳು	1	0	0
ಭಾರತದಲ್ಲಿ ಜಾತಿಭೇದ	1	0	[illegible]
ವಿಷ್ಣುವಿನ ದಶಾವತಾರಗಳು	0	[illegible]	[illegible]
ಆಕಾಶ ಗಂಗೆ	2	4	0
ಸ್ವಾತಂತ್ರ್ಯವೀರ ಸಾವರಕರರು	[illegible]	4	
ಜೀವನ ಸಂಗ್ರಾಮ	1	8	0
ಕದಂಬ	1	4	0
ಕವಿತಾಕಾಮಿನಿ	2	0	0
ಸ್ವರಾಜ್ಯ ವಿಜಯ	0	8	0
ಸಪ್ತಸಾಗರ	0	12	0
ಜಮೀನ್ದಾರ	1	12	0

ಇತರ ಪುಸ್ತಕಗಳು

ಮನೆಮದ್ದು	2	8	0
ನೆನಪಿಗಾಗಿ	2	0	0
ಗೀತೆಯ ಕೈಗನ್ನಡಿ	0	12	0
ಸುಲಭದಲ್ಲಿ ಇಂಗ್ಲಿಷ್	2	0	0
ಸರಸ್ವತಿ	0	12	0
ಪ್ರತೀಕಾರ	0	8	0
ಪ್ರೇಮ ಪ್ರವಾಹ	0	8	0
ಮುಗುಳು	0	5	6
ವತ್ಸಲಾ	0	8	0
ಶಂಬುಕ ವಧೆ	0	2	0
ವೈಯಕ್ತಿಕ ಆರೋಗ್ಯ	0	2	0
ಜಂಬುಕವಧೆ	0	2	0
ಆದರ್ಶ ಆರೋಗ್ಯಮಾತೆ	0	2	0
ಚಿಗುರು	0	8	0
ಲೋಪಾಮುದ್ರೆ	0	8	0
ವ್ಯವಹಾರಜ್ಞಾನದರ್ಪಣ	1	8	0

ಕೆಟಲಾಗಿಗೆ ಬರೆಯಿರಿ
ನವಭಾರತ ಬುಕ್ ಡಿಪೊ, ಉಡುಪಿ.

Edited, Printed & Published By K. H. Shetty at the Navayuga Press, Udipi, S. India.

1952-53

1952-53

ನವ ಯುಗ

		page no.
1)	4- 9- 1952-	12
2)	11- 9- 1952-	12
3)	18- 9- 1952-	12
4)	25- 9- 1952-	12
5)	2- 10- 1952-	12
6)	9- 10- 1952-	12
7)	16- 10- 1952-	12
8)	23- 10- 1952	12
9)	30- 10- 1952	12
10)	6- 11- 1952	12
11)	13- 11- 1952-	12
12)	20- 11- 1952-	12
13)	27- 11- 1952-	12
14)	4- 12 1952-	12
15)	18- 12- 1952-	13
16)	25- 12- 1952-	12
17)	1- 1- 1953-	12
18)	8- 1- 1953-	12
19)	15- 1- 1953-	10
		227

4-9-1952

Estd. 1921 ಸ್ಥಾಪನೆ.
32ನೆಯ ವರ್ಷ

Founder Sri A. B. Shetty,
Minister for Medical & Public Health

ನವಯುಗ
ಆರೋಗ್ಯ ಮಂತ್ರಿ
ಶ್ರೀ. ಎ. ಬಿ. ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ

ವಾ॥ ಚಂದಾ 5-12-0
6 ತಿಂಗಳಿಗೆ 3-0-0
ಬಿಡಿ ಪ್ರತಿಗೆ 0-2-0

ನವಯುಗ

ಅಂತರಂಗ
ಪುಸ್ತಕ ಪತ್ರಿಕೆಯ
ಉಪಯುಕ್ತವಾದ
86 ಪುಸ್ತಕಗಳು
ರೂ. 24ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ
ಮೆನೇಜರ್,
ಅಂತರಂಗ, ಉಡುಪಿ.

Vol 32
No. 1

NAVAYUGA WEEKLY POST BOX NO. 22 UDIPI

ವರ್ಷ ೩೨
ವಾರ ೧

ಮಧುಕರ

ಏಳನೇ ಎಡ್ವರ್ಡ್ ದೊರೆಗೆ ಐದನೇ ಜಾರ್ಜ್ ಇಸ್ಕೂಲಿನಲ್ಲಿ ಕಲಿಯುವ ಹುಡುಗನಾಗಿದ್ದಾಗ – ಒಂದು ಪತ್ರ ಬರೆದ "ನನಗೆ ಈ ತಿಂಗಳು ಖರ್ಚಿಗೆ ಸ್ವಲ್ಪ ಹಣ ಬೇಕು. ಕೂಡಲೇ ಕಳುಹಿಸುವಿರಾಗಿ ನಂಬಿದ್ದೇನೆ" ಎಂದು ಅದರಲ್ಲಿತ್ತು.

ಮಗನು ಮಿತಿಮೀರಿ ವೆಚ್ಚಮಾಡುವನೆಂದು ಏಳನೇ ಎಡ್ವರ್ಡ್ ದೊರೆ ಭಾವಿಸಿದ. ಎರಡು ಹಿತನುಡಿಗಳನ್ನು ಬರೆದು ಕಳುಹಿಸುವುದು ಉಚಿತವೆಂದು ತೋರಿತು. "ಮಗನೇ ನಿನ್ನ ಖರ್ಚುವೆಚ್ಚಗಳನ್ನು ನೀನು ಕಡಿಮೆ ಮಾಡಲೇಬೇಕು. ಈ ತಿಂಗಳು ನನಗೊಂದು ಪೆನ್ನಿಯೂ ಸಿಗಲಾರದು ಎಂದಾದರೂ [illegible]" ಎಂದು ಮಾರ್ಮಿಕವಾಗಿ ಅವನು ನಿಷ್ಠುರನಾಗಿ ಬರೆದ.

ಮರುಟಪಾಲಿಗೆ ಮಗನಿಂದ ಉತ್ತರ ಬಂತು. "ನಿಮ್ಮ ಆಜ್ಞೆಯಂತೆ ಇದುವರೆಗೆಯೇ ನನ್ನಲ್ಲಿ ಖರ್ಚುವೆಚ್ಚ ನೋಡಿಕೊಳ್ಳಲು ನಿಶ್ಚಯಿಸಿದ್ದೇನೆ. ಪ್ರತ್ಯಕ್ಷ ನೀವು ನನಗೆ ಬರೆದ ಕಾರ್ಡನ್ನು ಏಲಂ ಹಾಕಿ ೨ ಪೌಂಡು ಗಳಿಸಿದ್ದೇನೆ ಈ ತಿಂಗಳು ತೊಂದರೆಯಿಲ್ಲ"

ಲಘು ಮನಸ್ಸು

ಮನಸ್ಸು ಹಗುರವಾಗಿರಬೇಕಾದುದು ಸ್ವಾಸ್ಥ್ಯದ ದೃಷ್ಟಿಯಿಂದ ಅತ್ಯಂತ ಅಗತ್ಯವೆಂದು ಎಲ್ಲರೂ ಒಪ್ಪುವರು. ನಮ್ಮ ಎಲ್ಲ ಕೆಲಸ ಕಾರ್ಯಗಳಲ್ಲಿಯೂ ಉತ್ಸಾಹ ತುಂಬಿ ತುಳುಕುತಿದ್ದರೆ-ಅದೆಷ್ಟೇ ಭಾರದ ಕಾರ್ಯವಿದ್ದರೂ ಬಹಳ ಹಗುರೆನಿಸುವುದು. ಅನುಭವ ಜನ್ಯ ಸಂಗತಿ. ನಾವು ಪ್ರವೃತ್ತರಾಗುವ ಕೆಲಸಗಳನ್ನು ಸಾಮಾನ್ಯವಾಗಿ ಮಾನಸಿಕ ಶ್ರಮ ಹಾಗೂ ದೈಹಿಕ ಶ್ರಮ ಎಂದು ವಿಭಾಗಿಸಬಹುದು: ಇವೆರಡರ ಪ್ರಮಾಣವು ಒಂದಕ್ಕೊಂದು ಪೂರಕವಾಗಿದ್ದರೇನೇ ಒಬ್ಬ ವ್ಯಕ್ತಿಯ ಸ್ವಾಸ್ಥ್ಯ ಚೆನ್ನಾದ ಸ್ಥಿತಿಯಲ್ಲಿ ಬಹುದು. ಮನುಷ್ಯನ ಸ್ನಾಯು ಖಂಡ ಳನ್ನು ಚೆನ್ನಾಗಿ ಬಲಿತು ಪುಷ್ಟವಾಗುವುದರ ಜೊತೆಗೆ, ನಮ್ಮ ಭಾವನಾತ್ಮಕವಾ ಇಚ್ಛೆಗಳು ಪೂರ್ಣಗೊಳ್ಳುವುದೂ ಅವಶ್ಯವಿದೆ. ಶ್ರಮವನ್ನು ಮನೋರಂಜನೆಯ ಸ್ಫೂರ್ತಿಯಲ್ಲಿ ತೆಗೆದುಕೊಳ್ಳುವುದು ಒಂದೇ ಬಾಣದಿಂದ ಎರಡು ಹಕ್ಕಿಗಳನ್ನು ಟ್ಟಿಸುವ ಯೋಗ್ಯ ಹೆಜ್ಜೆ.

ನಮ್ಮಲ್ಲಿ ಎಷ್ಟೋ ಮಂದಿ ಕೆಲಸ ಮಾಡುವುದೆಂದರೆ ತಪ್ಪದ ಒಲ್ಲದ ಭಾರವೆಂದೂ ಕ್ಲೇಶದಾಯಕವಾದ ಸಂಗತಿಯೆಂದೂ [illegible] ರುವುದು ದೌರ್ಭಾಗ್ಯದ ವಿಷಯ. ನಮಗೆ ಊಟ [illegible] ಉಳಿಯಲಿಕ್ಕೆ ಇರಲಿಕ್ಕೆ ತಕ್ಕುದಾದ ಸೌಕರ್ಯಕ್ಕೆ ಬೇರೇನೂ ಉಪಾಯ ಕಾಣದೆ ಅಸಹಾಯತೆಯಿಂದ ಕೆಲಸವನ್ನು ಕೈಗೊಳ್ಳುವ ಜನರೇ ಹೆಚ್ಚು. ಆದರೆ ಶ್ರಮಪೂರ್ವಕ ದುಡಿಯುವುದರಿಂದ ಎಷ್ಟರ ಮಟ್ಟಿನ ಆನಂದ ದೊರೆಯಬಲ್ಲುದೆಂಬುದನ್ನು ನಿರುದ್ಯೋಗಿಗಳಾಗಿ ನಾವು ಕಳೆಯಬೇಕಾಗಿ ಬಂದ ಸಂದರ್ಭ ತಾನಾಗಿ ತೋರಿಸಿ ಕೊಡುವುದು. ಆಲಸ್ಯವೆಂಬುದು ಮಹಾ ಜಾಡ್ಯ—ಮಿತ್ರದಕ್ಕೆ ಪರಿಶ್ರಮವೆಂಬುದೇ ಮದ್ದು. ಹಾಗೆಂದು ಕೆಲಸದಿಂದ ಆನಂದವನ್ನೂ ಶಕ್ತಿಯನ್ನೂ ಪಡೆಯುವವರು ಕೆಲವೇ ಮಂದಿ ಎಂಬುದೂ ನಿಜ. ದಿನಾಲು ಒಂದೇ ತೆರನಾದ ಯಾಂತ್ರಿಕ ರೀತಿಯ ಕೆಲಸದಲ್ಲಿ ತೊಡಗುವವರು ಹೀಗೆ ಬೇಸರಗೊಳ್ಳುತ್ತಾರೆ. ಕೆಲಸವು ಭಾರರೂಪದಲ್ಲಿ ಪರಿವರ್ತನೆಗೊಂಡಾಗ ಸ್ವಭಾವತಃ ಅದರ ಪ್ರಮಾಣ ಕಡಿಮೆಯಾಗುವುದು. ಪರಿಣಾಮವಾಗಿ ಉತ್ಪಾದನೆ ತಗ್ಗುವುದು.

ಆದರೆ ಶ್ರಮ ಪಡುವುದರಲ್ಲಿಯೂ ಆಗಲೀ—ಇನ್ನಿತರ ಯಾವುದೇ ಸಂಗತಿಯಲ್ಲಾಗಲೀ ಒಂದು ವಿಷಯ ಮರೆಯಕೂಡದು—ಯಾವುದಾದರೊಂದು ಸಂಗತಿ ಪ್ರಿಯ ಅಥವಾ ಅಪ್ರಿಯವೆಂದು ತೋರುವುದು ನಮ್ಮ ದೃಷ್ಟಿಕೋನವನ್ನು ಅವಲಂಬಿಸಿಯದೆ ತಲೆಬೇಸರ ಹಿಡಿಸುವ ಕೆಲಸವಾದರೂ ಉತ್ಸಾಹ ಹಾಗೂ ಬುದ್ಧಿಪೂರ್ವಕ ಮಾಡಿದರೆ - ಅದು ರಂಜನಾಪೂರ್ಣವೆನಿಸುವುದು ನಿಶ್ಚಯ. ನಮ್ಮ ದೃಷ್ಟಿಕೋನ ಕೆಲಸದಲ್ಲಿ ಆನಂದವನ್ನು ಕಂಡುಕೊಳ್ಳುವಂತಿರುವುದು ಬಹಳ ಒಳ್ಳೆಯದು. ಹೊಟ್ಟೆಗಾಗಿ ದುಡಿಯಲೇಬೇಕೆಂದಿರುವಾಗ ಸಾವಿರ ತಪಿಸಿ, ಕೆಲಸಕ್ಕಿಳಿಯುವುದಕ್ಕಿಂತ ನಗುಮುಖ ತೋರಿ ಅದನ್ನು ನಿರ್ವಹಿಸುವುದು ಚೆನ್ನಲ್ಲವೇ? ತುಚ್ಛ ಮತ್ತು ಅಸಹ್ಯಕರವೆಂದು ತೋರಬಹುದಾದ ಕೆಲಸಗಳನ್ನು, ನಮ್ಮ ದೃಷ್ಟಿಕೋನವನ್ನು ಕೆಲಮಟ್ಟಿಗೆ ವಿಸ್ತೃತಗೊಳಿಸುವುದರ ಮೂಲಕ ಹಾಗು ಕೆಲಸವನ್ನು ನಮ್ಮ ಅನೇಕ ಕ್ರಿಯೆಗಳ ಅವಿಭಾಜ್ಯ ಅಂಗವೆಂದು ತಿಳಿದುಕೊಳ್ಳುವುದರಿಂದ ಆನಂದದಾಯಕವಾಗಿ ನೆರವೇರಿಸಬಹುದು. ಒಂದು ದೊಡ್ಡ ಯಂತ್ರದಲ್ಲಿ ಒಂದು ಕೀಲು ಮುರಿದರೂ ಸಾಕು—ಯಂತ್ರ ಕೆಡುವುದಿಲ್ಲವೆ? ಅದರಂತೆಯೇ ನಮ್ಮ ಕೆಲಸಗಳಲ್ಲಿ ಸ್ವಲ್ಪ ಮಟ್ಟಿನ ಲೋಪವುಂಟಾದರೂ—ಅದರ ಪರಿಣಾಮ ಕೆಡುಕಾಗುವುದು. ಆದುದರಿಂದ ಮನುಷ್ಯನಿಗೆ ತನ್ನ ಕೆಲಸದಲ್ಲಿ ಬೇಸರ ತೋರಿದಾಗ—ಕೆಲಸವನ್ನು ಅವನು ಭಾವನಾತ್ಮಕ ದೃಷ್ಟಿಯಿಂದ ನೋಡಲಿ: "ನಾನು ಇಲ್ಲಿ ಇಲ್ಲದಿದ್ದರೆ ಈ ಕೆಲಸ ಪೂರ್ಣ ನಿಂತೇ ಹೋಗುವುದಿಲ್ಲವೆ?" ಎಂದವನು ದೃಷ್ಟಿಕೋನ ಬದಲಿಸಿ ಯೋಚಿಸಿದ್ದೇ ಆದರೆ, ತನ್ನ ಕೆಲಸ ಎಷ್ಟು ಮಹತ್ವವುಳ್ಳದು ಎಂದವನು ಅಭಿಮಾನ ಪಡುವನು. ಸಾಕಷ್ಟು ಪ್ರಮಾಣದಲ್ಲಿ ಸ್ವಾಭಿಮಾನವಿರಬೇಕಾದುದು ಪ್ರಗತಿ ಹಾಗೂ ಉತ್ಕರ್ಷದ ದೃಷ್ಟಿಯಿಂದ ಅಗತ್ಯ.

ಒಂದೇ ಬಗೆಯ ಕೆಲಸದಿಂದ ಬರುವ ಬೇಸರ ನೀಗಿಸಲು, ಮತ್ತು ವಿರಕ್ತಿ ಹಾಗೂ ಉದ್ವೇಗವನ್ನು ದೂರೀಕರಿಸಲು—ನಮ್ಮ ಕೆಲಸಕ್ಕೆ ಕಲ್ಪನೆಯ ಮೆರಗನ್ನು ಕೊಡುವುದೊಂದು ಉತ್ತಮ ಉಪಾಯ. ಇದರಿಂದ ಸ್ವಂತ ಬುದ್ಧಿಯನ್ನು ಚೆನ್ನಾದ ರೀತಿ ಉಪಯೋಗಿಸಿದ ಸಂತೋಷ ದೊರಕುವುದಲ್ಲದೆ—ಕಲ್ಪನೆಯ ಕಣ್ಣುಗಳಿಂದ ನೋಡಿದಾಗ ಒಂದು ವಿಷಯದ ಗೂಢ ರಹಸ್ಯ ತತ್ವಗಳನ್ನು ಭೇದಿಸಿ ತಿಳಿಯುವ ಅಪೂರ್ವ ಶಕ್ತಿಯೂ ಕರಗತವಾಗುವುದು. ಇಂದಿನ ಸುಪ್ರಸಿದ್ಧ ವಿಜ್ಞಾನಿಗಳ ಬದುಕನ್ನೇ ನೋಡಬಾರದೆ! ದಿನವಿಡೀ ಪ್ರಯೋಗಶಾಲೆಯಲ್ಲಿ "ಟೆಸ್ಟ್ ಟ್ಯೂಬ್" ಮತ್ತು "ಸ್ಪಿರಿಟ್ ಲ್ಯಾಂಪ್"ಗಳ ನಡುವೆ ಬಿದ್ದುಕೊಂಡಿರುವ ಆ ಜನಕ್ಕೆ—ಬೇಸರ [illegible] ಬಾರದಿರುವಂತೆ

([illegible]ನೇ ಪುಟ ನೋಡಿರಿ)

ಹೈದರಾಬಾದು ನಿಜಾಮರು ಮದುವೆ ಪಾರಿತೋಷಕವಾಗಿ ಕೊಟ್ಟ ವಜ್ರಖಚಿತ ಹಾರವನ್ನು ಧರಿಸಿದ ಬ್ರಿಟಿಷ್ ಮಹಾ ರಾಣಿ ಎರಡನೆ ಎಲಿಜಬೆತ

20) 22-1-1953 — 10
21) 12-2-1953 - 12
22) 19-2-1953 - 12
23) 26-2-1953 - 12
24) 5-3-1953 - 12
25) 12-3-1953 - 12
26) 19-3-1953 - 12
27) 26-3-1953 - 12
28) 2-4-1953. 12
29) 9-4-1953. 12
30) 16-4-1953. 12
31) 23-4-1953. 12
32) 30-4-1953- 12
33) 7-5-1953- 12
34) 14-5-1953- 12
35) 21-5-1953- 12
36) 28-5-1953 — 12

202

4-9-1952

Estd. 1921 ಸ್ಥಾಪನೆ.
32ನೆಯ ವರ್ಷ

Founder: **Sri A. B. Shetty,**
Minister for Medical & Public Health

ನವಯುಗ
ಆರೋಗ್ಯ ಮಂತ್ರಿ
ಶ್ರೀ. ಎ. ಬಿ. ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ

ವಾ॥ ಚಂದಾ 5-12-0
6 ತಿಂಗಳಿಗೆ 3-0-0
ಬಿಡಿ ಪ್ರತಿಗೆ 0-2-0

ನವಯುಗ

ಅಂತರಂಗ
ಪುಸ್ತಕ ಪತ್ರಿಕೆಯ
ಉಪಯುಕ್ತವಾದ
86 ಪುಸ್ತಕಗಳು
ರೂ. 24ಕ್ಕೆ ಸಿಗುತ್ತವೆ
ವಿವರಕ್ಕೆ ಬರೆಯಿರಿ.
ಮೆನೇಜರ್,
ಅಂತರಂಗ, ಉಡುಪಿ

Vol 32
No. 1

NAVAYUGA WEEKLY POST BOX NO. 22 UDIPI

ವರ್ಷ ೩೨
ವಾರ ೧

ಮಧುಪರ್ಕ

ಏಳನೇ ಎಡ್ವರ್ಡ್ ದೊರೆಗೆ ಐದನೇ ಜಾರ್ಜ್ ಇನ್ನೂ ಶಾಲೆಯಲ್ಲಿ ಕಲಿಯುವ ಹುಡುಗನಾಗಿದ್ದಾಗ – ಒಂದು ಪತ್ರ ಬರೆದ: "ನನಗೆ ಈ ತಿಂಗಳು ಖರ್ಚಿಗೆ ಸ್ವಲ್ಪ ಹಣ ಬೇಕು. ಕೂಡಲೇ ಕಳುಹಿಸುವಿರಾಗಿ ನಂಬಿದ್ದೇನೆ" ಎಂದು ಅದರಲ್ಲಿತ್ತು.

ಮಗನು ಮಿತಿಮೀರಿ ವೆಚ್ಚಮಾಡುವನೆಂದು ಏಳನೇ ಎಡ್ವರ್ಡ್ ದೊರೆ ಭಾವಿಸಿದ. ಎರಡು ಹಿತನುಡಿಗಳನ್ನು ಬರೆದು ಕಳುಹಿಸುವುದು [illegible] ತೋರಿತು: "ಮಗನೇ ನಿನ್ನ ಖರ್ಚು ವೆಚ್ಚಗಳನ್ನು ನೀನು ಕಡಿಮೆ ಮಾಡಲೇ ಬೇಕು. ಈ ತಿಂಗಳು ನಿನಗೊಂದು ಪೆನ್ನಿಯೂ ಸಿಗಲಾರದು. ಏನಾದರೂ ನೋಡಿಕೊಂಡಿರು" ಎಂದು ಮುಂತಾಗಿ ಅವನು ನಿಷ್ಠುರನಾಗಿ ಬರೆದ.

ಮರುಟಪಾಲಿಗೆ ಮಗನಿಂದ ಉತ್ತರ ಬಂತು: "ನಿಮ್ಮ ಆಜ್ಞೆಯಂತೆ ಇದ್ದುದರಲ್ಲಿಯೇ ನನ್ನಲ್ಲಿ ಖರ್ಚುವೆಚ್ಚ ನೋಡಿಕೊಳ್ಳಲು ನಿಶ್ಚಯಿಸಿದ್ದೇನೆ. ಪ್ರತ್ಯಕ್ಷ ನೀವು ನನಗೆ ಬರೆದ ಕಾರ್ಡನ್ನು ಲಿಲಾಂ ಹಾಕಿ [illegible] ಪೌಂಡು ಗಳಿಸಿದ್ದೇನೆ. ಈ ತಿಂಗಳು ತೊಂದರೆಯಿಲ್ಲ."

ಲಘು ಮನಸ್ಸು

ಮನಸ್ಸನ್ನು ಹಗುರವಾಗಿರಿಸಬೇಕಾದುದು ಸ್ವಾಸ್ಥ್ಯದ ದೃಷ್ಟಿಯಿಂದ ಅತ್ಯಂತ ಅಗತ್ಯವೆಂದು ಎಲ್ಲರೂ ಒಪ್ಪುವರು. ನಮ್ಮ ಎಲ್ಲ ಕೆಲಸ ಕಾರ್ಯಗಳಲ್ಲಿಯೂ ಉತ್ಸಾಹ ತುಂಬಿ ತುಳುಕುತ್ತಿದ್ದರೆ-ಅದೆಷ್ಟೇ ಭಾರದ ಕಾರ್ಯವಿದ್ದರೂ ಬಹಳ ಹಗುರೆನಿಸುವುದು. ಅನುಭವ ಜನ್ಯ ಸಂಗತಿ. ನಾವು ಪ್ರವೃತ್ತರಾಗುವ ಕೆಲಸಗಳನ್ನು ಸಾಮಾನ್ಯವಾಗಿ ಮಾನಸಿಕ ಶ್ರಮ ಹಾಗೂ ದೈಹಿಕ ಶ್ರಮ ಎಂದು ವಿಭಾಗಿಸಬಹುದು: ಇವೆರಡರ ಪ್ರಮಾಣವು ಒಂದಕ್ಕೊಂದು ಪೂರಕವಾಗಿದ್ದರೇನೇ ಒಬ್ಬ ವ್ಯಕ್ತಿಯು ಸ್ವಾಸ್ಥ್ಯ ಚೆನ್ನಾದ ಸ್ಥಿತಿಯಲ್ಲಿ ಇರುವುದು. ಮನುಷ್ಯನ ಸ್ನಾಯು ಖಂಡಗಳನ್ನು ಚೆನ್ನಾಗಿ ಬಲಿತು ಪುಷ್ಟವಾಗುವುದರ ಜೊತೆಗೆ, ನಮ್ಮ ಭಾವನಾತ್ಮಕವಾದ ಇಚ್ಛೆಗಳು ಪೂರ್ಣಗೊಳ್ಳುವುದೂ ಅವಶ್ಯವಿದೆ. ಶ್ರಮವನ್ನು ಮನೋರಂಜನೆಯ ಸ್ಫೂರ್ತಿಯಲ್ಲಿ ತೆಗೆದುಕೊಳ್ಳುವುದು ಒಂದೇ ಬಾಣದಿಂದ ಎರಡು ಹಕ್ಕಿಗಳನ್ನು ಒಟ್ಟಿಸುವ ಯೋಗ್ಯ ಹೆಜ್ಜೆ.

ನಮ್ಮಲ್ಲಿ ಎಷ್ಟೋ ಮಂದಿ ಕೆಲಸ ಮಾಡುವುದೆಂದರೆ ಸಲ್ಲದ ಒಲ್ಲದ ಭಾರವೆಂದೂ ಕ್ಲೇಶದಾಯಕವಾದ ಸಂಗತಿಯೆಂದೂ ತಿಳಿಯುತ್ತಿರುವುದು ದೌರ್ಭಾಗ್ಯದ ವಿಷಯ. [illegible]ಲಿಕ್ಕೆ, ಉಡಲಿಕ್ಕೆ ಇರಲಿಕ್ಕೆ ತಪ್ಪದಾದ ಸೌಕರ್ಯಕ್ಕೆ ಬೇರೇನೂ ಉಪಾಯ ಕಾಣದೆ ಅನಿವಾರ್ಯತೆಯಿಂದ ಕೆಲಸವನ್ನು ಕೈಗೊಳ್ಳುವ ಜನರೇ ಹೆಚ್ಚು. ಆದರೆ ಶ್ರಮಪೂರ್ವಕ ದುಡಿಯುವುದರಿಂದ ಎಷ್ಟರ ಮಟ್ಟಿನ ಆನಂದ ದೊರೆಯಬಲ್ಲುದೆಂಬುದನ್ನು ನಿರುದ್ಯೋಗಿಗಳಾಗಿ ನಾವು ಕೆಲಸ ಬೇಕಾಗಿ ಬಂದ ಸಂದರ್ಭ ತಾನಾಗಿ ತೋರಿಸಿ ಕೊಡುವುದು. ಆಲಸ್ಯವೆಂಬುದು ಮಹಾ ಜಾಡ್ಯ-ಮತ್ತದಕ್ಕೆ ಪರಿಶ್ರಮವೆಂಬುದೇ ಮದ್ದು. ಹಾಗೆಂದು ಕೆಲಸದಿಂದ ಆನಂದವನ್ನೂ ಶಕ್ತಿಯನ್ನೂ ಪಡೆಯುವವರು ಕೆಲವೇ ಮಂದಿ ಎಂಬುದೂ ನಿಜ. ದಿನಾಲು ಒಂದೇ ತೆರನಾದ ಯಾಂತ್ರಿಕ ರೀತಿಯ ಕೆಲಸದಲ್ಲಿ ತೊಡಗುವವರು ಬೇಗ ಬೇಸರಗೊಳ್ಳುತ್ತಾರೆ. ಕೆಲಸವು ಭಾರರೂಪದಲ್ಲಿ ಪರಿಣಮಿಸಿ [illegible] ಸ್ವಾಭಾವಿಕವಾಗಿ ಅವರ ಪ್ರಮಾಣ ಕಡಿಮೆಯಾಗುವುದು. ಪರಿಣಾಮವಾಗಿ ಉತ್ಪಾದನೆ ತಗ್ಗುವುದು.

ಆದರೆ ಶ್ರಮ ಪಡುವುದರಲ್ಲಿಯಾಗಲೀ-ಇನ್ನಿತರ ಯಾವುದೇ ಸಂಗತಿಯಲ್ಲಾಗಲೀ ಒಂದು ವಿಷಯ ಮರೆಯಕೂಡದು:-ಯಾವುದಾದರೊಂದು ಸಂಗತಿ ಪ್ರಿಯ ಅಥವಾ ಅಪ್ರಿಯವೆಂದು ತೋರುವುದು ನಮ್ಮ ದೃಷ್ಟಿಕೋನವನ್ನು ಅವಲಂಬಿಸಿಯದೆ. ತಲೆಬೇಸರ ಹಿಡಿಸುವ ಕೆಲಸವಾದರೂ ಉತ್ಸಾಹ ಹಾಗೂ ಬುದ್ಧಿಪೂರ್ವಕ ದುಡಿದರೆ - ಅದು ಲಾಭಪೂರ್ಣವೆನಿಸುವುದು ನಿಶ್ಚಯ. ನಮ್ಮ ದೃಷ್ಟಿಕೋನ ಕೆಲಸದಲ್ಲಿ ಆನಂದವನ್ನು ಕಂಡುಕೊಳ್ಳುವಂತಿರುವುದು ಬಹಳ ಒಳ್ಳೆಯದು. ಹೊಟ್ಟೆಗಾಗಿ ದುಡಿಯಲೇ ಬೇಕೆಂದಿರುವಾಗ ಸಾವಿರ ಶಪಿಸಿ, ಕೆಲಸಕ್ಕೆಳೆಯುವುದಕ್ಕಿಂತ ನಗುಮುಖ ತೋರಿ ಅದನ್ನು ನಿರ್ವಹಿಸುವುದು ಚೆನ್ನಲ್ಲವೇ? ತುಚ್ಛ ಮತ್ತು ಅಸಹ್ಯಕರವೆಂದು ತೋರಬಹುದಾದ ಕೆಲಸಗಳನ್ನು, ನಮ್ಮ ದೃಷ್ಟಿಕೋನವನ್ನು ಕೆಲಮಟ್ಟಿಗೆ ವಿಸ್ತೃತಗೊಳಿಸುವುದರ ಮೂಲಕ ಆ ಕೆಲಸವನ್ನು ನಮ್ಮ ಅನೇಕ ಕ್ರಿಯೆಗಳ ಅವಿಭಾಜ್ಯ ಅಂಗವೆಂದು ತಿಳಿದುಕೊಳ್ಳುವುದರಿಂದ ಆನಂದದಾಯಕವಾಗಿ ನೆರವೇರಿಸಬಹುದು. ಒಂದು ದೊಡ್ಡ ಯಂತ್ರದಲ್ಲಿ ಒಂದು ಕೀಲು ಮುರಿದರೂ ಸಾಕು-ಯಂತ್ರ ಕೆಡುವುದಿಲ್ಲವೆ? ಅದರಂತೆಯೆ ನಮ್ಮ ಕೆಲಸಗಳಲ್ಲಿ ಸ್ವಲ್ಪ ಮಟ್ಟಿನ ಲೋಪವುಂಟಾದರೂ-ಅದರ ಪರಿಣಾಮ ಕೆಡಕಾಗುವುದು. ಆದುದರಿಂದ ಮನುಷ್ಯನಿಗೆ ತನ್ನ ಕೆಲಸದಲ್ಲಿ ಬೇಸರ ತೋರಿದಾಗ-ಕೆಲಸವನ್ನು ಅವನು ಭಾವನಾತ್ಮಕ ದೃಷ್ಟಿಯಿಂದ ನೋಡಲಿ: "ನಾನು ಇಲ್ಲಿ ಇಲ್ಲದಿದ್ದರೆ, ಈ ಕೆಲಸ ಪೂರ್ಣ ನಿಂತೇ ಹೋಗುವುದಲ್ಲವೆ?" ಎಂದವನು ದೃಷ್ಟಿಕೋನ ಬದಲಿಸಿ ಯೋಚಿಸಿದ್ದೇ ಆದರೆ, ತನ್ನ ಕೆಲಸ ಎಷ್ಟು ಮಹತ್ವವುಳ್ಳದು ಎಂದವನು ಅಭಿಮಾನ ಪಡುವನು. ಸಾಕಷ್ಟು ಪ್ರಮಾಣದಲ್ಲಿ ಸ್ವಾಭಿಮಾನವಿರಬೇಕಾದುದು ಪ್ರಗತಿ ಹಾಗೂ ಉತ್ಕರ್ಷದ ದೃಷ್ಟಿಯಿಂದ ಅಗತ್ಯ.

ಒಂದೇ ಬಗೆಯ ಕೆಲಸದಿಂದ ಬರುವ ಬೇಸರ ನೀಗಿಸಲು, ಮತ್ತು ವಿರಕ್ತಿ ಹಾಗೂ ಉದ್ವೇಗವನ್ನು ದೂರೀಕರಿಸಲು-ನಮ್ಮ ಕೆಲಸಕ್ಕೆ ಕಲ್ಪನೆಯ ಮೆರುಗನ್ನು ಕೊಡುವುದೊಂದು ಉತ್ತಮ ಉಪಾಯ. ಇದರಿಂದ ಸ್ವಂತ ಬುದ್ಧಿಯನ್ನು ಚೆನ್ನಾದ ರೀತಿ ಉಪಯೋಗಿಸಿದ ಸಂತೋಷ ದೊರಕುವುದಲ್ಲದೆ-ಕಲ್ಪನೆಯ ಕಣ್ಣುಗಳಿಂದ ನೋಡುವಾಗ ಒಂದು ವಿಷಯದ ಗೂಢ ರಹಸ್ಯ ಸತ್ಯಗಳನ್ನು ಭೇದಿಸಿ ತಿಳಿಯುವ ಅಪೂರ್ವ ಶಕ್ತಿಯೂ ಕರಗತವಾಗುವುದು. ಇಂದಿನ ಸುಪ್ರಸಿದ್ಧ ವಿಜ್ಞಾನಿಗಳ ಬದುಕನ್ನೇ ನೋಡಬಾರದೇ? ದಿನವಿಡೀ ಪ್ರಯೋಗಶಾಲೆಯಲ್ಲಿ "ಟೆಸ್ಟ್ ಟ್ಯೂಬ್" ಮತ್ತು "ಸ್ಪಿರಿಟ್ ಲ್ಯಾಂಪ್"ಗಳ ನಡುವೆ ಬಿದ್ದುಕೊಂಡಿರುವ ಆ ಜನಕ್ಕೆ-ಬೇಸರ ಬಾರದಿರುವಂತೆ

(೯ನೇ ಪುಟ ನೋಡಿರಿ)

ಹೈದರಾಬಾದು ನಿಜಾಮರು ಮದುವೆ ಪಾರಿತೋಷಕವಾಗಿ ಕೊಟ್ಟ ವಜ್ರಖಚಿತ ಹಾರವನ್ನು ಧರಿಸಿದ ಬ್ರಿಟಿಷ ಮಹಾರಾಣಿ ಎರಡನೆ ಎಲಿಜಬೆತ್

37)	4-6-1953 -	16
38)	11-6-1953 —	12
39)	18-6-1953 -	12
40)	25-6-1953 -	12
41)	2-7-1953 -	12
42)	9-7-1953 -	12
43)	16-7-1953 -	12
44)	23-7-1953	12
45)	30-7-1953 -	12
46)	6 8-1953 -	12
47)	13-8-1953	30
48)	20 8 1953	12
49)	27-8-1953	12
		178

1) 227
2) 202
3) 178

607

4-9-1952

Estd. 1921 ಸ್ಥಾಪನೆ
32ನೆಯ ವರ್ಷ

Founder Sri A. B. Shetty,
Minister for Medical & Public Health

ನವಯುಗ
ಆರೋಗ್ಯ ಮಂತ್ರಿ
ಶ್ರೀ. ಎ. ಬಿ. ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ

ವಾ। ಚಂದಾ 5-12-0
6 ತಿಂಗಳಿಗೆ 3-0-0
ಬಿಡಿ ಪ್ರತಿಗೆ 0-2-0

ನವಯುಗ

ಅಂತರಂಗ
ಪುಸ್ತಕ ಪತ್ರಿಕೆಯ
ಉಪಯುಕ್ತವಾದ
86 ಪುಸ್ತಕಗಳು
ರೂ. 24ಕ್ಕೆ ಸಿಗುತ್ತ
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡು

Vol 32
No. 1

NAVAYUGA WEEKLY POST BOX NO. 22 UDIPI

ವರ್ಷ
ವಾರ

ಮಧುಪರ್ಕ

ಏಳನೇ ಎಡ್ವರ್ಡ್ ದೊರೆಗೆ ಐದನೇ ಜಾರ್ಜ್ ಇನ್ನೂ ಶಾಲೆಯಲ್ಲಿ ಕಲಿಯುವ ಹುಡುಗನಾಗಿದ್ದಾಗ – ಒಂದು ಪತ್ರ ಬರೆದ: "ನನಗೆ ಈ ತಿಂಗಳು ಖರ್ಚಿಗೆ ಸ್ವಲ್ಪ ಹಣ ಬೇಕು. ಕೂಡಲೇ ಕಳುಹಿಸುವಿರಾಗಿ ನಂಬಿದ್ದೇನೆ" ಎಂದು ಅದರಲ್ಲಿತ್ತು.

ಮಗನು ಮಿತಿಮೀರಿ ವೆಚ್ಚಮಾಡುವನೆಂದು ಏಳನೇ ಎಡ್ವರ್ಡ್ ದೊರೆ ಭಾವಿಸಿದ. ಎರಡು ಹಿತನುಡಿಗಳನ್ನು ಬರೆದು ಕಳುಹಿಸುವುದುಚಿತವೆಂದು ತೋರಿತು. "ಮಗನೇ ನಿನ್ನ ಖರ್ಚು ವೆಚ್ಚಗಳನ್ನು ನೀನು ಕಡಿಮೆ ಮಾಡಲೇ ಬೇಕು. ಈ ತಿಂಗಳು ನಿನಗೊಂದು ಪೆನ್ನಿಯೂ ಸಿಗಲಾರದು. ಮುಂದಾದರೂ ಜೋಕೆಯಿಂದಿರು" ಎಂದು ಮುಂಚಾಗಿ ಅವನು ನಿಷ್ಠುರನಾಗಿ ಬರೆದ.

ಮರುಟಪಾಲಿಗೆ ಮಗನಿಂದ ಉತ್ತರ ಬಂತು – "ನಿಮ್ಮ ಆಜ್ಞೆಯಂತೆ ಇದ್ದುದರಲ್ಲಿಯೇ ನನ್ನೆಲ್ಲ ಖರ್ಚುವೆಚ್ಚ ನಡೆಸಿಕೊಳ್ಳಲು ನಿಶ್ಚಯಿಸಿದ್ದೇನೆ. ಪ್ರಕೃತ ನೀವು ನನಗೆ ಬರೆದ ಕಾರ್ಡನ್ನು ಏಲಂ ಹಾಕಿ – ೨೦ ಪೌಂಡು ಗಳಿಸಿದ್ದೇನೆ! ಈ ತಿಂಗಳು ತೊಂದರೆಯಿಲ್ಲ"

ಲಘು ಮನಸ್ಸು

ಮನಸ್ಸು ಹಗುರವಾಗಿರ ಬೇಕಾದು ಸ್ವಾಸ್ಥ್ಯದ ದೃಷ್ಟಿಯಿಂದ ಅತ್ಯಂ ಆಗತ್ಯವೆಂದು ಎಲ್ಲರೂ ಒಪ್ಪುವರು. ನ ಎಲ್ಲ ಕೆಲಸ ಕಾರ್ಯಗಳಲ್ಲಿಯೂ ತ್ಸಾಹ ತುಂಬಿ ತುಳುಕುತಿದ್ದರೆ-ಅದೆ ಭಾರದ ಕಾರ್ಯವಿದ್ದರೂ ಬಹಳ ಹ ನಿಸುವುದು. ಅನುಭವ ಜನ್ಯ ಸಂಗತಿ. ವು ಪ್ರವೃತ್ತರಾಗುವ ಕೆಲಸಗಳನ್ನು ಮಾನ್ಯವಾಗಿ ಮಾನಸಿಕ ಶ್ರಮ ಹಾ ದೈಹಿಕ ಶ್ರಮ ಎಂದು ವಿಭಾಗಿಸ ಬ ದು: ಇವೆರಡರ ಪ್ರಮಾಣವು ಒಂದ ನ್ಯಂದು ಪೂರಕವಾಗಿದ್ದರೇನೇ ಒಬ್ಬ ಕ್ತಿಯ ಸ್ವಾಸ್ಥ್ಯ ಚೆನ್ನಾದ ಸ್ಥಿತಿಯಲ್ಲಿ ಬಹುದು ಮನುಷ್ಯನ ಸ್ನಾಯು ಖಂಡ ಳನ್ನು ಚೆನ್ನಾಗಿ ಬಲಿತು ಪುಷ್ಟವಾಗು ದರ ಜೊತೆಗೆ, ನಮ್ಮ ಭಾವನಾತ್ಮಕವಾ ಇಚ್ಛೆಗಳು ಪೂರ್ಣಗೊಳ್ಳುವುದೂ ಅ ಶ್ಯವಿದೆ. ಶ್ರಮವನ್ನು ಮನೋರಂಜನೆ ಸ್ಫೂರ್ತಿಯಲ್ಲಿ ತೆಗೆದುಕೊಳ್ಳುವುದು ಂದೇ ಬಾಣದಿಂದ ಎರಡು ಹಕ್ಕಿಗಳನ್ನು ಟ್ಟುವ ಯೋಗ್ಯ ಹೆಜ್ಜೆ

ನಮ್ಮಲ್ಲಿ ಎಷ್ಟೋ ಮಂದಿ ಕೆಲಸ ಮಾ ವುದೆಂದರೆ ಸಲ್ಲದ ಒಲ್ಲದ ಭಾರವೆಂ ೂ ಕ್ಲೇಶದಾಯಕವಾದ ಸಂಗತಿಯೆಂ [illegible]ಯುತ್ತಿರುವುದು ದೌರ್ಭಾಗ್ಯದ ಷಯ. ನಮ್ಮ [illegible] ಉಡಲಿಕ್ಕೆ ರಲಿಕ್ಕೆ ತಕ್ಕುದಾದ ಸೌಕರ್ಯಕ್ಕೆ ಬೇ ನೂ ಉಪಾಯ ಕಾಣದೆ ಅಸಹಾಯತೆ ಂದ ಕೆಲಸವನ್ನು ಕೈಗೊಳ್ಳುವ ಜನರೇ ಚ್ಚು. ಆದರೆ ಶ್ರಮಪೂರ್ವಕ ದುಡಿ ಯುವುದರಿಂದ ಎಷ್ಟರ ಮಟ್ಟಿನ ಆನಂದ ರೆಯ ಬಲ್ಲುದೆಂಬುದನ್ನು ನಿರುದ್ಯೋ ಗಳಾಗಿ ನಾವು ಕಳೆಯ ಬೇಕಾಗಿ ಒಂದ ಸಂದರ್ಭ ತಾನಾಗಿ ತೋರಿಸಿ ಕೊಡುವು . ಆಲಸ್ಯವೆಂಬುದು ಮಹಾ ಜಾಡ್ಯ-ಮ ದಕ್ಕೆ ಪರಿಶ್ರಮವೆಂಬುದೇ ಮದ್ದು ಗೆಂದು ಕೆಲಸದಿಂದ ಆನಂದವನ್ನೂ ಶ ಯನ್ನೂ ಪಡೆಯುವವರು. ಕಲವೇ ಮಂ ಎಂಬುದೂ ನಿಜ. ದಿನಾಲು ಒಂದೇ ನಾದ ಯಾಂತ್ರಿಕ ರೀತಿಯ ಕೆಲಸದ ತೊಡಗುವವರು ಹೇಗೆ ಬೇಸರ ಗೊಳ್ಳು ತ್ತಿದೆ. ಕೆಲಸವು ಭಾರರೂಪದಲ್ಲಿ ಪರಿಣ ಮನೆಗೊ[illegible]. ಸ್ವಾಭಾವಿಕವಾಗಿ ಅವರ ಪ್ರಮಾಣ ಕಡಿಮೆಯಾಗುವುದು. ಪರಿಣಾ ಮವಾಗಿ ಉತ್ಪಾದನೆ ತಗ್ಗುವುದು.

ಆದರೆ ಶ್ರಮ ಪಡುವುದರಲ್ಲಿಯಾಗ –ಇನ್ನಿತರ ಯಾವುದೇ ಸಂಗತಿಯ ಲ್ಲಾಗಲೀ ಒಂದು ವಿಷಯ ಮರೆಯ ಕೂಡದು-ಯಾವುದಾದರೊಂದು ಸಂಗತಿ ಪ್ರಿಯ ಅಥವಾ ಅಪ್ರಿಯವೆಂದು ತೋರುವ ನಮ್ಮ ದೃಷ್ಟಿಕೋನವನ್ನು ಅವಲಂಬಿಸಿಯದೆ ತಲೆಬೇಸರ ಹಿಡಿಸುವ ಕೆಲಸವಾದರೂ ಉತ್ಸಾಹಯೋಗೂ ಬುದ್ಧಿಪೂರ್ವಕ ದುಡಿದರೆ-ಅದು ರುಚಿಪೂರ್ಣವೆನಿಸುವುದು ನಿಶ್ಚಯ. ನಮ್ಮ ದೃಷ್ಟಿಕೋ ನ ಕೆಲಸದಲ್ಲಿ ಆನಂದವನ್ನು ಕಂಡುಕೊಳ್ಳುವಂತಿರುವುದು ಬಹಳ ಒಳ್ಳೆಯದು. ಹೊಟ್ಟೆಗಾಗಿ ದುಡಿಯಲೇ ಬೇಕೆಂದಿರುವ ಗ ಸಾವಿರ ಶಪಿಸಿ, ಕೆಲಸಕ್ಕಿಳಿಯುವುದಕ್ಕಿಂತ ನಗುಮುಖ ತೋರಿ ಅದನ್ನು ವರ್ಹಿಸುವುದು ಚೆನ್ನಲ್ಲವೇ? ತುಚ್ಛ ವ ತ್ತು ಅಸಹ್ಯಕರವೆಂದು ತೋರ ಬಹುದಾದ ಕೆಲಸಗಳನ್ನು, ನಮ್ಮ ದೃಷ್ಟಿಕೊನವನ್ನು ಕೆಲಮಟ್ಟಿಗೆ ವಿಸ್ತೃತಗೊಳಿಸು ದರ ಮೂಲಕ ಹಾಗು ಕೆಲಸವನ ನಮ್ಮ ಅನೇಕ ಕ್ರಿಯೆಗ ಅವಿಭಾಜ್ಯ ಅಂಗವೆಂದು ತಿಳಿದುಕೊಳ ವುದರಿಂದ ಆನಂದದಾಯಕವಾಗಿ ನೆರವೇರಿಸಬಹುದು. ಒಂದು ದೊಡ್ಡ ಯಂತ್ರ ಲ್ಲಿ ಒಂದು ಕೀಲು ಮುರಿದರೂ ಸಾಕ ಯಂತ್ರ ಕೆಡುವುದಿಲ್ಲವೆ? ಅದರಂತೆಯೆ ನಮ್ಮ ಕೆಲಸಗಳಲ್ಲಿ ಸ್ವಲ್ಪ ಮಟ್ಟಿನ ಲೋ ಪವುಂಟಾದರೂ–ಅದರ ಪರಿಣಾಮ ಕೆ ಟ್ಟದಾಗುವುದು ಆದುದರಿಂದ ಮನುಷ್ಯನಿ ತನ್ನ ಕೆಲಸದಲ್ಲಿ ಬೇಸರ ತೋರಿದಾಗ–ಕೆಲಸವನ್ನು ಅವನು ಭಾವನಾತ್ಮಕ ದೃಷ್ಟಿಯಿಂದ ನೋಡಲಿ: "ನಾನು ಇಲ್ಲಿ ಇಲ್ಲದ್ದರೆ, ಈ ಕೆಲಸ ಪೂರ್ಣ ನಿಂತೇ ಹೋಗುವುದಲ್ಲವೆ?" ಎಂದವನು ದೃಷ್ಟಿಕೋ ಬದಲಿಸಿ ಯೋಚಿಸಿದ್ದೇ ಆದರೆ, ತನ್ನ ಲಸ ಎಷ್ಟು ಮಹತ್ವವುಳ್ಳದು ಎಂದವನ ಅಭಿಮಾನ ಪಡುವನು. ಸಾಕಷ್ಟು ಮಾಣದಲ್ಲಿ ಸ್ವಾಭಿಮಾನವಿರಬೇಕಾದ ದು ಪ್ರಗತಿ ಹಾಗೂ ಉತ್ಕರ್ಷದ ದೃಷ್ಟಿಯಿಂದ ಅಗತ್ಯ.

ಒಂದೇ ಬಗೆಯ ಕೆಲಸದಿಂದ ಬರು ಬೇಸರ ನೀಗಿಸಲು, ಮತ್ತು ವಿರಕ್ತಿ ಹಾಗೂ ಉದ್ವೇಗವನ್ನು ದೂರೀಕರಿಸಲು–ನಮ್ಮ ಕೆಲಸಕ್ಕೆ ಕಲ್ಪನೆಯ ಮೆರುಗನ್ನು ಕೊಡುವುದೊಂದು ಉತ್ತಮ ಉಪಾಯ ಇದರಿಂದ ಸ್ವಂತ ಬುದ್ಧಿಯನ್ನು ಚೆನ್ನಾದ ರೀತಿ ಉಪಯೋಗಿಸಿದ ಸಂತೋಷ ದೊರಕುವುದಲ್ಲದೆ–ಕಲ್ಪನೆಯ ಕಣ್ಣಿ ಇಂದ ನೋಡುವಾಗ ಒಂದು ವಿಷಯ ಗೂಢ ರಹಸ್ಯ ಹತ್ಯಗಳನ್ನು ಭೇದಿಸಿ ತಿಯುವ ಅಪೂರ್ವ ಶಕ್ತಿಯೂ ಕರಗ ವಾಗುವುದು. ಇಂದಿನ ಸುಪ್ರಸಿದ್ಧ ವಿಜ್ಞಾನಿಗಳ ಬದುಕನ್ನೆ ನೋಡಬಾರದ ದಿನವಿಡೀ ಪ್ರಯೋಗಶಾಲೆಯಲ್ಲಿ "ಟೆಸ್ಟ್ ಟ್ಯೂಬ್" ಮತ್ತು "ಸ್ಪಿರಿಟ್ ಲ್ಯಾಂಪ್ ಗಳ ನಡುವೆ ಬಿದ್ದುಕೊಂಡಿರುವ ಆ ಜ ಕ್ಯ–ಬೇಸರ ಬಾರದಿ ರು ವ ೦

(೯ನೇ ಪುಟ ನೋಡಿರಿ)

ಹೈದರಾಬಾದು ನಿಜಾಮರು ಮದುವೆ ಪಾರಿತೋಷವಾಗಿ ಕೊಟ್ಟ ವಜ್ರಖಚಿತ ಹಾರವನ್ನು ಧರಿಸಿದ ಬ್ರಿಟಿಷ್ ಮಹಾರಾಣಿ ಎರಡನೆ ಎಲಿಜಬೆತ್.

ಭಾರತ ಸೇವಕ ಸಮಾಜದ ರಚನೆ

ವಿಧಾಯಕ ಕಾರ್ಯಕರ್ತರಿಗೊಂದು ಅಪೂರ್ವ ಅವಕಾಶ

ಭಾರತದಲ್ಲಿ ಮನುಷ್ಯ ಪ್ರಯತ್ನಕ್ಕೆ ವಿಪುಲ ಆಸ್ಪದವಿದೆ ಎಂಬುದನ್ನು ಪ್ರತಿಯೊಬ್ಬರೂ ಒಪ್ಪುವರು. ನಮ್ಮ ಬಳಿ ಯಂತ್ರ ಸಾಧನಗಳಿಲ್ಲ, ಸೇನೆ ಇಲ್ಲ, ನಿಸರ್ಗ ಸಂಪತ್ತು ಇದ್ದರೂ ಅದನ್ನು ಉಪಯೋಗಿಸುವ ನೇರವಾದ ಮಾರ್ಗವಿಲ್ಲ. ಇಂದರದಲ್ಲಿ ಜನಬಲವೇ ಸರ್ವ ಬಲವೆಂದು ತಿಳಿದು—ಕೆಲಸವೇ ಮುಕ್ತಿ ಎಂದುಕೊಂಡು—ಅಭ್ಯುದಯ ಸಾಧಿಸುವುದನ್ನು ಬಿಟ್ಟರೆ ಎರಡನೆಯದಾದ ಉದ್ಧಾರ ಮಾರ್ಗ ನಮಗೆ ತೆರೆದಿಲ್ಲ. ಹಳ್ಳಿಗಳ ಸ್ಥಿತಿಯನ್ನು ಸುಧಾರಿಸುವುದೂ, ಆರ್ಥಿಕ ಪುನರ್ರಚನೆಯನ್ನು ಯಶಸ್ವಿಯಾಗಿಸುವುದೂ ಭಾರತದ ಏಳಿಗೆಯ ಸರ್ವ ಪ್ರಥಮ ಸೋಪಾನವೆಂದು ಎಲ್ಲ ಆರ್ಥಿಕ ತಜ್ಞರೂ ಹೇಳಿದ್ದಾರೆ. ಗಾಂಧೀಜೀಯ ಕಣ್ಣಿಗೂ ಹಳ್ಳಿಯ ಉದ್ಧಾರವೇ ಭಾರತದ ಪ್ರಧಾನ ಸಮಸ್ಯೆಯಾಗಿ ಕಂಡಿತ್ತು. ಕಾರಣ—ಅವರ ರಾಷ್ಟ್ರೀಯ ಚಟುವಟಿಕೆಗಳೆಲ್ಲದರ ಮೂಲ ಪ್ರೇರಣೆ ಗ್ರಾಮಾಭ್ಯುದಯದ ಭಾವನೆಯಾಗಿತ್ತು. ಅಖಿಲಭಾರತ ನೇಕಾರರ ಸಂಘ, ಹರಿಜನ ಸೇವಕ ಸಂಘ, ಸರ್ವೋದಯ ಸಮಾಜದಂಥವುಗಳ ಕಲ್ಪನೆಯನ್ನು ಮಾಡಿದವರು ಗಾಂಧೀಜಿಯೇ. ಬಹುಮುಖವಾದ ಉದ್ದೇಶಗಳನ್ನಿಟ್ಟುಕೊಂಡು—ಒಟ್ಟಾರೆ ಹಳ್ಳಿಯ ಸ್ಥಿತಿಯನ್ನು ಊರ್ಜಿತ ಮಟ್ಟಕ್ಕೆ ತರುವುದೇ ಗಾಂಧೀಜೀಯ ಮನೀಷೆಯಾಗಿತ್ತು.

ಸರ್ವ ಮಾನ್ಯ ಉದ್ದೇಶ

ಗಾಂಧೀಜಿಯ ಕೊನೆಗಾಲ ಸಮೀಪಿಸಿದಂತೆ ನಮ್ಮಲ್ಲಿ ಪ್ರತಿಯೊಬ್ಬನ ಹೃದಯಕ್ಕೂ ಅಖಿಲ ಭಾರತದ ತಳಹದಿಯ ಮೇಲೆ—ಯಾವುದೇ ಪಕ್ಷ ಅಥವಾ ಜಾತೀಯತೆಯ ಗಂಧಗಾಳಿ ಇಲ್ಲದ ಆರ್ಥಿಕ ಪುನರುದ್ಧಾರವನ್ನೇ ಪ್ರಧಾನೋದ್ದೇಶವಾಗುಳ್ಳ ಒಂದು ಸಂಸ್ಥೆಯ ಸಂಘಟನೆಯಾಗುವ ಆವಶ್ಯವನ್ನವರು ಕಂಡುಕೊಂಡಿದ್ದರೆಂದು ತಿಳಿಯಿತು. ಈ ದೃಷ್ಟಿಯಿಂದ ನೋಡಿದರೆ ರಾಷ್ಟ್ರಪಿತನು ಹಾಕಿಕೊಟ್ಟ ರೂಪುರೇಖೆಯನ್ನೇ ಹೊಂದಿಕೊಂಡು "ಭಾರತ ಸೇವಕ ಸಮಾಜ" ಎಂಬ ನೂತನ ಸಂಘಟನೆ ನಡೆಯುತ್ತಿದೆ ಎನ್ನಬಹುದು. ಗಾಂಧೀಜಿಯ ಪರಮ ಶಿಷ್ಯನೆಂದು ಕರೆಯಬಹುದಾದ ಜವಾಹರಲಾಲ ನೆಹರೂ ರಾಷ್ಟ್ರದ ಮುಂದೆ ಈ ಹೊಸ ಕಲ್ಪನೆಯನ್ನು—ಅಥವಾ ಕಾರ್ಯ ರಂಗವನ್ನು ಇಟ್ಟಿರುವರು. ಆಧುನಿಕ ರಾಷ್ಟ್ರಗಳ ಕೂಟದಲ್ಲಿ ಭಾರತವು ಬಲಯುತವೂ ಅಭಿಮಾನಿಯೂ ಆದ ರಾಷ್ಟ್ರವಾಗಿ ಮೆರೆಯಬೇಕೆಂಬ ಹಂಬಲ ನಮಗಿದೆ. ಈಚೆಗೆ ಚುನಾವಣೆ ಕಾಲದಿಂದ ಅಸ್ತಿತ್ವಕ್ಕೆ ಬಂದಿರುವ ಹಲವು ಪಕ್ಷಗಳ ಉದ್ದೇಶವೂ ಏನಕೇನ ಪ್ರಕಾರೇಣ ಭಾರತವನ್ನು ಆರ್ಥಿಕ ದಾಸ್ಯದಿಂದ ಮುಕ್ತಗೊಳಿಸುವುದೇ ಅಲ್ಲವೆ? ಆದಕಾರಣ ಪಕ್ಷಾತೀತವಾದ ತಳಹದಿಯ ಮೇಲೆ, ಸಾಮಾನ್ಯವಾದ ಏಕೋದ್ದೇಶವನ್ನು ಕಣ್ಣ ಮುಂದಿಟ್ಟುಕೊಂಡು ಅದನ್ನು ಸಾಧಿಸಲು ಪ್ರಯತ್ನಿಸಬೇಕೆಂಬದಾಗಿ ಭಾರತ ಸೇವಕ ಸಮಾಜ ನೆನಸಿರುವುದು. ಶುಭ ಸೂಚನೆ. ಸಾರ್ವಜನಿಕರಲ್ಲಿ ಹೊಣೆಗಾರಿಕೆಯ ಮತ್ತು ಕರ್ತವ್ಯ ಜ್ಞಾನವನ್ನು ಉದ್ದೀಪನಗೊಳಿಸುವ, ಸ್ವಾವಲಂಬನೆಯ ತತ್ವವನ್ನು ಮನಗಾಣಿಸುವ, ದುಡಿದು ಬದುಕಬೇಕೆಂಬ ಮೂಲ ಭೂತ ಸಂಗತಿಯನ್ನು ಒತ್ತಿ ಹೇಳುವ ಘನವಾದ ಕೆಲಸವನ್ನದು ಕೈಗೊಳ್ಳುವುದು. ಮನುಷ್ಯ ಮನುಷ್ಯನ ನಡುವೆ ಇರುವ ಸಂಬಂಧ ಸೌಹಾರ್ದಮಯವಾಗುವಂತೆಯೂ ದೈಹಿಕ ಶ್ರಮದ ಮೇಲೆ ಪ್ರೀತಿ ಹುಟ್ಟುವಂತೆಯೂ ಸ್ವಂತ ಕೈಯಿಂದಲೇ ಬೇಕಾದ ಸಾಧನ ಸಲಕರಣೆಗಳನ್ನೊದಗಿಸುವಂತೆಯೂ ಪ್ರಯತ್ನಿಸುವುದು. ಈ ಸಂಘಟನೆಯ ಇನ್ನೊಂದು ಮಹತ್ವದ ಉದ್ದೇಶ

ಸಾಮೂಹಿಕ ಸಹಕಾರ

ಕಾರ್ಯ ಗೌರವಕ್ಕೆ ತಕ್ಕಂತೆ, ಅದನ್ನು ಸಾವಧಾನದಿಂದ ಪೂರೈಸುವ ಜವಾಬ್ದಾರಿಯೂ ದೊಡ್ಡದು. ಜನತೆಯ ಏಳಿಗೆಯ ಪ್ರಯತ್ನಕ್ಕೆ ಜನತಾ ಸಹಕಾರ ಮೂಲಭೂತವಾದ ಆವಶ್ಯಕತೆಯಾಗುತ್ತದೆ. ಹಿಂಸಾಕೃತ್ಯಗಳಲ್ಲಿ ಆಸಕ್ತರಾದ ಮತ್ತು ಜಾತೀಯ ಭಾವನೆಗಳನ್ನು ಉದ್ರೇಕಿಸುವ ಹೊಲಸು ಬುದ್ಧಿಯ ಜನಗಳನ್ನು ಬಿಟ್ಟರೆ—ಉಳಿದೆಲ್ಲ ಸಜ್ಜನರು ಭಾರತ ಸೇವಕ ಸಮಾಜವನ್ನು ಸೇರಿ, ದುಡಿಯಬೇಕೆಂದು ಪ್ರಧಾನಿ ನೆಹರೂ ಕರೆಕೊಟ್ಟಿರುವರು. ಜನತಾ ಜನಾರ್ದನನ ಸೇವೆ ಮಾಡಬೇಕೆಂದು ಪ್ರಾಮಾಣಿಕವಾಗಿ ಬಯಸುವ ಮಹಾಜನರಿಗೆ ಇದು ಅಪೂರ್ವವಾದ ಸುಸಂಧಿ. ರಾಜಕೀಯವಾದ, ಅಥವಾ ಜಾತೀಯತೆಯ ಸಂಕುಚಿತ ಹಾಗೂ ಕುಹಕ ಉದ್ದೇಶವೆಲ್ಲದಿರುವುದರಿಂದ—ಸ್ವಯಂ ಸ್ಫೂರ್ತಿಯಿಂದ ವಿಧಾಯಕ ಕಾರ್ಯಕರ್ತರು ಇದನ್ನು ಸೇರಬಹುದು. ಎಲ್ಲ ಅಧಿಕಾರೇತರ ರಚನಾತ್ಮಕ ಸಂಸ್ಥೆಗಳೂ ಭಾರತ ಸೇವಕ ಸಮಾಜದ ಅಂಗವಾಗಿ ದುಡಿದರೆ—ಅದರಿಂದ ದೇಶಕ್ಕೆ ಬಹಳ ಲಾಭವಾಗುವುದು. ವರಾನವಾಗಿ, ತಮ್ಮ ಅಂತರ್ಯದ ಪ್ರವೃತ್ತಿಗೆ ರಚನಾತ್ಮಕ ಸ್ವರೂಪವನ್ನು ನೀಡುತ್ತಿರುವ ಜನತಾ ಸೇವಕರಿಗೆ—ಸಾಮಾನ್ಯವಾದೊಂದು ಉದ್ದೇಶದ ಪೂರ್ತಿಗಾಗಿ ಸಾಮೂಹಿಕ ಸಹಕಾರದ ತತ್ವದ ಮೇಲೆ ದುಡಿಯುವ ಹೊಸ ಅವಕಾಶ ಇದರಿಂದ ದೊರೆಯುವುದು. ಜನರಲ್ಲಿ ಕೌಟುಂಬಿಕ ಭಾವನೆಯನ್ನೂ ಸಹಕಾರ ಪ್ರವೃತ್ತಿಯನ್ನೂ ಸೇವಾಜೀವನದ ಕುರಿತು ಆದರವನ್ನೂ ಉಂಟುಮಾಡಲು ಇದನ್ನು ಬಿಟ್ಟರೆ—ಬೇರೆ ಯೋಗ್ಯ ಸಂದರ್ಭ ದೊರೆಯದು.

೧ನೇ ಪುಟಕ್ಕೆ

ಕಾಸರಗೋಡು

ಡಿ. ಮು. ಕೋರ್ಟಿನಲ್ಲಿ

O S No 34/1951
R I A 2497/51
R. E P. No 212,1952

M ನರಸಿಂಗ ರಾವ್, M. ಭವಾನಿಶಂಕರ ರಾಯರ ಮಗ ಉದ್ಯಾವರ ಗ್ರಾಮ —ಅರ್ಜಿದಾರ [ವಾದಿ]

ಮತ್ತು

ಕೇಶವ ಭಟ್ಟ-ಬೊಳವಾರು ಚರ್ಕಪ್ಪ ಭಟ್ಟರ ಮಗ ಹೊಸಬೆಟ್ಟು ಗ್ರಾಮದ ಮಂಜೇಶ್ವರ --ರೆಸಪಾಂಡೆಂಟ [ಪ್ರತಿವಾದಿ]

ಇವರೊಳಗೆ

ರೆಸಪಾಂಡೆಂಟ ಕೇಶವ ಭಟ್ಟರಿಗೆ.

ಮೇಲ್ಕಂಡ ಕ್ರಮ ನಂಬ್ರ 34/1951 ನೇ ವ್ಯಾಜ್ಯದಲ್ಲಿ ಆದ ಪ್ರಿಲಿಮ್ನರಿ ಡಿಕ್ರಿಯಿಂದ ಕೋರುವ ಆಸ್ತಿ ಮೇಲಿನ ನಾವ ಸದ್ರಿ ಡಿಕ್ರಿ ಆ್ಯವಜು ವಸೂಲು ಪಡೆಯುವಗೋಸ್ಕರ ದಾಖಲು ಮಾಡಿದ ಮೇಲ್ಕಂಡ R- E. P. 212/1952 ನೇ ಅಪ್ಲಿಕೇಶನಿನ ಮೇಲೆ ಇಸ್ತಿಹಾರಿನ ಶರ್ತಗಳು ನಿರ್ಣಯಿಸುವ ಬಗ್ಗೆ ತಾರೀಕು 19-9 52 ಕ್ಕೆ ಇಟ್ಟಿರುವದರಿಂದ ಆ ದಿವಸ ಪೂರ್ವಾಹ್ನ 11 ಘಂಟೆಗೆ ನೀವು ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸದಿದ್ದರೆ ನಿಮ್ಮನ್ನು ಎಕ್ಸ್‌ಪಾರ್ಟ ಮಾಡಿ ಅರ್ಜಿಯು ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸೋಣಾಗುತ್ತದೆ.

S. Lakshman Rao.
Vakil for Petitioner-
Kasaragod, 26-8-1952.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 298/1952

T ರಾಮಚಂದ್ರರಾವ್ — ವಾ

ಮತ್ತು

1) ದೊಡ್ಡ ಸೆಟ್ಟಿ ವೈರೆಸೆಟ್ಟಿಯ ಮಗಳ
2) ಶೀನ ಸೆಟ್ಟಿ ತಾಡ ಸೆಟ್ರ ಮಗ— ಉಡಿ

— ಪ್ರತಿವಾದಿಗಳು,

ತಾಲೂಕು ಕೆರ್ಕಳ್ ಬೆಟ್ಟು ಗ್ರಾಮದಲ್ಲಿರುವವರು ಇವರೊಳಗೆ—ಸದರಿ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನೆಂದರೆ—

ವಾದಿಯವರಿಗೆ ಪ್ರತಿವಾದಿಗಳು ಬಾಲಗೇಣಿ ಕ್ಕಿನಿಂದ ಅನುಭವಿಸಿಕೊಂಡು ಬಂದ ಆಸ್ತಿಗಳ ಸ್ವಾಧೀನತೆಗೂ ಮುಟ್ಟುವಳಿಗೂ ಕೊಡ ವಾದಿಯು ಮಾಡಿರುವ ಮೇಲ್ಕಂಡ ವ್ಯಾಜ್ಯವು ತಾ 17—9—1952ಕ್ಕೆ ಇಟ್ಟಿರುತ್ತ ಸದ್ರಿ ವ್ಯಾಜ್ಯದಲ್ಲಿ ಪ್ರತಿವಾದಿಗೆ ಉದಾಹರಣೆ ಕೊಟ್ಟು ವ್ಯವಹರಿಸುವುದಿದ್ದಲ್ಲಿ ಸದ್ರಿ ತಾ. 17 9—52 ನೇ ದಿವಸ ಬೆಳಿಗ್ಗೆ 11 ಘಂಟೆಗೆ ಮೇಲ್ಕಂಡ ಕೋರ್ಟ ಮುಂದೆ ಸ್ವ ಹಾ ವಕೀಲರ ಮುಖಾಂತರ ಹಾಜರಾ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತ ಪ್ಪಿ ನಿಮ್ಮನ್ನು ಏಕ್ಸ್‌ಪಾರ್ಟಿ ಮಾಡಿ ಸದ್ರಿ ವ್ಯಾಜ್ಯವು ಫೈಸಲ್ ಮಾಡಲ್ಪಡುವುದು

P. V. Achar
Vakil for Plaintif
ಉಡ್ಪಿ ತಾ 27 -8 -52

ಕುಂದಾಪುರ

ಡಿ. ಮು ಕೋರ್ಟಿನಲ್ಲಿ

ಕ್ರಮ ನಂಬ್ರ 190/5

ವಾದಿ:— ಗಣಪಯ್ಯ ಶೆಟ್ಟಿ

ಪ್ರತಿವಾದಿಗಳು:— ಚಿನ್ನಮ್ಮ ರುಕ್ಮಿಣಿ ಕೂ

ಕುಂದಾಪುರ ತಾಲೂಕು ಉಪ್ಪುಂದ ಗ್ರಾಮದಲ್ಲಿರುವ ರಘುನಾಥ ಶೆಟ್ಟರ ಹೆಂಡತಿ ಲಾ ದಾವೆಯ 3 ನೇ ಪ್ರತಿವಾದಿ ಚಿನ್ನಮ್ಮ ಮುಳಾಂಬು ಇವರಿಗೆ ಈ ಮೂಲಕ ತಿಳಿಪಡಿಸುವುದೇನೆಂದರೆ:—

ವಾದಿ ಕೈಕೇತಿನಲ್ಲಿ ಕಾಣ್ಬದ ನಿವೃತ್ತಿ ಕುರಿತು ಪ್ರತಿವಾದಿತ ಮೇಲೆ ಮಾಡಿದ ಮೇಲಣ ದಾವೆ ತಾ. 29-9-52 ಕ್ಕೆ ಪ್ರತಿ ದಿರ ಉಧಾಹರಣೆ ಬಗ್ಗೆ ಇಡೋಣಾಗಿದೆ. ದ್ರಿದಾವೆಯ ಕುರಿತು ನಿಮ್ಮದೇನಾದರು ಆಕ್ಷೇಪವಿದ್ದಲ್ಲಿ ಸದ್ರಿ ತಾರೀಕಿನಲ್ಲಿ ಕೋರ್ಟ ಮುಂದೆ ಜ್ಯಾಹೀರು ಮಾಡಿ ಕೊಳ್ಳತಕ್ಕ ತ ಕೋರ್ಟು ಹುಕುಂ ಪ್ರಕಾರ ನಿಮಗೆ ಮೂಲಕ ತಿಳಿಸಿಯದೆ.

(By order of the court)

A. N. Rao
Advocate for Pl
Coondapoor Date 28 8 52.

ದೇವರ ದಯೆ

ಅಕ್ಕಪಕ್ಕಗಳಲ್ಲಿ ರೆಕ್ಕೆಗಳುಳ್ಳ ದೇವದೂತರು ನಮ್ಮನ್ನು ಕೈಹಿಡಿದು ಮುನ್ನಡೆಸುತ್ತಿದ್ದ ಕತೆ ಹಿಂದಿನ ಕಾಲದ ಸಂಗತಿ ಇದನ್ನು ದೇವರ ದಯೆ ಎಂಬುದಾಗಿ ಆಗ ಜನರು ಕೊಂಡಾಡುತ್ತಿದ್ದರು

ದೇವರ ದಯೆ ಈಗಲೂ ಇದೆ. ಆದರ ಸ್ವರೂಪದಲ್ಲಿ ಮಾತ್ರ ಪರಿವರ್ತನೆಯಾಗಿದೆ ಸ್ವರ್ಗದಿಂದ ದೇವದೂತರು ಇಳಿದು ಬಂದು ತನ್ನನ್ನು ಸಂರಕ್ಷಿಸಬೇಕೆಂದು ವಿವೇಕಿಗಳು ಈಗ ಅಪೇಕ್ಷಿಸುವುದಿಲ್ಲ ಈಗ ದೇವರ ದಯೆಯಿಂದ ನಮಗೆ ಅನ್ವಯಿಸಿಸಿದ [illegible] ಸೌಲಭ್ಯವಿದೆ [illegible] ವಿಮೆ [illegible], ನಿಮ್ಮ ಮತ್ತು ನಿಮ್ಮ ಕುಟುಂಬದ ರಕ್ಷಣೆಯನ್ನು ಮಾಡಿಕೊಳ್ಳಿರಿ ತನ್ನ ರಕ್ಷಣೆ ತಾನು ಮಾಡಿಕೊಳ್ಳಬಲ್ಲವನನ್ನು ದೇವರು ಕೈಬಿಡುವುದಿಲ್ಲ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಪ್ರಧಾನ ಕಾರ್ಯಾಲಯ. ಉಡುಪಿ, ದ ಭಾರತ ಸ್ಥಾಪನೆ: ೧೯೩೫
ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ ಕಂಪೆನಿ
The Canara Mutual Assurance Co. Ltd.
Head Office: UDIPI. S India. Estd: 1935

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ಮಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಟಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಬಡದೇಶಗಳ ಭೂಗರ್ಭ ನಿಧಿ

ಆಗ್ನೇಯ ಏಶಿಯಾ ರಾಷ್ಟ್ರಗಳ ಅತುಲೈಶ್ವರ್ಯ

ಆಗ್ನೇಯ ಏಶಿಯಾದಲ್ಲಿ ಹೇರಳ ಖನಿಜ ಸಂಪತ್ತು ತುಂಬಿದೆ. ಚೀನಾ, ಮಲಯಾ, ಜಪಾನು, ಭಾರತಗಳು ಅಪಾರ ಖನಿಜವನ್ನು ಒಳಗೊಂಡಿವೆ. ಆದರೆ ಅವುಗಳೆಲ್ಲವನ್ನೂ ಭೂಗರ್ಭದ ನಿಕ್ಷೇಪದಿಂದ ತೆಗೆದು ಗರಿಷ್ಠ ಪ್ರಮಾಣದಲ್ಲಿ ಉಪಯೋಗಕ್ಕೆ ದೊರಕುವಂತೆ ಮಾಡುವ ಪ್ರಯತ್ನಗಳು ಅಷ್ಟು ಹೆಚ್ಚಿಲ್ಲ. ಆದರೂ ಈಚೆಗೆ ಪ್ರಕಟಗೊಂಡಿರುವ ವರದಿಯಂತೆ ೧೯೫೦ ಕ್ಕಿಂತಲೂ ಕಳೆದವರ್ಷ ಅಧಿಕ ಖನಿಜ ಸಂಪತ್ತನ್ನು ಸೂರೆಗೊಳ್ಳಲಾಯಿತೆಂದು ತಿಳಿದಿದೆ. ಅಲ್ಲದೆ ಆಯಾ ಸರಕಾರಗಳು ಖನಿಜೋತ್ಪತ್ತಿಯನ್ನು ಹೆಚ್ಚಿಸುವ ಬಗ್ಗೆ ಯೋಗ್ಯ ಕ್ರಮ.ಗಳನ್ನು ಕೈಗೊಂಡ ನಿದರ್ಶನಗಳೂ ಇವೆ. ಖನಿಜ ಮತ್ತು ತತ್ಸಂಬಂಧಿ ಕ್ಷೇತ್ರಗಳ ಅಭಿವೃದ್ಧಿಗಾಗಿ ಸಾಕಷ್ಟು ಹೆಚ್ಚು ಹಣವನ್ನು ಭಾರತ ಮತ್ತು ಪಾಕಿಸ್ತಾನ ಸರಕಾರಗಳು ತಮ್ಮ ಐದು ಹಾಗೂ ಆರು ವರ್ಷಗಳ ಯೋಜನೆಗಳಲ್ಲಿ ತೆಗೆದಿಟ್ಟಿವೆ. ಸಂಯುಕ್ತರಾಷ್ಟ್ರಸಂಘದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಭಾಗಕ್ಕೆ ಸಿಲೋನಿನಲ್ಲಿ ಮೂರು ವರ್ಷಗಳ ತನಕ ಖನಿಜ ಸಂಗ್ರಹದ ಸಂಶೋಧನೆ ನಡೆಸಲು ಅಧಿಕಾರಕೊಡುವ ಒಪ್ಪಂದವಾಗಿದೆ. ಬರ್ಮಾದಲ್ಲಿ ಎರಡು ಗಣಿಗಾರಿಕೆ ಕಂಪೆನಿ ಒಡೆತನವನ್ನು ಸರಕಾರ ಹಾಗೂ ಖಾಸಗಿ ಬಂಡವಾಳಗಳಿಂದ ನಿಯಂತ್ರಿಸಲಾಗಿದೆ. ನೇಪಾಳದಲ್ಲಿರುವ ಸತುವಿನ ಸಂಗ್ರಹದ ಅಧಿಕ ಪ್ರಯೋಜನ ಪಡೆಯಲಾಗುವಂತೆ ಹೊಸತಾಗಿ ಕಂಪೆನಿಯೊಂದನ್ನು ತೆರೆಯಲಾಗಿದೆ. ಇದುಬಿಟ್ಟು, ವಿವಿಧ ಸರಕಾರಗಳು ತಮ್ಮ ರಾಜ್ಯಗಳಲ್ಲಿ ಇರಬಹುದಾದ ಅಣುಶಕ್ತಿ ಉತ್ಪಾದನೆಯ ಖನಿಜಗಳನ್ನು-(ಉದಾ: ಮೊನಜೈಟ್, ಯುರೇನಿಯಂ) ಕಂಡು ಹಿಡಿಯುವುದರಲ್ಲಿ ತತ್ಪರವಿವೆ.

ಅಮೂಲ್ಯ ಖನಿಜಗಳು

ಜಗತ್ತಿನ ಒಟ್ಟು ಉತ್ಪಾದನೆಯಲ್ಲಿ ೯% ತವರವು ಆಗ್ನೇಯ ಏಶಿಯಾದ ಯಾ, ಇಂಡೋನೇಶಿಯಾ ಮತ್ತು ಥೈಲೇಂಡ್‌ಗಳಿಂದ ದೊರೆತದ್ದು ಕಂಡು ರುತ್ತದೆ. ಆದರೆ ಇದೇ ಮಾತನ್ನು ಕಲ್ಲಿದ್ದಲು, ಪೆಟ್ರೋಲಿಯಂ ಮತ್ತು ಕಬ್ಬಿಣ ನಿಕ್ಷೇಪದ ಕುರಿತು ಹೇಳಲಾಗುವುದಿಲ್ಲ. ಧಾರಾಳವಾದ ಸಂಗ್ರಹ ಭೂಗರ್ಭದಲ್ಲಿದ್ದರೂ-- ನಮಗೆ ಉಪಯೋಗಕ್ಕೆ ದೊರೆತದ್ದು ಬಹಳ ಕಡಿಮೆ: ಪಶ್ಚಿಮ ಜರ್ಮನಿಯೊಂದೇ ರಾಷ್ಟ್ರದ ಕಲ್ಲಿದ್ದಲು ಉತ್ಪತ್ತಿ ಇಡೀ ಆಗ್ನೇಯ ಏಶಿಯಾದಷ್ಟು ಇತ್ತು! ಚೀನಾವನ್ನು ಬಿಟ್ಟುಳಿದ ಈ ವಿಭಾಗದ ಕಬ್ಬಿಣದ ಉತ್ಪತ್ತಿ ಸಂಯುಕ್ತ ರಾಜ್ಯ ಅಮೇರಿಕೆಯ ಉತ್ಪನ್ನದ ಶೇಕಡಾ ಐದರಷ್ಟು ಮಾತ್ರ! ಪೆಟ್ರೋಲಿಯಂ ಇಡೀ ಏಶ್ಯವನ್ನುಳಿದ ಜಗತ್ತಿನ ಉತ್ಪಾದನೆಯ ನೂರರಲ್ಲಿ ಮೂರಂಶದಷ್ಟೇ! ನಮ್ಮಲ್ಲಿ ತಂತ್ರಜ್ಞರ ಕೊರತೆ ಇರುವುದೂ, ಬಂಡವಾಳ ಸಾಕಷ್ಟು ಇಲ್ಲದಿರುವುದೂ--ಈ ರೀತಿ ನಾವು ಹಿಂದೆ ಉಳಿಯಲು ಕಾರಣ. ಆದರೂ ಲೋಕದಲ್ಲಿ ಖನಿಜೋತ್ಪತ್ತಿಯ ಬೇಡಿಕೆ ಬಹಳ ಹೆಚ್ಚಿದೆಯಾಗಿ-ಅವುಗಳ ಬೆಲೆಯು ಪ್ರಮಾಣವೂ ಏರುತ್ತಿದೆ. ಭಾರತದಿಂದ ಇಲ್ಮೆನೈಟ, ಮ್ಯಾಂಗನೀಸ್, ಮೈಕಾಗಳೂ, ಚೈನಾದಿಂದ ಟಂಗಸ್ಟನ್ ಅದುರುಗಳೂ, ಸಿಲೋನಿನಿಂದ ಗ್ರಾಫೈಟೂ ಜಾಗತಿಕ ಪೇಟೆಗೆ ಬಂದು, ಹೇರಳ ಹಣ ಸಂಪಾದಿಸುತ್ತಿವೆ. ಆಗ್ನೇಯ ಏಶಿಯಾದಲ್ಲಿ ಟಂಗಸ್ಟನ್, ಇಲ್ಮೆನೈಟ್, ಕ್ರೋಮೈಟ್, ಮ್ಯಾಂಗನೀಜ, ತಾಮ್ರ, ಸೀಸ, ಸತು, ತವರ, ಅಲುಮಿನಿಯಂ, ಅಂಟಿಮನಿ ಗ್ರಾಫೈಟ್, ಮೈಕಾ ಮತ್ತು ಗಂಧಕ ಇನ್ನೇ ಮುಂತಾದ ಹತ್ತು ಹಲವು ಬಗೆಯ ಅಮೂಲ್ಯ ಖನಿಜಗಳಿವೆ ಎಂದು ಗೊತ್ತಾಗಿದೆ

ಕಬ್ಬಿಣದ ಉತ್ಪತ್ತಿ

ಕಬ್ಬಿಣದ ಅದುರಿಗೂ ಆಗ್ನೇಯ ಏಶಿಯಾ: ಕಡಿಮೆಯಲ್ಲ: ಚೈನಾವನ್ನುಳಿದು ಇತರ ರಾಷ್ಟ್ರಗಳು ಐದು ಮಿಲಿಯ ಟನ್ನುಗಳಗೂ ಹೆಚ್ಚು ಕಬ್ಬಿಣದ ಅದರನ್ನು ಎತ್ತಿದುವು. ಹೆಚ್ಚಾಗಿ ಜಪಾನಿಗೇ ಈ ಅದುರುಗಳನ್ನು ರಫ್ತುಮಾಡಲಾಯಿತು. ಜಪಾನಿನಲ್ಲಿ ಉಕ್ಕು ಮತ್ತು ಕಬ್ಬಿಣದ ಕೈಗಾರಿಕೆ ಎಷ್ಟು ಬೆಳೆದಿವೆ ಎಂದರೆ ಈಗ ಸುದೂರದ ಪಶ್ಚಿಮ ಅಮೇರಿಕದಿಂದ ಹಾಗೂ ಭಾರತದಿಂದ ಕಬ್ಬಿಣದ ಅದುರು ಆಮದು ಮಾಡಿಕೊಳ್ಳಲು ಮಾತುಕತೆ ನಡೆಯುತ್ತಿದೆ. ಭಾರತ ಹಾಗೂ ಚೈನಾಗಳು ತಮ್ಮ ಮನೆಯ ಬೇಡಿಕೆಯನ್ನು ಪೂರೈಸಲಿಕ್ಕೆನೇ ಕಬ್ಬಿಣದ ಅದುರನ್ನಿಟ್ಟವು.

ಟಂಗಸ್ಟನ್ ಉತ್ಪಾದನೆಯಲ್ಲಿ ಚೈನಾ ಜಗತ್ತಿನಲ್ಲಿ ಸರ್ವ ಪ್ರಥಮಸ್ಥಾನ ಪಡೆಯುತ್ತಿದೆ. ಸಂಯುಕ್ತ ರಾಜ್ಯ ಅಮೇರಿಕೆಯೇ ಟಂಗಸ್ಟನನ್ನು ಬಳಸುವುದರಲ್ಲಿ ಮುಂದು. ಆದರೆ ಚೈನಾದಲ್ಲಿ ಪ್ರಜಾರಾಜ್ಯ ಸ್ಥಾಪನೆಯಾ ಬಳಿಕ ಟಂಗಸ್ಟನ್, ರಶಿಯಾಕ್ಕೆ ಸಾಗಿತಾಗಿ-ಅಮೇರಿಕೆಯ ಬೇಡಿಕೆ ಪೂರೈಸಲ್ಪಡಲಿಲ್ಲ. ಕೊರಿಯಾದ ಯುದ್ಧ ಪ್ರಸಂಗ ಸಹ ಪರಿಸ್ಥಿತಿಯನ್ನು ಹದಗೆಡಿಸಿತು. ಹೀಗಾಗಿ ಟಂಗಸ್ಟನಿಗೆ ಬೆಲೆ ಏರಿತು. ಬರ್ಮಾವು ದ್ವಿತೀಯ ಸ್ಥಾನವನ್ನು ಪಡೆದರೂ ಆಂತರಿಕ ಅನಾನುಕೂಲತೆಗಳಿಂದ ಉತ್ಪಾದನೆಯು ಮುಟ್ಟಿ ತೀರ ಕುಸಿದುದರಿಂದ—ಬರ್ಮಾಕ್ಕೆ ಈ ಬೆಲೆ ಏರಿಕೆಯ ಲಾಭವುಣ್ಣಲಾಗಲಿಲ್ಲ. ಕೊರಿಯಾ ಹಾಗೂ ಥ್ಯಾಲೇಂಡುಗಳು ಈಗ ಟಂಗಸ್ಟನು ಉತ್ಪಾದನೆಯಲ್ಲಿ ಧುಮುಕಿವೆ.

ಭಾರತದ ಕೀರ್ತಿ

ಭಾರತವು ಇಲ್ಮೆನೈಟದ ಉತ್ಪಾದನೆಯಲ್ಲಿ ಅಗ್ರಸ್ಥಾನ ಪಡೆದಿದೆ. ಅಮೇರಿಕವೇ ಇದನ್ನು ಹೆಚ್ಚು ಬಳಸುತ್ತದೆ. ಮುಂಬಯಿಯ ಬಳಿಯಲ್ಲಿ ಹೊಸತಾಗಿ ಇಲ್ಮೆನೈಟ ನಿಕ್ಷೇಪವನ್ನು ಶೋಧಿಸಲಾಗಿದೆ. ಮಲಯಾವೂ ಇದರಲ್ಲಿ ಮುಂದಿದ್ದು ೧೯೫೦ರ ಎರಡು ಪಾಲಷ್ಟನ್ನು ಕಳೆದ ವರ್ಷ ಅದು ಉತ್ಪಾದಿಸಿತು. ಸಿಲೋನಿನಲ್ಲಿ ಕರಾವಳಿಯ ಹೊಯ್ಗೆಯಿಂದ ಇಲ್ಮೆನೈಟನ್ನು ಪ್ರತ್ಯೇಕಿಸಿ ತೆಗೆಯುವ ಬಗ್ಗೆ ಪ್ರಯತ್ನ ನಡೆಯುತ್ತಿದೆ.

ಮ್ಯಾಂಗನೀಜ (ಲೋಹಮಂಡೂರ) ದ ಉತ್ಪಾದನೆಯಲ್ಲೂ ಭಾರತ ಮುಂದಿದೆ ಅಮೇರಿಕ ಆಮದು ಮಾಡಿಕೊಂಡುದರಲ್ಲಿ ಮೂರರಲ್ಲಿ ಒಂದಂಶ ಭಾರತದಿಂದಲೇ ಬಂತು ಫಿಲಿಪ್ಪೈನ್ಸು ಒಳ್ಳೆಯ ಬೆಲೆ ಕೈಗೆ ಬರುವಂತಿದ್ದರೂ ಕಾರಣಾಂತರಗಳಿಂದ ಮ್ಯಾಂಗನೀಜದ ಉತ್ಪಾದನೆಯನ್ನು ಹೆಚ್ಚಿಸಲಿಲ್ಲ. ಆದರೆ ಕ್ರೋಮ್ಯಾಟ ಎಂಬ ಇನ್ನೊಂದು ಮುಖ್ಯ ಅದುರಿಗೆ ಅದು ಹೆಸರಾಗಿದೆ. ಪಾಕಿಸ್ತಾನವೂ ಕ್ರೋಮ್ಯಾಟಉತ್ಪಾದಕ ರಾಷ್ಟ್ರವಾಗಿದೆ.

ಬಹುಶಃ ವಿಶ್ವದಲ್ಲಿ ಗ್ರಾಫೈಟ ಮತ್ತು ಮೈಕಾಗಳಿಗೆ ಏಶಿಯಾದ ಸಿಲೋನು ಹಾಗೂ ಭಾರತಗಳೇ ಹೆಸರಾದವುಗಳು. ಅವುಗಳ ಕೂಡೆ ಸ್ಪರ್ಧಿಸುವ ಬೇರೆ ರಾಷ್ಟ್ರಗಳಿಲ್ಲ.

ಅಲುಮಿನಿಯಂ

ಪುಟ್ಟ ರಾಷ್ಟ್ರ ಜಪಾನು ತಾಮ್ರ, ಸೀಸ ಮತ್ತು ಸತುಗಳ ಉತ್ಪಾದನೆಗೆ ಪ್ರಸಿದ್ಧ. ಫಿಲಿಪ್ಪೈನ್ಸು ತಾಮ್ರದ ಉತ್ಪಾದನೆಯಲ್ಲಿ ದ್ವಿತೀಯಸ್ಥಾನ ಪಡೆದಿದೆ. ಬರ್ಮಾದ ವಿಖ್ಯಾತ ಬಾಡ್ವಿನ್ ಸೀಸ ಮತ್ತು ಸತು ಉತ್ಪಾದಕ ಗಣಿಗಳು ಖಾಸಗಿ ಹಾಗೂ ಸರಕಾರದ ಸಂಯುಕ್ತ ಒಡೆತನಕ್ಕೆ ಸೇರಿದುವು.

ತವರದ ಉತ್ಪಾದನೆಗೆ ಮಲಯಾ, ಇಂಡೋನೇಶಿಯಾ ಮತ್ತು ಥ್ಯಾಲೇಂಡು ಜಗತ್ತಿನಲ್ಲಿ ಖ್ಯಾತಿವೆತ್ತ ರಾಷ್ಟ್ರಗಳು. ಕಾರ್ಮಿಕರ ಉಪಟಳಗಳು, ಸುರಕ್ಷಿತವಲ್ಲದ ವಾತಾವರಣ, ಏರುತ್ತಿರುವ ಉತ್ಪಾದನಾ ವೆಚ್ಚ, ವರ್ಷಾಂತ್ಯದ ಬೆಲೆ ಯಿಳಿತಗಳಿದ್ದರೂ—ಉತ್ಪಾದನೆ ಕುಸಿಯದಿದ್ದುದು ಒಂದು ವೈಶಿಷ್ಟ್ಯ.

ಅಲುಮಿನಿಯಮನ್ನು ಲೋಹರೂಪದಲ್ಲಿ ಉತ್ಪಾದಿಸಲು ಶಕ್ಯವಾದ ರಾಷ್ಟ್ರಗಳು ಜಪಾನು, ಚೈನಾ ಮತ್ತು ಭಾರತ. ಅಲುಮಿನಿಯಮನ್ನು ಒಳಗೊಂಡಿರುವ ಬಾಕ್ಸೈಟು ಅದುರುಗಳನ್ನು ಇಂಡೋನೇಶಿಯಾ ಅತ್ಯಧಿಕ ಪ್ರಮಾಣದಲ್ಲಿ ಎತ್ತಿ ರಫ್ತುಮಾಡುತ್ತಿತ್ತು. ಭಾರತದಲ್ಲೂ ಈ ಅದುರುಗಳನ್ನು ಎತ್ತಿ, ನಮ್ಮ ಅಲುಮಿನಿಯಂ ಕೈಗಾರಿಗೆ ಒದಗಿಸಲಾಯಿತು. ಅಲ್ಲದೇ ಹೊಸದಾಗಿ ಅಲುಮಿನಿಯಮ್ ನಿಕ್ಷೇಪ ನಮ್ಮಲ್ಲಿರುವುದನ್ನೂ ಕಂಡುಹಿಡಿಯಲಾಗಿದೆ.

[೯ನೇ ಪುಟ ನೋಡಿರಿ.]

Notice.

In the Court of the
District Munsiff of Udipi
O. S. 448 of 1952

Between—
nas Rebello Plaintiff
and
iovinda Poojari & 6 others-- Defendants.

Is hereby given that the Plaintiff has applied for Permission o sue on behalf of the Geneal body of Creditors of the amily of the Defendants; also n the aforsaid Suit filed by im for a declaration that the le Deed Executed by defts. 2 o 7 in favour of the Ist deft. is oid as against the Pltf. and eneral body of Creditors, as being fraudulent and the same is osted to 7-10-52 in the aforsid Court, for inquiry.

[By order of Court]

K. Vittal Nayak
Vakil for Plaintiff

Idipi, 28-8-52.

ನೀವೇಕೆ ಸೇವಿಂಗ್ಸ್‌ಬೇಂಕ್ ಖಾತೆಯನ್ನು ತೆರೆಯಬೇಕು?

ಬೇಂಕಿನಲ್ಲಿಟ್ಟ ಹಣವು ಯಾವಾಗಲೂ ಭದ್ರವಾಗಿರುತ್ತದೆ. ಗುಪ್ತವಾಗಿ ಶೇಖರಿಸಿಟ್ಟ ಹಣಕ್ಕೆ ಒಂದಲ್ಲ ಒಂದು ದಿನ ಗಂಡಾಂತರವೆ. ಅಂತಹ ನಿಧಿಯು ಕಳ್ಳಕಾಕರ ವಶವಾಗಲು, ಕೈ ಬದಲಾವಣೆಯಾಗಲು ಇಲ್ಲವೆ ಇಲಿಗಳು ಅಥವಾ ಬಿಳಿ ಇರುವೆಗಳಿಂದ ನಾಶವಾಗಿ ಹೋಗಬಹುದು. ಆಕರ್ಷಕ ಬಡ್ಡಿಯನ್ನು ನಾವು ಕೊಡುವುದರಿಂದ ನಮ್ಮ ಸೇವಿಂಗ್ಸ್ ಖಾತೆಯಲ್ಲಿಟ್ಟ ನಿಮ್ಮ ಹಣವು ದಿನದಿಂದ ದಿನಕ್ಕೆ ಬೆಳೆಯುತ್ತಲೇ ಹೋಗುವುದು.

ಇಂದೇ ಸೇವಿಂಗ್ಸ್ ಬೇಂಕ್ ಲೆಖ್ಖವನ್ನು ತೆರೆಯಿರಿ.

ದಿ ಕೆನರಾ ಇಂಡಸ್ಟ್ರಿಯಲ್
ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.
ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ.

The Canara Industrial &
Banking Syndicate Limited.
Estd. 1925 H. O. UDIPI

ಋತುಸ್ರಾವ ನಿಂತಿತು

'ಕುಸುಮರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. [illegible] ಮುಂದಿಗೆ ಖಾತ್ರಿ ಗುಣವಾಗಿದೆ- ಬಿಲ್ಲೆ: ರೂ. 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. 5-] ವಿ. ಪಿ. ಖರ್ಚು ಪ್ರತ್ಯೇಕ]

Mrs D. DEVEE, F. DS. (N. J.),
Tollygunge CALCUTTA.
ಸ್ಟಾಕಿಸ್ಟರು: ಕಾಮತ್ ಕಂಪೆನಿ, ಮಂಗಳೂರು

ವಿವಿಧ ಪಾತ್ರೆಗಳು

ಯಾವತರದ್ದೂ, ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ [illegible] ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಲಂಜೆ ವ್ಯಾಸಾಚಾರ್ಯ,

ಇಂದೂರಿನ ಎ.ಐ.ಸಿ.ಸಿ.

ಒಕ್ಕಲೆಬ್ಬಿಸುವುದನ್ನು ತಡೆಯುವ ಸುಗ್ರೀವಾಜ್ಞೆ

ನಿಯಂತ್ರಣಕ್ಕೆ ಅರ್ಧಚಂದ್ರ

ರಾಜಾಜಿ ಧೈರ್ಯದಿಂದ ಮುಂದಿಟ್ಟ ವಿನಿಯಂತ್ರಣದ ಹೆಜ್ಜೆಯನ್ನು ಆಶಾದೃಷ್ಟಿಯಿಂದ ನೋಡಿದುದು ಸಾರ್ಥಕವಾಗಿದೆ: ಮದ್ರಾಸು ರಾಜ್ಯದಲ್ಲಿ ಅದು ಯಶಸ್ವಿಯಾದುದಲ್ಲದೆ—ಉಳಿದ ರಾಜ್ಯಗಳಿಗೂ ಸ್ಫೂರ್ತಿಶಕ್ತಿಯನ್ನು ನೀಡಿದುದು ಅಭಿಮಾನದ ಸಂಗತಿ. ಉತ್ತರ ಪ್ರದೇಶ-ಬಿಹಾರ ಮುಂತಾದ ರಾಜ್ಯಗಳು ನಿಯಂತ್ರಣವನ್ನು ಈ ಮೊದಲೇ ಸಡಲಿಸಿವೆ. ಮತ್ತೀಗ ಮಧ್ಯಭಾರತ ರಾಜ್ಯದಲ್ಲಿಯೂ ಸಪ್ಟೆಂಬರ ಒಂದನೇ ತಾರೀಕಿನಿಂದ ನಿಯಂತ್ರಣವು ಹೆಚ್ಚು ಕಡಿಮೆ ರದ್ದಾಗುವುದು. ಇಂದೂರು ಮತ್ತು ಮೊಹೋ ಎಂಬೆರಡು ನಗರಗಳಲ್ಲಿ ಕ್ರಮಬದ್ಧವಾದ ರೇಶನಿಂಗು ಪದ್ಧತಿಯು ಅಲ್ಲಿ ಕಳೆದೆಂಟು ವರ್ಷಗಳಿಂದಿತ್ತು. ಉಳಿದೆಡೆಯಲ್ಲೂ ರೈತರು ಲೆವಿ ಕೊಡುವುದನ್ನು ಕೊಟ್ಟಮೇಲೂ-ಆಹಾರ ಧಾನ್ಯಗಳನ್ನು ಮನಬಂದಂತೆ ಮಾರುವಂತಿರಲಿಲ್ಲ ಅವುಗಳ ಸಾಗಾಟಕ್ಕೆ ಅನೇಕ ಬಗೆಯ ನಿಯಂತ್ರಣಗಳಿದ್ದುವು. ಈಗ ಆ ಪ್ರದೇಶದ ಹಳ್ಳಿಗಳ ಹೊರತು, ಉಳಿದೆಲ್ಲಾ ಕಡೆ ಬಿಗಿಯನ್ನು ಸಡಲಿಸಲಾಗಿದೆ. ಗೋಧಿಯ ಸಂಗ್ರಹ ಮಾತ್ರ ಸ್ವಲ್ಪ ಕಡಿಮೆ ಇದೆ ಎಂದೆನಿಸಿದ್ದರಿಂದ-ಅದರ ಮೇಲಿನ ಹತೋಟಿ ಪೂರ್ಣ ತೆಗೆದೊಗೆಯಲಾಗಿಲ್ಲ ಆದರೂ ಇನ್ನಾರು ತಿಂಗಳುಗಳಲ್ಲಿ ಪರಿಸ್ಥಿತಿ ಸುಧಾರಿಸುವುದು ನಿಶ್ಚಯವೆಂದಾದರೆ-ಪ್ರಶ್ನೆಯ ಪುನರವಲೋಕನಕ್ಕೆ ಎಡೆದೊರೆಯುವುದು. ಆಗ ಈ ವಿಷಯದಲ್ಲೂ ಉಚಿತವಾದ ಕ್ರಮ ಕೈಗೊಳ್ಳಬಹುದು. ಈ ಬಗೆಯಾಗ-ಜನರ ಮೇಲೆ ಅದಕ್ಕೂ ಹೆಚ್ಚು ಸರಕಾರದ ಮೇಲೆ ಅನಪೇಕ್ಷಿತ ಹಾಗೂ ಅನಾವಶ್ಯಕವಾದ ಹೊರೆಯಾಗಿ ಕುಳಿತಿದ್ದ ನಿಯಂತ್ರಣಕ್ಕೆ ಅರ್ಧಚಂದ್ರ ದೊರೆಯುತ್ತಿರುವುದು ಸಂತೋಷ.

ಕೊರತೆಯ ಭೂತ

ಆಹಾರದ ಅಭಾವವಿದೆ ಎಂಬ ಭಯವೇ ನಿಯಂತ್ರಣಗಳನ್ನು ಹೇರುವಂತೆ ಒತ್ತಾಯಿಸುವ ಶಕ್ತಿಯಾಗಿರುತ್ತದೆ. ಏಶಿಯಾದ ರಾಷ್ಟ್ರಗಳಲ್ಲಿ ಹಸಿವು ಗೋಳಿಡುತ್ತಿದೆ. ಪಾಶ್ಚಾತ್ಯ ಪತ್ರಿಕೋದ್ಯಮಿ ಲೂಯಿ ಫಿಶರ್ ಹಿಂದೊಮ್ಮೆ ಭಾರತದ ಸಮಸ್ಯೆಯೆಂದರೆ ಅನ್ನ ಬ್ರಹ್ಮ ಎಂದು ಬರೆದಿದ್ದ. ಒಂದು ರೀತಿಯಲ್ಲಿ ನೋಡಿದರೆ ತಜ್ಞರು ಇಡೀ ಲೋಕದಲ್ಲಿಯೇ ಆಹಾರಧಾನ್ಯದ ಉತ್ಪತ್ತಿ ಕಡಮೆಯಾಗುತ್ತಾ ನಡೆದಿದೆ ಎನ್ನುತ್ತಾರೆ ಅಕ್ಕಿಯನ್ನು ಉಪಾಹರಿಸುವ ಚಪಲ ಅಡರಿಗಿದೆ: ಮತ್ತು ಜನಸಂಖ್ಯೆಯ ಹೆಚ್ಚಳವನ್ನೂ, ಬರ್ಮಾ, ಇಂಡೋಚೈನಾದಂಥ ದೇಶಗಳ ಆಂತರಿಕ ಅಶಾಂತಿಯನ್ನೂ ಅಕ್ಕಿಯ ಕೊರತೆಯುಂಟಾಗಲು ಪ್ರೇರಕವಾದ ಪರಿಸ್ಥಿತಿ ಎಂದವರು ಬೊಟ್ಟೆತ್ತಿ ತೋರಿಸುವರು. ಜಾಗತಿಕ ಆಹಾರ ಮತ್ತು ಕೃಷಿ ಸಂಘಕೂಡ ಕೊರತೆ ಇದೆ ಎಂದೇ ಸಾರುತ್ತಿದೆ. ಅಮೇರಿಕೆ! ಅಲ್ಲಿಯ ಕೃಷಿ ಪದ್ಧತಿಯನ್ನು ಭಾರತೀಯ ರೈತರ ಹಿತಕ್ಕಾಗಿ ಅಭ್ಯಸಿಸಲು ಹೋಗಿರುವ ಒಂದು ನಿಯೋಗ ಭಾರತದಲ್ಲಿ ನೂರಕ್ಕೆ ಆರರಷ್ಟು ಮಾತ್ರ ಕೊರತೆ ಇದೆ ಎಂದಿದೆ. ನಮ್ಮ ರೈತರು ಸ್ವಲ್ಪ ಮಾತ್ರ ಮನಸ್ಸುಗೊಟ್ಟು ಹೆಚ್ಚು ಬೆಳೆಯಲು ಕಂಕಣಬದ್ಧರಾದರೆ- ಈ ಕೊರತೆ ನೀಗಿಸುವುದೊಂದು ಕಠಿಣ ಕಾರ್ಯವಲ್ಲ ಎಂದವರ ಅಭಿಪ್ರಾಯ. ಇದಕ್ಕಿಂತಲೂ ಮೋಜಿನ ಸಂಗತಿ ಎಂದರೆ-- ಆಹಾರ ಧಾನ್ಯಗಳ ಕೊರತೆ ಇದೆ ಎನ್ನುವವರು ವ್ಯಾಪಾರೀ ದೃಷ್ಟಿಯಲ್ಲಿ ಅಧಿಕ ಲಾಭಕ್ಕೆ ಕೈ ಹಚ್ಚುವವರೇ ಎಂಬ ಒಂದು ವಾದ. ಪ್ರಜೆಗಳ ಹೊಟ್ಟೆ ಹೊರೆಯುವ ಭಾರವನ್ನು ಸರಕಾರ ತನ್ನ ಮೇಲೆ ತೆಗೆದುಕೊಂಡ ಮೇಲೆ-ಮಾನವೀಯ ವ್ಯವಹಾರವಾಗಿದ್ದ ಪ್ರಶ್ನೆಗೆ ರಾಜಕೀಯ ಸ್ವರೂಪ ಬಂತು. ಪರಿಣಾಮವಾಗಿ-ರಾಜಕೀಯದ ಹೆಗ್ಗುರುತಾದ ವಿಳಂಬ ಧೋರಣೆಯೂ ಔದಾಸೀನ್ಯವೂ ಆಹಾರ ಧಾನ್ಯಗಳ ಆಮದು ಮತ್ತು ಪೂರೈಕೆಯಲ್ಲಿ ಕಂಡು ಬಂದುವು. ಇದನ್ನೆಲ್ಲ ನಿವಾರಿಸುವ ಏಕಮಾತ್ರ ಸಾಧನವೆಂದರೆ—ಮೊದಲಿನಂತೆ ಆಹಾರ ಆಯಾತದ ಮತ್ತು ವಿತರಣೆಯ ಹೊಣೆಯನ್ನು ಸಾಮಾನ್ಯ ವ್ಯಾಪಾರಿ ವರ್ಗಗಳಿಗೆ ಬಿಟ್ಟು ಕೊಡುವುದೇ ಸೈ. ಈ ಅಭಿಪ್ರಾಯವನ್ನು "ದಿ ಇಕಾನಮಿಸ್ಟ" ಎಂಬ ಪ್ರಸಿದ್ಧ ಪತ್ರಿಕೆಯಲ್ಲಿ ವ್ಯಕ್ತಗೊಳಿಸಿ, ಪ್ರಮಾಣಿಸಲಾಗಿದೆ.

ತಂಜಾವೂರಿನ ಗೊಂದಲ

ಇದರ ವಿವರವಾದ ಚರ್ಚೆ ನಮಗೆ ಅಗತ್ಯವಿಲ್ಲದಿದ್ದರೂ, ನಿಯಂತ್ರಣಗಳು ಪ್ರತಿಯೊಂದು ಸಮಯ ಅನಗತ್ಯವೆಂದು ಘಂಟಾಘೋಷವಾಗಿ ಹೇಳುವಂತಿಲ್ಲದಿದ್ದರೂ—ಮೇಲಿಂದ ಮೇಲೆ ಈ ತರ್ಕ ಮಾನವೀಯ ಸ್ವಭಾವಕ್ಕೆ ಒಗ್ಗುವಂತಿದೆ ಎಂಬುದು ನಿಜ. ಆದರೆ ಭಾರತವನ್ನು ಎದುರಿಸಿರುವ ಸಮಸ್ಯೆ ಕೇವಲ ಆಹಾರಾಭಾವದಷ್ಟಕ್ಕೆ ಸೀಮಿತವಾಗಿಲ್ಲ. ಭಾರತಕ್ಕೆ ಆಗಮಿಸಿದ ಲೂಯಿ ಫಿಶರ್ ಹೇಳುವಂತೆ ಭಾರತದಲ್ಲಿ ಆಮೂಲಾಗ್ರವಾಗಿ ಸಾಮಾಜಿಕ ಕ್ರಾಂತಿಯಾಗಬೇಕಾಗಿದೆ. ಜನರ ಆಹಾರಾಭ್ಯಾಸದಲ್ಲಿ ಬದಲಾವಣೆಯೂ-ಸಂತತಿನಿಯಮನದ ಕಡೆಗೆ ಅಧಿಕ ಒಲವೂ ಜನರಲ್ಲಿ ತೋರಬೇಕು. ಪರಂಪರಾಗತವಾಗಿ ರೂಢಿಸಿರುವ ದೃಷ್ಟಿ ಮಾರ್ಪಡಬೇಕು. ಹಿಗೆಲ್ಲ "ಬೇಕು"ಗಳ ಪಟ್ಟಿ ಬೆಳೆಯುತ್ತಿದೆ. ಆದರೆ ಇವುಗಳನ್ನು ಕಣ್ಣೆತ್ತಿ ನೋಡುವವರೂ ಇಲ್ಲವೆಂಬುದನ್ನು ಮರೆಯುವುದೆಂತು? ವ್ಯಕ್ತಿಯು ತನ್ನ ಸ್ವಾರ್ಥವೊಂದನ್ನೆ ಮುಂದಿಟ್ಟುಕೊಂಡು-ಸಮಾಜದ ಸಮಷ್ಟಿಹಿತವನ್ನು ಅಲಕ್ಷಿಸುವ ಸಂಪ್ರದಾಯ ಬಹುಶಃ ಭಾರತದಲ್ಲಿ ಬೆಳೆದಷ್ಟು, ಬೇರೆಲ್ಲೂ ಇಲ್ಲ. ಆದರೆ ವೈಯಕ್ತಿಕ ಸ್ವಾರ್ಥವು ಒಂದು ವರ್ಗವನ್ನೆ ಅನ್ಯಾಯಕ್ಕೆ ಎಳೆಯುವಾಗ-ಸಮಾಜದ ಹಿತವನ್ನೇ ವಹಿಸಿ, ನ್ಯಾಯಕಾಪಾಡಬೇಕಾಗಿ ಬರುತ್ತದೆ. ಇಂಥದೊಂದು ಪ್ರಸಂಗ ಇದೀಗ ನಮ್ಮ ರಾಜ್ಯದ ತಂಜಾವೂರು ಜಿಲ್ಲೆಯಲ್ಲಿ ಘಟಿಸಿತು: ತಂಜಾವೂರು ಸಮೃದ್ಧಿಯ ಪ್ರದೇಶ ದಕ್ಷಿಣ ಭಾರತದಲ್ಲಿಯೇ ಅಕ್ಕಿಯ ಬೆಳೆಗೆ ಹೆಸರಾಗಿದೆ. ಕಾವೇರಿಯ ಮುಖ ತ್ರಿಕೋಣದಲ್ಲಿರುವ ಇಲ್ಲಿಯ ನೆಲ ಸದಾ ನೀರುಂಡು ಹಸಿರಾಗಿದೆ. ಪ್ರಕೃತಿದತ್ತವಾದ ಈ ಎಲ್ಲ ಅನುಕೂಲತೆಗಳಿದ್ದರೂ, ಅಲ್ಲಿ ಕೆಲಸಮಯದಿಂದ ಭೂಮಾಲಿಕ ಹಾಗೂ ಒಕ್ಕಲುಗಳೊಳಗೆ ಬಲಿಯುತಿದ್ದ ಮನಸ್ತಾಪದಿಂದಾಗಿ-ಉತ್ಪಾದನೆ ಕುಸಿಯುವ ಭಯ ಉಂಟಾಗಿದೆ.

ಸುಗ್ರೀವಾಜ್ಞೆಯ ತಾತ್ಪರ್ಯ

ಈ ವಿಷಯದಲ್ಲಿ ಮದ್ರಾಸು ಸರಕಾರವು ಕೈಹಾಕಿ—ಈಗ ಗವರ್ನರರು ಒಂದು ಸುಗ್ರೀವಾಜ್ಞೆ (ಆರ್ಡಿನೆನ್ಸ)ಯ ಮೂಲಕ, ಅಲ್ಲಿಯ ಪರಿಸ್ಥಿತಿಯ ಮೇಲೆ ಹಿಡಿತ ತರಲು ಪ್ರಯತ್ನಿಸಿರುವರು. ಕೆಲವು ರಾಜಕೀಯ ಪಕ್ಷಗಳು ಉಳುವವನಿಗೆ ಧರ್ಮಾರ್ಥವಾಗಿಯೇ ಹೊಲಸಿಗುವುದೆಂದು ಆಶೆ ತೋರಿಸಿ ಮತ್ತು ಭೂಮಾಲಿಕರಿಗೆ ಸಲ್ಲತಕ್ಕ ಗೇಣಿ ಕೊಡುವುದನಾವಶ್ಯವೆಂದು ಅಪಪ್ರಚಾರ ನಡೆಸಿ ಒಕ್ಕಲಿಗರನ್ನು ಅನ್ಯಾಯಕ್ಕೆ ಪ್ರೇರೇಪಿಸಿದಂತೆ—ಭೂಮಾಲಿಕರು ಕೆಲವರೂ ಒಕ್ಕಲುಗಳಿಂದ ಆಸ್ತಿಯನ್ನು ಬಿಡಿಸಿಕೊಂಡು ಇಚ್ಛಾನುಸಾರ ವರ್ತಿಸುವ ಅತಿರೇಕಕ್ಕೆ ಮನಗೊಟ್ಟರು. ಹೀಗಾಗಿ ಅಲ್ಲಿ ಘರ್ಷಣೆ ಎದ್ದಿತು. ಹೊಲ ಸಂಬಂಧದ ಹಕ್ಕು ಬಾಧ್ಯತೆಗಳ ಪ್ರಶ್ನೆಯನ್ನೆತ್ತಿಕೊಂಡು ತೀವ್ರ ಸ್ವರೂಪದ ಆಂದೋಲನ ನಡೆಯಿತು. ಇದರಿಂದ ರಾಜ್ಯದಲ್ಲಿ ಕ್ಷೋಭೆಯುಂಟಾಗುವ ಭಯವನ್ನು ಮುಂದಾಗಿ ಕಂಡುಕೊಂಡು ಗವರ್ನರರ ಸುಗ್ರೀವಾಜ್ಞೆಯನ್ನು ಒಡನೆಯೇ ಜಾರಿಗೆ ತರಲಾಯಿತು. ಸುಗ್ರೀವಾಜ್ಞೆಯಲ್ಲಿ ಒಕ್ಕಲುಗಳಿಗೆ ತಮ್ಮ ಭೂಮಿಯ ಮೇಲೆ ವ್ಯವಸಾಯ ಮಾಡುವ ಹಕ್ಕನ್ನು ಐದು ವರ್ಷಗಳ ವರೆಗೆ ಸುರಕ್ಷಿತವಾಗಿಡಲಾಗಿದೆ. ಮೊದಲು ಉತ್ಪಾದನೆಯಲ್ಲಿ ೭೫% ಭೂಮಾಲಿಕರಿಗೆ ಸಲ್ಲುತಿದ್ದರೆ, ಈಗ ಅದನು ೬೦%ಕ್ಕೆ ಇಳಿಸಲಾಗಿದೆ. ಆದರೆ—ಸಾಗುವಳಿ ಖರ್ಚು, ಬೀಜ, ಗೊಬ್ಬರ ಮುಂತಾದವುಗಳನ್ನೆಲ್ಲ ಒಕ್ಕಲೇ ನೋಡಿಕೊಳ್ಳಬೇಕೆಂದು ವಿಧಿಸಿರುವುದರಿಂದ— ಒಕ್ಕಲುಗಳಿಗೆ ಹೆಚ್ಚಿನ ಪ್ರಯೋಜನ ದೊರೆತಿಲ್ಲ. ಹೀಗಾಗಿ ಸಮಾಧಾನಕ್ಕೆ ಎಡೆಯೂ ಇಲ್ಲ. ಅದರಂತೆ ಭೂವ್ಯವಸಾಯದಲ್ಲಿ ದುಡಿಯುವ ಕೆಲಸಗಾರರ ವೇತನ ಪ್ರಮಾಣವನ್ನೂ ನಿರ್ದಿಷ್ಟಗೊಳಿಸಲಾಗಿದೆ. ಈ ವಿಷಯದಲ್ಲಿಯೂ ತಕರಾರುಗಳಿಗೆ ಆಸ್ಪದ ದೊರೆತಿದೆ. ಜಿಲ್ಲೆಯಾದ್ಯಂತಕ್ಕೂ ಒಂದೇ ಮಿತಿಯನ್ನು ಹಾಕಿದುದರಿಂದ ಆ ಜಿಲ್ಲೆಯ ಪ್ರದೇಶಗಳ ಭಿನ್ನ ಭಿನ್ನ ಪರಿಸ್ಥಿತಿಯಂತೆ ಅಗ್ಗದರದಲ್ಲಿ ದೊರಕಬಹುದಿದ್ದ ಕೂಲಿ ಜನರು ಇನ್ನು ಸಿಗದಾಗುವರು ಮತ್ತು ಸರಕಾರವೇ ಕ್ರಮ ಕೈಗೊಂಡುದರಿಂದ ಕೂಲಿಯ ಬೆಲೆ ಇತರ ಕ್ಷೇತ್ರಗಳಲ್ಲೂ ಏರುವುದು ಎಂಬ ಭಯವನ್ನು ತೋರಿಸಲಾಗಿದೆ.

ಭೂ ಸುಧಾರಣೆಯ ಬೇಡಿಕೆ.

ತಂಜಾವೂರಿನಲ್ಲಿಯಷ್ಟೆ ಈ ಬಗೆಯ ಪರಿಸ್ಥಿತಿ ಇರುವುದಲ್ಲ--ರಾಜ್ಯದ ಉಳಿದೆಡೆಗಳಲ್ಲೂ ಇಂಥದೇ ವಾತಾವರಣವಿದೆ ಆದರೆ ಅಲ್ಲಿಯನ್ನು ಘರ್ಷಣೆಯಾಗಲೀ ಚಳುವಳಿಯಾಗಲೀ ನಡೆದಿಲ್ಲ ಮಾತ್ರ. ಸರಕಾರವು ಶಾಸನಸಭೆಯಲ್ಲಿ ಕಾಯಿದೆ ತಂದು ಭೂಸುಧಾರಣೆಯಂಥ ಮಹತ್ವದ ವಿಷಯವನ್ನು ಚರ್ಚಿಸದೆ-ವಿಶಿಷ್ಟ ಪರಿಸ್ಥಿತಿ ಇದೆ ಎಂದುಕೊಂಡು ಸುಗ್ರೀವಾಜ್ಞೆಯಿಂದ ಕಾರ್ಯಸಾಧಿಸ ಹೊರಟುದು ಸಮಂ

ZANDU Mahayogaraja Guggula
ಝಂಡೂ ಮಹಾಯೋಗರಾಜ ಗುಗ್ಗುಳ
ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ. 1 ತೊಲೆಗೆ ರೂ 3- ಮಾತ್ರ
ದೊರೆಯುವ ಸ್ಥಳಗಳು:
1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್. ಕೆಮಿಸ್ಟ್ಸ ಎಂಡ್ ಡ್ರಗ್ಗಿಸ್ಟ್ಸ, ಉಡುಪಿ
2 ಶ್ರೀ ವಿ ವಿ ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು
4 ಎಲ್ ಎನ್. ಶರ್ಮ, ಹಜೂರು ರಸ್ತೆ ಮಂಗಳೂರು.
ಮತ್ತಿತರ ಸೇಲ್ ಏಜಂಟರಲ್ಲಿ.
ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ, ವ್ಯಾಪಾರ ಶರತ್ತು ವಗೈರೆಗಳಿಗೆ ಬರೆಯಿರಿ.
DAMODAR & CO.,
Nainiappa Naicken Street, Park Town-MADRAS 3.

For Protection and Provision
Consult
The New Guardian of India Life Insurance Co., Ltd.
Estd] Head office: MADRAS [1934
A Policy in this Progressive Life Office is good investment; its Agency is valuable business connection.
Applications for representation are invited from influential persons.
Please apply to:
The Branch Manager,
Diamond Building, Hampankatta,
MNGALORE, S. K.

ಅಧಿವೇಶನದ ಮುಂದೆ

ಪ್ರಜಾ-ಸೋಶಿಯಲಿಸ್ಟ್ ಪಕ್ಷಕ್ಕೆ ಅಕ್ಕರೆಯ ಸ್ವಾಗತ

ಜಸವಲ್ಲ ಎನ್ನುವವರೂ ಇದ್ದಾರೆ. ಅಲ್ಲದೆ ಒಂದು ತೊಡಕನ್ನು ಬಿಡಿಸಲು ಜೊಂಟಿ ಸುಗ್ರೀವಾಜ್ಞೆಯಿಂದ ಬೇರೆಯೇ ತೊಡಕುಗಳು ಉಂಟಾಗಿವೆ ಎಂದು ಸಿದ್ಧಪಡಿಸಿ ತೋರಿಸುವುದಕ್ಕೆ ಮುಂದಾದವರೂ ಇರುವರು. ನ್ಯಾಯಾಲಯದಲ್ಲಿ ಸುಗ್ರೀವಾಜ್ಞೆಯ ಕ್ರಮಬದ್ಧತೆಯನ್ನು ಪ್ರಶ್ನಿಸುವ ಎತ್ತುಗಡೆಯಲ್ಲಿ ಭೂಮಾಲಿಕರು ಇರುವರೆಂದೂ ಸುದ್ದಿ ಇದೆ. ಹೇಗೇ ಇರಲಿ—ಈ ಆಜ್ಞೆಯು ಒಳ್ಳೆಯ ಉದ್ದೇಶವನ್ನಿಟ್ಟುಕೊಂಡಿದೆ. ಹಾಗೆಂದು ರೈತರಿಗೆ ಐದು ವರ್ಷಗಳ ಭೂಸ್ವಾಮ್ಯದ ಭದ್ರತೆಯನ್ನ(ನ್ಯಾಯ ರೀತಿಯಲ್ಲಿ ನಡೆದುಕೊಂಡರೆ ಮಾತ್ರ)ಕೊಟ್ಟುದರ ಹೊರತು ಹೆಚ್ಚಿನ ಉಪಕಾರವೇನನ್ನೂ ಮಾಡಿಲ್ಲ. ಹೈದರಾಬಾದು ಸರಕಾರದ ರಾಜಪ್ರಮುಖರು ಹೊರಡಿಸಿದ ಸುಗ್ರೀವಾಜ್ಞೆ ಕೂಡ ಹೆಚ್ಚು ಕಡಿಮೆ ಇದೇ ಮಾದರಿಯಲ್ಲಿದೆ. ಭೂಮಾಲಿಕರು ಬುದ್ಧಿಪೂರ್ವಕವಾಗಿ, ದುರುದ್ದೇಶದಿಂದ ಇನ್ನು ಮುಂದೆ ರೈತರನ್ನು ಆಸ್ತಿಯಿಂದ ಬಿಡಿಸಲಾಗದು ಎಂದಿದೆ ಅದರಲ್ಲಿ. ಇದನ್ನೆಲ್ಲ ನಿರುದ್ವೇಗದಿಂದ ವಿಮರ್ಶಿಸುವುದಾದರೆ—ಭೂಸುಧಾರಣೆಯ ಆಗತ್ಯ ಬಹಳಷ್ಟಿದೆ ಎಂದೂ— ಆದರೆ ಶಾಸನ ಸಭೆಯಲ್ಲಿ ಶಾಸನವನ್ನು ಮಂಡಿಸಿ, ಪಾಸುಮಾಡಿಸಿಕೊಳ್ಳುವುದೇ ಕ್ಷೇಮದ ರೀತಿ ಎಂದೂ ತಿಳಿಯಬಹುದು. ನಮ್ಮ ಜಿಲ್ಲೆಯನ್ನೆ ತೆಗೆದುಕೊಂಡರೂ—ಅನ್ಯಾಯವಾಗಿ ಒಕ್ಕಲೆಬ್ಬಿಸುವುದನ್ನು ಪ್ರತಿಬಂಧಿಸಬೇಕೆನ್ನುವ ಬೇಡಿಕೆ ಹತ್ತು ಹಲವು ಸಲ ಸರಕಾರಕ್ಕೆ ಮುಟ್ಟಿದ್ದುಂಟು. ಇಂದಿಗೂ ಪರಿಸ್ಥಿತಿ ಏನು ಸುಧಾರಿಸಿಲ್ಲ. ತಂಜಾವೂರ ಒಕ್ಕಲುಗಳಿಗೆ ದೊರೆತ ಭರವಸೆಯಿಂದ ಉಳಿದ ರೈತರು ವಂಚಿತರಾಗಿರುವುದು ಸಮನಲ್ಲ.

ಇಂದೂರಿನ ಅಧಿವೇಶನ

ಭೂಸುಧಾರಣೆಯನ್ನು ಆಯಾ ಪ್ರದೇಶದ ಪರಿಸ್ಥಿತಿಗೆ ಅನುಸರಿಸಿಯೇ ಮಾಡುವುದವಶ್ಯವೆಂದು ಕಾಂಗ್ರೆಸ್ ಹಿರಿಯರು ಮೊನ್ನೆ ಮೊನ್ನೆ ನಿರ್ಧರಿಸಿದರು. ಇದೇ ಸಪ್ಟಂಬರ ೧೧ರಲ್ಲಿ ಇಂದೂರಿನಲ್ಲಿ ಸೇರಲಿರುವ ಮಹಾಧಿವೇಶನದಲ್ಲಿ ಭೂಸುಧಾರಣೆಯ ಪ್ರಶ್ನೆಗೆ ಪ್ರಾಶಸ್ತ್ಯಕೊಡುವರೆಂಬುದು ನಿಶ್ಚಯ. ಆದರೆ ಈ ಮಹಾಧಿವೇಶನದಲ್ಲಿ ಪ್ರಾಮುಖ್ಯವಾಗಿ ಚರ್ಚೆಗೆ ಬರಲಿರುವ ಇನ್ನೊಂದು ವಿಷಯ ಇದೆ: ಕಾಂಗ್ರೆಸು ಈಗ ಸರಕಾರವನ್ನು ರಚಿಸಿಕೊಂಡು ಆಡಳಿತದ ಹೊಣೆಯನ್ನು ಹೊತ್ತಿರುವುದರಿಂದ ಅದು ಕೇವಲ ಜನತಾಂದೋಲನವನ್ನು ಸಂಘಟಿಸುವ ಸಂಸ್ಥೆಯಾಗಿ ಉಳಿದಿಲ್ಲ. ಶಾಸನಾತ್ಮಕ ಅಧಿಕಾರವನ್ನೂ ಸಂಘಟನಾತ್ಮಕ ಚಳುವಳಿಯನ್ನೂ ಪರಸ್ಪರ ಪೂರಕವಾಗುವ ರೀತಿಯಲ್ಲಿ ಹೇಗೆ ಹೊಂದಿಸಿಕೊಳ್ಳಬೇಕೆಂಬುದರ ಬಗ್ಗೆ ಈಗ ತೀವ್ರಾಸಕ್ತಿಯನ್ನು ಕಾಂಗ್ರೆಸದ ವರಿಷ್ಠರು ತೋರಿಸುತ್ತಿರುವರು. ಈಚೆಗೆ ಬಹುಸ್ಥಾನೀಯ [illegible] ಸಂಬಂಧದಲ್ಲಿ ಮುಂಬಯಿ ಸರಕಾರ ಹಾಗೂ ಪ್ರದೇಶ ಕಾಂಗ್ರೆಸ ಸಮಿತಿಗಳ ನಡುವೆ ಭಿನ್ನಾಭಿಪ್ರಾಯವೆದ್ದು—ಪರಿಸ್ಥಿತಿ ಪ್ರಕೋಪಕ್ಕೇರಲು ಪ್ರೇರೇಪಣೆಯೊದಗಿದೆ. ಜನತೆಯೊಡನೆ ಸರಕಾರವು ನಿಕಟ ಸಂಪರ್ಕವನ್ನು ಇಟ್ಟುಕೊಳ್ಳಬೇಕೆಂದೂ ಕಾಂಗ್ರೆಸ ಸಮಿತಿಗಳ ಮತ್ತು ಸರಕಾರದ ನಡವಳಿಕೆಗಳಲ್ಲಿ ವೈವಿಧ್ಯವಿರದೆ, ಸಾಮಾನ್ಯ ಏಕರೂಪತೆ ಇರಬೇಕೆಂದೂ ಬಹಳವಾಗಿ ಹೇಳಲಾಗುತ್ತಿದೆ. ಶಾಸನ ಸಭೆಗಳ ಮತ್ತು ಕೇಂದ್ರ ಪಾರ್ಲಿಮೆಂಟಿನ ಸದಸ್ಯರು ತಮ್ಮ ಮತದಾರ ಕ್ಷೇತ್ರಗಳೊಂದಿಗೆ ಗಾಢವಾದ ಸಂಬಂಧವನ್ನು ಬೆಳೆಸಿಕೊಳ್ಳುವುದು ಉಚಿತವೆಂದೂ ತಿಳಿಯಲಾಗಿದೆ. ಹೀಗೆ ಇಂದೂರಿನ ಎ. ಐ. ಸಿ. ಸಿ. ಅಧಿವೇಶನವು ವೈಶಿಷ್ಟ್ಯಪೂರ್ಣವಾಗುವುದರಲ್ಲಿ ಸಂದೇಹವಿಲ್ಲ.

ಜನತೆಯೊಡನೆ ಸಂಪರ್ಕ

ಕಾಂಗ್ರೆಸಿಗರಲ್ಲಿ ಮತಭೇದವೆದ್ದುದನ್ನು ನಿವಾರಿಸಬೇಕಾದುದು ಅಪೇಕ್ಷಣೀಯ; ಮತ್ತು ಕಾಂಗ್ರೆಸ ವರಿಷ್ಠರು ಈ ಕಡೆ ಶೀಘ್ರ ಗಮನಕೊಡಬೇಕು. ಶ್ರೀ ಎಸ್. ಕೆ. ಪಾಟೀಲರು ನೆಹರೂರಿಗೆ ಪತ್ರಬರೆದು ತಮ್ಮ ನಿಲುವನ್ನು ವಿವರಿಸಿದವರೆಂದು ವರದಿಯಾಗಿದೆ. ಹಾಗೆಯೇ ಕಾಂಗ್ರೆಸಿನ ಘಟನೆಗೆ ತಿದ್ದುಪಡಿ ಮಾಡುವ ವಿಷಯದಲ್ಲಿ ಪ್ರದೇಶ ಕಾಂಗ್ರೆಸ ಸಮಿತಿಗಳು ಬೇರೆ ಬೇರೆ ಅಭಿಪ್ರಾಯವನ್ನು ತಳೆದಿವೆ. ಪಾಟೀಲರು ಹೇಳುವಂತೆ ರಾಜ್ಯದ ಮುಖ್ಯಮಂತ್ರಿ, ಪ್ರದೇಶ ಕಾಂಗ್ರೆಸ ಸಮಿತಿಗಳ ಅಧ್ಯಕ್ಷ ಮತ್ತು ಕಾಂಗ್ರೆಸ ಮುಖಂಡರುಳ್ಳ ಒಂದು ಮಧ್ಯವರ್ತಿಯಾದ ಅಂಗವು ಸರಕಾರಕ್ಕೆ ಮಾರ್ಗದರ್ಶನ ಮಾಡಬೇಕೆಂದು ಒಪ್ಪಿದರೆ—ಪ್ರಜಾ ಪ್ರಭುತ್ವದ ಮೂಲ ತತ್ವಕ್ಕೆ ಕುಠಾರಾಘಾತವಾದಂತೆ ಎಂದು ಕೆಲವರ ಮತ. ಶಾಸನಾತ್ಮಕ ಹಾಗೂ ಸಂಘಟನಾತ್ಮಕವಾದ ಎರಡು ಬೇರೆ ಬೇರೆ ಶಾಖೆಗಳ ಮೇಲೆ ಕೆಲವೇ ಮಂದಿಯ ಸರ್ವಾಧಿಕಾರ ನಡೆಯಲಿಕ್ಕೆ ಇದರಿಂದ ಆಸ್ಪದವಾಗುತ್ತದೆ. ಇದರ ಬದಲಿಗೆ ಮೈಸೂರ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ಹೇಳುವಂತೆ ಎರಡೂ ಶಾಖೆಗಳನ್ನು ಒಂದಾಗಿಸಿ ಕಾರ್ಯಪ್ರವೃತ್ತರಾಗುವುದಾದರೆ, ಅಲ್ಲಿ ಶಾಸನಾತ್ಮಕ ಅಂಗದ ಪ್ರಾಧಾನ್ಯವೇ ಎದ್ದುತೋರುವುದು ಮತ್ತು ಸರಕಾರದ ಮೇಲೆ ವ್ಯರ್ಥವಾದ ತೊಂದರೆಗಳೂ ಬೀಳ್ಳುವುವು ಸರಕಾರದ ರಹಸ್ಯಗಳನ್ನು ಕಾಂಗ್ರೆಸ ಸಂಸ್ಥೆಗೆ, ಅರ್ಥಾತ್ ಅದರ ಸದಸ್ಯರಿಗೆ ತಿಳಿಯಪಡಿಸುತ್ತಾ ಹೋಗುವುದು ಚೆನ್ನಾದ ರೀತಿಯಲ್ಲ ಇದೆಲ್ಲ ಖಾಸಗಿ ಅಭಿಪ್ರಾಯ- ಇಷ್ಟಗಳಿಗೆ ಕೊನೆಯದಾಗಿ ಯಾವ ಸ್ವರೂಪ ಬರುವುದೆಂಬುದನ್ನು ಇನ್ನೂ ನಿರೀಕ್ಷಿಸಬೇಕಷ್ಟೆ. ಆದರು ಜನತೆಯೊಡನೆ ನಿಕಟ ಸಂಪರ್ಕವನ್ನು ಆಡಳಿತ ನಡೆಸುವ ಸರಕಾರ ಇಟ್ಟುಕೊಳ್ಳಬೇಕೆಂದು ಬಲವಾದ ಪ್ರತಿಪಾದನೆ ಇದಕ್ಕಾಗಿ—ರಾಷ್ಟ್ರೀಯ ಕಾಂಗ್ರೆಸ ಪಾರ್ಲಿಮೆಂಟರಿ ಮಂಡಳದ ನೇಮಕ ಬಹುಶಃ ಆಗಬಹುದು. ಎ. ಐ. ಸಿ. ಸಿ. ಅಧಿವೇಶನಕ್ಕೆ ಮುನ್ನಾದಿನ ಶ್ರೀ ನೆಹರೂರ ಅಧ್ಯಕ್ಷತೆಯಲ್ಲಿ ಕೂಡುವ ಸಭೆಯಲ್ಲಿ ಇದು ಚರ್ಚೆಗೆ ಬರುವುದು.

ಧುರೀಣರ ಮತಭೇದಗಳು

ಕಾಂಗ್ರೆಸ್ ವರ್ಗಗಳಲ್ಲಿ ಇನ್ನೂ ಕೆಲವು ಮತಭೇದಗಳು ಕಂಡುಬರುತ್ತಿವೆ. ಬಿಹಾರದ ಪೂರ್ವ ಭಾಗದ ಕೆಲವು ಪ್ರದೇಶವನ್ನು ಪಶ್ಚಿಮ ಬಂಗಾಳಕ್ಕೆ ಸೇರಿಸಬೇಕೆಂದು ಈಗ ಕೆಲವು ಸಮಯದಿಂದ ಎದ್ದಿದ್ದ ಮಾತು ನೆಹರೂರವರಿಗೆ ತಲೆಸಿಡಿತ ತಂದಿದೆ. ಪಶ್ಚಿಮ ಬಂಗಾಳ ಶಾಸನ ಸಭೆಯು ಒಂದು ನಿರ್ಣಯವನ್ನು ಸ್ವೀಕರಿಸಿ, ಈ ರೀತಿ ಬಿಹಾರದ ಕೆಲವು ಭಾಗವನ್ನು ತಮ್ಮ ರಾಜ್ಯಕ್ಕೆ ಸೇರಿಸಬೇಕೆಂದು ಒತ್ತಾಯ ಮಾಡಿತ್ತು. ಆದರೆ ಬಿಹಾರದ ಮುಖ್ಯಮಂತ್ರಿ ಡಾ|| ಸಿಂಹ ಇದನ್ನು ತೀವ್ರವಾಗಿ ವಿರೋಧಿಸಿದ್ದಾರೆ. ಅದಕ್ಕೆ ಪಶ್ಚಿಮ ಬಂಗಾಳ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಅತುಲ್ಯ ಘೋಷರು ಉತ್ತರ ಕೊಡುತ್ತಾ ತಮ್ಮ ಬೇಡಿಕೆ ನ್ಯಾಯಪೂರ್ಣವಾದುದೆಂದೂ ದೇಶಕ್ಕಾಗಿ ಬಂಗಾಳವು ಮಾಡಿದ ತ್ಯಾಗಕ್ಕೆ ಈ ಪ್ರತಿಫಲ ಸಿಗುವುದವಶ್ಯವೆಂದೂ ಹೇಳಿದ್ದಾರೆ. ಪೂರ್ವ ಬಂಗಾಳದಿಂದ ಬರುವ ನಿರಾಶ್ರಿತರನ್ನು ಪುನರ್ನಿವೇಶನಗೊಳಿಸುವುದಕ್ಕೆ ಪಶ್ಚಿಮ ಬಂಗಾಳವು ಈ ಹೊಸ ಪ್ರದೇಶಗಳನ್ನು ಕೇಳುತ್ತಿದೆ ಎಂದವರ ವಾದ. ಅಷ್ಟು ಮಾತ್ರವಲ್ಲದೆ—ತಾವು ಬೇಡುತ್ತಿರುವ ಬಿಹಾರದ ಪ್ರದೇಶವು ಬಂಗಾಳಿ ಮಾತನಾಡುವವರ ನಿವಾಸಸ್ಥಾನವೇ ಆಗಿದೆಯಾದುದರಿಂದ, ಕಾಂಗ್ರೆಸು ಬಹಳ ಕಾಲದಿಂದ ಹೇಳುತ್ತ ಬಂದಿರುವ ಭಾಷಾನುಗುಣ ಪ್ರಾಂತರಚನಾ ದೃಷ್ಟಿಯಿಂದಲೂ ತಮ್ಮ ಬೇಡಿಕೆ ಸಾಧುವೆಂದವರು ಸಿದ್ಧಪಡಿಸಿದ್ದಾರೆ. ಸಂಬಂಧದ ಪರಸ್ಪರ ದ್ವೇಷವನ್ನು ಹತ್ತಿಕ್ಕಲು ಪ್ರಯತ್ನಿಸುವುದಕ್ಕೆ ನೆಹರೂ ಹಿಂಜರಿದಿಲ್ಲ. ಒಂದು ಪತ್ರದ ಮೂಲಕ ಅವರು ತಮ್ಮ ಕಳವಳವನ್ನು ವ್ಯಕ್ತಪಡಿಸಿದ್ದು, ಧುರೀಣರು ಕಲಹ ಮಾಡಬಾರದೆಂದು ಹಿತ ನುಡಿದಿರುವರು. ಭಾಷಾನುಗುಣ ಪ್ರಾಂತರಚನೆಯ ಪ್ರಶ್ನೆಯನ್ನು ಕೇಳುವುದಾದರೆ—ಕರ್ನಾಟಕ ಪ್ರದೇಶ ಕಾಂಗ್ರೆಸ ಸಮಿತಿಯ ಇತ್ತೀಚಿನ ಸಭೆಯಲ್ಲಿ ಇದಕ್ಕೆ ಜೋರು ಕೊಡಲಾಯಿತು. ಒಬ್ಬ ಸದಸ್ಯರಂತೂ ಪರಂಪರಾಗತವಾಗಿ ಬಂದ—ಕೇವಲ ಗೊತ್ತುವಳಿಯನ್ನು ಸ್ವೀಕರಿಸಿ ನಿಷ್ಕ್ರಿಯರಾಗಿ ಕುಳಿತಿರುವ—ಪದ್ಧತಿಯ ಪ್ರತಿಭಟನಾರ್ಥವಾಗಿ ಸಭಾತ್ಯಾಗ ಮಾಡಿದರಂತೆ! ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ನೆಹರೂರಿಗೆ ಭಾಷಾನುಗುಣ ಪ್ರಾಂತ್ಯರಚನೆಯ ಬಗ್ಗೆ ಒತ್ತಾಯಪೂರ್ವಕ ಪತ್ರ ಬರೆಯುವರೆಂದು ತಿಳಿದಿದೆ

ಪ್ರಜಾ ಸೋಶಿಯಲಿಸ್ಟ ಪಕ್ಷ

ಹಾಗೆಂದು ಇಂಥ ಪತ್ರಗಳಿಂದ ಏನೂ ಕೆಲಸ ಸಾಧಿಸದು ಎಂಬುದು ಸ್ಪಷ್ಟ: ಎಷ್ಟು ಪತ್ರಗಳೂ ಮನವಿಗಳೂ ನೆನೆಗುದಿಗೆ ಬಿದ್ದಿಲ್ಲ! ತಂಜಾವೂರಿನ ಸುಗ್ರೀವಾಜ್ಞೆಯನ್ನೆ ನಿದರ್ಶನವಾಗಿ ತೆಗೆದುಕೊಂಡರೆ ಅಲ್ಲಿಯ ಚಳವಳಿಯೇ ಈ ತೆರನಾದೊಂದು ಹೆಜ್ಜೆಗೆ ಪ್ರೋತ್ಸಾಹ ಕೊಟ್ಟಿತು. ಕರ್ನಾಟಕ ಪ್ರಾಂತರಚನೆಯಾಗಲೀ, ಬೇರಾವುದೇ ಭಾಷಾನುಗುಣ ಪ್ರಾಂತದ ನಿರ್ಮಾಣವಾಗಲೀ, ಮಾತಿನಿಂದ ನಡೆಯುವಂತದಲ್ಲ ವರಿಷ್ಠರು ಒಪ್ಪಬೇಕೆನ್ನುತ್ತಾರೆ ಲೋಕದಲ್ಲಿ ಯಾವುದೊಂದು ವಿಷಯವನ್ನು ತೆಗೆದುಕೊಂಡರೂ -- ವೈಯಕ್ತಿಕ ಭಿನ್ನಾಭಿಪ್ರಾಯಕ್ಕೆ ಎಡೆಯಿದ್ದೇ ಇದೆಯಷ್ಟೇ ಎಂದಮೇಲೆ ಸಾಮಾನ್ಯ ತತ್ವಗಳ ಆಧಾರದ ಮೇಲೆಯೇ ಒಂದು ನಿರ್ಣಯವನ್ನು ಕಾರ್ಯಕಾರಿಯಾಗಿಸುವುದಕ್ಕೆ ಪ್ರಯತ್ನಿಸುವುದೊಳ್ಳೆಯದು. ಈಚೆಗೆ ಮಹತ್ವದ ಸುದ್ದಿಯಾಗಿ ಹಬ್ಬಿರುವ ಕಿಸಾನ್ ಮಜದೂರ ಪ್ರಜಾಪಕ್ಷ ಮತ್ತು ಸಮಾಜವಾದೀ ಪಕ್ಷಗಳ ಐಕ್ಯವು ಇದಕ್ಕೊಂದು ಯೋಗ್ಯ ನಿದರ್ಶನ. ಮೇಲಿಂದ ಮೇಲೆ ನೋಡಿದರೆ - ಇವುಗಳ ರಚನೆಯಲ್ಲಿಯೇ ಮೂಲಭೂತವಾದ ಭಿನ್ನತೆಯಿದೆ. ಹೊಸ ಪಕ್ಷದ — ಪ್ರಜಾ-ಸೋಶಿಯಲಿಸ್ಟ ಪಕ್ಷ ಎಂದವರ ಹೆಸರು — ಧುರೀಣರೇ ಹೇಳುವಂತೆ, ದೇಶದಲ್ಲಿ ಸಬಲವಾದೊಂದು ವಿರೋಧಿಗುಂಪನ್ನು ಕಟ್ಟುವ ಸಾಮಾನ್ಯ ಉದ್ದೇಶದಿಂದ ಈ ತೆರನಾದ ಐಕ್ಯತೆಗಾಗಿ ಪ್ರಯತ್ನ ನಡೆಯಿತು. ತತ್ವತಃ ಒಂದು ಗಾಂಧೀ ತತ್ವಾನುಯಾಯಿಯಾದ ಸರ್ವೋದಯ ಪಂಥಿಯಾದ ಪಕ್ಷ—ಮತ್ತಿನ್ನೊಂದು ಮಾರ್ಕ್ಸ ತತ್ವವನ್ನು ಒಪ್ಪುವ ಆರ್ಥಿಕ ಧ್ಯೇಯದ ಪಕ್ಷ. ಇವೆರಡು ಹೊಂದಿಕೊಂಡು ಕೆಲಸ ನಡೆಸುವುದೆಂಬುದು ಸಾಹಸದ ಮಾತೇ ಆದರೂ. ಅವುಗಳ ಧುರೀಣರು ಮೂರು ತಿಂಗಳುಗಳಿಂದ ಪರಸ್ಪರ ವಿಚಾರ ವಿಮರ್ಶೆ ನಡೆಸಿ ಕೊನೆಯದಾಗಿ ಒಂದು ಸ್ಪಷ್ಟ ನಿರ್ಣಯಕ್ಕೆ ಬಂದರು. ಸಪ್ಟಂಬರ ೨೫ನೇ ತಾರೀಕಿಗೆ ಮುಂಬಯಿಯಲ್ಲಿ ಜರಗುವ ಅಧಿವೇಶನದ ಹೊಸ ಪಕ್ಷಕ್ಕೆ ಸ್ಥಿರವಾದರೂಪವನ್ನು ಕೊಡುವರೆಂದು ತಿಳಿದಿದೆ.

(೭ನೇ ಪುಟಕ್ಕೆ ಮುಂದುವರಿಯುವುದು)

ಅಸಾಧಾರಣ ವಾಗ್ಮಿಗಳೂ ಗ್ರಂಥಕರ್ತರೂ ಆದ
ಶ್ರೀ. ಎಸ್ ಪಂಚಪಕೇಶ ಅಯ್ಯರ್, ಎಂ. ಎ., ಐ. ಸಿ. ಎಸ್, ಬಾರ್-ಎಟ್ ಲಾ,
ಎಫ್. ಎಸ್. ಎಲ್. ಅವರು ಬರೆದ Tales of Ind ಎಂಬ ಕಥಾವಳಿಯ ಅನುವಾದ

ಭಾರತೀಯ ಕತೆಗಳು

ಅನುವಾದಕರು—ಶ್ರೀ. ಕೊರಡ್ಕಲ್ ಶ್ರೀನಿವಾಸ ರಾವ್.

ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಬೇಕೆಂಬ ಅಪೇಕ್ಷೆ ಇದ್ದೇ ಇದೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸಂದರ್ಭೋಚಿತವಾದ ಉಪಮೆ, ಗಾದೆ, ಕಥೆ ದೃಷ್ಟಾಂತ ಇತ್ಯಾದಿಗಳು ಬರಬೇಕು. ಅಂತಹ ಅಮೂಲ್ಯ ಭಂಡಾಗಾರವೇ ಈ ಭಾರತೀಯ ಕತೆಗಳು

ಎಲ್ಲರೂ ಅವಶ್ಯವಾಗಿ ಓದತಕ್ಕ ಅಪೂರ್ವ ಗ್ರಂಥ
151 ಕತೆಗಳು ಬೆಲೆ ರೂ. 1-12-0
ನವಭಾರತ ಪುಸ್ತಕ ಭಂಡಾರ, ಉಡುಪಿ.

1906 ರಲ್ಲಿ ಸ್ಥಾಪಿಸಲ್ಪಟ್ಟ
ಸರ್ವತೋಮುಖವಾಗಿ ಅಭಿವೃದ್ಧಿ ಹೊಂದುತ್ತಲಿರುವ
'ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್''
ಇದನ್ನೇ ಸಹಸ್ರಾರು ಜನರು ತಮ್ಮ ಅಚ್ಚುಮೆಚ್ಚಿನ ಬ್ಯಾಂಕನ್ನಾಗಿ
ಆರಿಸಿರುವರು ನೀವೂ ಇಂದೇ ಒಂದು ಖಾತೆಯನ್ನು ತೆರೆದು
ಬ್ಯಾಂಕಿನ ಗ್ರಾಹಕರಲ್ಲಿ ಒಬ್ಬರಾಗಿರಿ
THE CANARA BANKING CORPORATION LIMITED.
ಪ್ರಧಾನ ಕಾರ್ಯಾಲಯ, ಉಡುಪಿ. (ದ ಭಾರತ)

ನವಯುಗ
ಉಡುಪಿ, ಗುರುವಾರ ೪-೯-'೫೨

ಹಳ್ಳಿಯ ಆರೋಗ್ಯ

ಮುಖ್ಯಮಂತ್ರಿ ರಾಜಗೋಪಾಲಾಚಾರಿಯವರು ಮದ್ರಾಸು ಮೆಡಿಕಲ್ ಕಾಲೇಜಿನ ಪದವೀಧರರನ್ನುದ್ದೇಶಿಸಿ ಮಾತನಾಡುವಾಗ ಗ್ರಾಮಾಂತರ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸಲು ಹೆಚ್ಚುಹೆಚ್ಚು ವೈದ್ಯರು ದೊರಕುವಂತೆ ಅಲ್ಪಾವಧಿಯ ಶಿಕ್ಷಣ ಕ್ರಮವನ್ನು ತೊಡಗುವ ಕುರಿತು ಸರಕಾರ ಆಲೋಚಿಸುತ್ತಿದೆ ಎಂದರು. ಶಿಕ್ಷಣಪದ್ಧತಿಯ ವಿವರಗಳು ವಿಸ್ತಾರವಾಗಿ ತಿಳಿದು ಬಂದಿಲ್ಲ—ಮತ್ತು ಸರಕಾರವಾದರೂ ಕೊನೆಯ ನಿರ್ಣಯವನ್ನು ಇನ್ನೂ ಕೈಗೊಂಡಿಲ್ಲವಾದುದರಿಂದ – ವಿವರವಾದ ಚರ್ಚೆಗೆ ಇದು ಅವಕಾಶವಲ್ಲ. ಆದರೂ –ಸರಕಾರ ಒಂದು ಉತ್ತಮ ವಿಷಯವನ್ನು ಪರ್ಯಾಲೋಚಿಸುತ್ತಿದೆಯೆಂದೂ ಇಲ್ಲಿ ಹೇಳುವುದೊಳ್ಳೆಯದು. ಗ್ರಾಮಾಂತರ ಪ್ರದೇಶಗಳ ಆರೋಗ್ಯ ಸ್ಥಿತಿಯು ಬಹಳಷ್ಟು ಕೆಟ್ಟಿರುವುದು ಎಲ್ಲರಿಗೂ ಗೊತ್ತಿದ್ದ ಸಂಗತಿಯೇ. ಹಳ್ಳಿಗಳ ಅಭಿವೃದ್ಧಿ ಯೋಜನೆಗಳಲ್ಲೆಲ್ಲ ಗ್ರಾಮನೈರ್ಮಲ್ಯ ಮತ್ತು ಆರೋಗ್ಯ ರಕ್ಷಣೆಯ ಬಗ್ಗೆ ಯೋಗ್ಯ ಚೆಷ್ಟೆಗಳನ್ನು ಇಡಬೇಕೆಂದು ಪ್ರತಿಪಾದನೆ ನಡೆಯುದಿಲ್ಲ. ಭಾರತದಂಥ ಬಡ ದೇಶದಲ್ಲಿ-ಹೊಟ್ಟೆಬಟ್ಟೆಯ ಮೂಲಭೂತ ಆವಶ್ಯಕತೆಯನ್ನು ಪೂರೈಸುವುದು ಕಷ್ಟಕ್ಕೆ ಬಂದಿರುವಾಗ- ಆರೋಗ್ಯರಕ್ಷಣೆಯಂಥ ಕಾರ್ಯಕ್ರಮದತ್ತ ಲಕ್ಷ್ಯ ಪೂರೈಸುವ ಹುಮ್ಮಸ್ಸು ಜನರಲ್ಲಿ ಉಳಿದಿಲ್ಲ. ನಮ್ಮ ಮೆಡಿಕಲ್ ಕಾಲೇಜುಗಳಿಂದ ಪದವೀಧರರಾಗಿ ಹೊರಬರುವ ಯುವಜನಾಂಗ ಕೂಡ ಹಳ್ಳಿಗರ ಒತ್ತಾಯದ ಔದಾಸೀನ್ಯಕ್ಕೆ ಒಪ್ಪಿಗೆಯ ಮುದ್ರೆಯನ್ನೊತ್ತಿ ಕುಳಿತುಬಿಡುವ ಸಂದರ್ಭವೇ ಹೆಚ್ಚು. ಅತ್ಯಂತ ವ್ಯಯದಿಂದ-ಡಿಗ್ರಿ ಸಂಪಾದಿಸಿದ ವಿದ್ಯಾರ್ಥಿಗಳು, ಅನೇಕ ಕಾರಣಗಳಿಗಾಗಿ ಹಳ್ಳಿಗಳಿಗೆ ಹೋಗಿ ನೆಲಸಲು ಒಡಂಬಡುವುದಿಲ್ಲ. ಮುಖ್ಯವಾಗಿ ಪೇಟೆ ಪಟ್ಟಣಗಳಲ್ಲಿ ದೊರಕುವ ಸಂಪಾದನೆ ಎಷ್ಟು ಮಾತ್ರಕ್ಕೂ ಹಳ್ಳಿಯಲ್ಲಿ ಸಿಗಲಾರದು. ಇದರ ಜೊತೆಗೆ ಅಮೂಲ್ಯ ಔಷಧ ಸಾಮಾಗ್ರಿಗಳು, ಸಾರಿಗೆ ಸಂಪರ್ಕದ ಅನುಕೂಲತೆಗಳು ಮುಂತಾದವುಗಳ ಬರವೂ ಗ್ರಾಮಾಂತರ ಪ್ರದೇಶಗಳಲ್ಲಿದೆ. ಪೇಟೆಯಲ್ಲಿ ಹತ್ತಾರು ರೋಗಿಗಳನ್ನು ಅವರಿದ್ದಲ್ಲಿಗೆ ಹೋಗಿ ಪರೀಕ್ಷಿಸುವ ಅವಧಿಯಲ್ಲಿ ಹಳ್ಳಿಯಲ್ಲಿ ಒಬ್ಬನನ್ನು ನೋಡುವಂತಿಲ್ಲ ಸರಿಯಾದ ಮಾರ್ಗಗಳಿಲ್ಲದೆ ಇರುವುದರಿಂದ–ಮತ್ತು ಡಾಕ್ಟರು ಜನರಿಗೆ ದೊರಕುವ ಹಣ ರೂಪದ ಪ್ರತಿಫಲ ಅತ್ಯಲ್ಪವಾಗಿರುವುದರಿಂದ ಹಳ್ಳಿಯ ರೋಗಿಗಳೆಂದರೆ ಕುತ್ಸಿತ ಭಾವನೆಯು ಬೆಳೆಯುತ್ತಿದೆ. ಈ ಮನೋಭೂಮಿಕೆಯು ಮಾರ್ಪಡಬೇಕಾದುದು ಅಗತ್ಯವೆಂದು ಮಾನವೀಯವಾದ ಕರುಣೆಯಿಂದ ನಾವು ಹೇಳುತ್ತೇವೆ. ಹಾಗೆಂದು–ದುಡ್ಡೇ ಸರ್ವಸ್ವವಾಗಿರುವ ಈ ದಿನಗಳಲ್ಲಿ, ಹಿತೋಪದೇಶಗಳ ಬೆಲೆ ಎಲ್ಲೆಡೆಯಲ್ಲೂ ತಗ್ಗಿದೆ. ಆದುದರಿಂದ ಬೇರೇನಾದರೂ ಆಮಿಷವನ್ನು ತೋರಿಸಿ-ಹಳ್ಳಿಗಳಿಗೆ ವೈದ್ಯ ಜನರನ್ನು ಆಕರ್ಷಿಸ ಬೇಕಾಗುತ್ತದೆ. ಈಗಿರುವ ಪದವೀಧರರು ದೊಡ್ಡ ಹಣವಂತರಿಂದ ಬಂದವರಿದ್ದು, ಸ್ವಾಭಾವಿಕವಾಗಿ ಅವರು ಪೇಟೆಯ ಕಡೆಗೇ ಕಣ್ಣಿಟ್ಟಿರುವರು. ಹಳ್ಳಿಯ ಎಷ್ಟೋ ಜನರಿಗೆ ವೈದ್ಯಕೀಯಾಭ್ಯಾಸ ಮಾಡುವ ಆಶೆ ಇದ್ದರೂ ಅದಕ್ಕೆ ತಗಲುವ ಪರಮಾವಧಿ ವೆಚ್ಚವನ್ನೂ ದೀರ್ಘಾವಧಿ ಸಮಯವನ್ನೂ ಕಂಡು ಅವರು ಹಿಂಜರಿಯುವರು. ರಾಜಗೋಪಾಲಾಚಾರ್ಯರು ಸೂಚಿಸಿದಂತೆ ಅಲ್ಪಾವಧಿ ಶಿಕ್ಷಣವನ್ನು ನೀಡಿದ್ದೇ ಆದರೆ ಎಷ್ಟೋ ಯುವಕರಿಗೆ ಇದೊಂದು ಪ್ರೋತ್ಸಾಹವಾಗಿ ಪರಿಣಮಿಸುವುದು. ಹಳ್ಳಿಯ ಸಾಮಾನ್ಯ ಕಾಯಿಲೆಗಳಿಗೆ ಯೋಗ್ಯ ಚಿಕಿತ್ಸೆಯನ್ನು ಶಾಸ್ತ್ರೀಯವಾಗಿ ಮಾಡುವ ಸಾಮರ್ಥ್ಯ ಅವರಲ್ಲಿದ್ದರೆ-- ಸಾಕು. ಶಸ್ತ್ರ ಚಿಕಿತ್ಸೆ, ಮತ್ತು ಆಧುನಿಕ ವಿಜ್ಞಾನದ ಪ್ರಭಾವದಿಂದ ನ್ಯಗ್ರೋಧ ವೃಕ್ಷದಂತೆ ಬೆಳೆಯುತ್ತಿರುವ ವೈದ್ಯಕೀಯ ಶಾಸ್ತ್ರದ ವಿಶಾಲಾನುಭವವಿಲ್ಲದಿದ್ದರೂ ಮಾನವನ ನೋವುಬೇನೆಗಳನ್ನು ಕೆಲಮಟ್ಟಿಗಾದರೂ ಪರಿಹರಿಸಲು ಎಡೆ ಇರುವ ಅಲ್ಪಾವಧಿ ಶಿಕ್ಷಣ ಕ್ರಮಕ್ಕೆ ಉತ್ತೇಜನವನ್ನು ಕೊಡಬೇಕು. ಇಂದು ಆಳಲೆಕಾಯಿ ಪಂಡಿತರು, ವೈರಾಗಿಗಳು, ಅರ್ಧ ಮರ್ಧ ಅನುಭವವಿರುವ ಕಂಪೌಂಡರು ಹಳ್ಳಿಗಳಲ್ಲಿ ವೈದ್ಯಕೀಯ ಶಾಸ್ತ್ರದ ಮೇಲಿನ ತಮ್ಮ ವಿದ್ವತ್ತನ್ನು ಪ್ರದರ್ಶಿಸುತ್ತಿರುವರು. ಇಂಥವರ ಮೇಲೂ ವಿಶ್ವಾಸವನ್ನಿಟ್ಟುಕೊಂಡು ಹಳ್ಳಿಯ ಜನ ಔಷಧಿ ಬೇಡಿ ತರುತ್ತಾರೆ ಎಂದ ಮೇಲೆ -ಶಾಸ್ತ್ರೀಯ ರೀತ್ಯಾ ಅಲ್ಪಾವಧಿ ಶಿಕ್ಷಣ ಪಡೆದ ವೈದ್ಯರ ಮೇಲೆ ಅವರ ಪ್ರೇಮ ಬೆಳೆಯಲು ಹೆಚ್ಚು ಕಷ್ಟವಾಗಲಿಕ್ಕಿಲ್ಲ ಸೂಕ್ಷ್ಮ ಪ್ರಸಂಗಗಳಲ್ಲಿ ಈ ವೈದ್ಯ ಜನರಿಂದ ರೋಗಿಗಳಿಗೆ ಹೆಚ್ಚಿನ ಉಪಕಾರ ದೊರೆಯದಿದ್ದರೂ ಯೋಗ್ಯ ಸಲಹೆಯಂತೂ ದೊರೆಯಬಲ್ಲದು. ಕೆಲವು ಹಳ್ಳಿಗಳ ಗುಂಪಿಗೊಂದೆಂಬಂತೆ ಇಂಥ ವಿಶಿಷ್ಟ ಕಾಯಿಲೆಗಳ ಉಪಚಾರ ಕೇಂದ್ರಗಳನ್ನು ತೆರೆದು, ತಜ್ಞರ ಚಿಕಿತ್ಸಾ ಸೌಲಭ್ಯವನ್ನು ಒದಗಿಸಿ ಕೊಟ್ಟರೆ ಅದು ಬಹಳ ಪರಿಣಾಮಕಾರಿಯಾಗುವುದು. ಉಚ್ಚ ಮಟ್ಟದ ಅನುಭವ ಮತ್ತು ತರಬೇತಿ ಇಲ್ಲದವರು ವೈದ್ಯಕೀಯ ವೃತ್ತಿಯನ್ನು- ಮಾನವನ ಜೀವದ ಮೇಲೆ ಆಡುವ ಗುರುತರ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸಲಾರರೆಂದು ತಿಳಿಯಬಾರದು. ಸಾಮಾನ್ಯವಾಗಿ ಜನರಲ್ಲಿ ಜಾಣ್ಮೆಯೂ ಸರಸದ್ವಿವೇಕ ಬುದ್ಧಿಯೂ ನೆಲಸಿದೆ. ಇದರ ಬಲದಿಂದ ತಮಗೆ ದೊರೆತ ತರಬೇತಿಯನ್ನು ಉಚಿತ ರೀತಿಯಲ್ಲಿ ಉಪಯೋಗಿಸಿಕೊಳ್ಳುವ ಚೈತನ ಅಲ್ಪಾವಧಿ ಶಿಕ್ಷಣ ಪಡೆದ ಪದವೀಧರರಿಗೂ ಬರುವುದು. ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ನೀಡುವ ಅಧ್ಯಾಪಕ ವರ್ಗದವರು ಜಗಜ್ಜನರಿರುವರೇ? ಮಗುವಿನ ಶೈಶವದಲ್ಲಿ ಕೊಡುವ ವಿದ್ಯೆಯೇ ಆದರ ಬದುಕನ್ನು ರೂಪಿಸುವುದೆಂದು ತಜ್ಞರಾದವರು ಅಭಿಪ್ರಾಯಪಡುವಾಗ, ಈ ಮುಖ್ಯ ಕಾರ್ಯಕ್ಕಾಗಿ ಉಚ್ಚಮಟ್ಟದ ಶಿಕ್ಷಣ ಪಡೆದ ಅಧ್ಯಾಪಕರನ್ನು ಸರಕಾರ ನೇಮಿಸಿದೆಯೆ.–ಇದೇ ರೀತಿ ವೈದ್ಯಕೀಯ ಕ್ಷೇತ್ರ ಕೂಡ ಪ್ರತಿಯೊಂದು ಸಮಸ್ಯೆಯನ್ನು ವ್ಯವಹಾರಿಕ ದೃಷ್ಟಿಯಿಂದ ನೋಡಬೇಕೇ ಹೊರತು--ತಜ್ಞತೆಯ ದೃಷ್ಟಿಯಿಂದಲೇ ವಿವಕ್ಷಿಸ ಹೊರಡುವುದು ನ್ಯಾಯವಲ್ಲ ಈ ಸಂದರ್ಭದಲ್ಲಿ ಏನಾದರೂ ಸಂಶಯ ಏಳುವುದಾದರೆ--ಅದು ಹಳ್ಳಿಗಳಿಗೇ ಅಲ್ಪಾವಧಿ ಶಿಕ್ಷಣ ಪಡೆದ ವೈದ್ಯರ ಸೇವೆ ದೊರಕುವುದು ನಿಶ್ಚಯವೇ ಎಂಬ ಬಗ್ಗೆ ಮಾತ್ರ. ನಿರ್ಬಂಧದಿಂದ ಹಳ್ಳಿಗೆ ಹೋಗಿ ವೈದ್ಯಕೀಯವೃತ್ತಿಯನ್ನು ನಡೆಸಬೇಕೆನ್ನಲಾಗುವುದೇ ಎಂಬ ಪ್ರಶ್ನೆ. ಆದರೆ ರಾಜಗೋಪಾಲಾಚಾರಿಯವರ–– ಗ್ರಾಮಾಂತರ ಪ್ರದೇಶಗಳಲ್ಲಿ ಈಗಿರುವ ಸಾರ್ವಜನಿಕ ಚಿಕಿತ್ಸಾಲಯಗಳಲ್ಲಿಯೇ ವೈದ್ಯರ ಕೊರತೆ ––[illegible] ಎಂದು ಸ್ಪಷ್ಟಗೊಳಿಸಿರುವುದನ್ನು ನೋಡಿದರೆ-- ಸರಕಾರ ಈ ಅಲ್ಪಾವಧಿ ಶಿಕ್ಷಣ ಪಡೆದ ವೈದ್ಯರನ್ನು ತನ್ನ ನಿಬಂಧಿಯಾಗಿ ಸ್ವೀಕರಿಸಲು ಸಿದ್ಧವಿದೆ ಎಂದು ವ್ಯಕ್ತವಾಗುವುದು. ಈ ಮಟ್ಟಿಗೆ--ಸರಕಾರ ಹೆಚ್ಚು ನಿಗಾಕೊಟ್ಟು ಯೋಗ್ಯ ನಿಶ್ಚಯಕ್ಕೆ ಬರುವುದೆಂದು ಆಶಿಸುವೆವು.

ಮಲಾನರ ದರ್ಪದಮನ

ಸತ್ಯಾಗ್ರಹ ದಿನದಿಂದ ದಿನಕ್ಕೆ ಬಲಗೊಳ್ಳುತ್ತಿದೆ-

ದಕ್ಷಿಣ ಆಫ್ರಿಕೆಯಲ್ಲಿ ಮಾನವೀಯ ಹಕ್ಕುಬಾಧ್ಯತೆಗಳಿಗಾಗಿ ಹೋರಾಡುತ್ತಿರುವ ಸತ್ಯಾಗ್ರಹಿಗಳಿಗೆ ಜಗತ್ತಿನ ಮೂಲೆ ಮೂಲೆಯಿಂದಲೂ ನೈತಿಕ ಬೆಂಬಲ ದೊರೆಯುತ್ತಿದೆ ಸಂಯುಕ್ತ ರಾಷ್ಟ್ರಸಂಘವು ಸ್ವೀಕರಿಸಿರುವ ಮಾನವಾಧಿಕಾರ ಪ್ರಣಾಳಿಕೆಗೆ ಮಲಾನ ಸರಕಾರದ ನಡವಳಿಕೆ ತೀರಾ ವಿರುದ್ಧವಿದೆ ಎಂಬುದನ್ನು ಎಲ್ಲರೂ ಮುಕ್ತ ಕಂಠದಿಂದ ಘೋಷಿಸುತ್ತಿರೆ ಭಾರತ ಸರಕಾರವು ದಕ್ಷಿಣ ಆಫ್ರಿಕೆಯಲ್ಲಿರುವ ಕಷ್ಟಬದ್ಧ ಪರಿಸ್ಥಿತಿಯ ಸಂಬಂಧದಲ್ಲಿ ಸಂಯುಕ್ತ ರಾಷ್ಟ್ರಸಂಘದ ಸಾಮಾನ್ಯ ಅಧಿವೇಶನ ತಕ್ಕ ನಿಗಾ ಕೊಡಬೇಕೆಂದು ಕೇಳಿಕೊಳ್ಳಲಿದೆ. ಭಾರತದ ನಿಶ್ಚಯಕ್ಕೆ ದಕ್ಷಿಣ ಆಫ್ರಿಕದ ಭಾರತೀಯ ಧುರೀಣರಿಂದ ಮಾತ್ರವಲ್ಲ–ವಿಶ್ವದ ಪ್ರಸಿದ್ಧ ಪತ್ರಿಕೆಗಳೂ ಆದರದ ಸ್ವಾಗತವನ್ನು ಕೊಟ್ಟಿವೆ. ಇಂಡೋನೇಶಿಯಾ ಕೂಡ ಈ ಸಂಬಂಧದಲ್ಲಿ ಭಾರತದೊಡನೆ ಸಹಕರಿಸುವುದು. ಈಚೆಗೆ ಸ್ವಾತಂತ್ರ್ಯ ಪಡೆದ ಈ ಎರಡು ಏಶಿಯನ ರಾಷ್ಟ್ರಗಳು ಒತ್ತಾಯಿಸಿದಾಗ-ಸಂಯುಕ್ತ ರಾಷ್ಟ್ರಸಂಘದ ಸಾಮಾನ್ಯ ಅಧಿವೇಶನವು ಚರ್ಚೆಯನ್ನು ಪ್ರಾರಂಭಿಸಲೇ ಬೇಕಾದ ವಾತಾವರಣ ಉಂಟಾಗುವುದು ನಿಶ್ಚಯ ಟ್ಯುನೀಶಿಯಾದ ಪ್ರಶ್ನೆಯಲ್ಲಿ ಉತ್ತಮ ಆಸ್ಥೆಯನ್ನು ವಹಿಸಿದ ಏಶಿಯಾ–ಆಫ್ರಿಕನ ರಾಷ್ಟ್ರಗಳ ಮನದೊಲವು ಈ ಸಂಬಂಧದಲ್ಲಿ ಹೇಗಿದೆ ಎಂಬುದನು ಅರಿತುಕೊಳ್ಳಲು ಪ್ರಯತ್ನಿಸಬೇಕೆಂದು ಭಾರತ ಸರಕಾರ ತನ್ನ ಪ್ರತಿನಿಧಿಗೆ ಈಗಾಗಲೇ ತಿಳಿಸಿರುವುದು.

ಸಂಧಾನ ಮಾರ್ಗದ ಆತಂಕ

ಆದರೆ ಈ ವಿಷಯದಲ್ಲಿ ಸ್ಪಷ್ಟವಾಗಿ ಎದ್ದು ತೋರುತ್ತಿರುವ ಒಂದು ಆತಂಕವೂ ಇದೆ. ಈ ಜನವರಿಯಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯ ಅಧಿವೇಶನದಲ್ಲಿ ದಕ್ಷಿಣ ಆಫ್ರಿಕೆಯು ಹಿಂದೀಯರನ್ನು ನಡೆಸಿಕೊಳ್ಳುತ್ತಿರುವ ರೀತಿನೀತಿಯ ಕುರಿತು ಅತೃಪ್ತಿಯನ್ನು ತೋರಿಸಿದ್ದಲ್ಲದೆ—ಸಂಬಂಧಿಸಿದ ಮೂರು ರಾಷ್ಟ್ರಗಳು (ದಕ್ಷಿಣ ಆಫ್ರಿಕಾ, ಭಾರತ ಮತ್ತು ಪಾಕಿಸ್ತಾನ) ಸಂಯುಕ್ತರಾಷ್ಟ್ರ ಸಂಘದೊಂದಿಗೆ ಸಹಕರಿಸಿ ಒಂದು ಒಪ್ಪಂದಕ್ಕೆ ಬರಬೇಕೆಂದು ಒಂದು ಗೊತ್ತುವಳಿಯನ್ನು ಸ್ವೀಕರಿಸಲಾಗಿತ್ತು. ವರ್ಣಭೇದ ನೀತಿಯು ಸಂಯುಕ್ತರಾಷ್ಟ್ರ ಸಂಘದ ಘನತೆಗೆ ಕುಂದುಂಟುಮಾಡುತ್ತಿರುವುದೆಂದು ಇದರಲ್ಲಿ ಸ್ಪಷ್ಟವಾಗಿ ಎತ್ತಿ ತೋರಿಸಲಾಗಿತ್ತು. ಭಾರತ–ಪಾಕಿಸ್ತಾನಗಳು ಒಟ್ಟಿಗೆ ಒಬ್ಬ ಪ್ರತಿನಿಧಿಯನ್ನು, ದಕ್ಷಿಣ ಆಫ್ರಿಕಾ ಒಬ್ಬನನ್ನೂ, ಉಳಿದೊಬ್ಬನನ್ನು ಈ ಇಬ್ಬರೂ ಪ್ರತಿನಿಧಿಗಳು ಒಟ್ಟಿಗೆ ಆರಿಸಿಕೊಂಡು, ಸಂಧಾನಕ್ಕೆ ಪ್ರಯತ್ನಿಸಬೇಕೆಂದು ಅದರಲ್ಲಿ ಹೇಳಿತ್ತು. ಆದರೆ ದಕ್ಷಿಣ ಆಫ್ರಿಕಾದ ಮಲಾನ ಸರಕಾರ ಸಂಯುಕ್ತ ರಾಷ್ಟ್ರಸಂಘಕ್ಕೆ ಆಂತರಿಕ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರವಿಲ್ಲೆಂದು ಈ ಸೂಚನೆಯನ್ನು ತಿರಸ್ಕರಿಸಿದುದರಿಂದ ಯಾವುದೇ ಸಮಿತಿ ನಿರ್ಮಾಣಗೊಳ್ಳಲಿಲ್ಲ.

ಟ್ರಿಗ್ವೆಲೀಯವರ ನಿಷ್ಕ್ರಿಯತೆ

ಇಂಥದೊಂದು ಪ್ರಸಂಗ ಏರ್ಪಡುವುದು ನಿಶ್ಚಯವೆಂದು ಮೊದಲೇ ಊಹಿಸಲಾಗಿತ್ತು-ಮೊದಲಿನ ಗೊತ್ತುವಳಿಗೇ ಇನ್ನೊಂದು ಕಲಮನ್ನು ಸೇರಿಸಿದ್ದರು: ಅದರಂತೆ, ಮೂರು ರಾಷ್ಟ್ರಗಳು ಏನು ನಿರ್ಣಯ ಕೈಗೊಳ್ಳುವುದಕ್ಕೂ ಆಗದಿದ್ದರೆ, ಸಂಯುಕ್ತ ರಾಷ್ಟ್ರಸಂಘದ ಮುಖ್ಯ ಕಾರ್ಯದರ್ಶಿ ಟ್ರಿಗ್ವೆಲೀ ಈ ವಿಷಯದಲ್ಲಿ ಮಧ್ಯಸ್ಥಿ ನಡೆಸಿ ಒಂದು ಒಪ್ಪಂದವಾಗುವಂತೆ ನೋಡಿಕೊಳ್ಳಬೇಕು ಎಂದಿದೆ. ಆದರೆ ಟ್ರಿಗ್ವೆಲೀ ಈ ವರೆಗೆ ಅಂಥದೇನೂ ಪ್ರಯತ್ನವನ್ನು ಕೈಗೊಂಡಿಲ್ಲ. ಭಾರತ ಸರಕಾರದ ಪ್ರತಿನಿಧಿಗಳು ಕೆಲವೊಮ್ಮೆ ಈ ಸಂಬಂಧ ನೆನಪು ಕೊಟ್ಟರೂ ಟ್ರಿಗ್ವೆಲೀ ಇದಕ್ಕೆ ಕಿವಿಗೊಟ್ಟಂತಿಲ್ಲ. ಆದುದರಿಂದ, ಮುಂದಿನ ಸಾಮಾನ್ಯ ಅಧಿವೇಶನ ಕಾಲದಲ್ಲಿ ಈ ಮೊದಲೇ ಸ್ವೀಕರಿಸಿರುವ ಗೊತ್ತುವಳಿಯ ಪರಿಣಾಮಗಳನ್ನು ತಿಳಿದುಕೊಳ್ಳದೆ ಹೊಸತಾಗಿ ಚರ್ಚೆ ನಡೆಯುವ ಸಂಭವ ಬಹಳ ಕಡಿಮೆ ಎಂದು ಕೆಲವು ವರ್ಗಗಳ ಅಭಿಪ್ರಾಯ. ಆದರೆ ಭಾರತ ಹಾಗೂ ಇಂಡೋನೇಶಿಯಾಗಳು- ಇದನ್ನು ಜಾಗತಿಕ ಕ್ಷೋಭೆಗೆ ಕಾರಣವಾದ ಪರಿಸ್ಥಿತಿ ಎಂದೂ, ಅಗತ್ಯ ಗಮನವೀಯಬೇಕಾದ ಪ್ರಸಂಗ ಅಲ್ಲಿದೆ ಎಂದೂ ಪ್ರತಿಪಾದಿಸುವುದರಿಂದ, ಕೊನೆಗಾದರೂ ಈ ವಿಷಯಕ್ಕೆ ಸಾಮಾನ್ಯ ಅಧಿವೇಶನ ಗಮನಕೊಡಬೇಕಾಗಿ ಬಂದೀತು.

ಮಲಾನರ ಆಕ್ರೋಶ

ಆಫ್ರಿಕದ ಗೊಂದಲ ವಿಶ್ವವ್ಯಾಪಿಯಾದ ಅಸಂತೋಷಕ್ಕೆ ಎಡೆಮಾಡಿಕೊಟ್ಟಿದೆ ಸ್ವತಃ ಆಫ್ರಿಕೆಗೂ ಇದು ಅಪಾರ ಹಾನಿಯನ್ನು ತಂದೊಡ್ಡಿದೆ. ಭಾರತ ಮತ್ತು ಪಾಕಿ

ಸ್ತಾನಗಳೊಡನೆ ವ್ಯಾಪಾರ ಸಂಬಂಧವನ್ನು ಕಡಿದುಕೊಂಡುದರಿಂದ, ೧.೧೫ ಕೋಟಿ ಪೌಂಡುಗಳಷ್ಟು ಅದಕ್ಕೆ ಹೆಚ್ಚುವೆಚ್ಚ ಬಂದಿದೆ. ಇದರೊಂದಿಗೆ ರಾಷ್ಟ್ರಕೂಟದ ದೇಶಗಳೊಡನಿರುವ ಸೌಹಾರ್ದ ಸಂಬಂಧವೂ ಕೆಡುತ್ತಾ ಬಂದಿದೆ. ಬ್ರಿಟನಿನೊಡನೆ ಅದಕ್ಕೆ ಸ್ನೇಹದ ಸಂಬಂಧ ಇಟ್ಟುಕೊಳ್ಳಲು ಸಾಧ್ಯವಾಗಿಲ್ಲ. ಅಲ್ಲಿಯ ಪತ್ರಿಕೆಗಳಂತೂ ಬಿಟ್ಟೂಬಿಡದೆ ಮಲಾನರ ನೀತಿಯನ್ನು ಹಳಿಯುತ್ತಿವೆ. ಇದಕ್ಕೆ ಮಲಾನರು ಕಟುವಚನಗಳಲ್ಲಿ ಮಾರ್ನುಡಿಯಲಿಕ್ಕೇನೂ ಹಿಂಜರಿಯುವುದಿಲ್ಲ. ಬ್ರಿಟನು ತಾನು ದಿವಾಳಿ ತೆಗೆದುಕೊಂಡು, ಉಳಿದವರಿಗೂ ಅದೇ ನೀತಿಯನ್ನು ಬಾಲಹೋದ ನರಿಯಂತೆ, ಉಪದೇಶಿಸಹತ್ತಿದೆ ಎಂಬ ಧಾಟಿಯಲ್ಲಿ ಮಾಲನರು ಮಾತನಾಡುತ್ತಾರೆ. ಅವರು ಹೇಳುವಂತೆ ದಕ್ಷಿಣ ಆಫ್ರಿಕೆಯಲ್ಲಿ ಒಂದೇ ಒಂದು ಶ್ವೇತ ವರ್ಣದ ಸಿಳ್ಳೆ ಉಳಿದರೆ, ಭಾರತ ಮತ್ತು ಪಾಕಿಸ್ತಾನಗಳೊಡನೆ ಸ್ನೇಹ ಸಾಧ್ಯವಿಲ್ಲ. ಯುರೋಪ್ಯರನ್ನು ಅಲ್ಲಿಂದ ಓಡಿಸಿ, ಹಿಂದೀಯರಿಗೆ ಪಟ್ಟ ಕಟ್ಟಿದರೆ ಮಾತ್ರ ಈ ಎರಡು ದೇಶಗಳಿಗೆ ತೃಪ್ತಿಯಾದೀತು. ಎನ್ನುವಷ್ಟು ದೂರ ಮಲಾನರು ಮುಂದರಿದಿದ್ದಾರೆ.

ವರಿಷ್ಠ ನ್ಯಾಯಾಲಯದ ತೀರ್ಪು

ಮಲಾನರನ್ನು ಕಾಡುವ ಇನ್ನೊಂದು ಮುಖ್ಯ ಸಮಸ್ಯೆ: ಯುರೋಪ್ಯರಲ್ಲಿರುವ ಬಿಕ್ಕಟ್ಟು. ಪಾರ್ಲಿಮೆಂಟರಿ ಹೈಕೋರ್ಟನ್ನು ಸ್ಥಾಪಿಸಬೇಕೆಂಬ ಸರಕಾರೀ ಗೊತ್ತುವಳಿಗೆ ವಿರೋಧಿ ಗುಂಪಿನವರ ತೀಕ್ಷ್ಣ ಪ್ರತಿಭಟನೆಯನ್ನು ಎದುರಿಸಬೇಕಾಯಿತು. ಆಫ್ರಿಕರ ಮೂಲ ನಿವಾಸಿಗಳ ಸ್ನೇಹವನ್ನು ಸಂಪಾದಿಸಲಾರದರೂ-ಭಾರತೀಯರ ಚಳುವಳಿಯನ್ನು ಸದೆ ಬಡಿಯುವ ಆಶೆ, ಈಗ ತಿಳಿಯಾಗಿದೆ. ಆಫ್ರಿಕನರೂ ಎಚ್ಚತ್ತು, ಸತ್ಯಾಗ್ರಹದ ಬೆಂಬಲಿಗರಾಗಿ ಹೊರ್ಮಟ್ಟಿರುವರು. ಇದಕ್ಕೂ ಹೆಚ್ಚಿನ ಹೊಡೆತವೆಂದರೆ— ವರಿಷ್ಠ ನ್ಯಾಯಾಲಯವು ಈಚೆಗೆ ಕೊಟ್ಟ ತೀರ್ಪು: ಪಾರ್ಲಿಮೆಂಟರಿ ಹೈಕೋರ್ಟನ್ನು ಸ್ಥಾಪಿಸಿದ ಸರಕಾರದ ನಿರ್ಣಯವು ಘಟನೆಯ ೧೫೨ನೇ ಕಲಮಿಗೆ ವಿಸಂಗತವಾಗಿದೆ ಎಂದು ಕೇಪ ವರಿಷ್ಠ ನ್ಯಾಯಾಲಯ ಒಮ್ಮತದ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ನ್ಯಾಯಾಲಯಗಳಿಗೆ ಮೊರೆ ಹೋಗುವ ನಾಗರಿಕರ ಘಟನಾತ್ಮಕ ಅಧಿಕಾರಕ್ಕೆ ಪಾರ್ಲಿಮೆಂಟರಿ ಹೈಕೋರ್ಟಿನ ಸ್ಥಾಪನೆಯಿಂದ ತಡೆಯಾಗಿದೆ ಎಂದು ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಮಲಾನರು ಛಲವಾದಿ ತಾನೇ—ಈ ವಿಷಯದಲ್ಲಿ ಅಪೀಲು ಮಾಡುವುದಾಗಿ ಒಡನೆಯೇ ನಿರ್ಧರಿಸಲಾಗಿದೆ. ಇನ್ನು ಆರು ವಾರಗಳಲ್ಲಿ ಅಪೀಲು ಕೋರ್ಟಿನ ನಿರ್ಣಯವೂ ಗೊತ್ತಾಗುವುದು: ಆಗ ಸರಕಾರಕ್ಕೆ ಅಪಜಯವಾದರೆ, ಒಂದೋ ಇಂದಿನ ವರೆಗಿನ ಅನಪೇಕ್ಷಿತ ರೀತಿಯಲ್ಲಿ ಪುನರ್ರಚನೆ ಕೈಗೊಳ್ಳಬೇಕು. ಇಲ್ಲವೆ ನ್ಯಾಯಾಲಯಗಳ ಅಸ್ತಿತ್ವವನ್ನೇ ಮರೆತು ಚೆಂಡಾಡಿಕೆಗೆಳಸಬೇಕು.

ಮುಕ್ತ ಕಂಠದ ಪ್ರಶಂಸೆ

ಅಮೇರಿಕ ಹಾಗೂ ಬ್ರಿಟನಿನ ಪತ್ರಿಕೆಗಳು ಅಹಿಂಸಾತ್ಮಕ ಸತ್ಯಾಗ್ರಹವನ್ನು ಮುಕ್ತ ಕಂಠದಿಂದ ಪ್ರಶಂಸಿಸುತ್ತಿದ್ದಂತೆಯೇ ಮಲಾನರ ನೀತಿಯನ್ನು ಕಟು ವಚನಗಳಿಂದ ಬೈದು ಭಂಗಿಸುತ್ತಿವೆ. ಸತ್ಯಾಗ್ರಹದ ಸುದ್ದಿಗೆ ವಿಶೇಷ ಮಹತ್ವವನ್ನು ಕೊಟ್ಟು ಪ್ರಕಟಿಸಲಾಗುತ್ತಿದೆ. ಬ್ರಿಟನಿನ ಕಾರ್ಮಿಕರ ಸಂಘದ ಅಧಿವೇಶನ ಈ ಮಂಗಳವಾರದಿನ ಕೂಡಿದಾಗ—ಅಲ್ಲಿ ದಕ್ಷಿಣ ಆಫ್ರಿಕದ ಹಿಂದೀಯರ ಹೋರಾಟ ಸಾಧುವಾದದೆಂಬ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ್ದಲ್ಲದೆ—ಮಲಾನರ ಧೋರಣೆ ಅನುಚಿತವೆಂದು ಸಾರಲಾಯಿತು. ಪತ್ರಿಕೆಗಳಲ್ಲಿ ಕೇವಲ ಸುದ್ದಿ ವೈಶಿಷ್ಟ್ಯ ಮಾತ್ರವಲ್ಲದೆ—ಸಂಪಾದಕೀಯ ಲೇಖನಗಳಲ್ಲೂ ದಕ್ಷಿಣ ಆಫ್ರಿಕದ ಪರಿಸ್ಥಿತಿಯೇ ಬಣ್ಣನೆಗೊಳ್ಳುತ್ತಿದೆ. ಸತ್ಯಾಗ್ರಹ ಸಮರವು ಈಗ ನೇಟಾಲು ಪ್ರಾಂತ್ಯವನ್ನು ಆಕ್ರಮಿಸಿದೆ. ಜೈಲುಗಳೆಲ್ಲ ಸತ್ಯಾಗ್ರಹಿಗಳಿಂದ ತುಂಬಿದೆ

ಇರಾಣದ ತೇಜೋಭಂಗ

ಹೀಗೆ ಮಲಾನರ ಛಲವಾದಿತನವು ದೇಶಕ್ಕೆ ಗಂಡಾಂತರ ಪ್ರಾಯವೂ ಕಂಟಕಕರವಂಥದೂ ಆಗಿರುವಾಗ--ಇರಾಣದ ಮುಖ್ಯ ಮಂತ್ರಿ ಮುಸಾದಿಕರು ಎಣ್ಣೆ ಕಂಪೆನಿಯ ಸಂಬಂಧದಲ್ಲಿ ತೋರುವ ಹಠವು ಪ್ರಶಂಸಾರ್ಹವೆನ್ನಬಹುದು: ಇರಾಣಕ್ಕೆ ವಿಪುಲವಾದ ಎಣ್ಣೆಯ ಸಂಪತ್ತು ಇದ್ದರೂ, ಅದನ್ನು ಅನುಭವಿಸದೆ ಈಗ ಆರ್ಥಿಕ ದುಸ್ಥಿತಿಗೆ ಎದೆಯೊಡ್ಡಬೇಕಾಗಿದೆ. ಎಣ್ಣೆ ರಾಷ್ಟ್ರೀಕರಣದ ಹೆಜ್ಜೆಯು ಸ್ವಾಭಿಮಾನಿಯಾದ ಜನತೆಗೆ ಹೇಳಿಸಿದ ಸಾಹಸವೆಂದು ನಾವು ಒಪ್ಪಬೇಕು: ಆದರೆ, ಆದರ ಪರಿಣಾಮವಾಗಿ ಈಗ ಒಂದು ವರ್ಷಕ್ಕೂ ಹೆಚ್ಚು ಸಮಯದಿಂದ, ಇರಾಣ ಸೋತು ಸುಣ್ಣವಾಗಿದೆ. ಸೈನಿಕರು, ಸರಕಾರೀ ಅಧಿಕಾರಿಗಳು ಮುಂತಾದವರಿಗೆ—ಕಳೆದ ಕೆಲವು ತಿಂಗಳುಗಳಿಂದ ಇನ್ನೂ ಸಂಬಳ ಸಿಕ್ಕಿಲ್ಲ! ಜನರ ಮೇಲೆ ಹೊಸ ತೆರಿಗೆಯನ್ನು ಹೇರಿಸುವುದೆಂದರೆ—ಅತ್ಯಾಚಾರಕ್ಕೆ ಮನಸ್ಸು ಮಾಡಿದಂತೆಯೇ. ಎಣ್ಣೆಯೊಂದೇ ಆದಾಯದ ಸ್ರೋತವಾಗಿರುವಾಗ—ಅದನ್ನು ಕಳೆದುಕೊಂಡು ಎಷ್ಟುದಿನ ನೂಕಬಹುದು? ಇರಾಣವು ಸ್ಟರ್ಲಿಂಗವನ್ನು ಉಪಯೋಗಿಸದಂತೆ ಬ್ರಿಟನು ನಿರ್ಬಂಧ ಮಾಡಿದೆ. ರಾಷ್ಟ್ರೀಕರಣದ ಬಳಿಕ, ಎಣ್ಣೆಯ ವ್ಯಾಪಾರವೇ ನಿಂತುಹೋಗಿದೆ. ಹೊಸತಾಗಿ ಎಣ್ಣೆಯನ್ನು ಅಗೆದು ತೆಗೆಯುವ ಕೆಲಸವೂ ತಂತ್ರಜ್ಞರ ಕೊರತೆಯಿಂದ ಇನ್ನೂ ತೊಡಗಿಲ್ಲ. ಹೀಗೆ—ಮುಸಾದಿಕರ ರಾಷ್ಟ್ರೀಯತಾಭಾವನೆಯನ್ನು ಅಣಕು ದೃಷ್ಟಿಯಿಂದ ನೋಡುವ ಬ್ರಿಟನ—ಮತ್ತು ಅದರ ಆಪ್ತ ಅಮೇರಿಕ, ಒಂದು ಹೊಸ ಒಸಗೆಯನ್ನು ಈಚೆಗೆ ಕಳಿಸಿಕೊಟ್ಟುವು. ಚರ್ಚಿಲ ಹಾಗೂ ಟ್ರೂಮನ ಇಬ್ಬರ ವೈಯಕ್ತಿಕ ಒಪ್ಪಿಗೆಯೂ ಆ ಸಂದೇಶದಲ್ಲಿದ್ದುವು.

ಹೊಸ ಕೊಡುಗೆ

ಈ ಒಸಗೆಯಂತೆ ಇರಾಣವು ಅಂತರಾಷ್ಟ್ರೀಯ ನ್ಯಾಯಾಲಯದ ಮೂಲಕ ಆಂಗ್ಲೋ ಇರಾಣಿಯನ ಎಣ್ಣೆ ಕಂಪೆನಿಗೆ ಕೊಡಬೇಕಿರುವ ಪರಿಹಾರ ಧನವನ್ನು ನಿಶ್ಚಯಿಸಬೇಕು. ಇರಾಣದ ಎಣ್ಣೆಯು ಜಾಗತಿಕ ಪೇಟೆಗೆ ಹೋಗುವಂತೆ ಏರ್ಪಾಡು ಮಾಡಲು ಇರಾಣ ಸರಕಾರ ಮತ್ತು ಆಂಗ್ಲೋ ಇರಾಣಿಯನ್ ಎಣ್ಣೆ ಕಂಪೆನಿಯ ಪ್ರತಿನಿಧಿ ಮಂಡಳವಿರಬೇಕು. ಹೀಗೆ ಮಾಡಿದರೆ—ಬ್ರಿಟನು ಇರಾಣಕ್ಕೆ ಸ್ಟರ್ಲಿಂಗು ಸಂಗ್ರಹವನ್ನು ಉಪಯೋಗಿಸಲು ಎಡೆ ಕೊಡುವುದು. ಕೊಂಡ ಎಣ್ಣೆಗೆ ಒಡನೆಯೇ ಬೆಲೆ ಕೊಡುವುದು. ಅಲ್ಲದೆ ಇರಾಣದ ಆರ್ಥಿಕ ದುಸ್ಥಿತಿಯ ನಿವಾರಣೆಗಾಗಿ ಅಮೇರಿಕವು ಒಂದು ಕೋಟಿ ಡಾಲರು ಧನ ಸಹಾಯವನ್ನು ಒಡನೆಯೇ ಕೊಡುವುದು. ಈ ಕೊಡುಗೆಗಳು ಇರಾಣದ ಪ್ರಕೃತ ಪರಿಸ್ಥಿತಿಯಲ್ಲಿ ತುಂಬ ಆಕರ್ಷಕವಿದ್ದರೂ— ಅವುಗಳ ಹಿನ್ನೆಲೆ ಸ್ಪಷ್ಟ: ಅಂತರಾಷ್ಟ್ರೀಯ ನ್ಯಾಯಾಲಯಕ್ಕೆ ಇನ್ನೊಮ್ಮೆ ಈ ಪ್ರಸಂಗವನ್ನೊಯ್ದರೆ, ತಮಗೆ ನ್ಯಾಯ ದೊರೆತೀತೆಂಬ ನಂಬುಗೆ ಬಹುಶಃ ಮುಸಾದಿಕರಿಗಿಲ್ಲ. ಅದರಂತೆ, ಅಮೇರಿಕದ ಧನಸಹಾಯವೆಂಬ ಆಮಿಷ ಪ್ರಿಯವೆಂದು ಕಂಡರೂ, ಈ ಪಾಶ್ಚಾತ್ಯ ಸಹೋದರರು ಸಣ್ಣ ಮೀನನ್ನು ಗಾಳಕ್ಕೆ ಸಿಕ್ಕಿಸಿ, ದೊಡ್ಡ ಮೀನ ನುಂಗುವ ಚತುರರೆಂದು ಈಗಾಗಲೇ ಇರಾಣಿಗೆ ಮನವರಿಕೆಯಾಗಿದೆ. ಇಂದಿನ ವರೆಗಿನ ಬ್ರಿಟನ್ನಿನ ನಡವಳಿಕೆ ಮೂಗು ಮುಚ್ಚಿ ಬಿಟ್ಟರೆ, ಬಾಯಿ ತಾನಾಗಿ ತೆರೆಯುವುದೆಂಬ ನೀತಿಯನ್ನೆ ಬಿಂಬಿಸುತ್ತಿತ್ತು. ಆದರ ಕಟು ಅನುಭವವನ್ನು ಸಹಿಸಿಯೂ ಸೂಚನೆಗಳನ್ನು ತಿರಸ್ಕರಿಸುವ ರಾಷ್ಟ್ರಾಭಿಮಾನವನ್ನು ಮುಸಾದಿಕರು ತೋರಿದ್ದಾರೆ. ಈ ವಿಷಯದ ವಿವರ ಚರ್ಚೆ ನಡೆಯಲು--ಮಜಲೀಸದ ಸಭೆ ಬೇಗನೇ ಕೂಡುವುದು.

ಕಾಶ್ಮೀರ ಪ್ರಶ್ನೆ

ಜಿನೀವಾದಲ್ಲಿ ಡಾ| ಗ್ರಹಾಮರೊಡನೆ ಕಾಶ್ಮೀರ ಪ್ರಕರಣದಲ್ಲಿ ಭಾರತ-ಪಾಕಿಸ್ತಾನದ ಪ್ರತಿನಿಧಿಗಳು ನಡೆಸುತ್ತಿರುವ ಮಾತುಕತೆಗಳು ಆಶಾಜನಕ ಪರಿಸ್ಥಿತಿಯನ್ನೇನು ನಿರ್ಮಿಸಿಲ್ಲ. ಗ್ರಹಾಮರು ಯುದ್ಧ ವಿರಾಮ ರೇಖೆಯ ಇಕ್ಕೆಲಗಳಲ್ಲಿ ನಿಲ್ಲಿಸಬೇಕಿರುವ ಸೈನ್ಯಪ್ರಮಾಣದ ಮತಭೇದವನ್ನು ಬಗೆಹರಿಸಲು ಹೊಸ ಸೂಚನೆಗಳನ್ನು ಕೊಡುವುದಿದ್ದರೂ-- ಪಾಕಿಸ್ತಾನದ ಈ ವರೆಗಿನ ಧೋರಣೆ ಬದಲಾಗದೆ, ಒಮ್ಮತ ಶಕ್ಯವಿಲ್ಲ. ಹೀಗೆ ಭಾರತದ ಅಭಿಪ್ರಾಯವಿದ್ದರೆ, ಪಾಕಿಸ್ತಾನವು ಕಾಶ್ಮೀರ ಬಿಕ್ಕಟ್ಟಿಗೆ ಅಡ್ಡಬಂಡೆಯಾಗಿ ಭಾರತದ ನಿಲುಮೆ ಇದೆ ಎಂದು ಪ್ರತಿಯಾಗಿ ದೂರುತ್ತಿದೆ. ಇವೆಲ್ಲಕ್ಕಿಂತಲೂ ಕುತೂಹಲಜನಕವಾದ ಸುದ್ದಿ ಎಂದರೆ - ಕಾಶ್ಮೀರದ ಮೇಲೆ ಎರಡನೆಯ ಬಾರಿ ಪ್ರಬಲ ಆಕ್ರಮಣ ನಡೆಸುವ ಹೊಂಚು ಇದೆ ಎಂದು "ನ್ಯೂಯೋರ್ಕ ಟೈಮ್ಸ"ದಲ್ಲಿ ಬಂದಿರುವ ಒಂದು ಲೇಖನ. ಇದರನ್ವಯ ಹೊಸತಾಗಿ ದಾಳಿನಡೆದರೆ—ಪಾಕಿಸ್ತಾನವನ್ನು ದೂರುವಂತೆ ಅದರ ಸ್ವರೂಪವಿರುವುದಿಲ್ಲ!

ಇಂದೂರಿನ ಎ.ಐ.ಸಿ.ಸಿ. ಅಧಿವೇಶನದ ಮುಂದೆ

(೫ನೇ ಪುಟದಿಂದ ಮುಂದುವರಿದುದು)

ಕಮ್ಯೂನಿಸ್ಟರಿಗೆ ಧಕ್ಕೆ

ಮಹಾಚುನಾವಣೆಯಲ್ಲಿ ಕಾಂಗ್ರೆಸನ್ನು ಬಿಟ್ಟರೆ ಸಮಾಜವಾದಿ ಪಕ್ಷವು ದ್ವಿತೀಯ ಸ್ಥಾನವನ್ನೂ ಕಿಸಾನ ಮಜದೂರ ಪ್ರಜಾ ಪಕ್ಷವು ತೃತೀಯ ಸ್ಥಾನವನ್ನೂ ಮತದಾನ ಪ್ರಮಾಣದಲ್ಲಿ ಪಡೆದಿದ್ದುವು. ಇವೆರಡು ಪಕ್ಷಗಳಿಗೆ ಒಟ್ಟು ೨೮%ರಷ್ಟು ಮತಗಳು ದೊರೆತಿದ್ದುವು. ಸದಸ್ಯರ ಆಯ್ಕೆಯ ದೃಷ್ಟಿಯಿಂದ ಕಮ್ಯೂನಿಸ್ಟರೇ ಹೆಚ್ಚು ಸಂಖ್ಯೆಯಿಂದ ಬಂದರೆಂಬ ಸಂಗತಿ ಬೇರೆ. ಮುಖ್ಯವಾಗಿ ಮದ್ರಾಸು ರಾಜ್ಯದಲ್ಲಿ ಪ್ರಜಾಪಕ್ಷವು ಕಮ್ಯೂನಿಸ್ಟರೊಡನೆ ಸಲ್ಲದ ಸ್ನೇಹವನ್ನು ಮಾಡಿಕೊಂಡುದರಿಂದ ಹಾಗಾಗಿರಬಹುದು. ಆದರೂ-- ಪ್ರಜಾಪ್ರಭುತ್ವವನ್ನು ಯಶಸ್ವಿಯಾಗಿಸಬೇಕಾದರೆ, ಇಂದಿನಂತೆ ಹತ್ತು ಹಲವು ಪಕ್ಷಗಳಲ್ಲಿ ಜನತೆ ಒಡೆದು ಹೋಗದೆ ಕೆಲವೇ ಪಕ್ಷಗಳಲ್ಲಿ ಸುಸಂಘಟಿತವಾಗುವುದು ಅಪೇಕ್ಷಣೀಯ. ಕಾಂಗ್ರೆಸ ಸರಕಾರದೊಡನೆ ಪ್ರತಿಸ್ಪರ್ಧೆಗೆ ನಿಂತು-- ಹೊಯ್‌ಕೈಯಾಗಿ ಆಡಳಿತದ ಮೇಲೆ ನಿಯಂತ್ರಣವನ್ನಿಡುವ ಮಹತ್ವಾಕಾಂಕ್ಷೆ ಪ್ರಜಾ-ಸೋಶಿಯಲಿಸ್ಟ ಪಾರ್ಟಿಗಿರುವುದು ಚಂದ. ಮೇಲಾಗಿ-- ಧುರೀಣರು ಕಮ್ಯೂನಿಸ್ಟರೊಡನೆ ಸಂಪರ್ಕ ಇಟ್ಟುಕೊಳ್ಳಬಾರದೆಂದೂ--ಗಾಂಧೀತತ್ವ ಪ್ರಣಾಳಿಯನ್ನು ಅನುಸರಿಸಬೇಕೆಂದೂ ನಿರ್ಧರಿಸಿರುವುದರಿಂದ ರಾಷ್ಟ್ರಕ್ಕೆ ತುಂಬ ಕ್ಷೇಮವಿದೆ. ಕಾಂಗ್ರೆಸದ ಕಿವಿ ಹಿಂಡಿ ಬುದ್ಧಿಗಲಿಸುವ ಚಪಲಕ್ಕೆಲ್ಲ-- ವಿಧಾಯಕವಾದ ಸಲಹೆಗಳನ್ನು ಮುಂದಿಟ್ಟು ಮಾರ್ಗದರ್ಶನ ಮಾಡುವ ಕೀರ್ತಿಗೆ ಪ್ರಜಾ ಸೋಶಿಯಲಿಸ್ಟ ಪಕ್ಷ ಒಲಿದು ಬರಲಿ ಎಂದು ಪ್ರತಿಯೊಬ್ಬನೂ ಹಾರೈಸುವ ತಿಳಿ ವಾತಾವರಣವಿದೆ. ಎಲ್ಲಿ ಯಾವುದೂ ಸ್ವಲ್ಪಮಟ್ಟಿನ ಗೊಂದಲ ಎದ್ದಿದ್ದರೆ--ಅದು ಮದ್ರಾಸು ರಾಜ್ಯದಲ್ಲಿ ಮಾತ್ರ. ಸಂಯುಕ್ತ ಪ್ರಜಾಸತ್ತಾತ್ಮಕ ರಂಗವೆಂದುಕೊಂಡಿರುವ ವಿರೋಧಿ ಪಕ್ಷದಲ್ಲಿ ಕಮ್ಯೂನಿಸ್ಟರೊಡನೆ ಪ್ರಜಾಪಕ್ಷದವರೂ ಸೇರಿರುವುದರಿಂದ—ಈ ರಂಗದ ಭವಿತವ್ಯ ಅನಿಶ್ಚಿತ. ಶ್ರೀ ಪ್ರಕಾಶಮರು ಪ್ರಜಾ-ಸೋಶಿಯಲಿಸ್ಟ ಪಕ್ಷವನ್ನು ಸ್ವಾಗತಿಸುವಾಗ—ಮದ್ರಾಸದ ವಿಶಿಷ್ಟ ಸಂಸ್ಥಿತಿಯನ್ನು "ಕಾಯು ನೋಡಿರಿ" ಎಂದರು. ಕಮ್ಯೂನಿಸ್ಟರಿಗೆ ಬಲವಾದ ಧಕ್ಕೆ ತಗುಲಿದೆ ಎಂಬುದು ಅವರು ವ್ಯಕ್ತಪಡಿಸುವ ಕಳವಳದಿಂದಲೇ ಮನವರಿಕೆಯಾಗುತ್ತಿದೆ

ಚಂದಾದಾರರಲ್ಲಿ ವಿನಂತಿ.

ಕಳೆದ ಆಗೋಸ್ತು ತಿಂಗಳ ಅಂತ್ಯಕ್ಕೆ 'ನವಯುಗ'ದ ೩೧ನೆಯ ವರ್ಷವು ಪೂರ್ತಿಯಾಗಿ ಸಪ್ಟಂಬರ ತಿಂಗಳಿಂದ ೩೨ನೇ ವರ್ಷವು ಆರಂಭವಾಗಿದೆ. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವವರು ಈ ಮೊದಲೇ ಅವಧಿ ಮುಗಿದು ಚಂದಾ ಬಾಕಿ ಮಾಡಿಕೊಂಡವರು ಎಲ್ಲರೂ ತಮ್ಮ ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ತ್ವರೆ ಮನಿಯಾರ್ಡರು ಮೂಲಕ ಕಳುಹಿಸಿಕೊಡಬೇಕಾಗಿ ಮತ್ತೊಮ್ಮೆ ಅಪೇಕ್ಷಿಸುತ್ತೇವೆ.

ಅಂತಹ ಸಕಾಲದಲ್ಲಿ ಹಣಬಾರದಿದ್ದಲ್ಲಿ ನಾವು ಕಳಿಸುವ ವಿ. ಪಿ. ಯನ್ನು ಪಡಕೊಳ್ಳಬೇಕಾಗಿ ವಿನಂತಿ

Read & Advertise in
'NAVAYUGA' Weekly
Voice of the people Excellent
Media and Reading Value

ಉಡುಪಿ

ಉಡುಪಿ ಮುನಿಸಿಪಲ್ ಚುನಾವಣೆಗೆ ಸಂಬಂಧಪಟ್ಟ ನಾಮಪತ್ರಗಳನ್ನು ಇದೇ ತಾ. 5 ಮತ್ತು 6ಲ್ಲು ಅಪರಾಹ್ನ 2ರಿಂದ 4 ಗಂಟೆಯೊಳಗೂ ತಾ. 8ರಂದು ಪೂರ್ವಾಹ್ನ 11ರಿಂದ ಸಂಜೆ 5 ಗಂಟೆಯೊಳಗೂ ಮುನಿಸಿಪಲ್ ಆಫೀಸಿನಲ್ಲಿ ಇಲೆಕ್ಷನ್ ಆಫೀಸರ್ [ಕಮಿಶನರ್] ಮುಂದೆ ಹಾಜರು ಪಡಿಸಬೇಕು, ತಾ 9ರಂದು ಪೂರ್ವಾಹ್ನ 11 ಗಂಟೆಗೆ ನಾಮಪತ್ರಗಳ ಪರಿಶೀಲನೆಯಾಗುವುದು ಸ್ಪರ್ಧೆಗಳಿದ್ದ ವಾರ್ಡುಗಳ ಮತದಾನವು ಅಕ್ಟೋಬರ್ ತಾ 6ರಂದು ಬೆಳಗ್ಗೆ ಗಂಟೆ 7ರಿಂದ ಸಂಜೆ 6ರ ತನಕ [ಮಧ್ಯಾಹ್ನ 12ರಿಂದ 1 ಗಂಟೆಯ ವರೆಗೆ ಬಿಡುವು] ಜರಗುವುದು ವೋಟುಗಳ ಎಣಿಕೆಯು ಮರುದಿನ ಬೆಳಗ್ಗೆ 9-30ಕ್ಕೆ ಪ್ರಾರಂಭವಾಗುವುದು.

ಮುನಿಸಿಪಲ್ ಕೌನ್ಸಿಲು ಸಭೆಯು ತಾ 30ರಲ್ಲು ಚೇರ್ಮನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಹಲವಾರು ಸರಕಾರಿ ಆರ್ಡರುಗಳು ರಿಕಾರ್ಡು ಮಾಡಲ್ಪಟ್ಟವು. ಮುಂದಿನ ನವಂಬರ ತಿಂಗಳ ತಾ 27ರಿಂದ 29ರ ವರೆಗೆ ದ. ಕ. ಜಿಲ್ಲೆಯನ್ನು ಸಂದರ್ಶಿಸಲಿರುವ ಮದ್ರಾಸು ಗವರ್ನರರಿಗೆ ಮಾನಪತ್ರವೀಯಬೇಕೆಂದು ನಿರ್ಣಯಿಸಲಾಯಿತು ಸ್ಥಳೀಯ ಹಿಂದೂ ಶವ ಸಂಸ್ಕಾರ ಸಮಿತಿಗೆ ಸ್ಮಶಾನಭೂಮಿಯಲ್ಲಿ ವಿದ್ಯುದ್ದೀಪಗಳನ್ನು ಉರಿಸುವರೆ ಸಹಾಯಧನವಾಗಿ ಐವತ್ತು ರೂಪಾಯಿ ಕೊಡಬೇಕೆಂದು ಆದ ಕೌನ್ಸಿಲಿನ ಒಮ್ಮತದ ನಿರ್ಣಯಕ್ಕೆ ಮುನ್ಸಿಪಲ್ ಕೌನ್ಸಿಲುಗಳ ರೀಜನಲ್ ಇನ್ಸ್ಪೆಕ್ಟರರು ಮಂಜೂರಾತಿ ಕೊಡದಿದ್ದ ವಿಷಯದಲ್ಲಿ ಅವರನ್ನು ಕಾರಣ ಕೇಳಿಕೊಳ್ಳಬೇಕೆಂದು ನಿಶ್ಚಯಿಸಲಾಯಿತು ಸ್ಥಳೀಯ ಸರಕಾರಿ ಆಸ್ಪತ್ರೆಗೆ ಕೂಡಲೇ ಲೇಡಿ ಡಾಕ್ಟರರನ್ನು ನೇಮಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ಶ್ರೀ ಕೆ. ಕೆ. ಪೈಗಳ ನಿರ್ಣಯವು ಒಮ್ಮತದಿಂದ ಪಾಸಾಯಿತು.

ನಾಗರೀಕರ ಸಭೆ-ಯಾವ ಪಕ್ಷ, ಪಂಗಡಗಳಿಲ್ಲದೆ ಕೇವಲ ನಗರದ ಹಿತದೃಷ್ಟಿಯಿಂದಲೇ ಕೌನ್ಸಿಲು ಮೆಂಬರರಾಗಲಿಚ್ಛಿಸುವವರು ಸ್ವತಂತ್ರರಾಗಿ ನಿಲ್ಲಬೇಕೆಂದು ವಿನಂತಿಸುವ ನಿರ್ಧಾರವು ತಾ 31ರಲ್ಲು ಸೇರಿದ ಪಕ್ಷಾತೀತ ನಾಗರಿಕರ ಸಭೆಯಲ್ಲಿ ಮಂಜೂರಾಯಿತು. ಡಾ| ಟಿ. ಜಿ. ಆಚಾರ್ಯರು ಅಧ್ಯಕ್ಷತೆ ವಹಿಸಿದ್ದರು ಸ್ವತಂತ್ರರಾಗಿ ನಿಂತ ಹುರಿಯಾಳುಗಳ ಸಭೆಯನ್ನು ಇದೇ ತಾ 10ರಲ್ಲು ಜರಗಿಸುವರೆ ಶ್ರೀಗಳಾದ ಯು ಎಸ್. ನಾಯಕ ಮತ್ತು ಬಿ. ವಾಸುದೇವರಾಯರನ್ನು ಕನ್ವೀನರರಾಗಿ ಆರಿಸಲಾಯಿತು.

ಕಲಾವೃಂದದ ವಾರ್ಷಿಕೋತ್ಸವವು— ಕಳೆದ ತಾ 27 ಮತ್ತು 28ರಲ್ಲು ಸ್ಥಳೀಯ ಸಂಸ್ಕೃತ ಕಾಲೇಜಿನ ಕಟ್ಟಡದಲ್ಲಿ ಜರಗಿತು. ಪರ್ಯಾಯ ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥ ಸ್ವಾಮಿಗಳವರು ಸಮಾರಂಭದ ಉದ್ಘಾಟನೆಯನ್ನು ನೆರವೇರಿಸಿದರು. ಮದ್ರಾಸು ಯೂನಿವರ್ಸಿಟಿ ಪ್ರೊಫೆಸರ್ ಶ್ರೀ ಎಮ್. ಗೋವಿಂದರಾಯರು ಸಭಾಧ್ಯಕ್ಷತೆ ವಹಿಸಿದ್ದರು. ವರದಿ ವಾಚನ, ಶ್ರೀ ಎಮ್. ಆರ್. ಜಗನ್ನಾಥಾಚಾರ್ಯರಿಂದ ಕಾವ್ಯ ವಾಚನವಾದ ಬಳಿಕ ಶ್ರೀ ಎಸ್. ವೆಂಕಟರಾಜರು 'ಕನ್ನಡ ಸಾಹಿತ್ಯದಲ್ಲಿರುವ ಕೆಲವು ಕೊರತೆಗಳು' ಎಂಬ ವಿಚಾರದಲ್ಲಿ ವಿಮರ್ಶಾತ್ಮಕ ದೃಷ್ಟಿಯಿಂದ ಭಾಷಣವಿತ್ತರು. ಸಭಾಧ್ಯಕ್ಷರು 'ಹಳೆಗನ್ನಡ ಸಾಹಿತ್ಯದಲ್ಲಿ ಕೆಲವು ರಸೋಕ್ತಿಗಳು' ಎಂಬ ವಿಷಯದಲ್ಲಿ ಭಾಷಣವಿತ್ತರು. ಧನ್ಯವಾದಾರ್ಪಣೆಯೊಂದಿಗೆ ಆ ದಿನದ ಕಾರ್ಯಕ್ರಮ ಮುಗಿಯಿತು ಎರಡನೆ ದಿವಸದ ಸಭೆಯು ಗಾಂಧಿ ಮೆಮೋರಿಯಲ ಕಾಲೇಜಿನ ಪ್ರಾಧ್ಯಾಪಕ ಶ್ರೀ ಎಮ್. ನಾರಾಯಣ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ವಿಷ್ಣುಮೂರ್ತಿ ಭಟ್ಟರ ಕವಿತಾ ವಾಚನವಾದ ಬಳಿಕ ಎಮ್. ಜಿ. ಎಮ್. ಕಾಲೇಜಿನ ಪ್ರೊಫೆಸರ್ ಶ್ರೀ ಆರ್. ಎಸ್. ಮಾಧವ ರಾಯರು 'ಅಣುಜೀವಿಗಳು' ಎಂಬ ವಿಷಯವನ್ನೆತ್ತಿ ಭಾಷಣವಿತ್ತರು. ವೃಂದದ ಕಾರ್ಯಕಲಾಪಗಳ ಕುರಿತಾಗಿ ಶ್ರೀ ಪಿ. ಶ್ರೀನಿವಾಸ ಅಡಿಗರು ಮಾತನಾಡಿದರು. ದಿವಂಗತ ಪಂಡಿತ ವೆಂಕಟರಮಣಾಚಾರ್ಯರ ಸ್ಮಾರಕ ಲೇಖನ ಮತ್ತು ಭಾಷಣ ಸ್ಪರ್ಧೆಗಳಲ್ಲಿ ಉತ್ತೀರ್ಣರಾದ ಶ್ರೀಯುತರು ಬಿ. ಕೇಶವಪೈ. ಯು. ಮೋಹನ ರಾವ್, ನಾರಾಯಣ ಹೆಬ್ಬಾರ್, ಮತ್ತು ಪ್ರಭಾಕರಾಚಾರ್ಯ—ಇವರಿಗೆ ಈ ಸಮಾರಂಭದಲ್ಲಿ ಬಹುಮಾನಗಳನ್ನು ಕೊಡಲಾಯಿತು. ಬಳಿಕ ವೃಂದದ ಗೆಳೆಯರಿಂದ ಚಿಕ್ಕ ನಾಟಕಾಭಿನಯವಾದೊಡನೆ ಎರಡನೆ ದಿವಸದ ಸಮಾರಂಭ ಕೊನೆಗೊಂಡಿತು.

ತಿದ್ದುಪಡಿ

ಕೋಟೇಶ್ವರ ಪಂಚಾಯತ 'ಹೋರ್ಡಿಂಗ ನೋಟೀಸು' ನಮ್ಮ ತಾ. 21-8-52ರ ಸಂಚಿಕೆಯಲ್ಲಿ ಪ್ರಕಟವಾದುದರಲ್ಲಿ 'ಶಿವ್ಯಾ ನಂಬ್ರ 20/1952ನ್ನು 29/52' ಎಂತಲೂ, 'ಅಕ್ಕೆರಿ' ಎಂಬುದನ್ನು ಅಟ್ಟಿರೆ ಎಂಬುದಾಗಿಯೂ 'ವೆಂಕಟಾಚಲ ಆಚಾರ್ಯ' ಎಂಬುದನ್ನು ವೆಂಕಟಾಚಲ ಚಾತ್ರ ಎಂಬುದಾಗಿಯೂ ತಿದ್ದಿ ಓದಬೇಕಾಗಿದೆ. ಸಂ| ಸ.

ಕೋಡಿಬೆಟ್ಟು ಪಣಂಬೂರು—ಸ್ಥಳೀಯ ಶ್ರೀ ಕೃಷ್ಣ ಭಜನಾ ಸಂಘದ ವಾರ್ಷಿಕ ಮಹಾ ಸಭೆಯು ಕಳೆದ ತಾ 15ರಲ್ಲು ಶ್ರೀ ದೇವು ಪೂಜಾರಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿಯವರಿಂದ ವರದಿ ವಾಚನವಾದ ಬಳಿಕ ಶ್ರೀಗಳಾದ ಬೈಕಂಪಾಡಿ ವೆಂಕಟ ಗುರಿಕಾರ, ಎಮ್. ವೈ. ರುದ್ರಿಕ್ಸ್, ರಾಮಣ್ಣ, ಕೇಶವ ಸೆಟ್ಟಿ ಮೊದಲಾದವರು ಸಂಘದ ಏಳ್ಗೆಗಾಗಿ ಹಿತಸೂಚನೆಗಳನ್ನಿತ್ತರು. ಸಂಘದ ಉಪಯೋಗಕ್ಕಾಗಿ ಕಟ್ಟಡ ಕಟ್ಟುವರೆ ಮನಮಾಡುವುದನೆ ಶ್ರೀಮತಿ ತಿಮರ್ಲೆ ಬೆಂಗರು, ಅವರು ತಮ್ಮ ಸ್ವಂತ ಸ್ಥಳದ ಒಂಭತ್ತು ಸೆಂಟ್ಸ್ ಜಾಗವನ್ನು ಧರ್ಮಾರ್ಥವಾಗಿ ಸಂಘಕ್ಕೆ ಕೊಟ್ಟ ಬಗ್ಗೆ ಅವರ ಉಪಕಾರ ಸ್ಮರಿಸಲಾಯಿತು.

ಪುತ್ತೂರು—ಸ್ಥಳೀಯ ಇರ್ಜೆಯ ಎದುರಾಗಡೆ ಇರುವ ಗೋಪುರವು ಈಚೆಗೆ ಕುಸಿದು ಬಿದ್ದಿರುವುದು. ಅಲ್ಲೇ ಸಮೀಪವಿರುವ ಹುಡುಗಿಯರ ಶಾಲಾ ಕಟ್ಟಡವು ಅಪಾಯಕರ ಸ್ಥಿತಿಯಲ್ಲಿರುವುದಾಗಿ ಹೇಳಲಾಗಿದೆ.

ಕಾರ್ಕಳ— ಸ್ಥಳೀಯ ಎಸ್. ವಿ. ಟಿ. ಗರ್ಲ್ಸ್ ಹೈಸ್ಕೂಲಿನ ಹಳೇ ವಿದ್ಯಾರ್ಥಿನಿಯರ ಸಂಘವೊಂದನ್ನು ಸ್ಥಾಪಿಸುವ ಉದ್ದೇಶದಿಂದ ಅವರ ಸಭೆಯೊಂದು ತಾ. 29ರಂದು ಕುಮಾರಿ ವಿಮಲಾ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಪಿ ಕೃಷ್ಣಾಬಾಯಿಯವರು ಸಂಘದ ಆವಶ್ಯಕತೆಯ ಕುರಿತು ಮಾತನಾಡಿದರು. ನಿಯಮಾವಳಿಗಳನ್ನು ತಯಾರಿಸುವರೆ ಶ್ರೀಮತಿ ಆರ್. ಕಮಲಾಬಾಯಿ ಮೊದಲಾದವರಿರುವ ಕಮಿಟಿ ರಚನೆಯಾಯಿತು.

ಹಿಲಿಯಾಣ—ಸ್ಥಳೀಯ ಬೋರ್ಡ್ ಎಲಿಮೆಂಟರಿ ಶಾಲೆಯ ಏಳಿಗೆಗಾಗಿ ದುಡಿದ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಚ್. ನಾರಾಯಣ ಚಪ್ಪಗಾರರನ್ನು ಬೀಳ್ಕೊಡುವ ಸತ್ಕಾರ ಸಮಾರಂಭವು ಕಳೆದ ತಾ 28ರಲ್ಲು ಯಶಸ್ವಿಯಾಗಿ ಜರಗಿತು,

ಮುರ್ಡೆ —ಕಳೆದ ತಾ 30ನೇ ಅಪರಾಹ್ನ ಪಟ್ಣ ಶಾಲೆಯಲ್ಲಿ ಹಿರಿಯಡ್ಕ ಆರ್ಯಸಮಾಜದ ವತಿಯಿಂದ ಶ್ರೀ ಯಂ. ವಾಸುದೇವ ಭಟ್ಟರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಮಂಗಳೂರು ಶ್ರದ್ಧಾನಂದ ಅನಾಥಾಶ್ರಮದ ಸದಾನಂದ ಸರಸ್ವತಿಯವರು ಮಾನವ ಧರ್ಮದ ಕುರಿತೂ ಬಿ. ಕೆ. ಅನಂತಯ್ಯನವರು ವೇದ ಧರ್ಮ ಮತ್ತು ಸ್ವಾಮಿ ದಯಾನಂದ ಎಂಬ ಕುರಿತೂ ಭಾಷಣವಿತ್ತರು. ಮುರ್ಡೆ ಗೋವಿಂದ ಸೆಟ್ರು, ಬಾಳ್ಕಟ್ಟ ರಾಮಚಂದ್ರ ಭಟ್ಟರು ಅಧ್ಯಕ್ಷರು ಮಾತನಾಡಿದ ಮೇಲೆ ಧನ್ಯವಾದದೊಂದಿಗೆ ಸಭಾಂತ್ಯವಾಯಿತು.

ಕುಂಬಳೆ - ಕಳೆದ ತಾ 31ರಲ್ಲು ಕಾಸರಗೋಡು ತಾಲೂಕು ಉಪಾಧ್ಯಾಯರ ಯೂನಿಯನ್ ಪುನರ್ರಚನಾ ಕಮಿಟಿ ಸಭೆಯು ಯಂ. ಸಿ. ಕಣ್ಣನವರ ಅಧ್ಯಕ್ಷತೆಯಲ್ಲಿ ಜರಗಿ ಮುಂದಿನ ಕಾರ್ಯಕ್ರಮವನ್ನು ನಿರ್ಣಯಿಸಲಾಯಿತು,

ಪೆರ್ಡೂರು—ಕಳೆದ ತಾ 21ನೇ ಹಗಲು ಮೇಯಲಿಕ್ಕೆ ಕಟ್ಟಿದ ದನವನ್ನು ಬಿಡಿಸಿ ತರಲು ಹೋದ ಗಂಗಮ್ಮ ಎಂಬ ಹೆಂಗಸಿಗೆ ಹುಲಿಯೊಂದು ವಿಶೇಷ ಗಾಯಗೊಳಿಸಿರುತ್ತದೆ.

ಸಾಬ್ರಿಕಟ್ಟೆ- ತಾ. 1ರಲ್ಲು ಬೊ| ಹಾ| ಎಲಿಮೆಂಟರಿ ಶಾಲೆಯ 6ನೇ ಕ್ಲಾಸು ತೆರೆಯುವ ಸಮಾರಂಭವು ಸ್ಕೂಲ್ ಕಮಿಟಿ ಪ್ರೆಸಿಡೆಂಟ್ ಆಳ್ವಾರ್ ಸಂಕಪ್ಪ ಸೆಟ್ರ ಅಧ್ಯಕ್ಷತೆಯಲ್ಲಿ ನೆರವೇರಿತು.

ಧರ್ಮಸ್ಥಳ- ಕಳೆದ ತಾ 29ನೇ ರಾತ್ರಿ ಧರ್ಮಸ್ಥಳ ದೇವಸ್ಥಾನದ ಜನರಲ್ ಮ್ಯಾನೇಜರರಾದ ಬಿ. ಸೀತಾರಾಮ ಅಡಿಗರೆಂಬವರು ತನ್ನ 33ನೇ ವಯಸ್ಸಿನಲ್ಲಿ ಮೃತರಾದರು ಇವರು ಮಂಗಳೂರು ಸರಕಾರಿ ಆಸ್ಪತ್ರೆಯಲ್ಲಿದ್ದ ತನ್ನ ಮಿತ್ರರೊಬ್ಬರನ್ನು ನೋಡಲು ಹೋದವರು ಆಸ್ಪತ್ರೆಯ ಜಗಲಿಯಿಂದ ಕೆಳಗೆ ಬಿದ್ದು ಪೆಟ್ಟಾಗಿ ಡಾಕ್ಟರರ ಪ್ರಯತ್ನ ಫಲಿಸದೆ ತೀರಿಹೋದರು. ಈ ಶೋಕ ಪ್ರದರ್ಶನಕ್ಕಾಗಿ ಇಲ್ಲಿಯವರು ವ್ಯಾಪಾರೋದ್ಯಮಗಳನ್ನು ನಿಲ್ಲಿಸಿದರು.

All Secondary Schools may Subscribe to "Navayuga" weekly Since it has been approved by the Director of Public Instruction, Madras

ಸ್ವರ್ಗೀಯ ಪ್ರೇಮಚಂದ್ರರ ಧರ್ಮಪತಿ
ಶ್ರೀಮತಿ ಶಿವರಾಣಿ ದೇವಿಯವರ
ಕಥಾಮಾಲಿಕೆಯ ಅನುವಾದ.

ನಾರೀಹೃದಯವನ್ನು ಚಿತ್ರಿಸುವ
ಅತ್ಯುತ್ತಮ ಕತೆಗಳ ಸಂಗ್ರಹ

ಸ್ತ್ರೀಯರಲ್ಲಿಯೂ ಸಾಹಸ, ಸ್ನೇಹ, ದೇಶಭಕ್ತಿ, ತ್ಯಾಗ, ಬಲಿದಾನಾದಿ ಅಮೂಲ್ಯ ಗುಣಗಳೂ ಇದ್ದೇ ಇವೆ ಎಂಬುದನ್ನು ಚೆನ್ನಾಗಿ ವಿವರಿಸಿರುವ ನವೀನ ಕತೆಗಳು.

ನಾರಿಯರೂ, ಪುರುಷರೂ ಓದತಕ್ಕ
ರೂ 1-8 0 ಬೆಲೆಯ ಪುಸ್ತಕ

ರಂಗಭೂಮಿಯ
ರಂಗಿನ ತರಂಗ

ಎಸ್. ವೆಂಕಟರಾಜರು ಬರೆದ
ವಿನೋದಪ್ರಧಾನ ನಾಟಕ

- ● ನಡೆದ-ನಡೆಯುವ ವಿದ್ಯಮಾನದ ಒಂದು ಪಡಿಯಚ್ಚು
- ● ಒಂದು ನಾಟಕಮಂಡಲಿ ಸುಲಭದಲ್ಲಿ ಸಿಕ್ಕಿದ ಸಾಮಾನ್ಯ ಘಟನೆಯೊಂದರ ನೈಜ ಚಿತ್ರ
- ● ಆಕರ್ಷಕ ಪುಸ್ತಕ, ಬೆಲೆ 0 10 0

ನಡಿಯುವ ಚಿತ್ರ
ಯಾವ ಯಾವ ಕಾರಣಗಳಿಂದ ಯಾರ್ಯಾರಿಗೆ ಎಂತೆಂತಹ
ವಿರಹ ತಾಪಗಳಾಗಿವೆಯೋ ಅವರೆಲ್ಲರ ತಾಪಪರಿಹಾರಕ್ಕಾಗಿ —

ಬಿರಾಹ-ಕಿ-ರಾತ್
ದೇವ ಆನಂದ್, ಓಮ್ ಪ್ರಕಾಶ್, ನರ್ಗಿಸ್, ಮತ್ತು ಸ್ನೇಹ ಪ್ರಭಾ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ತಾವು ನಿರೀಕ್ಷಿಸುತ್ತಿದ್ದ ತರಾನ.
ಸದ್ಯದಲ್ಲಿ ಮೆಟ್ರೋರವರ ಕೀಮ್ KIM (ವರ್ಣಚಿತ್ರ)



Applauded as the BEST Rubber Stamp Makers all over India

CROWN RUBBER STAMP CO.
Mangalore
(ESTD. 1926)

ಲಘು ಮನಸ್ಸು

(೧ನೇ ಪುಟದಿಂದ ಮುಂದುವರಿದುದು)

ನೋಡಿಕೊಳ್ಳುವುದು ಅವರ ತೀಕ್ಷ್ಣವಾದ ಜಿಜ್ಞಾಸೆ; ಹಿಂಗದ ಹಸಿವೆ. ಕಲ್ಪನೆಯ ಕ್ರೀಡೆಯೇ ಇಲ್ಲಿ ನಡೆದಿದೆ. ಇದರಿಂದ ನೋಡುವವರ ಕಣ್ಣಿಗೆ ಪ್ರಯೋಗ ಶಾಲೆಯ ರಹಸ್ಯಮಯ ವಾತಾವರಣ ಆಕರ್ಷಕವೆನಿಸುವುದು.

ಮನಸ್ಸಿಗೆ ಒಲ್ಲದ ಕೆಲಸಮಾಡಿದರೆ-ಭಾವನಾತ್ಮಕವಾದ ವಿದ್ರೋಹ ಉತ್ಪನ್ನಗೊಳ್ಳುವುದರಿಂದ, ಮನಸ್ಸನ್ನು ತಿದ್ದಿಕೊಳ್ಳುವುದೇ ಮಹತ್ವದ ಸಂಗತಿಯಾಗುತ್ತದೆ. ಮನೋರಂಜನೆಯ ಮೂಲಕ ಈ ಉದ್ವೇಗವನ್ನು ಕಳೆದುಕೊಳ್ಳಲು ಬರುತ್ತದೆ. ಶ್ರಮದಂತೆ ಒತ್ತಾಯಕ್ಕೆ ಕಟ್ಟುಬೀಳದೆ, ಸ್ವತಂತ್ರವಾಗಿ ಹಾಗೂ ಸ್ವೇಚ್ಛೆಯಿಂದ ದೊರಕುವುದೇ ಮನೋರಂಜನೆ ಆನಂದದಾಯಕವೆನಿಸುವುದರ ಮರ್ಮ. ಶಾರೀರಕ ಶ್ರಮವು ಹೆಜ್ಜೆಯ ಕೆಂದಾಗ ಕಲ್ಪನೆಯನ್ನು ಆಶ್ರಯಿಸಿ, ಬೌದ್ಧಿಕ ಕೆಲಸದಲ್ಲಿ ಉದ್ಯುಕ್ತರಾಗುವುದು ಹಿತಕರವಿದೆಯಲ್ಲವೆ? ಅದರಂತೆ ಮಸ್ತಕವು ಕುಂದು ಕಂತವಾದಾಗ—ತರ್ಕ, ಚಿಂತನೆ, ಮನನ, ವಿಶ್ಲೇಷಣಗಳಿಂದ ನರಮಂಡಲ ಬಿಗಿಯೆನಿಸಿದಾಗ—ಅದನ್ನು ಸಡಿಲುಗೊಳಿಸಿ ದೇಹದ ಉಳಿದ ಅಂಗಗಳ ಲಘುತ್ವದೊಂದಿಗೆ ಸೌಮನಸ್ಯವನ್ನು ಸ್ಥಾಪಿಸಬೇಕು. ಮನೋರಂಜನೆ ಇದಕ್ಕೊಂದು ಸಾಧನ. ಬುದ್ಧಿಜೀವಿಗಳು ದೈಹಿಕ ಶ್ರಮದ ರಂಗಕ್ಕೆ ಇಳಿದರೆ-ಆಗ ಅವರ ರಚನಾತ್ಮಕ ಪ್ರವೃತ್ತಿ ಬೆಳಕಿಗೆ ಬರಲು ಇನ್ನಷ್ಟು ವಿಶಾಲವಾದ ಹಾಗೂ ಯೋಗ್ಯವಾದ ಅವಕಾಶ ದೊರಕುವುದು. ಹೂತೋಟಗಳನ್ನು ಅವರು ಶೃಂಗರಿಸಹೊರಟರೆ, ಅದರ ಕಳೆ ಏರುವುದು. ಗೃಹಶಿಲ್ಪವನ್ನು ಕೈಗೊಂಡರೆ ಆಕರ್ಷಕವೆನಿಸುವುದು. ಶಾರೀರಿಕ ಶ್ರಮ ಮಾಡುವವರು ಗ್ರಂಥಾವಲೋಕನ, ಸಂಗೀತ, ಚಿತ್ರ ಬಿಡಿಸುವುದು ಮುಂತಾದವುಗಳ ಮೂಲಕ ಕಲ್ಪನೆಯ ಕೈಯನ್ನು ಕುದುರಿಸಲು ಎಡೆ ಇದೆ.

ಹೀಗೆ-ಎಂಥವರೂ ಆನಂದ ಪೂರ್ವಕವಾಗಿ ಶ್ರಮ ನಿರತರಾಗುವುದು ಸಾಧ್ಯ. ಮನಸ್ಸನ್ನು ಭಾರವಾಗಿಡದೆ ಸದಾ ಕಾಲ ಲಘುವಾಗಿಡಬೇಕು. ಲಘು ಮನಸ್ಸು ಬಂದೆಲ್ಲ ಕಷ್ಟಗಳನ್ನು ನಗು ನಗುತ್ತಾ ಸಹಿಸುವುದು. ಕಲ್ಪನೆಯ ಕೈ ಅಲ್ಲಾಡಿದ್ದರೆ-ಕಷ್ಟದಿಂದ ಪಾರಾಗಲೂ ಅದು ಸಮರ್ಥವಾಗುವುದು. ರಾಜಕೀಯದಲ್ಲಿ ಜನರ ಮನೋಬಲವನ್ನು ತಿಳಿದು ನಡೆಯುವ ಅಗತ್ಯ ಬೀಳುತ್ತದೆ. ಪಂಚವಾರ್ಷಿಕ ಯೋಜನೆಯಂಥ ರಚನಾತ್ಮಕ ಕಾರ್ಯರಂಗ ನಮ್ಮ ಮುಂದಿದೆ. ಬುದ್ಧಿಜೀವಿಗಳೂ ಶ್ರಮಜೀವಿಗಳೂ ಕೂಡಿಯೇ ಇದರಲ್ಲಿ ಭಾಗವಹಿಸಿ ಯಶಸ್ಸು ಸಂಪಾದಿಸಬೇಕು. ನಮ್ಮ ಜನರ ದೃಷ್ಟಿಕೋನವನ್ನು ಬದಲಿಸುವ ಸಮಯ ಸಂದರ್ಭದಲ್ಲಿ ಭಾರತ ಸೇವಕ ಸಮಾಜದಂಥ ಅಪೂರ್ವ ಸಂಘಟನೆ ತೊಡಗಿದೆ. ಎಲ್ಲರೂ ರಾಷ್ಟ್ರದ ಅವಶ್ಯಕತೆಯನ್ನು ಮನಗಾಣುವ ಕಾಲ ಸನ್ನಿಹಿತವಾಗಿದೆ.

—ಓಂ ತತ್ಸತ್ ||

ಬಡದೇಶಗಳ ಭೂಗರ್ಭ ನಿಧಿ

[೪ ನೇ ಪುಟದಿಂದ ಮುಂದುವರಿದುದು]

ಗಂಧಕದ ಕೊರತೆ

ಯುದ್ಧದ ದಾಹ ಹೆಚ್ಚುತ್ತಿರುವ ಈ ದಿನಗಳಲ್ಲಿ ಗಂಧಕದ ಬೇಡಿಕೆಗೆ ಇತಿಮಿತಿ ಇಲ್ಲ: ಅಂತರರಾಷ್ಟ್ರೀಯ ಮಟ್ಟಕ್ಕೆ ಗಂಧಕದ ಉತ್ಪಾದನೆ ಏರಿಸ್ಕೆ ಮುಟ್ಟಿದೆ. ಕಳೆದ ವರ್ಷಕ್ಕಿಂತ ಈ ವರ್ಷ ಒಂದು ಮಿಲಿಯ ಟನ್ನು ಗಂಧಕ ಹೆಚ್ಚು ಬೇಕಾದೀತೆಂಬ ಒಂದೇ ಮಾತು ಇದಕ್ಕೆ ನಿದರ್ಶನ. ಗಂಧಕ, ಜಸ್ತ, ಪೈರೈಟಗಳನ್ನು ಜಪಾನೇ ಅತ್ಯಧಿಕ ಉತ್ಪಾದಿಸುತ್ತಿದೆ ಆದರೆ ಎಲ್ಲವೂ ಮನೆಬಳಕೆಗೇ ಸ್ವ. ಭಾರತವು ೧೯೫೧ರಲ್ಲಿ ಗಂಧಕದ ಕೊರತೆಯಿಂದ ಬಸಲಿತು. ೬೦೦೦೦ ಟನ್ನುಗಳ ಅಗತ್ಯವಿದ್ದರೂ ಅಮೇರಿಕದಿಂದ ೪೪೦೦೦ ಟನ್ನುಗಳಷ್ಟನ್ನು ಆಮದು ಮಾಡಿಕೊಂಡು ತೃಪ್ತಿಪಟ್ಟುಕೊಳ್ಳಬೇಕಾಯಿತು. ಮೂಲ ರಾಸಾಯನಿಕ ಕೈಗಾರಿಕೆಗಳಿಗೂ, ಗೊಬ್ಬರ ತಯಾರಿಕೆಗೂ ಪ್ರಾಶಸ್ತ್ಯ ಕೊಟ್ಟು ಇದನ್ನು ಹಂಚಿದರು. ಇಂಥದರಲ್ಲಿ ಮುಂಬಯಿಯ ಬಳಿ ಪೈರೈಟು ನಿಕ್ಷೇಪವಿದೆ ಎಂಬ ಸಂಗತಿ ಆಶಾಜನಕವಿದೆ.

ಕಲ್ಲಿದ್ದಲು ಉತ್ಪಾದನೆಯು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಜಪಾನ, ಚೈನಾ ಮತ್ತು ಭಾರತಗಳು ಮುಖ್ಯವಾದವುಗಳು. ಕಲ್ಲಿದ್ದಲು ಉತ್ಪಾದಕವಲ್ಲದ ರಾಷ್ಟ್ರಗಳು (ಬರ್ಮಾ, ಥೈಲೆಂಡು, ಬ್ರಿಟಿಷ ಬೋರ್ನಿಯೋ ಇತ್ಯಾದಿ) ಈಗ ಹೇಗಾದರೂ ಮಾಡಿ ಕಲ್ಲಿದ್ದಲು ಬಗೆಯಬೇಕೆಂದು ಶತಪ್ರಯತ್ನದಲ್ಲಿವೆ. ಈಗ ಕ್ಷುಬ್ಧವಾಗಿರುವ ಕೊರಿಯಾ, ವೀಟನಾಮು ಮತ್ತು ಮಲಯಾಗಳೂ ಕಲ್ಲಿದ್ದಲಿಗೆ ಹೆಸರಾದವುಗಳು. ಏನೇ ಇರಲಿ- ಒಟ್ಟಿನಲ್ಲಿ ಆಗ್ನೇಯ ಏಶಿಯಾದ ರಾಷ್ಟ್ರಗಳಲ್ಲಿ ಖನಿಜ ಸಂಪತ್ತನ್ನು ಉಪಯೋಗಿಸುವುದಕ್ಕೆ ವಿಪುಲ ಅವಕಾಶವಿದೆ ಎಂಬುದು ಸ್ವತಃಸಿದ್ಧ. ನಾವು ಯಾರಿಗೂ ಕಡಿಮೆಯಿಲ್ಲ!

ಮಂಗಳೂರು

ಮುನಿಸಿಪಲ್ ಕೌನ್ಸಿಲಿನ ಚುನಾವಣೆ—ನಾಮ ಪತ್ರಗಳನ್ನು ಇದೇ ತಾ. 5 ಮತ್ತು 6ರಲ್ಲಿ ಅಪರಾಹ್ನ 2ರಿಂದ 4 ಗಂಟೆಯವರೆಗೂ ತಾ. 8ರಲ್ಲಿ ಪೂರ್ವಾಹ್ನ 11 ರಿಂದ ಸಂಜೆ 5 ಗಂಟೆಯ ತನಕವೂ ಸ್ವೀಕರಿಸಲಾಗುವುದು. ತಾ. 9 ಕ್ಕೆ 10 ಗಂಟೆಗೆ ನಾಮಪತ್ರಗಳ ಪರಿಶೋಧನೆ, ಅಪೀಲುಗಳಿಲ್ಲದಿದ್ದಲ್ಲಿ ತಾ. 13ರಂದು, ಅಪೀಲುಗಳಿದ್ದ ಸಂದರ್ಭದಲ್ಲಿ ತಾ. 17ರಲ್ಲಿ ಉಮೇದ್ವಾರರ ಹೆಸರುಗಳ ಪ್ರಕಟಣೆ, ಅಕ್ಟೋಬರ ತಿಂಗಳ ತಾ. 6ರಲ್ಲಿ ಬೆಳಿಗ್ಗೆ 7ರಿಂದ ಸಂಜೆ 6ಗಂಟೆ ತನಕ (ಮಧ್ಯಾಹ್ನ 12ರಿಂದ 1ರ ವರೆಗೆ ಬಿಡುವು) ಮತದಾನ ನಡೆಯುವುದು. ತಾ. 7 ರಂದು ಬೆಳಿಗ್ಗೆ 9 ಗಂಟೆಗೆ ಮತಗಳ ಎಣಿಕೆ ಪ್ರಾರಂಭವಾಗುವುದು.

ಪದವೀಧರರ ಸತ್ಕಾರ— ಮಂಗಳೂರು ಗವರ್ನಮೆಂಟ್ ಕಾಲೇಜಿನ ಬಿ. ಎ. ಪರೀಕ್ಷೆಯಲ್ಲಿ ಪಾಸಾದವರನ್ನು ಸತ್ಕರಿಸುವ ಸಮಾರಂಭವು ತಾ. 28ರಲ್ಲಿ ಸಂಜೆ ಜರಗಿತು. ಟೀಪಾರ್ಟಿ ಸತ್ಕಾರ, ಸ್ವಾಗತ ಮಾತುಗಳಾದ ಬಳಿಕ ಪ್ರಿನ್ಸಿಪಾಲ್ ಶ್ರೀ ಎನ್. ಎ. ಹಶೀಮಿಯವರು ಸ್ನಾತಕರ ಪರಿಚಯ ಮಾಡಿಕೊಟ್ಟರು. ಸ್ನಾತಕರ ಕಡೆಯಿಂದ ಶ್ರೀಗಳಾದ ನರಸಿಂಹ ಶೆಣೈ, ಕೆ ಕರುಣಾಕರ ರಾವ್, ಕೆ ಇಸ್ಮಾಯಿಲ್, ರಂಗನಾಥ ಸೆಟ್ಟಿ ಮತ್ತು ಕುಮಾರಿ ಇಂದಿರಾ ಅವರು ಮಾತನಾಡಿ ತಮ್ಮ ಉಪಾಧ್ಯಾಯ ವೃಂದವನ್ನು ಅಭಿನಂದಿಸಿದರು. ಜಿಲ್ಲಾ ಕಲೆಕ್ಟರ್ ಶ್ರೀ ಎ ಸಿ. ರಾಮಕೃಷ್ಣನ್ ಅವರು ಪದವೀಧರರು ಉತ್ತಮ ಆದರ್ಶದಿಂದ ದೇಶ ಸೇವೆಗೆ ಮುಂದಾಗಬೇಕೆಂದರು. ಬಳಿಕ ಶ್ರೀ ತಿಮ್ಮಪ್ಪ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು. ವಿನೋದ ಕಾರ್ಯಕ್ರಮಗಳೊಂದಿಗೆ ಸಮಾರಂಭ ಮುಕ್ತಾಯವಾಯಿತು.

ರಾಷ್ಟ್ರೀಯ ಗೋಸಪ್ತಾಹವು-- ಮಂಗಳೂರಲ್ಲಿ ಅಕ್ಟೋಬರ ತಾ 26ರಿಂದ ನವಂಬರ ತಾ 1ರ ವರೆಗೆ ಆಚರಿಸಲ್ಪಡುವ ಕಾರ್ಯಕ್ರಮ ನಿರ್ಧರಿಸಲಾಗಿದೆ

ವಾರ್ಷಿಕ ಮಹಾಸಭೆ—ದ. ಕ. ಸಿನೆಮಾ ಎಂಪ್ಲೋಯಿಸ್ ಎಸೋಸಿಯೇಶನಿನ ವಾರ್ಷಿಕ ಮಹಾ ಸಭೆಯು ಕಳೆದ ತಾ 21ರಲ್ಲಿ ರಘುನಾಥ ಮೆಮೋರಿಯಲ್ ಹಾಲಿನಲ್ಲಿ ಎಡ್ವೊಕೇಟ್ ಶ್ರೀ ಡಿ. ಮೋಹನ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲೆಯಾದ್ಯಂತ ಇರುವ ಸಿನೆಮಾ ಕೆಲಸಗಾರರು ಈ ಯೂನಿಯನಿಗೆ ಸೇರಿ ಅದನ್ನು ಬಲಪಡಿಸುವುದರ ಅವಶ್ಯಕತೆಯ ಕುರಿತು ಭಾಷಣಗಳಾಗಿ ಹೊಸ ವರುಷದ ಅಧಿಕಾರಿಗಳ ಆಯ್ಕೆ ನಡೆಯಿತು.

ಶ್ರೀ ರೋಹಿತ್ ಮೇಥಾರವರು- ವಾರಣಾಸಿಯ ಥಿಯಾಸೊಫಿಕಲ್ ಹೈಸ್ಕೂಲ್ ಮತ್ತು ವಸಂತ ಕಾಲೇಜುಗಳೆಂಬ ಬಾಲಕರ ಮತ್ತು ಬಾಲಕಿಯರ ಎರಡು ಕಾಲೇಜುಗಳ ಸಂಚಾಲಕರಿದ್ದು ಅವರು ತಮ್ಮ ಪತ್ನಿ ಶ್ರೀಮತಿ ಶ್ರೀದೇವಿಯೊಡನೆ ಮಂಗಳೂರಿಗೆ ಬಂದಿರುವರು. ಸರಕಾರಿ ಕಾಲೇಜಿನಲ್ಲಿ ಶ್ರೀ ಮೇಥಾರವರು 'ಆಧುನಿಕ ವಾದಗಳು ಮತ್ತು ಜಾಗತಿಕ ಸಂಕಷ್ಟಗಳು! ಈ ವಿಷಯಗಳಲ್ಲಿ ಎರಡು ಭಾಷಣಗಳನ್ನಿತ್ತರು. ಶ್ರೀಮತಿ ಶ್ರೀದೇವಿ ಮೇಥಾರವರು ಬಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ 'ವಿದ್ಯಾರ್ಥಿಗಳೆಂತು ಸತ್ಪ್ರಜೆಗಳಾಗಬಹುದು?' ಎಂಬೀ ವಿಚಾರದಲ್ಲಿ ಉಪನ್ಯಾಸವಿತ್ತರು.

ಶ್ರೀ ಬೆನೆಗಲ್ ಶಿವರಾಯರು:— ಪುನರ್ನಿವೇಶನ ಮತ್ತು ಎಂಪ್ಲೊಯ್‌ಮೆಂಟ್ ಎಕ್ಸ್‌ಚೇಂಜ್‌ಗಳ ಕಾರ್ಯ ಪರಿಶೀಲಿಸಿ ಯೋಗ್ಯ ಸಲಹೆಗಳನ್ನು ಕೊಡಲು ಮಂತ್ರಿಮಂಡಲವು ರಚಿಸಿದ ಸಮಿತಿಗೆ ಅಧ್ಯಕ್ಷರಾಗಿ ನೇಮಕಹೊಂದಿರುವರೆಂದು ತಿಳಿದುಬರುತ್ತದೆ.

ಸಾರ್ವಜನಿಕ ಗಣೇಶೋತ್ಸವ:—ಹಲವು ಸಂಘ ಸಂಸ್ಥೆಗಳ ನೇತೃತ್ವದಲ್ಲಿ ತಾ 24ರಲ್ಲಿ ಜರಗಿತು. ಶ್ರೀ ಎಸ್. ನ್. ಸುವರ್ಣ, ಎಮ್. ಎಲ್. ಎ. ಅವರು ಇಂತಹ ಉತ್ಸವ ಕಾಲದಲ್ಲಿ ಜನರು ಜಾತೀಯ ಮನೋಭಾವವನ್ನು ತೊರೆದು ನಾವೆಲ್ಲರೂ ಭಾರತೀಯರೆಂದು ಪ್ರತಿಜ್ಞೆ ಮಾಡಿಕೊಂಡರೆ ದೇಶದ ಅಭ್ಯುದಯಕ್ಕೆ ತುಂಬ ಅನುಕೂಲವಾಗುವುದೆಂದು ಮಹಾಜನರನ್ನುದ್ದೇಶಿಸಿ ಭಾಷಣವಿತ್ತರು.

ಉದಾರ ದಾನ:—ಜೆಪ್ಪು ಸೈಂಟ್ ಜೋಸೆಫ್ಸ್ ಕಾತೊಲಿಕ ಹೈಸ್ಕೂಲಿನ ಶಾಲೆ ಧರ್ಮ ಸಂಪಾದಕರು ಶಾಲೆಯ ಸ್ವಾಸ್ಥ್ಯ ಸಂಸ್ಥಾನವನ್ನು ನಡೆಸುವ ಸಲುವಾಗಿ ಆ ಮೆನೇಜರಿಗೆ ರೂಪಾಯಿ 501ರ ಥೈಲಿಯೊಂದನ್ನು ಸಂಘದ ಕೋಶಾಧಿಕಾರಿಗಳ ವಶಕ್ಕೆ ಕೊಡಿಸಿರುವರೆಂದು ತಿಳಿದು ಬರುತ್ತದೆ.

ಹೈಕೋರ್ಟಿನಲ್ಲಿ ದಾವೆ—'ಅರಿಷ್ಟಗಳ ತಯಾರಿಕೆಗೆ ಮದ್ಯಪಾನ ನಿರೋಧ ಕಾನೂನಿನ ಮೂಲಕ ರಿವಿನ್ಯೂ ಬೋರ್ಡು ಯಾವ ನಿರ್ಬಂಧವನ್ನೂ ಮಾಡಕೂಡದೆಂದು ರಿಜಿಸ್ಟರ್ಡ್ ವೈದ್ಯ ಶ್ರೀ ಜಿ. ನಾಗೇಶ ರಾಯರು ಮದ್ರಾಸು ಹೈಕೋರ್ಟಿನ ನ್ಯಾಯಾಧೀಶ, ಕೆ. ಸುಬ್ಬರಾಯರಲ್ಲಿ ದಾವೆ ಹೂಡಿದ್ದಾರೆ

ಸ್ತ್ರೀ ಪುರುಷ ಶಿಶುಗಳು ರೋಗದಿಂದ ನರಳಬೇಕಾಗಿಲ್ಲ!
ಲಕ್ಷಾಂತರ ಜನರು ಗುಣಹೊಂದಿದ್ದಾರೆ!
ಸರ್ ಜೀವನ್ ಶಿಲಾಜಿತ್ ಲೇಹ್ಯ
ಶಿಲಾಜಿತ್ ಹಿಮಾಲಯದ ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗಗಳಿಗೂ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ. ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.
೪೦ ದಿನದ ಲೇಹ್ಯ ರೂ ೫/೪, ೨೦ ದಿನದ ಲೇಹ್ಯ ರೂ ೩-೪
(ಪೋಸ್ಟೇಜು ಮಾಫ್)
ನೀಲಗಿರಿ ಡಿಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪ್ಪೋದಲ್ಲಿ ಕೇಳಿರಿ.

DO YOU KNOW?
THAT
THE VIJAYA BANK, LIMITED.
1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs 10 lacks
3. Has granted an average dividend of 6 to the Shareholders for the past 20 years
4 Has a net work of Branches in South Kanara and one each in Mercara and Fort, Bombay
5 Offers attractive rates of interest on Deposits and Cash Certificates
6 Grants loans on easy terms to approved parties or on approved securities
7. Does afford full protection and rich return to all your monies
ADOPT IT AS
"MY BANK"
THE VIJAYA BANK, LIMITED,
H. O., MANGALORE

GUN FOR SALE
Slightly used doubl Barrel. Breach Loading Hammerless, ejecter Gun
X C/o Navayuga. Udipi S K
ಗನ್ ಮಾರಾಟಕ್ಕಿದೆ
ಸ್ವಲ್ಪವೇ ಉಪಯೋಗಿಸಿದ ಜೋಡಿ ನಳಿಗೆಯ, ಕುದುರೆ ಇಲ್ಲದ, ಹೊಡೆದ ತೋಟೆ ಹಿಂದೆ ಹಾರಿಸುವ ಹೊಸತೋಟೆಯ ಕೋವಿಯೊಂದು ಮಾರಲಿಕ್ಕಿದೆ
X C/o ನವಯುಗ ಉಡುಪಿ

ದ. ಕ. ಜಿಲ್ಲೆಯಲ್ಲಿ ಮಂತ್ರಿ ಡಾ॥ ನಾಗಣ್ಣ ಗೌಡರು

ಮಲ್ಪೆಯಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕಸಭೆ

ಉಡುಪಿ ನಗರ ಸಭೆಯ ಮಾನಪತ್ರಾರ್ಪಣೆ

ಮದ್ರಾಸಿನ ಕೃಷಿ ಮತ್ತು ಅರಣ್ಯಖಾತೆಯ ಮಾನ್ಯಮಂತ್ರಿ ಡಾ॥ ನಾಗಣ್ಣ ಗೌಡರು ತಾ. 27ರಂದು ರಾತ್ರಿ ಉಡುಪಿಗೆ ಆಗಮಿಸಿದರು. ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆ, ಕಾರ್ಯದರ್ಶಿ ಶ್ರೀ ಕೆ. ನರಹರಿ ಕಾಮತ್, ಡಾ॥ ಟಿ. ಎಮ್. ಎ. ಪೈ, ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಮೊದಲಾದವರು ಅವರನ್ನು ಪೆಂಟಲೆಂಡ್ ಬಂಗ್ಲೆಯಲ್ಲಿ ಸ್ವಾಗತಿಸಿದರು.

ತಾ. 28ರಂದು ಬೆಳಗ್ಗೆ ಶ್ರೀ ಕೃಷ್ಣನ ದರ್ಶನ ಮಾಡಿದ ಬಳಿಕ ಮಲ್ಪೆಗೆ ಬಂದು ಅಲ್ಲಿಯ ಫಿಶ್‌ಕ್ಯೂರಿಂಗ್ ಯಾರ್ಡನ್ನು ಸಂದರ್ಶಿಸಿದರು. ಫಿಶರಿ ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರ್ ಶ್ರೀ ಮುಕುಂದನ್ ಉನ್ನಿಯವರು ಅಲ್ಲಿಯ ವಿದ್ಯಮಾನಗಳ ಪರಿಚಯವನ್ನು ಮಾಡಿಕೊಟ್ಟರು. ಬೆಸ್ತರಿಗೆ ಫಿಶ್‌ಕ್ಯೂರಿಂಗ್ ಯಾರ್ಡಿನಲ್ಲಿರುವ ಅನಾನುಕೂಲತೆಗಳನ್ನು ಬಗೆಹರಿಸುವಂತೆ ಮಂತ್ರಿಗಳನ್ನು ಶ್ರೀ ಟಿ. ಎ. ಪೈಗಳು ನಿವೇದಿಸಿಕೊಂಡರು. ಆ ಬಗ್ಗೆ ಮಂತ್ರಿಗಳ ಸಹಾನುಭೂತಿ ಕೂಡಾ ದೊರೆಯಿತು. ನಂತರ ಮಂತ್ರಿಗಳು ಮಲ್ಪೆ ಫಿಶರೀಸ್ ಸ್ಕೂಲನ್ನು ಸಂದರ್ಶಿಸಿದಾಗ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸಾರಾ, ಬಿ ಎ ಬಿ. ಟಿ, ಮೊದಲಾದವರು ಸ್ವಾಗತವಿತ್ತರು. ಸಂತೋಷಚಿತ್ತರಾದ ಡಾ॥ ಗೌಡರು ಅದೇ ಶಾಲೆಯ ಹೊಸಬ್ಲಾಕಿನ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಈ ಕಾರ್ಯಕ್ಕೆ ಒದಗಿಸಲಾದ ಬೆಳ್ಳಿ ಕಾಪಿಯನ್ನು ಮಂತ್ರಿಗಳೇ ಹರಾಜುಮಾಡಿ ಸಂಪಾದಿಸಿದ ರೂ. 150/-ನ್ನು ಅದೇ ಶಾಲಾಫಂಡಿಗೆ ಕೊಟ್ಟರು. ಬಳಿಕ ಶಾಲೆಯಲ್ಲಿ ಮಲ್ಪೆ ಮಹಾಜನರ ಸಭೆಯು ಶ್ರೀ ಟಿ. ಎ. ಪೈ, ಎಮ್. ಎಲ್. ಎ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಬಾಲಿಕೆಯರಿಂದ ಪ್ರಾರ್ಥನೆಯಾದೊಡನೆ ಪಂಡಿತ ಯು. ಬಿ. ಆಚಾರ್ಯರು ಮಾನ್ಯ ಮಂತ್ರಿಗಳಿಗೆ ಮಾನಪತ್ರವೊಂದನ್ನು ಅರ್ಪಿಸಿದರು. ಜಲಬತ್ತಿದ ಸರೋವರದಲ್ಲಿ ನವಜಲವೊದಗಿದಂತೆ ಈಗಿನ ರಾಜಾಜಿ ಮಂತ್ರಿಮಂಡಳದ ಶ್ಲಾಘನೆ, ಜನತೆಯ ತೃಪ್ತಿ, ಕೊಡವೂರು ಹೊಳೆಗೆ ಅಣೆಕಟ್ಟು, ಮೀನುವ್ಯವಸಾಯಿಗಳಿಗೆ ದ್ವಿಗುಣಿತ ಸೌಕರ್ಯದ ಅವಶ್ಯಕತೆ, ಮಲ್ಪೆಬಂದರ ಬಡಾವಣೆ, ಮಂಗಳೂರು ಮಲ್ಪೆ ರೈಲ್ವೆ ಇತ್ಯಾದಿ ವಿಷಯಗಳು ಮಾನಪತ್ರದಲ್ಲಿ ಸೂಚಿಸಲಾಗಿತ್ತು. ಮೊಗವೀರ ಮಹಾಜನ ಸಂಘದ ಪರವಾಗಿ ಶ್ರೀ ಎಮ್. ಮಧ್ವರಾಜರು ಬಿನ್ನವತ್ತಳೆಯೊಂದನ್ನು ಒಪ್ಪಿಸಿದರು. ರಂಪಣಿ ಬಲೆಗಳ ಮೇಲಿನ ಮಾರಾಟಕರವನ್ನು ತೆಗೆದು ಹಾಕಿದ ಬಗ್ಗೆ ಮದ್ರಾಸು ಸರಕಾರವನ್ನು ಅಭಿನಂದಿಸುವ ಅಂತೆಯೇ ಅದಕ್ಕಾಗಿ ಶ್ರಮಿಸಿದ ಶ್ರೀ ಟಿ. ಎ. ಪೈಗಳನ್ನೂ ಅಭಿನಂದಿಸುವ, ಮಲ್ಪೆಯಲ್ಲಿ ಕೋಲ್ಡ್ ಸ್ಟೋರೇಜ್ ಮತ್ತು ಐಸ್‌ಫೆಕ್ಟರಿ ಆಗಬೇಕೆನ್ನುವ ಮೊಗವೀರ ವಿದ್ಯಾರ್ಥಿಗಳಿಗೆ ಹೆಚ್ಚಿನ ವಿದ್ಯಾ ಸೌಕರ್ಯ ಸಿಗುವಂತಾಗಬೇಕೆನ್ನುವ, ಮಲ್ಪೆ ಹೊಳೆಯಿಂದ ಫಿಶ್ ಕ್ಯೂರಿಂಗ್ ಯಾರ್ಡಿಗೆ ಒಂದು ಕಾಲುವೆ ಆಗಬೇಕೆನ್ನುವ ಇತ್ಯಾದಿ ವಿಷಯಗಳು ಬಿನ್ನವತ್ತಳೆಯಲ್ಲಿ ಸೂಚಿಸಲ್ಪಟ್ಟಿದ್ದವು.

ಮಾನ್ಯ ಮಂತ್ರಿಗಳು ಉತ್ತರ ಈಯುತ್ತಾ, ಕೃಷಿಕನಾದ ತನಗೆ ಆದರದ ಗೌರವವನ್ನು ಇತ್ತುದಕ್ಕಾಗಿ ಆಭಾರ ಸೂಚಿಸಿದರು. ಮೊಗವೀರ ಬಂಧುಗಳ ಉದ್ಯೋಗ, ಅವರು ಹಿಂದಿನ ಕಾಲದಲ್ಲಿ ಸಾಧಿಸಿದ ಮಹಾಕಾರ್ಯಗಳ ವಿವರಣೆಯನ್ನು ಮಾಡುತ್ತಾ ಸ್ವತಂತ್ರ ಭಾರತದಲ್ಲಿ ಮೊಗವೀರ ಬಂಧುಗಳ ಜವಾಬ್ದಾರಿ ಏನೆಂಬುದನ್ನು ವಿವರಿಸಿದರು. ಸ್ವತಂತ್ರ ಭಾರತ ರಕ್ಷಣೆಗೆ ಇತರ ದೇಶಗಳಂತೆ ನೌಕಾಪಡೆ ಅತ್ಯಗತ್ಯವಿದೆ. ಈ ಭಾಗದಲ್ಲಿ ಮೊಗವೀರ ಬಂಧುಗಳು ಸೇರಿ ತಮ್ಮ ಹಿರಿದಾದ ಕರ್ತವ್ಯವನ್ನು ಸಲ್ಲಿಸಲು ಇದೀಗ ಸಂದರ್ಭವೊದಗಿದೆ. ಆದುದರಿಂದ ಮೊಗವೀರ ತರುಣರು ತಮ್ಮ ಹಿರಿತನದ ಕಸುಬುಗಳನ್ನು ಮರೆಯದೆ ವಿದ್ಯಾವಂತರಾಗಿ ನೌಕಾ ಪಡೆಯಲ್ಲಿ ಸೇರಬೇಕೆಂದು ಕೇಳಿಕೊಂಡರು. ಬಿನ್ನವತ್ತಳೆಯಲ್ಲಿ ಹೇಳಲಾದ ಇತರ ವಿಷಯಗಳಲ್ಲಿ ಶಕ್ಯವಿದ್ದಷ್ಟು ನಿಗಾ ಕೊಡಲಾಗುವುದೆಂದರು. ಅಧ್ಯಕ್ಷ ಶ್ರೀ ಟಿ. ಎ. ಪೈಗಳು ತಮ್ಮ ಭಾಷಣದಲ್ಲಿ ಸರಕಾರವು ಮೀನುಗಾರಿಕೆಗೆ ಖರ್ಚು ಮಾಡುವ ಇಪ್ಪತ್ತು ಲಕ್ಷ ರೂಪಾಯಿಗಳ ಪ್ರಯೋಜನವನ್ನು ಈ ಜಿಲ್ಲೆಯ ಮೊಗವೀರರೂ ಪಡೆಯಬೇಕಾಗಿದೆ ಎಂದೂ ಆ ಕುರಿತು ಮೊಗವೀರರು ಕಾರ್ಯ ತತ್ಪರರಾಗಬೇಕೆಂದರು. ಮಂಗಳೂರು, ಮಲ್ಪೆ, ರೈಲ್ವೆ ವಿಚಾರವಾಗಿ ಪ್ರಸ್ತಾಪಿಸುತ್ತಾ ಅದು ಕೂಡಾ ಬೇಗನೇ ಕಾರ್ಯರೂಪಕ್ಕೆ ಬರಲಿದೆ ಎಂದೂ ಕೋಲ್ಡ್ ಸ್ಟೋರೇಜ್ ಇತ್ಯಾದಿ ಕೂಡಾ ಸರಕಾರದ ದೃಷ್ಟಿಯಲ್ಲಿರುವುದೆಂದೂ, ಜಿಲ್ಲೆಗೆ ಜೋಗಿನ ವಿದ್ಯುತ್ ಪ್ರಸಾರದ ಸಿದ್ಧತೆ ಇತ್ಯಾದಿ ವಿಷಯಗಳನ್ನೂ ವಿವರಿಸಿದರು. ಡಾ॥ ವಿ. ಕೆ. ಬಲ್ಲಾಳರು ಧನ್ಯವಾದಗಳನ್ನರ್ಪಿಸಿದ ನಂತರ ರಾಷ್ಟ್ರಗೀತೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಮಾನ್ಯಮಂತ್ರಿಗಳು ಮಲ್ಪೆ ಕಾರ್ಯಕ್ರಮ ಮುಗಿಸಿಕೊಂಡು ಉಡುಪಿಯ ಮುನ್ಸಿಪಲ್ ಮೈನ್ ಶಾಲೆಗೆ ಆಗಮಿಸಿದಾಗ ಮುನಿಸಿಪಲ್ ಚೇರ್‌ಮೆನ್ ಶ್ರೀ ಯು ಎಸ್. ನಾಯಕ್ ಮೊದಲಾದವರು ಸ್ವಾಗತವಿತ್ತರು. ಶ್ರೀ ನಾಯ್ಕರು ಮಂತ್ರಿಗಳಿಗೆ ಪುಷ್ಪಹಾರವನ್ನಿತ್ತು ಮಾನಪತ್ರವನ್ನೋದಿ ಒಪ್ಪಿಸಿದರು. ಮಂತ್ರಿಗಳು ನಗರ ಸಭೆಯ ಆಭಾರ ಮನ್ನಿಸಿ ಮದ್ರಾಸ್ ಮಂತ್ರಿಮಂಡಳದ ಕಾರ್ಯಕಲಾಪಗಳನ್ನು ವಿವರಿಸಿದರಲ್ಲದೆ ಮುಂದಿನ ಯೋಜನೆಗಳಿಗೂ ಜನತೆಯು ಬೆಂಬಲ ಈಯಬೇಕೆಂದು ಕೇಳಿಕೊಂಡರು. ಮುಂದಿನ ತಿಂಗಳಲ್ಲಿ ಜರಗಲಿರುವ ನಗರ ಸಭಾಚುನಾವಣೆಯಲ್ಲಿ ಕಾಂಗ್ರೆಸ್ ಹುರಿಯಾಳುಗಳಿಗೆ ಮತಕೊಟ್ಟು ಸಹಕರಿಸಬೇಕೆಂದು ಸೂಚಿಸಿದರು. ಮುನ್ಸಿಪಲ್ ವೈಸ್ ಚೇರ್‌ಮೆನ್ ಶ್ರೀ ಎ. ಬಿ. ಕೃಷ್ಣರಾಯರು ಧನ್ಯವಾದಗಳನ್ನರ್ಪಿಸಿದರು.

ನಂತರ ಮಂತ್ರಿಗಳು ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿಗೆ ಸಂದರ್ಶನವಿತ್ತು ಅಲ್ಲಿಯ ವಸ್ತುವಿಜ್ಞಾನ ಶಾಖಾ ಸಂಘವನ್ನು ಉದ್ಘಾಟಿಸಿದರು. ಡಾ॥ ಯು. ಪಿ. ಮಲ್ಯರು ಅಧ್ಯಕ್ಷತೆ ವಹಿಸಿದ್ದರು. ಪ್ರಿನ್ಸಿಪಾಲ್ ಎಚ್. ಸುಂದರರಾಯರು ತಮ್ಮ ಸ್ವಾಗತ ಭಾಷಣದಲ್ಲಿ ಕಾಲೇಜಿನ ಕಾರ್ಯಕಲಾಪಗಳನ್ನು ವಿವರಿಸಿದರಲ್ಲದೆ ಸರಕಾರವು ಖಾಸಗಿ ಕಾಲೇಜುಗಳಿಗೆ ಹೆಚ್ಚಿನ ದ್ರವ್ಯ ಸಹಾಯ ನೀಡುವ ಆವಶ್ಯಕತೆಯನ್ನು ಸೂಚಿಸಿದರು. ಪ್ರಿನ್ಸಿಪಾಲರ ಮಾತುಗಳೆಲ್ಲವನ್ನೂ ಒಪ್ಪುತ್ತಾ ಮಂತ್ರಿಗಳು ತನ್ನಿಂದಾಗುವ ಸಹಾಯ ನೀಡುವೆನೆಂದರು. ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ ಕೃಷಿಗೆ ವಿದ್ಯಾರ್ಥಿಗಳು ಹೆಚ್ಚಿನ ಮಹತ್ವ ಕೊಟ್ಟು ಅನ್ನಾಭಾವವನ್ನು ಹೋಗಲಾಡಿಸುವ ಕಾರ್ಯದಲ್ಲಿ ನೆರವಾಗಬೇಕೆಂದರು. ಕಾರ್ಯದರ್ಶಿಯವರು ಧನ್ಯವಾದಗಳನ್ನರ್ಪಿಸಿದ ಬಳಿಕ ಸಭಾಂತ್ಯವಾಯಿತು. ಮಧ್ಯಾಹ್ನ ಭೋಜನ ತೀರಿಸಿಕೊಂಡು ಮಾನ್ಯ ಮಂತ್ರಿಗಳು ಕಾರ್ಕಳ, ಮೂಡಬಿದ್ರೆ ಮಾರ್ಗವಾಗಿ ಮಂಗಳೂರಿಗೆ ಪ್ರಯಾಣ ಬೆಳೆಸಿದರು.

ಪುತ್ತೂರಲ್ಲಿ ಪ್ರವಾಸ—ಮಾನ್ಯ ಮಂತ್ರಿ ನಾಗಣ್ಣ ಗೌಡರು ತಾ 29ರಲ್ಲು ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಎಫ್. ಎಕ್ಸ್. ಡಿ ಪಿಂಟೊ, ಡಾ॥ ಯು. ಪಿ. ಮಲ್ಯ, ಶ್ರೀ ಜಿ. ವೈಕುಂಠ ಬಾಳಿಗ, ಎಮ್. ಎಲ್. ಎ ಮೊದಲಾದವರೊಂದಿಗೆ ಅಲ್ಲಿಯ ಕೃಷಿ ಇಲಾಖೆಯ ಹಣ್ಣು ಹಂಪಲು ಉತ್ತಮ ತರಗತಿಯ ಗಿಡಗಳನ್ನು ತಯಾರಿಸುವ ಕೃಷಿ ತೋಟವನ್ನು ಸಂದರ್ಶಿಸಿದರು. ಈ ತೋಟದ ಪರಿಚಯವನ್ನು ಶ್ರೀ ಕೆ. ಪಿ. ಪಿ. ನಂಬಿಯಾರರು ಮಂತ್ರಿಗಳಿಗೆ ಮಾಡಿಕೊಟ್ಟರು. ಸಮೀಪದ ಶ್ರೀ ಲಕ್ಷ್ಮೀನಾರಾಯಣ ಭಟ್ಟರ 'ಮಾದರಿ ತೋಟ'ವನ್ನು ಮಂತ್ರಿಗಳು ಸಂದರ್ಶಿಸಿದರು. ಅಲ್ಲಿಂದ ಮುಂದೆ ಪ್ರಯಾಣ ಬೆಳೆಸಿ ಕೊಯ್ಲದ ಪಶು ಸಂಶೋಧನಾಲಯಕ್ಕೆ ಭೆಟ್ಟಿಯಿತ್ತರು. ಅಲ್ಲಿಯ ಸೂಪರಿಂಟೆಂಡೆಂಟ್ ಶ್ರೀ ಯು. ಟಿ. ಬೆಂಜಮಿನ್ ಮತ್ತು ಸಮಿತಿ ಕಾರ್ಯದರ್ಶಿ ಡಾ॥ ಬಾಲಪ್ಪ ಸೆಟ್ಟರು ಸ್ವಾಗತವಿತ್ತರು, ನಂತರ ಉಪ್ಪಿನಂಗಡಿಯ ಪ್ರಮುಖರನ್ನು ಕಂಡು ಮಾತುಕತೆ ನಡೆಸಿದರು. ನಂತರ ಸಂಶೋಧನಾಲಯದ ಕಡೆಯಿಂದ ನಡೆಸಲಾಗುವ ಡೈರಿಯಲ್ಲಿ ಹಾಲಿನಿಂದ ಕೆನೆಯನ್ನು ವಿಂಗಡಿಸುವ ಕ್ರಮ, ಬೆಣ್ಣೆ ತಯಾರಿಕೆ ಕೃತ್ರಿಮ ಸಂತಾನೋತ್ಪತ್ತಿ ವಿಧಾನ ಮೊದಲಾದವುಗಳನ್ನು ಪರಿಶೀಲಿಸಿದರು. ಅಂತೆಯೇ ಕೋಳಿ ಸಾಕಾಣಿಕೆಯಲ್ಲಿ ಕೃತ್ರಿಮರೀತಿಯಿಂದ ತಯಾರಿಸಲ್ಪಟ್ಟ ಮರಿಗಳನ್ನು ನೋಡಿದರು. ಬಳಿಕ ಮಂತ್ರಿಗಳು ಮಂಗಳೂರಿಗೆ ಹಿಂತಿರುಗಿದರು.

ಮಂಗಳೂರಲ್ಲಿ:— ಮಾನ್ಯಮಂತ್ರಿಗಳು ಜಿಲ್ಲಾ ವೆಟರ್ನರಿ ಆಸ್ಪತ್ರೆ, ಜ್ಞಾನೋದಯ ಫಿಶರೀಸ್ ಶಾಲೆಗಳನ್ನು ಸಂದರ್ಶಿಸಿ ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಜರಗಿದ ಮಹಾಸಭೆಯಲ್ಲಿ ಹಾಜರಾದರು. ಶ್ರೀ ಕೆ. ಬಿ ಜಿನರಾಜ ಹೆಗ್ಡೆಯವರು ಭೂಕಂದಾಯದ ಮೇಲಿನ ಸರ್‌ಚಾರ್ಜ ಹೇರುವ ಯೋಜನೆಯಿಂದ ಪಟ್ಟಾದಾರರಿಗಾಗುವ ಕಷ್ಟಗಳನ್ನು ತಿಳಿಸಿದರು. ನೀರಾವರಿ ಕೆಲಸಗಳು, ಮಲೆನಾಡು ಅಭಿವೃದ್ಧಿ, ಪಂಪು ಸೆಟ್ಟುಗಳ ದುರಸ್ತಿ ಬಗ್ಗೆ ಕಮ್ಮಾರ ಶಾಲೆಯ ಅವಶ್ಯಕತೆಯನ್ನು ಕೂಡಾ ಮಂತ್ರಿಗಳ ಗಮನಕ್ಕೆ ತಂದರು. ಶ್ರೀ ಸಿ. ಎಲ್. ಲೋಬೋರವರು ಮಾತನಾಡುತ್ತಾ ಪಾನನಿರೋಧ ಕಾಯಿದೆಯಲ್ಲಿ ಕೆಲವು ಬದಲಾವಣೆಯಾದರೆ ಒಳ್ಳೇದಾಗುವುದೆಂದರು.

ಮಂತ್ರಿಗಳು ಉತ್ತರ ಈಯುತ್ತಾ ಸರ್‌ಚಾರ್ಜ ಪ್ರಶ್ನೆಯು ತನ್ನ ಅಧಿಕಾರಕ್ಕೊಳಪಟ್ಟಿಲ್ಲವಾದರೂ ತನ್ನಿಂದ ಶಕ್ಯವಿದ್ದುದನ್ನು ಮಾಡುವೆನೆಂದರು. ಮಲೆನಾಡು ಅಭಿವೃದ್ಧಿಯು ಬೇಗನೆ ಆಗಬೇಕಾದುದು ನಿಜವೆಂದರು. ಜಿಲ್ಲಾ ಕಲೆಕ್ಟರರು ಧನ್ಯವಾದಗಳನ್ನರ್ಪಿಸಿದ ನಂತರ ಸಭೆಯು ಮುಕ್ತಾಯವಾಯಿತು.

ಆ ಮೇಲೆ ಮಂತ್ರಿಗಳು ಮೊಗವೀರ ಲಿಟರರಿ ಸೊಸೈಟಿ, ಮೊಗವೀರ ಸಮಾಜ ಸಂಘವನ್ನು ಸಂದರ್ಶಿಸಿದರು. ಆಗ ಅವರಿಗೊಂದು ಮಾನಪತ್ರ ನೀಡಲಾಯಿತು. ಮಂತ್ರಿಗಳು ಉತ್ತರ ನೀಡುತ್ತಾ ಮೊಗವೀರರ ಕಷ್ಟಗಳನ್ನು ಮನಗಂಡು ರಾಜಾಜಿಯವರು ಮೀನಿನ ಮೇಲಿನ ಟೇಕ್ಸನ್ನು ತೆಗೆದುಹಾಕಿದರು ಎಂದು ತಿಳಿಸಿದರು. ಧನ್ಯವಾದಗಳಾಗಿ ಕಾರ್ಯಕ್ರಮ ಕೊನೆಗೊಂಡಿತು. ತಾ.30ರಂದು ನೀಲೇಶ್ವರಕ್ಕೆ ಹೋಗಿ ಅಲ್ಲಿಯ ತೆಂಗಿನ ತೋಟವನ್ನು ನೋಡಿ ಮುಂದೆ ಪ್ರಯಾಣ ಬೆಳೆಸಿದರು.

THE VIJAYA BANK, LTD, UDIPI

ದಿ. ವಿಜಯಾ ಬ್ಯಾಂಕ್, ಲಿಮಿಟೆಡ್, ಉಡುಪಿ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದ ಈಡಿನ ಮೇಲೆ ಸಾಲ ಪಡಕೊಂಡು, ಕ್ಲುಪ್ತವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿರುವುದರಿಂದಲೂ, ಸದರಿ ಸಾಲವನ್ನು ಬರಮಾಡಿಕೊಳ್ಳುವರೆ, ಅವರಿಗೆ ರಜಿಸ್ಟ್ರಿ ನೋಟೀಸು ಬಿಟ್ಟಲ್ಲಿಯೂ, ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಬರುವ ತಾ.13-9-52ನೇ ಶನಿವಾರ ಘಂಟೆ 3ಕ್ಕೆ ಸರಿಯಾಗಿ ಅಥವಾ ಬ್ಯಾಂಕಿಗೆ ಯುಕ್ತಕಂಡ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದೆನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು, ತಿಳಿದಿರಲಿ.

ಲೋನು ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು, ಬಡ್ಡಿ ಸಮೇತ 30 6-52ರ ವರೆಗೆ		
60/51	ಯು. ಪಿ ನಾರಾಯಣ, ಪೇಂಟರ್, ಪೋಸ್ಟು ಆಫೀಸು ಉಡುಪಿ	21	4	0
361/51	ಅಜೀಜ್ ಅಹಮ್ಮದ್ ಸಾಹೇಬ್, ಎಚ. ಎ. ರಜಾಕಾಲಿ ಸಾಹೇಬ ಮಗ, ಮಸೀದಿ ರಸ್ತೆ ಉಡುಪಿ	80	11	0
415/51	ಕೆ. ಕೃಷ್ಣ ರಾವ್, ರಾಮರಾಯರ ಮಗ, ಸರಸ್ವತೀ ದೇವಸ್ಥಾನದ ಬಳಿ, ಉಡುಪಿ	178	15	0
424/51	ಕೆ. ರಾಮಕೃಷ್ಣ ರಾವ್, ಕೆ ಗಣಪಯ್ಯರ ಮಗ, ಕ್ಲಾರ್ಕ ಡಿಪ್ಯುಟಿ ಇನ್ಸ್‌ಪೆಕ್ಟರರ ಆಫೀಸು, ಉಡುಪಿ	79	1	0
6/52	ಗಿರಿಯ ಮೊಯ್ಲಿ, ಬಾಬು ಪೂಜಾರಿ ಅಳಿಯ, ಕೊರಂಗ್ರಪಾಡಿ, ಪೋಸ್ಟು ಕೊರಂಗ್ರಪಾಡಿ	36	13	0
33/52	ಮಹಬಲ ಸೆಟ್ಟಿ, ಜೋಗಪ್ಪ ಶೆಟ್ಟಿ ಮಗ, ಕೋಡಿಮನೆ, ಕಂಬಾರು, ಪೋಸ್ಟು ಬೈಲೂರು	1033	8	0
93/52	ಬಿ. ಶಿವರಾಮ ಶೆಟ್ಟಿ, ಸುಬ್ಬಣ್ಣ ಸೆಟ್ಟಿ ಮಗ, ಬಜ್ಜಾಲು ಪೆರ್ಡೂರು ಗ್ರಾಮ, ಪೋಸ್ಟು ಪೆರ್ಡೂರು	1536	1	0

Udipi
30-8-52

B. S. S. Hegde.
Agent

ಲಕ್ಷ್ಮಿ
ಸಂತಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರದ ಕೃಚ್ಛ್ರ, ಮೂತ್ರದೊಡನೆಯಾ ಮುಂದಾಗಿ ಬಿಳುಪು, ಅರಸಿನ ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವದು, ತೊಡೆ ಸಂದಿನಲ್ಲಿ ಗರಳೆ ಬರುವದು. ಕಾಲುಗಂಟು ವೇದನೆ, ಕಣ್ಣಲ್ಲಿ ಕೀವು ಬರುವದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ, ಸ್ತ್ರೀಯರ ಬಿಳಿ ಸೆರಗು ಇವೆಲ್ಲಾ ಖಾತ್ರಿಯಾಗಿ ಗುಣ ಹೊಂದುವದು.—ಇತರರು ಈಗಿನ ಉಷ್ಣಕಾಲದಲ್ಲಿ ಗರ್ಮಿ ಕಂಡುಬಂದರೆ ರಾತ್ರಿ ಮಲಗುವಾಗ ಒಂದು ಮಾತ್ರೆ ಸೇವಿಸಿ ಹಾಲು ಕುಡಿದರೆ ಸುಖವಾಗಿ ನಿದ್ರೆ ಬಂದು ಸುಖವಿರೇಚನೆಯಾಗಿ ದೇಹದ ಉಷ್ಣ ಹೋಗುವದು.

ಶೀಸೆ 1ಕ್ಕೆ ರೂ 2-0-0

ಏಜಂಟ್ಸ್:
ಷಾ ಕಂಪೆನಿ, ಮಂಗಳೂರು



ತಿದ್ದಿ ಬೆಳಸಿದ ಎರಡನೆ ಮುದ್ರಣ
[illegible]
...ಗಳನ್ನು ... ವಿ.ಪಿ. ಆರ್ಡರ್ ಮಾಡಿದರೆ ರಿಜಿಸ್ಟರಿನಿಂದ ಕಳುಹಿಸುತ್ತೇವೆ
ಪ್ರಸವ ವಿಜ್ಞಾನ
ಸಾಧನ ಪ್ರಕಟನಾಲಯ
ಹುಬ್ಬಳ್ಳಿ

ಭಾರತ ಸೇವಕ ಸಮಾಜದ ರಚನೆ

[೨ನೇ ಪುಟದಿಂದ ಮುಂದುವರಿದುದು]

ಅಭೂತಪೂರ್ವ ಸುಸಂಧಿ

ರಾಜಕಾರಣದಲ್ಲಿ ಮನಸ್ಸು ಉಳ್ಳವರೆಲ್ಲ-ಕಳ್ಳಿಯ ಹೆಸರನೇ ಇರಲಿ-ಎಲ್ಲರೂ ಮನಃಪೂರ್ವಕ ಸಹಕರಿಸಬೇಕಾದ ಸಂಸ್ಥೆಯಾಗಿ ಭಾರತ ಸೇವಕ ಸಮಾಜವಿದೆ. ಸಮಾಜದಲ್ಲಿ ಇಂದು ತುಂಬಿರುವ ದಾರಿದ್ರ್ಯ ಮತ್ತು ಅಜ್ಞಾನವನ್ನು ನಿವಾರಿಸುವುದರಲ್ಲಿ ಭಾರತ ಸೇವಕ ಸಮಾಜವು ರಾಷ್ಟ್ರನಿರ್ಮಾಣದ ಕೆಲಸಮಾಡುವುದು ಅಪೇಕ್ಷಣೀಯವಿದ್ದಂತೆ-ಅಗತ್ಯ ಕೂಡ. ಅದುದರಿಂದ-ನಿರುದ್ಯೋಗ, ವರ್ಗಭೇದ, ಸೌಕರ್ಯದ ಅಭಾವ, ಹಸಿವಿನ ಗೋಳು ಮತ್ತು ಅನೀತಿಯ ವರ್ತನೆಗಳಂಥ ಅಪ್ರಿಯ ಸಂಗತಿಗಳನ್ನು 'ಶಾಶ್ವತ ರೂಪದಲ್ಲಿ ದೂರೀಕರಿಸುವ ಸರ್ವಸಾಮಾನ್ಯ ಧ್ಯೇಯ ಸಾಧನೆಗೆ ಕಂಕಣ ಬದ್ಧರಾಗುವ ಕಾಲ ಈಗ ಬಂದಿದೆ. ಸಾರ್ವಜನಿಕರ ನಡುವೆ ವಿಧಾಯಕ ಕಾರ್ಯಕರ್ತರೂ ಹುಮ್ಮಸ್ಸಿನಿಂದ ಮುಂಬಂದ ಸ್ವಯಂ ಸೇವಕರೂ ಮಾಡುವ ಕೆಲಸಗಳ ಪ್ರಭಾವ ಮತ್ತು ಪರಿಣಾಮಗಳು ಒಳ್ಳೆಯದಾಗುವುದ ನಿಶ್ಚಯ. ಇದರಿಂದ ಕಲುಷಿತ ವಾತಾವರಣವು ತಿಳಿಗೊಂಡು-ಪರಸ್ಪರರನ್ನು ಗೌರವಿಸಿ ನಡೆಯುವ ಬುದ್ಧಿಯೂ, ಸೇವಾಪರಾಯಣತೆಯೂ, ಕಷ್ಟಸಹಿಷ್ಣುತೆಯೂ ವ್ಯಾಪಕಗೊಳ್ಳುವುದು.

ಬಿರುಕು ಮುಚ್ಚುವ ಪ್ರಯತ್ನ

ಆದರೆ ಅಧಿಕಾರಿಗಳ ಮತ್ತು ಅಧಿಕಾರೇತರರ ನಡುವೆ ಈಗ ಬಿಟ್ಟಿರುವ ಬಿರುಕ ಮುಚ್ಚದ ಹೊರತು— ಸರಕಾರದ ಪ್ರೇರಣೆಯಿಂದ ತೊಡಗಿರುವ ಭಾರತ ಸೇವಕ ಸಮಾಜ ಜನಪ್ರಿಯಗೊಳ್ಳುವುದು ಕಷ್ಟ. ಅಧಿಕಾರೇತರ ವರ್ಗದವರು ನಿರ್ಭಯರಾಗಿ ಮತ್ತು ಅಭಿಮಾನ ಪೂರ್ವಕ ಅಧಿಕಾರಿಗಳೊಡನೆ ಸಂಪರ್ಕಕ್ಕೆ ಬರುವಂತಾದರೆ ಮಾತ್ರ ಈ ಅಪೂರ್ವ ಚಳುವಳಿಗೆ ಯಶಸ್ಸು ದೊರೆತೀತು. ಅಧಿಕಾರಿ ವರ್ಗದವರು ಆಯಾಯ ಹಳ್ಳಿಯ ವಾತಾವರಣಕ್ಕೆ ಒಪ್ಪುವಂತೆ—ಮತ್ತು ಗ್ರಾಮಸ್ಥರ ಮನದೊಲವನ್ನು ಅರಿತುಕೊಂಡು ಸಾಧ್ಯವಿದ್ದಷ್ಟು ಮಟ್ಟಿಗೆ ಅವರ ಇಚ್ಛೆ ಅಭಿಲಾಷೆಗಳಂತೆ ನಡೆದುಕೊಳ್ಳುವುದು ಅಪೇಕ್ಷಣೀಯ. ತಮಗೆ ಹೊಳೆದ ಅಭಿವೃದ್ಧಿ ಯೋಜನೆಗಳನ್ನು ಸರ್ವಾಧಿಕಾರಿಯಂತೆ ಕಾರ್ಯರೂಪಕ್ಕೆ ತರಲು ಬಯಸದೆ—ಹಳ್ಳಿಯ ವೃದ್ಧರ ಹಾಗೂ ಧುರೀಣರ ಸಲಹೆಯನ್ನು ಕೇಳಿಕೊಳ್ಳುವುದೊಳ್ಳೆಯದು. ತನ್ನ ಮಾತಿಗೂ ಬೆಲೆ ಇದೆ ಎಂದು ತಿಳಿದಾಗ—ಸ್ವಾಭಾವಿಕವಾಗಿ ಮನುಷ್ಯನಲ್ಲಿ ಸ್ಫೂರ್ತಿಯ ಸೆಲೆ ತುಂಬಿ ಹರಿಯುವುದಷ್ಟೆ! ಈ ಸಾಮಾನ್ಯ ಮನೋಭೂಮಿಕೆಯನ್ನು ಮರೆತು ಅಧಿಕಾರಿಗಳು ವರ್ತಿಸಬಾರದ

ಕಾರ್ಯಕರ್ತರ ತರಬೇತಿ

ಸಂಘಟನೆ ಒಂದು ರೂಪಕ್ಕೆ ಬಂದು-ಪರಿಪೂರ್ಣಾವಸ್ಥೆಯನ್ನು ತಳೆಯಬೇಕಾದರೆ, ತಕ್ಕಮಟ್ಟಿನ ತರಬೇತಿಯೂ ಬೇಕು. ಪ್ರತಿಯೊಬ್ಬ ಕಾರ್ಯಕರ್ತನೂ ತನ್ನ ಮೇಲೆ ಬಿದ್ದಿರುವ ಹೊಣೆಗಾರಿಕೆಯ ಮಹತ್ವವನ್ನು ತಿಳಿಯುವಂತೆ, ಮತ್ತು ಕೌಶಲ್ಯದಿಂದ ಕೆಲಸ ನಿರ್ವಹಿಸುವಂತೆ ಎಲ್ಲ ರೀತಿಯಿಂದಲೂ ನೆರವನ್ನೂ ಪ್ರೋತ್ಸಾಹವನ್ನೂ ಕೊಡಬೇಕು. ಆಯಾ ಊರವರೇ ಮುಂಬಂದು ಭಾರತ ಸೇವಕ ಸಮಾಜದ ಒಂದು ಅಂಗವಾಗಿ ದುಡಿದು ತಮ್ಮ ಕರ್ತವ್ಯವನ್ನು ಮಾಡುತ್ತಾರೆಂತೆ ನೋಡಿಕೊಂಡರೆ—ಸಮಸ್ಯೆ ಮಾನ್ಯರ ಮೂರು ವೀಸ ಪಾಲು ಬಗೆಹರಿದಂತೆಯೇ. ಕ್ರಿಯಾ ಸ್ವಾತಂತ್ರ್ಯದ ಸದುಪಯೋಗವಾಗುವ ಈ ಅವಕಾಶವನ್ನು [illegible] ಯೋಗಿಸಬೇಕು. ಪ್ರತಿಯೊಂದೂ [illegible] ಕಾರ್ಯಕರ್ತರು [illegible] ಭೂಮಿಗೆ ಇಳಿದು [illegible] ಬೇಕು. [illegible]—ಕೆಲಸಮಾಡುವ ಮನಸ್ಸು, ಸೇವಾ [illegible] ಯೂ, ಚಟುವಟಿಕೆ ತೋರುವ [illegible] ಬೇಕು. ಆಲಸ್ಯದ ನಿದ್ರೆಯಿಂದ ಎಚ್ಚೆತ್ತು ಭವ್ಯ ಭವಿಷ್ಯದ ದಿವ್ಯದರ್ಶನ ಮಾಡುವ ಪುಣ್ಯ ನಮ್ಮೆಲ್ಲರದಾಗಲಿ!

ಕುಂದಾಪುರ
ಡಿ. ಮು. ಕೋರ್ಟಿನಲ್ಲಿ

R E P. 899 51
O S. 155/1945

ಸಗ್ರಿ ಪಾಸ್ತೀವ ನಾಯ್ಕ — ಅರ್ಜಿದಾರ
ರಾಮ ಮೋಣ್ಯ ಶಣೆ — ಎದ್ರಿರು

ಅರ್ಜಿದಾರನ ಕಡೆಯಿಂದ — ಈ ಮೂಲಕ ತಿಳಿಯಪಡಿಸುವುದೇನೆಂದರೆ.

6 ಪುಷ್ಪ ಮೋಣ್ಯ - ಶ್ರೀದೇವಿ [illegible] ಗ ಗುಜ್ಜಾಡಿ ಗ್ರಾಮ

ಎದ್ರಿರ ಬಾಬ್ತು ಸ್ಥಿರಾಸ್ತಿ ಲೈಲಾಮು ಮಾಡುವ ಗೋಸ್ಕರ ಅರ್ಜಿದಾರನ ಕಡೆಯಿಂದ ಹಾಜರು ಪಡಿಸಿದ ಆಸ್ತಿ ಹಾರಿನ ಶರ್ತ ನಿರ್ಣಯಿಸುವ ಗೋಸ್ಕರ ತಾ. 17 9 52 ಕ್ಕೆ ಆ ಬೈಕ ತಸ್ಥಿಗೆ ಇಟ್ಟಿದೆ. ಆ ಕುರಿತು ನಿಮ್ಮ ದೇನಾದರು ಆಕ್ಷೇಪ ಇದ್ರೆ ಸದ್ರಿ ದಿವಸ ಹಗಲು 11 ಘಂಟೆಗೆ ಸ್ವತಹಾ ವ ವಕೀಲರ ದ್ವಾರಾ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದ್ದರೆ ನಿಮ್ಮ ಗೈರು ಹಾಜರಿಯಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿದೆ

G. Sanjieva Rao A [illegible]
Vakil for Petitioner
Kundapur, Date 27 8 52

ಕುಂದಾಪುರ
ಡಿ. ಮು ಕೋರ್ಟಿನಲ್ಲಿ

R C 61/1945
R. E P. 423 1951

ಅರ್ಜಿದಾರ ಮಂಜುನಾಥ [illegible]

ಎದ್ರಿರು — 1) ಭವಾನಿ ಅಮ್ಮ 2) ಗಿರಿಜಾ ಬಾಯಿ 3) ರುಕುಮಾಬಾಯಿ 4) ಶಾಂತಾ ಬಾಯಿ.

1, 2, 4, ನೇ ಎದ್ರಿರಿಗೆ ಈ ಮೂಲಕ ತಿಳಿಸುವುದೇನೆಂದರೆ 1 ನೇ ಎದ್ರಿ ಭವಾನಿಅಮ್ಮ ಹೊಸಕೋಟೆ ನರಸಿಂಗ ರಾಯರ ಹೆಂಡ್ತಿ 2 ನೇ ಎದ್ರಿ ಗಿರಿಜಾ ಬಾಯಿ ರಿಟಾಯರ್ಡ್ ಡೆಪ್ಟಿ ಇನ್ಸ್‌ಪೆಕ್ಟರ್ ಪದ್ಮನಾಭಯ್ಯನ ಹೆಂಡ್ತಿ 4ನೇ ಎದ್ರಿ ಶಾಂತಬಾಯಿ ರಿಟಾಯರ್ಡ್ ಸಬ್ ರಿಜಿಸ್ಟ್ರಾರ್ ರಾಮಾ ಕೃಷ್ಣ ರಾವ್ರುರ ಹೆಂಡ್ತಿ. ಬಿಜೂರು ಗ್ರಾಮಸ್ಥರು.

ಮೇಲೆ ಹೇಳಿರುವ ವ್ಯಾಜ್ಯದಲ್ಲಿ ಡಿಕ್ರಿಹೊಂದಿದವನಾದ ಅರ್ಜಿದಾರನು ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿಮಾಡಿದ್ದಾನೆ. ಆದುದರಿಂದ ಸಿ ರಾಸ್ತಿವಿಕ್ರಯದ ಯಿಸ್ತಾಹಿನ ಶರ್ತಗಳನ್ನು ನಿರ್ಣಯಿಸಲಿಕ್ಕೆ, ತಾರೀಕು 17-9-1952 ಕ್ಕೆ ಮುಂದೆ ಹೋಗಿಯದೆಂತ ಈ ಮೂಲಕ ತಿಳಿಸಲಾಗುತ್ತದೆ.

B. Mahabala Holla
Advocate for petitioner
ತಾರೀಕು 25-8-52,
ಮೊಕ್ಕಾಂ ಕುಂದಾಪುರ.,

ವಿಚಾರ ಪ್ರಚೋದಕವಾದ ಪ್ರತಿಯೊಬ್ಬರೂ ಓದಲೇಬೇಕಾದ ನವನವೀನ ಪ್ರಸ್ತಕಗಳು

ಗೀತಾ ರಹಸ್ಯವನ್ನು ತಿಳಿಯ ಬಯಸುವಿರಾ?

ದಿ. ಹೊಸಕೆರೆ ಚಿದಂಬರಯ್ಯ ಕೃತ **ಗೀತೆಯ ಕೈಗನ್ನಡಿ** ಭಗವದ್ಗೀತೆಯ ಸಮಾಲೋಚನೆ

ಪುಟಗಳು 428 ಬೆಲೆ 0 12 0 ಅಂಚೆವೆಚ್ಚ 0 4 0

100 ಪ್ರತಿಗಳಿಗೆ ರೂ 50, 250ಕ್ಕೆ ರೂ 140, 500ಕ್ಕೆ ರೂ 250

ಗತಿ, ಕಾದಂಬರಿ, ನಾಟಕ, ಚಿತ್ರ, ಪ್ರಬಂಧ, [illegible] ಮೊದಲಾದ [illegible] ರೂ 30 ರ [illegible] ಗಳನ್ನು ಒಮ್ಮೆಯೇ ಕೊಳ್ಳುವವರಿಗೆ ರೂ 24ಕ್ಕೆ ಕೊಡಲಾಗುವುದು

ನಾರೀಹೃದಯ ರೂ	1	8	ಪ್ರಕಾಶ ರೂ	2	8	[illegible] ರೂ	2	0
ಭಾರತೀಯ ಕತೆಗಳು	1	12	ಮಧುಮನ	3	0	ಕಾವ್ಯಸಂಪದ	1	[illegible]
[illegible]	1	12	ಘಾಟಮಾರ	2	0	ಸೇವಾ ವಿಜಯ	1	4
ಕವಿತಾ ಕಾಲಿದಾಸ	2	0	ಸಂವಾದೀಪ	1	0	ರಂಗಭೂಮಿ	0	10
ಕುಲದಿಲ್ಲದ ಹೆಣ್ಣು	2	0	ಜಮೀನ್ದಾರ	1	8	ಭಾರತದಲ್ಲಿ ಜಾತಿಭೇದ	1	0
[illegible]	1	4	ದೇಶಭಕ್ತ	1	4	[illegible]	1	4
ಸುಲಭದಲ್ಲಿ ಇಂಗ್ಲಿಷ್	2	0	ಮನೆ ಮಗಳು	2	8	[illegible]	1	4
ನೀತಿವಿನೋದ ಕತೆಗಳು	0	12	ಸರಸತಿ	0	12	ಭಾಗ್ಯಲಕ್ಷ್ಮಿ	1	4
ಜೀವನ ಸಂಗ್ರಾಮ	1	8	ಸೇವಾಪಥ	0	8	[illegible]	0	6

ಇವೇ ಮೊದಲಾದ ನೂರಾರು ಬಗೆಯ ಉಪಯುಕ್ತ ಪುಸ್ತಕಗಳ ಕೆಟಲಾಗ್ ಗೆ ಬರೆಯಿರಿ ವ್ಯಾಪಾರಿಗಳಿಗೂ, ಪುಸ್ತಕಭಂಡಾರಗಳಿಗೂ ವಿಶೇಷ ಸವಲತ್ತುಗಳಿವೆ

ನವಭಾರತ ಪುಸ್ತಕ ಭಂಡಾರ, ಉಡುಪಿ. ದ ಕ

ಉಡುಪಿಗೆ ಹೋಗಬೇಕೆ! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೂ ದೂರವಿಲ್ಲ!

ಪ್ರ್ಯಾಸಿಗಾದವ್ಯಾಪಾರದ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ವಿಶ್ರಾಂತಿ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

"ಗೋಪಾಲ ಭೇಷಜಾಶ್ರಮ" ಮಂಗಳೂರು.

ಸ್ಥಾಪನೆ 1910

ಸ್ಥಾಪಕರು-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿದ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರಪ್ರಿಯ ರಸಾಯನ ಅಲ್ಪಮೂಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಲಭ್ಯವಾಗಿರುವುದು

ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ— ಡಾ! ಯಂ ಸಿ. ಶಾಸ್ತ್ರೀ, ಯಲ್ ಐ ಎಂ
ಕೊಡಿಯಾಲಬೈಲ ಪೋಸ್ಟ್, (ಮಂಗಳೂರು)
ಸ್ಥಾನಿಕ ಏಜಂಟರು— ಡಾ! ವಿ. ಕೆ ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

ಮುಟ್ಟು ತಪ್ಪಿದರೆ ಚಿಂತೆ ಬೇಡ

'[illegible] ರಾಜ' ಸೇವಿಸಿರಿ. ಮುಟ್ಟು ಪ್ರಾರಂಭವಾಗುವುದು. 4-5 ತಿಂಗಳು ನಿಂತಿದ್ದರೂ ಮುಟ್ಟು ಯಾವ ಅಪಾಯವನ್ನೂ ಮಾಡದೆ 21 ಘಂಟೆಯೊಳಗೆ ಗ್ಯಾರಂಟಿಯಿಂದ ಪ್ರಾರಂಭವಾಗುವುದು. ಬೆಲೆ ರೂ 7 8 ವಿ ಪಿ. ಖರ್ಚು ರೂ 1 ವಿಶೇಷ ರೂ 24 ವಿ ಪಿ 1/12

BINAPANI AUSHADHALAYA N [illegible]
15 1 Mo[illegible] Avenue CALCUTTA 33
ಸ್ಥಳೀಯ ಏಜಂಟರು.
ವೈದ್ಯ ಸಿ ಆರ್. ಕಾಮತ್,
ಮಂಗಳೂರು.

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು ಚೇಳುವಿಷ ಮುಂತಾದವು, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ



ಕಾಡಿಡಿ ಸಾಂಕೇತಿಕ ಮತ್ತು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ
ಮದರಾಸು, ಬೊಂಬಾಯಿ ಮತ್ತು ಕಲ್ಕ

NAVAYUGA WEEKLY, UDIPI 4 9 1952 Regd. No. M. 3618 LICENCE No. 31 Licensed to Post without Prepayment

ವಾರದ ಒಳಿತು ಕೆಡುಕುಗಳು

ತಾ 4—9—52ರಿಂದ ತಾ. 10—9—52ರ ವರೆಗೆ

ಮೇಷ—ನಿಮ್ಮ ಜೀವನದಲ್ಲೇನೂ ಸುಧಾರಣೆಯಾದುದು ಕಂಡು ಬರುವಂತಿಲ್ಲ ಈ ವಾರದಲ್ಲಿ. ಜನ್ಮದಲ್ಲಿ ಬೃಹಸ್ಪತಿ ಅಷ್ಟಮದಲ್ಲಿ ಅಂಗಾರಕ ಇವರೀರ್ವರಿಂದ ನಿಮಗೆ ತುಂಬಾ ಹಾನಿಯಿರುವದು. ಯಾವ ಕೆಲಸವನ್ನು ಪೂರ್ತಿಮಾಡಲು ಬಿಡಲೊಲ್ಲರು. ವಿರೋಧಿಗಳ ಪೀಡೆಯು ಅಸಹನೀಯವಿರುವದು. ಆರ್ಥಿಕ ಬಿಕ್ಕಟ್ಟು ಅತ್ಯಂತ ಹೆಚ್ಚಲಿದೆ. ಸಾಂಸಾರಿಕ ತಾಪತ್ರಯಗಳು ಹೆಚ್ಚುವವು. ಆದರೂ ತಾ 4, 7, 8 ಈ ದಿನಗಳಲ್ಲಿ ಕಿಂಚಿತ್ ಸುಖ ಲಾಭಗಳನ್ನು ಕಾಣುವಿರಿ.

ವೃಷಭ—ಇಂದಿನ ನಿಮ್ಮ ದುಃಸ್ಥಿತಿಯು ಸಮುದ್ರಕ್ಕೆ ಹಿಂಗು ಕದಡಿದಂತೆ ಅಲ್ಪವಾಗಿದ್ದು ನಾನಾತರದ ಖರ್ಚುಗಳಿಗೆ ಸಿಲುಕಿ ಸಾಲ ವಸ್ತ್ರರ ವಹಿಸಲಿರುವಿರಿ. ನಿರ್ಗಂಧ ಕುಸುಮವನ್ನು ತುಂಬಿಗಳು ದೂರೀಕರಿಸುವಂತೆ ನಿಮ್ಮ ಆಪ್ತರೂ ಬಂಧುಗಳೂ ನಿಮ್ಮನ್ನು ದೂರಮಾಡುವರು ಅರ್ಧಾಂಗಿಯು ಕೂಡ ನಿತ್ಯ ಕಲಹವಾಡೀತು. ನೌಕರಿ ವ್ಯಾಪಾರಗಳಲ್ಲಿ ಸ್ವಲ್ಪ ಮಟ್ಟಿನ ಆದಾಯ ಕಾಣಬಹುದು ತಾ. 4, 5, 6, 9, 10 ಈ ದಿನಗಳು ಕಿಂಚಿತ್ ಸುಖಕಾರಿಗಳಿವೆ.

ಮಿಥುನ—ಕ್ರಿಯೆಯೊಂದು ಕಾರ್ಯಗಳೂ ನಿಮ್ಮಭೀಷ್ಟದಂತೆ ಸಿದ್ಧಿಸಲಿವೆ ಸಾಮಾಜಿಕ ರಾಜಕೀಯ ರಂಗಗಳಲ್ಲಿ ವಿಜಯಿಗಳಾಗುವಿರಿ ಶತ್ರುಗಳೂ ಕೂಡ ನಿಮ್ಮ ಕಾರ್ಯ ಕೌಶಲ್ಯವನ್ನು ಕಂಡು ವೈರವನ್ನು ಬಿಟ್ಟು ಮೈತ್ರಿಯನ್ನು ಬಯಸುವರು, ಸರ್ವತ್ರ ಸ್ಥಾನಮಾನಗಳು ಲಭಿಸುವವು, ವ್ಯಾಪಾರಿ ಜನರಿಗೆ ಆಕಸ್ಮಿಕ ನಷ್ಟ ಒದಗಬಹುದು. ತಾ. 5ರಿಂದ 8ರ ವರೆಗಿನ ದಿನಗಳಲ್ಲಿ ಸುಖಲಾಭ ಇಷ್ಟಪ್ರಾಪ್ತಿಗಳಾಗುವವು.

ಕರ್ಕಟ—ಸುಖ ದುಃಖ ಲಾಭನಷ್ಟಗಳು ನಿಮಗೀವಾರದಲ್ಲಿ ಸಮನಾಗಿ ಪರಿಣಮಿಸುವವು. ನಿಮ್ಮ ಅನುದಿನದ ಅನುಯೋಗ, ಖರ್ಚು ವೆಚ್ಚಗಳ ಸಲುವಾಗಿ ಬೇರೆಯವರ ನ್ಯಾಕ್ಸ್ಯಕಬೇಕಾಗದು ಪ್ರಬಲರಾದ ಶತ್ರುಗಳನ್ನು ಕೂಡ ಈ ಕಾಲದಲ್ಲಿ ಪರಾಭವಗೊಳಿಸುವಿರಿ. ಗೃಹ ತಾಪತ್ರಯಗಳು ಕಡಿಮೆಯಾಗುವವು. ಆದರೆ ಮನಶ್ಚಾಂಚಲ್ಯ ಅಧಿಕವಾಗಲಿದೆ. ವಾರಾಂತ್ಯದ 4 ದಿನಗಳು ಸಕಲ ಕಾರ್ಯಗಳಿಗೂ ಅನುಕೂಲವಿದೆ.

ಸಿಂಹ—ಆದಾಯವೊಂದು ವೆಚ್ಚವೆರಡು ಎಂಬಂತೆ ನಿಮ್ಮ ಪರಿಸ್ಥಿತಿ ಈ ವಾರದಲ್ಲಿ ಕಾಣಸಲಿದೆ ದೇಹದಲ್ಲಿ ಉಷ್ಣ ವಿಶೇಷದಿಂದಾಗಿ ಜ್ವರಾದಿಗಳು ಕಾಣಿಸಬಹುದು ವಿನಾಕಾರಣ ವಾಕ್ಕಲಹಕ್ಕೆ ಸಿಲುಕುವಿರಿ. ಆಕಸ್ಮಿಕ ಪರ್ಯಟನ ಅಪ್ತೇಷ್ಟರ ವಿರಹ ದುಃಖ ಪೀಡಿತರಾದ ನಿಮಗೆ ತಾ 4, 9, 10 ಈ ದಿನಗಳಲ್ಲಿ ಧನಧಾನ್ಯಗಳೂ ಕಾರ್ಯದಲ್ಲಿ ಸಫಲತೆಯೂ ಲಭಿಸಲಿವೆ

ಕನ್ಯಾ—ನಿಮ್ಮ ಸಾಹಸವು ಅದ್ವಿತೀಯವಿರುವದು. ಆದರೆ ದೈವವೇ ನಿಮ್ಮಮೇಲೆ ಮುನಿದಿರುವಲ್ಲಿ ಸಾಹಸವೆಲ್ಲ ಫಲಿಸೀತು. ತತ್ರಾಪಿ ಏಳೂವರೆ ಶನಿಯು ಸದಾ ನಿಮ್ಮ ಆರೋಗ್ಯಕ್ಕೆ ಧಕ್ಕೆಯನ್ನೊದಗಿಸುತ್ತಿರುವನು. ಖರ್ಚುಗಳು ದಿನದಿನಕ್ಕೆ ಹೆಚ್ಚಲಿವೆಯಾದ್ದರಿಂದ ದಿನಯಾಪನೆಯು ಕಷ್ಟಸಾಧ್ಯವಾದೀತು. ನಿಮ್ಮ ಸ್ವಂತ ಉಪಭೋಗಕ್ಕೆ ಯಾವತರದ ನ್ಯೂನತೆಗಳೂ ಬಾರವು ವಾರಾದಿಯ 3 ದಿನಗಳು ಇದ್ದುದರಲ್ಲಿ ಉತ್ತಮವೆನಿಸಲಿವೆ.

ತುಲಾ:—ಇದರಲ್ಲಿ ಶ್ರೀನೇ ಧನ್ಯರೆನ್ನಬಹುದು. ನಿಮ್ಮ ಕೆಲಸಕ್ಕಿಂತಲೂ ಅಧಿಕವಾದಫಲವು ಲಭಿಸುವ ಈ ವಾರದಲ್ಲಿ ಜನತೆಯ ಬೆಂಬಲವು ವಿಶೇಷವಾಗಿರುವದು. ನೌಕರ ವ್ಯಾಪಾರಾದಿಗಳಲ್ಲಿ ಹೆಚ್ಚಿನ ಫಲ ಪ್ರಾಪ್ತವಾಗಲಿದೆ. ರಾಜಕೀಯ ಅಧಿಕಾರಿಗಳು ನಿಮ್ಮಗೆ ಪೀಡಿಸುವ ಸಂಭವವಿದೆ. ಉಷ್ಣ ಪಿತ್ತ ದೋಷದಿಂದ ಆರೋಗ್ಯಕ್ಕೂ ಹಾನಿಯಿದೆ ತಾ. 5ರಿಂದ 8ರ ವರಗಿನ ದಿನಗಳಲ್ಲಿ ನಿಮ್ಮ ಬಯಕೆಗಳು ಸಿದ್ಧಿಸಲಿವೆ.

ವೃಶ್ಚಿಕ:—ನಿಮ್ಮ ಅದೃಷ್ಟವು ಸಾಕಷ್ಟು ಉತ್ತಮವಿರುವದು. ಕೆಲಸಕ್ಕೆ ತಕ್ಕ ಫಲವು ಯಾವುದೊಂದು ತರದ ವಿಘ್ನವಿಡ್ಡರಗಳಿಲ್ಲದೆ ಲಭಿಸಲಿದೆ. ಸೇವಕ ವರ್ಗದವರೂ ವ್ಯಾಪಾರಿಗಳೂ ನೌಕರಿಜನರೂ ತಮ್ಮ ಪರಿಶ್ರಮಕ್ಕಿಂತ ಹೆಚ್ಚಿನ ಫಲವನ್ನು ಪಡೆವರು ಗುರುಹಿರಿಯರಲ್ಲಿನ ಮನಸ್ತಾಪವು ಅಧಿಕವಾಗಲಿದೆ ಆಕಸ್ಮಿಕ ಅಪಘಾತಗಳೂ ಸಂಭವಿಸಬಹುದು. ವಾರಾಂತ್ಯದ 4 ದಿನಗಳಲ್ಲಿ ಮಾನಯಾನ ವಿಜಯಗಳು ಲಭಿಸುವವು.

ಧನು:—ಕಾಲಗತಿಯು ಕುಟಿಲವಾಗಿರುವದು. ನಿಮ್ಮ ಸಂಕಲ್ಪಗಳೆಲ್ಲವೂ ಗಗನಕುಸುಮಗಳಂತಾಗಲಿವೆ. ತಾನೊಂದ ಬಗೆದರೆ ದೈವವೊಂದೆಣಿಸಿತೆಂಬಂತೆ ಎಲ್ಲಾ ಭಾಗದಲ್ಲೂ ವಿಘ್ನ ವಿಡ್ಡಂಗಳು ಹೆಚ್ಚುವವು ಆದಾಯವು ಕಡಿಮೆಯಾಗಿ ಖರ್ಚು ಹೆಚ್ಚುವುದರಿಂದ ಬೇರೆಯವರ ಕೂಡೆ ಸಾಲಮಾಡುವಿರಿ, ಪಿತ್ತದೋಷದಿಂದ ದುಃಸ್ವಪ್ನಗಳೂ ನಿದ್ರಾಹತ್ಯವು ಉಂಟಾಗಲಿದೆ ಆದರೂ ಬೃಹಸ್ಪತ್ಯಾಯರು ತಾ 4, 9, 10, ಈ ದಿನಗಳಲ್ಲಿ ನಿಮ್ಮ ಬಯಕೆಯನ್ನು ಪೂರೈಸಲಿರುವರು.

ಮಕರ:—ಬಂಧು ಬಾಂಧವರೊಳಗಣ ವೈಮನಸ್ಯ ಕಲಹ ರೂಪವನ್ನೈತಂದೀತು. ಪರ್ಯಟನಾದಿಗಳೂ ಪ್ರಾಪ್ತವಾಗುವ ಸಂಭವವಿದೆ ಆದರೆ ನಿಮ್ಮ ಶಕ್ತಿ ಸಾಮರ್ಥ್ಯಗಳು ಅದ್ವಿತೀಯವಿರುವವು, ಹಿಡಿದ ಕೆಲಸವನ್ನು ಕೊನೆಗಾಣಿಸಿ ನಿಮ್ಮ ಇಷ್ಟಾರ್ಥವನ್ನು ಪಡೆದೇತೀರುವಿರಿ. ಮಾತ್ರವಲ್ಲ ಆಕಸ್ಮಿಕವಾಗಿ ಸ್ತ್ರೀ ಧನವು ಲಭಿಸಲಿದೆ. ತಾ. 5, 6, ಈ ವಾರದಲ್ಲಿ ಉತ್ತಮ ದಿನಗಳಾಗಿ ಪರಿಣಮಿಸಲಿವೆ.

ಕುಂಭ:—ನಿಮ್ಮ ದುರ್ವಿಧಿಯು ಇನ್ನೂ ಮುಗಿದಿಲ್ಲವು ನಿಂತಲ್ಲಿ ನಿಲ್ಲಲು ನಿಮ್ಮ ಚಂಚಲ ಚಿತ್ತವು ಬಿಡದು. ನಿರುದ್ಯೋಗದಿಂದಲೇ ಹೆಚ್ಚಿನ ಕಾಲವನ್ನು ಕಳೆವಿರಿ. ಯಾವ ಕೆಲಸಕ್ಕೆ ಕೈಯಿಕ್ಕಿದರೂ ಕೊನೆತನಕ ಮುಂದರಿಸುವ ಶಕ್ತಿ ಸಾಹಸಗಳಿಲ್ಲದೆ ಅರ್ಧದಲ್ಲೇ ಕೈ ಬಿಡುವಿರಿ. ಮಾಕುಮಾಕು ಜಗಳಗಳಾಗಲಿವೆ. ಆರೋಗ್ಯವು ಚೆನ್ನಾಗಿರದು. ಒಟ್ಟಾರೆ ದಿನಯಾಪನೆಯು ಅತೀವ ಕಷ್ಟವಾಗಲಿದೆ. ತಾ. 4, 7, 8, ಈ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಕಾಣಿಸವು

ಮೀನ:—ಹೆಚ್ಚಿನ ನಿಮ್ಮ ತಾಪತ್ರಯಗಳು ಇಂದು ದೂರವಾಗುವವು, ವ್ಯಾಪಾರ ವ್ಯವಹಾರಾದಿ ಉದ್ಯೋಗಗಳಲ್ಲಿ ಪ್ರಗತಿಯು ಕಂಡುಬರುವದು. ನೌಕರಿ ಜನರು ಉನ್ನತ ಸ್ಥಾನಕ್ಕೇರಲಿರುವರು. ಸಮಾಜದಲ್ಲೂ ಗೌರವಾದರಗಳೂ ತೃಪ್ತಿಕರವಾಗಿ ಲಭಿಸುವವು. ಶ್ರಮಜೀವಿಗಳಿಗೂ ಸೇವಕ ಜನತೆಗೂ ಸ್ವಲ್ಪ ಬಿಕ್ಕಟ್ಟೇ ಕಾಣಿಸೀತು. ಆಕಸ್ಮಿಕ ಪ್ರವಾಸಗಳುಂಟಾಗುವವು. ತಾ. 5, 6, 9, 10, ಈ ದಿನಗಳು ಸುಖ ಭೋಗಲಾಭವಿಜಯದಾಯಿಗಳಿವೆ.

ದಿ ವಿಜಯಾ ಬೇಂಕ್ ಲಿಮಿಟೆಡ್ ಬೈಂದೂರು- ದ. ಕ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನಮೇಲೆ ಪಡೆದ ಸಾಲವನ್ನು ಮರುಪಾವತಿಮಾಡುವದೆ ರಿಜಿಸ್ಟ್ರಿನೋಟೀಸು ಮೂಲಕ ಕೇಳಿಕೊಂಡಾಗ್ಯೂ ಅಸಲು-ಬಡ್ಡಿ ಯಾವುದನ್ನೂ ಈ ತನಕವೂ ಕೊಡದೆ ಬಾಕಿಮಾಡಿಕೊಂಡಿರುವುದರಿಂದ, ಸದ್ರಿಯವರು ಈಡಿಟ್ಟ ನಗವನ್ನು ತಾ 12 9 1952ನೇ ಶುಕ್ರವಾರ ಅಪರಾಹ್ನ ಗಂಟೆ 2-0ಕ್ಕೆ ಯಾ ಬೇಂಕಿಗೆ ಯುಕ್ತಕಂಡ ಇತರ ದಿನಗಳಲ್ಲಿ ಪುನಃ ನೋಟೀಸುಕೊಡದೇನೆ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಹರಾಜು ಮಾಡಲಾದೀತು, ತಿಳಿದಿರಿ.

ಸಾಲದ ಜಂಡಾ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು		
		ರೂ.	ಆ	ಪೈ
89/17-8	ಜಿ ಸೈಯದ್ ಮುಸ್ತಫ್ ಸಾಹೇಬ್, ಸೈಯದ್ ಮೈದಿನ್ ಸಾಹೇಬರ ಮಗ, ಕೇರಿ ಶಿರೂರು	03	8	0
480,50	ವಿ ಲಿಂಮ್ಸ್ ನಜ್ರತ್, ಅಂತೋನಿ ಜುವಾಂವ ನಜ್ರತದ ಮಗ, ಕಲ್ಲಾಗ್ರಹಿತ್ಲು ಪಡುವರಿ	3	8	0
507 50	ಶ್ರೀ ಉಪ್ಪುಂದ ಕೂಟಾರಮನೆ ಕೊರಗಯ್ಯ ಸೆಟ್ಟಿ, ಅಮ್ಮುಸೆಟ್ಟರ ಮನೆ ಮಂಜಯ್ಯ ಸೆಟ್ಟರ ಮಗ, ತಗ್ಗರ್ಸೆ ಗ್ರಾಮದಲ್ಲಿರುವವರು, ಬೈಂದೂರು	81	10	0
895/50	ಶ್ರೀ ಮದ್ದೋಡಿ ವೆಂಕಟ್ರಮಣ ಸೇರುಗಾರ, ಅಣ್ಣಪ್ಪ ಸೇರುಗಾರರ ಮಗ, ಮುಷ್ಯಾಡಿ ಬೈಂದೂರು	75	6	0
992/50	ಶ್ರೀ ಯು. ಶಂಕರ ಸೇಟ್, ಮಂಜುನಾಥ ಸೇಟರ ಮಗ, ಚಿನಿವಾರ ಉಪ್ಪುಂದ	76	11	0
1216/50	ಜ. ಮಡಿಗಾರ ಅಬ್ದುಲ್ ಕಾದಿರ್ ಸಾಹೇಬ್ ಬುಡಾನ್ ಸಾಹೇಬರ ಮಗ, ಕೇರಿ ಶಿರೂರು	57	10	0
1271/50	ಜ. ಹುಸೇನ್ ಸಾಹೇಬ್, ಮುಹ್ಮದ್ ಸಾಹೇಬರ ಮಗ, ಕೇರಿ ಶಿರೂರು	204	7	0
1158/50	ಶ್ರೀ ಹೊನ್ನಮ್ಮನ ಮಲ್ಲಯ್ಯ ಸೇರುಗಾರ, ಅಣ್ಣಪ್ಪ ಸೇರುಗಾರರ ಮಗ, ಕೋಟಬಾಗಿಲು ಪಡುವರಿ	19	0	0
1611,50	ಶ್ರೀ ಯು. ದೇವಣ್ಣ ಭಟ್ಟ, ಬಾಲ ಭಟ್ಟರ ಮಗ, ಪ್ರೆಸಿಡೆಂಟ್, ಪಂಚಾಯತ್ ಬೋರ್ಡ್ ಉಪ್ಪುಂದ	71	8	0
211,51	ಜ. ಬಾತಾ ಬುಡಾನ್ ಸಾಹೇಬ್, ಸುಲೆಮಾನ್ ಸಾಹೇಬರ ಮಗ, ಹಡವಿನ ಕೋಣೆ, ಶಿರೂರು	180	0	0
467/51	ಜ ಹಳಗೇರಿ ಹುಸ್ಸೇನ್ ಸಾಹೇಬ್, ಇಮಾಮ್ ಸಾಹೇಬರ ಮಗ, ಕಂಬದ ಕೋಣೆ	28	14	0
147,51	ಶ್ರೀ M. P ವೆಂಕಟ್ರಮಣ ಸೇರುಗಾರ, ಮದ್ದೋಡಿ ಗಣಪಯ್ಯ ಸೇರುಗಾರರ ಮಗ ಮಯ್ಯಾಡಿ ಬೈಂದೂರು	73	4	0
661/51	ಶ್ರೀ ಮಂಗ ದೇವಡಿಗ, ನಾಗನ ಅಳಿಯ, ಹೊಳೆಬಾಗಿಲು, ಉಪ್ಪುಂದ	43	4	0
1105/51	ಶ್ರೀ ಶೀನಪ್ಪ ಸೆಟ್ಟಿ, ಮಂಜಯ್ಯ ಸೆಟ್ಟರ ಅಳಿಯ, ಬೀಯಾರ ಮನೆ, ಬೈಂದೂರು	26	12	0
1256/51	ಶ್ರೀ ಕೊಲ್ಲೆ ತಿಮ್ಮಪ್ಪ ಸೇಟ್, ಸುಬ್ರಾಯ ಸೇಟರ ಮಗ, ಬೈಂದೂರು	38	4	0
1277/51	ಜ. ಬಸ್ರೂರು ಕಾಧಿರ್ ಸಾಹೇಬ್, ಮುಹ್ಮದ್ ಸಾಹೇಬರ ಮಗ, ಗೋಳಿಹೊಳೆ ಗ್ರಾಮ ಬೈಂದೂರು	131	13	0
24/52	ಶ್ರೀ ಬೇಲೆಮನೆ ವೆಂಕಟ್ರಮಣ ಸೇರುಗಾರ, ದಾಸಪ್ಪ ಸೇರುಗಾರರ ಮಗ, (ಹೊಲಿಗೆಯವ) ಬೈಂದೂರು	10	8	0
45/52	ಶ್ರೀ K. ಶೇಷಯ್ಯ, ರೆವಿನ್ಯೂ ಇನ್ಸ್‌ಪೆಕ್ಟರ ಪೇದೆ, ಬೈಂದೂರು, ಹಾಲಿ ಕುಂದಾಪುರದಲ್ಲಿರುವವರು	15	11	0
168,52	ಶ್ರೀ ಯು. ಶ್ರೀನಿವಾಸ ಸೇಟ್. ರಘುನಾಥ ಸೇಟರ ಮಗ, ಉಪ್ಪುಂದ	82	11	0
197/52	ಶ್ರೀ ಮಾನಿ ರಾಮಕೃಷ್ಣಯ್ಯ, ಮಾನಿ ತಿಮ್ಮಪ್ಪಯ್ಯನವರ ಮಗ, ನಾಗೋಡಿಗ್ರಾಮ ಕೊಲ್ಲೂರು ದ ಕ.	379	12	0
236/52	ಶ್ರೀ ಉಪ್ಪುಂದ ಬೆಳಿಸೆಟ್ಟರ ಮನೆ ಕೃಷ್ಣಯ್ಯ ಸೆಟ್ಟಿ, ಚಿಕ್ಕಮ್ಮ ಸೆಡ್ತಿಯ ಮಗ, ಉಪ್ಪುಂದ	204	9	0
117/52	ಶ್ರೀ ಯು. ರಘುನಾಥ ಸೇಟ್ ನಾಗಪ್ಪ ಸೇಟರ ಮಗ ಉಪ್ಪುಂದ	15	9	0

ಬೈಂದೂರು
29 - 8 - 1952

ಎಚ್. ರಾಜೀವ ಸೆಟ್ಟಿ,
ಏಜಂಟ್.

ತೃಪ್ತಿಕರವಾದ ವಸತಿ— ಹಿತಕರವಾದ ಊಟ— ರುಚಿಕರವಾದ ಉಪಾಹಾರ
ಇವುಗಳಿಗೆ
ಆದರ್ಶ ನಿಲಯವೆಂದರೆ
ವುಡ್ ಲೇಂಡ್ಸ್
ಉಡುಪಿ.
ಯಾತ್ರಿಕರಿಗೂ ಪ್ರಯಾಣಿಕರಿಗೂ
ಸರ್ವ ಅನುಕೂಲವಾಗುವಂತೆ
ನಗರದ ಕೇಂದ್ರಭಾಗದಲ್ಲಿದೆ

ಮೂಲ್ಕಿ ಬೇಂಕ್.
ಲಿಮಿಟೆಡ್, ಮೂಲ್ಕಿ
1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು
The Moolky Bank Ltd.,
Moolky, S K

ಡಿ. ಕೆ. ಭಾರದ್ವಾಜರ
ಇಂಗ್ಲಿಷ್ × ಇಂಗ್ಲಿಷ್
ಕನ್ನಡ ಡಿಕ್ಷನೆರಿ
ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ
ದೊಡ್ಡ ಸೈಜಿನ ನಿಘಂಟು
ಬೆಲೆ ರೂ 5-6-0
ನವಭಾರತ ಬುಕ್‌ಡಿಪೊ, ಉಡುಪಿ

Edited, Printed & Published By K. H. Shetty at the Navayuga Press, Udipi, S. India.

Regd. No. M. 531
LICENCE No. 31
Licensed to Post without Prepayment

11-9-1952

Estd. 1921 ಸ್ಥಾಪನೆ
32ನೆಯ ವರ್ಷ

Founder: **Sri A. B. Shetty,**
Minister for Medical & Public Health

ನವಯುಗ
ಆರೋಗ್ಯ ಮಂತ್ರಿ
ಶ್ರೀ. ಎ. ಬಿ. ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ
ಉಡುಪಿ, ದ. ಕನ್ನಡ

ವಾ। ಚಂದಾ 5-12-0
6 ತಿಂಗಳಿಗೆ 3-0-0
ಬಿಡಿ ಪ್ರತಿಗೆ 0-2-0

ನವಯುಗ

ಅಂತರಂಗ
ಪುಸ್ತಕ ಪತ್ರಿಕೆಯು
ಉಪಯುಕ್ತವಾದ
86 ಪುಸ್ತಕಗಳು
ರೂ 24ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ.

Vol 32
No. 2

NAVAYUGA WEEKLY POST BOX NO 22 UDIPI

ವರ್ಷ ೩೨
ವಾರ ೨

ವರ್ತಮಾನ ಕಾಲ

ವರ್ತಮಾನ ಕಾಲದ ಬೆಲೆಯನ್ನು ಅರಿತು ಮುಗಿಸುವವರಿಲ್ಲ; ಆದರೆ ಪ್ರತಿಯೊಂದು ಕ್ಷಣ ಆಶಾಭರಿತವಿದೆ. ನಮಗೆ ಐದು ನಿಮಿಷದ ಬಳಿಕ ಏನಾಗುವುದೋ, ಏನು ಹೋಗುವುದೋ ಎಂಬ ಬಗ್ಗೆ ಭೀತಿ ಇದೆ-ಹೊರತು, ಈ ಕ್ಷಣದ ಘಟನೆಯಿಂದ ಯಾರೂ ತಬ್ಬಿಬ್ಬಾಗುವುದಿಲ್ಲ. ನಾವು ಈಗೇನು ಕೆಲಸದಲ್ಲಿ ತೊಡಗಿರುವೆವೋ-ಅದರಿಂದ ನಮಗೆ ಬೇಸರವೂ ಆಯಾಸವೂ ಆಗುವುದಿಲ್ಲ! ಇನ್ನು ಮುಂದೆ ಮಾಡಬೇಕಾಗುವ ಕೆಲಸದ ರಾಶಿಯನ್ನು ಎಣಿಸಿಯೇ ನಮಗೆ ಉದ್ವಿಗ್ನತೆಯುಂಟಾಗುತ್ತದೆ. ಮನುಷ್ಯನು ಒಂದು ಸಮಯದಲ್ಲಿ ಒಂದೇ ಕೆಲಸ ಮಾಡಬಲ್ಲನು-ಮತ್ತು ಯಥಾರ್ಥವಾಗಿಯೂ, ಒಬ್ಬನಿಗೆ ಒಂದು ಸಮಯಕ್ಕೆ ಒಂದೇ ಕೆಲಸವಿರುತ್ತದೆ ಎಂಬ ತಥ್ಯವನ್ನು ಮನಗಾಣುವುದೊಳಿತು. ಇದರಿಂದ ವ್ಯರ್ಥ ಆಯಾಸದ ಅನುಭವವುಂಟಾಗುತ್ತಿಲ್ಲ. ಇಂದು ಮಾಡಬೇಕಾದುದನ್ನು ಇಂದು, ಮತ್ತು ನಾಳೆಯದನ್ನು ನಾಳೆ ಮಾಡಬೇಕೆಂಬ ಸಂಕಲ್ಪ ಮಾತ್ರ ಇದ್ದರೆ ಸರಿ.

ಉದ್ವೇಗ ಅಥವಾ ಚಿಂತೆಗಳ ನಡುವೆ ಯಾವುದೇ ಕೆಲಸ ಮಾಡಹೋಗುವುದು ಹಿತವಲ್ಲ. ಇವೆರಡರಿಂದಲೂ ದೂರಾಗಿ ಉತ್ಸಾಹದಿಂದ ಮತ್ತು ಲವಲವಿಕೆಯಿಂದ ಕಾರ್ಯರಂಗದಲ್ಲಿ ಪ್ರವೇಶಿಸಿ ದುಡಿದಾಗ—ಮಾನಸಿಕ ಹಾಗೂ ಶಾರೀರಿಕ ಶ್ರಮವುಂಟಾದರೂ ಅದು ಸ್ವಾಸ್ಥ್ಯಪ್ರದವಿರುತ್ತದೆ. ಈ ಆಯಾಸವನ್ನು ರಾತ್ರಿಸಮಯ ಚೆನ್ನಾಗಿ ನಿದ್ದೆಮಾಡಿ, ದೂರೀಕರಿಸಬಲ್ಲೆವು. ತದ್ವಿರುದ್ಧವಾಗಿ—"ಅಯ್ಯೋ, ಕೆಲಸದ ರಾಶಿ ಬಿದ್ದಿದೆಯಲ್ಲ!" ಎಂದು ಮಾನಸಿಕವಾಗಿ ವಿಕಲತೆಯನ್ನು ತೋರಿಸಹತ್ತಿದರೆ, ಅದು ನರಮಂಡಲಗಳ ಮೇಲೆ ಮಾಡುವ ದುಷ್ಪ್ರಭಾವವನ್ನು ಫಕ್ಕನೆ ದೂರಮಾಡಲಾರೆವು. ನಾಳೆಯ ಕೆಲಸವನ್ನು ಇಂದುಮಾಡಿ ಮುಗಿಸುವ ಅವಸರ, ಅಥವಾ ಈಗಿನ ಕೆಲಸವನ್ನು ಮತ್ತೆ ಮಾಡೋಣ ಎಂಬ ಉದಾಸೀನ ಇವೆರಡೂ ವ್ಯರ್ಥ ಮಾನಸಿಕ ಉಪಟಳವನ್ನು ಕೊಡುತ್ತವೆ.

ಕಾರಣ-ವರ್ತಮಾನವನ್ನು ಉಪೇಕ್ಷಿಸಿ ನಡೆಯಬೇಡಿರಿ ಎಂಬ ಹಿತವಚನ. ನಾವು ಎಲ್ಲಿರುವೆವೋ-ಅಲ್ಲಿಯದನ್ನಷ್ಟೆ ಯೋಚಿಸೋಣ. ನಮ್ಮ ಮುಂದೇನಿದೆಯೋ, ಅದನ್ನಷ್ಟೆ ನೋಡೋಣ. ದಿನದ ಕೆಲಸವನ್ನು ಪ್ರಾಮಾಣಿಕ ರೀತಿಯಿಂದ ಮಾಡಬೇಕು. ಮತ್ತು ಕೆಲಸ ಮುಗಿದಾಗ ಮನಸ್ಸಿನ ಬಾಗಿಲನ್ನೂ ಮುಚ್ಚಿ ಬಿಡಬೇಕು, ಮರಳಿ ಆ ವಿಷಯ ಯೋಚಿಸಬಾರದು. ಈ ದಿನ ಮಾಡಿದ ಕೆಲಸದ ಕುರಿತು ಸಂತೋಷಗೊಳ್ಳೋಣ. ಹಾಗೆಂದು ನಾಳೆ ಮಾಡಲಿರುವುದರ ಕುರಿತು ವ್ಯರ್ಥ ಉದ್ವೇಗದಿಂದ ದೂರವಿರೋಣ. ಸ್ವಾಸ್ಥ್ಯ ಮತ್ತು ಶಾಂತಿಯ ಮಾರ್ಗ ಇದೇ.

(೧೨ನೇ ಪುಟ ನೋಡಿ)

ಮಧುಪರ್ಕ

ಜಪಾನಿಗೊಬ್ಬ ಮಹಾಶಯರು ಹೋದಾಗ, ಅವರನ್ನು ಒಂದು ದೊಡ್ಡ ಬೌದ್ಧ ಮಂದಿರಕ್ಕೆ ಕರೆದುಕೊಂಡು ಹೋಗಿ—ಅಲ್ಲಿಯ ಶೃಂಗಾರ ಹಾಗೂ ಕಲಾವೈಭವವನ್ನು ತೋರಿಸಿದರು. ಒಂದು ಗೋಡೆಯ ಮೇಲೆ ಒಬ್ಬ ಚಿತ್ರಗಾರನು ಭಗವಾನ್ ಬುದ್ಧನ ಅಂತಿಮಕ್ಷಣದ ಚಿತ್ರಾಂಕನವನ್ನು ಮಾಡುತ್ತಿದ್ದ. ಮೃತ್ಯುಶಯ್ಯೆಯ ಮೇಲೆ ಬುದ್ಧದೇವ ಪವಡಿಸಿದ್ದ. ಒಕ್ಕೆಲದಲ್ಲಿ ಶಿಷ್ಯ ಆನಂದ ವಿಷಣ್ಣವದನನಾಗಿ ನಿಂತಿದ್ದ. ಇನ್ನೂ ಎಷ್ಟೋ ಆಪ್ತ ಶಿಷ್ಯರ ಭಾವಪೂರ್ಣ ಚಿತ್ರ ಬರೆಯುವುದು ಬಾಕಿ ಇತ್ತು.

ಮಾತಿನ ನಡುವೆ ಚಿತ್ರಗಾರನೊಡನೆ 'ಈ ಚಿತ್ರ ಇನ್ನೂ ಮುಗಿದಿಲ್ಲವಲ್ಲ' ಎಂದು ಮಹಾಶಯರು ಕಳವಳ ವ್ಯಕ್ತಪಡಿಸಿದರು.

ಒಂದು ವರ್ಷದಿಂದ ಚಿತ್ರಕಾರ ಅದನ್ನು ಬರೆಯತೊಡಗಿದ್ದ. ಹಾಗೆಂದು ಉದ್ವೇಗದ ಲವಲೇಶವನ್ನೂ ತೋರಿಸದೆ ಅವನೆಂದ— "ಅದು ನಿಜ. ಒಂದು ದಿನಕ್ಕೆ ನಾನು ಎಷ್ಟು ಕೆಲಸ ಮಾಡಬಲ್ಲೆನೆಂದು ನನಗೆ ತಿಳಿದಿದೆ— ಅಷ್ಟು ಮಾಡುತ್ತೇನೆ. ಸಂಜೆಯಾದೊಡನೆಯೇ, ಸಿದ್ಧತೆಯಾದ ಕೆಲಸಕ್ಕೆ [illegible]"



ರಾಧಾ—ಕೃಷ್ಣ

ಸಾಮಾಜಿಕ ವಿಕಾಸದ ಕಾರ್ಯವಿಧಾನ

ವಿಶಿಷ್ಟ ಪರಿಸ್ಥಿತಿಗೆ ಒಗ್ಗುವ ಪದ್ಧತಿಯ ಅಗತ್ಯ

ಜನಪದ ಅಭಿವೃದ್ಧಿ ಯೋಜನೆಗಳ ಕುರಿತಾಗಿ ಇಂದು ಬಹಳ ಮಾತುಗಳನ್ನು ನಾವು ಕೇಳುತ್ತೇವೆ. ಇತ್ತೀಚಿನ ಕೆಲಸಮಯದಲ್ಲಿ ಭಾರತ ಸರಕಾರವು ಬಹಳ ತತ್ಪರತೆಯಿಂದ ಈ ಯೋಜನೆಯನ್ನು ಕಾರ್ಯರಂಗಕ್ಕೆ ಇಳಿಸುತ್ತಿದೆ. ಪಂಚವಾರ್ಷಿಕ ಅಭಿವೃದ್ಧಿ ಯೋಜನೆಯಲ್ಲಿ ಜನತೆಯೊಡನೆ ನಿಕಟ ಸಂಬಂಧವನ್ನು ಇಟ್ಟುಕೊಂಡಿರುವ ವಿಭಾಗ ಇದೇ. ಈ ನೂತನ ಯೋಜನೆಯನ್ನು ಜನರು ಹೇಗೆ ಸ್ವಾಗತಿಸುವರು ಮತ್ತು ತಜ್ಞರ ಕಾರ್ಯಪ್ರಣಾಳಿಯೊಂದಿಗೆ ಹೇಗೆ ಸಹಕರಿಸಿ ದುಡಿಯುವರು ಎಂಬುದನ್ನು ಅವಲಂಬಿಸಿಯೇ ಯಶಸ್ಸಿನ ಪ್ರಮಾಣವನ್ನು ಗೊತ್ತು ಹಚ್ಚಬಲ್ಲೆವು. ಯೋಜನೆಯನ್ನು ಎಷ್ಟೇ ಚೆನ್ನಾಗಿ ಸಿದ್ಧಗೊಳಿಸಿದರೂ— ಅದರಿಂದ ಪ್ರಯೋಜನ ಪಡೆಯುವವರು ಸಾಕಷ್ಟು ಉತ್ಸಾಹವನ್ನು ತೋರುವುದಿಲ್ಲವಾದರೆ— ಯೋಜನೆ ಸಾರ್ಥಕವಾಗದು. ಯೋಜನೆಗಳನ್ನು ಅವು ಜನರಲ್ಲಿ ಉಂಟುಮಾಡುವ ಉತ್ಸಾಹ ಮತ್ತು ಲವಲವಿಕೆಯ ಮೇಲಿಂದಲೇ ತೂಗಿ ನೋಡಿದರೆ ಒಳ್ಳೆಯದು—ಜನರ ಮನದೊಲವಿಗೆ ಅನುಕೂಲವಿಲ್ಲದ ಮತ್ತು ವಾತಾವರಣದ ಅಗತ್ಯವನ್ನು ಕಡೆಗಣಿಸಿದ ಯೋಜನೆಗಳಿಗೆ ಎಷ್ಟು ಮಾತ್ರಕ್ಕೂ ಸ್ವಾಗತ ದೊರೆಯದು. ಜನಪದ ಅಭಿವೃದ್ಧಿ ಯೋಜನೆಯು ಯಶಸ್ವಿಯಾಗಬೇಕೆಂದು ಬಯಸುವವರು— ಈ ಮೂಲಭೂತ ಅಗತ್ಯವನ್ನು ಕಡೆಗಣಿಸಿದರೆ ಸಲ್ಲದು.

ಗಾಂಧೀಜೀಯ ಕಾರ್ಯ ವಿಧಾನ

ಗಾಂಧೀಜಿಯ ವಿಧಾಯಕ ಕಾರ್ಯಕ್ರಮವು ಭಾರತಕ್ಕೆ ಅಪೂರ್ವವಾದ ಹಾಗೂ ಆದರ್ಶಪೂರ್ಣ ಮಾದರಿಯಾಗಿತ್ತು. ಜನಪದ ಅಭಿವೃದ್ಧಿ ಯೋಜನೆಗಳ ಇಂದಿನ ಸ್ಥೂಲ ಸ್ವರೂಪವನ್ನು ನೋಡಿದರೆ- ಗಾಂಧೀಜಿಯನ್ನು ನಾವು ಮರೆತೇ ಬಿಟ್ಟಿರುವೆವೋ ಎಂದು ಭಯವೆನಿಸುತ್ತದೆ. ಅಖಿಲ ಭಾರತ ಸ್ವರೂಪದ ಹಲವಾರು ವಿಧಾಯಕ ಕಾರ್ಯಕ್ರಮಗಳನ್ನು ಇಟ್ಟುಕೊಂಡು ಗಾಂಧೀಜಿ ಹಳ್ಳಿಗಳ ಪುನರುತ್ಥಾನವನ್ನು ಸಾಧಿಸಲು ಪ್ರಯತ್ನಿಸಿದ್ದರು. ಬೇರೆ ದೇಶಗಳಿಂದ ಹೊಸ ಕ್ರಮವನ್ನೂ ವಿಚಾರಗಳನ್ನೂ ಕಲಿತುಕೊಳ್ಳುವುದರಿಂದ ಹಾನಿಯಿಲ್ಲದಿದ್ದರೂ—ನಮ್ಮ ವಿಶಿಷ್ಟ ಸಮಸ್ಯೆಗಳಿಗೆ ವಿದೇಶೀ ತಜ್ಞರ ಪರಿಹಾರ ಲಾಭ ತರಲಾರದು ಎನ್ನುವ ಜನ ನಮ್ಮಲ್ಲಿದ್ದಾರೆ.

ಅಮೇರಿಕದಲ್ಲಿ ಕೈಗೊಳ್ಳಲಾಗಿರುವ ಜನಪದ ಅಭಿವೃದ್ಧಿ ಯೋಜನೆಗಳ ಮಾದರಿಯಲ್ಲಿಯೇ ನಮ್ಮ ಯೋಜನೆಯೂ ಇವೆ. ಅಮೇರಿಕದ ಗ್ರಾಮ ಜೀವನವನ್ನು ಸುಧಾರಿಸಿ, ಹೊಸ ಕಳೆಯನ್ನು ನೀಡುವುದರಲ್ಲಿ ಅಲ್ಲಿಯ ಯೋಜನೆ ತೀರ ಯಶಸ್ಸು ಪಡೆದಿದೆ. ಆದರೆ ಪ್ರತಿಯೊಂದೂ ದೇಶಕ್ಕೆ ತನ್ನದೇ ಆದ ಕಷ್ಟಗಳವೆ—ತನ್ನದೇ ಆದ ಪರಂಪರೆ ಇದೆ—ವಿಶಿಷ್ಟ ವಾತಾವರಣವಿದೆ. ಕಾರಣ ಒಂದು ದೇಶಕ್ಕೆ ಒಳಿತಾಗಿ ಹೇಳಿಸಿದ ಪರಿಹಾರ ಮಾರ್ಗ, ಈ ದೇಶಕ್ಕೆ ಒಗ್ಗದೇ ಹೋಗಬಹುದು- ಅಮೇರಿಕೆಯ ತಜ್ಞರಿಂದ ನಮ್ಮ ಹಳ್ಳಿಗಳನ್ನು ಉದ್ಧರಿಸುವ ಯೋಜನೆ ಮಾಡಿದರೆ—ಗಾಂಧೀಜಿ ನಮ್ಮ ಮುಂದಿಟ್ಟ ಕಾರ್ಯವಿಧಾನವನ್ನು ಎಡಗಾಲಿನಿಂದ ಒದ್ದೆಸೆದಂತೆ—ಎನ್ನುವ ಗಾಂಧೀಶಿಷ್ಯರ ಎಚ್ಚರವನ್ನು ಮರೆಯಕೂಡದು.

ಸರ್ವೋದಯ ಸಮಾಜ

ಜನಪದ ಅಭಿವೃದ್ಧಿ ಯೋಜನೆಗಳ ಉದ್ದೇಶ "ಪರಮಾವಧಿ ಜನರ ಪರಮಾವಧಿ ಉತ್ಕರ್ಷ" ಎಂದು ಹೇಳಲಾಗಿದೆ. ಇದು ಹತ್ತೊಂಭತ್ತನೆ ಶತಮಾನದಲ್ಲಿ ಬೆಂಥಾಮ್ ಮತ್ತು ಜಾನ್ ಸ್ಟುಅರ್ಟ ಮಿಲ್ ಅವರ ಮುಂದಿದ್ದ ಧ್ಯೇಯ. ಆದರೆ ಮಹಾತ್ಮಾ ಗಾಂಧೀಜಿ ನಮ್ಮ ಎದುರು ಇಟ್ಟ ಆದರ್ಶ ಬೇರೆಯೇ. ಅದನ್ನು ಸರ್ವೋದಯ ಎಂದು ಹೆಸರಿಸಬಹುದು. ಬದುಕಿನ ಎಲ್ಲ ಬಗೆಯಲ್ಲೂ ಎಲ್ಲರಿಗೂ ಸುಖ ದೊರೆಯಬೇಕೆಂದು ಗಾಂಧೀಜಿಯ ಹೇಳಿಕೆ. ಅವರ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದ್ದ ಮಹಾ ವ್ಯಕ್ತಿ ರಸ್ಕಿನನ ಅಭಿಪ್ರಾಯದಂತೆ, ಸರ್ವೋದಯವೆಂದರೆ— "ಈ ಕೊನೆಯವನ ವರೆಗೂ" ಎಂಬ ಆದರ್ಶ. ಸಮಾಜದಲ್ಲಿ ಕಡೆಗಣಿಸಲ್ಪಟ್ಟಿರುವವನ, ಅಥವಾ ಅತ್ಯಂತ ದೀನ ಹಾಗೂ ಹೀನನಾದವನ ಬಗೆಗೆ ವಿಶೇಷ ಆಸ್ಥೆಯನ್ನು ತೋರಿ— ಅವನನ್ನು ಸಹ ಉದ್ಧರಿಸುವುದು ಸಮಾಜದ ಮೂಲ ಉದ್ದೇಶ. ಗಾಂಧೀಜಿಯ ವಿಧಾಯಕ ಕಾರ್ಯವಿಧಾನದಲ್ಲಿ ಎಲ್ಲರ ಬದುಕನ್ನೂ ಹಸನಾಗಿಸುವ ಸ್ಪಷ್ಟ ಅಭಿಲಾಷೆ ತುಂಬಿತುಳುಕಿತ್ತು. ಮಾತ್ರವಲ್ಲ— ವೈಯಕ್ತಿಕ, ಸಾಮಾಜಿಕ ಹಾಗೂ ರಾಷ್ಟ್ರೀಯ ಮುಖಗಳನ್ನೂ ಅದು ಸ್ಪರ್ಶಿಸಿತ್ತು.

ಸಾಮಾಜಿಕ ಸುಧಾರಣೆ

ಯೋಜನಾ ಆಯೋಗ ನಿರೂಪಿಸಿದಂತೆ—ಜನಪದ ಅಭಿವೃದ್ಧಿಯ ಕಾರ್ಯಪ್ರಣಾಳಿ ಆರ್ಥಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳನ್ನೆಲ್ಲ ಕವಿಯುವಷ್ಟು ವ್ಯಾಪಕವಾಗಿದೆ. ಹಾಗೆಂದು ಸಾಮಾಜಿಕ ಸುಧಾರಣೆಯ ಕಡೆಗೆ ಅದರಲ್ಲಿ ಏನೊಂದೂ ಕಳಕಳಿಯನ್ನು ತೋರಿಸದಿರುವುದು ಕೊರತೆಯೇ ಸೈ. ಗಾಂಧೀಜಿಯ ಚಳುವಳಿಗಳಲ್ಲಿ ಸ್ತ್ರೀಯರ ಸ್ಥಾನಮಾನವನ್ನು ಉಚ್ಚಗೊಳಿಸುವುದು, ಅಸ್ಪೃಶ್ಯತೆಯ ಕಲಂಕವನ್ನು ದೂರೀಕರಿಸುವುದು, ಗುಡ್ಡಗಾಡು ಜನರಲ್ಲಿ ಸಾಂಸ್ಕೃತಿಕ ಬುದ್ಧಿ ನೆಲೆಯಾಗುವಂತೆ ನೋಡುವುದು ಮುಂತಾದುವಕ್ಕೆ ಅಸ್ಪದವಿತ್ತು; ಮತ್ತು ಪ್ರಾಶಸ್ತ್ಯವನ್ನೂ ಕೊಡಲಾಗುತಿತ್ತು. ಅಮೇರಿಕದ ಯೋಜನೆಗಳಲ್ಲಿ ಗ್ರಾಮಾಂತರ ಪ್ರದೇಶಗಳ ವಿಕಾಸದ ಈ ಮುಖವನ್ನು ಅಲಕ್ಷಿಸಿದ್ದು ಕಂಡುಬರುವುದಿಲ್ಲ. ಪ್ರೊ ಹಿಲ್ ಮ್ಯಾನರೊಂದುಕಡೆ "ಸಾಮಾಜಿಕ ಸಂಬಂಧವನ್ನು ಹಾರ್ದಿಕಗೊಳಿಸುವುದರ ಮೇಲೆಯೇ" ಜನಪದ ಅಭಿವೃದ್ಧಿ ಯೋಜನೆಯ ಯಶಸ್ಸು ಅವಲಂಬಿಸಿದೆ ಎನ್ನುತ್ತಾರೆ. ಸಾಮಾಜಿಕ ಸಮಸ್ಯೆಗಳನ್ನು ನಿವಾರಿಸದೆ—ಜನಪದ ಅಭಿವೃದ್ಧಿ ಯೋಜನೆಗಳನ್ನು ಯೋಗ್ಯ ನೆಲಗಟ್ಟಿನ ಮೇಲೆ ಸಾಧಿಸಿದಂತಾಗದು. ಸಾಮಾಜಿಕ ಸುಧಾರಣೆಯ ವಿಧಾನವೂ ಎಷ್ಟೇ ನಿಧಾನವಾಗಿದ್ದರೂ—ಅದು ಬಲಯುತವೂ ನಿಶ್ಚಯವೂ ಆಗಿರುವುದಗತ್ಯ.

(೧೧ನೇ ಪುಟ ನೋಡಿರಿ)

ದೇವರ ದಯೆ

ಅಕ್ಕಪಕ್ಕಗಳಲ್ಲಿ ರೆಕ್ಕೆಗಳಿದ್ದ ದೇವದೂತರು ನಮ್ಮನ್ನು ಕೈಹಿಡಿದು ಮುನ್ನಡೆಸುತಿದ್ದ ಕತೆ ಹಿಂದಿನ ಕಾಲದ ಸಂಗತಿ ಇದನ್ನು ದೇವರ ದಯೆ ಎಂಬುದಾಗಿ ಆಗ ಜನರು ಕೊಂಡಾಡುತಿದ್ದರು.

ದೇವರ ದಯೆ ಈಗಲೂ ಇದೆ. ಆದರ ಸ್ವರೂಪದಲ್ಲಿ ಮಾತ್ರ ಪರಿವರ್ತನೆಯಾಗಿದೆ ಸ್ವರ್ಗದಿಂದ ದೇವದೂತರು ಇಳಿದು ಬಂದು ತಮ್ಮನ್ನು ಸುಧಾರಿಸಬೇಕೆಂದು ವಿವೇಕಿಗಳು ಈಗ ಅಪೇಕ್ಷಿಸುವುದಿಲ್ಲ ಈಗ ದೇವರ ದಯೆಯಿಂದ ನಮಗೆ ಅವಶ್ಯವೆನಿಸಿದ ವಿಮಾ ಸೌಲಭ್ಯವಿದೆ. ಇಂದೇ ವಿಮೆ ಇಳಿಸಿ, ನಿಮ್ಮ ಮತ್ತು ನಿಮ್ಮ ಕುಟುಂಬದ ರಕ್ಷಣೆಯನ್ನು ಮಾಡಿಕೊಳ್ಳಿರಿ ತನ್ನ ರಕ್ಷಣೆ ತಾನು ಮಾಡಿಕೊಳ್ಳಬಲ್ಲವನನ್ನು ದೇವರು ಕೈಬಿಡುವುದಿಲ್ಲ.

ದಿ ಕೆನರಾ ಮ್ಯೂಚುವಲ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ. ಸ್ಥಾಪನೆ: ೧೯೩೫
ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ ಕಂಪೆನಿ
The Canara Mutual Assurance Co. Ltd.
Head Office: **UDIPI**, S. India. Estd: 1935

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತವೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ವಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಮುಟ್ಟು ತಪ್ಪಿದರೆ ಚಿಂತೆ ಬೇಡ

"ಋತುರಾಜ್" ಸೇವಿಸಿರಿ. ಋತುಸ್ರಾವ ಪ್ರಾರಂಭವಾಗುವುದು. 4–5 ತಿಂಗಳು ನಿಂತಿದ್ದರೂ ಮುಟ್ಟು ಯಾವ ಅಪಾಯವನ್ನೂ ತಾರದೆ 24 ಘಂಟೆಯೊಳಗೆ ಗ್ಯಾರಂಟಿಯಿಂದ ಪ್ರಾರಂಭವಾಗುವುದು. ಬೆಲೆ ರೂ. 7/8 ವಿ. ಪಿ. ಖರ್ಚು ರೂ. 1- ವಿಶೇಷ ರೂ. 24 ವಿ. ಪಿ. 1/12

BINAPANI AUSHADHALAYA (N. J.)
15/1 Moor's Avenue. CALCUTTA, 33
ಸ್ಥಳೀಯ ಏಜಂಟರು:
ವೈದ್ಯ ಸಿ ಆರ್. ಕಾಮತ್,
ಮಂಗಳೂರು.

ಮೂಲ್ಕಿ ಬೇಂಕ್.
ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K

GUN FOR SALE

Slightly used double Barrel. Breach Loading. Hammerless, ejscter Gun.
X C/o Navayuga, Udipi (S. K)

ಗನ್ ಮಾರಾಟಕ್ಕಿದೆ

ಸ್ವಲ್ಪವೇ ಉಪಯೋಗಿಸಿದ ಜೋಡು ನಳಿಗೆಯ, ಕುದುರೆ ಇಲ್ಲದ, ಹೊಡೆದ ತೋಟೆ ಹಿಂದೆ ಹಾರಿಸುವ ಹೊಸತೋಟೆಯ ಕೋವಿಯೊಂದು ಮಾರಲಿಕ್ಕಿದೆ
X C/o ನವಯುಗ ಉಡುಪಿ

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ತಾಕುಕೊಳ್ಳುವುದು, ಚೇಳುವಿಷ ಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

SOVEREIGN-REMEDY
AMRUTANJAN
Best Indian Pain Balm
Amrutanjan Depots
BOMBAY, MADRAS

REGD
ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್
ಮದರಾಸು, ಬೊಂಬಾಯಿ ಮತ್ತು ಕಲ್ಕ

ಮಾನವ ಸಾಹಸದ ಅಪೂರ್ವ ನಿದರ್ಶನ

ಜ್ವಾಲಾಮುಖಿಯಿಂದ ಕಾರ್ಖಾನೆ ನಡೆಸುವ ಚಮತ್ಕಾರ

— ೧ —

ಮುಂಜಾನೆ ಎಂಟು ತಾಸು. ಇನ್ನೇನು ಜನರೆಲ್ಲಾ ತಂತಮ್ಮ ಕೆಲಸದಲ್ಲಿ ತೊಡಗಿದ್ದರು. ಮಾರ್ಗಗಳಮೇಲೂ ಸಾಕಷ್ಟು ಗಂದಲವಿತ್ತು. ಒಮ್ಮಿಂದೊಮ್ಮೆ ಗಡಗಡನೆ ನಡುಗುವ ಧ್ವನಿ ಕೇಳಿ ಬಂತು —ಮಾರ್ಟಿನಿಕ್ ದ್ವೀಪದ ಸ್ಯೆಂಟ್‌ಪೀಎರ್ ನಗರದಲ್ಲಿದ್ದ ನಲುವತ್ತು ಸಾವಿರ ವಾಸಿಕರ ಪಾಲಿಗೆ ಅದೇ ಅಂತಿಮ ಧ್ವನಿಯಾಯಿತು! ಜನರೆಲ್ಲಾ ಕಾಂಡವಲೀಲೆಯೋ ಎಂಬಂತೆ ಈ ನಡುಕು ಧ್ವನಿಯಿಂ ಸ್ತಂಭೀಭೂತರಾದರು. ಏನೆಂದು ಯೋಚಿಸಲಿಕ್ಕೂ ಅವಕಾಶದೊರೆಯದ ಸ್ಥಿತಿಯಲ್ಲಿ ಅವರೆಲ್ಲಾ ಯಮಲೋಕ ಸೇರಿದರು, ಸುರು ತುಂಬಿದ, ಜನರ ನಗುನಡೆಗಳಿಂ ನಂದನವನದಂತಿದ್ದ ನಗರ - ರುದ್ರಭೂಮಿಯಾಯಿತು.! ಎಲ್ಲ ಮನೆಮಠಗಳು ಕುಸಿದು ಬಿದ್ದು ಸರ್ವತ್ರ ಸ್ಮಶಾನ ವೈರಾಗ್ಯ ಹಬ್ಬಿತು. ಕೊಲೆಪಾತಕಿಯಾಗಿ ನೆಲಮಾಳಿಗೆಯಲ್ಲಿ ಶಿಕ್ಷೆ ಅನುಭವಿಸುತ್ತಿದ್ದ ಕೈದಿಯೊಬ್ಬ ಮಾತ್ರ ಉಳಿದುಕೊಂಡ!

ಈ ನಗರದ ಬಳಿಯಲ್ಲಿಯೇ ಪೆಲೀ ಪರ್ವತವಿದೆ. ಅಲ್ಲಿಯ ಜನರು ಈ ಪರ್ವತದ ಪೂಜೆ ಮಾಡುತ್ತಿದ್ದರು. ಅದನ್ನು ದೇವರೆಂದು ತಿಳಿಯುತ್ತಿದ್ದರು. ಇಂದು ದೇವತೆಗೆ ಕೋಪ ಬಂದಿತು—ಅದರ ಮುಖದಿಂದ ಜ್ವಾಲಾಮುಖಿ ಸಿಡಿಯಿತು!

ಜ್ವಾಲಾಮುಖಿ ಪರ್ವತಗಳಿಂದ ಈ ರೀತಿ ಅಪಾರ ಹಾನಿ ಉಂಟಾಗುವುದೇನು ಇದೇ ಮೊದಲಲ್ಲ – ಅಥವಾ ಕೊನೆಯದೂ ಅಲ್ಲ. ಕಳೆದ ವರ್ಷ ನ್ಯೂಗಿನಿಯ ಲೆಮಿಂಗ್‌ಟನ್ ಎಂಬ ಜ್ವಾಲಾಮುಖಿ ಪರ್ವತದ ಸ್ಫೋಟದಿಂದಾಗಿ ಇಪ್ಪತ್ತು ಹಳ್ಳಿಗಳು ನಾಶಗೊಂಡುದಲ್ಲದೆ, ನಾಲ್ಕು ಸಾವಿರ ಜನ ಮೃತ್ಯುವಶರಾದರು. ೧೯೪೫ರಲ್ಲಿ ಜಪಾನಿನ ಹಿರೋಶಿಮಾದಲ್ಲಿ ಅಣು ಬಾಂಬನ್ನು ಒಗೆದುದರಿಂದ ಅಪಾರ ಹಾನಿಯೊದಗಿತು: ಎಲ್ಲೆಲ್ಲೂ ಹಾಹಾಕಾರ ತುಂಬಿತು ಆದರೆ ಸಿಸಿಲಿಯ ವೆಸೂವಿಯಸ್ ಜ್ವಾಲಾಮುಖಿಯೊಂದೇ ಈ ವರೆಗೆ ಅನೇಕ ಅಣು ಬಾಂಬುಗಳು ಮಾಡಬಹುದಾದ ನಷ್ಟವನ್ನು ಮಾಡಿದೆ ಎಂಬುದನ್ನು ಮರೆಯುವಂತಿಲ್ಲ.

— ೨ —

ಅಸಾಮಿನಲ್ಲಿ ಭಯಂಕರ ಭೂಕಂಪವಾದುದನ್ನು ಕಂಡೇ ನಾವು ತತ್ತರಿಸಿದ್ದೇವೆ. ಅದರ ಹಾನಿಯಿಂದ ಚೇತರಿಸುವ ಸಾಮರ್ಥ್ಯ ನಮಗೆ ಬಂದಿಲ್ಲ. ಜ್ವಾಲಾಮುಖಿ ಪರ್ವತಗಳ ಸ್ಫೋಟವನ್ನು ನಿಲ್ಲಿಸುವ ಬಗೆ ಹೇಗೆಂದು ವಿಜ್ಞಾನಿಗಳು ಬಹಳ ಶೋಧಿಸುತ್ತಿದ್ದಾರೆ. ಆದರೆ ಈ ವರೆಗೆ ಅವರು ಹೆಚ್ಚು ಸಾಫಲ್ಯ ಪಡೆದಿಲ್ಲ. ಕೆಲಮಟ್ಟಿಗೆ ಜಯ ದೊರೆತಿದೆ. ಉದಾಹರಣೆಗಾಗಿ, ಸ್ಫೋಟಗೊಳ್ಳುವುದಕ್ಕೆ ಸಾಕಷ್ಟು ಮುಂಚಿತವಾಗಿಯೇ ಅದರ ಸೂಚನೆಯನ್ನು ಕಂಡುಕೊಂಡು, ಜನರನ್ನು ಜಾನುವಾರುಗಳನ್ನೂ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸ ಬರುವಂತೆ ಮಾಡಿದ್ದಾರೆ. ೧೯೩೫ರಲ್ಲಿ ಡಾ| ಟಿ ಎ. ಜಾಗರ್ ಎಂಬವರು ವಿಮಾನ ಮೂಲಕ, ಸ್ಫೋಟಕ್ಕೆ ಸ್ವಲ್ಪ ಸಮಯಕ್ಕೆ ಮುಂಚೆ, ಪರ್ವತದಲ್ಲಿ ಜನನಿವಾಸವಿಲ್ಲದೆಡೆ ಬಾಂಬು ಸುರುವಿ, ತನ್ಮೂಲಕ ವಿಶಾಲವಾದ ಹೊಂಡ ಉಂಟಾಗುವಂತೆ ಮಾಡುವುದರಲ್ಲಿ ಯಶಸ್ಸು ಪಡೆದರು. ಕೆಲವೇ ತಾಸಿನ ಬಳಿಕ ಸ್ಫೋಟ ಸಂಭವಿಸಿದಾಗ ಜ್ವಾಲಾಮುಖಿಯು ಉಗುಳಿದ ಲಾವಾ ರಸವೆಲ್ಲ ಈ ಹೊಂಡಗಳಲ್ಲಿ ತುಂಬಿತು, ಹೊರತು ಜನರಿಗೇನೂ ಬಾಧೆಯಾಗಲಿಲ್ಲ!

ಈಗ್ಗೆ ಕೆಲವರ್ಷದಿಂದ ವಿಜ್ಞಾನಿಗಳು ಇನ್ನೊಂದು ವಿಷಯದ ಕುರಿತೂ ಆಸ್ಥೆ ತೋರಿಸುತ್ತಿದ್ದಾರೆ: ತಮ್ಮ ಸಂಶೋಧನೆಗಳ ಫಲವಾಗಿ, ಭೂಮಿಯ ಅಡಿ ಎಪ್ಪತ್ತು ಮೈಲು ಆಳದಲ್ಲಿರುವ ಕಾವು ಹಾಗೂ ಖನಿಜ ಪದಾರ್ಥಗಳಿಂದ ತುಂಬಿದ ದ್ರವಗಳ ಕಾರಣದಿಂದಲೇ ಜ್ವಾಲಾಮುಖಿ ಸ್ಫೋಟಗೊಳ್ಳುವುದೆಂದು ಅವರಿಗೆ ಖಾತ್ರಿಯಾಗಿದೆ. ತಣ್ಣೀರು ಇಷ್ಟು ಆಳ ಇಳಿದು ಈ ದ್ರವ ಪದಾರ್ಥವನ್ನು ಸ್ಪರ್ಶಿಸಿದರೆ-ಅದು ಒಮ್ಮೆಲೆ ಭಗಿಲ್ಲೆಂದು ಭೂಮಿಯಿಂದ ಮೇಲಕ್ಕೆ ಸಿಡಿಯುವುದು. ಲಾವಾ ರಸದ ರೂಪದಲ್ಲಿ ಪರ್ವತ ಮುಖದಿಂದ ಹೊರ ಹೊಮ್ಮುವುದು. ಈ ದ್ರವ ಪದಾರ್ಥದಲ್ಲಿ ಬಹಳ ಶಕ್ತಿ ಹುದುಗಿಕೊಂಡಿದೆ ಎಂಬುದಂತೂ ಸ್ಪಷ್ಟ

— ೩ —

ಸ್ಫೋಟಗೊಂಡು ವ್ಯರ್ಥ ಹಾನಿಯುಂಟುಮಾಡುವ ಜ್ವಾಲಾಮುಖಿಯ ಗುಪ್ತ ಶಕ್ತಿಯನ್ನು ರಚನಾತ್ಮಕ ಕಾರ್ಯಗಳಿಗೆ ಹೇಗೆ ಬಳಸ ಬರುವುದೆಂಬುದನ್ನು ಈಗ ವಿಜ್ಞಾನಿಗಳು ಪರಿಶೋಧಿಸುತ್ತಿರುವರು. ಜ್ವಾಲಾಮುಖಿಯು ಹೊರ ಹೊಮ್ಮುವ ಲಾವಾ ರಸದಿಂದ ಸಾಕಷ್ಟು ಪ್ರಯೋಜನ ದೊರೆಯುತ್ತಿದೆ—ಅದರಲ್ಲಿ ಪೊಟಾಶ್, ಸಲ್ಫ್ಯೂರಿಕ್ ಎಸಿಡ್, ಬೋರಿಕ್ ಎಸಿಡ್, ಅಮೋನಿಯಾ ಮುಂತಾದ ಖನಿಜ ವಸ್ತುಗಳಿವೆ. ವಲ್ಕ್ಯಾನೋ ದ್ವೀಪದ ಜ್ವಾಲಾಮುಖಿಯಿಂದಾಗಿ ಗಂಧಕ ಕೂಡಾ ದೊರೆಯುತ್ತಿದೆ. ಇವೆಲ್ಲವುಗಳನ್ನು ಚೆನ್ನಾದ ರೀತಿಯಲ್ಲಿ ಉಪಯೋಗಿಸಲು ಅನುವಾಗುವಂತೆ ಇಟಲಿಯಲ್ಲಿ ಒಂದು ರಾಸಾಯನಿಕ ಪ್ರಯೋಗ ಶಾಲೆಯನ್ನು ತೆರೆದಿರುವರು. ಲಾವಾ ರಸವು ತಣಿದಬಳಿಕ ಆ ಫಲವತ್ತಾದ ಮಣ್ಣಿನಲ್ಲಿ ಚೆನ್ನಾದ ಬೆಳೆ ಬೆಳೆಯಬಹುದು. ಆದರೆ ಇಷ್ಟು ಸ್ವಲ್ಪ ಪ್ರತಿ ಲಾಭದಿಂದ ಸಂತುಷ್ಟರಾಗುವ ಮನಸ್ಸು ವಿಜ್ಞಾನಿಗಳಿಗಿಲ್ಲ.

ಈ ಸಂಬಂಧದಲ್ಲಿ ಇಟಲಿಯ ಲಾರ್ಡರೆಲೊ ಎಂಬುದಕ್ಕೆ ಹತ್ತಿರದ ಜ್ವಾಲಾಮುಖಿಯ ಉಪಯೋಗವನ್ನು ಒಂದು ಹಬೆಯಂತ್ರವನ್ನು ಚಲಿಸುವುದಕ್ಕೆ ಬಳಸಿದಾಗ ಸರ್ವ ಪ್ರಥಮವಾಗಿ ಯಶಸ್ಸು ದೊರೆಯಿತು. ಇದರಿಂದ ಉತ್ತೇಜಿತರಾಗಿ ಇನ್ನೂ ಹೆಚ್ಚಿನ ಪ್ರಯತ್ನ ನಡೆಯಿತು. ಇಂದು ಅಲ್ಲಿ ಎಪ್ಪತ್ತೈದು ಸಾವಿರ ಕಿಲೋವಾಟು ವಿದ್ಯುಚ್ಛಕ್ತಿಯನ್ನು ಜ್ವಾಲಾಮುಖಿಯಿಂದ ಪಡೆಯುತ್ತಾರೆ! ಅಲ್ಲಿಯ ಎಷ್ಟೋ ಕಾರಖಾನೆಗಳು [illegible] ಇದೇ ವಿದ್ಯುಚ್ಛಕ್ತಿಯ ಬಳಕೆಯಿಂದ ನಡೆಯುತ್ತವೆ.

— ೪ —

ಈ ಬಗೆಯಲ್ಲಿ—ಜ್ವಾಲಾಮುಖಿಯ ನಾಶಕಾರಿ ಶಕ್ತಿಯನ್ನು ರಚನಾತ್ಮಕ ಕೆ

[೧೦ನೇ ಪುಟ ನೋಡಿರಿ]

ಪುತ್ತೂರು ಡಿ. ಮು. ಕೋರ್ಟಿನಲ್ಲಿ

[illegible] 356/1948. R.E.P 83/1952.
R.E.A. 245/52.

ಪಾಂಡುರಂಗ ರಾವ್ — ವಾದಿ
ಅರ್ಜಿದಾರ

ಮುಳಿಯ ಕಡಬಿಲ ರಾಮಕೃಷ್ಣ ಭಟ್ಟ
ಭೀಮ ಭಟ್ಟ ಮಗ — ಅಳಿಕೆ ಗ್ರಾಮ
ಪ್ರತಿವಾದಿ— ಎದ್ರಿ —

ಎದ್ರಿಯ ಜಾಯ್ತು ಸ್ಥಿರಾಸ್ತಿಯನ್ನು ವಾದಿಗೆ ಬರ ಬೇಕಾದ ಐವಜು ವಸೂಲಿಗೋಸ್ಕರ ಲೀಲಾವಿಗೆ ಅಪೇಕ್ಷಿಸಿ ಲೀಲಾಂ ಇಸ್ತಿಹಾರ ಹಾಜರು ಪಡಿಸಿರುವದರಿಂದ ಇಸ್ತಿಹಾರಿನ ಷರತ್ತುಗಳನ್ನು ನಿರ್ಣಯಿಸಲಿಕ್ಕೂ, ಲೀಲಾಂ ಸಮಯ ಅರ್ಜಿದಾರನ ಕಡೆಯಿಂದ ದರ್ಖಾಸ್ತಿಗೆ ನಿಲ್ಲುವರೆ ಪರ್ಮಿಶನಿಗೆ ಕೂಡಾ ತಾ. 19-9-1952ಕ್ಕೆ ನೋಟೀಸಿನ ಕಸ್ಸಿ ವ್ಯಾಜ ನಿಶ್ಚಯಿಸಿರುವದರಿಂದ ಎದ್ರಿಯು ಆಕ್ಷೇಪಗಳೇನಾದರೂ ಹೇಳುವದಿದ್ದರೆ ಆ ವ್ಯಾಜದಿನ ಈ ಕೋರ್ಟಿನ ಮುಂದೆ 11 ಘಂಟೆಗೆ ಹಾಜರಾಗಿ ಬರಹ ಮೂಲಕ ಹೇಳಿಕೊಳ್ಳತಕ್ಕದ್ದು. ಇದಕ್ಕೆ [illegible] ತೀರ್ಪು ಎಂತ ಮಾಡಿ ಈ ವೆವಹಾರವನ್ನು ಮುಂದರಿಸಲಾಗುವದು ಎಂತ ಈ ಕೋರ್ಟಿನವರ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

B. Ramachandra Rao
M.A.B.L.
Pleader for Petitioner.
ತಾ. 22-8-1952 ಪುತ್ತೂರು S. K.

ಪುತ್ತೂರು ಡಿ. ಮು. ಕೋರ್ಟಿನ
O. S 471/4

ಕುಂಞಣ್ಣ ಶೆಟ್ಟಿ — ವಾದಿ
ಅಬ್ದುಲ್ ಖಾದ್ರಿ ಬ್ಯಾರಿ—ಪ್ರತಿವಾ

1. ಸುಬ್ಬಕ್ಕ-ಚೆನ್ನಪ್ಪಶೆಟ್ಟಿ ವಿಧವೆ -
2. ಅಣ್ಣಪ್ಪಶೆಟ್ಟಿ 3. ಕಮಲಯಾನೆ ಗೋ
1ನೇ ಸುಬ್ಬಕ್ಕನ ಮಕ್ಕಳು — ಪುತ್ತೂರು ತಾಲೂಕು ಕೆದಂಬಾಡಿ ಗ್ರಾಮದ ಕನಡ ಮನೆಯಲ್ಲಿರುತ್ತಾರೆ.

ಇವರಿಗೆ ಕೋರ್ಟಿನ ಹುಕುಂ ಪ್ರಕಾ ಈ ಮೂಲಕ ತಿಳಿಯಪಡಿಸುವುದೇನಂದರೆ ಮೇಲ್ಕಂಡ ವಾದಿಯು, ಪ್ರತಿವಾದಿಯೋ ಕಳೆದ 1948-49ನೇ ವರ್ಷದ ಗೇಣಿ ಬಾ ವಗೈರೆ ರೂ. 350 ಕ್ಕೆ ಮಾಡಿದ, ನೋ ದಾವೆಯಲ್ಲಿ ನಿಮ್ಮನ್ನು ಕೂಡಾ ಸಪ್ಲಿಮೆಂಟಲ್ ಪ್ರತಿವಾದಿಯಾಗಿ ಕಕ್ಷಿಯಾಗಿ ಸೇರ್ಪಡಿಸಬೇಕೆಂತ ವಗೈರೆ ವಾದಿ ಕೊಟ್ಟ R I A 751/52ನೇ ಅರ್ಜಿ ಮತ್ತು ದಾವೆ ಕೂಡಾ ತಾ. 15-9-52 ಕ್ಕೆ ತನಿಖೆಗೆ ಇಟ್ಟ [illegible] ಗ ಸದ್ರಿದಾವೆ ಮತ್ತು ಅರ್ಜಿಗೆ ಆಕ್ಷೇಪಣೆ ಏನಾದ್ರು ಇದ್ದರೆ, ನೀವು [illegible] ವ್ಯಾಜದ ದಿನ ಪೂರ್ವಾಹ್ನ ಘಂಟೆ 11 ಕ್ಕೆ ಕೋರ್ಟು ಮುಂದೆ ಖುದ್ದು ಯಾ ವಕೀಲ ದ್ವಾರಾ ಹಾಜರಾಗಿ ಉತ್ತರ ಕೊಡತಕ್ಕದ್ದು ತಪ್ಪಿದ್ರೆ [illegible] ಮಾಡಿ ಯುಕ್ತ ಕಂಡಂತೆ ನಿರ್ಣಯಿಸಲಾಗುವುದು.

M. Sudashiva Rao,
Pleader for plf
ಪುತ್ತೂರು ತಾ. 25-8-52

ನೀವೇಕೆ ಸೇವಿಂಗ್ಸ್‌ಬೇಂಕ್ ಖಾತೆಯನ್ನು ತೆರೆಯಬೇಕು?

ಬೇಂಕಿನಲ್ಲಿಟ್ಟ ಹಣವು ಯಾವಾಗಲೂ ಭದ್ರವಾಗಿರುತ್ತದೆ. ಗುಪ್ತವಾಗಿ ಹೇಖರಿಸಿಟ್ಟ ಹಣಕ್ಕೆ ಒಂದಲ್ಲ ಒಂದು ದಿನ ಗಂಡಾಂತರವೆ. ಅಂತಹ ನಿಧಿಯು ಕಳ್ಳಕಾಕರ ವಶವಾಗಲು, ಕೈ ಬದಲಾವಣೆಯಾಗಲು ಇಲ್ಲವೆ ಇಲಿಗಳು ಅಥವಾ ಬಿಳಿ ಇರುವೆಗಳಿಂದ ನಾಶವಾಗಿ ಹೋಗಬಹುದು ಆಕರ್ಷಕ ಒಡ್ಡಿಯನ್ನು ನಾವು ಕೊಡುವುದರಿಂದ ನಮ್ಮ ಸೇವಿಂಗ್ಸ್ ಖಾತೆಯಲ್ಲಿಟ್ಟ ನಿಮ್ಮ ಹಣವು ದಿನದಿಂದ ದಿನಕ್ಕೆ ಬೆಳೆಯುತ್ತಲೇ ಹೋಗುವುದು.

ಇಂದೇ ಸೇವಿಂಗ್ಸ್ ಬೇಂಕ್ ಲೆಖ್ಖವನ್ನು ತೆರೆಯಿರಿ.

ದಿ ಕೆನರಾ ಇಂಡಸ್ಟ್ರಿಯಲ್
ಎಂಡ್‌ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ. 1925 ಹೆಡ್ ಆಫೀಸ. ಉಡುಪಿ

The Canara Industrial &
Banking Syndicate Limited.
Estd. 1925 H. O: UDIPI

For Protection and Provision
Consult
The New Guardian of India Life Insurance Co., Ltd.
Estd] Head office: MADRAS [1934
A Policy in this Progressive Life Office is good investment: its Agency is valuable business connection
Applications for representation are invited from influential persons.
Please apply to:
The Branch Manager,
Diamond Building, Hampankatta,
MNGALORE, S. K.

ದೇಶದ ನಾಗರಿಕರ

ಸುಗ್ರೀವಾಜ್ಞೆಗೆ ತಿದ್ದುಪಡಿ

ತಂಜಾವೂರಿನ ಗೊಂದಲವನ್ನು ಶಾಂತ ಮಾಡಲು ಗವರ್ನರರು ಸುಗ್ರೀವಾಜ್ಞೆಯನ್ನು ಬಹಳ ಅವಸರದಲ್ಲಿ ಹೊರಡಿಸಿದಂತಿತ್ತು ಎಂಬುದು ಸ್ಪಷ್ಟ. ಇಂಥದೊಂದು ಕ್ರಮವು ಅಗತ್ಯವಿತ್ತೆಂದು ಸ್ವಾಗತಿಸಲಾಯಿತಾದರೂ—ಅದರ ಕುಂದುಕೊರತೆಗಳ ತೀಕ್ಷ್ಣ ವಿಮರ್ಶೆಯನ್ನೂ ಮಾಡಲಾಯಿತು. ಇದರಿಂದ ಪಾಠ ಕಲಿತೋ ಎಂಬಂತೆ, ಸುಗ್ರೀವಾಜ್ಞೆಯನ್ನು ಕೆಲ ಮಟ್ಟಿಗೆ ಪರಿಷ್ಕರಿಸುವ ಇನ್ನೊಂದು ಆಜ್ಞೆಯನ್ನು ಗವರ್ನರರು ಹೊರಡಿಸಿರುವರು. ಇದರ ಪ್ರಕಾರ ಕೆಲವೆಡೆ ಅಸಂತೋಷ ಏಳಬಹುದಾಗಿದ್ದುದು—ಈಗ ತೃಪ್ತಿಗೆ ಅವಕಾಶ ಕೊಟ್ಟಿದ್ದರೂ, ತಿದ್ದುಪಡಿ ಆಜ್ಞೆಯ ಒಂದೆರಡು ಕಲಮುಗಳು ಮರಳಿ ತಿಕ್ಕಾಟಕ್ಕೆ ಅನುವು ಮಾಡಿಕೊಡಬಹುದು. ಮುಖ್ಯವಾಗಿ ತಿದ್ದುಪಡಿ ಆಜ್ಞೆಯಿಂದ ಇಡೀ ವಿಷಯವನ್ನು ರೈತರಿಗೆ ಅನುಕೂಲವಾಗುವಂತೆ ಮಾಡಲಾಗಿದೆ. ಈ ಹಿಂದೆ ಧನಿ ಮತ್ತು ಒಕ್ಕಲುಗಳಿಗೆ ೬೦.೪೦ ಎಂಬ ಪ್ರಮಾಣದಲ್ಲಿದ್ದ ಹುಟ್ಟುವಳಿಯು ಆಕರ್ಷಕವೆನಿಸಿದ್ದರೂ, ಒಕ್ಕಲೇ ಎಲ್ಲ ಸಾಗುವಳಿ ಖರ್ಚನ್ನು, ಎಂದರೆ ಗೊಬ್ಬರ, ಬೀಜ ಇತ್ಯಾದಿ, ನೋಡಬೇಕೆಂದು ವಿಧಿಸಿದ್ದರಿಂದ ಒಕ್ಕಲುಗಳಿಗೆ ಯಥಾರ್ಥವಾದ ಲಾಭವೇನೂ ಉಂಟಾದಂತಿರಲಿಲ್ಲ. ಆದರೆ ಈಗಿನ ತಿದ್ದುಪಡಿಯಂತೆ ಧನಿ ಹಾಗೂ ಒಕ್ಕಲುಗಳಲ್ಲಿ ಇದನ್ನು ಹಂಚಿಹಾಕಿರುವರು; ಎಂದರೆ ಈ ಮೊದಲು ಇದ್ದ ಕಟ್ಟಳೆಗೇ ಅನುಮೋದನೆ ಕೊಟ್ಟಿರುವರು. ಇದರಿಂದ ಧನಿಯ ಪಾಲಿಗೆ ಬರುವ ಗೇಣಿ ಅಂಶಕ್ಕೆ ಕತ್ತರಿ ಬಂದರೂ—ಒಟ್ಟು ಉತ್ಪಾದನೆಯಲ್ಲಿ ಏನಿಲ್ಲೆಂದರೂ ೧೫% ದಷ್ಟನ್ನು ಸಾಗುವಳಿ ವೆಚ್ಚವೆಂದು ಒಬ್ಬನೇ ಸಹಿಸಿಕೊಳ್ಳುವ ಸಾಮರ್ಥ್ಯವಿಲ್ಲದ ಒಕ್ಕಲಿಗೆ ನೆರವು ದೊರೆತಂತಾಗಿದೆ.

ಒಕ್ಕಲುಹಿತ ಮಸೂದೆ

ರೈತರನ್ನು ಕರುಣಾಪೂರ್ಣ ದೃಷ್ಟಿಯಿಂದ ನೋಡಬೇಕೆಂಬುದೇ ಕಾಂಗ್ರೆಸು ಸರಕಾರದ ಮುಂದಿರುವ ಆಶೆ; ಆದುದರಿಂದ ರಾಜಾಜಿಯವರ ದಕ್ಷ ಆಡಳಿತವು ಭೂಸುಧಾರಣೆಯ ಕ್ರಮಗಳ ಬಗ್ಗೆ ಶೀಘ್ರ ಗಮನಕೊಟ್ಟುದನ್ನು ಪ್ರಶಂಸಿಸದಿರೆವು. ಮಲಬಾರು ಒಕ್ಕಲ ಹಿತ ಮಸೂದೆಯಂಥ ಒಂದು ಭದ್ರವಾದ ಕಾಯಿದೆಯು ಈ ಹಿಂದೆ ಇದ್ದರೂ—ಅದು ಕೇವಲ ಒಂದು ಜಿಲ್ಲೆಗಷ್ಟೇ ಅನ್ವಯಿಸುತಿತ್ತು. ನೆರೆಯ ದಕ್ಷಿಣ ಕನ್ನಡಕ್ಕೂ ಅದೇ ಮಾದರಿಯ ಮಸೂದೆಯೊಂದು ಅಗತ್ಯವಿದೆಯಾಗಿ ಮನವಿಗಳು ನೂರಾರು ಸಲ್ಲಿಸಲ್ಪಟ್ಟದ್ದರೂ ಅವನ್ನು ಕೇಳಿ; ತಕ್ಕ ಹೆಜ್ಜೆಯನ್ನು ಮುಂದಿಟ್ಟವರಿಲ್ಲ. ಮಲಬಾರು ಒಕ್ಕಲುಹಿತ ಮಸೂದೆಯನ್ನು ಈಗ ಮರಳಿ ಪರಿಶೀಲನೆಗೆ ತೆಗೆದುಕೊಳ್ಳಲಾಗಿದೆಯೆಂದೂ, ತಕ್ಕ ಪರಿಷ್ಕಾರದಿಂದ ಅದನ್ನು ಇನ್ನಷ್ಟು ಸುದೃಢವಾಗಿಸಲಾಗುವುದೆಂದೂ ವರದಿ ಬಂದಿದೆ. ಆದರೆ ತಂಜಾವೂರಿನಂಥ ಜರೂರು ವಾತಾವರಣ ಇಲ್ಲದಿರುವುದರಿಂದ, ಗವರ್ನರರ ಸುಗ್ರೀವಾಜ್ಞೆಯ ಪ್ರಯೋಗ ಮಲಬಾರು ಒಕ್ಕಲುಹಿತ ಮಸೂದೆಯ ಸಂಸ್ಕರಣಕ್ಕೆ ಬರಲಿಕ್ಕಿಲ್ಲ. ರಾಜಾಜಿಯೊಡನೆ ಪತ್ರಕಾರರು ರಾಜ್ಯದಲ್ಲಿ ಇತರೆಡೆಗಳಲ್ಲಿಯೂ ತಂಜಾವೂರಿನಲ್ಲಿ ಜಾರಿಗೆ ತಂದ ಮಾದರಿಯ ಸುಧಾರಣೆಯಾಗುವ ಅಗತ್ಯವಿಲ್ಲವೆ ಎಂದು ಪ್ರಶ್ನಿಸಿದ್ದಕ್ಕೆ ಹೌದೆಂದು ಅವರು ಒಪ್ಪಿರುವರು. ಆದರೆ ಪ್ರತಿಯೊಂದೂ ಜಿಲ್ಲೆಯ ಪರಿಸ್ಥಿತಿ ಭಿನ್ನವಾಗಿರುವುದರಿಂದ, ಆಯಾ ವಾತಾವರಣಕ್ಕೆ ಹೊಂದಿದಂತೆ ಭೂಸುಧಾರಣಾ ಕ್ರಮಗಳನ್ನು ಕೈಕೊಳ್ಳಬೇಕಿದೆ ಎಂದೂ- ಆ ಕಾರಣದಿಂದ ಪ್ರಗತಿ ಮೆಲ್ಲನೆ ಕೈಗೂಡುತ್ತಿರುವುದಾಗಿಯೂ ಮುಖ್ಯಮಂತ್ರಿ ಹೇಳಿದರು.

ಜಹಗೀರುದಾರಿ ನಿರ್ಮೂಲನ

ರಾಜಸ್ಥಾನದಲ್ಲಿ ಹೆಸರೇ ಸೂಚಿಸುವಂತೆ ಹಿಂದಿನ ರಾಜ ಮಹಾರಾಜರ ಭೂಮಿಯೇ ಅತ್ಯಧಿಕ. ಅವರೆಲ್ಲರಿಗೂ ವಿಶಾಲವಾದ ಜಾಗೀರುಗಳಿದ್ದುವು. ಈ ವರ್ಷ ಫೆಬ್ರುವರಿಯಲ್ಲಿ ಕಾಯಿದೆಯಾಗಿ ರೂಪುಗೊಂಡ ಜಾಗೀರದಾರಿ ನಿರ್ಮೂಲನ ಮಸೂದೆಯಂತೆ ರೂ. ೫೦೦೦ಕ್ಕೂ ಮಿಕ್ಕಿದ ಹುಟ್ಟುವಳಿಯ ಎಲ್ಲ ಜಾಗೀರುಗಳನ್ನೂ ಸರಕಾರ ವಶಪಡಿಸಿಕೊಳ್ಳುವುದು. ಮೊದಲಿಗೆ ದೊಡ್ಡ ದೊಡ್ಡ ಜಾಗೀರುಗಳನ್ನೆ ಸರಕಾರ ಸ್ವವಶಪಡಿಸುವುದಾಗಿಯೂ ಈ ತಿಂಗಳ ೧೬ನೇ ದಿನಾಂಕದಿಂದ ಈ ಕೆಲಸವು ತೊಡಗಲ್ಪಡುವುದೆಂದೂ ರಾಜಸ್ಥಾನದ ಕಂದಾಯಮಂತ್ರಿ ಮೋಹನ್‌ಲಾಲ್ ಸುಖಾಡಿಯಾ ಹೇಳಿದ್ದಾರೆ. ರಾಜ್ಯದ ೧,೩೦,೦೦೦ ಚದರ ಮೈಲು ವಿಸ್ತೀರ್ಣದಲ್ಲಿ ೪೦,೯೦೦ ಚದರ ಮೈಲು ಜಾಗೀರು ಪ್ರದೇಶವಾಗಿದೆ ಎಂಬುದನ್ನು ನೋಡಿದರೆ ಈ ಸುಧಾರಣೆಯ ಮಹಾ ಸ್ವರೂಪ ದೃಷ್ಟಿಗೋಚರವಾಗುವುದು. ಹಲವಾರು ವಿಭಾಗಗಳಲ್ಲಿ ಪೂರೈಸಲಿರುವ ಈ ಕ್ರಮವು ಅನ್ಯಾಯದ್ದಿಂದ, ಘಟನಾತ್ಮಕವೂ ಮಾನವೀಯ ಆಶೋತ್ತರಗಳಿಗೆ ಹೇಳಿಸಿದಂಥವೂ ಆಗಿದೆ ಎಂದು ಮಂತ್ರಿಗಳೆಂದರು. ಮಧ್ಯ ಯುಗದ ಸುಲಿಗೆ ಮತ್ತು ಲೂಟಿಯಿಂದ ರೈತರನ್ನು ಉದ್ಧರಿಸುವುದು ಈ ಕಾಯಿದೆಯ ಮುಖ್ಯೋದ್ದೇಶವೆಂದವರು ಸ್ಪಷ್ಟಪಡಿಸಿದರು.

ದಕ್ಷಿಣ ಭಾರತದ ಔದ್ಯಮಿಕ ಪ್ರಗತಿ

ಔದ್ಯಮಿಕ ವಿಕಾಸ

ದಕ್ಷಿಣ ಭಾರತಕ್ಕೆ ಕೇಂದ್ರದ ಮಂತ್ರಿವರ್ಯರು ಒಬ್ಬೊಬ್ಬರಾಗಿ ಸಂದರ್ಶನ ಕೊಡುತ್ತಾ ಬಂದಿದ್ದಾರೆ. ಮಾನ್ಯ ದೇಶಮುಖ, ಜಗಜ್ಜೀವನರಾಮ, ವಿ. ವಿ. ಗಿರಿ, ಮತ್ತೀಗ ಟಿ. ಟಿ. ಕೃಷ್ಣಮಾಚಾರಿಯವರು ಮದ್ರಾಸು ಮುಂತಾದೆಡೆಗಳಿಗೆ ಭೇಟಿ ಕೊಟ್ಟರು. ವಾಣಿಜ್ಯ ಮಂತ್ರಿಯಾದ ಶ್ರೀ ಕೃಷ್ಣಮಾಚಾರಿಯವರು ದಕ್ಷಿಣದವರೇ. ಅವರಿಗೆ ನಮ್ಮ ಔದ್ಯೋಗಿಕ ಸಮಸ್ಯೆಗಳೇನೆಂಬುದೂ ಸ್ಪಷ್ಟವಾಗಿ ತಿಳಿದಿದೆ. ಉತ್ತರ ಭಾರತವು ಔದ್ಯೋಗಿಕ ಕ್ಷೇತ್ರದಲ್ಲಿ ಅತ್ಯಂತ ಪ್ರಗತಿಯನ್ನು ಈಗಾಗಲೇ ಸಾಧಿಸಿರುವಾಗ, ದಾಕ್ಷಿಣಾತ್ಯರಾದ ನಾವು ಬಹಳಷ್ಟು ಹಿಂದೆ ಬಿದ್ದಿರುವೆವೆಂಬುದು ವಿಷಾದಕರ. ಉದ್ದಿಮೆ ಬೆಳೆಯಲು ಬೇಕಿರುವ ಪ್ರಕೃತಿಕ ಸಂಪತ್ತು ನಮ್ಮಲ್ಲಿ ಇಲ್ಲದಿರುವುದು ಪ್ರಾಮುಖ್ಯವಾದ ಕೊರತೆಯಾಗಿದೆ. ಕಲ್ಲಿದ್ದಲು, ಕಬ್ಬಿಣ, ಕಲ್ಲೆಣ್ಣೆ ಮುಂತಾದ ಮೂಲ ಭೂಖನಿಜ ಸಂಪತ್ತು, ಇಲ್ಲದೆ ದಕ್ಷಿಣ ಭಾರತದ ಔದ್ಯೋಗೀಕರಣ ಮಂದಗತಿಯಿಂದ ಸಾಗಿದೆ. ಇದನ್ನು ಮನಗಂಡ ಶ್ರೀ ಕೃಷ್ಣಮಾಚಾರಿಯವರು, ನಮ್ಮ ಉದ್ದಿಮೆಗಳ ವಿಕಾಸವನ್ನು ಯಾವ ಬಗೆಯಾಗಿ ಮಾಡಬಹುದೆಂಬುದನ್ನು ಸೂಚಿಸುವ ಕೆಲವು ರೂಪುರೇಖೆಗಳ ಪಂಚಾಂಗವನ್ನು ಮಾಡಿಸಿಕೊಡುವ ಯತ್ನದಲ್ಲಿರುವರೆಂದು ಕೇಳಿ ಸಮಾಧಾನವಾಗುವುದು. ಜನಸಾಮಾನ್ಯಕ್ಕೆ ಔದ್ಯೋಗಿಕ ವಿಸ್ತರಣದಲ್ಲಿ ಆಸಕ್ತಿ ಹುಟ್ಟಬೇಕಾದುದೂ, ಪರಿಮಿತ ಪೂರೈಕೆಯೊಳಗೇ ಪರಮಾವಧಿ ವಿಕಾಸವನ್ನು ಯೋಚಿಸಬೇಕಾದುದೂ ಇಂದಿನ ಅಗತ್ಯ. ತಜ್ಞರು ದಕ್ಷಿಣ ಭಾರತದ ಪ್ರತಿಯೊಂದೂ ಕ್ಷೇತ್ರವನ್ನು ಪರಿಶೋಧಿಸಿ--ಅಲ್ಲಲ್ಲಿಯ ಭೂಗರ್ಭನಿಧಿಯನ್ನೂ ನಿಸರ್ಗ ಸಂಪತ್ತನ್ನೂ ಲಾಭದಾಯಕವಾಗಿ ಹೇಗೆ ಬಳಸಬಹುದೆಂದು ಸೂಚಿಸಲಿ!

ರಾಷ್ಟ್ರೀಕರಣದ ಭಯವಿಲ್ಲ

ನಮ್ಮಲ್ಲಿ ಔದ್ಯಮಿಕ ವಿಕಾಸಕ್ಕೆ ಪ್ರೇರಣೆಯೊದಗಿಸಿದ ಚಾಲಕ ಶಕ್ತಿ ವಿದ್ಯುತ್ತು ಎಂಬುದನ್ನು ಈ ಪ್ರಸಂಗದಲ್ಲಿ ಸ್ಮರಿಸಿಕೊಳ್ಳಬಹುದು. ಕೊಯಮುತ್ತೂರಿನಲ್ಲಿ ೧೯೩೦ರ ಅನಂತರ ಉತ್ತೇಜಕ ವಾತಾವರಣದ ನಡುವೆಯೂ ಉದ್ದಿಮೆ ಹುಟ್ಟಿಕೊಂಡು ಬೆಳೆದು ನಿಂತುದು ಪೈಕಾರಾ ಹಾಗೂ ಮೆಟ್ಟೂರಿನ ವಿದ್ಯುಚ್ಛಕ್ತಿಯ ಬಲದಿಂದಲೇ. ಪಶ್ಚಿಮ ಘಟ್ಟಗಳ ಮತ್ತು ಕೃಷ್ಣಾ ಗೋದಾವರಿಗಳ ಅಪಾರ ಜಲವನ್ನು ವಿದ್ಯುಚ್ಛಕ್ತಿಗಾಗಿ ಬಳಸುವ ಮಾರ್ಗ ಕಂಡುಕೊಂಡರೆ, ಔದ್ಯೋಗೀಕರಣದ ಮಹತ್ವದ ಪ್ರಶ್ನೆ ಬಗೆಹರಿಯುವುದು. ನಮ್ಮ ಜಿಲ್ಲೆಯನ್ನು ತೆಗೆದುಕೊಂಡರೂ, ಜೋಗಿನಿಂದ ವಿದ್ಯುಚ್ಛಕ್ತಿಯ ಪೂರೈಕೆಯಾದರೆ—ಆಗ ನಮ್ಮ ಜಿಲ್ಲೆಯಲ್ಲಿ ಅನೇಕ ಬಗೆಯಿಂದ ಔದ್ಯಮಿಕ ಕ್ಷೇತ್ರದ ವಿಸ್ತರಣೆ ಕೈಗೂಡುವುದು. ತಿರುನಲ್ವೆಲ್ಲಿಯಲ್ಲಿ ಸೋಡಾ ಆಶ್ ಸಿಗುವುದೆಂದಾದರೆ, ಬಳಿಯಲ್ಲಿಯೇ ಗಾಜಿನ ಕೈಗಾರಿಕೆ ಬೆಳೆಯಲು ಅವಕಾಶವಿದೆ ಎಂದರ್ಥವಲ್ಲವೆ? ಹೀಗೆ ರಾಜ್ಯವನ್ನು ಆರ್ಥಿಕ ಸ್ವಾತಂತ್ರ್ಯದೆಡೆಗೆ ಮುನ್ನಡೆಸುವ ಜವಾಬ್ದಾರಿಯನ್ನು ಸರಕಾರವೂ ಜನತೆಯೂ ಕೂಡಿಯೇ ಹೊತ್ತುಕೊಂಡದ್ದಾದರೆ—ನಮ್ಮ ಭಾಗ್ಯದ ದಿನಗಳು ಹೆಚ್ಚು ದೂರವಿರಲಾರವು. ಖಾಸಗಿ ಉದ್ದಿಮೆಗಳ ಮೇಲೆ ಬಂಡವಾಳವನ್ನು ಉಪಯೋಗಿಸುವುದು ಅಪಾಯಕರವೆಂಬ ಭೀತಿ ಕೆಲವರಲ್ಲಿ ಇತ್ತು. ವಾಣಿಜ್ಯ ಮಂತ್ರಿಗಳು ರಾಷ್ಟ್ರೀಕರಣದಂಥ ಕ್ರಮವನ್ನು ಸದ್ಯಕ್ಕೆ, ಏನಿಲ್ಲೆಂದರೂ ೫ ವರ್ಷಗಳ ತನಕ, ಸರಕಾರವು ಕೈಕೊಳ್ಳಲಾರದು ಎಂದು ಸ್ಪಷ್ಟೀಕರಿಸಿರುವುದರಿಂದ ಈ ಹೆದರಿಕೆ ನಿರಾಧಾರವೆನ್ನಲಡ್ಡಿಯಿಲ್ಲ. ಪಂಚವಾರ್ಷಿಕ ಯೋಜನೆಯಲ್ಲಿಯೂ ಖಾಸಗಿ ಬಂಡವಾಳವನ್ನು ನಿಕ್ಷೇಪಿಸಲು ವಿಶಾಲವಾದ ಔದ್ಯಮಿಕ ಕ್ಷೇತ್ರವನ್ನು ಬಿಟ್ಟುಕೊಡಲಾಗಿದೆ.

WANTED
THE POPULAR INSURANCE COMPANY LIMITED,
"Popular Buildings" MANGALORE 1.
Invites applications from experienced and influential insurance men for the appointment of an INSPECTOR for UDIPI and COONDAPOOR area.
Apply with details of insurance experience and New Business undertaking
The Managing Director

ZANDU Mahayogaraja Guggula.
ಝಂಡೂ ಮಹಾಯೋಗರಾಜ ಗುಗ್ಗುಳ
ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ. 1 ತೊಲಿಗೆ ರೂ 3- ಮಾತ್ರ.
ದೊರೆಯುವ ಸ್ಥಳಗಳು:
1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್.
ಕೆಮಿಸ್ಟ್ಸ ಎಂಡ್ ಡ್ರಗ್ಗಿಸ್ಟ್ಸ, ಉಡುಪಿ
2 ಶ್ರೀ ವಿ ವಿ ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್. ಎನ್. ಶರ್ಮ, ಹಜೂರು ರಸ್ತೆ ಮಂಗಳೂರು.
ಮತ್ತಿತರ ಸೇಲ್ ಏಜಂಟರಲ್ಲಿ.
ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರ ಶರತ್ತುಗಳಿಗೆ ಬರೆಯಿರಿ.
DAMODAR & CO.,
Nainiappa Naicken Street, Park Town–MADRAS 3.


Applauded as the BEST Rubber Stamp Makers all over India
CROWN RUBBER STAMP CO.
Mangalore
(Estd. 1926)

ಮುಗಿಯದ ಹೋರಾಟ

ಹೈದರಾಬಾದಿನಲ್ಲಿ ವಿಧ್ವಂಸಕ ಕೃತ್ಯ

ಅದೃಷ್ಟಕ್ಕೆ ಆಹ್ವಾನ

ಒಂದು ಉದ್ದಿಮೆ ಬೆಳೆಯಬೇಕಾದರೆ ಅಲ್ಲಿ ದುಡಿಯುವ ಕಾರ್ಮಿಕರ ಹಾಗೂ ಅಧಿಕಾರ ನಡೆಸುವ ಒಡೆಯರ ನಡುವೆ ಸೌಹಾರ್ದ ಸಂಬಂಧವಿರಬೇಕೆಂಬುದು ನಿರ್ವಿವಾದ. ಶ್ರೀ ಗಿರಿಯವರು ಹೋದೆಡೆಯಲ್ಲೆಲ್ಲ ಮಾಲಕ-ನೌಕರರ ಸಂಬಂಧವನ್ನು ಸ್ನೇಹಪೂರ್ಣವಾಗಿಸಬೇಕೆಂದು ಇತ್ತಂಡದವರಿಗೂ ಸೂಚಿಸಿರುವರು. ಭಿನ್ನಾಭಿಪ್ರಾಯಗಳನ್ನು ಪರಸ್ಪರ ಪರಾಮರ್ಶೆ ಹಾಗೂ ಸಂಧಾನಮಾರ್ಗದಿಂದ ಪರಿಹರಿಸಿಕೊಳ್ಳಬೇಕೆಂದು ಅವರು ಉಪದೇಶಿಸುತ್ತಾರೆ. ಇದು ನ್ಯಾಯಸಮ್ಮತವೆಂದು ಒಪ್ಪಬೇಕು. ಮುಖ್ಯವಾಗಿ ಭಾರತದಲ್ಲಿ ಧರ್ಮ ಹಾಗೂ ನೈತಿಕ ಮಹತ್ವವನ್ನು ಸಾರುವ ಈ ಪುಣ್ಯ ಭೂಮಿಯಲ್ಲಿ– ಈ ತೆರನಾದ ಕ್ರಮವನ್ನೆ ಜನ ಹೆಚ್ಚಾಗಿ ಮೆಚ್ಚುವರು. ಆದರೆ ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ಹೆಚ್ಚಿನ ದುರವಸ್ಥೆಗೀಡಾದ ಜನ ಮಧ್ಯಮ ವರ್ಗ ಹಾಗೂ ಶ್ರಮಜೀವಿಗಳೆಂಬುದನ್ನು ನಾವು ಹೇಗೆ ಮರೆಯೋಣ. ಅಮೇರಿಕಾದಲ್ಲಿ ವರ್ಷಕ್ಕೆ ಹತ್ತು ಸಾವಿರ ಡಾಲರುಗಳಷ್ಟು (ಎಂದರೆ ಸುಮಾರು ೪೫೦೦೦ ರೂಪಾಯಿ) ಸಂಪಾದನೆ ಇದ್ದರೂ, ಒಬ್ಬ ಸಾಮಾನ್ಯ ಮನುಷ್ಯನಿಗೆ ೫೭ ಡಾಲರುಗಳು ಕಡಿಮೆ ಬಿದ್ದುವಂತೆ! ಇಂಥದರಲ್ಲಿ ದಿನಕ್ಕೊಂದು ರುಪಾಯಿಯ ಸಂಪಾದನೆಯೂ ಇಲ್ಲದ ನಮ್ಮ ಜನ ಅದೃಷ್ಟವೆಂದು, ಪೂರ್ವ ಕರ್ಮವೆಂದು, ಹೇಗೆ ದಿನ ತಳ್ಳಲು ಬಂದೀತು? ಕಾಂಗ್ರೆಸು ಸರಕಾರದ ಮೇಲೆ ಜನರಿಗೆ ಇಂದು ಮೊದಲಿನ ಪ್ರೀತಿ ಉಳಿದಿಲ್ಲ ಎಂಬುದನ್ನು ಭಾರತದ ಉಪರಾಷ್ಟ್ರಾಧ್ಯಕ್ಷರಾದ ಡಾ. ರಾಧಾಕೃಷ್ಣನ್ [illegible]ರಿಸಿರುವರು. ಕಾಂಗ್ರೆಸ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು. ಭಾರತದ ಅತ್ಯುಜ್ವಲ ವ್ಯಕ್ತಿಯಾದ ರಾಧಾಕೃಷ್ಣನ್ನರು ಯಾವದೇ ರಾಜಕಾರಣದಿಂದ ದೂರವಿದ್ದವರು–ಪಕ್ಷಾತೀತರಾದ ಚಾರಿತ್ರ್ಯ ಸಂಪನ್ನರು. ಅವರು ಜನರಿಂದು ಆರ್ಥಿಕ ದಾಸ್ಯದಿಂದ ಚೇತರಿಸಿಕೊಂಡಿಲ್ಲ ಎಂಬುದನ್ನು ಜನತೆ ಎಂದೋ ಕಂಡುಕೊಂಡಿದೆ.

ಮುಗಿಯದ ಹೋರಾಟ

ಕಲಕತ್ತೆಯಲ್ಲಿ ಡಾ. ರಾಧಾಕೃಷ್ಣನ್ನರು ಇನ್ನೂ ಹಲವು ಸಂಗತಿಗಳನ್ನು ಮನಮುಟ್ಟುವಂತೆ ವಿವರಿಸಿದರು. ಮುಖ್ಯವಾಗಿ ಕಾಂಗ್ರೆಸು ದೇಶ ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ತೋರಿಸಿದ ಹತ್ತು ಪಾಲು ಹುಮ್ಮಸ್ಸನ್ನು ಈಗ ಆರ್ಥಿಕ ದಾಸ್ಯದಿಂದ ಚೇತರಿಸಲು ಉಪಯೋಗಿಸಬೇಕೆಂಬುದನ್ನು ಉಲ್ಲೇಖಿಸಬಹುದು. ಜಗತ್ತಿನಲ್ಲಿ ದೃಷ್ಟಿ ಹೊರಳಿಸಿದ ಕಡೆಯಲ್ಲೆಲ್ಲ ಇಂದು ಕ್ರಾಂತಿಯ ಚಿಹ್ನವು ಗೋಚರಿಸುತ್ತಿದೆ. ಹಿಂಸಾತ್ಮಕ ಕ್ರಾಂತಿಗೇನೇ ಇಂದು ಪ್ರಚೋದನೆ ದೊರೆಕಿರುವಾಗ-ಭಾರತದಲ್ಲಿ ಅಂಥ ಅರಾಜಕತೆ ಹಾಗೂ ವಿಘಾತಕ ಆಂದೋಲನಕ್ಕೆ ಎಡೆ ದೊರೆಯಬಾರದೆಂದಿದ್ದರೆ, ಶೀಘ್ರ ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಪ್ರಗತಿ ಹಾಗೂ ಕ್ರಾಂತಿ ಸಾಧಿಸುವುದು ಅಗತ್ಯ. ನಮಗಿಂದು ಸ್ವಾತಂತ್ರ್ಯ ದೊರೆತಿದೆ–ಸಾಕು ಎಂಬ ಆತ್ಮಸಂತೃಪ್ತಿ ಎಷ್ಟು ಮಾತ್ರಕ್ಕೂ ಸಾಲದು. ಕಾಂಗ್ರೆಸ್ಸು ಕೈಕೊಂಡ ಹೋರಾಟ ಇನ್ನೂ ಮುಗಿದಿಲ್ಲ. ದೇಶದ ಸಾರ್ವಾಂಗೀಣ ಏಳಿಗೆಯಾಗಿಲ್ಲ. ಅಧಿಕಾರ ಸ್ಥಾನಗಳಲ್ಲಿರುವ ಜನ ಪ್ರಜೆಗಳು ತಮ್ಮಲ್ಲಿಟ್ಟ ವಿಶ್ವಾಸವನ್ನು ಕಾಯ್ದುಕೊಳ್ಳುವಂತೆ ವರ್ತನೆ ಇಡುವುದವಶ್ಯ. ನಮ್ಮ ತತ್ವಜ್ಞಾನವಾಗಲೀ ಧರ್ಮೋಪದೇಶವಾಗಲೀ ಮನುಷ್ಯನ ಕರ್ತವ್ಯದ ಬಗ್ಗೆ ಎಚ್ಚರಿಕೆಯನ್ನೇ ಹೇಳುತ್ತಿವೆ: ಅವುಗಳಿಂದ ಪರಾವೃತ್ತರಾಗುವ ಮನೋಲಕ್ಷಣ ತೋರಬಾರದು.

ವಿದ್ಯಾರ್ಥಿಗಳ ಹಲ್ಲೆ

ದೇಶದ ಹಿರಿಯರೊಬ್ಬರು ಹೀಗೆ ಎಲ್ಲ ಪಕ್ಷ ಸಂಗಡಗಳ ಭಾವನೆಯಿಂದಲೂ ಮೇಲಿದ್ದು ನಿಂತು ಗಂಭೀರ ವಾಣಿಯಿಂದ ಸರ್ವೋಚ್ಚ ಮಟ್ಟದ ಆದರ್ಶ ನಮ್ಮ ಕಣ್ಣು ಮುಂದಿಡೆ ಎನ್ನುವಾಗ–ಮುಂದಿನ ಜನಾಂಗವನ್ನು ರೂಪಿಸುವ ವಿದ್ಯಾರ್ಥಿಗಳು ಹೈದರಾಬಾದಿನಲ್ಲಿ ಕಳೆದ ವಾರ ಮಾಡಿದ ಗೊಂದಲಕ್ಕೆ ಏನೆನ್ನೋಣ? ಹೈದರಾಬಾದು ಸರಕಾರದ [illegible] ರಾಜ್ಯದ ಹೊರಗಿನವರಿಗೆ ಅಧಿಕಾರ ಸ್ಥಾನಗಳನ್ನು ಕೊಡಲಾಗದು. ಮತ್ತು ಈಗಾಗಲೇ ಅಂಥ ಸ್ಥಾನಗಳಲ್ಲಿ ಇರುವವರನ್ನು ಹೊರದೂಡಬೇಕೆಂದು ವಿಶೇಷವಾಗಿ ವಿದ್ಯಾರ್ಥಿಗಳು ಬೇಡುತ್ತಿರುವರು. ಸಾಮಾನ್ಯವಾಗಿ ರಾಜ್ಯ ಸರಕಾರಗಳು ಅಧಿಕಾರ ಸ್ಥಾನಗಳಿಗೆ ತಮ್ಮ ಪ್ರಜೆಗಳಲ್ಲಿ ಯೋಗ್ಯರಾದವರನ್ನೆ ನಿಯುಕ್ತಗೊಳಿಸುತ್ತವೆ. ಆದರೆ ಇಂದು ಜನಹಿತ ಸರಕಾರವು ರೂಪುಗೊಂಡಿದೆಯಾಗಿ, ಅನೇಕ ಹೊಣೆಗಾರ ಕೆಲಸಗಳನ್ನು ಸರಕಾರ ನಿರ್ವಹಿಸಬೇಕಾಗಿದೆ. ಅಲ್ಲಿಗೆ ದಕ್ಷತೆಯುಳ್ಳ ಕಾರ್ಯ ನಿರ್ವಹಿಸಬಲ್ಲ ಜಾಣಾಕ್ಷರನ್ನು ಎಲ್ಲಿಂದರಲ್ಲಿಂದ ತರಿಸಿಕೊಂಡು ಕೆಲಸವನ್ನು ನಿರಾತಂಕವಾಗಿ ಪೂರೈಸುವುದೇ ಆದ್ಯಕರ್ತವ್ಯವಿದೆ. ಮೇಲಾಗಿ ಭಾರತದ ರಾಜ್ಯಘಟನೆಯು ಸಮಸ್ತ ಭಾರತದಲ್ಲಿ ಸಾಮಾನ್ಯನಾಗರಿಕ ಹಕ್ಕುಗಳನ್ನು ಕೊಟ್ಟು, ವ್ಯಕ್ತಿಯನ್ನು ಗೌರವಿಸಿದೆ. ಹೀಗಿರುವಾಗ - ವಿದ್ಯಾರ್ಥಿಗಳು ನಮ್ಮ ರಾಜ್ಯದಲ್ಲಿ ಬೇರೆ ರಾಜ್ಯದ ನಾಗರಿಕರಿಗೆ ಸ್ಥಳ ದೊರೆಯಕೂಡದೆಂದು ಆಂದೋಲಿಸಿರುವುದನ್ನು ವಿವೇಕಿಗಳು ಸಮರ್ಥಿಸುವಂತಿಲ್ಲ.

ಹೈದರಾಬಾದಿನಲ್ಲಿ ಸ್ಫೋಟ

ರಾಜಕೀಯ ವ್ಯಕ್ತಿಗಳ ಪ್ರೇರಕತ್ವದಿಂದ ಹೈದರಾಬಾದು ಹಾಗೂ ಸಿಕಂದರಾಬಾದುಗಳಲ್ಲಿ ತೀವ್ರ ಮಟ್ಟಕ್ಕೆ ಮುಟ್ಟಿದ ವಿದ್ಯಾರ್ಥಿಗಳ ಗಲಭೆ. ಬಂದ್, [illegible] ಹೈದರಾಬಾದು ಸ್ವಾತಂತ್ರ್ಯ ಪ್ರಾಪ್ತಿಯಾದಂದಿನಿಂದ ನೋಡದ [illegible] ಮುಖಂಡರುಗಳು ಕೆಲ ಕಾಲದ ಹಿಂದೆ ತಮ್ಮ ಸ್ವಾರ್ಥಕ್ಕಾಗಿ ಹೈದರಾಬಾದವನ್ನು ಸ್ಫೋಟಕ ಸದೃಶವಾಗಿ ಮಾಡಿದರು. ಆಗ ಕೈಕಟ್ಟಿ ವಿನೋದ ನೋಡುತ್ತ [illegible] ಆದರ್ಶಗಳಿಂದ ಇವರನ್ನು ವಂಚಿಸಲು ನೋಡಿದರು, ಈಗ ಎಲ್ಲೆಡೆ ದೇಶದ್ರೋಹದಿಂದ ವಿದ್ಯಾರ್ಥಿಗಳು ಅಪೇಕ್ಷಿತ ಗೊಂದಲಕ್ಕೆ ಕಾರಣರಾದರು. ಇವರಿಗೆ ಹಿಂದಿನಿಂದ ಪ್ರೋತ್ಸಾಹ ಕೊಡುವ ಪುಂಡರನ್ನು ಮುಖ್ಯಮಂತ್ರಿ ಕಟುವಾಗಿ ಎಚ್ಚರಿಸಿದ್ದಾರೆ. ಪೋಲೀಸರ ಲಾಠೀಚಾರ್ಜ ಹಾಗೂ ಗುಂಡಿನ ಹಾರಿಕೆಯಿಂದ ಕೆಲ ವಿದ್ಯಾರ್ಥಿಗಳು [illegible]ಗೊಂಡರೆ–ವಿದ್ಯಾರ್ಥಿಗಳು ಕಲ್ಲುಮಳೆಯನ್ನು ಸುರಿಸಿ ಅನೇಕ ಪೋಲೀಸರಿಗೆ ಗಾಯಪಡಿಸಿದರು. ಮೋಟಾರುಗಳನ್ನು ಸುಡುವುದು, ಲೂಟಿ ಹಾಗೂ ಹಲ್ಲೆಗಳಿಂದ ಪರಿಸ್ಥಿತಿ ಬಹಳಷ್ಟು ಗಂಭೀರವಾಗಿದೆ. ಗೋಲೀಬಾರಿನ ಪ್ರಕರಣದಲ್ಲಿ ವಿಚಾರಣೆ ನಡೆಸಲಾಗುವುದೆಂದು ಸರಕಾರ ಸಾರಿದೆ. ಸುಸಜ್ಜಿತ ಪಡೆಗಳಿಂದ ಶಾಂತಿಯನ್ನು ಕಾಪಾಡುತ್ತಿದೆ. ಸಾರ್ವಜನಿಕ ಸಭೆ, ಮೆರವಣಿಗೆಗಳನ್ನು ಈಗ ನಿರ್ಬಂಧಿಸಿರುವುದು.

BBC/52/4071

ಬ್ರೂಕ್ ಬಾಂಡ್ ಚಹಾ

ತಾಜಗಿಗೂ
ಸುವಾಸನೆಗೂ
ಮಿತವ್ಯಯಕ್ಕೂ



ಇವು ಕೇವಲ ಕಾಗದದ ಚೂರುಗಳಷ್ಟೇ ಅಲ್ಲ–ಕೊಳೆ, ಧೂಳು ಮತ್ತು ಕ್ರಿಮಿಕೀಟಗಳ ಅಪಾಯಗಳಿಂದ ನಿಮ್ಮ ಚಹಾ ಸುರಕ್ಷಿಸಲ್ಪಟ್ಟದೆಯೆಂಬುದಕ್ಕೆ ಖಾತ್ರಿಯಾಗಿವೆ. ಪೊಟ್ಟಣ ಕಟ್ಟಲ್ಪಟ್ಟ ಚಹಾವನ್ನು ಕೊಂಡು ನಿಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದೇ ಅಲ್ಲದೆ ಬ್ರೂಕ್ ಬಾಂಡ್ ಪೊಟ್ಟಣವನ್ನೇ ಕೊಂಡು ಯಥಾರ್ಥವಾಗಿಯೂ ತಾಜಾವಾದ ಮತ್ತು ಉತ್ತಮ ತಯಾರಿಕೆಯ ಚಹಾವನ್ನು ಸೇವಿಸುವ ಹರ್ಷವನ್ನು ಪಡೆಯಿರಿ.

ಬ್ರೂಕ್
ಬಾಂಡ್
ಚಹಾ

ಭಾರತದ ಅತ್ಯುತ್ತಮ ಪೊಟ್ಟಣಗಳಲ್ಲಿ ಭಾರತದ ಅತ್ಯುತ್ತಮ ಚಹಾ.

ರಂಗಭೂಮಿಯ
ರಂಗಿನ ತರಂಗ



ಎಸ್. ವೆಂಕಟರಾಜರು ಬರೆದ
ವಿನೋದಪ್ರಧಾನ ನಾಟಕ

- ● ನಡೆ-ನುಡಿಯ [illegible]
- ● [illegible]
- ● [illegible]



1906 ರಲ್ಲಿ ಸ್ಥಾಪಿಸಲ್ಪಟ್ಟು
ಸರ್ವತೋಮುಖವಾಗಿ ಅಭಿವೃದ್ಧಿ ಹೊಂದುತ್ತಲಿರುವ
"ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್"
ಇದನ್ನೇ ಸಹಸ್ರಾರು ಜನರು ತಮ್ಮ ಅಚ್ಚುಮೆಚ್ಚಿನ ಬ್ಯಾಂಕನ್ನಾಗಿ
ಆರಿಸಿರುವರು. ನೀವೂ ಇಂದೇ ಒಂದು ಖಾತೆಯನ್ನು ತೆರೆದು
ಬ್ಯಾಂಕಿನ ಗ್ರಾಹಕರಲ್ಲಿ ಒಬ್ಬರಾಗಿರಿ.
THE CANARA BANKING CORPORATION LIMITED.
ಪ್ರಧಾನ ಕಾರ್ಯಾಲಯ, ಉಡುಪಿ. (ದ ಭಾರತ)

ನವಯುಗ

ಉಡುಪಿ, ಗುರುವಾರ ೧೧-೯-'೫೨

ಸೌಹಾರ್ದ ಸಂಬಂಧ

ಈ ವಾರಾಂತ್ಯದಲ್ಲಿ ಇಂದೂರಿನಲ್ಲಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಅಧಿವೇಶನವು ಜರಗುವುದು. ಕಾಂಗ್ರೆಸು ಅಧಿವೇಶನದ ಮುಂದೆ ಮಹತ್ವದ ವಿಷಯಗಳು ಇದ್ದು, ಅವುಗಳ ಮೇಲೆ ಗಂಭೀರ ಸ್ವರೂಪದ ಚರ್ಚೆ ನಡೆಯುವುದು. ಮಹಾಚುನಾವಣೆಗಳ ಬಳಿಕ ಇದೀಗ ಪ್ರಥಮ ಬಾರಿ ಜರಗುವ ಮಹಾಧಿವೇಶನದಲ್ಲಿ ರಾಷ್ಟ್ರದ ರಾಜಕೀಯದ ಭವಿಷ್ಯತ್ತನ್ನು ಪ್ರಭಾವಿಯಾಗಿ ಮಾಡುವ ನಿರ್ಣಯಗಳಾಗುವುದು ಸ್ವಾಭಾವಿಕ. ಮಹಾಚುನಾವಣೆಗಳಲ್ಲಿ ಕಾಂಗ್ರೆಸಿಗೆ ಜನರೊಲವು ಹರಿದುದು ಮತ್ತು ಪೆಪ್ಸು ರಾಜ್ಯವೊಂದನ್ನುಳಿದು, ಉಳಿದೆಡೆಗಳಲ್ಲಿ ಕಾಂಗ್ರೆಸ್ಸು ಸರಕಾರವನ್ನು ರಚಿಸಿ, ಆಡಳಿತ ಯಂತ್ರದ ಹೊಣೆಯನ್ನು ಹೊತ್ತುದು ಕಾಂಗ್ರೆಸಿನ ಭವಿಷ್ಯ ಉಜ್ವಲವಿದೆ ಎಂಬುದಕ್ಕೆ ನಿದರ್ಶನ. ಕಾಂಗ್ರೆಸು ಸಂಸ್ಥೆಯ ಮುಂದಿನ ನಿಲುವು ಹಾಗೂ ಕಾರ್ಯ ಪ್ರಣಾಳಿಗಳ ಬಗ್ಗೆ ಕೆಲವೊಂದು ತಿದ್ದುಪಡಿಗಳನ್ನು ಮಾಡುವ ಅಗತ್ಯವಾದರೂ ಈ ಕಾರಣದಿಂದಲೇ ತಲೆದೋರಿತೆನ್ನಬಹುದು. ಕಾಂಗ್ರೆಸು ಈಗ ಶಾಸನಾತ್ಮಕ ಹಾಗೂ ಸಂಘಟನಾತ್ಮಕವಾದ ದ್ವಿಮುಖ ಕಾರ್ಯಭಾಗವನ್ನು ನಿರ್ವಹಿಸಿಕೊಂಡು ಮುನ್ನಡೆ ಇಡುವ ಪರಿಸ್ಥಿತಿ ಉಂಟಾಗಿದೆ. ಪ್ರಜಾಪ್ರಭುತ್ವ ಪದ್ಧತಿಯಂತೆ ಸರಕಾರವನ್ನು ನಡೆಸುವ ಹೊಣೆಗಾರಿಕೆ ಒಂದಾದರೆ—ಜನತೆಗೆ ಸ್ವಾತಂತ್ರ್ಯಾಂದೋಲನದ ಕಾಲದಲ್ಲಿ ಕೊಟ್ಟ ವಚನಗಳನ್ನು ಪೂರೈಸುತ್ತಾ, ರಚನಾತ್ಮಕವಾದ ಪ್ರಗತಿಯನ್ನು ಭಾರತದಲ್ಲಿ ನೆಲೆಗೊಳಿಸುವುದು ಇನ್ನೊಂದು ಜವಾಬ್ದಾರಿಯಾಗಿದೆ. ರಾಷ್ಟ್ರವನ್ನು ಕಾಂಗ್ರೆಸು ಈ ಎರಡೂ ಅಂಗಗಳೆಂಬ ರೆಕ್ಕೆಯಿಂದ ಮುಂದೊಯ್ಯುವ ಅಗತ್ಯ ಹೆಚ್ಚಿರುವ ಈ ಕಾಲದಲ್ಲಿ—ಈಗ್ಗೆ ಕೆಲದಿನಗಳಿಂದ ಘರ್ಷಣೆಯೆದ್ದಿರುವುದನ್ನು ಸ್ವಾಗತಾರ್ಹವೆನ್ನಲಾರೆವು. ಮುಖ್ಯವಾಗಿ ಪಾರ್ಲಿಮೆಂಟರಿ ಕಾರ್ಯಾಂಗಕ್ಕೂ ಕಾಂಗ್ರೆಸ ಸಮಿತಿಗಳಿಗೂ ನಡುವೆ ಬಿಕ್ಕಟ್ಟುಂಟಾಗಿದೆ. ಶಾಸನ ಸಭೆಗಳಲ್ಲಿ ಕಾಂಗ್ರೆಸು ಪಕ್ಷದಿಂದ ಸ್ಥಾನ ಪಡೆದ ಸದಸ್ಯರು ಹಾಗೂ ಕಾಂಗ್ರೆಸು ಸಮಿತಿಗಳ ಸದಸ್ಯರು—ಇವರ ಸಂಬಂಧವು ಸೌಹಾರ್ದಪೂರ್ಣವೂ ಸಹಕಾರ ಭಾವನೆಯಿಂದ ಯುಕ್ತವೂ ಆಗಿರುವುದವಶ್ಯ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡೇ ಕಾಂಗ್ರೆಸ ಕಾರ್ಯಕಾರೀ ಮಂಡಳಿಯು ನೇಮಿಸಿದ ಉಪಸಮಿತಿಯು ನಿಯಮಾವಳಿಯಲ್ಲಿ ಕೆಲವೊಂದು ತಿದ್ದುಪಡಿ ಮಾಡಿತು. ಕೇಂದ್ರ ಪಾರ್ಲಿಮೆಂಟಿನ ಕಾಂಗ್ರೆಸ ಸದಸ್ಯರು ಕಾರ್ಯಕಾರಿ ಮಂಡಳಿಯ ಸದಸ್ಯರಾಗಬಹುದೆಂದೂ ಹಾಗೆಯೇ ರಾಜ್ಯ ಶಾಸನ ಸಭೆಗಳ ಸದಸ್ಯರಾದರೂ ಕಾಂಗ್ರೆಸ ಸಮಿತಿಗಳ ಸದಸ್ಯರಾಗಬಹುದೆಂದೂ ಇದರಲ್ಲಿ ಸೂಚಿಸಲಾಗಿದೆ. ಇದರಿಂದ ಕಾಂಗ್ರೆಸು ಸಂಸ್ಥೆಯ ಮನೀಷೆ ಏನೆಂಬುದನ್ನು ತಿಳಿದುಕೊಂಡು, ಶಾಸನಾತ್ಮಕವಾಗಿ ಕೆಲಸ ನಿರ್ವಹಿಸಲು ಒಂದು ಬಗೆಯಿಂದ ಅವಕಾಶ ಒದಗಿಸಿದಂತಾಗುವುದು. ಕಾಂಗ್ರೆಸು ಸಂಸ್ಥೆ ಹಾಗೂ ಶಾಸನ ಸಭೆಗಳ ಕಾಂಗ್ರೆಸು ಸದಸ್ಯರ ನಡುವೆ ಸೌಹಾರ್ದ ಸಂಬಂಧವು ಅಚ್ಚಳಿಯದೆ ಉಳಿಯುವುದು ಇಷ್ಟವಾಗಿದೆ ಎಂಬುದಕ್ಕಾಗಿಯೇ ಈ ತೆರನಾದ ತಿದ್ದುಪಡಿ ಮಾಡಲಾಯಿತು. ಹಾಗೆಂದು ಇದನ್ನು ಎಲ್ಲರೂ ಒಪ್ಪುತ್ತಿಲ್ಲ. ಮುಖ್ಯವಾಗಿ ಮುಂಬಯಿ ಪ್ರದೇಶ ಕಾಂಗ್ರೆಸ ಸಮಿತಿಯ ಅಧ್ಯಕ್ಷ ಶ್ರೀ ಎಸ್. ಕೆ. ಪಾಟೀಲರು ಈ ಪ್ರಶ್ನೆಯನ್ನು ಅತ್ಯಂತ ಮಹತ್ವದ್ದನ್ನಾಗಿ ಮಾಡಿದರು. ಕಾಂಗ್ರೆಸಿನ ಆದೇಶದಂತೆ ಮಂತ್ರಿಮಂಡಳ ನಡೆಯುವಂತೆ ಮಾಡಲು ಮಧ್ಯವರ್ತಿಯಾದ ಒಂದು ಸಮಿತಿ ಇರಬೇಕೆಂಬ ಅವರ ಸೂಚನೆಯು ಪ್ರಜಾಪ್ರಭುತ್ವ ಪದ್ಧತಿಗೆ ವಿಸಂಗತವಿದ್ದಂತೆ, ಅವ್ಯವಹಾರ್ಯವೂ ಹೌದು. ಹಾಗೆಯೇ ಮೈಸೂರ ಮುಖ್ಯಮಂತ್ರಿ ಶ್ರೀ ಜಿ. ಹನುಮಂತಯ್ಯನವರು ಹೇಳಿದಂತೆ ಕಾಂಗ್ರೆಸು ಪಾರ್ಲಿಮೆಂಟರಿ ಪಕ್ಷ ಹಾಗೂ ಕಾರ್ಯ ಸಮಿತಿಗಳನ್ನು ಒಂದುಗೂಡಿಸುವುದೆಂದರೂ ಸರಿಯಾದ ಮಾರ್ಗವಲ್ಲ. ಮುಖ್ಯವಾಗಿ ರಾಜಕೀಯ ಕ್ಷೇತ್ರಕ್ಕೆ ಮಿಗಿಲಾಗಿ—ಲೋಕ ಸೇವೆಯ ಆದರ್ಶವನ್ನು—ರಚನಾತ್ಮಕ ರೀತಿಯಲ್ಲಿ ಭಾರತದ ಉದ್ಧಾರವನ್ನು ಸಾಧಿಸುವುದು ರಾಷ್ಟ್ರೀಯ ಕಾಂಗ್ರೆಸಿನ ಅಪೇಕ್ಷೆ. ಇದರಿಂದ ಪಾರ್ಲಿಮೆಂಟರಿ ಪಕ್ಷದಿಂದ ಬೇರೆಯಾಗಿಯೇ ಕಾಂಗ್ರೆಸು ಸಂಸ್ಥೆ ಉಳಿಯುವುದು ಅಪೇಕ್ಷಣೀಯ. ಗಾಂಧೀಜಿ ತಮ್ಮ ಅಂತಿಮ ದಿನಗಳಲ್ಲಿ ಕಾಂಗ್ರೆಸು ಲೋಕಸೇವಕ ಸಂಸ್ಥೆಯಾಗಬೇಕೆಂದು ಸೂಚಿಸಿದ್ದುಂಟು. ಆಚಾರ್ಯ ವಿನೋಬಾ ಭಾವೆಯವರು ಇತ್ತೀಚೆಗೆ ಇದರ ನೆನಪು ಮಾಡಿಕೊಟ್ಟರು. ಉಪರಾಷ್ಟ್ರಾಧ್ಯಕ್ಷ ಡಾ. ರಾಧಾಕೃಷ್ಣನ್ನರು ಕಾಂಗ್ರೆಸಿಗರ ಹೋರಾಟ ಅರ್ಧಸಾರ್ಥವಾಗಿದೆಯೆಂದೂ ಆರ್ಥಿಕ ದಾಸ್ಯವನ್ನು ಉಚ್ಚಾಟನೆ ಮಾಡದ ವಿನಹ ವಿರಾಮ ಸಲ್ಲದೆಂದೂ ನುಡಿದರು. ಇದನ್ನೆಲ್ಲ ನಿರುದ್ವೇಗದಿಂದ ವಿವೇಚಿಸಿದರೆ—ರಾಜಕೀಯ ಉದ್ದೇಶಕ್ಕೂ ಮಿಗಿಲಾದ ಕಾರ್ಯ ಸಾಧನೆಯು ಕಾಂಗ್ರೆಸಿನ ಮುಂದಿದೆ ಎಂದು ಗೋಚರಿಸುವುದು. ರಾಜಕೀಯದ ಮೂಲಕ ಶೀಘ್ರ ಪ್ರಗತಿ ಸಾಧ್ಯವೆಂಬುದರಿಂದ—ಶಾಸನಾತ್ಮಕ ಹಾಗೂ ಸಂಘಟನಾತ್ಮಕ ಅಂಗಗಳು ಪರಸ್ಪರ ಪೂರಕವಾಗಿ, ಹೊಂದಿಕೊಂಡು ನಡೆದರೆ ಚೆನ್ನ.

ಸೇನಾಪತಿ ನಾಗಿಬರ ಸರ್ವಾಧಿಕಾರ

ಈಜಿಪ್ತ ಸೈನ್ಯಕ್ರಾಂತಿಯ ಪ್ರತಿಧ್ವನಿ

ಏಳು ವಾರಗಳ ಹಿಂದೆ ರಕ್ತರಹಿತ ಸೈನ್ಯ ಕ್ರಾಂತಿಯು ಇಜಿಪ್ತದಲ್ಲಿ ನಡೆದಾಗ—ಸೇನಾಪತಿ ಜನರಲ್ ಮಹಮ್ಮದ ನಾಗಿಬರನ್ನು ಅಲ್ಲಿಯ ಜನತೆ ದೇವಾವತಾರವೆಂದೇ ಪರಿಗಣಿಸಿದ್ದಿತು. ದುರಾಡಳಿತೆಯಿಂದ ಬೇಸತ್ತವರಿಗೆ ಅರಸ ಫರೂಕರನ್ನು ಒತ್ತಾಯದಿಂದ ಸಿಂಹಾಸನ ಚ್ಯುತರನ್ನಾಗಿ ಮಾಡಿದುದು ಸಮಾಧಾನದ ಸಂಗತಿಯಾಗಿತ್ತು. ಆ ಬಳಿಕ ಎಲ್ಲ ಮಿಲಿಟರಿ ಆಡಳಿತ ಪಡೆಯುವುದೋ ಎಂಬ ಅಂಜಿಕೆ ಇತ್ತಾದರೂ—ನಾಗಿಬರು ಅಲಿಮೆಹರ ಮಂತ್ರಿತ್ವದಲ್ಲಿ ನಾಗರಿಕ ಸರಕಾರವನ್ನೆ ಆಡಳಿತ ನಡೆಸುವಂತೆ ನೇಮಿಸಿದರು; ಹಾಗೂ ಸೈನ್ಯವು ರಾಜಕೀಯದಲ್ಲಿ ಪ್ರವೇಶಿಸಿ, ಪ್ರಗತಿಯನ್ನು ಕುಂಠಿಸುವುದಿಲ್ಲವಾಗಿ ಸಾರಿದರು. ಆದರೆ ಜನತೆ ಮನೋವಾಂಛೆಯನ್ನರಿತುಕೊಂಡು ಕೆಲವು ಮೂಲ ಭೂತ ಸುಧಾರಣೆಗಳನ್ನು ತಾವು ಮಾಡುವುದಾಗಿಯೂ ಅವರು ಹೇಳಿದ್ದರು. ಒಂದನೆಯದಾಗಿ—ವಿವಿಧ ಪಕ್ಷಗಳಲ್ಲಿ ಬೇರು ಬಿಟ್ಟಿದ್ದ ಲಂಚಗುಳಿತನವೇ ಮೊದಲಾದ ದುರಾಚಾರಗಳನ್ನು ನಿರ್ಮೂಲನಗೊಳಿಸುವುದು, ಎರಡನೆಯದಾಗಿ ಭೂಸುಧಾರಣೆಯನ್ನು ಜ್ಯಾರಿಗೆ ತರುವುದು, ಮತ್ತು ಮೂರನೆಯದಾಗಿ ಪ್ರಜಾಪ್ರಭುತ್ವ ಪದ್ಧತಿಯಂತೆ ಚುನಾವಣೆಯನ್ನು ನಡೆಸುವುದು—ಇವು ಜನತೆಗೆ ನಾಗಿಬರು ಕೊಟ್ಟ ಆಶ್ವಾಸನೆಗಳಾಗಿದ್ದುವು. ಈ ಸುಧಾರಣೆಗಳ ವ್ಯಾಪಕತೆಯನ್ನು ಕಣ್ಮುಂದಿಟ್ಟುಕೊಂಡು ಹೇಳುವುದಾದರೆ—ಇವನ್ನೆಲ್ಲ ರಾತ್ರಿ ಬೆಳಗಾಗುವುದರೊಳಗೆ ಮಾಡಿ ಮುಗಿಸಲು ಬರಲಾರದು. ವ್ಯವಹಾರಿಕ ಮಾರ್ಗದ ತೊಂದರೆಗಳೆಷ್ಟೋ ನಮ್ಮ ಮನದ ಅಭಿಲಾಷೆಗಳ ಪೂರ್ತಿಗೆ ಕಡಿವಾಣ ಹಾಕುವುವು

ಸಮಾಧಾನದ ಪರಿಣಾಮ

ಕಾರಣ—ಸೈನ್ಯವು ಬಯಸಿದಷ್ಟು ವೇಗದಲ್ಲಿ ನಾಗರಿಕ ಸರಕಾರವು ಶುದ್ಧೀಕರಣ ಭೂಸುಧಾರಣೆ, ಚುನಾವಣೆಗಳನ್ನು ನಡೆಸಲು ಸಮರ್ಥವಾಗಲಿಲ್ಲ. ಅಲಿಮೇಹರರ ಮಂತ್ರಿಮಂಡಳವು ಭೂಸುಧಾರಣೆಯ ಬಗ್ಗೆ ಪರ್ಯಾಲೋಚಿಸಿ, ತ್ವರಿತವಾಗಿ ಅದಕ್ಕೆ ಒಪ್ಪಿಗೆ ಮುದ್ರೆಯನ್ನು ಒತ್ತಿತು. ಹಾಗೆಯೇ ಪಕ್ಷ ಪಂಗಡಗಳ ಶುದ್ಧೀಕರಣ ಕಾರ್ಯದಲ್ಲೂ ಹಲವಾರು ದುರ್ನಡತೆಯವರನ್ನು ಹೊರದೂಡಲಾಯಿತು. ಅವರ ಬಹಿರಂಗ ವಿಚಾರಣೆಯನ್ನು ನಡೆಸಲು ಉದ್ಯುಕ್ತರಾದರು. ಹಾಗೆಂದು ಇಜಿಪ್ತದ ಆಗುಹೋಗುಗಳ ಮೇಲೆ ಪ್ರಭಾವಿಯಾದ ಪರಿಣಾಮವನ್ನು ಬೀರುವ ಎಷ್ಟೋ ವ್ಯಕ್ತಿಗಳ ಮೇಲೆ ಕೈಮಾಡಲು ಅಲಿ ಮೆಹರರಿಗೆ ಧೈರ್ಯ ಬರಲಿಲ್ಲ. ಭೂಸುಧಾರಣೆಯ ಮಟ್ಟಿಗೂ ಅವರು ಮತ್ತು ನಾಗಿಬರೊಳಗೆ ಭಿನ್ನಾಭಿಪ್ರಾಯ ತಲೆ ಎತ್ತಿತ್ತು. ಹೀಗೆ ಮುಖ್ಯ ಪ್ರಶ್ನೆಯಲ್ಲಿಯೇ ಬಿಕ್ಕಟ್ಟು ಉಂಟಾಗಿದ್ದರಿಂದ ಅಲಿ ಮೆಹರರ ಮಂತ್ರಿಮಂಡಳ ಉಳಿಯುವ ಆಶೆ ಏನೂ ಇದ್ದಿಲ್ಲ.

ಹೊಸ ಮಂತ್ರಿಮಂಡಳ

ಕೊನೆಗೂ ಈ ಮಂತ್ರಿಮಂಡಳ ಉರುಳಿತು! ಮತ್ತು ಸೇನಾಪತಿ ನಾಗಿಬರೇ ಮುಖ್ಯ ಮಂತ್ರಿತ್ವವನ್ನು ವಹಿಸಿ ಈಗ ಹದಿನಾರು ಮಂತ್ರಿಗಳುಳ್ಳ ಮಂತ್ರಿಮಂಡಳವನ್ನು ರಚಿಸಿದ್ದಾರೆ. ಸೇನಾಧಿಪತಿ ಪದವಿಯೊಡನೆ, ಇವರು ಮುಖ್ಯಮಂತ್ರಿತ್ವ ಯುದ್ಧ ಹಾಗೂ ನೌಕಾ ಶಾಖೆಗಳನ್ನು ತಮ್ಮ ವಶದಲ್ಲಿಟ್ಟುಕೊಂಡಿದ್ದಾರೆ. ನಾಗಿಬರು ಬಯಸಿದಷ್ಟು ಶೀಘ್ರದಲ್ಲಿ ಸುಧಾರಣೆಗಳನ್ನು ಮಾಡಲು ತಮ್ಮ ಮಂತ್ರಿಮಂಡಳಕ್ಕೆ ಸಾಧ್ಯವಾಗದ್ದರಿಂದ ರಾಜೀನಾಮೆಯನ್ನು ಅಲಿ ಮೆಹರರು ಕೊಟ್ಟರು. ಕೆಲವೇ ದಿನಗಳ ಹಿಂದೆ ಇವರ ಮಂತ್ರಿಮಂಡಳದ ಇಬ್ಬರು ಸದಸ್ಯರನ್ನು ಹೊರಹಾಕಿ, ಹೊಸತಾಗಿ ಐದು ಮಂದಿಯನ್ನು ಸೇರಿಸಿ, ಪುನರ್ಘಟನೆ ಮಾಡಿದ್ದರು. ಆದರೇನು? ಜನರಲ್ ನಾಗಿಬರು ಸೈನ್ಯಬಲವನ್ನುಪಯೋಗಿಸಿ, ಸಂಖ್ಯೆ ಹೆಚ್ಚು ರಾಜಕೀಯ ಧುರೀಣರನ್ನು ಬಂಧಿಸಿ ವಿಚಾರಣೆಗೆ ಗುರಿಪಡಿಸಲು ಹವಣಿಸಿದ್ದು, ಅಲಿ ಮೆಹರರ ಮನ ನೋಯಿಸಿದೆ. ಈ ಸಂಬಂಧದಲ್ಲಿ ಸೈನ್ಯವು ಹೊರಡಿಸಿದ ಪ್ರಕಟಣೆಯಲ್ಲಿ ಅರಸ ಫರೂಕರು ದುರಾಡಳಿತೆಯ ಪ್ರತೀಕದಂತಿದ್ದರು. ಅವರನ್ನು ಗಡೀಪಾರು ಮಾಡಿದ ಬಳಿಕ, ಅಂತರಿಕ ಸುಧಾರಣೆಗೆ ಪರಿಶುದ್ಧವಾದ ರಾಜಕೀಯ ಜೀವನವುಂಟಾಗುವಂತೆ ಶುದ್ಧೀಕರಣಕ್ಕೆ ಸೈನ್ಯವು ಮನಗೊಟ್ಟಿದೆ. ಈ ಬಗ್ಗೆ ಹೊರಡಿಸಿದ ಆದೇಶವನ್ನು ಅಲಕ್ಷ್ಯದಿಂದ ಕಂಡು, ಸುಮ್ಮನುಳಿದ ಕಾರಣ—ನಮಗೆ ಸಂಶಯ ಬಂದವರನ್ನೆಲ್ಲ ಬಂಧಿಸಿರುವುದು.

ಸೈನ್ಯಾಡಳಿತೆಗೆ ಯಶಸ್ಸು

ಹೀಗೆ ಬಂಧಿತರಾದವರಲ್ಲಿ ಭೂಸುಧಾರಣೆಗೆ ಅಡ್ಡ ಬಂದವರೂ, ಲಂಚಗುಳಿತನದ ಆರೋಪಕ್ಕೊಳಗಾದವರೂ ಇರುವರು. ಹಾಗೆಂದು ಮಾಜಿ ಮುಖ್ಯಮಂತ್ರಿ ಹಾಗೂ ವಫ್ದ ಪಕ್ಷದ ಧುರೀಣರಾದ ನಹಾಸ ಪಾಶಾರನ್ನು ಇನ್ನೂ ಕೈದು ಮಾಡಿಲ್ಲ ಎಂಬುದನ್ನು ಸ್ಮರಿಸಬೇಕು. ಇವರ ವ್ಯಕ್ತಿತ್ವವು ತುಂಬ ಪ್ರಭಾವಯುತವಾಗಿದೆ—ಚಾರಿತ್ರ್ಯದ ಮೇಲೆ ಲಂಚಗುಳಿತನದ ಕಳಂಕವಿದ್ದರೂ ಅವರನ್ನು ಕೆಣಕುವ ಧೈರ್ಯ ಬಹುಶಃ ಇನ್ನೂ ನಾಗಿಬರಿಗೆ ಬಂದಿಲ್ಲ. ಒಟ್ಟಿನಲ್ಲಿ ಸೇನಾಧಿಪತಿ ನಾಗಿಬರು ಇಜಿಪ್ತದಲ್ಲಿ ಸರ್ವಾಧಿಕಾರವನ್ನೇ ನಡೆಸುತ್ತಿದ್ದಾರೆ. ರಾಜಕೀಯದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲವಾಗಿ ಸಾರಿದ್ದ ನಾಗಿಬರು, ಈಗ ರಾಜಕೀಯರಂಗದ ಧುರೀಣರಾಗಿಯೂ ಮೆರೆದರು. ತುರ್ಕಸ್ಥಾನದಲ್ಲಿ ಮುಸ್ತಾಫಾ ಕೆಮಾಲಪಾಶಾ ಕೂಡಾ ಈ ಶತಮಾನದಾದಿಯಲ್ಲಿ ಇದೇ ತೆರನಾದ ಸೈನ್ಯಕ್ರಾಂತಿಯಿಂದ ರಾಜಕೀಯ ರಂಗವನ್ನು ಸುವ್ಯವಸ್ಥಿತಗೊಳಿಸಿದ್ದನ್ನು ಕಂಡರೆ ನಾಗಿಬರ ಪ್ರಯತ್ನಕ್ಕೆ ಯಶಸ್ಸು ದೊರೆತೀತೆನ್ನಲಡ್ಡಿಯಿಲ್ಲ.

ಭೂಸುಧಾರಣೆ

ಇಜಿಪ್ತದ ಭೂಸುಧಾರಣಾ ಯೋಜನೆಯಲ್ಲಿ ಒಬ್ಬನು ಹೆಚ್ಚೆಂದರೆ ೨೦೦ ಎಕರೆ ಭೂಮಿಯನ್ನು ತನ್ನ ವಶ ಇಟ್ಟುಕೊಳ್ಳಬಹುದು. ಈ ಕನಿಷ್ಠ ಮಿತಿಯನ್ನು ೧೦೦೦ ಎಕರೆಗೆ ಏರಿಸಬೇಕೆಂದೂ, ವಶಪಡಿಸಿಕೊಂಡ ಭೂಮಿಗೆ ಪರಿಹಾರವಾಗಿ ಕೊಡುವ

ನೂರವತ್ತು ವರ್ಷಗಳಲ್ಲಿ ಪಾವತಿಯಾಗುವ, ಸರಕಾರಿ ಬಾಂಡುಗಳಿಗೆ ಬದಲಾಗಿ ನಗದು ಹಣವನ್ನು ಕೊಡಬೇಕೆಂದೂ ಇಜಿಪ್ತದ ದೊಡ್ಡ ಜಮೀನುದಾರರು ಕೇಳಿಕೊಂಡಿದ್ದರು. ಆದರೆ ಜನಸಾಮಾನ್ಯರ ಹಿತಸಾಧಿಸುವ ಆಮೂಲ ಏರಿರುವಾಗ-ಜಮೀನುದಾರರ ಯಾವ ಮಾತಿಗೂ ಕಿವಿಗೊಡುವ ಪರಿಸ್ಥಿತಿ ಇಲ್ಲ. ಮೇಲಾಗಿ ಇಜಿಪ್ತದ ಇಂದಿನ ದುರ್ದಶೆಗೆ ಜಮೀನುದಾರರ ನಿರಂಕುಶ ವರ್ತನೆಯೇ ಮೂಲಕಾರಣ. ಅವರ ಸೊಕ್ಕನ್ನು ಇಳಿಸದೆ--ಜನತೆಯ ಉದ್ಧಾರ ಸಾಧ್ಯವಿಲ್ಲ. ಇಜಿಪ್ತದ ಭೂಮಿಯಲ್ಲಿ ೬೦% ಸಿರಿವಂತರ ಕೈಯಲ್ಲಿದೆ. ಇವರನ್ನು ಬಿಟ್ಟರೆ, ಉಳಿದ ೪೦%ದಲ್ಲಿ ೨೦೦ ಎಕ್ರೆಗೂ ಹೆಚ್ಚು ಭೂಮಿಯಿದ್ದ ಒಡೆಯರ ಸಂಖ್ಯೆ ೧೩೦೦೦. ಎರಡು ಕೋಟಿಗೂ ಮಿಕ್ಕಿದ ಬಡಜನತೆಗೆ ಭೂಮಿಯೇ ಇಲ್ಲದೆ ಅವರು ಅನ್ನಾಹಾರಗಳಿಗಾಗಿ ಒದ್ದಾಡುತ್ತಿರುವರು. ಸಿರಿವಂತರಾದ ಭೂಮಾಲಿಕರು ಈ ಹಿಂದೆ ಅರಸ ಫರೂಕನ ಮರೆಯಲ್ಲಿ ಮೆರೆದಾಡುತಿದ್ದರು. ರಾಜಕೀಯದಲ್ಲಿ ಇವರದೇ ವರ್ಚಸ್ಸು ನಡೆಯುತ್ತಿತ್ತು. ಇನ್ನು ಮುಂದೆ ಇವರ ಆಟ ಎಷ್ಟರಷ್ಟು ಸಾಗಲಾರದು. ಫೆಬ್ರವರಿಯಲ್ಲಿ ನಡೆಸಲಾಗುವುದೆನ್ನುವ ಸಾರ್ವತ್ರಿಕ ಚುನಾವಣೆ ಯಶಸ್ವಿಯಾಗಬೇಕಾದರೆ ಜಮೀನುದಾರರ ಅಟೋಪ ನಿಲ್ಲುವುದಗತ್ಯ.

ಇರಾಣದ ನಿಲುವು

ಎಣ್ಣೆ ತಂಟೆಯ ಸಂಬಂಧದಲ್ಲಿ ತಾವಿನ್ನೂ ಆಶಾವಾದಿಗಳಾಗಿರುವುದಾಗಿ ಬ್ರಿಟನಿನ ವಿದೇಶ ಮಂತ್ರಿ ಆಂಥೋನಿ ಈಡನರು ಹೇಳಿದ್ದಾರೆ. ಬ್ರಿಟಿಷ್ ಮುಖ್ಯಮಂತ್ರಿ ಚರ್ಚಿಲ್ ಹಾಗೂ ಅಮೇರಿಕಾಧ್ಯಕ್ಷ ಟ್ರೂಮನರು ಜೊತೆಯಲ್ಲಿ ಕೊಡಮಾಡಿದ ಸಲಹೆಯನ್ನು ಪುನಃ ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಅವರ ಅಭಿಪ್ರಾಯ. ಇರಾಣದ ಜನತೆಯ ಹಂಬಲವಾದ ಎಣ್ಣೆ ರಾಷ್ಟ್ರೀಕರಣವನ್ನು ತಮ್ಮ ಸರಕಾರ [illegible] ಸ್ಪಷ್ಟಗೊಳಿಸಿದರು. ಆದರೆ ಮುಸಾದಿಕರು ಬ್ರಿಟನ ಸೂಚನೆಗಳಲ್ಲಿ ಹೊಸತೇನೂ ಇಲ್ಲವೆಂದೂ--ಹಿಂದಿನ ಸೂಚನೆಗಳನ್ನೆ ಬೇರೊಂದು ಶಬ್ದದಲ್ಲಿ ಒಪ್ಪಿಸಲಾಗಿದೆಯಾಗಿಯೂ ತಮ್ಮ ನಿರಾಕರಣಕ್ಕೆ ಕಾರಣ ಹೇಳುವರು. ಇರಾಣದ ಜನತೆಯ ಆಶೋತ್ತರಗಳ ಎಳ್ಳಷ್ಟು ಕಲ್ಪನೆ ಮಾಡದ ಇಲ್ಲಿನ ಇಂಥ ಕೊಡುಗೆಗಳು ಸ್ವೀಕಾರಾರ್ಹವಲ್ಲ ಎಂದರವರು. ಹೇಗದ ಅಂತಾರಾಷ್ಟ್ರೀಯ ನ್ಯಾಯಾಲಯವು ಪರಿಹಾರ ಧನದ ವಿಷಯದಲ್ಲಿ ತೀರ್ಮಾನ ಕೊಡುವುದಕ್ಕೆ ತಮ್ಮ ಒಪ್ಪಿಗೆ ಇಲ್ಲವೆಂದೂ ಇರಾಣದ ಅಥವಾ ಎರಡೂ ಪಕ್ಷಗಳಿಗೆ ಸಮ್ಮತವಾದ ಬೇರೊಂದು ನ್ಯಾಯಾಲಯದ ನಿರ್ಣಯಕ್ಕೆ ಇದನ್ನೊಪ್ಪಿಸಬೇಕೆಂದೂ ಮುಸಾದಿಕರ ಹೇಳಿಕೆ. ಹೀಗೆ-ಪ್ರಶ್ನೆಯು ಇದ್ದಲ್ಲಿಯೇ ಇದೆ.

ವರ್ಣೀಯರ ಹೋರಾಟ

ದಕ್ಷಿಣ ಆಫ್ರಿಕೆಯ ಪರಿಸ್ಥಿತಿ ಸುಧಾರಿಸಿಲ್ಲ-ಮಲಾನರ ವರ್ಣಭೇದ ನೀತಿಯನ್ನು ಟೀಕಿಸುವುದರಲ್ಲಿ ಸೋವಿಯಟ ರಶಿಯಾ ಹಾಗೂ ಯುಗೋಸ್ಲಾವಿಯಾದಂಥ ಕಮ್ಯೂನಿಸ್ಟ ರಾಷ್ಟ್ರಗಳೂ ಹಿಂಜರಿದಿ [illegible] ಪ್ರಶ್ನೆಯನ್ನು ಭಾರತ ಎತ್ತಿದಾಗ ಅದಕ್ಕೆ ಹೆಚ್ಚಿನ ರಾಷ್ಟ್ರಗಳ ಬೆಂಬಲ ದೊರೆಯುವ ಭರವಸೆ ದೊರಕಿದೆ. ಹಾಗೆಂದು ಉಚ್ಚ ರಾಷ್ಟ್ರವೆಂದು ಹೊಗಳುವ ಅಮೇರಿಕದಲ್ಲಿ ಕೂಡ ಕೆಲವೆಡೆ "ನೀಗ್ರೋ" ಜನರನ್ನು ಇದೇ ರೀತಿ ತುಚ್ಛವಾಗಿ ಕಾಣುವ ಪದ್ಧತಿ ಈಗಲೂ ಇದೆ. ಕಾರಣ-ಅಮೇರಿಕವು ದಕ್ಷಿಣ ಆಫ್ರಿಕೆಯ ನಿಲುವಿಗೆ ಬೆಂಬಲಕೊಡಲೂ ಬಹುದು. ಇದು ಹೊರತು ಸಂಯುಕ್ತ ರಾಷ್ಟ್ರಸಂಘವು ಯಾವುದೇ ರಾಜ್ಯದ ಆಂತರಿಕ ವ್ಯವಹಾರದಲ್ಲಿ ಕೈ ಹಾಕಲಾರದೆಂದು ಸ್ಪಷ್ಟವಾಗಿ ಹೇಳಲಾಗಿದೆಯಾಗಿ-ದಕ್ಷಿಣ ಆಫ್ರಿಕೆಯು ಭಾರತೀಯರನ್ನು ನಡೆಸಿಕೊಳ್ಳುವ ಪ್ರಶ್ನೆಯು ಅಂತರಿಕ ವ್ಯವಹಾರಕ್ಕೆ ಸೇರಿದೆಯಾಗಿ ಸಾಧಿಸಬಹುದು. ಸಂಯುಕ್ತ ರಾಷ್ಟ್ರಸಂಘವು ಸ್ವಲ್ಪ ಬಿಗಿಯಿಂದ ವರ್ತಿಸಿದರೆ-ದಕ್ಷಿಣ ಆಫ್ರಿಕ ಹೊರಬಿದ್ದು ಹೋದೀತು! ಮಲಾನರೊಂದು ಕಡೆ ಮಾತನಾಡುವಾಗ, ಆಸ್ಟ್ರೇಲಿಯಾದಲ್ಲಿ (ಇಲ್ಲಿ ಬಿಳಿಯರ ಹೊರತು ಬೇರಾರೂ ಕಾಯಂ ವಾಸ್ತವ್ಯ ಮಾಡಲಾರರು) ಭಾರತೀಯರಿಗೆ ಅನಿರ್ಬಂಧ ಪ್ರವೇಶ ಕೊಡಬೇಕೆಂದರೆ, ಅದನ್ನು ಆಸ್ಟ್ರೇಲಿಯಾ ಸರಕಾರ ಹೇಗೆ ಕಂಡೀತು? ಎಂದು ಪ್ರಶ್ನಿಸಿದ್ದಾರೆ.

ಅನಾವಶ್ಯಕ ವಿಳಂಬ

ಜನೀವಾದಲ್ಲಿ ಕಾಶ್ಮೀರ ವಿಷಯದ ಮಾತುಕತೆಗಳು ಯಶಸ್ವಿಯಾಗಲಿಕ್ಕಿಲ್ಲ ಎಂದೇ ತೋರುತ್ತದೆ. ನಿನ್ನೆ ಬುಧವಾರದ ದಿನ ಕೊನೆಯದಾಗಿ ಭಾರತ-ಪಾಕಿಸ್ತಾನಗಳ ಪ್ರತಿನಿಧಿಗಳೊಡನೆ ಡಾ. ಗ್ರಾಹಾಂ ಅವರು ಮಾತುಕತೆಯಾಡಬೇಕೆಂದಿದೆ. ಮಂಗಳವಾರ ದಿನವೇ ಭಾರತಕ್ಕೆ ಹೊರಡಲಿದ್ದ ಶ್ರೀ ಅಯ್ಯಂಗಾರರ, ಗುರುವಾರದವರೆಗೆ ತಮ್ಮ ಪ್ರಯಾಣವನ್ನು ಮುಂದರಿಸಿದ್ದು ಇದಕ್ಕಾಗಿಯೇ. ಗೋಪ್ಯ ಮಾತುಕತೆಗಳಲ್ಲಿ ಡಾ. ಗ್ರಾಹಾಮರು ಹೊಸ ಸೂಚನೆಗಳನ್ನು ಕೊಟ್ಟರು.- ಅವುಗಳು ಸ್ವೀಕರಿಸಲ್ಪಡುವ ಸಂಭವ ಬಹಳ ಕಡಿಮೆ. ಹೇಗಿದ್ದರೂ-ಸಂಯುಕ್ತ ರಾಷ್ಟ್ರ ಸಂಘವು ನಾಲ್ಕು ವರ್ಷಗಳಿಗೂ ಹೆಚ್ಚಿನ ಈ ಕಾಲಾವಧಿಯಲ್ಲಿ ದಿನತಳ್ಳುವುದೊಂದನ್ನು ಬಿಟ್ಟು, ಬೇರೇನೂ ಮಾಡಲು ಶಕ್ಯವಾಗದಿದ್ದುದಕ್ಕೆ ಎಲ್ಲರಿಗೂ ಬೇಸರವುಂಟಾಗಿದೆ. ಕುರುವಿನ ಮೇಲೆ ಬೊಕ್ಕೆ ಎಂಬಂತೆ- ಡಾ. ಗ್ರಾಹಾಮರೀಗ, ಕಾಶ್ಮೀರದ ಆಡಳಿತವನ್ನು ಸಂಯುಕ್ತ ರಾಷ್ಟ್ರಸಂಘದಿಂದ ನಿಯುಕ್ತನಾದೊಬ್ಬನು ನೋಡಿಕೊಳ್ಳಬೇಕೆಂದೂ ಅವನ ಕೈಕೆಳಗೆ ನಿರೀಕ್ಷಕರಿರಬೇಕೆಂದೂ ಸೂಚಿಸಿರುವರಂತೆ. ಇದನ್ನು ಕಾಶ್ಮೀರ ಜನತೆಯೂ ಮುಖ್ಯಮಂತ್ರಿ ಶೇಖ ಅಬ್ದುಲ್ಲರೂ ಕೂಡಿಯೇ ವಿರೋಧಿಸುವರು. ಕಾಶ್ಮೀರದ ಭವಿಷ್ಯನಿರ್ಣಯದ ಅಧಿಕಾರ ಸಂಯುಕ್ತ ರಾಷ್ಟ್ರಸಂಘಕ್ಕೆ ಇಲ್ಲವೆಂದೂ ಕಾಶ್ಮೀರ ಜನತೆಯೇ ಇದನ್ನು ನಿರ್ಣಯಿಸಬಲ್ಲುದೆಂದೂ ಗೊತ್ತುವಳಿಗಳಲ್ಲಿ ಸ್ಪಷ್ಟೀಕರಿಸಿರುವರು. ಯುವರಾಜ ಕರಣಸಿಂಗರು ಚುನಾಯಿತ ರಾಜಪ್ರಮುಖನ ಸ್ಥಾನವನ್ನು ಅಲಂಕರಿಸುವ ಬಗ್ಗೆಯೂ ಈಗ ಏನನ್ನೂ ಹೇಳಲು ಸಿದ್ಧರಿಲ್ಲ. ಸಂಯುಕ್ತ ರಾಷ್ಟ್ರಸಂಘದ ನಿಲುವು ಸ್ಪಷ್ಟವಾಗುವವರೆಗೆ ಮತ್ತು ಘಟನಾಸಮಿತಿಯು ಕಾಶ್ಮೀರದ ಚುನಾಯಿತ ರಾಜಪ್ರಮುಖನ ಸ್ಥಾನಮಾನವನ್ನು ನಿರ್ದಿಷ್ಟಗೊಳಿಸುವವರೆಗೆ ಆ ಅಧಿಕಾರದ ಹೊಣೆಗಾರಿಕೆ ಮುನ್ನರಿಯುವುದು ಕಷ್ಟವಾಗಿದೆ

ಉಡುಪಿ

ಉಡುಪಿ ಮುನಿಸಿಪಲ್ ಚುನಾವಣೆ

ಸಿಂಧುವಾದ ನಾಮಪತ್ರಗಳು

ತಾ 6 10-52ಕ್ಕೆ ನಡೆಯಲಿರುವ ಮುನಿಸಿಪಲ್ ಚುನಾವಣೆಗೆ ತಾ 5, 6, 8 ರಲ್ಲು ಉಮೇದ್ವಾರರು ಹಾಕಿದ ನಾಮಪತ್ರಗಳು ತಾ ೯ರಲ್ಲು ಪರಿಶೋಧಿಸಲ್ಪಟ್ಟು ಎಲ್ಲವೂ ಸಿಂಧುವಾಗಿ ಪ್ರಕಟಿಸಲ್ಪಟ್ಟವು. ಅವುಗಳ ವಿವರ:—

1ನೆ ವಾರ್ಡು-ಗುಂಡಿಬೈಲು: ಶ್ರೀಮತಿ ಮನೋರಮಾದೇವಿ ಮತ್ತು ಶ್ರೀಮತಿ ಸುಮಿತ್ರಾ ಬಾಯಿ [C] [ಹೆಂಗಸರ ರಿಜರ್ವ್ ಸೀಟು] ದಾಸ ಸೇರಿಗಾರ ಮತ್ತು ರಾಮಚಂದ್ರ ರಾವ್, ಕುಂಜೂರು. [C]

2ನೆ ವಾರ್ಡು-ಕಡಿಯಾಳಿ: ಯು. ಕೇಶವ ಕಾಮತ್ ಮತ್ತು ಕೆ. ಪ್ರಭಾಕರ ಪೈ. [C]

3ನೆ ವಾರ್ಡು-ಕುಂಜಿಬೆಟ್ಟು: ಕೆ. ಗುರುರಾಜ ರಾವ್, [C] ಅಣ್ಣಪ್ಪ ಭಕ್ತ, ಎ. ನಾರಾಯಣ ನಾಯಕ್, ಕೆ. ದಾಸ ಸೇರಿಗಾರ ಮತ್ತು ಕೆ. ಕಮಲಾಕ್ಷ ಪೈ. [C ಬದಲಿ]

4ನೆ ವಾರ್ಡು-ರಥಬೀದಿ: ಲಕ್ಷ್ಮೀನಾರಾಯಣ ಐತಾಳ್, [C] ಎ. ತ್ರಿವಿಕ್ರಮ ನಾಯಕ್, ಎ. ನಾರಾಯಣ ನಾಯಕ್ ಮತ್ತು ಪಿ. ಕೆ. ಶೇಷಗಿರಿ ರಾವ್.

5ನೆ ವಾರ್ಡು-ಪಣಿಯಾಡಿ: ಬಿ. ಶ್ರೀನಿವಾಸಾಚಾರ್ಯ ಮತ್ತು ಎ ಬಿ. ಕೃಷ್ಣರಾಜ [C]

6ನೆ ವಾರ್ಡು-ತೆಂಕಪೇಟೆ: ಕೆ. ವಾಸುದೇವ ನಾಯಕ್, ಯು. [C ಬದಲಿ] ಉಮಾನಾಥ ಆಚಾರ್ಯ, ಎ. ಗುರುರಾಜ ಭಟ್, ಎಮ್. ವಿಠಲ ಕಾಮತ್ [C] ಮತ್ತು ಎಲ್. ಎಸ್. ನಾಯಕ್.

7ನೆ ವಾರ್ಡು-ಸೆಂಟ್ರಲ್: ಪಿ. ಕೆ. ಶೇಷಗಿರಿ ರಾವ್, ಕೆ. ಕಮಲಾಕ್ಷ ಪೈ [C] ಮತ್ತು ಯು. ಯಶವಂತ ಕಾಮತ್.

8ನೆ ವಾರ್ಡು-ಶಿರಿಬೀಡು: ಯು. ಎಸ್. ಇಮಾಮ್ ಸಾಹೇಬ, [C] ಅಮ್ಮುಂಜೆ ಅನಂತ ನಾಯಕ್, ಇಬ್ರಾಹಿಮ್ ಸಾಹೇಬ್ ಮತ್ತು ಅಬ್ದುಲ್ ಲತೀಫ್ ಸಾಹೇಬ್.

9ನೆ ವಾರ್ಡು-ಮೂಡನಿಡಂಬೂರು: ಬಿ ಕೃಷ್ಣಪ್ಪ ಭಂಡಾರಿ, ಟಿ. ಎ ವಾಸುದೇವನ್, ವಿಠಲ ಸೆಟ್ಟಿ ಮತ್ತು ಪಿ. ಸೀನ ಸೆಟ್ಟಿ. [C]

10ನೆ ವಾರ್ಡು-ಬನ್ನಂಜೆ: ಯು. ವಾಸುದೇವ ಪ್ರಭು, ಯು. ಸೀನ ನಾಯ್ಕ, ಬಿ. ಕೆ. ಕೃಷ್ಣರಾವ್, [C] ಪಿ. ವಿ. ವ್ಯಾಸರಾವ್, ಮತ್ತು ಕೆ. ಮಹಾಬಲ ಸೆಟ್ಟಿ.

11 ನೆ ವಾರ್ಡು-ಅಂಬಲಪಾಡಿ: ಎ. ಶಂಭು ಸೆಟ್ಟಿ [C] ಮತ್ತು ಐ. ರಘುರಾಮ ಸೆಟ್ಟಿ.

12ನೆ ವಾರ್ಡು-ಕನರ್ಪಾಡಿ: ಶ್ರೀಮತಿ ಎಲ್. ಎಮ್. ಫೆರ್ನಾಂಡೀಸ್ [C] ಮತ್ತು ಕೆ. ರಾಮ ರಾವ್.

13ನೆ ವಾರ್ಡು-ಕಿನ್ನಿಮೂಲ್ಕಿ: ಎಮ್. ಪಾಂಡುರಂಗ ಶೆಟ್ಟಿ, ಬಿ. ಮೈಕಲ್[C] ಮತ್ತು ಲಕ್ಷ್ಮೀನಾರಾಯಣ ಭಟ್.

14ನೆ ವಾರ್ಡು-ಬೈಲೂರು: ಎ. ಮಂಜುನಾಥ ರಾವ್ ಮತ್ತು ಎಮ್. ಕೇಶವ ಪೈ. [C]

15ನೆ ವಾರ್ಡು-ವಳಕಾಡು: ಕೆ. ದೇವೇಂದ್ರ ಶೆಣೈ [C] ಮತ್ತು ಕೆ. ಗೋಪಾಲ ಕುಂದ್ರ.

16ನೆ ವಾರ್ಡು-ಕಾಡಬೆಟ್ಟು: ಯು. ರಾಮಚಂದ್ರ (C) (ಹರಿಜನ ರಿಜರ್ವ್), ಕೆ. ಜನಾರ್ಧನ ಪೈ, (C) ಬಿ. ಎಸ್. ಲೂವಿಸ್ ಮತ್ತು ಸೀತಾರಾಮ ಕಾಮತ್

17ನೆ ವಾರ್ಡು-ಅಜ್ಜರಕಾಡು: ಪಿ ಉಪೇಂದ್ರ, ಶಿ. ಶ್ರೀನಿವಾಸ ನಾಯಕ್, ರಮೇಶ ಯು. ಪೈ, (C) ಮತ್ತು ಪಿ. ಮನೋರಮಾ ಬಾಯಿ, ಮನೋರಮಾ ಆಚಾರ್ಯ (C) ಮತ್ತು ಕೆ ರೋಹಿಣಿ ಜೆ ಪೈ, ಅಮ್ಮಣ್ಣಿ ಬ್ಯಾಪ್ಟಿ (ಹೆಂಗಸರ ರಿಜರ್ವ್)

(ಹೆಸರಿನ ಎದುರಿಗೆ C ಇರುವವರು ಕಾಂಗ್ರೆಸ್ ಉಮೇದ್ವಾರರು)

ಜನರಲ್ ಸೀಟ್ 17; ಹೆಂಗಸರ ರಿಜರ್ವ್ ಸೀಟ್ 2; ಹರಿಜನ ರಿಜರ್ವ್ 1. ಹೀಗೆ ಒಟ್ಟು 20 ಸ್ಥಾನಗಳಿಗೆ 59 ನಾಮಪತ್ರಗಳಿವೆ. ಹಿಂದೆಗೆಯುವ ದಿನ 11-9-52

ಕಮ್ಯೂನಿಸ್ಟರ ಕೌಶಲ

ಕೊರಿಯಾದಲ್ಲಿ ಕೆಲದಿನಗಳಿಂದೀಚೆಗೆ ಸಂಯುಕ್ತ ರಾಷ್ಟ್ರ ಸಂಘದ ಕೈಯೇ ಮೇಲಿತ್ತು: ಯಾಲೂ ನದೀ ವಲಯ ಹಾಗೂ ಉತ್ತರ ಕೊರಿಯಾದ ಮಿಲಿಟರಿ ಕೇಂದ್ರಗಳ ಮೇಲೆ ಬಲವಾದ ಧಾಳಿ ನಡೆಸಿದಾಗಲೂ, ಕಮ್ಯೂನಿಸ್ಟರು ಪ್ರತಿಭಟನೆ ತೋರದೆ ಸುಮ್ಮನಿದ್ದರು. ಆದರೆ ಒಮ್ಮಿಂದೊಮ್ಮೆ ಕಳೆದ ಶನಿವಾರ ಅವರ ಪ್ರತಿಧಾಳಿಯು ಉಗ್ರಗೊಂಡಿತು. ಗುಂಡಿನ ಮಳೆಗರೆಯುತ್ತಾ ಸಂಯುಕ್ತ ರಾಷ್ಟ್ರ ಸಂಘದ ಪಡೆಗಳನ್ನು ಹಿಂದೂಡುತ್ತಾ ಕಮ್ಯೂನಿಸ್ಟರು ಮುನ್ನಡೆದರು. ಮಿಲಿಟರಿ ನಿರೀಕ್ಷಕರು ಈ ಕೆಲ ತಿಂಗಳುಗಳಲ್ಲಿ ಕಮ್ಯೂನಿಸ್ಟರು ಸಾಕಷ್ಟು ಮದ್ದು ಗುಂಡುಗಳ ಸಂಗ್ರಹ ಮಾಡಿರುವರೆಂದೂ ಅಭಿಪ್ರಾಯ ಪಡುತ್ತಾರೆ. ಸಂಧಾನ ಮಾತುಕತೆಗಳು ನಡೆಯುವ ಪಾನ ಮುಂಜಾಮದ ತಟಸ್ಥ ಪ್ರದೇಶವನ್ನೂ ದಾಳಿಯಲ್ಲಿ ಪ್ರವೇಶಿಸಲಾಯಿತೆಂದು ವರದಿ. ಮಾತುಕತೆಗಳಲ್ಲಿ ಕೈದಿಗಳ ವಿನಿಮಯ ಪ್ರಶ್ನೆಯು ಇನ್ನೂ ಬಗೆಹರಿಯದೆ ಉಳಿದಿದೆ. ಅಮೇರಿಕದಲ್ಲಿ ಕೊರಿಯಾ ಕದನದ ಬಗ್ಗೆ ವ್ಯಾಕುಲ ಮನೋವೃತ್ತಿ ಕಂಡು ಬರುತ್ತಿದೆ. ಮುಂಬರುವ ಚುನಾವಣೆಯಲ್ಲಿ ಯಾವ ಪಕ್ಷಕ್ಕೆ ಗೆಲುವಾಗುವುದೆಂಬುದನ್ನು ಕಂಡೇ ಕೊರಿಯಾ ಕದನದ ಅಂತಿಮರೂಪವನ್ನು ಊಹಿಸಬೇಕು.

ಕೆ. ಜಿ. ಮಶ್ರುವಾಲರ ನಿಧನ

ಮ. ಗಾಂಧಿಯವರ ನಿಷ್ಠಾವಂತ ಶಿಷ್ಯ ಹಾಗೂ 'ಹರಿಜನ' ಪತ್ರಿಕೆಯ ಸಂಪಾದಕ ಶ್ರೀ. ಕೆ. ಜಿ. ಮಶ್ರುವಾಲರು ತಾ. ೯ರಲ್ಲಿ 61 ನೇ ವಯಸ್ಸಿನಲ್ಲಿ ಶ್ವಾಸರೋಗದಿಂದ ನಿಧನಗೊಂಡರು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

R. E. P. 429/51 S. C. 316/47

ಕುಂಜೂರು ವಾಸುದೇವ ಆಚಾರ್ಯ
-ಅರ್ಜಿದಾರ.

ಮತ್ತು

1. ವೆಂಕಟಕೃಷ್ಣ, ಅನಂತರಾಮ ಭಟ್ರ ಮಗ, [illegible]. 2 ರಾಧಮ್ಮ, ಅನಂತರಾಮ ಭಟ್ರ ವಿಧವೆ, ಉಡುಪಿ ತಾಲೂಕು ಮಜೂರು ಗ್ರಾಮದಲ್ಲಿರುವವರು -ಎದ್ರಿರು.

ಸದ್ರಿ ಎದ್ರಿರಿಗೆ ಈ ಮೂಲಕ ತಿಳಿಸುವುದೇನೆಂದರೆ—

ಮೇಲ್ಕಂಡ ಡಿಕ್ರಿ ಪ್ರಕಾರ ಅರ್ಜಿದಾರರಿಗೆ ಬರುವ ಐವೇಜು ವಸೂಲಿ ಬಗ್ಗೆ ಸದ್ರಿ ಅನಂತರಾಮ ಭಟ್ರ ಬಾಬ್ತು ನಿಮ್ಮ ಸ್ವಾಧೀನವಿರುವ ಸ್ಥಿರಾಸ್ತಿಯನ್ನು ಜಪ್ತು ಮಾಡಿ ಏಲಾನಿಂದ ಐವೇಜು ವಸೂಲು ಪಡೆಯುವರೆ ಅರ್ಜಿದಾರರು ದಾಖಲು ಮಾಡಿದ ಮೇಲ್ಕಂಡ ಅಮಲ್ ಜ್ಯಾರಿಯು ನಿಮಗೆ ಪುನಃ ಜಪ್ತಿ ಪ್ರೊ ಓರ್ಡರ್ ಬಗ್ಗೆ ತಾ. 19-9-52ಕ್ಕೆ ಇಟ್ಟಿರುವುದರಿಂದ ಅದಕ್ಕೆ ನಿಮ್ಮದೇನಾದರೂ ಆಕ್ಷೇಪವಿದ್ದರೆ ಆ ದಿವಸ ಬೆಳಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉಜ್ರ ತಿಳಿಸತಕ್ಕದ್ದು. ತಪ್ಪಿದ್ದರೆ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂತ ಈ ಮೂಲಕ ಕೋರ್ಟು ಹುಕುಂ ಪ್ರಕಾರ ತಿಳಿಸಿದೆ.

P. Ramachandra Rao,
Pleader for Petitioner.

ಮಂಗಳೂರು

ಮದ್ರಾಸು ಮುಖ್ಯಮಂತ್ರಿ ಎ. ಬಿ ಶೆಟ್ಟರು- ತಾ 7ರಲ್ಲು ಸಂಜೆ ಮಂಗಳೂರಿಗೆ ಆಗಮಿಸಿದಾಗ 'ರೈಲ್ವೆ ನಿಲ್ದಾಣದಲ್ಲಿ ಜಿಲ್ಲಾಧಿಕಾರಿಗಳಿಂದಲೂ ನಾಗರಿಕರಿಂದಲೂ ಸ್ವಾಗತಪಡೆದರು. ಮರುದಿನ ಸ್ಥಳೀಯ ಹೆಡ್ ಕ್ವಾರ್ಟರ್ಸ್ ಆಸ್ಪತ್ರೆಯನ್ನು ಸಂದರ್ಶಿಸಿದರು. ಸ್ಥಳೀಯ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಈ ಜಿಲ್ಲೆಯ ಶಾಸನಸಭಾ ಪ್ರತಿನಿಧಿಗಳೊಡನೆ, ಜೋಗಿನಿಂದ ದ. ಕ. ಜಿಲ್ಲೆಗೆ ವಿದ್ಯುತ್ ಪೂರೈಕೆ ಮಾಡುವ ಮತ್ತು ಜಿಲ್ಲೆಗೆ ಸಂಬಂಧಪಟ್ಟ ಇತರ ಸಮಸ್ಯೆಗಳ ಕುರಿತು ಮಾತುಕತೆ ನಡೆಸಿದರು. ಮಂಗಳೂರಿಗೆ ನಳ್ಳಿ ನೀರನ್ನು ಒದಗಿಸುವ ಪ್ರಶ್ನೆಯನ್ನೂ ಚರ್ಚಿಸಲಾಯಿತು. ಮದ್ರಾಸಿಗೆ ಹಿಂತಿರುಗಿದ ನಂತರ ಈ ಕುರಿತು ತಾನು ವಿಚಾರಮಾಡುವುದಾಗಿ ಮಂತ್ರಿಗಳು ಆಶ್ವಾಸನೆಯಿತ್ತರು.

ತಾ 9ರಲ್ಲು ಕಾರ್ಕಳಕ್ಕೆ ತೆರಳಿ ಅಲ್ಲಿಯ ಕಾರ್ಯಕರ್ತರೊಡನೆ ವಿಚಾರ ವಿನಿಮಯ ಮಾಡಿದರು. ತಾ 10ರಲ್ಲು ಕುಂದಾಪುರಕ್ಕೆ ಭೇಟಿಕೊಟ್ಟರು. ತಾ 11ರಲ್ಲು ಬೆಳಿಗ್ಗೆ ಉಡುಪಿಗೆ ಬಂದು ಸಂಜೆ ಮಂಗಳೂರಿಗೆ ವಾಪಾಸು ತೆರಳಿದರು. ತಾ. 12ರಲ್ಲು ಮೂಡುಶೆಡ್ಡೆ ಕ್ಷಯರೋಗ ಶುಶ್ರೂಷಾ ಕೇಂದ್ರವನ್ನು ಸಂದರ್ಶಿಸಿ ತಾ 13ರಲ್ಲು ಮದ್ರಾಸಿಗೆ ಪ್ರಯಾಣ ಮಾಡುವರು.

ಪ್ರಕಟಣೆ

ಕುಂದಾಪುರ ತಾಲೋಕು ಯಡೂರು ಕುಂಬ್ಳಾಡಿ ಗ್ರಾಮದ ಕೊಳ್ಳನಲ್ಲಿರ್ವ ಬೆಷ್ಟಿ ಮಕ್ಕಿ ಸುಬ್ಬ ಸೆಡ್ತೀರ ಮೊಮ್ಮಗಳು ರಾಮಕ್ಕ ಸೆಡ್ತಿಯು ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವದೇನೆಂದ್ರೆ, ನನ್ನ ಚಿಕ್ಕಮ್ಮ, ಯಡೂರು ಕುಂಬ್ಳಾಡಿ ಗ್ರಾಮದ ಕೊಳ್ಳನಲ್ಲಿರ್ವ ಸುಬ್ಬ ಸೆಡ್ತಿ ಮಗಳು ಅಬ್ಬಕ್ಕ ಸೆಡ್ತಿ ಎಂಬವಳಿಗೆ ಗಂಡು ಯಾ-ಹೆಣ್ಣು ಸಂತತಿ ಯಿರುವದಿಲ್ಲಾ. ಸದ್ರಿ ಅಬ್ಬಕ್ಕ ಸೆಡ್ತಿ ಹೆಸ್ರಲ್ಲಿ ಕೆಲವು ಸ್ಥಿರ ಆಸ್ತಿಗಳು ಮತ್ತು ಈಡಿನ ಹಣಗಳು ಮತ್ತು ರುಪಾಯಿ 1000-0-0 ಒಂದು ಸಾವಿರಕ್ಕೆ ಮಿಕ್ಕಿದ ಚರಸೊತ್ತುಗಳು ಯಿರುತ್ತದೆ. ಸದ್ರಿ ಅಬ್ಬಕ್ಕ ಸೆಡ್ತಿ ಎಂಬವಳಿಗೆ ನಾನು ಮತ್ತು ಸದ್ರಿ ಅಬ್ಬಕ್ಕ ಸೆಡ್ತಿಯ ಅಕ್ಕ ಚಿಕ್ಕ ಸೆಡ್ತಿ ಮೊಮ್ಮಕ್ಕಳು, ಮೂಕಮ್ಮ ಸೆಡ್ತಿ ವಗೈರೆಯವರು ಕೂಡಾ ಮುಖ್ಯ ಹಕ್ಕುದಾರರಾಗಿ ಅಳಿಯಸಂತಾನಕಟ್ಟು ಪ್ರಕಾರ ನಾನು ಮತ್ತು ಮೂಕಮ್ಮ ಸೆಡ್ತಿ ಕೂಡಾ ಸದ್ರಿ ಅಬ್ಬಕ್ಕ ಸೆಡ್ತಿ. ಸ್ಥಿರ-ಚರ, ಸೊತ್ತುಗಳಿಗೆ ಹಕ್ಕುದಾರರಾಗಿರುತ್ತೇವೆ. ಸದ್ರಿ ಅಬ್ಬಕ್ಕ ಸೆಡ್ತೀಯು ಮೂರು ತಿಂಗಳಿಂದ ಖ್ಯಾಲೆ ಶುರುವಾಗಿ ಯಿತ್ತಲಾಗಿ 15 ದಿವಸಗಳಿಂದ ಸ್ಮೃತಿ ತಪ್ಪಿ ಹೋಗಿರುತ್ತದೆ. ತಾ 23-8-52ಲ್ಲು ಸದ್ರಿ ಅಬ್ಬಕ್ಕ ಸೆಡ್ತಿ ಎಂಬವಳಿಗೆ ಅವುಷದಿ ಮಾಡಿಸುತ್ತೇವೆಂತ ಹೇಳಿ ಕಾಣಿಸಿದ ಮೂಕಮ್ಮ ಸೆಡ್ತಿ ಮತ್ತು ಯಿವಳ ಅನುಯಾಯಿಗಳು ಕುಂದಾಪುರ ಕಸಬೆಗೆ ಮಂಚಲಿನಿಂದ ಸದ್ರಿ ಅಬ್ಬಕ್ಕ ಸೆಡ್ತಿಯನ್ನು ತೆಗ್ಸಿಕೊಂಡು ಹೋಗಿ ಅಬ್ಬಕ್ಕ ಸೆಡ್ತಿಯ ಸ್ಥಿರ, ಚರ, ಸೊತ್ತುಗಳನ್ನು ಅಪಹರಿಸುವ ಕೆಟ್ಟ ಇರಾದೆಯಿಂದ ಖಾಲಿ ಕಾಗದದ ಮೇಲೆ ಕೆಲವು ಎಡಹೆಬ್ಬೆಟ್ಟು ಗುರ್ತಗಳನ್ನು ಪಡೆದು ಯಿಟ್ಟುಕೊಂಡಿರುತ್ತಾರೆಂದು ವರ್ತಮಾನ ಕೇಳಿಸುತ್ತೇನೆ. ಸದ್ರಿ ಅಬ್ಬಕ್ಕ ಸೆಡ್ತಿ, ಸ್ಮೃತಿಯಿಲ್ಲದೆ, 15 ದಿವ್ಸವಾಗಿರುತ್ತದೆ. ಸದ್ರಿ ಅಬ್ಬಕ್ಕ ಸೆಡ್ತೀಗೆ ತಿಳುವಳಿಕೆಯಿಲ್ಲದೆ ಆ ಮೂಕಮ್ಮ ಸೆಡ್ತಿಯಾಗಲಿ ವ ಅವಳ ಸಂಬಂಧಿಕರಾಗಲಿ ಪಡಕೊಂಡ ಹೆಬ್ಬೆಟ್ಟು ಸಹಾಯದಿಂದ ರಿಕಾರ್ಡು ವಗೈರೆಗಳೇನಾದ್ರು ಮಾಡಿಕೊಂಡರೆ, ಸದ್ರಿ ರಿಕಾರ್ಡುಗಳು ವ ನೋಟುಗಳು ಸದ್ರಿ ಅಬ್ಬಕ್ಕ ಸೆಡ್ತಿಗಾಗಲೀ ವ ಅವಳ ಸ್ಥಿರಚರ, ಸೊತ್ತುಗಳಿಗೆ ಬಯಂಡ ಆಗತಕ್ಕದ್ದಲ್ಲ. ಮತ್ತು ಅವಳ ಕಾಲದನಂತ್ರ ಸ್ಥಿರ ಚರ, ಸೊತ್ತುಗಳಿಗೆ ಅಳಿಯಸಂತಾನ ಕಟ್ಟುಪ್ರಕಾರ ಹಕ್ಕು ಹೊಂದುವಲ್ಲಿ ನನಗೆ ವ ನನ್ನ ಸಂತತಿಯವರಿಗೆ ಬಾಧಕವಾಗತಕ್ಕದ್ದಲ್ಲಾ ಎಂಬ ಸಂಗ್ತಿ ಈ ಮೂಲಕ ಸರ್ವಜನರಿಗೆ ತಿಳಿಸೋಣಾಗುತ್ತದೆ.

● || ಈ ಎಡರ್ಗೆರೆ ಮತ್ತು ಎಡ ಹೆಬ್ಬೆಟ್ಟು ಮುದ್ರೆ ಸದ್ರಿ ರಾಮಕ್ಕ ಸೆಡ್ತಿದ್ದಾಗಿರುತ್ತದೆ.

ನಗರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಸ್ಪರ್ಧಿಸುತ್ತದೆ.

ತಾ. 2-9-52ರ ನವಭಾರತದಲ್ಲಿ ಪ್ರಕಟಿಸಿರುವ ಇದಕ್ಕೆ ವಿರೋಧವಾದ ವರ್ತಮಾನವು ಸರಿಯಲ್ಲ. ತಾ. 22-8-1952ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯವರು ಬರೆದ ಪತ್ರದಲ್ಲಿ ಜಿಲ್ಲೆಯಲ್ಲಿ ನಡೆಯುವ ಸ್ಥಳೀಯ ಸಂಸ್ಥೆಗಳ ಚುನಾವಣಾ ಅಧಿಕಾರವು ಸಂಪೂರ್ಣವಾಗಿ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಇರುತ್ತದೆ, ಈ ವಿಚಾರದಲ್ಲಿ ಪ್ರದೇಶ ಸಮಿತಿಯಿಂದ ಏನೊಂದೂ ಸಲಹೆ ಸಮ್ಮತಿ ಪಡೆಯುವ ಅಗತ್ಯವಿಲ್ಲವೆಂತ ಸ್ಪಷ್ಟವಾಗಿ ಬರೆದಿರುತ್ತಾರೆ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಸಮಿತಿಯೂ ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯೂ ತಾ. 17-8-52 ರಲ್ಲು ಕೂಡಿ ಒಮ್ಮತದಿಂದ ಜಿಲ್ಲಾ ಮುನ್ಸಿಪಲ್ ಚುನಾವಣೆಗಳಲ್ಲಿ ಸ್ಪರ್ಧಿಸಬೇಕೆಂದು ನಿರ್ಣಯ ಮಾಡಿರುತ್ತದೆ. ಈ ನಿರ್ಣಯವು ನವಭಾರತದ ತಾ. 22-8-52ರ ಸಂಚಿಕೆಯಲ್ಲಿ ಪ್ರಕಟವಾಗಿದೆ. ಅದಕ್ಕನುಸರಿಸಿ ಉಮೇದ್ವಾರರನ್ನು ಆರಿಸುವ ಸಮಿತಿ ಕೂಡಾ ಏರ್ಪಟ್ಟು ಉಮೇದ್ವಾರರಿಂದ ಅರ್ಜಿಗಳನ್ನು ಪಡೆದು ಬೆಟ್ಟಿನ ಮಟ್ಟಿನ ಆರಿಸೋಣ ಕೂಡಾ ಇಷ್ಟರಲ್ಲೇ ಆಗಿರುತ್ತದೆ. ಆದ್ದರಿಂದ ಚುನಾವಣೆಯಲ್ಲಿ ಕಾಂಗ್ರೆಸ್ ಕಡೆಯ ಉಮೇದ್ವಾರರು ಸ್ಪರ್ಧಿಸುವುದರಲ್ಲಿ ಯಾವ ಅನುಮಾನವುಇಲ್ಲ.

ಇದಕ್ಕೆ ವ್ಯತಿರಿಕ್ತವಾದ ಯಾವ ನಿರ್ಣಯವನ್ನೂ ಕರ್ನಾಟಕ ಪ್ರದೇಶ ಕಮಿಟಿಯು ಮಾಡಲಿಲ್ಲ ಅಲ್ಲದೆ ಅಧಿಕಾರ ಸಂಪೂರ್ಣವಾಗಿ ಜಿಲ್ಲಾ ಸಮಿತಿಗನೇ ಇರುವುದರಿಂದ ಇದಕ್ಕೆ ವಿರೋಧವಾಗಿ ಪ್ರಾಂತೀಯ ಸಮಿತಿಯು ಇದರಲ್ಲಿ ಪ್ರವೇಶಿಸುವರೆ ಕಾರಣ ಕೂಡಾ ಇರುವುದಿಲ್ಲ.

ಈ ಕಾರಣಗಳಿಂದ ಕಾಂಗ್ರೆಸ್ ಸಂಸ್ಥೆಯು ಬರುವ ಮುನ್ಸಿಪಲ್ ಚುನಾವಣೆಯಲ್ಲಿ ಈ ಹಿಂದೆ ನಿರ್ಣಯಿಸಿದಂತೆ ಸ್ಪರ್ಧಿಸುವುದರಲ್ಲಿ ಏನೂ ಸಂದೇಹವಿಲ್ಲ, ಮಹಾಜನರಿಗೆ ಈ ವಿಷಯದಲ್ಲಿ ಏನೂ ಸಂದೇಹ ಬೇಡವೆಂದು ಶ್ರೀ ಬಿ. ಆರ್. ಕರ್ಕೇರ, ಕಾರ್ಯದರ್ಶಿ ದ. ಕ. ಜಿಲ್ಲಾ. ಕಾ. ಕಮಿಟಿ. ಮತ್ತು ಬಿ. ಬಿ. ಶೆಟ್ಟಿ, ಕಾರ್ಯದರ್ಶಿ, ಮುನ್ಸಿಪಲ್ ಚುನಾವಣೆ ಸಮಿತಿ. ಇವರು ತಿಳಿಸುತ್ತಾರೆ

ಸಾರ್ವಜನಿಕ ಶಾರದಾ ಮಹೋತ್ಸವ- ವನ್ನು ಮಂಗಳೂರಲ್ಲಿ ಈ ಬಾರಿಯೂ ಆಚರಿಸುವರೆ ಉತ್ಸವ ಸಮಿತಿಯೊಂದು ರಚಿಸಲಾಯಿತು, ಶ್ರೀಗಳಾದ ಜಿ. ಗೋಪಾಲಪೈ [ಅಧ್ಯಕ್ಷ], ಎಮ್. ಮಾರ್ತಪ್ಪ ಪ್ರಭು ಮತ್ತು ಪಿ. ವೈಕುಂಠ ಕಾಮತ್ (ಜತೆ ಕಾರ್ಯದರ್ಶಿಗಳು), ಕೆ. ಉಪೇಂದ್ರ ಶೆಣೈ (ಖಜಾನ್ಜಿ)

ಆಲ್ಬ್ಬಕರ್ಕ್ ಕ್ರಿಕೆಟ್ ಟೂರ್ನಮೆಂಟು.--ಇದೇ ತಿಂ 4ರಲ್ಲು ಆರಂಭವಾಗಿ ಅಕ್ಟೋಬರ್ ತಾ 3ರ ತನಕ ನಡೆಯಲಿದೆ.

ಭಾಷಣ- ಸ್ಥಳೀಯ ಗವರ್ನಮೆಂಟ್ ಕಾಲೇಜಿನ ಕನ್ನಡ ಸಂಘದ ಆಶ್ರಯದಲ್ಲಿ ತಾ 4ರಲ್ಲು ಶ್ರೀ ಪರಮೇಶ್ವರ ಮಯ್ಯನವರ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ಶ್ರೀ ಎಸ್ ಎಸ್. ಕಿಲ್ಲೆಯವರು 'ಮಹಾಭಾರತದ ವೀರರು' ಎಂಬ ವಿಷಯದಲ್ಲಿ ಭಾಷಣವಿತ್ತರು. ವಿದ್ವಾನ್ ಎಮ್. ಶಂಕರನಾರಾಯಣ ಭಟ್ಟರು ಬರೆದ 'ಕುಂದಮಾಲ' ನಾಟಕಕ್ಕೆ ಸರಕಾರದಿಂದ ಐದುನೂರು ರೂಪಾಯಿಗಳ ಬಹುಮಾನ ದೊರೆತುದಕ್ಕೆ ಅವರನ್ನು ಈ ಸಭೆಯಲ್ಲಿ ಅಭಿನಂದಿಸಲಾಯಿತು.

ಜಿಲ್ಲಾ ಕಲೆಕ್ಟರರ ಪ್ರಕಟಣೆ— ಮಂಗಳೂರು ಮತ್ತು ಉಡುಪಿ ನಗರಸಭೆಗಳ ಚುನಾವಣೆ ನಿಮಿತ್ತ ಅಕ್ಟೋಬರ್ ತಿಂಗಳ ತಾ 6ನೆ ಸೋಮವಾರ ದಿವಸವನ್ನು ಸ್ಥಳೀಯ ರಜಾದಿನವಾಗಿ ಜಿಲ್ಲಾ ಕಲೆಕ್ಟರರು ಜಾಹೀರುಮಾಡಿರುತ್ತಾರೆ.

ಸೈನ್ಯಕ್ಕೆ ಆರಿಕೆ- ಒಳ್ಳೆಯ ಬಲಿಷ್ಠ ಮತ್ತು ಬುದ್ಧಿವಂತರಾದ ಯುವಕರನ್ನೂ ದೇಶರಕ್ಷಣೆಯ ಕಾರ್ಯಕ್ಕೆ ಅರ್ಥಾತ್ ಸೈನ್ಯಕ್ಕೆ ಆರಿಸುವ ಉದ್ದೇಶದಿಂದ ಕೊಯಮುತ್ತೂರಿನ ಅಸಿಸ್ಟೆಂಟ್ ರಿಕ್ರ್ಯೂಟಿಂಗ್ ಆಫೀಸರರು ಇದೇ ತಾ 6ರಲ್ಲು ಮಂಗಳೂರಲ್ಲಿ ಮೊಕ್ಕಾಂ ಮಾಡಿದರು.

ಪ್ರೋಗ್ರೆಸಿವ್ ಫ್ರಂಟಿನ ಸಭೆಯು ಕಳೆದ ತಾ 31ರಲ್ಲು ಶ್ರೀ ಇವರ್ನಾಡಿ ಆನಂದ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಮುಂಬರುವ ನಗರಸಭಾ ಚುನಾವಣೆಯಲ್ಲಿ ಮಂಗಳೂರ ನಾಗರಿಕರು ಫ್ರಂಟಿನ ಕಡೆಯಿಂದ ನಿಲ್ಲುವ ಉಮೇದ್ವಾರರಿಗನೇ ಓಟು ಕೊಡುವಂತೆ ಶ್ರೀಗಳಾದ ಎ. ಕೆ. ಸೇಸರ್, ಡಿ. ಮೋಹನರಾವ್, ಯು. ಜನಾರ್ಧನ, ಡಿ. ಎಮ್. ರಾಫಿಕ್, ಎಸ್. ಎ. ಶರ್ಮ ಮತ್ತು ಡಾ| ಸಂಜೀವನಾಥರು ವಿನಂತಿ ಮಾಡಿದರು.

ಜಿಲ್ಲಾ ಬೋರ್ಡು ಸಭೆಯು— ಇದೇ ತಾ 17ನೆ ಬುಧವಾರ ಪೂರ್ವಾಹ್ನ 11 ಗಂಟೆಗೆ ಜಿಲ್ಲಾ ಬೋರ್ಡಿನ ಆಫೀಸಿನಲ್ಲಿ ಜರಗುವುದು.

ಮಂಗಳೂರು ನಗರ ಸಭೆಯು— ಉಪಾಧ್ಯಕ್ಷ ಶ್ರೀ ಕೆ. ಸೂರ್ಯ ನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ ಎಸ್. ಭಾಸ್ಕರ ರೈಗಳು ಒಂದು ನಿರ್ಣಯದಲ್ಲಿ ಮಂಗಳೂರಿನ ಕ್ರೀಡಾ ಗೋಪುರ ಮತ್ತು ಮೋಟಾರ್ ನಿಲ್ದಾಣದ ಕಟ್ಟಡಗಳ ರಚನೆಯ ಕುರಿತು ಯೋಗ್ಯ ಅಧಿಕಾರಿಗಳಿಂದ ಪರೀಕ್ಷೆ ಮಾಡಿಸಬೇಕೆಂದು ಸೂಚಿಸಿದರು. ಕ್ರೀಡಾ ಗೋಪುರಕ್ಕಾಗಿ ರೂಪಾಯಿ 43,000/, ಮೋಟಾರ್ ನಿಲ್ದಾಣಕ್ಕಾಗಿ ರೂಪಾಯಿ ಒಂದುಲಕ್ಷ ವೆಚ್ಚವಾದರೂ ಅವುಗಳು ಈಗಾಗಲೇ ಹಾಳಾದ ಸ್ಥಿತಿಗಿಳಿದಿವೆ ಎಂದು ಹೇಳಿ ತನ್ನ ನಿರ್ಣಯವನ್ನು ಸಮರ್ಥಿಸಿ ಮಾತನಾಡಿದರು. ಶ್ರೀ ಪಿ. ಪಿ. ಡಿ. ಸೋಜರು ಈ ನಿರ್ಣಯವನ್ನು ಅನುಮೋದಿಸಿದರು. ಸಭಾಧ್ಯಕ್ಷರು ಉತ್ತರವಿತ್ತಮೇಲೆ ಶ್ರೀ ಶ್ರೀ ರೈಗಳು ತನ್ನ ನಿರ್ಣಯದಲ್ಲಿ ಮೋಟಾರ್ ನಿಲ್ದಾಣಕ್ಕೆ ಸಂಬಂಧಿಸಿದ ಭಾಗವನ್ನು ಹಿಂತೆಗೆದುಕೊಂಡರು. ಕ್ರೀಡಾ ಗೋಪುರದ ವಿಚಾರದಲ್ಲಿ ನಗರ ಸಭೆಯ ಇಂಜಿನೀಯರು ಪರಾಂಬರಿಸಿ ರಿಪೋರ್ಟು ಮಾಡಬೇಕೆಂದು ನಿರ್ಧಾರವಾಯಿತು.

ಕಂಕನಾಡಿ ಫಾದರ್ ಮುಲ್ಲರ್ ಆಸ್ಪತ್ರೆ- ಯ ಅಸಿಸ್ಟೆಂಟ್ ಡೈರೆಕ್ಟರಾಗಿ ರೆ| ಫಾ| ಎಮ್. ಫೆರ್ನಾಂಡೀಸ್ ಅವರು ನೇಮಕಹೊಂದಿರುವರು.

ಮಲ್ಪೆ-ಹಿಂದ್ ಕಿಸಾನ್ ಪಂಚಾಯತ ಮತ್ತು ಸೋಶಲಿಸ್ಟ್ ಪಾರ್ಟಿಯ ಆಶ್ರಯದಲ್ಲಿ ತಾ 5ರಲ್ಲು ಹೊಸ ಸಂತೆಯ ಪ್ರಾರಂಭೋತ್ಸವವು ವಕೀಲ್ ಶ್ರೀ ಎಮ್. ನರಸಿಂಹ ಕಾಮತರಿಂದ ನೆರವೇರಿಸಲ್ಪಟ್ಟಿತು.

ಸುರತ್ಕಲ್— ಸ್ಥಳೀಯ ಇಡ್ಯ ಬಿಲ್ಲ ಸಹಾಯಕ ಸಂಘದ ಆಶ್ರಯದಲ್ಲಿ ಇದೆ ತಾ 4ರಲ್ಲು ಬ್ರಹ್ಮ ಶ್ರೀ ನಾರಾಯಣ ಗುರ ಸೇವಾ ಭಜಕ ಮಂದಿರದಲ್ಲಿ 'ಶ್ರೀ ನಾರಾಯಣ' ಜಯಂತಿ ಉತ್ಸವವು ಬಹು ವಿಜೃಂಭಣೆಯಿಂದ ಜರಗಿತು.

ಕುಂಬಳೆ—ತಾ ೫ರಂದು ಜಿಲ್ಲಾ ಕಲೆಕ್ಟರ್ ಶ್ರೀ ಸಿ ಎ. ರಾಮಕೃಷ್ಣನ್ ಐ. ಸಿ. ಎಸ್ ರವರು ಸಿಂಯಾ ಅಣೆಕಟ್ಟನ್ನು ಸಂದರ್ಶಿಸಿದರು.

ಮಹಿಳೋದ್ಧಾರಣಾ ಖಾತೆಯ ಉದ್ಯೋಗಸ್ಥೆ ಶ್ರೀಮತಿ ಕಲ್ಲಾಟ್, ಬಿ. ಎ. ಎಲ್. ಟಿ ಯವರು ಕಳೆದ ವಾರ, ನಾರಾಯಣ ಮಂಗಲದ ಮಹಿಳೋದ್ಧಾರಣ ಕೇಂದ್ರವನ್ನು ಪರಿಶೋಧಿಸಿರುವರು.

ಇಲ್ಲಿ [illegible] ಮಾಡಿದ ಭತ್ತ ಬೆಳೆಯನ್ನು ಕೊಯ್ಯಲು ಪ್ರಾರಂಭ ಮಾಡಲಾಗಿದೆ. ಹೊಸ ಭತ್ತಕ್ಕೆ ಇಲ್ಲಿ [illegible] ಯಷ್ಟು ಬೆಲೆ ಸಿಂತಿದೆ. ಅಕ್ಕಿಯ ದಾರಣೆ ಸಹ ಕಡಿಮೆಯಾಗುತ್ತಾ ಇದೆ.

ಅಲ್ಲಲ್ಲಿ ಸೀತ ಜ್ವರದ ಸೋಂಕಿನ ಪ್ರಾರಂಭವಾಗಿದೆ.

[illegible]

ಶ್ರೀ ಕೆ. ಕೆ. ಶೆಟ್ಟರು ಬರೆದ
ನವೀನ ಸಾಮಾಜಿಕ ನಾಟಕ
ಬೆಲೆ: 0—10—0

ಋತುಸ್ರಾವ ನಿಂತಿತು
'ಕುಮಾರಿ' ಪಿಲ್ಸಗಳನ್ನು ಉಪಯೋಗಿಸಿದರೆ ಹದಕಪ್ಪು ಋತುಸ್ರಾವವಾಗ-ವುದು. ಹಕೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂಯಿಲ್ಲ. ಸಾಧಾರಾರು ಮುಂದಿಗೆ ಮಾತ್ರ ಗುಣವಾಗಿದೆ-
ಬೆಲೆ ರೂ. 3-| ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8-]ವಿ ಪಿ ಹಪ್ಪೆರಡಾಕ ಪ್ರತ್ಯೇಕ]
MIS· D. DEVEE, F· DS. (N. J.)
Tollygunge CALCUTTA,
ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು

ದಿ. ಕೆ. ಭಾರದ್ವಾಜರ
ಇಂಗ್ಲಿಷ್ × ಇಂಗ್ಲಿಷ್
ಕನ್ನಡ ಡಿಕ್ಷ್ನರಿ
ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ
ದೊಡ್ಡ ಸೈಜಿನ ನಿಘಂಟು.
ಬೆಲೆ ರೂ 5-6-0
ನವಭಾರತ ಬುಕ್‌ಡಿಪೊ, ಉಡುಪಿ

ಮಂಜೇಶ್ವರ- ಕಳೆದ ತಾ 31ರಲ್ಲಿ ಯುವಕ ಸಂಘದ ಆಶ್ರಯದಲ್ಲಿ ಶ್ರೀ ಎ. ಕೃಷ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಜರಗಿತು. ಶ್ರೀಗಳಾದ ಬಿ ವಿ. ಕಕ್ಕಿಲ್ಲಾಯ, ಎಮ್. ಎಚ್. ಕೃಷ್ಣಪ್ಪ, ಡಾ। ಎ. ಸುಬ್ಬರಾವ್ ಮೊದಲಾದವರು ಮಾತನಾಡಿದರು. ರೈತರಿಗೆ ಮೂಲಗೇಣಿ ಹಕ್ಕು ಸಿಗಬೇಕು ಮತ್ತು ಗೇಣಿ ಕಡಿಮೆಯಾಗಬೇಕು, ತಂಜಾವೂರಿನಲ್ಲಿ ಜಾರಿಗೆಬಂದ ಆರ್ಡಿನೆನ್ಸ್ ಈ ಜಿಲ್ಲೆಗೆ ಕೂಡಾ ಆದಷ್ಟು ಬೇಗನೆ ಜಾರಿಗೆತಂದು ಒಕ್ಕಲೆಬ್ಬಿಸುವುದನ್ನು ತಡೆಯಬೇಕೆಂಬ ನಿರ್ಣಯ ಪಾಸಾಯಿತು.

ಉಜ್ರೆ- ಸ್ಥಳೀಯ ಬುನಾದಿ ತರಬೇತಿ ಶಾಲೆಯಲ್ಲಿ ತಾ 1ರಲ್ಲಿ ಬಕ್ರಿದ್ ದಿನಾಚರಣೆಯು ಸದ್ರಿ ಶಾಲೆಯ ಸಹಾಯಕ ಉಪಾಧ್ಯಾಯ ಶ್ರೀ ಟಿ. ಶೀನಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಜನಾಬ್ ಇಬ್ರಾಹಿಮ್ ಮೌಲ್ವಿಯವರು 'ಬಕ್ರಿದ್' ಹಬ್ಬದ ವಿಚಾರದಲ್ಲಿ ಭಾಷಣವಿತ್ತರು.

ಹಂಗಾರಕಟ್ಟೆ ಬೆಂಗ್ರೆ—ಸಮುದ್ರದ ಅನಾಹುತದಿಂದಾಗಿ ಆಸ್ತಿ ಪಾಸ್ತಿಗಳನ್ನು ಕಳಕೊಂಡವರ ಹಾಗೂ ನಿರಾಶ್ರಿತರಾದವರ ಸ್ಥಿತಿಗತಿಗಳನ್ನು ಪರಿಶೀಲಿಸಿ, ಅವರಿಗೆ ಪರಿಹಾರ ದೊರೆಯುವ ಏರ್ಪಾಡು ಮಾಡುವಂತೆ ಜಿಲ್ಲಾ ಕಲೆಕ್ಟರರು ಖುದ್ದು ಈ ಸ್ಥಳವನ್ನು ಸಂದರ್ಶಿಸುವಂತೆ ವಿನಂತಿ ಮಾಡಿಕೊಳ್ಳುವ ನಿರ್ಣಯವೊಂದು ತಾ 4ರಲ್ಲಿ ಫಿಶರೀಸ್ ಶಾಲೆಯಲ್ಲಿ ಸೇರಿದ ಈ ಪರಿಸರದ ಜನತೆಯ ಸಭೆಯಲ್ಲಿ ಪಾಸಾಯಿತು. ಬೆಂಗ್ರೆ ನಿರಾಶ್ರಿತ ಸೇವಾ ಸಮಿತಿ ಕೂಡಾ ರಚಿಸಲಾಯಿತು.

ಮೂಲ್ಕಿ- ಸ್ಥಳೀಯ ಬೋರ್ಡ್ ಎಲಿಮೆಂಟರಿ ಶಾಲೆಯ ಮಕ್ಕಳ ತಿಂಗಳ ಹಬ್ಬವು ತಾ 30ರಲ್ಲಿ ವಿದ್ವಾನ್ ಶ್ರೀ ಟಿ. ದಾಮೋದರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಬಿ. ರತ್ನಾಕರ, ಎಮ್. ಹರಿರಾಮ ರಾವ್ ಮತ್ತು ಕೆ. ತಿಮ್ಮಪ್ಪ ಸೆಟ್ಟರು ಕಾಲೋಚಿತ ಮಾತುಗಳನ್ನಾಡಿದರು. ವಿವಿಧ ವಿನೋದಾವಳಿ, ಧನ್ಯವಾದಾರ್ಪಣೆ, ರಾಷ್ಟ್ರಗೀತೆಗಳಾಗಿ ಸಮಾರಂಭವು ಕೊನೆಗೊಂಡಿತು.

ಕಟಪಾಡಿ- ಸ್ಥಳೀಯ ಶ್ರೀ ವೆಂಕಟರಮಣ ಸ್ವಾಮಿ ಹಾ। ಎ। ಶಾಲೆಯಲ್ಲಿ 'ಸ್ಥಾಪಕರ ದಿನಾಚರಣೆ'ಯು ಇದೇ ತಾ 4ರಲ್ಲಿ ಉಡುಪಿ ಸೌತ್ ರೇಂಜಿನ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಎಚ್. ವೆಂಕಟರಾಯ ಗಡಿಯಾರರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲೆಯ ಕುರಿತು 195 [illegible] ರ ಸಂಕ್ಷಿಪ್ತ ವರದಿಯನ್ನು ಶಾಲಾ ಹೆಡ್ಮಾಸ್ಟರ್ ಶ್ರೀ ಯು. ರಾಮಚಂದ್ರ ಮಯ್ಯರವರು ಓದಿದರು. ಶಾಲಾ ಸ್ಥಾಪಕರೂ ಪ್ರವರ್ತಕರಾಗಿದ್ದ ದಿವಂಗತ ಶ್ರೀ ಪಾಂಗಾಳ ಶ್ರೀನಿವಾಸ ನಾಯಕರ ಗುಣಕಥನವನ್ನು ವಿದ್ವಾನ್ ಶ್ರೀ ಕೆ. ಆರ್. ಭಟ್ಟರು ಮಾಡಿದರು. ಶ್ರೀಗಳಾದ ಕೆ ವಾಸುದೇವ ಕಾಮತ್, ಕೆ. ಅನಂತಪದ್ಮನಾಭ ಪುರಾಣಿಕ, ಕೆ. ಆರ್. ಕೆ[illegible]ಯವರು ಸಂದರ್ಭೋಚಿತ ಮಾತುಗಳನ್ನಾಡಿದರು. ಆ ಮೇಲೆ ಭಾಷಣ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ಹಂಚಲಾಯಿತು. ಅ[illegible]ರು ಶಾಲೆಯ ಪ್ರಸ್ತುತ ಪರಿಸ್ಥಿತಿಯನ್ನು, ಶಾಲೆಯ ಏಳಿಗೆ ಬಗ್ಗೆ ಶಾಲಾ ಸ್ಥಾಪಕರೂ ಹಳೆಯವರೂ ಮಾಡಿದ ಪ್ರಯತ್ನಗಳನ್ನು ಪ್ರಶಂಸಿಸಿ ಮಾತನಾಡಿ, ಶಾಲೆಗೆ ಶ್ರೇಯವನ್ನು ಹಾರೈಸಿದರು. ಶಾಲಾ ಬಾಲ ಬಾಲಕಿಯರ ವಿವಿಧ ವಿನೋದಾವಳಿ ಪ್ರದರ್ಶನ, ಲಾ ಮುಖ್ಯೋಪಾಧ್ಯಾಯರಿಂದ ಧನ್ಯವಾದಾರ್ಪಣೆ, ರಾಷ್ಟ್ರಗೀತೆ ಕಾರ್ಯಕ್ರಮಗಳಿಂದ ಸಭೆಯು ಕೊನೆಗೊಂಡಿತು.

ಪಡೂರು—ಇಲ್ಲಿಯ ಶ್ರೀ ಮಹಾಲಿಂಗೇಶ್ವರ ಶಾಲಾ ಹಳೆ ವಿದ್ಯಾರ್ಥಿ ಸಂಘದ ಸಭೆಯು ಕಳೆದ ತಾ 16ರಲ್ಲಿ ಜರಗಿ, ವಯಸ್ಕರ ಶಿಕ್ಷಣ ಶಿಬಿರವೊಂದನ್ನು ಬೇಗನೆ ತೆರೆಯಬೇಕೆಂದು ನಿರ್ಣಯವಾಯಿತು.

ಉಳ್ಳಾಲ- ಸ್ಥಳೀಯ ಎಲಿಮೆಂಟರಿ ಶಾಲೆಯಲ್ಲಿ ಇದೇ ತಾ 1ರಲ್ಲಿ ರಾತ್ರಿ ವಯಸ್ಕರ ಶಿಕ್ಷಣ ತರಗತಿಯೊಂದು ತೆರೆಯ

ವಯಸ್ಕರ ಶಿಕ್ಷಣವೂ ಕಡ್ಡಾಯವಾಗಬೇಕು.

ನಮ್ಮ ಆರ್ಥಿಕ ಸಮಸ್ಯೆಯು ಬಗೆ ಹರಿದಂದೇ ನಮ್ಮ ಶಿಕ್ಷಣ ಸಮಸ್ಯೆಯೂ ಕೊನೆಗೊಂಡೀತು.

ಪ್ರಜಾಪ್ರಭುತ್ವದ ಹಾದಿಯಲ್ಲಿ ಮುನ್ನಡೆಯುತ್ತಿರುವ ಭಾರತದ ಸಮಸ್ಯೆಗಳಲ್ಲಿ ಪ್ರಜೆಗಳಿಗೆ ಪ್ರಜಾಪ್ರಭುತ್ವದ ಕುರಿತು ಸಾಕಷ್ಟು ಅರಿವಿಲ್ಲದಿರುವುದೇ ಪ್ರಾಮುಖ್ಯವಾದ ಒಗಟು. ನಮ್ಮ ಆವ ಸುಧಾರಣೆಯೂ ಯಾವ ಯೋಜನೆಯೂ ಬಯಸಿದಷ್ಟು ಫಲಕಾರಿಯಾಗದಿರಲು ಇದುವೇ ಮುಖ್ಯಕಾರಣ. ಚುನಾವಣೆಯಂತಹ ಮಹಾಕಾರ್ಯಗಳಲ್ಲಿ ಪ್ರಜಾಪ್ರಭುತ್ವದ ಅಜ್ಞಾನವು ಜನತೆಯಲ್ಲಿ ಎಷ್ಟರ ಮಟ್ಟಿಗೆ ಪ್ರಬಲವಾಗಿದೆ ಎಂಬ ಕಟು ಅನುಭವ ನಮಗಾಗಿದೆ. ಕುರುಡರು ಸೂರ್ಯನ ಕುರಿತು ಕಟ್ಟಿದ ಭಾವಗೀತೆಯಂತೆ ಕಿವುಡನು ಸಂಗೀತಕ್ಕೆ ತಾಳಹಾಕುವಂತೆ ಆಭಾಸವೂ ಹಾಸ್ಯಾಸ್ಪದವೂ ಆದರೀತಿಯ ಪ್ರಜಾಸತ್ತೆಯ ರೂಪವನ್ನೇ ನಮ್ಮವರಲ್ಲಿ ಹೆಚ್ಚಿನ ಪ್ರಜೆಗಳು ನೋಡುತ್ತಿದ್ದಾರೆ. ಭಾರತ ಸರಕಾರ ಇದನ್ನು ತಿಳಿಯದಿಲ್ಲ. ವಯಸ್ಕರು ಸಾಕ್ಷರಸ್ಥರಾಗಿ ಓದು ಬರಹ ಕಲಿತು ಪ್ರಜಾಪ್ರಭುತ್ವದ ರೂಪರೇಷೆಗಳನ್ನಾದರೂ ಅರಿತು ಕೊಳ್ಳಲಾಗುವಂತೆ ವಯಸ್ಕರ ಶಿಕ್ಷಣ ಪದ್ಧತಿಯು ಬಳಕೆಗೆ ಬಂದಿರುತ್ತದೆ.

ಸರಕಾರವು ಸಾಧಿಸಹೊರಟ ಈ ನಿರಕ್ಷರತಾ ನಿವಾರಣ ಅಭ್ಯಾಸವು ಸಾಮಾನ್ಯವಾದುದಲ್ಲ. ಮಾಡಿದ ವೆಚ್ಚ ಅತ್ಯಲ್ಪವಲ್ಲ. ವಯಸ್ಕರ ಶಿಕ್ಷಣ ಸಮಿತಿಗಳನ್ನು ಸ್ಥಾಪಿಸಿ ಅವುಗಳ ಸಹಾಯದಿಂದ ವಿದ್ಯಾ ಇಲಾಖೆಯು ಸಹಕಾರದಿಂದ ಅತ್ಯಂತ ಮುತುವರ್ಜಿಯಿಂದ ಅದು ಕಾರ್ಯೋನ್ಮುಖವಾಗಿದೆ. ನಮ್ಮ ನಿರಕ್ಷರಿ ಪ್ರಜೆಗಳ ಸಂಖ್ಯೆಯು ಚಿಕ್ಕದಲ್ಲ ನಮ್ಮಂತೇ ಓದು ಬರಹ ಬಾರದವರೇ ಎಂ ಎಲ್. ಎ, ಗಳಾಗಬೇಕೆಂಬ ಒಂದೇ ಘೋಷಣೆಯನ್ನು ಮುಂದಿಟ್ಟು ಎಲ್ಲಾ ನಿರಕ್ಷರರು ನಿರಕ್ಷರ ಪ್ರತಿನಿಧಿಯನ್ನೇ ಮಾತ್ರ ಆರಿಸಿ ಹೊರಟರೆ ನಿಜಕ್ಕೂ ಏನೂ ಅರಿಯದ ಬೆಪ್ಪುತಕಡಿ ದೂಮಣ್ಣನೊಬ್ಬನು ಮುಖ್ಯಮಂತ್ರಿ ಆಗುವುದರಲ್ಲಿ ಸಂದೇಹವೇ ಇಲ್ಲ, ಪ್ರಜಾಪ್ರಭುತ್ವದಲ್ಲಿ ಬಹು ಸಂಖ್ಯಾಕರೇ ಆಳುವವರೆಂದಾದ ಮೇಲೆ ನಿರಕ್ಷರರಿಂದ ತುಂಬಿ ತುಳುಕುವ ನಮ್ಮ ನಾಡನ್ನು ಅಂಥವರೇ ಆಳಹೊರಟರೆ ಹೇಗಾದೀತು?

ಓದು ಬರಹಗಳ ಗಂಧಗಾಳಿಯಿಲ್ಲದ ರಾಜ ಮಹಾರಾಜರುಗಳು ಭಾರತವನ್ನಾಳಿದ ಉದಾಹರಣೆಗಳಿಲ್ಲವೇ? ಎಂದು ತರ್ಕಕ್ಕಿಳಿಯಬಹುದಾದರೂ ಅರಸಾಗಿ ಆಳಲಿಕ್ಕೆ ಮಾತ್ರವಲ್ಲ ಆಳಾಗಿ ದುಡಿಯುವವನಿಗೆ ಸಹಾ ವಿದ್ಯಾಭ್ಯಾಸದ ಆಗತ್ಯವಿದೆಯೆಂಬುದನ್ನು ಯಾರ ಅಂತರಾತ್ಮವೂ ಅಲ್ಲಗಳೆಯಲಾರದು.

ಆದೆಷ್ಟೋ ವಯಸ್ಕರ ಶಾಲೆಗಳನ್ನು ಸರಕಾರವು ನಡೆಯಿಸುತ್ತಿದೆ. ಆದೆಷ್ಟೋ ತರಬೇತಿ ಶಿಬಿರಗಳು ಕಾರ್ಯನಿರತವಾಗಿವೆ ಶಿಕ್ಷಕರಿಗೆ ಎಂಟು ಹನ್ನೆರಡು ರೂಪಾಯಿ ಸಂಬಳ, ದೀಪ ಇತ್ಯಾದಿ ವೆಚ್ಚ, ಅಕ್ಷರಸ್ಥನಾಗಿ ಸರ್ಟಿಫಿಕೇಟು ಪಡೆದವನ ತಲಾ ಒಂದಕ್ಕೆಷ್ಟು ಬೋನಸ್ಸು, ಆ ಶಿಬಿರಗಳಲ್ಲಿ ವಯಸ್ಕರ ಓದುವಿಕೆಗೆ ಬೇಕಾಗಿ ದೈನಿಕ-ವಾರಪತ್ರಿಕೆ ಇತ್ಯಾದಿಗಳಿಗೆ ಆದೆಷ್ಟೋ ಹಣವು ವಿನಿಯೋಗಿಸಲ್ಪಡುತ್ತದೆ. ಸರಕಾರದ ಸಾಹಸ, ಹಣದ ವೆಚ್ಚ ಇತ್ಯಾದಿಗಳನ್ನೂ ಈ ಉದ್ಯಮದಿಂದ ಬಂದ ಪ್ರತಿಫಲವನ್ನೂ ತೂಗಿ ನೋಡಿದರೆ ಮಾತ್ರ ಮನಸ್ಸಿಗೆ ಸಮಾಧಾನವಾಗುವಂತಿಲ್ಲ. ಸಂಗೀತದಿಂದಲೇ ಸಂಭಾಷಣೆ ಮಾಡಬೇಕೆಂದು ವಿಧಿಸಿದ ಸಂಗೀತಪ್ರಿಯ ರಾಜನ ಆಜ್ಞೆಯು ಅಪ್ರಯೋಜಕ, ಕಷ್ಟದಾಯಕ ಮಾತ್ರವಲ್ಲ ಸಂಗೀತ ಶಾಸ್ತ್ರವನ್ನೇ ಅಧೋಗತಿಗಿಳಿಸುವಂತೆ ನಮ್ಮ ವಯಸ್ಕರ ಶಿಕ್ಷಣದ ಸಂಗತಿಯಾಗಿದೆ. ಈ ಸ್ಥಿತಿಯು ವಯಸ್ಕರ ಶಿಕ್ಷಣ ವಿಧಾನವು ಮುಂದುವರಿದಲ್ಲಿ ಎಂದೆಂದಿಗೂ ಈ ಸಮಸ್ಯೆಯೂ ಬಗೆಹರಿಯುವಂತಿಲ್ಲವೆಂಬುದನ್ನು ತಿಳಿದೂ ತಿಳಿದೂ ನಾವು ಹೌದೋ ಬಸವಾ? ಹಾಡು ಎಂಬ ಬಸವಣ್ಣಗಳಾಗಬೇಕೇಕೆ?

ವಯಸ್ಕರ ಶಿಕ್ಷಣ ಶಿಬಿರಗಳೆಲ್ಲವೂ ಅಪ್ರಯೋಜಕ ವೆಚ್ಚವಾದ ಎಲ್ಲಾ ಹಣವೂ ವ್ಯರ್ಥ ಎಂಬುದಕ್ಕೇ ನಾವು ಸೈಗುಟ್ಟಲಾಗುವುದಿಲ್ಲ. ಅವುಗಳಿಂದ ಸಾಧ್ಯವಿದ್ದಷ್ಟು ಪ್ರತಿಫಲ ಸಿಗುವಷ್ಟು ಕೆಲಸವಾಗುತ್ತಿದೆಯೆಂದೇ ಒಪ್ಪಿಕೊಳ್ಳೋಣ. ಕಲಿಸುವ ಶಿಕ್ಷಕ, ಸಹಾಯ ಕೊಡುವ ಸರಕಾರಗಳಿದ್ದರೂ ಕಲಿಯುವ ವಯಸ್ಕರು ಬೇಕಲ್ಲಾ? ಅವರನ್ನು ಆಕರ್ಷಿಸುವುದೆಂತು? ಅದೇ ನಮ್ಮ ಸಮಸ್ಯೆ.

ಯಕ್ಷಗಾನ, ತಾಳಮದ್ದಳೆ ಹರಿಕಥೆ ನಾಟಕಗಳಿಂದಲೇ ಸೆಳೆಯಲ್ಪಡಬಹುದು ನಮ್ಮ ನಿರಕ್ಷರರು ಎಂಬ ಅಭಿಪ್ರಾಯವಿದ್ದರೂ ದಿನಂಪ್ರತಿ ಈ ಕಾರ್ಯಕ್ರಮಗಳನ್ನಿರಿಸಲು ಯಾವ ಶಿಬಿರಕ್ಕೆ ಸಾಧ್ಯ? ಹಾಗೆ ಆಕರ್ಷಿಸಲ್ಪಟ್ಟರೂ ಅವನಿಗೆ ಓದು ಬರಹಗಳಲ್ಲಿ ಅಭಿರುಚಿಯಿಲ್ಲವಾದಲ್ಲಿ ಶಿಕ್ಷಣ, ವಿದ್ಯಾಭ್ಯಾಸ ಅನಗತ್ಯವೆಂದವನ ದೃಢ ಅಭಿಪ್ರಾಯವಿರುವಲ್ಲಿ ಏನು ಮಾಡಲಾದೀತು? ಕಲಿಸುವ ಶಿಕ್ಷಕನು ದಮ್ಮಯ್ಯ ಹಾಕಿ "ಮಹಾರಾಯಾ ಕಲಿ. ಓದು" ಎಂಬುದಕ್ಕಿಂತಲೂ "ಸ್ವಾಮಿ ಕಲಿಸಿ ಕೊಡಿ ಹೇಳಿ ಕೊಡಿ" ಎಂದು ಕಲಿಯುವವನು ಮುಂದಾದಲ್ಲಿ ಮಾತ್ರ ಎಲ್ಲವೂ ಸರಿಯಾದಂತೆ. ಆದುದರಿಂದ ತಾನು ಕಲಿಯಬೇಕು ತಾನು ಬರೆಯಬೇಕು ತಾನು ಓದಬೇಕು ಎಂಬ ಆಪೇಕ್ಷೆ ಕಲಿಯುವ ವಯಸ್ಕರಿಗೆ ಹುಟ್ಟಿದರೆ ಅತ್ಯಲ್ಪ ಖರ್ಚಿನಿಂದ ಅತೀ ಕಡಿಮೆ ಆಯಾಸನಿಂದ ಕಾರ್ಯ ಸಫಲವಾಗುವುದು.

ಕಲಿಯುವವನು ತಾನಾಗಿ ಕಲಿಸುವವನನ್ನು ಹುಡುಕಿಕೊಂಡು ಬರಬೇಕಾದರೆ ತಾನು ಕಲಿಯಲೇ ಬೇಕೆಂಬ ಪ್ರೇರೇಪಣೆ ಆತನಲ್ಲಿ ಬಲಗೊಳ್ಳಬೇಕು. ಆ ಪ್ರೇರೇಪಣೆ ಅವನ್ನ ಸುಮ್ಮನೆ ಬರಲಾರದು, ಪರಿಸ್ಥಿತಿಯ ಒತ್ತಡ ಬಲವತ್ತರವಾಗಬೇಕು. ಓದು ಬರಹವಿಲ್ಲದವನ ವ್ಯವಹಾರಕ್ಕೆ ತೊಂದರೆಗಳು ಬಂದಾಗ ತಾನಾಗಿ ಆತನು ಅದಕ್ಕಾಗಿ ಪ್ರಯತ್ನಿಸುವನು. ಈ ರೀತಿಯ ಬಾಹ್ಯ ಒತ್ತಡವೊಂದನ್ನು ಸರಕಾರವು ಜನರ ಮುಂದಿಟ್ಟರೆ ಆಗಲೇ ಈ ಸಮಸ್ಯೆ ಸುಲಭದಲ್ಲಿ ಬಗೆಹರಿಯುವುದು.

ಕೈವಶರಿನ ಎಲ್ಲಾ ರಿಕಾರ್ಡುಗಳನ್ನೂ ಅಸಿಂಧುವೆಂದು ಸಾರಿದರೆ ಜನರು ತಾವಾಗಿ ಕಲಿಯಲು ಬಯಸುವುದಿಲ್ಲವೆ? ಇಂತಹ ಪುಸ್ತಕವನ್ನು ಓದಿ ತಿಳಿಯಲಾಗದ ವಯಸ್ಕನಿಗೆ ಮತದಾನದ ಹಕ್ಕಿಲ್ಲವೆಂಬ ಕಾನೂನು ಬಂದಲ್ಲಿ, ಇಂತಿಷ್ಟು ಅವಧಿಯೊಳಗೆ ಇಂತಹ ಪರೀಕ್ಷೆಯಲ್ಲಿ ಪಾಸಾಗಿ ಸರ್ಟಿಫಿಕೇಟು ಪಡೆಯದಿದ್ದರೆ ಅವನಿಗೆ ಸಾಮಾನ್ಯ ಪ್ರಜೆಯ ಹಕ್ಕುಗಳು ಸಿಗಲಾರವು—ಇವುಗಳಲ್ಲಿ ಸೂಕ್ತವಾದ ಕಾನೂನೊಂದನ್ನು ಸರಕಾರವು ರಚಿಸಿದರೆ ಸ್ವಲ್ಪವಾದರೂ ಹೆಚ್ಚಿನ ಪ್ರತಿಫಲ ಕಂಡು ಬಾರದೇ?

ಕಾನೂನಿನಿಂದಲೇ ಎಲ್ಲವನ್ನು ಸಾಧಿಸಲಾಗುವುದಿಲ್ಲ, ಜನತೆಗೆ ಇಂತಹ ಕಾನೂನಿನ ಅನ್ಯಾಯವಾದೀತು ಎಂಬವಾದವು ಮುಂದೆ ಬರಬಹುದಾದರೂ, ಕೆಲವು ವಿಷಯಗಳನ್ನಾದರೂ ಸಾಧಿಸಲು ಕಾನೂನು ಬೇಕು, ಜನತೆಗೆ ಅನ್ಯಾಯವಾಗದಷ್ಟು ಸುಲಭ ರೀತಿಯಿಂದ ಸಾಧಿಸಬಹುದು ಎಂಬ ಸಮಾಧಾನಾಪೇಕ್ಷೆಯನ್ನು ಮುಂದೆ ತರಬಹುದು.

ವಯಸ್ಕರನ್ನು ತರಬೇತಿಗೊಳಿಸುವ ಕಡೆಗೆ ವಿಶೇಷ ಗಮನ ಕೊಟ್ಟು ಮಕ್ಕಳ ವಿದ್ಯಾಭ್ಯಾಸವನ್ನು ನಾವು ಕಡೆಗಣಿಸಿದರೆ ಅದು ಸಾಲ ತೀರಿಸದೆ ಬಡ್ಡಿ ಮಾತ್ರ ಕಟ್ಟಿ ತೃಪ್ತಿಪಡುವ ಮೂಢ ಸಾಲಿಗನಂತಾದೀತು. ಚಿಕ್ಕವರಿಗೆ ಕಡ್ಡಾಯ ಶಿಕ್ಷಣ ಎಷ್ಟು ಅಗತ್ಯವೆಂದು ನಾವು ತಿಳಿದೇ ಇದ್ದೇವೆ. ಮಕ್ಕಳ ಕಡ್ಡಾಯ ಶಿಕ್ಷಣ ಎಷ್ಟು ನ್ಯಾಯವೋ ಅಷ್ಟೇ ವಯಸ್ಕರ ಕಡ್ಡಾಯ ಶಿಕ್ಷಣವೂ ಸಮಂಜಸ. ಎಂದಿನ ವರೆಗೆ ನಾವು ಅವುಗಳನ್ನು ದಾಕ್ಷಿಣ್ಯ, ಅನ್ಯಾಯ ಮತ್ತು ಆರ್ಥಿಕ ಪರಿಸ್ಥಿತಿ ಎಂಬ ಕಾರಣಗಳನ್ನೊಡ್ಡಿ ಮುಂದೂಡುತ್ತೇವೋ ಅಂದಿನ ವರೆಗೆ ನಮ್ಮ ನಿರಕ್ಷರತಾ ಸಮಸ್ಯೆ ಬಗೆಹರಿಯಲಾರದು.

ಅಸಾಧಾರಣ ವಾಗ್ಮಿಗಳೂ ಗ್ರಂಥಕರ್ತರೂ ಆದ
ಶ್ರೀ. ಎಸ್. ಶಂಕರಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್., ಬಾರ್ ಎಟ್ ಲಾ, ಎಫ್. ಎಸ್, ಎಲ್ ಅವರು ಬರೆದ Tales of Ind ಎಂಬ ಕಥಾವಳಿಯ ಅನುವಾದ

ಭಾರತೀಯ ಕತೆಗಳು

ಅನುವಾದಕರು— ಶ್ರೀ ಕೊರಡ್ಕಲ್ ಶ್ರೀನಿವಾಸ ರಾವ್.

ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಬೇಕೆಂಬ ಹಿರಿಯಾಸೆ ಇದ್ದೇ ಇದೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸಂದರ್ಭೋಚಿತವಾದ ಉಪಮೆ, ಗಾದೆ, ಕಥೆ ದೃಷ್ಟಾಂತ ಇತ್ಯಾದಿಗಳು ಬರಬೇಕು. ಅಂತಹ ಅಮೂಲ್ಯ ಭಂಡಾಗಾರವೇ ಈ ಭಾರತೀಯ ಕತೆಗಳು.

ಎಲ್ಲರೂ ಅವಶ್ಯವಾಗಿ ಓದತಕ್ಕ ಅಪೂರ್ವ ಗ್ರಂಥ
151 ಕತೆಗಳು ಬೆಲೆ ರೂ. 1-12-0
ನವಭಾರತ ಪುಸ್ತಕ ಭಂಡಾರ, ಉಡುಪಿ

ನಡೆಯುವ ಚಿತ್ರ
ಹಿಂದುಸ್ಥಾನದ ಸುಂದರ ದೃಶ್ಯಗಳನ್ನು ಸಂದುಗೊಂದುಗಳಲ್ಲಿ ಹುಡುಕಿ ಚಂದವಾದ ವರ್ಣಚಿತ್ರವಾಗಿ ಜಗತ್ತಿಗೆ ತೋರಿಸಿದವರು:—
ಮೆಟ್ರೊ ಗೋಲ್ಡ್‌ವಿನ್ ಮೇಯರ್
ಇವರ
ಕಿಮ್ (ವರ್ಣ ಚಿತ್ರ)
ಭೂಮಿಕೆ ಎರೋಲ್ ಫ್ಲಿನ್, ಡೀನ್‌ಸ್ಟೋಕ್‌ವೆಲ್, ಪೋಲ್ ಲುಕಾಸ್
ಮೊದಲಾದವರು.
ಬರುವ ಚಿತ್ರ— ವೀರ್ ಅರ್ಜುನ್ (ನಿರೂಪರಾಯ್
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್

ಮಾನವ ಸಾಹಸದ ಅಪೂರ್ವ ನಿದರ್ಶನ

(4ನೇ ಪುಟದಿಂದ ಮುಂದುವರಿದುದು)

ಸಗಳಿಗೆ ಉಪಯೋಗಿಸುವ ಬಗ್ಗೆ ಹಲವಾರು ಪ್ರಯತ್ನ ನಡೆದದ್ದುಂಟು. ಒಬ್ಬ ಇಂಜೀನಿಯರರು ತುಂಬ ಸಾಹಸಪಟ್ಟು, ಜ್ವಾಲಾಮುಖಿಯಲ್ಲಿರುವ ಆವಿಯನ್ನು ಶೇಖರಿಸಿ, ಅದರಿಂದ ಪ್ರಾಕೃತಿಕ [illegible] ಪಡೆಯಲು ಸಮರ್ಥರಾದರು ಇದೇ ಶಕ್ತಿಯನ್ನುಪಯೋಗಿಸಿ ಹನ್ನೆರಡು ಸಾವಿರ ಅಶ್ವಶಕ್ತಿಯಷ್ಟು ವಿದ್ಯುತ್ತನ್ನು ಪಡೆದರು ಫ್ಲಾರೆನ್ಸ್ ನಗರದ ಆಗ್ನೇಯ ದಿಕ್ಕಿಗಿರುವ ಪೀಸಾ ಪ್ರದೇಶದಲ್ಲಿ ಇದೇ ರೀತಿಯ ಜ್ವಾಲಾಮುಖಿ ಶಕ್ತಿಯನ್ನು ಮಾನವೋಪಯೋಗಿ ಕೆಲಸಗಳಿಗೆ ಉಪಯೋಗಿಸುತ್ತಿರುವರು. ಅಮೇರಿಕದ ಇಡೋಹೋ ರಾಜ್ಯದ ರಾಜಧಾನಿ ಬೋಯಿಜ್‌ನಲ್ಲಿ ಆರು ತಿಂಗಳು ಸೆಖೆ, ಮತ್ತಾರು ತಿಂಗಳು ಛಳಿ ಆದರೆ ಇದೀಗ ಜ್ವಾಲಾಮುಖಿಯ ನೆರವಿನಿಂದ, ಛಳಿಗಾಲದ ಆರು ತಿಂಗಳಲ್ಲಿ ಕೂಡಾ ನಗರ ಬೆಚ್ಚಗಿರುವಂತೆ ಮಾಡಿದ್ದಾರೆ. ಜ್ವಾಲಾಮುಖಿಯೊಡನೆ ಸಂಬಂಧ ಜೋಡಿಸಿರುವ ಹಲವಾರು ಬಾವಿಗಳನ್ನು ತೋಡಿ, ಈ ಸೌಲಭ್ಯವನ್ನೊದಗಿಸಲಾಗಿದೆ.

ಎಟ್ನಾ ಪರ್ವತದ ವಿನಾಶಕಾರಿ ಶಕ್ತಿಯನ್ನು ಇಂದು ಮನೆಗಳನ್ನು ಬೆಚ್ಚಗಿರಿಸಲು ಉಪಯೋಗಿಸುತ್ತಾರೆ. ಪ್ರತಿಕೂಲ ಹವಾಮಾನ ಇರುವಾಗಲೂ ಬೆಚ್ಚನಾದ ವಾತಾವರಣವನ್ನು ಉಂಟುಮಾಡಿದ ಮನುಷ್ಯನ ಸಾಹಸ ಪ್ರಶಂಸನೀಯವಲ್ಲವೆ? ಐಸ್‌ಲೇಂಡ್ (ಹಿಮಭೂಮಿ) ಎಂಬ ದ್ವೀಪದಲ್ಲಿ, ಹೆಸರೇ ಸೂಚಿಸುವಂತೆ, ಸದಾ ಸರ್ವದಾ ಛಳಿ ತುಂಬಿದೆ. ಅಲ್ಲಿ ಬೆಂಕಿಯುರಿಸಲು ಕಟ್ಟಿಗೆಯೂ ಇಲ್ಲ. ಇದ್ದಲೂ ಇಲ್ಲ. ಎಣ್ಣೆಯೂ ಇಲ್ಲ. ಮನುಷ್ಯ ಬದುಕಿರುವುದೇ ಕಷ್ಟವಿರುವಾಗ ಇನ್ನು ಕಾರಖಾನೆಗಳು ಬಂದಾವೆ? ಬಂದು ಒಬ್ಬ ನಿವಾಸಿ, ಒಂದು ಬೆಚ್ಚಗಿನ ಬಾವಿಯೊಂದಿಗೆ ಸಂಬಂಧಿಸಿರುವಂತೆ ಗೋಶಾಲೆ ರಚಿಸಿದ ಪರಿಣಾಮವಾಗಿ, ಇಡೀ ಗೋಶಾಲೆ ಬೆಚ್ಚನಿದ್ದಿತು. ಇದರಿಂದ ಸರಕಾರಿ ಅಧಿಕಾರಿಗಳು ಆಕರ್ಷಿತರಾದರು. ಹೆಕಲಾ ಪರ್ವತದ ಜ್ವಾಲಾಮುಖಿಯೊಡನೆ ಸಂಬಂಧವಿರುವ ೭೦೦ ಬಾವಿಗಳು ಇಲ್ಲಿವೆ. ಇಂಥ ಇವುಗಳ ಬಲದಿಂದಲೇ ರಾಜಧಾನಿಯನ್ನು ಬೆಚ್ಚನಿರಿಸಲಾಗಿದೆ. ಆಶ್ಚರ್ಯದ ಮಾತೆಂದರೆ ಈ ಬಿಸಿನೀರಿನ ಪ್ರಭಾವದಿಂದ, ಇಲ್ಲಿಯ ವಾತಾವರಣವೂ ಬಿಸಿಯೇರಿ, ಈಗ ಸೆಖೆ ಪ್ರದೇಶದ ಬೆಳೆಯನ್ನು ಇಲ್ಲಿ ಬೆಳೆ, ಕೃಷಿಮಾಡುವುದಾ ಸಾಧ್ಯವಾಗಿದೆ.

— ೫ —

ಈಚೆಗೆ ಆಂಗ್ಲ ಭೂಗರ್ಭ ಶಾಸ್ತ್ರಜ್ಞರೊಬ್ಬರು ಹೀಗೆಂದರು—"ಇದ್ದಲಿನ ಅಭಾವವಿರುವ ಈ ದಿನಗಳಲ್ಲಿ ಜ್ವಾಲಾಮುಖಿ ಪರ್ವತದ ಅಪಾರ ಶಕ್ತಿ ಉಪಯೋಗಕ್ಕೆ ಬಾರದೆ ನಷ್ಟವಾಗುವುದು ವಿಷಾದಕರ. ಅದನ್ನು ಹೇಗಾದರೂ ಮಾಡಿ ಬಳಸಲು ಕಲಿತುಕೊಂಡು, ಇದ್ದಲು ಅಭಾವದ ಕಷ್ಟ ನೀಗಿಕೊಳ್ಳಬೇಕು." ಇಡೀ ಲೋಕದಲ್ಲಿ ಹೆಚ್ಚು ಕಡಿಮೆ ಐನೂರು ಜ್ವಾಲಾಮುಖಿ ಪರ್ವತಗಳಿವೆ. ಅವುಗಳ ಶಕ್ತಿಯು ಪೂರ್ಣ ಉಪಯೋಗ ಸಾಧ್ಯವಾದರೆ ಭವಿಷ್ಯದಲ್ಲಿ ಇದ್ದಲು ಅಗದು ತಗಲುವ ಸಂಕಟವೇ ಇಲ್ಲ. ಜ್ವಾಲಾಮುಖಿಯ ಪ್ರಾಕೃತಿಕ ಶಕ್ತಿ ಬಹಳ ಅಗ್ಗವಾಗಿಯೂ ದೊರೆತೀತು. ಮಹಾ ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟಿ ಅನ್ನದ ಉತ್ಪಾದನೆಯನ್ನು ಹೆಚ್ಚಿಸುವುದರಲ್ಲಿ ನಮ್ಮ ಇಂಜನಿಯರರು ತತ್ಪರರಿದ್ದಾರೆ ಹಾಗೆಯೇ ವಿಜ್ಞಾನಿಗಳು ಜ್ವಾಲಾಮುಖಿಯನ್ನು ರಚನಾತ್ಮಕ ಶಕ್ತಿ ನೀಡಲಿಕ್ಕೆ ಸರಿಯಾಗಿ ಉಪಯೋಗಿಸಲು ಸಂಪೂರ್ಣ ಕಲಿತರೆ—ಅದನ್ನು ಮಹಾವಿಜಯವೆಂದು ಗರ್ವದಿಂದ ಹೇಳಬಹುದು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. P. No 26/1952

ಜಾಲಯ್ಯ ಗೌಡ —ಅರ್ಜಿದಾರ

1 ಸಿದ್ದಪ್ಪ ಗೌಡ 2. ಶಿವಪ್ಪ ಗೌಡ — ಅಂಗರ ಗೌಡನ ಮಕ್ಕಳು 1ನೇ ಯವ ರೆಕ್ಯ ಗ್ರಾಮದ.. 2 ನೇ ಯವ ಯೇತಲಪಾಡಿ ಗ್ರಾಮದಲ್ಲಿ — ಎದ್ರಿ ..

ಕೋರ್ಟ್ ಹುಕುಂ ಪ್ರಕಾರ, 2ನೇ ಎದ್ರಿಗೆ ಈ ಮೂಲಕ ತಿಳಿಸುವುದೇನೆಂದರೆ — ನಿಮ್ಮ ತಂದೆ ಅಂಗರ ಗೌಡನು ದೇರಣ್ಣ ಗೌಡನಿಗೆ ತಾ. 26-4-39 ರಲ್ಲಿ ಬರೆಕೊಟ್ಟ ಸ್ಥಿರಾಸ್ತಿ ಕ್ರಯ ಚೀಟಿನಲ್ಲಿ ನಿಮ್ಮಿಬ್ಬರಿಗೆ ಸಂದಾಯ ಮಾಡುವ ಬಗ್ಗೆ ಅಮಾನತ್ತಿಟ್ಟ ರೂ. 200-0 0 ಮತ್ತು 26-4-50ರ ವರೆಗಾಯ್ತುನ ಬಡ್ಡಿ ಕೂಡಾ ಅರ್ಜಿದಾರನು ಮೇಲ್ಕಂಡ ಅರ್ಜಿ ಪ್ರಕಾರ ನಿಮಗೆ ಸಂದಾಯ ಮಾಡುವ ಬಗ್ಗೆ ಮಜ್ಕೂರು ಕೋರ್ಟಿಗೆ ಡಿಪೋಜಿಟು ಮಾಡಿರುವುದರಿಂದ ಅದನ್ನು ಪಡೆದು ರಶೀದಿ ಕೊಡುವರಿ ನಿಮ್ಮದೇನಾದರು ಆಕ್ಷೇಪವಿದ್ದರೆ ತಾ 1-10-1952 ರಲ್ಲಿ ಮೇಲ್ಕಂಡ ಕೋರ್ಟ್ ಮುಂದೆ ನೀವು ಸ್ವತಃ ವ ವಕೀಲರ ದ್ವಾರ ಹಾಜರಾಗಿ ಉಜರು ಹೇಳಿಕೊಳ್ಳತಕ್ಕದ್ದು ತಪ್ಪಿದ್ದರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು.

(Sd) **C. S. Shastry**
Vakil for Petitioner

ಪುತ್ತೂರು, ತಾ. 4-9-52.

ಬೊಂಬಾಯಿ ಬಿಲ್ಲವರ ಸಂಘದ ಅಧಿಕಾರಿಗಳಾಗಿ—ಈ ಕೆಳಗಿನವರು ಆರಿಸಲ್ಪಟ್ಟಿರುತ್ತಾರೆ. ಶ್ರೀಗಳಾದ ಬಿ. ಎಮ್. ಕೋಟ್ಯಾನ್ (ಅಧ್ಯಕ್ಷ), ಎಚ್. ಆರ್. ಅಂಚನ್ (ಉಪಾಧ್ಯಕ್ಷ), ಟಿ. ತನಿಯ (ಗೌರವ ಜನರಲ್ ಸೆಕ್ರೆಟರಿ), ವೈ. ಜಿ. ಬಂಗೇರ್ (ಸಹಾಯಕ ಕಾರ್ಯದರ್ಶಿ), ಎಚ್. ಎಸ್. ಪೂಜಾರಿ ಮತ್ತು ಎನ್. ಬಿ. ಅಮೀನ್ (ಜತೆ ಕೋಶಾಧಿಕಾರಿಗಳು), ಕೆ. ಬಿ. ಕುಕ್ಯಾನ್ ಮತ್ತು ವಿ. ಟಿ. ಅಮೀನ್ (ಜಾಯಿಂಟ್ ಲ್ಯಾಬ್ರೆರಿಯನ್ಸ್), ಕೆ. ಬಿ. ಸುವರ್ಣ (ಬಿಲ್ಲವರ ಸೇವಾದಳ ಜಿ. ಓ. ಸಿ.)

ಮದ್ರಾಸು—ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣ ಸಂಘದ ವಾರ್ಷಿಕ ಅಧಿವೇಶನವು ಕಳೆದ ತಾ. 24ರಲ್ಲು ಶ್ರೀ ಕೆ. ವೈ. ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಉಪಾಹಾರ, ಪ್ರಾರ್ಥನೆಗಳಾದ ಬಳಿಕ ಕೈಲಾಸವಾಸಿಗಳಾದ ಡಾ| ಯು. ರಾಮರಾವ್, ಡಾ| ಪಾಂಗಾಳ ಕೃಷ್ಣರಾವ್ ಮೊದಲಾದವರ ನಿಧನದ ಸಲುವಾಗಿ ಸಂತಾಪ ಸೂಚಿಸುವ ನಿರ್ಣಯವನ್ನು ಸಭಾಧ್ಯಕ್ಷರು ಮಂಡಿಸಿದರು.

ವಾರ್ಷಿಕ ವರದಿ ವಾಚನ ಮುಗಿದ ಬಳಿಕ ಮಾನ್ಯ ಮಂತ್ರಿ ಡಾ| ಯು. ಕೃಷ್ಣರಾಯರು ಈ ಸಂದರ್ಭದಲ್ಲಿ ನೂತನ ಪದವೀಧರರಿಗೆ ಸೂಕ್ತ ಸಲಹೆಗಳನ್ನಿತ್ತು ಮಾತನಾಡಿ ಪ್ರೋತ್ಸಾಹಿಸಿದರು. ಪದವೀಧರರ ಕಡೆಯಿಂದ ಡಾ| ಗೋವಿಂದ ರಾಯರು ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಮೆಡಿಕಲ್, ಇಂಜಿನಿಯರಿಂಗ್, ಲಾ, ಇತ್ಯಾದಿ ವಿಷಯಗಳನ್ನು ಅಭ್ಯಾಸಿಸುತ್ತಿರುವ 47 ವಿದ್ಯಾರ್ಥಿಗಳಿಗೆ ರೂಪಾಯಿ 8925ನ್ನು ಈ ವರ್ಷ ವಿದ್ಯಾರ್ಥಿ ವೇತನ ಕೊಡುವುದಾಗಿ ಹಣ ಮಂಜೂರಾಯಿತು. ಸಂಘದ ಕಾರ್ಯದರ್ಶಿ ಡಾ| ಪಾಂಗಾಳ ಶ್ರೀನಿವಾಸ ರಾಯರು ಧನ್ಯವಾದಗಳನ್ನರ್ಪಿಸುತ್ತ ಈ ಮೊದಲು ವಿದ್ಯಾರ್ಥಿ ವೇತನ ಪಡೆದವರು ಈಗ ಸ್ವತಂತ್ರ ಉದ್ಯೋಗದಲ್ಲಿದ್ದು ಇನ್ನು ತಾವು ಪಡೆದ ಹಣವನ್ನು ಮರುಪಾವತಿ ಮಾಡಿಲ್ಲವಾದುದರಿಂದ ಇನ್ನಾದರೂ ಆ ಕಾರ್ಯವನ್ನು ಪೂರೈಸಬೇಕೆಂದು ಕೇಳಿಕೊಂಡರು.

DO YOU KNOW?
THAT
THE VIJAYA BANK, LIMITED.

1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs 10 lacks
3. Has granted an average dividend of 6% to the Shareholders for the past 20 years.
4. Has a net work of Branches in South Kanara and one each in Mercara and Fort, Bombay
5. Offers attractive rates of interest on Deposits and Cash Certificates
6. Grants loans on easy terms to approved parties or on approved securities
7. Does afford full protection and rich return to all your monies.

ADOPT IT AS
"MY BANK"
THE VIJAYA BANK, LIMITED,
H. O., MANGALORE.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
[illegible] ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇದಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ್

ಸ್ವೀಕಾರ ವಿಮರ್ಶೆ

ಅಗಲಿದ ಅಕ್ಕ ಸರೋಜಿನಿ

ಬರೆದವರು: ಎಂ. ವಿ. ಹೆಗ್ಡೆ, ಪ್ರಕಾಶಕರು; ಅಂತರಂಗ ಕಾರ್ಯಾಲಯ, ಉಡುಪಿ, ಬೆಲೆ ಮೂರಾಣೆ)

ಭಾರತದ ಮಹಿಳಾಮಣಿ ಸರೋಜಿನಿ ದೇವಿ ನಾಯುಡುರವರ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಒಳಗೊಂಡ ಈ ಪುಸ್ತಕ ನಮ್ಮ ಅಕ್ಕತಂಗಿಯರೆಲ್ಲರೂ ಓದಿ, ಮನನ ಮಾಡುವಂತಿದೆ, ಕವಯಿತ್ರಿಯಾಗಿ ರಾಜಕಾರಣಿಯಾಗಿ ಸರೋಜಿನಿ ದೇವಿ ಮಾಡಿದ ವಿವಿಧ ಸೇವೆಗಳನ್ನು ಲೇಖಕರು ಚೆಲೋನಾದ ರೀತಿಯಲ್ಲಿ, ಹೃದಯಸ್ಪರ್ಶಿಯಾಗುವಂತೆ ವಿವರಿಸಿದೆ

ಅಮೃತ ಧಾರೆ-

(ಪರಮಾರ್ಥ ಬೋಧನೆಯ ಕಥೆಗಳು)

ಬರೆದವರ: ವೀರಾಇಪ್ಪಯಗಟಿ. ಪ್ರಕಾಶಕರು: ಅಜಿತ ಪ್ರಕಾಶನ, ಬೆಳಗಾವಿ. ಬೆಲೆ: ರೂ ೧-೦-೦ ಪುಟ: ೮೬

ವಿದ್ಯೆಗಳಲ್ಲಿ ಅಧ್ಯಾತ್ಮ ವಿದ್ಯೆಯೇ ಸರ್ವಶ್ರೇಷ್ಠವೆಂಬುದಾಗಿ ಗೀತೆಯಲ್ಲಿ ಉಲ್ಲೇಖವಿದೆ. ಲೌಕಿಕ ವಿದ್ಯೆಗಳಲ್ಲಿ ಪಾರಂಗತನಾದರೆ ಅದರಿಂದ ಶ್ರೇಯಸ್ಸು ಲಭಿಸುವುದಿಲ್ಲ. ಕ್ಷಣಿಕ ಸುಖ ದೊರೆತರೂ-ಪರಿಣಾಮದಲ್ಲಿ ಅದು ದುಃಖ ರೂಪವಿರುವುದು ಎಂದು ಮುಂತಾಗಿ ಭಾರತೀಯ ವೇದಾಂತ ಸಾರುತ್ತಿದೆ ಅನೇಕ ಸಾಧು-ಸಂತರು ಆಧ್ಯಾತ್ಮಿಕ ಮಾರ್ಗವಲಂಬಿಗಳಾಗಿ ಮುಕ್ತಿ ಪಡೆದಿರುವ ಉದಾಹರಣೆಗಳಿವೆ ಇನ್ನಿಲ್ಲೆಂದರೂ ಸಾಮಾಜಿಕ ಕಲ್ಯಾಣದ ದೃಷ್ಟಿಯಿಂದಲಾದರೂ ಜನ ಧರ್ಮನಿಷ್ಠರಾಗಿ ವರ್ತಿಸುವುದು ಇಷ್ಟವಾಗಿದೆ. ಇಂಥವರಲ್ಲಿ ಧರ್ಮದ ವಿವಿಧ ಸ್ವರೂಪಗಳನ್ನು ಅವರ ಒಳಗುಟ್ಟನ್ನು ಮತ್ತು ಇಹಪರ ಸುಖಗಳೆರಡಕ್ಕೂ ಕಾರಣವಾಗುವ ಬೋಧೆಯನ್ನು ಒಳಗೊಂಡಿರುವ ಈ ಪುಸ್ತಕ ಸ್ವಾಗತಾರ್ಹವೆನ್ನಲಡ್ಡಿಯಿಲ್ಲ. ಉಪನಿಷತ್ತುಗಳು ವೇದಗಳು, ಆರಣ್ಯಕಗಳು, ಯೋಗವಾಸಿಷ್ಠ ಮುಂತಾದ ವಿವಿಧ ದರ್ಶನ ಗ್ರಂಥಗಳಲ್ಲಿ ಲಭ್ಯವಿರುವ ನೀತಿ ಕತೆಗಳನ್ನು ಸಾಕಷ್ಟು ಪೂರ್ವ ಪೀಠಿಕೆಯೊಂದಿಗೆ ಈ ಪುಸ್ತಕದಲ್ಲಿ ಬರೆಯಲಾಗಿದೆ ಎಲ್ಲರೂ ಓದಿ ಮನವರಿಕೆ ಮಾಡಿಕೊಳ್ಳಬಹುದಾದ ಪುಟ್ಟ ಪುಸ್ತಕ [illegible]ವನ್ನಿತ್ತೇವೆ.

ನೋಟೀಸು

ಕುಂದಾಪುರ ಪಂಚಾಯ್ತ್ ಬೋರ್ಡ್ ಕೋರ್ಟಿನಲ್ಲಿ

C S. 30/50.

ವಾದಿ— ಶಿವರಾಮ ಶೆಟ್ಟಿ.
ಪ್ರತಿವಾದಿ—. ಕುಪ್ಪಯ್ಯ ಶೆಟ್ಟಿ.

ಕೆದೂರು ಬಡಾಡಿ ಮನೆ ನಾಗಯ್ಯ ಶೆಟ್ಟಿ ಅಳಿಯ ಅಸೋಡು ಗ್ರಾಮದಲ್ಲಿ ಇರುವವ.

ಪ್ರತಿವಾದಿಯು ವಾದಿಯ ಅಂಗಡಿಯಲ್ಲಿ ಲೇವಾದೇವಿ ನಡ್ಸಿ ಬಾಕಿ ಆದ ರೂ 23 9 9ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ದಾವಾ ದಾಖಲು ಮಾಡಿರುತ್ತಾನೆ. ಸದ್ರಿ ದಾವೆಯು ತಾ 17-9-52 ಕ್ಕೆ ತನಿಖೆಗೆ ಇಟ್ಟಿದೆ ಎಂಬ ಸಂಗ್ತಿ ಈ ಮೂಲಕ ಪ್ರತಿವಾದಿಗೆ ತಿಳಿಸಲಾಗಿಯದೆ.

S. Shivarama Shetty
ವಾದಿ

ತೃಪ್ತಿಕರವಾದ ವಸತಿ— ಹಿತಕರವಾದ ಊಟ— ರುಚಿಕರವಾದ ಉಪಾಹಾರ ಇವುಗಳಿಗೆ
ಆದರ್ಶ ನಿಲಯವೆಂದರೆ
ವುಡ್ ಲೇಂಡ್ಸ್
ಉ ಡು ಪಿ-
ಯಾತ್ರಿಕರಿಗೂ ಪ್ರಯಾಣಿಕರಿಗೂ
ಸರ್ವ ಅನುಕೂಲವಾಗುವಂತೆ
ನಗರದ ಕೇಂದ್ರಭಾಗದಲ್ಲಿದೆ

(೨ನೇ ಪುಟದಿಂದ ಮುಂದರಿದುದು)

ಶಿಕ್ಷಣ ಕ್ಷೇತ್ರದಲ್ಲಿ

ಇದರಂತೆ ಹೊಸ ಸಮಾಜದ ರಚನೆಯೊಡನೆ, ಶೈಕ್ಷಣಿಕ ಕ್ರಮದಲ್ಲಿ ಬದಲಾವಣೆಯೂ ಅಪೇಕ್ಷಣೀಯ. ಆಧುನಿಕ ಶಿಕ್ಷಣವು ಕ್ರಿಯಾತ್ಮಕವಾದ ಮತ್ತು ವೃತ್ತಿಪರವಾದ ಚೌಕಟ್ಟಿನಲ್ಲಿ ಬೆಳೆಯಲು ಹವಣಿಸುತ್ತಿದೆಯಾಗಿ ಲೋರೇನೆ ಫೊ. ಹೇಳುತ್ತಾನೆ. ಅಮೇರಿಕದ ಟೆನೆಸಿ ಕಣಿವೆ ಯೋಜನೆಯ (ಟಿವಿಎ) ಪ್ರಥಮಾಧ್ಯಕ್ಷ ಆರ್ಥರ್ ಮಾರ್ಗನ್' "ಮಕ್ಕಳು ಶಾಲೆಗಳಲ್ಲಿ ವಿಷಯವನ್ನೂ, "ಹೊರಗಡೆ ಬದುಕಿನ ಬಗೆಯನ್ನೂ" ಕಲಿಯುವನೆಂದು ಹೇಳುತ್ತಾನೆ. ಭಾರತದಲ್ಲಿ ಈಗಾಗಲೇ ಯಶಸ್ಸು ಪಡೆದ ನಿಲೋಕೇರಿ, ಫರಿದಾಬಾದ, ಇಟಾವಾದಂಥ ಜನಪದ ಅಭಿವೃದ್ಧಿ ಯೋಜನಾ ಕೇಂದ್ರಗಳಲ್ಲಿ ಕೂಡ ದುರ್ದೈವವೆಂಬಂತೆ ಪುಸ್ತಕಜ್ಞಾನಕ್ಕೆ ಪ್ರಾಶಸ್ತ್ಯ ಕೊಡಲಾಗಿದೆ. ಜನಪದ ಅಭಿವೃದ್ಧಿ ಯೋಜನೆಯ ಕ್ಷೇತ್ರಗಳಲ್ಲಿ ವಯಸ್ಕರಿಗೆ ಸ್ವಾವಲಂಬನ, ಪರಿಶ್ರಮ, ಪರಸ್ಪರ ಸಹಕಾರ ಮುಂತಾದ ಆದರ್ಶಗಳ ಬಗ್ಗೆ ಹಿತೋಪದೇಶ ಕೊಡುವರು. ಹಾಗೆಂದು ಅಲ್ಲಿಯ ಎಳೆ ವಯಸ್ಸಿನ ಮಕ್ಕಳಿಗೆ, ನಾಳಿನ ಜನಾಂಗಕ್ಕೆ, ಹಿಂದಿನ ಅನಪೇಕ್ಷಿತ ಪದ್ಧತಿಯಂತೆ ಶಿಕ್ಷಣ ನೀಡಲಾಗುತ್ತಿದೆ!

ಗಾಂಧೀಜಿ ಮೂಲ ಶಿಕ್ಷಣ ಪದ್ಧತಿಗೆ ಪ್ರಾಶಸ್ತ್ಯ ಕೊಟ್ಟರು ಭಾರತದ ಹಲವೆಡೆ ಅದನ್ನು ಪ್ರಾಯೋಗಿಕ ರೂಪದಲ್ಲಿ ಅನುಸರಿಸಿ, ಯಶಸ್ಸು ಸಂಪಾದಿಸಲಾಗಿದೆ ಕೇಂದ್ರ ಶೈಕ್ಷಣಿಕ ಮಂತ್ರಿಮಂಡಳ ಹಾಗೂ ಯೋಜನಾ ಆಯೋಗಗಳೂ ಈ ಪದ್ಧತಿಯನ್ನು ಪುರಸ್ಕರಿಸಿವೆ. ಕಾರಣ ಜನಪದ ಅಭಿವೃದ್ಧಿ ಯೋಜನಾ ಕ್ಷೇತ್ರಗಳಲ್ಲಿ ಕೂಡ ಈ ಕ್ರಮ ಅನುಸರಿಸಲ್ಪಡಬೇಕು.

ವಿಕೇಂದ್ರಿತ ಔದ್ಯೋಗೀಕರಣ

ಬಡದೇಶವಾದ ಭಾರತದಲ್ಲಿ ನಿರುದ್ಯೋಗ--ಅದಕ್ಕೂ ಹೆಚ್ಚಾಗಿ ಕಡಿಮೆ ಉದ್ಯೋಗದ ಸಮಸ್ಯೆಗಳನ್ನು ಕಡೆಗಣಿಸಿದರೆ ನಡೆಯದು. ಇದನ್ನು ಪರಿಹರಿಸುವ ಏಕಮಾತ್ರ ಉಪಾಯವೆಂದರೆ—ದೇಶಾದ್ಯಂತವಾಗಿ ಗುಡಿ ಕೈಗಾರಿಕೆಗಳನ್ನೂ, ಸಣ್ಣ ಪ್ರಮಾಣದಲ್ಲಿ ಮೂಲ ಉದ್ಯೋಗಗಳನ್ನೂ ಎಲ್ಲೆಡೆಯಲ್ಲೂ ಕೈಗೊಳ್ಳುವುದು. ಪೂರ್ಣೋದ್ಯೋಗ ದೊರಕುವುದಕ್ಕೂ ಸ್ವಾವಲಂಬನಕ್ಕೂ ಇದು ನೆರವಾಗುವುದು ಮಾತ್ರವಲ್ಲದೆ—ಈ ಬಗೆಯ ವಿಕೇಂದ್ರೀಕೃತ ಔದ್ಯೋಗೀಕರಣದಿಂದ ರಾಷ್ಟ್ರಕ್ಕೆ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ರಾಜಕೀಯವಾದ ಲಾಭ ದೊರಕುವುದು ನಿಶ್ಚಯ. ಅಮೇರಿಕೆಯಂಥ ಮಹಾ ಔದ್ಯೋಗೀಕರಣದ ದೇಶದಲ್ಲಿ ಕೂಡ ನಗರದ ಔದ್ಯೋಗೀಕರಣದಿಂದ ಸಂಕಟ ಬರುವುದು ನಿಶ್ಚಯವೆಂಬ ಭಾವನೆ ಇದೀಗ ಬಲಿಯತೊಡಗಿದೆ. ಹಳ್ಳಿಯ ಪುನರುತ್ಥಾನಕ್ಕಾಗಿ ಗ್ರಾಮ ಕುಟುಂಬಗಳನ್ನು ಪ್ರಯೋಗ ಶಾಲೆಯಾಗಿ ತೆಗೆದುಕೊಳ್ಳಬೇಕೆಂದೂ ಅವರು ತಿಳಿಯುತ್ತಾರೆ. ಅರ್ಥಿಕವಾದ ತೊಡಕುಗಳುದ್ಭವಿಸಿದಾಗ—ಹಳ್ಳಿಯ ಉದ್ಯೋಗಗಳು ಮೆತ್ತನೆಯ ಗಾದಿಯಂತೆ ವರ್ತಿಸುವುದಾಗಿ ಆರ್ಲ ಹಚ್ ಹೇಳುತ್ತಾರೆ. ಆರ್ಥರ್ ಮಾರ್ಗನ ಈ ದಿಸೆಯಲ್ಲಿ ಅನೇಕ ಪ್ರಯೋಗಗಳನ್ನು ಕಳೆದ ಹಲವು ವರ್ಷಗಳಿಂದ ಮಾಡಿ ನೋಡಿ—ಇದರ ಸತ್ಯವನ್ನು ಮನವರಿಕೆ ಮಾಡಿಕೊಂಡಿದ್ದಾರೆ. ಹೀಗೆ ಅಮೇರಿಕನರು ಕೂಡ ವಿಕೇಂದ್ರೀಕರಣ ಹಾಗೂ ಗ್ರಾಮೋದ್ಯೋಗಗಳ ಕಡೆಗೆ ಹೆಚ್ಚು ಶ್ರದ್ಧೆಯಿಂದ ನೋಡುತ್ತಿರುವಾಗ--ನಾವು ಯಾಂತ್ರಿಕ ಔದ್ಯೋಗೀಕರಣಕ್ಕೆ ಮನಗೊಡುತ್ತಿರುವುದು ಆಶ್ಚರ್ಯವೆಂದು ಪ್ರೊ. ಎಸ್. ಎನ್. ಅಗರ್‌ವಾಲಾ ಹೇಳುತ್ತಾರೆ. ಘಟನೆಯಲ್ಲಿ ಒತ್ತಿ ಹೇಳಿದ ಚಲೋ ಜೀವನ ಮಟ್ಟವನ್ನು ಜನರು ಹೊಂದುವಂತೆ ಮತ್ತು ದುಡಿದುಣ್ಣಲು ಅಧಿಕಾರ ಪಡೆಯುವಂತೆ ಗ್ರಾಮಾಂತರ ಪ್ರದೇಶಗಳಲ್ಲಿ ಔದ್ಯೋಗಿಕ ಸಂಘಗಳು ಏರ್ಪಡುವುದು ಅನಿವಾರ್ಯ.

ವಿನಯಶೀಲ ನಡವಳಿಕೆ

ಇರ್ವಿನ್ ಸಾಂಡರ್ಸರ ಎತ್ತಿತೋರಿಸುವಂತೆ, ಜನರ ಆಚಾರವಿಚಾರಗಳು ಒಂದೊಂದು ಕಡೆ ಒಂದೊಂದು ತೆರನಾಗಿವೆಯಾಗಿ, ಸ್ಥಳೀಯ ವಾತಾವರಣವನ್ನು ಹೊಂದಿಕೊಂಡೆ ಕೆಲಸ ನಿರ್ವಹಿಸುವುದಗತ್ಯವಿದೆ. ನಮ್ಮ ಸ್ವಕಪೋಲ ಕಲ್ಪಿತ ಅಭಿಪ್ರಾಯದಂತೆ—ಒಂದು ಯೋಜನೆಯನ್ನು ಎಲ್ಲೆಡೆಯಲ್ಲೂ ಸಮರೂಪದಲ್ಲಿ ಕಾರ್ಯವಿಧಾನಕ್ಕೆ ಇಳಿಸಬಯಸುವಷ್ಟು ನಿಷ್ಠುರರಾದರೆ—ಅದರಿಂದ ಅಪಯಶಸ್ಸು ಕಟ್ಟಿಟ್ಟದ್ದು. ಗ್ರಾಮಾಭಿವೃದ್ಧಿಯಲ್ಲಿ ಹಳ್ಳಿಗರ ಆಸಕ್ತಿಯನ್ನು ಕೆರಳಿಸಿ, ಅವರ ಆಗತ್ಯಗಳ ಕಲ್ಪನೆಯನ್ನು ಮಾಡಿಕೊಳ್ಳುವ ಮಟ್ಟಿಗೆ ನಮ್ಮ ಮನಸ್ಸು ಸ್ವಚ್ಛವಿರಬೇಕು. ನಿಜವಾಗಿ—ಹಳ್ಳಿಗರೇ ತಮಗೇನು ಬೇಕೆಂಬುದನ್ನು ನಿಶ್ಚಯಿಸಿ ಯೋಜನೆಯ ರೂಪುರೇಷೆ ಹಾಕಬೇಕು. ಹಳ್ಳಿಯ ಪುನರುದ್ಧಾರದ ಕಾರ್ಯ ಪ್ರಣಾಳಿಗಳಲ್ಲಿ ವೈವಿಧ್ಯಕ್ಕೆ, ನಯ ಮತ್ತು ನಾಜೂಕಿಗೆ ಆಸ್ಪದವಿದ್ದು--ಅದು ನೀರಿನಂತೆ ಸರಿಯಬೇಕು. ಯಾರ ಪಾತ್ರೆಯಲ್ಲಿ ಅದು ತುಂಬಿ ನಿಲ್ಲುವಂತಿದ್ದರೆ ಚೆನ್ನ.

ಕೊನೆಯದಾಗಿ--ಅಧಿಕಾರಿಗಳು ಹಳ್ಳಿಗರ ಅಜ್ಞಾನ ಮತ್ತು ಕೊರತೆಗಳನ್ನು ನೀಗಿಸುವೆವೆಂದು ಗರ್ವಪಟ್ಟು ಹೋಗಬಾರದು. ನಾವು ಭಾವವನ್ನೇ ಪ್ರಥಮಾವಶ್ಯಕತೆ ಎನ್ನಬಹುದು. ತಾನು ದೊಡ್ಡವನೆಂದುಕೊಂಡು ಅಧಿಕಾರಿ ನಡೆದರೆ--ಹಳ್ಳಿಗರ ವಿಶ್ವಾಸವನ್ನು ಅವನೆಂದೂ ಪಡೆದುಕೊಳ್ಳಲಾರ. ಸತ್ಯಾನ್ವೇಷಿಯಾಗಿ--ವಿನಯಶೀಲನಾಗಿದ್ದರೆ ಮಾತ್ರ ಜನ ಒಲಿಯುವರು. ಗಾಂಧೀಜಿಯ ಕೃತಿಯೊಂದೂ ಚಟುವಟಿಕೆಗೆ ಈ ತೆರನಾದ ಮನೋಭಾವವೇ ಸ್ಫೂರ್ತಿಕೊಟ್ಟಿತು. ನಮ್ರತೆಯನ್ನೇ ದೇವರೆಂದು ವಿಧಾಯಕ ಕಾರ್ಯಕರ್ತರು ಆರಾಧಿಸಬೇಕಾಗಿ ಗಾಂಧೀಜೀ ಹೇಳುತ್ತಿದ್ದರು. ನಮಗಿಂತ ಹೀನ-ದೀನರಾಗಿರುವವರಿಗೆ "ಉಪಕಾರ" ಮಾಡುವೆವೆಂದೂ ಅವರ ಉದ್ಧಾರ ಮಾಡುವೆವೆಂದೂ ಅಹಂಕಾರದಿಂದ ನಡೆದುಕೊಂಡರೆ--ಭಾರತದ ಮಹಾ ಜೀವಗಳಾದ ರಾಮ, ಬುದ್ಧ, ಗಾಂಧೀ ಮುಂತಾದವರ ಆದರ್ಶಕ್ಕೆ ಎಳ್ಳು ನೀರು ಬಿಟ್ಟು ಕೈ ತೊಳೆದುಕೊಂಡಂತೆಯೇ.

ಲಕ್ಷ್ಮಿ
ಸಂತಾಲ್ ಮಾತ್ರೆ

[illegible] ದಿನದಿಂದ ಬಹುಕಾಲದ ಮೇಹ, [illegible] ಮೂತ್ರದ ಉರಿ, ಮೂತ್ರದ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವದು, ತೊಡೆ ಸಂದಿನಲ್ಲಿ ಗರಳೆ ಬರುವದು. ಕಾಲುಗಂಟು ವೇದನೆ, ಕಣ್ಣಲ್ಲಿ ಕೀವು ಬರುವದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ, ಸ್ತ್ರೀಯರ ಬಿಳಿ ಸೆರಗು ಇವೆಲ್ಲಾ ಖಾತ್ರಿಯಾಗಿ ಗುಣ ಹೊಂದುವದು_ ಇತರರು ಈಗಿನ ಉಷ್ಣಕಾಲದಲ್ಲಿ ಗರ್ಮಿ ಕಂಡುಬಂದರೆ ರಾತ್ರೆ ಮಲಗುವಾಗ ಒಂದು ಮಾತ್ರೆ ಸೇವಿಸಿ ಹಾಲು ಕುಡಿದರೆ ಸುಖವಾಗಿ ನಿದ್ರೆ ಬಂದು ಸುಖವಿರೇಚನೆಯಾಗಿ ದೇಹದ ಉಷ್ಣ ಹೋಗುವದು.

ಶೀಸೆ 1ಕ್ಕೆ ರೂ. 2-0-0

ಏಜಂಟ್ಸ್:

ಷಾ ಕಂಪೆನಿ, ಮಂಗಳೂರು.

ವಿವಿಧ ಪಾತ್ರೆಗಳು



ಯಾವತ್ತೂ, ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಿಲ್ಪಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

THE BOMBAY LIFE ASSURANCE COMPANY, LTD.
ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೋ., ಲಿಮಿಟೆಡ್
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು
ಪ್ರಧಾನ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ
ಇವರ ಶಾಖಾ ಕಚೇರಿಗಳು:-
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.
ವಿಮೆ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ವಿಚಾರ ಪ್ರಚೋದಕವಾದ ಪ್ರತಿಯೊಬ್ಬರೂ ಓದಲೇಬೇಕಾದ ನವನವೀನ ಪುಸ್ತಕಗಳು!
ಗೀತಾ ರಹಸ್ಯವನ್ನು ತಿಳಿಯ ಬಯಸುವವರಾರು?
ದೀ ಹೊಸಕೆರೆ ಚಿದಂಬರಯ್ಯ ಕೃತ ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ
ಪುಟಗಳು 428 ಬೆಲೆ 0-12-0 ಅಂಚೆವೆಚ್ಚ 0 4-0
100 ಪ್ರತಿಗಳಿಗೆ ರೂ. 50. 250ಕ್ಕೆ ರೂ. 140; 500ಕ್ಕೆ ರೂ 250.

ಕತೆ, ಕಾದಂಬರಿ ನಾಟಕ, ಚಿತ್ರ, ಪ್ರಬಂಧ, ಹರಟೆ ಮೊದಲಾದ, ನೋಡಿದವರ ಬಿಡದಿರುವ ಅಂತರಂಗ ಪ್ರಕಟನಾಲಯದ ರೂ 30 ಕ್ರಯದ 85 ಪ್ರಕಟಣೆಗಳನ್ನು ಒಮ್ಮೆಯೇ ತರಿಸಿಕೊಳ್ಳುವವರಿಗೆ ರೂ 24ಕ್ಕೆ ಕೊಡಲಾಗುವುದು.

ನಾರೀಹೃದಯ ರೂ	1	8	ಪರಿಹಾರ ರೂ.	2	8	ನೆನಪಿಗಾಗಿ ರೂ.	2	6
ಭಾರತೀಯ ಕತೆಗಳು	1	12	ಮಧುವನ	3	0	ಕಾವ್ಯಸಾಮ್ರಾಜ್ಯ	1	8
ಸನ್ಯಾಸಿಯ ಕೋಗಿನಲ್ಲಿ	1	12	ಘಂಟಮಾರ	2	0	ಪ್ರೇಮ ವಿಜಯ	1	4
ಕವಿತಾ ಕಾಮಿನಿ	2	0	ಸಂವಾದಿನಿ	1	0	ರಂಗಭೂಮಿ	0	10
ಕುಲವಿಲ್ಲದ ಹಣ	2	0	ಜಮೀನ್ದಾರ	1	8	ಭಾರತದಲ್ಲಿ ಜಾತಿಭೇದ	1	0
ವ್ಯಭಿಚಾರಿಣಿ [illegible]	1	4	ದೇಶಭಕ್ತ	1	4	ವೀರ ಸಾವರ್ಕರ	1	4
ಕುಲಭವತ್ತು ಇಂಗ್ಲಿಷ್	2	0	ಮನೆ ಮದ್ದು	2	8	ಕದಂಬ	1	4
ನೀತಿವಿನೋದ ಕತೆಗಳು	0	12	[illegible]	0	12	ಭಾಗ್ಯಲಕ್ಷ್ಮಿ	1	4
ಜೀವನ ಸಂಗ್ರಾಮ	1	8	ಸೇವಾಪಥ	0	8	ಲೋಪಾಮುದ್ರೆ	0	8

ಇವೇ ಮೊದಲಾದ ನೂರಾರು ಬಗೆಯ ಉಪಯುಕ್ತ ಪುಸ್ತಕಗಳ ಪಟ್ಟಿಗಾಗಿ ಬರೆಯಿರಿ ವ್ಯಾಪಾರಿಗಳಿಗೂ, ಪುಸ್ತಕಭಂಡಾರಗಳಿಗೂ ವಿಶೇಷ ಸವಲತ್ತುಗಳಿವೆ.
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

All Secondary Schools may Subscribe to "Navayuga" weekly Since it has been approved by the Director of Public Instruction, Madras

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. 74/50

ಕುಂಞಾಣ ರೈ —ವಾದಿ
ಅಬ್ಬಾಸ್ ಬ್ಯಾರಿ —ಪ್ರತಿವಾದಿ

1). ಸುಬ್ಬಕ್ಕೆ ಚೆನ್ನಪ್ಪ ರೈ ವಿಧವೆ 2, ಜತ್ತಪ್ಪ ರೈ. 3, ಕಮಲ ಯಾನೆ, ಗೋಪಿ —1ನೇ ಸುಬ್ಬಕ್ಕನ ಮಕ್ಕಳು. ಪುತ್ತೂರು ತಾಲ್ಲೂಕು ಕೆದಂಬಾಡಿ ಗ್ರಾಮದ ಕನ್ನಡಮೂಲೆಯಲ್ಲಿರುತ್ತಾರೆ—

ಇವರಿಗೆ

ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸುವುದೇನೆಂದರೆ—

ಮೇಲ್ಕಂಡ ವಾದಿಯು ಪ್ರತಿವಾದಿ ಮೇಲೆ ಕಳೆದ 1948-49ನೇ ವರುಷದ ಗೇಣಿ ಬಾಕಿ ವಗೈರೆ ರೂ. 218 0-0ಕ್ಕೆ ಮಾಡಿದ ಮೇಲಿನ ದಾವೆಯಲ್ಲಿ ನಿಮ್ಮನ್ನು ಕೂಡಾ ಸಪ್ಲಿಮೆಂಟಲ್ ಪ್ರತಿವಾದಿಗಳಾಗಿ ಕಕ್ಷಿಯಲ್ಲಿ ಸೇರ್ಪಡಿಸಬೇಕೆಂತ ವಗೈರೆ ವಾದಿ ಕೊಟ್ಟ R. I. A. 750/52ನೇ ಅರ್ಜಿ ಮತ್ತು ದಾವೆ ಕೂಡಾ ತಾ. 15-9-52ಕ್ಕೆ ತನಿಖೆಗೆ ಇಟ್ಟಿದೆ. ಆದ್ದರಿಂದ ಸದ್ರಿ ದಾವೆ ಮತ್ತು ಅರ್ಜಿ ಕುರಿತು ತಕರಾರು ನಿಮಗೇನಾದರೂ ಆಕ್ಷೇಪ ಇದ್ದರೆ ಸದ್ರಿ ವಾಯಿದೆ ದಿನ ಪೂರ್ವಾಹ್ನ ಗಂಟೆ 11ಕ್ಕೆ ನೀವು ಸ್ವತಃ ಯಾ ವಕೀಲದ್ವಾರಾ ಕೋರ್ಟು ಮುಂದೆ ಹಾಜರಾಗಿ ವ್ಯವಹರಿಸದಿದ್ದರೆ, ನಿಮ್ಮನ್ನು ಏಕಪಕ್ಷ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

M Sadashiva Rao,
Pleader for Plff.

ಪುತ್ತೂರು [illegible]

ವರ್ತಮಾನ ಕಾಲ

[೧ನೇ ಪುಟದಿಂದ ಮುಂದುವರಿದುದು]

— ಭವಿಷ್ಯದ ಬಗ್ಗೆ ಸವಿಯಾದ ಹಗಲುಗನಸುಗಳು ನಮಗೆ ಬೇಡ-ಅಪ್ರಿಯ ಹಾಗೂ ಕ್ಷೋಭೆಗೊಳಿಸುವ ಚಿಂತೆಗಳೂ ಬೇಡ. ಕರ್ತವ್ಯ ಬುದ್ಧಿಯಿಂದ, ಪ್ರಾಮಾಣಿಕತೆಯಿಂದ ಈಗ ನಮ್ಮ ಮುಂದಿರುವ ಕೆಲಸವನ್ನು ಶಕ್ತಿ ಸಾಹಸಗಳಿಂದ ಯಶಸ್ವಿಯಾಗಿ ನಿರ್ವಹಿಸುವಾ. ನಮ್ಮ ಶಕ್ತಿ ಅನಂತ—ಮತ್ತು ಸಾಮರ್ಥ್ಯ ಅಪಾರ ಎಂಬ ಬಗ್ಗೆ ಆತ್ಮವಿಶ್ವಾಸವಿರಲಿ. ಈ ತೆರನಾದ ಮನೋಭೂಮಿಕೆಯಿಂದ, ಮಹಾ ಮಹಾ ಕಾರ್ಯಗಳನ್ನೂ ಸುಲಭವಾಗಿ ಕೈಗೂಡಿಸುವ ಸಾಹಸಕ್ಕೆ ಪ್ರೇರಣೆ ದೊರಕುವುದು. ಹಾಗೆಂದು ನಮ್ಮ ಕಣ್ಣ ಮುಂದೆ ನಿಶ್ಚಿತವಾದ ಧ್ಯೇಯಮಾರ್ಗ ಇರಬೇಕು. ಗೊತ್ತುಗುರಿಯಿಲ್ಲದೆ—ನಾವು ಜೀವನ ನೌಕೆಯನ್ನು ಪ್ರಶಾಂತ ಸಮುದ್ರದಲ್ಲಿ ಹರಿಯಗೊಡಕೂಡದು. ನಮ್ಮ ಆದರ್ಶ ನಿರ್ಮಲವಿರಲಿ. ಅದನ್ನು ಮುಟ್ಟುವುದಕ್ಕೆ ಪರಿಶ್ರಮ ಪೂರ್ವಕ ದುಡಿಯುವ ಬುದ್ಧಿ ಇರಲಿ.

ಸುಖ ಬೇಕಿದ್ದರೆ ಕೆಲಸಮಾಡಬೇಕು: 'ಕೆಲಸದಿಂದ ಸಿಗುವ ಮಹಾ ಲಾಭವೊಂದಿದೆ—ಲೋಕಕ್ಕೆ ಭಾರವಾಗಿ ಬದುಕಿದೆವೆಂಬ ಆಪವಾದದಿಂದ ಮುಕ್ತಿ; ಮತ್ತು ನಮ್ಮಿಂದೇನು ಆಗ ಬೇಕಿತ್ತೋ ಅದನ್ನು ಚೆನ್ನಾದ ರೀತಿಯಲ್ಲಿ ಪೂರೈಸಿಕೊಟ್ಟೆವೆಂಬ ಸಂತೃಪ್ತಿ. ಲೋಕದಲ್ಲಿ ಒಳ್ಳೆಯ ಕೆಲಸ ಮಾಡುವ ಮನಸ್ಸಿದ್ದರೆ-ಅವುಗಳಿಗೇನೂ ಕೊರತೆ ಇಲ್ಲ. ನಮಗಾಗಿ ಪ್ರತಿಯೊಂದೂ ಒಳ್ಳೆಯ ಕೆಲಸದ ಬಾಗಿಲು ತೆರೆದಿವೆ. ಸ್ವಯಂಪ್ರೇರಣೆಯಿಂದ ಧುಮುಕಬಹುದಾದ ಸರ್ವಜನೋಪಯೋಗಿ ಕೆಲಸಗಳಲ್ಲದೆ-ಜೀವನ ನಿರ್ವಹಣಕ್ಕಾಗಿ ಆಧರಿಸಿದ ಉದ್ಯೋಗಗಳೂ ಇವೆಯಷ್ಟೆ: ಅಲ್ಲೂ ಬೇಸರ ಪ್ರವೇಶಿಸಲು ಎಡೆಕೊಡಕೂಡದು.

ಎಷ್ಟೋ ಕೆಲಸಗಳು ನಮಗೆ ಅಪ್ರಿಯವೆನಿಸುವುದರಿಂದ—ಅವುಗಳನ್ನು ಮೂಲೆಗೊತ್ತುವ ಪ್ರವೃತ್ತಿಯುಂಟಾಗುತ್ತದೆ. ನಾಳೆ ನೋಡೋಣ ಎಂದೇ ನಾವು ಪ್ರತಿದಿನ ಮುಂದೂಡುತ್ತೇವೆ. ಇದರಿಂದ ಕ್ಷಣಿಕ ಲಾಭ ದೊರೆತಂತೆ, ತೃಪ್ತಿಯುಂಟಾದಂತೆ ತೋರಿದರೂ-ವಾಸ್ತವವಾಗಿ ಅದರಿಂದಾಗುವ ಮನೋಘಾತ ತೀಕ್ಷ್ಣವಾದುದು. ಆತ್ಮ ಶಕ್ತಿ ಕ್ಷೀಣಿಸುವುದು ಮತ್ತು ಭಯದ ಭಾವಕ್ಕೆ ಎಡೆದೊರೆಯುವುದು. ಉಳಿದ ಪ್ರಿಯ ಕಾರ್ಯಗಳಲ್ಲಿ ಮಗ್ನರಿರುವಾಗ [illegible]—ಇನ್ನೊಂದೊಮ್ಮೆ, ಅದೊಂದು ಕೆಲಸ ಬಾಕಿ ಇದೆಯಲ್ಲ! ಎಂದು ಚಿಂತೆ ಹತ್ತುವುದು. ಈ ಚಿಂತೆ ದಿನವೂ ಬೆಳೆದು ಕೊನೆಗೊಮ್ಮೆ ಅತ್ಯಂತ ವ್ಯಸನೆಯೊಡನೆ ಅದೇ ಅಪ್ರಿಯ ಕೆಲಸದಲ್ಲಿ ಒತ್ತಾಯಕ್ಕೆ ಕಟ್ಟುಬಿದ್ದು ಮನಗೊಡುವ ಪ್ರಸಂಗ ಬರುವುದು. ಹಾಗೆಂದು ಪ್ರಾರಂಭದಲ್ಲಿಯೇ ದುರ್ಬಲ ಅಪ್ರಿಯ ಭಾವನೆಯನ್ನು ಕಡೆಗಣಿಸಿ, ಕೆಲಸ ಮಾಡುತ್ತಿದ್ದರೆ-ಇಷ್ಟು ಹೆಚ್ಚು ಚಿಂತೆಗೀಡಾಗಬೇಕಿದ್ದಿಲ್ಲ ಎಂಬುದಂತೂ ಸ್ಪಷ್ಟ.

ಆದುದರಿಂದ ಅರುಚಿಕರವಾದ ಕೆಲಸವನ್ನೆಲ್ಲ ಪ್ರಾರಂಭದಲ್ಲಿಯೇ ಮಾಡಿ ಮುಗಿಸೋಣ: ಅದನ್ನು ಮುಗಿಸುವಷ್ಟು ಸಮಯ ಮಾತ್ರ ಸ್ವಲ್ಪ ಕಷ್ಟವೆನಿಸಬಹುದು. ಆದರೆ, ಅದರಿಂದ ಮುಕ್ತಿ ದೊರೆತಕ್ಷಣದಿಂದ ನಮಗೆ ಆಗುವ ಸಂತೋಷ ಉಲ್ಲಾಸಪ್ರದ. ಮುಂದೆ ನಾವು ಇಡೀ ದಿನವನ್ನು ನಗು ನಗುತ್ತಾ ಕಳೆಯಬಲ್ಲೆವು! ಎಷ್ಟು ಕಷ್ಟವಪ್ಪಾ ಎಂದುಕೊಂಡಿದ್ದ ಕೆಲಸ—ಇಷ್ಟು ಸುಲಭದಲ್ಲಿ ಬಗೆಹರಿದದ್ದು ಕಂಡು ನೀವು ಆಶ್ಚರ್ಯಗೊಳ್ಳುವಿರಿ. ಹೀಗೆ ದಿನದ ಎಲ್ಲ ಕೆಲಸವೂ ನಮ್ಮ ಮಟ್ಟಿಗೆ ಸರಳವೆನಿಸುವುದು.

ರಾಷ್ಟ್ರದ ಮುಂದೆ ವಿಧಾಯಕ ಕಾರ್ಯಕ್ರಮಗಳಿವೆ: ಅವುಗಳಲ್ಲಿ ಉತ್ಸಾಹದಿಂದ ಭಾಗವಹಿಸಬೇಕೆಂಬುದನ್ನು ಮರೆಯದಿರೋಣ. ಇಂದು ನಮ್ಮ ಮುಂದೆ ಕಷ್ಟಪಟ್ಟು ದುಡಿಯುವ ಧ್ಯೇಯವಿರುವುದು ಅಗತ್ಯವಾಗಿದೆ. ಅದು ಎಷ್ಟೇ ಅಪ್ರಿಯವೆನಿಸಿದರೂ—ನಾಳೆಗೆ ಮುಂದೂಡಬಹುದೆನ್ನುವುದು ಅನಪೇಕ್ಷಿತ. ಕವಿ ಉಮರ್ ಖಯ್ಯಾಂ ಒಂದೆಡೆ ಇದನ್ನೇ ಸ್ವಾರಸ್ಯವಾಗಿ ಹೀಗೆ ಬಣ್ಣಿಸಿದ್ದಾನೆ—

ನಿನ್ನೆ ಸತ್ತುಹೋದಿನ್ನು
ನಾಳೆ ಹುಟ್ಟಲು ಬೇಕು
ಇಂದು ಸೊಗವಿರಲದನ
ಸವಿಯದಿರಲೇಕೆ?

ಓಂ ತತ್ಸತ್॥

ವಾರದ ಒಳಿತು ಕೆಡುಕುಗಳು

ತಾ 11—9—52ರಿಂದ ತಾ. 17—9—52ರ ವರೆಗೆ

ಮೇಷ—ಸದ್ಯದ ಸ್ಥಿತಿಯಲ್ಲಿ ನಿಮ್ಮ ಅದೃಷ್ಟವು ಬಹಳ ದುರ್ಬಲವಿರುವದು. ಯಾವ ಉದ್ಯಮದಲ್ಲಿ ಕೈಯಿಕ್ಕಿದರೂ ನಷ್ಟವೇ ಅಧಿಕವಾದೀತು. ಆತ್ಮೀಯರ ನೆರವೂ ಕೂಡ ಲಭಿಸದು. ಶತ್ರು ಜನರು ಪ್ರತೀಕಾರಾಸಕ್ತರಾಗುವರು. ಕಜ್ಜಿ ಹುಣ್ಣು ಮೊದಲಾದ ಚರ್ಮರೋಗಗಳ ಪೀಡೆಗೆ ಗುರಿಯಾಗಲಿರುವಿರಿ. ಆದರೂ ಇದ್ದುದರಲ್ಲಿ ತೃಪ್ತಿಯೇನೆಂದರೆ ಎಷ್ಟೇ ಕಷ್ಟ ಬಂದರೂ ಹಿಡಿದ ಮಾರ್ಗವನ್ನು ಬಿಡದೆ ಮುಂದರಿವ ನಿಮ್ಮ ಆತ್ಮ ಶಕ್ತಿಗೆ ತಾ. 12-13 ಈ ದಿನಗಳಲ್ಲಿ ಫಲ ಸಿಗಲಿದೆ.

ವೃಷಭ— ಸುಖಲಾಭಗಳಿಗಿಂತ ಕಷ್ಟ ನಷ್ಟಗಳು ದ್ವಿಗುಣವಾಗಿ ಫಲಿಸುವವು. ಗೃಹಕೃತ್ಯದಲ್ಲಿ ನಿತ್ಯ ಜಗಳಗಳು ಕಾಣಿಸಲಿದೆ. ದುಡಿಮೆಯ ಬಹ್ವಂಶವು ಸನ್ಮಾರ್ಗದಲ್ಲಿ ವ್ಯಯವಾದೀತು. ಬಾಲ್ಯ ಮಿತ್ರರ ನೆರವಿನಿಂದಾಗಿ ಆರ್ಥಿಕ ತಗಾದೆಗೆ ಸಿಲುಕಲಾರಿರಿ. ವಿದ್ಯೋಪಜೀವಿಗಳಿಗೆ ಕಾಲವು ಸ್ವಲ್ಪ ಅನುಕೂಲವಿದೆ. ತಾ. 11-14-15-16 ಈ ದಿನಗಳಲ್ಲಿ ಸುಖಭೋಗ ವಿಜಯಗಳು ಲಭಿಸುವವು.

ಮಿಥುನ—ನಿಮ್ಮ ಸುದೈವವು ಇಂದೀಗ ಫಲಿಸಲಿದೆ. ನಿಮ್ಮ ಸಂಕಲ್ಪಗಳೆಲ್ಲವೂ ಕಾರ್ಯರೂಪಕ್ಕೆ ಬರಲು ಯಾವವೊಂದು ತರದ ಅಡ್ಡಿ ಆತಂಕಗಳೂ ಬರಲಾರವು. ಬಂಧು ಮಿತ್ರರ ನೆರವಿನಿಂದ ಕೂಡಿದ ನಿಮಗೆ ದಿನಗಳೆದುದೇ ತಿಳಿಯಲೊಲ್ಲದು. ಹಿಂದಿನ ಸಾಲ ಕಣಗಳಿಂದ ಮುಕ್ತರಾಗಿ ಸುಖದಿಂದ ಕಾಲಯಾಪನೆ ಮಾಡುವಿರಿ. ತಾ. 12-13-17 ಈ ದಿನಗಳಲ್ಲಿ ನಿಮ್ಮ ಬಯಕೆಯು ನಿರ್ವಿಘ್ನದಿಂದ ನೆರವೇರುವದು.

ಕರ್ಕಟ—ಮನಶ್ಚಾಂಚಲ್ಯ ಆಧಿಕ್ಯದಿಂದಾಗಿ ಹೆಚ್ಚಿನ ಕಾರ್ಯಗಳು ಅರ್ಧದಲ್ಲೇ ನಿಲ್ಲಲಿವೆ ಆದರೂ ಶತ್ರು ಜನರು ನಿಮ್ಮ ಶೌರ್ಯ ಧೈರ್ಯಗಳಿಗೆ ಬೆದರಿ ದೂರ ಸರಿವರು. ಕೃತ್ರಿಮ ಮಿತ್ರರ ಮೋಸದ ಬಲೆಗೆ ಸಿಲುಕಿ ನಷ್ಟ ಕಷ್ಟಗಳನ್ನು ಹೊಂದುವ ಸಂಭವವಿದೆ. ಆರೋಗ್ಯಕ್ಕೂ ಕೊಂಚ ಬಾಧೆಯುಂಟಾದೀತು. ಆರ್ಥಿಕ ತಗಾದೆಯು ಕಾಣಿಸದು. ತಾ. 11-14-15-16 ಈ ದಿನಗಳಲ್ಲಿ ನಿಮ್ಮ ಬಯಕೆಯು ಪೂರ್ಣವಾಗಲಿದೆ.

ಸಿಂಹ—ಗ್ರಹ ಮಾನವು ಬಹ್ವಂಶ ಪ್ರತಿಕೂಲ ಸ್ಥಿತಿಗೆ ಬಂದಿರುವದು. ಕಷ್ಟಪಟ್ಟು ದುಡಿದ ಹಣವು ದಿನಾಂತ್ಯದಲ್ಲುಳಿಯಲಾರದು ವಿನಾಕಾರಣ ಕಲಹ ಆಪ್ತೇಷ್ಟರ ವಿರಹ ಆಕಸ್ಮಿಕ ಪ್ರವಾಸ ಉದರಶೂಲೆ ಇತ್ಯಾದಿಗಳಿಂದ ಪೀಡಿತರಾಗುವಿರಿ. ಆದರೂ ಸುರಗುರುಗಳು ನಿಮ್ಮನ್ನು ಪೂರ್ಣ ದೃಷ್ಟಿಯಿಂದ ಕಾಣುವುದರಿಂದ ತಾ 11-12-13-17 ಈ ದಿನಗಳಲ್ಲಿ ಸುಖವಂ ಕಾಣುವಿರಿ

ಕನ್ಯಾ—ನಿಮ್ಮ ಧೈರ್ಯ ಸಾಹಸಗಳು ಅದ್ವಿತೀಯವಿರುವವು. ನಷ್ಟವಾದ ವಸ್ತು ಒಡವೆಗಳು ಪುನಃ ಕೈ ಸೇರಲಿವೆ ಅದಕೆ ಆಕಸ್ಮಿಕ ಪ್ರವಾಸಗಳು ಪ್ರಾಪ್ತವಾಗಿ ನಷ್ಟ ಕಷ್ಟಗಳೊದಗಲಿವೆ. ಆರೋಗ್ಯಕ್ಕೂ ಕೂಡ ಹೆಚ್ಚಿನ ಬಾಧೆಯುಂಟಾದೀತು. ವಾರದ ಅದ್ಯಂತ ದಿನಗಳನ್ನುಳಿದು ಮಿಕ್ಕ ದಿನಗಳು ಸುಖಕಾರಿಗಳಿವೆ.

ತುಲಾ—ಹೆಚ್ಚಿನ ಗ್ರಹಬಲ ನಿಮಗಿರುವುದಾದರೂ ಪಾಪಿಗಳಾದ ಶನ್ಯಾಂಗರಕರ ಮಧ್ಯದಲ್ಲಿ ಸಿಲುಕಿದ ನಿಮಗೆ ಶುಭಫಲವು ಹೆಚ್ಚಾಗಿ ಕಾಣಸಿಗಲೊಲ್ಲದು, ನಿಮ್ಮ ಪರಿಶ್ರಮಕ್ಕಿಂತಲೂ ಅಧಿಕ ಆದಾಯವಿದೆ. ಹೆಚ್ಚಿನ ಸಂಕಲ್ಪಗಳು ಫಲಿಸುವವು. ಆದರೇನು ದೇಹಕ್ಕೆ ಸುಖವಿಲ್ಲದ ಮೇಲೆ ಬೇರಾವ ಸೌಲಭ್ಯಗಳಿದ್ದರೂ ಏನು ಪ್ರಯೋಜನ ವಾರಾಂತ್ಯದ 4 ದಿನಗಳಲ್ಲಿ ಗುರುವಿನ ಅನುಗ್ರಹದಿಂದ ಸುಖ ಕಾಣುವಿರಿ.

ವೃಶ್ಚಿಕ—ಹಿಂದಿನ ದಿನಗಳಿಗಿಂತ ಈ ವಾರವು ನಿಮಗೆ ಬಹುಮಟ್ಟಿಗೆ ಉತ್ತಮ ಫಲದಾಯಿಯಾಗಿದೆ. ನೀವು ಯಾವ ಕಾರ್ಯವನ್ನು ಮಾಡಿದರೂ ಅದೆಂದೂ ವಿಫಲವಾಗದು. ವ್ಯಾಪಾರ ಉದ್ಯೋಗಾದಿಗಳಲ್ಲಿ ದಿನೇ ದಿನೇ ಪ್ರಗತಿ ಕಾಣುವದು ಅನೇಕಜನರಿಂದ ಹೆಚ್ಚಿನ ಲಾಭ ದೊರೆಯಲಿದೆ. ಆಕಸ್ಮಿಕ ಅಪಘಾತಗಳ ಯೋಗವಿರುವುದರಿಂದ ತಾ. 12ರಿಂದ 16ರ ವರೆಗಿನ ದಿನಗಳಲ್ಲಿ ಜಾಗರೂಕರಾಗಿರಿ.

ಧನು—ಕೆಲವು ವಾರಗಳಿಂದ ನೀವು ಹೆಚ್ಚಾಗಿ ಸುಖವನ್ನೇ ಕಾಣುತ್ತಿದ್ದು ಇಂದೀಗ ದುಃಖವನ್ನು ಅನುಭವಿಸುವ ಸಂಧರ್ಭ ಒದಗಿದೆ. ಮಿತಿಯಿಲ್ಲದ ಖರ್ಚುಗಳು ನಿಮ್ಮನ್ನು ಕಂಗುಬಡಿಸಲಿವೆ ಮಾತಾಡಿದವರೊಡನೆ ಜಗಳಕ್ಕಿಳಿವುದು ಮನಸ್ಸು ಕಡಿವಾಣತಪ್ಪಿದ ಕುದುರೆಯಂತಾಗುವುದು. ಆದರೂ ದೈವಾನುಗ್ರಹವು ಚೆನ್ನಾಗಿರುವುದರಿಂದ ವಾರಾದಿಯ 3 ದಿನಗಳಲ್ಲಿ ನಿಮ್ಮ ಬಯಕೆಯು ಸಫಲವಾದೀತು.

ಮಕರ— ಸುಖಲಾಭಪತಿಯಾದ ಅಂಗಾರಕನು ಲಾಭಸ್ಥಾನಗತನಾಗಿರುವುದರಿಂದ ನೀವು ಜೀವನದಲ್ಲಿ ಯಾವ ತರದ ಕ್ಲೇಶಗಳನ್ನು ಹೊಂದಲಾರಿರಿ ಖರ್ಚಿನ ಸಲುವಾಗಿ ಬೇರೆಯವರನ್ನಾಶ್ರಯಿಸಬೇಕಾಗಿಲ್ಲವು. ಜನತೆಯಿಂದ ಸತ್ಕಾರ ಗೌರವಗಳನು ಪಡೆವಿರಿ ರಾಜಕೀಯ ಕ್ಷೇತ್ರದಲ್ಲಿ ವಿಜಯವು ಲಭಿಸುವದು. ಆಕಸ್ಮಿಕ ಧನಲಭಿಸುವ ಯೋಗವಿದೆ. ವಾರದ ಅಧ್ಯಂತದಿನಗಳನ್ನು ಬಿಟ್ಟು ಮಿಕ್ಕುಳಿದ ದಿನಗಳು ಕ್ಷೇಮಲಾಭಕರಗಳಿವೆ.

ಕುಂಭ—ನಿಮ್ಮ ಅದೃಷ್ಟವಿಂದು ಬಹುಮಟ್ಟಿಗೆ ಹೀನ ಸ್ಥಿತಿಗೆ ಬಂದಿರುವುದು ಅದ್ದರಿಂದಲೇ ದೇಹಾಲಸ್ಯ ಆಪ್ತೇಷ್ಟರ ವಿರಹ ಪತ್ನಿ ಪುತ್ರರಿಂದ ದೂರವಾಗಿರುವಿಕೆ ಹಣದ ಅಡಚಣೆ ಇತ್ಯಾದಿ ನಾನಾ ದುಃಖಗಳಿಗೆ ಗುರಿಯಾಗುವಿರಿ. ಸ್ಥಾನಚಲನೆಯೂ ಕಾಣಿಸಬಹುದು. ವಿಜಾತಿಯವರೊಡನೆ ಕಲಹವಾಗಲಿದೆ ವಾರಾಂತ್ಯದ 4 ದಿನಗಳು ಇದ್ದುದರಲ್ಲಿ ಉತ್ತಮವೆನ್ನಬಹುದು.

ಮೀನ—ಈ ವಾರದಲ್ಲಿ ನಿಮಗೆ ಸುಖ ದುಃಖಗಳು ಲಾಭನಷ್ಟಗಳು ಸಂಕೋಚದಲ್ಲಿ ಫಲಿಸಲಿವೆ. ಉದ್ಯೋಗದಲ್ಲಿ ಪ್ರಗತಿ ಉಂಟಾಗದು. ಸ್ವಕೀಯ ಕಾರ್ಯದಲ್ಲಿ ವಿಜಯಿಗಳಾಗುವಿರಿ ಸಮಾಜದಲ್ಲಿ ಮನ್ನಣೆ ಲಭಿಸುವದು. ಆದರೆ ವ್ಯಾಪಾರದಲ್ಲಿ ಆಕಸ್ಮಿಕ ನಷ್ಟ ಉಂಟಾಗಲಿದೆ. ಸ್ತ್ರೀಜನರಿಂದ ಕಲಹ ಅಪಮಾನಾದಿಗಳು ಪ್ರಾಪ್ತವಾಗಲಿವೆ. ಕೆಲವೊಮ್ಮೆ ಪರ್ಯಟನವು ಕೂಡಾ ಪ್ರಾಪ್ತವಾದೀತು. ವಾರದ ಅಧ್ಯಂತದಿನಗಳಲ್ಲಿ ವಿಜಯಲಾಭ ಸುಖ.

ಸ್ತ್ರೀ ಪುರುಷ ಶಿಶುಗಳು ರೋಗದಿಂದ ನರಳಬೇಕಾಗಿಲ್ಲ!
ಲಕ್ಷಾಂತರ ಜನರು ಗುಣಹೊಂದಿದ್ದಾರೆ!
ಸರ್ ಜೀವನ್ ಶಿಲಾಜಿತ್ ಲೇಹ್ಯ
ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ, ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹ ಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.
೪೪ ದಿನದ ಲೇಹ್ಯ ರೂ ೫/೪, ೨೨ ದಿನದ ಲೇಹ್ಯ ರೂ ೩/೪
(ಪೋಸ್ಟೇಜು ಮಾಫಿ)

KING OF TONIC
SILAJITH LAYHAM
ನೀಲಗಿರಿ ಡಿಪೊ, ಅಕ್ಕಿಪೇಟೆ ಚೌಳ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ ಎಂ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

. No. LICENCE No. 31
(Licensed to Post without Prepayment

18-9-1952

Estd. 1921 ಸ್ಥಾಪನೆ.
32ನೆಯ ವರ್ಷ

Founder: Sri A. B. Shetty,
Minister for Medical & Public Health

ನವಯುಗ
ಆರೋಗ್ಯ ಮಂತ್ರಿ
ಎ. ಬಿ. ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ.

ಚಂದಾ 5-12-0
ತಿಂಗಳಿಗೆ 3-0-0
ಪ್ರತಿಗೆ 0-2-0

ನವಯುಗ

ಅಂತರಂಗ
ಪುಸ್ತಕ ಪತ್ರಿಕೆಯ
ಉಪಯುಕ್ತವಾದ
86 ಪುಸ್ತಕಗಳು
ರೂ. 24ಕ್ಕೆ ಸಿಗುತ್ತವೆ
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ

Vol 32
No. 3
NAVAYUGA WEEKLY POST BOX NO. 22 UDIPI
ವರ್ಷ 3
ವಾರ 1

ಮಧುಪರ್ಕ

ಚೀನಾದ ಜಾನಪದ ಕತೆ—ವಿಧಾತ ಒಂದು ದಿನ ಬೇಸರ ಕಳೆಯಲೆಂದು ಭೂಲೋಕ ಸಂಚಾರ ಕೈಗೊಂಡ. ಒಬ್ಬ ರೈತ ಕೈಯಲ್ಲಿ ಹಾರೆ ಹಿಡಿದುಕೊಂಡು ದೊಡ್ಡ ಪರ್ವತವನ್ನು ನೆಲಸಮಮಾಡುವ ಸಾಹಸದಲ್ಲಿದ್ದುದನ್ನು ನೋಡಿ, "ಇದೇನಯ್ಯಾ, ನಿನ್ನ ಕೆಲಸ!" ಎಂದ.

"ಸ್ವಾಮಿ, ನನ್ನ ಹೊಲಕ್ಕೆ ನೀರೇ ಬರುವುದಿಲ್ಲ, ಈ ಪರ್ವತವನ್ನು ನೆಲಸಮ ಮಾಡದೆ ಬೇರೆ ಉಪಾಯವಿಲ್ಲ!" ಎಂದನವ.

"ಛೆ, ಏನು ಹುಚ್ಚನೋ ಎಲ್ಲಿ ಈ ಪರ್ವತ ಮತ್ತೆಲ್ಲಿ ನಿನ್ನ ಕೈಯ ಹಾರೆ!" ಎಂದು ವಿಧಾತ ನಕ್ಕು ಮುಂದರಿದ. ಕೆಲಕ್ಷಣದಲ್ಲಿ ಪರ್ವತರಾಜ ಅವನಿಗೆದುರಾದ. ಗಡಗಡನೆ ನಡುಗುತ್ತಿದ್ದ ಅವನನ್ನು ಕಂಡು ವಿಧಾತ "ಸಂಗತಿ ಏನಪ್ಪಾ?" ಎಂದು ವಿಚಾರಿಸಿದ.

"ಮಹಾಪ್ರಭೋ, ನನಗಿರಲು ಎಲ್ಲಿಯಾದರೂ ಬೇರೊಂದು ಕಡೆ ಸ್ಥಳ ಮಾಡಿಕೊಡಿರಿ. ಆ ರೈತ ಮಹಾ ಸಾಹಸಿ, ನನ್ನನ್ನು ನೆಲಸಮಮಾಡಿಯೇ ತೀರುವೆನೆಂಬ ಆತ್ಮ ವಿಶ್ವಾಸದಿಂದ, ಈ ಕೆಲಸ ಕೈಗೊಂಡಿದ್ದಾನೆ. ಇಂದಲ್ಲ, ನಾಳೆ, ಅವನಲ್ಲದಿದ್ದರೆ ಅವನ ಮೊಮ್ಮಗ—ನನ್ನನ್ನು ಬುಡ ಮೇಲು ಮಾಡುವರು ಸ್ವಾಮಿ" ಎಂದು ಪರ್ವತರಾಜ ಮುಮ್ಮಲ ಮರುಗಿದ.

ಮಂಗಲ ವರದಾನ

ನೆನಪಿರಲಿ— ಆತ್ಮ ವಿಶ್ವಾಸವೇ ನಮ್ಮ ಜವಾದ ವ್ಯಕ್ತಿತ್ವ. ಋಗ್ವೇದದ ಒಂ ು ಪ್ರಾರ್ಥನಾ ಶ್ಲೋಕ ಹೀಗಿದೆ-- ಇಂದ್ರನು ನಮಗೆ ನಿರಾಶೆಯಲ್ಲಿಯೂ ಕ್ತಿಯನ್ನು ಕೊಡಲಿ; ಬಿದ್ದಲ್ಲಿಂದ ಏಳು ಬಲ ಕೊಡಲಿ!—" ಜೀವನದಲ್ಲಿ ಸಫಲ ಸಿಗಬೇಕಾದರೆ ಆತ್ಮವಿಶ್ವಾಸವಿರಬೇ ದುದು ಅತ್ಯಂತ ಆಗತ್ಯವಿದೆ. ತನ್ನ ಲಿನ ವಿಶ್ವಾಸವನ್ನೆ ಕಳಕೊಂಡ ಮನು ್ಯ ಜೀವನದಲ್ಲಿ ಬರುವ ತೊಡಕು ವಿರುದ್ಧ ಏನು ಹೋರಾಡಿಯಾನು? ತ್ಮವಿಶ್ವಾಸವೆಂದರೆನೇ ಮಂಗಲ ವರ ನ. ಅದರೆದುರು ತ್ರಿಲೋಕ ರಾಜ್ಯ ನ್ನೂ ತುಚ್ಛೀಕರಿಸಬಹುದು. ಹಾ ಂದು ಇಷ್ಟು ಅಗತ್ಯ ಹಾಗೂ ಮಹತ್ವದ ತ್ಮ ವಿಶ್ವಾಸವನ್ನು ಯಥಾರ್ಥವಾಗಿ ಂಪಾದಿಸಿಕೊಂಡಿರುವ ಜನರೆಷ್ಟು? ಹೆ ್ಚಿನವರು ಪ್ರತಿಕ್ಷಣವೂ ಭಾರವಾದ ನಿ ್ಟುಸಿರಿಟ್ಟು "ಅಯ್ಯೋ, ನಾನೂ ಹೀಗೆ ಮಾಡುತಿದ್ದರೆ!" ಎಂದೆನ್ನುವವರೆ ಇರು ರು.

ಹೀಗೆ ಉಸಿರ್ಗರೆಯುವವರು ಎಂದಿ ೂ ಒಂದು ಕೆಲಸದಲ್ಲಿ ಯಶಸ್ಸು ಪಡೆ ರುಲಾರರು. ಅವರ ಪಾಲಿಗೆ ನಿರಾಶೆಯೇ ೂನೆಯ ವರೆಗೂ ಉಳಿಯುವುದು. ಇದ ್ಕೆ ಒಂದೇ ಒಂದು ಕಾರಣ— ತನ್ನ ಶಕ್ತಿ ಂಪನ್ನತೆಯ ಮೇಲೆ ಅವರಿಗೆ ತಿಲಾಂಶ ೂ ವಿಶ್ವಾಸವಿಲ್ಲವೆಂಬುದೇ. ಅಂಥವರು "ಅಯ್ಯೋ, ನಾನೂ ಹೀಗೆ ಮಾಡು ದ್ದರೆ!" ಎಂಬ ನಿರಾಶೆಯ ಸೊಲ್ಲಿನ ದಲಿಗೆ "ನಾನೂ ಹೀಗೆ ಮಾಡು ನು!" ಎಂಬ ಸಂಕಲ್ಪವನ್ನು ೈಗೊಳ್ಳುವುದು ಶ್ರೇಯಸ್ಕರ. ಮಾತ ಲ್ಲಿನಾದರೆ ಎನ್ನುವ ರೀತಿಯೇ ಚೆನ್ನಾ ುದಲ್ಲ. ಮನುಷ್ಯನಿಗೆ ಒಂದು ಕೆಲಸವ ್ನು ಮಾಡುವ ಸಾಮರ್ಥ್ಯ ತನ್ನಲ್ಲಿ ಇದ್ದೇ ಿದೆ ಎಂದೂ ನಂಬಿಗೆ ಇರಬೇಕು. ಈ ಂಬಿಗೆಯ ಬಲವೇ ಅವನ ಪಾಲಿಗೆ ಕಠಿ ಣತಮವಾದ ಕೆಲಸವನ್ನೂ ಸುಲಭತರ ವಾಗಿಸುವುದು. ಆತ್ಮ ವಿಶ್ವಾಸವನ್ನು ಬೆಳೆಸಿ ೊಳ್ಳುವ ಹೆಜ್ಜೆ ಇದು.

ಯುರೋಪಿನಲ್ಲಿ ನೆಪೋಲಿಯನನ ೇಂಕಾರ! ಅನೇಕ ರಾಜ್ಯಗಳಲ್ಲಿ ವಿಜಯ ತಾಕೆಯನ್ನೇರಿಸಿ ಈ ಧೀರ ಕೊನೆಗೆ ಟಲಿಯಮೇಲೆ ಹಲ್ಲೆಮಾಡಲು ಹವಣಿ ದ. ಆದರೆ ಭಾರತದ ಹಿಮಾಲಯದಂತೆ, ಟಲಿಯಲ್ಲಿ ಹಿಮಾಚ್ಛಾದಿತವಾದ ಆ ್ಪ್ಸ ಪರ್ವತಾವಳಿ ತನ್ನ ಗರ್ವೋನ್ನತ ಮಸ್ತಕದಿಂದ ನೆಪೋಲಿಯನನಿಗೆ ಅಡ್ಡಿಯೊಡ್ಡಿತು. ಅಂದಿನವರೆಗೆ ಆಲ್ಪ್ಸ ಪರ್ವತವನ್ನು ಏರಿ ಪಾರಾಗುವ ಸಾಹಸವನ್ನು ಯಾರೂ ಮಾಡಿದ್ದಿಲ್ಲ. ಅದನ್ನು ಅಸಾಧ್ಯ ಕಾರ್ಯವೆಂದು ಎಲ್ಲರೂ ಸುಮ್ಮನಿದ್ದರು. ಹಾಗೆಂದು, ಪರ್ವತವನ್ನು ಏರದೆ ಇಟಲಿಯ ಮೇಲೆ ದಾಳಿ ಇಡಲಾಗುವುದಿಲ್ಲವಲ್ಲ! ನೆಪೋಲಿಯನನು ಪರ್ವತವೇರಲು ಆಜ್ಞೆ ಕೊಟ್ಟ. ಸೈನಿಕರು "ಇದೇನು, ತಮ್ಮ ನಾಯಕನ ತಲೆ ಕೆಟ್ಟಿದೆಯೋ?" ಎಂದುಕೊಂಡರು. ಉಚ್ಚಾಧಿಕಾರಿಗಳು ಇದು ಚಿನ್ನಾದ ಕೆಲಸವಲ್ಲ ಎಂದು ವಿನಯದಿಂದ ನುಡಿದರು. ನೆಪೋಲಿಯನನು ಈ ಮಾತುಗಳಿಗೆಲ್ಲ ಕಿವುಡನಾಗಿ ಸ್ವತಃ ಮುನ್ನಡೆದು, ಅಸಂಭವ ಕಾರ್ಯವನ್ನು ಸಂಭವನೀಯವೆಂದು ತೋರಿಸಿಕೊಟ್ಟ. ಈ ಸಾಹಸದ ಹಾಗೂ ಆತ್ಮ ವಿಶ್ವಾಸದ ನೆರಳಲ್ಲಿ ನಡೆದುದಕ್ಕೆ ಇಟಲಿಯ ಸಾಮ್ರಾಜ್ಯ ದೊರೆಯಿತು. ತನ್ನ ಆತ್ಮ ವಿಶ್ವಾಸದ ಬಲದ ಮೇಲಿಂದ ನೆಪೋಲಿಯನ ಹೇಳುತಿದ್ದ-"ಲೋಕದಲ್ಲಿ ಅಸಾಧ್ಯವೆಂಬುದಿಲ್ಲ!"

ನಿಜಕ್ಕೂ ಮನುಷ್ಯನಿಗೆ ಲೋಕದಲ್ಲಿ ಅಸಾಧ್ಯವೆಂಬುದಿಲ್ಲ. ಆದರೆ ಅಸಂಭವವು ಸಂಭವನೀಯವೆನಿಸಬೇಕಾದರೆ ಆತ್ಮ ವಿಶ್ವಾಸವೆಂಬ ಮಹಾ ಸಾಮರ್ಥ್ಯ ಮಾತ್ರ ಬೇಕೇ ಬೇಕು. ಜೀವನದ ವಿವಿಧ ಭೂಮಿಕೆಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಆತ್ಮ ವಿಶ್ವಾಸ ಅತ್ಯಗತ್ಯ. ಅಸಫಲತೆ ಹಾಗೂ ಕಷ್ಟಗಳಿಗೆ ಅಂಜಿ ಬೆನ್ನುಕೊಡದೆ—ಹೆಜ್ಜೆ ಹೆಜ್ಜೆಗೂ ದೃಢತೆಯಿಂದ ಮುನ್ನಡೆಯಲು ಆತ್ಮ ವಿಶ್ವಾಸ ಬಹಳ ಸಹಾಯಕರ. ಯೋಗವಾಸಿಷ್ಠದಲ್ಲಿ ವಾಲ್ಮೀಕಿ ಕರ್ಮದ ಅದ್ಭುತ ಶಕ್ತಿಯನ್ನು ಬಣ್ಣಿಸಿದ್ದಾನೆ—ಅವನ ಅಭಿಪ್ರಾಯದಂತೆ, ಎಲ್ಲ ಕೀರ್ತಿ, ಶ್ರೇಯಸ್ಸು ಹಾಗೂ ಸಿದ್ಧಿಯ ಮೂಲವೇ ಕರ್ಮ. ಕರ್ಮ ಕ್ಷೇತ್ರದಲ್ಲಿಯೇ ಬಗೆ ಬಗೆಯ, ಯಶೋ ಸೌರಭದಿಂದ ಘಮ ಘಮಿಸುವ ಪುಷ್ಪಗಳು ಅರಳುತ್ತವೆ; ಸಿದ್ಧಿಯ ಪುಣ್ಯಫಲ ಸಿಗುತ್ತದೆ. ಸಾಂಸಾರಿಕ ಸಿದ್ಧಿಯೊಂದಿಗೆ ಆಧ್ಯಾತ್ಮಿಕ ಸಿದ್ಧಿ ಕೂಡ ಕರ್ಮದಿಂದಲೇ ಫಲಪ್ರದವಾಗುತ್ತದೆ. ಮಿತಿ ಇಲ್ಲದ ಈ ಕರ್ಮ ಕ್ಷೇತ್ರ ಮನುಷ್ಯನ ಮುಂದೆ ಪ್ರತಿಕ್ಷಣವೂ ವಿಸ್ತರಿಸಿದೆ: ಮತ್ತದು ಸುಲಭ ಗ್ರಾಹ್ಯವಾಗಿದೆ. ಆತ್ಮ ವಿಶ್ವಾಸದಿಂದ ಈ ಕ್ಷೇತ್ರದಲ್ಲಿ ಕರ್ಮ ಬೀಜವನ್ನು ಬಿತ್ತುವ ಸಾಹಸ ಮಾತ್ರ ಮನುಷ್ಯನಿಗಿರಬೇಕಷ್ಟೆ. ಕಷ್ಟ ಪಟ್ಟು ಕರ್ಮ ಕ್ಷೇತ್ರದಲ್ಲಿ ಕಾಲಿಡದೆ, ಕೂತಲ್ಲಿಯೇ ಇಂದಲ್ಲ ನಾಳೆ ಸಫಲತೆ ನನ್ನ ಬಳಿ ಸಾರುವುದು ಎಂದು ಕೂತರೆ ಪ್ರಯೋಜನವಿಲ್ಲ. ಆತ್ಮವಿಶ್ವಾಸ ಬೇಕು— ಅದರೊಡನೆ ಕರ್ಮ ಮಾಡುವ ದೃಢ ಸಂಕಲ್ಪವೂ ಬೇಕು. ಜೀವನ ಸಂಘರ್ಷದಲ್ಲಿ ನಿರಾಶೆಗಳು ಬಂದು ಮುತ್ತಿದಾಗ ಧೃತಿಗೆಡದೆ—ಹೊಸ ಹುರುಪಿನಿಂದ ಧ್ಯೇಯದೆಡೆಗೆ ಗಮಿಸುವ ಪ್ರವೃತ್ತಿ ತೋರಿಸುವುದೇ ಆತ್ಮವಿಶ್ವಾಸ ಜಾಗೃತವಾಗಿದೆ ಎಂಬುದಕ್ಕೆ ಪ್ರತ್ಯಕ್ಷ ನಿದರ್ಶನ.

"ಭಾರತ ಬಿಟ್ಟು ತೊಲಗಿರಿ!" ಎಂಬ ಚಳುವಳಿಯ ಬೆಂಕಿಯನ್ನು ಗಾಳಿಯಲ್ಲಿ ಗಾಂಧೀಜಿ ಹೊತ್ತಿಸಿದರಷ್ಟೆ; ಗಾಂಧೀಜಿಯೊಂದಿಗೆ ಇನ್ನೂ ಹಲವು ಮುಖಂಡರು ಸೆರೆಮನೆ ಸೇರಿದರು. ಭಾರತವನ್ನು ಬಿಟ್ಟು ತೊಲಗಿರಿ ಎಂದಂತೆ "ಭಾರತವೆಂದಿಗೂ ವಿಭಾಜಿತವಾಗದು" ಎಂದರು ಅವರು

(೧೦ನೇ ಪುಟ ನೋಡಿ)

ಗೌರಿಶಂಕರ ಪರ್ವತಾರೋಹಣಕ್ಕೆ ಸಂಬಂಧಿಸಿದ ಗಂಟೆಗೆ 500 ಮೈಲು ವೇಗದಿಂದ ಹಾರಾಡಬಲ್ಲ ಬಿ. ಒ. ಎ. ಸಿ ವಿಮಾನವು ಇತ್ತೀಚೆಗೆ ದಿಲ್ಲಿಯಿಂದ ಸಮುದ್ರ ಮಟ್ಟದಿಂದ 36,000 ದಿಂದ 37,000 ಅಡಿ ಎತ್ತರದಲ್ಲಿ ಹಾರಿ ಹಿಮಾಲಯದ ಅತಿ ಎತ್ತರದ ಶಿಖರಗಳನ್ನು ಪ್ರದಕ್ಷಿಣೆ ತೆಗೆಯಿತು. ಈ ಸನ್ನಿವೇಶದಲ್ಲಿ ಭಾಗವಹಿಸಿದ ಬಾಲಕನಾದ ಅಮೃತಸರಿನ ಮುಕ್ತಸ್ರಾ ಮಿ। ಜೆ.ಜಿ.ಎಸ್. ಗಾರ್ನರ್ ಇವರನ್ನು ಚಿತ್ರದಲ್ಲಿ ಕಾಣಬಹುದು.

ಇಂದಿನ ಯುವಜನಾಂಗದ ಜೀವನ ಸಂಘರ್ಷ

ವಿಶ್ವವಿದ್ಯಾಲಯದ ಶಿಕ್ಷಣಪದ್ಧತಿ ಮಧ್ಯಮವರ್ಗದ ಕೈಬಿಟ್ಟಿದೆ.

ಉದ್ಯೋಗ ವಿನಿಮಯ ಕಾರ್ಯಾಲಯಗಳು ಈಚೆಗೆ ಹೊರಗೆಡವಿದ ಕೆಲವೊಂದು ಅಂಕೆಸಂಖ್ಯೆಗಳು ತುಂಬ ಕುತೂಹಲಜನಕವಿವೆ. ನಿರುದ್ಯೋಗಿಗಳಾದ ಜನರಿಗೆ ಉದ್ಯೋಗವನ್ನು ಹುಡುಕಿಕೊಡುವ ಘನವಾದ ಕೆಲಸವನ್ನು ಈ ವಿನಿಮಯ ಸಂಸ್ಥೆಗಳು ನೆರವೇರಿಸುತ್ತವೆ. ಸಾಮಾನ್ಯವಾಗಿ ಜಿಲ್ಲೆಯ ಮುಖ್ಯ ಕೇಂದ್ರಕ್ಕೊಂದರಂತೆ ಭಾರತದಾದ್ಯಂತ ೧೨೩ ವಿನಿಮಯ ಕಾರ್ಯಾಲಯಗಳಿವೆ. ಹೈಸ್ಕೂಲು ಮಟ್ಟದ ಸಾಮಾನ್ಯ ಶಿಕ್ಷಣ ಪಡೆದ ಹಾಗೂ ಕಾಲೇಜುಗಳಲ್ಲಿ ಪದವೀಧರರಾದ ನಿರುದ್ಯೋಗಿ ಸ್ತ್ರೀ ಪುರುಷರು ಕಾರ್ಯಾರ್ಥಿಗಳಾಗಿ ಈ ಕಾರ್ಯಾಲಯಗಳಲ್ಲಿ ತಮ್ಮ ಹೆಸರನ್ನು ಭರ್ತಿ ಮಾಡಿಸುವರು. ಅವರವರ ಇಚ್ಛೆ, ಯೋಗ್ಯತೆ, ಮತ್ತು ತೆರವಿರುವ ಕೆಲಸಗಳನ್ನು ಹೊಂದಿಕೊಂಡು ಉದ್ಯೋಗವನ್ನು ಸಾಧ್ಯವಿದ್ದಷ್ಟು ಹೆಚ್ಚು ಮಂದಿಗೆ ಒದಗಿಸಿಕೊಡಲಾಗುವುದು. ಇಷ್ಟಿದ್ದರೂ—ಕೆಲಸ ಸಿಗದೆ ನಿರುದ್ಯೋಗಿಗಳಾಗಿರುವವರ ಸಂಖ್ಯಾ ಪ್ರಮಾಣವನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಕಂಡಾಗ, ದಂಗು ಬಡೆಯುವೆವು: ಈ ವರ್ಷದ ಮೇ ಮಾಸಾಂತ್ಯದಲ್ಲಿ ನಿರುದ್ಯೋಗಿಗಳೆಂದು ಪಟ್ಟಿಯಲ್ಲಿ ಹೆಸರು ಕಾಣಿಸಿದವರ ಒಟ್ಟು ಸಂಖ್ಯೆ ೩,೬೬,೫೯೫. ಇವರಲ್ಲಿ ಪದವೀಧರರು ೧೪,೮೨೮. ಹೈಸ್ಕೂಲು ಶಿಕ್ಷಣ ಪಡೆದವರು ೧,೦೧,೦೩೮. ಆದರೆ ಇದು ನಿರುದ್ಯೋಗಿಗಳ ಸಂಪೂರ್ಣ ಮಾಹಿತಿಯನ್ನು ಕೊಡುವುದಿಲ್ಲ—ತಾವಾಗಿ ಕೆಲಸ ಬೇಕೆಂದು ವಿನಿಮಯ ಕಾರ್ಯಾಲಯಕ್ಕೆ ಬಂದವರ ಸಂಖ್ಯೆ ಇದು: ಹಾಗೆ ಮಾಡದ ನಿರುದ್ಯೋಗಿ ಪದವೀಧರರೂ ಸಾಮಾನ್ಯ ಶಿಕ್ಷಣ ಪಡೆದ ಯುವಕರೂ ಏನಿಲ್ಲೆಂದರೂ ಇಮ್ಮಡಿ ಇರಬಹುದು.

ಸರಕಾರೀ ಕೆಲಸದ ಮೋಹ

ಜನರಲ್ಲಿ ಸಾಮಾನ್ಯವಾಗಿ ಸರಕಾರೀ ಕೆಲಸದ ಬಗ್ಗೆಯೇ ಆತುರ ಹಾಗೂ ಕುತೂಹಲ ಕಂಡುಬರುತ್ತಿದೆ. ಆದರೆ, ಸರಕಾರದ ಕಾರ್ಯವಿಭಾಗವು ಮಿತವಾಗಿದ್ದು, ಅದಕ್ಕೆ ಬೇಕಿರುವ ಸಿಬಂಧಿಯ ಪ್ರಮಾಣ ಕೂಡ ಕಡಿಮೆ. ಈಗಂತೂ ಸರಕಾರೀ ವ್ಯಯವನ್ನು ಬಿಟ್ಟೂ ಬಿಡದ ಸ್ತಿಮಿತಕ್ಕೆ ತರುವ ಹವಣಿಂದಾಗಿ—ಕೆಲಸವಿರುವವರನ್ನೂ ಮನೆಗೆ ಕಳುಹಲಾಗುತ್ತಿದೆ. ಸರಕಾರಕ್ಕೆ ಸಾಮಾನ್ಯವಾಗಿ ವರ್ಷಕ್ಕೆ ೩೦,೦೦೦ ಪದವೀಧರರ ಅಗತ್ಯವುಂಟಾಗುತ್ತದೆಂದು ಅಂದಾಜು. ಹಾಗೆಂದು ನಮ್ಮ ವಿಶ್ವವಿದ್ಯಾಲಯಗಳಿಂದ ಪದವೀಧರರಾಗಿ ಹೊರ ಬರುವವರ ಸಂಖ್ಯೆ ೪೫೦೦೦. ಇದನ್ನು ಬಿಟ್ಟು ಹೈಸ್ಕೂಲು ವಿದ್ಯಾಭ್ಯಾಸವನ್ನ ಪಡೆದು ಬರುವವರ ಸಂಖ್ಯೆಗಂತೂ ಲೆಕ್ಕ ಮಿತಿ ಇಲ್ಲ. ಏನಿಲ್ಲೆಂದರೂ ಭಾರತದಲ್ಲಿ ಹತ್ತು—ಹನ್ನೆರಡು ಲಕ್ಷ ಯುವಜನಾಂಗ ಹೀಗಿದ್ದೀತು. ಇವರಿಗೆಲ್ಲ ಸರಕಾರದಲ್ಲಿ ಕೆಲಸ ಒದಗಿಸಲು ಸಾಧ್ಯವಿದೆಯೆ? ಇಲ್ಲವೆಂದಾದರೆ ಬೇರೇನು ಮಾರ್ಗ? ಸರಕಾರವು ತನ್ನ ಮಿತವ್ಯಯ ಧೋರಣದಿಂದಾಗಿ ಕೆಲಸಕ್ಕೆ ಜನರನ್ನು ನೇಮಿಸುವಾಗ ಬಹಳ ಜಾಗರೂಕತೆಯಿಂದ ವರ್ತಿಸುತ್ತದೆ. ಸಾರ್ವಜನಿಕ ಸಂಸ್ಥೆಗಳು ಕೂಡ ೧೯೫೦ನೇ ನವಂಬರದಿಂದೀಚೆಗೆ ಆರ್ಥಿಕ ಪರಿಸ್ಥಿತಿ ಕೆಟ್ಟುದರಿಂದ ಹೊಸತಾಗಿ ಉದ್ಯೋಗವನ್ನು ಒದಗಿಸಿಕೊಡುವಷ್ಟು ಚೈತನ್ಯ ಪಡೆದಿಲ್ಲ. ಇದು ಈಚಿನ ಘಟನೆಯಾದರೂ, ಮಹತ್ವದ್ದೇ ಸರಿ. ಇನ್ನು ದೀರ್ಘ ಕಾಲದಿಂದಲೂ ನಮ್ಮಲ್ಲಿ ನಿರುದ್ಯೋಗದ ಹಾವಳಿ ಇದ್ದಿತೆಂಬುದನ್ನು ಸ್ಮರಿಸುವಾಗ, ಶಿಕ್ಷಣ ಕ್ರಮದಲ್ಲಿ ಹೆಚ್ಚು ಹೆಚ್ಚು ಜನರು ಉದ್ಯೋಗದಲ್ಲಿ ನೆಲೆಗೊಳ್ಳಲಾಗುವಂತೆ ಪರಿವರ್ತನೆಯಾಗಬೇಕಾಗಿದೆ ಎಂದು ಗೋಚರಿಸುವುದು. ಪದವೀಧರರಲ್ಲಿ ಬಹಳ ಅಲ್ಪಮಂದಿ ಮಾತ್ರ ಇಂಜಿನೀಯರಿಂಗ್, ವೈದ್ಯಕೀಯ ಮುಂತಾದ ಉಪಯುಕ್ತ ಶಿಕ್ಷಣದಲ್ಲಿ ತಜ್ಞರಿದ್ದಾರೆ. ಉಳಿದವರೆಲ್ಲ ಕೇವಲ ಕಾರಕೂನಿಕೆಗಷ್ಟೇ ಹೇಳಿಸಿದವರು. ಮೆಟ್ರಿಕ್ಯುಲೇಟುಗಳಂತೂ—ಕ್ಲಾರ್ಕ ಹುದ್ದೆಗೇ ಸೈ. ಅದಕ್ಕೂ ಮಿಕ್ಕಿದ ಯೋಗ್ಯತೆ ಅವರಲ್ಲಿಲ್ಲ.

ಮಧ್ಯಮ ವರ್ಗದ ಕಷ್ಟ

ಶೈಕ್ಷಣಿಕ ಪದ್ಧತಿಯಲ್ಲಿ ತೀವ್ರ ಸ್ವರೂಪದ ಪರಿವರ್ತನೆ ಅಗತ್ಯವೆಂಬುದಾಗಿ ೧೯೩೦ರಿಂದೀಚೆಗೆ ನೇಮಕಗೊಂಡ ಪ್ರತಿಯೊಂದೂ ಸಮಿತಿ ವರದಿ ಮಾಡಿದೆ. ಮೆಕಾಲೆ ಇಂಗ್ಲೀಷು ಶಿಕ್ಷಣವನ್ನು ನಮ್ಮ ಜನರಿಗೆ ನೀಡ ಹೋದದ್ದು—ಈಸ್ಟ ಇಂಡಿಯಾ ಕಂಪೆನಿಗೆ ಅಗ್ಗ ದರದಲ್ಲಿ ಕಾರಕೂನರನ್ನು ಒದಗಿಸಲಿಕ್ಕಾಗಿಯೇ. ಆ ದುರ್ದಿನದಿಂದಲೇ ನಮ್ಮ ಮಧ್ಯಮ ವರ್ಗದ ಜನಕ್ಕೆ ಸರಕಾರಿ ಕೆಲಸದ ಮೋಹ ಅಂಟಿಕೊಂಡಿತು. ಶಿಕ್ಷಣ ಪದ್ಧತಿಯು ಬೇಕಾದ ಕಾರ್ಯ ವೆಚ್ಚಗಳನ್ನು ಕನಿಷ್ಠ ವರ್ಗದ ಜನರು ನೋಡಿಕೊಳ್ಳಲಾರರು. ಆರ್ಥಿಕ ಸ್ಥಿತಿ ಉತ್ತಮ ಇದ್ದವರು ನಿರುದ್ಯೋಗದಿಂದ ಇದ್ದರೂ ಅವರಿಗೆ ಅಧಿಕ ಹಾನಿಯಾಗದು. ಆದರೆ ತಮ್ಮ ಇದ್ದ ಬಿದ್ದ ಹಣವನ್ನೆಲ್ಲ ಶಿಕ್ಷಣಕ್ಕೆ ಸುರಿವಿ ಕೈ ಖರಿದು ಮಾಡಿಕೊಂಡಮೇಲೆ ಮಧ್ಯಮ ವರ್ಗದ ತರುಣನು ನಿರುದ್ಯೋಗಿಯಾಗುವನಾದರೆ—ಅವನ ಪರಿಸ್ಥಿತಿ ಶೋಚನೀಯ. ನಮ್ಮ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಶಿಕ್ಷಾವಂತ ತರುಣ-ತರುಣಿಯರನ್ನು ಕೆಲಸಕ್ಕಿಟ್ಟುಕೊಳ್ಳುವ ಯೋಗ್ಯತೆ ಬಹಳ ಮಿತವಿದೆ. ಶಿಕ್ಷಣದ ಪ್ರಯೋಜನ ಅತ್ಯಧಿಕವಾಗಬೇಕಾದರೆ, ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಯನ್ನು ಹೊಂದಿಕೊಂಡೇ ಅದು ರೂಪಿತವಾಗುವುದಗತ್ಯ. ಜನಸಂಖ್ಯೆ ಏರಿದಂತೆ ಹಾಗೂ ಜೀವನ ವೆಚ್ಚ ಹೆಚ್ಚಿದಂತೆ, ಮಧ್ಯಮ ವರ್ಗದ ಕಷ್ಟ ತಾಪತ್ರಯಗಳಿಗೆ ಕೊನೆ ಇರುವುದಿಲ್ಲ. ಹೊಟ್ಟೆ ಪಾಡಿಗಾಗಿ, ಉದ್ಯೋಗ ಕ್ಷೇತ್ರದಲ್ಲಿ ತೀವ್ರ ಸ್ಪರ್ಧೆಗವರು ನಿಲ್ಲಲೇಬೇಕಾಗುವುದು. ಅವಶ್ಯಕತೆಗಿಂತ ಹೆಚ್ಚಿನ ಪೂರೈಕೆಯಾಗುವಾಗ, ಸಾಮಾನ್ಯವಾಗಿ ಎಷ್ಟೋ ಮಂದಿ ನಿರಾಶರಾಗುವರು. ಉದ್ಯೋಗ ದೊರಕಿದವರಿಗೂ— ಕಡಿಮೆ ವೇತನ ದೊರೆಯುವುದು. ಅಧ್ಯಾಪಕ ವೃತ್ತಿಯನ್ನು ಅವಲಂಬಿಸಿದವರನ್ನೆ ಇದಕ್ಕೆ ನಿದರ್ಶನವೆನ್ನಬಹುದು: ಕಾರಕೂನಿಕೆ ಬಿಟ್ಟರೆ ಇದೇ ಉಳಿದೊಂದು ಉದ್ಯೋಗ. ಉಮೇದ್ವಾರರು ಹೆಚ್ಚಿರುವುದರಿಂದ, ಸಂಬಳ ಕಡಿಮೆ ಕೊಟ್ಟರೂ ನಡೆಯುತ್ತದೆ. ಆದರೆ ಅಧ್ಯಾಪಕರಿಗೂ ಹೆಂಡತಿ-ಮಕ್ಕಳಿರುವರಷ್ಟೆ! ಅವ ಹೊಟ್ಟೆ ಪಾಡಿಗೆ ಬೇರೇನು ಉಪವೃತ್ತಿ ಕೈಗೊಳ್ಳಲಿ ಎಂಬ ಯೋಜನೆಯಲ್ಲಿ, ಮ ದ್ಯೋದ್ಯೋಗದ ಕಡೆಗೆ ಕೊಡುವ ಗಮ ಅತ್ಯಲ್ಪವಾಗುತ್ತದೆ. ಹೀಗೆ ಕಾರ್ಯಕ್ಷ ಮತೆ ಸ್ವಾಭಾವಿಕವಾಗಿ ಕುಗ್ಗುತ್ತದೆ.

ಮನೋಭೂಮಿಕೆಯಲ್ಲಿ ಮಾರ್ಪಾಟು

ಈಗಿದ್ದ ಸ್ಥಿತಿಯನ್ನು ಹಾಗೆಯೆ ಮುಂದರಿಯಗೊಟ್ಟರೆ ಅದರಿಂದ ತುಂ ಅಪಾಯವುಂಟು! ಉದ್ಯೋಗವನ್ನು ಒ ಗಿಸಿಕೊಡುವದಾಗದಿದ್ದರೆ— ನಾಗರಿಕ ಉಪವಾಸದಿಂದ ಸಾಯುವ ದುರ್ದೆ ಬಂದೀತು. ಪ್ರಜಾಪ್ರಭುತ್ವದ ಹೆಮ್ಮೆ ರ ವ ರಾಷ್ಟ್ರಗಳಲ್ಲಿ, ದುಡಿದುಣ್ಣುವೆನೆನು ವ ನಾಗರಿಕನಿಗೆ, ಉದ್ಯೋಗ ದೊರೆಯ ವುದಿಲ್ಲವಾದರೆ, ಅದನ್ನುಳಿದು ನಾಚಿಕೆ ಡಿನ ಪ್ರಸಂಗ ಬೇರೊಂದಿ ಇದನ್ನು ತಿಳಿದೇ ಪಂಚವಾರ್ಷಿ ಯೋಜನೆಯಲ್ಲಿ ವಿಶ್ವವಿದ್ಯಾಲಯ ಗಳು ನೀಡುತ್ತಿರುವ ಶಿಕ್ಷಣವ ವೃತ್ತಿಪರ ಹಾಗೂ ತಾಂತ್ರಿಕ ತಂಬೇ ಯ ಹೊನಲಿಗಿಳಿಯುವಂತೆ ಪರಿವರ್ತಿ ಬೇಕೆನ್ನಲಾಗಿದೆ. ಪ್ರಾರಂಭದಲ್ಲಿಯೇ ವ ತ್ತಿಪರ ಹಾಗೂ ಮೂಲ ಶಿಕ್ಷಣವನ್ನು ದ್ಯಾರ್ಥಿಗಳಿಗೆ ನೀಡುವುದರಿಂದ—ಕಾ ಕೂನರಾಗಿ ದುಡಿಯುವ ಸಾಮರ್ಥ್ಯ ಸಿದು, ದಿನದ ರೊಟ್ಟಿ ಸಂಪಾದನೆಗೆ ವ ಶವಾದ ಕ್ಷೇತ್ರವನ್ನು ನಿರ್ಮಿಸಿದಂ ಗುತ್ತದೆ ಎಂದು ಇದರ ತಾತ್ಪರ್ಯ. ಹಿ ಗಾಗಬೇಕಾದರೂ—ದೇಶದಲ್ಲಿ ಶೀಘ್ರಗ ಯಿಂದ ಔದ್ಯೋಗೀಕರಣ ವುಂಟಾಗು ಅಗತ್ಯ ಒದಗೀತು. ಅಥವಾ ಗಾಂಧೀ ಹೇಳಿದಂತೆ ಬ್ರಿಟಿಷರಾಳಿಕೆಗೆ ಹಿಂದಿ ಗ್ರಾಮ ಸ್ವರಾಜ್ಯ ಸ್ಥಾಪನೆಯಾಗಬೇ ದೀತು. ಏನೇ ಇರಲಿ—ಸಮಾಜದ ಕೆಲ ಭಾಗ್ಯಶಾಲಿಗಳನ್ನು ಬಿಟ್ಟರೆ, ಉಳಿದವ ಶ್ರೇಷ್ಠತಮ ಜ್ಞಾನಾರ್ಜನೆಗಾಗಿ ಶಿಕ್ಷಣ ನ್ನು ಅವಲಂಬಿಸದೆ—ಹೊಟ್ಟೆಪಾಡಿಗಾ ಹಂಚಿಕೆ ಕಟ್ಟುವವರೇ ಇದ್ದಾ ಬದುಕಿನ ವಿವಿಧ ರಂಗಗಳಲ್ಲಿ ಯಶ ಯಾಗಿ ಕೈಯಾಡಿಸಿ ಬದುಕಬಲ್ಲ ಜಾಣ ಗಷ್ಟೆ ಇಂದು ಬೆಲೆ ಇದೆ—ಎಂದಮೇ ಹೊಲದಲ್ಲೇ ಇರಲಿ, ಕಾರ್ಖಾನೆಯ ಯೇ ಇರಲಿ, ವಿಶೇಷತರವಾದ ಪ್ರ ಯಿಂದ ಕಾರ್ಯನಿರ್ವಹಿಸಬಲ್ಲವನು ಮ ತ್ರ ಬಾಳುವನು! ಇಂದು ನಾವು ಕಾರ ನರಿಗೆ, ಸರಕಾರಿ ಅಧಿಕಾರಿಗಳಿಗೆ, ಅಂ ಕಾರರಿಗೆ ಕೊಡುವ ಮರ್ಯಾದೆಯನ್ನೆ ಹೊಲದ ರೈತನಿಗೆ, ಕಾರಖಾನೆಯ ರ್ಮಿಕನಿಗೆ, ಸೇತುವೆಕಟ್ಟುವ ಇಂಜಿ ನೀಯರಿಗೆ, ಟ್ರ್ಯಾಕ್ಟರು ಡ್ರೈವರನಿಗೆ, ಶಬ ಶಿಲ್ಪಿಗೆ ಕೊಡುವುದಗತ್ಯ. ಮನು ನನ್ನು ಮನುಷ್ಯನನ್ನಾಗಿ ಶಿಕ್ಷಣ ರೂ ಬೇಕಾದರೆ—ಈ ಮೂಲಭೂತವಾದ ರ್ಪಾಟು ಉಂಟಾಗಬೇಕು. ನಮ್ಮ ನ ಳಿಕೆಗೆ ಮತ್ತು ವಿಚಾರ ಸಮಯದೊ ಹೊಂದಿಕೊಂಡು ಬೆಳೆಯಲಿ!

ದೇವರ ದಯೆ

ಅಕ್ಕಪಕ್ಕಗಳಲ್ಲಿ ರೆಕ್ಕೆಗಳಿದ್ದ ದೇವದೂತರು ನಮ್ಮನ್ನು ಕೈಹಿಡಿದು ಮುನ್ನಡೆಸುತಿದ್ದ ಕತೆ ಹಿಂದಿನ ಕಾಲದ ಸಂಗತಿ. ಇದನ್ನು ದೇವರ ದಯೆ ಎಂಬುದಾಗಿ ಆಗ ಜನರು ಕೊಂಡಾಡುತಿದ್ದರು.

ದೇವರ ದಯೆ ಈಗಲೂ ಇದೆ. ಆದರ ಸ್ವರೂಪದಲ್ಲಿ ಮಾತ್ರ ಪರಿವರ್ತನೆಯಾಗಿದೆ. ಸ್ವರ್ಗದಿಂದ ದೇವದೂತರು ಇಳಿದು ಬಂದು ತಮ್ಮನ್ನು ಸುಧಾರಿಸಬೇಕೆಂದು ವಿವೇಕಿಗಳು ಈಗ ಅಪೇಕ್ಷಿಸುವುದಿಲ್ಲ. ಈಗ ದೇವರ ದಯೆಯಿಂದ ನಮಗೆ ಅವಶ್ಯವೆನಿಸಿದ ವಿಮಾ ಸೌಲಭ್ಯವಿದೆ. ಇಂದೇ ವಿಮೆ ಇಳಿಸಿ, ನಿಮ್ಮ ಮತ್ತು ನಿಮ್ಮ ಕುಟುಂಬದ ರಕ್ಷಣೆಯನ್ನು ಮಾಡಿಕೊಳ್ಳಿರಿ. ತನ್ನ ರಕ್ಷಣೆ ತಾನು ಮಾಡಿಕೊಳ್ಳ ಬಲ್ಲವನನ್ನು ದೇವರು ಕೈಬಿಡುವುದಿಲ್ಲ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ. ಸ್ಥಾಪನೆ: ೧೯೩೫
ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ ಕಂಪೆನಿ
The Canara Mutual Assurance Co. Ltd.
Head Office: UDIPI, S. INDIA. ESTD: 1935

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ವರ್ಗ ಸಮರದ ಬದಲು ಮಾನವೀಯ ಭಾವ

ಔದ್ಯಮಿಕ ಅಭಿವೃದ್ಧಿಗೆ ಕೈಗೊಳ್ಳತಕ್ಕ ಕ್ರಮ

ಕಾರ್ಮಿಕರು ಮತ್ತು ಒಡೆಯರ ನಡುವೆ ಉಂಟಾಗಿರುವ ಬಿರುಕನ್ನು ಬೇಗನೇ ಮುಚ್ಚುವುದಗತ್ಯವೆಂಬುದಾಗಿ ಇಂದು ಎಲ್ಲರೂ ಒಪ್ಪುವರು. ಕೇಂದ್ರ ಸರಕಾರದ ಕಾರ್ಮಿಕ ಮಂತ್ರಿ ಶ್ರೀ ವಿ. ವಿ. ಗಿರಿಯವರು ಶ್ರಮಜೀವಿಗಳ ಹಾಗೂ ಉದ್ಯೋಗಪತಿಗಳ ಸಂಬಂಧವನ್ನು ತುಂಬ ಸೌಹಾರ್ದಯುತವಾಗಿಯೂ ಪರಸ್ಪರ ಹೊಂದಿಕೊಂಡಿರುವಂತೆಯೂ ಮಾಡಲು ಆತುರ ಪ್ರಯತ್ನಪಡಿಸುತ್ತಾರೆ. ಔದ್ಯೋಗಿಕ ಅಭಿವೃದ್ಧಿಯ ದೃಷ್ಟಿಯಿಂದ ತಮ್ಮ ಸಮಸ್ಯೆಗಳನ್ನು ಸಂಧಾನ ಹಾಗೂ ಮಧ್ಯಸ್ಥಿಕೆಯ ಶಾಂತಮಾರ್ಗದಿಂದ ಪರಿಹರಿಸಿಕೊಳ್ಳುವುದು ಸೂಕ್ತ ಹಾಗೂ ಲಾಭದಾಯಕವೆಂದು ಅವರು ಪ್ರತಿಪಾದಿಸುತ್ತಾರೆ. ಸರಕಾರದಿಂದ ನ್ಯಾಯಮಂಡಳವು ನೇಮಕಗೊಂಡು, ಔದ್ಯೋಗಿಕ ತಂಟೆಗಳನ್ನು ಪರಿಹರಿಸುವಲ್ಲಿ ಸಹಯೋಗ ನೀಡುತ್ತಿದ್ದರೂ ಅದನ್ನು ಪರಿಣಾಮಕಾರಿಯಾದ ಕ್ರಮವೆಂದು ಒಪ್ಪಲಾಗದು. ಎರಡೂ ವರ್ಗಗಳಲ್ಲಿ ಸ್ನೇಹ ಬೆಳೆಯಲು ತಿಲಾಂಶದಷ್ಟೂ ಅವಕಾಶ ಕೊಡದೆ–ಸಹಕಾರ ಮನೋವೃತ್ತಿ ಉಂಟಾಗುವಂತೆ ನೋಡಿಕೊಂಡರೆ ಮಾತ್ರ ಒಂದು ಉದ್ದಿಮೆಯು ಉತ್ಕರ್ಷವನ್ನು ಮುಟ್ಟೀತು. ಒಡೆಯರು ತಮ್ಮ ಹಿತಸಂಬಂಧಗಳ ಮಟ್ಟಿಗೆ ಲೋಭದೋರಾಗಬೇಕಾದುದೂ, ಕಾರ್ಮಿಕರು ಹಕ್ಕುಬಾಧ್ಯತೆಗಳ ಬೇಡಿಕೆ ಮುಂದಿಡುವಾಗ ಮಾನವೀಯ ಉಪಾಯಗಳಿಂದ ವಿಚಲಿತರಾಗದಿರುವುದೂ ಮುಖ್ಯ. ನಾವು ಒಬ್ಬನಿಗೆ ರೊಕ್ಕ ಕೊಟ್ಟು, ಅವನ ಸಮಯವನ್ನು ಕೊಂಡುಕೊಳ್ಳಬಹುದು. 'ಅದರಿಂದ ಅವನನ್ನು ನಮ್ಮ ಕೆಲಸಕ್ಕೆ ಉಪಯೋಗಿಸಿಕೊಳ್ಳಬಹುದು. ತನ್ನ ಪರಿಶ್ರಮದಿಂದ ಅವನು ಸಂಬಳ ಕೊಟ್ಟದಾತನಿಗೆ ಪ್ರತಿಫಲವನ್ನು ನೀಡುವನೆಂಬುದು ನಿಜ. ಹಾಗೆಂದ–ಮನುಷ್ಯನೊಡನೆ, ಯಾವ ಕ್ಷೇತ್ರ [illegible] ಆರ್ಥಿಕ ವ್ಯವಹಾರ ಮಾಡುವಾಗ–ದುಡ್ಡು ಕೊಟ್ಟು ಅವನ ಹೃದಯವನ್ನು ಗೆಲ್ಲಲಾರೆವು ಹೃದಯವನ್ನು ಗೆದ್ದುಕೊಳ್ಳದ ಹೊರತು, ಆ ಮನುಷ್ಯನ ಶ್ರೇಷ್ಠ ಕರ್ತೃತ್ವಶಕ್ತಿಯ ಲಾಭ ಪಡೆಯಲಾರೆವು. ಮಾಲಕ–ಮಜೂರ ಸಂಬಂಧವನ್ನು ಕುರಿತು ವಿಚಾರಿಸುವಾಗ ಈ ಮೂಲಭೂತ ಅಂಶವನ್ನು ಕಡೆಗಣಿಸಲಾಗದು

ಕಾರ್ಮಿಕರ ಸಹಕಾರ

ಮಾನವೀಯತೆಯನ್ನು ಮೂಲೆಗೊತ್ತಿ ನಡೆಯುವ ಮುಷ್ಕರ ಹಾಗೂ ಕಿತ್ತಾಟಗಳು ರಾಷ್ಟ್ರದ ಔದ್ಯಮಿಕ ಪ್ರಗತಿಯಲ್ಲಿ ಕಂಟಕಪ್ರಾಯವಾಗಿವೆ. ಪರಿಶ್ರಮ ಹಾಗೂ ಬಂಡವಾಳಗಳ ನಡುವೆ ಅಸಹಯೋಗ ಉಂಟಾದರೆ, ತತ್ಪರಿಣಾಮವಾಗಿ ಉತ್ಪಾದನೆಯು ತಗ್ಗುವುದು. ಉತ್ಪಾದನೆಯು ಕಡಿಮೆಯಾದಂತೆ–ಬೆಲೆಯಲ್ಲಿ ಹೆಚ್ಚಳವಾಗುತ್ತದೆ. ದಾರಿದ್ರ್ಯದಿಂದ ಕಂಗೆಟ್ಟಿರುವವರನ್ನು ಉದ್ಧರಿಸುವ ಹಲವಾರು ಮಾರ್ಗಗಳನ್ನು ಮಾರ್ಕ್ಸ್, ಲೆನಿನ್, ಗಾಂಧೀ ಮುಂತಾದವರು ವರ್ಣಿಸಿದ್ದಾರೆ ಮಾರ್ಕ್ಸ್‌ವಾದವನ್ನು ಮೆಚ್ಚುವ ಜನ ಈಗ ಹೆಚ್ಚು ಕಂಡುಬರುವರೂ–ಮಾನವನನ್ನು ಯಾಂತ್ರಿಕ ಮಟ್ಟಕ್ಕೆ ಇಳಿಸುವ ಹಾಗೂ ವರ್ಗಕಲಹದ ದುಷ್ಟ ಪದ್ಧತಿಯನ್ನು ಘೋಷಿಸಿ ನಿಂತಿರುವ ಈ ಮಾರ್ಗ ಸಾಧುವಾದುದಲ್ಲ ಎಂದು ವಿವೇಕಿಗಳ ಮತ. ಗಾಂಧೀಜಿ, ಭಾರತೀಯ ಸಂಸ್ಕೃತಿಗೆ ಒಪ್ಪುವ ರೀತಿಯಲ್ಲಿ, ನ್ಯಾಯ ಹಾಗೂ ಧರ್ಮಗಳಿಗನುಸಾರ–ಮಾನವೀಯತೆಯ ಭಾವನೆಯಿಂದ ಈ ಬಗೆಯ ತಂಟೆಗಳು ಬಗೆಹರಿಯಬೇಕೆಂದು ಬಯಸುತಿದ್ದರು. ಪಶ್ಚಿಮದ ರಾಷ್ಟ್ರಗಳು–ಧರ್ಮದೃಷ್ಟಿಯಿಂದ ಪ್ರೇರಿತವಾಗಿದ್ದರೋ ಇಲ್ಲವೋ–ಹೇಳುವಂತಿಲ್ಲದಿದ್ದರೂ––ಮಾನವ್ಯದ ಕರೆಗೆ ಅವರು ಓಗೊಡುತ್ತಿರುವರೆಂದೂ, ಮನುಷ್ಯನ ಮನಸ್ಸನ್ನು ಒಲಿಸುವ ಹತ್ತು ಹಲವು ಬಗೆಯ ಪ್ರಯತ್ನಗಳನ್ನು ಕೈಗೊಳ್ಳುತ್ತಿರುವರೆಂದೂ ನಿಸ್ಸಂಶಯವಾಗಿ ಹೇಳಬಹುದು. ಅವರ ಹೊಸ ಯೋಜನೆಗಳು ನಿಜಕ್ಕೂ ಯಶಸ್ವಿಯಾಗಿವೆ.

ಯೇಸುವಿನ ಉಪದೇಶ

ಔದ್ಯೋಗಿಕ ಸಂಸ್ಥೆಯಲ್ಲಿ ದುಡಿಯುವ ಕಾರ್ಮಿಕರ ಒಲವು ಸಂಪಾದನೆಯನ್ನು ಬಂಡವಾಳ ಒದಗಿಸಿದ ಒಡೆಯರು ಇಂದು ಬಹುವಾಗಿ ಅಪೇಕ್ಷಿಸುತ್ತಾರೆ. ಅಮೇರಿಕದ ಟಾಮ್ ಪ್ಯಾಕನು ಈ ಹೊಸ ಯೋಜನೆಯ ಪರಿಣಾಮವಾಗಿ ಕಾರ್ಮಿಕರ ಸದ್ಭಾವನೆಯೊಂದಿಗೆ, ಕಂಪೆನಿಯ ಭವಿಷ್ಯವನ್ನೂ ಉಜ್ವಲ ಹಾಗೂ ಸುರಕ್ಷಿತಗೊಳಿಸಿದನು. ಕೆಲವೇ ವರ್ಷಗಳ ಹಿಂದೆ ನಾಲ್ಕುವರೆ ಸಾವಿರ ಡಾಲರು ಬೆಲೆಕಟ್ಟಬಹುದಿದ್ದ ಅವನ ಕಂಪೆನಿಗೆ ಇಂದು ಹತ್ತು ಲಕ್ಷ ಡಾಲರು ಕೊಟ್ಟರೂ ಕಡಿಮೆಯೇ. ಇದು ಅದ್ಭುತ ಸಾಫಲ್ಯವಲ್ಲವೆ? ಇದಕ್ಕೆ ಮೂಲಕಾರಣ––ಕಾರ್ಮಿಕರ ಸಹಕಾರ. ಟಾಮ್ ಪ್ಯಾಕನ ಮಾತನ್ನೆ ಉದಾಹರಿಸುವುದಾದರೆ, "ಕಂಪೆನಿಯನ್ನು ಹೇಗೆ ಊರ್ಜಿತಗೊಳಿಸಬಹುದೆಂದು ನನ್ನ ಜನರೇ ಹೇಳುತ್ತಾರೆ. ನನ್ನವರಿಗಿಂತ ಒಳ್ಳೆಯ ಸಲಹೆ ಬೇರೆಲ್ಲಿಂದ ಬಂದೀತು? ಅವರ ಸಹಕಾರಕ್ಕೆ ಬದಲಾಗಿ ಲಾಭದಲ್ಲಿ ಪಾಲನ್ನೂ, ಉತ್ತಮ ವ್ಯವಸ್ಥೆಯನ್ನೂ ನಾನು ಅವರಿಗೆ ಕೊಡುತ್ತೇನೆ. ಅವರನ್ನು ಕೂಲಿಗೆ ದುಡಿಯುವ ಜಡಪಾಯಿಯೆಂದು ತಿಳಿಯದೆ, ನನ್ನಂತೆಯೇ ಒಬ್ಬ ಮನುಷ್ಯ ಜೀವ ಎಂದು ಕಾಣುತ್ತೇನೆ" ಹೀಗೆ ಇನ್ನೂ ಅನೇಕ ಸಂಸ್ಥೆಗಳು ಟಾಮ್ ಪ್ಯಾಕನ ಸ್ವರ್ಣ ನಿಯಮವನ್ನು ಪ್ರಯೋಗಿಸಿ ಉತ್ತಮ ಯಶಸ್ಸು ಸಂಪಾದಿಸಿದ ನಿದರ್ಶನಗಳಿವೆ ಇವುಗಳಿಗೆ ಈ ಸನ್ಮಾನ ಹಾಗೂ ಗೌರವ ಬಂದಿತಾದರೂ ಹೇಗೆ? ಬಹಳ ಸುಲಭದ ಮಾತು–ಯೇಸು ಪರ್ವತದ ಮೇಲಿಂದ ಅಪ್ಪಣೆ ಕೊಡಿಸಿದ ಸೂತ್ರಗಳಿವೆಯಷ್ಟೆ: ಅವುಗಳಲ್ಲಿ "ಬೇರೆಯವರು ನಿನಗಾಗಿ ಏನು ಮಾಡಬೇಕೆಂದು ಬಯಸುವಿಯೋ ಅದನ್ನು ನೀನು ಅವರಿಗಾಗಿ ಮಾಡಿಬಿಡು" ಎಂಬುದೂ ಒಂದು. ವರ್ಗ ಸಂಘರ್ಷದ ಜ್ವಾಲೆಯನ್ನು ಶಮನಗೊಳಿಸಲು ಬಂಡವಾಳ ರಾಷ್ಟ್ರವಾದ ಅಮೇರಿಕ ಹೀಗೆ ಶ್ರಮಿಸುತ್ತಿದೆ.

ಉದ್ಯೋಗದ ಭದ್ರತೆ

ವೇತನ ಪ್ರಮಾಣದ ಕುರಿತು ಅಮೇರಿಕಾದ ಕಾರ್ಮಿಕ ಅಧಿಕ ಗಮನ ಕೊಡುವುದಿಲ್ಲವೆಂದರೆ ಆಶ್ಚರ್ಯ. ಕೆಲಸದಲ್ಲಿ ಉನ್ನತಿಗೆಷ್ಟು ಅವಕಾಶವಿದೆ ಮತ್ತು ಅದು ಚಿರಸ್ಥಾಯಿಯೋ ಹೇಗೆಂಬುದರ ಕಡೆಗೇ ಅವರ ಗಮನವಿರುತ್ತದೆ. ನನಗೆ ಬೇಕೆನಿಸಿದ ವಸ್ತುಗಳ ಉತ್ಪಾದನೆಯು ನಮ್ಮಿಂದ ಸಾಧ್ಯವಾಗದಿದ್ದಾಗ– ದುಡ್ಡು ಸರ್ವಸ್ವವಾಗಿ ಬಿಡುತ್ತದೆ ಈ ಪರಾವಲಂಬನದ ಪರಿಣಾಮವಾಗಿ, ದುಡ್ಡಿನ ಜೊತೆಗೆ ಭದ್ರತೆಯನ್ನೂ ಬೇಡುವ ಪರಿಸ್ಥಿತಿ ನಿರ್ಮಾಣಗೊಳ್ಳುತ್ತದೆ. ಸೀಯರ್ಸ್ ರೋಬರ್ ಎಂಡ್ ಕಂಪೇನಿ ಎಂಬ ಸಂಸ್ಥೆ ಕಾರ್ಮಿಕರ ಈ ಮನೋವೃತ್ತಿಯನ್ನು ತಣಿಸಲು ಯತ್ನಿಸಿದೆ. ಸಂಬಳದಿಂದ ಕೂಡಿದ ರಜೆ, ದುರ್ಘಟನೆಗಳ ಅಲೋವೆನ್ಸು, ಸಾಮೂಹಿಕ ವಿಮಾ ವ್ಯವಸ್ಥೆ, ಸ್ವಾಸ್ಥ್ಯದ ಸಂರಕ್ಷೆ, ನಿಃಶುಲ್ಕ ಚಿಕಿತ್ಸೆ ಮುಂತಾದ ಹಲವು ಬಗೆಯ ಸೌಕರ್ಯಗಳೊಂದಿಗೆ–ಸ್ಟಾಕ್ ಅನರ್‌ಶಿಪ್ ಎಂಬ ಹೊಸ ಯೋಜನೆಯನ್ನು ಅದು ಜಾರಿಗೆತಂದಿದೆ. ಈ ಯೋಜನೆಯ ಬಗ್ಗೆ ಒಬ್ಬ ಕಾರ್ಮಿಕ "ನನಗಂತೂ ನಾನು ಒಡೆಯನೇ ಹೌದೆಂದು ಭಾಸವಾಗುತ್ತದೆ: ಇದರ ಸಂಚಾಲನದಲ್ಲಿ ನನ್ನದೂ ಕೈಯಿದೆ" ಎಂದು ಹೆಮ್ಮೆಯಿಂದ ಹೇಳುತ್ತಾನೆ ಎಷ್ಟೋ ಕಂಪೆನಿಗಳು ಈ ಯೋಜನೆಯಿಂದ ಸ್ಥಿತಿಗತಿಯನ್ನು ಉತ್ತಮಗೊಳಿಸಿವೆ ಹಾಗೆಯೇ ಇನ್ನಷ್ಟು ಸಂಸ್ಥೆಗಳು ಉನ್ನತಿಗೆ ಅವಕಾಶವನ್ನು ಕಲ್ಪಿಸಿಕೊಟ್ಟು ಊರ್ಜಿತಾವಸ್ಥೆಯನ್ನು ಮುಟ್ಟಿವೆ.

ಉನ್ನತಿಗೆ ಆಸ್ಪದ

ವಾಲ್ಟಿಮೋರದ್ ಮೆಕ್ ಕಾರ್ಮಿಕ್ ಎಂಡ್ ಕಂಪೆನಿ "ತರುಣ ವ್ಯವಸ್ಥಾಪಕ ಮಂಡಳಿ" ಎಂಬುದನ್ನು ನಿರ್ಮಿಸಿದೆ. ಕುಶಲರಾದ ಯುವಕ-ಯುವತಿಯರು ಇದರ ಸದಸ್ಯರು. ಇವರು ತಮ್ಮ ಕೆಲಸದಲ್ಲಿ ಸಫಲತೆಯನ್ನು ತೋರಿಸಿದರೆ, ಹಿರಿಯರ ಸಾಲಿಗೆ ಸೇರುವರು ಟಪ್ಪಾಲು ಪೇದೆಯೊಬ್ಬ ಇದೇ ಯೋಜನೆಯ ಪರಿಣಾಮವಾಗಿ ಕೆ ಉಪಾಧ್ಯಕ್ಷನಾದ. ಕಿಟಕಿ ಒರೆಸಿ, ಸ್ವಚ್ಛಮಾಡುವ ಹುಡುಗ, ಕಂಪೆನಿಯ ಮುಖ್ಯ ಕ್ಲಾರ್ಕನಾದ. ಸಂಸ್ಥೆಯ ವ್ಯವಸ್ಥಾಪಕರು ಸಂಬಳದಲ್ಲಿ ೧೦% ಕಡಿತವಿದ್ದುದನ್ನು ತೆಗೆದುಹಾಕಿದದರಿಂದ ಉತ್ಪಾದನೆಯಲ್ಲಿ ೧೦% ಹೆಚ್ಚಾದುದು ಕಂಡುಬಂತು.

ಇದು ಹೊರತು ಕಾರ್ಮಿಕರ ಪ್ರಾಮಾಣಿಕತೆಯನ್ನು ಗೆಲ್ಲಲು ಇನ್ನೂ ಹಲವು ಬಗೆಯ ಆಮಿಷಗಳನ್ನು ತೋರದಿಲ್ಲ. ಚಿಕಾಗೋದ ಒಂದು ಸಂಸ್ಥೆ ದಿನಕ್ಕೆರಡುಬಾರಿ ತನ್ನ ಕಾರ್ಮಿಕರಿಗೆ ಚಹಾ ಪಾನವನ್ನು ಪುಕ್ಕಟೆಯಾಗಿ ಮಾಡಿಸುತ್ತದೆ. ಮಹಿಳೆಯರಿಗೆ ಸಮವಸ್ತ್ರವನ್ನು ಒದಗಿಸಿ ಕೊಡುತ್ತದೆ. ಕೆಲವು ಕಂಪೆನಿಗಳು ಗ್ರೀಷ್ಮ ಕಾಲದಲ್ಲಿ ಶಿಬಿರಗಳನ್ನು ತೆರೆದರೆ, ಇನ್ನು ಕೆಲವು ವಿದ್ಯಾರ್ಥಿವೇತನಗಳನ್ನು ಘೋಷಿಸುತ್ತವೆ. ಸಂಗೀತದ ಕಾರ್ಯಕ್ರಮ, ಪ್ರಸಿದ್ಧ ಪತ್ರಿಕೆಗಳಿಂದ ಕೂಡಿದ ವಾಚನಾಲಯ, ವ್ಯಾಯಾಮಶಾಲೆ ಇನ್ನೂ ಹಲವು ಬಗೆಯಿಂದ ಕೆಲಸಗಾರರ ಹೃದಯ ಗೆಲ್ಲುವ ಪ್ರಯತ್ನಗಳಿವೆ.

ಲಾಭಾಂಶದಲ್ಲಿ ಪಾಲು

ಆದರೆ ಇದೆಲ್ಲಕ್ಕೂ ಮಿಗಿಲಾದುದು ಲಾಭದ ಮೊತ್ತದಿಂದ ಶ್ರಮಜೀವಿಗಳಿಗೂ ಪಾಲು ಕೊಡುವ ವಿಧಾನ: ಕೆಲಸಗಾರರು ತಮ್ಮ ಸಂಬಳದಿಂದ ದಿನದ ಖರ್ಚುವೆಚ್ಚಗಳನ್ನು ನೋಡಿಕೊಂಡು, ಲಾಭಾಂಶದಿಂದ ವಿಶೇಷ ವಸ್ತುಗಳನ್ನು ಕೊಂಡುಕೊಂಡು ಸುಖಿಸುತ್ತಾರೆ. ಜಾರ್ಜ್ ಜೆಸ್ ಹೇಳುವಂತೆ–"ಹಿಂದೆ ವ್ಯವಸ್ಥಾಪಕರ ಮಸ್ತಿಷ್ಕದ ೯೫% ಯಾಂತ್ರಿಕ ಕೆಲಸಗಳನ್ನು ನೀಗಿಸುವುದಕ್ಕೆ ಕಳೆದು, ಮಾನವೀಯ ಸಮಸ್ಯೆಗಳಿಗಾಗಿ ಕೇವಲ ೫% ರಷ್ಟು ಉಳಿಯುತಿತ್ತು. ಆದರೆ ಭವಿಷ್ಯತ್ತಲ್ಲಿ ಸ್ಥಿತಿ ಮಾರ್ಪಾಟು ಹೊಂದಬೇಕಾಗಿದೆ: ೫೦% ಮಾನವೀಯ ಸಮಸ್ಯೆಗಳಿಗೆ ವ್ಯಯಮಾಡುವುದವಶ್ಯ." ಇದನ್ನೆ ಟಾಮ್ ಪ್ಯಾಕ "ಅಮೇರಿಕದ ಸ್ವತಂತ್ರ ವ್ಯವಸ್ಥೆ ಮಾತ್ರವಲ್ಲ–ವಿಶ್ವದಲ್ಲಿಯೇ ಮಾನವೀಯ ಸಂಬಂಧಗಳು ಸೌಹಾರ್ದಯುತವೂ ಸಹಕಾರ ಪೂರ್ಣವೂ ಆದ ವಾತಾವರಣದಲ್ಲಿ ಬೆಳೆಯಬೇಕು" ಎನ್ನುತ್ತಾನೆ.

ನೀವೇಕೆ ಸೇವಿಂಗ್ಸ್‌ಬೇಂಕ್ ಖಾತೆಯನ್ನು ತೆರೆಯಬೇಕು?

ಬೇಂಕಿನಲ್ಲಿಟ್ಟ ಹಣವು ಯಾವಾಗಲೂ ಭದ್ರವಾಗಿರುತ್ತದೆ. ಗುಪ್ತನಾಗಿ ಕೇಖಂಸಿಟ್ಟ ಹಣಕ್ಕೆ ಒಂದಲ್ಲ ಒಂದು ದಿನ ಗಂಡಾಂತರವೆ ಅಂತಹ ನಿಧಿಯು ಕಳ್ಳಕಾಕರ ವಶವಾಗಲು, ಕೈ ಬದಲಾವಣೆಯಾಗಲು ಇಲ್ಲವೆ ಇಲಿಗಳು ಅಥವಾ ಬಿಳಿ ಇರುವೆಗಳಿಂದ ನಾಶವಾಗ ಹೋಗಬಹುದು ಆಕರ್ಷಕ ಬಡ್ಡಿಯನ್ನು ನಾವು ಕೊಡುವುದರಿಂದ ನಮ್ಮ ಸೇವಿಂಗ್ಸ್ ಖಾತೆಯಲ್ಲಿಟ್ಟ ನಿಮ್ಮ ಹಣವು ದಿನದಿಂದ ದಿನಕ್ಕ ಬೆಳೆಯುತ್ತಲೇ ಹೋಗುವುದು

ಇಂದೇ ಸೇವಿಂಗ್ಸ್ ಬೇಂಕ್ ಲೆಖ್ಖವನ್ನು ತೆರೆಯಿರಿ.

ದಿ ಕೆನರಾ ಇಂಡಸ್ಟ್ರಿಯಲ್
ಎಂಡ್‌ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.
ಸ್ಥಾಪನೆ: 1925 ಹೆಡ್ ಆಫೀಸು. ಉಡುಪಿ

The Canara Industrial &
Banking Syndicate Limited.
Estd: 1925 H. O: UDIPI.

ಜಾಗತಿಕ ಶಾಂತಿಯೋ

ಕೈಮಗ್ಗದ ನೇಕಾರರ ಚಿಂತನೀಯ ಪರಿಸ್ಥಿತಿ

ಗೃಹೋದ್ಯಮಕ್ಕೆ ಪೆಟ್ಟು

ಮಹತ್ವದ ವಿಷಯಗಳ ಮೇಲೆ ಅಭಿಪ್ರಾಯ ಭೇದ ಉಂಟಾಗುವುದು ಸ್ವಾಭಾವಿಕವೇ ನಿಜವಾದರೂ—ರಾಜ್ಯ ಸೂತ್ರಗಳನ್ನು ಕೈಯಲ್ಲಿ ಹಿಡಿದುಕೊಂಡ ಧುರೀಣರು ಸಾರ್ವಜನಿಕವಾಗಿ ಪರಸ್ಪರ ವಿಸಂಗತವಾದ ಧೋರಣೆಯನ್ನು ವ್ಯಕ್ತಪಡಿಸುವುದು ಇಷ್ಟವಲ್ಲ. ಕಳೆದವಾರ ಇಂಥದೊಂದು ಪ್ರಕರಣ ಘಟಿಸಿತು. ಕೈಮಗ್ಗದ ನೇಕಾರರ ಪ್ರಕೃತದ ಪರಿಸ್ಥಿತಿ ತುಂಬ ಶೋಚನೀಯವಿದೆ. ಮದ್ರಾಸ ರಾಜ್ಯದಲ್ಲಿಯಂತೂ ಅವರು ಕಂಗೆಟ್ಟಿರುವರು. ನೂಲು ಸಾಕಷ್ಟು ಪ್ರಮಾಣದಲ್ಲಿ ಸಿಗದಿರುವುದು ಕಳೆದ ವರ್ಷದ ಮುಖ್ಯ ತೊಂದರೆಯಾಗಿದ್ದರೆ—ಈ ವರ್ಷ ನೇಯ್ದ ಬಟ್ಟೆಗೆ ಗಿರಾಕಿಗಳೇ ದೊರೆಯದ ಪರಿಸ್ಥಿತಿ ಇದೆ. ಮದ್ರಾಸು ರಾಜ್ಯದಲ್ಲಿ ಸುಮಾರು ೧೦ ಲಕ್ಷ ನೇಕಾರ ಕುಟುಂಬಗಳಿದ್ದು ಭಾರತದಲ್ಲಿ ಏನಿಲ್ಲೆಂದರೂ ೫೦ ಲಕ್ಷದಷ್ಟು ನೇಕಾರ ಕುಟುಂಬಗಳಿಗೆ ಕೈಮಗ್ಗವನ್ನು ಬಿಟ್ಟರೆ ಬೇರೆ ಜೀವನೋಪಾಯದ ಮಾರ್ಗವಿಲ್ಲ. ಪಾಶ್ಚಾತ್ಯರ ಆಕ್ರಮಣವು ಭಾರತದಲ್ಲಿ ತೊಡಗಿದ ದಿನದಿಂದ ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಹೊಲ್ಲದ ಬಿಕ್ಕಟ್ಟು ಉಂಟಾಯಿತು—ಮತ್ತು ಸಾಮಾಜಿಕ ನೆಲಗಟ್ಟೇ ಕುಸಿದು ಹೋಯಿತು.. ಕೈಮಗ್ಗಗಳ ನೇಕಾರರು ಅಂದಿನಿಂದಲೇ ಉದ್ಯೋಗವಿಲ್ಲದೆ ಅಲೆಯುವ ಪರಿಸ್ಥಿತಿ ನಿರ್ಮಾಣಗೊಂಡಿತು. ಆದರೂ ಪರಂಪರಾಗತವಾಗಿ ಬಂದಿರುವ ವೃತ್ತಿಯನ್ನು ಕಷ್ಟವಾಗಲೀ, ನಷ್ಟವಾಗಲೀ ಬಿಟ್ಟುಕೊಡದ ನೇಕಾರ ಕುಟುಂಬಗಳು ಇನ್ನೂ ಸಾಕಷ್ಟು ಹೆಚ್ಚು ಪ್ರಮಾಣದಲ್ಲಿವೆ. ಗಿರಣಿಗಳೊಡನೆ ಸ್ಪರ್ಧಿಸುವ ವಿಷಮ ವಾತಾವರಣದಲ್ಲಿಯೂ ಸುಮಾರು ೧೭೦೦ ದಶಲಕ್ಷ ಗಜದಷ್ಟು ಬಟ್ಟೆಯನ್ನು ವರ್ಷವರ್ಷವೂ ಉತ್ಪಾದಿಸುತ್ತಿರುವರು. ಗಿರಣಿಗಳಲ್ಲಿ ದುಡಿಯುವ ನೇಕಾರರ ಸಂಖ್ಯೆ ೭೦ ಸಾವಿರಕ್ಕೂ ಹೆಚ್ಚಿಲ್ಲ. ಹೀಗಿರುವಾಗ ಕೈಮಗ್ಗವು ಗೃಹೋದ್ಯಮವಾಗಿ ಸ್ಥಿರವಾಗಿ ನೆಲೆನಿಂತಿದೆ ಎಂಬುದು ಸ್ವಯಂ ವೇದ್ಯವಾಗುತ್ತದೆ.

ಅನುಚಿತ ಛಲ

ಹಾಗೆಂದು—ನೂಲಿನ ಅಭಾವ ಹಾಗೂ ಉತ್ಪಾದಿತ ಬಟ್ಟೆಗೆ ಪೇಟೆ ದೊರಕದಿರುವುದು ನೇಕಾರರಿಗೆ ಬಿಕ್ಕಟ್ಟನ್ನು ತಂದೊಡ್ಡಿದೆ. ಗಿರಣಿಗಳು ಉತ್ಪಾದಿಸುವ ಬಟ್ಟೆಯು ಸಾಮಾನ್ಯವಾಗಿ ಅಗ್ಗ ಬೆಲೆಗೆ ಮಾರಲ್ಪಡುವುದರಿಂದ, ಜನರು ಅದನ್ನೇ ಹೆಚ್ಚಾಗಿ ಕೊಂಡುಕೊಳ್ಳುವರು. ಹೀಗೆ ಎರಡು-ಮೂರು ಕೋಟಿ ರೂಪಾಯಿ ಬೆಲೆಯ ಬಟ್ಟೆಗಳು ಗಿರಾಕಿ ಇಲ್ಲದೆ ನೇಕಾರರ ಸಹಾಯಕ ಸಂಘಗಳಲ್ಲಿ ದಾಸ್ತಾನು ಬಿದ್ದಿವೆ. ಇವುಗಳು ಕಟ್ಟೆಯಾಗಿರುವುದರಿಂದ ವಿದೇಶಗಳಲ್ಲಿ ಪೇಟೆಯನ್ನು ದೊರಕಿಸುವುದೂ ಕಷ್ಟ. ನಮ್ಮ ಮಾಲೇ ನಮಗೆ ಸೇರುವುದಿಲ್ಲವೆಂದ ಮೇಲೆ—ಪರದೇಶೀಯರು ಇದನ್ನು ಮೆಚ್ಚಿ ಒಲಿದು ಬರಬೇಕೆಂದು ಹೇಗೆ ಹೇಳಬಲ್ಲೆವು?—ಏನೇ ಇರಲಿ, ಪರಿಸ್ಥಿತಿಯ ಗಂಭೀರತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ರಾಜಾಜಿ ಒಂದು ಸಮರ್ಪಕವಾದ ಸೂಚನೆ ಮಾಡಿದರು: ಸೀರೆ ಮತ್ತು ಧೋತರಗಳನ್ನು ನೇಯುವ ಗುತ್ತಿಗೆಯನ್ನು ಕೈಮಗ್ಗದ ನೇಕಾರರಿಗೆ ಬಿಟ್ಟುಕೊಡುವುದವಶ್ಯ ಎಂದವರು ಪ್ರತಿಪಾದಿಸಿದರು. ಇದನ್ನು ಕೇಂದ್ರ ಸರಕಾರದ ವಾಣಿಜ್ಯ ಮಂತ್ರಿ ಶ್ರೀ ಟಿ ಟಿ ಕೃಷ್ಣಮಾಚಾರಿಯವರು ಖಂಡಿಸಿದರು. ರಾಜಾಜಿಯ ಸೂಚನೆ ಅವ್ಯವಹಾರ್ಯವೆಂದೂ, ತತ್ಕಾಲ ನೇಕಾರರಿಗೆ ಇದರಿಂದ ಹಿತವುಂಟಾದಂತೆ ಕಂಡುಬಂದರೂ ಜನರು ಬತ್ತಲೆ ತಿರುಗುವ ಪ್ರಸಂಗ ಬಂದೀತೆಂದೂ ಅವರು ಹೇಳಿದರು. ಕೈಮಗ್ಗದ ನೇಕಾರರು ಇಷ್ಟರವರೆಗೆ ಸಾಕಷ್ಟು ದುಡ್ಡು ಮಾಡಿದ್ದಾರೆ. ಅವರಿಗೆ ಈಗ ನಿರುದ್ಯೋಗವಿದೆ ಎಂದು, ಗಿರಣಿಗಳ ಉತ್ಪಾದನವನ್ನು ಕಡಿಮೆಮಾಡಲು ಹವಣಿಸುವುದು ಚೆನ್ನಾದುದಲ್ಲ. ಕೈಮಗ್ಗದ ಬಟ್ಟೆಯ ಉತ್ಪಾದನಾ ಪ್ರಮಾಣವು ಬಹಳ ಅಲ್ಪವಿರುವುದರಿಂದ, ಸಂರಕ್ಷಣೆ ಕೊಟ್ಟರೂ ಉತ್ಪಾದನೆ ಏರುವ ಭರವಸೆ ಇಲ್ಲ. ನೇಕಾರರನ್ನೆಲ್ಲ ಗಿರಣಿಗಳಲ್ಲಿ ಕೆಲಸಕ್ಕೆ ಸೇರಿಸುವುದೇ ಒಳ್ಳೆಯ ಉಪಾಯ ಎಂದು ಅವರು ಹೇಳಿದರು.

ರಾಜಾಜಿಯ ನಿಲುವು

ಹೀಗೆ ಕೇಂದ್ರದ ವಾಣಿಜ್ಯ ಮಂತ್ರಿಗಳು ಒಂದು ವ್ಯವಹಾರ್ಯವಾದ ಸೂಚನೆಯನ್ನು ತಿರಸ್ಕರಿಸಿ ಮಾತನಾಡಿದುದಕ್ಕೆ ರಾಜಾಜಿ ಮಾರ್ಮಿಕವಾದ ಉತ್ತರಕೊಟ್ಟರು: ತಮ್ಮ ಸೂಚನೆಯ ವಿರೋಧಕರಿಗೆ ಕಲ್ಪನಾ ಶಕ್ತಿಯಿಲ್ಲವೆಂದವರು ಹೇಳಿದರು. ಕೈಮಗ್ಗಗಳನ್ನು ಉಳಿಸಲು ಗಿರಣಿಗಳನ್ನು ಕೊಲ್ಲಬೇಕೆಂದು ಹೇಳಿದರೆ—ಯೋಗ್ಯ ಸಂರಕ್ಷಣೆ ಕೊಡುವ ಅಗತ್ಯವನ್ನಷ್ಟೆ ಬಿಂಬಿಸಲಾಗಿದೆ ಎಂದು ರಾಜಾಜಿ ಸ್ಪಷ್ಟಪಡಿಸಿದರು. ಕುಟುಂಬಾಗತವಾಗಿ ನೇಕಾರರು ಕೈಮಗ್ಗದ ಉದ್ಯೋಗವನ್ನು ಅನುಸರಿಸುತ್ತಿರುವುದರಿಂದ ಹಾಗೂ ಅವರೆಲ್ಲರನ್ನು ಗಿರಣಿಗಳಲ್ಲಿ ತೊಡಗಿಸುವುದು ತೀರಾ ಅಸಾಧ್ಯವಾದುದರಿಂದ—ತಮ್ಮ ಸೂಚನೆಯನ್ನು ಮಾನ್ಯಮಾಡುವುದೇ ಏಕಮಾತ್ರ ಮಾರ್ಗವೆಂದು ರಾಜಾಜಿ ಹೇಳಿದ್ದಾರೆ. ಈಗಿರುವ ನಿಯಮದಂತೆ ಗಿರಣಿಗಳು ೪೦% ದಷ್ಟನ್ನು ಸೀರೆ ಮತ್ತು ಧೋತರಗಳ ಉತ್ಪಾದನೆಗೇ ಮೀಸಲಾಗಿರಿಸಬೇಕಾಗಿದೆ. ಶ್ರೀ ಕೃಷ್ಣಮಾಚಾರಿಯವರು ರಾಜಾಜಿಯ ಖಂಡತುಂಡ ಉತ್ತರದಿಂದ ಸ್ವಲ್ಪ ಮೆತ್ತಗಾಗಿ, ಈ ನಿರ್ಬಂಧವನ್ನು ಸಡಿಲಿಸುವ ವಿಚಾರವಿದೆ ಎಂದ ಅನಂತರ ಹೇಳಿದರು. ಇಡೀ ಬಟ್ಟೆ ಉದ್ಯೋಗವನ್ನು ಪುನರ್ವಿಮರ್ಶಿಸಲು ಉಚ್ಚ ಮಟ್ಟದ ಸಮಿತಿಯೊಂದನ್ನು ನೇಮಿಸುವ ವಿಚಾರವನ್ನೂ ಅವರು ಪ್ರಕಟಿಸಿದರು. ಕೈಮಗ್ಗದ ನೇಕಾರರ ಬಗ್ಗೆ ತನಗೆ ಪೂರ್ಣ ಸಹಾನುಭೂತಿ ಇದೆಯಾಗಿಯೂ ಆದರೆ ಮದ್ರಾಸು ರಾಜ್ಯದ ನೇಕಾರರ ಯೋಗಕ್ಷೇಮದ ಬಗ್ಗೆ ರಾಜಾಜಿ ಮಾಡಿದ ಸೂಚನೆಯು ಬಹಳ ವ್ಯಾಪಾರ ಸ್ವರೂಪದ್ದಿರುವುದರಿಂದ—ಆ ಬಗ್ಗೆ ಉಳಿದ ರಾಜ್ಯಗಳ ಪರಿಸ್ಥಿತಿಯನ್ನು ಕಣ್ಣು ಮುಂದಿಟ್ಟುಕೊಂಡೇ ಒಂದು ನಿರ್ಣಯಕ್ಕೆ ಬರಬೇಕಾಗಿದೆ ಎಂದೂ ಕೃಷ್ಣಮಾಚಾರಿ ತಿಳಿಸಿದರು.—ಪಂಚವಾರ್ಷಿಕ ಯೋಜನೆಯಲ್ಲಿ ಕೈಮಗ್ಗದ ಉದ್ದಿಮೆಗೆ ಸಂರಕ್ಷಣೆ ಕೊಡಬೇಕೆಂದು ಸೂಚಿಸಲಾಗಿದೆ. ಗಾಂಧೀ ಅರ್ಥಶಾಸ್ತ್ರಜ್ಞರು (ಉದಾ: ದಿವಂಗತ ಕಿ. ಘ. ಮಶ್ರೂವಾಲ) ರಾಜಾಜಿಯ ಸೂಚನೆ ಸಮಂಜಸವೆಂದು ಹೇಳುತ್ತಾರೆ. ಸಮಾಜವಾದಿ ಧುರೀಣ ಅಶೋಕ ಮೆಹತಾ ಕೂಡ ಕೃಷ್ಣಮಾಚಾರಿಯವರ ಧೋರಣವನ್ನು ಟೀಕಿಸಿದ್ದಾರೆ. ಹೀಗಿರುವುದರಿಂದ ಮಾನ್ಯರು ಯೋಗ್ಯ ಹೆಜ್ಜೆಯನ್ನು ಮುಂದಿಟ್ಟು, ನಿರುದ್ಯೋಗಿಗಳ ಹೊಟ್ಟೆಗೆ ಕಲ್ಲು ಹಾಕದೆ-ಉದ್ಯೋಗ ಹೆಚ್ಚುವಂತೆ ನೋಡಿಕೊಂಡರೆ ಒಳಿತು.

ಸತತೋದ್ಯೋಗದ ಪ್ರವೃತ್ತಿ

ಉದ್ಯೋಗವನ್ನು ಹೆಚ್ಚಿಸುವುದೇ ಭಾರತದ ಮುಂದಿರುವ ಮುಖ್ಯ ಸಮಸ್ಯೆ. ಮೂಲಭೂತವಾದ ಆರ್ಥಿಕ ಸಮಸ್ಯೆಗಳನ್ನು ಭಾರತವಿರಲಿ, ಅಥವಾ ಯಾವುದೇ ರಾಷ್ಟ್ರವಿರಲಿ— ಅದ್ಭುತ ಚಮತ್ಕಾರದಿಂದ ಬಿಡಿಸಲು ಸಾಧ್ಯವಿಲ್ಲ ಎಂಬುದನ್ನು ಏ. ಐ. ಸಿ. ಸಿ.ಯ ಇಂದೂರು ಅಧಿವೇಶನದಲ್ಲಿ ಕಾಂಗ್ರೆಸಾಧ್ಯಕ್ಷ ಶ್ರೀ ಜವಾಹರಲಾಲ ನೆಹರೂ ಸ್ಪಷ್ಟಗೊಳಿಸಿದರು. ಆರ್ಥಿಕ ಅಭಿವೃದ್ಧಿಯನ್ನು ಹೇಗೆ ಸಾಧಿಸಬೇಕೆಂಬುದನ್ನೆ ನಾವು ಅನವರತ ಚಿಂತಿಸಬೇಕು; ಚರ್ಚಿಸಿ, ಕಾರ್ಯಶೀಲರಾಗಬೇಕು. ದಾರಿದ್ರ್ಯ ಹಾಗೂ ನಿರುದ್ಯೋಗಗಳನ್ನು ಹೊಡೆದೋಡಿಸುವ, ಮತ್ತು ಸಾಮಾನ್ಯ ಜನರ ಜೀವನ ಮಟ್ಟವನ್ನು ಎತ್ತರಿಸಿ, ಬದುಕಿನ ಕುರಿತಾದ ನಿರಾಶಾಭಾವವನ್ನು ದೂರೀಕರಿಸುವ ಪರಮೋದ್ದೇಶ ನಮ್ಮದಿರಬೇಕು ಎಂದು ನೆಹರೂ ಪುನರುಚ್ಚರಿಸಿದ್ದಾರೆ. ಇತರ ರಾಷ್ಟ್ರಗಳು ನಿರಂತರ ಪರಿಶ್ರಮ ಹಾಗೂ ಸತತೋದ್ಯೋಗದಿಂದ ಅಭ್ಯುದಯ ಹೊಂದಿರುವುದನ್ನು ಕಂಡಿದ್ದೇವೆ. ಅಮೇರಿಕವನ್ನೆ ತೆಗೆದುಕೊಂಡರೂ, ಎರಡು ಶತಮಾನಗಳಿಗೆ ಹಿಂದಿನ ಅಮೇರಿಕದ ಸ್ಥಿತಿ ನಮ್ಮಷ್ಟು ಚೆನ್ನಾಗಿರಲಿಲ್ಲ ಹೆಚ್ಚೇಕೆ— ಪ್ರಥಮ ಮಹಾಯುದ್ಧದ ಕಾಲದಲ್ಲಿ ಅಮೇರಿಕ ಅದರಲ್ಲಿ ಭಾಗವಹಿಸುವಷ್ಟು ಚೈತನ್ಯ ಪಡೆದಿರಲಿಲ್ಲ. ಏನೋ-ಎರಡನೆ ಮಹಾಯುದ್ಧದಿಂದೀಚೆಗೆ ಅದು ವಿಶ್ವದ ಮಹಾರಾಷ್ಟ್ರವಾಗಿ ಮೆರೆಯುತ್ತಿದೆ. ಅಲ್ಲಿಯವರೆಗೆ ಜನ ಏಕಮನವಾಗಿ—ಉ

ZANDU Mahayogaraja Guggula

ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ 1 ತೊಲೆಗೆ ರೂ 3- ಮಾತ್ರ.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್. ಕೆಮಿಸ್ಟ್ಸ ಎಂಡ್ ಡ್ರಗ್ಗಿಸ್ಟ್ಸ, ಉಡುಪಿ
2 ಶ್ರೀ ಪಿ. ವಿ ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್. ಎನ್. ಶರ್ಮ, ಹಜೂರು ರಸ್ತೆ ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ,

ಪ್ರತಿನಿಧಿಯಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರಿ ಶರತ್ತು ವಗೈರೆಗಳಿಗೆ ಬರೆಯಿರಿ.

DAMODAR & CO.,
Nainiappa Naicken Street, Park Town—MADRAS 3.

For Protection and Provision
Consult
The New Guardian of India Life Insurance Co., Ltd.
Estd] Head office: MADRAS [1934
A Policy in this Progressive Life Office is good investment; its Agency is valuable business connection.
Applications for representation are invited from influential persons.
Please apply to:
The Branch Manager,
Diamond Building, Hampankatta,
MNGALORE, S. K.

CHITRAKOT
ASTHMA-BUTI
A very powerful and world renowned remedy which cures Asthma completely by one dose to be taken on 3-10-52 full moon.
Apply at once in English:-
Shree Mahatma Maunibaba
AYURVEDIC ASHRAM
Chitrakot, Dist. BANDA, U. P.

ಅಸ್ತಮಾ (ದಮ್ಮು)
ಜಗತ್ಪ್ರಖ್ಯಾತ 'ಅಸ್ತಮಬೂಟಿ'ಯ ಒಂದು ಡೋಸನ್ನು ತಾ. 3-10-1952 ನೆ ಪೌರ್ಣಿಮೆ ರಾತ್ರಿಯಲ್ಲಿ ಸೇವನೆ ಮಾಡಿದರೆ ಎಂಥಹ ಅಸ್ತಮಾದರೂ ಗುಣಹೊಂದುವುದು-
ಪತ್ರವ್ಯವಹಾರ ಇಂಗ್ಲಿಷಿನಲ್ಲಿ
Mahatma Shri Janki Sewa Ashram,
P. O. Chitrakot, U. P.

ಭಾರತದ ಧೋರಣ

ಒಕ್ಕಟ್ಟೇ ಕಾಂಗ್ರೆಸಿಗರ ಯಶಸ್ಸಿನ ರಹಸ್ಯ

ದ್ಯೋಗಶೀಲರಾಗಿ ದುಡಿಯುತ್ತಿದ್ದರು. ಭಾರತ ಕೂಡ ಹೀಗೆ ಉದ್ಯೋಗಪ್ರಿಯ ರಾಷ್ಟ್ರವಾಗುವುದಾಗಿ ನೆಹರೂ ನಂಬಿಕೆ ತೋರಿಸಿದರು.

ವಿದೇಶ ನೀತಿಯ ತಿಳುವಳಿಕೆ

ಹೀಗೆ ಪ್ರಗತಿಯನ್ನು ಹೊಂದುತ್ತಿರುವಾಗ ಭಾರತವು ತಟಸ್ಥ ರಾಷ್ಟ್ರವಾಗಿ ಉಳಿಯುವಂತಿಲ್ಲ ಎಂಬ ಸಂಗತಿಯನ್ನೂ ನೆಹರೂ ವ್ಯಕ್ತಪಡಿಸಿದರು. ಇಡೀ ವಿಶ್ವವೇ ಪರಿವರ್ತನೆ ಹೊಂದುತ್ತಿರುವಾಗ ಭಾರತ ಜಗತ್ತಿಗಿಂತ ಪ್ರತ್ಯೇಕವಾಗಿ ಉಳಿಯಲಾರದು. ನಮ್ಮ ಜನ ಬುದ್ಧಿವಂತರಾಗಬೇಕಾದರೆ, ನಮ್ಮ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ—ವಿದೇಶ ನೀತಿಯ ತಿಳುವಳಿಕೆಯು ಬಹಳ ಅಗತ್ಯವಾಗಿದೆ. ಇದು ನಮ್ಮ ಕರ್ತವ್ಯದ ಒಂದಂಗವಾಗಿದೆ ಎಂದು ನೆಹರೂ ಹೇಳಿದರು. ಭಾರತವು ಜಗತ್ತಿನ ಯಾವುದೊಂದು ವಿಶಿಷ್ಟ ಗುಂಪನ್ನು ಸೇರುವುದಿಲ್ಲವಾದರೂ, ಲೋಕಶಾಂತಿಯು ಗಂಡಾಂತರವನ್ನು ಎದುರಿಸುವಾಗ, ತಾಟಸ್ಥ್ಯವನ್ನು ವಹಿಸುವುದು ನಿಷ್ಕ್ರಿಯತೆ ಎಂದೆನಿಸುವುದಾಗಿ ಮೌಲಾನಾ ಆಜಾದರು ಸ್ಪಷ್ಟೀಕರಿಸಿದರು. ಪ್ರತಿಯೊಂದೂ ಪ್ರಶ್ನೆಯ ಯೋಗ್ಯತೆಯನ್ನ, ಅದು ಶಾಂತಿಗೆ ನೆರವಾಗುವುದೇ ಅಥವಾ ಯುದ್ಧಕ್ಕೆ ಪ್ರಚೋದಿಸುವುದೇ ಎಂಬುದರ ಮೇಲಿಂದ ನಿರ್ಣಯಿಸುವುದು ಭಾರತದ ನಿಲುವು. ಮೂರನೆಯ ಮಹಾಯುದ್ಧದ ಕಾರ್ಮುಗಿಲುಗಳು ದಿಗಂತದಲ್ಲಿ ಕಂಡುಬರುವುದು ನಿಶ್ಚಯವಾಗಿಯೂ ಶೋಚನೀಯ. ಕಾರಣ, ಜಗತ್ತಿನ ಮಹಾರಾಷ್ಟ್ರಗಳು ಯುದ್ಧವನ್ನು ತಡೆಗಟ್ಟಲೂ ಶಾಂತಿಸೌಹಾರ್ದಮಯವಾದ ವಾತಾವರಣವನ್ನು ನಿರ್ಮಿಸಲು ಪ್ರಯತ್ನಿಸಬೇಕೆಂದು ಅಖಿಲ ಭಾರತ ಕಾಂಗ್ರೆಸ ಅಧಿವೇಶನವು ಗೊತ್ತುವಳಿಯನ್ನು ಸ್ವೀಕರಿಸಿದೆ. ವರ್ಣಭೇದ ನೀತಿಯ ವಿರುದ್ಧ ಭಾರತೀಯ ಜನಾಂಗವು ಆಫ್ರಿಕನರ ಸಹಯೋಗದೊಂದಿಗೆ—ಮಲಾನ ಸರಕಾರದ ವಿರುದ್ಧ ಹೋರಾಡುತ್ತಿರುವುದಕ್ಕೆ ಕಾಂಗ್ರೆಸು ನೈತಿಕ ಬೆಂಬಲವನ್ನು ನೀಡಿದೆ. ಆಫ್ರಿಕಾ ಎಚ್ಚತ್ತಿದೆ ಎಂದೂ ಅದರ ಮುನ್ನಡೆಯನ್ನು ಸ್ಥಗಿತಗೊಳಿಸುವುದು ಸಾಧ್ಯವಿಲ್ಲವಾಗಿಯೂ ನೆಹರೂ ಎಚ್ಚರಿಸಿದ್ದಾರೆ. ಆಫ್ರಿಕದ ಭಾರತೀಯರು ತಮ್ಮ ಹಿತಕ್ಕಾಗಿ ಅಲ್ಲಿಯ ನಿವಾಸಿಕರ ಹಿತರಕ್ಷಣೆಗೆ ಅಧಿಕ ಮಹತ್ವ ಕೊಡುವುದವಶ್ಯವೆಂದೂ ಹಿಂಸಾತ್ಮಕ ಚಳುವಳಿಗಳಿಸುವುದು ಸರ್ವಥಾ ಅನಪೇಕ್ಷಣೀಯವೆಂದೂ ಕಾಂಗ್ರೆಸು ಸ್ವೀಕರಿಸಿದ ಗೊತ್ತುವಳಿಯಲ್ಲಿ ಎತ್ತಿಹೇಳಿದೆ. ಹಾಗೆಯೇ ಟ್ಯುನೀಸಿಯಾದ ಜನರ ಸ್ವಾತಂತ್ರ್ಯಾಂದೋಲನಕ್ಕೆ ಸಹಾನುಭೂತಿಯನ್ನೂ ಕಾಂಗ್ರೆಸು ತೋರಿಸಿದೆ.

ಚಂದ್ರಶೇಖರ ನಗರ

ಇಂದೂರಿನಲ್ಲಿ ಅಖಿಲ ಭಾರತ ಕಾಂಗ್ರೆಸ ಸಮಿತಿಯ ಅಧಿವೇಶನಕ್ಕೆಂದು ಒಂದು ನೂತನ ನಗರವನ್ನೇ ನಿರ್ಮಿಸಿದ್ದರು. ಇಪ್ಪತ್ತೈವರ್ಷ ಪೂರ್ವದಲ್ಲಿ ಪೋಲೀಸರೊಡನೆ ನಡೆದ ಚಕಮಕಿಯಲ್ಲಿ ಹುತಾತ್ಮರಾದ ಚಂದ್ರಶೇಖರ ಆಜಾದರ ಹೆಸರನ್ನು ಈ ನಗರಕ್ಕೆ ಇಟ್ಟಿದ್ದರು. ಅಧಿವೇಶನಕ್ಕಾಗಿ ೬೦೦×೪೦೦ ಅಡಿಗಳಷ್ಟು ವಿಶಾಲವಾದ ಮಂಟಪದ ರಚನೆ ಮಾಡಿದ್ದರು. ವ್ಯಾಸಪೀಠದ ಹಿಂಬದಿ ಕಾಂಗ್ರೆಸಿನ ರಾಜಕೀಯ ಆಂದೋಲನ ಮತ್ತು ಸರ್ವೋದಯ ಚಳುವಳಿಯ ಪಂಚಯಾರ್ಷಿಕ ಚಿತ್ರಗಳಿದ್ದವು. ನಗರಕ್ಕೆ ನಾಲ್ಕು ಮಹಾದ್ವಾರಗಳಿದ್ದು, ಅವುಗಳಲ್ಲಿ ಪ್ರಾಮುಖ್ಯವೆನಿಸಿದುದಕ್ಕೆ ಝಾಂಸಿಯ ಮಹಾರಾಣಿ ಲಕ್ಷ್ಮೀಬಾಯಿಯ ಹೆಸರನ್ನು ಕೊಟ್ಟಿದ್ದರು. ಈ ಮಹಾದ್ವಾರಗಳಲ್ಲಿ ಮಧ್ಯಭಾರತದ ಗ್ರಾಮೀಣ ಹಾಗೂ ಐತಿಹಾಸಿಕ ಪ್ರಗತಿಯನ್ನು ತೋರಿಸುವ ಚಿತ್ರಗಳಿದ್ದವು. ಮುಖ್ಯ ಮಹಾದ್ವಾರದ ಮುಂದಿನ ಚೌಕದಲ್ಲಿ ಮಹಾತ್ಮಾ ಗಾಂಧೀಜಿಯ ೧೨ಅಡಿ ಎತ್ತರದ ಪ್ರತಿಮೆಯನ್ನು ನಿಲ್ಲಿಸಿದ್ದರು. ಒಂದು ಚಿಕ್ಕ ಕೈದೋಟದ ಮಧ್ಯದಲ್ಲಿ ಎತ್ತರವಾದ ಧ್ವಜಸ್ತಂಭವನ್ನು ನಿಲ್ಲಿಸಿದ್ದರು. ಇಲ್ಲಿ ಶ್ರೀ ನೆಹರೂ ಧ್ವಜಾರೋಹಣವನ್ನು ನೆರವೇರಿಸುವಾಗ ಸರಕಾರವು ತಪ್ಪು ಮಾಡಿದಾಗ ಜನರು ಅದನ್ನು ತಿಳಿಸಿಹೇಳಿ, ಸಂದಾರಿಗೆ ತರುವುದಗತ್ಯ ಹೌದಾದರೂ—ತಮ್ಮ ಪಾಲಿನ ಕರ್ತವ್ಯವನ್ನು ಮಾಡಲು ಜನರು ಹಿಂಜರಿಯಬಾರದು ಎಂದರು. ಕಾಂಗ್ರೆಸು ಸಂಯುಕ್ತ ಪ್ರಯತ್ನ ಹಾಗೂ ಪರಿಶ್ರಮದ ದ್ಯೋತಕವಾಗಬೇಕೆಂದೂ, ಧ್ವಜವಂದನೆಯ ಶುಭ ಸಮಯದಲ್ಲಿ ಇನ್ನೂ ಹೆಚ್ಚಿನ ಪ್ರಯತ್ನಗಳಿಂದ ತಮ್ಮ ಸಮಸ್ಯೆಗಳ ಯಥೋಚಿತ ನಿವಾರಣೋಪಾಯಗಳನ್ನು ಕೈಗೊಳ್ಳುವೆವೆಂದು ಪ್ರತಿಜ್ಞೆಗೈಯಬೇಕೆಂದೂ ನೆಹರೂ ಕರೆಕೊಟ್ಟರು.

ಉತ್ತಮ ಸಂಪ್ರದಾಯ

ಈ ಕಾಂಗ್ರೆಸು ಅಧಿವೇಶನದ ಉದ್ದೇಶ ಆಂತರಿಕ ಸಂಬಂಧವನ್ನು ಬಿಗಿಗೊಳಿಸುವುದೇ ಆಗಿತ್ತೆಂದರೆ ತಪ್ಪಾಗದು. ವಿದೇಶ ಧೋರಣೆಯ ಸ್ಪಷ್ಟೀಕರಣವು ಇಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಅಪೇಕ್ಷಣೀಯವಿದ್ದಿತೆಂಬುದು ನಿಜ. ಹಾಗೆಂದು ಕಾಂಗ್ರೆಸು ಪ್ರಜಾಪ್ರಭುತ್ವದ ಹಿನ್ನೆಲೆಯಲ್ಲಿ ರಾಜ್ಯಸೂತ್ರಗಳನ್ನು ಕೈಯಲ್ಲಿ ತೆಗೆದುಕೊಂಡಬಳಿಕ ನಡೆಯುವ ಈ ಪ್ರಥಮಾಧಿವೇಶನದಲ್ಲಿ—ಈ ಬಗ್ಗೆ ಚರ್ಚೆನಡೆಯುವುದೂ ಸ್ವಾಭಾವಿಕ. ಘಟನೆಗೆ ತಿದ್ದುಪಡಿ ಮಾಡುವ ವಿಚಾರವನ್ನು ಅಧಿವೇಶನವು ಚರ್ಚಿಸುವುದಕ್ಕೆ ಮುಂಚೆ ಕಾಂಗ್ರೆಸ ಕಾರ್ಯಕಾರಿ ಸಮಿತಿಯು ಸೇರಿ ತಿದ್ದುಪಡಿಗಳ ಬಗ್ಗೆ ಬಂದ ಸೂಚನೆಗಳನ್ನೆಲ್ಲ ವಿಚಾರಿಸಿತು. ಪರಿಣಾಮವಾಗಿ ತಾನು ಮೊದಲು ಮಾಡಿದ ಸೂಚನೆಗಳಲ್ಲಿಯೇ ಬದಲಾವಣೆಯ ಅಗತ್ಯ ಅದಕ್ಕೆ ಕಂಡುಬಂತು. ಇದರಿಂದ ವರಿಷ್ಠರಲ್ಲಿ ಭಿನ್ನಾಭಿಪ್ರಾಯ ಹಾಗೂ ತಿಕ್ಕಾಟಕ್ಕೆ ಆಸ್ಪದ ದೊರೆಯದೆ ಎಲ್ಲವೂ ಸೌಹಾರ್ದಯುತವಾಗಿ ಬಗೆಹರಿಯಿತೆಂಬುದು ಸಂತೋಷ. ಮುಖ್ಯವಾಗಿ ಶ್ರೀ ಎಸ್. ಕೆ. ಪಾಟೀಲರು ಕಾಂಗ್ರೆಸಿನ ಮುಂದೆತಂದ ಮಹತ್ವದ ಪ್ರಶ್ನೆಯು ಸಮಾಧಾನಕರವಾಗಿ ಬಿಡಿಸಲ್ಪಟ್ಟುದು ಸ್ತುತ್ಯ. ಘಟನೆಗೆ ತಿದ್ದುಪಡಿಮಾಡುವ ಮೂಲಕ ಕಾಂಗ್ರೆಸಿನ ಶಾಸನಾತ್ಮಕ ಹಾಗೂ ಸಂಘಟನಾತ್ಮಕವಾದ ಅಂಗಗಳೊಳಗೆ ನಿಕಟ ಸಂಬಂಧ ಪ್ರಸ್ಥಾಪಿಸಲು ಪ್ರಯತ್ನಿಸುವುದಕ್ಕಿಂತ ಸುಯೋಗ್ಯ ಸಂಪ್ರದಾಯವೊಂದನ್ನು ಪ್ರಾರಂಭಿಸುವುದೇ ಒಳಿತೆಂಬುದು ಚೆನ್ನಾದ ಕ್ರಮವೆನ್ನೆ. ಇದರಂತೆ ಕಾಂಗ್ರೆಸ ಕಾರ್ಯಕಾರಿ ಸಮಿತಿಯಲ್ಲಿಮಂತ್ರಿಗಳ ಸಂಖ್ಯೆ ೫೦%ಎಂದು ಮಿತಿಯನ್ನು ಘಟನೆ ತಿದ್ದುಪಡಿಯಿಂದ ನಿರ್ಣಯಿಸುವ ಬದಲು ಒಂದು ಸಂಪ್ರದಾಯವನ್ನು ಹಾಕಿಕೊಡುವುದರ ಮೂಲಕ ಈ ಉದ್ದೇಶ ಸಾಧನೆಗೆ ಪ್ರಯತ್ನಿಸಿದ್ದೂ ಒಳ್ಳೆಯದೇ.

ಪೂರಕಾಂಗಗಳು

ಹೀಗೆ ಸುಯೋಗ್ಯ ರೀತಿಯಲ್ಲಿ ಕಾಂಗ್ರೆಸ್ ಘಟನೆಗೆ ಸೂಚಿಸಿದ ತಿದ್ದುಪಡಿಗಳು ಘರ್ಷಣೆ ಇಲ್ಲದೆ ಸ್ವೀಕೃತ ಗೊಂಡುದಕ್ಕೆ ಶ್ರೀ ಎಸ್ ಕೆ ಪಾಟೀಲರ ಔದಾರ್ಯ ಕೆಲ ಮಟ್ಟಿಗೆ ಕಾರಣವಿದ್ದೀತು. ಅವರು ತಮ್ಮ ತಿದ್ದುಪಡಿಗಳ ಉದ್ದೇಶವು ಈ ಹೊಸ ತಿದ್ದುಪಡಿಗಳಿಂದ ೯೫%ದಷ್ಟು ಸಾರ್ಥಕವಾಯಿತೆಂದು ಹೇಳಿದರು. ಆದರಲ್ಲೂ ಕಾಂಗ್ರೆಸಿನ ಶಾಸನಾತ್ಮಕ ಹಾಗೂ ಸಂಘಟನಾತ್ಮಕವಾದ ಅಂಗಗಳೊಳಗೆ ಸಹಕಾರ ಭಾವವನ್ನು ನಿಯಮಾವಳಿಯಿಂದ ಸಾಧಿಸಲು ಪ್ರಯತ್ನಿಸದೆ, ಸಂಪ್ರದಾಯವೆಂದು ಅನುಸರಿಸಬೇಕಾಗಿ ಪಾಟೀಲರು ಹೇಳಿದ್ದು ಸ್ವಾಗತಾರ್ಹವಿದೆ. ಕಾಂಗ್ರೆಸಾಧ್ಯಕ್ಷ ನೆಹರೂ ಕಾಂಗ್ರೆಸು ಸಂಸ್ಥೆಯು ಹೀಗೆ ಎರಡು ಅಂಗಗಳಿಂದೊಡಗೂಡಿದೆ ಎಂಬ ತತ್ವವನ್ನು ಒಪ್ಪಲು ಸಿದ್ಧರಿಲ್ಲ. ಇಂದೂರಿನಲ್ಲಿ ಅವರು ಕಾಂಗ್ರೆಸು ಸದಸ್ಯರನ್ನು ಪ್ರೇರಿಸಿ ಮಾತನಾಡುವಾಗ--ಇವೆರಡೂ ಪರಸ್ಪರ ಪೂರಕ ಎಂಬ ಭಾವನೆಗೇ ಜೋರುಕೊಟ್ಟರು. ಜನರಿಂದ ಚುನಾಯಿತರಾದ ಕಾಂಗ್ರೆಸು ಸದಸ್ಯರು ತಮ್ಮ ಮತದಾರ ಕ್ಷೇತ್ರಗಳೊಡನೆ ಅತ್ಯಂತ ಸಮೀಪದ ಸಂಬಂಧ ಇಟ್ಟುಕೊಳ್ಳಬೇಕೆಂದೂ ನೆಹರೂ ಒತ್ತಾಯಿಸಿದರು. ಮತದಾರರನ್ನು ಮರೆತರೆ ಸದಸ್ಯರು ತಮ್ಮ ಕಾಲಿಗೇ ಕೊಡಲಿ ಏಟು ಹಾಕಿಕೊಳ್ಳುವರು. ಕಾಂಗ್ರೆಸು ಚುನಾವಣೆಯಲ್ಲಿ ಅಧಿಕಾರವನ್ನು ಪಡೆಯು

(೧೮ನೇ ಪುಟ ನೋಡಿರಿ)

886/32/101/2



ಆದರೆ, ಸ್ವಚ್ಛವಾಗಿ ಪೊಟ್ಟಣ ಕಟ್ಟಲ್ಪಟ್ಟ ಉತ್ತಮ ತಯಾರಿಕೆಯ ತಾಜಾ ಚಹವು – ಅದು ಬ್ರೂಕ್ ಬಾಂಡ್ ಚಹವೇ ಆಗಿದ್ದಲ್ಲಿ – ಮಿತವ್ಯಯಕರವೂ ಆಗಿರುವುದೆಂದು ಲಕ್ಷ್ಮಿಯು ಒತ್ತಿ ಹೇಳಿದಳು. ನನ್ನ ಮಹದಾಶ್ಚರ್ಯಕ್ಕೆ, ಅಂದಿನ ದಿನವೇ ಮೊದಲನೆ ಸಾರಿಗೆ ನಾನು ಕೊಂಡ ಬ್ರೂಕ್ ಬಾಂಡ್ ಪೊಟ್ಟಣದ ಚಹವು ಅಂದಿನವರೆವಿಗೂ ಉಪಯೋಗಿಸುತ್ತಿದ್ದ ಖುದರಾ ಚಹಾಗಿಂತ ಗುಣದಲ್ಲಿ ಅತಿ ಶ್ರೇಷ್ಠವಾಗಿದ್ದುದೂ ಅಲ್ಲದೆ, ಮೊದಲಿನಷ್ಟೇ ಬಟ್ಟಲುಗಳಷ್ಟು ಚಹಾ ಮಾಡಸಲು ಮೊದಲಿಗಿಂತ ಕಮ್ಮಿ ಚಹಾ ಪುಡಿ ಪೂರೈಸಿತು. ಅಂದಿನಿಂದ ಮನೆಗೆ ತಂದ ಪ್ರತಿಯೊಂದು ಬ್ರೂಕ್ ಬಾಂಡ್ ಪೊಟ್ಟಣವೂ ಲಕ್ಷ್ಮಿಯು ಹೇಳಿದ್ದು ಎಷ್ಟು ನಿಜವೆಂಬುದನ್ನು ಸಮರ್ಥಿಸಿದೆ

ಬ್ರೂಕ್ ಬಾಂಡ್ ಚಹಾ

ಭಾರತದ ಅತ್ಯುತ್ತಮ ಪೊಟ್ಟಣಗಳಲ್ಲಿ ಭಾರತದ ಅತ್ಯುತ್ತಮ ಚಹಾ.

1906 ರಲ್ಲಿ ಸ್ಥಾಪಿಸಲ್ಪಟ್ಟು
ಸರ್ವತೋಮುಖವಾಗಿ ಅಭಿವೃದ್ಧಿ ಹೊಂದುತ್ತಲಿರುವ
"ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್"
ಇದನ್ನೇ ಸಹಸ್ರಾರು ಜನರು ತಮ್ಮ ಅಚ್ಚುಮೆಚ್ಚಿನ ಬ್ಯಾಂಕನ್ನಾಗಿ
ಆರಿಸಿರುವರು ನೀವೂ ಇಂದೇ ಒಂದು ಖಾತೆಯನ್ನು ತೆರೆದು
ಬ್ಯಾಂಕಿನ ಗ್ರಾಹಕರಲ್ಲಿ ಒಬ್ಬರಾಗಿರಿ.
THE CANARA BANKING CORPORATION LIMITED.
ಪ್ರಧಾನ ಕಾರ್ಯಾಲಯ, ಉಡುಪಿ. (ದ ಭಾರತ)

ನವಯುಗ
ಉಡುಪಿ, ಗುರುವಾರ ೧೮-೯-'೫೨

ಸ್ಥಾನಿಕ ಸ್ವರಾಜ್ಯ

ಮದ್ರಾಸು ರಾಜ್ಯದಲ್ಲಿ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಚುನಾವಣೆಗಳು ನಡೆಯುವ ಸಮಯ ಸಮೀಪಿಸುತ್ತಿದೆ. ಸ್ಥಾನಿಕ ಸ್ವರಾಜ್ಯ ಬ್ರಿಟಿಷರು ಕ್ರಮಕ್ರಮವಾಗಿ ನಮಗೆ ಕೊಡಮಾಡಿದ ಸುಧಾರಣೆಗಳಲ್ಲಿ ಮೊದಲಿನದೆನ್ನಬಹುದು. ಈಗ ನಾವು ಪೂರ್ಣ ಸ್ವರಾಜ್ಯವನ್ನು ಪಡೆದಿದ್ದೇವೆ. ಹಾಗೆಂದು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ತಮ್ಮ ಮಹತ್ವವನ್ನು ಕಳೆದುಕೊಂಡಿರದೆ-ಅವುಗಳ ಉಪಯುಕ್ತತೆ ಇನ್ನಷ್ಟು ಹೆಚ್ಚಿಕೊಂಡಿದೆ. ಭಾರತೀಯ ಸಂಸ್ಕೃತಿಗೆ ಗ್ರಾಮ ಪಂಚಾಯತಿ ಹಾಗೂ ನಗರಸಭೆಗಳು ಚಿರಪರಿಚಿತವಾದುವುಗಳೇ: ಮತ್ತು ಗ್ರಾಮೀಣ ಸಂಸ್ಕೃತಿಯ ವೈಶಿಷ್ಟ್ಯವೆಂದೂ ಇದನ್ನು ಕರೆಯಲಡ್ಡಿಯಿಲ್ಲ. ಗ್ರಾಮ ಹಾಗೂ ನಗರಗಳ ನೈರ್ಮಲ್ಯ, ಆರೋಗ್ಯ, ಶಿಕ್ಷಣ ಸೌಲಭ್ಯ, ಚಿಕಿತ್ಸಾ ಸೌಕರ್ಯ ಮತ್ತಿನ್ನಿತರ ಹತ್ತು ಹಲವು ಬಗೆಯಲ್ಲಿ ಜನತೆಯ ಸುಖ ಸಮೃದ್ಧಿಗೆ ನೆರವಿತ್ತು ಕಾರ್ಯನಿರ್ವಹಿಸುವುದು ಸ್ಥಾನಿಕ ಸಂಸ್ಥೆಗಳ ಹೊಣೆಗಾರಿಕೆ. ಇವುಗಳ ಸಂಚಾಲಕರಾಗಿ-ಸ್ವಯಂ ನಾಗರಿಕರೇ ಇರುವುದರಿಂದ, ಅದು ಸ್ವರಾಜ್ಯ ತತ್ವಕ್ಕೂ ಒಪ್ಪಿಗೆ.

ಪ್ರತ್ಯಕ್ಷ ಚುನಾವಣೆಯು ನಮ್ಮ ಮುಂದಿರುವುದರಿಂದ-ಮತ್ತು ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಪಡೆದ ಅನುಭವದ ಬಲವೂ ಇರುವುದರಿಂದ-ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಬಗ್ಗೆ ಕೆಲವೊಂದು ಹಿತ ಮಾತುಗಳನ್ನು ನುಡಿಯುವುದವಶ್ಯವಾಗಿರುತ್ತದೆ: ಜನರು ಇಂದು ಹಿಂದಿಗಿಂತ ಬುದ್ಧಿವಂತರೂ ಗಟ್ಟಿಗರೂ ಆಗಿದ್ದಾರೆ. ಮತದಾರರು ತಮ್ಮ ಓಟನ್ನು ಚಲಾಯಿಸುವಾಗ ಬುದ್ಧಿಪೂರ್ವಕ ಯೋಚಿಸಿಯೇ ಯೋಗ್ಯ ಹುರಿಯಾಳಿಗೆ ಬೆಂಬಲ ನೀಡುವರು. ಅದರಲ್ಲೂ ಉಡುಪಿ, ಮಂಗಳೂರುಗಳ ನಗರ ಸಭೆಯ ಚುನಾವಣೆಗಳಲ್ಲಿ ಜನರ ನಿರ್ಣಯ ಅಜ್ಞಾನದ ಫಲವೆಂದು ಹೇಳಲಿಕ್ಕೇ ಆಸ್ಪದವಿರುವುದಿಲ್ಲ ಈ ಎರಡೂ ನಗರಗಳು ಜಿಲ್ಲೆಯಲ್ಲಿ ಅತ್ಯಂತ ಮುಂದುವರಿದವುಗಳಿದ್ದು-ಅಲ್ಲಿಯ ಪುರಜನರು ಸುಶಿಕ್ಷಿತರೂ, ಅನುಭವಿಗಳೂ, ಆಧುನಿಕ ರಾಜಕಾರಣದ ಹೊಳಹನ್ನು ಅರಿತವರೂ ಆಗಿರುವರು. ಸ್ವಲ್ಪಮಟ್ಟಿನ ಅಜ್ಞಾನ ಅಥವಾ ತಪ್ಪು ತಿಳುವಳಿಕೆ ಇದ್ದವರಿಗೆ ಕೂಡ-ಜನವರಿಯಲ್ಲಾದ ಚುನಾವಣೆಗಳು ಚೆನ್ನಾದ ಪಾಠವನ್ನು ಕಲಿಸಿಕೊಟ್ಟಿವೆ ಹೀಗೆ ಒಪ್ಪಿನಲ್ಲಿ ಮತದಾರರನ್ನು ಮರುಳುಮಾಡಿ-ಒಲಿಸಿಕೊಳ್ಳುವ ಪರಿಸ್ಥಿತಿ ಈಗ ಉಳಿದಿಲ್ಲ. ತಮ್ಮ ಕರ್ತೃತ್ವ ಶಕ್ತಿಯಿಂದ ಹಾಗೂ ಸೇವಾ ಬುದ್ಧಿಯಿಂದ ಅನುಭವ ವೈಶಾಲ್ಯದಿಂದ ಮತದಾರರ ಪ್ರೀತಿ ಸಂಪಾದಿಸಿದ ಹುರಿಯಾಳುಗಳಿಗೇ ಬೆಂಬಲ ದೊರೆತೀತಲ್ಲದೆ-ಹಂಗು ಹಾಗೂ ವರ್ಚಸ್ಸಿನಿಂದ ಕೆಲಸ ನಡೆಯುವ ಕಾಲ ಇದಲ್ಲ ಎಂಬುದು ಸ್ಪಷ್ಟ.

ಕಾಂಗ್ರೆಸು ಸಂಸ್ಥೆಯು ಉಡುಪಿ ಹಾಗೂ ಮಂಗಳೂರು ಎರಡೂ ಕಡೆಗಳಲ್ಲಿ ನಗರ ಸಭೆಯ ಚುನಾವಣೆಗೆ ಸ್ಪರ್ಧಿಸಬೇಕೆಂದು ನಿರ್ಣಯಿಸಿದೆ. ಅದು ಆರಿಸಿದ ಹುರಿಯಾಳುಗಳ ಪಟ್ಟಿಯು ಪ್ರಸಿದ್ಧಿಗೊಂಡಿದೆ. ಉಡುಪಿಯ ನಗರ ಸಭೆಗಿರುವ ಇಪ್ಪತ್ತು ಸ್ಥಾನಗಳಲ್ಲಿ ಹರಿಜನರಿಗಾಗಿ ಮೀಸಲಿರುವ ಒಂದು ಸ್ಥಾನಕ್ಕೆ ಕಾಂಗ್ರೆಸು ಹುರಿಯಾಳುಗಳು ಅವಿರೋಧವಾಗಿ ಆಯ್ಕೆ ಹೊಂದಿದ್ದಾರೆ. ಕಾಂಗ್ರೆಸು ಉಳಿದೆಲ್ಲ ಸ್ಥಾನಕ್ಕೂ ಸ್ಪರ್ಧಿಸುವುದು: ಚುನಾವಣೆಗಳಲ್ಲಿ ಒಂದು ಸುಸಂಘಟಿತ ಪಕ್ಷವು ಸ್ಪರ್ಧಿಸಿ, ಜಯಶೀಲವಾದರೆ—ಮತದಾರರಿಗೆ ದೊರಕುವ ಪ್ರಯೋಜನಗಳು ಹೆಚ್ಚುವುದೆಂದು ನಿಸ್ಸಂದೇಹವಾಗಿ ಹೇಳಬಹುದು. ಈ ಕಾರಣದಿಂದಲೇ—ಕಾಂಗ್ರೆಸು ಹುರಿಯಾಳುಗಳಿಗೆ ಬೆಂಬಲ ಕೊಟ್ಟು, ಮತದಾರರು ತಮ್ಮ ಹಿತಸಂವರ್ಧಿಸಿಕೊಳ್ಳಬೇಕು.

ಹುರಿಯಾಳುಗಳು ಸ್ವಾರ್ಥ ಬುದ್ಧಿಯಿಂದ ಚುನಾವಣಾಕಣಕ್ಕೆ ಇಳಿದಿದ್ದರೆ ಮತದಾರರೇ ಅವರನ್ನು ಉಪೇಕ್ಷಿಸುವುದು ನಿಶ್ಚಯ. ಹಾಗೆಂದು—ಕಾಂಗ್ರೆಸು ಹುರಿಯಾಳುಗಳ ಪಟ್ಟಿಯನ್ನು ಲಕ್ಷಿಸಿ ನೋಡಿದಾಗ-ಅವರ ಚಾರಿತ್ರ್ಯದಲ್ಲಿ ಕಳಂಕದ ರೇಖೆ ಇನ್ನೂ ಮೂಡಿಲ್ಲವೆಂದು ತೋರದಿರದು. ಇದಿರಾಳಿಗಳು ಚರಿತ್ರಭ್ರಷ್ಟರೆನ್ನುವುದು ಸಲ್ಲದ ಧಾರ್ಷ್ಟ್ಯವಾದೀತಾದರೂ--ಮೊದಲೇ ಹೇಳಿದಂತೆ, ಸುಸಂಘಟಿತವಾದ ಪಕ್ಷವು ವಿಜಯಿಯಾದರೆ ಅದರಿಂದ ಪುರನಿವಾಸಿಗಳು ಅಧಿಕ ಲಾಭವನ್ನು ಹೊಂದಲು ಅವಕಾಶವಿದೆ.

ಸ್ವತಂತ್ರ ಉಮೇದ್ವಾರರನ್ನು ಆರಿಸಿ ಕಳಿಸಿ ಅದರ ಕಹಿಯನ್ನು ಅನುಭವಿಸಿರುವೆವು, ಅನುಭವಿಸುತ್ತಿರುವೆವು. ಪರಸ್ಪರ ದ್ವೇಷದಿಂದ ನ್ಯಾಯ ಅನ್ಯಾಯ, ಯೋಗ್ಯತೆ, ಅಯೋಗ್ಯತೆಯ ವಿವೇಚನೆ ಮಾಡದೆ ಒಬ್ಬನು ತಂದ ಸೂಚನೆಯನ್ನು ಇನ್ನೊಬ್ಬನು ವಿರೋಧಿಸುವುದು, ಅಥವಾ ಕೌನ್ಸಿಲಿನ ಆಯವ್ಯಯ, ಶಕ್ತಿ ನಿಶ್ಶಕ್ತಿಗಳ ಅರಿವು ಇಲ್ಲದೆ ತಮ್ಮ ತಮ್ಮ ವಾರ್ಡಿಗೆ ಹಲವಾರು ಕೆಲಸವಾಗಬೇಕೆಂದು ಹಟಸಾಧನೆ ಮಾಡುವುದು ಯಾ ಮೀಟಿಂಗಿಗೇ ಗೈರು ಹಾಜರಾಗುವುದು ಇವೆಲ್ಲವೂ ಮಾಯವಾಗಿ ನಗರದ ಸಮಷ್ಟಿ ಅಭಿವೃದ್ಧಿಗೆ ಸುಸಜ್ಜಿತವಾದ ಸುಸಂಘಟಿತವಾದ ರೀತಿಯಲ್ಲಿ ಶಿಸ್ತಿನಿಂದ ನಡೆಯಬೇಕಾದರೆ ಪಕ್ಷ ನಿಂಗಣವಾಗಿಯೇ ನಗರಸಭೆಯ ಆಡಳಿತೆಯಾಗಬೇಕಾದುದು ಅತ್ಯಾವಶ್ಯಕ. ಕಾಂಗ್ರೆಸು ದೇಶದಲ್ಲಿಯೇ ಜನಪ್ರಿಯ ಸಂಸ್ಥೆ: ನಗರ ಸಭೆಯ ಆಡಳಿತಾಧಿಕಾರ ಕಾಂಗ್ರೆಸು ಹುರಿಯಾಳುಗಳಿಗೆ ದೊರೆತರೆ, ಕಾಂಗ್ರೆಸು ಸಂಸ್ಥೆಯ ಉತ್ತಮ ಆದರ್ಶ ಹಾಗೂ ಕಾಲಾನುಕಾಲದ ಆದೇಶಗಳಿಗನುಸಾರ ಅದು ಚೆನ್ನಾಗಿ ಕೆಲಸಮಾಡಿ ತೋರಿಸಬಲ್ಲುದು. ಇಷ್ಟು ವರ್ಷಗಳಿಂದಿರದ ಪ್ರಬಲ ಸ್ಪರ್ಧೆ ಈ ಬಾರಿ ಇರುವುದರಿಂದ—ಮತದಾರರು ಹೆಚ್ಚು ಶ್ರದ್ಧೆ ತೋರುವರೆಂದೂ, ಒಕ್ಕಟ್ಟಿನ ಬಲವನ್ನು ಮೆಚ್ಚುವರೆಂದೂ ಹಾರೈಸುತ್ತೇವೆ.

ವಿಶ್ವಶಾಂತಿಗೆ ಮಹಾರಾಷ್ಟ್ರಗಳ ಪ್ರಯತ್ನ

ಕಾಶ್ಮೀರದ ಬಿಕ್ಕಟ್ಟು ಇನ್ನೂ ಬಗೆಹರಿಯಲಿಲ್ಲ-

ಅಖಿಲ ಭಾರತ ಕಾಂಗ್ರೆಸ ಅಧಿವೇಶನದಲ್ಲಿ ಸ್ವೀಕರಿಸಿದ ಗೊತ್ತುವಳಿಗಳಲ್ಲೆಲ್ಲ ವಿಶ್ವಶಾಂತಿಯನ್ನು ಪ್ರಸ್ಥಾಪಿಸಲು ಮಹಾರಾಷ್ಟ್ರಗಳಾದ ಚೀನಾ, ರಶಿಯಾ, ಅಮೇರಿಕಾ, ಬ್ರಿಟನ್ ಮತ್ತು ಫ್ರಾನ್ಸುಗಳು ಒಡನೆಯೇ ಪ್ರಯತ್ನಿಸಬೇಕೆಂಬುದು ಅತ್ಯಂತ ಮಹತ್ವದ್ದು. ಶಾಂತಿಯೇ ಧ್ಯೇಯವಾಗಿರುವ ಭಾರತದಲ್ಲಿ ಅಧಿಕಾರರೂಢವಾಗಿರುವ ಪ್ರಬಲ ಪಕ್ಷವು ಇಂಥದೊಂದು ಗೊತ್ತುವಳಿಯನ್ನು ಮಾಡಿದುದರಿಂದ-ವಿಶ್ವದ ರಾಷ್ಟ್ರಗಳು ಸ್ವಾಭಾವಿಕವಾಗಿ ಈ ಬಗ್ಗೆ ಆಸ್ಥೆ ತಳೆದದ್ದು ಕಂಡು ಬರುತ್ತದೆ. ಮುಖ್ಯವಾಗಿ ಅಮೇರಿಕ ಈ ಕುರಿತು ಕೆಲವು ಸ್ಪಷ್ಟೀಕರಣಗಳನ್ನು ಕೇಳಿದೆ ಎಂದು ಸುದ್ದಿ. ಭಾರತದ ವಿದೇಶಾಂಗ ನೀತಿಯನ್ನು ಸ್ಪಷ್ಟಪಡಿಸುವಾಗ ಮೌಲಾನಾ ಆಜಾದರು ಚೀನಾಕ್ಕೆ ಇನ್ನೂ ಅಮೇರಿಕ ಮುಂತಾದ ಕೆಲವು ರಾಷ್ಟ್ರಗಳು ಮನ್ನಣೆ ಕೊಡದಿರುವುದನ್ನು ಪ್ರಸ್ತಾಪಿಸಿದ್ದರು. ಹಾಗೆಯೇ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಚೀನಾದಲ್ಲಿ ಪ್ರಕೃತ ಅಧಿಕಾರದಲ್ಲಿರುವ ಜನತಾ ಸರಕಾರಕ್ಕೆ ಮನ್ನಣೆಕೊಟ್ಟು ಸೇರಿಸಿಕೊಳ್ಳದಿದ್ದುದು ಒಳ್ಳೆಯದಾಗಲಿಲ್ಲ ಎಂದೂ ಅವರು ಹೇಳಿದ್ದರು. ರಶಿಯಾವು ಈ ವಿಷಯದಲ್ಲಿ ಹೆಚ್ಚು ಕುತೂಹಲವನ್ನು ತೋರಿಸೀತು. ಈಗಾಗಲೇ ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯಾಧಿವೇಶನದಲ್ಲಿ ಶಾಂತಿಗಾಗಿ ಹೊಸಸೂಚನೆಗಳನ್ನದು ಕೊಡುವುದಾಗಿ ವದಂತಿ ಇವೆ. ಹಾಗೆಯೇ—ಕೊರಿಯದ ಕದನ ವಿರಾಮ ಮಾತುಕತೆಗಳು ಇನ್ನೂ ಏನೊಂದೂ ನಿರ್ಣಯಕ್ಕೆ ಬರದಿರುವಾಗ-ಮೆಕ್ಸಿಕೋ ರಾಷ್ಟ್ರವು ಹೊಸತೊಂದು ಸೂಚನೆಯನ್ನು ಮಾಡಿದೆ. ಭಾರತ ಕೂಡ ಈ ಯೋಜನೆಯಲ್ಲಿ ಕುತೂಹಲ ತೋರಿಸಿದೆ. ಅಲ್ಲದೆ-ಎ. ಐ. ಸಿ. ಸಿ. ಅಧಿವೇಶನದಲ್ಲಿ ನೆಹರೂ ಕೊರಿಯಾಕ್ಕೆ ಶುಶ್ರೂಷಾ ಪಥಕವನ್ನು ಕಳಿಸುವ ಬಗ್ಗೆ ಹೇಳಿದ ಮಾತುಗಳು ಸಹ ಸಂಧಾನ ಉಂಟಾಗಬಹುದೆಂದು ನಂಬಿಕೆ ಹುಟ್ಟಿಸುತ್ತವೆ. ಇನ್ನು ಎರಡು ವರ್ಷಗಳ ವರೆಗೆ ಕೊರಿಯಾದ ಕದನ ಮುಂದುವರಿದೀತೆನ್ನಲು ಬರುವುದಿಲ್ಲವಾದುದರಿಂದ-ಮತ್ತು ಬೇಗನೇ ಅಲ್ಲಿ ಶಾಂತಿ ನೆಲೆಗೊಳ್ಳುವುದೆಂಬ ವಿಶ್ವಾಸವಿರುವುದರಿಂದ-ಈಗಿರುವ ಪಥಕವನ್ನು ಹಿಂದಕ್ಕೆ ಕರೆಸಿ, ಹೊಸತೊಂದನ್ನು ಕಳಿಸುವ ವಿಚಾರವಿಲ್ಲ ಎಂದರವರು

ಹಿಂಗದ ಬಾಯಾರಿಕೆ

ಆದರೆ-ಯುದ್ಧತೃಷ್ಣೆಯನ್ನು ಹಿಂಗಿಸಿಕೊಳ್ಳುವ ಆತುರವೇ ಕೊರಿಯದ ರಣಾಂಗದಲ್ಲಿ ಕಂಡುಬರುತ್ತದೆ. ಎಂದರೆ ತಪ್ಪಾಗದು. ಸಂಯುಕ್ತ ರಾಷ್ಟ್ರಸಂಘದ ಕಡೆಯಿಂದ ಸೈನ್ಯಾಧಿಕಾರವನ್ನು ವಹಿಸಿಕೊಂಡಿರುವ ಜನರಲ್ ಕ್ಲಾರ್ಕರೇ ಅದಿಯಾಗಿ ಎಲ್ಲರೂ-ಕದನವಿರಾಮ ಮಾತುಕತೆಗಳನ್ನು ಇಷ್ಟು ದೀರ್ಘಕಾಲ ಬೆಳೆಸಿ ಕಮ್ಯೂನಿಷ್ಟರು ತನ್ಮಧ್ಯೆ ತಮ್ಮ ಸೈನ್ಯಬಲ ವರ್ಧಿಸಿಕೊಂಡರು ಎನ್ನುತ್ತಾರೆ. ಶಾಂತಿ ಸಂಧಾನದ ಮಾತುಕತೆಗಳನ್ನು ಯುದ್ಧ ಸನ್ನಾಹವನ್ನು ಹೆಚ್ಚಿಸುವುದಕ್ಕೆ ದುರುಪಯೋಗಪಡಿಸಿಕೊಂಡರೆಂದು ಬಿಡದೆ ಅಪಾದಿಸುತ್ತಾರೆ. ಆದುದರಿಂದ, ಇಷ್ಟು ಸಮಯದಲ್ಲಿ ಕಮ್ಯೂನಿಸ್ಟರು ಏನೇನು ಅಭಿವೃದ್ಧಿ ಸಾಧಿಸಿದ್ದಾರೋ ಅವನ್ನೆಲ್ಲ ನಿರ್ನಾಮಗೊಳಿಸುವುದನ್ನು ಸಂಯುಕ್ತ ರಾಷ್ಟ್ರಕಂಗಗಳ ಉದ್ದೇಶವಾಗಿಟ್ಟುಕೊಂಡಂತಿದೆ. ಯಾಲೂ ನದಿಯ ದಂಡೆಯ ಮೇಲೆ ಸತತವಾದ ದಾಳಿ ನಡೆಯುತ್ತಿದೆ. ಮಂಚೂರಿಯಾದ ಗಡಿಯಲ್ಲಿ ಕಮ್ಯೂನಿಷ್ಟರು (ಬಹುಶಃ ರಶಿಯಾದ ನೆರವಿನಿಂದ) ತುಂಬ ಯುದ್ಧೋಪಕರಣಗಳನ್ನು ಸಜ್ಜುಗೊಳಿಸಿಟ್ಟಿರುವರೆಂದೂ, ಹೊಸತಾಗಿ ಕಾರ್ಖಾನೆಗಳನ್ನು ತೆರೆದಿರುವುದಾಗಿಯೂ ಸುದ್ದಿ ಇರುವುದರಿಂದ--ಈ ಆಕ್ರಮಣಕ್ಕೆ ಅಧಿಕ ಚಲನೆ ದೊರೆತಿದೆ. ಜೂನು ತಿಂಗಳಲ್ಲಿ ಅಮೇರಿಕವು ಯಾಲೂ ನದಿಯ ಮೇಲೆ ಬಾಂಬು ದಾಳಿ ನಡೆಸಿದಾಗ ತನ್ನನ್ನು ಕೇಳಲಿಲ್ಲವೆಂದು ದೂರಿದ್ದ ಬ್ರಿಟನ--ಈಗ ನಡೆದಿರುವ ದಾಳಿ ಸಮಂಜಸವಾದುದೆಂದು ಅಭಿಪ್ರಾಯ ವ್ಯಕ್ತ ಮಾಡಿವೆ.

ಶಾಂತಿಯ ಹೊಸ ಸೂಚನೆ

ಮೆಕ್ಸಿಕೋ ರಾಷ್ಟ್ರವು ಕದನ ವಿರಾಮಕ್ಕಾಗಿ ಮಾಡಿದ ಸೂಚನೆಯಲ್ಲಿ ಸ್ವಯಂ ಪ್ರೇರಣೆಯಿಂದ ತಮ್ಮ ದೇಶಗಳಿಗೆ ಮರಳಲೊಪ್ಪುವ ಯುದ್ಧ ಕೈದಿಗಳನ್ನು ಹೋಗಗೊಡಬೇಕೆಂದು ಹೇಳಿದೆ. ಉಳಿದವರನ್ನು ಸಂಯುಕ್ತರಾಷ್ಟ್ರ ಸಂಘದ ಸದಸ್ಯ ರಾಷ್ಟ್ರಗಳ ರಕ್ಷಣೆಯಲ್ಲಿ ಒಪ್ಪಿಸಿಕೊಡಬೇಕು. ಕೊರಿಯಾದಲ್ಲಿ ಶಾಂತಿ ನೆಲಸಿದ ಬಳಿಕ, ತಂತಮ್ಮ ರಾಷ್ಟ್ರಕ್ಕೆ ಸೇರಿದ ಯುದ್ಧ ಕೈದಿಗಳಿಗೆ ಯೋಗ್ಯ ಅನುಕೂಲತೆ ಹಾಗೂ ಅವಕಾಶಗಳನ್ನು ಕೊಟ್ಟು ಹಿಂದಕ್ಕೆ ಬರಮಾಡಿಕೊಳ್ಳಬೇಕು. ಈ ಸೂಚನೆಯನ್ನು ಸದಸ್ಯ ರಾಷ್ಟ್ರಗಳಿಗೆಲ್ಲ ಅವಗಾಹನೆಗಾಗಿ ಕಳಿಸಿದ್ದು-ಅವು ಇದನ್ನು ಚೆನ್ನಾಗಿ ಪರಿಶೀಲಿಸುತ್ತಿವೆ. ಸಂಯುಕ್ತರಾಷ್ಟ್ರ ಸಂಘದ ಮಹಾ ಕಾರ್ಯದರ್ಶಿ ಟ್ರಿಗ್ವೆಲೀ ಈ ಸೂಚನೆಯ ತತ್ವವನ್ನು ಬೆಂಬಲಿಸಿದ್ದು, ಜಾಗರೂಕತೆಯಿಂದ ಪರಿಶೀಲಿಸಿದರೆ ಪರಿಣಾಮ ಆಶಾದಾಯಕವಾದೀತೆಂದಿರುವರು

ಮುಸಾದಿಕರ ಕರಾರು

ಇರಾಣದ ಮುಖ್ಯ ಮಂತ್ರಿ ಡಾ| ಮುಸಾದಿಕರು ಎಣ್ಣೆ ತಂಟೆಯನ್ನು ವಿಶ್ವನ್ಯಾಯಾಲಕ್ಕೆ ತೀರ್ಮಾನಿಸಲು ಒಪ್ಪಿಸುವುದಕ್ಕೆ ಮುಂಚೆ ಕೆಲವೊಂದು ಮಾತುಗಳಿಗೆ ಉಭಯ ಪಕ್ಷಗಳೂ ಸ್ಪಷ್ಟವಾಗಿ ಒಮ್ಮತ ತೋರಬೇಕೆಂದು ಕರಾರು ಹಾಕಿದ್ದಾರೆ. ಮುಖ್ಯವಾಗಿ ಎಣ್ಣೆ ವ್ಯವಹಾರದ ಬಗ್ಗೆ

ರುಣಿಗೆ ಸಲ್ಲತಕ್ಕ ೫೦ ಲಕ್ಷ ಪೌಂಡು ಹಣವನ್ನು ಪಾವತಿ ಮಾಡಲೇಬೇಕು. ಆ ಕಂಪಾನಿನಲ್ಲಿರುವ ಯಂತ್ರ ಸಾಮಾಗ್ರಿಗಳ ಬಗ್ಗೆ ಮಾತ್ರ ಪರಿಹಾರವನ್ನು ಕೊಡಲಾಗುವುದಲ್ಲದೆ, ಉಳಿದುದಕ್ಕೂ ಅಲ್ಲ. ಇನ್ನು ೧೯೪೭ಕ್ಕೂ ಹಿಂದಿನ ವಿವಾದವೇನಾದರೂ ವಿವಾದಾಂಶವಿದ್ದರೆ, ಅದನ್ನು ೧೯೩೩ರಲ್ಲಿ ಮಾಡಿಕೊಂಡ ಒಡಂಬಡಿಕೆಯಂತೆ, ಮತ್ತು ೧೯೪೭ರಿಂದ ೧೯೫೧ರಲ್ಲಿ ರಾಷ್ಟ್ರೀಕರಣ ಕಾಯಿದೆ ಪಾಸಾಗುವ ವರೆಗಿನ ಅವಧಿಯ ವಿವಾದ ಪ್ರಸಂಗಗಳಿಗೆ ೧೯೪೮ರಲ್ಲಿ ಆದ ಹೊಸ ಒಪ್ಪಂದದಂತೆ ನಿರ್ಣಯವನ್ನು ಅಂಗೀಕರಿಸಬೇಕು. ರಾಷ್ಟ್ರೀಕರಣ ಕಾಯಿದೆ ಜಾರಿಗೆ ಬಂದ ಬಳಿಕದ ಯಾವುದೇ ಬೇಡಿಕೆಯನ್ನು ವಿಚಾರಿಸಲಾಗುವುದಿಲ್ಲ. ಎಣ್ಣೆ ಕಂಟೆಯ ಸಂಬಂಧದಲ್ಲಿ ಇದು ಕೊನೆಯ ಕರಾರಾಗಿದ್ದು, ಮೊಸಲೀಕು ತಕ್ಕ ಶರ್ತಗಳಿಗೆ ಒಪ್ಪಿಗೆ ಕೊಟ್ಟು, [illegible] ತೋರಬೇಕೆಂದು ಮುಸಾದಿಕರು ಕೇಳಿಕೊಂಡಿದ್ದಾರೆ. ಈ ಸಮಸ್ಯೆ ಬಗೆಹರಿಯದಿದ್ದರೆ ಬ್ರಿಟನಿನೊಡನೆ ಸಂಬಂಧವಿಚ್ಛೇದ ಮಾಡಿಕೊಳ್ಳಬಹುದೆಂದು ಅನುಮಾನವಿದೆ. ಇರಾಣಾ ಈಗ ಜರ್ಮನ್ ತಜ್ಞರ [illegible] ಅಬದಾನಿನ ಎಣ್ಣೆ ಶುದ್ಧೀಕರಣ ಕಾರ್ಖಾನೆಯನ್ನು ಮರಳಿ ಕೆಲಸಕ್ಕೆ ಹಚ್ಚುವ ಎತ್ನುಗಡೆಯಲ್ಲಿದೆ.

ಆಮೂಲಾಗ್ರ ಸುಧಾರಣೆ

ಜನರಲ್ ನಾಗಿಬರು ಸೇನಾಧಿಪತಿ ಹಾಗೂ ಮುಖ್ಯಮಂತ್ರಿಗಳೆಂದು ಮಾತ್ರವಲ್ಲ--ಈಜಿಪ್ತದ ಮಿಲಿಟರಿ ಗವರ್ನರರೆಂದೂ ಘೋಷಿಸಲ್ಪಟ್ಟಿರುವರು. ಹೀಗೆ ಸರ್ವಾಧಿಕಾರಕ್ಕೆ ಪೂರ್ಣ ಸ್ವರೂಪ ಬಂದಂತಾಗಿದೆ. ನಾಗಿಬರ ಹೊಸ ಮಂತ್ರಿಮಂಡಳವು ಆದರ್ಶಪೂರ್ವಕವಾದ ನಡವಳಿಕೆ ಇಟ್ಟುಕೊಂಡಿದೆಯಾಗಿ ವರದಿ. ದಿನವಿಡೀ ಮಂತ್ರಿಮಂಡಳವು ದೀರ್ಘಕಾಲದ ವರೆಗೆ ಸಭೆ ಸೇರುತ್ತದೆ. ಮುಖ್ಯವಾಗಿ ಭೂಸುಧಾರಣೆ, ರಾಜಕೀಯ ಪಕ್ಷಗಳ ಶುದ್ಧೀಕರಣಗಳೇ ಅದರ ಮುಂದಿನ ವಿಷಯಗಳು. ವಿಶೇಷ ನ್ಯಾಯ ಮಂಡಳಿಗಳನ್ನು ನೇಮಿಸಿ, ರಾಜಕೀಯದಲ್ಲಿ ಲಂಚವು ನಡೆಸಿದವರ (ಕಳೆದ ವಾರ ಬಂಧನದಲ್ಲಿಟ್ಟವರ) ವಿಚಾರಣೆ ನಡೆಸುತ್ತಾರೆ. ಭೂ ಸುಧಾರಣೆಯ ಕ್ರಮವನ್ನು ವಿರೋಧಿಸುವವರಿಗೆ ಉಗ್ರ ಶಿಕ್ಷೆಯ ಬೆದರಿಕೆ ಇದೆ. ಈಜಿಪ್ತದ ಘಟನೆಯನ್ನು ಬದಲು ಮಾಡುವ ಸಿದ್ಧತೆ ನಡೆದಿದೆಯಾಗಿಯೂ ವರದಿ ಬಂದಿದೆ. ದೇವಾಲಯಗಳಿಗೆ ಬಿಟ್ಟದ್ದ ಆಸ್ತಿಯನ್ನು ಜನಹಿತಕ್ಕಾಗಿ ವಿನಿಯೋಗಿಸಲು ನಿರ್ಧಾರವಾಗಿದೆ. ಹೀಗೆ ಆಮೂಲಾಗ್ರ ಪರಿವರ್ತನೆ ಈಜಿಪ್ತದ ವೈಶಿಷ್ಟ್ಯ. ಸಾಮ್ರಾಜ್ಯದೊಳಗೆ ಈಜಿಪ್ತವು ಬ್ರಿಟನಿನೊಡನೆ ಇಟ್ಟುಕೊಳ್ಳತಕ್ಕ ಸಂಬಂಧ, ಮಧ್ಯಪೂರ್ವದ ಸಂರಕ್ಷಣಾ ಯೋಜನೆ, ಸುಡಾನದ ಪ್ರಶ್ನೆಗಳ ಬಗ್ಗೆ ಹೊಸ ಸರಕಾರದ ನಿಲುವು ಏನೆಂಬುದನ್ನು ಘೋಷಿಸುವ ನಿರೀಕ್ಷೆ ಇದೆ.

ಸತ್ಯಾಗ್ರಹಿಗಳಿಗೆ ಪ್ರೋತ್ಸಾಹ

ದಕ್ಷಿಣ ಆಫ್ರಿಕಾದ ಸತ್ಯಾಗ್ರಹಕ್ಕೆ ಭಾರತದ ಎ. ಐ. ಸಿ. ಸಿ.ಯು ನೈತಿಕ ಹಾಗೂ ಆರ್ಥಿಕ ಬೆಂಬಲವನ್ನು ಕೊಡಲು ನಿರ್ಧರಿಸಿದೆಯಷ್ಟೆ: ಅಮೇರಿಕಾದ ಮಾಜಿ ಅಧ್ಯಕ್ಷರ ಪತ್ನಿ ಶ್ರೀಮತಿ ರೂಜವೆಲ್ಟರು ನಾಟಾಳ ಹಿಂದೀ ಕಾಂಗ್ರೆಸಿನ ಉಪಾಧ್ಯಕ್ಷ ಶ್ರೀ ಅಶ್ವಿನಿ ಚೌಧರಿಯವರಿಗೆ ಬರೆದೊಂದು ಪತ್ರದಲ್ಲಿ ಶ್ವೇತೇತರರ ಹಕ್ಕುಬಾಧ್ಯತೆಗಳಿಗಾಗಿ ನಡೆದಿರುವ ಸತ್ಯಾಗ್ರಹವನ್ನು ಮುಂದುವರಿಸಬೇಕಾಗಿ ಕೇಳಿಕೊಂಡಿದ್ದಾರೆ. ಬ್ರಿಟನಿನ ಪಾದ್ರಿಗಳೊಬ್ಬರು ಸಮಸ್ತ ಕ್ರೈಸ್ತ ಪ್ರಪಂಚಕ್ಕೆ ಮಲಾನರ ಧೋರಣೆಯನ್ನು ವಿರೋಧಿಸಲು ಕರೆಕೊಟ್ಟಿರುವರು. ಆಫ್ರಿಕಾದಲ್ಲಿ ಮಲಾನರ ರಾಷ್ಟ್ರೀಯ ಸರಕಾರ ಸಲ್ಲದ ಕಾರ್ಯ ಮಾಡುತ್ತಿದೆಯಾಗಿ ಸಂಯುಕ್ತ ರಂಗದ ಸಾಟ್ರಸ ಹೇಳಿದ್ದಾರೆ. ಏನಿದ್ದರೂ ಮಲಾನರು ಮಾತ್ರ ನಿಂತಲ್ಲಿಂದ ಕದಲುವುದಿಲ್ಲ. ಅಲ್ಲದೆ ಮಲಾನ ಮಂತ್ರಿಮಂಡಳದ ಸದಸ್ಯರ ಮಾತುಗಳಂತೂ ದಿನದಿಂದ ದಿನಕ್ಕೆ ರೂಕ್ಷವಾಗುತ್ತವೆ.

ಸಿಂಹಳದ ಭಾರತೀಯರು

ಸಿಂಹಳದಲ್ಲಿ ಭಾರತೀಯರ ಮತಾಧಿಕಾರ ಪ್ರಶ್ನೆಯನ್ನು ಬೇಗನೇ ಬಗೆಹರಿಸುವುದಾಗಿ ಮುಖ್ಯ ಮಂತ್ರಿ ಡಡ್ಲೆ ಸೇನಾನಾಯಕರು ಕೊಟ್ಟ ಆಶ್ವಾಸನವನ್ನು ಅನುಲಕ್ಷಿಸಿ ಸಿಂಹಳ ಭಾರತೀಯರ ಕಾಂಗ್ರೆಸು ಇನ್ನೆರಡು ತಿಂಗಳ ಕಾಲ ಸತ್ಯಾಗ್ರಹ ನಿಲ್ಲಿಸಬೇಕೆಂದು ನಿರ್ಣಯಿಸಿದೆ.

ಮುಗಿದ ಮಾತುಕತೆ

ಜಿನೀವಾದ ಮಾತುಕತೆಗಳು (ಮೊದಲೇ ಊಹಿಸಿದಂತೆ) ಯಾವ ಪರಿಣಾಮಕಾರೀ ನಿರ್ಣಯಕ್ಕೂ ಬಾರದೆ ವ್ಯರ್ಥಗೊಂಡವು. ಬೇಕೆಂದೇ ಮೂರು ವಾರಗಳ ತನಕ ಆಶಾದಾಯಕ ವಾತಾವರಣವನ್ನು ನಿರ್ಮಿಸಲೂ, ದಿನ ದೂಡಲೂ ಅವುಗಳು ಕಾರಣವಾದುವು, ಹೊರತು ಮುಖ್ಯ ಪ್ರಶ್ನೆಯಾದ ಯುದ್ಧ ವಿರಾಮ ರೇಖೆಯ ಇಕ್ಕೆಡೆಗಳಲ್ಲಿರುವ ಸೈನ್ಯ ಪ್ರಮಾಣದ ಬಗ್ಗೆ ಏನೊಂದೂ ನಿರ್ಣಯಕ್ಕೆ ಬರಲಿಲ್ಲ, ಎರಡೂ ರಾಷ್ಟ್ರಗಳು ತಮ್ಮ ಮೊದಲಿನ ನಿಲುವನ್ನು ಪ್ರತಿಪಾದಿಸಿದುದರಿಂದ-- ಡಾ|| ಗ್ರಹಾಮರು ಯಥಾಪ್ರಕಾರವಾಗಿ (ಹಾಗೂ ಯಥಾ ಸಾವಕಾಶವಾಗಿ) ತಮ್ಮದೊಂದು ವರದಿಯನ್ನು ಒಪ್ಪಿಸಲಿದ್ದು ಆ ವರದಿಯಲ್ಲಿ ಗ್ರಹಾಮರು ಯಾವ ನಿಶ್ಚಯಕ್ಕೆ ಬಂದಿರುವರೆಂಬುದರ ಮೇಲಿಂದ, ಹಾಗೂ ಸಂಯುಕ್ತ ರಾಷ್ಟ್ರ ಸಂಘ ಮುಂದೇನು ಹೆಜ್ಜೆ ಇಡಬಹುದೆಂಬುದರಿಂದ-- ಭವಿಷ್ಯತ್ತನ್ನು ನಿರ್ಧರಿಸಬೇಕು. ಕರಾಚಿಯ "ಡಾನ" ಪತ್ರಿಕೆ ಮಾತುಕತೆಗಳು ನಿರಾಶೆಯಲ್ಲಿ ಕೊನೆಗೊಂಡಿದ್ದಕ್ಕೆ ಭಾರತವನ್ನು ಆಪಾದಿಸಿದೆ. ಶ್ರೀ ಅಯ್ಯಂಗಾರರು ಇನ್ನೊಮ್ಮೆ ತಾವೆಲ್ಲ ಒಟ್ಟುಗೂಡಿ ಮಾತುಕತೆ ನಡೆಸಲಿಕ್ಕೂ ಸಿದ್ಧರೆಂದಿದ್ದಾರೆ. ಮೊನ್ನೆ ಮೊನ್ನೆ ಪಾಕಿಸ್ತಾನವು ಕಾಶ್ಮೀರದ ಮೇಲೆ ಗುಪ್ತ ದಾಳಿಯ ಸಿದ್ಧತೆ ನಡೆಸುತ್ತಿದೆ ಎಂಬ ಸುದ್ದಿ ಇದ್ದರೆ- ಇನ್ನೀಗ ಪೂರ್ವಪಾಕಿಸ್ತಾನದಲ್ಲಿ ಸೈನ್ಯಗಳನ್ನು ಹಾಗೂ ಒಂದು ಲಕ್ಷ ಅನ್ಸಾರ್ ಸ್ವಯಂ ಸೇವಕರನ್ನು ಗಡಿಪ್ರದೇಶದಲ್ಲಿ ಕಳ್ಳಸಾಗಾಟವಾಗದಂತೆ ನಿರ್ಬಂಧಿಸುವ ಕುಂಟು ನೆಪದಿಂದ ಕಾಲೂರಿಸಲಾಗಿದೆ ಎಂದು ತಿಳಿದುಬಂದಿದೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No 217/1952

ಕಲ್ಲಾಲ ಸೋಜ ಬ್ಯಾ — ವಾದಿಯು

ಮತ್ತು

ಎಲಿಜಾ ಮಿನೇಜಸ್ ಕೊಡಾ—ಪ್ರತಿವಾದಿಯು

2ನೇ ಪ್ರತಿವಾದಿ ಇಂತ್ರು ಮಿನೇಜಸ್—ಜುವಾಂ ಮಿನೇಜಸರ ಮಗ ವ ನೋನಿಕಾ ಕಾಲ್ವಾಂವ್ ಬಾಯಿ ಮಗ— ಶಿರ್ವ ಗ್ರಾಮದ [illegible]

ವಾದಿಯು Specific performance ಬಗ್ಗೆ ದಾಖಲು ಮಾಡಿದ ಮೇಲಿನ ದಾವೆಯು 2ನೇ ಪ್ರತಿವಾದಿಯ ನೋಟೀಸಿನ ಬಗ್ಗೆ ತಾರೀಖು 3-10-52ಕ್ಕೆ ಇಟ್ಟಿದೆ. 2ನೇ ಪ್ರತಿವಾದಿಯು ಸದ್ರಿ ದಿವಸ ಪೂರ್ವಾಹ್ನ ಘಂಟೆ 10ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ವ ವಕೀಲರ ದ್ವಾರಾ ಹಾಜರಾಗದೆ ತಪ್ಪಿದರೆ ಸದ್ರಿ ನ್ಯಾಯವನ್ನು ಅವರ ಗೈರು ಹಾಜರಿಯಿಂದ ತೀರ್ಮಾನಿಸಲ್ಪಡುವುದು.

Gratian C Rego,
Vakil for Plaintiff.

ಉಡುಪಿ, ತಾರೀಖು, 30-8-52

ಉಡುಪಿ

ಮುನಿಸಿಪಲ್ ಕೌನ್ಸಿಲು ಸಭೆಯು-- ಇದೇ ತಾ. 13ರಲ್ಲು ಚೆರ್ಮೆನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ, 1951-52ನೆ ವರ್ಷದ ಆಡಳಿತ ವರದಿ ಸ್ವೀಕೃತವಾಯಿತು. (ವಿವರ ಮುಂದಿನ ಸಂಚಿಕೆಯಲ್ಲಿ)

11 ಮಂದಿ ನಾಮಪತ್ರ ಹಿಂತೆಗೆದರು

ಉಡುಪಿ ಮುನಿಸಿಪಾಲಿಟಿಯ ಮೆಂಬರಿಕೆಗೆ 59 ಮಂದಿ ನಾಮಪತ್ರಗಳನ್ನು ಸಲ್ಲಿಸಿದ್ದರಷ್ಟೆ. ಅವರ ಪೈಕಿ 11 ಮಂದಿ ತಂತಮ್ಮ ನಾಮಪತ್ರಗಳನ್ನು ಹಿಂತೆಗೆದಿರುವರು. ಹರಿಜನ ಕಾದಿಟ್ಟ ಸ್ಥಳಕ್ಕೆ ಮಾತ್ರ ಪ್ರತಿಪಕ್ಷಿಗಳಿಲ್ಲ. ಇತರ ಸ್ಥಾನಗಳಿಗೆ ಸ್ಪರ್ಧೆಯಿರುವುದರಿಂದ ಮುಂದಿನ ತಿಂಗಳ ತಾ. 6ರಂದು ಮತದಾನ ನಡೆಯಲಿದೆ.

ಶ್ರೀ ಟಿ. ವಿ. ಬಿ. ಸಿ. ಕುಲಾಸರಿಗೆ ವಿದಾಯ ಸತ್ಕಾರ--ಇಲ್ಲಿಂದ ವರ್ಗವಾಗಿ ಕಾಸರಗೋಡಿಗೆ ಹೋಗಲಿರುವ ಜನಪ್ರಿಯ ಡಿ। ಮುನ್ಸಿಫ್ ಶ್ರೀ ಟಿ. ವಿ. ಬಿ ಸಿ. ಕುಲಾಸರಿಗೆ ಇದೇ ತಾ 14ರಲ್ಲು ಸ್ಥಳೀಯ ತರುಣವ್ಯಾಪಾರಿಗಳಾದ ಶ್ರೀ ಎಫ್. ಅಂದ್ರಾದೆಯವರು ಶ್ರೀ ಆರ್. ಎಮ್. ಅಂದ್ರದೆಯವರ ಬಿಡಾರದಲ್ಲಿ ವಿದಾಯ ಸತ್ಕಾರವನ್ನೇರ್ಪಡಿಸಿದ್ದರು. ನಗರದ ಅಧ್ಯ ಕಾಪಸೀಯರನೇಕರು ಈ ಸಮಾರಂಭಕ್ಕೆ ಆಮಂತ್ರಿತರಾಗಿದ್ದರು. ಉಪಾಹಾರವಾದ ಬಳಿಕ ವಕೀಲ ಶ್ರೀ ಜೆ ಸಿ. ರೇಗೋರವರು ಮಾನ್ಯ ಅತಿಥಿಯ ಕಾರ್ಯ ನಿಷ್ಠೆ, ಶಿಸ್ತು, ಸೌಜನ್ಯಾದಿ ಗುಣಗಳನ್ನು ವಿವರಿಸಿ ಯಶಸ್ಸನ್ನು ಕೋರಿದರು. ಅತಿಥಿ ಶ್ರೀ ಕುಲಾಸೊರವರು, ಉಡುಪಿ ಜನತೆಯು ತನ್ನ ಮೇಲಿಟ್ಟಿರುವ ಅಭಿಮಾನಕ್ಕಾಗಿ ಧನ್ಯವಾದವಿತ್ತು ಭಾಷಣವಿತ್ತರು.

ಮರುದಿನ, ತಾ 15ರಲ್ಲು ಬೆಳಿಗ್ಗೆ ಸ್ಥಳೀಯ ಮೊಡರ್ನ್ ಹಾ। ಎ। ಶಾಲೆಯ ಅಧ್ಯಾಪಕ ವೃಂದದವರು ಶ್ರೀ ಕುಲಾಸೊರವರನ್ನು ಉಪಾಹಾರವಿತ್ತು ಸನ್ಮಾನಿಸಿದರು. ಶಾಲಾ ಮೆನೇಜರ್ ಶ್ರೀ ಕೆ. ಜಗನ್ನಾಥ ನಾಯ್ಕರು ಅತಿಥಿಯ ಗುಣಗಾನ ಮಾಡಿದ ಮೇಲೆ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಯವರು ಸಂದರ್ಭೋಚಿತವಾಗಿ ಮಾತನಾಡಿ, ಉಡುಪಿಯಲ್ಲಿ ಸಬ್ ಕೋರ್ಟು ಯಾ ಎಡಿಶನಲ್ ಸಬ್ ಕೋರ್ಟು ಆಗುವ ಸಂಭವವಿದೆ ಎಂದೂ, ಶ್ರೀ ಕುಲಾಸೊರವರೇ ಪ್ರಥಮ ಸಬ್ ಜಡ್ಜರಾಗಿ ಬರಲೆಂದೂ ಆಶಿಸಿದರು. ಮಾನ್ಯ ಅತಿಥಿಯ ಭಾಷಣವಾಗಿ ಸಮಾರಂಭ ಅಂತ್ಯವಾಯಿತು.

ಚರಕಾ ಸ್ಪರ್ಧೆಯ 'ಫಲಿತಾಂಶ': ಸ್ಥಳೀಯ 'ಚರಕಾ' ಹಸ್ತಲಿಖಿತ ಪತ್ರಿಕೆಯವರು ಏರ್ಪಡಿಸಿದ ಸ್ಪರ್ಧೆಗೆ 120 ಬರಹಗಳು ಬಂದಿದ್ದವು. ಇವುಗಳ ಪರಿಶೀಲನೆಯಾಗಿ ಪ್ರಥಮ ಬಹುಮಾನವು ಕುಮಾರಿ ಯು. ಜಯಂತಿ ಬಾಯಿ, ತೀರ್ಥಹಳ್ಳಿಯವರಿಗೂ, ದ್ವಿತೀಯ ಬಹುಮಾನವು ಕುಮಾರಿ ಮನೋರಂಜಿನಿ ಪಿ ಯಸ್, ಪಾಲಯಂ, ಸೇಲಂ ಅವರಿಗೂ, ತೃತೀಯ ಬಹುಮಾನವು ಶ್ರೀ ಪ ನಾ. ಬಟವಿ, ಬೆಳಗಾಂವಿ ಅವರಿಗೂ ದೊರೆತಿರುತ್ತದೆ. ಬಹುಮಾನಗಳನ್ನು ಸಂಬಂಧಪಟ್ಟವರಿಗೆ ಇದೇ ಸಪ್ಟಂಬರ ತಿಂಗಳಾಂತ್ಯದೊಳಗೆ ಕಳುಹಿಸಲಾಗುವುದೆಂದು ತಿಳಿಸಲಾಗಿದೆ.

ಚರಕಾ ಜಯಂತಿಯು: ಉಡುಪಿಯಲ್ಲಿ ಇದೇ ತಾ. 16 ರಿಂದ ಅಕ್ಟೋಬರ ತಿಂಗಳ ತಾ. 2ರ ತನಕ ಸ್ಥಳೀಯ ಕತಾಯಿ ಮಂಡಲದ ಆಶ್ರಯದಲ್ಲಿ ನಡೆಯಲಿರುವುದು. ಈ ಪಕ್ಷದಲ್ಲಿ ಖಾದಿ ಪ್ರಚಾರ ಮಾರಾಟದ ಏರ್ಪಾಡು ಮಾಡಲಾಗಿದೆ ಎಂದೂ ಖಾದಿಪ್ರೇಮಿಗಳೆಲ್ಲರೂ ಖಾದಿಯನ್ನು ಕೊಂಡುಕೊಂಡು ಚರಕಾ ಜಯಂತಿಯನ್ನು ಸಾರ್ಥಕಗೊಳಿಸಬೇಕಾಗಿ ಕತಾಯಿ ಮಂಡಲ ಕಾರ್ಯದರ್ಶಿ ಶ್ರೀ. ಕೆ. ಶ್ರೀನಿವಾಸ ಪೈಗಳು ತಿಳಿಸುತ್ತಾರೆ.

ಜಿಲ್ಲಾ ಕಲೆಕ್ಟರರಿಗೆ ಸತ್ಕಾರ ಕೂಟ—ಮೊನ್ನೆ ಸ್ಥಳೀಯ ಬಾರ್ ಎಸೋಸಿಯೇಶನಿನವರು ತಾ 10ರಲ್ಲಿ ಏರ್ಪಡಿಸಿದ್ದರು. ವಕೀಲ ಸಂಘದ ಅಧ್ಯಕ್ಷ ಶ್ರೀ ಕೆ. ಜಿ. ಬಳ್ಳಾಳರು ನಮ್ಮ ಜಿಲ್ಲೆಯಲ್ಲಿ ಕಾರ್ಯಾಂಗ ಮತ್ತು ನ್ಯಾಯಾಂಗವನ್ನು ಬೇರೆ ಬೇರೆ ಗೊಳಿಸುವ ಸಂದರ್ಭದಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಇಲ್ಲಿಯೇ ಒಂದು ಸಬ್ ಡಿವಿಜನಲ್ ಮೆಜಿಸ್ಟ್ರೇಟರ ಕೋರ್ಟನ್ನು ತೆರೆಯುವಂತಾಗಬೇಕೆಂದು ಸೂಚಿಸಿದರು. ಜಿಲ್ಲಾ ಕಲೆಕ್ಟರ್ ಶ್ರೀ ಸಿ.ಎ. ರಾಮಕೃಷ್ಣನ್ ಐ. ಸಿ. ಯಸ್. ಅವರು ಈ ಸೂಚನೆಯನ್ನು ಪರ್ಯಾಲೋಚಿಸುವೆನೆಂದರು.

ಆನ್ಸ್ಟಬ್ಬ ಮಂತ್ರಿಗಳ ಆಗಮನ: ಮದ್ರಾಸಿನ ಸಾರ್ವಜನಿಕ ಕಾಮಗಾರಿ ಖಾತೆಯ ಮಂತ್ರಿ ಶ್ರೀ ಎಸ್. ರಂಗ ರೆಡ್ಡಿಯವರು ತಾ 21ನೇ ಬೆಳಿಗ್ಗೆ 9 ಗಂಟೆಗೆ ಮಂಗಳೂರಿಗೆ ಬಂದು ಕಂಜ5ಕ್ಕೆ ಕೊಳವು ತಂಕದ ಉದ್ಘಾಟನೆ ಮಾಡುವರು. ಮರುದಿನ ಮೂಡಬಿದ್ರೆ ಸಾವಿರ ಕಂಬದ ಬಸ್ತಿ, ಕಾರ್ಕಳದ ಗೋಮಟೇಶ್ವರ ಬೆಟ್ಟವನ್ನು ಸಂದರ್ಶಿಸಿ ಗಂಟೆ 9-15ಕ್ಕೆ ಮತ್ತಿಗೆ 11ಕ್ಕೆ ಕಲ್ಯಾಡಿ ಸಂಕಗಳ ಶಂಕುಸ್ಥಾಪನೆ ಮಾಡುವರು. ಗಂಟೆ 12ಕ್ಕೆ ಉಡುಪಿಗೆ ಬರುವರು 3-30ಕ್ಕೆ ರಾಮಕೃಷ್ಣ ಥಿಯೇಟರಿನಲ್ಲಿ ಸಾರ್ವಜನಿಕ ಭಾಷಣ ಮಾಡಿ ಮೂಲ್ಕಿ ಮಾರ್ಗವಾಗಿ ಮಂಗಳೂರಿಗೆ ತೆರಳಿ ಮರುದಿನ ಮದ್ರಾಸಿಗೆ ಪ್ರಯಾಣಿಸುವರು.

ತಾ. 11-9-52 ರಲ್ಲಿ [illegible]ರು ಆರೋಗ್ಯ ಮಂತ್ರಿಗಳಿಗೆ ಬಿನ್ನವತ್ತಳೆಯನ್ನು ಅರ್ಪಿಸಿದಾಗ ಅವರಿತ್ತ ಉತ್ತರವನ್ನು 'ನವಭಾರತ'ದ ವಾರ್ತಾಹರರು ತಪ್ಪಾಗಿ ಪ್ರಕಟಿಸಿರುವರೆಂದೂ ಇದರಿಂದ ಆ ದಿನ ಸಂದರ್ಭದಲ್ಲಿ ತಪ್ಪು ಅಭಿಪ್ರಾಯ ಉಂಟಾಗಲು ಆಸ್ಪದವಾಗಿರುವುದೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ. ಮಂತ್ರಿಗಳ ಉತ್ತರವನ್ನು ನಾವು ಸಾಧ್ಯವಾದಷ್ಟು ವಿವರವಾಗಿ ಬೇರೆಡೆ ಪ್ರಕಟಿಸಿರುವುದನ್ನು ಸನ್ಮಾನ್ಯವಾಚಕರು ನೋಡಬಹುದು ಸಂ. ನ.

ತಾ 19—9—52ರಿಂದ
ಚಿತ್ರ ಪ್ರಪಂಚದಲ್ಲೇ ಕ್ರಾಂತಿ ಎಬ್ಬಿಸಿ ಚೈತನ್ಯ ಪೂರ್ಣವಾದ ಚಾರಿತ್ರಿಕ ನೀತಿ ಸಾರಿದ ವರ್ಣ ಚಿತ್ರ [illegible]
ಇಂಗ್ಲಿಷ್ ಚಿತ್ರ
ತ್ರಿ ಮಸ್ಕೇಟಿಯರ್ಸ್. (ಮೆಟ್ರೊ ಗೋಲ್ಡ್ವಿನ್)
ಬರುವ ಚಿತ್ರ— "ಶ್ರೀಮತೀಜಿ"
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.
ನಡಿಯುವ ಚಿತ್ರ— ವನ್ ಮಿಲಿಯನ್ ಬಿ. ಸಿ.

ಆರೋಗ್ಯಮಂತ್ರಿ ಶ್ರೀ ಎ. ಬಿ. ಸೆಟ್ಟರ ಜಿಲ್ಲಾಪ್ರವಾಸ

ಇದೇ ತಾ. ೭ರಲ್ಲು ಮಾನ್ಯ ಆರೋಗ್ಯ ಮಂತ್ರಿ ಶ್ರೀ ಸೆಟ್ಟರು ಮಂಗಳೂರಿಗೆ ಆಗಮಿಸಿದ ವಿಚಾರ ಸಂಚಿಕೆಯಲ್ಲಿ ಪ್ರಕಟವಾಗಿದೆ. ತಾ. ೯ರಲ್ಲು ಮಂತ್ರಿಗಳು ಕಾರ್ಕಳಕ್ಕೆ ಆಗಮಿಸಿ ಸ್ಥಳೀಯ ಆಸ್ಪತ್ರೆಯನ್ನು ಸಂದರ್ಶಿಸಿದರು. ಆಸ್ಪತ್ರೆಗೆ ಲೇಡಿ ಡಾಕ್ಟರರ ನೇಮಕ, ವಿದ್ಯುದ್ದೀಪಗಳ ಸೌಕರ್ಯ ಇತ್ಯಾದಿ ವಿಷಯಗಳನ್ನೊಳಗೊಂಡ ಮನವಿಯೊಂದು ಮಂತ್ರಿಗಳಿಗೆ ಕೊಡಲಾಯಿತು. ಹೆಮ್ಮಕ್ಕಳ ರೋಗಿಗಳ ಸಂಖ್ಯೆಯು ಆಸ್ಪತ್ರೆಯಲ್ಲಿ ಸಾಕಷ್ಟು ಇಲ್ಲದಿರುವುದರಿಂದ ಲೇಡಿ ಡಾಕ್ಟರರ ನೇಮಕದ ಆವಶ್ಯಕತೆ ಕಾಣುವುದಿಲ್ಲವಾಗಿ ಮಂತ್ರಿಗಳು ಅಭಿಪ್ರಾಯಪಿತ್ತರು.

ಕುಂದಾಪುರದಲ್ಲಿ ಮಾನಪತ್ರ— ಮದ್ರಾಸು ಸರಕಾರದ ಆರೋಗ್ಯಮಂತ್ರಿ ಶ್ರೀ ಎ. ಬಿ. ಸೆಟ್ಟರು ತಾ ೧೦ರಂದು ಕಾರ್ಕಳ ಸೋಮೇಶ್ವರ ಮಾರ್ಗವಾಗಿ ಕುಂದಾಪುರಕ್ಕೆ ಆಗಮಿಸಿದರು. ಶ್ರೀ ಸೆಟ್ಟರ ಜತೆಯಲ್ಲಿ ಜಿಲ್ಲಾ ಹೆಲ್ತ್ ಆಫೀಸರರೂ, ಡಾ। ಆಡಪ್ಪ, ಅವರೂ ಬಂದಿದ್ದರು. ಮಾನ್ಯಮಂತ್ರಿಗಳನ್ನು ಶ್ರೀ ವೈ. ಮಂಜಯ್ಯ ಸೆಟ್ಟಿ, ಎಮ್. ಎಲ್. ಎ. ಮತ್ತು ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಶ್ರೀ ಎಮ್. ಎಮ್. ಹೆಗ್ಡೆ ಮೊದಲಾದವರು ಸ್ವಾಗತಿಸಿದರು. ಸಂಜೆ ಮಾನ್ಯ ಮಂತ್ರಿಗಳು ಸ್ಥಳೀಯ ಸರಕಾರಿ ಆಸ್ಪತ್ರೆಯನ್ನು ಸಂದರ್ಶಿಸಿದರು. ಅಲ್ಲಿಯ ಅ। ಸರ್ಜನ್ ಡಾ। ಎಮ್. ಸಿ ನಾಯರರು ಆಸ್ಪತ್ರೆಯ ಅನುಭವಗಳನ್ನಿತ್ತರು. ಬಳಿಕ ಮಾನ್ಯಮಂತ್ರಿಗಳು ಎಡ್ವರ್ಡ್ ಮೆಮೋರಿಯಲ್ ಕ್ಲಬ್ಬಿಗೆ ಭೆಟ್ಟಿಯಿತ್ತರು. ಕ್ಲಬ್ಬಿನ ಅಧ್ಯಕ್ಷ ಶ್ರೀ. ಕೆ. ನಾರಾಯಣ ಪೈಗಳವರು ಮಾನ್ಯ ಸೆಟ್ಟರಿಗೆ ಸುಸ್ವಾಗತವಿತ್ತರು.

ಶ್ರೀ ಎಮ್. ಎಮ್. ಹೆಗ್ಡೆಯವರು ಮಾನ್ಯಮಂತ್ರಿಗಳಿಗೆ ಕ್ಲಬ್ಬಿನ ಪರವಾಗಿ ಒಕ್ಕಲು ಎಬ್ಬಿಸದಂತೆ ತಡೆಯುವ, ಜೋಗಿನ ವಿದ್ಯುತ್ತನ್ನು ಜಿಲ್ಲೆಗೆ ತರಿಸುವಾಗ ಅದರ ಪ್ರಯೋಜನವು ಕುಂದಾಪುರಕ್ಕೆ ಲಭಿಸುವಂತೆ ಮಾಡುವ, ಸರಕಾರಿ ಆಸ್ಪತ್ರೆಗೆ ಲೇಡಿ ಡಾಕ್ಟರರ ನೇಮಕ, ರೋಗಿಗಳು ಉಳುಕೊಳ್ಳುವ ಸ್ಥಳದ ವಿಸ್ತರಣ, ಹೆರಿಗೆಬಗ್ಗೆ ಯೋಗ್ಯ ವ್ಯವಸ್ಥೆ ಸಿಗುವಂತೆ ಮಾಡುವ, ಜಿಲ್ಲೆಗೆ ಸಿಹಿಕಳ್ಳಿನ ಸವಲತ್ತನ್ನು ಒದಗಿಸುವ ಕೇಳಿಕೆಗಳುಳ್ಳ ಮಾನಪತ್ರವೊಂದನ್ನು ಒಪ್ಪಿಸಿದರು. ಮಾನ್ಯ ಮಂತ್ರಿಗಳು ಉತ್ತರವೀಯುತ್ತಾ, ಕಳೆದ ಐದು ವರ್ಷಗಳಿಂದ ಮದ್ರಾಸು ಸರಕಾರವು ಜಿಲ್ಲೆಯಲ್ಲಿ ನಡೆಸಿದ ಪ್ರಗತಿ ವಿವರಿಸಿ, ಮಲೇರಿಯಾ ರೋಗವು ಜಿಲ್ಲೆಯಲ್ಲಿ ಡಿ. ಡಿ. ಟಿ. ಸ್ಪ್ರೇ ಮಾಡಿದ್ದರಿಂದ ತುಂಬಾ ಕಡಿಮೆಯಾಗಿದೆ. ಅದನ್ನು ಕುಂದಾಪುರದಲ್ಲೂ ಕಾರ್ಯಕಾರಿಮಾಡಲಾಗುವುದೆಂದು ಹೇಳಿ ಕ್ಲಬ್ಬಿನ ಅಧಿಕಾರಿಗಳ ಆಭಾರ ಮನ್ನಿಸಿದರು.

ಗಂಗೊಳ್ಳಿಯಲ್ಲಿ ಸಾರ್ವಜನಿಕ ಸಭೆ—ಬಳಿಕ ಮಂತ್ರಿಗಳು ಗಂಗೊಳ್ಳಿಗೆ ಪ್ರಯಾಣಬೆಳೆಸಿ ಅಲ್ಲಿಯ ಎಸ್. ವಿ. ಹೈಸ್ಕೂಲ್ ಮಂದಿರದಲ್ಲಿ ಸಾರ್ವಜನಿಕ ಸಂಸ್ಥೆಗಳ ಕಡೆಯಿಂದ ಅರ್ಪಿಸಲಾದ ಮಾನಪತ್ರಗಳನ್ನು ಸ್ವೀಕರಿಸಿದರು. ಶ್ರೀ ವೈ. ಮಂಜಯ್ಯ ಸೆಟ್ಟಿ, ಎಮ್ ಎಲ್. ಎ ಅವರು ಈ ಸಮಾರಂಭದ ಅಧ್ಯಕ್ಷಸ್ಥಾನ ವಹಿಸಿದ್ದರು. ಮಾನ್ಯ ಮಂತ್ರಿಗಳು ಉತ್ತರವೀಯುತ್ತಾ 'ಹೈಸ್ಕೂಲ್ ಕಟ್ಟಡಕ್ಕೆ ನೀವು ಇನ್ನೂ ಹೆಚ್ಚಿನ ಸಹಾಯವನ್ನು ಕೇಳಿದ್ದೀರಿ. ನಮ್ಮ ಸರಕಾರವು ಒಟ್ಟು ಆದಾಯ ಅರುವತ್ತು ಕೋಟಿಯಲ್ಲಿ ೧೧½ ಕೋಟಿಯನ್ನು ವಿದ್ಯಾಭ್ಯಾಸಕ್ಕಾಗಿ ವೆಚ್ಚಮಾಡುತ್ತದೆ. ಇಷ್ಟು ವೆಚ್ಚವನ್ನು ಅನ್ಯಾನ್ಯ ಪ್ರಾಂತವೂ ಮಾಡುವುದಿಲ್ಲ. ನಮ್ಮ ಜಿಲ್ಲೆಯ ಹೈಸ್ಕೂಲು ಕಾಲೇಜುಗಳು ಇತರ ಜಿಲ್ಲೆಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿದ್ದೂ ಅವು ಯೋಗ್ಯರೀತಿಯಲ್ಲಿ ನಡೆಯುತ್ತಲಿರುವುದು ಅಭಿಮಾನದ ಸಂಗತಿ' ಎಂದರು. ಮತ್ತೂ ಬೇಡಿಕೆಗಳನ್ನು ಒಮ್ಮೆಲೇ ಮುಂದಿಟ್ಟರೆ ಅವು ಪ್ರಯೋಜನಕಾರಿಯಾಗಲಾರವು. ಅತ್ಯಗತ್ಯ ವಿಷಯಗಳನ್ನು ಒಮ್ಮನಸ್ಸಿನಿಂದ ಎಲ್ಲರೂ ಏಕಸ್ವರವಾಗಿ ಕೇಳಿದರೆ ಅದು ಪ್ರಯೋಜನಕಾರಿಯಾಗಲು ಸಾಧ್ಯವಿದೆ ಎಂದು ಕೊನೆಯದಾಗಿ ಹೇಳಿದರು.

ಉಡುಪಿಯಲ್ಲಿ ಬಿನ್ನವತ್ತಳೆ, ಮೆಡಿಕಲ್ ಕಾಲೇಜಿಗೆ ಬೆಂಬಲ

ತಾ ೧೧ನೆ ಪೂರ್ವಾಹ್ನ ಶ್ರೀ ಸೆಟ್ಟರು ಉಡುಪಿಗೆ ಆಗಮಿಸಿದರು. ಮುಕುಂದ ನಿವಾಸದಲ್ಲಿ ಎಕೆಡಮಿ ಒಫ್ ಜನರಲ್ ಎಜ್ಯುಕೇಶನ್, ಮಣಿಪಾಲ—ಸಂಸ್ಥೆಯ ಕಡೆಯಿಂದ ಅದರ ರಿಜಿಸ್ಟ್ರಾರ್ ಡಾ। ಟಿ ಮಾಧವ ಪೈಗಳವರು ಮಾನ್ಯ ಮಂತ್ರಿಗಳಿಗೆ ಪುಷ್ಪ ಮಾಲಿಕೆಯನ್ನರ್ಪಿಸಿ ಬಿನ್ನವತ್ತಳೆಯೊಂದನ್ನು ಓದಿ ಒಪ್ಪಿಸಿದರು. ಎಕೆಡಮಿಯ ಜನನ, ಬೆಳವಣಿಗೆ, ಈ ತನಕ ಸಾಧಿಸಿದ ಕಾರ್ಯಗಳು, ಮೆಡಿಕಲ್ ಕಾಲೇಜು ತೆರೆಯಲು ಮಾಡಿದ ಪ್ರಯತ್ನ, ಕರ್ನಾಟಕ ವಿಶ್ವವಿದ್ಯಾಲಯದವರು ಅಂಗೀಕಾರ ಕೊಡಲೊಪ್ಪಿದ್ದರಿಂದ ಬರುವ ಜೂನಿನಲ್ಲಿ ಮೆಡಿಕಲ್ ಕಾಲೇಜ್ ತೆರೆವ ವಿಚಾರ ಆ ಬಗ್ಗೆ ಸರಕಾರದ ಸಹಾಯ ಪ್ರೋತ್ಸಾಹಗಳ ನಿರೀಕ್ಷೆ ಇತ್ಯಾದಿ ವಿಷಯಗಳು ಬಿನ್ನವತ್ತಳೆಯಲ್ಲಿ ಹೇಳಲಾಗಿತ್ತು. ಮಾನ್ಯ ಸೆಟ್ಟರು ಉತ್ತರವೀಯುತ್ತಾ 'ಇಂದು ಸ್ಥಳೀಯ ಸಂಗಾತಿಗಳನ್ನು ನೋಡಿ ಮಾತುಕಥೆ ನಡೆಸಲು ಸಂದರ್ಭವನ್ನು ಒದಗಿಸಿಕೊಟ್ಟ ಎಕೆಡೆಮಿ ರಿಜಿಸ್ಟ್ರಾರ್ ಡಾ। ಪೈಗಳನ್ನು ಪ್ರಥಮತ ವಂದಿಸಿದರು. ಮುಂದುವರಿಯುತ್ತಾ ಕಸ್ತೂರಿ ಬಾ ಮೆಡಿಕಲ್ ಕಾಲೇಜಿನ ರೂಪರೇಖೆಗಳನ್ನು ಡಾ। ಪೈಗಳವರು ತನಗೂ, ಮದ್ರಾಸಿನ ಇನ್ನಿತರ ಪ್ರಮುಖ ಅಧಿಕಾರಿಗಳಿಗೂ ಮನದಟ್ಟಾಗುವಂತೆ ವಿವರಿಸಿರುತ್ತಾರೆ. ಈ ಯೋಜನೆಯ ಸಫಲತೆಯು ಸರಕಾರದ ದೃಷ್ಟಿ ಪಥದಲ್ಲಿದೆ. ಈಚೆಗೆ ಮುಖ್ಯ ಮಂತ್ರಿ ರಾಜಾಜಿಯವರು ವೈದ್ಯಕೀಯ ಕ್ಷೇತ್ರದಲ್ಲಿ ಅಲ್ಪಾವಧಿಯ ಕಡಿಮೆ ವೆಚ್ಚದ ಹೊಸ ಪದ್ಧತಿಯೊಂದನ್ನು ಜ್ಯಾರಿಗೆ ತರುವುದರಲ್ಲಿದ್ದಾರೆ. ಎಕೆಡೆಮಿಯವರು ಆರ್ಥಿಕ ಸಹಾಯವನ್ನು ಅಪೇಕ್ಷಿಸಿರುವರು. ಮಧುರಾ ಮತ್ತು ಗುಂಟೂರು ಮೆಡಿಕಲ್ ಕಾಲೇಜುಗಳ ಬಗ್ಗೆ ಸರಕಾರವು ಈಗಾಗಲೇ ಎರಡೂವರೆ ಕೋಟಿ ರೂಪಾಯಿಯಷ್ಟರ ಹೊಣೆ ಹೊತ್ತು ಕಂಗಾಲಾಗಿದೆ, ಆರ್ಥಿಕ ಕೊರತೆಯಿಂದ ಅಲ್ಲಿಯ ಕಾರ್ಯ ಸ್ಥಗಿತಗೊಂಡಿದೆ. ಇಂತಹ ಪರಿಸ್ಥಿತಿಯಲ್ಲಿ ಎಕೆಡಮಿಗೆ ಪ್ರಕೃತ ದ್ರವ್ಯ ಸಹಾಯವನ್ನೀಯಲು ಮಾತ್ರ ಸರಕಾರವು ಅಸಮರ್ಥವಾಗಿಯದೆ. ಹಲವಾರು ಸಂಸ್ಥೆಗಳ ಜನ್ಮದಾತರಿದ್ದು ಅವನ್ನು ಉತ್ತಮವಾಗಿ ಮುನ್ನಡೆಸಿಕೊಂಡು ಬರುವ ಸಾಹಸಿಯೂ, ಧೈರ್ಯಶಾಲಿಯೂ ಆದ ಡಾ। ಪೈಗಳಿಗೆ ಮೆಡಿಕಲ್ ಕಾಲೇಜ್ ವಿಚಾರದಲ್ಲೂ ಸಾಕಷ್ಟು ಹಣ ಸಂಗ್ರಹಿಸಲು ಸಾಧ್ಯವಿದೆ. ಅದ್ದರಿಂದ ಅವರು ಈ ಕಾರ್ಯಪ್ರವೃತ್ತರಾಗಲಿ, ಜಯವು ಸಿಗುವುದು.

ಪ್ರಕೃತ ಹಳ್ಳಿಗಳಲ್ಲಿ ಡಾಕ್ಟರರ ಆವಶ್ಯಕತೆ ತುಂಬಾ ಇದೆ. ಅದನ್ನು ಪೂರೈಸುವರೆ ಸರಕಾರವು ಯತ್ನಿಸುತ್ತಿದೆ. ಕೆಲವುಕಡೆ ಪರೀಕ್ಷಾರ್ಥವಾಗಿ ಸಿವಿಲ್ ಅಸಿಸ್ಟಂಟ್ ಸರ್ಜನರ ಸಂಬಳವನ್ನು ಕೊಡುತ್ತೇವೆ ಎಂದರೂ ಡಾಕ್ಟರರು ಗ್ರಾಮ ವಲಯಗಳಲ್ಲಿ ಹೋಗಿ ಉಳಕೊಳ್ಳಲು ಮುಂದೆ ಬರುವುದಿಲ್ಲ. ಇಂತಹ ಅನಪೇಕ್ಷಿತ ವಾತಾವರಣ ಹೋಗಬೇಕಾಗಿದೆ. ಬೊಂಬಾಯಿ ಪ್ರಾಂತದ ಕರ್ನಾಟಕ ವಿದ್ಯಾಪೀಠವು ಕಸ್ತೂರಿಬಾ ಮೆಡಿಕಲ್ ಕಾಲೇಜಿಗೆ ಮನ್ನಣೆ ಕೊಡಲಿರುವುದಾಗಿ ಎಕೆಡಮಿ ರಿಜಿಸ್ಟ್ರಾರು ತಿಳಿಸುತ್ತಾರೆ. ಇದು ಸಂತೋಷದ ಸಂಗತಿ. ಇದು ಕಾರ್ಯಗತವಾದಲ್ಲಿ ಭಿನ್ನವತ್ತಳೆಯಲ್ಲಿ ಕೇಳಲಾದ ಉಡುಪಿ ಅಜ್ಜರಕಾಡಿನ ಕಾಡಿಟ್ಟ ಯಾ ಬೇರೆ ಯೋಗ್ಯ ಸ್ಥಳವನ್ನು ಆಸ್ಪತ್ರೆ ಕಟ್ಟಡ ಕಟ್ಟಲು ಎಕೆಡಮಿಗೆ ಕೊಡಲಾಗುವುದೆಂದೂ ಮಂಗಳೂರಿನ ವೆನ್‌ಲಾಕ್ ಮತ್ತು ಲೇಡಿ ಗೋಶನ್ ಮತ್ತು ಉಡುಪಿ ಸರಕಾರಿ ಆಸ್ಪತ್ರೆಗಳ ಉಪಯೋಗದ ಸೌಕರ್ಯಗಳಿಗೆ ಪರವಾನಗಿ ದೊರೆಯುವುದೆಂದೂ ಮಾನ್ಯಮಂತ್ರಿ ಹೇಳಿದರು. ಇಂಡಿಯನ್ ಮೆಡಿಕಲ್ ಕೌನ್ಸಿಲಿನ ಅಧ್ಯಕ್ಷರು ಕೂಡ ತನಗೆ ಸಹಕಾರನೀಡುವುದಾಗಿ ತಿಳಿಸಿರುವರೆಂದು ಡಾ। ಪೈಗಳು ಹೇಳಿ ಧನ್ಯವಾದಗಳನ್ನಿತ್ತರು.

ಬಳಿಕ ಮಂತ್ರಿಗಳು ಸ್ಥಳೀಯ ಸರಕಾರಿ ಆಸ್ಪತ್ರೆಯನ್ನು ಸಂದರ್ಶಿಸಿದಾಗ ಅಲ್ಲಿಯ ಅಸಿಸ್ಟಂಟ್ ಸರ್ಜನ್ ಡಾ। ಹರಿಜೀವನದಾಸ ಸೆಟ್ಟಿ, ಒನೆರರಿ ಅ। ಸರ್ಜನ್ ಡಾ। ಟಿ. ಆರ್. ನಾಯಕ್ ಮೊದಲಾದವರು ಸ್ವಾಗತವಿತ್ತರು. ಡಾ। ಎಸ್. ಆರ್. ಪೈ, ಶ್ರೀ ಟಿ. ಎ ಪೈ, ಎಮ್. ಎಲ್. ಎ. ಮೊದಲಾದವರು ಆಸ್ಪತ್ರೆಯ ಎರಡು ತೊಡರುಗಳನ್ನು ಮಂತ್ರಿಗಳ ಗಮನಕ್ಕೆ ತಂದರು. ಲೇಡಿ ಡಾಕ್ಟರರ ಆವಶ್ಯಕತೆಯನ್ನು ಶ್ರೀ ಯು. ಎಸ್. ಭಟ್ಟರು ಹೇಳಿದುದಕ್ಕೆ ಲೇಡಿ ಡಾಕ್ಟರರ ಕೊರತೆಯಿದೆಯಲ್ಲಾ ಎಂದು ಮಂತ್ರಿಗಳು ಉತ್ತರವಿತ್ತರು.

ತದನಂತರ ಮಾನ್ಯಮಂತ್ರಿಗಳು ವಿಕ್ಟೋರಿಯಾ ಜ್ಯುಬಿಲಿ ಯೂನಿಯನ್ ಕ್ಲಬಿನಲ್ಲಿ ಬ್ರಹ್ಮಾವರದ ದೇಶಿ ವೈದ್ಯರ ಹಾಗೂ ನಾಗರಿಕರ ಕಡೆಯಿಂದ ಶ್ರೀಗಳಾದ ಬಿ. ವಿ. ಮಾಧವರಾವ್ ಮತ್ತು ವೈ ರಾಮರಾವ್ ಗುರುಕಲ್ ಅವರು ಒಪ್ಪಿಸಿದ ಮನವಿಯನ್ನು ಪರಿಶೀಲಿಸಿದರು, ಆಸವಾರಿಷ್ಟಗಳನ್ನು ಪಾನನಿರೋಧ ಕಾನೂನಿನಿಂದ ಹೊರಪಡಿಸಿ ಪ್ರತಿಬಂಧಕಗಳನ್ನು ತೆಗೆದು ಹಾಕುವ ವಿಚಾರವನ್ನು ಸರಕಾರವು ಆಲೋಚಿಸುತ್ತಿರುವುದಾಗಿಯೂ ಈ ವಿಚಾರದಲ್ಲಿ ಜನರ ಕೇಳಿಕೆಗಳನ್ನು ಮುಖ್ಯಮಂತ್ರಿಗಳ ಮತ್ತು ಪಾನನಿರೋಧ ಮಂತ್ರಿಗಳ ಗಮನಕ್ಕೆ ತರುವುದಾಗಿಯೂ ಆಶ್ವಾಸನೆಯಿತ್ತರು. ಆ ಮೇಲೆ ಮಧ್ಯಾಹ್ನದ ಭೋಜನ ತೀರಿಸಿಕೊಂಡು ಎಂ. ಜಿ. ಎಮ್. ಕಾಲೇಜನ್ನು ಸಂದರ್ಶಿಸಿ ಸಂತೋಷ ಪ್ರದರ್ಶಿಸಿ, ಮಂಗಳೂರಿಗೆ ತೆರಳಿದರು.

ಮ. ಧ. ಕಳ— ಹಳೆ ವಿದ್ಯಾರ್ಥಿ ಸಂಘದ ನೇತೃತ್ವದಲ್ಲಿ ಕೃಷ್ಣ ಜಯಂತಿಯು ಎಲಿಯೂರು ವಿದ್ವಾನ್ ಜಿನರಾಜ ಜೈನ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಕೆ. ಪ್ರಫುಲ್ಲ ರೈಗಳು ಶ್ರೀ ಕೃಷ್ಣನ ಜೀವನ ಚರಿತ್ರೆಯನ್ನೂ, ಶ್ರೀ M. ಧರ್ಮರಾಜ ಇಂದ್ರರವರು ಜೈನಮತದ ರೀತಿಯಾಗಿ ಕೃಷ್ಣನಾರು? ಎಂಬುದನ್ನು ವಿವರಿಸಿದ ಬಳಿಕ ಯನ್ ರಾಮಯ್ಯ ರೈಗಳು ಕೃಷ್ಣನ ವ್ಯಕ್ತಿತ್ವವನ್ನು ವರ್ಣಿಸಿ ನಂತರ ಅಧ್ಯಕ್ಷರ ಭಾಷಣವಾಗಿ ಧನ್ಯವಾದದೊಂದಿಗೆ ಸಭೆಯು ಚದರಿತು.

ಬೊಂಬಾಯಿ: ಇಲ್ಲಿಯ ವಿದ್ಯಾದಾಯಿನಿ ಸಭೆಯ ೩೧ ನೇ ವಾರ್ಷಿಕೋತ್ಸವವು ಇದೇ ತಾ. ೨೧ರಲ್ಲು ಅಪರಾಹ್ನ ೨½ ಗಂಟೆಗೆ ಸರ್ ಕವಾಸ್ಜಿ ಜಹಾಂಗೀರ್ ಸಾರ್ವಜನಿಕ ಮಂದಿರದಲ್ಲಿ ಡಾ। ಎ. ವಿ. ಬಾಳಿಗ (ಮುಂಬಾಯಿ ಪ್ರಖ್ಯಾತ ಸರ್ಜನ್) ಅವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಜಾಗತಿಕ ಶಾಂತಿಯೇ ಭಾರತದ ಧೋರಣ

[೫ನೇ ಪುಟದಿಂದ ಮುಂದುವರಿದುದು]

ಲಿಕ್ಕಾಗಿ ಸ್ಪರ್ಧಿಸದೆ, ಹಿಂದೆಕೊಟ್ಟ ವಚನಗಳನ್ನು ಕಾರ್ಯರೂಪಕ್ಕೆ ಇಳಿಸಬಯಸಿ ಹಾಗೆ ಮಾಡಿತು, ಹಿಂದೆ ಜನತೆಯ ನಡುವೆ ಕಾಂಗ್ರೆಸು ಕೆಲಸಮಾಡಿದೆ; ಮುಂದಾದರೂ ಜನತೆಯ ಮಧ್ಯದಲ್ಲಿಯೇ ಮುನ್ನಡಿ ಇಡಬೇಕು. ದೊಡ್ಡ ಮಾತುಗಳನ್ನು ಆಡದೆ—ರಾಷ್ಟ್ರೀಯ ಪ್ರಗತಿಗಾಗಿ ದುಡಿಯಬೇಕು. ಎಲ್ಲವನ್ನೂ ಕಾಂಗ್ರೆಸು ಸಂಸ್ಥೆ ಎಂಬುದರೊಳಗಿಂದಲೇ ಮಾಡಬೇಕಲ್ಲದೆ— ವೈಯಕ್ತಿಕವಾಗಿಯಾಗಲೀ ಪ್ರತ್ಯೇಕ ಭಾವನೆಯಿಂದಾಗಲೀ ಅಲ್ಲ. ಐಕ್ಯವೇ ಕಾಂಗ್ರೆಸಿಗರ ಮೂಲ ಮಂತ್ರ— ಎಂದು ನೆಹರೂ ಉಪದೇಶಿಸಿದರು.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ



ಪ್ರಸವ ವಿಜ್ಞಾನ

ಸಾಧನ ಪ್ರಕಟನಾಲಯ
ದೊಡ್ಡಬಳ್ಳಾಪುರ

ಅಸಾಧಾರಣ ವ್ಯಕ್ತಿಗಳೂ ಗ್ರಂಥಕರ್ತರೂ ಆದ
ಶ್ರೀ. ಎಸ್. ಪಂಚಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್, ಬಾರ್ ಎಟ್ ಲಾ,
ಎಫ್. ಎಸ್, ಎಲ್. ಅವರು ಬರೆದ Tales of Ind ಎಂಬ ಕಥಾವಳಿಯ ಅನುವಾದ

ಭಾರತೀಯ ಕತೆಗಳು

ಅನುವಾದಕರು—ಶ್ರೀ. ಕೊರಡ್ಕಲ್ ಶ್ರೀನಿವಾಸ ರಾವ್.

ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಬೇಕೆಂಬ ಹಿರಿಯಾಶೆ ಇದ್ದೇ ಇದೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸಂದರ್ಭೋಚಿತವಾದ ಉಪಮೆ, ಗಾದೆ, ಕಥೆ ದೃಷ್ಟಾಂತ ಇತ್ಯಾದಿಗಳು ಬರಬೇಕು. ಅಂತಹ ಅಮೂಲ್ಯ ಭಂಡಾಗಾರವೇ ಈ ಭಾರತೀಯ ಕತೆಗಳು.

ಎಲ್ಲರೂ ಅವಶ್ಯವಾಗಿ ಓದತಕ್ಕ ಅಪೂರ್ವ ಗ್ರಂಥ

151 ಕತೆಗಳು ಬೆಲೆ ರೂ. 1-12-0

ನವಭಾರತ ಪುಸ್ತಕ ಭಂಡಾರ, ಉಡುಪಿ.



Applauded as the BEST Rubber Stamp Makers all over India

CROWN RUBBER STAMP CO.
Mangalore
(ESTD 1926)

ಮಂಗಳೂರು

ಶ್ರೀ. ಎ. ಕೆ. ಗೋಪಾಲನ್ನರ ಭಾಷಣ:— ಕೇಂದ್ರ ಸರಕಾರದ ಲೋಕ ಸಭೆಯ ಕಮ್ಯುನಿಸ್ಟ್ ಮೆಂಬರಾದ ಶ್ರೀ. ಎ. ಕೆ. ಗೋಪಾಲನ್ ಅವರು ಸಪತ್ನೀಕರಾಗಿ ದಿನಾಂಕ ೧೩ ರಂದು ಸಂಜೆ ಮಂಗಳೂರಿಗೆ ಆಗಮಿಸಿದಾಗ, ಮಜೂರ ಬಂಧುಗಳು ಅವರಿಗೆ ಸ್ವಾಗತವಿತ್ತು ಮೆರವಣಿಗೆಯಿಂದ ಕೇಂದ್ರ ಮೈದಾನಿಗೆ ಕರತಂದರು ಅಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ ಎ. ಕೃಷ್ಣ ಶೆಟ್ಟಿಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಗೋಪಾಲನ್ನರು ಭಾಷಣಮಾಡುತ್ತಾ ಹೇಳಿದುದೇನಂದರೆ 'ನಾವು ಪಾರ್ಲಿಮೆಂಟಿನಲ್ಲಿ ಬರೇ ಸರಕಾರದ ವಿರೋಧಪಕ್ಷದವರೆಂದು ಸರಕಾರದ ಕೆಲಸಗಳನ್ನೆಲ್ಲ ಖಂಡಿಸುವವರಲ್ಲ ಸರಕಾರವು ಒಳ್ಳೆಯದನ್ನು ಮಾಡಿದರೆ ಅವರನ್ನು ಅಭಿನಂದಿಸುವ, ಕೆಡುಕು ಮಾಡಿದರೆ ಖಂಡಿಸುವ ಕೆಲಸಮಾಡಿದ್ದೇವೆ. ಸರಕಾರವು ಕಾಶ್ಮೀರದೊಂದಿಗೆ ಮಾಡಿದ ಒಪ್ಪಂದಕ್ಕಾಗಿ ನಾವು ಅವರನ್ನು ಅಭಿನಂದಿಸುತ್ತೇವೆ. ಸ್ಥಾನಬದ್ಧತೆಯ ಕಾನೂನು ತಂದಾಗ ಖಂಡಿಸಿದ್ದೇವೆ!" ಕಾಂಗ್ರೆಸ್ ಅಧಿಕಾರಕ್ಕೆ ಬಂದಮೇಲೆ ತಮ್ಮ ತ್ಯಾಗ ಗುಣಗಳನ್ನೆಲ್ಲಾ ಬಿಟ್ಟು ಕೊಟ್ಟು ಭಂಡವಾಳಗಾರರ ಬೆನ್ನು ಹತ್ತತೊಡಗಿದೆ ಎಂದರಲ್ಲದೆ ಭಾರತದಲ್ಲಿ ಯಾವುದೇ ಒಂದು ಪಕ್ಷದಿಂದ ಜನರ ಒಳಿತಕ್ಕಾಗಿ ಪಕ್ಷಗಳು ಒಟ್ಟಾಗಿ ಕೆಲಸಮಾಡಬೇಕೆಂದು ಕೇಳಿಕೊಂಡರು. ಮಂಗಳೂರು ಮುನ್ಸಿಪಲ್ ಚುನಾವಣೆಯಲ್ಲಿ ಕಾಂಗ್ರೆಸ್ಸೇತರ ಪಕ್ಷದವರಿಗೆ ಓಟುಕೊಡಬೇಕೆಂದು ಕೇಳಿಕೊಂಡರು. ಸಭಾರಂಭದಲ್ಲಿ ಶ್ರೀ. ಗೋಪಾಲನ್ನರಿಗೆ ಹೂವಮಾಲೆಗಳು ಅರ್ಪಿಸಲ್ಪಟ್ಟವಲ್ಲದೆ ಚೀನಾದಲ್ಲಿ ಜರಗುವ ಶಾಂತಿ ಸಮ್ಮೇಳನಕ್ಕೆ ಹೋಗಲಿರುವ ಅವರಿಗೆ ರೂಪಾಯಿ 246/ರ ನಿಧಿಯೊಂದನ್ನು ಅರ್ಪಿಸಲಾಯಿತು. ಚೀನದ ಮಾವೋ-ತ್ಸೆಂಗರಿಗೊಪ್ಪಿಸಲು ಒಂದು ಗೇರು ಬೀಜದ ಬುತ್ತಿಯನ್ನು ಕೊಡಲಾಯಿತು.

ಕರ್ನಾಟಕ ಗಾನ ಕಲಾಮಂಡಳಿ: ಎಂಬ ಹೆಸರಿನ ಸಂಘದ ಉದ್ಘಾಟನೆಯು ಶಾರದಾ ಪೂಜೆಯು ಇದೇ ತಾ.24 ಂದ 27ರ ತನಕ ಸಂಗೀತ ಕಾರ್ಯಕ್ರಮದೊಡನೆ ಜರಗಲಿದೆ.

ಪತ್ರಿಕಾ ಸಮ್ಮೇಳನ— ತಾ 13 ರಂದು ಸಂಜೆ ಶ್ರೀ ಕೆ. ಸದಾನಂದ ಹೆಗ್ಡೆಯವರು ಏರ್ಪಡಿಸಿದ ಪತ್ರಿಕಾ [illegible] ಗಿದಾಗ ಶ್ರೀ ಹೆಗ್ಡೆಯವರು ಪಾರ್ಲಿಮೆಂಟನ ವಿಷಯವಾಗಿ ಹಲವು ವಿಷಯಗಳನ್ನು ತಿಳಿಸಿ ಪ್ರಶ್ನೆಗಳನ್ನು ಕೇಳಬಹುದೆಂದು ಸೂಚಿಸಿದರು. ಶ್ರೀಗಳಾದ ಎಚ್. ಭೀಮರಾವ್, ಎಸ್. ಮುಕುಂದರಾವ್, ಪಿ. ಕೆ. ನಾರಾಯಣ ಮೊದಲಾದವರು ಹಾಸನ ಮಂಗಳೂರು ರೈಲ್ವೆ, ಮಲ್ಪೆ ಬಂದರು, ಮಲೆನಾಡಿನ ಅಭಿವೃದ್ಧಿ, ಒಕ್ಕಲು ಮಸೂದೆ ಮೊದಲಾದ ವಿಷಯಗಳಲ್ಲಿ ಪ್ರಶ್ನೆಗಳನ್ನು ಕೇಳಿದರು. ಅವುಗಳಿಗೆಲ್ಲಾ ಶ್ರೀ ಹೆಗ್ಡೆಯವರು ಉತ್ತರವಿತ್ತರಲ್ಲದೆ ಪತ್ರಿಕೆಗಳು ತಮ್ಮ ಅಭಿಪ್ರಾಯಗಳನ್ನು ಟೀಕೆಗಳನ್ನು ಸೂಚಿಸಿದರೆ ಅದರಿಂದ ತಮಗೂ ತಮ್ಮ ಸಹೋದ್ಯೋಗಿಗಳಿಗೂ ತುಂಬಾ ಸಹಾಯವಾಗುವುದೆಂದು ಅಭಿಪ್ರಾಯವಿತ್ತರು. ಶ್ರೀಗಳಾದ ಎಲ್. ಸಿ. ಪಾಯಿಸ್ ಮತ್ತು ಎನ್. ಎಸ್. ಸುವರ್ಣರೂ ಒಕ್ಕಲು ಮಸೂದೆಯ ಕುರಿತು ತಂತಮ್ಮ ಅಭಿಪ್ರಾಯಗಳನ್ನಿತ್ತರು.

ಮುನಿಸಿಪಲ್ ಕೌನ್ಸಿಲು ಸಭೆಯು— ತಾ 13ರಂದು ಸಂಜೆ ಶ್ರೀ ಎಲ್. ಸಿ. ಪಾಯಿಸ್, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾರಂಭದಲ್ಲಿ ಪೋಪ್ ಸಾಹೇಬರು ಸೈಂಟ್ ಗ್ರೆಗರಿ ದಿ ಗ್ರೇಟ್‌ರವರ ನೈಟ್‌ಹುಡ್ ಬಿರುದನ್ನು ಶ್ರೀ ಎಲ್. ಸಿ. ಪಾಯಿಸರಿಗೆ ಕೊಟ್ಟ ಬಗ್ಗೆ ಕೌನ್ಸಿಲಿನ ಕಡೆಯಿಂದ ಶ್ರೀ ಭಾಸ್ಕರ ಪೈಗಳನ್ನು ಶ್ರೀ ಪಾಯಿಸರನ್ನು ಅಭಿನಂದಿಸಿದರು. ಚಾಲ್ತಿ ವರುಷದಲ್ಲಿ ಕೌನ್ಸಿಲಿನ ಪೇದೆಗಳಿಗೆ ಪೋಷಾಕು ಕೊಡುವ ಬಗ್ಗೆ ರೂ 600 ಮಂಜೂರು ಮಾಡಲಾಯಿತು. ಎಂಟು ಲಕ್ಷ ರೂಪಾಯಿಗಳ ಸಾಲವನ್ನು ಸರಕಾರದಿಂದ ಪಡಕೊಳ್ಳಬೇಕಾಗಿ ನಿರ್ಣಯವಾಯಿತು.

ಭಾಷಣ— ಇದೇ ತಾ. 4ರಲ್ಲು ಸಂಜೆ ಸ್ಥಳೀಯ ಗವರ್ನಮೆಂಟ್ ಕಾಲೇಜಿನ ಕರ್ನಾಟಕ ಸಂಘದ ಆಶ್ರಯದಲ್ಲಿ ಶ್ರೀ ಎನ್. ಎಸ್. ಕಿಲ್ಲೆಯವರು 'ಮಹಾಭಾರತದ ವೀರರ ಪರಿಚಯ' ಎಂಬ ವಿಷಯವನ್ನೆತ್ತಿ ಭಾಷಣವಿತ್ತರು. ನಿವೃತ್ತ ಕನ್ನಡ ಲೆಕ್ಚರರ್ ಶ್ರೀ ಕೆ. ಪರಮೇಶ್ವರಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಇದೇ ತಾ 7ರಲ್ಲು ಸಂಜೆ ಸ್ಥಳೀಯ ಮಿಲಾಗ್ರಿಸ್ ಹೈಸ್ಕೂಲಿನ ಸಭಾ ಸದನದಲ್ಲಿ ದಕ್ಷಿಣ ಕನ್ನಡ ಕೊಡಗರ ಸಂಘದ ಆಶ್ರಯದಲ್ಲಿ ಶ್ರೀ ಎನ್. ಎಸ್. ಕಿಲ್ಲೆಯವರ ಅಧ್ಯಕ್ಷತೆಯಲ್ಲಿ ಕೈಲು ಪೊಳುರು ಹಬ್ಬವು ಆಚರಿಸಲ್ಪಟ್ಟಿತು.

ಸಂಘದ ಉಪಾಧ್ಯಕ್ಷರಾದ ಶ್ರೀ ಬಿ. ಪಿ. ರಮಣನವರು ಸ್ವಾಗತ ಭಾಷಣ ಮಾಡಿದ ಮೇಲೆ ಶ್ರೀ ಜಯರಾಮರಿಂದ ಪ್ರಾರ್ಥನೆ ನಡೆಯಿತು ಬಳಿಕ ಕೈಲು ಪೊಳುರು ಇದರ ಕುರಿತು ಶ್ರೀಗಳಾದ ಜಿ. ಟಿ. ನಾರಾಯಣ ರಾವ್ ಮತ್ತು ಬಿ. ಆರ್. ಆರ್ ಪೂಂಜರು ಮಾತನಾಡಿದರು. ಅಧ್ಯಕ್ಷರ ಭಾಷಣ ಉಪಾಹಾರ, ಸಂಗೀತ ಕಾರ್ಯಕ್ರಮಗಳಾದ ನಂತರ ಕಾರ್ಯದರ್ಶಿ ಎಮ್. ಪೂಣಚ್ಚರವರು ಧನ್ಯವಾದಗಳನ್ನರ್ಪಿಸಿದರು.

ಚೇರ್ಕಾಡಿ— ಸ್ಥಳೀಯ ಆರ್. ಕೆ. ಪಾಟ್ಕಾರ್ ಶಾರದಾ ಹಾ. ಎ. ಶಾಲೆಯಲ್ಲಿ ಇದೇ ತಾ. 11ರಂದು ಮಹಾತ್ಮಾ ಗಾಂಧೀಜಿಯವರ ಭಾವಚಿತ್ರವನ್ನು ಜಿಲ್ಲಾ ವಿದ್ಯಾಧಿಕಾರಿಗಳು ಅನಾವರಣ ಮಾಡುತ್ತಾ, ಬಾಪೂಜಿಯ ವ್ಯಕ್ತಿತ್ವದ ಕುರಿತು ನಾಲ್ಕು ಒಳ್ಳೇ ಮಾತುಗಳನ್ನಾಡಿದರು. ಅಲ್ಲದೆ ಈ ಶಾಲೆಯ ರಜತೋತ್ಸವ ಆಚರಣೆ ಸಮಾರಂಭದ ಮುಹೂರ್ತದಲ್ಲಿ ಕೃಷಿ ವೃತ್ತಿಶಿಕ್ಷಣ ಶಾಖೆಯನ್ನು ತೆರೆಯಲು ಈಗಲೇ ನಿರ್ಧರಿಸಿರುವುದು ಸಂತೋಷಕರವೆಂದು ಅಭಿಪ್ರಾಯವಿತ್ತರು.

ಕುಂಬಳೆ— ಪಾರ್ಲಿಮೆಂಟ್ ಕಮ್ಯೂನಿಸ್ಟ್ ಪಾರ್ಟಿ ನಾಯಕರಾದ ಶ್ರೀ ಎ. ಕೆ. ಗೋಪಾಲನ್ನರು ಇದೇ ತಾ. 12ರಂದು ಮಂಜೇಶ್ವರಕ್ಕೆ ಆಗಮಿಸಿದರು. ಅಲ್ಲಿ ಡಾ! ಎ. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಭಾಷಣವಿತ್ತರು.

ಕಾಸರಗೋಡು— ತಾ. 11ರಂದು ಕಾಸರಗೋಡಿನಲ್ಲಿ ಶ್ರೀ ಕೆ. ಮಾಧವನ್ ಅವರ ಅಧ್ಯಕ್ಷತೆಯಲ್ಲಿ ಒಕ್ಕಲಿಗರ ಮಹಾಸಭೆ ಜರಗಿತು. ಶ್ರೀ ಎಮ್. ನಾರಾಯಣನ್ ನಂಬಿಯಾರರು ಸಭೆಯನ್ನು ಉದ್ಘಾಟಿಸಿದರು. ಕಾಸರಗೋಡು ಫಿರ್ಕಾಕ್ಕೆ ಒಕ್ಕಲುತನ ಕಾನೂನನ್ನು ಜಾರಿಗೆ ತರಲಿಕ್ಕೆ ವಿನಂತಿಸುವ ನಿರ್ಣಯವಾಯಿತು

ಸುರತ್ಕಲ್-ಕೃಷ್ಣಾಪುರ: ಉಡುಪಿ ಶ್ರೀ ಕೃಷ್ಣಾಪುರ ಮಠದ ಶ್ರೀಮದ್ವಿದ್ಯಾರತ್ನ ತೀರ್ಥ ಶ್ರೀ ಪಾದಂಗಳವರು ಇಲ್ಲಿಯ ಶ್ರೀಮಠದಲ್ಲಿ ಶ್ರೀ ಕೃಷ್ಣಾಷ್ಟಮಿಯನ್ನು ಬಹಳ ವಿಜೃಂಭಣೆಯಿಂದ ಆಚರಿಸಿದರು. ಮಠದ ಆಡಳಿತದಲ್ಲಿ ಎಂಡೋಮೆಂಟ್ ಬೋರ್ಡಿನವರು ಕೈ ಹಾಕಿದ್ದರ ನಿಷೇಧಾರ್ಥವಾಗಿ ನಿಲ್ಲಿಸಿದ್ದ-ಅಷ್ಟಮಿಯ ಮರುದಿನ ನಡೆಯುವ ವಿಟ್ಲಪಿಂಡಿ ಉತ್ಸವವನ್ನು ಮರಳಿ ಜಯವಾದ್ದರಿಂದ ಈ ಸಲ ವೈಭವದಿಂದ ನಡೆಯಿಸಿದ್ದರು.

ದಿ. ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು. ದ. ಕ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲವನ್ನು ಮರು ಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ಅಸಲು-ವ-ಬಡ್ಡಿ, ಯಾವುದನ್ನೂ ಈ ತನಕವೂ ಕೊಡದೆ ಬಾಕಿ-ಮಾಡಿಕೊಂಡಿರುವುದರಿಂದ, ಸದ್ರಿಯವರು ಈಡಿಟ್ಟ ನಗವನ್ನು, ತಾ 25-9-1952 ನೇ ಗುರುವಾರ ಅಪರಾಹ್ನ ಗಂಟೆ 2ಕ್ಕೆ-ಯಾ-ಬೇಂಕಿಗೆ ಯುಕ್ತ ತೋರಿದ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ, ಬೇಂಕಿನ ಪಠಾರದಲ್ಲಿ ಬಹಿರಂಗವಾಗಿ ಹರಾಜು ಮಾಡಲಾದೀತು, ತಿಳಿದಿರಿ.

ಸಾಲದ ಸಂಖ್ಯಾ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು ರೂ.	ಆ.
109/50	ಶ್ರೀ ಯು. ರಘುನಾಥ ಶೇಟ್, ನಾಗಪ್ಪ ಶೇಟರ ಮಗ, ಉಪ್ಪುಂದ	27	5
148/50	ಶ್ರೀ ಜಿ ಸುಬ್ರಾಯ ಹೊಳ್ಳ, ಪದ್ಮನಾಭ ಹೊಳ್ಳರ ಮಗ, ಗೋಳಿಹೊಳೆ ಗ್ರಾಮ, ಬೈಂದೂರು	39	14
1250/50	ಶ್ರೀ ವೆಂಕಟ್ರಮಣ ಸೇರುಗಾರ, ಪೇಟೆ ಸಣ್ಣಯ್ಯ ಸೇರುಗಾರರ ಮಗ, ಮಯ್ಯಾಡಿ, ಬೈಂದೂರು	95	0
707/51	ಶ್ರೀ ಅಪ್ಪಯ್ಯನ ಗೋವಿಂದ ಸೇರುಗಾರ, ದಾಸ ಸೇರುಗಾರರ ಮಗ, ಪಡುವರಿ	20	4
767/51	ಶ್ರೀ ಗೋವಿಂದ, ಚಿಕ್ಕನದಾರನ ಮಗ, ಅಮ್ಮನವರ ತೊಪ್ಪಲು, ಉಪ್ಪುಂದ	6	3
794/51	ಶ್ರೀ ದೇವನ ಮನೆ ಮಾಚ ಕಾರ್ವಿ, ಶೇಷನ ಮಗ, ಮಡಿಕಲ್ಲು, ಉಪ್ಪುಂದ	252	13
916/51	ಶ್ರೀ ಸುಬ್ಬ, ಮಾಂಗಳಿ ಮನೆ, ಮಂಜನ ಅಳಿಯ, ಕರ್ಕಿಕಳಿ, ಉಪ್ಪುಂದ	16	2
918/51	ಶ್ರೀ ಸುಬ್ಬ ಮೊಗೇರ, ಮಂಜನ ಅಳಿಯ, ಕರ್ಕಿಕಳಿ, ಉಪ್ಪುಂದ	32	4
1127/51	ಶ್ರೀ ಗೋವಿಂದ ಸೆಟ್ಟಿ, ಮುಳ್ಳುಗುಡಿ ವೀರಣ್ಣ ಸೆಟ್ಟರ ಅಳಿಯ, ಹೇರೂರು ಗ್ರಾಮ, ಕಿರಿಮಂಜೇಶ್ವರ	479	10
[illegible]/51	ಜ ಮನ್ವೆಲ್ ಗೊಮ್ಸ್, ಫಕೀರ ಸಾಹೇಬರ ಮಗ, ಮುಗಳಿಬೆಟ್ಟು, ಶಿರೂರು	32	2
1284/51	ಶ್ರೀ ಬೀಯಾರ ನಾಗಯ್ಯ ಸೆಟ್ಟಿ, ಕಳವಾಡಿ ಮಂಕಪ್ಪ ಸೆಟ್ಟರ ಮಗ, ಬೈಂದೂರು	42	6
1302/51	ಶ್ರೀ ದುರ್ಗ ಕಾರ್ವಿ, ಕಾಳನದಾಸನ ಮಗ, ಉಪ್ಪುಂದ	12	11
1345/51	ಶ್ರೀ ಕಂಬ್ಳು ಶಿವರಾಮ ಸೇರುಗಾರ, ಮಲ್ಲಯ್ಯ ಸೇರುಗಾರರ ಮಗ ಬಾಡ, ಬೈಂದೂರು	31	9
16/52	ಶ್ರೀ ಹೊಸಮನೆ ಸುಕ್ರ, ತಾರಾಪತಿ, ಬೈಂದೂರು	208	13
18/52	ಶ್ರೀ ಪಟ್ಟವದ ತಿಮ್ಮಪ್ಪ ಸೇರುಗಾರ, ಮಂಜಯ್ಯ ಸೇರುಗಾರರ ಮಗ, ಪಡುವರಿ	37	11
86/52	ಶ್ರೀ ಪೂಜಾರಿ ಮನೆ ಗೋವಿಂದ ಕಾರ್ವಿ, ಮಂಜನ ಮಗ, ಕರ್ಕಿಕಳಿ, ಉಪ್ಪುಂದ	31	4
157/52	ಶ್ರೀ ಸುಬ್ಬ ಬೇಡುಮಗ, ಸೊಣೆಯನ ಮನೆ, ತಾರಾಪತಿ, ಪಡುವರಿ.	[illegible]	2
558/50	ಮಿ. ಪೆದ್ರು ಫೆರ್ನಾಂಡಿಸ್, ಇಂತ್ರು, ಫೆರ್ನಾಂಡಿಸರ ಮಗ, ಪಾಣಿ ಬಿತ್ತು ಪಡುವರಿ.	33	3
692/51	ಶ್ರೀ ನಾಗಪ್ಪ ಮೊಗೇರ, ಗುತ್ತು ಮನೆ ದಾರನ ಅಳಿಯ, ಪಡುವರಿ	6	1
239/51	ಶ್ರೀ ಹರಿಭಟ್ಟ, ಮಹಾಬಲ ಭಟ್ಟರ ಮಗ, ಲಕ್ಷ್ಮಿ, ನಾಗೋಡಿ ಗ್ರಾಮ, ಕೊಲ್ಲೂರು	303	6
788/51	ಶ್ರೀ ಗಣಪಯ್ಯ ಸೇಟ್, ದುರ್ಗ ಸೇಟರ ಮಗ, ಮಟದಗದ್ದೆ, ಉಪ್ಪುಂದ	78	5
880/52	ಶ್ರೀ M. G. ರಾಮ ಸೇಟ್, ನಾರಾಯಣ ಸೇಟರ ಮಗ, ಮಯ್ಯಾಡಿ, ಬೈಂದೂರು.	23	3
877/51	ಶ್ರೀ ಯು ಶೇಷಪ್ಪ ವೈದ್ಯ, ಮಂಜುನಾಥ ವೈದ್ಯರ ಮಗ, ಉಪ್ಪುಂದ	8	3
1262/51	ಶ್ರೀ ಮಡೆಂಕೋಡಿ ವೆಂಕಟ್ರಮಣ ಸೇರುಗಾರ, ಶೇಷಯ್ಯ ಸೇರುಗಾರರ ಮಗ, ಮಯ್ಯಾಡಿ ಬೈಂದೂರು	63	11

ಬೈಂದೂರು,
13-9-1952

ಎಚ್. ರಾಜೀವ ಸೆಟ್ಟಿ

ಋತುಸ್ರಾವ ನಿಂತಿತು

'ಕಾಮರೂಪ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ಸರಿಹೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾಧಾರಣ ಮುಂದಿಗೆ ಶಾಸ್ತ್ರಿ ಗುಣವಾಗಿದೆ- ಬೆಳ್ಳಿ ರೂ. 3-) ಸ್ಪೆಶ್ಯಲ್ ರೂ. 5 ಅಧಿಕಾಧಿಕ ಸ್ಪೆಶ್ಯಲ್ ರೂ. 8-) [illegible] ಹನ್ನೆರಡಾಣೆ ಪ್ರತ್ಯೇಕ]

MIS. P. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ಚಿತ್ರಕೂಟ ಅಸ್ತಮಾ ಬೂಟಿ

ತಾ. 3-10-1952 ಹುಣ್ಣಿಮೆ ರಾತ್ರಿ ಒಂದೇ ರೋಜ ತೆಗೆದುಕೊಂಡರೆ ಅಸ್ತಮ ಸಂಪೂರ್ಣ ಗುಣಪಡಿಸುವ ಅತ್ಯಂತ ಬಲಕಾರಿ ಹಾಗೂ ಜಗದ್ವಿಖ್ಯಾತ ಔಷಧ.

ಇಂಗ್ಲಿಷ್ ಭಾಷೆಯಲ್ಲಿ ಬರೆಯಿರಿ:—

SHRI MAHATMA YOGI BABA,
Ayurvedic Buti Bhandar,
P. O. Chitrakot [U. P.]

ಮೂಲ್ಕಿ ಬ್ಯಾಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd

ಮಂಗಲ ವರದಾನ

(೧ನೇ ಪುಟದಿಂದ ಮುಂದುವರಿದುದು)

ಘೋಷಿಸಿದರು: ಲಕ್ಷಾಂತರ ಜನರ ಬಾಯಿಂದ ಈ ಮಾತು ಹೊಮ್ಮಿತು. ಆದರೆ ಒಂದೇ ಒಂದು ಧ್ವನಿ ಮಾತ್ರ ಭಿನ್ನವಾಗಿತ್ತು: "ಭಾರತ ಸ್ವಾತಂತ್ರ್ಯಕ್ಕಾಗಿ, ಪಾಕಿಸ್ತಾನದ ಬೇಡಿಕೆಯನ್ನು ಮನ್ನಿಸಬೇಕು." ಇದೇ ಧ್ವನಿ ಗಾಂಧೀಜಿ ಕೈಗೊಂಡ ಸತ್ಯಾಗ್ರಹದ ಹೆಜ್ಜೆ ಸಲ್ಲದೆಂದು ವಿರೋಧ ಪ್ರಕಟಿಸಿತು. ತನ್ನ ನಿಷ್ಠಾವಂತ ಅನುಯಾಯಿಯೊಬ್ಬನ ಈ ಮಾತು ಕೇಳಿ, ಗಾಂಧೀಜಿಯೇ ಅಸಮಂಜಸದಲ್ಲಿ ಬಿದ್ದರು. ಹೀಗೆ ವಿರೋಧಾಭಿಪ್ರಾಯ ಪ್ರಕಟಿಸಿದ ಮಹಾಜೀವ ಚಕ್ರವರ್ತಿ ರಾಜಗೋಪಾಲಾಚಾರಿ. ಅಂದು ಅವರ ಮಾತನ್ನು ಯಾರೂ ಲಕ್ಷ್ಯಕ್ಕೆ ತೆಗೆದುಕೊಳ್ಳಲಿಲ್ಲ. ಗಾಂಧೀಜಿ ಬೇಸರ ತಳೆದರು; ನೆಹರೂ ರಾಜಾಜಿಯ ಈ ಮಾತು ತಮ್ಮ ಮಾರ್ಗದ ಮೇಲಿನ ಮುಳ್ಳೆಂದು ಗುಡುಗಿದರು. ಜನರು ರಾಜಾಜಿಯ ಭಾಷಣ ಕಾಲದಲ್ಲಿ ಕೊಳೆತ ಕೋಳಿಮೊಟ್ಟೆ, ಕಲ್ಲುಗಳನ್ನೆಸೆದು ಮುಖಭಂಗದ ಪ್ರಯತ್ನ ಮಾಡಿದರು. ಆದರೆ ಐದೇ ಐದು ವರ್ಷಗಳಲ್ಲಿ—ರಾಜಾಜಿಯ ಮಾತು ಸತ್ಯವೆಂದು ಇತಿಹಾಸ ಸಾಕ್ಷ್ಯ ಕೊಟ್ಟಿತು! ರಾಜಾಜಿಯು ಆತ್ಮವಿಶ್ವಾಸದಿಂದ ನುಡಿದ ಈ ಮಾತು, ನಿರ್ಭಯವಾಗಿ ಸಾರಿದ ಈ ಸಂಗತಿ, ರಾಷ್ಟ್ರೀಯರಾದ ನಮ್ಮ ನೆನಪಿನಿಂದ ಜಾರುವಂತಿಲ್ಲ. ದೃಢಸಂಕಲ್ಪ ಹಾಗೂ ಅದಮ್ಯ ಆತ್ಮವಿಶ್ವಾಸದ ವ್ಯಕ್ತಿತ್ವದಿಂದ ರಾಷ್ಟ್ರವೂ ಉಚ್ಛ್ರಾಯಾವಸ್ಥೆಗಳನ್ನು ಮುಟ್ಟುವುದು.

ಎಂಡ್ರ್ಯೂ ಕಾರ್ನೆಗೀ ಅಮೇರಿಕಾದ ಪ್ರಸಿದ್ಧ ವ್ಯವಹಾರಜ್ಞ. ಇವತ್ತು ಅವನು ಕೋಟ್ಯಾಧೀಶ: ಆದರೆ, ಕೈಯಲ್ಲಿ ಪುಡಿಕಾಸೂ ಇಲ್ಲದ ದಿನ ಅವನ ಬದುಕಿನಲ್ಲಿ ಒಂದಿತ್ತು. ಅವನ ತಂದೆ "ಟೇಬಲ್ ಕ್ಲಾಥ್" ಕೈಯಲ್ಲಿ ಹಿಡಿದುಕೊಂಡು ಮನೆ ಮನೆ ತಿರುಗುತ್ತಿದ್ದ. ತಾಯಿ ದಿನಕ್ಕೆ ೧೬ರಿಂದ ೧೮ ತಾಸು ಕುಟುಂಬ ಪೋಷಣೆಗಾಗಿ ದುಡಿಯುತ್ತಿದ್ದಳು. ಆಗೆಲ್ಲ ಕಾರ್ನೆಗೀ ಹೇಳುತ್ತಿದ್ದ--"ಅಮ್ಮಾ, ನಾನು ಬೇಗನೇ ದೊಡ್ಡ ಮನುಷ್ಯನಾಗುವೆನಮ್ಮಾ. ಭಯ ಬೇಡ." ಈ ಮಾತು ಬಾಲ್ಯದ ದಿವಾಸ್ವಪ್ನವಾಗಿರಲಿಲ್ಲ. ಅವನು ಸದಾ ಗಂಭೀರಾಲೋಚನೆಯಲ್ಲಿ ಕುಳಿತು, ತನ್ನ ಮಾತಿನಂತೆ ನಡೆಯುವ ಸಂಕಲ್ಪದಲ್ಲಿ ತೊಡಗಿದ. ಒಂದಲ್ಲ ಒಂದು ದಿನ ಲಕ್ಷ್ಮಿ ಕಾಲು ಮುರಿದು ತನ್ನ ಮನೆಯಲ್ಲಿ ಕೂಡುವಳೆಂಬ ಆತ್ಮವಿಶ್ವಾಸ ಅವನಿಗಿತ್ತು. ಚೆನ್ನಾಗಿ ದುಡಿದ--ಮತ್ತು ವಿಶ್ವಾಸ ಅವನನ್ನು ಉತ್ತುಂಗ ಶಿಖರಕ್ಕೆ ಏರಿಸಿಯೇ ತೀರಿತು.

ಯಶಸ್ಸಿನ ಭವ್ಯಭವನ ನಿರ್ಮಾಣಕ್ಕೆ ನಮ್ಮ ಕರ್ತೃತ್ವ ಶಕ್ತಿಯು ಜಾಗೃತವಾಗಬೇಕೆಂಬುದು ನಿಜ. ಜೀವನಯಾತ್ರೆ ಹೇಡಿಗಳಿಗೆ ಹೇಳಿಸಿದುದಲ್ಲ-- ನಪುಂಸಕನಿಗೇ ಅದಕ್ಕೆ ಯೋಗ್ಯರು ಎಂಬ ಶೇಕ್ಸ್ಪಿಯರನ ಮಾತುಗಳನ್ನು ಸ್ಮರಿಸೋಣ. ಆತ್ಮವಿಶ್ವಾಸದ ಅಭಾವವೇ ಹೇಡಿತನ: ಅದರ ವೃದ್ಧಿಯೇ ಸಾಫಲ್ಯದ ರಹಸ್ಯ. ಮನುಷ್ಯ ಸಂಕಲ್ಪ ಬಲದಿಂದಲೂ ಅಧ್ಯವಸಾಯದಿಂದಲೂ ಯಶಸ್ಸಿನ ಒಂದೊಂದೇ ಮಣಿಯ ಅಧಿಕಾರಿಯಾಗುತ್ತಾನೆ. ಮುಳ್ಳಿಗೆ ಅಂಜಿ ಪುಷ್ಪಶಯನದಿಂದ ವಿಮುಖರಾಗುವುದೆ?- ಛೆ, ಭಾರತದ ರಾಷ್ಟ್ರೀಯ ಚಾರಿತ್ರ್ಯ ಇದಕ್ಕೆ ಒಪ್ಪದು.

— ಓಂತತ್ಸತ್.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ಸಂಖ್ಯೆ 341/1952

ಯು. ಸುಬ್ಬಣ್ಣ ಉಪಾಧ್ಯ — ವಾದಿ
ಮತ್ತು
ಅಕ್ಕಮ್ಮ ಸೆಡ್ತಿ ಹೊಸಮನೆ ಗಿರಿಯಮ್ಮ ಸೆಡ್ತಿ ಮಗಳು ಮ ದೇವಪ್ಪ ಸೆಟ್ಟಿಯ ಸೊಸೆ ಉಡುಪಿ ತಾಲೂಕು ಉಪ್ಪೂರು ಗ್ರಾಮದ ತೆಂಕಬೆಟ್ಟಿನಲ್ಲಿರುವವಳು — ಪ್ರತಿವಾದಿಳು
—ಇವರಿಗೆ.

ವಾದಿಗೆ ಪ್ರತಿವಾದಿಯಿಂದ ಬರತಕ್ಕ ಕಳದ ಸ್ವಾಧೀನು ಸಂಬಂಧ ಆದಿಲಾಗ್ಯಾತು ಖರ[illegible]ರದ ಆಖೈರು ವರೆಗಿನ ಒಂಭತ್ತು ವರುಷಗಳ ಮೂಲಗೇಣಿ ಗೇಣಿ ಬಾಕಿ ಬಡ್ಡಿ ವಗೈರೆಗಳನ್ನು ದಾವಾ ಆಸ್ತಿಗಳ ಮಾರಾಟದಿಂದ ಕೂಡಾ ಕೊಡಿಸುವಂತೆ ಡಿಕ್ರೀ ಕೇಳಿ ವಾದಿಯು ಮಾಡಿರುವ ಈ ದಾವೆಯು ತಾ. 7-10-1952 ಕ್ಕೆ ಪ್ರತಿವಾದಿಗೆ ನೋಟೀಸು ಬಗ್ಗೆ ಇಟ್ಟಿರುತ್ತದೆ. ಸದ್ರಿ ತಾರೀಕು 7-10-1952 ನೇ ದಿವಸ ಬೆಳಿಗ್ಗೆ ಹತ್ತು ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಪ್ರತಿವಾದಿಳು ಸ್ವತಹಾ ವ ವಕೀಲರ ಮುಖಾಂತರ ಹಾಜರಾಗಿ ಉತ್ತರಕೊಡಲಿಕ್ಕೆ ತಪ್ಪಿದ್ರೆ ಈ ದಾವೆಯನ್ನು ಅವಳ ಗೈರು ಹಾಜರಿಯಲ್ಲಿ ತೀರ್ಮಾನಿಸಲಾಗುವುದು.

V. R. Kidiyur.
Advocate for Plaintiff
ಉಡುಪಿ, ತಾ. 11-9-1952

ಸ್ವೀಕಾರ ವಿಮರ್ಶೆ

ಹೂದೋಟ (ಭಾಗ ೨) ಸಂಪಾದಕ: ಟಿ. ಶ್ರೀಪತಿ, ಬಿ. ಎ., ಕೃಷ್ಣವಿಹಾರ, ಕದ್ರಿ ದೇವಾಲಯದ ಸ್ಟ್ರೈ, ಕಂಕನಾಡಿ, ಮಂಗಳೂರು. ಬೆಲೆ: ರೂ. ೩-೮-೦

ಶ್ರೀ ಟಿ. ಶ್ರೀಪತಿಯವರು ಕೆಲಸಮಯದ ಹಿಂದೆ ಹೂದೋಟದ ಮೊದಲನೆಯ ಭಾಗವನ್ನು ಪ್ರಕಟಿಸಿದ್ದರು. ಕನ್ನಡದ ಹಿರಿ-ಕಿರಿಯ ಬರೆಹಗಾರರ ಆಯ್ದ ಸಣ್ಣ ಕತೆಗಳನ್ನು ಪೋಣಿಸಿ, ಹೂದೋಟದಲ್ಲಿ ಪ್ರಕಟಿಸಿದ್ದಾರೆ. ಪ್ರಕೃತ ಸಂಕಲನದಲ್ಲಿ ಒಟ್ಟು ಹದಿನಾರು ಸಣ್ಣ ಕತೆಗಳಿವೆ. ಹಿರಿಯರೆನ್ನಬಹುದಾದ ಗೊರೂರು ರಾಮಸ್ವಾಮಯ್ಯಂಗಾರ, ಕಲ್ಲೂರ ಕೃಷ್ಣಕುಮಾರ ಇವರ ಕತೆಗಳು ತುಂಬ ಚೆಲುವಾಗಿವೆ; ಮನೋಜ್ಞವಾಗಿದೆ. ಶ್ರೀ ಎ. ಎಸ್. ರಾಮಕೃಷ್ಣರ "ಋಣಾನುಬಂಧ' ಕಥಾವಸ್ತುವಿನ ವೈಶಿಷ್ಟ್ಯದಿಂದ ಹಾಗೂ ನಿರೂಪಣಾ ಕೌಶಲದಿಂದ ಪ್ರಶಂಸನೀಯವೆನಿಸಿದೆ. ಹರಲಾನೆ ಅನಂತ ಭಟ್ಟರ "ಕೊಟ್ಟದ್ದು-ಪಡೆದದ್ದು" ಬಹಳ ಮಾರ್ಮಿಕವಾಗಿದೆ. ಕುಲಕರಣಿ ಬಿಂದುಮಾಧವರ "ರಕ್ತರಾತ್ರಿ" ಕೂಡ ಹಾಗೆಯೇ. "ಕಮಲಾಸಾನಿ" "ಒಂದು ವರ್ಷದಲ್ಲಿ" ಎಂಬೆರಡು ಕತೆಗಳಲ್ಲಿ ವಸ್ತು ಚಿತ್ರಣವು ಸುಂದರವಾಗಿ ಮೂಡಿದೆ. ಉಳಿದ ಕತೆಗಳೂ ಒಳ್ಳೆಯವೇ. ಹೀಗೆ ಅಚ್ಚುಕಟ್ಟಾದ ಮುದ್ರಣದೊಂದಿಗೆ ಬಿಳಿ ಕಾಗದದ ೨೫೦ ಪುಟಗಳನ್ನೊಳಗೊಂಡಿರುವ ಈ ಪ್ರಾತಿನಿಧಿಕ ಕಥಾಸಂಕಲನ ಸಂಗ್ರಹಣೀಯವೆನ್ನಬಹುದು. ಕನ್ನಡಿಗರ ಪ್ರೋತ್ಸಾಹದಿಂದ ಹೂದೋಟದ ಮೂರನೇ ಭಾಗ ಬೇಗ ಹೊರಬರಲಿ ಎಂದು ಹಾರೈಸುವೆವು.

ಮನ್ನೊ ಮದುವೆ- ಬರೆದವರು: ಎಂ. ಜಿ. ವೆಂಕಟೇಶಯ್ಯ ಪ್ರಕಾಶಕರು: ಎಚ್. ಎನ್. ರಾಜ್ ಬ್ರದರ್ಸ್, ಚಿಕ್ಕಪೇಟೆ, ಬೆಂಗಳೂರು ನಗರ. ಬೆಲೆ: ರೂ ೨-೦-೦

ಇದೊಂದು ಸಾಮಾಜಿಕ ಕಾದಂಬರಿ. ತಿಳಿ ಹಾಸ್ಯದ ಮಾತುಗಳಿಂದ ಒಂದು ಸಾಮಾನ್ಯ ಕತೆಯನ್ನು ಮನೋರಂಜಕವಾಗುವಂತೆ ಹೆಣೆದಿದ್ದಾರೆ. ಪಾತ್ರಗಳ ಚಿತ್ರಣದಲ್ಲಿ ಕೈ ಕುದುರಿದೆ ಎನ್ನಲಾರೆವಾದರೂ-ಕತೆ ಹೇಳುವ ಕಲೆ ಲೇಖಕರಿಗೆ ಮೈಗೂಡಿದೆ, ಎಂದೆನ್ನಲಡ್ಡಿಯಿಲ್ಲ. ಒಂದೆರಡು ತಾಸು ಸಮಯವನ್ನು ಈ ಪುಸ್ತಕ ಪಠನದಿಂದ ಖುಶಾಲಿನಲ್ಲಿ ಕಳೆಯಬಲ್ಲೆವು.

ಕಾವ್ಯಗಾಯನ ಕಲಾ ಸಂಗ್ರಹ (ಗಮಕ ಕಲೆ)- ಲೇಖಕರ: ಗಮಕಿ ಎಂ. ರಾಘವೇಂದ್ರರಾಯ, ಅಧ್ಯಾಪಕ, ಗಮಕ ಶಿಕ್ಷಣ ಶಾಲೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಬೆಲೆ: ರೂ ೦-೧೨-೦

ಗಮಕ ಕಲೆಯು ಹಿಂದಿನ ಕಾಲದಲ್ಲಿ ರಾಜಾಶ್ರಯದಲ್ಲಿ ಬೆಳೆದುಬಂದಿತ್ತು. ಇಂದು ಸಾರ್ವಜನಿಕರಿಂದ ಸಾಕಷ್ಟು ಪ್ರೋತ್ಸಾಹ ದೊರೆಯದೆ (ಸಂಸ್ಕಾರವಂತರೂ ಈ ಕಡೆ ಲಕ್ಷ್ಯ ಕೊಡುತ್ತಿಲ್ಲ) ಮೃತಪ್ರಾಯಾವಸ್ಥೆಯನ್ನು ಮುಟ್ಟಿದೆ. ಹೀಗಿದ್ದರೂ ಅಲ್ಲಲ್ಲಿ ಕಲಾಭಿಮಾನಿಗಳೂ, ಸಾಹಿತ್ಯ ಕೂಟಗಳೂ ಗಮಕಕಲೆಯನ್ನು ಜೀವಂತವಾಗಿಡುವ ಸ್ತುತ್ಯ ಉದ್ಯಮವನ್ನು ಕೈಗೊಂಡಿರುವರು. ಹಾಗೆಂದು ಈ ಕಲೆಯ ಅಭ್ಯಾಸ ಸುಗಮವಾಗುವಂತೆ ಶಾಸ್ತ್ರಭಾಗವೊಂದನ್ನು ಎಲ್ಲರ ಕೈಯಳವಿಗೂ ಸಿಗುವ ರೀತಿ ಸಿದ್ಧಪಡಿಸಿರಲಿಲ್ಲ. ಪ್ರಕೃತ ಪುಸ್ತಕವು ಕೆಲಮಟ್ಟಿಗೆ ಈ ಅಭಾವವನ್ನು ದೂರೀಕರಿಸಿದೆ. ನಾಲ್ಕು ಪ್ರಕರಣಗಳಲ್ಲಿ (ಸಾಹಿತ್ಯ ವಿಭಾಗ, ಸಂಗೀತ ವಿಭಾಗ, ಸಾಹಿತ್ಯ—ಸಂಗೀತ ಸಮನ್ವಯ ವಿಭಾಗ ಇತ್ಯಾದಿ) ಲೇಖಕರು ಗಮಕ ಕಲೆಯ ಶಾಸ್ತ್ರೀಯ ಅಭ್ಯಾಸದ ಕುರಿತು ಚರ್ಚಿಸಿರುವರು. ಅವರ ಪ್ರಯತ್ನ ಸ್ತುತ್ಯವಿದೆ.

ಮುಟ್ಟು | ತಪ್ಪಿದರೆ ಚಿಂತೆ ಬೇಡ

ಋತುರಾಜ್ ಸೇವಿಸಿ. ಋತುಸ್ರಾವ ಪ್ರಾರಂಭವಾಗುವುದು. 4-5 ತಿಂಗಳು ನಿಂತಿದ್ದರೂ ಮುಟ್ಟು ಯಾವ ಅಪಾಯವನ್ನೂ ತಾರದೆ 24 ಘಂಟೆಯೊಳಗೆ ಗ್ಯಾರಂಟಿಯಿಂದ ಪ್ರಾರಂಭವಾಗುವುದು. ಬೆಲೆ ರೂ. 7/8 ವಿ. ಪಿ. ಖರ್ಚ ರೂ. 1- ವಿಶೇಷ ರೂ. 24 ವಿ. ಪಿ. 1/12

DINAPANI AUSHADHALAYA (N. J.)
15/1 Mour'e Avenue, CALCUTTA, 33
ಸ್ಥಳೀಯ ಏಜಂಟರು:
ವೈದ್ಯ ಪಿ ಆರ್. ಕಾಮತ್,
ಮಂಗಳೂರು.

DO YOU KNOW?
THAT
THE VIJAYA BANK, LIMITED.

1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs 10 lacks
3. Has granted an average dividend of 6% to the Share-holders for the past 20 years.
4. Has a net work of Branches in South Kanara and one each in Mercara and Fort, Bombay.
5. Offers attractive rates of interest on Deposits and Cash Certificates
6. Grants loans on easy terms to approved parties or on approved securities
7. Does afford full protection and rich return to all your monies.

ADOPT IT AS
"MY BANK"
THE VIJAYA BANK, LIMITED,
H. O., MANGALORE.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ತಮ್ಮ ಸ್ನಾನ, ಊಟ, ಉಪಹಾರ, [illegible], ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೆ
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ್

ಅಮೃತಾಂಜನ
ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷ ಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

SOVEREIGN-REMEDY
AMRUTANJAN
Best Indian Pain Balm
Amrutanjan Depot
BOMBAY MADRAS

REGD
[illegible]
[illegible]
ನಮ್ಮಲ್ಲಿ
ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್
ಮದರಾಸು, ಬೊಂಬಾಯಿ ಮತ್ತು ಕಲಕ

ಲಕ್ಷ್ಮಿ
ಸಂತಾಲ್ ಮಾತ್ರೆ
ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರಉರಿ, ಮೂತ್ರದ ಕಟ್ಟು, ಮೂತ್ರದೊಡನೆಯೂ ಮುಂಚಾಗಿ ಬಿಳುಪು, ಅರಿಸಿನ ಈ ವರ್ಣಗಳಲ್ಲಿ ಕೀವು ಹೋಗುವದು, ತೊಡೆ ಸಂದಿನಲ್ಲಿ ಗರಳೆ ಬರುವದು, ಕಾಲುಗಂಟು ನೋವು ವೇದನೆ, ಕಣ್ಣಿನಲ್ಲಿ ಕೀ ಬರುವದು, ಶರೀರದಲ್ಲಿ ಉಷ್ಣತೆ, ಸ್ವಪ್ನ ದ್ರಿಯ, ಸ್ತ್ರೀಯರ ಬಿಳಿ ಸೆರಗು ಇವೆ ಖಾತ್ರಿಯಾಗಿ ಗುಣ ಹೊಂದುವದು.- ದಿನ ಹಗಲ ಉಷ್ಣಕಾಲದಲ್ಲಿ ಗಮ ಕಂಡುಬಂದರೆ ರಾತ್ರಿ ಮಲಗುವಾಗ ಒಂ ಮಾತ್ರೆ ಸೇವಿಸಿ ಹಾಲು ಕುಡಿದರೆ ಸು ವಾಗಿ ನಿದ್ರೆಬಂದು ಸುಖವಿರೇಚನೆಯಾ ದೇಹದ ಉಷ್ಣ ಹೋಗುವದು.
ಶೀಸೆ 1ಕ್ಕೆ ರೂ. 2-0-0
ಏಜಂಟ್ಸ್:
ಷಾ ಕಂಪೆನಿ, ಮಂಗಳೂರು

ಸದ್ಯ ಕನ್ನಡಿಗರ ಧ್ಯೇಯವೇನು? ಏಕೀಕರಣ.

ಯು. ನಾ. ಉಡುಪ, ವಿದ್ವಾನ್, ಐರೋಡಿ.

ಮಾನವನು ಜಗತ್ತಿನ ರಂಗದಲ್ಲಿ ಕಾಣಿಸಿಕೊಂಡ ಕೆಲವು ಮಾಸಗಳಲ್ಲೇ ತನ್ನ ತಾಯಿ, ತನ್ನ ತಂದೆ, ತನ್ನ ಸಹೋದರರು ಎಂಬ ಅಭಿಮಾನದ ಸೊನಲು ಅವನ ಹೃದಯದಲ್ಲಿ ತಾನಾಗಿ ಉದ್ಭವಿಸಿ, ರಕ್ತದೊಂದಿಗೆ ಸಮರಸವಾಗಿ ನರನಾಡಿಗಳಲ್ಲೆಲ್ಲಾ ಸಳಸಳನೆ ಹರಿಯತೊಡಗುವುದು. ಇದು ಏಕೆ ಹುಟ್ಟುವುದು? ಪ್ರಾಣಿವರ್ಗದಲ್ಲೂ ಈ ಅಭಿಮಾನವಿದೆಯೆ? ಇದು ಅವುಗಳಲ್ಲಿಲ್ಲದಿದ್ದರೆ, ಅವು ಸುಖವಾಗಿ ಬಾಳ್ವೆಯ ವಾಹಿನಿಯನ್ನು ದಾಟುವುದಿಲ್ಲವೆ? ಮಾನವನಾಗಿ ಇಂಥಾ ಮಮಕಾರಗಳನ್ನು ಹಚ್ಚಿಕೊಂಡರೆ ಅಧಃಪತನವೇ ಫಲವಲ್ಲವೆ? ಇಂಥಾ ಹಲವು ಪ್ರಶ್ನೆಗಳನ್ನು ಮಾನವನು ತನ್ನ ಮೂಢತನವನ್ನು ಪ್ರದರ್ಶಿಸಲು ಕೇಳಬಹುದು. ಪ್ರಾಣಿವರ್ಗಕ್ಕೂ ಅವುಗಳ ಬುದ್ಧಿಶಕ್ತಿಯನ್ನನುಸರಿಸಿ ಇಂತಹ ಅಭಿಮಾನಗಳ ಸಂಖ್ಯೆ ಕಡಿಮೆ ಇರಬಹುದು; ಅಥವಾ ಮನುಷ್ಯನಲ್ಲಿ ಇದರ ಸಾಂದ್ರತೆ ಹೆಚ್ಚಿದ್ದರೆ ಪ್ರಾಣಿಗಳಲ್ಲಿ ತೆಳ್ಳಗಿರಬಹುದು. ಆದರೆ ಈ ಅಭಿಮಾನವು ಯಾರನ್ನೂ ಬಿಟ್ಟಿಲ್ಲ. ಇನ್ನು ಮನುಷ್ಯ ಜೀವಿಯು ಈ ಲೋಕದ ಸುಖಕ್ಕೆ ಒಂದು ಪರಿಮಾಣದ ಅಭಿಮಾನವಿರಲೇಬೇಕಾಗುವುದು. ಯಾವ ದೇಶದಲ್ಲಿ ಇಂಥಾ ಅಭಿಮಾನ ಶೂನ್ಯರ ಸಂಖ್ಯೆ ಏರಿದೆಯೋ ಅಲ್ಲಿ ಸುಖವಿಲ್ಲ- ಸ್ವಾತಂತ್ರ್ಯವಿಲ್ಲ ಗುಲಾಮಗಿರಿಯು ಸದಾ ಆ ಭೂಮಿಯಲ್ಲಿ ತಾಂಡವವಾಡುತ್ತಿರುವುದು. ಗುಲಾಮಗಿರಿಯೆಂದರೇನು? ಅದರ ಪರಿಣಾಮವೇನು? ಅಭಿಮಾನ ಶೂನ್ಯನಾಗಿ ಪ್ರಾಣಿಗಳಂತೆ ತನ್ನ ಸಮಾನ ವ್ಯಕ್ತಿಯನ್ನು ವಿವಿಧ ಮಾರ್ಗದಿಂದ ಸೇವಿಸುತ್ತಿರುವುದೇ ಗುಲಾಮಗಿರಿ ತನ್ನ ಜನನಿಯಂತಿದ್ದ ದೇಶವನ್ನು ಪರಕೀಯರು ಭಂಗಪಡಿಸಿದಾಗಲೂ ಸ್ಮಶಾನ ಮೂಕನಾಗಿರುವುದು ಅದರ ಪರಿಣಾಮ ಇಲ್ಲಿ ಹೇಳಿದ ಸೇವೆಗೆ ಅರ್ಥವೂ ಕೆಳಗಿನ ಮಟ್ಟದಲ್ಲೇ ಇದೆ ಇಂಥಾ ಅಭಿಮಾನ ಶೂನ್ಯವನ್ನು ತಲೆಎತ್ತಿರುಗುವ ಪುರುಷ ಪುಂಗವರ ರಾಷ್ಟ್ರಗಳು ತುಳಿದು ಪಡೆದು ನೆಲಕಚ್ಚಿರಿಸಲು ಪ್ರಯತ್ನಿಸುವುವು, ಇಲ್ಲವೆ ಜನನಿಗೆ ಸಮಾನವಾದ ಅವನ ಜನ್ಮಭೂಮಿಯನ್ನು ಪಾಲುಮಾಡಿಯೊ, ಸಂಬಂಧ ತಪ್ಪಿಸಿಯೊ, ಅಲ್ಲಿನ ಜನಶಕ್ತಿಯನ್ನು ಮೆಟ್ಟಿ ಗುಲಾಮತನವನ್ನೇ ಅವನೆಚ್ಚುವಂತೆ ಮಾಡುವುವು. ಆ ಪ್ರಬಲ [illegible]ಗಳು ತಮ್ಮ ಸುಖಕ್ಕಾಗಿ ನಡೆಸುವ ಈ ಕ[illegible]ಚಮತ್ಕಾರವು, ಅಭಿಮಾನ ಮತ್ತು ಗುಲಾಮತನದ ಬೆಲೆಯನ್ನು ಅರಿಯುವವರಿಗೆ ಮಾತ್ರ ನಡೆದೀತು. ಮನುಷ್ಯನು ಅವೆರಡಕ್ಕಿದ್ದ ಸ್ವರ್ಗ ಪಾತಾಳಗಳ ವ್ಯತ್ಯಾಸವನ್ನು ತಿಳಿದರೂ ಮತ್ತೂ ಎಚ್ಚರ ಹೊಂದದೆ ದಾಸ್ಯ ಶೃಂಖಲೆಯನ್ನೇ ಆಹ್ವಾನಿಸುತ್ತಿದ್ದರೆ ಅವನೊಬ್ಬ ಮನುಷ್ಯನೆಂದಾಗುವುದೆ? ಅವನ ಆ ಕಿಲುಬು ಹಿಡಿದ ಮನುಷ್ಯತ್ವವು ಇತರ ಉಜ್ವಲ ರಾಷ್ಟ್ರಗಳಂತೆ ಪುನಃ ಬೆಳಗುವುದೆಂದಿಗೆ? ದಾಸ್ಯ ಪಂಕದ ಗುರುತಾದ ಈ ಅಪಮಾನವನ್ನು ತೊಳೆದುಕೊಳ್ಳುವುದೆಂದಿಗೆ?

ತನ್ನ ಬಾಂಧವರಲ್ಲೇ ಹರಿಯುತ್ತಿದ್ದ ಅಭಿಮಾನವು ವಯಸ್ಸೇರಿದಂತೆ ವಿಶಾಲವಾಗುತ್ತಾ ಹೋಗುವುದು. ಆಗ ಅವನು ತಾನು ಉಣ್ಣುವ ಅನ್ನ, ಕುಡಿಯುವ ನೀರು, ಸೇವಿಸುವ ಗಾಳಿ ಎಲ್ಲಿಂದ ಬಂತೆಂದು ನೋಡುವನು; ತಾನು ತಾಯಿಯ ಸಂರಕ್ಷಣೆಯಿಂದ ತಪ್ಪಿದ ಮೇಲೆ ಯಾರ ಮಡಿಲಲ್ಲಿದ್ದೇನೆಂದು ಯೋಚಿಸುವನು, ಆಗ ಅವನಿಗೆ ಜನ್ಮಭೂಮಿಯೇ ಅಭಿನವ ಮಾತೆಯಾಗಿ ತೋರುವುದು ಹೀಗೆ ಮಾನವ ಬಾಳ್ವೆಗೆ ತೋರಬೇಕಾದುದೂ ಸಹಜ. ಹೀಗೆ ದೇಶದೊಡನೆ ಅವನು ಸಮೀಪ ಸಂಬಂಧ ಬೆಳೆಸಿಕೊಂಡ ವಿನಹ ಅವನು ಇತರ ರಾಷ್ಟ್ರಗಳ ಮುಂದೆ ತಲೆ ಎತ್ತಿರುಗಲಾರನೆಂದು ಅನುಭವದಿಂದಲೇ ಅರಿಯುವನು. ಈ ಅಭಿಮಾನದ ಜೊತೆಯಲ್ಲೇ ಅವನಿಗೆ ತಾಯಿಯ ಬಾಯಿಯಿಂದ ಮೊತ್ತಮೊದಲು ಕೇಳಿದ ನುಡಿಯಲ್ಲೂ ಗೌರವವುಂಟಾಗಬೇಕು. ನಾಮಕ್ಕೂ ನಾಮಿಗೂ ವ್ಯತ್ಯಾಸವಿಲ್ಲದಂತೆ ದೇಶಕ್ಕೂ ಅದರ ಭಾಷೆಗೂ ಸಮೀಪದ ಸಂಬಂಧವಿದೆ. ಒಂದು ಉನ್ನತಿಯ ಶಿಖರವನ್ನೇರುವಾಗ ಇನ್ನೊಂದನ್ನೂ ತನ್ನೊಡನೆಯೊಯ್ಯುವುದು. ಈ ಭಾಷಾಭಿಮಾನವು ಸುಲಭದಲ್ಲೇ ತನ್ನಷ್ಟಕ್ಕೇ ಉಂಟಾಗಲಾರದು. ಇದಕ್ಕೆ ಗುರುಹಿರಿಯರ ಉಪದೇಶ ಬೇಕು. ಅವರು ತಮ್ಮ ಮಕ್ಕಳ ಮುಂದೆ ಭಾಷಾಭಿಮಾನವನ್ನು ಪ್ರಕಟಪಡಿಸಬೇಕು. ಈ ಅಭಿಮಾನಗಳೆಲ್ಲಾ 'ಹಿರಿಯಕ್ಕನ ಚಾಳಿ ಮನೆ ಮಕ್ಕಳಿಗೆಲ್ಲ' ಎಂಬಂತೆ ಹಿರಿಯರಿಂದ ಕಿರಿಯರ ಕಡೆಗೆ ಹರಿಯಬೇಕಾಗುವುದು. ದಾಸ್ಯತನದಲ್ಲಿ ಮುಳುಗಿದ್ದ ರಾಷ್ಟ್ರಗಳಲ್ಲಿ ಆಳರಸರು ಈ ಮಹಿಮಾಮಯ ಗುಣಗಳನ್ನು ಕ್ರಮಶ ವ್ಯಕ್ತಿ ವ್ಯಕ್ತಿಯಿಂದ ಕೀಳಲು ಅವರಿಗೆ ತಕ್ಕ ಶಿಕ್ಷಣವನ್ನೊದಗಿಸುವರು. ಅದು ಸಾರೋದ್ಧಾರವಾಗಿ ನಡೆದರೆ ಅರ್ಧ ಶತಮಾನದಲ್ಲೇ ಒಂದು ವೀರ ಜನಾಂಗದಲ್ಲಿ ಗುಲಾಮ ಪಂಥವು ನಿರ್ಮಾಣವಾಗುವುದು. ಈ ಪಂಥದವರಿಗೆ ತಮ್ಮ ಸ್ವಜನಾಂಗದ ಗುರುತಿಲ್ಲ; ಸ್ವದೇಶದ ಪರಿಚಯವಿಲ್ಲ; ಸ್ವಭಾಷೆಯಲ್ಲಿ ತಾತ್ಸಾರ ಹುಟ್ಟಿ ಅದರ ಸಂಭಾಷಣೆಯು ಅಗೌರವದ್ದಾಗಿ ತೋರುವುದು, ಈ ವರ್ಗದವರಿಗೆ ಕೇವಲ ಉದರ ಭರಣಕ್ಕೆ ಸಿಕ್ಕಿ ವಿಲಾಸಕ್ಕೆ ಬೇಕಾದ ವ್ಯಕ್ತಿಯೋ ಶಕ್ತಿಯೋ ಇದ್ದರೆ ಸಾಕು. ಇವರಲ್ಲಿ ಬುದ್ಧಿವಂತರೆನ್ನಿಸಿಕೊಂಡವರು ತಮ್ಮ ಆಳರಸರಂತೆ ತಾವೂ ಸ್ವಬಾಂಧವರನ್ನೇ ಸರಿ ಸವಾರಿ ಮಾಡ[illegible]ಯತ್ನಿಸುವರು. ಅವರು ಕೊಟ್ಟ ಅಧಿಕಾರ ಲಾಲಸೆಗೆ ಬಲಿಬಿದ್ದು-ಸ್ವಾತಂತ್ರ್ಯವೇಕೆ? ಸ್ವದೇಶಕ್ಕೂ ನಮಗೂ ಸಂಬಂಧವೇನು? ಸ್ವಭಾಷೆಯು ಬರ್ಬರ ಜನಾಂಗದ ಭಾಷೆ ನಮ್ಮನ್ನೂ ಸ್ವಾತಂತ್ರ್ಯಕ್ಕೆ ಅರ್ಹರಾಗಿಲ್ಲ ಎಂದು ಘೋಷಿಸುವರು. ಇದಕ್ಕಿಂತ [illegible]ಲೀ ಪಾತಕವಾಗಲೀ ಯಾವುದು?

ಕನ್ನಡನಾಡು ಇಂಗ್ಲಿಷರ ಆಳಿಕೆಯಲ್ಲಿ ಸಂಪೂರ್ಣ ಬದಲಾಯಿತು. ಸಿಂಹ ಕಿಶೋರಗಳಾಗಿದ್ದ ಕನ್ನಡಿಗರಿಗೆ-ನೀವು ಕುರಿಮರಿಗಳು-ಎಂಬುದನ್ನು ಆ ಪರಕೀಯರು ಮುಂದಿಟ್ಟು ಮಾಡಿಹೋಗಿದ್ದಾರೆ. ನಾವು ಅವರ [illegible] [illegible] ಕುರಿಯಂತೆ ಆಡಲು ಕಲಿತಿದ್ದೇವೆ. ನಮ್ಮ ಈ ದೌರ್ಬಲ್ಯಕ್ಕೆ ತಲೆತೂಗಿದ ಪರಕೀಯರು ತಮಗೆ ಮನಬಂದಂತೆ ನಾಡನ್ನು ಕತ್ತರಿಸಿ, ಮುಂಬಯಿ, ಮದ್ರಾಸ, ಮೈಸೂರು ಮತ್ತು ಹೈದರಾಬಾದು ಸಂಸ್ಥಾನಗಳಿಗೆ ಹಂಚಿ ಈ ನಾಡವರು ಶತಮಾನ ಕಳೆದರೂ ಉದ್ಧಾರವಾಗದಿರಿ ಎಂದು ಆಶೀರ್ವದಿಸಿದರು. ಅಂದು ಇತರರ ಬಾಯಿಯಿಂದ ಭಾರತದ ಪಾರತಂತ್ರ್ಯವನ್ನರಿತು ನಮ್ಮ ಶಕ್ತಿ ಅಪಮಾನಗಳನ್ನು ಮರೆತು ಅದರ ಸ್ವಾತಂತ್ರ್ಯಕ್ಕಾಗಿ ಹೆಣಗಾಡಿದೆವು. ಆಳರಸರು ಮೆಲ್ಲಗೆ ಈ ದೇಶದಿಂದ ಕಾಲುಕಿತ್ತರು, ಹಿಂದೆ ಅವರು ಕರ್ನಾಟಕದ ಮೇಲೆತ್ತಿದ ಖಡ್ಗವನ್ನೇ ತಾವು ಪಲಾಯನಮಾಡುವ ಮುನ್ನ ಅಖಂಡ ಭಾರತದ ಮೇಲೆತ್ತಿ ಅದರ ಶಿರಭುಜ ಪ್ರಾಂತಗಳನ್ನು ಸೀಳಿ ತಮ್ಮ ಮ್ಲೇಂಛ ಸ್ವಭಾವವನ್ನು ಮೆರೆದುಹೋದರು. ಆಗ ನಾವು ದುರ್ದೈವೀ ಭಾರತದ ವಿಕಟರೂಪಕ್ಕಾಗಿ ಉಳಿದ ಭಾರತೀಯರೊಂದಿಗೆ ದನಿಗೂಡಿಸಿ ಬಿಕ್ಕಿ ಬಿಕ್ಕಿ ಅತ್ತೆವು. ಆಗಲೂ ನಮ್ಮ ನಾಡಿನ ದುರವಸ್ಥೆಗಾಗಿ ನಮಗೆ ಮರುಕ ಉಂಟಾಗಲಿಲ್ಲ!

ಭಾರತದ ಅಂತರ್ಯದಲ್ಲಿ ತನಗೆ ಅಖಂಡವಾಗುವ ಆಶೆ ಇದೆ; ಭಾರತೀಯರಿಗೂ ಇದೆ. ಆದರೆ ಛಿನ್ನಭಿನ್ನವಾದ ಕರ್ನಾಟಕವನ್ನು ಬೆಸೆಯಲು ಅವರು ಏನೇನೋ ಸಬೂಬುಗಳನ್ನೊಡ್ಡುತ್ತಿದ್ದಾರೆ ಕ್ರಿ. ಶ ೧೯೦೭ರಲ್ಲಿ ಧಾರವಾಡದಲ್ಲಿ ಕರ್ನಾಟಕ ಏಕೀಕರಣವಾಗಬೇಕೆಂಬ ಕಿರುದನಿ ಎದ್ದಿತು. ಇದಕ್ಕನುಕೂಲವಾಗಿ ಮೋಂಟ್‌ಫೋರ್ಡ್ ಮತ್ತು ಸೈಮನ್ ವರದಿಗಳು ಭಾಷಾವಾರು ಪ್ರಾಂತರಚನೆಗೆ ಬೆಂಬಲಕೊಟ್ಟವು ಈ ತತ್ವದ ಮೇಲೆಯೇ ಸಿಂಧ, ಒರಿಸ್ಸಾ, ಬಿಹಾರ ಮೊದಲಾದ ಕೆಲವು ಪ್ರಾಂತಗಳ ನಿರ್ಮಾಣವಾಯಿತು ಆಗಲೂ ಆಳುವವರಿಗೆ ಕನ್ನಡಿಗರು ಕಣ್ಣ ಕಸವಾಗಿಯೇ ಕಾಣಿಸಿದರು ಕ್ರಿ. ಶ. ೧೯೨೦ರಲ್ಲಿ ನಮ್ಮ ಭಾರತದ ಕಾಂಗ್ರೆಸು ಬ್ರಿಟಿಷರ ಪ್ರಾಂತಗಳ ವಿಭಜನೆಯನ್ನು ಮನ್ನಿಸದೆ ತನ್ನ ಆಡಳಿತಕ್ಕಾಗಿ ಭಾಷಾವಾರು ಪ್ರಾಂತಗಳನ್ನೇ ಮನ್ನಿಸಿತು. ಅದು ತನ್ನ ಕಾರ್ಯ ಚಲಾವಣೆಗಾಗಿ ೧೯[illegible]ರಲ್ಲೇ ಆಂಧ್ರ ಪ್ರಾಂತವನ್ನು ನಿರ್ಮಿಸಿಕೊಂಡಿತು. ಆಗಲೇ ಕರ್ನಾಟಕ ಏಕೀಕರಣದ ಚಳವಳಿ ನಡೆದಿದ್ದರೂ, [illegible]ರಲ್ಲಿ ಭಾರತದ ಕಾಂಗ್ರೆಸು ಕರ್ನಾಟಕ ಪ್ರಾಂತಕ್ಕೆ [illegible] [illegible]. ಕ್ರಿ. ಶ ೧೯೨೪ರ ಬೆಳಗಾಂವಿಯ ಕಾಂಗ್ರೆಸ್ಸು ಪೂಜ್ಯ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಸೇರಿದಾಗ, ಅಂದಿನ ಕಾಂಗ್ರೆಸ್ಸು ಕರ್ನಾಟಕದ ಏಕೀಕರಣದ ನಿರ್ಣಯವನ್ನು ಸ್ವೀಕರಿಸಿತು. ಕ್ರಿ. ಶ. ೧೯೨೮ರಲ್ಲಿ ನೆಹರೂ ವರದಿಯು ಈ ಭಾಷಾವಾರು ಪ್ರಾಂತಗಳ ಕುರಿತು ಹೀಗೆಂದಿದೆ 'ಕರ್ನಾಟಕ ಏಕೀಕರಣವಾಗಲು ಆ ನಾಡಿಗೆ ಪ್ರಬಲವಾದ ಅರ್ಹತೆಯಿದೆ ಆರ್ಥಿಕ ದೃಷ್ಟಿಯಿಂದಲೂ ಕರ್ನಾಟಕವು ಏಕೀಕರಣವಾಗಲು ಸಮರ್ಥವಿದೆ'

ಕ್ರಿ. ಶ. ೧೯೪೭ನೆಯ ಆಗೋಸ್ತು ೧೫ರ ನಂತರ ಭಾರತವು ಸ್ವತಂತ್ರ ರಾಜ್ಯವಾಯಿತು! ಮರುವರ್ಷ ಜೂನ್ ೧೭ರಂದು ಭಾಷಾ ಪ್ರಾಂತಗಳನ್ನು ನಿರ್ಮಾಣಮಾಡುವುದರ ಕುರಿತು ಅವುಗಳ ಆರ್ಥಿಕ ಮತ್ತು ಇತರ ವಿಚಾರಗಳ ವರದಿಮಾಡಲು ಒಂದು ಸಮಿತಿಯನ್ನು ಸರಕಾರವು ನೇಮಕ ಮಾಡಿತು. ಈ ಸಮಿತಿಯ ಅಧ್ಯಕ್ಷರೇ ಶ್ರೀ ಎಸ್. ಕೆ ಧಾರ್ ಎಂಬವರು. ಇದನ್ನೇ ಧಾರ್ ಸಮಿತಿ ಎನ್ನುವರು. ಇದು ಕರ್ನಾಟಕ ಏಕೀಕರಣದ ಅಗತ್ಯವನ್ನು ಒತ್ತಿ ಹೇಳಿತು, ಅಲ್ಲದೆ ಕನ್ನಡಿಗರಿಗಾದ ಅನ್ಯಾಯವನ್ನು ಮುಕ್ತಕಂಠದಿಂದ ಘೋಷಿಸಿತು. ಆದರೆ ಕೊನೆಯ ಫಲಿತಾಂಶ ಶೂನ್ಯ. ಈ ಏಕೀಕರಣದ ಘೋಷಣೆಯನ್ನೆಬ್ಬಿಸಿದ ನಾಡಿನ ಕೆಲವು ಹಿರಿಯರು ಭಾರತ ಸರಕಾರದ ದೊಡ್ಡ ದೊಡ್ಡ ಹುದ್ದೆಗೆ ಕೈಒಡ್ಡಿ ತೆಪ್ಪಗಾದರು. ಅವರ ಸ್ಥಾನಮಾನಗಳನ್ನು ಗಮನಿಸಿದ ಉಳಿದ ಹಿರಿಯರು ತಾವೂ ದೊಡ್ಡ ಗುಳ್ಳೆಬ್ಬಿಸಿದ್ದಾರೆ!

ಕನ್ನಡಿಗರಿಗಾದ ಅನ್ಯಾಯದ ಫಲಿತಾಂಶವೆಂದು ಭಾರತಕ್ಕೆ ಸಂಭವಿಸಿ ಅದೂ ಸೀಳು ಮಾಡಲ್ಪಟ್ಟಿತು. ಅದಕ್ಕಾಗಿ ಸಮಸ್ತ ಭಾರತೀಯರು ಮರುಗಿದಂತೆ ಹತಭಾಗ್ಯ ಕರ್ನಾಟಕದ ಅದೃಷ್ಟಕ್ಕಾಗಿ [illegible]ಯನೊಬ್ಬನೂ ಗಟ್ಟಿಯಾಗಿ ಉಸಿರುಬಿಟ್ಟಂತಿಲ್ಲ ಇದಲ್ಲವೆ ಆಶ್ಚರ್ಯ!

ನಮ್ಮ ಪಾವನ ಕರ್ನಾಟಕವು ೧,೪೬,೨೬೦ ಚದರ ಮೈಲು ವಿಸ್ತಾರವಿದೆ ಇದು ಎರಡು ಕೋಟಿ ಜನರನ್ನು ಪೋಷಿಸುತ್ತಿದೆ ಇಲ್ಲಿಯ ಉತ್ಪತ್ತಿ ಈ ಸ್ಥಿತಿಯಲ್ಲಿ ಇಪ್ಪತ್ತುಕೋಟಿ ರೂಪಾಯಿ' ಇದರಲ್ಲಿ ಕರಿಮಣ್ಣಿನ [illegible] ಭೂಮಿ, ಎರೆಮಣ್ಣಿನ ಮಲೆನಾಡು, ಕಡುಮಣ್ಣಿನ ಬಯಲು ಪ್ರದೇಶವಲ್ಲದೆ ೨೦೦ ಮೈಲುದ್ದದ ಮಲೆ-ತುಂಬಿದ ಕರಾವಳಿಇದೆ. ಇದರಲ್ಲಿ ಮದ್ರಾಸು ಮೊದಲಾದ ಕರ್ನಾಟಕ ವಿಭಾಗಗಳಿಂದ ಸಿಡಿದುನಿಂತ ಮೈಸೂರು ಸಂಸ್ಥಾನದ ವಿಸ್ತೀರ್ಣ ಮೂವತ್ತು ಸಾವಿರ ಚದರ ಮೈಲು. ಇದೊಂದರಲ್ಲೇ ಉತ್ಪನ್ನ ಹತ್ತು ಕೋಟಿ' ಹೈದರಾಬಾದಿನಲ್ಲಿ ಇಪ್ಪತ್ತಾರು ಸಾವಿರ ಚದರ ಮೈಲು ವಿಸ್ತಾರದ ಕನ್ನಡ ಪ್ರಾಂತವಿದೆ ಮುಂಬಯಿಯಲ್ಲಿ ನಾಡಿನ ದೊಡ್ಡದೊಡ್ಡ ತುಂಡುಗಳು ಸೇರಿವೆ, ಇಂದಿನ ದಿನದಲ್ಲೂ ಕರ್ನಾಟಕವೊಂದು ಉಳಿಕೆಯ ಪ್ರಾಂತ' ಆದರೆ ಅದರ ದುರ್ದೆಶೆಯಿಂದ ಅದು ಭಾರತದಲ್ಲಿ ಕಂಗಾಲಾದ ದುರ್ಭಿಕ್ಷ ರಾಷ್ಟ್ರಗಳಲ್ಲೊಂದೆಂದು ಇಂದಿನ ಕನ್ನಡಿಗರು ಗಣಿಸಿಟ್ಟಿದ್ದಾರೆ!

ಭಾರತದ ಆಡಳಿತವು ವ್ಯವಸ್ಥಿತವಾಗಿ ಸಾಗಬೇಕಾದರೆ ಪ್ರಾಂತಗಳ ವಿಭಜನೆಯು ಭಾಷೆಯನ್ನು ಹೊಂದಿರಬೇಕು. ಇಂದಿನ ಸಮಸ್ತ ಯುರೋಪು ಖಂಡವು ಯಾವ ತತ್ವದ ಮೇಲೆ ವಿಭಾಗಿಸಲ್ಪಟ್ಟಿದೆ? ಅದರಿಂದ ಅದರ ಸೌಭಾಗ್ಯಕ್ಕೇನು ತೊಡಕುಂಟಾಯಿತು? ಭಾಷಾವಾರು ಪ್ರಾಂತಗಳ ರಚನೆಯಾದಮೇಲೆ ಆಯಾ ಪ್ರಾಂತದ ಶಾಸನ ಸಭೆ ಮತ್ತು ಕೋರ್ಟು ಕಚೇರಿಗಳಲ್ಲಿ ಕನ್ನಡವೇ ಪ್ರಚಾರದಲ್ಲಿರಬೇಕು ಇಂದಿನ ಕೋರ್ಟು ಕಚೇರಿಗಳ ಹೊಲಸು ಕನ್ನಡಕ್ಕೆ ಬೇಗನೆ ಅರ್ಧಚಂದ್ರ ಪ್ರಯೋಗಮಾಡಬೇಕು. ಅವುಗಳ ಒಕ್ಕಣೆಯನ್ನು ಓದಿದರೆ ಯಾವ ಕನ್ನಡಿಗನಿಗೆ ನಾಚಿಕೆಯಿಂದ ಮೋರೆಯು ಕೆಂಪಾಗದು? ಅಲ್ಲಿಯ ಇಂಗ್ಲೀಷು ನಮ್ಮ ಕನ್ನಡವನ್ನು ಹೊಲಸು ಮೇಲೋಗರವನ್ನಾಗಿ ಮಾಡಿದೆ. ಆ ಆಂಗ್ಲ ಭಾಷೆಯು ಕನ್ನಡದ ಅಭಿಮಾನಿಗಳ ವಶವಾಗಿ ಕನ್ನಡಕ್ಕೊಂದು ಹೊಸ ಚಲನೆಯನ್ನು ಕೊಟ್ಟಿದೆ ಆದರೆ ಗುಲಾಮ ಪದ್ಧತಿಯವರ ಕೈಗೆ ಸಿಕ್ಕಿ ಅಸಹ್ಯವಾದ ಬರ್ಬರ ಭಾಷೆಯಾಯಿತು.

ಭಾರತವು ಇದೇ ನೇರದ ಆಳಿಕೆ[illegible] ಸೂತ್ರಗಳನ್ನು ಎಲ್ಲಾ ಪ್ರಾಂತಗಳಿಗೂ[illegible]

ವಿಚಾರ ಪ್ರಚೋದಕವಾದ ಪ್ರತಿಯೊಬ್ಬರೂ ಓದಲೇಬೇಕಾದ ನವನವೀನ ಪುಸ್ತಕಗಳು!

ಗೀತಾ ರಹಸ್ಯವನ್ನು ತಿಳಿಯ ಬಯಸದವರಾರು?

ವಿ. ಹೊಸಕೆರೆ ಚಿದಂಬರಯ್ಯ ಕೃತ
ಗೀತೆಯ ಕೈಗನ್ನಡಿ
ಭಗವದ್ಗೀತೆಯ ಸಮೂಲ ಭಾಷಾಂತರ

ಪುಟಗಳು 428 ಬೆಲೆ 0-12-0 ಅಂಚೆವೆಚ್ಚ 0 4 0
100 ಪ್ರತಿಗಳಿಗೆ ರೂ. 60. 250ಕ್ಕೆ ರೂ. 140; 500ಕ್ಕೆ ರೂ 250.

ಕತೆ, ಕಾದಂಬರಿ, ನಾಟಕ, ಚಿತ್ರ, ಪ್ರಬಂಧ, ಹರಟೆ ಮೊದಲಾದ, ನೋಡಿದರೆ ಬಿಡದಿರುವ [illegible] ಪ್ರಕಟನಾಲಯದ ರೂ 30 ಕ್ರಯದ 86 ಪ್ರಕಟಣೆಗಳನ್ನು ಒಮ್ಮೆಯೇ ತರಿಸಿಕೊಳ್ಳುವವರಿಗೆ ರೂ 24ಕ್ಕೆ ಕೊಡಲಾಗುವುವು.

ನಾರೀಹೃದಯ ರೂ	1	8	[illegible] ರೂ	2	8	ನೆನಪಿಗಾಗಿ ರೂ.	2	0
ಭಾರತೀಯ ಕತೆಗಳು	1	12	ಮಧುವನ	3	0	ಕಾವ್ಯಸಾಮ್ರಾಜ್ಯ	1	8
ಸನ್ಯಾಸಿಯ ಸೋಗಿನಲ್ಲಿ	0	12	[illegible]	2	0	ಪ್ರೇಮ ವಿಜಯ	1	4
ಕವಿತಾ [illegible]	2	0	ಸಂಪಾದಕ	1	0	ರಂಗಭೂಮಿ	0	10
ಕುಲವಿಲ್ಲದ ಹೆಣ್ಣು	2	0	ಜನ್ಮಾಂತರ	1	8	ಭಾರತದಲ್ಲಿ ಜಾತಿಭೇದ	1	0
ವ್ಯಭಿಚಾರಿಣಿ ಯಾರು	1	4	ದೇಶಭಕ್ತ	1	4	ವೀರ ಸಾವರ್ಕರ	1	4
ಸುಲಭದ ಇಂಗ್ಲಿಷ್	2	0	ಮನೆ ಮದ್ದು	2	8	ಕದಂಬ	1	4
ನೀತಿವಿನೋದ ಕತೆಗಳು	0	12	[illegible]	0	12	ಭಾಗ್ಯಲಕ್ಷ್ಮಿ	1	4
ಜೀವನ ಸಂಗ್ರಾಮ	1	8	ಸೇವಾಪಥ	0	8	[illegible]	0	8

ಇವೇ ಮೊದಲಾದ ನೂರಾರು ಬಗೆಯ ಉಪಯುಕ್ತ ಪುಸ್ತಕಗಳ ಕೆಟಲಾಗಿಗೆ ಬರೆಯಿರಿ ವ್ಯಾಪಾರಿಗಳಿಗೂ, ಪುಸ್ತಕಭಂಡಾರಗಳಿಗೂ ವಿಶೇಷ ಸವಲತ್ತುಗಳಿವೆ

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ

No. 518
LICENCE No. 31
Licensed to Post without Prepayment

25—9—1952

Estd. 1921 ಸ್ಥಾಪನೆ,
32ನೆಯ ವರ್ಷ

Founder: Sri A. B. Shetty,
Minister for Medical & Public Health

ನವಯುಗ
ಆರೋಗ್ಯ ಮಂತ್ರಿ
ಎ. ಬಿ. ಶೆಟ್ಟರಿಂದ
ಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ.

ಚಂದಾ 5-12-0
ಂಗಳಿಗೆ 3-0-0
ಪ್ರತಿಗೆ 0-2-0

ನವಯುಗ

NAVAYUGA WEEKLY POST BOX NO 22 UDIPI

Vol 32
No. 4

ವರ್ಷ ೩
ವಾರ ೪

ಅಂತರಂಗ
ಪುಸ್ತಕ ಪತ್ರಿಕೆಯು
ಉಪಯುಕ್ತವಾದ
86 ಪುಸ್ತಕಗಳು
ರು. 24ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ.

ಮಧುಪರ್ಕ

ಕಲ್ಕತ್ತೆಯ ಪತ್ರಿಕೆಯೊಂದು ಮುಂಬಯಿಯ ಮಹನೀಯರೊಬ್ಬರ ಕುರಿತು ಅಸತ್ಯಪೂರ್ಣ ಲೇಖನವೊಂದನ್ನು ಬರೆದು ಪ್ರಕಟಿಸಿತು. ಇದರಿಂದ ಕುಪಿತರಾಗಿ, ಆ ಮಹನೀಯರು ಒಡನೆಯೇ ವಿಮಾನ ಮೂಲಕ ಕಲ್ಕತ್ತೆಗೆ ಆಗಮಿಸಿದರು.

ಅಲ್ಲಿ ಪ್ರಥಮತಃ ಅವರ ಸ್ನೇಹಿತರೊಬ್ಬರ ಭೇಟಿಯಾಯಿತು: "ಆ ಪತ್ರಿಕೆಯ ಸಂಪಾದಕ ಕ್ಷಮೆ ಕೇಳುವಂತೇಕೆ ನಾನು ನಿರ್ಬಂಧಿಸಕೂಡದು? ಕೋರ್ಟಿನಲ್ಲಿ ಮಾನಹಾನಿ ದಾವೆಯನ್ನೇಕೆ ಹೂಡಲಾಗದು?" ಎಂದು ಮಹನೀಯರು ತಮ್ಮ ಮನೋವಾಂಛೆಯನ್ನು ವ್ಯಕ್ತಪಡಿಸಿದರು.

ಅದಕ್ಕೆ ಕಲ್ಕತ್ತೆಯ ಸ್ನೇಹಿತರು ಹೀಗೆಂದರು— "ಏನೂ ಮಾಡಬೇಡಿರಿ: ಆ ಪತ್ರಿಕೆಯನ್ನು ತರಿಸುವವರಲ್ಲಿ ಅರ್ಧದಷ್ಟು ಜನರು ಲೇಖನವನ್ನು ನೋಡಿರಲಿಕ್ಕೇ ಇಲ್ಲ. ನೋಡಿದವರಲ್ಲಿ ಅರ್ಧ ಓದಿರಲಿಕ್ಕಿಲ್ಲ. ಓದಿದವರಲ್ಲಿ ಅರ್ಧ ಜನರಿಗೆ ಅರ್ಥವಾಗಿರಲಿಕ್ಕಿಲ್ಲ, ಅರ್ಥವಾದವರಲ್ಲಿ ಅರ್ಧ ಜನಕ್ಕೆ ವಿಶ್ವಾಸ ಹುಟ್ಟಿರಲಿಕ್ಕಿಲ್ಲ. ಇನ್ನು ಹಾಗೆ ವಿಶ್ವಾಸ ಇಟ್ಟುಕೊಂಡವರಿದ್ದರೆ—ಅವರಿಗೇನೂ ಮಹತ್ವವಿಲ್ಲ!"

ಟೀಕೆಯ ಹೆದರಿಕೆ

ಲೋಕ ನಿಯಮವೆಂದೇ ಹೇಳಬಹುದು—ಜನರು ಪ್ರತಿಯೊಂದು ವಿಷಯವನ್ನೂ, ವಸ್ತುವನ್ನೂ, ತಮ್ಮ ಕಣ್ಣಿನಿಂದ, ತಮ್ಮ ಕಲ್ಪನೆ ಹಾಗೂ ಭಾವನೆಗಳಿಗನುಸಾರ ನೋಡುತ್ತಾರೆ. ಇದರಂತೆ ಪ್ರತಿಯೊಬ್ಬನೂ ಲೋಕ ತನ್ನೆಣಿಕೆಯಂತೆ ನಡೆಯಲೆಂದೂ ತಾನು ನುಡಿದಂತಾಗಲೆಂದೂ ಬಯಸುತ್ತಾನೆ. ಆದರೆ, ಲೋಕಗತಿಯು ಸಾಮಾನ್ಯ ಮನುಷ್ಯ ಕಲ್ಪನೆಗೆ ತದ್ವಿರುದ್ಧವಾಗಿರುವ ಪ್ರಸಂಗವೇ ಹೆಚ್ಚು. ಆಗ, ಪರಸ್ಪರ ದೋಷಲೋಪಗಳನ್ನೆತ್ತಿ ತೋರಿಸುವುದರಲ್ಲಿ—ಟೀಕಾಟೀಕೆಗಳಲ್ಲಿ ಸಂತೋಷ ಕಂಡುಕೊಳ್ಳ ಬಯಸುವನು; ವಸ್ತು ತಮ್ಮಲ್ಲಿ, ತನಗಾದ ನಿರಾಶೆ ಹಾಗೂ ಆಘಾತಗಳಿಂದ ಬಿಡುಗಡೆಯನ್ನು ಹವಣಿಸುವನು.

ಜನ ನಮ್ಮ ವಿಷಯವಾಗಿ ಟೀಕೆ ಟಿಪ್ಪಣಿಗಳನ್ನು ಮಾಡುವುದನ್ನು ಕಂಡು, ರೋಷಾವೇಶಗೊಳ್ಳುವ ಪ್ರವೃತ್ತಿ ನಮಗೆ ಸ್ವಾಭಾವಿಕವಾಗಿ ಬರುತ್ತದೆ. ನಮ್ಮ ದೋಷದೋಷಗಳನ್ನೆತ್ತಿ ತೋರಿಸುವವರು, ತಾವೆಷ್ಟು ಸಂಭಾವಿತರಿರುವರಪ್ಪಾ! ಎಂದು ಮೂದಲಿಸುವ ಬಯಕೆಯುಂಟಾಗುತ್ತದೆ. ಹಾಗೆಂದು—ಇದು ಎಲ್ಲ ಪ್ರಸಂಗದಲ್ಲಿಯೂ ಸರಿಯಾದುದೆನ್ನಲಾರೆವು. ಅದರಲ್ಲಿ ಪ್ರಜಾಪ್ರಭುತ್ವ ಪದ್ಧತಿ ಜಾರಿಯಲ್ಲಿರುವ ಈ ಕಾಲದಲ್ಲಿ—ಟೀಕೆ ಟಿಪ್ಪಣಿಗಳ ವಿಷಯದಲ್ಲಿ ನಾವು ಸೌಹಾರ್ದಮಯವಾದ ವಾತಾವರಣವನ್ನೇ ನಿರ್ಮಿಸುವುದಗತ್ಯ. ಬುದ್ಧಿವಂತರಾದವರು ಟೀಕೆ ಟಿಪ್ಪಣಿಗಳಿಂದ ಅತ್ಯಮೂಲ್ಯವಾದ ಜ್ಞಾನಸಂಪಾದನೆ ಮಾಡುತ್ತಾರೆ. ಟೀಕೆಗಳಿಗೆ ಅವರು ಭಯಪಡುವುದಿಲ್ಲ—ಹಾರ್ದಿಕ ಸ್ವಾಗತಿಸುತ್ತಾರೆ: ಬಿಚ್ಚು ಮನಸ್ಸಿನಿಂದ ತಮ್ಮ ಕೆಟ್ಟತನವನ್ನು ತೋರಿಸಿಕೊಟ್ಟುದಕ್ಕೆ ಆಭಾರ ಮನ್ನಿಸುತ್ತಾರೆ.

ಹೀಗೆ ಮಾಡುವ ಬದಲಿಗೆ ನಾವು ಕೋಪಾವಿಷ್ಟರಾಗಿ, ನಮ್ಮ ಒಳ್ಳೆಯದಕ್ಕೆಯೇ ಆದರೂ, ಒಬ್ಬ ಮನುಷ್ಯ ನಮ್ಮ ಲೋಪದೋಷಗಳನ್ನೆತ್ತಿ ತೋರಿಸಿದುದಕ್ಕೆ ಬೈದು ಭಂಗಿಸಿದರೆ—ಅವನು ಮುಂದೆಂದೂ ನಮ್ಮ ಕೊರತೆಗಳನ್ನು ನಮ್ಮೊಡನೆ ಹೇಳಿ ತೋರಿಸುವುದಿಲ್ಲ. ಹೊರವರ ನಂಬಿ, [illegible] ಷ್ಟು ಗುಟ್ಟದನ್ನು ಮಾಡಿತೋರಿಸಿ, ಕಿರುಗುತ್ತಾನೆ! ಕೇಳುವ ಹತ್ತು ಜನರ ಕಿವಿಗೆ ಬೀಳುವಂತೆ ಅವನು [illegible] ದ—ಅದು ಊರಿದಾರಿಗೆ ವಿಷಗಾಳಿಯಂತೆ ಹಬ್ಬುತ್ತದೆ. ಮೊದಲೇ ಇಲಿ ಓಡಿದ ಸದ್ದಿಗೆ ಹುಲಿ ಹಾರಿತು ಎಂಬ ದಾಗಿ ಪ್ರಚಲಿತಗೊಂಡಿದೆ; ಇನ್ನು ಇದನ್ನು ಕೇಳಿದ ಜನ ತತ್ತರಿಸುವಂತೆ ತಮಗೆ ತೋರಿದಂತೆ ಭಾಷ್ಯ ಮಾಡಿದರೆ, ಅಲ್ಲಿಗೆ ತೀರಿತು! ಇದರಿಂದ ನಮ್ಮ ವ್ಯಕ್ತಿತ್ವಕ್ಕೆ ಅಪಾರ ಧಕ್ಕೆ ತಗಲುವುದು ನಿಶ್ಚಯ. ಆದುದರಿಂದ ನಮ್ಮ ಕುರಿತು ಬಹಿರಂಗ ಟೀಕೆಗೆ ಆಸ್ಪದ ಕೊಡಲಾಗದು.

ನಮ್ಮದು ಸಮಚಿತ್ತವಾಗಿಲ್ಲದಿರುವಾಗ— ಜನರು ನಮ್ಮ ದೋಷಗಳನ್ನೆತ್ತಿ ತೋರಿಸುವುದನ್ನು ಕಂಡು ಖೇದಗೊಳ್ಳುತ್ತೇವೆ. ಆದರೆ ಜೀವನ ಸಾಫಲ್ಯವನ್ನು ಪಡೆಯಲು ಟೀಕೆಗಳಿಗೆ ತಲೆಗೊಡಬೇಕಾದೆ ಎಂದು ನೆನಪಿನಲ್ಲಿಟ್ಟುಕೊಳ್ಳಬೇಕು. "ಕೇಳುವ ಕಿವಿಯನ್ನು ಯಾವಾಗಲೂ ತೆರೆದಿಡಿರಿ. ಆದರೆ ನಾಲಿಗೆಯ ಮೇಲೆ ಮಾತ್ರ ಹಿಡಿತವಿರಲಿ" ಎಂದೊಂದು ಇಂಗ್ಲೀಷು ವಾಕ್ಯವಿದೆ. ಸ್ವಪ್ನ ಸಿಂಹಿಯ ಛಾಯೆ ಕವಿದಂತೆ ಕಂಡರೂ ನಮ್ಮಲ್ಲಿ ಪ್ರಚಲಿತವಿರುವ "ಅಂಡೆ ಬಾಯಿ ಕಟ್ಟಬಹುದು-ದೊಂಡೆ (ಕಂಠ) ಬಾಯಿ ಕಟ್ಟಲಾರೆವು" ಎಂಬ ಮಾತು ಕೂಡ ಟೀಕೆಗೆ ಅಳುಕಕೂಡದೆಂದು ಸಂಕೇತಿಸುತ್ತದೆ. ನಮಗೆ ಮನಸ್ಸಿಕಲಿ ಇಲ್ಲದಿರಲಿ—ಟೀಕೆ ಎಂದರೆ ಜೀವನ ಸಂಗ್ರಾಮದಲ್ಲಿ ಅನಪೇಕ್ಷಿತವಾಗಿ ಬರುವ ಉಡುಗೊರೆಯೇ ಹೊರತು—ಶಾಪವಲ್ಲ.

ಒಬ್ಬ ತತ್ವಜ್ಞಾನಿ ತನ್ನ ಕೋಣೆಯ ಗೋಡೆಯ ಮೇಲೆ ಹೀಗೆ ಬರೆದಿದ್ದ—"ಟೀಕೆಗಳಿಂದ ಮುಕ್ತನಾಗ ಬಯಸಿ ಮಾತನಾಡಬೇಡ; ಏನೂ ಮಾಡಬೇಡ. ಆ ಕುರಿತು ಯೋಚನೆಯೂ ಬೇಡ." ಇದು ನಿಜ: ಮನುಷ್ಯ ಉನ್ನತ ಸ್ಥಾನವನ್ನು ಗಳಿಸಿದಂತೆ, ಅವನ ಪ್ರಕೀರ್ತಿ ಹೆಚ್ಚುತ್ತದೆ. ಅವನ ಕಾರ್ಯಕ್ಷೇತ್ರ ವ್ಯಾಪಕಗೊಳ್ಳುತ್ತದೆ. ಅವನ ನಡವಳಿಕೆಯನ್ನು ನಿರೀಕ್ಷಿಸಿ ಪರೀಕ್ಷಿಸುವ ಜನ ಹೆಚ್ಚಾಗುತ್ತಾರೆ. ಇಲ್ಲಿ ಸ್ವಾಭಾವಿಕವಾಗಿ ಮತಭೇದ ಉಂಟಾಗುವುದರಿಂದ—ಟೀಕೆಗೆ ಅವಕಾಶ ದೊರೆಯುತ್ತದೆ. ಇದನ್ನು ಮೊದಲೇ ಪ್ರತಿಯೊಬ್ಬ ಸಾಮಾಜಿಕ ಕಾರ್ಯಕರ್ತನೂ ಅರಿತಿರುವುದೊಳ್ಳೆಯದು. ಒಳ್ಳೆಯ ಕೆಲಸ ಮಾಡಿದಾಗಲೂ, ಜನರು ದೋಷದ ಕಡೆಗೇ ಬೊಟ್ಟು ಮಾಡುತ್ತಾರಲ್ಲ? ಎಂದವರು ಆಕ್ಷೇಪಿಸಬಹುದು. ಆದರೆ, ಇಷ್ಟರವರೆಗೆ ಒಬ್ಬ ಮನುಷ್ಯನಿಂದಲೂ ಎಲ್ಲರನ್ನೂ ತೃಪ್ತಿಪಡಿಸುವುದಾಗಲಿಲ್ಲ ಎಂಬುದನ್ನು ಮರೆಯಲಾಗದು—ರಾಮರಾಜ್ಯದಲ್ಲಿ ಕೂಡ ಅಗಸರವನು ಸೀತಾ ಮಾತೆಯ ಕುರಿತು ತನ್ನದೇ ವಾಗ್ಬಾಣವನ್ನೆಸೆದನು. ಗಾಂಧೀಜಿಯನ್ನು ಲೋಕವೇ ಕೊಂಡಾಡುತಿದ್ದರೂ—ಸಾಮಾನ್ಯ ಮನುಷ್ಯನೊಬ್ಬನ ಭಿನ್ನಾಭಿಪ್ರಾಯದ, ಫಲಸ್ವರೂಪವಾಗಿ, ಅವರು ಗುಂಡಿನೇಟಿಗೆ ಎದೆಯೊಡ್ಡಿದರು!

ನಾವು ಎಷ್ಟೇ ಒಳ್ಳೆಯ ಕೆಲಸ ಮಾಡಿದರೂ ಜನರು ದೋಷವನ್ನೆತ್ತಿ ತೋರಿಸುವರು; ತಮ್ಮಿಂದ ಆಗದ ಕೆಲಸವನ್ನು ಮಾಡಿ ತೋರಿಸಿದನಲ್ಲ ಎಂಬ ಅಸೂಯಾಭಾವನೆ ಇಲ್ಲಿರಬಹುದು. ಹಾಗೆಯೇ ನಾವು ಹಾಗೆ ಮಾಡಲಿಲ್ಲವಲ್ಲ ಎಂಬ ನಿರಾಶೆಯಿಂದ—ಸಾಂತ್ವನಪಡೆಯಲು ಪರರ ಭರ್ತ್ಸನೆ ನೆರವಾದೀತು.

(೧೧ನೇ ಪುಟ ನೋಡಿರಿ)



ಬ್ರಿಟನಿನಲ್ಲಿ ತರಬೇತು ಹೊಂದುವ ಪರರಾಷ್ಟ್ರಗಳ ವಿದ್ಯಾರ್ಥಿ ದಾದಿಯರು.

ಅಮೃತತುಲ್ಯ ಕ್ಷೀರದ ಪೂರೈಕೆ

ಅತ್ಯಾಧುನಿಕ ಉಪಕರಣಗಳಿಂದ ಸುಸಜ್ಜಿತ ದುಗ್ಧಾಲಯ

ವೃಂದಾವನದಲ್ಲಿ ಹಸುಗಳನ್ನು ಮೇಯಿಸುತ್ತಿದ್ದ ಮುದ್ದು ಕೃಷ್ಣನ ಸ್ಮರಣೆಯಾದಾಗ, ಮನಸ್ಸು ಉಲ್ಲಸಿತಗೊಳ್ಳುವುದಲ್ಲವೆ! ಅಲ್ಲಿಯ ಗೋಸಮೂಹ ಅಮೃತ ತುಲ್ಯವಾದ ಹಾಲನ್ನು ಕೊಟ್ಟು, ಜನರ ಹೊಟ್ಟೆ ತಣಿಸುತ್ತಿತ್ತು. ಹಾಲು, ಮೊಸರು, ಬೆಣ್ಣೆ ತುಪ್ಪಗಳಿಂದ—ನಾವು ಸಮೃದ್ಧವಾದ ಜೀವನವನ್ನು ನಿರ್ವಹಿಸುತ್ತಿದ್ದ ಕಾಲ ಅದಾಗಿತ್ತು. ಆದರೆ ಇಂದು? ಒಂದು ಲೋಟ ಹಾಲಿಗಾಗಿ ಚಡಪಡಿಸುತ್ತೇವೆ. "ಸುಜಲಾಂ ಸುಫಲಾಂ ಸಸ್ಯ ಶ್ಯಾಮಲಾಂ" ಆಗಿದ್ದ ಭಾರತವನ್ನು ಸದಾ ಸಂತೃಪ್ತಗೊಳಿಸುತ್ತಿದ್ದ ಗೋ ಸಂಪತ್ತು ಇಂದೆಲ್ಲಿದೆ? ಜಲಪಾನದ ಬದಲು ದುಗ್ಧಪಾನವೇ ನಿತ್ಯ ನಿಯಮವಾಗಿದ್ದ ಭಾರತ ಇಂದು ಕಂಗಾಲರ ದೇಶವಾಗಿದೆ.

ಹಾಲಿನ ಮಹಿಮೆ

ವೇದ ಹಾಗೂ ಆಯುರ್ವೇದ ಶಾಸ್ತ್ರದ ಅನೇಕ ಗ್ರಂಥಗಳಲ್ಲಿ ಹಾಲನ್ನು ಅಮೃತ ತುಲ್ಯವೆಂದು ಬಣ್ಣಿಸಲಾಗಿದೆ. "ದನದ ಹಾಲು ಸೋಮರಸದೊಡನೆ ಬೆರೆಯಲಿ" (ಋಗ್ವೇದ). "ನವ ವಧೂವರರು ದನದ ಹಾಲನ್ನು ಕುಡಿದು ಬಲವಂತರೂ ಆಯುಷ್ಮಂತರೂ ಆಗಲಿ. ಸ್ವಾಸ್ಥ್ಯಪ್ರದರಾಗಿ ರಾಷ್ಟ್ರೋನ್ನತಿಯೊಡನೆ ಆತ್ಮೋತ್ಕರ್ಷವನ್ನೂ ಮಾಡಿಕೊಳ್ಳಲಿ. ಅವರ ಬಳಿಯಲ್ಲಿ ನಾನಾವಿಧವಾದ ಸೌಭಾಗ್ಯ ನೆಲಸಲಿ". "ಗೋಮಾತೆಯೇ, ಎತ್ತುಗಳಿಂದು ಕೂಡಿಕೊಂಡು ನಮ್ಮ ಹಟ್ಟಿಗೆ ಬಾರಮ್ಮಾ. ನಿನ್ನ ಸಾಮೀಪ್ಯದಿಂದ ನಮ್ಮ ಧನ ಧಾನ್ಯಗಳ ರಕ್ಷಣೆಯಾಗಲಿ ಎಂದೇ ನಮ್ಮ ಬಯಕೆ."(ಅಥರ್ವ)ದುಗ್ಧರಸದ ಕುರಿತಾದ ಸಾಂಗೋಪಾಂಗಜ್ಞಾನವನ್ನು ಅಂದಿನ ಜನ ಪಡೆದಿದ್ದರು. ಪ್ರಾಚೀನ ವೈದ್ಯಕೀಯ ಗ್ರಂಥಗಳಲ್ಲಿ (ಸುಶ್ರುತ, ವಾಗ್ಭಟ, ಚರಕ) ನಾನಾ ಬಗೆಯ ಪ್ರಾಣಿಗಳ ಹಾಲಿನ ಗುಣವನ್ನು ಪಚನ ಕ್ರಿಯೆಯ ಮೇಲೆ ಅವು ಮಾಡುವ ಪರಿಣಾಮವನ್ನೂ ವಿವೇಚಿಸಲಾಗಿದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಗೋವಧೆಗೆ ಉದ್ಯುಕ್ತನಾದವನಿಗೆ ಮೃತ್ಯುದಂಡವನ್ನು ಉಲ್ಲೇಖಿಸಲಾಗಿದೆ. ಮಹಾಭಾರತ ಗೋಗ್ರಹಣ ಪ್ರಸಂಗವೂ ಯೋಗೀಶ್ವರ ಶ್ರೀ ಕೃಷ್ಣನ ಗೋಪಾಲನೆಂಬ ಹೆಸರೂ– ಭಾರತದಲ್ಲಿ ಹಾಲಿಗೆ ಕೊಡಲಾದ ಮಹತ್ವದ ಸ್ಥಾನವನ್ನು ನಿರ್ದೇಶಿಸುತ್ತವೆ.

ಉತ್ತಮ ಖಾದ್ಯ ವಸ್ತು

ದನದ ಹಾಲಿನಷ್ಟು ಪವಿತ್ರ ಹಾಗೂ ಉತ್ತಮ ಖಾದ್ಯ ಪದಾರ್ಥವು ಇನ್ನೊಂದಿಲ್ಲ. ನಮ್ಮ ಮಕ್ಕಳು ಹತವೀರ್ಯರೂ, ತೇಜೋಹೀನರೂ ಆಗಿದ್ದರೆ, ಭವಿಷ್ಯವನ್ನು ಉಜ್ವಲವೆಂದು ಹೇಗೆ ಹೇಳಬಲ್ಲೆವು? ನಮ್ಮ ಸಾಂಸ್ಕೃತಿಕ ವೈಶಿಷ್ಟ್ಯವಾಗಿರುವ ಅಮೂಲ್ಯ ಗೋಧನವನ್ನು ಉತ್ತಮವಾದ ರೀತಿ ಲಾಭದಾಯಕವಾಗುವಂತೆ ಉಪಯೋಗಿಸಲು ನಮಗೆ ಬರಬೇಕು. ಇದನ್ನು ಕಂಡುಕೊಂಡೇ ನಾಲ್ಕು ವರ್ಷಗಳ ಹಿಂದೆ, ಮುಂಬಯಿಯಿಂದ ೪೦ ಮೈಲ ದೂರದ ಆರೆ ಗ್ರಾಮದಲ್ಲಿ ಶ್ರೇಷ್ಠತರವಾದ ದುಗ್ಧಾಲಯವೊಂದನ್ನು ತೆರೆದರು. ಭಾರತದಲ್ಲಿ ಇದನ್ನು ಸರಿಗಟ್ಟುವ ಇನ್ನೊಂದು ಕ್ಷೇತ್ರವಿಲ್ಲ: ಮಾತ್ರವಲ್ಲ, ಲೋಕದ ಉತ್ಕೃಷ್ಟ ಕೇಂದ್ರಗಳಲ್ಲಿ ಇದೊಂದು ಎನ್ನಲೇನೂ ಅಡ್ಡಿ ಇಲ್ಲ.

ಆರೆಯ ದುಗ್ಧಾಲಯವನ್ನು ೧೯೪೯ರಲ್ಲಿ ಮುಂಬಯಿ ಸರಕಾರ ಹಾಗೂ ಖಾಸಗೀ ಕಂಪೆನಿಗಳ ಸಹಕಾರದಿಂದ ಸ್ಥಾಪಿಸಲಾಯಿತು. ಪಾಶ್ಚರೈಜಿಂಗ್ ಮುಂತಾದ ಅತ್ಯಾಧುನಿಕ ಸಲಕರಣೆಗಳಿಂದ ಸಜ್ಜುಗೊಂಡಿರುವ ಈ ಕೇಂದ್ರವು ಮುಚ್ಚಿದ ಬಾಟಲಿಗಳಲ್ಲಿ ಮುಂಬಯಿಯ ಐದುಲಕ್ಷ ನಿವಾಸಿಕರಿಗೆ (ಎಂದರೆ ಒಟ್ಟು ಜನಸಂಖ್ಯೆಯ ೪೦%) ಅತ್ಯುತ್ತಮ ಹಾಲನ್ನು ಒದಗಿಸಿಕೊಡುತ್ತದೆ.

ಆರೆಯ ದುಗ್ಧಾಲಯ

ರಾಷ್ಟ್ರೀಯ ಹಾಗೂ ಅಂತರ್ರಾಷ್ಟ್ರೀಯ ಸಹಕಾರದದ್ಯೋತಕವಾಗಿ ಈ ಕೇಂದ್ರವಿದೆಎನ್ನಲಡ್ಡಿಯಿಲ್ಲ. ಭಾರತದ ಬೇರೆ ಬೇರೆ ರಾಜ್ಯಗಳ ಜಾನುವಾರುಗಳು, ಕೆಲಸಗಾರರೂ ತಂತ್ರಜ್ಞರೂ ಇಲ್ಲಿರುವರು. ಅಮೇರಿಕ, ಬ್ರಿಟನು, ಸ್ವಿಜರಲೇಂಡ್, ಸ್ವೀಡನುಗಳ ಯಂತ್ರ ಸಾಮಗ್ರಿ, ಫ್ರೆಂಚ್ ತಜ್ಞರು ಸಿಫಾರಸು ಮಾಡಿದ ಪಾಶ್ಚರೈಜಿಂಗ್ ಪದ್ಧತಿ—ಇವೆಲ್ಲವುಗಳ ಸಮನ್ವಯದ ಫಲವೇ ಮುಂಬಯಿ ನಾಗರಿಕರಿಗೆ ಬಾಟಲಿಯಲ್ಲಿ ತುಂಬಿಸಿಗುವ ಹಾಲು.

ಮುಂಬಯಿಯಲ್ಲಿ ಅನಾರೋಗ್ಯಪ್ರದವಾದ ದೊಡ್ಡಿಗಳು ಎಲ್ಲೆಲ್ಲೂ ತುಂಬಿದ್ದು, ಸಾರ್ವಜನಿಕರ ಸ್ವಾಸ್ಥ್ಯ ಭಂಗ ಮಾಡುತ್ತಿದ್ದುವು. ಶುದ್ಧ ಹಾಲು ಎಲ್ಲಿಯೂ ಸಿಗುತ್ತಿರಲಿಲ್ಲ ಹಾಲಿಗೆ ಬೆರಸಿದ ನೀರು ಕೊಡುಕೊಳ್ಳಲಾಗಿತ್ತು! ಇದನ್ನು ನಿವಾರಿಸಬೇಕೆಂದು, ಮುಂಬಯಿಯ ಆಗಿನ ಪೂರೈಕೆ ಮಂತ್ರಿ ಶ್ರೀ ದಿನಕರರಾವ ದೇಸಾಯರು ಈ ಕೇಂದ್ರದ ಯೋಜನೆಯನ್ನು ಮುಂದಿಟ್ಟರು. ಈ ಯೋಜನೆಯನ್ವಯ ೧೫೦೦೦ ಹಾಲು ಕರೆಯುವ ಗೋಸಂಪತ್ತನ್ನು ನಗರದಿಂದ ಹೊರಗೆ, ಆರೆಯ ದುಗ್ಧಾಲಯಕ್ಕೆ ಸ್ಥಳಾಂತರಿಸಿದರು. ಆರೆ ಮೊದಲು ಬೀಳುಭೂಮಿಯಾಗಿತ್ತಾದರೂ, ಈಗ ಅಲ್ಲಿಯ ೩೫೦೦ ಎಕ್ರೆ ಸ್ಥಳಗಳಲ್ಲಿ ೨೯ ಅತ್ಯಾಧುನಿಕ ದುಗ್ಧ ಗೃಹಗಳನ್ನು ತೆರೆಯಲಾಗಿದೆ ಕಲ್ಲು ಹಾಗೂ ಕಾಂಕ್ರೀಟುಗಳ ಕಟ್ಟಡಗಳಲ್ಲಿ ಆರೋಗ್ಯಕರವಾದ ವಾತಾವರಣದಲ್ಲಿ ಹಸುಗಳು ಇವೆ. ಸುತ್ತಲೂ ರಮ್ಯವಾದ ಹೂತೋಟ, ಹಾಗೂ ಹಸುರಾದ ಮೈದಾನವಿದೆ. ಈ ವರ್ಷ ಇನ್ನೂ ನಾಲ್ಕು ದುಗ್ಧ ಗೃಹಗಳನ್ನು ತೆರೆಯುವರು.

ಪ್ರತಿಯೊಂದೂ ದುಗ್ಧಗೃಹಕ್ಕೆ ಲಕ್ಷ ರೂಪಾಯಿ ವೆಚ್ಚ ಬರುತ್ತದೆ. ತವ ಗೋಸಂಪತ್ತನ್ನು ಇಲ್ಲಿರಗೊಟ್ಟುದಕ್ಕಾ ಅದರ ರಕ್ಷಕರು ಬಾಡಿಗೆ ಕೊಡಬೇಕ ನೈರ್ಮಲ್ಯಕ್ಕೆ ಹೆಚ್ಚಿನ ಗಮನಕೊ ವರು. ಪಶು ರೋಗಗಳಿಗೆ ಉತ್ತಮವಾ ಧರ್ಮಾರ್ಥ ಚಿಕಿತ್ಸೆಯ ಏರ್ಪಾಡು ಇದೆ ಇಲ್ಲಿಯ ಉತ್ಕೃಷ್ಟ ಪರಿಸ್ಥಿತಿಯಿಂ ಜನರು ಸಂಪೂರ್ಣ ತೃಪ್ತರಾಗಿದ್ದಾರೆ.

ಶಾಸ್ತ್ರೀಯ ಪದ್ಧತಿ

ಪೂರ್ವಾರ್ಧ ಗೋಲದಲ್ಲಿಯೇ ಮೊ ದಲಿಸಿದ–ಇಲ್ಲಿಯ ಪಾಶ್ಚರೈಜಿಂಗ್ ವಿಭಾ ಗವು ತುಂಬ ಉಪಯೋಗಿಯಾಗಿದೆ. ಸಿಗೆ ೫೦೦ ಮಣ ಹಾಲನ್ನು ಪಾಶ್ಚರೈಜಿಂ ಗ- ಕ್ರಮಕ್ಕೆ ಒಳಪಡಿಸುವ ಸಾಮರ್ಥ್ಯ ಇದಕ್ಕಿದೆ. ಇದು ಇನ್ನೂ ಎಷ್ಟೋ ವರ್ಷಗಳವರೆಗೆ ಮುಂಬಯಿಯ ಪೂರೈಕೆ ಸಾಕು ಈಗ ದಿನಕ್ಕೆ ೩೦೦೦ ಮಣ (ಎ ದರೆ ೨೫೦೦೦ಗೆಲನು) ಹಾಲನ್ನು ಬಾಟ ಯಲ್ಲಿ ತುಂಬುತ್ತಾರೆ.

ಹಾಲಿನ ಮಾದರಿಯನ್ನು ತೆಗೆದುಕೊ ಡು, ಚೆನ್ನಾಗಿ ಪರೀಕ್ಷಿಸುವುದೇ ಮೊದಲ ನ ಕೆಲಸ. ಇದಕ್ಕಾಗಿ ಸುಸಜ್ಜಿತವಾ ಬೆಕ್ಟೀರಿಯಾ ಲಾಜಿಕಲ್ ಪ್ರಯೋಗಶಾ ಲೆಯೊಂದಿದೆ. ಹಾಲಿನ ಗುಣವನ್ನನುಸ ಸಿ, ಅದಕ್ಕೆ ಬೆಲೆ ತೆರುತ್ತಾರೆ.

ದುಗ್ಧಾಲಯದಲ್ಲಿ ಹಾಲನ್ನು ೧೬ ಫಾರನೈಟ್ ವರೆಗೆ ಬಿಸಿಮಾಡಿ, ೪೦° ಫ ರನೈಟಿಗೆ ತಣಿಸುವ ಪಾಶ್ಚರೈಜಿಂಗ್ ಮವನ್ನು ಅನುಸರಿಸುತ್ತಾರೆ. ಇದಕ್ಕೆ ಗಲುವ ಸಮಯ ೧೫ ಸೆಕೆಂಡುಗಳು.

ದಿನಾಲೂ ೩,೫೦,೦೦೦ ಬಾಟಲಿಗಳ ಹಾಲು ತುಂಬಿಸುವರು. ಇದಕ್ಕಾಗಿ ಎ ಟು ಪ್ರತ್ಯೇಕ ಯಂತ್ರಗಳಿವೆ. ಕೈಯಿಂ ಮುಟ್ಟದೆನೇ ಈ ಎಲ್ಲ ಕೆಲಸ ನಡೆಯು ದೆ. ಮುಚ್ಚಳವನ್ನು ಹಾಕಲಿಕ್ಕೂ ಸ್ವಚಾ ಲಿತ ಯಂತ್ರ ಸ್ಥಾಪನವಿದ್ದು, ಅದು ಅಲ ಮೂನಿಯಂ ಟೊಪ್ಪಿಯನ್ನಿಡುತ್ತದೆ.

[೧೧ನೇ ಪುಟ ನೋಡಿರಿ]

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ
O. S. No. 374/195
ಮರಿಯಮ್ಮ ಭಟ್ಟು — ವಾದಿ
ಮತ್ತು
ಹಜರಾಬಿ ಕೂಡಾ—ಪ್ರತಿವಾದಿ ಇವರೊಳ

ಸದ್ರಿದಾವೆಯ ಸಪ್ಲಿಮೆಂಟ 4 ನೇ ಪ್ರ ವಾದಿ ಮ್ಯಾಕಲ್ ಅಬ್ಬೆವು ಸಾಲ್ಯೊಪರ ಅ ವು ಮಗ, ಕಾರ್ಕಳ ತಾಲೂಕು ಕುಕ್ಕು ದೂರು ಗ್ರಾಮದಲ್ಲಿರುವವ.

ಸದ್ರಿ 4ನೇ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನಂದರೆ —

ಸದ್ರಿದಾವೆಯಲ್ಲಿ ವಾದಿಯು ಸ್ವಾಧೀನ ಕೇಳಿದ ಆಸ್ತಿ ಪೈಕಿ ಕೆಲವು ಅಂಶವನ್ನು ನೀ ವು ಮೂಲಗೇಣಿಗೆ ಪಡೆದಿರುವದಾಗಿ ಯುವುದರಿಂದ ನಿಮ್ಮ ತಕ್ರೀರು ನಿವೃ ಯಿಂದ ತನಗೆ ಆಸ್ತಿಸ್ವಾಧೀನತೆ ಕೊಡಿಸ ಕಾಗಿ ವಗೈರೆ ನಿವೃತ್ತಿ ಕೇಳಿ ನಿಮ್ಮನ್ನು ಸದ್ರಿ ದಾವೆಯಲ್ಲಿ ಸಪ್ಲಿಮೆಂಟು 4ನೇ ಪ್ರತಿ ವ್ಯಾಗಿ ಪಕ್ಷಮಾಡಿರುವುದೆ. ನಿಮ್ಮ ಹಾಜರಾ ಗ್ಗೆ ಸದ್ರಿದಾವೆಯು 4-10-52ಕ್ಕೆ ಇಟ್ಟಿ ನೀವು ಉದಾಹರಣೆ ದಾಖಲು ಮಾಡುವದಿ ತಾರೀಕು 4-10-52 ನೇ ದಿವಸ ಮೇಲ್ಕ ದ ಕೋರ್ಟಿನಲ್ಲಿ ಹಗಲು 10 ಘಂಟೆಗೆ ಸ ಜರಾಗಿ ಹಾಜರುಮಾಡತಕ್ಕದ್ದು. ತಪ್ಪಿದ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವುದು. ಟ ಸಂಗ್ತಿಯನ್ನು ಕೋರ್ಟ ಹುಕುಂ ಪ್ರ ರ ಈ ಮೂಲಕ ತಿಳಿಸಲಾಗುತ್ತದೆ.

K. V. Kamath
Advocate for Plaint
Karkala 19 9 1952

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.
Moolky, S. K.

ಆಗ--?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿಯುವುದು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ, ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿ ಇರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕಂಡೊಡನೆ ನಿಮ್ಮದೇ ಆಗುವ, ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ, ನಿಮ್ಮ ನಾಡಿನ

ಈ ಕಂಪೆನಿಯಲ್ಲಿಯೇ ವಿಮೆ ಇಳಿಸಿರಿ

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ. ಸ್ಥಾಪನೆ: ೧೯೩೫
The Canara Mutual Assurance Co. Ltd.
Head Office: UDIPI, S. India. Estd: 1935.

ರಾಮತೀರ್ಥ
ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ. ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ವಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2--0--0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಜನಮತ ರೂಪಿಸುವ ಸಾಧನ

ಉಚ್ಚ ಮಟ್ಟದ ಪತ್ರಿಕೋದ್ಯಮದ ಸಲ್ಲಕ್ಷಣ

ವೃತ್ತ ಪತ್ರಿಕೆಗಳ ಮಹತ್ವವನ್ನು ವಿವರಿಸಿ ಹೇಳುತ್ತಾ ಹೋದರೆ–ದೊಡ್ಡ ರಾಮಾಯಣವೇ ಆದಾದೀತು. ಹಾಗೆಂದು–ವ್ಯಕ್ತಿತ ಪ್ರಪಂಚದಲ್ಲಿ ಸರಕಾರ ಪರಿಮೋರಿಯಾಗಿ ನಿಂತಿರುವ ವೃತ್ತ ಪತ್ರಿಕೆಗಳನ್ನು ಕಡೆಗಣಿಸಿ ನಡೆಯುವ ಮೂರ್ಖತನ ಮಾತ್ರ ಯಾರೂ ತೋರಲಾರರು. ಇಂದಿನ ಜನಜೀವನದಲ್ಲಿ ವೃತ್ತ ಪತ್ರಿಕೆಗಳು ಅತ್ಯಂತ ಅವಶ್ಯಕ ವಸ್ತುಗಳಾಗಿ ಬಂದಾಗಿವೆ. ರೇಡಿಯೋ, ಚಲಚ್ಚಿತ್ರ, ಸರಕಾರೀ ಪ್ರಚಾರ ಶಿಕ್ಷಣಮಂದಿರ ಮುಂತಾದವುಗಳೊಂದಿಗೆ, ವೃತ್ತ ಪತ್ರಿಕೆಗಳ ಪ್ರಾಬಲ್ಯ ಹೆಚ್ಚುತ್ತಿದೆ. ಇವು ಜನತೆಯ ಪ್ರತಿನಿಧಿಯಾಗಿ, ಮಾರ್ಗದರ್ಶಿಯಾಗಿ, ಕೆಲಸಮಾಡುತ್ತಿವೆ. ಪ್ರಜಾ ಪ್ರಭುತ್ವದಲ್ಲಿ ವೃತ್ತ ಪತ್ರಿಕೆಗಳೇ ಜನತೆ ಹಾಗೂ ಸರಕಾರದ ನಡುವೆ ನಿಕಟ ಸಂಬಂಧ ಕಲ್ಪಿಸುವ ಗೊಣಸು. ಜನರಲ್ಲಿ ಜ್ಞಾನ ಹೆಚ್ಚಿದಷ್ಟು, ಹಾಗೂ ಲೋಕದ ಆಟೋಪಟಗಳು ವ್ಯಾಪಕಗೊಂಡಷ್ಟು, ವೃತ್ತ ಪತ್ರಿಕೆಗಳ ಸ್ವರೂಪದಕ್ಷಯೂ ವೈಶಾಲ್ಯವೂ ಬರುತ್ತದೆ. ತಿಳಿಯಾದ ವಿಮರ್ಶೆ, ನ್ಯಾಯಪ್ರಿಯತೆ, ಸತ್ಯದೃಷ್ಟಿ ಹಾಗೂ ಸಹೃದಯತೆ–ಪತ್ರಿಕೆಗಳ ವೈಶಿಷ್ಟ್ಯವಾಗಿದ್ದರೆ ಚೆನ್ನ. ಅಗಾಧವಾದ ತಿಳುವಳಿಕೆ ಮತ್ತು ಆಳವಾದ ಅಧ್ಯಯನ ಪತ್ರಿಕೋದ್ಯಮಿಯ ಶಕ್ತಿಯನ್ನು ಹೆಚ್ಚಿಸುತ್ತವೆ.

ಪತ್ರಿಕೋದ್ಯಮದಲ್ಲಿ ತತ್ವನಿಷ್ಠೆ

ಇಂದು ಪತ್ರಿಕೋದ್ಯಮವು ಒಂದು ಕೈಗಾರಿಕೆಯಾಗಿಯೇ ಬೆಳೆದಿದೆ ಎಂದರೆ ಅತಿಶಯೋಕ್ತಿಯಲ್ಲ. ಆದರೆ ಒಂದು ಕೈಗಾರಿಕೆಯ ಕ್ಷೇತ್ರವ್ಯಾಪ್ತಿಗಿಂತಲೂ ಪತ್ರಿಕೆಗಳ ವೈಶಾಲ್ಯ ಬಹಳ ಹೆಚ್ಚು–ಮತ್ತು ಅವು ಮಾಡುವ ಪರಿಣಾಮ ಕೂಡ ಅತ್ಯಧಿಕವೆಂದು ಒಪ್ಪಿಕೊಳ್ಳದೆ ಗತ್ಯಂತರವಿಲ್ಲ. ವೃತ್ತ ಪತ್ರಿಕೆಗಳು ಉದ್ಯಮವಾಗಿದ್ದಂತೆ, ಒಂದು ಉಚ್ಚಮಟ್ಟದ ಕಲೆಯಾಗಿರುವುದೇ ಇದಕ್ಕೆ ಕಾರಣ. ಪತ್ರಿಕೋದ್ಯಮಕ್ಕೆ ಬಂಡವಾಳ ಬೇಕಾದರೂ, ಅಷ್ಟಿದ್ದರೆ ಸಾಕಾಗುವುದಿಲ್ಲ ಜೊತೆಗೆ ಸೂಕ್ಷ್ಮ ಬುದ್ಧಿಯ ಸಂಪಾದಕ [illegible] ಲೇಖಕರ ನೆರವು ಅತ್ಯಗತ್ಯ. ಬಂಡವಾಳವನ್ನು ಉಪಯೋಗಿಸಿದಕ್ಕೆ ಯೋಗ್ಯ ಪ್ರತಿಫಲ ದೊರೆಯಬೇಕಾದರೆ, ವೃತ್ತಪತ್ರಿಕೆಗಳು ಹೆಚ್ಚು ಆಕರ್ಷಕವೂ, ವಿಚಾರ ಪ್ರಚೋದಕವೂ, ಆಗಬೇಕು. ಸತ್ಯವನ್ನಾದರೂ ವಿಚಾರದ ಒರೆಗಲ್ಲಿಗೆ ಹಚ್ಚಿ, ಅದರ ತಿರುಳನ್ನು ಜನರ ಮುಂದಿಡುವುದು ಪತ್ರಿಕೆಗಳ ಕರ್ತವ್ಯ, ಇದನ್ನೇ, ಸಂಪಾದಕಾ ನೀತಿಯೆಂದು ತಿಳಿದವರು ಹೇಳುತ್ತಾರೆ. ವೃತ್ತಪತ್ರಿಕೆಗಳ ಪ್ರಾಬಲ್ಯ ನಿರ್ಣಯವನ್ನು ಸಂಪಾದನಾ ನೀತಿಯ ಮೇಲಿಂದ ಮಾಡಬೇಕು. ಸ್ಪಷ್ಟವಾದಿತನವು ಸಂಪಾದನಾ ನೀತಿಯಲ್ಲಿ ಕಂಡುಬರುವುದೇ, ಅಥವಾ ವಂಚನೆಯೇ ಅದರ ಜೀವಾಳವಾಗಿದೆಯೇ–ಎಂಬುದು ಇಲ್ಲಿನ ಮುಖ್ಯ ಪ್ರಶ್ನೆ. ಆದರೆ ತತ್ವನಿಷ್ಠೆ ಹಾಗೂ ಆದರ್ಶಗಳನ್ನು ನೆಚ್ಚಿಕೊಂಡು ನಡೆಯುವುದು ಬಹಳ ಕಠಿಣ ಕೆಲಸವಾಗಿರುವುದರಿಂದ— ಪತ್ರಿಕೆಗಳು ಹಂಗಿಗೆ ಒಳಗಾಗಿ ನಡೆಯುವ ಸಂಭವವೇ ಅಧಿಕ.

ಉತ್ಕೃಷ್ಟ ವ್ಯಕ್ತಿತ್ವದ ಅಗತ್ಯ

ದಿವಂಗತ ಕಿಶೋರಲಾಲ ಮಶ್ರೂವಾಲರನ್ನು ಗೌರವಿಸುವ ಜನ ಅವರ ಸ್ಪಷ್ಟವಾದಿತನಕ್ಕೆ, ನ್ಯಾಯಪ್ರಿಯತೆಗೆ, ಘರ್ಷಣೆಯಿಂದ ಪ್ರಕಟಪಡಿಸುವ ಮೌಲಿಕ ವಿಚಾರಕ್ಕೆ ಮತ್ತು ತತ್ವ ನಿಷ್ಠೆಗೆ ಬೆಲೆ ಕೊಡುವವರೇ, ಮಶ್ರೂವಾಲರು ರಾಜಕೀಯ ಕ್ಷೇತ್ರದ ಉಜ್ವಲ ಕರ್ಮಕರರಿದ್ದಂತೆ– ಶಿಕ್ಷಣತಜ್ಞರೂ ಹೌದು. ಈ ಪ್ರವೃತ್ತಿಗೆ ಗಾಂಧೀಜಿಯ ಅಹಿಂಸೆಯ ಒಪ್ಪವಿದ್ದುದರಿಂದ – ಕಟುವಚನದ ಅಂತರಾಳದಲ್ಲಿ ಕೂಡ ನಮ್ರತೆಯ ಸ್ರೋತ ಪ್ರವಹಿಸುತ್ತಿರುವುದನ್ನು ಕಾಣಬಹುದಿತ್ತು. ವೃತ್ತ ಪತ್ರಿಕಾ ಸಂಪಾದಕರು ಈ ಯೋಗ್ಯತೆಯನ್ನು ಹೆಚ್ಚಿಸಿಕೊಳ್ಳುವ ಅಗತ್ಯವನ್ನು ಹೇಳಿ ತೀರದು. ಹಾಗೆಯೇ ವೃತ್ತ ಪತ್ರಿಕೋದ್ಯಮಿ ಸತತೋದ್ಯೋಗ ಶೀಲನೂ ಹೌದು. ಅವನಿಗೆ ವಿರಾಮವಿಲ್ಲ. ದಿನದ ಇಪ್ಪತ್ತನಾಲ್ಕು ತಾಸನ್ನು ಅವನು ನಿರೀಕ್ಷಣೆ, ಅಧ್ಯಯನ ಹಾಗೂ ಬರವಣಿಗೆಯಲ್ಲಿ ಕಳೆಯುವುದು ಅನಿವಾರ್ಯವಾಗುತ್ತದೆ. ಮರಣಕ್ಕೆ ಒಂದು ತಾಸು ಮುಂಚಿತವಾಗಿ ಮಶ್ರೂವಾಲರು ತಮ್ಮ "ಹರಿಜನ" ಪತ್ರಿಕೆಗೆ ಲೇಖನಗಳನ್ನು ಬರೆಯುತ್ತಿದ್ದರು ಎಂದು ಕೇಳಿದ್ದೇವೆ. ಇಂದಿನ ಪ್ರಪಂಚ ತೊಡಗಿರುವ ನಾಗಾಲೋಟವನ್ನು ಬೆಂಬತ್ತಿ ಬಸವಳಿಯುವ ಭೀರುವಿಗೆ ಪತ್ರಿಕಾ ಪ್ರಪಂಚದಲ್ಲಿ ಮನ್ನಣೆ ಇಲ್ಲ–ಸ್ಥಾನವೂ ಇಲ್ಲ. ಸೂಕ್ಷ್ಮಾವಲೋಕನ, ಜ್ವಲಂತ ಪ್ರತಿಭೆ ಹಾಗೂ ಕಲಾತ್ಮಕ ದೃಷ್ಟಿಯನ್ನು ಸಮನ್ವಯ ಮಾಡಿಕೊಂಡು ಸತ್ವವನ್ನೆತ್ತಿ ತೋರಿಸುವ ಉತ್ಕೃಷ್ಟ ವ್ಯಕ್ತಿತ್ವವಿದ್ದವನೇ ಶ್ರೇಷ್ಠ ವೃತ್ತ ಪತ್ರಿಕೋದ್ಯಮಿಯಾಗಬಲ್ಲ

ನಾಗಾಲೋಟದ ಬದಲು ಅಂಬೆಗಾಲು

ಶ್ರೀ ನೆಹರೂ ಈಚೆಗೆ ಈ ವಿಷಯವನ್ನು ಚೆನ್ನಾಗಿ ಮಥಿಸಿ ಕೆಲವು ಒಳ್ಳೆಯ ಮಹತ್ವದ ಮಾತನ್ನಾಡಿದ್ದಾರೆ. ಓಡುವ ಜಗತ್ತಿನ ಹಿಂದೆ ನಾವು ಅಂಬೆಗಾಲಿಡುತ್ತ ಸಾಗುತ್ತಿರುವಂತೆ ಭಾಸವಾಗುತ್ತಿದೆ, ಎಂದವರು ಹೇಳುತ್ತಾರೆ. ಈ ಕಾರಣದಿಂದ ನಾವು ಉತ್ಸಾಹ ಕುಂದಿ ಮುದುಕರಾಗುತ್ತಾ ನಡೆದಿರುವೆವೇ ಎಂದವರು ಅನುಮಾನಿಸುತ್ತಾರೆ. ಆದರೆ, ಜಗತ್ತು ಓಡುವಾಗ, ಪ್ರತಿಯೊಂದೂ ಕ್ಷಣಕ್ಕೂ ಇನ್ನಿಲ್ಲದ ಮಹತ್ವ ಬರುತ್ತದೆ. ಆಳವಾದ ಅಭ್ಯಾಸಕ್ಕಾಗಲೀ, ಸೂಕ್ಷ್ಮಾವಲೋಕನಕ್ಕಾಗಲೀ ಆಸ್ಪದ ದೊರೆಯದೆ, ಚಲಚ್ಚಿತ್ರದಂತೆ ಒಂದರ ಹಿಂದೊಂದಾಗಿ ನಡೆಯುವ ಘಟನೆಗಳ ಮೇಲೆ ದೃಷ್ಟಿ ಹಾಯಿಸುವುದೊಂದೇ ಕೆಲಸವಾಗುತ್ತದೆ. ಆದುದರಿಂದ ನಮ್ಮ ಜ್ಞಾನಬಲವನ್ನು ಸಂವರ್ಧಿಸಿಕೊಳ್ಳುವುದಕ್ಕೆ ಅನುಕೂಲ ದೊರೆಯದೆ ಹೋಗುವ ಸಂದರ್ಭವೇ ಹೆಚ್ಚು. [illegible] ಪುಸ್ತಕಭಂಡಾರದಲ್ಲಿ ಇದ್ದುದು ಕೇವಲ ೫೦ ಪುಸ್ತಕಗಳು: ಅವನು ಜೀವಮಾನವಿಡೀ ಅವುಗಳ ಅಧ್ಯಯನ ಮಾಡಿದ್ದ. ಆದರೆ ಅವನು ಆ ಯುಗದಲ್ಲಿಯೇ ಅತ್ಯಂತ ಮೇಧಾವಿ ಎನಿಸಿಕೊಂಡು ಪ್ರಸಿದ್ಧನಾದ. ಇಂದು ನಾವು ದಿನಕ್ಕೆ ಐದು ಪತ್ರಿಕೆಗಳನ್ನು ನೋಡುತ್ತೇವೆ; ಓದುತ್ತೇವೆ. ಆದರೆ ಒಂದು ಪಂಕ್ತಿಯಾದರೂ ನಮ್ಮ ನೆನಪಿನಲ್ಲಿ ಉಳಿಯುವುದಿಲ್ಲ. ವೃತ್ತ ಪತ್ರಿಕೆಗಳಲ್ಲಿ ನಿತ್ಯ ಸತ್ಯದ ಅಂಶ ಕಡಿಮೆ ಇರುವುದೂ–ಅನಪೇಕ್ಷಿತ ಟೀಕೆ ಟಿಪ್ಪಣಿ ಹಾಗೂ ಭಾವೋದ್ವೇಗವನ್ನು ಹುಟ್ಟಿಸುವ ಪ್ರಸಂಗಗಳ ವರ್ಣನೆಯೂ ತುಂಬಿರುವುದು ಇದಕ್ಕೆ ಕಾರಣ. ನಮ್ಮ ಪತ್ರಿಕೆಗಳು ಸರಕಾರದ ಲೋಪದೋಷಗಳನ್ನು ರಾಷ್ಟ್ರ ರಾಷ್ಟ್ರಗಳೊಳಗಿನ ಯುದ್ಧ ವೈಷಮ್ಯದ ಬಣ್ಣನೆಯನ್ನೂ ಮಾಡುವಷ್ಟು–ರಚನಾತ್ಮಕ ರಂಗದ ಚಟುವಟಿಕೆಗಳನ್ನು ಪ್ರಸಿದ್ಧಿಸುವುದಿಲ್ಲ.

ರಚನಾತ್ಮಕ ಪ್ರವೃತ್ತಿಗೆ ಪ್ರೋತ್ಸಾಹ

ತಮ್ಮ ಪತ್ರಿಕೆಗಳನ್ನು ಓದುವ ಜನ ಹೆಚ್ಚಬೇಕೆಂದು ಅದರ ಒಡೆಯರು ಅಪೇಕ್ಷಿಸುವುದು ತಪ್ಪಲ್ಲ. ಆದರೆ ಕೀಳುಮಟ್ಟದ ಸುದ್ದಿಗಳಿಂದ ಜನಮನರಂಜನೆ ಮಾಡಿ, ಅವರ ಅಭಿರುಚಿಯನ್ನು ಕೆಡಿಸಿ, ಗಳಿಸಿಕೊಳ್ಳುವ ಹಂಚಿಕೆಯನ್ನು ವೃತ್ತಪತ್ರಿಕೆಗಳ ಒಡೆಯರು ಕೈಗೊಳ್ಳುವುದು ಚೆನ್ನಾದುದಲ್ಲ. ಸಂಪಾದಕನಲ್ಲಿ ಸಂಯಮವು ಇರಲೇಬೇಕಾದ ಮುಖ್ಯ ಗುಣ. ಪತ್ರಿಕಾ ಸ್ವಾತಂತ್ರ್ಯವನ್ನು ಹತ್ತಿಕ್ಕುವುದು ಪ್ರಜಾಪ್ರಭುತ್ವದ ಇಂದಿನ ದಿನಮಾನದಲ್ಲಿ ಯೋಗ್ಯವಲ್ಲವಾದರೂ–ಅಸಂಯಮಿಯಾದ ಸಂಪಾದಕರ ಕೊಳಕು ವರ್ತನೆಯನ್ನು ಕ್ಷಮಿಸುವುದು ಸಾಧ್ಯವಿಲ್ಲ. ಸಾರ್ವಜನಿಕ ಶಾಂತಿ ಹಾಗೂ ನೈರ್ಮಲ್ಯ ರಕ್ಷಣೆ ನಾಗರಿಕ ಸರಕಾರದ ಜವಾಬ್ದಾರಿಯಾಗಿರುವಾಗ, ಕೆಲವೊಂದು ವಿಧಿನಿಯಮಗಳನ್ನು ಅದು ಜಾರಿಗೆ ತಂದೇ ತೀರುತ್ತದೆ.

ನಮ್ಮ ಪತ್ರಿಕೆಗಳು ಸಾಮಾನ್ಯವಾಗಿ ಉಚ್ಚ ಮಟ್ಟವನ್ನು ಕಾಯ್ದುಕೊಂಡು ಬಂದಿವೆ. ಆದರೆ ಪೇಟೆಯ ಜನರ ವರ್ತಮಾನಕ್ಕಿಟ್ಟ ಮಹತ್ವ ಕೊಡುವವಲ್ಲದೆ— ಹಳ್ಳಿಗರ ಸುದ್ದಿಯನ್ನು ಮಹತ್ವದ್ದೆಂದು ಗಣಿಸುವುದಿಲ್ಲ. ಅಲ್ಲಿಯ ಜನರ ನಡುವೆ ಪತ್ರಿಕೆಗಳ ಪ್ರಚಾರ ಅಷ್ಟು ಹೆಚ್ಚು ಪ್ರಮಾಣದಲ್ಲಿ ಆಗಿರದಿರುವುದು ಇದಕ್ಕೆ ಕಾರಣವಿದ್ದೀತು. ಆದರೂ–ಹಳ್ಳಿಯ ಸಮಸ್ಯೆಗಳ ಮತ್ತು ಹಳ್ಳಿಗರ ಅಭಿರುಚಿಗೆ ಒಪ್ಪುವ ಚರ್ಚೆ ನಡೆದರೆ ಒಳ್ಳೆಯದು. ಏಕೆಂದರೆ, ಬಡತನ, ರೋಗರುಜೆಗಳು, ನಿರುದ್ಯೋಗ, ಅವಿದ್ಯೆ ಮುಂತಾದವುಗಳನ್ನು ದೂರೀಕರಿಸಿ, ಜನರಲ್ಲಿ ಆತ್ಮವಿಶ್ವಾಸವನ್ನು ಅಂತಃಶಕ್ತಿಯನ್ನೂ ಹೆಚ್ಚಿಸಲಿಕ್ಕೆ ಪತ್ರಿಕೆಗಳು ಉಪಯೋಗಿಯಾಗಿವೆ. ಪತ್ರಿಕೆ ಪ್ರಚಾರ ಸಾಧನವಲ್ಲ–ಶಿಕ್ಷಣದ ಸಾಧನ. ಅಶ್ಲೀಲಕ್ಕೆ ಎಡೆಕೊಡದೆ, ನಮ್ಮ ಸ್ವಾತಂತ್ರ್ಯ ರಕ್ಷಣೆಗೆ ಪೋಷಕವಾಗುವಂತೆಯೂ, ಜನರ ರಚನಾತ್ಮಕ ಪ್ರವೃತ್ತಿಗೆ ಪ್ರೋತ್ಸಾಹ ದೊರೆಯುವಂತೆಯೂ, ಪತ್ರಿಕೋದ್ಯಮ ಬೆಳೆಯಬೇಕು.

ಉಪರಾಷ್ಟ್ರಾಧ್ಯಕ್ಷ ರಾಧಾಕೃಷ್ಣನ್ ಹೇಳುವಂತೆ, ಜನಕ್ಕೆ ಏನು ಬೇಕೋ ಅದನ್ನು ಕೊಡದೆ–ಪತ್ರಿಕೆಗಳು ಕೊಡುವುದನ್ನೆ ಜನತೆ ಅಚ್ಚುಮೆಚ್ಚಿನಿಂದ ಸ್ವೀಕರಿಸುವಂತೆ ಮಾಡಬೇಕು

ಸರ್ವಸ್ತರತು ದುರ್ಗಾಣಿ
ಸರ್ವೋ ಭದ್ರಾಣಿ ಪಶ್ಯತು
ಸರ್ವಃ ಸದ್ಬುದ್ಧಿ ಮಾಪ್ನೋತು
ಸರ್ವಃ ಸರ್ವತ್ರ ನಂದತು॥

ನೀವೇಕೆ ಸೇವಿಂಗ್ಸ್ ಬೇಂಕ್ ಖಾತೆಯನ್ನು ತೆರೆಯಬೇಕು?

ಬೇಂಕಿನಲ್ಲಿಟ್ಟ ಹಣವು ಯಾವಾಗಲೂ ಭದ್ರವಾಗಿರುತ್ತದೆ, ಗುಪ್ತವಾಗಿ ಕೇಖರಿಸಿಟ್ಟ ಹಣಕ್ಕೆ ಒಂದಲ್ಲ ಒಂದು ದಿನ ಗಂಡಾಂತರವೆ. ಅಂತಹ ನಿಧಿಯು ಕಳ್ಳಕಾಕರ ವಶವಾಗಲು, ಕೈ ಒದಲಾವಣೆಯಾಗಲು ಇಲ್ಲವೆ ಇಲಿಗಳು ಅಥವಾ ಬಿಳಿ ಇರುವೆಗಳಿಂದ ನಾಶವಾಗಿ ಹೋಗಬಹುದು. ಆಕರ್ಷಕ ಬಡ್ಡಿಯನ್ನು ನಾವು ಕೊಡುವುದರಿಂದ ನಮ್ಮ ಸೇವಿಂಗ್ಸ್ ಖಾತೆಯಲ್ಲಿಟ್ಟ ನಿಮ್ಮ ಹಣವು ದಿನಗಿಂದ ದಿನಕ್ಕೆ ಬೆಳೆಯುತ್ತಲೇ ಹೋಗುವುದು.

ಇಂದೇ ಸೇವಿಂಗ್ಸ್ ಬೇಂಕ್ ಲೆಖ್ಖವನ್ನು ತೆರೆಯಿರಿ

ದಿ ಕೆನರಾ ಇಂಡಸ್ಟ್ರಿಯಲ್
ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.
ಸ್ಥಾಪನೆ. 1925 ಹೆಡ್ ಆಫೀಸು. ಉಡುಪಿ

The Canara Industrial &
Banking Syndicate Limited.
Estd: 1925 H. O: UDIPI.

For Protection and Provision

Consult
The New Guardian of India Life Insurance Co., Ltd.
Estd] Head office: MADRAS [1934

A Policy in this Progressive Life Office is good investment; its Agency is valuable business connection.

Applications for representation are invited from influential persons.

Please apply to:
The Branch Manager,
Diamond Building, Hampankatta,
MNGALORE, S. K.

ಬರಗಾಲ ಎದುರಿಸಲು

ಸ್ವರಾಜ್ಯ ಪ್ರಾಪ್ತಿಯ ಬಳಿಕದ ಸಂಕಷ್ಟಗಳು.

ಬರಗಾಲದ ಭಯ

ಸರಕಾರವು ಜನಹಿತ ಯೋಜನೆಗಳನ್ನು ಕಾರ್ಯರೂಪಕ್ಕೆ ಇಳಿಸಲು ಟೊಂಕ ಕಟ್ಟಿರುವ ಈ ದಿನಗಳಲ್ಲಿ ಜನತಾ ಸಹಕಾರವನ್ನದು ಅಪೇಕ್ಷಿಸುತ್ತದೆ. ತಕ್ಕಮಟ್ಟಿಗೆ ಜನರು ಸಹ ಸಹಾಯವನ್ನಿತ್ತು ಸರಕಾರದ ಬಲ ಹೆಚ್ಚಿಸುತ್ತಾರೆ. ಆದರೆ—ಜನರ ಹಾಗೂ ಸರಕಾರದ ಎಲ್ಲ ಕಾರ್ಯಕ್ರಮಗಳನ್ನೂ ಬುಡ ಮೇಲುಮಾಡಿಬಿಡುವ ಪ್ರಾಕೃತಿಕ ವಿಕೋಪಗಳಿಂದ ರಕ್ಷಣೆ ನೀಡುವವರಾರು? ರಾಜಗೋಪಾಲಾಚಾರಿಯಾದರೆ ದೇವರೇ ಕಾಪಾಡಬೇಕು ಎನ್ನುತ್ತಾರೆ. ನಿಜವಾಗಿಯೂ ದಕ್ಷಿಣ ಭಾರತದಲ್ಲಿ ಅನಾವೃಷ್ಟಿಯಿಂದಾಗಿ ಈ ಸಲದ ಮುಂಗಾರು ಬೆಳೆಯು ರುಪಾಯಿಗೆ ಎಂಟಾಣೆಯಂತೆಯೂ ಕೈಗೆ ಬರುವುದು ಶಕ್ಯವಿಲ್ಲದಂಥ ಪರಿಸ್ಥಿತಿ ಇದೆ. ಈ ಬೇಸಗೆಯಲ್ಲಿ ರಾಯಲಸೀಮೆಯಲ್ಲಿ ಉಗ್ರ ಬರಗಾಲದ ಹಾವಳಿ ನಡೆಯಿತು. ಬಳ್ಳಾರಿ ಜಿಲ್ಲೆ ರಾಯಲಸೀಮೆಯ ನೆರೆಕರೆಯಲ್ಲಿದ್ದರೂ ಕಳೆದ ವರ್ಷ ಅಲ್ಲಿ ಬರಗಾಲದ ಭೀತಿ ಇರಲಿಲ್ಲ. ಈ ವರ್ಷ ತದ್ವಿರುದ್ಧವಾಗಿದೆ. ರಾಯಲಸೀಮೆಯನ್ನುಳಿದು ಇನ್ನೂ ಹತ್ತು ಜಿಲ್ಲೆಗಳಲ್ಲಿ ಮಳೆಗಾಳಿಯ ಅಭಾವದಿಂದ ಬರಗಾಲ ಉಂಟಾಗುವ ಭೀತಿ ಇದೆ. ವೈರಿನ ಕಣಜವೆಂದು ಹೆಮ್ಮೆಪಟ್ಟುಕೊಳ್ಳಬಹುದಾದ ತಂಜಾವೂರು ಜಿಲ್ಲೆಯು ಕೂಡ ಇದಕ್ಕೆ ಅಪವಾದವಾಗಿಲ್ಲ. ಮದ್ರಾಸ ರಾಜ್ಯದ ಸ್ಥಿತಿ ಹೀಗಾದರೆ, ಮೈಸೂರಲ್ಲಿ ಕೋಲಾರ ಹಾಸನ, ಕಡೂರು ಮುಂತಾದ ಜಿಲ್ಲೆಗಳಲ್ಲಿ ಅನಾವೃಷ್ಟಿಯ ಕಾರಣದಿಂದ ಕ್ಷಾಮಭಯ ಹೆಚ್ಚಿದೆ. ಮುಂಬಯಿ ರಾಜ್ಯದಲ್ಲಿ ಗುಜರಾತ, ಮಹಾರಾಷ್ಟ್ರ ಹಾಗು ಕರ್ನಾಟಕ ಈ ಮೂರೂ ಪ್ರದೇಶಗಳಲ್ಲಿ ಮುಂಗಾರು ಮಳೆಯ ಅಭಾವದ ದುಷ್ಪರಿಣಾಮ ಉಂಟಾಗಿರುವುದು. ಅಹಮ್ಮದಾಬಾದ, ಮೆಹಸಾನಾ ಜಿಲ್ಲೆಗಳಲ್ಲಿ ಬೆಳೆಗಳು ಒಣಗುತ್ತಿವೆ. ಸೊಲ್ಲಾಪುರ, ಭಡೋಚ ಮುಂತಾದ ಕಡೆಯೂ ಪೈರು ಸಮಾಧಾನಕರವಾಗಿಲ್ಲ. ಬೆಳಗಾಂವಿ ಹಾಗೂ ಬಿಜಾಪುರ ಜಿಲ್ಲೆಗಳು ಉಗ್ರ ಕ್ಷಾಮಭಯದಿಂದ ತತ್ತರಿಸುತ್ತಿವೆ. ಹೈದರಾಬಾದಿನಲ್ಲಿಯೂ ಕಡಿಮೆ ಮಳೆಯಾಗಿರುವುದರಿಂದ—ಜನರು ಭತ್ತದ ಬದಲು ಜೋಳ ಬೆಳೆದಿರುವರು. ವರಂಗಲ ಜಿಲ್ಲೆಯಲ್ಲಿ ಭತ್ತದ ಬೆಳೆಗೆ ಧಕ್ಕೆ ತಟ್ಟಿದೆ. ಉಸ್ಮಾನಾಬಾದ ಜಿಲ್ಲೆಯ ಪರಿಸ್ಥಿತಿಯೂ ಚಿಂತಾಜನಕವಾಗಿದೆ.

ಪರಿಸ್ಥಿತಿಯ ಉಗ್ರಸ್ವರೂಪ

ಬರಗಾಲದ ಭೀತಿ ಈ ಪಾರ ಅಕಸ್ಮಾತ್ತಾಗಿ ಉಂಟಾದುದಲ್ಲವೆಂಬುದನ್ನು ಅಲ್ಲಗಳೆಯುವಂತಿಲ್ಲ. ಕೆಲವರ್ಷಗಳಿಂದೀಚೆಗೆ ಮಳೆಯ ಅಭಾವದಿಂದ ಪರಿಸ್ಥಿತಿ ಮೆಲ್ಲಮೆಲ್ಲನೆ ಕೆಡುತ್ತಾ ಬಂದಿದೆ. ಮುಂಬಯಿ ರಾಜ್ಯದಲ್ಲಿ ವರ್ಷಂಪ್ರತಿ ಬರಬೀಳವೆ ಇಲ್ಲ. ಮದ್ರಾಸಿನ ರಾಯಲ ಸೀಮೆಯಲ್ಲಿ ಕಳೆದ ಐದಾರು ವರ್ಷಗಳಿಂದ ಅನಾವೃಷ್ಟಿ ಇತ್ತು. ಸರಕಾರ ಅಲ್ಪಸ್ವಲ್ಪ ಪರಿಹಾರೋಪಾಯಗಳನ್ನು ಆಗಿಂದಾಗ್ಗೆ ಕೈಕೊಳ್ಳುತ್ತಾ ಬಂದಿದ್ದರೂ—ಪ್ರಾಕೃತಿಕ ವಿಕೋಪವನ್ನು ಸಂಪೂರ್ಣ ಶಮನ ಮಾಡುವಷ್ಟು ಸಾಮರ್ಥ್ಯವಂತವಾಗಿಯೂ ಪರಿಣಾಮಕಾರಿಯಾಗಿಯೂ ಇರಲಿಲ್ಲ. ಮುಖ್ಯವಾಗಿ ನೀರಾವರಿ ಕ್ರಮವನ್ನು ಪುನರುಜ್ಜೀವನಗೊಳಿಸುವುದೂ ಮಳೆ ನೀರಿನ ಪೂರ್ಣೋಪಯೋಗವಾಗುವಂತೆ ಶಾಸ್ತ್ರೀಯರೀತ್ಯಾ ಪ್ರಯತ್ನಿಸುವುದೂ ಅಗತ್ಯ. ಅನ್ನಕ್ಷಾಮದ ಪರಿಣಾಮವಾಗಿ, ಧಾನ್ಯದ ಬೆಲೆ ವಿಪರೀತ ಏರುತ್ತದೆ; ಮತ್ತು ಜನಗಳಲ್ಲಿ ಅದನ್ನು ಕೊಂಡುಕೊಳ್ಳುವ ಶಕ್ತಿ ಉಳಿಯುವುದಿಲ್ಲ. ಹೊಲಗಳಲ್ಲಿ ದುಡಿದು ನಾಲ್ಕುಕಾಸು ಸಂಪಾದಿಸುವವರಿಗೂ ಕೂಡ ನಿರುದ್ಯೋಗ ಬಾಧಿಸುವುದು. ಹೀಗೆ ಬರಗಾಲದ ಕಾರಣದಿಂದ—ಸಂಕಷ್ಟಕ್ಕೀಡಾದ ಜನರನ್ನು ಸಂತೈಸುವುದೇ ಸರಕಾರಕ್ಕೆ ದೊಡ್ಡ ಹೊರೆಯೂ, ಹೊಣೆಗಾರಿಕೆಯೂ ಆಗುವುದು. ಬರಗಾಲ ಪೀಡಿತ ಪ್ರದೇಶಗಳಲ್ಲಿ ಸಂಚರಿಸಿಬಂದ ಬಳಿಕ, ಮುಂಬಯಿ ರಾಜ್ಯದ ಕಂದಾಯ ಮಂತ್ರಿ ಶ್ರೀ ಬಿ. ಎಸ್. ಹಿರೆಯವರು ಎಲ್ಲರಿಗೂ ಕೆಲಸ ಹಾಗೂ ಆಹಾರ ಒದಗಿಸಿ ಕೊಡಲು ಶಕ್ತಿ ಮೀರಿ ಪ್ರಯತ್ನಿಸುವುದಾಗಿ ಆಶ್ವಾಸನ ಕೊಟ್ಟಿದ್ದಾರೆ. ಮೈಸೂರು ಪ್ರದೇಶಗಳಲ್ಲಿಯೂ ಬರಗಾಲ ಪರಿಹಾರ ಯೋಜನೆಗಳಿಗೆ ವ್ಯಾಪಕ ರೂಪವನ್ನು ಕೊಡಲಾಗಿದೆ. ಈ ವರ್ಷದಲ್ಲಿ ಎಪ್ರಿಲ ತಿಂಗಳಿಂದ ಈ ವರೆಗೆ ಸುಮಾರು ೪೦,೫೦,೯೦೦ ರುಪಾಯಿಗಳನ್ನು ಸರಕಾರವು ಬರಗಾಲ ಪರಿಹಾರ ಕಾರ್ಯಗಳಿಗೆ ಮಂಜೂರು ಮಾಡಿದೆ. ಇದಲ್ಲದೆ ಚಿಕ್ಕ ಪುಟ್ಟ ನೀರಾವರಿ ಯೋಜನೆಗಳಿಗಾಗಿ ೭೩,೫೦,೦೦೦ ರುಪಾಯಿಗಳನ್ನು ಪ್ರತ್ಯೇಕ ತೆಗೆದಿಡಲಾಗಿದೆ. ಇನ್ನು ರಾಜ್ಯದ ಬರಗಾಲ ಪರಿಸ್ಥಿತಿಯನ್ನು ವಿಮರ್ಶಿಸಲು, ಈಗಾಗಲೇ ಕೈಗೊಳ್ಳಲಾಗಿರುವ ಪರಿಹಾರ ಕ್ರಮಗಳನ್ನು ಪರಿಶೀಲಿಸಲೂ ಈ ಮಾಸಾಂತ್ಯದಲ್ಲಿ ಶಾಸನ ಸಭಾಸದಸ್ಯರ ಮತ್ತು ಸರಕಾರೀ ಶಾಖೆಗಳ ಹಾಗೂ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ವರಿಷ್ಠರ ಸಭೆಯೊಂದನ್ನು ಕರೆದಿರುವರು. ಸಂತ್ರಸ್ತರಿಗೆ ಪರಿಹಾರ ನೀಡಲು ವಿಶೇಷಾಧಿಕಾರಿಯೊಬ್ಬನ ನೇಮಕವಾಗಿದೆ.

ಪರಿಹಾರೋಪಾಯಗಳು

ಕೇಂದ್ರ ಸರಕಾರವು ಬರಗಾಲದ ಪರಿಹಾರ ಕ್ರಮಗಳನ್ನು ಹೆಚ್ಚು ತೀವ್ರವಾಗಿಸುವ ಸದುದ್ದೇಶ ಇಟ್ಟುಕೊಂಡಿದೆ. ಆಹಾರ ಮಂತ್ರಿ ಶ್ರೀ ರಫಿ ಅಹಮ್ಮದ ಕಿದ್ವಾಯಿಯವರು ಮೈಸೂರಿಗೆ ಭೆಟ್ಟಿಕೊಡುವರು. ಹಾಗೆಯೇ ಪ್ರಧಾನ ಮಂತ್ರಿ ನೆಹರೂ ದಕ್ಷಿಣ ಭಾರತಕ್ಕೆ ಸದ್ಯದಲ್ಲಿಯೇ ಬರಲಿರುವರು. ಇವರ ಆಗಮನದಿಂದ ಇಲ್ಲಿಯ ಪರಿಸ್ಥಿತಿಯ ಸ್ಪಷ್ಟ ಚಿತ್ರವು ಅವರ ಕಣ್ಣ ಮುಂದೆ ನಿಲ್ಲಬಹುದು. ಮತ್ತು ಕೇಂದ್ರ ಸರಕಾರವು ಅಧಿಕ ಆಹಾರದ ಪೂರೈಕೆ ಮತ್ತು ಧನಸಹಾಯವನ್ನು ಕೊಡಲು ಉದ್ಯುಕ್ತವಾದೀತು. ಮೈಸೂರು ಮುಖ್ಯ ಮಂತ್ರಿಯವರು ಕೇಂದ್ರ ಸರಕಾರದ ಹೊಣೆಯು ಈ ವಿಷಯದಲ್ಲಿ ತುಂಬ ಹೆಚ್ಚಿದೆ ಎಂದಿದ್ದಾರೆ. ಯುದ್ಧ ಹಾಗೂ ಸಾಂಕ್ರಾಮಿಕ ರೋಗಗಳು ಕೇಂದ್ರ ಸರಕಾರವು ವಿಚಾರಿಸತಕ್ಕ ವಿಷಯಗಳಾಗಿರುವಂತೆ— ವರ್ಷ ವರ್ಷವೂ ಬಿಟ್ಟೂ ಬಿಡದೆ ಕಾಡುವ ಬರಗಾಲವನ್ನು ಕೇಂದ್ರ ಸರಕಾರದ ಹೊಣೆಗೆ ಸೇರಿಸಬೇಕು ಎಂದವರ ಅಭಿಪ್ರಾಯ. ರಾಜ್ಯ ಸರಕಾರಗಳು ಎಷ್ಟು ಪ್ರಯತ್ನಪಟ್ಟರೂ ಕೇಂದ್ರದ ಸಹಾನುಭೂತಿ—ಸಹಕಾರಗಳ ಹೊರತು, ಸಂಕಷ್ಟಗಳನ್ನು ದೂರೀಕರಿಸುವುದು ಸಾಧ್ಯವಾಗದು ಮದ್ರಾಸು ಮುಖ್ಯಮಂತ್ರಿ ರಾಜಗೋಪಾಲಾಚಾರಿ ಕೂಡ ಜನರಿಂದ ಪರಿಹಾರ ಯೋಜನೆಗಳಿಗಾಗಿ ಬರುತ್ತಿರುವ ಬೇಡಿಕೆಯನ್ನು ಪೂರೈಸುವುದೇ ಕಠಿಣವಾಗಿದೆ. ಸಾರ್ವಜನಿಕರು ಸಭೆಸೇರಿ ಮಂತ್ರಿಗಳಿಗೆ ಆರ್ಥಿಕ ಸಹಾಯಕ್ಕಾಗಿ, ಮತ್ತು ಇನ್ನೂ ಹಲವು ಕೆಲಸಗಳಿಗಾಗಿ ಒತ್ತಾಯಪಡಿಸುತ್ತಿರುವರು. ಆದರೆ ರಾಜ್ಯದ ಆರ್ಥಿಕ ಪರಿಸ್ಥಿತಿಯು ತುಂಬ ಕೆಟ್ಟಿದೆ. ಜೊತೆಗೆ ಇಡೀ ರಾಜ್ಯವನ್ನೆ ಬರಗಾಲ ಪ್ರದೇಶವೆಂದು ಸಾರಬೇಕೆ? ಎಂಬ ಅಂಜಿಕೆಗೂ ಅವಕಾಶ ದೊರಕಿದೆ. ಕೇಂದ್ರ ಸರಕಾರವು ಈ ವಿಷಯದಲ್ಲಿ ಆಸಕ್ತಿಯನ್ನು ತೋರಿಸಿ, ಬರಗಾಲ ಪರಿಸ್ಥಿತಿಯ ವಿವ ವಾದ ವರದಿಯನ್ನು ಕೇಳಿದೆ. ಮದ್ರಾಸ ಸರಕಾರದವರು ಕಳಿಸಿದ ವರದಿಯಲ್ಲಿ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಒದಗಿಸಿಕೊಡುವುದು, ಗಂಜೀ ಕೇಂದ್ರಗಳನ್ನು ವಿಸ್ತರಿಸುವುದು ಮತ್ತು ಅಗ್ಗದರದಲ್ಲಿ ದವಸಧಾನ್ಯದ ಪೂರೈಕೆಗಳನ್ನು ಪ್ರಾಮುಖ್ಯ ಕ್ರಮಗಳೆಂದು ಹೇಳಿದೆ ಅನಾವೃಷ್ಟಿಯಿಂದ ಈ ವರ್ಷ ಹೆಚ್ಚಿನ ತೊಂದರೆಯಾಗದು ಏಕೆಂದರೆ ಸರಕಾರದೊಡನೆ ಈ ಮಾಸಾರಂಭದಲ್ಲಿ ೫ ಲಕ್ಷ ಟನ್ನು ಆಹಾರ ಧಾನ್ಯ ದಾಸ್ತಾನು ಇತ್ತು. ಈ ವರ್ಷಾಂತ್ಯದೊಳಗೆ ಇನ್ನೂ ಎರಡು ಲಕ್ಷದಷ್ಟು ಆಹಾರ ಧಾನ್ಯವು ಕೇಂದ್ರದಿಂದ ಪೂರೈಕೆಯಾಗುವ ನಿರೀಕ್ಷೆ ಇದೆ. ಹಾಗಂದು ಬರುವ ವರ್ಷದ ಪರಿಸ್ಥಿತಿಯನ್ನು ನೆನೆದೇ ಚಿಂತೆಗೀಡಾ ಬೇಕು.

ರಾಷ್ಟ್ರೀಯ ಸಂಪತ್ತಿನ ವ್ಯಾಖ್ಯೆ

ಕ್ಷಾಮ ಭಯವನ್ನು ಬಿಟ್ಟರೆ, ನಮ ಕಳವಳಪಡುವಂಥದೇನೂ ಇಲ್ಲ. ಭಾರತ ಆರ್ಥಿಕ ಸ್ಥಿತಿ ಭದ್ರವಾಗಿದೆ ಎಂದು ಇತ್ತೀಚೆಗೆ ಅರ್ಥಮಂತ್ರಿ ಶ್ರೀ ದೇಶಮುಖ ಹೇಳಿರುವುದನ್ನು ಭೂತಪೂರ್ವ ಅರ್ಥಮಂತ್ರಿ ಡಾ. ಜಾನ್ ಮಥಾಯಿ ಸಮರ್ಥಿಸಿದ್ದಾರೆ. ಹೀಗಿದ್ದರೂ ನಮ್ಮ ಸಂಪತ್ತನ್ನು ರುಪಾಯಿಗಳಲ್ಲಿ ಅಳೆಯ ಹೋಗುವುದು ಚೆನ್ನಾದುದಲ್ಲ ಎಂದು ನೆಹರೂ ಅಭಿಪ್ರಾಯ ಉಜ್ಜಯಿನಿಯಲ್ಲಿ ಅವ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಿದ್ದರು. ಬೆಳ್ಳಿ ಮತ್ತು ಬಂಗಾರದ ಗಟ್ಟಿಗಳೇ ಸರ್ವಸ್ವವಲ್ಲ. ನಮ್ಮ ಹೊಲ ಮನೆಗಳು, ಕಾರ್ಖಾನೆಗಳು, ದುಡಿಮೆಯಲ್ಲಿ ನಿರತರಾದ ಜನರು ಭಾರತ ರಾಷ್ಟ್ರೀಯ ಸಂಪತ್ತು, ಹೊಲ ಮತ್ತು ಕಾರ್ಖಾನೆಗಳಲ್ಲಿ ದುಡಿಯುವ ಜನರನ್ನು ಗೌರವಿಸುವ ಕಾಲ ಈಗ ಬಂದಿದೆ, ವಿಶ್ವವಿದ್ಯಾಲಯಗಳ ಪದವಿಗಳಿಗೆ [illegible] ಕಡಿಮೆಯಾಗಿದೆ. ಪ್ರತ್ಯಕ್ಷ ಅನುಭ ಹಾಗೂ ಪರಿಶ್ರಮಗಳಿಗೆ ಹೆಚ್ಚು ಮ ತ್ವವನ್ನು ಕೊಡುವುದು ಇಂದಿನ ಲಸ. ದೇಶದಲ್ಲಿ ಕೆಲವೆಡೆ ಬರಗಾಲದ ಯ ಆವರಿಸಿರುವುದು. ಅವರಿಗೆಲ್ಲ ಅನ ವಸ್ತ್ರಗಳನ್ನು ಕೊಟ್ಟು ಕಾಪಾಡುವ ಕೆಲ ಮಂತ್ರ ಮಾಟಗಳಿಂದ ಆಗದು. ಜನ ಕರುಣಾಜನಕ ಪರಿಸ್ಥಿತಿಯು ನೈಸರ್ಗಿ ಕೋಪದ ಪರಿಣಾಮವಾಗಿದ್ದರೂ— ಕ ದಿಂದ ದುಡಿಯಲು ಜನ ಬದ್ಧಕಂಕ

WANTED

THE POPULAR INSURANCE COMPANY LIMITED.

"Popular Buildings" MANGALORE 1.

Invites applications from experienced and influential insurance men for the appointment of an INSPECTOR for UDIPI and COONDAPOOR area.

Apply with details of insurance experience and New Business undertaking.

The Managing Director.

ZANDU Mahayogaraja Guggula.

ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ. 1 ತೊಲೆಗೆ ರೂ 3- ಮಾತ್ರ.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್. ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ.
2 ಶ್ರೀ. ವಿ. ವಿ. ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್. ಎನ್. ಶರ್ಮ, ಹಜೂರು ರಸ್ತೆ ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರತಿನಿಧಿಯಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರ ಶರತ್ತು ವಗೈರೆಗಳಿಗೆ ಬರೆಯಿರಿ.

DAMODAR & CO.,

Nainiappa Naicken Street, Park Town-**MADRAS** 3.

ಸರಕಾರದ ಸಾಹಸ

ಸ್ಥಾನಿಕ ಚುನಾವಣೆಗಳಲ್ಲಿ ಕಾಂಗ್ರೆಸಿನ ಯಶಸ್ಸು

ರಾಗಬೇಕು. ನೆಹರೂರ ಉಪದೇಶವು ಎಲ್ಲ ಕಡೆ ಒಂದೇ ಪಲ್ಲವಿಯಿಂದ ಕೂಡಿದೆ. ನಮ್ಮ ರೋಮವೆದ್ದು ನಿಲ್ಲುವಂತೆ, ಕಿವಿ ನಿಗುರಿಸಿ ಕೇಳುವಂತೆ, ಹುಚ್ಚೆದ್ದು ಕುಣಿಯುವಂತೆ ಮಾಡುವ ಯಾವ ಮಾತನ್ನೂ ನೆಹರೂ ಆಡಲಿಲ್ಲ. ಕರ್ತವ್ಯದಕ್ಷರಾಗಿ ನಡೆಯಬೇಕು: ಆಗ ಮಾತ್ರ ಸ್ವರಾಜ್ಯಸಿದ್ಧಿ ಎಂಬ ತತ್ವವನ್ನು ಅವರು ಜನರ ಮನಸ್ಸಿನಲ್ಲಿ ಬಿಂಬಿಸಲು ಪ್ರಯತ್ನಿಸಿದರು.

ಸ್ವರಾಜ್ಯ ಪ್ರಾಪ್ತಿಯ ಕಷ್ಟ

ಸ್ವರಾಜ್ಯ ಸಿದ್ಧಿಯನ್ನು ರಾಜಾಜಿ ಬೇರೊಂದು ಬಗೆಯಾಗಿ ಬಣ್ಣಿಸಿದರು: ಜನರು ಬಿನ್ನವತ್ತಳೆಗಳ ಮೂಲಕ ತಮಗೆ ಅದು ಬೇಕು, ಇದು ಬೇಕು ಎಂದು ಬಿಟ್ಟುಬಿಡದೆ ಕೇಳುತ್ತಾರೆ. ಈ ಎಲ್ಲ ಬೇಡಿಕೆಗಳು ಜನ್ಮಕ್ಕೆ ಬಂದುದು ೧೯೪೭ನೇ ಆಗೋಸ್ಟು ೧೫ನೇ ದಿನದಿಂದಲೇ ಸೈ. ಅದಕ್ಕೆ ಮೊದಲು ಜನರು ಸರಕಾರವನ್ನು ಯಾವುದಕ್ಕೂ ಬೇಡುತ್ತಿರಲಿಲ್ಲ. ಜನರು ಸರಕಾರವನ್ನು ಯಾಚಿಸುವ ನಮೂನೆ ನೋಡಿದರೆ– ಸರಕಾರ ಏನೂ ಕೆಲಸ ಮಾಡುತ್ತಿಲ್ಲವೇ ಎಂಬ ಸಂಶಯವೇಳುತ್ತದೆ. ಜನರ ಬೇಡಿಕೆಗಳನ್ನೆಲ್ಲ ಒಟ್ಟಾಗಿಸಿ, ಬ್ರಿಟಿಷರಿಗೆ ಕಳಿಸಿದರೆ, ತಾವು ಭಾರತವನ್ನು ಬಿಟ್ಟುಬಂದ ಬಳಿಕ ಇಷ್ಟ ಸಂಕಷ್ಟ ಹೆಚ್ಚಾಗಿರುವುದನ್ನು ಕಂಡು ಅವರಿಗೆ ತುಂಬ ಸಂತೋಷವಾದೀತು-ಎಂದ, ರಾಜಾಜಿ ವ್ಯಂಗ್ಯವಾಡಿದರು. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಹೆಚ್ಚು ಹೆಚ್ಚು ಅಧಿಕಾರ ನೀಡಬೇಕೆಂದು ರಾಜಾಜಿಗೆ ಭಿನ್ನವಿಸಿದಾಗ—ಅವರದನ್ನು ತಾತ್ವಿಕವಾಗಿ ಒಪ್ಪಿಕೊಂಡರು. ವಿಕೇಂದ್ರೀಕರಣದ ಮೂಲಕ ಆಡಳಿತವನ್ನು ಸುಲಭವೂ ಕಾರ್ಯಕ್ಷಮವೂ ಪೂರ್ಣವೂ ಆಗಿ ಮಾಡುವುದು ತನ್ನ ಮನೋಬಯಕೆ ಎಂದವರು ನುಡಿದರು. ಈಗಿನ ಪರಿಸ್ಥಿತಿಯಲ್ಲಿ ಸಾಕಷ್ಟು ಸಮಯ ಹಾಗೂ ವಿತ್ತ ಸ್ವಾಸ್ಥ್ಯವಿಲ್ಲ: ಹೀಗಾಗಿ ಸರಕಾರವು ಯಾವ ರೀತಿಯಿಂದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಹೆಚ್ಚು ಅಧಿಕಾರ ನೀಡಬಹುದೆಂಬುದನ್ನು ವಿಚಾರಿಸಲು ವಿಳಂಬವಾಗಿದೆ ಎಂದವರು ತಮ್ಮ ಕಷ್ಟವನ್ನು ತೋಡಿಕೊಂಡರು. ನಗರಸಭೆ ಹಾಗೂ ಜಿಲ್ಲಾ ಬೋರ್ಡುಗಳಿಗೆ ಈಗಿರುವ ವರಮಾನದ ಕ್ಷೇತ್ರ ಸೀಮಿತವಾಗಿದೆ. ಅದನ್ನು ವಿಸ್ತರಿಸಲು ಅವಕಾಶವಿರುವಲ್ಲೆಲ್ಲ ಆ ಪ್ರಯತ್ನ ನಡೆಯಬೇಕಾದುದು ಒಳ್ಳೆಯದೇ. ದಕ್ಷವಾದ ಆಡಳಿತವನ್ನು ನಿರ್ವಹಿಸಿಕೊಂಡು ಹೋಗಬಲ್ಲ ಸಾಮರ್ಥ್ಯವಿದ್ದಲ್ಲೆಲ್ಲ–ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಹೆಚ್ಚು ಉಪಯುಕ್ತ ಸಾಧನಗಳಾಗಬಲ್ಲುವು.

ನಗರ ಸಭಾ ಚುನಾವಣೆಗಳು

ಮದ್ರಾಸು ರಾಜ್ಯದಲ್ಲಿ ನಗರಸಭೆಗಳ ಚುನಾವಣೆಯು ನಡೆಯುತ್ತ, ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳಲ್ಲಿ ಚುನಾವಣೆಗಳ ಪರಿಣಾಮವು ಪ್ರಸಿದ್ಧಗೊಂಡಿರುವುದು. ಹೆಚ್ಚಿನ ಸ್ಥಾನಗಳು ಕಾಂಗ್ರೆಸಿಗರಿಗೇ ದೊರಕಿರುವುದು ಸಂತೋಷದ ಸಂಗತಿ. ಆಂಧ್ರ ಪ್ರದೇಶದಲ್ಲಿ ಕಾಂಗ್ರೆಸು ಪಕ್ಷವಾಗಿ ಸ್ಪರ್ಧಿಸುವುದಿಲ್ಲವೆಂದು ಶ್ರೀ [illegible] ಹೀಗೆ ಅಲ್ಲಿ ಸ್ವತಂತ್ರ ಉಮೇದ್ವಾರಿಗಳೇ ಹೆಚ್ಚು ಆಯ್ಕೆಗೊಂಡಿದ್ದಾರೆ. ಕಳೆದ ಮಾರ್ಚ ಚುನಾವಣೆಯಲ್ಲಿ ಕಾಂಗ್ರೆಸು ಸೋತ ನಗರಗಳಲ್ಲಿ ಇಂದು ಕಾಂಗ್ರೆಸು ಗೆದ್ದುಬಂದ ಉದಾಹರಣೆಗಳಿವೆ. ರಾಜಾಜಿಯ ಸಮರ್ಥ ಆಡಳಿತದ ಒಳ್ಳೆಯ ಪರಿಣಾಮ ಜನರ ಮೇಲೆ ಆಗಿದೆ ಎಂಬುದಕ್ಕೆ ಇದನ್ನು ನಿದರ್ಶನವೆನ್ನಬಹುದು. ತಮಿಳು ನಾಡಿನಲ್ಲಿ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಚುನಾವಣೆಯ ಮಟ್ಟಿಗೆ ಕಾಂಗ್ರೆಸು ಹಾಗೂ ಮುಸ್ಲಿಂ ಲೀಗುಗಳಲ್ಲಿ ಒಪ್ಪಂದವಾಗಿದೆ ಎಂದು ಮಹಮ್ಮದ ಇಸ್ಮಾಯಿಲರು ಒಂದು ಪ್ರಕಟಣೆಯನ್ನು ಈಚೆಗೆ ಕೊಟ್ಟಿದ್ದರು. ಮುಸ್ಲಿಂ ಲೀಗಿಗೆ ಮುಸಲ್ಮಾನರ ಜನಸಂಖ್ಯಾ ಪ್ರಮಾಣವನ್ನನುಸರಿಸಿ ಪ್ರಾತಿನಿಧ್ಯವನ್ನು ಕೊಟ್ಟು, ಅಲ್ಲಿ ಕಾಂಗ್ರೆಸು ಉಮೇದ್ವಾರಿಗಳನ್ನು ನಿಲ್ಲಿಸದಿರುವುದು ಗೊತ್ತಾಗಿದೆ ಎಂದು ಪ್ರಕಟಣೆಯಲ್ಲಿ ಇಸ್ಮಾಯಿಲರು ಹೇಳಿದ್ದರು. ಇದನ್ನು ಡಾ. ಪಿ. ಸುಬ್ಬರಾಯನರು ಅಲ್ಲಗಳೆದಿದ್ದಾರೆ. ಈ ಸಂಬಂಧದಲ್ಲಿ ಮಾತುಕತೆಗಳಷ್ಟೇ ನಡೆದುವೆಂದೂ ಯಾವುದೇ ತರದ ಒಡಂಬಡಿಕೆಯಾಗಿಲ್ಲೆಂದೂ ಅವರು ಸ್ಪಷ್ಟಪಡಿಸಿದ್ದಾರೆ. ಇದರಿಂದ ಇಸ್ಮಾಯಿಲರಿಗೆ ‘ಆಶ್ಚರ್ಯ” ಆಗಿದೆ. ಆದರೂ–ಮುಸ್ಲಿಂ ಲೀಗಿನ ಹುರಿಯಾಳುಗಳು ಇಲ್ಲದಿರುವ ಕಡೆಗಳಲ್ಲೆಲ್ಲ ಕಾಂಗ್ರೆಸು ಹುರಿಯಾಳಿಗೇ ಬೆಂಬಲ ಕೊಡಬೇಕೆಂದು ಅವರು ಬಿನ್ನವಿಸುವರು. ರಾಜಾಜಿಯ ಆಡಳಿತದೊಂದಿಗೆ ಸಹಕರಿಸುವ ಮನಸ್ಸು ತಮ್ಮದು ಎಂದವರು ಹೇಳಿದರು

ವಿರೋಧೀ ಗುಂಪಿನ ಮುಖಭಂಗ

ಆಡಳಿತವು ಸಮರ್ಪಕವಾಗಬೇಕಾದರೆ ಅಡಿಯಿಂದ ಮುಡಿಯವರೆಗೂ ಏಕಸೂತ್ರತೆ ಇರುವುದವಶ್ಯ. ಭಾರತದಲ್ಲಿ ಇಂದು ಕಾಂಗ್ರೆಸು ಅಧಿಕಾರಾರೂಢ ಪಕ್ಷವಾಗಿರುವುದರಿಂದ, ಅದರ ಮನೋಧರ್ಮವು ಹಾಗೂ ನಿಲುವುಗಳನ್ನು ಅನುಸರಿಸಿ ನಡೆಯಬಲ್ಲ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡಬಲ್ಲುವು. ಈ ದೃಷ್ಟಿಯಿಂದ ಕಾಂಗ್ರೆಸು ನಗರ ಸಭೆಗಳ ಚುನಾವಣೆಯಲ್ಲಿ– ಹಾಗೂ ಮುಂಬರುವ ಗ್ರಾಮ ಪಂಚಾಯತುಗಳಲ್ಲಿ ಸ್ಪರ್ಧಿಸುವುದೊಳಿತು. ಜನರಾದರೂ ಕಾಂಗ್ರೆಸು ಸಂಸ್ಥೆಯ ಮೇಲಿನ ಪ್ರೀತಿಯಿಂದಲೂ ಸ್ವಾಭಾವಿಕವಾದ ಸುಖಾಪೇಕ್ಷೆಯಿಂದಲೂ— ಕಾಂಗ್ರೆಸು ಹುರಿಯಾಳಿಗೆ ಮತಕೊಡುವುದನ್ನು ಕರ್ತವ್ಯವೆಂದು ಭಾವಿಸಬೇಕು. ರಾಜಾಜಿ ಇದನ್ನು ಪದೇ ಪದೇ ಹೇಳುತ್ತಾರೆ. ಬೇರೆ ಪಕ್ಷ ಪಂಗಡಗಳು ವಚನ ಪೂರೈಸುವ ಹೊಣೆಯಿಂದ ಕೂಡಿಲ್ಲವಾದುದರಿಂದ–ದೊಡ್ಡ ದೊಡ್ಡ ಮಾತುಗಳನ್ನು ಆಡಿಬಿಡುವರು ಎಂದು ಇಂದೂರು ಅಧಿವೇಶನದ ಸಂದರ್ಭದಲ್ಲಿ ನೆಹರೂ ಹೇಳಿದ್ದರು. ಕಾಂಗ್ರೆಸಿನ ಬಲ ಗುಂದಿಸಬೇಕೆಂದು ವಿರೋಧೀ ಗುಂಪುಗಳೆಲ್ಲ ಒಟ್ಟಾಗಿ ಸೇರಿದರೂ-ಇಂದು ಮದ್ರಾಸಿನಲ್ಲಿ ಸಂಯುಕ್ತ ಪ್ರಜಾಸತ್ತಾತ್ಮಕ ರಂಗದ್ದೇ ಪ್ರಾಬಲ್ಯವಿದ್ದರೂ– ಅವುಗಳ ಮುಖಭಂಗವಾಗಿದೆ. ಇತ್ತೀಚೆಗೆ ಸೋಶಲಿಸ್ಟ ಹಾಗೂ ಕಿಸಾನ ಮಜದೂರ ಪ್ರಜಾಪಕ್ಷದ ಧುರೀಣರ ನಡುವೆ ಒಪ್ಪಂದವಾಗಿ-ಅವೆರಡು ಐಕ್ಯಗೊಂಡು ಹೊಸ ಪಕ್ಷದ ಸ್ಥಾಪನೆ ಮಾಡುವುದಾಗಿ ಸಾರಿದ್ದರೂ-ಮದ್ರಾಸಿನ ವಿಶಿಷ್ಟ ಪರಿಸ್ಥಿತಿ ಭಿನ್ನಾಭಿಪ್ರಾಯಕ್ಕೆಡೆಮಾಡಿಕೊಟ್ಟಿದೆ. ಈ ಹಿಂದೆಯೇ ಸೂಚಿಸಿದಂತೆ–ಸೋಶಲಿಸ್ಟರು ಪ್ರಜಾಪಕ್ಷದವರು ಕಮ್ಯೂನಿಸ್ಟರೊಡನೆ ಸಹಕರಿಸುವುದನ್ನು ಸತರಾಂ ಒಪ್ಪುವುದಿಲ್ಲ. ತಮಿಳುನಾಡು ಪ್ರಜಾಪಕ್ಷದ ಧುರೀಣರಾದ ಶ್ರೀ ಎಸ್. ಬಿ. ಆದಿತ್ಯನವರು ಹೊಸ ಪಕ್ಷದ ಸ್ಥಾಪನೆಯನ್ನು ಒಪ್ಪಲಿಕ್ಕೆ ತಾವು ಸಿದ್ಧರಿಲ್ಲವೆಂದೂ–ಈ ಕಾರಣದಿಂದ ಈ ತಿಂಗಳಾಂತ್ಯದ ಸಭೆಗೆ ಮುಂಬಯಿಗೆ ಹೋಗುವುದಿಲ್ಲವಾಗಿಯೂ ಹೇಳಿದ್ದಾರೆ. ಪ್ರಕಾಶಮರೂ, ಟಿ. ವಿಶ್ವನಾಥರೂ ಮುಂಬಯಿಯ ಸಭೆಯಲ್ಲಿ ಹಾಜರಿರುವುದರಿಂದ, ಅವರು ಹೊಸ ಪಕ್ಷವನ್ನು ಒಪ್ಪಿಕೊಂಡಂತಾಗಿದೆ. ದೇಶದಲ್ಲಿ ಬಲವಾದ ವಿರೋಧಿ ಪಕ್ಷವನ್ನು ಸ್ವಾಗತಾರ್ಹವೆಂದು ಸ್ವೀಕರಿಸುವಷ್ಟರಲ್ಲಿಯೇ—ಮದ್ರಾಸಿನಲ್ಲಿ ಕಮ್ಯೂನಿಸ್ಟರೊಡನೆ ಮಾಡಿಕೊಂಡ ಅನುಚಿತ ಸಖ್ಯ ಬಿಕ್ಕಟ್ಟನ್ನು ತಂದೊಡ್ಡಿದೆ.

ಕೈಮಗ್ಗಕ್ಕೆ ಸಂರಕ್ಷಣೆ

ಕೈಮಗ್ಗದ ಬಟ್ಟೆಬರೆಗಳಿಗೆ ರಕ್ಷಣೆಯನ್ನು ಕೊಡುವುದಗತ್ಯವೆಂದು ಪ್ರಧಾನ ಮಂತ್ರಿ ನೆಹರೂರಿಗೆ ಅಖಿಲ ಭಾರತ ನೇಕಾರರ ಶಿಷ್ಟಮಂಡಳವೊಂದು ಮನವಿಯನ್ನು ಅರ್ಪಿಸಿದೆ. ಭಾರತದಲ್ಲಿಯೇ ಅತಿ ದೊಡ್ಡ ಮಟ್ಟದ ಗ್ರಹೋದ್ಯಮವಾಗಿರುವ ಕೈಮಗ್ಗಗಳನ್ನು ಅಭಿವೃದ್ಧಿಗೊಳಿಸುವ ಉದ್ದೇಶದಿಂದ ಈ ಸಂರಕ್ಷಣೆಯನ್ನು ನೀಡಬೇಕೆಂದು ಮನವಿಯಲ್ಲಿ ಹೇಳಲಾಗಿದೆ. ಗಿರಣಿಗಳು ಸೀರೆ ಮತ್ತು ಧೋತರಗಳನ್ನು ನೇಯದಂತೆ ನಿರ್ಬಂಧಿಸಬೇಕೆಂಬ ರಾಜಾಜಿಯ ಸೂಚನೆಗೆ ನೇಕಾರರು ಬೆಂಬಲ ನೀಡಿರುವರು. ಇದಕ್ಕೆ ಪ್ರತಿಯಾಗಿ, ಕೈಮಗ್ಗದ ವಸ್ತ್ರಗಳ ಉತ್ಪಾದನಾ ಮಟ್ಟವು ಏರುವಂತೆಯೂ ಅವುಗಳ ಬೆಲೆಯು ಸಾಮಾನ್ಯ ಜನರ ಕೈ

[illegible]


ನನ್ನ ಸೊಸೆ ಅಸಾಧಾರಣಳು!

[illegible]G/52/107/3

ಚಲುವೆಯೂ ಚತುರೆಯೂ ಆಗಿ ಅಷ್ಟೇ ಅಲ್ಲ ದುಡ್ಡಿನ ಬೆಲೆಯನ್ನರಿತವಳು. ಅದಕ್ಕೇನೇ ಅವಳ [illegible] ಚಹಾ [illegible] ತಯಾರಿಕೆಯೂ ಅತಿ [illegible]ವಾದದ್ದು. ಆದ ಬ್ರೂಕ್ ಬಾಂಡ್ ಚಹಾವು ಮಿತವ್ಯಯಕರವೂ ಆಗಿದೆಯೆಂದು ಯಾವಾಗಲೂ ಅದನ್ನೇ ಉಪಯೋಗಿಸುತ್ತಾಳೆ. ಕೇವಲ 2 ಔನ್ಸ ಪುಡಿಯಿಂದ 30 ಬಟ್ಟಲುಗಳಷ್ಟು ಯಥಾರ್ಥವಾಗಿಯೂ ಸೊಗಸಾದ ಚಹಾ ಒದಗುವುದೆಂಬುದು ನಿಮಗೆ ಗೊತ್ತುಂಟೇ? ಹೌದು. ಮತ್ತೊಂದು ಬಟ್ಟಲು ತೆಗೆದು ಕೊಳ್ಳಿರಿ— ಬ್ರೂಕ್ ಬಾಂಡ್ ಅಸಾಧಾರಣವಾದದ್ದು!

ಬ್ರೂಕ್ ಬಾಂಡ್ ಚಹಾ

ಭಾರತದ
ಅತ್ಯುತ್ತಮ
ತೋಟಗಳಲ್ಲಿ
ಬೆಳೆದ
ಅತ್ಯುತ್ತಮ
ಚಹಾ

1906 ರಲ್ಲಿ ಸ್ಥಾಪಿಸಲ್ಪಟ್ಟ
ಸರ್ವತೋಮುಖವಾಗಿ ಅಭಿವೃದ್ಧಿ ಹೊಂದುತ್ತಲಿರುವ
'ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್"
ಇದನ್ನೇ ಸಹಸ್ರಾರು ಜನರು ತಮ್ಮ ಅಚ್ಚುಮೆಚ್ಚಿನ ಬ್ಯಾಂಕನ್ನಾಗಿ
ಆರಿಸಿರುವರು ನೀವೂ ಇಂದೇ ಒಂದು ಖಾತೆಯನ್ನು ತೆರೆದು
ಬ್ಯಾಂಕಿನ ಗ್ರಾಹಕರಲ್ಲಿ ಒಬ್ಬರಾಗಿರಿ.
THE CANARA BANKING CORPORATION LIMITED.
ಪ್ರಧಾನ ಕಾರ್ಯಾಲಯ, ಉಡುಪಿ. (ದ ಭಾರತ)

ನವಯುಗ

ಉಡುಪಿ, ಗುರುವಾರ ೨೫-೯-'೫೨

ಔದ್ಯಮಿಕ ಅಭಿವೃದ್ಧಿ

ಭಾರತದಲ್ಲಿ ಮಹೋದ್ಯಮಗಳು ಮಾಡಿರುವ ಪ್ರಗತಿಯು ಈಚೆಗೆ ಹೊಸ ದಿಲ್ಲಿಯಲ್ಲಿ ಪ್ರಕಟಿತವಾದ ಅಂಕಸಂಖ್ಯೆಗಳಿಂದ ತಿಳಿದು ಬರುತ್ತದೆ. ವಿಪುಲ ಖನಿಜ ಸಂಪತ್ತು ಮತ್ತು ನೈಸರ್ಗಿಕ ಸೌಲಭ್ಯಗಳಿದ್ದರೂ ಧನಾಭಾವ ಹಾಗೂ ತಾಂತ್ರಿಕ ತರಬೇತಿಯ ಕೊರತೆಯಿಂದಾಗಿ ನಾವಿನ್ನೂ ಬಡರಾಷ್ಟ್ರವಾಗಿ ಉಳಿದಿದ್ದೇವೆ. ಈ ವರ್ಷದ ಪ್ರಥಮಾರ್ಧದಲ್ಲಿ ಇದ್ದಲು, ಸಿಮೆಂಟು, ಜವುಳಿ, ಉಕ್ಕು, ಉಪ್ಪು, ಯಂತ್ರೋಪಕರಣಗಳು, ವಿದ್ಯುದ್ದೀಪ ಮುಂತಾದುವುಗಳು ಮಾಡಿದ ಪ್ರಗತಿಯು ಪ್ರಶಂಸನೀಯವಿದೆ. ೧೯೫೧ಕ್ಕಿಂತ ಸಾಮಾನ್ಯವಾಗಿ ಈ ವರ್ಷ ೭%ದಷ್ಟು ಹೆಚ್ಚು ಉತ್ಪಾದನೆಯಾದುದು ಕಂಡುಬರುತ್ತದೆ. ಉಪ್ಪು, ಸಿಮೆಂಟು ಹಾಗೂ ಇದ್ದಲುಗಳ ಉತ್ಪಾದನೆಯು ಈ ವರ್ಷ ಅತ್ಯುಚ್ಚ ಮಟ್ಟವನ್ನು ಮುಟ್ಟಿದೆ. ಎರಡು ವರ್ಷಗಳಿಗೆ ಹಿಂದೆ ಭಾರತವು ಉಪ್ಪಿನ ವಿಷಯದಲ್ಲಿ ಕೊರತೆ ಪ್ರದೇಶವಾಗಿತ್ತು. ಆದರೆ ಇಂದು ೭೫ ಲಕ್ಷಟನ್ನುಗಳಷ್ಟು ಉಪ್ಪನ್ನು ನಿರ್ಯಾತಮಾಡಲು ಸಮರ್ಥವಾಗಿದೆ. ಉಪ್ಪಿಗೆ ಮಧ್ಯಪ್ರಾಚ್ಯ ಹಾಗೂ ಪೌರ್ವಾತ್ಯ ದೇಶಗಳಲ್ಲಿ ಪೇಟೆ ದೊರಕುವ ನಿರೀಕ್ಷೆ ಇದೆ. ಪ್ರಸ್ತುತ ಜಪಾನು ದೇಶವು ನಮ್ಮ ಉಪ್ಪಿನ ಪ್ರಮುಖ ಗಿರಾಕಿಯಾಗಿದ್ದು, ತನ್ನಲ್ಲಿರುವ ರಾಸಾಯನಿಕ ಕಾರ್ಖಾನೆಗಳಿಗೋಸ್ಕರ ಅದು ಉಪ್ಪನ್ನು ಆಮದು ಮಾಡಿಕೊಳ್ಳುತ್ತಿದೆ. ನಮ್ಮ ದೇಶದಲ್ಲಿಯೂ ರಾಸಾಯನಿಕ ಕಾರ್ಖಾನೆಗಳ ಉಪಯೋಗಕ್ಕಾಗಿ ಉಪ್ಪನ್ನು ಬಳಸಬಹುದು. ಕೇಂದ್ರದ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಈ ವಿಷಯದಲ್ಲಿ ಆಶಾದಾಯಕವಾದ ಮಾತುಗಳನ್ನಾಡಿದ್ದಾರೆ. ಉತ್ಪಾದನೆ ಹೆಚ್ಚಿದಂತೆ, ಅದನ್ನು ಯೋಗ್ಯ ರೀತಿಯಲ್ಲಿ ಬಳಸುವ ಕ್ಷೇತ್ರ ಕೂಡ ಹೆಚ್ಚಾಗಬೇಕಾದುದು ನ್ಯಾಯ. ಕಲ್ಲಿದ್ದಲು ಚೆನ್ನಾಗಿ ಸಿಗುವುದಾದರೆ, ಕಬ್ಬಿಣದ ಕಾರ್ಖಾನೆಯನ್ನು ತೆರೆದು ಕಲ್ಲಿದ್ದಲಿಗೆ ಪೂರ್ಣೋಪಯೋಗ ಪಡೆಯಬೇಕಲ್ಲವೆ? ಹೀಗೆ ಒಂದಕ್ಕೊಂದು ಪೂರಕವಾದ ರೀತಿಯಲ್ಲಿ ಔದ್ಯಮಿಕ ಕ್ಷೇತ್ರವನ್ನು ವಿಸ್ತರಿಸುತ್ತಾ ಹೋಗುವುದರಿಂದ ರಾಷ್ಟ್ರದ ಸಂಪತ್ತು ಹೆಚ್ಚಿ, ಸುಖಸಮೃದ್ಧಿ ನೆಲೆಗೊಳ್ಳಲು ಆಸ್ಪದವುಂಟಾಗುತ್ತದೆ. ಮುಂಬಯಿಯಲ್ಲಿ ಎಣ್ಣೆ ಶುದ್ಧೀಕರಣ ಕಾರ್ಖಾನೆಯು ಕಾರ್ಯಾರಂಭ ಮಾಡಿದರೆ, ಆಗ ಭಾರತಕ್ಕೆ ಬೇಕಾಗುವ ಎಣ್ಣೆಯಲ್ಲಿ ಬಹ್ವಂಶವನ್ನು ಇಲ್ಲಿಯ ಉತ್ಪಾದನೆಯೇ ಪೂರೈಸಬಲ್ಲುದು. ಕಂಪೆನಿಗೆ ವಿಶೇಷವಾಗಿ ವಿದೇಶೀಯರೇ ಬಂಡವಾಳವನ್ನು ಒದಗಿಸಿ ಕೊಡುವರಾದರೂ ಸರಕಾರದ ಹತೋಟಿಯು ಜೊತೆಗೆ ಭಾರತದ ಬಂಡವಾಳಕ್ಕೂ ಅವಕಾಶ ಕೊಡಲಾಗಿದೆ. ಇದಲ್ಲದೆ ನಮ್ಮವರಿಗೆ ಎಣ್ಣೆ ಶುದ್ಧೀಕರಣದ ರಹಸ್ಯಗಳನ್ನೆಲ್ಲ ತಿಳಿಯಲು ಅನುಕೂಲತೆ ಒದಗಿಸಿಕೊಡಬೇಕೆಂಬ ಪ್ರತ್ಯೇಕ ಕರಾರು ಕೂಡ ಇದೆ. ಹೀಗಿರುವುದರಿಂದ- ಹೊಸತಾಗಿ ಸ್ವತಂತ್ರ ರೀತಿಯಿಂದ ಉದ್ದಿಮೆಯನ್ನು ಸ್ಥಾಪಿಸಲು ನೆರವು ದೊರೆಯುವುದು. ಜವುಳಿ ಉದ್ದಿಮೆಯು ಭಾರತದಲ್ಲಿ ಕೆಲವರ್ಷಗಳಿಂದ ಪ್ರಾಬಲ್ಯಪಡೆದಿದ್ದು, ಈಗಿನ ಉತ್ಪಾದನಾ ಅಂಕೆ ಸಂಖ್ಯೆಯಂತೆ, ನಮಗಿನ್ನು ಬಟ್ಟೆಯ ಕೊರತೆಯಾಗದು. ಈ ವರ್ಷಾರಂಭದಲ್ಲಿ ವಿದ್ಯುದುಪಕರಣಗಳ ಉತ್ಪಾದನೆಯಲ್ಲಿ ಕೆಲಮಟ್ಟಿಗೆ ಇಳಿತ ಕಂಡುಬಂದಿದ್ದರೂ-ಇದು ಶಾಶ್ವತವೆನ್ನಲು ಬರುವುದಿಲ್ಲ. ಭಾರತ ಸರಕಾರ ಕೈಗೊಂಡಿರುವ ವಿವಿಧೋದ್ದೇಶದ ಅಣೆಕಟ್ಟುಗಳ ಪೂರ್ತಿಯೊಡನೆ-ವಿದ್ಯುದುಪಕರಣಗಳ ಬೇಡಿಕೆ ಒಮ್ಮೆಲೇ ಏರುವುದು ನಿಶ್ಚಯ. ಔದ್ಯಮಿಕ ವಿಕಾಸಕ್ಕೆ ವಿದ್ಯುತ್ತಿನ ಸಹಕಾರವನ್ನು ಬಣ್ಣಿಸಿ ಮುಗಿಯಲಿಕ್ಕಿಲ್ಲ. ಹಾಗೆಯೇ ಕಲ್ಲಿದ್ದಲು ವಿಪುಲವಾಗಿ ದೊರಕುವುದರಿಂದ, ಕಬ್ಬಿಣ ಉಕ್ಕು ಮತ್ತಿನ್ನಿತರ ಕಾರ್ಖಾನೆಗಳನ್ನು ತೆರೆದು ಕಾರ್ಯಾರಂಭಿಸಲೂ ಇದು ಯೋಗ್ಯಕಾಲ. ಹೀಗೆಲ್ಲ ಉದ್ದಿಮೆಗಳನ್ನು ವಿಸ್ತರಿಸುವಾಗ ಒಂದು ವಿಷಯವನ್ನು ಚೆನ್ನಾಗಿ ನೆನಪಿನಲ್ಲಿಟ್ಟುಕೊಳ್ಳಬೇಕು: ನಮ್ಮ ಜನರ ಬುದ್ಧಿವಂತಿಕೆಯ ಮೇಲೆ ವಿಶ್ವಾಸವಿದ್ದು ಸರಕಾರ ನಡೆಯಬೇಕು. ಈಗಿರುವಂತೆ ಹೆಚ್ಚಿನ ಯೋಜನೆಗಳೆಲ್ಲವೂ ಪಾಶ್ಚಾತ್ಯ ತಜ್ಞರಿಂದ ರಚಿಸಲ್ಪಟ್ಟು, ಯೋಜನೆಯ ಪ್ರತಿಯೊಂದೂ ಕಾರ್ಯಾಂಗದಲ್ಲಿ ಅವರ ವರ್ಚಸ್ಸೇ ಉಳಿದಿದೆ. ಅಖಿಲಭಾರತ ಉತ್ಪಾದಕರ ಸಂಘದ ಅಧ್ಯಕ್ಷ ಸ್ಥಾನದಿಂದ ಮೈಸೂರಿನ ಶಿಲ್ಪಿ ಎಂದು ಖ್ಯಾತರಾದ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯ ಮಾತನಾಡುವಾಗ ಈ ಬಗ್ಗೆ ತಕ್ಕ ಸಲಹೆಯನ್ನು ಕೊಟ್ಟಿರುವರು. ನಮ್ಮ ಉದ್ದಿಮೆಗಳು ಅಭಿವೃದ್ಧಿಹೊಂದುವುದು ಅತ್ಯಂತ ಆಗತ್ಯ. ಮತ್ತು ತಾಂತ್ರಿಕ ತರಬೇತಿಯು ಸಾಕಷ್ಟು ಇಲ್ಲದಿರುವುದರಿಂದ ಭಾರತೀಯರಿಗೆ ಹೆಚ್ಚು ಹೆಚ್ಚು ಅವಕಾಶಗಳನ್ನು ಒದಗಿಸಿ ಕೊಡಬೇಕಾದುದು ಅಷ್ಟೇ ಅಗತ್ಯ ಎಂದವರು ಹೇಳಿದರು. ಈ ಸಲಹೆಯನ್ನು ಕೇವಲ ಸ್ವಾಭಿಮಾನ ಪ್ರೇರಿತವೆಂದಷ್ಟೇ ತಿಳಿದುಕೊಳ್ಳದೆ ಸ್ವಾವಲಂಬನೆಯ ಸದುದ್ದೇಶ ಕೂಡ ಇದರಲ್ಲಿ ಅಂತರ್ಗತವಾಗಿದೆಯೆಂದು ಭಾವಿಸುವುದೊಳ್ಳೆಯದು. ವಿಶ್ವೇಶ್ವರಯ್ಯನವರು ಪ್ರತಿಪಾದಿಸಿದ ಇನ್ನೊಂದು ವಿಷಯ ಅಂಕೆ ಸಂಖ್ಯೆಗಳನ್ನು ಕಲೆಹಾಕುವುದಕ್ಕೆ ಸಂಬಂಧಿಸಿದೆ. ಔದ್ಯಮಿಕ ಕ್ಷೇತ್ರದಲ್ಲಿ ದಿನದಿಂದ ದಿನಕ್ಕೆ ವ್ಯವಸ್ಥಿತವಾದ ರೀತಿಯಲ್ಲಿ ಉತ್ಪಾದನೆಯನ್ನು ಹೆಚ್ಚಿಸಬೇಕಾದರೆ ಸಾಕಷ್ಟು ಸ್ಪಷ್ಟವಾದ ಹಾಗೂ ವಿಶ್ವಾಸಾರ್ಹವಾದ ಅಂಕೆಸಂಖ್ಯೆಗಳ ಮಾಹಿತಿ ಇರುವುದಗತ್ಯ. ವಿದೇಶಗಳಲ್ಲಿ ಒಂದು ಉದ್ದಿಮೆಯು ಮಾಡಿರುವ ಪ್ರಗತಿ, ಮತ್ತು ಅದರ ವಿವಿಧ ಮುಖಗಳ ಕಲ್ಪನೆಯನ್ನು ನಮ್ಮ ಉದ್ದಿಮೆಯೊಡನೆ ತೂಗಿ ನೋಡುವ ದೃಷ್ಟಿಯಿಂದಲೂ ಈ ಅಂಕೆ ಸಂಖ್ಯೆಗಳು ಪ್ರಯೋಜಕವಾಗಿವೆ. ಸರಕಾರವು ತಕ್ಕ ಆಸ್ಥೆಯನ್ನು ತೋರಿಸಿದ್ದಾದರೆ ನಮ್ಮ ಔದ್ಯೋಗಿಕ ಸಂಸ್ಥೆಗಳು ಈ ಮಟ್ಟಿಗೆ ಸಹಕರಿಸಲು ಸಿದ್ಧವಿವೆ ಎಂದು ಹೇಳಬಹುದು. ಕೊನೆಯದಾಗಿ ವಿಶ್ವೇಶ್ವರಯ್ಯನವರು ಜನರ ಅಭಿರುಚಿಗೆ ಅಭ್ಯಾಸಗಳಲ್ಲಿ ಮತ್ತು ಸರಕಾರೀ ಕ್ರಮಗಳಲ್ಲಿ ದೃಷ್ಟಿ ಪರಿವರ್ತನೆಯಾಗಬೇಕೆಂದು ಅಪೇಕ್ಷಿಸಿದರು. ಪರಿಶ್ರಮ ಪೂರ್ವಕವಾದ ಹಾಗೂ ಶಿಸ್ತಿನಿಂದ ಕೂಡಿದ ದುಡಿಮೆ ಭಾರತೀಯ ನಾಗರಿಕರ ನಿತ್ಯಾಭ್ಯಾಸವಾಗಬೇಕೆಂದ ಅವರ ಮಾತು ನಮ್ಮ ಯುವ ಜನಾಂಗದ ಆದರ್ಶವಾಗಬೇಕು. "ದುಡಿಮೆಯೇ ಸಂಸ್ಕೃತಿಯನ್ನು ಸಂಧಾರಿಸುತ್ತದೆ, ಸಂಪತ್ತನ್ನೂ ಸೌಭಾಗ್ಯವನ್ನೂ ಉನ್ನತ ಜೀವನ ಮಟ್ಟವನ್ನೂ ತರುತ್ತದೆ" ಎಂದು ವಿಶ್ವೇಶ್ವರಯ್ಯನವರು ಸ್ಪಷ್ಟ ಮಾತುಗಳಲ್ಲಿ ಆದರ್ಶ ಸಾಧನೆಯ ಮಾರ್ಗವೇನೆಂಬುದನ್ನು ಉಲ್ಲೇಖಿಸಿದ್ದಾರೆ. ಬಂಡವಾಳ, ತಾಂತ್ರಿಕ ನೆರವು ಮುಂತಾದವುಗಳಿಗಿಂತ ಮೊದಲು ನಮಗೆ ಉತ್ಸಾಹ ಬೇಕೇಬೇಕಾಗಿದೆ ಎಂಬದನ್ನು [illegible] ಬಾರಿಗೂ ನೆನಪಿನಲ್ಲಿಟ್ಟುಕೊಳ್ಳಬೇಕು. ಮನಸ್ಸಿದ್ದರೆ ಎಲ್ಲ ಕೆಲಸವನ್ನೂ ಮಾಡಿ ಪೂರೈಸಬಹುದು. ನಿರತ ಸಾಧನೆಯಿಂದ ಮಹಾ ಕಾರ್ಯಗಳೂ ಸುಲಭದಲ್ಲಿ ನೆರವೇರುವುವು. ಭಾರತದ ಉದ್ದಿಮೆಗಳು ಬೆಳೆದು ನಾಡು ಸಂಪತ್ತಿನಿಂದ ತುಂಬಿ ತುಳುಕುವಂತೆ ಮಾಡುವ ಪುಣ್ಯ ನಮ್ಮದಾಗುವುದು.

ಪತ್ರಿಕಾ ಆಯೋಗದ ನೇಮಕ

ವೃತ್ತಪತ್ರಿಕೆಗಳ ಸ್ಥಿತಿಗತಿಯನ್ನು ವಿಚಾರಿಸುವ ಉದ್ದೇಶ,

ಭಾರತದ ವೃತ್ತಪತ್ರಿಕೆಗಳ ಸ್ಥಿತಿಗತಿಯನ್ನು ಕೂಲಂಕಷವಾಗಿ ಪರಿಶೀಲಿಸಿ ವರದಿ ಮಾಡಲು ಭಾರತ ಸರಕಾರವು ಒಂದು ಆಯೋಗವನ್ನು ನೇಮಕ ಮಾಡಿದೆ. ಮುಂಬಯಿ ಹೈಕೋರ್ಟಿನ ನ್ಯಾಯಮೂರ್ತಿ ರಾಜಾಧ್ಯಕ್ಷರು ಆಯೋಗದ ಅಧ್ಯಕ್ಷರಾಗಿ ಕೆಲಸ ಮಾಡುವರು. ಡಾ. ಜಕೀರ ಹುಸೇನ, ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್, ಡಾ. ವಿ. ಕೆ. ಆರ್. ವಿ. ರಾವ್, ಜೆ. ನಟರಾಜನ್, ಎಂ. ಚಲಪತಿ ರಾವ್, ಆಚಾರ್ಯ ನರೇಂದ್ರ ದೇವ ಮುಂತಾದವರು ಆಯೋಗದ ಸದಸ್ಯರು. ವೃತ್ತಪತ್ರಿಕೆ ಹಾಗೂ ನಿಯತಕಾಲಿಕಗಳ ಬಂಡವಾಳ, ವ್ಯವಸ್ಥೆ, ಸುಧಾರಣೆ ಮುಂತಾದವುಗಳ ಬಗ್ಗೆ ಆಯೋಗವು ವಿವರವಾಗಿ ವಿಚಾರಿಸಿ ಬರುವ ಮಾರ್ಚಿ ತಿಂಗಳೊಳಗೆ ವರದಿಯನ್ನು ಒಪ್ಪಿಸಬೇಕಾಗಿದೆ. ಆಯೋಗದಲ್ಲಿ ಪತ್ರಿಕೋದ್ಯಮಿಗಳು ಕಡಿಮೆಯಾಗಿದ್ದು ಶಿಕ್ಷಣ ತಜ್ಞರು ಅರ್ಥಶಾಸ್ತ್ರಜ್ಞರೂ ಸಾಮಾಜಿಕ ಕಾರ್ಯಕರ್ತರೂ ಜೊತೆಗೊಬ್ಬ ನ್ಯಾಯಾಧಿಕರೂ ಸೇರಿರುವುದೊಂದು ವೈಶಿಷ್ಟ್ಯ ಪತ್ರಿಕಾ ಸ್ವಾತಂತ್ರ್ಯಕ್ಕೆ ಬಗೆಬಗೆಯ ವ್ಯಾಖ್ಯೆ ಮಾಡಿ ಜನರು ಟೀಕಿಸುವುದ ಇಂದಿನ ವಾಡಿಕೆಯಾಗಿದೆ. ಆಯೋಗವ ಈ ವಿಷಯದಲ್ಲಿ ಕೈ ಹಾಕಿ, ಈ ರುವ ಕಾಯಿದೆ ಕಾನೂನುಗಳ ಬಗ ತನ್ನ ಅಭಿಪ್ರಾಯವನ್ನು ವ್ಯಕ್ತಪ ಸುತ್ತದೆ. ಅಖಿಲಭಾರತ ವೃತ್ತಪತ್ರಿ ಸಂಪಾದಕರ ಪರಿಷತ್ತು ಮೊನ್ನೆ ತಾನೆ ಹೊಸದಿಲ್ಲಿಯಲ್ಲಿ ಸೇರಿದ್ದು, ವೃತ್ತಪ ಕೆಗಳ ಸ್ವಾತಂತ್ರ್ಯವನ್ನು ಸಂಕ್ಷ ಲಾಗದು ಎಂದು ನಿರ್ಣಯ ಸ್ವೀಕರಿಸಿದೆ ಕೆಲವು ಪತ್ರಿಕೆಗಳು ಕೀಳ್ಮಟ್ಟದವಿದ್ದರೂ ಅಶ್ಲೀಲ ಹಾಗೂ ಅಸಭ್ಯ ಲೇಖನಗಳಂ ಅಪಪ್ರಚಾರಮಾಡುತ್ತಿದ್ದರೂ- "ಪತ್ರಿ ಸ್ವಾತಂತ್ರ್ಯ"ವು ಪರಮಶ್ರೇಷ್ಠವಾದುದ ದು ಮನ್ನಿಸಲ್ಪಡಬೇಕೆಂದು ಪರಿಷತ್ತು ಹೇಳುತ್ತದೆ. ಭಾರತ ಸರಕಾರ ಪತ್ರಿಕಾ ಆಯೋಗವೊಂದನ್ನು ನೇಮಿಸಿದುದಕ್ಕೆ ಲ್ಲೆಡೆಯಿಂದಲೂ ಸ್ವಾಗತ ದೊರೆತಿದೆ: ತ್ರಿಕಾ ಪ್ರಪಂಚ ಅದರೊಡನೆ ಸಂಪೂರ ಸಹಕರಿಸುವುದಾಗಿ ಭರವಸೆಕೊಟ್ಟಿದೆ.

* * *

ರಾಷ್ಟ್ರಸಂಘದ ಸದಸ್ಯತ್ವ

ಜಪಾನಿಗೆ ಸಂಯುಕ್ತ ರಾಷ್ಟ್ರಸಂಘ ಸದಸ್ಯತ್ವವನ್ನು ಕೊಡಬೇಕೆಂದು ಭದ್ರತಾ ಮಂಡಳದ ಮುಂದೆ ಅಮೇರಿಕ ತಂದ ಸೂ ಚನೆಗೆ ಹತ್ತು ಸದಸ್ಯರ ಬೆಂಬಲವಿದ್ದರೂ- ಹನ್ನೊಂದನೆಯದಾದ ರಶಿಯಾ ತನ್ನ ವೇಧಾಧಿಕಾರವನ್ನು ಪ್ರಯೋಗಿಸಿ, ಅದನ್ನ

ಉಡುಪಿ ಡಿ. ಮು. ಕೋರ್ಟಿನಲ್ಲಿ
S.C 506/45 S.E.P. 231/195

ಬಿ. ವಿಠಲ ಹೆಗ್ಡೆ—ಅರ್ಜಿದಾರ
ಮತ್ತು
ಎಲ್ಲಪ್ಪ ಹೆಗ್ಡೆ ಕೂಡ—ಎದುರು
ಇವರೊಳಗೆ

ಎದುರು:-2 ಅಕ್ಕಣಿ ಹೆಗ್ಗಡ್ತಿ, 3 ತಿಮ ಪ್ಪ ಹೆಗ್ಡೆ, 5 ಪ್ರಾಪಕ್ಕ ಹೆಗ್ಗಡ್ತಿ [ಸರ್ವ ಹೆಗ್ಗಡ್ತಿ ಮಕ್ಕಳು] 6 ವಾಸು ಹೆಗ್ಡೆ- ಕೃ ಹೆಗ್ಗಡ್ತಿ ಮಗ, ಉಡುಪಿ ತಾಲೂಕು ಶಿವ ಗ್ರಾಮದಲ್ಲಿರುವವರು.

ಗಾರ್ನಿಶಿಗಳು: 7 ನರಸಿ ಹೆಗ್ಗಡ್ತಿ, 8 ಗ ಲಾಡಿ ಹೆಗ್ಗಡ್ತಿ- ಕೃಷ್ಣ ಹೆಗ್ಗಡ್ತಿ ಮಕ್ಕ 9 ಸುಶೀಲ ಹೆಗ್ಗಡ್ತಿ-ಸಿಂಧು ಹೆಗ್ಗಡ್ತಿ ಗಳು, 11 ಭವಾನಿ ಹೆಗ್ಗಡ್ತಿ-ಅಕ್ಕಣಿ ಹೆ ಡ್ತಿ ಮಗಳು, ಉಡುಪಿ ತಾಲೂಕು ಶಿರ್ವ ಗ್ರಾಮದಲ್ಲಿರುವವರು.

ಮೇಲ್ಕಂಡ ಎದುರು ವ ಗಾರ್ನಿಶಿಗಳಿಗೆ ಮೂಲಕ ತಿಳಿಯಪಡಿಸುವುದೇನೆಂದರೆ:

ಮೇಲ್ಕಂಡ ಅಮಲ್ಜಾರಿಯಲ್ಲಿ, ಕೋರ್ಟ O. S. NO. 409/46ನೇ ಖ್ಯದ ಕ್ರೆಡಿಟಿಗೆ ಡಿಪಾಜಿಟುಯಿರುವ- ರು ರೂ. 300/- ನ್ನು ಜಪ್ತು ಮಾಡುವ ಯೂ- ಮತ್ತು ಸದ್ರಿ O. S No 409/ ನೇ ಡಿಕ್ರಿ ಆಸ್ತಿಯ ವಸೂಲಿ ಹಕ್ಕು ಜಪ್ತು ಮಾಡುವಂತೆ ಸಹ ಅರ್ಜಿದಾರನು ದಾ ಮಾಡಿದ ಮೇಲ್ಕಂಡ ಅಮಲ್ಜಾರಿ ತಾ 1 10-1952ಕ್ಕೆ ವಿಚಾರಣೆಗಿಡ ಸದ್ರಿ ಎದುರು ವ ಗಾರ್ನಿಶಿಗಳು ಆಕ್ಷೇಪ ಹೇ ತಕ್ಕದ್ದಿದ್ದರೆ ಆ ದಿವಸ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ, ಹ್ಯಾಹೇವಾರಿ ಕೃತಕ್ಕದ್ದು-ಎಂತ ತಿಳಿಸಲಾಗಿರುವದೆ

K J Balla
Pleader for Petitio

Dated 21-9-52 Camp: Udipi.

ಸ್ಕರಿಸಿತು ರಶಿಯಾದ ಪ್ರತಿನಿಧಿ ಇದಕ್ಕೆ ಕಾರಣಗಳನ್ನು ತಿಳಿಸುತ್ತಾ, ಜಪಾನ ಇನ್ನೂ ರಶಿಯಾ ಹಾಗೂ ಚೀನಾಗಳೊಡನೆ ಶಾಂತಿ ಒಪ್ಪಂದ ಮಾಡಿಕೊಂಡಿಲ್ಲೆಂದೂ, ಈಗಿರುವಂತೆ ಅದು ಅಮೇರಿಕದ "ವಸಾಹತು" ಪ್ರದೇಶವಾಗಿ ಉಳಿದಿರುವುದಾಗಿಯೂ ಹೇಳಿದರು. ಸರ್ವಭಾಧಿಕಾರವಿಲ್ಲದ ರಾಷ್ಟ್ರಕ್ಕೆ ಸಂಯುಕ್ತ ರಾಷ್ಟ್ರ ಸಂಘದ ಸದಸ್ಯತ್ವ ಕೊಡುವುದಕ್ಕೆ ತನ್ನ ಸಮ್ಮತಿ ಇಲ್ಲೆಂದು ಅವರು ಸಾರಿದರು. ಅಮೇರಿಕನರು ಕೊರಿಯಾ ಹಾಗೂ ಕಮ್ಯೂನಿಸ್ಟ ಪ್ರದೇಶಗಳ ಮೇಲೆ ಸತತಾಕ್ರಮಣ ನಡೆಸುವ ಹೊಂಚು ಹಾಕಿ, ಜಪಾನಿನಲ್ಲಿ ಇನ್ನೂ ತಮ್ಮ ಸೈನ್ಯವನ್ನು ಇಟ್ಟುಕೊಂಡಿರುವುದಾಗಿ ರಶಿಯಾ ಆಕ್ಷೇಪಿಸಿತ. ಹೀಗೆ ೫೩ನೇ ಸಲ ರಶಿಯಾ ನಿಷೇಧಾಧಿಕಾರವನ್ನು ಉಪಯೋಗಿಸಿದುದರಿಂದ—ಮತದಾನದ ಕ್ರಮದಲ್ಲಿ ಬದಲಾವಣೆಯಾದರೆ ಚೆನ್ನಾಗಿದೇ ಎಂದು ಅಮೇರಿಕ ಸೂಚಿಸಿದುದಕ್ಕೆ ರಶಿಯಾ ಪ್ರಬಲ ಪ್ರತಿಭಟನೆ ವ್ಯಕ್ತಮಾಡಿತು ನಿಷೇಧಾಧಿಕಾರವು ತಂಬ ಅಮೂಲ್ಯವಾದ ಕೊನೆಗಳಿಗೆಯ ಅಸ್ತ್ರವೆಂದು ಹೇಳಿ, ಅದನ್ನು ಕಸಿದುಕೊಂಡರೆ, ರಶಿಯಾ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಉಳಿಯಲಾರದೆಂದು [illegible] ಮಾಲಿಕರು ಸಾರಿದರು. ಅಮೇರಿಕವು ಇಷ್ಟು ಹೆಚ್ಚು ಸಲ ನಿಷೇಧಾಧಿಕಾರವನ್ನು ಉಪಯೋಗಿಸಿಲ್ಲವಾದರೆ— ಅದಕ್ಕೆ ಕಾರಣ,, ರಶಿಯಾ ಅಮೇರಿಕೆ ಅದ ಮುಂದಿಟ್ಟ ಮಾದರಿಯ ಅನುಚಿತ ಸೂಚನೆಗಳನ್ನು ಮಾಡಿಲ್ಲೆಂಬುದೇ ಸೈ ಎಂದು ಮಾಲಿಕರು ಹೇಳಿದರು.

ರಶಿಯಾ—ಅಮೇರಿಕೆಗಳ ಭಯ.

ಹೀಗೆ ಸಂಯುಕ್ತ ರಾಷ್ಟ್ರ ಸಂಘದ ಸದಸ್ಯತ್ವವನ್ನು ಅಪೇಕ್ಷಿಸಿ ಬಂದ ಜಪಾನ ಈಗಿನ ನಿರಾಕರಣೆಯಿಂದ ನಿರಾಶೆಗೊಂಡಿದೆ. ಈ ವಿಷಯದಲ್ಲಿ ಸುಮ್ಮನಿರಿಯದೆ—ಅದು ಸದಸ್ಯತ್ವವನ್ನು ಪಡೆಯಲು ಬೇರೆ ಬಗೆಯಾಗಿ ಪ್ರಯತ್ನಿಸುತ್ತಿದೆ. ರಶಿಯಾ ಮೊದಲು ಇಂಡೋ ಚೈನಾನೆನ್ನಿಸಿದ್ದ ಈಗಿನ ಕಾಂಬೋಡಿಯಾ, ವೀಟನಾಮ ಮತ್ತು ಲಾವೋಸ್‌ಗಳಿಗೆ ಸದಸ್ಯತ್ವವನ್ನು ಕೊಡಲು ನಿವೇದಿಸಿದೆ. ಜಪಾನ್‌ಗೆ ಸದಸ್ಯತ್ವ ಕೊಡಬೇಕೆಂದು ರಶಿಯಾ ಮಾಡಿದ ಸೂಚನೆಯನ್ನು ಉಳಿದ ಹತ್ತು ಸದಸ್ಯರು ತಿರಸ್ಕರಿಸಿದರು. ಇದರ ಮೇಲಿಂದ ಪಶ್ಚಿಮರಾಷ್ಟ್ರಗಳು ತಮ್ಮ ತಮ್ಮೊಳಗೇ ಕಚ್ಚಾಡುತ್ತಿವೆಯಾಗಿ ಸ್ವಯಂ ವೇದ್ಯವಾಗುತ್ತದೆ. ಜಪಾನದಲ್ಲಿ ಈಗ ಪುನಃ ಶಸ್ತ್ರೀಕರಣದ ಗುಲ್ಲು ಎದ್ದಿದೆ. ಹಾಗೆಂದು ಇದಕ್ಕೆ ಬೇಕಾದ ವಿಪುಲ ಸಾಧನ ಸರಂಜಾಮುಗಳಾಗಲೀ, ಧನವಾಗಲೀ ಚಿಕ್ಕ ರಾಷ್ಟ್ರವಾದ ಜಪಾನದಲ್ಲಿ ಇಲ್ಲ. ಇದೆಲ್ಲವನ್ನೂ ಅಮೇರಿಕೆಯು ದೊಡ್ಡಣ್ಣನೇ ಪೂರೈಸಬೇಕು! ಇತ್ತೀಚೆಗೆ ಚೀನಾ ಹಾಗೂ ರಶಿಯಾಗಳೊಡನೆ ಹೊಸ ಒಪ್ಪಂದವಾಗಿದ್ದು—ಇದರನ್ವಯ ಚೀನೀ ಜನತಾ ಸರಕಾರವು ಪೋರ್ಟ ಆರ್ಥರಿನಲ್ಲಿ ರಶಿಯಾದ ಸೈನ್ಯವು ಇನ್ನೂ ಕೆಲ ಸಮಯ ನಿಲ್ಲುವುದಕ್ಕೆ ಕೊಟ್ಟ ಆಮಂತ್ರಣ ಸ್ವೀಕಾರಗೊಂಡಿದೆ. ಇದು ಅಮೇರಿಕನರಿಗೆ ದಿಗಿಲು ಹುಟ್ಟಿಸಲು ಸಾಕಷ್ಟು ಬಲವಾದ ಕಾರಣ. ಹಾಗೆಯೇ ಶಾಂತಿ ಸಾಗರ ಯೋಜನೆಯಂಥ ಕೂಟ ನೀತಿಯನ್ನು ರಶಿಯಾ ಶಂಕೆಯಿಂದ ಕಾಣುವಂತಿಲ್ಲ.

ಮಲಾನರ ಬೆದರಿಕೆ

ಅಹಿಂಸಾತ್ಮಕ ಸತ್ಯಾಗ್ರಹವನ್ನು ದಕ್ಷಿಣ ಆಫ್ರಿಕಾದಲ್ಲಿ ನಡೆಸುತ್ತಿರುವ ಭಾರತೀಯರ ಬಗ್ಗೆ ಸಹಾನುಭೂತಿಯನ್ನು ತೋರಿಸಿದ ಅಖಿಲಭಾರತ ರಾಷ್ಟ್ರೀಯ ಕಾಂಗ್ರೆಸು ಒಂದು ಪ್ರಕಟಣೆಯನ್ನು ಹೊರಡಿಸಿ, ಸಾರ್ವಜನಿಕರು ಉದಾರತೆಯಿಂದ ಧನ ಸಹಾಯ ನೀಡಬೇಕೆಂದು ಬಿನ್ನವಿಸಿದೆ. ಸತ್ಯಾಗ್ರಹವು ದಿನದಿಂದ ದಿನಕ್ಕೆ ಬಲಿಯುತ್ತಾ ಬರುತ್ತಿರುವುದಾಗಿ ಕೇಳುತ್ತೇವೆ. ಆದರೆ ಮಲಾನ ಸರಕಾರವು ಇನ್ನೂ ತನ್ನ ನಿಲುವಿನಲ್ಲಿ ಬದಲಾವಣೆಯನ್ನು ತೋರಿಲ್ಲ. ಮೊನ್ನೆ ಮೊನ್ನೆ ಜೋಹಾನ್ಸ್ ಬರ್ಗದಲ್ಲಿ ವಿಟ್‌ವಾಟರ್ಸ್‌ರಾಂಡ್ ವಿಶ್ವವಿದ್ಯಾಲಯದ (ಇದು ದಕ್ಷಿಣ ಆಫ್ರಿಕೆಯಲ್ಲಿಯೇ ಅತ್ಯಂತ ದೊಡ್ಡದು) ಬಿಳಿ ವಿದ್ಯಾರ್ಥಿಗಳು ಪ್ರದರ್ಶನ ನಡೆಸಿದ್ದನ್ನು ಟೀಕಿಸಿದ್ದಲ್ಲದೆ ಇನ್ನು ಮುಂದೆ ಹೀಗೆ ನಡೆದರೆ ಸರಕಾರ ವಿಶ್ವವಿದ್ಯಾಲಯಕ್ಕೆ ಕೊಡುವ ಸಹಾಯಧನವನ್ನು ನಿಲ್ಲಿಸುವುದಾಗಿ ಎಚ್ಚರಿಕೆ ಕೊಡಲಾಗಿದೆ. ಕಮ್ಯೂನಿಸ್ಟರನ್ನು ನಿರ್ಬಂಧಿಸುವ ಕಾನೂನಿನನ್ವಯ ಇಬ್ಬರ ಆಫ್ರಿಕನ ವೈದ್ಯಕೀಯಾಭ್ಯಾಸಿಗಳನ್ನು ಬಂಧಿಸಿದ್ದೇ ವಿದ್ಯಾರ್ಥಿಗಳ ಪ್ರದರ್ಶನಕ್ಕೆ ಕಾರಣ. ಪ್ರಿಟೋರಿಯಾದಲ್ಲಿ ಮಲಾನರು ಈಚೆಗೆ ಮಾತನಾಡಿದಾಗ ಪಾರ್ಲಿಮೆಂಟು ಹೈಕೋರ್ಟನ್ನು ಘಟನಾತ್ಮಕವಲ್ಲೆಂದು ಅಪೀಲು ಕೋರ್ಟು ಕೂಡ ನಿರ್ಣಯಿಸಿದರೆ—ಆಗ ಚುನಾವಣೆಯೇ ಮುಂದಿನ ನಿಲುವೆಯನ್ನು ರೂಪಿಸುವುದ ಎಂದರು. ಹಾಗೆಯೇ ಸಂಯುಕ್ತ ರಾಷ್ಟ್ರಸಂಘವು ದಕ್ಷಿಣ ಆಫ್ರಿಕೆಯ ಆಂತರಿಕ ವಿಷಯದಲ್ಲಿ (ಎಂದರೆ ವರ್ಣದ್ವೇಷ ನೀತಿಯ ಬಗ್ಗೆ) ಕೈಹಾಕಿದ್ದರೆ—ತನ್ನ ಸದಸ್ಯತ್ವವನ್ನು ಚೆಲ್ಲಿಕೊಟ್ಟು ಹೊರಬರುವುದಾಗಿ ಕೂಡ ಮಲಾನ ಹೇಳಿದರು.

ಟ್ರಿಗ್ವೆಲೀಯವರ ಪತ್ರ

ಆದರೆ ಈಚೆಗೆ, ಅಸ್ವಾಸ್ಥ್ಯ ವಿರಾಮದ ಬಳಿಕ, ಸಂಯುಕ್ತ ರಾಷ್ಟ್ರಸಂಘದ ಕಾರ್ಯ[illegible] ಟ್ರಿಗ್ವೆಲೀಯವರು ಭಾರತ, ಪಾಕಿಸ್ತಾನ ಹಾಗೂ ದಕ್ಷಿಣ ಆಫ್ರಿಕೆಗಳಿಗೆ ಒಂದು ಪತ್ರ ಬರೆದು, ವರ್ಣದ್ವೇಷ ನೀತಿಯ ಸಂಬಂಧದಲ್ಲಿ ಆಯಾ ರಾಷ್ಟ್ರಗಳ "ಅಭಿಪ್ರಾಯ" ಕೇಳಿದ್ದಾರೆ. ರಾಷ್ಟ್ರಸಂಘದ ಕಾರ್ಯದರ್ಶಿಯು ನಿರ್ದಿಷ್ಟವಾದೊಂದು ಕ್ರಮವನ್ನು ಕೈಕೊಳ್ಳುವ ಬದಲು— ಹೀಗೆ ಅಭಿಪ್ರಾಯ ಕೇಳುವುದು ಸರಿಯಲ್ಲವಿದ್ದರೂ, ಭಾರತ ಸರಕಾರ ಒಡನೆಯೇ ಈ ಪತ್ರಕ್ಕೆ ಉತ್ತರ ಕಳಿಸಿದೆ. ದಕ್ಷಿಣ ಆಫ್ರಿಕದಲ್ಲಿ ಭಾರತೀಯರನ್ನು ನಡೆಸಿಕೊಳ್ಳುವ ವಿಷಯದಲ್ಲಿ ಶೀಘ್ರವೇ ಪರಿಣಾಮಕಾರೀ ಕ್ರಮಗಳನ್ನು ಕೈಗೊಳ್ಳಬೇಕೆಂದು ಭಾರತ ಹೇಳಿದೆ. ಸಂಯುಕ್ತ ರಾಷ್ಟ್ರ ಸಂಘದ ಮುಂದಿನ ಅಧಿವೇಶನಕ್ಕೆ ಹೋಗುವ ಭಾರತದ ಪ್ರತಿನಿಧಿ ಮಂಡಳದ ಸದಸ್ಯರ ಹೆಸರ ಪ್ರಸಿದ್ಧಿಗೊಂಡಿದ್ದು, ಶ್ರೀಮತಿ ವಿಜಯಲಕ್ಷ್ಮಿ ಪಂಡಿತರಿಗೆ ಧುರೀಣತ್ವ ದೊರಕಿದೆ. ಈ ಹಿಂದೆ ದಕ್ಷಿಣ ಆಫ್ರಿಕೆಯ ಪ್ರಶ್ನೆ ರಾಷ್ಟ್ರಸಂಘದ ಸಾಮಾನ್ಯ ಸಭೆಯಲ್ಲಿ ಚರ್ಚೆಗೆ ಬಂದಿದ್ದಾಗ ಶ್ರೀಮತಿಯವರೇ ಭಾರತದ ಪರವಾಗಿ ಮಾತನಾಡಿದ್ದರು.

ಉಡುಪಿ.

ಆಗಮನ—ಮದ್ರಾಸು ಜಸ್ಟಿಸ್ ಪಿ ರಾಜಗೋಪಾಲನ್ ಅವರು ಜಿಲ್ಲಾಧಿಕಾರಿಗಳೊಂದಿಗೆ ತಾ 16ರಲ್ಲಿ ಉಡುಪಿಗೆ ಆಗಮಿಸಿ ಸ್ಥಳೀಯ ಡಿ ಮು। ಕೋರ್ಟನ್ನು ಸಂದರ್ಶಿಸಿದರು. ಬಾರ್ ಎಸೋಸಿಯೇಶನಿಗೆ ಭೇಟಿಯಿತ್ತಾಗ ವಕೀಲ್ ಶ್ರೀ ಕೆ. ಜಿ ಬಲ್ಲಾಳ್ ಮೊದಲಾದವರು ಸ್ವಾಗತವಿತ್ತರು. ಸಬ್ ಕೋರ್ಟು ಸಬ್ ಡಿವಿಜನಲ್ ಮೆಜಿಸ್ಟ್ರೇಟ್ ಕೋರ್ಟುಗಳ ಆವಶ್ಯಕತೆಯನ್ನು ನ್ಯಾಯಮೂರ್ತಿಗಳ ಗಮನಕ್ಕೆ ತರಲಾಯಿತು. ಸಬ್ ಡಿವಿಜನಲ್ ಮೆಜಿಸ್ಟ್ರೇಟ್ ಕೋರ್ಟನ್ನು ಇಲ್ಲಿಗೆ ವರ್ಗಾಯಿಸುವ ಕುರಿತು ಸಹಾನುಭೂತಿಯಿಂದ ಕೇಳಿಕೆಯನ್ನು ಪರಿಶೀಲಿಸಲಾಗುವುದೆಂದರು.

ಗೋಟು ವಾದ್ಯ — ನಾದವಾಣಿ ಮೈಸೂರ ಆಸ್ಥಾನ ವಿದ್ವಾನ್ ಶ್ರೀ ನಾರಾಯಣ ಅಯ್ಯಂಗಾರರು ತಮ್ಮ ಕುಮಾರ ಮಾಸ್ಟರ್ ರಾಮಕೃಷ್ಣರವರ ಹಾಡುಗಾರಿಕೆಯೊಂದಿಗೆ ತಾ. 17ರಂದು ರಾತ್ರಿ ಶ್ರೀ ಕೃಷ್ಣಮಠದ ವಸಂತ ಮಹಲಿನಲ್ಲಿಯೂ ತಾ. 21ನೇ ರಾತ್ರಿ ಮುಕುಂದ ನಿವಾಸದಲ್ಲಿಯೂ ಗೋಟುವಾದ್ಯ ಬೈಟಕನ್ನು ನೆರವೇರಿಸಿದರು

ಹೊಸ ಮುನ್ಸೀಫರು. ಶ್ರೀ. ಟಿ. ವಿ. ಬಿ. ಸಿ. ಕುಲಾಸೊ ಅವರು ಕಾಸರಗೋಡಿಗೆ ವರ್ಗಾಯಿಸಲ್ಪಟ್ಟಿದ್ದರಿಂದ ಅವರ ಸ್ಥಾನಕ್ಕೆ ಜನಾಬ್ ಅಬ್ದುಲ್ ರಹೀ ಅವರು ನೇಮಿಸಲ್ಪಟ್ಟಿದ್ದು ಅಧಿಕಾರ ಸ್ವೀಕರಿಸಿರುವರು

ಮಂತ್ರಿಗಳ ಕಾರ್ಯಕ್ರಮ ರದ್ದು ಇದೇ ತಾ. 22ರಲ್ಲಿ ಪೂರ್ವಾಹ್ನ ಮತ್ತಿಗೆ ಮತ್ತು ಕಲ್ಯಾಡಿ ಸಂಕಗಳ ಶಂಕುಸ್ಥಾಪನಾ ಕಾರ್ಯವನ್ನು ನೆರವೇರಿಸಲು ಎಲ್ಲಾ ಸಿದ್ಧತೆಗಳನ್ನು ಮಾಡಲಾಗಿತ್ತು. ಆದರೆ ಆ ಕಾರ್ಯನೆಸಗಲು ಬರಲಿದ್ದ ಮಾನ್ಯ ಮಂತ್ರಿ ಶ್ರೀ. ಎನ್ ರಂಗರೆಡ್ಡಿಯವರಿಗೆ ದೇಹಾಲಸ್ಯ ಉಂಟಾದುದರಿಂದ ಕಾರ್ಯಕ್ರಮ ರದ್ದು ಮಾಡಲ್ಪಟ್ಟಿತು ಶ್ರೀ. ಟಿ ಎ. ಪೈ ಎಮ್ ಎಲ್ ಎ ಅವರು ಈ ವಿಚಾರವನ್ನು ನೆರೆದ ಜನತೆಗೆ ಜಾಹೀರು ಮಾಡಿದರು,

ನಗರ ಸಭೆಯ ಚುನಾವಣಾ ಪ್ರಚಾರ ಸಭೆಯು— ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ತಾ 21ರಲ್ಲಿ ಸಂಜೆ ರಥಬೀದಿಯಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಎಫ್ ಎಕ್ಸ್. ಡಿ'ಪಿಂಟೋರವರ ಅಧ್ಯಕ್ಷತೆಯಲ್ಲಿ ನೆರವೇರಿತು ಜನಾಬ್ ಇದಿನಬ್ಬನವರು ಕಾಂಗ್ರೆಸ್ ಸರಕಾರವು ಮಾಡಿದ ಜನಹಿತ ಕಾರ್ಯಗಳನ್ನು ವಿವರಿಸಿ ನಗರ ಸಭಾ ಚುನಾವಣೆಯಲ್ಲಿಯೂ ಕಾಂಗ್ರೆಸ್ ಉಮೇದಾರಿಗಳಿಗೆ ಬೆಂಬಲ ನೀಯಬೇಕೆಂದರು. ಶ್ರೀಗಳಾದ ಆರ್ ಆರ್. ಕುಂಜೂರು ಎಡ್ವಕೇಟ್ ಬಿ ಎ. ಸೆಟ್ಟರು ನಗರ ಸಭೆಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಭಾಗವಹಿಸುವುದರ ಪ್ರಯೋಜನವನ್ನು ವಿವರಿಸಿದರು. ಶ್ರೀ ಟಿ. ಎ ಪೈ ಎಮ್ ಎಲ್. ಎ. ಅವರು ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಕಾಂಗ್ರೆಸ್ ಭಾಗವಹಿಸುವುದರ ಔಚಿತ್ಯವೇನೆಂಬುದನ್ನು ವಿವರಿಸಿ ಚುನಾವಣಾ ರಂಗದಲ್ಲಿ ಆಗುತ್ತಿರುವ ಆರೋಪ ಟೀಕೆ ಗಳಿಗೆ ತಕ್ಕ ಉತ್ತರವಿತ್ತು ಮತದಾರರು ಕಾಂಗ್ರೆಸ ಹುರಿಯಾಳುಗಳಿಗೆ ಮತವೀಯಬೇಕೆಂದು ವಿನಂತಿಸಿ ಸ್ಫೂರ್ತಿದಾಯಕ ಭಾಷಣ ಮಾಡಿದರು. ಶ್ರೀ ಎಸ್. ಎಸ್. ಕಿಲ್ಲೆಯವರು ತನ್ನ ಅಸ್ಖಲಿತ ಮತ್ತು ಆವೇಶಪರ ಭಾಷಣದಲ್ಲಿ ಚುನಾವಣೆ ಕುರಿತು ಜಿಲ್ಲಾ ಕಾಂಗ್ರೆಸ್ ಕಮಿಟಿ ಮತ್ತು ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳಲ್ಲಿ ಮತಭೇದವಿದೆ ಎಂದು ವಿರೋಧಿ ಪಕ್ಷದವರು ಅಪಪ್ರಚಾರ ಮಾಡುವುದರಲ್ಲಿ ಹುರುಳಿಲ್ಲವೆಂದೂ ಕ್ರಮಬದ್ಧವಾಗಿಯೇ ಕಾಂಗ್ರೆಸ್ ಹುರಿಯಾಳುಗಳನ್ನು ನಿಲ್ಲಿಸಲಾಗಿದೆಯೆಂದೂ ಆದಿಯಿಂದಲೂ ಕಾಂಗ್ರೆಸಿಗೆ ವಿಶೇಷ ಬೆಂಬಲ ನೀಡುತ್ತಿರುವ ಉಡುಪಿಯು ಈ ಬಾರಿ ಕೂಡ ಹಿಂದುಳಿಯಲಾರದೆಂದೂ ತೋರಿಕೆಗೆ ಪಾರ್ಟಿ ಇಲ್ಲವೆಂದರೂ ಕಾಂಗ್ರೆಸನ್ನು ವಿರೋಧಿಸುತ್ತಿರುವವರ ಹಿನ್ನೆಲೆಯ ಕೂಟತಂತ್ರವನ್ನು ವಿವರಿಸಿ ಸ್ವಾರ್ಥಿಗಳ ಅಪಪ್ರಚಾರ ಮತ್ತು ಸೂತ್ರಚಾಲನೆಯನ್ನು ಖಂಡಿಸಿ ತುಳುವಿನಲ್ಲಿ ಭಾಷಣಮಾಡಿದರು. ಕಾಂಗ್ರೆಸ್ಸಿಗೇ ಮತ ಕೊಡಬೇಕೆಂದು ಅಧ್ಯಕ್ಷ ಭಾಷಣವಾದ ಮೇಲೆ ಡಾ। ಕೆ. ಎಲ್. ಐತಾಳರ ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಮಳೆ ಇಲ್ಲ—ಸುಮಾರು ಒಂದು ತಿಂಗಳಿಂದ ಮಳೆ ಬಾರದೆ ತೆನೆ ಬಿಡುವ ಪೈರಿಗೆ ತುಂಬಾ ಹಾನಿಯಾಗಿದೆ. ಎಣ್ಣೆ ಬರುವಾಗ ಗಾಣ ಮುರಿಯಿತೆಂಬಂತಾಗಿದೆ. ರೈತರು ಕಂಗೆಟ್ಟಿರುವರು.

ಕಾಂಗ್ರೆಸಿಗೆ ಇನ್ನೊಂದು ಸೀಟು- ಕಡಿಯಾಳಿ ವಾರ್ಡಿನ ಉಮೇದ್ವಾರ ಶ್ರೀಯು. ಕೇಶವ ಕಾಮತರು ತನ್ನ ಉಮೇದ್ವಾರಿಕೆಯನ್ನು ಹಿಂದೆಗೆದುದರಿಂದ ಕಾಂಗ್ರೆಸ ಉಮೇದ್ವಾರ ಶ್ರೀ ಕೆ. ಪ್ರಭಾಕರ ಪೈಗಳು ಅವಿರೋಧವಾಗಿ ಆರಿಸಲ್ಪಟ್ಟಂತಾಯಿತು. ಹರಿಜನ ಸೀಟ್ ಮೊದಲೇ ಅವಿರೋಧವಾಗಿದೆ. ಉಳಿದೆಲ್ಲ ಸ್ಥಾನಗಳಿಗೂ ಸ್ಪರ್ಧೆ ಇದೆ

ನವರಾತ್ರಿ ಮಹೋತ್ಸವ- ಮಂಗಳೂರಿನ ಕದ್ರಿ ಶ್ರೀ ಮಂಜುನಾಥ ಸ್ವಾಮಿ ದೇವಸ್ಥಾನದಲ್ಲಿ ಉಡುಪಿ ಅಧಮಾರು ಮಠದ ಶ್ರೀ ವಿಬುಧೇಶತೀರ್ಥ ಶ್ರೀ ಪಾದಂಗಳವರ ನೇತೃತ್ವದಲ್ಲಿ ನವರಾತ್ರಿ ಮಹೋತ್ಸವ ಇದೇ ತಾ 26ನೆ ಶುಕ್ರವಾರದಿಂದ ತಾರೀ 29 9-52ನೆ ಸೋಮವಾರ ತನಕ ಪುರಾಣ ಪಠನ, ಹರಿಕಥೆ, ಭಾಷಣ ಮೊದಲಾದ ಕಾರ್ಯಕ್ರಮಗಳಿಂದ ಜರಗಲಿರುವುದು.

ಕೂಳೂರು ಸೇತುವೆಯ ಉದಘಾಟನೆ- ಮಾನ್ಯಮಂತ್ರಿಗಳು ಮಂಗಳೂರಿನಿಂದ ಕೂಳೂರಿಗೆ ಬರಲು ಅಲ್ಲಿ ಅವರ ಸ್ವಾಗತಮಾಡಲಾಯಿತು. ಪ್ರಾರ್ಥನಾನಂತರ ಡಿವಿಜನಲ್ ಎಂಜಿನಿಯರ್ (ಹ್ಯಾವೇಸ್) ಶ್ರೀ ಎಮ್. ಎಸ್. ಸಬ್ರಿಟಿಯವರು ತಮ್ಮ ಸ್ವಾಗತ ಭಾಷಣಮಾಡಿದ ಬಳಿಕ "ಕೂಳೂರಿನ ಕಡವು ದಕ್ಷಿಣಕನ್ನಡ ಜಿಲ್ಲೆಯ ಅತೀ ದೊಡ್ಡ ಕಡವುಗಳಲ್ಲಿ ಒಂದಾಗಿದ್ದು ವರ್ಷಕ್ಕೆ ಮೂವತ್ತು ಸಾವಿರ ರೂಪಾಯಿಗಳ ತೆರಿಗೆಯು ಸರಕಾರಕ್ಕೆ ದೊರೆಯುತ್ತಿತ್ತು. ಪಂಚವಾರ್ಷಿಕ ಯೋಜನೆಯಲ್ಲಿ ಕಾಣಿಸಲಾದ ಅತೀ ದೊಡ್ಡ ಸೇತುವೆಗಳಲ್ಲಿ ಇದೊಂದು. ಈ ಸೇತುವೆ ಕಟ್ಟಲು ರೂ. 7·8 ಲಕ್ಷ ಖರ್ಚಾಗಿದೆ" ಎಂದು ಚೀಫ್ ಎಂಜಿನಿಯರ್ (ಹ್ಯಾವೇಸ್) ಶ್ರೀ ಕೆ ಕೆ. ನಂಬಿಯಾರು ವರದಿ ಮಾಡಿದರು. ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಸಾರಿಗೆ ದೃಷ್ಟಿಯಿಂದ ಈ ಜಿಲ್ಲೆಯು ಬಹಳ ಹಿಂದಿರುವುದಾಗಿಯೂ ಪಂಚವಾರ್ಷಿಕ ಯೋಜನೆಯ ಪ್ರಕಾರ ಹಲವಾರು ಸೇತುವೆಗಳನ್ನು ನಾವು ಪಡೆಯಲಿರುವುದಾಗಿಯೂ ತಿಳಿಸಿ ಕೇಂದ್ರ ಸರಕಾರದಿಂದ ಹೆಚ್ಚು ಸಹಾಯ ನಿರೀಕ್ಷಿಸಲು ಸಾಧ್ಯವಿಲ್ಲವೆಂದರು ದಕ್ಷಿಣ ಕನ್ನಡ ಜಿಲ್ಲೆಯ ಕಡೆಗೆ ಸರಕಾರವು ಲಕ್ಷ್ಯ ಕೊಡುವುದಿಲ್ಲವೆಂದು ತಿಳಿಯುವುದು ತಪ್ಪೆಂದರು. ಸುಪರಿಂಟೆಂಡೆಂಟ್ ಎಂಜಿನಿಯರ್ (ಹ್ಯಾವೇಸ್) ಶ್ರೀ ಎಸ್. ಸಿ. ನಾಯಕರು ಧನ್ಯವಾದಗಳನ್ನರ್ಪಿಸಿದರು ಈ ಸಮಾರಂಭ ಮುಗಿದ ಬಳಿಕ ಮಾನ್ಯ ರೆಡ್ಡಿಯವರು ಪಾವಂಜೆಗೆ ಹೋಗಿ ಅಲ್ಲಿ ಉಪ್ಪು ನೀರು ಗದ್ದೆಗಳಿಗೆ ಬೀಳದಂತೆ ಕಟ್ಟಲಾದ ಕಣ್ಣ ಅಣೆಕಟ್ಟನ್ನು ಪರಿಶೀಲಿಸಿದರು ಅಮೇಲೆ ಮಂಗಳೂರಿಗೆ ಹಿಂತಿರುಗಿದರು.

ಶ್ರೀ ರಾಮಕೃಷ್ಣ ಥಿಯೇಟರ್
ಲಿಮಿಟೆಡ್, ಉಡುಪಿ.
ಬರುವ ಚಿತ್ರಗಳು -
ಶ್ರೀಮತಿಜೀ, ಬ್ಲೇಕ್ ಎರೊ
ಡೆಮನ್ ಲಾಂಡ್.

ಮಂಗಳೂರು ಮತ್ತು ಉಡುಪಿ ನಗರ ಸಭಾ ಮತದಾರರಲ್ಲಿ

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ವಿಜ್ಞಾಪನೆ

ಇದೇ ಬರುವ ಅಕ್ಟೋಬರ ತಾರೀಖು 6 ನೇ ದಿನ ಮಂಗಳೂರು ಮತ್ತು ಉಡುಪಿ ನಗರ ಸಭೆಗಳಿಗೆ ಚುನಾವಣೆಗಳು ನಡೆಯಲಿಕ್ಕಿವೆಯಷ್ಟೇ! ಈ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದಿಂದ ಉಮೇದ್ವಾರರನ್ನು ನಿಲ್ಲಿಸಲಾಗಿದೆಯೆಂದು ಹೆಚ್ಚಿನ ಮತದಾರರಿಗೆ ಈಗ ಗೊತ್ತಿದೆ.

ಕಾಂಗ್ರೆಸ್ ಉಮೇದ್ವಾರರನ್ನು ನಿಲ್ಲಿಸಿದ್ದರಲ್ಲಿ ಇಲ್ಲಿಯ ಜಿಲ್ಲಾ ಕಾಂಗ್ರೆಸ್ ಕಮಿಟಿ, ಕರ್ನಾಟಕ ಪ್ರಾಂತಿಕ ಕಮಿಟಿಗೆ ಅವಿಧೇಯತೆ ತೋರಿಸಿರುತ್ತದೆಂದಿತ್ಯಾದಿ ಪ್ರಚಾರ ಸರಿಯಲ್ಲವೆಂಬುದನ್ನು ಸ್ಪಷ್ಟಪಡಿಸಬೇಕಾಗಿದೆ. ಸ್ಥಳಿಕ ಸಂಸ್ಥೆಗಳ ಚುನಾವಣೆಗಳಲ್ಲಿ ಭಾಗವಹಿಸುವ ಕುರಿತು ಸಾಮಾನ್ಯವಾಗಿ ಅಲ್ಲಲ್ಲಿಯ ಜಿಲ್ಲಾ ಕಮಿಟಿಯವರೇ ನಿರ್ಣಯಿಸುವುದು ವಾಡಿಕೆ. ಈ ಬಾರಿ ನಮ್ಮ ಪ್ರಾಂತಿಕ ಕಮಿಟಿಯು ಇಲ್ಲಿಯ ಪರಿಸ್ಥಿತಿಯ ಕುರಿತು ತನಗೆ ದೊರೆತ ಮಾಹಿತಿಯ ಮೇಲೆ ಕಾಂಗ್ರೆಸು ಪಕ್ಷವಾಗಿ ಚುನಾವಣೆಗಳಲ್ಲಿ ಭಾಗವಹಿಸುವದಕ್ಕಿಂತ ವ್ಯಕ್ತಿತ್ವ ಕಾಂಗ್ರೆಸಿಗರು ಸ್ಪರ್ಧಿಸುವುದೇ ಉತ್ತಮವೆಂಬ ಸೂಚನೆಯೊಂದನ್ನು ನಮಗೆ ಕಳುಹಿಸಿದುದು ನಿಜವಿರುತ್ತದೆ. ಆದರೆ ಈ ಸಲಹೆ ನಮಗೆ ಸಿಕ್ಕುವ ಮೊದಲೇ ಇಲ್ಲಿಯ ಕಮಿಟಿಯವರು ಕಾಂಗ್ರೆಸ್ ಪಕ್ಷದ ಉಮೇದ್ವಾರರನ್ನು ನಿಲ್ಲಿಸುವ ಖಂಡಿತ ನಿರ್ಧಾರ ಮಾಡಿ ಕಾರ್ಯ ಮುಂದರಿಸಿದ ವಿವರಗಳನ್ನು ಮತ್ತೆ ಪ್ರಾಂತಿಕ ಕಮಿಟಿಗೆ ತಿಳಿಸಿದ ಬಳಿಕ ಅವರು ಈ ಬಗ್ಗೆ ತಮ್ಮ ಪೂರ್ಣ ಅನುಜ್ಞೆ ಕೊಟ್ಟಿರುತ್ತಾರೆಂಬುದರಿಂದ ಇದರಲ್ಲಿ ಅವಿಧೇಯತೆಯ ಪ್ರಶ್ನೆಯೇ ಬರುವುದಿಲ್ಲ. ಮಂಗಳೂರು ಮತ್ತು ಉಡುಪಿಯಲ್ಲಿ ಕಾಂಗ್ರೆಸಿನ ಹೆಸರಲ್ಲಿ ಸ್ಪರ್ಧಿಸುವ ಎಲ್ಲಾ ಉಮೇದ್ವಾರರಿಗೆ ಕಾಂಗ್ರೆಸ್ ಸಂಸ್ಥೆಯ ಪೂರ್ಣಬೆಂಬಲ ಉಂಟೆಂದು ಕಂಠೋಕ್ತವಾಗಿ ಹೇಳಬಯಸುತ್ತೇನೆ ಮತ್ತು ಎಲ್ಲಾ ಕಾಂಗ್ರೆಸಿಗರೂ ಕಾಂಗ್ರೆಸ್ ಸಂಸ್ಥೆಯ ಮೇಲೆ ಅಭಿಮಾನವುಳ್ಳವರು, ಇವರಿಗೆ ಪೂರ್ಣ ಸಹಾಯ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

ಈಗಿನ ಸಂದರ್ಭದಲ್ಲಿ ಸಂಸ್ಥಾನದ ಸರಕಾರ ಕಾಂಗ್ರೆಸಿಗರ ಕೈಯಲ್ಲಿರುವಾಗ ನಗರ ಸಭೆಗಳ ಆಡಳಿತ ಕೂಡಾ ಕಾಂಗ್ರೆಸಿಗರ ಕೈಯಲ್ಲಿಯೇ ಇರಿಸುವುದರಿಂದ ನಗರ ಸಭೆಯ ಮುಂದಿನ ಕಾರ್ಯಗಳನ್ನು ವಿಶೇಷ ಯಶಸ್ವಿಯಾಗಿ ಸಾಧಿಸಲಿಕ್ಕೆ ತುಂಬಾ ಸಹಾಯವಾಗುವುದೆಂಬುದನ್ನು ಮತದಾರರೆಲ್ಲಾ ತಿಳಿದುಕೊಳ್ಳುವುದು ಅತ್ಯಗತ್ಯವಾಗಿದೆ. ನಗರ ಸಭೆಯ ಹೆಚ್ಚಿನ ಕಾರ್ಯಗಳು ಈಗಿನ ಏರ್ಪಾಡಿನಂತೆ ಸಂಸ್ಥಾನ ಸರಕಾರದ ಸಹಾಯ ಸಹಕಾರಗಳಿಂದಲೇ ನಡೆಯಲಿಕ್ಕಿದೆ. ಕಾಂಗ್ರೆಸೇತರ ಆಡಳಿತ ನಗರ ಸಭೆಗಳಲ್ಲಿ ಬಂದರೆ ಸಂಸ್ಥಾನ ಸರಕಾರ ಇದಕ್ಕೆ ಸಹಾಯ ಮಾಡುವಂತಿಲ್ಲ ನೆಂಬುದು ಇದರ ಅಭಿಪ್ರಾಯವಲ್ಲ, ಅಂತಹ ನಗರ ಸಭೆಯ ಆಡಳಿತೆಯವರು ಸರಕಾರದೊಡನೆ ಸಹಕರಿಸಿ ವರ್ತಿಸುವುದಕ್ಕಿಂತ ವ್ಯರ್ಥ ಘರ್ಷಣೆ ಇತ್ಯಾದಿ ಕಟ್ಟಿಕೊಳ್ಳುವ ಸಂಭವಗಳೆ ಹೆಚ್ಚೆನ್ನಲು ಅಡ್ಡಿಯಿಲ್ಲ. ಇಂತಹ ಧೋರಣೆಯಿಂದ ಕಾಂಗ್ರೆಸೇತರ ರಾಜಕೀಯ ಪಕ್ಷಗಳ ಬೆಳವಣಿಗೆಗೆ ಸಹಾಯವಾಗಬಹುದಾದರೂ ನಿಜವಾಗಿಯೂ ನಗರದ ಹಿತದೃಷ್ಟಿಯಿಂದ ಇದು ಹಾನಿಕರವೆಂಬುದು ಸ್ಪಷ್ಟವಿರುತ್ತದೆ.

ಸ್ವತಂತ್ರ ಸರಕಾರದಡಿಯಲ್ಲಿ ನಮ್ಮ ನಗರ ಸಭೆಗಳು ಹಿಂದಿಗಿಂತಲೂ ಎಷ್ಟೋ ಹೆಚ್ಚಿನ ನಗರದ ಸೇವೆ ಸಲ್ಲಿಸಲಿಕ್ಕಿದೆ. ತುಂಬಾ ಕೆಲಸ ಸಾಧಿಸಬೇಕಾದ ಈ ಸಂದರ್ಭದಲ್ಲಿ ತಮ್ಮ ತಮ್ಮ ಪಂಗಡ ಬೆಳೆಸುವ ಕೆಲವರ ಹವ್ಯಾಸಕ್ಕೆ ಬಲಿಬೀಳದೆ ನಗರದ ಹಿತದ ದೃಷ್ಟಿಯಿಂದ ಎಲ್ಲಾ ಮತದಾರರೂ ಕಾಂಗ್ರೆಸ್ ಉಮೇದ್ವಾರರಿಗೇನೇ ತಮ್ಮ ಮತಗಳನ್ನು ಕೊಟ್ಟು ನಗರದ ಹಿತ ಸಾಧಿಸುವ ಕಡೆಗೆ ಗಮನ ಕೊಡುವುದು ಅಗತ್ಯವೆಂದು ಸೂಚಿಸಬಯಸುತ್ತೇವೆ.

ಕಾಂಗ್ರೆಸ್ ಸಂಸ್ಥೆಯ ಕುರಿತು ಅಪಪ್ರಚಾರಕ್ಕೆ ಯಾರೂ ಕಿವಿಗೊಡುವಂತಿಲ್ಲವೆಂಬ ವಿಶ್ವಾಸ ನಮ್ಮಲ್ಲಿ ಇದೆ. ಪಂಡಿತ ನೆಹರು ಅವರ ನೇತೃತ್ವದಲ್ಲಿ ನಡೆಯುವ ಈ ಸಂಸ್ಥೆಯ ಉಮೇದ್ವಾರರನ್ನು ಇತ್ತೀಚೆಗೆ ನಡೆದ ಶಾಸನ ಸಭೆಗಳ ಚುನಾವಣೆಗಳಲ್ಲಿ ಈ ಜಿಲ್ಲೆಯ ಮಹನೀಯರು ಸಂಪೂರ್ಣ ಸಮರ್ಥಿಸಿ ಈ ಜಿಲ್ಲೆ ಕಾಂಗ್ರೆಸ್ ಜಿಲ್ಲೆಯೆಂದು ಕೀರ್ತಿ ಗಳಿಸಿದ್ದಾರೆ. ಈ ರೀತಿ ಆರಿಸಿ ಈಗ ಮದ್ರಾಸಿನಲ್ಲಿ ಕಾಂಗ್ರೆಸ್ ಸರಕಾರವು ಆಡಳಿತೆಯಲ್ಲಿರುವಂತೆ ಮಾಡಿದುದರಿಂದ ಮಹಾಜನರಿಗೆ ಎಷ್ಟು ಪ್ರಯೋಜನ ಇಷ್ಟರೊಳಗೇ ಆಗಿದೆ ಎಂಬುದು ಪ್ರತ್ಯಕ್ಷವಾಗಿ ಎಲ್ಲರಿಗೂ ತಿಳಿದ ವಿಷಯವೇ ಆಗಿರುವುದರಿಂದ ಈ ಪ್ರತ್ಯಕ್ಷ ಪ್ರಯೋಜನಗಳ ಎದುರು ಕೇವಲ ಅಪಪ್ರಚಾರಕ್ಕೆ ಬೆಲೆ ಬಾರದೆಂಬುದು ಸ್ಪಷ್ಟವಿರುತ್ತದೆ. ಆದುದರಿಂದ ಈ ನಗರ ಸಭಾ ಚುನಾವಣೆಗಳಲ್ಲಿಯೂ ಕಾಂಗ್ರೆಸ್ ಉಮೇದ್ವಾರರನ್ನು ಸಮರ್ಥಿಸಿ ಎದುರಾಳಿಗಳ ಅಪಪ್ರಚಾರ ಪೂರ್ಣ ನಿಲ್ಲಿಸುವಂತೆ ಮಹಾಜನರು ಮಾಡಬೇಕಾಗಿ ಕೇಳಿಕೊಳ್ಳುತ್ತೇವೆ.

ಭಾರತದ ಕೇಂದ್ರ ಸರಕಾರ ಪಂಡಿತ ಜವಾಹರಲಾಲರೇ ನಡೆಸಬೇಕೆಂದು ನಿಮಗಿದ್ದರೆ, ಮದ್ರಾಸ್ ಸರಕಾರ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರೇ ನಡೆಸಬೇಕೆಂದು ನಿಮಗಿದ್ದರೆ ನಿಮ್ಮ ಮತಗಳನ್ನು ಕಾಂಗ್ರೆಸ್ ಪಕ್ಷದ ಉಮೇದ್ವಾರರಿಗೇನೇ ಕೊಟ್ಟು, ಕಾಂಗ್ರೆಸ್ ಸಂಸ್ಥೆಯ ಮೇಲೆ ನಿಮಗಿರುವ ಅಚಲ ವಿಶ್ವಾಸವನ್ನು ಪುನಃ ಪ್ರದರ್ಶಿಸುವುದು ಅತ್ಯಗತ್ಯ. ಯಾಕೆಂದರೆ ಈ ನಗರ ಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಗೆದ್ದರೆ ಕಾಂಗ್ರೆಸ್ ಸಂಸ್ಥೆ ಹಾಗೂ ಕಾಂಗ್ರೆಸ್ ಸರಕಾರಗಳಿಗೆ ನೀವು ಹೆಚ್ಚಿನ ಬಲ ಕೊಟ್ಟಂತಾಗುತ್ತದೆ. ಇಲ್ಲದಿದ್ದರೆ ತದ್ವಿರುದ್ಧ ಪರಿಣಾಮವಾಗುತ್ತದೆ.

ಕಾಂಗ್ರೆಸ್ ಪಕ್ಷದವರು ಯೋಗ್ಯರಿದ್ದವರನ್ನೇ ಆರಿಸಿ ಉಮೇದ್ವಾರರನ್ನಾಗಿ ನಿಲ್ಲಿಸಲು ಸರ್ವ ಯತ್ನ ಮಾಡಿದ್ದಾರೆ. ಈ ಉಮೇದ್ವಾರರಿಗೆ ನಿಮ್ಮ ಹಾಗೂ ನಿಮ್ಮ ಸ್ನೇಹಿತರ ಮತ ದೊರೆತು ಇವರು ವಿಜಯಿಗಳಾಗುವಂತೆಯೂ ಕಾಂಗ್ರೆಸಿನ ಶಕ್ತಿ ಬೆಳೆಸುವಂತೆಯೂ ಅದಕ್ಕೂ ಹೆಚ್ಚಾಗಿ ನಿಮ್ಮ ನಗರದ ಹಿತವನ್ನು ವಿಶೇಷ ಯಶಸ್ವಿಯಾಗಿ ಸಾಧಿಸುವಂತೆಯೂ ಈ ಮೂಲಕ ಎಲ್ಲಾ ಮತದಾರರಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪರವಾಗಿ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

ಎಫ್. ಎಕ್ಸ್. ಡಿ. ಪಿಂಟೋ,
ಅಧ್ಯಕ್ಷ, ಜಿಲ್ಲಾ ಕಾಂಗ್ರೆಸ್ ಕಮಿಟಿ,

(೫ನೇ ಪುಟದಿಂದ ಮುಂದುವರಿದುದು)

ಬಳಕೆಗೆ ಬರುವಂತೆಯೂ ಮಾಡಬೇಕಲ್ಲದೆ, ನಿಷೇಧಾತ್ಮಕ ಕ್ರಮಗಳಿಂದ ಕೈಮಗ್ಗದ ಸಮಸ್ಯೆಯ ಪರಿಹಾರ ಸಾಧ್ಯವಿಲ್ಲವೆಂದು ಮುಂಬಯಿಯ ಗಿರಣಿಯೊಡೆಯರ ಸಂಘದ ಪ್ರಕಟಣೆಯೊಂದು ಹೇಳುತ್ತದೆ. ಇದೇ ಸಮಸ್ಯೆಯು ಗ್ರಾಹಕರ ಆರ್ಥಿಕ ಶಕ್ತಿಯನ್ನೆ ಹೊಂದಿಕೊಂಡಿದೆ ಎಂದು ಇದರಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿರುವರು. ವಿದೇಶಗಳಲ್ಲಿ ಪೇಟೆ ದೊರಕುವಂತೆ ಮಾಡುವುದರಿಂದ ಮತ್ತು ಉತ್ಕೃಷ್ಟ ತರಗತಿಯ ಬಟ್ಟೆಗಳನ್ನೆ ಸಿದ್ಧಗೊಳಿಸುವುದರಿಂದ ಕೈಮಗ್ಗದ ಉದ್ದಿಮೆಗೆ ನಿಜವಾದ ಪರಿಹಾರ ದೊರೆಕೀತೆಂಬುದು ಗಿರಣಿಯೊಡೆಯರ ಸಂಘದ ಅಭಿಪ್ರಾಯ.


Acclaimed as the BEST Rubber Stamp Makers allover India
CROWN RUBBER STAMP CO.
Mangalore
ESTD. 1926

THE VIJAYA BANK LTD., Kaup.

ದಿ. ವಿಜಯ ಬೇಂಕ್ ಲಿಮಿಟೆಡ್, ಕಾಪು.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಆಸಾಮಿಗಳು ಈ ಬೇಂಕಿನಿಂದ ಚಿನ್ನಾಭರಣಗಳ ಆಧಾರದ ಮೇಲೆ ಪಡಕೊಂಡ ಈ ಕೆಳಗೆ ನಮೂದಿಸಿದ ಸಾಲಗಳ ಅಸಲು ವ ಬಡ್ಡಿ ಇತ್ಯಾದಿಗಳನ್ನು ಬೇಂಕಿನ ಕ್ರಮ ಪ್ರಕಾರ ನೋಟೀಸು ವ ಜಪ್ತಿ ನೋಟೀಸು ಕೊಟ್ಟಾಗಲೂ ಕೂಡಾ ಬಾಕಿ ಮಾಡಿಕೊಂಡಿರುವುದರಿಂದಲೂ ಕೆಲವರಿಗೆ ಕೊಟ್ಟ ನೋಟೀಸು ವ ರಿಜಿಸ್ಟ್ರ ನೋಟೀಸು ಕಾರಣಾಂತರದಿಂದ ವಾಪಾಸು ಬಂದಿರುವುದರಿಂದಲೂ ಸದ್ರಿ ಸಾಲಗಳ ಸಂಬಂಧ ಬೇಂಕಿಗೆ ಸಲ್ಲತಕ್ಕ ಸಂಪೂರ್ಣ ಐವೇಜುಗಳನ್ನು ಇದೇ ಬರುವ ತಾರೀಖು I-10-1952ನೇ ಬುಧವಾರದ ಒಳಗೆ ಸಲ್ಲಿಸದೆ ಇದ್ದಲ್ಲಿ ಸದ್ರಿ ಸಾಲಗಳಲ್ಲಿ ಅಡವಿಟ್ಟ ಆಭರಣಗಳನ್ನು ಇದೇ ತಾರೀಖು 4-10-1952ನೇ ಶನಿವಾರ ಪೂರ್ವಾಹ್ನ ಘಂಟೆ 11ಕ್ಕೆ ಯಾ ಬೇಂಕಿಗೆ ಯುಕ್ತ ತೋರುವ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೆ ಈ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು. ತಿಳಿದಿರುವುದು.

ಸಾಲದ ತಾರೀಖು	ಸಾಲದ ನಂಬ್ರ	ಸಾಲ ಪಡೆದವರ ಹೆಸರು	ಬಾಕಿ ಜಮೆ	
13-7-50	1046/50	ಅಬ್ದುಲ್ ಸತ್ತರ್ ಉಮ್ಮರ್ ಸಾಹೇಬರ ಮಗ ಮಲ್ಲಾರು, ಪೋಸ್ಟು ಮಲ್ಲಾರು	53	13
22-7-50	1118/50	ಅಬ್ದುಲ ರಹಿಮಾನ್ ಮಹಮ್ಮದ್ ಸಾಹೇಬ್ ಮಲ್ಲಾರುಗ್ರಾಮ ಪೋಸ್ಟು ಮಲ್ಲಾರು	42	1
11-1-51	40/51	ಶಾಮು ಸೆಟ್ಟಿ ಚಂದು ಸೆಟ್ಟಿಯರ ಅಳಿಯ ಪನಿಯೂರು ಬಡಗರಗುತ್ತು ಪೋಸ್ಟು ಉಚ್ಚಿ	153	6
9-2-51	127/51	ಜಬ್ಬ ಪೂಜಾರಿ ಗುರುವ ಪೂಜಾರಿಯ ಅಳಿಯ ಕೊಪ್ಪಲಮಟ್ಟು ಪೋಸ್ಟು ಕಟಪಾಡಿ	51	4
12-2-51	135/51	ಜವಿರ್ ಡಿ'ಸೋಜ ನಿಕೋಲಸ್ ಡಿ'ಸೋಜರ ಮಗ ಪಾಂಗಾಳ ಗ್ರಾಮ ಪೋಸ್ಟು ಪಾಂಗಾಳ	20	0
21-11-51	1338/51	—ದಿ—	118	13
20-2-51	166/51	ಅಬ್ದುಲ್ ಅಜೀಜ್ ಮಹಮ್ಮದ್ ಸಾಹೇಬರ ಮಗ ಪಡುಮನೆ ಮಲ್ಲಾರುಗ್ರಾಮ ಪೋಸ್ಟು ಮಲ್ಲಾರು	42	0
22-2-51	171/51	ಅತ್ತು ಪೂಜಾರಿ ಅಪ್ಪು ಪೂಜಾರಿಯ ಅಳಿಯ ಕಿಟ್ಟಸೆಟ್ಟಿ ಒಕ್ಕಲು ಕಲ್ಲುಗುಡ್ಡೆ ಹೆರೂರು ಪೋಸ್ಟು ಪಾದೂರು	99	0
25-4-51	367/51	ಮಹಮ್ಮದ್ ಸಾಹೇಬ್ ಹುಸೇನು ಸಾಹೇಬರ ಮಗ ಮಲ್ಲಾರುಗ್ರಾಮ ಪೋಸ್ಟು ಮಲ್ಲಾರು.	22	15
10-5-51	431/51	—do—	22	15
19-6-51	648/51	—do—	25	0
4-7-51	718/51	—do—	24	14
20-8-51	960/51	—do—	16	12
26-12-50	2150/50	—do—	13	5
27-4-51	378/51	ಎಮ್. ಅಫ್ಸಲ್ ಹರೂನ್, ಹರೂನ್ ಸಾಹೇಬರ ಮಗ ಬೆಳಪು ಗ್ರಾಮ ಪೋಸ್ಟು ಉಚ್ಚಿಲ	34	4
10-5-51	432/51	ಪಿಜಿನ ಪೂಜಾರಿ ಎಂಕ ಪೂಜಾರಿಯ ಅಳಿಯ ಪಾಂಗಾಳ ಅರ್ಬ್ಯಡಿ ಪಾಂಗಾಳಗ್ರಾಮ ಪೋಸ್ಟು ಪಾಂಗಾಳ	37	5
18-9-50	1687/50	ಎಮ್. ಉಮ್ಮರ್ ಮುಕ್ರಿ ಅಬ್ದುಲ್ ಬ್ಯಾರಿಯ ಮಗ ಮೂಳೂರು ಗ್ರಾಮ ಪೋಸ್ಟು ಉಚ್ಚಿಲ	123	0
8-5-51	415/51	ಶ್ರೀ ಎಮ್. ರಾಮಪ್ಪ ಟೀಚರ್ ಫಿಶ್ಚರೀಸ್ ಸ್ಕೂಲ್ ಎರ್ಮಾಳ್ ಪೋಸ್ಟು ಎರ್ಮಾಳ್	967	15
18-5 51	475/51	—do—	120	0
18-6 51	638/51	—do—	85	0

Office: The Vijaya Bank Ltd., Kaup. Date. 22-9-1952 } **K. Seetharama Shetty,** Agent at Kaup.

THE BOMBAY LIFE ASSURANCE COMPANY, LTD.
ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೋ, ಲಿಮಿಟೆಡ್.
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.
ಪ್ರಧಾನ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.
ಇವರ ಶಾಖಾ ಕಚೇರಿಗಳು:-
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.
ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಮಂಗಳೂರಿಗೆ ಮಂತ್ರಿ ರಂಗ ರೆಡ್ಡಿಗಳ ಆಗಮನ

ಮದ್ರಾಸು ಸರಕಾರದ ಸಾರ್ವಜನಿಕ ಕಾಮಗಾರಿಕೆಗಳ ಇಲಾಖಾ ಮಂತ್ರಿಗಳಾದ ಮಾನ್ಯ ಶ್ರೀ ಎನ್. ರಂಗಾರೆಡ್ಡಿಯವರು ತಾ 21 ರಂದು ಪೂರ್ವಾಹ್ನ ಮಂಗಳೂರಿಗೆ ಆಗಮಿಸಿದಾಗ ಅವರಿಗೆ ಸಂಭ್ರಮದ ಸ್ವಾಗತವೀಯಲಾಯಿತು. ಸರ್ಕ್ಯೂಟ್ ಬಂಗ್ಲೆಯಲ್ಲಿ ಮಾನ್ಯ ಮಂತ್ರಿಗಳು ಸ್ವಲ್ಪ ವಿಶ್ರಾಂತಿ ಪಡೆದು ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಭೇಟಿಯಿತ್ತರು. ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಹಾಗೂ ಇತರ ಕಾಂಗ್ರೆಸ್ ಕೆಲಸಗಾರರು ಮಾನ್ಯ ರೆಡ್ಡಿಗಳಿಗೆ ಸುಸ್ವಾಗತವನ್ನಿತ್ತರು. ಬಳಿಕ ಮಂತ್ರಿಗಳಿಗೆ ಕೆಲವು ಪ್ರಶ್ನೆಗಳನ್ನು ಕೇಳಲಾಯಿತು. ಮೈಸೂರು ಸರಕಾರದವರು ವಿದ್ಯುತ್ ಶಕ್ತಿಯನ್ನು ಕೊಡಲು ಒಪ್ಪಿದರೂ ಮದ್ರಾಸು ಸರಕಾರದವರು ಈ ಪ್ರಶ್ನೆಯನ್ನು ಹಿಂದೆ ಹಾಕುತ್ತಿದ್ದಾರೆಂದು ಆಕ್ಷೇಪವೆತ್ತಿ, ದಕ್ಷಿಣಕನ್ನಡವನ್ನು ಮದ್ರಾಸು ಸರಕಾರದವರು ಅಲಕ್ಷ್ಯದಿಂದ ಕಾಣುತ್ತಿದ್ದಾರೆಂದು ಹೇಳಿದರು, ಆಂಧ್ರ—ತಮಿಳುನಾಡುಗಳ ಅನೇಕ ಹಳ್ಳಿಗಳಿಗೆ ವಿದ್ಯುತ್ತನ್ನು ಒದಗಿಸಿರುವುದಾದರೂ ಈ ಜಿಲ್ಲೆಯ ಹಳ್ಳಿಗಳಿಗೆ ಯಾವ ರೀತಿಯಿಂದಲೂ ಸರಕಾರವು ಅನುಕೂಲ ಮಾಡಿದ್ದಿಲ್ಲವೆಂದು ಶ್ರೀ ಕೆ.ಆರ್. ಆಚಾರ್ಯರು ಹೇಳಿದರು ಶ್ರೀ ಬಿ ವೈಕುಂಠ ಬಾಳಿಗರು ಮಾತಾಡುತ್ತ ಸರಕಾರವು ಸುಮ್ಮನೆ ವಿದ್ಯುತ್ ಯೋಜನೆಯನ್ನು ತರುವುದೆಂದು ಆಸೆ ತೋರಿಸುವುದಕ್ಕಿಂತ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಿಲ್ಲವೆಂದು ಹೇಳುವುದು ಉತ್ತಮವೆಂದರು. ಶ್ರೀಗಳಾದ ಎಸ್. ನರ್ಸಪ್ಪಯ್ಯ, ಎಸ್. ಎನ್. ಸುವರ್ಣ, ರಾವ್ ಸಾಹೇಬ್ ಕುಂಟಿ ಮೊದಲಾದವರೂ ಮಾತನಾಡಿದರು.

ಮಾನ್ಯ ಮಂತ್ರಿಗಳು, ಸರಕಾರವು ಈ ಜಿಲ್ಲೆಯನ್ನು ಕಡೆಗಣಿಸಿಲ್ಲವೆಂದೂ, ಮದ್ರಾಸು ಸರಕಾರದವರೊಳಗೂ ಬರೇ ಒಂದು ಶಬ್ದದ ಅರ್ಥದ ಕುರಿತು ಮತಭೇದವೆದ್ದು ವಿದ್ಯುತ್ತಿನ ಕುರಿತು ಒಪ್ಪಂದವಾಗದಿರಲು ಕಾರಣವೆಂದೂ, ನಿಜಕ್ಕೂ ಆ ವಿಷಯವು ಬಹಳ ಅಲ್ಪವಿದ್ದು ಅದನ್ನು ಗಣಿಸಬೇಕಾದ ಅಗತ್ಯವಿಲ್ಲವೆಂದು ಹೇಳಿದರೂ ಮದ್ರಾಸಿನ ನ್ಯಾಯ ಪಂಡಿತರ ಅಭಿಪ್ರಾಯವನ್ನು ತಿರಸ್ಕರಿಸಿ ತಾವು ಯಾವ ಕೆಲಸವನ್ನು ಮಾಡುವಂತಿಲ್ಲವೆಂದೂ ಹೇಳಿದ್ದಲ್ಲದೆ, ವಿದ್ಯುತ್ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕೆಂಬುದರಿಂದಲೇ ಸಿಬ್ಬಂದಿಯ ನೇಮಕ [illegible], ವಸ್ತುಗಳನ್ನು ತರಿಸಲಾಗಿದೆಯೆಂದೂ ಹೇಳಿದರು. ಜಿಲ್ಲೆಯವರು ಸ್ವಲ್ಪ ಸಮಾಧಾನ ಪಟ್ಟುಕೊಳ್ಳಬೇಕೆಂದು ಸೂಚಿಸಿದರು. ಬಳಿಕ ಚಹಾ ಸತ್ಕಾರ ನಡೆಯಿತು.

ಜಿಲ್ಲಾ ಬೋರ್ಡಿನ ಬೇಡಿಕೆಗಳು— ಮಾನ್ಯ ಮಂತ್ರಿಗಳು ನಂತರ ಜಿಲ್ಲಾ ಬೋರ್ಡ್ ಸಭಾ ಮಂದಿರಕ್ಕೆ ಆಗಮಿಸಿದರು. ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರೂ ಕಾರ್ಯದರ್ಶಿ ಶ್ರೀ ಎಮ್. ಸುಂದರ ರಾಯರೂ ಇತರ ಅಧಿಕಾರಿಗಳೂ ಸ್ವಾಗತವಿತ್ತರು. ಜಿಲ್ಲಾ ಬೋರ್ಡಿನ ಅಧ್ಯಕ್ಷರು ಮಂತ್ರಿಗಳ ಗಮನಕ್ಕೆ ತಂದ ವಿಷಯಗಳಾವುವೆಂದರೆ (1) ಈ ಜಿಲ್ಲೆಯು ಸುಂದರವಾಗಿ ಸಂಪತ್ಸಮೃದ್ಧವಾಗಿ ಕಾಣುತ್ತಿದ್ದರೂ ವಸ್ತುಸ್ಥಿತಿ ಹಾಗಿಲ್ಲ. 150 ಇಂಚು ಮಳೆ ಇದ್ದರೂ ನೀರೆಲ್ಲಾ ಸಮುದ್ರಕ್ಕೆ ಹೋಗಿ ಬೆಳೆಗಳಿಗೆ ಬೇಕಾದಷ್ಟು ನೀರಿಲ್ಲ; ನೀರಾವರಿ ಕೆಲಸಗಳು ಅಗತ್ಯವಾಗಿವೆ. (2) ಕರಾವಳಿಯನ್ನು ಬಿಟ್ಟರೆ ಇನ್ನುಳಿದುದು ಕಾಡುಗಳ ಪ್ರದೇಶ. ಜಿಲ್ಲೆಯಲ್ಲಿ ಇರುವ ರೈಲುಮಾರ್ಗ ಬರೇ 60 ಮೈಲುಗಳಷ್ಟು ಎಂದರೆ 100 ಚದರ ಮೈಲುಗಳಿಗೆ 1·49 ಮೈಲುಗಳಷ್ಟು ರೈಲುಮಾರ್ಗ. ಮೋಟಾರ್ ರಸ್ತೆಗಳು 931 ಮೈಲುಗಳು. ಮೋಟಾರಿಗೆ ಉಪಯೋಗವಿಲ್ಲದ ರಸ್ತೆಗಳು [illegible] ಮೈಲು. ಹಿಂದಿನ ಮಂತ್ರಿ ಮಾನ್ಯ ಭಕ್ತವತ್ಸಲಂ ಅವರು ಈ ಜಿಲ್ಲೆಯ ಸಂಚಾರ ಸೌಕರ್ಯಕ್ಕೆ ಸಹಾಯ ಮಾಡಿದ್ದಾರೆ. 3) ಗ್ರಾಮರಸ್ತೆಗಳಿಗೆ ಒಂಭತ್ತು ಲಕ್ಷ ರೂಪಾಯಿಗಳ ವೆಚ್ಚದ ಪ್ಲಾನು ಆಗಿದೆ. ಅದು ಬೇಗನೆ ಕಾರ್ಯರೂಪಕ್ಕೆ ಬರುವಂತಾಗಬೇಕು 4) ಮಂಗಳೂರು—ಮಡಿಕೇರಿ ಮತ್ತು ಮಂಗಳೂರು—ಕಾರ್ಕಳ ಈ ಎರಡು ರಸ್ತೆಗಳನ್ನು ದೂಳುಇಲ್ಲದ ರಸ್ತೆಗಳನ್ನಾಗಿ ಮಾಡುವುದು ಅಗತ್ಯ 5) ಮಲೆನಾಡಿನ ಸಣ್ಣ ನದಿಗಳಿಗೆ ಸೇತುವೆಗಳು ಅಗತ್ಯ 6] ಮೋರಿಗಳ ದುರಸ್ತಿ 7) ರೇವುಗಳಲ್ಲಿ ಆಗಬೇಕಾದ ಸುಧಾರಣೆ 8) ಮಂಗಳೂರು ಹಾಸನ ರೈಲ್ವೆ- ಇತ್ಯಾದಿ

ಮಾನ್ಯ ಮಂತ್ರಿಗಳು ಉತ್ತರವೀಯುತ್ತಾ, ನಿಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳತಕ್ಕ ಸಾಧನಗಳನ್ನು (ತೆರಿಗೆ) ನೀವು ಕೇಳಿಕೊಂಡಿದ್ದಿರಿ ಈ ವರ್ಷದ ಮದ್ರಾಸು ಸರಕಾರದ ಆದಾಯದಲ್ಲಿ ತುಂಬಾ ಕೊರತೆ ಇದೆ, ಪ್ರಾಂತದ ಕೆಲವು ಪ್ರದೇಶಗಳಲ್ಲಿ ಬರಗಾಲ ಬಂದಿರುದೆ, ಅಲ್ಲಿಯ ಜನರಿಗೆ ಆಹಾರವನ್ನು ಒದಗಿಸಬೇಕಾಗಿದೆ. ಅವರಿಗೆ ಸಾಲ ಕೊಡಬೇಕಾಗಿದೆ, ಇತರ ವೆಚ್ಚಗಳಿಗೆ ಬೇಕಾದ ಹಣವನ್ನು ಕ್ಷಾಮ ನಿವಾರಣೆಗೆ ವ್ಯಯಿಸಬೇಕಾಗಿ ಬಂದಿದೆ ಸರಕಾರದ ಕಷ್ಟವನ್ನು ಸಹಾನುಭೂತಿಯಿಂದ ನೀವು ಪರ್ಯಾಲೋಚಿಸಬೇಕು ಈ ಕಾರಣದಿಂದ ಕೆಲವು ನೀರಾವರಿ ಮತ್ತು ವಿದ್ಯುತ್ ಯೋಜನೆಗಳನ್ನು ನಿಲ್ಲಿಸಬೇಕಾಗಿ ಬರುತ್ತಿತ್ತು. ಆದರೆ ಐದು ಕೋಟಿಯ ಸಾಲ ಸಿಕ್ಕಿದುದರಿಂದ ಆ ಕೆಲಸಗಳನ್ನು ಮುಂಬರಿಸಬಹುದಾಗಿದೆ ನಿಮ್ಮ ಜಿಲ್ಲೆಗೆ ಬೇಕಾಗಿ ವಿದ್ಯುತ್ ಸಾಮಗ್ರಿಗಳಿಗೆ ಆರ್ಡರು ಕೊಡಲ್ಪಟ್ಟಿದೆ ಸಿಬಂದಿಯ ನೇಮಕವಾಗಿದೆ ಆದರೆ ಮೈಸೂರಿನ ಕರಾರು ಆಗದಿದ್ದುದರಿಂದ ಸಿಬಂಧಿಯನ್ನು ತೆಗೆಯಬೇಕಾಗಿ ಬಂದಿದೆ. ಸರಕಾರವು ಅಲಕ್ಷ್ಯ ತೋರಿಸಿಲ್ಲ.

ವಿದ್ಯುತ್ತಿಗಾಗಿ ಎಂಟು ಲಕ್ಷ ಮಂಜೂರಾಗಿದೆ. ನಿಮ್ಮ ಜಿಲ್ಲೆಯ ಹಿತವು ನನ್ನ ಹೃದಯದಲ್ಲಿದೆ. ಕೆಲವು ಕಾಮಗಾರಿಗಳನ್ನೂ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದೆ. ಕಮ್ಯೂನಿಟಿ ಪ್ರೊಜೆಕ್ಟಿನಲ್ಲಿ ಕೆಲವು ಸೇರಿವೆ. ಇನ್ನೂ ಟೋಲ್ ವಿಚಾರದಲ್ಲಿ ನಿಮಗೆ ಅನುಕೂಲತೆ ಬೇಕಾದರೆ ಪ್ರಧಾನ ಮಂತ್ರಿಗಳಿಗೂ ಅರ್ಥ ಸಚಿವರಿಗೂ ಶಿಷ್ಟ ಮಂಡಳ ಕಳುಹಿಸಿರಿ. ರೇವಿನ ವಿಚಾರದಲ್ಲಿ ಏನೆಲ್ಲ ಮಾಡಲು ಸಾಧ್ಯವಿದೆಯೋ ಅದನ್ನು ಆಲೋಚಿಸುತ್ತೇನೆ ಎಂದರು. ಬಳಿಕ ವಿದ್ಯುತ್ ಕಂಪೆನಿಗೆ ಭೇಟಿಯಿತ್ತರು.

ಕೆನರಾ ಚೇಂಬರ್ ಒಫ್ ಕೊಮರ್ಸ್- ಸಂಸ್ಥೆಯ ಕಡೆಯಿಂದಲೂ ಮಾನ್ಯ ಮಂತ್ರಿ ರೆಡ್ಡಿಯವರಿಗೆ ಮನವಿಯೊಂದು ಅರ್ಪಿಸಲಾಯಿತು. ದ ಕ ಜಿಲ್ಲೆಯ ಒಳನಾಡು ಸುಮಾರು 30,000 ಚದರಮೈಲುಗಳಷ್ಟಿದ್ದು ಚೆನ್ನಾಗಿ ವ್ಯಾಪಾರ ನಡೆಯುವ ಪ್ರದೇಶ. ಆದರೆ ರಸ್ತೆಗಳು ಸರಿಯಾಗಿಲ್ಲದ ಕಾರಣ ದೊಡ್ಡ ತೊಂದರೆಯಾಗಿದೆಯೆಂದು ಮನವಿಯಲ್ಲಿ ಸೂಚಿಸಲಾಗಿತ್ತು. ಅಲ್ಲದೆ ಮಂಗಳೂರು ದಿನೇ ದಿನೇ ವೃದ್ಧಿಯಾಗುತ್ತಿರುವ ಬಂದರ. ಪಶ್ಚಿಮ ಕರಾವಳಿಯ ಮೇಜರ್ ಪೋರ್ಟ್ಸ್ ಡೆವಲಪ್‌ಮೆಂಟ್ ಕಮಿಟಿ ಶಿಫಾರಸು ಮೇರೆಗೆ ಮಂಗಳೂರು ಬಂದರವನ್ನು ಸರ್ವ ಋತುಬಂದರವನ್ನಾಗಿ ಮಾಡಲು ಅನುಕೂಲವೇ ಎಂಬುದನ್ನು ಪರೀಕ್ಷಿಸುವುದಕ್ಕಾಗಿ ಪೂನೆಯ ಸಂಶೋಧನಾ ಕೇಂದ್ರದಲ್ಲಿ ಶೋಧಗಳು ನಡೆಯುತ್ತಿವೆ. ಚೇಂಬರಿನವರೂ ಪೋರ್ಟ್ ಕನ್ಸರ್ವೆನ್ಸಿ ಬೋರ್ಡಿನವರೂ ಮಂಗಳೂರಿನ ವ್ಯಾಪಾರ ವ್ಯವಹಾರಕ್ಕೆ ಒಂದು ಪೋರ್ಟ್ ಟ್ರಸ್ಟ್ ಅಗತ್ಯವೆಂದು ಅಭಿಪ್ರಾಯಪಟ್ಟಿರುತ್ತಾರೆ. ಕೆನರಾ ಚೇಂಬರಿನ ಕಾರ್ಯಕ್ರಮ ತೀರಿಸಿ ಮಾನ್ಯಮಂತ್ರಿಗಳು ಕೂಳೂರಿಗೆ ಹೋಗಿ, ಅಲ್ಲಿ ನೂತನವಾಗಿ ಕಟ್ಟಿಸಿದ ಸೇತುವೆಯನ್ನು ತೆರೆದರು.

ತಾ. 22ರಂದು ಮುಕ್ತಿಗೆ ಸೇತುವೆ ಮತ್ತು ಕಲ್ಯಾಡಿ ಸಂಘದ ಶಂಕುಸ್ಥಾಪನಾ ಕಾರ್ಯಕ್ರಮಗಳನ್ನು ಮಾನ್ಯ ಮಂತ್ರಿಗಳು ದೇಹಾಲಸ್ಯದ ನಿಮಿತ್ತ ರದ್ದುಮಾಡಿದರು.

ಮಂಗಳೂರು

ದ ಕ. ಜಿಲ್ಲಾ ಬೋರ್ಡಿನ ಸಭೆಯು

ತಾ. 17ರಲ್ಲಿ ಉಪಾಧ್ಯಕ್ಷ ಶ್ರೀ ಎಫ್. ಎಕ್ಸ್. ಡಿ' ಪಿಂಟೋರವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಗಳಾದ ಎಸ್ ಪರಮೇಶ್ವರಯ್ಯ ಮತ್ತು ವೈ. ಮಂಜಯ್ಯಸೆಟ್ಟಿ ಎಮ್. ಎಲ್. ಎ. ರವರ ಸದಸ್ಯತನವನ್ನು ಊರ್ಜಿತಗೊಳಿಸಲಾಯಿತು ಅನಂತರ ಪ್ರಶ್ನೋತ್ತರಗಳಾದುವು ಶ್ರೀ ಎಮ್. ಎಸ್. ಅಧಿಕಾರಿಗಳು ಇಪ್ಪತ್ತು ಪ್ರಶ್ನೆ ಕೇಳಿದ್ದರು. ಉಪ್ಪಿನಂಗಡಿ ಹಾ। ಎ। ಶಾಲಾ ಕಟ್ಟಡಕ್ಕಾಗಿ ರೂ. 14,500, ಹೊಸದುರ್ಗ ಪನತ್ತಡಿ ರಸ್ತೆಗೆ ಜಲ್ಲಿ ಹಾಕಲು ರೂಪಾಯಿ 34,303, ಉಪ್ಪಿನಂಗಡಿ ಹಾ। ಎ। ಶಾಲೆಯ ಮುಖ್ಯರೊಡ್ಡಿಗಾಗಿ ರೂ 3,175 ಮಂಜೂರುಮಾಡಲಾಯಿತು. ತಾಲೂಕು ಕೇಂದ್ರಗಳಲ್ಲಿರುವ ಬೋರ್ಡ್ ನೌಕರರಿಗೆ ಮನೆಬಾಡಿಗೆ ಕೊಡಲು ಪ್ರತಿವರ್ಷವೂ ತಗಲುವ ರೂ. 11683ನ್ನು ಕೊಡಲು ಈ ವರ್ಷದ ಮುಂಗಡ ಪತ್ರದಲ್ಲಿ ಬಹಳ ಕೊರತೆಯಿರುವುದರಿಂದ ಸರಕಾರದೊಡನೆ ಗ್ರಾಂಟು ಕೇಳುವುದೆಂದಾಯಿತು.

ಬರುವ ನವಂಬರ ತಿಂಗಳಲ್ಲಿ ಜಿಲ್ಲೆಯನ್ನು ಸಂದರ್ಶಿಸಲಿರುವ ಮದ್ರಾಸು ಗವರ್ನರರಿಗೊಂದು ಬಿನ್ನವತ್ತಳೆಯೊಂದನ್ನು ಕೊಡಬೇಕೆಂದು ನಿರ್ಣಯವಾಯಿತು. ಜಿಲ್ಲಾ ಬೋರ್ಡಿನ ಕ್ಷೇತ್ರದಲ್ಲಿ ಹೋಟೆಲು ಕೆಲಸಮಾಡುವವರಿಗೆ ಲ್ಯಾಸೆನ್ಸು ಫೀಸು ಒಂದು ರೂಪಾಯಿ ಎಂದು ನಿರ್ಣಯಿಸಲಾಯಿತು.

ವಿದ್ಯಾರ್ಥಿಗಳ ಸಮಾಜ ಸೇವೆ- ಮಂಗಳೂರು ಸೈಂಟ್ ಎಲೋಶಿಯಸ್ ಕಾಲೇಜಿನ ಸಮಾಜ ಸೇವಾ ಸಂಘದ ಸೇವಕ ದಳವು ಮೂಲ್ಕಿ ಫಿರ್ಕದಲ್ಲಿ ತಿರುಗಾಡಿ ಅಲ್ಲಿನ ಜನರಲ್ಲಿ ಸಮಾಜ ವಿಕಾಸ ಯೋಜನೆಯ ಕಾರ್ಯಕ್ರಮಗಳಲ್ಲಿ ಹುರುಪು ಹುಟ್ಟಿಸಿತು. ಅಲ್ಲಿಂದ ಅವರು ಹೆಜಮಾಡಿ ಪಡುಪಣಂಬೂರು, ಕಿನ್ನಿಗೋಳಿ ಕೇಂದ್ರಗಳನ್ನು ಸಂದರ್ಶಿಸಿ ಮರಳಿ ಮಂಗಳೂರಿಗೆ ಬಂದರು.

ಪತ್ರಿಕೋದ್ಯಮ ವರ್ಗ— ದ. ಕ ಪತ್ರಿಕೋದ್ಯೋಗಿ ಸಂಘದ ಆಶ್ರಯದಲ್ಲಿ ಮೂರು ತಿಂಗಳ ತನಕ ಪತ್ರಿಕೋದ್ಯಮ ವರ್ಗವನ್ನು ಪ್ರಯೋಗಾರ್ಥವಾಗಿ ನಡಿಸುವದೆಂದು ತೀರ್ಮಾನವಾಯಿತು. ಈ ತರಗತಿಯು ನವಂಬರ ತಿಂಗಳ ತಾ 1ರಿಂದ ಪ್ರಾರಂಭವಾಗಲಿದ್ದು ಪ್ರತಿ ಆದಿತ್ಯವಾರ ಬೆಳಿಗ್ಗೆ 10 ರಿಂದ 11½ ತನಕ ನಡೆಯುವುದು. ಶ್ರೀಗಳಾದ ಆರ್ ಕೆ. ಪ್ರಭು ಮತ್ತು ಎಚ್.ಆರ್ ವ ಲ್ಯರು ವರ್ಗವನ್ನು ನಡೆಸಲು ಒಪ್ಪಿರುವರು.

ದ. ಕ. ಜಿಲ್ಲೆಯಿಂದ ತಿರುಪತಿ ಯಾತ್ರೆಗೆ ಹೋಗುವವರಿಗೆ ಸೂಚನೆ

ಈ ತಿಂಗಳಲ್ಲಿ ತಿರುಪತಿಯಲ್ಲಿರುವ ತಿರುಮಲೆ ಗುಡ್ಡೆ ಎಂಬಲ್ಲಿ ನಡೆಯುವ ಬ್ರಹ್ಮೋತ್ಸವಕ್ಕೆ ಯಾತ್ರಾರ್ಥಿಗಳಾಗಿ ಪ್ರಯಾಣ ಮಾಡುವವರು ಜಿಲ್ಲಾ ಆರೋಗ್ಯ ಖಾತೆಯಿಂದ ಪ್ರಯಾಣದ ಒಂದು ವಾರಕ್ಕೆ ಮುಂಚಿತವಾಗಿ ಕಾಲೇರಾ ಇಂಜಕ್ಷನ್ ತೆಗೆದುಕೊಂಡು, ಆ ಬಗ್ಗೆ ಕೊಡಲ್ಪಡುವ ಸರ್ಟಿಫಿಕೇಟನ್ನು ಪಡಕೊಳ್ಳತಕ್ಕದ್ದು. ಆ ಬಗ್ಗೆ ಯಾತರದ ಹಣವನ್ನು ಸಲ್ಲಿಸಲು ಮಾಡುವುದಿಲ್ಲವಾಗಿ ಜಿಲ್ಲಾ ಹೆಲ್ತ್ ಆಫೀಸರು ಪ್ರಕಟಿಸಿರುವರು.

ರಿಜಿಸ್ಟರ್ಡ್ ಮದುವೆ ರಿಜಿಸ್ಟ್ರಾರ್

ಇದೇ ತಾ. 17 ರಿಂದ ಶ್ರೀ. ಎಚ ನರ್ಸಪ್ಪ, ಬಿ. ಎ ಅವರು ದ. ಕ. ಜಿಲ ರಿಜಿಸ್ಟರ್ಡ್ ಮದುವೆ ರಿಜಿಸ್ಟ್ರಾರರಾಗಿ ನೇಮಕ ಹೊಂದಿರುವರು.

ವಿದ್ಯಾರ್ಥಿ ಅಧ್ಯಾಪಕರ ಪ್ರವಾ

ಮಂಗಳೂರು ಸರಕಾರಿ ಬುನಾದಿ ಶಿಕ್ಷಕರ ತರಬೇತಿ ಶಾಲಾ ಎರಡನೇ ವರ್ಷದ ವಿದ್ಯಾರ್ಥಿ ಅಧ್ಯಾಪಕರು ತಾ, 14ರಲ್ಲಿ ಗುರುಪುರಕ್ಕೆ ಬಂದು ಅಲ್ಲಿಯ ಬುನಾದಿ ಶಿಕ್ಷಣ ತರಬೇತಿ ಶಾಲೆಯನ್ನು ಸಂದರ್ಶಿಸಿದರು. ಅಂದು ಮಧ್ಯಾಹ್ನ ಜರಗಿದ ಸಭೆಯಲ್ಲಿ ಶ್ರೀ ಎಮ್ ಮಾರ್ಟಿನರು ಪ್ರವಾಸದ ಧ್ಯೇಯಗಳ ಕುರಿತು ಭಾಷಣವಿತ್ತರು. ಸಂಜೆ ಬಜ್ಪೆ ವಿಮಾನ ನಿಲ್ದಾಣ ಸಂದರ್ಶಿಸಿ ಬೊಂದೆಲ್ ಮಾರ್ಗವಾಗಿ ಮಂಗಳೂರಿಗೆ ಹಿಂತಿರುಗಿದರು

ನೋಟೀಸು.

ಕುಂದಾಪುರ ಡಿ ಮು ಕೋರ್ಟಿನಲ್ಲಿ

R· E· P· 369 1951 ಓ· C· 225,

ಅರ್ಜಿದಾರ— ಹಳನಾಡು ಸೂರಪ್ಪ ಹೆಗ್ಡೆ.
ಎದುರು— ರಾಮಣ್ಣ ಸೆಟ್ಟಿ (ಫೌತ್) ಸಹಿತ.

ಕುಂದಾಪುರ ತಾಲ್ಲೂಕು ಹಳನಾಡು ಗ್ರಾಮದ ಕೆಳಮನೆ ಅಕ್ಕಮ್ಮ ಸೆಡ್ತಿ ಮಗ 2 ಎದ್ರಿ ಅಣ್ಣಪ್ಪ ಸೆಟ್ಟಿ, ಮರ್ಲಿ ಸೆಡ್ತಿ ಮಗ 3ನೇ ಎದ್ರಿ ಲಚ್ಚಮ್ಮ ಸೆಡ್ತಿ, ಈ 2 ಜನರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ,

ಮೇಲಿನ ವ್ಯವಹಾರದ ಡಿಕ್ರಿದಾರನಾದ ಅರ್ಜಿದಾರನು ನಿಮ್ಮ ಬಾಬ್ತು ಸ್ಥಿರ ಆಸ್ತಿ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾನೆ. ಆದರಿಂದ ವಿಕ್ರಯದ ಮುಸ್ತಾಯಿದೆ ಷರತ್ತುಗಳನ್ನು ನಿರ್ಣಯಿಸುವ ಬಗ್ಗೆ ತಾರೀ 14-10-1952ನೇ ದಿನ ಮೇಲ್ಕಾಣುವ ಕೋರ್ಟಿನಲ್ಲಿ ತನಿಖೆಗೆ ಇಡಲಾಗಿದೆ ಎಂಬದಾಗಿ ಈ ಮೂಲಕ ನಿಮಗೆ ತಿಳಿಸಲಾಗಿದೆ

B. S Shetty, B. A. B
Vakil for Petition
Coondapoor, 20-9-52.

The East & West Insurance Co., Ltd.,
ESTD:] East & West Building. BOMBAY. 1 [1913
ದಿ ಈಸ್ಟ್ ಎಂಡ್ ವೆಸ್ಟ್
ಸ್ಥಾಪನೆ.] ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್. [1913
ಒಟ್ಟು ನಿಧಿ ರೂಪಾಯಿ 1 ಕೋಟಿ ೫ ಲಕ್ಷಕ್ಕೂ ಮಿಕ್ಕಿ ಇದೆ.
ಒಟ್ಟು ಆಸ್ತಿಬದುಕು ರೂಪಾಯಿ 1ಕೋಟಿ 23 ಲಕ್ಷಕ್ಕೆ ಮೇಲ್ಪಟ್ಟು ಇದೆ
ಪೋಲಿಸಿ ಹೋಲ್ಡರರ ಸೇವೆಯೇ ನಮ್ಮ ಧ್ಯೇಯ.
ಆರು ತಿಂಗಳಿಗೊಂದಾವರ್ತಿ ನಡೆಯುವ ನಮ್ಮ ಈ ಸಲದ ಕಾರು ಪ್ರಯಾಣದಲ್ಲಿ ಹುಬ್ಬಳ್ಳಿ, ಬೆಳಗಾಂ, ಕೊಲ್ಹಾಪುರ, ಪೂನ, ಬೊಂಬಾಯಿ ಸಿಟಿ ಮತ್ತು ಸಬರ್ಬನ್ ಜಿಲ್ಲೆಗಳಲ್ಲಿ ಪ್ರಸ್ತುತ ನೆಲಸಿರುವ ನಮ್ಮ ಪೋಲಿಸಿದಾರರು ಮತ್ತು ಹಿತಚಿಂತಕರು ತೋರಿಸಿದ ಪ್ರೀತಿ ವಿಶ್ವಾಸಗಳಿಗೆ ನಾವು ತುಂಬಾ ಆಭಾರಿಗಳಾಗಿದ್ದೇವೆ.
ನಮ್ಮ ಪೋಲಿಸುಗಳು [illegible] ಮತ್ತು [illegible], ನಮ್ಮ ಪರಿಯಾದ ಪ್ರತೀಜಿಲ್ಲೆಗಳಲ್ಲೂ ಯೋಗ್ಯಸಂಬಳದಲ್ಲಿ ಕೆಲಸಮಾಡಬಲ್ಲ ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ.
ಮೆಸ್ಸರ್ಸ್ ಹೆಗ್ಡೆ ಎಂಡ್ ರಾವ್
ಚೀಫ್ ಏಜಂಟರು,
ದಕ್ಷಿಣ ಕನ್ನಡ, ಉತ್ತರ ಕನ್ನಡ, ಮತ್ತು ಮೈಸೂರು ಸ್ಟೇಟ್
ಪೋಸ್ಟ್, ಶಿರ್ವ ದ. ಕ.

ಸ್ವೀಕಾರ ವಿಮರ್ಶೆ

ಮಹಾತ್ಮಾ ಗಾಂಧೀ ಸ್ಮಾರಕ ಕಾಲೇಜು ವಾರ್ಷಿಕಾಂಕ— (೧೯೫೨)ರ ಪ್ರತಿಯೊಂದು ನಮ್ಮ ಕೈಸೇರಿದೆ. ದಿನದಿಂದ ದಿನಕ್ಕೆ ಪ್ರವರ್ಧಮಾನಗೊಳ್ಳುತ್ತಿರುವ ಉಡುಪಿಯ ಈ ಕಾಲೇಜಿನ ಚಟುವಟಿಕೆಗಳ ಪ್ರತೀಕವಾಗಿ ಈ ವಾರ್ಷಿಕಾಂಕವಿದೆ. ವಿದ್ಯಾರ್ಥಿ ಬರೆಹಗಾರರ ಚಿಕ್ಕ ಚೊಕ್ಕ ಬರೆಹಗಳೂ, ಜೊತೆಗೆ ಪ್ರಾಧ್ಯಾಪಕ ವೃಂದದ ಪ್ರೌಢ ಲೇಖನಗಳೂ ಈ ಸಂಚಿಕೆಯಲ್ಲಿವೆ. ಇಂಗ್ಲೀಷು ವಿಭಾಗವಲ್ಲದೆ ಕನ್ನಡ, ಹಿಂದೀ ಹಾಗೂ ಸಂಸ್ಕೃತ ವಿಭಾಗಗಳನ್ನೂ ಈ ಸಂಚಿಕೆಯಲ್ಲಿ ಕಾಣಬಹುದು. ವಾರ್ಷಿಕಾಂಕವು ಸಚಿತ್ರವಾಗಿರುವುದು ಇನ್ನೊಂದು ವೈಶಿಷ್ಟ್ಯ. ಲಘು ಕತೆಗಳಿಂದ ಹಿಡಿದು ಸಾಹಿತ್ಯ ವಿಮರ್ಶೆ, ವೈಜ್ಞಾನಿಕ ಹಾಗೂ ಆಧ್ಯಾತ್ಮಿಕ ವಸ್ತುಗಳ ವಿವೇಚನೆಯವರೆಗೆ ಬರೆಹಗಳು ವಿಸ್ತರಿಸಿವೆ. ಅಲ್ಲಲ್ಲಿ ಕವನಗಳ ಮಾಧುರ್ಯವೂ ತುಂಬಿದೆ.

ಸಿಡಿದ ಕಿಡಿಗಳು- ಲೇಖಕರ-ಕುಂಚಾಲ್ ಶಾಂತಾರಾಂ. ಪ್ರಕಾಶಕರು:- ಸಂಜೀವಿನಿ ಪ್ರಕಾಶನ, ಹುಬ್ಬಳ್ಳಿ, ಬೆಲೆ: ರೂ. ೧-೮-೦

ಇದೊಂದು ಹರಟೆಗಳ ಸಂಗ್ರಹ. ನಿತ್ಯ ಜೀವನದ ಹಾಗೂ ಸುತ್ತುಮುತ್ತಿನ ವಾತಾವರಣದ ನಾನಾ ವಸ್ತು ವಿಷಯಗಳನ್ನೆತ್ತಿಕೊಂಡು ನಾಲ್ಕಾರು ವರ್ಷಗಳಲ್ಲಿ ಬರೆದುದನ್ನು ಇಲ್ಲಿ ಸಂಗ್ರಹರೂಪದಲ್ಲಿ ಕೊಟ್ಟಿದ್ದಾರೆ. ಹರಟೆಗಳನ್ನು ಬರೆಯುವ ಪ್ರತಿಭೆ ಲೇಖಕರಿಗೆ ಇದೆ ಎಂಬುದು ಇಲ್ಲಿ ವ್ಯಕ್ತವಾಗುತ್ತಿದೆಯಾದರೂ-ಅವುಗಳಲ್ಲಿ ಜೀವತುಂಬುವ ಸಾಮರ್ಥ್ಯವನ್ನು ಇನ್ನೂ ಅವರ ಲೇಖನಿ ಪಡೆದಿಲ್ಲ. ಬದುಕಿನ ಅಪಾರ ಅನುಭವ ಹಾಗೂ ಅಗಾಧ ಜ್ಞಾನವಿದ್ದರೆ, ಹರಟೆಗಳು ಸಹೃದಯದ ಮನೋಲ್ಲಾಸವಮಾಡಿಸುವುದರ ಜೊತೆಗೆ, ಭಾವ ಹಾಗೂ ವಿಚಾರಗಳನ್ನು ಕೆರಳಿಸಬಲ್ಲವು. ಆದರೆ ಇಲ್ಲಿಯ ಹರಟೆಗಳು ಕಲಾತ್ಮಕ ಮೌಲ್ಯವನ್ನು ಪಡೆದಿಲ್ಲವೆಂದು ವಿಷಾದಿಸಬೇಕಾಗಿದೆ. ಹೀಗಿದ್ದರೂ-ಲಘು ಹರಟೆಗಳೆಂದು ಇವನ್ನು ಮನ್ನಿಸಬಹುದು. ಓದಿ ಸಂತೋಷಿಸಬಹುದು.

ಸತ್ಯನಾರಾಯಣ ಕಥೆ- ಬರಹಗಾರ ಹಾಗೂ ಪ್ರಕಾಶಕರು: ಶ್ರೀ ಜಿ. ಪರಮೇಶ್ವರ ಭಟ್ಟ, ವಿದ್ವಾನ್, ಸೈಂಟ್ ಆನ್ಸ್ ಟ್ರೈನಿಂಗ್ ಕಾಲೇಜು, ಮಂಗಳೂರು. ಬೆಲೆ: ೦-೬-೦

ಕಲಿಯುಗದಲ್ಲಿ ಮನುಷ್ಯನ ದಾರಿದ್ರ್ಯಾದಿ ದೋಷಗಳನ್ನು ನಿವಾರಿಸುವುದಕ್ಕು ಸಂತಾನ ಇಲ್ಲದವರಿಗೆ ಮಕ್ಕಳಾಗುವುದಕ್ಕೂ, ಸರ್ವ ಸೌಭಾಗ್ಯಾಭಿವೃದ್ಧಿಗೂ ಸತ್ಯನಾರಾಯಣ ದೇವರ ವ್ರತವನ್ನು ಆಚರಿಸುವುದು ಒಳ್ಳೆಯದೆಂದು ಆಸ್ತಿಕ ಜನರ ಅಭಿಪ್ರಾಯ. ಸಂಸ್ಕೃತದಲ್ಲಿ ರಚಿಸಲ್ಪಟ್ಟಿರುವ ಸತ್ಯನಾರಾಯಣ ಕಥಾಭಾಗವನ್ನು ವಿವರಿಸುವ ಶ್ಲೋಕಗಳ ಕನ್ನಡಾನುವಾದವನ್ನು ಶ್ರೀ ಭಟ್ಟರು ಇಲ್ಲಿ ಮಾಡಿದ್ದಾರೆ. ಅನುವಾದ ಚೌಪದಿಗಳ ರೂಪದಲ್ಲಿದೆ. ಮತ್ತು ಸರಳವಾಗಿದೆ. ಮೊದಲಲ್ಲಿ ಸತ್ಯನಾರಾಯಣನ ಕಥಾ ಸಾರಾಂಶವನ್ನು ತಿಳಿ ಮಾತುಗಳಲ್ಲಿ ವಿವರಿಸಿ ಹೇಳಿರುವುದರಿಂದ, ಅರ್ಥಗ್ರಹಣವು ಇನ್ನಷ್ಟು ಸುಲಭವಾಗಿದೆ.

ಬೈಂದೂರು- ಸೋಮವಾರ ರಾತ್ರಿ ಸಾಧಾರಣ 11-10ಕ್ಕೆ ಭಟ್ಕಳ, ಬೈಂದೂರು, ಕಾರ್ಕಿ, ಕೊಲ್ಲೂರು, ನಾಗೋಡಿ, ವರೆಗಿನ ಭೂಮಿಯು ಭಯಂಕರ ಶಬ್ದದೊಡನೆ ಎರಡು ಸಲ ಅಲ್ಲಾಡಿರುವುದಾಗಿಯೂ, ಬಹಳ ಜನರು ಹೆದರಿ, ಮನೆಯ ಹೊರಗೆ ಓಡಿ ನೋಡಲಾಗಿ ಏನೂ ಇಲ್ಲವಾಗಿ ತಿಳಿಯುತ್ತದೆ.

ಇಲ್ಲಿನ ಆಸುಪಾಸು 5-6 ಗ್ರಾಮಗಳಲ್ಲಿ ಸಾಧಾರಣ ಒಂದು ತಿಂಗಳಿಂದ ಮಳೆಯು ಏನೂ ಇಲ್ಲದೆ, ಪೈರುಗಳೆಲ್ಲಾ ಒಣಗಲಾರಂಭಿಸಿರುವವು. ವ್ಯಾಪಾರಿಗಳು ಈಗಾಗಲೇ ಮುಡಿಗೆ ರೂ 36ರ ತನಕ ಧಾರಣೆ ಏರಿಸಿರುವರು.

ಕುಂಬಳೆ— ಫಿಷರೀಸ್ ಅಸಿಸ್ಟೆಂಟ್ ಡಯರೆಕ್ಟರ್ ಶ್ರೀ. ಮುಕುಂದನ್ ಉಣ್ಣಿಯವರು, ತಾ. ೧೫ರಂದು ಇಲ್ಲಿನ ಯಾರ್ಡನ್ನೂ, ಫಿಷರೀಸ್ ಶಾಲೆಯನ್ನೂ ಪರಿಶೀಲಿಸಿದರು.

ಜಸ್ಟೀಸ್ ಪಿ. ರಾಜಗೋಪಾಲನ್, ರೆವಿನ್ಯೂಬೋರ್ಡ್ ಮೆಂಬರ್ ಶ್ರೀ ಸತ್ಯನಾಥನ್ ಇವರು ತಾ. ೧೫ರಂದು, ಜಿಲ್ಲಾ ಕಲೆಕ್ಟರ್ ಶ್ರೀ ಸಿ. ಎ. ರಾಮಕೃಷ್ಣನ್, ಐ. ಸಿ. ಎಸ್. ಇವರೊಂದಿಗೆ ಕಾಸ್ರಗೋಡಿಗೆ ಆಗಮಿಸಿದ್ದರು.

ಕಾಸ್ರಗೋಡಿನ ಪ್ರಿನ್ಸಿಪಲ್ ಡಿಸ್ಟ್ರಿಕ್ಟ್ ಮುನ್ಸಿಫರಾಗಿ ಉಡುಪಿಯಿಂದ ವರ್ಗಾಯಿಸಲ್ಪಟ್ಟ ಶ್ರೀ ಟಿ ವಿ. ಬಿ. ಸಿ. ಕೊಲಾಸೊರವರು ತಾ. ೧೯ರಂದುಚಾರ್ಜು ವಹಿಸಿರುವರು.

ಕಾಸರಗೋಡು ಫರ್ಕ ಕೇಂದ್ರದಲ್ಲಿ- ದ. ಕ. ಜಿಲ್ಲೆಯ ನೇಕಾರ ಸಂಘಗಳ ಪ್ರತಿನಿಧಿಗಳ ಪರಿಷತ್ತು ಇದೇ ತಾ 14ರಲ್ಲು ಜರಗಿತು. ಮಂಗಳೂರು ಕಾಸರಗೋಡು ಸರ್ಕಲುಗಳ ಡಿಪ್ಯುಟಿ ರಿಜಿಸ್ಟ್ರಾರ್ ಶ್ರೀಗಳಾದ ಕೆ. ಕೇಶವ ಕಿಣಿ, ಮತ್ತು ಪಿ. ಸಂಕಪ್ಪನವರೂ, ತಿರುಚಿರಪಳ್ಳಿಯ ರೀಜನಲ್ ಮಾರ್ಕೆಟಿಂಗ್ ಆಫೀಸರ್ ಶ್ರೀ ಸಿ. ತಿರುನಕ್ಕರಸು ಮೊದಲಾದವರು ಹಾಜರಿದ್ದರು. ಬಣ್ಣದ ಸೀರೆಗಳನ್ನು ವೇಷ್ಟಿಗಳನ್ನೂ ತಯಾರಿಸುವ ಸರ್ವ ಹಕ್ಕು ಕೈಮಗ್ಗಗಳಿಗೆನೇ
ಸಲ್ಲಾಗಿರಿಸುವಂತೆ ಮದ್ರಾಸು ಸರಕಾರ
ಸ್ಸಾರರ ಮೂಲಕ ಮದ್ರಾಸು ಮತ್ತು
ದ್ರ ಸರಕಾರಗಳನ್ನು ವಿನಂತಿಮಾಡಿಕೊ
ವ ಒಮ್ಮತದ ನಿರ್ಣಯವಾಯಿತು.

ಸಾಂತೂರು ಮುದರಂಗಡಿ—
ಳೀಯ ಭಾರತ ವಾಚನಾಲಯದ ಸಭೆ
ತಾ. 14ರಲ್ಲು ಪಂಚಾಯತಬೋರ್ಡು ಅ
ನಲ್ಲಿ ಶ್ರೀ ಬೆಂಜಮಿನ್ ಮತಾಯಸರ ಅ
ಕ್ಷತೆಯಲ್ಲಿ ಜರಗಿತು. ವಾಚನಾಲಯಕ್ಕೆ
ಟ್ಟಿನ ಪತ್ರಿಕೆಗಳನ್ನು ತರಿಸಬೇಕೆಂದು ಸ
ರು ಸೂಚನೆಯಿತ್ತರು.

ಪ್ರಕಟಣೆ

ಕಟಪಾಡಿ ಶ್ರೀ ವೆಂಕಟ್ರಮಣ ದೇವರಸನ್ನಿಧಿಯಲ್ಲಿ-ಇದೇ ಆಶ್ವೀಜ ಶುದ್ಧ ೨ ಆದಿತ್ಯವಾರ ಲಾಗಾಯ್ತು(ತಾ 28-9-52ಕ್ಕೆ)ಆರಂಭವಾಗಿ 5-10-52) ತನಕ ಏಳು ದಿನಗಳ ಅಹೋರಾತ್ರಿ ಭಜನಾ ಸಪ್ತಾಹವು ಶ್ರೀ ದೇವತಾನುಗ್ರಹದಿಂದಲೂ, ಇಹಪರಕ್ಕೆ ಸಾಧನವಾದ ಈ ಮಹತ್ಕಾರ್ಯಕ್ಕೆ ತಾವು ಭಕ್ತಿಪೂರ್ವಕವಾಗಿ ಉದಾರ ಹಸ್ತದಿಂದ ಮಾಡಿದ ದ್ರವ್ಯ ಸಹಾಯದಿಂದಲೂ ಎಂದಿನಂತೆ ಸರ್ವವಿನಿಯೋಗಗಳೊಂದಿಗೆ ಸಾಂಗವಾಗಿ ನೆರವೇರಲಿರುವುದು. ಈ ಮಹೋತ್ಸವಕ್ಕೆ ತಾವು ಆಗತ್ಯವಾಗಿ ಬಂದು, ಶ್ರೀ ದೇವರ ಪ್ರಸಾದವನ್ನು ಸ್ವೀಕರಿಸಿ ಶ್ರೀ ದೇವರ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ. ಶ್ರೀ ಭಜನೆ ಸಪ್ತಾಹ ಸಮಾರಂಭದಲ್ಲಿ ನಡೆಯಬಹುದಾದ ಸದ್ವಿನಿಯೋಗಗಳ ವಿವರ:— ರಾತ್ರಿಕಾಲದ ಹೂವಿನ ಪೂಜೆ ರೂ. 10-0-0, ಹೂವಿನ ಪೂಜೆಗೆ ರೂ. 5-0-0, ದೀಪಾರಾಧನೆ ರೂ. 2-0 0, ಪಟ್ಟಪಿಂಡಿ 0-8-0, ಕರ್ಪೂರಾರತಿ 0—2—3. ತುಳಸೀಹಾರ 0-1-3, ಅಹೋರಾತ್ರಿ ಪೂರ್ಣ ವಿನಿಯೋಗಕ್ಕೆ ರೂ. 24.

ಪಾಂಗಾಳ ಅಪ್ಪಪ್ಪ ನಾಯಕ್.
ಪ್ರಕೃತ ಆಡಳ್ತೆದಾರ,

ಕಟಪಾಡಿ, 20-9-52.

ವಿವಿಧ ಪಾತ್ರೆಗಳು



ಯಾವತ್ತೂ, ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ವಿಚಾರ ಪ್ರಚೋದಕವಾದ ಪ್ರತಿಯೊಬ್ಬರೂ ಓದಲೇಬೇಕಾದ ನವನವೀನ ಪುಸ್ತಕಗಳು!

ಗೀತಾ ರಹಸ್ಯವನ್ನು ತಿಳಿಯ ಬಯಸದವರಾರು?

ದಿ| ಹೊಸಕೆರೆ ಚಿದಂಬರಯ್ಯ ಕೃತ **ಗೀತೆಯ ಕೈಗನ್ನಡಿ** ಭಗವದ್ಗೀತೆಯ ಸಮೂಲ ಭಾಷಾಂತರ

ಪುಟಗಳು 428 ಬೆಲೆ 0-12-0 ಅಂಚೆವೆಚ್ಚ 0-4-0

100 ಪ್ರತಿಗಳಿಗೆ ರೂ. 60; 250ಕ್ಕೆ ರೂ. 140; 500ಕ್ಕೆ ರೂ 250.

ಕತೆ, ಕಾದಂಬರಿ, ನಾಟಕ, ಚಿತ್ರ, ಪ್ರಬಂಧ, ಹರಟೆ ಮೊದಲಾಗಿ, ನೋಡಿದರೆ ಬಿಡದಿರುವ ಅಂತರಂಗ ಪ್ರಕಟನಾಲಯದ ರೂ. 30 ಕ್ರಯದ 86 ಪ್ರಕಟಣೆಗಳನ್ನು ಒಮ್ಮೆಯೇ ತರಿಸಿಕೊಳ್ಳುವವರಿಗೆ ರೂ. 24ಕ್ಕೆ ಕೊಡಲಾಗುವುದು.

ನಾರೀಹೃದಯ ರೂ.	1	8	ಪ್ರಕಾಶ ರೂ.	2	8	ನೆನಪಿಗಾಗಿ ರೂ.	2	0
ಭಾರತೀಯ ಕತೆಗಳು	1	12	ಮಧುವನ	3	0	ಕಾವ್ಯಸಾಮ್ರಾಜ್ಯ	1	8
ಸನ್ಯಾಸಿಯ ಸೋಗಿನಲ್ಲಿ	1	[illegible]	ಫಂಟಮಾರಾ	2	0	ಪ್ರೇಮ ವಿಜಯ	1	4
ಕವಿತಾ ಕಾಮಿನಿ	2	0	ನಂದಾದೀಪ	1	0	ರಂಗಭೂಮಿ	0	10
ಕುಲವಿಲ್ಲದ ಹೆಣ್ಣು	2	0	ಜಮೀನ್ದಾರ	1	8	ಭಾರತದಲ್ಲಿ ಜಾತಿಭೇದ	1	0
ವ್ಯಭಿಚಾರಿಣಿ ಯಾರು	1	4	ದೇಶಭಕ್ತ	1	4	ವೀರ ಸಾವರ್ಕರ	1	4
ಸುಲಭದಲ್ಲಿ ಇಂಗ್ಲಿಷ್	2	0	ಮನೆ ಮದ್ದು	2	8	ಕದಂಬ	1	4
ನೀತಿವಿನೋದ ಕತೆಗಳು	0	12	ಸರಸ್ವತಿ	0	12	ಭಾಗ್ಯಲಕ್ಷ್ಮಿ	1	4
ಜೀವನ ಸಂಗ್ರಾಮ	1	8	ಸೇವಾಪಥ	0	8	ಲೋಪಾಮುದ್ರೆ	0	8

ಇವೇ ಮೊದಲಾದ ನೂರಾರು ಬಗೆಯ ಉಪಯುಕ್ತ ಪುಸ್ತಕಗಳ ಕೆಟಲಾಗಿಗೆ ಬರೆಯಿರಿ ವ್ಯಾಪಾರಿಗಳಿಗೂ, ಪುಸ್ತಕಭಂಡಾರಗಳಿಗೂ ವಿಶೇಷ ಸವಲತ್ತುಗಳಿವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ ಕ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ವಿಮ್ಮ ಸ್ನಾನ, ಊಟ, ಉಪಹಾರ, ಬೈಕಲ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

ಮುಟ್ಟು | ಕಷ್ಟದರೆ ಚಿಂತೆ ಬೇ

'ಮುತುರಾಜ' ಸೇವಿಸಿರಿ. ಮುತುಸ
ಪ್ರಾರಂಭನಾಗುವುದು. 4-5 ತಿಂಗ
ನಿಂತಿದ್ದರೂ ಮುಟ್ಟು ಯಾವ ಅಪಾ
ವನ್ನೂ ತಾರದೆ 24 ಘಂಟೆಯೊಳಗೆ ಗ
ರಂಟಿಯಿಂದ ಪ್ರಾರಂಭವಾಗುವುದು, ಬ
ರೂ. 7/8 ವಿ. ಪಿ. ಖರ್ಚು ರೂ.
ವಿಶೇಷ ರೂ. 24 ವಿ. ಪಿ. 1/12

BINAPANI AUSHADHALAYA (N- J-
15/1 Moore Avenue, CALCUTTA,
ಸ್ಥಳೀಯ ಏಜಂಟರು:
ವೈದ್ಯ ಸಿ ಆರ್. ಕಾಮತ್,
ಮಂಗಳೂರು.

ಜಗದ್ವಿಖ್ಯಾತ ಹಾಗೂ ತೀವ್ರ ಗ
ಕಾರಿ ಚಿತ್ರಕೋಟಿ ಅಸ್ತಮ ಭ

ಒಂದು ದೋಸನ್ನು 3-10-52ನೆ ಪ
ಮೆ ರಾತ್ರಿ ಸೇವಿಸಿದರೆ ನಾನಾ ರೀತಿಯ ಪ
ಹಳೆಯ ಅಸ್ತಮ ಅರ್ಥಾತ್ ಉಬ್ಬಸ ವ
ತದ ಶ್ವಾಸರೋಗಗಳು ಗುಣಹೊಂದು

ಇಂಗ್ಲಿಷಿನಲ್ಲಿ ಪತ್ರವ್ಯವಹಾರ:-

Manager,
Shri Vishwa Kalayan Karyalaya,
P O Chitrakot, U. P.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು
ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ,
ನೋವು, ಗಾಯಗಳು, ಬಾತುಕೊಳ್ಳುವು
ಚೇಳುವಿಷ ಮುಂತಾದವು, ಪಕ್ಷವಾತ, ಮೊ
ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌ



REC
ಜೇವಳ
ಮದ್ರಾ
ನಮ್ಮ
ಸಿಕ್ಕುತ್ತ

ಅಮೃತಾಂಜನ ಲಿಮಿಟೆಡ್
ಮದರಾಸು, ಬೊಂಬಾಯಿ ಮತ್ತು ಕಲ್

ತೃಪ್ತಿಕರವಾದ ವಸತಿ— ಹಿತಕರವಾ
ಊಟ— ರುಚಿಕರವಾದ ಉಪಾಹಾ
ಇವುಗಳಿಗೆ
ಆದರ್ಶ ನಿಲಯವೆಂದರೆ
ಫುಡ್ ಲೇಂಡ್
ಉ ಡು ಪಿ.
ಯಾತ್ರಿಕರಿಗೂ ಪ್ರಯಾಣಿಕರಿಗೂ
ಸದಾ ಅನುಕೂಲವಾಗುವಂತೆ
ನಗರದ ಕೇಂದ್ರಭಾಗದಲ್ಲಿದೆ

All Secondary Schools
Subscribe to "Navayuga" wee
Since it has been approved
the Director of Public Instru
tion, Madras.

ಟೀಕೆಯ ಬೆದರಿಕೆ

(೧ನೇ ಪುಟದಿಂದ ಮುಂದುವರಿದುದು)

ಟೀಕೆಗಳಿಂದ ನೊಂದು ಕೊಂಡು, ದ್ದಾಡುವ ಜನರನ್ನು ಕಂಡ ಲ್ಯ ಸಂಕೋಚಪಡುವ ಬುದ್ಧಿಯಿಂದ ೂ ಜನರೂ ವಾಗ್ಬಾಣಗಳನ್ನೆಸೆಯಬಹುದು. ಆದರೆ-ಸತ್ಯಪ್ರಿಯನೂ ಸ್ಥಿತಪ್ರಜ್ಞನೂ ಅವುಗಳಿಂದ ಎದೆಗೆಡುವುದಿಲ್ಲ. ಟೀಕೆಯಲ್ಲಿ ಹುರುಳಿದೆಯೋ ಇಲ್ಲವೋ ಎಂಬುದನ್ನು ಆತ್ಮಶಕ್ತಿಯ ಬಲದಿಂದ ಸ್ವಯಂ ನಿರ್ಣಯಿಸಿ, ಒಳ್ಳೆಯ ಅಂಶವನ್ನೇ ಸ್ವೀಕರಿಸುವುದು ಬುದ್ಧಿವಂತನ ಲಕ್ಷಣ.

ಟೀಕೆಯಿಂದ ಉದ್ರೇಕಗೊಂಡವರು ಯ್ಯಿಗೆ ಪುಯ್ಯಿ ತೀರಿಸುವ ಚಪಲ ತೋರಿಸುವುದುಂಟು: ಇದು ಬಹಳ ಕಟ್ಟೆ ಸು: ಹೀನ ಮಾರ್ಗ. ಟೀಕೆಯಲ್ಲಿ ಅಸತ್ಯವೇ ತುಂಬಿದ್ದರೂ ಅದನ್ನು, ಅಲಕ್ಷಿಸಿ ಬಿಡುವುದೇ ಯೋಗ್ಯ ಹೆಜ್ಜೆಯಾದೀತಲ್ಲದೆ-ರಾತಿಗೆ ಪ್ರತಿವಾಗ್ಬಾಣವಾಗುವುದಲ್ಲ. ತನ್ನ ವಿರೋಧಿಗಳ ವಿರೋಧದ ಕುರಿತ ಅಮೇರಿಕದ ಮಾಜಿ ಅಧ್ಯಕ್ಷ ಲಿಂಕನ ಹೀಗೆಂದಿದ್ದಾನೆ:-

"ನನ್ನ ಕುರಿತು ಎತ್ತಿದ ಆಕ್ಷೇಪಗಳನ್ನೂ, ನನ್ನ ಕಾರ್ಯದ ಲೋಪದೋಷಗಳ ಟೀಕೆಯನ್ನೂ ಕೇಳುತ್ತಾ ಕುಳಿತರೆ-ನನಗೆ ಬೇರೆ ಕೆಲಸವೇ ಉಳಿಯದು: ಅವುಗಳಿಗೆ ಉತ್ತರಿಸುತ್ತಾ ಕುಳಿತರೆ ದಿನದ ಇಪ್ಪತ್ತನಾಲ್ಕೂ ತಾಸು ಸಾಕಾಗದೆ ಹೋದೀತು. ಕೆಲಸವನ್ನು ಎಷ್ಟು ಒಳ್ಳೆಯ ರೀತಿ ಸಾಧ್ಯವೋ-ಅಷ್ಟು ಚೆನ್ನಾಗಿ ಮಾಡುತ್ತೇನೆ. ಅದರ ಪರಿಣಾಮ ಕೆಟ್ಟದೇ ಆದಲ್ಲಿ-ಆಗ ನಾನು ತುಂಬ ಪ್ರಾಮಾಣಿಕತೆ ಹಾಗೂ ಸರ್ವ ಬಲವನ್ನುಪಯೋಗಿಸಿ ಕೆಲಸ ಮಾಡಿದ್ದೆನೆಂದು ಎಷ್ಟು ಸಾಧಿಸಿದರೂ, ನೀರಮೇಲಿನ ಹೋಮ.! ನನ್ನ ಕೆಲಸದ ಪರಿಣಾಮ ಒಳ್ಳೆಯದಾದರೆ-ಇಂದಿನ ಟೀಕೆಗಳಿಗೆ ಬೆಲೆಯೇ ಉಳಿಯುವುದಿಲ್ಲ!"

— ಒಂತಕ್ಸತ

ಅಮೃತ ತುಲ್ಯಕ್ಷೀರದ ಪೂರೈಕೆ

(೨ನೇ ಪುಟದಿಂದ ಮುಂದುವರಿದುದು)

ಅಗ್ಗದ ಪೂರೈಕೆ

ಸೇರಿಗೆ ೧೪ ಆಣೆಯಂತೆ ಕ್ರಯವಿರುವ ಶುದ್ಧ ಹಾಲನ್ನು ಕೊಂಡುಕೊಳ್ಳಲಾರದವರು, ಎಂಟಾಣೆಗೇ ಮಾರಲಾಗುವ ಶಲ್ ಹಾಲನ್ನು ಉಪಯೋಗಿಸಬಹುದು. ಇದರಲ್ಲಿ ೧೦೦ ಪಾಲು ಹಾಲೂ, ೧೦೦ ಪಾಲು ನೀರೂ ೧೦ ಪಾಲು ಅವುಬಾದ ಹಾಲುಪುಡಿಯೂ ಇದೆ. ಮೂರು ವರ್ಷಕ್ಕೆ ಮೊದಲು ದಿನಕ್ಕೆ ೧೦ ಮಣ ಹಾಲು ಮಾರಾಟವಾಗುತ್ತಿದ್ದರೆ, ಈಗ ಅದರ ಬೇಡಿಕೆ ೭೦೦ ಮಣಕ್ಕೇರಿದೆ.

ಪ್ರತಿ ಮುಂಜಾನೆ ಮತ್ತು ಸಂಜೆ, ತಕ್ಕ ರೋಗರಕ್ಷಕ ಕ್ರಮಗಳಿಂದ ವ್ಯವಸ್ಥಿತಗೊಳಿಸಿದ ವಾಹನಗಳು ಹಾಲು ತುಂಬಿದ ಬಾಟಲಿಗಳನ್ನು ನಗರದ ೭೦೧ ಪೂರೈಕೆ ಕೇಂದ್ರಗಳಿಗೆ ಒದಗಿಸಿಕೊಡುತ್ತವೆ.

ಪಶು ತಜ್ಞರು ತುಂಬ ಆಸ್ಥೆಯಿಂದ ಜಾನುವಾರುಗಳ ಸಂರಕ್ಷಣೆ, ತಳಿ ಸುಧಾರಣೆಗಳು ಕೈಗೊಂಡಿದ್ದಾರೆ. ಕರುಗಳನ್ನು ಕ್ರಯಕ್ಕೆ ಪಡೆದುಕೊಂಡು, ಪ್ರಬುದ್ಧವಾಗುವವರೆಗೆ ಸಾಕಿ, ಆ ಬಳಿಕ ಅದರ ಮೊದಲಿನ ಒಡೆಯರಿಗೇ ಮರಳಿ ಯೋಗ್ಯ ಬೆಲೆಗೆ ಮಾರುವ ಪದ್ಧತಿಯೂ ಇದೆ.

ಈ ಕೇಂದ್ರ ಪಶು ಸಾಕಣೆಯು ವಿದ್ಯಾರ್ಥಿಗಳಿಗೆ ಅಭ್ಯಾಸ ಯೋಗ್ಯವಾಗಿದೆ. ಈ ಯೋಜನೆಯ ಯಶಸ್ಸಿಗೆ ದುಗ್ಧಶಾಸ್ತ್ರ ಹಾಗೂ ಕೃಷಿ ಕ್ಷೇತ್ರಗಳಲ್ಲಿ ಪರಿಣತರಾದವರು ಕಾರಣರಾಗಿದ್ದಾರೆ. ಭಾರತೀಯ ನಗರಗಳಿಗಾಗಿ ಇನ್ನೂ ಇಂಥ ಹಲವು ಕೇಂದ್ರಗಳ ಆಗತ್ಯವಿದೆ. ಮುಂಬಯಿ ಸರಕಾರದವರೇ ಇನ್ನೊಂದು ಕೇಂದ್ರವನ್ನು ತೆರೆಯುವ ಹವಣಿಕೆಯಲ್ಲಿದ್ದಾರೆ. ಪೂರ್ವದ ದೇಶಗಳಲ್ಲಿ ಜನರ ಸ್ವಾಸ್ಥ್ಯಕ್ಕಾಗಿ ಹಾಲು ಅತ್ಯಗತ್ಯವಾಗಿರುವಾಗ—ಹಾಗೂ ಅದರ ಶಾಸ್ತ್ರೀಯ ಪೂರೈಕೆ ಬಹಳಷ್ಟು ಕಡಿಮೆ ಇರುವಾಗ-ಈ ಬಗೆಯ ಕೇಂದ್ರಗಳು ಹೆಚ್ಚಿದಷ್ಟೂ ಸುಖ.

ತಿದ್ದಿ ಬೆಳಸಿದ ೨ನೆಯ ಮುದ್ರಣ
೧೨೭ ಪುಟಗಳು ೪೫ ಚಿತ್ರಗಳು
೨ ರೂ. ೬ ಆಣೆಗಳನ್ನು ಮನಿಯಾರ್ಡರ್ ಮಾಡಿದರೆ ರಿಜಿಸ್ಟರಿನಿಂದ ಕಳಿಸುತ್ತೇವೆ
ಪ್ರಸವ ವಿಜ್ಞಾನ
ಸಾಧನ ಪ್ರಕಟನಾಲಯ
ದೊಡ್ಡಬಳ್ಳಾಪುರ

ಪುತ್ತೂರು ತಾಲೂಕು ರೈತ ಸೇವಾಸಂಘ

ಸ್ವತಂತ್ರವಾಗಿ ನ್ಯಾಯ, ಸತ್ಯ, ಶಾಂತಿಯ ಮಾರ್ಗದಿಂದ ಮುಂದೆ ಸಾಗುತ್ತಿರುವ ಜಿಲ್ಲೆಯ ಏಕಮಾತ್ರ ರೈತ ಸಂಘಟನೆ.

ಸಂಘದ ಉಪಾಧ್ಯಕ್ಷ ಡಾ। ಪಿ. ವಿ. ಶರ್ಮರು ಮೇಲಣ ಸಂಘದ ಕುರಿತು ಬರೆದ ಲೇಖನದ ಸಾರಾಂಶವೇನೆಂದರೆ ಮುಕ್ಕಾಲು ಪಾಲು ಮಲೆನಾಡಿನಿಂದ ಮುಚ್ಚಿರುವ ಈ ತಾಲೂಕಿನಲ್ಲಿ ಬಹು ಸಂಖ್ಯಾತ ರೈತರು ತಮ್ಮ ಅನುದಿನದ ಬಾಳ್ವೆಗಾಗಿ ಶತಮಾನಗಳಿಂದ ಕಾಡು ಮೃಗಗಳೊಡನೆ ಹೋರಾಡಿದ್ದಾರೆ. ಮಲೇರಿಯಾ ಜ್ವರವನ್ನು ಎದುರಿಸಿ ಸತ್ತು ಸಾಯದೆ ಬದುಕಿದ್ದಾರೆ. ದೂರದ ಕೊಡಗಿಗೆ ಓಡಿ ದುಡಿದು ತಂದು ತಮ್ಮ ಮಕ್ಕಳು ಮರಿಗಳನ್ನು ಬದುಕಿಸಿದ್ದಾರೆ. ಜಿಲ್ಲೆಯಲ್ಲೇ ಹಿಂದುಳಿದ ಈ ತಾಲೂಕಿನ ರೈತ ಬಳಗ ಈಗ ಜಿಲ್ಲೆಗೇ ಮಾದರಿಯಾಗುವ ರೀತಿಯಲ್ಲಿ ಸಂಘಟನೆಯಾಗುತ್ತಿರುವುದು ಈ ತಾಲೂಕಿನ ಭವಿಷ್ಯದ ಶುಭ ಸೂಚನೆಯಾಗಿದೆ.

'ಭೂಮಿಯು ಎಲ್ಲಾ ಸಕ್ಕ ಗೋಪಾಲನಿಗೆ ಸೇರಿದ್ದಾಗಿರುತ್ತದೆ. ಇದರಲ್ಲಾದ ಬದಲಾವಣೆಗಳೆಲ್ಲ ಮನುಷ್ಯ ಕೃತ್ರಿಮಗಳು. ಇವನ್ನು ಮನುಷ್ಯನೇ ಅಹಿಂಸಾತ್ಮಕವಾದ ರೀತಿಯಿಂದ ಪುನರ್‌ರಚನೆಗೊಳಿಸಲು ಶಕ್ತನಾಗಿದ್ದಾನೆ. ಇದು ನಮ್ಮ ಹಿರಿಯರಿಂದ ನಮಗೆ ಸಂಪ್ರದಾಯವಾಗಿ ಬಂದ ಸಂದೇಶ. ಗೋಪಾಲನೆಂದರೆ ಕುರುಬ ಹಾಗೂ ಒಡೆಯ. ಮತ್ತೊಂದು ದೃಷ್ಟಿಯಿಂದ ನೋಡಿದರೆ ಗೋಪಾಲನೆಂದರೆ ದೇವರು. ದೇವರೆಂದರೆ ನಮ್ಮ ನವೀನ ಯುಗದಲ್ಲಿ ಜನತೆ. ಆದುದರಿಂದ ಭೂಮಿಯ ಮೇಲೆ ಪ್ರತಿಯೊಬ್ಬ ಮಾನವನಿಗೂ ಹಕ್ಕಿರುತ್ತದೆ. ಆದರೆ ಯಾವಾತನು ಭೂಮಿಯಲ್ಲಿ ಕಷ್ಟಪಟ್ಟು ದುಡಿಯುತ್ತಾನೋ ಅಷ್ಟರ ತನಕ ಆ ಭೂಮಿಯು ಅವನದೇ ಆಗಿರುತ್ತದೆ. ಈ ಪುರಾತನ ಸತ್ಯವನ್ನು ಮಾತ್ರ ನಮ್ಮ ದೇಶದಲ್ಲಿ ದುಡಿಯುವ ಬಡ ರೈತನಿಗೆ ಅರಿಯದಂತೆ ಗುಪ್ತವಾಗಿರಿಸಲ್ಪಟ್ಟಿದೆ.'' ಇಂದಿಗೆ ಹದಿನೈದು ವರ್ಷಗಳ ಹಿಂದಿನ ಮಾತುಗಳು, 'ಹರಿಜನ' ಪತ್ರಿಕೆಯ 2-1-1937ರ ಸಂಚಿಕೆಯಲ್ಲಿ ಮಹಾತ್ಮಾಜೀಯವರ ಮುತ್ತಿನಂತಹ ಈ ಮಾತುಗಳನ್ನು ಕಾಣಬಹುದು. ರಾಷ್ಟ್ರಪಿತನ ಈ ಮಾತುಗಳ ತಿರುಳಿನ ತಳಹದಿಯ ಮೇಲೆ ತಲೆ ಎತ್ತಿ ನಿಂತಿದೆ.

ಪುತ್ತೂರು ತಾಲೂಕು ರೈತ ಸಂಘ ತಾ 27-2-1952ರಲ್ಲಿ ಸಂಜೆ ೩ ತಾಸಿಗೆ ವಿಟ್ಲದಲ್ಲಿ ಪುತ್ತೂರು ತಾಲೂಕು ರೈತ ಸೇವಾ ಸಂಘ ಜನ್ಮತಾಳಿತು. ನೆರೆದ ಇನ್ನೂರು ಮಂದಿ ರೈತರು ಸಂಘದ ಅಭ್ಯುದಯಕ್ಕಾಗಿ ಎಡೆಬಿಡದೆ ದುಡಿಯುವೆವು ಎಂದು ಎದೆಮುಟ್ಟಿ ಪ್ರತಿಜ್ಞೆ ಮಾಡಿದರು. ಹೊಸ ಸ್ಫೂರ್ತಿ, ಹೊಸ ಆಶೆ, ಚೇತನಗಳೊಂದಿಗೆ ಮನೆಗೆ ಮರಳಿದರು. ಅಂದು ಪುತ್ತೂರು ತಾಲೂಕಿನ ರೈತ ಜೀವನದ ಇತಿಹಾಸದಲ್ಲಿ ಒಂದು ಹೊಸ ಅಂಕವು ಪ್ರಾರಂಭವಾಯಿತು. ಈಗಲೇ ಆರು ಸಾವಿರಕ್ಕೆ ಮಿಕ್ಕಿ ಸದಸ್ಯರು ಸೇರಿಕೊಂಡಿದ್ದಾರೆ. ಸುಮಾರು ನೂರು ಮಂದಿ ನಿಸ್ವಾರ್ಥಪ್ರವೃತ್ತಿಯಿಂದ ಕೆಲಸ ಮಾಡುತ್ತಿದ್ದಾರೆ. ಪ್ರಕೃತ ಪುತ್ತೂರು ತಾಲೂಕು ಅಲ್ಲದೆ ಮಂಗಳೂರು ತಾಲೂಕಿನ ಪಾಣೆಮಂಗಳೂರು, ಬಂಟ್ವಾಳ ಫಿರ್ಕಾಗಳನ್ನೂ, ಕಾಸರಗೋಡು ತಾಲೂಕಿನ ಕುಂಬಳೆ ಫಿರ್ಕವನ್ನೂ, ಕಾರ್ಕಳ ತಾಲೂಕಿನ ವೇಣೂರು ಫಿರ್ಕವನ್ನೂ, ಸಂಘವು ತನ್ನ ಕಾರ್ಯಕ್ಷೇತ್ರದೊಳಗೆ ಸೇರಿಸಿಕೊಂಡಿದೆ. ಸುಮಾರು ಹದಿನೈದು ಕೇಂದ್ರಗಳಲ್ಲಿ ಸಂಘದ ಶಾಖೆಗಳು ಈಗಾಗಲೇ ಬಲಗೊಂಡಿವೆ. ಕೊಟ್ಟ ಗೇಣಿಗೆ ರಶೀದಿಕೊಡದೆ ಪುನಃ ಕೈವಶ ಮಾಡುವುದು, ಬಿಟ್ಟೀ ಕೆಲಸಕ್ಕೆ ಬಾರದಿದ್ದುದಕ್ಕೆ ಒಕ್ಕಲೆಬ್ಬಿಸುವುದು, ಗೇಣಿ ಚೀಟಿಗೆಂದು ಹೆಬ್ಬೆಟ್ಟು ತೆಗೆದು ನೋಟು ಬರೆಸಿಕೊಳ್ಳುವುದು, ಮೂಲಗೇಣಿ ಮಾಯದೆ ಗೇಣಿಗಳನ್ನು ಪ್ರತಿಫಲ ಕೊಡದೆ ಬಲಾತ್ಕಾರದಿಂದ ಬರೆಸಿಕೊಳ್ಳುವುದು ಇತ್ಯಾದಿ ನಾನಾ ರೀತಿಯ ದೂರುಗಳು ದಿನೇ ದಿನೇ ಬರುತ್ತವೆ. ಇವಲ್ಲದೆ ಮನೆಗೆ ಬೆಂಕಿ ಬಿದ್ದು ಸರ್ವನಾಶವಾದ ರೈತನ ಗೋಳು. ಉಡಲು ವಸ್ತ್ರವಿಲ್ಲದೆ ಬಾಳೇ ಭಾರವಾದಂತೆ ತೋರುವ ತಂಗಿಯರ ಹೃದಯ ಕರಗುವ ದೃಶ್ಯ, ಮದ್ದಿಲ್ಲದೆ, ಕೈಯಲ್ಲಿ ಕಾಸಿಲ್ಲದೆ ಕ್ಷೀಣವಾದ ಶರೀರ ಕರಗುವಂತೆ ಮಾಡುವ ಮರಿಮಕ್ಕಳ ಕೂಗು-ತಾಯಿಯ ಕೂಗು-ಸಂಘದ ಆಫೀಸಿಗೆ ಬರುವ ಮೊರೆ.

ಪ್ರಕೃತ ಸಂಘದ ಮುಂದಿರುವ ಮಹತ್ತ್ವದ ಪ್ರಶ್ನೆ ಎಂದರೆ ಮೂಲಗೇಣಿ ಒಕ್ಕಲುಗಳದ್ದಾಗಿರುತ್ತದೆ. ಒಡೆಯರೋ ಒಕ್ಕಲೋ ಹಿತ ಮಸೂದೆಯು ಬರುವಂತೆ ಸಂಘವು ಪ್ರಯತ್ನ ಮಾಡುತ್ತಿದೆ. ಒಂದು ವೇಳೆ ಕೂಡಲೇ ಈ ಮಸೂದೆಯನ್ನು ತರಲು ಸರಕಾರಕ್ಕೆ ಪ್ರಕೃತ ಅಸಾಧ್ಯವಾಗಿದ್ದರೆ, ತಂಜಾವೂರು ಜಿಲ್ಲೆಗೆ ತಂದಂತಹ (Ordinence) 'ವಿಶೇಷ ಮಸೂದೆ'ಯನ್ನಾದರೂ, ಕೆಲವು ತಿದ್ದುಪಡಿಯೊಂದಿಗೆ, ಕಡಗೆ ಪುತ್ತೂರು ತಾಲೂಕಿಗಾದರೂ ಸರಕಾರವು ಒಡನೆ ತರಬೇಕೆಂಬುದು ಸಂಘದ ಕನಿಷ್ಠ ಕೇಳಿಕೆ. ಈ ವಿಚಾರದಲ್ಲಿ ಸಂಘವು ಒಂದು ಶಿಷ್ಟಮಂಡಳಿಯನ್ನು ಒಡನೆಯೇ ಮದ್ರಾಸಿಗೆ ಕಳುಹಿಸುವ ತಯಾರಿಯಲ್ಲಿದೆ. ಇವಲ್ಲದೆ ಬಡ ಕೃಷಿ ಮಜೂರಿಗೆ ಸರಕಾರವು ಕೂಡಲೇ [illegible] ಬಂಜರುಸ್ಥಳಗಳು, ಕೊಡುವಂತೆ ಸಂಘವು ಪ್ರಯತ್ನಿಸುತ್ತಿದೆ. ಈ ತಾಲೂಕಿನ ಮೂರ್ತೆದಾರರ ಸಮಸ್ಯೆ ಇನ್ನೊಂದು ವಿಚಾರ. ಇದರ ಕುರಿತು ಕೂಡಲೇ ಒಂದು ನಿರ್ಣಯವನ್ನು ಸಂಘವು ಸರಕಾರದ ಮುಂದಿಡುವುದು. ಪುತ್ತೂರು ತಾಲೂಕಿನ [illegible] ಜಿಲ್ಲೆಯ [illegible] ರೈತ ಹಿತೈಷಿಯೂ ಸಂಘಕ್ಕೆ ಸಾಧ್ಯವಾದಷ್ಟು ಬೆಂಬಲ ನೀಡಬೇಕೆಂಬುದೇ [illegible]- ಅಂತೆಯೇ 'ರೈತ ರಾಜ್ಯ ಉದಯವಾಗಲಿ'

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿಶ್ಚೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಐಶ್ವರ್ಯಶಾಲಿಗಳಿಗೂ ಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ। ಯಂ ಸಿ. ಶಾಸ್ತ್ರೀ, ಯಲ್. ಐ ಎಂ
ಕೊಡಿಯಾಲಬೈಲ ಪೋಸ್ಟ್, (ಮಂಗಳೂರು)
ಸ್ವಾಧಿಕಸ್ತರು:— ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು

DO YOU KNOW?
THAT
THE VIJAYA BANK, LIMITED.
1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs. 10 lacks
3. Has granted an average dividend of 6% to the Shareholders for the past 20 years.
4. Has a net work of Branches in South Kanara and one each in Mercara and Fort, Bombay.
5. Offers attractive rates of interest on Deposits and Cash Certificates
6. Grants loans on easy terms to approved parties or on approved securities
7. Does afford full protection and rich return to all your monies.
ADOPT IT AS
"MY BANK"
THE VIJAYA BANK, LIMITED,
H. O., MANGALORE.

ವಾರದ ಒಳಿತು ಕೆಡುಕುಗಳು

ತಾ. 25—9—52ರಿಂದ ತಾ. 1—10—52ರ ವರೆಗೆ

ಮೇಷ—ದೈವ ಬಲದಲ್ಲಿ ಸ್ವಲ್ಪ ಕೊರತೆ ಕಂಡರೂ ನಿಮ್ಮ ಪೌರುಷವಿಂದ ಅದ್ವಿತೀಯವಾಗಿದೆ. ಎಷ್ಟೇ ಕಷ್ಟ ನಷ್ಟಗಳೊದಗಲಿ ಹಿಡಿದ ಕಾರ್ಯವನ್ನು ಬಿಡದೆ ಕಡೆಹಾಯಿಸುವ ಹಟವಾದಿಗಳಾದ ನಿಮ್ಮ ಪ್ರಯತ್ನವೆಂದೂ ವಿಫಲವಾಗದು. ಚರ್ಮರೋಗಗಳು ಅಲ್ಪ ಸ್ವಲ್ಪ ಕಾಣಿಸಲಿವೆ. ವ್ಯರ್ಥ ಖರ್ಚುಗಳು ಹೆಚ್ಚುವವು. ವಾರಾಂತ್ಯದ 4 ದಿನಗಳಲ್ಲಿ ಕಾರ್ಯ ವಿಜಯ ಮಿತ್ರ ಸಮಾಗಮ ಲಾಭಗಳಿವೆ.

ವೃಷಭ—ಕೃಷ್ಣಪಕ್ಷದ ಚಂದ್ರನಂತೆ ದಿನದಿಂದ ದಿನಕ್ಕೆ ನಿಮ್ಮ ಅದೃಷ್ಟವು ಹ್ರಾಸವಾಗುತ್ತ ಬರುತ್ತಿದೆ. ಯಾವ ಕಾರ್ಯಕ್ಕೆ ಕೈ ಹಚ್ಚಿದರೂ ನಷ್ಟ ಕಷ್ಟಗಳೇ ಅಧಿಕವಾದಾವು. ಆಪ್ತೇಷ್ಟರ ವಿರಹ ಶತ್ರು ಜನರ ಉಪಟಳ ಆರ್ಥಿಕ ಬಿಕ್ಕಟ್ಟು ದೇಹಾಲಸ್ಯ ಇತ್ಯಾದಿ ಅನಿಷ್ಟ ಫಲಗಳಿಂದಾವೃತರಾದ ನಿಮಗೆ ತಾ 25, 30, 1, ಈ 3 ದಿನಗಳಲ್ಲಿ ಸ್ವಲ್ಪ ಸುಖ ಲಾಭಗಳು ಕಾಣಿಸುವವು

ಮಿಥುನ—ಎಂತಹ ವಿಘ್ನಗಳೇ ಬಂದರೂ ನೀವು ಹಿಡಿದ ಕಾರ್ಯವನ್ನು ಕೊನೆಗಾಣಿಸದೆ ಬಿಡಲೊಲ್ಲಿರಿ. ರಾಜಕೀಯ ಸಾಮಾಜಿಕ ಕ್ಷೇತ್ರಗಳಲ್ಲಿ ನಿಮ್ಮ ಅಭೀಷ್ಟದಂತೆ ಕಾರ್ಯಗಳು ಜರಗಲಿವೆ. ನಿಮ್ಮ ಔದಾರ್ಯ ಧೈರ್ಯಗಳನ್ನು ಕಂಡು ಶತ್ರುಜನರೂ ನಿಮ್ಮ ಮೈತ್ರಿಯನ್ನಪೇಕ್ಷಿಸುವರು. ಗಾಳಿಗಿಡಲಾಗಿಟ್ಟ ದೀಪದಂತೆ ಚಂಚಲವಾಗಿರತಕ್ಕ ನಿಮ್ಮ ಮನಸ್ಸನ್ನು ಬಿಗಿ ಹಿಡಿಯಿರಿ, ವಾರಾದಿಯ 3 ದಿನಗಳಲ್ಲಿ ಭೋಗ ಲಾಭ ವಿಜಯಗಳುಂಟಾಗುವವು.

ಕರ್ಕಟ—ಗೃಹತಾಪತ್ರಯಗಳು ಮುಂಚಿಗಿಂತ ಅಧಿಕವಾಗಲಿವೆ. ವಿನಾಕಾರಣ ಜಗಳ ಕಲಹಕ ನಿಮಿತ್ತ ಜನತೆಯೊಡನೆ ಮನಸ್ತಾಪವು ಉಂಟಾಗುವದು. ಪ್ರಯಾಸಾಧ್ಯವಾದ ಕಾರ್ಯಗಳನ್ನು ಅಲ್ಪಯತ್ನದಿಂದ ಸಾಧಿಸಲಿರುವಿರಿ. ನೌಕರಿ ಜನರಿಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ, ಉದ್ಯೋಗದಲ್ಲಿ ಅಡ್ಡಿ ಆತಂಕಗಳು ಹೆಚ್ಚಲಿವೆ. ತಾ 26, 27, 28, 29 ಈ ದಿನಗಳಲ್ಲಿ ನಿಮ್ಮ ಬಯಕೆಯು ಸಿದ್ಧಿಸಲಿದೆ.

ಸಿಂಹ—ವ್ಯವಹಾರದಲ್ಲಿ ಬಹಳ ಜಾಗರೂಕರಾಗಿರಿ ನಿಮ್ಮನ್ನು ಮೋಸದ ಬಲೆಯಲ್ಲಿ ಕೆಡಹಲಿರುವರು. ವಿರೋಧಿ ವರ್ಗದವರು ಹೇಳದೆ ಮಾಡಿದ ತಪ್ಪಿಗೆ ನೀವು ತಲೆಯೊಡ್ಡಬೇಕಾಗುವದು. ಖರ್ಚಿಗೆ ತಕ್ಕಷ್ಟು ಧನಾಗಮವಿರುವುದರಿಂದ ದಿನಗಳೆವುದು ಕಷ್ಟಸಾಧ್ಯವಾಗಲಾರದು. ಉದ್ಯಮಗಳಲ್ಲಿ ಹೆಚ್ಚಿನ ಫಲಲಾಭವಿದೆ ವಾರಾಂತ್ಯದ 4 ದಿನಗಳಲ್ಲಿ ಪ್ರತಿಯೊಂದು ಭಾಗದಲ್ಲೂ ಪ್ರಗತಿ ತೋರುವುದು.

ಕನ್ಯಾ— ಜನ್ಮದಲ್ಲಿ ರವಿಕುಜರೂ ಅಷ್ಟಮದಲ್ಲಿ ಬೃಹಸ್ಪತಿಯೂ ಇರುವ ಕಾರಣ ನಿಮಗೀಕಾಲದಲ್ಲಿ ಇಲ್ಲಸಲ್ಲದ ವ್ಯರ್ಥ ಖರ್ಚುಗಳು ಪರ್ಯಟನ ರೋಗಭಯ ಜನತೆಯ ವಿರೋಧ ಇವೆಲ್ಲವೂ ಹೆಚ್ಚಲಿವೆ. ಆದರೆ ಇದ್ದುದರಲ್ಲಿ ಕೃಷಿಯೋದ್ಯಮದವರೆ ಪೌರುಷಶಾಲಿಗಳಾದ ನೀವು ಯಾರ ಬೆದರಿಕೆಗೂ ಸೊಪ್ಪು ಹಾಕುವವರಲ್ಲ ಹಿಡಿದ ಕಾರ್ಯವನ್ನೆಂದೂ ಬಿಡಲಾರಿರಿ. ತಾ. 25, 30, 1, ಈ ದಿನಗಳು ಉಳಿದ ದಿನಗಳಿಗಿಂತ ಉತ್ತಮ.

ತುಲಾ— ನಿಮ್ಮ ಸ್ವಂತ ಭೋಗಕ್ಕೆ ಯಾವ ತರದ ತೊಂದರೆಯೂ ಕಾಣಿಸದೀವಾರದಲ್ಲಿ. ನಿಮ್ಮ ಮಾತಿಗೆ ಮರುಳಾದ ಜನತೆಯು ಸಕಲ ವಿಧದಲ್ಲೂ ನಿಮಗೆ ನೆರವಾಗಲಿದೆ. ರಾಜಕೀಯದಲ್ಲಿ ಸ್ವಲ್ಪ ಅಡ್ಡಿಗಳು ಕಂಡು ಬರಬಹುದು. ಮಾತ್ರವಲ್ಲ ಅಧಿಕಾರಿ ವರ್ಗದ ಭಯಕ್ಕೂ ಅವಕಾಶವಿದೆ. ತಾ 26 27 ಈ ದಿನಗಳಲ್ಲಿ ನಿಮ್ಮ ಸಂಕಲ್ಪವು ಸಿದ್ಧಿಸುವದು.

ವೃಶ್ಚಿಕ— ವಾಹನಾದಿಗಳಲ್ಲಿನ ಪ್ರಯಾಣಗಳಲ್ಲಿ ಸ್ವಲ್ಪ ಅನಿಷ್ಟ ಸಂಭವಿಸುವ ಯೋಗವಿದೆ. ಜಾಗ್ರತೆಯಾಗಿರಿ, ಮನೋರೋಗವು ಕೊಂಚ ಬಲಿತೀತು. ನಿಮ್ಮ ಪರಿಶ್ರಮಕ್ಕಿಂತ ಹೆಚ್ಚಿನ ಲಾಭವು ಕಾಣಿಸುವದು. ಬಾಲ್ಯಸ್ನೇಹಿತರ ಸಹಕಾರವು ಉತ್ತಮವಿರುವುದು. ಹಿಂದಿನ ಋಣಬಾಧೆಗಳಿಂದ ಇಂದು ಮುಕ್ತರಾಗುವಿರಿ. ತಾ. 25, 28, 29, ಈ ದಿನಗಳಲ್ಲಿ ಮೃಷ್ಟಾನ್ನ ಭೋಜನ ಭೋಗ ಲಾಭಗಳು ಚೆನ್ನಾಗಿವೆ.

ಧನು— ಗ್ರಹಾನುಕೂಲ್ಯದಿಂ
ಡಿದ ನಿಮಗೆ ಇಂದಿನ ದಿನಗಳು ಸು
ಗಳಾಗಲಿವೆ. ದೇಹಸುಖ ಹತಿಯ ಪುಣ
ಗ್ರಹಕ್ಕೆ ಪಾತ್ರರಾದ ನಿಮಗೆ ಈ ಸುಕ
ಥೆ ಕಾಣಿಸದು. ಉದ್ಯೋಗವು ನಿರಾತ
ಗಿ ಸಾಗಲಿದೆ. ಆಕಸ್ಮಿಕ ಖರ್ಚುಗಳು
ಸ್ತವಾಗುವ ಸಂಭವವಿದೆ. ನೌಕರಿಜ
ವಿದ್ಯೋದಯ ವಿವಗ ಕನ್ಯಾ ವ್ಯಾಪಾರಿಗ
ತಾ. 26, 27, 30 1 ಈ ದಿನಗಳು
ತ್ತಮವಿವೆ.

ಮಕರ— ಶ್ರಮಪಟ್ಟು ದು
ಆದರೆ ದುಡಿಮೆಯ ಮುಂತ್ತುಡಿ ಬ
ಳು ನಿಮ್ಮನ್ನು ಆವರಿಸಿವೆ ಆತ ವಿವ
ಖರ್ಚಿನ ಸಲುವಾಗಿ ಹಿಂವರನ್ನಾಶ್ರ
ಗಿ ಬರುವದು. ಜನತೆಯ ಅಪವಾದಕ್ಕೆ
ಕುವ ಸಂಭವವಿದೆ. ವಿಶೇಷತಃ ಮಾತಿ
ತಿಗೆ ಕಲಹ ಬೆಳೆಯಲಿದೆ. ತಾ. 25, 2
ಈ ದಿನಗಳಲ್ಲಿ ಸ್ವಲ್ಪಸುಖ ಕಾಣಿಸಬ

ಕುಂಭ— ಹಿಡಿದ ಕಾರ್ಯಗ
ಧ್ಯದಲ್ಲಿ ನಿಲ್ಲಲಿವೆ. ಪತ್ನೀ ಪುತ್ರರ ವಿ
ದುಃಖಕ್ಕೊಳಗಾಗುವಿರಿ, ಉಷ್ಣಪಾ
ಆರೋಗ್ಯಕ್ಕೂ ಹಾನಿತಗಲಲಿದೆ. ಎ
ಯತ್ನಪಟ್ಟು ದುಡಿದರೂ ದಿನದಖರ್ಚ
ಸಾಧಿಸಲಾಗದು ವಿಶೇಷತಃ ಕರ ಮ
ರು ಪ್ರತೀಕಾರಕತ್ತರಾಗಿರುವರು.
ರಿಕ ತಾಪತ್ರಯಗಳೂ ಪೀಡಿಸಲಿವೆ ತ
29, ಹೊರತು ಮಿಕ್ಕ ದಿನಗಳು ಹೆಚ್ಚ
ನಿಷ್ಟಗಳನ್ನುಂಟು ಮಾಡಲಾರವು.

ಮೀನ— ಪಿತ್ಥ ವಾತ ಪ್ರ
ದಿಂದಾಗಿ ನಿಮ್ಮ ಆರೋಗ್ಯ ಕೆಡುವ
ವಿದೆ, ದೇಹದಲ್ಲಿ ಸಾಕಷ್ಟು ಶಕ್ತಿ ಉತ
ಳೂ ಇರಲಾರವು. ಇದಕಾರಣದಿಂದ
ಡಿದ ಕಾರ್ಯವನ್ನು ಬೇಕೋ ಬೇ
ಎಂಬಂತೆರದಲ್ಲಿ ಮುಂದರಿಸುವಿರಿ. ಈ
ದಲ್ಲಿ ಆರ್ಥಿಕ ಬಿಕ್ಕಟ್ಟು ಕಾಣಿಸದು.
ರೀಕ್ಷಿಕ ಪ್ರವಾಸದ ಯೋಗವಿದೆ. ತಾ,
ದ 26ರ ವರೆಗಿನ ದಿನಗಳಲ್ಲಿ ನಿಮ್ಮ ಸ
ವು ಸಿದ್ಧಿಸಲಿವೆ.

ಸ್ತ್ರೀ ಪುರುಷ ಶಿಶುಗಳು ರೋಗದಿಂದ ನರಳಬೇಕಾಗಿಲ್ಲ!
ಲಕ್ಷಾಂತರ ಜನರು ಗುಣಹೊಂದಿದ್ದಾರೆ!

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರಸ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.
೪೪ ದಿನದ ಲೇಹ್ಯ ರೂ ೫/೪, ೨೨ ದಿನದ ಲೇಹ್ಯ ರೂ ೩/೪
(ಪೋಸ್ಟೇಜು ಮಾಫ)

ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಅಂತರಂಗದ ಪ್ರಕಟಣೆಗಳು

ಬಿಂದಾವಳಿ	ಎಂ. ವಿ. ಹೆಗ್ಡೆ	೦	೩
ಆ ಸುದ್ದಿ	,,	೦	೪
ಹೃದಯಾಂಬಾನ ವಿಜಯ	,,	೦	೪
ಸೆರೆಯಾಳು	ಬಿಂದು ಮಾಧವ	೦	೬
ಗಾಡೆಯ ಗಾಂಧಿ	ಎಂ ವಿ. ಹೆಗ್ಡೆ	೦	೩
ಶಾಂತಿಯ ಮಡಿಲಲ್ಲಿ	ಪ. ಸು. ಭಟ್ಟ	೦	೩
ಬಲಿಪೀಠದಲ್ಲಿ	ಆರ್. ಕಲ್ಯಾಣಮ್ಮ	೦	೮
ಅಗಲಿದ ಅಕ್ಕ ಸರೋಜಿನಿ	ಹೆಗ್ಡೆ	೦	೩
ನನ್ನ ಸಂಗಾತಿ	ಎಂ. ನಾ. ಹೆಗ್ಡೆ	೦	೩
ಪುಣ್ಯಫಲ	ಗಿರಿಬಾಲೆ	೦	೪
ಸುಖದ ದಾರಿ	ದೇವದಾಸ	೦	೩
ಸುಕಾಂತ	ಪತ್ತಿಲಮಾನಿ	೦	೨
ಪಂಚಮುಖಿ	ಶ್ರೀಧರ	೦	೫
ಜಾತಿ ಭೂತಕ್ಕೆ ಬಲಿ	ದೇವಕಿ	೦	೩
ಜನಸೇವೆಯ ಸೋಗಿನಲ್ಲಿ	ಕೆ. ಬಿ. ಶೆಟ್ಟಿ	೦	೩
ನಾಕಂಡ ಅವಳು	ವೇ. ಅಡಿಗ	೦	೩
ತ್ರಿವೇಣಿ	ಅಯ್ಯೊ	೦	೩
ನಿಲುವಂಗಿ	ಸುಬ್ಬರಾಮಯ್ಯ	೦	೪
ಬಾಡಿಗೆ ಮನೆ	ಹುಯಿಲಗೋಳ	೦	೩
ವರ್ತಮಾನಕಾಲದ ನಾಲ್ವರು ಮಹಾನುಭಾವರು	ಕು. ಶಿ.	೦	೪
ದೇವರ ನಾಮ ಮತ್ತು ಸಾಧನೆ	ಬಾಪು	೦	೩
ಎರಡು ಕಥೆಗಳು	ಸಂಕಲನ	೦	೪
ಸರಸ ವಿರಸ	ಅ. ಗೌ. ಕಿನ್ನಿಗೋಳಿ	೦	೩
ಹೃದಯೇಶ್ವರಿ	ಪ್ರೇಮಚಂದ್ರ	೦	೪
ವಿವಿಧ ವಿಷಯ ಕೋಶ ಭಾ. ೧, ೨		೦	೬
ನುಡಿಮುತ್ತುಗಳು ಭಾ. ೧, ೨, ೩		೦	೧೨
ಕಲಿಯಿಲ್ಲದ ಹೆಣ್ಣು	ವೆಂಕೋಬಾಚಾರ್ಯ	೨	೦
ತವರುಮನೆಯಿಂದ	ಶಾರದಾ ದೇವಿ	೦	೪
ಭಾಗ್ಯಲಕ್ಷ್ಮಿ	ಲಕ್ಷ್ಮಣ ರಾವು	೧	೪
ಯುಗವಾಣಿ	ಕು. ಶಿ	೦	೮
ಸ್ತ್ರೀ ಹೃದಯ	ಪಾ. ವಸಂತಿಬಾಯಿ	೦	೪
ದ್ವೇಷ	ಶ್ರೀ ಮೂರ್ತಿ	೦	೩
2 ಏಕಾಂಕ ನಾಟಕಗಳು	ವೆಂಕಟರಾಜ	೦	೪
ಪ್ರಜಾಪ್ರಭುತ್ವವನ್ನು ಕುರಿತು	ಕಾರಂತ	೦	೮
ಕಲಾವಿದನ ದಿನಚರಿ	ಎಸ್ಕೆಲ್	೦	೩
ಆಧುನಿಕ ಭಾರತ	ಯೂಸುಫ್	೦	೪
ಕಾವೇರಿ ಬಡವಾಗಿದೆ	ಕು. ಶಿ.	೦	೪
ಭಾರತದ ಸಾಹಿತ್ಯ ಕಲೆಗಳು	ವಿ. ಶ್ರೀ.	೦	೪
ಸ್ತ್ರೀ ಸ್ವಾತಂತ್ರ್ಯ ಬೇಕೆ	ಬಾಪಟ್	೦	೪
ಹಂಬಲ	ಕೆ. ಕೃ. ಮೂರ್ತಿ	೦	೪
ಭಾರತ ಚಿತ್ರದ ಅಂಚೆ ಚೀಟುಗಳು		೦	೩
ತ್ರಿಶೂಲ	ವಸುದೇವ ಭೂಪಾಲಂ	೦	೫
ಪುಸ್ತಕ ಪ್ರಪಂಚ	ಕು ಶಿ	೧	೪
ಹಳ್ಳಿಯಲ್ಲಿ ನಡೆದ ನಾಟಕ	ದೇವದಾಸ	೦	೩
ನೆರೆಯ ಗಾಂಧಾರ	ಸು. ಕೃ. ಹೆಗ್ಡೆ	೦	೩
ಮಾತಿನ ಯುಗದ ಮಹಾಪ್ರಭಾವ		೦	೩
ವಿಜ್ಞಾನದ ಬೆಳವಣಿಗೆ	ಚಂ. ಶೆಟ್ಟಿ	೦	೪
ಡಾ। ಹರ್ಡೀಕರ್	ನಾ. ರಾ. ದೇಶಾಯಿ	೦	೮
ತೆಂಗಿನ ತವರು	ಯು. ನಾ. ಭಟ್ಟ	೦	೬
ಪ್ರಾಯಶ್ಚಿತ್ತ	ಎಮ್. ಗೋ. ರಾವು	೦	೩
ಪ್ರಭಾ	ಕು। ಪದ್ಮಾ	೦	೩
ಶವಗಳ ಕಾಗೆಟು	ಸು. ಕೃ. ಹೆಗಡೆ	೦	೧೨
ಸ್ವಪ್ನಲೋಕ	ಕಾರ್ತಿಕೇಯ	೦	೫
ಮಹಾಜೀವಿಗಳು	ಕು. ಶಿ.	೦	೫
ಘಂಟಮಾಲಾ (5 ಭಾಗಗಳು)	ಕು. ಶಿ.	೨	೦
ಮಹಾಪೇಟೆ	ಡಾ। ಯು. ಕೃಷ್ಣ	೦	೫
ಭಾರತದ ರಾಷ್ಟ್ರಗೀತೆ	ಚಂ. ಶೆಟ್ಟಿ	೦	೩
ನಮ್ಮ ಬಹು ದೊಡ್ಡ ಶತ್ರು	ಕೆ. ಶಿ. ಶೆಟ್ಟಿ	೦	೪
ಕೈಲಾಸ	ಚಂದ್ರರಾಜ ಶೆಟ್ಟಿ	೦	೩
ಬಾತಿ	ಸಂಗ್ರಹ	೦	೪
ಕತ್ತುಕೊಯ್ದವರಾರು?	ರಾ. ಮೂರ್ತಿ	೦	೬
ಸಮಾಜದ ಅಗ್ನಿಕುಂಡ	ವಸಂತಿಬಾಯಿ	೦	೪
ಬೆಳ್ಳಿಹಬ್ಬ		೦	೪
ಉಷಾ	ಕು. ಪದ್ಮಾ	೦	೪
ವಿಧಿ ಲೀಲೆ	ಮೈಲಾರಪ್ಪ	೦	೪
ಪರಮಾಣು ಪ್ರಪಂಚ	ಉಡುಪ	೦	೪
ನೀತಿ ವಿನೋದ ಕಥೆಗಳು	ವೀ. ಯು. ಗಟ್ಟಿ	೦	೧೨
ಸಾಹಸ ಭೀಮ ವಿಜಯ	ವೆಂ. ಶೆಟ್ಟಿ	೦	೮
ಭಾರತದ ಗುರುಕುಲ	,,	೦	೬
ಲತ್ತಪಗಡೆ	,,	೦	೬
ಸೇನಾಪತಿ	ಸುಬ್ರಹ್ಮಣ್ಯ	೦	೮
ಭರತೇಶ ದಿಗ್ವಿಜಯ	ವೆಂಕಪ್ಪ ಶೆಟ್ಟಿ	೦	೮
ಮನೋಪದೇಶ	ಬಾಪಟ	೦	೮
ಜೀವನ ಕಲೆ	ಗ. ನಾ. ಪಂಡಿತ	೦	೧೦
ಪ್ರತಿಜ್ಞಾಪೂರ್ತಿ	ಸು ಕೃ ಹೆಗಡೆ	೦	೧೨
ಮಿತ ಸಂತತಿ		೦	೬
ಗುಪ್ತರೋಗ ನಿವಾರಣೆ		೦	೯
ಸೌಂದರ್ಯ	ರಾಜತಂತ್ರಿ	೦	೫
ಸಂಘಾ	ಕು. ಪದ್ಮಾ	೦	೮
ವಸಂತ ಕಾಲ	ಉಡುಪ	೦	೬
ನವೀನ ನಾಟಕಗಳು	ಸಂಕಲನ	೦	೭
ಪರ್ಲ್ ಎಸ್. ಬಕ್	ಯು. ನಾ ಭಟ್ಟ	೦	೭

ವಿಕ್ರಯಾಧಿಕಾರಿಗಳು— ನವಭಾರತ ಪುಸ್ತಕಭಂಡಾರ, ಉಡುಪಿ.

ಮುತ್ತುಸ್ರಾವ ನಿಂತಿತು

'ಲುಪುರಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಪದೆಕಟ್ಟು ಮುತ್ತುಸ್ರಾವವಾಗ ವಷ್ಟ, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ ರೂ. 3-; ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ, ೫ [ಡಿ ಟಿ ಜನ್ನೆರಡಾಣೆ ಪ್ರತ್ಯೇಕ]

Mrs D. DEVEE, P 18 ... J.)
Tollygunge CALCUTTA
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ಲಕ್ಷ್ಮೀ
ಸಂತಾಲ್ ಮಾತ್ರೆ

ಇದರ ಉಪಯೋಗದಿಂದ ಒಹ
ಲದ ಮೇಹ, ಪ್ರಮೇಹ, ಮೂ
ಉರಿ, ಮೂತ್ರದ ಕಟ್ಟು, ನಿತ್ರದೇ
ಯೂ ಮುಂದಾಗಿ ದಳವು, ಅರಸಿನ
ವು ಈ ವರ್ಣಗಳಲ್ಲಿ ಕೀವು ಹೋ
ದು, ತೊಡೆ ಸಂದಿನಲ್ಲಿ ಗರಳೆ ಬರುವ
ಕಾಲುಗಂಟೆ ವೇದನೆ, ಕಣ್ಣಿನಲ್ಲಿ
ಬರುವದು, ಶರೀರದಲ್ಲಿ ಉಷ್ಣತೆ, ಸ್ವಪ್ನ
ಧ್ಯಾಯ, ಸ್ತ್ರೀಯರ ಬಿಳಿ ಸೆರಗು ಇವೆ
ಖಾತ್ರಿಯಾಗಿ ಗುಣ ಹೊಂದುವದು
ರದು ಈಗಿನ ಉಷ್ಣಕಾಲದಲ್ಲಿ ಗ
ಕಂಡುಬಂದರೆ ರಾತ್ರಿ ಮಲಗುವಾಗ್ಗೆ
ಮಾತ್ರೆ ಸೇವಿಸಿ ಹಾಲು ಕುಡಿದರೆ
ವಾಗಿ ನಿದ್ರೆಬಂದು ಸುಖವಿರೇಚನವ
ದೇಹದ ಸುಸ್ತು ಹೋಗುವದು,

ಶೀಸೆ 1ಕ್ಕೆ ರೂ. 2–0–0

ಏಜಂಟ್ಸ್:

ಷಾ ಕಂಪೆನಿ, ಮಂಗಳೂರು

CHITRAKOT
ASTHMA-BUT

A very powerful and wo
renowned remedy wh
cures Asthma completely
one dose to be taken
3-10-52 full moon.

Apply at once in Englis

Shree Mahatma Maunibab
AYURVEDIC ASHRA
Chitrakot, Dist. BANDA, U

Edited, Printed & Published By K. H. Shetty at the Navayuga Press, Udipi, S. India.

ನವಯುಗ

NAVAYUGA WEEKLY POST BOX NO. 12 UDIPI



ಮಧುಪರ್ಕ

ಗಾಂಧೀಜಿ ಹೊಸದಿಲ್ಲಿಯಿಂದ ಕಲಕತ್ತೆಗೆ ಪಾಟ್ನಾಮಾರ್ಗವಾಗಿ ಹೊರಟಿದ್ದರು. ಪಾಟ್ನಾದ ರೈಲ್ವೆ ನಿಲ್ದಾಣದಲ್ಲಿ ಬಿಹಾರದ ಮಂತ್ರಿಗಳು ಗಾಂಧೀಜಿಯನ್ನು ಸ್ವಾಗತಿಸಲು ಬಂದಿದ್ದರು.

ಗಾಡಿ ಹೊರಡುವ ಸಮಯವಾಗಿತ್ತು. ಮಂತ್ರಿವರ್ಯರು ಇನ್ನೂ ಗಾಂಧೀಜಿಯೊಡನೆ ಮಾತನಾಡುವುದರಲ್ಲಿ ಮಗ್ನರಾಗಿದ್ದರು. ಆಗ ಸ್ಟೇಶನ ಮಾಸ್ತರರು ಹೆದರಿಕೆಯಿಂದಲೇ ಗಾಂಧೀಜಿ ಕುಳಿತಿದ್ದ ಡಬ್ಬಿಯ ಬಳಿ ಬಂದು ಗಾಡಿ ಹೊರಡುವ ಸಮಯವಾಗಿದೆಯೆಂದೂ, ಗಾಂಧೀ ಇಚ್ಛಿಸಿದರೆ, ಅವರು ಹೇಳುವಷ್ಟು ಸಮಯ ಗಾಡಿಯನ್ನು ನಿಲ್ಲಿಸುವುದಾಗಿಯೂ ಹೇಳಿದರು.

ಒಡನೆಯೇ ಗಾಂಧೀಜಿಯ ಸಂದೇಶ ಬಂತು— "ನಿಮ್ಮ ನಿಜ ಕರ್ತವ್ಯವನ್ನು ಪಾಲಿಸುವ ಬದಲು ನನ್ನ ಅನುಕೂಲತೆ ಅನಾನುಕೂಲತೆಗಳ ಕುರಿತು ವಿಚಾರಿಸುತ್ತೀರಿ. ಇದಕ್ಕೆ ನಿಮ್ಮನ್ನು ದೂರುವುದಿಲ್ಲ. ತಪ್ಪು ನಿಮ್ಮ ಶಿಕ್ಷಣದ್ದಾಗಿದೆ. ನನ್ನ ಅನುಕೂಲತೆ, ಅನಾನುಕೂಲತೆಯ ಬಗ್ಗೆ ನಿಮಗೇನು ಇಷ್ಟು ಕಳವಳ? ಯಾವನಾದರೂ ಬೇರೆ ಪ್ರಯಾಣಿಕನು ಗಾಡಿ ತುಸು ಹೆಚ್ಚು ಹೊತ್ತು ನಿಲ್ಲಬೇಕೆಂದು ಬಯಸುವನೋ ಎಂದು ವಿಚಾರಿಸಲು ನೀವು ಹೋಗುತ್ತೀರಾ? ಇಲ್ಲವಾದರೆ ನೀವು ನನ್ನಲ್ಲಿಗೂ ಬರಬಾರದಿತ್ತು. ಆದುದರಿಂದ ನಿಮ್ಮ ವೇಳಾಪತ್ರಿಕೆಯಂತೆ ನಡೆದುಕೊಂಡು, ಸರಿಯಾದ ವೇಳೆಗೆ ಗಾಡಿ ಹೊರಡುವ ಸೀಟಿಯೂದಿರಿ''

ಪರಮ ಪುರುಷಾರ್ಥ

ಸಾರ್ವಜನಿಕ ಜೀವನದಲ್ಲಿ ಹಂಗು, ದಯೆ ಮತ್ತು ದಾಕ್ಷಿಣ್ಯಗಳು ಬೇಕಾದುದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಸೇರಿಕೊಂಡು ವಾತಾವರಣವನ್ನೇ ಇಂದು ಕೆಡಿಸಿವೆ. ಒಬ್ಬ ದೊಡ್ಡ ಮನುಷ್ಯನು ತನ್ನ ಕೈಸನ್ನೆಯಿಂದ ಸಾವಿರಮಂದಿಯನ್ನು ಕುಣಿಸುವುದು ಸರ್ವಸಾಮಾನ್ಯ ಸಂಗತಿಯಾಗಿದೆ. ಅಧಿಕಾರಮದ, ಸಂಪತ್ತಿನ ಗರ್ವ, ಶಕ್ತಿಸಾಮರ್ಥ್ಯ ಇವೆಲ್ಲ ಮನುಷ್ಯನನ್ನು ಉತ್ಕರ್ಷದ ಬದಲು ಅಧಃಪತನಕ್ಕೆ ಒಯ್ಯುತ್ತಿವೆ. ಸ್ವಾರ್ಥ ಹಾಗೂ ಕೆಲವೇ ಮಂದಿಯ ಹಿತಕ್ಕಾಗಿ ಸಮಷ್ಟಿಯ ಅನ್ಯಾಯವಾಗುತ್ತದೆ. ಇದನ್ನು ಸಹಿಸಬಲ್ಲ [illegible] ಶಕ್ತಿಯನ್ನು ಹುಚ್ಚು ಅಧ್ಯಾತ್ಮವೆಂದು ಹೀನಾಯವಾಗಿ ಕಾಣುತ್ತಾರೆ.

ದೊಡ್ಡವರೆಂದು, ದುಡ್ಡಿದ್ದವರೆಂದು ಜನರು ಹೆದರುವರು: ಹೆದರಿಕೆಯಿಂದ ಬಹಿರಂಗದಲ್ಲಿ ಕೈಮುಗಿದು, ಸೇವಕರೆನ್ನಿಸಿಕೊಳ್ಳುವರು. ಆದರೆ ಬೆನ್ನಲ್ಲಿ ಮನಬಂದಂತೆ ಈ ದೊಡ್ಡವರ ನಿಂದೆಮಾಡುವರು: ಮನಸ್ಸಿನಲ್ಲೊಂದಾದರೆ, ಮಾತಿನಲ್ಲಿ ಇನ್ನೊಂದು. ಈತೆರನಾದ ವಂಚನೆಗೆ ಹೊಣೆಯಾರು?

ಇದು ಕಲಿಕಾಲ–ಸತ್ಯಕ್ಕೆ, ನ್ಯಾಯಕ್ಕೆ, ಧರ್ಮಕ್ಕೆ ಬೆಲೆಯಿಲ್ಲವೆಂದು ಸುಮ್ಮನುಳಿಯುವುದು ಸಾಧ್ಯವಿಲ್ಲ. ಧರ್ಮದ [illegible] ಇನ್ನೂ [illegible] ನಿಂತಿದೆ. ಸತ್ಯ ಸಮಾನತೆಗಳು ಮಾನವೀಯತೆಯ ಸಲ್ಲಕ್ಷಣಗಳೆಂದು ಕೊಂಡಾಡಲ್ಪಡುತ್ತಿವೆ; ಕೃತಿಯಲ್ಲಿ ಮಾತ್ರ ದುರ್ವರ್ತನೆಗಳ ಪ್ರಭಾವ ಕಂಡು ಬರುತ್ತಿದೆ.

ಈ ದ್ವಂದ್ವದ ನಾಶವಾಗಬೇಕೆಂದು ನಾವು ಬಯಸುತ್ತೇವೆ. ಜನರು ಔದಾರ್ಯದಿಂದ ನಡೆಯಬೇಕೆಂದೂ ವಿನಯಶೀಲತೆ, [illegible]ಗಳು ಕೈದೀವಿಗೆಯಾಗಬೇಕೆಂದೂ ಬಯಸುವ ಜನ ಉಪದೇಶ ಮಾಡುತ್ತಾ ಸುಮ್ಮನುಳಿಯಲಾಗದು. ಕಾರ್ಯಕ್ಷೇತ್ರಕ್ಕೆ ಧುಮುಕಬೇಕು.

ನಾವು ಮಹಾಪುರುಷರ ಆದರ್ಶ ಜೀವನವನ್ನು ಅನುಸರಿಸಲು ಹೆಜ್ಜೆ ಹೆಜ್ಜೆಗೂ ಪ್ರಯತ್ನಪಡುವುದು ಶ್ರೇಯಸ್ಕರ. ನಮಗಿಂದು ನೀಡಲಾಗುವ ಶಿಕ್ಷಣ ತಪ್ಪು ಧೋರಣೆಯಿಂದ ಕೂಡಿದೆ. ಅದು ವ್ಯಕ್ತಿಯನ್ನು ಸಮಷ್ಟಿಯೊಂದಿಗೆ ಸಮರಸವಾಗಿ ಬೆರೆಯಲು ಬಿಡದೆ ಸ್ವಾರ್ಥದ ದುರುದ್ದೇಶವನ್ನು ಅಪ್ರತ್ಯಕ್ಷವಾಗಿ ಬೋಧಿಸುತ್ತಿದೆ. ಸಮಾಜ ಸಮೃದ್ಧಿಗಳ ವಿಚಾರ ಬಂದಾಗಲೆಲ್ಲ ವ್ಯಕ್ತಿ ತನ್ನದನ್ನಷ್ಟೆ ಯೋಚಿಸಹತ್ತುವಂತೆ ಅದು ಮಾಡಿದೆ.

ಅಂತರ್ನಿರೀಕ್ಷಣೆಯು ಆತ್ಮಿಕ ವೃದ್ಧಿಗೆ ಅತ್ಯ[illegible] ಕಣ್ಣಿಂದ ಕಂಡೊಡನೆ ಅದನ್ನು ತಿದ್ದುವ ಮೋಹವೂ ಅವಶ್ಯ. ಈ ಮಟ್ಟಿಗೆ ನಮ್ಮ ಚಪಲವನ್ನು ತಡೆಯದೆ ಒಳ್ಳೆಯ ಶಿಕ್ಷಕರಂತೆ ನಡೆಯಬೇಕು.

ಸಮಾನತೆಯನ್ನು ಉಪದೇಶಿಸುವ ಜನರು ಉಚ್ಚ ಹಾಗೂ ನೀಚ ಎಂಬ ಭೇದಭಾವವನ್ನು ತೊಡೆದುಹಾಕಲು ಏಕೆ ಪ್ರಯತ್ನಿಸುವುದಿಲ್ಲ? ಮಂತ್ರಿಗಳಿಗೆ ಪುಷ್ಪಹಾರ, ಪುಷ್ಕಳ ಭೋಜನ ನೀಡುವುದು ಶಿಷ್ಟಾಚಾರ ಹೌದಾದರೂ, ಬಡವನನ್ನು ಹೀನಾಯವಾಗಿ ನಡೆಸಿಕೊಳ್ಳುವುದು ಸಭ್ಯ ಸಂಸ್ಕೃತಿಗೆ ಕಳಂಕವಲ್ಲವೆ?

"ಮಂತ್ರಿಗಳು ದೃಷ್ಟಿಗೆ ಬಿದ್ದೊಡನೆಯೇ ನೀವು ಗಾಬರಿಪಟ್ಟುಕೊಳ್ಳಬೇಡಿರಿ. ಅವರು ಜನತೆಯ ಸೇವಕರು. ಆದುದರಿಂದ ನೀವು ನಿರ್ಭಯರಿರಬೇಕು. ಮಂತ್ರಿಗಳು ಕೂಡ ತಮ್ಮ ಕೈಕೆಳಗಿನವರನ್ನು ತಮ್ಮ ನೌಕರರೆಂದು ತಿಳಿಯದೆ ಬಂಧುಗಳೆಂದು ಆದರಿಸಬೇಕು. ಅದೇ ಸುಖದ ಹಾದಿ, ಅದೇ ಪ್ರಜಾಪ್ರಭುತ್ವದ ರಸಾಸ್ವಾದನೆಯ ಮಾರ್ಗ" ಎಂದು ಗಾಂಧೀಜಿ ಹೇಳಿದ್ದು ನಮಗೊಂದು ಪಾಠವಾಗಬೇಕು.

ಶಿಸ್ತುಪಾಲನೆಯ ಮನೋವೃತ್ತಿ ಹಾಗೂ ನಿರ್ಭಯವಾದ ನಡವಳಿಕೆ ಜೀವನದ ತೊಡಕುಗಳನ್ನೆದುರಿಸಿ ಮುನ್ನಡೆಯಲು ತುಂಬ ಸಹಕಾರಿ. ಅಧಿಕಾರ ವರ್ಗ ಈ ಗುಣಗಳನ್ನು ಪಡೆದುಕೊಂಡಿದ್ದರೆ—ನೌಕರರ ಸ್ಥಿತಿ ಬಹಳ ಉನ್ನತವಾಗುತ್ತದೆ. ಅವರ ಧೈರ್ಯ, ಪ್ರಾಮಾಣಿಕತನ ಮತ್ತು ಶಿಕ್ಷಣ ಬೆಳೆಯಲು ಅವಕಾಶ ದೊರೆಯುತ್ತದೆ.

ಆದರೆ ವಾಸ್ತವವಾಗಿ ಪರಿಸ್ಥಿತಿ ಹೇಗಿದೆ? ವರಿಷ್ಠರ ಸುಖಾನುಕೂಲತೆಗಳ ವ್ಯವಸ್ಥೆಯಾಗದಿದ್ದರೆ, ನೌಕರಿಗೆ ಚಕ್ರ ಬೀಳುತ್ತದೆ. ವಿನಯದ ಢೋಂಗು ಮಾಡದಿದ್ದರೆ ದಂಡನೆ ದೊರೆಯುತ್ತದೆ.

ಭಾರತದ ಇಂದಿನ ದುರವಸ್ಥೆಗೆ ಈ ಮನೋವೃತ್ತಿಯನ್ನೇ ಹೊಣೆಗಾರವೆನ್ನಬೇಕು. ಮಂತ್ರಿಗಳು ಜನತೆಯ ಪ್ರತಿನಿಧಿಗಳಾಗಿ ಸರಕಾರ ನಡೆಸಿದರೂ, ಸರಕಾರದಲ್ಲಿರುವ ಅಧಿಕಾರಿ ವರ್ಗ ಆಧುನಿಕ ಮಾರ್ಪಾಟಿಗೆ ಇನ್ನೂ ಒಗ್ಗಿಕೊಂಡಿಲ್ಲ. ಹಳ್ಳಿಯ ಸಾಮಾನ್ಯ ರೈತನಿಗೂ ದಿಲ್ಲಿಯಲ್ಲಿ ಅಧಿಕಾರಗದ್ದುಗೆಯಲ್ಲಿರುವ ವರಿಷ್ಠರಿಗೂ ಸಂಬಂಧ ತಪ್ಪಿದ್ದು ಇನ್ನೂ ಕೂಡಿ ಬಂದಿಲ್ಲ.

ನಮ್ಮ ವಿಚಾರ ಕ್ರಮದಲ್ಲಿ ಬದಲಾವಣೆ ಬೇಕು. ನಮ್ಮ ಕೃತಿಗಳಲ್ಲಿ ಮಾನವೀಯ ಭಾವನೆ ರೂಪುಗೊಳ್ಳಬೇಕು; ಸಭ್ಯತೆ, ಸಂಸ್ಕೃತಿಗಳು ಪರಮ ಪುರುಷಾರ್ಥವಾಗಬೇಕು ಎಂದು ಹೇಳುವಾಗ–ಆಗದ ಹೋಗದ ವಿಚಾರಗಳಿವು ಎಂಬ ಅನಾಸ್ಥೆ ಬೇಡ.

ಯೂಕ್ಲಿಡನು "ಸರಳರೇಖೆ" ಎಂದು ನುಡಿದಾಗ ಅದಕ್ಕೆ ಅಗಲವಿದೆ ಎಂದಿರಲಿಲ್ಲ. ಆದರೆ ಅಗಲವಿಲ್ಲದುದೊಂದನ್ನು ನಾವು ಕಣ್ಣಿಂದ ಕಂಡುದಿದೆಯೇ? ಆದರೂ ಈ ಸಿದ್ಧಾಂತದ ಮೇಲೆ ರೇಖಾಗಣಿತದ ಬೆಳವಣಿಗೆಯಾಗಿದೆ. ಹಾಗೆಯೇ ಆದರ್ಶ ಕೂಡ ಉತ್ಕರ್ಷದ ಮಾಧ್ಯಮವಾಗಲಿ!

ಓಂ ಶಕ್ತಿ!

ಗಾಂಧೀ ವಚನಗಳು

- 'ಸತ್ಯಕ್ಕಾಗಿ ಅಹಿಂಸಾತ್ಮಕವಾಗಿ ನಡೆಸುವ ಯುದ್ಧವೇ ಧರ್ಮಯುದ್ಧ'
- 'ಅಂತರ್ಜಾತೀಯ ಭೋಜನ ವಿವಾಹ ಇವು ಸ್ವಾತಂತ್ರ್ಯವೆಂದು ನೀವು ಭಾವಿಸುವುದಾದರೆ ಅದು ತಪ್ಪು, ನೀವು ಸತ್ಯ ಅಹಿಂಸೆಯಲ್ಲಿ ನಂಬಿಕೆಯಿಡಬೇಕು. ಸತ್ಯ ಮತ್ತು ಅಹಿಂಸೆಯ ಮಾರ್ಗದಿಂದ ಮಾತ್ರ ರಾಮರಾಜ್ಯ ಸಾಧ್ಯ'
- ಹಿಂಸಾತ್ಮಕ ವೈರಿಗೆ ಅನಿಷ್ಟ ಬಯಸದೆ ಸಂತೋಷದಿಂದ ಮೃತ್ಯುವನ್ನಪ್ಪಿ ವೈರಿಯ ಹೃದಯ ಪರಿವರ್ತನೆ ಮಾಡಿದ ಹಲವು ಉದಾಹರಣೆಗಳು ಇತಿಹಾಸದಲ್ಲಿವೆ."
- "ಮೌನವು ಸತ್ಯ ಭಕ್ತನ ಆಧ್ಯಾತ್ಮಿಕ ಸಾಧನೆಯಲ್ಲಿ ಒಂದು ಮಹತ್ವದ ಅಂಗ"
- 'ಖಾದಿಯು ಬಡವರ ಜೀವನದಲ್ಲಿ ಒಂದು ಆಶಾಕಿರಣ'

ಇಂಪಾದ ಸಂಗೀತದ ಮಾಯಾಮೋಡಿ

ಕಾರ್ಮಿಕರ ಮನೋಲ್ಲಾಸಕ್ಕೆ ಕಾರ್ಖಾನೆಯಲ್ಲಿ ಸಂಗೀತಮಂಡಳಿ!

ಮಾಡಾಂ ಮಾಂಟೆಸರಿಯನ್ನು ಯುಗ ಪ್ರವರ್ತಕರ ಸಾಲಿಗೆ ಸೇರಿಸುವ ಚಳಕ ನಮ್ಮದು. ಶಿಕ್ಷಣ ಕ್ಷೇತ್ರದಲ್ಲಿ ಅವರು ಮಾಡಿದ ಮೂಲಭೂತ ಸುಧಾರಣೆಯಿಂದಾಗಿ—ಮಾನವತೆಯ ಮೇಲೆಯೇ ಪರಿಣಾಮವಾಯಿತು. ವ್ಯಕ್ತಿತ್ವದ ಮೌಲ್ಯದಲ್ಲಿಯೇ ಪರಿವರ್ತನೆ ಕಂಡು ಬಂತು. ಇದಕ್ಕೆ ಪ್ರೇರೇಪಣೆಯೊದಗಿಸಿದ ಘಟನೆಯನ್ನು ತಿಳಿದ ಜನ ಬಹಳ ಕಡಿಮೆ: ಬಾಲ್ಯದಲ್ಲಿ ಮಾಂಟೆಸರಿ ಒಂದು ಬೆಕ್ಕನ್ನು ಸಾಕಿದ್ದರು. ಬೆಕ್ಕು ಉಗ್ರಸ್ವಭಾವದ್ದು. ಮನೆಗೆ ಯಾರ ಬಂದರೂ ಅವರೊಡನೆ ಕಲಹಕ್ಕೇಳುತ್ತಿತ್ತು. ಅದರ ದೂರು ಕೇಳಿ ಕೇಳಿ ಮಾಂಟೆಸರಿಗೆ ತಲೆಬೇಸರ ಬಂತು. ಆದರೆ, ಮಾಂಟೆಸರಿ ಪಿಯಾನೋದಲ್ಲಿ ಸಂಗೀತ ನುಡಿಸಲು ಅಭ್ಯಸಿಸತೊಡಗಿದ ಕ್ಷಣದಿಂದ ಬೆಕ್ಕಿನ ಸ್ವಭಾವದಲ್ಲಿ ಆಶ್ಚರ್ಯಕರ ಪರಿವರ್ತನೆ ಕಂಡು ಬಂತು. ಕೆಲವೇ ದಿನಗಳಲ್ಲಿ ಅದರ ಅಭ್ಯಾಸ ತುಂಬ ಸೌಮ್ಯವಾಯಿತು. ಇದೇ ಘಟನೆಯಿಂದ ಮಾಂಟೆಸರಿಗೆ ಮಾನವ ಸಮಾಜವನ್ನೆ ಸುಶಿಕ್ಷಿತ ಹಾಗೂ ಸುಸಂಸ್ಕೃತ ಮಾಡುವ ಹುರುಪನ್ನು ಕೊಟ್ಟಿತು. ಆಧುನಿಕ ಯುಗದ ಶಿಕ್ಷಣ ತಜ್ಞರಲ್ಲಿ ಶ್ರೇಷ್ಠಳೆಂಬ ಕೀರ್ತಿಯನ್ನು ತಂದಿತು.

ಮನಮೋಹಿಸುವ ಮಾಧುರ್ಯ

ಮಾನವನ ಸ್ವಭಾವದ ಮೇಲೆ ಸಂಗೀತದ ಆಳವಾದ ಪ್ರಭಾವವುಂಟಾಗುತ್ತದೆ. ಮನುಷ್ಯನಲ್ಲಿ ಅತ್ಯದ್ಭುತ ಬದಲಾವಣೆಯನ್ನು ಮಾಡಬಲ್ಲ ಜಾದೂ ಸಂಗೀತದಲ್ಲಿದೆ ಎಂದರೂ ತಪ್ಪಲ್ಲ. ಸಂಗೀತದ ಮಧುರಲಯ ಮತ್ತು ಕೋಮಲ ಸ್ವರವು ಪಶು ಪಕ್ಷಿಗಳನ್ನು ಸಮ್ಮೋಹಿಸುತ್ತದೆ. ಎಲ್ಲರ ಮನಸ್ಸನ್ನು ರಮಿಸಿ, ಭಾವನೆಗಳನ್ನು ಸೌಮ್ಯ ಮಾಡುತ್ತದೆ. ಮನುಷ್ಯನಲ್ಲಿ ನವ ಶಕ್ತಿಯನ್ನೂ ಅದಮ್ಯ ಸ್ಫೂರ್ತಿಯನ್ನೂ ಅತ್ಯುತ್ಸಾಹವನ್ನೂ ಉಂಟುಮಾಡಿ, ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸುತ್ತದೆ. ಇದನ್ನು ತಿಳಿದೇ ಶೇಖಸಾದೀ ಹೀಗೆಂದ—“ಸಂಗೀತದ ಹಿಂದೆ ಭಗವಂತನು ನಡೆಯುತ್ತಾನೆ; ನದೀಸದೃಶವಾದ ಹೃದಯವು ಸಂಗೀತ ರೂಪದ ಗಾಳಿಯಿಂದ ತರಂಗಿತವಾಗದಿದ್ದರೆ, ಆ ಹೃದಯಕ್ಕೆ ಪಿಶಾಚಿ ಕೂಡ ಹೆದರುತ್ತದೆ.”

ಭಾರತದಲ್ಲಿ ಶೇರ್‌ಶಾಹನ ಹೆಸರು ಇತಿಹಾಸ ಪ್ರಸಿದ್ಧವಾಗಿದೆ. ಗ್ರ್ಯಾಂಡ್‌ಟ್ರಂಕ್ ರೋಡಿನಂಥ ವಿಶಾಲ ಮಾರ್ಗ, ಪ್ರಥಮವಾಗಿ ಅಂಚೆ ಪದ್ಧತಿ, ಭೂಕಂದಾಯದ ಅಂದಾಜು ಮುಂತಾದ ಕೆಲಸಗಳಿಂದ ಅವನ ನೆನಪು ಸದಾ ಸ್ಮರಣೆಯಲ್ಲಿರುತ್ತದೆ. ಅವನ ರಚನಾತ್ಮಕ ಪ್ರವೃತ್ತಿಯು ವ್ಯಕ್ತಗೊಂಡುದರಿಂದ ಸಹಸ್ರಾರು ಜನರಿಂದು ಸುಖಿಗಳಾಗಿದ್ದಾರೆ. ಆದರೆ ಸಂಗೀತವು ಅವನ ಮನಸ್ಸನ್ನು ಮೃದುಮಾಡಿತೆಂದು ತಿಳಿದ ಜನರೆಷ್ಟು? ಶೇರಶಾಹನು ದಿಲ್ಲಿಯ ಗದ್ದುಗೆಯೇರಿದ ಮೊದಲಿನದರಲ್ಲಿ ಅವನ ಉಗ್ರ ಸ್ವಭಾವದಿಂದ ಜನ ತತ್ತರಿಸುತ್ತಿದ್ದರು. ಒಮ್ಮೊಮ್ಮೆ ಅವನಿಗೆ ಹುಚ್ಚು ಹಿಡಿಯುವುದು ಇತ್ತು. ಕಿಲ್ಲೆಯ ಮೇ

ಸೆದಿದ್ದ ಸೂಳೆಗಾರರನ್ನು ಶೂಲಕ್ಕೇರಿಸಿದ್ದ. ಅವನ ಬಳಿಗೆ ಒಬ್ಬ ಫಾರಸೀ ಸಂಗೀತಗಾರ ಬಂದು ಸೊಗಸಾದ ಹಾಡು ನುಡಿಸಲು, ಅದರ ಮಾಧುರ್ಯದಿಂದ ಶೇರ್‌ಶಾಹನ ಹುಚ್ಚು ಮಾಯವಾಯಿತು; ಅವನ ಉಗ್ರಸ್ವಭಾವವೂ ಮರೆಯಾಯಿತು.

ಮನೋಭಾವ ಪರಿವರ್ತಕ ಗುಣ

ವಿದೇಶಗಳಲ್ಲಿ ಸಂಗೀತದ ಮೂಲಕ ಜನತೆಯ ನೈತಿಕ ಮಟ್ಟವನ್ನು ಎತ್ತರಿಸುವ ಪ್ರಯತ್ನ ನಡೆಯುತ್ತಿದೆ. ಇದರಲ್ಲಿ ಸಾಕಷ್ಟು ಯಶಸ್ಸೂ ದೊರೆತಿದೆ. ಕೊಲೆಗಡುಕ ಅಥವಾ ಜನ್ಮದಿಂದಲೇ ಅಪರಾಧಿಗಳಾದವರೂ ಕೂಡ ಸಂಗೀತದ ದಯೆಯಿಂದ ಮನುಷ್ಯರಂತೆ ಜೀವನಯಾಪನೆ ಮಾಡುವುದನ್ನು ಕಾಣುತ್ತೇವೆ. ಕೆಲ ವರ್ಷಗಳ ಹಿಂದೆ ಅಮೇರಿಕದ ಸಾನ್ ಫ್ರಾನ್ಸಿಸ್ಕೋ ನಗರದ ಜೈಲು ಅಧಿಕಾರಿ ಇದ್ದಲ್ಲಿಗೆ ಒಬ್ಬ ವ್ಯಕ್ತಿ ಹೋದ. ಸಂಗೀತದ ಮೂಲಕ ಅಪರಾಧಿಗಳ ಮನೋಭಾವವನ್ನು ಪರಿವರ್ತಿಸಿ, ಸುಸಂಸ್ಕೃತ ಹಾಗೂ ಸಭ್ಯರನ್ನಾಗಿ ತಾನು ಮಾಡುವುದಾಗಿ ಅವನೆಂದ. ಅವನಿಗೆ ಅವಕಾಶಕೊಟ್ಟ ಬಳಿಕ, ಉಂಟಾದ ಪರಿಣಾಮ ಅಧಿಕಾರಿಯನ್ನು ದಂಗುಬಡಿಸಿತು! ಜೈಲಿನ ಕಠೋರತಮವಾದ ಯಾತನೆಯು ದುರ್ವ್ಯಸನಿಯನ್ನು ಒಳ್ಳೆಯವನನ್ನಾಗಿಸಲು ತಪ್ಪಿದರೂ, ಸಂಗೀತ ಈ ಅಸಾಧ್ಯ ಕಾರ್ಯವನ್ನು ಸಾಧಿಸಿಯೇ ತೀರಿತು.

ಮನುಷ್ಯನ ಸ್ವಾಸ್ಥ್ಯದ ಮೇಲೂ ಸಂಗೀತದ ಪ್ರಭಾವಿಯಾಗಿದೆ. ಪ್ರಸಿದ್ಧ ಶರೀರ ವಿಜ್ಞಾನಶಾಸ್ತ್ರಿಯಾದ ಪಾಲ್ ಬರ್ನಿಯರನ ಹೇಳಿಕೆಯಂತೆ, ಕೆಲವು ರಾಗ-ರಾಗಿಣಿಗಳನ್ನು ಆಲಿಸುವುದರಿಂದ, ನಮ್ಮ ಪಾಚನಗ್ರಂಥಿಗಳು ತುಂಬ ತ್ವರ್ಯದಲ್ಲಿ ಕೆಲಸ ಪ್ರಾರಂಭಿಸುತ್ತವೆ. ಮನುಷ್ಯನ ಹೊಟ್ಟೆಯಲ್ಲಿರುವ ದೊಡ್ಡ ಕರುಳು ಕೆಲವೊಂದು ರಾಗಿಣಿಯ ಪ್ರಭಾವದಿಂದ ಉತ್ತೇಜಿತಗೊಂಡು ಮಲವನ್ನು ಹೊರಹಾಕುವುದರಲ್ಲಿ ತತ್ಪರವಾಗುತ್ತದೆ. ಪಾಲ್ ಬರ್ನಿಯರ್ ತನ್ನ ಸ್ವಂತಾನುಭವದಿಂದ ಈ ಮಾತಿನ ಸತ್ಯವನ್ನು ಮನ್ನಿಸುತ್ತಾನೆ.

ರೋಗಗಳಿಗೆ ರಾಮಬಾಣ

ಒಳ್ಳೆಯದೆನ್ನುವ ಔಷಧಿಗಿಂತಲೂ ಸಂಗೀತದ ಬೆಲೆ ಹೆಚ್ಚು. ನಿದ್ರಾನಾಶ ಹಾಗೂ ನೋವು ಬೇಸರಿಕೆಗಳಿಗೆ ಸಂಗೀತಕ್ಕೂ ಮಿಕ್ಕಿದ “ಟಾನಿಕ್” ಪೇಟೆಯಲ್ಲಿ ದೊರಕದು. ಮಿಚಿಗನ್ ವಿಶ್ವವಿದ್ಯಾಲಯದಲ್ಲಿ ಈ ಕುರಿತು ಪ್ರಯೋಗ ನಡೆದು ಪರಿಣಾಮವಾಗಿ ಅನೇಕಾನೇಕ ರೋಗಗಳಿಗೆ ಸಂಗೀತ ಪರಮೌಷಧಿ ಎಂದು ಸಿದ್ಧವಾಗಿದೆ. ಬೇರೆ ಬೇರೆ ರೋಗಗಳನ್ನು ಭಿನ್ನ ಭಿನ್ನ ರಾಗಿಣಿಯ ಸಹಾಯದಿಂದ ನಿವಾರಿಸಲು ಬರುವುದಂತೆ. ತಲೆಸಿಡಿತವನ್ನು ದೂರೀಕರಿಸಲು ವೀಣಾವಾದನ ರಾಮಬಾಣದಂತೆ!

ಆಗ--?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿಯುವುದು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ, ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿ ಇರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ–ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕಂಡೊಡನೆ ನಿಮ್ಮದೇ ಆಗುವ, ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ, ನಿಮ್ಮ ನಾಡಿನ

ಈ ಕಂಪೆನಿಯಲ್ಲಿಯೇ ವಿಮೆ ಇಳಿಸಿರಿ

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ. ಸ್ಥಾಪನೆ: ೧೯೩೫

The Canara Mutual Assurance Co. Ltd.

Head Office: UDIPI, S. INDIA. ESTD: 1935.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ರಕ್ತದ ಒತ್ತಡವನ್ನು ಕಡಿಮೆ ಮಾ ಲಿಕ್ಕೂ ಸಂಗೀತದಿಂದ ಸಾಧ್ಯವಿದೆ: ಒ ದು ಕತ್ತಲು ಕೋಣೆಯಲ್ಲಿ ರಕ್ತದ ಒ ಡಕ್ಕೆ ಬಲಿಯಾದ ಕೆಲವರನ್ನು ಕೂಡಿ ಅವರೆದುರು ವಿಶಿಷ್ಟ ರಾಗವೊಂದನ್ನ ಗ್ರಾಮಾಫೋನು ರಿಕಾರ್ಡಿನ ಮ ಲಕ ಹಲವು ಬಾರಿ ನುಡಿ ದಾಗ, ಆ ರೋಗಿಗಳಿಗೇನೋ ಬೇಸ ವಾಯಿತು. ಆದರೆ ರಕ್ತದ ಒತ್ತ ವನ್ನು ಅಳೆಯುವ ಮಂತ್ರ ಮಾತ್ರ ಕ ಮೆ ಒತ್ತಡವನ್ನು ತೋರಿಸುತಿತ್ತು.

ಜರ್ಮನಿಯಲ್ಲಂತೂ ಒಮ್ಮೆ ಮೃತ ವನ್ನೇ ಜಯಿಸಿದ ಸಂಜೀವಿನಿಯಾಗಿ ಸ ಗೀತ ಕೆಲಸ ಮಾಡಿತು. ಒಬ್ಬ ರೋ ತುಂಬ ಸಮಯದಿಂದ ಹಾಸಿಗೆ ಹಿಡಿದಿದ ಡಾಕ್ಟರುಜನ ಇವನ ನರನಾಡಿಗಳಲ್ಲ ವಿಷ ತುಂಬಿದೆ ಎಂದು ಹೇಳಿ, ಕೈಬಿಟ್ಟರ ಆದರೆ ಡಾ| ಸ್ವೇಗ್ ಎಂಬವರೊಬ್ಬ ಒಂದುದಿನ ರೋಗಿಯ ಮಂಚದ ಅ ಯಲ್ಲಿ ಬೇಂಡ್ ವಾದನವನ್ನು ಏರ್ಪಡಿ ಲು, ಎಲ್ಲರೂ ಚಕಿತರಾದರು. ಡಾಕ್ಟರ ನಿರ್ದೇಶಿಸಿದ ಪ್ರಕಾರ, ಬೇಂಡಿನಿಂದ ತ ಬ ಸೌಮ್ಯವೂ, ಮಧುರವೂ ಆದ ಧ ಹೊರಡುತಿತ್ತು. ಕೆಲದಿನಗಳವರೆಗೆ ಟ್ಟೂ ಬಿಡದೆ ಸಂಗೀತ ಕೇಳಿದುದರ ಣಾಮವಾಗಿ, ರೋಗಿ ಸ್ವಸ್ಥನಾದ ಇದರಿಂದ ಡಾ. ಸ್ವೇಗರ ಹೆಸರು ಸಮ ಯುರೋಪಿನಲ್ಲಿ ಹಬ್ಬಿತು.

ಬೌದ್ಧಿಕಶಕ್ತಿ ವೃದ್ಧಿ

ಮನೋಭಾವಗಳ ಕೆಟ್ಟ ಪ್ರಭ ದಿಂದ ಉಂಟಾಗುವ ರೋಗಗಳ (Psychosomatic diseases) ಶಮನ ಮಾಡುವುದರಲ್ಲಿ ಸಂಗೀತ ಹತ್ವ ಪಡೆಯುತ್ತದೆ. ಅಮೇರಿಕಾದ ಆ ತ್ರಿಯೊಂದರಲ್ಲಿ ಕೇಳುವ ಶಕ್ತಿಯನ್ನು ದ ಕೊಂಡು ಕಿವುಡನಾದವನೊಬ್ಬನ, ಗೀತದಿಂದಾಗಿ ಮರಳಿ ಕಿವಿಯಾಲಿಸಿ ಬಲ್ಲವನಾದ. ಒಬ್ಬ ಇಟಾಲಿಯನ್ ರ ವಿಜ್ಞಾನ ಶಾಸ್ತ್ರಜ್ಞನ ಅಭಿಪ್ರಾ ದಂತೆ, ಮನುಷ್ಯನ ಬೌದ್ಧಿಕ ಶಕ್ತಿಯ ಹೆಚ್ಚಿಸುವ ಸಾಮರ್ಥ್ಯವನ್ನು ಸಂಗಿ ಪಡೆದಿದೆ. ಸಂಗೀತ ಮನುಷ್ಯನ ವಿಚ ಶಕ್ತಿಯನ್ನೂ ವರ್ಧಿಸುವುದು ಕಂ ಬಂದಿದೆ.

ನಮ್ಮ ಆರೋಗ್ಯವನ್ನು ಕಾಯ್ದು ಕೊಳ್ಳಲು ಸಂಗೀತ ತುಂಬ ಸಹಕಾರಿಯಾ ಸಂಗೀತದ ತರಂಗಗಳಿಂದ ನಮ್ಮಲ್ಲಿ ಸ ಸರ್ವದಾ ಹೊಸ ಹುರುಪು ತುಂಬಿ ಳುಕುತ್ತದೆ. ನಮಗೆ ಬೇಸರವೆನಿಸಿದ ವೆಲ್ಲ ಮೆಲ್ಲನೆ ಗುಣುಗುಣಿಸಹತ್ತುತ್ತೇ ಮತ್ತು ತನ್ಮೂಲಕ ಸಂತೋಷಕಾ ಯತ್ನಿಸುತ್ತೇವೆ. ಅಂತಃಕರಣ ಹಾಡಿ ಯಲು ಕಾತರಗೊಂಡಾಗ, ಕ್ಲೇಶದ ಯೆಯೂ ಉಳಿಯುವುದಿಲ್ಲ. ಎಲ್ಲ ವು, ಬೇಸರ ಔದಾಸೀನ್ಯ ವೈರಾಗ್ಯ ಹೆರದಾರಿ ದೂರ ಓಡಿಹೋಗುವುವು ಗಳ ಸ್ಥಾನವನ್ನು ಸಾಮ್ಯಭಾವ ಹ ಅನುರಾಗಗಳು ಆಕ್ರಮಿಸುವುವು.

ಹೀಗೆ ಜೀವನದಲ್ಲಿ ಹಾಸುಹೊ ರುವ ಸಂಗೀತವನ್ನು ಈಗ ಸಮಯ

ಗಾಂಧೀಜಿ ಉಪದೇಶಿಸಿದ ನೀತಿ:

ಮನುಷ್ಯತ್ವವನ್ನು ತಿರಸ್ಕರಿಸತಕ್ಕದ್ದಲ್ಲ.

ಗಾಂಧೀ ವಾದವೆಂದು ನಾವು ಯಾವು ನ್ನು ಕರೆಯುತ್ತೇವೋ ಅದು ಕಲ್ಪವೆಂ ಗಾಂಧೀ ಶಿಷ್ಯರಾದ ದಿವಂಗತ ಮಶ್ರೂ ಲಾರು ಇತ್ತೀಚೆಗೆ ನುಡಿದುದನ್ನು ಸ್ಮ ಯೇ ಈ ಲೇಖ ಬರೆಯುತ್ತಿದ್ದೇವೆ: ಒ ಮಹಾ ಗುರುವಿನ ಜೀವನವನ್ನೂ ಉ ಶಗಳನ್ನೂ ಕೆಲ ಸೂತ್ರಗಳಿಗೆ ಇಳಿ ಸುವುದು ಅಶಕ್ಯವಾದ ಕ್ರಮವೆಂಬು ಂದ ಮಶ್ರೂವಾಲಾರು ತಮ್ಮ ಅಂತಿಮ ಗಳಲ್ಲಿ ಹೀಗೆಂದಿಂಬಹುದು. ಆದರೂ ಂಧೀಜಿಯ ಜೀವನವನ್ನೂ ಲೇಖನಗ ನ್ನೂ ನಾವು ಅಭ್ಯಸಿಸುವುದಕ್ಕೆ, ಅವರ ತಿಪ್ರಾಯಗಳನ್ನು ಉದಾಹರಿಸುವುದ ಆಕ್ಷೇಪವಿಲ್ಲ. ಅವರ ಉದಾತ್ತ ಜೀ ದ ಮತ್ತು ಲೇಖನಸಂಪತ್ತಿಯ ಅಭ್ಯಾ ಭಾರತದ ಇಂದಿನ ಸ್ಥಿತಿಗತಿಯಲ್ಲಿ ಂಬ ಅಗತ್ಯ. ಸಾಮಾನ್ಯವಾಗಿ ಯಾವು ದರೊಂದು ಕಲ್ಪನೆ, ವಾಕ್ಯ ಅಥವಾ ಪದೇಶ ನಮ್ಮಲ್ಲಿ ಯಾರಿಗಾದರೂ ಮೆ ಗೆಯಾದರೆ ಅಥವಾ ಇತರರಿಗೆ ಹಿತಕ ಗಬಹುದೆಂದು ತೋರಿದರೆ, ಅಥವಾ ವಿಚಾರಗಳನ್ನು ಜನರಿಗಿಂತಲೂ ಚೆ ಗಿ ಅದು ವ್ಯಕ್ತಗೊಳಿಸುವುದೆಂದಿದ್ದ ಆಗ ಅದನ್ನು ಉದಾಹರಿಸುವ ಚಾಪ ತೀರ ಸ್ವಾಭಾವಿಕ. ಗಾಂಧೀಜಿ ಇಲ್ಲ ತಾದರೂ ಅವರು ಹೇಳುವ ಮಹ ದ ತತ್ವ ಅಳಿದು ಹೋಗಿಲ್ಲ ಬುದರಿಂದ, ಅವರ ಬರವಣಿಗೆ ತುಂಬ ಲಿತವಾಗಿದೆ ಎಂಬುದರಿಂದ, ಭಾರ ನಿತ್ಯ ವ್ಯವಹಾರದಲ್ಲಿ ಅದು ಧ್ರುವ ರೆಯುತ್ತಿದೆ ಎಂಬುದರಿಂದ—ನಮ ನ್ನೂ ಎಷ್ಟೋ ವರ್ಷಗಳ ವರೆಗೆ ಗಾಂ ಯ ಮಾರ್ಗದರ್ಶನ ಬೇಕು.

ಮಾನವೀಯ ಅಂತಃಕರಣ

ಗಾಂಧೀಜಿಯನ್ನು ರಾಜಕಾರಣದೊಂದಿಗೆ ಬೆಸಕೆ ಮಾಡುವುದು ನಮ್ಮಲ್ಲಿ ಹೆಚ್ಚಿನವರ ಅಭ್ಯಾಸವಾಗಿದೆ. ಆದುದರಿಂದ ನಮ್ಮ ಆತ್ಮಿಕ ಸಂಪತ್ತು ಇನ್ನೂ ದೈನ್ಯಾವಸ್ಥೆಯಲ್ಲಿದೆ ಎನ್ನುವ ದುಃಸ್ಯರ್ಕ್ಯ ಕೆಲವರದ್ದು. ಈ ಜನ ಗಾಂಧೀಜಿಯನ್ನು ರಾಜಕಾರಣದ ಆವರಣದಿಂದ ಆಧ್ಯಾತ್ಮಿಕ ಕ್ಷೇತ್ರಕ್ಕೆ ಸ್ಥಾನಾಂತರಿಸುತ್ತಾರೆ. ಗಾಂಧೀಜಿಯು ರಾಷ್ಟ್ರಕ್ಕಾಗಿ ಅಥವಾ ರಾಷ್ಟ್ರೀಯತ್ವಕ್ಕಾಗಿಂದ—“ರಾಮ”ನಿಗೆ ಸೇರಿದ್ದರು ಎಂದು ಹಿಂದೀಯ ಪ್ರಸಿದ್ಧ ವಿಚಾರಿ ಶ್ರೀ ಜೈನೇಂದ್ರ ಕುಮಾರ ಹೇಳುತ್ತಾರೆ. ರಾಜಕಾರಣದಲ್ಲಿ ಕೂಡ ರಾಮರಾಜ್ಯದ ಕಲ್ಪನೆಯನ್ನು ಸೃಷ್ಟಿಸಿದ ಅಭೂತ ಪೂರ್ವ ವೇದಾಂತಿ ಗಾಂಧೀಜಿ ಎಂದು ಜೈನೇಂದ್ರ ಕುಮಾರ ಪ್ರತಿಪಾದಿಸುತ್ತಾರೆ ಇದರಲ್ಲಿ ತಥ್ಯವಿಲ್ಲೆಂದಲ್ಲ: ನಿಜವಾಗಿಯೂ ಗಾಂಧೀಜಿಯನ್ನು ಕೊಂಡಾಡುವುದು ಅವರ ಮಾನವೀಯ ಅಂತಃಕರಣಕ್ಕಾಗಿಯೇ. ಮನುಷ್ಯನ ಅಸಂಖ್ಯ ಸಮಸ್ಯೆಗಳನ್ನು ಗಾಂಧೀಜಿ ತನ್ನದೇ ಆದ ವಿಶಿಷ್ಟ ದೃಷ್ಟಿಯಿಂದ ಕಂಡು ವಿಶ್ಲೇಷಿಸಿದ್ದಾರೆ. ಅದರ ತಿರುಳನ್ನು ಬಿಚ್ಚಿ ತೋರಿಸಿದ್ದಾರೆ. ಅವರು ಹೇಳಿರುವ ಎಷ್ಟೋ ವಿಷಯಗಳು ಒಳ್ಳೆಯವು, ಆಗತ್ಯ ಹಾಗೂ ಆವಸರದವುಗಳು. ಅವುಗಳ ಬಗ್ಗೆ ಭಿನ್ನಾಭಿಪ್ರಾಯ ಏಳಬಹುದು ಹಾಗೆಯೇ ಮಾನವೀಯ ಆದರ್ಶಗಳನ್ನು ಗಾಂಧೀಜಿಯ ಹೆಸರು ಹೇಳಿಯೇ ಸಾಧಿಸಬೇಕಾದ ಅವಶ್ಯಕತೆ ಇರಲಿಕ್ಕಿಲ್ಲ. ನಾವು ನಮ್ಮ ದೃಷ್ಟಿಕೋಣ, ವಿಚಾರ, ಮತ್ತು ಪದ್ಧತಿಗಳಿಂದ ಅದನ್ನು ಮಾಡಲಡ್ಡಿಯಿಲ್ಲ. ಈ ಕೆಲಸದಲ್ಲಿ ಯುಗಪ್ರವರ್ತಕನಾದ ಈ ಮಹಾಪುರುಷನ ಮಾರ್ಗವನ್ನು ಅನುಸರಿಸುವುದು ಶ್ರೇಯಸ್ಕರವೆಂಬ ಕಣ್ಣಯದ ಅಗ[illegible]ವೀಯ ಸಮಸ್ಯೆ ಬಿಡಿಸಲ್ಪಡಬೇಕಾಗಿದೆ ಮತ್ತು ಧ್ಯೇಯಸಾಧನೆಯಾಗಬೇಕಾಗಿದೆ ಎಂದಿದ್ದರೆ ಅಷ್ಟು ಸಾಕು.

ಗೃಹೋದ್ಯಮ ಸ್ವಾಗತಾರ್ಹ

ಗಾಂಧೀ ಬದುಕಿರುವಾಗ ಅವರಿಗೆ ಅಸಂಖ್ಯ ಪತ್ರಗಳು ಬರುತಿದ್ದುವು: ಅವರ ವಿಚಾರಗಳು ಹೆಚ್ಚಾಗಿ ಅವರು ಬರೆದ ಮಾತೋಲೆಗಳ ಅಥವಾ ಹರಿಜನ ಪತ್ರಿಕೆಗಳಲ್ಲಿ ಪ್ರಸಿದ್ಧವಾದ ಲೇಖನಗಳಲ್ಲಿ ವ್ಯಕ್ತಗೊಳ್ಳುತಿದ್ದುವು. ಇಂದಿಗೂ ಅವರ ವಿಚಾರಗಳು ಮೌಲಿಕವಾಗಿವೆ— ಅವುಗಳ ತೂಕ ಇನ್ನೂ ಇಳಿದಿಲ್ಲ ಎಂಬುದರಿಂದ, ಕೆಲವೊಂದು ವಿಶಿಷ್ಟ ಸಮಸ್ಯೆಗಳಿಗೆ ಗಾಂಧೀಜಿಯ ಉಪಶಮನವನ್ನು ಕೇಳುವುದೊಳ್ಳೆಯದು. ಭಾರತದಲ್ಲಿ ಔದ್ಯೋಗೀಕರಣದ ಅಗತ್ಯವಿದೆಯೆ? ಹಡಗುಗಳು, ವಿಮಾನಗಳು, ವಿವಿಧ ಯಂತ್ರೋಪಕರಣಗಳು ಬೇಡವಾದರೆ, ಭಾರತ ಸ್ವತಂತ್ರವಾಗಿ ತನ್ನ ಹೊಣೆಗಾರಿಕೆಯನ್ನು ನಿರ್ವಹಿಸುವ ಕ್ರಮ ಹೇಗೆ? ಎಂದೊಬ್ಬ ಕೇಳಿದ್ದಕ್ಕ—ಗಾಂಧೀಜಿ ಔದ್ಯೋಗೀಕರಣ ಯಾವ ದೇಶಕ್ಕೇ ಆದರೂ ಅಗತ್ಯವೆಂದು ಭಾವಿಸುವುದಿಲ್ಲವಾಗಿ ಹೇಳಿದರು. ಅಮಿತವೇಗದ ಭೌತಿಕ ಸುಖಸಾಧನೆಯಲ್ಲಿ ತೊಡಗಿರುವಾಗ ಉಚ್ಚ ವಿಚಾರಗಳ ಕಡೆಗೆ ಲಕ್ಷ್ಯ ಪೂರೈಸುವುದಾಗುವುದಿಲ್ಲ. ನಮ್ಮ ಬದುಕನ್ನು ಚೆನ್ನಾಗಿ ಬಾಳುವಕಲೆಯೇ ಎಲ್ಲಕ್ಕೂ ಮಿಗಿಲಾಗಿದೆಯಲ್ಲದೆ ಔದ್ಯೋಗೀಕರಣದಂಥ ಮಾರ್ಗಗಳು ಸುಖಾನುಭವವನ್ನು ಮಾಡಿಗೊಡವು. ಹೀಗಿದ್ದರೂ ಮೂಲಭೂತವಾದ ಕೆಲವು ಉದ್ಯೋಗಗಳು ಅಗತ್ಯವೇ. ಅವುಗಳು ಆದರ್ಶದ ಹತ್ತಿರ ಹತ್ತಿರಕ್ಕೆ ಬರಬೇಕಾದರೆ—ಸರಕಾರೀ ಒಡೆತನದಲ್ಲಿರುವುದೂ, ಎಲ್ಲರೂ ಸಹೃದಯತೆಯಿಂದ ಒಟ್ಟುಗೂಡಿ ದುಡಿಯುವುದೂ ಅಗತ್ಯ. ಗುಡಿ ಕೈಗಾರಿಕೆಗಳು ಶಾಂತಿಯನ್ನು ಕಾಪಾಡುತ್ತವೆ. ಎಲ್ಲರಿಗೂ ಅನ್ನ ವಸ್ತ್ರ ವಸತಿಗಳನ್ನು ಕೊಡಲು ನೆರವಾಗುತ್ತವೆ. ಅಲ್ಲಿ ಗಿರಣಿಯೊಡೆಯನ ಸ್ವರ್ಗ ವೈಭವ ಹಾಗೂ ಕೂಲಿಕಾರನ ನರಕಯಾತನೆಯಂಥ ಭೀಭತ್ಸ ವೈಷಮ್ಯಕ್ಕೆಡೆಇಲ್ಲದಿರುವುದರಿಂದ, ಗೃಹೋದ್ಯಮಗಳು ಸ್ವಾಗತಾರ್ಹವಿವೆ.

ಸ್ವಂತ ಪ್ರಯತ್ನವೇ ಸರ್ವಸ್ವ

ಗೃಹೋದ್ಯಮಗಳು ಬೆಳೆಯಲು ಇರುವ ಆತಂಕಗಳಲ್ಲಿ ಯಂತ್ರನಿರ್ಮಿತ ಒಡವೆಗಳನ್ನು ಅಗ್ಗದಲ್ಲಿ ಅವುಗಳನ್ನು ಪೂರೈಸಲಾಗದಿರುವುದು ಒಂದನೆಯದು. ಇದನ್ನು ದೂರೀಕರಿಸಲು ಹಳ್ಳಿಗಳ ಕಲಾ ಕೌಶಲ್ಯವನ್ನು ಬೆಳೆಯಗೊಡುವುದೊಂದೇ ಕ್ಷೇಮ ಮಾರ್ಗ. ನಮ್ಮ ಹಳ್ಳಿಗಳಲ್ಲಿ ಜೀವನಾವಶ್ಯಕವಾದ ಯಾವ ಸಾಮಗ್ರಿಯ ಕೊರತೆಯೂ ಉಂಟಾಗದಂತೆ ಗುಡಿ ಕೈಗಾರಿಕೆ ಬೆಳೆಯಲು ಅಸ್ಪದ ಕೊಡಬೇಕು. ಇಂದು ಹಳ್ಳಿಗಳಲ್ಲಿ ಸೆಗಣಿಯ ರಾಶಿ ಕಂಡುಬಂದರೆ—ನಾಳೆ, ಅವುಗಳು ನಂದನವನದಂತೆ ಕಾಣಬೇಕು. ಅಲ್ಲಿರುವ ಜನ ಬುದ್ಧಿವಂತರಾಗಿ, ಯಾರಿಂದಲೂ ಶೋಷಿಸಲಾಗದ, ವಂಚನೆಗೀಡಾಗದ, ನಾಗರಿಕರಾಗಬೇಕು.

ಆಹಾರಾಭಾವದ ಕುರಿತು ಗಾಂಧೀಜಿಯ ಹೇಳಿಕೆ ಮಾರ್ಮಿಕವಾಗಿದೆ: ನಮ್ಮ ಕರಾವಳಿಯಿಂದ ಹೊರಗೆ ಯಾರಿಂದಲೂ ನೆರವು ದೊರೆತೀತೆಂಬ ಭರವಸೆ ನಮಗೆ ಬೇಡ. ನಮಗೆ ಸಹಾಯ ಮಾಡಬೇಕೆಂದು ಬಯಸುವ ಜನ ಹಲವರಿರಬಹುದು. ಆದರೆ ನಿಜವಾಗಿಯೂ ತಾವು ಕಷ್ಟವನ್ನು ಅನುಭವಿಸಿ ಅವರು ನಮಗೆ ದಾನ ಮಾಡುತ್ತಿರುವರು. ವಿಪುಲ ಧಾನ್ಯ ಸಂಗ್ರಹವಿದ್ದರೂ ಸಾರಿಗೆ ಸೌಕರ್ಯದ ಅಭಾವ ಎಲ್ಲರಿಗೂ ಇದೆ. ದೇಶದೊಳಗೆಯೇ ಆದರೂ ಒಂದು ಕಡೆಯಿಂದ ಇನ್ನೊಂದು ಕಡೆಗೆ ಆಹಾರ ಸಾಗಿಸುವುದು ಮಹತ್ವದ ಸಮಸ್ಯೆಯಾಗುತ್ತದೆ. ಈ ಕಾರಣಕ್ಕಾಗಿ ನಮ್ಮ ಸ್ವಂತ ಪ್ರದೇಶದ ಉತ್ಪಾದನೆಯನ್ನೆ ಹೆಚ್ಚಿಸಿ ಹೊಟ್ಟೆತುಂಬ ಉಣ್ಣಲು ಪ್ರಯತ್ನಿಸಬೇಕು.

ಸೌಹಾರ್ದಭಾವನೆ ಬಲಿಯಲಿ

ಸರಕಾರ ನಡೆಸಲು ಇಂದು ಸೈನ್ಯ ಹಾಗೂ ಪೋಲೀಸು ಪಡೆಗಳು ಅತ್ಯಂತ ಅವಶ್ಯವೆಂದು ಪರಿಗಣಿತವಾಗಿವೆ. ಶ್ರೀ ಶಂಕರರಾವ ದೇವರು ಗಾಂಧೀಜಿಗೊಮ್ಮೆ ಅಹಿಂಸೆಯಲ್ಲಿ ವಿಶ್ವಾಸವಿದ್ದವರು ಮಂತ್ರಿ ಪದದಲ್ಲಿದ್ದು ಹೇಗೆ ಸರಕಾರ ನಡೆಸಬಹುದು? ಎಂದು ಪ್ರಶ್ನಿಸಿದರು. ಗಾಂಧೀ ಇದಕ್ಕೆ ಉತ್ತರರೂಪದಲ್ಲಿ ಸೈನ್ಯ ಹಾಗೂ ಪೋಲೀಸರನ್ನು ಅವಲಂಬಿಸಿ ನಾವು ಬದುಕುವುದೆಂದರೆ ದಾಸ್ಯವೇ ಸೈ ಎಂದರು. ಆಂತರಿಕ ಕ್ಷೇಮಸಾಧನೆಗಾಗಿ ಸರಕಾರ ಚಡಪಡಿಸುತ್ತಿದ್ದರೂ, ಅಹಿಂಸೆಯ ಶ್ರದ್ಧೆ ಇರುವವನು ಮಂತ್ರಿ ಪದದ ಇಕ್ಕಳದಲ್ಲಿ ಬೀಳಲಾಗದೆಂಬುದು ಸ್ಪಷ್ಟ. ನಮ್ಮ ಜನರು ತಿಳಿಗೇಡಿಗಳು ಹಾಗೂ ಪರಸ್ಪರ ಸೌಹಾರ್ದ ಭಾವನೆಯನ್ನು ಕಳೆದುಕೊಂಡ. “ಗೂಂಡಾಗಿರಿ”ಯನ್ನೇ ಆರಾಧಿಸುತ್ತಿರುವರು ಎಂದರೆ—ಅದು ನಾಚಿಕೆಗೇಡು. ಈ ಪ್ರವೃತ್ತಿ ಪ್ರಾಬಲ್ಯದಲ್ಲಿರುವಾಗ ಅಹಿಂಸೆಯನ್ನು ನಿಜ ಅರ್ಥದಲ್ಲಿ ಪರಿಪಾಲಿಸುವುದು ಕಷ್ಟ. ಆದರೂ ಅಂತರ್ಯದಲ್ಲಿ ವ್ರತನಿಷ್ಠರಿದ್ದರೆ, ಮೃತ್ಯುಮುಖದಲ್ಲೂ ಧೈರ್ಯಕಟ್ಟಿಕೊಳ್ಳಬಹುದು. ನಮ್ಮ ಸಮಾಜವನ್ನು ಆದರ್ಶರೂಪದಲ್ಲಿ ಕಟ್ಟಬೇಕೆಂದು ಪ್ರಯತ್ನ ಮಾಡಬೇಕು: ಪ್ರಯತ್ನದಲ್ಲಿ ಶ್ರದ್ಧೆ ಬೇಕು, ಎಂದು ಗಾಂಧೀಜಿಯ ಮತ.

[ನೇ ಪುಟದಿಂದ ಮುಂದುವರಿದುದು.]

ಉಪಮೆಸಿದ್ದಾರೆ. ಅಲ್ಲಿ ಸಂಗೀತದಿಂದ, ಕಾರ್ಖಾನೆಯ ಉತ್ಪಾದನ ಹೆಚ್ಚಿದೆ. ಕಾರ್ಮಿಕರು ಹರ್ಷಭಂಗಿ ಸ್ಫೂರ್ತಿಯಿಂದ ಕಾರ್ಯ ಪ್ರವೃತ್ತರಾಗುವುದು ಕಂಡುಬಂದಿದೆ. ರಿಕ ಮತ್ತು ಯುರೋಪಗಳಲ್ಲಿ ರ್ಖಾನೆಗಳ ಒಡೆಯರು ಸಂಗೀತ ಮಂ ಗಳನ್ನು ನೇಮಿಸಿ, ಕೆಲಸಗಾರರ ಮ ಲ್ಲಾಸವನ್ನುಂಟುಮಾಡಲು ಪ್ರಯ ದ್ದಾರೆ. ಈಚೆ ಕೆಲಸ ನಡೆಯುತಿ ಕೆ, ಆಚೆ ಸಂಗೀತವೂ ಸಾಗುತ್ತದೆ! ಕಾರಿಗಳಿಂದ ಹಿಡಿದು ಸಾಮಾನ್ಯ ಸಗಾರನ ವರೆಗೆ ಎಲ್ಲರಿಗೂ ಸಂಗೀತ ತೋಹಾರ ಎನಿಸಿದೆ.

ನುಷ್ಯನಷ್ಟೇ ಅಲ್ಲ, ಪಶುಪಕ್ಷಿಗಳೂ ತವೆಂದರೆ ಪ್ರೀತಿ. ವಿಷಧರ ನಾಗರ ವಿಗೂ ಹಾವಾಡಿಗನ ಪುಂಗಿಯ ನಾದ ಹ್ಲಾದವನ್ನುಂಟುಮಾಡುತ್ತದೆ: ಹೆಡೆ ತ್ತಿ ಸರ್ಪ ಆಡುತ್ತದೆ! ಪಕ್ಷಿ ಸಂಕುಲ ಗೆ ಸಂಗೀತದ ಹೊರತು ದಿನಯಾಪನೆ ಕಷ್ಟ. ಅರಣ್ಯದ ಹಿಂಸ್ರ ಜಂತು ಗೆ ಕೂಡ ಸಂಗೀತ ತುಂಬ ಸವಿಯಾ ತೋರುತ್ತದೆ ಎಂದ ಮೇಲೆ—ಸಂಗೀತ ಮಾಯಾಮೋಡಿಗೆ ಬೇರೆ ಸಾಕ್ಷ್ಯ

ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ತೆರೆಯಬೇಕಾದುದೇಕೆ?

ಬೇಂಕಿನಲ್ಲಿ ನಿಮ್ಮ ಲೆಕ್ಕವೊಂದು ತೆರೆಯಲ್ಪಟ್ಟಲ್ಲಿ ಅದು ನಿಮ್ಮಲ್ಲಿ ಬ್ಯಾಂಕಿಂಗ್ ವ್ಯವಹಾರದ ಪದ್ಧತಿಯನ್ನುಂಟುಮಾಡುವುದು; ಅಪವ್ಯಯವಾಗಿ ಹೋಗುವ ಅತ್ಯಲ್ಪ ಹಣವನ್ನಾದರೂ ಬ್ಯಾಂಕಿನಲ್ಲಿಡಬೇಕೆಂಬ ಕುತೂಹಲವು ನಿಮ್ಮಲ್ಲುಂಟಾಗುವುದು ನಿಮ್ಮ ಬ್ಯಾಂಕಿನಲ್ಲಿ ಇಂದೇ ಸೇವಿಂಗ್ಸ್ ಬ್ಯಾಂಕ್ ಲೆಕ್ಕವನ್ನು ತೆರೆದು ಅದರಲ್ಲಿ ಎಷ್ಟೇ ಸಣ್ಣ ಹಣವನ್ನಾದರೂ ಕ್ರಮಪ್ರಕಾರ ಶೇಖರಿಸುತ್ತ ಬಂದರೆ ಅದು ಬೇಗನೆ ದೊಡ್ಡ ಮೊತ್ತವಾಗಿ ನೀವು ವಿಶೇಷವಾಗಿ ಇಚ್ಛಿಸುವ ನಿಮ್ಮ ಕುಟುಂಬದ ಬಗ್ಗೆ ಗೃಹನಿರ್ಮಾಣ, ಮಕ್ಕಳ ವಿದ್ಯಾಭ್ಯಾಸ ಇತ್ಯಾದಿ ಕೆಲಸಗಳಿಗೆ ಒದಗುವುದು

ಆದುದರಿಂದ ಇಂದೇ ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ತೆರೆಯಿರಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.
ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ.
The Canara Industrial &
Banking Syndicate Limited.
Estd: 1925 H. O: UDIPI.

ದಯಮಾಡಿ ನಿಮ್ಮ
ಚಂದಾಹಣ ಕಳಿಸಿರಿ.

★ ನವರಾತ್ರಿ ಮತ್ತು ಶಕ್ತಿ ಪೂಜೆ ★

ಪ್ರಪಂಚದ ಯಾವ ದೇಶದಲ್ಲೇ ಆಗಲಿ, ಯಾವ ಜನಾಂಗದಲ್ಲಿಯೇ ಆಗಲಿ, ಹಬ್ಬಹುಣ್ಣಿಮೆಗಳನ್ನು ಆಚರಿಸದೇ ಇಲ್ಲ. ಹಿಂದೂ, ಮುಸ್ಲಿಂ, ಕ್ರೈಸ್ತ, ಬೌದ್ಧ, ಪಾರಶೀ ಎಂಬೀ ಐದು ಮಹಾಧರ್ಮಗಳ ಅನುಯಾಯಿಗಳಲ್ಲಿಯೂ ಸಣ್ಣದೊಡ್ಡ ಹಬ್ಬಗಳೆಷ್ಟೋ ಉಂಟು. ಈಗಿನ ವಿಜ್ಞಾನ ಪ್ರಗತಿಯ ವೇಷಭೂಷಣ, ಆಚಾರ ವಿಚಾರಗಳಿದ್ದಿಲ್ಲದ ಹಿಂದಿನ ಕಾಲಗಳಲ್ಲಿ ಈ ಹಬ್ಬಗಳನ್ನು ಅಂದಿನವರು ಹೇಗೆ ಆಚರಿಸುತಿದ್ದರೋ ಹಾಗೆ ಇಂದಿನವರೂ ಕೂಡಾ ಆಚರಿಸುತ್ತಾರೆ! ಕಾಲಾನುಗುಣವಾಗಿ ಅವುಗಳ ಆಚರಣೆಯಲ್ಲಿ ಕೆಲವೊಂದು ಬದಲಾವಣೆಗಳಾಗಿರಬಹುದೇ ಹೊರತು ಅವುಗಳನ್ನು ಯಾವಧರ್ಮದವರೂ ಮರೆತಿರುವದಿಲ್ಲ, ಬಿಟ್ಟುಕೊಟ್ಟಿರುವುದಿಲ್ಲ. ಅಂದಮೇಲೆ ಈ ಹಬ್ಬಹುಣ್ಣಿಮೆಗಳಿಗೆ ಇಷ್ಟೊಂದು ಮಹತ್ವ ಹಾಗೂ ಧಾರ್ಮಿಕ ಸ್ವರೂಪ ಬರಲು ಕಾರಣವೇನು? ಅವುಗಳ ಮೂಲಾರ್ಥವೇನು? ಅವುಗಳ ಉದ್ದೇಶವೇನು? ಎಂಬ ಪ್ರಶ್ನೆಗಳನ್ನು ಪ್ರತಿಯೊಬ್ಬನೂ ವಿಚಾರಿಸಿ, ತಿಳಿದುಕೊಳ್ಳಬೇಕು.

ಹಬ್ಬ-ಪರ್ವ, ಹುಣ್ಣಿಮೆ-ಪೂರ್ಣಿಮೆ.

ಹಬ್ಬ ಎಂಬುದು 'ಪರ್ವ' ಎಂಬ ಸಂಸ್ಕೃತ ಪದದ ತದ್ಭವ; ಹಾಗೆಯೇ ಹುಣ್ಣಿಮೆಯು ಪೂರ್ಣಿಮೆಯ ತದ್ಭವ. ಪರ್ವ ಎಂದರೆ ತುಂಬಿಸು ಎಂದು ಅರ್ಥ. ಹಬ್, ಹಬ್ಬು ಎಂದರೆ ವಿಸ್ತರಿಸು, ಹರಡು, ಕೊನೆಮುಟ್ಟಿಸು ಎಂದು ಅರ್ಥ. ಯಾವುದೊಂದು ಕಾರ್ಯವನ್ನು ಮುಗಿಸಿದಾಗ, ಅದನ್ನು ಸುರುಮಾಡಿದವನಿಗೆ ಒಂದು ಬಗೆಯ ತೃಪ್ತಿಯೂ, ಆನಂದವೂ ಆಗುತ್ತದಷ್ಟೇ? ಬಿತ್ತಿದ ಬೀಜವು ಮೊಳೆತು ಗಿಡವಾಗಿ, ಹೂಬಿಟ್ಟು, ಫಲಕೊಟ್ಟಾಗ ಬಿತ್ತಿದವನಿಗೆ ಆಗುವ ತೃಪ್ತಿಯೂ, ಆನಂದವೂ ಅಷ್ಟಿಷ್ಟಲ್ಲ- ಪ್ರಪಂಚ ಜೀವನದಲ್ಲಿ ಇದು ಎಲ್ಲರಿಗೂ ಅನುಭವಕ್ಕೆ ಬರುತ್ತಿದೆ. ಆ ಆನಂದವನ್ನು ಆಚರಿಸುವುದೇ 'ಪರ್ವ' ಅಥವಾ ಹಬ್ಬವಾಗಿದೆ. ಪೂರ್ಣ ಎಂದರೆ ತುಂಬ ಎಂದು ಅರ್ಥ; ಪೂರ್ಣಿಮೆ ಎಂದರೆ, ತುಂಬಾಗಿ ಅಥವಾ ತುಂಬ ಆದದ್ದು ಎಂದು ಅರ್ಥ. ಶುದ್ಧ ಪಾಡ್ಯದ ದಿನ ತೆಳ್ಳನೆಯ ಗೆರೆಯಂತೆ, ರೇಷೆಯಂತೆ ತೋರಿದ ಚಂದ್ರನು ದಿನಗಳೆದಂತೆಲ್ಲ ತುಂಬುತ್ತ, ದಪ್ಪನಾಗುತ್ತ ಹೋಗಿ, ಪಕ್ಷದ ಕೊನೆಯಲ್ಲಿ ಪೂರ್ಣಚಂದ್ರನಾಗಿ, ಜಗತ್ತನ್ನೆಲ್ಲ ಆಹ್ಲಾದಕರವಾದ ತಂಬೆಳಕಿನಿಂದ ತುಂಬುತ್ತಾನೆ. ಆ ಹುಣ್ಣಿಮೆಯು ಹೇಗೆ ಪೂರ್ಣತೆಯ ಸಂಕೇತವಾಗಿ ಸಂತೋಷ, ಉತ್ಸಾಹಗಳನ್ನುಂಟು ಮಾಡುತ್ತದೋ ಹಾಗೆ, ಕೈಕೊಂಡ ಕಾರ್ಯವು ಪೂರ್ಣವಾಗುತ್ತಲೇ ಸಂತೋಷವಾಗುವುದು. ಆ ಸಂತೋಷವನ್ನು ಆಟ, ಊಟ, ವಿನೋದಗಳಿಂದ ಆಚರಿಸುವುದು ಮಾನುಷ್ಯ ಸ್ವಭಾವವಾಗಿದೆ. ಕಾರ್ಯವು ಪೂರ್ಣವಾಗಲು ಬೆಂಬಲವಾಗಿ ನಿಂತ ಯಾವ ಅದೃಶ್ಯವಾದ ಶಕ್ತಿ ಇದೆಯೋ ಅದನ್ನು ನೆನೆದು, ಅದಕ್ಕೆ ಗೌರವವನ್ನು ಅರ್ಪಿಸುವುದೇ ಪೂಜೆಯಾಗಿಯೂ, ಧಾರ್ಮಿಕ ಕೃತ್ಯವಾಗಿಯೂ ಪರಿಣಮಿಸುವುದು. ಅನ್ಯರೊಡನೆ ತೋಡಿಕೊಳ್ಳುವುದರಿಂದ ನಮ್ಮ ದುಃಖದ ಭಾರವು ಹೇಗೆ ಕಡಿಮೆಯಾಗುತ್ತದೋ ಹಾಗೆ ಅನ್ಯರೊಡನೆ ಕೂಡಿ ಅನುಭವಿಸುವುದರಿಂದ ನಮ್ಮ ಸುಖವು ಹೆಚ್ಚುತ್ತದೆ. ಅದ್ದರಿಂದಲೇ ಸುಖದುಃಖಗಳ ಸಾಮೂಹಿಕ ಆಚರಣೆಗಳು ಎಲ್ಲೆಡೆಯೂ ರೂಢಿಗೆ ಬಂದಿವೆ.

ಈ ಆಶ್ವೀಜ ಮಾಸದ ಶುಕ್ಲ ಪಾಡ್ಯದಿಂದ ದಶಮಿಯವರೆಗಿನ ಒಂಬತ್ತು ರಾತ್ರಿಗಳಿಗೆ 'ನವರಾತ್ರಿ' ಎಂಬ ಹೆಸರು ಬಂದಿದೆ. ಈ ನವರಾತ್ರಿಯು ಬಹು ಸಂತೋಷದಿಂದಲೂ, ಪವಿತ್ರವಾದ ಮನಸ್ಸಿನಿಂದಲೂ ಆಚರಿಸಲ್ಪಡಲೆಂದು ಅದಕ್ಕೆ 'ಧಾರ್ಮಿಕ' ಸಂಕೇತವನ್ನು ಸೂಚಿಸಲಾಗಿದೆ. ಸರ್ವಸೃಷ್ಟಿಯೂ ಸ್ತ್ರೀಗರ್ಭರೂಪದಿಂದ ಹೊರಬರುವುದಲ್ಲವೇ? ಮನುಷ್ಯನಿಂದ ಕ್ರಿಮಿಕೀಟಾದಿವರೆಗಿನ ಸರ್ವ ಜೀವಜಂತುಗಳೂ ಸ್ತ್ರೀ ರೂಪದ ಹೊಟ್ಟೆಯಿಂದಲೇ ಹುಟ್ಟುತ್ತವೆ. ಜೀವ ಇದ್ದಲ್ಲಿ ಶಕ್ತಿ ಇದೆ; ಶಕ್ತಿಯೇ ಜೀವದ ಸಂಕೇತ. ಈ ಜೀವವು ಸ್ತ್ರೀಗರ್ಭದಿಂದಲೇ ರೂಪಧಾರಣ ಮಾಡುವುದಾದ್ದರಿಂದ, ಜೀವಶಕ್ತಿಯು ಮಾತೆಯಾದ ಸ್ತ್ರೀಯು ಶಕ್ತಿಯ ಮೂಲಸ್ಥಾನವಾದಳು. ಅದ್ದರಿಂದಲೇ. ಜೀವಜಾತಗಳ ಮೂಲವಾದ ಪರಬ್ರಹ್ಮವನ್ನು ಶಕ್ತಿರೂಪಿಯಾದ 'ದೇವಿ' ಎಂದು ಸಂಕಲ್ಪಿಸಿಕೊಂಡು, ಆರಾಧಿಸಲಾಗುತ್ತಿದೆ. ಇದೇ 'ಶಕ್ತಿಪೂಜೆ" ಇದೇ ದೇವೀ ಉಪಾಸನೆ.

ಶಕ್ತಿಯ ಕೇಂದ್ರ

ಶಕ್ತಿಗೆ ಈಗಿನ ವಿಜ್ಞಾನಿಗಳು ವಿದ್ಯುತ್ ಎನ್ನುತ್ತಾರೆ. ಪಂಚಭೂತಗಳ ನಿಚ್ಚಣಿಕೆಯ ಕೊನೆಯ ಹಂತವೇ ತೇಜಸ್ಸು ಅದೇ ವಿದ್ಯುತ್ತು. ಆ ತೇಜಸ್ಸೇ ಸೃಷ್ಟಿಯ ಮೂಲ ಬೀಜ. ಅದನ್ನೇ ವೀರ್ಯವೆನ್ನುವರು. ಯೋಗಶಾಸ್ತ್ರ ಹಾಗೂ ಆಧುನಿಕ ಶರೀರ ರಚನಾಶಾಸ್ತ್ರ ಪ್ರಕಾರ ಈ ತೇಜಸ್ಸಿನ ಕೇಂದ್ರವು ಮೂಲಧಾರದಲ್ಲಿದೆ. ಇದಕ್ಕೆ ಮೂಲಾಧಾರ ಚಕ್ರವೆನ್ನುವರು. ಕೆಳಗೆ ಬೆಂಕಿಯನ್ನಿಟ್ಟು ಅದರಮೇಲೆ ಭಾಂಡೆಯನ್ನಿಟ್ಟು ಆಹಾರವನ್ನು ಬೇಯಿಸುವಂತೆ, ಮನುಷ್ಯ ದೇಹದಲ್ಲಿ ಈ ಅಗ್ನಿಸ್ಥಾನವನ್ನು ಮೂಲಾಧಾರ ಸ್ಥಾನದಲ್ಲಿ ಕೇಂದ್ರಿಸಲಾಗಿದೆ. ಆದಕ್ಕೆ ಶ್ರೀಚಕ್ರವೆಂಬ ಸುಂದರವಾದ ಮತ್ತೊಂದು ಹೆಸರೂ ಉಂಟು. ಶ್ರೀ ಎಂದರೆ, ಜೀವಧಾರಣೆಗೆ ಅತ್ಯಗತ್ಯವಾದ ಸಂಪತ್ತು- ಆ ಸಂಪತ್ತು ದೃಶ್ಯರೂಪದ ಲೋಹನಾಣ್ಯಗಳ ಸಂಪತ್ತಲ್ಲ; ಆರೋಗ್ಯ ರೂಪದ ತೇಜಸ್ಸಿನ ಸಂಪತ್ತು. "ಆರೋಗ್ಯವೇ ಭಾಗ್ಯ" ಎಂಬ ಗಾದೆಯ ಮಾತು ಅದನ್ನೇ ಬಹು ಸುಲಭ ಭಾಷೆಯಲ್ಲಿ ಸಾರುತ್ತಿದೆ. ಎಲ್ಲವನ್ನೂ ಪ್ರಖರವಾದ ಅಗ್ನಿಯು ಸುಟ್ಟು ಶುದ್ಧಿಮಾಡುವಂತೆ, ಪ್ರಚಂಡ ತೇಜಸ್ವಿಯಾದವನು ವಿಷವನ್ನು ಕೂಡಾ ತಿಂದು, ದಕ್ಕಿಸಿಕೊಂಡು, ಅಮೃತವಾಗಿ ಮಾಡಬಲ್ಲನು. ಇದಕ್ಕೆ, ವಿಷಪಾನದಿಂದ ನೀಲಕಂಠನಾದ, ಹಾಗೂ ವಿಷಸರ್ಪಗಳಿಂದ ಭೂಷಿತನಾದ ಪರಶಿವ (ಅವಿನಾಶಿಯಾದ ಮಹಾಮಂಗಳ)ನೇ ಸಾಕ್ಷಿ. ತನ್ನ ಪರಮವೈರಾಗ್ಯದಿಂದ, ಅಖಂಡ ಬ್ರಹ್ಮಚರ್ಯದ ವೀರ್ಯಧಾರಣದಿಂದ, ಪರಶಿವನು ಅವಿನಾಶಿಯಾದ ತೇಜೋಲಿಂಗ, ಜ್ಯೋತಿರ್ಲಿಂಗವಾಗಿದ್ದಾನೆ.

ಶಕ್ತಿಯು ಶ್ರೀ ಚಕ್ರದಲ್ಲಿ ಪ್ರತಿಷ್ಠಿತವಾಗಿದೆ ಎಂಬುದರ ರಹಸ್ಯಾರ್ಥವೇ ಇದು. ಈ ಶಕ್ತಿಯನ್ನು, ಮಳೆಗಾಲ ಕಳೆದು, ಜ್ಯೋತ್ಸ್ನಾಮಯವಾದ ಬೆಳದಿಂಗಳ ಶರತ್ಕಾಲದ ಆರಂಭ ಸೂಚಕವಾದ ಆಶ್ವಿನ ಮಾಸದ ಆದಿಯಿಂದ ಪೂಜಿಸಲು ವಿಧಿಸಲ್ಪಟ್ಟಿದೆ. ಈ ಮಾಸವು ಬೆಳೆಗಳನ್ನಿತ್ತು ಮನೆ ತುಂಬಿಸಿಕೊಳ್ಳುವ ವೇಳೆಯೂ ಹೌದು. ಇದರ ಕೊನೆಯಲ್ಲಿ ಪರಮಾನಂದದ ಸೂಚಕವಾದ ದೀಪಗಳ ಹಬ್ಬವಾದ ದೀಪಾವಳಿಯೂ, ಲಕ್ಷ್ಮೀ-ಸರಸ್ವತಿಯರ ಪೂಜೆಯೂ ಬರುವುದು. ಆಶ್ವಿನದಲ್ಲಿ ಪ್ರತಿಷ್ಠಿತವಾಗಿ, ಪೂಜೆಗೊಂಡ ಶಕ್ತಿಯು, ದೀಪಾವಳಿಯಲ್ಲಿ ಉಜ್ವಲವಾದ ಸಂಪತ್ತು, ಜ್ಞಾನ, ಮತ್ತು ಸುಖದ ರೂಪದಿಂದ ಬೆಳಗುವುದು.

ಸಪ್ತಶತಿ- ಅಂದರೆ ಏಳುನೂರು ಶ್ಲೋಕಗಳುಳ್ಳ, ದೇವೀಮಹಾತ್ಮ್ಯೆಯ ಗ್ರಂಥವನ್ನು ರಚಿಸಿದ ಪ್ರಾಚೀನ ದ್ರಷ್ಟಾರರು ಶಕ್ತಿಪೂಜೆಯ ಅವಶ್ಯಕತೆಯನ್ನೂ, ಅದರಿಂದ ಬರುವ ಇಹಪರ ಹಿತಕಾರಕವಾದ ಸತ್ಫಲಗಳನ್ನೂ ಅದರಲ್ಲಿ ಬಹು ಮನೋಹರವಾಗಿ ಬಣ್ಣಿಸಿದ್ದಾರೆ. ಸೃಷ್ಟಿ, ಸ್ಥಿತಿ, ಲಯ ಎಂಬೀ ಕಾರ್ಯತ್ರಯವೆಲ್ಲ . ಆ ಶಕ್ತಿಯ ಕ್ರಿಯೆಗಳೇ ಆಗಿವೆ. ಶಕ್ತಿಯನ್ನು ಕಳೆದುಕೊಂಡ ದೇಹಿಯು ಬಗೆ ಬಗೆಯ ನೋವುಗಳಿಗೆ ಗುರಿಯಾಗುತ್ತಾನಲ್ಲವೇ? ಆ ನೋವುಗಳು ಶರೀರದ ಮುಖಾಂತರವಾಗಿ ತೋರಿದಾಗ ನಾವು 'ವ್ಯಾಧಿ' ಎನ್ನುತ್ತೇವೆ; ಮಾನಸಿಕ ರೂಪವಾಗಿ ತೋರಿದಾಗ 'ಆಧಿ' ಎನ್ನುತ್ತೇವೆ. ಸತ್ವ, ರಜ, ತಮ ಎಂಬ ತ್ರಿಗುಣಗಳ ಮೂಲಕವಾಗಿ ದೃಶ್ಯರೂಪ ಪಡೆದ ಕಫ, ವಾತ, ಪಿತ್ತಗಳೆಂಬ ತ್ರಿದೋಷಗಳ ಸಮತ್ವವು ತಪ್ಪಿದಾಗ ರೋಗ ಉಂಟಾಗುವುದು. ಸಮತ್ವವನ್ನು ಕಾದುಕೊಂಡು ಬರುವುದೇ ನಿರೋಗಸ್ಥಿತಿ. ಆದಕ್ಕೆ " ಯೋಗ" ಎಂದು (ಸಮತ್ವಂ ಯೋಗಂ ಉಚ್ಯತೆ) ಗೀತೆಯು ಕರೆದಿದೆ. ಈ ಮೂರು ಗುಣಗಳೂ, ದೋಷಗಳೂ, ಶಕ್ತಿಗಳೇ ಆಗಿವೆ. ಶಕ್ತಿಯ ಸ್ಥಾನಪಲ್ಲಟದಿಂದ ಹಾಗೂ ವಿಷಮತೆಯಿಂದ ಹುಟ್ಟುವುದು, ಬದುಕುವುದು, ಸಾಯುವುದು ಎಂಬ ಪ್ರಾಪಂಚಿಕ ಕ್ರಿಯೆಗಳಾಗುತ್ತವೆ.

ಈ ಶಕ್ತಿಗಳು ಒಂಭತ್ತು ವಿಧವಾದ ರೂಪಗಳಿಂದ ಕೆಟ್ಟುದನ್ನು ನಾಶಮಾಡುತ್ತವೆ. ಆ ಕೆಟ್ಟುದಕ್ಕೆ "ದೈತ್ಯ"ರೆಂದು ಹೆಸರಿಡಲಾಗಿದೆ. ದೇವಿಯು ದೈತ್ಯರುಗಳನ್ನು ಸಂಹಾರಮಾಡಿ, ಲೋಕ ಕಲ್ಯಾಣವನ್ನುಂಟುಮಾಡಿದಳೆಂಬುದರ ಅರ್ಥವೇ ಇದು.

ಈ ರೀತಿ ಇರುವ ಈ ನವರಾತ್ರಿಯ ಶಕ್ತಿಯ ಪೂಜೋಪಾಸನೆಯು ಯೋಗಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರಗಳ ಭದ್ರವಾದ ಪೀಠದ ಮೇಲೆ ರಚಿತವಾದ ದೊಡ್ಡ ಹಬ್ಬವಾಗಿದೆ. ಇದನ್ನು ತ್ರಿಕರಣ ಪೂರ್ವಕವಾಗಿ ಆಚರಿಸಿ, ಸತ್ಯ, ಪ್ರೀತಿ, ನೀತಿ, ವಿನಯ, ವಿದ್ಯೆ ಎಂಬೀ ಪಂಚಾಮೃತದ ಫಲವನ್ನು ಸರ್ವ ಸಜ್ಜನರೂ ಒಂದು ನಿಮಿಷವಾದರೂ ಬಿಡದೆ ಸದಾ ಜೀವನದಲ್ಲಿ ಪ್ರತಿಷ್ಠಿಸಿಕೊಳ್ಳಲಿ,ಎಂಬುದೇ ಪ್ರಾರ್ಥನೆ.

(ಜ) —ಜಿ. ಆರ್. ಪಾ

ZANDU Mahayogaraja Guggula.

ಝಾಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ. 1 ತೊಲೆಗೆ ರೂ 3- ಮಾತ್ರ.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್. ಕೆಮಿಸ್ಟ್ಸ ಎಂಡ್ ಡ್ರಗ್ಗಿಸ್ಟ್ಸ, ಉಡುಪಿ.
2 ಶ್ರೀ. ವಿ. ವಿ. ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್. ಎಸ್. ಶರ್ಮ, ಹಜೂರು ರಸ್ತೆ ಮಂಗಳೂರು.
ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರ ಶರತ್ತುಗಳಿಗೆ ಬರೆಯಿರಿ-

DAMODAR & CO.,
Nainiappa Naicken Street, Park Town–**MADRAS** 3.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು
ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ,
ನೋವು, ಗಾಯಗಳು, ದಾತುಕೊಳ್ಳುವುದ
ಚೇಳುವಿಷ ಮುಂತಾದವು, ಪಕ್ಷವಾತ, ಮೊ
ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌ

SOVEREIGN-REMEDY
AMRUTANJAN
Best Indian Pain Balm
Amrutanjan Depots
BOMBAY MADRAS

REGD
ಹುಳುಕ
ಮುದ್ರೆ
ನಮ್ಮ
ಜಿಕ್ಕ

ಅಮೃತಾಂಜನ ಲಿಮಿಟೆಡ
ಮದರಾಸು, ಬೊಂಬಾಯಿ ಮತ್ತು ಕ

ಶೋಷಣೆಗಳಿಂದ ಸಮಸ್ಯೆಗಳು ಬಗೆಹರಿಯವು

ಭೇದಭಾವ ಮರೆತು ಒಕ್ಕಟ್ಟಿನಿಂದ ಕೆಲಸಮಾಡಿರಿ

ಉಸ್ಮಾನಾಬಾದದಲ್ಲಿ ಪಂಡಿತ ನೆಹರೂರವರ ಭಾಷಣ

ತಾ 27ರಂದು ಹೈದರಾಬಾದಿನ ಉಸ್ಮಾನಾಬಾದದಲ್ಲಿ ಲಕ್ಷಕ್ಕಿಂತಲೂ ಜಾಸ್ತಿ [illegible]ಂದ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಪ್ರಧಾನಮಂತ್ರಿ ಪಂಡಿತ ನೆಹರೂರವರು ಭಾಷಣಮಾಡುತ್ತ, ಜನರು ತೋರಿದ ಪ್ರೀತಿ ವಿಶ್ವಾಸಗಳಿಂದ ತನ್ನ ಪ್ರಯಾಣದ ಆಯಾಸವು ಮಾಯವಾಗಿದೆ. ಹಾರ ತುರಾಯಿಗಳನ್ನು ಹಾಕಿ ಪರಸ್ಪರ ಸ್ತುತಿ ಮಾಡುವುದರಲ್ಲಿ ನನಗೆ ವಿಶ್ವಾಸವಿಲ್ಲ. ಕೆಲಸಮಾಡುವವರಲ್ಲಿ ನನ್ನ ವಿಶ್ವಾಸ ಹೆಚ್ಚು ಎಂದು ಹೇಳಿದರು.

ಸ್ವಾತಂತ್ರ್ಯ ಲಭಿಸಿದನಂತರ ನಿಮ್ಮ ಹಕ್ಕುಗಳ ಜತೆಗೆ ನಿಮ್ಮ ಮೇಲೆ ಬಿದ್ದಿರುವ ಕೆಲವೊಂದು ಹೊಣೆಗಳೂ ಕರ್ತವ್ಯಗಳೂ ಇರುವವು. ದೇಶವು ನಿರುದ್ಯೋಗದ ಸಮಸ್ಯೆಯನ್ನು ಬಿಡಿಸಬೇಕಾಗಿದೆ. ಆರ್ಥಿಕ ಸಮಸ್ಯೆಗಳನ್ನೂ ಬಿಡಿಸಬೇಕಾಗಿದೆ. ಇವು ಬರೀ ಶೋಷಣೆಗಳಿಂದ ಇಲ್ಲವೆ ಪ್ರತ್ಯೇಕತೆಯ ಭಾವನೆಯಿಂದ ಬಿಡಲಾರವು. ಎಲ್ಲ ರಾಜ್ಯಗಳೂ ಎಲ್ಲಧರ್ಮದಜನರೂ ತಮ್ಮ ಭೇದಭಾವಗಳನ್ನು ಮರೆತು ಒಕ್ಕಟ್ಟಿನಿಂದ ಕೆಲಸಮಾಡಿದರೆ ಇವುಗಳನ್ನು ಸಾಧಿಸುವುದು ಸಾಧ್ಯವಾಗುವುದು. ನಾವು ನಮ್ಮ ಬಂಧವರಿಗೆ ಅನ್ಯಾಯ ಬಗೆದರೆ ಜಗತ್ತಿನ ರಾಷ್ಟ್ರಗಳಲ್ಲಿ ನಾವು ತಲೆಎತ್ತಿ ನಿಲ್ಲುವುದೆಂತು? ಹಿಂದಿನದೆಲ್ಲವನ್ನು ಮರೆತುಬಿಟ್ಟು ಮಾಡಿದ ಕೃತಿಗೆ ಪ್ರಾಯಶ್ಚಿತ್ತವೆಂದು ಗಲಭೆಯಲ್ಲಿ ನಿರಾಶ್ರಿತರಾದವರಿಗೆ ಪರಿಹಾರನೀಡಲು ಸಹಾಯಮಾಡುವುದು ನಮ್ಮ ಕರ್ತವ್ಯವೆಂದು ಮುಂತಾಗಿ ಹೇಳಿದರು.

ಭಾರತ ಸಮಾಜ ಸೇವಾ ಆಸ್ಪತ್ರೆ – ಶ್ರೀ ನೆಹರೂರವರಿಂದ ಉದ್ಘಾಟನೆ

ಸಮಾಜ ಸೇವಾ ಸಂಸ್ಥೆಯ ಹೈದರಾಬಾದ ಶಾಖೆಯ ಒಟ್ಟು ಸಾಧಾರಣ ನಾಲ್ವತ್ತು ಸಾವಿರ ರೂಪಾಯಿ ವೆಚ್ಚಮಾಡಿ ಕಟ್ಟಿಸಿದ ನಾಲ್ವತ್ತು ಹಾಸಿಗೆಗಳುಳ್ಳ ಆಸ್ಪತ್ರೆಯನ್ನು ತಾ 24ರಂದು ಪ್ರಧಾನ ಮಂತ್ರಿ ನೆಹರೂರವರು ಉದ್ಘಾಟಿಸುತ್ತ 'ನಮ್ಮ ದೇಶದ ಲಕ್ಷಗಟ್ಟಲೆ ಜನರು ಸಾಮಾಜಿಕ, ಆರ್ಥಿಕ ಸೇವೆಯಲ್ಲಿ ತಮ್ಮ ಸಾಮರ್ಥ್ಯಾನುಸಾರ ಕೆಲಸಮಾಡದಿದ್ದರೆ ನಮ್ಮ ದೇಶವು ನಿಜವಾಗಿಯೂ ಮುಂದುವರಿಯಲಾರದು' ಎಂದರು.

ಅವರು ಮುಂದುವರಿದು ಇದುವರೆಗೆ ನಾವು ಹಳ್ಳಿಗಳನ್ನು ದುರ್ಲಕ್ಷಿಸಿ ಪೇಟೆ ಶಹರುಗಳ ಕಡೆಗೆ ಹೆಚ್ಚು ಗಮನ ಕೊಟ್ಟಿದ್ದಾಗಿದೆ. ಪಟ್ಟಣಗಳಿಗೆ ದೊಡ್ಡ ಆಸ್ಪತ್ರೆಗಳ ಅಗತ್ಯವಿರುವುದೇನೋ ನಿಜ. ಆದು ಹಳ್ಳಿಗಳಲ್ಲಿ ಜೀವಿಸುವ ಜನರಿಗೆ ವೈದ್ಯಕೀಯ ಉಪಚಾರವು ತಮ್ಮ ಹಳ್ಳಿಗಳಲ್ಲಿ ಅಥವಾ ಸಮೀಪದ ಹಳ್ಳಿಗಳಲ್ಲಿ ದೊರೆಯುವಂತೆ ಚಿಕ್ಕ ಆಸ್ಪತ್ರೆಗಳನ್ನು ಹಳ್ಳಿಗಳಲ್ಲಿ ಪ್ರಾರಂಭಿಸುವುದು ಅಗತ್ಯವಿದೆ. ಹಳ್ಳಿಯ ಜನರಿಗೆ ಅಗತ್ಯವಿರುವ ವೈದ್ಯಕೀಯ ಉಪಚಾರವು ಅವರಿದ್ದಲ್ಲಿಯೇ ದೊರೆಯುವಂತಾದರೆ ಅವರು ಇಂಥ ಆಸ್ಪತ್ರೆಗಳನ್ನು ಹಳ್ಳಿಗಳಲ್ಲಿ ಸ್ಥಾಪಿಸಿ ನಡೆಸಿಕೊಂಡು ಹೋಗಲು ಪ್ರತಿ ಕುಟುಂಬಕ್ಕೆ ವರ್ಷಕ್ಕೆ ಎಂಟಾಣೆಯಿಂದ ಒಂದು ರೂಪಾಯಿವರೆಗೆ ಕೊಡಲು ಹಿಂದು ಮುಂದೆ ನೋಡಲಾರರು. ಇಂಥ ಆಸ್ಪತ್ರೆಗಳನ್ನು ಸ್ಥಾಪಿಸಲು ಅಗತ್ಯವಿರುವ ವೆಚ್ಚದ ಕೆಲಭಾಗವನ್ನು ಜನರು ವಹಿಸಿಕೊಳ್ಳಲು ಮುಂದೆ ಬಂದರೆ ನಗರ ಸಭೆಯವರು, ಜಿಲ್ಲಾ ಬೋರ್ಡಿನವರು, ಮತ್ತು ಸರಕಾರದವರ ಹೆಚ್ಚಿನ ಹಣವನ್ನು ಕೊಟ್ಟು ಚಿಕ್ಕ ಮಾಲ್ಕ ಆಸ್ಪತ್ರೆಗಳನ್ನು ಹಳ್ಳಿಗಳಲ್ಲಿ ಸ್ಥಾಪಿಸಲು ಮುಂದೆ ಬರಬೇಕು. ಹಳ್ಳಿಗಳಿಗೆ ಉಪಯುಕ್ತ ಸೇವೆ ಸಲ್ಲಿಸುವ ಯಾವುದೇ ಯೋಜನೆಗೆ ಹಣಕಾಸಿನಿಂದ ಮತ್ತು ಇತರ ರೀತಿಯಲ್ಲಿ ಸಹಾಯನೀಡಲು ಹಳ್ಳಿಗರು ಮುಂದೆಬರುವರೆಂಬ ಭರವಸೆ ನನಗಿದೆ' ಎಂದರು

ದೇಶದ ತರುಣಿಯರಿಗೆ ರಾಜಾಜಿಯವರ ಉಪದೇಶ

ಅಖಿಲಭಾರತ ಗೃಹವಿಜ್ಞಾನ ಸಂಸತ್ತಿನ ದ್ವಿತೀಯಾಧಿವೇಶನವು ಈ ಬಾರಿ ತಾ 23ರಲ್ಲಿ ಮದ್ರಾಸಿನಲ್ಲಿ ಸೇರಿದ ವೇಳೆ ಮದ್ರಾಸದ ಪ್ರಧಾನಿ ಶ್ರೀ ರಾಜಗೋಪಾಲಾಚಾರ್ಯರು ದೇಶದ ಬಾಲಿಕೆಯರನ್ನು ಕುರಿತು ಮಾತನಾಡುತ್ತ 'ಕೌಟುಂಬಿಕ ಸೌಖ್ಯವೇ ಗೃಹವಿಜ್ಞಾನವೆಂದೂ ಅದು ಬರೀ ಹೊಟ್ಟೆ ತುಂಬಿಸುವ ಶಾಸ್ತ್ರವಲ್ಲವೆಂದೂ ಸ್ಪಷ್ಟ ಉಪದೇಶವಿತ್ತರು.

ಅವರು ಮುಂದುವರಿಯುತ್ತ 'ಗೃಹವಿಜ್ಞಾನವು ನಿಜವಾಗಿಯೂ ದೊಡ್ಡ ಶಾಸ್ತ್ರ. ಕುಟುಂಬದ ಸೌಖ್ಯವೇ ಗೃಹವಿಜ್ಞಾನವೆನ್ನಬಹುದು. ಬಟ್ಟೆಗಳನ್ನು ಒಗೆದು ಮಡಿಮಾಡುವುದರಿಂದಲೇ ಇಲ್ಲವೆ ಅಡಿಗೆ ಮಾಡುವುದರಿಂದಲೇ ಗೃಹವಿಜ್ಞಾನವಾಗಲಾರದು. ಹೇಗೆ ವಿವಾಹವಾಗಬೇಕು ಮತ್ತು ವೈವಾಹಿಕ ಜೀವನವನ್ನು ಹೇಗೆ ನಡೆಸಬೇಕು ಎಂಬುದನ್ನು ಕಲಿಯಬೇಕು. ವಿವಾಹ, ಕುಟುಂಬ ಮತ್ತು ಮಕ್ಕಳು ಇವುಗಳಿಗೆ ಸಂಬಂಧಿಸಿದ್ದೇ ಗೃಹವಿಜ್ಞಾನ. ಮನೆಯನ್ನು ನಡೆಸುವ ಹೊಣಗಾರಿಕೆಯು ತಮ್ಮಮೇಲೆ ಬಿದ್ದ ಕೂಡಲೇ ಅದನ್ನು ನಿರ್ವಹಿಸುವಂತೆ ಮನೆಯನ್ನು ಸಜ್ಜುಮಾಡಿಟ್ಟುಕೊಳ್ಳಲು ಸಮರ್ಥವಾಗುವಂತೆ ನಮ್ಮ ತರುಣ–ತರುಣಿಯರಿಗೆ ಶಿಕ್ಷಣ ದೊರೆಯಬೇಕಾದುದು ಅಗತ್ಯ.

ಕೌಟುಂಬಿಕ ಸುಖದ ಶಾಸ್ತ್ರವನ್ನು ಶಾಲೆ ಕಾಲೇಜುಗಳಲ್ಲಿ ಕಲಿಸಬೇಕು ಎಂದು ನನ್ನ ಅಭಿಪ್ರಾಯವಿದೆ. ಈ ಗೃಹವಿಜ್ಞಾನ ಶಿಕ್ಷಣವು ತರುಣಿಯರಿಗೆ ಅಗತ್ಯವಿದ್ದಷ್ಟೇ ತರುಣರಿಗೂ ಅಗತ್ಯವಾಗಿದೆ. ಆದಾಗ್ಗ್ಯೂ ಈ ಶಿಕ್ಷಣವನ್ನು ತರುಣಿಯರು ಅತ್ಯಗತ್ಯ ಪಡೆಯಬೇಕು ಎಂದು ನಾನು ಒತ್ತಿ ಹೇಳುತ್ತೇನೆ' ಎಂದರು.

ಭದ್ರತಾ ಮಂಡಳಕ್ಕೆ ಡಾ। ಗ್ರಹಾಮರ ವರದಿ

ಸಂ. ರಾ. ಸಂಘದ ಕಾಶ್ಮೀರ ಪ್ರತಿನಿಧಿ ಡಾ। ಗ್ರಹಾಮರು ಭದ್ರತಾ ಮಂಡಳಕ್ಕೆ ತಾ. 24ರಲ್ಲಿ ವರದಿಯೊಂದನ್ನು ಸಾದರಪಡಿಸುತ್ತ 'ಸಂ. ರಾ. ಸಂಘದ ಕಾಶ್ಮೀರ ಸಮಿತಿಯು ಗೊತ್ತುವಳಿಯನ್ವಯ ಭಾರತ–ಪಾಕಿಸ್ತಾನಗಳ ಮೇಲೆ ಯುದ್ಧ ವಿರಾಮ ಗಡಿಯ ಎರಡೂ ಬದಿಯಲ್ಲಿರುವ ಪ್ರದೇಶದ ಬಗ್ಗೆ ಇರುವ ಹೊಣೆ ಮತ್ತು ನಿರ್ವಹಿಸತಕ್ಕ ಕಾರ್ಯ ಇವುಗಳ ತಳಹದಿಯ ಮೇಲೆ ಯುದ್ಧ ವಿರಾಮ ಗಡಿಯ ಎರಡೂ ಬದಿಯಲ್ಲಿ ನಿಃಸೈನ್ಯೀಕರಣದ ನಂತರ ಉಳಿಯಬಹುದಾದ ಸೈನ್ಯದ ನಿರ್ದಿಷ್ಟ ಸಂಖ್ಯೆಯನ್ನು ಗೊತ್ತುಪಡಿಸುವ ಸಂಬಂಧದಲ್ಲಿಯೂ ಚರ್ಚೆ ನಡೆಸಲಾಯಿತು. ಆದರೆ ಸಂ. ರಾ. ಸಂಘದ ಗೊತ್ತುವಳಿಯನ್ವಯ ಕಾಶ್ಮೀರದಲ್ಲಿ ಭಾರತ ಪಾಕಿಸ್ತಾನಗಳಿಗಿರುವ ಸ್ಥಾನಮಾನ, ಹೊಣೆ ಇವುಗಳ ಸಂಬಂಧದಲ್ಲಿ ಉಭಯ ಪಕ್ಷಗಳಲ್ಲಿ ಮೂಲಭೂತವಾದ ಭಿನ್ನಾಭಿಪ್ರಾಯವಿದ್ದುದರಿಂದ ಈ ಬಗ್ಗೆಯು ಒಮ್ಮತವಾಗಲಿಲ್ಲ' ಎಂದು ಹೇಳಿರುವರು. ಇನ್ನು ಭದ್ರತಾ ಮಂಡಳವು ಯಾವ ನಿರ್ದಿಷ್ಟ ಕ್ರಮ ಕೈಕೊಳ್ಳಬೇಕೆಂಬುವನ್ನು ಡಾ। ಗ್ರಾಹಾಮರು ತಮ್ಮ ವರದಿಯಲ್ಲಿ ಸೂಚಿಸಿಲ್ಲ. ಅವರು ಕಾಶ್ಮೀರದಲ್ಲಿ ನಿಃಸೈನ್ಯೀಕರಣ ಸಾಧಿಸಲು ನಾವು ಮಾಡಿದ ಪ್ರಯತ್ನ ಅದು ವಿಫಲವಾಗಲು ಇರುವ ಕಾರಣಗಳನ್ನು ಸಾದ್ಯಂತವಾಗಿ ತಿಳಿಸಿರುವರು. ಮುಂದೆ ಯಾವ ಕ್ರಮ ಕೈಕೊಳ್ಳಬೇಕೆಂಬುದನ್ನು ಭದ್ರತಾಮಂಡಳದ ನಿರ್ಣಯಕ್ಕೆ ಅವರು ಬಿಟ್ಟುಕೊಟ್ಟಿರುವರು.

BBG/52/LOT 4

ನನ್ನ ಪತಿಗೆ ಉತ್ತಮ ಚಹಾ ಕಂಡರೆ ಇಷ್ಟ!



ಆದರೆ ನಾನು [illegible] [illegible] ಅವರ ಇಷ್ಟ! [illegible] ನನ್ನ ತಾಯಿಯು ನನಗೆ [illegible] ಅವರನ್ನು ಸಂತೋಷಗೊಳಿಸುವುದು ಕಷ್ಟವಾಗುತ್ತಿತ್ತು. [illegible] ವಾಗಿಯೂ ಉತ್ತಮವಾದ ಚಹಾ [illegible] ಒಡನೆಯೇ ಹಣವನ್ನು ಉಳಿಸುತ್ತದೆ, ಏಕೆಂದರೆ ಕೇವಲ ಎರಡು ಔನ್ಸಿನ ಒಂದು ಬ್ರೂಕ್ ಬಾಂಡ್ ಪ್ಯಾಕೆಟ್ಟು 30 ಬಟ್ಟಲುಗಳ ಚಹಕ್ಕೆ ಸಾಕಾಗುತ್ತದೆ. ಚೆನ್ನಾಗಿ ಪರಿಚಿತವಾದ ಬ್ರೂಕ್ ಬಾಂಡ್ ಪ್ಯಾಕೆಟ್ಟು ನನ್ನ ಮನೆಯಲ್ಲಿ ಸದಾಕಾಲದಲ್ಲಿಯೂ ಇರುತ್ತದೆ

ಬ್ರೂಕ್
ಬಾಂಡ್
ಚಹಾ

ಭಾರತದ ಅತ್ಯುತ್ಕೃಷ್ಟವಾದ ಮ

ಗೀತೆಯ ಕೈಗನ್ನಡಿ

ತಿಳಿಗನ್ನಡದಲ್ಲಿ ಅನುಭವಪೂರ್ಣರಿಂದ ಬರೆಯಲ್ಪಟ್ಟ ಇಂತಹ ಅನುವಾದ 'ಗೀತೆಯ ಕೈಗನ್ನಡಿ'ಯನ್ನು ಬಿಟ್ಟರೆ ಇನ್ನೊಂದಿಲ್ಲ. 'ಗೀತೆಯ ಕೈಗನ್ನಡಿ''ಯು ಹೊಸಕೆರೆ ಶ್ರೀ ಚಿದಂಬರಯ್ಯನವರ ಸರಳ ಭಾಷಾಂತರ ಅತೀ ಅಗ್ಗವಾದ ಮತ್ತು ಪ್ರತಿಮನೆಯಲ್ಲಿಯೂ ಇರಬೇಕಾದ ಗೀತಾಪುಸ್ತಕ

ಬೆಲೆ ಬರೇ 0–12–0 ಮಾತ್ರ.
ನವಯುಗ ಪ್ರೆಸ್ ಉಡುಪಿ.

1906 ರಲ್ಲಿ ಸ್ಥಾಪಿಸಲ್ಪಟ್ಟು
ಸರ್ವತೋಮುಖವಾಗಿ ಅಭಿವೃದ್ಧಿ ಹೊಂದುತ್ತಲಿರುವ
"ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್"
ಇದನ್ನೇ ಸಹಸ್ರಾರು ಜನರು ತಮ್ಮ ಅಚ್ಚುಮೆಚ್ಚಿನ ಬ್ಯಾಂಕನ್ನಾಗಿ
ಆರಿಸಿರುವರು. ನೀವೂ ಇಂದೇ ಒಂದು ಖಾತೆಯನ್ನು ತೆರೆದು
ಬ್ಯಾಂಕಿನ ಗ್ರಾಹಕರಲ್ಲಿ ಒಬ್ಬರಾಗಿರಿ
THE CANARA BANKING CORPORATION LIMITED.
ಪ್ರಧಾನ ಕಾರ್ಯಾಲಯ, ಉಡುಪಿ. (ದ ಭಾರತ)

ನವಯುಗ
ಉಡುಪಿ, ಗುರುವಾರ ೨-೧೦-'೫೨

ಅಕ್ಟೋಬರ ೨

ಈ ದಿನವನ್ನು ನಾವು ಎಂದೆಂದಿಗೂ ಮರೆಯುವಂತಿಲ್ಲ, ದೇಶ ವಿದೇಶಗಳಲ್ಲಿ ಮಹಾತ್ಮರೆಂದು ಹೆಸರಾಂತ, ದೇಶೀಯರಿಗೆಲ್ಲ ಪೂಜ್ಯ ಬಾಪೂಜಿ ಎಂದೆನಿಸಿಕೊಂಡ, ಗಾಂಧೀಜಿಯವರು ಜನ್ಮವೆತ್ತಿದ ದಿನ ಇದು. ಈ ದಿನ ಭಾರತದಲ್ಲಿ ಚಿರತ್ರಾಂಕಿತವಾಗಿರುವಂತೆ ಪ್ರತಿಯೊಬ್ಬ ಭಾರತೀಯನಿಗೂ ಪವಿತ್ರವಾಗಿರುವುದು. ಬಾಪೂಜಿ ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ವೀರ ಪುರುಷರೆಂಬುದು ಮಾತ್ರ ಈ ಪವಿತ್ರತೆಗೆ ಕಾರಣವಲ್ಲ—ಪಾರತಂತ್ರ್ಯದಲ್ಲಿ ತಮ್ಮ ಸಂಪೂರ್ಣ ವರ್ಚಸ್ಸನ್ನೂ, ಧೃತಿಯನ್ನೂ ಕಳೆದುಕೊಂಡು, ಗುಲಾಮಗಿರಿಯೇ ತಮ್ಮ ಅನಿವಾರ್ಯ ಭವಿಷ್ಯವೆಂದು ತಿಳಿದಿದ್ದ ಭಾರತೀಯರಲ್ಲಿ ಆತ್ಮಾಭಿಮಾನವನ್ನು ಕೆರಳಿಸಿ, ಸ್ಫೂರ್ತಿ ಮತ್ತು ನವಚೇತನವನ್ನು ತುಂಬಿಸಿ, ಅವರು ಮುಖವೆತ್ತಿ, ಮಾನವತ್ವವನ್ನು ಕಾಪಾಡಿಕೊಳ್ಳುವಂತೆ ಮಾಡಿದ ಅವರ ದೈವೀಕಶಕ್ತಿಯು ಜನತೆಯ ಹೃದಯಾಂತರಾಳದಲ್ಲಿ ಅವರಿಗೊಂದು ಪೂಜ್ಯಸ್ಥಾನಕೊಡಿಸಿತು. ಅವರು ಪ್ರತಿಪಾದಿಸಿದ ಸತ್ಯ ಮತ್ತು ಅಹಿಂಸಾತತ್ವ, ಉದಾತ್ತ ಧ್ಯೇಯ, ಉತ್ತಮ ಮಾರ್ಗದರ್ಶನ—ಇದರೊಂದಿಗೆ ಹೇಳಿದುದನ್ನೇ ಮಾಡುವ, ಮಾಡಿದುದನ್ನೇ ಹೇಳುವ ಸ್ಪಷ್ಟ ಧೋರಣೆ ಹಾಗೂ ಸರಳ ಮತ್ತು ಆದರ್ಶ ಜೀವನ ಜನರ ಕಣ್ಣು ತೆರೆಯಿಸಿ ಕ್ರಾಂತಿಯನ್ನೆಬ್ಬಿಸಿತು; ದೇಶದ ಅದೃಷ್ಟದಲ್ಲಿ ಅಭಿವೃದ್ಧಿ ತರಲನುಕೂಲಿಸಿತು. ಬಾಪೂಜಿ ಜನ್ಮವೆತ್ತದಿದ್ದರೆ, ಭಾರತದ ಸ್ಥಿತಿಗತಿ ಏನಾಗುತ್ತಿತ್ತೊ ಎಂಬುದನ್ನು ನೆನಸಿದರೆ ಅವರ ಜನ್ಮದಿನ—ಅಕ್ಟೋಬರ ೨ರ ಮಹತ್ವ ನಮಗೆ ತಿಳಿಯುವುದು.!

ಇಂತಹ ಪವಿತ್ರ ದಿನದಂದು ನಾವು ಗಾಂಧೀಜೀಯವರ ಆದೇಶ, ಉದ್ದೇಶಗಳನ್ನು ಸ್ಮರಿಸಿಕೊಂಡು, ಅವರು ಹಾಕಿಕೊಟ್ಟ ಆದರ್ಶವನ್ನು ಅನುಸರಿಸುತ್ತಿರುವೆವೊ ಎಂಬುದನ್ನು ವಿಮರ್ಶಿಸಿಕೊಳ್ಳುವುದವಶ್ಯ. ಗಾಂಧೀಜೀಯವರ ಕನಸಿನ 'ರಾಮ ರಾಜ್ಯ' ಅಥವಾ ನೆನಸಿದ ಸುಖಸಮೃದ್ಧಿಯಿಂದ ನಾವಿನ್ನೂ ಬಹುದೂರವಿರುವೆವು. ಅವರ ಕನಸು, ನೆನಸು ಕಾರ್ಯತಃ ಕೈಗೂಡಬೇಕೆಂದು ಅವರು ಜನತೆಯ ಕೈಗೆ ಕಟ್ಟಿಕೊಟ್ಟ ಕಾಂಗ್ರೆಸ್ಸು, ಅವರ ಉತ್ತರಾಧಿಕಾರಿಗಳೆಂದು ಹೆಸರಿದ್ದ ಪಂಡಿತ ನೆಹರುಗಳ ಮುಖಂಡತ್ವದಲ್ಲಿ ಶಕ್ತಿಮೀರಿ ಶ್ರಮಿಸುತ್ತಿರುವುದು; ಕೈಗೆ ಎಟಕದ ಕಾರಣಗಳಿಂದಾಗಲಿ, ಪ್ರಕೃತಿ ಮುನಿದ ಅನಾಂತರಗಳಿಂದಾಗಲಿ, ಈ ಶ್ರಮಕ್ಕೆ ಸರಿಯಾದ ಫಲ ಇನ್ನೂ ದೊರೆತಿಲ್ಲ. ಆದರೆ ಕಾಂಗ್ರೆಸ್ಸು ಕರ್ತವ್ಯಚ್ಯುತವಾಗಿಲ್ಲ; ತನ್ನ ಗುರಿಯನ್ನು ಮರೆಯದೆ, ಸ್ಥಿರವಾದ ಮತ್ತು ಬಲವಾದ ಹೆಜ್ಜೆಯನ್ನಿಡುತ್ತ ರಾಷ್ಟ್ರದ ಪುನರ್ರಚನಾ ಕಾರ್ಯದಲ್ಲಿ ಭದ್ರವಾದ ಅಸ್ತಿವಾರವನ್ನು ಕಾಂಗ್ರೆಸ್ಸು ಹಾಕಿರುವುದು; ದೇಶದ ಉಜ್ವಲ ಭವಿಷ್ಯವನ್ನು ಕಾಂಗ್ರೆಸ್ಸು ಕಾದಿರುವುದಲ್ಲದೆ ಅದನ್ನು ಸಾಧಿಸುತ್ತಿರುವುದು. ಈ ಕಾರ್ಯದಲ್ಲಿ ಮಿಲಿಯಾಂತರ ಜನರ ಬೆಂಬಲವಿರುವ, ದೇಶದಲ್ಲಿ ಹಿರಿಯ ಸ್ಥಾನವನ್ನು ಪಡೆದಿರುವ ಕಾಂಗ್ರೆಸ್ಸಿಗೆ ಬಾಪೂಜಿಯವರ ಮೂರ್ತಿಯೇ ಸ್ಫೂರ್ತಿಯನ್ನು ಕೊಟ್ಟಿದೆ, ಕೊಡುತ್ತಿದೆ, ಇನ್ನು ಮುಂದೆಯೂ ಕೊಡಬೇಕಾಗಿರುವುದು. ಈ ಸ್ಫೂರ್ತಿಯಿಂದಲೇ ಹೊತ್ತ ಹೊಣೆಗಾರಿಕೆಯ ನಿರ್ವಹಣೆಯಾಗಬೇಕು. ಜನತೆಯ ಪ್ರೀತಿ ವಿಶ್ವಾಸ ಪಡೆದಿರುವ ಈ ಜನತಾ ಸಂಸ್ಥೆಗೆ ಇದು ಅಶಕ್ಯವಲ್ಲ—ಮಾತ್ರ, ಪ್ರತಿಯೊಬ್ಬ ಪ್ರಾಮಾಣಿಕ ಕಾಂಗ್ರೆಸಿಗನೂ ಈ ಪುಣ್ಯ ದಿನದಂದು ತನ್ನ ಯಥಾನುಶಕ್ತಿ ನಿಸ್ವಾರ್ಥ ಸೇವೆಯನ್ನು ದೇಶ ಮತ್ತು ಜನತಾ ಹಿತದೃಷ್ಟಿಯಿಂದ ಮೀಸಲಾಗಿಡುವ ತನ್ನ ಪಕ್ಷದ ಕ್ರಿಯಾ ಶಕ್ತಿಯಲ್ಲಿ ವಿಶ್ವಾಸವಿಡುವ ಪುನರ್ದೀಕ್ಷೆ ತೊಡಬೇಕು.

ಹೀಗೆ ದೀಕ್ಷೆ ತೊಡಲು ಕಾರಣವಿದೆ. ತತ್ವಹೀನ, ಕ್ರಿಯಾಹೀನ ಪ್ರತಿಗಾಮಿ ಪಕ್ಷಗಳನೇಕ ತಮ್ಮ ಸ್ವಾರ್ಥಸಾಧನೆಗಾಗಿ ನಾನಾರೀತಿಯ ಸೋಗಿನಿಂದ ಕಾಂಗ್ರೆಸಿನ ಶಕ್ತಿ ಮರ್ದಿಸಲು, ಅನೈತಿಕ ಒಗ್ಗಟ್ಟಿನಿಂದ ಕತ್ತಿಕಟ್ಟಿ ಹೋರಾಟದ ಕಣಕ್ಕಿಳಿದಿರುವವು. ಕಾಂಗ್ರೆಸು ತತ್ವಶಃ ಇದಿರಾಟವನ್ನು ಮೆಚ್ಚುವುದು; ಆದರೆ ಜಾತೀಯತೆಯ ಕಿಚ್ಚನ್ನೆಬ್ಬಿಸುವ ಅಥವಾ ಜನವಂಚನೆಯ ಸ್ವಾರ್ಥಸಾಧಕರ ಪಕ್ಷಗಳನ್ನು ಕಾಂಗ್ರೆಸ್ಸು ಸಹಿಸುವುದಿಲ್ಲ. ಇದರಿಂದಲೇ ಜಾತ್ಯಾಂಧರೂ, ಸ್ವಾರ್ಥಿಗಳೂ ಕಾಂಗ್ರೆಸ್ಸನ್ನು ಬಿಟ್ಟು ಹೋಗುವಂತಾಯಿತು, ಕಾಂಗ್ರೆಸಿನಲ್ಲಿದ್ದ ಕೊಳಕು ಕಡಿಮೆಯಾಗುವಂತಾಯಿತು. ಆದರೆ ಯಾರ ಜಾತೀಯತೆಯ ಮನೋಭಾವನೆಗೆ ಕಾಂಗ್ರೆಸ್ಸು ಎಡೆಕೊಡಲಿಲ್ಲವೊ, ಯಾರ ಸ್ವಾರ್ಥಸಿದ್ಧಿಗಾಗಿ ಕಾಂಗ್ರೆಸ್ಸು ಕೈಗೊಂಬೆಯಾಗದಂತಾಯಿತೊ, ಅದೇ ವ್ಯಕ್ತಿಗಳು ಪ್ರತೀಕಾರಬದ್ಧರಾಗಿ, ತಮಗೆ ವ್ಯಕ್ತಿತ್ವ ಮತ್ತು ಪ್ರತಿಷ್ಠೆಯನ್ನು ಗಳಿಸಿಕೊಟ್ಟ ಅದೇ ಕಾಂಗ್ರೆಸ್ಸಿನ ಶುದ್ಧೀಕರಣಕ್ಕಾಗಿ ಹೊರಟಿರುವೆವೆನ್ನುತ್ತ ತಮ್ಮ ನಿಜ ಸ್ವರೂಪವನ್ನು ತೋರಿಸುತ್ತಿರುವರು. ಈ ಹವ್ಯಾಸವು ಖಂಡನೀಯವಿದೆ. ಅಲ್ಲದೆ ಈ ಶುದ್ಧೀಕರಣದ ಸೋಗಿನಲ್ಲಿ ನಾನಾ ರೀತಿಯ ಸ್ವಾರ್ಥ ಹುದುಗಿ ಕೊಂಡಿರುವುದು. ಅಂಥಹ ಸ್ವಾರ್ಥದ ಮೇಲೆ ಮುಸುಕೆಳೆದು ಕೊಳ್ಳಲು ತಾವು ಕಾಂಗ್ರೆಸಿನಲ್ಲಿದ್ದಾಗ ತೋರಿಸಿದ ದೇಶ ಪ್ರೇಮ, ಮಾಡಿದ ತ್ಯಾಗದ ನಿರೂಪಣೆಯನ್ನೂ ಮಾಡುತ್ತಿರುವರು. ಆದರೆ ಇವರು ನಿಜವಾದ ತ್ಯಾಗಮೂರ್ತಿಗಳಾಗಿದ್ದು, ದೇಶಪ್ರೇಮಿಗಳಾಗಿದ್ದರೆ ಕಾಂಗ್ರೆಸನ್ನು ಅವರು ತ್ಯಜಿಸುವ ಅಗತ್ಯವಿರಲಿಲ್ಲ, ಅಥವಾ ಹೊರತಳ್ಳಲ್ಪಡುತ್ತಿರಲಿಲ್ಲ, ಇದನ್ನು ಸಾರ್ವಜನಿಕರು ಸಾಮಾನ್ಯವಾಗಿ ಬಲ್ಲರಾದುದರಿಂದ ನಾವು ಆ ಕುರಿತು ವಿವರಿಸ ಹೋಗುವುದಿಲ್ಲ. ಕಾಂಗ್ರೆಸ್ ಶುದ್ಧೀಕರಣವನ್ನೆ ಮುಖ್ಯ ಧ್ಯೇಯವಾಗಿಟ್ಟುಕೊಂಡು ಅವತರಿಸಿದ ಕಿಸಾನ್ ಮಜದೂರ್ ಪ್ರಜಾಪಕ್ಷವು ತನ್ನ ರೂಪು ಮತ್ತು ಸ್ಥಾನಮಾನವನ್ನು ಕಳೆದುಕೊಂಡುದುದಲ್ಲದೆ, ಸಂಘ ಶಕ್ತಿಯ ಬಯಕೆಯಿಂದ ಇನ್ನೊಂದು ಪಕ್ಷಕ್ಕೆ ಅಂಟಿಕೊಳ್ಳುವ ನಿರ್ಧಾರ ಮಾಡಬೇಕಾಯಿತು. ಇದರಿಂದಲೇ ಜನತೆಯ ಒಲವು ಮತ್ತು ನಿಲುವು ಹೇಗಿದೆ ಎಂಬುದನ್ನು ತಿಳಿಯಬಹುದು. ಹಿಂದೆ ಆ ಪಕ್ಷವನ್ನು ಸೇರಿಕೊಂಡಾಗಲಿ, ಹೊರಗಿದ್ದೇ ಆಗಲಿ ಅದಕ್ಕೆ ಪ್ರೋತ್ಸಾಹಕೊಟ್ಟವರು ಆ ಪಕ್ಷದ ಹೆಸರೆತ್ತಲೂ ಈಗ ನಾಚಿ, ವೈಯಕ್ತಿಕವಾಗಿ ಕಾಂಗ್ರೆಸ್ಸು ಕೆಟ್ಟಿದೆ, ನಾರುತ್ತಿದೆ, ಕೊಳಕು ತುಂಬಿದೆ, ಅದರ ಶುದ್ಧೀಕರಣ ಮಾಡುವೆವೆಂದು ಸಾರುತ್ತಿರುವರು. ಇದು ತೀರ ಹಾಸ್ಯಾಸ್ಪದವಾದುದಲ್ಲದೆ, ಶೋಚನೀಯವಾದ ವಿಷಯವಾಗಿರುವುದು. ಇವರು ಇನ್ನಾದರೂ ತಮ್ಮ ಅರ್ಥಹೀನ, ಅಗ್ಗದ ಧೋರಣೆಯನ್ನು ಬಿಟ್ಟು, ದೇಶ ಮತ್ತು ಜನತೆಯ ಹಿತದೃಷ್ಟಿಯಿಂದ ನ್ಯಾಯಮಾರ್ಗಾವಲಂಬಿಗಳಾಗಲು ಈ ಪುಣ್ಯದಿನದಂದು ಪ್ರತಿಜ್ಞೆ ಮಾಡಲಿ. ತಮ್ಮ ಕೃತಿ ಮತಿಗಳನ್ನು ತಾವೇ ತೂಗಿಕೊಂಡು ಆತ್ಮಶೋಧನೆ ಮಾಡಿಕೊಳ್ಳಲಿ. ತಮ್ಮನ್ನು ತಾವೇ ತಿದ್ದಿಕೊಂಡು ಕಾಂಗ್ರೆಸ್ಸಿಗೆ ಬೆಂಬಲ ಕೊಡುವ ನಿರ್ಧಾರ ಮಾಡಲಿ.

ಬಟ್ಟೆ ಬೆಲೆ ನಿಯಂತ್ರಣ ರದ್ದು

ಈಗ ಮಿಲ್ ಬಟ್ಟೆಯ ಉತ್ಪಾದನೆಯು ಹೆಚ್ಚಿರುವುದರಿಂದ ಭಾರತ ಸರಕಾರವು ಧೋತಿ, ಸೀರೆ, ಮಲ್, ಒಯ್ಲ್ಸ್, ಪಾಪ್ಲಿನ್, ಕ್ರೇಪ್ಸ್, ಡ್ರಿಲ್ ಮೊದಲಾದ ಬಟ್ಟೆಯ ಬೆಲೆ ನಿಯಂತ್ರಣವನ್ನು ರದ್ದುಗೊಳಿಸಲು ನಿರ್ಧರಿಸಿದೆ.

ರೊಕ್ಕದ ಪೈರುಗಳ ಮೇಲೆ ತೆರಿಗೆ ಹಾಕುವ ಯೋಜನೆ

ಭಾರತ ಸರಕಾರದ ಒಕ್ಕಲತನ ಖಾತೆಯ ಮಂತ್ರಿಗಳಾದ ಶ್ರೀ ಪಂಜಾಬರಾವ್ ದೇಶಮುಖರು ತಾ 26ರಲ್ಲಿ ನಾಗಪುರದಲ್ಲಿ ಅಲ್ಲಿಯ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಭಾಷಣಮಾಡುತ್ತ 'ಆಹಾರ ಕೊರತೆ ಇರುವ ರಾಜ್ಯಗಳಲ್ಲಿ ಹ
ತ್ತಿ, ಸಣಬು ಇವುಗಳ ವಿನಹ ಇತರ ರ
ಣದ ಪೈರುಗಳ ಮೇಲೆ ತೆರಿಗೆಹಾಕುವ ಕ
ರಿತು ಕೇಂದ್ರ ಸರಕಾರವು ವಿಚಾರ ನಡೆ
ದೆ" ಎಂದರು. ಮುಂದುವರಿಯುತ್ತ 'ಕೇ
ವೊಂದು ರಾಜ್ಯಗಳಲ್ಲಿ ತಂಬಾಕಿನಂತ
ರೊಕ್ಕದ ಪೈರನ್ನು ಹೆಚ್ಚಿಗೆ ಬೆಳೆಸುವು
ರಿಂದ ಆಹಾರದ ಕೊರತೆಯುಂಟಾಗು
ದು. ಅಂಥ ರಾಜ್ಯ ಸರಕಾರಗಳು ತಮ
ಆಹಾರ ಕೊರತೆ ತುಂಬಿಕೊಳ್ಳಲು ಆಯ
ತಮಾಡಿದ ಧಾನ್ಯವನ್ನು ಅಗ್ಗದಂದಿ
ಪೂರೈಸಲು ಕೇಂದ್ರ ಸರಕಾರಕ್ಕೆ ಒತ್ತಾ
ಯಪಡಿಸುವವು. ಇಂಥ ರೊಕ್ಕದ ಬೆಳೆ
ಳ ಮೇಲೆ ತೆರಿಗೆಯನ್ನು ಹಾಕಿ ಅದರಿಂ
ಬರುವ ಹಣದಿಂದ ವಿದೇಶದಿಂದ ಆಯ
ತಮಾಡಿದ ಧಾನ್ಯವನ್ನು ಕೊರತೆ ರಾ
ಕ್ಕೆ ಅಗ್ಗ ದರದಿಂದ ಪೂರೈಸುವುದರಿಂ
ಕೇಂದ್ರವು ವಹಿಸಬೇಕಾದ ಬೀಳುವ ಕ
ರತೆಯನ್ನು ಕೆಲಮಟ್ಟಿಗೆ ತುಂಬಿಕೊ
ಳ್ಳಲು ಅನುಕೂಲವಾಗುವುದೆಂದೂ ಆಹಾ
ಕೊರತೆಯಿರುವ ರಾಜ್ಯಗಳಲ್ಲಿ ಬೆಳೆಸು
ರೊಕ್ಕದ ಪೈರುಗಳ ಮೇಲೆ ತೆರಿಗೆ ಹಾ
ವ ವಿಚಾರಮಾಡಬೇಕಾಗಿದೆ ಎಂದೂ ಕ
ಹಾ ಹೇಳಿದರು.

ಜಿಲ್ಲೆಗಳಲ್ಲಿ ಆನರರಿ ಮೆಡಿಕಲ್ ಸರ್ವಿಸ್

ಮದ್ರಾಸು ಸರಕಾರದ ಸಾರ್ವಜನಿ
ಆರೋಗ್ಯ ಖಾತೆಯ ಮಾನ್ಯ ಮಂತ್ರಿ
ಳಾದ ಶ್ರೀ ಎ. ಬಿ. ಸೆಟ್ಟರು ಮದ್ರಾ
ಗೌರವ ಮೆಡಿಕಲ್ ಆಫೀಸರರ ಪರಿಷ
ನ್ನು ತಾ 27ರಂದು ಉದ್ಘಾಟಿಸುತ್ತ
ಈ ಸಂದರ್ಭದಲ್ಲಿ ಆಡಳಿತೆ ನಡೆಸುವವ
ಡಾಕ್ಟರರೂ ಸಹಕರಿಸಿ ದೇಶದ ಆರ್ಥಿ
ಸ್ಥಿತಿಯನ್ನು ಅವಲಕ್ಷಿಸಿ ವೈದ್ಯಕೀ
ಸಹಾಯವನ್ನು ಕೊಡಲು ಯೋಜನೆ
ನ್ನು ಸಿದ್ಧಗೊಳಿಸಿ, ಅತಿ ಕಡಿಮೆ ದರ
ಬಡವರಿಗೆ ಔಷಧವು ದೊರೆಯುವ
ಮಾಡಬೇಕೆಂದು ಸೂಚಿಸಿದರು. ಮುಂ
ವರಿಯುತ್ತಾ ಮಾನ್ಯ ಸೆಟ್ಟರು ವಿಜ್ಞಾನ
ಅಭಿವೃದ್ಧಿ ಹೊಂದಿದಂತೆ ವೈದ್ಯಕೀಯ
ಹಾಯದ ಬೆಲೆಯು ಅಧಿಕವಾಗು
ಹೋಗುವುದೆಂದೂ, ಆಸ್ಪತ್ರೆಗಳನ್ನು
ಟ್ಟಿಸುವುದೂ ಅವುಗಳಿಗೆ ಬೇಕಾದ ಮ
ಗಳನ್ನು ಒದಗಿಸುವುದೂ ಸುಲಭದ ಕ
ವಲ್ಲವೆಂದೂ, ಅವುಗಳಿಗೆ ತುಂಬಾ ಹ
ನ್ನು ವ್ಯಯಿಸಬೇಕಾಗುವುದೆಂದೂ ಹೇ
ರು. ಇಂದು 'ಸಂಗ್ರಹಿಸಿದ ಸಾಮಗ್ರಿ
ಕೆಲಸಮಯದಲ್ಲಿಯೆ ಹಳೆಮಟ್ಟಿನದಾ
ವುವೆಂದೂ ಹೇಳಿ, ಸರಕಾರದ ಆರ್ಥಿ
ಸ್ಥಿತಿಯನ್ನು ಹೊಂದಿಕೊಂಡು ಆರೋ
ಇಲಾಖೆಗೆ ಹಣ ವ್ಯಯಿಸಬೇಕಾಗುವು
ದೂ ಹೇಳಿದರು.

ತಾರೀಕು 1-10-52 ರಿಂದ ಇಂಗ್ಲಿಷ್ ಸಿರಿಯಲ್ ಚಿತ್ರ
ಬ್ಲೆಕ್ ಎರೊ,
ಅನಂತರ: ಎ. ವಿ. ಎಮ್ ಪ್ರೊಡಕ್ಷನ್ಸ್‌ರವರ
ಬಹಾರ್
ವೈಜಯಂತಿ ಮಾಲಾ, ಕರನ್ ದಿವಾನ್, ಪ್ರಾಣ್, ಓಂ ಪ್ರಕಾಶ್
ಪದ್ಮಿನಿ ಮೊದಲಾದವರು,
ಅನಂತರ: ಮಾಯಾಕುದುರೆ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ

ಪ್ರಜಾ-ಸೋಶಲಿಸ್ಟ ವಿಲಿನೀಕರಣ

ಬೊಂಬಾಯಿಯಲ್ಲಿ ತಾ. 25ರಲ್ಲು ಂದ ಸೋಶಲಿಸ್ಟ ಪಕ್ಷದ ಜನರಲ್ ನ್ಸಿಲು ಸೋಶಲಿಸ್ಟ ಮತ್ತು ಪ್ರಜಾಪ ಷಗಳ ವಿಲಿನೀಕರಣಕ್ಕೆ ಒಪ್ಪಿಗೆ ಕೊಟ್ಟಿತು. ಆಚಾರ್ಯ ನರೇಂದ್ರ ದೇವರು ಅಧ್ಯಕ್ಷತೆ ವಹಿಸಿದ್ದರು. ಇದೇ ರೀತಿ ಸೋಶಲಿಸ್ಟ ಪಕ್ಷದೊಡನೆ ಪ್ರಜಾಪಕ್ಷವು ವಿಲೀನವಾಗುವುದಕ್ಕೆ ಸರ್ವಾನುಮತದಿಂದ ಒಪ್ಪಿಗೆ ಕೊಡುವ ಒಂದು ನಿರ್ಣಯವು ಪ್ರಜಾಪಕ್ಷದ ಕಾರ್ಯಸಮಿತಿಯ ಸಭೆಯಲ್ಲಿ ಸ್ವೀಕರಿಸಲ್ಪಟ್ಟಿತು. ಎರಡೂ ಪಕ್ಷಗಳ ಪ್ರತಿನಿಧಿಗಳ ಸಂಯುಕ್ತ ಸಭೆಯು ಮರುದಿನ ಸೇರಿತು. ಪ್ರಜಾ ಸೋಶಲಿಸ್ಟ ವಿಲೀನೀಕರಣವು ದೇಶವನ್ನು ಬಲಿಷ್ಠ ರಾಷ್ಟ್ರವನ್ನಾಗಿ ಮಾಡಿ ತನ್ಮೂಲಕ ದೇಶದ ಏಳಿಗೆಯನ್ನು ಸಾಧಿಸಲೆಂದೂ, ಸಮಾಜದಲ್ಲಿ ಅಲ್ಲಲ್ಲಿ ತಲೆದೋರುವ ಕೊಳೆ ಕಶ್ಮಲಗಳು ತೊಳೆದು ಹೋಗಿ ದೇಶವು ಸುಖಶಾಂತಿಯಿಂದ ತುಂಬಿ ತುಳುಕಲೆಂದೂ ಎರಡೂ ಪಕ್ಷಗಳು ಕೈಕೊಂಡ ನಿರ್ಣಯದಲ್ಲಿ ಹೇಳಲಾಗಿದೆ. ಈ ಹೊಸ ಪಕ್ಷದ ಅಧ್ಯಕ್ಷರಾಗಿ ಆಚಾರ್ಯ ಕೃಪಲಾನಿಯವರು ಆರಿಸಲ್ಪಟ್ಟಿರುವರು. ಶ್ರೀ ಅಶೋಕ ಮೆಹತಾರವರು ಪ್ರಧಾನ ಕಾರ್ಯದರ್ಶಿಗಳಾಗಿ ಆಯ್ಕೆಹೊಂದಿರುವರು. ಇಪ್ಪತ್ತು ಮಂದಿ ಇರುವ ಕಾರ್ಯಕಾರೀ ಮಂಡಳಿಯ ರಚನೆಯೂ ಆಗಿದೆ. ಜನತೆಯ ಸೇವೆಮಾಡಲು ಹೊಸ ಪಕ್ಷದ ನಿರ್ಮಾಣವಾಗಿದೆ. ನಮ್ಮ ಉದ್ದೇಶಗಳು ಚೆನ್ನಾಗಿವೆ ಅವನ್ನು ಸಾಧಿಸಲು ನಮಗೆ ಜನರ ಸಹಕಾರ ಬೇಕಾದೆ ಎಂದು ಆಚಾರ್ಯ ಕೃಪಲಾನಿಯವರು ಸಾರ್ವಜನಿಕ ಸಭೆಯೊಂದರಲ್ಲಿ ಹೇಳಿದರು

ಕಾಶ್ಮೀರದ ಅಭಿವೃದ್ಧಿಗಾಗಿ
ಪಂಚವಾರ್ಷಿಕ ಯೋಜನೆ

ಜಮ್ಮು, ಕಾಶ್ಮೀರ ಮತ್ತು ಲಡಾಖ್ ಗಳ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸುವ ದೃಷ್ಟಿಯಿಂದ ಹೊಸದಿಲ್ಲಿಯ ಯೋಜನಾ ಸಮಿತಿಯು ಹತ್ತು ಕೋಟಿ ರೂಪಾಯಿಗಳ ಒಂದು ಪಂಚವಾರ್ಷಿಕ ಯೋಜನೆಯನ್ನು ತಯಾರಿಸಿರುವುದು ಜಮ್ಮು ಶ್ರೀನಗರಗಳ ನಡುವಿನ ಅಂತರವು ಸಾಧಾರಣ ಇಪ್ಪತ್ತು ಮೈಲುಗಳಷ್ಟು ಕಡಿಮೆ ಆಗುವಹಾಗೆ ಒಂದೂವರೆ ಮೈಲು ಉದ್ದದ ಒಂದು ಸುರಂಗ ಮಾರ್ಗವನ್ನು ಕಟ್ಟಲು ಮೂರುಕೋಟಿ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ. ಈ ಮಾರ್ಗದಿಂದಾಗಿ ಕಾಶ್ಮೀರ ಮತ್ತು ಭಾರತದ ನಡುವೆ ಯಾವಾಗಲೂ ಉಪಯೋಗಿಸಬಹುದಾದ [illegible] ಉಂಟಾಗುವದೇ

ಗುಡಿ ಕೈಗಾರಿಕೆಗಳಿಗೆ 40ಲ[illegible] ಸಂದರ್ಶಕರ ಸೌಕರ್ಯ ಹೆಚ್ಚಿಸಲು, ಕೃಷಿಗೆ ದನಕರುಗಳ ಪರಿಸ್ಥಿತಿಯ ಸುಧಾರಣೆಗೆ, ಔಷಧ ಇತ್ಯಾದಿ ಒಂದೊಂದು ವಿಷಯಕ್ಕೆ ರೂಪಾಯಿ 15 ಲಕ್ಷ. ರಸ್ತೆಕಟ್ಟಲು ಮತ್ತು ಇದ್ದ ರಸ್ತೆ ದುರಸ್ತಿಮಾಡಲು, ನೀರಾವರಿ ಯೋಜನೆ, ವಿದ್ಯುತ್ ಯೋಜನೆ, ನೆರೆಹಾವಳಿ ತಡೆಕಟ್ಟುವಿಕೆ, ಕುಡಿಯುವ ನೀರಿನ ಪೂರೈಕೆ, ಭೂಮಿಯ ಫಲವತ್ತತೆಯನ್ನು ರಕ್ಷಿಸುವಿಕೆ, ಸಾರ್ವಜನಿಕ ಹಿತಯೋಜನೆ ಮೊದಲಾದವುಗಳು ಪಂಚವಾರ್ಷಿಕ ಯೋಜನೆಯಲ್ಲಿ ಕಾರ್ಯರೂಪಕ್ಕೆ ಬರುವವು.

ಉಡುಪಿ ಡಿ. ಮು. ಕೋರ್ಟಿನಲ್ಲಿ
O. ಸ. No. 313/52

ಕೊರಗ ಸೆಟ್ಟಿಗಾರ —ವಾದಿ.
ಮತ್ತು
ಫೆಡ್ರಿಕ್ ಸೋನ್ಸ್ ಗೂಡ—ಪ್ರತಿವಾದಿರು
ಇವರುಗಳಿಗೆ-

1 ಫೆಡ್ರಿಕ್ ಸೋನ್ಸ್, 2 ಜದ್ರಿಕ್ ಸೋನ್ಸ್. (ತೀಡೋರ್ ಸೋನ್ಸರ ಮಕ್ಕಳು.) Jai Hind Restaurent, at Ambernath Mill Kallyan Taluk, Thana District, Bombay, Ambernath Post,

ಮೇಲ್ಕಂಡ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ವಾದಿಗೆ ಪ್ರತಿವಾದಿಯು ತಾ 24-8-1950 ರಲ್ಲು ರೂ 637-1-4ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಬಾಬ್ತು ವಾದಿಗೆ ಬರಾ ಅಸಲು, ಬಡ್ಡಿ ವಗೈರೆ ಬಗ್ಗೆ ವಾದಿಯು ದಾಖಲ್ಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 20-10-1952ಕ್ಕೆ ಪ್ರತಿವಾದಿರ ನೋಟೀಸು ಬಗ್ಗೆ ಇಟ್ಟದ್ದು, ಪ್ರತಿವಾದಿರು ತಮ್ಮ ಉದಾಹರಣೆಯುಳ್ಳ ವಕೀಲರ ಮೂಲಕ ಸ್ವತಃ ದಿವಸ ಬೆಳಗ್ಗೆ ಗಂಟೆ 11ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಜ್ವಾಹೀರಾಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಅವರನ್ನು ಎಕ್ಸ್ ಪಾರ್ಟಿ ಮಾಡಿ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದು,

K. J. Ballal,
Pleader for Plaintiff.
Dated 29-9-52 Camp: Udipi.

ಗಾಂಧೀ ವಚನಾಮೃತ

೧. ಸತ್ಯವೇ ದೇವರು, ಬೇರೆ ದೇವರಿಲ್ಲ. ೨ ಸತ್ಯಸಾಧನೆಗೆ ಒಂದೇ ಮಾರ್ಗ-ಅಹಿಂಸೆ ೩. ಕ್ಷಮೆ ದಯೆ.-ಆತ್ಮದ ಗುಣ, ಅಕ್ರೋಧವೇ ಕ್ಷಮೆ. ೪. ಪ್ರೀತಿಯಿದ್ದಲ್ಲಿ ಬಾಳು, ಹಗೆಯಿದ್ದಲ್ಲಿ ಹಾಳು. ೫ ಹೆಣ್ಣು ಅಹಿಂಸೆಯ ಅವತಾರ ಪುತ್ಥಳಿ. ೬. ಸತ್ಯಾಗ್ರಹವೇ ಸತ್ಯಶೋಧನೆಯ ದಾರಿ. ೭. ಸತ್ಯಾಗ್ರಹ ಧರ್ಮಯುದ್ಧ, ಯುದ್ಧ ವಿರುದ್ಧ. ೮. ಎಲ್ಲ ಧರ್ಮಗಳೂ ಸತ್ಯ. ಸಮ್ಯ ೯. ಮನುಷ್ಯನಿಗೆ ಸ್ವಧರ್ಮವೇ ಶ್ರೇಯ, ಶ್ರೇಷ್ಠ. ೧೦. ಮನುಷ್ಯ ಮನುಷ್ಯರಲ್ಲಿ ಭೇದಸಲ್ಲದು. ೧೧. ರೊಟ್ಟಿಯೇ ರೈತನ ಕಾಮಧೇನು, ಅನ್ನಪೂರ್ಣೆ. ೧೨. ನೂತವಗೆ ಬಟ್ಟೆ, ದುಡಿದವಗೆ ಹೊಟ್ಟೆ. ೧೩. ಸ್ವಾವಲಂಬನ ಬಾಳು, ಪರಾವಲಂಬನ ಸಾವು. ೧೪. ಕೈಗೆಲಸ ಕಲಿಸದ ವಿದ್ಯೆ ವ್ಯರ್ಥ. ೧೫. ಯಂತ್ರ ನರನ ಗುಲಾಮ, ನರ ಯಂತ್ರದಾಳಲ್ಲ. ೧೬. ಗ್ರಾಮಸ್ವರಾಜ್ಯವೇ ನಿಜ ಸ್ವರಾಜ್ಯ. ೧೭. ಅರ್ಥಶಾಸ್ತ್ರದ ಗುರಿ ಹಣವಲ್ಲ, ಶಾಂತಿ. ೧೮. ಹಸು ಭಾರತೀಯ ಜೀವನದ ಆಧಾರ.

ಗಾಂಧಿ ರಾಮರಾಜ್ಯ.

ರಾಮರಾಜ್ಯವೆಂದರೆ ಪಾರಮಾರ್ಥಿಕವಾಗಿ ಭೂಸ್ವರ್ಗ;
ರಾಜಕೀಯವಾಗಿ ಪರಿಪೂರ್ಣ ಪ್ರಜಾತಂತ್ರ.
ಅದರಲ್ಲಿ ಭಾಗ್ಯವಂತರಿಲ್ಲ, ನಿರ್ಭಾಗ್ಯರಿಲ್ಲ, ಜಾತಿಭೇದವಿಲ್ಲ, ಲಿಂಗಭೇದವಿಲ್ಲ.
ರಾಮರಾಜ್ಯದಲ್ಲಿ ಭೂಮಿ, ರಾಷ್ಟ್ರ - ಎಲ್ಲವೂ ಜನತೆಯದು.,
ನ್ಯಾಯವೋ ಸಿದ್ಧಾಂತ ಪರಿಪೂರ್ಣ
ಅದರಲ್ಲಿ ವಾಕ್, ಪೂಜಾ ಸ್ವಾತಂತ್ರ್ಯವುಂಟು.
ಕಾರಣ ಅದು ಸ್ವಯಂ ಸ್ಥಾಪಿತ ಶಾಸನ ಪ್ರಭುತ್ವ.
ಅದರಲ್ಲಿ ನೈತಿಕ ಸಂಯಮವುಂಟು,
ಇಂಥ ರಾಷ್ಟ್ರಕ್ಕೆ ಅಸ್ತಿಭಾರ ಸತ್ಯ, ಅಹಿಂಸೆಗಳೇ.
ಅದರಲ್ಲಿ ಸುಖಿ ಸಂಪದ್ಯುಕ್ತ ಗ್ರಾಮಗಳೂ, ಗ್ರಾಮ ಕೂಟಗಳೂ ಇರಬೇಕು.
'ಇದನ್ನು ಸಾಧಿಸಲು ಪ್ರಯತ್ನಿಸುವುದೇ ನನಗೆ ಆನಂದ

ಮಹಾತ್ಮಾ ಗಾಂಧಿ.

(ಇತ್ತೀಚೆಗೆ ಮೈಸೂರು ನಗರದಲ್ಲಿ ಗಾಂಧಿ ಚೌಕದಲ್ಲಿ ಶ್ರೀಮನ್ಮಹಾರಾಜರು ಅನಾವರಣ ಮಾಡಿದ ಗಾಂಧಿ ಸ್ತೂಪದ ಮೇಲೆ ನಿರೂಪಿಸಲಾದ ಗಾಂಧೀಜಿಯವರ ತತ್ವಬೋಧೆಯ ಸಾರ.)

ಅಹಿಂಸಾ ರೀತಿ

(ಮ: ಗಾಂಧಿಯವರ ಪ್ರಿಯ ಗೀತೆಯಾದ 'ಪಾನಿ ಆಪನೆ ಪಾಯಸ್' ಎಂಬ ಗುಜರಾತಿ ಗೀತಾನುವಾದ)

ನೀರಿತ್ತವಂಗೆ ಮೃಷ್ಟಾನ್ನ ಉಣಿಸಯ್ಯಾ।
ಶಿರವ ಬಾಗಿದಂಗೆ ಸಾಷ್ಟಾಂಗ [illegible]।
ಗುಣ ಒಂದ ತೋರಿದಂಗೆ ಶತ ಗುಣವ
ತೋರಿಸಯ್ಯಾ।
ಅಪಕಾರ ಗೈವನಂಗೆ ಉಪಕಾರ
ಮರಳಿಸಯ್ಯಾ।
ತನ್ನ ಪೀಡಿಪಂಗೆ ತನು ತೊರೆದು
ಕರುಣಿಸಯ್ಯಾ।
ಧರ್ಮ ವಿಚಾರಿಪಂಗೆ ಇದು ಧರ್ಮ
ಮರ್ಮವಯ್ಯಾ।

ಉಡುಪಿ

ಮೊಹರಂ ದಿನಾಚರಣೆ— ತಾ. 30-9-52ನೇ ರಾತ್ರಿ 'ಅಂಜುಮಾನ'ನಲ್ಲಿ ಮೊಹರಮ್ 10ನೆಯ ದಿನದ ಆಚರಣೆಯು ಜನಾಬ್ H. S ಹುಸೇನ್, ಬಿ.ಎ ಬಿ.ಎಲ್. ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ನಗರದ ಪ್ರತಿಷ್ಠ ಹಿಂದೂ ಬಂಧುಗಳನ್ನೂ ಆಮಂತ್ರಿಸಲಾಗಿತ್ತು, ಪ್ರಾರ್ಥನೆಯ ಬಳಿಕ ಶ್ರೀ ಟಿ. ಎ. ಪೈ, ಎಮ್.ಎಲ್.ಎ.ಗಳು ಹಿಂದು ಮುಸ್ಲಿಂ ಐಕ್ಯತೆಯನ್ನು ಕೋರಿ, ಉಡುಪಿಯ ಇಂದಿನ ಆದರ್ಶವನ್ನು ಅಖಿಲ ಭಾರತದಲ್ಲಿ ಅನುಸರಿಸುವಂತಾಗಲಿ ಎಂದು ಆಶಿಸಿದರು. ಶ್ರೀಗಳಾದ ಟಿ. ಎನ್. ಕೇಳು ನಂಬಿಯಾರರು, ಆರ್. ಆರ್. ಕುಂಜೂರರು, ಜನಾಬ್ ವಕೀಲ ಉಸ್ಮಾನ್ ಸಾಹೇಬರು, ಜನಾಬ್ ರಫಿಯುದ್ದಿನ್ ಸಾಹೇಬರು, ಸ್ಥಳೀಯ ಮುನ್ಸಿಫರಾದ ಜನಾಬ್ ಅಬ್ದುಲ್ ರಹೀಂರು, ಡಾ। ಕೆ. ಎಲ್. ಐತಾಳರು ಮೊದಲಾದವರು ಹಿಂದೂ ಮುಸ್ಲಿಂ ಮತದ ಗುರಿ ಒಂದೇ ಎಂದು ವಿವರಿಸಿದರು. ಅಧ್ಯಕ್ಷರು ತಮ್ಮ ಆಳವಾದ ಅಭ್ಯಾಸ ಮತ್ತು ಅನುಭವವನ್ನು ಸುಲಲಿತವಾಗಿ ವಿವರಿಸಿ ಅತಿಥಿಗಳಲ್ಲಿ ಉಭಯ ಮತಗಳಲ್ಲೂ ಪರಸ್ಪರ ನಿಷ್ಠೆಯ ಆವಶ್ಯಕತೆಯನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ವಿವರಿಸಿದರು. ಅತಿಥಿಗಳಿಗೆ ಲಘು ಉಪಹಾರವೂ ಇತ್ತು.

ತಾ। ಆಹಾರ ಸಮಿತಿಸಭೆಯು— ತಾ 27ರಲ್ಲು ಸಬ್ ಕಲೆಕ್ಟರ್ ಶ್ರೀ ಕೃಷ್ಣನವರ ಅಧ್ಯಕ್ಷತೆಯಲ್ಲಿ ಜರಗಿತು. ಮಳೆಯ ಅಭಾವದಿಂದ ಬೆಳೆಯು ಸಾಕಷ್ಟು ತೃಪ್ತಿಕರವಿಲ್ಲದಿರುವುದರಿಂದ ಬಹಿರಂಗ ಪೇಟೆಯಲ್ಲಿ ಸಿಗಬಹುದಾದ ಅಕ್ಕಿಯ ಕ್ರಯವು ಏರುವ ಲಕ್ಷಣಗಳಿರುವುದರಿಂದ 'ಲೆವಿ' ಪದ್ಧತಿಯನ್ನು ಜಾರಿ ಮಾಡುವುದು ಒಳ್ಳೆಯದೆಂದು ಶ್ರೀ ಪಿ. ಗೋಪಾಲ ನಾಯ್ಕರು ಸೂಚಿಸಿದರು. ಈ ಕುರಿತು ಜಿಲ್ಲಾ ಕಲೆಕ್ಟರರಿಗೆ ಬರದುಕೊಳ್ಳಲಾಯಿತು.

ಅಲೆವೂರು ಸೇತುವೆ ನಿಧಿ ಸಂಗ್ರಹ ಕಮಿಟಿ ಸಭೆಯು ತಾ 29 ರ ಲ್ಲು ಕಾಂಗ್ರೆಸ್ ಕಮಿಟಿ ಆಫೀಸಿನಲ್ಲಿ ಶ್ರೀ ಟಿ ಎ ಪೈ ಎಮ್ ಎಲ್ ಎ ಅವರ ಅಧ್ಯಕ್ಷತೆಯಲ್ಲಿ ಜರಗಿತು, ಕಾರ್ಯದರ್ಶಿ ಶ್ರೀ ಎ ಬಿ ಕೃಷ್ಣರಾಜರು ಈ ತನಕ ವಸೂಲಾದ ಹಣ ಇತ್ಯಾದಿ ವಿವರಗಳನ್ನೊಳಗೊಂಡ ವರದಿಯನ್ನೋದಿದರು. ಸೇತುವೆಗೆ ಇನ್ನೂ ಬೇಕಾಗುವ ಸಾಧಾರಣ ರೂ 5,500ನ್ನು ಸಂಗ್ರಹಿಸುವರೆ ಇದೇ ತಾ 30ರಿಂದ ಒಂದು ವರ್ಷದ ಅವಧಿ ಹೆಚ್ಚಿಸಲಾಯಿತು. ನಿಧಿ ಸಂಗ್ರಹದ ಕೆಲಸವನ್ನು ಜರೂರು ಮುಂದೊತ್ತಬೇಕಾಗಿ ಅಧ್ಯಕ್ಷರು ಸೂಚಿಸಿದರು,

ಮುನಿಸಿಪಲ್ ಕೌನ್ಸಿಲ್ ಸಭೆಯು ತಾ 29ರಲ್ಲು ಶ್ರೀ ಯು ಎಸ್ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾತಂತ್ರ್ಯ ದಿನಾಚರಣೆ ಸ್ಮಾರಕ ಸ್ಕಾಲರ್ ಶಿಪ್ಪನ್ನು ಚಾಲ್ತಿ ವರುಷದಲ್ಲಿ ಸ್ಥಳೀಯ ಬೋರ್ಡ ಹೈಸ್ಕೂಲ್ ವಿದ್ಯಾರ್ಥಿ ಶ್ರೀ ಯು ಮೋಹನ ರಾಯರಿಗೆ ಕೊಡುವುದೆಂದಾಯಿತು, ಮುನಿಸಿಪಲ್ ಕೌತ್ ಶಾಲಾ ಕಟ್ಟಡ ಸಮಿತಿಗೆ ಒಂದು ಸಾವಿರ ರೂಪಾಯಿ ಕೊಡುವರೆ ಕೌನ್ಸಿಲಿನ ಮಂಜೂರಾತಿ ದೊರೆಯಿತು,

ವಿಜಯ ದಶಮಿ ಮಹೋತ್ಸವವು—ತಾ 28ರಂದು ಆರ್. ಎಸ್. ಎಸ್. ಸಂಘದ ಆಶ್ರಯದಲ್ಲಿ ಪಂಡಿತ ಟಿ. ಎನ್. ಕೇಳು ನಂಬಿಯಾರರ ಅಧ್ಯಕ್ಷತೆಯಲ್ಲಿ ಜರಗಿತು. ಆರ್. ಎಸ್. ಎಸ್. ದಳದವರು ತಮ್ಮ ಕಸರತ್ತುಗಳನ್ನು ಪ್ರದರ್ಶಿಸಿದರು. ಹಿಂದುಸ್ಥಾನಕ್ಕೆ ಸ್ವತಂತ್ರ ದೊರೆತು ಐದು ವರುಷಗಳಾದರೂ ಜನರು ನಿರೀಕ್ಷಿಸಿದಷ್ಟು ಕಾರ್ಯಗಳಾಗಿಲ್ಲವೆಂದು ವಿದ್ವಾನ್ ಎಸ್. ಭಟ್ಟರು ಸಂಘದ ಧ್ಯೇಯಗಳನ್ನು ವಿವರಿಸುವ ಕಾಲಕ್ಕೆ ಹೇಳಿದರು, ಅಧ್ಯಕ್ಷರು, ಸರಕಾರವನ್ನು ಟೀಕಿಸುವುದು ಸಹಜವಿದ್ದರೂ ಜನತೆಯು ಸಹಕಾರ ಬೆಂಬಲವನ್ನೀಯಬೇಕೆಂದು ಕೇಳಿಕೊಂಡರು,

ನಾಡ ಹಬ್ಬದ ಸಾಹಿತ್ಯೋತ್ಸವವು—ಉಡುಪಿಯಲ್ಲಿ ಈ ಬಾರಿ ತಾ. 26ರಿಂದ 29ರ ವರೆಗೆ ಶ್ರೀ ಕೃಷ್ಣ ಮಠದ ವಸಂತ ಮಂಟಪದಲ್ಲಿ ಪರ್ಯಾಯ ಶ್ರೀ ಪೇಜಾವರ ಮಠದ ಮತ್ತು ಉಡುಪಿ ಕರ್ನಾಟಕ ಸಂಘದ ಸಂಯುಕ್ತ ಆಶ್ರಯದಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು. ಪರವೂರ ಸಾಹಿತಿಗಳನೇಕರು ಆಗಮಿಸಿದ್ದರು.

ದುರ್ಗಾ ಮಹಲ್—ಎಂಬ ನೂತನ ಭೋಜನ ಮತ್ತು ನಿವಾಸ ಗೃಹವೊಂದನ್ನು ತಾ 29ರಂದು ಡಾ। ಕೆ ಎಲ್. ಐತಾಳರು ಉದ್ಘಾಟಿಸಿದರು. ಶ್ರೀ ಜಿ. ಲಕ್ಷ್ಮೀನಾರಾಯಣ ಸಹೋದರರ ಆಮಂತ್ರಣವನ್ನು ಮನ್ನಿಸಿ ಊರ ಗೃಹಸ್ಥರನೇಕರು ಸಮಾರಂಭದ ಚಹಾ ಸತ್ಕಾರಕ್ಕೆ ಬಂದಿದ್ದರು.

ಬುಡ್ನಾರು—ದೇ। ಭ। ದೇಜಪ್ಪ ಶೆಟ್ರ ತಾಯಿ ಕಮ್ಮಾರು ಗಿರಿಯಮ್ಮ ಶೆಡ್ತಿರು ಕಳೆದ ತಾ 26ನೇ ರಾತ್ರಿ 80ನೇ ವಯಸ್ಸಿನಲ್ಲಿ ಮಕ್ಕಳ ಮನೆಯಲ್ಲಿ ನಿಧನಹೊಂದಿದರು.

ಶಂಕರನಾರಾಯಣ— ಶ್ರೀ ಮಾನಂಜೆ ಕೇಶವರಾಯರಿಂದ ಸಿದ್ಧಾಪುರ ಗ್ರಾಮದ ಆಗಳಿ ಎಂಬಲ್ಲಿ ಕಳೆದ ಮೂರು ತಿಂಗಳ ಹಿಂದೆ ತೆರೆಯಲ್ಪಟ್ಟ ಕೃಷಿ ಕ್ಷೇತ್ರಕ್ಕೆ ತಾ. 28ರಲ್ಲು ಧಾರ್ಮಿಕ ಕಾರ್ಯಕ್ರಮ ಜರಗಿಸಿ ಅಮೃತ ಕುಂಜ ಎಂದು ನಾಮಕರಣ ಮಾಡಲಾಯಿತು.. ಈ ಭಾಗದಲ್ಲಿ ಒಂದು ತಿಂಗಳಿಂದ ಮಳೆ ಬಾರದೆ ಪೈರು ಒಣಗಿ ಹೋಗಿ ವಿಶೇಷ ನಷ್ಟವಾಗಿದೆ.

ಬಡಾನಿಡಿಯೂರು— ಇಲ್ಲಿಯ ಕರ್ನಾಟಕ ಸಂಘದ ಸಾರ್ವಜನಿಕ ವಾಚನಾಲಯದ ಪ್ರಾರಂಭೋತ್ಸವವನ್ನು ತಾ. 28ರಲ್ಲು [illegible] ಕಾಲೇಜು ಪ್ರೊಫೆಸರ್ ಶ್ರೀ ಕೆ ಶಿವರಾಮ ಶೆಟ್ಟಿಯವರು ನೆರವೇರಿಸಿದರು.

ಮಂಗಳೂರು ಮತ್ತು ಉಡುಪಿ ನಗರ ಸಭಾ ಚುನಾವಣೆ

ಕಾಂಗ್ರೆಸ್ ಭಾಗವಹಿಸಲು ಕೆ. ಪಿ. ಸಿ. ಸಿ. ಯ ಸಮ್ಮತಿ

ಕಾಂಗ್ರೆಸ್ ಹುರಿಯಾಳುಗಳಿಗೇ ಓಟು (ಮತ) ಕೊಡಿರೆಂದು ಕೆ.ಪಿ.ಸಿ.ಸಿ. ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರ ಹೇಳಿಕೆ.

ದಿನಾಂಕ 30-8-52ರಂದು ಹುಬ್ಬಳ್ಳಿಯಲ್ಲಿ ಸೇರಿದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯಕಾರೀ ಸಮಿತಿಯ ಸಭೆಯಲ್ಲಿ ಮಂಗಳೂರು ಮತ್ತು ಉಡುಪಿ ನಗರಸಭೆಗಳ ಚುನಾವಣೆಯಲ್ಲಿ ಕಾಂಗ್ರೆಸ್ ಭಾಗವಹಿಸದಿರುವುದು ಸೂಕ್ತವೆಂದು ಅಭಿಪ್ರಾಯ ಪಡಲಾಯಿತು. ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಕಾಂಗ್ರೆಸ್ ನಾಯಕರ ಅಭಿಪ್ರಾಯವನ್ನು ಗಮನಿಸಿ ಇಂತಹ ನಿರ್ಣಯವನ್ನು ಮಾಡಬೇಕಾಯಿತು. ಬೇರೆ, ಬೇರೆ ಜಿಲ್ಲೆಗಳಲ್ಲಿ ಜರುಗಿದ ಇಂತಹ ಸ್ಥಾನಿಕ ಸಂಸ್ಥೆಗಳ ಚುನಾವಣೆಗಳ ವಿಷಯದಲ್ಲಿ ಆಯಾ ಜಿಲ್ಲಾ ಕಾಂಗ್ರೆಸ್ ಸಮಿತಿಗಳು ತಳೆಯುವ ಧೋರಣೆ ನಿರ್ಣಯಗಳಲ್ಲಿ ಈ ವರೆಗೆ ಕೆ. ಪಿ. ಸಿ. ಸಿ.ಯು ಕೈಹಾಕಿರಲಿಲ್ಲ. ಅದರಂತೆಯೇ ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸ್ ಸಮಿತಿಯವರೂ ತಮಗೆ ಸರಿತೋರಿದಂತೆ ನಿರ್ಣಯವನ್ನು ಮಾಡಬಹುದಿತ್ತು. ಕೆ. ಪಿ. ಸಿ. ಸಿ. ಕೌನ್ಸಿಲ್ ಸಭೆಗೆ ಬರುವ ಪೂರ್ವದಲ್ಲಿಯೇ ಈ ನಗರ ಸಭಾ ಚುನಾವಣೆಗಳಲ್ಲಿ ಭಾಗವಹಿಸುವ ಕುರಿತು ಕೆಲವೊಂದು ಏರ್ಪಾಡುಗಳನ್ನು ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿಯವರು ಪ್ರಾರಂಭಿಸಿದ್ದರೆಂದು ತೋರುತ್ತದೆ. ಕೆ. ಪಿ. ಸಿ. ಸಿ. ಕೌನ್ಸಿಲ್ ಸಭೆಯನ್ನು ಮುಗಿಸಿಕೊಂಡು ಮಂಗಳೂರಿನ ಕಾಂಗ್ರೆಸ್ ನಾಯಕರು ಮಂಗಳೂರಿಗೆ ತಲುಪುವಷ್ಟರಲ್ಲಿ ಅಲ್ಲಿನ ನಗರ ಸಭಾ ಚುನಾವಣೆಗಳ ಸಿದ್ಧತೆಯು ತೀರ ಮುಂದರಿಸಿ ಹೋಗಿದ್ದಿತೆಂದು ತಿಳಿದು ಬರುತ್ತದೆ.

ಇಂತಹ ಪರಿಸ್ಥಿತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿಯವರು ಮಂಗಳೂರು, ಉಡುಪಿ ನಗರ ಸಭಾ ಚುನಾವಣೆಗಳಲ್ಲಿ ಕಾಂಗ್ರೆಸು ಭಾಗವಹಿಸಬೇಕೆಂದು ಕೊನೆಯದಾಗಿ ನಿರ್ಧರಿಸಿ ಅದೇ ಮೇರೆಗೆ ನಡೆಯಲು ಒಪ್ಪಿಗೆ ಕೊಡಬೇಕೆಂದು ಕೆ. ಪಿ. ಸಿ. ಸಿ.ಗೆ ಕೇಳಿದರು. ಕಾಂಗ್ರೆಸ್ ಸಂಘಟನೆಯ ಹಿತವನ್ನು ಮನಗಂಡು ದಕ್ಷಿಣಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಈ ನಗರ ಸಭಾ ಚುನಾವಣೆಗಳಲ್ಲಿ ಭಾಗವಹಿಸಿ ಮುಂದರಿಯಲು ಸಮ್ಮತಿಯನ್ನು ಕೊಡಬೇಕಾಯಿತು. ಅದುದರಿಂದ ಕೆ. ಪಿ. ಸಿ. ಸಿ.ಯ ಬೆಂಬಲದಿಂದಲೇ ಈಗ ಎರಡೂ ನಗರಗಳಲ್ಲಿ ಚುನಾವಣೆಗಳನ್ನು ಕಾಂಗ್ರೆಸ್ ಪಕ್ಷವು ನಡೆಸುತ್ತಿದೆ. ಇದಕ್ಕೆ ಯಾರೂ ಸಂದೇಹ ಪಡಬೇಕಾಗಿಲ್ಲ. ಅದಲ್ಲದೆ ಈ ಚುನಾವಣೆಗಳಲ್ಲಿ ಅವಶ್ಯಕವಾದ ಸರ್ವ ಸಹಾಯವನ್ನು ಸಲ್ಲಿಸಲು ಕೆ. ಪಿ. ಸಿ. ಸಿ.ಯು ಸಿದ್ಧವಾಗಿದೆ.

ಶಾಸನ ಸಭೆ, ಲೋಕ ಸಭೆಗಳ ಸಾರ್ವತ್ರಿಕ ಚುನಾವಣೆಗಳಲ್ಲಿ ಕಾಂಗ್ರೆಸು ಚುನಾವಣಾ ಘೋಷಣೆಯ ಮೂಲಕ ತಾನು ಕೊಟ್ಟ ಆಶ್ವಾಸನೆಗಳನ್ನು ಪೂರೈಸಲು ಸ್ಥಾನಿಕ ಸಂಸ್ಥೆಗಳಲ್ಲಿ ಸೇರಿ ಪಟ್ಟಣದ ನಿವಾಸಿಗಳಿಗೆ ಸರ್ವನಾಗರಿಕ ಸುಖ-ಸೌಕರ್ಯಗಳನ್ನೊದಗಿಸಿಕೊಡಲು ಪ್ರಯತ್ನಿಸುವುದು ಸಹಜವೂ ಆಗಿದೆ. ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿಯವರು ಸಾಗಿಸಿದ ಈ ನಗರ ಸಭಾ ಚುನಾವಣಾ ಚಟುವಟಿಕೆಗಳಲ್ಲಿ ಅವರಿಗೆ ಅಪೂರ್ವ ವಿಜಯವು ಲಭಿಸಲೆಂದು ಅಪೇಕ್ಷಿಸುತ್ತೇನೆ.

ಮಂಗಳೂರು, ಉಡುಪಿ ನಗರ ನಿವಾಸಿಗಳು ಕಾಂಗ್ರೆಸಿನ ಬಗ್ಗೆ ತುಂಬ ನಿಷ್ಠೆಯುಳ್ಳವರು. ಆದರೆ, ಗೌರವ, ಘನತೆಗಳ ರಕ್ಷಣೆಗಾಗಿ ಸಾರ್ವತ್ರಿಕ ಚುನಾವಣೆಗಳಲ್ಲಿ ಮನಃಪೂರ್ವಕ ಸಹಕರಿಸಿ ಶ್ರಮಿಸಿದ್ದಾರೆ. ಅದರಂತೆ ಈ ನಗರಸಭಾ ಚುನಾವಣೆಗಳಲ್ಲಿಯೂ ಪ್ರತಿಯೊಬ್ಬ ನಾಗರಿಕನು ತನ್ನ ಅಮೂಲ್ಯವಾದ ಮತವನ್ನು (ವೋಟು) ಕಾಂಗ್ರೆಸ್ ಪಕ್ಷದ ಹುರಿಯಾಳುಗಳಿಗೇ ಕೊಟ್ಟು ಎಲ್ಲ ವಾರ್ಡುಗಳಲ್ಲಿಯೂ ಕಾಂಗ್ರೆಸ್ ಹುರಿಯಾಳುಗಳು ಪ್ರಚಂಡ ಬಹುಮತದಿಂದ ಆರಿಸಿ ಬರುವಂತೆ ಮಾಡುವರೆಂದು ನನಗೆ ವಿಶ್ವಾಸವಿದೆ. ಈ ಚುನಾವಣೆಗಳಲ್ಲಿ ಕಾಂಗ್ರೆಸಿಗೆ ಸರ್ವವಿಧದ ಸಹಾಯವನ್ನು ನೀಡಬೇಕೆಂದು ಅಲ್ಲಿನ ನಾಗರಿಕರಲ್ಲಿ ಅರಿಕೆ ಮಾಡುತ್ತೇನೆ.

ಎಸ್. ನಿಜಲಿಂಗಪ್ಪ,
ಅಧ್ಯಕ್ಷ, ಕೆ. ಪಿ. ಸಿ. ಸಿ.,
(ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ)

ಕಾಂಗ್ರೆಸಿಗೇ ಬೆಂಬಲ ಕೊಡಿರೆಂದು

ಶ್ರೀ ಕೆ. ಸದಾನಂದ ಹೆಗ್ಡೆಯವರ ಬಿನ್ನಹ

ಉಡುಪಿಯು ಮುಂದಾಳಾಗಲಿ.

ಉಡುಪಿಯು ದೊಡ್ಡ ಜ್ಞಾನಕೇಂದ್ರವಾಗಿದೆ, ಜ್ಞಾನಾರ್ಜನೆಗೆ ಯೋಗ್ಯವಾದ ಜ್ಞಾನ ಭಂಡಾರವೇ ಅಲ್ಲಿದೆ ಉಡುಪಿಯು ಯಾವಾಗಲೂ ಉಚ್ಚ ಅಭಿಪ್ರಾಯ, ಉಚ್ಚ ಧ್ಯೇಯಗಳಿಗೆ ಸ್ಥಾನಕೊಟ್ಟಿದೆ. ನಮ್ಮ ತಾಯಿನಾಡಿನ ಏಳ್ಗೆ ಮತ್ತು ಅಭಿವೃದ್ಧಿಗಾಗಿ ಅದು ಹಿಂದಿನಂತೆ ಮುಂದೆಯೂ ಬೆಂಬಲ ಕೊಡುವುದೆಂಬುದರಲ್ಲಿ ಸಂಶಯವಿಲ್ಲ.

ನಾವು ಪ್ರಜಾಪ್ರಭುತ್ವದ ದಾರಿಯನ್ನು ಆರಿಸಿಕೊಂಡಿರುವೆವು. ಈ ಪ್ರಜಾಪ್ರಭುತ್ವದ ಕಾರ್ಯಕ್ಷೇತ್ರವನ್ನು ಬೆಳೆಯಿಸಲು ನಾವು ಯಾವ ವ್ಯಕ್ತಿ ಅಥವಾ ವ್ಯಕ್ತಿಗಳ ಅಧೀನಕ್ಕೊಳಗಾಗದ ಒಂದು ಶಿಸ್ತಿನ ಪಕ್ಷಪರವಾದ ತತ್ವಗಳನ್ನೇ ಪಾಲಿಸುವಂತಿರಬೇಕು. ರಾಜಕೀಯದಲ್ಲಿ ವ್ಯಕ್ತಿ ಸಂಬಂಧ ಇಲ್ಲವೇ ಜಾತ್ಯಾಭಿಮಾನವೇ ಮೊದಲಾದ ವಿಷಯಗಳಿಗೆ ಸ್ಥಾನವಿಲ್ಲ. ಇವುಗಳು ನಮ್ಮನ್ನು ನಮ್ಮ ಧ್ಯೇಯದಿಂದ ಬದಿಗೊಯ್ಯುವುವು.

ನಾವೀಗ ನಿರ್ಮಾಣಾವಸ್ಥೆಯಲ್ಲಿದ್ದೇವೆ. ನಮ್ಮದು ಬರೇ ಐದು ವರ್ಷದ ಪ್ರಜಾಪ್ರಭುತ್ವ. ನಾವಿಂದು ಅನುಸರಿಸುವ ಸಂಪ್ರದಾಯಗಳೇ ಮುಂದೆ ದಾರಿತೋರಿಸತಕ್ಕವು. ಆದುದರಿಂದ ನಮ್ಮ ಜವಾಬ್ದಾರಿ ಬಹುದೊಡ್ಡದು. ನಾವಿಂದು ಯಾವುದೇ ತಪ್ಪು ಹೆಜ್ಜೆ ಇಟ್ಟರೂ ನಾಳೆ ವಿಪರೀತ ಪ್ರತಿಫಲವಿದೆ ಎಂತಲೇ ಇಂದಿನ ಜನಾಂಗ ಇಂದಿಗೆ ಮಾತ್ರವಲ್ಲ ಮುಂದಕ್ಕೂ ಇರುವಂಥಾದ್ದೇ ಎಂಬುದನ್ನು ನಾವು ಕ್ಷಣಕ್ಷಣಕ್ಕೂ ಜ್ಞಾಪಿಸಿಕೊಳ್ಳಬೇಕು.

ರಾಜಕೀಯವನ್ನು ಚಿಂತಿಸುತ್ತಿರುವ ಪ್ರತಿಯೊಬ್ಬ ವ್ಯಕ್ತಿಯೂ ಅದನ್ನು ರಾಜಕೀಯ ರೀತಿಯಲ್ಲಿಯೇ ಯೋಚಿಸುವುದು ಅವನ ಕರ್ತವ್ಯವಾಗಿದೆ. ಅಂತೆಯೇ ತನ್ನ ಸುತ್ತುಮುತ್ತಿನವರನ್ನೂ ತಿದ್ದುವುದು ಸಹಾ ರಾಜಕೀಯ ವ್ಯಕ್ತಿಯ ಕರ್ತವ್ಯ. ನಾವೀ ಧ್ಯೇಯ ಸಾಧನೆಗಾಗಿ ನಮ್ಮ ಪಕ್ಷ ಪದ್ಧತಿಯನ್ನು ಕಟ್ಟುನಿಟ್ಟಿನಿಂದಲೇ ಸರಿಯಾಗಿ ಆರಂಭಿಸಬೇಕು. ಪಾಶ್ಚಾತ್ಯ ಪ್ರಜಾಪ್ರಭುತ್ವ ನಿರ್ವಾಹಕ್ಕೆ ಇದೊಂದೇ ದಾರಿಯಾಗಿದೆ ಈ ದೃಷ್ಟಿಯಲ್ಲಿ ಕಾಂಗ್ರೆಸು ಇಂದಿನ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಪಕ್ಷ ಹಿಡಿದು ಸ್ಪರ್ಧಿಸಲು ನಿರ್ಧರಿಸಿದುದು ನ್ಯಾಯವಾಗಿದೆ. ಪ್ರತಿಯೊಬ್ಬ ನಾಗರಿಕನೂ ಪಕ್ಷ ಸಂಘಗಳು ಮುಂದಿಟ್ಟ ಧ್ಯೇಯಧೋರಣೆಗಳನ ವಿಮರ್ಶಿಸಿ ತನಗೆ ಹಿತವಾದ ಪಕ್ಷಕ್ಕೇ ಬೆಂ ಲ ಕೊಡುವ ನಿರ್ಧಾರ ಮಾಡಬೇಕು. ಚಿ ಪುಟ್ಟ ಭೇದಭಾವಗಳಿದ್ದರೆ ಅವು ಅಗಣ್ಯ.

ನಾನು ಮತದಾರರುಗಳಲ್ಲೆಲ್ಲಾ ಕಾಂ ಸ್ ಪಕ್ಷಕ್ಕೆ ಬೆಂಬಲ ಕೊಡಬೇಕೆಂದು ಕೇ ಕೊಳ್ಳುವೆನು. ಒಂದು ಪಕ್ಷದ ಯೋಗ್ಯ ತಿಳಿಯಬೇಕಾದರೆ ಅದು ಹಿಂದೆ ಸಾಧಿಸಿ ಕಾರ್ಯ, ಮುಂದಿನ ಕ್ರಿಯಾಶಕ್ತಿ ಮತ ಅದರ ಧ್ಯೇಯ, ಅದರ ಮುಂದಾಳುತ ಶಿಸ್ತು ಏನೆಂಬುದನ್ನು ಅರಿತುಕೊಳ್ಳಬೇಕ

ಮೊದಲೇ ಹೇಳುವಂತೆ ನಮ್ಮ ಜಾಪ್ರಭುತ್ವ ಐದು ವರ್ಷದ್ದು. ನಾ ಆದಿಯಿಂದಲೂ ಅನೇಕಾನೇಕ ಗ ಡಾಂತರಗಳನ್ನು ಇದಿರಿಸಬೇಕಾಯಿತ ಆಕ್ರಮ, ಜಾತ್ಯಾಂಧತೆ, ಜಡತನ ಮತ ಹಸಿವುಗಳ ಸಂಕಟವನ್ನು ಎದುರಿಸಬೇ ಯಿತು ನಾವು ನಮ್ಮ ಕೆಲವು ನೆರೆ ರಾಷ್ಟ್ರಗ ಮಾಡಿದಂತೆ ಅದಾವ ದಾರಿ ಹಿಡಿಯಬೇಕಾ ಬಹುದೋ ಎಂಬ ಯೋಚನೆ ಕೂಡಾ ಆಗಾ ಬಂದಿತ್ತು. ಆದರೆ ನಮ್ಮಲ್ಲಿ ಆತ್ಮವಿಶ್ವಾ ವಿತ್ತು ಮುಂದಾಳುಗಳಲ್ಲಿ ನಂಬಿಕೆಯಿತ್ತು ಆ ಸಂಧಿ ಕಾಲದಲ್ಲಿ ರಾಷ್ಟ್ರಪಿತನೂ ನಮ ಡನಿದ್ದನು. ನಾವು ಹಲವಾರು ಗಂಡಾಂತ ಗಳನ್ನು ಇದಿರಿಸಿ ಬಗೆಹರಿಸಿಕೊಂಡಿರುವೆ ದುರ್ಘಟನೆಗಳನ್ನು ಪರಿಹರಿಸಿಕೊಂಡು ನಾ ಸಾಖು ಮತ್ತು ಉನ್ನತಿಯ ಕಡೆಗೆ ಮುನ್ನ ಯುತ್ತಿರುವೆವು. ನಾವು ಹಿಂದೆ ಅನೇಕ ಸ ದೊಡ್ಡ ತಪ್ಪು ಮಾಡಿದ್ದೆವು. ಆದರೆ ಅದ ನಮ್ಮ ಅಜ್ಞಾನ ಮತ್ತು ಅತಿ ಉತ್ಸಾಹ ಕಾರಣ. ನಾವು ನೂತನರು. ನಮ್ಮ ಅನು ವಕ್ಕೂ ಮಿತಿಯಿದೆ. ಮುಂದೆ ನಾನು ತ ನ್ನೇ ಮಾಡುವುದಿಲ್ಲ ಎಂಬ ಆಶ್ವಾಸನೆಯ ನ್ನು ಕೊಡಲಾರೆ. ಆದರೆ ನಮ್ಮ ಎಲ್ಲಾ ಸ ಸ್ಯೆಗಳನ್ನು ಉತ್ಸಾಹದಿಂದಲೇ ದೇಶ ಬ ಯಿಂದಲೇ ಬಗೆಹರಿಸುವೆವು ಎನ್ನದಿರಲಾ ನಮ್ಮ ಮುನ್ನೋಟವು ಸುಸ್ಪಷ್ಟವಿದೆ. ಶ್ರ ವಿಶ್ವಾಸಗಳೂ ಕುಗ್ಗಿಲ್ಲ. ನಾವು ನಮ್ಮ ಮಸ್ಯೆಗಳನ್ನು ಧೈರ್ಯ ಸ್ಥೈರ್ಯಗಳಿಂ ಪ್ರತಿಭಟಿಸಿದ್ದೇವೆ. ಕಾಂಗ್ರೆಸ್ ಪಕ್ಷದ ಮು ದಾಳುತ್ವವು ದೇಶದ ಜನರಲ್ಲಿ ವಿಶ್ವಾ ವನ್ನು ಹುಟ್ಟಿಸಿದೆ ಮತ್ತು ಅವರಲ್ಲಿ ಆ ಆಕಾಂಕ್ಷೆಗಳನ್ನು ಮೂಡಿಸಿದೆ ನಮ್ಮ ಜನ ಮುಂದರಿಯುತ್ತಿದ್ದಾರೆ. ನಾವು ದೇವರ ನಂಬಿಕೆಯಿಟ್ಟು ನಮ್ಮಲ್ಲಿ ವಿಶ್ವಾಸ ತಳೆ ಮುಂದೆ ನಡೆಯೋಣ. ಬಾಪೂಜೀಯವ ಪ್ರತಿಪಾದಿಸಿದ ಹಾಗೂ ಪ್ರಾಣಾರ್ಪಣ ಮಾ ದ ಧ್ಯೇಯ ಧೋರಣೆಗಳಿಗಾಗಿ ಹೋ ಡೋಣ. ನಾವು ಅವರು ಬೆಳಗಿಸಿದ ಪ್ರಕಾ ವನ್ನು ಮುಂದೊಯ್ಯುವ ಪ್ರತಿಜ್ಞಾಬದ್ಧ ಗಿರುವೆವು.

ಅಂತರರಾಷ್ಟ್ರೀಯವಾಗಿ ಹೇಳುವುದಾದ 1947ರ ಮೊದಲು ನಮಗೊಂದು ನೆಲೆಯಿ ಲಿಲ್ಲ. ನಾವಿಂದು ಇತರ ರಾಷ್ಟ್ರಗಳೆದುರು ಸ ನಮಾನವನ್ನು ಕಲ್ಪಿಸಿಕೊಂಡಿದ್ದೇವೆ. ಶ ಕ್ಕೊಳಗಾದ ಜಗತ್ತು ನಮ್ಮನ್ನೇ ಆಶಾಪ ರ್ಣ ದೃಷ್ಟಿಯಿಂದ ನೋಡುತ್ತಿದೆ. ಭದ್ರವಾ ಅದೃಷ್ಟವನ್ನು ನಮಗೆ ನಾವೇ ಕಲ್ಪಿಸಿಕೊ ಬೇಕು. ಸ್ಥಳೀಯ ಮನೋವೈಷಮ್ಯಗಳ ಲಿ, ಕಿಚ್ಚು ಕಿಟಲೆಗಳಾಗಲಿ, ಸ್ವಾರ್ಥಭೇ ಷೆಯಾಗಲಿ ನಮ್ಮ ಜೀವನದ ಧ್ಯೇಯಸಾಧ ಗೆ ಎಷ್ಟಕ್ಕೂ ಹೇಳಿಸಿದ್ದಲ್ಲವಷ್ಟೆ! ಉಡು ಯು ಮುಂದಾಳಾಗಬೇಕು, ಇತರರು ಹಿ ಬಾಲಿಸುವರು.

ಜೈ ಹಿಂದ್!

ಕೆ. ಸದಾನಂದ ಹೆಗ್ಡೆ, M. A. B.
ಎಡ್ವಕೇಟ್,
ಮೆಂಬರ್, ಕೌನ್ಸಿಲ್ ಆಫ್ ಸ್ಟೇಟ್

ಉಡ್ಪಿ ಡಿ ಮು ಕೋರ್ಟಿನಲ್ಲಿ

S. C. 439/1952

ಬಿ ಗೋವಿಂದರಾಯ ನಾಯ್ಕ —ವಾದಿ.

ಮತ್ತು

1 ಕೆ ವಿಠಲ ಶೆಟ್ಟಿ, 2 ಮಿನಾಯತುಲ್ಲಾ, 3 ಕಂಚಿಬಟ್ಟು ಎಂಡ್ ಕಂಪೆನಿ, A. registered partnership represented by defendants 1 and 2 as partners —ಪ್ರತಿವಾದಿರು.

ಇವರೆದುರಿಗೆ.

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ:-

3ನೇ ಪ್ರತಿವಾದಿ ಫರ್ಮಿನಿಂದಲೂ ಅದ್ರ ಪಾಲುಗಾರರಾದ 1, 2ನೇ ಪ್ರತಿವಾದಿರಿಂದಲೂ, ವಾದಿಗೆ [illegible] ಸಂದಿರುವ ಅಸಲು ಬಡ್ಡಿ ಕೂಡಾ ರುಪಾಯಿ 197 2 0ನ್ನು ಬರಮಾಡಿಕೊಳ್ಳುವರೇ ವಾದಿಯು ಮಾಡಿದ ಮೇಲಿನ ವ್ಯಾಜ್ಯವು [illegible]-10-52ಕ್ಕೆ ಇಟ್ಟಿರುತ್ತದೆ. ಸದ್ರಿ ವ್ಯಾಜ್ಯ[illegible] ಪ್ರತಿವಾದಿರ ಉದಾಹರಣೆ ಇದ್ದ ಸದ್ರಿ ದಿವಸ ಹಗಲು ಗಂಟೆ 10ಕ್ಕೆ ಪ್ರತಿವಾದಿರು ಈ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳಲಿಕ್ಕೆ ತಪ್ಪಿದ್ರೆ ಅವರ ಗೈರುಹಾಜ್ರಿಯಲ್ಲಿ ಈ ವ್ಯಾಜ್ಯ ತೀರ್ಮಾನಿಸಲ್ಪಡುವುದು.

B. Vasudeva Rao,
Counsel for Plaintiff.

ಉಡ್ಪಿ, 29-9-52

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

The East & West Insurance Co., Ltd.,
[Estd:] East & West Building, BOMBAY, 1. [1913
ದಿ ಈಸ್ಟ್ ಎಂಡ್ ವೆಸ್ಟ್
ಸ್ಥಾಪನೆ:] ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್. [1913
ಒಟ್ಟು ನಿಧಿ ರೂಪಾಯಿ 1 ಕೋಟಿ 5ಲಕ್ಷಕ್ಕೂ ಮಿಕ್ಕಿ ಇದೆ.
ಒಟ್ಟು ಆಸ್ತಿಬದುಕು ರೂಪಾಯಿ 1ಕೋಟಿ 23 ಲಕ್ಷಕ್ಕೆ ಮೇಲ್ಪಟ್ಟು ಇದೆ.
ಪೋಲಿಸಿ ಹೋಲ್ಡರ ಸೇವೆಯೇ ನಮ್ಮ ಧ್ಯೇಯ.
ಆರು ತಿಂಗಳಿಗೊಂದಾವರ್ತಿ ಸರ್ತಿಯಂತೆ ನಮ್ಮ ಈ ಸಲದ ಕಾರು ಪ್ರಯಾಣದಲ್ಲಿ ಹುಬ್ಬಳ್ಳಿ, ಬೆಳಗಾಂ, ಕೊಲ್ಹಾಪುರ, ಪೂನ, ಬೊಂಬಾಯಿ ಸಿಟಿ ಮತ್ತು ಸಬರ್ಬನ್ ಜಿಲ್ಲೆಗಳಲ್ಲಿ ಪ್ರಕೃತ ನೆಲಸಿರುವ ನಮ್ಮ ಪೋಲಿಸಿದಾರರು ಮತ್ತು ಹಿತಚಿಂತಕರು ತೋರಿಸಿದ ಪ್ರೀತಿ ವಿಶ್ವಾಸಗಳಿಗೆ ನಾವು ತುಂಬಾ ಆಭಾರಿಗಳಾಗಿದ್ದೇವೆ.
ನಮ್ಮ ಆಫೀಸುಗಳು ಶಿರ್ವಾ ಮತ್ತು ಪಡುಬಿದ್ರಿ ನಮ್ಮ ಏರಿಯಾದ ಪ್ರತೀ ಜಿಲ್ಲೆಗಳಲ್ಲೂ ಯೋಗ್ಯ ಸಂಬಳದಲ್ಲಿ ಕೆಲಸಮಾಡಬಲ್ಲ ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ.
ಮೆಸ್ಸರ್ಸ್ ಹೆಗ್ಡೆ ಎಂಡ್ ರಾವ್
ಚೀಫ್ ಏಜಂಟರು,
ದಕ್ಷಿಣ ಕನ್ನಡ, ಉತ್ತರ ಕನ್ನಡ, ಮತ್ತು ಮೈಸೂರು ಸ್ಟೇಟ್,
ಪೋಸ್ಟ್, ಶಿರ್ವಾ ದ. ಕ.


Applauded as the BEST Rubber Stamp Makers all over India
CROWN RUBBER STAMP CO.
Mangalore
[ESTD: 1926]

ಮಂಗಳೂರು

ಸಂಗೀತ ಕಚೇರಿ—ಶ್ರೀ ಡಿ. ಬಿ ರೇಂದ್ರ, ಬೆಂಗಳೂರು ಮತ್ತು ಶ್ರೀ ದತ್ತ ಗರೂರ, ಅವರುಗಳ ಸಂಗೀತ ಕಚೇರಿ ಒಂದು ಕಳೆದ ತಾ. 21ನೇ ರಾತ್ರಿ ಶ್ರೀ ಂಕಟ್ರಮಣ ದೇವಸ್ಥಾನದಲ್ಲಿ ಜರಗಿತು. ಕಾ ರ್ಯಕ್ರಮಾಂತ್ಯದಲ್ಲಿ ಶ್ರೀ ಎಮ್. ಗೋಪಾ ಕೃಷ್ಣ ರಾಯರು ಸಂಗೀತಕಲಾವಿದರಬ್ಬ ನ್ನು ಶ್ಲಾಘಿಸುತ್ತ, ಈ ಕಲಾ ಸೇವಕರಿಗೆ ಕ ರ್ನಾಟಕದಲ್ಲಿ ಸುಸ್ವಾಗತ ದೊರೆಯಲೆಂದು ರೈಸಿದರು. ಶ್ರೀ ಎಮ್. ಎ. ದೇವಾಡಿಗರು ಲಾವಿದರಿಗೊಂದು ಥೈಲಿಯನ್ನು ಸಾರ್ವಜ ಕರ ಪರವಾಗಿ ಅರ್ಪಿಸಿದರು.

ಜಿಲ್ಲಾ ಬೈಠಕ್—ರಾಷ್ಟ್ರೀಯ ಸ್ವ ಯಂ ಸೇವಕ ಸಂಘದ ಜಿಲ್ಲಾ ಬೈಠಕ್ ತಾ. 21 ಮತ್ತು 22ರಲ್ಲು ಶ್ರೀ ಕೆ. ಸದಾಶಿವ ರಾ ಯರ ಅಧ್ಯಕ್ಷತೆಯಲ್ಲಿ ಸೇರಿತು. ಕರ್ನಾಟಕ ಮತ್ತು ಹೈದರಾಬಾದಿನ ಪ್ರಚಾರಕ ಶ್ರೀ ಮಾಧವರಾವ್ ಜೋಶಿಯವರು ಸಭೆಯಲ್ಲಿ ಭಾಗವಹಿಸಿದ್ದು, ಕೆಲವು ಸೂಕ್ತ ಸಲಹೆಗಳ ಇತ್ತರು.

ಶ್ರೀ ರಾಮವಾಜಪೇಯಿ—ಅಖಿಲ ಭಾರತ ಸ್ಕೌಟ್ಸ್ ಸಂಸ್ಥೆಯ ನೇಶನಲ್ ಕ ಮಿಶನರ್ ಶ್ರೀ ರಾಮ ವಾಜಪೇಯಿಯವರು ಮಂಗಳೂರಿಗೆ ಆಗಮಿಸಿ ತಾ. 22ರಲ್ಲು ದ. ಕ. ಜಿಲ್ಲಾ ಭಾರತ್ ಸ್ಕೌಟ್ಸ್ ಸಂಸ್ಥೆಯ ಆ ಶ್ರಯದಲ್ಲಿ ಅವರಿಗೊಂದು ಸತ್ಕಾರ ಕೂಟ ನಡೆಯಿತು. ಶ್ರೀ ವಾಜಪೇಯಿಯವರು ಸ್ಕೌ ಟ್ ಮಾಸ್ಟರರನ್ನುದ್ದೇಶಿಸಿ ಭಾಷಣವಿತ್ತರು.

ಕರ್ನಾಟಕ ಗಾನ ಕಲಾಮಂಡಳಿಯ ಆಶ್ರಯದಲ್ಲಿ ಶಾರದಾ ಮಹೋತ್ಸವವು ತಾ. 24ರಿಂದ 27ರ ತನಕ ವೇಣುವಾದನ, ವೀಣಾವಾದನ, ಪಿಟೀಲು, ಮೃದಂಗ, ಹಾಡು ಗಾರಿಕೆಗಳ ಕಾರ್ಯಕ್ರಮದಿಂದ ಸಾಂಗ ವಾಗಿ ಜರಗಿತು.

ವಾರ್ಷಿಕ ಮಹಾಸಭೆ— ಹೊಟೆ ಲ್ ಮಜದೂರರ ವಾರ್ಷಿಕ ಮಹಾಸಭೆಯು ತಾ. 24ರಲ್ಲು ಡಾ| ಕೆ. ನಾಗಪ್ಪ ಆಳ್ವರಿಂದ ಉದ್ಘಾಟಿಸಲ್ಪಟ್ಟು ಶ್ರೀ ಮಹಾಬಲ ರೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಸದ್ಯದ ಫೆಕ್ಟರಿ ಆಕ್ಟನ್ನು ತೆಗೆದು ಹಾಕಿ ಹೊಟೆಲುಗಳ ಮಾ ಟ್ಟಿಗೆ ಶೋಪ್ಸ್ ಎಂಡ್ ಎಸ್ಟಾಬ್ಲಿಷ್‌ಮೆಂಟ್ ಆಕ್ಟನ್ನು ಜ್ಯಾರಿಗೆ ತರಬೇಕೆನ್ನುವ ಮತ್ತು ಇಂದೂರಿನ ಕಾರ್ಮಿಕ ಮುಖಂಡರಿಗೆ ವಿಧಿ ಸಲಾದ [illegible] ದಂಡನೆಯನ್ನು ಪುನರ್ವಿಮರ್ಶಿಸಿ ಅವರನ್ನು ಕ್ಷಮಿಸುವಂತೆ ರಾಷ್ಟ್ರಪತಿಯರನ್ನು ಕೇಳಿಕೊಳ್ಳುವ ನಿರ್ಣಯಗಳಾದುವು.

ನಗರಸಭಾ ಚುನಾವಣೆಯ ಪ್ರಚಾರ ಸಭೆಯೊಂದು ಕಾಂಗ್ರೆಸ್ ಕಮಿಟಿಯ ನೇತೃತ್ವದಲ್ಲಿ ಕಳೆದ 23ರಲ್ಲಿ ಕೇಂದ್ರ ಮೈದಾನಿನಲ್ಲಿ ಶ್ರೀ ಎಲ್. ಸಿ. ಪಾಯಸರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ ಆರ್. ಕಬಾರ್, ಎನ್. ಎಸ್. ಕಿಲ್ಲೆ, ಬಿ. ವೈಕುಂಠ ಬಾಳಿಗ, ಎಸ್. ಎನ್. ಸುವರ್ಣ ಮೊದಲಾದವರು ಕಾಂಗ್ರೆಸ್ ಹುರಿಯಾಳುಗಳನ್ನು ಆರಿಸುವ ಅವಶ್ಯಕತೆಯನ್ನು ವಿವರಿಸಿ ಭಾಷಣವಿತ್ತರು. ಕೆಲವರಿಂದಾಗುತ್ತಿರುವ ಅಪಪ್ರಚಾರಕ್ಕೂ ಉತ್ತರವೀಯಲಾಯಿತು.

ಋತುಸ್ರಾವ ನಿಂತಿತು

'ಶಾಮೂರಿ' ಪಿಲ್ಲುಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗದೆ [illegible] ಬರುವುದು. ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾಧಾರಣ ಕುಂದಿಗೆ ಖಾತ್ರಿ ಗುಣವಾಗಿದೆ- ಪಿಲ್ಸ್ ರೂ. 3-| ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8-] ವಿ ಪಿ [illegible] ಪ್ರತ್ಯೇಕ]

Mrs. D. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು: [illegible], ಮಂಗಳೂರು

ಪಡುಪಣಂಬೂರು—ಮಾನ್ಯ ನಂ ಶ್ರೀ ರಂಗಾ ರೆಡ್ಡಿಯವರಿಂದ ತಾ. 22ರಲ್ಲು ಉದ್ಘಾಟಿಸಲ್ಪಡಬೇಕಾಗಿದ್ದ ಪಡುಪಣಂಬೂರು ಬೋರ್ಡ್ ಹಾ| ಎ| ಶಾಲಾ ಕಟ್ಟಡದ ಉದ್ಘಾಟನಾ ಸಮಾರಂಭವು, ಅವರ ಅನಾರೋಗ್ಯದ ನಿಮಿತ್ತ ಅವರ ಗೈರಹಾಜರಿಯಲ್ಲಿ ಶ್ರೀ ಎನ್. ಎಸ್ ಸುವರ್ಣ, ಎಮ್. ಎಲ್ ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆಯಾದ ಬಳಿಕ ಶ್ರೀ ಎಮ್. ಕೆ. ಎಲ್ಲಪ್ಪನವರು ಸ್ವಾಗತ ಭಾಷಣ ಮಾಡಿದರು. ಆ ಮೇಲೆ ಶಾಲಾವರದಿಯನ್ನು ಶ್ರೀ ಬಿ. ತಿಮ್ಮಪ್ಪಯ್ಯನವರು ಓದಿದರು. ಈ ಕಟ್ಟಡದ ಬಗ್ಗೆ ಸ್ಥಳವನ್ನು ಶ್ರೀ ಚೆನ್ನರಾಯ ಸಾಮಂತರು ದಾನ ಮಾಡಿದ್ದರೆಂದೂ ಕಟ್ಟಡದ ಖರ್ಚು ಅಂದಾಜು ರೂ. 15,000 ಆಗಿತ್ತೆಂದೂ ವರದಿಯಲ್ಲಿ ಸೂಚಿಸಲಾಗಿತ್ತು.

ಆ ಮೇಲೆ ದಿವಂಗತ ಶ್ರೀ ಎಮ್. ಆರ್. ಪೂಂಜರ ಭಾವಚಿತ್ರವನ್ನು ಅನಾವರಣ ಮಾಡಿದರು. ಶಾಲಾ ಕಟ್ಟಡ ಉದ್ಘಾಟನೆಯನ್ನು ಶ್ರೀ ಸುವರ್ಣರು ನೆರವೇರಿಸಿದರು. ಶಾಲಾ ಕಟ್ಟಡವನ್ನು ಜಿಲ್ಲಾ ಬೋರ್ಡಿನ ಪರವಾಗಿ ಅದರ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಸ್ವೀಕರಿಸಿದರು. ಶ್ರೀಗಳಾದ ಜಿ. ಮಹಾಬಲ ಸೆಟ್ಟಿ, ಎ. ಫಕೀರಪ್ಪ ಮೊದಲಾದವರ ಸಂದರ್ಭೋಚಿತ ಮಾತುಗಳಾಗಿ, ಅಧ್ಯಕ್ಷರ ಭಾಷಣಾನಂತರ ಡಾ| ಎಮ್. ರಾಯಪ್ಪ ಕಾಮತರ ವಂದನಾರ್ಪಣೆಯೊಂದಿಗೆ ಸಮಾರಂಭ ಮುಕ್ತಾಯವಾಯಿತು.

ಮೂಲ್ಕಿ— ಸ್ಥಳೀಯ ಬೋರ್ಡ್ ಹೈಸ್ಕೂಲು ತಾರೀಕು 1-6-1952ರಿಂದ ಗವರ್ನ್‌ಮೆಂಟ್ ಹೈಸ್ಕೂಲಾಗಿ ಪರಿವರ್ತನೆ ಹೊಂದಿರುವುದರಿಂದ ಇಲ್ಲಿನ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ. ಪಿ ರಾಮಕೃಷ್ಣರಾವ್ ಬಿ. ಎ., ಎಲ್. ಟಿ. ಅವರು ಪುತ್ತೂರು ಬೋರ್ಡ್ ಹೈಸ್ಕೂಲಿಗೆ ವರ್ಗಾಯಿಸಲ್ಪಟ್ಟಿದ್ದು, ಪ್ರಥಮ ಸಹಾಯಕ ಉಪಾಧ್ಯಾಯರಾದ ಶ್ರೀ. ಯಂ. ಪಿ. ದೇವರಾವ್, ಬಿ. ಎ ಎಲ್. ಟಿ. ಅವರೇ ಚಾರ್ಜಿನಲ್ಲಿದ್ದರು. ಆದರೆ ಶ್ರೀ. ಪಿ. ರಾಮಕೃಷ್ಣ ರಾವ್, ಬಿ. ಎ. ಎಲ್. ಟಿ. ಇವರೇ ಗವರ್ನ್‌ಮೆಂಟ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿ ನೇಮಕಹೊಂದಿದ್ದು ತಾ. 23 9-1952ರಲ್ಲು ಚಾರ್ಜು ವಹಿಸಿಕೊಂಡಿದ್ದಾರೆ.

ನಾಯರಬೆಟ್ಟು ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಕಳೆದ ತಾ. 26ರಲ್ಲಿ ಶ್ರೀ. ಕೆ. ಸದಾಶಿವ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಶಾರದಾ ಪೂಜೆಯು ಜರಗಿತು. ಶ್ರೀ ಕೆ. ಬಿ. ಜಗನ್ನಾಥ ಶೆಟ್ಟಿ, ಕವಡೂರು ಬಾಬು ಸೆಟ್ಟಿ, ನಾರಾಯಣ ಮಾಸ್ಟರ್ ಮೊದಲಾದವರು ಸಂದರ್ಭೋಚಿತ ಭಾಷಣಮಾಡಿದರು.

ಭೈರಂಜೆ—ಶ್ರೀ ಶಾರದಾ ಎಯ್ಡೆಡ್ ಎಲಿಮೆಂಟರಿಶಾಲೆಯಲ್ಲಿ 26-9-1952ರಲ್ಲು ಶ್ರೀ ಶಾರದಾ ಪೂಜಾಸಮಾರಂಭವೂ ವಯಸ್ಕರ ಶಿಕ್ಷಣ ಕೂಟದ ಆಶ್ರಯದಲ್ಲಿ ಭಜನೆಯ ಕಾರ್ಯಕ್ರಮವೂ ಜರಗಿತು.

ಕಂಬಳೆ—ಒಂದು ತಿಂಗಳಿಂದೀಚೆಗೆ ಮಳೆ ಬಾರದ ಕಾರಣ, ಭತ್ತದ ಬೆಳೆಗೂ, ತರಕಾರಿ ತೋಟಗಳಿಗೂ ತುಂಬಾ ನಾಶವೊದಗಿರುವುದಾಗಿ ತಿಳಿಯುತ್ತದೆ.

ಶಿರ್ವ—ಇಲ್ಲಿಯ ಲೋಕಲ್ ಫಂಡ್ ಆಸ್ಪತ್ರೆಗೆ ಡಾ| ಎಂ. ಸದಾಶಿವ ಶೆಟ್ಟರು ಡಾಕ್ಟರರಾಗಿ ಬಂದಿದ್ದು ಈಗಾಗಲೇ ಜನರ ಪ್ರೀತಿಗೆ ಪಾತ್ರರಾಗಿರುವರೆಂದೂ ಜಿಲ್ಲಾ ಬೋರ್ಡಿನವರು ಇಲ್ಲಿಗೆ ಹೆಚ್ಚಿನ ಸಲಕರಣೆಗಳನ್ನು ಒದಗಿಸುವ ಅಗತ್ಯವೆಂದೂ ನಿವಾಸಿಕರೊಬ್ಬರು ಬರೆಯುತ್ತಾರೆ

ಕೊಂಜಿಬೆಟ್ಟು—ಎಂ. ಆರ್. ಟಿ. ವಾಚನಾಲಯ ಮತ್ತು ಪುಸ್ತಕಾಲಯದಲ್ಲಿ ಕಳೆದ ತಾ 28ರಂದು ನಾಡ ಹಬ್ಬದ ಸಲುವಾಗಿ ವಿಶೇಷ ಸಭೆಯೊಂದು ಶ್ರೀ ಪಿ. ಶಾಸ್ತ್ರ ಡಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ, ಶ್ರೀಗಳಾದ ಕೆ. ಪ್ರಭಾಕರ ಪೈ, B. Sc., ಜಿ. ರಾವ್, D. com. ಕೆ. ಪದ್ಮನಾಭ ಭಟ್. ಸಂಜೀವ ಶೆಟ್ಟಿ, ಕೆ. ಗೋಪಾಲ ಶೆಟ್ಟಿಗಾರ ಮೊದಲಾದವರ ಭಾಷಣಗಳಾದುವು.

ಪುತ್ತೂರು— ಜಿಲ್ಲಾ ಹೈಸ್ಕೂಲುಗಳ ದಕ್ಷಿಣ ವಿಭಾಗದ ವಾರ್ಷಿಕ ಮಹಾ ಸಭೆಯು ಬೋ| ಹೈಸ್ಕೂಲಿನಲ್ಲಿ ರೆಜಿನಲ್ ಇನ್ಸ್‌ಪೆಕ್ಟರರ ಅಧ್ಯಕ್ಷತೆಯಲ್ಲಿ ಕಳೆದ ತಾ. 21ರಲ್ಲು ಜರಗಿ ವರದಿ ವಾಚನ, ಜಮಾ ಖರ್ಚಿನ ವಿಮರ್ಶೆ. ಅಧಿಕಾರಿಗಳ ಆಯ್ಕೆ ನಡೆಯಿತು

ಇಲ್ಲಿಯ ಕರ್ನಾಟಕ ಸಂಘದ ಸಾಪ್ತಾಹಿಕ ಸಾಹಿತ್ಯ ಕೂಟವು ಕಳೆದ 21ರಲ್ಲಿ ಕೂಡಿದಾಗ ಶ್ರೀ ಬೆಳ್ಳೆ ರಾಮಚಂದ್ರ ರಾಯರು "ಮೇನ್ ದಿ ಅನ್ ನೋನ್" ಎಂಬ ಕಾದಂಬರಿಯ ಕುರಿತು ಉಪನ್ಯಾಸವಿತ್ತರು.

ಬೆಳ್ಳೆ—ಕಳೆದ ತಾ. 16ರಲ್ಲು ಬೋ| ಎ. ಶಾಲೆಯಲ್ಲಿ ಶ್ರೀ ಬಿ. ರಾಮಣ್ಣ ಶೆಟ್ರ ಅಧ್ಯಕ್ಷತೆಯಲ್ಲಿ ಶಾರದಾ ಪೂಜೆಯು ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ಹೆಗ್ಗುಂಜೆ—ಕಳೆದ ತಾ. 25ರಲ್ಲಿ ಬಿ. ಟಿ. ಹಾ| ಎ. ಶಾಲೆಯಲ್ಲಿ ಶ್ರೀ ಬಿ. ಶಿವರಾಮ ಶೆಟ್ರ ಅಧ್ಯಕ್ಷತೆಯಲ್ಲಿ ನೇಶನಲ್ ವಯಸ್ಕರ ಶಾಲೆಯಲ್ಲಿ ಶ್ರೀ ಎಚ್. ರಾಮಚಂದ್ರಯ್ಯನವರ ಅಧ್ಯಕ್ಷತೆಯಲ್ಲಿಯೂ ಶಾರದಾ ಪೂಜಾದಿಗಳು ನೆರವೇರಿದವು.

ಮತದಾರರಲ್ಲಿ ವಿನಂತಿ

ಬರುವ ಒಕ್ಟೋಬರ 6ನೇ ತಾರೀಕಿನ ದಿನದಲ್ಲಿ ನಡೆಯಲಿರುವ
ಉಡುಪಿ ಮತ್ತು ಮಂಗಳೂರು ಮುನ್ಸಿಪಾಲಿಟಿಯೊಳಗಿನ
ಚುನಾವಣೆಯಲ್ಲಿ ಕೊಂಗ್ರೆಸ್ಸ್ ಸಂಪೂರ್ಣ ವಿಜಯಶಾಲಿಯಾಗುವಂತೆ
ತಮಗಿರುವ ಘನವಾದ ಮತವನ್ನು ಅದರ ಚಿಹ್ನೆಯಾದ
"ಒಂದು ಎತ್ತು" ಈ ಗುರುತಿನ ಪೆಟ್ಟಿಗೆಗೆ ಹಾಕಿ
ಕೊಂಗ್ರೆಸ್ಸಿನ ವಿಜಯ ಪತಾಕೆಯನ್ನು ಮೆರೆಸಿರಿ

(ನಮ್ಮ ವ್ಯಾಪಾರೀ ಜಾಹೀರಾತನ್ನು ಕ್ರಮವಾಗಿ ಪ್ರಕಟಿಸುತ್ತಿದ್ದ ಪಕ್ಷಾತೀತ (?) ಪತ್ರಿಕೆಯೊಂದು ಇದನ್ನು ಮೊದಲು ಪ್ರಕಟಿಸುವುದಾಗಿ ಹೇಳಿ ಕಡೆಗೆ ನಿರಾಕರಿಸಿದ್ದರಿಂದ ಇಲ್ಲಿ ಪ್ರಕಟಿಸಲಾಗಿದೆ. ವಿವರಕ್ಕೆ ನಮ್ಮ ಕರಪತ್ರವನ್ನು ನೋಡಿರಿ.)

(Space donated by U. RAGHAVENDRA KRISHNA BHAT Jeweller Udipi.)

THE CANARA INDUSTRIAL & BANKING SYNDICATE, LTD., BYNDOOR

ದಿ ಕೆನರಾ ಇಂಡಸ್ಟ್ರಿಯಲ್ ಎಂಡ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಬೈಂದೂರು.

ಜಾಹೀರು ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಲ್ಲಿ ಆಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದುದರಿಂದಲೂ, ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸಿಗನುಸಾರವಾಗಿಯೂ, ಇನ್ನು ಕೆಲವ [illegible]ಯಾಗದೆ [illegible] ಬಂದಿರುವದರಿಂದಲೂ, ಈ ಮೂಲಕ ತಿಳಿಯಪಡಿಸುವದೇನಂದರೆ ಸದ್ರಿಯ [illegible] ನಗಗಳನ್ನು ಇದೇ ತಿಂಗಳು ತಾ. 11-10-1952 ನೇ ಶನಿವಾರ ಮಧ್ಯಾಹ್ನ ಗಂಟೆ 2ಕ್ಕೆ ಯಾ ಅನಂತರ ಯುಕ್ತಕಂಡ ತಾರೀಕಿಗೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವವು. ಸದ್ರಿ ಏಲಂಗಳಿಗೆ ನಿಲ್ಲಲು ಅಪೇಕ್ಷಿಸುವವರು ಆ ಸಮಯಕ್ಕೆ ಬೇಂಕಿನ ಆಫೀಸಿಗೆ ಬರಬೇಕಾಗಿ ಅಪೇಕ್ಷಿಸುತ್ತೇವೆ.

ಲೋನು ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು	
402/51	ಶೃಂಗೇರಿ ಮಹಮ್ಮದ್ ಜುಕ್ರಿ, ಮಹಮ್ಮದ್ ಶಿರೂರಾ ಬೇರಿ ಮಗ, ಯಡ್ತರೆ ಗ್ರಾಮದಲ್ಲಿರುವವರು	14	0
515/50	ಹೊಸೂರು ಕೇಶವ ಶೇಟ್, ಮಂಜುನಾಥ ಶೇಟರ ಮಗ ಜುವೆಲ್ಲರ್ ಅಂಬಾಗಿಲು ಉಪ್ಪುಂದ	20	0
620/51	— do—	60	0
705/51	ಹೊಸ್ಮಯ್ಯನ ಮಂಜುನಾಥ ಶೇರುಗಾರ, ಅಣ್ಣಪ್ಪ ಶೇರುಗಾರರ ಮಗ, ರೈತ ಪಡುವರಿಗ್ರಾಮದಲ್ಲಿರುವವರು	26	0
536/51	ಕೊಯಮುತ್ತೂರು ರಾಯಪ್ಪ, ರಾಮನಾಯ್ಕರ ಮಗ ಸೇತುವೆ ಕೆಲಸಮಾಡುವವರು ಶಿರೂರು	35	0
566/51	—do—	40	0
785/51	ಹೊಸಾಡು ಮರ್ಲಿ, ಇಡ್ಡ ಹೆಂಗ್ಸಿನ ಮಗಳು ಯಡ್ತರೆ ಗ್ರಾಮದಲ್ಲಿರುವವಳು	7	0
1347/51	ತಗ್ಗರ್ಸೆ ಗಣಪತಿ ಶೇಟ, ಸುಬ್ರಾಯ ಶೇಟರ ಮಗ, ಉಪ್ಪುಂದ ಕೇರಿಯಲ್ಲಿರುವವ	65	0
1408/51	ಗಂಜೇರಿ ಮಂಜಿನ ಮನೆ ಗೋವಿಂದ, ಮಂಜನ ಮಗ, [illegible] ಉಪ್ಪುಂದ	16	0
527/51	ಕೋಣಿ ರಾಮಚಂದ್ರ ಶೇಟ, ನಾಗಪ್ಪ ಶೇಟರ ಮಗ, ಜುವೆಲ್ಲರ್ ನಾಯ್ಕನಕಟ್ಟೆ, ಕಂಬದಕೋಣೆ.	125	0

Office, Byndoor,
Date, 25-9-1952

B NARASIMHAYYA,
Agent.

ಮುಟ್ಟು ತಪ್ಪಿದರೆ ಚಿಂತೆ ಬೇಡ

'ಋತುರಾಜ್' ಸೇವಿಸಿರಿ. ಋತುಸ್ರಾವ ಪ್ರಾರಂಭವಾಗುವುದು. 4-5 ತಿಂಗಳು ನಿಂತಿದ್ದರೂ ಮುಟ್ಟು ಯಾವ ಅಪಾಯವನ್ನೂ ತಾರದೆ 24 ಘಂಟೆಯೊಳಗೆ ಗ್ಯಾರಂಟಿಯಾದ ಪ್ರಾರಂಭವಾಗುವುದು. ಬೆಲೆ ರೂ. 7/8 ವಿ. ಪಿ ಖರ್ಚು ರೂ. 1. ವಿಶೇಷ ರೂ. 24 ವಿ. ಪಿ. 1/12

BINAPANI AUSHADHALAYA (N. J.)
15/1 Moor's Avenue, CALCUTTA, 33
ಸ್ಥಳೀಯ ಏಜಂಟರು:
ವೈದ್ಯ ಸಿ ಆರ್. ಕಾಮತ್,
ಮಂಗಳೂರು.

ತೃಪ್ತಿಕರವಾದ ವಸತಿ— ಹಿತಕರವಾದ
ಊಟ— ರುಚಿಕರವಾದ ಉಪಾಹಾರ
ಇವುಗಳಿಗೆ
ಆದರ್ಶ ನಿಲಯವೆಂದರೆ
ವುಡ್ ಲೇಂಡ್ಸ್
ಉಡುಪಿ.
ಯಾತ್ರಿಕರಿಗೂ ಪ್ರಯಾಣಿಕರಿಗೂ
ಸರ್ವ ಅನುಕೂಲವಾಗುವಂತೆ
ನಗರದ ಕೇಂದ್ರಭಾಗದಲ್ಲಿದೆ

ಕತ್ತಲೆಯಿಂದ ಬೆಳಕಿನೆಡೆಗೆ

ಮೋಸ ವಂಚನೆಗಳಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ

ಲೇಖಕ: ಪಿಯರ್ ಲಕ್ಷ್ಮೀನಾರಾಯಣ ಆಳ್ವ

ಅಸತೋ ಮಾ ಸದ್ಗಮಯ । ತಮಸೋ ಮಾ ಜ್ಯೋತಿರ್ಗಮಯ । ಮೃತ್ಯೋರ್ಮಾ ಅಮೃತಂಗಮಯ ! "ಅಸತ್ತಿನಿಂದ ಸತ್ಯದೆಡೆಗೆ ಕತ್ತಲೆಯಿಂದ ಬೆಳಕಿನೆಡೆಗೆ, ಮೃತ್ಯುವಿನಿಂದ ಅಮೃತತ್ವದೆಡೆಗೆ ನಡೆಸು" ಎಂದು ಮುಮುಕ್ಷುಗಳಾದ ಸಾಧಕರು ಜಗದಾದಿ ಶಕ್ತಿಯೊಡನೆ ಬೇಡಿಕೊಂಡರು ತಮ್ಮ ಅಪೂರ್ಣ ಚೈತನ್ಯವು ಪೂರ್ಣತೆ ಪಡೆಯಲು ದಾರಿ ಕೊರೆದು ಮುಂದುವರಿಯುತ್ತಿರುವಾಗ ಹಾದಿಯಲ್ಲಿ ಅಡೆತಡೆಗಳು ಎದುರಾಗಿ ತಮ್ಮ ಚೈತನ್ಯ ಕುಸಿದು ಬೀಳುವುದೋ ಎಂದು ಭಾಸವಾಗಲು ಅವರ ಹೃದಯದಿಂದ ಹರಿದು ಹೊರಟ ಪ್ರಾರ್ಥನೆಯಿದು ಸುತ್ತಲೂ ಕತ್ತಲೆ ಕವಿದು ಮುಂದಿನ ಹಾದಿ ಕಾಣದೆ ತತ್ತರಿಸುತ್ತಿರುವಾಗ ಹೃದಯದಾಳದಿಂದ ಹುಟ್ಟಿ ಬಂದ ಕಳಕಳಿಯ ಬೇಡಿಕೆಯಿದು. ಎತ್ತೆತ್ತಲೂ ಮೃತ್ಯುವಿನ ತಾಂಡವ ನಡೆದಿದ್ದು ಮಾನವನ ಆಶೆ ಆದರ್ಶಗಳು ಒಮ್ಮೆಲೇ ಕೊನೆಗೊಳ್ಳುವಂತೆ ತೋರಿದಾಗ ಎದ್ದು ಬಂದ ಧ್ವನಿಯಿದು ಅನ್ಯಾಯ, ಅಧರ್ಮ, ಅಸತ್ಯಗಳೇ ಮೆರೆದು ಸತ್ಯ, ನ್ಯಾಯ, ಧರ್ಮಗಳಿಗೆ ಸ್ಥಾನವೇ ಇಲ್ಲವೆಂದು ಭಾಸವಾದಾಗ ಮೊರೆದು ಬಂದ ಮೊರೆಯಿದು. ಈ ಜಗತ್ತನ್ನೇ ತನ್ನ ಲೀಲೆಯಿಂದ ಆಳುತ್ತಿರುವ ಆ ಅನಂತ ಚೈತನ್ಯದೊಡನೆ ಅವರು ತಮ್ಮ ಬಯಕೆಯನ್ನು ನಿರ್ಮಲ ಮನಸ್ಸಿನಿಂದ ತೋಡಿಕೊಂಡು, ತಮ್ಮ ಪ್ರಯತ್ನಕ್ಕೆ ಅದರ ನೆರವನ್ನು ಕೇಳಿದರು ಪರಿಶುದ್ಧ ಹೃದಯ, ಪವಿತ್ರ ಮನಸ್ಸು, ಮುಗ್ಧ ಭಾವ, ಸತತ ಪ್ರಯತ್ನಗಳ ಗೋಪುರಕ್ಕೆ ಸರ್ವಾರ್ಪಣದ ಕಳಶವಿಟ್ಟು ಅವರು ತಮ್ಮ ಕೆಲಸವನ್ನು ಕೊನೆಗೊಳಿಸಿದರು-ಗುರಿಸೇರಿದರು. ಅದೇ ಅವರನ್ನು ಆತ್ಮಾನಂದದ ಗೌರೀಶಂಕರಕ್ಕೆ ಏರಿಸಿತು.

ನಾವೆಲ್ಲರೂ ಬಯಸುವುದು ಅತ್ಯಂತ ಸುಖವನ್ನು-ನಿತ್ಯಾನಂದವನ್ನು. ಆದರೆ ಆ ಅನಂತಾನಂದವು ಎಲ್ಲಿದೆ? ಅದನ್ನು ಪಡೆಯುವ ಬಗೆ ಹೇಗೆ? ಇದನ್ನು ಅರಿಯದೆಯೇ ಅಡ್ಡಹಾದಿಯಲ್ಲಿ ಅಲೆಯುತ್ತಿರುತ್ತೇವೆ- ಗೊತ್ತುಗುರಿಯಿಲ್ಲದ ಮರುಳರಂತೆ. ಚಪಲ ಇಂದ್ರಿಯಗಳ ಬೇಡಿಕೆಗಳನ್ನು ಪರಿಪೂರ್ಣಗೊಳಿಸುವುದರಲ್ಲೇ ನಿಜವಾದ ಸುಖ ಅಡಗಿದೆ ಎಂದು ಭ್ರಮಿಸಿ ಅವುಗಳ ದಾಹವನ್ನು ತಣಿಸಲೆಳಸುವ ವ್ಯರ್ಥ ಪ್ರಯತ್ನದಲ್ಲಿ ನಮ್ಮ ಶಕ್ತಿ ಸರ್ವಸ್ವವನ್ನೂ ವ್ಯಯಿಸಿ ಕೊನೆಗೆ ನಿರಾಶರಾಗಿ ಬಿದ್ದಿರುತ್ತೇವೆ– ಮೃಗಜಲದ ಬೆಂಬಿಡಿದು ಬಸವಳಿಯುವ ಪ್ರಾಣಿಗಳಂತೆ. ನಮಗೆ ಹೆಚ್ಚಿನವರಿಗೆ ನಮ್ಮ ತಪ್ಪು ತಿಳಿದು ಅರಿವು ತಲೆದೋರುವಾಗ ಮರಣದ ತೆರೆ ಬೀಳಲನುವಾಗಿರುತ್ತದೆ ಹೀಗೆ ಬಾಳಿನ ಕೊನೆಯ ದಿನಗಳಲ್ಲಿ ದುಃಖದ ಬೆಂಗಾಡಿನಲ್ಲಿ ಬಾಯಾರಿ ಬಿದ್ದಿರುತ್ತಿರುವ ನಮ್ಮ ಬಾಳು ಕರುಣಾಜನಕವಾಗಿದೆ

ಸರ್ವಾರ್ಪಣದ ಗರ್ಭಗುಡಿಯೊಳಗೆ ಅನಂತಾನಂದದ ದೇವ ವಿಗ್ರಹ ವಿರಾಜಮಾನವಾಗಿದೆ ಸರ್ವಾರ್ಪಣವೇ ಮುಕ್ತಿ. ಸರ್ವಾರ್ಪಣವನ್ನು ಸಂಪೂರ್ಣವಾಗಿ ಸಾಧಿಸಿದಾತನೇ ಮುಕ್ತ ಮುಕ್ತಿಯು ಮರಣಾನಂತರ ಮಾತ್ರ ದೊರೆಕಬಹುದಾದ ವಸ್ತು ವಿಶೇಷವಲ್ಲ, ಜೀವಿಸಿರುವಾಗಲೇ ಪಡೆಯಬಹುದಾದ ಸ್ಥಿತಿ ವಿಶೇಷ. ಇದನ್ನು ನಮ್ಮ ನೂರಾರು ಸಾಧು ಶರಣರು ಸಾಧಿಸಿ ತೋರಿಸಿದ್ದಾರೆ ಸರ್ವಾರ್ಪಣವನ್ನು ಸಾಧಿಸಬೇಕಾದರೆ— ಮುಕ್ತನಾಗಬೇಕಾದರೆ ವಿದ್ವತ್ತು, ಜ್ಞಾನಗಳು ಅತ್ಯವಶ್ಯಕವಾದವುಗಳು ಎಂದು ನಾವು ಹೆಚ್ಚಿನವರು ತಿಳಿಯುತ್ತೇವೆ. ಆದರೆ ಡಾಂಭಿಕ ವಿದ್ವತ್ತಾಗಲೀ, ಒಣಜ್ಞಾನವಾಗಲೀ ಅದಕ್ಕೆ ಬೇಕಾಗಿಲ್ಲ, ಅದಕ್ಕೆ ಬೇಕಾಗಿರುವುದು ನಿರ್ಮಲ ಮನಸ್ಸು, ಪರಿಶುದ್ಧ ಹೃದಯ, ಇದನ್ನೇ ಆಚಾರ್ಯ ವಿನೋಬಾ ಭಾವೆಯವರು "ವಿದ್ವತ್ತು, ಕರ್ಮಕಲಾಪ, ಇವನ್ನು ಅವಲಂಬಿಸಿಲ್ಲ ಮೋಕ್ಷ. ಅದಕ್ಕೆ ಸಾದಾ ಸರಳ ಭಕ್ತಿ ಸಾಕು ಮುಗ್ಧ ಭಾವಿಕ ಸ್ತ್ರೀಯರು ನಾ, ತಾ, ಎನ್ನುವ ಜ್ಞಾನಿಗಳನ್ನು ಮೀರಿ ಮುಂದೆ ಹೋಗಿದ್ದಾರೆ. ಪವಿತ್ರ ಮನಸ್ಸು ಮುಗ್ಧ ಶುದ್ಧಭಾವ ಇಷ್ಟಾದರೆ ಮೋಕ್ಷ ಏನೂ ಕಷ್ಟವಲ್ಲ" ಎಂದು ಹೇಳಿದರು. ಅರವಿಂದಾಶ್ರಮದ ಮಾತೆಯವರು ಇದೇ ಅರ್ಥದಲ್ಲಿ "ಘೋರ ತಪಸ್ಸಿಗಿಂತಲೂ ನಿಜವಾದ ಭಕ್ತಿ ಮತ್ತು ಆತ್ಮನಿವೇದನೆಗಳು ತೀವ್ರವಾಗಿ ದಿವ್ಯದತ್ತ ಎಳೆದೊಯ್ಯುವವು" ಎಂದಿದ್ದಾರೆ

ನಮ್ಮಲ್ಲಿ ಹೆಚ್ಚಿನ ಮಂದಿ ಭಕ್ತಿಯನ್ನು ಬೇಡಿಕೆ ಎಂಬ ಅರ್ಥದಲ್ಲಿ ಗ್ರಹಿಸುತ್ತೇವೆ. ಆದರೆ ನಿಜವಾಗಿ ಭಕ್ತಿ ಎಂದರೆ ಅರ್ಪಣೆ ಅರ್ಪಣಾಭಾವ ತುಂಬಿದ ಹೃದಯದ ನೆಲದಲ್ಲಿ ಭಕ್ತಿಯು ಮೊಳೆತು ಪಲ್ಲವಿಸುತ್ತದೆ. ಆದುದರಿಂದಲೇ ಟಾಗೋರರೊಂದೆಡೆಯಲ್ಲಿ ಹೇಳಿದ್ದಾರೆ, "ಭಕ್ತಿಯಲ್ಲಿ ಬೇಡಿಕೆಯಿಲ್ಲ, ಅರ್ಪಣೆಯಿದೆ" ಎಂದು.

ಮೋಸ ವಂಚನೆಗಳಿಂದ ಏನನ್ನೂ ಸಾಧಿಸಲಾಗುವುದಿಲ್ಲ, ಅವುಗಳಿಂದ ಸುಖವನ್ನು ಪಡೆಯಬಹುದೆಂಬುದು ಭ್ರಾಂತಿ ಆದರೂ ನಾವು ಅವುಗಳನ್ನು ತೊರೆದಿಲ್ಲ ಅದಕ್ಕೆ ಕಾರಣ ಮೋಹ. ನಮ್ಮ ಮೋಹದಿಂದಲೇ ನಮ್ಮ ಮೃತ್ಯುವನ್ನು ತಂದುಕೊಳ್ಳುತ್ತೇವೆ—ತೆರಣಿಯ ಹುಳದಂತೆ! ಮೋಸ ವಂಚನೆಗಳಿಂದ ಸುಖದೊರಕಿದಂತೆ ಭಾಸವಾಗುತ್ತದೆ. ಅದು ಭಾಸವಾಗುವುದು ಮಾತ್ರ, ಪ್ರತ್ಯಕ್ಷವಾಗುವುದಲ್ಲ ಎಂಬುವನ್ನು ಅರಿಯಲು ತಡೆಯಾಗುತ್ತದೆ ನಮ್ಮ ಮೋಹ ಹಾಗೆ ಭಾಸವಾದ ಸುಖ ಮುಂದಿನ ದುರಂತ ದುಃಖದ ಪೀಠಿಕೆಯಾಗುತ್ತದೆ ಹೀಗಿದ್ದರೂ ಜಗತ್ತನ್ನು ವಂಚಿಸಿಯೇ ತೀರುತ್ತೇವೆ ನಮ್ಮ ಸುಖವನ್ನು ದೊರಕಿಸಿಕೊಳ್ಳುವ ಹಂಬಲದಿಂದ ಆದರೆ ಹೀಗೆ ಜಗತ್ತನ್ನು ವಂಚಿಸುವುದೆಂದರೆ ತನ್ನನ್ನು ತಾನೇ ವಂಚಿಸಿಕೊಂಡಂತೆ ಎಂಬುದು ನಮಗೆ ಅರಿವಾಗುವುದಿಲ್ಲ ಜಗತ್ತನ್ನು ನಾವು ವಂಚಿಸುತ್ತೇವೆ ಎಂದು ಭಾವಿಸುವುದು ಆತ್ಮವಂಚನೆಯನ್ನೇ. ಆದುದರಿಂದ ಆ ಮೂಲಕ ಸಿಕ್ಕಿದ "ಸುಖ" ಸುಖವಾಗುವುದಿಲ್ಲ ದುಃಖವಾಗುತ್ತದೆ. ಆದುದರಿಂದಲೇ ನಿತ್ಯಾನಂದವನ್ನು ಬಯಸುವವನು ಜಗತ್ತನ್ನು ವಂಚಿಸಬಾರದು, ಎಂದರೆ ತನ್ನನ್ನು ತಾನು ವಂಚಿಸಿಕೊಳ್ಳಬಾರದು. ಇದೇ ಸತ್ಯವನ್ನು ಶ್ರೀ ರಾಮಕೃಷ್ಣ ಪರಮಹಂಸರು "ಯಾರು ತಮ್ಮ ಮನಸ್ಸನ್ನು ತಾವು ವಂಚಿಸದಿರುವರೋ ಅವರಿಗೇ ಮುಕ್ತಿ, ನಿಷ್ಕಪಟತೆ ಮತ್ತು ಶ್ರದ್ಧೆ ಇವೇ ಮುಕ್ತಿಗೆ ಮಾರ್ಗ" ಎಂದು ಸಾರಿದರು.

ಸರ್ವಾರ್ಪಣವನ್ನು ಸಾಧಿಸುವುದಕ್ಕೆ ಭಕ್ತ ದೇವರ ನೆರವನ್ನೆ ಪಡೆಯುತ್ತಾನೆ ದೇವರ ಇಚ್ಛೆಯಿಲ್ಲದೆ ಒಂದು ಹುಲ್ಲುಕಡ್ಡಿ ಕೂಡಾ ಅತ್ತಿತ್ತ ಚಲಿಸಲಾರದು ಎಂದು ಆತನ ನಂಬಿಕೆ. ತನ್ನ ಸಾಹಸಕ್ಕೆ ದೇವರ ಸಹಾಯವಿಲ್ಲದೆ ತನ್ನಿಂದ ಏನನ್ನೂ ಸಾಧಿಸಲಸಾಧ್ಯ ಎಂಬುದು ಆತನ ದೃಢ ನಿಶ್ಚಯ ಆದುದರಿಂದಲೇ ಭಕ್ತ ತಾನು ನಡೆಯಲಿರುವ ಮಹಾಪಥದಲ್ಲಿ ದೇವನ ಕರುಣೆಯ ನೆರಳು ಸದಾ ತಂಪೆಯುತ್ತಿರುವಂತೆ ಬೇಡಿಕೊಳ್ಳುತ್ತಾನೆ ಆ ತಣ್ಪಿನಿಂದಾಗಿ ಗುರಿಸೇರುವ ತನಕವೂ ಭಕ್ತನ ಉತ್ಸಾಹದ ಕೊಳ ಬತ್ತದಿರುತ್ತದೆ. ಅಂತೆಂದೇ ಗುರಿ ಸೇರಿಸುವ ಹೊಣೆಯೂ ದೇವನದೇ. ಆದುದರಿಂದಲೇ ಷಣ್ಮುಖ ಸ್ವಾಮಿಗಳು ಬೇಡಿಕೊಂಡರು "ಎಂದು ಅಷ್ಟತನುಗಳು ಪಿಂಡವಾದವು, ಅಂದು ಇಂದು ಪರ್ಯಂತರ ಒಂದೆನಯ್ಯಾ. ಸುಖದುಃಖಂಗಳಲ್ಲಿ ಬಂದೆನಯ್ಯಾ. ಸಂಸಾರದ ದಂದುಗವ ತೊಲಗಿಸಿ ನಿಮ್ಮತ್ತ ಎಳೆದುಕೊಳ್ಳಾ ಅಖಂಡೇಶ್ವರ ನಿಮ್ಮ ಧರ್ಮ ನಿಮ್ಮ ಧರ್ಮ." ಈ ಜಗತ್ತಿನ ಮಾಯೆಯ ಬಲೆಯಲ್ಲಿ ಬೀಳದಂತೆ ತನ್ನನ್ನು ರಕ್ಷಿಸಿ ಮುನ್ನಡೆಸುವ ಭಾರವೂ ದೇವನದೇ ಎಂದು ನರೆನಂಬಿ ಭಕ್ತಿ ಭಂಡಾರಿ ಬಸವಣ್ಣನವರು ಬೇಡುತ್ತಿದ್ದಾರೆ "ವಿಷಯವೆಂಬ ಹಸುರನ್ನು ಎನ್ನ ಮುಂದೆ ತಂದು ಪಸರಿಸದಿರಯ್ಯಾ ಪಶುವೇನ ಬಲ್ಲುದು ಹಸುರೆಂದೆಳಸುವುದು ವಿಷಯರಹಿತನ ಮಾಡಿ ಭಕ್ತಿ ರಸವ ದಣಿಯೆ ಮೇಯಿಸಿ ಸುಬುದ್ಧಿಯೆಂಬ ಉದಕವನೆರೆದು ನೋಡಿ ಸಲಹಯ್ಯಾ ಕೂಡಲಸಂಗಮದೇವಾ" "ತನು ನಿನ್ನದು, ಜೀವನ ನಿನ್ನದು, ಸ್ವಾಮಿ ಅನುದಿನದಲಿ ಬಹ ಸುಖದುಃಖ ನಿನ್ನದಯ್ಯಾ" ಎಂದು ಕನಕದಾಸರು ತಮ್ಮ ಸರ್ವಸ್ವವನ್ನೂ ಸ್ವಾಮಿಯ ಅಡಿಗೆ ನಿವೇದಿಸಿದರು. ಆತನ ಲೀಲಾನಾಟಕದಲ್ಲಿ ತನ್ನ ಯಾತನೆಯಿಂದ ನರ್ತಿಸುವುದರಲ್ಲಿಯೇ ಆತ್ಮಾನಂದವನ್ನು ಪಡೆದರು ತನ್ನದೆಲ್ಲವೂ ಆತನದು, ಆತನಿಗೆ ಸೇರದ ಅಂಶ ಇದ್ದರೆ ಅದು ಮಿಥ್ಯ, ಅದು ಇಂದಿಲ್ಲ ನಾಳೆ ಕಣ್ಮರೆಯಾಗುವುದು, ನಡೆವುದೆಲ್ಲ ಆತನ ಲೀಲೆ, ಆದುದರಿಂದಲೇ ನಾವು ಏನೆಲ್ಲ ಕರ್ಮ ಮಾಡುತ್ತೇವೋ ಅದು ಆತನಿಗೆ ಅರ್ಪಿತ ಅಥವಾ ಆತನಿಂದಲೇ ಪ್ರೇರಿತರಾಗಿ ಮಾಡಿದುದು—ಎಂಬ ಭಾವವೇ ಸರ್ವಾರ್ಪಣ ಭಾವ ಇದೇ ಭಕ್ತಿಯ ಪರಮೋನ್ನತ ಸ್ಥಿತಿ.

ತನ್ನ ಬಾಯಿಯಿಂದಲೇ ಭಗವಂತ ಸಾರಿದಿದ್ದಾನೆ ಇದನ್ನು ಗೀತೆಯಲ್ಲಿ ಭಗವಂತ ಹೊರೆ ಹೊರೆ ತತ್ವಜ್ಞಾನವನ್ನು ಅರ್ಜುನನಿಗೆ ಉಪದೇಶಿಸಿದ. ಆದರೆ ಕೊಟ್ಟಕೊನೆಗೆ ಎಂದ ಅರ್ಜುನಾ "ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ॥ ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ । ಎಲ್ಲಾ ಧರ್ಮಗಳನ್ನೂ ತೊರೆದು ನನಗೊಬ್ಬನಿಗೇ ಶರಣು ಬಾ. ನಾನು ನಿನ್ನನ್ನು ಎಲ್ಲಾ ಪಾಪಗಳಿಂದಲೂ ಬಿಡಿಸುತ್ತೇನೆ ಕೊರಗಬೇಡ."

ಸಂಸಾರ ಸಾಗರದ ಈ ಅಲ್ಲೋಲಕಲ್ಲೋಲದಿಂದ ಮೇಲೆದ್ದು ದಡಸೇರಬೇಕಾದರೆ, ಕತ್ತಲೆಯಿಂದ ಬೆಳಕಿನೆಡೆಗೆ, ಅಸತ್ಯದಿಂದ ಸತ್ಯದೆಡೆಗೆ, ಮೃತ್ಯುವಿನಿಂದ ಅಮೃತತ್ವದೆಡೆಗೆ ಸಾಗಬೇಕಾದರೆ ಸರ್ವಾರ್ಪಣವೇ ಸರ್ವೋತ್ಕೃಷ್ಟ ದಾರಿ.

DO YOU KNOW?
THAT
THE VIJAYA BANK, LIMITED.

1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs 10 lacks
3. Has granted an average dividend of 6% to the Shareholders for the past 20 years
4. Has a net work of Branches in South Kanara and one each in Mercara and Fort, Bombay
5. Offers attractive rates of interest on Deposits and Cash Certificates
6. Grants loans on easy terms to approved parties or on approved securities
7. Does afford full protection and rich return to all your monies

ADOPT IT AS
"MY BANK"
THE VIJAYA BANK, LIMITED,
H O, MANGALORE

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ
ಪ್ರೊಪ್ರೈಟರ್:— ಕೆ. ವೆಂಕಟರಮಣಭಟ್ಟ

For Protection and Provision
Consult
The New Guardian of India Life Insurance Co., Ltd.
Estd] Head office M DRAS [1934
A Policy in this Progressive Life Office is good investment, its Agency is valuable business connection.
Applications for representation are invited from influential persons.
Please apply to
The Branch Manager,
Diamond Building, Hampankatta,
MNGALORE, S. K.

All Secondary Schools may Subscribe to "Navayuga" weekly Since it has been approved by the Director of Public Instruction, Madras.

ಕಾರ್ಮಿಕರೂ, ಮಹಾತ್ಮಾ ಗಾಂಧೀಜಿಯೂ

ಲೇಖಕರು: ಶ್ರೀ G W ಬಾಲಚಂದಾನಿ

ಇತಿಹಾಸದಲ್ಲಿ, ಅನೇಕ ಸಂದರ್ಭಗಳಲ್ಲಿ ವೀರಪೂಜೆಯು, ತಮ್ಮ ನಾಯಕರ ಧ್ಯೇಯಗಳಿಗೆ ಕಾರ್ಯಪದ್ಧತಿ ಮತ್ತು ಬಾಯಿ ಮರ್ಯಾದೆ ತೋರಿಸುವಂಥ ಅವನತಿಗಿಳಿದಿದೆ. ಗಾಂಧೀಜಿಯವರು ನಮಗೆ ಯಾವ ತತ್ವಗಳನ್ನು ಬೋಧಿಸಿದರೂ ಅದನ್ನು ಆಚರಿಸಿದವರು. ಅವರು ಹಾಕಿದ ತತ್ವಗಳಲ್ಲಿ ಯಾವುದು ನಮಗೆ ಹಿಡಿಸುತ್ತದೆಯೋ ಅದನ್ನು ನಮ್ಮ ಅನುದಿನದ ಕಾರ್ಯದಲ್ಲಿ, ದೃಷ್ಟಿಯಲ್ಲಿ ಆಚರಣೆಗೆ ತರುವುದೇ ಅವರಿಗೆ ಗೌರವಕಾಣಿಕೆ ಕೊಡುವುದಕ್ಕಿರುವ ಏಕಮಾತ್ರ ಮಾರ್ಗ.

ಕಾರ್ಮಿಕರ ಬಗ್ಗೆ ಗಾಂಧೀಜಿಯವರ ದೃಷ್ಟಿ, ಅವರ ಬೇಡಿಕೆಗಾಗಿ ಗಾಂಧೀಜಿಯವರ ಹೋರಾಟ, ಕಾರ್ಮಿಕ–ಮಾಲೀಕರ ಸಂಬಂಧದ ಬಗ್ಗೆ ಅವರಿಗಿದ್ದ ಕಲ್ಪನೆ ಇವುಗಳೆಲ್ಲವೂ ಇಂದು ನಮಗೆ ಅತಿ ಮುಖ್ಯವಾದ ಅಂಶಗಳಾಗಿವೆ.

ದೇಹಶ್ರಮದ ಕಾನೂನು

“ನಿನ್ನ ಬೆವರಿಳಿಸಿ ಸಂಪಾದಿಸು” ಎಂದು ಬೈಬಲ್ ಹೇಳಿದೆ. ಗಾಂಧೀಜಿಯವರು ಅದನ್ನು ವಿಸ್ತರಿಸಿ, ಪ್ರತಿಯೊಬ್ಬರೂ ಯಾವುದೇ ಉಪಯುಕ್ತ ದೇಹಶ್ರಮ ಕೈಕೊಳ್ಳಬೇಕೆಂದು ಹೇಳಿದ್ದಾರೆ. “ಇದನ್ನು ಸ್ವಪ್ರೇರಣೆಯಿಂದ ಮತ್ತು ಬುದ್ಧಿವಂತಿಕೆಯಿಂದ ಆರಿಸಿಕೊಳ್ಳಬೇಕು. ಒಬ್ಬ ನಾಯಕನಿಗೆ ಒತ್ತಾಯದ ವಿಧೇಯತೆಯನ್ನು ತೋರಿಸುವುದು ಗುಲಾಮಗಿರಿಯ ಸ್ಥಿತಿ’ ಎಂದು ಅವರು ಹೇಳಿದ್ದಾರೆ. “ತನ್ನ ತಂದೆಗೆ ಸ್ವಪ್ರೇರಣೆಯಿಂದ ವಿಧೇಯತೆ ತೋರಿಸುವುದು ಕುಮಾರತನದ ಹೆಮ್ಮೆ; ಅದರಂತೆ, ಅನ್ನಶ್ರಮಕ್ಕಾಗಿ ಕಾನೂನುಗಳಿಗೆ ಒತ್ತಾಯದ ವಿಧೇಯತೆ ತೋರಿಸುವುದು ಬಡತನಕ್ಕೆ, ಅನಾರೋಗ್ಯಕ್ಕೆ ಮತ್ತು ಅತೃಪ್ತಿಗೆ ದಾರಿಯಾಗುವುದು. ಇದೊಂದು ರೀತಿಯ ಗುಲಾಮಗಿರಿಯೇ. ಈ ಕಾನೂನುಗಳಿಗೆ ಸಮ್ಮತವಾದ ವಿಧೇಯತೆಯು, ತೃಪ್ತಿ ಮತ್ತು ಆರೋಗ್ಯವನ್ನು ತರುವುದು. ಈ ರೀತಿಯಲ್ಲಿ ಗಾಂಧೀಜಿಯವರು ದೈಹಿಕಶ್ರಮದ ಗೌರವವನ್ನು ಒತ್ತಿಹೇಳಿದ್ದಾರೆ. ತಮ್ಮ ಕೆಲಸಕ್ಕೆ ಸ್ವಯಂಪ್ರೇರಣೆಯ ಮತ್ತು ಪ್ರಜ್ಞಾಪೂರ್ವಕವಾದ ಭಕ್ತಿ ಇರಬೇಕೆಂಬುದರ ಮಹತ್ವವನ್ನು ಅವರು ತಿಳಿಸಿದ್ದಾರೆ. ಈ ಸಂಕೇತದಿಂದ, ಸಮಾಜದ ಅಂತಸ್ತು, ಪ್ರತ್ಯೇಕವಾದ ವೈರವರ್ಗಗಳು, ಮಾನಸಿಕ ಮತ್ತು ದೈಹಿಕ ಶ್ರಮಜೀವಿಗಳು, ಮಾಲೀಕರು ಮತ್ತು ಕೆಲಸಗಾರರು ಇವೆಲ್ಲ ಕೃತಕವಾಗಿ ಪರಿಣಮಿಸುವುದು. ಗಾಂಧೀಜಿಯವರೊಬ್ಬರೇ ತಮ್ಮ ತೀವ್ರ ಆಧ್ಯಾತ್ಮಿಕ ಚಟುವಟಿಕೆಯಿಂದಾಗಿ ಯಾವ ದೈಹಿಕಶ್ರಮವೂ–[illegible] ಕೆಲಸವನ್ನೂ ಸೇರಿಸಿಕೊಂಡು–ತಮಗೆ ಕಡೆಯಲ್ಲವೆಂದು ಕಂಡುಹಿಡಿದ್ದಾರೆ. ಆದುದರಿಂದ, ಮೊದಲು ಮಾಡಬೇಕಾದ ಕೆಲಸ, ಕಾರ್ಮಿಕರು ಸಾಮಾಜಿಕ ದೃಷ್ಟಿಯಲ್ಲಿ ಕೊಂಚ ಕಡಿಮೆ ಎಂದು ನೋಡುವುದನ್ನು ಮತ್ತು ಉಪೇಕ್ಷೆಯಾಗಿ ಪುರಸ್ಕರಿಸುವ ಧಾರ್ಮಿಕ ಅಜ್ಞಾನದಿಂದ ಬಿಡುಗಡೆ ಹೊಂದಬೇಕು. ಮಹಾತ್ಮಾಜಿಯವರು ತಮ್ಮ ತೀಕ್ಷ್ಣ ಒಳನೋಟದಿಂದ ಯಾವ ನೈತಿಕ ಬೆಲೆಯನ್ನು ನೋಡಿದರೂ ಅದನ್ನು ಅರ್ಥಶಾಸ್ತ್ರ ತತ್ವದ ಆಧುನಿಕ ಸಂಶೋಧನೆಗಳೂ ಸಹ ಅಂಗೀಕರಿಸಿವೆ. ಶ್ರಮಜೀವಿಗಳು, ಇನ್ನೆಂದಿಗೂ ಅಗ್ಗದ ಮಾರುಕಟ್ಟೆಯಲ್ಲಿ ಕೊಂಡುಕೊಳ್ಳಬಹುದಾದಂಥ, ಉತ್ಪಾದನೆಗೆ ಬೇಕಾಗುವ ಒಂದಂಶವಲ್ಲ, ಬದಲು ಅವರು ದೇಶದ ಅತಿಮುಖ್ಯ ಸಂಪತ್ತು.

ಅಹಮದಾಬಾದಿನ ಮಾದರಿ

ಗಾಂಧೀಜಿಯವರು, ಮೊಟ್ಟಮೊದಲಿನ ಕಾರ್ಮಿಕ ಶಾಸನ ಅಂದರೆ ೧೯೨೬ರ ಭಾರತೀಯ ಟ್ರೇಡ್ ಯೂನಿಯನ್ ಕಾನೂನು ಬರುವುದಕ್ಕೆ ಮುನ್ನ ಕಾರ್ಮಿಕ ಹಿತರಕ್ಷಣೆಗಾಗಿ ಕೆಲಸಮಾಡುತ್ತಿದ್ದರು. ೧೯೧೩ರಲ್ಲಿ ತಿದ್ದುಪಡಿಯಾದ ಇಂಡಿಯನ್ ಪೀನಲ್ ಕೋಡಿನಲ್ಲಿರುವ ಕಾನೂನು ಅವಕಾಶಗಳ ಪ್ರಕಾರ ಅವರು ಕಾರ್ಮಿಕರ ಸಂಘಟನೆ ಕೈಗೊಳ್ಳಬೇಕಾಗಿತ್ತು. ಈ ಕಾನೂನಿನ ಪ್ರಕಾರ, ಮುಷ್ಕರ ವ್ಯವಸ್ಥೆಯನ್ನು ಕೈಗೊಳ್ಳುವ ಕಾರ್ಮಿಕ ಸಂಘಗಳು (ಟ್ರೇಡ್ ಯೂನಿಯನ್‌ಗಳು) ನ್ಯಾಯಬದ್ಧ ಸಂಘಗಳಲ್ಲವೆಂದು ಘೋಷಿಸಲಾಗುವುದು. ಗಾಂಧೀಜಿಯವರು ಬಿಹಾರಿನ ಪ್ಲಾಂಟೇಷನ್ ಕೆಲಸಗಾರರ ವ್ಯಾಜ್ಯ ವಿಷಯವನ್ನು ಕೈಕೊಂಡರು. ೧೯೧೮ರಲ್ಲಿ, ಅಹಮದಾಬಾದಿನ ಗಿರಣಿ ಕೆಲಸಗಾರರ ಅಹಿಂಸಾತ್ಮಕ ಹೋರಾಟದಲ್ಲಿ ಗಾಂಧೀಜಿಯವರು ಮುಂದಾಳಾಗಿದ್ದರು. ಈ ಹೋರಾಟದ ಪರಿಣಾಮವಾಗಿ ಪ್ರಬಲ ಕಾರ್ಮಿಕ ಸಂಘವೊಂದು ನಿರ್ಮಾಣವಾಯಿತು. ಈ ಸಂಘ ಇಂದಿಗೂ ಭಾರತದಲ್ಲೇ ಉತ್ತಮ ರೀತಿಯಲ್ಲಿ ವ್ಯವಸ್ಥಿತಗೊಳಿಸಲ್ಪಟ್ಟ ಸಂಘವಾಗಿದೆ. ಗಾಂಧೀಜಿಯವರ ಈ ಚಟುವಟಿಕೆಗಳ ಪರಿಣಾಮವಾಗಿ ಕಾರ್ಮಿಕರು ಮತ್ತು ಮಾಲೀಕರನ್ನೊಳಗೊಂಡ ಪಂಚಾಯತಿ ಸಮಿತಿಯನ್ನು ಎಲ್ಲಾ ವಿಷಯಗಳ ಮೇಲಿನ ಭಿನ್ನಾಭಿಪ್ರಾಯಗಳನ್ನು ಇತ್ಯರ್ಥಗೊಳಿಸುವ ಕೆಲಸಕ್ಕಾಗಿ [illegible] ಯಲ್ಲಿ ಒಪ್ಪಂದವಾಗಿದೆ, ಎರಡು ಪಕ್ಷಗಳೂ ಅಂಗೀಕರಿಸಬಹುದಾದಂಥ ನಿಷ್ಪಕ್ಷಪಾತವಾದ ಮಧ್ಯಸ್ಥಗಾರರಿಗೆ ಮನವಿ ಮಾಡಿಕೊಳ್ಳುವ ಹಕ್ಕೂ ದೊರೆಯಿತು. ಭಿನ್ನಾಭಿಪ್ರಾಯಗಳ ಇತ್ಯರ್ಥಕ್ಕೆ ಈ ರೀತಿಯ ಪಂಚಾಯತಿ ಸಮಿತಿಯೂ, ಅಹಮದಾಬಾದಿನಲ್ಲಿ ಮುಷ್ಕರಗಳ ಸಂಖ್ಯೆ ಕಡಿಮೆಯಾಗುವುದಕ್ಕೆ ಸಹಾಯವಾಯಿತು. ಜೊತೆಗೆ ಕೈಗಾರಿಕಾ ಭಿನ್ನಾಭಿಪ್ರಾಯಗಳ ಸಂಖ್ಯೆ ಕಡಿಮೆಯಾದ್ದರಿಂದ ಕಾರ್ಮಿಕರಿಗೆ ಹೆಚ್ಚಿನ ಯಶಸ್ಸು ದೊರೆತಂತಾಯಿತು. “ನನ್ನ ಮಾರ್ಗಕ್ಕೇ ಬಿಟ್ಟರೆ, ಭಾರತದ ಎಲ್ಲಾ ಕಾರ್ಮಿಕ ಸಂಘಗಳನ್ನೂ ಅಹಮದಾಬಾದಿನ ಮಾದರಿಯಲ್ಲಿ ನಿಬಂಧಿಸುತ್ತೇನೆ” ಎಂದು ಗಾಂಧೀಜಿಯವರು ಬರೆದಿದ್ದಾರೆ.

ಇಲ್ಲಿಯೂ ಸಹ, ಗಾಂಧೀಜಿಯವರು ತಮ್ಮ ಸ್ಪಷ್ಟವಾದ ನೋಟದಿಂದ ಭಿನ್ನಾಭಿಪ್ರಾಯಗಳ ಇತ್ಯರ್ಥಕ್ಕೆ ಆಡಳಿತಯಂತ್ರಗಳ ಆವಶ್ಯಕತೆಯನ್ನು ಕಂಡುಕೊಂಡರು. ಅದನ್ನೇ ನಾವು ೧೯೨೯ರ ಕಾರ್ಮಿಕರ ವಿವಾದದ ಕಾನೂನು ಮತ್ತು ೧೯೪೭ರ ಕೈಗಾರಿಕಾ ವಿವಾದದ ಕಾನೂನುಗಳಲ್ಲಿ ಅವಕಾಶಮಾಡಿ ಕೊಟ್ಟಿರುವುದು.

ಕಾರ್ಯ ಸಮಿತಿಗಳು ಮತ್ತು ಗಾಂಧೀ ತತ್ವ

ಅಹಮದಾಬಾದಿನಲ್ಲಿ ನಿಯೋಜಿಸಲಾದ ದ್ವಿಪಕ್ಷೀಯ ಆಡಳಿತಯಂತ್ರ ವ್ಯವಸ್ಥೆಯನ್ನು ಸ್ವಪ್ರೇರಣೆಯ ಆಧಾರದ ಮೇಲೆ, ದೇಶದಲ್ಲಿ ವಿಪುಲವಾಗಿ ಅನುಮೋದಿಸಿಲ್ಲ. ಕೈಗಾರಿಕೆಯ ಎರಡು ಪಕ್ಷಗಳೂ (ವಿಭಿನ್ನ ಆಸಕ್ತಿಗಳುಳ್ಳ) ವಿರೋಧೀಪಕ್ಷದ ಶಿಬಿರಗಳ ಸದಸ್ಯರೆಂದೂ ತಮ್ಮನ್ನು ಗಣಿಸಿಕೊಳ್ಳುತ್ತಿರುವುದೇ ಕಾರಣವಿರಬಹುದು. ಈ ಎರಡು ಪಕ್ಷಗಳಿಗೂ ಮಧ್ಯೆ ಅಂತರ್ಗತ ಭಿನ್ನಾಭಿಪ್ರಾಯವಿರಬೇಕಾಗಿಲ್ಲ; ಎರಡೂ ಉಭಯ ಸಾಮಾನ್ಯ ಆಸಕ್ತಿಗಳನ್ನು ಮತ್ತು ವಿಷಯಗಳನ್ನು ಜಂಟಿಯಾಗಿ ಪರಿಶೀಲಿಸುವುದು ಭಿನ್ನಾಭಿಪ್ರಾಯಗಳನ್ನು ಬಗೆಹರಿಸುವುದಕ್ಕೆ ನೆರವಾಗುತ್ತದೆ. ೧೯೪೭ರ ಕೈಗಾರಿಕಾ ವಿವಾದ ಕಾನೂನಿನ ೩ನೇ ಅನುಚ್ಛೇದದಲ್ಲಿ ನೂರಕ್ಕೂ ಮೇಲ್ಪಟ್ಟ ಸಂಖ್ಯೆಯ ಶ್ರಮಜೀವಿಗಳನ್ನು ಹೊಂದಿರುವ ಕೈಗಾರಿಕಾ ಸಂಸ್ಥೆಗಳಲ್ಲಿ ಮಾಲೀಕರು ಮತ್ತು ಕಾರ್ಮಿಕರ ಸಮ ಪ್ರಾತಿನಿಧ್ಯ ಕಾರ್ಯಸಮಿತಿಯೊಂದನ್ನು ಮಾಲೀಕರು ರಚಿಸಬೇಕೆಂದು ವಿಧಿಸಲಾಗಿದೆ. ಕಾರ್ಮಿಕ ಪ್ರತಿನಿಧಿಗಳನ್ನು, ಅವರ ಸಂಖ್ಯೆ, ಇಲಾಖಾ ಪ್ರಾತಿನಿಧ್ಯ ಇವುಗಳ ಬಗ್ಗೆ ಕಾರ್ಮಿಕ ಸಂಘದೊಂದಿಗೆ ಸಲಹೆ ಪಡೆದು, ನಿರ್ಧರಿಸಿ ಅನಂತರ ಚುನಾಯಿಸಲಾಗುವುದು. ಈ ಕಾರ್ಯಸಮಿತಿಯ ಉದ್ದೇಶ ಕಾರ್ಮಿಕ ಮಾಲೀಕರ ನಡುವೆ ಮಧುರ ಬಾಂಧವ್ಯವನ್ನು ಕಲ್ಪಿಸಿ, ರಕ್ಷಿಸುವ ಕಾರ್ಯಕ್ರಮಗಳನ್ನು ಉತ್ತೇಜನಗೊಳಿಸುವುದೇ ಆಗಿದೆ. ಉಭಯ ಸಾಮಾನ್ಯ ಆಸಕ್ತಿಗಳ ಅಥವಾ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಬಗೆಹರಿಸಲು ಕಾರ್ಯಸಮಿತಿ ನೆರವಾಗುತ್ತದೆ. ಈ ಕಾರ್ಯಸಮಿತಿಗಳು ಕಾರ್ಮಿಕ ಸಂಸ್ಥೆಗಳಿಗೆ ವ್ಯತಿರಿಕ್ತವಾದ ಸಂಘವೆಂಬ ತಪ್ಪು ಭಾವನೆಯಿದೆ. ನ್ಯಾಯವಾಗಿ ನೋಡಿದರೆ, ಕಾರ್ಮಿಕ ಸಂಘಗಳು ಕೈಗಾರಿಕಾ ಆಧಾರದ ಮೇಲೆ ಯಾವುದನ್ನು ಸಾಧಿಸಲು ಹೊರಡುತ್ತವೆಯೋ ಅದನ್ನು ಕಾರ್ಯಸಮಿತಿಗಳು ಪ್ರಾದೇಶಿಕ ಆಧಾರದ ಮೇಲೆ ಅದಕ್ಕೆ ಬೆಂಬಲಕೊಡುತ್ತವೆ. ಮಾಲೀಕರೊಂದಿಗೆ ಕಾಲಿಕ ಸಮಾಲೋಚನೆ ಮಾಡುವ ಸದವಕಾಶವನ್ನು ಕಾರ್ಮಿಕರಿಗೆ ಈ ಕಾರ್ಯಸಮಿತಿಗಳು ಒದಗಿಸುತ್ತವೆ. ಕಾರ್ಮಿಕರೂ ಮತ್ತು ಮಾಲೀಕರೂ ಕಾರ್ಯಸಮಿತಿಗಳನ್ನು ಯಶಸ್ವಿಗೊಳಿಸಿದರೆ ಮಾತ್ರ ಅವರು ವಿಶಾಲವಾದ ತಳಹದಿಯ ಮೇಲೆ ಪರಸ್ಪರ ಸಮಾಲೋಚನೆ ಮಾಡುವ ಅವಕಾಶ ಹೊಂದಿರುವುದು ತನ್ಮೂಲಕ ಮಹಾತ್ಮಾ ಗಾಂಧಿಯವರು ಆಶಿಸಿದ್ದ, ಅನುಸರಿಸಿದ ಅಹಮದಾಬಾದಿನ ಮಾದರಿಯಲ್ಲಿ ದ್ವಿಪಕ್ಷೀಯ ಸಂಸ್ಥೆಯನ್ನು ವೃದ್ಧಿಗೊಳಿಸಿದಂತಾಗುವುದು.

ಸಮರ್ಪಕ ಸಾಮಾಜಿಕ ಅರ್ಥಶಾಸ್ತ್ರ!

ಮಾಲೀಕರ ಮತ್ತು ಕಾರ್ಮಿಕರ ಉದ್ದೇಶಗಳ ಐಕ್ಯತೆಯ ಬಗ್ಗೆ, ಅವರಿಬ್ಬರಿಗೂ ಸುಮಧುರ ಬಾಂಧವ್ಯವಿರಬೇಕಾದ ಆಗತ್ಯದ ಬಗ್ಗೆ, ಮಹಾತ್ಮಾ ಗಾಂಧೀಜಿಯವರು ಒತ್ತಿ ಹೇಳಿದ್ದಾರೆ.

“ನಿಜವಾದ ಸಾಮಾಜಿಕ ಅರ್ಥಶಾಸ್ತ್ರವು, ಕಾರ್ಮಿಕ, ಕಾರ್ಖಾನೆ ಮತ್ತು ಮಾಲೀಕ ಇವರೆಲ್ಲರೂ ಒಂದೇ ಸಂಸ್ಥೆಯ ಅಂಗಗಳೆಂದು ತಿಳಿಸುವುದು, ಇವರಲ್ಲಿ ಯಾರೂ ಉಳಿದವರಿಗಿಂತ ಹೆಚ್ಚು ಇಲ್ಲ ಕಡಿಮೆಯೂ ಇಲ್ಲ. ಅವರ ಆಸಕ್ತಿಗಳು ವಿಭಿನ್ನವಾಗಿರದೆ, ಒಂದೇ ಆಗಿದ್ದು ಅಂತರ ಅವಲಂಬಿತವಾಗಿರಬೇಕು–ಎಂದು ಅವರು ಹೇಳಿದ್ದಾರೆ ಸಂಗ್ರಹಿತ ಬಂಡವಾಳವೆಂದರೆ ಅಪರಿಮಿತ ಶಕ್ತಿ, ಬಂಡವಾಳ ಮತ್ತು ಕಾರ್ಮಿಕರ ಮಧ್ಯೆ ನ್ಯಾಯಬದ್ಧ ಸಂಬಂಧವೇರ್ಪಡಬೇಕೆನ್ನುವವರಲ್ಲಿ ನಾನೂ ಒಬ್ಬ. ಒಬ್ಬರಮೇಲೆ ಮತ್ತೊಬ್ಬರ ಪ್ರಾಬಲ್ಯಾಧಿಕಾರವಿರಬೇಕೆಂಬುದನ್ನು ನಾನೊಪ್ಪುವುದಿಲ್ಲ. ಅವರಿಬ್ಬರ ಮಧ್ಯೆ ಯಾವುದೇ ರೀತಿಯ ನೈಸರ್ಗಿಕ ವೈರವಿದೆಯೆಂದು ನಾನು ಭಾವಿಸುವುದಿಲ್ಲ. ಬಡವರೂ ಮತ್ತು ಐಶ್ವರ್ಯವಂತರು ಯಾವತ್ತೂ ನಮ್ಮೊಂದಿಗೇ ಇರುತ್ತಾರೆ. ಆದರೆ ಅವರ ಪರಸ್ಪರ ಸಂಬಂಧ ಶಾಶ್ವತ ಬದಲಾವಣೆಗೆ ಅಧೀನಪಟ್ಟಿರುತ್ತದೆ. ಬಂಡವಾಳಗಾರರೂ ಮತ್ತು ಕಾರ್ಮಿಕರೂ, ಒಗ್ಗಟ್ಟಿನಿಂದ ಮತ್ತು ಸೌಹಾರ್ದತೆಯಿಂದ ನಡೆಯುವ ದೊಡ್ಡ ಸಂಸಾರದಂತಿರಬೇಕು. ಬಂಡವಾಳಗಾರರು ಕಾರ್ಮಿಕರ ಭೌತಿಕ ಹಿತರಕ್ಷಣೆಯನ್ನು ಮಾತ್ರ ಗಮನಿಸದೆ, ಅವರ ನೈತಿಕ ಹಿತರಕ್ಷಣೆಯನ್ನೂ ಕೈಗೊಳ್ಳಬೇಕು. ತಮ್ಮ ಕೈಕೆಳಗಿರುವ ಕಾರ್ಮಿಕವರ್ಗಗಳ ಹಿತರಕ್ಷಣೆಗಾಗಿ ಮಾಲೀಕರು ಧರ್ಮದರ್ಶಿಗಳಾಗಿ ಬೇಕು”–ಎಂದು ಹೇಳಿದ್ದಾರೆ.

ಲಕ್ಷ್ಮಿ
ಸಂತಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರದ ಕಟ್ಟು, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವದು, ತೊಡೆ ಸಂದಿನಲ್ಲಿ ಗರಳೆ ಬರುವದು, ಕಾಲುಗಂಟು ವೇದನೆ, ಕಣ್ಣಿನಲ್ಲಿ ಕೀವು ಬರುವದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ, ಸ್ತ್ರೀಯರ ಬಿಳಿ ಸೆರಗು ಇವೆಲ್ಲಾ ಖಾತ್ರಿಯಾಗಿ ಗುಣ ಹೊಂದುವದು–ಇತರರು ಈಗಿನ ಉಷ್ಣಕಾಲದಲ್ಲಿ ಗರ್ಮಿ ಗಂಡುಬರುವರೆ ರಾತ್ರಿ ಮಲಗುವಾಗ್ಗೆ ಒಂದು ಮಾತ್ರೆ ಸೇವಿಸಿ ಹಾಲು ಕುಡಿದರೆ ಸುಖವಾಗಿ ನಿದ್ರೆಬಂದು ಸುಖವಿರೇಚನೆಯಾಗಿ ದೇಹದ ಉಷ್ಣ ಹೋಗುವದು.

ಶೀಸೆ 1ಕ್ಕೆ ರೂ 2-0-0

ಏಜಂಟ್ಸ್:
ಷಾ ಕಂಪೆನಿ, ಮಂಗಳೂರು.

ವಿಚಾರ ಪ್ರಚೋದಕವಾದ ಪ್ರತಿಯೊಬ್ಬರೂ ಓದಬೇಕಾದ ನವನವೀನ ಪುಸ್ತಕಗಳು

ಗೀತಾ ರಹಸ್ಯವನ್ನು ತಿಳಿಯ ಬಯಸುವವರಾರು?

ದಿ। ಹೊಸಕೆರೆ ಚಿದಂಬರಯ್ಯ ಕೃತ ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಪುಟಗಳು 428 ಬೆಲೆ 0 12-0 ಅಂಚೆವೆಚ್ಚ 0-4-0

100 ಪ್ರತಿಗಳಿಗೆ ರೂ. 60; 250ಕ್ಕೆ ರೂ 140; 500ಕ್ಕೆ ರೂ 250

ಕತೆ, ಕಾದಂಬರಿ, ನಾಟಕ, ಚಿತ್ರ, ಪ್ರಬಂಧ, ಹರಟೆ ಮೊದಲಾದ, ನೋಡಿದರೆ ಬಿಡದಿರುವ ಅಂತರಂಗ ಪ್ರಕಟನೆಯಾದ ರೂ 30 ಕ್ರಯದ 86 ಪ್ರಕಟಣೆಗಳನ್ನು ಒಮ್ಮೆಯೇ ತರಿಸಿಕೊಳ್ಳುವವರಿಗೆ ರೂ. 24ಕ್ಕೆ ಕೊಡಲಾಗುವುದು.

ನಾರೀಹೃದಯ ರೂ	1	8	ಪ್ರತಾಪ ರೂ.	2	8	ನವಪಿಂಗಳ ರೂ.	2	0
ಭಾರತೀಯ ಕತೆಗಳು	1	12	ಮಂಥನ	3	0	ಕಾವ್ಯಸಾಮ್ರಾಜ್ಯ	1	8
ಸನ್ಯಾಸಿಯ ಸೋಗಿನಲ್ಲಿ	0	12	ಘಟವಾದ	2	0	ಪ್ರೇಮ ವಿಜಯ	1	4
ಕವಿತಾ ಕಾಮಿನಿ	2	0	ಸಂಪಾದಕ	1	0	ರಂಗಭೂಮಿ	0	10
ಕುಲವಿಲ್ಲದ ಹೆಣ್ಣು	2	[illegible]	[illegible]	1	8	ಭಾರತದಲ್ಲಿ ಜಾತಿಭೇದ	1	0
ವ್ಯಭಿಚಾರದ [illegible]	1	4	ದೇಶಭಕ್ತ	1	4	ವೀರ ಸಾವರ್ಕರ	1	4
ಸುಲಭದಲ್ಲಿ ಇಂಗ್ಲಿಷ್	2	0	ಮನೆ ಮದ್ದು	2	8	ಕದಂಬ	1	4
ನೀತಿವಿನೋದ ಕತೆಗಳು	0	12	ಸರಸ್ವತಿ	0	12	ಭಾಗ್ಯಲಕ್ಷ್ಮಿ	1	4
ಜೀವನ ಸಂಗ್ರಾಮ	1	8	ಸೇವಾಸದನ	0	[illegible]	[illegible]	0	8

ಇವೇ ಮೊದಲಾದ ನೂರಾರು ಬಗೆಯ ಉಪಯುಕ್ತ ಪುಸ್ತಕಗಳ ಪಟ್ಟಿಗಾಗಿ ಬರೆಯಿರಿ. ವ್ಯಾಪಾರಿಗಳಿಗೂ, ಪುಸ್ತಕಭಂಡಾರಗಳಿಗೂ ವಿಶೇಷ ಸವಲತ್ತುಗಳಿವೆ

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1923ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky S K

ಗಾಂಧೀಜಿಯವರು ಈ ವಿಷಯದ ಮೇಲೆ ಬರೆದಿರುವುದನ್ನು ವಿಶಾಲವಾಗಿ ನಾನು ಉದ್ಧರಿಸುತ್ತಿದ್ದೇನೆ. ಏತಕ್ಕೆಂದರೆ, ಈಗ ನಮ್ಮ ಮುಂದಿರುವ ಗುರಿಯನ್ನು ಎದುರಿಸಲು ಈ ಸಿಟ್ಟಿನ ಸಮಸ್ಯೆಯನ್ನು ಅರಿಯುವುದು ಅಗತ್ಯವೆಂದು ನಾನು ಪರಿಗಣಿಸುತ್ತೇನೆ. ಸರಕಾರವು "ಯಾವ ಗೊಡವೆಗೂ" ಹೋಗದಿರುವ ನೀತಿಯನ್ನು ಅನುಸರಿಸಬೇಕೆಂದೂ ಕೆಲವು ಮಾಲೀಕರು ಇಚ್ಛಿಸುತ್ತಾರೆ. ದೇಶದಲ್ಲಿ ಕಾರ್ಮಿಕ ಶಾಸನಗಳು ಬಹಳ ವೇಗವಾಗಿವೆಯೆಂದು ಅವರು ಪ್ರತಿಭಟಿಸಿದ್ದಾರೆ. ಸಂಸ್ಥಾನ ಸರ್ಕಾರವು, ಕಾರ್ಮಿಕರಿಗೋಸ್ಕರ ಹೆಚ್ಚಿನ ಒಪ್ಪಂದಗಳ ರೂಪದಲ್ಲಿ ಸರ್ವಕ್ಷೇತ್ರಗಳಲ್ಲೂ ಮಧ್ಯ ಪ್ರವೇಶಿಸುವುದನ್ನು ಅವರು ಆರೋಪಿಸುತ್ತಾರೆ. ಇನ್ನೊಂದು ಕಡೆ ಕಾರ್ಮಿಕ ಮುಖಂಡರಲ್ಲಿ ಕೆಲವರ, ಸರಕಾರವು ಕಾರ್ಮಿಕರಿಗಾಗಿ ಅತ್ಯಲ್ಪ ಸಹಾಯ ಮಾಡಿದೆ ಎಂದು ಟೀಕಿಸುತ್ತಾರೆ. ಆದುದರಿಂದ, ಈ ಎರಡು ಪಕ್ಷದ ಟೀಕೆಗಳೂ, ಸರ್ಕಾರ ತಪ್ಪು ಹಾದಿಯಲ್ಲಿಲ್ಲವೆಂದೂ ಸುವರ್ಣ ಮಧ್ಯಮದಲ್ಲಿದೆಯೆಂದೂ ವ್ಯಕ್ತಗೊಳ್ಳುತ್ತದೆ.

ಸರ್ವತ್ರ ಹೃದಯಪರಿವರ್ತನೆ

ಈ ಸದ್ಯದಲ್ಲಿ ಎಲ್ಲಕ್ಕಿಂತಲೂ ಹೆಚ್ಚು ಬೇಕಾಗಿರುವುದು, ಕಾನೂನಿನ ಒತ್ತಾಯ ಮಾಡಬೇಕಾದುದಲ್ಲ. ಮಾಡಬೇಕಾದ ಕೆಲವು ಕೆಲಸಗಳನ್ನು ಮಾಡದಿರುವುದಲ್ಲ. ಆದರೆ ನಮ್ಮ ಹೃದಯಪರಿವರ್ತನೆ, ಸಮಾಜೋದ್ದೇಶಗಳಿಗಾಗಿ ಒಗ್ಗಟ್ಟಿನ ಭಾವನೆ. ಯಾವುದೇ ಕೆಲಸವನ್ನು ನಮ್ಮ ಕೈಲಾದಷ್ಟು ಮಾಡತಕ್ಕಂಥ ದೃಢ ಮನೋಭಾವನೆ, ಸಮಾಜನ್ಯಾಯ ಹಾಗೂ ರಾಷ್ಟ್ರೀಯ ದೃಷ್ಟಿಯ ಅರಿವು ನಮಗೆ ಅಗತ್ಯವಾಗಿ ಬೇಕಾಗಿದೆ, ಆಗಾಗಿನ ಕಾನೂನುಗಳಿಂದ ಪಡೆಯಬಹುದಾದ, ಲಾಭದಾಯಕತನ, ಕೆಲಸದಕ್ಷ ನಿಧಾನ ಇತ್ಯಾದಿಗಳ ಆಕ್ರಮಣ ನಮಗಿನ್ನು ಬೇಕಿಲ್ಲ. "ಉತ್ಪಾದನೆ ಮಾಡು ಇಲ್ಲವೇ ನಾಶವಾಗು" ಎಂಬ ಉದ್ಗಾರವನ್ನು ಬರೇ ಬಾಯಿಯಲ್ಲಿ ಘೋಷಿಸಿದರೆ ಸಾಲದು. ಅದನ್ನು ಕಾರ್ಯಗತಮಾಡಲು ಸಂಘಟನೆ, ದೃಢಮನಸ್ಸು, ರಾಷ್ಟ್ರೀಯಭಾವನೆ ಮತ್ತು ನಿರ್ಧಾರಗಳ ಅವಶ್ಯಕತೆಯಿದೆ. ಪ್ರತಿಯೊಬ್ಬನೂ ತಾನಿರುವ ಸ್ಥಾನದಲ್ಲಿ ತನ್ನ ಕೆಲಸವನ್ನು ಸಂಪೂರ್ಣವಾಗಿಯೂ, ಚೆನ್ನಾಗಿಯೂ ಮಾಡಿದರೆ, ಆರ್ಥಿಕ ಹಾದಿಯಲ್ಲಿ ಮುಂದೆ ಹೋಗಬಹುದು.

ನಿರಂಕುಶತೆ ಎರಡು ಪಕ್ಷಕ್ಕೂ ಮಾರಿ

ಗಾಂಧೀಜಿಯವರ ಉಪದೇಶದಲ್ಲಿ ಒಂದೆರಡು ಹಿತವಚನಗಳಿಲ್ಲದೇ ಇಲ್ಲ "ಕಾರ್ಮಿಕ ಮತ್ತು ಮಾಲೀಕರ ಮಧ್ಯದ ಹೋರಾಟದಲ್ಲಿ ಮಾಲೀಕರೇ ಬಹುವೇಳೆ ತಪ್ಪುದಾರಿಯಲ್ಲಿರಬಹುದು. ಆದರೆ ಕಾರ್ಮಿಕರು ತಮ್ಮ ಬಲದ ಪೂರ್ಣ ಅರಿವನ್ನು ಪಡೆದರೆ ಅದು ಬಂಡವಾಳಗಾರರಿಗಿಂತಲೂ ಹೆಚ್ಚಿನ ನಿರಂಕುಶತೆಯಾದೀತು ಬಂಡವಾಳಗಾರರು ತಮ್ಮ ಐಶ್ವರ್ಯಕ್ಕಾಗಿ ಹೆಮ್ಮೆಪಟ್ಟರೆ, ಕಾರ್ಮಿಕರು ತಮ್ಮ ಸಂಖ್ಯಾಬಲಕ್ಕಾಗಿ ಹೆಮ್ಮೆಪಡುತ್ತಾರೆ. ಬಂಡವಾಳಗಾರರಂತೆ ಅವರಿಗೂ ಉದ್ವೇಗ ಬಂದಾಗ ಪ್ರಜ್ಞಾಹೀನರಾಗುತ್ತಾರೆ. ಅಧಿಪತ್ಯ ನಡೆಸತೊಡಗುತ್ತಾರೆ. ಆದರೆ ಅವರಿಬ್ಬರಿಗೂ ಆ ಉದ್ವೇಗ ಬಾರದಿರಲಿ ಎಂದು ಪ್ರಾರ್ಥಿಸೋಣ"-ಎಂದು ಮಹಾತ್ಮಾಜಿ ಹೇಳಿದ್ದಾರೆ.

ಎರಡು ದಶಕಗಳ ಹಿಂದೆ ಹೇಳಿದ ಈ ಮಾತುಗಳು ಇಂದು ಮಹತ್ವಪೂರ್ಣ ಭವಿಷ್ಯವಾಗಿವೆ. ಸಂಖ್ಯಾಬಲದಮೇಲೆ ಭರವಸೆಯಿಡುವುದು ಭವಿಷ್ಯವನ್ನೇ ಮಣ್ಣುಗೆಡಿಸುತ್ತದೆ. ನಮ್ಮ ಮೇಲೆಯು ಸುತ್ತ ಹಾಗೂ ಒಳಗೂ, ಸೌಹಾರ್ದ ರೀತಿಯಲ್ಲಿ ಇತ್ಯರ್ಥಗೊಳ್ಳಬಹುದಾದಂಥ ಭಿನ್ನಾಭಿಪ್ರಾಯಗಳನ್ನು ಬೃಹದಾಕಾರವಾಗಿ ಪ್ರಚಾರಮಾಡುತ್ತಿರುವುದನ್ನು ನೋಡುತ್ತಿದ್ದೇನೆ. ಈ ರೀತಿಯ ಪ್ರಚಾರದಿಂದ ವರ್ಗಕಲಹ ಉತ್ಪನ್ನವಾಗುವುದಲ್ಲದೆ ರಾಷ್ಟ್ರದಬಲ ಕುಂದಿಹೋಗುವುದು.ಸಾರ್ವ

ವಾರದ ಒಳಿತು ಕೆಡುಕುಗಳು

ತಾ. 2—10—52ರಿಂದ ತಾ. 8—10—52ರ ವರೆಗೆ

ಮೇಷ—ನೌಕರಿ ಉದ್ಯಮಗಳಲ್ಲಿ ನಿಮ್ಮ ಅಪೇಕ್ಷೆಯಂತೆ ಫಲ ಲಭಿಸಲಿವೆ ಸಂಪದ್ಭಾಗವು ಬಹುಮಟ್ಟಿಗೆ ಉತ್ತಮಸ್ಥಿತಿಗೆ ಬರಲಿದೆ. ಈ ವಾರದಲ್ಲಿ ಸೇವಕಜನತೆಗೆ ಕಾಲವು ಉತ್ತಮವಿರದು. ವಣಿಕ್ ಜನರಿಗೆ ಆಕಸ್ಮಿಕ ನಷ್ಟವುಂಟಾದೀತು. ದೇಹದಲ್ಲಿ ಕ್ಷೀಣತೆ ದೌರ್ಬಲ್ಯಗಳು ಕಾಣಿಸಬಹುದು. ಗುರು ಹಿರಿಯರು ಮತ್ತು ಸ್ತ್ರೀಜನರ ಕೂಡೆ ಮನಸ್ತಾಪದ ಯೋಗವಿದೆ. 5. 6 ಮಾತ್ರ ಹೆಚ್ಚಿನ ಅನುಕೂಲಗಳಿವೆ.

ವೃಷಭ—ಇಂದಿನ ಕಾಲವು ಅತೀವ ಕಠಿಣಸ್ಥಿತಿಗೆ ಬಂದಿದೆ. ಯಾವ ಭಾಗದಲ್ಲಿ ನೋಡಿದರೂ ಆಶೆಗವಕಾಶವಿಲ್ಲವು. ತಂದೆ ಮಕ್ಕಳೊಳು ಗಂಡ ಹೆಂಡಿರೊಳು ಜಗಳವಾದೀತು. ಇಲ್ಲಸಲ್ಲದ ಶೋಕ ತಾಪಗಳು ಪ್ರಾಪ್ತವಾಗಲಿವೆ. ಶತ್ರುಜನರಿಂದ ಹೆಚ್ಚಿನ ಹಾನಿಯು ಆರ್ಥಿಕಭಾಗಕ್ಕೊದಗಲಿದೆ. ಪ್ರವಾಸದಿಂದಾಗಿ ತನುಮನಗಳಿಗೆ ಸುಖಶಾಂತಿಯಿರದು ತಾ 5, 6 ಕೀಳ ಅನಿಷ್ಟವಿವೆ.

ಮಿಥುನ—ತನು ಸುಖಸ್ಥಿತಿಯು ಉಚ್ಚನಾಗಿಯೂ ಲಾಭದಲ್ಲಿ ಬೃಹಸ್ಪತಿಯೂ ಇರುವಕಾರಣ ನಿರೋಗಿಗಳಾಗಿ ಬೇಕಾದ ಸುಖ ಸೌಲಭ್ಯಗಳನ್ನು ಪಡೆವಿರಿ. ಸಂಪದ್ಭಾಗವು ಉತ್ತಮರೀತಿಯಲ್ಲಿರುವುದು. ವಿದ್ಯೋಪಜೀವಿಗಳಿಗೆ ಉದ್ಯೋಗದಲ್ಲಿ ಪ್ರಗತಿಯಿದೆ. ಆದರೂ ಗೃಹಚ್ಛಿದ್ರದಿಂದಾಗಿ ಮನಸ್ಸಿಗೆ ನೆಮ್ಮದಿ ದುರ್ಲಭವಾದೀತು. ವಾರಾದಿಯ 5 ದಿನಗಳು ಅಭೀಷ್ಟಪ್ರದಗಳಿವೆ.

ಕರ್ಕಟ—ದೈವವು ಬಹಳ ಅನುಕೂಲಸ್ಥಿತಿಗೆ ಬಂದಿರುವುದು. ಯಾವ ಕಾರ್ಯಕ್ಕೆ ಕೈಯಿಕ್ಕಲಿ ನೀವು ವಿಜಯಿಗಳಾಗಿಯೇ ಬರುವಿರಿ. ನಿಮ್ಮ ಕಾರ್ಯ ಸಾಹಸಗಳಿಗೆ ಬೆದರಿದ ಶತ್ರುಜನತೆಯು ಕಣ್ಣಿಗೆ ಗೋಚರಿಸದು. ಆರೋಗ್ಯ ಆರ್ಥಿಕಭಾಗಗಳು ಉತ್ತಮವಿರುವವು. ವಾರಾಂತ್ಯದ 4 ದಿನಗಳಲ್ಲಿ ನಿಮ್ಮ ಬಯಕೆಯು ಅನಾಯಾಸದಿಂದ ನೆರವೇರಲಿದೆ

ಸಿಂಹ—ಈ ವಾರದಲ್ಲಿ ನಿಮಗೆ ಸುಖದುಃಖ ಲಾಭನಷ್ಟಗಳು ಸಮನಾಗಿವೆ, ಪ್ರಯತ್ನಕ್ಕೆತಕ್ಕುದಾದ ಫಲ ಲಭಿಸಿದರೂ ದಿನಾಂತ್ಯದಲ್ಲಿ ಬಂಗೈಯಾಗುವದು. ಆಪ್ತೇಷ್ಟರಲ್ಲಿ ಅವಿಶ್ವಾಸಕ್ಕೆಡೆದೊರೆತೀತು. ಮಕ್ಕಳ ಆರೋಗ್ಯದತ್ತ ಹೆಚ್ಚಿನ ಗಮನವನ್ನಿಡಿರಿ. ನೌಕರಿ ಜನರಿಗೆ ಪ್ರಗತಿಯಿದೆ. ವಾರಾಂತ್ಯದ 2 ದಿನಗಳು ಉತ್ತಮವಿವೆ.

ಕನ್ಯಾ—ನಿಮ್ಮ ಅದೃಷ್ಟವಿಂದು ಬಹಳ ಕೆಳಮಟ್ಟಕ್ಕೆ ಬಂದಿದೆ. ಆತನಿಂದ ನಿಮ್ಮ ಪ್ರಯತ್ನಗಳೆಲ್ಲವೂ ನೀರಿನಲ್ಲಿ ಮಾಡಿದ ಹೋಮದಂತೆ ವಿಫಲವಾದಾವು. ಅನಿರೀಕ್ಷಿತ ಪ್ರವಾಸವು ಕಷ್ಟನಷ್ಟಕ್ಕೀಡುಮಾಡುವದು. ಕುಜನರ ಸಂಸರ್ಗದಿಂದ ಅನಿಷ್ಟ ಪ್ರಾಪ್ತಿಯಿದೆ. ದೇಹಕ್ಕೆ ಸುಖವಿರದು. ಆದರೂ ವಾರಾದಿಯ 3 ದಿನಗಳಲ್ಲಿ ಹಣದ ಭಾರಕ್ಕೇನೂ ಅಪಾಯ ಕಾಣಿಸದು

ತುಲಾ—ನೆನೆದಂತೆ ಕಾರ್ಯವು ನೆರವೇರುವದು. ಜನತೆಯ ಬೆಂಬಲವು ಸಾಕಷ್ಟಿದ್ದ ಕಾರಣ ಪ್ರತಿಯೊಂದು ಕಾರ್ಯದಲ್ಲೂ ಪ್ರಗತಿಹೊಂದುವಿರಿ. ನೀಚಜನತೆಯಿಂದ ಹೆಚ್ಚಿನ ಫಲಪ್ರಾಪ್ತಿಯಿದೆ. ಶರೀರ ಸುಖಕ್ಕಾವ ಕೊರತೆಯೂ ಇರದು. ವ್ಯಾಪಾರ ವ್ಯವಹಾರಗಳಲ್ಲಿ ಕೀರ್ತಿ ಲಾಭಗಳಿವೆ. ವಾರಾಂತ್ಯದ 2 ದಿನಗಳಲ್ಲಿ ಅಧಿಕವ್ಯಯ ಅನಿಷ್ಟಗಳು ಕಾಣಿಸಬಹುದು.

ವೃಶ್ಚಿಕ—ನಿಮ್ಮ ಪ್ರತಿಯೊಂದು ಕಾರ್ಯವೂ ನಿರೀಕ್ಷೆಗಿಂತ ಅಧಿಕವಾದ ಫಲವೀಯಲಿದೆ ಮಿತ್ರ ವರ್ಗದವರ ಬೆಂಬಲದಿಂದಾಗಿ ಪ್ರಬಲರಾದ ಇದಿರಾಳಿಗಳನ್ನು ಪರಾಭವಗೊಳಿಸುವಿರಿ. ಕೆಲವೊಮ್ಮೆ ಮುಂಗೋಪದ ಫಲವಾಗಿ ಕಲಹವಾದೀತು. ಆರೋಗ್ಯದ ಮಟ್ಟಿಗೆ ಸ್ವಲ್ಪ ಜಾಗರೂಕರಾಗಿರಿ. ವಾರಾಂತ್ಯದ 4 ದಿನಗಳು ಪ್ರಶಸ್ತವಿವೆ.

ಧನು—ಇಂದಿನ ನಿಮ್ಮ ಗ್ರಹಮಾನವು ಉತ್ತಮವಿದೆ. ಸಾಮಾಜಿಕ ರಾಜಕೀಯ ಕ್ಷೇತ್ರಗಳಲ್ಲಿ ಅದ್ವಿತೀಯ ವಿಜಯವನ್ನು ಸಂಪಾದಿಸುವಿರಿ. ನಿಮ್ಮ ಅಭಿಲಾಷೆಗಳು ನಾಯಾಸದಿಂದ ಸಿದ್ಧಿಸುವವು, ಹಿಂದಿನ ಸಾಲಕಡಗಳಿಂದ ಮುಕ್ತರಾಗಿ ನಿಶ್ಚಿಂತೆಯಿಂದಿರುವಿರಿ. ಆಕಸ್ಮಾತ್ ಅಪಘಾತಗಳ ಯೋಗವಿರುವುದರಿಂದ ವಾರಾದಿಯ 5 ದಿನಗಳಲ್ಲಿ ಜಾಗರೂಕರಾಗಿರಿ.

ಮಕರ—ಸಕಲ ಗ್ರಹವೃಂದವೂ ನಿಮಗೆ ಪ್ರತಿಕೂಲ ಸ್ಥಾನದಲ್ಲಿರುವುದರಿಂದ ನಿಮ್ಮ ಪ್ರಯತ್ನಗಳೆಲ್ಲವೂ ವಿಫಲವಾಗುವವು. ವೃಥಾವಾಕ್ಕಲಹಗಳುದ್ಭವಿಸಲಿವೆ. ಬಂಧುಜನರೊಡನೆ ಮನಸ್ತಾಪ ಹೆಚ್ಚೀತು. ಪಿತ್ತಪ್ರಕೋಪದಿಂದ ಶರೀರಕ್ಕೆ ಸ್ವಾಸ್ಥ್ಯವಿರದೆ ಹಣದ ಅಡಚಣೆಯಿಂದಾಗಿ ಮರ್ಯಾದೆವು ಯದು. ವಾರಾದಿಯ 3 ದಿನಗಳು ಅಪಕಷ್ಟದಾಯಿಗಳಾಗವು.

ಕುಂಭ—ಕಳೆದ ದಿನಗಳಿಗಿಂತ ಕಾಲವು ನಿಮಗದೆಷ್ಟೋ ಉತ್ತಮವಿದೆ. ಪವಾಡ ತೆರದಿಂದ ಧನವು ನಿಮ್ಮ ಕೈಸೇರಲಿದೆ. ವ್ಯಾಪಾರದಲ್ಲಿ ಪ್ರಗತಿ ಹೊಂದುವಿರಿ, ಸ ಲಾಟ್ರಿ ವಗೈರೆ ಅನಿರೀಕ್ಷಿತ ಧನ ಲಾಭ ಯೋಗವಿದೆ. ಆತ್ಮೀಯರ ವಿಯೋಗವುಂಟಾಗುವದು. ಗೃಹಕಲಹ ಹೆಚ್ಚುವ ಸಂಭವವಿದೆ. ತಾ. 5, 6, ಇಷ್ಟಪ್ರದಗಳಿವೆ.

ಮೀನ—ಆಕಸ್ಮಿಕ ಪ್ರವಾಸವು ಪ್ರಾಪ್ತವಾದೀತು. ರಾಜಕೀಯ ರಂಗದಲ್ಲಿ ನಿರೀಕ್ಷಿಸಿದ ಫಲಲಭಿಸದು; ನೌಕರಿ ಜನರಿಗೆ ಅಧಿಕಾರಿಗಳ ಭಯ ವಿಶೇಷವಾದೀತು. ಹೆಚ್ಚಿನ ಸಮಯವನ್ನು ಮಾರ್ಗದಲ್ಲಿ ಕಳೆಯಬೇಕಾಗುವದು. ಇದ್ದುದರಲ್ಲಿ ತೃಪ್ತಿಯಿಂದರೆ ಆರ್ಥಿಕವಿಭಾಗದಲ್ಲೇನೂ ಕೊರತೆಯಿರದು. 5, 6, ಬಿಟ್ಟು ಉಳಿದ ದಿನಗಳು ಇಷ್ಟಪ್ರದಗಳಿವೆ.

ತ್ರಿಕ ಶಿಕ್ಷಣಮಟ್ಟವನ್ನು ನಾವು ಪಡೆದು, ಕಾರ್ಮಿಕರು ತಮ್ಮ ಸಮಸ್ಯೆಗಳನ್ನು ತಾವೇ ವಿಭಜಿಸಿ ನೋಡಿಕೊಳ್ಳಬಲ್ಲವರಾಗುವವರೆಗೆ ಅವರಿಗೆ ಸರಿಯಾದ ಮಾರ್ಗದರ್ಶನ ಅತ್ಯಾವಶ್ಯಕ. ಹೆಚ್ಚಾಗಿ ನಿರಕ್ಷರಿ ಕಾರ್ಮಿಕರು, ತಮ್ಮ ಸಂಘಗಳಲ್ಲಾಗಲೀ ಇತರ ಕಡೆಗಳಲ್ಲಾಗಲಿ, ಸರಿಯಾದ ಮಾರ್ಗದರ್ಶನಕ್ಕಾಗಿ ನಾಯಕರನ್ನು ಅಪೇಕ್ಷಿಸುತ್ತಾರೆ. ಆದರೆ ಅವರಿಗೆ ದೊರೆಯುವ ನೆರವು ಅಂತರ್ಗತ ಉದ್ದೇಶದಿಂದ ಕೂಡಿರುತ್ತದೆ

ಜನಸಾಮಾನ್ಯರೊಂದಿಗೆ ಸಂಬಂಧವನ್ನು ಬೆಳೆಸಿಕೊಳ್ಳಲು, ಕಾರ್ಮಿಕರೊಂದಿಗಿದ್ದು ಅವರೊಂದಿಗೆ ಕೆಲಸಮಾಡಲು, ಅವರನ್ನು ಉತ್ತಮಗೊಳಿಸಲು ಸಾಧ್ಯವಾದ ಯೋಜನೆ ಮಾಡತಕ್ಕಂಥ ಸ್ತ್ರೀಯರು ಮತ್ತು ಪುರುಷರ ಅವಶ್ಯಕ ಇಂದು ನಮ್ಮ ರಾಷ್ಟ್ರಕ್ಕಿದೆ ಗಾಂಧೀಜಿಯವರು, ಅವರೊಂದಿಗಿದ್ದು ಅವರ ಉನ್ನತಿ ಬಗೆದು ಮಾರ್ಗದರ್ಶಿಯಾದರು. ಅವರ ನೆನಪಿಗಾಗಿ ನಾವು ಕೊಡಬಹುದಾದ ಅತ್ಯುತ್ತಮ ಕಾಣಿಕೆಯೂ ಅವರ ಹಾದಿಯಲ್ಲೇ ನಡೆದ. ನಮ್ಮ ಇಡೀ ಜೀವನವನ್ನೇ ಸರ್ವರ ಒಳ್ಳೆಯದಕ್ಕಾಗಿ, ನಿಜವಾಗಿ ಅರ್ಪಿಸುವುದೇ ಆಗಿದೆ.

[ಏಷಿಯನ್ ಲೇಬರ್ ಮಾರ್ಚ್, ೫೨]

KING OF TONIC
SHILAJITH LEHYAM

ಸ್ತ್ರೀ ಪುರುಷ ಶಿಶುಗಳು ರೋಗದಿಂದ ನರಳಬೇಕಾಗಿಲ್ಲ!
ಲಕ್ಷಾಂತರ ಜನರು ಗುಣಹೊಂದಿದ್ದಾರೆ!
ಸರ್ ಜೀವನ್ ಶಿಲಾಜಿತ್ ಲೇಹ್ಯ
ಶಿಲಾಜಿತ್ ಹಿಮಾಲಯದ ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.
೪೮ ದಿನದ ಲೇಹ್ಯ ರೂ ೫/೪, ೨೨ ದಿನದ ಲೇಹ್ಯ ರೂ ೩/೮
(ಪೋಸ್ಟೇಜು ವಾಕ)
ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿಶ್ಚೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.
ಹೆಚ್ಚಿನ ಮಾಹಿತಿಗೆ—ಡಾ। ಯಂ. ಪಿ. ಶಾಸ್ತ್ರೀ, ಯಲ್. ಐ ಎಂ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಥಾನಿಕರು:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು

ತಿದ್ದಿ ಬೆಳೆಸಿದ ಎರಡನೆ ಮುದ್ರಣ
ಎಂಟು ಆಣೆಗಳನ್ನು ಮನಿಯಾರ್ಡರ್ ಮಾಡಿದರೆ ರಿಜಿಸ್ಟರಿನಿಂದ ಕಳಿಸುತ್ತೇವೆ
ಸಾಧನ ಪ್ರಕಟನಾಲಯ
ದೊಡ್ಡಬಳ್ಳಾಪುರ

Edited, Printed & Published By K. H. Shetty at the Navayuga Press, Udipi, S. India.

R. No. LICENCE No. 31
Licensed to Post without Prepayment

9-10-1952

Sri A. B. Shetty,
Minister for Medical & Public Health

ೀ. ಎ. ಬಿ. ಶೆಟ್ಟರಿಂದ
ಟನವಾದ ನವಯುಗ ಪತ್ರಿಕೆ
ಉಡುಪಿ ದ. ಕನ್ನಡ

ಿ ಚಂದಾ 5-12-0
ತಿಂಗಳಿಗೆ 3-0-0
ಡಿ ಪ್ರತಿಗೆ 0-2-0

ನವಯುಗ

Vol 32
No. 6
NAVAYUGA WEEKLY POST BOX NO 22 UDIPI
ವರ್ಷ ೩೨
ವಾರ ೬

ಅಂತರಂಗ
ಪುಸ್ತಕ ಪತ್ರಿಕೆಯ
ಉಪಯುಕ್ತವಾದ
88 ಪುಸ್ತಕಗಳು
ರೂ. 24ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ

ಮಧುಪರ್ಕ

ಒಬ್ಬ ಚೀನೀ ಆಫೀಸರು ಅಮೇರಿಕೆಗೆ ಹೋಗಿದ್ದ. ನ್ಯೂಯಾರ್ಕ್ ತಲುಪಿದಾಗ, ಅಲ್ಲಿ ಆವನಿಗೆ ವಿಜೃಂಭಣೆಯ ಸ್ವಾಗತವನ್ನಿತ್ತರು. ಈ ಪೌರ್ವಾತ್ಯ ಮಿತ್ರನೆದುರು ತಮ್ಮ ಸಾರಿಗೆ ಸೌಕರ್ಯದ ಶ್ರೇಷ್ಠತ್ವವನ್ನು ತೋರಿಸಬಯಸಿ, ನೆಲದಡಿಯಲ್ಲಿ ಸುರಂಗಮಾರ್ಗವಾಗಿ ಹೋಗುವ ರೈಲಿನಲ್ಲಿ ಪ್ರಯಾಣಮಾಡಲು ನಿರ್ಧರಿಸಿದರು.

ಸ್ಟೇಶನು ತಲುಪಿ ಗಾಡಿಯ ಪ್ರತೀಕ್ಷೆಯಲ್ಲಿದ್ದಾಗ, ಒಂದು ಪ್ಯಾಸೆಂಜರ್ ರೈಲು ಬಂತು. ಅದನ್ನು ಬಿಟ್ಟುಕೊಟ್ಟು ಆ ಬಳಿಕ ಬಂದ ಎಕ್ಸ್‌ಪ್ರೆಸ್ ರೈಲಿನಲ್ಲಿ ಇವರು ಹೊರಟರು. ಅಮೇರಿಕದ ಮಿತ್ರರು ಚೀನೀಯ ಮಿತ್ರನಿಗೆ "ಇದರಲ್ಲಿ ಕುಳಿತು ಪ್ರಯಾಣಿಸಿದುದರಿಂದ ನಿಮ್ಮ ನಾಲ್ಕು ನಿಮಿಷಗಳ ಉಳಿತಾಯವಾಯಿತು" ಎಂದರು.

ಅದಕ್ಕೆ ಚೀನೀ ಮಿತ್ರ "ಎಂದರೆ, ನಾವು ನಾಲ್ಕು ನಿಮಿಷ ಬೇಗನೇ ಅಸ್ಥಾನವನ್ನು ಮುಟ್ಟುವೆವು, ಅಲ್ಲವೆ?" ಎಂದ.

"ಸರಿ, ಸರಿ"

"ಆದರೆ—ಆ ನಾಲ್ಕು ನಿಮಿಷವನ್ನು ಉಳಿಸಿ ಅದರ ಉಪಯೋಗವನ್ನಾದರೂ ಏನು ಮಾಡಲಿದೆ?" ಎಂಬ ಚೀನೀಯನ ಪ್ರಶ್ನೆಗೆ ಉತ್ತರವಿರಲಿಲ್ಲ!

ಅವಸರ ಬೇಡ

ಇಂದು ಲೋಕದ ತುಂಬ ಎಳೆದಾಟವೇ ಕಂಡು ಬರುತ್ತಿದೆ. ಜನರು ಚಿಂತಾಕುಲರೂ, ಆತುರಚಿತ್ತರೂ, ವೇಗಗಾಮಿಗಳೂ ಆಗಿ ತೋರುತ್ತಾರೆ. ಯಾವಾಗ ನೋಡಿದರೂ ಜನ ಓಡಾಡುತ್ತಿರುತ್ತಾರೆ—ಎರಡು ನಿಮಿಷ ನಿಂತು, ಉಸಿರಾಡಲೂ ಬಿಡುವಿರುವುದಿಲ್ಲ. ಐವತ್ತು ವರ್ಷಕ್ಕೆ ಮುಂಚೆ ಎತ್ತಿನ ಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದೆವು ಆಗೆಲ್ಲಿಯಾದರೂ ತಕ್ಕ ಗಾಡಿ ಸಿಗದಿದ್ದರೆ ಎಷ್ಟೋ ಗಂಟೆ ಕಾಲವೇ ಏಕೆ, ದಿನಗಳನ್ನೇ ಆರಾಮವಾಗಿ ಕಳೆದು ಬಿಡುತ್ತಿದ್ದೆವು. ಈಗ? ಟ್ರೇನ್ ಅಥವಾ ಬಸ್ಸು ಎಲ್ಲಿಯಾದರೂ ತಪ್ಪಿದರೆ ಸಾಕು, ಇನ್ನೊಂದಕ್ಕಾಗಿ ನಾಲ್ಕೈದು ನಿಮಿಷ ಕಾಯುವುದೆಂದರೆ ಕೂಡ ನಿಮಿಷ ಯುಗವಾಗುತ್ತದೆ!

ನಾವು ಸಮಯ ಬಹಳ ಅಮೂಲ್ಯವಸ್ತು ಎಂದು ಹೇಳುತ್ತೇವೆ. ಅದನ್ನು ಆದಷ್ಟು ಹೆಚ್ಚು ಸದುಪಯೋಗಗೊಳಿಸಬೇಕೆಂದು ಕೇಳುತ್ತೇವೆ. ನಮಗೆ ಹಲವಾರು ಕೆಲಸಗಳು ಮಾಡಲಿಕ್ಕಿವೆ. ಆದರೆ ಅವುಗಳೆಲ್ಲ ಲಕ್ಷ್ಯ ಪೂರೈಸುವಷ್ಟು ಸಮಯಾನುಕೂಲತೆ ಮಾತ್ರ ನಮಗೆ ಇರುವುದಿಲ್ಲ. ಹೀಗಾಗಿ ಅಯ್ಯೋ, ಆ ಕೆಲಸ ವ್ಯರ್ಥವೇ ಉಳಿಯಿತಲ್ಲ! ಎಂದು ಚಿಂತೆಯಾಗಿ ಶಾಂತಿ ಹಾಗೂ ಉಲ್ಲಾಸದ ಆವಶ್ಯಕತೆ ಇರುವಾಗ ಹೀಗೆ ನೋವು [illegible]!

ನಮಗೆ ಬದುಕುವ ಬಗೆ ಹೇಗೆಂಬುದನ್ನು ಚೆನ್ನಾಗಿ ಕಲಿಯುವ ಆವಶ್ಯಕತೆ ಇದೆ. ಮಾನಸಿಕ ಹಾಗೂ ಆತ್ಮಿಕ ಶಾಂತಿಯು ಅಗತ್ಯ ನಮ್ಮಲ್ಲಿ ಪ್ರತಿಯೊಬ್ಬನಿಗೂ ಇದ್ದೇ ಇರುತ್ತದೆ. ಆದುದರಿಂದ ಕೆಲಸದ ರಾಶಿಯೇ ಬಿದ್ದಿರುವಾಗ ಕೂಡ, ಸ್ವಲ್ಪ ಸಮಯವನ್ನು ವಿಶ್ರಾಂತಿಯಲ್ಲಿ ಕಳೆಯಲಾಗುವಂತೆ ಮಾಡಬೇಕು. 'ಅಯ್ಯೋ, ನಾ ನಿನ್ನೆ ನಿದ್ದೆ ಮಾಡಿಲ್ಲವಲ್ಲ ಎಂದು ನೀವು ಚಿಂತೆಯಿಂದ ಕಂಗೆಡುವುದು ಬೇಡ. ನಿಮಗೆ ನಿದ್ದೆ ಬೇಕೆನಿಸಿದಾಗ ನಿಮ್ಮ ದೇಹ ತನ್ನಿಂದತಾನೇ ಸೂಚಿಸ ಹತ್ತುವುದು.'

ಅಮೇರಿಕಾಧ್ಯಕ್ಷ ಕಾಲ್‌ಬಿನ್ ಕೂಲಿಜ್‌ನ ಕುರಿತು ಒಂದು ಪ್ರಸಂಗವನ್ನು ಉಲ್ಲೇಖಿಸಿರುತ್ತಾರೆ. ಒಂದು ದಿನ ಅಧ್ಯಕ್ಷ ಮಹಾಶಯ ಆಫೀಸು ರೂಮಿನಲ್ಲಿ ಕುಳಿತು ಕಾರ್ಯಮಗ್ನರಾಗಿದ್ದಾಗ, ಅವರಿಗೆ ಸ್ವಲ್ಪ ವಿಶ್ರಾಂತಿ ಬೇಕೆಂದೆನಿಸಿತು. ಒಂದು ಕುರ್ಚಿಯ-ಮೇಲೆ ಬಿದ್ದು ಕೊಂಡುದೇ ತಡ, ಚೆನ್ನಾಗಿ ನಿದ್ದೆ ಬಂತು. ಅಧ್ಯಕ್ಷ ಮಹಾಶಯರೊಡನೆ ಭೇಟಿಯಾಗಲು ಹೊರಗೆ ದೊಡ್ಡ ದೊಡ್ಡ ಮನುಷ್ಯರು ಕಾದು ನಿಂತಿದ್ದರು. ಇದನ್ನು ನೋಡಿ ಅಧ್ಯಕ್ಷ-ಕಾರ್ಯದರ್ಶಿ ಹೆಬರ್ಟ ಕಂಗಾಲಾದ. ಅಧ್ಯಕ್ಷರನ್ನು ನಿದ್ದೆಯಿಂದ ಎಬ್ಬಿಸುವ ಧೈರ್ಯವಾದರೂ ಆವನಿಗೆಲ್ಲಿ? ಸ್ವಲ್ಪಸಮಯದ ಬಳಿಕ ಅಧ್ಯಕ್ಷ ಮಹಾಶಯರು ನಿದ್ದೆಯಿಂದ ಎಚ್ಚತ್ತರು. ಕಾರ್ಯದರ್ಶಿಯನ್ನು ನೋಡಿದಾಗ ಅವನ ಗಾಬರಿಗೊಂಡ ಮುಖ ಕಂಡಿತು "ಏನಪ್ಪಾ, ಅಮೇರಿಕಾ ಇದ್ದಲ್ಲಿಯೇ ಇದೆಯಷ್ಟೆ!" ಎಂದರು!

[illegible] ನಾವು ಬದುಕಿಗಿಂತ ಕೆಲವು ವಿಶಿಷ್ಟ ವಸ್ತುಗಳ ಬೆಲೆಯೇ ಹೆಚ್ಚೆಂದು ತಿಳಿದುಕೊಳ್ಳುತ್ತೇವೆ ನಮಗೆ ಕೆಲಸವಿದ್ದಾಗ ಸುಖನಿದ್ರೆ ಮಾಡುವ ಮನಸ್ಸಾಗುವುದಿಲ್ಲ. ಆದರೂ ನಮ್ಮ ಮನಸ್ಸನ್ನು ಕೆಲಸದ ಭಾರದಿಂದ ಕೆಲ ಕ್ಷಣದವರೆಗೆ ಮುಕ್ತ ಮಾಡಲು ಬರುತ್ತದೆ. ಉದಾಹರಣೆಗೆ, ಒಬ್ಬ ಮೆನೇಜರನ ಮೇಜಿನ ಮೇಲೆ ಸುಂದರ ದೃಶ್ಯಗಳನ್ನು ಅಂಕಿಸಿರುವ ಹಲವಾರು ಚಿತ್ರಗಳನ್ನು ಇಟ್ಟಿದ್ದರು ತನ್ನ ಕೆಲಸದಲ್ಲಿ ಬೇಸರ ತಲೆದೋರಿದಾಗ, ಮೆನೇಜರ ಮೇಜಿನಮೇಲಿನ ಈ ಸುಂದರ ಚಿತ್ರಗಳೆಡೆಗೆ ದೃಷ್ಟಿ ಬೀರಿ, ಅವುಗಳ ಸೌಂದರ್ಯಪಾನ ಮಾಡುತ್ತಿದ್ದ ತನ್ನ ಭಾವನೆಗಳನ್ನು ಈ ರೀತಿ ತಣಿಸಿ, ಆಯಾಸ ಪರಿಹರಿಸಿಕೊಳ್ಳುತ್ತಿದ್ದ. ಇದಕ್ಕೋಸ್ಕರ ಹೊರಗೆ ಅಡ್ಡಾಡಲು ಹೋಗುವ ಅಗತ್ಯ ಬರಲಿಲ್ಲ. ಕೂತಲ್ಲಿಯೇ ಎಲ್ಲ ಕೆಲಸ.

ಆಕಾಶವನ್ನು ನೋಡಿರಿ—ಅಲ್ಲಿ ಮೋಡಗಳ ಆಟ ನೋಡಿರಿ. ನದಿ, ಗುಡ್ಡ, ಬೆಟ್ಟ, ವೃಕ್ಷ ಸಂಕುಲ, ಅರಣ್ಯ, ನಕ್ಷತ್ರಗಳಿಂದ ಕೂಡಿದ ರಾತ್ರಿ—ಇವುಗಳ ನೆನಪು ಮಾಡಿಕೊಂಡರೂ ಅದರ ಪ್ರಭಾವ ಮನಸ್ಸು ಹಾಗೂ ಶರೀರಗಳ ಮೇಲೆ ಚೆನ್ನಾಗಿ ಆಗುವುದು. ಪ್ರಕೃತಿ ಎಷ್ಟು ಶಾಂತವಾಗಿದೆ ಎಂಬ ಭಾವನೆ ನಮ್ಮನ್ನು ಕುಳಿತಲ್ಲಿಯೇ ಶಾಂತಮಯವಾಗಿಸುವುದು.

ನಮಗಿಂದು ಯಾವುದಕ್ಕೂ ಸಮಯಾನುಕೂಲತೆ ಇಲ್ಲ ಎಂದು ಹೇಳುತ್ತೇವೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮನೆಯೆಂದರೆ ಹೋಟೆಲಿಗಿಂತ ಹೆಚ್ಚು ವೈಶಿಷ್ಟ್ಯಪೂರ್ಣ ವಸ್ತುವೇನಲ್ಲ: ಹೋದಾಗಲೆಲ್ಲ ಊಟ, ಕಾಫಿ, ಮತ್ತು ಮಲಗಲು ಹಾಸಿಗೆಯಷ್ಟು ಸಿಗುವ ಸ್ಥಳವಷ್ಟೆ. ಮನೆಯಲ್ಲಿ ನಮಗೆ ಸಿಗಬೇಕಾದ ಶಾಂತಿಯ ಪರಿಚಯ ಎಷ್ಟುಮಂದಿಗಿದೆ? ನಮ್ಮೆಣಿಕೆಯಂತೆ ನಾವು ಸುಮ್ಮನೆ ಆಲಸಿಗಳಾಗಿ ಉಳಿದಿಲ್ಲ—ಯಾವಾಗಲೂ ಏನಾದರೊಂದು ಮಾಡುತ್ತಾ ಇರುತ್ತೇವೆ. ಸಿನೆಮಾ, ಥಿಯೇಟರ್, ಮೇಚ್ ಇತ್ಯಾದಿ ನಮಗೆಷ್ಟು ವ್ಯಸನಗಳಿವೆ! ಆದರೆ ಇವುಗಳಿಂದ ನಿಜಸುಖ ದೊರೆಯದು. ಕುಟುಂಬದ ಜನರೊಡನೆ ನಿಕಟ ಪರಿಚಯ ಬೆಳೆಯಬೇಕು. ರಾಜ್ಯದ ಮುಖ್ಯ ಪ್ರಧಾನನಾಗಿದ್ದರೂ ವಾರಕ್ಕೆರಡು ಸಂಜೆ ತನ್ನ ಮನೆಯಲ್ಲಿದ್ದುಕೊಂಡು, ಕುಟುಂಬದ ಜನರೊಡನೆ ಕಳೆಯುವವನಿದ್ದಾನೆ ಆ ದಿನ ಯಾರು ಬಂದು ಯಾವ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಪ್ರಾರ್ಥಿಸಿದರೂ, "ನಾನು ಮೊದಲೇ ಪ್ರೋಗ್ರಾಂ ಫಿಕ್ಸ್ ಮಾಡಿಯಾಗಿದೆ" ಎಂದೆನ್ನುತ್ತಾರೆ ಅವರು.

ಹಿಂದೆ ಇಂದಿನಷ್ಟು ಅವಸರ ಕಂಡು ಬರುತ್ತಿದ್ದಿಲ್ಲ. ಹೀಗಾಗಿ ಪರಿಚಯ ಸಂಬಂಧ ಯಾವಾಗಲೂ ಗಾಢವಾಗುತ್ತಿತ್ತು ಪ್ರೇಮ ಹಾಗೂ ಆನಂದದ ಮಯವಾಗುತ್ತಿತ್ತು. ಇಂದು ತಂದೆಗೆ ತನ್ನ ಮಕ್ಕಳ

[ನೇ ಪುಟ ನೋಡಿರಿ]



ಕ್ರಾಂತಿಕಾರಿ ಲೇಖಕರೂ, ಆಯುರ್ವೇದೋದ್ಧಾರಕರೂ ಆದ
ಡಾ| ಪಂಡಿತ ತಾರಾನಾಥರು

ಸಂತತಿ ಸಂವರ್ಧನೆಗೆ ಅಕ್ಕಿಯೇ ಮುಖ್ಯ ಆಹಾರ

ಲೇಖಕರು:- ಡಾ| ಕೆ. ಕೆ. ದಾದಾಚಾನಜಿ, ಮುಂಬಯಿ.

ಕೆಲವು ಕಾಲದ ಹಿಂದೆ, ಸರಕಾರವು ಜನಗಣನೆಯ ಅಂಕೆ ಸಂಖ್ಯೆಗಳನ್ನು ಪರಿಶೀಲಿಸಿ ಆ ಬಗ್ಗೆ ನಿರ್ಧಾರಕ್ಕೆ ಬರುವಾಗ್ಗೆ, "ಹಿಂದುಸ್ಥಾನದಮೇಲೆ ಹೆಚ್ಚಿನ ಜನಭಾರವನ್ನು ಉಂಟು ಮಾಡಲು ಕಾರಣವಾದ, ಮಾನವೀ ತೀಕ್ಷ್ಣ ಉತ್ಪಾದಕ ಶಕ್ತಿಗೆ, ಅಕ್ಕಿಯ ಆಹಾರವು ಕಾರಣವಾಗಿದೆಯೇ? ಎಂಬ ಮಾತು ಅದರ ಮುಂದೆ ನಿಂತಿತ್ತು. ಮೊನ್ನೆ ಮೊನ್ನೆನವರೆಗೆ ಜಪಾನ ದೇಶವು ಈ ಬಗ್ಗೆ ಮಾಡಿದ ಸಂಶೋಧನೆಯ ಲಾಭವನ್ನು ಆಗ ಸರಕಾರವು ತೆಗೆದು ಕೊಳ್ಳಲಿಲ್ಲ. ೧೯೩೪ನೇ ಇಸ್ವಿಯಲ್ಲಿ ಜಿ. ಎಸ್. ಮೆಡಿಕಲ್ ಕಾಲೇಜ (ಮುಂಬಯಿ)ದಲ್ಲಿ "ಸಂತತಿ ನಿಯಮನ" ಈ ವಿಷಯದ ಮೇಲೆ ಚರ್ಚಿಸಲು ಒಂದು ಸಭೆಕೂಡಿತ್ತು. ಹಿಂದುಸ್ಥಾನದಲ್ಲಿಯ ಜನನ ಪ್ರಮಾಣವನ್ನು ತಡೆಯಲು, ಅದಕ್ಕೆ ಉತ್ತೇಜಕವಾದ ಅಕ್ಕಿಯ ಆಹಾರದಲ್ಲಿರುವ ಕಾರಣವನ್ನು ನಾವು ತಿಳಿದುಕೊಳ್ಳಬೇಕೆಂದು, ನಾನು ಆ ಚರ್ಚೆಯಲ್ಲಿ ಭಾಗವಹಿಸುತ್ತ ಹೇಳಿದೆನು. ಅಕ್ಕಿಯ ಆಹಾರವನ್ನು ಜನರು ಸೇವಿಸುವದನ್ನು ಕಡಿಮೆ ಮಾಡುವುದೇ, ಈ ಮಾತಿಗೆ ತಕ್ಕ ಉಪಾಯವಾಗಿದೆಯೆಂದೂ ಹೇಳಿದೆನು. ಈ ಬಗ್ಗೆ ಪ್ರಸಿದ್ಧ ಜಪಾನೀ ಶಾಸ್ತ್ರಜ್ಞರು ಶೋಧಮಾಡಿ ಕಂಡು ಹಿಡಿದ ಅಭಿಪ್ರಾಯಗಳನ್ನೂ ಆಗ ಸಭೆಯ ಮುಂದಿಟ್ಟೆನು. ಅಕ್ಕಿಯಲ್ಲಿ ಸಂತತಿ ಉತ್ಪಾದಕ ದ್ರವ್ಯಗಳು ಹೆಚ್ಚಾಗಿವೆ, ಎಂದು ತಿಳಿದು, ಅದರಲ್ಲಿಂದ ಆ ಭಾಗವನ್ನು ತೆಗೆದು ಹಾಕಿ ಅದರ ಅನುಭವನ್ನು ಜಪಾನೀ ಸಂಶೋಧಕರು ಪಡೆದಿದ್ದಾರೆ. ಈ ವಿಷಯವು ವೈದ್ಯಕೀಯ ಮತ್ತು ಇತರ ಮಾನಸಿಕ ಪುಸ್ತಕಗಳಲ್ಲಿ ಪ್ರಸಿದ್ಧವಾಗಿದೆ.

ಶಾಸ್ತ್ರೀಯ ದೃಷ್ಟಿಯಿಂದ, ಅಕ್ಕಿಯ ಆಹಾರದಲ್ಲಿಯ ಸಂತತಿ ಉತ್ಪಾದನೆಗೆ ಸಹಾಯ ಮಾಡುವ ಸತ್ವವನ್ನು ಎರಡು ರೀತಿಯಿಂದ ನಿವಾರಿಸಬಹುದು. ಅಕ್ಕಿಯನ್ನು ಬೆಳೆಯದ ಹಾಗೆ ಮಾಡಿ, ಹೊರಗಿನಿಂದ ತರಿಸದಂತೆ ವ್ಯವಸ್ಥೆ ಮಾಡಿ, ಮತ್ತು ಅಕ್ಕಿ ತಿನ್ನುವುದಕ್ಕೆ ಅಡ್ಡಿಮಾಡಿ ಇದನ್ನು ಸಾಧಿಸಬಹುದು. ಆದರೆ ಕಾಲಾಂತರದಿಂದ ಅಕ್ಕಿ ತಿನ್ನುವ ಸಂಪ್ರದಾಯವನ್ನು ಈ ರೀತಿಯಿಂದ ತಡೆಯುವುದು ಯುಕ್ತವಾಗಲಾರದು. ಎರಡನೆಯ ಮಾರ್ಗವು ಸಂಶೋಧನೆಗೆ ಸಂಬಂಧಪಟ್ಟುದಾಗಿದೆ. ಆಧುನಿಕ ಶಾಸ್ತ್ರೀಯ ಸಂಶೋಧನೆಯು ಹೊಸ ತರಹದ ಸಸ್ಯ ಮತ್ತು ಪ್ರಾಣಿಗಳನ್ನು ಹುಟ್ಟಿಸುವಷ್ಟು ಸಮರ್ಥವಾಗಿದೆ. ಅದರ ಮೂಲಕ ಸಂತತಿ ಉತ್ಪಾದಕ ಶಕ್ತಿರಹಿತವಾದ ಅಕ್ಕಿಯನ್ನು ಹುಟ್ಟಿಸಬಹುದು. ಮತ್ತು ಆ ಮಾರ್ಗದಿಂದ ನಮ್ಮ ಜನರ ಸಂತತಿ ಉತ್ಪಾದಕ ಶಕ್ತಿಯನ್ನು ಕಡಿಮೆ ಮಾಡಬಹುದು. ಇಲ್ಲವೆ ಅಕ್ಕಿಯ ಜೊತೆಗೆ ಇನ್ನೊಂದು ವಸ್ತುವನ್ನು ಕೂಡಿಸಿ ತಿನ್ನುವಂತೆಮಾಡಿ, ಅದರ ಮೂಲಕ ಅಕ್ಕಿಯಲ್ಲಿಯ ಉತ್ಪಾದಕ ಶಕ್ತಿಯನ್ನು ಅದರಲ್ಲಿಯ ಪೌಷ್ಟಿಕ ಶಕ್ತಿಯು ಕಡಿಮೆ ಮಾಡಬಹುದು. ಆದರೆ ಈ ಜೊತೆಗೆ ಕೂಡಿಸಬೇಕಾದ ವಸ್ತುವು ಸುಲಭ ಬೆಲೆಗೆ ದೊರೆಯುವಂಥದಿರಬೇಕು. ಮತ್ತು ಅದು ರುಚಿರಹಿತವಾದಂಥದೂ ಎಲ್ಲಕಡೆಗೆ ಸಿಗುವಂಥದೂ ಆಗಬೇಕು. ಜನತೆಗೆ ಈ ಸಂತತಿ ನಿಯಮನದ ನಿರುಪದ್ರವಿ ಉಪಾಯದ ಆವಶ್ಯಕತೆ ಮತ್ತು ಮಹತ್ವವನ್ನು ಮನಗಾಣಿಸಿಕೊಟ್ಟು, ಅವರ ಸಹಕಾರದಿಂದ ನಮ್ಮ ಬಡ ಮತ್ತು ಶಕ್ತಿರಹಿತ ಜನತೆಯನ್ನು ಉದ್ಧಾರ ಮಾಡಬೇಕು.

ಯುರೋಪಿಯನ್ನರ ಆಹಾರದಲ್ಲಿ ಎಲ್ಲ ಧಾನ್ಯಗಳ ಮಿಶ್ರಣವಿರುತ್ತದೆ. ಆದರಲ್ಲಿ ಅಕ್ಕಿಯ ಭಾಗವು ಅತ್ಯಲ್ಪವಿರುತ್ತದೆ. ಆದ್ದರಿಂದ ಅವರ ಸಂತತಿ ಉತ್ಪಾದಕ ಶಕ್ತಿಯು, ಏಶಿಯಾದ ಅಕ್ಕಿ ತಿನ್ನುವವರ ಶಕ್ತಿಗಿಂತ ಕಡಿಮೆ ಇರುತ್ತದೆ. ಭಾರತದ ಕೇಂದ್ರೀಯ ಮತ್ತು ಪ್ರಾಂತೀಯ ಸರಕಾರಗಳು ಈ ಬಗ್ಗೆ ವಿಶಿಷ್ಟ ಉದ್ದೇಶ ನಿರ್ದಿಷ್ಟವಾದ ಸಂಶೋಧನೆಗಳನ್ನು ನಡೆಸುವ ಸಂಸ್ಥೆಗಳನ್ನು ಸ್ಥಾಪಿಸಬೇಕೆಂದು ನನ್ನ ಬಿನ್ನಹವಿದೆ. ಜನತೆಯು ಸೇವಿಸುವ ವಿವಿಧ ಆಹಾರಗಳಲ್ಲಿಯ ಉತ್ಪಾದನೆ ಶಕ್ತಿಯನ್ನು ಕಂಡುಹಿಡಿಯುವುದು, ಆ ಶಕ್ತಿಗಳನ್ನು ನಿಯಂತ್ರಿಸುವ ಉಪಾಯ ಹುಡುಕುವುದು ಮನುಷ್ಯನು ಸಾಕಿದ ಪ್ರಾಣಿಗಳು ತಿನ್ನುವ ವಸ್ತುಗಳಲ್ಲಿಯ ಈ ಶಕ್ತಿಯನ್ನು ಕಂಡುಹಿಡಿಯುವುದು ಇವೇ ಮೊದಲಾದ ಕಾರ್ಯಗಳನ್ನು ಆ ಸಂಸ್ಥೆಗಳು ಮಾಡಬೇಕು. ಈಗಾಗಲೇ ಹೆಚ್ಚು ಜನಸಂಖ್ಯೆಯುಳ್ಳ ಮತ್ತು ಪ್ರತಿವರ್ಷ ನೂರಕ್ಕೆ ೨ರಷ್ಟು ಅದನ್ನು ಹೆಚ್ಚಿಸುತ್ತಿರುವ ಭಾರತದ ದೃಷ್ಟಿಯಿಂದ ಈ ವಿಷಯವು ಬಹಳ ಮಹತ್ವದ್ದಾಗಿದೆ. ಇಂತಹ ಸಂಸ್ಥೆಗಳು ಇನ್ನೂ ಅಸ್ತಿತ್ವದಲ್ಲಿ ಇಲ್ಲ. ಆದರೆ ಭಾರತವು ಈ ವಿಷಯದಲ್ಲಿ ಮೊದಲು ಹೆಜ್ಜೆಯನ್ನು ಇಡುವುದು ಅಗ್ರಾಹ್ಯವೇನೂ ಆಗಲಾರದು.

ವಿವಿಧ ಪ್ರದೇಶಗಳ ಹವಾಮಾನ ನೀರುಗಳ ಸಂಶೋಧನೆಯನ್ನು ಈ ಸಂಸ್ಥೆಗಳು ಮಾಡಿ ಆಯಾಭಾಗಗಳಲ್ಲಿ ಹೆಂಗಸರಿಗಿಂತ ಗಂಡಸರು ಏಕೆ ಹೆಚ್ಚು ಇದ್ದಾರೆ? ಗಂಡಸರಿಗಿಂತ ಹೆಂಗಸರು ಏಕೆ ಹೆಚ್ಚು ಎಂಬ ವಿಷಯವನ್ನು ಕಂಡುಹಿಡಿಯಬೇಕು. ಆಗ ಉತ್ಪಾದಕ ಶಕ್ತಿ ಮತ್ತು ಅದರ ನಿಯಂತ್ರಣ ಇವುಗಳ ಸಂಬಂಧವು ಚನ್ನಾಗಿ ಗೊತ್ತಾಗುವುದು. ಜನರ ಉತ್ಪಾದಕ ಶಕ್ತಿಯೇ ಕಡಿಮೆಯಾದರೆ ಸಂತತಿ ನಿಯಮನದ ಅವಶ್ಯಕತೆಯು ಉಳಿಯುವುದಿಲ್ಲ.

ಈ ಸಂಶೋಧನೆಯನ್ನು ಮಾಡುವ ಮೊದಲು ಸಂತತಿ ನಿಯಮನದ ಕೇಂದ್ರಗಳನ್ನು ತೆಗೆಯುವುದು ಹೆಚ್ಚಿನ ಮೆಚ್ಚುಗೆ ಕಾರ್ಯವಾಗಿದೆ. ದಿನದಿನಕ್ಕೆ ಬೆಳೆಯುವ ಈ ಜನಸಂಖ್ಯೆಗೆ ಲಕ್ಷ್ಯಗೊಟ್ಟು ಕೇಂದ್ರಗಳನ್ನು ತೆಗೆಯಬೇಕಾದೀತು. ಆದ್ದರಿಂದ ಆಹಾರದ ಸಂಶೋಧನೆ, ಧಾರ್ಮಿಕ ಮತ್ತು ನೈತಿಕ ಪ್ರಚಾರಗಳಿಂದ ಈ ವೆಚ್ಚವನ್ನು ಮಾಡದೆ ನಮ್ಮ ಕಾರ್ಯ ಸಾಧಿಸಬಹುದು.

ನಮ್ಮ ಜನಸಂಖ್ಯೆಗೆ ಸಂಬಂಧಪಟ್ಟ ಅಂಕೆ ಸಂಖ್ಯೆಗಳನ್ನು ಗಮನಿಸಿದರೆ ನಮ್ಮಲ್ಲಿ ಆಗುವ ಶಿಶುಜೀವನ ಹಾನಿಯ ಕಲ್ಪನೆಯು ಬರುವುದು. ಸಂತತಿಯು ಹೆಚ್ಚಾದಂತೆ ಶಿಶು ಮತ್ತು ತಾಯಂದಿರ ಮರಣವು ಹೆಚ್ಚುವುದು ಭಾರತದಲ್ಲಿಯ ಪ್ರತಿ ನೂರು ಮರಣಗಳಲ್ಲಿ ೬೫ ಶಿಶುಗಳದಿರುವುದು. ಹತ್ತು ವರ್ಷಗಳ ಒಳಗಿನ ಹುಡುಗರು ಅದರಲ್ಲಿ ೫೫.

ಇಂತಹ ಮಕ್ಕಳನ್ನು ಸಾಕುವುದರಲ್ಲಿ ನಮ್ಮ ತಾಯಂದಿರ ಉತ್ಸಾಹವು ಹಾಳಾಗುತ್ತಿದೆ. ಮತ್ತು ನೂರು ಜನನಗಳಾದ ಅವುಗಳಿಗೆ ಜನ್ಮಕೊಟ್ಟ ೨೦ ತಾಯಂದಿರು ಮರಣ ಹೊಂದುತ್ತಾರೆ. ಇದರಲ್ಲಿ ಆರೋಗ್ಯ ಹಾನಿಯೆಷ್ಟು? ಮತ್ತು ದುಡ್ಡಿನ ವೆಚ್ಚವೇನು? ಮತ್ತು ನಮ್ಮ ಆಯುಃ ಪ್ರಮಾಣವೆಷ್ಟು? ೫೫ವರ್ಷ ಸರಾಸರಿಯಲ್ಲಿ ನಿಜವಾಗಿ ಅದು ೨೭ವರ್ಷವೇ ಇದೆ.

ಇದುವರೆಗೆ ಜಾಗತಿಕ ಜನಸಂಖ್ಯಾ ಸಮಿತಿಗಳು, ಪರಿಷತ್ತುಗಳು ಕೂಡುತ್ತವೆ. ಮತ್ತು ಆ ವಿಷಯದ ಮೇಲೆ ಬಹಳಷ್ಟು ವಾಙ್ಮಯವು ಹೊರಬಿದ್ದಿವೆ. 'ಕುಟುಂಬ ವ್ಯವಸ್ಥೆ' 'ಸಂತತಿನಿಯಮನ' ಈ ವಿಷಯಗಳ ಬಗ್ಗೆ ಬಹಳ ಚರ್ಚೆಯಾಗುತ್ತದೆ. ಆದರೆ ಇದರಿಂದ ಬಡಭಾರತಕ್ಕೆ ಸಹಾಯವಾಗಲಾರದು ಈ ಸಂಬಂಧವಾದ ಚಲಚ್ಚಿತ್ರಗಳೂ ನಮ್ಮ ಜನತೆಗೆ ತೋರಿಸಲ್ಪಡುತ್ತವೆ. ಆದರೆ ನಮ್ಮ ಜನರು ನಿರಕ್ಷರಿಗಳು, ಭಾವಿಕರು, ಲಗುಲಗ್ನವಾಗಿ, ಬೇಗನೆ ಮಕ್ಕಳನ್ನು ಹಡೆದು, ಬೇಗನೆ ಸಾಯುವವರಲ್ಲಿಯೇ ಅವರು ಆನಂದಪಡುತ್ತಿದ್ದಾರೆ. ಸಂಖ್ಯೆ ಬಹಳವಾಗಿದೆ, ಆದರೆ ತಂತಿಯು ಇಳಿಯುತ್ತಿದೆ ಶೀಲವಿಲ್ಲದ ಈ ಜನಸಂಗುಳಿ ಜಗತ್ತಿನಲ್ಲಿ ಬೆಲೆಯಿಲ್ಲ. 'ಕುಟುಂಬ ವ್ಯವಸ್ಥೆಯ, ಸಮಸ್ಯೆಯ

(೧೨ನೇ ಪುಟ ನೋಡಿರಿ)

ಆಗ--?

ತಾರುಣ್ಯವು ತೀರಿದಾಗ, ಶಕ್ತಿಯು ಕುಗ್ಗಿದಾಗ, ದುಡಿಯುವುದು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ, ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ ಮುಖದಲ್ಲಿ ನಗೆಯನ್ನು ನಲಿಸಬಲ್ಲ ಜೀವನದ ಚೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿ ಇರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕಂಡೊಡನೆ ನಿಮ್ಮದೇ ಆಗುವ, ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ, ನಿಮ್ಮ ನಾಡಿನ

ಈ ಕಂಪೆನಿಯಲ್ಲಿಯೇ ವಿಮೆ ಇಳಿಸಿರಿ

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ. ಸ್ಥಾಪನೆ: ೧೯೩೫
The Canara Mutual Assurance Co. Ltd.
Head Office: UDIPI, S. INDIA. ESTD: 1935



ರಾಮತೀರ್ಥ
ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತವೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಉಡುಪಿ ಡಿ. ಮು. ಕೋರ್ಟಿನಲ್ಲಿ
S. C. 96/52 S. ಇ. P. 27/52
ಶೇಕ್ ಕಾಶಿಂಮ ಸಾಹೇಬ —ಅರ್ಜಿದಾ
ಮತ್ತು
ಶ್ರೀನಿವಾಸ ನಾಯ್ಕ ಕೂಟಾ— ಎದ್ರಿ

1ನೇ ಎದ್ರಿ ಶ್ರೀನಿವಾಸ ನಾಯ್ಕ-ನಾಗಪ್ಪ ನಾಯ್ಕರ ಮಗ, ಪುತ್ತೂರು ಗ್ರಾಮದಲ್ಲಿರು ವವರು-ಇವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ:--

ಉಡುಪಿ ತಾಲ್ಲೂಕು ಪುತ್ತೂರು ಗ್ರಾಮದಲ್ಲಿರ ವ ಅನಂತ ನಾಯ್ಕರ ಮಗ ವಾಮನ ನಾಯ್ ರು 1ನೇ ಎದ್ರಿ ಮೇಲೆ ಪಡದ ಈ ಕೋ ರ್ಟು S. C. 96/52ನೇ ಡಿಕ್ರಿಯನು ಅರ್ಜಿದಾರನು ಸದ್ರಿ ವಾಮನ ನಾಯ್ಕರಿಂ 26-6-1952ರಲ್ಲು ಕ್ರಮವಾದ ಟ್ರಾನ್ಸ್ಫರ ದಸ್ತಾವೇಜು ಮೂಲಕ ಟ್ರಾನ್ಸ್ಫರ್ ಪಡದ ಸದ್ರಿ ಟ್ರಾನ್ಸ್ಫರ್ ಮಂಜೂರು ಮಾಡು ಬಗ್ಗೆ ವಗೈರೆ ಮೇಲ್ಕಂಡ ಅಮಲ್ ಜ್ಯಾರಿ ನ್ನು ಅರ್ಜಿದಾರನು ದಾಖಲು ಮಾಡಿ ಅದು ಮ ನೋಟೀಸಿನ ಬಗ್ಗೆ ತಾ. 14-10-52 ಯಿಟ್ಟಿರುತ್ತದೆಂತಲೂ, ಆ ಬಗ್ಗೆ ಆಕ್ಷೇಪ ಹೇ ಳತಕ್ಕದ್ದು ಇದ್ದ್ರೆ ಸದ್ರಿ ದಿವ್ಸ ಮೇಲ್ಕಂ ಕೋರ್ಟು ಮುಂದೆ ಹಗಲು 10 ಗಂಟೆಗೆ ಹಾ ಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದೆಂತ ಸಹಾ ಈ ಮೂಲಕ ತಿಳಿಸಲಾಗುತ್ತದೆ.

N. Ramachandra Bha
Advocate for Petitioner
UDIPI, Dated 1-10-52

ಆಹಾರದ ಕೊರತೆಗೆ ಕಾರಣ:

ಭೂಮಾತೆಯ ಮೇಲೆ ಅತ್ಯಾಚಾರ!

ಲೇಖಕರು: ಶ್ರೀ ಎಂ. ಸಿ. ಹಿರೇಮಠ, ವಕೀಲ ಧಾರವಾಡ

ಮನುಷ್ಯನು ಮೂಲದಲ್ಲಿ ತನ್ನ ಬೇಡಿಕೆಗಳನ್ನು ಕಾಡು ಮೃಗಗಳ ಬೇಟೆಯಾಡುವುದರಿಂದ, ಮೀನು ಹಿಡಿಯುವುದರಿಂದ ಮತ್ತು ತನ್ನ ಆವಶ್ಯಕತೆಗಳನ್ನು ಒದಗಿಸಿಕೊಳ್ಳಲು ಸಹಾಯಕವಾದ ಇತರ ಕೊಲೆಸುಲಿಗೆ ಮೊದಲಾದ ಹಿಂಸಾ ಮಾರ್ಗಗಳಿಂದ ಪೂರೈಸಿಕೊಳ್ಳುತ್ತಿದ್ದನು. ಅಂದಿನ ಸನ್ನಿವೇಶಕ್ಕೆ ಸರಿಹೋಗುವ ಬಿಲ್ಲು-ಬಾಣಗಳು ಮತ್ತು ಬಲೆ – ಜಾಲಗಳು ಮಾನವನ ಬದುಕು ಬಾಳುವೆಯ ಸಾಮಾನು ಸರಂಜಾಮುಗಳಾಗಿದ್ದುವು. ಪ್ರಾಣಿಗಳನ್ನು ಕೊಂದು ತಿನ್ನುವ ಹಿಂಸ್ರ ಪಶುಗಳಂತೆ ಮಾನವನ ಜೀವನವಿದ್ದಿತು. ಆತನು ತನ್ನ ಆಯುಧಗಳಿಂದ ದೊರಕಿಸಿಕೊಂಡ ಆಹಾರವನ್ನೇ ತಿಂದು, ಮುಚ್ಚುಮರೆ ಇಲ್ಲದೆ, ಬಟ್ಟೆ ತೊಟ್ಟಿಲ್ಲದ ಬತ್ತಲೆಯ ಸ್ಥಿತಿಯಲ್ಲಿ ಜೀವಿಸುತ್ತಿದ್ದನು. ಕೊನೆಕೊನೆಗೆ ಮನುಷ್ಯನು ತಾನು ಕೊಂದ ಪ್ರಾಣಿಗಳ ತುಪ್ಪಳು ಚರ್ಮವನ್ನೇ ತನ್ನ ಉಡುಪನ್ನಾಗಿ ಮಾರ್ಪಡಿಸಿಕೊಂಡನು. ವ್ಯಾಪಾರವು ಆ ಕಾಲದಲ್ಲಿ ಅರಿಯದ ವಿಷಯ. ಆವನು ತನ್ನ ಹಸಿವು ಬಳಲಿಕೆಗಳನ್ನು ಹಿಂಗಿಸಿಕೊಳ್ಳುವುದಕ್ಕೆ ಮಾತ್ರ ದುಡಿಯುತ್ತಿದ್ದನು. ಸ್ಥಳದಿಂದ ಸ್ಥಳಕ್ಕೆ ಅಲೆದಾಡುವ ಜೀವನ ಪದ್ಧತಿಯನ್ನು ಬಿಟ್ಟು, ತನಗೆ ಬೇಕಾದುದೆಲ್ಲವನ್ನೂ ಉಂಟುಮಾಡಿಕೊಳ್ಳುವ ಸಹಜ ಪ್ರೇರಣೆಯು ಮಾನವನಲ್ಲಿ ಮೂಡಿದಾಗ್ಗೆ, ಆವನು ಭೂಮಿಯನ್ನು ತನ್ನ ಬೇಡಿಕೆಗಳನ್ನು ಪೂರೈಸಿಕೊಳ್ಳುವ ಸಾಧನವನ್ನಾಗಿ ಆಯ್ದುಕೊಂಡನು. ಈ ಸನ್ನಿವೇಶವು ಮಾನವನ ವಿಕಾಸದ ಇತಿಹಾಸದಲ್ಲಿ ಅತ್ಯಂತ ಮಹತ್ವಪೂರ್ಣವಾದ ಒಂದು ಘಟ್ಟವು. ಅನಾದಿ ಕಾಲದಿಂದಲೂ ಬೆಳೆದು ನಿಂತ ಕನ್ನೆ-ಕಾಡುಗಳನ್ನು ಕಡಿದು ಬಯಲು ಮಾಡಿ ಕನ್ನಿಕಾವಸ್ಥೆಯಲ್ಲಿದ್ದ ಭೂದೇವಿಯನ್ನು ಮಾನವನು ಆರಂಭಕ್ಕಾಗಿ ಮೀಸಲಾಗಿರಿಸಿ, ತನ್ನ ಯೋಜನೆಯಂತೆ ಬೇಸಾಯ ಮಾಡತೊಡಗಿದನು. ದಂಡಕಾರಣ್ಯದಂತಹ ದಟ್ಟಡವಿಗಳನ್ನು ಕಡಿದು ಬಯಲು ಮಾಡುವ ಕೆಲಸವು ಅಂದಿನ ಸಂದರ್ಭದಲ್ಲಿ ಸುಲಭಸಾಧ್ಯವಾದ ಮಾತೆಂದು ಯಾರೂ ಗ್ರಹಿಸಕೂಡದು. ಇಂತಹ ದೊಡ್ಡ ಕಾರ್ಯಸಿದ್ಧಿಗಾಗಿ ಮಾನವನು ಅಪಾರ ಶಕ್ತಿಯನ್ನು ಅಣಿಗೊಳಿಸಬೇಕಾಯಿತು. ಆದುದರಿಂದ, ಯಾವನಾದರೊಬ್ಬನು ಅಂತಹ ಕಾರ್ಯಸಿದ್ಧಿಗೆ ಅವಶ್ಯವಿದ್ದ ಅದ್ಭುತ ಪರಿಶ್ರಮವಹಿಸಿ, ತನಗೆ ಅವಶ್ಯವಿದ್ದ ಭೂ-ಭಾಗವನ್ನು ದೊರಕಿಸಲು ಸಾಹಸಪಟ್ಟು ಜಯಶೀಲನಾದರೆ, ಆವನಲ್ಲಿ ಆ ಭೂಮಿಯ ವಿಷಯವಾಗಿ ಸ್ವಾಮಿತ್ವದ ತಿಳುವಳಿಕೆಯು ಸ್ವಾಭಾವಿಕವಾಗಿ ಉಂಟಾಗುತ್ತಿತ್ತು. ಈ ತಿಳುವಳಿಕೆಯೇ ಭೂಮಿಯಲ್ಲಿಯ ಸ್ವಂತ ಒಡೆತನದ ಕಲ್ಪನೆಗೆ ಮೂಲ ಕಾರಣವು ಆದಾಗ್ಯೂ, ಪ್ರತಿಯೊಬ್ಬನು ತನ್ನ ಸ್ವಂತ ಅವಶ್ಯಕತೆಗಳ ಗೋಸ್ಕರವೇ ಕಾರ್ಯ ಕೈಕೊಳ್ಳುತ್ತಿದ್ದನು. ಅಂದಿನ ಪರಿಸ್ಥಿತಿಯಲ್ಲಿ, ಭೂಮಿಯು ಮನುಷ್ಯನಿಗೆ ಉಣ್ಣಲು ಆಹಾರವನ್ನು ಮತ್ತು ಉಡಲು ಬಟ್ಟೆಯನ್ನು ಒದಗಿಸಿಕೊಳ್ಳಲು ಅವಶ್ಯವಿದ್ದ ಪದಾರ್ಥಗಳನ್ನು ಬೆಳೆಯಿಸುವ ಮಹತ್ವದ ಸಾಧನವಾಗಿ ಪರಿಣಮಿಸಿತು.

ಈ ರಚನಾ ಕ್ರಮದ ಆಧಾರದ ಮೇಲೆ ಕೃಷಿ ಕೈಗಾರಿಕೆಗಳು ಬೆಳೆದು ಬಂದವು. ಇವುಗಳನ್ನು ಕೂಡ, ಒಕ್ಕಲಿಗನೇ ಬಹು ಮಟ್ಟಿಗೆ, ತನ್ನ ಬಿಡುವಿನ ಕಾಲದಲ್ಲಿ ಮಾತ್ರ ಕೈಗೊಳ್ಳುತ್ತಿದ್ದನು. ಈ ಉದ್ಯೋಗಗಳಿಂದ ಒಕ್ಕಲಿಗನಿಗೆ ಇಡೀ ವರ್ಷವೆಲ್ಲ ಪೂರಾ ಬೇಕಾದ ಕೆಲಸ ದೊರೆಯುತ್ತಿತ್ತು. ನಿರುದ್ಯೋಗದ ಸಮಸ್ಯೆಯ ಸುಳಿವೇ ಇರಲಿಲ್ಲ. ಆಗತ್ಯವಿದ್ದಷ್ಟಕ್ಕಿಂತಲೂ ಹೆಚ್ಚಿಗೆ ಉತ್ಪಾದಿಸಲ್ಪಟ್ಟ ಹುಟ್ಟುವಳಿಯನ್ನು ಬೇರೆಯವರ ಉಳಿತಾಯಕ್ಕೆ ವಿನಿಮಯ ಮಾಡುತ್ತಿದ್ದರು. ಇದುವೇ, ವ್ಯಾಪಾರದ ಮೂಲಾರಂಭವು. ಈ ತರಹದ ವಸ್ತು ವಿನಿಮಯದ ವ್ಯಾಪಾರದಿಂದ ಉಭಯಪಕ್ಷಕಾರರಿಗೂ ಲಾಭವುಂಟಾಗುತ್ತಿತ್ತು.

ಹಣದ ಚಲಾವಣೆ

ಈ ಸಮಯಕ್ಕೆ ಹಣವು ಅನುಕೂಲವಾದ ಮತ್ತು ಅಧಿಕೃತವಾದ ಚಲಾವಣೆ ನಾಣ್ಯವೆಂದು ಮತ್ತು ವಿನಿಮಯ ವ್ಯಾಪಾರದ ಸಾಧನವೆಂದು ಬಳಕೆಯಲ್ಲಿ ಬಂದಿತು. ಆದರೆ, ಈ ಹೊಸ ಹುಟ್ಟವು ಕೊಳ್ಳುವ ಶಕ್ತಿಯನ್ನು ಸಂಗ್ರಹಿಸಲು ಅನುಕೂಲವಾದ ಸಾಧನವೆಂಬ ಕಾರಣದಿಂದ ಮತ್ತು ಅದರಿಂದುಂಟಾಗುವ ವಿವಿಧ ಲಾಭಗಳ ಮೂಲಕ, ತನ್ನ ಮೂಲ ವಾಸ್ತವಿಕ ಮತ್ತು ನ್ಯಾಯ ಸಮ್ಮತವಾದ ಉಪಯುಕ್ತತೆಯನ್ನು ಮೀರಿ ಬೆಳೆದು ನಿಂತು, ಅದೊಂದು ಕೇವಲ ಸಾಧನ ಮಾತ್ರ ಎಂದೆನಿಸದೆ, ಅದೇ ಒಂದು ಅಂತಿಮ ಧ್ಯೇಯವೆನಿಸಿತು. ಇಷ್ಟೇ ಅಲ್ಲ; ಹಣವು ಅಲ್ಪಕಾಲದಲ್ಲಿಯೇ ತಾನೇ ತಾನಾಗಿ ಸಿಂಹಾಸನವೇರಿಕೊಂಡ ಬೇಡಿಕೆಯಲ್ಲಿ ಮಿಕ್ಕ ವಸ್ತುಗಳನ್ನು ಸೋಲಿಸಿತು.

ಅದು ಮೊದಲ್ಗೊಂಡು, ಮಾನವನು ಮಿಕ್ಕ ಎಲ್ಲ ವಸ್ತುಗಳನ್ನು ಮತ್ತು ಪದಾರ್ಥಗಳನ್ನು, ಅವುಗಳಲ್ಲಿ ಮಾನವನ ಮೂಲಭೂತ ಆವಶ್ಯಕತೆಗಳನ್ನು ಪೂರೈಸುವ ಸಾಮರ್ಥ್ಯವಿದೆಯೋ ಇಲ್ಲವೋ ಎಂಬ ಮಹತ್ವದ ಅಂಶದ ಪರಿಶೀಲನೆಯನ್ನು ಕಡೆಗಣಿಸಿ, ಹಣ ಸಂಪಾದಿಸುವ ಒಂದೇ ಒಂದಾದ ಉದ್ದೇಶವನ್ನು ಮುಂದಿಟ್ಟುಕೊಂಡು ಉತ್ಪಾದಿಸಲನುವಾದನು. ಹಣವುಳ್ಳವನಿಂದ ಕೃತಕ ಮತ್ತು ಕಾಲ್ಪನಿಕ ಬೇಡಿಕೆಗಳು ನಿರ್ಮಿಸಲ್ಪಟ್ಟವು. ಕೊಳ್ಳುವ ಶಕ್ತಿಯನ್ನು ಸಂಗ್ರಹಿಸುವ ಮುಖ್ಯಸಾಧನವಾದ ಈ ಸಾಧನವನ್ನು ಸಂಪಾದಿಸುವ ಮೇಲಾಟದಲ್ಲಿ, ಜನಸಾಮಾನ್ಯರ ನೈಜವಾದ ಬೇಡಿಕೆಗಳು ಕಡೆಗಣಿಸಲ್ಪಟ್ಟವು ಜನರ ನಿತ್ಯೋಪಯೋಗಕ್ಕೆ ಆವಶ್ಯಕವಾದ ಹುಣಸೆ ಹಣ್ಣು, ಬೆಲ್ಲ, ಮೆಣಸು, ಹಾಲು, ಬೆಣ್ಣೆ, ಎಣ್ಣೆಯೇ ಮೊದಲಾದವುಗಳ ಬೆಲೆಯು ಕಲ್ಪನಾತೀತವಾಗಿ ಏರಲು ಕಾರಣವೇನು?

ಈ ಹಿನ್ನೆಲೆಯಲ್ಲಿ, ಮಾನವನ ಬೇಡಿಕೆಗಳನ್ನು ಪೂರೈಸುವ ಕಲಕರಣಗಳಂತಿದ್ದ ಉತ್ಪಾದನೆಯ ಎಲ್ಲ ಸಾಧನಗಳು ತಮ್ಮ ಸ್ಥಾನವನ್ನು ಕಳೆದುಕೊಂಡವು. ಈ ಅವನತಿಯಲ್ಲಿ ಭೂದೇವಿಯು ಕೂಡ ಪಾಲುಗಾರಳಾದಳು, ಕೃಷಿ ಕರ್ಮದಲ್ಲಿ ತೊಡಗಿದವರನ್ನು ಪೋಷಿಸುವ ತನ್ನ ಆದ್ಯಕರ್ತವ್ಯವನ್ನು ಭೂಮಿಯು ಇಂದು ಕಳೆದುಕೊಂಡಿದೆ. ಸಾಕಷ್ಟು ಆಹಾರ ಬಟ್ಟೆಗಳಿಲ್ಲದೆ ಬಳಲುವವರಲ್ಲಿ ಒಕ್ಕಲಿಗ ಮತ್ತು ಭೂಮಿಯಿಲ್ಲದ ಬೇಸಾಯದ ಕೂಲಿಕಾರ, ಇವರಿಬ್ಬರ ಪರಿಸ್ಥಿತಿಯು ಅತ್ಯಂತ ಶೋಚನೀಯವಾಗಿದೆ. ಆದರೆ ಹಣವುಳ್ಳವರು ಭೂಮಿಯ ಹುಟ್ಟುವಳಿಗಳನ್ನು ಸುಲಭವಾಗಿ ಸಂಪಾದಿಸಬಲ್ಲರು. ಮಾನವ ನಿರ್ಮಿತ ಈ ವ್ಯವಸ್ಥೆಯು ನಿಸರ್ಗದ ನಿಯಮಕ್ಕೆ ಪ್ರತಿಕೂಲವಾಗಿರುವುದಲ್ಲದೆ ಪ್ರತಿಗಾಮಿಯಾಗಿದೆ. ಈ ಪರಿಸ್ಥಿತಿಯು ತೀವ್ರ ಸುಧಾರಿಸಲ್ಪಡದಿದ್ದರೆ, ಮಾನವ ಕೋಟಿಯು ಅಭೂತಪೂರ್ವವಾದ ದುರಂತಕ್ಕೊಳಗಾಗುವುದು

ಸದ್ಯಸ್ಥಿತಿ

ಸದ್ಯದ ಸರಕಾರದ ಆಹಾರ ದೊರಕಿಸುವ ಯೋಜನೆಗಳು ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿವೆ. ಬರಿಯ ಹಣದ ಸಂಬಂಧವು ಬಲ್ಲಿದರು ಬಡವರನ್ನು ಶೋಷಿಸಲು ಅನುಕೂಲತೆಯನ್ನುಂಟು ಮಾಡಿಕೊಡುತ್ತಿದೆ. ಅದು ವಸ್ತುಗಳ ನಿಜವಾದ ಬೆಲೆಯನ್ನು ಮರೆಮಾಡಿ ವ್ಯಾಪಾರೋದ್ಯಮಗಳಿಗೆ ತಪ್ಪು ಮಾರ್ಗದರ್ಶನ ಮಾಡಿಕೊಡುತ್ತದೆ. [illegible] ಪದಾರ್ಥಗಳ ಬೆಲೆಯನ್ನು ಹಣದ ರೂಪದಲ್ಲಿ ಕೊಡುತ್ತದೆ. ಇದರಿಂದ ನಾಲ್ಕು ಪಟ್ಟು ಸುಲಿಗೆಗೆ ಅವಕಾಶವುಂಟಾಗುತ್ತದೆ: (೧) ಅದು ತನ್ನ ಇಷ್ಟಬಂದ ಹಾಗೆ ಬೆಳೆಯುವವನಿಂದ ಜೀವನಾಧಾರಕ್ಕೆ ಆವಶ್ಯಕವಾದುದನ್ನು ಕಸಿದುಕೊಳ್ಳುತ್ತದೆ. (೨) ವಾಸ್ತವಿಕತೆಗೆ ಸಂಬಂಧವಿಲ್ಲದ ಮೊತ್ತವು ಅಥವಾ ಪರಿಮಾಣವು ನಿರ್ಣಯಿಸಲ್ಪಡುತ್ತದೆ. (೩) ಹಣದ ರೂಪದಲ್ಲಿ ಕೊಡಲ್ಪಡುವ ಪ್ರತಿಫಲವು ಪದಾರ್ಥಗಳ ನಿಜವಾದ ಬೆಲೆಗಳನ್ನು ಮುಚ್ಚಿಡುತ್ತದೆ. ಒಂದು ಬಟ್ಟಲು ಹಾಲಿನಲ್ಲಿರುವ ಪುಷ್ಟಿಕರ ಗುಣದ ಬೆಲೆಯನ್ನು ನಾಲ್ಕು ಬಟ್ಟಲು ಚಹಾದೊಡನೆ ಸರಿದೂಗಿಸಲಾದೀತೆ? ಅದಕ್ಕೆ, ಅವುಗಳ ಹಣದ ರೂಪದ ಬೆಲೆಗಳ

(೧೨ನೇ ಪುಟ ನೋಡಿರಿ)

ದ. ಕ. ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

O. S. ನಂಬ್ರ 118/1952

Between:-

ದೇಜಪ್ಪ ಶೆಟ್ಟಿ ಕೂಡಾ —ವಾದಿರು ಮರ್ತಿ

ದುಗ್ಗಮ್ಮ ಕೂಡಾ —ಪ್ರತಿವಾದಿರು

1) ದುಗ್ಗಮ್ಮ ಅಚ್ಚಕ್ಕ ಹೆಂಗ್ಸಿನ ಮಗಳು. 5) ದೇವಕಿ ಶೆಡ್ತಿ, 6) ಸರಸ್ವತಿ ರೈತಿ, 8) ಲಕ್ಷ್ಮಿ ಹೆಗ್ಗಡ್ತಿ, 9) ಸೀತಾರಾಮ ಶೆಟ್ಟಿ, 1ನೇ ದುಗ್ಗಮ್ಮ ಹೆಂಗ್ಸಿನ ಮಕ್ಕಳು (1, 5, 6, 8 ಮತ್ತು 9ನೆ ಪ್ರತಿವಾದಿರು)

ಎಲ್ಲರೂ ಮಂಗ್ಳೂರು ತಾಲೂಕಿನ ಕೊಡಿಯಾಲ ಬೈಲು ಗ್ರಾಮದ ಹಿಂತರ ಓಣಿಯಲ್ಲಿ ವಾಸಿಸುವವರು—ಇವರಿಗೆ

ವಾದಿರು ನಿಮ್ಮ ವಗೈರೆರ ಮೇಲೆ ಮಾಡಿದ ಸದ್ರಿ ವ್ಯಾಜ್ಯವನ್ನು ಅಕ್ಟೋಬರ ತಿಂಗಳ ತಾ. 16ಕ್ಕೆ ತನಿಖೆಗೆ ಇಟ್ಟಿರುವುದರಿಂದ ಸದ್ರಿ ವ್ಯಾಜ್ಯಕ್ಕೆ ನೀವು ಸದ್ರಿ ಕೋರ್ಟಿನಲ್ಲಿ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ವ್ಯಾಜ್ಯವು ನಿರ್ಧರಿಸಲಾಗುವುದು ಎಂತ ಕೋರ್ಟ್ ಹುಕುಂ ಪ್ರಕಾರ ನಿಮಗೆ ತಿಳುಹಿಸಲಾಗಿದೆ.

Sd/– ಕೆ. ಸೂರ್ಯನಾರಾಯಣ ಅಡಿಗ.
ವಾದಿ ಕಡೆ ಎಡ್ವಕೇಟ್.
ಮಂಗ್ಳೂರು 22-9-1952

ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ತೆರೆಯಬೇಕಾದುದೇಕೆ?

ಬೇಂಕಿನಲ್ಲಿ ನಿಮ್ಮ ಲೆಕ್ಕವೊಂದು ತೆರೆಯಲ್ಪಟ್ಟಲ್ಲಿ ಅದು ನಿಮ್ಮಲ್ಲಿ ಬ್ಯಾಂಕಿಂಗ್ ವ್ಯವಹಾರದ ಪದ್ಧತಿಯನ್ನುಂಟುಮಾಡುವುದು; ಅನಾವಶ್ಯಕವಾಗಿ ಹೋಗುವ ಅತ್ಯಲ್ಪ ಹಣವನ್ನಾದರೂ ಬ್ಯಾಂಕಿನಲ್ಲಿಡಬೇಕೆಂಬ ಕುತೂಹಲವು ನಿಮ್ಮಲ್ಲುಂಟಾಗುವುದು. ನಿಮ್ಮ ಬ್ಯಾಂಕಿನಲ್ಲಿ ಇಂದೇ ಸೇವಿಂಗ್ಸ್ ಬ್ಯಾಂಕ್ ಲೆಕ್ಕವನ್ನು ತೆರೆದು ಅದರಲ್ಲಿ ಎಷ್ಟೇ ಸಣ್ಣ ಹಣವನ್ನಾದರೂ ಕ್ರಮಪ್ರಕಾರ ಶೇಖರಿಸುತ್ತ ಬಂದರೆ ಅದು ಬೇಗನೆ ದೊಡ್ಡ ಮೊತ್ತವಾಗಿ ನೀವು ವಿಶೇಷವಾಗಿ ಇಚ್ಛಿಸುವ ನಿಮ್ಮ ಕುಟುಂಬದ ಬಗ್ಗೆ ಗೃಹನಿರ್ಮಾಣ, ಮಕ್ಕಳ ವಿದ್ಯಾಭ್ಯಾಸ ಇತ್ಯಾದಿ ಕೆಲಸಗಳಿಗೆ ಒದಗುವುದು.

ಆದುದರಿಂದ ಇಂದೇ ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ತೆರೆಯಿರಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.
ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ.
The Canara Industrial &
Banking Syndicate Limited.
Estd: 1925 H. O: UDIPI.

ವಿವಿಧ ಪಾತ್ರೆಗಳು

ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳು [illegible] ಚಿಲ್ಲರೆಯಾಗಿಯೂ [illegible].
ಕಲ್ಯಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಬೆಂಗಾಡಿನ ಬದಲು ಸುವರ್ಣ ಭೂಮಿ

ಜವಾಯೀ ನದೀ ಯೋಜನೆಯ ಪರಿಣಾಮ

— ೧ —

ಇಂದಿಗೆ ಐವತ್ತು ವರ್ಷಗಳಿಗೆ ಹಿಂದೆ ರಾಜಪುತಾನದ ಮರುಭೂಮಿಯನ್ನು ಸಸ್ಯ ಶ್ಯಾಮಲವಾಗಿಸ ಬೇಕೆಂದು ಒಂದು ನದೀಯೋಜನೆಯನ್ನು ಮಾಡಿದ್ದರು. ಆದರೆ ಅಂದು ಕೇವಲ ಕಲ್ಪನಾ ಮಾತ್ರವಾಗಿದ್ದ ಜವಾಯೀ ಯೋಜನೆ ಇದೀಗ ಹಲವಾರು ಸಾವಿರ ಎಕ್ರೆ ಭೂಮಿಯನ್ನು ಫಲವತ್ತಾದ ಪ್ರದೇಶವಾಗಿ ಪರಿವರ್ತಿಸಿದೆ. ಡಿಲ್ಲಿಯಿಂದ ಅಹಮದಾಬಾದಿಗೆ ಹೋಗುವ ಪಶ್ಚಿಮ ರೇಲ್ವೆಯ ಅಜಮೀರ ಮತ್ತು ಅಬುಗಳ ನಡುವಿರುವ ಎರಿನಾಪುರಾ ರೋಡ್ ಸ್ಟೇಶನಿಗೆ ಸಮೀಪ ಈ ಅಣೆಕಟ್ಟು ಇದೆ. ರಾಜಪುತಾನದ ಜೋಧಪುರ ಡಿವಿಜನಿನಲ್ಲಿರುವ ಅರಾವಳೀ ಪರ್ವತ ಪ್ರದೇಶದಿಂದ ಜವಾಯೀ ಎಂಬ ನದಿಯು ಹೊರಡುತ್ತದೆ. ಅದರಲ್ಲಿ ವರ್ಷದ ಹನ್ನೆರಡೂ ತಿಂಗಳು ನೀರಿಲ್ಲವಾದರೂ, ಇರುವ ನೀರನ್ನು ಉಚಿತ ರೀತಿಯಿಂದ ಉಪಯೋಗಿಸಿದರೆ—ಮರುಭೂಮಿ ಸುವರ್ಣ ಭೂಮಿ ಎನಿಸುವುದರಲ್ಲಿ ಸಂದೇಹವಿಲ್ಲ. ಇದಕ್ಕೆ (ಅಣೆಕಟ್ಟನ್ನು ಕಟ್ಟಿದ್ದಾರೆ; ಅಣೆಕಟ್ಟಿನ ನಾಲ್ಕು ಸುತ್ತು ಮಾರ್ಗಗಳನ್ನು ಮಾಡಿದ್ದಾರೆ. ಹೀಗೆ ರೇಲ್ವೆ ಹಾಗೂ ಮಾರ್ಗಗಳಿಂದ ಅಲ್ಲಿಗೆ ಹೋಗಿ ಇಳಿಯಲು ಕಷ್ಟವೇನಿಲ್ಲ. ಅಣೆಕಟ್ಟಿನ ಉತ್ತರ ಗೋಡೆಯ ಬಳಿ ಒಂದು ಪ್ರಯಾಣಿಕರ ಬಂಗಲೆ ಇದೆ. ಅಧಿಕಾರಿ ವರ್ಗ ಹಾಗೂ ಸಂದರ್ಶಕರು ಅಲ್ಲಿ ಉಳಿದುಕೊಳ್ಳುತ್ತಾರೆ. ಸುತ್ತಲೂ ಒಂದು ನಗರದಂತೆಯೇ ಏರ್ಪಟ್ಟಿದೆ; ಇಲ್ಲಿರುವವರು ಅಣೆಕಟ್ಟಿಗಾಗಿ ಕೆಲಸಮಾಡುವ ಕೂಲಿಕಾರರು.

— ೨ —

೧೯೦೦–೧೯೦೩ರ ಸುಮಾರಿಗೆ ಆಗಿನ ಜೋಧಪುರ ಸಂಸ್ಥಾನದ ಮುಖ್ಯ ಇಂಜೀನಿಯರರಾಗಿದ್ದ ಮಿ. ಎಂ. ಸ್ಮಿಥ್‌ರಿಗೆ ಜವಾಯೀ ನದಿಗೆ ಅಣೆಕಟ್ಟನ್ನು ಕಟ್ಟುವ ಯೋಚನೆ ಹೊಳೆಯಿತು. ಆದರೆ ಅನೇಕ ಕಾರಣಗಳಿಂದಾಗಿ ಅವರಿಗೆ ಈ ಕಾರ್ಯವನ್ನು ಕೈಗೊಳ್ಳಲಾಗಲಿಲ್ಲ. ಈ ನಂತರ ೪೦ ವರ್ಷಗಳವರೆಗೆ ಯಾರೊಬ್ಬರ ಲಕ್ಷ್ಯವೂ ಈ ಯೋಜನೆಯತ್ತ ಹರಿಯಲೇ ಇಲ್ಲ. ೧೯೪೪ರಲ್ಲಿ ಜೋಧಪುರದ ಆಗಿನ ಮುಖ್ಯ ಇಂಜೀನಿಯರಾದ ಎಂ. ಎಫ್. ಎಫ್. ಫರ್ಗಸನರು ಈ ಯೋಜನೆಯನ್ನು ಮರಳಿ ಪರಿಶೀಲಿಸಿದರು. ೧೯೪೭ರಲ್ಲಿ ಜೋಧಪುರ ಸರಕಾರವು ಈ ಯೋಜನೆಗೆ ತನ್ನ ಸಮ್ಮತಿಯನ್ನು ಕೊಟ್ಟುದರಿಂದ, ಒಡನೆಯೇ ಕಾರ್ಯವನ್ನು ತೊಡಗಿದರು. ಈ ನಡುವೆ ಭಾರತವು ಸ್ವಾತಂತ್ರ್ಯವನ್ನು ಪಡೆಯಿತು. ದೇಶೀಯ ಸಂಸ್ಥಾನಗಳೆಲ್ಲ ಒಂದಾಗಿ ಸೇರಿ, ರಾಜಪುತಾನವೆಂಬ ಹೊಸ ರಾಜ್ಯದ ಉದಯವಾಯಿತು. ಆ ಬಳಿಕ ನೀರಾವರಿ ವಿಭಾಗದ ಮುಖ್ಯ ಇಂಜೀನಿಯರಾದ ಶ್ರೀ. ಎಂ. ಡೀ. ಮಿತ್ತಲರ ನೇತೃತ್ವದಲ್ಲಿ ಜವಾಯೀ ಯೋಜನೆಯು ಪ್ರಗತಿಯನ್ನು ಹೊಂದಿತು. ಕಳೆದ ವರ್ಷ ಮುಖ್ಯ ಅಣೆಕಟ್ಟಿನ ಬಗ್ಗೆ ಆರು ತಿಂಗಳ ವರೆಗೆ ದಿನಕ್ಕೆ ಎರಡು ಸರ್ತಿಯಂತೆ ೧೬ ಗಂಟೆ ಕಾಲ ಕೆಲಸ ನಡೆಯಿತು. ಈಗಲೂ ಉತ್ತರ ಭಾಗದಲ್ಲಿ ಹಗಲೂ ರಾತ್ರಿ ಕೆಲಸ ನಡೆಯುತ್ತಿದೆ; ಕಾಲುವೆಗಳನ್ನು ತೋಡುವುದೂ ನಡೆದಿದೆ. ೧೯೫೧ನೇ ನವಂಬರ ೨೭ನೇ ದಿನಾಂಕ ಆಗ ರಾಜಪುತಾನದ ಮುಖ್ಯಮಂತ್ರಿಯಾಗಿದ್ದ ಶ್ರೀ ಜಯನಾರಾಯಣ ವ್ಯಾಸರ ಹಸ್ತದಿಂದ ಮೊದಲನೇ ಕಾಲುವೆಯ ಉದ್ಘಾಟನಾ ಸಮಾರಂಭ ನೆರವೇರಿತು. ಇದರ ಪರಿಣಾಮವಾಗಿ ನಾಲ್ಕು ಸಾವಿರ ಬಿಘೆಯಷ್ಟು ಜಮೀನು ನೀರಿನಿಂದ ಸಮೃದ್ಧಿಗೊಂಡು, ಇಪ್ಪತ್ತು ಸಾವಿರ ಮಣ ಆಹಾರ ಧಾನ್ಯದ ಉತ್ಪತ್ತಿಯಾಯಿತು.

— ೩ —

ಕೇಂದ್ರಸರಕಾರದ ಜಲ ವಿದ್ಯುತ್ತಿನ ಆಯೋಗದವರು ಈ ಯೋಜನೆಯನ್ನು ಕೊನೆಯದಾಗಿ ಪರಿಶೀಲಿಸಿದ್ದಾರೆ; ಅವರ ಹೇಳಿಕೆಯಂತೆ ಈ ಯೋಜನೆಗೆ ಪೂರ್ಣವಾಗುವುದಕ್ಕೆ ಸುಮಾರು ಮೂರುಕೋಟಿ ಇಪ್ಪತ್ತುಮೂರು ಲಕ್ಷ ರುಪಾಯಿ ವೆಚ್ಚ ಬರುವುದು. ಇದರಲ್ಲಿ ಜಲ ವಿದ್ಯುತ್ತು ವಿಕಾಸಯೋಜನೆಯನ್ನು ಸೇರಿಸಿಲ್ಲ. ಹಣದ ಅನುಕೂಲತೆ ನೋಡಿಕೊಂಡು ಮುಂದೆ ಬೇಕಾದಾಗ ಅದನ್ನು ಕೈಗೊಳ್ಳಲಾಗುವುದು. ಈಗಾಗಲೇ ಒಂದೂವರೆ ಕೋಟಿ ರುಪಾಯಿಯಷ್ಟು ವೆಚ್ಚವನ್ನು ಈ ಯೋಜನೆಗಾಗಿ ಮಾಡಲಾಗಿದೆ. ಉಳಿದ ಸುಮಾರು ಎರಡುಕೋಟಿ ರುಪಾಯಿ ಹಣ ಸರಾಗವಾಗಿ ದೊರೆತರೆ ೧೯೫೪ನೇ ಇಸವಿಯೊಳಗೆ ಯೋಜನೆ ಪೂರ್ಣವಾದೀತೆಂದು ಅಂದಾಜು. ಈಗ ದಿನಾಲೂ ಎರಡೂವರೆ ಸಾವಿರ ಕೂಲಿಕಾರರು ಈ ಅಣೆಕಟ್ಟಿನ ಕೆಲಸಕ್ಕಾಗಿ ಬೆವರಿಳಿಸುತ್ತಿರುವರು. ಪ್ರತಿಫಲವಾಗಿ ಅವರಿಗೆ ದೊರಕುವ ಕೂಲಿ ದಿನಕ್ಕೆ ಎಂಟಾಣೆಯಿಂದ ಹನ್ನೆರಡಾಣೆಯಷ್ಟು ಮಾತ್ರ.

— ೪ —

ಜವಾಯೀ ನದಿಯ ನೀರನ್ನು ಹೆಚ್ಚು ಹೆಚ್ಚು ನೀರಾವರಿಗೆ ಉಪಯೋಗಿಸಲಾಗುವಂತೆ ಪುಟ್ಟ ಬೆಟ್ಟಗಳ ನಡುವೆ ಮೂರು ಕಡೆ ಅಣೆಕಟ್ಟನ್ನು ಕಟ್ಟುತ್ತಿದ್ದಾರೆ. ಎರಡು ಕಡೆ ಮಣ್ಣಿನ ವಿಶಾಲ ಗೋಡೆಯನ್ನು ಕಟ್ಟುತ್ತಿದ್ದಾರೆ. ಮುಖ್ಯ ಅಣೆಕಟ್ಟಿನ ಎತ್ತರ 2020 ಅಡಿಯಷ್ಟಿದ್ದು ಅದರಲ್ಲಿ ಕಲ್ಲು ಹಾಗೂ ಸುಣ್ಣದ ಅಂಶದಿಂದ ಕೂಡಿದ ಗಟ್ಟಿಮುಟ್ಟಾದ ಅಣೆಕಟ್ಟು ೩೮೮ ಅಡಿಯಷ್ಟಿದೆ. ನದಿಯ ತಳದಿಂದ ಮೇಲೆ ಅತ್ಯಧಿಕ ಎತ್ತರ ೧೧೨ ಅಡಿಯಷ್ಟಿದ್ದರೆ, ಭೂ ಗರ್ಭದಲ್ಲಿ ಹೆಚ್ಚೆಂದರೆ ೪೫ ಅಡಿಯಷ್ಟು ಕೆಳಗೆ ಅಣೆಕಟ್ಟಿನ ಗೋಡೆ ಇಳಿದಿದೆ. ಉತ್ತರ ಭಾಗದಿಂದ ಪ್ರಮುಖ ಕಾಲುವೆಯು ಹೊರಡಿದ್ದು ಅದು ೧೪ ಮೈಲಿನಷ್ಟು ದೂರದ ವರೆಗೆ ಕೇವಲ ಕಾಂಕ್ರೀಟಿನಿಂದಲೇ ತಯಾರಾಗಿದೆ, ಇದೇ ಕಾಲುವೆಯನ್ನು ಮುಂದೆ ಬೆಳೆಸಿಕೊಂಡು ಒಟ್ಟಿಗೆ ೮೦ ಮೈಲು ಉದ್ದದ ನಾಲ್ಕು ಶಾಖೆಗಳಾಗಿ ವಿಂಗಡಿಸುತ್ತಾರೆ. ಇದರಿಂದ ೩೦,೦೦೦ರು ಎಕರೆ ಭೂಮಿ ನೀರಿನಿಂದ ಫಲವತ್ತಾಗಿ ಮಾರ್ಪಡುವುದು. ಮುಖ್ಯ ಅಣೆಕಟ್ಟಿನ ನೀರೊಂದರಿಂದಲೇ ೩೦ರಿಂದ ೪೦ ಸಾವಿರ ಬಿಘೆಯಷ್ಟು ಜಮೀನಿಗೆ ಲಾಭವಿದೆ ಎಂದು ಅಂದಾಜು ಮಾಡಿದ್ದಾರೆ.

— ೫ —

ರಾಜಪುತಾನದಲ್ಲಿರುವುದು ಮೂ
ಮೂರು ದೊಡ್ಡ ನೀರಾವರಿ ಯೋಜ
ಗಳು: (೧) ಭಾಕರಾ–ನಾಂಗಲ (
ಚಂಬಲ ಮತ್ತು (೩) ಜವಾ
ಮೊದಲಿನವೆರಡರ ಸಂಬಂಧ ರಾಜ
ತಾನದೊಡನೆ ಮಾತ್ರವಿರದೆ, ಬೇ
ರಾಜ್ಯಗಳೂ ಅದರ ನಿರ್ಮಾಣದ
ಪಾಲುಗಾರರಿರುವುದರಿಂದ ರಾಜಪು
ನಕ್ಕೆ ಮಾತ್ರ ಯೋಜನೆಯ ಪೂ
ಪ್ರಯೋಜನ ದೊರೆಯುವಂತಿಲ್ಲ.
ವಾಯೀ ನದೀ ಯೋಜನೆಯು ಕೇವ
ರಾಜಪುತಾನಕ್ಕೆ ಮೀಸಲಾಗಿರುವುದರಿ
ದ, ಮರುಭೂಮಿಯನ್ನದು ಸಮೃದ್ಧಿ
ಪ್ರದೇಶವಾಗಿಸುವುದು ನಿಶ್ಚಯ. ಇದ
ಜೊತೆಗೆ ಭಾಕರಾ–ನಾಂಗಲ್, ಚಂಬ
ನದೀ ಯೋಜನೆಗಳ ಪಾಲೂ ದೊರೆ
ಬೆಂಗಾಡು ರಾಜಪುತಾನದ ಭವಿತವ್ಯ
ಬದಲಾಗುವುದು.

ಆದರೂ ಹಣಾಭಾವವೊಂದಿದೆ ಜಾ
–ಯೋಜನೆ ವಿಳಂಬವಾಗಿ ಪೂರ್ತಿಗೆ
ಳ್ಳುತ್ತಿರುವುದನ್ನು ನೆನೆದು ಭಾರತ ಸ
ಕಾರದ ಸಹಾಯ ಯಾಚನೆಯನ್ನು ಮ
ಡಲಾಗಿದೆ. ಈ ಸಹಾಯ ದೊರೆಯದಿ
ರೆ, ಯೋಜನೆ ನಿಶ್ಚಿತ ಅವಧಿಯೊ
ಪೂರ್ತಿಸಲ್ಪಡಲಿಕ್ಕಿಲ್ಲ ಎಂಬ ಭಯವಿ
ರಾಜಪುತಾನದ ಜನತೆ ಈ ಯೋಜನೆ
ಬಗ್ಗೆ ಆತುರದೃಷ್ಟಿಯಿಂದ ನೋಡುತ್ತಿ
ಸುಖಸಮೃದ್ಧಿಯ ಬಯಕೆಯಿಂದ ಅ
ಜವಾಯೀ ಯೋಜನೆಯನ್ನು ಈಕ್ಷಿ
ಕ್ಷಿದೆ ಮರುಭೂಮಿಯನ್ನು ಸುವ
ಭೂಮಿಯಾಗಿಸುವ ಜಾದೂ ಈ ಯೋ
ನೆಗಿರುವುದರಿಂದಲೇ ಭಾರತದ ಉ
ನೂರಾರು ನದೀ ಯೋಜನೆಗಳಿಗಿಂತ
ನದೀ ಯೋಜನೆಗೆ ಹೆಚ್ಚಿನ ಮಹ
ಹಾಗೂ ಪ್ರಾಶಸ್ತ್ಯ ಎಂದೆನ್ನಬಹುದು.

ಶಿರ್ವಾ ಪಂಚಾಯತ್ ಬೋರ್ಡಿನಲ್ಲಿ
ಸಿವಿಲ್ ವ್ಯಾಜ್ಯ ನಂಬ್ರ 17/52
ಪೇದ್ರು ಮಿನೇಜ — ವಾದಿ
ಸುಬ್ಬಣ್ಣ ನ್ಯಾಕ — ಪ್ರತಿವಾದಿ

ಮೇಲ್ಕಂಡ ಪ್ರತಿವಾದಿ ಸುಬ್ಬಣ್ಣ ನ್ಯಾಕ ರಾಮಚಂದ್ರ ನ್ಯಾಕರ ಮಗ ಶಿರ್ವಾಗ್ರಾಮದ ಸೊರ್ಪ ಇವರಿಗೆ ತಿಳಿಸುವದೇನಂದರೆ.

ವಾದಿಯು ನಿಮ್ಮ ಮೇಲೆ ದಾಕ್ಲು ಮಾಡಿದ ಮೇಲಿನ ದಾವೆಯು ತಾ 20-10-52ನೇ ಸೋಮವಾರ ಹಗಲು ಗಂಟೆ 3ಕ್ಕೆ ತನಿಖೆಗೆ ಇಡಲಾಗಿಯದೆ. ಆ ದಿನ ನೀವು ಕೋರ್ಟಿಗೆ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮನ್ನು ಎಕ್ಸ್‌ಪಾರ್ಟಿ ಮಾಡಿ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದು.

S Annaya Hegde
President, Panchayat
Board Shirva, S. K.
ಶಿರ್ವಾ 3—10—1952.

ZANDU Mahayogaraja Guggula.
ಝಾಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ. 1 ತೊಲೆಗೆ ರೂ 3- ಮಾತ್ರ.

ದೊರೆಯುವ ಸ್ಥಳಗಳು:
1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್. ಕೆಮಿಸ್ಟ್ಸ ಎಂಡ್ ಡ್ರಗ್ಗಿಸ್ಟ್ಸ, ಉಡುಪಿ.
2 ಶ್ರೀ ವಿ ವಿ ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್. ಎನ್. ಶರ್ಮಾ, ಹಜೂರು ರಸ್ತೆ ಮಂಗಳೂರು.
ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರತಿನಿಧಿಯಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರಿ ಶರತ್ತು ವಗೈರೆಗಳಿಗೆ ಬರೆಯಿರಿ.

DAMODAR & CO.,
Nainiappa Naicken Street, Park Town–**MADRAS** 3.

ನಿಮಗೆ
ಇಂಗ್ಲಿಷ್ ಕಲಿಯಬೇಕೆ
ಹಾಗಿದ್ದರೆ

ಕೊರಡ್ಕೇ
ಶ್ರೀನಿವಾಸ
ರಾ
ವಿರಚಿತ

ಸುಲಭದಲ್ಲಿ ಇಂಗ್ಲಿಷ್
English Made Easy
ಆಂಗ್ಲ ಸ್ವಯಂಬೋಧಿನಿ ಪುಸ್ತಕ
ಅತ್ಯುಪಯುಕ್ತವಾದುದು.
ಬೆಲೆ ರೂ. 2-0-0.
ವಿ. ಪಿ. ದ್ವಾರ ರೂ. 2-8-0.
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

ಭಾರತದ ಹಳ್ಳಿಗಳ ಅಭಿವೃದ್ಧಿ

ಸಮಾಜ ವಿಕಾಸ ಯೋಜನೆಯ ಉದ್ಘಾಟನೆ

ಮಹಾತ್ಮಾಜೀಯವರ ಜಯಂತಿ ಶುಭ ಮುಹೂರ್ತದಲ್ಲಿಲ್ಲಾ ಹಳ್ಳಿಗಳ ಅಭಿವೃದ್ಧಿಗಾಗಿ ಕೈಕೊಂಡ ಸಮಾಜ ವಿಕಾಸ ಯೋಜನೆಗಳನ್ನು ದಿನಾಂಕ ೨ನೆಂದು ನವದಿಲ್ಲಿಯಲ್ಲಿ ಪ್ರಾರಂಭಿಸಲಾಯಿತು. ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ಆರಿಸಲ್ಪಟ್ಟ ಹಳ್ಳಿಗಳನ್ನೊಳಗೊಂಡ ಸಮಾಜ ವಿಕಾಸ ಯೋಜನೆ ಕೇಂದ್ರಗಳನ್ನು ಈ ದಿನವೇ ಪ್ರಾರಂಭಿಸಲಾಯಿತು. ಈ ಯೋಜನೆಗಳ ಒಟ್ಟು ಪ್ರದೇಶವು 26950 ಚದರ ಮೈಲುಗಳಿದ್ದು 18465 ಹಳ್ಳಿಗಳನ್ನೊಳಗೊಂಡಿರುವವು ಒಂದು ಕೋಟಿ ಐವತ್ತು ಲಕ್ಷದ ತೊಂಭತ್ತು ಸಾವಿರ ಜನರಿಗೆ ಈ ಯೋಜನೆಗಳ ಲಾಭ ಸಿಕ್ಕುವುದು. ಈ ಯೋಜನೆಗಳಿಗೆ ಮೂವತ್ತೆಂಟು ಕೋಟಿ ರೂಪಾಯಿಗಳ ವೆಚ್ಚ ತಗಲುವುದು.

ಗ್ರಾಮಾಭಿವೃದ್ಧಿಯೇ ಈ ಯೋಜನೆಗಳ ಮುಖ್ಯ ಉದ್ದೇಶವಾಗಿದ್ದು ಪಡಲು ಭೂಮಿಯ ಸಾಗುವಳಿ, ನೀರಾವರಿ ಸೌಕರ್ಯ, ಉತ್ತಮ ಬೀಜಗಳು, ಆಧುನಿಕ ವ್ಯವಸಾಯ ಉಪಕರಣಗಳು, ಪೇಟಿ ಹಾಗೂ ಸಾಲದ ಸೌಕರ್ಯ, ಪಶುಸಂಪತ್ತಿ, ಮೀನುಗಾರಿಕೆ ಅಭಿವೃದ್ಧಿ ಮೊದಲಾದ ಕಾರ್ಯಗಳನ್ನು ಈ ಯೋಜನೆಗನುಸಾರವಾಗಿ ಕೈಕೊಳ್ಳಲಾಗುವುದು.

'ಸಮಾಜ ವಿಕಾಸ ಯೋಜನೆಗಳ ಕಾರ್ಯಾಚರಣೆಯನ್ನು ಯಶಸ್ವಿಗೊಳಿಸಲು ಜನತೆಯು ತಮ್ಮ ಪಾಲಿನ ಕೆಲಸವನ್ನು ಮಾಡಬೇಕು' ಎಂದು ರಾಷ್ಟ್ರಪತಿ ಡಾ|| ರಾಜೇಂದ್ರ ಪ್ರಸಾದರು ಆಕಾಶವಾಣಿಯಲ್ಲಿ ಭಾಷಣ ಮಾಡಿ ಈ ಎಲ್ಲ ಕೇಂದ್ರಗಳ ಉದ್ಘಾಟನೆಯನ್ನು ನೆರವೇರಿಸಿದರು. ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ ನೆಹರೂರವರು ದಿಲ್ಲಿಯಿಂದ ಹನ್ನೆರಡು ಮೈಲು ದೂರದಲ್ಲಿರುವ ಅಲಿಪುರದಲ್ಲಿ ಸಮಾಜ ವಿಕಾಸ ಯೋಜನೆಯನ್ನು ಉದ್ಘಾಟಿಸುತ್ತ 'ಸಮಾಜ ವಿಕಾಸ ಯೋಜನೆಗಳ ಫಲವಾಗಿ ಭಾರತದಲ್ಲಿ ಕ್ರಾಂತಿಯಾಗಲಿದೆ. ಬಂದೂಕಿ ಮತ್ತು ರಕ್ತ ಪಾತಗಳ ಮೂಲಕ ಸಾಧಿಸಿದ ಕ್ರಾಂತಿಯಂತೆ ಇದಾಗಿರದೆ ಬಹುತನದ ಸನ್ಮಾರ್ಗಲವಕಾಗಿ ನಡೆಸಿದ ನಿರಂತರ ಪ್ರಯತ್ನಗಳ ಮೂಲಕ ಸಾಧಿಸಿದ ಕ್ರಾಂತಿಯಾಗುವುದು' ಎಂದರು. ಪಂಡಿತ ನೆಹರೂರವರು ಕೈಯಲ್ಲಿ ಗುದ್ದಲಿಯನ್ನು ಹಿಡಿದುಕೊಂಡು ನಾಲ್ಕು ಬುಟ್ಟಿಗಳಷ್ಟು ಮಣ್ಣನ್ನು ಅಗೆದರು. ಈ ಸಮಾರಂಭಕ್ಕೆ ಒಂದು ಸಾವಿರ ಹಳ್ಳಿಯ ಹೆಮ್ಮಕ್ಕಳು ಬಂದಿದ್ದರು

ಭೂದಾನ ಯಜ್ಞಕ್ಕೆ ಸಹಾಯ ನೀಡಿರಿ.

ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳು ಒಂದು ಪರಿಪತ್ರವನ್ನು ಹೊರಡಿಸಿ ಆಚಾರ್ಯ ವಿನೋಬಾ ಭಾವೆಯವರು ಪ್ರಾರಂಭಿಸಿರುವ ಭೂದಾನ ಯಜ್ಞದಲ್ಲಿ ಸಕ್ರಿಯವಾಗಿ ಸಹಕರಿಸಬೇಕೆಂದು ಎಲ್ಲಾ ಪ್ರದೇಶ ಕಾಂಗ್ರೆಸ್ ಕಮಿಟಿಗಳಿಗೆ ವಿನಂತಿಮಾಡಿಕೊಂಡಿದ್ದಾರೆ.

ತುಟ್ಟಿಭತ್ತೆ ಕುರಿತು ಗಾಡಗೀಳ ಸಮಿತಿ ಸೂಚನೆ

ಕೇಂದ್ರಸರಕಾರದ ನೌಕರರಿಗೆ ಈಗ ಕೊಡಲಾಗುತ್ತಿರುವ ತುಟ್ಟಿಭತ್ತೆಯಲ್ಲಿ ಸೇಕಡಾ 50ರಷ್ಟು ಸಂಬಳದಲ್ಲಿ ಲೀನಗೊಳಿಸಬೇಕೆಂದು ಗಾಡಗೀಳ ಸಮಿತಿಯು ಶಿಫಾರಸು ಮಾಡಿರುತ್ತದೆ. ತಿಂಗಳಿಗೆ ರೂಪಾಯಿ ಏಳುನೂರ ಐವತ್ತು ಅಥವಾ ಅದಕ್ಕಿಂತ ಕಡಿಮೆ ಸಂಬಳವಿದ್ದ ಕೇಂದ್ರದ ನೌಕರರಿಗೆ ಮಾತ್ರ ಈ ಶಿಫಾರಸನ್ನು ಅನ್ವಯಿಸಬೇಕೆಂದು ಸಮಿತಿಯು ಸೂಚಿಸಿರುವುದು. ಸರಕಾರವು ಈ ಸೂಚನೆಗಳನ್ನು ಅಂಗೀಕರಿಸಿದರೆ ಪ್ರತಿವರುಷ ಆರುಕೋಟಿ ರುಪಾಯಿ ಹೆಚ್ಚು ವೆಚ್ಚವಾಗುವುದು. ಕೇಂದ್ರದ ಹದಿನೈದುಲಕ್ಷ ನೌಕರರಿಗೆ ಇದರ ಲಾಭ ದೊರೆಯುವುದು

ಮದ್ರಾಸಿನಲ್ಲಿ ಪಂಡಿತ ನೆಹರುಗಳು

ಪ್ರಧಾನಮಂತ್ರಿ ಪಂಡಿತ ನೆಹರೂರವರು ತಾ 4ರಲ್ಲು ಮಧ್ಯಾಹ್ನ ಮದ್ರಾಸಿಗೆ ಆಗಮಿಸಿದರು. ಮದ್ರಾಸಿನ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರ್ಯ, ಡಾ|| ಪಿ. ಸುಬ್ಬರಾಯನ್ ಮೊದಲಾದವರು ಸ್ವಾಗತಿಸಿದರು.

ಪಂಡಿತ ನೆಹರೂರವರು ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಡನೆ ಮಾತನಾಡುತ್ತಾ ತಾವು ಬರಗಾಲ ಪ್ರದೇಶವಾದ ರಾಯಲಸೀಮೆಯ ಮೇಲಿಂದ ವಿಮಾನದಲ್ಲಿ ಬಂದಿದ್ದರೂ ಬರಗಾಲ ಪರಿಸ್ಥಿತಿಯನ್ನು ನೋಡಲಿಕ್ಕಾಗಲಿಲ್ಲವೆಂದರು.

ಸುದ್ದಿಗಾರರ ಸಭೆಯಲ್ಲಿ ಪಂಡಿತ ನೆಹರೂರವರು ಮಾತನಾಡುತ್ತಾ, ಪಾಕಿಸ್ತಾನವು ಕಾಶ್ಮೀರದ ಮೇಲೆ ಅಧಿಕೃತ ದಾಳಿಮಾಡಲಿ ಅಥವಾ ಗುಡ್ಡಗಾಡು ಜನರು ಅನಧಿಕೃತ ಹಲ್ಲೆಯನ್ನಾರಂಭಿಸಲಿ, ಅದರಲ್ಲಿ ಸರಕಾರವು ಭೇದವೆಣಿಸುವುದಿಲ್ಲ ಅಂಥ ಎಲ್ಲಾ ದಾಳಿಗಳು ಪಾಕಿಸ್ತಾನದ ಸಶಸ್ತ್ರ ಆಕ್ರಮಣವೆಂದು ಭಾವಿಸಿ ಸರ್ವ ಶಕ್ತಿಯಿಂದ ಎದುರಿಸಲಾಗುವುದೆಂದು ಸ್ಪಷ್ಟ ಮಾತುಗಳಲ್ಲಿ ನುಡಿದರು.

ರಾಯಲ ಸೀಮೆ ಸಂದರ್ಶನ

ಪ್ರಧಾನಿ ನೆಹರೂರವರು ತಾ 5ರಂದು ಕ್ಷಾಮ ಪೀಡಿತ ರಾಯಲಸೀಮೆ ಮತ್ತು ಮೈಸೂರಿನ ಉತ್ತರ ಭಾಗಗಳ ಸಂದರ್ಶನವನ್ನು ಪ್ರಾರಂಭಿಸಿದರು. ಅವರು ತಮ್ಮ ಪ್ರವಾಸದಲ್ಲಿ ಮದ್ರಾಸು ಸರಕಾರವು ಕೈಕೊಂಡಿರುವ ಕ್ಷಾಮ ಪರಿಹಾರ ಕಾರ್ಯವನ್ನು ಅವಲೋಕಿಸುವರು. ಬಳ್ಳಾರಿ ಅನಂತಪುರ, ಕಡಪ್ಪಾ, ಚಿತ್ತೂರು, ಮತ್ತು ಕರ್ನೂಲುಗಳು ರಾಯಲ್ ಸೀಮೆಯ ಐದು ಜಿಲ್ಲೆಗಳು ಈ ಪೈಕಿ ಮಳೆಯ ಅಭಾವದಿಂದ ಚಿತ್ತೂರಿನ ಕ್ಷಾಮ ಪರಿಸ್ಥಿತಿಯೇ ಅತಿ ವಿಷಮವಾದುದೆಂದು ತಿಳಿಯಲಾಗುತ್ತದೆ. ಅನಂತಪುರ ಜಿಲ್ಲೆಯಲ್ಲಿ 800 ಗ್ರಾಮಗಳಿದ್ದು ಆ ಪೈಕಿ 600 ಗ್ರಾಮಗಳು ಬರಗಾಲಕ್ಕೆ ತುತ್ತಾಗಿವೆ. ಜೋಳ, ನೆಲಗಡಲೆ, ಹತ್ತಿ ಇತ್ಯಾದಿ ಬೆಳೆಗಳಿಗೆ ಮಳೆಯ ಅಭಾವದ ದುಷ್ಪರಿಣಾಮ ತುಂಬಾ ಆಗಿದೆ.

ಮದ್ರಾಸ ರಾಜ್ಯಕ್ಕೆ ದಂತ ವಿಜ್ಞಾನದ ಕಾಲೇಜು

ಮದ್ರಾಸು ರಾಜ್ಯದ ಆರೋಗ್ಯ ಮಂತ್ರಿ ಮಾನ್ಯ ಶ್ರೀ ಎ. ಬಿ ಸೆಟ್ಟಿಯವರು ತಾ. 5ರಂದು ಡೆಂಟಿಸ್ಟ್ ಆಕ್ಟಿಗನುಸಾರ ಡೆಂಟಲ್ ಕೌನ್ಸಿಲ್ ಎಂಬ ಸಂಸ್ಥೆಯ ಉದ್ಘಾಟನೆಯನ್ನು ಮಾಡುವ ಸಂದರ್ಭದಲ್ಲಿ ಮದ್ರಾಸ ರಾಜ್ಯಕ್ಕೊಂದು ದಂತ ವೈದ್ಯ ಶಿಕ್ಷಣದ ಕಲಾಶಾಲೆಯು ಸ್ಥಾಪಿಸಲಾಗುವುದೆಂದೂ 1953ನೇ ಜುಲಾಯಿ ತಿಂಗಳಲ್ಲಿ ಅದು ತೆರೆಯಲ್ಪಡುವುದೆಂದೂ ಹೇಳಿದರು. ಕಟ್ಟಡವು ಇನ್ನು ಎರಡು ತಿಂಗಳುಗಳೊಳಗೆ ಪೂರ್ತಿಯಾಗುವ ನಿರೀಕ್ಷೆಯಿದೆಯಾಗಿತ್ತು. ದೇಶದಲ್ಲಿಯೇ ದೊರೆಯುವ ಉಪಕರಣಗಳನ್ನು ಸಂಗ್ರಹಿಸಲಾಗಿದೆ ಎಂದೂ ಆದರೆ ಇಲ್ಲಿ ದೊರೆಯದಿದ್ದ ವಸ್ತುಗಳನ್ನು ಅಮೇರಿಕ್ಕೆ ಇಂಗ್ಲಂಡ್, ಜಪಾನುಗಳಿಂದ ತರಿಸಿಕೊಳ್ಳಲಾಗುವುದೆಂದೂ ಹೇಳಿದರು. ಜನರಲ್ಲಿ ದಂತಗಳನ್ನು ಚೆನ್ನಾಗಿಟ್ಟುಕೊಳ್ಳಬೇಕೆಂಬ ಇಚ್ಛೆಯು ಹುಟ್ಟಬೇಕೆಂದೂ, ಹಾಳು ಹಲ್ಲುಗಳಿರುವುದು ಫೇಶನಿಗೆ ವಿರೋಧ, ಹೊಲಸು ಬಾಯಿಯಿರುವುದು ಅಯೋಗ್ಯ ಎಂಬ ಜ್ಞಾನವನ್ನು ಜನರಲ್ಲಿ ಉಂಟುಮಾಡಬೇಕೆಂದು ದಂತವೈದ್ಯರಲ್ಲಿ ಮಾನ್ಯಮಂತ್ರಿಗಳು ವಿನಂತಿ ಮಾಡಿದರು.

ಬಿಹಾರ ಗವರ್ನರ್

ಶ್ರೀ ಆರ್ ಆರ್. ದಿವಾಕರರು ತಾವು ಗವರ್ನರ ಪದವಿ ವಹಿಸಿಕೊಂಡಂದಿನಿಂದ ತಮ್ಮ ಸಂಬಳದಲ್ಲಿ ಸೇಕಡಾ 15 ರಷ್ಟು ಆತ್ಮ ಪ್ರೇರಣೆಯಿಂದ ಕಡಿತಮಾಡಿಕೊಂಡಿರುತ್ತಾರೆ.

ಬೊಂಬಾಯಿ ರಾಜ್ಯದ ಅಧಿಕಾರಿಗಳ ಪರಿಷತ್ತು

ಸರಕಾರಿ ನೌಕರರು ಜನತಾ ಕಲ್ಯಾಣದ ಅಧಿಕಾರಿಗಳಾಗಬೇಕೆಂದು ಬೊಂಬಾಯಿಯ ಮುಖ್ಯಮಂತ್ರಿ ಶ್ರೀ ಮುರಾರಜಿ ದೇಸಾಯಿಯವರು ತಾ 4ರಲ್ಲು ಬೊಂಬಾಯಿಯಲ್ಲಿ ಪ್ರಾರಂಭವಾದ ಹಿರಿಯ ಸರಕಾರಿ ಅಧಿಕಾರಿಗಳ ಮೂರು ದಿವಸಗಳ ಪರಿಷತ್ತಿನಲ್ಲಿ ಅಧ್ಯಕ್ಷಸ್ಥಾನದಿಂದ ಭಾಷಣ ಮಾಡುತ್ತ ಹೇಳಿದರು.

ಶ್ರೀ ಮುರಾರಜಿಯವರ ಸಂದೇಶ

ಹರಿಜನ ದಿನಾಚರಣೆಯು ಅವರ ಮೇಲಿನ ಅಪಾತ್ರತೆಗಳನ್ನೆಲ್ಲ ಕೂಡಲೇ ದೂರಗೊಳಿಸುವುದು ಅಗತ್ಯವಿದೆ ಎಂಬ ನೆನಪನ್ನು ಸಂಪ್ರದಾಯವಾದಿಗಳಿಗೆ ಕೊಡತಕ್ಕದ್ದೆಂದು ಬೊಂಬಾಯಿ ಮುಖ್ಯಮಂತ್ರಿ ಶ್ರೀ ಮೊರಾರಜಿ ದೇಸಾಯಿಯವರು ಜನತೆಗಿತ್ತ ಸಂದೇಶದಲ್ಲಿ ಹೇಳಿದರು.

ಕಾಂಗ್ರೆಸ್ ಕಾರ್ಯನಿರ್ವಾಹಕ ಮಂಡಳಿಯ ಸದಸ್ಯರು

ಕಾಂಗ್ರೆಸ್ ಅಧ್ಯಕ್ಷ ಪಂಡಿತ ನೆಹರೂರವರು ಶ್ರೀಗಳಾದ ಲಾಲ ಬಹಾದೂರ್ ಶಾಸ್ತ್ರಿ, ರಫಿ ಅಹಮ್ಮದ ಕಿದ್ವಾಯಿ, ಶ್ರೀಮನ್ನಾರಾಯಣ ಅಗರವಾಲಾ ಮತ್ತು ಶ್ರೀಮತಿ ಪುಷ್ಪಾ ಬೆಹನ ಮೆಹತಾ ಇವರನ್ನು ಕಾಂಗ್ರೆಸ್ ಕಾರ್ಯನಿರ್ವಾಹಕ ಮಂಡಳಿಯ ಸದಸ್ಯರೆಂದು ನೇಮಕಮಾಡಿಕೊಂಡಿದ್ದಾರೆ.

ಇಂದೂರಲ್ಲಿ ನಡೆದ ಅಖಿಲಭಾರತ ಕಾಂಗ್ರೆಸ್ ಕಮಿಟಿಯಲ್ಲಿ ಪಾಸಾದ ಗೊತ್ತುವಳಿಯ ಮೇರೆಗೆ ಮಂತ್ರಿಗಳ ಹಾಗೂ ಇತರರ ನೇಮಕದಲ್ಲಿ ಇಂತಿಷ್ಟೇ ಇರಬೇಕೆಂಬ ನಿರ್ಬಂಧವಿಲ್ಲದ ಕಾರಣ ನೇಮಕಕ್ಕೆ ತೊಂದರೆಯೇನೂ ಇರುವುದಿಲ್ಲ. ಈಗ ಇರುವ 21 ಮಂದಿ ಸದಸ್ಯರ ಪೈಕಿ 8 ಮಂದಿ ಮಂತ್ರಿಗಳು.

ಪಾರ್ಲಿಮೆಂಟ್ ಸದಸ್ಯರಿಗೆ ಜೀವಾವಧಿ ಶಿಕ್ಷೆ

ಎರಡುನೂರು ಎಕರೆಗಳಿಗಿಂತ ಹೆಚ್ಚು ಭೂಮಿಯನ್ನು ಯಾರೂ ಇಟ್ಟುಕೊಳ್ಳಬಾರದೆಂಬ ಈಜಿಪ್ಟಿನ ಹೊಸ ಭೂಸುಧಾರಣೆಗಳನ್ನು ವಿರೋಧಿಸಿದ ತಪ್ಪಿಗಾಗಿ ಈಜಿಪ್ಟಿನ ಪಾರ್ಲಿಮೆಂಟಿನ ಹಿಂದಿನ ಸದಸ್ಯರೂ 1800 ಎಕರೆ ಭೂಮಿಯ ಮಾಲಕರೂ ಆದ 25 ವರ್ಷದ ಅಡ್ಲಿ ಲುಮ್ಲುಮ್ ಎಂಬವರಿಗೆ ಜೀವಾವಧಿ ಸಶ್ರಮ ಶಿಕ್ಷೆಯನ್ನು ವಿಧಿಸಿರುವರು

ಅಣುಬಾಂಬಿನ ಕುರಿತು ಶ್ರೀ ಭಾವೆಯವರ ಹೇಳಿಕೆ

ಪಾಟ್ನಾದಿಂದ ಹತ್ತೊಂಭತ್ತು ಮೈಲು ದೂರದ ಬಿಹಾರದಲ್ಲಿ ತಾ 4ರಲ್ಲು ಪ್ರಾರ್ಥನಾ ಸಭೆಯಲ್ಲಿ ಮಾತನಾಡುತ್ತಾ ಆಚಾರ್ಯ ವಿನೋಬಾ ಭಾವೆಯವರು 'ಇಂಗ್ಲಂಡು ಕೂಡ ಅಣು ಬಾಂಬನ್ನು ತಯಾರಿಸಿದೆ. ತಿಳಿದು ಜಗ ವಿಷಾದವಾಗಿದೆ' ಎಂದರು. ಭಾರತವು ಅಣುಬಾಂಬುಗಳಿಂದ ಸಿದ್ಧವಾಗಬೇಕೆ ಎಂದು ನಾವು ನಿಶ್ಚಯಿಸಿದರೆ ನಮ್ಮ ಮೂವತ್ತು ಕೋಟಿ ಜನರನ್ನು ಕೊಲ್ಲಬೇಕಾಗುವುದು. 'ಸೈನ್ಯ ದೇವ'ರನ್ನು ಸಂತೋಷಗೊಳಿಸುವ ಪ್ರದರ್ಶನಕ್ಕಾಗಿ ಕುರಿಗಳ ಹಾಗೆ ಮನುಷ್ಯರನ್ನೇ ಬಲಿಕೊಡಲು ನಾವು ತಯಾರಿದ್ದೇವೆಯೋ? ಇಲ್ಲವಾದರೆ ನಾವು ಸಾಮಾನ್ಯರೀತಿಯಲ್ಲೇ ಬಲಶಾಲಿಗಳಾಗಬೇಕು. ಅದಕ್ಕಾಗಿ ನಮ್ಮ ಎಲ್ಲ ಸಮಸ್ಯೆಗಳನ್ನು ಬಗೆಹರಿಸಲು ನಾವು ಅಹಿಂಸೆಯ ದಾರಿಯನ್ನು ಹಿಡಿಯಬೇಕು' ಎಂದು ಹೇಳಿದರು.



ಗ್ರಾಂಡ್ ಇಂಜಿನಿಯರಿಂಗ್‌ನಲ್ಲಿ ಉಚ್ಚ ತರಬೇತಿ ಪಡೆಯಲು ಇತ್ತೀಚೆಗೆ ಇಂಗ್ಲಂಡಿಗೆ ತೆರಳಿದ ಶ್ರೀ ಹರೇಂದ್ರನಾಥ ಶೆಟ್ಟರು [ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಆಗಿದ್ದ ಡಾ|| ಬಿ ರಾಮಣ್ಣ ಶೆಟ್ಟಿ ಪುತ್ರ] ಮತ್ತು ಅವರೊಡನೆ ತೆರಳಿದ ಅವರ ಧರ್ಮಪತ್ನಿ ಸೌ| ಸುಮನಾ. [ಆರಂಭದಲ್ಲಿ ನವಯುಗದ ಸಂಪಾದಕ ವರ್ಗದಲ್ಲಿದ್ದು ಅನಂತರ ವೈದ್ಯ ಶಿಕ್ಷಣ ಪಡೆದು ಈಗ ಮೈಸೂರು ಸ್ಟೇಟಿನ ಮೂಡುಗೆರೆಯ ಜನಪ್ರಿಯ ಡಾಕ್ಟರರೂ ಅಲ್ಲಿಯ ಟೌನ್ ಮುನ್ಸಿಪಲ್ ಕೌನ್ಸಿಲಿನ ಅಧ್ಯಕ್ಷರೂ ಆಗಿರುವ ಡಾ|| ಪಿ. ಎ. ಅಯ್ಯಂಗಾರ್ ಪುತ್ರಿ]

1906 ರಲ್ಲು ಸ್ಥಾಪಿಸಲ್ಪಟ್ಟ
ಸರ್ವತೋಮುಖವಾಗಿ ಅಭಿವೃದ್ಧಿ ಹೊಂದುತ್ತಲಿರುವ
"ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್"
ಇದನ್ನೇ ಸಹಸ್ರಾರು ಜನರು ತಮ್ಮ ಅಚ್ಚುಮೆಚ್ಚಿನ ಬ್ಯಾಂಕನ್ನಾಗಿ
ಆರಿಸಿರುವರು. ನೀವೂ ಇಂದೇ ಒಂದು ಖಾತೆಯನ್ನು ತೆರೆದು
ಬ್ಯಾಂಕಿನ ಗ್ರಾಹಕರಲ್ಲಿ ಒಬ್ಬರಾಗಿರಿ
THE CANARA BANKING CORPORATION LIMITED.
ಪ್ರಧಾನ ಕಾರ್ಯಾಲಯ, ಉಡುಪಿ. (ದ ಭಾರತ)

ನವಯುಗ

ಉಡುಪಿ, ಗುರುವಾರ ೯-೧೦-'೫೨

ಖಾದಿಗೆ ಜನತೆಯ ಪ್ರೋತ್ಸಾಹದ ಆವಶ್ಯಕತೆ

ಮಹಾತ್ಮಾಜೀಯವರ ಬೀಜ ಮಂತ್ರವಾದ ಖಾದಿಯ ಕುರಿತು ಜನತೆಗಿರುವ ಅಸಡ್ಡೆ ಮಾಯವಾಗಿ ಇನ್ನಾದರೂ ಅದಕ್ಕೆ ಯೋಗ್ಯ ಹಾಗೂ ಶೀಘ್ರ ಪ್ರೋತ್ಸಾಹ ದೊರಕಬೇಕಾದುದು ಅತ್ಯಾವಶ್ಯಕವೆಂಬುದನ್ನು ಮಹಾತ್ಮರ ಜನ್ಮದಿನದಂದು ಕಾಂಗ್ರೆಸ್ ಅಧ್ಯಕ್ಷ ಪಂಡಿತ ನೆಹರೂ ಮೊದಲಾದ ರಾಷ್ಟ್ರ ನಾಯಕರು ಸ್ಪಷ್ಟ ಕರೆಯನ್ನು ಜನತೆಗಿತ್ತುದುದು ಸಂದರ್ಭೋಚಿತವಿದೆ. ಗಾಂಧಿಜೀಯವರ ನಶ್ವರ ಶರೀರವು ಅದೃಶ್ಯವಾದರೂ ಅವರ ಉದಾತ್ತ ಧ್ಯೇಯತತ್ವಗಳು ಆಚಂದ್ರಾರ್ಕವಾಗಿ ಉಳಿಯುವಂತಹುಗಳೇ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಅಲ್ಲಗಳೆಯಲು ಶಕ್ಯವೂ ಇಲ್ಲ. ಕಾಂಗ್ರೆಸಿಗರಲ್ಲೇ ಖಾದಿಯ ಮೇಲಣ ವಿಶ್ವಾಸ ಕಡಿಮೆಯಾಗುತ್ತಿರುವುದು ಹಿತಕರವಲ್ಲ. ಉದ್ದುದ್ದ ಭಾಷಣಗಳನ್ನೇನೋ ಅನೇಕರು ಕೊಡುವರು;ತತ್ವೋಪದೇಶಮಾಡುವರು. ಆದರೆ ಮಾತಿನ ಮಲ್ಲರಾಗದೆ ಕಾರ್ಯಕರ್ತರಾಗಬೇಕೆಂಬುದನ್ನು ರಾಷ್ಟ್ರಪತಿ ಪ್ರಸಾದರು ಒಂದೆಡೆ ಹೇಳಿದುದನ್ನು ಜನತೆಯು ಮುಖ್ಯತಃ ಕಾಂಗ್ರೆಸಿಗರು ತಮ್ಮ ಅನುಷ್ಠಾನದ ಜೀವನದಲ್ಲಿ ಬಳಕೆಯಲ್ಲಿ ತರಬೇಕಾಗಿದೆ. ಬಾಪೂಜಿಗೆ ಪ್ರಿಯವಾದ ಖಾದಿ ಮಂತ್ರವನ್ನು ತ್ರಿಕರಣ ಶುದ್ಧಿಯಿಂದ ಜಪಿಸುತ್ತೇವೆಂದು ಪಣತೊಡಬೇಕಾದ ಕಾಲವೀಗ ಸನ್ನಿಹಿತವಾಗಿದೆ.

ಭಾರತಕ್ಕೆ ಸ್ವಾತಂತ್ರ್ಯ ಲಭಿಸಿ ಐದು ಸಂವತ್ಸರಗಳು ದಾಟಿ ಹೋದುವು, ಈ ಅವಧಿಯಲ್ಲಿ ಖಾದಿಯ ಪರಿಸ್ಥಿತಿ ಹೇಗಿದೆ ಎಂಬುದನ್ನು ವಾರ್ಧದಲ್ಲಿ ಸೇರಿದ ಸರ್ವ ಸೇವಾ ಸಮಾಜದ ಸಭೆಯಲ್ಲಿ ಮಂಡಿಸಲಾದ ವರದಿಯೇ ಸಾರುತ್ತಿದೆ;ಮಾತ್ರವಲ್ಲದೆ ಜಡರಾದವರನ್ನು ಕೂಡಾ ಬಡಿದೆಬ್ಬಿಸುವಂತಹದಾಗಿದೆ. ಸಾಧಾರಣ ರೂಪಾಯಿ 7,5,0000ದಷ್ಟು ಬೆಲೆಬಾಳುವ ಅಧಿಕೃತ ಶುದ್ಧ ಖಾದಿ ಮಾರಾಟವಾಗದೆ ಉಳಿದಿರುವುದು; ಸುಮಾರು 20,0,0000ರೂಪಾಯಿ ಕ್ರಯದ ಖಾದಿ ನೂಲು ರಾಶಿ ರಾಶಿಯಾಗಿ ಬಿದ್ದಿದೆ. ಇದರಿಂದಾಗಿ ಸಾಧಾರಣ 1,50,000 ನೂಲುವವರು ನಿರುದ್ಯೋಗಿಗಳಾಗಿರುವರು. ಖಾದಿಯ ಮೇಲಣ ಆಸಕ್ತಿ ಕಡಿಮೆಯಾದುದೇ ಇದಕ್ಕೆ ಕಾರಣವಲ್ಲದೆ ಮತ್ತೇನ? ಖಾದಿಯು ಲಾಭದಾಯಕವಲ್ಲ ಧರಿಸಲು ನಾಜೂಕಾಗಿಲ್ಲ ಎಂಬ ದೃಷ್ಟಿಯನ್ನು ಬದಲಾಯಿಸಿ ಜನತೆಯ ದೇಶದ ಆರ್ಥಿಕ ಸ್ವಾತಂತ್ರ್ಯ ದೃಷ್ಟಿಯಿಂದಲೂ ರಾಷ್ಟ್ರ ಪ್ರೇಮ, ಧರ್ಮಾಭಿಮಾನದಿಂದಲೂ ಖಾದಿ ಪ್ರೇಮಿಗಳಾಗಿ ಖಾದಿ ವೃತಾವಲಂಬಿಗಳಾದರೆ ರಾಶಿಬಿದ್ದ ಖಾದಿಯು ಮಾರಾಟವಾಗುವುದಲ್ಲದೆ ನಿರುದ್ಯೋಗಿ ಬಡ ಜನತೆಗೂ ಉಸಿರು ಬಿಡಲು ಅನುಕೂಲ ವಾತಾವರಣ ಕಲ್ಪಿಸಿದಂತಾಗುತ್ತದೆ. ಹೀಗಾಗಲೆಂದೇ ಗಾಂಧಿ ಜಯಂತಿ ಪಕ್ಷದಲ್ಲಿ ಜನತೆಯನ್ನು ವಿಜ್ಞಾಪಿಸಿಕೊಳ್ಳುತ್ತೇವೆ.

ಮಾರಾಟಕರದ ಪ್ರಶ್ನೆ ಪುನರ್ವಿಮರ್ಶಿಸಲಾಗುವುದಿಲ್ಲ

ವ್ಯಾಪಾರಿಗಳಿಗೆ ರಾಜಾಜಿಯ ಸ್ಪಷ್ಟೋಕ್ತಿ

ಮದ್ರಾಸಿನ ಮುಖ್ಯ ಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು, ತಾ. 5 ರಲ್ಲು ಮದ್ರಾಸಿನ ಎಣ್ಣೆ ಮತ್ತು ಎಣ್ಣೆ ಧಾನ್ಯ ಸಂಘದ ವಾರ್ಷಿಕ ಸಭೆಯನ್ನು ಉದ್ಘಾಟಿಸುತ್ತ ಸದ್ಯಕ್ಕೆ ರಾಜ್ಯದಲ್ಲಿರುವ ಅಸಾಧಾರಣ ಆರ್ಥಿಕ ತುಟಾಗ್ರತೆಯ ಪರಿಸ್ಥಿತಿಯ ಮೂಲಕ ಸರಕಾರವು ಸದ್ಯಕ್ಕೆ ಮಾರಾಟ ಕರಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆಯನ್ನು ಪುನರ್ವಿಮರ್ಶಿಸಲು ಶಕ್ಯವಿಲ್ಲವೆಂದು ಸ್ಪಷ್ಟೋಕ್ತಿಗಳನ್ನಾಡಿದರು. ಹದಿನೈದು ವರ್ಷಗಳ ಹಿಂದೆ ಹೇರಲ್ಪಟ್ಟ ಕರವು ಇಂದು ನಾನು ಮುಖ್ಯ ಮಂತ್ರಿಯಾದೊಡನೆ ಇಷ್ಟೊಂದು ಚರ್ಚೆಯ ವಿಷಯ ಏಕಾಗಬೇಕು ಎಂಬುದು ನನಗೆ ತಿಳಿಯದಾಗಿದೆಂದೂ ಹೇಳಿದರು

ಕೃಷಿ ಕಾಲೇಜಿಗೆ ಸಂದರ್ಶನ

ಪಶ್ಚಿಮ ಬಂಗಾಳದ ಕೃಷಿ ಮಂತ್ರಿ ಡಾ। ಆರ್. ಅಹಮ್ಮದರು ಕೊಯಮುತ್ತೂರಿನ ಕೃಷಿ ಕಾಲೇಜನ್ನು ಸಂದರ್ಶಿಸಿ ಅಲ್ಲಿಯ ಕಾರ್ಯ ಕಲಾಪಗಳ ಅನುಭವವನ್ನು ಪಡೆದರು.

ಗೋಹತ್ಯೆ ತಡೆಯಲು ಚಳವಳ

ರಾಷ್ಟ್ರೀಯ ಸ್ವಯಂಸೇವಕ ಸಂಘವು ಗೋಹತ್ಯೆಯನ್ನು ತಡೆಯಲು ದೇಶದಾದ್ಯಂತ ಆಂದೋಲನದ ಚಳವಳಿಯನ್ನು ಇದೇ ತಾ 26ರಿಂದ ಪ್ರಾರಂಭಿಸುವುದೆಂದು ಆರ್. ಎಸ್. ಎಸ್. ಸಂಘದ ನಾಯಕರಾದ ಶ್ರೀ ಎಮ್. ಎಸ್. ಗೋಳ್ವಲ್ಕರರು ಹೈದರಾಬಾದಿನಲ್ಲಿ ಪತ್ರಿಕಾಪ್ರತಿನಿಧಿಗಳೊಡನೆ ಹೇಳಿದರು

ಆರೋಗ್ಯಕ್ಕೆ ವಿಶ್ರಾಂತಿ ಅಗತ್ಯ

ಕೊಯಮುತ್ತೂರಿನ ಟೆಲಿಗ್ರಾಫ್ ಇಂಜಿನಿಯರಿಂಗ್ ರಿಕ್ರಿಯೇಶನ್ ಕ್ಲಬ್ಬಿನ ಆರನೇ ವಾರ್ಷಿಕೋತ್ಸವವು ಕೊಯಮುತ್ತೂರಿನ ಸೆಷನ್ಸ್ ಜಡ್ಜರಾದ ಶ್ರೀ ಇ. ಅಂತೋನಿಯವರ ಅಧ್ಯಕ್ಷತೆಯಲ್ಲಿ ಜರಗಿದಾಗ ಎಲ್ಲರ ಆರೋಗ್ಯದ ಮತ್ತು ಸಂತೋಷದ ಕ್ರಮವಾದ ರಕ್ಷಣೆಗೆ ವಿಶ್ರಾಂತಿಯು ಅತ್ಯಗತ್ಯವೆಂದು ಅವರು ಅಧ್ಯಕ್ಷಪೀಠದಿಂದ ಹೇಳಿದರು.

ಬಡತನ ಮತ್ತು ನಿರಕ್ಷರತೆಗಳ ನಿವಾರಣೆಗಾಗಿ ದುಡಿಯಬೇಕು.

ಭೂಜ ನಗರಸಭೆಯು ರಾಷ್ಟ್ರಪತಿ ಡಾ| ರಾಜೇಂದ್ರಪ್ರಸಾದರಿಗೆ ಮಾನಪತ್ರವನ್ನು ಅರ್ಪಿಸಿದಾಗ, ಬಡತನ ಮತ್ತು ನಿರಕ್ಷರತೆಗಳು ದೇಶದಲ್ಲಿ ನಿವಾರಣೆಯಾಗಲು ಜನತೆಯು ದುಡಿಯಬೇಕೆಂದು ಒತ್ತಿ ಹೇಳಿದರು. ಮುಂದುವರಿಯುತ್ತಾ, ಆರ್ಥಿಕ ಸ್ವಾತಂತ್ರ್ಯಪಡೆಯಲು ಜನತೆಯು ಕಷ್ಟವನ್ನು ಸಹಿಸಿಕೊಂಡು ದುಡಿಯಬೇಕು ಬರೇ ಭಾಷಣಮಾಡುತ್ತ ಮತ್ತು ದೂರಿಕೊಳ್ಳುತ್ತ ಹೋದರೆ ಆರ್ಥಿಕ ಸ್ವಾತಂತ್ರ್ಯ ದೊರೆಯದು. ಕಾಂಗ್ರೆಸ್ ಸರಕಾರವು ಅದನ್ನು ಮಾಡಲಿಲ್ಲ, ಇದನ್ನು ಮಾಡಲಿಲ್ಲ, ಎಂದು ಜನರು ದೂರುವುದು ಉಂಟು. ಆದರೆ ರಾತ್ರಿ ಬೆಳಗಾಗುವುದರೊಳಗೆ ಯಾವ ಸರಕಾರಕ್ಕೂ ಮಹಾ ಸಮಸ್ಯೆಗಳನ್ನು ಬಿಡಿಸಲು ಶಕ್ಯವಿಲ್ಲವೆಂಬುದನ್ನು ಜ್ಞಾಪಕಕ್ಕೆ ತರಬೇಕು.

ದೇಶದಲ್ಲಿ ಬಡತನ, ನಿರಕ್ಷರತೆ ಇರುವುದು ವಿಷಾದಕರ. ಈ ಎರಡೂ ಅನಿಷ್ಟಗಳ ನಿವಾರಣೆಗಾಗಿ ಜನತೆಯು ಕಾರ್ಯಪ್ರವರ್ತರಾಗಬೇಕು. ಈ ಅನಿಷ್ಟಗಳು ಇಲ್ಲವೆಂದಾದರೆ ನಮಗೆ ನಿಜವಾದ ಸ್ವಾತಂತ್ರ್ಯ ಲಭಿಸಿದಂತಾಗುವುದು ಆ ಗುರಿಯನ್ನು ಮುಟ್ಟಲು ಸದಾ ಸರ್ವದಾ ಎಲ್ಲರೂ ಕಷ್ಟ ಸಹಿಷ್ಣುತೆಯಿಂದ ದುಡಿಯಬೇಕು' ಎಂದು ಹೇಳಿದರು.

ನೆಹರೂರವರು ಅನ್ನಛತ್ರ ಸಂದರ್ಶಿಸಿದರು

ಪ್ರಧಾನಮಂತ್ರಿ ಪಂಡಿತ ನೆಹರೂರವರು ಬಂಗಾಳಪ್ರದೇಶ ಸಂಚಾರವನ್ನು ಕೈಕೊಂಡವರು ತಾ 5ರಲ್ಲು ಮೇನಗೊಂಡದಲ್ಲಿಯ ಕೊಡವಾಳ ಹಳ್ಳಿಯಲ್ಲಿಯ ಅನ್ನಛತ್ರವೊಂದನ್ನು ಸಂದರ್ಶಿಸಿ, ಅಲ್ಲಿ ಕೊಡಲಾಗುವ ಗಂಜಿಯ ಸ್ಯಾಂಪಲನ್ನು ನೋಡಿ ಅದು ರುಚಿಯಾಗಿದೆ ಎಂದು ಹೇಳಿದರು. ಈ ಛತ್ರದಲ್ಲಿ ದಿನಂಪ್ರತಿಯೂ ಸಾಧಾರಣ 550 ಜನರಿಗೆ ಗಂಜಿ ಹಂಚಲ್ಪಡುತ್ತಿದೆ. ಪ್ರಧಾನಮಂತ್ರಿಗಳು ಅಲ್ಲಿಂದ ಇನ್ನೊಂದು ಹಳ್ಳಿಗೆ ಪ್ರಯಾಣಬೆಳೆಸಿ ಅಲ್ಲಿ ಕಾಗದದ ಹೂ ಹಾಗೂ ಅಭ್ರಕದ ಕನ್ನಡಕಗಳನ್ನು ಮಾರುತ್ತಿದ್ದವನೊಬ್ಬನನ್ನು ಕಂಡು ಅವನ ಹತ್ತಿರವಿದ್ದುದನ್ನೆಲ್ಲಾ ಆತನು ಹೇಳಿದ ಐದು ರೂಪಾಯಿ ಕ್ರಯಕ್ಕೆ ಪಡಕೊಂಡು ಅವೆಲ್ಲವನ್ನೂ ಚಿಕ್ಕ ಮಕ್ಕಳಿಗೆ ಹಂಚಬೇಕೆಂದು ಅಧಿಕಾರಿಗಳ ವಶ ಕೊಟ್ಟರು.

ಸ್ವಯಂ ಸೇವಕ ದಳ

ಹೈದರಾಬಾದದಲ್ಲಿ ಸೇರಲಿರುವ ೫೮ನೆ ಕಾಂಗ್ರೆಸ್ ಮಹಾಧಿವೇಶನಕ್ಕೆ ಒಂದೂವರೆ ಸಾವಿರ ಸ್ವಯಂ ಸೇವಕರ ದಳವನ್ನು ಸಿದ್ಧಗೊಳಿಸಲು ಅಧಿವೇಶನದ ಸ್ವಾಗತ ಸಮಿತಿಯು ನಿರ್ಧರಿಸಿದೆ.

ಸರ್ ಮಿರ್ಜಾ ಇಸ್ಮಾಯಿಲರು

ಭಾರತದ ಮುತ್ಸದ್ದಿಗಳಾದ ಶ್ರೀ ಮಿರ್ಜಾ ಇಸ್ಮಾಯಿಲರನ್ನು ತಾ 5ರಲ್ಲು ಇರಾಣದ ಶಹಾರವರು ಕರೆಸಿಕೊಂಡು ಅವರ ಕೂಡೆ ಸ್ವಲ್ಪ ಕಾಲ ಮಾತುಕತೆ ನಡೆಸಿದರು, ಬಳಿಕ ಅವರು ಇರಾಣದ ವಿದೇಶ ಮಂತ್ರಿ ಶ್ರೀ ನೂಸೈನ ನವಾಬರನ್ನು ಭೇಟಿಯಾದರು, ಸರ್ ಇಸ್ಮಾಯಿಲರು ತಮ್ಮ ವಂಶಜರ ಮೂಲ ಸ್ಥಳವಾದ ಇಸ್ಪಹಾನನ್ನೂ ಸಂದರ್ಶನವೀಯಲಿರುವರು.

ಕಲ್ಕತ್ತಾದಲ್ಲಿ ಅಗ್ನಿ ನಾರಾಯಣನ ಪ್ರಕೋಪ

ಕಲ್ಕತ್ತಾದ ಲಾಲ ಬೀದಿಯ ಒಂದು ಗೋದಾಮಿಗೆ ತಾ 4ರಲ್ಲು ರಾತ್ರಿ ಆಕಸ್ಮಿಕವಾಗಿ ಬೆಂಕಿ ತಗಲಿ ಸಾಧಾರಣ ಒಂದು ಕೋಟಿ ರೂಪಾಯಿ ಬೆಲೆ ಬಾಳುವ ಸರಕುಗಳು ನಾಶಹೊಂದಿದವು. ಪೋಲಿಸರೂ ಅಗ್ನಿಶಾಮಕ ದಳದವರೂ ಬೆಂಕಿ ನಂದಿಸಲು ಪ್ರಯತ್ನಿಸಿ ಅದನ್ನು ಹತೋಟಿಗೆ ತಂದರು.

ಇಂಗ್ಲಾಂಡಿಗೆ ಭಾರತದ ಅಧಿಕಾರಿಗಳು

ಇಂಗ್ಲಾಂಡಿನ ಸಮಾಜ ಸಂರಕ್ಷಣ ವ್ಯವಸ್ಥೆಗಳನ್ನು ನಿರೀಕ್ಷಿಸಲು ಭಾರತ ಸರಕಾರದ ಮೂವರು ಅಧಿಕಾರಿಗಳು ತಾ. 3ರಲ್ಲು ಬೊಂಬಾಯಿಯಿಂದ ವಿಮಾನದಲ್ಲಿ ಜಿನೆವಾಕ್ಕೆ ಹೋಗಿರುವರು. ಇವರು 'ಫೆಲೋಶಿಪ್ ಯೋಜನೆ'ಗನುಸಾರವಾಗಿ ಇಂಗ್ಲಾಂಡಿಗೆ ಹೋದುದಾಗಿದೆ. ಐದು ತಿಂಗಳವರೆಗೆ ಅವರು ಅಲ್ಲಿ ತಂಗುವರು.

ಭಾರತದ ಪತ್ರಿಕಾ ವ್ಯವಸಾಯವು

ಅತ್ಯಂತ ಪ್ರಭಾವಶಾಲಿಯಾಗಿದ್ದು ಭಾರತದ ಹೊರನಾಡುಗಳಲ್ಲೂ ಅದರ ಕಾರ್ಯ ವಿಸ್ತರಿಸಿರುವುದೆಂದು ಲಂಡನಿನಲ್ಲಿರುವ ಭಾರತದ ಹೈಕಮಿಶನರ್ ಶ್ರೀ ಬಿ. ಜಿ. ಖೇರರು ಲಂಡನಿನ ಭಾರತೀಯ ಮತ್ತು ಪೂರ್ವದ ವೃತ್ತಪತ್ರ ಸಂಘದ ತಾ. 3ರಲ್ಲು ಜರಗಿದ ರಜತ ಮಹೋತ್ಸವ ಸಮಾರಂಭದಲ್ಲಿ ಮಾತನಾಡುತ್ತಾ ಹೇಳಿದರು.

ನೂಲಿನ ಬೆಲೆ

ಟೆರಿಫ್ ಬೋರ್ಡಿನ ಸೂಚನೆಯಂತೆ ನೂಲಿನ ಬೆಲೆಯನ್ನು ಏರಿಸದಿದ್ದುದಕ್ಕೆ ದಕ್ಷಿಣಭಾರತದ ಗಿರಣಿ ಒಡೆಯರ ಸಂಘವು ತನ್ನ ವಿಷಾದವನ್ನು ವ್ಯಕ್ತಪಡಿಸಿ, ಕೇಂದ್ರಸರಕಾರದ ಕೈಗಾರಿಕಾ ಮತ್ತು ವಾಣಿಜ್ಯ ಮಂತ್ರಿಗಳಿಗೆ ತಂತಿ ಕಳುಹಿಸಿದನು ಬೆಲೆ ಏರಿಸದಿದ್ದಲ್ಲಿ ಗಿರಣಿಗಳಿಗೆ ತುಂಬಾ ನಷ್ಟವಾಗುವ ಸಂಭವವಿದೆಯಾಗಿಯೂ ಸೂಚಿಸಲಾಗಿದೆ.

ಮುಂಬಯಿಯಲ್ಲಿ ಗಾಳಿ ಮಳೆ

ಇದೇ ತಾ. 6ನೇ ಸಂಜೆ ಪ್ರಚಂಡ ಬಿರುಗಾಳಿ ಬೀಸಿದುದರ ಪರಿಣಾಮವಾಗಿ ಟೆಲಿಫೋನು ಮತ್ತು ರೈಲ್ವೆ ಸಾಗಣೆಯು ನಿಂತುಹೋಯಿತು ಗಾಳಿಯೊಡನೆ ಮಳೆಯೂ ಸುರಿದುದರಿಂದ ಮುಂಬಯಿ ನಗರದ ತಗ್ಗಾದ ಕಡೆಗಳಲ್ಲಿ ನೀರುತುಂಬಿ ಹೋಯಿತು. ಇದರಿಂದ ಕೆಲವು ಕಡೆಗಳಲ್ಲಿ ಜನರಿಗೆ ತುಂಬಾ ಅನಾನುಕೂಲವುಂಟಾಯಿತು. ಕೆಲವು ದಿವಸಗಳಿಂದ ಬಿಸಿಲ ಬೇಗೆಯಿಂದ ಬಳಲುತ್ತಿದ್ದ ಜನರಿಗೆ ಮಳೆಗಾಳಿಯಿಂದ ಅದು ಕಡಿಮೆಯಾದ್ದರಿಂದ ಸ್ವಲ್ಪ ಮಟ್ಟಿನ ಸಂತೋಷವಾಯಿತು.

ರಾಷ್ಟ್ರಪತಿಗಳ ಆಜ್ಞೆ

ಪ್ರತಿ ಎರಡು ವರ್ಷಗಳಿಗೊಮ್ಮೆ ರಾಜ್ಯ ಪರಿಷತ್ತಿನ ಸದಸ್ಯರನ್ನು ನಿವೃತ್ತಗೊಳಿಸುವುದಕ್ಕಾಗಿ ಮೂರು ಗುಂಪುಗಳನ್ನಾಗಿ ಮಾಡುವ ಬಗ್ಗೆ ರಾಷ್ಟ್ರಪತಿಗಳು ಆಜ್ಞೆ ಹೊರಡಿಸಿದ್ದಾರೆ.

ಉಡುಪಿ, ಮಂಗಳೂರು ನಗರ ಸಭೆಗಳ ಚುನಾವಣೆಯ ಫಲಿತಾಂಶ

ಹೆಚ್ಚಾಗಿ ಸ್ವತಂತ್ರರೇ ಗೆದ್ದುಬಂದರು.

ಡುಪಿ ನಗರಸಭೆಯ ಚುನಾವಣೆಯು
ನೇ ಸೋಮವಾರ ನಡೆಯಿತು. ಎಲ್ಲ
ಳಲ್ಲಿ ಬಿರುಸಿನ ಸ್ಪರ್ಧೆಯಿದ್ದರೂ
ದಾನವು ಶಾಂತರೀತಿಯಲ್ಲಿ ನೆರವೇರಿತು.
ಮತಘಟ್ಟಗಳಲ್ಲಿಯೂ ಸುಮಾರು ಮು
ಂಶಕ್ಕೆ ಮಿಕ್ಕಿ ಮತದಾರರು ಬಂದು
ಮತಗಳನ್ನಿತ್ತರು. ತಾ. 7ರಲ್ಲಿ ಮತ
ಕೆ ನಡೆದು ಫಲಿತಾಂಶವು ಹೊರಬಿದ್ದಿದೆ.

ನೇ ಗುಂಡಿಬೈಲು ವಾರ್ಡ್

ಹೆಂಗಸರ ರಿಸರ್ವ್ ಸೀಟ್

ೋರಮಾ ದೇವಿ (ಸ್ವ) 231
ತ್ರಾ ಆರ್. ಪೈ (ಕಾಂ) 207

ಜನರಲ್ ಸೀಟ್

ಸೇರಿಗಾರ (ಕ) 208
ಆರ್. ಕುಂಜೂರು (ಕಾಂ) 207

2ನೇ ಕಡಿಯಾಳಿ

ಪ್ರಭಾಕರ ಪೈ (ಕಾಂ)
(ಅವಿರೋಧ ಆಯ್ಕೆ)

3ನೇ ಕುಂಜಿಬೆಟ್ಟು

ಕೆ. ಪೈ (ಕಾಂ) 178
ನಾರಾಯಣ ನಾಯಕ್ (ಸ್ವ) 158
ಸೇರಿಗಾರ (ಕ) 94

4ನೇ ಟೆಂಪಲ್

ಕೆ. ಎಲ್. ಐತಾಳ (ಕಾಂ) 206
ನಾರಾಯಣ ನಾಯಕ್ (ಸ್ವ) 112

5ನೇ ಪಣಿಯಾಡಿ

ಎಸ್. ಆಚಾರ್ (ಸ್ವ) 229
ಬಿ. ಕೃಷ್ಣರಾಜ (ಕಾಂ) 120

6ನೇ ತೆಂಕಪೇಟೆ

ವಿಟ್ಠಲ ಕಾಮತ್ (ಕಾಂ) 284
ಗುರುರಾಜ ಭಟ್ (ಸ್ವ) 133

7ನೇ ಸೆಂಟ್ರಲ್

ಕೆ. ಪೈ (ಕಾಂ) 228
ಾದಿ ಶೇಷಗಿರಿ ರಾವ್ (ಸ್ವ) 144
ಅನಂತ ಕಾಮತ್ (ಸ್ವ) 10

8ನೇ ತಿರಿಬೀಡು

ಎಸ್. ಇನಾಯತ್ ಪಟೇಲ್ (ಕಾಂ) 239
ಂತ ನಾಯಕ್ (ಸ್ವ) 124
ಇಬ್ರಾಹಿಂ ಸಾಹೇಬ್ (ಸ್ವ) 11

9ನೇ ಮೂಡನಿಡಂಬೂರು

ಲ ಶೆಟ್ಟಿ (ಸ್ವ) 219
ಶೀನ ಶೆಟ್ಟಿ (ಕಾಂ) 129

10ನೇ ಬನ್ನಂಜೆ

ಪಿ. ವಿ. ವ್ಯಾಸರಾವ್ (ಸ್ವ) 136
ನ ನಾಯಕ್ (ಕ) 110
ಕೆ. ಕೃಷ್ಣರಾವ್ (ಕಾಂ) 104
ಮಹಾಬಲ ಶೆಟ್ಟಿ (ಸ್ವ) 60

11ನೇ ಅಂಬಲಪಾಡಿ

ಾಡಿ ರಘುರಾಮ ಶೆಟ್ಟಿ (ಸ್ವ) 194
ಶಂಭು ಶೆಟ್ಟಿ (ಕಾಂ) 116

12ನೇ ಕನಸಾಡಿ

ರಾಮ ರಾವ್ (ಸ್ವ) 242
ಮತಿ ಎಲ್. ಎಂ. ಫೆರ್ನಾಂಡಿಸ್ (ಕಾಂ) 161

13ನೇ ಕಿನ್ನಿಮೂಲ್ಕಿ

ಪಾಂಡುರಂಗ ಶೆಣೈ (ಸ್ವ) 219
ಪೈಕಾ (ಕಾಂ) 174

14ನೇ ಬೈಲೂರು

ಮಂಜುನಾಥ ರಾವ್ (ಸ್ವ) 141
ಕೇಶವ ಭಟ್ [ಕಾಂ] 134

15ನೇ ವಳಕಾಡು

ದೇವೇಂದ್ರ ಶೆಣೈ (ಕಾಂ) 234
ಗೋಪಾಲಕೃಷ್ಣ, [ಸ್ವ] 150

16ನೇ ಕಾಡಬೆಟ್ಟು

ಹರಿಜನ ರಿಸರ್ವ್ ಸೀಟ್

ಯು. ರಾಮಚಂದ್ರ (ಕಾಂ)
[ಅವಿರೋಧ ಆಯ್ಕೆ]

ಜನರಲ್ ಸೀಟ್

ಸೀತಾರಾಮ ಕಾಮತ್ (ಸ್ವ) 183
ಕೆ. ಜನಾರ್ದನ ಪೈ [ಕಾಂ] 165

17ನೇ ಅಜ್ಜರಕಾಡು

ಹೆಂಗಸರ ರಿಸರ್ವ್ ಸೀಟ್

ಶ್ರೀಮತಿ ಮನೋರಮಾ ಆಚಾರ್ಯ (ಕಾಂ) 169
ಶ್ರೀಮತಿ ಮನೋರಮಾ ನಾಯಕ್ [ಸ್ವ] 146

ಜನರಲ್ ಸೀಟಿಗೆ

ಯು. ಎಸ್. ನಾಯಕ್ (ಸ್ವ) 168
ಟಿ. ಅಶೋಕ ಪೈ [ಕಾಂ] 159

ಕಾಂಗ್ರೆಸಿಗೆ 8, ಕಮ್ಯೂನಿಸ್ಟ್ 1, ಸ್ವತಂತ್ರರಿಗೆ 11 ಸ್ಥಾನಗಳು ದೊರೆತವು ಒಬ್ಬ ಕಾಂಗ್ರೆಸ್ ಹುರಿಯಾಳುಗಳು 2ಕಡೆಗಳಲ್ಲಿ ಆರಿಸಿ ಬಂದುದರಿಂದ ಒಂದು ಸ್ಥಾನಕ್ಕೆ ರಾಜಿನಾಮೆ ಕೊಡಬೇಕಾಗಿದ್ದು ಉಪಚುನಾವಣೆ ನಡೆಯಬೇಕಾಗಿದೆ.

ಮಂಗಳೂರಲ್ಲಿ

ತಾ. 6ರಲ್ಲಿ ಚುನಾವಣೆ ನಡೆದು ಮರು ದಿನ ಮತಗಣನೆಯಾಯಿತು. ಫಲಿತಾಂಶವು ಹೀಗಿದೆ.

1ನೇ ದೇರೆಬೈಲು ವಾರ್ಡ್

ಹರಿಶ್ಚಂದ್ರ ಆಚಾರ್, ಸ್ವ-520
ಬಿ. ಪಿ. ಎ. ಅಂದ್ರಾದೆ, ಸ್ವ-376

2ನೇ ದೇರೆಬೈಲು ದಕ್ಷಿಣ

ಮಿಜಾರ್ ಗೋವಿಂದ ಪೈ, ಕಾಂ-655
ಶಾಂತಾರಾಮ ಪೈ, ಸ್ವ-458

3ನೇ ಬಿಜೈ

ಜಿ. ಪಿ. ಮಥಾಯಿಸ್, ಕಾಂ-642
ಪಾಲ್ ಡಿ'ಸೋಜ, ಸ್ವ-531

4ನೇ ಕದ್ರಿ ಪಶ್ಚಿಮ

ಡಾ| ಯಂ. ಸಿ. ಶಾಸ್ತ್ರಿ, ಸ್ವ-560
ಇ. ಎ. ಪ್ಯಾಸ್, ಸ್ವ-337

7ನೇ ಕೊಡಿಯಾಲಬೈಲು

ಕೆ. ಪ್ರಭಾಕರ ರೈ, ಸ್ವ-377
ಬಿ. ಆನಂದ ಶೆಟ್ಟಿ, ಸ್ವ-288
ವರದರಾಜ ಪ್ರಭು, ಕಾಂ-202

9 ಕಂಬಳ ಉತ್ತರ

ಬಿ. ಯಸ್. ಭಾಸ್ಕರ ರೈ, ಸ್ವ-380
ಯಂ. ಲೋಕಯ್ಯ ಶೆಟ್ಟಿ, ಕಾಂ-357

11ನೇ ಬೋಳೂರು

ಯಂ. ಯಸ್. ದಯಾಕರ್, ಸ್ವ-865
ಜಿ. ಎ. ಪುತ್ರನ್, ಕಾಂ-574

12ನೇ ಕುದ್ರೋಳಿ ಉತ್ತರ

ಮೋಹನ ಶೆಣೈ, ಸ್ವ-418
ಮಹಮ್ಮದ್ ಖಾನ್, ಸ್ವ-404
ಆರ್. ಬಿ. ಸಿ. ಡಿ. ಅಂದ್ರಾದೆ, ಸ್ವ-159

13 ಕುದ್ರೋಳಿ ದಕ್ಷಿಣ

ಮಿತ್ರದಾಸ್ ಹೆಗ್ಡೆ, ಸ್ವ-683
ಡಾ| ಬಿ. ಆರ್. ಹೆಗ್ಡೆ, ಕಾಂ-446

14 ನವಾಯತ್

ಯು. ಅಹಮ್ಮದ್ ಹುಸ್ಸೇನ್, ಸ್ವ-405
ಯು. ಅಚ್ಯುತ ನಾಯಕ್, ಸ್ವ-291
ಬಿ. ಮೋಹನ ರಾವ್, ಸ್ವ-135

16 ಸೆಂಟ್ರಲ್

ಡಾ| ಯು. ಪಿ. ಮಲ್ಯ, ಕಾಂ-849
ಶೇಷಗಿರಿ ಪೈ, ಸ್ವ-178

17 ಡೊಂಗರಕೇರಿ

ರಮಾನಂದ ಚೂರ್ಯ, ಸ್ವ-300
ಡಾ| ಗಿರಿಧರ ರಾವ್, ಕಾಂ-238
ಪದ್ಮನಾಭ ಕಾಮತ್, ಸ್ವ-135
ವಿ. ಯಸ್. ಪ್ರಭು, ಸ್ವ-92

18 ಮಾರ್ಕೆಟ್

ಯು. ಸುಮಿತ್ರ ಭಟ್, ಸ್ವ-546
ಯಸ್. ಎಸ್. ಕಿಲ್ಲೆ, ಕಾಂ-528

19 ಪೋರ್ಟ್ (2 ಸ್ಥಾನಗಳು)

ಕ್ರಿಶ್ಚನ್ ಕಾರ್ಯಪ್ಪ, ಸ್ವ-663
ಶ್ರೀಮತಿ ಲೋರಾ ಪ್ಯಾಸ್, ಸ್ವ-528
ಶಾರದಾ ಕಲ್ವಾರ್, ಕಾಂ-446

20 ಬೆಂದೂರು ಪಶ್ಚಿಮ

ಜೆ. ಬಿ. ಮಚ್ಯಾಡೊ, ಸ್ವ-461
ಕೆ. ಆರ್. ಆಚಾರ್, ಕಾಂ-404

22 ಫಳ್ನೀರು ಪೂರ್ವ

ಮೇರಿ ಬ್ರಿಟ್ಟೋ, ಕಾಂ-380
ವಿಲಿಯಂ ಪಿಂಟೊ, ಸ್ವ-248

23 ಫಳ್ನೀರು ಪಶ್ಚಿಮ

ಮಾಧವ ಕಾಮತ್, ಸ್ವ-510
ಡಿ. ಜೆ ಬ್ರಿಟ್ಟೊ, ಕಾಂ-386

21 ಮಿಲಾಗ್ರಿಸ್

ಡಾ| ನಾಗಪ್ಪ ಆಳ್ವ, ಸ್ವ-500
ಡಾ| ಉಮೇಶರಾವ್, ಕಾಂ-208

25 ಕೆಂಟೋನ್ಮೆಂಟ್

ಬಿ. ಆರ್. ಕರ್ಕೇರ, ಕಾಂ-676
ಕೇಶವ ನಾಯಕ್, ಸ್ವ-178

27 ಹೊಯ್ಗೆ

ಗಜಾನನ ರಾವ್, ಸ್ವ-814
ಜೋಸೆಫ್ ಬ್ರಿಟ್ಟೊ, ಕಾಂ-654

28 ಬೋಳಾರ-ಪಶ್ಚಿಮ

ಕೊರಗಪ್ಪ ರೈ, ಸ್ವ-512
ಎ. ಎಲ್. ಡೀಗೊ, ಸ್ವ-511

30 ಮಂಗಳಾದೇವಿ

ಯಂ. ರಮಾನಾಥ್, ಸ್ವ-755
ಬಿ. ಯಲ್. ಎನ್. ರೈ, ಕಾಂ-690
ಜೆ. ಎ. ರೊಡ್ರಿಗಸ್, ಸ್ವ-14

31 ಅತ್ತಾವರ ಉತ್ತರ

ಮಾಧವ ಸುವರ್ಣ, ಕಾಂ-474
ಅಮೃತ ಯಂ. ಸ್ವ-445

33 ಜೆಪ್ಪು-ಉತ್ತರ (2 ಸ್ಥಾನಗಳು)

ಡಬ್ಲ್ಯು. ಜೆ. ಡಿ'ಸೋಜ, ಸ್ವ-950
ಎಸ್. ಜಿ. ಸಾಲೆನ್ಸ್, ಸ್ವ-556
[illegible], [illegible], ಸ್ವ-323
ರಮಣ, ಕಾಂ-220

38 ಜೆಪ್ಪು ದಕ್ಷಿಣ

ಕೆ. ವಾಮನ, ಸ್ವ-629
ಸಿ. ನರಸಿಂಹ ಪೈ, ಕಾಂ-375

ನಗರ ಸಭೆಯ ಒಟ್ಟು 36 ಸ್ಥಾನಗಳಲ್ಲಿ 27 ಸ್ಥಾನಗಳಿಗೆ ಮಾತ್ರ ಸ್ಪರ್ಧೆ ನಡೆಯಿತು. ಉಳಿದ 9 ಸ್ಥಾನಗಳಲ್ಲಿ ಮೊದಲೇ ಅವಿರೋಧವಾಗಿ ಆಯ್ಕೆಯಾಗಿತ್ತು.

ಅವಿರೋಧವಾಗಿ ಆರಿಸಲ್ಪಟ್ಟವರು:

5ನೇ ಕದ್ರಿ ಮಧ್ಯ ವಾರ್ಡ್ ಕೆ. ಸೂರ್ಯ ನಾರಾಯಣ ಅಡಿಗ, 6ನೇ ಕದ್ರಿ ಪೂರ್ವ-ಡಾ| ಯಸ್. ರಘುನಾಥ್ ಸುವರ್ಣ, 8ನೇ ಕಂಬಳ ದಕ್ಷಿಣ-ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿ [ಕಾಂ], 10ನೇ ಮಣ್ಣಗುಡ್ಡೆ-ಎಂ. ಶ್ರೀನಿವಾಸ ನಾಯಕ್ [ಕಾಂ], 15ನೇ ಬಂದರ್-ಸಿ. ಕಾನ್ಜಿ ಪಕ್ಕಿ, 21ನೇ ಬೆಂದೂರು ಪೂರ್ವ— ಪಿ. ಬಿ. ಡಿ'ಸೋಜ, 26ನೇ ಪೋರ್ಟ್-ಬಿ. ಯಂ. ಹಸನ್ ಹಾಜಿ, 29ನೇ ಬೋಳಾರ ಪೂರ್ವ-. [illegible] ಮುಖರ್, 32ನೇ ಅತ್ತಾವರ ದಕ್ಷಿಣ- ಶ್ರೀಮತಿ ಬಿ. ಯಸ್. ಪಿಂಟೊ [ಕಾಂ].

ಮಂಗಳೂರಲ್ಲಿ ಕಾಂಗ್ರೆಸ್ 20 ಸ್ಥಾನಗಳಿಗೆ ಮಾತ್ರ ಉಮೇದ್ವಾರರನ್ನು ನಿಲ್ಲಿಸಿತ್ತು. ಇವರಲ್ಲಿ 6 ಜನರು ಮಾತ್ರ ಆರಿಸಲ್ಪಟ್ಟರು. ಅವಿರೋಧವಾಗಿ ಬಂದವರು 3 ಕಾಂಗ್ರೆಸಿಗರು. ಒಟ್ಟು 36 ಸ್ಥಾನಗಳಲ್ಲಿ 9 ಸ್ಥಾನ ಮಾತ್ರ ಕಾಂಗ್ರೆಸಿಗೆ ದೊರೆತಂತಾಯಿತು.

ಬೇಂಕ್ ದರೋಡೆಗಾರರಿಗೆ ಜೀವಾವಧಿ ಶಿಕ್ಷೆ

ಭಾರತದಲ್ಲಿ ಅತೀದೊಡ್ಡ ದರೋಡೆಯೆಂದು ಹೆಸರುವಡೆದ ಲೋಯ್ಡ್ಸ ಬೇಂಕಿನ ದರೋಡೆ ಖಟ್ಲೆಯಲ್ಲಿ ಮುಖ್ಯ ಆರೋಪಿಗಳಾದ ಅನೋಕೆಲಾಲ್ ರಣಜಿತ್ ಸಿಂಗ್, ಹರನಾರಾಯಣ ನಾನಕ್ ಚಂದ್ ಮತ್ತು ರಾಮಕಿಸಾನ್ ಶರ್ಮ ಇವರಿಗೆ ಮುಂಬಯಿಯ ಎಡಿಶನಲ್ ಸೆಶ್ಯನ್ಸ್ ನ್ಯಾಯಾಧೀಶರಾದ ಜೆ. ಯಂ. ಶೇಲಾಟರು ತಾ. 6ರಲ್ಲು ಆ ಜನ್ಮ ಶಿಕ್ಷೆಯನ್ನು ವಿಧಿಸಿದ್ದಾರೆ. ಈ ಮೂವರೂ ತಪ್ಪಿತಸ್ಥರೆಂದು ಜೂರಿಗಳೆಲ್ಲರೂ ಅಭಿಪ್ರಾಯ ಪಟ್ಟಿದ್ದರು. 1951ನೇ ಎಪ್ರಿಲ್ 20ರಲ್ಲಿ ನಟ್ಟ ಹಗಲಿನಲ್ಲಿ ಈ ಅತಿದೊಡ್ಡ ದರೋಡೆ ಮುಂಬಯಿ ನಗರದಲ್ಲಿ ನಡೆದಿತ್ತು. ಈ ಮೂರು ಜನ ಆರೋಪಿಗಳು ಮತ್ತು ಇನ್ನಿಬ್ಬರು ಲೋಯ್ಡ್ಸ ಬೇಂಕ್ ಕಟ್ಟಡದ ಹಿಂದಿನ ರಸ್ತೆಯ ಮೇಲೆ ನಿಂತಿದ್ದ ಒಂದು ಟೇಕ್ಸಿಯ ಮೇಲೆ ಆಕ್ರಮಣ ನಡೆಸಿದ್ದರು. ಬ್ಯಾಂಕಿನ ಸಿಪಾಯಿಯೊಬ್ಬನು ಹನ್ನೆರಡು ಲಕ್ಷ ರೂಪಾಯಿಗಳ ಕರೆನ್ಸಿ ನೋಟಿದ್ದ ಪೆಟ್ಟಿಗೆಯೊಂದನ್ನು ರಿಜರ್ವ ಬ್ಯಾಂಕಿಗೆ ಒಯ್ಯುತ್ತಿದ್ದನು. ಟೇಕ್ಸಿ ಡ್ರೈವರನನ್ನು ಗುಂಡುಹೊಡೆದು ಕೊಲ್ಲಲಾಯಿತು. ಬ್ಯಾಂಕಿನ ಇತರ ಮೂರು ಜನ ಕೆಲಸಗಾರರಿಗೆ ಗಾಯಗೊಳಿಸಲಾಯಿತು. ದರೋಡೆಗಾರರು ಅದೇ ಟೇಕ್ಸಿಯನ್ನು ಚಲಾಯಿಸಿಕೊಂಡು ಧಾವಿಸಿ ಅದನ್ನು ಒಂದೆಡೆ ಬಿಟ್ಟು ಪರಾರಿಯಾಗಿದ್ದರು.

ಮುಂಬಯಿ ನಗರದಲ್ಲಿ

ವಾಹನಗಳ ಸಂಪಿನ ದೆಸೆಯಿಂದ ಆಹಾರ ಪದಾರ್ಥಗಳ ಸಾಗಾಟಕ್ಕೆ ತೊಂದರೆ ಒದಗಿದಲ್ಲಿ ಅವುಗಳನ್ನು ಸೈನ್ಯದಳವು ಸಾಗಿಸಲು ಅನುಕೂಲವಾಗುವಂತೆ ಸಂರಕ್ಷಣಾ ಶಾಖೆಯವರು ಆಜ್ಞೆಯೊಂದನ್ನು ಹೊರಡಿಸಿದ್ದಾರೆ.

ಮುಂಬಯಿಯ ಲೋಕೋಪಯೋಗಿ ಖಾತಾ ಮಂತ್ರಿ ಶ್ರೀ ಬಿ ಜಿ. ಪಟೇಲರು ಖಾಸಗಿ ವಾಹನಗಳನ್ನು ನಡೆಸಕೂಡದೆಂದು ಒತ್ತಾಯ ಮಾಡುವ ಮುಷ್ಕರಗಾರರ ವಿರುದ್ಧವಾಗಿ ಕಠಿಣ ಕಾರ್ಯಕ್ರಮ ಜರಗಿಸಲಾಗುವುದೆಂದೂ ತಮ್ಮ ಕೆಲಸಗಳನ್ನು ಚಲಾಯಿಸಲು ಮುಂದೆ ಬರುವ ಮೋಟರ್ ಓಪರೇಟರಿಗೆ ಸಕಲ ಸಹಾಯವನ್ನು ಕೊಡಲಾಗುವುದೆಂದೂ ಪತ್ರಿಕಾ ವರದಿಗಾರರ ಸಭೆಯಲ್ಲಿ ಸೂಚಿಸಿದ್ದಾರೆ.

ಕ್ರಮತಪ್ಪಿ ನಡೆಯದಿರಿ

ಮುಂಬಯಿ ಪ್ರಾದೇಶಿಕ ಕಾಂಗ್ರೆಸ ಸಮಿತಿಯ ಶ್ರೀ ಎಸ್. ಕೆ. ಪಾಟೀಲರು ತಾ 6ರಲ್ಲು ಮೋಟರ್ ಮುಷ್ಕರಗಾರರ ಪ್ರತಿನಿಧಿಗಳನ್ನು ಕಂಡು ಟ್ರಾನ್ಸ್‌ಪೋರ್ಟ್ ಆಪರೇಟರರು ತಮ್ಮ ಬೇಡಿಕೆಗಳನ್ನು ಸಾಧಿಸಿಕೊಳ್ಳುವುದಕ್ಕಾಗಿ ಕ್ರಮತಪ್ಪಿ ನಡೆಯಕೂಡದೆಂದೂ, ಅವರ ಬೇಡಿಕೆಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಲಾಗುವುದೆಂದೂ ತಿಳಿಸಿದರು. ತಮ್ಮ ಮುಷ್ಕರವು ಇತರ ಸಾಮಾನ್ಯ ಮುಷ್ಕರದಂತೆ ಆಗಿರುವುದಿಲ್ಲವೆಂದು ಮೋಟರ್ ಆಪರೇಟರರ ಮುಖಂಡರಾದ ಶ್ರೀ ಎ. ಎಸ್. ಇನಾಮದಾರವರು ಸೂಚಿಸಿದರು.

1906 ರಲ್ಲು ಸ್ಥಾಪಿಸಲ್ಪಟ್ಟ
ಸರ್ವತೋಮುಖವಾಗಿ ಅಭಿವೃದ್ಧಿ ಹೊಂದುತ್ತಲಿರುವ
"ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್"
ಇದನ್ನೇ ಸಹಸ್ರಾರು ಜನರು ತಮ್ಮ ಅಚ್ಚುಮೆಚ್ಚಿನ ಬ್ಯಾಂಕನ್ನಾಗಿ
ಆರಿಸಿರುವರು. ನೀವೂ ಇಂದೇ ಒಂದು ಖಾತೆಯನ್ನು ತೆರೆದು
ಬ್ಯಾಂಕಿನ ಗ್ರಾಹಕರಲ್ಲಿ ಒಬ್ಬರಾಗಿರಿ
THE CANARA BANKING CORPORATION LIMITED.
ಪ್ರಧಾನ ಕಾರ್ಯಾಲಯ, ಉಡುಪಿ. (ದ ಭಾರತ)

ನವಯುಗ
ಉಡುಪಿ, ಗುರುವಾರ ೯-೧೦-'೫೨

ಖಾದಿಗೆ ಜನತೆಯ ಪ್ರೋತ್ಸಾಹದ ಆವಶ್ಯಕತೆ

ಮಹಾತ್ಮಾಜೀಯವರ ಬೀಜ ಮಂತ್ರವಾದ ಖಾದಿಯ ಕುರಿತು ಜನತೆಗಿರುವ ಅಸಡ್ಡೆ ಮಾಯವಾಗಿ ಇನ್ನಾದರೂ ಅದಕ್ಕೆ ಯೋಗ್ಯ ಹಾಗೂ ಶೀಘ್ರ ಪ್ರೋತ್ಸಾಹ ದೊರಕಬೇಕಾದುದು ಅತ್ಯಾವಶ್ಯಕವೆಂಬುದನ್ನು ಮಹಾತ್ಮರ ಜನ್ಮದಿನದಂದು ಕಾಂಗ್ರೆಸ್ ಅಧ್ಯಕ್ಷ ಪಂಡಿತ ನೆಹರೂ ಮೊದಲಾದ ರಾಷ್ಟ್ರ ನಾಯಕರು ಸ್ಪಷ್ಟ ಕರೆಯನ್ನು ಜನತೆಗಿತ್ತುದುದು ಸಂದರ್ಭೋಚಿತವಿದೆ. ಗಾಂಧಿಜೀಯವರ ನಶ್ವರ ಶರೀರವು ಅದೃಶ್ಯವಾದರೂ ಅವರ ಉದಾತ್ತ ಧ್ಯೇಯತತ್ವಗಳು ಆಚಂದ್ರಾರ್ಕವಾಗಿ ಉಳಿಯುವಂತಹುಗಳೇ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಅಲ್ಲಗಳೆಯಲು ಶಕ್ಯವೂ ಇಲ್ಲ. ಕಾಂಗ್ರೆಸಿಗರಲ್ಲೆ ಖಾದಿಯ ಮೇಲಣ ವಿಶ್ವಾಸ ಕಡಿಮೆಯಾಗುತ್ತಿರುವುದು ಹಿತಕರವಲ್ಲ. ಉದ್ಬುದ್ಧ ಭಾಷಣಗಳನ್ನೇನೋ ಅನೇಕರು ಕೊಡುವರು; ತತ್ವಉಪದೇಶಮಾಡುವರು. ಆದರೆ ಮಾತಿನ ಮಲ್ಲರಾಗದೆ ಕಾರ್ಯಕರ್ತರಾಗಬೇಕೆಂಬುದನ್ನು ರಾಷ್ಟ್ರಪತಿ ಪ್ರಸಾದರು ಒಂದೆಡೆ ಹೇಳಿದುದನ್ನು ಜನತೆಯು ಮುಖ್ಯತಃ ಕಾಂಗ್ರೆಸಿಗರು ತಮ್ಮ ಅನುನಿತ್ಯದ ಜೀವನದಲ್ಲಿ ಬಳಕೆಯಲ್ಲಿ ತರಬೇಕಾಗಿದೆ. ಬಾಪೂಜಿಗೆ ಪ್ರಿಯವಾದ ಖಾದಿ ಮಂತ್ರವನ್ನು ತ್ರಿಕರಣ ಶುದ್ಧಿಯಿಂದ ಜಪಿಸುತ್ತೇವೆಂದು ಪಣತೊಡಬೇಕಾದ ಕಾಲವೀಗ ಸನ್ನಿಹಿತವಾಗಿದೆ.

ಭಾರತಕ್ಕೆ ಸ್ವಾತಂತ್ರ್ಯ ಲಭಿಸಿ ಐದು ಸಂವತ್ಸರಗಳು ದಾಟಿ ಹೋದುವು, ಈ ಅವಧಿಯಲ್ಲಿ ಖಾದಿಯ ಪರಿಸ್ಥಿತಿ ಹೇಗಿದೆ ಎಂಬುದನ್ನು ವಾರ್ಧದಲ್ಲಿ ಸೇರಿದ ಸರ್ವ ಸೇವಾ ಸಮಾಜದ ಸಭೆಯಲ್ಲಿ ಮಂಡಿಸಲಾದ ವರದಿಯೇ ಸಾರುತ್ತಿದೆ; ಮಾತ್ರವಲ್ಲದೆ ಜಡರಾದವರನ್ನು ಕೂಡಾ ಹೊಡೆದೆಬ್ಬಿಸುವಂತಹುದಾಗಿದೆ. ಸಾಧಾರಣ ರೂಪಾಯಿ 7,5,0000ದಷ್ಟು ಬೆಲೆಬಾಳುವ ಅಧಿಕೃತ ಶುದ್ಧ ಖಾದಿ ಮಾರಾಟವಾಗದೆ ಉಳಿದಿರುವುದು; ಸುಮಾರು 20,0,0000ರೂಪಾಯಿ ಕ್ರಯದ ಖಾದಿ ನೂಲು ರಾಶಿ ರಾಶಿಯಾಗಿ ಬಿದ್ದಿದೆ. ಇದರಿಂದಾಗಿ ಸಾಧಾರಣ 1,50,000 ನೂಲುವವರು ನಿರುದ್ಯೋಗಿಗಳಾಗಿರುವರು. ಖಾದಿಯ ಮೇಲಣ ಆಸಕ್ತಿ ಕಡಿಮೆಯಾದುದೇ ಇದಕ್ಕೆ ಕಾರಣವಲ್ಲದೆ ಮತ್ತೇನ? ಖಾದಿಯು ಲಾಭದಾಯಕವಲ್ಲ ಧರಿಸಲು ನಾಜೂಕಾಗಿಲ್ಲ ಎಂಬ ದೃಷ್ಟಿಯನ್ನು ಬದಲಾಯಿಸಿ ಜನತೆಯ ದೇಶದ ಆರ್ಥಿಕ ಸ್ವಾತಂತ್ರ್ಯ ದೃಷ್ಟಿಯಿಂದಲೂ ರಾಷ್ಟ್ರ ಪ್ರೇಮ, ಧರ್ಮಾಭಿಮಾನದಿಂದಲೂ ಖಾದಿ ಪ್ರೇಮಿಗಳಾಗಿ ಖಾದಿ ವ್ರತಾವಲಂಬಿಗಳಾದರೆ ರಾಶಿಬಿದ್ದ ಖಾದಿಯು ಮಾರಾಟವಾಗುವುದಲ್ಲದೆ ನಿರುದ್ಯೋಗಿ ಬಡ ಜನತೆಗೂ ಉಸಿರು ಬಿಡಲು ಅನುಕೂಲ ವಾತಾವರಣ ಕಲ್ಪಿಸಿದಂತಾಗುತ್ತದೆ. ಹಾಗಾಗಲೆಂದೇ ಗಾಂಧಿ ಜಯಂತಿ ಪಕ್ಷದಲ್ಲಿ ಜನತೆಯನ್ನು ವಿಜ್ಞಾಪಿಸಿಕೊಳ್ಳುತ್ತೇವೆ.

ಮಾರಾಟಕರದ ಪ್ರಶ್ನೆ ಪುನರ್ವಿಮರ್ಶಿಸಲಾಗುವುದಿಲ್ಲ ವ್ಯಾಪಾರಿಗಳಿಗೆ ರಾಜಾಜಿಯ ಸ್ಪಷ್ಟೋಕ್ತಿ

ಮದ್ರಾಸಿನ ಮುಖ್ಯ ಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ತಾ. 5 ರಲ್ಲು ಮದ್ರಾಸಿನ ಎಣ್ಣೆ ಮತ್ತು ಎಣ್ಣೆ ಧಾನ್ಯ ಸಂಘದ ವಾರ್ಷಿಕ ಸಭೆಯನ್ನು ಉದ್ಘಾಟಿಸುತ್ತ ಸದ್ಯಕ್ಕೆ ರಾಜ್ಯದಲ್ಲಿರುವ ಅಸಾಧಾರಣ ಆರ್ಥಿಕ ಕುಟಾಗ್ರತೆಯ ಪರಿಸ್ಥಿತಿಯ ಮೂಲಕ ಸರಕಾರವು ಸದ್ಯಕ್ಕೆ ಮಾರಾಟ ಕರಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆಯನ್ನು ಪುನರ್ವಿಮರ್ಶಿಸಲು ಶಕ್ಯವಿಲ್ಲವೆಂದು ಸ್ಪಷ್ಟೋಕ್ತಿಗಳನ್ನಾಡಿದರು. ಹದಿನೈದು ವರ್ಷಗಳ ಹಿಂದೆ ಹೇರಲ್ಪಟ್ಟ ಕರವು ಇಂದು ನಾನು ಮುಖ್ಯ ಮಂತ್ರಿಯಾದೊಡನೆ ಇಷ್ಟೊಂದು ಚರ್ಚೆಯ ವಿಷಯ ಏಕಾಗಬೇಕು ಎಂಬುದು ನನಗೆ ತಿಳಿಯದಾಗಿದೆಂದೂ ಹೇಳಿದರು

ಕೃಷಿ ಕಾಲೇಜಿಗೆ ಸಂದರ್ಶನ

ಪಶ್ಚಿಮ ಬಂಗಾಳದ ಕೃಷಿ ಮಂತ್ರಿ ಡಾ। ಆರ್. ಅಹಮ್ಮದರು ಕೊಯಮುತ್ತೂರಿನ ಕೃಷಿ ಕಾಲೇಜನ್ನು ಸಂದರ್ಶಿಸಿ ಅಲ್ಲಿಯ ಕಾರ್ಯ ಕಲಾಪಗಳ ಅನುಭವವನ್ನು ಪಡೆದರು.

ಗೋಹತ್ಯೆ ತಡೆಯಲು ಚಳವಳಿ

ರಾಷ್ಟ್ರೀಯ ಸ್ವಯಂಸೇವಕ ಸಂಘವು ಗೋಹತ್ಯೆಯನ್ನು ತಡೆಯಲು ದೇಶದಾದ್ಯಂತ ಆಂದೋಲನ ಚಳವಳಿಯನ್ನು ಇದೇ ತಾ 26ರಿಂದ ಪ್ರಾರಂಭಿಸುವುದೆಂದು ಆರ್. ಎಸ್. ಎಸ್. ಸಂಘದ ನಾಯಕರಾದ ಶ್ರೀ ಎಮ್. ಎಸ್. ಗೋಳ್ವಲ್ಕರರು ಹೈದರಾಬಾದಿನಲ್ಲಿ ಪತ್ರಿಕಾಪ್ರತಿನಿಧಿಗಳೊಡನೆ ಹೇಳಿದರು

ಆರೋಗ್ಯಕ್ಕೆ ವಿಶ್ರಾಂತಿ ಆಗತ್ಯ

ಕೊಯಮುತ್ತೂರಿನ ಟೆಲಿಗ್ರಾಫ್ ಇಂಜಿನಿಯರಿಂಗ್ ರಿಕ್ರಿಯೇಶನ್ ಕ್ಲಬ್ಬಿನ ಆರನೇ ವಾರ್ಷಿಕೋತ್ಸವವು ಕೊಯಮುತ್ತೂರಿನ ಸೆಶ್ಶನ್ಸ್ ಜಡ್ಜರಾದ ಶ್ರೀ ಇ. ಆಂತೋನಿಯವರ ಅಧ್ಯಕ್ಷತೆಯಲ್ಲಿ ಜರಗಿದಾಗ ಎಲ್ಲರ ಆರೋಗ್ಯದ ಮತ್ತು ಸಂತೋಷದ ಕ್ರಮವಾದ ರಕ್ಷಣೆಗೆ ವಿಶ್ರಾಂತಿಯು ಅತ್ಯಗತ್ಯವೆಂದು ಅವರು ಅಧ್ಯಕ್ಷಪೀಠದಿಂದ ಹೇಳಿದರು.

ಬಡತನ ಮತ್ತು ನಿರಕ್ಷರತೆಗಳ ನಿವಾರಣೆಗಾಗಿ ದುಡಿಯಬೇಕು.

ಭೋಜ ನಗರಸಭೆಯು ರಾಷ್ಟ್ರಪತಿ ಡ|ರಾಜೇಂದ್ರಪ್ರಸಾದರಿಗೆ ಮಾನಪತ್ರವನ್ನು ಅರ್ಪಿಸಿದಾಗ, ಬಡತನ ಮತ್ತು ನಿರಕ್ಷರತೆಗಳು ದೇಶದಲ್ಲಿ ನಿವಾರಣೆಯಾಗಲು ಜನತೆಯು ದುಡಿಯಬೇಕೆಂದು ಒತ್ತಿ ಹೇಳಿದರು. ಮುಂದುವರಿಯುತ್ತಾ, ಆರ್ಥಿಕ ಸ್ವಾತಂತ್ರ್ಯಪಡೆಯಲು ಜನತೆಯು ಕಷ್ಟವನ್ನು ಸಹಿಸಿಕೊಂಡು ದುಡಿಯಬೇಕು. ಬರೇ ಭಾಷಣಮಾಡುತ್ತ ಮತ್ತು ದೂರಿಕೊಳ್ಳುತ್ತ ಹೋದರೆ ಆರ್ಥಿಕ ಸ್ವಾತಂತ್ರ್ಯ ದೊರೆಯದು. ಕಾಂಗ್ರೆಸ್ ಸರಕಾರವು ಅದನ್ನು ಮಾಡಲಿಲ್ಲ, ಇದನ್ನು ಮಾಡಲಿಲ್ಲ, ಎಂದು ಜನರು ದೂರುವುದು ಉಂಟು. ಆದರೆ ರಾಷ್ಟ್ರ ಬೆಳಗಾಗುವುದರೊಳಗೆ ಯಾವ ಸರಕಾರಕ್ಕೂ ಮಹಾ ಸಮಸ್ಯೆಗಳನ್ನು ಬಿಡಿಸಲು ಶಕ್ಯವಿಲ್ಲವೆಂಬುದನ್ನು ಜ್ಞಾಪಕಕ್ಕೆ ತರಬೇಕು.

ದೇಶದಲ್ಲಿ ಬಡತನ, ನಿರಕ್ಷರತೆ ಇರುವುದು ವಿಷಾದಕರ. ಈ ಎರಡೂ ಅನಿಷ್ಟಗಳ ನಿವಾರಣೆಗಾಗಿ ಜನತೆಯು ಕಾರ್ಯ ಪ್ರವರ್ತರಾಗಬೇಕು. ಈ ಅನಿಷ್ಟಗಳು ಇಲ್ಲವೆಂದಾದರೆ ನಮಗೆ ನಿಜವಾದ ಸ್ವಾತಂತ್ರ್ಯ ಲಭಿಸಿದಂತಾಗುವುದು ಆ ಗುರಿಯನ್ನು ಮುಟ್ಟಲು ಸದಾ ಸರ್ವದಾ ಎಲ್ಲರೂ ಕಷ್ಟ ಸಹಿಷ್ಣುತೆಯಿಂದ ದುಡಿಯಬೇಕು' ಎಂದು ಹೇಳಿದರು.

ನೆಹರೂರವರು ಅನ್ನಛತ್ರ ಸಂದರ್ಶಿಸಿದರು

ಪ್ರಧಾನಮಂತ್ರಿ ಪಂಡಿತ ನೆಹರೂರವರು ಬಂಗಾಲಪ್ರದೇಶ ಸಂಚಾರವನ್ನು ಕೈಕೊಂಡವರು ತಾ 5ರಲ್ಲು ವೆನುಗೊಂಡದ ಜಿಲ್ಲೆಯ ಕೊಡವಾಲ ಹಳ್ಳಿಯಲ್ಲಿಯ ಅನ್ನಛತ್ರವೊಂದನ್ನು ಸಂದರ್ಶಿಸಿ, ಅಲ್ಲಿ ಕೊಡಲಾಗುವ ಗಂಜಿಯ ಸ್ಯಾಂಪಲನ್ನು ನೋಡಿ ಅದು ರುಚಿಯಾಗಿದೆ ಎಂದು ಹೇಳಿದರು. ಈ ಛತ್ರದಲ್ಲಿ ದಿನಂಪ್ರತಿಯೂ ಸಾಧಾರಣ 550 ಜನರಿಗೆ ಗಂಜಿ ಹಂಚಲ್ಪಡುತ್ತಿದೆ. ಪ್ರಧಾನಮಂತ್ರಿಗಳು ಅಲ್ಲಿಂದ ಇನ್ನೊಂದು ಹಳ್ಳಿಗೆ ಪ್ರಯಾಣಬೆಳೆಸಿ ಅಲ್ಲಿ ಕಾಗದದ ಹೂ ಹಾಗೂ ಅಭ್ರಕದ ಕನ್ನಡಕಗಳನ್ನು ಮಾರುತ್ತಿದ್ದವನೊಬ್ಬನನ್ನು ಕಂಡು ಅವನ ಹತ್ತಿರವಿದ್ದುದನ್ನೆಲ್ಲಾ ಆತನು ಹೇಳಿದ ಐದು ರೂಪಾಯಿ ಕ್ರಯಕ್ಕೆ ಪಡೆದುಕೊಂಡು ಅವೆಲ್ಲವನ್ನೂ ಚಿಕ್ಕ ಮಕ್ಕಳಿಗೆ ಹಂಚಬೇಕೆಂದು ಅಧಿಕಾರಿಗಳ ವಶ ಕೊಟ್ಟರು.

ಸ್ವಯಂ ಸೇವಕ ದಳ

ಹೈದರಾಬಾದಲ್ಲಿ ಸೇರಲಿರುವ 58ನೆ ಕಾಂಗ್ರೆಸ್ ಮಹಾಧಿವೇಶನಕ್ಕೆ ಒಂದೂವರೆ ಸಾವಿರ ಸ್ವಯಂ ಸೇವಕರ ದಳವನ್ನು ಸಿದ್ಧಗೊಳಿಸಲು ಅಧಿವೇಶನದ ಸ್ವಾಗತ ಸಮಿತಿಯು ನಿರ್ಧರಿಸಿದೆ.

ಸರ್ ಮಿರ್ಜಾ ಇಸ್ಮಾಯಿಲರು

ಭಾರತದ ಮುತ್ಸದ್ದಿಗಳಾದ ಶ್ರೀ ಮಿರ್ಜಾ ಇಸ್ಮಾಯಿಲರನ್ನು ತಾ 5ರಲ್ಲು ಇರಾಣದ ಶಹಾರವರು ಕರೆಸಿಕೊಂಡು ಅವರ ಕೂಡೆ ಸ್ವಲ್ಪ ಕಾಲ ಮಾತುಕಥೆ ನಡೆಸಿದರು. ಬಳಿಕ ಅವರು ಇರಾಣದ ವಿದೇಶ ಮಂತ್ರಿ ಶ್ರೀ ಹುಸೈನ ನವಾಬರನ್ನು ಭೇಟಿಯಾದರು. ಸರ್ ಇಸ್ಮಾಯಿಲರು ತಮ್ಮ ವಂಶಜರ ಮೂಲ ಸ್ಥಳವಾದ ಇಸ್ಫಹಾನನ್ನೂ ಸಂದರ್ಶನವೀಯಲಿರುವರು.

ಕಲ್ಕತ್ತದಲ್ಲಿ ಅಗ್ನಿ ನಾರಾಯಣ ಪ್ರಕೋಪ

ಕಲ್ಕತ್ತಾದ ಲಾಲ ಬೀದಿಯ ಒಂ ಗೋದಾಮಿಗೆ ತಾ 4ರಲ್ಲು ರಾತ್ರಿ ಆಕ ಕವಾಗಿ ಬೆಂಕಿ ತಗಲಿ ಸಾಧಾರಣ ಒಂ ಕೋಟಿ ರೂಪಾಯಿ ಬೆಲೆ ಬಾಳುವ ಸರ ಗಳು ನಾಶಹೊಂದಿದವು. ಪೋಲಿಸ ಅಗ್ನಿಶಾಮಕ ದಳದವರೂ ಬೆಂಕಿ ನಂ ಸಲು ಪ್ರಯತ್ನಿಸಿ ಅದನ್ನು ಹತೋಟಿ ತಂದರು.

ಇಂಗ್ಲಾಂಡಿಗೆ ಭಾರತದ ಅಧಿಕಾರಿಗಳು

ಇಂಗ್ಲಾಂಡಿನ ಸಮಾಜ ಸಂರಕ್ಷ ವ್ಯವಸ್ಥೆಗಳನ್ನು ನಿರೀಕ್ಷಿಸಲು ಭಾರತ ಸರಕಾರದ ಮೂವರು ಅಧಿಕಾರಿಗಳು ತಾ 3ರಲ್ಲು ಬೊಂಬಾಯಿಯಿಂದ ವಿಮಾನದಲ್ಲಿ ಜಿನೇವಾಕ್ಕೆ ಹೋಗಿರುವರು. ಇವ 'ಫೆಲೋಶಿಪ್ ಯೋಜನೆ'ಗನುಸಾರವಾ ಇಂಗ್ಲಾಂಡಿಗೆ ಹೋದುದಾಗಿದೆ. ಐ ತಿಂಗಳವರೆಗೆ ಅವರು ಅಲ್ಲಿ ತಂಗುವರು.

ಭಾರತದ ಪತ್ರಿಕಾ ವ್ಯವಸಾಯ

ಅತ್ಯಂತ ಪ್ರಭಾವಶಾಲಿಯಾಗಿದ್ದು ಭ ರತದ ಹೊರನಾಡುಗಳಲ್ಲೂ ಅದರ ರ್ಯ ವಿಸ್ತರಿಸಿರುವುದೆಂದು ಲಂಡನಿನಲ್ಲಿ ವ ಭಾರತದ ಹ್ಯೆಕಮಿಶನರ್ ಶ್ರೀ ಜಿ. ಖೇರರು ಲಂಡನಿನ ಭಾರತೀಯ ತ್ತು ಪೂರ್ವದ ವೃತ್ತಪತ್ರ ಸಂಘದ 3ರಲ್ಲು ಜರಗಿದ ರಜತ ಮಹೋತ್ಸವ ಪ್ರಾರಂಭದಲ್ಲಿ ಮಾತನಾಡುತ್ತಾ ಹೇಳಿದರು.

ನೂಲಿನ ಬೆಲೆ

ಟರಿಫ್ ಬೋರ್ಡಿನ ಸೂಚನೆಯಂ ನೂಲಿನ ಬೆಲೆಯನ್ನು ಏರಿಸದಿದ್ದುದಕ್ಕೆ ಕ್ಷಿಣಭಾರತದ ಗಿರಣಿ ಒಡೆಯರ ಸಂಘ ತನ್ನ ವಿಷಾದವನ್ನು ವ್ಯಕ್ತಪಡಿಸಿ, ಕೇ ದ್ರಸರಕಾರದ ಕೈಗಾರಿಕಾ ಮತ್ತು ವಾ ಜ್ಯ ಮಂತ್ರಿಗಳಿಗೆ ತಂತಿ ಕಳುಹಿಸಿರುವ ಬೆಲೆ ಏರಿಸದಿದ್ದಲ್ಲಿ ಗಿರಣಿಗಳಿಗೆ ತುಂಬ ನಷ್ಟವಾಗುವ ಸಂಭವವಿದೆಯೆಂದೂ ಸೂಚಿಸಲಾಗಿದೆ.

ಮುಂಬಯಿಯಲ್ಲಿ ಗಾಳಿ ಮಳೆ

ಇದೇ ತಾ. 6ನೇ ಸಂಜೆ ಪ್ರಚಂಡ ರುಗಾಳಿ ಬೀಸಿದುದರ ಪರಿಣಾಮವಾಗಿ ಲಿಫೋನು ಮತ್ತು ರೈಲ್ವೆ ಸಾಂಗೆಯು ನಿ ತುಹೋಯಿತು ಗಾಳಿಯೊಡನೆ ಮ ಯೂ ಸುರಿದುದರಿಂದ ಮುಂಬಯಿ ನಗರ ತಗ್ಗಾದ ಕಡೆಗಳಲ್ಲಿ ನೀರುತುಂಬಿ ಹೋಯಿತು. ಇದರಿಂದ ಕೆಲವು ಕಡೆಗಳಲ್ಲಿ ನರಿಗೆ ತುಂಬಾ ಅನಾನುಕೂಲವು ಟಾಯಿತು. ಕೆಲವು ದಿವಸಗಳಿಂ ಬಿಸಿಲ ಬೇಗೆಯಿಂದ ಬಳಲುತ್ತಿದ್ದ ಜನರಿಗೆ ಮಳೆಗಾಳಿಯಿಂದ ಅದ ಕಡಿಮೆಯಾದ್ದರಿಂದ ಸ್ವಲ್ಪ ಮಟ್ಟಿನ ಸಂತೋಷವಾಯಿತು.

ರಾಷ್ಟ್ರಪತಿಗಳ ಆಜ್ಞೆ

ಪ್ರತಿ ಎರಡು ವರ್ಷಗಳಿಗೊಮ್ಮೆ ರಾಜ್ಯ ಪರಿಷತ್ತಿನ ಸದಸ್ಯರನ್ನು ನಿವೃತ್ತಗೊಳಿಸುವುದಕ್ಕಾಗಿ ಮೂರು ಗುಂಪುಗಳನ್ನಾಗಿ ಮಾಡುವ ಬಗ್ಗೆ ರಾಷ್ಟ್ರಪತಿಗಳು ಆಜ್ಞೆ ಹೊರಡಿಸಿದ್ದಾರೆ.

ಉಡುಪಿ, ಮಂಗಳೂರು ನಗರ ಸಭೆಗಳ ಚುನಾವಣೆಯ ಫಲಿತಾಂಶ

ಹೆಚ್ಚಾಗಿ ಸ್ವತಂತ್ರರೇ ಗೆದ್ದು ಬಂದರು.

ಉಡುಪಿ ನಗರಸಭೆಯ ಚುನಾವಣೆಯು 5ನೇ ಸೋಮವಾರ ನಡೆಯಿತು. ಎಲ್ಲ ಗಳಲ್ಲೂ ಬಿರುಸಿನ ಸ್ಪರ್ಧೆಯಿದ್ದರೂ ದಾನವು ಶಾಂತರೀತಿಯಲ್ಲಿ ನೆರವೇರಿತು. ಮತಘಟ್ಟಗಳಲ್ಲಿಯೂ ಸುಮಾರು ಮು ಲಂಕಕ್ಕೆ ಮಿಕ್ಕಿ ಮತದಾರರು ಬಂದು ಮತಗಳನ್ನಿತ್ತರು. ತಾ. 7ರಲ್ಲಿ ಮತ ನೆ ನಡೆದು ಫಲಿತಾಂಶವು ಹೊರಬಿದ್ದಿದೆ.

1ನೇ ಗುಂಡಿಬೈಲು ವಾರ್ಡ್

ಹೆಂಗಸರ ರಿಸರ್ವ್ ಸೀಟ್

ನೋರಮಾ ದೇವಿ (ಸ್ವ) 231
ಚಿತ್ರಾ ಆರ್. ಪೈ (ಕಾಂ) 207

ಜನರಲ್ ಸೀಟ್

ಸ ಸೇರಿಗಾರ (ಕ) 208
ಆರ್. ಕುಂಜೂರು (ಕಾಂ) 207

2ನೇ ಕಡಿಯಾಳಿ

ಪ್ರಭಾಕರ ಪೈ (ಕಾಂ)
(ಅವಿರೋಧ ಆಯ್ಕೆ)

3ನೇ ಕುಂಜಿಬೆಟ್ಟು

ಕೆ. ಪೈ (ಕಾಂ) 178
ನಾರಾಯಣ ನಾಯಕ್ (ಸ್ವ) 158
ಸ ಸೇರಿಗಾರ (ಕ) 94

4ನೇ ಟೆಂಪಲ್

ಕೆ. ಎಲ್. ಐತಾಳ (ಕಾಂ) 206
ನಾರಾಯಣ ನಾಯಕ್ (ಸ್ವ) 112

5ನೇ ಪಣಿಯಾಡಿ

ಎಸ್. ಆಚಾರ್ (ಸ್ವ) 229
ದ. ಕೃಷ್ಣರಾಜ (ಕಾಂ) 120

6ನೇ ತೆಂಕಪೇಟೆ

ವಿಟ್ಠಲ ಕಾಮತ್ (ಕಾಂ) 284
ಗುರುರಾಜ ಭಟ್ (ಸ್ವ) 133

7ನೇ ಸೆಂಟ್ರಲ್

ಕೆ. ಪೈ (ಕಾಂ) 228
ಡಿ ಶೇಷಗಿರಿ ರಾವ್ (ಸ್ವ) 144
ವಸಂತ ಕಾಮತ್ (ಸ್ವ) 10

8ನೇ ಶಿರಿಬೀಡು

ಎಸ್. [illegible] (ಕಾಂ) 239
ನಾಯಕ್ (ಸ್ವ) 124
ಇಬ್ರಾಹಿಂ ಸಾಹೇಬ್ (ಸ್ವ) 11

9ನೇ ಮೂಡನಿಡಂಬೂರು

ಲ ಶೆಟ್ಟಿ (ಸ್ವ) 219
ನ ಶೆಟ್ಟಿ (ಕಾಂ) 129

10ನೇ ಬನ್ನಂಜೆ

ಪಿ. ವಿ. ವ್ಯಾಸರಾವ್ (ಸ್ವ) 136
ನ ನಾಯಕ್ (ಕ) 110
ಕೆ. ಕೃಷ್ಣರಾವ್ (ಕಾಂ) 104
ಮಹಾಬಲ ಶೆಟ್ಟಿ (ಸ್ವ) 60

11ನೇ ಅಂಬಲಪಾಡಿ

[illegible] ರಘುರಾಮ ಶೆಟ್ಟಿ (ಸ್ವ) 194
ಶಂಭು ಶೆಟ್ಟಿ (ಕಾಂ) 116

12ನೇ ಕನಪಾಡಿ

ರಾಮ ರಾವ್ (ಸ್ವ) 242
ಮತಿ ಎಲ್. ಎಂ. ಫೆರ್ನಾಂಡಿಸ್ (ಕಾಂ) 161

13ನೇ ಕಿನ್ನಿಮೂಲ್ಕಿ

ಪಾಂಡುರಂಗ ಶೆಟ್ಟಿ (ಸ್ವ) 219
ಮೈರಾ (ಕಾಂ) 174

14ನೇ ಬೈಲೂರು

ಮಂಜುನಾಥ ರಾವ್ (ಸ್ವ) 141
ಕೇಶವ ಭಟ್ [ಕಾಂ] 134

15ನೇ ವಳಕಾಡು

ದೇವೇಂದ್ರ ಶೆಣೈ (ಕಾಂ) 234
ಗೋಪಾಲಕೃಷ್ಣ [ಕ] 150

16ನೇ ಕಾಡಬೆಟ್ಟು

ಹರಿಜನ ರಿಸರ್ವ್ ಸೀಟ್

ಯು. ರಾಮಚಂದ್ರ (ಕಾಂ)
[ಅವಿರೋಧ ಆಯ್ಕೆ]

ಜನರಲ್ ಸೀಟ್

ಸೀತಾರಾಮ ಕಾಮತ್ (ಸ್ವ) 183
ಕೆ. ಜನಾರ್ದನ ಪೈ [ಕಾಂ] 165

17ನೇ ಅಜ್ಜರಕಾಡು

ಹೆಂಗಸರ ರಿಸರ್ವ್ ಸೀಟ್

ಶ್ರೀಮತಿ ಮನೋರಮಾ ಆಚಾರ್ಯ (ಕಾಂ) 169
ಶ್ರೀಮತಿ ಮನೋರಮಾ ನಾಯಕ್ [ಸ್ವ] 146

ಜನರಲ್ ಸೀಟಿಗೆ

ಯು. ಎಸ್. ನಾಯಕ್ (ಸ್ವ) 168
ಟಿ. ವಿನೋದ ಪೈ [ಕಾಂ] 159

ಕಾಂಗ್ರೆಸಿಗೆ 8, ಕಮ್ಯೂನಿಸ್ಟ್ 1. ಸ್ವತಂತ್ರರಿಗೆ 11 ಸ್ಥಾನಗಳು ದೊರೆತವು. ಒಬ್ಬ ಕಾಂಗ್ರೆಸ್ ಹುರಿಯಾಳುಗಳು 2 ಕಡೆಗಳಲ್ಲಿ ಆರಿಸಿ ಬಂದುದರಿಂದ ಒಂದು ಸ್ಥಾನಕ್ಕೆ ರಾಜೀನಾಮೆ ಕೊಡಬೇಕಾಗಿದ್ದು ಉಪಚುನಾವಣೆ ನಡೆಯಬೇಕಾಗಿದೆ.

ಮಂಗಳೂರಲ್ಲಿ

ತಾ. 6ರಲ್ಲಿ ಚುನಾವಣೆ ನಡೆದು ಮರು ದಿನ ಮತಗಣನೆಯಾಯಿತು. ಫಲಿತಾಂಶವು ಹೀಗಿದೆ.

1ನೇ ದೇರೆಬೈಲು ಪೂರ್ವ

ಹರಿಶ್ಚಂದ್ರ ಆಚಾರ್, ಸ್ವ-520
ಜಿ. ಬಿ. ಎ. ಆಂದ್ರಾದೆ, ಸ್ವ-376

2ನೇ ದೇರೆಬೈಲು ದಕ್ಷಿಣ

ಮಿಜಾರ್ ಗೋವಿಂದ ಪೈ, ಕಾಂ-655
ಶಾಂತಾರಾಮ ಪೈ, ಸ್ವ-458

3ನೇ ಬಿಜೈ

ಬಿ. ಪಿ. ಮಥಾಯಿಸ್, ಕಾಂ-642
ಪಾಲ್ ಡಿ'ಸೋಜ, ಸ್ವ-531

4ನೇ ಕದ್ರಿ ಪಶ್ಚಿಮ

ಡಾ| ಯಂ. ಸಿ. ಶಾಸ್ತ್ರಿ, ಸ್ವ-560
ಇ. ಎ. ಬ್ಯಾಸ್, ಸ್ವ-337

7ನೇ ಕೊಡಿಯಾಲಬೈಲು

ಕೆ. ಪ್ರಭಾಕರ ರೈ, ಸ್ವ-377
ಐ. ಆನಂದ ಸೆಟ್ಟಿ, ಸ್ವ-288
ವರದರಾಜ ಪ್ರಭು, ಕಾಂ-202

9 ಕಂಬಳ ಉತ್ತರ

ಬಿ. ಯಸ್. ಭಾಸ್ಕರ ರೈ, ಸ್ವ-380
ಯಂ. ಲೋಕಯ್ಯ ಸೆಟ್ಟಿ, ಕಾಂ-357

11ನೇ ಬೋಳೂರು

ಯಂ. ಯಸ್. ದಯಾಕರ್, ಸ್ವ-865
ಜಿ. ಎ. ಪುತ್ರನ್, ಕಾಂ-574

12ನೇ ಕುದ್ರೋಳಿ ಉತ್ತರ

ಮೋಹನ ಶೆಣೈ, ಸ್ವ-418
ಮಹಮ್ಮದ್ ಖಾನ್, ಸ್ವ-404
ಆರ್. ಬಿ. ಸಿ. ಡಿ. ಆಂದ್ರಾದೆ, ಸ್ವ-159

13 ಕುದ್ರೋಳಿ ದಕ್ಷಿಣ

ಮಿತ್ರದಾಸ್ ಹೆಗ್ಡೆ, ಸ್ವ-683
ಡಾ| ಬಿ. ಆರ್. ಹೆಗ್ಡೆ, ಕಾಂ-446

14 ನವಾಯತ್

ಯು. ಅಹಮ್ಮದ್ ಹುಸ್ಸೇನ್, ಸ್ವ-405
ಯು. ಅಚ್ಯುತ ನಾಯಕ್, ಸ್ವ-291
ಡಿ. ಮೋಹನ ರಾವ್, ಸ್ವ-135

16 ಸೆಂಟ್ರಲ್

ಡಾ| ಯು. ಪಿ. ಮಲ್ಯ, ಕಾಂ-849
ಶೇಷಗಿರಿ ಪೈ, ಸ್ವ-178

17 ಡೊಂಗರಕೇರಿ

ರಮಾನಂದ ಆಚಾರ್ಯ, ಸ್ವ-300
ಡಾ| ಗಿರಿಧರ ರಾವ್, ಕಾಂ-238
ಪದ್ಮನಾಭ ಕಾಮತ್, ಸ್ವ-135
ವಿ. ಯಸ್. ಪ್ರಭು, ಸ್ವ-92

18 ಮಾರ್ಕೆಟ್

ಯು. ಸುಮಿತ್ರ ಭಟ್, ಸ್ವ-546
ಯಸ್. ಎಸ್. ಕಿಲ್ಲೆ, ಕಾಂ-528

19 ಕೋರ್ಟ್ (2 ಸ್ಥಾನಗಳು)

ಕ್ರಿಶ್ಚನ್ ಕಾರ್ಯಪ್ಪ, ಸ್ವ-663
ಶ್ರೀಮತಿ ಲೋರಾ ಪ್ಯಾಸ್, ಸ್ವ-528
ಶಾರದಾ ತಲ್ವಾರ್, ಕಾಂ-446

20 ಬೆಂದೂರು ಪಶ್ಚಿಮ

ಜೆ. ಬಿ. ಮಚ್ಯಾಡೊ, ಸ್ವ-461
ಕೆ. ಆರ್. ಆಚಾರ್, ಕಾಂ-404

22 ಪಳ್ನೀರು ಪೂರ್ವ

ಮೇರಿ ಬ್ರಿಟ್ಟೋ, ಕಾಂ-380
ವಿಲಿಯಂ ಪಿಂಟೊ, ಸ್ವ-248

28 ಪಳ್ನೀರು ಪಶ್ಚಿಮ

ಮಾಧವ ಕಾಮತ್, ಸ್ವ-510
ಡಿ. ಜೆ ಬ್ರಿಟ್ಟೊ, ಕಾಂ-386

21 ಮಿಲಾಗ್ರಿಸ್

ಡಾ| ನಾಗಪ್ಪ ಆಳ್ವ, ಸ್ವ-500
ಡಾ| ಉಮೇಶರಾವ್, ಕಾಂ-208

25 ಕೆಂಟೋನ್‌ಮೆಂಟ್

ಬಿ. ಆರ್. ಕರ್ಕೇರ, ಕಾಂ-676
ಕೇಶವ ನಾಯಕ್, ಸ್ವ-178

27 ಹೊಯ್ಗೆ

ಗಜಾನನ ರಾವ್, ಸ್ವ-814
ಜೋಸೆಫ್ ಬ್ರಿಟ್ಟೊ, ಕಾಂ-654

28 ಬೋಳಾರ-ಪಶ್ಚಿಮ

ಕೊರಗಪ್ಪ ರೈ, ಸ್ವ-512
ಎ. ಎಲ್. ರೇಗೊ, ಸ್ವ-511

30 ಮಂಗಳಾದೇವಿ

ಯಂ. ರಮಾನಾಥ್, ಸ್ವ-755
ಬಿ. ಯಲ್. ಎನ್. ರೈ, ಕಾಂ-690
ಜೆ. ಎ. ರೊಡ್ರಿಗಸ್, ಸ್ವ-14

31 ಅತ್ತಾವರ ಉತ್ತರ

ಮಾಧವ ಸುವರ್ಣ, ಕಾಂ-474
ಅಮೃತ ಯಂ. ಸ್ವ-445

33 ಜೆಪ್ಪು-ಉತ್ತರ (2 ಸ್ಥಾನಗಳು)

ಡಬ್ಲ್ಯು. ಜೆ. ಡಿ'ಸೋಜ, ಸ್ವ-950
ಎಸ್. ಜೆ. ಸಾಲಿನ್ಸ್, ಸ್ವ-556
[illegible]-323
ರಮಣ, ಕಾಂ-220

38 ಜೆಪ್ಪು ದಕ್ಷಿಣ

ಕೆ. ವಾಮನ, ಸ್ವ-629
ಪಿ. ನರಸಿಂಹ ಪೈ, ಕಾಂ-375

ನಗರ ಸಭೆಯ ಒಟ್ಟು 36 ಸ್ಥಾನಗಳಲ್ಲಿ 27 ಸ್ಥಾನಗಳಿಗೆ ಮಾತ್ರ ಸ್ಪರ್ಧೆ ನಡೆಯಿತು, ಉಳಿದ 9 ಸ್ಥಾನಗಳಲ್ಲಿ ಮೊದಲೇ ಅವಿರೋಧವಾಗಿ ಆಯ್ಕೆಯಾಗಿತ್ತು.

ಅವಿರೋಧವಾಗಿ ಆರಿಸಲ್ಪಟ್ಟವರು:

5ನೇ ಕದ್ರಿ ಮಧ್ಯ ವಾರ್ಡ್ ಕೆ. ಸೂರ್ಯನಾರಾಯಣ ಅಡಿಗ, 6ನೇ ಕದ್ರಿ ಪೂರ್ವ-ಡಾ| ಯಸ್. ಉಮಾನಾಥ್ ಸುವರ್ಣ, 8ನೇ ಕಂಬಳ ದಕ್ಷಿಣ-ಶ್ರೀಮತಿ ಕಲ್ಯಾಣಿ ಸೆಟ್ಟಿ [ಕಾ], 10ನೇ ಮಣ್ಣಗುಡ್ಡೆ-ಎಂ. ಶ್ರೀನಿವಾಸ ನಾಯಕ್ [ಕಾ], 15ನೇ ಬಂದರ್-ಸಿ. ಕುನ್ಹಿ ಪಕ್ಕಿ, 21ನೇ ಬೆಂದೂರು ಪೂರ್ವ—ಟಿ. ಬಿ. ಡಿ'ಸೋಜ, 26ನೇ ಪೋರ್ಟ್-ಬಿ. ಯಂ. ಜೆಸನ್ ರಾಜ, 29ನೇ ಬೋಳಾರ ಪೂರ್ವ-, [illegible] ಮೂರ್ತಿ, 32ನೇ ಅತ್ತಾವರ ದಕ್ಷಿಣ- ಶ್ರೀಮತಿ ಬಿ. ಯಸ್. ಪಿಂಟೊ [ಕಾ].

ಮಂಗಳೂರಲ್ಲಿ ಕಾಂಗ್ರೆಸ್ 20 ಸ್ಥಾನಗಳಿಗೆ ಮಾತ್ರ ಉಮೇದ್ವಾರರನ್ನು ನಿಲ್ಲಿಸಿತ್ತು. ಇವರಲ್ಲಿ 6 ಜನರು ಮಾತ್ರ ಆರಿಸ್ಪಟ್ಟರು. ಅವಿರೋಧವಾಗಿ ಬಂದವರು 3 ಕಾಂಗ್ರೆಸಿಗರು. ಒಟ್ಟು 36 ಸ್ಥಾನಗಳಲ್ಲಿ 9 ಸ್ಥಾನ ಮಾತ್ರ ಕಾಂಗ್ರೆಸಿಗೆ ದೊರೆತಂತಾಯಿತು.

ಬೇಂಕ್ ದರೋಡೆಗಾರರಿಗೆ ಜೀವಾವಧಿ ಶಿಕ್ಷೆ

ಭಾರತದಲ್ಲಿ ಅತೀದೊಡ್ಡ ದರೋಡೆಯೆಂದು ಹೆಸರುವಡೆದ ಲೋಯ್ಡ್ಸ್ ಬೇಂಕಿನ ದರೋಡೆ ಕಟ್ಲೆಯಲ್ಲಿ ಮುಖ್ಯ ಆರೋಪಿಗಳಾದ ಅನೋಕೆಲಾಲ್ ರಣಜಿತ್ ಸಿಂಗ್, ಹರನಾರಾಯಣ ಸಾನೆಕ್ ಚಂದ್ ಮತ್ತು ರಾಮಕಿಶನ್ ಶರ್ಮ ಇವರಿಗೆ ಮುಂಬಯಿಯ ಎಡಿಶನಲ್ ಸೆಶನ್ಸ್ ನ್ಯಾಯಾಧೀಶರಾದ ಜೆ. ಯಂ. ಶೀಲಾಟರು ತಾ. 6ರಲ್ಲು ಆಜನ್ಮ ಶಿಕ್ಷೆಯನ್ನು ವಿಧಿಸಿದ್ದಾರೆ. ಈ ಮೂವರೂ ತಪ್ಪಿತಸ್ಥರೆಂದು ಜೂರಿಗಳೆಲ್ಲರೂ ಅಭಿಪ್ರಾಯ ಪಟ್ಟಿದ್ದರು. 1951ನೇ ಎಪ್ರಿಲ್ 20ರಲ್ಲಿ ನಟ್ಟ ಹಗಲಿನಲ್ಲಿ ಈ ಅತಿದೊಡ್ಡ ದರೋಡೆ ಮುಂಬಯಿ ನಗರದಲ್ಲಿ ನಡೆದಿತ್ತು. ಈ ಮೂರು ಜನ ಆರೋಪಿಗಳು ಮತ್ತು ಇನ್ನಿಬ್ಬರು ಲೋಯ್ಡ್ಸ್ ಬೇಂಕ್ ಕಟ್ಟಡದ ಹಿಂದಿನ ರಸ್ತೆಯ ಮೇಲೆ ನಿಂತಿದ್ದ ಒಂದು ಟೇಕ್ಸಿಯ ಮೇಲೆ ಆಕ್ರಮಣ ನಡೆಸಿದ್ದರು. ಬ್ಯಾಂಕಿನ ಸಿಪಾಯಿಯೊಬ್ಬನು ಹನ್ನೆರಡು ಲಕ್ಷ ರೂಪಾಯಿಗಳ ಕರೆನ್ಸಿ ನೋಟಿದ್ದ ಪೆಟ್ಟಿಗೆಯೊಂದನ್ನು ರಿಜರ್ವ ಬ್ಯಾಂಕಿಗೆ ಒಯ್ಯುತ್ತಿದ್ದನು. ಟೇಕ್ಸಿ ಡ್ರೈವರನನ್ನು ಗುಂಡುಹೊಡೆದು ಕೊಲ್ಲಲಾಯಿತು. ಬ್ಯಾಂಕಿನ ಇತರ ಮೂರು ಜನ ಕೆಲಸಗಾರರಿಗೆ ಗಾಯಗೊಳಿಸಲಾಯಿತು. ದರೋಡೆಗಾರರು ಅದೇ ಟೇಕ್ಸಿಯನ್ನು ಚಲಾಯಿಸಿಕೊಂಡು ಧಾವಿಸಿ ಅದನ್ನು ಒಂದೆಡೆ ಬಿಟ್ಟು ಪರಾರಿಯಾಗಿದ್ದರು.

ಮುಂಬಯಿ ನಗರದಲ್ಲಿ

ವಾಹನಗಳ ಸಂಪಿನ ದೆಸೆಯಿಂದ ಆಹಾರ ಪದಾರ್ಥಗಳ ಸಾಗಾಟಕ್ಕೆ ತೊಂದರೆ ಒದಗಿದಲ್ಲಿ ಅವುಗಳನ್ನು ಸೈನ್ಯದಳವು ಸಾಗಿಸಲು ಅನುಕೂಲವಾಗುವಂತೆ ಸಂರಕ್ಷಣಾ ಶಾಸನವು ಆಜ್ಞೆಯೊಂದನ್ನು ಹೊರಡಿಸಿದ್ದಾರೆ.

ಮುಂಬಯಿಯ ಲೋಕೋಪಯೋಗಿ ಶಾಖಾ ಮಂತ್ರಿ ಶ್ರೀ ಬಿ ಜಿ. ಪರೇಖರು ಖಾಸಗಿ ವಾಹನಗಳನ್ನು ನಡೆಸ ಕೂಡದೆಂದು ಒತ್ತಾಯ ಮಾಡುವ ಮುಷ್ಕರಗಾರರ ವಿರುದ್ಧವಾಗಿ ಕಠಿಣ ಕಾರ್ಯಕ್ರಮ ಜರಗಿಸಲಾಗುವುದೆಂದೂ ತಮ್ಮ ಕೆಲಸಗಳನ್ನು ಚಲಾಯಿಸಲು ಮುಂದೆ ಬರುವ ಮೋಟರ್ ಓಪರೇಟರಿಗೆ ಸಕಲ ಸಹಾಯವನ್ನು ಕೊಡಲಾಗುವುದೆಂದೂ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಸೂಚಿಸಿದ್ದಾರೆ.

ಕ್ರಮತಪ್ಪಿ ನಡೆಯದಿರಿ

ಮುಂಬಯಿ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಶ್ರೀ ಎಸ್. ಕೆ. ಪಾಟೀಲರು ತಾ 6ರಲ್ಲಿ ಮೋಟರ್ ಮುಷ್ಕರಗಾರರ ಪ್ರತಿನಿಧಿಗಳನ್ನು ಕಂಡು ಟ್ರಾನ್ಸ್‌ಪೋರ್ಟ್ ಆಪರೇಟರು ತಮ್ಮ ಕೇಳಿಕೆಯನ್ನು ಸಾಧಿಸಿಕೊಳ್ಳುವುದಕ್ಕಾಗಿ ಕ್ರಮತಪ್ಪಿ ನಡೆಯಕೂಡದೆಂದೂ, ಅವರ ಕೇಳಿಕೆಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಲಾಗುವುದೆಂದೂ ತಿಳಿಸಿದರು. ತಮ್ಮ ಮುಷ್ಕರವು ಇತರ ಸಾಮಾನ್ಯ ಮುಷ್ಕರದಂತೆ ಆಗಿರುವುದಿಲ್ಲವೆಂದು ಮೋಟರ್ ಆಪರೇಟರರ ಮುಖಂಡರಾದ ಶ್ರೀ ಎ. ಎಸ್. ಇರಾಣಿಯವರು ಸಾರಿದರು.

ಕೋಟೆ ಮುಂಡುಗಾರು— ಸ್ಥಳೀಯ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಗಾಂಧಿ ಜಯಂತಿಯು ತಾ 2ರಲ್ಲು ಯಶಸ್ವಿಯಾಗಿ ಆಚರಿಸಲ್ಪಟ್ಟಿತು. ಶಾಲಾ ವಠಾರದ ಎದುರಿನ ಪಂಚಾಯತ ರಸ್ತೆ, ಪಂಚಾಯತ ಉದ್ಯಾನವನ್ನು ಶುಚಿಗೊಳಿಸುವಿಕೆ, ಸೂತ್ರಯಜ್ಞ, ಶ್ರೀ ಸೀತಾರಾಮ ಕೋಟೆಯವರ ಅಧ್ಯಕ್ಷತೆಯಲ್ಲಿ ಸಭೆ ಭಾಷಣ, ಯಕ್ಷಗಾನ ಮೊದಲಾದ ಕಾರ್ಯಕ್ರಮಗಳಾದುವು

ದೇರ್ಳಕಟ್ಟೆ— ಇದೇ ತಾ. 3ರಲ್ಲು ಸಂಜೆ ಕಲ್ಲಂಗಡಿಯ ಡಾ। ಬಾಲಕೃಷ್ಣ ಮುದ್ದ ಇವರ ಇಂಗ್ಲಿಷ್ ಆಯುರ್ವೇದ ಚಿಕಿತ್ಸಾಲಯವು ದೇರ್ಳಕಟ್ಟೆಯಲ್ಲಿ ಉಳ್ಳಾಲದ ರೂರಲ್ ಮೆಡಿಕಲ್ ಆಫೀಸರ್ ಡಾ. ಬಾಳಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಶ್ರೀಗಳಾದ ಕಲ್ಲಂಗಡಿ ಕೆ. ಪಿ. ಪರಮೇಶ್ವರ ಮತ್ತು ಕೆ. ಪಿ. ಲಕ್ಷ್ಮಣಯವರ ಭಗವದ್ಗೀತಾ ವಾಚನವು ಆದ ಮೇಲೆ ಸಭಾಂತ್ಯವಾಯಿತು.

ಕುಂಬಳೆ— ಸುಳ್ಯ ಫಿರ್ಕದಲ್ಲಿ ಗ್ರಾಮಾಭಿವೃದ್ಧಿ ಪದ್ಧತಿಯನ್ನು ಜಾರಿಗೆ ತರಲು ಸರಕಾರವು ತೀರ್ಮಾನಿಸಿರುವುದಾಗಿ ತಿಳಿದು ಬರುತ್ತದೆ.

ಪೌರತನ ಶಿಕ್ಷಣ ತರಬೇತಿ ಕೇಂದ್ರ ಮಣಿಪಾಲ

ಮಂಗಳೂರು ಟ್ರೈನಿಂಗ್ ಕಾಲೇಜಿನ ಸೆಕೆಂಡರಿ ಶಾಲೆಯ ತರಬೇತಿ ಉಪಾಧ್ಯಾಯರ ಬಗ್ಗೆ ವ್ಯವಸ್ಥೆ ಮಾಡಲ್ಪಟ್ಟ ಪೌರತನ ಶಿಕ್ಷಣ ತರಬೇತಿ ಕೇಂದ್ರವು ತಾ 5ರಂದು ಸಂಜೆ ಡಾ। ಟಿ. ಮಾಧವ ಪೈಗಳಿಂದ ಉದ್ಘಾಟಿಸಲ್ಪಟ್ಟಿತು. ಪ್ರಾರ್ಥನೆಯಾದೊಡನೆ ಶ್ರೀ ಬಿ. ಪಿ. ರಮಣ, ಕ್ಯಾಂಪ್ ಆಫೀಸರರು ಶಿಬಿರದ ಉದ್ದೇಶವನ್ನು ವಿವರಿಸಿ ಅತಿಥಿಗಳನ್ನು ಸ್ವಾಗತೀಕರಿಸಿದರು. ಅಧ್ಯಕ್ಷರು ಪ್ರಾರಂಭ ಭಾಷಣ ಮಾಡುತ್ತಾ ತರಬೇತಿ ಮಹತ್ವವನ್ನು ವಿವರಿಸಿದರು. ತರಬೇತಿ ವಿದ್ಯಾರ್ಥಿಗಳಿಂದ ಕೊಳಲುವಾದನ ಮತ್ತು ಗಾಯನ ಜರಗಿದನಂತರ ಅಧ್ಯಕ್ಷರು ಮುಕ್ತಾಯ ಭಾಷಣದಲ್ಲಿ ವ್ಯಕ್ತಿಯ ಮಹತ್ವ, ರಾಜಕೀಯ ರಂಗದಲ್ಲಿ ಆತನ ಹೊಣೆಗಾರಿಕೆ ಇತ್ಯಾದಿಗಳನ್ನು ವಿವರಿಸಿದರು. ಲಘುಪಹಾರ, ವಂದನಾರ್ಪಣೆಯೊಂದಿಗೆ ಉದ್ಘಾಟನಾ ಸಮಾರಂಭ ಕೊನೆಗೊಂಡಿತು.

ಮುಂಬಯಿ— ದ. ಕ. ಜಿಲ್ಲೆಯವರಾಗಿದ್ದು ಬೊಂಬಾಯಿಯಲ್ಲಿ ವಾಸ್ತವ್ಯ ಮಾಡಿಕೊಂಡಿದ್ದು ಕೆಲವು ಸಮಯದ ಹಿಂದೆ ಪರರಾಷ್ಟ್ರ ಸಂಚಾರಕ್ಕಾಗಿ ಹೋದ ಡಾ। ಡಿ. ನಾರಾಯಣ ರಾಯರು ಕಳೆದ ತಾ. 27ರಲ್ಲು ಬೊಂಬಾಯಿಗೆ ಹಿಂತಿರುಗಿ ಬಂದರು. ಶ್ರೀಯುತರು ಲಂಡನಿನಲ್ಲಿ ಕಳೆದ ಜುಲೈ ತಿಂಗಳಲ್ಲಿ ಜರುಗಿದ ವೈದ್ಯಕೀಯ ಕಾಂಗ್ರೆಸಿನಲ್ಲಿ ಭಾಗವಹಿಸಿದ್ದರಲ್ಲದೆ ಯುರೋಪಿನ ಹಲವಾರು ಆಸ್ಪತೆಗಳನ್ನೂ ವಿದ್ಯಾಸಂಸ್ಥೆಗಳನ್ನೂ ಕಾರ್ಖಾನೆ ಮೊದಲಾದುವನ್ನೂ ಸಂದರ್ಶಿಸಿದರು.

ಮದ್ರಾಸು — ತಾ 28-9-52 ರಂದು ವಾಲ್ ಟೆಕ್ಸ್ ಥಿಯೇಟರಿನಲ್ಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ದಸರಾ ಮಹೋತ್ಸವವು ಆಚರಿಸಲ್ಪಟ್ಟಿತು. ಮಾನ್ಯ ಮಂತ್ರಿ ಡಾ। ಆರ್ ನಾಗಣ್ಣ ಗೌಡರು ಅನಿವಾರ್ಯ ಕಾರಣದಿಂದ ಬಾರದುದರಿಂದಾಗಿ ತಿರುವಾಂಕೂರು ಸರಕಾರದ ನಿವೃತ್ತ ಮುಖ್ಯ ನ್ಯಾಯಾಧೀಶ ಶ್ರೀ. ಯು. ಪದ್ಮನಾಭ ಉಕ್ಕಿಲ್ಲಾಯರು ಅಧ್ಯಕ್ಷತೆ ವಹಿಸಿದ್ದರು. ಪ್ರತೀಕಾರ ವೆಂಬ ಪೌರಾಣಿಕ ಮತ್ತು ಆಷಾಢ ಭೂತಿ ಎಂಬ ಸಾಮಾಜಿಕ ನಾಟಕಗಳು ಸಂಘದ ಸದಸ್ಯರಿಂದ ಅಭಿನಯಿಸಲ್ಪಟ್ಟವು.

ಮುಢಾಳೆ—ಹಳೆವಿದ್ಯಾರ್ಥಿ ಸಂಘದ ನೇತೃತ್ವದಲ್ಲಿ ಗಾಂಧೀಜಯಂತಿಯು; ಶ್ರೀ ಹಿಲಿಮಜಲು ದಾಸಪ್ಪ ರೈಗಳಿಂದ ಧ್ವಜಾರೋಹಣವಾಗಿ; ಲಘೂಪಹಾರವಾದ ತರುವಾಯ ಪಠೇಲ್ ಕೊರಗಪ್ಪ ರೈಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ಬಹು ವಿಜೃಂಭಣೆಯಿಂದ ಜರಗಿತು.

ಮೂಲ್ಕಿಯಲ್ಲಿ ಸಮಾಜವಿಕಾಸ ಯೋಜನೆಯ ಉದ್ಘಾಟನೆ

ರಾಮಕೃಷ್ಣ ಪೂಂಜರ ಸ್ಮಾರಕ ರೇಡಿಯೋ ಮಂದಿರದ ಆರಂಭೋತ್ಸವ

ಇದೇ ತಾ. 2ರಲ್ಲು ಗಾಂಧಿ ಜಯಂತಿ ಸಲುವಾಗಿ ಬೆಳಿಗ್ಗೆ ಶಾಲಾ ಮಕ್ಕಳ ಹಾಗೂ ಇತರರ ಪೇಟೆ ಮೆರವಣಿಗೆಯಾಗಿ ಗಾಂಧಿ ಮೈದಾನದಲ್ಲಿ ರಾಷ್ಟ್ರಧ್ವಜಾರೋಹಣ ಕಾರ್ಯವನ್ನು ಪಂಚಾಯತು ಬೋರ್ಡ್ ಪ್ರೆಸಿಡೆಂಟ್ ಶ್ರೀ ಎಮ್. ರಾಮಣ್ಣ ಶೆಟ್ಟರು ನೆರವೇರಿಸಿದರು. ನಂತರ ಶಾಲಾ ಮಕ್ಕಳಿಗೆ ಸಿಹಿತಿಂಡಿ ಹಂಚಲಾಯಿತು. ಅದಾಗಿ ಶಾಲಾ ಮಕ್ಕಳೂ ಹಳ್ಳಿಗರೂ ಕೂಡಿಕೊಂಡು ಗಾಂಧಿ ಮೈದಾನವನ್ನು ಸಮತಟ್ಟುಗೊಳಿಸಿದರು.

ಪಾನನಿರೋಧ ಮಂತ್ರಿಗಳಾದ ಮಾನ್ಯ ಪಳಣಿ ಸ್ವಾಮಿ ಗೌಂಡರು ಚಿತ್ರಾಪಾಡಿಯಲ್ಲಿ ಒಂದು ಬಾವಿ ಅಗೆಯುವ ಕೆಲಸವನ್ನು ಉದ್ಘಾಟಿಸುತ್ತಾ ಗ್ರಾಮಸ್ಥರು ನೀರು ಸೇದಲು ಸ್ವಚ್ಛ ಪಾತ್ರೆಗಳನ್ನೇ ಉಪಯೋಗಿಸಬೇಕೆಂದು ಒತ್ತಿ ಹೇಳಿದರು. ನಂತರ ಕೊಂಕಣತೋಡಿಗೆ ಕಟ್ಟವನ್ನು ಹಳ್ಳಿಗರು ಹಾಕುತ್ತಿರುವುದನ್ನು ಮಂತ್ರಿಗಳು ನೋಡಿ ಸಂತೋಷ ಪಟ್ಟರು. ಬಳಿಕ ಕಂಪೋಸ್ಟು ಹೊಂಡವನ್ನು ತೆರೆದರು. ನಂತರ ಸಾರ್ವಜನಿಕ ಸಭೆಯು ಗಾಂಧಿ ಮೈದಾನದಲ್ಲಿ ಜರಗಿತು. ಮಾನ್ಯ ಮಂತ್ರಿಗಳಿಗೆ ಮೂಲ್ಕಿ ಫಿರ್ಕಾ ಕ್ಷೇತ್ರದ ಕಡೆಯಿಂದ ಆದರದ ಸ್ವಾಗತ ಪತ್ರವೊಂದು ಅರ್ಪಿಸಲಾಯಿತು. ಅದರಲ್ಲಿ ಹೇಳಿರುವುದೇನಂದರೆ 'ಮದ್ರಾಸು ಸರಕಾರವು ಗ್ರಾಮಾಭಿವೃದ್ಧಿಯ ಕಾರ್ಯವನ್ನು ಮೂಲ್ಕಿಫಿರ್ಕಾಕ್ಕೆ ಅನ್ವಯಿಸಿದ ಪರಿಣಾಮವಾಗಿ ಹಲವು ಕುಂದುಕೊರತೆಗಳು ನಿವಾರಣೆಯಾಗಿವೆ. ಸಮಾಜವಿಕಾಸಯೋಜನೆ ಅನ್ವಯಿಸಿದಾಗ ನಮ್ಮ ಅಭಿವೃದ್ಧಿಗೆ ಕೆಲವು ತೊಂದರೆಗಳಿವೆ. ಪಾವಂಜೆ ನದಿಯು ನಮ್ಮ ಜಿಲ್ಲಾ ಕೇಂದ್ರವಾಗಿರುವ ಮತ್ತು ಕೃಷಿವ್ಯವಸಾಯಗರೋತ್ಪತ್ತಿಗಳಿಗೆ ಮಾರಾಟ ಸ್ಥಳವೂ ನಿರ್ಯಾತದ್ವಾರವೂ ಆಗಿರುವ ಮಂಗಳೂರನ್ನು ನಮ್ಮಿಂದ ಬೇರ್ಪಡಿಸುತ್ತದೆ. ಅದು ನಮಗೆ ಅತೀ ಹತ್ತಿರದ ಬಂದರು ಮತ್ತು ರೈಲ್ವೇ ನಿಲ್ದಾಣವಾಗಿರುತ್ತದೆ. ಆದುದರಿಂದ ಪಾವಂಜೆ ನದಿಗೂ ಸೇತುವೆಯು ಶೀಘ್ರ ಕಟ್ಟಿಸಲ್ಪಡಬೇಕಾಗಿದೆ

ಮಾನ್ಯ ಮಂತ್ರಿಗಳು ಉತ್ತರವೀಯುತ್ತಾ ನಾನು ಪಾನನಿರೋಧ ಶಾಖೆಯಲ್ಲಿರುವವನಾದರೂ ಸ್ವಾಗತ ಪತ್ರದಲ್ಲಿ ಹೇಳಲಾದ ವಿಷಯಗಳನ್ನು ಸಂಬಂಧಪಟ್ಟ ತನ್ನ ಸಹೋದ್ಯೋಗಿಗಳ ಗಮನಕ್ಕೆ ತರುವೆನು. ಅಲ್ಲದೆ ಆ ಕುರಿತು ತನ್ನಿಂದಾದ ಸಹಕಾರವನ್ನೀಯುವೆನೆಂದರು.

ಕೀರ್ತಿಶೇಷ ರಾಮಕೃಷ್ಣ ಪೂಂಜರ ಸ್ಮಾರಕ ಆಕಾಶವಾಣಿ ಮಂದಿರವನ್ನು ಮಾನ್ಯ ಮಂತ್ರಿಗಳು ನಂತರ ಉದ್ಘಾಟನೆ ಮಾಡಿದರು. ಶ್ರೀ ಎಮ್ ಆರ್ ಎಚ್ ಪೂಂಜರು ಮೂಲ್ಕಿ ಜನತೆಯ ಕಡೆಯಿಂದ ಬಿನ್ನವತ್ತಳೆಯೊಂದನ್ನು ಮಂತ್ರಿಗಳಿಗೆ ಒಪ್ಪಿಸಿದರು. ಸ್ಮಾರಕ ಕಮಿಟಿ ಸೆಕ್ರೆಟರಿಗಳಾದ ಶ್ರೀ ಬಿ ಎಸ್ ಭಾಸ್ಕರ ರೈಗಳು ಕಮಿಟಿ ವರದಿಯನ್ನೋದಿದರು. ಈ ಸಂದರ್ಭದಲ್ಲಿ ಕಮ್ಯುನಿಟಿ ಪ್ರೊಜೆಕ್ಟಿನ ಕುರಿತು ಡಾ। ಚಂಪಾ, ಶ್ರೀ ಸಿಂಹಾದ್ರಿ ಮೊದಲಾದವರು ಮಾತನಾಡಿದರು. ಹಳೆಯಂಗಡಿ ಮೊಗವೀರ ಯುವಕರ ವ್ಯಾಯಾಮ ಪ್ರದರ್ಶನ ಕೂಡಾ ನಡೆಯಿತು, ಜಿಲ್ಲಾ ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟ್ ಶ್ರೀ ಎಫ್ ಎಕ್ಸ್ ಡಿ ಪಿಂಟೊ, ಡಾ॥ ನಾಲ್ಕ ಮೊದಲಾದವರು ಮಂಗಳೂರಿನಿಂದ ಈ ಸಮಾರಂಭಕ್ಕೆ ದಯಮಾಡಿಸಿದ್ದರು.

ಕಾರ್ಕಳ— ಮಂಗಳೂರಿನ ಬಿ ಟಿ. ಕಾಲೇಜಿನಲ್ಲಿ ತರಬೇತಿ ಹೊಂದುತ್ತಿರುವ ವಿದ್ಯಾರ್ಥಿ ಅಧ್ಯಾಪಕರ ನಾಗರಿಕ ಅಭ್ಯಾಸದ ಕೇಂದ್ರವನ್ನು ತಾ 3ರಲ್ಲು ಉಡುಪಿ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ. ಎಚ್. ಸುಂದರರಾಯರು, ಶ್ರೀನಿವಾಸ ಆಶ್ರಮದಲ್ಲಿ ತೆರೆದರು ಬಿ. ಟಿ. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ. ಬಿ. ರಾಘವ ಬಾಳಿಗರು ಸ್ವಾಗತ ಭಾಷಣ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮುಂದಿನ ನಾಗರಿಕರಾಗುವ ಇಂದಿನ ಮಕ್ಕಳಿಗೆ ಶಿಕ್ಷಣವನ್ನು ಕೊಡುವ ಜವಾಬ್ದಾರಿ ಹೊತ್ತ ಉಪಾಧ್ಯಾಯರಿಗೆ ಇಂತಹ ತರಬೇತಿ ವರ್ಗವು ಅತ್ಯಾವಶ್ಯಕವೆಂದು ವಿದ್ಯಾರ್ಥಿ ಅಧ್ಯಾಪಕರು ಇತರ ಸದುಪಯೋಗ ಪಡೆಯ ಬೇಕೆಂದೂ ಹೇಳಿದರು.

ಉಡುಪಿ

ಗಾಂಧಿ ಜಯಂತಿ ತಾ 2ರಲ್ಲು ಗಾಂಧಿ ಜಯಂತಿ ಸಲುವಾಗಿ ಬೆಳಿಗ್ಗೆ ಗಾಂಧಿ ಮೈದಾನದಲ್ಲಿ ಮುನಿಸಿಪಲ್ ಕಮಿಶನರ್ ಶ್ರೀ ಗೋಪಾಲ ಮೆನೂನ್ನರು ಧ್ವಜಾರೋಹಣ ಮಾಡಿದರು, ಬಳಿಕ ಸೂತ್ರಯಜ್ಞ ಖಾದಿ ಮಾರಾಟ ಕಾರ್ಯಕ್ರಮಗಳಾದುವು

ಸಂಜೆ ರಥಬೀದಿಯಲ್ಲಿ ಸರ್ಕಲ್ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ಕೌನ್ಸಿಲ್ ಒಫ್ ಸ್ಟೇಟ್ಸ್ ಸದಸ್ಯ ಶ್ರೀ ಕೆ. ಎಸ್. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಮಿಟಿ ಕಾರ್ಯದರ್ಶಿಯರಾದ ಶ್ರೀ ಹಳ್ಳಿ ರಿಯವರು ಕಾಂಗ್ರೆಸ್ ಸಂಸ್ಥೆ, ಕಾಂಗ್ರೆ ಸರಕಾರಗಳು ಸಾಧಿಸಿದ ಕಾರ್ಯಗಳನ್ನು ವಿವರಿಸಿ ಜನತೆಯು ಚಿಕ್ಕಪುಟ್ಟ ದೋಷಗ ನ್ನು ಸಹಿಸಿಕೊಂಡು ಕಾಂಗ್ರೆಸ್ ಸಂಸ್ಥೆಯ ಬೆಂಬಲಿಗರಾಗಿ ಉಳಿಯುವಂತೆ ಜನ ಯು ಪ್ರಯತ್ನಿಸಬೇಕೆಂದರು. ಶ್ರೀ ಟಿ ಪೈ, ಎಮ್. ಎಲ್. ಎ. ಅವರು ಮಾತನಾಡುತ್ತಾ ಕಾಂಗ್ರೆಸನ್ನು ಟೀಕಿಸುವವರಿಗೆ ಉತ್ತರವನ್ನಿತ್ತರು ಶ್ರೀ ಆರ್. ಆರ್. ಕ ಜಾರ್‌ರವರು ಧನ್ಯವಾದಗಳನ್ನರ್ಪಿಸಿದ

ಮಳೆ —ಕಳೆದ ನಾಲ್ಕೈದು ದಿನಗ ದ ಅಲ್ಪ ಸ್ವಲ್ಪ ಮಳೆ ಬೀಳುತ್ತಿದೆ.

ಸ್ವೀಕಾರ

ಕರ್ನಾಟಕ ಡೈರೆಕ್ಟರಿ 1952. ಪ್ರಕಾಶಕರು:—ಆಜಾದ್ ಪಬ್ಲಿಕೇಶನ್ಸ್, ಬಸವನ ಗುಡಿ, ಬೆಂಗಳೂರು ಕ್ರೌನ್ಸಿನ ಸುಮಾರು 400 ಪುಟಗ ಬೆಲೆ ರೂ. 5—0—0 ಕನ್ನಡದಲ್ಲಿ ನ ಸಾಹಸವಿದು. ವಿಮರ್ಶೆ ಹಿಂದಿನಿಂದ.

PLACE YOUR LIFE ASSURANCE WITH A COMPANY OF YOUR OWN - - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policyholders and Representatives At whatever stage we welcome your association with the POPULAR.

The Popular Insurance Co. Ltd.

"Popular Buildings", MANGALORE—1.

ಬರುವ ಚಿತ್ರಗಳು:—

ಮಾಯಾ ಕುದುರೆ [Magic Horse]

ಪಾತ್ರವರ್ಗ:— ಅಂಜಲಿದೇವಿ, ನಾಗೇಶ್ವರ ರಾವ್, ರೇಲಂಗಿ.

ಥಿಂಗ್ಸ್ ಟು ಕಮ್ (Things to Come)

ಮುಂಬರುವ ಯಂತ್ರಯುಗದ ಕಥಾಭಾಗದಿಂದೊಡಗೂಡಿದ

ಸಾಹಸ ಚಿತ್ರ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ

For Protection and Provision

Consult

The New Guardian of India Life Insurance Co., Ltd.

Estd] Head office: **MADRAS** [1934

A Policy in this Progressive Life Office is good investment; its Agency is valuable business connection.

Applications for representation are invited from influential persons.

Please apply to: **The Branch Manager,**
Diamond Building, Hampankatta,
MNGALORE, S. K.

ದಯಮಾಡಿ ನಿಮ
ಚಂದಾಹಣ ಕಳಿಸಿ

ದಿ
ನ್ಯೂ ಕರ್ನಾಟ
ಪ್ರೊವಿಡೆಂಟ್ ಇನ್ಸೂರೆ
ಕಂಪೆನಿ, ಲಿಮಿಟೆಡ್

ಉಡುಪಿ, ದ. ಕನ್ನ

ಒಂದು ಸಾವಿರ ರೂಪಾಯಿ ವರೆಗೆ ಮಾಡಲಿಕ್ಕೂ, ಏಜನ್ಸಿ ಯಾ ಸ್ಪೆ ಏಜನ್ಸಿ ಪಡೆದು ದುಡಿತಕ್ಕೆ ತಕ್ಕ ಫಲ ಪಡೆಯಲಿಕ್ಕೂ ಯೋಗ್ಯವಾದ ವಿಡೆಂಟ್ ವಿಮಾ ಕಂಪೆನಿ ನಿಯಮ. ಬರೆಯಿರಿ

[illegible] ನವಮುದ್ರಣ
[illegible]
ಪ್ರಸವ
[illegible]
ಸಾಧನ ಪ್ರಕಟನಾಲಯ
ದೊಡ್ಡಬಳ್ಳಾಪುರ

ಮಂಗಳೂರು

ಪಾನನಿರೋಧ ಮಂತ್ರಿಗಳ ಆಗಮನ.—ಮದ್ರಾಸು ಸರಕಾರದ ಪಾನನಿರೋಧ ಮಂತ್ರಿ ಶ್ರೀ ಪಿ. ಸಿ ಪಳನಿ ಗೌಂಡರ್, ಅವರು ತಾ. 1ರಲ್ಲಿ ಮಂಗಳೂರಿಗೆ ಆಗಮಿಸಿದಾಗ ಇಲ್ಲಿನ ನಾಗರಿಕರೂ ಅಧಿಕಾರಿಗಳೂ ಅವರನ್ನು ರೈಲು ನಿಲ್ದಾಣದಲ್ಲಿ ಸ್ವಾಗತಿಸಿದರು. ಮರುದಿನ ಬೆಳಿಗ್ಗೆ ಮಂತ್ರಿಗಳು ಮೂಲ್ಕಿ, ಸುರತ್ಕಲ್, ಕಿನ್ನಿಗೋಳಿ ಮುಂತಾದೆಡೆಗಳಿಗೆ ಹೋಗಿ ಜಿಲ್ಲೆಯಲ್ಲಿ ಸಮಾಜ ವಿಕಾಸ, ಯೋಜನೆಯ ಉದ್ಘಾಟನೆ ಮಾಡಿದರು. ಮಂತ್ರಿಗಳು ಹರಿಜನರಿಗೂ ಬೆಸ್ತರಿಗೂ ಉಪಯೋಗವಾಗುವಂತಹ ಒಂದು ಬಾವಿಯ ಕೆಲಸವನ್ನು ತಾನೇ ಗುದ್ದಲಿಯಿಂದ ಆರಂಭಿಸಿದರು. ಸುರತ್ಕಲ್ಲಿನಲ್ಲಿ ಹೊಸ ರಸ್ತೆಗೊಂದು ಗುದ್ದಲಿ ಹಿಡಿದು ಅಗೆದು ಆರಂಭೋತ್ಸವ ನೆರವೇರಿಸಿದರು. ವಯಸ್ಕರ ಶಿಕ್ಷಣಾರಂಭಕ್ಕೆ ಮುಂದಾಗಿ ಬಂದ ಕೆಲವರಿಗೆ ತಾನೇ ಒಂದೆರಡು ಸವಾಲುಗಳನ್ನು ಕೇಳಿದರು. ಗಾಂಧಿ ಜಯಂತ್ಯುತ್ಸವದಲ್ಲಿ ಭಾಷಣ ಮಾಡಿದರು. ಮಾನ್ಯ ಮಂತ್ರಿಗಳಿಗೆ ದ. ಕ. ಜಿ. ಭಾ. ವೈದ್ಯ ಸಂಘ ಮತ್ತು ಜಿಲ್ಲಾ ಪರಿಷತ್ತಿನ ಶಿಷ್ಟಮಂಡಲವು ಒಂದು ಮನವಿಯನ್ನು ಒಪ್ಪಿಸಿತು. ಆಸವಾರಿಷ್ಟಗಳ ಕುರಿತಾದ ನಿರ್ಬಂಧ ಮೊದಲಾದವನ್ನು ನಿವೇದಿಸಲಾಗಿತ್ತು. ಮನವಿಯಲ್ಲಿ ಕಾಣಿಸಿದ ವಿಷಯಗಳನ್ನು ಸಹಾನುಭೂತಿಯಿಂದ ಪರಿಶೀಲಿಸಲಾಗುವುದೆಂದು ಮಾನ್ಯ ಮಂತ್ರಿಗಳು ಆಶ್ವಾಸನೆಯಿತ್ತರು. ತಾ 3ರಂದು ಬೆಳಿಗ್ಗೆ ಮದ್ರಾಸಿನತ್ತ ಕಡೆ ಪ್ರಯಾಣ ಬೆಳೆಸಿದರು.

ವಸಂತಪ್ರೇಮಿ ಮಂಡಲಿಯ ವರ್ಧಂತಿ- ಬೆಸೆಂಟ್ ಶಾಲೆಯ ಹಳೆ ವಿದ್ಯಾರ್ಥಿನಿಯರ ಸಂಘವಾದ ವಸಂತ ಮಂಡಲಿಯ ವರ್ಧಂತಿಯು ತಾ 29ರಲ್ಲಿ ಸಂಜೆ ಶ್ರೀಮತಿ ರಾಜಲಕ್ಷ್ಮಿ ಆಚಾರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಶಾಲೆಯ ಹೆತ್ತವರ ದಿನಾಚರಣೆಯು ತಾ 30ರಲ್ಲಿ ಶ್ರೀಮತಿ ಎಸ್. ಶಾಂತೇರಿ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿತು.

ಮನಿಯಾರ್ಡರು ಫಾರ್ಮುಗಳಲ್ಲಿ ಹಣ ಕಳುಹಿಸುವವರು ಇನ್ನು ಮುಂದೆ ಫಾರ್ಮಿನ ಕೂಪನಿನ ಹಿಂಬದಿಯಲ್ಲಿ ತಮ್ಮ ಹೆಸರು ವಿಳಾಸವನ್ನು ಸ್ಪಷ್ಟವಾಗಿ ಬರೆಯಲೇ ಬೇಕೆಂದು ಸರಕಾರವು ನಿರ್ಧರಿಸಿರುತ್ತದೆ. ಇದನ್ನು ಪ್ರತಿಯೊಬ್ಬರೂ ಗಮನಿಸತಕ್ಕದ್ದು.

ವಿಜಯದಶಮಿ-- ಮಂಗಳೂರಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಆಶ್ರಯದಲ್ಲಿ ವಿಜಯದಶಮಿ ಉತ್ಸವವು ತಾ 28ರಲ್ಲಿ ಶ್ರೀ ಅದಮಾರು ಮಠದ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಯಂಸೇವಕರ ಮೆರವಣಿಗೆಯಾಗಿ ವ್ಯಾಯಾಮ ಪ್ರದರ್ಶನವಾಯಿತು. ನಂತರ ಜಿಲ್ಲಾ ಚಾಲಕರಾದ ಶ್ರೀ ಕಾರ್ಕಳ ಸದಾಶಿವರಾಯರು ಸ್ವಾಗತ ಭಾಷಣ ಮಾಡಿದರು ಬಳಿಕ ಕರ್ನಾಟಕ ಪ್ರಾಂತ ಪ್ರಚಾರಕ ಶ್ರೀ ಯಾದವರಾವ್, ಅವರು ಭಾಷಣ ಮಾಡುತ್ತ, ಸಂಘದ ಧ್ಯೇಯವು ಋಷಿ ಪರಂಪರೆಯೇ ಆಗಿದೆ ಎಂದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಎಲ್ಲರೂ ನಿಸ್ವಾರ್ಥ ಜೀವನ ನಡೆಸಿ ಮಾನವಕೋಟಿಗೆ ಕಲ್ಯಾಣ ಬಯಸಬೇಕೆಂದರು. ಸ್ವಾಮಿಗಳವರು ತಾ 26ರಿಂದ 28ರ ತನಕ ಮಂಗಳೂರು ಕದ್ರಿ ದೇವಸ್ಥಾನದಲ್ಲಿ ನವರಾತ್ರಿ ಉತ್ಸವವನ್ನು ಕೂಡಾ ಆಚರಿಸಿದರು.

ಉದ್ಘಾಟನೆ—ಅರವಿಂದ ಮೋಟರ್ಸ್ ಎಂಬ ವ್ಯಾಪಾರಿ ಸಂಸ್ಥೆಯ ಉದ್ಘಾಟನೆಯು, ನಮ್ಮ ಜಿಲ್ಲಾ ಕಲೆಕ್ಟರ್ ಶ್ರೀ ಸಿ.ಸಿ. ರಾಮಕೃಷ್ಣನ್, ಅವರು ತಾ 28ರಲ್ಲಿ ನೆರವೇರಿಸಿದರು.

ಗಾಂಧಿ ಜಯಂತಿಯು—ತಾ 2ರಲ್ಲಿ ಮಂಗಳೂರಿನ ಕೇಂದ್ರ ಮೈದಾನದಲ್ಲಿ ಕಾಂಗ್ರೆಸ್ ಪಕ್ಷದ ನಾಯಕತ್ವದಲ್ಲಿ ಶ್ರೀ ಎ ಶಂಕರಾಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಲ್. ಸಿ. ಪಾಯಸ್, ಎನ್. ಎಸ್ ಕಿಲ್ಲೆ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಮಂಗಳೂರಿನ ವಿವಿಧ ಸಂಸ್ಥೆಗಳಲ್ಲೂ ಗಾಂಧಿ ಜಯಂತಿಯು ವಿವಿಧ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿತು.

ವರ್ಧಂತಿ ಸಮಾರಂಭ—ಗಣಪತಿ ಶಾಲೆಯ ವರ್ಧಂತಿ ಸಮಾರಂಭವು ತಾ 28ರಲ್ಲಿ ಸಂಜೆ ಶ್ರೀ ಬೆನಗಲ್ ಸಂಜೀವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ಟರ್ ಶ್ರೀ ಎಚ್ ಪಾಂಡುರಂಗ ರಾಯರು ವರದಿಯನ್ನೋದಿದ ಬಳಿಕ ಬಹುಮಾನ ವಿತರಣೆಯಾದ ಬಳಿಕ ಶ್ರೀ ಪಿ ಸೋಮನಾಥ ರಾಯರು ಶಾಲಾ ಪ್ರಶಸ್ತಿ ಭಾಷಣ ಮಾಡಿದರು. ವಿವಿಧ ವಿನೋದಾವಳಿಗಳಿಂದ ಸಮಾರಂಭ ಕೊನೆಗೊಂಡಿತು.

ಸಂಸ್ಮರಣೆಯುತ್ಸವ—ಬೆಸೆಂಟ್ ಮಾತೆಯ ಸಂಸ್ಮರಣ ಮಹೋತ್ಸವವು, ಬೆಸೆಂಟ್ ಬಾಲಿಕಾ ಪಾಠಶಾಲೆಯ ಹುಟ್ಟು ಹಬ್ಬವು ತಾ 1ರಲ್ಲಿ ಸಂಜೆ ಶ್ರೀ ಬೆನಗಲ್ ಸಂಜೀವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಸರಕಾರಿ ಬುನಾದಿ ಶಿಕ್ಷಣ ತರಬೇತಿ ಶಾಲೆಯಲ್ಲಿ ತಾ. 2ರಲ್ಲಿ ಬೆಳಿಗ್ಗೆ ವಿದ್ಯಾರ್ಥಿ ಅಧ್ಯಾಪಕರಿಂದ ಪ್ರಭಾತಫೇರಿ ನಡೆಯಿತು. ಶ್ರೀ ಕೆ. ಸದಾನಂದ ಹೆಗ್ಡೆಯವರು ಧ್ವಜವನ್ನು ಏರಿಸಿದರು. ಬಳಿಕ ಶ್ರೀ ಎಮ್. ರಾಜೀವನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಗಾಂಧೀಜೀಯವರ ಕುರಿತು ಭಾಷಣವಾದ ಬಳಿಕ ಶ್ರೀ ಜಿ. ರಾಜೀವ ಭಂಡಾರಿಗಳು ಧನ್ಯವಾದಗಳನ್ನರ್ಪಿಸಿದರು.

ಕಲ್ಲಡ್ಕ: ತಾ. 26-9-52ರಲ್ಲಿ ಸ್ಥಳೀಯ ಶಾಲೆಯಲ್ಲಿ ಶಾರದಾ ಪೂಜೆ ಮತ್ತು ರಾತ್ರಿಗೆ ಮಕ್ಕಳ ವಿವಿಧ ಚಟುವಟಿಕೆಗಳು ಊರ ಮತ್ತು ಪರವೂರಿನ ಅರ್ಥದಾರಿಗಳ ಕೂಡುವಿಕೆಯಿಂದ ಯಕ್ಷಗಾನ ಕೂಟವು ಸಹ ನೆರವೇರಿತು

ಅತ್ರಕಳ.— ತಾ 28-9-52ರಲ್ಲಿ ಅತ್ರಕಳ ಕೊರಗರ ಕಾಲನಿಯ ಶಂಕು ಸ್ಥಾಪನೆಯು ಜಿಲ್ಲಾ ಕಲೆಕ್ಟರ್ ಶ್ರೀ ಸಿ ಎ ರಾಮಕೃಷ್ಣನ್ I C. S. ಇವರ ದಿವ್ಯ ಹಸ್ತದಿಂದ ನೆರವೇರಿತು ಅತ್ರಕಳ ಗ್ರಾಮ ಸೇವಾ ಸಂಘದ ಅಧ್ಯಕ್ಷ ಶ್ರೀ ಅಪ್ಪಣ್ಣ ಸೆಟ್ಟಿ ಹೂಮಾಲೆಯನ್ನರ್ಪಿಸಿ ಸತ್ಕರಿಸಿದ ಬಳಿಕ ಡಾ ಸಂಜೀವ ನಾಥರು ಸ್ವಾಗತ ಭಾಷಣ ಮಾಡಿದರು ಕಾರ್ಯದರ್ಶಿ ಶ್ರೀ ರಘುರಾಮ ಸೆಟ್ಟಿ ಕಲೆಕ್ಟರರಿಗೆ ಭಿನ್ನವತ್ತಳೆಯನ್ನರ್ಪಿಸಿದರು. ಮಾನ್ಯ ಕಲೆಕ್ಟರರು ಸಂದರ್ಭೋಚಿತ ಭಾಷಣ ಮಾಡಿದನಂತರ ಡಾ. ಎಸ. ಚಂಪನವರು ಹರಿಜನರ ಸಂಕಷ್ಟಗಳ ಕುರಿತು ಭಾಷಣ ಮಾಡಿದರು. ಶ್ರೀ ತಮ್ಮಣ್ಣ ಸೆಟ್ಟಿ ಧನ್ಯವಾದಗಳನ್ನರ್ಪಿಸಿದರು

ಪುಣಚಾ— ಹಿಂದುಸ್ಥಾನೀ ಪ್ರಚಾರ ಸಮಿತಿ, ಬಾಲಾ ಸಮಿತಿ, ಗ್ರಾಮಸಂಘ, ಬೆಳಕು ಸಂಘ-ಇವುಗಳ ವಾರ್ಷಿಕೋತ್ಸವವು ಕಳೆದ ತಾ 27ರಲ್ಲಿ ಪರಿಯಾಲ್ತಡ್ಕ ಐಡೆಡ್ ಹಾ। ಎ। ಶಾಲೆಯಲ್ಲಿ ಶ್ರೀ ಸಿ. ಕೃಷ್ಣ ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಜರಗಿತು ಗಾಯನ ನಾಟಕ ಮೊದಲಾದ ಕಾರ್ಯಕ್ರಮಗಳಾದುವು.

ಸಾಂತೂರು- ಸ್ಥಳೀಯ ಸಾಂತೂರು ಕೊಪ್ಲ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಕಳೆದ ತಾ 26ರಲ್ಲಿ ಬೆಳಿಗ್ಗೆ ಶಾರದಾಪೂಜಾ ಸಮಾರಂಭವು, ಮಕ್ಕಳ ಹೆತ್ತವರ ಸಮಕ್ಷಮ ಯಶಸ್ವಿಯಾಗಿ ಜರಗಿತು.

ಹಿರೇಬೆಟ್ಟು- ಪಟ್ಲ ಶ್ರೀ ಗಣಪತಿ ಎಯಿಡೆಡ್ ಎಲಿಮೆಂಟರಿ ಶಾಲೆಯಲ್ಲಿ ಕಳೆದ ತಾ 27ರಲ್ಲಿ ಹೆತ್ತವರ ಕೂಟದ ವಿಶೇಷ ಸಭೆಯು ಡಾ। ಗಿರಿಧರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರ್ ಶ್ರೀ ಪಿ. ಗೋವಿಂದ ನಾಯ್ಕರ ಸ್ವಾಗತ ಮಾತುಗಳಾದನಂತರ ಸಭಿಕರ ಮಾತುಗಳಾದುವು.

ಫಲಿಮಾರು- ಸ್ಥಳೀಯ ಬೋರ್ಡ್ ಹಾ। ಎ। ಶಾಲೆಯಲ್ಲಿ ಕಳೆದ ತಾ 29ರಲ್ಲಿ ಶಾರದಾಪೂಜಾ ಸಮಾರಂಭ ಜರಗಿತು.

ಸುರತ್ಕಲ್- ಇಲ್ಲಿಯ ಅಗ್ಗಿದ ಕರಾ ಹಾ। ಎ। ಶಾಲೆಯ ವರ್ಧಂತಿ ಸಮಾರಂಭ ಮತ್ತು ದಸರಾ ಮಹೋತ್ಸವವು ಕಳೆದ ತಾ. 29ರಲ್ಲಿ ಶ್ರೀ ಇಡ್ಯ ವೆಂಕಟಪ್ಪಯ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಸಭಿಕರ ಭಾಷಣ, ಪಾರಿತೋಷ ವಿತರಣೆ, ವಿವಿಧ ವಿನೋದಾವಳಿಗಳಾದುವು

ನೀಲಾವರ--ಸ್ಥಳೀಯ. ಮಹಿಷಮರ್ದಿನಿ ಶಾಲೆಯ ವರ್ಧಂತ್ಯುತ್ಸವವು ಕಳೆದ ತಾ. 26ರಲ್ಲಿ ಉಡುಪಿ ರೇಂಜಿನ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾರದಾ ಪೂಜಾ ಪ್ರಾರ್ಥನಾದಿಗಳಾದ ಬಳಿಕ ಶಾಲಾ ಮನೇಜರ್ ಶ್ರೀ ಅಣ್ಣಪ್ಪ ಭಟ್ಟರು ಸ್ವಾಗತ ಭಾಷಣ ಮಾಡಿದರು. ಶಾಲಾ ಮಕ್ಕಳ ವಿವಿಧ ವಿನೋದಾವಳಿಗಳಾದ ಬಳಿಕ ಶಾಲಾ ಹಳೆ ವಿದ್ಯಾರ್ಥಿಗಳಿಂದ ಯಕ್ಷಗಾನ ನಾಟಕ ಪ್ರದರ್ಶನ ನಡೆಯಿತು. ಬಹುಮಾನ ವಿತರಣೆ ಅಧ್ಯಕ್ಷರ ಸಮಯೋಚಿತ ಭಾಷಣಗಳಾಗಿ ಧನ್ಯವಾದಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಮಿಜಾರು—ಎಡಪದವು ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ. ಎಸ್ ಬಾಲಕೃಷ್ಣ ರೈಗಳವರ ಅಧ್ಯಕ್ಷತೆಯಲ್ಲಿ ಶಾರದಾ ಪೂಜಾ ಸಮಾರಂಭವೂ ಈ ಕೇಂದ್ರದ ಹೆತ್ತವರ ಸಭೆಯೂ ಕಳೆದ ತಾ. 26ರಲ್ಲಿ ಯಶಸ್ವಿಯಾಗಿ ಜರಗಿತು. ಶಾಲಾ ಹೆಡ್ಮಾಸ್ಟರ್ ಶ್ರೀ. ಎಸ್. ಕೋರಗ ಸೆಟ್ಟರು ಈ ಕೇಂದ್ರದಲ್ಲಿ ವಿದ್ಯಾಪ್ರಚಾರದ ಕುರಿತು ಮಾತಾಡಿದರು. ಗುರುಪುರದಿಂದ ಮೂಡಬಿದ್ರೆಯ ವರೆಗೆ 12 ಮೈಲುಗಳ ಅಂತರಕ್ಕೆ ಒಂದು ಮಾಧ್ಯಮಿಕ ಶಾಲೆಯು ಅಗತ್ಯವಿರುವುದರಿಂದ ಎಡಪದವು ಬೋರ್ಡ್ ಎಲಿಮೆಂಟರಿ ಶಾಲೆಯನ್ನು ಹಯರ್ ಎಲಿಮೆಂಟರಿ ಶಾಲೆಯನ್ನಾಗಿ ಮಾರ್ಪಡಿಸುವ ಆವಶ್ಯಕತೆಯ ಸೂಚನೆ ಸಭೆಯ ಮುಂದೆ ಬಂದಾಗಿ ಸರಕಾರವನ್ನು ಮತ್ತು ಜಿಲ್ಲಾ ಬೋರ್ಡನ್ನು ಈ ಬಗ್ಗೆ ಕೇಳಿಕೊಳ್ಳಬೇಕೆಂದು ಸಭೆಯ ಅಭಿಪ್ರಾಯವಾಯಿತು. ಕಟ್ಟೋಣ ವಿಸ್ತರಣದ ಬಗ್ಗೆ ತಕ್ಕ ವ್ಯವಸ್ಥೆ ಮಾಡಲು ಕಮಿಟಿಯೊಂದು ರಚಿಸಲಾಯಿತು.

ಪೆರ್ಡೂರು- ತಾ 2ರಲ್ಲಿ ಸ್ಥಳೀಯ ಬಿ. ಇ. ಎಮ್. ಎಲಿಮೆಂಟರಿ ಶಾಲೆಯಲ್ಲಿ ಗಾಂಧಿ ಜಯಂತಿ ನಿಮಿತ್ತ ಶ್ರೀ ಎನ್. ಪದ್ಮನಾಭ ಸೆಟ್ಟರು ಧ್ವಜಾರೋಹಣ ಮಾಡಿದರು. ರಾತ್ರಿ ಪೆರ್ಡೂರು ಕಲಾಮಂಡಳಿಯ ಹುಟ್ಟುಹಬ್ಬವು ಶ್ರೀ ಶ್ರೀಪತಿರಾವ್ ಫಲಿಮಾರ್ಕರ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮಂಡಳಿಯ ಅಧ್ಯಕ್ಷ ಶ್ರೀ ಎಸ್. ಎಸ್. ಶ್ರೀನಿವಾಸನ್ ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಎ ಪಿ ಕಲ್ಯಾಣಯವರು ಮಂಡಳಿಯ ವರದಿಯನ್ನೋದಿದರು. ಪೆರ್ಡೂರು ಎರಡನೆ ವಲಯದ ಎಕ್ಸ್‌ಟೆನ್ಶನ್ ಆಫೀಸರ್ ಶ್ರೀ ಕೆ. ಭೋಜರಾಜ ಸೆಟ್ಟರೇ ಮೊದಲಾದವರ ಮಾತುಗಳಾದ ಬಳಿಕ ಸಂಗೀತ ಕಚೇರಿ ನಡೆಯಿತು. ಯಕ್ಷಗಾನ ಕಾರ್ಯಕ್ರಮವಾಗಿ ಐತಿಹಾಸಿಕ ನಾಟಕ ಪ್ರದರ್ಶನ ಸಂದರ್ಭಾರ್ಪಣೆಯೊಂದಿಗೆ ಸಮಾರಂಭ

[೧ನೇ ಪುಟದಿಂದ ಮುಂದುವರಿದುದು]

ಗುರುತಿಲ್ಲ. ಮಕ್ಕಳಿಗೆ ತಂದೆಯ ಪರಿಚಯವಿಲ್ಲ. ಇದು ಹೋಗಿ ಮನೆಯ ಹಿತ್ತಿಲಲ್ಲಿ ಮಕ್ಕಳೊಂದಿಗೆ ತಾಯಿತಂದೆಗಳು ಒಟ್ಟಿಗೆ ಆಡುತ್ತಿರುವ ದಿನ ಬರಬೇಕು. ತನ್ನ ಕಾಲೇಜಿನಲ್ಲಿ ಹೊಸತಾಗಿ ಬಂದ ಪ್ರೊಫೆಸರರು ಹೇಗಿರುವರೆಂಬುದನ್ನು ತಂದೆಗೆ ಮಗ ಹೇಳುವಂತಿರಬೇಕು. ಶಾಲಾ ವಾರ್ಷಿಕೋತ್ಸವದಲ್ಲಿ ತನಗೆ ಸಿಕ್ಕಿದ ಮೆಚ್ಚಿನ ಬಗ್ಗೆ ಪ್ರಶಂಸೆಯ ನಾಲ್ಕು ಮಾತುಗಳನ್ನು ಕೇಳುವ ಭಾಗ್ಯ ಮಗಳದ್ದಾಗಬೇಕು.

ಇದು ತವಕದ ಬದುಕಿನಿಂದ ನೆರವೇರುವಂಥದಲ್ಲ: ನಿಧಾನ, ಹಾಗೂ ಶಾಂತಿಯ ಜೀವನವೇ ನಮಗೆ ಬೇಕಾದ ಆದರ್ಶ. ಅವಸರದಿಂದ ಸಂಬಂಧ ಕಡಿವುದು-ನಿಧಾನದಿಂದ ಸಂಬಂಧ ಗಾಢವಾಗುವುದು

ಓಂತತ್ಸತ್||

ಚಾತ್ರಿ ಚಿನ್ನದ ನೆಕ್ಲೇಸ್, ಕೆಂಪುವಾರು ಚೈನುಗಳು, ಬೆಂಡೋಲೆ,
ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು
ಯಾವಾಗಲೂ ಸಿದ್ಧವಿವೆ.
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ
ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ ಉಡುಪಿ, ದ. ಭಾರತ.
ಫೋನು ನಂಬ್ರ 16

The East & West Insurance Co., Ltd.,
[ESTD:] East & West Building, BOMBAY, 1. [1913
ದಿ ಈಸ್ಟ್ ಎಂಡ್ ವೆಸ್ಟ್
ಸ್ಥಾಪನೆ:] ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್. [1913
ಒಟ್ಟು ನಿಧಿ ರೂಪಾಯಿ 1 ಕೋಟಿ 5 ಲಕ್ಷಕ್ಕೂ ಮಿಕ್ಕು ಇದೆ.
ಒಟ್ಟು ಆಸ್ತಿಬದುಕು ರೂಪಾಯಿ 1 ಕೋಟಿ 23 ಲಕ್ಷಕ್ಕೆ ಮೇಲ್ಪಟ್ಟು ಇದೆ.
ಪೋಲಿಸಿ ಹೋಲ್ಡರರ ಸೇವೆಯೇ ನಮ್ಮ ಧ್ಯೇಯ.
ಆರು ತಿಂಗಳಿಗೊಂದಾವರ್ತಿ ಸರ್ತಿಯಂತೆ ನಮ್ಮ ಈ ಸಲದ ಕಾರು ಪ್ರಯಾಣದಲ್ಲಿ ಹುಬ್ಬಳ್ಳಿ, ಬೆಳಗಾಂ, ಕೊಲ್ಹಾಪುರ, ಪೂನ, ಬೊಂಬಾಯಿ ಸಿಟಿ ಮತ್ತು ಸಬರ್ಬನ್ ಪಳ್ಳಿಗಳಲ್ಲಿ ಪ್ರತ್ಯಕ್ಷ ನೆರವಾದ ನಮ್ಮ ಪೋಲಿಸಿದಾರರು ಮತ್ತು ಏಜೆಂಟರು ತೋರಿಸಿದ ಪ್ರೀತಿ ವಿಶ್ವಾಸಗಳಿಗೆ ನಾವು ತುಂಬಾ ಆಭಾರಿಗಳಾಗಿದ್ದೇವೆ
ನಮ್ಮ ಆಫೀಸುಗಳು ಶಿರ್ವ ಮತ್ತು ಪಡುಬಿದ್ರಿ, ನಮ್ಮ ಏರಿಯಾದ ಪ್ರತೀ ಜಿಲ್ಲೆಗಳಲ್ಲೂ ಯೋಗ್ಯ ಸಂಬಳದಲ್ಲಿ ಕೆಲಸಮಾಡಬಲ್ಲ ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ.
ಮೆಸ್ಸರ್ಸ್ ಹೆಗ್ಡೆ ಎಂಡ್ ರಾವ್
ಚೀಫ್ ಏಜಂಟರು,
ದಕ್ಷಿಣ ಕನ್ನಡ, ಉತ್ತರ ಕನ್ನಡ, ಮತ್ತು ಮೈಸೂರು ಸ್ಟೇಟ್.
ಪೋಸ್ಟ್, ಶಿರ್ವ ದ. ಕ.

[೩ನೇ ಪುಟದಿಂದ ಮುಂದುವರಿದುದು]

ನ್ನು ಸರಿದೂಗಿಸಲು ಪ್ರಯತ್ನಮಾಡಿ ನೋಡಬಹುದು. (೪) ಈ ತರಹದ ಯೋಜನೆಯನ್ನು ಕಾರ್ಯಾಚರಣೆಯಲ್ಲಿ ತರುವುದರಿಂದ ಉತ್ಪಾದನೆಯು ತಪ್ಪುದಾರಿಯನ್ನು ಹಿಡಿಯುತ್ತದೆ. ಸರಕಾರದ ಆಹಾರಧಾನ್ಯದ ಎತ್ತುವಳಿಯಿಂದ ಬೆದರಿದ ರೈತನು ಆಹಾರ ಧಾನ್ಯಗಳ ಬದಲು ಸಣಬು ಹತ್ತಿ, ಚಹಾ, ಇಲ್ಲವೆ ಕುಂಡೀನಾರನ್ನು ಬೆಳೆಯಲು ಮುಂದುವರೆದು ಭೂಮಿಯ ದುರುಪಯೋಗಮಾಡಿ ಇಡೀ ಜನತೆಯ ಮೇಲೆ ಅಕಾಲಿಕ ಬರಗಾಲವನ್ನು ಹೇರಬಹುದು.

ನ್ಯಾಯ ದೃಷ್ಟಿಯುಳ್ಳ ಯಾವುದೇ ಆಹಾರಧಾನ್ಯ ಎತ್ತುವಳಿ ಪದ್ಧತಿಯು ವಿನಿಮಯದ ತಳಹದಿಯ ಮೇಲೆ ಸ್ಥಾಪಿಸಲ್ಪಟ್ಟಿರತಕ್ಕದ್ದಲ್ಲದೆ, ಅದು ಬೆಳೆಯುವವನ ನಿವ್ವಳ ಉಳಿತಾಯಗಳಿಗಷ್ಟೇ ಅನ್ವಯಿಸತಕ್ಕದ್ದು. ಮತ್ತು ಇಂತಹ ನಿವ್ವಳ ಉಳಿತಾಯವನ್ನು ಕಂಡುಹಿಡಿಯಲು ಸಾಧುವಾದ ಮಾರ್ಗವನ್ನು ಅನುಸರಿಸತಕ್ಕದ್ದು. ಒಕ್ಕಲಿಗನ ಎಲ್ಲ ಅನಿವಾರ್ಯ ಅವಶ್ಯಕತೆಗಳನ್ನು ಮುಂಚಿತವಾಗಿ ಗೊತ್ತುಪಡಿಸಿ, ಆ ಬಳಿಕ ಅವನ ಉಳಿತಾಯದ ಧಾನ್ಯವನ್ನು ಕಂಡುಹಿಡಿಯತಕ್ಕದ್ದು. ಇಂತಹ ಉಳಿತಾಯವುಳ್ಳ ಒಕ್ಕಲಿಗನಿಗೆ ಬಟ್ಟೆ ಅಥವ ಸಿಮೆಂಟು, ಇಲ್ಲವೆ ಇತರ ಯಾವುದೇ ಪದಾರ್ಥವು ಬೇಕಾದರೆ, ಸರಕಾರವು ಅವನಿಗೆ ಬೇಕಾದ ಪದಾರ್ಥವನ್ನು ಒದಗಿಸಿಕೊಟ್ಟು ಅದಕ್ಕೆ ಪ್ರತಿಯಾಗಿ ಅವನಲ್ಲಿರುವ ಆಹಾರಧಾನ್ಯಗಳನ್ನು ತೆಗೆದುಕೊಳ್ಳತಕ್ಕದ್ದು. ಆದರೆ, ಸರಕಾರವು ವಿನಿಮಯ ಪದ್ಧತಿಯನ್ನು ಬಿಟ್ಟು, ಒಕ್ಕಲಿಗನಲ್ಲಿರುವ ಆಹಾರ ಧಾನ್ಯವನ್ನು, ತಾನೇ ಯದ್ವಾತದ್ವಾ ರೀತಿಯಲ್ಲಿ ಗೊತ್ತುಪಡಿಸಿದ ಧಾರಣೆಯಂತೆ, ಹಣದ ಬೆಲೆಗೆ ತೆಗೆದುಕೊಂಡು ಅವನು ಕಾಳಪೇಟೆಯಲ್ಲಿ ತನಗೆ ಅವಶ್ಯವಿದ್ದ ಪದಾರ್ಥಗಳನ್ನು ಅಧಿಕ ಬೆಲೆ ಕೊಟ್ಟುಕೊಳ್ಳುವಂತೆ ಮಾಡುವುದು ಜನ ಹಿತೈಕ ದೃಷ್ಟಿಯುಳ್ಳ ಸರಕಾರದ ಧರ್ಮವೇ? ಈ ದೃಷ್ಟಿಯಿಂದ ನೋಡಿದರೆ, ಕಾಳಪೇಟೆಯ ನಿರ್ಮಾತೃವು ಸರಕಾರವಲ್ಲದೆ ಮತ್ತಿನ್ನಾರು? ಒಕ್ಕಲಿಗನಿಂದ ಪಡೆದುಕೊಂಡದ್ದಕ್ಕೆ ಪ್ರತಿಯಾಗಿ ಅವನ ಅವಶ್ಯಕತೆಗಳನ್ನು ಪೂರೈಸುವುದು ನಿಜವಾಗಿಯೂ ಪ್ರಜಾನುರಾಗವಿರುವ ಸರಕಾರದ ಧರ್ಮವಲ್ಲವೇ?

ಪದಾರ್ಥಗಳ ಬೆಲೆಕಟ್ಟುವ ಯಾಂತ್ರಿಕ ವಿಧಾನವು ಒಕ್ಕಲಿಗನಲ್ಲಿ ಸಮಾಜ ಹಿತ ವಿಘಾತಕ ಪ್ರವೃತ್ತಿಯುಳ್ಳ ಪದಾರ್ಥಗಳನ್ನು ಬೆಳೆಯಿಸಲು ಪ್ರೇರಣೆಯನ್ನುಂಟುಮಾಡಿದೆ. ಕೂಳಿಲ್ಲದೆ ಸಾಯುವ ಜನಸಾಮಾನ್ಯರ ಪೋಷಣೆ ಮಾಡುವ ಆಹಾರ ಧಾನ್ಯಗಳ ಬದಲು ತಂಬಾಕು ಬೆಳೆಯಿಸುವ ಸಮಾಜ ಹಿತ ವಿಘಾತಕ ಕಾರ್ಯವನ್ನು ಒಕ್ಕಲಿಗನು ಮಾಡಬಹುದು. ಜನದಂಗುಳಿಗೆ ಇತರ ಜೀವನಾವಶ್ಯಕವಾದ ವಸ್ತುಗಳ ಅವಶ್ಯಕತೆಯಿದ್ದಾಗ್ಗೆ, ಒಕ್ಕಲಿಗನು ಮೇಲು ದರ್ಜೆಯ ಜನರ ಕೃತಕ ಮತ್ತು ಕಾಲ್ಪನಿಕ ಬೇಡಿಕೆಗಳನ್ನು ಪೂರೈಸಲು ಸಿದ್ಧವಾಗಿ ನಿಂತ ಕಾರಖಾನೆಗಳಿಗೆ ಅವಶ್ಯವಿದ್ದ ಕಚ್ಚಾಮಾಲನ್ನು ಬೆಳೆಯಿಸಬಹುದು. ಈ ತೆರನಾದ ಭೂಮಿಯ ಉಪಯೋಗವು, ಧನೋತ್ಪಾದನೆಗಿಂತಲೂ ತನ್ನ ಮಕ್ಕಳನ್ನು ಪೋಷಿಸುವ ಉಚ್ಚತಮ ಕರ್ತವ್ಯವುಳ್ಳ ಭೂಮಿತಾಯಿಯ ಮೇಲೆ ನಡೆಸುವ ಅತ್ಯಾಚಾರವಲ್ಲದೆ ಮತ್ತೇನು?

ಭೂಕಂದಾಯ ಪದ್ಧತಿ
ಸದೋಷವಾಗಿದೆ

ಸರಕಾರವು ಅನುಸರಿಸುತ್ತಿರುವ ಭೂಕಂದಾಯವನ್ನು ವಸೂಲಮಾಡುವ ಪದ್ಧತಿಯು ತುಂಬಾ ದೋಷಪೂರಿತವಾಗಿದೆ. ಭೂಕಂದಾಯವನ್ನು ಹಣದ ರೂಪದಲ್ಲಿ ವಸೂಲುಮಾಡದೆ, ಅದನ್ನು ಭೂಮಿ ಹುಟ್ಟುವಳಿಯ ನಿರ್ದಿಷ್ಟ ಪಾಲಿನ ರೂಪದಲ್ಲಿ ವಸೂಲುಮಾಡತಕ್ಕದ್ದು. ಹೀಗೆ ಕಂದಾಯ ರೂಪದಲ್ಲಿ ವಸೂಲ ಆದ ಧಾನ್ಯವನ್ನೆಲ್ಲ ಸರಕಾರವು ಸಂಗ್ರಹಿಸಿಟ್ಟರೆ, ಆಹಾರ ಕೊರತೆಯ ಸಮಸ್ಯೆಯು ಕೆಲಮಟ್ಟಿಗಾದರೂ ಪರಿಹಾರವಾದಂತಾದೀತು. ಮತ್ತು ಆಹಾರ ಧಾನ್ಯ ವಿತರಣೆಯಲ್ಲಿ ಉಂಟಾಗುವ ಎಡರು ತೊಡರುಗಳನ್ನು ಸಹಜವಾಗಿ ಎದುರಿಸುವ ಧೈರ್ಯವುಂಟಾಗಬಹುದು. ಪರದೇಶಗಳಿಂದ ಆಹಾರ ಧಾನ್ಯಗಳ ಆಯಾತ ಮಾಡುವುದು ಎಂದೆಂದಿಗೂ ಮೂಲಭೂತ ಸಮಸ್ಯೆಗೆ ಯುಕ್ತಪರಿಹಾರವು ದೊರೆತರೆ, ಅದಕ್ಕೆ ಆನುಷಂಗಿಕವಾಗಿ ಸಂಬಂಧಿಸಿದ ಇತರ ಸಮಸ್ಯೆಗಳ ಪರಿಹಾರವು ಸುಲಭಸಾಧ್ಯವಾಗುವುದರಲ್ಲಿ ಸಂದೇಹವಿಲ್ಲ.

ಸಹಕಾರಿ ಒಕ್ಕಲತನ

ಒಕ್ಕಲತನದ ಹುಟ್ಟುವಳಿಯ, ಅದರಲ್ಲಿಯೂ ಮುಖ್ಯವಾಗಿ ಆಹಾರಧಾನ್ಯಗಳ, ಉತ್ಪಾದನೆ ಮತ್ತು ವಿತರಣೆಗಳಲ್ಲಿ ಸಾಧುವಾದ ಸಹಕಾರ ಮಾರ್ಗವನ್ನವಲಂಬಿಸತಕ್ಕದ್ದು. ಒಕ್ಕಲತನದ ಹುಟ್ಟುವಳಿಯ ಉತ್ಪಾದನೆಯಲ್ಲಿ ಹೆಚ್ಚಳವುಂಟಾಗಬೇಕಾಗಿದ್ದಲ್ಲಿ ಭೂ ಸಾಗುವಳಿ ಸಂಘಗಳನ್ನು ಪ್ರತಿಯೊಂದು ಹಳ್ಳಿಯಲ್ಲಿ ಸ್ಥಾಪಿಸುವ ಉಪಕ್ರಮವನ್ನು ಕೂಡಲೇ ಕೈಕೊಳ್ಳತಕ್ಕದ್ದು. ಈ ಬಗ್ಗೆ ಮುಂಬಯಿ ಸಹ
ಕಾರ ಸಂಘಗಳ ಕಾಯಿದೆ (೧೯೨೫)
ಯಲ್ಲಿ ಸೂಕ್ತ ವಿಧಾನಗಳಿದ್ದರೂ ಭೂ
ಸಾಗುವಳಿ ಸಂಘಗಳ ಸ್ಥಾಪನೆಯು ಇ
ನ್ನೂ ಕಲ್ಪನೆಯಲ್ಲುಳಿದಿದೆ. ಸಂಘಗಳ
ವರ್ಗೀಕರಣದ ಉದ್ದೇಶದ ಮಟ್ಟಿಗೆ ಮಾ
ತ್ರ, ಅಲ್ಲೊಂದು ಇಲ್ಲೊಂದು, ಭೂ ಸಾ
ಗುವಳಿ ಸಂಘವು ಕೇವಲ ನಮೂನೆಗಾಗಿ
ತಲೆಯೆತ್ತಿದೆ. ಕೇವಲ ಕಾಯಿದೆ ಮಾಡು
ವುದರಿಂದ ಇಲ್ಲವೆ ಸಮ್ಮೇಲನಗಳಲ್ಲಿ ಉ
ದ್ದುದ್ದ ಭಾಷಣಗಳನ್ನು ಮಾಡುವುದರಿಂ
ದೇನು ಪ್ರಯೋಜನ? ಮನಸ್ಸಿದ್ದಲ್ಲಿ ಮಾ
ರ್ಗ ದೊರೆತೇ ತೀರುತ್ತದೆ. ಸಹಕಾರ ಪದ್ಧ
ತಿಯ ಮೇರೆಗೆ ಭೂ ಸಾಗುವಳಿಯನ್ನು
ಕೈಕೊಳ್ಳುವ ಬಗ್ಗೆ ಡಾ|| ಮೋಹಿತೆ,
ವರು ಸಿದ್ಧಪಡಿಸಿದ ಯೋಜನೆಯನ್ನು
ಕಾರ್ಯರೂಪಕ್ಕೆ ತರುವ ಉದ್ದೇಶದಿಂ
ಲೇ ಮುಂಬಯಿ ಸಹಕಾರ ಸಂಘಗ
(ತಿದ್ದುಪಡಿ) ಕಾಯಿದೆ ನಂ. ೧೪|೪೯
ನೇದ್ದು ಜ್ಯಾರಿಯಲ್ಲಿ ತರಲ್ಪಟ್ಟಿದೆ. ಆದ
ಗ್ಯೂ, ಈ ದಿಶೆಯಲ್ಲಿ ಪ್ರಗತಿಯೆಲ್ಲಿದೆ
ಇನ್ನು ಒಕ್ಕಲತನದ ಹುಟ್ಟುವಳಿಯ ವಿ
ರಣೆಯಲ್ಲಿಯೂ ಇದೇ ನಿರಾಶಾಜನಕ
ತ್ರವು ನಮ್ಮ ಕಣ್ಣು ಮುಂದೆ ಬಂದು ನಿ
ತ್ತದೆ. ಆಹಾರಧಾನ್ಯಗಳ ಮತ್ತು ಇ
ಎಲ್ಲ ಜೀವನಾವಶ್ಯಕವಾದ ಪದಾರ್ಥಗ
ವಿತರಣೆಯ ಕಾರ್ಯವನ್ನು ಸಂಪೂ
ವಾಗಿ ಗ್ರಾಹಕರ ಸಹಕಾರಸಂಘಗಳ
ಒಪ್ಪಿಸದೆ, ಸರಕಾರವು ತಾನೇ ವ್ಯಾಪಾ
ಸಾಗಿಸುವ ಹವ್ಯಾಸದಿಂದ ಮುಂದು
ಯುತ್ತಿದೆ. ಸರಕಾರವು ಈತರಹದ ವ
ಪಾರೀ ಮನೋವೃತ್ತಿಯನ್ನು ವಿಸರ್ಜಿ
ಆ ಕಾರ್ಯವನ್ನು ಕೇವಲ ಗ್ರಾಹ
ಸಹಕಾರೀ ಸಂಘಗಳಿಗೆ ಒಪ್ಪಿಸಿ ವಾಣಿ
ಕ್ಷೇತ್ರದಿಂದ ಇಂದು ನಾಳೆನ್ನದೆ ಕಾಲ್
ಯುವುದು ದೇಶದ ಹಿತದ ದೃಷ್ಟಿಯಿಂ
ಒಳ್ಳೇದು.

ಒಟ್ಟಿನ ಮೇಲೆ, ನಮ್ಮ ಆಹಾರ ಸ
ಸ್ಯೆಯ ಪರಿಹಾರಕ್ಕೆ ಅತಿ ಸನಿಹದ ದ
ಯಲ್ಲ! ನಾವು ಭೂಮಿತಾಯಿಯನ್ನು
ಳ ಪೂರ್ವದ ನಿರ್ಮಲ ಸ್ಥಿತಿಯ ವೈ
ಶಿಖರಕ್ಕೆ ಮುಟ್ಟಿಸ ಬೇಕಲ್ಲದೆ, ಭೂ
ತಾಯಿಯು ರಾಷ್ಟ್ರದ "ಅನ್ನ ಪೂ
ಎಂಬ ಅವಳ ಪ್ರಾಚೀನ ಗೌರವದ ಸ
ದಲ್ಲಿ ಭದ್ರಮಾಗಿರಿಸಲು ಭಗೀರಥ ಪ್ರ
ತ್ನ ಮಾಡಬೇಕು. ಅಂದರೆ ಮ
ಭೂಮಿ ತಾಯಿಯು ಬವಣೆಯು ಪರಿ
ವಾಗಬಲ್ಲದು.

(ಜ. ಕ.)

IN THE COURT OF THE DISTRICT MUNSIFF OF COONDAPOOR.

O. P. No. 52 of 1952.

Between: Akkamma Shedthi wife of Ramayya Shetty residing at Shankaranarayana Village Coondapoor Taluk --Petitioner

and

Narasamma Shedthi and another —Respondents

To

All persons who are interested

Whereas the petitioner above named had filed the above application for issue of a succession certificate empowering her to collect the amount due to her late son Manjayya Shetty in her capacity as manger of her family. The said application stands Posted to 21-10-1952. Anybody who intends opposing the said application should appear before the said court on that day at 11 A. M. and file thier objections if any, failing which a successiou certificate will be issued to the petitioner.

By Order of Court

ಸಹಿ/ *K. Ramappayya*, B A B L.
Advocate Petitioner.

Coondapoor. 29-9-1952.

DO YOU KNOW?
THAT
THE VIJAYA BANK, LIMITED.

1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs. 10 lacks.
3. Has granted an average dividend of 6% to the Shareholders for the past 20 years.
4. Has a net work of Branches in South Kanara and one each in Mercara and Fort, Bombay.
5. Offers attractive rates of interest on Deposits and Cash Certificates.
6. Grants loans on easy terms to approved parties or on approved securities
7. Does afford full protection and rich return to all your monies

ADOPT IT AS
"MY BANK"
THE VIJAYA BANK, LIMITED,
H. O., MANGALORE.

THE BOMBAY LIFE ASSURANCE COMPANY, LTD.
ದಿ ಬೋಂಬೆ ಲೈಫ್ ಎಶ್ಯೂರೆನ್ಸ್ ಕೋ. ಲಿಮಿಟೆಡ್.
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.
ಪ್ರಧಾನ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ
ಇವರ ಶಾಖಾ ಕಚೇರಿಗಳು:-
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.
ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ
ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು
ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

All Secondary Schools
Subscribe to "Navayuga" wee
Since it has been approved
the Director of Public Instr
tion, Madras.



ರುಷಕ್ಕೆ "ಚುನಾವಣಾ ವರುಷ" ಡ್ಡ ಹೆಸರು ಸರಿಯಾಗಿ ಒಪ್ಪುತ್ತದೆ. ಮತ್ತು ಪಾರ್ಲಿಮೆಂಟುಗಳ ಚುನಾ ನ್ನು ಮುಗಿಸಿ ಕೈ ತೊಳೆಯುತ್ತಿರುವ ಎಂಬಂತೆ ನಗರಸಭೆಗಳ ಸರದಿ ಬಂ ದಗಳೀಗ ಅದೇ ಕೋಲಾಹಲದಲ್ಲಿ ಗಿವೆ ಇನ್ನು ನಗರಸಭೆಗಳ ಚುನಾ ಗೆ ಅದುವಷ್ಟರಲ್ಲೇ ಗ್ರಾಮ ಪಂ ತುಗಳ ಗೌಜ ಕೇಳಲಿದೆ. ಅಂತೂ 52 ಷವೊಂದರಲ್ಲೇ ಒಂದಲ್ಲ, ಎರಡಲ್ಲ, ಚುನಾವಣೆಗಳ ಬಿಸಿಯಿಂದ ಜನತೆ ಜೊತೆ ಹೊತ್ತ ಸರಕಾರ ಸೋತು ಪ್ಪ ಚುನಾವಣೆ; ವೋಟು" ಎಂಬಲ್ಲಿ ಪರಿಸ್ಥಿತಿ ಬಂದುಬಿಡುವಂತಿದೆ.

ಮೂರು ತಿಂಗಳುಗಳಿಗೆ ಹೆಚ್ಚುಕ 7,850 ಪ್ಯೆನರ್ (ಚಿಕ್ಕ) ಪಂಚಾಯ ಚುನಾವಣೆಯಾಗಲಿದೆ. ಸುಮಾರು ಸೀನಿಯರ್ ಪಂಚಾಯತ ಬೋರ್ಡುಗಳ ವಣೆಯು ನಂತರ ಜರಗುವುದು. ಚಿಕ್ಕ ಯತು ಬೋರ್ಡುಗಳ ಸಂಖ್ಯೆಯೇ ಆ ರುವುದರಿಂದ ಹೆಚ್ಚಿನ ಹಳ್ಳಿಗಳ ಬೋ ವು ಪ್ಯೆನರ್ ಪಂಚಾಯತುಗಳ ಪಾ ಬುದು ಸ್ಪಷ್ಟ ಎಲ್ಲರ ದೃಷ್ಟಿಯೂ ಕಡೆಗೆ ತಿರುಗಲೇಬೇಕಾದ ಮತ್ತು ತ್ತಿರುವ ಈ ಕಾಲದಲ್ಲಿ ಗ್ರಾಮರಾಜ ಅಚಲ ವಿಶ್ವಾಸವನ್ನಿಟ್ಟವ ಈ ಸ ದಲ್ಲಿ ಈ ಪಂಚಾಯತ ಬೋರ್ಡಿನ ವಡೆಯು ಮಹತ್ವದ್ದಾಗಿದೆ

ವರೆಗೆ ನಮ್ಮ ಚಿಕ್ಕ ಪಂಚಾಯತಬೋ ಳಿಗಿದ್ದ ಅಧಿಕಾರ ಅವುಗಳಿಂದಾದ ಜ ಕಾರ್ಯಗಳ ಆಧಾರದಮೇಲೆ ಮುಂದಿನ ಯತ ಬೋರ್ಡುಗಳ ಮಹತ್ತಿಕೆಯು ರ್ಣರಿಸಬಾರದು ನಮ್ಮ ಹೆಚ್ಚಿನ ಪಂಚಾ ಗಳು ಈ ವರೆಗೆ ಕೈಕೊಂಡಿದ್ದ ಕಾರ್ಯ ಗಳು ಅಷ್ಟೇನೂ ಗಣ್ಯವಾದುವುಗಳಲ್ಲ. ಟೀಲರುಗಳಿಗೆ ಲೈಸನ್ಸು ಕೊಡುವುದು, ವ್ಯ ಗೆಯನ್ನು ವಸೂಲು ಮಾಡುವುದು ಸು ರ್ಕೆಟುಗಳ ವರಿವಸೂಲು ಮಾಡುವು ವುಗಳ ಮುಖ್ಯ ಕೆಲಸವಾಗಿತ್ತು ಸರ ಂದಿಸುವ ಸೆಸ್ಸು ಮತ್ತು ಮೋಲಿನ ತೆರಿ ಗಳ ಜಮಾ ಮೊಬಲಗನ್ನು ಸೇ

ಪಂಚಾಯತ ಬೋರ್ಡಿನ ಚುನಾವಣೆಗಳು

ಲೇಖಕರು— ಶ್ರೀ ಶಾಂತಿ

ಪಿಂಗ್ಸ್ ಬ್ಯಾಂಕುಗಳಲ್ಲಿಟ್ಟು ಸಾವಿರಗಟ್ಲೆ ರೂಪಾಯಿಗಳನ್ನು ಅವು ಶೇಖರಿಸಿಟ್ಟುಕೊಂಡಿವೆ ಚಿಕ್ಕ ಪುಟ್ಟ ಮಾರ್ಗನುಕೂಲತೆ, ಪಂಪುಗಳು ಇವೇ ಇವುಗಳು ಕೈಕೊಂಡಿದ್ದ ಕಾರ್ಯಗಳು ಮುಂದುವರಿದ ಕೆಲವು ಲೈಬ್ರೆರಿ, ರೇಡಿಯೋ ಪ್ರಾಥಮಿಕ ಶಿಕ್ಷಣ ಇತ್ಯಾದಿ ಕೆಲಸಗಳನ್ನೂ ವಹಿಸಿವೆ ಸಾಮಾನ್ಯವಾಗಿ ಹತ್ತು ರೂಪಾಯಿಗಳಿಗಿಂತ ಹೆಚ್ಚು ವೆಚ್ಚದ ಕೆಲಸಗಳಿಗೆ ಸರಕಾರದ ಮಂಜೂರಾತಿಯು ಆವಶ್ಯವಿದೆ ಈ ಮಂಜೂರಾತಿಯು ಅಷ್ಟೇನೂ ಸುಲಭದಲ್ಲಿ ಸಿಗುವಂತಿಲ್ಲ ಮೂರು ವರುಷಗಳ ಆಯ ವ್ಯಯ ಪಟ್ಟಿ, ಕ್ರಮಬದ್ಧವಾದ ಠರಾವು, ಕೆಲವೊಮ್ಮೆ ಅವುಗಳ ಇಂಗ್ಲೀಷು ಭಾಷಾಂತರ ಇತ್ಯಾದಿ ಕೇಳಿಕೆಗಳು ಪಂಚಾಯತ ಬೋರ್ಡು ವ್ಯವಹಾರದ ನಿಶ್ಶಕ್ತಿಗಳಾಗಿದ್ದುವು ಪರಿಣಾಮವಾಗಿ ಯಾವ ಪ್ರಯೋಜನಕಾರಿಯಾದ ಕಾಮಗಾರಿಕೆಯು ಸುಲಭದಲ್ಲಿ ಪೂರೈಸುತ್ತಿರಲಿಲ್ಲ ಯೋಗ್ಯ ಪಂಚಾಯತ ಬೋರ್ಡುಗಳ ಪಾಲಿಗೆ ಈ ಬಿಗಿಯಿದ್ದವು ಅನ್ಯಾಯವಾಗಿ ಕಂಡು ಬಂದರೂ ಸರಕಾರದ ಈ ಕಾನೂನು ಅನಗತ್ಯವೆನ್ನಲಾಗುವುದಿಲ್ಲ ಕೆಲವು ಪಂಚಾಯತ ಬೋರ್ಡುಗಳು ಹಣವನ್ನು ದುರುಪಯೋಗಗೊಳಿಸಿದ್ದ ದೃಷ್ಟಾಂತಗಳೂ ಇವೆ ಬಾವಿ ತೋಡಿಸದನೇ ತೋಡಿದ್ದಕ್ಕೆ 500 ನೀರು ಬರಲಿಲ್ಲವಾದ್ದರಿಂದ ಅಪಾಯಕಾರಿಯಾದ ಹೊಂಡವನ್ನು ಮುಗಿಸಿದ್ದಕ್ಕೆ ಖರ್ಚು 50 ಒಟ್ಟಿಗೆ 550 ರೂಪಾಯಿಗಳ ವೆಚ್ಚವನ್ನು ಸ್ಯಾಂಕ್ಷನ್ ನೀಡಲು ಠರಾವು ಮಾಡಿದ ಬೋರ್ಡುಗಳೂ ಇವೆಯಂತೆ ಇದು ಅತಿಶಯ ಅಲಂಕಾರವಾಗಿರಬಹುದೇನೋ ಅಂತೂ ನಮ್ಮ ಎಲ್ಲಾ ಪಂಚಾಯತ ಬೋರ್ಡುಗಳು ನಿಸ್ವಾರ್ಥತೆಯಿಂದ ವರ್ತಿಸುತ್ತಿವೆ ಎಂಬ ನಂಬಿಕೆ ಈ ವರೆಗೆ ಸರಕಾರಕ್ಕೆ ಹುಟ್ಟಲಿಲ್ಲ. ಮಾರ್ಗದ ಕಂಟ್ರಾಕ್ಟಿನಲ್ಲಿ ಕಮಿಷನು, ದಿನಕೂಲಿಯಲ್ಲಿ ಬ್ಲೇಕ್ ಮಾರ್ಕೆಟುಗಳನ್ನು ಯಾವ ಪಂಚಾಯತಗಳೂ ಮಾಡಿಲ್ಲವೆಂದು ಎದೆತಟ್ಟಿ ಹೇಳಲು ಸಾಧ್ಯವೇ ಇಲ್ಲ ಕೆಲವು ಪಂಚಾಯತಗಳ, ಅಧ್ಯಕ್ಷರು ನಿಜವಾಗಿಯೂ ವೆಚ್ಚ ಮಾಡಿ ಸರಕಾರೀ ಮಂಜೂರಾತಿ ಸಿಗದೆ ಕೈಯಿಂದ ತುಂಬಿಸಿದ ದೃಷ್ಟಾಂತಗಳೂ ಇವೆ ಆದರೆ ಇಂತವು ಬಹು ಕಡಿಮೆ

ಇನ್ನು ಬೋರ್ಡಿನ ಮೀಟಿಂಗುಗಳ ಕುರಿತು ಪ್ರಸ್ತಾಪಿಸುವುದು ಬೇಡವೇ ಎನಿಸುತ್ತದೆ. ಸದಸ್ಯರಲ್ಲಿ ಸಭೆಗೆ ಬರುವ ವಿಷಯದಲ್ಲಿ ಅಭಿರುಚಿಯಿಲ್ಲದವರೇ ಹೆಚ್ಚು ಅಧ್ಯಕ್ಷರೇ ವರದಿಯನ್ನು ಬರೆದು ಠರಾವುಗಳನ್ನು ಮಾಡಿ ದಸ್ಕತ್ತಿನ ಬಗ್ಗೆ ಸದಸ್ಯರ ಮನೆಬಾಗಿಲಿಗೆ ಕಳುಹಿಸಿಕೊಡಬೇಕು ಹೀಗೆ ತಮ್ಮ ಮನೆಬಾಗಿಲಿಗೆ ವರದಿ ಪುಸ್ತಕ ಬರುವುದರಿಂದ ಅವರ ಭರವಸ್ಸು ಹೆಚ್ಚುವುದೆಂದು ಅವರ ಅಭಿಪ್ರಾಯವಾಗಿರಬೇಕು ಎಂದರೆ ಸದಸ್ಯರಲ್ಲಿ ಹೆಚ್ಚಿನವರು ಕೇವಲ ಭೂಷಣಕ್ಕಾಗಿ, ಹೆಸರಿಗಾಗಿ ಮಾತ್ರ ಸದಸ್ಯರು ಅಧಿಕಾರಕ್ಕೋಸ್ಕರ ಅಧ್ಯಕ್ಷರು. ಇಂತಹ ಪಂಚಾಯತುಗಳ ಸಂಖ್ಯೆ ಹೆಚ್ಚಾಗಿದ್ದುದರಿಂದಲೇ ಎಷ್ಟು ಗ್ರಾಮಗಳ ಉನ್ನತಿಯಾಗಬಹುದಾಗಿತ್ತೋ ಅಷ್ಟು ಆಗದೆ ಉಳಿಯಿತು ಪಂಚಾಯತ ಬೋರ್ಡುಗಳೆಂದರೆ ಕೇವಲ ತೂಗಾಡುವ ಬೋರ್ಡು ಎಂಬ ಅಭಿಪ್ರಾಯ ಹಳ್ಳಿಗರಲ್ಲಿ ಬಲವಾಯಿತು ಎಷ್ಟನ್ ದೊರೆಯ ಕನಸು ಕನಸಾಗಿಯೇ ಉಳಿಯಿತು

ಆದರೆ ಇನ್ನು ಮುಂದೆಯೂ ಹೀಗಾಗುವುದೆಂಬ ಆಶಂಕೆಯಿಂದ ವರ್ತಿಸುವುದು ಸಮಂಜಸವಲ್ಲ. ಬೋರ್ಡಿಗೆ ಮನೆಕರಿಗೆ ವಿದ್ಯಾತೆರಿಗೆ ಇತ್ಯಾದಿ ಹಲವು ವಿಧದ ತೆರಿಗೆಗಳನ್ನು ಹೊರಿಸುವ ಅಧಿಕಾರ ಹೊಸ ಪಂಚಾಯತುಗಳಿಗೆ ಬರಬಹುದು, ಬಂದಿದೆ ಮಾತ್ರವಲ್ಲ ಪ್ರಾಥಮಿಕ ಶಿಕ್ಷಣ, ಹಳ್ಳಿಯ ಆಸ್ಪತ್ರೆ ಪ್ರಸೂತಿ ಶಾಲೆಯು, ವಾಚನಾಲಯ ಇತ್ಯಾದಿಗಳು ಪಂಚಾಯತುಗಳ ಅಧಿಕಾರಕ್ಕೆ ಬರುವ ಸಂಭವವಿದೆಯೆಂದು ಕಾಣುತ್ತಿದೆ. ಹಳ್ಳಿ ಗ್ರಾಮಗಳಲ್ಲಿನ ಚಿಕ್ಕಪುಟ್ಟ ನೀರಾವರಿ, ಮಾರ್ಗ, ಕಟ್ಟಗರ ಕಾಮಗಾರಿಕೆಯ ಹೊಣೆಯನ್ನು ಹೊತ್ತು ಅವುಗಳ ಕಡೆಗೆ ಪಂಚಾಯತುಗಳು ನೋಡಲು ಲಕ್ಷ್ಯ ಕೊಡಬೇಕು. ಪಂಚಾಯತ ಬೋರ್ಡುಗಳು ಕೇಳುವವರಿಲ್ಲದೆ ಹಾಳು ಬಿದ್ದಿರುವ ಕೆರೆ ಮದಗಗಳ ದುರಸ್ತಿಗಾಗಿ ದುಡಿಯಬೇಕು. ಅಲ್ಲಿ ಆಕಾಶವಿಲ್ಲದೆ ಸಮುದ್ರ ಪಾಲಾಗುವ ನೀರನ್ನು ಕಟ್ಟಿ ಕಟ್ಟಿ ಕೃಷಿಗೆ ಉಪಯೋಗಿಸಲು ಪ್ರಯತ್ನಿಸಬೇಕು. ಕೃಷಿ ಇಲಾಖೆಯವರು ತಮ್ಮ ಪೇಟೆಯ ಆಫೀಸನ್ನು ಬಿಟ್ಟು ಪಂಚಾಯತಗಳಿಗೆ ಸಲಹೆ ಕೊಡಬೇಕು. ಹಾಗೆಯೇ ವೈದ್ಯರಿಲ್ಲದೆ, ಶಾಲೆಗಳಲ್ಲಿ ಶಿಕ್ಷಕರಿಲ್ಲದೆ ಬರಡು ಬಿದ್ದಿರುವ ಹಳ್ಳಿಗಳ ಉದ್ಧಾರವು ಆಗುವುದಿದ್ದರೆ ಪಂಚಾಯತ ಬೋರ್ಡುಗಳಿಂದ ಸುಲಭ ಸಾಧ್ಯ. ಅದ್ದರಿಂದಲೇ ಗಾಂಧೀಜೀಯವರು ಗ್ರಾಮ ರಾಜ್ಯದ ಕನಸು ಕಂಡಿದ್ದರು ಆ ಮಹಾತ್ಮನ ಮಹಾ ಕನಸು ಹುಸಿಯಾಗಬಾರದು

ಎಲ್ಲದಕ್ಕೂ ಹೆಚ್ಚಿನ ಕೊರತೆಯೊಂದರೆ ನಿಸ್ವಾರ್ಥದಿಂದ ಕೆಲಸ ಮಾಡುವ, ಫಲಾಪೇಕ್ಷೆಯಿಲ್ಲದೆ ಸೇವೆ ಮಾಡುವ ಅಧ್ಯಕ್ಷರು ನಮ್ಮ ಹಳ್ಳಿಗಳಲ್ಲಿ ಜಾತೀಯತೆ, ಮನೆತನ, ಕಾದಾಟಗಳಿಗೇನೇ ಸ್ಥಾನಮಾನಗಳು ಹೆಚ್ಚು ಎಂಬ ಅಪವಾದವಿದೆ ಪುರಾಣದ ಶ್ರೀರಾಮನಂತೆ ಅಧಿಕಾರಾಪೇಕ್ಷೆಯಿಲ್ಲದೆ ಕರ್ತವ್ಯಕ್ಕಾಗಿ ಹೋರಾಡುವ ಅಧ್ಯಕ್ಷರು, ಭರತ ಲಕ್ಷ್ಮಣ ಶತ್ರುಘ್ನರಂತಹ ಭ್ರಾತೃ ಪ್ರೇಮದಿಂದ, ಜನತಾನುರಾಗದಿಂದ ಕೂಡಿರುವ ಸದಸ್ಯರುಗಳಿಂದ ನಮ್ಮ ಗ್ರಾಮ ಪಂಚಾಯತುಗಳು ಕೂಡಿದ್ದರೆ ಅದು ಬಾಪೂಜಿಯ ರಾಮ ರಾಜ್ಯವಾದೀತೆಂದು ನಾವು ಭಾವಿಸಬಹುದು ರಾಮ ರಾಜ್ಯ ಗ್ರಾಮ ರಾಜ್ಯವೆಂಬ ಕನಸು ನನಸಾಗಿಸುವುದರಲ್ಲಿ ರಾಮ ಲಕ್ಷ್ಮಣರಂತಹ ವ್ಯಕ್ತಿಗಳು ನಾವಾಗುವ, ಅಂತಹರನ್ನು ಆರಿಸುವ!

ಟ್ಟು | ತಪ್ಪಿದರೆ ಚಿಂತೆ ಬೇಡ
ಮುತುರಾಜ್ ಸೇವಿಸಿರಿ. ಮುತುಸ್ರಾವ
ರಂಭವಾಗುವುದು. 4-5 ತಿಂಗಳು
ತಪ್ಪಿದ್ದರೂ ಮುಟ್ಟು ಯಾವ ಅಪಾಯ
ಲ್ಲದಂತೆ 24 ಘಂಟೆಯೊಳಗೆ
ಯಿಂದ ಪ್ರಾರಂಭವಾಗುವುದು. ಬೆಲೆ
7/8 ವಿ. ಪಿ. ಖರ್ಚು ರೂ 1
ಷ ರೂ. 24 ವಿ ಪಿ 1/12
APANI AUSHADHALAYA (N. J.)
1 Moore Avenue CALCUTTA 33
ಯ ಏಜಂಟರು:
ವೈದ್ಯ ಸಿ ಆರ್. ಕಾಮತ್,
ಮಂಗಳೂರು.

ಲಕ್ಷ್ಮಿ
ಸಂತಾಲ್ ಮಾತ್ರೆ
ದರ ಉಪಯೋಗದಿಂದ ಒಸಕಾ
ಮೇಹ, ಪ್ರಮೇಹ, ಮೂತ್ರದ
ಮೂತ್ರದ ಕೃಚ್ಛ್ರ, ಮೂತ್ರದೊಡನೆ
ಮುಂದಾಗಿ ಬಿಳುಪು, ಅರಿಶಿನ ಕೆಂ
ಈ ವರ್ಣಗಳಲ್ಲಿ ಕೀವು ಹೋಗುವ
ಕೊಡಿ ಸಂದಿನಲ್ಲಿ ಗರಳೆ ಬರುವದು.
ಗಂಟು ವೇದನೆ, ಕಣ್ಣಿನಲ್ಲಿ ಕೀವು
ನವು, ಶರೀರದಲ್ಲಿ ಉಷ್ಣ ಕ್ಷಯ
ಸ್ತ್ರೀಯರ ಬಿಳಿ ಸೆರಗು ಇವೆಲ್ಲ
ಯಾಗಿ ಗುಣ ಹೊಂದುವದು. ಇ
ಈಗಿನ ಉಷ್ಣ ಕಾಲದಲ್ಲಿ ಗರ್ಮಿ
ಬಂದರೆ ರಾತ್ರೆ ಮಲಗುವಾಗ್ಯೆ ಒಂದ
ತ್ರೆ ಸೇವಿಸಿ ಹಾಲು ಕುಡಿದರೆ ಸುಖ
ನಿದ್ರೆ ಬಂದು ಸುಖವಿರೇಚನೆಯಾಗಿ
ದ ಸುಸ್ತು ಹೋಗುವದು.
ಶೀಸೆ 1ಕ್ಕೆ ರೂ. 2-0-0
ಟ್ಸ್:
ಕಂಪೆನಿ, ಮಂಗಳೂರು.

ಮಧುವನ
ಪ್ರಾತಿನಿಧಿಕ ಕಥಾಸಂಕಲನ
ಬೆಲೆ. ರೂ. 3 0 0
[illegible]
ಸಾಮಾಜಿಕ ಕಾದಂಬರಿ ಬೆಲೆ 0-10-0
ಭಾರತೀಯ ಕತೆಗಳು
ಸ್ವಾರಸ್ಯಪೂರ್ಣ ಕಥಾವಳಿ. ಬೆಲೆ 1-12-0
ನಾರೀ ಹೃದಯ
ಸ್ತ್ರೀ ಹೃದಯವನ್ನು ಚಿತ್ರಿಸುವ ಕಥಾವಳಿ. ಬೆಲೆ ರೂ 1-8-0
ನವಭಾರತ ಪುಸ್ತಕ ಭಂಡಾರ, ಉಡುಪಿ

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ
1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನಹಿತಸಾಧನೆಯನ್ನು ಮಾಡುತ್ತಿರುವುದು
The Moolky Bank Ltd.,
Moolky, S K

ಅಮೃತಾಂಜನ
ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಥಂಡಿ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷ ಮುಂತಾದವು, ಪಕ್ಷವಾತ, ಜೋಡಿನೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

AMRUTANJAN
Best for all Pains
Amrutanjan Depot
BOMBAY MADRAS
ಎಲ್ಲ
ಸ್ಟೋರುಗಳಲ್ಲಿ
ಮತ್ತು
ನಮ್ಮಲ್ಲಿ
ಸಿಕ್ಕುತ್ತವೆ
ಅಮೃತಾಂಜನ ಲಿಮಿಟೆಡ್,
ಮದರಾಸು, ಬೊಂಬಾಯಿ [illegible]

ವಾರದ ಒಳಿತು ಕೆಡುಕುಗಳು

ತಾ. 9-10-52ರಿಂದ ತಾ. 15-10-52ರ ವರೆಗೆ

ಮೇಷ—ದಿನೇ ದಿನೇ ನಿಮ್ಮ ಅದೃಷ್ಟವು ಕುಗ್ಗುತ್ತಾ ಬರುತ್ತಿದೆ. ದೈಹಿಕ ಶ್ರಮದಿಂದ ದುಡಿದ ನಾಲ್ಕು ಕಾಸೂ ವ್ಯರ್ಥ ಖರ್ಚುಗಳಿಗಾಗಿ ವ್ಯಯವಾಗುವದು. ಮನೋಧೈರ್ಯವು ಲುಪ್ತವಾದಕಾರಣ ಯಾವೊಂದು ಕಾರ್ಯವನ್ನು ಮುಂದರಿಸಲೂ ಹಿಂಜರಿವಿರಿ. ದೇಹದಲ್ಲಿ ನಿಶ್ಶಕ್ತಿ ಹೆಚ್ಚಲಿದೆ. ವಾರಾದಿಯ 3 ದಿನಗಳು ಉತ್ತಮವಿವೆ.

ವೃಷಭ—ಕಳೆದ ವಾರದಷ್ಟು ಅನಿಷ್ಟದಾಯಿಯಾಗದೀವಾರವು. ಉದ್ಯಮಶೀಲರಿಗೆ ಪರಿಶ್ರಮಕ್ಕೆ ತಕ್ಕುದಲ್ಲವಾದರೂ ಸಾಕಷ್ಟು ಫಲ ಲಭಿಸುವದು. ಶತ್ರುಜನರು ಪ್ರತೀಕಾರಾಸಕ್ತರಾಗುವರು. ಕಜ್ಜಿ ಹುಣ್ಣು ವಗೈರೆ ಚರ್ಮರೋಗಗಳು ಕಾಡಿಸಲಿವೆ. ಪರ್ಯಟನದಿಂದಾಗಿ ತನುಮನಗಳಿಗೆ ಸುಖಶಾಂತಿಯಿರದು. ತಾ 12, 13,ರಲ್ಲಿ ವಿಜಯ ಶುಭಲಾಭಗಳಿವೆ.

ಮಿಥುನ—ಸುಖಮಯವಾಗಿದ್ದ ನಿಮ್ಮ ಸಂಸಾರದಲ್ಲಿಂದು ಗೃಹಕಲಹಗಳುದ್ಭವಿಸಲಿವೆ, ತಂದೆ ಮಕ್ಕಳು ಗಂಡಹೆಂಡಿರೊಳು ಮತಭೇದವುಂಟಾಗುವದು. ಆದರೂ ಸನ್ಮಿತ್ರರ ಬೆಂಬಲವು ಚೆನ್ನಾಗಿರುವದು ಖರ್ಚುವೆಚ್ಚಗಳ ದಿನವಿದ್ದರೂ ಪರಿಶ್ರಮಕ್ಕಿಂತ ಅಧಿಕವಾದ ಫಲಪ್ರಾಪ್ತಿಯಿರುವುದರಿಂದ ಹಣದ ಅಡಚಣೆಯುಂಟಾಗದು. ತಾ 12, 17 ಬಿಟ್ಟು ಉಳಿದ ದಿನಗಳು ಪ್ರಶಸ್ತವಿವೆ.

ಕರ್ಕಾಟ—ಎಲ್ಲಾ ಗ್ರಹರೂ ನಿಮ್ಮ ಭಾಗಕ್ಕೆ ಅನುಕೂಲವಿರುವುದರಿಂದ ನಿಮ್ಮ ಸಂಕಲ್ಪಗಳು ಇಂದು ನಿರ್ವಿಘ್ನದಿಂದ ಸಿದ್ಧಿಸಲಿವೆ. ಆರ್ಥಿಕ ಭಾಗದಲ್ಲಿ ವಿಶೇಷ ಅಭಿವೃದ್ಧಿಯನ್ನೈದುವಿರಿ. ಕೋರ್ಟುಕಚೇರಿಗಳ ಕಾರ್ಯಗಳು ನಿಮ್ಮಂತೆ ಆಗುವವು. ದೈಹಿಕ ಸುಖ ಮಾನಸಿಕ ಶಾಂತಿಯೊಡಗೂಡಿದ ನೀವು ತಾ 12, 13ರನ್ನು ಅತೀವ ಸಂತಸದಿಂದ ಕಳೆವಿರಿ.

ಸಿಂಹ—ಗ್ರಹಸ್ಥಿತಿಯು ಕೊಂಚ ಬದಲಾಯಿಸಿರುವದು. ಹಿಂದಿನ ಸುಖಸೌಭಾಗ್ಯಗಳು ಇಂದು ದೊರೆಯವು. ವಿಶೇಷತಃ ಆರ್ಥಿಕ ಭಾಗಕ್ಕೆ ಹಾನಿಯಿದೆ. ಆದಾಯವೂ ಬಹುಮಟ್ಟಿಗೆ ಕಡಿಮೆ ನಿಲ್ಲುವದಾದರೂ ಖರ್ಚಿನಸಲುವಾಗಿಯಾವರನ್ನಾಶ್ರೈಸಬೇಕಾಗಿಲ್ಲವು. ನಿಮ್ಮ ಧೈರ್ಯಸಾಹಸಗಳು ಕೊಂಚ ಕುಗ್ಗಲಿವೆ ಪ್ರವಾಸಗಳಿಗೂ ಲೇಖಕ ವರ್ಗದವರಿಗೂ ಕಾಲವು ಅನುಕೂಲವಿರುವುದು. ತಾ. 12, 13 ಬಿಟ್ಟು ಉಳಿದ ದಿನಗಳು ಪ್ರಶಸ್ತವಿವೆ.

ಕನ್ಯಾ—ಆರ್ಥಿಕ ವಿಭಾಗದಲ್ಲಿ ನೀವು ಹಿಂದಿಗಿಂತ ಎಷ್ಟೋ ಸುಧಾರಿಸಿರುವಿರಿ. ಅತಏವ ಈ ವಾರದಲ್ಲಿ ನಿಮಗೆ ಹಣದ ಬಿಕ್ಕಟ್ಟು ಕಾಣಿಸದು. ಆದರೆ ಆರೋಗ್ಯವು ಮಾತ್ರ ಸರಿಯಿರದು. ಶತ್ರುಜನರು ಕೃತ್ರಿಮ ಮಿತ್ರರ ಸೋಗಿನಿಂದ ನಿಮ್ಮನ್ನು ವಂಚಿಸಲಿರುವರು. ಜನಾಪವಾದಕ್ಕೆ ಸಿಲುಕಲಿರುವಿರಿ. ವಾರಾದಿಯ 5 ದಿನಗಳಲ್ಲಿ ಹೆಚ್ಚಿನ ಅಪಾಯಗಳು ಸಂಭವಿಸಲಾರವು.

ತುಲಾ—ದಿನಗಳು ಸುಖಮಯಗಳಾಗಲಿವೆ. ನಷ್ಟವಾದ ದ್ರವ್ಯಾದಿಗಳೂ ಇಂದು ನಿಮ್ಮ ಕೈಸೇರುವವು. ಜನತೆಯ ಬೆಂಬಲವು ಉತ್ತಮವಿರುವುದರಿಂದ ಹಿಡಿದ ಕಾರ್ಯದಲ್ಲಿ ವಿಜಯಿಗಳಾಗುವಿರಿ. ಕೆಲವೊಮ್ಮೆ ವೃಥಾ ವಾಕ್ಕಲಹವು ಗಂಟುಬೀಳಲಿದೆ. ಮಾತ್ರವಲ್ಲ ಕನಸಿನಲ್ಲೂ ನೆನೆಸದ ಅನರ್ಥಗಳೊದಗುವವು. ವಾರಾಂತ್ಯದ 4 ದಿನಗಳು ತುಂಬಾ ಲಾಭದಾಯಿಗಳಾಗಿವೆ.

ವೃಶ್ಚಿಕ—ಹಿಂದಿಗಿಂತ ಈ ವಾರದಲ್ಲಿ ನಿಮ್ಮ ಉತ್ಪತ್ತಿಯು ಕಡಿಮೆಯಾಗಿ ಖರ್ಚು ಹೆಚ್ಚಲಿದೆ. ಆದರೂ ಹಣದ ಅಭಾವವುಂಟಾಗದು. ಪಿತ್ತೋಷ್ಣ ಪ್ರಕೋಪದಿಂದ ಆರೋಗ್ಯ ಕೆಡುವದು ನೀಚ ಜನರಿಂದ ವಿಶೇಷತಃ ಲಾಭವಿದೆ. ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷಿಸಿದ ಫಲಪ್ರಾಪ್ತಿಯಿದೆ. ಸಂಸಾರಿಕ ಸುಖವು ಉತ್ತಮವಿರುವದು. ವಾರಾಂತ್ಯದ 2 ದಿನಗಳು ಇಷ್ಟಪ್ರದಗಳಿವೆ

ಧನು—ಶ್ರಮ ಜೀವಿಗಳು ಸೇವಕ ವರ್ಗದವರು ಹೊರತಾಗಿ ಮಿಕ್ಕವರಿಗೆಲ್ಲಾ ಈ ವಾರವು ಅತೀವ ಪ್ರಶಸ್ತವಿದೆ. ಯಾವ ಕಾರ್ಯದಲ್ಲೂ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಬೇಕಾಗಿಲ್ಲವು. ಬಂಧು ಮಿತ್ರರ ನೆರವಿನಿಂದಾಗಿ ವಿರೋಧಿಗಳ ಗುಂಪನ್ನು ಪರಾಭವಗೊಳಿಸುವಿರಿ. ಆರೋಗ್ಯದ ಕಡೆಗೆ ವಿಶೇಷ ಗಮನವಿಡಿರಿ. ತಾ. 9, 10, 11, ಈ ದಿನಗಳಲ್ಲಿ ನಿಮ್ಮ ಸಂಕಲ್ಪಗಳು ನಿರ್ವಿಘ್ನದಿಂದ ಸಿದ್ಧಿಸುವವು.

ಮಕರ—ಸಂದುಹೋದ ದಿನಗಳಂತಿರದೀವಾರವು. ನಿಮ್ಮ ಪರಿಶ್ರಮಕ್ಕುಚಿತವಲ್ಲವಾದರೂ ಸಾಕಷ್ಟು ಫಲ ಲಾಭವಿದೆ. ನೀವೆಷ್ಟೇ ಜಾಣರಿರಿ ಮಾತು ಮಾತಿಗೆ ಜನರೊಡನೆ ಕಲಹವಾಗದಿರದು. ವ್ಯವಹಾರ ನಿಮಿತ್ತ ಕೋರ್ಟುಕಛೇರಿಗಳಿಗೆ ಹೋಗುವ ಪ್ರಸಂಗ ಬರಲಿದೆ. ಗೃಹ ಕಲಹಗಳು ಹೆಚ್ಚುವವು. ವಾರಾದಿಯ 5 ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗವು.

ಕುಂಭ—ಮಾಡಿದ ಕಾರ್ಯವು ವಿಫಲವಾಗದು ಜನತೆಯ ಗೌರವಾದರಗಳಿಗೆ ಪಾತ್ರರಾಗುವಿರಿ. ವಿಶೇಷತಃ ನಿಮ್ಮ ಕಾಲವನ್ನು ಹೆಚ್ಚಾಗಿ ಪ್ರವಾಸದಲ್ಲಿ ಕಳೆಯಬೇಕಾಗಿ ಬರಲಿದೆ. ಸ್ತ್ರೀ ಧನಾಪ್ತಿಯ ಯೋಗವಿದೆ. ವಿದ್ಯೋಪಜೀವಿಗಳಿಗೀಕಾಲವು ಉತ್ತಮವಾಗಿಲ್ಲವು. ವಾರಾಂತ್ಯದ 4 ದಿನಗಳಲ್ಲಿ ಸುಖಮಿತ್ರ ಸಮಾಗಮ ಲಾಭಗಳಿವೆ.

ಮೀನ—ದಿನದಿಂದ ದಿನಕ್ಕೆ ಪ್ರಗತಿಯ ಚಿಹ್ನೆಗಳು ಕಾಣುತ್ತಿವೆ. ಶುಭ ಗ್ರಹರ ಬೆಂಬಲವು ಉತ್ತಮವಿರುವುದರಿಂದ ಸತ್ಕಾರ್ಯಗಳಲ್ಲಿ ಯಶಸ್ಸು ಧನ ಲಾಭವೂ ಉತ್ತಮವಾಗಿ ಲಭಿಸುವದು, ಆರೋಗ್ಯವೂ ಸುಧಾರಿಸುವದು. ಆಕಸ್ಮಿಕ ಪರ್ಯಟನದ ಯೋಗವಿದೆ. ರಾಜಕೀಯದಲ್ಲಿ ಫಲವು ಒಳ್ಳೆಯದಿರದು. ವಾರಾಂತ್ಯದ 2 ದಿನಗಳು ಕ್ಷೇಮದಾಯಿಗಳಿವೆ.

([illegible]ನೇ ಪುಟದಿಂದ ಮುಂದುವರಿದುದು)

ಭಾರತದ ಯೋಜನಾ ಸಮಿತಿಯ ಕಾರ್ಯಕ್ರಮದಲ್ಲಿ ಸೇರಿಸಲ್ಪಟ್ಟಿದೆ. ಆದರೆ ಅದನ್ನು ಹೇಗೆ ಸಾಧಿಸಬೇಕೆಂಬ ಬಗ್ಗೆ ಇನ್ನೂ ನಿರ್ಣಯವಾಗಿಲ್ಲ. ಆದ್ದರಿಂದ ಈ ವಿಷಯದಲ್ಲಿ ಮೇಲೆ ಹೇಳಿದ ಉತ್ಪಾದಕ ಶಕ್ತಿ ನಿಯಂತ್ರಣದ ಬಗ್ಗೆ ತನ್ನ ಹಣವು ವೆಚ್ಚವಾಗುವಂತೆ, ಯೋಜನಾಸಮಿತಿಯು ನೋಡುವದು, ತೀರಮಹತ್ವದ ಮತ್ತು ಅವಶ್ಯಕ ವಿಷಯವಾಗಿದೆ

ವ್ಯಕ್ತಿಗಳು ಸಂತತಿನಿಯಮನಕ್ಕಾಗಿ ಯತ್ನಿಸುವುದಕ್ಕಿಂತ, ಮೇಲೆ ಹೇಳಿದಂತೆ ಸರಕಾರವು ಉತ್ಪಾದಕ ಶಕ್ತಿಯನ್ನು ಕಡಿಮೆ ಮಾಡಲು ಸಾರ್ವತ್ರಿಕ ವ್ಯವಸ್ಥೆ ಮಾಡುವದು ವ್ಯವಹಾರ್ಯವಾಗಿದೆ. ಉತ್ಪಾದಕ ಶಕ್ತಿಯ ನಿಯಂತ್ರಣವು ಸಾಧಿಸದಿದ್ದರೆ, ಸಂತತಿನಿಯಮದ ಉಪಾಯವು ರಿಂತ ಹಿಡಿಯಲ್ಪಟ್ಟಾಗ್ಗೆ ಇವತ್ತಿನಷ್ಟು ಸಂಶೋಧನಾ ಶಾಖೆಯು ಬೆಳೆದಿದ್ದಿಲ್ಲ. ಈಗ ನಾವು ಈ ಎರಡನೆ ಉಪಾಯವನ್ನು ಸಹಜವಾಗಿ ಉಪಯೋಗಿಸಿಕೊಳ್ಳಬಹುದು.— **ಜೈ ಹಿಂದ್.**

(ಇಂಡಿಯಾ ಪ್ರೆಸ್ ಸರ್ವೀಸ ಮುಂಬಯಿ.)

KING OF TONIC
SILAJITHLATHAM

ಸ್ತ್ರೀ ಪುರುಷ ಶಿಶುಗಳು ರೋಗದಿಂದ ನರಳಬೇಕಾಗಿಲ್ಲ!
ಲಕ್ಷಾಂತರ ಜನರು ಗುಣಹೊಂದಿದ್ದಾರೆ!

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.
೪೮ದಿನದ ಲೇಹ್ಯ ರೂ ೫/೮, ೨೪ ದಿನದ ಲೇಹ್ಯ ರೂ ೩/೮
(ಪೋಸ್ಟೇಜು ಮಾಫಿ)
ನೀಲಗಿರಿ ಡಿಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಮುಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿ ಶುಚಿ ಹೇಳಬೇಕೆ
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

“ಗೋಪಾಲ ಭೇಷಜಾಶ್ರಮ” ಮಂಗಳೂರು-
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ॥ ಯಂ. ಸಿ. ಶಾಸ್ತ್ರೀ, ಯಲ್. ಐ ಎಂ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:—ಡಾ॥ ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟುಡ

ಋತುಸ್ರಾವ ನಿಂತಿತು
'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಕಟ್ಟಿ ಋತುಸ್ರಾವವಾಗುವದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದುವುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಶಾಶ್ವತ ಗುಣವಾಗಿದೆ. ಬೆಲೆ; ರೂ. 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. 8-] ವಿ ಪಿ ಹನ್ನೆರಡಾಣೆ ಪ್ರತ್ಯೇಕ]
MIS. P. DEVEE, P. DS. (N. J.)
Tollygunge CALCUTTA.
ಸ್ಟಾಕಿಸ್ಟರು! ಶಹಾ ಕಂಪೆನಿ, ಮಂಗಳೂರು

ತೃಪ್ತಿಕರವಾದ ವಸತಿ— ಹಿತಕರವಾ
ಊಟ— ರುಚಿಕರವಾದ ಉಪಾಹಾ
ಇವುಗಳಿಗೆ
ಆದರ್ಶ ನಿಲಯವೆಂದರೆ
ವುಡ್ ಲೇಂಡ್ಸ್
ಉಡುಪಿ.
ಯಾತ್ರಿಕರಿಗೂ ಪ್ರಯಾಣಿಕರಿಗೂ
ಸರ್ವ ಅನುಕೂಲವಾಗುವಂತೆ
ನಗರದ ಕೇಂದ್ರಭಾಗದಲ್ಲಿದೆ

ಗೀತೆಯ
ಕೈಗನ್ನಡಿ
ತಿಳಿಗನ್ನಡದಲ್ಲಿ ಅನುಭವಸ್ಥರಿಂದ
ರೆಯಲ್ಪಟ್ಟ ಇಂತಹ ಅನುವಾ
'ಗೀತೆಯ ಕೈಗನ್ನಡಿ'ಯನ್ನು
ಟ್ಟರೆ ಇನ್ನೊಂದಿಲ್ಲ. 'ಗೀತೆಯ
ಗನ್ನಡಿ"ಯು ಹೊಸಕೆರೆ ಶ್ರೀ ಚಿ
ಬರಯ್ಯನವರ ಸರಳ ಭಾಷಾಂ
ಅತೀ ಅಗ್ಗವಾದ ಮತ್ತು ಪ್ರತಿಸ
ಯಲ್ಲೂ ಇರಬೇಕಾದ ಗೀತಾಪುಸ್ತ
ಬೆಲೆ: ಬರೇ 0-12-0 ಮಾ
ನವಯುಗ ಪ್ರೆಸ್, ಉಡುಪಿ

Edited, Printed & Published By K. H. Shetty at the Navayuga Press, Udipi, S. India.

Regd. No. M. 3618
LICENCE No. 31
Licensed to Post without Prepayment

16-10-1952

Estd. 1921 ಸ್ಥಾಪನೆ.
32ನೆಯ ವರ್ಷ

Founder: **Sri A. B. Shetty,**
Minister for Medical & Public Health

ನವಯುಗ
ಆರೋಗ್ಯ ಮಂತ್ರಿ
ಎ. ಬಿ. ಶೆಟ್ಟರಿಂದ
ಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ

ಚಂದಾ 5-12-0
ತಿಂಗಳಿಗೆ 3-0-0
ಡಿ ಪ್ರತಿಗೆ 0-2-0

ನವಯುಗ

ಅಂತರಂಗ
ಪುಸ್ತಕ ಪತ್ರಿಕೆಯ
ಉಪಯುಕ್ತವಾದ
86 ಪುಸ್ತಕಗಳು
ರೂ 24ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ.

Vol 32
No 7

NAVAYUGA WEEKLY POST BOX NO 22 UDIPI

ವರ್ಷ ೩೨
ವಾರ ೭

ಮಧು ಪರ್ಕ

ಒಮ್ಮೆ ಮಹಾತ್ಮಾ ಗಾಂಧೀಜಿಯ ಬಳಿಗೊಬ್ಬ ಸಜ್ಜನರು ಬಂದರು. ಇಂಗ್ಲೀಷಿನಲ್ಲಿ ಇವರು ಕೂಟ ಬುದ್ಧಿವಂತರು ಲೇಖಗಳನ್ನು ಬರೆದು ಪ್ರಸಿದ್ಧರಾಗಿದ್ದರು.

ಮಾತುಕತೆಯ ನಡುವೆ "ಬಾಪೂಜಿ, ನನ್ನಿಂದೇನಾದರೂ ಸೇವೆಯಾಗುವುದಿದ್ದರೆ, ಆಗಕ್ಕೆ ಮಾಡಿಸಿಕೊಳ್ಳಿರಿ" ಎಂದು ಈ ಮಹಾಶಯರು ನುಡಿದರು. ಗಾಂಧೀಜಿ ತಮ್ಮ ಪತ್ರಿಕೆಗಳಿಗೆ ಕೆಲವೊಂದು ಲೇಖ ಬರೆದು ಕೊಡಿರಿ ಎಂದು ಹೇಳುವರೆಂಬ ಇವರ ಎಣಿಕೆಯಾಗಿತ್ತು.

"ಚೆನ್ನಾಯಿತು, ಈಗಲೇ ಮಾಡಸೊತ್ತಿದೆಯೇ?" ಎಂದು ಗಾಂಧೀಜಿ ನಸುನಗೆಯೊಡನೆ ಕೇಳಿದರು. ಇದರಿಂದ ಉಬ್ಬಿದ ಸಜ್ಜನರು, "ಹೌದೋ, ಏನದು ಹೇಳಿರಿ, ನಾನು ಮಾಡಿಯೇ ತೀರುತ್ತೇನೆ" ಎಂದುತ್ತರಿಸಿದರು.

ಗಾಂಧೀಜಿ ಮೆಲ್ಲನೆ "ನೋಡಿ, ಅಲ್ಲಿ ಗೋಧಿ ಬೀಸಲಿಕ್ಕೆ ಇಟ್ಟಿದ್ದೇನೆ. ಬೀಸುಗಲ್ಲಿಗೆ ನೀವೂ ಸ್ವಲ್ಪ ಕೈಕೊಡುತ್ತೀರಾ?" ಎಂದು ನುಡಿದಾಗ ಸಜ್ಜನರ ಮುಖ ನೋಡಬೇಕಿತ್ತು.

ಅಭೂತಪೂರ್ವ ಶಪಥ

ಮುಂದಿನ ಮೂರು ವರ್ಷಗಳಲ್ಲಿ ಗ್ರಾಮ ಕಲ್ಯಾಣದ ಮಹಾ ಯೋಜನೆಗಳನ್ನು ಕಾರ್ಯರೂಪಕ್ಕಿಳಿಸುವ ಹೊಣೆ ಇದೆ. ಜನಪದ ಅಭಿವೃದ್ಧಿ ಯೋಜನೆಗಳನ್ನು ಭಾರತದಲ್ಲಿ ಅನೇಕ ಹಿಮಾಚಲ ಪರ್ಯಂತ ಸುಮಾರು ಅರುವತ್ತು ಕೇಂದ್ರಗಳಲ್ಲಿ ತೊಡಗಿರುವರು. ಇವುಗಳಲ್ಲಿ ಅಡಗಿರುವ ತಿರುಳಾದರೂ ಏನು? ಅವಿರತ ಪರಿಶ್ರಮವೆಂಬುದೇ ಇದಕ್ಕೆ ಉತ್ತರ. "ದುಡಿಮೆ, ಎಡೆಬಿಡದ ದುಡಿಮೆ." ಎಂಬ ಪಲ್ಲವಿಯೊಂದೇ ನಮ್ಮ ಸುಖಕ್ಕೆ ಏಕಮೇವ ಮಾರ್ಗ. ಆದುದರಿಂದ ಆಯಾ ಪ್ರದೇಶದ ಎಲ್ಲ ಜನರನ್ನೂ [illegible] ದುಡಿಯಲು ಒತ್ತಾಯ ಪೂರ್ವಕ ವಿನಂತಿಸಲಾಗುವುದು. ಜನತೆಗೆ ಯೋಗ್ಯ ತಾಂತ್ರಿಕ ತರಬೇತಿಯನ್ನು ಕೊಟ್ಟು ಮಾರ್ಗದರ್ಶನ ಮಾಡಲು ಸರಕಾರದ ನೌಕರ ವರ್ಗವೂ ಇದೆ. ಇವರೊಡನೆ ಜನಸಾಮಾನ್ಯರು ಹೊಂದಿಕೊಂಡು, ಪರಸ್ಪರ ಸಹಾಯಕ ತತ್ವದ ತಳಹದಿಯ ಮೇಲೆ ಕಾರ್ಯೋನ್ಮುಖರಾಗಬೇಕು.

ಜನಪದ ಅಭಿವೃದ್ಧಿ ಯೋಜನೆಯು ಮೂರು ವರ್ಷಗಳ ತನಕ ಸರಕಾರೀ ನೆರವಿನಿಂದ ಬೆಳೆದು, ಆ ಬಳಿಕ ಸ್ವಂತ ಕಾಲ ಮೇಲೆ ನಿಲ್ಲುವುದೆಂದು ನಿರೀಕ್ಷಿಸಲಾಗಿದೆ. ಸಮಗ್ರ ಭಾರತವನ್ನು ಸುಖಸಮೃದ್ಧಿಯಿಂದ ತುಂಬಿ ತುಳುಕುವಂತೆ ಮಾಡುವ ದೊಡ್ಡ ಮಟ್ಟಿನ ಗ್ರಾಮ ಕಲ್ಯಾಣ ಯೋಜನೆ ಇದೆನ್ನಬಹುದು. ಈ ಯೋಜನೆ ಬೊಟ್ಟೆತ್ತಿ ತೋರಿಸುವ ಆದರ್ಶ, ಅತ್ಯಂತ ಉಜ್ವಲವೂ ಪವಿತ್ರವೂ ಆಸ್ವಾದ್ಯವೂ ಆಗಿದೆ. ನಿಸರ್ಗದೊಡನೆ ಅನವರತ ಹೋರಾಡುವ ಮನುಷ್ಯನ ಚೈತನ್ಯಶಕ್ತಿಯನ್ನದು ಪುಟಿದೆಬ್ಬಿಸುತ್ತದೆ. ಬುದ್ಧಿಯನ್ನು ಸ್ವಂತ ಅಭಿವೃದ್ಧಿ ಹಾಗೂ ರಾಷ್ಟ್ರಕಲ್ಯಾಣದ ಸದುದ್ದೇಶ ಪೂರ್ತಿಗಾಗಿ ಉಪಯೋಗಿಸಿಕೊಂಡು, ದೈಹಿಕ ಶ್ರಮವನ್ನು ಕೈಗೊಳ್ಳುವಂತೆ ಈ ಯೋಜನೆ ಪ್ರೇರೇಪಿಸುತ್ತದೆ.

ಜನ ಕರ್ಮನಿರತರಾಗಬೇಕೆಂದು ಉಪದೇಶ ನೀಡಿದ ಮಹಾ ಜೀವ ಶ್ರೀಕೃಷ್ಣ. ಭಗವದ್ಗೀತೆ ಆಧ್ಯಾತ್ಮಿಕ ಉನ್ನತಿಗೆ ಕೈಗಂಬವಾಗಿದ್ದಂತೆ ತಾತ್ವಿಕ ಜೀವನಾದರ್ಶವನ್ನೂ ಪ್ರತಿಪಾದಿಸುತ್ತದೆ. ಗೀತೆಯನ್ನು ಅತ್ಯಂತ ಭಕ್ತಿಶ್ರದ್ಧೆಯಿಂದ ಕಾಣುತ್ತಿದ್ದ ಮಹಾತ್ಮಾಗಾಂಧೀಜಿ ಕೂಡ, ಕೈಗೆ ಒಂದು ನಿಮಿಷವೂ ವಿರಾಮವಿಲ್ಲದು ಎಂದು ಪದೇ ಪದೇ ಹೇಳಿದ್ದಾರೆ. ಅವರ ಜೀವನವಂತೂ ಕಾರ್ಯಕುಶಲರ ಗರಡಿ ಮನೆ.

ಪ್ರಜಾಪ್ರಭುತ್ವದ ಶಕ್ತಿಯಾಗುವುದಕ್ಕೆ ಪ್ರತಿಫಲಾಪೇಕ್ಷೆ ಇಲ್ಲದೆ ನಿರಂತರ ದುಡಿಮೆ ಅತ್ಯಗತ್ಯ. ಒಬ್ಬೊಬ್ಬ ಮನುಷ್ಯನೂ ಸ್ವಂತಏಳಿಗೆಯ ದೃಷ್ಟಿಯಿಂದಲೂ ಮುಕ್ತವಾದ [illegible] ಹೆಚ್ಚು ಕೆಲಸ ಮಾಡಬಹುದು. ಆದರೆ ಬುದ್ಧಿಶಕ್ತಿಯೊಂದೇ ಅಲ್ಲ– ದೈಹಿಕದ ದುಡಿಮೆಯ ಕಡೆಗೂ ಅಷ್ಟೇ ಮಹತ್ವ ಕೊಡತಕ್ಕದ್ದು. ನಾಲ್ಕು ಮಂದಿ ಒಟ್ಟಾಗಿ ಸೇರಿ ಒಂದು ಒಳ್ಳೆಯ ಕೆಲಸ ಮಾಡುವಾಗ, ಕೆಲಸದ ಆಯಾಸ ಮಾಯವಾಗಿ, ಆನಂದದ ಅನುಭವ ವೇದ್ಯವಾಗುತ್ತದೆ. ಹತ್ತು ಮಂದಿಯ ಸಾಮೂಹಿಕ ದುಡಿಮೆಯಿಂದ ಅಧಿಕ ಆಹಾರ ಬೆಳೆದೀತು, ಶಾಲೆ [illegible], ಒಂದು ಆರೋಗ್ಯಕೇಂದ್ರವೂ ನಿರ್ಮಾಣಗೊಂಡೀತು. ಇವುಗಳು ಪರಿಶ್ರಮ ನೀಡುವ ಉತ್ತಮ ಫಲದ ನಿದರ್ಶನಗಳಾಗುವುವು. ಸಮಾಜಕ್ಕೆ ಇದರಿಂದ ಉಪಯೋಗವಿದೆ; ಎಂತಲೇ ಉಪಕಾರವೂ ಇದೆ.

ತನ್ನಿಂದ ಸಮಾಜಕ್ಕೆ ಆದ ಸೇವೆಯ ಕಲ್ಪನೆಯಂತೂ, ವ್ಯಕ್ತಿಗೆ ಇನ್ನಷ್ಟು ಹರ್ಷಪ್ರದವೂ ಉಲ್ಲಸದಾಯಕವೂ ಆಗುತ್ತದೆ. ದೇವತೆಗಳು ಕ್ಷೀರ ಸಾಗರವನ್ನು ಬಹಳ ತಾಳ್ಮೆಯಿಂದ ಮಥಿಸಿದ ಬಳಿಕ, ಅಮೃತ ದೊರೆಯಿತಲ್ಲವೆ? ಆಗಿನ ಉತ್ಸಾಹ ಹಾಗೂ ಆನಂದೋದ್ರೇಕ ನಮ್ಮದಾಗುತ್ತದೆ. ಸಾಮೂಹಿಕ ದುಡಿಮೆಯಿಂದಲೇ ಈ ಮಾದರಿಯ ಅಪೂರ್ವ ಆನಂದ ಲಭ್ಯ.

[illegible]ಜನೆಯು ಪ್ರಥಮತಃ ಸಾಧಿಸಬೇಕಾದದ್ದು ಆಹಾರ ವಿಷಯದಲ್ಲಿ ಸ್ವಾವಲಂಬನವನ್ನು. ಆರೋಗ್ಯಕ್ಕೆ ಹಿತಕರವಾದ ಹಾಗೂ ತಿನ್ನಲು ರುಚಿಕಟ್ಟಾದ ಆಹಾರ ನಮಗೆ ಬೇಕಾದಷ್ಟು ನಮ್ಮಲ್ಲಿ ಬೆಳೆಯುವಂತಾಗಬೇಕು. ದುಡಿಮೆಯ ಮಹತ್ವ ಇಲ್ಲಿ ಹೇಳಬೇಕಿರದು. ಅನ್ನಬ್ರಹ್ಮ ಆರಾಧನೆಯನ್ನು ಅನಿವಾರ್ಯವೆಂಬ ಬೋಧವನ್ನು ನಮಗೆ ನಮ್ಮ ಹಿರಿಯರು ಹೇಳಿದ್ದಾರೆ. ತೈತ್ತರೀಯೋಪನಿಷತ್ತಿನಲ್ಲಿ (ಇಂದಿನ ಕೊರತೆಯ ಕಾಲಕ್ಕೆ ಎಷ್ಟೋ ಮುಂಚೆ) ಆಹಾರದ ವಿಷಯದಲ್ಲಿ ಹೀಗೆ ಉಪದೇಶಿಸಲಾಗಿದೆ–

"ಅಧಿಕಾಧಿಕ ಅನ್ನವನ್ನು ಉತ್ಪಾದಿಸಿರಿ. ಇದೊಂದು ವ್ರತವೇ ಸರಿ: ಇದನ್ನು ಪವಿತ್ರ ಕರ್ತವ್ಯವೆಂದು ತಿಳಿದು ಅಂಗೀಕರಿಸಿರಿ. ಮನೆಗೆ ಅತಿಥಿಯಾಗಿ ಯಾರು ಬಂದರೂ ಅನ್ನವಿಕ್ಕದೆ ಮರಳಿಸಲಾಗದು. ಆದುದರಿಂದ ಪ್ರತಿಯೊಂದೂ ವಿಧಾನದಿಂದ ವಿಪುಲ ಆಹಾರವನ್ನು ಒದಗಿಸಿಕೊಳ್ಳಿರಿ."

ನಿಶ್ಚಯವಾಗಿಯೂ ದೈಹಿಕ ಪರಿಶ್ರಮ ಪೂರ್ವಕವಾಗಿ ಹೊಲದಲ್ಲಿ ಗೈಮೆಮಾಡುವುದೇ ಇದಕ್ಕೆ ತೆರೆದಿರುವ ಉಪಾಯ. ಜಾನಪದ ಅಭಿವೃದ್ಧಿಯೋಜನೆಗಳು ಅನ್ನೋತ್ಪಾದನೆಯನ್ನು ಹೆಚ್ಚಿಸುವುದಷ್ಟೇ ಅಲ್ಲ–ಗ್ರಾಮಕಲ್ಯಾಣ ಸರ್ವಾಂಗೀಣವಾಗಬೇಕೆಂದು ಪ್ರಯತ್ನಿಸುತ್ತಿದೆ. ಸರಕಾರಿ ನೌಕರರು ನೀಡುವ ಸಹಕಾರ ಹಾಗೂ ತೋರುವ ನಡವಳಿಕೆಯೊಂದಿಗೆ– ಜನತೆಯ ಉತ್ಸಾಹ ಮತ್ತು ಕಾರ್ಯಕ್ಷಮತೆ ಕೂಡ ಈ ಯೋಜನೆಯ ಯಶಸ್ಸಿನ ಮಾನದಂಡ. ಇದು ಸರಕಾರದಿಂದ ದೊರೆತ ಬಹುಮಾನವಲ್ಲ– ಅಧಿಕಾರಿಯಿಂದ ಹಿಡಿದು ಕೂಲಿಯ ವರೆಗೂ ದುಡಿದು ಬದುಕುವ ಅಭೂತಪೂರ್ವ ಶಪಥ. ಹಿಂದಿನ ಕಾಲದ ಸುಖಸಂತೋಷಗಳು ಕಾಲ್ಪನಿಕವಾಗಿ ಕೇವಲ ಸ್ವಪ್ನದ್ರವ್ಯವಾಗಿ ಇಂದು ಉಳಿದಿವೆ. ಆ ಭವ್ಯತೆಯನ್ನು ಕಣ್ಣ ಮುಂದೆ ಮರಳಿ ಕಟ್ಟಲು ದುಡಿಮೆಯೊಂದೇ ಸಹಕಾರಿ ಎಂದವು ಸಾರಿ ಹೇಳುತ್ತವೆ. ಇಲ್ಲಿ [illegible], ಕೋಲಿಗಾಗಲೀ ಅವಕಾಶವಿಲ್ಲ.

ನಮ್ಮ ಶಾಂತಿ ಸಂತೋಷದ ಬದುಕು ಸಮಾಜ ಸೇವೆಯ ಆದರ್ಶದಿಂದ ಓತಪ್ರೋತವಾಗಿರುವಂತೆ ನೋಡಿಕೊಳ್ಳೋಣ. ಜನತಾ ಜನಾರ್ದನನ ಪೂಜೆಯಿಂದ ನಮ್ಮ ಜೀವನಕ್ಕೆ ಬೆಲೆ ಬರುತ್ತದೆ; ಕಳೆ ಏರುತ್ತದೆ. ಜನತೆ ಎಚ್ಚತ್ತು ಕಾರ್ಯನಿಷ್ಠವಾಗುವಾಗ, ಸಮಾಜ ಚಟುವಟಿಕೆಯಿಂದ ತುಳುಕುತ್ತದೆ. ಗ್ರಾಮ ಕಲ್ಯಾಣವೆಂದರೆ ಇದಕ್ಕಿಂತ ಹೆಚ್ಚಿನದೇನಲ್ಲ. ಎಲ್ಲ ಇರುವುದು ನಮ್ಮ ಕೈಯಲ್ಲಿ: ಸಂಪತ್ತು ಮೈಬೆವರಿಳಿಸಿ ದುಡಿಯುವುದರಿಂದಲೇ ಲಭ್ಯ ಎಂಬ ಸೂತ್ರ ವಾಕ್ಯ ನಮ್ಮ ಸ್ಮರಣೆಯಲ್ಲಿ ಸದಾ ಜಾಗ್ರತವಾಗಿರಲಿ. ದೈಹಿಕ ದುಡಿಮೆಯ ದೀಕ್ಷೆ ನೆರವೇರಲಿ!

—[illegible]॥



ಪೂನಾದ ನೇಶನಲ್ ಕೆಮಿಕಲ್ ಲೆಬೋರೇಟರಿಯ ಡೈರೆಕ್ಟರರಾಗಿ ಬ್ರಿಟನಿನಿಂದ ಹಿಂದುಸ್ಥಾನಕ್ಕೆ ಆಗಮಿಸಿರುವ
ಪ್ರೊ ಜಿ. ಐ. ಫಿಂಚ್,

ತಂತ್ರ ಭಾರತದಲ್ಲಿ ಸಾಹಿತಿಗಳ ಜವಾಬ್ದಾರಿ

ವಿಶ್ವಕಲ್ಯಾಣ ಸಾಧನೆಗೆ ವಿಶ್ವಪ್ರೇಮಪೂರಿತವಾದ ಸಾಹಿತ್ಯವೊಂದೇ ಸಾಧನ

ಲೇಖಕರು: ಶ್ರೀ ಭೋಜರಾಜ ಶೆಟ್ಟಿ, ಬೊಂಬಾಯಿ

ನೈತಿಕ ಪಾರತಂತ್ರ್ಯದಿಂದ ನಮ್ಮ
ಬಂಧಮುಕ್ತವಾಗಿದೆ. ಜೊತೆಗೆ ನ
ವಾಬ್ದಾರಿಯು ಹೆಚ್ಚಿದೆ. ವಿಶಾಲ
ತ, ಜೀರ್ಣವಾದ ಪ್ರತ್ಯೇಕ ಭಾಗ
ರ್ನಿರ್ಮಾಣಕ್ಕೆ ನಾವಿಂದು ತೊಡ
ಗಿದೆ. ವರ್ಷಾನುವರ್ಷದಿಂದ ಸ
ದ-ದೇಶದ, ಮೂಲೆ ಮೂಲೆಗಳಲ್ಲಿ
ಗೀದ ಕೊಳೆಯನ್ನು ನಾವಿಂದು
ಸಿ ಶುಚಿಗೊಳಿಸಬೇಕಾಗಿದೆ. ಹಲ
ತೇನು? ನಾವಿಂದು ಪ್ರತಿಯೊಂ
ಕ್ಷೇತ್ರದಲ್ಲಿ, ನವನಿರ್ಮಾಣ ಕಾರ್ಯ
ನವಸ್ಫೂರ್ತಿಯಿಂದ ಕೈಗೊಳ್ಳುವ
ಕತೆಯಿದೆ.

ಂದು ದೇಶದ ಜೀವನಯಾತ್ರೆಯ
ಮಾರ್ಗದಲ್ಲಿ, ರಾಜಕೀಯ ಪಾರ
ವು ಬಹು ದೊಡ್ಡ ಅತಂಕ. ಇದು
ಅನುಭವದಿಂದ ಅರಿತ ಸತ್ಯ. ಆದ
ಜನೈತಿಕ ಬಿಡುಗಡೆಯೊಂದೇ ನಮ್ಮ
ಮ ಗುರಿಯಲ್ಲ. ಇದು ನಮ್ಮ ಪೂ
ಬಿಡುಗಡೆಯ ಮಾರ್ಗದಲ್ಲಿ ಒಂದು
ಧನ" ಮಾತ್ರ. ಧೀರ್ಘಕಾಲದ ತ್ಯಾ
ತಪಸ್ಸುಗಳ ನಂತರ ಈ ಅಮೂಲ್ಯ
ನ ನಮ್ಮ ಹಸ್ತಗತವಾಗಿದೆ. ಇದನ್ನು
ಬಡ ದೇಶದ, ಜನತೆಯ, ಜೀವನ
ಸ ಕಾರ್ಯದಲ್ಲಿ ಹೇಗೆ ಉಪಯೋಗಿ
ಳ್ಳಬೇಕೆಂಬುದೇ ದೊಡ್ಡ ಮಾತು.
ಮ್ಮ ರಾಜನೀತಿ, ಅರ್ಥನೀತಿಗಳ ರೀತಿ
ಗಿರಬೇಕು-ಸಮಾಜದ ಪುನರ್ನಿರ್ಮಾ
ಹೇಗಾಗಬೇಕು— ನವನಿರ್ಮಾಣದ
ಯೋಜನೆಗಳು ಯಾವ ಕ್ರಮದಿಂದ ಸಾ
ಗಬೇಕು— ಎಂಬೀ ವಿಷಯಗಳನ್ನು ದೂ
ದೃಷ್ಟಿಯಿಂದ ಕಾಲಕ್ಕೊಪ್ಪುವಂತೆ ವಿ
ಚಾರಮಾಡಿ ಅರಿತುಕೊಳ್ಳಬೇಕು. ಈ ಕು
ತು ಚಿಂತಿಸುವಾಗ, ನಾವು ಉದಾರ ಹೃ
ಯಿಗಳೂ, ಸಂವೇದನಾಶೀಲರೂ, ಸರ್ವ
ಸಾರಗ್ರಾಹಿಗಳೂ, ಸರ್ವಜನಾಂಗಳ ಹಿಂ
ಗಳೂ ಆಗುವ ಅಗತ್ಯವಿದೆ. ನಮ್ಮ ದೃ
ಷ್ಟಿಯು ಬರಿ ಸಂಕೀರ್ಣ ರಾಷ್ಟ್ರೀಯ ಭಾ
ವನೆಯಿಂದ ಕುಂಠಿತವಾಗಿರಬಾರದು. ವಿಶ್ವ
ದ ಎಲ್ಲಾ ರಾಷ್ಟ್ರಗಳನ್ನು, ವಿಜ್ಞಾನದ
ರಜ್ಜು, ಒಂದೇ ಕಟ್ಟಿನಲ್ಲಿ ಕಟ್ಟಿದೆ, ಇನ್ನೂ
ಬಿಗಿಯಾಗಿ ಕಟ್ಟುತ್ತಾ ಇದೆ. ಈ ಪರಿಸ್ಥಿ
ತಿಯಲ್ಲಿ, ಕೇವಲ ರಾಷ್ಟ್ರೀಯ ಭಾವನೆ
ಯು, ಪ್ರಗತಿಯ ಲಕ್ಷಣವಾಗಲಿಕ್ಕಿಲ್ಲ.

ಈ ಎಲ್ಲಾ ಪ್ರಗತಿಪರ ವಿಚಾರಗಳು ಜನತೆಯ ಮನದಲ್ಲಿ ಮೊಳೆತು-ಬೆಳೆದು, ದೇಶದ ಸರ್ವಾಂಗೀಣ ಉನ್ನತಿ ಕಾರ್ಯದಲ್ಲಿ ಜನಮನವು ಪ್ರವರ್ತವಾಗಬೇಕಾದರೆ, ಸಾಹಿತ್ಯವೊಂದೇ ಇದಕ್ಕೆ ಅಮೂಲ್ಯ ಸಾಧನ. ಜನತೆಯ ಮನೋಭೂಮಿಯನ್ನು ಸಾಹಿತ್ಯವೇ ಉಳಬೇಕು. ಉತ್ತು ಹಸನಾದ ಭೂಮಿಯಲ್ಲಿ ಸಾಹಿತ್ಯವೇ ಬೇಕಾದ ಬೀಜವನ್ನು ಬಿತ್ತಬೇಕು. ಬಿತ್ತಿದ ಬೀಜಕ್ಕೆ ಸಾಹಿತ್ಯವೇ ನೀರು ಗೊಬ್ಬರ ಕೊಡಬೇಕು. ಸಾಹಿತ್ಯದಿಂದಲೇ ಹುಲುಸಾದ ಬೆಳೆ ಬೆಳೆದು ಯೋಗ್ಯ ಫಲ ದೊರೆಯಬೇಕು. ಜನತೆಗೆ 'ಸ್ವತಂತ್ರ ವಿಚಾರ'ದ ಪ್ರಚೋದನೆ ಕೊಡುವ ನಾವು ರ್ಥ್ಯ 'ಸ್ವತಂತ್ರ ಸಾಹಿತ್ಯ'ಕ್ಕೆ ಮಾತ್ರ ಇದೆ. ಮನ, ಬುದ್ಧಿ; ವಿಚಾರ, ದೇಹಗಳಿಂದ ನಿರೋಗಿಯಾದ ನವ ಸಮಾಜ ರಚನೆಯ ಮಹಾನ್ ಕಾರ್ಯದಲ್ಲಿ 'ಸ್ವತಂತ್ರ ಸಾಹಿತ್ಯ'ದ ಜವಾಬ್ದಾರಿ ಘನವಾದುದು. ನಮ್ಮಿಂದ ಎಷ್ಟೋ ಪಾಲು ಮುಂದರಿದ ರಾಷ್ಟ್ರಗಳಲ್ಲೂ ಸತ್ತಾರೂಢ ರಾಜಕೀಯ ಪಕ್ಷ, ಅಥವಾ ಪ್ರಬಲವಾದ ಇತರ ಪಕ್ಷಗಳ ಸಾಧನ ಮಾತ್ರವಾಗಿ, ಸಾಹಿತ್ಯವು, ತನ್ನ ಘನತೆಯನ್ನು ಕಳಕೊಂಡುದನ್ನು ಕಾಣುತ್ತಿದ್ದೇವೆ. ಅಜ್ಞಾನ, ಅವಿದ್ಯೆ, ಬಡತನದಲ್ಲೇ ಬಿದ್ದಿದ್ದು, ಈಗ ತಾನೇ ಸ್ವತಂತ್ರವಾದ ಭಾರತದಲ್ಲಿ ಉದಯೋನ್ಮುಖ ಸಾಹಿತ್ಯವು, ಅಧಿಕಾರವಿದ್ದವರ, ಪಕ್ಷಬಲವಿದ್ದವರ, ಆರ್ಥಿಕ ಬಲವಿದ್ದವರ ಕೈಗೊಂಬೆಯಾಗುವ ಗಂಡಾಂತರ ಬಹಳ ಹೆಚ್ಚಾಗಿ ಇದೆ. ದೇಶದ ಪ್ರಗತಿಶೀಲ ಸಾಹಿತಿಗಳು, ಈ ಪ್ರಲೋಭನೆಗಳ ಕುರಿತು ಸದಾ ಜಾಗರೂಕರಾಗಿರುವ ಅವಶ್ಯಕತೆಯಿದೆ. ವೈಜ್ಞಾನಿಕ, ದಾರ್ಶನಿಕ, ರಾಜನೀತಿ, ಅರ್ಥಶಾಸ್ತ್ರ, ಇತ್ಯಾದಿ ವ್ಯವಹಾರದ ಉಪಯೋಗೀ ವಿಷಯಗಳು ಸಾಹಿತ್ಯದ ಶರೀರವಾದರೆ ಕಾವ್ಯ, ಕಥೆ, ಕಾದಂಬರಿ, ನಾಟಕ ಇವೇ ಮೊದಲಾದ ರಸಾತ್ಮಕ ಸಾಹಿತ್ಯಗಳು ಆತ್ಮದಂತಿವೆ. ಶರೀರರಹಿತವಾಗಿ ಸುತ್ತಾಡುವ ಪ್ರೇತಾತ್ಮವಾಗಲೀ-ಆತ್ಮರಹಿತವಾದ ಜಡ ದೇಹವಾಗಲೀ ನಮಗೆ ಬೇಕಾಗಿಲ್ಲ. ಅನುಭವವನ್ನು ಹೆಚ್ಚಿಸಿ, ಕ್ರಿಯಾ ಶೀಲತೆಯನ್ನು ಹುಟ್ಟಿಸಬೇಕಾದರೆ ವ್ಯವಹಾರೀ ಸಾಹಿತ್ಯವೇ ಬೇಕು, ಮಾನವನ ಸುಖ--ದುಃಖಗಳ ಕುರಿತು ಸಂವೇದನೆಯನ್ನು ಹುಟ್ಟಿಸಿ--ಮನದಲ್ಲಿ ಕೋಮಲ ಭಾವಗಳನ್ನು ಪ್ರಚೋದನೆಗೊಳಿಸಬೇಕಾದರೆ ರಸಾತ್ಮಕ ಸಾಹಿತ್ಯಗಳೇ ಬೇಕು. ಈ ಕಿರನಾಗಿ ಬೆಳೆಯುವ ಸಾಹಿತ್ಯಕ್ಕೆ ತನ್ನದೇ ಆದ ಸಂಸ್ಕಾರವೂ ಬೇಕು. ಇದು ಪರಾನುಕರಣ ರಹಿತವಾಗಿರಬೇಕು. ನಮ್ಮ ಜೀವನದ ಕುರಿತು, ಪರಂಪರಾಗತವಾದ ಒಂದು ದೃಷ್ಟಿಕೋನ ನಮಗಿದೆ. ಪ್ರಾಚೀನ ಭಾರತದ ಇತಿಹಾಸ, ತಪೋನಿಷ್ಠರಾದ ಋಷಿಮುನಿಗಳ, ಆಚಾರ್ಯರ ಇತಿಹಾಸ. ಲೋಕ ಸಂಗ್ರಹಕ್ಕಾಗಿಯೂ, ಸಮಾಜದ ಧಾರಣೆ, ಪೋಷಣೆಗಾಗಿಯೂ--ಆ ಮಹನೀಯರು ಜೀವಿತವನ್ನೇ ಧಾರೆಯೆರೆದು-ಸಂಗ್ರಹಿಸಿದ ಅಪಾರ ಜ್ಞಾನಭಂಡಾರ ನಮ್ಮಲ್ಲಿ ಇದೆ. ದುರ್ಭಾಗ್ಯವಶದಿಂದ—ಅಜ್ಞಾನಿಗಳಾಗಿ ನಾವು—ಈ ಅಮೂಲ್ಯ ಸಂಪತ್ತಿನ ಪೂರ್ಣ ಪರಿಚಯ ಮಾಡಿಕೊಂಡಿಲ್ಲ. ಈ ಭಾಗದಲ್ಲಿ ವಿದೇಶಿಯರು ಎಷ್ಟು ಪ್ರಯೋಜನ ಪಡೆದಿದ್ದಾರೋ ಅಷ್ಟನ್ನೂ ನಾವು ಪಡೆದಿಲ್ಲ. 'ಸಂಸ್ಕೃತ' ಭಾಷೆಯಲ್ಲಿರುವ ಈ ಅಪೂರ್ವ ಜ್ಞಾನ ಸಂಗ್ರಹವು, ಹಿಂದಿಯಲ್ಲಾಗಲೀ, ನಮ್ಮ
ನಮ್ಮ ಮಾತೃಭಾಷೆಗಳಲ್ಲಾಗಲೀ ಎಷ್ಟು
ಆಗಬೇಕೋ ಅಷ್ಟು ಭಾಷಾಂತರ ಆಗಿಲ್ಲ.
ಈ ಕಾಲದಲ್ಲಿ, ಈ ಕಾರ್ಯ ಅತ್ಯಂತ
ಭರದಿಂದ ಸಾಗಬೇಕಾಗಿದೆ. ದೇಶದ ಸಾ
ಮಾನ್ಯ ಮನುಷ್ಯನೂ ಅರಿಯುವಷ್ಟು ಕ
ಕಾರ್ಯ-ವಿಸ್ತಾರವಾಗಿ ಸಾಗಬೇಕು.
ಮ್ಮ ಸಂಸ್ಕೃತಿ, ಸಭ್ಯತೆ, ಜೀವನದ ಕಡೆ
ನಮ್ಮ ಹಿರಿಯರು ಇಟ್ಟುಕೊಂಡ ದೃಷ್ಟಿ
ಇವು ಯಾವುದೆಂಬ ಕಲ್ಪನೆ ನಮಗೆ ಇರ
ತೀರಬೇಕು. ಹಳೆಯದೆಲ್ಲವೂ ಉತ್ತಮ
ಅದೆಲ್ಲವೂ ಇಂದಿಗೂ ನಮಗೆ ಗ್ರಾಹ್ಯವೆ
ಬ ದುರಾಗ್ರಹ, ಅಥವಾ ಅಂಧಶ್ರದ್ಧೆಯಿ
ದ ಈ ಪ್ರತಿಪಾದನೆಯಲ್ಲ! ತ್ಯಾಗ, ನಿ
ಮತ್ತು ಆತ್ಮಾರ್ಪಣೆಯ ತಪಸ್ಸಿನಿಂದ
ಡೀ ಮಾನವ ಜಾತಿಯ ಕಲ್ಯಾಣದ
ಗೇ ದೃಷ್ಟಿಯಿಟ್ಟು ನಮ್ಮ ಪ್ರಾಚೀನ
ಚಾರ್ಯರು ಸಂಪಾದಿಸಿದ ಜ್ಞಾನದ
ಕು ನಮಗೆ ಇಂದಿಗೂ ದಾರಿ ತೋರ
ಲ್ಲುದು. ಈ ಮಹಾನ್ ಪ್ರಕಾಶದಲ್ಲಿ
ವು ಬಹುದೂರ ನಡೆಯಬಲ್ಲೆವೆಂಬ
ತು ಸತ್ಯ. ನಮ್ಮ ವರ್ತಮಾನ ಸಾಹಿ
ಕೂಡಾ, ತ್ಯಾಗ, ನಿಷ್ಠೆ ತಪಸ್ಸುಗಳ ಅ
ಸ್ಫೂರ್ತಿಯಿಂದಲೇ ನಿರ್ಮಾಣವಾ
ಕು. ವಿಲಾಸ, ವಿಭ್ರಮ-ವಾಗ್ಜಾಲದ
ತೆಯಾಗಬಾರದು ನಮ್ಮ ಸಾಹಿತ್ಯ.
ರ್ಥಿಗಳ, ಶೋಷಕರ 'ಸಾಧನ"ವಾಗ
ಶ್ವ ಮಾನವನ ಕಲ್ಯಾಣದ "ಸಂದೇಶ
ಗಬೇಕಾಗಿದೆ ನಮ್ಮ ಸಾಹಿತ್ಯ. ಇದೆ
ಮ್ಮ "ಸಾಹಿತ್ಯ ಜೀವ"ದ ಸಂಸ್ಕಾರ
ಹದಿಂದ ಪುಷ್ಟವಾಗಿ, ಆತ್ಮಬಲ ಪ
ತವಾಗಿ, ಸಂಸ್ಕಾರ ಪೂರಿತವಾಗಿ
ಸಾಹಿತ್ಯವು ಸನಾತನವೂ--ನವೀ
ನವೂ ಆಗಿ-ವಿಶ್ವದ ಮುಂದೆ ಇಂದ
ಯೆತ್ತಬೇಕಾಗಿದೆ. ಈ ಜವಾಬ್ದಾರಿ
ಸಾಹಿತಿಗಳಿಗೆ ಇಂದು ಕಡಿಮೆಯದ

ನಮ್ಮ ಸಾಹಿತಿಯು ಇಂದು
ಸರ್ವ ಆಲಸ್ಯವನ್ನು ತೊಡೆದುಹಾ
ಯೋನ್ಮುಖನಾಗಬೇಕು. ಈ ನ
ರಾತನ ದೇಶದ ಆ ಮಹಾಲಾಗ್ರ
ಮಾಣ ಕಾರ್ಯ ಸಾಮಾನ
ಪ್ರಾಚೀನ, ಅರ್ವಾಚೀನ ಸಾ
ಜ್ಞಾನ ಭಂಡಾರವನ್ನು ಒಡೆದ
ನ್ನು ಸಾಮಾನ್ಯನಿಂದ ಸಾಮಾನ್ಯ
ಜನಕೆ ಹಂಚಿ, ಜನಮನಕ್ಕೆ
ಧಾರೆಯೆರೆದು--ತಮಗೊಳಿಸುವ
ದೊಡ್ಡ ಜವಾಬ್ದಾರಿಯಿಂದು
ಸಾಹಿತಿಯ ಮೇಲಿದೆ.

ಸೃಷ್ಟಿಯ ಆದಿಯಿಂದ ಮಾ
ಗತಿ ಬಹು ಮಂದಗತಿಯಿಂದ
ದಿದೆ. ಕತ್ತಲೆಯಲ್ಲಿ ದಾರಿಕಾ
ದಾಡುತ್ತಾ, ಹುಡುಕಾಡುತ್ತಾ
ಮುಂದರಿದಿದ್ದಾನೆ ಮಾನವನ
ಮಾರ್ಗದಲ್ಲಿ ಪ್ರಕೃತಿ ಎಷ್ಟೋ
ಗಳನ್ನು ಮಂದೊಡ್ಡಿದೆ. ಆದ
ಯಾದ ಮನುಷ್ಯನ ಕೈಯಲ್ಲಿ
ಯನ್ನು ಜಯಿಸುವ ಸಾಧನ
ತ್ತಾ ಹೋಗಿವೆ. ಇಂದು ವಿ
ಯೋಗ್ಯ ಸಲಕರಣೆಗಳು

[೧೧ನೇ ಪುಟ ನೋಡಿ

ಆಗ--?

ತಾರುಣ್ಯವು ತೀರಿದಾಗ, ಶಕ್ತಿಯು ಕುಗ್ಗಿದಾಗ, ದುಡಿಯುವುದು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ, ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿ ಇರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು, ಕಂಡೊಡನೆ ನಿಮ್ಮದೇ ಆಗುವ, ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ, ನಿಮ್ಮ ನಾಡಿನ

ಈ ಕಂಪೆನಿಯಲ್ಲಿಯೇ ವಿಮೆ ಇಳಿಸಿರಿ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ. ಸ್ಥಾಪನೆ: ೧೯೩೫
The Canara Mutual Assurance Co. Ltd.
Head Office: **UDIPI**, S. India. Estd: 1935

ರಾಮತೀರ್ಥ
ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಭೂಸುಧಾರಣಾ ಮಾರ್ಗದ ಆತಂಕ

ವ್ಯಾಪಕವಾದ ಔದ್ಯಮಿಕ ಕ್ಷೇತ್ರವೇ ಇಂದಿನ ಅಗತ್ಯ.

ಭೂಸುಧಾರಣೆಯ ಪ್ರಶ್ನೆಯು ಇಂದು ನಿಶ್ಚಯದ ಪಲ್ಲವಿಯಾಗಿದೆ: ಆದರೆ ಇದು ಎಷ್ಟು ಸಮಸ್ಯಾತ್ಮಕವೂ ವ್ಯಾಪಕವೂ ಆದ ವಿಷಯವೆಂಬುದನ್ನು ಆಳವಾಗಿ ತಿಳಿದು ನೋಡಬಯಸಿದವರು ಕಡಿಮೆ. ಉದಾಹರಣೆಗೆ, ಭೂಮಿಯ ಒಡೆತನವು ಉಳುವವನಿಗೇ ಸೇರಬೇಕೆಂದೂ ಸರಕಾರ ಮತ್ತು ಬೇಸಾಯಗಾರನಿಗೆ ನಡುವೆ ಜಮೀನುದಾರರೇ ಮುಂತಾದ ಮಧ್ಯಸ್ಥಗಾರ ವರ್ಗಗಳಿರಕೂಡದೆಂದೂ ಹೇಳುವುದು ಸರ್ವಸಾಧಾರಣವಾಗಿದೆ. ಆದರೆ ಮೊದಲ ಹಂತದಲ್ಲಿಯೆ ನಮಗೆ "ಉಳುವವನು ಹೊಲದೊಡೆಯನು" ಎಂಬ ಘೋಷಣೆ ಎಷ್ಟರ ಮಟ್ಟಿಗೆ ಸಮಂಜಸ ಹಾಗೂ ವ್ಯಾವಹಾರಿಕ ಎಂಬುದರ ಬಗ್ಗೆ ಸಂಶಯ ಏಳುವುದು: ಹಳ್ಳಿಯ ಕುಶಲ ವೃತ್ತಿಯನ್ನು ಅವಲಂಬಿಸಿರುವ ಲಕ್ಷಾಂತರ ಬಡಗಿಗಳು, ಕುಂಬಾರರು, ನೇಕಾರರು ಮುಂತಾದವರೂ, ವಂಶಪಾರಂಪರಗತವಾಗಿ ಉದ್ಯೋಗವನ್ನು ಕೈಗೊಂಡು ಬಂದಿರುವ ಅಗಸ, ಕ್ಷೌರಿಕ ಮುಂತಾದವರೂ ಅಲ್ಪಸ್ವಲ್ಪ ವಿದ್ಯಾ ಸಂಪನ್ನರಾಗಿ ನಗರದಲ್ಲಿ ಏನಾದರೊಂದು ಕೆಲಸವನ್ನು ಮಾಡಿಕೊಂಡು ಇರುವವರೂ— ವ್ಯವಸಾಯವನ್ನು ಮಾಡಿಯೇ ಮಾಡುತ್ತಾರೆ. ಆದರೆ ವ್ಯವಸಾಯದ ಉತ್ಪನ್ನವನ್ನು ತಮ್ಮ ಅಗ್ಗ ಸಂಪಾದನೆ ಕೂಡಿಸಿ, ಅನುಭೋಗಿಸುತ್ತಾರೆ. ಇವರು ಭೂಮಿಯನ್ನು ಉಳುವವರೇ ಅಲ್ಲವೇ? ಹಾಗೆಯೇ ಕೆಲವು ರೈತರು ಕೂಲಿಯಾಳುಗಳನ್ನಿಟ್ಟುಕೊಂಡು ಬೇಸಾಯ ಮಾಡಿದರೆ, ಇನ್ನು ಕೆಲವರು ಸ್ವಂತ ಸಾಗುವಳಿಯೊಂದಿಗೆ, ಸ್ವಲ್ಪ ಭೂಮಿಯನ್ನು ಗೇಣಿಗೆ ಪಡೆದುಕೊಂಡು ಅದನ್ನೂ ಸಾಗುವಳಿಮಾಡುವರು. ಇವರನ್ನು ಏನೆಂದು ಕರೆಯಬೇಕು? ಇನ್ನು ಕೊನೆಯದಾಗಿ ಭೂಮಿಯಿಲ್ಲದ—ಆದರೆ ವರ್ಷವಿಡೀ ವ್ಯವಸಾಯದ ಕಸುಬಿನಲ್ಲಿಯೇ ತಲ್ಲೀನರಾಗಿರುವ – ಕೂಲಿಗಳಿರುವರಲ್ಲಾ! ಅವರು ಭೂಮಿ ಸಾಗು ಮಾಡುವರೆಂದಷ್ಟಕ್ಕೆ "ಉಳುವವನೇ ಹೊಲದೊಡೆಯನು" ಎಂಬ ಕಕ್ಷೆಯಲ್ಲಿ ಬರುವರೇ?

ಸಮಸ್ಯೆಯ ವಿಶ್ಲೇಷಣೆ

ಹೀಗೆ ನಮ್ಮ ಅನುಪಸ್ಥಿತ ಪಲ್ಲವಿಯನ್ನು ವಿಶ್ಲೇಷಿಸುತ್ತಲೇ ಸಮಸ್ಯೆಯು ಉದ್ಭವಿಸುತ್ತದೆ. ಇಷ್ಟೆಲ್ಲಾ ತೊಡಕುಗಳನ್ನು ಸಮಾಧಾನಕರವಾಗಿ ಬಿಡಿಸುವುದಕ್ಕೆ ತುಂಬಾ ಅನುಭವವೂ ಸಹನೆಯೂ ಜಾಗರೂಕತೆಯೂ ಜನರ ಮನದೊಲವಿನ ಹೊಲಬೂ ಇರುವುದು ಅಗತ್ಯ. ಒಂದೊಮ್ಮೆ ಇದನ್ನು ಚೆನ್ನಾಗಿ ಬಗೆಹರಿಸಿದರೂ – ಎಲ್ಲರಿಗೂ ಸಮಾನವಾಗಿ ಭೂಮಿ ವಿತರಿಸುವುದೆಂಬ ಎರಡನೆಯ ಹೆಜ್ಜೆ ಇನ್ನೊಂದಷ್ಟು ತೊಡಕುಗಳನ್ನು ತಂದೊಡ್ಡುವುದು. ಉದಾ: ಪ್ರತಿಯೊಂದು ಕುಟುಂಬಕ್ಕೂ ಕಡಿಮೆಯೆಂದರೆ ಐದೆಕರೆಯಷ್ಟು ಭೂಮಿ ಸಿಗಬೇಕೆಂದು ಹೇಳಲಾಗುತ್ತಿದೆ. ಭೂಮಿಯೆಂದರೆ ಸಾಗುಭೂಮಿಯೆ ಬಾಗುಭೂಮಿಯೋ? ಅರಣ್ಯವೋ? ಗುಡ್ಡ ಅಥವಾ ಮೈದಾನವೆ? ಬಯಲೇ, ಬೆಟ್ಟಗದೆಯೋ [illegible]

ವ್ಯನೂ ಪ್ರಶ್ನೆಯನ್ನೆತ್ತಬಲ್ಲನು. ಇದರ ಜೊತೆಗೆ ಭೂಮಿಯ ಫಲವತ್ತತೆ, ಅದು ಇರುವ ಸ್ಥಳದ ಮಹತ್ವ, ಬೇಸಾಯಗಾರನು ಅದನ್ನು ಉಪಯೋಗಿಸುವುದಕ್ಕೆ ಇರುವ ವಿಶೇಷ ಅನುಕೂಲತೆಗಳು—ಇವೂ ಬರುವುದು ನಿಶ್ಚಯ. ಇನ್ನು ಜನಸಂಖ್ಯಾ ಪ್ರಮಾಣ ಕೂಡಾ ಸಮಸ್ಯೆಯನ್ನು ಜಿಗುಟಾಗಿಸಬಲ್ಲುದು: ಎಲ್ಲೆಡೆ ಜನವಸತಿ ಒಂದೇ ತೆರನಾಗಿಲ್ಲ: ಸಾಂದ್ರ ಜನವಸತಿ ಇರುವಲ್ಲಿ ವಿತರಣೆಗೆ ಅಧಿಕ ಭೂಮಿ ದೊರೆಯದೆ ಹೋದೀತು. ಮಂದ ಜನವಸತಿ ಇರುವ ಭೂಮಿ ಹೆಚ್ಚು ಯೋಗ್ಯತೆಯಿಂದ ಕೂಡಿರದೆ ಇದ್ದೀತು. ಹೀಗಾಗಿ ಜನರನ್ನು ಸ್ಥಳಾಂತರಿಸುವ ಸಮಸ್ಯೆಯುಂಟಾದರೂ ಆಶ್ಚರ್ಯವಲ್ಲ.

ತಕರಾರು ಏಳುವ ಭಯ

ಈ ಮಹತ್ವದ ಉದ್ದೇಶವನ್ನು ಚೆಲುವಾದ ರೀತಿಯಲ್ಲಿ ಪೂರೈಸ ಬಲ್ಲ ಹೊಣೆಯನ್ನು ಹೊರಲು ಮುಂಬರುವುದಾದರೂ ಯಾರ? ಸರಕಾರದ ಕಾಯಿದೆ ಬಲದಿಂದ ಭೂಸುಧಾರಣೆಗೆ ಉತ್ತೇಜನ ಕೊಡಬಹುದು – ಏಕೆ, ಕಮ್ಯುನಿಸ್ಟ ರಾಷ್ಟ್ರಗಳಲ್ಲಿ ಮಾಡುವಂತೆ ಬಲಾತ್ಕಾರವನ್ನೂ ಉಪಯೋಗಿಸಬಹುದು. ಆದರೆ ಲಕ್ಷಾಂತರ ಹಳ್ಳಿಗರ ಹೊಲಮನೆಯನ್ನು ಕಸಿದುಕೊಳ್ಳುವಾಗ, ಎಷ್ಟೇ ನ್ಯಾಯಪ್ರಿಯವಾದ ರಾಷ್ಟ್ರವಾದರೂ, ಅಲ್ಲಿ ಮೋಸ, ವಂಚನೆ ಮತ್ತು ತಕರಾರುಗಳಿಗೆ ಎಡೆದೊರೆತೇ ತೀರುವುದು. ಹಲವಾರು ಜನರು ನಿರ್ಗತಿಕರಾಗುವುದರಿಂದ, ಅಸಂತುಷ್ಟಿಯು ಒಲಿತು ಸಾಮಾಜಿಕ ಸಮತೆ ನಡುಗುವ ಭಯವು ಇದೆ. ನ್ಯಾಯದ ಹೆಸರಲ್ಲಿ – ತೆರೆಯ ಮರೆಯಲ್ಲೇ ಆದರೂ – ಅನ್ಯಾಯ ನರ್ತನಗೈದೀತು ಎಂದು ಯಾರೊಬ್ಬರೂ ಕಳವಳ ವ್ಯಕ್ತಪಡಿಸರೇ. ಒಡನೆಲ್ಲ ಉ[illegible]ಬಹುದು(?) ಎಂದಿಟ್ಟುಕೊಂಡರೂ, ಜನ ಸಂಖ್ಯೆಯ ಆಧಾರದ ಮೇಲೆ ಭೂಮಿಯ ಕನಿಷ್ಟ ಮಿತಿಯನ್ನು ಗೊತ್ತುಮಾಡುವ ಪದ್ಧತಿ ವ್ಯವಹಾರ್ಯವಾಗದು ಎಂದು ಬಲ್ಲವರ ಹೇಳಿಕೆ. ಐದು ಸದಸ್ಯರಿರುವ ಒಂದು ಕುಟುಂಬ ಇನ್ನು ಹತ್ತು ವರ್ಷಗಳಲ್ಲಿ ಹದಿನೈದಕ್ಕೆ ಬೆಳೆದೀತು: ಅಥವಾ ರೋಗರುಜೆಗೆ ಬಲಿಯಾಗಿ ಒಂದೇ ಒಂದು ತಲೆ ಮಾತ್ರ ಉಳಿದೀತು. ಆಗ ಬಾರಿಬಾರಿಗೂ ಕುಟುಂಬದ ಗಾತ್ರವನ್ನೂ, ಅದು ಅನುಭೋಗಿಸುತ್ತಿರುವ ಭೂಮಿಯ ಪ್ರಮಾಣವನ್ನೂ ಪರಿಶೀಲಿಸುತ್ತಾ ತಕ್ಕ ಹೊಣೆಗಾರಿಕೆಯನ್ನುಂಟುಮಾಡುವ ಹೊಸತೊಂದು ಕೆಲಸ ನಡೆಯುತ್ತಿರಬೇಕಾಗುವುದು: ಆಗ ಇದ್ದ ಹಿಡುವಳಿಗೆ ಸಮೀಪದಲ್ಲಿಯೇ ಹೊಸತಾಗಿ ಭೂಮಿ ದೊರೆಯುವುದು ಸಾಧ್ಯವೆ? ದೂರದ ಭೂಮಿಯನ್ನು ಸಾಗುಮಾಡಿ ಲಾಭ ಸಂಪಾದಿಸಲಾಗುವುದೆ? ಹೀಗೆ ಒಂದು ಸಮಸ್ಯೆ ಹತ್ತು ಹೊಸ ಸಮಸ್ಯೆಗೆ ಜನ್ಮ ಕೊಡುವುದು ಅದು ಅಲ್ಲದೆ, ಭಾರತದಲ್ಲಿ ಹಾಗೆ ಹಂಚಿಕೊಡಲು ಉಳಿದಿರುವ ಭೂಮಿಯಾದರೂ, ಬಹಳ ಸ್ವಲ್ಪ ಎಂದು ಬೇರೆ ಹೇಳುತ್ತಾರೆ.

ಮಧ್ಯಸ್ಥರ ವರ್ಚಸ್ಸು

ಆದರೂ ಸಾಮಾನ್ಯವಾಗಿ ಮಧ್ಯಸ್ಥವರ್ಗವನ್ನು ಉರುಳಿಸುವುದರಿಂದ, ಬೇಸಾಯಗಾರರಿಗೆ ಅನಾವಶ್ಯಕವಾದ ತೊಂದರೆ ತಾಪತ್ರಯಗಳು ದೂರಾಗುವುವೆಂದು ಪ್ರತಿಪಾದಿಸಲಡೆಯಿದೆ. ಇದರ ಪರಿಣಾಮವಾಗಿ ಬೇಸಾಯಗಾರನ ಉತ್ಪತ್ತಿಯಲ್ಲಿ ಹೆಚ್ಚಳವೂ ಜೀವನ ಮಟ್ಟದಲ್ಲಿ ಔನ್ನತ್ಯವೂ ಉಂಟಾಗುವುದೆಂದು ಹೇಳಬಹುದು. ಆದರೆ ವ್ಯವಸಾಯದಲ್ಲಿ ಮಾತ್ರವಲ್ಲದೆ ಇತರ ಕ್ಷೇತ್ರಗಳಲ್ಲಿಯೂ ಕೂಡಾ (ಉದಾ: ಔದ್ಯಮಿಕ ಕ್ಷೇತ್ರ) ಮಧ್ಯಸ್ಥರ ವರ್ಚಸ್ಸು ನಾಶವಾಗಬೇಡವೇ? ಅಲ್ಲಿ ಈ ವರ್ಗದ [illegible]ಟನೆಯು ಬಹುದಾದರೆ ಇಲ್ಲಿ ಏಕಕೂಡದು? [illegible] ಪ್ರಶ್ನೆಯನ್ನು ಉತ್ತರಿಸಬೇಕಾದುದೂ ಧರ್ಮ. ಅಲ್ಲದೆ ಒಬ್ಬ ಜಮೀನುದಾರನನ್ನು ಒಕ್ಕಲಿಗನ ಶತ್ರುವೆಂದೇಕೆ ತಿಳಿಯಬೇಕು? ಒಬ್ಬ ಗಿರಣಿಯೊಡೆಯನು ತನ್ನಲ್ಲಿರುವ ಕೋಟ್ಯಾಂತರ ಭಂಡವಾಳದ ಬಲದಿಂದ ಆ ಉದ್ದಿಮೆಯನ್ನು ನಿರಾತಂಕವಾಗಿ ನಡೆಸಬಲ್ಲನಾದರೆ ಜಮೀನುದಾರನು ತನ್ನ ಹಣವನ್ನು ಭೂಮಿಯ ಮೇಲೆ ಸುರುವಿ, ಅದನ್ನು ಒಂದು ವ್ಯವಹಾರವಾಗಿ ಏಕೆ ಮಾಡಿಕೊಳ್ಳಕೂಡದು? ಇಷ್ಟೂ ಅಲ್ಲದೆ, ಕೇವಲ ಆಹಾರ ಧಾನ್ಯ ಬೆಳೆಯುವ ಭೂಮಿಯ ಒಡೆಯರ ಮೇಲೆಯೇ ಗದಾಪ್ರಹಾರವಾಗಬೇಕೇಕೆ? ಕಾಫಿ ತೋಟ, ರಬ್ಬರು ತೋಟ, ಏಲಕ್ಕಿ ತೋಟ, ಕರಿಮೆಣಸಿನ ತೋಟ ಎಂದು ಮುಂತಾಗಿ ರೊಕ್ಕದ ಪೈರು ಬೆಳೆಯುವವರಿಗೆ ಭೂಸುಧಾರಣ ಕಾಯಿದೆಯಿಂದ ಮುಕ್ತಿದೊರೆತರೆ, ಅದು ಸರಿಯೇ? ಭಂಡವಾಳವನ್ನು ಭೂಮಿಯ ಮೇಲೆ ಸುರುವುದೇ ಅಪರಾಧವೆಂದು ಪರಿಗಣಿಸಲ್ಪಡುವುದಾದರೆ, ಅದನ್ನು ಸರಿಯಾದ ರೀತಿ ಎನ್ನಲಾಗದು.

ಬೇರೆ ಉದ್ಯೋಗ ಬೇಕು.

ಭೂ ಸುಧಾರಣೆಯ ಗುಲ್ಲನ್ನೆಬ್ಬಿಸಿದವರು—ಸಮ ಪ್ರಮಾಣದಲ್ಲಿ ಭೂಮಿಯನ್ನು ವಿತರಿಸುವುದೊಂದೇ ಏಕಮಾತ್ರ ಉಪಾಯವೆಂದೂ ತುತೂರಿ ಊದಿದರು. ಭೂಮಿಯ ಬೇಡಿಕೆ ಅಧಿಕಾಧಿಕವಾಗುತ್ತಾ ನಡೆದುದು ಭೂ ಸುಧಾರಣೆಯ ಕೂಗಿಗೆ ಇನ್ನೂ ಹೆಚ್ಚಿನ ಪುಟಕೊಟ್ಟಿತು. ಭೂಮಿಯ ಸಮನಾದ ಹಂಚಿಕೆಯಾಗಬೇಕೆನ್ನುವವರು, ಮುಂದೆ ಮನೆಗಳ ಪುನರ್ವಿತರಣ, ಬೇಂಕುಗಳಲ್ಲಿರುವ ಡಿಪಾಜಿಟುಗಳ ಪ್ರಮಾಣ ಬದ್ಧ ಹಂಚೋಣ—ಎಂದೂ ಗುಲ್ಲೆಬ್ಬಿಸಲು ಆಸ್ಪದವಿದೆ. ಒಂದು ರೀತಿ ನೋಡಿದರೆ, ಕಮ್ಯೂನಿಸಂ ಬಂದರೆ ಮಾಡುವುದು ಇದನ್ನೇ. ಆದರೆ ಅದಕ್ಕೆ ಕೂಡ ಭಾರತದಲ್ಲಿ—ವ್ಯವಸಾಯ ಕ್ಷೇತ್ರದಲ್ಲಿಯಾದರೂ—ಹೇಳಿಕೊಳ್ಳಬಹುದಾದಷ್ಟು ಹೆಚ್ಚು ಆಸ್ಪದವಿಲ್ಲ. ಅಮೇರಿಕಾದಲ್ಲಿ ಒಬ್ಬೊಬ್ಬನಿಗೆ ನಲುವತ್ತು ಎಕರೆ ಭೂಮಿ ದೊರೆಯುವಂತಿದ್ದರೂ, ಅಲ್ಲಿಯ ಜನ ಔದ್ಯೋಗಿಕ ಕ್ಷೇತ್ರಗಳ ದುಡಿಮೆಯನ್ನೇ ಆಶ್ರಯಿಸುತ್ತಾರೆ. ಅಲ್ಲಿಯ ಬಳಿಕೆ ಈ ವಿಶಾಲ ಭೂಮಿಯ ವರಮಾನಕ್ಕೆ ಸಮನಾಗಿದೆ. ನಮಗೆ ಹಂಚಿದರೆ ಬರುವುದು ಒಂದೆಕರೆ ಭೂಮಿ—ಸಾಫು ಇನ್ನೂ ಅದಕ್ಕಾಗಿಯೇ ಬಡಿದಾಡುತ್ತಿದ್ದೇವೆ. ಅದನ್ನು ತುಂಡು ಮಾಡಿ ಮಕ್ಕಳಲ್ಲಿ ಹಂಚಿಕೊಡುತ್ತೇವೆ

೧೦ನೇ ಪುಟ ನೋಡಿರಿ.

ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ತೆರೆಯಬೇಕಾದುದೇಕೆ?

ಬೇಂಕಿನಲ್ಲಿ ನಿಮ್ಮ ಲೆಕ್ಕವೊಂದು ತೆರೆಯಲ್ಪಟ್ಟಲ್ಲಿ ಅದು ನಿಮ್ಮಲ್ಲಿ ಬ್ಯಾಂಕಿಂಗ್ ವ್ಯವಹಾರದ ಪದ್ಧತಿಯನ್ನುಂಟುಮಾಡುವುದು; ಅನ್ಯಾಯವಾಗಿ ಹೋಗುವ ಅತ್ಯಲ್ಪ ಹಣವನ್ನಾದರೂ ಬ್ಯಾಂಕಿನಲ್ಲಿಡಬೇಕೆಂಬ ಕುತೂಹಲವು ನಿಮ್ಮಲ್ಲುಂಟಾಗುವುದು. ನಿಮ್ಮ ಬ್ಯಾಂಕಿನಲ್ಲಿ ಇಂದೇ ಸೇವಿಂಗ್ಸ್ ಬ್ಯಾಂಕ್ ಲೆಕ್ಕವನ್ನು ತೆರೆದು ಅದರಲ್ಲಿ ಎಷ್ಟೇ ಸಣ್ಣ ಹಣವನ್ನಾದರೂ ಕ್ರಮಪ್ರಕಾರ ಶೇಖರಿಸುತ್ತ ಬಂದರೆ ಅದು ಬೇಗನೆ ದೊಡ್ಡ ಮೊತ್ತವಾಗಿ ನೀವು ವಿಶೇಷವಾಗಿ ಇಚ್ಛಿಸುವ ನಿಮ್ಮ ಕುಟುಂಬದ ಬಗ್ಗೆ ಗೃಹನಿರ್ಮಾಣ, ಮಕ್ಕಳ ವಿದ್ಯಾಭ್ಯಾಸ ಇತ್ಯಾದಿ ಕೆಲಸಗಳಿಗೆ ಒದಗುವುದು.

ಆದುದರಿಂದ ಇಂದೇ ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ತೆರೆಯಿರಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.
ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ
The Canara Industrial &
Banking Syndicate Limited.
Estd: 1925 H. O: UDIPI.

ಲಕ್ಷ್ಮೀ
ಸಂತ್ರಾಲ್ ಮಾತ್ರೆ

ಇದರ ಉಪಯೋಗದಿಂದ ಒಡನಾಡ ಆದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರದ ಕೃಚ್ಛ್ರ, ಮೂತ್ರದೊಡನೆಯಾ ಮುಂಚಾಗಿ ಬಿಳುಪು, ಆರಿನ ಕಂಪು ಈ ಭಾಗಗಳಲ್ಲಿ ಕೀವು ಹೋಗುವದು, ತೊಡೆ ಸಂದಿನಲ್ಲಿ ಗಂಟು ಬರುವದು, ಕಾಲುಗಂಟು ವೇದನೆ, ಕಣ್ಣಿನಲ್ಲಿ ಕೀವು ಬರುವದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ, ಸ್ತ್ರೀಯರ ಬಿಳೆ ಕೆಂಗು ಇವೆಲ್ಲಾ ಖಾತ್ರಿಯಾಗಿ ಗುಣ ಹೊಂದುವವು. ಇತರ ಈಗಿನ ಉಷ್ಣಕಾಲದಲ್ಲಿ ಗರ್ಮಿ ತಂದುಬಂದರೆ ರಾತ್ರಿ ಮಲಗುವಾಗ್ಗೆ ಒಂದು ಮಾತ್ರೆ ಸೇವಿಸಿ ಹಾಲು ಕುಡಿದರೆ ಸುಖವಾಗಿ ನಿದ್ರೆಬಂದು ಸುಖವಿರೇಚನೆಯಾಗಿ ದೇಹದ ಸೊಕ್ಕು ಹೋಗುವದು.

ಶೀಸೆ 1ಕ್ಕೆ ರೂ. 2-0-0

ಏಜಂಟ್ಸ್:
ಷಾ ಕಂಪೆನಿ, ಮಂಗಳೂರು

ನೆಹರೂ ಸಂಚಾರ

ಧಾನಮಂತ್ರಿ ಶ್ರೀ ಜವಾಹರಲಾಲ ಭಾರತದ ಹೃತ್ಕಮಲವೇ ಸೈ ಮುಖಂಡರಲ್ಲಿ (ಗಾಂಧೀಜಿಗಿಂತ ಒಂದು ತೂಕ ಹೆಚ್ಚೇ ಎಂದು ಹೇಳಡು) ಅತ್ಯಂತ ಜನಪ್ರಿಯವಾದ ವ್ಯ ಶ್ರೀ ನೆಹರೂ ನಿಜ. ಎಂತಲೇ, ನೆಹ ಸಂಚಾರದ ಕಾರ್ಯಕ್ರಮವಿದ್ದಾಗಲೆ ಜನತೆಗೆ ಸಂತೋಷ, ಮತ್ತು ಸಡಗರ ತೆಯ ಮೇಲೆ ತನ್ನ ಅಪ್ರತಿಮ ವ್ಯಕ್ತಿ ಪ್ರಭಾವವನ್ನು ಬೀರಿ, ಅವರ ಮನ ಲವನ್ನೂ ಹಣೆಬರಹವನ್ನೂ ನೋಡಿ, ತಿಳಿಯಬಲ್ಲ ಸೂಕ್ಷ್ಮಶಕ್ತಿ ಹಾಗೂ ಜ್ಞಾನ ಶ್ರೀ ನೆಹರೂರಿಗಿದೆ. ಮದ್ರಾಸು ಜ್ಯದಲ್ಲಿ ಬರಗಾಲ ತಾಂಡವವಾಡುತ್ತಿ ವ ರಾಯಲಸೀಮೆ ಹಾಗೂ ಮೈಸೂರ ಕ್ಷಾಮಗ್ರಸ್ತ ಪ್ರದೇಶಗಳ ಪರಿಸ್ಥಿತಿಯ ಕಣ್ಣಾರೆ ನೋಡಬಯಸಿ ಪ್ರಧಾನಿ ಹರೂ ಮದ್ರಾಸಿಗೆ ಆಗಮಿಸಿದರು. ಕಳೆ ವಾರಪತ್ರಿಕೆಗಳಲ್ಲಿ ತುಂಬಾ ನೆಹರೂ ಸಂಚಾರದ ಸಮಾಚಾರವೇ ಇದ್ದಿತು. ಬರಗಾಲ ಪ್ರದೇಶದಲ್ಲಿ ಒಟ್ಟು ಮೂರು ದಿನದ ಸಂಚಾರವನ್ನು ನೆಹರು ಕೈಗೊಂಡಿದ್ದರು ತಮಗರಿಯದ ಭಾಷೆಯಲ್ಲಿ ಮಾತನಾಡುವ ಜನರನ್ನು ನೆಹರೂ ನೋಡಿದರು. ಜನರೊಡನೆ ಬೆರೆತು ಅವರ ಸುಖದುಃಖಗಳನ್ನು ವಿಚಾರಿಸಿ ತಿಳಿದುಕೊಳ್ಳುವ ಆತುರ ಹಾಗೂ ಹಂಬಲ ನೆಹರೂಗಿದ್ದರೂ, ಕೇವಲ ದೃಷ್ಟಿಕ್ಷೇಪ ಮಾತ್ರದಿಂದಲೇ ಎಲ್ಲವನ್ನೂ ಮನವರಿಕೆ ಮಾಡಿಕೊಳ್ಳುವ ವ್ಯಾವಹಾರಿಕ ಮಾರ್ಗವನ್ನೇ ಅವರಿಗೆ ತೆರೆದಿತ್ತು. ಜನರಿಗೂ ಇದು ಅರ್ಥವಾಗುತಿತ್ತು. ತಮ್ಮ ಧುರೀಣನು ಏನಾದರೂ ಮಾಡಿ ತನ್ನ ದೇಶ ಬಾಂಧವರ ಏಳಿಗೆಗೆ ದುಡಿಯುವುದು ನಿಶ್ಚಯವೆಂಬ ಅಭಿಮಾನ ಜನತೆಯಲ್ಲಿ ಅಚ್ಚಳಿಯದೆ ಮೂಡಿತ್ತು. ಇದನ್ನು ನೆಹರೂ ಕಂಡು ಸಂತುಷ್ಟರಾದರು.

ನಿರಾಶೆ ಬೇಡ

ಮಾತು ತಿಳಿಯದ ಮೂಕರ ನಡುವೆ ಕೂಡ ನೆಹರೂ ತನ್ನ ಸಾಂತ್ವನದ ನುಡಿಗಳನ್ನು ಹೇಳಲು ಹಿಂಜರಿಯಲಿಲ್ಲ. ತಮ್ಮ ಸಂಚಾರದ ವೇಳೆ ಅವರು ಭಾಷಣ ಮಾಡಿದುದು ಬಹಳ ಸ್ವಲ್ಪ. ಆದರೆ ನೋಡೆಡೆ ಎಲ್ಲೆಲ್ಲ ಜನರು ತಮಗಿತ್ತ ವಿಜೃಂಭಣೆಯದಲ್ಲವಾದರೂ ಪ್ರೀತಿಯ ಸ್ವಾಗತಕ್ಕೆ ಅವರು ಕೃತಜ್ಞತೆ ವ್ಯಕ್ತಪಡಿಸಿದರು. ಬರಗಾಲದಂಥ ಭೀಷಣ ಪರಿಸ್ಥಿತಿಗೆ ಜನರು ಗುರಿಯಾದುದಕ್ಕೆ ವಿಷಾದಿಸಿದರೂ, ಧೈರ್ಯಗುಂದಬೇಡಿರೆಂದು ಹಿತ ನುಡಿದರು. ಮೈಸೂರು ರಾಜ್ಯದಲ್ಲೊಂದು ಕಡೆ ಅಲ್ಲಿಯ ಜನತಾ ಧುರೀಣರು ನೆಹರೂರಿಗೆ ಅರ್ಪಿಸಿದ ಮನವಿಯಲ್ಲಿ "ನಾವು ಸಂಪೂರ್ಣ ಅಸಹಾಯರಾಗಿದ್ದೇವೆ; ನಿರಾಶರಾಗಿದ್ದೇವೆ" ಎಂಬ ಧ್ವನಿಯಿತ್ತು. ಇದನ್ನು ಕೇಳಿ ನೆಹರೂ ಕುಪಿತರಾದರು. ಜನತೆಯ ಪ್ರತಿನಿಧಿಗಳಿಗೆ ಜನರ ಕಷ್ಟ ಸಮಯದಲ್ಲಿ ನಿರಾಶರಾಗಿ ಕೈಚೆಲ್ಲಿ ಬಿಡುವ ಅಧಿಕಾರವಿಲ್ಲ. ಶಕ್ತಿಮೀರಿ ಪ್ರಯತ್ನಪಟ್ಟು ಜನತಾ ಸೇವೆ ನಿರ್ವಿಘ್ನವಾಗಿ ನಡೆಯುತ್ತಿರುವಂತೆ ಅವರು ನೋಡಿಕೊಳ್ಳಬೇಕಾದುದು ಕರ್ತವ್ಯ. ಆದುದರಿಂದ ನೆಹರೂ "ನೀವು ನಿರಾಶರಾಗಿದ್ದರೆ, ದಯವಿಟ್ಟು ನಿಮ್ಮ ಪದಕ್ಕೆ ರಾಜೀನಾಮೆ [illegible] ಜನತೆಗೆ ಆಶೆ ತುಂಬುವವರ ಅಧಿಕಾರಕ್ಕೆ ಬಂದು, ಜನರ ಕಷ್ಟ ನೀಗಿಸಲು ಪರಿಶ್ರಮಿಸಲಿ" ಎಂದು ನಿಷ್ಠುರದ ಆದರೆ ಸಮಯೋಚಿತವಾದ ಮಾತು ಹೇಳಿದರು.

ಸ್ವಯಂಸ್ಫೂರ್ತಿಯ ಕ್ಷೇತ್ರ

ಹೀಗೆ ಜನತೆ ಧೈರ್ಯಗೆಟ್ಟು ಅಸಹಾಯತೆ ತೋರಬಾರದು ಎಂದು ನೆಹರೂರ ಮನೀಷೆ. ತಮಗೊಪ್ಪಿಸಿದ ಅಸಂಖ್ಯ ಮನವಿಗಳಲ್ಲಿ ರಾಜ್ಯ ಸರಕಾರ ಅದು ಮಾಡಬೇಕು, ಕೇಂದ್ರ ಸರಕಾರ ಇದು ಮಾಡಬೇಕು ಎಂದು "ಬೇಕು"ಗಳ ಪಟ್ಟಿಯನ್ನೇ ಮುಂದಿಟ್ಟದ್ದು ವಿಷಾದಕರ ಎಂದು ನೆಹರೂ ಬೇಸರ ತೋರಿದರು. ಅವರ ಮಾತನ್ನು ತಪ್ಪೆಂದು ತೆಗೆದು ಹಾಕಲಾಗುವುದಿಲ್ಲ. ವ್ಯವಹಾರಜ್ಞನಾದ ಯಾವನೊಬ್ಬನಿಗೂ ಸರಕಾರ ಜನತೆಗಾಗಿ ಮಾಡಬಲ್ಲದೆಷ್ಟೆಂಬುದು ಚೆನ್ನಾಗಿ ತಿಳಿದಿದೆ. ಸಂಕಟ ಬಂದರೆ ವೆಂಕಟರಮಣ ಎಂದು ಸರಕಾರವನ್ನು ಯಾಚಿಸುವುದು ಸ್ವಾಭಾವಿಕವಾದರೂ, ಸಣ್ಣ ಪುಟ್ಟ ಪ್ರತಿಯೊಂದೂ ಕೆಲಸಕ್ಕೆ ಸರಕಾರದಿಂದಲೇ ಸ್ಫೂರ್ತಿ ದೊರೆಯಲೆಂದು ಅಪೇಕ್ಷಿಸುವುದು ಪ್ರಜಾಪ್ರಭುತ್ವಕ್ಕೆ ಒಗ್ಗುವಂಥ ನಡವಳಿಕೆಯಲ್ಲ. ಈ ಪ್ರವೃತ್ತಿ ರಚನಾತ್ಮಕವಾಗಿರದೆ, ನಕಾರಾತ್ಮಕವಾಗಿದೆ ಎನ್ನಬೇಕು. ಆದುದರಿಂದ ನೆಹರೂ ಇದನ್ನು ವಿರೋಧಿಸಿದರು: ಸರಕಾರ ಮಾಡಬೇಕೆಂದು ಹೇಳಿದ ಎಷ್ಟೋ ಕಾರ್ಯಗಳನ್ನು ಸ್ವತಃ ಜನತೆಯೇ ಉತ್ಸಾಹದಿಂದ ಮುಂಬಂದು ಮಾಡಲಿಕ್ಕೆ ಸಾಧ್ಯವಿದೆ. ಭಾರತ ಸೇವಕ ಸಮಾಜದಂಥ ಸಂಘಟನೆಯನ್ನು ಸೃಷ್ಟಿಸಿದ್ದು ಇದಕ್ಕಾಗಿಯೇ. ಜನರಲ್ಲಿ ಸ್ವಾವಲಂಬನ ಹಾಗೂ ಸ್ವಂತ ಸಹಾಯದ ಮನೋವೃತ್ತಿ ಬೆಳೆದುಬರುವುದು ಅವಶ್ಯ" ಎಂಬುದಾಗಿ ನೆಹರೂ ತಿಳಿಸಿ ಹೇಳಿದರು.

ಪರಿಹಾರೋಪಾಯ

ಬರಗಾಲಪೀಡಿತ ಪ್ರದೇಶಗಳಲ್ಲಿ ರಾಜ್ಯ ಸರಕಾರ ಅಪಾರ ವೆಚ್ಚದಿಂದ ಪರಿಹಾರ ಕ್ರಮಗಳನ್ನು ಕೈಗೊಂಡಿದೆ. ಈಗಾಗಲೇ ಆರುಕೋಟಿ ರುಪಾಯಿಗೂ ಮಿಕ್ಕಿ ವೆಚ್ಚ ತಗುಲಿದೆ ಪರಿಸ್ಥಿತಿ ಇನ್ನೂ! ಕೆಲ ಸಮಯದವರೆಗೆ ಹೀಗೇ ಉಳಿದರೆ, ಹತ್ತುಕೋಟಿ ರುಪಾಯಿಯಷ್ಟು ಖರ್ಚು ಬಂದೀತು

ಜನಾಂಗ ನಿರ್ಮಾಣದ

ಬರಗಾಲ ಪೀಡಿತರಿಗೆ ಸಹಾಯದ ಭರವಸೆ

ಕೇಂದ್ರಸರಕಾರದ ಪರಿಸ್ಥಿತಿಯ ಭೀಷಣತೆಯನ್ನು ಲಕ್ಷಿಸಿ, ರಾಜ್ಯ ಸರಕಾರಕ್ಕೆ ಅತ್ಯಧಿಕ ಪ್ರಮಾಣದಲ್ಲಿ ನೆರವು ನೀಡುವುದೆಂದು ಆಶಿಸಲಾಗಿದೆ. ಶ್ರೀ ನೆಹರೂರೇ ಕಣ್ಣಾರೆ ಪರಿಸ್ಥಿತಿಯ ಭೀಕರತೆಯನ್ನು ಕಂಡಿರುವುದರಿಂದ, ರಾಜ್ಯಸರಕಾರ ಇನ್ನು ಪತ್ರವ್ಯವಹಾರದ ಮೂಲಕ ವಿಷಯವನ್ನು ಒತ್ತಾಯಿಸಿ ತಿಳಿಸಿಕೊಡುವ ಪ್ರಮೇಯ ಅಷ್ಟಾಗಿ ಬರಲಿಕ್ಕಿಲ್ಲ. ಸಂಕಟಗ್ರಸ್ತ ಪ್ರದೇಶಗಳನ್ನು ಬರಗಾಲದ ಬೀಡೆಂದು ಕಾಯಿದೆರೀತ್ಯಾ ಘೋಷಿಸಬೇಕಾಗಿ ಕೆಲವೊಂದು ಮನವಿಗಳಲ್ಲಿ ನೆಹರೂರನ್ನು ಕೇಳಿದ್ದರು. ಮುಂಬಯಿ ರಾಜ್ಯದ ಕರ್ನಾಟಕ ಭಾಗಗಳಲ್ಲಿ ಕೆಲವು ಈ ರೀತಿ ಘೋಷಣೆಗೆ ಒಳಗಾಗಿವೆ. ನೆಹರೂ ಇದರ ಅನಗತ್ಯವನ್ನು ಎತ್ತಿ ತೋರಿಸಿದರು: ಜನತೆಗೆ ಬೇಕಾಗಿರುವುದು ಸಂಕಟ ಪರಿಹಾರದ ಉಪಾಯ. ಬರಗಾಲ ಪೀಡಿತ ಪ್ರದೇಶಗಳನ್ನು ಕಾಯಿದೆಯ ಘೋಷಣೆ ಹೊರಡಿಸಿ, ಸಂತವಿಸಲಾಗುತ್ತದೆಯೇ? ಇಲ್ಲ- ಜನತೆಯ ಕಷ್ಟನಿವಾರಣೆಗೆ ಸರಕಾರ ಕಷ್ಟಪಟ್ಟು ದುಡಿಯುತ್ತದೆ ಕಾಯಿದೆ ಘೋಷಣೆಯ ಬಲದಿಂದಷ್ಟೇ ಈ ನೆರವು ದೊರೆಯಬೇಕೆಂದಿಲ್ಲ. ನಿಜಕ್ಕೂ "ಶಕ್ಯವಿದ್ದಷ್ಟೂ ಹೆಚ್ಚು ಪ್ರಮಾಣದಲ್ಲಿ ಸಹಾಯವನ್ನೊದಗಿಸುವೆನು" ಎಂದು ಬಿಚ್ಚು ಮಾತಿನಲ್ಲಿ ಆಶ್ವಾಸನೆ ನೀಡಿದುದು ಜನರಲ್ಲಿ ಜೀವ ಕಳೆ ತುಂಬಿದೆ

ಬಂಡೆಗಲ್ಲಿನ ದಾರ್ಢ್ಯ

ಜನರಲ್ಲಿ ಜೀವಕಳೆ ತುಂಬಿಕೊಂಡಿದ್ದು ಕಷ್ಟಪರಂಪರೆಯನ್ನೇ ಆದರೂ ಹಸನ್ಮುಖರಾಗಿ ಎದುರಿಸುವ ದಾರ್ಢ್ಯ ಬೆಳೆಯಬೇಕೆಂದು ನೆಹರೂ ತಮ್ಮ ಚಿತ್ತೂರಿನ ಭಾಷಣದಲ್ಲಿ ಹೇಳಿದರು:- ಜನರು ಕಂಗೆಡದೆ, ಮುಖದಲ್ಲಿ ನಗೆ ತಂದುಕೊಂಡಿದ್ದುದನ್ನು ನೋಡಿ, ತಮಗೆ ಹರ್ಷವಾಯಿತೆಂದು ಅವರು ನುಡಿದರು. ಭಾಷಣದ ನಡುವೆ ನೆಹರೂ ಒಂದು ಕ್ಷಣ ಭಾವಾವೇಶಕ್ಕೆ ಸಿಲುಕಿದ ಕವಿಯಂತೆ ಗುಡುಗಿದರು— "ಕಷ್ಟಗಳಿಗೆ ಬೆನ್ನು ತೋರಿಸದ ಬಂಡೆಗಳಲ್ಲಿನ ಶಕ್ತಿಯನ್ನು ಜನ ಸಂಪಾದಿಸಬೇಕು. ಮಿಂಚು, ಬಿರುಗಾಳಿ ಅಥವಾ ಆರ್ಭಟದಿಂದ ಎರಗುವ ಸಿಡಿಲಿನ ಕಾರ್ಯವನ್ನಾದರೂ ಎದುರಿಸಬೇಕು." ದೇಶದ ಸಾರ್ವ ಗಿಕ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಜನ ಪರಸ್ಪರ ಸಹಕಾರ ಪ್ರದರ್ಶಿಸಿ, ದುಡಿಯಬೇಕೆಂದು ನೆಹರೂ ಕೇಳಿಕೊಂಡರು.

ನೀರಾವರಿ ಯೋಜನೆ

ಪರಿಹಾರೋಪಾಯಗಳನ್ನು ಶಾಶ್ವ ತಳಹದಿಯ ಮೇಲೆ ಕೈಗೊಳ್ಳುವುದು ತ್ಯುತ್ತಮವೆಂದು ನೆಹರೂರ ತಿಳಿವಳಿಕೆ ಬಂಗಾಲದಂಥ ಪಿಡುಗು ಆಕಸ್ಮಿಕವಾ ಉಂಟಾಗದೆ, ಹಲವು ವರ್ಷಗಳಿಂದ ನೆ ಗೊಂಡ ಕೊರತೆಯ ಪರಿಣಾಮವೆಂಬುದ ಸ್ಪಷ್ಟವಿದೆ. ಇದರ ಕಾರಣಗಳನ್ನು ಶೋಧಿಸಿ ತಿಳಿದು, ಪರಿಹಾರ ಮಾರ್ಗ ನ್ನು ಸೂಚಿಸಲು ಅನುಕೂಲವಾಗುವಂ ಬಂದು ಉಚ್ಚಮಟ್ಟದ ನಿಯೋಗವ ಸದ್ಯದಲ್ಲಿಯೇ ರಾಯಲ ಸೀಮೆಯತ್ತ ಕಳಿಸುವ ವಿಚಾರ ನೆಹರೂರಿಗಿದೆ. ಕೇ ಮಯದ ಹಿಂದೆ ಅಸ್ಸಾಮಿನ ಪರಿಸ್ಥಿತಿ ನ್ನು ಪರಿಶೀಲಿಸಿ ವರದಿಮಾಡಲು ಈ ಯ ಸಮಿತಿಯನ್ನು ಏರ್ಪಡಿಸಿದ್ದ ಅದರ ಕೆಲಸ ಎಣಿಕೆಮೀರಿ ತೃಪ್ತಿಕರ ದು ಕಂಡುಬಂದುದು ಈಗಿನ ಹೊಸ ದ್ಯಮಕ್ಕೆ ಉತ್ತೇಜನವೆನ್ನಬಹು ಬಂಗಾಲ ಪ್ರದೇಶ ನಮ್ಮ ರ ದಲ್ಲಿ ಮಾತ್ರವಿರದೆ, ಮುಂಬಯಿ ರ್ನಾಟಕ, ಮೈಸೂರು ಪೂರ್ವಭಾ ಕೆಲ ಜಿಲ್ಲೆಗಳು, ಸೌರಾಷ್ಟ್ರ, ಮಧ್ಯ ರತ, ಉತ್ತರ ಪ್ರದೇಶದ ಕೆಲ ಬಿಹಾರ ಮುಂತಾದೆಡೆ ಇದೆ. ಮ ಕ್ಕೆ ಮಾತ್ರ ಅತ್ಯಧಿಕ ಸಹಾಯ ನೀ ಕೆಂದು ಕೇಳುವುದು ಈ ಕಾರಣದಿಂ ಯಾಗದು. ಆದರೂ ರಾಜ್ಯ ಸರ ಪೆನ್ನಾರ್, ತುಂಗಭದ್ರಾ, ಕೃಷ್ಣಾ ಗೆ ಅಣೆಕಟ್ಟುಗಳನ್ನು ಹಾಕಿ, ನೀ ಯ ಕ್ರಮಗಳನ್ನು ಕೈಗೊಳ್ಳುವುದೆ ಮುಖ್ಯವಾದ, ಶಾಶ್ವತ ನೆಲೆಗಟ್ಟಿನ, ರ ಕ್ರಮವೆಂದು ತಿಳಿಸಿದೆ. ಈ ಯಥಾ ರೀತಿ ಗಂಜೀ ಕೇಂದ್ರಗಳ ಜನರು ಕೊಳ್ಳುವ ಶಕ್ತಿಯನ್ನು ಲು ನೆರವಾಗುವ ಕಾಮಗಾರಿಗಳ ದುವರಿಯುತ್ತವೆ.

ZANDU Mahayogaraja Guggula.
ಝಂಡೂ ಮಹಾಯೋಗರಾಜ ಗುಗ್ಗುಳ
ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ನದುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ. 1 ತೊಲೆಗೆ ರೂ 3- ಮಾತ್ರ.
ದೊರೆಯುವ ಸ್ಥಳಗಳು:
1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್.
ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್ ಉಡುಪಿ.
2 ಶ್ರೀ ವಿ ವಿ ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್. ಎನ್. ಶರ್ಮ, ಹಜೂರು ರಸ್ತೆ ಮಂಗಳೂರು.
ಮತ್ತಿತರ ಸೇಲ್ ಏಜಂಟರಲ್ಲಿ.
ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರ ಶರತ್ತು ವಗೈರೆಗಳಿಗೆ ಬರೆಯಿರಿ-
DAMODAR & CO.,
Nainiappa Naicken Street, Park Town-MADRAS 3.



ವಿವಿಧ ಪಾತ್ರೆಗ
ಯಾವತ
ದ ಜಿಳ್ಳ
ಹಿತ್ತಾಳ
ಮೊದಲ
ಳ ವಿವಿ
ಗಳೂ
ಳೂ ರ
ಯೂ ಚಿಲ್ಲರೆಯಾಗಿಯೂ ದೊರೆ
ಕಣ್ಣಂಜೆ ವ್ಯಾಸಾಚಾ
ರಥಬೀದಿ, ಉಡು

ಘನವಾದ ಕಾರ್ಯ

ಎದೆಗುಂದದೆ ದುಡಿಯಿರೆಂದು ಜನತೆಗೆ ಕರೆ

ತಲೆಗೆ ಬಿದ್ದ "ಕುಟ್ಟು"

ಮದ್ರಾಸಿನಲ್ಲಿ ನೆಹರೂ ಅನೇಕ ಮಹತ್ವದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ು. ಕಾಂಗ್ರೆಸು ಕೆಲಸಗಾರರನ್ನು ಉ ೇಶಿಸಿ ಮಾತನಾಡುವ ಸಂದರ್ಭವೂ ಅ ಗೆ ದೊರೆಯಿತು. ಚುನಾವಣೆಗಳು ಮ ಆದರ ಪರಿಣಾಮವನ್ನು ನೆಹರೂ ವಿ ಶಾಸ್ತ್ರದ ದೃಷ್ಟಿಯಿಂದ ಪರಿಶೀಲಿಸಿ ು ಜನತೆ ಬುದ್ಧಿವಂತವಾಗಿದೆ ಎಂದು ಪ್ಪಕೊಂಡ ನೆಹರೂ ಬಲಿಷ್ಠ ಪಕ್ಷದ ಂಗ್ರೆಸಿಗರ ತಲೆಗೆ "ಕುಟ್ಟು" ಕೊಡುವ ಲಸವನ್ನು ಚುನಾವಣೆ ಮಾಡಿತೆಂದು ಳಿದರು. ಜನತೆಯಿಂದ ದೂರ ಸ್ತು, ಅಧಿಕಾರಲೋಲುಪರಾಗಿ ಂಗ್ರೆಸಿಗರು ಕುಳಿತೆಡೆಯಲ್ಲೆಲ್ಲ ಸೋ ತಿಂದರೆಂದೂ– ಜನತೆಯ ವಿಶ್ವಾಸಕ್ಕೆ ತ್ರವಾಗುವಂತೆ ಅಧಿಕ ಕಾಂಗ್ರೆಸಿಗರು ಡಿದಲ್ಲಿ, ಒಬ್ಬಿಬ್ಬರು ಅಕರ್ಮಣ್ಯರಿದ್ದ ಗೆದ್ದು ಬಂದರೆಂದೂ ನೆಹರೂ ವಿಷಾದ ಗಿ ಹೇಳಿದರು. ತಲೆಗೆಬಿದ್ದ ಈ ಕುಟ್ಟು ು ಹಾನಿಮಾಡದೆ, ಒಳಿತನ್ನೇ ಮಾಡಿ ವೆಂದು ನೆಹರೂ ತಮ್ಮ ಅಭಿಪ್ರಾಯ ಕ್ತಪಡಿಸಿದರು. ಕಾಂಗ್ರೆಸಿಗರಿಗೆ ತಾವು ಪ್ಪಿಬಿದ್ದಿರುವೆವೆಂಬುದನ್ನು ಈ ಕುಟ್ಟು ತೋರಿಸಿಕೊಟ್ಟವು ನೆಹರೂ ರಾಷ್ಟ್ರ ಘಾತಕ ಚಟುವಟಿಕೆಗಳ ಬಗ್ಗೆ ನಿಮ್ಮ ಭಿಪ್ರಾಯ ವ್ಯಕ್ತಪಡಿಸಿದಂತೆ–ಕಾಂಗ್ರೆಸಿ ಕರ್ತವ್ಯ ಬುದ್ಧಿಯನ್ನೂ ಜಾಗೃತಗೊ ಸಿದರು ವೇ.ಲ.ಕೇಳೆಂಬ ಕಾರಣವನ್ನು ವಿ ಡೆ, ಕಾಂಗ್ರೆಸಿಗರು ಐಕ್ಯದಿಂದ, ದುಡಿದು ಕಾಂಗ್ರೆಸನ್ನು ಚೈತನ್ಯಪೂರ್ಣವಾದ ಸಂ ಯಾಗಿ ಕಟ್ಟಬೇಕೆಂದು ಬಿನ್ನವಿಸಿದ ಐತಿಹಾಸಿಕ ಮಹತ್ವದಿಂದ ಕೂಡಿದ ಂಗ್ರೆಸು ಸಂಸ್ಥೆಯನ್ನು ಕಟ್ಟುವ ಜವಾ ಬ್ದಾರಿ ಪ್ರತಿಯೊಬ್ಬ ಕಾಂಗ್ರೆಸಿಗನ ಮೇ ಇದೆ ಎಂದವರು ಎಚ್ಚರಿಸಿದರು. ಮ್ಯುನಿಸ್ಟರ ಚಟುವಟಿಕೆಗಳಿಂದ ಕಾಂಗ್ರೆ ಗರು ಬೆಚ್ಚಿಬೀಳುವುದಕ್ಕೆ ಅರ್ಥವಿಲ್ಲವೆಂ ದವರು ಹೇಳಿದರು. "ನಾವು ಬಲವಂತರ ರೆ, ಇದಿರಾಳಿಯ ಆಟ ನಡೆಯದು" ಂದು ನೆಹರೂ ಕಾಂಗ್ರೆಸಿಗರ ವ್ಯಕ್ತಿತ್ವ ಷ್ಕಳಂಕವಾಗುವ ಬಗ್ಗೆ ಹಿತ ನುಡಿದರು. ಮ್ಮಲ್ಲಿ ಆತ್ಮವಿಶ್ವಾಸವಿಲ್ಲದಿರುವುದರಿಂ –ಇದಿರಾಳಿಯೊಡನೆ ಸೆಣಸಲು ಭಯಪ ತ್ತೇವೆ.

ಜನತೆಯೊಡನೆ ಸಂಪರ್ಕ

ನಮ್ಮ ಚಟುವಟಿಕೆಗಳು ನಿಷ್ಕ್ರಿಯ ಗರದೆ ಸಕ್ರಿಯವಾಗಬೇಕು, ಸದಾ ಪ್ರ ಕಶೀಲನವಾಗಿದ್ದುಕೊಂಡು ಹುಮ್ಮಸ್ಸು ಹಾಗೂ ಲವಲವಿಕೆಯಿಂದ ಕೂಡಿ ಚನಾತ್ಮಕ ಪ್ರವೃತ್ತಿಯನ್ನು ಪೋಷಿಸುತ್ತಿರಬೇಕು ಎಂದು ನೆಹರೂ ಪೇಕ್ಷಿಸಿದರು. ಪ್ರತಿಕ್ಷಣದ ಸಮಸ್ಯೆಯನ್ನೂ ಸರಿಯಾದ ದೃಷ್ಟಿಕೋಣದಿಂದ ನೋಡಿ, ತಿಳಿದುಕೊಳ್ಳುವ ಸೂಕ್ಷ್ಮ ಶ ಪ್ರಗಾಢವಾಗಿ ಬೆಳೆಯಬೇಕೆಂದು ನೆ ಹರೂ ಒತ್ತಿಹೇಳಿದರು. ಸ್ವಾರ್ಥ ತ್ಯಾಗ ಮಾಡಿ ಸೇವಾ ಜೀವನವನ್ನು ಕೈಗೊಳ್ಳು ವಿಂದ ದ್ವೇಷ ಹಾಗೂ ಅಸಮತೆ ಯವಾಗುತ್ತದೆಂದು ನೆಹರೂ [illegible]

ದೇಶಿಸಿದರು. "ಕಾಂಗ್ರೆಸು ಚುನಾವಣೆಯನ್ನು ಹೋರಾಡಲು ಸ್ವಷ್ಟವಾದ ಸಂಸ್ಥೆಯಲ್ಲ. ಯಾರಾದರೂ ಕಾಂಗ್ರೆಸಿಗರು ಹಾಗೆಣಿಸಿದ್ದರೆ– ಕಾಂಗ್ರೆಸಿನ ಮುಖ್ಯ ಕರ್ತವ್ಯಕ್ಕೆ ಎಳ್ಳು ನೀರು ಬಿಟ್ಟಂತೆಯೇ ಸೈ. ಆಗ ಸಂಸ್ಥೆ ತ್ಯಾಜ್ಯವಾಗುತ್ತದೆ." ಕಾಂಗ್ರೆಸು ಜನತೆಯೊಡನೆ ನಿಕಟ ಸಂಪರ್ಕ ಬೆಳೆಸಿಕೊಳ್ಳುವುದೇ, ಸರಕಾರ ನಡೆಸುವುದಕ್ಕಿಂತಲೂ ಅಗತ್ಯದ ಹಾಗೂ ಮಹತ್ವದ ಕಾರ್ಯ. ಈ ಮಾತಿಗೆ ಭಿನ್ನಾಭಿಪ್ರಾಯವಿರಲಾರದು.

ಮಾನವೀಯತೆಯ ಅಂಶ

ದೇಶದ ನಿಜವಾದ ಸಂಪತ್ತಿನ ವ್ಯಾಖ್ಯೆಯನ್ನು ಒಬ್ಬೊಬ್ಬರು ಒಂದೊಂದು ತೆರ ಮಾಡುತ್ತಾರೆ. ನೆಹರೂ ಹೇಳಿದಂತೆ ಮನುಷ್ಯ ಬಲವೇ ಸರ್ವಸ್ವ. ಭಾರತದ ಏಕಮೇವ ಉದ್ಧಾರ ಮಾರ್ಗವೆಂದರೆ, ನಮ್ಮ ಮೂವತ್ತೈದು ಕೋಟಿ ಜನರ ಮನುಷ್ಯ ಬಲವನ್ನು ಸದುಪಯೋಗಗೊಳಿಸುವುದೇ ಸೈ. ನಮಗೆ ಯಂತ್ರಗಳು ಬೇಕು: ಅವುಗಳಿಂದ ಮಹಾ ಮಹಾ ಕಾರ್ಯ ಸಾಧಿಸಲ್ಪಡಬೇಕು. ಆದರೆ ಔದ್ಯೋಗೀಕರಣದ ಹುಮ್ಮಸ್ಸಿನಲ್ಲಿ ಮಾನವೀಯತೆಯ ಅಂಶವನ್ನು ಕಡೆಗಣಿಸುವುದು ಸಲ್ಲದು ಎಂದು ನೆಹರೂ ಹೇಳುತ್ತಾರೆ. ಯಾಂತ್ರೀಕರಣದ ಮೋಹದಿಂದದ, ನಮ್ಮಲ್ಲಿ ನಿರುದ್ಯೋಗ ಬೆಳೆಯುವ ಪರಿಸ್ಥಿತಿ ನಿರ್ಮಾಣಗೊಳ್ಳಕೂಡದೆಂದು ನೆಹರೂ ಎಚ್ಚರಿಕೆ ಕೊಡುತ್ತಾರೆ. ಇಂದು ಯಾಂತ್ರಿಕ ವಿಭಾಗದಲ್ಲಿ ಒಳ್ಳೆಯ ತರಬೇತಿಹೊಂದಿದ ಯುವಕರೆಷ್ಟೋ ಇದ್ದಾರೆ: ಸರಕಾರಕ್ಕೆ ಅವರ ಆವಶ್ಯಕತೆ ಇದೆ. ಆದರೂ ಅವರಲ್ಲಿ ಹಲವರಿಗೆ ಉದ್ಯೋಗವಿಲ್ಲ. ಏಕಾಗಿ ಇದ? ಯಂತ್ರದ ಮೇಲೆ ಅವಲಂಬಿತವಾದ ಬದುಕು ಅವರದಾಗಿದೆ. ಎಷ್ಟೋ ಕೆಲಸಗಳನ್ನು ಯಂತ್ರದ ನೆರವಿಲ್ಲದೆ ನಾವು ಮಾಡಬಹುದು: ಅದು ಪರಿಣಾಮದಲ್ಲಿ ತುಂಬ ನಯನಾಜೂಕು ಪಡೆಯದಿದ್ದರೂ ನಿತ್ಯದ ಆವಶ್ಯಕತೆಯನ್ನು ಪೂರೈಸೀತು. ಗ್ರಾಮೋದ್ಯೋಗಗಳ ಪುನರುಜ್ಜೀವನ ಉದಾಹರಣೆಗೆ ಕೈಮಗ್ಗದ ಬಟ್ಟೆಗಳನ್ನೇ ತೆಗೆದುಕೊಳ್ಳಬಹುದು: ಗಿರಣಿಗಳ ಪ್ರಾಬಲ್ಯದಿಂದ, ಕೈಮಗ್ಗದ ಬಟ್ಟೆಗಳು ಗಿರಾಕಿಗಳಿಲ್ಲದೆ ಕೊಳೆಯುತ್ತಿವೆ. ನೆಹರೂರವರಿಗೆ ಈ ಸಮಸ್ಯೆಯನ್ನು ನಿವೇದಿಸಿದಾಗ, ಅವರು ಉತ್ಪಾದಿತ ವಸ್ತುಗಳಗೆ ಪೇಟೆ ದೊರಕುವುದಿಲ್ಲವೆಂಬುದೇ ಈಗಿನ ಪ್ರಶ್ನೆ ಎಂದು ಉದ್ಗರಿಸಿದರು. ನೆಹರೂ ದೃಷ್ಟಿಯಲ್ಲಿ ಕೈಮಗ್ಗದ ಉದ್ಯೋಗವೊಂದು ಮಹತ್ವದ ಗುಡಿಕೈಗಾರಿಕೆ: ಲಕ್ಷಾಂತರ ಜನಕ್ಕೆ ಕೆಲಸವೊದಗಿಸಿಕೊಡುವ ಉದ್ಯಮ. ಅದನ್ನು ಉಪೇಕ್ಷಿಸಿ ಭಾರತ ಸಮೃದ್ಧವಾಗಲು ಸಾಧ್ಯವಿಲ್ಲ. ಜನರು ಔದ್ಯೋಗೀಕರಣದ ಪಲ್ಲವಿಯನ್ನು ಹಾಡುತ್ತಿದ್ದರೂ ಎರಡುಕೋಟಿಗೂ ಮಿಕ್ಕಿದ ಜನಕ್ಕೆ ಔದ್ಯೋಗೀಕರಣದಿಂದ ನೆರವು ದೊರೆಯಲಾರದು. ಅಂಥದರಲ್ಲಿ ಭೂಸಾಗುವಳಿಯ ಮೇಲೆ ಜನ ಅಧಿಕ ಅವಲಂಬಿತವಾಗುವುದು (ಈಗಿದ್ದಂತೆ) ಅನಿವಾರ್ಯ. ಆದುದರಿಂದ ಮಧ್ಯಮಾರ್ಗವಾದ ಗ್ರಾಮೋದ್ಯೋಗಗಳ ಪುನರುಜ್ಜೀವನ ಅತ್ಯಾವಶ್ಯಕವೆಂಬುದಕ್ಕೆ ನೆಹರೂ ಸಮ್ಮತಿಸುತ್ತಾರೆ.

ಸ್ವದೇಶೀ ವ್ಯಾಮೋಹ

ನಮ್ಮಲ್ಲಿ ಸ್ವದೇಶೀ ವ್ಯಾಮೋಹ ಬೆಳೆಯಬೇಕೆಂದು ಹೇಳುವವರಲ್ಲಿ ಕೇಂದ್ರ ಸರಕಾರದ ವಾಣಿಜ್ಯ ಖಾತೆಯ ಮಂತ್ರಿ ಶ್ರೀ ಕರಮಾರಕರೂ ಒಬ್ಬರು. ಮುಂಬಯಿಯಲ್ಲಿ ಆಯಾತ–ನಿರ್ಯಾತ ಧೋರಣೆಯ ಸಂಬಂಧ ಅವರು ಮಾತನಾಡುವಾಗ, ನಾವು ಆದಷ್ಟು ಹೆಚ್ಚು ನಿರ್ಯಾತ ವ್ಯಾಪಾರ ಬೆಳೆಸುವುದು ಅಪೇಕ್ಷಣೀಯವೆಂದೂ, ನಮ್ಮ ಸೀಮಿತ ಕ್ಷೇತ್ರದಲ್ಲಿಯೇ ಅತ್ಯಧಿಕ ಡಾಲರು ಗಳಿಸಬೇಕೆಂದು ಅವರು ಹೇಳಿದರು. ಈಗಿದ್ದಂತೆ, ನಮ್ಮ ಆಯಾತ ಸಾಮಗ್ರಿಯ ಪ್ರಮಾಣ ನಿರ್ಯಾತದ ಮೊತ್ತವನ್ನು ಮೀರಿದೆ: ಹೀಗಾಗಿ ದೇಶಕ್ಕೆ ಹಾನಿಯಾಗಿದೆ. ನಾವು ಸಂಯಮಿಗಳೂ, ಮಿತವ್ಯಯಿಗಳೂ ಆಗಿ, ದೇಶದೊಳಗಿನ ವಸ್ತುವಿನ ಮಟ್ಟ ವಿದೇಶೀ ಮಾಲಿಗಿಂತ ಕೀಳಾಗಿದ್ದರೂ, ಅದನ್ನೆ ಉಪಯೋಗಿಸಲು ಕಲಿತರೆ, ಪರಿಸ್ಥಿತಿ ಸುಧಾರಿಸುವುದೆಂದು ಕರಮಾರಕರ ಸಂದೇಶ. ಜವುಳಿ ಉದ್ದಿಮ ಇಡಕ್ಕೆಯಿಂದ, ನಿವರ್ತನ. ಹಾಗೆಯೇ ಕಾಗದದ ವ್ಯಾಪಾರವೂ ಕೂಡ. ವಿದೇಶಗಳಿಂದ ಆಮದಾಗುವ ವಿಲಾಸ ವಸ್ತುಗಳ ಬಗ್ಗೆಯಂತೂ ಹೇಳುವುದೇ ಬೇಡ.

ಮಿತವ್ಯಯದಿಂದ ಅಭಿವೃದ್ಧಿ

ಜನರಲ್ಲಿ ಸುಖಲೋಲುಪತೆ ಕಂಡುಬಂದಾಗ ರಾಷ್ಟ್ರದ [illegible]ವಾಗುತ್ತದೆ ತ್ರಿಕಾಲಾಬಾಧಿತ ಸತ್ಯವನ್ನು ನೆಹರೂ ಪದೇ ಪದೇ ನೆನಪಿಗೆ ತರುತ್ತಾರೆ. ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ದೇಶದ ಏಳಿಗೆಗಾಗಿ ಸರಕಾರ ಹತ್ತು ಹಲವು ಕೆಲಸಗಳನ್ನು ಕೈಗೊಂಡಿತು. ಆಗಿನ ಯೋಜನೆಗಳು ಕಾರ್ಯರೂಪಕ್ಕೆ ಇಳಿಯಬೇಕಾದರೆ, ನಮ್ಮಲ್ಲಿ ಸಾಕಷ್ಟು ಧನಬಲವಿರಬೇಕು. ತಾನೇ [illegible] ಆಕಾಂಕ್ಷೆಯಿಂದ ಇಂದು ಜನರು ಮಿತವ್ಯಯಿಗಳಾಗಿ, ದುಡ್ಡು ಸಂಗ್ರಹ ಮಾಡಿ, ಅಭಿವೃದ್ಧಿ ಯೋಜನೆಗಳಿಗೆ ಒದಗಿಸಿಕೊಡಬೇಕೆಂದು ನೆಹರೂ ಕೇಳಿಕೊಂಡರು. ಅಮೇರಿಕೆಯಂತೆ ನಾವು ಸಂಪನ್ನ ರಾಷ್ಟ್ರವಾಗಿಲ್ಲ: ಜೀವನ ಮ



ಪೊಟ್ಟಣಗಳ-ಲ್ಲಿನ ಚಹಾ ಅಗ್ಗ!

ಹೌದು, ಅದು ಬ್ರೂಕ್ ಬಾಂಡ್ ಪೊಟ್ಟಣವಾಗಿದ್ದಲ್ಲಿ ಪೊಟ್ಟಣದಲ್ಲಿನ ಚಹವನ್ನು ಕೊಳ್ಳುವುದು ಯಥಾರ್ಥವಾಗಿಯೂ ಅಗ್ಗ! ಬ್ರೂಕ್ ಬಾಂಡ್ ಚಹವು ಯಥಾರ್ಥವಾಗಿಯೂ ತಾಜಾವಾದುದೂ, ಮನೋರಂಜನೀಯ ಸುವಾಸನೆಯುಳ್ಳದೂ ಎಂಬುದನ್ನು ಖಾತ್ರಿ ಮಾಡುವುದೇ ಅಲ್ಲದೆ, ಈ ದಿವ್ಯವಾದ ಪೊಟ್ಟಣವು ಈ ಗುಣಗಳನ್ನು ಕಾಯ್ದಿಟ್ಟು ನಿಮ್ಮ ಹಣದ ಸಂಪೂರ್ಣ ಬೆಲೆಗೆ ತಕ್ಕ [illegible] ಉತ್ತಮ ಚಹಾ ನಿಮಗೆ ದೊರೆಯುವುದೆಂಬುದಕ್ಕೂ ಭರವಸೆಯಾಗಿದೆ. ಈ ಹೆಸರುವಾಸಿಯಾದ ಪೊಟ್ಟಣದಲ್ಲಿನ ಹೆಸರುವಾಸಿಯಾದ ಚಹವನ್ನು ಕೊಂಡು, ನೀವೂ ಕೂಡ ಹಣವನ್ನುಳಿಸಬಹುದು.

ಬ್ರೂಕ್ ಬಾಂಡ್ ಚಹಾ

ಭಾರತದ ಅತ್ಯುತ್ಕೃಷ್ಟವಾದುದು

1906 ರಲ್ಲಿ ಸ್ಥಾಪಿಸಲ್ಪಟ್ಟು
ಸರ್ವತೋಮುಖವಾಗಿ ಅಭಿವೃದ್ಧಿ ಹೊಂದುತ್ತಲಿರುವ
"ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್"
ಇದನ್ನೇ ಸಹಸ್ರಾರು ಜನರು ತಮ್ಮ ಅಚ್ಚುಮೆಚ್ಚಿನ ಬ್ಯಾಂಕನ್ನಾಗಿ
ಆರಿಸಿರುವರು. ನೀವೂ ಇಂದೇ ಒಂದು ಖಾತೆಯನ್ನು ತೆರೆದು
ಬ್ಯಾಂಕಿನ ಗ್ರಾಹಕರಲ್ಲಿ ಒಬ್ಬರಾಗಿರಿ
THE CANARA BANKING CORPORATION LIMITED.
ಪ್ರಧಾನ ಕಾರ್ಯಾಲಯ, ಉಡುಪಿ. (ದ ಭಾರತ)

ನವಯುಗ
ಉಡುಪಿ, ಗುರುವಾರ ೧೬-೧೦-'೫೨

ಸಕಾಲಿಕ ನಿರ್ಣಯ

ಭಾರತವೆಂದೇ ಅಲ್ಲ–ಹಿಂದುಳಿದ ಪ್ರತಿಯೊಂದೂ ರಾಷ್ಟ್ರಗಳ ಪಲ್ಲವಿಯೊಂದೇ–"ಅಧಿಕ ಉತ್ಪಾದನೆ" ನಮ್ಮ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದಾಗದಿದ್ದರೆ, ನಮ್ಮ ಜೀವನ ಮಟ್ಟವನ್ನು ಎತ್ತರಿಸುವುದು ಸ್ವಪ್ನಪ್ರಾಯವಾದ ಕಲ್ಪನೆಯಾಗುತ್ತದೆ. ಆದುದರಿಂದ ಸರ್ವ ವಿಧದಿಂದಲಾದರೂ ನಮ್ಮ ಉತ್ಪಾದನೆಯನ್ನು ಹೆಚ್ಚಿಸಿಕೊಂಡು, ಸುಖಸಮೃದ್ಧಿಯನ್ನು ಸಾಧಿಸಬೇಕಾದುದು ಪ್ರಥಮಾವಶ್ಯಕತೆಯಾಗಿದೆ. ಭಾರತದ ನಾಗರಿಕರು ಇದನ್ನು ತಮ್ಮ ಕರ್ತವ್ಯವೆಂದು ತಿಳಿದು, ಪ್ರತಿನಿಷ್ಠರಾಗಿ ವರ್ತಿಸಬೇಕೆಂದು ಪ್ರಾರ್ಥಿಸುವುದು ಸಮಯೋಚಿತ. ನಿಜಕ್ಕೂ ಪ್ರಧಾನಿ ನೆಹರು ಮದರಾಸಿನಲ್ಲಿ ಭಾರತದ ಆರ್ಥಿಕ ಧೋರಣೆಯ ರೂಪರೇಖೆಯನ್ನು ಬಿಂಬಿಸಿದಾಗ, ಕೃಷಿ ಅಥವಾ ಕೈಗಾರಿಕೆ ಯಾವುದೇ ಕ್ಷೇತ್ರದಲ್ಲಿಯಾಗಲೀ ಉತ್ಪಾದನೆಯನ್ನು ಕುಗ್ಗಿಸುವ ಹೆಜ್ಜೆಯನ್ನಿಡುವುದು ರಾಷ್ಟ್ರವಿಘಾತುಕವಾದ ಪ್ರವೃತ್ತಿ ಎಂದು ಎಚ್ಚರ ನೀಡಿರುವರು. ಭಾರತದ ಮುಖ್ಯ ಪ್ರಶ್ನೆ ಅನ್ನಬಟ್ಟೆ ಮಾತ್ರವಾಗಿ ಇದೆ–ನಿರುದ್ಯೋಗ, ದಾರಿದ್ರ್ಯ, ಕೈಗಾರಿಕೆಗಳ ಅಭಿವೃದ್ಧಿ ಮುಂತಾದುವೂ ಇದರೊಡನೆ ಸೇರಿಕೊಂಡಿವೆ. ಕೃಷಿ ವಿಜ್ಞಾನದಲ್ಲಿ ನಮ್ಮ ರೈತರು ಸಾಕಷ್ಟು ಪಾರಂಗತರಾಗಿಲ್ಲದಿರುವುದೊಂದು ಕೊರತೆ, ಇದಕ್ಕೆ ಈಗಿನ ಭೂಧಾರಣ ಪದ್ಧತಿಯಲ್ಲಿರುವ ಕೊರತೆಯನ್ನು ಪ್ರಾಮುಖ್ಯ ಕಾರಣವೆಂದು ಪರಿಗಣಿಸಬಹುದಾದರೂ– ರೈತನ ಹುಮ್ಮಸ್ಸನ್ನು ಬಡಿದೆಬ್ಬಿಸುವ ಪ್ರಯತ್ನಗಳ ಅಭಾವ ಕೂಡ ಆಲಸ್ಯಕ್ಕೆ ಪ್ರೋತ್ಸಾಹ ಕೊಟ್ಟಿದೆ ಎನ್ನಲಡ್ಡಿಯಿಲ್ಲ. ಇದನ್ನು ಮನವರಿಕೆ ಮಾಡಿಕೊಂಡ ಸರಕಾರ ಜನಪದ ಅಭಿವೃದ್ಧಿ ಯೋಜನೆಗಳೆಂಬ ಗ್ರಾಮ ಕಲ್ಯಾಣದ ಕಾರ್ಯಕ್ರಮವನ್ನು ಭಾರತದ ಹಲವೆಡೆ ತೊಡಗಿರುವುದು ಪ್ರಶಂಸನೀಯ. ಗ್ರಾಮೀಣ ಅಭ್ಯುದಯವನ್ನು ಸರ್ವಾಂಗಿಕವಾಗಿಸುವ ಉನ್ನತ ಧ್ಯೇಯದಿಂದ ಆರಂಭಿಸಿರುವ ಈ ಪ್ರಯತ್ನಕ್ಕೆ ಜನತಾ ಸಹಕಾರ ನಿರಂತರವಾಗಿ ದೊರೆತು, ನಾಡಿನಲ್ಲಿ ಸಮೃದ್ಧಿ ನೆಲೆಗೊಳ್ಳುವಂತಾಗಬೇಕು, ಕೃಷಿಯ ಉತ್ಪಾದನೆಯನ್ನು ಹೆಚ್ಚಿಸುವುದು, ಆರೋಗ್ಯಕರವಾದ ವಸತಿ, ಸಂಚಾರಾನುಕೂಲತೆ ಮತ್ತು ವಿದ್ಯಾಸಂಗಕ್ಕೆ ಬೇಕಾದ ಸೌಕರ್ಯ ಇನ್ನೂ ಹತ್ತು ಹಲವು ಬಗೆಯಲ್ಲಿ ಗ್ರಾಮ ಕಲ್ಯಾಣವನ್ನು ಈ ಯೋಜನೆ ಸಾಧಿಸಲು ನೋಡುತ್ತಿದೆ. ಇದರ ಯಶಸ್ಸಿನ ಪರಿಣಾಮವಾಗಿ ಭಾರತದ ಜನತೆಯ ಭವಿಷ್ಯ ಸಂಪನ್ನವಾದೀತೆಂದು ಆಶಿಸಬಹುದು. ಇದು ಮೂಲಭೂತವಾದ ಉಪಕ್ರಮ. ಇದರ ಮೇಲಿಂದಲೇ ದೇಶದ ಭವಿತವ್ಯ ಕಟ್ಟಬಹುದಾಗಿದೆ: ಅನ್ನದ ಸಮಸ್ಯೆ ಪರಿಹರಿಸಲು ಅರ್ಥಾತ್ ಕೃಷಿಯ ಉತ್ಪಾದನೆಯನ್ನು ಹೆಚ್ಚಿಸಲು ಒಮ್ಮೆಗೆ ಸಮರ್ಥರಾದರೆ–ಇಂದು ಅದಕ್ಕಾಗಿ ವ್ಯಯಿಸುವ ಅಪಾರ ಹಣವನ್ನು ಅಭಿವೃದ್ಧಿ ಯೋಜನೆಗಳಿಗೆ ವಿನಿಯೋಗಿಸಬಹುದು. ಈಗಾಗಲೇ ಮಹಾ ನೀರಾವರಿ ಯೋಜನೆಗಳು, ಜಲವಿದ್ಯುತ್ಕೇಂದ್ರಗಳು ನಿರ್ಮಾಣ ಘಟ್ಟದಲ್ಲಿವೆ. ಯಾವ ಕಾರಣದಿಂದಲೋ–ಅವುಗಳ ಭವ್ಯತೆಯ ಪ್ರಚಾರ ನಮ್ಮ ಜನದ ನಡುವೆ ಸಾಕಷ್ಟು ಹೆಚ್ಚು ಪ್ರಮಾಣದಲ್ಲಿ ಆಗುತ್ತಿಲ್ಲ. ಹಾಗೆಂದು, ಅವುಗಳ ವೈಶಾಲ್ಯವನ್ನು ಉಪೇಕ್ಷಿಸುವುದು ರಾಷ್ಟ್ರೀಯ ಮನೋವೃತ್ತಿಯಾಗದು. ನಮ್ಮ ಸರಕಾರದ ಆದಾಯ ಬಹಳ ಮಿತವಿದೆ: ಮಿತವಾದ ಸಂಪತ್ತನ್ನು ಅಭಿವೃದ್ಧಿ ಯೋಜನೆಗಳಿಗೆ ವಿನಿಯೋಗಿಸುವಾಗ ಪ್ರಾಶಸ್ತ್ಯದ ಪ್ರಶ್ನೆ ಬರುತ್ತದೆ. ಹೀಗೆ ಕೆಲವೇ ಯೋಜನೆಗಳನ್ನು ಮಾತ್ರ ಪ್ರಥಮತಃ ಕಾರ್ಯರೂಪಕ್ಕಿಳಿಸಲು ಭಾರತ ಸರಕಾರ ನಿರ್ಧರಿಸಿದೆ. ಕ್ರಮಕ್ರಮವಾಗಿ ಯೋಜನೆಗಳನ್ನು ವಿಸ್ತರಿಸುವುದು ಅದರ ಮನೀಷೆ. ಕಾರಣ, ಪ್ರಾಂತೀಯ ಭೇದಭಾವನೆ ಬೆಳೆಯಲು ಇಂಬುಗೊಟ್ಟು, ಅಭಿವೃದ್ಧಿಯೋಜನೆಗಳ ಸಾರಾಸಾರವನ್ನು ಟೀಕಿಸುವುದು ಸರಿಯೆನಿಸದು. ಯೋಜನೆಗಳ ಮಾತನ್ನಾಡುವಾಗ–ಅದರಲ್ಲೂ ಮುಖ್ಯವಾಗಿ ಕೈಗಾರಿಕಾ ಧೋರಣದ ಪ್ರಶ್ನೆ ಬಂದಾಗ–ರಾಷ್ಟ್ರೀಕರಣದ ಸ್ಮರಣೆಯಾಗುವುದು ಸ್ವಾಭಾವಿಕ. ಉತ್ಪಾದನೆ ಹೆಚ್ಚಬೇಕೆನ್ನುವವರು ರಶಿಯಾ ಚೀನಾಗಳು ಅತ್ಯಲ್ಪಕಾಲದಲ್ಲಿಯೇ ಮಹತ್ತರ ಅಭಿವೃದ್ಧಿ ಸಾಧಿಸಿಲ್ಲವೆ ಎಂದೆನ್ನುತ್ತಾರೆ. ಆದರೆ ನೆಹರೂ ಮಾತಿನಂತೆ–ಅಲ್ಲಿಯ ಪರಿಸ್ಥಿತಿಗಿಂತ ಇಲ್ಲಿನದು ತೀರ ಭಿನ್ನವಿದೆ ಪ್ರತಿಯೊಂದೂ ಪ್ರಸಂಗದ ಹಿನ್ನೆಲೆಯನ್ನು ವಿಚಾರಿಸುವುದೂ ಒಳಿತು. ರಕ್ತಪಾತ, ಯುದ್ಧಭಯ, ಹಾಗೂ ಬಲತ್ಕಾರಗಳ ಬಲದಿಂದ ಅಲ್ಲಿ ಉತ್ಪಾದನೆ ಹೆಚ್ಚಿದಂತೆ ಕಂಡೀತು. ಆದರೆ ಪ್ರಜಾಪ್ರಭುತ್ವ ತತ್ವವನ್ನು ಅಳವಡಿಸಿಕೊಂಡಿರುವ ಭಾರತದಲ್ಲಿ ಆ ಬಗೆಯ ಸರಕಾರೀ ಸರ್ವಾಧಿಕಾರವನ್ನು ಹೇರುವಂತಿಲ್ಲ. ನಮ್ಮ ಮುಖ್ಯ ಉದ್ಯೋಗಗಳು–ಅದರಲ್ಲಿ ರಾಷ್ಟ್ರದ ಬೆಳವಣಿಗೆಗೆ ಅತ್ಯಾವಶ್ಯಕವಾದುವುಗಳಲ್ಲಿ–ಸರಕಾರದ ಅಂಗ ಮಹತ್ವದ್ದಿರಬೇಕೆಂಬುದನ್ನು ನೆಹರೂ ಒಪ್ಪುತ್ತಾರೆ. ನಿಜವಾಗಿ ನೋಡ ಹೋದರೆ, ಈಗಾಗಲೇ ತೊಡಗಿರುವ ಗೊಬ್ಬರ ಕಾರ್ಖಾನೆ, ಹಡಗು ಕಟ್ಟುವ ಕಾರ್ಖಾನೆ, ವಿಮಾನ ಕಾರ್ಖಾನೆ ಇತ್ಯಾದಿಗಳಲ್ಲ ಸರಕಾರದ ಒಡೆತನವೇ ಎದ್ದು ಕಾಣುತ್ತದೆ. ಆದರೆ ಈಗಿರುವ ಉದ್ದಿಮೆಗಳನ್ನೆಲ್ಲ ರಾಷ್ಟ್ರೀಕರಿಸಬಾರದೇಕೆ? ಎಂದು ಕೇಳುವುದು ಮಾತ್ರ ಮೂರ್ಖತನ: ರಾಷ್ಟ್ರೀಕರಣವನ್ನು ಮಾಡುವಾಗ ಪರಿಹಾರ ದ್ರವ್ಯ ಕೊಟ್ಟೇ ತೀರಬೇಕೆಂದು ಸರಕಾರದ ನಿಲುಮೆ. ಇದರ ಯೋಗ್ಯತೆಯನ್ನು ಚರ್ಚಿಸುವುದರಲ್ಲಿ ಕಾಲ ಕಳೆಯುವುದು ನಿರರ್ಥಕ. ಪರಿಹಾರ ನೀಡಬೇಕೆಂದಿರುವಾಗ–ಸರಕಾರ ತನ್ನ ಆದಾಯವನ್ನೆಲ್ಲ ಈಗಿರುವ ಉದ್ದಿಮೆಗಳನ್ನು ವಶಪಡಿಸಿಕೊಳ್ಳುವುದಕ್ಕೇ ವಿನಿಯೋಗಿಸಲಿ ಎನ್ನುವುದು ಹುಚ್ಚುತನ. ಅದರ ಬದಲು ಖಾಸಗಿ ಒಡೆಯರ ಬಂಡವಾಳಕ್ಕೂ ಅಸ್ಪದ ಕೊಟ್ಟು, ಈಗ ಅಸ್ತಿತ್ವದಲ್ಲಿಲ್ಲದ ದೊಡ್ಡ ಹಾಗೂ ಮೂಲೋದ್ಯೋಗಗಳನ್ನು ಸರಕಾರದ ಧನ ಬಲದಿಂದ ತೊಡಗಿದರೆ, ಆಗ ಉತ್ಪಾದನಾ ಕ್ಷೇತ್ರ ವ್ಯಾಪಕವಾಗುತ್ತದೆ, ನಮ್ಮ ಉದ್ದೇಶ ಸಾರ್ಥಕವಾಗುತ್ತದೆ. ಈ ಮಾತಿನ ಜಾಣ್ಮೆಯನ್ನು ಒಪ್ಪುವುದೇ ಸಕಾಲಿಕ ನಿರ್ಣಯ.

ಭಾರತದೊಳಗಿನ ವಿದೇಶೀ ವಸಾಹತುಗಳು

ವಿಲೀನೀಕರಣ ಹೊಂದಿಯೇ ತೀರಬೇಕೆಂದು ನೆಹರೂ

ಮದ್ರಾಸು ರಾಜ್ಯಕ್ಕೆ ನೆಹರೂ ಆಗಮಿಸಿದಾಗ–ಭಾರತ ಸರಕಾರದ ವಿದೇಶ ನೀತಿಯ ಮೇಲೂ ಸಾಕಷ್ಟು ಸ್ಪಷ್ಟವಾದ ಬೆಳಕು ಚೆಲ್ಲುವ ಕೆಲಸವನ್ನು ಅವರು ಮಾಡಿದರು. ಮುಖ್ಯವಾಗಿ ಕಾಶ್ಮೀರ ಹಾಗೂ ಭಾರತದೊಳಗಿರುವ ವಿದೇಶೀ ವಸಾಹತುಗಳ ಭವಿತವ್ಯದ ಪ್ರಸಂಗವನ್ನವರು ಎತ್ತಿಕೊಂಡರು. ಭಾರತವನ್ನು ಬ್ರಿಟಿಷರು ಸ್ನೇಹದಿಂದ ಬಿಟ್ಟು ಹೋದರೂ–ಇನ್ನೂ ಕೆಲವು ವಿದೇಶೀ ಗುಂಪುಗಳು ಭಾರತದ ಕೆಲವೆಡೆ ಬೇರು ಬಿಟ್ಟಿರುವುದು ನಿಜಕ್ಕೂ ವಿಷಾದಕರ. ಫ್ರೆಂಚ ಹಾಗೂ ಪೋರ್ಚುಗೀಜ ವಸಾಹತುಗಳು ಭಾರತದ ಕರಾವಳಿ ಪ್ರದೇಶದಲ್ಲಿ ಈಗಲೂ ಉಳಿದಿವೆ. ಶಾಂತಿ ಕಾಲದಲ್ಲಿಯೇ ಅವುಗಳಿಂದ ಭಾರತಕ್ಕೆ ತೊಂದರೆ ಎನಿಸುತ್ತಿರುವಾಗ–ಯುದ್ಧ ಪ್ರಸಂಗದಂಥ ಆಯಕಟ್ಟಿನ ಸಮಯ, ಈ ವಿದೇಶೀ ವಸಾಹತುಗಳಿಂದ ಭಾರತಕ್ಕೆ ಗಂಡಾಂತರವೇ ಇದೆ. ಇದು ಒಂದು ಸಾಮಾನ್ಯ ಭಯವಾದರೆ–ವಿದೇಶೀ ವಸಾಹತುಗಳ ರಾಷ್ಟ್ರೀಯ ಮನೋವಾಂಛೆಯು ಇದಕ್ಕೂ ಮಿಗಿಲಾದ ಮಹಾಪ್ರಶ್ನೆ. ವಸಾಹತು ಪ್ರದೇಶಗಳ ಜನತೆ ಭಾರತೀಯರೇ ಆಗಿದ್ದು, ಭೌಗೋಲಿಕವಾಗಿಯಲ್ಲದೆ– ಸಾಂಸ್ಕೃತಿಕವಾಗಿಯೂ ಭಾರತದ ಅವಿಭಾಜ್ಯ ಅಂಗವಾಗಿರುವುದು ಸ್ಪಷ್ಟವಿದೆ. ಅಲ್ಲಿಯ ಜನರು ಭಾರತದೊಡನೆ ವಿಲೀನೀಕರಣವಾಗಬೇಕೆಂದೂ ಚಳುವಳಿ ಹೂಡುತ್ತಿರುವಾಗ–ಆ 3 ಲಕ್ಷ ಬಂಧುಗಳ ನೆರವಿಗೆ ಬರದಿರುವುದು ನಮಗೆ ಚೆನ್ನಲ್ಲ. ಎಂತಲೇ ಪ್ರಧಾನಿ ನೆಹರೂ: ವಿದೇಶೀ ವಸಾಹತುಗಳು ಇಂದಲ್ಲ ನಾಳೆಯಾದರೂ ಭಾರತದೊಡನೆ ಸೇರಿಯೇ ತೀರಬೇಕಾದದು ಧರ್ಮ ಎಂದಿರುವರು.

ರಾಷ್ಟ್ರೀಯಾಕಾಂಕ್ಷೆ

ಆದರೆ ನೆಹರೂ ಹೇಳಿದಷ್ಟಕ್ಕೆ ಪರಿಸ್ಥಿತಿ ಒಮ್ಮೆಗೇ ಮಾರ್ಪಡುವುದಿಲ್ಲ. ಭಾರತ ಸರಕಾರದ ನಿಲುಮೆ ಸುದೃಢವಾಗಿದೆ ಎಂಬುದು ಇದರ ಮೇಲಿಂದ ವ್ಯಕ್ತವಾಗಿದೆಯಾಗಿ–ವಿದೇಶೀ ವಸಾಹತುಗಳಲ್ಲಿ ನೆಲಸಿರುವ ಭಾರತೀಯ ಜನತೆಗೆ ಹೊಸ ಧೈರ್ಯ ಹಾಗೂ ಲವಲವಿಕೆ ಉಂಟಾಗಿದೆ. ಅಲ್ಲಿ ಜನಾಭಿಪ್ರಾಯವನ್ನು ಭಾರತದೊಡನೆ ವಿಲೀನೀಕರಣದ ಕಡೆಗೆ ಇನ್ನೂ ಚೆನ್ನಾಗಿ ಸಂಘಟಿಸುವ ಉದ್ಯಮಕ್ಕೆ ಕೈಹಾಕಿರುವರು. ಪಾಂಡಿಚೆರಿಯ ಆರು ರಾಷ್ಟ್ರೀಯ ಸಂಸ್ಥೆಗಳು ಒಂದಾಗಿ ಸೇರಿ, ಈ ಉದ್ದೇಶಕ್ಕೆ ದುಡಿಯಲು ನಿರ್ಧರಿಸಿವೆ. ಹಾಗೆಯೇ ಗೋವಾದ ಜನತಾ ಧುರೀಣರು ಸಂಯುಕ್ತ ರಾಷ್ಟ್ರಸಂಘಕ್ಕೆ ಒಂದು ಮನವಿ ಕಳಿಸಿ, ವಸಾಹತು ರಾಷ್ಟ್ರಗಳು, ಜನತೆಯ ರಾಷ್ಟ್ರೀಯಾಕಾಂಕ್ಷೆಗೆ ಧಕ್ಕೆ ತರುವುದನ್ನು ಪ್ರತಿಭಟಿಸಿದೆ. ಭಾರತಸರಕಾರ ಕೂಡ ಈ ಸಂಬಂಧ ಉಗ್ರವಾದ ಹೆಜ್ಜೆಯನ್ನಿಟ್ಟಿದೆ: ಪಾಂಡೀಚೆರಿ ಮುಂತಾದೆಡೆ ರಾಷ್ಟ್ರೀಯ ಆಕಾಂಕ್ಷೆಯನ್ನು ಹತ್ತಿಕ್ಕಲು ಪುಂಡತನವನ್ನು ಪ್ರಯೋಗಿಸುವ ನಿದರ್ಶನಗಳು ಕಂಡುಬಂದುದರಿಂದ–ನೇರಾಗಿ ಪ್ಯಾರಿಸಿನಲ್ಲಿರುವ ಫ್ರೆಂಚ ಸರಕಾರಕ್ಕೆ ವಿದೇಶ ಖಾತೆ ಪ್ರತಿಭಟನಾ ಸ್ವರೂಪದ ದೂರು ಕಳಿಸಿದೆ. ಪುಂಡಾಟಿಕೆಯನ್ನು ಎದೆಬಿಡದೆ ನಡೆಸುತ್ತಿರುವುದರಿಂದ—ನ್ಯಾಯವಾದ ರೀತಿಯಲ್ಲಿ ಜನಮತ ಗಣನೆ ನಡೆಯಲು ಅನುಕೂಲ ಪರಿಸ್ಥಿತಿ ಉಳಿದಿಲ್ಲ ಎಂದು ನೆಹರೂ ಹೇಳಿದ್ದಾರೆ. ಕೆಲಸಮಯದ ಹಿಂದೆ ಮೂರು ನಿಷ್ಪಕ್ಷಪಾತ ರಾಷ್ಟ್ರಗಳ ಪ್ರತಿನಿಧಿಗಳು ಈ ಸಂಬಂಧ ಮಾಡಿದ್ದ ವರದಿಯಲ್ಲೂ ಈ ಅಂಶವನ್ನು ಚೆನ್ನಾಗಿ ಬಿಂಬಿಸಲಾಗಿದೆ ಎಂದೆಲ್ಲ ಸ್ಮರಿಸಬಹುದು

ಜನಾಭಿಪ್ರಾಯ ಸಂಗ್ರಹ

ಆದುದರಿಂದ–ವಿದೇಶೀ ವಸಾಹತುಗಳೊಡನೆ ನ್ಯಾಯವಾದ ರೀತಿ ಜನಾಭಿಪ್ರಾಯವನ್ನು ತಿಳಿದುಕೊಳ್ಳುವ ಪ್ರಶ್ನೆಯನ್ನೇ ಈಗ ಎತ್ತುವಂತಿಲ್ಲವೆಂದು ನೆಹರೂ ಖಂಡತುಂಡವಾಗಿ ಸಾರಿರುವರು. ಇದರ ಅರ್ಥ–ಸ್ವಾಭಾವಿಕವಾಗಿ ವಿದೇಶೀ ವಸಾಹತುಗಳು ಭಾರತದೊಡನೆ ಐಕ್ಯಗೊಳ್ಳಬೇಕೆಂಬೇ ಆಗಿದೆ. ಫ್ರೆಂಚ ಸರಕಾರದೊಡನೆ ಈ ಮುಂಚೆ ನಡೆಸಿದ ಮಾತುಕತೆಗಳ ಪರಿಣಾಮವಾಗಿ, ಅವರ ಅಧೀನದಲ್ಲಿರುವ ಭಾರತೀಯ ವಸಾಹತುಗಳಲ್ಲಿ ಜನಾಭಿಪ್ರಾಯವನ್ನು ತಿಳಿಯಲು ಪ್ರಯತ್ನಿಸಬೇಕೆಂದಿತ್ತು. ಈಗ ಭಾರತದ ಪ್ರಧಾನಿ ನೆಹರೂ ನಿಶ್ಚಿತಾಭಿಪ್ರಾಯವನ್ನು ವ್ಯಕ್ತಪಡಿಸಿದ್ದರಿಂದ, ವಸಾಹತು ಜನತೆಗೆ ಸಂತೋಷವಾದರೂ–ಫ್ರೆಂಚ ಸರಕಾರಕ್ಕೆ ವಿವಂಚನೆ ಉಂಟಾಗಿದೆ. ನೆಹರೂ ಹೇಳಿಕೆಯಿಂದ ಆಶ್ಚರ್ಯವಾಯಿತೆಂದು ಆ ಸರಕಾರದ ವಕ್ತಾರ ಹೇಳಿದ್ದಾನೆ. ನೆಹರೂ ಮಾತಿನ ಬಿಸಿ ಬಹುಶಃ ಫ್ರಾನ್ಸಿಗೆ ಇಷ್ಟರಲ್ಲೇ ತಟ್ಟಿರಬೇಕು, ಆದರೂ ಭಾರತದ ಘೋಷಣೆ ಶಾಂತಿಗೆ ಪೋಷಕ

ಗಿದೆ ಎಂಬುದು ಸುದೈವದ ಸಂಗತಿ. ಇತರ ರಾಷ್ಟ್ರಗಳು ಯುದ್ಧದ ಮೂಲಕ ಬಲಾತ್ಕಾರವಾಗಿಯಾದರೂ ತಮ್ಮ ಉದ್ದೇಶಪೂರ್ತಿಗೆ ಕೈಹಾಕಬಹುದು. ಆದರೆ ಗಾಂಧೀಜಿಯ ಶಾಂತಿ-ಅಹಿಂಸಾ ತತ್ವಗಳಲ್ಲಿ ಶ್ರದ್ಧಾಭಕ್ತಿ ನೆಲೆಸಿರುವ ಭಾರತ ಸರ್ವಥಾ ಆ ಮಾರ್ಗವನ್ನು ಅನುಸರಿಸುವಂತಿಲ್ಲ. ಆದುದರಿಂದಲೇ ನೆಹರೂ ಪದೇ ಪದೇ ಶಾಂತಿ ಪಾಠವನ್ನು ಪುನರುಚ್ಚರಿಸುತ್ತಿರುವರು.

ಸಾಮ್ರಾಜ್ಯವಾದಿಗಳ ವ್ಯಾಮೋಹ

ವಿದೇಶೀ ವಸಾಹತುಗಳ ಮೇಲಿರುವ ತಮ್ಮ ಹತೋಟಿಯನ್ನು ಬಿಟ್ಟುಕೊಡಲು ಸಾಮ್ರಾಜ್ಯವಾದಿ ರಾಷ್ಟ್ರಗಳಿಗೆ ಕಷ್ಟವೆನಿಸುವುದು. ಸ್ವಾಭಾವಿಕ ಭಾರತಕ್ಕೆ ಸ್ವಾತಂತ್ರ್ಯ ಕೊಟ್ಟು ಬ್ರಿಟನು ಕೆಟ್ಟಿತಲ್ಲಾ ಎಂಬ ಭಾವನೆ ಈಗಿನ ಚರ್ಚಿಲರ ಸರಕಾರಕ್ಕೆ ಅಂತರಂಗದಲ್ಲಿಯಾದರೂ ಇದ್ದೇ ಇರಬೇಕು. ಇಲ್ಲವಾದರೆ--ಮೊರೊಕ್ಕೊ ಮತ್ತು ಟ್ಯೂನೀಸಿಯಾದ ಪ್ರಶ್ನೆಗಳನ್ನು ಸಂಯುಕ್ತರಾಷ್ಟ್ರ ಸಂಘ ಎತ್ತಲಾಗದು--ಅವು ಫ್ರಾನ್ಸಿನ ಆಂತರಿಕ ವಿಷಯವೆಂದು ಫ್ರೆಂಚ ಸರಕಾರ ನಿರ್ಧರಿಸಿದುದಕ್ಕೆ ಬ್ರಿಟನಿನ ಬೆಂಬಲ ದೊರೆಯುತ್ತಿರಲಿಲ್ಲ. ಆದರೆ ಈ ಬಾರಿಯ ಅಧಿವೇಶನದಲ್ಲಿ ಸಂಯುಕ್ತ ರಾಜ್ಯ ಅಮೇರಿಕೆ ಮಾತ್ರ ಫ್ರಾನ್ಸಿನ ನಿಲುವನ್ನು ಸಮರ್ಥಿಸುವಂತಿಲ್ಲ. ಕಳೆದ ಸಲ ಭದ್ರತಾ ಮಂಡಳದಲ್ಲಿ ಟ್ಯೂನೀಸಿಯಾ ಪ್ರಶ್ನೆ ಬಂದಾಗ ಅಮೇರಿಕ ತೋರಿಸಿದ ನಡುವಳಿಕೆ, ಮನೆಯೊಳಗೇ ಅತೃಪ್ತಿಯನ್ನುಂಟು ಮಾಡಿದ್ದಿತು. ಆದುದರಿಂದ ಈ ಸಲ ಅದು ಫ್ರಾನ್ಸಿಗೆ ಒಂದು ಸೂಚನೆ ಕೊಟ್ಟು, ಸಂಯುಕ್ತರಾಷ್ಟ್ರ ಸಂಘದ ಸಾಮಾನ್ಯಾಧಿವೇಶನದಲ್ಲಿ ಚರ್ಚೆಗೆ ಬರಲಿರುವ ವಿಷಯಗಳಲ್ಲಿ ಟ್ಯೂನೀಸಿಯಾ--ಮೊರೊಕ್ಕೊ ಪ್ರಶ್ನೆಯೂ ಒಂದಾಗಿರಬೇಕೆಂಬುದಕ್ಕೆ ಒಪ್ಪಲು ಹೇಳಿದೆ. ಅಮೇರಿಕದ ಅಭಿಪ್ರಾಯದಂತೆ, ಹೇಗಿದ್ದರೂ ಈ ಪ್ರಶ್ನೆಗೆ ವಿಷಯ ಪಟ್ಟಿಯಲ್ಲಿ ಸ್ಥಾನ ದೊರಕುವುದಂತೂ ನಿಶ್ಚಯ; ಆದರೆ ಇದಕ್ಕೂ ಹೆಚ್ಚು ಅಗತ್ಯದ ಬೇರೆ ವಿಷಯಗಳೂ ಇರುವುದರಿಂದ-- ಈ ವಿಷಯದ ಮೇಲಿನ ಚರ್ಚೆ ತಾನಾಗಿಯೇ ಮುಂದೆ ಹಾಕಲ್ಪಡುವುದು. ಇದರಿಂದ ಫ್ರಾನ್ಸಿನ ಹಿತಕ್ಕೂ ತೊಂದರೆಯಿಲ್ಲ. ಪ್ರಶ್ನೆಯನ್ನು ಸಾಮಾನ್ಯಾಧಿವೇಶನದಲ್ಲಿ ಮಂಡಿಸಿಯೇ ತೀರುವೆವೆಂದು ಹಟ ತೊಟ್ಟಿರುವ ಅರಬ-ಏಶಿಯಾದ ರಾಷ್ಟ್ರಗಳ ಪ್ರತಿಷ್ಠೆಗೂ ಕುಂದಿಲ್ಲ.

ಅಮೇರಿಕೆಯ ದರ್ಪ

ಹೀಗೆ ಹಾವು ಸಾಯಬಾರದು-ಕೋಲು ಮುರಿಯಬಾರದು ಎಂಬ ಮಧ್ಯ ಮಾರ್ಗವನ್ನನುಸರಿಸಿ, ಅಮೇರಿಕಾ ತನ್ನ ಗೌರವ ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಿದೆ. ಚೀನಾದ ಮೇಲೆ ಆರ್ಥಿಕ ಬಹಿಷ್ಕಾರವನ್ನು ಹಾಕಬೇಕೆಂಬ ಅದಕ್ಕೆ ಒಂದು ಮಹತ್ವಾಕಾಂಕ್ಷೆಯಿತ್ತು. ಆದರೆ ಇದರಿಂದ ಚೀನಾದಲ್ಲಿರುವ ಬ್ರಿಟನಿನ ಹಿತ ಸಂಬಂಧಕ್ಕೆ ತೊಂದರೆ ಬಂದು ನಷ್ಟವುಂಟಾಗುವುದರಿಂದ ಬ್ರಿಟನು ಆರಂಭದಲ್ಲಿಯೇ ಸೂಚನೆ ಬೇಡವೆಂದು ಹೇಳಿದೆ. ಎಲ್ಲ ಪ್ರಸಂಗದಲ್ಲಿಯೂ ತನ್ನ ಸಹೋದರನೆನಿಸುವ ಬ್ರಿಟನಿನ ಮನಭಂಗ ಮಾಡಲು ಅಮೇರಿಕ ಪ್ರಯತ್ನಿಸಿದರೆ-- ಪಾಶ್ಚಾತ್ಯ ಶಕ್ತಿಗಳ ಬಣದಲ್ಲಿ ಒಡಕುಂಟಾಗಿದೆ ಎಂದು ಕಮ್ಯೂನಿಸ್ಟ ರಶಿಯಾದ ಗುಂಪು ಅಪಪ್ರಚಾರ ಮಾಡೀತಲ್ಲವೆ? ಆದುದರಿಂದ ಅಮೇರಿಕ ಚೀನಾದ ಮೇಲಿನ ಆರ್ಥಿಕ ಬಹಿಷ್ಕಾರ ಪ್ರಶ್ನೆಯನ್ನು ಬಿಟ್ಟುಕೊಟ್ಟಿದೆ. ಕೊರಿಯಾ ಕದನ ವಿರಾಮದ ಪ್ರಸಂಗದಲ್ಲಿಯೂ ಅಮೇರಿಕದ ಸರ್ವಾಧಿಕಾರವೇ ನಡೆದಿದೆ; ಕಮ್ಯೂನಿಸ್ಟರು ಯುದ್ಧ ಕೈದಿಗಳ ವಿನಿಮಯ ಪ್ರಶ್ನೆಯ ಬಗ್ಗೆ ಯೋಗ್ಯ ನಿಲುವನ್ನು ತಳೆಯುವ ವರೆಗೆ ಮಾತುಕತೆಗಳನ್ನು ಮುಂದುವರಿಸಲಾಗಿದೆ. ಇದರ ಬೆನ್ನಲ್ಲೇ ಭೀಕರವಾದ ಧಾಳಿಯನ್ನು ಭೂಜಲ ಹಾಗೂ ವಾಯು ಪಡೆಗಳ ಒತ್ತಾಸೆಯೊಡನೆ ಪ್ರಾರಂಭಿಸಲಾಗಿದೆ. ಈ ವರ್ಷದಲ್ಲಿಯೇ ಉಗ್ರತಮವೆನಿಸುವ ದಾಳಿ ಈಚೆಗೆ ನಡೆದ ವರದಿ ಬಂದಿದೆ.

ರಶಿಯಾದ ಅಂಜಿಕೆ

ಕೊರಿಯಾ ಕದನವು ಶಾಂತಿಯಿಂದ ಮುಕ್ತಾಯವಾಗಬೇಕೆಂದು ರಶಿಯಾದ ಅಭಿಲಾಷೆಯಿರುವುದು ನಿಜವೇ ಎಂಬುದಾಗಿ ಅಮೇರಿಕಾ ನೇರವಾದ ಪ್ರಶ್ನೆ ಕೇಳುವುದೆಂದು ವದಂತಿ. ರಶಿಯಾದ ಕಮ್ಯೂನಿಸ್ಟ ಪಕ್ಷದ ಅಧಿವೇಶನ ಮಾಸ್ಕೋದಲ್ಲಿ ನಡೆದಾಗ--ಪಾಶ್ಚಾತ್ಯರ ಬಲವನ್ನೂ ಅಭಿವೃದ್ಧಿಯನ್ನೂ ಧಿಕ್ಕರಿಸಿ ರಶಿಯಾ ತನ್ನ ಶಕ್ತಿಸಾಮರ್ಥ್ಯವನ್ನು ಹೆಚ್ಚಿಸಿಕೊಂಡಿದೆ ಎಂದು ಬಹಿರಂಗವಾಗಿ ಸಾರಲಾಯಿತು. ಪಶ್ಚಿಮ ಯುರೋಪು ರಾಷ್ಟ್ರಗಳ ಒಕ್ಕೂಟ ಸೇನಾಧಿಪತಿ ಜನರಲ್ ರಿಜ್ವೇಯವರ ಆ ಧೈರ್ಯ ಕಂಡಾಗ-ರಶಿಯಾ ಹೇಳುವುದು ನಿಜವಿದ್ದೀತೆಂದೂ ತೋರುತ್ತದೆ. ರಶಿಯಾ ರಣಕಣಕ್ಕೆ ಇಳಿದರೆ, ಅದನ್ನು ಪ್ರತಿಭಟಿಸುವಷ್ಟು ಸೈನ್ಯ ಪಶ್ಚಿಮ ಯುರೋಪ ರಾಷ್ಟ್ರಗಳಿಗೆ ಬಹುಶಃ ಇರಲಿಕ್ಕಿಲ್ಲ ಎಂದು ರಿಜ್ವೇ ಹೇಳುತ್ತಾರೆ. ಈ ನಡುವೆ ಸಂಯುಕ್ತ ರಾಷ್ಟ್ರಸಂಘದ ಸದಸ್ಯ ರಾಷ್ಟ್ರಗಳೆಲ್ಲ ಒಂದಾಗಿ ಯುದ್ಧ ಪ್ರತಿಬಂಧಕೋದ್ದೇಶದಿಂದ ಸ್ವಯಂಸೇವಕರ ಪಡೆಯೊಂದನ್ನು ಸಿದ್ಧಪಡಿಸಬೇಕೆಂಬುದು ಟ್ರಿಗ್ವೆಲೀಯ ಅಭಿಮತ. ಆದರೆ ಇಂಥದರಲ್ಲೆಲ್ಲ ಭಾರತಕ್ಕೆ ಆಸ್ಥೆ ಕಡಿಮೆ. ದಕ್ಷಿಣ ಆಫ್ರಿಕೆಯ ವರ್ಣಭೇದ ಕಾನೂನಿನ ಸಾರಾಸಾರ ಪ್ರಶ್ನೆ ಭಾರತಕ್ಕೆ ಮಹತ್ವದ್ದು.

ಅನಿಶ್ಚಿತ ಭವಿತವ್ಯ

ಈ ಸಂಬಂಧದಲ್ಲಿ ಮಲಾನ ಸರಕಾರದ ಧೋರಣೆ ಅಸಹ್ಯ ಮಟ್ಟಕ್ಕೆ ಮುಟ್ಟಿದೆ. ಅವರ ತರ್ಕ--ಕುತರ್ಕದ ಹಂತಕ್ಕೆ ಏರಿದೆ. ಭಾರತದಲ್ಲಿ ಜನವಸತಿ ಹೆಚ್ಚಿರುವುದರಿಂದ, ಅವರಲ್ಲಿ ಕೆಲವರನ್ನು ದಕ್ಷಿಣ ಆಫ್ರಿಕೆಗೆ ಸ್ಥಾನಾಂತರಿಸುವುದು ನೆಹರೂರ ಮನೀಷೆ ಎಂಬ ಮಲಾನರ ಅಭಿಪ್ರಾಯ ಕೀಳ್ಮಟ್ಟದ ಪ್ರತಿಪಾದನೆ ಎನ್ನದೆ ಗತ್ಯಂತರವಿಲ್ಲ. ಸಂಯುಕ್ತರಾಷ್ಟ್ರ ಸಂಘ ಒಪ್ಪಿಕೊಂಡ ಮಾನವೀಯ ಹಕ್ಕು ಬಾಧ್ಯತೆಗಳನ್ನು ಅನುಲಕ್ಷಿಸಿ, ವರ್ಣಭೇದ ಕಾಯಿದೆಯ ಕ್ರಮಬದ್ಧತೆಯನ್ನು ಎತ್ತುತ್ತಿರುವಾಗ--ಮಲಾನರ ಹೇಳಿಕೆ ಮೂರ್ಖತನದ ದ್ಯೋತಕವೇ ಸೈ ಎಂಬುದು ಇನ್ನಷ್ಟು ನಿಶ್ಚಯವಾಗುತ್ತದೆ. ಈ ಎಲ್ಲ ಪ್ರಸಂಗಗಳ ಮೇಲಿಂದ ಕೇಳುವುದಾವುದೆಂದರೆ--ಇದೇ ತಾ ೧೪ರಿಂದ ಕೂಡುವ ಸಂಯುಕ್ತರಾಷ್ಟ್ರ ಸಂಘದ ಸಾಮಾನ್ಯಾಧಿವೇಶನದಲ್ಲಿ ತನ್ನ ಗೋರಿಯನ್ನು ತಾನೇ ಕಟ್ಟಿಕೊಳ್ಳುವ ಪ್ರಶ್ನೆಗಳೇ ಪ್ರಾಶಸ್ತ್ಯ ಪಡೆದಿವೆ. ಏಷ್ಯಾ ಖಂಡ ಪ್ರದೇಶಗಳ ಹಾಗೂ ಜನಾಂಗ ಭೇದ ನೀತಿಯ ಪ್ರಶ್ನೆ, ಸಂಯುಕ್ತರಾಷ್ಟ್ರ ಸಂಘದ ಮೂಲ ತತ್ವಕ್ಕೆ ಕುಠಾರಪ್ರಾಯವಿದ್ದರೂ--ಅದನ್ನು [illegible] ಮಹಾರಾಷ್ಟ್ರಗಳು ಸಿದ್ಧವಿಲ್ಲವಲ್ಲ ? ಕಣ್ಣುಮುಚ್ಚಾಲೆಯಾಟವೇ ಅವುಗಳ ಅಭೀಷ್ಟವಾದರೆ, ಎಲ್ಲ ಬಣ್ಣವನ್ನು ಮಸಿ ನುಂಗಿದ ಪ್ರಮೇಯ ಒದಗುವುದು ತಪ್ಪದು.

ಉಡುಪಿ

ಆಗಮನ:—ಚರಖಾ ಸಂಘ, ಸೇವಾಗ್ರಾಮ ಇದರ ಕತಾಯಿ ಮಂಡಲ ವಿಭಾಗದ ಕಾರ್ಯದರ್ಶಿ ಶ್ರೀ ನಾ. ರಾ. ಸೋವಾನಿಯವರು ತಾ 9ಕ್ಕೆ ಇಲ್ಲಿಗೆ ಆಗಮಿಸಿದ್ದು, ಸಾಯಂ 4-30 ಗಂಟೆಗೆ ಎಮ್. ಜಿ. ಎಮ್. ಕಾಲೇಜಿನಲ್ಲಿ ಭಾಷಣವಿತ್ತರು. ಬಳಿಕ ಸ್ಥಳೀಯ ಕತಾಯಿ ಮಂಡಲದವರನ್ನು ಸಂದರ್ಶಿಸಿದರು. ಮಾರನೆ ದಿನ ಬೆಳಿಗ್ಗೆ ಚೇರ್ಕಾಡಿಯಲ್ಲಿರುವ ಖಾದೀ ಕೇಂದ್ರಕ್ಕೆ ಸಂದರ್ಶನವಿತ್ತರು. ಮಧ್ಯಾಹ್ನ ನಂತರ ಉಡುಪಿಯ ಗವರ್ನಮೆಂಟ್ ಗಂಡಸರ ಮತ್ತು ಹೆಮ್ಮಕ್ಕಳ ಟ್ರೈನಿಂಗ್ ಶಾಲೆಗಳಲ್ಲಿ ಭಾಷಣವಿತ್ತರು. ಸರ್ವೋದಯ ವಿಚಾರ, ಅನ್ನ ವಸ್ತ್ರಸ್ವಾವಲಂಬನ, ಖಾದೀ ಪ್ರಚಾರ ವಿಷಯಗಳು ಅವರ ಭಾಷಣಗಳ ಮುಖ್ಯ ತಾತ್ಪರ್ಯವಾಗಿದ್ದಿತು.

ಮಂತ್ರಿ ಡಾ| ಯು. ಕೃಷ್ಣರಾಯರ ಆಗಮನ

ಮದ್ರಾಸಿನ ಕೈಗಾರಿಕೆ ಮತ್ತು ಮಜೂರ ಖಾತೆಯ ಮಂತ್ರಿಗಳಾದ ಮಾನ್ಯ ಮಂತ್ರಿ ಡಾ| ಯು. ಕೃಷ್ಣರಾಯರು ಇದೇ ತಾ. 13ಕ್ಕೆ ಮದ್ರಾಸಿನಿಂದ ಹೊರಟು 14ನೇ ಸಂಜೆ ಮಂಗಳೂರಿಗೆ ಆಗಮಿಸಿದಾಗ ಜಿಲ್ಲಾ ಕಲೆಕ್ಟರ್ ಶ್ರೀ ಸಿ ಎ. ರಾಮಕೃಷ್ಣನ್, ಶ್ರೀ ಎಫ್ ಎಕ್ಸ್. ಡಿ. ಪಿಂಟೊ, ಶ್ರೀ ವಿ ಎಸ್ ಕುಡ್ವ ಮೊದಲಾದವರು ಸ್ವಾಗತವಿತ್ತರು. ಮಂತ್ರಿಗಳು ಕದ್ರಿ ಪ್ರವಾಸಿಕರ ಬಂಗ್ಲೆಯಲ್ಲಿ ಉಳಿದು ಮರುದಿನ ಬೆಳಿಗ್ಗೆ 9ಘಂಟೆಗೆ ಮರೋಳಿ [illegible]ಯನ್ನೂ ಸಂಜೆ 4-30ಕ್ಕೆ ಜಪ್ಪು ಕೋಮನವೆಲ್ತ್ ಹಂಚಿನ ಕಾರ್ಖಾನೆಯನ್ನೂ ಸಂದರ್ಶಿಸಿ 6-30ಕ್ಕೆ ಇಂಡಿಯನ್ ಮೆಡಿಕಲ್ ಎಸೋಸಿಯೇಶನಿಗೆ ಭೇಟಿಯಿತ್ತರು 16ನೇ ಬೆಳಿಗ್ಗೆ 9-30ಕ್ಕೆ ವೆಸ್ಟರ್ನ್ ಇಂಡಿಯಾ ಹಂಚು ತಯಾರಕರ ಸಂಘಕ್ಕೆ ಭೇಟಿಯಾಗಿ 3 30ಕ್ಕೆ ಸಿನೇಮಾ ಮಾಲಕರ ಡೆಪ್ಯುಟೇಶನ್ ಸ್ವೀಕರಿಸಿ 5-30ಕ್ಕೆ ಕೆನರಾ ಚೇಂಬರ್ ಆಫ್ ಕಾಮರ್ಸಿಗೆ ಸಂದರ್ಶನ, ತಾ. 17ನೇ ಬೆಳಿಗ್ಗೆ 8 ಘಂಟೆಗೆ ಬಸ್ ಮಾಲಕರ ಡೆಪ್ಯುಟೇಷನ್, ಸಂಜೆ 4-30ಕ್ಕೆ ಕಾಂಗ್ರೆಸ್ ಕೆಲಸಗಾರರಿಗೆ ಭೇಟಿ, 5 30ಕ್ಕೆ ವಿದ್ಯಾರ್ಥಿಗಳಿಗೆ ಭಾಷಣ ತಾ. 18ನೇ ಬೆಳಗ್ಗೆ 9ಘಂಟೆಗೆ ಮಂಗಳೂರಿಂದ ಹೊರಟು ಕಾರ್ಕಳ ಮಾರ್ಗವಾಗಿ ಉಡುಪಿಗೆ ಪ್ರಯಾಣ. 3 ಘಂಟೆಗೆ ಕ್ಯಾಂಡಿಡ್ ಲೂಮ್ ಮೆನ್ಯುಫೆಕ್ಚರರ್ಸ್ ಎಸೋಸಿಯೇಶನಿನ ಮಾನಪತ್ರ, 4 ಗಂಟೆಗೆ ಸರ [illegible] ಗೇಹಸ್ಥಾನ ಸಂದರ್ಶನ, ತಾ. 19 [illegible] 20ರಲ್ಲಿ ಉಡುಪಿಯಲ್ಲಿ ಉಳಿದು ಇತರ ಕಾರ್ಯಕ್ರಮಗಳನ್ನು ನೆರವೇರಿಸಿ 21ನೇ ಸಂಜೆ ಮಂಗಳೂರಿಗೆ ತೆರಳಿ ಮಾರನೆ ದಿನ ಮದ್ರಾಸಿಗೆ ಪ್ರಯಾಣಿಸುವರು

ಉಪನ್ಯಾಸ— ಮಹಾತ್ಮಾ ಗಾಂಧಿ ಕಾಲೇಜಿನ ಕಲಾ ಸಂಘದ ಆಶ್ರಯದಲ್ಲಿ ತಾ. ೧೪ ರಂದು ಸಂಜೆ ಡಾ| ದತ್ತಾತ್ರೇಯ ರಾವ್ ಸನಾದಿ Ph D Fellow of the Notional Institute of Cancer [U- S- A] ಮತ್ತು ಅಮೇರಿಕದ ಕೆಲಿಫೋರ್ನಿಯಾ ವಿಶ್ವವಿದ್ಯಾಲಯದ ಅಸಿಸ್ಟಾಂಟ ಪ್ರೊಫೆಸರ್- ಇವರು ಅಮೇರಿಕನ್ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿ ಜೀವನದ ಮತ್ತು ವಿದ್ಯಾಭ್ಯಾಸ ಕ್ರಮದ ಕುರಿತು ಉಪನ್ಯಾಸ ಮಾಡಿ, ಬಳಿಕ ವಿದ್ಯಾರ್ಥಿಗಳ ಪ್ರಶ್ನಾವಳಿಗೆ ಉತ್ತರಿಸಿದರು. ಕಲಾ ಸಂಘದ ಅಧ್ಯಕ್ಷರಾದ ಕು. ಶಿ. ಹರಿದಾಸ ಭಟ್ಟರು ಅತಿಥಿಗಳ ಪರಿಚಯ ಮಾಡಿಸಿದರು. ಪ್ರಿನ್ಸಿಪಾಲ ಸುಂದರ ರಾಯರು ಅಧ್ಯಕ್ಷರಾಗಿದ್ದರು. ಕಾರ್ಯದರ್ಶಿ ಶ್ರೀ ಬಾಸ್ಕರ ಶೆಟ್ಟರು ಧನ್ಯವಾದವನ್ನರ್ಪಿಸಿದರು.

ಮುನಿಸಿಪಲ್ ಕೌನ್ಸಿಲು ಸಭೆಯು ತಾ 13ರಲ್ಲು ಸಂಜೆ ಚೆರ್‌ಮನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ಕ್ಷೇತ್ರದಲ್ಲಿ ಮೋಟಾರ್ ಲಾರಿ ಮತ್ತು ಬಸ್ಸುಗಳ ಓಡಾಟದ ವೇಗವನ್ನು ಗಂಟೆಗೆ ಹತ್ತು ಮೈಲುಗಳಂತೆ ಇರಿಸಬೇಕೆಂದು ನಿರ್ಣಯವಾಯಿತು.

ಉಪಚುನಾವಣೆ— ಕುಂಜಿಬೆಟ್ಟು ಮತ್ತು ಸೆಂಟ್ರಲ್ ವಾರ್ಡುಗಳಲ್ಲಿ ಕಾಂಗ್ರೆಸ್ ಹುರಿಯಾಳಾಗಿ ಸ್ಪರ್ಧಿಸಿ ಎರಡೂ ಕಡೆಗಳಲ್ಲಿ ವಿಜಯಿಗಳಾದ ಶ್ರೀ. ಕೆ. ಕೆ. ಪೈಗಳು ಸೆಂಟ್ರಲ್ ವಾರ್ಡಿನ ತನ್ನ ನಗರ ಸಭಾ ಸದಸ್ಯತನಕ್ಕೆ ರಾಜೀನಾಮೆಯನ್ನಿತ್ತಿದ್ದಾರೆ. ಸಂಬಂಧದಲ್ಲಿ ಹೊಸ ಕೌನ್ಸಿಲು ರಚನೆಯಾದ ಮೇಲೆ ಈ ವಾರ್ಡಿಗೆ ಉಪಚುನಾವಣೆಯಾಗುವುದು.

ಉಡುಪಿ ಸಹಕಾರಿ ಹಾಲು ಸರಬರಾಯಿ ಸಂಘದ ಮಹಾ ಸಭೆಯು— ತಾ 12ರಲ್ಲು ಡಾ| ಟಿ. ಎಮ್ ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಎಮ್. ವಾಮನ ಭಟ್ಟರು ಸಂಘದ ವರದಿಯನ್ನೋದಿದರು. ಮೆಂಬರರಿಗೆ ಸೇಕಡಾ 6¼ರಂತೆ ಡಿವಿಡೆಂಟ್ ಹಂಚುವುದೆಂದಾಯಿತು. ಹೊಸ ವರುಷಕ್ಕೆ ಡಾ| ಟಿ. ಎಮ್. ಎ. ಪೈ. (ಅಧ್ಯಕ್ಷ) ಶ್ರೀಗಳಾದ ಎಮ್. ವಾಮನ ಭಟ್ (ಕಾರ್ಯದರ್ಶಿ) ಎ. ಲಕ್ಷ್ಮೀನಾರಾಯಣ ರಾವ್, ಬಿ ಕೆ. ಕೃಷ್ಣ ರಾವ್, ಕೆ. ಕೆ. ಪೈ, ನ್ಯಾ. ದೂಮಣ್ಣ ಹೆಗ್ಡೆ ಮತ್ತು ಡಾ| ಡಬ್ಲ್ಯು. ಎ, ಸುಬೇತಾ, ಅವರು, ಡ್ಯಾರೆಕ್ಟರರಾಗಿ ಆರಿಸಲ್ಪಟ್ಟರು. ಸಂಘವು ಜನಪ್ರಿಯವಾಗುವಂತೆ ಪ್ರಯತ್ನಿಸಿದ ಗೌರವ ಕಾರ್ಯದರ್ಶಿ ಎಮ್. ವಾಮನ ಭಟ್ಟರ ಸೇವೆಯನ್ನು ಪ್ರಶಂಸಿಸುವ ನಿರ್ಣಯವಾಯಿತು.

ವಿದಾಯ ಸತ್ಕಾರ ಕೂಟ— ಸ್ಥಳೀಯ ಎಮ್. ಜಿ. ಎಮ್. ಕಾಲೇಜಿನ ಇಂಗ್ಲಿಷ್ ಲೆಕ್ಚರರ್ ಶ್ರೀ ಕೆ. ಎಸ್. ಕಾಮತರು ಈ ಕಾಲೇಜನ್ನು ಬಿಟ್ಟು ಚಿತ್ತೂರು ಸರಕಾರಿ ಕಾಲೇಜಿಗೆ ಹೋಗುವ ನಿಮಿತ್ತ, ಈ ಕಾಲೇಜಿನ ಪ್ರೊಫೆಸರರೂ ವಿದ್ಯಾರ್ಥಿಗಳೂ ಅವರಿಗೆ ತಾ. 13ರಲ್ಲು ಸಂಜೆ ವಿದಾಯ ಸತ್ಕಾರವನ್ನೇರ್ಪಡಿಸಿ ಮಾನಪತ್ರವಿತ್ತು ಗೌರವಿಸಿದರು. ಪ್ರಿನ್ಸಿಪಾಲ್ ಎಚ್ ಸುಂದರ ರಾಯರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಕು ಶಿ. ಹರಿದಾಸ ಭಟ್, ಟಿ. ನಾರಾಯಣ ಅಯ್ಯಂಗಾರ್ ಮೊದಲಾದವರು ಶ್ರೀ ಕಾಮತರ ಗುಣ ಗಾನಮಾಡಿದರು.

ರಾಜಮಹಾಲಿನವರ ಸ್ತುತ್ಯ ಕಾರ್ಯ— ಉಡುಪಿಯ, ರಾಜಮಹಾಲಿನ ಒಡೆಯರು ಕಳೆದ ತಾ 28ರಿಂದ ಇದೇ ತಾ. 25ರ ತನಕ ಪ್ರತಿ ಆದಿತ್ಯವಾರ ದಿವಸ ಬೆಳಗ್ಗೆ ಅಂಗಹೀನರಿಗೆ, ಅನಾಥ ಬಾಲಕರಿಗೆ, ಹರಿಜನರಿಗೆ, ಕೆಲಸಮಾಡಲು ಅಸಾಧ್ಯವಾದವರಿಗೆಲ್ಲ ಧರ್ಮಾರ್ಥ ಗಂಜಿ ಊಟದ ವ್ಯವಸ್ಥೆ ಮಾಡಿರುವುದು ಸ್ತುತ್ಯವಿದೆ. ಇದೇ ತಾ 12ರಲ್ಲು ಸಾಧಾರಣ ನಾಲ್ನೂರು ಜನರಿಗೆ ಗಂಜಿಯೂಟ ದಾನ ನಡೆಯಿತು. ಮಾಲಿಕರ ಔದಾರ್ಯ ಅನುಕರಣೀಯವಿದೆ

ಕಸ್ತೂರಿಬಾ ಮೆಡಿಕಲ್ ಕಾಲೇಜು ಬರುವ ಜೂನಿನಲ್ಲಿ ಪ್ರಾರಂಭವಾಗುವುದು. ಅದರ ಬಗ್ಗೆ ಪೂರ್ವ ಸಿದ್ಧತೆಗಳಾಗುತ್ತಿವೆ. ಕರ್ನಾಟಕ ವಿಶ್ವವಿದ್ಯಾಲಯವು ಮೊದಲೇ ಒಪ್ಪಿಗೆ ಕೊಟ್ಟಿದೆ. ಮದ್ರಾಸು ಸರಕಾರವು ಕಾಲೇಜಿಗೆ ಉಡುಪಿಯಲ್ಲಿ ಖಾಲಿ ಸ್ಥಳವನ್ನು ಕೊಡಬಹುದೆಂದೂ ಮಂಗಳೂರು ಉಡುಪಿ ಸರಕಾರಿ ಆಸ್ಪತ್ರೆಗಳನ್ನು ಕಾಲೇಜಿನ ಉಪಯೋಗಾರ್ಥ ಕೊಡಲಾಗುವುದೆಂದೂ [illegible] ಮೂಲಕ ತಿಳಿದಿದೆ.

[೫ನೇ ಪುಟದಿಂದ ಮುಂದುವರಿದುದು]

ಟ್ಟವನ್ನಂತೂ ಉತ್ಕೃಷ್ಟವೆನ್ನಬಹುದು. ಆದರೂ ನಮಗೆ ಭವಿಷ್ಯ ಇಷ್ಟು ಶಕ್ತಿಯಿಂದ ಕೂಡ ಬಾರದೆಂಬ ಅರಿವು ಇರಬೇಕು. ಇಂದಿನ ಪರಿಸ್ಥಿತಿಯನ್ನು ತಿಳಿದುಕೊಂಡು, ಅದಕ್ಕೆ ಹೊಂದಿಕೊಂಡು ಮುನ್ನಡೆಯಬೇಕು. ಈ ಮಾತನ್ನು ಕರ್ನಾಟಕ ವಿಶ್ವವಿದ್ಯಾಲಯದ ಮೂರನೇ ಪದವೀದಾನ ಸಮಾರಂಭವನ್ನು ನೆರವೇರಿಸಿದಾಗ, ಮುಂಬಯಿಯ ಗವರ್ನರ ಶ್ರೀ ಗಿರಿಜಾ ಶಂಕರ ವಾಜಪೇಯಿಯವರು ಹೇಳಿದರು. ವಿಶ್ವವಿದ್ಯಾಲಯಗಳು ಬೇಡಿಕೆಗಿಂತ ಹೆಚ್ಚು ಪದವೀಧರರನ್ನು ನಿರ್ಮಿಸುತ್ತಿವೆ. ತಮ್ಮ ಚಟುವಟಿಕೆಗಳನ್ನು ವಿಸ್ತರಿಸಲು, ಧನ ಸಹಾಯವನ್ನು ಕೇಳುತ್ತಿವೆ. ಪದವೀಧರರಾದವರಿಗೆ ಸಮಾಜದಲ್ಲಿ ಯೋಗ್ಯತೆಗೆ ತಕ್ಕ ಕೆಲಸ ದೊರೆಯುವುದಿಲ್ಲ. ಸರಕಾರಕ್ಕೆ ಧನಸಹಾಯ ಮಾಡುವ ಸಾಮರ್ಥ್ಯವಿಲ್ಲ. ಇಂಥದರಲ್ಲಿ ಎಷ್ಟು ಬಂತೋ, ಏನು ಕೆಲಸ ಸಿಕ್ಕಿತೋ—ಅದರಲ್ಲಿಯೇ ಸಂತುಷ್ಟಿ ತೋರಬೇಕು.

ರಾಷ್ಟ್ರ ನಿರ್ಮಾಣದ ಸಾಮರ್ಥ್ಯ

ಸರಕಾರ ಕರಭಾರ ಪದ್ಧತಿ ಈಗಾಗಲೇ ಹದಗೆಟ್ಟಿದೆ ಎಂದು ದೂರು ಕೇಳುತ್ತಿದ್ದರೂ—ಜನರ ಬೇಡಿಕೆ ಹೆಚ್ಚಿದರೆ, ಕರ ಹೆಚ್ಚಿಸುವುದರ ಹೊರತು ಅನ್ಯಮಾರ್ಗವಿಲ್ಲ ಎಂದು ನೆಹರೂ ತಿಳಿಸಿದರು. ಆದರೂ ನಮ್ಮ ಪರಿಶ್ರಮ ಹಾಗೂ ಅನವರತ ದುಡಿಮೆಯಿಂದ ದೇಶವನ್ನು ಕಟ್ಟುವ ಸಾಮರ್ಥ್ಯ ನಮ್ಮಲ್ಲಿದೆ ಎಂದವರು ವಿಶ್ವಾಸ ತೋರಿಸಿದರು, ಭಾರತ ಸೇವಕಸಮಾಜದ ಆದರ್ಶವನ್ನು ಜನರಿಗೆ ಬಿಂಬಿಸುತ್ತಾ, ನೆಹರೂ ಅದು ರಾಜಕೀಯ ಸಂಘಟನೆಯಲ್ಲವೆಂದೂ ಜನರ ಮನಃ ಪ್ರವೃತ್ತಿಯನ್ನು ದೈಹಿಕ ಶ್ರಮದ ಗೌರವದ ಕಡೆಗೆ ತಿರುಗಿಸುವುದು ಸಮಾಜದ ಗುರಿ ಎಂದೂ ಹೇಳಿದರು. ಮಾತಿನಿಂದ ಏನೂ ಸಾಧಿಸದು—ಕೃತಿಯೊಂದೇ ನಮ್ಮ ಯಶಸ್ಸಿನ ಪ್ರಮಾಣವೆಂದು ನೆಹರೂ ನಿಶ್ಚಯವಾಕ್ಯವನ್ನುಡಿದರು. ವಿದ್ಯಾರ್ಥಿಗಳು ಪುಸ್ತಕ ಪಠನಕ್ಕಿಂತ ಹೆಚ್ಚು, ಕಾರ್ಯಕ್ಷೇತ್ರದಲ್ಲಿ ಭಾಗವಹಿಸುವುದರಿಂದ ಪ್ರತ್ಯಕ್ಷ ಅನುಭವವನ್ನು ಪಡೆಯಬಹುದು. ಎಂದರು. ಭಾರತದ ನಾಗರಿಕರೆಂದು ತಿಳಿದು ಜನ ಸರಕಾರದೊಡನೆ, ಅದರ ಒಳ್ಳೆಯ ಪ್ರಯತ್ನಗಳೊಡನೆ, ಸಹಕರಿಸಿ, ದುಡಿಯಬೇಕೆಂದು ನೆಹರೂ ವಿನಂತಿಸಿದರು. ಕಷ್ಟಪಟ್ಟು, ಸಹನ ಹಾಗೂ ತಾಳ್ಮೆಯಿಂದ, ದುಡಿದು ಧನ್ಯರಾಗಿರಿ ಎಂದು ನೆಹರೂ ಜನತೆಗೆ ಕರೆಕೊಟ್ಟರು.

ಉಡುಪಿ ಡಿ ಮು ಕೋರ್ಟಿನಲ್ಲಿ
O S. No. 372/1952
ಧ, ವೆಂಕಟ ಸುಬ್ಬಣ್ಣ ಭಟ್ಟ—ವಾದಿ
ಮತ್ತು
1 ಪದ್ಮನಾಭ ಶಾಸ್ತ್ರಿ 2 U. ಕೆ. ರಾಜಾರಾಮ್ 3 U ವೆಂಕಟ ಕೃಷ್ಣ ಶಾಸ್ತ್ರಿ — ಪ್ರತಿವಾದಿರು – ಇವರೊಳಗೆ

ಮೇಲ್ಕಂಡ ವ್ಯಾಜ್ಯವು ವಾದಿಗೆ ಪ್ರತಿವಾದಿಯಿಂದ ಬರತಕ್ಕಗೇಣಿ ಬಾಕಿಗೆ ಮಾಡಿದ್ದಾಗಿದ್ದು ಸದ್ರಿ ವ್ಯಾಜ್ಯದಲ್ಲಿ 3ನೇ ಪ್ರತಿವಾದಿಗೆ ಆಗತಕ್ಕ ವ್ಯಾಜ್ಯದ ನೋಟೀಸು ತಾರೀಕು 27-10-52 ಇಟ್ಟಿರುವದರಿಂದ ಸದ್ರಿ ಪ್ರತಿವಾದಿಯು ತನ್ನ ಆಕ್ಷೇಪ ಹೇಳುವದನ್ನು ಸದ್ರಿ ತನ್ನ ದಿವಸ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿ ಕೊಳ್ಳತಕ್ಕದ್ದು.

P Padamnabha Rao.
Vakil for Plaintiff
Dated 13-10-52 UDIPI,

ಮಂಗಳೂರು

ಬಿರುಗಾಳಿಯ ಅನಾಹುತ — ಕಣ್ಣನೂರಿನಿಂದ ಮಂಗಳೂರಿಗೆ ಬರುತ್ತಿದ್ದ ಮಂಜಿಯೊಂದು ಮುಲ್ಕಿಯ ಸಮೀಪ ಬಿರುಗಾಳಿಗೆ ತುತ್ತಾಗಿ ತಾ. 10ರಲ್ಲಿ ಒಡೆದು ಹೋಯಿತೆಂದೂ ಅದರಲ್ಲಿದ್ದ ಜನರು ಈಜಿಕೊಂಡು ದಡ ಸೇರಿದರೆಂದೂ ಹೇಳಲಾಗಿದೆ. ಈ ಮಂಜಿಯಲ್ಲಿ ಒಂದುನೂರು ಟನ್ನುಗಳಷ್ಟು ಕಟ್ಟಿಗೆ ಸಾಮಾನುಗಳಿದ್ದವು.

ಭಾವಚಿತ್ರ ಅನಾವರಣ— ಬೆಸೆಂಟ್ ಬಾಲಿಕಾ ಪಾಠಶಾಲೆಯ ವರ್ಧಂತಿ ಸಮಾರಂಭದ ಕಾಲದಲ್ಲಿ ದಿವಂಗತ ಎಮ್. ವೆಂಕಟೇಶ ಪೈಗಳ ಭಾವಚಿತ್ರದ ಅನಾವರಣವನ್ನು ಶ್ರೀ ಬೆನಗಲ್ ಸಂಜೀವರಾಯರು ನೆರವೇರಿಸಿದರು. ಶ್ರೀ ಎಮ್. ಎಸ್. ವಿಠಲರಾಯರು ದಿವಂಗತರ ಕುರಿತು ಮಾತನಾಡಿ ಅವರ ಸ್ಮಾರಕವಾಗಿ ಶಾಲೆಯು ನಿರ್ಮಿಸಲಿರುವ ರಂಗಮಂಟಪಕ್ಕೆ ಸಾರ್ವಜನಿಕರ ಸಹಾಯವನ್ನು ಕೋರಿದರು. ಅದೇ ಶಾಲೆಯ ಹೆತ್ತವರ ದಿನಾಚರಣೆಯು ಶ್ರೀಮತಿ ಶಾಂತೇರಿ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿತು,

ದುರ್ಮರಣ ಇದೇ ತಾ 7ರಲ್ಲಿ ಮಧ್ಯಾಹ್ನ ಮಂಗಳೂರಿಗೆ ಬರುತ್ತಿದ್ದ ರೈಲ್ನ ಅಡಿಯಲ್ಲಿ ತೊಕ್ಕೋಟು ಬಳಿ, ಒಬ್ಬನು ಕಂಬಿಗಳ ಮೇಲೆ ಬಿದ್ದುಕೊಂಡು ಆತ್ಮಹತ್ಯೆ ಮಾಡಿಕೊಂಡನು. ಈ ಸುದ್ದಿ ಪೋಲೀಸರಿಗೆ ತಲ್ಪಿ, ಅವರು ಬಂದು ಶವ ತೆಗೆಸಿ ಪಂಚನಾಮೆ ನಡೆಸಲಾಗಿ, ಆತ್ಮಹತ್ಯೆ ಮಾಡಿಕೊಂಡವನು ಉಡುಪಿ ತಾಲೂಕಿನ ಆರಡಿ ಸುಬ್ಬಣ್ಣ ಶೆಟ್ಟರ ಮೊಮ್ಮಗ ಪೆರ್ಡೂರು ಗ್ರಾಮದ ಕೆ. ವೀರಣ್ಣ ಸೆಟ್ಟಿ ಎಂಬವನೆಂದೂ, ತನ್ನ ಮರ್ಯಾದೆ ಕಾಪಾಡಲು ತಾನು ಈ ರೀತಿ ಪ್ರಾಣತ್ಯಾಗ ಮಾಡುತ್ತಿರುವೆನೆಂದೂ ವಿವರಿಸಿ ಬರೆದ ಪತ್ರವನ್ನು ಅಂಗಿ ಕಿಸೆಯಲ್ಲಿರಿಸಿಕೊಂಡಿದ್ದನೆಂದೂ ತಿಳಿದು ಬರುತ್ತದೆ.

ಹಿಂಗಾರು ಮಳೆ—ದ. ಕ. ಜಿಲ್ಲೆಯಲ್ಲಿ ಒಂದು ವಾರದಿಂದ ಮಳೆ ಬರುತ್ತಲಿದ್ದು ತಾ. 9, 10, 11ರಲ್ಲಿ ವಿಪರೀತವಾಗಿ ಸುರಿಯಿತು ಕೆಲವು ಕಡೆ ನೆರೆಯು ಬಂದು ಕಟಾವಾದ ಪೈರು ನೆರೆಯ ಪಾಲಾಯಿತೆಂದೂ ಹೇಳಲಾಗಿದೆ

ವ್ಯಾಪಾರಸ್ಥರ ಸಭೆ— ಕೆನರಾ ವಾಣಿಜ್ಯಸಂಘದ ಕಾರ್ಯಾಲಯದಲ್ಲಿ ತಾ. 7ರಂದು ಸಂಘದ ಅಧ್ಯಕ್ಷ ಶ್ರೀ ಎ. ಉಮಾನಾಥ ರಾಯರ ಅಧ್ಯಕ್ಷತೆಯಲ್ಲಿ ವ್ಯಾಪಾರಸ್ಥರ ಸಭೆಯೊಂದು ಸೇರಿತು. ದಕ್ಷಿಣಕನ್ನಡ ಸೆಂಟ್ರಲ್ ಕೋಆಪರೇಟಿವ್ ಹೋಲ್‌ಸೇಲ್ ಸ್ಟೋರ್ಸ್—ಈ ಸಂಸ್ಥೆಯು ಮುಂದಿನ ತಿಂಗಳಾರಂಭದಿಂದ ರಖಂ ವ್ಯಾಪಾರವನ್ನು ನಿಲ್ಲಿಸುವುದಾಗಿ ಸೂಚಿಸಿದ್ದು ಈ ವಿಷಯದಲ್ಲಿ ಆಮದು ಆಗುವ ಅಕ್ಕಿ ಮತ್ತಿತರ ಧಾನ್ಯಗಳನ್ನು ರಖಂ ವ್ಯಾಪಾರಿಗಳಿಗೆ ಹಂಚಲು ಅಪೇಕ್ಷಿಸುವ ವ್ಯಾಪಾರಿಗಳು ಸಭೆಸೇರಿ ನಿರ್ಧರಿಸಲು ಜಿಲ್ಲಾ ಕಲೆಕ್ಟರು ಕೊಟ್ಟ ಸೂಚನೆ ಮೇರೆಗೆ ಈ ಸಭೆಯಲ್ಲಿ ವಿಷಯ ಪರ್ಯಾಲೋಚಿಸಲಾಯಿತು. ಆಖೈರು ನಿರ್ಧಾರಕ್ಕೆ ಬರಲು ಆಲೋಚಿಸುವರೆ ವ್ಯಾಪಾರಸ್ಥರ ಉಪಸಮಿತಿಯೊಂದು ರಚಿಸಲಾಯಿತು.

ಈ ಸಭೆ ಮುಗಿದಬಳಿಕ ಮದ್ರಾಸಿನ ಮುಖ್ಯಮಂತ್ರಿ ಶ್ರೀ ರಾಜಗೋಪಾಲಾಚಾರಿಯವರು ಬಹುಮುಖ ಮಾರಾಟಕರವನ್ನು ಏಕಮುಖದ್ದನ್ನಾಗಿ ಮಾಡುವ ವಿಚಾರದಲ್ಲಿರುವರೆಂದು ತಿಳಿದುಬಂದುದರಿಂದ ಈ ಕುರಿತು ವಿಚಾರ ವಿನಿಮಯ ಮಾಡಲು ವ್ಯಾಪಾರಿಗಳ ಇನ್ನೊಂದು ಸಭೆಯು ಜರಗಿತು ಈ ಸಭೆಯಲ್ಲಿ ಸೇರಿದ ಸದಸ್ಯರು ಮಾನ್ಯ ಮಂತ್ರಿ ರಾಜಾಜಿಯವರು ಈಗಿರುವ ಬಹು ಮುಖ ಮಾರಾಟ ಕರವನ್ನು ಏಕಮುಖ ಮಾರಾಟ ಕರವನ್ನಾಗಿ ಬದಲಾಯಿಸುವ ಹೇಳಿಕೆಯನ್ನು ಈಚೆಗೆ ಹೊರಡಿಸಿದುದನ್ನು ಸ್ವಾಗತಿಸಲಾಯಿತು. ಈ ವಿಚಾರದಲ್ಲಿ ಸಂಪೂರ್ಣ ಬೆಂಬಲ ಕೊಡುವುದಲ್ಲದೆ ಏಕಮುಖ ಮಾರಾಟಕರ ಪದ್ಧತಿಯನ್ನು ಕಾರ್ಯರೂಪಕ್ಕೆ ತರಲು ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವಾಯಿತು.

ಚರಕಾ ಸಂಘದ ಖಾದಿ ಮಾರಾಟದ ಏಜನ್ಸಿಗಳು ಇಲ್ಲದಿದ್ದಲ್ಲಿ ಜನರಿಗೆ ಖಾದಿ ಒದಗಿಸುವ ಅನುಕೂಲತೆಗೋಸ್ಕರ ಏಜನ್ಸಿಗಳನ್ನು ಕೊಡುವ ನಿರ್ಧಾರ ಮಾಡಲಾಗಿದೆ; ಆದರಿಂದ ಖಾದಿ ಕಾರ್ಯಕರ್ತರು ಏಜನ್ಸಿಯನ್ನು ಪಡೆದುಕೊಂಡು ಖಾದಿ ಪ್ರಚಾರವನ್ನು ಮಾಡಲು ಅನುಕೂಲವಾಗುವುದು ಮಾತ್ರವಲ್ಲದೆ ಕರ್ನಾಟಕದ ಕ್ಷಾಮಪೀಡಿತ ಜನರಿಗೆ ಸಹಾಯ ಮಾಡಿದಂತೆಯೂ ಆಗುವುದು. ಇದಕ್ಕೆ ಮನಸ್ಸಿದ್ದವರು ಏಜನ್ಸಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು. ಗೌರವ ಮಾರಾಟ ವ್ಯವಸ್ಥಾಪಕ, ಎಸ್. ಕೆ. ವಿ. ಐ. ಎ. ರಥಬೀದಿ, ಮಂಗಳೂರು

ದ. ಕ. ಜಿಲ್ಲೆಯ ಪ್ರಜಾಪಕ್ಷ ಮತ್ತು ಸೋಶಲಿಸ್ಟ್ ಪಕ್ಷಗಳ—ಸಂಯುಕ್ತ ಸಭೆಯೊಂದು ಇದೇ ತಾ. 26ರಲ್ಲಿ ಬೆಳಿಗ್ಗೆ 10ಗಂಟೆಗೆ 'ವಿಚಾರವಾಣಿ' ಆಫೀಸಿನಲ್ಲಿ ಜರಗುವುದು. ಶ್ರೀ ಕೆ ಆರ್. ಕಾರಂತರು ಅಧ್ಯಕ್ಷತೆ ವಹಿಸುವರು. ಹಲವು ಪ್ರಮುಖ ಕಾರ್ಯಕ್ರಮಗಳ ಕುರಿತು ಈ ಸಭೆಯಲ್ಲಿ ಚರ್ಚಿಸಲಾಗುವುದು.

ಬಲಿದಿನಾಚರಣೆ— ಇದೇ ತಾ 18ರಂದು ಸಂಜೆ ಐದು ಗಂಟೆಗೆ ಶ್ರೀ ಮಹರ್ಷಿ ದಯಾನಂದ ಸರಸ್ವತಿಯವರ ಬಲಿದಾನ ದಿನಾಚರಣೆಯು ಶ್ರೀ ಎಸ್. ನರ್ಸಪ್ಪಯ್ಯ ಎಮ್. ಎಲ್. ಸಿ. ಅವರ ಅಧ್ಯಕ್ಷತೆಯಲ್ಲಿ ಜರಗುವುದು.

ವಿದಾಯ ಸತ್ಕಾರ— ಮಂಗಳೂರಿನ ಪ್ರಾದೇಶಿಕ ಹಿಂದೀ ಪ್ರಚಾರ ಸಮಿತಿಯ ಸಂಚಾಲಕರಿದ್ದು, ಇನ್ನು ಕರ್ನಾಟಕ ಪ್ರಾಂತೀಯ ಹಿಂದೀ ಪ್ರಚಾರ ಸಮಿತಿಯ ಮಂತ್ರಿಗಳಾಗಿ ಧಾರವಾಡಕ್ಕೆ ಹೋಗಲಿರುವ ಶ್ರೀ ಎ. ಆರ್ ನಾವಡರನ್ನು ಬೀಳ್ಕೊಳ್ಳುವ ಸಮಾರಂಭವು ತಾ. 12ರಲ್ಲಿ ಸಂಜೆ ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಭವನದಲ್ಲಿ ಡಾ॥ ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು, ಹಲವರ ಕಾಲೋಚಿತ ಮಾತುಗಳಾದ ಬಳಿಕ ಶ್ರೀ ನಾವಡರಿಗೆ ನಿಧಿ ಅರ್ಪಿಸಲಾಯಿತು,

ಹೊಸ ಕೌನ್ಸಿಲರುಗಳಿಗೆ ಸತ್ಕಾರ- ಮಂಗಳೂರಿನ ಮತದಾರ ಸಂಘದವರು ನಗರ ಸಭೆಗೆ ಹೊಸತಾಗಿ ಆರಿಸಲ್ಪಟ್ಟ ಸದಸ್ಯರಿಗೆ ತಾ. 12-ರಂದು ಸಾಯಂಕಾಲ ಗಣಪತಿ ಹೈಸ್ಕೂಲಿನ ಸಭಾಭವನದಲ್ಲಿ ಒಂದು ಟೀ ಪಾರ್ಟಿ ಸತ್ಕಾರವನ್ನಿತ್ತು ಗೌರವಿಸಿದರು- ಶ್ರೀ. ಟಿ. ಮೋಹನ ರಾಯರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಕೆ ಎಸ್. ಎನ್. ಅಡಿಗ, ಶ್ರೀ ಎಲ್. ಜಿ. ಸಾಲೆನ್ಸ್ ಮೊದಲಾದವರು ಮಾತನಾಡಿದರು. ಶ್ರೀ. ಎ. ಕೆ. ಸೇವಕರು ಧನ್ಯವಾದಗಳನ್ನರ್ಪಿಸಿದರು.

ಕಾಫಿ ವ್ಯಾಪಾರಿಗಳ ಸಭೆ- ಮಂಗಳೂರು ಕಾಫಿ ವ್ಯಾಪಾರಿಗಳ ಸಭೆಯು ತಾ. 11ರಂದು ಬೆಳಿಗ್ಗೆ ಮಂಗಳೂರಿನ ಕಾಫಿ ವ್ಯಾ
ಪಾರಿಗಳ ಸಂಘದ ಅಧ್ಯಕ್ಷರಾದ ಶ್ರೀ ಸಾ
ಕಾರ್ ಲಕ್ಷ್ಮಣ ಪೈಗಳ ಅಧ್ಯಕ್ಷತೆಯಲ್ಲಿ
ರಗಿತು ಇದೇ ತಾ 7ರಲ್ಲಿ ಮೈಸೂರು
ತ್ತು ಕೊಯಮುತ್ತೂರಿನಲ್ಲಿ ಭಾರತದ
ಬೋರ್ಡಿನವರು ಕಾಫಿಯನ್ನು ಏಲಂ
ಡಲು ಕೈಕೊಂಡ ಅತೃಪ್ತಿಕರವಾದ ರೀ
ವಿಷಯವಾಗಿ ಚರ್ಚಿಸಲಾಯಿತು. ಶ್ರೀಗ
ದ ಎಸ್. ಎಲ್. ಲೋಬೊ, ಎಮ್. ಗ
ಪಾಲಸೆಟ್ಟಿ, ಸುಜೀರ್ ದೇವದಾಸ ನಾಯ್
ಮೊದಲಾದವರು ಮಾತನಾಡಿದರು. ಬೆ
ಳೂರಲ್ಲಿ ಪ್ರಮುಖ ಮಾರ್ಕೆಟಿಂಗ್ ಆಫಿ
ಸರಲ್ಲಿಗೆ ತಾ 13ರಲ್ಲಿ ಒಂದು ಶಿಷ್ಟಮಂ
ವನ್ನು ಕಳುಹಿಸಬೇಕಾಗಿ ಸಭೆಯಲ್ಲಿ ನಿ
ಯವಾಯಿತು, ಭಾರತದ ಕಾಫಿ ಬೋರ್
ಮೆಂಬರ್ ಶ್ರೀ ಸುಬ್ರಾಯ ಮಲ್ಯರು ಇ
ನ ಸಭೆಗೆ ಹಾಜರಿದ್ದರು

**ಪೌರಂತನ ಶಿಕ್ಷಣ ತರಬೇತಿ ಕೇ
ದ್ರವು**— ಇದೇ ತಾ. 5ರಲ್ಲಿ ಮಣಿಪಾ
ದಲ್ಲಿ ಪ್ರಾರಂಭವಾದುದು ತಾ. 14 ರಲ್ಲಿ
ನೆಗೊಂಡಿತು. ಕೇಂದ್ರಕ್ಕೆ ಆಹ್ವಾನಿತ
ವಾರು ಮಂದಿ ಸಂದರ್ಶನವಿತ್ತಿದ್ದರು. (
ಗಳಾದ ಟಿ. ಎ. ಪೈ ಎಮ್. ಎಲ್.
ಟಿ. ರಮೇಶ್ ಪೈ, ಬಿ, ಬಿ. ಸೆಟ್ಟಿ, ಎಡ
ಟ್ ಮಂಗಳೂರು, ಡಾ। ಕೆ. ಎಲ್. ಐತಾ
ಳ ಕೆ. ಮೋಹನ್ ದಾಸ್ ಪೈ, ಎಮ್.
ಎಮ್. ಕಾಲೇಜು ಪ್ರಿನ್ಸಿಪಾಲ್ ಎಚ್. ,
ದರರಾವ್, ಬಿ. ಎಮ್ ಬಾಗಿ, ಕೊಲ್ಲ
ರ, ಮೊದಲಾದವರು ಕೇಂದ್ರದ ತರಬೇತಿ
ಪಾಧ್ಯಾಯರಿಗೆ ಹಲವಾರು ಸಲಹೆಗಳ
ನು. ಉಪಾಧ್ಯಾಯ ವಿದ್ಯಾರ್ಥಿಗಳು ಉ
ಪಿಗೆ ಬಂದು ಶ್ರೀಕೃಷ್ಣ ಮಠವನ್ನು ಸಂದ
ರ್ಶಿಸಿ ಪರ್ಯಾಯ ಶ್ರೀ ಪೇಜಾವರ ಸ್ವಾಮಿ
ಗಳವರಿಂದ 'ಪೌರ ಧರ್ಮ ಮತ್ತು ಮಾ
ಧರ್ಮ'ದ ಕುರಿತು ಉಪನ್ಯಾಸ ಕೇಳಿದರು
ಸ್ಥಳೀಯ ಬೋರ್ಡ್ ಹೈಸ್ಕೂಲನ್ನು ಮಲ್ಪೆ
ಬಂದರ ಮೊದಲಾದ ಸ್ಥಳಗಳನ್ನು ಸಂದರ್ಶಿ
ಸಿ ಅಲ್ಲಲ್ಲಿಯ ಅನುಭವವನ್ನು ಪಡೆಕೊಂ
ಡರು. ತಾ. 13ರಲ್ಲಿ ಪ್ರೇಕ್ಷಕರ ದಿನವು ಉಡುಪಿ
ಡಿ। ಮುನ್ಸಿಫ್ ಜನಾಬ್ ಅಬ್ದುಲ್ ರ
ಹಮಾನ್ ಸಾಹೇಬರ ಅಧ್ಯಕ್ಷತೆಯಲ್ಲಿ ಮಾ
ಡೆಲ್ ಹೈಸ್ಕೂಲಿನಲ್ಲಿ ಜರಗಿತು ಗವರ್
ಮೆಂಟ್ ಕಾಲೇಜ್ ಪ್ರಿನ್ಸಿಪಾಲ್ ಶ್ರೀ. ಬಿ
ಆರ್ ಬಾಳಿಗರು ಸ್ವಾಗತ ಮಾತುಗಳನ್ನಾ
ದರು ತರಬೇತಿ ಉಪಾಧ್ಯಾಯರು ವಿವಿಧ
ಟುಚಟಿಕೆಗಳ ಪ್ರದರ್ಶನ ಗಳಾದುವು ಕ್ಯಾ
ಪ್ ಆಫೀಸರ್, ಶ್ರೀ. ಬಿ. ವಿ, ರಮಾನಂದ
ರು ವಂದನೆಗಳನ್ನರ್ಪಿಸಿದರು.

ದಿ
ನ್ಯೂ ಕರ್ನಾಟಕ
ಪ್ರೊವಿಡೆಂಟ್ ಇನ್ಸೂರೆನ್ಸ್
ಕಂಪೆನಿ, ಲಿಮಿಟೆಡ್.
ಉಡುಪಿ, ದ. ಕನ್ನಡ
ಒಂದು ಸಾವಿರ ರೂಪಾಯಿ ವರೆಗೆ ವಿ
ಮಾಡಲಿಕ್ಕೂ, ಏಜನ್ಸಿ ಯಾ ಸ್ಪೆಶ್ಯ
ಏಜನ್ಸಿ ಪಡೆದು ದುಡಿತಕ್ಕೆ ತಕ್ಕ ಪ್ರ
ಫಲ ಪಡೆಯಲಿಕ್ಕೂ ಯೋಗ್ಯವಾದ ಪ್ರೊ
ವಿಡೆಂಟ್ ವಿಮಾ ಕಂಪೆನಿ ನಿಯಮಗಳ
ಬರೆಯಿರಿ.
THE NEW KARNATAKA PROVIDEN
INSURANCE CO , LTD , UDIPI

ನಡಿಯುವ ಚಿತ್ರ
ಎಕ್‌ಥಾ ರಾಜಾ
(ಹಿಂದಿ)
ಪಾತ್ರ ವರ್ಗ:- ಮಾಧುರಿದೇವಿ, ಅಂಜಲಿದೇವಿ, ಎಮ್. ಜಿ. ರಾಮಚಂದ್ರನ್.
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.


Applauded as the BEST Rubber Stamp Makers. all over India
CROWN RUBBER STAMP CO.
Mangalore
ESTD 19

ರಾಜಕೀಯ ಪ್ರಶ್ನೆಗಳನ್ನು ರಾಜಕೀಯ ದೃಷ್ಟಿಯಿಂದಲೇ ಬಿಡಿಸಬೇಕು.

ಮಂಗಳೂರು ಮತ್ತು ಉಡುಪಿ ಮುನಿಸಿ ಲ್ ಚುನಾವಣೆಗಳಲ್ಲಿ ಕಾಂಗ್ರೆಸಿಗೆ ಉಂಟಾ ಸೋಲಿನಿಂದ ಅನೇಕರು ಮನಃಪೂರ್ವಕ ಸ್ವಾದಿಸುತ್ತಿದ್ದಾರೆ. ಆದರೆ ತಿಳಿದವರು ಮ ್ತು ಕಾರ್ಯಸಾಧಕರು ಪ್ರತಿಯೊಂದು ಸೋ ನ್ನು ಗೆಲವಿನ ಸಾಧನವಾಗಿ ಮಾರ್ಪಡಿಸು ರೆ. ಈ ಚುನಾವಣೆಗಳಿಂದ ನಮ್ಮ ಕಣ್ಣು ರೆಯುವಂತಾಗಬೇಕು. ವಂಚನೆಯ ತೃಪ್ತಿ ಯಿಂದ ಇರುವುದಕ್ಕೆ ಆಸ್ಪದವಿಲ್ಲವೆಂಬುದ ನ್ನು ನಾವು ತಿಳಿದುಕೊಳ್ಳಬೇಕು. ಅಂತಃ ಕಲ ಗಳ ಸಮಯವು ಕಳೆದುಹೋಗಿದೆ. ಸಮಾ ಧ್ಯೇಯದಲ್ಲಿ ವಿಶ್ವಾಸವುಳ್ಳವರೆಲ್ಲರೂ ಒ ಟ್ಟಾಗಿ ಶಿಸ್ತಿನಿಂದ ದುಡಿಯಬೇಕು. ಹೊಸ ತ್ಸಾಹ, ಹುರುಪು ಮತ್ತು ಶಕ್ತಿಗಳನ್ನು ಟ್ಟಸಬೇಕು. ದೇಶದ ಹಿತವನ್ನು ಸ್ವಾರ್ಥ ಂತ ಮೇಲೆಂದು ಇಟ್ಟುಕೊಳ್ಳಬೇಕು.

ಕಾಂಗ್ರೆಸ್ಸಿನ ಹಿತೈಷಿಗಳಲ್ಲಿ ಒಂದು ಮಾ ಸಾರ್ವಜನಿಕ ಅಭಿಪ್ರಾಯವು ಬಹು ಂದ ಕಾಂಗ್ರೆಸ್ಸಿನ ಬೆಂಬಲಕ್ಕೆ ಇದೆ ಎಂಬು ದಲ್ಲಿ ನನಗೆ ಸಂಶಯವಿಲ್ಲ. ಇಂದು ಕೂಡಾ ಕ್ಕಂತ ಆದರ ಮತ್ತು ಗೌರವಕ್ಕೆ ಪಾತ್ರ ವ ರಾಜಕೀಯ ಸಂಸ್ಥೆ ಇದು. ಆದರೆ ಆ ಕಲ ಸಂದರ್ಭಾನುಸಾರ ಬೇರೆ ಬೇರೆ ಹಂ ಗೊಳಗಾಗಿ ಹೆಚ್ಚಾಗಿ ವ್ಯಕ್ತಿಗತ ಅಥವಾ ತೀಯ ಕಾರಣಗಳಿಂದ ಈ ಸಂಸ್ಥೆಗೆ ವಿ ರೋಧವಾಗಿ ವರ್ತಿಸುವುದನ್ನು ನೋಡಿದರೆ ವಿನ್ನೂ ರಾಜಕೀಯ ವಿಷಯದಲ್ಲಿ ಅವಿ ಕ್ವವಂತರಾಗಿರುವೆವೊ ಎಂಬ ಸಂಶಯವುಂ ಗುವುದು.

ಬಾಲ್ಯಾವಸ್ಥೆಯಲ್ಲಿರುವ ನಮ್ಮ ಪ್ರಜಾ ಭುತ್ವಕ್ಕೆ ನಾವು ಸತ್ಯನಿಷ್ಠೆಯಿಂದ ಇರಬೇ ದರೆ ರಾಜಕೀಯ ಪ್ರಶ್ನೆಗಳನ್ನೂ ರಾಜ ಯ ದೃಷ್ಟಿಯಿಂದಲೇ ಬಿಡಿಸಬೇಕು. ಇಲ್ಲ ದ್ದರೆ ಬೇರೆ ಕೆಲವು ದೇಶಗಳಲ್ಲಿ ಆದಂತೆ ವು ನಮ್ಮ ಸ್ವಾತಂತ್ರ್ಯವನ್ನು ಗಂಡಾಂತ ಕ್ಕೆ ಗುರಿಪಡಿಸಿದಂತಾಗುತ್ತದೆ. ವ್ಯಕ್ತಿಗಳ ತವಾನದ ಸ್ವಭಾವವೇ ಪ್ರಜಾಪ್ರಭುತ್ವದ ಜವಾದ ಭದ್ರತೆ ಎನ್ನಬಹುದು.

ರಾಜಕೀಯ ಪ್ರತಿಪಕ್ಷ ಸ್ವಾಗತಾರ್ಹವೆಂ ದೇ ನಾನು ತಿಳಿಯುತ್ತೇನೆ. ಬಲವಾದ ಶಕ್ತಿ ಯುತ ಮತ್ತು ಶಿಸ್ತಿನಿಂದ ನಡೆಯುವ ವಿ ರುದ್ಧ ಪಕ್ಷವು ಪ್ರಜಾಪ್ರಭುತ್ವದಲ್ಲಿ ಸ್ವ ಸ್ಥ ಸ್ಪಷ್ಟವಾದ ರಾಜಕೀಯ ಧ್ಯೇಯ ಧೋರಣೆಗಳುಳ್ಳ ಬೆಳೆದ ಹಾಗೂ ಶಿಸ್ತುಳ್ಳ ರಾಜಕೀಯ ಪಕ್ಷಗಳು ನಮ್ಮಲ್ಲಿ ಬೇಗನೇ ರುವಂತಾಗುವವೆಂದು ನಾನು ನಿರೀಕ್ಷಿಸುತ್ತೇನೆ. ಆದರೆ ಕಾಂಗ್ರೆಸ್ಸಿಗಿರುವ ರಾಜಕೀಯ ವಿರೋಧವು ಇಂದು ವ್ಯಕ್ತಿಗಳನ್ನು, ಯಾ ಜಾತಿಗಳನ್ನು ಹೊಂದಿಕೊಂಡಿರುತ್ತದೆ. ಜಾತೀಯತೆಯು ನಮ್ಮ ರಾಜಕೀಯ ರಂಗದಲ್ಲಿ ಇನ್ನೂ ತನ್ನ ಪ್ರಭಾವವನ್ನು ಬೀರುತ್ತದೆ. ರಾಜಕೀಯ ಸಮಯಸಾಧಕರಿಗೆ ಸಿಕ್ಕುವ ಪ್ರೋತ್ಸಾಹವನ್ನು ನೋಡಿದರೆ ನಾವಿನ್ನೂ ರಾಜಕೀಯ ವಿಷಯದಲ್ಲಿ ಹಿಂದುಳಿದಿರುವೆವೆಂದು ಭಾಸವಾಗುತ್ತದೆ. ಪರಸ್ಪರ ವಿರುದ್ಧ ಧ್ಯೇಯಗಳುಳ್ಳ ಪಕ್ಷಗಳು, ಪರಸ್ಪರ ವಿರೋಧವುಳ್ಳ ಶಕ್ತಿಗಳು ವಿಚಿತ್ರ ಕೂಟವಾಗಿ ಈ ವಿರುದ್ಧ ಪಕ್ಷ ರೂಪುಗೊಂಡಿದೆ. ಇದು ನಿಜವಾಗಿ ಗಂಡಾಂತರದ ಚಿಹ್ನೆ. ಆದರೆ ಇದು ತಾತ್ಕಾಲಿಕ ಪರಿಸ್ಥಿತಿ ಮಾತ್ರವೆಂದು ನಾನು ನಂಬುತ್ತೇನೆ. ನಿರಾಶೆಯಲ್ಲಿ ಪ್ರಯೋಜನವಿಲ್ಲ. ನಾವು ಯಾವ ಪಕ್ಷಗಳ ಧ್ಯೇಯವನ್ನು ಒಪ್ಪಿದರೂ ಸರಿ, ಆ ಪಕ್ಷದಲ್ಲಿಯೂ ನಾವು ಮನಃಪೂರ್ವಕ ವಿಶ್ವಾಸ ಪಡುವುದು ಮತ್ತು ಶಿಸ್ತಿನಿಂದ ನಡೆಯುವುದು ದೇಶದ ಹಿತಕ್ಕೂ ಕಲ್ಯಾಣಕ್ಕೂ ಅಗತ್ಯವಿರುತ್ತವೆ. - ಜೈ ಹಿಂದ್ -

[ಲೇ: ಶ್ರೀ ಕೆ. ಎಸ್. ಹೆಗ್ಡೆ, ಕೌನ್ಸಿಲ್ ಆಫ್ ಸ್ಟೇಟ್ಸಿನ ಸದಸ್ಯರು, ಮಂಗಳೂರು.]

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

R. E. P. 909/51 O. S. 529/47

ವಾದಿ —ನಾರಾಯಣ ಜೋಯಿಸ.

ಪ್ರತಿವಾದಿ— ಮಹಾಲಿಂಗ ಜೋಯಿಸ

ಪ್ರತಿವಾದಿ — ಮಹಾಲಿಂಗ ಜೋಯಿಸ ಉಪ್ಪುಂದ ಪರಮೇಶ್ವರ ಜೋಯಿಸರ ಮಗ, ಉಪ್ಪುಂದ ಗ್ರಾಮದಲ್ಲಿರುವವ

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ,

ನಿಮಗೆ ಮೇಲಿನ ಅಮಲ್ದಾರಿಯಲ್ಲಿ ಹಾಜರಾದ ಯಿಸ್ತಿಹಾರಿನಲ್ಲಿ ಕಾಣುವ ವಕ್ಲುಗರಿಂದ ಬರತಕ್ಕ ಗೇಣಿ ವಸೂಲಿ ಹಕ್ಕನ್ನು ಈ ಡಿಕ್ರಿ ಸಹದ ಬಗ್ಗೆ ಯೇಲಂ ಮಾಡ್ಲಿಗೆ ಯಿಟ್ಟದೆ. ಸದ್ರಿ ಯಿಸ್ತಿಹಾರಿನ ಶರ್ತ ನಿರ್ಣಯಿಸುವದಕ್ಕೆ ಅಮಲ್ದಾರಿಯನ್ನು ತಾ. 24-10-52ಕ್ಕೆ ತಸ್ತಿಗೆ ಯಿಟ್ಟದೆ. ಈ ಕುರಿತು ನಿಮ್ಮದ್ದೇನಾದರೂ ಆಕ್ಷೇಪವಿದ್ದರೆ ಆ ದಿನ ಬೆಳಿಗ್ಗೆ 11 ಗಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ಅರ್ಜಿ ಹೇಳುವಮಾಡಿಕೊಳ್ಳತಕ್ಕದ್ದು ಎಂದು ಸದ್ರಿ ತಿಳಿಸಿಯದೆ.

By Order of the Court

Y. Tejappa Shetty

Advocate for Plaintiff

Coondapoor, 12-10-1952.

ಚಿಕ್ಕಾಡಿ—ಆರ್. ಕೆ. ಪಾಟ್ಕರ್ ರಾದಾ ಹಯರ್ ಎಲಿಮೆಂಟರಿ ಶಾಲೆಯಲ್ಲಿ ಇದೇ ತಾ ೯ರಲ್ಲಿ ಪಂಡಿತ ನೆಹರೂರವರ ಭಾವಚಿತ್ರ ಅನಾವರಣೋತ್ಸವವು ಶ್ರೀ ಟಿ ಎ. ಪೈ- ಎಮ್. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮಕ್ಕಳ ವಿವಿಧ ವಿನೋದಾವಳಿಗಳ ನಂತರ ಸಭಿಕರಲ್ಲಿ ಹಲವರು ಸಂದರ್ಭೋಚಿತ ಭಾಷಣ ಮಾಡಿದರು. ಮಾನ್ಯ ಅಧ್ಯಕ್ಷರು ಪಂಡಿತ ನೆಹರೂಗಳ ಗುಣಕಥನದೊಂದಿಗೆ ಕಾಂಗ್ರೆಸ್ ಸರಕಾರ ಜನತೆಗೆ ಮಾಡಿದ ಸೇವೆಯನ್ನು ವಿವರಿಸುತ್ತಾ ಎಲ್ಲರೂ ನೆಹರೂ ಸರಕಾರಕ್ಕೆ ಬೆಂಬಲ ಕೊಡಬೇಕೆಂದಲ್ಲದೆ ಹಳ್ಳಿಗರು ತಮ್ಮ ಸಹಕಾರದಿಂದಲೇ ಹಳ್ಳಿ ವಿದ್ಯಾಲಯಗಳನ್ನು ಅಭಿವೃದ್ಧಿಗೊಳಿಸಬೇಕೆಂಬ ಉಪಯುಕ್ತ ಹಲವು ಸೂಚನೆಗಳನ್ನಿತ್ತರು. ಧನ್ಯವಾದ ಸಮರ್ಪಣೆಯೊಂದಿಗೆ ಸಭೆ ಚದರಿತು.

ಸುರತ್ಕಲ್—ಸ್ಥಳೀಯ ವಿಧ್ಯಾದಾಯಿನೀ ಹೈಸ್ಕೂಲ್ ಮತ್ತು ಇನ್ನೆರಡು ಶಾಲೆಗಳನ್ನು ನಡೆಸುವ ಹಿಂದೂ ವಿದ್ಯಾದಾಯಿನಿ ಸಂಘದ ಸ್ಥಾಪನೆ ಕಾಲದಿಂದ ಕಾರ್ಯದರ್ಶಿಗಳೂ, ಸ್ಥಳೀಯ ಪಂಚಾಯತ ಕೋರ್ಟಿನ ಮಾಜಿ ಪ್ರೆಸಿಡೆಂಟರು ಆದ ಶ್ರೀ ಹೊಸಬೆಟ್ಟು ರಾಮರಾಯರು ಇದೇ ತಾ 8ರಲ್ಲು ರಾತ್ರಿ ತಮ್ಮ 77ನೇ ವಯಸ್ಸಿನಲ್ಲಿ ದೈವಾಧೀನರಾದರು. ದಿವಂಗತರು ವಿಧ್ಯಾದಾಯಿನಿ ಹೈಸ್ಕೂಲು ಸ್ಥಾಪನಾ ಕಾಲದಲ್ಲಿ ರೂಪಾಯಿ 5000 ಉದಾರ ದಾನಮಾಡಿದ್ದರು. ಅವರ ಸ್ಮಾರಕಾರ್ಥವಾಗಿ ತಾ ೯ರಲ್ಲು ಪುನಃ ಪ್ರಾರ್ಥನೆ ಮಾಡಿ ಹೈಸ್ಕೂಲು ಮತ್ತು ಇತರ ಎರಡು ಶಾಲೆಗಳಿಗೆ ರಜಾಕೊಡಲಾಯಿತು.

ಇಡ್ಯ ಸುರತ್ಕಲ್—ಇಡ್ಯ ಬಿಲ್ಲವರ ಸಹಾಯಕ ಸಂಘವು ನಡೆಸಿಕೊಂಡು ಬರುವ ಬೃಹತ್ ಶ್ರೀ ನಾರಾಯಣ ಗುರು ಸೇವಾ ಭಜನಾ ಮಂದಿರದ ಸಪ್ತಾಹವು ಇದೇ ತಾ. 27ರಲ್ಲು ಮಂಗಲೋತ್ಸವದೊಂದಿಗೆ ವಿವಿಧ ಕಾರ್ಯಕ್ರಮಗಳಿಂದ ಜರಗಲಿರುವುದು.

ಕುಕ್ಕುಜೆ—ಮಂಚಿ ಗ್ರಾಮದ ಕುಕ್ಕುಜೆಯಲ್ಲಿ ಮಂಚಿ ಇರಾ ಪಂಚಾಯತ ಬೋರ್ಡ್ ವಠಾರದಲ್ಲಿ ಕಟ್ಟಿಸಿದ ನೂತನ ಭವ್ಯ ಕಟ್ಟಡವಾದ 'ಸ್ವರಾಜ್ಯ ಮಂದಿರ'ದ ಉದ್ಘಾಟನೆಯನ್ನು ಶ್ರೀ ಬಿ ವೈಕುಂಠ ಬಾಳಿಗ, ಎಮ್. ಎಲ್. ಎ ಅವರು ನೆರವೇರಿಸಿದರು. ಶ್ರೀಗಳಾದ ಎನ್. ಉಪೇಂದ್ರನಾಯಕ್, ಎನ್. ನಾರಾಯಣ ಭಟ್, ಎನ್. ಶಂಕರನಾರಾಯಣಪ್ಪಯ್ಯ ಮೊದಲಾದವರು ಮಾತನಾಡಿದರು. ಶ್ರೀ ಬಾಳಿಗರು ಮಾತನಾಡುತ್ತಾ ತಮ್ಮ ಕರ್ತವ್ಯದಲ್ಲಿ ನಾವು ಎಂದೂ ಹಿಂದೆ ಬೀಳದೆ ಸರ್ವ ವಿಧದಿಂದಲೂ ಜನರ ಪ್ರಾತಿನಿಧ್ಯವನ್ನು ಸರಕಾರದ ಮುಂದಿಟ್ಟು ಜನರ ಸೇವೆ ಮಾಡುವುದಾಗಿ ಭರವಸೆಯಿತ್ತರು.

ಬಂಟ್ವಾಳ—ಸ್ಥಳೀಯ ಬಿ. ಸಿ. ರೋಡು ಪ್ರಯಾಣಿಕರ ಕೂಟಕ್ಕೆ ಬಂಟ್ವಾಳ ಡಿಪ್ಯುಟಿ ತಹಸೀಲ್ದಾರ್ ಶ್ರೀ ಲೋಕಯ್ಯ ಶೆಟ್ಟರು ತಾ. ೬ರಲ್ಲು ಸಂದರ್ಶನವಿತ್ತು ಕಂಪೋಸ್ಟ್ ಗೊಬ್ಬರ ಇತ್ಯಾದಿ ವಿಷಯದಲ್ಲಿ ಮಾತನಾಡಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಬಿ ಗಂಗಯ್ಯನವರು ಧನ್ಯವಾದಗಳನ್ನರ್ಪಿಸಿದರು.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ.

ಸದಸ್ಯರ ಯಾದಿಯ ಕುರಿತಾದ ಪ್ರಕಟಣೆ:

ಕಾಂಗ್ರೆಸಿನ ಪ್ರಾಥಮಿಕ ಮತ್ತು ಸಕ್ರಿಯ ಸದಸ್ಯರನ್ನು ಸೇರಿಸುವ ಅವಧಿಯು ಮುಗಿದಿದ್ದು, ಸದ್ರಿ ಸದಸ್ಯರ ಯಾದಿಯು ಈಗ ತಯಾರಿಸಲ್ಪಟ್ಟು ತಾ.11-10-52ರಂದು ಮಂಗಳೂರಿನ ಬಾವುಟ ಗುಡ್ಡೆಯ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಫೀಸಿನಲ್ಲಿ ಪ್ರಸಿದ್ಧಿಸಲ್ಪಟ್ಟಿದೆ.

ಈ ಪಟ್ಟಿಯಲ್ಲಿ ತಮ್ಮ ಹೆಸರು ಸರಿಯಾಗಿ ಸೇರಿಸಲ್ಪಟ್ಟಿರುವದೋ ಎಂಬುದನ್ನು ಪರಿಶೀಲಿಸಿ ತಿದ್ದುಪಡಿ ಏನಾದರೂ ಇದ್ದರೆ ಅದನ್ನು ಇದೇ ತಾರೀಕು 18-10-52ರೊಳಗೆ ಜಿಲ್ಲಾ ಕಾಂಗ್ರೆಸ್ ಕಮಿಟಿ ಆಫೀಸಿಗೆ ಬಂದು ಸರಿಮಾಡಿಸಿಕೊಳ್ಳತಕ್ಕದ್ದು. ಹೆಸರು ಬಿಟ್ಟು ಹೋಗಿದ್ದ ಪಕ್ಷದಲ್ಲಿ ಅದನ್ನು ಸೇರಿಸಿಕೊಳ್ಳುವ ಮತ್ತು ಸದಸ್ಯತನದ ಕುರಿತು ಯಾವ ರೀತಿಯ ತಕರಾರಾದರೂ ಇದ್ದ ಪಕ್ಷದಲ್ಲಿ ಅದನ್ನು ಬರೆದಿರಿಸಿ ಒಪ್ಪಿಸತಕ್ಕದ್ದು. ಆ ಮೇಲೆ ಬರುವ ಯಾವ ತಕರಾರುಗಳನ್ನೂ ಸ್ವೀಕರಿಸಲಾಗುವುದಿಲ್ಲ.

ಪಟ್ಟಿ ತಯಾರಿಸುವಾಗ ಉಂಟಾಗಿರುವ ತಪ್ಪುಗಳನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಫೀಸಿನಿಂದಲೇ ತಿದ್ದುಪಡಿ ಮಾಡಲಾಗುವುದು. ಹೆಸರುಗಳು ಬಿಟ್ಟು ಹೋದ ಅಥವಾ ಬಿಡಬೇಕಾದ ಸಂದರ್ಭಗಳ ತಕರಾರುಗಳನ್ನು ಜಿಲ್ಲಾ ಪರಿಶೀಲನಾಧಿಕಾರಿಯು ಪರಿಶೀಲನೆಗೊಳಪಡಿಸಿ ತೀರ್ಮಾನವನ್ನು ತಾ 25-10-1952ರ ಒಳಗಾಗಿ ಪ್ರಕಟಿಸಲಾಗುವುದು.

ತಾ 26-10 52ಕ್ಕೆ ಕಾಂಗ್ರೆಸ್ ಸದಸ್ಯರ ಕೊನೆಯ ಪಕ್ಕಾ ಯಾದಿಯು ತಯಾರಿಸಲ್ಪಡುವುದು.

(ಸಹಿ) ಬಿ ಆರ್. ಕರ್ಕೇರ
ಪ್ರಧಾನ ಕಾರ್ಯದರ್ಶಿ
ಮಂಗಳೂರು ತಾ. 7-10-52

ಕಾರ್ಕಳ—ತಾ. 11ರಲ್ಲಿ ಸ್ಥಳೀಯ ಬೋರ್ಡ್ ಹೈಸ್ಕೂಲಿನ ಹೆಡ್ಮಾಸ್ತರ್ ಶ್ರೀ ಜಿ. ಶ್ಯಾಮರಾಯ ಶೆಟ್ಟರು 'ರಾಷ್ಟ್ರೀಯ ಧುರೀಣ' ಎಂಬ ಕುರಿತಾಗಿ ಇಲ್ಲಿಯ ಭುವನೇಂದ್ರ ಸಂಸ್ಕೃತ ಕಾಲೇಜಿನಲ್ಲಿ ಪೌರಶಿಕ್ಷಣ ತರಬೇತಿ ಶಿಬಿರದ ಬಿ. ಟಿ. ವಿದ್ಯಾರ್ಥಿ ಉಪಾಧ್ಯಾಯರಿಗೆ ಉಪನ್ಯಾಸವನ್ನಿತ್ತರು. ಶ್ರೀ ರಾಘವ ಬಾಳಿಗರು ಅಧ್ಯಕ್ಷತೆ ವಹಿಸಿದ್ದರು. ಬಳಿಕ ಶ್ರೀ ಎಚ್. ವೆಂಕಟಪ್ಪಯ್ಯ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿದ ತರ್ಕ ಸಭೆಯಲ್ಲಿ ಸಭಿಕರಲ್ಲಿ ಹಲವರು ಭಾರತವು ಸ್ವತಂತ್ರವನ್ನು ಗಳಿಸಿದ ರೀತಿಯ ಕುರಿತು ಮಾತನಾಡಿದರು. ಅಧ್ಯಕ್ಷರು ವಿದ್ಯಾರ್ಥಿಗಳಲ್ಲಿ ಶಿಸ್ತಿನ ಅವಶ್ಯಕತೆಯನ್ನು ವಿವರಿಸಿ ಭಾಷಣ ಮಾಡಿದರು.

ಖಾತ್ರಿ ಚಿನ್ನದ ನೆಕ್ಲೇಸ್, ತರಹವಾರು ಚಿನ್ನಗಳು, ಬೆಂಡೋಲೆ,
ಸರಗಳು ಲೋಲಕ್ಕುಗಳು, ನಮ್ಮ [illegible]
ಯಾವಾಗಲೂ ಸಿದ್ಧವಿವೆ.
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.
ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.
ಫೋನು ನಂಬ್ರ 66

ರಾಷ್ಟ್ರಕವಿ ಎಮ್. ಗೋವಿಂದ ಪೈಗಳವರಿಂದ ಉದ್ಘಾಟಿಸಲ್ಪಟ್ಟ
ಕೊರಡ್ಕಲ್ ಸ್ಮಾರಕ ಸಮಿತಿಯವರಿಂದ
(ದಿವಂಗತ ಕೊರಡ್ಕಲ್ ಶ್ರೀನಿವಾಸ ರಾಯರ ನೆನಪಿಗಾಗಿ)
ಪ್ರಕಟಿಸಲ್ಪಟ್ಟ "ನೆನಪಿಗಾಗಿ" ನಾವೀನ್ಯಪೂರ್ಣ ಪುಸ್ತಕ
ಕರ್ನಾಟಕದ ಹೆಸರಾಂತ ಲೇಖಕರನೇಕರ ವಿವಿಧ ಬರಹಗಳಿಂದ ಕೂಡಿದೆ.
ಬೆಲೆ ರೂ- 2—0—0 ಮಾತ್ರ ರೂ 2—6—0 ಕಳುಹಿಸಿದರೆ
ಒಂದು ಪ್ರತಿಯನ್ನು ಟಪ್ಪಾಲು ದ್ವಾರಾ ಕಳುಹಿಸಬಹುದು-
ಕೊರಡ್ಕಲ್ಲರ ಶಿಷ್ಯ ವೃಂದವೂ ಮಿತ್ರಮಂಡಳಿಯೂ [illegible]
ಕೊಂಡುಕೊಂಡು ಸ್ಮಾರಕ ಸಮಿತಿಗೆ ನೆರವು ನೀಡಬೇಕಾಗಿ
ವಿಶೇಷತಃ ಕೋರಲಾಗಿದೆ-

ಪ್ರತಿಗಳು ಸಿಗುವ ಸ್ಥಳಗಳು:-
1) ಕೊರಡ್ಕಲ್ ಸ್ಮಾರಕ ಸಮಿತಿ, ಉಡುಪಿ 2) ನವಯುಗ ಪ್ರೆಸ್, ಉಡುಪಿ
3) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು, 4) ನವಭಾರತ ಬುಕ್ ಡಿಪ್ಪೊ, ಉಡುಪಿ.

ಋತುಸ್ರಾವ ನಿಂತಿತು
'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಪದಶಃ ಋತುಸ್ರಾವವಾಗುವದು, ಹಕೋಟೆಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾಧಾರಣ ಮುಂದಿಗೆ ಖಾತ್ರಿ ಗುಣವಾಗಿದೆ- ಬೆಲೆ ರೂ. 3-; ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8-]ವಿ ಪಿ ಹನ್ನೆರಡಾಣೆ ಪ್ರತ್ಯೇಕ]
Mrs P. DEVEE, F. DS. (N. J.)
Tollygunge CALCUTTA
ಸ್ಟಾಕಿಸ್ಟರು: ಪಹಾ ಕಂಪೆನಿ, ಮಂಗಳೂರು



ಸೌಂದರ್ಯ ಸ್ಪರ್ಧೆ ಹಾಗು ಭಾರತ ಸಂಸ್ಕೃತಿ

ಇಂದು ಜಗತ್ತು ವಿಜ್ಞಾನಯುಗದಲ್ಲಿ ನಿಂತುದೇನೋ ನಿಜ. ಪಾಶ್ಚಿಮಾತ್ಯರು ತಮ್ಮ ಮನೋವಿಲಾಸಕ್ಕಾಗಿ ಅನೇಕ ನವ ವಸ್ತುಗಳನ್ನು ತಯಾರಿಸುವದುಂಟು. ಇಂದು ನಮ್ಮ ಭಾರತ ದೇಶದ ಮಹಿಳೆಯರು ಪ್ರತಿಯೊಂದು ವಿಷಯದಲ್ಲಿಯೂ ಪಾಶ್ಚಿಮಾತ್ಯರನ್ನು ಅನುಕರಿಸುವುದನ್ನು ಎಲ್ಲರೂ ಬಲ್ಲೆವು. ಸಂಸ್ಕೃತಿಯು ಜೀವನದ ಮಟ್ಟದ ಏಳ್ಗೆಯಾಗಿದೆಯಲ್ಲದೆ ಅದು ಕೇವಲ ವಿಲಾಸದ ದಾರಿಗೆ ಒಯ್ಯತಕ್ಕದುದಲ್ಲ. ಇಂಗ್ಲಂಡ ಅಮೇರಿಕಾ ಮೊದಲಾದ ದೇಶಗಳು ಇಂದು ತಮ್ಮ ತಮ್ಮ ದೇಶದ ಸುಂದರ ಮಹಿಳೆಯರನ್ನು ಒಂದೆಡೆ ಕರೆದು ಅವರ ಸೌಂದರ್ಯವನ್ನು ಪರೀಕ್ಷಿಸುವ ಪದ್ಧತಿಯು ಸುರುವಾಗಿದೆ. ಕೆಲವೇ ದಿನಗಳ ಹಿಂದೆ ನಮ್ಮ ದೇಶದಿಂದ 'ಇಂದ್ರಾಣಿ' ಎಂಬ ಮಹಿಳೆಯು 'ಮಿಸ್ ಇಂಡಿಯಾ' ಆಗಿ ಆ ಸೌಂದರ್ಯ ಸ್ಪರ್ಧೆಗೆ ಉಪಸ್ಥಿತಳಾಗಿದ್ದಳು. ತೀಕ್ಷ್ಣ ದೃಷ್ಟಿಯಿಂದ ಇಂದು ನಾವೆಲ್ಲರೂ ಅನುಸರಿಸುತ್ತಿರುವ ಪಾಶ್ಚಿಮಾತ್ಯ ಸಂಸ್ಕೃತಿಯು ನಿಜಕ್ಕೂ ನಮ್ಮ ಭಾರತ ಸಂಸ್ಕೃತಿಗೆ ವಿರೋಧವಾಗಿದೆ, ಒಂದೊಂದು ನಾಡು ತನ್ನ ತನ್ನ ಉಚ್ಚ ಸಂಸ್ಕೃತಿಯನ್ನು ಕಾಯ್ದುಕೊಂಡು ಬಂದಿದೆ ಭಾರತದ ಸಂಸ್ಕೃತಿಯು ಇಡೀ ಜಗತ್ತಿಗೆ ಹೆಚ್ಚಿನದೆಂಬುದು ಈ ಪಾಶ್ಚಿಮಾತ್ಯರ ವಿಲಾಸಕ್ಕೊಳಗಾದ ನವ ತರುಣ ತರುಣಿಯರಿಗೇನು ಗೊತ್ತಿಲ್ಲವೇ?

ಸೌಂದರ್ಯ ಸ್ಪರ್ಧೆಯಲ್ಲಿ ಪ್ರತಿ ಮಹಿಳೆಯು ತನ್ನ ಪೋಷಾಕು ಧರಿಸಿ, ಆ ಸಭೆಯು ಸರ್ವಜನರೆದುರಿನಲ್ಲಿ ಹಾಯ್ದು ಹೋಗುವಾಗ್ಗೆ ಆ ಮಹಿಳೆಯನ್ನು ಕಡೆಗಣ್ಣಿನಿಂದ ನೋಡುವ ಜನರಿಷ್ಟಿರುವದಿಲ್ಲ? ಸೌಂದರ್ಯ ಸ್ಪರ್ಧೆಯೆಂದರೆ ಅದೊಂದು ಅಪಮಾನಕರ ಸಂಗತಿಯೇ ಸರಿ. ನಾವು ರಾಮಾಯಣ, ಮಹಾಭಾರತದಿಂದ ಇಂದಿನವರೆಗೆ ನಮ್ಮ ಭಾರತದ ಇತಿಹಾಸದ ಸಾವಿರಾರು ಪುಟಗಳನ್ನು ಹೊರಳಿಸಿದರೂ ನಮಗೆ ಸೌಂದರ್ಯ ಸ್ಪರ್ಧೆಯ ಸಂಗತಿಯು ಎಂದಿಗೂ ಸಿಗಲಿಕ್ಕಿಲ್ಲ. ಯಾರೂ ಎಂದೂ ಭಾರತದಲ್ಲಿ ಇಂಥ ವಿಲಾಸಮಯ ಕಾರ್ಯಗಳನ್ನು ಮಾಡುತ್ತಿರಲಿಲ್ಲ. ಪ್ರತಿ ಮಹಿಳೆಯು ತನಗೆ ಮರ್ಯಾದೆಯೇ ಹೆಚ್ಚಿನದೆಂದು ಬಗೆದು, ಗಂಡನೆಂದರೆ ದೇವರೆಂದು ಬಗೆಯುತ್ತಿದ್ದಳು. ಅಂಥ ಸ್ತ್ರೀಯನ್ನು ಪ್ರತಿ ಭಾರತೀಯನು ಧರ್ಮ ಪತ್ನಿಯೆಂದು ತಿಳಿದುಕೊಳ್ಳುತ್ತಿದ್ದನು. ನಾವಿಂದು ನಮ್ಮ ದೇಶದಲ್ಲಿ ನೋಡುತ್ತಿರುವುದೇನು? ಕೇಳುತ್ತಿರುವುದೇನು! ಎಲ್ಲವೂ ಭಾರತ ಸಂಸ್ಕೃತಿಗೆ ವಿರೋಧವಾದುದು. ರಾವಣನು ಸೀತೆಯನ್ನು ಒಯ್ದುದಕ್ಕಾಗಿ ಇಡೀ ರಾಮಾಯಣದಲ್ಲಿ ದುಷ್ಟನೆಂದು ಕರೆಯಲ್ಪಟ್ಟನು ಸೀತೆಯು ಸಹಧರ್ಮಿಣಿಯಾಗಿ ಭಾರತ ದೇಶದ ಮಹಿಳೆಯರಿಗೆ ತನ್ನ ಪಾತಿವ್ರತ್ಯದ ಕುರುಹನ್ನು ಸೂರ್ಯ ಚಂದ್ರರಿರುವವರೆಗೂ ತೋರಿಸಿಕೊಟ್ಟಳು. ಸೃಷ್ಟಿ ನಿಯಮದಂತೆ ಸೌಂದರ್ಯವು ಇದ್ದೇ ಇರುತ್ತದೆ. ಆದರೆ ಆ ಸೌಂದರ್ಯವು ಮರ್ಯಾದೆಯಲ್ಲಿರಬೇಕಲ್ಲದೆ, ಪ್ರತಿಯೋರ್ವನ ಬಾಯ್ಮಾತು, ಕಣ್ಣಿನ ನೋಟವಾಗಿರಬಾರದು.

ಪದ್ಮಿನಿಯ ಆದರ್ಶ

ಪದ್ಮಿನಿಯು ಜಗತ್ತಿಗೆ ಸುಂದರಳಾಗಿದ್ದಳು ಅಂದರೆ ಆ ಮಹಿಳೆಯು ಇಂದಿನ ಸ್ತ್ರೀಯರಂತೆ ತನ್ನ ಸೌಂದರ್ಯವನ್ನು ಸರ್ವರಿಗೂ ತೋರಿಸಿ ಮೇಲಾಗಿರಲಿಲ್ಲ ಆದರೆ ರಾಜಪೂತ ಅರಸರ ರಾಣಿಯಾದ ಪದ್ಮಿನಿಯು ತನ್ನ ಪಾತಿವ್ರತ್ಯಪ್ರಕಾಶದಿಂದ ಇಡೀ ದೇಶಕ್ಕೆ ಬೆಳಗು ಪಂತಿದ್ದಳು.

ಇಂದು ಸೌಂದರ್ಯ ಸ್ಪರ್ಧೆಗೆಹೋಗಿ ಭಾಗವಹಿಸುವ ಮಹಿಳೆಯರಿಗೆ ಪಾತಿವ್ರತ್ಯ ಯೆಂಬುದು ಗೊತ್ತೇ ಇರಲಿಕ್ಕಿಲ್ಲ ಹಿಂದೂ ಸಂಸ್ಕೃತಿಯಲ್ಲಿ ಮಹಿಳೆಯರಿಗೆ ಹೆಚ್ಚಿನ ಸ್ಥಾನವೆಂದರೆ ಪಾತಿವ್ರತ್ಯವು. ಅದನ್ನೆಲ್ಲ ತ್ಯಜಿಸಿ ಅನೇಕ ಜನರಿಂದೊಡಗೂಡಿದ ಸಭೆಯಲ್ಲಿ ತಮ್ಮ ಮುಖವನ್ನು ತೋರಿಸಬರುವುದು ಎಂಥ ಅಸಹ್ಯಕರವು ನಮ್ಮ ಸಂಸ್ಕೃತಿಗೆ, ನಮ್ಮ ಸಮಾಜಕ್ಕೆ!

ಪಾಶ್ಚಿಮಾತ್ಯರ ಸಂಸ್ಕೃತಿಯು ನಮ್ಮ ನೀತಿ, ರೀತಿಗಳಿಗೆ ವಿರೋಧವಾಗಿದೆ. (ರಜಿಸ್ಟರ ಮ್ಯಾರೇಜ) ಬರೆದುಕೊಟ್ಟ ವಿವಾಹ, ಒಬ್ಬನನ್ನು ತ್ಯಜಿಸಿ ಮತ್ತೊಬ್ಬನನ್ನು ಲಗ್ನವಾಗ-ವಿಕೆ, ಸೌಂದರ್ಯ ಸ್ಪರ್ಧೆಯಲ್ಲಿ ಭಾಗವಹಿಸುವಿಕೆ ಇವೆಲ್ಲವು ನಮ್ಮ ದೇಶದ ಇತಿಹಾಸದಲ್ಲಿ ಎಂದೂ ಆಗಿರಲಿಕ್ಕಿಲ್ಲ. ಪಾಶ್ಚಿಮಾತ್ಯ ಮಹಿಳೆಯರ ಉದರದಲ್ಲಿ ಜನಿಸಿದ ಮಗುವಿನ ತಂದೆಯ ಹೆಸರನ್ನು ಹೇಳಬೇಕಾದರೆ (ಬರೆಯಿಸಬೇಕಾದರೆ) ಅದರಲ್ಲಿ ಸಂದೇಹಗಳು ಉಂಟಾಗುತ್ತಿದೆಯಂತೆ. ಪಾಶ್ಚಿಮಾತ್ಯ ದೇಶದ ಮಹಿಳೆಯರಿಗೆ ಎನಿಲ್ಲೆಂದರೂ ಸುಮಾರು ೫-೬ ಜನ ಗಂಡರೊಂದಿಗೆ ಸಂಸಾರ ಮಾಡುವುದು ಅಸಹ್ಯವಾಗಿಲ್ಲ! ನಮ್ಮ ಭಾರತದ ಇಂದಿನ ಮಹಿಳೆಯರು ಇಂಥದನ್ನು ಕೇಳಿಯೋ, ಇಲ್ಲವೆ ಓದಿಯೋ, ತಾವೂ ಅದೇ ಹಾದಿಯನ್ನು ಹಿಡಿದುದಾದರೆ ಎಂಥ ಅಪಮಾನದ ಸಂಗತಿಯು ನಮ್ಮ ಭಾರತದ ಸ್ತ್ರೀ ಜನಾಂಗಕ್ಕೆ!

ಭಾರತದ ಮಹಿಳೆಯರೆಲ್ಲರೂ ತಾವು ತಮ್ಮ ದಿವ್ಯ ಪತಿವ್ರತಾ ಪ್ರಕಾರದಿಂದ ತಮ್ಮ ಸಂಸ್ಕೃತಿಯನ್ನು ಕಾಯ್ದುಕೊಳ್ಳುವುದಾದರೆ ಅವರೆಲ್ಲ ಇಂದೇ ಅಕ್ಕ ಮಹಾದೇವಿ ಅಹಲ್ಯಾಬಾಯಿ, ಸೀತೆ, ಸಾವಿತ್ರಿಯರ ಜೀವನ ಚರಿತ್ರೆಯನ್ನು ಓದಲಿ ಇಂದು ಪ್ರತಿ ಮಹಿಳೆಯು ಪುರುಷನಂತೆ ಸಮಾನ ಹಕ್ಕನ್ನು ಪಡೆಯಲು ಆತುರತೆ ಪಡುತ್ತಿರುವಾಗ ಪ್ರತಿ ಮಾನವನಂತೆ ಪುರುಷತ್ವದ ಕಾರ್ಯ ಮಾಡಿ ತೋರಿಸಬೇಕು. ಸ್ತ್ರೀಯು ಎಂದೋ ಅಬಲೆಯೆಂದು ಕರೆಯಲ್ಪಟ್ಟಿದ್ದಾಳೆ. ಸ್ತ್ರೀಯರು, ಮಕ್ಕಳು ಸಾಕಿಕೊಂಡು ಮನೆಯಲ್ಲಿ ಕೂಡ್ರಬೇಕೆಂದಲ್ಲ. ಸ್ತ್ರೀಯರು ತಮ್ಮ ಕುಟುಂಬದ ಉದ್ಧಾರಕ್ಕಾಗಿ ಬಾಳಬೇಕಲ್ಲದೆ ಕುಟುಂಬದ ಅಧೋಗತಿಗಲ್ಲ. ಒಂದು ಕುಟುಂಬದ ಉದ್ಧಾರವಾದರೆ ಆ ಕುಟುಂಬವು ಸುತ್ತಲಿನ ಕುಟುಂಬಕ್ಕೆ ಆದರ್ಶಮಯವಾಗುವದು ಹಾಗೆಯೇ ಸರ್ವ ಕುಟುಂಬಗಳಿಂದಲೇ ಸರ್ವಸಮಾಜದ ಉದ್ಧಾರ. ಭಾರ
ಉದ್ಧಾರವು ಭಾರತದ ಜನಾಂಗವನ್ನೇ ಅವ
ಡಿದೆ. ಜನಾಂಗವೆಂದರೆ ಪುರುಷ ಮತ್ತು
ಸ್ತ್ರೀಯರೀರ್ವರೂ ಇರುವರು. ಪ್ರತಿ ಭಾರ
ಮಹಿಳೆಯೂ ತನ್ನ ಕುಟುಂಬದ ಉದ್ಧ
ಮಾಡಿದ್ದಾದರೆ ನಿಜಕ್ಕೂ ಭಾರತದ ಉದ್ಧ
ವಿದೆ. ಸಮಾನ ಹಕ್ಕು ಬೇಕೆಂದು ಎದ
ವಾದಿಸುತ್ತ ಅದಿಗಳಿಗೆ ಪುರುಷನ ಹೆಜ್ಜೆ ಎ
ಸುತ್ತಾ ಹೋದರೆ ಮಹಿಳೆಯರು ಎಂದಿಗೂ
ಆದರ್ಶಿಗಳಾಗಲಾರರು.

ನಮ್ಮ ಹೊಣೆ

ಭಾರತ ಸಂಸ್ಕೃತಿಯು ಹಿಂದೊಮ್ಮೆ ಜ
ತ್ತನ್ನೇ ಬೆಳಗುಗೊಳಿಸಿದೆ. ಅಂಥ ಸಂಸ್ಕೃ
ಯನ್ನುಳಿಸಲು ನಾವೆಲ್ಲರೂ ಇಂದು ಹೊ
ಗಾರರು. ಇಂದು ಭಾರತದ ಸಂಸ್ಕೃತಿಯು
ಹೆಚ್ಚಿನದೆಂಬುದನ್ನು ತೋರಿಸಿಕೊಡಲು
ಮ್ಮೆಲ್ಲರಿಗೆ ನಾಚಿಕೆಯೇಕೆ? ಜಗತ್ತು ಭ
ಸುತ್ತಿರುವುದು. ಇಂದು ಶಾಂತಿ- ಮಾಳ್ಪ
ರಿಗುಂಟ ನಡೆದರೆ ಶಾಂತಿಯೆಲ್ಲಿ? ಧರ
ಮತ್ತು ಸಂಸ್ಕೃತಿಗಳು ಮಾನವನ ರಕ್ಷ
ಮೂಲ ಕಾರಣಗಳು.

ಇಂದು ಎಲ್ಲೆಡೆಯಲ್ಲಿ ಭಾರತದ ಮೂ
ಮೂಲೆಯಲ್ಲಿ ಅಶ್ಲೀಲತೆಯು ಬೆಳೆದಿದೆ
ದನ್ನು ನಾಶಗೊಳಿಸಲು ಭಾರತೀಯರಿ
ಸಾಧ್ಯ. ಆ ಅಶ್ಲೀಲತೆಯು ಉಗಮವಾದ
ಮುಖ್ಯವಾಗಿ ಪಾಶ್ಚಿಮಾತ್ಯರಿಂದ. ಪಾ
ಮಾತ್ಯರು ತಮ್ಮ ಹೊಸ ಸಂಶೋಧನೆಗಳಿ
ಮುಂದುವರೆದರೆ ಭಾರತೀಯರಾದ ನಾ
ಧರ್ಮ ಮತ್ತು ಸಂಸ್ಕೃತಿಯಿಂದ ಮುಂದು
ರಿಯಬೇಕು. ಪಾಶ್ಚಿಮಾತ್ಯರಿಂದ ನ
ಸಮಾಜದಲ್ಲಿ ಸಂಸ್ಕೃತಿಯ ಬಗ್ಗೆ ಯಾವ
ಧಾರಣೆಯೂ ಆಗಿಲ್ಲ ಆದರೆ ಪ್ರತಿಯ
ಸಮಾಜದಲ್ಲಿ ಕುನೀತಿಗಳು ಮಾತ್ರ ಬೆಳೆದಿ
ಅಂಥವುಗಳನ್ನು ಕೊಡೆದಟ್ಟ
ವ್ಯಕ್ತಿಗಳನ್ನೊಳಗೊಂಡ ಸಮಾಜವು ಕ
ತೆರೆದು ನೋಡಬೇಕು.

ಪಾಶ್ಚಿಮಾತ್ಯರಲ್ಲಿ ಬಹು ಸಂಖ್ಯಾಕ ಮ
ಳೆಯರು ಪತಿಯೆಂದರೆ ಪ್ರೇಮಿಯೆಂದು
ರ್ಥಮಾಡಿಕೊಳ್ಳುತ್ತಾರೆ. ಆದರೆ ಭಾರತದ
ಪತಿಯೆಂದರೆ ಸರ್ವವಿಷಯದಲ್ಲಿಯೂ ಸ್ತ್ರೀ
ಯ ಪೂರ್ಣಸ್ವಾಮಿ. ಮಹಿಳೆಯರೆಲ್ಲ ಆದ
ರಾಗಿ ಕುಟುಂಬದ ಉದ್ಧಾರಕರಾಗಿ ಮ
ದಾಗಲಿ. ಪಾಶ್ಚಿಮಾತ್ಯರ ಅಶ್ಲೀಲತೆಯ
ಎಂದಿಗೂ ಅನುಸರಿಸದಿರಲಿ. ಸೌಂದ
ಸ್ಪರ್ಧೆಯಂಥ ಭಾರತ ಸಂಸ್ಕೃತಿಗೆ ವಿರೋ
ವಾದ ಚಟುವಟಿಕೆಗಳಲ್ಲಿ ಭಾಗವಹಿಸದಿರ

—ಬಿ. ಗುರುಬಸವರಾಜ ಹೂವಿನ ಹಿಪ್ಪ
('ಜ. ಕ.')

(೩ನೇ ಪುಟದಿಂದ ಮುಂದುವರಿದುದು)

ಸ್ವಾಭಾವಿಕವಾಗಿ ಆ ಹಿಡುವಳಿಯ ಉತ್ಪತ್ತಿ ಕಗ್ಗುವುದರಿಂದ ದಾರಿದ್ರ್ಯ ಕಟ್ಟಿಟ್ಟ ಬುತ್ತಿಯಾಗುತ್ತದೆ. ಭೂಮಿಯೊಡತನಕ್ಕಾಗಿ ಹಸಿದು ಬಾಯಿತೆರೆಯದೆ ಬೇರೆಕ್ಷೇತ್ರದಲ್ಲಿ ಬದುಕು ನೀಗುವ ನಿರ್ಧಾರ ನಮ್ಮದಾಗಬೇಕು. ನಮಗೆ ಬೇರೆ ಯಾವ ಸರಿಯಾದ ಉದ್ಯೋಗವೂ ದೊರೆತಿಲ್ಲವೆಂಬುದರಿಂದ, ಭೂಮಿಯನ್ನು ಸಾಗು ಮಾಡುವುದಕ್ಕೆ ಮನಸ್ಸು ಮಾಡುತ್ತೇವೆ. ಅದರಿಂದ ಒಂದದ್ದು ಅರ್ಧವರ್ಷಕ್ಕೊಂದು ಗಿಂಜಿಗೂ ಸಾಮಾನ್ಯವಾಗಿ ಸಾಲುವುದಿಲ್ಲ. ಹೊಟ್ಟೆ ಹಸಿದಿರುವಾಗ ಭೂಮಿತಾಯಿಯ ಸೇವೆ ಚೆನ್ನಾಗಿ ಮಾಡಬೇಕೆಂಬ ಮನಸ್ಸಾಗುವುದಿಲ್ಲ ಹೀಗೆ ನಮಗೆ ಕಷ್ಟ ಕಾರ್ಪಣ್ಯ.

ಆದುದರಿಂದ - ಸರಕಾರ ಆದರದ ಅಧಿಕ ಉತ್ಪಾದನಾ ಚಳುವಳಿಗೆ ಪ್ರೋತ್ಸಾಹಕೊಡುವುದರ ಜೊತೆಗೆ, ವ್ಯಾಪಕವಾದ ಔದ್ಯೋಗಿಕ ಕ್ಷೇತ್ರವನ್ನು ನಿರ್ಮಿಸಿ, ಅಲ್ಲಿನ ನಮ್ಮ ಜನಕ್ಕೆ ಪೂರ್ಣೋದ್ಯೋಗ ದೊರೆಯುವಂತೆ ಮಾಡಬೇಕು. ನಮ್ಮ ಜನತೆ ಸ್ವಯಂಪ್ರೇರಣೆಯಿಂದ ಏನಾದರೊಂದು ಹೊಸ ವೃತ್ತಿಯನ್ನು ಕಲಿತುಕೊಂಡು, ಜೀವನ ಸಾಗಿಸಲು ಮುಂದಾದರೂ ಆದೀತು

ಮಾನವ ವಿಜಯದ ಹೆದ್ದಾರಿ!
ಆರ್ಥಿಕ ಮತ್ತು ಸಾಂಪತ್ತಿಕ ಅನುಕೂಲತೆಯು ಇಂದಿನ ಮಾನವ ಜೀವನದ ವಿಜಯದ ಹೆದ್ದಾರಿ.
ಜನತೆಗೆ ಈ ಅನುಕೂಲತೆಗಳನ್ನೊದಗಿಸಿ ಸಾಂಪತ್ತಿಕ ಅಭಿವೃದ್ಧಿ ಸಾಧಿಸುವುದೇ ಬೇಂಕುಗಳ ಹೆಗ್ಗುರಿ
ದಿನೇ ದಿನೇ ಜನ ವಿಶ್ವಾಸಗಳಿಗೆ ಪ್ರಗತಿ ಹೊಂದುತ್ತಿರುವ
ದಿ ವಿಜಯ ಬೇಂಕ್ ಲಿ., ಮಂಗಳೂರು.
ಇದರೊಡನೆ ನಿಮ್ಮ ವ್ಯವಹಾರ ಬೆಳೆಸಿ ಅನುಕೂಲತೆ ಪಡೆದು ಜೀವನದಲ್ಲಿ ವಿಜಯ ಸಾಧಿಸಿರಿ.
ಗಿರಾಕಿಗಳ ಹಿತಸಾಧನೆ ಮತ್ತು ವಿಶ್ವಾಸ ಸಂಪಾದನೆಯು ವಿಜಯ ಬೇಂಕಿನ ಅಮೂಲ್ಯ ಸೊತ್ತು
The Vijaya Bank Ltd.,
Head Office: MANGALORE-3
Branches at
Udipi, Kaup, Coondapur, Byndoor, Karkal, Brahmavar, City-Mangalore, Kasaragod, Puttur, Kanhangad, Bombay & Mercara.

For Protection and Provision
Consult
The New Guardian of India Life Insurance Co., Ltd.
Estd] Head office: MADRAS [1934
A Policy in this Progressive Life Office is good investment; its Agency is valuable business connection.
Applications for representation are invited from influential persons.
Please apply to:
The Branch Manager,
Diamond Building, Hampankatta,
MNGALORE, S. K.

ಅಪಸ್ಮಾರ ಮತ್ತು ಭೂತೋನ್ಮಾ
ನಿರ್ಮೂಲನ
ಅಪಸ್ಮಾರ, ಭೂತೋನ್ಮಾದ, ಮೊಲನ
ರು ಬೇನೆಯಿಂದ ನರಳುವವರು ಆಶ್ಚ
ರ್ಯಕರವಾದ ಈ ಚೀಂನ್ನು ಮಾಸಿದೊಡ
ಒಂದೂ ಕಾಲು ಇಂಚು ಉದ್ದದ ಕಪ್ಪುಬ
ದ ಕ್ರಿಮಿಯೊಂದು ಹೊರಗೆ ಬರುವುದು.
ತರ ಈ ಬೇನೆಯು ಮಾಯವಾಗುವುದು.
ಇಂಗ್ಲಿಷಿನಲ್ಲಿ ಬರೆಯಿರಿ:-
Shri 108 Mahatma Ambar Das
P. O. CHITRAKOT, U. P.

ತೃಪ್ತಿಕರವಾದ ವಸತಿ— ಹಿತಕರವಾ
ಊಟ— ರುಚಿಕರವಾದ ಉಪಾಹಾ
ಇವುಗಳಿಗೆ
ಆದರ್ಶ ನಿಲಯವೆಂದರೆ
ಫುಡ್ ಲೇಂಡ್ಸ್
ಉಡುಪಿ.
ಯಾತ್ರಿಕರಿಗೂ ಪ್ರಯಾಣಿಕರಿಗೂ
ಸರ್ವ ಅನುಕೂಲವಾಗುವಂತೆ
ನಗರದ ಕೇಂದ್ರಭಾಗದಲ್ಲಿದೆ

ಸ್ವತಂತ್ರ ಭಾರತದಲ್ಲಿ ಸಾಹಿತಿಗಳ ಜವಾಬ್ದಾರಿ.

ನೇ ಪುಟದಿಂದ ಮುಂದುವರಿದುದು]

ಿ ಮನುಷ್ಯನ ಬಹು ಮಟ್ಟಿನ ಬುದ್ಧಿವನ್ನು ಸ್ಥಾಪಿಸಿಕೊಟ್ಟು ಶಕ್ತಿಶಾಲಿಗ ಮಾಡಿದೆ. ಜ್ಞಾನ, ವಿಜ್ಞಾನಗಳ ಬಲ ಶಕ್ತಿ ಸಂಪನ್ನನಾದ ಮನುಷ್ಯ ಸಾಗಿದ್ದಾನೆ? ಇದೇ ವಿಚಾರಾರ್ಹ ೦! ಸಾಮರ್ಥ್ಯವಂತನೂ, ಉದಾರಿ —ಶುಭಾನ್ವೇಷಿಯೂ ಆಗಿದ್ದರೆ ಮಾ ಅವನಿಂದ ಲೋಕದ ಕಲ್ಯಾಣವಾಗು ಿ, ಶಕ್ತಿ ಮದದಿಂದ ಮನುಷ್ಯ ಉನ್ಮ ದರೆ ವಿನಾಶ ಕಟ್ಟಿಟ್ಟ ಗಂಟು. ಇಂ ಗಿದೆ. ಇದಕ್ಕಾಗಿ ನಾವಿಂದು ು ಪಡಬೇಕು. ವಿಜ್ಞಾನದ ಸರ್ವ ಯು ಹೆಚ್ಚು ಮಾನವನ ಕೈಯಲ್ಲಿ ಶದ 'ಶಸ್ತ್ರಾಯುಧ' ಆಗಿದೆ. ವಿಶ್ವದ ಮೂಲಿಕ ವಿಜ್ಞಾನ ಶಕ್ತಿಯು ಮಾನವನನ್ನು ಭಸ್ಮಾಸುರನನ್ನಾಗಿ ಮಾಡಿದೆ. ಗ ದ್ವೇಷ ಪೂರ್ಣವಾದ ರಾಷ್ಟ್ರ—ರಾ ಗಳ ಅಪನ್ಯಾಯ, ಭೀಕರ ಮಹಾ ದ್ಧದ ಸಿದ್ಧತೆ ಇವು ವಾತಾವರಣದಲ್ಲಿ ಸ ಹರಡುತ್ತಾ ಇವೆ. ಯೋಜನಾಬದ್ಧ ಯೋಗಗಳ ದೆಸೆಯಿಂದ, ವಿಜ್ಞಾನವು ನ್ನಷ್ಟು ಪ್ರಬಲವಾಗುವುದೆಂಬುದರಲ್ಲಿ ಂದೇಹವಿಲ್ಲ. ವಿಶ್ವಶಾಂತಿಯು ಕುರಿತು ಕ್ಯರಾಗಿ ಚಿಂತಿಸುವ ಮಾನವತಾವಾದಿ ನ್ನು ಈ ವಿಷಯವು ಚಿಂತಾಗ್ರಸ್ತನ ನ್ನಾಗಿ ಮಾಡುತ್ತಾ ಇದೆ. ಈ ಸರ್ವ ಕೀ ಶಕ್ತಿಯನ್ನು ಸರ್ವ ಕಲ್ಯಾಣ ತ್ತಿಯಾಗಿ ಮಾರ್ಪಡಿಸಲು ಸಾಧ್ಯವಿಲ್ಲ ? ಈ ಪ್ರಶ್ನೆ ಸಹಜವಾಗಿ ಹುಟ್ಟುತ್ತದೆ. ನನ್ನ ದೃಷ್ಟಿಯಿಂದ ಈ ಕಲ್ಯಾಣಕಾರಕ ಕಾರ್ಯಸಾಧನೆಗೆ, ವಿಶ್ವಪ್ರೇಮ ಪೂರಿತವಾದ 'ಸಾಹಿತ್ಯ'ವೊಂದೇ ಸಂಪೂರ್ಣ ಸಾಧನವಾಗಬಲ್ಲದು. ಈ ಮಾತು ಸಾಮಾನ್ಯದೃಷ್ಟಿಗೆ ಹಾಸ್ಯಾಸ್ಪದವಾಗಿ ಕಾಣಬಹುದು. ದಿನೇ ದಿನೇ ಪ್ರಬಲವಾಗುತ್ತಿರುವ ವಿಜ್ಞಾನದ ತಾಂಡವ ನೃತ್ಯಕ್ಕೆ ಅನುಕೂಲವಾದ ತಾಳ–ಸಂಗೀತಗಳ ಮೇಳ ಕೂಡಿಸುವ ಸಾಮರ್ಥ್ಯ ನಮ್ಮ ಸಾಹಿತ್ಯಕ್ಕಿದೆಯೇ ಎಂಬ ಪ್ರಶ್ನೆಯೇಳಬಹುದು. ಪ್ರಶ್ನೆ ಸಹಜವೇ! ಈ ಸಾಧನಾ ಮಾರ್ಗದಲ್ಲಿ ಬಾಧೆ ಬಹಳವಿದೆಯೆಂಬುದು ಸತ್ಯ. ಸಂಕೀರ್ಣ ರಾಷ್ಟ್ರೀಯತಾ ಭಾವ, ದುರಾಗ್ರಹ ಪೀಡಿತ ವರ್ಗಭೇದ, ಧನಸಂಚಯದ ಮಹಾಪಾತ ಮೋಹ ಇತ್ಯಾದಿಗಳಿಂದ ಪ್ರೇರಿತವಾದ ಶಕ್ತಿಮದಾಂಧ ರಾಷ್ಟ್ರಗಳು, ಮಾನವತಾ ಪ್ರೇಮಿಗಳಾದ ಮಹಾನ್ ಸಾಹಿತಿಗಳ ಮಾತಿಗೆ ಈ ತನಕ ಬೆಲೆಕೊಡಲಿಲ್ಲ. ವಿನಾಶದ ಉನ್ಮತ್ತ ಪೀಠವೇರಿದ ಮದಾಂಧರುಗಳ ಕಿವಿಯ ತನಕ ಸಾಹಿತ್ಯದ ಸೌಮ್ಯ ಸ್ವರ ಕೇಳಿಲ್ಲ. ಹಾಗಿದ್ದರೂ ಆ ಪುಣ್ಯಸ್ವರವು ಅಹಂಕಾರದಿಂದ ಅಪಹಾಸ್ಯಕ್ಕೆ ಗುರಿಯಾಗಿದೆ. ಇಷ್ಟೆಲ್ಲಾ ಸತ್ಯ! ಹಾಗೆಂದು ಸಾಹಿತ್ಯವು ಇಷ್ಟರಲ್ಲೇ ಸೋಲನ್ನೊಪ್ಪಿಕೊಳ್ಳಬೇಕೆ? ಕೂಡದು. ಎಷ್ಟಕ್ಕೂ ಕೂಡದು! ಈ ದೇಶದ ಸಾಹಿತ್ಯ-ಸಾಹಿತಿಯ ಉಜ್ವಲ ಪರಂಪರೆಗೆ ಲಾಂಛನಾಸ್ಪದ!! ಸಾಹಿತಿಯು ನಿಷ್ಠೆ, ತ್ಯಾಗ, ತಪಸ್ಸಿನಿಂದ ವಿಶ್ವಶಾಂತಿಯ ಅಮೃತತ್ವವನ್ನು ತನ್ನಲ್ಲಿ ಏಕೀಕರಿಸಿಕೊಳ್ಳಬೇಕು. ತನ್ನ ಸಾಧನ ಸಂಚಯದ ಮಂತ್ರ ಪ್ರಯೋಗವನ್ನು ವಿರಾಟ್ ಜನಶಕ್ತಿಯಮೇಲೆ ಪ್ರಯೋಗಿಸಬೇಕು. ತನ್ನ ಮಂತ್ರಶಕ್ತಿಯಿಂದ ಜಾಗೃತವಾದ- ಸಜೀವನವಾದ ಜನಶಕ್ತಿಯು ವಿರಾಟ್ ಸ್ವರೂಪವನ್ನು ಮದಾಂಧವಾದ ವಿಜ್ಞಾನಶಕ್ತಿಯ ಸಂಚಯಕಾರರ ಮುಂದೆ ನಿಲ್ಲಿಸಬೇಕು. ರಘುರಾಮನ ಶಾಂತ–ಸತ್ಯ ಶಕ್ತಿಗೆ ಶರಣಾದ ಪರಶುರಾಮನ ಉಗ್ರ ಶಕ್ತಿಯಂತೆ, ವಿಜ್ಞಾನ ಶಕ್ತಿಯು ಜನಶಕ್ತಿಯು ಶರಣಾಗಿ ಸಮ್ಮಿಳಿತವಾಗಬೇಕು. ಈ ಮಹಾನ್ ಕಾರ್ಯ ಇಂದು ಸಾಹಿತಿಯಿಂದಲೇ ಆಗಬೇಕಾಗಿದೆ. ಈ ಗುರುತರ ಜವಾಬ್ದಾರಿಯು ಬಹುಭಾಗ ಅತಿ ಪ್ರಾಚೀನ ಇತಿಹಾಸ, ಸಂಸ್ಕೃತಿಗಳ ಸಂಪತ್ಸಂಚಯವುಳ್ಳ ಸ್ವತಂತ್ರ ಭಾರತದ ಉದಯೋನ್ಮುಖ-ಪ್ರಗತಿಶೀಲ ಸಾಹಿತಿಗಳಿಂದ ಆಗಬೇಕಾಗಿದೆ. ಅನಾದಿಕಾಲದಿಂದ ಪಶುಬಲಕ್ಕಿಂತ ಆತ್ಮಬಲವೇ ಮೇಲೆಂದು ಕೃತಿಯಿಂದ ಸಿದ್ಧಗೊಳಿಸಿಕೊಂಡು ಬಂದ ತಪೋಬಲವು ನಮ್ಮ ಸಾಹಿತಿಗಳ ಬೆನ್ನ ಹಿಂದೆ ಇದೆ. ಅಷ್ಟೇ ಸಾಲದು. ಇಂದು ಕೂಡಾ ನಮ್ಮ ಸಾಹಿತಿಗಳು--ಸಾಹಿತ್ಯ ಸಾಧನೆಯ ಉಗ್ರ ತಪಸ್ಸಿನ ಅಗ್ನಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು. ಆಗ ಮಾತ್ರ ನಮ್ಮ ಸಾಹಿತ್ಯದ ಸ್ವರವು ಮದಾಂಧ ಜಗತ್ತನ್ನು ಎಚ್ಚರಿಸಬಲ್ಲದು. ಆಗ ಮಾತ್ರ ಪ್ರಾಚೀನ ಭಾರತದ ಪರಂಪರೆಗೆ ಅನುಸಾರವಾದ ಜವಾಬ್ದಾರಿಯನ್ನು ನಾವು ಹೊರಬಲ್ಲೆವೆಂದು ಎದೆ ತಟ್ಟಿ ವಿಶ್ವದ ಮುಂದೆ ನಿಲ್ಲಬಹುದು.

ವಿಶ್ವದ ಜನ ನಮ್ಮ ದೇಶದ ಕಡೆಗೆ ಇಂದು ಆಶಾ ಪೂರ್ಣ ದೃಷ್ಟಿಯಿಂದ ನೋಡುತ್ತಿದೆ. ಅದರಲ್ಲೂ ವಿಶೇಷ ಬಂಧವು ನಮಗೆ ನಿಕಟ ಸಂಬಂಧವುಳ್ಳದ್ದು. ವಿಶ್ವ ಜನ ಸಂಖ್ಯೆಯ ಬಹು ಭಾಗ ನಮ್ಮ ಬಂಧದಲ್ಲಡಕವಾಗಿದೆ. ನಮ್ಮ ಸಾಹಿತ್ಯವು ಕ ನಿಷ್ಪಕ್ಷಪಾತಿಯಾದದ್ದಲ್ಲದರೂ [illegible] ಯ ಮಾನವನ್ನು [illegible], ವಿಶ್ವ ಕಲ್ಯಾಣ ಕಾರ್ಯದಲ್ಲಿ ನಾವು ಬಹಳಷ್ಟು ಕಾರ್ಯ ಮಾಡಿದಂತಾಗಬೇಕು. ಸಾಹಿತ್ಯ ಸೇವೆಯಲ್ಲಿ ಭಾಗ ವಹಿಸುವುದು ಬಹು ದೊಡ್ಡ ಸೌಭಾಗ್ಯ! ಭಾರತದ ಸಾಹಿತ್ಯ ಸೇವೆಯ ಸೌಭಾಗ್ಯ ಪಡೆದ—ಪಡೆಯಬಲ್ಲ ಸಾಹಿತಿಗಳು, ಈ ಭಾಗದಲ್ಲಿ ಒಂದು ನಿಷ್ಠಯಾತ್ಮಕ ಧೋರಣೆಯಿಂದ ಕಾರ್ಯೋನ್ಮುಖರಾಗಿ, ವಿಶ್ವ ಸಂಸಾರವನ್ನು ಚರಿತ್ರ ಸಂಪನ್ನ ಮಾನವ ಕುಟುಂಬವಾಗಿ, ವರ್ಗ ರಹಿತ, ವರ್ಣಭೇದ ರಹಿತ, ಉಚ್ಚ ನೀಚ ಭೇದರಹಿತವಾದ ಒಂದು ಅನ್ಯೋನ್ಯ ಆದರ್ಶ ಸಂಸಾರವಾಗಿ ಮಾರ್ಪಡಿಸುವ ಚತುರ ಸಾಹಿತಿಗಳಾಗಬೇಕು. ನಮ್ಮ ಸಾಹಿತಿಗಳಿಗೆ ಈ ಸೃಷ್ಟಿಯ ದೃಷ್ಟಿ, ಈ ಕಾರ್ಯದ ಅರಿಕೆ ನಿ [illegible] ಸಾಧನಗಳಲ್ಲಿ, ಜನತೆ ಹೊಂದುತ್ತಿರುವ [illegible] ಸಮಾಜವನ್ನು ಅವರು ಜಗತ್ತು ನೋಡಿಕೊಳ್ಳಬಲ್ಲರು. ಈ ಭಾಗದಲ್ಲಿ ಧೀರ ಧೋರಣೆಯಿಂದ ತನ್ನ [illegible]. ಕಡೆಗೆ ಸಾಗಬೇಕು.

ಮನುಷ್ಯತ್ವವನ್ನು ಪರಿಷ್ಕಾರಗೊಳಿಸಿ, ಸ್ವಭಾವಕ್ಕೆ ಸಂಸ್ಕಾರಗೊಳಿಸಿ. [illegible] ಉತ್ತಮ ಸಾಹಿತ್ಯ ನಿರ್ಮಾಣಕ್ಕೆ [illegible] ಮಾತ್ರ ಅತ್ಯಂತ [illegible] ಅಗತ್ಯವಿದೆ. ಈ ಕೆಲಸ ಸಾಹಿತ್ಯ-ಸೃಷ್ಟಿ ಕಷ್ಟಕರವಾಗಿದೆ! ಇದೇ ಕಾರಣದಿಂದ ಗಂಭೀರ ಸಾಹಿತ್ಯಕ್ಕೆ ಬರ. ಸುಲಭದಲ್ಲಿ ಮಾರಾಟ ಕ್ಷೇತ್ರ ಸಿಗುವುದಿಲ್ಲ. ಈ ಒಂದೇ ಕಾರಣದಿಂದ ಸಾತ್ವಿಕ, ಗಂಭೀರ ಸಾಹಿತ್ಯ ನಿರ್ಮಾಣದ ಪ್ರವೃತ್ತಿ ಕಡಿಮೆಯಾಗಿ, ಆಕರ್ಷಕ ಲಕ್ಷಣದ, ಹೀನ ಪ್ರವೃತ್ತಿಯ ಸಾಹಿತ್ಯವು ಬೆಳೆಯುತ್ತಿದೆ. [illegible] ಪ್ರಚೋದಕ ಸಾಹಿತ್ಯದ ಕಾಂತಿ ಮಾರಾಟ ಕ್ಷೇತ್ರದಲ್ಲಿ ಹರಡುತ್ತಲಿದೆ. ಇದಲ್ಲದೇ ಸಾಹಿತಿ [illegible] ಉಚ್ಚ ಆದರ್ಶಗಳು [illegible] ತಪಸ್ಸಿನ [illegible] ಜಗತ್ತಿನಲ್ಲಿ ಈ ಸಹಜ ಸಿದ್ಧಿ ಹೊಂದಿದ [illegible] ಸಾಹಿತ್ಯ ಕ್ಷೇತ್ರಕ್ಕೆ [illegible] ಮನುಷ್ಯ [illegible] ಪ್ರವೃತ್ತಿಗಳನ್ನು [illegible] ಗಾಗದೆ ಗತ್ಯಂತರವಿಲ್ಲ. ಸಾಹಿತಿ [illegible] ಸಾಧಿಸಿ ಉತ್ತೀರ್ಣನಾಗಬೇಕಾದ [illegible] ಮಹತ್ತ್ವದ ಜವಾಬ್ದಾರಿಗಳಲ್ಲಿ ದು ಒಂದಾಗಿದೆ.

ವಿಜ್ಞಾನ, ಮೋಕ್ಷ, [illegible] 'ಸಾಹಿತ್ಯಸೇವೆ' ಎಂಬ [illegible] 'ಸಾಹಿತ್ಯ ಸೇವೆ'-ಅರ್ಥಾತ್ 'ಜನಸೇವೆ' ಜನತಾ ಜನಾರ್ದನನ ಸೇವೆ [illegible] ಮೇಧಾವಿಗಳ, [illegible] ಯೋಗಿಗಳಾಗಬಲ್ಲ [illegible] ಹೊಂದು—ಭಾರತದಲ್ಲಿ ಈ ಕ್ಷೇತ್ರಕ್ಕೆ [illegible] ಬೇಕು [illegible] ತಂತ್ರ ಭಾರತದ ಸಾಹಿತಿಯ [illegible] ದೃಷ್ಟಿಯ [illegible] ಬೇಕು.

The East & West Insurance Co., Ltd.,
ESTD:] East & West Building, BOMBAY, 1. [1913
ದಿ ಈಸ್ಟ್ ಎಂಡ್ ವೆಸ್ಟ್
ಸ್ಥಾಪನೆ:] ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್. [1913
ಒಟ್ಟು ನಿಧಿ ರೂಪಾಯಿ 1 ಕೋಟಿ 5 ಲಕ್ಷಕ್ಕೂ ಮಿಕ್ಕಿ ಇದೆ.
ಒಟ್ಟು ಆಸ್ತಿಬದುಕು ರೂಪಾಯಿ 1 ಕೋಟಿ 23 ಲಕ್ಷಕ್ಕೆ ಮೇಲ್ಪಟ್ಟು ಇದೆ.
ಪೋಲಿಸಿ ಹೋಲ್ಡರರ ಸೇವೆಯೇ ನಮ್ಮ ಧ್ಯೇಯ.
ಆರು ತಿಂಗಳಿಗೊಂದಾವರ್ತಿ [illegible] ನಮ್ಮ ಈ ಸಲದ [illegible] ಣದಲ್ಲಿ ಹುಬ್ಬಳ್ಳಿ, ಬೆಳಗಾಂ, ಕೊಲ್ಹಾಪುರ, ಪೂನಾ, ಬೊಂಬಾಯಿ [illegible] ಡಿವಿಜನ್ ಜಿಲ್ಲೆಗಳಲ್ಲಿ ಪ್ರಕೃತ ನೆಲಸಿರುವ ನಮ್ಮ ಪೋಲಿಸಿದಾರರು ಮತ್ತು ಹಿತಚಿಂತಕರು ತೋರಿಸಿದ ಪ್ರೀತಿ ವಿಶ್ವಾಸಗಳಿಗೆ ನಾವು ತುಂಬಾ ಆಭಾರಿಗಳಾಗಿದ್ದೇವೆ.
ನಮ್ಮ ಆಫೀಸುಗಳು ಶಿರ್ವ ಮತ್ತು [illegible] ನಮ್ಮ [illegible] ಗಳೂ ಯೋಗ್ಯ ಸಂಬಳದಲ್ಲಿ ಕೆಲಸ ಮಾಡಬಲ್ಲ [illegible] ಬೇಕಾಗಿದ್ದಾರೆ.
ಮೆಸ್ಸರ್ಸ್ ಹೆಗ್ಡೆ ಎಂಡ್ ರಾವ್
ಚೀಫ್ ಏಜಂಟರು,
ದಕ್ಷಿಣ ಕನ್ನಡ, ಉತ್ತರ ಕನ್ನಡ, ಮತ್ತು ಮೈಸೂರು ಸ್ಟೇಟ್,
ಪೋಸ್ಟ್, ಶಿರ್ವ, ದ. ಕ.

ಅಸಾಧಾರಣ ವಾಗ್ಮಿಗಳೂ ಗ್ರಂಥಕರ್ತರೂ ಆದ
ಶ್ರೀ. ಎಸ್. ಪಂಚಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್., (ರಿಟೈರ್ಡ್), ಎಫ್. ಎಸ್. ಎಲ್. ಅವರು ಬರೆದ Tales of Ind ಎಂಬ ಕೃತಿಯ ಅನುವಾದ
ಭಾರತೀಯ ಕತೆಗಳು
ಅನುವಾದಕರು—ಶ್ರೀ ಕೋಟ್ಯಾರ್ ಶ್ರೀನಿವಾಸ ರಾವ್
ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಬೇಕೆಂಬ ಬಯಕೆ ಇದ್ದೇ ಇದೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸುಭಾಷಿತಗಳು, ಉಪಮೆ, ಗಾದೆ, ಕಥೆ ದೃಷ್ಟಾಂತ ಇತ್ಯಾದಿಗಳು ಬರಬೇಕು. ಅಂತಹ ಅಮೂಲ್ಯ ಭಂಡಾಗಾರವೇ ಈ ಭಾರತೀಯ ಕತೆಗಳು
ಎಲ್ಲರೂ ಅವಶ್ಯವಾಗಿ ಓದತಕ್ಕ ಅಪೂರ್ವ ಗ್ರಂಥ
151 ಕತೆಗಳು ಬೆಲೆ ರೂ 1-12-0
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮುಟ್ಟು ನಿಲ್ಲದಿದ್ದರೆ ಚಿಂತೆ ಬೇ
[illegible]
BINAPANI AUSHADHALAYA
[illegible]
ವೈದ್ಯ ಪಿ. ಆರ್. ಆ. ಮಲ್ಯ,
ಮಂಗಳೂರು.

ವಾರದ ಒಳಿತು ಕೆಡುಕುಗಳು

ತಾ. 9-10-52ರಿಂದ ತಾ. 15-10-52ರ ವರೆಗೆ

ಮೇಷ— ಈ ವಾರದಲ್ಲಿನ ಗ್ರಹಮಾನವು ನಿಮಗೆ ಕೊಂಚ ಪ್ರತಿಕೂಲವಾಗಿರುವುದು. ದೇಹಾಲಸ್ಯವೂ ಪರ್ಯಟನ ಕಲಹಾದಿಗಳೂ ಪ್ರಾಪ್ತವಾಗಲಿವೆ. ಆದರೂ ಆರ್ಥಿಕ ಭಾಗದಲ್ಲಿ ತೊಂದರೆ ಕಾಣಿಸದು. ರಾಜಕೀಯದಲ್ಲಿ ನಷ್ಟಕಷ್ಟಗಳೂ ಪರಾಭವವೂ ಪ್ರಾಪ್ತವಾದೀತು. ವಾರಾದಿಯ 5 ದಿನಗಳಲ್ಲಿ ನಿಮ್ಮ ಪ್ರಯತ್ನವು ಸಫಲವಾಗುವದು.

ವೃಷಭ— ವಿರೋಧಿ ವರ್ಗದವರು ಪ್ರತೀಕಾರದ ಹಂಚಿಕೆಯಲ್ಲಿರುವರು. ಸ್ತ್ರೀಜನರ ದೆಸೆಯಿಂದಾಗಿ ಕಷ್ಟನಷ್ಟಗಳು ಪ್ರಾಪ್ತವಾಗಲಿದೆ. ಮಾತ್ರವಲ್ಲ ಗೃಹಕೃತ್ಯದಲ್ಲೂ ಪರಸ್ಪರ ವೈಮನಸ್ಸುಗಳುಂಟಾಗಿ ನಿತ್ಯ ಕಲಹಕ್ಕೆಡೆಯಾಗುವದು, ಆದರೂ ಕೈಗೊಂಡ ಕಾರ್ಯದಲ್ಲಿ ಪ್ರಗತಿಯಿದೆ. ವಾರಾಂತ್ಯದ 5 ದಿನಗಳು ಇಷ್ಟಸಿದ್ಧಿಪ್ರದಗಳಿವೆ.

ಮಿಥುನ—ಸದ್ಯದ ಪರಿಸ್ಥಿತಿಯು ನಿಮ್ಮ ಭಾಗಕ್ಕೆ ಅತೀವ ವಿಪರೀತ ಸ್ಥಿತಿಗೆ ಬಂದಿರುವುದು, ಸುರಗುರುಗಳನ್ನು ಹೊರತಾಗಿ ಮಿಕ್ಕೆಲ್ಲ ಗ್ರಹರೂ ಅನಿಷ್ಟ ಸ್ಥಾನವನ್ನಾಶ್ರೈಸಿರುವುದರಿಂದ ನಾನಾ ದಿಕ್ಕಿನಿಂದ ಹಲವಾರು ತರದ ಪೀಡೆಗಳೂ ಅನಿಷ್ಟಗಳೂ ಬರಲಿವೆ, ಸಾಂಸಾರಿಕ ತಾಪತ್ರಯ ವ್ಯಾಪಾರದಲ್ಲಿ ನಷ್ಟ ಆತ್ಮೀಯರ ವಿರಹ ಆರ್ಥಿಕ ಬಿಕ್ಕಟ್ಟು ಇವುಗಳಿಂದ ಸಂತಪ್ತರಾದ ನಿಮಗೆ ವಾರಾಂತ್ಯದ 2 ದಿನಗಳಲ್ಲಿ ಸುರಗುರುಗಳಿಂದಾಗಿ ಸುಖ ಲಾಭಗಳಿಗವಕಾಶವಿದೆ.

ಕರ್ಕಟ—ಇಂದಿನ ನಿಮ್ಮ ಭವಿತವ್ಯವು ಉತ್ತಮ ಸ್ಥಿತಿಯಲ್ಲಿದೆ. ನಿಮ್ಮ ಅಭಿಕಾಂಕ್ಷೆಗಳು ಅಚಿರದಲ್ಲಿ ನೆರವೇರುವವು. ಉದ್ಯಮವು ನಿರರ್ಗಳವಾಗಿ ಮುಂದೆ ಸಾಗುವದು. ಧನ ಜನ ಬೆಂಬಲಯುಕ್ತರಾದ ನಿಮಗೆ ಕಫದೋಷದಿಂದಾಗಿ ಆರೋಗ್ಯಕ್ಕೆ ಧಕ್ಕೆ ತಗಲೀತು. ತಾ. 16-17 ಈ ದಿನಗಳಲ್ಲಿ ನೆನೆದಂತೆ ಕಾರ್ಯವು ನೆರವೇರುವದು.

ಸಿಂಹ—ನಿಮಗೀವಾರದಲ್ಲಿ ಇಷ್ಟಾನಿಷ್ಟಗಳು ಸಮನಾಗಿ ಫಲಿಸಲಿವೆ. ವಾತ ಪ್ರಕೋಪದಿಂದ ಆರೋಗ್ಯವು ಕೆಡಲಿದೆ. ಹೆಂಡತಿ ಮಕ್ಕಳ ಆರೋಗ್ಯಕ್ಕೂ ಹಾನಿಯಿದೆ. ನಿಮ್ಮ ಆರ್ಥಿಕ ಭಾಗವು ಸಾಕಷ್ಟು ಉತ್ತಮ ಸ್ಥಿತಿಗೆ ಬರಲಿದೆ, ಎಂತಹ ವಿಘ್ನ ವಿಡಂಬರಗಳು ಬಂದರೂ ಧೈರ್ಯಗೆಡದೆ ಕಾರ್ಯ ಸಾಧಿಸುವಿರಿ. ತಾ. 18, 19, 20 ಈ ದಿನಗಳಲ್ಲಿ ನಿಮ್ಮ ಪ್ರತಿಯೊಂದು ಉದ್ಯಮವೂ ಸಫಲವಾಗುವದು.

ಕನ್ಯಾ—ಕಾಲಗತಿಯು ಕುಟಿಲವಾಗಿರುವುದು, ನಿಮ್ಮ ಸಾಹಸ ಪರಿಶ್ರಮಗಳು ಇಂದು ನಿಷ್ಫಲಗಳಾಗಲಿವೆ. ಪರಿಶ್ರಮಕ್ಕೆ ತಕ್ಕ ಫಲ ಕಾಣಿಸದು. ಶ್ರಮಜೀವಿಗಳಿಗಂತೂ ದಿನಯಾಪನೆಯು ದುಸ್ತರವಾದೀತು. ಜನತೆಯ ನಿಂದಾಪವಾದಗಳಿಗೆ ಗುರಿಯಾಗುವಿರಿ. ವ್ಯಾಪಾರಿಗಳೂ ನೌಕರಿ ಜನರಿಗೂ ಶ್ರಮಕ್ಕೆ ತಕ್ಕ ಫಲ ಲಭಿಸೀತು. ತಾ. 16, 17, 21, 22 ಈ ದಿನಗಳು ಉಳಿದ ದಿನಗಳಿಗಿಂತ ಉತ್ತಮವಾದಾವು.

ತುಲಾ—ವಿಶೇತಃ ನಿವೀವಾರದಲ್ಲಿ ಆರೋಗ್ಯದ ಕಡೆಗೆ ಹೆಚ್ಚಿನ ಲಕ್ಷ್ಯವನ್ನಿಡಿರಿ. ಇತರ ಭಾಗಗಳಲ್ಲಿ ಯಾವ ಕುಂದು ಕೊರತೆಗಳೂ ಉಂಟಾಗಲಾರವು. ಎಂತಹ ಕಷ್ಟಸಾಧ್ಯವಾದ ಕಾರ್ಯವಾದರೂ ನಿಮ್ಮ ಭಾಗಕ್ಕೆ ತೃಣಸಮವೆನಿಸುವದು. ಶತ್ರು ಜನರು ನಿಮ್ಮ ದೃಗ್ಗೋಚರವಾಗಲಾರರು. ವಿನಾಕಾರಣ ವಾಕ್ಕಲಹವಾದೀತು. 18, 19, 20 ಈ ದಿನಗಳಲ್ಲಿ ಭೋಗ ಲಾಭ ವಿಜಯಗಳನ್ನು ಪಡೆವಿರಿ.

ವೃಶ್ಚಿಕ—ಕಷ್ಟಸಹಿಷ್ಣುಗಳಾದ ನಿಮ್ಮ ಪರಿಶ್ರಮವಿಂದು ನೀರಿನಲ್ಲಿ ಮಾಡಿದ ಹೋಮದಂತೆ ವ್ಯರ್ಥವಾದೀತು. ಪಿತ್ಥೋಷ್ಣ ಪ್ರಕೋಪದಿಂದಾಗಿ ಆರೋಗ್ಯ ಕೆಡಲಿದೆ. ಶತ್ರುಜನರ ಪೀಡೆಯೂ ಮಾನಸಿಕ ರೋಗವೂ ಅಧಿಕವಾಗಲಿದೆ. ಸರಕಾರಿ ಅಧಿಕಾರಿಗಳಿಂದ ಅನಿಷ್ಟವೊದಗೀತು. ಆದರೂ ಹಣದ ಅಭಾವವು ಅಷ್ಟೊಂದು ಕಾಣಿಸದು. ತಾ. 16, 17, 21, 22, ಈ ದಿನಗಳು ಹೆಚ್ಚಿನ ದೋಷಕಾರಿಗಳಾಗವು.

ಧನು—ನಿಮ್ಮ ಭವಿತವ್ಯವಿಂದು ಉತ್ತಮವಿರುವುದು. ಯಾವ ಕಾರ್ಯವನ್ನೇ ಆರಂಭಿಸಿರಿ ನಿಮ್ಮೆಣಿಕೆಗಿಂತಲೂ ಅಧಿಕವಾಗಿ ಫಲಪ್ರಾಪ್ತಿ ಇದೆ. ಜನರಿಂದ ಗೌರವಾದರಗಳು ಲಭಿಸುವವು. ಗೃಹ ಪರಿವಾರಗಳಲ್ಲಿ ಯಾವತರದ ನ್ಯೂನತೆಗಳೂ ಕಾಣಿಸವು. ಸ್ಮಿಕ ಅಪಘಾತಕ್ಕೆಡೆಯಿರುವುದರಿಂದ ಪ್ರಯ ಣದಲ್ಲಿ ವೃಕ್ಷಾರೋಹಣಾದಿಗಳಲ್ಲಿ ಬಹಳ ಗರೂಕರಾಗಿರಿ. ವಾರಾದಿಯ 5 ದಿನಗಳು ತ್ಯುತ್ತಮವಿವೆ.

ಮಕರ—ನಿಮ್ಮ ಪರಿಶ್ರಮವಿಂದ ಫಲವಾಗುವದು. ಬಂಧುಗಳು ನಿಮ್ಮ ದೂರವಾಗಿರುವರಾದರೂ ಅಸಹಾಯ ಶೂ ರಾದ ನೀವು ಉದ್ಯೋಗದಲ್ಲಿ ಪ್ರಗತಿಹೊಂ ವಿರಿ. ಧರ್ಮಕರ್ಮಗಳೆಡೆಗೆ ಮನವೊಲಿ ದು. ಮಾತ್ರವಲ್ಲ ಮನಸ್ಸಿಗೆ ನೆಮ್ಮದಿಯ ಕೂಡ ಇಲ್ಲವೆಂದರೆ ತಪ್ಪಾಗದು, ವಾರಾಂ ದ 5 ದಿನಗಳಲ್ಲಿ ನಿಮ್ಮ ಬಯಕೆಯು ಈ ರಲಿದೆ,

ಕುಂಭ—ನಿಮ್ಮ ಕರ್ಮಪತಿಯ ಅಂಗಾರಕನಿಂದು ಲಾಭಸ್ಥಾನಕ್ಕೆ ಬಂದಿ ದರಿಂದ ಕಷ್ಟಸಾಧ್ಯವಾದ ಕಾರ್ಯಗಳಲ್ಲಿ ಸ್ವಾರ್ಥವನ್ನು ಪಡೆವಿರಿ, ಮಾತ್ರವಲ್ಲ ಜ ಬೆಂಬಲವು ನಿಮಗೆ ಲಭಿಸೀತು, ಆದರೆ ಇ ಗ್ರಹಕರ ದುಃಸ್ಥಿತಿಯು ನಿಮ್ಮನ್ನು ಸ್ವಜನ ದೆ ದೂರಮಾಡೀತು. ನಿಷ್ಕಾರಣ ಕಲಹ ಗುವದು, ಕೋರ್ಟುಕಚೇರಿಗಳಿಗೆ ಹೊ ವ ಪ್ರಸಂಗವೂ ಬಂದೀತು. ವಾರಾಂ 2ದಿನಗಳು ಇತರ ದಿನಗಳಿಗಿಂತ ಲೇಸು.

ಮೀನ—ಶುಭಗ್ರಹರ ಬಲವಿಂದ ಮಗೆ ಲಭಿಸಿದಕಾರಣ ಸತ್ಕಾರ್ಯಗಳಲ್ಲಿ ಸಫಲವನ್ನು ಪಡೆವಿರಿ. ಧನಭಾಗ್ಯಗಳಲ್ಲಿ ಗುರು ಶುಕ್ರರು ನಿಮ್ಮ ಆರ್ಥಿಕ ದುಃ ಯನ್ನು ನೀಗಿಸುವರು. ನೌಕರಿ ವ್ಯಾ ವಸಾಯದವುಗಳಲ್ಲಿ ನಿಮ್ಮ ಅಭಿಕಾಂ ಳು ನಿಷ್ಫಲಗಳಾಗವು. ಪರ್ಯಟನಸ್ಥಾನ ತಿಗಳ ಸಂಭವವಿದೆ, ವಾರಾದಿಯ 2 ದಿನ ಲ್ಲಿ ನಿಮ್ಮ ಸಂಕಲ್ಪವು ಸಿದ್ಧಿ ಫಲಿದೆ.

ದಕ್ಷಿಣ ಕನ್ನಡ ಜಿಲ್ಲ ಪುತ್ತೂರು ಡಿವಿಜನ್ ರೆವಿನ್ಯೂ ಡಿವಿಜನಲ್ ಆಫೀಸರಿಂದ ಪ್ರಕಟಣೆ

ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ—

ದಕ್ಷಿಣಕನ್ನಡ ಜಿಲ್ಲಾ ಪುತ್ತೂರು ತಾಲೂಕು ಸುಬ್ರಮಣ್ಯ ಗ್ರಾಮದ ಕುಳಗುಂದದಲ್ಲಿ ವರ್ಷಂಪ್ರತಿ ಜರಗುವ ಜಾನುವಾರು ಸಂತೆಯು ಇದೇ 1952ನೇ ಯಿಸವಿ ನವಂಬರ ತಿಂಗಳ 1ನೇ ತಾರೀಕಿನಿಂದ ಅದೇ ತಿಂಗಳ 16ನೇ ತಾರೀಕಿನ ವರೆಗೆ ಜರಗುವುದು ಅಂದರೆ ಸಂತೆಯು ಕಾರ್ತಿಕ ಪೂರ್ಣಿಮೆಯ ದಿವಸ ಪ್ರಾರಂಭವಾಗಿ ಕಾರ್ತಿಕ ಅಮಾವಾಸ್ಯೆಯ ದಿವಸದ ಅಂದರೆ ಸುಬ್ರಹ್ಮಣ್ಯ ದೀಪೋತ್ಸವದ ತನಕ ಜರಗುವುದು.

ಸಂತೆಗೆ ತರಲ್ಪಡುವ ಪ್ರತಿಯೊಂದು ಜಾನುವಾರಿನ ಮೇಲೆ ತಲಾ ಒಂದರ ನಾಲ್ಕಾಣೆಯಂತೆ ಪೀಸು ವಸೂಲು ಮಾಡಲಾದೀತು ಒಂದುತಿಂಗಳ ಕರುಗಳನ್ನು ಸದ್ರಿ ಫೀಸುಗಳಿಂದ ವಿನಹಪಡಿಸಲಾಗಿದೆ. ಸಂದರ್ಭಾನುಸಾರ ಅವಶ್ಯಬಿದ್ದಲ್ಲಿ ಸದ್ರಿ ಫೀಸುಗಳನ್ನು ಏರಿಸಲೂಬಹುದು ಯಾ ಇನ್ನಿತರ ಫೀಸುಗಳನ್ನು ಹೊರಿಸಲೂ ಬಹುದು,

ಪರಂತು ರೆವಿನ್ಯೂ ಡಿವಿಜನಲ್ ಆಫೀಸರರು ಆವಶ್ಯವೆಂದು ತೋರುವ ಯಾವತ್ತೂ ಜಾನುವಾರುಗಳನ್ನೂ ಸದ್ರಿ ಫೀಸುಗಳಿಂದ ವಿನಾಯತಿ ಪಡಿಸ ಬಹುದು.

(Sd) ಎಸ್. ಯು. ಪಿ. ನಾಯಕ್
ರೆವಿನ್ಯೂ ಡಿವಿಜನಲ್ ಆಫೀಸರರು,
ಪುತ್ತೂರ್, 23-9-52

ಸ್ತ್ರೀ ಪುರುಷ ಶಿಶುಗಳು ರೋಗದಿಂದ ನರಳಬೇಕಾಗಿಲ್ಲ!
ಲಕ್ಷಾಂತರ ಜನರು ಗುಣಹೊಂದಿದ್ದಾರೆ!
ಸರ್‌ಜೀವನ್ ಶಿಲಾಜಿತ್ ಲೇಹ್ಯ
ಶಿಲಾಜಿತ್ ಹಿಮಾಲಯದದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ನಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.
೪೪ದಿನದ ಲೇಹ್ಯ ರೂ ೫/೪, ೨೨ ದಿನದ ಲೇಹ್ಯ ರೂ ೩/೪
(ಪೋಸ್ಟೇಜು ಮಾಫಿ)

KING OF TONIC
SILAJITHRAYANAM
ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋದಿನಲ್ಲಿ ಕೇಳಿರಿ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ್

"ಗೋಪಾಲ ಭೇಷಜಾಶ್ರಮ" ಮಂಗಳೂರು-
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ ಎಂ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:—ಡಾ| ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.
1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿ ಕ್ಕಾಗಿ ಡಿಪೋಸಿಟ್ ಹಣಕ್ಕೆ ಸ್ವಾ ಯವಾದ ಬಡ್ಡಿಯಿಂದಲೂ, ಸಾ ದ ಹಣಕ್ಕೆ ಅತೀ ಕಡಿಮೆ ದರ ಬಡ್ಡಿಯಿಂದಲೂ ಜನ ಹಿತಸಾಧ ಯನ್ನು ಮಾಡುತ್ತಿರುವುದು
The Moolky Bank Ltd.
Moolky, S. K.

ಅಮೃತಾಂಜನ
ತಲೆವೇದನೆ, ಶಿರೋವೇದನೆ, ಉಳುಕ ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ನೋವು,ಗಾಯಗಳು, [illegible] ಚೆಳವಿಷ ಮುಂತಾದವು, ಪಕ್ಷವಾತ, ಮೊ ಮೊದಲಾದ ಎಲ್ಲಾರೋಗಗಳಿಗೂ ಸಿದ್ಧ

SOVIREIGN-REMEDY
AMRUTANJAN
Best Indian Pain Balm
Amrutanjan Depot
BOMBAY, MADRAS
REG
ಹುಳು
ಮಂದ
ನಮ್ಮ
ಸಿಕ್ಯುತ್ತ
ಅಮೃತಾಂಜನ ಲಿಮಿಟೆ
ಮದರಾಸು, ಬೊಂಬಾಯಿ ಮತ್ತು ಕ

Edited, Printed & Published By K. H. Shetty at the Navayuga Press, Udipi, S. India.

Regd. No. M. 3618
LICENCE No. 31
Licensed to Post without Prepayment

23-10-1952

Estd 1921 ಸ್ಥಾಪನೆ.
32ನೆಯ ವರ್ಷ

Founder: Sri. A. B. Shetty,
Minister for Medical & Public Health

ನವಯುಗ
ಆರೋಗ್ಯ ಮಂತ್ರಿ
ಶ್ರೀ. ಎ. ಬಿ. ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ

ವಾ। ಚಂದಾ 5-12-0
6 ತಿಂಗಳಿಗೆ 3-0-0
ಬಿಡಿ ಪ್ರತಿಗೆ 0-2-0

ನವಯುಗ

Vol 32
No 8

NAVAYUGA WEEKLY POST BOX NO. 22 UDIPI

ವರ್ಷ ೩೨
ವಾರ ೮

ಅಂತರಂಗ
ಪುಸ್ತಕ ಪತ್ರಿಕೆಯು
ಉಪಯುಕ್ತವಾದ
86 ಪುಸ್ತಕಗಳು
ರೂ. 24ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ.
ಮೆನೇಜರ್,
ಅಂತರಂಗ, ಉಡುಪಿ

ಮಧುಹರ್ಷ

ಇಂಗ್ಲೆಂಡಿನ ಪ್ರಮುಖ ಪತ್ರಿಕೆಯೊಂದರ ಏಜಂಟನೊಬ್ಬ ಪತ್ರಿಕೆಗೆ ಸಲ್ಲಬೇಕಿದ್ದ ಹಣವನ್ನು ಕೊಡದೆ, ಸುಮ್ಮನಿದ್ದ. ಹಲವು ಸಲ ಪತ್ರ ಬರೆದು ವಿನಂತಿಸಿಕೊಂಡರೂ ಹಣವನ್ನು ಏಜಂಟ ಕಳಿಸದಿದ್ದುದು ನೋಡಿ, ಪತ್ರಿಕೆಯ ಮಾನೇಜರರಿಗೆ ಖೇದವಾಯಿತು. ಅವರು ತಮ್ಮ ಕಾರ್ಯಾಲಯದಲ್ಲಿ ತುಂಬ ಚತುರರೆಂದು ಹೆಸರಾದ ಮಿ. ವಾಲ್ಟರ್ ಎಂಬವರನ್ನು ಕರೆದು ಹೇಳಿದರು:

"ಮಿ. ವಾಲ್ಟರ್, ಆ ಏಜಂಟರಬಳಿ ನಮ್ಮ ಹಣ ತುಂಬ ಬಾಕಿ ಇದೆ. ನೀವು ಇಂದೇ ಅಲ್ಲಿಗೆ ಹೋಗಿ, ಆ ಹಣವನ್ನು ವಸೂಲುಮಾಡಿ ತರಬೇಕು."

ಒಡನೆಯೇ ವಾಲ್ಟರ್ ಮಹಾಶಯರು ಆ ಏಜಂಟನ ಊರಿಗೆ ರೇಲಿನಲ್ಲಿ ಹೊರಟರು. ಆದರೆ ಊರು ತಲುಪಿದಾಗ, ಅವರಿಗೆ ಏಜಂಟನ ಹೆಸರು ಮರೆತು ಹೋಗಿತ್ತು! ಕಾರಣ, ತಮ್ಮ ಕಾರ್ಯಾಲಯಕ್ಕೆ ಒಂದು ತಂತಿ ಕಳಿಸಿ, ಏಜಂಟನ ಹೆಸರೇನೆಂದು ತಿಳಿಸಬೇಕಾಗಿ ಪ್ರಾರ್ಥಿಸಿದರು.

ತಂತಿಗೆ ಉತ್ತರವೂ ಸಂಜೆಯೊಳಗೆ ಬಂತು– "ಏಜಂಟನ ಹೆಸರು ಮಿ. ಫ್ರೆಡರಿಕ್, ಮತ್ತು ನಿಮ್ಮ ಹೆಸರು ಮಿ. ವಾಲ್ಟರ್."

ಮರೆಯುವ ಕಲೆ

ಎಷ್ಟೋ ಮಂದಿ ಸ್ವಭಾವತಃ ಮರೆವಿಗಳಿರುವರು. ಅವರ ಸ್ಮರಣಶಕ್ತಿ ತೀವ್ರವಿರುವುದಿಲ್ಲ. ಹಲವು ಅತ್ಯಗತ್ಯದ ವಿಷಯಗಳನ್ನು ಮತ್ತು ಕೆಲಸಗಳನ್ನವರು ಮರೆತು ಬಿಡುವರು. ಮಾರ್ಗದಲ್ಲಿ ನಡೆಯುವಾಗ ಭೇಟಿಯಾದ ಮಹಾಶಯರು ನಮ್ಮನ್ನು ಗುರುತು ಪರಿಚಯದಿಂದಲೇ ಮಾತನಾಡಿಸಿದರೂ– ಅವರೊಡನೆ ಹಿಂದೆ ನಾವೆಂದು ಮಾತನಾಡಿದ್ದೆವೆಂದಾಗಲೀ ಅವರ ಹೆಸರೇನಿದೆ ಎಂಬಾಗಲೀ ಪ್ರಯತ್ನಿಸಿದರೂ ನೆನಪಿಗೆ ಬರಲೊಲ್ಲದು! ಇಂಥ ವಿಚಿತ್ರಾವಸ್ಥೆಯನ್ನು ಪ್ರತಿನಿತ್ಯವೆಂಬಂತೆ ನಮ್ಮಲ್ಲಿ ಅನೇಕರು ಅನುಭವಿಸುತ್ತಿರಬಹುದು.

ಸ್ಮರಣ ಶಕ್ತಿಯು ಕಡಿಮೆ ಎಂಬುದಕ್ಕಾಗಿ ಅಳುವ ಜನ ತುಂಬ ಇದ್ದಾರೆ: ಒಬ್ಬರು ತಮ್ಮ ಮಿತ್ರರಿಗೆ ಮನೆಗೆ ಭೋಜನಕ್ಕೆ ಬರಬೇಕೆಂದು ಆಮಂತ್ರಣ ಕೊಟ್ಟರು. ಆದರೆ ವೇಟೆಗೆ ಹೋದವರಿಗೆ ಇದು ಮರವೆಯಾಯಿತು. ಮಿತ್ರರು ಬಹಳ ಹೊತ್ತು ಕಾದು ನೋಡಿದರೂ ಇವರ ಸವಾರಿ ಮನೆಗೆ ಚಿತ್ತೈಸಲಿಲ್ಲ. ಹೀಗೆ ಕ್ಲೇಶ ಉಂಟಾಯಿತು. ಮತ್ತೊಬ್ಬರು ತಮ್ಮ ಮಗುವಿನ ಜನ್ಮ ದಿನೋತ್ಸವ ಇಂದೆಂಬುದನ್ನು ಮರೆತರು. ಪತ್ನಿ ಇದರಿಂದ ಕುಪಿತಗೊಂಡಳು. ನಿಮ್ಮ ನಮ್ಮಂಥ ಸಾಮಾನ್ಯ ಜನರು ನಮ್ಮ ಕೈಯಲ್ಲಿ ಈಗ ಇದ್ದ ವಸ್ತುವನ್ನು ಎಲ್ಲಿ ಇಟ್ಟೆವೆಂದು ತಿಳಿಯದೆ ಪೇಚಾಡುವುದುಂಟು. ಪುಸ್ತಕ, ಕೊಡೆ ಮುಂತಾದ ವಸ್ತುಗಳು ಕಳೆದು ಹೋಗುವುದೇ ಮರೆವಿನ ಮಹಿಮೆಯಿಂದ. ಸದಾಕಾಲ ನೆನಪಿಡತಕ್ಕದಾದ ಮಾತುಗಳನ್ನೆಷ್ಟೋ ಸುಲಭದಲ್ಲಿ ಮರೆತು ಬಿಡುತ್ತೇವೆ. ಹಾಗೆಂದು ಮರೆತು ಬಿಡುವುದರಿಂದಲೇ ಹಿತವಿರುವ ಹಲವು ಸಂಗತಿಗಳು, ನೆನಪಿನಿಂದ ಜಾರುವುದಿಲ್ಲ! ಇದು ತುಂಬ ವಿಚಿತ್ರ–ಯಥಾರ್ಥ ಸಲಹೆ ನೀಡುವುದಾದರೆ, ದುಃಖ, ನೋವು, ಚಿಂತೆ, ದ್ವೇಷ, ಮತ್ಸರ ಮುಂತಾದ ಕೆಟ್ಟ ಭಾವನೆಗಳನ್ನು ಪ್ರಚೋದಿಸುವ ಸ್ಮೃತಿಯೊಂದನ್ನು ಮರೆತು ಬಿಡುವುದೇ ಲೇಸು. ಅದರಲ್ಲೇ ಹಿತವಿದೆ

ಮರೆಯುವುದು ಮನುಷ್ಯ ಮಾತ್ರದವನಿಗೆ ಸ್ವಾಭಾವಿಕವಾಗಿದೆ ಮರೆವಿಗಾಗಿ ಪರಿಶ್ರಮಪಡುವ ಅಗತ್ಯವಿಲ್ಲ– ಸಮಯವೇ ಮರೆವುಂಟುಮಾಡುತ್ತದೆ. ಇಂಗ್ಲೀಷು ಗಾದೆಯೊಂದು, ಸಮಯವು ಸಂಜೀವಿನಿ ಎಂದು ಹೇಳುತ್ತದೆ. ಸಮಯ ನಮಗೆ ಹೊಸ ಅನುಭವಗಳನ್ನು ಸುಖಸ್ಮೃತಿಯನ್ನೂ ಉಂಟುಮಾಡುವುದರಿಂದ. ದುಃಖದಾಯಿ ಘಟನೆಗಳು ಮರೆತು ಹೋಗುತ್ತವೆ. ನಮ್ಮ ಮನಸ್ಸು ಯಾವಾಗಲೂ ಸುಖಾಕಾಂಕ್ಷಿಯಾಗಿರುತ್ತದೆ. ಇದುದರಿಂದ, ಅವಕಾಶ ದೊರೆತ ಹಾಗೆಲ್ಲ ಸುಖ ಸ್ಮೃತಿಯನ್ನೆ ಅದು ತನ್ನಲ್ಲಿ ತುಂಬಿಕೊಳ್ಳುತ್ತದೆ. ಹಾಗೆಂದು, ಸ್ಮರಣಶಕ್ತಿಗೆ ಕೆಲವು ದುಃಖ ಘಟನೆಗಳನ್ನು ಮರೆತುಬಿಡುವ ಸಾಮರ್ಥ್ಯ ಇಲ್ಲದಿರುವುದರಿಂದ–ನೆನಪು ಒಂ[illegible] ಪರಿಣಾಮ [illegible] ಅದಕ್ಕೇ ಮರೆಯುವುದನ್ನು ಕಲೆ ಎಂದು ಭಾವಿಸಿ, ಮನಸ್ಸಿಗೆ ತರಬೇತಿ ಕೊಡಬೇಕು ಎನ್ನುವುದು.

ದುಃಖದ ಘಟನೆಯನ್ನು ಮರೆಯುವುದರಲ್ಲಿ ಸಾಫಲ್ಯ ಪಡೆಯದಿದ್ದರೂ, ಅದನ್ನು ಸ್ಮರಿಸುವ ವ್ಯರ್ಥ ಪ್ರಯತ್ನಕ್ಕೆ ಮಾತ್ರ ಸರ್ವದಾ ಕೈಹಾಕಲಾಗದು. ದುಃಖಪೂರ್ಣ ಘಟನೆಯ ನೆನಪು ನಮ್ಮ ವ್ಯಕ್ತಿತ್ವದ ಮೇಲೆ ಆಘಾತ ಮಾಡಲು ಎಡೆಕೊಡಕೂಡದು. ದುಃಖ ಸ್ಮೃತಿ ಸಾಮಾನ್ಯ ಸ್ಥಿತಿಯನ್ನು ನಾಶಪಡಿಸಿ, ಮಸ್ತಿಷ್ಕದ ಸಮತೋ[illegible] ಕೆಡಿಸಿ ಮಾನಸಿಕ ಕ್ಲೇಶವನ್ನು ಉಲ್ಬಣ[illegible] ಮುಟ್ಟಿಸುತ್ತದೆ. ನಮಗೆ ಯಾರಾದರೂ ಹಿಂದೊಮ್ಮೆ ಕೆಡುಕು ಮಾಡಿದ್ದರೆನ್ನೋಣ, ಅದರ ಸ್ಮರಣೆ ಈಗ ನಮಗಾದರೆ ಸಾಕು–ವೈರಿವಿರು[illegible] ಮನಸ್ಸು ಖತಿಗೊಂಡು ದ್ವೇಷಾಗ್ನಿ ಪ್ರಜ್ವಲಿತವಾಗುತ್ತದೆ. ಈ ವಿಕಾರಾನುಭವ ಮಾನಸಿಕ ಶಾಂತಿಗೆ, ಶಾರೀರಿಕ ಸ್ವಾಸ್ಥ್ಯಕ್ಕೆ, ಸ್ನಾಯುವಿನ ದಾರ್ಢ್ಯಕ್ಕೆ, ವ್ಯಕ್ತಿತ್ವದ ನೆಲಗಟ್ಟಿಗೆ ಆಘಾತವುಂಟುಮಾಡುವುದು ನಿಶ್ಚಯ.

ಮರೆಯಲು ಯೋಗ್ಯವಾದ ದುಃಖ ಸ್ಮೃತಿಗಳು ನಮ್ಮನ್ನು ಕ್ರೂರಿಗಳನ್ನಾಗಿ, ವಿದ್ರೋಹಿಗಳನ್ನಾಗಿ ಪರಿವರ್ತಿಸುತ್ತವೆ. ಮುಯ್ಯಿಗೆ ಮುಯ್ಯಿ ತೀರಿಸುವ ಉದ್ದೇಶದಿಂದ ಸದಾ ಹೊಂಚು ಹಾಕುತ್ತಿರಲು ನಮ್ಮನ್ನವು ಪ್ರೇರಿಸುತ್ತವೆ. ಆತ್ಮಗ್ಲಾನಿ ಹಾಗೂ ಚಿತ್ತಕ್ಷೋಭೆಯು ರೂಪದಲ್ಲಿ ಹೃದಯದ ಸದ್ಭಾವನೆಯನ್ನು ಕಮರಿಸುತ್ತವೆ. ಎಷ್ಟೋ ಮಂದಿ ತಿಳಿದೋ ತಿಳಿಯದೆಯೋ ಈ ಅನಪೇಕ್ಷಿತ ಭಾವನೆಗಳಿಗೆ ಮನಸ್ಸಿನಲ್ಲಿ ಆಶ್ರಯ ಕೊಡುತ್ತಾರೆ. ಇದರಿಂದ ನಮ್ಮ ಸ್ವಭಾವ ಹಾಗೂ ವ್ಯವಹಾರದಲ್ಲಿ ಅನಪೇಕ್ಷಿತ ಗೊಂದಲವೇರ್ಪಡುತ್ತದೆ. ಸಮಯ ದುಃಖ ಸ್ಮೃತಿಯಿಂದಾದ ಗಾಯವನ್ನು ತುಂಬುತ್ತದೆ ನಿಜ; ಆದರೆಷ್ಟೋ ಮಂದಿಗೆ ಈ ಗಾಯವನ್ನು ಮತ್ತೂ ಮತ್ತೂ ಕೆರೆದು, ನೋವನ್ನು ಅನುಭವಿಸುವುದೇ ಸಂತೋಷಪ್ರದವೆಂದು ತೋರುತ್ತದೆ

ವಿಕಾರಾನುಭವಕ್ಕೆ ಕಾರಣವಾದ ಕುತ್ಸಿತ ಭಾವನೆಗಳಿಂದ ಮುಕ್ತಿ ದೊರೆಯಲು ಒಂದೇ ಒಂದು ಮಾರ್ಗವೆಂದರೆ, ಮರವು. ಹಾಗೆಂದು ಒಂದು ಪ್ರಸಂಗವನ್ನು ಇದ್ದಕ್ಕಿದ್ದ ಹಾಗೆ ಮರೆತು ಬಿಡುವುದು ಸುಲಭವಲ್ಲ. ಮರೆಯುವುದನ್ನು ಕಲಿಯಬೇಕಾಗುತ್ತದೆ; ಅದನ್ನು ಅಭ್ಯಾಸ ಮಾಡಿಕೊಳ್ಳಬೇಕಾಗುತ್ತದೆ. "ಕಟು ಅನುಭವಗಳನ್ನು ಮರೆಯಲಾರೆ" ಎನ್ನುವಾತ ತಪ್ಪು ಮಾಡುತ್ತಾನೆ. ಹೀಗೆ ಹೇಳಿ, ತನ್ನ ಮನಸ್ಸಿನ ಮೇಲೆ ಇಚ್ಛಾಶಕ್ತಿಯ ಪ್ರಭುತ್ವ ನಡೆಯುವುದಿಲ್ಲ ಎಂದವನು ಅಪರೋಕ್ಷವಾಗಿ ಸಿದ್ಧಪಡಿಸುತ್ತಾನೆ. ಇಚ್ಛಾಶಕ್ತಿಯನ್ನು ಸುದೃಢಗೊಳಿಸುವುದಕ್ಕೆ ನಿರಂತರ ಅಭ್ಯಾಸ ತುಂಬ ಸಹಕಾರಿಯಾಗಿದೆ.

ಒಬ್ಬ ಪ್ರಸಿದ್ಧ ವಿಜ್ಞಾನಿಗೆ ತನ್ನ ನೌಕರನ ಮೇಲೆ ಅತಿಶಯ ವಿಶ್ವಾಸವಿತ್ತು. ಎಷ್ಟೋ ಸಮಯದ ಬಳಿಕ, ಆ ನೌಕರ [illegible] ತನಗರಿಯದಂತೆ ಮೋಸ ಮಾ

[...ನೇ ಪುಟ ನೋಡಿರಿ]

ಶೃಂಗಾರಿಕೆಗೆ ಹೆಸರಾಂತ ವಿಚಕ್ಷಣರು

[illegible] ವಿಶ್ವವಿದ್ಯಾನಿಲಯವು ಸಂಶೋಧನಾಲಯಗ[illegible] ಶೃಂಗಾರಿಕೆಗೂ [illegible] ವಿದ್ಯಾರ್ಥಿಗಳಿಗೆ [illegible] ಯಂತ್ರದ ಪ್ರಯೋಗ ಮಾಡಿ ತೋರಿಸುತ್ತಿರುವರು.

ಜನಜಾಗೃತಿಯೇ ಸಾಹಿತ್ಯದ ಗುರಿಯಾಗಲಿ!

(ಶ್ರೀ ಭೋಜರಾಜ ಶೆಟ್ಟಿ; ಬೊಂಬಾಯಿ)

ಮನುಷ್ಯನನ್ನು, ದಾರಿದ್ರ್ಯ, ಅಜ್ಞಾನ, ರೋಗ–ಶೋಕ, ಪರಮುಖಾಪೇಕ್ಷೆಗಳಿಂದ ಉದ್ಧರಿಸಿ, ಅವನಲ್ಲಿ ಆತ್ಮಪ್ರಕಾಶ ಮತ್ತು ಆತ್ಮ ಬಲದ ಸಂಚಾರಗೊಳಿಸುವುದೇ ಸಾಹಿತ್ಯದ ಪರಮೋದ್ದೇಶ. ಚೇತನೋದ್ದೀಪನಗೊಳಿಸಲಾರದ–ಹೀನತೆ, ದೌರ್ಬಲ್ಯಗಳ ಪರಿಹಾರ ಮಾಡಲಾರದ ಸಾಹಿತ್ಯ—ಸಾಹಿತ್ಯವಲ್ಲ! ನಾವಿಂದು ಕಠಿಣವಾದ ಸಂಕ್ರಮಣ ಕಾಲದಲ್ಲಿದ್ದೇವೆ. ಸಂಕೀರ್ಣ ಸ್ವಾರ್ಥಗಳ ಕಾರ್ಮೋಡವು ನಮ್ಮ ಭಾಗ್ಯ ರವಿಯನ್ನು ಮುಚ್ಚಿಕೊಂಡಿದೆ. ಜಾತಿಧರ್ಮ ನಿರಪೇಕ್ಷವಾಗಿ--ವರ್ಗ ಭೇದಭಾವ ರಹಿತವಾಗಿ ವಿಚಾರ ಮಾಡುವುದೇ ನಮಗಿಂದು ಕಠಿಣವಾಗಿದೆ. ಈ ಸಂಕೀರ್ಣ ಭಾವವನ್ನು ಸಂಪೂರ್ಣ ತೊಡೆದು ಹಾಕದೆ ನಮ್ಮ ಉದ್ಧಾರ ಎಷ್ಟಕ್ಕೂ ಆಗಲಾರದು. ಅನಾದಿಕಾಲದಿಂದಲೂ, ಸದ್ಬೋಧೆ ಕೊಡುವ ಮಹಾ ಪುರುಷರು ನಮ್ಮ ಪುಣ್ಯಭೂಮಿಯಲ್ಲಿ ಕಡಿಮೆಯಾಬುದಿಲ್ಲ. ಆದರೆ, ಸಮಾಜದಲ್ಲಿ--ಒಳ್ಳೇ ಬೋಧೆ ಕೇಳುವ ಮತ್ತು ತಿಳಿಯುವ ಕುರಿತು ಒಂದು ತೆರನಾದ ಉದಾಸೀನ ಸೇರಿಹೋಗಿದೆ. ಒಂದು ತರದ ದೊಡ್ಡ ದೋಷವು ಸಮಾಜವನ್ನು ಸತ್ಪ್ರವೃತ್ತಿಯ ಕಡೆಯಿಂದ ತಡೆದು ಹಿಡಿದಿದೆ. ಆ ದೆಸೆಯಿಂದ, ಉತ್ತಮ ಸಾಹಿತ್ಯಗಳ ರಚನೆ ಮಾತ್ರ ನಮ್ಮ ಗುರಿಯಾಗಿರದೆ, ಅಂತಹ ಉತ್ತಮ ಸಾಹಿತ್ಯ ರಚನೆಗಳು ಸಮಾಜ ಜೀವನದಲ್ಲಿ ಹೇಗೆ ಜೀರ್ಣವಾಗಬೇಕು ಎಂಬ ಕುರಿತಾಗಿಯೇ ನಾವು ಹೆಚ್ಚು ಚಿಂತಿಸಬೇಕಾಗಿದೆ. ಹೀಗೆ ಮಾಡುವಾಗ, ಮೊದಲಿಗೆ ನಾವು ಸಮಾಜದ ಔದಾಸೀನ್ಯವನ್ನೂ, ಬೇರುಬಿಟ್ಟು ನಿಂತ ಮಹಾ ದೋಷವನ್ನೂ ತೊಡೆದು ಹಾಕಬೇಕು

ಸ್ವಪ್ನದ ಸೃಷ್ಟಿಯನ್ನು ನಾವು ವಾಯುಮಂಡಲದ ಮೇಲೆ ನಿರ್ಮಿಸಬಹುದು! ಆದರೆ, ನಮಗಿಂದು ಸಾಹಿತ್ಯದ ನಿಜ ಸೃಷ್ಟಿ ಬೇಕಾಗಿದೆ ಇದು ಮಾತ್ರ ವಾಸ್ತವಭೂಮಿಯ ಮೇಲೆಯೇ ಆಗಬೇಕು. ಭೂಮಿಯ ಮೇಲೆ ಸತ್ಯವಾಗಿ ಬದುಕಿರುವ ಕೋಟ್ಯಾನುಕೋಟಿ 'ಜನ'ಕ್ಕಾಗಿ ಆಗಬೇಕು. ಈ ಕೋಟಿ ಕೋಟಿಜನ ಹೇಗಿದ್ದಾರೆ? ಅವರಿಗೆ ಏನು ಬೇಕು? ಏನು ಬೇಡ--ಈ ಜನ ಉದ್ಧಾರಕ್ಕೆ ಏನು ತೊಡಕಾಗಿದೆ ಎಂಬ ಅರಿವಿಲ್ಲದೆ ನಾವು ಅವರಿಗಾಗಿ ಏನನ್ನೂ ಮಾಡಲಾರೆವು. ಬರೇ ಕಲ್ಪನಾವಿಲಾಸಿಯಾದ ಸಾಹಿತಿಯಿಂದ ಇಂದಿನ ನಮ್ಮ ಅಗತ್ಯಗಳ ಪೂರ್ತಿಯಾಗಲಾರದು ಅಪಾರ ಜನಸಮೂಹದ ಕಷ್ಟ, ಸಂಕಷ್ಟಗಳನ್ನು ಕಣ್ಣಿನಿಂದ ಕಂಡ--ಕಂಡದನ್ನು ಅನುಭವದಿಂದ, ಸಹ ಅನುಭೂತಿಯಿಂದ ತಿಳಿದ--ವಸ್ತುಸ್ಥಿತಿಯ ವಾಸ್ತವಿಕ ಅನುಭವವುಳ್ಳ ಸಾಹಿತಿಯಿಂದ ಮಾತ್ರ ಈ ಕೆಲಸ ಸಾಧ್ಯ.

ಜಾತೀಯ ಭೇದಭಾವವು, ನಮ್ಮ ಸಮಾಜವನ್ನು ಅಧಃಪತನಕ್ಕೆ ಇಳಿಸಿದೆ. ಇಂದಿಗೂ ಜಾತೀಯ ಪಂಗಡಗಳು ತಮ್ಮ ಪ್ರತ್ಯೇಕ ಮನೆಕಟ್ಟಿಕೊಳ್ಳುವುದರಲ್ಲಿ ಮಗ್ನವಾಗಿವೆ. ಒಂದು ಜಾತಿಯು ಇನ್ನೊಂದು ಜಾತಿಯನ್ನು ಸಂಶಯ ದೃಷ್ಟಿಯಿಂದ–ದ್ವೇಷದಿಂದ ನೋಡುತ್ತಾ ಇವೆ ಈ ಸಂಶಯ–ಈ ದ್ವೇಷ–ಅಳಿಯಬೇಕು. "ಬೆಕ್ಕಿನ ಬಿಡಾರ ಬೇರೆ" ಎಂಬ ಈ ಭಾವ ಸಮೂಲ ನಷ್ಟವಾಗಬೇಕು. ಉಚ್ಚ-ನೀಚ ಭೇದವಳಿದು ಒಂದೇ ಮಾನವ ಜಾತಿಯು ಮೇಲೇಳಬೇಕು. ಹೀಗಾಗುವಾಗ, ಈ ತನಕ ಉಚ್ಚವೆಂದು ಭಾವಿಸಿಕೊಂಡು ಬಂದ ಜಾತಿಗಳು ಬಹಳವಾಗಿ ತ್ಯಾಗಬುದ್ಧಿ ತೋರಿಸಬೇಕಾದೀತು! ಶತಮಾನದ ವಿಕಟ ಅಪಮಾನದ ಸೇಡು ಪದದಲಿತ ಜಾತಿಯ ಕಡೆಯಿಂದ ತೀವ್ರ ಬರಬಹುದು! ಅದನ್ನು ಸಹಿಸದೆ ಗತ್ಯಂತರವಿಲ್ಲ! ಹಾಗೆಯೇ ಕೆಳಗಿನ ವರ್ಗವೂ ಮೇಲೇಳುವಾಗ ಶಾಂತಿಯಿಂದ, ಸಹನೆಯಿಂದ ಎದ್ದು ನಿಲ್ಲಬೇಕು. ಹಿಂದಿನ ಕಹಿ ಅನುಭವವನ್ನು ತೊಡೆದು ಹಾಕಲು ತೊಡಗಿದಾಗ-ಹೊಸ ಆಘಾತದಿಂದ ಪುನಃ ನೋವು ಉಂಟಾಗಬಾರದು ಈ ಜಾಗ್ರತೆ, ಜಾಗೃತಿ-ಮನೋಭೂಮಿಕೆ, ಸಮಾಜದಲ್ಲಿ ನೆಲೆಗೊಳಿಸುವ ಕೆಲಸ ಇಂದು ಸಾಹಿತ್ಯದ ಪಾಲಿಗಿದೆ.

ಭಾರತವರ್ಷದಲ್ಲಿ, ಈ ಜಾತಿಭೇದವು ಹೇಗೆ ಉಂಟಾಯಿತು? ಈ ಕುರಿತು ಅನೇಕ ಕಾರಣಗಳಿವೆ. ಐತಿಹಾಸಿಕ, ಸಾಮಾಜಿಕ, ರಾಜನೈತಿಕ, ಮತ್ತು ಆರ್ಥಿಕ ಕಾರಣಗಳ ಸಂಘರ್ಷಣೆಯಿಂದ ಜಾತಿಪರಂಪರೆಗಳ ಉತ್ಪನ್ನವಾಯಿತು. ಈ ಮಾತನ್ನು ಸಪ್ರಮಾಣವಾಗಿ ತಿಳಿಯಲು ನಾವು ದೂರ ಹೋಗಬೇಕಾಗಿಲ್ಲ. ವೇದಕಾಲದಿಂದ ಮುಂದೆಬಂದ ನಮ್ಮ ಆಚಾರ್ಯವರ್ಯರ ಸಂಸ್ಕೃತಸಾಹಿತ್ಯವೇ ಅದಕ್ಕೆ ಆಧಾರವಾಗಿದೆ. ಜನ ಸಾಮಾನ್ಯಕ್ಕೆ ಈ ಸತ್ಯವು ಸ್ಪಷ್ಟವಾಗಲು ಇರುವ ದೊಡ್ಡ ಆತಂಕವೆಂದರೆ, ನಮ್ಮ ಪ್ರಾಚೀನ ಸಾಹಿತ್ಯವು ಸಂಸ್ಕೃತ ಭಾಷೆಯಲ್ಲಿರುವುದೇ ಆಗಿದೆ. ನನ್ನ ದೃಷ್ಟಿಯಲ್ಲಿ ಯಾವ ಕಾಲದ್ದೇ ಆಗಲಿ, ಯಾವ ವಿಷಯದ್ದೇ ಆಗಲೀ, ಸಾಹಿತ್ಯವು ಜನಜೀವನದ ಇತಿಹಾಸ. ಈ ಇತಿಹಾಸವನ್ನು ನಮಗೆ ನಮ್ಮ ಭಾಷೆಯಲ್ಲಿ ಅಥವಾ ಇತರ ಭಾಷೆಗಳಲ್ಲಿ ತಿಳಿಸುವಾಗ ತಮ್ಮ ತಮ್ಮ ಸ್ವಾರ್ಥಕ್ಕೆ ಅನುಸಾರವಾಗಿ ತಿಳಿಸಿದ್ದಾರೆ ಒಮ್ಮೆ ಭೌಗೋಲಿಕ, ಜಾತಿಗತ, ಧರ್ಮಗತ ಹೆಚ್ಚಾಗಿ–ರಾಜನೈತಿಕ ದೃಷ್ಟಿಕೋನದಿಂದ ಈ ಸತ್ಯವು ವಿರೂಪವಾಗಿ ನಮ್ಮದೃಷ್ಟಿಯ ಮುಂದೆ ಬಂದಿದೆ. ನಮಗಿಂತ ಹೆಚ್ಚಾಗಿ ಸಂಸ್ಕೃತ ಸಾಹಿತ್ಯವನ್ನು ತಮ್ಮ ಭಾಷೆಯಲ್ಲಿ ಪರಿವರ್ತಿಸಿಕೊಂಡವರು ಪಾಶ್ಚಿಮಾತ್ಯರು. ಅವರ ದೃಷ್ಟಿ ಪ್ರಾಮುಖ್ಯವಾಗಿ ರಾಜನೀತಿಯ ಕಡೆಗಿತ್ತು. ನಮ್ಮನ್ನು ದಾಸರಾಗಿಯೇ ಉಳಿಸಿಕೊಳ್ಳಲು ಸದಾ ಹಾರೈಸಿದ ಅವರು ನಾವು ಹೇಗಿದ್ದೇವೋ ಹಾಗೆ ಇರಬೇಕೆಂದೂ ಹಾಗಾಗದೇ ಬೇ ಉಪಾಯವಿಲ್ಲವೆಂದೂ ತಿಳಿಸುವ ಯತ್ನ ಮಾಡಿದ್ದಾರೆ. ಮಾನವೀ ದೌರ್ಬಲ್ಯವನ್ನು ತಿಳಿದು ನಮ್ಮ ಪ್ರಾಚೀನ ಇತಿಹಾಸದ ಕಡೆಗೆ ನಿರ್ವಿಕಲ್ಪ ಬುದ್ಧಿಯಿಂದ ಕಂಡ ವ್ಯಕ್ತಿ ಮಾತ್ರ ಯಾರಿಲ್ಲವೆಂದಲ್ಲ! ಹಾಗಿದ್ದ ಪುಣ್ಯಾತ್ಮರಿಗೆ ನಾವು ಋಣಿಗಳೂ ಹೌದು, ಆದರೆ ಹೆಚ್ಚಿನವರು ನಮ್ಮ ಇಂದಿನ ವಿಷಮ ಸಮಾಜ ರಚನೆಯನ್ನು - ಪ್ರಾಚೀ ಸಭ್ಯತೆ ಸಂಸ್ಕೃತಿಯ ವಿಕಲ್ಪ ಉದಾಹಣೆ ಕೊಟ್ಟು - ಸರಿಯೆಂದು ಪ್ರತಿಪಾದ ದ ಅಪಪ್ರಚಾರದ ಉದಾಹರಣೆಯೂ ದೆ. ಈ ತೆರದ ಅಪಪ್ರಚಾರವನ್ನು ಹೊಗಲಾಡಿಸದೆ ಗತ್ಯಂತರವಿಲ್ಲ. ನಮಗಿಂ - ಸಮಾಜದ ಈ ಗೋದಲವು–ಹಿಂದಿ ದಲೂ ಬಂದುದಲ್ಲವೆಂದು ಸಪ್ರಮಾಣ ಗಿ ತಿಳಿಸಬೇಕಾಗಿದೆ ಅದಕ್ಕಾಗಿ, ನ ಪ್ರಾಚೀನ ಸಾಹಿತ್ಯವನ್ನು—ನಮ್ಮ ಆ ನಿಕ ಸಾಹಿತಿಗಳು ನಮ್ಮ ನಮ್ಮ ಭಾ ತರಬೇಕು. ನಮ್ಮ ನವ ನಿರ್ಮಾಣ ಮಾರ್ಗದಲ್ಲಿ ನಿಂತ ಆತಂಕಗಳನ್ನು ನಿ ರಿಸುವುದಕ್ಕಾಗಿ ಈ ಕಲಸ ಆತೀವ

(೧೧ನೇ ಪುಟ ನೋಡಿರಿ)

ಕಿರಿಯರ ಪ್ರಪಂಚದ ಪ್ರಕಟಣಗಳು

ಸ್ವತಂತ್ರ ಜೀವನೋಪಾಯ	ಭಕ್ತ	೦	೬
ಸಂಶಯ ಪಿಶಾಚಿ	ಕೆ. ಕೆ. ಶೆಟ್ಟಿ	೦	೧೦
ನಾಡ ಕಥೆಗಳು	ಸಂಕಲನ	೦	೪
ಕುಶಲವ	ಕೆ. ಕೆ. ಶೆಟ್ಟಿ	೦	೮
ಕಾವ್ಯ ಸಾಮ್ರಾಜ್ಯ	ಕವನಸಂಗ್ರಹ	೧	೮
ಮಧುವನ	ಕಥಾ ಸಂಕಲನ	೬	೦
ಮುಂದಿನ ದೇವರು	ಕೆ. ಕೆ ಶೆಟ್ಟಿ	೦	೪
ವ್ಯಭಿಚಾರಿಣಿ ಯಾರು?	,,	೧	೪
ಹೆಂಡ್ತಿ ಗಂಡನಾದರೆ	,,	೦	೪
ಪುರುಷವಧು	,,	೦	೪
ಸನ್ಯಾಸಿಯ ಸೋಗಿನಲ್ಲಿ	,,	೦	೧೨
ನಂದಾದೀಪ	ಕೊಡ್ಕಲ್	೧	೦
ದೇಶಭಕ್ತ	ಕೆ. ಕೆ. ಶೆಟ್ಟಿ	೧	೪
ಪ್ರೇಮ ವಿಜಯ	,,	೧	೦
ರಂಗಭೂಮಿ	ಎಸ್. ವೆಂಕಟರಾಜ	೦	೧೦
ನಾರೀಹೃದಯ	ಸುಬ್ರಹ್ಮಣ್ಯಂ	೧	೮
ಭಾರತೀಯ ಕಥೆಗಳು	ಕೊಡ್ಕಲ್	೧	೧೨
ಪ್ರಕಾಶ	ರಾಜವಾಡೆ	೨	೮
ಮೂರು ಪ್ರಹಸನಗಳು	ಕೊಡ್ಕಲ್	೧	೦
ಅನ್ನದೇವರು ಮತ್ತು ಇತರ ಕಥೆಗಳು		೧	೦
ಭಾರತದಲ್ಲಿ ಜಾತಿಭೇದ	ಸುಬ್ರಹ್ಮಣ್ಯಂ	೧	೦
ವಿಷ್ಣುವಿನ ದಶಾವತಾರಗಳು	ಹೆಗ್ಡೆ	೦	೧೨
ಆಕಾಶ ಗಂಗೆ	ವೆಂಕಟರಾಜ	೨	೪
ಸ್ವಾತಂತ್ರ್ಯವೀರ ಸಾವರಕರರು		೧	೪
ಜೀವನ ಸಂಗ್ರಾಮ	ಪಿ. ಶೀನ ಶೆಟ್ಟಿ	೧	೮
ಕದಂಬ	ರಾಜವಾಡೆ	೧	೪
ಕವಿತಾ ಕಾಮಿನಿ	ವೆಂಕಟರಾಜ	೨	೦
ಸ್ವರಾಜ್ಯ ವಿಜಯ	ಎಂ. ವಿ ಹೆಗ್ಡೆ	೧	೮
ಸಪ್ತಸಾಗರ	ವೆಂಕಟರಾಜ	೦	೧೨
ಜಮೀನ್ದಾರ	ಗುಡ್ಡಪ್ಪ	೧	೦

ಕೆಟಲಾಗಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಆಗ--?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿಯುವುದು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ, ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿ ಇರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ–ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕಂಡೊಡನೆ ನಿಮ್ಮದೇ ಆಗುವ, ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ, ನಿಮ್ಮ ನಾಡಿನ

ಈ ಕಂಪೆನಿಯಲ್ಲಿಯೇ ವಿಮೆ ಇಳಿಸಿರಿ

ದಿ ಕೆನರಾ ಮ್ಯೂಚುವಲ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಾರ್ಯಾಲಯ. ಉಡುಪಿ, ದ ಭಾರತ. ಸ್ಥಾಪನೆ: ೧೯೩೫

The Canara Mutual Assurance Co. Ltd.

Head Office: **UDIPI**, S. INDIA ESTD: 1935

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತಿದೆ, ಬಕ್ಕ ಬಾಯಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಕ್ಯಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.

Moolky, S. K.

ಅಧಿಕ ಆಹಾರ ಬೆಳೆಯುವ ಚಳುವಳಿ

ಆಹಾರಾಭಾವದ ಕಾರಣ ಹಾಗೂ ಪರಿಹಾರೋಪಾಯಗಳು

ಭಾರತವು ಯಥಾರ್ಥವಾಗಿಯೂ ಕೃಷಿಪ್ರಧಾನ ರಾಷ್ಟ್ರ. ಸುಮಾರು ೨೫೦ ಲಕ್ಷ ಎಕ್ರೆ ಸ್ಥಳವನ್ನು ಕೃಷಿ ಮಾಡುತಿದ್ದು, ಪ್ರತಿಯೊಂದು ತಲೆಗೆ ೭ ಎಕ್ರೆಯಷ್ಟು ಇದಾಗುತ್ತದೆ. ಇದರಲ್ಲಿ ಆಹಾರ ಧಾನ್ಯಗಳನ್ನು ಬೆಳೆಯುವ ಅಂಶ ಅರ್ಧ ಎಕ್ರೆಯಷ್ಟು. ೧೯೪೯-೫೦ನೇ ವರ್ಷದಲ್ಲಿ ನಾವು ೪೫೦ ಲಕ್ಷ ಟನ್ನು ಆಹಾರ ಧಾನ್ಯವನ್ನೂ, ೨೭ ಲಕ್ಷ ಬೇಲು ಹತ್ತಿಯನ್ನೂ, ೧೪ ಲಕ್ಷ ಬೇಲು ಸಣಬನ್ನೂ, ೪೯ ಲಕ್ಷ ಟನ್ನು ಕಬ್ಬನ್ನೂ, ೫೦ ಲಕ್ಷ ಟನ್ನು ಎಣ್ಣೆ ಕಾಳನ್ನೂ ಬೆಳೆದೆವು. ಈ ಎಲ್ಲ ವಸ್ತುಗಳ ಉತ್ಪಾದನೆಯಲ್ಲಿಯೂ ಕೊರತೆ ಎದ್ದು ಕಾಣುತಿತ್ತು. ಆದುದರಿಂದ ಪರಸ್ಪರ ಹೊಂದಿಕೆಯುಳ್ಳ ರೀತಿಯಲ್ಲಿ ಪೂರ್ಣಾಭಿವೃದ್ಧಿಯನ್ನು ಸಾಧಿಸುವುದು ಮಹತ್ವದ ಸಂಗತಿಯಾಯಿತು. ಪ್ರತಿಯೊಂದೂ ಬೆಳೆಯನ್ನು ಹೆಚ್ಚಿಸುವುದು ಪ್ರಥಮಾವಶ್ಯಕತೆ ಇದ್ದಂತೆ, ಆದರ ಕ್ಷೇತ್ರದ ಇತಿಮಿತಿ ಕೆಟ್ಟು ಉಳಿದ ಬೆಳೆಗಳಿಗೆ ಹಾನಿಯಾಗದಂತೆ ನೋಡಿಕೊಳ್ಳುವುದೂ ಅಗತ್ಯ. ಇದು ಪೂರೈಸಬೇಕಾದರೆ, ಸುಸಂಬದ್ಧವಾದ, ಯೋಜನಾ ಪೂರ್ವಕವಾದ ಕಾರ್ಯವು ಬೇಕೇ ಬೇಕು.

ಅನ್ನ-ಬಟ್ಟೆಯ ಪ್ರಶ್ನೆ

ಆಂತರಿಕ ಸಮಸ್ಯೆಯಲ್ಲಿ ಸರ್ವ ಪ್ರಥಮ ಸ್ಥಾನವು ಆಹಾರ ಧಾನ್ಯದ ಕೊರತೆಗೇ ಸಿಗುತ್ತದೆ. ಆಹಾರದ ಸಮಸ್ಯೆ ಬರ್ಮಾವನ್ನು ಭಾರತದಿಂದ ಬೇರ್ಪಡಿಸಿದನ್ನು ಹಿಂದಿನ ಕಾಲದಿಂದ ತೊಡಗಿದೆ. ಪಾಕಿಸ್ತಾನವು ಜನ್ಮಕ್ಕೆ ಬಂದಂದಿನಿಂದ ನಮ್ಮ ಆಹಾರಾಭಾವದ ಪರಿಸ್ಥಿತಿ ಇನ್ನಷ್ಟು ಉಲ್ಬಣಗೊಂಡಿತು. ಯುದ್ಧಕ್ಕೆ ಮುಂಚೆ ಬರ್ಮಾದಿಂದ ನಾವು ೧೫ರಿಂದ ೨೦ ಲಕ್ಷ ಟನ್ನುಗಳಷ್ಟು ಅಕ್ಕಿಯನ್ನು ಆಮದು ಮಾಡಿಕೊಳ್ಳುತಿದ್ದೆವು. ಸ್ವಾತಂತ್ರ್ಯಕ್ಕಾಗಿ ಪಶ್ಚಿಮ ಪಂಜಾಬ, ಸಿಂಧಗಳಂಥ ಉಳಿತಾಯದ ಪ್ರಾಂತ್ಯಗಳನ್ನು ಪಾಕಿಸ್ತಾನಕ್ಕೆ ಕೊಡುವ ಮೂಲಕ ಸಾಕಷ್ಟು ಬೆಲೆಕೊಟ್ಟೆವು. ಜನಸಂಖ್ಯೆಯೂ ಮಿತಿಮೀರಿ ಬೆಳೆಯತೊಡಗಿತು. ಹಾಗೆಂದು ಉತ್ಪಾದನೆಯಲ್ಲಿ ಹೆಮ್ಮೆಪಟ್ಟುಕೊಳ್ಳುವ ಪ್ರಗತಿಯನ್ನೇನೂ ನಾವು ಸಾಧಿಸಲಿಲ್ಲ. ಈಗಿನ ಪ್ರಮಾಣದಂತೆ ಜನಸಂಖ್ಯೆ ಏರುತ್ತಾ ಹೋದರೆ, ಮತ್ತು ಉತ್ಪಾದನೆ ಇದೇ ಮಟ್ಟದಲ್ಲಿ ನಿಂತರೆ ೧೯೫೫-೫೬ನೇ ವರ್ಷದಲ್ಲಿ ನಮಗೆ ೭೦ ಲಕ್ಷ ಟನ್ನುಗಳಷ್ಟು ಆಹಾರ ಧಾನ್ಯದ ಕೊರತೆ ಕಂಡುಬರಬಹುದೆಂದು ಅಂದಾಜು ಮಾಡಿದ್ದಾರೆ.

ಅನ್ನದ ಬಳಿಕ ಬಟ್ಟೆಯ ಕೊರತೆ ಬಾಧಿಸುತ್ತಿದೆ. ಯುದ್ಧಕ್ಕೆ ಮುಂಚೆ ಭಾರತವು ೪೫ ಲಕ್ಷ ಬೇಲು ಹತ್ತಿಯನ್ನು ಬೆಳೆಯುತಿದ್ದರೂ, ಆ ಬಳಿಕ ಜಪಾನೀ ಪೇಟೆಯು ಕೈಬಿಟ್ಟು ಹೋದುದರಿಂದ ಮತ್ತು ಆಹಾರ ಧಾನ್ಯದ ಉತ್ಕಟ ಕೊರತೆ ಕಂಡುದರಿಂದ ಹತ್ತಿಯ ಬೆಳೆಯ ಮೇಲೆ ಒಂದು ತೆರನಾದ ಹತೋಟಿ ಅಗತ್ಯವೆನಿಸಿತು. ಪರಿಣಾಮವಾಗಿ ಹತ್ತಿ ಬೆಳೆಯುವಲ್ಲಿ ಆಹಾರ ಧಾನ್ಯ ಬೆಳೆಸಲು ಪ್ರೋತ್ಸಾಹ ಕೊಟ್ಟರು. ಆದರೆ, ಭಾರತದ ವಿಭಜನೆಯ ಬಳಿಕ ಪರಿಸ್ಥಿತಿ ಪುನಃ ಬದಲಿತು. ಹತ್ತಿಯ ಪೂರೈಕೆಯಲ್ಲಿ ವಿಳಂಬ ಹಾಗೂ ಅನಿಶ್ಚಿತತೆ ತಲೆದೋರಿತು. ನಮ್ಮ ರುಪಾಯಿಯ ಮೌಲ್ಯ ವಿಚ್ಛೇದನದ ಬಳಿಕಂತೂ ಪಾಕಿಸ್ತಾನದ ಹತ್ತಿ ತುಂಬ ಬೆಲೆಯುಳ್ಳದ್ದಾಗಿ ಪರಿಣಮಿಸಿದ್ದು ಮಾತ್ರವಲ್ಲ-ಎರಡು ದೇಶಗಳೊಳಗೆ ವ್ಯಾಪಾರ ಸಂಬಂಧವೇ ಮುರಿಯಿತು. ದೇಶದೊಳಗೆ ಈಗಾಗಲೇ ಪ್ರವರ್ಧಮಾನಸ್ಥಿತಿಗೆ ಬಂದಿದ್ದ ಜವುಳಿ ಉದ್ದಿಮೆಗೆ ಇದರಿಂದ ಸಕಾಲಿಕ ಆಘಾತವುಂಟಾದುದನ್ನು ಕಂಡ ಸರಕಾರ-ಹತ್ತಿಯ ಪೂರೈಕೆಯನ್ನು ಸುವ್ಯವಸ್ಥಿತಗೊಳಿಸುವುದು ತನ್ನ ಕರ್ತವ್ಯವೆಂದು ಭಾವಿಸಿತು. ನಿರುದ್ಯೋಗವುಂಟಾಗುವುದನ್ನು ತಡೆಯಲೂ, ವಿದೇಶೀ ಪೇಟೆ ಹಾಗೂ ವಿನಿಮಯವನ್ನು ಉಳಿಸಿಕೊಳ್ಳಲೂ, ನಿರ್ಯಾತ ಸುಂಕ ಮುಂತಾದ ರೀತಿಯ ಆದಾಯ ಕೈಬಿಡದಂತೆಯೂ ಮಾಡುವ ಉದ್ದೇಶದಿಂದ ಸರಕಾರ ಹತ್ತಿ ಬೆಳೆಯಲು ಪ್ರೋತ್ಸಾಹ ಕೊಟ್ಟಿತು. ಸುಮಾರು ೧೨ ಲಕ್ಷ ಬೇಲು ಹತ್ತಿಯ ಕೊರತೆ ನಮಗಿದೆ.

ರೊಕ್ಕದ ಪ್ರೇರಿತ ಪರಿಸ್ಥಿತಿ

ವಿದೇಶೀ ನಾಣ್ಯ ಸಂಪಾದನೆಗೆ ಹೇಳಿಸಿದ ಸಣಬನ್ನು ಭಾರತ ಅಲಕ್ಷಿಸುವಂತಿಲ್ಲ. ಆದರೂ ವಿಭಜನೆಯಿಂದಾಗಿ ಸಣಬನ್ನು ಉತ್ಪಾದಿಸುವ ಪ್ರದೇಶದಲ್ಲಿ ಐದರಲ್ಲಿ ನಾಲ್ಕು ಪಾಲು ಪಾಕಿಸ್ತಾನಕ್ಕೆ ಸೇರಿತು. ಹಾಗೆಂದು ಸಣಬಿನ ಗಿರಣಿಗಳೆಲ್ಲ ಭಾರತದಲ್ಲೇ ಇದ್ದುವು. ಹೀಗಾಗಿ ಪೂರೈಕೆ ಹಾಗೂ ಉತ್ಪಾದನೆಯಲ್ಲಿ ಸಮತೋಲ ಉಳಿಯದೆ ಗಂಡಾಂತರ ಪರಿಸ್ಥಿತಿ ನಿರ್ಮಾಣಗೊಂಡಿತು. ರುಪಾಯಿ ಮೌಲ್ಯ ವಿಚ್ಛೇದನಾ ನಂತರವಂತೂ, ಹತ್ತಿಯ ಹಾದೇ ಸಣಬಿನದೂ ಆಯಿತು. ಆದುದರಿಂದ, ವಿದೇಶೀ ಪೂರೈಕೆಯನ್ನು ಅನಾವಶ್ಯಕವಾಗಿ ಅವಲಂಬಿಸದೆ ನಮ್ಮ ಗಿರಣಿಗಳಿಗೆ ಸಾಕಷ್ಟು ಸಣಬನ್ನು ಒದಗಿಸಿಕೊಡುವ ಉದ್ದೇಶದಿಂದ ಈ ದಿಸೆಯಲ್ಲಿಯೂ ಬಲವಾದ ಚಳುವಳಿ ನಡೆದಿದೆ. ಸುಮಾರು ೨೦ ಲಕ್ಷ ಬೇಲುಗಳಷ್ಟು ಸಣಬನ್ನು ನಾವು ಹೆಚ್ಚು ಉತ್ಪಾದಿಸಲು ಸಮರ್ಥರಾದಾಗ, ಈ ಉದ್ದೇಶ ಕೈಗೂಡುವುದು.

ಕಳೆದೆರಡು ದಶಕಗಳಲ್ಲಿ ಪ್ರಾಬಲ್ಯಕ್ಕೆ ಬಂದ ಉದ್ದಿಮೆ ಸಕ್ಕರೆಯದು, ನಮ್ಮ ಕಾರ್ಖಾನೆಗಳಿಗೆ ಸಾಕಷ್ಟು ಕಬ್ಬು ದೊರೆಯುತಿದ್ದರೆ, ಆವುಗಳಿಂದ ೧೫ ಲಕ್ಷ ಟನ್ನು ಸಕ್ಕರೆ ದೊರೆಯಲಿತ್ತು. ಹಾಗೆಂದು ೧೯೫೦ರಲ್ಲಿ ಉತ್ಪಾದಿತವಾದ ಸಕ್ಕರೆ ಸುಮಾರು ೧೦ ಲಕ್ಷ ಟನ್ನು ಮಾತ್ರ. ಉತ್ತಮ ಮಟ್ಟದ ಕಬ್ಬಿನ ಕೊರತೆಯೇ ಕಾರ್ಖಾನೆಗಳ ಯಂತ್ರಗಳು ಕೆಲಸವಿಲ್ಲದೆ ಕೆಡುವಂತೆ ಮಾಡಿತು. ಮೊದಲಿಂದಲೂ ಈ ಅಭಾವ ಇದ್ದು, ಕಬ್ಬನ್ನು ಸುಧಾರಿತ ಕ್ರಮದಲ್ಲಿ ಬೆಳೆಯಲು ಪ್ರಯತ್ನ ಸಾಗುತ್ತಿದೆ. ಕಬ್ಬಿನಂತೆ ಬೆಲ್ಲದ ಉತ್ಪಾದನೆಯೂ ಸಾಕಷ್ಟಿಲ್ಲ. ನಮ್ಮ ಆಹಾರದ ಸಮತೋಲವನ್ನು ಕಾಯ್ದುಕೊಂಡು ಹೋಗಬೇಕಾದರೆ, ಬೆಲ್ಲ ತಿನ್ನುವ ಅಭ್ಯಾಸ ಕೆಲಮಟ್ಟಿಗೆ ಬೆಳೆಯಬೇಕು.

ಎಣ್ಣೆ ಕಾಳುಗಳನ್ನು ಉತ್ಪಾದಿಸುವ ರಾಷ್ಟ್ರಗಳಲ್ಲಿ ಭಾರತ ಅತ್ಯಂತ ದೊಡ್ಡದು. ನೆಲಗಡಲೆಯೇ ನಮ್ಮ ಮುಖ್ಯ ಉತ್ಪಾದನೆ. ಈಚಿನ ವರ್ಷಗಳಲ್ಲಿ ಮನೆಯೊಳಗೂ ವಿದೇಶಗಳಲ್ಲಿಯೂ ಎಣ್ಣೆ ಕಾಳಿನ ಬೇಡಿಕೆ ಹೆಚ್ಚುತ್ತಾ ನಡೆದಿದೆ. ನಮ್ಮ ಬೇಡಿಕೆಯನ್ನು ಪೂರೈಸುವುದಕ್ಕೂ ಸ್ವಲ್ಪ ಮಟ್ಟಿನ ನಿರ್ಯಾತಕ್ಕೂ ಅನುವಾಗುವಂತೆ ಎಣ್ಣೆ ಕಾಳಿನ ಉತ್ಪಾದನೆ ಹೆಚ್ಚಿಸುವುದಾದಲ್ಲಿ, ನಾಲ್ಕು ಲಕ್ಷ ಟನ್ನುಗಳ ಕೊರತೆ ನಿವಾರಿಸಬೇಕು. -

ಸರಕಾರೀ ಯೋಜನೆ

ಸಾಮಾನ್ಯವಾಗಿ ೧೯೪೩ರಷ್ಟು ಹಿಂದಿನಿಂದಲೇ ಈ ಎಲ್ಲ ಬೆಳೆಗಳನ್ನು ಅಭಿವೃದ್ಧಿಗೊಳಿಸಲು ಕ್ರಮಗಳನ್ನು ಕೈಗೊಳ್ಳಲಾಗಿತ್ತು. ಮಹಾಯುದ್ಧದಲ್ಲಿ ಜಪಾನು ಭಾಗವಹಿಸಿದುದರಿಂದ ಉಂಟಾದ ಬಹುವಿಧದ ಕೊರತೆಗಳನ್ನು ನೀಗಲು ಭಾರತ ಸರಕಾರ "ಅಧಿಕ ಆಹಾರ ಬೆಳೆಯಿರಿ" ಚಳುವಳಿಯನ್ನು ಆಗ ತೊಡಗಿತು. ೧೯೪೭ರಿಂದ ಸಣಬು ಹಾಗೂ ೧೯೫೦ರಿಂದ ಹತ್ತಿಯ ಉತ್ಪಾದನೆ ಹೆಚ್ಚಿಸುವ ಬಗ್ಗೆ ಪರಿಣಾಮಕಾರೀ ಕ್ರಮಗಳನ್ನು ಸರಕಾರ ಅನುಸರಿಸುತ್ತಿದೆ. ಭಾರತದ ಕಬ್ಬಿನ ಸಮಿತಿ ೧೯೪೪ರಲ್ಲಿ ಅಧಿಕ ಉತ್ಪಾದನಾ ಯೋಜನೆಯೊಂದನ್ನು ಸಿದ್ಧಗೊಳಿಸಿತು. ಎಣ್ಣೆ ಕಾಳಿನ ಸಮಿತಿ ಕೂಡ ಕಳೆದೆರಡು ಮೂರು ವರ್ಷಗಳಿಂದ ಯೋಗ್ಯ ಉಪಕ್ರಮಗಳ ಮೂಲಕ ಉತ್ಪಾದನೆ ಹೆಚ್ಚಿಸಲು ಪ್ರಯತ್ನಿಸಿದೆ.

ಅಧಿಕ ಆಹಾರಬೆಳೆಯುವ ಚಳುವಳಿಯು ಮೊದ ಮೊದಲು ಅಲ್ಪಾವಧಿ ಯೋ

[೧೦ ಪುಟ ನೋಡಿರಿ.]

ಕುಂದಾಪುರದ ಡಿ. ಮು. ಕೋರ್ಟಿನಲ್ಲಿ

O. S 447/52

ಪಶಿಧರ ಬಚ್ಚಿ—ವಾದಿ

ನರಹರಿ ನಾಯ್ಕ ಸಹಾ — ಪ್ರತಿವಾದಿಯು

ಸದ್ರಿ ವಾದಿಯ ಕಡೆಯಿಂದ ಈ ಮೂಲಕ ತಿಳಿಯಪಡಿಸುವದೇನೆಂದ್ರೆ

2 ಶಂಕರ ನಾಯ್ಕ
4 ಗೋವಿಂದ್ರಾಯ ನಾಯ್ಕ } ಹೆಮ್ಮಾಡಿ ಬಾಬನಾಯ್ಕರ ಮಕ್ಕಳು

ಕುಂದಾಪುರ ತಾಲ್ಲೂ ಹೆಮ್ಮಾಡಿ ಗ್ರಾಮ- ವಾದಿಗೆ ಪ್ರತಿವಾದಿರಿಂದ ಬರತಕ್ಕ ಸರ್ವೆ ಟೆಕು ಲಾಗಾಯ್ತು ಸುರ ಸಂವತ್ಸರದ ಅಂತ್ಯವರೇಗಿನ ಮೂಲಗೇಣಿ ಗೇಣಿ ರೂಪಾಯಿ 378-3-2 ಬಂದಮಾಡಿಕೊಳ್ಳುವರೆ ಮಾಡಿದ ಮೇಲ್ಕಂಡ ದಾವೆಯು ತಾ. 31-10-52ಕ್ಕೆ ಕಸ್ಸಿಗೆ ಯಿಟ್ಟಿದೆ. ಈ ಕುರಿತು ನಿಮ್ಮದೇನಾದ್ರೂ ಉದಾಹರಣೆ ಯಿದ್ರೆ ಸದ್ರಿ ದಿವ್ಸ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ವಕೀಲರ ಮುಖಾಂತ್ರ ಹಾಜ್ರಾಗಿ ಜಾಹೀರ ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವವೆಂಬ ಸಂಗ್ತಿ ವಾದಿಕಡೆಯಿಂದ ಈ ಮೂಲಕ ತಿಳಿಸಲ್ಪಟ್ಟಿದೆ.

G. Sanjva Rao.
Vakil for Plaintiff.
Kundapur. Date 15-10-52

ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ತೆರೆಯಬೇಕಾದುದೇಕೆ?

ಬೇಂಕಿನಲ್ಲಿ ನಿಮ್ಮ ಲೆಕ್ಕವೊಂದು ತೆರೆಯಲ್ಪಟ್ಟಲ್ಲಿ ಅದು ನಿಮ್ಮಲ್ಲಿ ಬ್ಯಾಂಕಿಂಗ್ ವ್ಯವಹಾರದ ಮಹತಿಯನ್ನುಂಟುಮಾಡುವುದು; ಅನಾವಶ್ಯಯವಾಗಿ ಹೋಗುವ ಅತ್ಯಲ್ಪ ಐವಜನ್ನಾದರೂ ಬ್ಯಾಂಕಿನಲ್ಲಿಡಬೇಕೆಂಬ ಕುತೂಹಲವು ನಿಮ್ಮಲ್ಲುಂಟಾಗುವುದು. ನಿಮ್ಮ ಬ್ಯಾಂಕಿನಲ್ಲಿ ಇಂದೇ ಸೇವಿಂಗ್ಸ್ ಬ್ಯಾಂಕ್ ಲೆಕ್ಕವನ್ನು ತೆರೆದು ಅದರಲ್ಲಿ ಎಷ್ಟೇ ಸಣ್ಣ ಐವಜನ್ನಾದರೂ ಕ್ರಮಪ್ರಕಾರ ಶೇಖರಿಸುತ್ತ ಬಂದರೆ ಅದು ಬೇಗನೆ ದೊಡ್ಡ ಮೊತ್ತವಾಗಿ ನೀವು ವಿಶೇಷವಾಗಿ ಇಚ್ಛಿಸುವ ನಿಮ್ಮ ಕುಟುಂಬದ ಒಗ್ಗೆ ಗೃಹನಿರ್ಮಾಣ, ಮಕ್ಕಳ ವಿದ್ಯಾಭ್ಯಾಸ ಇತ್ಯಾದಿ ಕೆಲಸಗಳಿಗೆ ಒದಗುವದು

ಆದುದರಿಂದ ಇಂದೇ ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ತೆರೆಯಿರಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.
ಸ್ಥಾಪನೆ: 1925 ಹೆಡ್ ಆಫೀಸು ಉಡುಪಿ.

**The Canara Industrial &
Banking Syndicate Limited.**
Estd: 1925 H. O: UDIPI.

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

ಸ್ಮಾಲ್ ನಂ. 171/1952.

ತನಿಯಪ್ಪ ಪೂಜಾರಿ_ಕೊಡಂಗ ಮ್ಯಾಲ ಪುಂಜಿರಿ ಅಳಿಯ, ಪಡ್ನೂರು ಗ್ರಾಮ ಪುತ್ತೂರು ತಾಲೂಕು. —ವಾದಿ

ಮತ್ತು

1 ಶಿವಮ್ಮ ಹೆಂಗಸು. 2 ಕನಲ ಹೆಂಗಸು. —ಪ್ರತಿವಾದಿಯು

1ನೇ ಪ್ರತಿವಾದಿ ಶಿವಮ್ಮ ಹೆಂಗಸು—ಅಕ್ಕ ಹೆಂಗಸಿನ ಮಗಳು ಪುತ್ತೂರು ತಾಲೂಕು ಕೊಳ್ತಿಗೆ ಗ್ರಾಮದ ದೋರ ಇವಳಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ.

ಪ್ರತಿವಾದಿಯು ಅವರ ಕುಟುಂಬದ ಖರ್ಚು ಮತ್ತು ಪ್ರಯೋಜನಾರ್ಥಕ್ಕಾಗಿ ವಾದಿಯಿಂದ ರೂ 250-0-0 ನಗದಿಯಾಗಿ ಪಡಕೊಂಡು ತಾ 5-6-1950ರಲ್ಲಿ ವಾದಿಗೆ ಬರಕೊಟ್ಟ ರಿಜಿಸ್ಟ್ರಿ ದಿವಾಂದು ಪ್ರಾಮಿಸರಿ ನೋಟಿನ ಸಂಪೂರ್ಣ ಅಸಲು ಬಡ್ಡಿ ಐವೇಜು ವಸೂಲಿಗೆ ದಾಖಲ್ಲು ಮಾಡಿದ ಸದ್ರಿ ದಾವೆಯು ಮೇಲ್ಕಂಡ ಕೋರ್ಟಿನಲ್ಲಿ ತಾ 28-10-1952ಕ್ಕೆ ಇಟ್ಟಿರುವದರಿಂದ ಆ ಕುರಿತು ಆಕ್ಷೇಪವಿದ್ದಲ್ಲಿ ಆ ದಿವಸ ಹಗಲು 11 ಗಂಟೆಗೆ ಕೋರ್ಟು ಮುಂದೆ ವಾಕ್ಲು ಮಾಡಿಕೊಳ್ಳತಕ್ಕದ್ದು ತಪ್ಪಿದ್ದಲ್ಲಿ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲಾಗುವದು.

ಕೋರ್ಟು ಹುಕುಂ ಪ್ರಕಾರ.

Sd/ ಪಿ. ಕೃಷ್ಣ ಭಟ್.
ವಾದಿಕಡೆ ವಕೀಲ

ಪುತ್ತೂರು ತಾ. 15-10-52

ತೆರಿಗೆ ಸೂಚನೆಗಳು

ಅರ್ಥಸಚಿವರ ಪರಿಷತ್ತಿನ ಫಲಶ್ರುತಿ

ಆರ್ಥಿಕ ಸ್ಥಿತಿ

ಕೆಲಸಮಯದಿಂದೀಚೆಗೆ ಕುತೂಹಲದಿಂದ ನಿರೀಕ್ಷಿಸುತ್ತಿದ್ದ ಅರ್ಥ ಮಂತ್ರಿಗಳ ಪರಿಷತ್ತು ಕಳೆದ ವಾರ ದಿಲ್ಲಿಯಲ್ಲಿ ಕೂಡಿತು. ಕೇಂದ್ರ ಸರಕಾರದ ಅರ್ಥ ಸಚಿವ ಶ್ರೀ ಚಿಂತಾಮಣಿ ದೇಶಮುಖರು ಅಧ್ಯಕ್ಷತೆ ವಹಿಸಿದ್ದರು. ಇಪ್ಪತ್ತೆರಡು ರಾಜ್ಯ ಸರಕಾರಗಳ ಆರ್ಥಿಕ ಹಾಗೂ ತತ್ಸಂಬಂಧಿ ಶಾಖೆಗಳ ಮಂತ್ರಿಗಳಲ್ಲದೆ ಏಳು ರಾಜ್ಯಗಳ ಮುಖ್ಯ ಮಂತ್ರಿಗಳೂ ಪರಿಷತ್ತಿನಲ್ಲಿ ಭಾಗವಹಿಸಿದರು. ಯೋಜನಾ ಆಯೋಗದ ಕೆಲವು ಸದಸ್ಯರೂ ಕೇಂದ್ರ ಸರಕಾರದ ಮಂತ್ರಿಗಳಲ್ಲಿ ಕೆಲವರೂ ಪರಿಷತ್ತಿನಲ್ಲಿ ಉಪಸ್ಥಿತರಿದ್ದರು. ಹದಿನಾಲ್ಕು ಅಂಶಗಳ ಸುದೀರ್ಘವಾದ ಕಾರ್ಯಕ್ರಮವು ಪರಿಷತ್ತಿನಲ್ಲಿ ಚರ್ಚೆಗೆ ಇಡಲ್ಪಟ್ಟಿದ್ದರೂ—ಎರಡು ದಿನಗಳ ಅಲ್ಪಾವಧಿಯು ಇದಕ್ಕೆ ಸಾಲದೆಂಬುದು ಸ್ಪಷ್ಟವಿದೆ ಆದರೂ ಪ್ರತಿಯೊಂದೂ ಸಂಗತಿಯನ್ನು ಸಾಕಷ್ಟು ಮಟ್ಟಿಗೆ ವಿವರವಾಗಿಯೇ ಚರ್ಚಿಸಿ, ನಿರ್ಣಯಕ್ಕೆ ಬರಲು ನೋಡಲಾಯಿತು. ಕೇಂದ್ರದ ಅರ್ಥಸಚಿವ ಶ್ರೀ ದೇಶಮುಖರು ಪರಿಷತ್ತಿನ ಉದ್ದೇಶವನ್ನು ವಿವರಿಸಲು ಮಾಡಿದ ಪುಟ್ಟ ಭಾಷಣದಲ್ಲಿ ಈಗ ಕೇಂದ್ರಸರಕಾರವಿರಲಿ, ರಾಜ್ಯಸರಕಾರಗಳಿರಲಿ, ತಮ್ಮ ಚಟುವಟಿಕೆಗಳನ್ನು ವ್ಯಾಪಕಗೊಳಿಸುವುದು ತಮ್ಮ ಕರ್ತವ್ಯವೆಂದು ಭಾವಿಸುತ್ತವೆ. ಸ್ವಾಭಾವಿಕವಾಗಿ ಇದು ದೇಶದ ಆರ್ಥಿಕ ಪರಿಸ್ಥಿತಿಯ ಮೇಲೆ ಪರಿಣಾಮವನ್ನುಂಟುಮಾಡುತ್ತದೆ. ಆದುದರಿಂದ ಪರಸ್ಪರ ಸಹಕಾರವನ್ನು ತೋರಿಸಿ, ವಿಚಾರ ವಿನಿಮಯದ ಮೂಲಕ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಂಡು ಹೋಗಲೂ, ತಮ್ಮ ಧ್ಯೇಯಸಾಧನೆಗಾಗಿ ಅವಶ್ಯವಿದ್ದ ಕಾರ್ಯಕ್ರಮಗಳನ್ನು ಕೈಗೊಳ್ಳಲೂ ನೋಡುವುದು ಇಷ್ಟವಾಗಿದೆ ಎಂದರು.

ರಾಜ್ಯ ಸರಕಾರಕ್ಕೆ ಪಾಲು

ಯೋಜನಾ ಆಯೋಗವು ಸಿದ್ಧಪಡಿಸಿದ ಕಾರ್ಯಕ್ರಮವನ್ನು ಕಾರ್ಯರೂಪದಲ್ಲಿ ಇಳಿಸುವ ಹೊಣೆಯು ಕೇಂದ್ರ ಸರಕಾರದಂತೆ ರಾಜ್ಯ ಸರಕಾರಗಳ ಮೇಲೂ ಇದೆ ಹಲವು ರಾಜ್ಯ ಸರಕಾರಗಳ ಆದಾಯದ ಸ್ರೋತವು ಸೀಮಿತವಾಗಿರುವುದರಿಂದ, ಜನಹಿತ ಕೆಲಸಗಳನ್ನು ಕಾರ್ಯಕಾರಿಯಾಗಿಸಲು ಅಗತ್ಯವಿರುವ ಭಂಡವಾಳದ ಕೊರತೆ ಎನಿಸಿದೆ. ಇದಕ್ಕಾಗಿ ಕೇಂದ್ರಸರಕಾರದ ಆದಾಯದ ಬಾಬುಗಳಲ್ಲಿ ಕೆಲವನ್ನು ರಾಜ್ಯ ಸರಕಾರಗಳಿಗೆ ವಹಿಸಿಕೊಡಲು ಅಥವಾ ಅದರಲ್ಲಿ ಒಂದು ಪಾಲನ್ನಾದರೂ ಕೊಡಬೇಕು ಎಂದು ಆರ್ಥಿಕ ಆಯೋಗದೆದುರು ರಾಜ್ಯ ಸರಕಾರಗಳು ಸಾಕ್ಷಿ ನುಡಿದಿದ್ದುವು. ಆ ಆಯೋಗದ ವರದಿಯು ಇನ್ನೂ ಪ್ರಕಟಗೊಂಡಿಲ್ಲವಾದರೂ—ಹೆಚ್ಚು ಕಡಿಮೆ ಎಲ್ಲ ರಾಜ್ಯ ಸರಕಾರಗಳೂ ಕೇಂದ್ರದ ವಿರುದ್ಧ ಶಕ್ತಿ ಹಿಡಿದು ನಿಂತಿದ್ದುವೆಂಬುದು ಸ್ಪಷ್ಟ. ಈ ಕಾರಣದಿಂದ ದೇಶದ ಹಣಕಾಸಿನ ಪರಿಸ್ಥಿತಿ ಸುಧಾರಿಸುವುದೆಂದು ಯಾರೂ ತಿಳಿದುಕೊಳ್ಳಲಾಗದ. ಏಕೆಂದರೆ ಕೇಂದ್ರದ ಸಂಪತ್ತಿನ ಒಂದು ಭಾಗವನ್ನಷ್ಟೆ ರಾಜ್ಯ ಸರಕಾರಗಳ ಬೊಕ್ಕಸಕ್ಕೆ ಬಿಟ್ಟುಕೊಡಲಾಗುವುದಲ್ಲದೆ ಬೇರೇನಿಲ್ಲ ಎಂದು ದೇಶಮುಖರು ಹೇಳಿದರು

ಮಾರಾಟ ಕರ

ಹೀಗೆ ಆರ್ಥಿಕ ಪರಿಸ್ಥಿತಿಯು ಹದಗೆಡದಂತೆ ನೋಡಿಕೊಳ್ಳುವುದು ಅರ್ಥಸಚಿವರ ಪರಿಷತ್ತಿನ ಮುಖ್ಯ ಉದ್ದೇಶವಾಗಿತ್ತು. ದೇಶದಲ್ಲಿ ಕೆಲ ಸಮಯದಿಂದ ಮಾರಾಟಕರ ಆಕರಣೆಯ ಸಂಬಂಧದಲ್ಲಿ ರಾಜ್ಯ ಸರಕಾರಗಳು ಈಗ ಅನುಸರಿಸುತ್ತಿರುವ ಸ್ವತಂತ್ರವಾದ ಧೋರಣೆಯನ್ನು ಪುನರ್ವಿಮರ್ಶಿಸಬೇಕೆಂಬ ಗುಲ್ಲು ಸರ್ವಸಾಮಾನ್ಯವಾಗಿ ಎದ್ದಿತ್ತು. ಒಂದೊಂದು ರಾಜ್ಯವೂ ಒಂದೊಂದು ಬಗೆಯಾಗಿ ಮಾರಾಟಕರ ಹೇರುವುದರಿಂದ ವ್ಯಾಪಾರೀ ವರ್ಗಕ್ಕೆ ಕಿರುಕುಳವುಂಟಾಗಿದೆ ಎಂದು ದೂರು ಕೇಳಿ ಬರುತ್ತಿದೆ. ಈ ಸಂಬಂಧ ನಡೆದ ಚರ್ಚೆಯ ಪರಿಣಾಮವಾಗಿ, ಈಗಿನ ಪದ್ಧತಿಯಲ್ಲಿ ಏನೊಂದೂ ಪರಿವರ್ತನೆಯುಂಟಾಗುವ ಲಕ್ಷಣವಿಲ್ಲವೆಂದು ಸಿದ್ಧವಾಗಿದೆ. ಕೇಂದ್ರ ಸರಕಾರದ ಮಂತ್ರಿಗಳು ಮಾರಾಟಕರದ ಸ್ವರೂಪದಲ್ಲಿ ಏಕಸೂತ್ರತೆಯನ್ನು ತರುವುದಕ್ಕೆ ಅನುಕೂಲರಿದ್ದರೂ ರಾಜ್ಯ ಸರಕಾರಗಳು ತಮ್ಮ ಆದಾಯದ ಮುಖ್ಯಾಂಶವಾಗಿ ಉಳಿದಿರುವ ಈಯೊಂದು ವಿಷಯದಲ್ಲಿ ಕೇಂದ್ರದ, ಅಥವಾ ಆ ಮಾತಿಗೆ ಬೇರಾವುದೇ ರಾಜ್ಯದ, ಪ್ರಭುತ್ವವನ್ನು ಒಪ್ಪಿಕೊಳ್ಳಲು ಸಮ್ಮತಿ ತೋರಲಿಲ್ಲ- ಮದ್ರಾಸಿನ ಮುಖ್ಯ ಮಂತ್ರಿ ರಾಜಗೋಪಾಲಾಚಾರಿಯವರು ಪರಿಷತ್ತಿನಲ್ಲಿ ಭಾಗವಹಿಸಿ, ಮಾರಾಟಕರದ ಆಕರಣೆಯ ಸಂಬಂಧದಲ್ಲಿ ರಾಜ್ಯ ಸರಕಾರಗಳಿಗೆ ಪೂರ್ಣ ಸ್ವಾತಂತ್ರ್ಯವಿರಬೇಕೆಂದು ಪ್ರತಿಪಾದಿಸಿದರು. ಕೇಂದ್ರ ಸರಕಾರದ ಅಭಿಪ್ರಾಯವನ್ನು ಖಂಡಿಸಿ ಮಾತನಾಡಲು ಹಿಂದು ಮುಂದ ನೋಡುತಿದ್ದ ಇತರ ರಾಜ್ಯದ ಮಂತ್ರಿಗಳಿಗೂ ರಾಜಾಜಿಯ ಸ್ಪಷ್ಟವಾದ ಪ್ರತಿಪಾದನೆಯಿಂದ ಜೀವ ಬಂದಂತಾಗಿ, ರಾಜಾಜಿ ಹೇಳುವುದಕ್ಕೆ ತಮ್ಮ ಸಮರ್ಥನೆಯನ್ನು ಕೊಟ್ಟರು.

ಸೌಹಾರ್ದ ಸಂಬಂಧ

ರಾಜಗೋಪಾಲಾಚಾರಿಯವರ ಉಪಸ್ಥಿತಿಯಿಂದ ಪರಿಷತ್ತು ಗೊಂದಲದಲ್ಲಿ ಮುಕ್ತಾಯವಾಗುವ ಬದಲು ಸುಸಂಬದ್ಧವಾಗಿ ಚರ್ಚೆಯನ್ನು ನಡೆಸುವಂತಾಯಿತು ಎಂದು ಮದ್ರಾಸಿನ ಅರ್ಥಮಂತ್ರಿ ಶ್ರೀ ಸಿ ಸುಬ್ರಹ್ಮಣ್ಯಂ ಹೇಳುತ್ತಾರೆ. ಮೈಸೂರಿನ ಮುಖ್ಯಮಂತ್ರಿ ಶ್ರೀ ಹನುಮಂತಯ್ಯ ಕೂಡಾ ರಾಜಾಜಿ ಅಲ್ಲಿದ್ದುದು ತುಂಬ ಉಪಕಾರವಾಯಿತು ಎನ್ನುತ್ತಾರೆ. ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳ ನಡುವೆ ಸೌಹಾರ್ದಮಯವಾದ ಮತ್ತು ಸಹಕಾರ ಮನೋವೃತ್ತಿಯ ಸಂಬಂಧವಿರಬೇಕೆಂದು ಘಟನೆಯಲ್ಲಿ ನಿರ್ದೇಶಿಸಲಾಗಿದೆ. ಎಂದ ಮಾತ್ರಕ್ಕೆ ಪ್ರತಿಯೊಂದೂ ವಿಷಯದಲ್ಲಿ ಕೇಂದ್ರ ಸರಕಾರದ ಮಾತೇ ನಡೆಯಬೇಕೆಂದು ಹೇಳುವುದು ಸರಿಯಾಗದು. ಮುಖ್ಯವಾಗಿ ಮಾರಾಟ ಕರದಂಥ ಪ್ರಶ್ನೆಯಲ್ಲಿ—ರಾಜ್ಯ ಸರಕಾರದ ಆದಾಯವೆಂಬ ಜೀವಾಳದ ಅಂಶ ಹುದುಗಿದೆಯಷ್ಟೆ. ಮುಂಬಯಿ, ಮದ್ರಾಸು ಮುಂತಾದ ರಾಜ್ಯಗಳು ಪಾಪಪ್ರತಿಬಂಧ ಧೋರಣೆಯನ್ನು ಬಿಟ್ಟೂ ಬಿಡದೆ ಅನುಸರಿಸುತ್ತಿರುವುದರಿಂದ- ಮಾರಾಟಕರದ ಆದಾಯವನ್ನು ಕುಗ್ಗಿಸಲು ಸುತರಾಂ ಒಡಂಬಡುವುದಿಲ್ಲ ಉಳಿದ ರಾಜ್ಯಗಳ ಪಾಲಿಗೆ, ಮಾರಾಟಕರ ಹೇರುವುದು ಆದಾಯವನ್ನು ಹೆಚ್ಚಿಸಲು ತೆರೆದಿರುವ ಒಂದು ವಿಧಾನವಾಗಿದೆ. ಆದುದರಿಂದ ಅದನ್ನು ಕಳೆದುಕೊಳ್ಳಲು ಯಾರೂ ಬಯಸುವುದಿಲ್ಲ.

ಭಂಡವಾಳದ ಕೊರತೆ

ಪಂಚವಾರ್ಷಿಕ ಯೋಜನೆಯ ಬಗ್ಗೆ ಅರ್ಥಸಚಿವರ ಪರಿಷತ್ತಿನಲ್ಲಿ ಚರ್ಚೆ ನಡೆದಾಗ, ರಾಜಗೋಪಾಲಾಚಾರಿಯವರು ಬರಗಾಲದಂಥ ಭೀಕರ ಪರಿಸ್ಥಿತಿಯನ್ನು ಎದುರಿಸಲು ಯೋಜನಾ ಆಯೋಗ ಏನೊಂದೂ ಏರ್ಪಾಡನ್ನು ಮಾಡದಿದ್ದುದು ವಿಷಾದಕರವೆಂದು ಹೇಳಿದ್ದಲ್ಲದೆ, ಬರಗಾಲ ನಿಧಿಯೊಂದನ್ನು ತೆಗೆದಿಡುವುದರ ಆವಶ್ಯಕತೆಯನ್ನು ಸ್ಪಷ್ಟವಾಗಿ ಬಿಂಬಿಸಿದರು. ಮೈಸೂರಿನ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ಇದಕ್ಕೆ ಹಾರ್ದಿಕ ಬೆಂಬಲ ಕೊಟ್ಟರು ಎಂದು ತಿಳಿದು ಬಂದಿದೆ. ರಾಜಾಜಿಯ ಸೂಚನೆಯ ಆಶಯವನ್ನು ಯೋಜನಾ ಆಯೋಗ ಮನವರಿಕೆ ಮಾಡಿಕೊಂಡಿದೆಯಾಗಿಯೂ ಸುಮಾರು ೩೦ ಕೋಟಿ ರೂಪಾಯಿಯಷ್ಟು ನಿಧಿಯನ್ನು ಬರಗಾಲ ಪರಿಹಾರೋಪಾಯಗಳಿಗಾಗಿ ಪ್ರತ್ಯೇಕಿಸಿ ಇಡಬಹುದೆಂದೂ ನಿರೀಕ್ಷಿಸಲಾಗಿದೆ ಪಂಚವಾರ್ಷಿಕ ಯೋಜನೆಯು ಈ ಮೊದಲು ಹೇಳಿದಂತೆ ಎರಡು ಭಾಗಗಳಲ್ಲಿ ಕಾರ್ಯರೂಪಕ್ಕೆ ಇಳಿಯದೆ, ಸುಮಾರು ಎರಡು ಸಾವಿರ ಕೋಟಿ ರೂಪಾಯಿ ವೆಚ್ಚವನ್ನು ತರುವ ಪೂರ್ಣ ರೂಪದಲ್ಲಿ ಕಾರ್ಯಗತಗೊಳಿಸಲ್ಪಡುವುದೆಂದು ತಿಳಿದಿದೆ. ಈ ಸಂಬಂಧ ಅಗ ತ್ಯವಿರುವ ಭಂಡವಾಳದಲ್ಲಿ ೨೭೯ ಕೋಟಿ ರೂಪಾಯಿಯ ಕೊರತೆ ಕಂಡು ಬಂದಿತೆಂದೂ, ಇದನ್ನು ದೇಶದೊಳಗಿನಿಂದಲೆ ಕೂಡಿಸಿ ಹೊಂದಿಸಬಹುದೆಂದೂ ದೇ ಮುಖರ ವಿಶ್ವಾಸ. ಇದಕ್ಕೂ ಹೆಚ್ ವೆಚ್ಚ ಬರುವುದಾದಲ್ಲಿ ಮಾತ್ರ ನಾಸಿಕ ಮುದ್ರಣಾಲಯಕ್ಕೆ ಕಣ್ಣೆ ಕಾದೀತು. ಅದು ಅನಿಷ್ಟಕ ವಾದುದರಿಂದ, ಯೋಜನೆಯಲ್ಲಿ ಕೆ ವಂಶವನ್ನು ಬದಿಗೆ ಸರಿಸಬೇಕಾದೀತ

ಉಳಿತಾಯ ಯೋಜನೆ

ರಾಜ್ಯ ಸರಕಾರಗಳು ಸಾಲಪತ್ರಗ ನ್ನು ಮಾರುವ ಸಂಬಂಧದಲ್ಲಿ ಕೂಡ ಗಿನ ಪದ್ಧತಿಯೇ ಮುಂದೆಯೂ ನಡೆಯ ವುದು. ಚಿಕ್ಕ ಪುಟ್ಟ ಉಳಿತಾಯಗಳ ಗತಿಯಲ್ಲಿ ಎಲ್ಲರೂ ತುಂಬ ಆಸಕ್ತಿ ನ್ನು ತೋರಿದರು. ಸುಮಾರು ೪೫ ಕೋ ಟಿ ರೂಪಾಯಿ ಈ ವರ್ಷ ಸಣ್ಣ ಸಣ್ಣ ವುದಾರರಿಂದ ಕೂಡಿ ಬಂದೀತೆಂದು ದಾಜುಮಾಡಿದ್ದಲ್ಲದೆ ಈ ವರ್ಷಾರಂಭ ಐದು ತಿಂಗಳುಗಳಲ್ಲಿ ೧೮ ಕೋಟಿ ಪಾಯಿಯಷ್ಟು ನಿಧಿ ಈ ರೀತಿ ಕೂಡಿದೆ ದೂ ತಿಳಿದುಬಂದಿದೆ. ಇದರ ಮೇಲಿ ಹೇಳುವುದಾದರೆ-ಸರಕಾರವು ಜನಸಾಮಾ ನ್ಯರಲ್ಲಿ ಮಿತವ್ಯಯ ಪ್ರವೃತ್ತಿಯನ್ನೂ ಉಳಿತಾಯದ ಬುದ್ಧಿಯನ್ನೂ ಉಂಟುಮಾ ಡುವುದಕ್ಕೆ ಆಕರ್ಷಕ ವಿಧಾನವನ್ನು ನುಸರಿಸಬೇಕು. ಎಂದರೆ, ಅಭಿವೃ ಯೋಜನೆಗಳಿಗೆ ಭಂಡವಾಳವನ್ನು ಒ ಸುವ ಸಮಸ್ಯೆ ಕೆಲಮಟ್ಟಿಗೆ ಬಿಡಿಸಲ್ಪ

PLACE YOUR LIFE ASSURANCE WITH A COMPANY OF YOUR OWN - - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policyholders and Representatives At whatever stage we welcome your association with the POPULAR.

The Popular Insurance Co. Ltd.

"Popular Buildings", MANGALORE—1.

ZANDU Mahayogaraja Guggula.

ಝಾಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ. 1 **ತೊಲೆಗೆ ರೂ 3-** ಮಾತ್ರ.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್.
ಕೆಮಿಸ್ಟ್ಸ ಎಂಡ್ ಡ್ರಗ್ಗಿಸ್ಟ್ಸ, ಉಡುಪಿ.
2 ಶ್ರೀ. ವಿ. ವಿ ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್. ಎಸ್. ಶರ್ಮ, ಹಜೂರು ರಸ್ತೆ ಮಂಗಳೂರು.
ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರ ಶರತ್ತು ವಗೈರೆಗಳಿಗೆ ಬರೆಯಿರಿ.

DAMODAR & CO.,

Nainiappa Naicken Street, Park Town—**MADRAS** 3.

ರೂಪ ಪರಿವರ್ತನೆ

ಶ್ಚಿಮ ಬಂಗಾಳಕ್ಕೆ ಬಂದೊದಗಿರುವ ಕುತ್ತು

ು. ಅರ್ಥಸಚಿವರ ಪರಿಷತ್ತಿನಲ್ಲಿ ರಾ ಸರಕಾರಗಳ ವಿಶೇಷ ಪ್ರಯತ್ನದ ಫ ವಾಗಿ ಕೂಡಿದ ಉಳಿತಾಯದ ಯಲ್ಲಿ ಒಂದು ಪಾಲನ್ನು ಅವುಗಳಿಗೆ ಡಬೇಕೆಂದು ಒಪ್ಪಿಕೊಳ್ಳಲಾಗಿದೆ. ಇ ಶುಭ ಚಿಹ್ನೆಯೇ ಸೈ.

ಕೈಮಗ್ಗದ ಸಮಸ್ಯೆ

ಬಂಗಾಲ ಪರಿಸ್ಥಿತಿಯನ್ನು ಕಣ್ಣಾರೆ ಡು ಮರಳಿದ ನೆಹರೂ ಕೇಂದ್ರ ಸರ ರವು ಅಧಿಕಾಧಿಕ ಆರ್ಥಿಕ ನೆರವನ್ನು ಜ್ಯ ಸರಕಾರಗಳಿಗೆ ನೀಡಿ, ಪರಿಹಾ ರೋಪಾಯ ಸುಗಮವಾಗುವಂತೆ ಮಾಡ ಕೆಂಬ ಬಗ್ಗೆ ಅನುಕೂಲ ಮತವನ್ನು ಂದಿರುವರು ಎಂದು ಹೇಳಲಾಗುತ್ತಿ ಬಂಗಾಲ ಪರಿಸ್ಥಿತಿಯನ್ನು ಎದುರಿ ದಲ್ಲಿ ರಾಜ್ಯ ಸರಕಾರಗಳು ಕೈಮೀರಿ, ಕ್ತಿಮೀರಿ ಪ್ರಯತ್ನಿಸುತ್ತಿದ್ದರೂ, ಈ ಹಿ ಯ ದೇಶ ವ್ಯಾಪಿಯಾದ ಸಮಸ್ಯೆಯು ಬೆಳೆಯುತ್ತಲಿದೆ. ರಾಜಗೋಪಾಲಾಚಾರಿಯ ರು ಕೇಂದ್ರದೊಡನೆ ಹೋರಾಡಲಿಕ್ಕೆ ಬದ್ಧರಾಗಿರುವಂತೆ ತೋರುತ್ತಿದೆ. ಅವ ಕೈಮಗ್ಗದ ಉದ್ದಿಮೆಯ ಸಂಬಂಧದ ಯೂ ತಮ್ಮ ನಿಲುವೆಯನ್ನು ಸ್ಪಷ್ಟ ಗಿ ಪ್ರತಿಪಾದಿಸಿದರು. ಲಕ್ಷಾಂತರ ಜ ರ ಅನ್ನ ಬಟ್ಟೆ ಹಾಗೂ ಉದ್ಯೋಗದ ಪ್ರ ಯಾಗಿ ನಿಂತಿರುವ ಕೈಮಗ್ಗದ ಸಮಸ್ಯೆ ನ್ನು ಯೋಜನಾ ಆಯೋಗ ಸಹಾನು ತಿಯಿಂದ ಕಾಣಬೇಕೆಂದು ಅವರ ಅಪೇ . ಯೋಜನಾ ಆಯೋಗ ಇದಕ್ಕೆ ಒಪ್ಪಿ ಂಡು ೧೯೫೫-೫೬ರ ಸುಮಾರಿಗೆ ಈ ದ ವಾರ್ಷಿಕ ಉತ್ಪನ್ನವಾದ ೮೦ ಟಿ ಗಜ ಕೈಮಗ್ಗದ ಬಟ್ಟೆಯನ್ನು ೭೦ ಕೋಟಿ ಗಜಕ್ಕೆ ಏರಿಸಬೇಕೆಂದು ಫಾರಸು ಮಾಡಿದೆ. ಆದರೂ ರಾಜಾಜಿ ಳಿದಂತೆ ಸೀರೆ ಮತ್ತು ಧೋತ್ರಗಳ ನೇಯ್ಗೆ ಅಧಿಕಾರವನ್ನು ಕೈಮಗ್ಗಗಳಿಗೆ ಪೂರ್ಣವಾಗಿ ಬಿಟ್ಟುಕೊಡತಕ್ಕದ್ದಲ್ಲವೆಂ ಅಲ್ಪಾವಧಿಯ ಸಂರಕ್ಷಣೋಪಾಯ ಗಿ ಹಾಗೆ ಮಾಡಬಹುದಲ್ಲವೆ, ಆ ಬಳಿಕ ತಮ್ಮ ನಾಜೂಕನ್ನು ಹೆಚ್ಚಿಸುವುದರಿಂದಲೇ ಕೈಮಗ್ಗದ ಬಟ್ಟೆ ಗಿರಾಕಿಗಳನ್ನು ಆಕರ್ಷಿಸುವಂತಾಗಬೇಕೆಂದೂ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ

ಭೂಕಂದಾಯದ ಮೇಲ್ತೆರಿಗೆ

ಮದ್ರಾಸು ರಾಜ್ಯದಲ್ಲಿ ಹೊಸ ತೆರಿಗೆಗಳನ್ನು ಹೇರುವ ಬಗ್ಗೆ ಸರಕಾರ ಮಾಡಿದ್ದ ಸೂಚನೆಗಳನ್ನು ಪರಿಶೀಲಕ ಸಮಿತಿಗೆ ಒಪ್ಪಿಸಿದ್ದರಷ್ಟೆ: ಈಗ ತಾನೆ ಅದರ ವರದಿಯು ಪ್ರಸಿದ್ಧಗೊಂಡಿದೆ. ಭೂಕಂದಾಯದ ಮೇಲೆ ಮೇಲ್ತೆರಿಗೆ (= ಸರ್‌ಚಾರ್ಜ) ಯನ್ನು ವಿಧಿಸುವ ಪ್ರಶ್ನೆಯಲ್ಲಿ ಸಮಿತಿಯು ಬದಲಾವಣೆ ಮಾಡಿ, ವಿನಾಯತಿಗೆ ಅರ್ಹವಾದ ಕನಿಷ್ಟ ಮಿತಿಯನ್ನು ರೂ. ೫೦ ಎಂದು ಗೊತ್ತುಮಾಡಿದೆ. ಆ ಬಳಿಕದ ರೂ. ೫೦ಕ್ಕೆ ರುಪಾಯಿಗೆ ಎರಡಾಣೆಯಂತೆ, ಅನಂತರದ ರೂ. ೧೦೦ಕ್ಕೆ ರುಪಾಯಿಗೆ ನಾಲ್ಕಾಣೆ, ಅನಂತರದ ರೂ. ೨೦೦ಕ್ಕೆ ರುಪಾಯಿಗೆ ಎಂಟಾಣೆ, ಅನಂತರದ ರೂ. ೫೦೦ಕ್ಕೆ ರುಪಾಯಿಗೆ ಹನ್ನೆರಡಾಣೆ, ಆ ಬಳಿಕುಳಿದ ಕಂದಾಯದ ಮೇಲೆಲ್ಲ ರುಪಾಯಿಗೆ ಹದಿನಾರಾಣೆ ಎಂದೂ ಸಮಿತಿ ನಿರ್ಧರಿಸಿದೆ. ಸಮಿತಿಯ ವರದಿಯಲ್ಲಿ ಸರಕಾರ ಆದಾಯವನ್ನು ಹೆಚ್ಚಿಸುವುದಕ್ಕಾಗಿಯೇ ಈ ತೆರಿಗೆಯ ಸೂಚನೆಯನ್ನು ಮಾಡಿದೆ ಎಂದು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಲಾಗಿದೆ. ಈ ತೆರಿಗೆಯು ಸಣ್ಣ ಹಿಡುವಳಿದಾರರಿಗೆ ಕಿರುಕುಳಸ್ವರೂಪವಾಗದಂತೆ, ಹಾಗೂ ದೊಡ್ಡವರಿಗೆ ಹೊರೆಯಾಗದಂತೆ ನೋಡಿಕೊಳ್ಳುವ ರೀತಿ ಈಗಿನ ಶಿಫಾರಸನ್ನು ಮಾಡಲಾಗಿದೆ. ಈಗಿನ ಶಿಫಾರಸು ಅವಿರೋಧವಾಗಿದೆ, ಹಲವರು ಇದಕ್ಕೆ ಅಸಮ್ಮತಿಯನ್ನು ಸೂಚಿಸಿರುವರೆಂದೂ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಮೇಲ್ತೆರಿಗೆಯನ್ನು ಹೊರಿಸುವ ಈ ಕ್ರಮದಲ್ಲಿ ಹಲವು ನ್ಯೂನಾತಿರೇಕಗಳಿವೆ ಎಂಬುದನ್ನು ಎತ್ತಿ ತೋರಿಸಲಾಗಿದ್ದು, ಸಮಿತಿಯಲ್ಲಿರುವ ಕಾಂಗ್ರೆಸು ಸದಸ್ಯರ ಹೆಚ್ಚಳದ ಬಲವೊಂದರಿಂದಲೇ (ಸರಿಯಾಗಿ ೧೧-ವಿರುದ್ಧ ೯) ಈ ಶಿಫಾರಸುಗಳು ಬೆಳಕು ಕಾಣುವಂತಾಗಿದೆ ಎಂದೂ ಆಕ್ಷೇಪ ಮಾಡುತ್ತಾರೆ.

ಪ್ರತಿಪಕ್ಷದ ಆಕ್ಷೇಪ

ಮೇಲ್ತೆರಿಗೆಯನ್ನು ಹೊರಿಸುವ ಈ ಹೊಸ ಮಸೂದೆಗೆ ಪುನರ್ವಿಮರ್ಶೆಯ ಬಳಿಕ ಕೂಡ ತತ್ವತಃ ಕೆಟ್ಟದೆಂದೂ, ಸ್ವರೂಪದಲ್ಲಿ ಕಾಠಿಣ್ಯದಿಂದ ಕೂಡಿದೆಯಾಗಿಯೂ, ಉತ್ಪಾದನೆಯನ್ನು ಹೆಚ್ಚಿಸುವ ಪ್ರವೃತ್ತಿಗೆ ಕೊಡಲಿಯೇಟಿನಂತಿದೆಯಾಗಿಯೂ ವಿರುದ್ಧಾಭಿಪ್ರಾಯ ಸೂಚಿಸಿದ ಒಂಭತ್ತು ಮಂದಿ ಸದಸ್ಯರೆಂದಿದ್ದಾರೆ. ಅದರಲ್ಲೂ ರಾಜ್ಯದಲ್ಲಿ ಎತ್ತ ನೋಡಿದತ್ತ ಕ್ಷಾಮಭೀತಿ ತಾಂಡವವಾಡುವುದು ದೃಷ್ಟಿಗೋಚರವಾಗುವಾಗ, ಈ ಮಸೂದೆಯು ಮಸೂದೆ ತರಲು ಕಾಲವೇ ಪ್ರತಿಕೂಲವಿದೆ ಎಂದವರು ಸಾರಿದ್ದಾರೆ. ಹೊಸ ತೆರಿಗೆ ಎಂದರೇನೇ ಭಯಭೀತರಾಗುವುದು ಜನಸಾಮಾನ್ಯಕ್ಕೆ ಅಂಟಿಕೊಂಡಿರುವ ರೋಗ. ಇದರ ಮೇಲೆ ಪ್ರತಿಪಕ್ಷದವರ ಅರ್ಭಟೆ ಕೇಳಿದರೆ— ಮುಂದಿನ ಶಾಸನ ಸಭಾಧಿವೇಶನದಲ್ಲಿ ಈ ಸಂಬಂಧ ನಿಶ್ಚಯವಾಗಿಯೂ ಸರಕಾರೀ ಪಕ್ಷ ಹಾಗೂ ಪ್ರತಿ ಪಕ್ಷಗಳೊಳಗೆ ಚಕಮಕಿ ನಡೆಯುವುದೆಂದೂ ಹೇಳಬಹುದು. ರಾಜ್ಯದ ಆದಾಯವನ್ನು ಹೆಚ್ಚಿಸುವುದಕ್ಕೆ ಈ ತೆರನ ಉಗ್ರ ಹಾಗೂ ಅನಪೇಕ್ಷಿತ ಕ್ರಮವನ್ನು ಕೈಗೊಳ್ಳಲಾಗದೆಂದು ಮೊದಲಿನಿಂದಲೂ ವಿರೋಧಿ ಗುಂಪು ಪ್ರತಿಭಟನೆ ತೋರಿಸಿದೆ. ಮನಸಿನಲ್ಲಂತೂ ಸರಕಾರೀ ಪಕ್ಷದೊಡನೆ ಹೊಯ್‌ಕೈಯಾಗಿ ನಿಂತು ಸಮಬಲದಿಂದ ಹೋರಾಡಲು ವಿರೋಧಿ ಗುಂಪು ಸದಾ ಸನ್ನದ್ಧವಿದೆ.

ಮೋಟಾರು ತೆರಿಗೆ

ಮೋಟಾರು ವಾಹನಗಳ ಓಡಾಟದ ಮೇಲೆ ಮೈಲಿಗೆ ಒಂದು ಪೈಯಂತೆ ಸರ್‌ಚಾರ್ಜನ್ನು ಕೊಡಿಸಬೇಕೆಂದು ಮಾಡಿದ ಇನ್ನೊಂದು ಸೂಚನೆ ಮಾತ್ರ ಅಮೂಲಾಗ್ರ ಪರಿವರ್ತನೆಗೆ ಗುರಿಯಾಗಿದೆ. ಶಾಸನ ಸಭೆ [illegible] ಮೂಲ ಮಸೂದೆಯಲ್ಲಿ ಪ್ರಯಾಣಿಕರಿಂದಲೇ ಈ ಸುಂಕ ವಸೂಲು ಮಾಡಲಾಗುವುದೆಂದು ಹೇಳಿತ್ತು. ಆದರೆ ಹೀಗೆ ವಸೂಲು ಮಾಡುವ ಕ್ರಮವು ಬಹಳ ದೀರ್ಘವೂ ತ್ರಾಸದಾಯಕವೂ ಆಗಿ ಪರಿಣಮಿಸುವುದೆಂಬುದರಿಂದ ಮತ್ತು ಪ್ರತಿಪಕ್ಷದವರು ಸೂಚನೆಯು ಸಾಮಾನ್ಯ ಪ್ರಯಾಣಿಕರ ಮೇಲೆ ಅನಾವಶ್ಯಕವಾದ ಭಾರವನ್ನು ಹೇರುವುದೆಂದು ವಾದಿಸಿದುದರಿಂದ—ಪರಿಶೀಲಕ ಸಮಿತಿಯು ಮಸೂದೆಗೆ ಹೊಸ ರೂಪನ್ನೇ ಕೊಟ್ಟಿದೆ. ಇದು ಎಷ್ಟರಮಟ್ಟಿಗೆ [illegible] ಎಂಬುದನ್ನು ನೋಡಬೇಕು. ಪರಿಶೀಲಕ ಸಮಿತಿಯು ಅಧಿಕಾರಿಗಳಿಂದ ಈಗಿನ ಬದಲಾವಣೆ [illegible] ಆಕ್ಷೇಪವನ್ನು ಇಷ್ಟರಲ್ಲಿಯೇ ತೆಗೆದಿರುವರು. ಪ್ರಯಾಣಿಕರ ಮೇಲೆ ಹೊರಿಸಬೇಕೆಂದಿದ್ದ ಮೇಲ್ತೆರಿಗೆಯನ್ನು ಬಸ್ ಮಾಲಿಕರೇ ನಿಶ್ಚಿತ ತೆರಿಗೆಯ ರೂಪದಲ್ಲಿ ಮುಂದುಗಡೆ ಒಂದಾಣೆಯಂತೆ ಕೊಡಬೇಕೆಂದು ವಿಧಿಸಿದ್ದೂ, ಮೋಟಾರು ಬಸ್ಸುಗಳಿಗೆ ಮಾತ್ರ ಎಂದು ಹೇಳಿದ್ದ ತೆರಿಗೆಯನ್ನು ಸಾರ್ವಜನಿಕ ಉಪಯೋಗಕ್ಕಾಗಿ ಓಡಾಡುವ ಲಾರಿಗಳ ಮೇಲೂ ಹೇರಬೇಕೆಂದು ನಿರ್ಧಾರ ಮಾಡಿದ್ದೂ—ಸಮುಚಿತ ಅಂಶಗಳೆಂಬುದರಲ್ಲಿ ಸಂದೇಹವಿಲ್ಲ. ಪರಿಶೀಲಕ ಸಮಿತಿಯ ಪ್ರತಿಪಕ್ಷದ ಸದಸ್ಯರು ಇಲ್ಲಿಯೂ ವಿರೋಧವನ್ನು ಸೂಚಿಸಿ, ಶಾಸನಸಭೆಯಲ್ಲಿ ಮಂಡಿಸಲಾದ ಮಸೂದೆಗಿಂತ ತೀರ ಭಿನ್ನ ಹಾಗೂ ವ್ಯಾಪಕ ರೂಪವನ್ನು ಪರಿಶೀಲಕ ಸಮಿತಿಯು ಶಿಫಾರಸು ಮಾಡಿ ತೋರಿಸುವುದರಿಂದ, ಇದಕ್ಕೆ ತಮ್ಮ ಒಪ್ಪಿಗೆ ಇಲ್ಲೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಸಾಲದುದಕ್ಕೆ ಈಗಿನ ಆರ್ಥಿಕ ಮುಗ್ಗಟ್ಟು ಹಾಗೂ ದುಸ್ಥಿತಿಯನ್ನು ಕಂಡರೆ, ಬಸ್ ಸಾಗಣೆಯು ಲಾಭದಾಯಕವಾದ ಉದ್ಯಮವಾಗಿಲ್ಲ ಎಂದೂ ಅಭಿಪ್ರಾಯ ಸೂಚಿಸಿರುವರು.

ಪ್ರಕೃತಿಯ ಪ್ರಶ್ನೆ

ಹೊಸ ತೆರಿಗೆಗಳು ಯಾರಿಗೂ ಬೇಕಾಗಿಲ್ಲವಾದರೂ—ದಿನದಿಂದ ದಿನಕ್ಕೆ ಸರಕಾರದ ಮೇಲೆ ಬಂದು ಬೀಳುವ ವಿಶೇಷವಾದ ಹೊರೆಗಳನ್ನು ಕಾಣುವಾಗ, ಗತ್ಯಂ

[೬ನೇ ಪುಟ ನೋಡಿರಿ]

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No. 374/1951

ಮರಿಯಣ್ಣ ಭಟ್ಟ —ವಾದಿ.
ಹಾಜಬ್ಬ ಕೂಡ. —ಪ್ರತಿವಾದಿಯು.

ಸದ್ರಿ ದಾವೆಯು ಸಪ್ಲಿಮೆಂಟ 4ನೇ ಪ್ರತಿವಾದಿ ಮ್ಯಾಕಲ್ ಅಬ್ರೇವು, ಸಾಲ್ವೋದಂ ಅಬ್ರೇವ ಮಗ, ಕಾರ್ಕಳ ತಾಲ್ಲೂಕು ಕುಕ್ಕುಂದೂರು ಗ್ರಾಮದಲ್ಲಿರುವವ.

ಸದ್ರಿ 4ನೇ ಪ್ರತಿವಾದಿಗೆ ಈ ಮೂಲಕ ತಿಳಿಸುವದೇನಂದ್ರೆ, ಸದ್ರಿ ದಾವೆಯಲ್ಲಿ ವಾದಿಯು ಸ್ವಾಧೀನತೆಕೇಳಿದ ಆಸ್ತಿ ಪೈಕಿ ಕೆಲವು ಅಂಶವನ್ನು ನೀವು ಮೂಲಗೇಣಿಗೆ ಪಡೆದಿರುವದಾಗಿ ತಿಳಿಯುವದ್ರಿಂದ ನಿಂಮ [illegible] ಸಂಪತ್ತಿಯಿಂದ ತನಗೆ ಆಸ್ತಿ ಸ್ವಾಧೀನತೆ ಕೊಡಿಸಬೇಕಾಗಿ ವಗೈರೆ ನಿವೃತ್ತಿ ಕೇಳಿ ನಿಮ್ಮನ್ನು ಸದ್ರಿ ದಾವೆಯಲ್ಲಿ ಸಪ್ಲಿಮೆಂಟ 4ನೇ ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡಿಯದೆ. ನಿಂಮ ಹಾಜ್ರಿ ಬಗ್ಗೆ ಸದ್ರಿ ದಾವೆಯು ತಾ. 27-10-52ಕ್ಕೆ ಇಟ್ಟಿದೆ. ನೀವು ಉದಾಹರಣೆ ದಾಖಲು ಮಾಡುವದಿದ್ದರೆ ತಾ 27-10-52ನೇ ದಿವಸ ಮೇಲ್ಕಂಡ ಕೋರ್ಟಿನಲ್ಲಿ ಹಗಲು ಘಂಟೆ 10ಕ್ಕೆ [illegible] ಹಾಜರಾಗತಕ್ಕದ್ದು. ತಪ್ಪಿದ್ದೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು. ಎಂಬ ಸಂಗತಿಯನ್ನು ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ತಿಳಿಸಲಾಗುತ್ತದೆ.

K. V. Kamath,
Advocate for Plaintiff.
Date 15-10-52, Karkla.

The East & West
ESTD.] **Insurance Co., Ltd.** [1913
East & West Building, BOMBAY, 1
ದಿ ಈಸ್ಟ್ ಎಂಡ್ ವೆಸ್ಟ್
ಸ್ಥಾಪನೆ:] ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್, [191
ಒಟ್ಟು ನಿಧಿ ರೂಪಾಯಿ 1 ಕೋಟಿ 5 ಲಕ್ಷ ಮಿಕ್ಕಿ ಇದೆ
1951ನೇ ಇಸವಿಯಲ್ಲಿ ಮರಣದಿಂದ ಮತ್ತು ಮ್ಯಾದೆಯಾಗಿ ಕೊಟ್ಟ
ಕ್ಲೈಮುಗಳು ರುಪಾಯಿ 5 ಲಕ್ಷ 91 ಸಾವಿರಕ್ಕೆ ಮಿಕ್ಕಿರುತ್ತವೆ
ಜೀವವಿಮೆಯ ಪೂರ್ಣ ಪ್ರಯೋಜನವನ್ನು ಜನರಿಗೆ ಒದಗಿಸಿಕೊಟ್ಟು
ಕಾಲಕಾಲಕ್ಕೆ ಸಲಹೆಯನ್ನಿತ್ತು ಸಹಕರಿಸುವುದೇ ನಮ್ಮ ಧ್ಯೇಯ
ದಕ್ಷಿಣ ಕನ್ನಡ ಜಿಲ್ಲೆಯ ಉತ್ತರಕ್ಕೆ ಒಬ್ಬ ಮತ್ತು ದಕ್ಷಿಣಕ್ಕೊಬ್ಬರಂತೆ ಎರಡು ಜನ ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ. ಉತ್ತರ ಕನ್ನಡ ಮತ್ತು ಮೈಸೂರು ಪ್ರಾಂತ್ಯದ ಪ್ರತೀ ಜಿಲ್ಲೆಗೂ ಜಿಲ್ಲೆಗೊಬ್ಬರಂತೆ [illegible] ಏಜಂಟರೂ ಬೇಕಾಗಿದ್ದಾರೆ.
ನಮ್ಮ ಆಫೀಸುಗಳು ಶಿರ್ವಾ ಮತ್ತು ಪಡುಬಿದ್ರಿ
ಮೆಸ್ಸರ್ಸ್ ಹೆಗ್ಡೆ ಎಂಡ್ ರಾವ್
ಚೀಫ್ ಏಜಂಟರು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಮತ್ತು ಮೈಸೂರು ಸ್ಟೇಟ್,
ಪೋಸ್ಟ್, **ಶಿರ್ವಾ ದ. ಕ.**

ಪ್ರಕಟಣೆ

ಕುಂದಾಪುರ ತಾಲೂಕು ಚಿತ್ತೂರು ಗ್ರಾಮದ ಶ್ರೀ ಮಾರ್ಣಕಟ್ಟೆ ಬ್ರಹ್ಮಲಿಂಗ ದೇವಸ್ಥಾನದ ಟ್ರಸ್ಟಿ ಚಿತ್ತೂರು ವೀರಣ್ಣ ಶೆಟ್ಟಿಯು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ:— ನನ್ನ ಆಡಳಿತೆಗೆ ಒಪ್ಪಿದ ಶ್ರೀ ಮಾರ್ಣಕಟ್ಟೆ ದೇವಸ್ಥಾನದ ದಶಾವತಾರ ಮೇಳವನ್ನು ಈ ಫಸಲಿಯಲ್ಲಿ ನಡಿಸಿಕೊಂಡು ಹೋಗಲು ಯಾರು ಕೇಳುವವರು ಬೇಕಾಗಿದೆ. ಇದೇ ಬರುವ ನವಂಬ್ರ ತಾ ೯ನೇ ಆದಿತ್ಯವಾರ ಅಪರಾಹ್ನ ಘಂಟೆ [illegible]ಕ್ಕೆ ನನ್ನ ತಮ್ಮ ಕುಂದಾಪುರ ಜನರಲ್ ಸಾಹುಕಾರ ಚಿತ್ತೂರು ಮಂಜಯ್ಯ ಶೆಟ್ಟಿ ಅಂಗಡಿಯಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುತ್ತದೆ. ಏಲಮ್ಮಿನಲ್ಲಿ ಗೆದ್ದವರು ನ್ಯಾಯವಾದ ಜವಾಬ್ದಾರಿ ಕೊಡಲು ತಯಾರಾಗಿರತಕ್ಕದ್ದು.

ವೀರಣ್ಣ ಶೆಟ್ಟಿ ರುಜು.
ತಾ. 20-10-1952

"ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್"
ಇವರಲ್ಲಿ ಒಂದು ಸೇವಿಂಗ್ಸ್ ಖಾತೆಯನ್ನು ತೆರೆದು ಅದನ್ನು ಕ್ರಮವಾದ
ಉಳಿತಾಯಗಳಿಂದ ವೃದ್ಧಿಗೊಳಿಸುವುದೇ
ಜೀವನದಲ್ಲಿ ನಿಮ್ಮ ಉನ್ನತಿಗೆ ಹೆದ್ದಾರಿ!
ಸ್ಥಾಪನೆ: 1906
THE CANARA BANKING CORPORATION LIMITED.
ಪ್ರಧಾನ ಕಾರ್ಯಾಲಯ, ಉಡುಪಿ. (ದ ಭಾರತ)

ನವಯುಗ

ಉಡುಪಿ, ಗುರುವಾರ ೨೩-೧೦-'೫೨

ಜನತೆಯ ಹೊಣೆ

ಯೋಜನಾ ಆಯೋಗವು ರೂಪಿಸಿದ ಪಂಚವಾರ್ಷಿಕ ಯೋಜನೆಗೆ ಕೊನೆಯ ಸ್ವರೂಪವನ್ನು ಕೊಡುವ ಕೆಲಸ ಈಗ ನಡೆದಿದೆ. ಈ ಉಪಕ್ರಮದಲ್ಲಿ ಸಹಾಯ ಬರಲೆಂದು ಯೋಜನಾ ಆಯೋಗವು ಹೆಚ್ಚು ಕಡಿಮೆ ಪ್ರತಿಯೊಂದೂ ಪಕ್ಷದ ಅಭಿಪ್ರಾಯವನ್ನು ತಿಳಿದುಕೊಳ್ಳಲು ಈಗ ಹವಣಿಸಿದೆ. ಭಾರತದ ಸರ್ವಾಂಗೀಣ ಅಭಿವೃದ್ಧಿಯೇ ಧ್ಯೇಯವಾಗುಳ್ಳ ಪಂಚವಾರ್ಷಿಕ ಯೋಜನೆಯು ಎಲ್ಲರ ಸಮ್ಮತವನ್ನು ಪಡೆಯುವಂತಿರಬೇಕು— ಮತ್ತು ಪಕ್ಷಪಂಗಡಗಳ ಭೇದಭಾವವಿಲ್ಲದೆ ಪ್ರತಿಯೊಬ್ಬನೂ ಈ ಯೋಜನೆಯು ಯಶಸ್ವಿಯಾಗುವಂತೆ ಸಹಕರಿಸಬೇಕು ಎಂಬ ಘನವಾದ ಉದ್ದೇಶದಿಂದ, ಯೋಜನಾ ಆಯೋಗ ಈ ರೀತಿ ಎಲ್ಲ ಪಕ್ಷದ ಧುರೀಣರ ಸಲಹೆ ಟೀಕೆಗಳಿಗೆ ಕಿವಿಗೊಡುತ್ತಿದೆ. ರಾಷ್ಟ್ರೀಯ ಪುನರ್ರಚನೆಯಂಥ ಹೊಣೆಗಾರ ಕೆಲಸವು ಅಧಿಕಾರಾರೂಢವಾದ ಪಕ್ಷದ ಬಲವೊಂದರಿಂದಲೇ ಸಮರ್ಪಕವಾಗಿ ನೆರವಾದರೆ ತೀರದು. ಅದರಲ್ಲೂ ಬಡತನ, ಅಜ್ಞಾನ ಕವಿಯುವ ಮತ್ತು ಸ್ವಾವಲಂಬನ ಪ್ರವೃತ್ತಿಯು ಇನ್ನೂ ಜಾಗೃತಗೊಂಡಿಲ್ಲದ ನಮ್ಮ ದೇಶದಲ್ಲಿ ಪಂಚವಾರ್ಷಿಕ ಯೋಜನೆಯನ್ನು ಇದೇ ಪ್ರಥಮ ಸಲ ಕಾರ್ಯರೂಪಕ್ಕಿಳಿಸುವಾಗ ಬಹಳ ಅಡಚಣೆಗಳನ್ನು ಎದುರಿಸಬೇಕಾದೀತೆಂಬುದು ಸಹಜ. ಜನರಿಗೆ ಸರಿಯಾದ ಮಾಹಿತಿ ಹಾಗೂ ತಿಳುವಳಿಕೆಯನ್ನು ಕೊಡುವ ಮತ್ತು ಅವರಲ್ಲಿ ಸ್ವಯಂಸ್ಫೂರ್ತಿ ಹಾಗೂ ಉತ್ಸಾಹಗಳನ್ನು ತುಂಬುವ ಮಹತ್ಕಾರ್ಯವನ್ನು ಸಾಧಿಸುವುದು ಗುರುತರವಾದ ಭಾರ. ಈ ರಾಷ್ಟ್ರೀಯ ಜವಾಬ್ದಾರಿಯನ್ನು ಎಲ್ಲ ಪಕ್ಷಪಂಗಡಗಳೂ ಮನವರಿಕೆ ಮಾಡಿಕೊಂಡು, ಸರಕಾರದ ಸ್ತುತ್ಯ ಕಾರ್ಯಕ್ರಮದೊಡನೆ ಸಹಕರಿಸಬೇಕೆಂದು ಕೋರುವುದು ಅಪ್ರಸ್ತುತವಾಗಲಾರದು. ಈ ದೃಷ್ಟಿಯಿಂದ ಯೋಜನಾ ಆಯೋಗ ಕಾಂಗ್ರೆಸು ಕಾರ್ಯಕಾರೀ ಸಮಿತಿಯೊಡನೆ ಪ್ರಜಾ ಸೋಶಲಿಸ್ಟ್ ಪಕ್ಷದ ಧುರೀಣರೊಡನೆ, ಪಾರ್ಲಿಮೆಂಟು ಮೆಂಬರುಗಳೊಡನೆ ನಡೆಸಿದ ಮಾತುಕತೆಗಳು ಸ್ವಾಗತಾರ್ಹ. ದೇಶದಲ್ಲಿ ಕ್ರಾಂತಿಕಾರಕವಾದ ಬದಲಾವಣೆ ಎನ್ನದಿದ್ದರೂ ಮೂಲಭೂತ ಪರಿವರ್ತನೆಗೆ ಇಂಬುಗೊಡುವಂತೆ ಪಂಚವಾರ್ಷಿಕ ಯೋಜನೆ ಇರಬೇಕಾದುದು ಚಂದ. ಉತ್ಪಾದನೆಯಲ್ಲಿ ಹೆಚ್ಚಳವನ್ನು ಸಾಧಿಸುವುದೂ, ನಿರುದ್ಯೋಗ ದಾರಿದ್ರ್ಯಗಳನ್ನು ನಿವಾರಿಸುವುದೂ, ನೈರ್ಮಲ್ಯ, ಶಿಕ್ಷಣ ಮುಂತಾದುವುಗಳನ್ನು ಸುವ್ಯವಸ್ಥಿತ ರೀತಿಯಿಂದ ಪುನರುಜ್ಜೀವನಗೊಳಿಸುವುದೂ ಪಂಚವಾರ್ಷಿಕ ಯೋಜನೆಯ ಗುರಿಯಾಗಿದೆ. ಇದಕ್ಕೆ ಅನುಕೂಲವಾಗುವಂತೆ ಭೂ ಸುಧಾರಣೆಯ ಪ್ರಶ್ನೆಗೆ ಪ್ರಥಮ ಪ್ರಾಶಸ್ತ್ಯ ಕೊಟ್ಟದ್ದು ಪ್ರಶಂಸನೀಯ. ಉತ್ಪಾದನೆಯನ್ನು ಹೆಚ್ಚಿಸುವ ನಿಶ್ಚಿತ ಕಾರ್ಯಕ್ರಮವನ್ನು ತೋರಿಸಿದರೂ— ನಿರುದ್ಯೋಗ ಹಾಗೂ ದಾರಿದ್ರ್ಯದ ಪ್ರಶ್ನೆಗಳನ್ನು ಬಗೆಹರಿಸುವ ಮಾರ್ಗಗಳನ್ನು ಯೋಜನೆ ಉಲ್ಲೇಖಿಸಿಲ್ಲ ಎಂದು ಅಶೋಕ ಮೆಹತಾ ಎತ್ತಿದ ಆಕ್ಷೇಪಕ್ಕೆ ದೇಶಮುಖರು ಸಮರ್ಪಕ ವಿವರಣೆ ಕೊಟ್ಟಿರುವರು. ಉತ್ಪಾದನೆ ಹೆಚ್ಚುವುದೆಂದರೆ, ನಿರುದ್ಯೋಗ ಕಡಿಮೆಯಾಯಿತೆಂದೂ, ಬಡತನವು ಹಿಂಗಿತೆಂದೂ ಯಾರೂ ತಿಳಿದುಕೊಳ್ಳಬಹುದು. ಪ್ರತಿ ಪಕ್ಷದವರು ಜೀವ ಹಿಡಿದುಕೊಂಡು ನಿಂತಿರುವುದೇ ದೇಶದ ಬಡತನ, ನಿರುದ್ಯೋಗ ಮುಂತಾದ ಅಭಾವಗಳ ದೆಸೆಯಿಂದ ಎಂದು ರಾಜಾಜಿ ಹೇಳುವುದನ್ನು ನೆನೆದುಕೊಳ್ಳಬಹುದು. ಒಮ್ಮೆಗೆ ಈ ಸಮಸ್ಯೆಗಳನ್ನು ಯಶಸ್ವಿಯಾಗಿ ಬಿಡಿಸುವುದಕ್ಕೆ ಸಮರ್ಥರಾದರೆ—ಆಗ ಪ್ರತಿಪಕ್ಷದ ಆಕ್ಷೇಪಗಳಿಗೆ ನೆಲೆ ಇಲ್ಲದಂತಾಗುವುದು. ಇದು ಕಾಂಗ್ರೆಸಿಗರಿಗೆ ರಾಜಾಜಿ ನೀಡಿದ ಉಪದೇಶವಾದರೂ—ರಾಷ್ಟ್ರವ್ಯಾಪೀ ಸಮಸ್ಯೆಯೊಂದನ್ನು ಬಿಡಿಸುವ ಕೆಲಸದಲ್ಲಿ ಪ್ರತಿಯೊಬ್ಬನೂ ಕರ್ತವ್ಯವೆಂದು ಮಾಡತಕ್ಕ ಅಂಶ ಇದೆ. ಬಂಡವಾಳವನ್ನು ಒದಗಿಸಲಾರದ ಬಡವರು ನಾವಾಗಿದ್ದರೆ— ದೈಹಿಕ ಶ್ರಮವನ್ನೆ ಸೇವಾರೂಪದಲ್ಲಿ ಕೊಡಬಹುದು. ಸರ್ವಹಿತ ಸಾಧನೆಯ ವಿಶಾಲ ದೃಷ್ಟಿ ಇಟ್ಟುಕೊಂಡಲ್ಲಿ, ಸಮಷ್ಟಿಯ ಉತ್ಕರ್ಷದೊಡನೆ ಆತ್ಮಕಲ್ಯಾಣವನ್ನು ಸಾಧಿಸಿಕೊಂಡಂತಾಗುವುದು. ಜನತೆ ರಾಜಕೀಯ ಮತಭೇದದ ಸುಳಿವಿನಲ್ಲಿ ಸಿಲುಕಿ ಬೀಳದೆ, ರಾಷ್ಟ್ರೀಯ ದೃಷ್ಟಿಯನ್ನು ಇಟ್ಟುಕೊಂಡು ಕರ್ತವ್ಯದಕ್ಷತೆಯಿಂದ ವರ್ತಿಸಿದರೆ ಚೆನ್ನ.

● ಮುಂಬಯಿ ಸರಕಾರವು ೪ ಕೈಗಾರಿಕಾ ಕೇಂದ್ರಗಳನ್ನು ಬಿಟ್ಟು ಇಡೀ ಪ್ರಾಂತ್ಯದಲ್ಲಿ ವಿನಿಯಂತ್ರಣ ಮಾಡಲು ನಿರ್ಧರಿಸಿದೆ.

● ತಿರುಪತಿ ದೇವಸ್ಥಾನದ ಖರ್ಚಿನಿಂದ ತಯಾರಾದ ಪಾಪನಾಶಂ ನೀರಾವರಿ ಯೋಜನೆಯನ್ನು ಶ್ರೀ ಸಿ ರಾಜಗೋಪಾಲಾಚಾರಿಯವರು ಉದ್ಘಾಟಿಸಿದರು.

● ವಿಜಯವಾಡದಲ್ಲಿ ನಡೆಯುತ್ತಿದ್ದ ಸ್ವಾಮಿ ಸೀತಾರಾಮರ ಆಂಧ್ರಪ್ರಾಂತ್ಯ ಸತ್ಯಾಗ್ರಹ ಚಳುವಳಿ ತಾತ್ಕಾಲಿಕವಾಗಿ ನಿಲ್ಲಿಸಲ್ಪಟ್ಟಿದೆ. ಹೊಸ ಪ್ರಜಾ ಸೋಶಲಿಸ್ಟ್ ಪಾರ್ಟಿಯ ಎಂಟಂಶದ ಕಾರ್ಯಕ್ರಮವನ್ನು ಯೋಚಿಸಲಿದೆ.

ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯಾಧಿವೇಶನ

ರಶಿಯಾ ಅಮೇರಿಕೆಗಳೊಳಗೆ ಮೂಲಭೂತ ಮತಭೇದ

ನ್ಯೂಯಾರ್ಕ್ ನಗರದಲ್ಲಿ ಸಂಯುಕ್ತ ರಾಷ್ಟ್ರಸಂಘದ ಸಾಮಾನ್ಯಾಧಿವೇಶನವು ಈಗ ಜರುಗುತ್ತಲಿದೆ. ಅರುವತ್ತು ರಾಷ್ಟ್ರಗಳ ಪ್ರತಿನಿಧಿಗಳು ಇದರಲ್ಲಿ ಉಪಸ್ಥಿತರಿದ್ದು ಅಧಿವೇಶನವು ೧,೩೫,೦೦,೦೦೦ ಡಾಲರು ವೆಚ್ಚದಿಂದ ಈಗತಾನೆ ನಿರ್ಮಾಣಗೊಂಡಿರುವ ಸಂಯುಕ್ತ ರಾಷ್ಟ್ರಸಂಘದ ಭವನದಲ್ಲಿಯೇ ಕೂಡುತ್ತಿದೆ. ಅಧಿವೇಶನದ ಅಧ್ಯಕ್ಷಪದಕ್ಕೆ [illegible] ಸ್ಪರ್ಧೆ ಇದ್ದು, ಭಾರತದ ವಿಜಯಲಕ್ಷ್ಮಿ ಪಂಡಿತರನ್ನು ಪರಾಜಯಗೊಳಿಸಿ, ಕೆನಡಾದ ಲೆಸ್ಟರ್ ಪಿಯರ್ಸನ್ನರು ಅಧ್ಯಕ್ಷರೆಂದು ಆಯ್ಕೆ ಹೊಂದಿದರು. ಸಂಯುಕ್ತ ರಾಷ್ಟ್ರಸಂಘದ ಈ ಏಳನೇ ಅಧಿವೇಶನದಲ್ಲಿ ಕೊರಿಯಾ ಯುದ್ಧ, ದಕ್ಷಿಣ ಆಫ್ರಿಕೆಯ ವರ್ಣಭೇದ ನೀತಿ, ಟ್ಯುನೀಸಿಯಾ ಮೊರೊಕ್ಕೊಗಳಲ್ಲಿನ ರಾಷ್ಟ್ರೀಯ ಚಳುವಳಿ ಮುಂತಾದ ಮುಖ್ಯ ಪ್ರಶ್ನೆಗಳಿವೆ. ರಷಿಯಾದ ಪ್ರತಿನಿಧಿಯು ಕೊರಿಯಾ ಯುದ್ಧ ನಿಲ್ಲಿಸುವ ಪ್ರಶ್ನೆಯ ಬಗ್ಗೆ ತುಂಬ ಉತ್ಕಂಠತೆಯನ್ನು ತೋರಿಸಿದರೂ, ಅಮೇರಿಕೆಯು ಅದನ್ನು ಕೆಲಸಮಯದ ಮಟ್ಟಿಗೆ ಮುಂದೆ ಹಾಕಬೇಕೆಂದಿದೆ. ಇದೇ ಬರುವ ನವಂಬರ ನಾಲ್ಕರಂದು ಅಮೇರಿಕೆಯಲ್ಲಿ ಅಧ್ಯಕ್ಷಪದದ ಚುನಾವಣೆಯು ನಡೆಯಲಿಕ್ಕಿರುವುದರಿಂದ—ಅದರ ಪರಿಣಾಮವು ಕೊರಿಯಾದಲ್ಲಿ ಅಮೇರಿಕೆಯು ಅನುಸರಿಸುತ್ತಿರುವ ನೀತಿಯ ಮೇಲೆ ವರ್ಚಸ್ಸು ಬೀರುವುದು ನಿಶ್ಚಯ. ಆದುದರಿಂದ ಈಗಲೇ ಕೊರಿಯಾದ ಪ್ರಶ್ನೆ ಚರ್ಚೆಗೆ ತೆಗೆದುಕೊಳ್ಳಲ್ಪಟ್ಟರೆ—ಅಮೇರಿಕ ಗೊಂದಲದಲ್ಲಿ ಬೀಳಬೇಕಾದೀತೆಂಬುದರಿಂದ ಉಳಿದ ವಿಷಯಗಳಿಗೆ ಪ್ರಾಶಸ್ತ್ಯ ಕೊಡಲು ಅಮೇರಿಕ ಆತುರ ತೋರಿಸಿದೆ.

ಪ್ರಥಮ ಪ್ರಾಶಸ್ತ್ಯದ ಪ್ರಶ್ನೆ

ಆದರೆ ರಶಿಯಾ ಅಮೇರಿಕೆಯ ಗತ್ತುಗಾರಿಕೆಯನ್ನು ಅಲಕ್ಷಿಸಿ ಸುಮ್ಮನುಳಿಯಲಿಲ್ಲ. ವಿಷಯಪಟ್ಟಿಯಲ್ಲಿ ಕೊರಿಯಾ ಪ್ರಶ್ನೆಗೆ ಕೊಡಲಾಗಿರುವ ಮೂರನೇ ಸ್ಥಾನದ ಬದಲು ಪ್ರಥಮ ಪ್ರಾಶಸ್ತ್ಯವನ್ನೇ ಇಡಬೇಕೆಂದು ಗ್ರೋಮಿಕೋ ವಾದಿಸಿದರು. ಅವರ ಪ್ರಯತ್ನ ನಿಷ್ಫಲಗೊಂಡರೂ, ಸಾಮಾನ್ಯಾಧಿವೇಶನದಲ್ಲಿ ಕೊರಿಯಾ ಯುದ್ಧ ನಿವಾರಣೆಯ ಬಗ್ಗೆ ಹಾಗೂ ಶಾಂತಿಸ್ಥಾಪನೆಯ ಬಗ್ಗೆ ಈಗಾಗಲೇ ಎಲ್ಲರೂ ಕಳಕಳಿಯನ್ನು ತೋರಿಸಿರುವರು. ಕೆಲವು ಪ್ರತಿನಿಧಿಗಳು ಮಾಡಿದ ಪ್ರಾಸ್ತಾವಿಕ ಭಾಷಣಗಳಲ್ಲಿ ಶಾಂತಿಯ ಬಯಕೆ ಎಲ್ಲರಿಗೂ ಇದೆ ಎಂಬ ಪಲ್ಲವಿಯನ್ನು ಚೆಲೋದಾಗಿ ಹಾಡಲಾಗಿತ್ತು. ಅದರಲ್ಲೂ ಅಮೇರಿಕದ ಡೀನ ಅಚೆಸನರು ಮಾಡಿದ ಭಾಷಣವು ಅತ್ಯಂತ ಸೌಮ್ಯವಾಗಿದ್ದು—ರಶಿಯಾದ ಹೆಸರನ್ನಾಗಲೀ ಕಮ್ಯೂನಿಸಂ ಬಗ್ಗೆ ಆಕ್ಷೇಪವನ್ನಾಗಲೀ ಅವರು ಎತ್ತದೇ ಇದ್ದದ್ದು ಎಲ್ಲರಿಗೂ ಆಶ್ಚರ್ಯವುಂಟುಮಾಡಿದೆ. ಅಚೆಸನರು ಅಮೇರಿಕೆಯು ಶಾಂತಿಯನ್ನು ಅಂಗೀಕರಿಸುವ ರಾಷ್ಟ್ರವೆಂದು ಪ್ರತಿಪಾದಿಸಿದ್ದಲ್ಲದೆ, ವಿಶ್ವಶ ತಿಯ ರಕ್ಷಣೆಗಾಗಿ, ಆಕ್ರಮಣವ ತಡೆಯುವುದು ಪ್ರಥಮ ಕರ್ತವ್ಯ ಗುತ್ತದೆ ಎಂದೂ ಹೇಳಿದ ಕೊರಿಯಾ ಯುದ್ಧದಲ್ಲಿ ಆಕ್ರಮಣಗಾರರನ್ನು ಹಿಮ್ಮೆಟ್ಟಿಸುವುದು ನಡೆದಿದೆ. ಗೆಂದು ಶಾಂತಿ ಸ್ಥಾಪನೆಯ ಪ್ರಯತ ಳಿಗೆ ಯಶಸ್ಸು ದೊರೆತಿಲ್ಲ. ಆದುದರಿ ಯುದ್ಧ ಮುಂದರಿಯುವುದು ಅನಿವಾರ ವಾಗಿದೆ ಎಂದವರು ವ್ಯಥೆಯಿಂದ ಹೇ ದರು.

ರಶಿಯಾದ ಶಾಂತಿ ಸೂಚನೆ

ಅಮೇರಿಕೆಯ ಕಣ್ಣೀರು ಒಂದೊಮ್ಮೆ ಲ್ಲ ರಾಷ್ಟ್ರಗಳ ಸಹಾನುಭೂತಿಯನ್ನು ಳಿಸೀತು. ಆದರೆ ರಶಿಯಾದ ವಿಶಿ ಯವರು ಮಾಡಿದ ಭಾಷಣ ಮಾ ಯಾರಿಗೂ ಆಶಾಪ್ರದವೆಂದೆನಿಸಿಲ್ಲ ಮಾ ಮಾತಿಗೂ "ಅಮೇರಿಕೆಯ ಯುದ್ಧ ಚೋದಕ"ರನ್ನು ಹೀಗಳೆಯುವ ವಿಶಿ ಯವರ ಭಾಷಣ ಅನಾವಶ್ಯಕವಾದ ಕಾರುವಂತಿತ್ತು. ತನ್ನ ಭಾಷಣದಲ್ಲಿ ತಿ ಸ್ಥಾಪನೆಗೆ ಹೊಸದೊಂದು ಯೋ ಯನ್ನು ವಿಶಿಂಸ್ಕಿಯವರು ಮಾಡಿದರು ಅವರ ಭಾಷಣದಂತೂ ಶಾಂತಿಯ ಮೇಯ ಉಳಿದಿಲ್ಲವೆಂದೇ ಧ್ವನಿಸುತಿ ಎಲ್ಲ ವಿದೇಶೀ ಸೈನ್ಯಗಳನ್ನು ಕೊರಿ ದಿಂದ ಹಿಂದೆಗೆಯಬೇಕೆಂದೂ, ಯು ಕೈದಿಗಳನ್ನು ಅಂತರಾಷ್ಟ್ರೀಯ ರೀ ಯಮಗಳಿಗನುಸಾರ ವಿನಿಮಯ ವ ಬೇಕೆಂದೂ ಕೊರಿಯಾದ ಭವಿತವ್ಯವ ಕೊರಿಯಾದ ಜನತೆಗೆ ಬಿಟ್ಟುಕೊಡಬೆ ದೂ ವಿಶಿಂಸ್ಕಿ ಸೂಚಿಸಿದರು. ಅಣು ಬು ಮುಂತಾದ ಘಾತಕ ಅಸ್ತ್ರಗಳನ್ನು ತಿಬಂಧಿಸುವುದು ಅತ್ಯಂತ ಅವಶ್ಯಕ ದ್ದು, ಇದಕ್ಕೆ ಅಮೇರಿಕೆ ಏಕೆ ಒಪ್ಪ ಕ್ಕಿ ಎಂದವರು ನೇರಾದ ಪ್ರಶ್ನೆ ಹಾ ರು. ಅಚೆಸನರು ತಮ್ಮ ಭಾಷಣದಲ್ಲಿ ಘಾತಕ ಅಸ್ತ್ರಗಳನ್ನು ಎಂದಿಗೂ ಪ್ರ ಗಿಸುವುದಿಲ್ಲವಾಗಿ ಆಶ್ವಾಸನೆ ಕೊಟ್ಟದ್ದ ಹಾಗೂ ಆಕ್ರಮಣವನ್ನು ತಡೆಯುವ ದೇ ಉದ್ದೇಶವೆಂದ, ಆತ್ಮರಕ್ಷಣೆಯ ಪಾಯವೆಂದು, ಶಸ್ತ್ರಾಸ್ತ್ರಗಳಿಂದ ಸ ಗೊಂಡಿರಲು ಪ್ರಯತ್ನಿಸುವುದಾಗಿ ದ್ದರು.

ವರ್ಣಭೇದ ನೀತಿ

ದಕ್ಷಿಣ ಆಫ್ರಿಕೆಯ ವರ್ಣಭೇದ ನೀತಿಯನ್ನು ಎತ್ತಿಕೊಳ್ಳಲು ಸಂಯುಕ್ತ ರಾಷ್ಟ್ರಸಂಘಕ್ಕೆ ಅಧಿಕಾರವಿದೆಯೇ, ಆಕ್ಷೇಪವು ಕಾಣಿಸಿಕೊಂಡಿತು. ದ ಆಫ್ರಿಕಾ ಸರಕಾರದ ಪ್ರತಿ ಜೂಟ್ಸಿಯವರು ಇದು ಸಾ ರ್ವಭೌಮಾಧಿಕಾರ ಸಂಪನ್ನವಾದ ರ ವೊಂದರ ಆಂತರಿಕ ಪ್ರಶ್ನೆಯೆ ವಾದಿಸಿದರು. ಆದರೆ ಭಾರತದ ಪ್ರ ಗಳು ಕಳೆದ ನಾಲ್ಕಾರು ವರ್ಷಗಳಿಂ ಪ್ರಶ್ನೆಯು ಸಂಯುಕ್ತ ರಾಷ್ಟ್ರ ದ ಮುಂದಿದೆ. ಆದುದರಿಂದ ಈಗ

ನ್ನು ಎತ್ತಿಕೊಳ್ಳಬಹುದೇ ಎಂದು ವಿಚಾರಿಸುವುದು ನಿರರ್ಥಕ. ಅದೂ ಅಲ್ಲದೆ ವರ್ಣಭೇದ ನೀತಿಯು ಸಂಯುಕ್ತ ರಾಷ್ಟ್ರ ಸಂಘದ ಮೂಲ ಭೂತತತ್ವಕ್ಕೆ ವಿಸಂಗತವಾಗಿರುವುದರಿಂದ, ಈ ಪ್ರಶ್ನೆ ಅತ್ಯಂತ ಮಹತ್ವದ್ದು ಎಂದು ಪ್ರತಿಪಾದಿಸಿದರು. ಈ ಚರ್ಚೆಯ ಸಮಯ ಬ್ರಿಟನು ದಕ್ಷಿಣ ಆಫ್ರಿಕೆಯ ಪಕ್ಷ ವಹಿಸಿ ಮಾತನಾಡಿದ್ದು ನಿಜಕ್ಕೂ ಆಶ್ಚರ್ಯ. ಕೆಲದಿನಗಳ ಹಿಂದೆ ಬ್ರಿಟನ ಪ್ರತಿನಿಧಿ ಗ್ಲಾಡ್‌ವಿನ್ ಜೆಬ್ಬರು ಸೂಕ್ಷ್ಮವಾಗಿ ದಕ್ಷಿಣ ಆಫ್ರಿಕೆಯ ನಿಲುವೆ ಸರಿ ಎನ್ನುವಂತೆ ಭಾಷಣ ಮಾಡಿದ್ದರು. ಅದರ ರಹಸ್ಯ ಈಗ ನಿಚ್ಚಳವಾಗಿ ಕಂಡುಬಂತು.

ಕುರುವಿನ ಮೇಲೆ ಬೊಕ್ಕೆ

ಇರಾಣೀ ಎಣ್ಣೆ ತಂಟೆಯು ಸಮಾಧಾನಕರವಾಗಿ ಬಗೆಹರಿಯದೆ, ಬ್ರಿಟನು ಮತ್ತು ಇರಾಣಗಳ ರಾಜಕೀಯ ಸಂಬಂಧ ಕಡಿಯುವಷ್ಟು ಮಟ್ಟಿಗೆ ಬೆಳೆದುದು ತೀರ ವಿಷಾದಕರ. ಕಳೆದ ವಾರ ಬ್ರಿಟನ ಸರಕಾರವು ಇರಾಣದ ಸೂಚನೆಗೆ ಮರುತ್ತರವನ್ನು ಕಳಿಸಿ, ಮಸಾದಿಕರ ನಿಲುವಿಗೆ ತನ್ನ ಸಮ್ಮತಿ ಇಲ್ಲೆಂದು ಹೇಳಿದೆ. ಪರಿಹಾರ ಧನವಾಗಿ ಕೊಡಬೇಕಿದ್ದ ೪೯ ಮಿಲಿಯ ಪೌಂಡುಗಳಲ್ಲಿ ೨೦ ಮಿಲಿಯ ಪೌಂಡನ್ನು ಒಡನೆಯೇ ಒಪ್ಪಿಸಬೇಕೆಂದು ಮಸಾದಿಕರು ಮಾಡಿದ ಸೂಚನೆಯನ್ನು ಬ್ರಿಟನು ತಿರಸ್ಕರಿಸಿದ್ದಲ್ಲದೆ- ಕರಾರಿನ ಅವಧಿ ಮುಗಿಯುವುದಕ್ಕೆ ಮುಂಚೆಯೇ ಆಂಗ್ಲೋ-ಇರಾಣಿಯನ್ ಎಣ್ಣೆ ಕಂಪೆನಿಯನ್ನು ರಾಷ್ಟ್ರೀಕರಿಸಿದುದರಿಂದ, ಆ ಬಗ್ಗೆ ಇರಾಣು ಸಂಪೂರ್ಣವೇ ಪರಿಹಾರ ನೀಡಬೇಕೆಂದು ಕೇಳಿದೆ. ಹೀಗೆ ಮೊದಲೇ ಎದ್ದಿರುವ ಕುರುವಿನ ಮೇಲೆ ಹೊಸತಾಗಿ ಬೊಕ್ಕೆ ಎದ್ದುದರಿಂದ—ಈಗಲೂ ಇರಾಣದ ಆರ್ಥಿಕ ಪರಿಸ್ಥಿತಿಯು ದಿನದಿಂದ ದಿನಕ್ಕೆ ಕೆಡುತ್ತ ಬಂದಿರುವುದರಿಂದ—ಮಸಾದಿಕರು ತೀವ್ರ ಚಿಂತೆಗೊಳಗಾಗಿರುವರು. ಇರಾಣದ ರಾಷ್ಟ್ರೀಯ ಆಕಾಂಕ್ಷೆಗಳನ್ನು ಹತ್ತಿಕ್ಕಲು ಬ್ರಿಟನು ಕಟ್ಟಿದೆ ಎನ್ನುತ್ತಾ, ಬಹಳ ದುಃಖದಿಂದ ತಮ್ಮೆರಡು ರಾಷ್ಟ್ರಗಳ ನಡುವೆ ರಾಯಭಾರಿ ಸಂಬಂಧ ಮುರಿಯಬೇಕಾಗಿ ಬಂತೆಂದು ಅವರು ಹೇಳಿದರು

ಉಗ್ರಕ್ರಮದ ಪ್ರತಿಪಾದನೆ

ಭಾರತ ಸರಕಾರವು ಪಾಕಿಸ್ತಾನದ ಮೇಲೆ ಆರ್ಥಿಕ ನಿರ್ಬಂಧ ಮುಂತಾದ ಉಗ್ರಕ್ರಮಗಳನ್ನು ಹೇರಬೇಕೆಂದೂ ಇಲ್ಲವಾದರೆ ಈಗಿನ ಬಿಕ್ಕಟ್ಟಿನ ಸ್ಥಿತಿಯು ಸುಧಾರಿಸುವಂತಿಲ್ಲವೆಂದೂ ಕಮ್ಯೂನಿಸ್ಟರು ಹೊರತಾಗಿ ಉಳಿದ ಕಾಂಗ್ರೆಸ್ಸೇತರ ಪಕ್ಷಗಳ ಸಭೆಯೊಂದು ಕಲ್ಕತ್ತೆಯಲ್ಲಿ ನಿರ್ಣಯ ಸ್ವೀಕರಿಸಿದೆ. ಪೂರ್ವ ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾತರಿಗೆ ಏನೇನೂ ಸಂರಕ್ಷಣೆ ಇಲ್ಲದಿರುವುದರಿಂದ, ಮತ್ತು ಪಾಕಿಸ್ತಾನದ ಈಗಿನ ಧೋರಣೆ ಬದಲಿಸುವ ಚಿಹ್ನೆಯೇನೂ ಕಾಣಿಸುವುದಿಲ್ಲವಾದುದರಿಂದ—ಅದಕ್ಕೆ ಬಿಸಿ ಹಚ್ಚಬೇಕೆಂದೂ ಇವರ ವಾದ. ತಮ್ಮ ಅಭಿಪ್ರಾಯವನ್ನು ಪ್ರಧಾನಿ ನೆಹರೂರಿಗೆ ತಿಳಿಸಿದ್ದಕ್ಕೆ, ಅವರಿಂದ ಸಮಾಧಾನಕರವಾದ ಜವಾಬು ದೊರೆಯಲಿಲ್ಲವೆಂದೂ, ಸೌಮ್ಯ ಧೋರಣೆಯನ್ನು ಮುಂದುವರಿಸುವುದೇ ಭಾರತ ಸರಕಾರದ ಇಚ್ಛೆಯಾಗಿದೆಯೆಂದೂ—ಆದರೆ ಅದು ನಿರರ್ಥಕವೆಂದೂ ಈ ಧುರೀಣರು ಹೇಳುತ್ತಾರೆ

ಉಡುಪಿಯಲ್ಲಿ ಮಂತ್ರಿ ಡಾ| ಯು. ಕೃಷ್ಣರಾಯರು

ಮದ್ರಾಸು ಸರಕಾರದ ಮಜೂರ ಮಂತ್ರಿ ಡಾ| ಯು. ಕೃಷ್ಣರಾಯರು ಮಂಗಳೂರಿನಿಂದ ತಾ 18ರಲ್ಲು ತನ್ನ ಹುಟ್ಟೂರಾದ ಉಡುಪಿಗೆ ಆಗಮಿಸಿದರು. ಸ್ಥಳೀಯ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ, ಕಾರ್ಯದರ್ಶಿ, ಎಮ್. ಎಲ್. ಎ. ಮೊದಲಾದವರು ಸ್ವಾಗತವಿತ್ತರು. ಅಪರಾಹ್ನ ಉಡುಪಿ ಕೈಮಗ್ಗ ಮಾಲಿಕ ಸಂಘದ ಬಿನ್ನವತ್ತಳೆಯನ್ನು ಸ್ವೀಕರಿಸಿದರು. ಮಂತ್ರಿಗಳು ರಾಜಾಜಿಯವರ ನೇತೃತ್ವದಲ್ಲಿ ಕೈಮಗ್ಗ ಮಾಲಕರ ಹಾಗೂ ನೇಕಾರರ ಹಿತವು ಸುಭದ್ರವಾಗಿರುವುದೆಂದೂ, ಫೆಕ್ಟರಿ ಮತ್ತು ಲೋಕಲ್ ಅಸಿಸ್ಟೆಂಟ್ಸ್ ಆಕ್ಟುಗಳನ್ನು ಕೈಮಗ್ಗಗಳಿಗೆ ಅನ್ವಯಿಸಕೂಡದೆಂದು ಮನವಿಯಲ್ಲಿ ಹೇಳಲಾಗಿತ್ತಾದರೂ ಆ ಭಾಗದಲ್ಲಿ ಭರವಸೆ ಕೊಡಲು ಶಕ್ಯವಿಲ್ಲವೆಂದೂ ಹೇಳಿದರು. ಶ್ರೀ ಟಿ. ಎ. ಪೈಗಳು ಈಗಿನ ಸರಕಾರದಿಂದ ಜನತೆಗೆ ಪ್ರಯೋಜನ ಪಡೆಯಲು ಸಾಧ್ಯವಿಲ್ಲವಾದರೆ, ಬೇರಾವ ಸರಕಾರದಿಂದಲೂ ಅದು ಸಾಧ್ಯವಾಗುವಂತಿಲ್ಲ. ಸರಕಾರದಿಂದ ಸಾಕಷ್ಟು ಪ್ರಯೋಜನ ದೊರಕಿಸಿಕೊಳ್ಳಬೇಕಾದರೆ ಜನತೆಯೂ ಸರಕಾರದೊಂದಿಗೆ ಮನಃಪೂರ್ವಕವಾಗಿ ಸಹಕರಿಸಬೇಕೆಂದರು. ಮುನಿಸಿಪಲ್ ಚೆರ್ಮನ್ ಶ್ರೀ ಯು. ಎಸ್. ನಾಯ್ಕರು ಸಭಾಧ್ಯಕ್ಷತೆ ವಹಿಸಿದ್ದರು. ಸಭಾಂತ್ಯದಲ್ಲಿ ಚಹಾ ಸತ್ಕಾರವಿತ್ತು.

ಬಳಿಕ ಮಂತ್ರಿಗಳು ಶ್ರೀ ಕೃಷ್ಣ ಮಠಕ್ಕೆ ಆಗಮಿಸಿದರು. ಪರ್ಯಾಯ ಶ್ರೀ ಪೇಜಾವರ ಮಠದ ಕಡೆಯಿಂದ ಸ್ವಾಗತವೀಯಲಾಯಿತು. ವಸಂತ ಮಹಲಿನಲ್ಲಿ ನಡೆದ ಸಭೆಯಲ್ಲಿ ಮಂತ್ರಿಗಳಿಗೆ ಅಷ್ಟಮಠಗಳ ಕಡೆಯಿಂದ ಮಾನಪತ್ರ ಅರ್ಪಿಸಲಾಯಿತು. ಮಂತ್ರಿಗಳು ಮಠಾಧಿಪತಿಗಳಿಗೆ ಅಭಾರ ಸೂಚಿಸಿ ರಾಜಾಜಿ ಮಂತ್ರಿಮಂಡಲದಲ್ಲಿ ಧರ್ಮ ಸೇವಕರುಗಳಿಗೆ ಯೋಗ್ಯ ಸ್ಥಾನವಿದೆ ಎಂದೂ ಧರ್ಮ ಸಂಸ್ಥೆಗಳು ತಮ್ಮ ಕರ್ತವ್ಯ ಪಥದಲ್ಲಿ ಸಾಗಲು ತೊಂದರೆಯಿಲ್ಲವೆಂದೂ ಹೇಳಿದರು.

ನಗರಸಭೆಯ ಮಾನಪತ್ರ

ತಾ. 19ರಲ್ಲು ಸಂಜೆ ಮುನಿಸಿಪಲ್ ಮೈನ್ ಶಾಲೆಯಲ್ಲಿ ಮಾನ್ಯ ಮಂತ್ರಿಗಳಿಗೆ ನಗರಸಭೆಯ ಪರವಾಗಿ ಚೆರ್ಮನ್ ಶ್ರೀ ಯು. ಎಸ್. ನಾಯ್ಕರು ಮಾನಪತ್ರವನ್ನರ್ಪಿಸಿದರು. ಮಂಗಳೂರು-ಉಡುಪಿ ರೈಲ್ವೆ, ಜೋಗದ ವಿದ್ಯುತ್ ಸಪ್ಲೈ, ಮಲ್ಪೆ ಪ್ರಬುದ್ಧ ಬಂದರ ನಿರ್ಮಾಣದ ಆವಶ್ಯಕತೆ ಇತ್ಯಾದಿ ಮಾನಪತ್ರದಲ್ಲಿ ಹೇಳಲಾಗಿತ್ತು. ಮಂತ್ರಿಗಳು ಉತ್ತರವೀಯುತ್ತಾ ದ. ಕ. ಜಿಲ್ಲೆಯ ಮತ್ತು ಉಡುಪಿಯ ಬೇಡಿಕೆಗಳ ಕಡೆಗೆ ತನ್ನ ದೃಷ್ಟಿ ಸದಾ ಇರುವುದೆಂದು ಆಶ್ವಾಸನೆಯಿತ್ತರು. ರೈಲ್ವೆ ಕುರಿತು ಮಾತನಾಡುತ್ತಾ, ಆ ವಿಷಯವು ಕೇಂದ್ರದ ಯೋಜನೆಯಲ್ಲಿ ಇಲ್ಲವಾದುದರಿಂದ ಈ ಜಿಲ್ಲೆಯ ಪ್ರತಿನಿಧಿಗಳು ಚಳವಳಿಸುವಂತೆ ಜನತೆಯು ಒಂದಾಗಬೇಕು. ಮದ್ರಾಸು ಸರಕಾರವು ಮಂಗಳೂರು-ಉಡುಪಿ ರೈಲ್ವೆ ಆವಶ್ಯಕತೆಯನ್ನು ಸೂಚಿಸಿಯದೆ ಎಂದರು. ಪ್ರಬುದ್ಧ ಬಂದರದ ಕುರಿತು ಪ್ರಸ್ತಾಪಿಸುತ್ತಾ, ಮಂಗಳೂರು ಮತ್ತು ಉಡುಪಿಯವರೊಳಗೆ ಒಮ್ಮತದ ಅಭಿಪ್ರಾಯವಿಲ್ಲವೆಂದರು. ಜನಸಭಾ ಮೆಂಬರರೂ ಕೂಡಾ ಕೆಲವರು ಮಂಗಳೂರು ಆಗಬೇಕೆಂದೂ ಕೆಲವರು ಮಲ್ಪೆ ಆಗಬೇಕೆಂದೂ ಚಳವಳಿಸುತ್ತಿರುವರು. ಅಂತೂ ಪ್ರಬುದ್ಧ ಬಂದರ ನಿರ್ಮಾಣ ಪರಿಶೀಲನಾ ಸಮಿತಿಯ ವರದಿಯನ್ನು ನಿರೀಕ್ಷಿಸುವುದು ಉತ್ತಮವೆಂದರು. ಜೋಗದ ವಿದ್ಯುತ್ ಆದಷ್ಟು ಬೇಗನೆ ಈ ಜಿಲ್ಲೆಗೆ ದೊರೆಯುವುದೆಂದು ಸೂಚಿಸಿದರು. ಮೂಲ್ಕಿ, ಪಾವಂಜೆ ಉದ್ಯಾವರ ಹೊಳೆಗಳಿಗೆ ಸೇತುವೆಗಳಾಗಬೇಕಾದುದು ಅತ್ಯಾವಶ್ಯಕ ಆದರೆ ಹಣದ ಕೊರತೆ ಮಾತ್ರ ಇದೆಯೆಂದರು. ನಗರಸಭೆಯಲ್ಲಿ ಪಕ್ಷಗಳಿರುವುದು ಹಿತವೆಂದೂ ಸ್ಥಳೀಯ ಸಭೆಗಳ ಯಶಸ್ಸಿಗೆ ಸ್ಥಳೀಯ ಸಂಸ್ಥೆಗಳ ತರಬೇತಿ ಅಗತ್ಯವೆಂದೂ ನಗರಾಭಿವೃದ್ಧಿಗೆ ನಗರಸಭೆಯು [illegible] ಎಂದೂ ಹೇಳಿದರು. ಉಡುಪಿ ನಗರಸಭೆಯು ರಾಜಾಜಿ ಮಂತ್ರಿಮಂಡಲದಲ್ಲಿ ವಿಶ್ವಾಸವನ್ನು ಪ್ರದರ್ಶಿಸಿದುದಕ್ಕೆ ವಂದನೆಗಳನ್ನರ್ಪಿಸಿದರು. ಉಪಾಧ್ಯಕ್ಷ ಶ್ರೀ ಎ. ಬಿ. ಕೃಷ್ಣರಾಜ ಧನ್ಯವಾದಗಳನ್ನರ್ಪಿಸಿದರು.

ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ

ಅನಂತರ ಮಂತ್ರಿಗಳು ಮುಕುಂದನಿವಾಸದಲ್ಲಿ ಸರ್ಕಲ್ ಕಾಂಗ್ರೆಸ್ ಕಮಿಟಿ ಏರ್ಪಡಿಸಿದ ಸಭೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನುದ್ದೇಶಿಸಿ ಭಾಷಣಮಾಡುತ್ತಾ ಕಾಂಗ್ರೆಸ್ಸಿನ ಇಂದಿನ ಶಿಥಿಲತೆಗೆ ಕಾಂಗ್ರೆಸ್ಸಿನೊಳಗಿನ ಶತ್ರುಗಳೇ ಕಾರಣವೆಂದೂ ಈಗಲಾದರೂ ಕಾಂಗ್ರೆಸನ್ನು ಪುನರ್ಘಟಿಸಿ ಅದನ್ನು ಬಲಗೊಳಿಸುವುದು ಅತ್ಯಾವಶ್ಯಕವೆಂದೂ ಯಾವುದೇ ಕಾರಣದಿಂದ ಕಾಂಗ್ರೆಸನ್ನು ಬಿಟ್ಟು ಹೋದವರು ಪುನಃ ಸೇರುವಂತಾಗಬೇಕೆಂದೂ ಜನಸಾಮಾನ್ಯರು ಕಾಂಗ್ರೆಸ್ ವಿರೋಧಿಗಳ ಬಲೆಗೆ ಬೀಳದಂತೆ ಕಾಂಗ್ರೆಸಿಗರು ಅವರ ಸಂಪರ್ಕವನ್ನು ಬೆಳೆಸಿ ಅವರನ್ನು ಒಲಿಸಿಕೊಂಡು ಶಕ್ತಿಯನ್ನು ಬೆಳೆಸಿಕೊಳ್ಳಬೇಕೆಂದೂ ಸರ್ವರೂ ತಾಳ್ಮೆಯಿಂದ ರಾಜಾಜಿ ಸರಕಾರಕ್ಕೆ ಸಹಕಾರ ನೀಡಬೇಕೆಂದೂ ಕೇಳಿಕೊಂಡರು. ಆರಂಭದಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಇಲ್ಲಿಯ ಜನರ ಕೆಲವು ಸಮಸ್ಯೆಗಳನ್ನೂ ಸ್ಥಳೀಯ ವಿದ್ಯಮಾನಗಳನ್ನೂ ವಿವರಿಸಿದರು. ಉಪಾಹಾರ ಸತ್ಕಾರವೂ ಇತ್ತು.

ಎಮ್. ಜಿ ಎಮ್. ಕಾಲೇಜಿನಲ್ಲಿ

ತಾ 20ರಲ್ಲು ಅಪರಾಹ್ನ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿಗೆ ಭೇಟಿಯಿತ್ತು ಅಲ್ಲಿಯ ಆರ್ಟ್ಸ್ ಎಸೋಸಿಯೇಶನನ್ನು ಉದ್ಘಾಟಿಸಿದರು. ಪ್ರಿನ್ಸಿಪಾಲ್ ಎಚ್. ಸುಂದರರಾಯರು ಸ್ವಾಗತವಿತ್ತರು. ಎಸೋಸಿಯೇಶನಿನ ಉಪಾಧ್ಯಕ್ಷ ಶ್ರೀ ಕು. ಶಿ. ಹರಿದಾಸ ಭಟ್ಟರು ಮಾನ್ಯ ಮಂತ್ರಿಗಳ ಪರಿಚಯವನ್ನು ವಿದ್ಯಾರ್ಥಿಗಳಿಗೆ ಮಾಡಿಕೊಟ್ಟರು. ಈ ಕಾಲೇಜಿಗೆ ಕಾರಣೀಭೂತರಾದ ಡಾ| ಟಿ. ಮಾಧವ ಪೈಗಳನ್ನು ಪ್ರಥಮತಃ ಮಾನ್ಯ ಮಂತ್ರಿಗಳು ಅಭಿನಂದಿಸಿದರು. ವಿದ್ಯಾರ್ಥಿಗಳಿಗೆ ನಾಲ್ಕು ಉಪದೇಶ ವಾಕ್ಯಗಳನ್ನು ಹೇಳುತ್ತಾ ವಿದ್ಯಾರ್ಥಿಗಳು ಕಲಾಸಕ್ತರಾಗಿರಬೇಕು, ತಮ್ಮ ನಡೆನುಡಿಗಳ ಕಡೆಗೆ ಹೆಚ್ಚು ಗಮನವೀಯಬೇಕು. [illegible] ಕಾಲೇಜು ಬಿಟ್ಟು ಹೋದನಂತರವೂ ಜನಸೇವೆಯಲ್ಲಿ ಆಸಕ್ತರಾಗಿರಬೇಕು ಎಂದು ಮುಂತಾಗಿ ಬೋಧಿಸಿದರು. ಸಂಘದ ಕಾರ್ಯದರ್ಶಿ ಶ್ರೀ ಭಾಸ್ಕರ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಸಂಸ್ಕೃತ ಕಾಲೇಜಿನಲ್ಲಿ—ಡಾ| ಯು. ಕೃಷ್ಣರಾಯರು ಬಳಿಕ ಸಂಸ್ಕೃತ ಕಾಲೇಜಿಗೆ ಬಂದು ಕೀರ್ತಿಶೇಷ ಫಲಿಮಾರು ಮಠದ ಶ್ರೀ ರಘುಮಾನ್ಯ ತೀರ್ಥ ಸ್ವಾಮಿಗಳವರ ಭಾವಚಿತ್ರ ಅನಾವರಣ ಮಾಡಿದರು. ಈ ಸಮಾರಂಭಕ್ಕೆ ಪರ್ಯಾಯ ಪೇಜಾವರ, ಪುತ್ತಿಗೆ, ಕಾಣಿಯೂರು, ಶೀರೂರು, ಅದಮಾರು, ಫಲಿಮಾರು ಸ್ವಾಮಿಗಳವರು ಚಿತ್ತೈಸಿದ್ದರು. ಕಾಲೇಜು ಆಡಳಿತ ಸಭೆಯ ಪರವಾಗಿ ಸಭೆಯ ಅಧ್ಯಕ್ಷ ಶ್ರೀ ಕೆ. ಲಕ್ಷ್ಮೀನಾರಾಯಣ ರಾಯರು ಮಾನಪತ್ರವನ್ನಿತ್ತರು. ಸಂಸ್ಕೃತ ವಿದ್ಯೆಯ ಮಹತ್ವ, ಅದಕ್ಕಾಗಿ ಜನತೆಯು ಕೊಡತಕ್ಕ ಪ್ರೋತ್ಸಾಹ ಮೊದಲಾದ ವಿಷಯಗಳನ್ನೆತ್ತಿ ಮಂತ್ರಿಗಳು ಮಾತನಾಡಿದರು. ಸಭೆಯ ಕಾರ್ಯದರ್ಶಿ [illegible] ರು ಧನ್ಯವಾದಗಳನ್ನರ್ಪಿಸಿದರು.

ಸಾರ್ವಜನಿಕ ಸಭೆಯಲ್ಲಿ ಸ್ಫೂರ್ತಿಯುಕ್ತ ಭಾಷಣ— ಸಂಜೆ ರಥಬೀದಿಯಲ್ಲಿ ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ಶ್ರೀ ಟಿ ಎ. ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಕರೆದಿದ್ದ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ. ಬಾಳ್ಕಟ್ಟ ಪೇಟು ಕೃಷ್ಣರಾಯ ಜಗನ್ನಾಥರು ಮಂತ್ರಿಗಳಿಗೆ ಮನವಿಯೊಂದನ್ನು ಅರ್ಪಿಸಿದರು. ಪಕ್ಷಲಾತನ ಮತ್ತು ಭೂಮಿಸುಧಾರಣೆ, ಮಂಗಳೂರು-ಉಡುಪಿ ರೈಲ್ವೆ, ಜೋಗದ ವಿದ್ಯುತ್ ಸಪ್ಲೈ, ಮಲ್ಪೆ ಬಂದರವನ್ನು ಪ್ರಬುದ್ಧ ಬಂದರವನ್ನಾಗಿ ಮಾಡುವಿಕೆ ಇತ್ಯಾದಿ ಪ್ರಮುಖ ವಿಷಯಗಳು ಮನವಿಯಲ್ಲಿ ಅಡಕವಾಗಿದ್ದವು

ಮಂತ್ರಿಗಳು ರಾಜಾಜಿ ಮದ್ರಾಸು ಸರಕಾರದ ಆಡಳಿತವನ್ನು ವಹಿಸಿಕೊಂಡಂದಿನಿಂದ ಅವರ ಸರಕಾರವು ಸಾಧಿಸಿದ ಕಾರ್ಯಗಳನ್ನು ವಿವರಿಸಿದ ಬಳಿಕ ಮನವಿಯಲ್ಲಿ ಕೇಳಿರುವ ವಿಷಯಗಳ ಕುರಿತು ಮಾತನಾಡಿದರು. ಪಕ್ಷಲಾತನ ಮತ್ತು ಭೂಸುಧಾರಣೆ ಕುರಿತು ಸರಕಾರವು ಮಸೂದೆಯೊಂದನ್ನು ತರಲಿರುವುದು. ಸುಸೂತ್ರ ಆಡಳಿತಕ್ಕಾಗಿ ಹೊಸ ತೆರಿಗೆಗಳನ್ನು ಹಾಕುವ ಪ್ರಸಂಗ ಬಂದಲ್ಲಿ, ತಮ್ಮೆಲ್ಲರ ಒಳ್ಳೇದಕ್ಕೆಂದೇ ಜನರು ಆತ್ಮಸಂತೋಷದಿಂದ ಹೊಸ ತೆರಿಗೆಗಳನ್ನು ಕೊಡಲು ಹಿಂದುಮುಂದು ನೋಡಬಾರದು ಎಂದು ಸೂಚಿಸಿದರು. ಸರಕಾರದ ಹಣದ ಅಭಾವವನ್ನು ತಿಳಿಸಿ ಜಿಲ್ಲೆಯ ಕೆಲಸಗಳಿಗಾಗಿ ಸ್ವಲ್ಪ ತಾಳ್ಮೆಯಿಂದಿರಬೇಕೆಂದರು

ಕಾಂಗ್ರೆಸು ಈ ಜಿಲ್ಲೆಯಲ್ಲಿ ಕಳೆದ ಅಸೆಂಬ್ಲಿ ಮತ್ತು ಪಾರ್ಲಿಮೆಂಟ್ ಚುನಾವಣೆಯಲ್ಲಿ ಅಧಿಕ ಸಂಖ್ಯೆಯಿಂದ ಜಯಶೀಲವಾಗಿತ್ತು. ಆದರೆ ಬಳಿಕ ಮುನಿಸಿಪಲ್ ಚುನಾವಣೆಯಲ್ಲಿ ಮಾತ್ರ ಅಲ್ಪ ಸಂಖ್ಯೆಯ ಸೀಟುಗಳು ಕಾಂಗ್ರೆಸ್ ಪಾಲಿಗೆ ದೊರೆತವು. ಈ ಕಾರಣದ ಕುರಿತು ಕೆಲವರು ಸರಕಾರವನ್ನು ದೂರುವರು. ಇದು ಸರಿಯಲ್ಲ. ಕಾಂಗ್ರೆಸ್ ಕಮಿಟಿಗಳು ದೊಡ್ಡ ಚುನಾವಣೆ ಮುಗಿದೊಡನೆ ಜನತೆಯ ಸಂಪರ್ಕವಿಟ್ಟುಕೊಳ್ಳಲಿಲ್ಲ. ಮುಂದಾಗಲೂ ಕಾಂಗ್ರೆಸ್ ಜನರ ಜತೆಯ ಸಂಪರ್ಕವಿಟ್ಟುಕೊಳ್ಳುವಂತಾಗಬೇಕು.

ಕಾಂಗ್ರೆಸ್ ಸಂಸ್ಥೆಯು ಯಾವ ವ್ಯಕ್ತಿ ಯಾವ ಕೂಟದ ಸೊತ್ತು ಅಲ್ಲ. ಕಾಂಗ್ರೆಸಿಗರೊಳಗೆ ಪರಸ್ಪರ ವೈಮನಸ್ಯ ಇರಕೂಡದು. ಕಾಂಗ್ರೆಸಿನಿಂದ ದೂರ ಸರಿದವರು ಪುನಃ ಕಾಂಗ್ರೆಸಿಗೆ ಸೇರಬೇಕು. ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸಬೇಕು. ದ. ಕ. ಜಿಲ್ಲೆಯು ಕಾಂಗ್ರೆಸ್ ಜಿಲ್ಲೆ ಎಂಬುದನ್ನು ಜನರು ಎದುರಿಗೆ ತರಬೇಕು ಎಂದು ಹೇಳಿ ಭಾಷಣ ಮುಗಿಸಿದರು. ಅಧ್ಯಕ್ಷರ ಭಾಷಣವಾದ ಮೇಲೆ ಶ್ರೀ ಆರ್. ಆರ್. ಕುಂಜೂರರು ಧನ್ಯವಾದಗಳನ್ನರ್ಪಿಸಿದರು. ಅಂದೇ ರಾತ್ರಿ ಮಂತ್ರಿಗಳು ಮಂಗಳೂರಿಗೆ ತೆರಳಿದರು.

ತೃಪ್ತಿಕರವಾದ ವಸತಿ— ಹಿತಕರವಾದ ಊಟ— ರುಚಿಕರವಾದ ಉಪಾಹಾರ
ಇವುಗಳಿಗೆ
ಆದರ್ಶ ನಿಲಯವೆಂದರೆ
ವುಡ್ ಲೇಂಡ್ಸ್
ಉಡುಪಿ.
ಯಾತ್ರಿಕರಿಗೂ ಪ್ರಯಾಣಿಕರಿಗೂ
ಸರ್ವ ಅನುಕೂಲವಾಗುವಂತೆ
ನಗರದ ಕೇಂದ್ರಭಾಗದಲ್ಲಿದೆ

ಶಾಲೆ, ಕಾಲೇಜುಗಳಿಗೂ
ಸಹಕಾರಿ ಸಂಘ, ಮುನ್ಸಿಫ್
ಕೋರ್ಟುಗಳಿಗೂ ಕೃಷಿಕ,
ವರ್ಗದಾರ, ವ್ಯಾಪಾರಿಗಳಿಗೂ
ಬೇಕಾಗುವ ಉತ್ತಮ ಕಾಗದದಲ್ಲಿ
ತಯಾರಿಸಿದ
ತರತರದ ಫಾರ್ಮುಗಳು,
ದೊರೆಯುತ್ತವೆ.
ನವಯುಗ ಪ್ರೆಸ್. ಉಡುಪಿ.

[೫ನೇ ಪುಟದಿಂದ ಮುಂದುವರಿದುದು]

ತರವೇ ಇಲ್ಲವೆಂದು ಭಾಸವಾಗುವುದು. ಕೇಂದ್ರ ಸರಕಾರದ ಮೇಲಂತೂ ಬೆನ್ನು ಮೂಳೆ ಮುರಿಯುವಂತೆ ಹೊಸ ಭಾರಗಳು ಬಂದು ಬೀಳುತ್ತಿವೆ ವಿಭಜನೆಯ ಪರಿಣಾಮವಾಗಿ ನಿರಾಶ್ರಿತರ ಪುನರ್ನಿವೇಶನದಂಥ ಮಹಾ ಸಮಸ್ಯೆ ತಲೆ ಎತ್ತಿತು. ಆ ಬಳಿಕ ಅಸ್ಸಾಮದ ಭೂಕಂಪ, ನೆರೆಗಳ ಹಾವಳಿಯಾದರೆ, ಇದೀಗ ಬರಗಾಲದ ಕಾಂಡವನ್ನು ಎದುರಿಸುವ ಕಷ್ಟ ಇದೆಯೋ ಎಂದು ಪ್ರಕೃತಿ ಪ್ರಶ್ನಿಸುತ್ತಿದೆ. ಕಾಲದುದಕ್ಕೆ ಪಾಕಿಸ್ತಾನವು ಪಾಸಪೋರ್ಟ ಪದ್ಧತಿಯನ್ನು ಅನುಸರಿಸಬೇಕೆಂದು ಹಂದ ಒತ್ತಾಯ, ಇನ್ನಷ್ಟು ಹಾನಿಗೆ ಕಾರಣವಾಗಿದೆ. ಎರಡು ರಾಷ್ಟ್ರಗಳೊಳಗೆ ಈಗಿರುವ ಪರ್ಮಿಟು ಪದ್ಧತಿಯೇ ಮುನ್ನಡೆಯಲೆಂದು ಭಾರತ ಅಭಿಪ್ರಾಯ ಸೂಚಿಸಿದರೆ, ಪಾಕಿಸ್ತಾನ ಅದಕ್ಕೆ ಕೇಳಲಿಲ್ಲ. ಕೊನೆಗೆ ಸಂಧಾನ ನಡೆದು ಎರಡೂ ರಾಷ್ಟ್ರಗಳಲ್ಲಿ ಅಕ್ಟೋಬರ ೧೫ರಿಂದ ಪಾಸ್‌ಪೋರ್ಟ ಪದ್ಧತಿ ಜ್ಯಾರಿಗೆ ಬರುವುದೆಂದು ನಿರ್ಧಾರವಾಯಿತು. ಈ ನಿರ್ಧಾರವನ್ನು ಬಹಿರಂಗಗೊಳಿಸುವಷ್ಟು ಕೂಡಾ ಪಾಕಿಸ್ತಾನವೇ ದುಡುಕುತನ ತೋರಿಸಿತು. ಆದರೆ ಮೊನ್ನೆ ತಾನೆ—ಇನ್ನೇನು ಪಾಸ್‌ಪೋರ್ಟ ಪದ್ಧತಿ ಜ್ಯಾರಿಗೆ ಬರುವುದೆಂದಿದ್ದಾಗ, ಪಾಕಿಸ್ತಾನ ಸರಕಾರ ಈ ಪದ್ಧತಿಯನ್ನು ಒಂದು ತಿಂಗಳು ಕಾಲ ಮುಂದೂಡಬೇಕೆಂದು ಭಾರತ ಸರಕಾರವನ್ನು ಕೇಳಿತು! ಭಾರತ ಸರಕಾರ ಇದಕ್ಕೆ ಒಡಂಬಡದೆ, ತನ್ನ ಮೊದಲಿನ ನಿರ್ಧಾರದಂತೆ ನಡೆಯಲು ನಿರ್ಧರಿಸಿತು.

ನಿರಾಶ್ರಿತರ ಗೋಳು

ಪಾಕಿಸ್ತಾನ ಮಂಗ ಚೇಷ್ಟೆಯನ್ನು ತೋರಿಸಿದಂತೆಲ್ಲ ಭಾರತ ಸರಕಾರ ಹಲ್ಲು ಕಿರಿಯುತ್ತಿರಬೇಕೆಂಬುದು ಸರಿಯಲ್ಲ. ಈ ಸಂಬಂಧದಲ್ಲಿ ಪಾಕಿಸ್ತಾನದ್ದೇ ಎಲ್ಲ ದೋಷವಿರುವಾಗ—ಅದರ ದುಡುಕುತನದ ಪರಿಣಾಮವನ್ನು ಅದು ಭೋಗಿಸಬೇಕು.

ಆದರೆ ಭಾರತಕ್ಕೆ ಹೊಸ ತಲೆನೋವನ್ನು ಕೊಡಗಿಸಿದ್ದು ಪೂರ್ವ ಬಂಗಾಳದಿಂದ (ಪಾಕಿಸ್ತಾನ ಪ್ರದೇಶ) ಪಶ್ಚಿಮ ಬಂಗಾಳಕ್ಕೆ (ಇದು ಭಾರತಕ್ಕೆ ಸೇರಿದ) ಬರುವ ನಿರಾಶ್ರಿತರ ಸಂಖ್ಯೆಯ ಪ್ರಮಾಣವೆಂಬಲ್ಲಿ ಸಂದೇಹವಿಲ್ಲ. ಈಗಾಗಲೇ ೪೦ ಲಕ್ಷ ನಿರಾಶ್ರಿತರು ಪಶ್ಚಿಮ ಬಂಗಾಳಕ್ಕೆ ಆಗಮಿಸಿದ್ದು, ಅವರನ್ನು ಪುನರ್ನಿವೇಶನಗೊಳಿಸುವುದಿರಲಿ, ಎಲ್ಲಿಯಾದರೂ ಉಳಕೊಳ್ಳುವಂತೆ ಮಾಡಲಿಕ್ಕೂ ಪಶ್ಚಿಮ ಬಂಗಾಳದ ಕೈಯಿಂದ ಆಗಿಲ್ಲ. ಸಮಸ್ಯೆ ಎಷ್ಟು ಜಿಗುಟಾಗಿದೆ. ಇಂಥದರಲ್ಲಿ ಕೇಂದ್ರದ ಸಹಾಯವನ್ನದು ಯಾಚಿಸಿದೆ. ೮೭ ಲಕ್ಷ ರೂಪಾಯಿಯ ಹೆಚ್ಚಿನ ನೆರವನ್ನು ನೀಡುವುದಾಗಿ ಕೇಂದ್ರ ಸರಕಾರ ಹೇಳಿದೆ. ಅಲ್ಲದೆ ಬಿಹಾರ ಹಾಗೂ ಒರಿಸಾ ರಾಜ್ಯಗಳಲ್ಲಿ ಕೆಲವು ನಿರಾಶ್ರಿತರನ್ನು ಪುನರ್ನಿವೇಶನಗೊಳಿಸುವ ವ್ಯವಸ್ಥೆಯೂ ನಡೆದಿದೆ. ಈಚೆಗೆ ಅಸ್ಸಾಮು ಹಾಗೂ ಭಾರತದ ಗಡಿಪ್ರದೇಶಗಳಲ್ಲಿ ಸಂಚಾರ ಕೈಗೊಂಡ ಭಾರತದ ಪ್ರಧಾನಿ ನೆಹರೂ, ಕಲ್ಕತ್ತೆಯಲ್ಲಿ ಒಂದು ದಿನ ಇಳಿದು, ನಿರಾಶ್ರಿತರ ಕಷ್ಟವನ್ನು ನೋಡಿದರು.

ಅಲ್ಪಾಡಿ— ತಾ. 14-10-52ರಲ್ಲಿ ಇಲ್ಲಿಯ ಬೋರ್ಡ ಎಲಿಮೆಂಟರಿ ಶಾಲೆಯಲ್ಲಿ ಹಯರ್ ಎಲಿಮೆಂಟರಿ ಕ್ಲಾಸು ತೆರೆಯುವ (೬ನೇ ತರಗತಿ) ಸಮಾರಂಭವನ್ನು, ಶ್ರೀಯುತ ಮಹಾಮಕ್ಕಿ ಪಟೇಲ್ ಶ್ರೀ ರಘುರಾಮ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯಿಸಲಾಯ್ತು.

ಕುಂಬಳೆ—ಕೈಗಾರಿಕಾ ಸಚಿವರಾದ ಡಾ: ಯು. ಕೃಷ್ಣ ರಾಯರು ತಾ ೧೪ರಂದು ಅಪರಾಹ್ನ ಗಾಡಿಗೆ ಮಂಗಳೂರಿಗೆ ಹೋಗುತ್ತಿರುವಾಗ, ಕೆಲವು ಮಹನೀಯರು ಅವರನ್ನು ಕಾಸರಗೋಡು ನಿಲ್ದಾಣದಲ್ಲಿ ಭೇಟಿ ಮಾಡಿ, ಈಗಿನ ರೈಲುಗಾಡಿ ಸಮಯದಿಂದ ಜನರಿಗೆ ಹೆಚ್ಚೇನೂ ಪ್ರಯೋಜನ ಕಾಣುವುದಿಲ್ಲವೆಂದೂ, ಗುಣಕರವಾದ ಸಮಯವನ್ನು ಬದಲಾಯಿಸುವಂತೆ ಪ್ರಯತ್ನ ಕೈಕೊಳ್ಳಬೇಕೆಂದೂ ತಿಳಿಸಿದ್ದಕ್ಕೆ, ಕೇಂದ್ರ ಸರಕಾರಕ್ಕೆ ತಿಳಿಸುವುದಕ್ಕೂ ತಾನು ಕೂಡಾ ತಿಳಿಸಲು ಪ್ರಯತ್ನಿಸುವೆನೆಂದೂ ಉತ್ತರವಿತ್ತಿರುವುದಾಗಿ ತಿಳಿಯುತ್ತದೆ.

ಕುಂಜಿಬೆಟ್ಟು:— "ಎಂ ಆರ್. ಟಿ. ವಾಚನಾಲಯ ಮತ್ತು ಪುಸ್ತಕಾಲಯ"ದ ವಾರ್ಷಿಕೋತ್ಸವವು 12-10-52ರಲ್ಲಿ ಶ್ರೀ ಎಸ್. ಕೆ. ಶ್ರೀಪತಿ ಆಚಾರ್ಯರ ಅಧ್ಯಕ್ಷತೆಯಲ್ಲಿ ಕಡಿಯಾಳಿ ಹಾಯರ್ ಎಲಿಮೆಂಟರೀ ಶಾಲೆಯಲ್ಲಿ ಜರಗಿತು. ಪೂರ್ವಾಹ್ನ ವಿವಿಧ ಸ್ಪರ್ಧೆಗಳು ನಡೆದುವು. ಸಂಜೆ ಜರಗಿದ ವಿಶೇಷ ಸಭೆಯಲ್ಲಿ ಕಾವ್ಯವಾಚನ, ಭಾಷಣ, ಬಹುಮಾನ ವಿತರಣ, ವಿವಿಧ ವಿನೋದಾವಳಿಗಳಾದುವು.

ಕುರುಕಾಲು—ಈ ಗ್ರಾಮದ "ಕುಂಜಾರ್‌ಗಿರಿ ಪೋಸ್ಟು" ಸ್ಥಾಪನೆಯಾದ ಲಾಗಾಯ್ತು ಬಟವಾಡೆಯ ಪೇದೆ ಇಲ್ಲದೆ, ಉಂಟಾದ ಅನಾನುಕೂಲತೆಯನ್ನು ಹೋಗಲಾಡಿಸುವುದಕ್ಕಾಗಿ ಇಲಾಖಾಧಿಕಾರಿಗಳು 8-10-52ರಿಂದ ಒಬ್ಬ ಪೇದೆಯನ್ನು ನೇಮಿಸಿದ್ದಾರೆ. ಅಲ್ಲದೆ ಮೂಡುಬೆಳ್ಳೆ ಪೋಸ್ಟಾಫೀಸಿನಿಂದ ಈವರೆಗೆ ಬಟವಾಡೆಯಾಗುತ್ತಿದ್ದ 'ಪಡುಬೆಳ್ಳೆ ಗ್ರಾಮ'ವನ್ನು ಲಗ್ತಿಯಲ್ಲಿರುವ ಕುಂಜಾರ್‌ಗಿರಿ ಪೋಸ್ಟಾಫೀಸಿಗೆ ಸಂಯೋಜಿಸಿ 20-10-52ರಿಂದ ಕುಂಜಾರ್‌ಗಿರಿ ಪೋಸ್ಟಾಫೀಸಿನ ಪೇದೆಯ ಮುಖಾಂತ್ರ ದಿನವಹಿ ಟಪ್ಪಾಲು ಬಟವಾಡೆಗೆ ಏರ್ಪಾಡಾಗಿದೆ. ಇನ್ನು ಮುಂದಕ್ಕೆ ಪಡುಬೆಳ್ಳೆಗೆ ಕಳುಹಿಸತಕ್ಕ ಕಾಗದ ಪತ್ರ ರಜಿಸ್ಟ್ರಿ, ಮನಿ ಆರ್ಡರು ವಗೈರೆ ಟಪ್ಪಾಲುಗಳನ್ನು "ಕುಂಜಾರ್‌ಗಿರಿ ಪೋಸ್ಟು" ಎಂದು ನಮೂದಿಸಿ ಕಳುಹಿಸಿದಲ್ಲಿ ವಿಳಂಬವಿಲ್ಲದೆ ಬಟವಾಡೆಯಾಗುವುದು.

ಕರ್ನಾಟಕ ಧರ್ಮಾರ್ಥ ರಾತ್ರಿ ಹೈಸ್ಕೂಲ್ ಬೊಂಬಾಯಿ— ಬೊಂಬಾಯಿ ಬಂಟರ ಯಾನೆ ನಾಡವರ ಸಂಘದವರು ನಡೆಸಿಕೊಂಡು ಬರುತ್ತಿರುವ ಈ ಶಾಲೆಯ 28ನೇ ವಾರ್ಷಿಕೋತ್ಸವವು 2-11-52ಕ್ಕೆ ಕವಾಸ್ಜಿ ಜಹಾಂಗೀರ್ ಸಭಾ ಸದನದಲ್ಲಿ ಸರ್ ಚುನಿಲಾಲ್ ವಿ. ಮೆಹತಾ ಅವರ ಅಧ್ಯಕ್ಷತೆಯಲ್ಲಿ ಜರಗಲಿದೆ.

ಮಂಗಳೂರು

ಜಿಲ್ಲಾ ಕಾಂಗ್ರೆಸ್ ಸದಸ್ಯತನದ ಕುರಿತಾದ ಆಕ್ಷೇಪಣೆಯ ವಿಚಾರಣೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯಿಂದ ಜಿಲ್ಲಾ ಚುನಾವಣಾ ಅಧಿಕಾರಿಯಾಗಿ ನೇಮಿಸಲ್ಪಟ್ಟಿರುವ ಶ್ರೀ ಎ. ಶಂಕರ ಆಳ್ವ, ವಕೀಲ್, ಮೈದಾನ್ ರೋಡು, ಮಂಗಳೂರು, ಇವರು ಇದೇ ತಾ 27ರಿಂದ 31ರ ತನಕ ಕಾಂಗ್ರೆಸ್ ಸದಸ್ಯತನದ ಕುರಿತಾದ ಆಕ್ಷೇಪಗಳೇನಾದರೂ ಇದ್ದ ಸಂದರ್ಭದಲ್ಲಿ ವಿಚಾರಣೆ ನಡೆಸಿ ತಾ. 1-11-52ರೊಳಗೆ ತೀರ್ಮಾನ ಕೊಡುವರು. ತಕರಾರುಗಳೇನಾದರೂ ಇದ್ದವರು ಅವರಿಗೆ ಬರೆದು ತೀರ್ಮಾನಪಡೆಯಬಹುದು.

ಕಾಂಗ್ರೆಸ್ ಪ್ರತಿನಿಧಿ ಚುನಾವಣೆ ಚುನಾವಣೆಯಲ್ಲಿ ಭಾಗವಹಿಸಿ ನಾಮಪತ್ರ ಹಾಕುವವರು ಜಿಲ್ಲಾ ಕಾಂಗ್ರೆಸ್ ಕಮಿಟಿ ಕಚೇರಿಯಲ್ಲಿ ಜಿಲ್ಲಾ ಚುನಾವಣಾ ಅಧಿಕಾರಿಗಳ ಯಾ ಅವರ ಅಧಿಕೃತ ಪ್ರತಿನಿಧಿಯ ಸಮಕ್ಷಮ ಹಾಗೆ ಮಾಡತಕ್ಕದು. ನಾಮಪತ್ರಗಳು ಇದೇ ತಾ. 24ರಿಂದ ಜಿಲ್ಲಾ ಹಾಗೂ ಆಯಾಯ ಸರ್ಕಲ್ ಕಾಂಗ್ರೆಸ್ ಕಮಿಟಿ ಆಫೀಸುಗಳಲ್ಲಿ ದೊರೆಯುವವು. ಶ್ರೀ ಎ. ಶಂಕರ ಆಳ್ವರು ಚುನಾವಣಾ ಅಧಿಕಾರಿಗಳಾಗಿಯೂ ಶ್ರೀ ಕೆ. ಆರ್ ಆಚಾರ್, ಅವರು ಜಿಲ್ಲಾ ಚುನಾವಣಾ ನ್ಯಾಯ ತೀರ್ಮಾನ ಅಧಿಕಾರಿಗಳಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ಉಡುಪಿ

ಮುನಿಸಿಪಲ್ ಉಪ ಚುನಾವಣೆ—ಉಡುಪಿ ಮುನಿಸಿಪಾಲಿಟಿಯ ಸೆಂಟ್ರಲ್ ವಾರ್ಡಿನ ಉಪ ಚುನಾವಣೆಯ ಕಾರ್ಯಕ್ರಮ ಹೀಗಿದೆ.

ನಾಮಪತ್ರ ಸ್ವೀಕಾರ ತಾ. 24 ,25 ಮತ್ತು 27 ಅಕ್ಟೋಬರ 52. ಪರಿಶೀಲನೆ ತಾ. 28-10-52 ತಕರಾರುಗಳೇನಾದರೂ ಇಲ್ಲದಿದ್ದಲ್ಲಿ ಕ್ರಮಬದ್ಧ ನಾಮಪತ್ರಗಳ ಪ್ರಕಟಣೆ ತಾ 1-11-52 ತಕರಾರುಗಳಿದ್ದಲ್ಲಿ ತಾ 5-11-52, ಮತದಾನ ತಾ 10-11-52, ಮತಗಳ ಎಣಿಕೆ ತಾ 11-11-52

ಪ್ರಕಟಣೆ—ಉಡುಪಿ ಮುನ್ಸಿಪಾಲಿಟಿಯ ಸೆಂಟ್ರಲ್ ವಾರ್ಡ್ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರಾಗಲು ಅಪೇಕ್ಷಿಸುವವರು ಇದೇ ಅಕ್ಟೋಬರ ತಾ 24ನೇ ಶುಕ್ರವಾರ ಸಂಜೆ ಘಂಟೆ ೬ರೊಳಗೆ ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರಿಗೆ ಅರ್ಜಿ ಬರೆದುಕೊಳ್ಳಬೇಕೆಂದು ಕಾಂಗ್ರೆಸ್ ಕಾರ್ಯದರ್ಶಿಗಳು ತಿಳಿಸುತ್ತಾರೆ. ಫಾರ್ಮ್ ಮುಂತಾದ ವಿವರಗಳನ್ನು ಅವರಿಂದ ಪಡಕೊಳ್ಳಬಹುದು.

The Canara Land Investments Limited.

Registered Office: Shanthi Bhavan. MANIPAL.

NOTICE

The Register of Members and Transfer Books of the Company will remain closed from 1st November 1952 to 16th November 1952 both days inclusive.

(By order of the Board)

Shanthi Bhavan,
MANIPAL, S Kanara
20th Octr. 1952

T. R. U. PAI.
Managing Director.

ಋತುಸ್ರಾವ ನಿಂತಿತು
'ಉವೂಂ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಿಕಟ್ಟಿ ಋತುಸ್ರಾವವಾಗುವುದು. ಹೊಟ್ಟೆಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾಧಾರಣ ಮಂದಿಗೆ ಮಾತ್ರ ಗುಣವಾಗಿದೆ. ಬೆಲೆ; ರೂ. 3-; ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. [illegible] ಪ್ರತ್ಯೇಕ]
MIS D. DEVEE, F. 58 (N. J.)
Tollygunge CALCUTTA
ಸ್ಟಾಕಿಸ್ಟರು: ಶಹಾ ಕಂಪನಿ, ಮಂಗಳೂರು


Applauded as the BEST Rubber Stamp Makers all over India
CROWN RUBBER STAMP CO.
Mangalore
[ESTD. 1923]

ಐ ತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ,
ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು
ಯಾವಾಗಲೂ ಸಿದ್ಧವಿವೆ.
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.
ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.
ಫೋನು ನಂಬ್ರ 66

ನಡಿಯುವ ಚಿತ್ರ —
ತಾರೀಕು 21-10-1952ರಿಂದ
ಮೋತಿ ಮಹಲ್
ಪಾತ್ರ ವರ್ಗ- ಸುರಯ್ಯಾ, ಮೀರಾ, ಅಶೋಕ್.
ಅನಂತರ ಬಾಡಿಯಾ ಚಿತ್ರ—
ಅಲ್ಲಾವುದ್ದೀನ್
ಶ್ರೀ ರಾಮಕೃಷ್ಣ ಥಿಯೇಟರ್ಸ್ ಲಿಮಿಟೆಡ್, ಉಡುಪಿ

ಅಮೃತಾಂಜನ
ತಲೆಬೇನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಜಾತುಕೊಳ್ಳುವುದು, ಚೇಳುವಿಷ ಮುಂತಾದವು, ಪಕ್ಷವಾತ, ಮೂಡಿನ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

SOVEREIGN-REMEDY
AMRUTANJAN
Best Indian Pain Balm
Amrutanjan Depots
BOMBAY MADRAS

REGD
ಎಲ್ಲಾ ಕಡೆ
ಮದ್ದು
ನಮ್ಮಲ್ಲಿ
ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್,
ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ

ಮಂಗಳೂರಲ್ಲಿ ಮಂತ್ರಿ ಡಾ| ಯು. ಕೃಷ್ಣರಾಯರು

ದರಾಸು ಸರಕಾರದ ಕೈಗಾರಿಕೆ ಮತ್ತು ರ ಮಂತ್ರಿ ಡಾ|| ಯು. ಕೃಷ್ಣರಾಯ ಳೆದವಾರ ಪ್ರಕಟಿಸಿದಂತೆ ತಾ 14ನೇ ಮಂಗಳೂರಿಗೆ ಆಗಮಿಸಿದ್ದು, ಮರು ಮಂಗಳೂರು ಸವಿಾಪದ ಮರೋಳಿಯಲ್ಲಿ ಕೆನರಾ ಪರ್ಸ್ ಶೋಪ್ ಲಿಮಿಟೆಡ್ ರು ಇತ್ತೀಚೆಗೆ ನೂತನವಾಗಿ ಪ್ರಾರಂಭಿಸಿದ ಸ್ಪ್ರಿಂಗ್ ತಯಾರಿಸುವ ಕೈಗಾರಿಕಾ ಸ್ಥಾನಕ್ಕೆ ಭೇಟಿ ಇತ್ತರು. ಸಂಸ್ಥೆಯ ನೇಜಿಂಗ್ ಡೈರೆಕ್ಟರ್ ಶ್ರೀ ವಿ ಎಸ್. ರು ಮಂತ್ರಿಗಳಿಗೆ ಅಲ್ಲಿ ವಸ್ತು ತಯಾರಿಸುವ ಕ್ರಮವಿವರಗಳನ್ನು ತಿಳಿಸಿದರು. ತ್ರಿಗಳು ಎಲ್ಲವನ್ನೂ ನೋಡಿ ಆನಂದಿಸಿದರು. ಸಂಸ್ಥೆಯ ವಿವಿಧ ಚಟುವಟಿಕೆಗಳನ್ನು ವಿವರಿಸುತ್ತ, ಮೋಟಾರು ಸಾರಿಗೆ ಅಭಿವೃದ್ಧಿಗೆ ಸರಕಾರವು ಸಹಾಯನೀಡಬೇಕೆನ್ನುವ, ಈ ಕುರಿತು ಪ್ರಾಂತಿಯ ಸರಕಾರಗಳೆಲ್ಲ ಏಕಧೋರಣೆಯನ್ನು ಅನುಸರಿಸುವುದು ಅವಶ್ಯವೆನ್ನುವ ಮನವಿಯೊಂದನ್ನು ಶ್ರೀ ಕಾಮ್ತರು ಒಪ್ಪಿಸಿದಾಗ ಮಂತ್ರಿಗಳು ಶ್ರೀ ಕಾಮ್ತರ ಉದ್ಯೋಗಿಕ ನೈಪುಣ್ಯವನ್ನು ಶ್ಲಾಘಿಸಿ, ಮಾಲಕ ಮಜೂರ ಸಂಬಂಧ ಉತ್ತಮವಾಗಿರುವುದರ ಆಗತ್ಯವನ್ನು ಒತ್ತಿ ಹೇಳಿದರು.

ತರುವಾಯ ಮಂತ್ರಿಗಳು ಪದವಿನಲ್ಲಿ ನವೀನವಾಗಿ ಕಟ್ಟಲ್ಪಟ್ಟ ಕೈಗಾರಿಕೆಯ ಶಾಲೆಯನ್ನು ನೋಡಿದರಲ್ಲದೆ ಈಗಿನ ಕಟ್ಟೋಣದಲ್ಲಿದ್ದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣವಿತ್ತರು.

ಬಳಿಕ ಮಂತ್ರಿಗಳು ಕಾಮನ್‌ವೆಲ್ತ್ ಹಂಚು ಕಾರ್ಖಾನೆಯನ್ನು ಸಂದರ್ಶಿಸಿ ಹಂಚು ತಯಾರಿಸುವ ರೀತಿಯನ್ನು ನೋಡಿದರು. ಮಜೂರರ ವಿಶ್ರಾಂತಿ ಗೃಹವನ್ನು ಉದ್ಘಾಟಿಸಿತ್ತು ಮುಷ್ಕರದ ದುಷ್ಪರಿಣಾಮಗಳನ್ನು ತಿಳಿಸಿ, ಮಜೂರರ ಸಂಕಷ್ಟದ ನಿವಾರಣೆಯ ಭರವಸೆಯನ್ನಿತ್ತರು. ಬಳಿಕ ಉಪಾಹಾರ ಸತ್ಕಾರವಾಯಿತು.

ಸಂಜೆ ಬಸ್ ಮಾಲೀಕರ ಶಿಷ್ಟಮಂಡಳಿಯೊಂದು ಶ್ರೀ ಕಾಮ್ತರ ನೇತೃತ್ವದಲ್ಲಿ ಮಂತ್ರಿಗಳನ್ನು ಭೇಟಿಯಾಗಿ ಮನವಿಯೊಂದನ್ನು ಅರ್ಪಿಸಿತು. ಮದ್ರಾಸು ಸರಕಾರವು ಹೊರಿಸಲಿರುವ ಸರ್ ಚಾರ್ಜಿನಿಂದ ನಮ್ಮ ಜಿಲ್ಲೆಯ ಬಸ್ಸು ಮಾಲಕರನ್ನೂ ವಿನಾಯಿತಿಗೊಳಿಸಬೇಕೆಂಬುದೇ ಅದರಲ್ಲಿ ಮುಖ್ಯವಾಗಿತ್ತು.

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ

ತಾ 17ನೇ ಸಂಜೆ ಮಂತ್ರಿಗಳು ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಇಲ್ಲಿನ ಕಾಂಗ್ರೆಸ್ ಕಾರ್ಯಕರ್ತರನ್ನು ಕಂಡು ಮಾತನಾಡಿದರು. ಜಿಲ್ಲಾ ಕಾ| ಕಮಿಟಿ ಅಧ್ಯಕ್ಷ ಶ್ರೀ. ಸ್. ಎಸ್. ಸಿಂಟೋಲರವರು ಸ್ವಾಗತಿಸಿದರು. ಮಂತ್ರಿಗಳು ಕಾಂಗ್ರೆಸ್ ಬಲಗೊಳ್ಳುವಂತೆ ಜನತಾ ಸಂಪರ್ಕವನ್ನು ಇಟ್ಟುಕೊಳ್ಳಬೇಕೆಂದೂ ಮಜೂರರು ಕಿಸಾನ ಸಂಘಟನೆಯನ್ನು ಬಹು ಬೇಗನೆ ಮಾಡಬೇಕೆಂದರು. ಸರಿಯಾದ ಪ್ರಚಾರಕರೂ ಪ್ರಚಾರ ಸಾಧನಗಳೂ ಅತ್ಯಗತ್ಯವಾದ್ದರಿಂದ ಅದಕ್ಕಾಗಿ ನಿಧಿ ಅವಶ್ಯಕತೆಯಿದೆಯೆಂದೂ ಸೂಚಿಸಿದರು. ಬಳಿಕ ಸಭಿಕರು ಕೇಳಿದ ಪ್ರಶ್ನೆಗಳಿಗೆ ಉತ್ತರವಿತ್ತರು. ಕಾರ್ಯದರ್ಶಿ ಬಿ. ಆರ್. ಕ ರರು ಧನ್ಯವಾದಗಳನ್ನಿತ್ತರು.

ಪತ್ರಿಕಾ ವ್ಯವಸಾಯಿಗಳ ಸಂಘದಲ್ಲಿ

ಅದೇದಿನ ಡಾ| ಕೃಷ್ಣರಾಯರಿಗೆ ಜಿಲ್ಲೆಯ ಪತ್ರಿಕಾ ವ್ಯವಸಾಯಿಗಳ ಸಂಘದಲ್ಲಿ ಸತ್ಕಾರ ನಡೆಯಿತು. ಸಾಮಾನ್ಯವಾಗಿ ಎಲ್ಲಾ ಪತ್ರಿಕಾ ವ್ಯವಸಾಯಿಗಳೂ ಪ್ರತಿನಿಧಿಗಳೂ ಇದಕ್ಕೆ ಬಂದಿದ್ದರು. ಆರಂಭದಲ್ಲಿ ಅವರ ಪರಿಚಯ ಮಾಡಿಕೊಡಲಾಯಿತು. ಲಘು ಉಪಾಹಾರಾನಂತರ ಬಳಿಕ ಸಂಘದ ಅಧ್ಯಕ್ಷ ಶ್ರೀ.ಪಿ. ಪುಟ್ಟಸ್ವಾಮಿಯವರು ಅತಿಥಿಗಳ ಪತ್ರಿಕಾ ಸೇವೆಯನ್ನು ಕೊಂಡಾಡಿ, ಪತ್ರಿಕೋದ್ಯೋಗಿಗಳಿಗೆ ಹಿತೋಪದೇಶ ಮಾಡುವಂತೆ ಕೇಳಿಕೊಂಡರು. ಡಾ| ಕೃಷ್ಣರಾಯರು ಭಾಷಣಮಾಡುತ ಜನಮತವನ್ನು ರೂಪಿಸುವುದರಲ್ಲಿ ಪತ್ರಿಕೆಗಳಿಗಿರುವ ಶಕ್ತಿಯನ್ನು ಪ್ರಥಮತಃ ವಿವರಿಸಿದರು. ಸರಿಯಾಗಿ ವರದಿಮಾಡುವುದು, ಸರಿಯಾಗಿ ವಿಮರ್ಶೆಮಾಡುವುದು ಮೊದಲಾದ ಪತ್ರಿಕೆಗಳ ಬಹುಮುಖ್ಯ ಕಾರ್ಯಭಾರಗಳನ್ನು ಸೂಕ್ಷ್ಮವಾಗಿ ತಿಳಿಸಿದರು. ಯೋಗ್ಯ ಮತ್ತು ನ್ಯಾಯವಾದ ಟೀಕೆಯು ಸ್ವಾಗತನೀಯವೆಂದರು. ಗ್ರಾಹಕರನ್ನು ಕೂಡಿಸುವುದೂ ಜಾಹೀರಾತುಗಳನ್ನು ಹೆಚ್ಚಿಸುವುದೂ ಅವಶ್ಯವೆಂದರು. ಸಾಮಾನ್ಯವಾಗಿ ಪತ್ರಿಕಾ ಚಾಲಕರಿಗೂ ಪತ್ರಿಕಾ ವ್ಯವಸಾಯಿಗಳಿಗೂ ಇರುವ ಸುಖಕಷ್ಟಗಳನ್ನೂ ಸೂಚಿಸಿ ಕನ್ನಡ ಪತ್ರಿಕಾ ಪ್ರಪಂಚಕ್ಕೆ ಗೆಲುವಾಗಲೆಂದರು. ಕಾರ್ಯದರ್ಶಿ ಶ್ರೀ. ನರಸಿಂಹರಾಯರು ಅಭಿನಂದಿಸಿದರು.

ಕೆನರಾ ಚೇಂಬರ್ ಓಫ್ ಕೊಮರ್ಸಿನಲ್ಲಿ

ತಾ. 16ರಂದು ಕೆನರಾ ಚೇಂಬರ್ ಓಫ್ ಕೊಮರ್ಸ ಸಂಸ್ಥೆಯವರು ಮಾನ್ಯಮಂತ್ರಿ ಡಾ| ಯು. ಕೃಷ್ಣರಾಯರನ್ನು ತಮ್ಮ ಕಾರ್ಯಾಲಯಕ್ಕೆ ಬರಮಾಡಿಸಿಕೊಂಡು ಸುಸ್ವಾಗತವನ್ನು ಬಯಸಿ ಚಹಾ ಸತ್ಕಾರವಿತ್ತು ಗೌರವಿಸಿದರು. ಚೇಂಬರ್ಸಿನ ಅಧ್ಯಕ್ಷ ಶ್ರೀ ಎ. ಉಮಾನಾಥರಾಯರು ಒಂದು ಮನವಿಯನ್ನು ಅರ್ಪಿಸಿದರು. ಅದರಲ್ಲಿ ಸೂಚಿಸಲಾದ ಪ್ರಾಮುಖ್ಯ ವಿಷಯಗಳಾವುವೆಂದರೆ 'ಮಂಗಳೂರು-ಹಾಸನ ರೈಲ್ವೆಮಾರ್ಗದ ವಿಷಯವಾಗಿ ಈ ಮೊದಲೇ ತಮಗೆ ಬರೆದುಕೊಳ್ಳಲಾಗಿತ್ತು. ಮೈಸೂರು ಸರಕಾರವು ಇದಕ್ಕೆ ಅನುಕೂಲವಾಗಿದೆ. ಕೇಂದ್ರಸರಕಾರದ ಅಭಿಪ್ರಾಯವು ಅನುಕೂಲವಾಗಿದೆ. ತಮ್ಮ ವರ್ಚಸ್ಸನ್ನು ಪ್ಲಾನಿಂಗ್ ಕಮಿಶನರ ಮೇಲೆ ಬೀರಿ ಹೊಸ ರೈಲ್ವೆ ನಿರ್ಮಾಣದಲ್ಲಿ ಇದನ್ನು ಸೇರಿಸುವಂತೆ ಮಾಡಬೇಕಾಗಿದೆ ಈ ಜಿಲ್ಲೆಯಲ್ಲಿ ಹಲವು ಕೈಗಾರಿಕೆಗಳಿದ್ದು ಅನೇಕ ಜನರಿಗೆ ಕೆಲಸವನ್ನು ಕೊಡುತ್ತಿವೆ ಅದರೆ ಈ ಜಿಲ್ಲೆಗೆ ಇಷ್ಟೇ ಕೈಗಾರಿಕೆಗಳು ಸಾಲವು. ಹೆಚ್ಚು ಕೈಗಾರಿಕೆಗಳಿಗೆ ವಿದ್ಯುತ್‌ಶಕ್ತಿಯಿಲ್ಲ ಜೋಗಿನಿಂದ ವಿದ್ಯುತ್ತನ್ನು ಪಡೆಯುವುದಕ್ಕೆ ನಾವು ಪ್ರಯತ್ನಿಸಿದಷ್ಟೂ ಅದು ಮುಂದೆ ಹೋಗುತ್ತಿದೆ. ಆ ಸಮಸ್ಯೆಯನ್ನು ಬಗೆಹರಿಸಿ ವಿದ್ಯುತ್ ನಮಗೆ ದೊರೆಯುವಂತೆ ಸಹಾಯ ನೀಡಬೇಕು. ಬಟ್ಟೆಯನ್ನು ಸಂಪೂರ್ಣ ಡಿಕಂಟ್ರೋಲು ಮಾಡಬೇಕು. ಟ್ರಾನ್ಸ್‌ಪೋರ್ಟ ಕೈಗಾರಿಕೆಯಮೇಲೆ ಹೊಸ ತೆರಿಗೆಗಳನ್ನು ಹಾಕಿದ್ದರಿಂದ ಈ ಕೈಗಾರಿಕೆ ತುಂಬಾ ಕಷ್ಟಕ್ಕೀಡಾಗಿದೆ. ಆದುದರಿಂದ ಅದರ ಮೇಲೆ ತೆರಿಗೆ ಹೊರಿಸಬಾರದು. ಈಗ ಮಾಲಕರು ಶೋಷಕರೆಂದೂ, ಮಜೂರರು ಶೋಷಿತರೆಂದೂ ಸರಕಾರದ ಅಭಿಪ್ರಾಯವಿದೆ ಕೆಲಸದಲ್ಲಿ ದಕ್ಷತೆ ಇರಬೇಕೆಂದು ಮಾಲಕರೂ ತಮ್ಮ ಹಕ್ಕುಗಳನ್ನು ಮನ್ನಿಸಬೇಕೆಂದು ಮಜೂರರೂ ಇರುವದರಿಂದ ಹಲವಾರು ಸಲ ಇವರೊಳಗೆ ತಿಕ್ಕಾಟ ಉಂಟಾಗುತ್ತದೆ ಆದುದರಿಂದ ಕೈಗಾರಿಕೆಯಲ್ಲಿ ಶಾಂತಿಯುಂಟಾಗುವಂತೆ ಮಾಡಬೇಕು. ವಾದ ವಿವಾದಗಳು ಶಾಂತರೀತಿಯಲ್ಲಿ ಬಗೆಹರಿಯುವಂತಾಗಬೇಕು.

ಮಂತ್ರಿಗಳ ಸದುತ್ತರ

ಮಾನ್ಯಮಂತ್ರಿಗಳು ಉತ್ತರವೀಯುತ್ತಾ 'ನೀವು ನನಗೆ ಸನ್ಮಾನವಿತ್ತುದಕ್ಕಾಗಿ ತುಂಬಾ ಸಂತೋಷವೆನಿಸುತ್ತದೆ, ತಮಿಳುನಾಡಿನಿಂದ ನಾನು ಚುನಾಯಿತನಾಗಿರುವೆನಾದರೂ ಅಲ್ಲಿಯ ಜನತೆಯಷ್ಟೇ ಈ ಜಿಲ್ಲೆಯ ಜನತೆಯ ಹಿತವನ್ನು ನಾನು ಬಯಸುತ್ತೇನೆ. ನನ್ನ ಮುಂಚೆ ಬಂದ ಮೂರು ನಾಲ್ಕು ಮಂತ್ರಿಗಳು ನಿಮ್ಮ ಕೇಳಿಕೆಗಳಿಗೆ ಪೂರ್ಣ ನಿರಾಶದಾಯಕವಾದ ಉತ್ತರವನ್ನು ಕೊಟ್ಟರೆಂದೂ ಅದರ ಪರಿಣಾಮವಾಗಿಯೇ ಮೊನ್ನೆ ನಡೆದ ನಗರಸಭಾ ಚುನಾವಣೆಯಲ್ಲಿ ಕಾಂಗ್ರೆಸು ಸೋಲುವಂತಾಯಿತೆಂದೂ ನೀವು ಹೇಳಿರುವಿರಿ. ಅದು ಸರಿಯಲ್ಲವೆಂದು ಎನಗನಿಸುತ್ತದೆ.

ಮಂಗಳೂರು-ಹಾಸನ ರೈಲ್ವೆ ಕೇಂದ್ರ ಸರಕಾರಕ್ಕೆ ಸಂಬಂಧಿಸಿದ್ದಾಗಿದೆ. ಹಿಂದೆ ಈ ರೈಲ್ವೆ ಮಾರ್ಗ ನಿರ್ಮಾಣದ ಪ್ರಶ್ನೆಗೆ ಮದ್ರಾಸು ಸರಕಾರವೇ ಅಡೆಹಾಕಿತ್ತು ಆದರೆ ಮದ್ರಾಸು ಸರಕಾರದಿಂದ ಯಾವ ಅಡ್ಡಿಯೂ ಬಾರದಂತೆ ನಾನು ಪ್ರಯತ್ನಿಸಿರುವೆನು; ಮಾತ್ರವಲ್ಲ ಮದ್ರಾಸು ಸರಕಾರವು ಈ ಯೋಜನೆಗೆ ತನ್ನ ಶಿಫಾರಸನ್ನೂ ಬೆಂಬಲವನ್ನೂ ಕೊಡುವುದೆಂದು ನಾನು ನಿಶ್ಚಯವಾಗಿ ಹೇಳಬಯಸುತ್ತೇನೆ, ನಿಮಗೆ ಕೇಂದ್ರದಲ್ಲೂ ಪ್ರಭಾವಶಾಲಿ ಪ್ರತಿನಿಧಿಗಳಿರುವರು ಅವರು ಈ ವಿಷಯವನ್ನು ಕೇಂದ್ರದ ರೈಲ್ವೆ ಮಂತ್ರಿಗಳ ಮುಂದಿರಿಸಿ ಅದರ ಮಂಜೂರಾತಿಯನ್ನು ಪಡೆಯಲು ಪ್ರಯತ್ನಿಸಬೇಕು.

ನಿಮ್ಮ ಜಿಲ್ಲೆಯ ಉದ್ಯೋಗಿಕ ಪ್ರಗತಿಯನ್ನು ನಾನು ಸ್ವತಃ ಹಲವು ಕಾರ್ಖಾನೆಗಳನ್ನು ಸಂದರ್ಶಿಸಿ ನೋಡಿರುವೆನು. ಉದ್ಯೋಗದ ಅಭಿವೃದ್ಧಿಗೆ ಕಡಿಮೆ ದರದಲ್ಲಿ ವಿದ್ಯುತ್ ಪೂರೈಕೆಯಾಗಬೇಕೆಂಬುದು ಸ್ವಾಭಾವಿಕ. ಮೈಸೂರು ಸರಕಾರವು ಜೋಗ್ ವಿದ್ಯುತ್ ಕೇಂದ್ರದಿಂದ 9000 ಕಿಲೊವಾಟ್ಸ್‌ಗಳಷ್ಟು ವಿದ್ಯುತ್ ಶಕ್ತಿಯನ್ನು ಪೂರೈಸುವುದಾಗಿ ಭರವಸೆ ಕೊಟ್ಟಿತ್ತು. ಆದರೆ ಮೈಸೂರು ಸರಕಾರವು ಅದರ ಮೇಲೆ ಹೊರಿಸಬೇಕೆಂದಿದ್ದ ಸರ್ ಚಾರ್ಜಿನ ಪ್ರಶ್ನೆಯಿಂದಾಗಿ ಕೊನೆಯ ನಿರ್ಣಯವಾಗಲಿಲ್ಲ. 'ಸರ್ ಚಾರ್ಜ'ನ ಬದಲಿಗೆ 'ತೆರಿಗೆ' ಎಂಬ ಶಬ್ದ ಉಪಯೋಗಿಸಲಾಗಿದೆ. ಈ ಶಬ್ದದ ಪೂರ್ಣ ಅರ್ಥ ಏನಾಗುವುದೆಂದು ಮದ್ರಾಸು ಸರಕಾರವು ಪರಿಶೀಲಿಸುತ್ತಿದೆ. ಇದರ ಕುರಿತು ಸ್ಪಷ್ಟೀಕರಣವನ್ನು ಮೈಸೂರು ಸರಕಾರದೊಡನೆ ಕೇಳಲಾಗಿದೆ ಈ ಪ್ರಶ್ನೆ ಬಗೆಹರಿಯಲು ತಡವಾಗಲಾರದು. ಬೇಗನೆ ಜೋಗ್ ವಿದ್ಯುತ್ ದ.ಕ. ಜಿಲ್ಲೆಗೆ ಬಂದೀತೆಂದು ನನಗೆ ವಿಶ್ವಾಸವಿದೆ.

ಬಟ್ಟೆ ವಿನಿಯಂತ್ರಣ ಗೊಳಿಸುವ ಪ್ರಶ್ನೆ ಕೇಂದ್ರ ಸರಕಾರದ ಕೈಯಲ್ಲಿದೆ ಬಟ್ಟೆ ಸಂಗ್ರಹ ಹೆಚ್ಚಿದ್ದು ಜನರಲ್ಲಿ ಕೊಳ್ಳುವ ಶಕ್ತಿ ಇಲ್ಲದಿರುವಾಗ ತಮ್ಮ 'ಕೋಟಾ'ಗಳನ್ನು ಕೊಂಡುಕೊಳ್ಳಬೇಕೆಂದು ವ್ಯಾಪಾರಿಗಳನ್ನು ಒತ್ತಾಯಿಸಬಾರದೆಂದು ನೀವು ಹೇಳುತ್ತೀರಿ ನಿಮ್ಮ ಪರಿಸ್ಥಿತಿ ನನಗೂ ಚೆನ್ನಾಗಿ ತಿಳಿದಿರುವುದು. ನಿಮಗೆ ತೊಂದರೆಯಾಗದಂತೆ ನಿಮ್ಮ ಪರಿಸ್ಥಿತಿಯ ಅರಿವನ್ನು ನಾನು ಕೇಂದ್ರಕ್ಕೆ ಮಾಡಿಕೊಟ್ಟಿರುವೆನು. ಆದರೆ ಲಾಭ ಸಿಗುವಾಗ ಮಾತ್ರ ಕೋಟಾಗಳನ್ನು ಸ್ವೀಕರಿಸಿ ಈಗ ಪಡೆಯದೆ ಇರುವುದು ವ್ಯಾಪಾರದ ಶುಭ ಲಕ್ಷಣವಲ್ಲ. ಮದ್ರಾಸು ಸರಕಾರವು ನಿಮ್ಮನ್ನು ಒತ್ತಾಯಿಸುತ್ತದೆಂದು ತಿಳಿಯಬೇಡಿ. ಅವಧಿ ದಾಟಿದ ಬಟ್ಟೆಗಳಿಗೆ ನೇಕಡಾ 5ರಷ್ಟು ಸುಂಕವನ್ನು ಹೊರಿಸುವುದು ಕೇಂದ್ರ ಸರಕಾರವು. ಬಟ್ಟೆಯ ವಿನಿಯಂತ್ರಣದಿಂದ ಕೈಮಗ್ಗಕ್ಕೆ ಅನುಕೂಲವಾದೀತೆಂದು ನೀವು ತಿಳಿಯುವುದಾದರೆ ಅದು ತಪ್ಪು ಎಂಬುದನ್ನು ತಿಳಿಯ ಬಯಸುತ್ತೇನೆ ಬಟ್ಟೆಯ ವಿನಿಯಂತ್ರಣದಿಂದ ಸ್ಪರ್ಧೆ ಹೆಚ್ಚಿ ಕೈಮಗ್ಗಕ್ಕೆ ಬಹಳ ಪೆಟ್ಟು ಬೀಳುವುದು ನಿಶ್ಚಯ ಅಂತೂ ನಿಮ್ಮ ಸಂಕಷ್ಟಗಳನ್ನು ಕೇಂದ್ರ ಸರಕಾರದ ಅವಗಾಹನೆಗೆ ತರುವೆನು.

ಇಲ್ಲಿನ ಮೋಟಾರ್ ಸಾರಿಗೆ ಕೈಗಾರಿಕೆಯು ಪ್ರಾಂತದ ಇತರ ಕಡೆಗಳಿಗಿಂತ ಭಿನ್ನವಾಗಿದೆ ಎಂದು ಹೇಳಲಾಗುತ್ತಿದೆ, ಅದ ಕಾರಣ ಸರ್ ಚಾರ್ಜ ಹೊರಿಸಲಾರದೆಂದು ನಿಮ್ಮ ಮತವಿದೆ. ಆದರೆ ಪ್ರಾಂತದ ಇತರ ಕಡೆಗಳಲ್ಲಿ ಸರ್ ಚಾರ್ಜ ಹೊರಿಸಿದ್ದರಿಂದ ಆ ಕೈಗಾರಿಕೆಗೆ ಏನೂ ತೊಂದರೆಯಾಗದೆಂದು ನನ್ನ ಅಭಿಪ್ರಾಯ. ಈ ವಿಷಯವಾಗಿ ಸಿಲೆಕ್ಟ್ ಕಮಿಟಿಯಲ್ಲಿ ನಾನು ಸರ್ ಚಾರ್ಜಿಗೆ ವಿರೋಧ ಮಾಡಿದ್ದೆ. ದ. ಕ. ಜಿಲ್ಲೆಯ ವಿಷಯದಲ್ಲಿ ಅದರ ಭಾರ ಕಡಿಮೆ ಮಾಡಲು ಯತ್ನಿಸುತ್ತೇನೆ.

ಸರಕಾರವು ಮಾಲಕರನ್ನು ಶೋಷಕರೆಂದಾಗಲೀ ಮಜೂರರನ್ನು ಶೋಷಿತರೆಂದಾಗಲೀ ತಿಳಿಯುತ್ತದೆಂದು ನೀವು ಗ್ರಹಿಸುವುದು ತಪ್ಪು. ವಿವಾದಗಳನ್ನು ಸಮಾಧಾನದಿಂದಲೇ ತೀರ್ಮಾನಿಸಬೇಕೆಂದು ನನ್ನ ಇಚ್ಛೆ ಅಷ್ಟೆ. ನಾನು ದಾಕ್ಟರನಾಗಿರುವುದರಿಂದ ಆಶಾವಾದಿಯಾಗಿರುವೆನು, ಬರುವ ಜನವರಿಯಲ್ಲಿ ನಿಮ್ಮ ವಿಮಾನ ನಿಲ್ದಾಣವು ತಯಾರಾಗುವುದು. ನೀರಿನ ಪೂರೈಕೆ ಇತ್ಯಾದಿಯೂ ಬೇಗನೆ ಆಗುವುದೆಂದು ನನಗೆ ಭರವಸೆ ಇದೆ. ಆಸ್ಪತ್ರೆ ಕಟ್ಟೋಣದ ವಿಷಯ ಆರೋಗ್ಯ ಮಂತ್ರಿಗಳಿಗೆ ತಿಳಿಸುತ್ತೇನೆ' ಎಂದರು. ಶ್ರೀ ಉಮಾನಾಥ ರಾಯರು ಧನ್ಯವಾದಗಳನ್ನರ್ಪಿಸಿದ ಬಳಿಕ ಸಭಾಂತ್ಯವಾಯಿತು

The Canara Industrial & Banking Syndicate, Ltd., Byndoor

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಬೈಂದೂರು.

ಜಾಹೀರು ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಲ್ಲಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದುದರಿಂದಲೂ, ಅವರಿಗೆ ಕೊಟ್ಟ ರಜಿಸ್ಟ್ರಿ ನೋಟೀಸಿಗನುಸಾರವಾಗಿಯೂ, ಇನ್ನು ಕೆಲವು ಜಾರಿಯಾಗದೆ ಹಿಂತಿರುಗಿ ಬಂದಿರುವದರಿಂದಲೂ, ಈ ಮೂಲಕ ತಿಳಿಯಪಡಿಸುವದೇನಂದರೆ, ಸದ್ರಿಯವರು ಅಡವಿಟ್ಟ ನಗಗಳನ್ನು ಇದೇ ತಿಂಗಳ ತಾ. 25 10-1952 ಶನಿವಾರ ಮಧ್ಯಾಹ್ನ ಗಂಟೆ 2ಕ್ಕೆ ಯಾ ಅನಂತರ ಯುಕ್ತ ಕಂಡ ತಾರೀಕಿಗೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವವು. ಸದ್ರಿ ಯೇಲಂವಿಗೆ ನಿಲ್ಲಲು ಅಪೇಕ್ಷಿಸುವವರು ಆ ಸಮಯಕ್ಕೆ ಬೇಂಕಿನ ಆಫೀಸಿಗೆ ಬರಬೇಕಾಗಿ ಅಪೇಕ್ಷಿಸುತ್ತೇನೆ.

ಲೋನು ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು
844/49	E. M Meera Sahib S/o Oommer Sahib Land Lord & Merchant, Byndoor.	Rupees 1285
378/50	—Do—	200
82/51	E. M. Kojapa Sahib S/o E. M. Meera sahib Land Lord Byndoor	100
719/51	ಹೊಕ್ಕರ ಹಿತ್ಲು ಮಾಸ್ತಿ, ಸುಬ್ಬನ ಮಗ, ವ್ಯಾಪಾರಿ ಉಪ್ಪುಂದ.	35
429/50	ಭಟ್ಟನ ಹಿತ್ಲು ಸೋಮ, ಮಾಸ್ತಿ ಮಗ, ಯಡ್ತರೆ ಗ್ರಾಮದಲ್ಲಿರುವವನು.	1-

Office: Byndoor,
Date 14—10—1952

B Narasimayya,
Agent



ಅಧಿಕ ಆಹಾರ ಬೆಳೆಯುವ ಚಳುವಳಿ

[೩ನೇ ಪುಟದಿಂದ ಮುಂದುವರಿದುದು]

ಜನೆಗಳನ್ನು ತಾತ್ಕಾಲಿಕ ಹಾಗೂ ಶಾಶ್ವತ ಎರಡೂ ರೀತಿಯಲ್ಲಿ ಕೈಗೊಳ್ಳುವುದಕ್ಕೆ ಪ್ರಾಶಸ್ತ್ಯ ಕೊಟ್ಟಿತು. ೧೯೪೭ನೇ ಏಪ್ರಿಲಿನಿಂದ ಐದು ವರ್ಷಗಳ ಅವಧಿಯುಳ್ಳ ಸುಸಂಬದ್ಧ ಯೋಜನೆಯ ರೂಪನ್ನು ತಾ ದಕ್ಕೆ ಕೊಟ್ಟರು. ಪ್ರತಿಯೊಂದೂ ವರ್ಷದ ಕನಿಷ್ಟ ಹೆಚ್ಚಳವನ್ನು ಸ್ಪಷ್ಟವಾಗಿ ನಿರ್ದೇಶಿಸಿ ಅದನ್ನು ಭಗೀರಥ ಪ್ರಯತ್ನದಿಂದಾದರೂ ಸಾಧಿಸುವ ಛಲ ನಮ್ಮ ರೈತರಲ್ಲಿ ಮೂಡಿಬರಬೇಕೆಂದು ಸರಕಾರ ಹಾರೈಸಿತು. ೧೯೪೭ರಲ್ಲಿ ಸರಕಾರವು ಲಾರ್ಡ್ ಬೊಯ್ಡ್ ಓರ್ ಅವರನ್ನು ಅಧಿಕ ಆಹಾರ ಬೆಳೆಯಲು ಅನುಸರಿಸಬೇಕಾದ ವಿಧಾನದ ಕುರಿತು ಸಲಹೆ ನೀಡಲು ಆಮಂತ್ರಿಸಿತು. ಕೃಷಿ ಕ್ಷೇತ್ರವನ್ನು ವ್ಯಾಪಕಗೊಳಿಸುವುದರ ಜೊತೆಗೆ, ನೀರಾವರಿ ಮುಂತಾದ ಉಪಾಯಗಳಿಂದ ಬೆಳೆಯನ್ನು ಹೆಚ್ಚಿಸುವುದಕ್ಕೂ ಪ್ರಾಶಸ್ತ್ಯ ಕೊಡಲಾಯಿತು. ಕೇಂದ್ರ ಟ್ರಾಕ್ಟರು ಸಂಸ್ಥೆಯೊಂದು ಅಸ್ತಿತ್ವಕ್ಕೆ ಬಂದು, ಅಂತರಾಷ್ಟ್ರೀಯ ಬ್ಯಾಂಕಿನಿಂದ ದೊರೆತ ಸಾಲದ ನೆರವಿನಿಂದ ಪಡು ಭೂಮಿಯನ್ನು ಸಾಗು ಮಾಡುವ ಕೆಲಸವೂ ಆರಂಭವಾಯಿತು. ಕಳೆದ ವರ್ಷ ಇದೇ ಚಳುವಳಿಗೆ ಹೊಸ ರೂಪನ್ನು ಕೊಟ್ಟು ಅದು ಯಶಸ್ವಿಯಾಗಲು ಪ್ರಭಾವಿ ಕಾರ್ಯಕ್ರಮವನ್ನು ರೂಪಿಸಲಾಯಿತು.

ಕಾರ್ಯ ವಿಧಾನ

ಈ ಚಳುವಳಿಯು ತೊಡಗಿದಂದಿನಿಂದಲೂ, ಅದರ ಯಶಸ್ಸನ್ನು-ಬಿಡುಗಣ್ಣಿನಿಂದ ಅಳೆದು ನೋಡಲಾಗುತ್ತಿದೆ. ಕಾಲಾನುಕಾಲಕ್ಕೆ ಅದುವರೆಗೆ ಪಡೆದ ಅನುಭವ ಹಾಗೂ ಜ್ಞಾನದಿಂದ ಕಾರ್ಯಕ್ರಮದ ಕೊರತೆ ನಿವಾರಿಸಲು ಪ್ರಯತ್ನಿಸಲಾಗಿದೆ. ಪ್ರಯತ್ನ ನಿಷ್ಫಲವಾಗದಂತೆ, ಎಲ್ಲಿ ಸುಲಭದಲ್ಲಿ ಹೆಚ್ಚು ಆಹಾರ ಧಾನ್ಯ ಬೆಳೆಯುವುದು ಸಾಧ್ಯವೋ ಅಲ್ಲಿಯೇ ಈಗಿನ ಕಾರ್ಯಕ್ರಮವನ್ನು ಬಲಗೊಳಿಸುವರು. ವರ್ಷ ವರ್ಷವೂ ವೆಚ್ಚಕ್ಕೆ ಆಸ್ಪದಕೊಡುವ ಕಾರ್ಯಕ್ರಮಗಳ ಸ್ಥಾನದಲ್ಲಿ ಸಣ್ಣ ಮಟ್ಟಿನ ಶಾಶ್ವತ ನೀರಾವರಿ ಕೆಲಸಗಳ ಮೇಲೆಯೇ ಧನವನ್ನು ಈಗ ವ್ಯಯಿಸುತ್ತಿರುವರು. ಸರಕಾರೀ ನೆರವೆಂದು ಆರ್ಥಿಕ ಸಹಾಯ ನೀಡುವ ಬದಲು, ಸಾಲದ ರೂಪದಲ್ಲಿ ಇದನ್ನು ಕೊಡುವರು. ಜರಿದ ಬಿದ್ದ ಬಾವಿಗಳನ್ನು ದುರಸ್ತಿಗೊಳಿಸುವುದು, ಬಾವಿಗಳಿಗೆ ಏತ ಮತ್ತು ಆ ಮಾದರಿಯ ಇತರ ನೀರೆತ್ತುವ ಸಲಕರಣೆಗಳನ್ನು ಜೋಡಿಸುವುದು, ಹೊಸತಾಗಿ ಅಣೆಕಟ್ಟುಗಳನ್ನು ಕಟ್ಟಿ ಕಾಲುವೆ ತೋಡಿಸುವುದು, ಹಿಂದಿನವುಗಳನ್ನು ಜೀರ್ಣೋದ್ಧಾರ ಮಾಡಿಸುವುದು, ಕೊಳವೆ ಬಾವಿಯಿಂದ ನೀರನ್ನೊದಗಿಸುವುದು, ಕೆರೆ-ಮದಗಗಳ ನಿರ್ಮಾಣ, ಈ ಎಲ್ಲ ವಿಧಾನದಿಂದ ಉತ್ಪಾದನೆಯನ್ನು ಶಾಶ್ವತ ರೂಪದಲ್ಲಿ ಹೆಚ್ಚಿಸಬಹುದೆಂದು ಸರಕಾರ ನಂಬಿದೆ. ಜನತೆಯ ಸಹಕಾರದಿಂದಲೇ ಸರಕಾರದ ನಂಬಿಕೆ ಕೈಗೂಡಬೇಕೆಂಬುದು ನಿಜ.

ಭೂಮಿಗೆ ನೀರಾವರಿಯ ಅನುಕೂಲತೆಯೊದಗಿಸುವುದರಿಂದ ಪ್ರತಿ ಎಕರೆಗೆ ಐದು ಮಣದಷ್ಟು ಫಸಲು ಕೈಗೆ ಬರುವ ನಿರೀಕ್ಷೆ ಇದೆ. ಪಡು ಭೂಮಿಯನ್ನು ಸಾಗುವಳಿ ಮಾಡುವುದಕ್ಕೆ ಸಕಲಾನುಕೂಲತೆಯನ್ನು ಸರಕಾರ ಕೊಡುತ್ತಿದೆ. ಜಾನುವಾರು ಶಕ್ತಿಯ ಅಭಾವ ಇದ್ದಲ್ಲಿ ಅಥವಾ ಆಳವಾದ ಉಳುಮೆ ಬೇಕೆನಿಸಿದಾಗ, ಯಂತ್ರಬಲವನ್ನುಪಯೋಗಿಸುವರು. ಭೂಮಿಯ ಫಲವತ್ತತೆಯನ್ನು ಕಾಯ್ದುಕೊಳ್ಳಲು ರೈತರಿಗೆ ತಕ್ಕ ಜ್ಞಾನೋಪದೇಶ ನೀಡುವರು. ರಾಜ್ಯ ಸರಕಾರಗಳು ಅಮೋನಿಯಂ ಸಲ್ಫೇಟು, ಸೂಪರ್ ಫೋಸ್ಫೇಟು, ಹಿಂಡಿ, ಕಂಪೋಸ್ಟು, ಹಸುರೆಲೆ ಮುಂತಾದ ಗೊಬ್ಬರಗಳನ್ನು ಒದಗಿಸುತ್ತವೆ. ಸುಧಾರಿತ ಬೀಜಗಳ ವಿತರಣೆಯೂ ನಡೆದಿದೆ. ಕೇಂದ್ರ ಸರಕಾರ ರಾಜ್ಯ ಸರಕಾರಗಳಿಗೆ ತಮ್ಮ ಯೋಜನೆಗಳನ್ನು ಕಾರ್ಯಗತಗೊಳಿಸಲು ಸಾಲಕೊಡುತ್ತಿದೆ. ಮತ್ತು ರಾಜ್ಯ ಸರಕಾರಗಳೂ ತಮ್ಮ ಆದಾಯದಿಂದ ರೈತರಿಗೆ ನೆರವು ನೀಡುತ್ತವೆ

All Secondary Schools may subscrib to "Navayuga" weekly Since it has been approved by the Director of Public Instruction, Madras.

ಸ್ವೀಕಾರ ವಿಮರ್ಶೆ

ಪುರಂದರದಾಸರ ಕೀರ್ತನೆಗಳು

ಪ್ರಕಾಶಕರು: ಉಪಾಧ್ಯಾಯ ಪ್ರಕಟಣಾಲಯ, ಗೋಪಾಲ್ ಕೃಷ್ಣ ಸ್ವಾಮಿಗುಡಿಬೀದಿ, ಚಿಕ್ಕಪೇಟೆ, ಬೆಂಗಳೂರು ಸಿಟಿ, ಬೆಲೆ ರೂ ೧-೧೦-೦

ದಾಸರ ಕೀರ್ತನೆಗಳು ಭಕ್ತಿಪರವಾಗಿದ್ದಂತೆ ಭಾವಪೂರ್ಣವೂ ಆಗಿವೆ. ಪಾರಮಾರ್ಥಿಕ ಪಥವನ್ನು ನಿರ್ದೇಶಿಸುವಂತೆ ಲೌಕಿಕ ವ್ಯವಹಾರವನ್ನೂ ಉಪದೇಶಿಸುತ್ತಿವೆ. ಸಾಹಿತ್ಯದ ಚೆಲುವನ್ನು ಅವುಗಳಲ್ಲಿ ಕಾಣಬಹುದಿದ್ದಂತೆ, ಶಾಸ್ತ್ರೀಯ ಸಂಗೀತಕ್ಕೂ ದಾಸರ ಕೀರ್ತನೆಗಳು ಮಹದಾಶ್ರಯ ನೀಡಿವೆ. ಕರ್ನಾಟಕದಲ್ಲಿ ಪುರಂದರ ದಾಸರ ಕೀರ್ತನೆಗಳು ತುಂಬಾ ಜನಪ್ರಿಯವಾಗಿವೆ. ಈ ಕೀರ್ತನೆಗಳನ್ನೊಳಗೊಂಡ ಸಂಕಲನವನ್ನು ಕೆಲವು ಪ್ರಕಾಶಕರು ಒದಗಿಸಿಕೊಟ್ಟು, ಉಪಕಾರ ಮಾಡಿದ್ದಾರೆ. ಪ್ರಕೃತದ ಸಂಕಲನದಲ್ಲಿ ೧೪೫ ಹಾಡುಗಳು ಇವೆ, ಜನಪ್ರಿಯವಾದೆಲ್ಲ ಪದಗಳ ಕೂಡು ಇದೆನ್ನಲು ಬರುವುದಿಲ್ಲವಾದರೂ-ವಿಷಯ ವೈವಿಧ್ಯ ಸಾಕಷ್ಟು ವ್ಯಾಪಕವಾಗಿದೆ. ಇನ್ನೂ ಕೆಲವು ಸಂಕಲನಗಳನ್ನು ಹೊರಡಿಸುವ ಇಚ್ಛೆಯನ್ನು ಪ್ರಕಾಶಕರು ವ್ಯಕ್ತಪಡಿಸಿರುವರು.

THE BOMBAY LIFE ASSURANCE COMPANY, LTD.
ದಿ ಬೋಂಬೆ ಲೈಫ್ ಎಶ್ಯೂರೆನ್ಸ್ ಕೋ. ಲಿಮಿಟೆಡ್.
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು
ಪ್ರಧಾನ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ
ಇವರ ಶಾಖಾ ಕಚೇರಿಗಳು...
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.
ಕಳೆದ ಮೂವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ
ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು
ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಶ್ರೀ ಕೆ. ಕೆ. ಶೆಟ್ರು ನಿರ್ಭೀತ ಲೇಖನಿಯಿಂದ ಹೊರಹೊಮ್ಮಿದ
ನವೀನ ಸಾಮಾಜಿಕ ಕಾದಂಬರಿ.
ಸನ್ಯಾಸಿಯ ಸೋಗಿನಲ್ಲಿ!
ವೇಶ್ಯಾಪುತ್ರಿಯಾದರೂ ನೀತಿವಂತ ಜೀವನ ನಡೆಸುವ ಮನಸ್ಸುಳ್ಳವಳಾದರೆ ಸಮಾಜವು ಅದಕ್ಕೆ ಹೇಗೆ ಅಡ್ಡಿ ಮಾಡಿ ಆಕೆಯ ಜೀವನವನ್ನು ಕೆಡಿಸಲು ಕಾರಣವಾಗುವುದೆಂಬುದನ್ನು ಹೃದಯಂಗಮವಾಗಿ ಚಿತ್ರಿಸುವ ಅತ್ಯಾಧುನಿಕ ಕಾದಂಬರಿ.
ಸನ್ಯಾಸದ ಮರೆಯಲ್ಲಿ ನಡೆಯುವ ವಿನ್ಯಾಸದ ಸತ್ಯಕತೆ.
ಬೆಲೆ 0—10—0 ಇತರ ಪುಸ್ತಕಗಳ ಕೆಟಲಾಗಿಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

For Protection and Provision Consult
The New Guardian of India Life Insurance Co., Ltd.
Estd] Head office: MADRAS [1934

NEW BUSINESS	Exceeds	... 66½	Lakhs
PREMIUM INCOME	„	. 15	„
LIFE FUND	„	... 54¾	„
ASSETS	„	... 60¼	„
BUSINESS IN FORCE	Nearly	3	Crores

A Policy in this Progressive Life Office is good investment; its Agency is valuable business connection.
Applications for Representation are invited from energetic influential persons, with good connection. Please apply to:
G. R. Wallia, Branch Manager,
Diamond Building, Hampankatta, MANGALORE, S. K.

ಯಕ್ಷಗಾನ ಸಂಪೂರ್ಣ ರಾಮಾಯಣ

ಕವಿ: "ರಾಜೇಶ" ಪ್ರಕಾಶಕರು: ಜೀ
ಧಂ ಪ್ರಕಟಣಾಲಯ, ಸಾಗರ. ಬೆಲೆ
ರೂ. ೦—೧೦—೦

ಸಂಪೂರ್ಣ ರಾಮಾಯಣವನ್ನು ನಾಟ
ದಲ್ಲಿ ಆಡಿ ತೋರಿಸುವ ಪರಿಪಾಟವುಂಟು
ಯಕ್ಷಗಾನದಲ್ಲಿ ಒಂದೇ ರಾತ್ರಿ ಅದನ್ನು
ಡಿ ತೋರಿಸಲು ತಕ್ಕುದಾದ ಪ್ರಸಂಗ ಪ್
ಯಃ ಇದುವರೆಗೆ ಲಭ್ಯವಿದ್ದಿಲ್ಲ. ಈ ಪು
ಕದ ಪ್ರಕಟಣೆಯಿಂದ ಹೊಸ ಪ್ರಯತ್ನ
ಪ್ರೋತ್ಸಾಹ ದೊರೆತಂತೆನಿಸುತ್ತದೆ. ವಿಸ್ತಾ
ವಾದ ರಾಮಾಯಣದ ಕತೆಯು ಇಲ್ಲಿ ಚೀ
ಕವಾಗಿರುವುದರಿಂದ ಸನ್ನಿವೇಶಗಳು ಕ್ಷಣ
ನಿಲ್ಲದೆ ಓಡುತ್ತಿವೆ. ಪರಿಣಾಮವಾಗಿ ಬಯಲ
ಟ ಆಡುವಾಗ ತರ್ಕಕ್ಕೆ, ಬೋಧಪ್ರದವ
ಚರ್ಚೆಗೆ ಅವಕಾಶ ದೊರೆಯುವ ಸ
ಭವ ಕಡಿಮೆ. ಇದರಿಂದ ಯಕ್ಷಗಾ
ಆಂತರಿಕ ಚೆಲುವು ಅಥವಾ ವೈಶಿಷ್ಟ್ಯಕ್ಕೆ ಕು
ದು ಒದಗೀತೋ ಏನೋ. ಆದರೂ ಈ
ಯತ್ನ ಸ್ವಾಗತಾರ್ಹ.

ಕೆಸರಿನ ಕಮಲ

ಕೃತಿಕರ್ತೃ ಮತ್ತು ಪ್ರಕಾಶಿಕೆ: ಲಕ್ಷ್ಮಿ
ಪಾರೆ ಸುಳ್ಯ, ದಕ್ಷಿಣ ಕನ್ನಡ ಬೆ
ರೂ. ೦-೪-೦

ಈ ಪುಸ್ತಕವು ೧೬ ಪದ್ಯಗಳಿಂದ ಕೂಡಿ
ಅದರ ಕವಿತಾ ಕಾಮಿನಿಯ ಸೌಂದರ್ಯ
ರಭಸ ಪರಿಚಯವನ್ನು ಮಾಡಿಸುವಷ್ಟು
ಬಾಸ್ಥ ಮಟ್ಟಕ್ಕೆ ಬಂದ ಒಂದು ಕವನ
ಇಲ್ಲವೆಂದು ವಿಷಾದಿಸಬೇಕು. ಕೃತಿಕರ್ತೃ
ಬರೆಯುವ ಹುಮ್ಮಸ್ಸು ಇದೆ. ಬಹುಶ
ದುದು ಅಟ್ಟದಲ್ಲಿ ಮಾಡಬೇಕೆಂಬ ಚಾ
ಲ್ಯ ಕೂಡಾ ಇದೆ. ಇಲ್ಲಿನ ಕೃತಿಗಳೆಲ್ಲ ಬಾ
ಷ ನೀರಸ ಸಾಕಷ್ಟು ವಿಸ್ತಾರವಾದ ಶಬ್ದ
ಪತ್ತಿಯ ಕೊರತೆ ರಸಸ್ಪಂದನವನ್ನುಂಟುಮಾ
ಡುವ ಸಾಮರ್ಥ್ಯದ ಅಭಾವ ಮುಂತಾದ
ರಣಗಳಿಂದ ಈ ನಿರ್ಣಯಕ್ಕೆ ಬರಬೇಕಾಗಿ
"ಕೆಸರಿನ ಕಮಲ" ಎಂಬ ಪ್ರಥಮದ ಕವಿ
"ಹೆಣ್ಣಿನ ಹೃದಯಾಲೋಕದಲ್ಲಿ ಮಾಡಲಾ
ಕಾರ್ಯವಿಲ್ಲ" ಎಂದು ಎಚ್ಚರ ಹೇಳುತ್ತ
ಒಂದು ಕಥಾನಕದ ಚಿತ್ರಣ ಇದಾದರೂ
ಮರ್ಮವೇಧಕವೆನಿಸುವುದಿಲ್ಲ; ಓದುಗರ ಸ
ನುಭೂತಿಗಳಿಸುವಂತೆ ಬರೆಯಲ್ಪಟ್ಟಿಲ್ಲ,
ದರೂ ಅಲ್ಲಲ್ಲಿ "ಗುಣವು ಮನದೊಳ
ಲಿ, ಮನವು ಕರ್ಮದೊಳಿರಲಿ, ಕರ್ಮ
ಮವನು ಕೊಡಲಿ, ಕರ್ಮ ಮಾಡು" ಎ
ಸಂದೇಶ, "ಜ್ಞಾನವು ಹೃದಯದ ಮಾ
ನೋಡಲು ಭಾವವು ನಲಿಯುವುದು; ನೆ
ನನು ಮರೆಯಿಸಿ ತಿಳಿಯುವ ಚೆಲುವನು
ವಿಸಿ ಮೆರೆಯುವುದು." ಎಂಬ ಅನುಭಾ
ಮಿಂಚು ಹೊಳೆಯುತ್ತಿದೆ.

ಲಕ್ಷ್ಮೀ
ಸಂತಾಲ್ ಮಾತ್ರೆ
ಇದರ ಉಪಯೋಗದಿಂದ ಬಹು
ಲದ ಮೇಹ, ಪ್ರಮೇಹ, ಮೂತ್ರ
ಉರಿ, ಮೂತ್ರದ ಕೃಚ್ಛ್ರ, ಮೂತ್ರದೊಡ
ಯೂ ಮುಂದಾಗಿ ಬಿಳುಪು, ಅರಸಿನ ಕ
ವು ಈ ವರ್ಣಗಳಲ್ಲಿ ಕೀವು ಹೋಗು
ದು, ತೊಡೆ ಸಂದಿನಲ್ಲಿ ಗಂಟೆ ಬರುವದು
ಕಾಲುಗಂಟು ವೇದನೆ, ಕಣ್ಣಿನಲ್ಲಿ ಕೀ
ಬರುವದು, ಶರೀರದಲ್ಲಿ ಉಷ್ಣತೆ, ಸ್ವಪ್ನ
ದ್ರಿಯ, ಸ್ತ್ರೀಯರ ಬಿಳೆ ಸೆರಗು ಇವೆಲ್
ಮಾತ್ರೆಯಾಗಿ ಗುಣ ಹೊಂದುವದು. ಇ
ರುವ ಈಗಿನ ಉಷ್ಣಕಾಲದಲ್ಲಿ ಗಮಿ
ಕಾಣುವಂದರೆ ರಾತ್ರಿ ಮಲಗುವಾಗ್ಗೆ ಒಂದ
ಮಾತ್ರೆ ಸೇವಿಸಿ ಹಾಲು ಕುಡಿದರೆ ಸು
ವಾಗಿ ನಿದ್ರೆ ಬಂದು ಸುಖವಿರೇಚನೆಯಾ
ದೇಹದ ಉಷ್ಣ ಹೋಗುವದು.
ಶೀಸೆ 1ಕ್ಕೆ ರೂ 2-0-0
ಏಜಂಟ್ಸ್:
ಷಾ ಕಂಪೆನಿ, ಮಂಗಳೂರು.

ಜನಜಾಗೃತಿಯೇ ಾಹಿತ್ಯದ ಗುರಿಯಾಗಲಿ!

(೩ನೇ ಪುಟದಿಂದ ಮುಂದುವರಿದುದು)

ವುಳ್ಳದ್ದು. ನಮ್ಮ ಸತ್ಯಸಂಸ್ಕಾರಗನ್ನು ಪಡಿಯಾಗಿ ಜನಸಾಮಾನ್ಯವು ಅವಮಾಡಿಕೊಳ್ಳಲಾರದ ದೆಸೆಯಿಂದ, ಹ ಮಾರು ಸಂಪ್ರದಾಯ, ಅಂಧಶ್ರದ್ಧೆ, ಸಂಸ್ಕಾರ—ನಮ್ಮ ಸಮಾಜದಲ್ಲಿ ನೆಲೆಂತಿದೆ ನಮ್ಮ ಸಂಸ್ಕೃತಿ ಮತ್ತು ಸಭ್ಯತೆು ನಿಜ ಪ್ರಜ್ಞೆಯಿಂದ ಈ ದೋಷಗು ನಾಶವು ನಿವಾರಣೆಯಾಗಿ ನಮ್ಮಾರ್ಯ ಮಾರ್ಗವು ಸುಗಮವಾದೀತು. ಮಾಜದ ತಳಹದಿಯನ್ನು ಒಳಗಿಂದೊಗೆ ಕೊರೆಯುತ್ತಿರುವ ಈ ದುಷ್ಟ ಶಕ್ತಿಳ ವಿರುದ್ಧ ಬಂಡಾಯವೆಬ್ಬಿಸಬಲ್ಲ ನಮ್ಮ ಇಂದಿನ ಸಾಹಿತ್ಯ, ಪ್ರಾಚೀನ ಸಾಹಿತ್ಯದ ತಳಹದಿಯ ಮೇಲಿಂದ ಬೆಳೆಯಬೇಕು. ಇದು ಅನಿವಾರ್ಯವಾದ, ನಮ್ಮಂದಿನ ಸಾಹಿತ್ಯದ ಉದ್ದೇಶಗಳಲ್ಲೊಂದೆಂಬುದು ನಿರ್ವಿವಾದ.

ಅಪಾರವೂ, ಅಸಹನೀಯವೂ ಸರ್ವಮೂಲ ಹೇತುವೂ, ಆಗಿ, ನಮ್ಮ ಅಭ್ಯುದಯದ ಮಾರ್ಗದಲ್ಲಿ ಆತಂಕವಾಗಿ ನಿಂತ ದಾರಿದ್ರ್ಯದ ನಿರ್ಮೂಲನವಾಗದೆ. ದೇಶದ ನವ ರಚನೆಯ ಕುರಿತು ಮಾತಾಡುವುದು ಬರೀ ಡಂಭಾಚಾರ! ಒಂದು ಕಡೆ ಅಗತ್ಯಕ್ಕಿಂತ ಮಿಗಿಲಾದ ಸಂಪತ್ತು ಸಂಚಯವಾಗಿ ಕೊಳೆತು ಬಿದ್ದಿರುವುದು: ಮತ್ತೊಂದು ಕಡೆ ಸಂಪತ್ತಿನ ಅಭಾವದಿಂದ ಜೀವಂತ ಮನುಷ್ಯ ಸಮಾಜವೇ ಕೊಳೆಯುತ್ತಿರುವುದು—ಇದೆಂತಹ ವಿಪರ್ಯಾಸ! ಉಣ್ಣುವುದಕ್ಕಿಲ್ಲದೆ, ಉಡುವುದಕ್ಕಿಲ್ಲದೆ, ಇರುವುದಕ್ಕಿಷ್ಟು ಜಾಗವಿಲ್ಲದೆ ಹೀನತೆ—ದೀನತೆ—ದೌರ್ಬಲ್ಯದಿಂದ ನರಳುತ್ತಿರುವ ಅಪಾರ ಜನ ಸಾಗರವೊಂದುಕಡೆ ಇದೇ ಜನರ ರಕ್ತ ಶೋಷಣೆಯಿಂದ ಸಂಚಯಗೊಳಿಸಿದ ಸಂಪತ್ತಿನಿಂದ, ವೈಭವ, ವಿಭ್ರಮ, ವಿಲಾಸಗಳಲ್ಲಿ ಮೆರೆದಾಡುವ ಜನವೊಂದುಕಡೆ! ದಿನ ರಾತ್ರಿ ದುಡಿವ ರೈತನ—ಕಾರ್ಮಿಕನ ಕುಟುಂಬಕ್ಕೆ ಉಂಡು ಉಟ್ಟು ಇರುವಷ್ಟು ಭಾಗ್ಯ ಏಕಿಲ್ಲ? ಮತ್ತೊಂದುಕಡೆ ಒಂದಿಷ್ಟು ಹಣ ಚೆಲ್ಲಿದಾಗ—ಬೆವರ ಹನಿ ಸುರಿಸದೆ—ಸಂಪತ್ತಿನ ಸಾಗರ ಏಕೆ ಹರಿಯಬೇಕು? ರೋಗ ರುಜನಗಳಿಂದ, ಹಸಿವೆಯ ಬೆಂಕಿಯಿಂದ ಈ ಬಡ ಜನಕ್ಕೆ ಏಕೆ ಮುಕ್ತಿಯಿಲ್ಲ? ಹೀಗಿದ್ದೂ ಈ ಜನ ಇನ್ನೂ ಸಹಿಸಿಕೊಂಡು ಮೂಕರಾಗಿ ಭಾಗ್ಯವನ್ನು ಹಳಿದುಕೊಂಡು ಏಕೆ ಕುಳಿತಿದ್ದಾರೆ? ಈ ಸಹನೆ, ಮೂಕತನ ಇನ್ನೂ ಸ್ವಾರ್ಥೀ ಶೋಷಕರ ಭಂಡವಾಳವಾಗಿ ಉಳಿಯಬೇಕೇ? ಸಮಾಜದಲ್ಲಿ ಆ ಹೃದಯ ವಿದಾರಕ ವಿಷಮತೆ ಏಕಿದೆ? ಯಾರಿಗಾಗಿ ಇದೆ? ಯಾರಿಂದಾಗಿ ಇದೆ? ಎಂದಿನವರೆಗಿದೆ?— ಈ ಪ್ರಶ್ನೆಗಳಿಗೆಲ್ಲಾ ಯಾರು ಉತ್ತರಕೊಡಬೇಕು? ಆರ್ಥಿಕ ಅರ್ಧಾಂಗ ವಾಯು'ವಿನಿಂದ ಪೀಡಿತವಾದ ಸಮಾಜವನ್ನು ಯಾರು ಉದ್ಧರಿಸಬೇಕು? ಈ ಸಮಾಜದ ಅಸ್ಥಿದಲ್ಲಿ ಯಾರು ಚೈತನ್ಯವನ್ನು ಹೊಯ್ದು ಮೇಲೆಬ್ಬಿಸಬೇಕು?—ನನ್ನ ದೃಷ್ಟಿಯಲ್ಲಿ 'ಸಾಹಿತ್ಯ'ವೇ ಇಂದು ಈ ಕಾರ್ಯ ಮಾಡಬೇಕಾಗಿದೆ. ಸಾಹಿತ್ಯವೇ ಸಮಾಜದ ಆತ್ಮಕ್ಕೆ ಅಮೃತವನ್ನು ಹೊಯ್ಯಬೇಕು. ಈ ಪೀಯೂಷಪಾನದಿಂದಲೇ ಜೀವನ್ಮೃತವಾದ 'ಜನ' ಎದ್ದು ನಿಲ್ಲಬೇಕು. ಜಡತೆ, ಮೂಕ ಸಹನೆಗಳನ್ನು ತೊಡೆದು ಹಾಕಿ, ಅನ್ಯಾಯದ ವಿರುದ್ಧ ಬಂಡಾಯವೆದ್ದು, ತನ್ನ ಹಕ್ಕುಬಾಧ್ಯತೆಗಳನ್ನು ಪಡೆದುಕೊಳ್ಳುವಂತೆ 'ಜನ'ವನ್ನು ಜಾಗೃತಿಗೊಳಿಸುವ ಮಹೋದ್ದೇಶವು ಇಂದು ಸಾಹಿತ್ಯದ್ದಾಗಿದೆ.

ಜಾತಿಭೇದ, ವರ್ಗಭೇದ, ಅಂಧಶ್ರದ್ಧೆ ಸಂಸ್ಕಾರ ಹೀನತೆ ಇತ್ಯಾದಿ ದುಷ್ಟ ಶಕ್ತಿಗಳ ವಿರುದ್ಧ 'ಸಾಹಿತ್ಯ' ಯುದ್ಧ ಹೂಡಬೇಕು ನಿಜ. ಹೊಟ್ಟೆಯ ಹಸಿವೆ ನೀಗಿಸಿಕೊಳ್ಳಲಾರದ ಜನ, ಜ್ಞಾನದ ಹಸಿವೆಯ ಕಡೆಗೆ ಎಷ್ಟು ದೃಷ್ಟಿಯಿಡ ಬಲ್ಲರು.! ನಮ್ಮ ದೇಶದಲ್ಲಿ ಓದುಬರಹ ಬಲ್ಲವರ ಸಂಖ್ಯಾ ಪ್ರಮಾಣ ಎಷ್ಟಿದೆ? ಜನತೆಯ ದಾರಿದ್ರ್ಯ ನಿರ್ಮೂಲನದ ಜೊತೆಗೆ ವಿದ್ಯಾದಾನವೂ ಕಡ್ಡಾಯವಾಗಿ ಆಗಬೇಕಾಗಿದೆ. ಮುಂದಿನ ಪೀಳಿಗೆ ಸಂಪೂರ್ಣ ಅಕ್ಷರಜ್ಞವಾಗುವಂತೆ ಇಂದಿನಿಂದಲೇ ಕಾರ್ಯ ಪ್ರಾರಂಭವಾಗಬೇಕು. ಜೊತೆಗೆ ಪ್ರೌಢ ನಿರಕ್ಷರರನ್ನು—ಅಕ್ಷರಜ್ಞರನ್ನಾಗಿ ಮಾಡುವ ಕಾರ್ಯವೂ ಆಗಬೇಕು. ಈ ಕೆಲಸಕ್ಕೆ ಅನುಕೂಲವಾಗುವಂತಹ ಸಾಹಿತ್ಯವೂ ಇಂದು ಸಾಹಿತಿಯಿಂದಲೇ ನಡೆಯಬೇಕು.

ಮಹತ್ತಾದ ಕಾರ್ಯ ಸಾಧನೆಗೆ ಹೃದಯ ವೈಶಾಲ್ಯಬೇಕು. ಈ ಘನಕಾರ್ಯಗಳು ಬರೇ ಪಂಡಿತರಿಂದ ಆಗತಕ್ಕವುಗಳಲ್ಲ! ಇದಕ್ಕಾಗಿ ಸಮಸ್ತ ವಿಘ್ನಗಳನ್ನು ಶಿರಸಾ ವಹಿಸಿ, ಸೌಹಾರ್ದ ಮತ್ತು ಸೇವಾಭಾವದಿಂದ— ಅಭಿಯೋಗೋನ್ಮುಖರಾಗಿ ಸಮಾಜದ ಕೆಳಗಿನಿಂದ ಕೆಳಗಿನ ಮಟ್ಟದಲ್ಲಿರುವ ಜನಸಾಗರದೊಡನೆ ಏಕರೂಪವಾಗಬಲ್ಲ ಮತ್ತು ವಿಲೀನವಾಗಬಲ್ಲ 'ಸಾಹಿತ್ಯ' ಸೇವಕರ ಅಗತ್ಯವಿದೆ. ಹೀಗೆ ಯಾರು ಮಾಡಬಲ್ಲರೋ ಅವರೇ ಇಂದು ನಮಗೆ ಬೇಕಾದ ಸಾಹಿತ್ಯವನ್ನೂ ನಿರ್ಮಿಸಬಲ್ಲರು; ಅಲ್ಲದೆ, ದೇಶದ ಭಾವೀ ಇತಿಹಾಸವನ್ನೂ ಅವರೇ ರೂಪಿಸುವರು. ನಮ್ಮ ದೇಶದಲ್ಲಿ ಹಿಂದು ವಿದ್ದಾನೆ, ಮುಸಲ್ಮಾನನಿದ್ದಾನೆ, – ಸ್ಪೃಶ್ಯ- ಅಸ್ಪೃಶ್ಯರಿದ್ದಾರೆ, ಬಡವನಿದ್ದಾನೆ, ಧನಿಕನಿದ್ದಾನೆ. ಇಗವರೆಲ್ಲರ ವೈವಿಧ್ಯ ಪೂರ್ಣವಾದ ಘರ್ಷಣೆಯಿಂದ ತುಂಬಿದ ಮನೋ ಪ್ರವಾಹವನ್ನು, ಒಂದೇ ಪ್ರವಾಹದಲ್ಲಿ ಹರಿಸಿ ಬಿಡಬಲ್ಲ, ಮಿಂಚಿನ ವೇಗದ ಕ್ರಿಯಾಶಕ್ತಿ, ಸಾಹಿತ್ಯದಲ್ಲಿ ತುಂಬಿ ಬರಬೇಕಾದರೆ. ಸಾಹಿತಿಯು ಮತ್ತು ಸಾಹಿತ್ಯವು, ಜನಸಮೂಹದಲ್ಲಿ ಸಮರಸವಾಗಿ ಹೋಗಬೇಕು. ಭಾರತದ ಸಹಸ್ರಾರು ಪಟ್ಟಣ ಹಳ್ಳಿಗಳ ಹರಡಿಕೊಂಡ ನೂರಾರು ಜಾತಿ ಮತ್ತು ಉಪ ಜಾತಿಗಳಲ್ಲಿ ವಿಭಕ್ತವಾಗಿ, ಸಭ್ಯತೆ ಮತ್ತು ಸಂಸ್ಕೃತಿಯ ಹಲವಾರು ಮೆಟ್ಟಲುಗಳಮೇಲೆ ನಿಂತ ಅನಂತ ಜನಸಮೂಹವೇ—ಸಾಹಿತ್ಯದ ಪ್ರಮುಖ ಗುರಿಯಾಗಬೇಕು. ನಮ್ಮ ಸರ್ವ ಪ್ರಯತ್ನಗಳ ಏಕಮಾತ್ರ ಲಕ್ಷ್ಯ ಈ ಅಪಾರ ಜನಸಮೂಹವೇ! ಇದನ್ನು ವರ್ತಮಾನ ದುರ್ಗತಿಯಿಂದ ರಕ್ಷಿಸಿ, ಭವಿಷ್ಯದ ಕಲ್ಯಾಣದ ಕಡೆ ಉನ್ಮುಖವನ್ನಾಗಿ ಮಾಡುವುದೇ ಇಂದಿನ ಸಾಹಿತ್ಯದ ಗುರಿ! ಇದೇ ಸಾಹಿತ್ಯ ನುಡಿಯು ನುಡಿಯಬೇಕಾದ ಸತ್ಯ—ಆಚರಿಸ ಬೇಕಾದ ಏಕಮಾತ್ರ ಧರ್ಮ!

ಮನುಷ್ಯನ ಸುಖಃ ದುಃಖಃ ಒಳಿತು—ಕೆಡುಕು, ಬೇಕು—ಬೇಡ, ಇತ್ಯಾದಿಗಳನ್ನು ಇವೆಲ್ಲವುಗಳಲ್ಲಿ ಸಮರಸವಾಗಿ ಸಂಪಾದಿಸಬೇಕು. ಆಗ ಮಾತ್ರ ಸಾಹಿತ್ಯ ನಿರ್ಮಾಣಕ್ಕೆ ಬೇಕಾದ ವಸ್ತು ಮತ್ತು ಭಾಷೆ ದೊರೆಯುತ್ತದೆ. ತನ್ನನ್ನು ತಾನು ಸಮಾಜಕ್ಕೆ ಅರ್ಪಿಸಿಕೊಂಡೇ ಸಮಾಜದ ಸಹಜ ವಸ್ತು ಮತ್ತು ಭಾಷೆಯನ್ನು ಸಂಪಾದಿಸಲು ಸಾಧ್ಯ. ಭಾಷಾ ಶಾಸ್ತ್ರ, ಮತ್ತು ವ್ಯಾಕರಣ ಸೂತ್ರಗಳಿಂದಲೇ ಸಹಜ ಭಾಷೆ ಹಸ್ತಗತವಾಗಲಾರದು ಸಮರಸ ಜೀವನದಿಂದಲೇ ಸಹಜಭಾಷೆ ಹಸ್ತಗತವಾಗಬಲ್ಲದು. ಈ ಮಾತಿಗೆ ನಮ್ಮ ದೇಶದಲ್ಲಿ - ಈ ಯುಗದ ಮಹಾನ್ ಉದಾಹರಣೆಯೆಂದರೆ 'ಗಾಂಧಿಜೀ' ಅವರು ನಮ್ಮ ಹೃದಯದ 'ಭಾಷೆ'ಯಿಂದ ಆಡುತ್ತಿದ್ದರು. ಅವರ 'ಭಾಷೆ' ನಮ್ಮ ಹೃದಯವನ್ನು ನೇರವಾಗಿ ಹೊಕ್ಕು ನಮ್ಮನ್ನು ಸಚೇತನಗೊಳಿಸುತಿತ್ತು. ಅವರಿಗೆ ಈ ಭಾಷೆ—ವಸ್ತುಗಳ ವಶೀಕರಣ ಕಲೆ ಹೇಗೆ ಹಸ್ತಗತವಾಗಿತ್ತು? ಅವರು ತನ್ನನ್ನು ತಾನು ಜನತೆಗಾಗಿ ಅರ್ಪಿಸಿಕೊಂಡು ಸಹಜ ಮಾನವರಾಗಿದ್ದರು. ಸತ್ಯ ವಸ್ತು, ಸಹಜ ಭಾಷೆಯಿಂದ ಹೇಳಿದ—ಬರೆದ ಸಾಹಿತ್ಯವೇ—ತ್ರಿಕಾಲಾಬಾಧಿತ ಸಾಹಿತ್ಯವಾಗಿ ಉಳಿಯುತ್ತದೆ. ಅದೇ ನಮಗೆ ಮಾರ್ಗದರ್ಶಕವಾಗುತ್ತದೆ. ಸ್ವತಂತ್ರ ಭಾರತವಿಂದು ಈ ತೆರದ ಸಾಹಿತ್ಯವನ್ನು ಕೇಳುತ್ತಿದೆ—ಬೇಡುತ್ತಿದೆ. ಅದನ್ನೇ ನೀಡಬಲ್ಲ 'ದಾತ'ರು ಮಾತ್ರ ಬೇಕಾಗಿದ್ದಾರೆ.

ಮಾನವ ವಿಜಯದ ಹೆದ್ದಾರಿ!

ಆರ್ಥಿಕ ಮತ್ತು ಸಾಂಪತ್ತಿಕ ಅನುಕೂಲತೆಯು ಇಂದಿನ ಮಾನವ ಜೀವನದ ವಿಜಯದ ಹೆದ್ದಾರಿ.

ಜನತೆಗೆ ಈ ಅನುಕೂಲತೆಗಳನ್ನೊದಗಿಸಿ ಸಾಂಪತ್ತಿಕ ಅಭಿವೃದ್ಧಿ ಸಾಧಿಸುವುದೇ ಬೇಂಕುಗಳ ಹೆಗ್ಗುರಿ

ದಿನೇ ದಿನೇ ಜನ ವಿಶ್ವಾಸಗಳಿಗೆ ಪ್ರಗತಿ ಹೊಂದುತ್ತಿರುವ

ದಿ ವಿಜಯ ಬೇಂಕ್ ಲಿ., ಮಂಗಳೂರು.

ಇದರೊಡನೆ ನಿಮ್ಮ ವ್ಯವಹಾರ ಬೆಳೆಸಿ ಅನುಕೂಲತೆ ಪಡೆದು ಜೀವನದಲ್ಲಿ ವಿಜಯ ಸಾಧಿಸಿರಿ

ಗಿರಾಕಿಗಳ ಹಿತಸಾಧನೆ ಮತ್ತು ವಿಶ್ವಾಸ ಸಂಪಾದನೆಯು ವಿಜಯ ಬೇಂಕಿನ ಅಮೂಲ್ಯ ಸೊತ್ತು

The Vijaya Bank Ltd.,
Head Office: MANGALORE-3.

Branches at.
Udipi, Kaup, Coondapur, Byndoor, Karkal, Brahmavar, City-Mangalore
Kasaragod, Puttur, Kanhangad, Bombay & Mercara

ಸ್ವರ್ಗೀಯ ಪ್ರೇಮಚಂದ್ರರ ಧರ್ಮಪತ್ನಿ
ಶ್ರೀಮತಿ ಶಿವರಾಣಿ ದೇವಿಯವರ
ಕಥಾಮಾಲಿಕೆಯ ಅನುವಾದ

ನಾರೀಹೃದಯವನ್ನು ಚಿತ್ರಿಸುವ
ಅತ್ಯುತ್ತಮ ಕತೆಗಳ ಸಂಗ್ರಹ

ಸ್ತ್ರೀಯರಲ್ಲಿಯೂ ಸಾಹಸ, ಸ್ನೇಹ, ವೀರ ಭಕ್ತಿ, ತ್ಯಾಗ, ಬಲಿದಾನಾದಿ ಅಮೂಲ್ಯ ಗುಣಗಳೂ ಇದ್ದೇ ಇವೆ ಎಂಬುದನ್ನು ಚೆನ್ನಾಗಿ ವಿವರಿಸಿರುವ ನವೀನ ಕತೆಗಳು.

ಬೆಲೆ. ರೂ 1-8-0.

ನವಭಾರತಪುಸ್ತಕಭಂಡಾರ, ಉಡುಪಿ

ವಿವಿಧ ಪಾತ್ರೆಗಳು

ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ [illegible] ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಂಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಮರೆಯುವ ಕಲೆ

[೧ನೇ ಪುಟದಿಂದ ಮುಂದುವರಿದುದು]

ಯುತ್ತಾ ಬಂದಿದ್ದಾನೆಂದು ವಿಜ್ಞಾನಿಗೆ ತಿಳಿಯಿತು. ಇದರಿಂದ ದುಃಖಿತನಾದ ವಿಜ್ಞಾನಿ ನೌಕರನನ್ನು ಒಡನೆಯೇ ಕೆಲಸದಿಂದ ತೆಗೆದು ಹಾಕಿದ. ಆದರೆ, ನೌಕರನಿಲ್ಲದೆ ವಿಜ್ಞಾನಿಯ ಕೆಲಸ ಸಾಗುವುದು ಕಷ್ಟವೆನಿಸಿತು. ಈ ಅನುಭವವನ್ನು ಬಣ್ಣಿಸುತ್ತಾ ವಿಜ್ಞಾನಿ ತನ್ನ ದಿನಚರಿಯಲ್ಲಿ ಈ ಮಾತು ಬರೆಯುತ್ತಿದ್ದ— "ಪೀಟರನನ್ನು (ಇದು ನೌಕರನ ಹೆಸರು) ಮರೆಯಬೇಕೆಂಬುದು ನೆನಪಿರಲಿ!"

"ಮರೆಯುವುದು ನೆನಪಿರಲಿ" ಎಂಬ ಸೊಲ್ಲು ತುಂಬ ಮಹತ್ವದಿಂದ ಕೂಡಿದೆ. ಮರೆಯುವಾಗ ನಾವು ಸ್ಮರಣಶಕ್ತಿಯ ತಿರುಗಾಮುರುಗಾ ಉಪಯೋಗ ಮಾಡುತ್ತೇವೆ. ಒಂದು ವಿಷಯದ ಸ್ಮರಣೆ ಜಾಗೃತವಾಗಬೇಕಾದರೆ, ಅದಕ್ಕೆ ಸಂಬಂಧಿಸಿದ ಎಲ್ಲ ಸಂಗತಿಯನ್ನು ಮನೋಪಟಲದ ಮೇಲೆ ಬಿಡದೆ ಮೂಡಿಸಲು ಪ್ರಯತ್ನ ನಡೆಸುತ್ತೇವಷ್ಟೇ! ತದ್ವಿರುದ್ಧ ನಡೆದರೆ ಸಾಕು— ನಿರಾಯಾಸವಾಗಿ ಮರೆತು ಬಿಡಬಲ್ಲೆವು. ಒಂದು ವೇಳೆ ಸಾಮಾನ್ಯ ಸಂಗತಿಯಂತೆ ಒಂದು ಘಟನೆ ಇನ್ನೂ ನೆನಪಿನಲ್ಲಿ ಉಳಿದರೂ, ಆ ಕಡೆ ಲಕ್ಷ್ಯಗೊಡದಿದ್ದರೆ, ಅದು ನಿಷ್ಕ್ರಿಯವೆನಿಸುತ್ತದೆ.

ನಮ್ಮ ಮನಸ್ಸಿನಲ್ಲೊಂದು ರಹಸ್ಯ ಸ್ಥಳದಲ್ಲಿ ವಿನೋದ ಘಟನೆಗಳ, ಹಾಸ್ಯಜನಕ ಪರಿಸ್ಥಿತಿ, ಮನೋರಂಜಕ ಮಾತುಕತೆಯ ಸ್ಮರಣೆಯನ್ನು ಮುಚ್ಚಿಡುವ ಅಭ್ಯಾಸ ಮಾಡಬೇಕು. ನಮಗೆ ಅಗತ್ಯವೆನಿಸಿದಾಗ, ಅವುಗಳನ್ನು ಹೊರತೆಗೆದು ಉಪಯೋಗಿಸುವಂತಿರಬೇಕು. ಇಲ್ಲಿ ಮುಚ್ಚಿಟ್ಟ ವಿಷಯಗಳಿಗೆ ನಮ್ಮ ಮಾನಸಃ ಶಕ್ತಿಯನ್ನು ತನ್ನೆಡೆಗೆ ಆಕರ್ಷಿಸಿ ಪ್ರಭಾವಿತವನ್ನಾಗಿ ಮಾಡುವ ಸಾಮರ್ಥ್ಯ ಇರಬೇಕು. ನಮ್ಮಲ್ಲಿ ಪ್ರತಿಯೊಬ್ಬರ ದೈನಂದಿನ ಅನುಭವಗಳಿಂದಲೇ ಈ ವಿಶೇಷ ಸಂಗ್ರಹವನ್ನು ಮಾಡಬಹುದು. ಮದುವೆಯ ಮೋಜು, ರಜಾ ದಿನದ ವಿನೋದ, ಸಿನೆಮಾ ಕಥೆ ಇತ್ಯಾದಿಗಳು ಮನೋರಂಜನೆಗೆ ಹೇಳಿಸಿದ ಸಾಮಗ್ರಿ.

ಮರೆಯಲು ಪ್ರಯತ್ನಿಸುವುದು ಪ್ರಕೃತಿಗೆ ವಿರುದ್ಧ ಕಾರ್ಯವಲ್ಲ- ಅನುಕೂಲ ವಿಧಾನ. ಮರೆವು ಪ್ರಕೃತಿ ನಿಯಮಗಳಲ್ಲಿ ಒಂದು. ಒಂದು ಸ್ಮೃತಿಯನ್ನು ಪೃಥಕ್ತಾಪೂರ್ವಕವ ನಸ್ಸಿನಿಂದ ಹೊರತಳ್ಳಿ ಬಿಟ್ಟದ್ದೇ ಆದರೆ, ಮತ್ತೆಂದೂ ನಮ್ಮ ಬಳಿ ಸುಳಿಯಲು ಅದಕ್ಕೆ ಧೈರ್ಯವುಳಿಯುವುದಿಲ್ಲ. ಪ್ರತಿಯೊಂದೂ ಅನುಭವವು ನಮ್ಮ ಸ್ಮರಣೆಯಲ್ಲಿ ಉಳಿದರೆ, ಅಧಾನವನ್ನು ಗಳಿಸುವುದ ಕಷ್ಟ. ಆದುದರಿಂದ ವ್ಯರ್ಥ ಸ್ಮೃತಿಯನ್ನು ಮರೆಯುವುದೇ ಬುದ್ಧಿವಂತಿಕೆ. ಸ್ಮರಣಾ ಶಕ್ತಿಯು ತುಂಬ ಸಂತೋಷ ಜನಕ ಘಟನೆಗಳಿಂದಲಿ—ಆ ಹೂದೋಟದಲ್ಲಿ ದುಃಖ ಸ್ಮೃತಿಯ ಹುಲ್ಲು—ಪಾವಸೆಗಳ ಸುಳಿವೂ ಇರದಿರಲಿ!

—ಓಂತತ್ಸತ್॥

ದಯಮಾಡಿ ನಿಮ್ಮ
ಚಂದಾಹಣ ಕಳಿಸಿರಿ.

ವಾರದ ಒಳಿತು ಕೆಡುಕುಗಳು

23-10-52ರಿಂದ ತಾ 29-10-52ರ ವರೆಗೆ

ಮೇಷ—ನಿಮ್ಮ ಆರೋಗ್ಯವಿಂದು ಬಹುಮಟ್ಟಿಗೆ ಸುಧಾರಿಸುವುದು. ಹಣದ ಬಿಕ್ಕಟ್ಟೂ ಬಹ್ವಂಶ ಕಡಿಮೆಯಾಗಲಿದೆ. ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷಿಸಿದ ಫಲ ಲಭಿಸುವದು. ಶತ್ರುಗಳ ಪೀಡೆ ಯಿಲ್ಲದಿದ್ದರೂ ಕಾರ್ಯ ಸಾಧನೆಗೆ ಬೇಕಾದ ಶಕ್ತಿ ಯುಕ್ತಿಗಳು ನಿಮ್ಮಲ್ಲಿ ಸಾಕಷ್ಟಿಲ್ಲದ ಕಾರಣ ಕೆಲವೊಂದು ಕಾರ್ಯಗಳನ್ನು ಅರ್ಧದಲ್ಲೇ ನಿಲ್ಲಿಸುವಿರಿ. ವಾರಾಂತ್ಯದ 5 ದಿನಗಳಲ್ಲಿ ಸುಖ ಇಷ್ಟ ಪ್ರಾಪ್ತಿ ಮಿತ್ರ ಭೆಟ್ಟಿಗಳಾಗಲಿವೆ.

ವೃಷಭ—ದಿನದಿಂದ ದಿನಕ್ಕೆ ನಿಮ್ಮ ಅದೃಷ್ಟವು ಕುಗ್ಗುತ್ತಾ ಬರುತ್ತಲಿದೆ. ಖರ್ಚಿನ ಭಾಗಗಳು ಮಿತಿಮೀರಿದ್ದು ಆದಾಯವು ಅತ್ಯಲ್ಪವಾಗುವ ಕಾರಣ ಚಿಕ್ಕ ಚಿಕ್ಕವರ ಕೂಡೆ ಸಾಲ ಕಡಗಳನ್ನು ಮಾಡುವಿರಿ. ಪರ್ಯಟನದ ದೆಸೆಯಿಂದಾಗಿ ಕಷ್ಟ ನಷ್ಟಗಳು ಹೆಚ್ಚುವವು. ತನುಮನಗಳಿಗೆ ಈಷತ್ತೂ ಸುಖಶಾಂತಿ ಲಭಿಸದು. ಶತ್ರುಗಳ ಪ್ರತೀಕಾರ ಕ್ರಿಯೆಯು ವಿಶೇಷವಾಗುವದು. ವಾರಾಂತ್ಯದ 2 ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗವು

ಮಿಥುನ— ಕಳೆದವಾರಕ್ಕಿಂತ ಕೊಂಚ ಸುಧಾರಣೆಯಾಗುವದು ನಿಮ್ಮ ಜೀವನದಲ್ಲಿ. ಉದ್ಯೋಗದಲ್ಲಿ ತೊಂದರೆಯು ದೂರವಾದೀತು. ಖರ್ಚಿನ ಸಲುವಾಗಿ ಎರಡನೆಯವರನ್ನಾಶ್ರಯಿಸಬೇಕಾಗಿ ಬರಲಾರದು. ಕಳತ್ರ ಕಲಹ ದೇಹಾಲಸ್ಯ ಶತ್ರುಜನರ ಪೀಡೆ ಇವುಗಳಿಂದ ಚಂಚಲಚಿತ್ತರಾದ ನಿಮಗೆ ವಾರಾದಿಯ 2 ದಿನಗಳಲ್ಲಿ ಮಿತ್ರ ಲಾಭಾದಿ ಜಯಾದಿಗಳ ಯೋಗವಿದೆ

ಕರ್ಕಟ—ಕಷ್ಟ ಸಹಿಷ್ಣುಗಳೂ ಹಠವಾದಿಗಳೂ ಆದ ನಿಮ್ಮ ಕಾರ್ಯಕಲಾಪಗಳಿಂದು ನಿರ್ವಿಘ್ನದಿಂದ ನೆರವೇರುವವು ಆದರೆ ಗೃಹಕೃತ್ಯದಲ್ಲಿನ ಅವ್ಯವಸ್ಥೆಯಿಂದಾಗಿ ನಿಮ್ಮ ಚಿತ್ತಕ್ಕೆ ಸ್ವಾಸ್ಥ್ಯವಿರದು. ವಿದ್ಯೋಪಜೀವಿಗಳಿಗೆ ಕಷ್ಟ ನಿಷ್ಠುರಗಳು ಅಧಿಕವಾಗುವವು. ರಾಜಕೀಯದಲ್ಲಿ ವಿಜಯಿಗಳಾಗುವಿರಿ. ವಾರಾದಿಯ 5 ದಿನಗಳು ನಿಮ್ಮ ಬಯಕೆಯನ್ನು ಈಡೇರಿಸುವವು.

ಸಿಂಹ— ಸಾಮಾಜಿಕ ರಾಜಕೀಯ ರಂಗಗಳಲ್ಲಿ ಅದ್ವಿತೀಯ ವಿಜಯವನ್ನು ಗಳಿಸುವಿರಿ. ನಿರುದ್ಯೋಗಿಗಳೂ ಕೂಡ ಸದುದ್ಯಮವನ್ನು ಹೊಂದಿ ಸುಖದಿಂದ ಕಾಲಯಾಪನೆ ಮಾಡುವರು ಆರ್ಥಿಕ ಪರಿಸ್ಥಿತಿಯು ಅತ್ಯುತ್ತಮಸ್ಥಿತಿಗೆ ಬರಲಿದೆ. ಸಾಂಸಾರಿಕ ಪತ್ರಯಗಳಿಂದ ಮುಕ್ತರಾಗುವಿರಿ. ವಾರಾಂತ್ಯದ 5 ದಿನಗಳಲ್ಲಿ ನಿಮ್ಮ ಸಂಕಲ್ಪಗಳು ದ್ಧಿಸುವವು.

ಕನ್ಯಾ—ಗ್ರಹಮಾನವು ತೀರ ಕೆರವುದು. ಮನಸ್ಸು ಅತೀವ ಚಂಚಲವಾಪದು. ದುರ್ಜನರ ಬಳಗಸಿಲಕಿ ಕಷ್ಟ ನ ಅಪವಾದಗಳನ್ನು ಹೊಂದುವಿರಿ. ಅಧಿಕಾನ' ಪೀಡೆಯು ಮೇಲಿಂದ ಮೇಲೆ ಬರ ದೇಹಾರೋಗ್ಯಕ್ಕೆ ಹಾನಿಯಿಹುದು. ಕ ಅಡಚಣೆಯಿಂದಾಗಿ ಹೆರವರಿಗೆ ಮುಖತರಿಸಲು ನಾಚುವಿರಿ. ತಾ 28, 29, ಹೆ ಅನಿಷ್ಟಕಾರಿಗಳಾಗಲಾರವು.

ತುಲ—ಇಂದು ನಿಮ್ಮ ಭಾಗ್ಯೋದಯವಾಗಿರುವುದು. ನಿಮ್ಮ ಸಂಕಲ್ಪಗಳೆಲ್ಲ ಕಾರ್ಯರೂಪಕ್ಕೆ ಬರಲಿವೆ. ಜನತೆಯ ಬಲವೂ ಸನ್ಮಿತ್ರರ ಸಹಾಯವೂ ಚೆನ್ನಾಗಿರ ದರಿಂದ ಯಾವ ಕಾರ್ಯದಲ್ಲೇ ಅ ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಲಾ ಸಂಪದ್ಭಾಗವು ಅತೀವ ವೃದ್ಧಿಹೊಂದ ವಾರಾದಿಯ 2 ದಿನದಲ್ಲಿ ನಿಮ್ಮ ಬಯಕೆ ನಿರ್ವಿಘ್ನದಿಂದ ಸಿದ್ಧಿಸುವುದು.

ವೃಶ್ಚಿಕ—ಈ ವಾರದಲ್ಲಿ ನಿಮ ನಾಕಾರಣ ಕಲಹಗಳುಂಟಾಗುವವು. ಯೊಂದು ಕಾರ್ಯಕ್ಕೂ ವಿಘ್ನಗಳೆ ಮನದಂತೆ ಕಾರ್ಯವು ನೆರವೇರದು. ಚ ಹಣದ ಬಿಕ್ಕಟ್ಟೂ ಕಾಣಿಸೀತು. ಷ್ಟಗಳ ಅಧಿಕ್ಯದಿಂದ ಆರೋಗ್ಯಕ್ಕೆ ಹಾದೆ. ತಾ. 25, 26, 27 ಈ ದಿನಗಳಲ್ಲಿ ಮಟ್ಟಿನ ನಿಮ್ಮ ಇಷ್ಟಾರ್ಥಗಳು ಸಿವವು.

ಧನು—ಹಿಂದಿನ ದಿನಗಳಂತಿಲ್ಲ ರವು. ಆಯ-ವ್ಯಯಗಳು ಸಮತೂಕ ಲ್ಲಲಿವೆ. ಸಾಂಸಾರಿಕ ತಾಪತ್ರಯಗಳು ವಾಗುವವು. ಬಂಧುಬಳಗದವರ ಮ ಮಿತ್ರರ ಹಾರ್ದಿಕ ಬೆಂಬಲವುಳ್ಳ ನಿಮ ದ್ಯೋಗದಲ್ಲಿ ಪ್ರಗತಿಯೂ ವ್ಯಾಪಾರ ಹಾರಗಳಲ್ಲಿ ಲಾಭವೂ ಲಭಿಸುವದು. 25, 26, 27 ಈ ದಿನಗಳಲ್ಲಿ ಶತ್ರುಪಿ ನನಾಶಕ್ಕವಕಾಶವಿದೆ.

ಮಕರ—ಇಲ್ಲಸಲ್ಲದ ಖರ್ಚು ಪ್ರಾಪ್ತವಾದರೂ ಆದಾಯವು ಸಾಕಷ್ಟಿ ದರಿಂದ ಹಣದ ಅಡಚಣೆಯುಂಟಾಗದ ಹತಾಶತ್ರುಯುಗಳು ಹೆಚ್ಚುವೆ. ಗುರು ರ ಕೂಡೆ ಮನಸ್ತಾಪವುಂಟಾಗುವದ ರೋಗ್ಯದ ಕಡೆ ಸ್ವಲ್ಪ ಗಮನವಿರಲಿ. ರಿ ವರ್ಗದವರೆಗೀಕಾಲವು ಉತ್ತಮ ದು, ಕಾಯಕಷ್ಟ ಜೀವಿಗಳಿಗೆ ದಿನಂ ಯು ಸುಗಮವಾಗಲಾರದು. ತಾ. 25 27 ಈ ದಿನಗಳಲ್ಲಿ ಭೋಗವಿಜಯಾದಿ

ಕುಂಭ—ನಿಮ್ಮ ಪರಿಸ್ಥಿತಿ ಮುಂಚಿಗಿಂತ ಎಷ್ಟೋ ಸುಧಾರಿಸಲಿ ವಾರು ತೆರದಿಂದ ಧನಲಾಭವಾಗಲಿದೆ ಸುಖವು ಉತ್ತಮವಾಗಿದ್ದೀತು. ವರ್ಗದವರಿಗೆ ಆಕಸ್ಮಿಕ ನಷ್ಟಕ್ಕವಕಾ ಜನತೆಯ ಬೆಂಬಲವು ಸಾಕಷ್ಟಿಲ್ಲದಿದ್ದ ರ್ಯವನ್ನು ಕೊನೆಹೊಂದಿಸುವ ಶಕ್ತಿಯುತರಾದ ನಿಮಗೆ ತಾ. 23, 2 29 ಈ ದಿನಗಳಲ್ಲಿ ಸುಖಸಂತೋಷ ಉಂಟಾಗುವವು.

ಮೀನ—ಕೈಗೊಂಡ ಕಾರ್ಯ ಹಲವಾರು ವಿಘ್ನಗಳು ಪ್ರಾಪ್ತವಾಗಲಿ ಶ್ರಮಕ್ಕೆ ತಕ್ಕ ಫಲಲಭಿಸದು. ಸದಾ ಟನದಲ್ಲಿ ಹೆಚ್ಚಿನ ಕಾಲ ಕಳೆಯಬೇದು, ಹಣದ ಲೇವಾದೇವಿ ನಿಮಿತ್ತ ವಾದಾವು. ಶತ್ರುಜನರ ಪೀಡೆ ಜನಾ... ಗೀಡಾದೀರಿ. ಆದರೂ ವಾರಾದಿಯ 5 ದಿನಗ ಳ್ಲಿ ಹೆಚ್ಚಿನ ಅನಿಷ್ಟಗಳೂ ಕಾಣಿಸದೆ ಸು ದಿಂದಿರುವಿರಿ.

ಸ್ತ್ರೀ ಪುರುಷ ಶಿಶುಗಳು ರೋಗದಿಂದ ನರಳಬೇಕಾಗಿಲ್ಲ!
ಲಕ್ಷಾಂತರ ಜನರು ಗುಣಹೊಂದಿದ್ದಾರೆ!
ಸರ್ ಜೀವನ್ ಶಿಲಾಜಿತ್ ಲೇಹ್ಯ
ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.
೪೪ ದಿನದ ಲೇಹ್ಯ ರೂ ೫/೪, ೨೨ ದಿನದ ಲೇಹ್ಯ ರೂ.೩/೪
(ಪೋಸ್ಟೇಜು ಮಾಫ್)
ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿ ರುಚಿ ಹೇಳಬೇಕೆ
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್



"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಎಂ. ಸಿ. ಶಾಸ್ತ್ರಿ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.
ಹೆಚ್ಚಿನ ಮಾಹಿತಿಗೆ—ಡಾ। ಯಂ ಸಿ. ಶಾಸ್ತ್ರೀ, ಯಲ್. ಐ ಎಂ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ವಾತಿಕೃರು:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟುವಿಡ

Edited, Printed & Published By K. H. Shetty at the Navayuga Press, Udipi, S. India.

Regd. No. 3618
LICENCE No. 31
Licensed to Post without Prepayment

30-10-1952

Estd. 1921 ಸ್ಥಾಪನೆ.
32ನೆಯ ವರ್ಷ

Founder: **Sri A. B. Shetty**
Minister for Medical & Public Health

ನವಯುಗ
ಆರೋಗ್ಯ ಮಂತ್ರಿ
ೀ. ಎ. ಬಿ. ಶೆಟ್ಟರಿಂದ
ಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ.

ಚಂದಾ 5-12-0
ತಿಂಗಳಿಗೆ 3-0-0
ಡಿ ಪ್ರತಿಗೆ 0-2-0

ನವಯುಗ

Vol 32
No. 9

NAVAYUGA WEEKLY POST BOX NO. 22 UDIPI

ವರ್ಷ ೩೨
ವಾರ ೯

ಅಂತರಂಗ
ಪುಸ್ತಕ ಪತ್ರಿಕೆಯ
ಉಪಯುಕ್ತವಾದ
86 ಪುಸ್ತಕಗಳು
. 24ಕ್ಕೆ ಸಿಗುತ್ತ!
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ.

ಮಧುಪರ್ಕ

ಪ್ರಸಿದ್ಧ ನಾಟಕಕಾರ ಜಾರ್ಜ ಬರ್ನಾರ್ಡ್‌ಶಾ ಅವರನ್ನು ಒಬ್ಬ ಮಹಿಳಾ ಮಣಿ ಭೋಜನ ಸಮಾರಂಭವೊಂದಕ್ಕೆ ಆಮಂತ್ರಿಸಿದಳು. ಶಾ ಅವರಿಗೆ ಅಂದು ಬೇರೆಲ್ಲಿಯೋ ಅಗತ್ಯದ ಕೆಲಸವಿತ್ತು. ಆದುದರಿಂದ ತಮಗೆ ಸಮಯವಿಲ್ಲ ಎಂದರು. ಇದಕ್ಕೆ ಮಹಿಳೆ ಒಪ್ಪದೆ, ಎಷ್ಟೇ ತಡವಾದರೂ, ಅಲ್ಲಿಯ ಕೆಲಸ ಮುಗಿದೊಡನೆಯೇ ತನ್ನಲ್ಲಿಗೆ ಬರಬೇಕೆಂದು ಒತ್ತಾಯ ಪಡಿಸಿದಳು.

ಈಗ ಶಾ ನಿರುಪಾಯರಾದರು. ಬೇರೆ ಕಡೆಯ ತನ್ನ ಕೆಲಸ ಮುಗಿದೊಡನೆಯೇ ಅವರು ನೇರಾಗಿ ಮಹಿಳಾ ಮಣಿಯ ಗೃಹ ಪ್ರವೇಶ ಮಾಡಿದರು. ಅವರನ್ನು ನೋಡಿದ ಹೆಂಗಸು "ಇದೇನಿದು, ನೀವು ಸಂಜೆಯ ಉಡುಪು ಧರಿಸದೇನೇ ಭೋಜನಕ್ಕೆ ಬಂದಿರಾ?" ಎಂದು ಕೇಳಿ ಬಿಟ್ಟಳು.

ಮರು ಮಾತಾಡದೆ ಶಾ ಅಲ್ಲಿಂದೆದ್ದು ಹೋಗಿ, ಸಂಜೆಯ ಪೋಷಾಕು ಧರಿಸಿ ಬಂದರು. ಭೋಜನ ಕಾಲದಲ್ಲಿ ಒಂದು ಮೋಜು ನಡೆಯಿತು. ಎಲ್ಲರೂ ಐಸ್ ಕ್ರೀಮನ್ನು ಚಪ್ಪರಿಸುತಿದ್ದಾಗ, ಶಾ ಚಮ್ಮಚದಿಂದ ಅದನ್ನು ತನ್ನ ಪೋಷಾಕಿನ ಮೇಲೆ ಎಸೆಯುತ್ತಿದ್ದರು

ಇದರ ಮರ್ಮ ಏನೆಂದು ಯಾರಿಗೂ ಮೊದ ಮೊದಲು ಅರ್ಥವಾಗಲಿಲ್ಲ. ಎಲ್ಲರೂ ತನ್ನನ್ನೆ ಬಿಟ್ಟ ಗಣ್ಣುಗಳಿಂದ ನೋಡುವುದನ್ನು ಕಂಡ ಶಾ ಈಗ ಬಾಯಿ ತೆರೆದು ಹೇಳಿದರು.-

"ಈ ಭೋಜನ ನನಗಲ್ಲ ನಾನು ಧರಿಸಿದ ಸಂಜೆಯ ಪೋಷಾಕಿಗಾಗಿ. ಆದುದರಿಂದ ಐಸ್ ಕ್ರೀಮನ್ನು ನೀನೇ ಸವಿನೋಡಪ್ಪಾ, ಪೋಷಾಕೇ!"

ಹೀಗೆಂದವರೇ ಶಾ ಅಲ್ಲಿಂದೆದ್ದು ಹೋಗಿಬಿಟ್ಟರು.

ಉಡುಗೆ-ತೊಡುಗೆ

ನಮ್ಮ ನಡವಳಿಕೆಯಲ್ಲಿ ಕೆಲವು ಅತ್ಯಂತ ಆವಶ್ಯಕತೆಯ ಪರಿಣಾಮವಾಗಿ ರೂಪುಗೊಂಡವುಗಳಾದರೆ, ಹಲವು ಮನಸ್ಸಿನ ಭಾವನೆಗಳನ್ನು ತಣಿಸಲು ಹುಟ್ಟಿಕೊಂಡವು. ಅನ್ನ ಉಣ್ಣುವ ಅಭ್ಯಾಸವು ಶರೀರದ ಅಗತ್ಯವಾದರೆ, ವಸ್ತ್ರ ವುಟ್ಟು ಶೃಂಗರಿಸುವ ಕ್ರಮವು ಮನುಷ್ಯನ ಆಸೆಯನ್ನು ತಣಿಸುವುದಕ್ಕಾಗಿಯೇ ರೂಢಿಗೆ ಬಂತು. ಪುರಾತನಕಾಲದಿಂದ, ಮನುಷ್ಯ ನಾಗರಿಕತೆಯ ಬೆನ್ನು ಹತ್ತಿದ ಗಳಿಗೆಯಿಂದ, ನಮ್ಮ ನಡವಳಿಕೆಯಲ್ಲಿ ಮಹತ್ವದ ಪರಿವರ್ತನೆ ಕಾಣುತ್ತಾ ಬಂದಿದೆ, ವಸ್ತ್ರವುಡುವ ಅಭ್ಯಾಸವನ್ನು ತ್ಯಜಿಸಬೇಕೆಂದು ಇಂದು ಯಾರಾದರೂ ಹೇಳಿದರೆ-ಅದನ್ನು ಒಪ್ಪುವ ಮನಸ್ಸಂತೂ ಇರಲಿ, ಅವನನ್ನು ಹುಚ್ಚನೆಂದು ಸಂಬೋಧಿಸುವ ಚಾಪಲ್ಯವನ್ನು ತಡೆಯಲು ನಮ್ಮಿಂದ ಸಾಧ್ಯವಾಗಲಿಕ್ಕಿಲ್ಲ. ಆದರೂ ಮನೋವೈಜ್ಞಾನಿಕರ ಅಭಿಮತದಂತೆ ವಸ್ತ್ರವುಡುವ ಹಾಗೂ ಶೃಂಗರಿಸಿಕೊಳ್ಳುವ ಪ್ರವೃತ್ತಿ ಬೇರೆಲ್ಲದ, ಇಲ್ಲದೆ ಸಲ್ಲದು ಎಂದು ಹೇಳಲಾಗದ- ಮಾನವೀಯ ಬಯಕೆಯೊಂದರ ದ್ಯೋತಕ ಮಾತ್ರ.

ಇದನ್ನು ಯಾರೂ ಬುಡಪಟ್ಟಿಗೆ ಒಪ್ಪಲಿಕ್ಕಿಲ್ಲ. ಅದರಲ್ಲೂ ನವನಾಗರಿಕತೆ ಪರಾಕಾಷ್ಠೆಗೆ ಬೆಳೆದುನಿಂತಿರುವಾಗ- ಈ ಮಾತನ್ನು ಆಡುವವನಿಗೆ ಎದೆಗಾರಿಕೆ ಬೇಕೆಂಬುದು ನಿಜ. ಉಡುಪು ತೊಡುಪುಗಳನ್ನು ಆಕರ್ಷಕವಾಗುವಂತೆ ಹೊಂಚಿಸುವುದು, ಮತ್ತು ಅವುಗಳ ಸ್ವರೂಪದಲ್ಲಿ ಕಾಲಕಾಲಕ್ಕೆ ಪರಿವರ್ತನೆಯನ್ನು ಸಾಧಿಸಿ ಒಗ್ಗಿಸಿಕೊಳ್ಳುವುದು ಮನಸ್ಸಿನ ಚಾಪಲ್ಯ ಪ್ರದರ್ಶನದ ಒಂದು ರೀತಿ. ಕೇವಲ ಉಡುಗೆ ತೊಡುಗೆಗಳಿಗಷ್ಟೇ ಈ ಪ್ರವೃತ್ತಿಯ ಕ್ಷೇತ್ರ ಸೀಮಿತವಾಗಿರದೆ, ನಮ್ಮ ವಾಹನ ಸೌಕರ್ಯಗಳಲ್ಲಿ, ಗೃಹನಿರ್ಮಾಣದ ಉದ್ಯೋಗದಲ್ಲಿ, ಸಾಹಿತ್ಯದಲ್ಲಿ, ಸಂಸ್ಕೃತಿಯಲ್ಲಿ-ಮನಸ್ಸಿನ ಅತೃಪ್ತ ಭಾವನೆಯನ್ನು ಕೆರಳಿಸಿ ಅದನ್ನು ಏನಾದರೊಂದು ರೀತಿಯಿಂದ ಪೂರೈಸುವಬಗ್ಗೆ ಅನುಸಂಧಾನ ನಡೆಯುತ್ತದೆ.

ನಮ್ಮ ಉಡುಗೆ—ತೊಡುಗೆಯು ಬಗೆ ದಿನ ದಿನಕ್ಕೂ ಬದಲಾಗುತ್ತಿರುವುದನ್ನು ನೋಡುತ್ತೇವೆ. ಈ ಬದಲಾವಣೆ ಆವಶ್ಯಕವೆಂದು ಪರಿಗಣಿಸಲ್ಪಡಬಹುದೇ? ನಿಜಕ್ಕೂ ಆಗಿಲ್ಲ. ಆದರೂ ನಾವು ಚೆಲುವೆಂದು, ಸುಲಭವೆಂದು, ಅನುಕೂಲವೆಂ

ನೆ ಒಂದು ಕಾಲಕ್ಕೆ ಹುಟ್ಟಿ ಹೊಸತೆಂದು ಹೇಳಿದ ಉಡುಗೆ ತೊಡುಗೆಯು ರೀತಿ-ಈಗ ತೀರಾ ಹಳೆಯದಾಗಿ, ಅಸಭ್ಯವಾಗಿ ತೋರುತಿದೆ: ಮತ್ತು ಈಗಿನ ಬಗೆ ಇನ್ನು ಹತ್ತು ವರ್ಷಗಳಲ್ಲಿ ಮೂಲೆ ಸೇರಲಾದೀತು. ಮನುಷ್ಯ ಸೌಂದರ್ಯವೆಂದು ಏನನ್ನು ತಿಳಿದುಕೊಳ್ಳುತ್ತಾನೋ, ಅದನ್ನು ನೋಡುವ ಕಣ್ಣಿನ ಮೇಲೆ ಈ ಎಲ್ಲ ಪರಿವರ್ತನೆಗೆ ಒತ್ತಾಯ ಪಡಿಸುವ ಅಥವಾ ಪ್ರೇರೇಪಣೆಯೊದಗಿಸುವ ಕೆಲಸ, ನಮ್ಮ ಮನಸ್ಸಿನ ಸುತ್ತ ಆಕಾಂಕ್ಷೆಯಲ್ಲಿದೆ.

ಸಾಮಾನ್ಯವಾಗಿ ಮನುಷ್ಯನಲ್ಲಿ ತಾನೊಬ್ಬ ಗಣ್ಯನೆಂದೆಣಿಸಿಕೊಳ್ಳುವ ಆಸೆ ಇರುತ್ತದೆ. [illegible] ತನ ಪರ್ಚನ್ನು ಬೀರಬೇಕೆಂಬ ಬಯಕೆ ಇರುತ್ತದೆ.

ಸರ್ ಅಲೆಕ್ಸಾಂಡರ್ ಕ್ಲಟರ್‌ಬಕ್ ಅವರು ಬ್ರಿಟನಿನ ಇಂಡಿಯಾ ರಾಯಭಾರಿಯಾಗಿ ಈ ತಿಂಗಳ ದಿನಾಂಕ ಒಂದರಲ್ಲು ದಿಲ್ಲಿಯಲ್ಲಿ ಪತ್ನೀ ಪುತ್ರಿ ಸಮೇತರಾಗಿ ಬಂದಿಳಿದಾಗ

ಇದನ್ನು ಉಡುಪು--ತೊಡುಪುಗಳು ಕೆಲಮಟ್ಟಿಗೆ ತಣಿಸುತ್ತವೆ. ಮನುಷ್ಯನಲ್ಲಿ ಇರುವ ಇನ್ನೊಂದು ಕಾಂಕ್ಷೆ ಸಾಮಾಜಿಕ ವರ್ತುಲದಲ್ಲಿ ಪ್ರತಿಷ್ಠೆ ಸ್ಥಾಪಿಸುವುದು. ಉಡುಗೆ-ತೊಡುಗೆಗಳು ಇದಕ್ಕೂ ಬೆಂಬಲ ಕೊಡುತ್ತವೆ. ಉಡುಗೆ ತೊಡುಗೆಗಳು ವ್ಯಕ್ತಿತ್ವದ ವೈಶಿಷ್ಟ್ಯವನ್ನು ಉಳಿಸಲು ನೆರವಾದಂತೆ, ಸಾಮಾಜಿಕ ಕೂಟದಲ್ಲಿ ಹೊಂದಿಕೆಯನ್ನೂ ತರುತ್ತವೆ. ನಾವು ಮನಸ್ಸಿಗೊಪ್ಪಿದ ಬಣ್ಣಬಣ್ಣದ ಅಂಗಿ ವಸ್ತ್ರಗಳನ್ನು ಉಟ್ಟು, ವ್ಯಕ್ತಿತ್ವದ ಹಿರಿಮೆಯನ್ನು ಕಾಯ್ದುಕೊಳ್ಳಲು ನೋಡಬಹುದು: ಆದರೆ ನಮಗೆಲ್ಲರಿಗೂ ಎರಡು ಕೈ ಮತ್ತೆರಡು ಕಾಲಿರುವಂತೆ ಎಲ್ಲರೂ ಧೋತಿವುಟ್ಟು, ಜುಬ್ಬ ಹಾಕಿಕೊಂಡಿರುವುದರಿಂದ ಸಾಮಾಜಿಕ ಕೂಟದಲ್ಲಿ ಒಂದಾಗಿ ಬೆರೆಯುತ್ತೇವೆ. ಒಬ್ಬ ಸಮಾಜಶಾಸ್ತ್ರಿ ಹೇಳುವಂತೆ- ಉಡುಗೆ ತೊಡುಗೆಗಳು ಐಕ್ಯಕ್ಕೆ ಪೋಷಕವಿರುವಂತೆ, ಪ್ರತ್ಯೇಕತೆಯನ್ನೂ ಎತ್ತಿಹಿಡಿಯುತ್ತವೆ. ಈ ವಿಶಿಷ್ಟ ಗುಣವಿಲ್ಲದಾಗ, ನಾವಿಂದು "ಫ್ಯಾಶನ್ನು" ಎಂದು ಕರೆಯುವ ಪದ್ಧತಿ ರೂಪುಗೊಳ್ಳಬಾರದು.

ಸಿನಿಮಾ ನಟನಟಿಯರ ಉಡುಗೆ ತೊಡುಗೆಗಳನ್ನು ಅನುಕರಿಸುವ ಹುಚ್ಚು ಹವ್ಯಾಸ ನಮ್ಮಲ್ಲೆಷ್ಟು ಮಂದಿಗಿಲ್ಲ? ಸೌಂದರ್ಯಕಾಂಕ್ಷೆಯ ಬದಲು, ಅನುಕರಣೆಯ ಒತ್ತಡವೇ ಇಲ್ಲಿ ಜೋರಾಗಿದ್ದರೂ, ಮನಸ್ಸಿನ ಆಳದಲ್ಲಿ ಆ ವಿಶಿಷ್ಟ ನಟನಟಿಯ ಜನಪ್ರಿಯತೆ ಆ ಮಾದರಿಯ ಉಡುಪು ತೊಡಪು ಧರಿಸುವುದರಿಂದಾದರೂ ಒದಗಲಿ ಎಂಬ ಬಯಕೆ ಇರುತ್ತದೆ. ಹತ್ತು ಜನ ದೊಡ್ಡವರು ಒಂದು ಹೊಸ ಬಗೆಯ ಉಡುಪು ಹಾಕಿ ಪೇಟೆಯಲ್ಲಿ ಸುತ್ತಾಡಿದರೆ, ಅದು ನಾಳೆಯಿಂದ ಫ್ಯಾಶನ್ನಾಗುತ್ತದೆ. ಮೇಲ್ತರಗತಿಯ ಜನರು ಏನು ಮಾಡಿದರೂ ಅದರ ಒಳಿತು ಕೆಡುಕುಗಳನ್ನು, ಸಾಧಕ ಬಾಧಕಾಂಶಗಳು ವಿವೇಚಿಸದೆ ಕೆಳಮಟ್ಟದವರು ಅದನ್ನು ಅನುಸರಿಸುತ್ತಾರೆ. ಇದು ಮನುಷ್ಯ ಸಹಜಗುಣ.

ಮಹಾತ್ಮಾ ಗಾಂಧೀಯಂಥವರು ಸರ್ವಸಾಧಾರಣವಾದ ಒಂದು ಪಂಚೆಯುಟ್ಟು "ಅರೆಬತ್ತಲೆ ಫಕೀರ" ನೆಂಬ ಬಿರುದು ಪಡೆದರು. ಹೀಗೆ ಮಾಡುವಲ್ಲಿ ಭಾರತದ ದಾರಿದ್ರ್ಯವನ್ನು ಬಿಂಬಿಸುವ ಘನವಾದ ಉದ್ದೇಶ ಅವರದಿತ್ತು. ಆದರೆ ನಮ್ಮಲ್ಲಿ ಎಷ್ಟೋ ಮಂದಿ ದಿನದಿನಕ್ಕೂ ಹೊಸಬಗೆಯ

[illegible]

ಒಂದು ದೇಶೀಯ ಸಾಧನೆಯ ಫಲ

ನಮ್ಮ ಸೈಕಲು ನಿರ್ಮಾಣೋದ್ಯೋಗದ ವೈಶಿಷ್ಟ್ಯ

ಭಾರತೀಯ ಕಾರ್ಮಿಕರ, ವ್ಯವಸ್ಥಾಪಕರ ಹಾಗೂ ಬಂಡವಾಳದ ಸುಂದರ ಸಮನ್ವಯದಿಂದ ನಡೆಯುವ ಸ್ವದೇಶೀ ಉದ್ದಿಮೆಯ ಮಾದರಿಯಾಗಿ ನಮ್ಮ ಸ್ಯೈಕಲು ತಯಾರಿಕೆಯನ್ನು ಹೆಸರಿಸಬಹುದು. ಕಳೆದ ಯುದ್ಧಕ್ಕೆ ಮುಂಚೆ ನಮ್ಮ ಪೇಟೆಯನ್ನೆಲ್ಲ ವಿದೇಶೀ ನಿರ್ಮಾಪಕರ, ಮುಖ್ಯವಾಗಿ ಬ್ರಿಟನು ಹಾಗೂ ಜಪಾನುಗಳ, ಸ್ಯೈಕಲುಗಳೇ ಆಕ್ರಮಿಸಿದ್ದವು. ಆದರೆ ೧೯೩೮ರಲ್ಲಿ ಸರ್ವಪ್ರಥಮವಾಗಿ ಕಲ್ಕತ್ತೆಯ ಸಂಸ್ಥೆಯೊಂದು ಸ್ಯೈಕಲು ತಯಾರಿಕೆಗೆ ಬೇಕಾದ ಯಂತ್ರೋಪಕರಣಗಳನ್ನು ತರಿಸುವ ಸಿದ್ಧತೆ ನಡೆಸಿತು. ದುರ್ದೈವದಿಂದ ಈ ಉಪಕರಣಗಳು ಭಾರತವನ್ನು ಸೇರುವುದಕ್ಕೆ ಮುಂಚಿತವಾಗಿ ಮಹಾಯುದ್ಧ ತೊಡಗಿದುದರಿಂದ, ಸ್ಯೈಕಲಿನ ಬಿಡಿಭಾಗಗಳನ್ನು ಮಾತ್ರ ತಯಾರಿಸುವುದರಲ್ಲಿ ತೃಪ್ತಿಗೊಂಡಬೇಕಾದ ಪರಿಸ್ಥಿತಿಯೊದಗಿತು. ೧೯೩೯ರಲ್ಲಿ ಇನ್ನೊಂದು ಪ್ರಮುಖ ವ್ಯಾಪಾರೀ ಸಂಸ್ಥೆ ಮುಂಬಯಿಯಲ್ಲಿ ಸ್ಯೈಕಲು ನಿರ್ಮಾಣದ ಕಾರ್ಖಾನೆಯನ್ನು ತೆರೆಯಲು ಹವಣಿಸಿತು. ಇದಕ್ಕೂ ಯುದ್ಧದಿಂದ ಆಘಾತವಾದರೂ ೧೯೪೦ರಲ್ಲಿ ಯಂತ್ರೋಪಕರಣಗಳಲ್ಲಿ ಹಲವು ಕೈಸೇರಿದುದರಿಂದ ಬಿಡಿಭಾಗಗಳನ್ನು ತಯಾರಿಸಲು ಸಾಧ್ಯವಾಯಿತು. ಸ್ವಲ್ಪ ಹೆಚ್ಚಿನ ಪ್ರಯತ್ನದಿಂದ ೧೯೪೧ರಲ್ಲಿ ಪೂರ್ಣರೂಪದಲ್ಲಿ ಸ್ಯೈಕಲನ್ನು ನಿರ್ಮಿಸುವುದು ಸಾಧ್ಯವಾಯಿತು. ಇದೇ ಸಮಯ ೧೯೪೨ರಲ್ಲಿ ಪಾಟ್ನಾದಲ್ಲಿ ಇನ್ನೊಂದು ಸ್ವತಂತ್ರ ಪ್ರಯತ್ನ ನಡೆಯಿತು. ಆದರೆ ಯುದ್ಧಕಾಲವಾದುದರಿಂದ, ಇವೆಲ್ಲ ಕಾರ್ಖಾನೆಗಳು ಸಂರಕ್ಷಣಾ ಸಾಮಗ್ರಿಗಳನ್ನು ಸಿದ್ಧಗೊಳಿಸುವುದರಲ್ಲಿ ಸಂಲಗ್ನವಾದುವು.

ಅಸಾಮಾನ್ಯ ಪ್ರಗತಿ

ಸ್ವಾಭಾವಿಕವಾಗಿ ಎಂಬಂತೆ, ಇನ್ನೂ ಎಳೆಯದಾಗಿದ್ದ ಈ ಉದ್ದಿಮೆಗೆ, ಲೋಕದ ಗಂಭೀರಸ್ಥಿತಿಯ ಗಂಡಾಂತರವನ್ನೂ ಎದುರಿಸಬೇಕಾಯಿತು. ಮುಖ್ಯವಾಗಿ ಬೇಕೆನಿಸಿದ ಸಾಮಾಗ್ರಿಗಳ, ಕಚ್ಚಾ ಸರಕುಗಳ, ಮತ್ತು ನುರಿತ ಯಂತ್ರಶಿಲ್ಪಿಗಳ ಕೊರತೆಯಿತ್ತು. ಆದರೆ ಉದ್ದಿಮೆಯನ್ನು ಪ್ರಾರಂಭಿಸಿದ ಸಂಸ್ಥೆಗಳು ಎದೆಗೆಡದೆ, ಬಹಳ ಚಾಣಾಕ್ಷತನದಿಂದ, ಎಲ್ಲ ವಿಘ್ನ ವಿಪತ್ತುಗಳನ್ನೂ ಎದುರಿಸಿ, ಉದ್ದಿಮೆಯನ್ನು ಮುಂದುವರಿಸಿಕೊಂಡು ಹೋದುವು. ಇಂದು ಸ್ಯೈಕಲು ಉದ್ದಿಮೆಯಲ್ಲಿ ಅತ್ಯಾಧುನಿಕ ಯಂತ್ರೋಪಕರಣಗಳು ಬಳಸಲ್ಪಡುವುವಲ್ಲದೆ–ಪರಿಶ್ರಮಿಗಳೂ, ಅನುಭವಿಗಳೂ ಆದ ಯಂತ್ರಶಿಲ್ಪಿಗಳ ನೆರವನ್ನೂ ಇದು ಹೊಂದಿದೆ. ಬಂಡವಾಳದ ದೃಷ್ಟಿಯಿಂದಲೂ ಉದ್ದಿಮೆ ಸುದೃಢವಾಗಿದೆ.

ನಮ್ಮಲ್ಲಿ ಸ್ಯೈಕಲನ್ನು ನಿರ್ಮಿಸುವ ರೀತಿ ನೀತಿಗಳು ಸಮುದ್ರದಾಚೆಯ, ಕೈಗಾರಿಕೋದ್ಯಮಗಳಲ್ಲಿ ಮುನ್ನಡೆದ ದೇಶಗಳ ಪದ್ಧತಿಯನ್ನೇ ಹೋಲುತ್ತವೆ. ಸ್ವದೇಶದ ಈ ಪುಟ್ಟ ಉದ್ದಿಮೆ ತನ್ನ ಕಾಲ ಮೇಲೆ ನಿಲ್ಲುವಂತೆ ಬೆಳೆದು ಬರಬೇಕೆಂಬ ಆಪೇಕ್ಷೆಯಿಂದ ೧೯೪೯ರಲ್ಲಿ ಭಾರತ ಸರಕಾರವು ಇದಕ್ಕೆ ಸಂರಕ್ಷಣೆಯನ್ನು ಕೊಟ್ಟಿದೆ. ಈ ವರ್ಷಕ್ಕೆ ಸಂರಕ್ಷಣಾ ಅವಧಿ ಮುಗಿಯುತ್ತದೆ. ಈ ಅವಧಿಯಲ್ಲಿ ಸ್ಯೈಕಲು ಉದ್ದಿಮೆ ಮಾಡಿದ ಪ್ರಗತಿಯು ಅಸಾಧಾರಣವಾಗಿದೆ. ಮುಂಬಯಿಯಲ್ಲಿರುವ ಕಾರ್ಖಾನೆಯೊಂದೇ ೧೯೪೯ರಲ್ಲಿ ೬೨೫೪೨, ೧೯೫೦ರಲ್ಲಿ ೯೫೯೫೩, ಮತ್ತು ೧೯೫೧ರಲ್ಲಿ ೧೦೮೦೦೦ ಸ್ಯೈಕಲುಗಳನ್ನು ನಿರ್ಮಿಸಲು ಶಕ್ತವಾಗಿದೆ. ಸುಂಕಮಂಡಳದ ನಿರೀಕ್ಷೆಗಿಂತ ಈ ಪ್ರಮಾಣವು ೧೯೪೯ರಲ್ಲಿ ೧೩%ದಷ್ಟು, ೧೯೫೦ರಲ್ಲಿ ೩೧%ದಷ್ಟು ಹಾಗೂ ೧೯೫೧ರಲ್ಲಿ ೩೫% ಹೆಚ್ಚು ಎಂಬುದನ್ನು ಅವಶ್ಯ ಗಮನಿಸಬೇಕು

ಯೋಗ್ಯತೆ ಮತ್ತು ವೈಶಿಷ್ಟ್ಯ

ಉಳಿದ ಸ್ಯೈಕಲು ನಿರ್ಮಾಪಕರ ಪ್ರಗತಿ ಮಾತ್ರ ಕೆಲವೊಂದು ವಿಶಿಷ್ಟ ಕಾರಣಗಳಿಂದ ಕುಂಠಿತಗೊಂಡಿತು. ಮುಖ್ಯವಾಗಿ ೧೯೪೯–೫೦ರಲ್ಲಿ ಸರಕಾರ ಅನುಸರಿಸಿದ ಸಾಮಾನ್ಯ ಲೈಸೆನ್ಸ ಪದ್ಧತಿಯಿಂದ ಸಣ್ಣಪುಟ್ಟ ಉದ್ದಿಮೆದಾರರಿಗೆ ತುಂಬ ಪೆಟ್ಟು ತಗಲಿತು. ಈ ಲೈಸೆನ್ಸು ಪಡೆದು ಲೋಕದ ಎಲ್ಲ ಕಡೆಯಿಂದ, ಮುಖ್ಯವಾಗಿ ಬ್ರಿಟನಿನಿಂದ, ಸ್ಯೈಕಲುಗಳನ್ನು ನಮ್ಮ ವ್ಯಾಪಾರಿಗಳು ಆಮದು ಮಾಡಿಸುದರಿಂದ, ನಮ್ಮಲ್ಲಿ ತಯಾರಾದ ಸ್ಯೈಕಲುಗಳು ಗಿರಾಕಿಗಳಿಲ್ಲದೆ ಕೊಳೆಯಬೇಕಾಯಿತು. ಈಗ ಕೂಡ ಭಾರತ ಸರಕಾರದ ಈ ಧೋರಣೆಯ ಪರಿಣಾಮವಾಗಿ ಬಿದ್ದ ಪೆಟ್ಟಿನಿಂದ ಹಲವರಿಗೆ ಚೇತರಿಸಿಕೊಳ್ಳಲು ಸಾಮರ್ಥ್ಯ ಬಂದಿಲ್ಲ

ಸಂರಕ್ಷಣೆ ದೊರೆತ ಅವಧಿಯಲ್ಲಿ ನಮ್ಮ ಸ್ಯೈಕಲುಗಳ ಯೋಗ್ಯತೆ ಮತ್ತು ನಿರ್ಮಾಣಮಟ್ಟದಲ್ಲಿ ತುಂಬ ಅಭಿವೃದ್ಧಿ ಕೈಗೂಡಿದೆ. ಅಲ್ಲದೆ ಬ್ರಿಟಿಷ್ ಯಂತ್ರೋಪಕರಣಗಳಿಗೆ ಸರಿದೊರೆಯೆನಿಸಿ ನಿಲ್ಲುವ ವೈಶಿಷ್ಟ್ಯವನ್ನು ನಮ್ಮ ದೇಶೀಯ ಸಾಮಗ್ರಿಗಳು ಪಡೆದಿವೆ. "ಹಿಂದೆ ದೇಶೀಯ ಸ್ಯೈಕಲುಗಳ ಯೋಗ್ಯತೆಯು ಆಮದಾಗುತ್ತಿದ್ದವುಗಳಷ್ಟು ಚೆನ್ನಾಗಿರಲಿಲ್ಲ. ಆದರೆ ಈಗ ತುಂಬ ಅಭಿವೃದ್ಧಿ ಸಾಧಿಸಲ್ಪಟ್ಟಿದಲ್ಲದೆ, ಸ್ಯೈಕಲು ಪ್ರಿಯರ ಮನ್ನಣೆಗೂ ಪಾತ್ರವಾಗಿದೆ" ಎಂದು "ಇಂಡಸ್ಟ್ರೀಸ್ ಎಂಡ್ ಸಪ್ಲೈಸ್ ಬುಲಿಟಿನ್" ನಮ್ಮ ಉದ್ದಿಮೆಯನ್ನು ಕೊಂಡಾಡಿದೆ.

ನಮ್ಮ ಸ್ಯೈಕಲು ಉದ್ದಿಮೆಯ ಇನ್ನೊಂದು ಮುಖ್ಯ ವೈಶಿಷ್ಟ್ಯ ಬೆಲೆಯಿಳಿಕೆ. ಅಸಾಧಾರಣ ಪ್ರಗತಿಯನ್ನು ಸಾಧಿಸಿದ್ದರ ಜೊತೆಗೆ, ೧೯೪೯ರಿಂದೀಚೆಗೆ ತನ್ನ ಉತ್ಪಾದಿತ ಸಾಮಗ್ರಿಯ ಬೆಲೆಯನ್ನು ಇಳಿಸಿದ ಏಕಮೇವ ಉದ್ದಿಮೆ ಸ್ಯೈಕಲಿನದು. ದಿನದಿಂದ ದಿನಕ್ಕೆ ಪ್ರತಿಯೊಂದೂ ಸಾಮಗ್ರಿಯ ಬೆಲೆ ಹೆಚ್ಚುವುದು ನಮ್ಮ ಅನುಭವದ ಮಾತು. ಹೀಗಿರುವಲ್ಲಿ ಸ್ಯೈಕಲು ಅಗ್ಗದರದಲ್ಲಿ ದೊರೆಯುತ್ತಿದೆ ಎಂಬುದು ನಿಜವಾಗಿಯೂ ಅಭಿಮಾನದ ಸಂಗತಿ.

ಉತ್ಪಾದನೆ ಹೆಚ್ಚಿಸುವ ಹೆಜ್ಜೆ

ಬೆಲೆಯಿಳಿಕೆಯು ಮೈಗೂಡಿದೆ ಎಂದ ಮಾತ್ರಕ್ಕೆ ಈ ಉದ್ದಿಮೆಯಲ್ಲಿ ದುಡಿಯುವ ಕಾರ್ಮಿಕರಿಗೆ ಅಲ್ಪವೇತನ ಕೊಡಲಾಗುತ್ತಿದೆ ಎಂದು ಯಾರೂ ಊಹಿಸಲಾಗದು. ಕೂಲಿ ಹಾಗೂ ಬೋನಸು ಪ್ರಮಾಣವು ಉಳಿದಾವ ಉದ್ದಿಮೆಯಲ್ಲಿನದಕ್ಕಿಂತಲೂ ಸ್ಯೈಕಲು ನಿರ್ಮಾಣೋದ್ಯಮದಲ್ಲಿ ಅತ್ಯಂತ ಉಚ್ಚ ಮಟ್ಟದಲ್ಲಿದೆ. ಕಾರ್ಮಿಕ ಸಮಿತಿಗಳನ್ನು ಈ ಉದ್ದಿಮೆಯು ರಚಿಸಿಕೊಂಡಿದ್ದು, ಕೂಲಿಕಾರ ಸಮಸ್ಯೆಗಳನ್ನು ಅವರ ಪ್ರತಿನಿಧಿಗಳೊಡ ವ್ಯವಸ್ಥಾಪಕರು ಬಿಚ್ಚು ಮನಸ್ಸಿನಿಂ ಚರ್ಚಿಸಿ, ಯೋಗ್ಯ ಹೆಜ್ಜೆಯನ್ನು ಇಡುವ ಕ್ರಮವು ಮೊದಲಿನಿಂದಲೂ ನಡೆದು ಬಂದಿದೆ. ಸರಕಾರವು ಈಚೆಗೆ ಕಾಯಿ ರೀತಿಯಿಂದ ಈ ಪದ್ಧತಿಯನ್ನು ತರಬ ಸಿದ್ದರೆ, ಸ್ಯೈಕಲು ಉದ್ದಿಮೆಯ ವ್ಯವಸ್ಥಾಪಕರು ಆರಂಭದಿಂದಲೇ ಈ ದಾರಿಯನ್ನು ಅನುಸರಿಸುತ್ತಿದ್ದರು. ಹೀಗಾ ಸೌಹಾರ್ದಮಯವಾದ ವಾತಾವರಣ ಳೆದು ಬಂದಿದೆ.

ಉತ್ಪಾದನೆಯನ್ನು ಹೆಚ್ಚಿಸುವುದರ ಈ ಉದ್ದಿಮೆಗೇ ಪ್ರಥಮ ಪ್ರಾಶಸ್ತ್ಯ ಸಲ್ಲಬೇಕು. ಸ್ಯೈಕಲುಗಳ ಬೆ ಯನ್ನು ತೀರಾ ಕೆಳಮಟ್ಟದಲ್ಲಿರಿಸಿ ಹಾ ಕಾರ್ಮಿಕರಿಗೆ ಅತ್ಯಧಿಕ ವೇತನವ ಕೊಟ್ಟು ೧೯೪೮ರ ಉತ್ಪಾದನೆಯನ್ನು ಗೂಡಿಸಿದ್ದು ಪ್ರಶಂಸಾರ್ಹವಾದ ಸಾಧ ಯಲ್ಲವೆ?

ಯೋಜನಾ ಆಯೋಗವು ಸ್ಯೈಕ ಉದ್ದಿಮೆ ಹೇಗೆ ಬೆಳೆದುಬರಬೇಕೆಂ ರೂಪರೇಷೆ ಹಾಕಿದೆ. ಆದಕ್ಕನುಸ ೧೯೫೫ರ ಸುಮಾರಿಗೆ ದೇಶದೊಳಗಿನ ಕಲಗಳ ಬೇಡಿಕೆ ಐದುಲಕ್ಷದಷ್ಟಾದೀ ಆದರೆ ನಮ್ಮ ಉದ್ದಿಮೆಯೊಂದೇ ಇ ಸ್ಯೈಕಲನ್ನು ನಿರ್ಮಿಸಲು ಅವಕಾಶ ದೆ ಯುವುದು ಕಷ್ಟ. ಮುಖ್ಯವಾಗಿ ವಿದೇ ಳಲ್ಲಿ ಸಿದ್ಧಗೊಂಡ ಸ್ಯೈಕಲುಗಳ ಆಮ ಅವಕಾಶವಿರುವಾಗ ಮತ್ತು ತದ್ವಿರ ವಾಗಿ ಉತ್ಕೃಷ್ಟವಂತಾದ ಬಗತ್ಯದ ಟ್ಟ ಸರಕಾರದ ಆಯಾತಕ್ಕೆ ಮಾತ್ರ ಬಂಧವಿರುವಾಗ– ಯೋಜನಾ ಆಯೋ ದ ನಿರೀಕ್ಷೆ ಕೈಗೂಡುವುದು ಸಂದೆ ಯೋಜನಾ ಆಯೋಗವು ವಿದೇಶೀ ಸ ಗಳಿಗೆ ಸ್ಯೈಕಲನ್ನು ನಿರ್ಮಿಸಲು ನೆ ತಾಗಿ ಅವಕಾಶ ನೀಡುವುದೆಂದು ಗೊ ಗಿದೆ. ಆದರೆ ಈ ವಿದೇಶೀ ಸಂಸ್ಥೆ ಪುನರ್‍ಉದ್ಯಮಗಳಾಗಿ ಬೆಳೆಯದೆ, ಶದಲ್ಲಿ ತಯಾರಾದ ಬಿಡಿ ಸಾಮಾಗ್ರಿ ನ್ನು ಭಾರತದಲ್ಲಿ ಜೋಡಿಸಿ, ಸ್ಯೈ ನಿರ್ಮಿಸುವುದರಿಂದ ಉದ್ದಿಮೆಯು ಣಿಗೆಗೆ ನೆರವಿಲ್ಲ. ಆದುದರಿಂದ ಸರಕಾ ಧೋರಣದಲ್ಲಿ ಸೂಕ್ತ ಪರಿವರ್ತನೆಯ ಗತ್ಯವಿದೆಯಲ್ಲದೆ, ವಿದೇಶೀ ನಿರ್ಮಾ ಚಟುವಟಿಕೆಯ ಮೇಲೂ ಒಂದು ಡುವುದು ಅಪೇಕ್ಷಣೀಯವೆನಿಸಿದೆ.

ಆಗ--?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿಯುವುದು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ, ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿ ಇರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ–ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕಂಡೊಡನೆ ನಿಮ್ಮದೇ ಆಗುವ, ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ, ನಿಮ್ಮ ನಾಡಿನ

ಈ ಕಂಪೆನಿಯಲ್ಲಿಯೇ ವಿಮೆ ಇಳಿಸಿರಿ

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ ಭಾರತ. ಸ್ಥಾಪನೆ: ೧೯೩೫
The Canara Mutual Assurance Co. Ltd.
Head Office: UDIPI, S India. Estd: 1935



ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ವಾಷಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಜಿ. ಐ. ಪಿ.) ಮುಂಬಯಿ, ೧೪

All Secondary Schools Subscribe to "Navayuga" we Since it has been approved the Director of Public Inst tion, Madras.

ಕೆಲವು ರಸಾಯನ ಪದಾರ್ಥಗಳು

ಭಾರತದಲ್ಲಿ ಉತ್ಪಾದನೆ ಸ್ವಯಂಪೂರ್ಣಾವಸ್ಥೆಯನ್ನು ಹೊಂದಿಲ್ಲ.

ರಸಾಯನಿಕ ವಸ್ತುಗಳ ಉತ್ಪಾದನೆಗೆ ಪ್ರೋತ್ಸಾಹದೊರೆತದ್ದೇ ಪ್ರಥಮ ಮಹಾಯುದ್ಧದಿಂದ ಎಂದೆನ್ನಬಹುದು. ಭಾರತದಲ್ಲಿ ಪುರಾತನ ಕಾಲದಿಂದಲೂ ಕೆಲವು ವಿಶಿಷ್ಟ ರಸಾಯನ ಪದಾರ್ಥಗಳು ತಯಾರಾಗುತ್ತಿದ್ದವು. ಮತ್ತು ಔದ್ಯಮಿಕ ಪ್ರಗತಿಯನ್ನು ಸಾಧಿಸಲಿಕ್ಕೆ ರಸಾಯನ ಪದಾರ್ಥಗಳ ಅಗತ್ಯ ಹೇಳತೀರದು. ಒಂದಲ್ಲ ಒಂದು ರೀತಿಯಿಂದ ಪ್ರತಿಯೊಂದೂ ಉದ್ದಿಮೆ ರಸಾಯನ ಪದಾರ್ಥಗಳನ್ನು ಬಳಸುವುದರಿಂದ, ದೇಶದ ಆರ್ಥಿಕ ಪರಿಸ್ಥಿತಿಯ ಮೇಲೆ ರಸಾಯನ ಪದಾರ್ಥಗಳ ಉತ್ಪಾದನೋದ್ಯೋಗ ತುಂಬ ಪ್ರಭಾವ ಬೀರುತ್ತದೆ. ರಾಷ್ಟ್ರ ರಕ್ಷಣೆಯ ಕಾರ್ಯ ಸಾಂಗವಾಗಬೇಕಾದರೂ ರಸಾಯನ ಪದಾರ್ಥಗಳು ವಿಪುಲ ಪ್ರಮಾಣದಲ್ಲಿ ಒದಗುವಂತಿರಬೇಕಾಗಿದೆ. ಆದುದರಿಂದ ಸ್ವಾತಂತ್ರ್ಯಪ್ರಿಯವಾದೆಲ್ಲ ದೇಶಗಳು ರಸಾಯನ ಪದಾರ್ಥಗಳ ಉತ್ಪಾದನೆಯನ್ನು ಎಂದಿಗೂ ಕಡೆಗಣಿಸುವಂತಿಲ್ಲ.

ರಸಾಯನ ಪದಾರ್ಥಗಳ ಉತ್ಪಾದನೋದ್ಯೋಗವು ಈಗಿನ ಆಧುನಿಕ ರೂಪವನ್ನು ಈ ಶತಮಾನದಲ್ಲಿ ಪಡೆಯಿತು. ಪ್ರಥಮ ಮಹಾಯುದ್ಧದ ಬಿಸಿ ತಟ್ಟಿದಾಗ, ಪ್ರತಿಯೊಂದೂ ದೇಶ ತನ್ನ ಆವಶ್ಯಕತೆಯನ್ನು ಪೂರೈಸುವ ಪಟ್ಟಿಗಾದರೂ ರಸಾಯನ ಪದಾರ್ಥಗಳ ಉತ್ಪಾದನೆಗೆ ಮಹತ್ವ ಕೊಡಬೇಕೆಂದು ಪ್ರತ್ಯಕ್ಷ ಅನುಭವಕ್ಕೆ ಬಂತು. ವೈರಿ ರಾಷ್ಟ್ರಗಳಿಂದ ಪೂರೈಸಲ್ಪಡುತ್ತಿದ್ದ ರಸಾಯನ ಪದಾರ್ಥಗಳು ದೊರಕದಂತಾಗಲು, ಸಂರಕ್ಷಣ ಕಾರ್ಯ ಕಠಿಣತಮವೆನಿಸಿತಲ್ಲದೆ, ದೇಶದ ಔದ್ಯಮಿಕ ಬೆಳವಣಿಗೆಗೂ ಪೆಟ್ಟುಬಿದ್ದಿತು. ಈ ಪರಿಸ್ಥಿತಿಯಿಂದ ಸ್ಥಳೀಯ ಉತ್ಪಾದನೆಯನ್ನು ಸಾಧ್ಯವಿದ್ದಷ್ಟು ಹೆಚ್ಚಿಸುವ ಪ್ರಯತ್ನಗಳಿಗೆ ಪ್ರೋತ್ಸಾಹ ದೊರೆಯಿತು.

ಯುದ್ಧದಿಂದ ಪ್ರೋತ್ಸಾಹ

ಯುದ್ಧಕಾಲದಲ್ಲಿ ಅಗ್ನೇಯ ಏಶಿಯಾದ ಮಟ್ಟಿಗೆ ಭಾರತವೇ ಆಯುಧಶಾಲೆಯಾಗಿತ್ತು. ಆದುದರಿಂದ ಯುದ್ಧ ಸಾಮಗ್ರಿಗಳನ್ನು ಸಿದ್ಧಗೊಳಿಸುವುದರಲ್ಲಿ ಭಾರತ ಹಿಂದುಳಿಯುವಂತಿರಲಿಲ್ಲ. ಮುಖ್ಯವಾಗಿ ಸ್ಫೋಟಕ ದ್ರವ್ಯಗಳನ್ನು ಸಿದ್ಧಪಡಿಸುವುದು ಭಾರತದ ಪಾಲಿಗೆ ಬಂತು. ಇದರಿಂದ ನೈಟ್ರಿಕ್ ಎಸಿಡ್, ಗ್ಲಿಸೆರಿನ್ ಮುಂತಾದವುಗಳ ಉತ್ಪಾದನೆಗೆ ನೆರವು ಸಿಕ್ಕಿತು.

ಔದ್ಯಮಿಕ ಉದ್ದೇಶಕ್ಕಾಗಿ ರಸಾಯನ ಪದಾರ್ಥಗಳನ್ನು ಇಬ್ಬಗೆಯಾಗಿ ವಿಂಗಡಿಸುತ್ತಾರೆ: ಸಾಧಾರಣವಾದ ರಸಾಯನ ಪದಾರ್ಥಗಳನ್ನು ದೊಡ್ಡ ಪಟ್ಟಿನಲ್ಲಿ ವಿಪುಲವಾಗಿ ಉತ್ಪಾದಿಸುವಲ್ಲದೆ, ಹೆಚ್ಚಿನವು ನಮ್ಮ ಔದ್ಯಮಿಕ ಹಾಗೂ ಕೃಷಿಕ್ಷೇತ್ರದಲ್ಲಿ ಉಪಯೋಗಿಸಲ್ಪಡುತ್ತವೆ. ಜವುಳಿ, ಕಾಗದ, ಸಾಬೂನು, ಗಾಜು, ಹದಗೊಳಿಸಿದ ಚರ್ಮ, ಚಿಮಣಿ ಎಣ್ಣೆ, ಪೆಟ್ರೋಲು ಮುಂತಾದ ಉದ್ಯಮಗಳಲ್ಲಿ ಕಚ್ಚಾ ಸಾಮಗ್ರಿಗಳನ್ನು ಉಪಯೋಗಕ್ಕೆ ಬರುವಂತೆ ಮಾಡುವ ವಿಶಿಷ್ಟ ಗುಣ ಈ ರಸಾಯನ ಪದಾರ್ಥಗಳಿಗಿದೆ. ಸಾಧಾರಣವಾದ ರಸಾಯನ ಪದಾರ್ಥದ ಪೂರೈಕೆಯನ್ನೇ ಜೀವನಾವಶ್ಯಕವಾದ ಕೈಗಾರಿಕೋದ್ಯಮಗಳು ಹೆಚ್ಚಾಗಿ ಅವಲಂಬಿಸಿರುವುದರಿಂದ, ಈ ಬಗ್ಗೆ ಅಧಿಕ ಲಕ್ಷ್ಯವನ್ನು ಕೊಡುವುದು ಅಪೇಕ್ಷಣೀಯವೆನಿಸಿದೆ.

ವಿಶಿಷ್ಟ ಗುಣಸಂಪನ್ನವಾದ ರಸಾಯನ ದ್ರವ್ಯಗಳು ಎರಡನೆ ವರ್ಗಕ್ಕೆ ಸೇರಿವೆ. ಅವುಗಳ ಯೋಗ್ಯತೆಯು ಅತ್ಯಂತ ಪ್ರಾಮುಖ್ಯವಾದ ವಿಷಯ. ಈ ಯೋಗ್ಯತೆ ಸಂಪಾದಿಸಲಿಕ್ಕೆ ಸೂಕ್ಷ್ಮವಾದ ಕೌಶಲ್ಯವೂ ಜಾಗರೂಕತೆಯೂ ಬೇಕಾಗುತ್ತದೆಯಾದುದರಿಂದ, ಇವುಗಳ ಉತ್ಪಾದನೆ ಅಲ್ಪಪ್ರಮಾಣದಲ್ಲಾಗುತ್ತದೆ. ಚಿತ್ರಗ್ರಾಹಕ ಸಾಮಗ್ರಿಗಳು, ಔಷಧ ಪದಾರ್ಥಗಳು, ಪೈಂಟು, ವಾರ್ನಿಶ, ರಂಗು ಮುಂತಾದವುಗಳ ತಯಾರಿಯಲ್ಲಿ ವಿಶಿಷ್ಟ ಗುಣಸಂಪನ್ನವಾದ ರಸಾಯನ ದ್ರವ್ಯಗಳು ಅಗತ್ಯ.

ಸರಕಾರದ ಸಹಾಯ

ದೇಶವನ್ನು ಔದ್ಯಮಿಕ ಪ್ರಗತಿ ಪಥಕ್ಕೆ ಒಯ್ಯುವಲ್ಲಿ ರಸಾಯನ ಪದಾರ್ಥಗಳು ನೀಡುವ ಸಹಕಾರ ಅತ್ಯಮೂಲ್ಯ. ಇದನ್ನು ಮನಗಂಡ ಸರಕಾರವು ಪ್ರತಿಯೊಂದು ರೀತಿಯಿಂದ ಈ ಉದ್ದಿಮೆಯನ್ನು [illegible] ನೆಲಗಟ್ಟಿನ ಮೇಲೆ ನಿಲ್ಲಿಸಲು ಮಾತ್ರವಲ್ಲ- ಬೆಳೆದು ವಿಕಾಸಗೊಳ್ಳುವಂತೆಯೂ ಸಹಕರಿಸಿದೆ. ೧೯೫೦ನೇ ವರ್ಷದಲ್ಲಿ ಭಾರತದಲ್ಲಿ ೨೪೪ ಕಾರ್ಖಾನೆಗಳು ರಸಾಯನ ಪದಾರ್ಥಗಳ ಉತ್ಪಾದನೆಯನ್ನು ಕೈಗೊಂಡಿದ್ದವು. ಇವುಗಳಲ್ಲಿ ೮೧ ಪಶ್ಚಿಮ ಬಂಗಾಲದಲ್ಲಿಯೂ ೬೩ ಮುಂಬಯಿ ರಾಜ್ಯದಲ್ಲಿಯೂ ಇದ್ದುವು.

ಬೊರಾಕ್ಸ, ನೈಟರ್, ಸಲ್ಫರ್‌ಗಳನ್ನು ಬಿಟ್ಟು ಉಳಿದ ಸಾಧಾರಣ ಪದಾರ್ಥಗಳು ಪ್ರಾಕೃತಿಕ ಸ್ವರೂಪದಲ್ಲಿ ದೊರೆಯದೆ, ಕಚ್ಚಾ ಸಾಮಗ್ರಿಗಳಿಂದ ಅವುಗಳನ್ನು ಸಿದ್ಧಗೊಳಿಸಬೇಕಾಗುತ್ತದೆ. ಭಾರತವು ಸರ್ವಸಾಧಾರಣವಾಗಿ ಎಲ್ಲ ರಸಾಯನ ಪದಾರ್ಥಗಳನ್ನೂ ಸಿದ್ಧಗೊಳಿಸುತ್ತದೆ. ಇತ್ತೀಚಿನ ಅಂಕೆ ಸಂಖ್ಯೆಗಳಿಗನುಸಾರ ಕೆಲವು ವಿಶಿಷ್ಟ ಪದಾರ್ಥಗಳನ್ನು ತಯಾರಿಸುವ ಕಾರ್ಖಾನೆಗಳ ಸಾಮರ್ಥ್ಯ ೩೦೬%ದಷ್ಟು ಹೆಚ್ಚಾಗಿದೆ. ಮತ್ತು ಅದೇ ಸಮಯಕ್ಕೆ ಉತ್ಪಾದನೆಯು ೧೯೪೬ಕ್ಕಿಂತ ೧೭೩೫%ದಷ್ಟು ಹೆಚ್ಚಿದೆ.

ಕ್ಷಾರ ಸಮುದಾಯಕ್ಕೆ ಸೇರಿದ ಸೋಡಾ ಆಶ್‌ನ ಉತ್ಪಾದನೆ ದೇಶದ ಬೇಡಿಕೆಯ ಮೂರನೇ ಒಂದಂಶದಷ್ಟಿದೆ. ಸಂರಕ್ಷಣಾ ಕಾರ್ಯದಲ್ಲೂ ಆರ್ಥಿಕ ಕ್ಷೇತ್ರದಲ್ಲೂ ತುಂಬ ಪ್ರಾಶಸ್ತ್ಯ ಪಡೆದ ಕಾಸ್ಟಿಕ್ ಸೋಡಾದ ಉತ್ಪಾದನೆ ತುಂಬ ಹೆಚ್ಚಿದೆ. ನಮಗೆ ವರ್ಷಕ್ಕೆ ೪೫೦೦ ಟನ್ನು ಕಾಸ್ಟಿಕ ಸೋಡಾ ಬೇಕಿದ್ದರೆ, ಈಗಾಗಲೇ ೧೯೦೦೦ ಟನ್ನುಗಳಷ್ಟನ್ನು ಪೂರೈಸುವ ಪ್ರಯತ್ನ ನಡೆದಿದೆ. ಸಾಬೂನು, ಕಾಗದ, ಸ್ಫೋಟಕ ದ್ರವ್ಯಗಳು, ರಂಗು, ವನಸ್ಪತಿ ಎಣ್ಣೆ ಮುಂತಾದವುಗಳ ತಯಾರಿಯಲ್ಲಿ ಇದು ಅತ್ಯಗತ್ಯ. ಇವುಗಳಲ್ಲಿ ಕೆಲವು ಉದ್ದಿಮೆಗಳು ತಮ್ಮ ಅಗತ್ಯಕ್ಕೆ ಸ್ವಂತ ಪೂರೈಕೆಯನ್ನೇ ನಿರ್ಧರಿಸಿವೆ. ಹೀಗೆ ೩೦೦೦ಟನ್ನು ಕಾಸ್ಟಿಕ ಸೋಡಾ ಒದಗುತ್ತದೆ.

ರಸಾಯನಿಕ ಗೊಬ್ಬರ

ಯುದ್ಧಕ್ಕೆ ಮುಂಚೆ ಭಾರತದಲ್ಲಿ ಸೂಪರ್ ಫೋಸ್ಫೇಟನ್ನು ತಯಾರಿಸುವ ಕಾರ್ಖಾನೆ ಎರಡಿದ್ದರೆ, ೧೯೪೬ ಹಾಗೂ ೧೯೫೦ರ ನಡುವೆ ೧೩ ಹೊಸ ಕಾರ್ಖಾನೆಗಳು ಹುಟ್ಟಿಕೊಂಡವು. ಮಾತ್ರವಲ್ಲ ಅಸಾಧಾರಣ ಪ್ರಗತಿಯನ್ನೂ ತೋರಿಸಿದವು. ಅಮೋನಿಯಂ ಸಲ್ಫೇಟು ಯುದ್ಧಕ್ಕೆ ಮುಂಚೆ ೩೦೦೦೦ ಟನ್ನಿನಷ್ಟೂ, ಸೂಪರ್ ಫೋಸ್ಫೇಟು ೨೦೦೦ ಟನ್ನಿನಷ್ಟೂ ಉತ್ಪಾದಿತವಾಗುತ್ತಿದ್ದವು. ೧೯೫೦ರಲ್ಲಿ ಸೂಪರ್ ಫೋಸ್ಫೇಟಿನ ಉತ್ಪಾದನೆ ೫೫೪೩೨ ಟನ್ನು! ೧೯೪೬ರಲ್ಲಿ ಉತ್ಪಾದಿತವಾ[illegible]ಮೋನಿಯಂ ಸಲ್ಫೇಟಿನ ಪ್ರಮಾಣ ೧೯೫೦ರಲ್ಲಿ ೪೭೩೦೦ ಟನ್ನಿಗೇರಿತು. ಈಗಂತೂ ಸಿಂಧ್ರಿಯ ಗೊಬ್ಬರ ಕಾರ್ಖಾನೆ ವರ್ಷಕ್ಕೆ ಮೂರೂವರೆ ಲಕ್ಷ ಟನ್ನಿನಷ್ಟು ಉತ್ಪಾದಿಸಲು ಶಕ್ತವಾಗಿದೆ.

ಸಲ್ಫ್ಯೂರಿಕ್ ಎಸಿಡನ್ನು ಬಳಸುವ ಪ್ರಮಾಣದ ಮೇಲೆ ಒಂದು ರಾಷ್ಟ್ರದ ಔದ್ಯಮಿಕ ಪ್ರಗತಿಯನ್ನು ಅಳೆಯುತ್ತಾರೆ. ಈ ದೃಷ್ಟಿಯಿಂದ ನೋಡಿದರೆ ಅಮೇರಿಕನನೊಬ್ಬ ವರ್ಷಕ್ಕೆ ೧೨೫ ರಾತಲು ಬಳಸುವಾಗ, ಬ್ರಿಟಿಶರವನು ೪೫ ರಾತಲು ಬಳಸುವಾಗ, ಭಾರತೀಯನು ೦.೬೩ ರಾತಲು ಬಳಸುತ್ತಾನೆ. ಇದು ನಮ್ಮ ದೈನ್ಯಾವಸ್ಥೆಯ ದ್ಯೋತಕ. ಹಾಗೆಂದು ಪ್ರಗತಿ ಕುಂಠಿತವಾಗಿಲ್ಲ. ಯುದ್ಧಕ್ಕೆ ಮುಂಚೆ ಇದ್ದ ೨೩ ಕಾರ್ಖಾನೆಗಳ ಸಂಖ್ಯೆ ಈಗ ೪೯ಕ್ಕೇರಿದೆ. ಇವು ೧೬೦೦೦ ಟನ್ನಿನಷ್ಟು ಉತ್ಪಾದಿಸಬಲ್ಲುವು. ೧೯೫೫-೫೬ರ ಸುಮಾರಿಗೆ ಈ ಸಾಮರ್ಥ್ಯ ೨೦೮೦೦೦ ಟನ್ನಿಗೇರುವ ನಿರೀಕ್ಷೆ ಇದೆ.

ಔಷಧಿ ತಯಾರಿಕೆ

ಭಾರತದ ಔಷಧ ತಯಾರಿಯ ಉದ್ಯೋಗವು ಇನ್ನೂ ಶೈಶವಾವಸ್ಥೆಯಲ್ಲಿದೆ. ಔಷಧ ವಸ್ತುಗಳ ಬಗ್ಗೆ ಭಾರತವು ಮೊದಲು ವಿದೇಶೀ ಆಯಾತವನ್ನೇ ಅವಲಂಬಿಸಿಕೊಂಡಿತ್ತು. ಆದರೆ ಯುದ್ಧದ ದೆಸೆಯಿಂದ ವಿದೇಶಗಳ ಬದಲು, ದೇಶೀಯ ಉತ್ಪಾದನೆಯನ್ನು ಆಶ್ರಯಿಸಬೇಕಾಗಿ ಬಂತು. ಆದರೂ ಸ್ವಯಂಪೂರ್ಣಾವಸ್ಥೆಯನ್ನು ಹೊಂದಲು ಇನ್ನೂ ಅನುಕೂಲ ದೊರೆತಿಲ್ಲ. ಸಂಯೋಜಕ ಅವಯವಗಳನ್ನೆಲ್ಲ ವಿದೇಶದಿಂದ ಆಯಾತಮಾಡಿದ ಸಾಮಗ್ರಿಗಳಿಂದ ಸಿದ್ಧಗೊಳಿಸುತ್ತೇವೆ. ವಿಶಿಷ್ಟ ಗುಣಸಂಪನ್ನವಾದ ರಸಾಯನ ಪದಾರ್ಥಗಳ ತಯಾರಿಗೆ ಬೇಕಾದ ಕಚ್ಚಾ ಸಾಮಗ್ರಿಯ ಕೊರತೆಯೇ ವಿದೇಶೀ ಆಯಾತಕ್ಕೆ ಕಾರಣ. ಆದರೆ ಕೆಲವೊಂದು ಕ್ಷೇತ್ರದಲ್ಲಿ ಸ್ವಾವಲಂಬನವನ್ನು ಸಾಧಿಸಿದ್ದಲ್ಲದೆ, ನಿರ್ಯಾತಕ್ಕೂ ಅವಕಾಶವಿರುವಷ್ಟು ಪ್ರಗತಿಹೊಂದಿದ್ದೇವೆ. ಈಚೆಗೆ ಕೆಲವು ವಿದೇಶೀ ಕಂಪೆನಿಗಳು ಭಾರತೀಯರ ಸಹಕಾರದಿಂದ, ಔಷಧಿ ತಯಾರಿಕೆಯ ಕ್ಷೇತ್ರಕ್ಕೆ ಇಳಿದಿವೆ.

ರಂಗಿನ ಉದ್ದಿಮೆ ಕೂಡ ಬಾಲ್ಯಾವಸ್ಥೆಯಲ್ಲಿದೆ. ಈಚೆಗೆ ಅಮೇರಿಕದ ನೆರವಿನಿಂದ ಸ್ಥಾಪಿತವಾದ ಬುಲ್ಸಾರದ ರಂಗಿನ ಕಾರ್ಖಾನೆಯನ್ನುಳಿದು ಇತರ ಸಂಸ್ಥೆಗಳ ಬಂಡವಾಳ ಎರಡು ಲಕ್ಷ ರೂಪಾಯಿ ಮಾತ್ರ. ಈ ಉದ್ದಿಮೆಗೆ ಬೇಕಾದ ಕಚ್ಚಾ ವಸ್ತು ಪರದೇಶಗಳಿಂದ ಆಮದಾಗಬೇಕು. ರಂಗಿನ ಉದ್ದಿಮೆ ಬೆಳೆದುಕೊಂಡಿಲ್ಲದುದರಿಂದ ಕಾರೆಣ್ಣೆಯನ್ನು ಭಟ್ಟಿ ಇಳಿಸುವಾಗ ದೊರೆಯುವ ಉಪವಸ್ತುಗಳ ಉಪಯೋಗ ಸಾಕಷ್ಟಾಗುವುದಿಲ್ಲ. ಹೀಗೆ ಈಗಿರುವ ನಾಲ್ಕು ತಾರೆಣ್ಣೆ ಭಟ್ಟಿ ಇಳಿಸುವ ಕಾರ್ಖಾನೆಗಳು ತಮ್ಮ ಸಾಮರ್ಥ್ಯದ ಅರ್ಧದಷ್ಟು ಮಾತ್ರ ಉತ್ಪಾದಿಸುತ್ತವೆ.

ಏನೇ ಇರಲಿ—ನಮ್ಮ ರಸಾಯನ ಪದಾರ್ಥಗಳ ಉತ್ಪಾದನೋದ್ಯೋಗವು ತುಂಬ ಬೆಳೆದುಕೊಂಡಿದೆ ಎಂಬುದು ನಿರ್ವಿವಾದ. ಸರಕಾರದ ನೆರವಿನಿಂದ ಇದು ಇನ್ನಷ್ಟು ವ್ಯಾಪಕ ಸ್ವರೂಪ ಪಡೆದೀತು.

ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ತೆರೆಯಬೇಕಾದುದೇಕೆ?

ಬೇಂಕಿನಲ್ಲಿ ನಿಮ್ಮ ಲೆಕ್ಕವೊಂದು ತೆರೆಯಲ್ಪಟ್ಟಲ್ಲಿ ಅದು ನಿಮ್ಮಲ್ಲಿ ಬ್ಯಾಂಕಿಂಗ್ ವ್ಯವಹಾರದ ಪದ್ಧತಿಯನ್ನುಂಟುಮಾಡುವುದು. ಅನಾವಶ್ಯಯವಾಗಿ ಹೋಗುವ ಅತ್ಯಲ್ಪ ಹಿವಜನ್ನಾದರೂ ಬ್ಯಾಂಕಿನಲ್ಲಿಡಬೇಕೆಂಬ ಕುತೂಹಲವು ನಿಮ್ಮಲ್ಲುಂಟಾಗುವುದು. ನಿಮ್ಮ ಬ್ಯಾಂಕಿನಲ್ಲಿ ಇಂದೇ ಸೇವಿಂಗ್ಸ್ ಬ್ಯಾಂಕ್ ಲೆಕ್ಕವನ್ನು ತೆರೆದು ಅದರಲ್ಲಿ ಎಷ್ಟೇ ಸಣ್ಣ ಹಿವಜನ್ನಾದರೂ ಕ್ರಮಪ್ರಕಾರ ಶೇಖರಿಸುತ್ತ ಬಂದರೆ ಅದು ಬೇಗನೆ ದೊಡ್ಡ ಮೊತ್ತವಾಗಿ ನೀವು ವಿಶೇಷವಾಗಿ ಇಚ್ಛಿಸುವ ನಿಮ್ಮ ಕುಟುಂಬದ ಬಗ್ಗೆ ಗೃಹನಿರ್ಮಾಣ, ಮಕ್ಕಳ ವಿದ್ಯಾಭ್ಯಾಸ ಇತ್ಯಾದಿ ಕೆಲಸಗಳಿಗೆ ಒದಗುವುದು.

ಆದುದರಿಂದ ಇಂದೇ ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ತೆರೆಯಿರಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ.

The Canara Industrial &
Banking Syndicate Limited.

Estd: 1925 H. O: UDIPI.

ಆಹಾರ ನಿಯಂತ್ರಣ

ಪಂಚವಾರ್ಷಿಕ ಯೋಜನೆಯ ಪುನರ್ವಿಮರ್ಶಿತ ಕರಡು

ಹೊಸ ನಿಲುವು

ಕೇಂದ್ರ ಸರಕಾರದ ಆಹಾರ ಧೋರಣೆಯಲ್ಲಿ ಮೂಲಭೂತ ಬದಲಾವಣೆಯಾಗುವ ಸೂಚನೆಗಳು ಕಳೆದವಾರ ಕಂಡು ಕೊಂಡವು. ಮದ್ರಾಸಿನಲ್ಲಿ ರಾಜಾಜಿ ಮಂತ್ರಿಮಂಡಳ ರಚಿಸಲ್ಪಟ್ಟೊಡನೆಯೇ ಆಹಾರ ನಿಯಂತ್ರಣವು ಕಿತ್ತುಹಾಕಲ್ಪಟ್ಟಿತು ಆಗ ಕೇಂದ್ರ ಸರಕಾರಕ್ಕೆ ಸ್ವಾಭಾವಿಕವಾಗಿ ಪರಿಸ್ಥಿತಿ ಹದಗೆಡುವುದೇ ಎಂಬ ಅನುಮಾನವಿದ್ದೇ ಇತ್ತು. ರಾಜಾಜಿಯ ಮನೋಧೈರ್ಯ ಹಾಗೂ ಚಾಣಾಕ್ಷ ಬುದ್ಧಿಯ ಮೇಲೆ ನಂಬುಗೆ ಇಟ್ಟೇ ಆಹಾರ ಮಂತ್ರಿ ಮಿ. ಕಿದ್ವಾಯಿ ಈ ಹೆಜ್ಜೆಯನ್ನು ಅನುಮೋದಿಸಿದ್ದರು. ಈಗ ಬಂದಿರುವ ಅನುಭವದಂತೆ, ಆಹಾರ ವಿಷಯದಲ್ಲಿ ವಿನಿಯಂತ್ರಣ ಧೋರಣೆಯನ್ನು ಅನುಸರಿಸುವುದೇ ಹಿತ ಎಂದು ಸರಕಾರ ನಿರ್ಧರಿಸಿದಂತಿದೆ. ಕೇಂದ್ರ ಸರಕಾರದ ಈ ಅಭಿಪ್ರಾಯವನ್ನು ಸಾಮಾನ್ಯವಾಗಿ ಎಲ್ಲ ರಾಜ್ಯ ಸರಕಾರಗಳೂ ಅನುಮೋದಿಸುತ್ತವೆ. ವಿನಿಯಂತ್ರಣದ ಬಗ್ಗೆ ಅಲ್ಪಸ್ವಲ್ಪ ಸಂದೇಹ ತೋರುವ ಮುಂಬಯಿ, ಮಧ್ಯಪ್ರದೇಶ ಹಾಗೂ ಭೋಪಾಳ ರಾಜ್ಯಗಳಿಂದರೂ ವಾರ್ಷಿಕ ಪೂರೈಕೆಯ ಆಶ್ವಾಸನೆ ಬಂದರೆ, ವಿನಿಯಂತ್ರಣವನ್ನು ಒಪ್ಪಿಕೊಳ್ಳಲು ಸಿದ್ಧವಿವೆ. ಕಿದ್ವಾಯಿಯವರ ಹೊಸ ಯೋಜನೆಯನ್ವಯ ಕೊರತೆಯ ರಾಜ್ಯಗಳಿಗೆ ಒಂದೊಂದು ಉಳಿಕೆಯ ರಾಜ್ಯಗಳನ್ನು ಜೋಡಿಸಿ, ಪ್ರತ್ಯೇಕ ವಿಭಾಗಮಾಡಿ, ಈ ವಿಭಾಗದೊಳಗೆ ಆಹಾರಧಾನ್ಯದ ಮುಕ್ತ ಸಾಗಾಟಕ್ಕೆ ಎಡೆಮಾಡಿಕೊಡಲಾಗುವುದರಿಂದ–ಎಲ್ಲ ಆಕ್ಷೇಪಕ್ಕೂ ಸಮಾಧಾನ ದೊರೆತಂತಾಗಿದೆ.

ಬೇಡದ ಹತೋಟಿ

ಆಹಾರ ವಿಷಯದ ಹೊಸ ಧೋರಣೆಯು ಮದ್ರಾಸು ರಾಜ್ಯದ ವಿನಿಯಂತ್ರಣ ಸಂಬಂಧಿ ಕಾರ್ಯಕ್ರಮದ ತದ್ಪ್ರತಿಯಾಗಿದೆ. ಜನರಿಗೆ ವಿನಿಯಂತ್ರಣದಿಂದ ಹಾನಿಯಾಗುವುದೆಂದಿದ್ದರೆ, ಆ ರಾಜ್ಯವು ನಿಯಂತ್ರಣವನ್ನು ತೆಗೆದು ಹಾಕಬೇಕೆಂದು ಕಿದ್ವಾಯಿ ಒತ್ತಾಯಿಸುವುದಿಲ್ಲ. ಆದರೆ ನಿಯಂತ್ರಣಗಳು ಕಳ್ಳ ಪೇಟೆಗೆ ಮುಕ್ತ ದ್ವಾರವನ್ನು ಮಾಡಿಕೊಟ್ಟಿವೆ ಮತ್ತು ಆಹಾರ ಸಾಗಾಟದ ಮೇಲೆ ಅನಪೇಕ್ಷಿತ ಒತ್ತಡವನ್ನು ತಂದು ಜನರಿಗೆ ಅನಾನುಕೂಲತೆ ಮಾಡಿವೆ ಎಂಬುದು ಈಗ ಚೆನ್ನಾಗಿ ಮನವರಿಕೆಯಾಗಿದೆ. ಕಿದ್ವಾಯಿಯವರು ಪುಣೆಯಲ್ಲಿ ಕೊಟ್ಟ ಹೇಳಿಕೆಯು ಇದನ್ನು ಸ್ಪಷ್ಟೀಕರಿಸುವಂತಿದೆ. ಎರಡನೆ ಮಹಾಯುದ್ಧದ ಕಾಲದಲ್ಲಿ ಪೇಟೆಯಲ್ಲಿ ಕಂಡು ಬಂದ ಬೆಲೆಗಳ ಏರಿಳಿತದ ಪರಿಣಾಮವಾಗಿ, ಜನರು ಕಷ್ಟವನ್ನು ಅನುಭವಿಸಬೇಕಾಗಿ ಬಂತು. ಇದರಿಂದ ಪ್ರಜೆಗಳಿಗೆ ರಕ್ಷಣೆ ನೀಡಲು ಸರಕಾರವು ನಿಯಂತ್ರಣ ಧೋರಣೆಯನ್ನು ಕೈಗೊಂಡಿತು. ಆದರೆ ಹಳ್ಳಿಯ ರೈತರಿಗೆ ಇದರಿಂದ ಪ್ರೋತ್ಸಾಹ ದೊರೆಯಲಿಲ್ಲ. ಉತ್ಪಾದನೆಯ ಮೇಲೆ ನಿಯಂತ್ರಣವಿದ್ದರೆ ಮಾತ್ರ, ಅದರ ಮಾರಾಟ ಬೆಲೆಯ ಮೇಲಿನ ನಿಯಂತ್ರಣವೂ ಯಶಸ್ವಿಯಾಗಬಲ್ಲುದು. ಈಗಿದ್ದಂತೆ ಕೃಷಿಯ ಉತ್ಪಾದನೆಯು ಅನಿರ್ಬಂಧಿತವಾಗಿದ್ದರೂ ಮಾರಾಟ ಬೆಲೆಯ ಮೇಲೆ ಬೇಡದ ಹತೋಟಿ ಇದೆ. ಜೊತೆಗೆ ಆಹಾರ ಧಾನ್ಯದ ವಿತರಣೆಯ ಕಾರ್ಯಕ್ಕಾಗಿ ಸರಕಾರವು ೯%ದಷ್ಟು ವೆಚ್ಚವನ್ನು ಮಾಡುತ್ತಿದೆ. ಇದು ಬಹಳ ಹೆಚ್ಚಾಯಿತು ಮತ್ತು ಈ ಭಾರವಾದರೂ ಗ್ರಾಹಕರ ಮೇಲೆ, ಅರ್ಥಾತ್ ಜನಸಾಮಾನ್ಯರ ಮೇಲೆ, ಬೀಳುವುದು ಇವೆಲ್ಲ ತೊಂದರೆಗಳಿಂದ ಜನರು ಪಾರಾಗಿ, ಸುಖ ಜೀವನ ನಡೆಸಬೇಕೆಂದು ಆಹಾರ ವಿನಿಯಂತ್ರಣವನ್ನು ಕೈಗೊಳ್ಳುವ ನಿಶ್ಚಯಕ್ಕೆ ಬರಲಾಗಿದೆ

ಪರಿಸ್ಥಿತಿ ಚೆನ್ನಾಗಿದೆ

ದೇಶದ ಆಹಾರ ಸ್ಥಿತಿಯು ಈಗಿನಷ್ಟು ಉತ್ತಮವಾಗಿ ಕಳೆದ ಹತ್ತು ವರ್ಷಗಳಲ್ಲಿ ಎಂದೂ ಇರಲಿಲ್ಲ ಎಂಬುದಾಗಿ ಕಿದ್ವಾಯಿಯರೂ ಅವರ ಸಹಾಯಕರಾದ ಶ್ರೀ ಪಂಜಾಬರಾವ ದೇಶಮುಖರೂ ಹೇಳಿದ್ದಾರೆ. ಅಕ್ಕಿಯ ಪರಿಸ್ಥಿತಿಯಷ್ಟೆ ಕೆಲ ಮಟ್ಟಿಗೆ ಚಿಂತಾಜನಕವಿದೆ ಹೊರತು, ಗೋಧಿ ಮುಂತಾದ ಯಾವುದೇ ಧಾನ್ಯದ ಸಂಗ್ರಹವು ತೃಪ್ತಿಕರವಿದೆ ಎಂದು ಮಂತ್ರಿದ್ವಯರು ಆಶ್ವಾಸನೆ ಕೊಟ್ಟಿರುವರು. ಉತ್ತರ ಪ್ರದೇಶ, ಪಶ್ಚಿಮ ಬಂಗಾಲ ಮತ್ತು ಮಧ್ಯಭಾರತದಲ್ಲಿ ಈ ವರ್ಷ ಮುಂಗಾರು ಬೆಳೆಯು ಅತ್ಯುತ್ತಮವಾಗಿದೆಯಾಗಿಯೂ ಬಿಹಾರ, ಮುಂಬಯಿ, ಮದ್ರಾಸುಗಳಲ್ಲಿ ಅನಾವೃಷ್ಟಿಯ ಭಯ ತೊಲಗಿದೆಯಾಗಿಯೂ ಉಳಿದೆಲ್ಲಕಡೆ ಬೆಳೆಯು ಉತ್ತಮವಿದೆಎಂದೂ ಶ್ರೀ ದೇಶಮುಖರು ಹೇಳಿದ್ದಾರೆ ಈ ವರ್ಷದ ಆಯಾತವು ೩೦ಲಕ್ಷ ಟನ್ನು ಎಂದ ಮಾತ್ರಕ್ಕೆ, ಇಷ್ಟು ಕೊರತೆ ಇದೆ ಎಂದರ್ಥವಲ್ಲ. ಮೊದಲೇ ಮಾಡಿಕೊಂಡ ಒಪ್ಪಂದದಂತೆ ಈ ಆಹಾರ ಧಾನ್ಯ ಆಮದುಮಾಡಿಕೊಳ್ಳಬೇಕಾಗಿದೆ. ಆದರೆ ಬರುವ ವರ್ಷ ೨೦ಲಕ್ಷ ಟನ್ನು ಕಡಿಮೆ ಆಮದು ಮಾಡಿಕೊಳ್ಳುವ ನಿರ್ಧಾರಕ್ಕೆ ಸರಕಾರ ಬಂದಿದೆ ಎಂದೂ ದೇಶಮುಖರು ತಿಳಿಸಿದರು. ದೇಶದ ಆಹಾರ ಸಂಗ್ರಹ ಯಾವಾಗ ಬೇಕೆಂದರೆ ಆಗ ೨೩ ಲಕ್ಷ ಟನ್ನು ಗೋಧಿ ಮತ್ತು ೮ಲಕ್ಷ ಟನ್ನು ಅಕ್ಕಿಯನ್ನು ಒದಗಿಸಬಲ್ಲುದು ಎಂದು ಮಂತ್ರಿಗಳು ಹೇಳಿರುವುದರಿಂದ ಚಿಂತೆಗೆ ಆಸ್ಪದವೇ ಉಳಿಯುವುದಿಲ್ಲ.

ಮತ ಭೇದ

ಏನೇ ಇರಲಿ–ಜನರ ಪರಿಸ್ಥಿತಿಯನ್ನು ಹದಗೆಡಿಸುತ್ತಾ ಹೋಗುವ ನಿಯಂತ್ರಣಗಳು ಇನ್ನೂ ಜ್ಯಾರಿಯಲ್ಲಿರುವ ಅಗತ್ಯ ಇಲ್ಲವೆಂಬುದು ಎಲ್ಲರ ಮನಸ್ಸಿಗೂ ಹೊಳೆದಿದೆ. ಯೋಜನಾ ಆಯೋಗ ಮಾತ್ರ ಈ ವಿಷಯದಲ್ಲಿ ಅನುಕೂಲ ಮತವನ್ನು ಹಿಡಿದಿಲ್ಲವೆಂದು ತೋರುತ್ತದೆ. ಸರಕಾರವು ಧಾನ್ಯದ ನಿಯಂತ್ರಣವನ್ನು ಇಟ್ಟುಕೊಂಡು ದರಗಳ ವಿಷಯದಲ್ಲಿ ಬಿಗಿಯಾದ ಧೋರಣೆಯನ್ನು ಅನುಸರಿಸಬೇಕೆಂದು ಯೋಜನಾ ಆಯೋಗದ ಅಭಿಪ್ರಾಯ ಕಿದ್ವಾಯಿಯವರ ಹೊಸ ನಿಲುವಿನಿಂದ ದೇಶದೊಳಗಿನ ಪರಿಸ್ಥಿತಿಯ ಸ್ವರೂಪವೇ ಮಾರ್ಪಾಡಾಗುವುದರಿಂದ ಯೋಜನಾ ಆಯೋಗ ಕಳವಳಕ್ಕೆ ಗುರಿಯಾಗಿದೆ. ವಿನಿಯಂತ್ರಣದ ಪರಿಣಾಮವಾಗಿ ಉಂಟಾಗಬಹುದಾದ ಕೆಲವೊಂದು ವಿಶಿಷ್ಟ ಸಮಸ್ಯೆಗಳ ಬಗ್ಗೆ ಯೋಜನಾ ಆಯೋಗವು ತನ್ನ ಸಲಹಾ ಮಂಡಳಿಯ ಅಭಿಪ್ರಾಯ ಕೇಳಿದೆ. ಆಹಾರ ಧಾನ್ಯದ ಮೇಲಿನ ನಿಯಂತ್ರಣಗಳು ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಅನಾವಶ್ಯಕವಾದ ತೊಂದರೆಯಾಗಿ ಪರಿಣಮಿಸಿವೆ ಎಂದು ಸಲಹಾ ಮಂಡಳದ ಕೆಲವು ಸದಸ್ಯರು ಅಭಿಪ್ರಾಯಪಟ್ಟರು. ಹಾಗೆಂದು ಬಹುಮತವು ವಿನಿಯಂತ್ರಣ ಧೋರಣಕ್ಕೆ ವಿರುದ್ಧವಿದ್ದಂತೆ ಕಂಡು ಬಂತು. ಪಂಚವಾರ್ಷಿಕ ಯೋಜನೆಯು ನಿಯಂತ್ರಣಗಳ ತಳಹದಿಯನ್ನು ಆಧರಿಸಿರುವುದರಿಂದ, ವಿನಿಯಂತ್ರಣ ಧೋರಣೆಯನ್ನು ಚಾಚೂ ತಪ್ಪದೆ ಅನುಸರಿಸುವುದು ಅನಿಷ್ಟಪ್ರದವಾದೀತೆಂದು ಅವರ ಅಂಜಿಕೆ. ಆಹಾರದ ಬೆಲೆಯೇ ಎಲ್ಲ ವಸ್ತುಗಳ ಬೆಲೆಯನ್ನು ಹೊಂದಿಕೊಂಡಿದೆ. ಮತ್ತು ಪಂಚವಾರ್ಷಿಕ ಯೋಜನೆಯಿಂದ ಸಾಧಿಸಬೇಕಾದ ಜನರ ಆರ್ಥಿಕ ಹಾಗೂ ಸಾಮಾಜಿಕ ಪುನರುದ್ಧಾರಕ್ಕೆ ಆಹಾರ ಧಾನ್ಯದ ಬೆಲೆಗಳು ಇಳಿಕೆಯಲ್ಲಿರುವುದು ಅತ್ಯವಶ್ಯಕವೆನಿಸಿದೆ. ಅದರಿಂದ ಆಹಾರ ಧೋರಣೆಯಲ್ಲಿ ಈಚೆಗೆ ಕಂಡು ಬಂದ ಅನಿಶ್ಚಿತತೆಯನ್ನು ಗಮನಿಸಿದರೆ, ಈ ಧೋರಣೆಯನ್ನು ಸರಕಾರ ಮುಂದುವರಿಸುವುದರಿಂದ ಪಂಚವಾರ್ಷಿಕ ಯೋಜನೆಯ ಬಲಗುಂದೀತ – ಎಂಬ ಅಭಿಪ್ರಾಯಕ್ಕೆ ಸಲಹಾಸಮಿತಿ ಬಂದಿದೆ.

ಕೊನೆಯ ಹೇಳಿಕೆ

ಸ್ವಾಭಾವಿಕವಾಗಿ ಈ ವರದಿ ಒಂದು ಮುಖ್ಯವಾದ ಮತ ಭೇದವನ್ನು ಎತ್ತಿ ತೋರಿಸುತ್ತದೆ: ರಾಷ್ಟ್ರೀಯ ಪುನರುದ್ಧಾರಕ್ಕೆ ದೃಢವಾಗಿ ಅಂಟಿಕೊಂಡಿರುವ ಯೋಜನಾ ಆಯೋಗದ ನಿಲುವನ್ನು ಕೇಂದ್ರ ಸರಕಾರ ಪುರಸ್ಕರಿಸುವುದಿಲ್ಲವಾದರೆ–ಮತ್ತೆ ನಾವು ಸಾಧಿಸುವುದಾದರೂ ಏನನ್ನು? ಎಂತಲೇ ಪತ್ರಿಕೆಗಳೂ ಮಹಾಜನರೂ ಕೂಡಿಯೇ ಟೀಕೆ ಮಾಡಿದ್ದಾರೆ. ಇದರಿಂದ ಅನಪೇಕ್ಷಿತವಾದ ಗೊಂದಲವುಂಟಾಗುವುದನ್ನು ಅಂತ ಕಿದ್ವಾಯಿಯವರು ಮುಂಬಯಿಯಲ್ಲೊಂದು ಹೇಳಿಕೆ ಕೊಟ್ಟು ಮಂತ್ರಿ ಮಂಡಳದ ಧೋರಣೆಯನ್ನು ಮುಂದಾಗಿ ತಿಳಿದುಕೊಂಡೇ, ತಾನೊಂದು ಅಭಿಪ್ರಾಯ ವ್ಯಕ್ತಪಡಿಸುತ್ತಿರುವದಾಗಿಯೂ ಆಹಾರ ಸಂಬಂಧದಲ್ಲಿ ಕೇಂದ್ರ ಮಂತ್ರಿಮಂಡಳದ ಸಾಮಾನ್ಯಧೋರಣೆ ಅದು ಅನುಕೂಲವಿರುವುದೆಂಬುದರಿಂದಲೇ ಮಾತುಕತೆಗಳ ಮೂಲಕ ಪ್ರಯತ್ನ ನಡೆಸಿದ್ದಾಗಿಯೂ ಸ್ಪಷ್ಟೀಕರಿಸಿದ್ದಾರೆ. ಸರಿ ಅಂತಿಮ ನಿರ್ಧಾರವನ್ನು ಇನ್ನೂ ಕೈಗೊಂಡಿರದೆ, ಕೆಲವೇ ದಿನಗಳಲ್ಲಿ ಅದನ್ನು ಪ್ರಕಟಿಸುವ ಆಶೆ ಇದೆ ಎಂದು ಕಿದ್ವಾಯಿಯವರು ಹೇಳಿದ್ದಾರೆ. ಇವೆಲ್ಲದರ ನೋಟದಿಂದ ಹೇಳುವುದಾದರೆ—ಕಿದ್ವಾಯಿಯವರು ದಿಲ್ಲಿಗೆ ಹೋಗಿ ಅಲ್ಲಿ ಕೇಂದ್ರ ಮಂತ್ರಿಮಂಡಳದೊಡನೆ ಪುನರಾಲೋಚನೆ ನಡೆಸಿದ ಬಳಿಕ, ಅಂತಿಮ ನಿರ್ಧಾರವನ್ನು ಬಹಿರಂಗಗೊಳಿಸುವರೆನ್ನಬಹುದು. ಮುಂಗಾರುಬೆಳೆ ಈಗಷ್ಟೆ ಕೈಗೆ ಬಂದಿರುವುದರಿಂದ, ಆಹಾರಧೋರಣೆಯನ್ನು ಈ ಸಮಯದಲ್ಲಿ ನಿರ್ಧರಿಸದಿದ್ದರೆ, ಇನ್ನು ಒಂದು ವರ್ಷದ ವರೆಗೆ ಅದರಲ್ಲಿ ಬದಲಾವಣೆ ಮಾಡುವುದು ಸಾಧ್ಯವಾಗದು. ಈ ಸಂಚಿಕೆ ಓದುಗರ ಕೈಸೇರುವಷ್ಟರಲ್ಲಿ ಕಿದ್ವಾಯಿಯವರ ಕೊನೆಯ ಹೇಳಿಕೆ ಹೊರಬೀಳಲೂ ಸಾಕು.

ಪುನರ್ವಿಮರ್ಶಿತ ವರದಿ

ಯೋಜನಾ ಆಯೋಗವು ತನ್ನ ಅಂತಿಮ ವರದಿಯನ್ನು ಇಷ್ಟರಲ್ಲಿಯೇ ಪ್ರಕಟಗೊಳಿಸುವ ನಿರೀಕ್ಷೆಯಿದೆ. ಅದರ ಪುನರ್ವಿಮರ್ಶಿತ ಯೋಜನೆಯಂತೆ ೧೯೫೫ರ ಸುಮಾರಿಗೆ ರಾಷ್ಟ್ರೀಯ ಆದಾಯ ಒಂದುಸಾವಿರ ಕೋಟಿ ರೂಪಾಯಿಯು ಹೆಚ್ಚುವುದೆಂದು ಹೇಳಬಹುದು. ಯೋಜನೆಯು ಎರಡುಸಾವಿರ ಕೋಟಿ ರೂಪಾಯಿ ವೆಚ್ಚವನ್ನು ತಗಲುವುದು. ಮುಖ್ಯ ನೀರಾವರಿ ಹಾಗೂ ವಿದ್ಯುಚ್ಛಕ್ತಿ ಯೋಜನೆಗಳಿಗೆ ಇದರಲ್ಲಿ ಪ್ರಾಶಸ್ತ್ಯವನ್ನು ಕೊಟ್ಟಿರುವರು. ಈಗ ಕೈಗೊಂಡಿರುವ ಯೋಜನೆಗಳನ್ನು ವಿಸ್ತರಿಸುವುದಲ್ಲದೆ, ಹೊಸತಾಗಿ ಯೋಜನೆಗಳನ್ನು ತೊಡಗಲು ಇದರಲ್ಲಿ ಅವಕಾಶಮಾಡಿರುವರು. ನೀರಾವರಿ ಹಾಗೂ ವಿದ್ಯುಚ್ಛಕ್ತಿ ಯೋಜನೆಗಳಿಗಾಗಿ ೫೪೦ ಕೋಟಿ ರೂಪಾಯಿ ವಿನಿಯೋಗಿಸಲ್ಪಡುವುದು. ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸ

ZANDU Mahayogaraja Guggula.

ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲ ಅಪ್ರತಿಮ ದಿವ್ಯೌಷಧ. 1 ತೊಲೆಗೆ ರೂ ೩- ಮಾತ್ರ.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್.
ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ.
2 ಶ್ರೀ ವಿ. ವಿ ಶೆಣ್ಯೆ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್ ಎಸ್. ಶರ್ಮ, ಹಜೂರು ರಸ್ತೆ ಮಂಗಳೂರು.
ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರತಿನಿಧಿಯಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರಿ ಶರತ್ತು ವಗೈರೆಗಳಿಗೆ ಬರೆಯಿರಿ.

DAMODAR & CO.,
Nainiappa Naicken Street, Park Town-MADRAS 3.

ಸಡಲಿಸಲು ಆತುರ

ಭಾರತದ ಪೂರ್ವಗಡಿ ಪ್ರದೇಶದಲ್ಲಿ ನೆಹರೂ ಸಂಚಾರ

ಕ್ಕಾಗಿ ೨೭ ಕೋಟಿ ರುಪಾಯಿಗಳ ವ್ಯವಸ್ಥೆ ಇದೆ ದಕ್ಷಿಣದಲ್ಲಿರುವ ಮದ್ರಾಸು, ಮೈಸೂರು ಮತ್ತು ತಿರುಕೊಚ್ಚಿ ರಾಜ್ಯಗಳು ಈ ಲಾಭವನ್ನು ಪಡೆಯುವುವು ಕೈಗಾರಿಕೋದ್ಯಮಗಳನ್ನು ವ್ಯಾಪಕಗೊಳಿಸಲು ೪೭೭ ಕೋಟಿ ರೂಪಾಯಿಗಳ ವೆಚ್ಚವನ್ನು ಯೋಜನೆಯು ತೋರಿಸಿದೆ ಕೈಗಾರಿಕೆಯನ್ನು ವಿಸ್ತರಿಸುವಲ್ಲಿ ಪ್ರಾಶಸ್ತ್ಯವನ್ನು (೧) ಸಣಬು, ಪ್ಲೈವುಡ್, ಜವುಳಿ, ಸಕ್ಕರೆ, ಸಾಬೂನು ಮುಂತಾದವುಗಳ ಉತ್ಪಾದನೆಯನ್ನು ಸುಸಂಬದ್ಧಗೊಳಿಸುವುದಕ್ಕೆ (೨) ಸಣಬು ಪ್ಲೈವುಡ್, ಕಬ್ಬಿಣ, ಉಕ್ಕು, ಅಲ್ಯುಮಿನಿಯಂ, ಸಿಮೆಂಟು, ರಸಾಯನಿಕ ಗೊಬ್ಬರಗಳು, ಸಾಮಾನ್ಯ ರಸಾಯನ ಪದಾರ್ಥಗಳು, ಮತ್ತು ಯಂತ್ರೋಪಕರಣಗಳ ತಯಾರಿಕೆಯನ್ನು ವ್ಯಾಪಕಗೊಳಿಸುವುದಕ್ಕೆ (೩) ಈಗಾಗಲೇ ಅಲ್ಪಸ್ವಲ್ಪ ಬಂಡವಾಳವನ್ನು ಪಯೋಗಿಸಿ ತೊಡಗಿರುವ ಕೈಗಾರಿಕಾ ಕೇಂದ್ರಗಳನ್ನು ಪೂರ್ಣಗೊಳಿಸುವುದಕ್ಕೆ ಮತ್ತು (೪) ಈಗಿರುವ ಕೊರತೆಗಳನ್ನು ತುಂಬುವುದಕ್ಕೆ ನೆರವಾಗುವ ಹೊಸ ಕೈಗಾರಿಕೆಯನ್ನು ಸ್ಥಾಪಿಸುವುದಕ್ಕೆ ಕೊಡಲಾಗಿದೆ. ಹಾಗೆಯೇ ವಿಶಾಖಪಟ್ಟಣದ ಹಡಗು ನಿರ್ಮಾಣ ಕೇಂದ್ರದಲ್ಲಿ ಹೊಸ ಧಕ್ಕೆಗಳನ್ನು ಸ್ಥಾಪಿಸುವುದಕ್ಕೂ, ಹಡಗು ಕಂಪನಿಗಳಿಗೆ ಭಾರವಾದ ಹಡಗುಗಳನ್ನು ಕೊಳ್ಳಲನುವಾಗುವಂತೆಯೂ ೧೪ ಕೋಟಿ ರುಪಾಯಿ ವೆಚ್ಚವನ್ನು ಮಾಡಲಾಗುವುದು.

ಕೈಮಗ್ಗಗಳಿಗೆ ಪ್ರೋತ್ಸಾಹ

ಕೈಮಗ್ಗಗಳ ಸಮಸ್ಯೆಯು ಯೋಜನಾ ಆಯೋಗದ ಗಮನವನ್ನು ವಿಶೇಷವಾಗಿ ಸೆಳೆದಿದೆ. ಹಳ್ಳಿಯ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸುವುದಕ್ಕೆ ಸುದೀರ್ಘವಾದ ಕಾರ್ಯಕ್ರಮವನ್ನು ಯೋಜನೆ ಒಳಗೊಂಡಿದೆ. ನಿರುದ್ಯೋಗವನ್ನು ದೂರೀಕರಿಸುವುದು ಈ ಕಾರ್ಯಕ್ರಮಗಳ ಮುಖ್ಯ ಉದ್ದೇಶವಾಗಿದೆ. [illegible] ಬೆಂಕಿಪೆಟ್ಟಿಗೆ, ಹದಗೊಳಿಸಿದ ಚರ್ಮ, ಕೈಯಿಂದ ತಯಾರಿಸಿದ ಕಾಗದ, ಓಲೆಬೆಲ್ಲ, ಬೆಲ್ಲ, ಕಂಬಳಿ, ಎಣ್ಣೆ ತೆಗೆಯುವ ಗಾಣ, ಜೇನು ವ್ಯವಸಾಯ ಮುಂತಾದವುಗಳ ಕುರಿತು ಯೋಜನಾ ಆಯೋಗ ಆಸ್ಥೆವಹಿಸಿದೆ. ಮುಖ್ಯವಾಗಿ ಕೈಮಗ್ಗದ ಸಮಸ್ಯೆಯನ್ನು ನಿವಾರಿಸಲು ಅನುಕೂಲವಾಗಬೇಕೆಂದು ಗಿರಣಿ ಬಟ್ಟೆಯ ಮೇಲೆ ಗಜಕ್ಕೆ ಮೂರು ಪೈಯಂತೆ ಕರ ಹೇರಲು ನಿರ್ಧರಿಸಿದೆ. ಭಾರತ ಸರಕಾರವು ಈಗಾಗಲೇ ಈ ವಿಷಯವನ್ನು ಕೈಗೆ ತೆಗೆದುಕೊಂಡಿದ್ದು ಪಾರ್ಲಿಮೆಂಟಿನ ಮುಂದಿನ ಅಧಿವೇಶನದಲ್ಲಿ ಈ ಬಗ್ಗೆ ವಿಧೇಯಕವೊಂದನ್ನು ಮಂಡಿಸಬಹುದು. ಈ ಕರವನ್ನು ಹೇರುವುದರಿಂದ ವರ್ಷಕ್ಕೆ ಆರು ಕೋಟಿ ರುಪಾಯಿಗಳ ಆದಾಯ ಬರುತ್ತದೆ. ಈ ಹಣದಿಂದ ಒಂದು ನಿಧಿಯನ್ನು ಕೂಡಿಟ್ಟು, ಕೈಮಗ್ಗದ ಬಟ್ಟೆಯನ್ನು ಜನಪ್ರಿಯಗೊಳಿಸಲು ಪ್ರಚಾರವನ್ನೂ, ಸಂಶೋಧನೆಯನ್ನೂ, ನಡೆಸುತ್ತಿದಲ್ಲದೆ, ಯೋಗ್ಯ ಪೇಟೆ ದೊರಕುವಂತೆ ವ್ಯಯುತ್ತವನ್ನೂ, ನಡೆಸುವ ಹಂಬಲವಿದೆ. ಕೈಮಗ್ಗದ ಸಮಸ್ಯೆಗಳ ಬಗ್ಗೆ ಸರಕಾರಕ್ಕೆ ಸಹಾಯ ನೀಡಲು ಈಗಾಗಲೇ ಅಖಿಲ ಭಾರತ ಕೈಮಗ್ಗದ ಮಂಡಳವನ್ನು ಸ್ಥಾಪಿಸಲಾಗಿದೆ ಭಾರತ ಸರಕಾರದ ಜವುಳಿ ಕಮಿಶನರು ಇದರ ಅಧ್ಯಕ್ಷರಾಗಿದ್ದು, ೧೬ ಮಂದಿ ಸದಸ್ಯರು ಇರುವರು

ಕೊರತೆ ತುಂಬುವ ಬಗೆ

ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಗೊಳಿಸಲು ಹಣದ ಕೊರತೆ ಕಂಡುಬರುವುದಷ್ಟೆ. ಯೋಜನಾ ಆಯೋಗದ ಸಲಹಾ ಮಂಡಳಿಯು ಈ ಸಂಬಂಧದಲ್ಲಿ ನೀಡಿದ ಸೂಚನೆಗಳಲ್ಲಿ ಪಾನ ಪ್ರತಿಬಂಧವನ್ನು ಕಿತ್ತೊಗೆಯುವುದು, ಉಪ್ಪಿನ ಮೇಲೆ ತೆರಿಗೆಯನ್ನು ಹೊರಿಸುವುದು, ಚಿಕ್ಕ ಉಳಿತಾಯದ ಯೋಜನೆಗಳನ್ನು ಅತ್ಯುತ್ಸಾಹದಿಂದ ಕಾರ್ಯಗತಗೊಳಿಸುವುದು, ಸುಂಕ, ಮಾರಾಟಕರ, ಮತ್ತು ಅಬಕಾರಿ ಕರಗಳ ಮೇಲೆ ಮೇಲ್ತೆರಿಗೆಯನ್ನು ಹೊರಿಸುವುದು ಮುಂತಾದುವು ಮುಖ್ಯ. ಹಾಗೆಯೇ ಸಾಕಷ್ಟು ಭರದಿಂದ ಪ್ರಚಾರ ಕಾರ್ಯ ನಡೆಯಬೇಕಾದುದೂ ಅವಶ್ಯಕವೆಂದು ಸಲಹಾ ಸಮಿತಿ ಹೇಳಿದೆ. ಯೋಜನಾ ಆಯೋಗದ ಪುನಪರಿಶೀಲಿತ ವರದಿಯಲ್ಲಿ ಜಿಲ್ಲೆಯನ್ನು ಆಡಳಿತದ ಪ್ರಾಮುಖ್ಯ ಘಟಕವೆಂದು ನಿರ್ದೇಶಿಸಲಾಗಿದೆಯಲ್ಲದೆ, ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ನಿರತವಾಗಿರುವ ಸ್ಥಾನಿಕ ಸಂಸ್ಥೆಗಳ ಚಟುವಟಿಕೆಯನ್ನು ವಿಶದವಾಗಿ ಹೇಳಿದೆ ಹಳ್ಳಿಗಳ ಪುನರುಜ್ಜೀವನದ ಹೃದಯವಾಗಿರುವ ಸ್ಥಾನಿಕ ಸಂಸ್ಥೆಗಳ ಅಧಿಕಾರ ಪ್ರಾಪ್ತಿಯ ಅಗತ್ಯವನ್ನೂ ಪಂಚವಾರ್ಷಿಕ ಯೋಜನೆಯು ಈಗಿನ ವರದಿ ಎತ್ತಿಹಿಡಿಯುತ್ತದೆ.

ವಿಶಾಲ ಭಾರತ

ಹಳ್ಳಿಯ ಜನರು ಪಂಚವಾರ್ಷಿಕ ಯೋಜನೆಯಲ್ಲಿ ಅತ್ಯಧಿಕ ಆಸ್ಥೆ ವಹಿಸಬೇಕೆಂದು ಕೇಳುವುದರಲ್ಲಿ ತಪ್ಪೇನಿಲ್ಲ ಮುಖ್ಯವಾಗಿ ಆಹಾರೋತ್ಪಾದನೆಯು ಹೆಚ್ಚಬೇಕಿರುವಾಗ, ಮತ್ತು ಆರ್ಥಿಕ ಹಾಗೂ ಸಮಾಜ ಪುನರ್ನಿರ್ಮಾಣದ ಹಂಬಲವಿರುವಾಗ–ನಮ್ಮ ಹಳ್ಳಿಯ ಬಾಂಧವರನ್ನು ಕಡೆಗಣಿಸಲಾರೆವು. ಭಾರತದಂಥ ವಿಶಾಲ ದೇಶದಲ್ಲಿ ನಮ್ಮ ಹಳ್ಳಿಗರಿಗಿಂತಲೂ ಅನಾಗರಿಕ ಸ್ಥಿತಿಯಲ್ಲಿರುವ ಗುಡ್ಡಗಾಡು ಪ್ರದೇಶದ ಜನರೂ ಇದ್ದಾರೆಂಬುದು ಸ್ಮರಣೆಯಲ್ಲಿರಲಿ; ಅವರ ಆಚಾರ ವಿಚಾರಗಳು ಎಷ್ಟೇ ಭಿನ್ನವಾಗಿದ್ದರೂ, ಅವರ ಸಂಸ್ಕೃತಿಯಲ್ಲಿ ಭಾರತೀಯ ವೈಶಿಷ್ಟ್ಯ ಮೂಡಿದೆ ಈಚೆಗೆ ಅಸ್ಸಾಮದ ಗುಡ್ಡಗಾಡು ಪ್ರದೇಶಗಳನ್ನು ಸಂದರ್ಶಿಸಿದ ಪ್ರಧಾನಮಂತ್ರಿ ನೆಹರೂ ತಮ್ಮ ಪ್ರವಾಸ ಕಾಲದ ಭಾಷಣದಲ್ಲಿ ಭಾರತದ ಐಕ್ಯವನ್ನು ಮನಗಾಣಬೇಕಾಗಿ ಜನರನ್ನು ವಿನಂತಿಸಿದರು. ಗುಡ್ಡಗಾಡು ಪ್ರದೇಶದ ಜನರು ನೂರಾರು ಪಂಗಡಗಳಾಗಿ ಜೀವಿಸಿರುವರು. ಅವರಲ್ಲಿ ಇನ್ನೂ ನವಜಾಗೃತಿ ಉಂಟಾಗಿಲ್ಲ ಬ್ರಿಟಿಷರ ಆಳಿಕೆ ಕಾಲದಲ್ಲಿ ಈ ಜನರ ಸ್ಥಿತಿಗತಿಯನ್ನು ಅಲಕ್ಷಿಸಿದ್ದು ಇದಕ್ಕೆ ಕಾರಣವಾಗಿರಬಹುದು. ಆದರೆ ಸ್ವತಂತ್ರ ಭಾರತದ ಮಟ್ಟಿಗೆ ಈ ಪ್ರದೇಶ ಆಯಕಟ್ಟಿನದ್ದಾಗಿದೆ. ಪಾಕಿಸ್ತಾನ, ಬರ್ಮಾ, ಚೀನಾ, ಹಾಗೂ ಟಿಬೇಟುಗಳ ಸರಹದ್ದಿನಲ್ಲಿರುವ ಅಸ್ಸಾಮದ ಗುಡ್ಡಗಾಡು ಪ್ರದೇಶ ಸಂರಕ್ಷಣಾ ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ಇಲ್ಲಿಯ ಜನರು ಭಾರತ ಸರಕಾರಕ್ಕೆ ನಿಷ್ಠೆಯಿಂದಿರುವುದೂ, ಸರಕಾರದ ಕಾರ್ಯರೂಪಗಳಲ್ಲಿ ಆಸಕ್ತಿ ತೋರಿ ದುಡಿಯುವುದೂ ಪ್ರತ್ಯೇಕತಾ ಭಾವನೆಯಿಂದ ವಿಮುಕ್ತರಾಗಿ ಭಾರತೀಯ ನಾಗರಿಕರಂತೆ ರಾಷ್ಟ್ರಹಿತದ ಕಾರ್ಯಗಳಲ್ಲಿ ಭಾಗವಹಿಸುವುದೂ ಅತ್ಯಂತ ಅಪೇಕ್ಷಣೀಯ

ನೆಹರೂ ವಿಜಯ

ನೆಹರೂ ಈ ಎಲ್ಲ ಸಂಗತಿಗಳನ್ನು ಒತ್ತಿಯೊತ್ತಿ ಹೇಳಿದರು ನಾಗಾ ಜನರು ತಮಗೆ ಪ್ರತ್ಯೇಕವಾದ ಸ್ವತಂತ್ರ ಘಟಕ ಬೇಕೆಂದು ಕೇಳುವುದನ್ನು ಹುಡುಗಾಟಿಕೆಯೆಂದು ನೆಹರೂ ಸ್ಪಷ್ಟವಾಗಿ ಹೇಳಿದರು. ಭಾರತಾಂತರ್ಗತವಾದ ಸ್ವಾಯತ್ತಾಧಿಕಾರವನ್ನು ನೀಡಲು ಸರಕಾರ ಆತುರವಿರುವುದು ಗಡಿಪ್ರದೇಶದ ನಮ್ಮ ಬಂಧುಗಳು ಇದನ್ನು ಚೆನ್ನಾಗಿ ಉಪಯೋಗಿಸಿಕೊಳ್ಳಬೇಕು. ಹೊರತು, ಸ್ವಾತಂತ್ರ್ಯವೆಂದು ಗುಲ್ಲೆಬ್ಬಿಸುವುದರಿಂದ ಯಾರಿಗೂ ಹಿತವಿಲ್ಲ. "ನಾನು ಪರಕೀಯನಲ್ಲ–ಅಥವಾ ನಿಮ್ಮ ಮೇಲೆ ಆಡಳಿತ ನಡೆಸಲು ಬಂದಿಲ್ಲ. ನಿಮ್ಮ ಬಾಂಧವನಾಗಿ, ನಿಮ್ಮ ಕಷ್ಟ ಸುಖಗಳ ಪರಿಚಯ ಮಾಡಿಕೊಂಡು ಹೋಗಲು ಬಂದಿದ್ದೇನೆ" ಎಂದು ಹೇಳಿ ನೆಹರೂ ಗುಡ್ಡಗಾಡು ಪ್ರದೇಶದ ಜನರ ವಿಶ್ವಾಸ ಸಂಪಾದನೆಗೆ ಪ್ರಯತ್ನಿಸಿದರು. ಹಾಗೆಯೇ "ಇಂದು ಭಾರತದ ನಾಗರಿಕರೆಲ್ಲ ಸಮಾನರು. ಇನ್ನು ಹತ್ತು ವರ್ಷಗಳಲ್ಲಿ ನಿಮ್ಮ ಮಕ್ಕಳಲ್ಲಿಯೇ ಒಬ್ಬನು ಭಾರತ ಪ್ರಜಾರಾಜ್ಯದ ಅಧ್ಯಕ್ಷನಾದಾನು. ಇನ್ನೊಬ್ಬನು ಪ್ರಧಾನ ಮಂತ್ರಿಯಾದಾನು' ಎಂದು ಪ್ರಜಾ ಪ್ರಭುತ್ವದ ವೈಭವವನ್ನು ಗುಡ್ಡಗಾಡು ಪ್ರದೇಶದ ಜನರಿಗೆ ಮನವರಿಕೆ ಮಾಡಿಸಿದ್ದಲ್ಲದೆ. ಇರಬೇಕಾದ ಮಹತ್ವಾಕಾಂಕ್ಷೆಯೊಂದರ ಬೀಜಾರೋಪಣ ಕಾ

[೮ನೇ ಪುಟ ನೋಡಿ]

BBC/52/[illegible]



ಬ್ರೂಕ್ ಬಾಂಡ್ ಚಹಾ

ತಾಜಗಿಗೂ
ಸುವಾಸನೆಗೂ
ಮಿತವ್ಯಯಕ್ಕೂ

ಇವು ಕೇವಲ ಕಾಗದದ ಚೂರುಗಳಷ್ಟೇ ಅಲ್ಲ–ಕೊಳೆ, ಧೂಳು ಮತ್ತು ಕ್ರಿಮಿಕೀಟಗಳ ಅಪಾಯಗಳಿಂದ ನಿಮ್ಮ ಚಹಾ ಸುರಕ್ಷಿಸಲ್ಪಟ್ಟದೆಯೆಂಬುದಕ್ಕೆ ಖಾತ್ರಿಯಾಗಿವೆ ಪೊಟ್ಟಣ ಕಟ್ಟಲ್ಪಟ್ಟ ಚಹಾವನ್ನು ಕೊಂಡು ನಿಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದೇ ಅಲ್ಲದೆ ಬ್ರೂಕ್ ಬಾಂಡ್ ಪೊಟ್ಟಣವನ್ನೇ ಕೊಂಡು ಯಥಾರ್ಥವಾಗಿಯೂ ತಾಜಾವಾದ ಮತ್ತು ಉತ್ತಮ ತಯಾರಿಕೆಯ ಚಹಾ [illegible] ಸೇವಿಸುವ ಹರ್ಷವನ್ನು ಪಡೆಯಿರಿ.

ಬ್ರೂಕ್ ಬಾಂಡ್ ಚಹಾ

ಭಾರತದ ಅತ್ಯುತ್ತಮ ಪೊಟ್ಟಣಗಳಲ್ಲಿ ಭಾರತದ ಅತ್ಯುತ್ತಮ ಚಹಾ.

"ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್"
ಇವರಲ್ಲಿ ಒಂದು ಸೇವಿಂಗ್ಸ್ ಖಾತೆಯನ್ನು ತೆರೆದು ಅದನ್ನು ಕ್ರಮವಾದ
ಉಳಿತಾಯಗಳಿಂದ ವೃದ್ಧಿಗೊಳಿಸುವುದೇ
ಜೀವನದಲ್ಲಿ ನಿಮ್ಮ ಉನ್ನತಿಗೆ ಹೆದ್ದಾರಿ !
ಸ್ಥಾಪನೆ: 1906
THE CANARA BANKING CORPORATION LIMITED.
ಪ್ರಧಾನ ಕಾರ್ಯಾಲಯ, ಉಡುಪಿ. (ದ ಭಾರತ)

ನವಯುಗ
ಉಡುಪಿ, ಗುರುವಾರ ೩೦-೧೦-'೫೨

ಶ್ರೇಯಃ ಸಾಧನೆ

ಯೋಜನಾ ಆಯೋಗದ ಸಲಹಾ ಮಂಡಳವು ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಮಾಡಲು ಆಗತ್ಯವಿರುವ ಹಣವನ್ನು ಕೂಡಿಸಲಿಕ್ಕಾಗಿ ಮಾಡಿದ ಸೂಚನೆಗಳು ಗಂಭೀರವಾಗಿವೆ. ಪಾನಪ್ರತಿಬಂಧವನ್ನು ಕಿತ್ತೊಗೆಯುವುದು, ಉಪ್ಪಿನ ಮೇಲೆ ಕರವನ್ನು ಹೇರುವುದು ಮುಂತಾದ ಸೂಚನೆಗಳು ಬಂದಿವೆ. ಪಂಚವಾರ್ಷಿಕ ಯೋಜನೆಯನ್ನು ಕಾರ್ಯರೂಪಕ್ಕೆ ಇಳಿಸುವಲ್ಲಿ ಕೇಂದ್ರಸರಕಾರದೊಡನೆ ರಾಜ್ಯ ಸರಕಾರಗಳೂ ಹೊಂದಿಕೊಂಡು ನಡೆಯಬೇಕಾಗಿದೆ. ತಮ್ಮ ಪಾಲಿಗೆ ಬಂದ ಕೆಲಸವನ್ನು ಪೂರೈಸಲು ಅವುಗಳಿಗೆ ಹಣದ ಅನುಕೂಲತೆ ಬೇಕೆಂಬುದೂ ನಿಜವೇ. ಇಂಥದರಲ್ಲಿ ರಾಜ್ಯ ಸರಕಾರದ ಉತ್ಪನ್ನವನ್ನು ಹೆಚ್ಚಿಸಲು ಏನು ಉಪಾಯ ಕೈಗೊಂಡರಾಗಬಹುದೆಂದು ಅರ್ಥಶಾಸ್ತ್ರಗಳು ವಿವೇಚಿಸಿ, ಕೊನೆಗೆ ಪಾನಪ್ರತಿಬಂಧವನ್ನು ಕಿತ್ತೊಗೆಯುವುದೇ ಸುಲಭದ ಹಾಗೂ ನೇರಾದ ಮಾರ್ಗ ಎಂದು ಎಣಿಸಿರಬಹುದು. ಉಪ್ಪಿನ ಮೇಲೆ ಕರ ಹೇರುವ ವಿಷಯವನ್ನು ಸಹ ಮುಂದೆ ಮಾಡಿದ್ದನ್ನು ನೋಡುವಾಗ, ನಾವು ರಾಷ್ಟ್ರ ಪುನರುದ್ಧಾರದ ನೆಪದಲ್ಲಿ ಸ್ವಾತಂತ್ರ್ಯ ಹೋರಾಟದ ಪವಿತ್ರ ಧ್ಯೇಯಗಳಿಗೆ ತಿಲಾಂಜಲಿಯನ್ನು ಕೊಡಲಿಕ್ಕೆ ಸನ್ನದ್ಧರಾಗಿರುವೆವೇ ಎಂಬ ಸಂಶಯವೇಳುತ್ತದೆ. ಮಹಾತ್ಮಾ ಗಾಂಧೀಜಿಯವರು ಹೂಡಿದ ಉಪ್ಪಿನ ಸತ್ಯಾಗ್ರಹ ಇತಿಹಾಸಪ್ರಸಿದ್ಧವಾಗಿದೆ. ಜನಸಾಮಾನ್ಯರಿಗಷ್ಟೆ ಅಲ್ಲ, ಎಲ್ಲರಿಗೂ ಜೀವನಾವಶ್ಯಕವೆನಿಸಿದ ಉಪ್ಪು ಕರಭಾರಕ್ಕೆ ಈಡಾಗದೆ ಅಗ್ಗದಲ್ಲಿ ದೊರೆಯಬೇಕೆಂದು ಗಾಂಧೀಜಿ ಆ ಸತ್ಯಾಗ್ರಹ ಹೂಡಿದ್ದರು. ಈಚೆಗೊಮ್ಮೆ ಉಪ್ಪಿನ ಮೇಲೆ ಕರ ಹೇರುವ ಸೂಚನೆ ಬಂದಾಗ ಸರಕಾರದ ಪರವಾಗಿ ಪ್ರಧಾನಿ ನೆಹರೂ ಈ ವಿಷಯವು ಜನರ ಮನೋಭಾವನೆಯನ್ನು ಕೆಣಕದಿರದು ಎಂದು ಹೇಳಿದ್ದರು.. ಸಾರ್ವಭೌಮಾಧಿಕಾರವುಳ್ಳ ಪ್ರಜಾರಾಜ್ಯವನ್ನು ಭಾರತದಲ್ಲಿ ಸ್ಥಾಪಿಸಿದ ಬಳಿಕ, ನಮ್ಮ ಆದರ್ಶ ಪರಂಪರೆಯನ್ನು ಉಳಿಸಿಕೊಳ್ಳುವ ಬದಲು ಆದಾಯವನ್ನು ಹೆಚ್ಚಿಸಿಕೊಳ್ಳುವ ನೆಪದಲ್ಲಿ ಹಾಸ್ಯಾಸ್ಪದ ಧೋರಣೆಯನ್ನು ವಹಿಸುವುದು ಎಂದಿಗೂ ಶೋಭೆ ತಾರದು. ಇದೇ ಮಾತನ್ನು ಪಾನಪ್ರತಿಬಂಧವನ್ನು ಕಿತ್ತೊಗೆಯಬೇಕೆಂದು ಬಂದಿರುವ ಸಲಹೆಯ ಬಗ್ಗೆಯೂ ಹೇಳಬಹುದು. ಪಾನಪ್ರತಿಬಂಧವು ನಮ್ಮ ರಾಷ್ಟ್ರೀಯ ಪುನರುಜ್ಜೀವನದ ಕಾರ್ಯಕ್ರಮಗಳಲ್ಲಿ ಪ್ರಾಮುಖ್ಯವಾದದ್ದು. ಮುಖ್ಯವಾಗಿ ಬಡ ಜನರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿ, ಅವರ ಕೌಟುಂಬಿಕ ಜೀವನವು ಸುಖಪ್ರದವಾಗುವಂತೆ ಮಾಡುವುದು ಇದರ ಉದ್ದೇಶ. ಈ ರೀತಿ ಪಾನಪ್ರತಿಬಂಧದಿಂದ ಕಲ್ಯಾಣವಿದೆ ಎಂಬುದನ್ನು ಮನಗಂಡೇ ಮದ್ರಾಸ್, ಮುಂಬಯಿಯಂಥ ರಾಜ್ಯಗಳು, ರಾಜ್ಯದಾದ್ಯಂತ ಮದ್ಯಪಾನ ನಿಷೇಧವನ್ನು ಜಾರಿಗೆ ತಂದುವು. ಇದರಿಂದ ಸರಕಾರಕ್ಕೆ ದೊರೆಯುತ್ತಿದ್ದ ಅಬಕಾರಿ ಆದಾಯಕ್ಕೆ ಸೊನ್ನೆ ಬಿತ್ತೆಂಬುದು ನಿಜವಾದರೂ ಈ ಹಣ ಬಡ ಜನರ ಕೈಯಲ್ಲಿ ಉಳಿದಿದೆ; ಮತ್ತು ಅವರ ಸಾಂಪತಿಕ ಸ್ಥಿತಿ ಊರ್ಜಿತಗೊಂಡಿದೆ ಎಂಬುದನ್ನು ಮರೆಯಬಾರದು. ಪಾನಪ್ರತಿಬಂಧವು ಅಯಶಸ್ವಿಯಾಗಿದೆ ಎಂದು ಅಪಪ್ರಚಾರ ಮಾಡುವವರು ಕಳ್ಳಭಟ್ಟಿಯನ್ನಿಳಿಸಿ ಸರಾಯಿ ಮಾಡುವವರನ್ನು ಬೊಟ್ಟೆತ್ತಿ ತೋರಿಸುತ್ತಾರೆ. ಈ ಸಂಬಂಧದ ತಕ್ಸೀರುಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆ ಎಂದು ಬಣ್ಣಿಸುತ್ತಾರೆ. ಹೀಗೆ ಅಕ್ರಮವಾಗಿ ನಡವಳಿಕೆಗೆ ಆಸ್ಪದ ದೊರೆತಿದೆ ಎಂಬುದೊಂದರಿಂದಲೇ ಪಾನಪ್ರತಿಬಂಧವನ್ನು ಕಿತ್ತೊಗೆಯುವ ನಿರ್ಧಾರಕ್ಕೆ ಬರುವುದು ಸಮಂಜಸವಲ್ಲ. ಹಾಗೆ ಮಾಡಿದ್ದೇ ಆದರೆ, ನಾಳೆ ಕಳವು, ಕೊಲೆ, ಸುಲಿಗೆ ಅತ್ಯಾಚಾರ ಮುಂತಾದ ಸಾಮಾಜಿಕ ಕೇಡುಗಳು ಈಗಲೂ ಕಂಡು ಬರುತ್ತವೆಯಾದುದರಿಂದ, ದಂಡ ನೀತಿಯನ್ನು ತ್ಯಜಿಸಿಬಿಡುವುದೇ ಒಳ್ಳೆಯದೆಂದು ಹೇಳಬೇಕಾದೀತು. ಸಾಮಾಜಿಕ ಹಿತವನ್ನೂ ಆತ್ಮೀಕ ಶ್ರೇಯಸ್ಸನ್ನೂ ಸಾಧಿಸಿಕೊಳ್ಳಲು ಪ್ರಯತ್ನಿಸುವುದು ಪ್ರತಿಯೊಬ್ಬನ ಕರ್ತವ್ಯವಾಗಿದ್ದು ಕಾಯಿದೆ ಕಾನೂನುಗಳು ಮನುಷ್ಯನ ಈ ಉನ್ನತಾದರ್ಶಕ್ಕೆ ಒಂದು ನಿರ್ದಿಷ್ಟವಾದ, ಆಚರಣೀಯವಾದ ಸ್ವರೂಪವನ್ನು ಕೊಡುತ್ತವೆ. ಮನುಷ್ಯ ಒಳ್ಳೆಯದಾಗುವುದಕ್ಕೆ ಕಾಯಿದೆ ಕಾನೂನುಗಳಿಂದ ಸಾಮಾನ್ಯವಾಗಿ ಬಾಧಕ ಬರುವುದಿಲ್ಲ. ಕೆಟ್ಟ ಪ್ರವೃತ್ತಿಯನ್ನು ತೋರಿದಾಗ ಮಾತ್ರ ಅದರಿಂದ ಅವನನ್ನು ಪರಾಙ್ಮುಖನಾಗಿಸಲು ಇವು ಪ್ರಯತ್ನಿಸುವುವು. ಇದು ನೈತಿಕ ಹೆಜ್ಜೆಯಾದುದರಿಂದ, ಮತ್ತು ಜನಹಿತವನ್ನೆ ಧ್ಯೇಯವಾಗುಳ್ಳ ಸರಕಾರ ಆಡಳಿತ ನಡಸುತ್ತಿರುವುದರಿಂದ, ಪಾನ ಪ್ರತಿಬಂಧದಂಥ ಕ್ರಮವು ಒಂದು ಆವಶ್ಯಕತೆಯೇ ಸೈ. ನಮ್ಮ ಘಟನೆಯ ನಿರ್ದೇಶಕ ತತ್ವ ಕೂಡ ಪಾನಪ್ರತಿಬಂಧವನ್ನು ಆಚರಣೆಯಲ್ಲಿ ತರಲು ಪ್ರಯತ್ನಿಸಬೇಕೆಂದು ಹೇಳುತ್ತದೆ ಎಂದ ಮೇಲೆ ಪಾನಪ್ರತಿಬಂಧವನ್ನು ಕಿತ್ತೊಗೆಯುವ ಮಾತೇ ಉಳಿಯುವುದಿಲ್ಲ. ಕೇವಲ ಧನಸಂಗ್ರಹಕ್ಕಾಗಿ ಈ ರೀತಿ ಮಾಡಬೇಕೆನ್ನುವುದು ಯೋಜನಾ ಆಯೋಗಕ್ಕೆ ನೀಡಿದ ಸಲಹೆಯ ಮರ್ಮವಾಗಿರಬಹುದು. ಹಾಗಿದ್ದರೂ ಪಾನಪ್ರತಿಬಂಧವನ್ನು ಕಿತ್ತೊಗೆದೇ ಈ ರೀತಿ ಹಣ ಕೂಡಿಸಬೇಕೆಂದಿಲ್ಲ. ಮುಂಬಯಿ ಮುಖ್ಯ ಮಂತ್ರಿ ಶ್ರೀ ಮೊರಾರಜಿ ದೇಸಾಯರು ಹೇಳುವಂತೆ ೨೦% ಮಂದಿ ಕುಡುಕರಿಂದ ಹಣ ಸುಲಿದು ಉಳಿದ ಜನರ ಕಲ್ಯಾಣ ಮಾಡಬೇಕೆನ್ನುವುದಕ್ಕಿಂತ, ೮೦% ಸಂಥಾಪಿತರ ಮೇಲೆಯೇ ಕರಭಾರವನ್ನು ಹೊರಿಸಿ, ಜನಹಿತ ಸಾಧಿಸಬಾರದೇಕೆ? ಈ ವಾದವೇ ಸಮರ್ಪಕವಾದದ್ದು. ಆದುದರಿಂದ ಪಾನಪ್ರತಿಬಂಧ ವಿಚಾರಣಾ ಸಮಿತಿಯು ಈ ಧೋರಣೆ ಯಶಸ್ವಿಯಾಗುವಂತೆ ಏನು ಉಪಾಯ ಕೈಗೊಳ್ಳಬಹುದೆಂಬುದರ ಕುರಿತು ಯೋಗ್ಯ ಮಾರ್ಗದರ್ಶನ ನೀಡುವುದೇ ಚೆಲುವಾದೀತಲ್ಲದೆ—ಅದನ್ನು ಕಿತ್ತೊಗೆಯುವ ಸಲಹೆ ನೀಡಿದರೆ ಉಚಿತವೆನಿಸದು

ಕೊರಿಯಾ ಕದನದ ಚರ್ಚೆ

ಕುತೂಹಲ ಕೆರಳಿಸುವ ತೆರೆಯ ಮರೆಯ ಮಾತುಕತೆ

ಸಂಯುಕ್ತ ರಾಷ್ಟ್ರಸಂಘದ ಸಾಮಾನ್ಯಾಧಿವೇಶನವು ಕೊರಿಯಾ ಕದನದ ಕುರಿತಾದ ಚರ್ಚೆಗೇನೇ ಪ್ರಥಮ ಪ್ರಾಶಸ್ತ್ಯವನ್ನು ಕೊಟ್ಟಿದೆ. ಟ್ಯುನೀಸಿಯಾ ಮೊರೊಕ್ಕೋಗಳ ಗೊಂದಲಕ್ಕೆ ಆ ಬಳಿಕದ ಸ್ಥಾನ ದೊರೆತಿದೆ! ಅರಬ ಏಶಿಯಾ ರಾಷ್ಟ್ರಗಳ ಪ್ರಯತ್ನಕ್ಕೆ ಈ ಬಗೆಯ ಸಾಫಲ್ಯ ದೊರೆತುದನ್ನು ಕಂಡ ಫ್ರೆಂಚ ಸರಕಾರ ನಿಜಕ್ಕೂ ಆಶ್ಚರ್ಯಗೊಳಗಾಗಿದೆ ಎಂದು ವರದಿ. ಈ ಆಶ್ಚರ್ಯ ಹೆಚ್ಚಲು ಇನ್ನೊಂದು ಕಾರಣ ಅಮೇರಿಕೆಯು ಫ್ರಾನ್ಸಿನ ವಿರುದ್ಧ ಕೊಟ್ಟ ಮತದಾನವಾಗಿದೆ. ಫ್ರೆಂಚ ಸರಕಾರದ ಪ್ರೀತಿಯನ್ನು ಕಳೆದುಕೊಳ್ಳಲು ಸಿದ್ಧವಿಲ್ಲದ ಅಮೇರಿಕ ಈ ಬಗ್ಗೆ ಹಿಂದಿನಿಂದ ಸ್ಪಷ್ಟೀಕರಣವನ್ನು ಕೊಡಬೇಕಾಯಿತು. ರಾಜಕೀಯ ಸಮಿತಿಯಲ್ಲಿ ಈ ಸಂಬಂಧ ಮತಗಣನೆ ನಡೆದಾಗ ಅಮೇರಿಕದ ವಿದೇಶಾಂಗ ಸಚಿವ ಡೀನ ಅಚೆಸನರು ಇರಲಿಲ್ಲ, ಮತ್ತು ಅಮೇರಿಕೆಯ ಪ್ರತಿನಿಧಿಗೆ ತನ್ನ ಸರಕಾರದಿಂದ ಏನೊಂದೂ ನಿರ್ದಿಷ್ಟ ಸೂಚನೆ ಬಂದಿರಲಿಲ್ಲ. ಹೀಗಾಗಿ ತನ್ನ ಬುದ್ಧಿಗೆ ಒಳಿತೆಂದು ತೋರಿದಂತೆ ಅಮೇರಿಕದ ಪ್ರತಿನಿಧಿ ವರ್ತಿಸಿದರು. ಇಷ್ಟಕ್ಕಾಗಿ ಫ್ರೆಂಚ ಸರಕಾರ ಬೇಸರಪಟ್ಟುಕೊಳ್ಳಬಾರದು. ಸಾಮಾನ್ಯಾಧಿವೇಶನದಲ್ಲಿ ಚರ್ಚೆ ನಡೆಯುವಾಗ, ನಿಶ್ಚಯವಾಗಿಯೂ ಅಮೇರಿಕೆ ಫ್ರಾನ್ಸಿನ ಬೆಂಬಲಕ್ಕೆ ನಿಲ್ಲುವುದು. ಈ ರೀತಿಯ ಭರವಸೆ ಅಮೇರಿಕನರ ಗತ್ತುಗಾರಿಕೆಯ ಇನ್ನೊಂದು ನಿದರ್ಶನ.

ಪ್ರಾತಿನಿಧ್ಯದ ಪ್ರಶ್ನೆ

ಕೊರಿಯಾ ಕದನದ ಪ್ರಸಂಗವನ್ನು ಕೈಗೆತ್ತಿಕೊಂಡಾಗ, ಸ್ವಾಭಾವಿಕವಾಗಿ ಉತ್ತರ ಕೊರಿಯಾ ಮತ್ತು ಕಮ್ಯೂನಿಸ್ಟ ಚೀನದ ಪ್ರತಿನಿಧಿತ್ವದ ಬಗ್ಗೆ ಚರ್ಚೆ ನಡೆಯಿತು. ಉತ್ತರ ಕೊರಿಯಾದ ಪ್ರತಿನಿಧಿ ಭಾಗವಹಿಸದ ಸಂಯುಕ್ತ ರಾಷ್ಟ್ರ ಸಂಘದ ಸಭೆಯ ನಿರ್ಣಯಕ್ಕೆ ಉತ್ತರ ಕೊರಿಯಾ ಒಪ್ಪಲಿಕ್ಕಿಲ್ಲ ಎಂಬುದಾಗಿ ಈ ಮೊದಲೇ ಸ್ಪಷ್ಟವಾಗಿ ಹೇಳಿಕೆ ಬಂದಿತ್ತು. ಸಂಧಾನದ ಮಾತುಕತೆಗಳು ಸುಗಮವಾಗಬೇಕಿದ್ದರೆ ಸಂಬಂಧಪಟ್ಟ ಎಲ್ಲ ಪಕ್ಷಗಳು ಒಟ್ಟಿಗೆ ಕಲೆತು ಮಾತುಕತೆಯ ಮೂಲಕ ಒಂದು ನಿರ್ದಿಷ್ಟ ನಿಲುಮೆಗೆ ಬರುವುದು ಅಗತ್ಯವಿದೆ. ಆದರೆ ಸಂಯುಕ್ತ ರಾಷ್ಟ್ರಸಂಘದ ಸಾಮಾನ್ಯಾಧಿವೇಶನವು ಈ ಸಾಧಾರಣ ನೀತಿಯನ್ನು ಉಪೇಕ್ಷಿಸಿ, ಉತ್ತರ ಕೊರಿಯಾದ ಪ್ರತಿನಿಧಿಗೆ ಪ್ರವೇಶ ಕೊಡುವುದಕ್ಕೆ ತಿರಸ್ಕರಿಸಿದೆ. ರಶಿಯ ಮಾಡಿದ್ದ ಈ ಸೂಚನೆಗೆ ಭಾರತ ಅನುಕೂಲ ಮತಕೊಟ್ಟಿದೆ. ಅದೇ ರೀತಿ ಕಮ್ಯೂನಿಸ್ಟ ಚೀನಾದ ಪ್ರಾತಿನಿಧ್ಯದ ಪ್ರಶ್ನೆಯಲ್ಲೂ ಭಾರತ ಬೆಂಬಲ ನೀಡಿದೆ. ಆದರೆ ದುರ್ದೈವವೆಂಬಂತೆ ಅಮೇರಿಕೆಯ ನಿಲುವೆಯನ್ನು ಹೆಚ್ಚಿನ ರಾಷ್ಟ್ರಗಳು ಅಪ್ಪಿಕೊಂಡು ನ್ಯಾಯವಾದ ಬೇಡಿಕೆಯನ್ನು ಮೂಲೆಗೊತ್ತಿವೆ.

ಹಾಸ್ಯಾಸ್ಪದ ನಿಲುಮೆ

ಉತ್ತರ ಕೊರಿಯಾ ಆಕ್ರಮಣ ಮಾ
ಡಿದ ರಾಷ್ಟ್ರವಾದದರಿಂದ ಅದಕ್ಕೆ ಸಾ
ಮಾನ್ಯಾಧಿವೇಶನದಲ್ಲಿ ಭಾಗವಹಿಸುವ
ಧಿಕಾರವಿಲ್ಲ ಎನ್ನುವ ಅಮೇರಿಕದ ವಾ
ಹೊರನೋಟಕ್ಕೆ ಚಂದ ಕಂಡರೂ ಯ
ಥಾರ್ಥವಾಗಿ ಟೊಳ್ಳು. ಕಾಶ್ಮೀರ ಪ್ರಸಂ
ಗದಲ್ಲಿ ಪಾಕಿಸ್ತಾನವು ಆಕ್ರಮಕ ರಾಷ್ಟ್ರ
ವೆಂದು ಡಿಕ್ಸನ್ಸ್ ವರದಿ ಒಪ್ಪಿಸಿದ್ದರು.
ಗ ಪಾಕಿಸ್ತಾನೀ ಪ್ರತಿನಿಧಿಗಳೊಡನೆ
ಚಾರ ವಿನಿಮಯ ನಡೆಸುವುದನ್ನು ಬಿಟ್ಟು
ಗೊಟ್ಟು, ಏಕಪಕ್ಷೀಯ ನಿರ್ಣಯವನ್ನು
ಮಂಡರಿಸಲಾಯಿತೆ? ಇಲ್ಲ—ಎಂದಮೇ
ಕೊರಿಯಾ ಕದನದಂಥ ಮಹತ್ವದ ಸಮ
ಸ್ಯೆಯನ್ನು ನಿವಾರಿಸುವಲ್ಲಿ ಈ ತೆರನಾ
ಪೊಳ್ಳುವಾದವನ್ನು ಮುನ್ನಿಡುವುದು ಸ
ಯಾದ ಮಾರ್ಗವಲ್ಲ. ಚೀನಾದ
ಕಮ್ಯೂನಿಸ್ಟ ರಾಜ್ಯವು ಆಡಳಿ
ನಡೆಸುತ್ತಿರುವಾಗ, ಅದನ್ನು ಮನ್ನಿಸ
ಇನ್ನೂ ಕೊಮಿಂಟಾಂಗ ಪಕ್ಷದ ಪ್ರತಿ
ಧಿಯೊಬ್ಬನಿಗೆ ಭದ್ರತಾ ಮಂಡಳದ
ಹಾಗೂ ಸಂಯುಕ್ತ ರಾಷ್ಟ್ರ ಸಂಘದ ಕಾ
ರ್ಯಕಲಾಪಗಳಲ್ಲಿ ಆಸನ ಕೊಡುವುದು
ಹಾಸ್ಯಾಸ್ಪದ ಸಂಗತಿ. ಚೀನಾದಲ್ಲಿ
ತನ್ನ ಹಿತಸಂಬಂಧಗಳಿಗೆ ಧಕ್ಕೆಯುಂಟಾ
ಬರದೆಂದು ಸ್ವಾರ್ಥದಿಂದಷ್ಟೆ ಬ್ರಿಟ
ಚೀನಾದ ಕಮ್ಯೂನಿಸ್ಟ ಸರಕಾರವನ್ನು
ನ್ನಿಸಿರಬೇಕು. ಇಲ್ಲದಿದ್ದರೆ, ಈಗಲೇ
ನಾದ ಪ್ರತಿನಿಧಿತ್ವ ಪ್ರಶ್ನೆಗೆ ಪ್ರಾಶಸ್
ಕೊಡುವುದು ಬೇಡವೆಂದು ಅದು
ಹೇಳುತ್ತದೆ?

ರಶಿಯದ ಮೇಲೆ ಆರೋಪ

ಅಮೇರಿಕದ ಡೀನ ಅಚೆಸನರು ಕೆ
ಯಾ ಕದನದ ಬಗ್ಗೆ ಒಂದು ಮಹತ್
ಭಾಷಣ ಮಾಡಿ ಯುದ್ಧ ಮುಂದು
ಯುವುದಕ್ಕೆ ರಶಿಯಾವೇ ಹೊಣೆ
ವೆಂದು ಆಪಾದಿಸಿದರು. ಭದ್ರತಾ ಮಂ
ದಲ್ಲಿ ರಶಿಯಾವು ಶಾಂತಿಯುತ ಸಂಧಿ
ದ ಪ್ರಯತ್ನವನ್ನೆಲ್ಲ ನಿಷೇಧಿಸಿದೆ. ಅ
ಕೃತ ರೀತಿಯಿಂದ ಅಮೇರಿಕೆ ಹಾಗೂ
ನ್ನಿತರ ರಾಷ್ಟ್ರಗಳು ಯುದ್ಧ ನಿಲ್ಲಿ
ಬಗ್ಗೆ ಮಾಡಿದ ಪ್ರಯತ್ನಗಳನ್ನೆಲ್ಲ
ಮುರಿಸಿದೆ. ಉತ್ತರ ಕೊರಿಯಾದಲ್ಲಿ

ಯ ಮಹಾ ಯುದ್ಧ ಮುಗಿಯದಕ್ಕೆ ಎರಡು ತಿಂಗಳು ಹಿಂದೆಯೇ ಂದರೆ ಜೂನ್, ೧೯೫೦ರಲ್ಲಿ ರಶಿಯಾವು ನ್ಯ ಪಡೆಯನ್ನು ಬೆಳೆಸಲು ಹವಣಿಸಿಂದೂ ಜೂಲೈ ೧೯೫೦ರಲ್ಲಿ ಕೊರಿಯಾ ದನ ಆರಂಭವಾದ ಬಳಿಕಂತೂ ಸೈನ್ಯಲವನ್ನು ಹೆಚ್ಚಿಸಿದ್ದಲ್ಲದೆ, ಚೆನ್ನಾದ ತಬೇತಿಯನ್ನು ಕೊಟ್ಟು, ಯುದ್ಧ ಸಾಗ್ರಿಗಳನ್ನು ಒದಗಿಸಿಯೂ, ಸಲಹೆಗನ್ನು ನೀಡಿಯೂ ರಶಿಯಾ ಅಪ್ರಿಯ ಾರ್ಯ ಮಾಡಿದೆಯಾಗಿಯೂ ಅಚಿಸನ ನುಡಿದರು. ಕೊರಿಯಾದಲ್ಲಿ ಕಾದುರುವ "ಗೆರಿಲ್ಲಾ"ಗಳಿಗೆ "ಉತ್ತರ ಕ್ರೆಶ್" (=ರಶಿಯಾ)ದಿಂದ ಆರ್ಥಿಕ ನೆರವು ದೊರಕುತ್ತಿದೆ ಎಂದೂ ಸಂಯುಕ್ತ ಾಷ್ಟ್ರ ಸಂಘದ ಪಡೆಗಳು ವಶಪಡಿಸಿಕೊಂ ಕಾಗದ ಪತ್ರಗಳಿಗನುಸಾರ, ದಕ್ಷಿಣ ೊರಿಯವನ್ನು ಸಂಪೂರ್ಣ ನುಂಗುವ ಹಂಚಿಕೆ ಇತ್ತೆಂದೂ ಅಚಿಸನರು ಹೇಳಿದ. ಆದರೆ ಸಂಯುಕ್ತ ರಾಷ್ಟ್ರಸಂಘಕ್ಕೆ ಕ್ರಮಣಕಾರರು ಯಾರೆಂದು ಈಗಾಗಲೇ ಚಿತವಾಗಿದೆ ಎಂದವರು ಅಪ್ರತ್ಯಕ್ಷವಾಗಿ ಶಿಯಾ ಚೀನಾಗಳನ್ನು ಹಂಗಿಸಿದರು.

ತೆರೆಯ ಮರೆಯ ಮಾತುಕತೆ

ಭಾರತದ ಪ್ರತಿನಿಧಿ ಶ್ರೀಮತಿ ವಿಜರು ಲಕ್ಷ್ಮಿ ಪಂಡಿತರು ಸಂಯುಕ್ತ ರಾಷ್ಟ್ರ ಸಂಘದ ಸದಸ್ಯ ರಾಷ್ಟ್ರಳಲ್ಲಿ ಗುಪ್ತ ಮಾತುಕತೆಗಳು ನಡೆಯುದ್ದು ಕೊರಿಯಾ ಕದನವನ್ನು ನಿಲ್ಲಿಸುವ ಪಾಯವನ್ನು ಯೋಚಿಸುವುದೇ ಇದರ ದ್ದೇಶ ಎಂಬುದಾಗಿ ಹೇಳಿದ್ದಾರೆ. ಯಾವ ಯಾವ ರಾಷ್ಟ್ರಗಳು ಈ ಸಮಾಲೋಚನೆಯಲ್ಲಿ ಸೇರಿವೆ ಎಂಬುದನ್ನು ಬಹಿಂಗಗೊಳಿಸಲು ಪಕ್ವವಾದ ಸಮಯ ಬಂದಿಲ್ಲವೆಂದು ಹೇಳಿ ಅವರು ಕುತೂಹಲಮಯವಾದ ವಾತಾವರಣದಲ್ಲಿ ಪ್ರಶ್ನೆಯನ್ನು ತೇಲಿಸಿದ್ದಾರೆ ಅಚಿಸನರ ಭಾಷಣ ವಿಜಯಲಕ್ಷ್ಮಿಯವರ ಹೇಳಿಕೆಗೆ ಪುಷ್ಟಿಕೊಡುವಂಥದಿದ್ದರೂ, ಈ ಗುಪ್ತ ಮಾತುಕತೆಗಳ ಬಗ್ಗೆ ಯಾರೂ ನಿಶ್ಚಿತ ಆಸ್ಥೆವಹಿಸುವುದಿಲ್ಲ. ಏನೋ, ಚೀನಾ ಸರಕಾರ ಹಾಗೂ ಅಲ್ಲಿರುವ ಭಾರತದ ರಾಯಭಾರಿಗಳ ನಡುವೆ ಮಾತುಕತೆ ನಡೆದಿರಬಹುದೆಂದು ಎಲ್ಲರೂ ತಣ್ಣಗೆ ಕುಳಿತಿರುವರು. ಸ್ವಲ್ಪ ಉತ್ಸಾಹದಿಂದ ಪ್ರಶ್ನೆಯ ರಹಸ್ಯ ತಿಳಿಯಲು ಪ್ರಯತ್ನಿಸಿದವರಿಗೆ, ೧೯೪೯ರಲ್ಲಿ ಬರ್ಲಿನ ಬಿಕ್ಕಟ್ಟನ್ನು ಬಗೆಹರಿಸುವಲ್ಲಿ ರಶಿಯಾದ ಜೇಕಬ ಮಲಿಕರೊಂದಿಗೆ ಯಶಸ್ವಿ ಸಂಧಾನ ನಡೆಸಿದ ಅಮೇರಿಕದ ಪ್ರತಿನಿಧಿ ಡಾ. ಫಿಲಿಪ್ ಜೇಸಫರ ಚಟುವಟಿಕೆ ಏನಾದರೂ ಇದ್ದೀತೇ ಎಂಬ ಆಶೆ ಇತ್ತು. ಅಂಥದೇನೂ ಇಲ್ಲವೆಂದು ಅಮೇರಿಕೆಯ ಸರಕಾರೀ ಅಧಿಕಾರಿಗಳು ಹೇಳುತ್ತಿರುವುದರಿಂದ ಈ ಗುಪ್ತಸಮಾಲೋಚನೆಳು ಯಾರಲ್ಲೂ ಹೆಚ್ಚಿನ ಆಶೆ ಹುಟ್ಟಿಸ, ಕೇವಲ ಕುತೂಹಲವನ್ನಷ್ಟೇ ಕೆರಳಿಸಿ. ಈ ನಡುವೆ ಅಮೇರಿಕಾ ಕ್ಷ ಪದದ ಹುರಿಯಾಳಾಗಿರುವ ಸನಹೋವರರು ಕೊರಿಯಾ ಯುದ್ಧ ಮುಗಿಸಲು, ತಾನು ಸ್ವಂತ ನೆ ರಂಗಕ್ಕೆ ಭೇಟಿ ಕೊಡುವುದಾಗಿ ಚುನಾವಣಾ ಭಾಷಣದಲ್ಲಿ ಸಾರಿದ್ದಾರೆ. ಅಧ್ಯಕ್ಷಪದಕ್ಕೆ ಆರಿಸಿ ಬಂದರೆ, ತಾನು ಮಾಡುವ ಪ್ರಥಮ ಕಾರ್ಯವಿದು ಎಂದವರು ಮತದಾರರ ಮನದೊಲವು ಸಂಪಾದಿಸಲು ಪ್ರಯತ್ನಪಟ್ಟರು.

ನ್ಯಾಯಬದ್ಧ ಹೋರಾಟ

ವರ್ಣದ್ವೇಷದ ಧೋರಣೆಯನ್ನು ಇನ್ನೂ ಮುಂದುವರಿಸುವುದರಿಂದ ಗಂಡಾಂತರವಿದೆ ಎಂದು ದಕ್ಷಿಣ ಆಫ್ರಿಕೆಯ ಕ್ರಿಶ್ಚಿಯನ ಧರ್ಮಗುರುಗಳು ಎಚ್ಚರಿಕೆ ಹೇಳಿದರೂ, ಮಲಾನು ಸರಕಾರ ಇಂಥ ಹಿತೋಪದೇಶಗಳಿಗೆ ಕಿವಿಗೊಡುವಷ್ಟು ಒಳ್ಳೆಯ ಬುದ್ಧಿ ಪಡೆದಿಲ್ಲ. ಈ ಸಂಗತಿಯು ತನ್ನ ಅಂತರಿಕ ಅಧಿಕಾರಕ್ಕೆ ಸೇರಿದೆ ಎಂದೂ ಸಂಯುಕ್ತ ರಾಷ್ಟ್ರಸಂಘವಾಗಲೀ, ಇತರ ಯಾವುದೇ ರಾಷ್ಟ್ರವಾಗಲೀ, ಇದರಲ್ಲಿ ಆಸ್ಥೆ ತಳೆಯುವುದು ಅನುಚಿತವೆಂದೂ ಇನ್ನೂ ಮಲಾನರು, ಮತ್ತವರ ಮಂತ್ರಿಮಂಡಳದ ಸದಸ್ಯರು ವಾದಿಸುತ್ತಾರೆ. ನೆಹರು ಆದಿಯಾಗಿ ಭಾರತದ ಧುರೀಣರೂ ಸಂಯುಕ್ತರಾಷ್ಟ್ರ ಸಂಘವೂ ಈ ಬಗ್ಗೆ ತಳೆದ ನಿಲುವೆ ತಪ್ಪೆಂದೂ ಇದರಿಂದ ದಕ್ಷಿಣ ಆಫ್ರಿಕೆಯಲ್ಲಿ ಹುಂಡಾಟ ಹಾಗೂ ಕಾಯಿದೇ ಭಂಗದಂಥ "ಅಕ್ರಮಕೃತ್ಯ"ಗಳಿಗೆ ಪ್ರೋತ್ಸಾಹ ಕೊಟ್ಟಂತಾಗುವುದಲ್ಲದೆ ನ್ಯಾಯ ಪರಿಪಾಲನೆಯನ್ನು ಬೆಂಬಲಿಸಿದಂತಾಗುವುದಿಲ್ಲವೆಂದೂ ಆ ಸರಕಾರ ಸಾರುತ್ತದೆ. ದಕ್ಷಿಣ ಆಫ್ರಿಕೆಯ ಪಾರ್ಲಿಮೆಂಟಿನ ವಿರೋಧಿ ಗುಂಪಿನ ಧುರೀಣರಾದ ಸ್ಟ್ರಸರು ಕೂಡ ಈ ವಿಷಯದಲ್ಲಿ ವಿದೇಶೀಯರು ಆಸಕ್ತಿ ತೋರಿಸ ಕೂಡದೆಂದು ಹೇಳಿ, ಇದನ್ನು ಭಾರತೀಯರು ಪ್ರತಿಭಟಿಸಿದ್ದಾರೆ. ಆಫ್ರಿಕನರೊಡನೆ ಸಹಕರಿಸಿಕೊಂಡು ಹೋಗಿ, ಈ ಜನಾಂಗ ಭೇದ ನೀತಿಯನ್ನು ಕೊನೆಗಾಣಿಸಲು ಪ್ರಯತ್ನಿಸುವ ಭಾರತೀಯರ ದೃಢನಿರ್ಧಾರವನ್ನು ಇನ್ನೊಮ್ಮೆ ಸ್ಪಷ್ಟೀಕರಿಸಲಾಗಿದೆ. ಭಾರತದಲ್ಲಿ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರು ದಕ್ಷಿಣ ಆಫ್ರಿಕೆಯ ವಿಶಿಷ್ಟ ಪ್ರಶ್ನೆಯಲ್ಲಿ ಲೋಕವೇ ಆಸಕ್ತಿ ತೋರಿಸ ಹತ್ತಿರುವುದು ಶುಭ ಚಿಹ್ನೆಯೆಂದು ನುಡಿದದ್ದಲ್ಲದೆ, ಈ ಹೋರಾಟ ಸಾಧುವಾದುದೆಂದೂ ಅಭಿಪ್ರಾಯಪಟ್ಟರು. ಈಗ ತಾನೆ ಯುರೋಪು ಪ್ರವಾಸವನ್ನು ಮುಗಿಸಿ ಬಂದ ಮೈಸೂರಿನ ಮಾಜೀ ಗವರ್ನರ ರಾಜ ಮಹಾರಾಜಸಿಂಗರು ತಾವು ಈ ಸಂಬಂಧದಲ್ಲಿ ಬ್ರಿಟಿಷ [illegible] ಮಂತ್ರಿಗಳನ್ನು ಕಂಡು ಮಾತುಕತೆ ನಡೆಸಿದ್ದಾಗಿಯೂ, ಭಾರತೀಯರನ್ನು ನಡೆಸಿಕೊಳ್ಳುವ ವಿಷಯದಲ್ಲಿ ಮಲಾನರಿಗೆ ಒಂದು ಪತ್ರ ಬರೆಯಲು ಅವರು ಒಪ್ಪಿದ್ದಾಗಿಯೂ ಹೇಳಿದ್ದಾರೆ. ಕಾಮನವೆಲ್ತ ರಾಷ್ಟ್ರದೊಡನೆ ವೈಮನಸ್ಯ ಕಟ್ಟಿಕೊಳ್ಳುವ ಸಂದರ್ಭ ಬಂದಾಗಲೆಲ್ಲ ಬ್ರಿಟನು ಪೇಚಿನಲ್ಲಿ ಸಿಕ್ಕಬೀಳುತ್ತದೆಯಂತೆ.

ಚಂದಾದಾರರಲ್ಲಿ ವಿನಂತಿ

ಚಂದಾಹಣ ಬಾಕಿ ಇರುವ ಚಂದಾದಾರರಿಗೆಲ್ಲಾ ಅವರವರ ಬಾಕಿಯನ್ನು ಕಾಣಿಸಿ ಈ ಮೊದಲೇ ಕಾರ್ಡುಗಳನ್ನು ಬರೆದಿರುತ್ತದೆ. ಕೆಲವರು ಸಕಾಲದಲ್ಲಿ ಚಂದಾ ಹಣವನ್ನು ಕಳುಹಿಸಿರುತ್ತಾರಾದರೂ ಹಲವರು ಇನ್ನೂ ಬಾಕಿಮಾಡಿಕೊಂಡಿದ್ದಾರೆ ಅಂಥ ಮಹನೀಯರು ಇನ್ನಾದರೂ ದಯಮಾಡಿ ಅದನ್ನು ಕಳುಹಿಸಿಕೊಡುವಂತೆ ಅಪೇಕ್ಷಿಸುತ್ತೇನೆ.

—ಮೆನೇಜರ್

ಮದ್ರಾಸಿನಲ್ಲಿ ನಿಜಲಿಂಗಪ್ಪನವರು ದ. ಕ. ಜಿಲ್ಲೆಯ ಒಕ್ಕಲಿಗರ ಸ್ಥಿತಿಗತಿ ಕುರಿತು ನಿವೇದನೆ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಮದ್ರಾಸು ಸರಕಾರದ ಮುಖ್ಯಮಂತ್ರಿ ಶ್ರೀ ರಾಜಗೋಪಾಲಾಚಾರ್ಯರನ್ನು ತಾ 27ರಲ್ಲಿ ಕಂಡು ದಕ್ಷಿಣಕನ್ನಡ ಜಿಲ್ಲೆಯ ಒಕ್ಕಲಿಗರ ಸ್ಥಿತಿಗತಿಗಳನ್ನು ನಿವೇದಿಸಿಕೊಂಡರೆಂದೂ ಮಾನ್ಯ ರಾಜಾಜಿಯವರು ಒಕ್ಕಲಿಗರ ರಕ್ಷಣೆಗೆ ಯೋಗ್ಯ ಕ್ರಮ ಕೈಕೊಳ್ಳುವ ಆಶ್ವಾಸನೆ ಕೊಟ್ಟಿರುವರೆಂದೂ ತಿಳಿದುಬಂದಿದೆ.

ಶ್ರೀ ನಿಜಲಿಂಗಪ್ಪನವರು ಇತ್ತೀಚೆಗೆ ಮದ್ರಾಸು ಸರಕಾರವು ಭೂಕಂದಾಯದ ಮೇಲೆ ಸರ್‌ಚಾರ್ಜ್ ಹಾಕುವ ನಿರ್ಧಾರಮಾಡಿದ್ದರಿಂದ ಭೂಮಿಯ ಒಡೆಯರು ತಮ್ಮ ಗೇಣಿಯನ್ನು ಹೆಚ್ಚಿಸುವ ಹಂಚಿಕೆಯಲ್ಲಿರುವರೆಂದೂ, ಹಾಗೆ ಹೆಚ್ಚಿಸಿದ ಗೇಣಿಯನ್ನು ಒಕ್ಕಲು ಕೊಡದೆಹೋದಲ್ಲಿ ಅವನ ಒಕ್ಕಲೆಬ್ಬಿಸಲಾಗುವುದೆಂಬ ಬೆದರಿಕೆಯನ್ನು ಹಾಕಿರುವರೆಂದು ಮುಖ್ಯಮಂತ್ರಿಗಳಿಗೆ ತಿಳಿಸಿದರಲ್ಲದೆ ಇದರಿಂದಾಗಿ ಒಕ್ಕಲುಗಳು ಹಾಗೂ ರೈತಕೂಲಿಯಾಳುಗಳು ತುಂಬಾ ಕಷ್ಟಗಳಿಗೊಳಗಾಗುವರೆಂದೂ ತಿಳಿಸಿರುವರಾಗಿ ಗೊತ್ತಾಗಿದೆ.

ಶ್ರೀ ರಾಜಗೋಪಾಲಾಚಾರ್ಯರು ಶ್ರೀ ನಿಜಲಿಂಗಪ್ಪನವರ ಈ ಮನವಿಯನ್ನು ಕೇಳಿದ್ದು ಇಂತಹ ಕ್ರಮ ಕೈಕೊಳ್ಳಲು ಹೊರಟ ಭೂ ಒಡೆಯರ ಈ ಕಾರ್ಯಕ್ಕಾಗಿ ತನ್ನ ನಿಷೇಧವನ್ನು ತೋರ್ಪಡಿಸಿದರಲ್ಲದೆ ಆ ಧನಿಗಳು ಒಕ್ಕಲುಗಳನ್ನೆಬ್ಬಿಸಲು ಯಾ ಅವರ ಗೇಣಿಯ ಮೊಬಲಗನ್ನು ಏರಿಸಲು ಪ್ರಯತ್ನಿಸಿದ್ದಲ್ಲಿ ಅಂತಹ ಕಾರ್ಯಗಳನ್ನು ತಡೆಯಲು ಸರಕಾರವು ಯೋಗ್ಯ ಕ್ರಮ ಕೈಕೊಳ್ಳಲಿದೆಯಾಗಿ ಅವರು ತಿಳಿಸಿದರೆಂದು ವರದಿಯಾಗಿದೆ.

ಮಂಗಳೂರಿನ ಹೊಸ ಸ। ಬಿಷೊಪರು—ಮಂಗಳೂರಿನ ಘನ ಹೊಂದಿದ ಮೊ. ಬೆಸಿಲ್ ಎಸ್. ಸಿ. ಪೆರಿಸ್ ಅವರು ಇತ್ತೀಚೆಗೆ ಪೋಪ್ ಗುರುಗಳಿಂದ ಸಹಾಯಕ ಹಾಗೂ ಟಿಟ್ಯುಲರ್ ಬಿಷೊಪರಾಗಿ ನೇಮಕ ಹೊಂದಿದ್ದು ತಾ. 28ನೇ ಬೆಳಗ್ಗೆ ಅವರನ್ನು ಕೊಯಮುತ್ತೂರು, ಕಲ್ಲಿಕೋಟೆ, ತಿರುಚನಾಪಳ್ಳಿ, ಗುಂಟೂರು, ಮೈಸೂರು, ಪೂನಾ ಮೊದಲಾದ ಬಿಷೊಪರ ಸಮಕ್ಷಮದಲ್ಲಿ ಸಂಪ್ರೋಕ್ಷಿಸುವ ಸಮಾರಂಭವು ರೊಜಾರಿಯೊ ಇಗರ್ಜಿಯಲ್ಲಿ ಜರಗಿತು. ಸಂಜೆ ಹೊಸ ಬಿಷೊಪರನ್ನು ಮಿಲಾಗ್ರಿಸ್ ಇಗರ್ಜಿ ಮೈದಾನದಲ್ಲಿ ಸನ್ಮಾನಿಸಲಾಯಿತು.

'ಅರ್ಥಶಾಸ್ತ್ರ'ಕ್ಕೆ ಬಹುಮಾನ

ಉಡುಪಿಯ ಎಂ. ಜಿ ಎಂ ಕಾಲೇಜಿನ ಲೆಕ್ಚರರ್ ಶ್ರೀ. ಕು. ಶಿ. ಹರಿದಾಸ ಭಟ್ಟ, ಎಂ. ಎ ಅವರು ಬರೆದ 'ಅರ್ಥಶಾಸ್ತ್ರ' ಎಂಬ ಗ್ರಂಥಕ್ಕೆ ಧಾರವಾಡದ ಕರ್ನಾಟಕ ಶಿಕ್ಷಣ ಸಮಿತಿಯು ಈ ವರ್ಷದ ಸಾಹಿತ್ಯ ಪಾರಿತೋಷಕ ರೂ 100/- ದೊರೆತಿದೆ.

ಹುಬ್ಬಳ್ಳಿಯಲ್ಲಿ ಡಾ। ಮಾಧವ ಪೈಗಳಿಗೆ ಸತ್ಕಾರ—ಉಡುಪಿಯಲ್ಲಿ ಬರುವ ಜೂನಿನಲ್ಲಿ ಪ್ರಾರಂಭವಾಗಲಿರುವ ಕಸ್ತೂರಬಾ ಮೆಡಿಕಲ್ ಕಾಲೇಜಿನ ಕುರಿತು ಕರ್ನಾಟಕ ಯುನಿವರ್ಸಿಟಿಯವರೊಡನೆ ಮಾತನಾಡಲು ಪ್ರವಾಸ ಬೆಳೆಸಿದ ಡಾ। ಟಿ ಮಾಧವ ಪೈಗಳಿಗೆ ತಾ. 28ರಲ್ಲಿ ಹುಬ್ಬಳ್ಳಿಯಲ್ಲಿ ಸತ್ಕಾರ ಕೂಟವೊಂದನ್ನು ಏರ್ಪಡಿಸಲಾಗಿತ್ತು ಈ ಸಂದರ್ಭದಲ್ಲಿ ಡಾ। ಪೈಗಳು ಬ್ಯಾಂಕಿಂಗ್ ವ್ಯವಹಾರವನ್ನು ಹೆಚ್ಚಿಸಿದರೇನೇ ದೇಶದ ಆರ್ಥಿಕ ಸ್ಥಿತಿಯು ಸುಧಾರಿಸಲ್ಪಡುವುದೆಂದರು ಶ್ರೀ ಮೊಹರೆ ಹನುಮಂತರಾಯರು ಕೊನೆಯಲ್ಲಿ ಧನ್ಯವಾದಗಳನಿತ್ತರು.

ಕಟಪಾಡಿ— ಸ್ಥಳೀಯ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸೇವಾ ಸಮಿತಿಯ ವಾರ್ಷಿಕೋತ್ಸವವು ಸಮಿತಿಯ ದೇವತಾ ಮಂದಿರದಲ್ಲಿ ಇದೇ ತಾ. 23ರಲ್ಲಿ ಪ್ರಾರಂಭವಾಗಿ ತಾ. 29ರಲ್ಲಿ ಮಧ್ಯಾಹ್ನ 12 ಗಂಟೆಯಿಂದ ಮರುದಿನ ಪೂರ್ವಾಹ್ನ 9 ಗಂಟೆಯ ವರೆಗೆ ಜರಗುವ [illegible] ಶ್ರೀದೇವೀ ಸಪ್ತಾಹ ಮಹೋತ್ಸವದೊಂದಿಗೆ ಅಂತ್ಯವಾಗಲಿರುವುದು. ಈ ಮಹೋತ್ಸವ ಕಾಲದಲ್ಲಿ ಗುರುಸ್ಮಾರಕ ನಿಧಿಗೆ, ಬಡವರ ಔಷಧೋಪಚಾರ ನಿಧಿಗೆ ಮತ್ತು ವಿದ್ಯಾರ್ಥಿ ವೇತನದ ನಿಧಿಗೆ ಉದಾರ ಮಹನೀಯರಿಂದ ಕೊಡಲ್ಪಡುವ ಸಹಾಯಗಳನ್ನು ಉಪಕಾರ ಪೂರ್ವಕ ಸ್ವೀಕರಿಸಲ್ಪಡುವುದು

ಕಾರ್ಕಳ—ಇಲ್ಲಿಗೊಂದು ರೈಲ್ವೆ ಔಟ್ ಏಜನ್ಸಿಯು ಸಂಬಂಧಪಟ್ಟವರಿಂದ ಮಂಜೂರಾಗಿರುವುದಾಗಿ ತಿಳಿದುಬರುತ್ತದೆ.

ಸ್ವರ್ಗೀಯ ಪ್ರೇಮಚಂದ್ರರ ಧರ್ಮಪತ್ನಿ
ಶ್ರೀಮತಿ ಶಿವರಾಣಿ ದೇವಿಯರ
ಕಥಾಮಾಲಿಕೆಯ ಅನುವಾದ

ನಾರೀಹೃದಯವನ್ನು ಚಿತ್ರಿಸುವ
ಅತ್ಯುತ್ತಮ ಕತೆಗಳ ಸಂಗ್ರಹ

ಸ್ತ್ರೀಯರಲ್ಲಿಯೂ ಸಾಹಸ, ಸ್ನೇಹ, ವೀರಭಕ್ತಿ, ತ್ಯಾಗ, ಬಲಿದಾನಾದಿ ಅಮೂಲ್ಯ ಗುಣಗಳೂ ಇದ್ದೇ ಇವೆ ಎಂಬುದನ್ನು ಚೆನ್ನಾಗಿ ವಿವರಿಸಿರುವ ನವೀನ ಕತೆಗಳು.

ಬೆಲೆ: ರೂ 1-8-0.

ನವಭಾರತಪುಸ್ತಕಭಂಡಾರ, ಉಡುಪಿ

[೫ನೇ ಪುಟದಿಂದ ಮುಂದುವರಿದುದು]

ರ್ಯವನ್ನೂ ನೆರವೇರಿಸಿದರು. ಎಲ್ಲಕ್ಕೂ ಆಶ್ಚರ್ಯದ ಸಂಗತಿಯೆಂದರೆ, ಅನಾಗರಿಕರೆಂದೆನ್ನಿಸಿಕೊಳ್ಳುವ ಗಡಿ ಪ್ರದೇಶದ ಜನರು ಪ್ರಧಾನಿಗಳನ್ನು ಸ್ವಾಗತಿಸಿದ ರೀತಿಯಾಗಿದೆ. ಆ ಪ್ರೇಮ, ಸೌಜನ್ಯಗಳನ್ನು ಕಂಡಾಗ, ಯಾರ ಮನಸ್ಸು ಆನಂದ ತುಂದಿಲವಾಗಲಿಕ್ಕಿಲ್ಲ? ನರ್ತನ ವಾದನಗಳಿಂದ ನೆಹರೂರನ್ನು ಇವರು ಸ್ವಾಗತಿಸಿದ್ದಲ್ಲದೆ, ಬಗೆಬಗೆಯ ಕಾಣಿಕೆಗಳನ್ನು ಕೊಟ್ಟು ಸನ್ಮಾನಿಸಿದರು. ಒಂದೆಡೆಯಲ್ಲಂತೂ ಜನ ತಮ್ಮ ಭಾಷೆಯಲ್ಲಿ ಜವಾಹರರ ಮೇಲೊಂದು ಕವನವನ್ನೇ ಈ ರೀತಿ ಕಟ್ಟಿದ್ದರು.

ವಿಶಾಲ ಗಗನದಿ ರವಿಚಂದ್ರ ಮರು।
ಪ್ರಶಾಂತ ತೇಜದಿ ಬೆಳಗುವಪೋಲು:|
ವಿಶಾಲ ಮಾನವ ಕೋಟಿಯ ಮಧ್ಯದಿ|
ಜವಹರ ಪ್ರಭೆಯದು ತುಂಬಿಹುದು"||

ಈ ಗುಡ್ಡಗಾಡು ಜನರು ಮೇಲಿನಂತೆ ನೆಹರೂರ ಗುಣಗಾನ ಮಾಡುತ್ತಾ "ಬೋಬೋ" ನೃತ್ಯ ಮಾಡಿದಾಗ, ನೆಹರೂರಿಗೂ ಸ್ಫೂರ್ತಿ ಬಂದು ತಾವೂ ಆ ಕುಣಿತವನ್ನು ಅನುಕರಿಸಲು ಪ್ರಯತ್ನಿಸಿದರು. ಇದನ್ನು ಕಂಡ ಜನತೆ ಹರ್ಷಾತಿರೇಕದಿಂದ, ಹುಚ್ಚೆದ್ದು, ಕುಣಿದಾಡಿತು.

ಕಾಸರಗೋಡು

ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 243/1952

ದಿ. ಭಾರತ್ ಡೈಲಿ ಕಲೆಕ್ಷನ್ ಚಿಟ್ಸ್ ಫಂಡ್ ಇದರ ಮೆನೇಜಿಂಗ್ ಪಾರ್ಟನರ್, M. ಪದ್ಮನಾಭ್ —ವಾದಿ.

ಮತ್ತು

1. ಬಿ. ರಾಮಣ್ಣ ಆಚಾರಿ, 2. ಕೆ. ಶಾರದಾಬಾಯಿ, 3. ಜನಾರ್ಧನ ಆಚಾರಿ —ಪ್ರತಿವಾದಿಗಳು.

ಇವರೊಳಗೆ-

ಸದ್ರಿ ವ್ಯಾಜ್ಯದ ವಾದಿಯ ಕಡೆ ನೋಟೀಸು.

ಪ್ರತಿವಾದಿಗಳು ವಾದಿಗೆ ಬರೆಕೊಟ್ಟ ದಾವಾ ಪ್ರೋನೋಟು ಪ್ರಕಾರ ಬರತಕ್ಕ ಅಸಲು ಬಡ್ಡಿ ಸಹ ರೂಪಾಯಿ 87-1-6ನ್ನು ಬರ ಮಾಡಿಕೊಳ್ಳುವರೆ ದಾಖಲು ಮಾಡಿದ ಮೇಲ್ಕಾಣಿಸಿದ ವ್ಯಾಜ್ಯವು ತಾರೀಕು 5-11-1952ಕ್ಕೆ ಇಟ್ಟಿರುತ್ತದೆಂಬ ಸಂಗತಿ ಈ ಮೂಲಕ ತಿಳಿಸಲಾಗಿಯದೆ.

B. Padmanab,
Advocate for Plaintiff.
Kasaragod, 25-10 1952

ಲಕ್ಷ್ಮೀ
ಸಂತಾಲ್ ಮಾತ್ರೆ

ಇದರ ಉಪಯೋಗದಿಂದ ಹಳೆಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರದ ಕಟ್ಟು, ಮೂತ್ರದೊಡನೆ ಯಾ ಮುಂದಾಗಿ ಬೀಳುವುದು, ಆಸನದ ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವದು, ತೊಡೆ ಸಂದಿನಲ್ಲಿ ಗರಳೆ ಬರುವದು. ಕಾಲುಗಂಟು ವೇದನೆ, ಕಣ್ಣಿನಲ್ಲಿ ಕೀವು ಬರುವದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ, ಸ್ತ್ರೀಯರ ಬಿಳೆ ಸೆರಗು ಇವೆಲ್ಲಾ ಖಾತ್ರಿಯಾಗಿ ಗುಣ ಹೊಂದುವವು. ಇತರರು ಈಗಿನ ಉಷ್ಣಕಾಲದಲ್ಲಿ ಗರ್ಮಿ ಕಂಡುಬಂದರೆ ರಾತ್ರೆ ಮಲಗುವಾಗ್ಯೆ ಒಂದು ಮಾತ್ರೆ ಸೇವಿಸಿ ಹಾಲು ಕುಡಿದರೆ ಸುಖವಾಗಿ ನಿದ್ರೆ ಬಂದು ಸುಖವಿರೇಚನೆಯಾಗಿ ದೇಹದ ಸುಸ್ತು ಹೋಗುವದು.

ಶೀಸೆ 1ಕ್ಕೆ ರೂ. 2-0-0

ಏಜಂಟ್ಸ್:
ಷಾ ಕಂಪೆನಿ, ಮಂಗಳೂರು.

ಉಡುಪಿ

ಉಪನ್ಯಾಸ -- ಶ್ರೀ ರಾಮಕೃಷ್ಣ ಮಿಶನಿನ ಹಿರಿಯ ಸ್ವಾಮಿಗಳೂ ನ್ಯೂಯಾರ್ಕ್ ನಗರದಲ್ಲಿ ಇದೇ ಮಿಶನಿನವರು ನಡೆಸುತ್ತಿರುವ ವೇದಾಂತ ಕೇಂದ್ರದ ಹಿಂದಿನ ಸಂಚಾಲಕರೂ ಆದ ಸ್ವಾಮಿ ರಾಘವಾನಂದಜೀಯವರು ತಾ. 22ರಂದು ಉಡುಪಿಯ ಸಂಸ್ಕೃತ ಕಾಲೇಜಿನಲ್ಲೂ, ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನಲ್ಲೂ, ಮುಳಿಯಂದ ನಿವಾಸದ ಮಹಾಜನ ಸಭೆಯಲ್ಲೂ ಉಪನ್ಯಾಸಗಳನ್ನಿತ್ತರು.

ಗೋವಧೆ ನಿಷೇಧ ಚಳವಳಿ— ಆರ್. ಎಸ್. ಎಸ್. ಸಂಘದ ನೇತೃತ್ವದಲ್ಲಿ ಗೋವಧೆ ನಿಷೇಧ ಚಳವಳಿ ಸಭೆಯು ಇದೇ ತಾ. 26ರಲ್ಲು ಸಂಜೆ ರಥಬೀದಿಯಲ್ಲಿ ಶ್ರೀ ಶೀರೂರು ಮಠದ ಕಿರಿಯ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಪರ್ಯಾಯ ಪೇಜಾವರ ಸ್ವಾಮಿಗಳವರು ಗೋ ಮಹಾತ್ಮೆಯನ್ನು ವರ್ಣಿಸಿ ಜನಜಾಗ್ರತಿಯನ್ನುಂಟು ಮಾಡಿದರು. ಅಧ್ಯಕ್ಷರ ಭಾಷಣವಾದನಂತರ ಗೋವಧೆಯನ್ನು ಕಾನೂನು ಮೂಲಕ ನಿಲ್ಲಿಸಬೇಕೆಂದು ಸರಕಾರವನ್ನು ವಿನಂತಿಸುವ ನಿರ್ಣಯವಾಯಿತು. ರಾಷ್ಟ್ರಾಧ್ಯಕ್ಷರಿಗೆ ಒಪ್ಪಿಸುವ ಮನವಿಗೇ ಜನತೆಯ ಸಹಿಗಳನ್ನು ಸಂಗ್ರಹಿಸುವ ಪ್ರಾರಂಭವಾಗಿದೆಯೆಂದು ತಿಳಿದು ಬರುತ್ತದೆ.

ಸೆಂಟ್ರಲ್ ವಾರ್ಡಿನ ಉಪ ಚುನಾವಣೆಗೆ— ಕಾಂಗ್ರೆಸ್ ಪಕ್ಷದಿಂದ ಶ್ರೀ ಹಿ. ವಿ. ಆಚಾರ್, ವಕೀಲ್ ಅವರೂ, ಸ್ವತಂತ್ರರಾಗಿ ಶ್ರೀಗಳಾದ [illegible]. ಟಿ. ಕಾಮತ್ ಮತ್ತು ಎ. ನಾರಾಯಣ ನಾಯ್ಕರು ನೊಮಿನೇಶನುಗಳನ್ನು ಸಲ್ಲಿಸಿರುವರು.

ಸಾಹಿತ್ಯ ಉತ್ಸವ— ಸ್ಥಳೀಯ ಕಲಾವೃಂದದ ಲಕ್ಷದೀಪ ಸಾಹಿತ್ಯೋತ್ಸವವು ನವಂಬರ ತಾ 1 ಮತ್ತು [illegible]ರಲ್ಲು ಜರಗಲಿರುವುದು. ಸಾಹಿತ್ಯೋತ್ಸವದ ಅಂಗವಾಗಿ ಚಿತ್ರಕಲಾ ಸ್ಪರ್ಧೆಯೊಂದು ಏರ್ಪಡಿಸಲಾಗಿದೆ. ಉತ್ತಮ ಚಿತ್ರಗಳಿಗೆ ಪ್ರಥಮ ಹಾಗೂ ದ್ವಿತೀಯ ಬಹುಮಾನಗಳು ಕೊಡಲಾಗುವುದು. ಉಮೇದ್ವಾರರು ಈ ತಿಂಗಳಾಖೈರೊಳಗೆ ವೃಂದದ ಕಾರ್ಯದರ್ಶಿಯವರಿಗೆ ಚಿತ್ರಗಳನ್ನು ಕಳುಹಿಸ ಬೇಕೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಶ್ರೀ ನಿಜಲಿಂಗಪ್ಪನವರ ಆಗಮನ— ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ತಾ 23ರಲ್ಲು ಉಡುಪಿಗೆ ಆಗಮಿಸಿ ಅಪರಾಹ್ನ ಎರಡುಗಂಟೆಗೆ ಸ್ಥಳೀಯ ರಾಮಕೃಷ್ಣ ಥಿಯೇಟರಿನಲ್ಲಿ ಉಡುಪಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡುತ್ತಾ ಕಾಂಗ್ರೆಸನ್ನು ಬಲಪಡಿಸಲು ಸಭಿಕರ ಸಲಹೆಗಳನ್ನು ಬಯಸಿದರು. ಶ್ರೀಗಳಾದ ಯು. ನಾಗಪ್ಪ ಕಾಮತ್ ಮತ್ತು ಎ. ಜೆ. ಅಲ್ಸೆಯವರು ತಮ್ಮ ಅಭಿಪ್ರಾಯಗಳನ್ನಿತ್ತರು. ಬಳಿಕ ಶ್ರೀ ನಿಜಲಿಂಗಪ್ಪನವರು ಮಾತನಾಡುತ್ತಾ ಈ ಜಿಲ್ಲೆಯಲ್ಲಿ ಈಚೆಗೆ ನಡೆದ ಮುನಿಸಿಪಲ್ ಚುನಾವಣೆಗಳಿಗೆ ಕಾಂಗ್ರೆಸಿಗೆ ಕಡಿಮೆ ಸ್ಥಾನಗಳು ದೊರೆತುವೆಂದು ಬೇಸರಿಸುವ ಅಗತ್ಯವಿಲ್ಲವೆಂದೂ ಕಾಂಗ್ರೆಸಿನ ಅಪಕೀರ್ತಿಗೆ ಯಾವ್ಯಾವ ಶಕ್ತಿಗಳು ತಮ್ಮ ಪಾತ್ರವನ್ನು ವಹಿಸಿದುವೆಂಬುದನ್ನೂ ವಿವರಿಸಿ ಮತ ಸಂಸ್ಥೆಗಳು ರಾಜಕೀಯಕ್ಕೆ ಕೈಹಾಕದಿರುವುದೊಳಿತೆಂದು ಸೂಚಿಸಿ ಕಾಂಗ್ರೆಸಿನ ಬೆಳವಣಿಗೆಗಾಗಿ ಎಲ್ಲರೂ ಫಲಾಪೇಕ್ಷೆಯಿಲ್ಲದೆ ದುಡಿಯಬೇಕೆಂದರು. ಶ್ರೀ ಆರ್. ಆರ್. ಕುಂಜೂರರು ವಂದನೆಗಳನ್ನರ್ಪಿಸಿದರು.

ಕ್ರಿಕೇಟ್ ಪಂದ್ಯಾಟ— ಸ್ಥಳೀಯ ಕ್ರಿಶ್ಚನ್ ಹೈಸ್ಕೂಲ್ ಮತ್ತು ಕುಂದಾಪುರ ಬೋರ್ಡ್ ಹೈಸ್ಕೂಲ್ ಗಳೊಳಗೆ ನಡೆದ ಸೀನಿಯರ್ ಕ್ರಿಕೇಟ್ ಫೈನಲ್ಸನಲ್ಲಿ ಕ್ರಿಶ್ಚನ್ ಹೈಸ್ಕೂಲಿನವರು 9ಅಧಿಕ ರನ್ಸ್‌ಗಳಿಂದ ವಿಜಯಿಗಳಾದರು. ಪಂದ್ಯಾಟವು ಗಾಂಧಿ ಮೈದಾನದಲ್ಲಿ ತಾ. 24. ಮತ್ತು 25ರಲ್ಲು ಜರಗಿತು.

ಮದ್ರಾಸು ಗವರ್ನರರು— ನವಂಬರ ತಿಂಗಳ ಕೊನೆಯ ವಾರದಲ್ಲಿ ದ. ಕ. ಜಿಲ್ಲೆಯ ಪ್ರವಾಸ ಕೈಕೊಂಡು ಉಡುಪಿಗೂ ಬರಲಿರುವರೆಂದು ಗೊತ್ತಾಗಿದೆ.

ಭಾಷಣ— ಅಖಿಲ ಭಾರತೀಯ ರಾಮರಾಜ್ಯ ಪರಿಷತ್ತಿನ ಅಧ್ಯಕ್ಷೆ ರಾಜಕುಮಾರಿ ಪ್ರಭಾವತಿ ರಾಜೆ ಅವರು ತಾ 28 ರಲ್ಲು ಉಡುಪಿಗೆ ಆಗಮಿಸಿದಾಗ ಅವರಿಗೆ ಪರ್ಯಾಯ ಪೇಜಾವರ ಮಠದ ಕಡೆಯಿಂದ ಸ್ವಾಗತವೀಯಲಾಯಿತು. ಸಂಜೆ ಶ್ರೀಮತಿಯವರು, ಶ್ರೀ ಕೃಷ್ಣ ಮಠದ ವಸಂತ ಮಹಲಿನಲ್ಲಿ ಭಾಷಣವಿತ್ತರು.

ನಮಗೆ ಬಂದ ಪತ್ರಗಳ ಸಾರ— ಉಡುಪಿಯಿಂದ ಭಟ್ಕಳಕ್ಕೆ ಹೋಗುವ ಪೆಸೆಂಜರರು ಉಡುಪಿಯಲ್ಲಿ 1½ ಗಂಟೆಯ ಕುಂದಾಪುರ ಲೈನಿನ ಸರ್ವಿಸಿನಲ್ಲಿ ಕುಳಿತರೆ ಉಪ್ಪುಂದದಲ್ಲೇ ರಾತ್ರಿ ನಿಲ್ಲಬೇಕಾಗುತ್ತದೆ. ಅಲ್ಲಿ ಪ್ರಯಾಣಿಕರಿಗೆ ಸಾಕಷ್ಟು ಸೌಕರ್ಯಗಳಿರುವುದಿಲ್ಲ ಆದುದರಿಂದ ಗಂಗೊಳ್ಳಿಯಿಂದ 5½ ಮತ್ತು 6½ ಸರ್ವಿಸಿಗೆ ಸರಿಯಾಗಿ ಬೈಂದೂರಿನಿಂದ ಭಟ್ಕಳಕ್ಕೆ ಒಂದು ಸರ್ವಿಸು ಇರುತ್ತಿದ್ದರೆ ಪೆಸೆಂಜರರಿಗೆ ಬಹಳ ಉಪಕಾರವಾಗುತ್ತಿತ್ತು ಎಂದು ನೊಂದ ಪೆಸೆಂಜರರೊಬ್ಬರು ಬರೆಯುತ್ತಾರೆ.

ಇದು ಕಾಂಗ್ರೆಸಿನ ಸೋಲೇ— ಎಂಬ ತಲೆ ಬರಹದಿಂದ ಸಾಂತೂರಿನ ಶ್ರೀ ಬಿ. ಜಿ. ಸೆಟ್ಟರು ಸುದೀರ್ಘ ಲೇಖನವೊಂದರಲ್ಲಿ 'ಸೇವಾದಲದ ಸಂಘಟನೆ'ಯ ಆವಶ್ಯಕತೆಯನ್ನು ಎತ್ತಿ ತೋರಿಸಿದ್ದಾರೆ.

ರಾಷ್ಟ್ರೀಯ ಗೋಸಪ್ತಾಹ ರಾಜಕು
ಮಾರಿ ರಾಜೆಯವರ ಭಾಷಣ

ತಾ. 26ರಂದು ಮಂಗಳೂರು ಕೇಂ
ಮೈದಾನಿನಲ್ಲಿ ಸೇರಿದ ಸಾರ್ವಜನಿಕ ಸಭೆ
ಲ್ಲಿ ರಾಷ್ಟ್ರೀಯ ಗೋಸಪ್ತಾಹದ ಉದ್ಘಾಟ
ಯನ್ನು ಮಾಡುತ್ತಾ ಅಖಿಲಭಾರತ ರಾ
ರಾಜ್ಯ ಪರಿಷತ್ತಿನ ಅಧ್ಯಕ್ಷೆ ರಾಜಕುಮಾ
ಶ್ರೀಮತಿ ಪ್ರಭಾವತಿ ರಾಜೆಯವರು ತ
ಭಾಷಣದಲ್ಲಿ ಸ್ವಾತಂತ್ರ್ಯ ಬಂದೊಡನೆ ಗೋ
ಹತ್ಯೆಯ ಮೇಲೆ ನಿರ್ಬಂಧ ಬರಬಹುದೆಂ
ನಾವು ನಿರೀಕ್ಷಿಸಿದ್ದೆವು ಆದರೆ ಇಂದು ಐ
ವರುಷಗಳು ಸಂದುಹೋದರೂ ಗೋ
ಯು ನಿರಾತಂಕವಾಗಿ ನಡೆಯುತ್ತಿದೆ. ದ
ದ ಸಂಪತ್ತು ಗೋ ಸಂಪತ್ತಿನ ರಕ್ಷಣೆಯಿಂ
ಲೇ ಹೆಚ್ಚುವುದು. ಕೇವಲ ಚರ್ಮ ವ್ಯಾ
ರಕ್ಕಾಗಿ ಮುದಿ ದನಗಳನ್ನು ಕೊಲ್ಲುವು
ಲ್ಲಿ ಅರ್ಥವೇನು? ಗೋವು ಹಿಂದುಗಳ ಶ್ರ
ವಿಷಯವೂ ಆಗಿದೆ. ಭಾವನಾತ್ಮಕವಾಗಿಯ
ಅದರ ರಕ್ಷಣೆ ಆವಶ್ಯವಾಗಬೇಕು.

ಕಾಂಗ್ರೆಸು ಜನತೆಯ ಈ ಭಾವನೆ
ನ್ನು ದುರ್ಲಕ್ಷಿಸುತ್ತದೆ, ಕೇಂದ್ರ ಹಾ
ಪ್ರಾಂತೀಯ ಸರಕಾರಗಳು ಕೂಡಾ ಇದ
ದುರ್ಲಕ್ಷಿಸುತ್ತಿವೆ. ಆಧುನಿಕ ವೈಜ್ಞಾನಿಕ
ತಿಯಲ್ಲೂ ಗೋವಿನ ಮಹತ್ವ ವಿಶೇಷ
ಈಗ ಪ್ರಚಲಿತವಾಗಿರುವ "ಪೆನ್‌ಸಿಲಿ
ಔಷಧವು ಗೋವುಗಳ ಸೆಗಣಿಯಿಂ
ತಯಾರಿಸಿದ್ದಾಗುತ್ತದೆ. ಆದರೂ ಇನ್ನೂ
ವ್ಯ ಸರಕಾರವು ಈ ಬಗ್ಗೆ ದುರ್ಲಕ್ಷಿಸ
ರುವುದು 'ವಿಷಾದಕರ' ಎಂದಿತ್ಯಾದಿಯ
ಹೇಳಿದರು. ಸಭಾಧ್ಯಕ್ಷತೆಯನ್ನು
ಸಿದ ಸ್ಥಳೀಯ ರಾಮಕೃಷ್ಣಾಶ್ರ
ಶ್ರೀ ಸ್ವಾಮಿ ಆದಿ ದೇವಾನಂದರು ಗೋ
ಧೆಯನ್ನು ನಿಲ್ಲಿಸುವ ಕುರಿತು ಮಾತ
ದ ಬಳಿಕ ಗೋವಧೆಯನ್ನು ನಿಲ್ಲಿಸ ಬೇ
ದೂ ಅದಕ್ಕಾಗಿ ರಾ. ಸ್ವ. ಸಂಘವು ಕೈ
ಡ ಆಂದೋಲನಕ್ಕೆ ಬೆಂಬಲಕೊಡಬೇ
ಕೇಳಿಕೊಳ್ಳುವ ನಿರ್ಣಯ ಪಾಸಾಯಿತು.

ಕಾಂಗ್ರೆಸ್ ಪ್ರತಿನಿಧಿಗಳ ಚುನಾ
ವಣಾ ತಾರೀಕಿನ ತಿದ್ದುಪಡಿ

ಈ ಚುನಾವಣೆಯ ಸಂಬಂಧವಾದ
ತಿನಲ್ಲಿ ಈ ಕೆಳಗಿನ ಬದಲಾವಣೆ ಮಾ
ಗಿದೆ ನೋಮಿನೇಶನುಗಳನ್ನು ಜಿಲ್ಲಾ
ಗ್ರೆಸ್ ಆಫೀಸಿನಲ್ಲಿ ನವಂಬರ ತಾ. 1 ವ
2 ರಲ್ಲು ಬೆಳಿಗ್ಗೆ 10 ಗಂಟೆಯಿಂದ ಅ
ಹ್ನ 4ರ ತನಕ ಸ್ವೀಕರಿಸಲಾಗುವುದು.
ರಲ್ಲು ಬೆಳಿಗ್ಗೆ 10 ಗಂಟೆಗೆ ನೊಮಿನೇ
ಗಳ ಪರಿಶೀಲನೆ ನಡೆಯುವುದು. ನಿರ
ವಾದ ನಾಮಪತ್ರಗಳ ಕುರಿತು ಜಿಲ್ಲಾ
ನಾವಣಾ ನ್ಯಾಯಮಂಡಲಕ್ಕೆ ಅಪೀ
ತಾ 4ನೆ ಮಂಗಳವಾರ ಸಂಜೆ ಆರು
ಯೊಳಗೆ ಮಾಡತಕ್ಕದ್ದು. ತಾ. 5-11
ಬುಧವಾರ ಅಪರಾಹ್ನ 4 ಗಂಟೆಯೊಳ
ನ್ಯಾಯಮಂಡಲವು ತೀರ್ಮಾನವೀಯು
ಎಂದು ದ. ಕ. ಜಿಲ್ಲಾ ಕಾಂಗ್ರೆಸ್ ಕಮಿ
ಪ್ರ. ಕಾರ್ಯದರ್ಶಿಗಳು ತಿಳಿಸುತ್ತಾರೆ.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ,
ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು,
ಯಾವಾಗಲೂ ಸಿದ್ಧವಿವೆ.
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.
ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.
ಫೋನು ನಂಬ್ರ 66

ಲಕ್ಷದಿಪೋತ್ಸವ ವರ್ಷಕ್ಕೊಮ್ಮೆ ಆದರೆ ಶ್ರೀ ಭಗವಾನನ ಭಕ್ತೋದ್ಧಾರದ ಅವತಾರ ಮಾತ್ರ ಯುಗಕ್ಕೊಮ್ಮೆ. ಇಂತಹ ಯುಗ ಯುಗಾಂತರಗಳ ಪರಮಾತ್ಮನ ಹತ್ತವತಾರಗಳನ್ನು ಅದ್ಭುತವಾಗಿ ತೋರಿಸುವ ಈ ಚಿತ್ರ ಇಂದಿನವರ ಹೆಮ್ಮೆ
ಶ್ರೀ ದಶಾವತಾರ ಕೀರ್ತಿ
[ಹಿಂದಿ ಚಿತ್ರ]
— ತಾ. 30 - 10 - 52 ರಿಂದ —
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಅಮೃತಾಂಜನ
ತಲೆವೇದನೆ, ಶಿರೋವೇದನೆ, ಉಳು
ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ
ನೋವು, ಗಾಯಗಳು, ಬಾತುಕೊಳ್ಳು
ಚೇಳವಿಷ ಮುಂತಾದವು, ಪಕ್ಷವಾತ, ಕ
ಮೊದಲಾದ ಎಲ್ಲಾ ರೋಗಗಳಿಗೂ ಸಿದ



ಸಾಳ
ಮ
ನವ
ಸಿಕ.

ಅಮೃತಾಂಜನ ಲಿಮಿಟೆ
ಮದರಾಸು, ಬೊಂಬಾಯಿ ಮತ್ತು

ಮಂಗಳೂರು

ರಾಷ್ಟ್ರೀಯ ಗೋಸಪ್ತಾಹವು— ಮಂಗಳೂರಲ್ಲಿ ತಾ 26ರಲ್ಲು ರಾಜಕುಮಾರಿ ಶ್ರೀಮತಿ ಪ್ರಭಾವತೀ ರಾಜೆ(ಅಖಿಲಭಾರತೀಯ ರಾಮರಾಜ್ಯ ಪರಿಷತ್ತಿನ ಅಧ್ಯಕ್ಷೆ) ಅವರ ನೇತೃತ್ವದಲ್ಲಿ ಶ್ರೀ ಸ್ವಾಮಿ ಆದಿದೇವಾನಂದಜೀ (ರಾಮಕೃಷ್ಣ ಆಶ್ರಮದ ಅಧ್ಯಕ್ಷ) ಅವರ ಸಭಾಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಆದಿನ ಬೆಳಗ್ಗೆ ಗೋವುಗಳ ಮೆರವಣಿಗೆಯಾದುದಲ್ಲದೆ ಸಂಜೆ ಕೇಂದ್ರ ಮೈದಾನಿನಲ್ಲಿ ಸಾರ್ವಜನಿಕ ಸಭೆ ಕೂಡಾ ಜರಗಿತು,

ನಿಧನ- ಮದ್ರಾಸು ಪ್ರೆಸಿಡೆನ್ಸಿ ಕಾಲೇಜಿನ ನಿವೃತ್ತ ಕನ್ನಡ ಪಂಡಿತರಾದ ಶ್ರೀ ಸಾಬಾಜಿ ಶ್ರೀನಿವಾಸಾಚಾರ್ಯರು ಇದೇ ತಾ 21ರಲ್ಲು ಬೆಳಗಿನ ಜಾವದಲ್ಲಿ ವಿಧಿವಶರಾದರು. ಮೃತರ ಆತ್ಮಕ್ಕೆ ಚಿರಶಾಂತಿಯಿರಲಿ.

ಶ್ರೀ ನಿಜಲಿಂಗಪ್ಪನವರು- ಕೆ. ಪಿ. ಸಿ. ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ದ. ಕ. ಜಿಲ್ಲಾ ಪ್ರವಾಸವನ್ನು ಕೈಕೊಂಡು ಇದೇ ತಾ 23ರಲ್ಲು ಸಂಜೆಗೆ ಮಂಗಳೂರಿಗೆ ಬಂದು ಅಂದೇ ಸಂಜೆ ಕೇಂದ್ರಮೈದಾನವಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡುತ್ತ ಕಾಂಗ್ರೆಸಿನೊಳಗಿದ್ದು ಕಾಂಗ್ರೆಸ್ಸಿಗೆ ದ್ರೋಹಬಗೆಯುವವರನ್ನು ಮರದಲ್ಲೆ ಇದ್ದು ಮರವನ್ನು ಕೊರೆಯುವ ಹುಳಕ್ಕೆಂದು ಖಂಡಿಸಿದರು. ಕಳೆದ ಮಹಾ ಚುನಾವಣೆಯಲ್ಲಿ 11 ಸ್ಥಾನಗಳಲ್ಲಿ 10 ಸ್ಥಾನ ಸಂಪಾದಿಸಿದ ಕಾಂಗ್ರೆಸು ಈ ಚುನಾವಣೆಯಲ್ಲೂ ಹೆಚ್ಚಿನ ಜಯ ಸಿಕ್ಕಬಹುದೆಂಬ ಮತ್ತು ಸಾರ್ವಜನಿಕ ಸಹಾಯ ಸಿಕ್ಕಬಹುದೆಂಬ ಇಲ್ಲಿಯ ಕಾಂಗ್ರೆಸಿಗರ ನಿರೀಕ್ಷೆ ಮೇರೆಗೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಚುನಾವಣೆಯಲ್ಲಿ ಸ್ಪರ್ಧಿಸಲು ಅಪ್ಪಣೆ ಕೊಟ್ಟಿತು; ಆದರೆ ಅನಂತರದ ಇಲ್ಲಿಯ ವಿದ್ಯಮಾನಗಳೂ, ಪತ್ರಿಕೆಗಳು ಕಾಂಗ್ರೆಸಿಗೆ ಸರಿಯಾದ ಬೆಂಬಲ ನೀಯದ್ದರಿಂದಲೂ ಚುನಾವಣೆಯ ಫಲವು ಕಾರ್ಯಕರ್ತರು ನೆನಸಿದಂತೆ ಆಗಲಿಲ್ಲ. ಒಂದು ಪಕ್ಷದ ಘನತೆಯು ಒಂದು ಚುನಾವಣೆಯ ಫಲದ ಮೇಲಿಲ್ಲವೆಂದೂ ಇದರಿಂದ ಕಾಂಗ್ರೆಸಿನ ನಿಸ್ಸೀಮ ಭಕ್ತರು ಪಾಠ ಕಲಿತು ಮುನ್ನಡೆಯಬೇಕೆಂದೂ, ಜನತೆಯೂ ಕೂಡಾ ವಿಮರ್ಶಾ ಬುದ್ಧಿಯಿಂದ ರಾಜಕೀಯ ಪಕ್ಷಗಳಿಗೆ ಬೆಂಬಲವೀಯಬೇಕೆಂಬುದನ್ನು ತಿಳಿಸಿ, ಕಾಂಗ್ರೆಸ್ ಪಕ್ಷವನ್ನೇ ಬಲಗೊಳಿಸುವುದು ಉತ್ತಮವೆಂದು ಹೇಳಿದರು. ಆ ದಿನದ ಸಭಾಧ್ಯಕ್ಷತೆಯನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಫ್. ಎಕ್ಸ್. ಡಿ. ಪಿಂಟೊ ಅವರು ವಹಿಸಿದ್ದರು. ಕಾರ್ಯದರ್ಶಿ ಬಿ. ಆರ್. ಕರ್ಕೇರರು ಧನ್ಯವಾದಗಳನ್ನರ್ಪಿಸಿದರು.

ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಶ್ರೀ ನಿಜಲಿಂಗಪ್ಪನವರು ಕಾಂಗ್ರೆಸನ್ನು ಬಲಗೊಳಿಸಲು ಸೂಚನೆಗಳನ್ನು ಅಪೇಕ್ಷಿಸಿದರು. ಶ್ರೀಗಳಾದ ಎನ್. ಎಸ್. ಕಿಲ್ಲೆ, ಕೆ. ಪದ್ಮನಾಭ ಶೆಟ್ಟಿ, ವಿಠಲದಾಸ ಸೆಟ್ಟಿ, ಎನ್. ಎನ್. ಸುವರ್ಣ, ನಾರಾಯಣ ಕಾಂಚನ, ಕೆ. ಎಸ್. ಹೆಗ್ಡೆ, ಬಿ. ದಾಮೋದರ ಬಾಳಿಗ, ಎ ಸಂಕರ ಆಳ್ವ, ಎಮ್. ಕೃಷ್ಣ ಸೆಟ್ಟಿ, ರಾಮ ಪ್ರೊತವಾಳ, ಬಿ. ಕೇಶವ ಬಾಳಿಗ ಮೊದಲಾದವರು ಜಿಲ್ಲಾ ಕಾಂಗ್ರೆಸಿನ ವಿಚಾರವನ್ನೂ ಜನತೆಯ ಅಭಿಪ್ರಾಯಗಳನ್ನೂ ಕಾರ್ಯಕರ್ತರ ಅಸಾಹಯಕ ಸ್ಥಿತಿಗತಿಗಳನ್ನೂ ತಿಳಿಸಿದರು. ಶ್ರೀ ನಿಜಲಿಂಗಪ್ಪನವರೂ ಶ್ರೀ ಹಳ್ಳಿಗೇರಿಯವರೂ ಮಾತನಾಡುತ್ತ ಕಾಂಗ್ರೆಸನ್ನು ಬೆಳೆಸುವಂತೆ ಪ್ರಯತ್ನಿಸಬೇಕೆಂದರು. ಜಿಲ್ಲಾ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿಗಳು ಧನ್ಯವಾದಗಳನ್ನರ್ಪಿಸಿದರು.

ನೋಟೀಸ್.

ತಾರೀಖು:—೨೭-೧೦-೫೨

(೧) ಗಿರಿಜಾ, ಕೋಂ. ಶಂಕರ್. ಜನ್ನಿಬೆ. ಸಾಕಿನ್ ಬದ್ದಿಯಾರ್.

(೨) ಸುಶೀಲಾ, ಕೋಂ. ಶಂಕರ್ ಪರಮೇಶ್ವರ ಭಟ್. ಹಂಕಲು. ಸಾಕಿನ್ ಬದ್ದಿಯಾರ್.

ಕೋಂ ನಾವು ಶಂಕರ್ ಪರಮೇಶ್ವರ ಸುಬ್ರಾಯ ಭಟ್. ಹಂಕಲು ಸಾಕಿನ್ ಶಿರಾಲಿ, ಫ್ರಾನ್ಸಿಸ್ ಬೇಂದ್ರೆ, ಪೇರೂ ಭಟ್ಕಳ. ಉ. ಕನ್ನಡ ಇವರಿಗೆ ಈ ನೋಟೀಸ್ ಮೂಲಕ ತಿಳಿಯಪಡಿಸುವದೇನಂದರೆ ನಮ್ಮ ಪೈಕಿ ಎರಡನೇಯವಳು ಒಂದನೇಯವಳ ಹೊಟ್ಟೆಯಲ್ಲಿ ಹುಟ್ಟಿದ ಮಗಳಾಗಿದ್ದು ನೀವು ಎರಡನೇಯವಳನ್ನು ಆಜಮಾಸ ೬.೭ ತಿಂಗಳಿಂದ ಲಗ್ನವಾಗಿ ಮನೆಗೆ ಕರಕೊಂಡು ಹೋದಿರಿ. ನಿಮ್ಮ ಮನೆಯ ರೀತಿ. ವ. ನಡಾವಳಿಗಳು ಯೋಗ್ಯ ತೋರದೇ ಇರುವದರಿಂದ ನಮ್ಮ ಪೈಕಿ ಎರಡನೇಯವಳು ನಿಮ್ಮ ಮನೆಯಲ್ಲಿ ಉಳಕೊಳ್ಳಲಿಕ್ಕೆ ಬೇಸರ ಪಟ್ಟದ್ದರಿಂದ ಒಂದನೇಯವಳು ಎರಡನೇಯವಳನ್ನು ನಿಮ್ಮ ಮನೆಯಿಂದ ತಾರೀಖು:—೨೫-೧೦-೫೨ನೇ ದಿನ ನಮ್ಮ ಉಭಯತರ ಸ್ವಸಂತೋಷದಿಂದ ಕರಕೊಂಡು ಬಂದಿರುತ್ತದ್ದು ನಾವು ಈಗ ನಮ್ಮ ವಾಸ್ತವ್ಯವಾದ ಬದ್ದಿಯಾರಿಕ್ಕೆ ಹೋಗುತ್ತೇವೆ. ನಮ್ಮ[illegible] ವಾಡಿಕೆಯಂತೇ ನಮ್ಮ ಪೈಕಿ ಎರಡನೇಯವಳು ನಿಮ್ಮನ್ನು ಸ್ವಂತ ಖುಶಿಯಿಂದ ಬಿಟ್ಟಿರುವುದರಿಂದ ಇದೇ ವಿವಾಹ ವಿಚ್ಛೇದನದ ನೋಟೀಸು ಕೊಟ್ಟಂತೆ ತಿಳಕೊಂಡು ನಿಮ್ಮ ಮನಸ್ಸಿನಂತೇ ನಡಕೊಳ್ಳುವಲ್ಲಿ ನಮ್ಮದೇನೂ ಆಕ್ಷೇಪವಿರುವದಿಲ್ಲಾ. ಹಾಗೂ ನಮ್ಮ ಪೈಕಿ ಎರಡನೇಯವಳು ತನ್ನ ಮನ ಬಂದಂತೇ ವರ್ತಿಸುವಲ್ಲಿ ಆ ಬಗ್ಗೆ ಯಾವದೇ ರೀತಿ ಆತಂಕ. ಯಾ, ಸರ್ಭಂಧಪಡಿಸುವರೇ ನಿಮಗೆ ಏನೂ ಹಕ್ಕು ಇರುವದಿಲ್ಲಾ. ನಮ್ಮ ಪೈಕಿ ಎರಡನೇಯವಳು ಸ್ವಂತ ಖುಶಿಯಿಂದ ನಮ್ಮ[illegible]ಯ ವಾಡಿಕೆಯಂತೇ ನಿಮ್ಮನ್ನು ಬಿಟ್ಟ ಎವದರಿಂದ ನಿಮ್ಮ ಆಸ್ತಿ ವ ಇನ್ವೆಸ್ಟ್‌ಮೆಂಟ್‌ಗಳಲ್ಲಿ ಪಾಲು ವಗೈರೆ ಕೇಳುವದಿಲ್ಲ. ಎರಡನೇಯವಳಿಗೆ ನಿಮ್ಮಿಂದ ಗರ್ಭ ವಗೈರೆ ಇರುವದಿಲ್ಲಾ. ಇದರಂತೇ ನಿಮ್ಮ [illegible]ಯನ್ನು ಜಾಹೀರ್ ಪಡಿಸ[illegible]ಯುವದು.

● ಈ. ಎ ಹೆ ಗುರ್ತು ಸಹ ಗಿರಿಜಮ್ಮನ ರುಜು.

● ಈ. ಎ. ಹೆ. ಗುರ್ತು ಸಹ ಸುಶೀಲೆಯ ರುಜು.

ಸೈಂಟ್ ಎಲೋಸಿಯಸ್ ಕಾಲೇಜಿನ— 'ಫೈನ್ ಆರ್ಟ್ಸ್ ಸೊಸೈಟಿ'ಯ ಆಶ್ರಯದಲ್ಲಿ ಮೈಸೂರಿನ ಆಸ್ಥಾನ ವಿದ್ವಾನ್ ನಾರಾಯಣ ಸ್ವಾಮಿ ಅಯ್ಯಂಗಾರರ ಗೋಟುವಾದ್ಯ ವಾದನ ನಡೆಯಿತು. ಅವರ ಚಿರಂಜೀವಿ ಹನ್ನೆರಡು ವರ್ಷ ಪ್ರಾಯದ ರಾಜರತ್ನಂ, ಅವರ ಸೊಗಸಾದ ಹಾಡುಗಾರಿಕೆಯೂ ಮಾಧವ ಮೆನೊನ್ನರ ಮೃದಂಗವೂ ಹಿಮ್ಮೇಳವಾಗಿತ್ತು. ವಿದ್ಯಾರ್ಥಿಗಳಿಂದ ಸಂಗ್ರಹವಾದ ಸುಮಾರು ಎಪ್ಪತ್ತೈದು ರೂಪಾಯಿಗಳ ಪರ್ಸನ್ನು ಶ್ರೀ ಅಯ್ಯಂಗಾರರಿಗೆ ಅರ್ಪಿಸಲಾಯಿತು.

ಸುಳ್ಯ— ಮಲೆನಾಡಿನಲ್ಲಿ ಫಿರ್ಕಾಭಿವೃದ್ಧಿ ಕಾರ್ಯವು ಮದ್ರಾಸು ಸರಕಾರದ ಫಿರ್ಕಾಭಿವೃದ್ಧಿ ಯೋಜನೆಯ ಕೆಲಸವನ್ನೀಗ ಮಲೆನಾಡಿಗನ್ವಯಿಸಿದಂತೆ, ಸುಳ್ಯದಲ್ಲಿ ಅಭಿವೃದ್ಧಿ ಕೇಂದ್ರದ ಉದ್ಘಾಟನೆಯನ್ನು ತಾ. 21ರಲ್ಲು ಮಜೂರ ಮಂತ್ರಿ ಡಾ। ಯು ಕೃಷ್ಣರಾಯರು ನೆರವೇರಿಸಿದರು. ಮಂತ್ರಿಗಳನ್ನು ಶ್ರೀಗಳಾದ ಕೆ. ವೆಂಕಟರಮಣ ಗೌಡ, ಎಮ್. ಎಲ್. ಎ, ಮತ್ತು ಫಿರ್ಕಾಭಿವೃದ್ಧಿ ಆಫೀಸರ್, ಶ್ರೀ ಎಮ್. ಕೆ. ಬಾಬುಸೆಟ್ಟಿ ಮೊದಲಾದವರು ಸ್ವಾಗತಿಸಿದರು. ಬಳಿಕ ಮಂತ್ರಿಗಳು ರಾಷ್ಟ್ರಧ್ವಜವನ್ನೇರಿಸಿ, ಕೃಷಿ ಕೈಗಾರಿಕೆ ಪ್ರದರ್ಶನಕ್ಕೆ ಸಂದರ್ಶನವಿತ್ತರು ಬಳಿಕ, ಸಾರ್ವಜನಿಕ ರೇಡಿಯೋ ಉದ್ಘಾಟನೆ ನಡೆಸಿದರು, ಆ ಮೇಲೆ ಮಂತ್ರಿಗಳು ಸುಳ್ಯ ಶಾಲೆಯ ಆಟದ ಸ್ಥಳವನ್ನು ವಿಸ್ತರಿಸುವ ಕೆಲಸವನ್ನು ತಾವೇ ಹಾರೆಹಿಡಿದು ಪ್ರಾರಂಭಿಸಿದರು. ನಂತರ ಫಿರ್ಕಾಭಿವೃದ್ಧಿ ಯೋಜನೆ ಉದ್ಘಾಟನೆಯಾಯಿತು. ಶ್ರೀ ಕೆ. ಪುಟ್ಟಣ್ಣ ಗೌಡರು ಈ ಸಂದರ್ಭಕ್ಕಾಗಿಯೇ ರಚಿಸಿದ ಸ್ವಾಗತ ಪದಗಳನ್ನು ಹಾಡಿದರು. ಶ್ರೀ ಕೆ. ವಿ. ಗೌಡರು ಮಲೆನಾಡಿನ ಕೊರತೆಗಳನ್ನೊಳಗೊಂಡ ಮನವಿಯನ್ನು ಮಂತ್ರಿಗಳಿಗೆ ಒಪ್ಪಿಸಿದರು. ಶ್ರೀ ಎಮ್. ಕೆ. ಬಾಬು ಸೆಟ್ಟಿಯು ಫಿರ್ಕಾಭಿವೃದ್ಧಿ ಕಾರ್ಯಕ್ರಮಗಳನ್ನು ವಿವರಿಸಿದರು, ಮಂತ್ರಿಗಳು ತಮ್ಮ ಭಾಷಣದಲ್ಲಿ ಮಲೆನಾಡಿನ ಅಭಿವೃದ್ಧಿಗಾಗಿ ಸರಕಾರವು ಪರ್ಯಾಲೋಚಿಸುತ್ತಿದೆಯೆಂದೂ ಈ ಫಿರ್ಕಾದಲ್ಲಿ ಸಾರಿಗೆಗಾಗಿ 50,000 ವೆಚ್ಚಮಾಡಲು ಮಂಜೂರಾಗಿದೆಯೆಂದೂ ಹೇಳಿದರು.

ಆಮುರ ಮುಡ್ನೂರು— ಈ ಗ್ರಾಮದ ಹಾಗೂ ನೆರೆ ಗ್ರಾಮಗಳ ಕೇಂದ್ರ ಸ್ಥಳವಾದ ಕುಕ್ಕುಜ್ಜೆ ಅಡ್ಯದಲ್ಲಿ ಗ್ರಾಮಸ್ಥರು ಸೇರಿ ಸಾಧಾರಣ ಹತ್ತು ಸಾವಿರ ರೂಪಾಯಿ ಖರ್ಚು ಮಾಡಿ ಕಟ್ಟಿಸಿ ಜಿಲ್ಲಾ ಬೋರ್ಡಿಗೆ ದಾನವಿತ್ತ ನೂತನ ಕಟ್ಟಡದಲ್ಲಿ ಎಲಿಮೆಂಟರಿ ಶಾಲೆಯನ್ನು ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ನಾಂಜಯ್ಯ ಹೆಗ್ಡೆಯವರು ಇದೇ ತಾ 22ರಲ್ಲು ಉದ್ಘಾಟಿಸಿದರು, ಶ್ರೀ ಕೆ. ವಿ. ಗೌಡ, ಎಮ್. ಎಲ್. ಎ. ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಊರವರ ಉದಾರತೆಯನ್ನು ಪ್ರಶಂಸಿಸುತ್ತಾ ಈ ಶಾಲೆಯು ಬೇಗನೆ ಹಾಯರ್ ಎಲಿಮೆಂಟರಿ ಶಾಲೆಯಾಗಲು ಊರವರು ನೆರವಾದರೆ ಸಾಧ್ಯವಿದೆಯೆಂದು ಶ್ರೀ ಹೆಗ್ಡೆಯವರು ತಮ್ಮ ಭಾಷಣದಲ್ಲಿ ಹೇಳಿದರು. ಸಭಾಧ್ಯಕ್ಷರು ತಮ್ಮ [illegible]ಯ ಭಾಷಣದಲ್ಲಿ ಜಿಲ್ಲಾ ಬೋರ್ಡಿನವರ [illegible]ಯನ್ನು ಕರೆಗ[illegible] ಅವರನ್ನು ಅಭಿನಂದಿಸಿದರು.

ಕಲ್ಯಾಣಪುರ- ಸ್ಥಳೀಯ ಮಿಲಾಗ್ರಿಸ್ ಹೈಸ್ಕೂಲಿನ ಬಹುಮಾನ ವಿತರಣ ಸಮಾರಂಭವನ್ನು ಜಿಲ್ಲಾ ಕಲೆಕ್ಟರ್ ಶ್ರೀ ಸಿ. ಎ. ರಾಮಕೃಷ್ಣನ್, ಅವರು ತಾ 23ರಲ್ಲು ನೆರವೇರಿಸುತ್ತಾ, ಈ ಶಾಲೆಯ ಪ್ರಗತಿಪರ ಅಭಿವೃದ್ಧಿಯನ್ನು ಕೊಂಡಾಡಿದರು. ಶಾಲಾ ಹೆಡ್ಮಾಸ್ತರ್ ರೆ। ಫಾ। ಎ. ಜೆ ಟೆಲಿಸ್, ಅವರು ಶಾಲಾ ವರದಿಯನ್ನೋದಿದರು; ವಿದ್ಯಾರ್ಥಿಗಳಿಂದ ಇಂಗ್ಲಿಷು ಮತ್ತು ಕನ್ನಡ ನಾಟಕಾಭಿನಯಗಳಾದುವು.

ಬಾರಕೂರು- ಉಡುಪಿ ರೇಂಜಿನ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವರಾಯರು ಜಿಲ್ಲಾ ಎಡ್ಯುಕೇಶನಲ್ ಆಫೀಸರರಾಗಿ ನೇಮಕಹೊಂದಿ ವರ್ಗಾಯಿಸಲ್ಪಡುವ ನಿಮಿತ್ತ ಅವರನ್ನು ಗೌರವಿಸಲು ಚಹಸತ್ಕಾರ ಕೂಟವೊಂದು ತಾ 23ರಲ್ಲು ಶ್ರೀ ಜೆ. ಪಿ. ಸಿಕೇರರ ಅಧ್ಯಕ್ಷತೆಯಲ್ಲಿ ಜರಗಿತು. ಸ್ಥಳೀಯ ಬೋರ್ಡು ಮತ್ತು ಖಾಸಗೀ ಶಾಲಾ ಅಧ್ಯಾಪಕರು ಈ ಕೂಟವನ್ನು ನೆರವೇರಿಸಿದ್ದಾಗಿದೆ.

ಕೋಟೆ ಮುಂಡುಗಾರು— ಇದೇ ತಾ 22 ಮತ್ತು 23ರಲ್ಲು ಕಳಂಜಬಾಳಿಲ ವಿವಿಧೋದ್ದೇಶ ಸಹಕಾರಿ ಸಂಘದ ಆಶ್ರಯದಲ್ಲಿ ಸ್ಥಳೀಯ ಜಾನುವಾರು ಪ್ರದರ್ಶನವು ಯಶಸ್ವಿಯಾಗಿ ಜರಗಿತು. ಉತ್ತಮವೆನಿಸಿದ ಬೇರೆ ಬೇರೆ ಜಾತಿಯ ಎಂಟು ಜಾನುವಾರುಗಳಿಗೆ ಎಂಟು ಬಹುಮಾನಗಳು ಕೊಡಲ್ಪಟ್ಟವು.

ಹಿರಿಯಡಕ— ಸ್ಥಳೀಯ ಆರ್ಯ ಸಮಾಜದ ವತಿಯಿಂದ ಬೋರ್ಡು ಹಾ। ಎ। ಶಾಲೆಯಲ್ಲಿ ಶ್ರೀ ಬಿ. ಮಹಾಬಲ ಸೆಟ್ಟರ ಅಧ್ಯಕ್ಷತೆಯಲ್ಲಿ ಇದೇ ತಾ 18ರಲ್ಲು ದೀಪಾವಳಿ ಹಬ್ಬ ಮತ್ತು ಋಷಿ ದಯಾನಂದ ಸರಸ್ವತಿಯವರ ನಿರ್ವಾಣೋತ್ಸವವು ಯಶಸ್ವಿಯಾಗಿ ಆಚರಿಸಲ್ಪಟ್ಟಿತು.

ಕಾಸರಗೋಡು— ಸ್ಥಳೀಯ ಯಕ್ಷಗಾನ ಸಂಘದ ವಾರ್ಷಿಕೋತ್ಸವವು ತಾ 18ರಲ್ಲು ಸಂಜೆ ಮಲ್ಲಿಕಾರ್ಜುನ ದೇವಸ್ಥಾನದ ವಠಾರದಲ್ಲಿ ಶ್ರೀ ಮಹಾಬಲ ಭಂಡಾರಿ, ಎಡ್ವೊಕೇಟ್, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಸ್. ಕೃಷ್ಣಭಟ್ಟರು ಸ್ವಾಗತ ಭಾಷಣವಿತ್ತರು. ಯಕ್ಷಗಾನ ಕಾರ್ಯಕ್ರಮದಿಂದ ಸಭಾಂತ್ಯವಾಯಿತು.

ಮೂಡಬಿದ್ರೆ— ಹರಿಜನರಲ್ಲಿ ನೂರು ಇನ್ನೂರು ರೂಪಾಯಿ ವರದಕ್ಷಿಣೆಯನ್ನು ಹುಡುಗನಿಂದ ಹುಡುಗಿಯ ರಕ್ಷಕನು ಪಡೆದುಕೊಂಡು ಲಗ್ನವಾಗುವ ಪದ್ಧತಿಯನ್ನು ಇಲ್ಲಿಯ ಮಹಾತ್ಮಾಗಾಂಧಿ ಸೇವಾ ಸಮಾಜ ಸಮಿತಿಯವರು ರದ್ದುಗೊಳಿಸಿ ವರದಕ್ಷಿಣೆಯು ಮೂವತ್ತು ರೂಪಾಯಿಗಳಿಗಿಂತ ಮೀರದೆ ಸುಲಭರೀತಿಯಲ್ಲಿ ವಿವಾಹವಾಗಬೇಕೆಂಬ ನಿರ್ಣಯವನ್ನು ಮಾಡಿ ಇದೇ 12ರಲ್ಲು ಸ್ಥಳೀಯ ಹಂಡುಗಿಯವರ ಶಾಲೆಯಲ್ಲಿ ಆ ನಿರ್ಣಯಕ್ಕನುಸಾರವಾಗಿ ಒಂದು ವಿವಾಹವನ್ನೂ ನೆರವೇರಿಸಿದರು.

ಖಂಭದ ಕೋಣೆ— ಕುಂದಾಪುರ ರೇಂಜಿನ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಬಿ. ಪಿಂಟೊ, ಅವರಿಗೆ ಕಾರ್ಕಳಕ್ಕೆ ವರ್ಗವಾದುದರಿಂದ ಅವರನ್ನು ಬೀಳ್ಕೊಡುವ ಸಮಾರಂಭವೂ, 'ಶ್ರೀ ವಿಜಯಾ ಮಿತ್ರಮಂಡಳಿ'ಯ ಉದ್ಘಾಟನ ಸಮಾರಂಭವೂ ಖಂಬದ ಕೋಣೆ ಹಾ। ಎ। ಶಾಲೆಯಲ್ಲಿ ತಾ 16ರಲ್ಲು ಜರಗಿತು. ಸಭಿಕರ ಭಾಷಣ ಮೊದಲಾದ ಕಾರ್ಯಕ್ರಮಗಳಾಗಿ ಮಂಡಳಿ ಅಧ್ಯಕ್ಷ ಶ್ರೀ ಸಂಜೀವ ರಾವ . ಆರ್. ಕೆ ಯವರ ಧನ್ಯವಾದಾರ್ಪಣೆಯೊಂದಿಗೆ ಸಭಾ ಕಾರ್ಯವು ಮುಕ್ತಾಯವಾಯಿತು .

The East & West
Estd.] Insurance Co., Ltd, [1913
East & West Building, BOMBAY, 1
ದಿ ಈಸ್ಟ್ ಎಂಡ್ ವೆಸ್ಟ್
ಸ್ಥಾಪನೆ.] ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್. [1913
ಒಟ್ಟು ನಿಧಿ ರೂಪಾಯಿ 1 ಕೋಟಿ 5 ಲಕ್ಷ ಮಿಕ್ಕಿ ಇದೆ
1951ನೇ ಇಸವಿಯಲ್ಲಿ ಮರಣದಿಂದ ಮತ್ತು ವ್ಯಾದೆಯಾಗಿ ಕೊಟ್ಟ
ಕ್ಲೈಮುಗಳು ರೂಪಾಯಿ 5 ಲಕ್ಷ 91 ಸಾವಿರಕ್ಕೆ ಮಿಕ್ಕಿರುತ್ತದೆ
ಜೀವವಿಮೆಯ ಪೂರ್ಣ ಪ್ರಯೋಜನವನ್ನು ಜನರಿಗೆ ಒದಗಿಸಿಕೊಟ್ಟು ಕಾಲಕಾಲಕ್ಕೆ ಸಲಹೆಯನ್ನಿತ್ತು ಸಹಕರಿಸುವುದೇ ನಮ್ಮ ಧ್ಯೇಯ.
ದಕ್ಷಿಣ ಕನ್ನಡ ಜಿಲ್ಲೆಯ ಉತ್ತರಕ್ಕೆ ಒಬ್ಬ ಮತ್ತು ದಕ್ಷಿಣಕ್ಕೊಬ್ಬರಂತೆ ಎರಡು ಜನ ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ. ಉತ್ತರ ಕನ್ನಡ ಮತ್ತು ಮೈಸೂರು ಪ್ರಾಂತ್ಯದ ಪ್ರತೀ ಜಿಲ್ಲೆಗೂ ಜಿಲ್ಲೆಗೊಬ್ಬರಂತೆ ಇನ್ಸ್‌ಪೆಕ್ಟರರೂ ಸ್ಪೆಶಲ್ ಏಜಂಟರೂ ಬೇಕಾಗಿದ್ದಾರೆ.
ನಮ್ಮ ಆಫೀಸುಗಳು ಶಿರ್ಸಿ ಮತ್ತು ಮೂಡಬಿದ್ರಿ
ಮೆಸ್ಸರ್ಸ್ ಹೆಗ್ಡೆ ಎಂಡ್ ರಾವ್
ಚೀಫ್ ಏಜಂಟರು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಮತ್ತು ಮೈಸೂರು ಸ್ಟೇಟ್
ಪೋಸ್ಟ್, ಶಿರ್ಸಿ ದ ಕ



ಕುಡಿತದ ಸಮಸ್ಯೆ-ರಷ್ಯಾ

ಕುಡಿಕತನವನ್ನು ನಿಲ್ಲಿಸಲು ರಷ್ಯಾ ಮಾಡಿದ ಪ್ರಯೋಗಗಳು

(ಸುಪ್ರಸಿದ್ಧ ಬರೆಹಗಾರರಾದ ಸಿ. ಡ್ವೈಸಾನ್ ಕಾರ್ಟರ್ ಅವರ 'ಸಿನ್ ಅಂಡ್ ಸೈನ್ಸ್' ಎಂಬ ಪುಸ್ತಕದ ಆಧಾರದ ಮೇಲೆ)

ಕುಡಿತವು ಒಂದು ನೈತಿಕ ಸಮಸ್ಯೆ. ವ್ಯಭಿಚಾರ ಮತ್ತು ಕಳ್ಳತನಗಳಷ್ಟೇ ಸಮಾಜಘಾತುಕ ಸಮಸ್ಯೆ ಇದು. ಕುಡಿತದಿಂದ ಅನೇಕ ಕೆಟ್ಟಚಾಳಿಗಳೂ ರೋಗಗಳೂ ಉದ್ಭವಿಸುವುವೆಂಬುದು ನಿರ್ವಿವಾದವಾದದ್ದು. ಮಠಾಧಿಪತಿಗಳು, ಪೋಲೀಸ್ ಅಧಿಕಾರಿಗಳು, ವೈದ್ಯರು, ಆರೋಗ್ಯಾಧಿಕಾರಿಗಳು, ಸೈನ್ಯನಾಯಕರು, ಸಮಾಜಸೇವಾ ಕಾರ್ಯಕರ್ತರು ಎಲ್ಲರೂ ಈ ವಿಚಾರವನ್ನು ಸಮರ್ಥಿಸಬಲ್ಲರು. ಕುಡುಕರು ನಿಧಾನವಾಗಿ ತಮ್ಮನ್ನೇ ಹಾಳುಮಾಡಿಕೊಳ್ಳುವುದಲ್ಲದೆ ತಮ್ಮ ಸಂಸಾರಗಳ, ಸಂಬಂಧಿಗಳ ಸುಖಸಂತೋಷವನ್ನೇ ಹಾಳುಮಾಡುತ್ತಾರೆ. ಈ ಒಂದು ಹಿರಿಯ ಸಮಸ್ಯೆಯನ್ನು ಪರಿಹರಿಸಿದ್ದೇ ಆದರೆ ಸಮಾಜದ ಇಂದಿನ ಅನೇಕ ರೋಗರುಜಿನಗಳು ಹೆಸರಿಲ್ಲದಂತಾಗುತ್ತವೆ. ನಮ್ಮ ದೇಶದಲ್ಲಂತೂ ಈ ಸಮಸ್ಯೆ ಬೃಹದಾಕಾರವಾಗಿದೆ. ರಷ್ಯಾದೇಶದಲ್ಲಿ ಈ ಸಮಸ್ಯೆಯನ್ನು ಬಹು ತೃಪ್ತಿಕರವಾಗಿ ಪರಿಹರಿಸಿದ್ದಾರೆ. ಅವರು ಅನುಸರಿಸಿದ ರೀತಿನೀತಿಗಳನ್ನು ತಿಳಿಯುವುದು ಯೋಗ್ಯವಾಗಿದೆ.

ರಷ್ಯಾದಲ್ಲಿ ಕಳೆದ ಹಲವಾರು ಶತಮಾನಗಳಿಂದಲೂ ಕುಡಿತವು ಹೇರಳವಾಗಿತ್ತು. ದೊರೆಯಿಂದ ಹಿಡಿದು ಬೀದಿಯ ಭಿಕಾರಿಯವರೆಗೆ ಎಲ್ಲರೂ ಮದ್ಯಪಾನ ಮಾಡುತ್ತಿದ್ದರು. ರಜೆದಿನಗಳಲ್ಲಿ ಕುಡಿದು ಮತ್ತರಾಗಿ ಬೀದಿಯಲ್ಲಿ ಬಿದ್ದಿರುತ್ತಿದ್ದ ಅನೇಕ ಸಭ್ಯಗೃಹಸ್ಥರನ್ನು ಕಾಣಬಹುದಿತ್ತು. ಮ್ಯಾಕ್ಸಿಂಗಾರ್ಕಿಯ 'ತಾಯಿ' ಎಂಬ ಕಾದಂಬರಿಯ ಮೊದಲ ಕೆಲವು ಪುಟಗಳಿಂದ ಇದು ಚೆನ್ನಾಗಿ ಪರಿಚಯವಾಗುತ್ತದೆ. ಆದರೆ, ರಷ್ಯದ ಕ್ರಾಂತಿಯ ನಂತರ ಅಲ್ಲಿ ಕುಡಿಯುವವರೇ ಅಪರೂಪ. ಎಂದಮಾತ್ರಕ್ಕೆ ಮದ್ಯವೇ ರಷ್ಯದಲ್ಲಿಲ್ಲವೆಂದಲ್ಲ. ಈಗಲೂ ಸಾರ್ವಜನಿಕವಾಗಿ ಮದ್ಯದ ಮಾರಾಟ ನಡೆಯುತ್ತಿದೆ.

ವ್ಯವಸ್ಥಿತ ರೀತಿಯಲ್ಲಿ ಈ ಸಮಸ್ಯೆಯನ್ನು ಎದುರಿಸಲು ೧೯೧೪ರಷ್ಟು ಹಿಂದೆಯೇ ಪ್ರಯತ್ನ ನಡೆದಿದೆ. ಅಲ್ಲಿಯವರೆಗೆ ಯಾರು ಬೇಕಾದರೂ ನಡೆಸಬಹುದಾಗಿದ್ದ ಮದ್ಯಮಾರಾಟದ ಉದ್ಯಮವನ್ನು ಜಾರ್ ಸರಕಾರವು ತಾನೇ ವಹಿಸಿಕೊಂಡಿತು. ಇದರಿಂದಾಗಿ ಸರಕಾರಕ್ಕೆ ವಿಪರೀತ ಆದಾಯ ಬಂತು. ಆದರೆ ತಹಬಂದಿಗೆ ತರಲಾಗದ ಮಟ್ಟದಲ್ಲಿ ಅನೀತಿಯುತ ನಡವಳಿಕೆಗಳು ತಲೆಹಾಕಿದುವು. ಸರಕಾರ ಪುನಃ ಖಾಸಗಿಯವರಿಗೇ ಈ ಕಾರ್ಯವಹಿಸಬೇಕಾಯಿತು. ಜಿಕಾರಿಯಾದ ಮದ್ಯದ ಮೇಲೆ ಹೆಚ್ಚಿನ ತೆರಿಗೆ ವಿಧಿಸಲಾಯಿತು. ಸಾಮಾನ್ಯ ಪ್ರಜೆಗೆ ಕುಡಿತವು ಹೆಚ್ಚು ವೆಚ್ಚದಿಂದ ಮಾತ್ರ ಸಾಧ್ಯವಿತ್ತು. ಸರಕಾರದ ಉತ್ಪತ್ತಿ ಚೆನ್ನಾಗಿಯೇ ಇತ್ತು. ಜನ ತಮ್ಮ ಇತರ ಅವಶ್ಯಕತೆಗಳನ್ನೆಲ್ಲ ಬದಿಗೊತ್ತಿ ಕುಡಿಯುತ್ತಿದ್ದರು. ಹೆಚ್ಚಿನ ತೆರಿಗೆ ವಿಧಾಯಕದಿಂದ ಸರಕಾರದ ಆದಾಯ ಹೆಚ್ಚಿತೇ ವಿನಾ ಕುಡಿಯುವವರ ಸಂಖ್ಯೆ ಕಡವೆಯಾಗಲಿಲ್ಲ.

ಈ ಸಮಯದಲ್ಲಿ ಪಾದ್ರಿಗಳು ಎಲ್ಲಮದ್ಯದಂಗಡಿಗಳನ್ನು ಮುಚ್ಚಿಸಬೇಕೆಂದು ಸರಕಾರಕ್ಕೆ ಮೊರೆಯಿಟ್ಟರು; ಈ ಒತ್ತಾಯದಿಂದ ಲೈಸೆನ್ಸ್ ಪದ್ಧತಿ ಮೇರೆ ಚಿಲ್ಲರೆ ಬಿಕರಿ ಅಂಗಡಿಗಳನ್ನು ವಿಧಾಯಕಮಾಡಲಾಯಿತು. ವ್ಯಾಪಾರಸ್ಥರು ಶೇಕಡ ೫೦ ಭಾಗ ಕಡಮೆಯಾದರು. ಕೊಳ್ಳುವವರ ಸಂಖ್ಯೆ ಮಾತ್ರ ಕಡಿಮೆಯಾಗಲಿಲ್ಲ.

ಕಳೆದ ಶತಮಾನದ ಅಂತ್ಯದಲ್ಲಿ ಕುಡಿತವನ್ನು ಬಿಡುವಂತೆ ಜನರನ್ನು ನೇರವಾಗಿ ಪ್ರಾರ್ಥಿಸಿಕೊಳ್ಳಲು ಆರಂಭವಾಯಿತು. ಭಾಷಣಗಳ, ಬರಹಗಳ ಮೂಲಕ ಈ ಕಾರ್ಯ ಭರದಿಂದ ಸಾಗಿತು. ಈವರೆಗೆ ಕಾರ್ಖಾನೆಗಳಲ್ಲಿ, ಎಸ್ಟೇಟುಗಳಲ್ಲಿ ಕೆಲಸಗಾರರಿಗೆ ತೇಬಿನ ಒಂದು ಭಾಗವನ್ನು ಮದ್ಯದ ರೂಪದಲ್ಲಿ ಕೊಡುತ್ತಿದ್ದರು. ಸರ್ಕಾರವು ಇದನ್ನು ನಿಷೇಧಿಸಿ ಆಜ್ಞೆ ಹೊರಡಿಸಿತು. ಇದರಿಂದ ಪರಿಸ್ಥಿತಿ ಸುಧಾರಿಸಿದಂತಾಗಲಿಲ್ಲ. ಸಂಬಳದ ದಿನ ಕೆಲಸಗಾರನು ತನ್ನ ಎಲ್ಲ ಸಂಪಾದನೆಯನ್ನೂ ಪಕ್ಕದಲ್ಲಿದ್ದ ಮದ್ಯದಂಗಡಿಗೆ ಸುರಿಯಲು ತೊಡಗಿದ. ಅನೇಕ ಕೆಟ್ಟಚಾಳಿಗಳು ದೇಶದಲ್ಲಿ ವಿಪರೀತವಾದುವು. ಕಾರ್ಖಾನೆಗಳಲ್ಲೂ ಕೆಲಸಗಾರರ ಕಾರ್ಯ ಸಾಮರ್ಥ್ಯ ದಿನೇದಿನೇ ಕಡಮೆಯಾಗುತ್ತ ಬಂತು. ಆಗತಾನೆ ಪ್ರಾರಂಭವಾಗಿದ್ದ ನೂತನ ಯಂತ್ರಗಳಿಂದ ಕೂಡಿದ್ದ ಕೈಗಾರಿಕೋದ್ಯಮಗಳಿಗೆ ಭಾರಿ ಪೆಟ್ಟು ಬಿತ್ತು. ಪುನಃ ರಾಷ್ಟ್ರದ್ಯಂತ ಮದ್ಯಪಾನನಿರೋಧ ಚಳುವಳಿ ಆರಂಭವಾಯಿತು. ಈ ಚಳುವಳಿಗೆ ಬೆಂಬಲಿಗರು ಹಿರಿಯ ಕೈಗಾರಿಕೋದ್ಯಮಿಗಳು, ಜಮೀನ್ದಾರರು. ಕಾರಣ ಸ್ಪಷ್ಟ.

ಈ ಚಳುವಳಿಯಿಂದಲೂ ಏನೂ ಪ್ರಯೋಜನ ಕಂಡುಬರಲಿಲ್ಲ. ಜಾರ್ ದೊರೆಯ ದಾಯಾದಿಯೊಬ್ಬ ಚಳುವಳಿಗೆ ನಾಯಕನಾಗಿ ನಿಂತ. ಹಿರಿಯ ಜಮೀನ್ದಾರನಾಗಿದ್ದ ಈತನ ಉತ್ಪತ್ತಿ, ಜೀತಗಾರರ ಕುಡಿತದ ಫಲವಾಗಿ ಕಡಮೆಯಾಗಿತ್ತು. ಇದಕ್ಕಾಗಿ ಈತ ಮದ್ಯಪಾನನಿರೋಧ ಚಳುವಳಿಗೆ ಬೆಂಬಲಿಗನಾದ. ಈ ಕಾರ್ಯದಲ್ಲಿ ತೊಡಗಿದ್ದ ದೇಶದಲ್ಲಿನ ಅನೇಕ ಸಂಸ್ಥೆಗಳನ್ನು ಒಂದುಗೂಡಿಸಿದ. ತನ್ನ ಮತ್ತು ಸ್ನೇಹಿತರ ನೆರವಿಂದ ಈ ಕಾರ್ಯಕ್ಕಾಗಿ ಒಂದು ಅಪಾರ ನಿಧಿಯನ್ನೇರ್ಪಡಿಸಿದ. ಶಿಕ್ಷಿತ ಕೆಲಸಗಾರರು ಒಂದು ನಿಯೋಜಿತ ರೀತಿಯಲ್ಲಿ ಜನಕ್ಕೆ ಬೋಧೆಮಾಡಲು ಪ್ರಾರಂಭಿಸಿದರು. ಒಂದು ದೊಡ್ಡ ಪುಸ್ತಕ ಭಂಡಾರವನ್ನು ಸ್ಥಾಪಿಸಿಕೊಂಡರು. ಅನೇಕ ಬರೆಹಗಾರರ, ಬೋಧಕರ, ಶಿಕ್ಷಕರ ನೇಮಕವಾಯಿತು. ಕುಡಿತಕ್ಕೆ ಸಂಬಂಧಿಸಿದ ಅನೇಕ ಅಂಕಿ ಅಂಶಗಳನ್ನು ಸಂಗ್ರಹಿಸಿ ಪ್ರಕಟಿಸಿದರು. ಉದ್ಯಾನವನಗಳಲ್ಲಿ, ಮನೋರಂಜನಾ ಕೇಂದ್ರಗಳಲ್ಲಿ, ದೊಡ್ಡದೊಡ್ಡ ಹೋಟೆಲುಗಳಲ್ಲಿ, ನಾಟಕಶಾಲೆಗಳಲ್ಲಿ, ಜನಸೇರುವ ಎಲ್ಲೆಡೆಗಳಲ್ಲೂ ಇವರ ಕಾರ್ಯ ಅವ್ಯಾಹತವಾಗಿ ಸಾಗಿತ್ತು. ೧೯೦ ರಲ್ಲಿ ಮಾಸ್ಕೊ ನಗರ ಒಂದರಲ್ಲೇ ಎರಡುವರೆ ದಶಲಕ್ಷ ಡಾಲರುಗಳನ್ನು ಇವ ಖರ್ಚು ಮಾಡಿದ್ದರು! ಈ ಸಂಸ್ಥೆಯ ಅನೇಕರಿಗೆ ಕೆಲಸ ದೊರಕಿತು. ನಿರುದ್ಯೋಗ ಸಮಸ್ಯೆ ಸ್ವಲ್ಪಮಟ್ಟಿಗೆ ಪರಿಹಾರವಾಯಿತೆ. ವಿನಾ ಕುಡಿತವನ್ನು ಕಡಿಮೆಮಾಡುವ ದಿಕ್ಕಿನಲ್ಲಿ ಇವರ ಸಾಧನೆ ಏನೂ ಇಲ್ಲವಾಯಿತು. ೧೯೦೫ರಲ್ಲಿ ಈ ಚಳುವ ತನ್ನ ಉನ್ನತ ಶಿಖರವನ್ನು ಮುಟ್ಟಿತು. ಈಗಾಗಲೆ ದೇಶದ ಜನರಲ್ಲಿ ರಾಜಕೀ ಜಾಗೃತಿ ಮೂಡಿಬಂದಿತ್ತು. ರಾಷ್ಟ್ರದ ರರುಳ, ತುಳಿತ ಸಹಿಸಲಸಾಧ್ಯವಾಗಿತ್ತು. ಮಾಸ್ಕೊವಿನ ಗವರ್ನರ್ ಜನರಲ್ಲೂ ಹಿರಿಯ ಬಂಡವಾಳಗಾರರೂ ಆಗಿ ಗ್ರ್ಯಾಂಡ್ ಡ್ಯೂಕ್ ಸರ್ಜಿಯಸ್ ಎಂ ವರು ಈ ಚಳುವಳಿಗೆ ಬೆಂಬಲಿಗರಾದ ರಾಜವಂಶದ ಅನೇಕರನ್ನು ತಮ್ಮೊ ನೆ ಕರೆತಂದರು. ಈ ಪೈಕಿ ಹಲವರು ಮದ್ಯಪಾನದ ಪೂರ್ಣನಿಷೇಧವನ್ನು ಪ ಪಾದಿಸಿದರು. ಇದಕ್ಕಿಂತ ಹೆಚ್ಚಿನ ಪ್ರ ವಯುತ ಮತ್ತು ಹಣ ಸೌಕರ್ಯವುಳ್ಳ ಕೊಂದು ಚಳುವಳಿಯನ್ನು ಜೋ ಲೂ ಸಾಧ್ಯವಿಲ್ಲ. ಆದರೆ ಸಾಮಾಜ ಪ್ರತಿಕ್ರಿಯೆ ಏನು? ಒಂದು ಥಾರ ಯಲ್ಲಿ ಮಾತನಾಡುತ್ತಿದ್ದ ಡ್ಯೂಕರ ಲೆ ನಾಡಬಾಂಬೊಂದನ್ನು ಎಸೆದರು. ಒಂದು ಪ್ರತಿಭಟನಾನಂತರ ಚಳುವಳಿ ಮಣ್ಣುಪಾಲಾಯಿತು. ಈ ಚಳುವಳಿ ನಾಯಕರೆಲ್ಲ ಜನತೆಯ ವಿರುದ್ಧಪಕ್ಷ ಸೇರಿಕೊಂಡರು.

ಮಹಾಯುದ್ಧ ಪ್ರಾರಂಭವಾದಾಗ ರಷ್ಯದ ಉತ್ಪತ್ತಿಯಲ್ಲಿ ಕಾಲುಭಾಗ ಬ್ರಾಂಡಿಯಿಂದ ಸೇರಿಬರುತ್ತಿತ್ತು. ಇ ಹೆಚ್ಚಿನ ವಿಚಾರವೆಂದರೆ ಸಾರ್ವಜನಿ ಕಾರ್ಯಾಚರಣೆ ಮತ್ತು ಸಂಸ್ಕಾರ ಹೆ ಗಾರಿಕೆ ಪ್ರಾರಂಭಿಸಿದ ನಂತರ ೧೯ ವರೆಗೆ ಮದ್ಯದ ವೆಚ್ಚ ಶೇಕಡ ೫೦೦ ಹೆಚ್ಚಿತ್ತು!!

ಈಗ ಈ ಕಾರ್ಯಕ್ಕಾಗಿ ಮತ್ತೊ ಸಂಸ್ಥೆ ಉದ್ಭವಿಸಿತು. 'ದಿ ಸೊಸೈಟಿ ಫ ಫೈಟಿಂಗ್ ಆಲ್ಕೊಹಾಲ್ ಇನ್ ಪ ಸ್ಕೂಲ್ಸ್' ಎಂಬ ಸಂಸ್ಥೆ ರಾಷ್ಟ್ರ ಒಂದು ಸರ್ವೆ ನಡೆಸಿತು. ಮಾಸ್ಕೊ ಣ ಒಂದರಲ್ಲೆ ಶೇಕಡ ತೊಂಭತ್ತು ದಿ ಕುಡಿಯುವವರಿದ್ದಾರೆಂಬುದು ಬಿತ್ತು. ೧೯೧೦ರಲ್ಲಿ ಈ ಸಮಸ್ಯೆಯ ಪರಿಶೀಲಿಸಲು ಅಖಿಲ ರಷ್ಯಾ ಸಮ್ಮೆ ಒಂದನ್ನು ಕರೆಯಲಾಯಿತು. ಈ ಸ ಳನಕ್ಕೆ ಕಾರ್ಮಿಕಸಂಘಗಳ ಬೆಂಬ

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K.

ವಿಚಾರ ಪ್ರಚೋದಕವಾದ ಪ್ರತಿಯೊಬ್ಬರೂ ಓದಲೇಬೇಕಾದ ನವನವೀನ ಪುಸ್ತಕಗಳು!

ಗೀತಾ ರಹಸ್ಯವನ್ನು ತಿಳಿಯ ಬಯಸದವರಾರು?

ಡಾ। ಹೊಸಕೆರೆ ಚಿದಂಬರಯ್ಯ ಕೃತ
ಗೀತೆಯ ಕೈಗನ್ನಡಿ
ಭಗವದ್ಗೀತೆಯ ಸಮೂಲ ಭಾಷಾಂತರ

ಪುಟಗಳು 428 ಬೆಲೆ 0-12-0 ಅಂಚೆವೆಚ್ಚ 0-4-0
100 ಪ್ರತಿಗಳಿಗೆ ರೂ. 60; 250ಕ್ಕೆ ರೂ. 140; 500ಕ್ಕೆ ರೂ. 250.

ಕತೆ, ಕಾದಂಬರಿ, ನಾಟಕ, ಚಿತ್ರ, ಪ್ರಬಂಧ, ಹರಟೆ ಮೊದಲಾದ, ನೋಡಿದರೆ ಬಿಡದಿರುವ ಅಂತರಂಗ ಪ್ರಕಟನಾಲಯದ ರೂ. 30 ಕ್ರಯದ 86 ಪ್ರಕಟಣೆಗಳನ್ನು ಒಮ್ಮೆಯೇ ತರಿಸಿಕೊಳ್ಳುವವರಿಗೆ ರೂ. 24ಕ್ಕೆ ಕೊಡಲಾಗುವುದು.

ನಾರೀಹೃದಯ ರೂ.	1	8	ಪ್ರಕಾಶ ರೂ.	2	8	ಸೆನಟಿಗಾಗಿ ರೂ.	2	0
ಭಾರತೀಯ ಕತೆಗಳು	1	12	ಮಧುವನ	3	0	ಕಾವ್ಯಸಾಮ್ರಾಜ್ಯ	1	8
ಸನ್ಯಾಸಿಯ ಸೋಗಿನಲ್ಲಿ	1	12	ಘಂಟಮಾರಾ	2	0	ಪ್ರೇಮ ವಿಜಯ	1	4
ಕವಿತಾ ಕಾಮಿನಿ	2	0	ನಂದಾದೀಪ	1	0	ರಂಗಭೂಮಿ	0	10
ಕುಲವಿಲ್ಲದ ಹೆಣ್ಣು	2	0	ಜಮೀನ್ದಾರ	1	8	ಭಾರತದಲ್ಲಿ ಜಾತಿಭೇದ	1	0
ವ್ಯಭಿಚಾರಿಣಿ ಯಾರು	1	4	ದೇಶಭಕ್ತ	1	4	ವೀರ ಸಾವರ್ಕರ	1	4
ಸುಲಭದಲ್ಲಿ ಇಂಗ್ಲಿಷ್	2	0	ಮನೆ ಮದ್ದು	2	8	ಕದಂಬ	1	4
ನೀತಿವಿನೋದ ಕತೆಗಳು	1	12	ಸರಸ್ವತಿ	0	12	ಭಾಗ್ಯಲಕ್ಷ್ಮಿ	1	4
ಜೀವನ ಸಂಗ್ರಾಮ	1	8	ಸೇವಾಪಥ	0	8	ಲೋಪಾಮುದ್ರೆ	0	8

ಇವೇ ಮೊದಲಾದ ನೂರಾರು ಬಗೆಯ ಉಪಯುಕ್ತ ಪುಸ್ತಕಗಳ ಕೆಟಲಾಗಿಗೆ ಬರೆಯಿರಿ. ವ್ಯಾಪಾರಿಗಳಿಗೂ, ಪುಸ್ತಕಭಂಡಾರಗಳಿಗೂ ವಿಶೇಷ ಸವಲತ್ತುಗಳಿವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ರಕ್ಷಣೆಗೂ ಉಳಿತಾಯ ವ್ಯವಸ್ಥೆಗೂ
ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶ್ಯೂರೆನ್ಸ್ ಕೊ. ಲಿಮಿಟೆಡ್.

ಸ್ಥಾಪನೆ: 1934. ಪ್ರಧಾನ ಕಚೇರಿ: ಮದ್ರಾಸು.

66¼ ಲಕ್ಷಕ್ಕೂ ಮಿಕ್ಕಿದ ಹೊಸ ವ್ಯವಹಾರ, 15 ಲಕ್ಷಕ್ಕೂ ಮಿಕ್ಕಿದ ಪ್ರೀಮಿಯಮ್ ಉತ್ಪತ್ತಿ, 45¾ ಲಕ್ಷಕ್ಕೂ ಮಿಕ್ಕಿದ ಜೀವವಿಮಾ ನಿಧಿ, 60¾ ಲಕ್ಷಕ್ಕೂ ಮಿಕ್ಕಿದ ಮೂಲಧನ. ಸಾಧಾರಣ 3 ಕೋಟಿಯಷ್ಟು ಊರ್ಜಿತದಲ್ಲಿರುವ ವಹಿವಾಟು.

ಪ್ರಗತಿಪರವಾದ ಈ ಕಂಪೆನಿಯಲ್ಲಿ ಒಂದು ಪೋಲಿಸಿ ಇರುವುದು ಉತ್ತಮ ರೀವಪಾತಿ. ಅಂತೆಯೇ ಇದರ ಏಜನ್ಸಿ ಇರುವುದು ಚಲೋ ವ್ಯವಹಾರ ಸಾಧನ.

ಉತ್ಸಾಹಿ, ಜನಾದರಣೀಯ, ಸಮರ್ಥ ಸ್ತ್ರೀ ಪುರುಷರಿಂದ ಕಂಪೆನಿ ಪ್ರಾತಿನಿಧ್ಯದ ಬಗ್ಗೆ ಅರ್ಜಿಗಳು ಸ್ವಾಗತಾರ್ಹವು. ದಯಮಾಡಿ ಬರೆಯಿರಿ:-

ಜಿ. ಆರ್. ಪಾಲ್ಯ, ಬ್ರಾಂಚ್ ಮೆನೇಜರ್,
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು [ದ. ಕ.]

ದೊರಕಿತು. ಮದ್ಯದಂಗಡಿಗಳನ್ನು ಗೊತ್ತಾದ ಕಾಲದಲ್ಲಿ ಮಾತ್ರ ತೆರೆದಿರುವಂತೆ ಸರ್ಕಾರವನ್ನು ಒತ್ತಾಯಪಡಿಸುವ ನಿರ್ಣಯವನ್ನು ಮಾಡಲಾಯಿತು. ಯುದ್ಧ ನಡೆಯುತ್ತಿತ್ತು. ಇಂಗ್ಲೆಂಡ್ ಮತ್ತು ಫ್ರಾನ್ಸಿನೊಡನೆ ಮೈತ್ರಿ ಬೆಳಸಿದ ಝಾರ್ ಸರ್ಕಾರ ಒಂದು ದೊಡ್ಡ ಸೈನ್ಯ ಕಟ್ಟಬೇಕಾಯಿತು. ಇದಕ್ಕಾಗಿ ಕೈಗಾರಿಕೋದ್ಯೋಗಿಗಳ ನೆರವನ್ನು ಸರ್ಕಾರ ಬೇಡಿತು. ಪ್ರತಿಯಾಗಿ ಅಬ್ಕಾರಿ ತೆರಿಗೆಯನ್ನು ಕಡಿಮೆ ಮಾಡುವಂತೆ ಅವರು ಒತ್ತಾಯಪಡಿಸಿದರು. ೧೯೧೪ರಲ್ಲಿ ಅಬ್ಕಾರಿ ತೆರಿಗೆಯನ್ನು ಹೆಚ್ಚಿಸುವುದಿಲ್ಲವೆಂದು ಸರ್ಕಾರ ಘೋಷಿಸಿತು. ಯುದ್ಧ ಆರಂಭವಾದ ವರ್ಷ ಇದು. ಸೈನ್ಯಕ್ಕೆ ಸೇರಿದವರೆಲ್ಲರೂ ಕುಡುಕರಾಗಿಯೇ ಇದ್ದರು, ಹೊಲಗಳಿಂದ ಕಾರ್ಖಾನೆಗಳಿಂದ ಉತ್ಪತ್ತಿ ಕಡಮೆಯಾಯಿತು. ರಾಷ್ಟ್ರದ ಉತ್ಪನ್ನ ಹೆಚ್ಚಬೇಕಾದ ಕಾಲದಲ್ಲಿ ಕಳವಳವಾಗತೊಡಗಿತು. ೧೯೧೪ನೇ ಜುಲೈ ಒಂದನೇ ದಿನ ಎಲ್ಲರಿಗೂ ಆಶ್ಚರ್ಯವುಂಟಾಗುವಂತೆ ಮದ್ಯಪಾನ ನಿರೋಧಾಜ್ಞೆ ಸರ್ಕಾರದಿಂದ ಹೊರಬಿತ್ತು. ಈ ಆಜ್ಞೆಯನ್ನು ಕ್ರೂರವಾಗಿಯೂ, ಪೂರ್ಣವಾಗಿಯೂ ರಾಷ್ಟ್ರಾದ್ಯಂತ ಜಾರಿಗೆ ತರಲಾಯಿತು. ಮದ್ಯದಂಗಡಿಗಳ ನಾಶ, ತಯಾರಿಕಾ ಉಪಕರಣಗಳ ನಾಶ, ಶೇಖರಿಸಿಟ್ಟಿದ್ದ ಮದ್ಯವನ್ನು ಚೆಲ್ಲುವುದು ತಡೆಯಿಲ್ಲದೆ ನಡೆಯಿತು. ಯಾರಿಗೂ ಇದನ್ನು ವಿರೋಧಿಸುವ ಧೈರ್ಯವಿಲ್ಲವಾಯಿತು. ಇತಿಹಾಸದಲ್ಲಿ ಇದೊಂದೇ ಬಾರಿ ಈ ರೀತಿ ಮದ್ಯವಿರೋಧ ಕಾರ್ಯಕ್ರಮ ನಡೆದಿರುವುದು, ಎಂದು ಧಾರಾಳವಾಗಿ ಹೇಳಬಹುದು. ಒಂದ ನೂರು ಅರುವತ್ತು ದಶಲಕ್ಷ ಜನ ಮೂಕರಂತೆ ಯಾವ ಪ್ರತಿಕ್ರಿಯೆಯೂ ಇಲ್ಲದೆ ಇದ್ದರು. ಯಾವ ಕಾನೂನನ್ನು ಮಾಡದೆ ಬರಿಯ ಆಜ್ಞೆಯಿಂದಲೇ ಝಾರ್ ಸರ್ಕಾರ ಈ ಕಾರ್ಯಮಾಡಿತ್ತು. ೧೯೧೬ರ ಉತ್ತರಾರ್ಧದಲ್ಲೂ ೧೯೧೭ರ ಪೂರ್ವಾರ್ಧದಲ್ಲೂ ಪೂರ್ಣ ಪಾನನಿರೋಧ ಜಾರಿಯಲ್ಲಿತ್ತು. ಈ ಕಾಲದಲ್ಲಿ ವಯಸ್ಕರೂ, ಮಕ್ಕಳೂ, ಆರೋಗ್ಯದೃಷ್ಟಿಯಿಂದ ಸುಧಾರಿಸಿದ್ದನ್ನು ಕಾಣಬಹುದಿತ್ತು. ಪಾನನಿರೋಧ ಖಂಡಿತವಾಗಿಯೂ ಜಾರಿಯಾಯಿತು.

ಆದರೆ, ಈ ಪರಿಸ್ಥಿತಿ ಬಹುಕಾಲ ಮುಂದುವರಿಯಲಿಲ್ಲ. ಯುದ್ಧ ಕಾಲದಲ್ಲಿ ದೇಶದಲ್ಲಿ ಹಸಿವು ಅಭಾವಗಳು ತಲೆಹಾಕಿದುವು. ವಿಚಿತ್ರ ರೋಗಗಳು ಕಾಣಿಸಿಕೊಂಡುವು. ಈ ಕಷ್ಟಕಾರ್ಪಣ್ಯಗಳನ್ನು ಮರೆಯುವುದಕ್ಕಾಗಿ ಎಲ್ಲರ ಗಮನ ಮದ್ಯದ ಸೀಸೆಯ ಕಡೆಗೆ ಒಮ್ಮೆಲೇ ಹರಿಯಿತು. ಎಲ್ಲರೂ ಮದ್ಯ ತಯಾರಿಸಲು ಪ್ರಾರಂಭಿಸಿದರು. ರೈತರು ಜೀವನಾಧಾರದ ಆಹಾರ ಪದಾರ್ಥಗಳನ್ನು ಬೆಳೆಯುವುದು ಬಿಟ್ಟು ಮದ್ಯ ತಯಾರಿಕೆಗನುಕೂಲವಾದ ಗೆಡ್ಡೆಗಳನ್ನು ಬೆಳೆಸಲನುವಾದರು. ದವಸದ ಕಣಜಗಳೆಲ್ಲ ಮದ್ಯದ ಹುಂಡಗಳಾದುವು. ಈ ಅಕ್ರಮ ಮದ್ಯ ಎಷ್ಟು ಬೇಗ ತಯಾರಾಗುತ್ತಿತ್ತೋ ಅಷ್ಟೇ ಬೇಗ ಬಿಕರಿಯಾಗುತ್ತಿತ್ತು. ಕಲವೇ ತಿಂಗಳುಗಳಲ್ಲಿ ರಾಷ್ಟ್ರಾದ್ಯಂತ ಮದ್ಯದ ಕಾಲುವೆ ಹರಿಯತೊಡಗಿತು. ಈ ರೀತಿ ತಯಾರಾದ ಮದ್ಯ ವಿಷಪ್ರಾಯವಾಗಿತ್ತು. ಶುದ್ಧ ಮದ್ಯವು ಕೆಲವರಿಗೇ ಹಾನಿಕಾರಿಯಾಗಿದ್ದುದು ಈ ಅಕ್ರಮ ಮದ್ಯ ಎಂತಹ ದೃಢಕಾಯ ಶರೀರವನ್ನೂ ಹಾಳುಮಾಡುತ್ತಿತ್ತು. ಪಾನ ನಿರೋಧವು—ಬಂದಾಗ ಕೊನೆಯಿಂದ ಜಾರಿಗೆ ಬಂದದ್ದು—ಪೂರ್ಣ ವಿಫಲವಾಯಿತು. ಒಬ್ಬೊಬ್ಬನೇ ಕುಡುಕನಿದ್ದ ಮನೆಯೇ ಮದ್ಯ ತಯಾರಿಕಾಗೃಹ ಹಾಗೂ ಮಾರಾಟಗೃಹವಾಗಿ ಏರ್ಪಟ್ಟಿತ್ತು. ಮಲಗುವ ಮುಂಚೆ ಕುಡಿತ; ಊಟದೊಂದಿಗೆ ಕುಡಿತ; ತಿಂಡಿಯೊಂದಿಗೆ ಕುಡಿತ. ಕೆಲಸಕ್ಕೆ ಹೋಗುವಾಗಲೂ ಪ್ರಾರ್ಥನಾಮಂದಿರಕ್ಕೆ ಹೋಗುವಾಗಲೂ ಕುಡಿದು ಮತ್ತರಾಗಿಯೇ ಹೋಗುತ್ತಿದ್ದರು ಜನ. ತಾಯಂದಿರು ಮಕ್ಕಳಿಗೆ ಪ್ರೀತಿಯಿಂದ ಮದ್ಯ ಕುಡಿಸುತ್ತಿದ್ದರು.

೧೯೧೭ರ ಕ್ರಾಂತಿಯನಂತರ ಈ ಅಕ್ರಮ ಮದ್ಯಸೇವನೆ ವಿಪರೀತವಾಯಿತು. ಆಹಾರ ಬೆಳೆ ಕಡಮೆಯಾದ್ದರಿಂದ ಕ್ಷಾಮಭಯ ತಲೆದೋರಿತು. ಹೊಸ ಸರ್ಕಾರ ಸ್ಥಾಪನೆಯಾಯಿತು. ಈ ಸರ್ಕಾರ ಈ ಸ್ಥಿತಿಯನ್ನು ಹೇಗೆ ಎದುರಿಸಿತು ಎಂಬುದು ಪರಿಶೀಲನಾರ್ಹವಾಗಿದೆ. ಮೊದಲು ಆರೋಗ್ಯದೃಷ್ಟಿಯಿಂದ ಈ ಅಕ್ರಮ ಮದ್ಯ ತಯಾರಿಕೆಯನ್ನು ನಿಲ್ಲಿಸಬೇಕಾಗಿತ್ತು. ಅದಕ್ಕಾಗಿ ಸರ್ಕಾರವು ಮದ್ಯತಯಾರಿಕೆಯನ್ನು ಕಾರ್ಖಾನೆಗಳು ಪುನಃ ಕೆಲಸಮಾಡಲು ಅನುಮತಿ ಕೊಟ್ಟಿತು. ಈ ವಿಚಾರದಲ್ಲಿ ಸಂಗ್ರಹಿಸಿದ್ದ ಅನೇಕ ಅಂಕೆ ಅಂಶಗಳು ಈ ಸರ್ಕಾರದ ಕೈಯಲ್ಲಿತ್ತು. ಲೆನಿನ್, ಸ್ಟಾಲಿನ್ ಮುಂತಾದ ನಾಯಕರು ವೈಯಕ್ತಿಕ ಆಸಕ್ತಿಯನ್ನು ವಹಿಸಿದರು, ವಿಜ್ಞಾನಿಗಳ ಹಾಗೂ ರಾಜಕಾರಣಿಗಳ ಸಭೆ ಸೇರಿಸಿ ಈ ವಿಚಾರದಲ್ಲಿ ಶೀಘ್ರ ಸಲಹೆ ಕೊಡಬೇಕೆಂದು ವಿನಂತಿ ಮಾಡಿಕೊಳ್ಳಲಾಯಿತು. ಈ ತಜ್ಞರು ಪಾನನಿರೋಧವನ್ನು ಎಲ್ಲ ದೃಷ್ಟಿಕೋನಗಳಿಂದಲೂ ಪರಿಶೀಲಿಸಿದರು. ಕಾನೂನು ಮೂಲಕ ಪಾನನಿರೋಧ ಸಾಧ್ಯವಿಲ್ಲ, ಸಾಧುವೂ ಅಲ್ಲ ಎಂದು ಅಭಿಪ್ರಾಯಪಟ್ಟರು. ಜನತೆಗೆ ಶಿಕ್ಷಣಕೊಟ್ಟು ಇದನ್ನು ಸಾಧಿಸಬಹುದೆಂಬುದು ಬರಿಯ ಭ್ರಾಂತಿ. ಮತಗಳ ಮೂಲಕ ಈ ಕಾರ್ಯ ಸಾಧ್ಯವಾಗದು ಏಕೆಂದರೆ ಮತಗಳೇ ಆಗ್ಗೆ ಜಡಗಟ್ಟಿದ್ದುವು. ಮನಃಶಾಸ್ತ್ರಜ್ಞರಿಂದ ವೈದ್ಯಕೀಯ ಪ್ರಯೋಗದ ಮೂಲಕ ಇದನ್ನು ತಪ್ಪಿಸಬಹುದೇ ಎಂದು ಯೋಚಿಸಿದಲ್ಲಿ, ಪ್ರಪಂಚದಲ್ಲಿರುವ ಎಲ್ಲ ಮನೋವೈದ್ಯರೂ ಮಾಸ್ಕೊ ನಗರ ಒಂದರ ಜನಕ್ಕೇ ಪ್ರಯೋಗ ಮಾಡಲು ಸಾಧ್ಯವಾಗಲಾರದು. ಸರ್ಕಾರಿ ಹತೋಟಿಯೂ ಸಹ ಕುಡಿತವನ್ನು ಕಡಮೆ ಮಾಡಲು ಸಾಧಕವಾಗಲಾರದು. ಈ ಎಲ್ಲ ವಿಚಾರಗಳಿಗೂ ಸಾಕಷ್ಟು ಅನುಭವ ಹಿಂದೆಯೇ ದೊರಕಿತ್ತು. ಈ ಸಭೆಯು "ಬಹು ಮಂದಿ ಈ ದಿನ ಕುಡಿಯುತ್ತಿರುವುದು, ಅವರ ಕಷ್ಟಮಯ ಜೀವನದಿಂದಲೇ ಹೊರತು ಕುಡಿತದಿಂದ ಕಷ್ಟಜೀವನ ಬಂತು ಎಂಬುದು ಸುಳ್ಳು. ಉತ್ತಮ ಜೀವನ ನಡೆಸಲು ಜನರಿಗೆ ಎಂದು ಸಾಧ್ಯವಾಗುವುದೋ, ಅಂದೇ ಕುಡಿತದ ಪ್ರಶ್ನೆ ಇತ್ಯರ್ಥವಾದೀತು" ಎಂದು ಅಭಿಪ್ರಾಯಪಟ್ಟಿತು.

ಸರ್ಕಾರ ಅಕ್ರಮ ಮದ್ಯ ತಯಾರಿಕಾಕಾರರನ್ನೆಲ್ಲ ನಿರ್ಮೂಲಮಾಡಬೇಕೆಂದು ನಿರ್ಧರಿಸಿತು. ಅದಕ್ಕಾಗಿ ಅವರು ಕೈಕೊಂಡ ಕ್ರಮ ಸ್ವಾರಸ್ಯವಾಗಿದೆ. ಮೊದಲನೆಯದಾಗಿ ಅಬ್ಕಾರಿ ತೆರಿಗೆಯನ್ನು ಪೂರ್ಣ ರದ್ದುಮಾಡಲಾಯಿತು. ಇದರಿಂದ ಮದ್ಯದ ಬೆಲೆ ಇದ್ದಕ್ಕಿದ್ದಂತೆಯೇ ಇಳಿದುಹೋಯಿತು. ಬೆಲೆ ಇಳಿಸಿದ ದಿನ ಅನಧಿಕೃತ ರಾಷ್ಟ್ರೀಯ ರಜಾದಿನವಾಗಿ ಘೋಷಿಸಲ್ಪಟ್ಟಿತು. ಅಂದಿನಿಂದಲೇ ಅಕ್ರಮ ಮದ್ಯ ತಯಾರಿಕಾಗಾರರು ದಿವಾಳಿ ಎದ್ದು ಹೆಸರಿಲ್ಲದಂತಾದರು. ಇದಾದ ಕೆಲವು ದಿನಗಳನಂತರ ಕಾರ್ಖಾನೆಗಳ ಬಳಿಯಲ್ಲೂ ರಜಾದಿನಗಳಲ್ಲೂ, ಸಂಬಳದಿನಗಳಲ್ಲೂ, ಮದ್ಯದ ಮಾರಾಟ ನಿಷೇಧ ಕಾನೂನು ಹೊರಡಿಸಿದರು. ಮಕ್ಕಳಿಗೆ ಮದ್ಯ ಕೊಟ್ಟವರಿಗೆ ಕಠಿಣಶಿಕ್ಷೆ ವಿಧಿಸಲಾಗುತ್ತಿತ್ತು. ಇದರೊಡನೆ, ಮದ್ಯದಿಂದ ಮೆದುಳು ಮತ್ತು ದೇಹದ ಮೇಲುಂಟಾಗುವ ಪರಿಣಾಮವನ್ನು ಜನರಿಗೆ ಪ್ರಚುರಪಡಿಸುತ್ತ ಬರಲಾಯಿತು. ಕುಡಿಯಬೇಡಿ ಎಂಬ ಪ್ರಚಾರ ಮಾಡಲೇ ಇಲ್ಲ. ಕುಡುಕರ ಸಂಖ್ಯೆ ಹೆಚ್ಚಿದ್ದ ಕಡೆ ಸರ್ಕಾರ ಹೊಸ ಮಾದರಿಯ ಕೇಂದ್ರಗಳನ್ನು ಸ್ಥಾಪಿಸಿತು. ಕುಡಿದು ಮತ್ತರಾಗಿ ಬಿದ್ದಿದ್ದವರನ್ನು ಪೋಲೀಸರು ಕೂಡಲೆ ಈ ಕೇಂದ್ರಕ್ಕೆ ಸಾಗಿಸುತ್ತಿದ್ದರು. ಕುಡುಕನಿಗೆ ಸ್ನಾನಮಾಡಿಸಿ, ವೈದ್ಯಪರೀಕ್ಷೆನಂತರ ವಿಶ್ರಾಂತಿಪಡೆಯಲು ಒಂದೆರಡು ದಿನಗಳ ಕಾಲ ಆ ಕೇಂದ್ರದಲ್ಲಿಯೇ ಆತ ಉಳಿಯಬೇಕಾಗಿತ್ತು. ಆತನ ವಿಳಾಸ ತಿಳಿದನಂತರ ಕಾರ್ಮಿಕ ಸಂಘದ ಸದಸ್ಯನಾಗಿದ್ದರೆ ಆ ಸಂಘಕ್ಕೆ ಕೂಡಲೆ ಆತನ ಹೆಸರನ್ನು ತಿಳಿಸುತ್ತಿದ್ದರು. ಸಂಘದವರು ಕಾರ್ಖಾನೆಯ ಬಳಿ ಒಂದು ದೊಡ್ಡ ಫೋಟೊ ಅಥವಾ ವ್ಯಂಗ್ಯ ಚಿತ್ರದೊಂದಿಗೆ ಅವನನ್ನು ಸ್ವಾಗತಿಸುತ್ತಿದ್ದರು. ಇಂತಹ ಪ್ರದರ್ಶನಗಳು ಪುನರಾವರ್ತಿಯಾಗಬೇಕಾಗಿದ್ದ ಕಾರ್ಮಿಕರಿಗೆ ಶಿಕ್ಷೆಯನ್ನು ವಿಧಿಸುತ್ತಲೂ ಇದ್ದರು. ಈ ವಿಧಾನ ಬಹು ಫಲಪ್ರದವಾಗಿ ನಡೆಯಿತು. ಸ್ನೇಹಿತರ ಮುಂದೆ, ಸಹೋದ್ಯೋಗಿಗಳ ಮುಂದೆ ಅವಮಾನ ಯಾರಿಗೂ ತಡೆಯಲಾಗದು.

ತಿಂಡಿ ಸಮೇತ ಸೇವಿಸಿದ ಮದ್ಯದಿಂದ ಹೆಚ್ಚು ಹಾನಿಯಿಲ್ಲವೆಂದೂ ಬರೀ ಮದ್ಯ ಮಾತ್ರ ದೇಹಕ್ಕೆ ಹಾನಿಕರವೆಂದೂ ವೈದ್ಯರು ಅಭಿಪ್ರಾಯಪಟ್ಟಿದ್ದರ ಮೇಲೆ ಸರ್ಕಾರ ಹೋಟೆಲುಗಳಲ್ಲಿ ತಿಂಡಿಯೊಡನೆ ಮದ್ಯ ಕೊಡುವುದನ್ನು ಪ್ರೋತ್ಸಾಹಿಸಿತು. ತಿಂಡಿ ಜೊತೆಗೆ ಹೆಚ್ಚಿಗೆ ಕುಡಿಯಲು ಸಾಧ್ಯವಿರಲಿಲ್ಲ. ಇದರಿಂದ ಕುಡುಕರೂ ಹೆಚ್ಚು ಕುಡಿಯಲು ಅವಕಾಶವಾಗುತ್ತಿರಲಿಲ್ಲ. ಈ ರೀತಿಯ ನಾನಾ ಕಾರ್ಯಗಳಿಂದ ಸರ್ಕಾರ ತನ್ನ ಗುರಿಯನ್ನು ಮುಟ್ಟಿತು. ಇಂದಿಗೂ ರಷ್ಯಾದಲ್ಲಿ ಈ ಸಮಸ್ಯೆಯು ವಿಚಾರವಾಗಿ ಭಿನ್ನಾಭಿಪ್ರಾಯವುಳ್ಳವರಿದ್ದಾರೆ. ನಿಯಮಿತ ವಿಧಿಗಳನನುಗುಣವಾಗಿ ಕುಡಿತವು ಅಷ್ಟು ಅಪಾಯಕಾರಿಯಲ್ಲವೆಂಬ ವಾದಿಗಳೂ ಇದ್ದಾರೆ. ಆದರೂ ಕುಡಿತದ ಸಮಸ್ಯೆ ರಷ್ಯಾದಲ್ಲಿ ಪರಿಹರಿಸಲ್ಪಟ್ಟಿದೆಯೆಂದೇ ಹೇಳಬಹುದು.

(ಪ್ರ ಪ್ರ) [illegible] ಎಲ್. ನಾರಾಯಣ

ಮಾನವ ವಿಜಯದ ಹೆದ್ದಾರಿ!
ಆರ್ಥಿಕ ಮತ್ತು ಸಾಂಪತ್ತಿಕ ಅನುಕೂಲತೆಯು ಇಂದಿನ ಮಾನವ ಜೀವನದ ವಿಜಯದ ಹೆದ್ದಾರಿ.
ಜನತೆಗೆ ಈ ಅನುಕೂಲತೆಗಳನ್ನೊದಗಿಸಿ ಸಾಂಪತ್ತಿಕ ಅಭಿವೃದ್ಧಿ ಸಾಧಿಸುವುದೇ ಬೇಂಕುಗಳ ಹೆಗ್ಗುರಿ
ದಿನೇ ದಿನೇ ಜನ ವಿಶ್ವಾಸಗಳಿಸಿ ಪ್ರಗತಿ ಹೊಂದುತ್ತಿರುವ
ದಿ ವಿಜಯ ಬೇಂಕ್ ಲಿಮಿಟೆಡ್.
ಇವರೊಡನೆ ನಿಮ್ಮ ವ್ಯವಹಾರ ಬೆಳಸಿ ಅನುಕೂಲತೆ ಪಡೆದು ಜೀವನದಲ್ಲಿ ವಿಜಯ ಸಾಧಿಸಿರಿ
ಗಿರಾಕಿಗಳ ಹಿತಸಾಧನೆ ಮತ್ತು ವಿಶ್ವಾಸ ಸಂಪಾದನೆಯು ವಿಜಯ ಬೇಂಕಿನ ಅಮೂಲ್ಯ ಸೊತ್ತು
The Vijaya Bank Ltd.,
Head Office, MANGALORE-3
Branches at
Udipi, Kaup, Coondapur, Byndoor, Karkal, Brahmavar, City-Mangalore, Kasaragod, Puttur, Kanhangad, Bombay & Mercara

ಶ್ರೀ ಕೆ. ಕೆ. ಶೆಟ್ಟಿ ನಿರ್ಭೀತ ಲೇಖನಿಯಿಂದ ಹೊರಹೊಮ್ಮಿದ
ನವೀನ ಸಾಮಾಜಿಕ ಕಾದಂಬರಿ
ಸನ್ಯಾಸಿಯ ಸೋಗಿನಲ್ಲಿ!
ವೇಶ್ಯಾಪುತ್ರಿಯಾದರೂ ನೀತಿವಂತ ಜೀವನ ನಡೆಸುವ ಮನಸ್ಸುಳ್ಳವಳಾದರ ಸಮಾಜವು ಅದಕ್ಕೆ ಹೇಗೆ ಅಡ್ಡಿ ಮಾಡಿ ಅವಳ ಜೀವನವನ್ನು ಕೆಡಿಸಲು ಕಾರಣವಾಗುವುದೆಂಬುದನ್ನು ಹೃದ್ರಾವಕವಾಗಿ ಚಿತ್ರಿಸುವ ಅತ್ಯ [illegible].
ಸನ್ಯಾಸದ ಮರೆಯಲ್ಲಿ ನಡೆಯುವ ವಿನ್ಯಾಸದ ಪ್ರತ್ಯಕ್ಷತೆ.
ಬೆಲೆ 0—10—0. ಇತರ ಪುಸ್ತಕಗಳ ಕೆಟಲಾಗಿಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.



ವಾರದ ಒಳಿತು ಕೆಡುಕುಗಳು

30-10-52ರಿಂದ ತಾ. 5-11-52ರ ವರೆಗೆ

ಮೇಷ—ಶ್ರಮ ಸಹಿಷ್ಣುಗಳಾದ ನಿಮಗೆ ಹೆಚ್ಚಿನ ಕಾರ್ಯಗಳಲ್ಲಿ ವಿಜಯದ ಯೋಗವಿದೆ. ನೀವೆಷ್ಟೇ ದುಡಿದರೂ ದಿನಾಂತ್ಯದಲ್ಲಿ ಕೈಕಿರಿದಾಗುವದು. ಸ್ತ್ರೀ ಧನಾಪ್ತಿಯ ಯೋಗವೂ ಕಾಣಿಸುವದು. ದೇಹದಲ್ಲಿ ನಿಶ್ಶಕ್ತಿ ಮತ್ತು ಕ್ಷೀಣತೆಯುಂಟಾಗಲಿದೆ ಅನಿರೀಕ್ಷಿತ ಪ್ರವಾಸವು ಪ್ರಾಪ್ತವಾದೀತು. ತಾ. 1, 2, 5, ಈ ದಿನಗಳಲ್ಲಿ ಮೃಷ್ಟಾನ್ನ ಭೋಜನ ಭೋಗಲಾಭ ಸುಖಗಳಿವೆ.

ವೃಷಭ— ಅದೃಷ್ಟ ಹೀನರಾದ ನಿಮ್ಮ ಪೌರುಷವಿಂದು ನಿಷ್ಫಲವಾದೀತು. ನಿಮ್ಮ ಆಶ್ರಯದಲ್ಲೇ ಇರುವ ದಾಸಭೃತ್ಯ ಪುತ್ರಾದಿಗಳು ಸದ್ಯ ನಿಮಗೆ ವಿಪರೀತವಾಗಿ ವರ್ತಿಸುವರು. ಸ್ತ್ರೀವರ್ಗದವರಿಂದಂತೂ ಅನಿಷ್ಟ ಅಪವಾದಾದಿಗಳು ತಪ್ಪಿದ್ದಲ್ಲವು. ಪ್ರತೀಕಾರಸಕ್ತರಾದ ಶತ್ರುಜನರಿಂದ ಹಲವಾರು ತರದ ಕಷ್ಟನಷ್ಟಗಳುಂಟಾದಾವು ವಿಜಾತಿಯವರೊಡನೆ ಕಲಹವಾಗುವದು ತಾ. 30, 31, 3, 4, ಈ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಕಾಣಿಸವು

ಮಿಥುನ— ಹೆದರಿದ ಹುಲ್ಲೆಯಂತೆ ನಿಮ್ಮ ಮನಸ್ಸು ಅತೀವ ಚಂಚಲವಾದೀತು ಮಾತ್ರವಲ್ಲ ಸದಾ ವಕ್ರಮಾರ್ಗವನ್ನೇ ಅನುಸರಿಸುವುದು. ನೇತ್ರೋದರ ಸಂಬಂಧವಾದ ಬಾಧೆಯುಂಟಾಗಲಿದೆ. ಕೈಹಿಡಿದಾಕೆಯು ಕಲಹಪ್ರಿಯಳಾಗುವಳು ಹಿಡಿದ ಕಾರ್ಯದಲ್ಲಿ ಫಲಾಪ್ತಿಯು ತೃಪ್ತಿಕರವಿರುವದು. ಉದ್ಯೋಗದಲ್ಲಿ ಪ್ರಗತಿ ಹೊಂದುವಿರಿ. ತಾ 3, 4. ಹೊರತಾದ ದಿನಗಳು ಅಭೀಷ್ಟಪ್ರದಗಳಿವೆ

ಕರ್ಕಟ—ನಿಮ್ಮ ಪ್ರಕೃತಿಯೆಂದು ಕಾರ್ಯಗಳು ನಿರೀಕ್ಷ್ಯದಿಂದ ನೆರವೇರುವವು ಸಂಪಾದ್ಯಾಗವು ಕೂಡ ಬಹು ಮಟ್ಟಿಗೆ ಸಂಧಾರಣೆಯಾಗಲಿದೆ. ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾದರೂ ತಂದೆ ಮಕ್ಕಳೊಳು ಗಂಡ ಹೆಂಡಿರೊಳು ಅನ್ಯೋನ್ಯವಿರದು. ಬೇಕಾದ ಸುಖ ಸೌಲಭ್ಯಗಳಿದ್ದರೂ ಸಮಯಕ್ಕೊದಗಲೊಲ್ಲವು. ಮನಸ್ಸು ಸದಾ ಚಿಂತಾಕುಲವಾಗಿರುವುದು. ತಾ. 1ರಿಂದ 4ರ ವರೆಗಿನ ದಿನಗಳು ಪ್ರಶಸ್ತವಿವೆ

ಸಿಂಹ—ಶನ್ಯಂಗಾರಕರನ್ನುಳಿದೆಲ್ಲ ಗ್ರಹರ ಪ್ರೀತಿಗೆ ಪಾತ್ರರಾದ ನಿಮಗೀವಾರವು ಅತೀವ ಸುಖ ಲಾಭದಾಯಿಯಾಗುವುದೆಂಬುದರಲ್ಲಿ ಸಂದೇಹವಿಲ್ಲವು, ವ್ಯಾಪಾರ ವ್ಯವಹಾರ ಮೊದಲಾದ ಉದ್ಯಮಗಳಲ್ಲಿ ಹೆಚ್ಚಿನ ಪ್ರಗತಿ ಹೊಂದುವಿರಿ ಜನತೆಯ ಗೌರವಾದರಗಳಿಗೆ ಪಾತ್ರರಾದ ನಿಮಗೆ ವಾರಾದಿಯ 4 ದಿನಗಳಲ್ಲಿ ರಾಜ ಭಯ ಉದರ ಶೂಲೆ ದೇಹಾಲಸ್ಯಗಳು ಕಂಡು ಬರುವವು

ಕನ್ಯಾ—ಕಾಲವು ಅತೀವ ಪ್ರತಿಕೂಲಾವಸ್ಥೆಗೆ ಬಂದಿರುವದು, ಯಾವ ಕಾರ್ಯಕ್ಕೆ ಕೈಹಚ್ಚಿದರೂ ನಿರಾಶೆಯೇ ಮುಂದಾಗಿ ತೋರುವದು ಸ್ವಜನರ ವಿಯೋಗದಿಂದ ದುಃಖಿತರಾಗುವಿರಿ. ಅನಿವಾರ್ಯ ಪ್ರವಾಸಗಳೊದಗಿ ಹೆಚ್ಚಿನ ಕಷ್ಟ ನಷ್ಟವು ಪ್ರಮುಖ್ಯೇ ದುಮಾಡುವವು. ಕಫ ದೋಷದಿಂದ ಆರೋಗ್ಯಕ್ಕೆ ಹೆಚ್ಚಿನ ಧಕ್ಕೆ ತಗಲೀತು. ಆರ್ಥಿಕ ಬಿಕ್ಕಟ್ಟಿನಿಂದ ಬಳಲತಕ್ಕ ನಿಮಗೆ ತಾ. 30, 31, 5, ಈ ದಿನಗಳು ಹೆಚ್ಚಿನ ಕಷ್ಟದಾಯಿಗಳಾಗಲಾರವು,

ತುಲಾ—ನಿಮ್ಮ ಬಯಕೆಗಳು ಅಚಿರದಲ್ಲಿ ನೆರವೇರುವವು ಜನಧನ ಬೆಂಬಲಯುಕ್ತರಾದ ನಿಮಗೆ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ವಿಜಯವು ಕಟ್ಟಿಟ್ಟ ಗಂಟಿನಂತಿರುವುದು, ಹಿಂದಿನ ಸಾಲ ಕಡಗಳಿಂದ ಮುಕ್ತರಾಗಿ ಕೈಯಲ್ಲಿ ಸದಾ ಹಣವು ಓಡಾಡುತ್ತಿರುವುದು ವಾರಾಂತ್ಯದ 3 ದಿನಗಳಲ್ಲಿ ಆಪ್ತಜನರ ವಿಯೋಗ ಅಧಿಕಾರಿಗಳ ಭಯ ಕಿಂಚಿದ್ದೇಹಾಲಸ್ಯವು ಕೂಡ ಕಂಡು ಬಂದೀತು.

ವೃಶ್ಚಿಕ— ಹಿಂದೆ ನೀವೆಲ್ಲೆಲ್ಲಿ ಪುರಸ್ಕೃತರಾಗುತಿದ್ದಿರೋ ಅಂದಿಲ್ಲಿ ನಿಮಗೆ ತಿರಸ್ಕಾರವು ಪ್ರಾಪ್ತವಾಗುವದು ಗುರುಜನರ ವಿರೋಧದಿಂದಾಗಿ ದೈವವು ನಿಮ್ಮ
ಮುನಿವದು. ಕಷ್ಟಪಟ್ಟು ದುಡಿದ
ಕೂಡ ವ್ಯರ್ಥವಾಯವಾಗಲಿವೆ, ವಿನಾ
ಕಲಹ ಜಗಳಗಳುದ್ಭವಿಸುವವು
ತಾ. 1, 2, 3, 4 ಈ ದಿನಗಳಲ್ಲಿ ನಿಮ್ಮ
ತ ಸುಖ ಭೋಗಗಳಿಗೆ ಕೊರತೆಯಾಗ

ಧನು - ಪುತ್ರಭೃತ್ಯಾದಿಗಳಿಂದ
ಡಿದ ಗೃಹಪರಿವಾರವು ನಿರಾಮಯವಾ
ತು, ಧನಧಾನ್ಯಗಳಿಗೇನೂ ಕೊರತೆ
ದು. ಸಮಾಜದಲ್ಲಿ ಸ್ಥಾನಮಾನಗಳೂ
ಲಿವೆ ಶತ್ರು ಜನರು ನಾನಾ ರೀತಿಯ
ಪ್ರವೀಣರಾಗಿರುವರು. ತನ್ನಿಮಿತ್ತ
ಆರ್ಥಿಕ ಹಾನಿಯೂ ಸಂಭವಿಸಲಿದ
ರಾಂತ್ಯದ 3 ದಿನಗಳಲ್ಲಿ ನಿಮ್ಮ ಬಯ
ನಿರ್ವಿಘ್ನದಿಂದ ನೆರವೇರಲಿದೆ.

ಮಕರ—ನಿಮ್ಮ ಪರಿಶ್ರಮಕ್ಕೆ
ಮ್ಮಡಿ ಫಲ ಲಾಭವಿದೆ ವ್ಯಾಪಾರ ವ್ಯ
ರಗಳಲ್ಲಿ ಒಳ್ಳೆ ಪ್ರಗತಿ ಕಾಣುವದು ಸ್ತ್ರೀ
ವಿಗಳಿಗೆ ಈ ಸಮಯವು ಅನುಕೂಲವಿ
ದಿನೆಯ ಬಹ್ವಂಶವು ಡಾಕ್ಟರರ ಕಿಸೆ
ದೆ ಪಿತ್ಥಪ್ರಕೋಪದಿಂದಾಗಿ ದುಃಖ
ಳು ಬೀಳುವವು. ತಾ. 30, 31, 5
ಗಳಲ್ಲಿ ಧನ ಲಾಭ ವಿಜಯ ನಿಮ್ಮ
ಲಭಿಸುವವು.

ಕುಂಭ— ಕೈ ಕೆಸರಾದರೆ
ಮೊಸರಾದೀತು ಕಷ್ಟಪಟ್ಟು ದುಡಿ
ಸ್ವಾರ್ಥ ಪಡೆಯಿರಿ ಈ ವಾರದಲ್ಲಿ
ಹಣದ ಅಡಚಣೆಯು ಕಾಣಿಸದು
ಗೃಹತಾಪತ್ರಯಗಳು ದಿನದಿಂದ ದಿನ
ಚ್ಚಲಿದೆ ಎಂತಹ ಮಾತಾಳಿಗೂ ಮಾ
ಬೇರೆ ತಪ್ಪಿದ್ದಿಲ್ಲವು. ತಾ. 1, 2, ಹೊ
ಉಳಿದ ದಿನಗಳು ಹಿತಕರಗಳಲ್ಲವು

ಮೀನ— ಇಷ್ಟಕ್ಕಿಂತ ದ್ವಿಗು
ಷ್ಟಗಳು ಕಾಣಿಸಲಿವೆ ನಿಮಗೀವಾರ
ರಾಪೇಕ್ಷೆಯಿಲ್ಲದೆ ಸ್ವಯಂ ಖರ್ಚಿಗೆ ತ
ಹಣವನ್ನು ದುಡಿವಿರಿ. ಆದರೆ ಸಿಂತ
ಲು ನಿಮಗವಕಾಶ ಲಭಿಸಲಾರದು
ಗ್ಯವು ಕೂಡಾ ಪಿತ್ಥದೋಷದಿಂದ
ಗಂಡಹೆಂಡಿರೊಳು ಐಕ್ಯವಿರದು ಸ
ಮತ್ತು ಬಂಧುವರ್ಗದವರ ಬೆಂಬಲ
ರಾದ ನಿಮಗೆ ತಾ. 30, 31, 3, 4,
ಗಳಲ್ಲಿ ಲಾಭವಿಜಯ ಭೋಗಗಳಿವ

ಉಡುಗೆ ತೊಡುಗೆ

(೧ನೇ ಪುಟದಿಂದ ಮುಂದುವರಿದುದು)

ಉಡುಪು ತೊಡುಪು ಧರಿಸಲು ಚಪಡಿಸುವುದು ಅವರ ಮನಸ್ಸಿನ ಚಾಂಚಲ್ಯದ ದ್ಯೋತಕಮಾತ್ರ. ಮಕ್ಕಳು ತಾಯಿಯನ್ನು ತನ್ನೆಡೆಗೆ ಸೆಳೆಯಲು ಅತ್ತು ಕರೆದು ರಂಪಾಟ ಮಾಡುವಂತೆ, ನೈಜ್ಯ ಭಾವ ನೆಲೆಗೊಂಡವರು ಉಡುಗೆ ತೊಡುಗೆಯಿಂದಾದರೂ ಜನರನ್ನು ಆಕರ್ಷಿಸುವ ಉಪಾಯವನ್ನು ಆಶ್ರಯಿಸುತ್ತಾರೆ. ಆಂತರಿಕ ಅಸಂತೋಷವನ್ನು ದೂರೀಕರಿಸಲು ಬಾಹ್ಯ ಸೌಕರ್ಯವನ್ನು ಉಪಯೋಗಿಸಿಕೊಳ್ಳುವ ಜನರೂ ಇದ್ದಾರೆ ತರಗತಿಯಲ್ಲಿ ಬುದ್ಧಿವಂತನೆನಿಸಿಕೊಳ್ಳದ ವಿದ್ಯಾರ್ಥಿಯೊಬ್ಬ, ಬೆಳಗ್ಗೆಯೊಂದ, ಸಂಜೆಗೆ ಒಂದು ಒಗೆಯ ಉಡುಪು ಧ[illegible] ಎಲ್ಲರ ಕಣ್ಣನ್ನು ಆಕರ್ಷಿಸಲು ಹವಣಿಸಬಹುದು. ಸಾಮಾನ್ಯ ಕ್ಲಾರ್ಕಿನ ಗೃಹಲಕ್ಷ್ಮಿ ಎರವಲು ತಂದ ಬೆಲೆಯುಳ್ಳ ವಸ್ತ್ರಾಭರಣ ಭೂಷಿತೆಯಾಗಿ—ನಾನೇನು ಕಡಮೆ ಎಂದು ಜಂಭಪಟ್ಟುಕೊಳ್ಳಬಹುದು

ಆದರೆ ಇವೆಲ್ಲ ಟೊಳ್ಳು ಉಡುಗೆ ಮೈ ಮುಚ್ಚಿದರೆ ಸಾಲದ, ಮನ ಮೆಚ್ಚುವಂತಿ ಬೇಕು ಎಂಬುದೇ ನಿಜ ಹಾಗೆಂದು ವ್ಯರ್ಥದ ಖರ್ಚು ವೆಚ್ಚಗಳಿಗೆ ಅಸ್ಪದ ಕೊಡುವ ವೈಭವ ಪ್ರದರ್ಶನ ತೀರ ಅನರ್ಥಕಾರಿ ವ್ಯಕ್ತಿತ್ವದ ಸ್ವಾಭಾವಿಕ ಸೌಂದರ್ಯವನ್ನು ಉಡುಗೆ ತೊಡುಗೆಗಳ ಕೃತ್ರಿಮ ಚೆಲುವಿನಿಂದ ಎಂದಿಗೂ ಪಡೆಯಲಾರೆವು ನಮಗೆ ಶೀಲ ಗುಣ ಮುಖ್ಯ—ಆಡಂಬರದ ಉಡುಗೆ ತೊಡುಗೆಯಲ್ಲ.

—ಓಂತತ್ಸತ್||

ಸ್ತ್ರೀ ಪುರುಷ ಶಿಶುಗಳು ರೋಗದಿಂದ ನರಳಬೇಕಾಗಿಲ್ಲ!
ಲಕ್ಷಾಂತರ ಜನರು ಗುಣಹೊಂದಿದ್ದಾರೆ!
ಸಂಜೀವನ್ ಶಿಲಾಜಿತ್ ಲೇಹ್ಯ
ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ, ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.
೪೪ ದಿನದ ಲೇಹ್ಯ ರೂ ೫/೪, ೨೨ ದಿನದ ಲೇಹ್ಯ ರೂ ೩/೪
(ಪೋಸ್ಟೇಜು ಮಾಫ)
ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

KING OF TONIC
SILAJITH LAYHAM

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆ
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಟೈಫಿನ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ್

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910
ಸ್ಥಾಪಕರು.-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ದೇಶಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು
ಹೆಚ್ಚಿನ ಮಾಹಿತಿಗೆ—ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ವಾಕಿಸ್ತರು.—ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟಿನ



ಋತುಸ್ರಾವ ನಿಂತಿ
'ಕುಮಾರಿ' ಬಿಲ್ಲೆಗಳನ್ನು ಉಪ
ಗಿಸಿದರೆ ಹದತಪ್ಪಿ ಋತುಸ್ರಾವವಾ
ದು, ಹಕೋಟಿಗೆ ಬರುವುದು. ಈ
ಸೇವನೆಯಿಂದ ತೀವ್ರ ಗುಣಹೊಂ
ದುದು. ಯಾವ ಬಾಧಕವೂ ಇಲ್ಲ.
ರಾಮ ಮುಂದಿಗೆ ಖಾತ್ರಿ ಗುಣವಾ
ಬೆಲೆ, ರೂ. 3, ಸ್ಪೆಶಲ್ ರೂ
ಅಧಿಕಾಧಿಕ ಸ್ಪೆಶಲ್ ರೂ. 8
ಹನ್ನೆರಡಾಣೆ ಪ್ರತ್ಯೇಕ]
MIS P. DEVEE, F D8 (N
Tollygunge CALCUTTA
ಪ್ರತಿನಿಧಿ. ಶಹಾ ಕಂಪೆನಿ, ಮಂಗ

ವಿವಿಧ ಪಾತ್ರೆಗ
ಯಾವತ್ತೂ
ದ ಬೆಳ್ಳಿ,
ಹಿತ್ತಾಳೆ,
ಮೊದಲಾ
ಳ ವಿವಿಧ
ಗಳೂ ಸಾ
ಳೂ ದಖ
ಯ ಚಿಲ್ಲರೆಯಾಗಿಯೂ ದೊರೆಯು
ಕಲ್ಯಾಂಜೆ ವ್ಯಾಸಾಚಾರ್ಯ
ರಥಬೀದಿ, ಉಡುಪಿ.



Edited, Printed & Published by K. H. Shetty at the Navayuga Press, Udipi, S. India.

. No. 618 | LICENCE No. 31 Licensed to Post without Prepayment

6-11-1952

Estd 1921 ಸ್ಥಾಪನೆ
32ನೆಯ ವರ್ಷ

Founder: Sri A. B. Shetty.
Minister for Medical & Public Health

ನವಯುಗ
ಆರೋಗ್ಯ ಮಂತ್ರಿ
ಎ. ಬಿ. ಶೆಟ್ಟರಿಂದ
ತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ.

ಚಂದಾ 5-12-0
ಂಗಳಿಗೆ 3-0-0
ಪ್ರತಿಗೆ 0-2-0

ನವಯುಗ

ol 32
o. 10
NAVAYUGA WEEKLY POST BOX NO. 22 UDIPI
ವರ್ಷ ೩೨
ವಾರ ೧೦

ಅಂತರಂಗ
ಪುಸ್ತಕ ಪತ್ರಿಕೆಯ
ಉಪಯುಕ್ತವಾದ
86 ಪುಸ್ತಕಗಳು
ರೂ 24ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ.

"ಜನರೆಲ್ಲಿಯಾದರೂ ನನ್ನ ನಿಂದೆ ಮಾಡುವಂತಾಗಬಾರದಲ್ಲ! ನನ್ನ ಕೆಲಸ ನೋಡಿದವರು ಕೈತಟ್ಟಿ ನಗಲು ಅವಕಾಶ ದೊರೆಯಬಾರದಲ್ಲ!"—ನಮ್ಮಲ್ಲಿ ಹಲವು ಜನರ ತಲೆಯಲ್ಲಿ ಈ ತೆರನ ಭಯವು ಸದಾ ಸುಳಿಯುತ್ತಲಿದೆ ಈ ಭಯವು ತೀರಾ ಸಾಮಾನ್ಯ ಪ್ರಕೃತಿಯಾಗಿ ಬಿಟ್ಟಿದೆಯಾದುದರಿಂದ, ಯಾರೊಬ್ಬರೂ ಇದನ್ನೊಂದು ಅವಗುಣವಾಗಿ ತಿಳಿಯುವುದಿಲ್ಲ. ತಮ್ಮ ಕೆಲಸ ಕಾರ್ಯಗಳೂ ಮಾತುಕತೆ–ನಡವಳಿಕೆಗಳೂ ಹಾಸ್ಯಾಸ್ಪದವೆಂದೆಲ್ಲಿ ಎಣಿಸಲ್ಪಡುವವೋ ಎಂಬ ಭಯದ ಭಾವನೆ ಅಂಥವರಲ್ಲಿ ಸದಾ ಜಾಗರೂಕವಾಗಿರುತ್ತದೆ. ಆದರೆ ಅಂಥ ಸ್ಥಿತಿಯಲ್ಲೂ ಒಂದು ಸೋಜಿಗವಿದೆ. "ಜನ ನನ್ನ ಬಗ್ಗೆ ಏನು ಹೇಳುತ್ತಾರೆ, ಮತ್ತೇನು ಎಣಿಸುತ್ತಾರೆ ಎಂಬ ಕುರಿತು ನನಗೆ ತಿಲಾಂಶವೂ ಲಕ್ಷ್ಯವಿಲ್ಲ--ನಾನದನ್ನು ಲೆಕ್ಕಿಸುವುದೇ ಇಲ್ಲ-" ಎಂದು ಜನರು ಘಂಟಾ ಘೋಷವಾಗಿ ಸಾರುವುದೊಂದು ಚೋದ್ಯ! ಇದು ಬಹಿರಂಗವಾಗಿ ಮುಖವುಳಿಸಿಕೊಳ್ಳಲು ಈ ಬೀ ಳು ನಡೆಸುವ ಹಂಚಿಕೆಯೇ ಹೊರತು, ಬೇರೇನಲ್ಲ. ಅವರ ಹೃದಯ ಗಹ್ವರದಲ್ಲಿ ಲೋಕ ನಿಂದೆಯ ಹೆದರಿಕೆ ಬೇರು ಬಿಟ್ಟಿರುವುದೇ ನಿಜ. ಈ ಭಯದಿಂದ ತತ್ತರಿಸುತ್ತಾ "ಜನ ನನ್ನ ನಿಂದೆಮಾಡುವಂತಾಗಬಾರದು, ನೋಡಿ ನಗುವಂತಾಗಬಾರದು." ಎಂದು ಯೋಚಿಸುವುದೇ ಅವರ ಕರ್ತವ್ಯ.

ಮನುಷ್ಯನಲ್ಲಿ ಅನಾದಿಕಾಲದಿಂದಲೂ ಲೋಕನಿಂದೆಯ ಹೆದರಿಕೆ ಇದ್ದೇ ಇತ್ತು ದರಲ್ಲೂ ಇಂದು ಸಂಸ್ಕೃತಿಯು ವೈಶಿಷ್ಟ್ಯ ಹೆಚ್ಚಿದಂತೆ, ನಾಗರಿಕತೆ ಉತ್ಕರ್ಷದ ಮೆಟ್ಟಿಲು ಮುಟ್ಟಿದಂತೆ, ಸಾಮಾಜಿಕ ತಿಳುವಳಿಕೆ ಹೆಚ್ಚುತ್ತಾ ಬಂದಂತೆ– ಲೋಕ ನಿಂದೆಯ ಭಯವೂ ಅತ್ಯಧಿಕವೆನಿಸಿದೆ ಚಿಂತೆಯ ಭಾರವು ನಮ್ಮ ನಾಲಿಗೆ ವಿ ಹರಿದೆ. ತನ್ನ ಕೆಲಸವನ್ನು, ಕರ್ತವ್ಯವುದನ್ನು, ಮಾಡುವ ಬದಲು ಇಂದು ಮನುಷ್ಯ ಜನರ ಸಂತೋಷದ ಕುರಿತು ಹೆಚ್ಚು ಆಸಕ್ತಿ ತೋರುತ್ತಾನೆ. ಲೋಕ ಸಮ್ಮತಿಪಡೆಯಲು ನೋಡುತ್ತಾನೆ ಹೀ ಮಾಡುವಾಗ ಒಂದು ಕ್ಷಣವಾದರೂ ಲೋಕವೆಂದರೆ ತನ್ನಂಥ ದುರ್ಬಲ ವ್ಯಕ್ತಿಗಳ ಬೀಡೇ ಅಲ್ಲವೇ ಎಂಬ ವಿಚಾರ ಬರುತ್ತಿದ್ದರೆ, ಎಲ್ಲರೂ ತನ್ನ ನೆರೆಹೊರೆಯವರ ಗುಣದೋಷಗಳನ್ನು ಆಯ್ದು ಡುವವರೇ ಎಂಬ ಸತ್ಯದರ್ಶನ ವಾಗುತ್ತಿದ್ದರೆ, ಹೀಗೆ ಭಯವಿಹ್ವಲರಾಗುವ ಸಂದರ್ಭ ಬರುತ್ತಿರಲಿಲ್ಲ.

[illegible]

ಎಚ್. ಜಿ. ವೆಲ್ಸನ ಒಂದು ಕತೆ ಹೀಗಿದೆ —

ಯಮಧರ್ಮರಾಯನ ಸಭೆಸೇರಿತ್ತು. [illegible] ಭೂಮಿಯಿಂದ ಮೃತವ್ಯಕ್ತಿಗಳ ಆತ್ಮ ಯಮಧರ್ಮರಾಯನ ಸಭೆಯನ್ನು ಪ್ರವೇಶಿಸುತ್ತವೆ. ಲೋಕದಲ್ಲಿ ತಾವೇನು ಮಾಡಿದೆವೆ ಎಂಬ ಲೆಕ್ಕಾಚಾರವನ್ನು ಅವರು ಯಮನೆದುರು ಒಪ್ಪಿಸಬೇಕು.

ಒಬ್ಬೊಬ್ಬರೇ ತಮ್ಮ ಹೇಳಿಕೆಯನ್ನು [illegible] ಅವರ ಮಾತಿನ ಮೇಲೆ ಹೇಳುವುದಾದರೆ, ಪ್ರತಿಯೊಬ್ಬನೂ [illegible] ಗಳನ್ನು ಮಾಡಿದ [illegible] ಒಬ್ಬೊಬ್ಬನ ವ್ಯಕ್ತಿತ್ವವೂ ಪ್ರತ್ಯೇಕ [illegible] ಆದರೆ ಯಮನು ಅವರು ಹೇಳುವುದರ ಮೇಲೆ ನಂಬಿಕೆ ಮಾಡದೆ ಚಿತ್ರಗುಪ್ತರ ಕಡೆ ತಿರುಗುತ್ತಾನೆ

"ಈ ಜನ ಹೇಳುವುದರಲ್ಲಿ ಅರ್ಧ ಸತ್ಯವಿದೆ — ಎಂದು ಚಿತ್ರಗುಪ್ತರು ಹೇಳಿ ತಮ್ಮ ದಫ್ತರ ತೆಗೆದು ಓದುತ್ತಾರೆ. ಅವರು ಓದುವುದನ್ನು ಕೇಳುತ್ತ ಹೋದಂತೆ ಭೂಲೋಕದಲ್ಲಿ ವೈಭವ ಕಾರ್ಯಗಳನ್ನು ಮಾಡಿದ್ದವೆ [illegible] ಜನರೆಲ್ಲಾ ತಲೆತಗ್ಗಿಸುತ್ತಾರೆ. ಚಿತ್ರಗುಪ್ತರ ದಫ್ತರದಲ್ಲಿ ಒಳ್ಳೆಯ ಕೆಲಸಗಳಿಗಿಂತ ಸಾವಿರ ಪಾಲು ಹೆಚ್ಚು ಹಾಸ್ಯಾಸ್ಪದ ಕಾರ್ಯಗಳ ವಿವರವೇ ಇತ್ತು. [illegible] ಮನುಷ್ಯಾತ್ಮರೆಲ್ಲ ಕೈಯಿಂದ ಮುಖಮುಚ್ಚಿಕೊಂಡರು

ಆಗ ಯಮ ಹೇಳುತ್ತಾನೆ—"ಈಗ ನೀವೆಲ್ಲ ಒಬ್ಬರನೊಬ್ಬರನ್ನು ತಿಳಿದು ಕೊಂಡಿರುತ್ತೀರಿ — ಈಗ ಮರಳಿ ಭೂಲೋಕಕ್ಕೆ ಹೋಗಿ, ನಿಮ್ಮ ಕರ್ತವ್ಯವನ್ನು ದಕ್ಷತೆಯಿಂದ ನೆರವೇರಿಸಿರಿ

ಲೋಕನಿಂದೆ

ಹಾಗಾದರೆ ಲೋಕನಿಂದೆಯ ಹೆದರಿಕೆ ಬೇಡವೇನು? ಜನರು ನಕ್ಕುಬಿಡುವಂಥ ಹಾಸ್ಯಾಸ್ಪದ ಕೆಲಸವನ್ನು ಮಾಡಬಹುದೇ? ನನಗೆ ನಾಚಿಕೆ ಎಂಬುದಿರುವಾಗ, ಯಾರೇ ಆಗಲೀ ಲೋಕ ನಿಂದೆಗೊಳಪಡುವ ಕೆಲಸ ಮಾಡಿಯಾರೇ? - ಸರಿ, ವಿವೇಕಪೂರ್ಣವಾಗಿ ಕಾರ್ಯಾರಂಭಿಸುವವರು ಎಂದಿಗೂ ಹೀಗೆಲ್ಲ ನಡೆಯಗೊಡರು [illegible] ದರೆ ಅವಿವೇಕದ ಸಂಚಾಂಗದಲ್ಲೇ ವಿವೇಕದ ಭವನ ನಿಂತಿದೆ! ಜೀವನದಲ್ಲಿ ಅವಿವೇಕದ ಬಲವೇ ಹೆಚ್ಚಿದ್ದು, ವಿವೇಕ ಬಹಳ ಕಡಿಮೆ ಇದೆ ಸಾಕ್ರೆಟಿಸನ ಒಂದು ಮಾತು ಹೀಗೆ ಇದೆ 'ವಿವೇಕಿ ಎನ್ನುತ್ತಿಯಾದರೆ, ಅವಿವೇಕವನ್ನು ತೊಡೆಯಲು ತೋರಿಸು.' ಆದುದರಿಂದ ಅವಿವೇಕದ ಕೆಲಸವೆಂದ ನಡೆವುದು ವಿವೇಕವು

ಇಂಗ್ಲೆಂಡಿನ ಸರ್ ಅಲೆಕ್ಸಾಂಡರ್ ಕ್ಲಟರ್ ಬಕ್, ಅವರು ಇಂಡಿಯಾದಲ್ಲಿ ರಾಯಭಾರಿಯಾಗಿ ದಿಲ್ಲಿಗೆ ಬಂದು ಭಾರತದ ರಾಷ್ಟ್ರಾಧ್ಯಕ್ಷ ಡಾ। ರಾಜೇಂದ್ರ ಪ್ರಸಾದರಿಗೆ ತಾ 8-10-52ರಲ್ಲಿ ನವ ದೆಹಲಿಯಲ್ಲಿ ರಾಯಭಾರತ್ವದ ಪತ್ರವನ್ನು ಒಪ್ಪಿಸುತ್ತಿರುವ ನೋಟ

ಹಾಗಾದರೆ ಅವಿವೇಕದ ಕೆಲಸವನ್ನು ಮಾಡುತ್ತಾ ಹೋದರೆ ಜೀವನದಲ್ಲಿ ಪ್ರಗತಿಗೆ ಬಂಧಕವುಂಟಾಗದಿಲ್ಲವೇ? ಈ ಸಂದೇಹ ನಿಜವಿದ್ದೀತು ಆದರೆ ಒಂದು ವಿಷಯ ನೀವು ಏಕಾಗಿ ನಿಮಗಿಷ್ಟು ಮಹತ್ವ ಕೊಡುತ್ತೀರಿ? ಲೋಕ ನಿಮ್ಮನ್ನು ನೋಡಿ ನಗುವುದೆಂದೂ ನಿಂದಿಸುವುದೆಂದು ಎಣಿಸುವುದೇಕೆ? ತನ್ನದೇ ರೀತಿಯಲ್ಲಿ ಸಮಯದೊಡನೆ ಶೀಘ್ರ ಹೆಜ್ಜೆಯಿಟ್ಟು ಮುನ್ನಡೆಯುವ ಲೋಕಕ್ಕೆ, ನಿಮ್ಮ ಗುಣಾವಗುಣಗಳ ಕಡೆಗೆ ದೃಷ್ಟಿ ಕ್ಷೇಪ ಮಾಡುವಷ್ಟು ಅವಕಾಶವಾದರೂ ಎಲ್ಲಿದೆ? ನೀವಿಟ್ಟ ಹೆಜ್ಜೆ ಅವಿವೇಕದ ಪ್ರತೀಕವೆಂದು ತಿಳಿದು, ನಿಮ್ಮೆಡೆಗೆ ಬೊಟ್ಟು ಮಾಡಿ, ಅಟ್ಟಹಾಸದಿಂದ ನಕ್ಕುಬಿಡಲು ಅದಕ್ಕೆ ವ್ಯವಧಾನವಿದೆಯೇ? ನಾವೆಲ್ಲರೂ ಲೋಕದ ಅಂಗವಾಗಿರುವುದರಿಂದ ನಮ್ಮ ಬಗ್ಗೆ ನಾವೇ ಯೋಚಿಸಬಹುದು ಆದರೆ ಅಗತ್ಯಕ್ಕೂ ಹೆಚ್ಚು ನಮ್ಮ ವ್ಯಕ್ತಿತ್ವಕ್ಕೆ ಮಹತ್ವ ಕೊಡುವುದು ಸಲ್ಲದ

ಇಂದು ವೇಳೆ, ಲೋಕ ನಮ್ಮ ಮೇಲೆ ಕಣ್ಣು ಇಟ್ಟಿತೆಂದೇ ತಿಳಿದುಕೊಳ್ಳೋಣ ಇದರಿಂದ ನಾವು ಹೆದರಿ ಕೈಕಾಲು ಬಿಡುವುದೇಕೆ? ನಾವು ಮಾಡಿದ ಕೆಲಸದಲ್ಲಿ ಲೋಕದ ಜನ ನಗುವಂಥದಿದೆ ಎಂದೇಕೆ ಎಣಿಸಬೇಕು? ನಮ್ಮಲ್ಲಿ ಭಾವೋದ್ರೇಕಗಳನ್ನು ಸಂಯಮಿಸಿ, ನಮ್ಮ ನಿಶ್ಚಿತ ದೃಷ್ಟಿಕೋಣದಿಂದ ನೋಡಿ, ಒಂದು ವಿಚಾರವನ್ನು ಹತ್ತು ಜನರ ಮುಂದಿಟ್ಟರೆ—ಮತ್ತು ನಮ್ಮ ವಿಚಾರ ಸರಿ ಎಂಬ ಆತ್ಮವಿಶ್ವಾಸವಿದ್ದರೆ—ಲೋಕನಿಂದೆಯ ಹೆದರಿಕೆ ತಿಲಾಂಶವೂ ಆಗುವುದಿಲ್ಲ ನಮ್ಮ ದಾರಿ ಸರಿ ಎಂದ ನಮಗೆ ನಂಬಿಕೆ ಇರುವಾಗ ಸಾರ್ಥಕ ಮಹತ್ವದ ವಿಷಯ ಲೋಕ ಈ ಕ್ಷಣ ನಮ್ಮನ್ನು ಕಂಡು ನಕ್ಕುಬಿಟ್ಟಿತೆಂದರೆ ಬಿಡಲಿ!—ನಮಗದರಿಂದೇನು? ಇಂದಲ್ಲ ಒಂದು ದಿನ ಅದೇ ಲೋಕ ನಮ್ಮ ವಿಜಯವನ್ನು ಪ್ರಶಂಸಿಸುವುದು ನಿಶ್ಚಯ.

ಲೋಕ ನಿಂದೆಯ ಭಯದಿಂದ ನಮಗೆ ಸರಿಕಂಡುದನ್ನು ಮಾಡುವುದಕ್ಕೆ ಹಿಂಜರಿಯುವುದು ಪ್ರಶಂಸಾರ್ಹವಲ್ಲ ನಮ್ಮ ಕೆಲಸದಿಂದ ಕಲ್ಯಾಣ ಸಾಧನೆಯಾಗುವುದೆಂದಿದ್ದರೆ, ಜನರ [illegible] ಎಂಬ [illegible] ಗಾಂಧೀಜಿಯವರ ಸತ್ಯಾಗ್ರಹದಂತೆ ಅಸ್ತ್ರವನ್ನು ಸ್ವ

[ನೇ ಪುಟ ನೋಡಿರಿ]

ಮೋಟಾರು ವಾಹನಗಳ ತಯಾರಿಕೆ

ನಮ್ಮಲ್ಲಿ ಕೌಶಲ್ಯವಿದ್ದರೂ ಅಭಿವೃದ್ಧಿಗೆ ಅನುಕೂಲ ಸ್ಥಿತಿ ಇಲ್ಲ.

ಮೋಟಾರು ವಾಹನಗಳು ಇಂದು ತುಂಬ ಜನಪ್ರಿಯವಾಗಿವೆ. ಪ್ರಯಾಣಿಕರನ್ನೊಯ್ಯುವ ಬಸ್ಸುಗಳನ್ನೂ ಸಾಮಾನುಗಳನ್ನೊಯ್ಯುವ ಲಾರಿಗಳನ್ನೂ ಹಳ್ಳಿಹಳ್ಳಿಯಲ್ಲೂ ಇಂದು ಕಾಣಬಹುದು ಹಾಗೆಯೇ ಮೋಟಾರು ಕಾರುಗಳು ಕೂಡ ಬಹಳಷ್ಟು ಕಾಣಸಿಗುತ್ತವೆ. ಅಮೇರಿಕೆಯಂತೆ ಮನೆಗೊಂದು ಕಾರು ನಮಗಿಲ್ಲದಿದ್ದರೂ, ಕಾರು ತಿರುಗಾಡದ ಪಟ್ಟಣ ಪಟ್ಟಣವಲ್ಲ ಎಂಬಷ್ಟರ ಮಟ್ಟಿಗೆ ಕಾರಿನ ಜನಪ್ರಿಯತೆ ಹೆಚ್ಚಿದೆ. ಇನ್ನು ಸಂರಕ್ಷಣಾ ಕಾರ್ಯಕ್ಕೆ, ಆರೋಗ್ಯ ರಕ್ಷಣೆಗೆ ರಚನಾತ್ಮಕ ಕೆಲಸಗಳಿಗೆ, ಅಗ್ನಿಶಾಮಕ ದಳಗಳಿಗೆ—ಮೋಟಾರು ವಾಹನಗಳ ಉಪಯೋಗ ಹೇಳಿ ತೀರದು. ಈ ಎಲ್ಲ ಕಾರಣಗಳಿಂದಾಗಿ ಪ್ರಗತಿಶೀಲ ರಾಷ್ಟ್ರಗಳಲ್ಲಿ ಮೋಟಾರು ವಾಹನಗಳ ತಯಾರಿಕೆಯನ್ನು ಅತ್ಯಂತ ಪ್ರಮುಖ್ಯವಾದ ಉದ್ಯೋಗವೆಂದು ಪರಿಗಣಿಸುತ್ತಾರೆ. ಎಷ್ಟೋ ಸಣ್ಣ ಪುಟ್ಟ ಕೈಗಾರಿಕೆಗಳಿಗೆ ಈ ಉದ್ದಿಮೆ ಆಶ್ರಯ ಕೊಡುವುದಲ್ಲದೆ, ದೇಶದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದರಲ್ಲಿಯೂ ನೆರವಾಗುತ್ತದೆ.

ನಮ್ಮವರ ಪ್ರಯತ್ನ

ಭಾರತದಲ್ಲಿ ಸಾರಿಗೆ ಸೌಕರ್ಯಗಳು ಹೇಳಿಕೊಳ್ಳುವಷ್ಟು ಬೆಳೆಯದೆ, ಉಪೇಕ್ಷೆಯಿಂದ ಕಾಣಲ್ಪಟ್ಟಿರುವುದರಿಂದ, ಈ ಉದ್ದಿಮೆಯನ್ನು ಕಟ್ಟಿ ಬೆಳೆಯಿಸುವುದಕ್ಕೆ ಉದ್ಯೋಗಪತಿಗಳು ಮುಂದಾಗಲು ಹಿಂಜರಿದದ್ದು ಸ್ವಾಭಾವಿಕ. ಆದರೆ ಇಂದು ಈ ಪ್ರವೃತ್ತಿ ಪರಿವರ್ತನೆ ಹೊಂದಿದ್ದು, ನಿಧಾನವಾಗಿಯೇ ಆದರೂ, ಪರಿಣಾಮಕಾರಿಯಾದ ಪ್ರಗತಿಯನ್ನು ಭಾರತೀಯ ಮೋಟಾರು ವಾಹನ ತಯಾರಿಕೋದ್ಯಮ ತೋರಿಸಿದೆ.

ಇಪ್ಪತ್ತು ವರ್ಷಗಳಿಗೆ ಹಿಂದೆ ಫೋರ್ಡ್ ಮೋಟರ್ ಕಂಪೆನಿಯು ಭಾರತದಲ್ಲಿ ಮೋಟಾರು ವಾಹನಗಳ ತಯಾರಿಕೋದ್ಯಮವನ್ನು ತೊಡಗಿತು. ಕೆಲವೇ ವರ್ಷಗಳ ಹಿಂದೆ ಭಾರತೀಯ ಸಂಸ್ಥೆಗಳು ಅಮೇರಿಕಾ, ಬ್ರಿಟಿಷ್ ಹಾಗೂ ಇಟಾಲಿಯನ್ ಕಂಪೆನಿಗಳ ಸಹಕಾರದಿಂದ ಈ ಉದ್ಯಮವನ್ನು ಆರಂಭಿಸಿದುವು. ಇಂದು ಹನ್ನೆರಡು ಭಾರತೀಯ ಸಂಸ್ಥೆಗಳು ಒಂಭತ್ತು ಕೋಟಿ ರುಪಾಯಿ (ಇದರಲ್ಲಿ ಅಧಿಕಪಾಲು ಭಾರತೀಯರದ್ದು) ಬಂಡವಾಳದ ಬಲದಿಂದ ವರ್ಷಕ್ಕೆ ೮೦,೦೦೦ ಕಾರುಗಳನ್ನೂ ಟ್ರಕ್ಕುಗಳನ್ನೂ ಸಿದ್ಧಪಡಿಸುವ ಸಾಮರ್ಥ್ಯವನ್ನು ಪಡೆದಿವೆ.

ಈ ಹನ್ನೆರಡು ಸಂಸ್ಥೆಗಳನ್ನು ಮೂರು ಬಗೆಯಾಗಿ ವಿಂಗಡಿಸಬಹುದು. (೧) ಏಳು ಸಂಸ್ಥೆಗಳಿಗೆ ಕೇವಲ ಬಿಡಿಭಾಗಗಳನ್ನು ಜೋಡಿಸುವುದೇ ಕೆಲಸವಾಗಿದೆ. (೨) ಮೂರು ಸಂಸ್ಥೆಗಳು ಮೋಟಾರು ವಾಹನಗಳ ತಯಾರಿಯನ್ನು ಸ್ವತಃ ಮಾಡುವ ಕಾರ್ಯಕ್ರಮ ಇಟ್ಟುಕೊಂಡಿದ್ದರೂ ಇನ್ನೂ ಅದನ್ನು ತೊಡಗಿಲ್ಲ. (೩) ಉಳಿದೆರಡು ಸಂಸ್ಥೆಗಳು ಭಾರತದಲ್ಲಿಯೇ ಮೋಟಾರು ವಾಹನಗಳನ್ನು ಪೂರ್ಣ ರೂಪದಲ್ಲಿ ತಯಾರಿಸುತ್ತವೆ: ಮತ್ತು ತಮ್ಮ ಕಾರ್ಯದಲ್ಲಿ ಒಳ್ಳೆಯ ಅಭಿವೃದ್ಧಿಯನ್ನು ತೋರಿಸಿವೆ ಒಂಭತ್ತು ಕೋಟಿ ರುಪಾಯಿ ಬಂಡವಾಳದಲ್ಲಿ ಏಳು ಕೋಟಿ ಈ ಎರಡು ಸಂಸ್ಥೆಗಳದ್ದು. ಮುಂಬಯಿಯ ಪ್ರೀಮಿಯರ್ ಆಟೋಮೊಬೈಲ್ಸ್, ಲಿಮಿಟೆಡ್ ಮತ್ತು ಕಲ್ಕತ್ತೆಯ ಹಿಂದುಸ್ಥಾನ್ ಮೋಟರ್ಸ್, ಲಿಮಿಟೆಡ್ ಎಂಬೀ ಸಂಸ್ಥೆಗಳು ವರ್ಷಕ್ಕೆ ೩೦,೦೦೦ ವಾಹನಗಳನ್ನು ಸಿದ್ಧಗೊಳಿಸಬಲ್ಲುವು.

ಸ್ಪರ್ಧೆಯಲ್ಲಿ ಜಯವಿಲ್ಲ

ಮೋಟಾರು ವಾಹನಗಳ ಬೇಡಿಕೆ ಅತ್ಯಲ್ಪವಾಗಿರುವುದರಿಂದ ಭಾರತದಲ್ಲಿ ಈ ಉದ್ದಿಮೆ ಅಭಿವೃದ್ಧಿ ಹೊಂದಲು ಅವಕಾಶವಿದೆಯೆ ಎಂಬುದು ಈಗಿನ ಪ್ರಶ್ನೆ. ಬೇಡಿಕೆ ಕಡಿಮೆ ಇರುವುದರಿಂದ ಉತ್ಪಾದನಾ ವೆಚ್ಚವು ಸ್ವಾಭಾವಿಕವಾಗಿ ಹೆಚ್ಚುತ್ತದೆ. ಪರಿಣಾಮವಾಗಿ ಅಗ್ಗ ದರದಲ್ಲಿ ಪೇಟೆಯಲ್ಲಿ ಸಿಗುವ ವಿದೇಶೀ ವಾಹನಗಳೊಡನೆ ಸ್ಪರ್ಧಿಸುವ ಸಾಮರ್ಥ್ಯವೇ ಉಳಿಯುವುದಿಲ್ಲ ವರ್ಷಕ್ಕೆ ನಮಗೆ ಈಗ ಬೇಕಿರುವ ೨೫೦೦೦ ವಾಹನಗಳಿಗಾಗಿ ವಿದೇಶದ ೧೮೦ ವಿವಿಧ ಮಾದರಿಗಳೊಡನೆ ಸೆಣಸಾಡಿ ಬದುಕುವುದೆಂದರೆ ಭಾರತದ ತಯಾರಿಕೆಗೆ ಸಾಧ್ಯವಿಲ್ಲ.

ಆಧುನಿಕ ವಾಹನ ಯಾಂತ್ರಿಕ ದೃಷ್ಟಿಯಲ್ಲಿ ಪರಿಪೂರ್ಣಾವಸ್ಥೆಯನ್ನು ಹೊಂದಿದ ತಯಾರಿಕೆಯಾಗಿದೆ. ಕೆಲವು ದಶಕಗಳವರೆಗೆ ಸಂಶೋಧನೆ ಹಾಗೂ ಪ್ರಯತ್ನ ನಡೆಸಿದುದರ ಫಲವಾಗಿ ಇಂದಿನ ಪರಿಪೂರ್ಣಾವಸ್ಥೆಯನ್ನು ಮುಟ್ಟಿದ್ದೇವೆ. ಇದಕ್ಕೆ ಸಾಕಷ್ಟು ಕೌಶಲ್ಯ ಬೇಕೆಂಬುದೂ ನಿಜ. ಯಂತ್ರ ನಿರ್ಮಾಣದ ಘನವಾದ ಕಾರ್ಯ, ಬೆಲೆಬಾಳುವ ಸಾಮಗ್ರಿ ಮತ್ತು ಸಲಕರಣೆಗಳು ಈ ಉತ್ಪಾದನೆಯ ಜೀವಾಳವಾಗಿರುವುದರಿಂದ, ದೊಡ್ಡ ಮಟ್ಟಿನಲ್ಲಿ ಕೈಗೊಂಡರೆ ಮಾತ್ರ ಮೋಟಾರು ವಾಹನಗಳ ಬೆಲೆ ಮಿತವಾಗಿರಬಹುದು. ಇಲ್ಲದಿದ್ದರೆ ದಿವಾಳಿ ಎದ್ದುಹೋಗಬೇಕಾದೀತು. ವಿದೇಶೀ ಸಂಸ್ಥೆಗಳು ಈ ತರ್ಕವನ್ನೇ ಮುಂದುಮಾಡಿ, ಭಾರತೀಯರು ಬಿಡಿಭಾಗಗಳನ್ನು ಜೋಡಿಸಿ, ಮೋಟಾರು ಸಿದ್ಧಗೊಳಿಸುವಷ್ಟಕ್ಕೇ ತೃಪ್ತರಾಗಬೇಕೆಂದು ಹೇಳುತ್ತವೆ. ನಮ್ಮ ಮಾರ್ಗಗಳ ಮೇಲೆ ಓಡಾಡುವ ನಾಲ್ಕು ಲಕ್ಷ ಕಾರುಗಳ ಪೇಟೆ ಇದಕ್ಕಾಗಿ ಮೀಸಲಿದೆ ಎಂಬ ಅಭಿಪ್ರಾಯ ಅವುಗಳದು.

ಆದರೆ ಭಾರತವಿಂದು ಸ್ವತಂತ್ರ ರಾಷ್ಟ್ರವಾದುದರಿಂದ ಸ್ವಂತ ಕಾಲಮೇಲೆ ನಿಲ್ಲಲು, ತನ್ನ ಅವಶ್ಯಕತೆಯನ್ನು ಸ್ವಯಂ ಪೂರೈಸಿಕೊಳ್ಳಲು, ಸಾಮರ್ಥ್ಯ ಪಡೆದಿರಬೇಕಲ್ಲವೆ? ಅದೂ ಸಂರಕ್ಷಣಾ ಕಾರ್ಯದಂಥ ಗುರುತರವಾದ ಹೊಣೆಗಾರಿಕೆಯು ನಮ್ಮ ಸರಕಾರದ ಹೆಗಲೇರಿರುವಾಗ, ಸಾಮಾನ್ಯವಾದ ಮೋಟಾರು ವಾಹನಗಳಿಗಾಗಿ ವಿದೇಶಗಳ ಪೇಟೆಯನ್ನು, ಎಂದರೆ, ಅವುಗಳ ಒಲವನ್ನು, ಆಶ್ರಯಿಸಿನಿಲ್ಲುವುದು ಗಂಡಾಂತರಪ್ರಾಯವಾಗಿದೆ. ಒಂದು
ಉದ್ಯಮವನ್ನು ದಿನ ಬೆಳಗಾಗುವುದರೊ
ಗೆ ತೊಡಗಲಾರೆವಷ್ಟೆ!

ಸಂರಕ್ಷಣಾ ಶಾಖೆಯ ಆಶಾ ದೃಷ್ಟಿ

ಆದುದರಿಂದ ನಮ್ಮ ಉದ್ಯಮ ಬೆ
ಯುವುದಕ್ಕೆ ಅನುಕೂಲ ವಾತಾವರಣ
ವನ್ನು ಕಲ್ಪಿಸಿಕೊಡಬೇಕಾದುದು ಸರ
ರದ ಕರ್ತವ್ಯ. ವಿದೇಶೀ ಕಂಪೆನಿಗಳು ಭಾ
ರತೀಯ ಪೇಟೆಯಲ್ಲಿ ತೋರಿಸುವ ೧೮
ಮಾದರಿಗಳನ್ನು ಕಡಿಮೆ ಮಾಡಿ, ಆ
ಸಿದ ಕೆಲವೇ ಮಾದರಿಗಳಿಗೆ ಅವಕಾ
ಕೊಟ್ಟರೆ, ಅದರಿಂದ ಹಿತವಿದೆ. ಹಾ
ಯೇ ನಮ್ಮ ಉದ್ದಿಮೆಗೆ ಸಂರಕ್ಷಣೆಯ
ನ್ನು ಕೊಡುವುದೂ ಒಂದು ಉಪಯುಕ್ತ
ಕ್ರಮ. ಈಗ ಕೆಲವು ರಾಜ್ಯ ಸರಕಾರಗಳ
ಮೋಟಾರು ಸಾರಿಗೆಯನ್ನು ರಾಷ್ಟ್ರೀಕರಿ
ರುವುದರಿಂದ, ತಮ್ಮ ಬೇಡಿಕೆಯನ್ನು ಭಾ
ರತೀಯ ತಯಾರಿಕೆಯಿಂದಲೇ ಪೂರೈ
ಕೊಳ್ಳಲು ನೋಡಿದರೆ ಅದರಿಂದ ಪ್ರೋ
ತ್ಸಾಹ ಸಿಗುವುದು.

ಸರಕಾರದ ವಾಣಿಜ್ಯ ಖಾತೆಯು
ದೇಶೀ ಆಮದುಗಳಿಗೆ ಪರವಾನಿಗೆಯನ್ನು
ಕೊಡುವಲ್ಲಿ ಚಾಂಚಲ್ಯ ಪ್ರದರ್ಶಿಸುತಿದ
ರೂ ಅರ್ಥಶಾಖೆಯು ಸ್ಥಳೀಯ ತಯಾ
ರಿಕೆಗಾರರ ನೆರವಿಗೆ ಬಂದು—ವಿದೇಶೀ
ಯಾತದ ಮೇಲೆ ಭಾರವಾದ ಕರವನ್ನು
ಹೇರಲು ಹಿಂಜರಿದಿಲ್ಲ ಪರಿಣಾಮವಾ
ಮೋಟಾರು ವಾಹನಗಳ ಬೆಲೆಯೇರಿ
ಎಂದೂ ವ್ಯಾಪಾರವು ಇಳಿಮುಖವಾಗಿ
ಎಂದೂ ದೂರುವುದಕ್ಕೆ ಆರಂಭವಾಗಿದೆ
ಆದರೂ ವಿದೇಶೀ ಆಯಾತದ ಮೇಲೆ ಕ
ಭಾರ ಹೇರಿದುದರಿಂದ ಮತ್ತು ಕೆಲ
ಬಿಡಿ ಭಾಗಗಳ ಆಯಾತದ ಮೇ
ಪ್ರತಿಬಂಧ ಹಾಕಿದುದರಿಂದ, ನಮ್ಮ
ಸಣ್ಣ ಪುಟ್ಟ ಉದ್ದಿಮೆಗಳು ಅಭಿವೃ
ಹೊಂದಲು ಸದವಕಾಶದೊರೆತಿದೆ. ಪಿ
ನು, ಸ್ಪಾರ್ಕ್‌ಪ್ಲಗ್, ಇಲೆಕ್ಟ್ರಿಕ್ ಹಾ
ರ್ನ ಮುಂತಾದವುಗಳು ನಮ್ಮಲ್ಲಿಯೇ
ದ್ಧಗೊಳ್ಳುತ್ತವೆ. ಮದ್ರಾಸಿನ ಒಂದು ಕ
ಪೆನಿ ಚಕ್ರಗಳನ್ನೂ ರಿಮ್ಮನ್ನೂ ತಯಾ
ಸಲು ತೊಡಗಿದೆ. ಇನ್ನೊಂದು ಕಂಪೆ
ಡೀಸೆಲ್ ಎಂಜಿನುಗಳನ್ನು ಸಿದ್ಧಗೊಳಿಸ
ತ್ತಿದೆ. ನಮಗೆ ಬೇಕಾದ ಬ್ಯಾಟರಿ ಮತ
ಟಾಯರು ಎಲ್ಲವೂ ಈಗ ಭಾರತದಲ್ಲಿಯೆ
ತಯಾರಾಗುತ್ತದೆ. ಮುಂಬಯಿಯ ಕಂ
ನಿಯೊಂದು ಇನ್ನೂ ಹತ್ತು ಹಲವು
ಪಕರಣಗಳನ್ನು ತಯಾರಿಸುವುದರಲ್ಲಿ ಯ
ಶಸ್ಸು ಹೊಂದಿದೆ. ಸಂರಕ್ಷಣಾ ಶಾಖೆ
ಬೇಕಿರುವ ಉಕ್ಕಿನ ಗಾಡಿಗಳ ಪೂರೈ
ಯನ್ನು ವರ್ಷ ವರ್ಷ ಹೆಚ್ಚಿಸಲು ಸಾ
ವಾಗಿದೆ.

ಸಂರಕ್ಷಣಾ ಶಾಖೆಯು ಮೋಟಾ
ವಾಹನಗಳ ತಯಾರಿಕೋದ್ಯಮವನ್ನು
ತುಂಬ ಆಶಾದೃಷ್ಟಿಯಿಂದ ನೋಡುತ್ತಿ,
ತನ್ನೆಲ್ಲ ಆವಶ್ಯಕತೆಯನ್ನು ದೇಶೀಯ
ಯಾರಿಕೆಯಿಂದಲೇ ಪೂರೈಸಿಕೊಳ್ಳ
ನೋಡುತ್ತಿದೆಯಲ್ಲದೆ, ಉದ್ಯಮವು ಜ
ದು ಎಂಜಿನು ಮುಂತಾದುವುಗಳನ್ನು ಕ
ಡ ಯಥೇಷ್ಟವಾಗಿ ಸಿದ್ಧಗೊಳಿಸುವುದ
ಭಾರತದ ಕಂಪೆನಿಗಳು ಸಮರ್ಥವಾ
ವ ದಿನವನ್ನದು ಪ್ರತೀಕ್ಷಿಸುತ್ತದೆ ಆದ
ಈ ಕೆಲಸ ನಿಧಾನವಾಗಿ ಸಾಗುತ್ತಿದೆ.
ಮ್ಮ ಜನರಿಗೆ ಕೌಶಲ್ಯ ಸಾಲದ, ಬು
ಸಾಲದು ಎಂಬುದು ಪ್ರಶ್ನೆಯಾಗಿರದೆ
ಅದಕ್ಕೆ ಸುರಿದ ಹಣ ಹಿಂದೆಬರುವಷ
ಬೇಡಿಕೆ ಬೆಳೆದಿಲ್ಲ ಎಂಬ ದೇ ಸಮಸ್ಯೆ
ರ್ಷಕ್ಕೆ ೧೨೫೦೦ ವಾಹನಗಳನ್ನು ತಯಾ
ರಿಸಬಲ್ಲ ಕಾರ್ಖಾನೆಯೊಂದು ಕಳೆದವರ
೨೦೦೦ ವಾಹನಗಳಿಗೇ ಪೇಟೆ ಕಂಡುಕೊ
ಡಿತೆನ್ನುವಾಗ ಸಮಸ್ಯೆಯ ಸ್ಪಷ್ಟ ಚಿ
ದೊರಕುತ್ತದೆ.

ರಾಮತೀರ್ಥ
ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತಿದೆ, ಬಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಪಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಜಿ. ಐ. ಪಿ) ಮುಂಬಯಿ, ೧೪

ಆಗ--?

ತಾರುಣ್ಯವು ತೊಲಗಿದಾಗ, ಶಕ್ತಿಯು ಕುಗ್ಗಿದಾಗ, ಮುದಿಯುವುದು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ, ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿ ಇರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ—ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕಂಡೊಡನೆ ನಿಮ್ಮದೇ ಆಗುವ, ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ, ನಿಮ್ಮ ನಾಡಿನ

ಈ ಕಂಪೆನಿಯಲ್ಲಿಯೇ ವಿಮೆ ಇಳಿಸಿರಿ

ದಿ ಕೆನರಾ ಮ್ಯೂಚುವಲ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ ಭಾರತ. ಸ್ಥಾಪನೆ: ೧೯೩೫
The Canara Mutual Assurance Co. Ltd.
Head Office: **UDIPI**, S. INDIA. ESTD: 1935

ಹೊಗೆಬಂಡಿ ನಿರ್ಮಿಸುವ ಭಾರತೀಯ ಕಾರ್ಖಾನೆ

ರಾಷ್ಟ್ರೀಯ ಆಶೆಆಕಾಂಕ್ಷೆಯನ್ನು ಪೂರೈಸುವ ಮಹತ್ವದ ಉದ್ಯಮ

ಭಾರತದಲ್ಲಿ ರೈಲು ಮಾರ್ಗಗಳು ೦೦೦ ಮೈಲಿನಷ್ಟು ವಿಸ್ತಾರಗೊಂಡಿ ಸುಮಾರು ೮೦೦೦ ಹೊಗೆಬಂಡಿಗಳು ಸುದೀರ್ಘವಾದ ಮಾರ್ಗದ ಮೇಲೆ ಡಾಡಲು ಉಪಯೋಗಿಸಲ್ಪಡುತ್ತವೆ. ರತದಲ್ಲಿ ರೇಲ್ವೆಯನ್ನು ೧೮೫೩ರಲ್ಲಿ ರಂಭಿಸಲಾಯಿತು. ಮುಂದಿನ ವರ್ಷ ಲ್ವೆಯ ಶತವಾರ್ಷಿಕೋತ್ಸವವನ್ನು ವಿ ಂಭಣೆಯಿಂದ ನೆರವೇರಿಸಲು ಭಾರತ ರ್ಕಾರವು ಎಲ್ಲ ಸಿದ್ಧತೆಗಳನ್ನು ನಡೆಸು ದೆ. ಇಷ್ಟು ಹಳೆಯ ಕಾಲದಿಂದ ನಾವು ಲ್ವೆಗಳನ್ನು ಉಪಯೋಗಿಸಿಕೊಂಡು ದಿದ್ದರೂ ಹೊಗೆಬಂಡಿಗಳನ್ನು ತ ಯಾರಿಸುವ ಅಲ್ಪ ಪ್ರಯತ್ನವನ್ನೂ ಾಡದೆ, ವಿದೇಶಗಳನ್ನೆ ಈ ಬಗ್ಗೆ ಅವ ಲಂಬಿಸುತ್ತಿದ್ದೆವೆಂದರೆ ಯಾರಿಗೂ ಆಶ್ಚ ರ್ಯವಾಗಬೇಕು. ಯುದ್ಧ ಮುಂತಾದ ತರ್ರಾಷ್ಟ್ರೀಯ ಬಿಕ್ಕಟ್ಟಿನ ಪ್ರಸಂಗ ಲ್ಲಿ ನಿಜಕ್ಕೂ ನಮ್ಮ ರೇಲ್ವೆಗಳು ತುಂ ಸಂಕಷ್ಟಕ್ಕೆ ಈಡಾದುದುಂಟು. ಹೊಗೆ ಂಡಿಗಳನ್ನು ಆಮದು ಮಾಡಿಕೊಳ್ಳುವು ಅಸಾಧ್ಯವಿರುವಾಗ, ನಮ್ಮ ರೇಲ್ವೆಗ ಗೆ ತುಂಬ ಆಘಾತ ಸಂಭವಿಸಿತು. ಂತ ಸರಕಾರವು ಇದನ್ನು ಮನಗಂ ಕಾಲಾನುಕಾಲಕ್ಕೆ ನಮ್ಮಲ್ಲಿಯೇ ಗೆ ಬಂಡಿಗಳನ್ನು ತಯಾರಿಸುವ ಉ ಮದ ಸ್ಥಾಪನೆಗಾಗಿ ಮಾಲ ಪ್ರಯತ್ನ ಗಳನ್ನು ಕೈಗೊಂಡಿತು. ೧೮೬೫ರಿಂದ ೨೫ರ ಅವಧಿಯಲ್ಲಿ ಹಳೆಯ ಪೂರ್ವ ಂತ ರೇಲ್ವೆ ಕಾರ್ಖಾನೆಯಲ್ಲಿ ೨೧೪ ಾಡ್‌ಗಾಜ್ ಹೊಗೆ ಬಂಡಿಗಳನ್ನೂ ೨೩ ಬ್ಯಾಲರುಗಳನ್ನೂ ನಿರ್ಮಿಸಲಾ ತ್ತು. ಹಾಗೆಯೇ ೧೮೯೫ರಿಂದ ೧೯೪೦ರ ವಧಿಯಲ್ಲಿ ಅಜಮೀರನಲ್ಲಿದ್ದ ಬಿ. ಬಿ. ಂಡ್ ಸಿ ಐ ರೇಲ್ವೆ ಕಾರ್ಖಾನೆಯಲ್ಲಿ ೩೫ ಪೂರ್ಣ ಹೊಗೆ ಬಂಡಿಗಳನ್ನು ನಿ ರ್ಮಿಸಿದ್ದರು ಆದರೂ ಇದು ಅತ್ಯಂತ ಪ್ರಮುಖ್ಯವಾದುದೆಂದು ಮಹತ್ವವನ್ನು ಕೊಟ್ಟೇ ಇರಲಿಲ್ಲ

ಪ್ರಶಸ್ತವಾದ ಸ್ಥಳ

೧೯೩೦ರ ಆದಿಯಿಂದ ಭಾರತೀಯ ಧುರೀಣರು ಶಾಸನ ರಂಗದಲ್ಲಿ ನಮ್ಮದೇ ದ ಹೊಗೆಬಂಡಿ ತಯಾರಿಕೆಯ ಕಾ ರ್ಖಾನೆ ತೆರೆಯಬೇಕೆಂದು ಪ್ರತಿಪಾದಿಸು ತ್ತಲೇ ಬಂದರು. ಆದರೆ ಒಂದಲ್ಲ ಒಂದು ಕಾರಣಕ್ಕಾಗಿ ಅವರ ಸೂಚನೆಗಳನ್ನು ತಿ ರಸ್ಕರಿಸಲ್ಪಡುತ್ತಿದ್ದವು ಕೊನೆಗೊಮ್ಮೆ ಲ್ಕೆ ೧೯೩೯ರಲ್ಲಿ ಒಂದು ಸಮಿತಿಯು ನೇಮಕಗೊಂಡಿತು. ಅದು ವಿಶೇಷವಾದ ಪರಿಶ್ರಮವನ್ನು ಮಾಡಿ, ಭಾರತದಲ್ಲಿ ಹೊಗೆಬಂಡಿಗಳನ್ನು ತಯಾರಿಸುವ ಬಗ್ಗೆ ಕೂಲಂಕಷವಾದೊಂದು ವರದಿಯನ್ನು ಒಪ್ಪಿಸಿತು ದುರ್ದೈವದಿಂದ ಆಗಲೇ ದ್ವಿತೀಯ ಮಹಾಯುದ್ಧ ತೊಡಗಿದುದರಿಂದ, ಈ ಯೋಜನೆಯನ್ನು ಮುಂದಕ್ಕೆ ಹಾಕುವುದು ಅವಶ್ಯವೆನಿಸಿತು

ಯುದ್ಧ ಮುಗಿದೊಡನೆಯೇ ಹೊಗೆಬಂಡಿಯ ಕಾರ್ಖಾನೆ ಆರಂಭಿಸಲು ಯೋಗ್ಯವಾದ ಸ್ಥಳವನ್ನು ಹುಡುಕಿದರು. ಅಂತೂ ದಶಂಬರ, ೧೯೪೬ರ ಸುಮಾರಿಗೆ ಚಾಂದಮರಿ ಎಂಬಲ್ಲಿ ಕಾರ್ಖಾನೆಯ ಕೆಲಸವನ್ನು ಆರಂಭಿಸಿಯೂ ಆಯಿತು ಆದರೆ ಭಾರತದ ವಿಭಜನೆ ೧೯೪೭ರಲ್ಲಿ ಆದಾಗ, ಚಾಂದಮರಿಯು ಆಯ ಕಟ್ಟಿನ ಗಡಿಪ್ರದೇಶದಲ್ಲಿ ನೆಲಸಿದೆ ಎಂಬುದರಿಂದ, ಇನ್ನೊಂದು ಯೋಗ್ಯವಾದ ಸ್ಥಳವನ್ನು ಆರಿಸುವ ಆವಶ್ಯಕತೆ ಬಿತ್ತು. ಹೀಗೆ ಯೋಜನೆಯು ಪ್ರಗತಿಪಥದಲ್ಲಿ ಮುನ್ನಡೆಯುತ್ತಿರುವಾಗಲೇ ಇನ್ನೊಂದು ಅಡ್ಡಿಯೊದಗಿತು.

ಅಂತೂ ೧೯೪೭ರ ಕೊನೆಯಲ್ಲಿ ಈಗಿನ ಚಿತ್ತರಂಜನವನ್ನು ಕಾರ್ಖಾನೆಗೆ ಪ್ರಶಸ್ತವಾದ ಸ್ಥಳವೆಂದು ಆರಿಸಿದರು. ಉಕ್ಕು ಹಾಗೂ ಕಲ್ಲಿದ್ದಲು ಕೇಂದ್ರಕ್ಕೆ ನೇರ ಸಮೀಪದಲ್ಲಿರುವುದೂ ನೀರಿನ ಹಾಗೂ ವಿದ್ಯುಚ್ಛಕ್ತಿಯ ಪೂರೈಕೆಗೆ ಅನುಕೂಲವಾದ ಮೈಥನ್ ಆಣೆಕಟ್ಟಿಗೆ ಹತ್ತಿರವಿರುವುದೂ ಚಿತ್ತರಂಜನದ ವೈಶಿಷ್ಟ್ಯ. ಇಲ್ಲಿಯ ಹವೆ ಉತ್ತಮವಾಗಿದ್ದು ಸುಮಾರು ೪೦೦೦ ಎಕ್ರೆ ಬೀಳು ಭೂಮಿಯನ್ನು ಕಾರ್ಖಾನೆಗೆ ಬಳಸಬಹುದು. ಮಣ್ಣಿನ ಗುಣವಿಶೇಷಗಳಿಂದಾಗಿ, ಕಾರ್ಖಾನೆಯನ್ನು ಕಟ್ಟುವಲ್ಲಿ ತುಂಬ ನೆರವು ದೊರೆತುದು. ನೈಪುಣ್ಯವಿಲ್ಲದಿದ್ದರೂ ಕೂಲಿಕಾರರು ಬೇಕಷ್ಟು ದೊರೆಯುವ ಅನುಕೂಲತೆಯುಳ್ಳದ್ದು, ಸುಂದರವೂ ರಮಣೀಯವೂ ಆದ ನೈಸರ್ಗಿಕ ವಾತಾವರಣದಿಂದ ಇದಕ್ಕೆ ಇನ್ನಷ್ಟು ಶೋಭೆ ಬಂದಿದೆ.

ಉತ್ಪಾದನಾ ಪ್ರಮಾಣ

ಕಾರ್ಖಾನೆಯನ್ನು ಕಟ್ಟುವ ಕೆಲಸ ಮುಂದುವರಿದಂತೆಲ್ಲ ಜನರು ನೆಲೆಸಿಲ್ಲುವಂತೆ ನಗರವನ್ನು ನಿರ್ಮಿಸುವ ಕೆಲಸ ಮುಂದರಿಯುತ್ತ ಬಂತು ಸಾಮಗ್ರಿ ಸಲಕರಣೆಗಳನ್ನು ಒಯ್ಯಲು ಅನುಕೂಲವಾಗಬೇಕೆಂದು ಹತ್ತಿರದ ರೂಪನಾರಾಯಣಪುರ ರೇಲ್ವೆ ಸ್ಟೇಶನಿನಿಂದ ಮೂರೂವರೆ ಮೈಲಿ ರೈಲು ಮಾರ್ಗವನ್ನು ಹಾಕಿದರು ಕಾರ್ಖಾನೆಯನ್ನು ಕಟ್ಟುವುದಕ್ಕೆ ಮುಂಚೆ ಎರಡು ಕೋಟಿ ಘನ ಅಡಿಗಳಷ್ಟು ಮಣ್ಣನ್ನು ವಿಶೇಷ ಯಂತ್ರಗಳ ಸಹಾಯದಿಂದ ಸಮತಟ್ಟು ಮಾಡಿದರು. ಯಂತ್ರ ಹಾಗೂ ಯಂತ್ರಾಲಯಗಳ ನೆಲಗಟ್ಟಿಗೇ ೪೭೫೦೦೦ ಘನಅಡಿ ಸಿಮೆಂಟುಕಾಂಕ್ರೀಟನ್ನು ಉಪಯೋಗಿಸಿದರು. ೧೧೦೦೦ಟನ್ನು ಉಕ್ಕು ಕಾರ್ಖಾನೆಗಳ ನಿರ್ಮಾಣಕ್ಕೆ ಉಪಯೋಗಿಸಲ್ಪಟ್ಟಿತು. ಒಟ್ಟು ೮೮೦೦೦೦ ಚದರ ಅಡಿ ನೆಲದ ಮೇಲೆ ಕಾರ್ಖಾನೆ ಕಟ್ಟಡಗಳು ನಿಂತಿವೆ. ಹೊಗೆಬಂಡಿ ನಿರ್ಮಾಣದ ಕಟ್ಟಡವೇ ಅತ್ಯಂತ ವಿಶಾಲವಾಗಿದೆ. ೧೫೬೦ ಅಡಿ ಉದ್ದ, ೨೧೨ ಅಡಿ ಅಗಲ ಮತ್ತು ೭೫ ಅಡಿ ಎತ್ತರವಿರುವ ಈ ಕಟ್ಟಡದಲ್ಲಿ ಪಶ್ಚಿಮ ಬಾಗಿಲಿನಿಂದ ಪ್ರವೇಶಿಸಿದ ಕಚ್ಚಾ ಸಾಮಗ್ರಿಗಳು ಪೂರ್ವ ಬಾಗಿಲಿನಲ್ಲಿ ಸುಸಜ್ಜಿತ ಹೊಗೆಬಂಡಿಗಳ ರೂಪದಲ್ಲಿ ಹೊರಬರುತ್ತವೆ.

ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ನವೆಂಬರ ೧, ೧೯೫೦ರಂದು ಈ ಕಾರ್ಖಾನೆಗೆ "ಚಿತ್ತರಂಜನ ಹೊಗೆಬಂಡಿ ನಿರ್ಮಾಣ"ವೆಂದು ನಾಮಕರಣ ಮಾಡಿದರು. ಜನವರಿ ೨೬, ೧೯೫೦ರಂದು ದಿವಂಗತ ದೇಶಬಂಧು ಚಿತ್ತರಂಜನದಾಸರ ಪತ್ನಿ ವಾಸಂತಿ ದೇವಿಯ ವರಹಸ್ತದಿಂದ ಕಾರ್ಖಾನೆ ಉತ್ಪಾದನೆಯನ್ನು ತೊಡಗಿತು

ಈಗ ಸರಕಾರದ ಬೇಡಿಕೆಯನ್ನು ಪೂರೈಸುವುದರಲ್ಲಿ ಕಾರ್ಖಾನೆ ಮಗ್ನವಾಗಿದೆ. ಉಲ್ಲಾಬ್ರಾಡ್ ಗಾಜ್ ಮಾದರಿಯ ೨೬೭ ಹೊಗೆಬಂಡಿಗಳಿಗಾಗಿ ಸರಕಾರ ಆರ್ಡರು ಕೊಟ್ಟಿರುತ್ತದೆ. ಚಿತ್ತರಂಜನ ಕಾರ್ಖಾನೆಯು ಬಿಡಿಭಾಗಗಳನ್ನು ಜೋಡಿಸುವ ಕೆಲಸ ಮಾತ್ರ ಮಾಡಿ ಮೊದಲನೆ ಹತ್ತು ಬಂಡಿಗಳನ್ನು ಸರಕಾರಕ್ಕೆ ಒದಗಿಸಿಕೊಟ್ಟಿತು, ಆದರೆ, ಕಳೆದ ಆಗೋಸ್ತು ತಿಂಗಳಲ್ಲಿ ನಿರ್ಮಾಣಗೊಂಡ ಹನ್ನೊಂದನೇ ಬಂಡಿಯನ್ನು ಕಟ್ಟುವಲ್ಲಿ ಚಿತ್ತರಂಜನದಲ್ಲಿ ತಯಾರಾದ ಬಿಡಿ ಭಾಗಗಳೇ ಹೆಚ್ಚಿದ್ದುವು. ಹೊಗೆಬಂಡಿ ನಿರ್ಮಾಣಕ್ಕೆ ಬೇಕಾದ ೨೨೩೯ ಬಿಡಿ ಭಾಗಗಳಲ್ಲಿ ೨೧೨೮ ಬಿಡಿ ಭಾಗಗಳು ಈ ಕಾರ್ಖಾನೆಯಲ್ಲಿಯೇ ಸಿದ್ಧಗೊಂಡಿದ್ದುವು ಈಗ ೭೦% ಬಿಡಿ ಭಾಗಗಳು ಚಿತ್ತರಂಜನದಲ್ಲಿ ತಯಾರಾಗುತ್ತವೆ. ಮತ್ತು ಇನ್ನು ಕೆಲವೇ ವರ್ಷಗಳಲ್ಲಿ ಸಂಪೂರ್ಣವಾಗಿ ಎಲ್ಲ ಬಿಡಿ ಭಾಗಗಳನ್ನೂ ಭಾರತದಲ್ಲಿ ತಯಾರಿಸುವ ಹಂಚಿಕೆ ಇದೆ ೧೯೫೨ರಲ್ಲಿ ೧೧ ಹೊಗೆ ಬಂಡಿಗಳನ್ನು ನಿರ್ಮಿಸಿದ್ದಾರೆ ಈ ವರ್ಷ ಜೂನು ತಿಂಗಳ ಸುಮಾರಿಗೆ ೬೨ ಹೊಗೆಬಂಡಿಗಳು ಸಿದ್ಧಗೊಂಡಿವೆ ಈ ವರ್ಷದ ಪರಮಾವಧಿ ಉತ್ಪಾದನೆ ಎಂಬುದಾಗಿ ೩೮ ಹೊಗೆಬಂಡಿಗಳ ಗುರಿ ಹಾಕಿತ್ತು. ೧೯೫೪ರಲ್ಲಿ ೬೨ ಹೊಗೆಬಂಡಿಗಳನ್ನು ಕಟ್ಟಬೇಕೆಂಬ ಲಕ್ಷ್ಯ. ಅಂತೂ ಕೊನೆಯದಾಗಿ ವರ್ಷಕ್ಕೆ ೧೨೦ ಹೊಗೆಬಂಡಿಗಳನ್ನೂ ೫೦ ಬಿಡಿ ಬ್ಯಾಲರುಗಳನ್ನೂ (ಒಂದು ಪಾಳಿ ಕೆಲಸಮಾಡಿ) ನಿರ್ಮಿಸಬೇಕೆಂಬ ಗೊತ್ತಾಗಿದೆ

ಚಿತ್ತರಂಜನ ಕಾರ್ಖಾನೆಯ ಮಹತ್ವವನ್ನು ಮನಗಾಣಿಸುವಾಗ, ಅದರ ಹಿನ್ನೆಲೆಯಲ್ಲಿರುವ ನಗರವಾಸಿಗಳ ಹಿತವನ್ನು ಅಲಕ್ಷ್ಯದಿಂದ ನೋಡುವಂತಿಲ್ಲ ನಗರ ನಿರ್ಮಾಣ ಕಾರ್ಯವನ್ನು ತೊಡಗುವಾಗಲೇ ಒಂದು ಆದರ್ಶ ನಗರವೆಂಬುದಾಗಿ ಚಿತ್ತರಂಜನವನ್ನು ರೂಪಿಸುವ ಧ್ಯೇಯ ಕಣ್ಣ ಮುಂದಿತ್ತು. ಆಧುನಿಕ ಜೀವನಕ್ಕೆ ಬೇಕಾದ ಎಲ್ಲ ಸೌಕರ್ಯಗಳಿಂದ ಪರಿಪೂರ್ಣಗೊಳಿಸುವುದರ ಜೊತೆಗೆ ಮಾನವೀಯ ಸಹಕಾರ ಭಾವನೆಗೆ ಪುಟಕೊಡುವ ರೀತಿಯಲ್ಲಿ "ಚಿತ್ತರಂಜನ" ನಾಮಧೇಯದಿಂದ ಮಹಾ ವ್ಯಕ್ತಿಯ ಘನತೆ ಗೌರವಗಳ ಜೀವಂತ ಪ್ರತೀಕದಂತೆ ನಾಗರಿಕ ಸಂಬಂಧ ಬೆಳೆಯಬೇಕೆಂದು ಯೋಜಿಸಲಾಗಿದೆ.

[೧೦ನೇ ಪುಟ ನೋಡಿರಿ]

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ನೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನು ಹೊಲ ರಖಂ ಆಗಿ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಸೇವಿಂಗ್ಸ್ ಬೇಂಕ್ ಖಾತೆಯನ್ನು ಏತಕ್ಕಾಗಿ ತೆರೆಯಬೇಕು?

ವ್ಯಾಪಾರ ಮತ್ತು ಕೈಗಾರಿಕೆಗೆ ಹಣವೇ ಜೀವಾಳ. ಆದರ ಒತ್ತಟ್ಟಿಗಿಟ್ಟ ಹಣ, ಉಪಯೋಗಿಸದ ಹಣ ಯಾವ ಪುರುಷಾರ್ಥವನ್ನು ಪಡೆಯಲಾರದು. ನಿಮ್ಮಂತಹ ಸಹಸ್ರಾರು ಡಿಪೊಜಿಟುದಾರರ ಹಣವು ನಿಮ್ಮ ಬೇಂಕಿನಲ್ಲೇ ಕೇಂದ್ರೀಕರಿಸಲ್ಪಟ್ಟಾಗ ಆ ಹಣವು ದೇಶದ ಕೈಗಾರಿಕೆ ಉದ್ಯಮಗಳ ಉಪಯೋಗಕ್ಕೆ ನೆರವಾಗಿ ದೇಶದ ಸಂಪದಭಿವೃದ್ಧಿಯನ್ನು ಸಾಧಿಸುವುದು. ಆದುದರಿಂದ ನಿಮ್ಮ ಮಿಗತಾಯ ಹಣವನ್ನು ನಿಮ್ಮ ಬೇಂಕ್ ಖಾತೆಯಲ್ಲಿಟ್ಟು ನಿಮ್ಮ ದೇಶದ ಅಭ್ಯುದಯಕ್ಕೇನೇ ಸಹಾಯ ನೀಡಿರಿ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.
ಸ್ಥಾಪನೆ. 1925 ಹೆಡ್ ಆಫೀಸ್ ಉಡುಪಿ

The Canara Industrial &
Banking Syndicate Limited.
Estd: 1925 H. O. UDIPI

ಋತುಸ್ರಾವ ನಿಂತಿತು

‘ಕುಮಾರಿ’ ಗುಳಿಗೆಗಳನ್ನು ಉಪಯೋಗಿಸಿದರೆ ಪದೆಪದೆ ಋತುಸ್ರಾವವಾಗುವುದು, ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಶಾಶ್ವತ ಗುಣವಾಗಿದೆ— ಬೆಲೆ: ರೂ. ೩। ಸ್ಪೆಶಲ್ ನಂ ೫— ಅಧಿಕಾಧಿಕ ಸ್ಪೆಶಲ್ ರೂ. ೨ [ವಿ ಪಿ ಖರ್ಚು ಪ್ರತ್ಯೇಕ]

Mrs. D. DEVEE, F. Ts. (N. J.)
Tollygunge CALCUTTA.
ಪ್ರತಿನಿಧಿಗಳು: ಕಾಮತಕಂಪೆನಿ, ಮಂಗಳೂರು.

ಮದ್ರಾಸು ಶಾಸನ ಸಭೆಯಲ್ಲಿ

ಕೆಲವು ವಾರಗಳ ವಿಶ್ರಾಂತಿಯ ಬಳಿಕ ಇದೀಗ ಮದ್ರಾಸು ಶಾಸನ ಸಭೆಯ ಅಧಿವೇಶನವು ಜರಗುತ್ತಲಿದೆ. ಈ ಸೋಮವಾರ ದಿನ (ತಾ. ೩) ತೊಡಗಿದ ಅಧಿವೇಶನದಲ್ಲಿ ತೆರಿಗೆ ಸೂಚನೆಗಳ ಕುರಿತು ಮಹತ್ವಪೂರ್ಣವಾದ ಚರ್ಚೆ ನಡೆಯುವ ನಿರೀಕ್ಷೆ ಇದೆ. ಪರಿಶೀಲಕ ಸಮಿತಿಯು ಈಗಾಗಲೇ ತೆರಿಗೆ ಸೂಚನೆಗಳನ್ನು ವಿಮರ್ಶಿಸಿ, ಅವಕ್ಕೆ ಹೊಸ ಸ್ವರೂಪವನ್ನಿತ್ತಿದೆ ಎನ್ನಬೇಕು. ಈಚೆ ಕೆಲವು ದಿನಗಳಲ್ಲಿ ಜನತೆಯೊಡನೆ ಸಂಪರ್ಕ ಬೆಳೆಸಿಕೊಳ್ಳುವ ಇರಾದೆಯಿಂದ ಸಂಚಾರ ಕಾರ್ಯಕ್ರಮಗಳನ್ನು ಕೈಗೊಂಡಿದ್ದ ಮಂತ್ರಿವರ್ಯರೆಲ್ಲ ಈಗ ಮರಳಿ ಸೆಕ್ರೆಟೇರಿಯಟ್‌ನ ತಮ್ಮ ಕಾರ್ಯಾಲಯದಲ್ಲಿ ಉಳಿಯುವುದು ಅವಶ್ಯವೆನಿಸಿದೆ. ರಾಜಗೋಪಾಲಾಚಾರಿಯವರು ದಿನಾಂಕ ೨ರಂದು ತಮ್ಮ ಮಂತ್ರಿಮಂಡಳದ ಸಭೆಯೊಂದನ್ನು ಕೂಡಿಸಿ, ಸುಮಾರು ನಾಲ್ಕು ತಾಸುಗಳ ವರೆಗೆ ಸರಕಾರೀ ವಿಷಯಗಳ ಕುರಿತು ಸಮಾಲೋಚನೆ ನಡೆಸಿದರೆಂದು ವರದಿಯಾಗಿದೆ. ಸೋಮವಾರದ ಅಧಿವೇಶನದಲ್ಲಿ ಕೈಗಾರಿಕಾ ಮಂತ್ರಿ ಡಾ|| ಯು. ಕೃಷ್ಣರಾಯರು ಕೈಮಗ್ಗಗಳಿಗೆ ಸೀರೆ ಮತ್ತು ಧೋತರಗಳನ್ನು ತಯಾರಿಸುವ ಗುತ್ತಿಗೆಯನ್ನೀಯಬೇಕೆಂಬಾಶಯದ ಅಧಿಕೃತ ಮಸೂದೆಯನ್ನು ಮಂಡಿಸಿದರು. ಗಿರಣಿಗಳ ಪೂರೈಕೆಯ ಹೊರತು ಬಟ್ಟೆಯ ಕೊರತೆ ಕಂಡು ಬಂದೀತೆನ್ನುವುದು ತಪ್ಪು ಅಭಿಪ್ರಾಯವೆಂದು ಮಾನ್ಯ ಮಂತ್ರಿಗಳು ಈ ಸಮಯ ಹೇಳಿದರು.

ಲೋಕ ಸಭೆಯ ಅಧಿವೇಶನ

ಕೇಂದ್ರದ ಲೋಕಸಭೆಯ ಅಧಿವೇಶನವು ದಿನಾಂಕ ೫ರಂದು ತೊಡಗಿ ಮಹತ್ವದ ಮಸೂದೆಗಳನ್ನು ಚರ್ಚೆಗೆ ತೆಗೆದುಕೊಳ್ಳುವುದು. ಈ ಅಧಿವೇಶನವು ಆರು ವಾರಗಳವರೆಗೆ ನಡೆಯುವ ನಿರೀಕ್ಷೆ ಇದೆ. ಸುಮಾರು ೩೦ ಹೊಸ ಮಸೂದೆಗಳು ಸಭೆಯ ಮುಂದಿವೆ. ಅವುಗಳಲ್ಲಿ ಹಿಂದೂ ಧರ್ಮಶಾಸ್ತ್ರ ಕ್ರೋಢೀಕರಣದ ವಿವಾಹ ಹಾಗೂ ವಿವಾಹವಿಚ್ಛೇದನ ಸಂಬಂಧದ ಪ್ರಥಮ ಭಾಗವು, ಖಾದಿ ಮತ್ತು ಕೈಮಗ್ಗದ ಉದ್ದಿಮೆಗೆ ಸಂರಕ್ಷಣೆ ನೀಡುವ ಬಗ್ಗೆ ಗಿರಣಿ ಬಟ್ಟೆಗಳ ಮೇಲೆ ಗಜಕ್ಕೆ ಮೂರು ಪೈಯಂತೆ ಮೇಲ್ತೆರಿಗೆ ಹೊರಿಸುವ ಆಶಯದ ಮಸೂದೆಯು ಅತ್ಯಂತ ಪ್ರಾಮುಖ್ಯವಾಗಿವೆ. ಇದರ ಜೊತೆಗೆ ಪಾಕಿಸ್ಥಾನ–ಮತ್ತು ಭಾರತಗಳು ಜಾರಿಯಲ್ಲಿ ತಂದಿರುವ ಪಾಸಪೋರ್ಟ್ ಹಾಗೂ ವೀಸಾ ಪದ್ಧತಿಯ ಪರಿಣಾಮ, ಪೂರ್ವ ಪಾಕಿಸ್ತಾನದಲ್ಲಿ ಅಲ್ಪ ಸಂಖ್ಯಾಕರಾದ ಹಿಂದುಗಳನ್ನು ನಡೆಸಿಕೊಳ್ಳುತ್ತಿರುವ ಬಗ್ಗೆ, ಪಂಚವಾರ್ಷಿಕ ಯೋಜನೆಯನ್ನು ಪುನರ್ವಿಮರ್ಶಿಸುವಲ್ಲಿ ಯೋಜನಾ ಆಯೋಗಕ್ಕೆ ಅರ್ಥ ಧೋರಣೆ, ಪಾನಪ್ರತಿಬಂಧ ಧೋರಣಾ ಮುಂತಾದವುಗಳಲ್ಲಿ ಕಂಡುಬಂದ ಅತಂಕಗಳು ಇತ್ಯಾದಿ ಸಂಗತಿಯ ಮೇಲೆ ಚರ್ಚೆನಡೆಯುವುದೆಂದು ಊಹಿಸಬಹುದು. ರಜಾದಿನಗಳನ್ನು ಬಿಟ್ಟರೆ ಉಳಿಯುವ ೩೦ ದಿನಗಳ ಕಾಲಾವಧಿಯಲ್ಲಿ ಇಷ್ಟೆಲ್ಲ ವಿಷಯಗಳ ಚರ್ಚೆಗೆ ಅವಕಾಶ ದೊರೆಯುವುದೇ ಎಂಬುದು ಪ್ರಶ್ನೆಯಾಗಿದೆ.

ಜನರೊಲವಿನ ಪರಿಚಯ

ಒಮ್ಮೆ ಲೋಕಸಭೆಯ ಅಧಿವೇಶನ ತೊಡಗಿದರೆ, ಮತ್ತೆ ನಮ್ಮ ಮಂತ್ರಿವರ್ಯರು ದಿಲ್ಲಿ ಬಿಟ್ಟು ಹೊರಗೆ ಕಾಲಿಡುವುದು ದುಸ್ಸಾಧ್ಯವಾಗುತ್ತದೆ. ಪ್ರಧಾನಿ ನೆಹರೂರ ಮಟ್ಟಿಗೆ ಈ ಮಾತು ಹೆಚ್ಚು ಅನ್ವಯಿಸುತ್ತದೆ. ಮಂತ್ರಿಮಂಡಳಕ್ಕೆ ಮಾರ್ಗದರ್ಶನ ಮಾಡುವ ಹಾಗೂ ಸರಕಾರದ ಧೋರಣವನ್ನು ನಿರ್ದೇಶಿಸುವ ಹೊಣೆಗಾರಿಕೆಯು ಪ್ರಧಾನಿ ನೆಹರೂರ ಮೇಲಿದೆ ಎಂಬುದರಿಂದ, ಅವರು ಯಾವಾಗಲೂ ಪಾರ್ಲಿಮೆಂಟಿನಲ್ಲಿ ಇದ್ದು ಅಧಿವೇಶನದ ಕಾರ್ಯಕಲಾಪಗಳಲ್ಲಿ ಚಟುವಟಿಕೆಯಿಂದ ಭಾಗವಹಿಸುವರು. ಬ್ರಿಟನಿನಲ್ಲಿ ಪ್ರಧಾನಿ ಚರ್ಚಿಲರು ಕರೆದ ರಾಷ್ಟ್ರಕೂಟದ ಮುಖ್ಯ ಪ್ರಧಾನರ ಪರಿಷತ್ತಿಗೆ ನೆಹರೂ ಹೋಗಲು ಒಡಂಬಡದಿದ್ದುದು ಈ ಕಾರಣಕ್ಕಾಗಿಯೇ. ಜನತೆಯೊಡನೆ ಸಂಪರ್ಕ ಬೆಳೆಸಬೇಕೆಂದಿದ್ದರೆ, ಅವರ ಕಷ್ಟ ಸುಖಗಳ ಸೂಕ್ಷ್ಮಾವಲೋಕನ ಮಾಡಿಕೊಳ್ಳಬೇಕೆಂದಿದ್ದರೆ, ಲೋಕ ಸಭೆಯು ಅಧಿವೇಶನದಲ್ಲಿ ಕೂಡಿರದ ಸಮಯವೇ ಪ್ರಶಸ್ತವಾದದ್ದು. ಮಹಾಚುನಾವಣೆಗಳ ಬಳಿಕ ಜನರ ಮನದೊಲವು ಹೇಗೆ ತಿರುಗಿದೆ ಎಂಬುದನ್ನು ಕಂಡುಕೊಳ್ಳಲೂ, ಆಯಾಯ ಪ್ರದೇಶದ ವಿಶಿಷ್ಟ ಸಮಸ್ಯೆಗಳನ್ನು ಮನವರಿಕೆಮಾಡಿಕೊಳ್ಳಲೂ ನೆಹರೂ ಈಚೆಗೆ ಕೈಕೊಂಡ ಸಂಚಾರಗಳು ತುಂಬ ಉಪಯೋಗಿ ಎಂದು ಸಿದ್ಧವಾಗಿವೆ. ಸ್ವತಃ ನೆಹರೂರಿಗಂತೂ ಅತ್ಯಂತ ಪ್ರಯೋಜನವಾಗಿದೆ ಎಂದು ಅವರೇ ಬಾಯಿಂದ ಹೇಳಿಕೊಂಡಿರುವರು.

ನಿರುದ್ಯೋಗ ಕಳೆಯಲು

ಬೌದ್ಧಿಕ ಬಲದೊಡನೆ ದೈಹಿಕ ಶ್ರಮವೂ ಹೆಚ್ಚಲಿ

ಯುವ ಜನಾಂಗದ ಆದರ್ಶ

ಅಸ್ಸಾಮದ ಗುಡ್ಡಗಾಡು ಪ್ರದೇಶಗಳ ಸಂಚಾರ ಮುಗಿಸಿದ ಬಳಿಕ ನೆಹರೂ ಸೇವಾಗ್ರಾಮದ ಯಾತ್ರೆಯನ್ನು ಕೈಗೊಂಡರು. ಗಾಂಧೀಜಿಯ ಚಟುವಟಿಕೆಗಳ ಕೇಂದ್ರವಾದ ಸೇವಾ ಗ್ರಾಮಕ್ಕೆ ನೆಹರೂ ಮೂರುವರ್ಷಗಳ ಮೇಲೆ ಇದೀಗ ಬಂದರು. ಸೌಗರ ವಿಶ್ವವಿದ್ಯಾಲಯದ ಹೊಸ ಕಟ್ಟಡದ ಶಂಕುಸ್ಥಾಪನೆಯನ್ನು ನೆರವೇರಿಸುವುದೂ ಸೇವಾಗ್ರಾಮದ ಗ್ರಾಮೀಣ ವಿಶ್ವವಿದ್ಯಾಲಯದ ಉದ್ಘಾಟನೋತ್ಸವವನ್ನು ಜರಗಿಸುವುದೂ ನೆಹರೂ ಮಧ್ಯಭಾರತಕ್ಕೆ ತೆರಳಿದುದರ ಉದ್ದೇಶವಾಗಿತ್ತು. ಸೌಗರ ವಿಶ್ವವಿದ್ಯಾಲಯವು ನೆಹರೂರಿಗೆ "ಡಾಕ್ಟರ್ ಅಫ ಲೆಟರ್ಸ" ಪದವಿಯನ್ನು ಕೊಟ್ಟು ಗೌರವಿಸಿತು. ಆಗ ನೆಹರೂ ಅಲ್ಲಿಯ ಛಾತ್ರವೃಂದವನ್ನು ಉದ್ದೇಶಿಸಿ ಮಾತನಾಡಿದ ಭಾಷಣದಲ್ಲಿ ಇಂದಿನ ಯುವ ಜನಾಂಗ ಭವ್ಯ ಭಾರತದ ನಿರ್ಮಾಣದಲ್ಲಿ ಮಹತ್ವದ ಪಾತ್ರವನ್ನು ವಹಿಸಬೇಕೆಂಬ ಧ್ವನಿ ಇತ್ತು. ನಮ್ಮ ತರುಣ–ತರುಣಿಯರು ಉತ್ತಮವಾದ ಗುಣ ಶೀಲಗಳಿಂದ ಕೂಡಿದವರಾಗಿ ಬದುಕುವುದು ಅವಶ್ಯವಿದ್ದಂತೆ ರಚನಾತ್ಮಕ ಕಾರ್ಯಗಳಲ್ಲಿ ಆಸಕ್ತಿಯನ್ನು ತೋರುವ ಬುದ್ಧಿಯಿಂದಲೂ ಕೂಡಿಬೇಕು. ಎಂದು ನೆಹರೂ ಅಭಿಪ್ರಾಯ ವ್ಯಕ್ತಗೊಳಿಸಿದರು. ಮಧ್ಯಮ ವರ್ಗದ ಜನರಿಂದ ದೇಶದ ಪ್ರಗತಿಗೆ ಹೆಚ್ಚಿನ ಸಹಾಯ ದೊರೆಯುವುದಿಲ್ಲ ಕುಶಾಗ್ರ ಬುದ್ಧಿಯ ತರ
ಣ ತರುಣಿಯರು ದೇಶದ ಸಮಸ್ಯೆಗಳಿ
ಉಚಿತವಾದ ಪರಿಹಾರ ಮಾರ್ಗವನ
ಕಂಡುಕೊಳ್ಳಬಲ್ಲರು. ಬುದ್ಧಿ ಬಲದ
ಯಾಗಲೀ ದೈಹಿಕ ಸಾಮರ್ಥ್ಯದಲ್ಲಿಯ
ಗಲೀ ನಮ್ಮ ಯುವಜನಾಂಗ ಹಿಂದೆ ಬ
ಳಬಾರದೆಂದು ನೆಹರೂ ಆಶಿಸಿದುದು
ತ್ಯಂತ ಸಮಂಜಸವಾಗಿದೆ. ವಿಶ್ವವಿದ್ಯಾ
ಯಗಳು ಸರಕಾರೀ ನೌಕರ ವರ್ಗಕ್ಕೆ
ರುವ ಅರ್ಹತೆಯನ್ನು ಮಾತ್ರ ವಿದ್ಯಾ
ವೃಂದಕ್ಕೆ ನೀಡುವುದಾದರೆ ಅದು ಶ
ಶೋಚನೀಯ. ಹಾಗೆಯೇ ಬೌದ್ಧಿಕ
ಳವಣಿಗೆಗೆ ಮಾತ್ರ ಪ್ರೋತ್ಸಾಹ ಕೊಟ
ದೈಹಿಕ ಸಾಮರ್ಥ್ಯವನ್ನು ಕಡೆಗಣಿ
ರೂ ಅದು ಹಿತವಲ್ಲ. ಭಾರತದ ಸೇನ
ಜನರಲ್ ಕಾರ್ಯಪ್ಪನವರ ಅಭಿಪ್ರಾ
ದಂತೆ ನಮ್ಮ ಯುವ ಜನಾಂಗಕ್ಕೆ ಸೈ
ಕ ಶಿಕ್ಷಣ ನೀಡುವುದು ಅತ್ಯವಶ್ಯ.
ರಿಂದ ವಿದ್ಯಾರ್ಥಿ ದೆಸೆಯ
ದಲೇ ಶಿಸ್ತು, ಸಂಯಮ, ಸೇವ
ಮನೋಭಾವ, ರಾಷ್ಟ್ರನಿಷ್ಠೆ ಇತ್ಯಾದಿ
ದ್ಗುಣ ನೆಲೆಗೊಳ್ಳಲು ಅನುಕೂಲ
ಗುತ್ತದೆ.

ಅದ್ಭುತ ಶಿಕ್ಷಣ ಪದ್ಧತಿ

ಆದರೆ ಶಿಕ್ಷಣ ಪದ್ಧತಿಯನ್ನು ರಾ
ಟೆಗಾಗುವುದರೊಳಗಾಗಿ ಮಾರ್ಪ
ಡಾರೆಂಬುದನ್ನು ಪ್ರಾಮಾಣಿಕವಾಗಿ
ಪ್ಪಬೇಕು. ನಮ್ಮ ಶಿಕ್ಷಣ ಕ್ರಮವು
ರತೀಯ ವಾತಾವರಣಕ್ಕೆ ಅನುಕ
ವಿಲ್ಲವೆಂದು ಆಕ್ಷೇಪ ಹೇಳುವವರಲ್ಲಿ
ಹಾತ್ಮಾ ಗಾಂಧೀಯವರ ಸ್ವರವೇ ಅ
ಚ್ಚವಾಗಿತ್ತು. ಗ್ರಾಮೀಣ ಜನತೆಯ
ರ್ಥಿಕ, ಸಾಮಾಜಿಕ ಹಾಗೂ ಸಾಂಸ
ಕ ಪುನರುತ್ಥಾನವನ್ನು ಅಪೇಕ್ಷಿಸಿ
ಧೀಜಿ "ಮೂಲಶಿಕ್ಷಣ"ವೆಂಬ ಅಭ
ಪೂರ್ವ ಯೋಜನೆಯೊಂದನ್ನು ದೇ
ಮುಂದೆ ಮಂಡಿಸಿದರು. ಸೇವಾಗ್ರಾ
ದಲ್ಲಿ ಈಗ ತಾನೆ ತೆರೆಯಲಾದ ಗ್ರಾ
ಣ ವಿಶ್ವವಿದ್ಯಾಲಯವು ಗಾಂಧೀಜ
ಧ್ಯೇಯ ಸಾಧನೆಗೆ ಶ್ರಮಿಸುವ ಪ್ರ
ಯಿಂದ ಬದ್ಧವಾಗಿದೆ ಭಾರತ ಸರ
ಮೂಲ ಶಿಕ್ಷಣ ಪದ್ಧತಿಯ ಉಪ್ಪೆ
ನ್ನು ಪುರಸ್ಕರಿಸುತ್ತಿದೆ ಎಂದು ನೆಹ
ಈ ಸಂದರ್ಭದಲ್ಲಿ ಹೇಳಿದರು. ಆದ
ಇನ್ನೂ ಪ್ರಾಯೋಗಿಕ ರೂಪದಲ್ಲಿ
ಲ ಶಿಕ್ಷಣ ಪದ್ಧತಿಯನ್ನು ಬಳಸುತ್ತಿ
ದರಿಂದ ನಮ್ಮ ಶಿಕ್ಷಣ ಪದ್ಧತಿಯ
ವರ್ತನೆಗೆ ಕಾಲಾವಕಾಶ ಬೇಕಾಗು
ಸಹಜ. ದೇಶದಲ್ಲಿ ನಿರಕ್ಷರತೆಯನ
ಮೂಲಿಸುವುದೊಂದೇ ಮೂಲ ಶಿಕ್ಷ
ಕಾರ್ಯವಾಗಿರದೆ, ನಿರುದ್ಯೋಗದ
ಚ್ಚಾಟನೆಗೂ ಅದು ನೆರವಾಗುವುದ
ಆದರ್ಶ ಶಿಕ್ಷಣ ಪದ್ಧತಿಎಂಬ ಪ್ರಶ
ಅದು ಅರ್ಹವಾಗಿದೆ. ಹೊಟ್ಟೆ ತುಂ
ವುದು ಜ್ಞಾನ ಸಂಪಾದನೆಗಿಂತಲೂ
ತ್ಯಂತ ಅವಶ್ಯವಾದ ಮೂಲಭೂತ
ಯಿರುವುದರಿಂದ ದೇಶದ ಆರ್ಥಿಕ
ರಚನೆಗೆ ಮೂಲಶಿಕ್ಷಣವೇ ಹೇ
ವಾಗಿದೆ.

PLACE YOUR LIFE ASSURANCE WITH A COMPANY OF YOUR OWN - - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policyholders and Representatives At whatever stage we welcome your association with the POPULAR.

The Popular Insurance Co. Ltd.

"Popular Buildings", MANGALORE—1

ZANDU Mahayogaraja Guggula

ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ. 1 **ತೊಲೆಗೆ ರೂ ೩- ಮಾತ್ರ.**

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್.
ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ.
2 ಶ್ರೀ ವಿ ವಿ ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್ ಎನ್ ಶರ್ಮ, ಹಜೂರು ರಸ್ತೆ ಮಂಗಳೂರು.
ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ, ವ್ಯಾಪಾರ ಶರತ್ತು ವಗೈರೆಗಳಿಗೆ ಬರೆಯಿರಿ.

DAMODAR & CO.,

Nainiappa Naicken Street, Park Town-**MADRAS** 3.

ಮೂಲಶಿಕ್ಷಣದ ನೆರವು

ಯುದ್ಧದ ಮಾತೆತ್ತುವುದೆಂದರೆ ಮಕ್ಕಳಾಟಿಕೆ

ಹಳ್ಳಿಯ ಉಪೇಕ್ಷೆ ಸಲ್ಲದು

"ಇನ್ನು ಹತ್ತು ಹದಿನೈದು ವರ್ಷಗಳ ಬಳಿಕ ನಿಮಗೆ ಯಥೇಷ್ಟ ಅನ್ನವನ್ನೂ ಬಟ್ಟೆಯನ್ನೂ ಒದಗಿಸಿಕೊಡುವೆನೆಂದು ಹೇಳಿ ನಾವು ಬಡವರನ್ನು ಸಂತವಿಸುವಹಾಗಿಲ್ಲ" –ಮಹಾತ್ಮಾಗಾಂಧೀಜಿಯ ಅಚ್ಚುಮೆಚ್ಚಿನ ಶಿಷ್ಯಂದಿರಾದ ಆಚಾರ್ಯ ವಿನೋಬಾ ಭಾವೆಯ ನುಡಿ ಇದು. ಒಂದು ಪ್ರಾರ್ಥನೋತ್ತರ ಭಾಷಣದಲ್ಲಿ ಅವರು ಮಾತನಾಡುತಿದ್ದರು. ನಮ್ಮ ಯೋಜನೆಗಳೇನಿದ್ದರೂ, ಹಳ್ಳಿಯನ್ನು ದುರ್ಲಕ್ಷಿಸಿದ್ದು ಕಂಡುಬರುತ್ತಿದೆ. ಬಡವರ ಕೈವಾರಿಯಾಗಿ ಯೋಜನೆಗಳು ರೂಪಿತಗೊಂಡಿಲ್ಲ. ಬದಲು ಶ್ರೀಮಂತರ ನೆರವಿಗೆ ಅವು ನಿಂತಂತಿದೆ ಎಂದು ಆಚಾರ್ಯ ಭಾವೆಯವರು ಗಂಭೀರವಾದ ಎಚ್ಚರಿಕೆಯನ್ನೀಡಿರು. ನಮಗೆ ವಿದ್ಯುಚ್ಛಕ್ತಿ ಸಿಗುತ್ತದೆ, ನಿಜ "ಆದರೆ ಮೊದಲು ದಿಲ್ಲಿಗೆ, ಆಬಳಿಕ ಪಾಟ್ನಾಕ್ಕೆ, ಅದರ ಪೂರೈಕೆಯಾಗುತ್ತಿದೆ. ಈ ಹಳ್ಳಿಗೆ ಎಂದು ವಿದ್ಯುಚ್ಛಕ್ತಿ ಬರುತ್ತದೋ ತಿಳಿಯದು" ಎಂಬುದಾಗಿ ಆಚಾರ್ಯರು ವ್ಯಕ್ತಗೊಳಿಸಿದ ಕಳವಳವನ್ನು ಸರಕಾರ ಉಪೇಕ್ಷೆಯಿಂದ ಕಾಣಲಾಗದು. ನಮ್ಮ ಯೋಜನೆಗಳೇನಿದ್ದರೂ ಮೂಲತಃ ಬಡವರ ಉದ್ಧಾರಕ್ಕೆ ಅವರಿಗೆ ಪೂರ್ಣೋದ್ಯೋಗವನ್ನೂ ಸಾಕಷ್ಟು ಅನ್ನಬಟ್ಟೆಯನ್ನೂ ಒದಗಿಸುವುದಕ್ಕೆ ಪೋಷಕವಾಗುವಂತಿರಬೇಕು. ನೆಹರೂ ಹೇಳಿದಂತೆ ದಿನದಿಂದ ದಿನಕ್ಕೆ ಬದಲಾಗುತ್ತಾ ನಡೆದಿರುವ ಜಗತ್ತಿನೊಡನೆ ನಾವೂ ಹೆಜ್ಜೆ ಇಡಲು ಕಲಿಯಬೇಕು. ಹೀಗೆ ಮಾಡುವಾಗ ಅಧಿಕ ಸಂಖ್ಯಾತರಾದ ಬಡವರನ್ನು ಹಿಂದೆ ಬಿಟ್ಟು ಹೋದರೆ-ನಾವೇನು ಪ್ರಗತಿ ಸಾಧಿಸಿದಂತಾಯಿತು?

ಕಷ್ಟಪಟ್ಟು ದುಡಿಯುವ ಪ್ರತಿಜ್ಞೆ

ಹೀಗೆಂದ ಮಾತ್ರಕ್ಕೆ ಸರಕಾರದ ಯೋಜನೆಗಳಲ್ಲಿ ಹುರುಳಿಲ್ಲವೆಂದು ಯಾರಾದರೂ ಅಪಾರ್ಥ ಕಲ್ಪಿಸಿಕೊಂಡರೆ ಅದು ತಪ್ಪು. ಸರಕಾರದ ಪಂಚವಾರ್ಷಿಕ ಯೋಜನೆಯಲ್ಲಿ ಸಾವಿರ ನ್ಯೂನತೆಗಳಿದ್ದರೂ ಅದರ ಸದುದ್ದೇಶ ಇವೆಲ್ಲ ಕೊರತೆಗಳನ್ನು ಹಿನ್ನೆಲೆಗೆ ಸರಿಸಿ ಮೆರೆಯುವಷ್ಟು ಪ್ರಭಾವಿಯಾಗಿದೆ ಎಂಬುದನ್ನು ಮರೆಯುವಂತಿಲ್ಲ. ಪ್ರಧಾನಿ ನೆಹರೂ ಆಶಿಸಿದಂತೆ ಜನತೆ ಪಂಚವಾರ್ಷಿಕ ಯೋಜನೆ, ಜನಪದ ಅಭಿವೃದ್ಧಿ ಯೋಜನೆ ಮುಂತಾದುವುಗಳಲ್ಲಿ ಸ್ವಯಂಸ್ಫೂರ್ತಿಯಿಂದ ಭಾಗವಹಿಸಲು ಮುಂಬರಬೇಕು. ಮೂಲಶಿಕ್ಷಣದ ಉದ್ದೇಶವಾದರೂ ಬೌದ್ಧಿಕ ಶಿಕ್ಷಣದ ಜೊತೆಗೆ ದೈಹಿಕ ಶ್ರಮವನ್ನು ಜೋಡಿಸುವುದೇ ಆಗಿದೆ. ನಾವು ದಿನಾಲೂ ಕಷ್ಟಪಟ್ಟು ದುಡಿದು, ನಮ್ಮ ಉತ್ಪಾದನೆಯನ್ನು ಹೆಚ್ಚಿಸಲು ಪ್ರಯತ್ನಿಸಿದರೆ, ಆಗ ವೈಯಕ್ತಿಕವಾದ ಕಷ್ಟ ಕಾರ್ಪಣ್ಯಗಳಷ್ಟೇ ತೊಲಗದೆ, ರಾಷ್ಟ್ರದ ಸಂಪತ್ತು ಹೆಚ್ಚುವುದು. ಇದನ್ನು ಮನಗಂಡ ನೆಹರೂ ನಮ್ಮ ಸಂಪತ್ತನ್ನು ರುಪಾಯಿ ಆಣೆ ಪೈಯಲ್ಲಿ ಅಳೆಯಲು ಬರುವುದಿಲ್ಲವೆಂತಲೂ, ನಮ್ಮ ಉತ್ಪಾದನಾ ಪ್ರಮಾಣವೇ ಸಾಂಪತ್ತಿಕ ಮಾನದಂಡವೆಂದೂ ಪದೇಪದೇ ಉಪದೇಶಿಸುತ್ತಾರೆ. ಸರಕಾರದ ಕಾನೂನಿನಿಂದ ಅಸಾಧ್ಯವಾದುದನ್ನು ಸಾಧಿಸಬಹುದೆಂದು ಹೇಳುವ ಜನ ಈಗ ಹಲವರು. ಆದರೆ ಸಾಮಾಜಿಕ ಕ್ರಾಂತಿಯು ಸರಕಾರೀ ಕಾಯಿದೆಯಿಂದ ಉಂಟಾಗದೆ, ಜನರ ಮನೋಭೂಮಿಯಲ್ಲಿಯೇ ಅದರ ಬೀಜಾರೋಪಣವಾಗಬೇಕೆಂಬ ಸತ್ಯವನ್ನು ಯಾರೂ ಅಲ್ಲಗಳೆಯಲಾರರು. ಅದ ಕಾರಣ, ಜನರು ತಮ್ಮ ಕರ್ತವ್ಯವನ್ನು ನಿಸ್ಪೃಹಬುದ್ಧಿಯಿಂದ ನೆರವೇರಿಸಲು, ಮುಖ್ಯವಾಗಿ ರಾಷ್ಟ್ರಾಭಿವೃದ್ಧಿ ಕಾರ್ಯಗಳಲ್ಲಿ ಮಗ್ನರಾಗಲು, ಕಂಕಣ ತೊಡಬೇಕು. ತೊಡಕು ತೊಂದರೆಗಳನ್ನು ಅಲಕ್ಷ್ಯದಿಂದ ನೋಡಿ ಕಷ್ಟಕಾರ್ಪಣ್ಯಗಳನ್ನು ಶಪಿಸದೆ, ಸಹಿಸಿಕೊಂಡು, ಶ್ರೇಯಃಸಾಧನೆಗೆ ದುಡಿಯಬೇಕು ಎನ್ನುವುದು ನ್ಯಾಯವಾದ ಉಪದೇಶ.

ಉಕ್ಕಿನ ಉದ್ದಿಮೆ

ಉತ್ಪಾದನೆಯನ್ನು ಹೆಚ್ಚಿಸಲು ನೆರವಾಗುವ ಕಾರ್ಯಕ್ರಮಗಳನ್ನು ಜಾರಿಯಲ್ಲಿ ತರಲು ಸರಕಾರವು ಹಿಂಜರಿದಿಲ್ಲವೆಂಬುದು ಇದುವರೆಗಿನ ಚಟುವಟಿಕೆಯನ್ನು ಕಂಡರೆ ತಿಳಿಯುವಂತಿದೆ. ಭಾರತದ ಹಲವು ರಾಜ್ಯಗಳಲ್ಲಿ ಜಮೀನುದಾರಿ, ಜಾಗೀರದಾರಿ ಪದ್ಧತಿಯ ನಿರ್ಮೂಲನವನ್ನು ಮಾಡಿರುವರು. ಇನ್ನುಳಿದ ಕಡೆಯಲ್ಲಿಯೂ ರೈತರ ಹಕ್ಕು ಬಾಧ್ಯತೆಗಳ ಸಂರಕ್ಷಣೆಗಾಗಿ ಕಾಯಿದೆಗಳನ್ನು ಮಾಡುವ ಹವಣಿಕೆ ಇದೆ. ಅಲ್ಲದೆ ಕೈಗಾರಿಕಾ ಕ್ಷೇತ್ರದಲ್ಲಿ ಕೂಡ ಅದ್ಭುತ ಪ್ರಗತಿಯನ್ನು ಸಾಧಿಸುವುದು ಪಂಚವಾರ್ಷಿಕ ಯೋಜನೆಯ ಉದ್ದೇಶವಾಗಿದೆ. ಮುಖ್ಯವಾಗಿ ಕಬ್ಬಿಣ ಮತ್ತು ಉಕ್ಕುಗಳ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಯೋಜನಾ ಆಯೋಗವು ಪ್ರಾಶಸ್ತ್ಯಕೊಟ್ಟಿದೆ. ಉಕ್ಕಿನ ಉದ್ದಿಮೆಯನ್ನು ಸ್ಥಾಪಿಸುವುದೆಂದರೆ ಅದಕ್ಕೆ ವಿಪುಲ ಬಂಡವಾಳಬೇಕು. ಅಪಾರ ಸಾಧನ ಸಾಮಗ್ರಿಗಳು ಬೇಕು. ಇಂಥದರಲ್ಲಿ ಉತ್ಪಾದನೆಯ ಹೆಚ್ಚಳಕ್ಕೆ ಬಾಧಕವಾಗುವ ಯಾವುದೇ ಆತಂಕವನ್ನು ನಿವಾರಿಸುವುದು ಸರಕಾರದ ಆದ್ಯ ಕರ್ತವ್ಯವೆನಿಸುತ್ತದೆ. ಈಚೆಗೆ ರಾಷ್ಟ್ರಾಧ್ಯಕ್ಷರು ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿ, ಮುಂದಿನ ವರ್ಷಾದಿಯಿಂದ ಸ್ಟೀಲ್ ಕಾರ್ಪೊರೇಶನ್ ಆಫ್ ಬೆಂಗಾಲ್, ಲಿಮಿಟೆಡ್ ಎಂಬ ಕಾರ್ಖಾನೆಯು ಇಂಡಿಯನ್ ಆಯರ್ನ್ ಎಂಡ್ ಸ್ಟೀಲ್ ಕಂಪೆನಿ, ಲಿಮಿಟೆಡ್‌ನೊಂದಿಗೆ ಲೀನಹೊಂದಬೇಕೆಂದು ವಿಧಿಸಿದ್ದಾರೆ. ಇದರಿಂದ ಉಕ್ಕಿನ ಉತ್ಪಾದನೆಯನ್ನು ಅತ್ಯಧಿಕ ಪ್ರಮಾಣದಲ್ಲಿ ಹೆಚ್ಚಿಸಲು ಅನುಕೂಲತೆ ದೊರೆಯುವುದಲ್ಲದೆ, ಅನಾವಶ್ಯಕವಾದ ವೆಚ್ಚವನ್ನುಳಿಸಿ ಉದ್ದಿಮೆಯ ಅಭಿವೃದ್ಧಿಗಾಗಿ ಉಪಯೋಗಿಸಲಿಕ್ಕೆ ಅಸ್ಪದವುಂಟಾಗುತ್ತದೆ. ನಿಜ ಹೇಳಬೇಕೆಂದರೆ ಜಾಗತಿಕ ಬೇಂಕಿನ ನಿಯೋಗವು ಭಾರತದಲ್ಲಿ ಉಕ್ಕಿನ ತಯಾರಿಯಲ್ಲಿ ಪ್ರಗತಿಯುಂಟಾಗಬೇಕಿದ್ದರೆ ಈ ಕಾರ್ಖಾನೆಗಳನ್ನು ಒಂದುಗೂಡಿಸುವುದು ಚೆಲುವಾದ ಉಪಾಯವೆಂದು ಸೂಚಿಸಿತ್ತು. ಸುಮಾರು ೩೧ ಕೋಟಿ ರೂಪಾಯಿ ವೆಚ್ಚದ ಅಭಿವೃದ್ಧಿ ಯೋಜನೆಯನ್ನು ಉಕ್ಕಿನ ಉದ್ದಿಮೆಗಾಗಿ ಸಿದ್ಧಗೊಳಿಸಿದ್ದು ಇದರಲ್ಲಿ ಅರ್ಧದಷ್ಟು ಹಣವನ್ನು ಜಾಗತಿಕ ಬೇಂಕು ಸಾಲ ರೂಪದಲ್ಲಿ ಕೊಡುವ ನಿರೀಕ್ಷೆ ಇದೆ. ಇನ್ನು ಹತ್ತು ಕೋಟಿ ರೂಪಾಯಿಯನ್ನು ಭಾರತ ಸರಕಾರ ಒದಗಿಸಿ, ಉಳಿದುದನ್ನು ಖಾಸಗಿ ಬಂಡವಾಳದಾರರ ಶೇರುಗಳಿಂದ ತುಂಬಿಸಲಾಗುವುದು.

ವಿಮಾನ ಸಾರಿಗೆ

ಇದೇ ಮಾದರಿಯ ಇನ್ನೊಂದು ಸ್ತುತ್ಯ ನಿರ್ಣಯವನ್ನು ಭಾರತ ಸರಕಾರ ಕೈಗೊಂಡಿದೆ. ಭಾರತದೊಳಗೆ ಹಾಗೂ ಭಾರತದಿಂದ ವಿದೇಶಗಳಿಗೆ ಪ್ರಯಾಣಿಸುವ ವಿಮಾನ ಸಾರಿಗೆಯನ್ನು ಒಂದೇ ಘಟಕವಾಗಿ ರೂಪಿಸುವ ನಿಶ್ಚಯಕ್ಕೆ ಸರಕಾರ ಬಂದಿರುತ್ತದೆ. ಈ ವಿಷಯದಲ್ಲಿ ಅಧಿಕೃತ ಪ[illegible]ಯೊಂದು ಪಾರ್ಲಿಮೆಂಟಿನಲ್ಲಿ ಸದ್ಯದಲ್ಲಿಯೇ ಮಂಡಿಸಲ್ಪಡುವುದು. ಭಾರತದಲ್ಲಿ ಈಗ ವಿಮಾನೋದ್ಯಾಣವು ಅತ್ಯಧಿಕ ವೆಚ್ಚವನ್ನು ತರುವಂಥದು. ವಿಮಾನ ಸಾರಿಗೆಯ ಸೌಕರ್ಯವನ್ನು ಒದಗಿಸುವ ಕಂಪೆನಿಗಳು ತಮ್ಮ ವೆಚ್ಚದ ಪ್ರಮಾಣವನ್ನು ಕಡಿಮೆ ಮಾಡಲು ಸಮರ್ಥವಾಗಿಲ್ಲ. ಹಾಗೆಯೇ ಹೆಚ್ಚಿನ ಅನುಕೂಲತೆಯನ್ನು ಪ್ರಯಾಣಿಕರಿಗೆ ಒದಗಿಸಿಕೊಡುವಷ್ಟು ಭಂಡವಾಳವೂ ಈ ಕಂಪೆನಿಗಳಿಗಿಲ್ಲ. ಆದುದರಿಂದ ಸರಕಾರವೇ ವಿಮಾನ ಸಾರಿಗೆಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು, ಅದರ ಅಭಿವೃದ್ಧಿಗಾಗಿ ಪ್ರಯತ್ನಿಸುವ ನಿಲುಮೆಯನ್ನು ವಹಿಸಿದೆ. ಒಂಭತ್ತು ಕಂಪೆನಿಗಳ ಒಡೆತನದಲ್ಲಿರುವ ವಿಮಾನಗಳೂ, ಆ ಕಂಪೆನಿಗಳ ಸಾಲ ಮೂಲಗಳೂ ಸರಕಾರದ ವಶ ಬಂದು, ಹೊಸತಾದ, ದಕ್ಷ ಆಡಳಿತ ಯಂತ್ರಕ್ಕೆ ವಿಮಾನೋದ್ಯಾಣವನ್ನು ಒಪ್ಪಿಸಲಾಗುವುದು.

ಕ್ಷುಲ್ಲಕ ಬುದ್ಧಿಯ ಗುಲ್ಲು

ದೇಶ ಹೀಗೆ ಅಭಿವೃದ್ಧಿಯನ್ನೇ ಧ್ಯೇಯವಾಗಿಟ್ಟುಕೊಂಡು ಮುನ್ನಡೆಯಲು ನೋಡುವಾಗ ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾತರಾದ ಹಿಂದುಗಳನ್ನು ನಡೆಸಿಕೊಳ್ಳುವ ರೀತಿಯ ಕುರಿತು ಕೆಲವರು ಎಬ್ಬಿಸುವ ಗುಲ್ಲನ್ನು ಕ್ಷುಲ್ಲಕ ಬುದ್ಧಿಯ ದ್ಯೋತಕವೆಂದೇ ಕರೆಯಬೇಕು. ಅಲ್ಪಸಂಖ್ಯಾತರನ್ನು ಒಳ್ಳೆಯ ರೀತಿಯಿಂದ ನೋಡಿಕೊಳ್ಳುವುದರಲ್ಲಿ ಪಾಕಿಸ್ತಾನ ಔದಾರ್ಯ ತೋರಿಸುತ್ತಿಲ್ಲವೆಂದರೂ ಆರ್ಥಿಕ ಬಹಿಷ್ಕಾರ, ದಂಡನೀತಿ ಮುಂತಾದ ಉಗ್ರಕ್ರಮಗಳನ್ನೆತ್ತಿ ಮಾತನಾಡುವುದು ಹೊಣೆಗೇಡಿ ವಿಚಾರವಾಗಿದೆ. ಯುದ್ಧದ ವಿಚಾರದಲ್ಲಿ ಮಾತಾಡುವವರಿಗೆ, ಅದರ ಪರಿಣಾಮದ ಭಯಂಕರ ಸ್ವರೂಪದ ಅರಿವಾಗಿಲ್ಲವೆಂದು ವಿಷಾದದಿಂದ ಹೇಳಬೇಕು. ಪ್ರಧಾನಿ ನೆಹರೂ ಯುದ್ಧದಿಂದ ಸಮಸ್ಯೆಯು ಪರಿಹಾರವಾಗುವುದಿಲ್ಲೆಂದು ಸ್ಪಷ್ಟವಾಗಿ ಹೇಳುತ್ತಾರಲ್ಲದೆ, ಒಂದುವೇಳೆ ಯುದ್ಧ ತೊಡಗಿದ್ದೇ ಆದರೆ, ಅದಕ್ಕೆ ತೆರಬೇಕಾಗಿರುವ ಬೆಲೆಯು ಅಪಾರ. ನಾವು ವಿಧ್ವಂಸಕ ಚಟುವಟಿಕೆಗಳಲ್ಲಿ ಆಸಕ್ತರಾಗಿರುವ ಬದಲು, ವಿಧಾಯಕ ಕಾರ್ಯಕ್ಷೇತ್ರಕ್ಕೆ ಧುಮುಕುವುದು ಶ್ರೇಯಸ್ಕರವೆಂದು ಹೇಳುವುದು ನಿಜ. ಉದಾಹರಣೆಗೆ, ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ಕೃಷಿ ಸಂಶೋಧನೆಯನ್ನು ವ್ಯಾಪಕಗೊಳಿಸುವುದೂ, ಸಂಶೋಧನೆಯ ಪರಿಣಾಮವನ್ನು ಹಳ್ಳಿಯ ರೈತನವರೆಗೆ ಮುಟ್ಟಿಸುವುದೂ ತುಂಬ ಮೆಚ್ಚಿನ ಕೆಲಸವಾಗಬಲ್ಲುದು. ಯುದ್ಧಕ್ಕಾಗಿ ವ್ಯಯಿಸುವ ಹಣವಿದ್ದರೆ, ಅದನ್ನು ಉತ್ಪಾದನ ಹೆಚ್ಚಿಸಲು ಉಪಯೋಗಿಸುವುದರ ಮೂಲಕ ಸದ್ವಿನಿಯೋಗಗೊಳಿಸಲೆಡೆಯಿದೆ. ಭಾರತದ ಸೈನ್ಯ ಪಾಕಿಸ್ತಾನವನ್ನು ಜಯಿಸುವುದಕ್ಕಾಗಿ ಇರದೆ, ದೇಶದ ರಕ್ಷಣೆ, ಹಾಗೂ ಜನತಾಸೇವೆಗಾಗಿ ಇದೆ ಎಂಬ ಆದರ್ಶ ಕಣ್ಣಿಂದ ಮರೆಯಾಗಕೂಡದು.

The East & West
Estd:] Insurance Co., Ltd., [1913
East & West Building, BOMBAY 1
ದಿ ಈಸ್ಟ್ ಎಂಡ್ ವೆಸ್ಟ್
ಸ್ಥಾಪನೆ:] ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್. [1913
ಒಟ್ಟು ನಿಧಿ ರೂಪಾಯಿ 1 ಕೋಟಿ 5 ಲಕ್ಷ ಮಿಕ್ಕಿ ಇದೆ
1951ನೇ ಇಸವಿಯಲ್ಲಿ ಮರಣದಿಂದ ಮತ್ತು ವ್ಯಾದಿಯಾಗಿ ಕೊಟ್ಟ
ಕ್ಲೈಮುಗಳು ರುಪಾಯಿ 5 ಲಕ್ಷ 91 ಸಾವಿರಕ್ಕೆ ಮಿಕ್ಕಿರುತ್ತದೆ
ಜೀವವಿಮೆಯ ಪೂರ್ಣ ಪ್ರಯೋಜನವನ್ನು ಜನರಿಗೆ ಒದಗಿಸಿಕೊಟ್ಟು
ಕಾಲಕಾಲಕ್ಕೆ ಸಲಹೆಯನ್ನಿತ್ತು ಸಹಕರಿಸುವುದೇ ನಮ್ಮ ಧ್ಯೇಯ.

ದಕ್ಷಿಣ ಕನ್ನಡ ಜಿಲ್ಲೆಯ ಉತ್ತರಕ್ಕೆ ಒಬ್ಬ ಮತ್ತು ದಕ್ಷಿಣಕ್ಕೊಬ್ಬರಂತೆ ಎರಡು ಜನ ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ. ಉತ್ತರ ಕನ್ನಡ ಮತ್ತು ಮೈಸೂರು ಪ್ರಾಂತ್ಯದ ಪ್ರತೀ ಜಿಲ್ಲೆಗೂ ಜಿಲ್ಲೆಗೊಬ್ಬರಂತೆ ಇನ್ಸ್‌ಪೆಕ್ಟರರೂ ಸ್ಪೆಶಲ್ ಏಜಂಟರೂ ಬೇಕಾಗಿದ್ದಾರೆ.

ನಮ್ಮ ಆಫೀಸುಗಳು ಶಿರ್ವ ಮತ್ತು ಪಡು ಬಿದ್ರಿ
ಮೆಸ್ಸರ್ಸ್ ಹೆಗ್ಡೆ ಎಂಡ್ ರಾವ್
ಚೀಫ್ ಏಜಂಟರು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಮತ್ತು ಮೈಸೂರು ಸ್ಟೇಟ್
ಪೋಸ್ಟ್, ಶಿರ್ವ ದ. ಕ.

ಬೆಲೆ: ಬರೇ 0-12-0 ಮಾತ್ರ.

"ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್"
ಇವರಲ್ಲಿ ಒಂದು ಸೇವಿಂಗ್ಸ್ ಖಾತೆಯನ್ನು ತೆರೆದು ಅದನ್ನು ಕ್ರಮವಾದ
ಉಳಿತಾಯಗಳಿಂದ ವೃದ್ಧಿಗೊಳಿಸುವುದೇ
ಜೀವನದಲ್ಲಿ ನಿಮ್ಮ ಉನ್ನತಿಗೆ ಹೆದ್ದಾರಿ !
ಸ್ಥಾಪನೆ: 1906
THE CANARA BANKING CORPORATION LIMITED.
ಪ್ರಧಾನ ಕಾರ್ಯಾಲಯ, ಉಡುಪಿ. (ದ ಭಾರತ)

ನವಯುಗ
ಉಡುಪಿ, ಗುರುವಾರ ೬-೧೧-'೫೨

ಹಿಂದುಳಿದವರು ಮುಂಬರಲಿ

ನಾಗಪುರದಲ್ಲಿ ಹರಿಜನ ಕಾರ್ಯಕರ್ತರು ಹಾಗೂ ವಿಧಾನ ಸಭೆಯ ಹರಿಜನ ಸದಸ್ಯರ ಅಧಿವೇಶನವೊಂದು ನಡೆದಾಗ, ಅಧ್ಯಕ್ಷಸ್ಥಾನದಿಂದ ಮಂತ್ರಿ ಜಗಜೀವನರಾಮರು ಮಾಡಿದ ಭಾಷಣವು ಗಮನೀಯವಾಗಿದೆ. ಭಾರತೀಯ ಘಟನೆಯಲ್ಲಿ ಜಾತಿ, ಮತ, ಲಿಂಗಭೇದವಿಲ್ಲದೆ ಎಲ್ಲ ನಾಗರಿಕರಿಗೂ ಸಮಾನಾಧಿಕಾರ ಮತ್ತು ಸಮಾನಾವಕಾಶಗಳನ್ನು ಕೊಡುವ ನಿರ್ದಿಷ್ಟ ಕಲಮು ಇದ್ದರೂ ಕೂಡ ಹಿಂದುಳಿದ ವರ್ಗದವರಿಗೆ ಮುಂಬರಲು ಸರ್ವಾನುಕೂಲತೆ ದೊರೆತಿಲ್ಲ ಎಂದವರು ಹೇಳಿದರು. ರಾಜ್ಯಘಟನೆಯಲ್ಲಿ ನಿರ್ದೇಶಿಸಿದ ತತ್ವಕ್ಕೆ ಮನ್ನಣೆ ಕೊಟ್ಟು, ಹಲವು ರಾಜ್ಯ ಸರಕಾರಗಳು ಹಿಂದುಳಿದವರನ್ನು ಮುಂದಕ್ಕೆ ತರುವ ಸದುದ್ದೇಶದಿಂದ ಬೇರೆ ಬೇರೆ ಕಾಯಿದೆಗಳನ್ನು ಪಾಸುಮಾಡಿವೆ. ಹೀಗಿದ್ದರೂ ಬಯಸಿದಷ್ಟು ಹೆಚ್ಚು ಪ್ರಮಾಣದಲ್ಲಿ ಈ ಕಾಯಿದೆಗಳಿಂದ ಉಪಕಾರವಾದಂತೆ ಕಂಡುಬರುವುದಿಲ್ಲ. ಇದರ ಕಾರಣವನ್ನು ವಿಶ್ಲೇಷಿಸಿ ನೋಡುವಾಗ ನಮ್ಮಲ್ಲಿ ಪರಂಪರಾಗತವಾಗಿ ರೂಢಿಸಿಕೊಂಡು ಬಂದ ಸಾಮಾಜಿಕ ಸಂಪ್ರದಾಯಗಳನ್ನು ಕಾಯಿದೆ ಬಲವೊಂದರಿಂದಲೇ ಬುಡ ಮೇಲು ಮಾಡಿಬಿಡುವುದು ಅಸಾಧ್ಯವೆಂದು ಸರ್ವಪ್ರಥಮವಾಗಿ ಅನುಭವಕ್ಕೆ ಬರುತ್ತದೆ. ಹರಿಜನರೇ ಆದಿಯಾಗಿ ಹಿಂದುಳಿದ ವರ್ಗಗಳಿಗೆಲ್ಲ ಸಮಾನಾವಕಾಶ ಹಾಗೂ ಅಧಿಕಾರವನ್ನು ಕೊಡಬೇಕೆಂದು ಕಾಯಿದೆ ಮಾಡಿದಷ್ಟಕ್ಕೆ ಅದನ್ನು ನಮ್ಮ ಸಮಾಜ ಮನ್ನಿಸಿದಂತಾಗಲಿಲ್ಲ. ಸಾಮಾಜಿಕ ಮನ್ನಣೆಯು ನಮ್ಮ ಬದುಕಿನ ಭದ್ರತೆ ಹಾಗೂ ಸುಖವಾದ ದಿನಯಾಪನೆಗೆ ಅತ್ಯಂತ ಆವಶ್ಯಕವಾದ ಸಂಗತಿಯೆಂಬುದನ್ನು ಲಕ್ಷ್ಯಿಸಿದರೆ—ಹಿಂದುಳಿದವರನ್ನು ದುರ್ಲಕ್ಷಿಸಿದ ಬಗ್ಗೆ ಸರಕಾರವನ್ನು ದೂರದೆ, ಮರಳಿ ಸಮಾಜವನ್ನೆ ನಿಂದಿಸಬೇಕಾಗುತ್ತದೆ. ಜಗಜೀವನರಾಮರು ಹೇಳಿದಂತೆ, ಹರಿಜನನೊಬ್ಬನು ಮಿಠಾಯಿ ಅಂಗಡಿ ತೆರೆದು, ಉಪಜೀವನ ಸಾಗಿಸುವೆನೆಂದೆಣಿಸಿದರೆ, ದಿವಾಳಿ ಎದ್ದು ಹೋಗಬೇಕಾದೀತಲ್ಲದೆ, ಅವನ ಅಂಗಡಿಯಿಂದ ಮಿಠಾಯಿ ಕೊಂಡುಕೊಳ್ಳಲು ಯಾರೊಬ್ಬರೂ ಬರಲಾರರು. ಅಂತೆಯೇ, ಭೂಮಿ ಸಾಗುವಳಿ ಮಾಡಬೇಕೆಂಬ ಸ್ವಾಭಾವಿಕವಾದ ಅಭಿಲಾಷೆ ಹರಿಜನರಲ್ಲಿದ್ದರೂ, ಸಾಮಾಜಿಕ ನೀತಿ-ನಿಯಮಗಳು ಅವರನ್ನು ಬೇಸಾಯದ ಕೂಲಿಗಳಾಗಿ ಉಳಿಯಗೊಡುವವೇ ಹೊರತು, ರೈತನ ಮಟ್ಟಕ್ಕೇರಿಸುವುದಿಲ್ಲ. ಇವೆಲ್ಲ ನಮ್ಮ ಸುತ್ತುಮುತ್ತಲೂ ಕಂಡು ಬರುವ ನಿತ್ಯ ವ್ಯವಹಾರಗಳು. ಇವು ತಪ್ಪೆಂದು ವಿವೇಕಿಗಳು ಒಪ್ಪುವರಾದರೂ—ಸಮಾಜದ ನಡವಳಿಕೆಯನ್ನು ಬದಲಿಸುವ ಕೆಲಸ ಮಾತ್ರ ಬಹಳ ವಿಳಂಬದಿಂದ ನಡೆಯುತ್ತಿದೆ. ತಾನು ಮಾಡಿದ ಕಾಯಿದೆಯನ್ನು ಜಾರಿಗೆ ತರುವಂತೆ ನೋಡುವುದು ಸರಕಾರದ ಕರ್ತವ್ಯವೆಂಬುದನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ, ಸರಕಾರದ ಚಟುವಟಿಕೆ ಇನ್ನಷ್ಟು ವ್ಯಾಪಕಗೊಳ್ಳಬೇಕೆನ್ನಬಹುದು. ಆದರೂ ವಿಧಾಯಕ ಕಾರ್ಯಕರ್ತರು ವಿಪುಲ ಸಂಖ್ಯೆಯಲ್ಲಿ ಮುಂಬಂದು ಜನರ ಮನಃಪರಿವರ್ತನೆಗಾಗಿ ಕೆಲಸಮಾಡದಿದ್ದಲ್ಲಿ ಸರಕಾರದ ಚಟುವಟಿಕೆಗಳಿಗೆ ಅನುಕೂಲವಾದ ವಾತಾವರಣ ನಿರ್ಮಿಸಲಿಕ್ಕಿಲ್ಲ. ಈ ಸಂದರ್ಭದಲ್ಲಿ ನಾವು ಹಿಂದುಳಿದ ವರ್ಗದವರಲ್ಲಿ ಸ್ವತಃ ಇರುವ ಆಲಸ್ಯ ಹಾಗೂ ಔದಾಸೀನ್ಯವನ್ನು ಉಪೇಕ್ಷಿಸುವಂತಿಲ್ಲ. ಹರಿಜನರಲ್ಲಿ ಸುಶಿಕ್ಷಿತರಾದವರು ವಿಧಾಯಕ ಕಾರ್ಯಕ್ರಮಗಳಲ್ಲಿ ಹೆಚ್ಚು ಆಸಕ್ತಿಯನ್ನು ತೋರಬೇಕು. ತಾವು ಮಾತ್ರ ಸಮಾಜದಲ್ಲಿ ಒಂದು ಉತ್ತಮ ಸ್ಥಾನ ಪಡೆದೆವೆಂದಷ್ಟಕ್ಕೆ, ತಮ್ಮ ಬಾಂಧವರನ್ನು ಉಪೇಕ್ಷೆಯಿಂದ ಕಾಣುವುದು ಸಲ್ಲದು. ಬದಲಿಗೆ, ತಮ್ಮಂತೆಯೇ ಅವರೂ ಉದ್ಧಾರ ಹೊಂದಬೇಕೆಂದು ಬಯಸಿ, ಅದಕ್ಕೆ ತಕ್ಕುದಾದ ಮನೋಭಾವನೆಯನ್ನು ಹುಟ್ಟಿಸಲು ಪ್ರಯತ್ನ ಮಾಡುವುದು ಅವಶ್ಯ. ಹಿಂದುಳಿದವರಲ್ಲಿ ಜಾಗೃತಿಯನ್ನುಂಟು ಮಾಡುವುದಕ್ಕೆ ಸರಕಾರದ ಕಾಯಿದೆಯೊಂದೇ ಸಾಲದು:—ಅವರ ನಡುವೆ ಬೆರೆತು, ಅವರ ಸಮಸ್ಯೆಗಳ ಪರಿಚಯ ಹಾಗೂ ಕಷ್ಟ ಸುಖಗಳ ತಿಳಿವಳಿಕೆಯುಳ್ಳ ಜನರ ನೆರವೂ ಅತ್ಯಗತ್ಯ. ಸುಶಿಕ್ಷಿತ ಹರಿಜನ ಬಾಂಧವರನ್ನು ಬಿಟ್ಟರೆ ಈ ವಿಷಯದಲ್ಲಿ ಹೆಚ್ಚು ಸಮರ್ಪಕವಾದ ಜ್ಞಾನವನ್ನು ಕೊಡಲು ಹೊರಗಿನವರು ಯಾರು ಸಮರ್ಥರು? ತಮ್ಮ ಹಿತಕ್ಕಾಗಿ ಕಾಯಿದೆಯೊಂದು ರೂಪಿತವಾಗಿದೆ ಮತ್ತು ಅದನ್ನು ಆಚರಣೆಗೆ ತರುವಲ್ಲಿ ತಮ್ಮ ಮನೋದಾರ್ಢ್ಯವೇ ಮುಖ್ಯವೆಂಬ ಭಾವನೆಯನ್ನು ಹರಿಜನರಲ್ಲಿ ಬಿತ್ತುವುದಕ್ಕೆ ನಡೆಸುವ ಪ್ರಯತ್ನವೇ, ಪರಿಣಾಮದಲ್ಲಿ ಸಾಮಾಜಿಕ ನೀತಿನಿಯಮಗಳಲ್ಲಿ ಪರಿವರ್ತನೆಯನ್ನು ಸಾಧಿಸಬಲ್ಲುದು. ಹೀಗೆ ಸಾಮಾಜಿಕ ಕಾರ್ಯಕರ್ತರೂ ಹರಿಜನ ಕೆಲಸಗಾರರೂ ಪರಸ್ಪರ ಸಹಕರಿಸಿ, ಮಾನವ ಜಾತಿಯನ್ನು ಒಂದೇಯಾಗಿ ಭಾವಿಸಿ, ಸೌಹಾರ್ದ ಸಂಬಂಧನೇರ್ಪಟ್ಟು ಸುಖ ಜೀವನ ಸಾಧ್ಯವಾಗುವಂತೆ ಕಾರ್ಯಕ್ರಮವನ್ನು ಅನುಸರಿಸುವುದೊಳಿತು. ಹಾಗೆ ಮಾಡುವಾಗ ರಾಷ್ಟ್ರದ ಐಕ್ಯವನ್ನು ಕಣ್ಣ ಮುಂದಿಟ್ಟುಕೊಳ್ಳುವುದೂ ಪ್ರಶಸ್ತ. ಹರಿಜನೋದ್ಧಾರವು ಬೃಹತ್ತಾದ ಸಮಸ್ಯೆಯಾಗಿದೆ. ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಕ್ರಾಂತಿಗೆ ಇಲ್ಲಿ ಆಸ್ಪದವಿದೆ. ಆದುದರಿಂದ ಈ ಕ್ರಾಂತಿಯ ಫಲವಾಗಿ ರಾಷ್ಟ್ರ ಗಂಡಾಂತರಕ್ಕೆ ಈಡಾಗುವಂತೆ ಪರಿಸ್ಥಿತಿಯನ್ನು ನಿರ್ಮಿಸುವ ಹುಚ್ಚೆಗೇಡಿ ಕೆಲಸಕ್ಕೆ ಹೋಗಬಾರದು. ಸ್ಪಷ್ಟವಾಗಿ ಹೇಳುವುದಾದರೆ, ಹರಿಜನ ಬಾಂಧವರಲ್ಲಿ ಮೂಡಿದ ಮಾನವೀಯ ಅಭಿಲಾಷೆಗಳಿಗೆ ಸ್ವಾಭಾವಿಕ ರೀತಿಯಲ್ಲಿ ತೃಪ್ತಿಯ ಮಾರ್ಗ ತೆರೆಯದಿದ್ದರೆ—ಕಮ್ಯೂನಿಸ್ಟರಂಥ ಪಕ್ಷಗಳು ಅವರ ಶಕ್ತಿಯನ್ನೆಲ್ಲ ತಮ್ಮ ವಿಧ್ವಂಸಕ ಕೃತ್ಯಗಳಿಗೆ ಪ್ರಚ್ಛನ್ನರೂಪದಲ್ಲಿ ಉಪಯೋಗಿಸಿಕೊಳ್ಳಲಿಕ್ಕೆ ಹಿಂಜರಿಯಲಿಕ್ಕಿಲ್ಲ. ಶೋಷಣೆಯನ್ನು ಕೊನೆಗಾಣಿಸುವುದೂ, ಸಮಾನಾವಕಾಶವನ್ನು ಕಲ್ಪಿಸಿ ಕೊಡುವುದೂ ಹಿಂದುಳಿದವರನ್ನು ಮುಂದಕ್ಕೆ ತರಲು ಕೈಗೊಳ್ಳಬೇಕಾದ ಮಾರ್ಗ ಎಂದಷ್ಟಕ್ಕೆ—ಎಲ್ಲ ಮುಗಿಯಲಿಲ್ಲ. ಹಿಂದುಳಿದವರೇ ಮುಂಬಂದು ತಮಗೆ ಸಮಾಜದ ಸಹಾನುಭೂತಿ ದೊರೆಯುವಂತೆ ವರ್ತಿಸುವುದೂ ಮುಖ್ಯದ ವಿಷಯ.

ಆಫ್ರಿಕನ್ನರ ಸ್ವಾತಂತ್ರ್ಯಪ್ರಿಯತೆ

ವರ್ಣ ಪ್ರಭುತ್ವವನ್ನು ಧಿಕ್ಕರಿಸುವ ಪ್ರಯತ್ನ

ಜಾಗತಿಕ ದೃಷ್ಟಿಯು ಹಿಂದುಳಿದ ರಾಷ್ಟ್ರವಾದ ಆಫ್ರಿಕದಲ್ಲಿ ಈಚೆಗೆ ನಡೆಯುತ್ತಿರುವ ಅನಪೇಕ್ಷಿತ ಚಟುವಟಿಕೆಗಳ ಕಡೆಗೆ ಹೊರಳಿದೆ ಎಂದರೆ ತಪ್ಪಾಗದು. ದಕ್ಷಿಣ ಆಫ್ರಿಕೆಯಲ್ಲಿ ಮಲಾನರ ಸರಕಾರ ಅನುಸರಿಸುತ್ತಿರುವ ವರ್ಣಭೇದ ನೀತಿಯನ್ನು ಲೋಕವೇ ನಿಂದಿಸುತ್ತಿದ್ದರೂ, ಆ ಸರಕಾರ ಮತ್ತು ಸಾಮ್ರಾಜ್ಯವಾದಿ ದೃಷ್ಟಿಕೋನವುಳ್ಳ ಬ್ರಿಟನು ಫ್ರಾನ್ಸ್‌ಗಳು ಮಲಾನರ ಬೆನ್ನು ತಟ್ಟುವ ಪ್ರಯತ್ನಕ್ಕೆ ಇಳಿದಿವೆ. ಬ್ರಿಟನಿನ ಪಾರ್ಲಿಮೆಂಟಿನಲ್ಲಿ ಈ ಕುರಿತು ಕೊಟ್ಟ ಸಮಾಧಾನ ಮತ್ತು ಹೊಸ ದಿಲ್ಲಿಯಲ್ಲಿ ಬ್ರಿಟಿಷ್ ರಾಯಭಾರಿ ಕ್ಲಟರ್‌ಬಕ್ಕರು ಪತ್ರಕಾರಗೋಷ್ಠಿಯಲ್ಲಿ ಹೇಳಿದ ವಿವರಣೆಗಳಿಗೆ ಭದ್ರವಾದ ನೆಲಗಟ್ಟೇ ಇಲ್ಲವೆನ್ನಬಹುದು. ಸಂಯುಕ್ತ ರಾಷ್ಟ್ರಸಂಘದ ತಿಮ್ಮಪಟದ ಎರಡನೇ ಕಲಮಿನ ಏಳನೇ ವಿಭಾಗದಲ್ಲಿ ಹೇಳಿದುದನ್ನು ವ್ಯತಿರಿಕ್ತವಾಗಿ ಹೋಗಲು ಬ್ರಿಟನ್ನು ಬಯಸುವುದಿಲ್ಲವಂತೆ. ಒಂದು ರಾಷ್ಟ್ರದ ಆಂತರಿಕ ಪ್ರಶ್ನೆಯಲ್ಲಿ ಸಂಯುಕ್ತ ರಾಷ್ಟ್ರಸಂಘವು ಕೈಹಾಕಲಾಗದೆಂದು ಈ ವಿಭಾಗವು ನಿರ್ದೇಶಿಸುತ್ತದೆಂಬುದು ನಿಜ. ಆದರೆ ವರ್ಣಭೇದ ನೀತಿಯು ಆಂತರಿಕ ಪ್ರಶ್ನೆ ಎಂದು ಅಲಕ್ಷಿಸುವಂಥದ್ದಿರದೆ, ಮಾನವ ಜಾತಿಯ ಮೇಲೆ ಅಸಹಜವಾದ, ಅನಪೇಕ್ಷಿತವಾದ ಕಳಂಕವನ್ನು ಹೇರುವಂಥದಿದೆ. ದಾಸ್ಯ ಹಾಗೂ ದಬ್ಬಾಳಿಕೆಯನ್ನು ಸಹಿಸುತ್ತಾ ಕೂರುವ ಪರಿಸ್ಥಿತಿ ಈಗ ಎಲ್ಲಿಯೂ ಉಳಿದಿಲ್ಲ. ಜನರು ಜಾಗೃತರಾಗಿದ್ದಾರೆ; ತಮ್ಮ ಮೂಲ ಭೂತ ಹಕ್ಕು ಬಾಧ್ಯತೆಗಳನ್ನು ಪಡೆಯಲು ಹೋರಾಡುವ ನಿರ್ಧಾರಕ್ಕೆ ಬಂದಿದ್ದಾರೆ.

ವರ್ಣ ಪ್ರಭುತ್ವದಿಂದ ಬಿಕ್ಕಟ್ಟು

ಕಾಲದೊಡನೆ ಹೆಜ್ಜೆ ಇಟ್ಟು ಬದುಕುವ ಜಾಣಾಕ್ಷತನವನ್ನು ತೋರಿಸದಿರುವುದು ದಕ್ಷಿಣ ಆಫ್ರಿಕೆಗೇ ಆಗಲಿ, ಅಥವಾ ಬ್ರಿಟನ್, ಫ್ರಾನ್ಸ್ ಇತ್ಯಾದಿ ಸಾಮ್ರಾಜ್ಯವಾದಿ ರಾಷ್ಟ್ರಗಳಿಗಾಗಲಿ ಭೂಷಣವಲ್ಲ. ದಕ್ಷಿಣ ಆಫ್ರಿಕೆಯ ಸರಕಾರವು ಅಗತ್ಯ ಬಿದ್ದರೆ ಸತ್ಯಾಗ್ರಹಿಗಳ ಮೇಲೆ ಗುಂಡು ಹಾರಿಸುವುದಕ್ಕೂ ಹಿಂಜರಿಯುವುದಿಲ್ಲವಂತೆ. ಹೀಗೆ ಮಾಡಿದ್ದೇ ಆದರೆ, ದಕ್ಷಿಣ ಆಫ್ರಿಕೆಯ ಸರಕಾರ ಗಂಡಾಂತರವನ್ನು ಮೈಮೇಲೆ ತಂದುಕೊಂಡಂತೆಯೇ ಸೈ. ವರ್ಣದ್ವೇಷ ನೀತಿಗೆ ತಿಲಾಂಜಲಿಯನ್ನಿತ್ತು ವರ್ಣ ಪ್ರಭುತ್ವವನ್ನು ಬಿಟ್ಟುಕೊಟ್ಟು, ಸೌಹಾರ್ದ ಸಂಬಂಧವನ್ನು ಬೆಳೆಸಿಕೊಳ್ಳದಿದ್ದರೆ ವಿಘಾತಕ ಪರಿಣಾಮವಾಗುವುದು ನಿಶ್ಚಯವೆಂದು ಭಾರತದ ಪ್ರಧಾನಿ ನೆಹರೂ ಎಚ್ಚರಿಸಿದ್ದಾರೆ. ಆದರೆ ಈ ಎಚ್ಚರವನ್ನು ಕಿವಿಗೊಟ್ಟು ಕೇಳಲು ದಕ್ಷಿಣ ಆಫ್ರಿಕೆಯ ಸರಕಾರ ಸಿದ್ಧವಿಲ್ಲ. ಹೈದರಾಬಾದು ರಾಜ್ಯದ ಮೇಲೆ ಭಾರತವು ನಡೆಸಿದ ಪೋಲೀಸು ಕ್ರಮವು ಆಂತರಿಕ ಪ್ರಶ್ನೆ ಎಂದು ಸರದಾರ ಪಟೇಲರು ಸಾರಿದ್ದರು. ಈಗ ದಕ್ಷಿಣ ಆಫ್ರಿಕೆಯ ವರ್ಣಭೇದ ನೀತಿಯನ್ನು ಆಂತರಿಕ ಪ್ರಶ್ನೆ ಎಂದು ಮನ್ನಿಸಲು ಮಾತ್ರ ಭಾರತ ಸಿದ್ಧವಿಲ್ಲ— ಎಂದು ದಕ್ಷಿಣ ಆಫ್ರಿಕೆಯ ಪ್ರತಿನಿಧಿ ಜೂಸ್ಟರು ಅಸಂಬದ್ಧವಾಗಿ ಪ್ರಲಾಪಿಸಿದ್ದಾರೆ.

ಕೆನಿಯಾದಲ್ಲಿ ಗುಪ್ತ ಚಟುವಟಿಕೆ

ಟ್ಯುನೀಸಿಯಾ— ಮೊರೊಕ್ಕೊಗಳ ಬಗ್ಗೆ ಫ್ರಾನ್ಸು ತಳೆದಿರುವ ಧೋರಣದ ಕುರಿತು ಏಶಿಯಾ—ಅರಬ ರಾಷ್ಟ್ರಗಳು ಆಕ್ಷೇಪ ಎತ್ತುವ ಹವಣಿಕೆಯಲ್ಲಿರುವಾಗಲೇ, ಪೂರ್ವ ಆಫ್ರಿಕೆಯಲ್ಲಿ ಬ್ರಿಟಿಷ್ ಪ್ರಭುತ್ವವನ್ನು ನಡುಗಿಸುವ ಘಟನೆಗಳು ಜರಗುತ್ತಿವೆ. ಗೋಲ್ಡ್ ಕೋಸ್ಟಿನಲ್ಲಿ ಈಚೆಗೆ ಹತ್ಯಾಕಾಂಡ ನಡೆಯಿತು. ಕೆನಿಯಾದಲ್ಲಿ "ಮಾವೊ ಮಾವೊ" ಎಂಬ ಗುಪ್ತ ಸಂಸ್ಥೆಯೊಂದು ಆಫ್ರಿಕವು ಆಫ್ರಿಕನರಿಗಾಗಿ ಎಂಬ ಪಲ್ಲವಿಯನ್ನು ಹಾಡುತ್ತಾ ತನ್ನ ಧೋರಣೆಗೆ ಪ್ರತಿಕೂಲರಾಗಿರುವ ಬಿಳಿಯರನ್ನಷ್ಟೆ ಅಲ್ಲ, ಆಫ್ರಿಕನ ನಿವಾಸಿಗಳನ್ನೂ ಕೊಲೆಗೈಯುವುದರಲ್ಲಿ ಮಗ್ನವಾಗಿದೆ. ಈ ಪರಿಸ್ಥಿತಿ ಎಷ್ಟು ಭೀಕರಾವಸ್ಥೆಗೆ ಮುಟ್ಟಿದೆ ಎಂದರೆ, ಬ್ರಿಟಿಷ ಪೋಲೀಸುಪಡೆಗಳು ಈ ವಿಧ್ವಂಸಕರನ್ನು ಬೆನ್ನಟ್ಟಿಕೊಂಡು ಹೋಗಿ, ಬಂಧನದಲ್ಲಿಡುವಂತಾಗಿದೆ. ಎಷ್ಟೋ ಆಫ್ರಿಕನರನ್ನೂ ಸೆರೆಹಿಡಿದಿದ್ದು ತಾತ್ಕಾಲಿಕವಾಗಿ ಕಟ್ಟಿದ ಜೈಲುಖಾನೆಯಲ್ಲಿ ಅವರನ್ನಿಟ್ಟಿರುವರು. ಬ್ರಿಟಿಷ್ ಸರಕಾರದ ವಸಾಹತುಶಾಖೆಯ ಕಾರ್ಯದರ್ಶಿ ಓಲಿವರ್ ಲಿಟನ್‌ಟನರು, ಕೆನಿಯಾಕ್ಕೆ ಆಗಮಿಸಿ ಇಲ್ಲಿಯ ಸೂಕ್ಷ್ಮಪರಿಸ್ಥಿತಿಯ ಅವಲೋಕನವನ್ನು ಕೈಗೊಂಡರು.

ಸಹಜವಾದ ಆಶೆ

ಕೆನಿಯಾದ ಪ್ರಕ್ಷುಬ್ಧ ವಾತಾವರಣಕ್ಕೆ ಗುಡ್ಡಗಾಡು ಜನರ ಸ್ಥಿತಿಗತಿಯು ತೀರ ಶೋಚನೀಯವಿರುವುದೇ ಮೂಲವೆನ್ನ

ಹುದು. ಭೂಸಂಬಂಧವಾದ ಮನಸ್ತಾಪ ಹಾಗೂ ಬಿಳಿಯರ ಅಡಳಿತವೆಂದರೇನೆ ಗುಪ್ತೆ ಅಫ್ರಿಕನರನ್ನು ಬ್ರಿಟಿಷ್ ದ್ವೇಷಿಗಳಾಗಿ ಪರವಶೀಸುತ್ತಿದೆ. ಇದಕ್ಕೆ ಮಾವೂ ಮಾವೂ" ವಿಧ್ವಂಸಕರು ಬೆಂಬಲವನ್ನಿತ್ತು ಪ್ರೋತ್ಸಾಹಿಸುವಂತಿದೆ. ಜನ ಜಾಗೃತಿ ಮೂಡಿರುವಾಗ, ಮಾನವ ಹಜ ಅಶೆ ಆಕಾಂಕ್ಷೆಗಳನ್ನು ವರು ತೋರ್ಪಡಿಸುವಾಗ ಪೋ ಸು ಅಥವಾ ಮಿಲಿಟರಿ ಪಡೆ ಸಹಾಯದಿಂದ ಆಂದೋಲನವನ್ನು ಡೆಯಬಲ್ಲೆವೆಂದು ರಾಷ್ಟ್ರಭಾವಿಸುವುದು ಪ್ಪಾಗುತ್ತದೆ. ಬ್ರಿಟಿಷ ಸರಕಾರ ಮಲ ಯಾದಲ್ಲಿ "ಕಮ್ಯೂನಿಸ್ಟರ ವಿಧ್ವಂಸಕ ತ್ಯಗಳನ್ನು" ಅಡಗಿಸಲು ಕೈಕೊಂಡ ಕ್ರಮಗಳು ಕ್ಷಣಿಕ ಶಾಂತಿಯನ್ನು ದರೂ ಮಲಯಾ ನಿವಾಸಿಗಳಲ್ಲಿ ಸ್ವಾತಂತ್ರ್ಯದ ಹಂಬಲವನ್ನೇನೂ ಕಡಿಮೆ ಡುವಂತಿಲ್ಲ. ಕೆನಿಯಾದಲ್ಲಿ ಕೂಡ ರೀತಿಯ ವಾತಾವರಣವಿದೆ. ಅಲ್ಲಿ ಸ್ಥಿತಿಗತಿಯನ್ನು ಪರಿಶೀಲಿಸಿ, ಗುಡ್ಡ ಡು ಪ್ರದೇಶದಲ್ಲಿ ಭೂ ಸಾಗುವಳಿಯ ವು, ವ್ಯವಸಾಯಕ್ಕೆ ಹೆಚ್ಚು ಭೂಮಿ ನ್ನೊದಗಿಸಲು ಇಡಬೇಕಾದ ಹೆಜ್ಜೆ, ರೋಗ್ಯ, ಶಿಕ್ಷಣ ಮುಂತಾದ ಕ್ಷೇತ್ರಗ ಆಗಬೇಕಿರುವ ಸುಧಾರಣೆಗೆ ಇತ್ಯಾದಿ ಸಂಬಂಧ ವರದಿ ಮಾಡಲು ಸರ್ ಕ್ಯಾಡೋ ಅವರ ನೇತೃತ್ವದಲ್ಲಿ ಒಂದು ಮಿತಿ ನೇಮಕಗೊಂಡಿದೆ.

ಸುಡಾನಿಗೆ ಸ್ವಯಂ ನಿರ್ಣಯಾಧಿಕಾರ

ಈ ಎಬ್ಬಗೆ ಸ್ವಲ್ಪವಾದರೂ ಸಮಾಧಾನಕೊಡುವಂಥ ಘಟನೆಯೆಂದರೆ, ಸುಡಾನ ಹಾಗೂ ಈಜಿಪ್ತಗಳ ನಡುವೆ ಇದ್ದ ಮನಸ್ಸು ಕಹಿ ಶಮನಗೊಳ್ಳಲು ನೆರವಾದ ಹದಿ-ನಗೀಬ ಒಪ್ಪಂದ. ಸುಡಾನದ ಲೆ ಈಜಿಪ್ತ ಹಾಗು ಬ್ರಿಟನಿನ ಯ ಏಕಾಧಿಕಾರ ವಿದ್ದಾಗ, ಈಜಿಪ್ತ ಂದೇ ಸುಡಾನದ ಮೇಲೆ ಪ್ರಭುತ್ವ ಲು ಕಾಯಿದೆ ಮಾಡಿತು. ಅಂದಿನಿಂದ ಬ್ರಿಟನು ಹಾಗೂ ಈಜಿಪ್ತದ ಸಂಬಂಧ ಲು ತೊಡಗಿತು. ವಫ್ದ ಪಕ್ಷದ ಸಹಾ ಪಾಶಾ ಮುಖ್ಯ ಮಂತ್ರಿಯಾಗಿದ್ದಾಗ ಜಿಪ್ತದ ಕೊರಳಿಗೆ ಕಟ್ಟಿದ ಈ ಬಿಕ್ಕ ನ್ನು, ಈಗ ಸರ್ವಾಧಿಕಾರಿ ನಗೀಬ ಹರಿಸುವಲ್ಲಿ ಸಮರ್ಥರಾಗಿದ್ದಾರೆ. ಸು ನಿನಲ್ಲಿ ಪ್ರಬಲ ಪಕ್ಷವೆಂದು ಹೆಸರಾದ ಮ್ಮಾ ಪಾರ್ಟಿಯ ಧುರೀಣರು ಮೆ ನಿಯವನ್ನು ಕಂಡು ಒಪ್ಪಂದ ಮಾಡಿ ಕೊಂಡಿದ್ದಾರೆ. ಇದರನ್ವಯ ಈ ವ ಂತ್ಯದೊಳಗೆ ಸುಡಾನಿನಲ್ಲಿ ಚುನಾ ಣೆಗಳು ನಡೆದು, ಪಾರ್ಲಿಮೆಂಟಿಗೆ ಹೊ ಣೆಯಾದ ಸುಡಾನೀಯರ ಮಂತ್ರಿ ಂಡಳ ರಚಿಸಲ್ಪಡುವುದು. ಅನಂತರ ಜಿಪ್ತದೊಡನೆ ಸೇರಬೇಕೋ ಅಥವಾ ಟನದೊಡನೆ ಕೂಡಬೇಕೋ ಎಂಬು ಸುಡಾನೀಯರು ನಿರ್ಧರಿಸಬೇಕು. ರೆ ಹೀಗೆ ಅಂತಿಮ ನಿರ್ಣಯವನ್ನು ಗೊಳ್ಳುವುದಕ್ಕೆ ಮೊದಲೆ ಎಲ್ಲ ವಿದೇಶೀ ನ್ಯ ಹಾಗೂ ಅಧಿಕಾರಿಗಳನ್ನು ವಿಸರ್ಜಿಸುವುದು ಅತ್ಯಗತ್ಯ. ಈಜಿಪ್ತದೊಡನಾದ ಒಡಂಬಡಿಕೆಯು ಬ್ರಿಟಿಷರ ಕಣ್ಣುಗೆ ತುಂಬ ಆಕರ್ಷಕವಾಗಿದೆ; ಎಂತ ಹೆಚ್ಚು ಕಡಿಮೆ ಸುಡಾನದ ಎಲ್ಲ ರಾಜಕೀಯ ಪಕ್ಷಗಳೂ ಇದನ್ನು ಒಪ್ಪಿವೆ. ನೈಲ ನದಿಯ ನೀರಿನ ಮಟ್ಟಿಗೆ ಈಜಿಪ್ತಕ್ಕೆ ಸುಡಾನೀಯರ ಅನುಕೂಲಾಭಿಪ್ರಾಯ ದೊರೆತುದರಿಂದ ಈಜಿಪ್ತಿಯ ನರ ವ ನೋಭಾವನೆಗೆ ಒಡಂಬಡಿಕೆ ಪ್ರೋತ್ಸಾಹಕವಾಗಿದೆ. ಇಂಥ ಪರಿಸ್ಥಿತಿಯಲ್ಲಿ ಬ್ರಿಟನು ಹೆಚ್ಚು ಮೋರೆಯಿಂದಲೇ ಆದರೂ, ನಗೀಬ-ಮೆಹದಿ ಒಡಂಬಡಿಕೆಯನ್ನು ಸ್ವಾಗತಿಸಿದುದರಲ್ಲಿ ಅಶ್ಚರ್ಯವಿಲ್ಲ. ಇರಾಣದಲ್ಲಿ ಮುಖಭಂಗವಾದ ನೋವು ಹೀಗೆ ಮಾಡಿಗೊಟ್ಟರಲೂ ಬಹುದು.

ಕೊರಿಯಾ ಶಾಂತಿ ಸೂಚನೆ

ಕೊರಿಯಾ ಕದನವನ್ನು ನಿಲ್ಲಿಸುವುದಕ್ಕೆ ಸಂಯುಕ್ತ ರಾಷ್ಟ್ರಸಂಘದ ವಲಯಗಳಲ್ಲಿ ಹಲವು ಬಗೆಯ ಪ್ರಯತ್ನಗಳು ನಡೆಯುತ್ತಿವೆ. ಅವರೆ ಪತ್ರಿಕಾ ವರದಿಗಳು ಹೇಳದಂತೆ ಭಾರತದ ಮುಖಾಂತರ ರಹಸ್ಯ ಮಾತುಕತೆಗಳು ನಡೆಯುತ್ತಿವೆ ಎಂಬ ಸಂಗತಿಗೆ ತಲೆ ಬುಡವಿಲ್ಲವೆಂದು ನೆಹರೂ ಹೇಳಿದ್ದಾರೆ. ಪಂಡಿತ ವಿಜಯಲಕ್ಷ್ಮಿಯವರ ಸರ್ವೇಕ ಎಲ್ಲ ರಾಷ್ಟ್ರಗಳ ಪ್ರತಿನಿಧಿಗಳೂ ಪರಸ್ಪರ ವಿಚಾರ ವಿನಿಮಯ ನಡೆಸಿ, ತನ್ಮೂಲಕ ಕೊರಿಯಾ ಕದನ ವಿರಾಮ ಸಾಧಿಸುವುದಕ್ಕೆ ಅನುಕೂಲವಾದ ಉಪಾಯವನ್ನು ಹುಡುಕುತ್ತಿರಬಹುದು. ರಶಿಯಾ—ಅಮೇರಿಕೆಗಳು ಬೇರೆ ಬೇರೆಯಾಗಿ ಮಾಡಿದ ಎರಡು ಶಾಂತಿಸೂಚನೆಗಳ ಉತ್ತಮಾಂಶಗಳನ್ನು ಸಂಯೋಜಿಸಿ ಭಾರತ ಇತ್ಯಾದಿಗಳ ನೆರವಿನೊಡನೆ ಇಂಡೋನೇಶಿಯಾ ಹೊಸ ಸೂಚನೆಯನ್ನು ಮುಂದಿಡುವುದಂತೆ.

The Catholic Bank Ltd, Udipi, Branch

ದಿ ಕೆಥೋಲಿಕ್ ಬೇಂಕ್, ಲಿಮಿಟೆಡ್, ಉಡುಪಿ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹಾಶಯರು ನಮ್ಮ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆಕೊಂಡ ಸಾಲದ ಮೂಲಧನಗನ್ನಾಗಲೀ ಯಾ ಆದಕ್ಕಾಗುವ ಈ ತನಕದ ಬಡ್ಡಿಯನ್ನಾಗಲೀ ಕೊಡದೆ ಇರುವುದರಿಂದಲೂ ಅಲ್ಲದೆ ಕ್ರಮವಾದ ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಕೆಲವರು ಪಡೆಕೊಂಡು ಕೆಲವರು ಊರಿನಲ್ಲಿ ಇಲ್ಲವಂತ, ವಾಪಾಸು ಬಂದಿರುವುದರಿಂದಲೂ ನಗಗಳನ್ನು ಅವರವರು ಬಿಡಿಸಿಕೊಂಡು ಹೋಗದಿರುವುದರಿಂದಲೂ ಸದರಿಯವರಿಗೆ ಯಾ ಸದರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಸುವುದೇನೆಂದ್ರೆ ಸದರಿಯವರು ಈಡಿಟ್ಟ ನಗಗಳನ್ನು ನವಂಬರ ತಿಂಗಳ ತಾರೀಕು 15ನೇ ಶನಿವಾರ ದಿವಸ ಘಂಟೆ 3ಕ್ಕೆ ಯಾ ಬೇಂಕಿಗೆ ಯುಕ್ತ ಕಂಡ ಇನ್ನಿತರ ದಿನಗಳಲ್ಲಿ ಪುನಹಾ ನೋಟೀಸು ಕೊಡದೆನೇ ಬ್ಯಾಂಕಿನ ಮರಾದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

J L No	Name and address & the borrower	Amount Principal)	
		ರೂ.	ಆ.
26/1415	Sri ಲಕ್ಷ್ಮಣ ಮಿತ್ತಂತಯ್ಯ, ಸೀತಾರಾಮ ಮಿತ್ತತಯ್ಯರ ಮಗ, ಇನ್ನಂಜೆ ಇನ್ನಂಜೆ P O	50	0
26/1786	K ಬೀರ ಮರಕಾಲ, ಕೊರಗ ಮರಕಾಲನ ಮಗ, ಕಂಬಳಬೆಟ್ಟು, ಉಡ್ಪಿ P. O.	40	0
26/2195	N ವಾದಿರಾಜ ಹೆಗ್ಡೆ, N ನಾರಾಯಣ ಅಡ್ಯಂತಯ್ಯರ ಮಗ, C/o Industrial & Commercial Syndicate No, 17 Rundals Road ಮೆಡ್ರಾಸ್	187	0
26/2286	U. ಮಂಜುನಾಥ ಬಾಳಿಗ, ವೆಂಕಟಪ್ಪಯ ಬಾಳಿಗರ ಮಗ, ಅಜ್ಜರ ಕಾಡು, ಉಡ್ಪಿ P O	200	0
26/2408	Sri ವಾದಿರಾಜ ಉಪಾಧ್ಯ, ಕೃಷ್ಣ ಉಪಾಧ್ಯಾಯರ ಮಗ, ಪಡುಪೇಟೆ, ಉಡ್ಪಿ P O.	45	0
28/ 431	ಶ್ರೀ ಬೀರ ಸೇಟ್, ಪದ್ಮನಾಭ ಸೇಟರ ಮಗ, ಶ್ರೀಬೀಡು, ಉಡ್ಪಿ P. O.	430	0
28/ 464	ಶ್ರೀ, ವಿಕ್ಟರ್ ಶಿರ, ಎಮಾನ್ಯುವೆಲ್ ಶಿರಿಯರ ಮಗ ಮೋಟಾರ ಡ್ರೈವರ್ C/o D P M-S. Udipi.	55	0
28/ 466	U. ನಾರಾಯಣ ಸೆಟ್ಟಿ, „ „ „ ಮೂಳ್ಳಿ, ಉಡ್ಪಿ P O.	35	0
28/ 505	U ಧನಂಜಿಸಂಕರ ಸೇಟ್, ಮಂಜುನಾಥ ಸೇಟರ ಮಗ, ಪಡುಪೇಟೆ, ಉಡ್ಪಿ	64	0
28/ 514	ಕಾಡ್ಪ ಪೂಜಾರಿ, ವೆಂಕ ಪೂಜಾರಿಯ ಅಳಿಯ, ಕಡೆಕಾರು, P O	30	0
28/ 525	ಶೇಕ್ ಹಬೀಬ್ ಯನ್ ಸಾಹೇಬ, ಶೇಕ್ ಕಾದರ್ ಸಾಹೇಬರ ಮಗ, ಕೊಡವೂರು, ಮೂಡುಬೆಟ್ಟು, ಮಲ್ಪೆ P O	60	0
28/ 633	ಸಲ್ವದರ್ P C. ಪೆರೇರ, ಅಲ್ಬರ್ಟ ಪೆರೇರನ ಮಗ, ಕಾರ್ಕಳ, ಉದ್ಯಾವರ P. O	160	0
28/ 755	N ದಾಸಪ್ಪ, ಬಾಬ ಪೂಜಾರಿಯ ಮಗ, ಪುತ್ತೂರು, ಕಲ್ಯಾಣಪುರ P O.	94	0
28/2589	ಶ್ರೀ ಕೃಷ್ಣಯ್ಯ ಸೆಟ್ಟಿ, ನಂದ್ಯಪ್ಪ ಸೆಟ್ಟಿಯ ಅಳಿಯ, ಕೊಂಗ್ರಪಾಡಿ P O	105	0

Udipi
Date, 4-11-52 }

V. J Andrade
Agent.

ನಡಿಯುವ ಚಿತ್ರ ಬೇತಾಬ್
ನಾಸೀಂ–ಕಮಲಾ, ಅಶೋಕ್ ಕುಮಾರ್, ಮೋತಿಲಾಲ್. ಇನ್ನು ಹಲವರು
ತಾ. 7—11—52ರಿಂದ, ಫಿಲ್ಮಿಸ್ತಾನದವರ ಶ...ನಾ ನಾಸಿರ್ ಖಾನ್.
ಶ್ರೀಮತಿಜಿ
ಬರುತ್ತದೆ: — ಆವಾರಾ, ಅನ್.
ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್; ಉಡುಪಿ

ದ. ಕ. ಜಿಲ್ಲೆಯ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಘದ—ಆಶ್ರಯದಲ್ಲಿ ಈ ಹಿಂದೆ ತರಬೇತಿ ಹೊಂದಿದ ಸ್ಕೌಟ ಮಾಸ್ಟರ್ ವ ಗೈಡರುಗಳಿಗೆ ಆಧುನಿಕ ಕ್ರಮಗಳು, ಪರೀಕ್ಷಾ ವಿಧಾನಗಳು ಮೊದಲಾದುವುಗಳ ಪರಿಪಕ್ವ ಅನುಭವವನ್ನೀಯುವ ಉದ್ದೇಶದಿಂದ ಉಡುಪಿಯಲ್ಲಿ ಇದೇ ತಿಂಗಳ 15, 16, 17ರಲ್ಲು ಒಂದು ತರಬೇತಿ ಶಿಬಿರವು ಜರಗುವುದು. ಈ ಬಗ್ಗೆ ಪ್ರತಿ ಸ್ಕೌಟರಿಂದ ರೂ. 3 ವಸೂಲು ಮಾಡಲಾಗುವುದು. ಈ ತರಬೇತಿಯಲ್ಲಿ ಉತ್ತೀರ್ಣರಾದವರಿಗೆ ಜಿಲ್ಲಾ ಸಂಘದಿಂದ ಪ್ರಶಸ್ತಿ ಪತ್ರಿಕೆಗಳನ್ನು ಕೊಡಲಾಗುವುದು. ಸರಕಾರಿ ಹುಕುಮಿನಂತೆ ಈ ತರಬೇತಿ ಬಗ್ಗೆ ಶಾಲೆಗಳಿಂದ ಗೈರು ಹಾಜರಾದ ಸಮಯವನ್ನು "ಡ್ಯೂಟಿ" ಎಂದು ಗಣಿಸಲಾಗುವುದು. ಈ ಶಿಬಿರವನ್ನು ಸೇರಲಿಚ್ಛಿಸುವ ಉಡುಪಿ ತಾಲೂಕಿನ ಸ್ಕೌಟರು ವ ಗೈಡರು ಆ ಬಗ್ಗೆ ಅರ್ಜಿಗಳನ್ನು ನಿಶ್ಚಿತ ವರ್ಗಣಿಯೊಂದಿಗೆ ಕೂಡಲೇ "ಅಸಿಸ್ಟೆಂಟ್ ಡಿಸ್ಟ್ರಿಕ್ಟ್ ಕಮಿಶನರ್, ಭಾರತ್ ಸ್ಕೌಟ್ಸ್ ಎಂಡ್ ಗೈಡ್ಸ್, ಉಡುಪಿ" ಎಂಬ ವಿಳಾಸಕ್ಕೆ ರವಾನಿಸಬೇಕು.

ಶಿರ್ವ—ಸ್ಥಳೀಯ ಪಂಚಾಯತು ಬೋರ್ಡಿನ ಸಭೆಯು ಶ್ರೀ ಎಸ್ ಅಜ್ಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ತಾ 28ರಂದು ಕೂಡಿ ಶಿರ್ವ ಕೇಂದ್ರಕ್ಕೊಂದು ಮೆಟರ್ನಿಟಿ ಮತ್ತು ಚೈಲ್ಡ್ ವೆಲ್‌ಫೇರ್ ಸೆಂಟರನ್ನು ತೆರೆಯುವಂತೆ ಜಿಲ್ಲಾ ಬೋರ್ಡನ್ನು ಕೇಳಿಕೊಳ್ಳುವ ಮತ್ತು ಆ ಬಗ್ಗೆ ರೂಪಾಯಿ 300/– ಸಹಾಯಧನವೀಯುವ, ಇಲೆಕ್ಟ್ರಿಸಿಟಿ ಶಿರ್ವಕ್ಕೆ ಮುಂದರಿಸುವಂತೆ ಸಂಬಂಧಪಟ್ಟವರೊಡನೆ ಪತ್ರವ್ಯವಹಾರ ನಡೆಸಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು

ನಮ್ಮ ಮುಂಬಯಿ ಚಂದಾದಾರರಲ್ಲಿ ವಿನಂತಿ

ತಮ್ಮ ವಿಳಾಸ ಬದಲಾದೊಡನೆ ನಮಗೆ ತಿಳಿಸುವಂತೆಯೂ, ಚಂದಾಹಣ ಬಾಕಿ ಇದ್ದವರು ಇನ್ನಾದರೂ ಅದನ್ನು ಈ ಕೆಳಗಿನ ವಿಳಾಸಕ್ಕೆ ನೇರಾ ಮನಿಯಾರ್ಡರು ಮಾಡಿ ಕಳಿಸುವಂತೆಯೂ ಇಲ್ಲವೆ ಮುಂಬಯಿ ಪೋರ್ಟಿನಲ್ಲಿರುವ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್‌ದ ಶಾಖೆಯಲ್ಲಿ 'ನವಯುಗ' ಖಾತೆಗೆ ಜಮಾ ಮಾಡಿ ರಶೀದಿ ಪಡೆಯುವಂತೆಯೂ (ಇದಕ್ಕೆ ಯಾವ ತರದ ಕಮಿಶನ್ ತೆರಬೇಕಾಗಿಲ್ಲ) ಅಪೇಕ್ಷಿಸುತ್ತೇವೆ

ಮೆನೇಜರ್, ನವಯುಗ, ಉಡುಪಿ

ಪ್ರಕಟಣೆ

ನನ್ನ ತಾಯಿ ಉಡುಪಿ ತಾಲೂಕು ಬೆಮ್ಮಾಣಬಟ್ಟು ಗ್ರಾಮದ ಪಡುಭಾಗದಲ್ಲಿರುವ ಅಂತಮ್ಮ ಹೆಗ್ಗಡ್ತಿಯ ಮಗಳು ನರಿ ಹೆಗ್ಗಡ್ತಿ ದು ಈಗ ಸುಮಾರು 5 ವರುಷಗಳಿಂದ ಸಂಪೂರ್ಣವಾಗಿ ಬುದ್ಧಿ ಶಾಶ್ವತೆ ವ ಸ್ವತಂತ್ರ್ಯ ಕ್ಷಿದವರಾಗಿದ್ದು ಈಗ ಇನ್ನೂ ಹೆಚ್ಚಿನ ದುರ್ವ್ಯವಸ್ಥೆಗೆ ಬಂದಿರುತ್ತಾರೆ ಆದುದರಿಂದ ಅವರು ಈ ವರೆಗೆ ಬೇರೆಯವರ ಉಪದೇಶಕ್ಕೆ ಒಳಪಟ್ಟು ಯಾವ ರಿಕಾರ್ಡು ಮಾಡಿರುವದಾದರೂ ವ ಇನ್ನು ಮುಂದೆ ಮಾಡುವದಾದರೂ ಅವುಗಳು ಸಿಂಧುವಾಗಲಿಕ್ಕಿಲ್ಲ ಮತ್ತು ಯಾರೂ ಅವರೊಂದಿಗೆ ಸಾಲ ಕಡ ಅಸ್ತಿ ಸಂಬಂಧವಾದ ವ್ಯವಹಾರವನ್ನು ಕೂಡಾ ನಡೆಸಕೂಡದಾಗಿ ಈ ಮೂಲಕ ಎಚ್ಚರಿಸಿಯದೆ,

ರುಕ್ಮಿಣಿ ಹೆಗ್ಗಡ್ತಿ, ಹೇರೂರು.
ತಾರೀಕು. 5-11-1952-

ಅಳಿಯ ಸಂತಾನ ಕಾನೂನು
ಇದರ ಪ್ರತಿಗಳು ದೊರೆಯುತ್ತವೆ,
ಕನ್ನಡ ಪ್ರತಿಗೆ 0-8-0
ಇಂಗ್ಲಿಷ್ ಪ್ರತಿಗೆ 0-8-0
ನವಯುಗ ಪ್ರೆಸ್, ಉಡುಪಿ.

ಉಡುಪಿ

ಮುನಿಸಿಪಲ್ ಕೌನ್ಸಿಲು ಸಭೆಯು—ಕಳೆದ ತಾ. 30ನೇ ಸಂಜೆ ಚೆರ್ಮೆನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರೊಪರ್ಟಿ ಟೇಕ್ಸ್ ಇಲಾಖೆಗೆ ಒಬ್ಬ ಗುಮಾಸ್ತನನ್ನು ಖಾಯಮಾಗಿ ಸೆಂಕ್ಷನ್ ಮಾಡಬೇಕಾಗಿ ಸೂಚಿಸಿದ ಕಮಿಶನರ ಅಪೇಕ್ಷೆಯನ್ನು ಮನ್ನಿಸಲಾಯಿತು. ಮುಂದಿನ ಜನವರಿ ತಿಂಗಳ ಮಧ್ಯದಲ್ಲಿ ಜರಗಲಿರುವ ಮಕರ ಸಂಕ್ರಾಂತಿ ಜಾತ್ರೆಯ ಸಮಯ ನಗರವನ್ನು ವಿಶೇಷ ಚೊಕ್ಕಟವಾಗಿಡುವರೆ ರೂ. 1350/- ಖರ್ಚು ಮಂಜೂರು ಮಾಡಲಾಯಿತು. ಮುನಿಸಿಪಲ್ ಬಂಗ್ಲೆಯ ಸಮೀಪದಲ್ಲಿರುವರೆ ಮಾರ್ಕೆಟ್ ಪ್ಲಾಟ್ ಒಂದನ್ನು ಕಾಸರ ಡಕಾರ್ ಬಂಧುಗಳು ಮುನಿಸಿಪಾಲಿಟಿಗೆ ದಾನವಿತ್ತುದನ್ನು ಅಭಾರಪೂರ್ವಕ ಸ್ವೀಕರಿಸಲಾಯಿತು. ಈ ತಿಂಗಳ ಕೊನೆಯಲ್ಲಿ ಉಡುಪಿಗೆ ಬರಲಿರುವ ಮದ್ರಾಸು ಗವರ್ನರರಿಗೆ ಮಾನಪತ್ರವೀಯುವ ನಿರ್ಧಾರವಾದುದಲ್ಲದೆ ಈಗ ತಾನೆ ಕೆಲಸ ಪೂರ್ಣವಾಗಿರುವ ಮುನಿಸಿಪಲ್ ಸೌತ್ ಹುಡುಗಿಯರ ಶಾಲಾ ಹೊಸ ಕಟ್ಟೋಣವನ್ನು ಪ್ರವೇಶಿಸುವ ಸಮಾರಂಭವನ್ನು ಗವರ್ನರ ಅಧ್ಯಕ್ಷತೆಯಲ್ಲಿ ನೆರವೇರಿಸಬೇಕೆಂದಾಯಿತು. ಅಡುಗಳ ಹಾವಳಿ ಕುರಿತು ಬಂದ ಅರ್ಜಿಯನ್ನು ಜಿಲ್ಲಾ ಕಲೆಕ್ಟರರಿಗೆ ಕಳುಹಿಸಬೇಕೆಂದಾಯಿತು.

ಸಭಾಂತ್ಯದಲ್ಲಿ ಸಭಾಧ್ಯಕ್ಷರು, ಕೌನ್ಸಿಲರುಗಳು, ಕಮಿಶನರ್, ಹೆಲ್ತ್ ಆಫೀಸರ್ ಮತ್ತು ಸಿಬಂದಿಯ ತನಗಿತ್ತ ಸಹಕಾರಕ್ಕಾಗಿ ಎಲ್ಲರ ಉಪಕಾರ ಸ್ಮರಿಸಿದರು. ಶ್ರೀಮತಿ ಲೀಲಾಬಾಯಿ ಕಾಮತ್ ಮತ್ತು ಶ್ರೀ ಕೆ. ಕೆ. ಪೈಗಳು ಮೆಂಬರರ ಪರವಾಗಿಯೂ, ಕಮಿಶನರ್ ಶ್ರೀ ಗೋಪಾಲ ಮೆನೊನ್ ಮತ್ತು ಹೆಲ್ತ್ ಆಫೀಸರ್ ಡಾ। ರಾಮಚಂದ್ರ ರಾಯರು ಸಿಬಂದಿಯ ಕಡೆಯಿಂದಲೂ ಮಾತನಾಡಿದರು.

ಆಫೀಸರ್ಸ್ ಕ್ಲಬ್ ಪ್ರಾರಂಭ—ತಾ 1ರಲ್ಲಿ ಡಿ। ಮುನ್ಸಿಫ್ ಜನಾಬ್ ಅಬ್ದುರ್ ರಹೀಮ್ ಅಹಮ್ಮದ್, ಅವರ ಅಧ್ಯಕ್ಷತೆಯಲ್ಲಿ ಸ್ಥಳೀಯ ಸರಕಾರಿ ಆಫೀಸರರ ಸಭೆಯು ಜರಗಿ 'ಆಫೀಸರ್ಸ್ ಕ್ಲಬ್' ಪ್ರಾರಂಭಿಸಲಾಯಿತು. ಕ್ಲಬ್ಬಿನ ಆಡಳಿತೆ ಮಂಡಲಿಗೆ ಶ್ರೀಗಳಾದ ಅಬ್ದುಲ್ ರಹೀಮ್ ಅಹಮ್ಮದ್ [ಅಧ್ಯಕ್ಷ] ವಿ. ಕೆ. ಶೆಟ್ಟಿ ಮತ್ತು ಎಸ. ಜಿ. ಕೆ. ಶೆಣೈ [ಜತೆಕಾರ್ಯದರ್ಶಿಗಳು] ಕೆ. ಗೋಪಾಲ ಮೆನೊನ್ [ಖಜಾಂಚಿ], ಕೆ. ವೆಂಕಪ್ಪ, ಡಾ। ಸಂಜೀವನ ಶೆಟ್ಟಿ, ಎಮ್. ಜಿ. ರಾಮಕೃಷ್ಣ, ಶೀನಣ್ಣ ರೈ ಮತ್ತು ವೆಂಕಟಗಿರಿ [ಇತರ ಸದಸ್ಯರು] ಆರಿಸಲ್ಪಟ್ಟರು

ಕಲ್ಯಾಣಪುರದಲ್ಲಿ- ಲಕ್ಷದೀಪೋತ್ಸವದ ಸಾಹಿತ್ಯೋತ್ಸವವು ತಾ 2ರಲ್ಲಿ ಸಂಜೆ ಚಂದ್ರೇಶ್ವರ ದೇವಸ್ಥಾನದ ಉಪ್ಪರಿಗೆಯಲ್ಲಿ, ಮಂಗಳೂರಿನ 'ಕಲಿಯುಗ' ಸಂಪಾದಕರಾದ ಡಾ। ಎಮ್. ಗೋಪಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ಲೆಕ್ಚರರ್ ಶ್ರೀ ವಾಸುದೇವರಾಯರು 'ಸಾಹಿತ್ಯದಲ್ಲಿ ಪಸ್ಯಗಳ ಗುಣ' ಎಂಬ ವಿಷಯವನ್ನೆತ್ತಿ ಮಾತನಾಡಿದರು. ಅಧ್ಯಕ್ಷರು 'ನೀತಿ ಮತ್ತು ಭೀತಿ' ಎಂಬ ವಿಷಯದಲ್ಲಿ ವಿಚಾರಪರ ಭಾಷಣವಿತ್ತರು. ವೃಂದದ ಕಾರ್ಯದರ್ಶಿ ಶ್ರೀ ಕೆ. ಹರಿದಾಸ ಉಪಾಧ್ಯಾಯರು ಧನ್ಯವಾದಗಳನ್ನರ್ಪಿಸಿದರು. ರಾತ್ರಿ ಯಕ್ಷಗಾನ ಸಮಾರಂಭವಿತ್ತು

ಲಕ್ಷದೀಪೋತ್ಸವ— ಶ್ರೀಕೃಷ್ಣ ಮಠದಲ್ಲಿ ಪರ್ಯಾಯ ಪೇಜಾವರ ಸ್ವಾಮಿಗಳವರ ನೇತೃತ್ವದಲ್ಲಿ ಲಕ್ಷದೀಪೋತ್ಸವವು ಕಳೆದ ತಾ 30ರಲ್ಲಿ ಪ್ರಾರಂಭವಾಗಿ ಮೂರು ದಿವಸಗಳ ತನಕ ಸಾಂಗವಾಗಿ ನಡೆಯಿತು. ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ತಾ 3ರಲ್ಲಿ ಲಕ್ಷದೀಪೋತ್ಸವವು ಜರಗಿತು. ಮಹಾ ಸಂತರ್ಪಣೆಯೂ ಇತ್ತು

ಮಡಿಕೇರಿ—ಡಾ। ಮೋದಿಯವರ ಉಚಿತ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರವು ತಾ 31ರಲ್ಲಿ ತೆರೆಯಲ್ಪಟ್ಟು 720 ಜನರಿಗೆ ಕಣ್ಣುಗಳನ್ನು ಪರೀಕ್ಷೆ ಮಾಡಿ ಸೂಕ್ತ ಔಷಧಿ ಮತ್ತು ಉತ್ತಮ ಸಲಹೆಗಳನ್ನು ಕೊಟ್ಟಿರುತ್ತದೆ. ರೋಗಿಗಳಿಗೆ ಕಾಂಗ್ರೆಸ್ ಸ್ವಯಂಸೇವಕರು ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ. ಕೊಡಗು ಸರಕಾರದ ಕಡೆಯಿಂದ ಯೋಗ್ಯ ಪ್ರೋತ್ಸಾಹ ದೊರೆತಿದೆ.

ಕುಳೂರು ಸಂಕ— ಈ ಸಂಕದ ಮೇಲಿಂದಲೂ ಪ್ರಯಾಣಿಕರ ಬಸ್ಸುಗಳು ಚಲಾವಣೆಯಾಗಬಹುದೆಂದು ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸರು ಅಪ್ಪಣೆ ಕೊಟ್ಟಿರುವರು. ಇಷ್ಟರವರೆಗೆ ಮಂಗಳೂರಿನಿಂದ ಹೊರಟ ಬಸ್ಸುಗಳು ಪಾವಂಜೆ ವರೆಗೆ ನೆಟ್ಟಗೆ ಹೋಗುವವು ಕಂಬೈಂಡ್ ಬುಕ್ಕಿಂಗ್ ಎಜನ್ಸಿಯವರು ಈ ಸಂಬಂಧ ದಿನಕ್ಕೆ ಹತ್ತು ಸಲ ಬಸ್ ಓಡಿಸುವುದನ್ನು ಇನ್ನು ಹದಿನೈದು ಬಾರಿ ಓಡಿಸುವರು. ಕಳೆದ ತಾ 29ರಿಂದಲೇ ಬಸ್ಸುಗಳು ಕುಳೂರು ಸಂಕದ ಮೇಲಿಂದ ಹೋಗುತ್ತಿವೆ.

ಜಯ—ಮದರಾಸಿನ ಹಿಂದೂ ರೆಲಿಜಿಯಸ್ ಎಂಡೋಮೆಂಟ್ ಬೋರ್ಡಿನವರು ಈಗ್ಗೆ 5 ವರ್ಷಗಳ ಹಿಂದೆ ಉಡುಪಿಯ ಶ್ರೀ ಕೃಷ್ಣಾಪುರ ಮಠದ ಆಡಳಿತವನ್ನು ಕೈವಶ ಮಾಡಿಕೊಂಡುದಲ್ಲದೆ ಶ್ರೀ ಮಠದ ಅಧಿಪತಿಗಳಾದ ಶ್ರೀ ಮಧ್ವಿವಿದ್ಯಾರತ್ನ ತೀರ್ಥ ಶ್ರೀಪಾದಂಗಳವರಮೇಲೆ ಬಂಗಾರದ ಸೊತ್ತುಗಳ ದುರುಪಯೋಗದ ಆರೋಪವಿಟ್ಟು ಕ್ರಿಮಿನಲ್ ವ್ಯವಹರಣೆಯನ್ನು ನಡೆಯಿಸಿದರು. ಮದರಾಸ್ ಹೈಕೋರ್ಟಿನಲ್ಲಿ ಆದ ತೀರ್ಮಾನದಂತೆ ಮಠದ ಆಡಳಿತವು ಶ್ರೀ ಶ್ರೀಗಳವರ ಅಧೀನಕ್ಕೆ ಈ ಹಿಂದೆಯೇ ಬಂದಿತ್ತು. ಇದೀಗ ಕ್ರಿಮಿನಲ್ ವ್ಯವಹರಣೆಯೂ ಕೊಯಮುತ್ತೂರಿನ ಜುಡಿಶಿಯಲ್ ಮೆಜಿಸ್ಟ್ರೇಟರಾದ ಶ್ರೀ ರಾಮಮೂರ್ತಿರವರ ಮುಂದೆ ತನಿಖೆಯಾಗಿ, ಆರೋಪವು ಸಂಪೂರ್ಣ ದುರುದ್ದೇಶಪೂರಿತವೂ ಕೇವಲ ನಿರಾಧಾರವೂ ಎಂದು ತೀರ್ಮಾನವಾಗಿ ಶ್ರೀಗಳವರನ್ನು ದೋಷಮುಕ್ತರನ್ನಾಗಿ ಮಾಡಲಾಗಿದೆ. ಶ್ರೀ ಮಠದ ಕಡೆಯಿಂದ ಶ್ರೀಗಳಾದ ಕೆ. ಆರ್. ಕಾರಂತ, ಪಿ. ಜನಾರ್ದನ ರಾವ್, ಎಡ್ವಕೇಟರು ಮಂಗಳೂರು ಮತ್ತು ಶ್ರೀ ಆರ್. ಕಂದಸ್ವಾಮಿ ಎಡ್ವಕೇಟ್ ಕೊಯಮುತ್ತೂರು, ಇವರು ವ್ಯವಹರಿಸಿದರು.

ಧರ್ಮಸ್ಥಳ—ಇದೇ 13ರಿಂದ 17ರ ತನಕ ಎಂದಿನಂತೆ ಶ್ರೀ ಧರ್ಮಸ್ಥಳ ಲಕ್ಷದೀಪೋತ್ಸವವು ಜರಗಲಿರುವುದು. ಕೊನೆಯ ಎರಡು ದಿನಗಳಲ್ಲಿ ಸಾಹಿತ್ಯ ಮತ್ತು ಧರ್ಮ ಸಮ್ಮೇಳನಗಳು ನಡೆಯಲಿರುವವು. ಕೊನೆಯ ದಿನ ವ್ಯವಸಾಯದ ವಸ್ತುಪ್ರದರ್ಶನ ಜರಗಲಿರುವುದು. ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಶ್ರೀ ದೇವುಡು ನರಸಿಂಹ ಶಾಸ್ತ್ರಿಗಳು ವಹಿಸಲಿರುವರು.

ಉಳ್ಳಾಲ—ತಾ. 20ರಲ್ಲಿ ಆನಂದಾಶ್ರಮ ಹೈಸ್ಕೂಲ್, ಕೋಟೆಕಾರ್ ಹಾ। ಎ। ಶಾಲೆ, ಉಚ್ಚಿಲ ಬೋವಿ ಹಾ। ಎ। ಶಾಲೆ, ಸ್ಟೆಲ್ಲಾ ಮೇರೀಸ್ ಹಾ। ಎ। ಶಾಲೆಗಳ ಕೂಡುವಿಕೆಯಿಂದ ಶಿಕ್ಷಣ ಸಪ್ತಾಹ ದಿನಾಚರಣೆಯು ಶ್ರೀ ಎಮ್. ಎಸ್. ಐಕಂಬರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ರಾಮರಾವ್, ಎಚ್. ವಿ. ರಾವ್ ಮೊದಲಾದವರು ಮಾತನಾಡಿದರು. ಇಂದಿನ ಮಕ್ಕಳನ್ನು ಮುಂದಿನ ಜನಾಂಗವಾಗಿ ರೂಪಿಸುವ ಹೊಣೆಗಾರಿಕೆಯಲ್ಲಿ ಉಪಾಧ್ಯಾಯರ ಮತ್ತು ರಕ್ಷಕರ ಕರ್ತವ್ಯವೇನೆಂಬುದನ್ನು ಅಧ್ಯಕ್ಷರು ವಿವರಿಸಿದರು. ವಿವಿಧ ವಿನೋದಾವಳಿಗಳಿಂದ ಸಭಾಂತ್ಯವಾಯಿತು.

ಕುಂಜಿಬೆಟ್ಟು— ಇಲ್ಲಿಯ ಎಮ್. ಆರ್. ಟಿ. ವಾಚನಾಲಯ ಮತ್ತು ಪುಸ್ತಕಾಲಯದ ಸದಸ್ಯರ ಸಭೆಯು ಕಳೆದ ತಾ 26ರಲ್ಲಿ ಶ್ರೀ ಕೆ. ವಾದಿರಾಜ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ, ಗತವರುಷದ ವರದಿ ಇತ್ಯಾದಿ ಮಂಜೂರು ಮಾಡಲ್ಪಟ್ಟವು. ಹೊಸ ವರುಷಕ್ಕೆ ಶ್ರೀಗಳಾದ ಎಮ್. ವಿ. ಪಡಿಯಾರರು ಅಧ್ಯಕ್ಷರಾಗಿಯೂ, ಕೆ. ವಾದಿರಾಜ ಆಚಾರ್ಯರು ಉಪಾಧ್ಯಕ್ಷರಾಗಿಯೂ, ಕೆ. ಪದ್ಮನಾಭ ಭಟ್ ಮತ್ತು ಜಿ. ರಾಯರು ಜತೆಕಾರ್ಯದರ್ಶಿಗಳಾಗಿಯೂ, ಕೆ. ರಾಮದಾಸ ಕಿಣಿಯರು ಕೋಶಾಧಿಕಾರಿಗಳಾಗಿಯೂ ಆರಿಸಲ್ಪಟ್ಟರು.

ಕಿನ್ನಿಕಂಬಳ- ತಾ 26ರಲ್ಲಿ ಕಿನ್ನಿಕಂಬಳದ ರೋಸಾಮಿಸ್ಟಿಕಾ ಹಾಯರ್ ಮತ್ತು ಸೆಕೆಂಡರಿ ಬೇಸಿಕ್ ಟ್ರೈನಿಂಗ್ ಶಾಲೆಯಲ್ಲಿ, ಶಾಲಾ ಸಹಾಯಾರ್ಥವಾಗಿ ಕಲಾಪ್ರದರ್ಶನ ಸಮಾರಂಭವೊಂದು ಶ್ರೀ ಎಚ್. ಆನಂದರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಸ್. ಕೆ. ಪದ್ಮನಾಭ ಆಚಾರ್ಯರು ಕಲಾಪ್ರದರ್ಶನದ ಉದ್ದೇಶಗಳನ್ನು ವಿವರಿಸಿದರು. ಶಾಲಾ ಮುಖ್ಯೋಪಾಧ್ಯಾಯಿನಿ ಧನ್ಯವಾದಗಳನ್ನರ್ಪಿಸಿದರು.

ಕುಂಬಳೆ- ಆರ್. ಎಸ್. ಎಸ್. ಸಂಘದ ಕಡೆಯಿಂದ ಆರಂಭಿಸಲಾದ ಗೋವಧ ನಿರೋಧ ಆಂದೋಲನದ ಉದ್ದೇಶಗಳನ್ನು ವಿವರಿಸುವ ಸಭೆಯು ತಾ 29ರಲ್ಲಿ ಸ್ಥಳೀಯ ಗಾಂಧಿ ಮೈದಾನದಲ್ಲಿ ಶ್ರೀ ಕೆ. ಎನ್. ಶರ್ಮರ ಅಧ್ಯಕ್ಷತೆಯಲ್ಲಿ ಜರಗಿತು.

ಭಾರತೀಯ ರೇಡಿಯೋಲಜಿ ಪರಿಷತ್ತು

ಮದ್ರಾಸಿನ ಡಾ। ಕೆ. ಎಮ್. ರೈಗಳು ಅಧ್ಯಕ್ಷರು

ಮುಂದಿನ ಜನವರಿ ತಿಂಗಳಲ್ಲಿ ತಾರೀ 3ರಿಂದ 6ತನಕ ದೆಹಲಿಯಲ್ಲಿ ಜರ ಲಿರುವ ಏಳನೇ ಅಖಿಲಭಾರತ ರೇ ಯೋಲೊಜಿಕಲ್ ಪರಿಷತ್ತಿನ ಅಧ್ಯಕ್ಷರಾ ಬರ್ನಾರ್ಡ್ ಇನ್ಸ್ಟಿಟ್ಯೂಟ್ ಅಫ್ ರೇ ಯೋಲಜಿಯ ಡೈರೆಕ್ಟರರೂ ಮದ್ರಾಸ್ ದಿಕಲ್ ಕಾಲೇಜಿನ ರೇಡಿಯೋಲಜಿ ಪ್ರೊ ಸರರೂ ಆದ ಡಾ। ಕೆ. ಎಂ. ರೈಗಳು ಆ ಲ್ಪಟ್ಟಿದ್ದಾರೆ. ಅಲ್ಲದೆ ಮುಂದಿನ ಜುಲೈ ತಿ ಗಳಲ್ಲಿ ಕೋಪನ್ ಹಾಗನ್-ಡೆನ್ ಮಾರ್ಕಿನ ಸೇರುವ ಇಂಟರ್ನೇಶನಲ್ ಕಾಂಗ್ರೆಸ್ ಫ್ ರೇಡಿಯೋಲಜಿಗೆ ಹಿಂದೂಸ್ಥಾನದ ತಿನಿಧಿಯಾಗಿಯೂ ಆರಿಸಲ್ಪಟ್ಟಿರುವ ಡಾ। ರೈಗಳು ಇಂಡಿಯನ್ ರೇಡಿಯೊಲೊ ಜಿಕಲ್ ಎಸೋಸಿಯೇಶನಿನ ಅಧ್ಯಕ್ಷ ರುವರು. ಮಾತ್ರವಲ್ಲ, ಮದ್ರಾಸ ಸ್ಟೇ ಮೆಡಿಕಲ್ ಕೌನ್ಸಿಲ್ ಮತ್ತು ಮದ್ರಾ ಯುನಿವರ್ಸಿಟಿಯ ಎಕೆಡಮಿಕ್ ಕೌನ್ಸಿ ಗೂ ಅವಿರೋಧವಾಗಿ ಆರಿಸಲ್ಪಟ್ಟಿರುವ

ವೆಲ್ಕಿನ್ಸ್ ಟೂತ್ ಪೇಸ್ಟ್
ಮಿಂಚುವ ನಗುವಿಗೆ, ಮತ್ತು
ಒಸಡಿನ ಆರೋಗ್ಯಕ್ಕೆ!
ಯು ಎಸ್ ಎ. ರಾಜ್ಯದ
ಪ್ರಸಿದ್ಧ ಡಾಕ್ಟರರೊಬ್ಬರ ತಯಾರಿಕೆ.
Welkin Laboratory (N)
Calcutta 33.
ಉದಾರ ಶರ್ತಗಳ ಮೇಲೆ ಪ್ರತಿನಿಧಿಗಳು ಬೇಕಾಗಿದ್ದಾರೆ

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ,
ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು
ಯಾವಾಗಲೂ ಸಿದ್ಧವಿದೆ.
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.
ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.
ಫೋನು ನಂಬ್ರ 16



ಕೊರಡ್ಕಲ್ ಶ್ರೀನಿವಾಸರಾವ್ ಕೃ
ಆಂಗ್ಲ ಸ್ವಯಂಬೋಧಿನಿ.
ಬೆಲೆ ರೂ. 2-0-0, ವಿ. ಪಿ. ದ್ವಾರ ರೂ. 2-8-
ಡಾ। ಕೊರಡ್ಕಲ್ ವೆಂಕಟರಾವ್ ಕೃ
ಮನೆ ಮದ್ದು
ಸುಲಭ ಚಿಕಿತ್ಸೆಗಳು.
ಬೆಲೆ ರೂ. 2-8-0, ವಿ. ಪಿ. ದ್ವಾರ ರೂ. 3-0
ನವಭಾರತ ಪುಸ್ತಕ ಭಂಡಾರ, ಉಡು

ಮಂಗಳೂರು

ಮುನಿಸಿಪಲ್ ಕೌನ್ಸಿಲು ಸಭೆಯು—ಕಳೆದ ತಾ 25ರಲ್ಲಿ ಸಂಜೆ ಶ್ರೀ ಎಲ್. ಸಿ. ಪಾಯಿಸರ ಅಧ್ಯಕ್ಷತೆಯಲ್ಲಿ ಜರಗಿತು. ಹರಿಜನ ವಿದ್ಯಾರ್ಥಿಗಳಿಗೆ ಸ್ಲೇಟು-ಪುಸ್ತಕ ಕೊಡಲು ಹಣ ಮಂಜೂರಾಯಿತು. ಇನ್ನು ಮುಂದೆ ಎಲ್ಲಾ ಬಡ ವಿದ್ಯಾರ್ಥಿಗಳಿಗೆ ಸ್ಲೇಟು-ಪುಸ್ತಕಗಳ ಸಹಾಯ ನೀಡುವ ನಿರ್ಣಯವಾಯಿತು. ಮಾರ್ಗಗಳಿಗೆ ತಾರು ಹಾಕುವ ಕಾರ್ಯವನ್ನು ನಿಲ್ಲಿಸಬೇಕೆಂಬ ಸರಕಾರದ ಹುಕುಮಿನ ವಿಚಾರದಲ್ಲಿ ಚರ್ಚೆ ನಡೆದು ಈ ವರ್ಷದ ಮಟ್ಟಿಗಾದರೂ ಎರಡು ರಸ್ತೆಗಳನ್ನು ನಗರ ಸಭೆಯು ತನ್ನ ಖರ್ಚಿನಿಂದ ಮಾಡಲು ಅನುಮತಿ ಕೊಡಬೇಕೆಂದೂ ಆ ವಿಚಾರದ ಗ್ರಾಂಟನ್ನು ಮುಂದಿನ ವರುಷದಲ್ಲಿ ಕೊಟ್ಟರೂ ಆಗಬಹುದೆಂಬ ನಿರ್ಣಯವಾಯಿತು. ಸಭಾರಂಭದಲ್ಲಿ ವಿಶ್ರಾಂತಿ ಹೊಂದುವ ಸದಸ್ಯರಿಗೆ ಸತ್ಕಾರ ನಡೆಯಿತು. ಕಮಿಶನರು ತನ್ನ ಭಾಷಣದಲ್ಲಿ ಸಮಿತಿಯವರ ಆಡಳಿತೆ, ಸಹಕಾರ ಬುದ್ಧಿಗಳನ್ನು ಪ್ರಶಂಸಿಸಿದರು. ಬಳಿಕ ಶ್ರೀಗಳಾದ ಕೆ ಎಸ್. ಉಡಿಗ, ಎಸ್. ಗೋಪಾಲ ಸಾಲೆನ್ಸ್, ಎನ್. ಎಸ್. ಕಿಲ್ಲೆ ಮತ್ತು ಡಾ। ಬಿ. ಆರ್. ಹೆಗ್ಡೆ ಮೊದಲಾದವರ ಭಾಷಣಗಳಾದುವು

ತಾ 31ರಲ್ಲಿ ಕೂಡ ಮುನಿಸಿಪಾಲಿಟಿಯ ಸಾರ್ವಜನಿಕ ಆರೋಗ್ಯ ಸಂಘದವರು ವಿಶ್ರಾಂತಿ ಹೊಂದುವ ಸದಸ್ಯರನ್ನು ಸತ್ಕರಿಸುವ ಸಮಾರಂಭವನ್ನು ಶ್ರೀಮತಿ ಮೇರಿ ಬ್ರಿಟ್ಟೋರವರ ಅಧ್ಯಕ್ಷತೆಯಲ್ಲಿ ಜರಗಿಸಿದರು. ಡಾ। ವೆಂಕಟಾಚಲಂ ಡಾ। ಬಿ ಆರ್. ಹೆಗ್ಡೆ, ಶ್ರೀಗಳಾದ ಎಮ್. ಸಿ. ಅಹಮ್ಮದ್, ಎಮ್. ಮೂಕಪ್ಪ, ಪಿ. ಪಿ. ಡಿ. ಸೋಜ ಮೊದಲಾದವರು ಮಾತನಾಡಿದರು. ಶ್ರೀ ಸಂಜೀವ ರಾಯರು ಧನ್ಯವಾದಗಳನ್ನರ್ಪಿಸಿದರು.

ದ ಕ ಜಿಲ್ಲಾ ಒಟೊ ಮೊಬೈಲ್ ಕೆಲಸಗಾರರ ಯೂನಿಯನ್—ಆಶ್ರಯದಲ್ಲಿ ತಾ. 26ರಲ್ಲಿ ಸಂಜೆ ಕೇಂದ್ರ ಮೈದಾನಿನಲ್ಲಿ ಶ್ರೀ ಬಿ. ವಿ. ಕಕ್ಕಿಲ್ಲಾಯರ ಅಧ್ಯಕ್ಷತೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಕೆಳಗಿನ ನಿರ್ಣಯಗಳಾದುವು. ಮದ್ರಾಸು ಸರಕಾರವು ಮೋಟಾರ್ ಸಾರಿಗೆಯ ಮೇಲೆ ಹೊಸ ತೆರಿಗೆ ಹಾಕಿರುವುದು ಕೈಗಾರಿಕೆಯ ಹಿತ ದೃಷ್ಟಿಯಿಂದಲೂ, ಮಜೂರರ ಉದ್ಯೋಗದ ದೃಷ್ಟಿಯಿಂದಲೂ ಸಾರ್ವಜನಿಕರ ಆರ್ಥಿಕ ದೃಷ್ಟಿಯಿಂದಲೂ ಅನ್ಯಾಯವೆಂದು ಈ ಸಭೆಯು ಅಭಿಪ್ರಾಯಪಡುತ್ತದೆ. ಅದನ್ನು ರದ್ದುಗೊಳಿಸಬೇಕೆಂದು ಸರಕಾರವನ್ನು ಈ ಸಭೆಯು ಒತ್ತಾಯಪಡಿಸುತ್ತದೆ. ಮೋಟಾರ್ ಕೈಗಾರಿಕೆಯ ಬಗ್ಗೆ ಜಿಲ್ಲೆಯು ಜೀವ ಪಡೆಯುತ್ತಿದ್ದರೂ ಅದರಲ್ಲಿ ಕೆಲಸಮಾಡುವ ಮಜೂರರ ಸ್ಥಿತಿಯು ಅಲಕ್ಷ್ಯಿಸಲ್ಪಟ್ಟಿದೆ. 1947ರಲ್ಲಾದ ಎವಾರ್ಡನ್ನು ಜಾರಿಗೆ ತಾರದ ಅನೇಕ ಮಾಲೀಕರಿರುವರು. ಇಂತವರ ಮೇಲೆ ಸರಕಾರವು ಯಾವುದೊಂದು ಕಾರ್ಯಕ್ರಮ ಕೈಗೊಂಡಿಲ್ಲ. ಅಷ್ಟೇ ಅಲ್ಲ, ಈ ಎವಾರ್ಡಿನಲ್ಲಿ ಸೇರಿದ ಎಷ್ಟೋ ಮಜೂರರ ಕೇಳಿಕೆಗಳಿವೆ. ಆದುದರಿಂದ ಮಜೂರರ ಸ್ಥಿತಿಗತಿಗಳನ್ನು, ಸಂಬಳ ತುಟ್ಟಿ ಭತ್ತೆ ಇತರ ಸೌಕರ್ಯಗಳನ್ನು ಒದಗಿಸುವ ಕ್ರಮವನ್ನು ಪರಿಶೀಲಿಸಿ ಅವುಗಳನ್ನು ಒದಗಿಸಿಕೊಡಲು ಸರಕಾರವು ಕೂಡಲೇ ಕಾರ್ಯಕ್ರಮ ಕೈಕೊಳ್ಳಬೇಕು ದ. ಕ. ಜಿಲ್ಲೆಯ ಮೋಟಾರು ಕೆಲಸಗಾರರಿಗೆ ಒಂದೇ ಸಂಘಟನೆಯಿರುವುದು ಮಜೂರರ ಹಿತದೃಷ್ಟಿಯಿಂದ ಅತ್ಯಾವಶ್ಯಕವೆಂದೂ ಈ ಸಭೆಯು ಅಭಿಪ್ರಾಯಪಡುತ್ತದೆ



ರಿಜನಲ್ ಟ್ರಾನ್ಸ್‌ಪೋರ್ಟ್ ಅಧಿಕಾರಿಗಳ ಸಭೆಯು– ಈಚೆ ಜರಗಿದಾಗ, ಜಿಲ್ಲೆಯ ಎಲ್ಲ ಬಾಡಿಗೆಯ ಮೋಟಾರ್ ವಾಹನ (ಟೇಕ್ಸಿ) ಗಳಿಗೂ ಟೇಕ್ಸಿ ಮೀಟರ್‌ಗಳನ್ನಿರಿಸಬೇಕೆಂಬ ನಿರ್ಣಯವಾಯಿತು ಮಂಗಳೂರಲ್ಲಿ ಒಟೊ-ರಿಕ್ಷಾಗಳ ಚಲಾವಣೆಯನ್ನು ಪ್ರಾರಂಭಿಸುವ ನಿರ್ಧಾರವೂ ಆಯಿತು.

ಜಿಲ್ಲಾ ಬೋರ್ಡಿನ ವಿಶೇಷ ಸಭೆಯು– ಇದೇ ತಾ 15ರಲ್ಲಿ ಹೊಸದುರ್ಗ ಬೋರ್ಡು ಶಾಲೆಯಲ್ಲಿ ಜರಗಲಿದ್ದು ಸಂಪರ್ಕದಾರಿಯ ಸ್ಥಾಯಿ ಸಮಿತಿಗೆ ಒಬ್ಬ ಮೆಂಬರನ್ನು ಆರಿಸಿಕೊಳ್ಳಲಾಗುವುದು.

ಸಕ್ಕರಕೊಟೆ- ಅಡಿಕೆ ವ್ಯಾಪಾರಿಗಳ ಸಭೆಯೊಂದು ತಾ 25ರಲ್ಲಿ ಶ್ರೀಗಳಾದ ಭಿಮಾಬಾಯಿ ಪ್ರಭು ದಾಸ್ ಪರೇಖ್ ಮತ್ತು ವಿ. ಎನ್. ಪಾಡಿಲ್ಕಾರರ ನೇತೃತ್ವದಲ್ಲಿ ಜರಗಿ ಶ್ರೀ ಜಿ. ಕೆ. ಗೋವಿಂದ ಭಟ್ಟರಿಗೆ ಸತ್ಕಾರವೀಯಲಾಯಿತು. ಶ್ರೀ ಕೆ. ಆರ್. ಕಾರಂತರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಭಿಕರ ಭಾಷಣ, ಅತಿಥಿಯ ಉತ್ತರಗಳಾಗಿ ವಂದನಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ– ಸಂಯುಕ್ತ ರಾಷ್ಟ್ರಗಳ ದಿನಾಚರಣೆಯು ತಾ 31 ರಂದು ಶ್ರೀ ಪಿ. ಕೆ. ನಾರಾಯಣನವರ ಅಧ್ಯಕ್ಷತೆಯಲ್ಲಿ ಜರಗಿತು ಮುಖ್ಯೋಪಾಧ್ಯಾಯಿನಿ ಶ್ರೀಮತಿ ಕೆ ರಾಧಾ, ಎಲ್. ರಾವ್ ಮೊದಲಾದವರು ಮಾತನಾಡಿದರು.

ಅಂತರಾಷ್ಟ್ರೀಯ ಸಹಕಾರ ದಿನಾಚರಣೆ—ಸ್ಥಳೀಯ ಎಸ್. ಸಿ. ಸಿ ಬೇಂಕಿನ ಸಭಾ ಭವನದಲ್ಲಿ ತಾ 1ರಲ್ಲಿ ಅಂತರ್ರಾಷ್ಟ್ರೀಯ ಸಹಕಾರ ದಿನಾಚರಣೆಯು ಶ್ರೀ ಕೆ. ಎಲ್. ಹೆಗ್ಡೆ, ಎಮ್. ಸಿ. ಎಸ್. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಶಾಂತೇರಿ ಪ್ರಭು, ಶ್ರೀಗಳಾದ ಜಿ. ಸಿರಹಾದ್ದಿ, ಎಮ್. ಸಿ. ಅಹಮ್ಮದ್, ಎಮ್. ವಿ ಕಾಮತ್ ಮತ್ತು ಎಫ್. ಎಕ್ಸ್. ಡಿ. ಪಿಂಟೋರವರು ಭಾಷಣ ಮಾಡಿದರು. ಜನರು ಬರೇ ಲಾಭದಾಯಕ ದೃಷ್ಟಿಯುಳ್ಳವರಾಗಿದ್ದು ಸ್ವಸೊತ್ತನ್ನು ಸಾರ್ವಜನಿಕ ಹಿತಕ್ಕೆ ಮತ್ತು ದೇಶದ ಏಳಿಗೆಗಾಗಿ ವ್ಯಯಿಸಲು ಸಿದ್ಧರಿರದೆ ಬರೇ ತಮ್ಮ ತಮ್ಮ ಬಂಡವಾಳವನ್ನು ತುಂಬಿಕೊಳ್ಳ ಪ್ರಯತ್ನಿಸುವವರಾಗಿಯೂ ಹೇಳಿದರು. ಜನರು ತಮ್ಮ ಈ ರೀತಿಯ ಮನೋಭಾವನೆಯನ್ನು ತೊಲಗಿಸಿ ತಮ್ಮ ಕೈಲಾದ ಮಟ್ಟಿನ ಸಹಕಾರವನ್ನಿತ್ತು ಹಿಂದುಳಿದ ಜನರ ಜೀವನ ಮಟ್ಟವನ್ನು ಉನ್ನತಗೊಳಿಸಲು ಸಹಕರಿಸಬೇಕೆಂದರು. ಅಧ್ಯಕ್ಷರು ಭಾಷಣ ಮಾಡುತ್ತ ಅನೇಕ ಜನರು ಸಹಕಾರಿ ಸಂಘಕ್ಕೆ ಸೇರವಾಗುವುದನ್ನು ಬರೇ ಬಾಹ್ಯ ಕಾರ್ಯಗಳಲ್ಲಿ ತೋರ್ಪಡಿಸುವರಲ್ಲದೆ ನಿಜವಾದ ಮಾನಸಿಕ ಸಹಾನುಭೂತಿ ತೋರಿಸದೆ ತಮ್ಮ ತಮ್ಮ ಏಳಿಗೆಯನ್ನೇ ಸಾಧಿಸುವುದರಲ್ಲಿ ವ್ಯಗ್ರರಾಗಿರುತ್ತಾರೆಂದರು. ಜನರು ತಮ್ಮ ಮಾತುಗಳಲ್ಲಿ ಒಂದು, ಕಾರ್ಯದಲ್ಲಿ ಬೇರೊಂದು, ಈ ರೀತಿ ಆಚರಿಸುವ ನಡತೆಗಳನ್ನು ದೂರೀಕರಿಸಬೇಕೆಂದು ಸೂಚಿಸಿದರು. ಜಿಲ್ಲೆಯಲ್ಲಿ ಶ್ರೀ ಮೂಳಹಳ್ಳಿ ಶಿವರಾಯರು ಸಹಕಾರ ಸಂಘದ ಪ್ರಥಮ ಹಾಗೂ ನಿಷ್ಠಾವಂತ ಕಾರ್ಯಕರ್ತರೆಂದು ಅಭಿನಂದಿಸಿ ಅವರ ಪ್ರಯತ್ನವನ್ನು ಶ್ಲಾಘಿಸಿದರು.

THE BOMBAY LIFE ASSURANCE COMPANY, LTD.
ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೋ. ಲಿಮಿಟೆಡ್.
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು
ಪ್ರಧಾನ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ
ಇವರ ಶಾಖಾ ಕಚೇರಿಗಳು.-
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.
ಕಳೆದ ಮೂವತ್ತೈದು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿವವರಿಂದ
ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ [illegible] ಸೇವೆಯನ್ನು
ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆ [illegible].
ವಿಮೆ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಅಸಾಧಾರಣ ಪಾಂಡಿತ್ಯವುಳ್ಳ ಗ್ರಂಥಕರ್ತರೂ ಆದ
ಶ್ರೀ. ಎಸ್. ಪಂಚಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್., ಬಾರ್-ಎಟ್-ಲಾ, ಎಫ್. ಆರ್. ಎಸ್. ಎಲ್ ಅವರು ಬರೆದ Tales of Ind ಎಂಬ ಕಥಾವಳಿಯ ಅನುವಾದ
ಭಾರತೀಯ ಕಥೆಗಳು
ಅನುವಾದಕರು—ಶ್ರೀ ಕೊಡಕ್ಕಲ್ ಶ್ರೀನಿವಾಸ ರಾವ್
ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಬೇಕೆಂಬ ಹಿರಿಯಾಸೆ ಇದ್ದೇ ಇದೆ, ಇದು ಸಿದ್ಧಿಸಬೇಕಾದರೆ ಮಾತಿನ ನಡು-ನಡುವೆ ಸಂದರ್ಭೋಚಿತವಾದ ಉಪಮೆ, ಗಾದೆ, ಕಥೆ ದೃಷ್ಟಾಂತ ಇತ್ಯಾದಿಗಳು ಬರಬೇಕು ಅಂತಹ ಅಮೂಲ್ಯ ಭಂಡಾರವೇ ಈ ಭಾರತೀಯ ಕತೆಗಳು
ಎಲ್ಲರೂ ಅವಶ್ಯವಾಗಿ ಓದತಕ್ಕ ಅಪೂರ್ವ ಗ್ರಂಥ
151 ಕತೆಗಳು ಬೆಲೆ ರೂ. 1-12-0
ನವಭಾರತ ಪುಸ್ತಕ ಭಂಡಾರ, ಉಡುಪಿ.

ಜಿಲ್ಲಾ ಶಿಕ್ಷಣ ಸಮ್ಮೇಲನವು—ಜಿಲ್ಲಾ ಟೀಚರ್ಸ್ ಗಿಲ್ಡಿನ ಆಶ್ರಯದಲ್ಲಿ ಮಂಗಳೂರು ಗವರ್ನಮೆಂಟ್ ಟ್ರೈನಿಂಗ್ ಕಾಲೇಜು ಪ್ರಿನ್ಸಿಪಲ್ ಶ್ರೀ ರಿ. ರಾಘವ ಬಾಳಿಗರ ಅಧ್ಯಕ್ಷತೆಯಲ್ಲಿ ಮಿಶನ್ ಹೈಸ್ಕೂಲಿನಲ್ಲಿ ಇದೇ ತಾ 9ರಲ್ಲಿ ಅಪರಾಹ್ನ 3 ಗಂಟೆಗೆ ಜರಗಲಿರುವುದು. ಶ್ರೀಗಳಾದ ಯು. ಸಿ. ಶೆಟ್ಟಿ, ಎಸ್. ಮುಕುಂದ ರಾವ್, ಕೆ ವಾಸುದೇವ ಶೆಣೈ, ಟಿ. ರಾಮುರಾವ್ ಮೊದಲಾದವರು ವಿವಿಧ ವಿಷಯದಲ್ಲಿ ಲಿಖಿತ ಪತ್ರಗಳನ್ನೋದಲಿರುವರು.

ಗೋಸಪ್ತಾಹ ಸಮಾರೋಪ—ಇದೇ ತಾ. 1ರಲ್ಲಿ ಗೋಸಪ್ತಾಹದ ಕೊನೆಯ ದಿನವಿದ್ದು ಅಂದು ಗಣಪತಿ ದೇವಸ್ಥಾನದಲ್ಲಿ ಗೋಪೂಜೆ ಮೊದಲಾದ ಕಾರ್ಯಕ್ರಮಗಳಾದುವು. ಸಂಜೆ ಶ್ರೀ ಕೆ. ಬಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಶ್ರೀ ಡಿ. ಪೋತನರಾಯರು 1 ಭಾರತ ಘಟನೆಯ 48ನೆ ಕಲಮಿನಲ್ಲಿ ಸೂಚಿಸಿರುವ ನೀತಿಗೆ ಗೋರಕ್ಷಣೆಗೆ ಸಹಾಯವಾಗಬೇಕು 2 ಗೋವಧೆ ಸಂಪೂರ್ಣವಾಗಿ ಪ್ರತಿಬಂಧಿಸಲ್ಪಡಬೇಕು, 3 ಪ್ರತಿ ಹಳ್ಳಿಯಲ್ಲಿ ಗೋಚರಾವು ಮತ್ತು ಗೋಶಾಲೆಗಳ ಅವಶ್ಯಕತೆ, ಇವೇ ಮೊದಲಾದ ನಿರ್ಣಯಗಳನ್ನು ತಂದರು. ಶ್ರೀ ಕಾಶಿನಾಥ ಭಟ್ಟರ ಧನ್ಯವಾದಾರ್ಪಣೆಯೊಂದಿಗೆ ಸಭೆಯು ಕೊನೆಗೊಂಡಿತು.

ದ ಕ. ಜಿಲ್ಲಾ ಪ್ರಜಾ-ಸಮಾಜವಾದಿ ಪಕ್ಷಗಳು- ಒಂದಾಗುವ ಮಹಾ ಸಭೆಯು ತಾ 28ರಲ್ಲಿ ಶ್ರೀ ಕೆ ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕಾರಂತರು ಆರಂಭದಲ್ಲಿ ಸ್ವಾಗತ ಭಾಷಣ ಮಾಡುತ್ತ ಎರಡೂ ಸಭೆಯಲ್ಲಾದ ವಿಚಾರಗಳನ್ನು ತಿಳಿಸಿ, ಒಂದಾದ ಹೊಸ ಪಕ್ಷದಿಂದ ಹೆಚ್ಚಿನ ಜನೋಪಯೋಗಿ ಕಾರ್ಯಗಳನ್ನು ಮಾಡಲು ಸಾಧ್ಯವಿದೆ ಎಂದರು. ಬಳಿಕ ಡಾ। ಸಂಜೀವನಾಥ, ಶ್ರೀ ಸಿ. ಗೋವಿಂದನ್, ಶ್ರೀ ವಿ. ಶ್ರೀನಿವಾಸ ಶೆಟ್ಟಿ ಮೊದಲಾದವರು ಸಂದರ್ಭೋಚಿತ ಭಾಷಣಗಳನ್ನಿತ್ತರು. ಕೊನೆಗೆ ತಾತ್ಕಾಲಿಕ ಜಿಲ್ಲಾ ಸಮಿತಿಯ ರಚನೆಯಾಗಿ ಸದಸ್ಯರನ್ನು ಸೇರಿಸುವ, ನಿಧಿಸಂಗ್ರಹಿಸುವ ಕಾರ್ಯಗಳು ತ್ವರಿತದಿಂದಾಗಬೇಕೆಂದಾಯಿತು.

ಗ್ರಾಮಕಲ್ಯಾಣ ಯೋಜನೆಯ ಬೋಧನ ಕಮಿಟಿಯು—ತಾ. 31ರಲ್ಲಿ ಕಲೆಕ್ಟರರ ಕಚೇರಿಯಲ್ಲಿ ಜರಗಿತು. ಯೋಜನಾಧಿಕಾರಿಗಳು ಮುಂದಿನ ಮೂರು ವರ್ಷಗಳಲ್ಲಿ ಆಗಲಿರುವ ಯೋಜನೆ ಮತ್ತು ಅದಕ್ಕಾಗುವ ವೆಚ್ಚವನ್ನು ವಿವರಿಸಿದ ಬಳಿಕ ಅನೇಕ ಚರ್ಚೆಗಳಾದುವು. ಇಂದಿನ ಸಭೆಗೆ ಎಮ್. ಎಲ್. ಎ. ಗಳು ಮತ್ತು ಇತರ ಅಧ್ಯರು ಬಂದಿದ್ದರು ಜಿಲ್ಲೆಯಲ್ಲಿ 65ಲಕ್ಷ ವಿನಿಯೋಗವಾಗುವುದಂತೆ ಸಂಜೆ ವಯಸ್ಕರ ವಿದ್ಯಾ ಸಮಿತಿಯ ಸಭೆಯೂ ಜರಗಿತೆಂದು ತಿಳಿದುಬರುತ್ತದೆ. (ಬೋಧನ ಕಮಿಟಿ ಸಭೆಗೆ ಪತ್ರಿಕಾ ಪ್ರತಿನಿಧಿಗಳಿಗೆ ಪ್ರವೇಶವಿದ್ದಿಲ್ಲವೆನ್ನಲಾದೆ)

ನಾಗರಿಕರ ಪುಸ್ತಕ ಭಂಡಾರ ಹಾಗೂ ಧರ್ಮಾರ್ಥ ವಾಚನಾಲಯವೊಂದು ತಾ. 30ರಂದು ಸಂಪಸೆಟ್ಟಿಯ ಪ್ಯಾಸ್ ಕಟ್ಟಡದಲ್ಲಿ ಶ್ರೀ ಎಸ್. ಮುಕುಂದ ರಾಯರ ಅಧ್ಯಕ್ಷತೆಯಲಿ ಶ್ರೀ ಎಸ್. ಎಸ್. ಅಡಿಗರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀಗಳಾದ ಬಿ. ಶಂಕರಭಟ್, ಕೃಷ್ಣರಾವ್, ಎಸ್. ಡಿ. ನಾಯಕ್ ಮೊದಲಾದವರು ಮಾತನಾಡಿದರು. ಶ್ರೀ ನಾರಾಯಣ ಮೂರ್ತಿಗಳು ಧನ್ಯವಾದವಿತ್ತರು.

All Secondary Schools may Subscribe to 'Navayuga' Weekly Since it has been approved by the Director of Public Instruction, Madras

ಕಣ್ಣಿನ ಕಪ್ಪಿನಲ್ಲಿ ಕಲೆ

ಶುಕ್ಲ ಪಟಲವು ಮಸುಕಾದ ಕಾರಣದಿಂದ ನೀವು ದೃಷ್ಟಿಯನ್ನು ಕಳೆದುಕೊಂಡಿದ್ದರೆ ಅದನ್ನು ತಿರುಗಿ ಪಡೆಯಲು ಸಾಧ್ಯವಿದೆ

ಕಣ್ಣಿನ 'ಕಪ್ಪು' ಎಂದು ಸಾಧಾರಣವಾಗಿ ಕರೆಯಲ್ಪಡುವುದೇ ಶುಕ್ಲ ಪಟಲ Cornea ಇದು ಪಾರದರ್ಶಕ ಗುಣವುಳ್ಳದಾಗಿರುತ್ತದೆ ಇದರ ಹಿಂದೆ ಇರುವ ಕೃಷ್ಣ ಪಟಲದಿಂದಾಗಿ ಶುಕ್ಲ ಪಟಲವು ಕಪ್ಪಾಗಿ ಕಾಣುತ್ತದೆ ದೃಷ್ಟಿಯು ಚೆನ್ನಾಗಿರಬೇಕಾದರೆ ಶುಕ್ಲ ಪಟಲವು ಶುಭ್ರವಾಗಿದ್ದು ಬೆಳಕಿನ ಕಿರಣಗಳು ಅದರ ಮೂಲಕ ಹಾದು ಹೋಗುವಂತಿರಬೇಕು ಶುಕ್ಲ ಪಟಲವು ಅದರ ಸಹಜವಾದ ಪಾರದರ್ಶಕ ಗುಣವನ್ನು ಕಳೆದು ಕೊಂಡರೆ ದೃಷ್ಟಿಗೆ ತಡೆಯುಂಟಾಗುತ್ತದೆ ಶುಕ್ಲ ಪಟಲದ ಮಸುಕಾಗಿರುವ ಪ್ರದೇಶ, ಅದರ ಪ್ರಮಾಣ ಮತ್ತು ಸಾಂದ್ರತೆಗಳನ್ನು ಹೊಂದಿಕೊಂಡು ದೃಷ್ಟಿಯು ಮಂದವಾಗುತ್ತದೆ ರೋಗದಿಂದಾಗಿ ಅಥವಾ ಗಾಯವುಂಟಾಗಿ ಶುಕ್ಲ ಪಟಲವು ಮಸುಕಾಗಬಹುದು ಶುಕ್ಲ ಪಟಲದ ಮೇಲೆ ಉಂಟಾಗುವ ಹುಣ್ಣು ಗುಣವಾಗುವಾಗ ಉಳಿಯುವ ಕಲೆಯು ಶುಕ್ಲ ಪಟಲವು ಮಸುಕಾಗುವುದಕ್ಕೆ ವಿಶೇಷವಾಗಿ ಕಾರಣವಾಗುತ್ತದೆ.

ಶುಕ್ಲ ಪಟಲವು ಮಸುಕಾದ ಮೇಲೆ ಅದನ್ನು ಗುಣಪಡಿಸುವುದಕ್ಕಿಂತಲೂ ಅದನ್ನು ತಡೆಗಟ್ಟುವುದು ಎಷ್ಟೋ ಉತ್ತಮ ಆದುದರಿಂದ ಇದರ ಕಡೆಗೆ ವಿಶೇಷ ಗಮನವನ್ನು ಕೊಡಬೇಕು ಇಂತಹ ತಡೆಗಟ್ಟುವ ಔಷಧ ಕ್ರಮಗಳು ಪಾಶ್ಚಾತ್ಯ ದೇಶಗಳಲ್ಲಿ ವಿಶೇಷವಾಗಿ ಮುಂದುವರಿಯುವುದರಿಂದ ಅಲ್ಲಿ ಕಣ್ಣಿನ ಕಪ್ಪಿನಲ್ಲಿ ಕಲೆಗಳಿರುವವರನ್ನು ಕಾಣಸಿಗುವುದು ಅಪೂರ್ವವಾಗಿದೆ.

ನಮ್ಮ ದೇಶದಲ್ಲಿ ಶುಕ್ಲ ಪಟಲವು ಮಸುಕಾದುದರಿಂದ ದೃಷ್ಟಿಯು ಮಂದವಾದವರು ವಿಶೇಷವಾದ ಸಂಖ್ಯೆಯಲ್ಲಿರುವರು. ಇವರನ್ನು ಗುಣಪಡಿಸುವ ಪ್ರಶ್ನೆಯು ನಮ್ಮ ದೇಶದಲ್ಲಿ ವಿಶೇಷ ಪ್ರಾಧಾನ್ಯತೆಯನ್ನು ಪಡೆಯುತ್ತದೆ, ಜೀವನದ ಅಂತ್ಯದವರೆಗೂ ಕುರುಡರಾಗಿಯೇ ಬಾಳಬೇಕಾಗಿರಬಹುದಾಗಿದ್ದ ಹಲವು ಹತಭಾಗ್ಯರು ಆಧುನಿಕ ಶಸ್ತ್ರ ಚಿಕಿತ್ಸೆಯ ವಿಧಾನಗಳಿಂದ ತಿರುಗಿ ದೃಷ್ಟಿಯನ್ನು ಪಡೆಯುವುದೂ ಸಾಧ್ಯವಿದೆ.

ಈ ಶಸ್ತ್ರ ಚಿಕಿತ್ಸಾ ವಿಧಾನವೇ ಶುಕ್ಲ ಪಟಲವನ್ನು ಕಿತ್ತು ಹಚ್ಚುವುದು ಮಸುಕಾಗಿರುವ ಶುಕ್ಲ ಪಟಲದ ಮಧ್ಯ ಭಾಗವನ್ನು ಕಿತ್ತು ತೆಗೆದು ಬದಲಿಗೆ ಸತ್ತ ಮನುಷ್ಯನೊಬ್ಬನ ಶುಕ್ಲ ಪಟಲದ ಅಷ್ಟೇ ದೊಡ್ಡ ಭಾಗವನ್ನು ಹಚ್ಚುವುದೇ ಈ ವಿಧಾನವಾಗಿದೆ ಯಾವುದಾದರೊಂದು ಕಾರಣದಿಂದ ಬದುಕಿರುವ ಮನುಷ್ಯನ ಕಣ್ಣನ್ನು ಕೀಳುವುದಿದ್ದರೆ ಆ ಕಣ್ಣುಗಳ ಶುಕ್ಲ ಪಟಲವನ್ನು ಉಪಯೋಗಿಸಬಹುದು ಪ್ರಾದೇಶಿಕ ಇಂದ್ರಿಯ ಸುಪ್ತಿಯನ್ನುಂಟುಮಾಡಿ ಶಸ್ತ್ರ ಕ್ರಿಯೆಯನ್ನು ನಡೆಸುತ್ತಾರೆ ಹಚ್ಚಿದ ಭಾಗವು ಆ ಸ್ಥಳದಲ್ಲೇ ನಿಲ್ಲುವಂತೆ ಅದನ್ನು ಹೊಲಿಯಲಾಗುತ್ತದೆ 8ನೇ ದಿವಸ ಈ ಹೊಲಿಗೆಯನ್ನು ತೆಗೆಯಲಾಗುವುದು

ಹೊಸದಾಗಿ ಹಚ್ಚಿದ ಭಾಗವು ಶುಕ್ಲ ಪಟಲದೊಡನೆ ಬೇಗ ಕೂಡಿ ಬರುವುದಾದರೂ ಅದು ಶುಭ್ರವಾಗಿ ಉಳಿಯುವುದು ಅಷ್ಟು ಸುಲಭವಲ್ಲ. ದೃಷ್ಟಿಯು ಉತ್ತಮಗೊಳ್ಳುವ ದೃಷ್ಟಿಯಿಂದ ಶಸ್ತ್ರಕ್ರಿಯೆಯು ಯಶಸ್ವಿಯಾಗಬೇಕಾದರೆ ಕಣ್ಣಿನ ಇತರ ಭಾಗಗಳು ಆರೋಗ್ಯದಲ್ಲಿರಬೇಕು. ಶುಕ್ಲ ಪಟಲವಲ್ಲದೆ ಕಣ್ಣಿನ ಇತರ ಯಾವುದಾದರೂ ಭಾಗವು ರೋಗಕ್ಕೆ ಬಲಿಯಾಗಿದ್ದರೆ ಶಸ್ತ್ರಕ್ರಿಯೆಯು ಯಶಸ್ವಿಯಾಗುವಂತಿಲ್ಲ. ಅಲ್ಲದೆ ಪ್ರತಿಯೊಂದು ವಿಧದ ಶುಕ್ಲ ಪಟಲವು ಮಸುಕಾದ ರೋಗದಲ್ಲಿಯೂ ಈ ಕ್ರಮವನ್ನು ಕೈಕೊಳ್ಳಲು ಸಾಧ್ಯವಿಲ್ಲ. ಆದರೂ ಈ ರೀತಿಯ ಶಸ್ತ್ರಕ್ರಿಯೆಯು ಪರಿಣಾಮಕಾರಿಯಾಗಬಹುದಾದ ಸಂದರ್ಭಗಳಲ್ಲಿ ಅದು ವಿಶೇಷ ಪ್ರತಿಫಲಗಳನ್ನು ಕೊಡುತ್ತದೆ.

ಸತ್ತನಂತರ ತನ್ನ ಕಣ್ಣುಗಳನ್ನು ದಾನ ಮಾಡಲು ಇಚ್ಛಿಸಿದ ಮನುಷ್ಯನು ಸತ್ತೊಡನೆ, ಅವನ ಕಣ್ಣುಗಳನ್ನು ಕಿತ್ತು ರೆಫ್ರಿಜಿರೇಟರಿನಲ್ಲಿ ಸಂಗ್ರಹಿಸಿಡಲಾಗುತ್ತದೆ. ಅನಂತರ ಒಂದೆರಡು ದಿನಗಳಲ್ಲೇ ಇವುಗಳನ್ನು ಉಪಯೋಗಿಸಬೇಕು ಹೀಗೆ ಕಣ್ಣುಗಳನ್ನು ಸಂಗ್ರಹಿಸಿಡುವ ಸ್ಥಳಕ್ಕೆ ನಯನ ನಿಧಿ (Eye Bank) ಎಂದು ಹೇಳುತ್ತಾರೆ ರೋಗಿಗಳ ಒಂದು ಪಟ್ಟಿಯನ್ನು ತಯಾರಿಸಿ ಕಣ್ಣುಗಳು ದೊರೆತಾಗ ಅವನ್ನು ಬೇಗನೆ ಶಸ್ತ್ರಕ್ರಿಯೆಯನ್ನು ನಡೆಸುತ್ತಾರೆ.

ಮದ್ರಾಸಿನ ಎಗ್ಮೋರಿನಲ್ಲಿರುವ ಕಣ್ಣಿನ ಆಸ್ಪತ್ರೆಯಲ್ಲಿ 1948ರಲ್ಲಿ ಒಂದು ನಯನ ನಿಧಿಯನ್ನು ತೆರೆಯಲಾಗಿತ್ತು. ಶುಕ್ಲ ಪಟಲವನ್ನು ಕಿತ್ತು ಹಚ್ಚುವ ಕೆಲಸವು ಅಲ್ಲಿ ಈಗ ನಡೆಯುತ್ತಿದೆ.

ಉಕ್ಕಿನ ಸಣ್ಣ ತುಂಡಿನಿಂದಾಗಿ ಈ ವ್ಯಕ್ತಿಯ ಕಣ್ಣಿಗೆ ಗಾಯವಾಗಿ ವ್ರಣವಾಯಿತು. ಚಿಕಿತ್ಸೆಯಿಂದ ಹುಣ್ಣು ಗುಣವಾದರೂ ಅದರಿಂದ ಉಂಟಾದ ಕಲೆಯು ದೃಷ್ಟಿಯು ಬಹಳ ಮಂದವಾಗುವುದಕ್ಕೆ ಕಾರಣವಾಯಿತು ಅವನ ಕೆಲಸವೂ ಹೋಯಿತು. ಹೊಸ ಚಿಕಿತ್ಸೆಯಿಂದ ಅವನು ಹಿಂತಿರುಗಿ ದೃಷ್ಟಿಯನ್ನು ಪಡೆದು ಈಗ ತಿರುಗಿ ಕೆಲಸ ಮಾಡುತ್ತಿರುವನು.

ಶುಕ್ಲ ಪಟಲವು ಮಸುಕಾದುದರಿಂದ ನಿಮ್ಮ ದೃಷ್ಟಿಯು ಹಾಳಾಗಿದ್ದರೆ ಮದ್ರಾಸಿನ ಎಗ್ಮೋರಿನಲ್ಲಿರುವ ಕಣ್ಣಿನ ಆಸ್ಪತ್ರೆಯನ್ನು ಸಂದರ್ಶಿಸಿ ಸಲಹೆಯನ್ನು ಪಡೆಯಿರಿ. ದೃಷ್ಟಿಯನ್ನು ತಿರುಗಿ ಪಡೆಯುವುದು ನಿಮಗೂ ಸಾಧ್ಯವಾಗಬಹುದು.

ಸಂಯುಕ್ತ ಅಮೆರಿಕದಲ್ಲಿಯೂ ಪಾಶ್ಚಾತ್ಯ ರಾಷ್ಟ್ರಗಳಲ್ಲಿಯೂ ಮರಣವು ಸಮೀಪಿಸಿರುವ ಕೆಲವು ಜನರು ತಮ್ಮ ಮರಣಾನಂತರ ಕಣ್ಣುಗಳನ್ನು ನಯನ ನಿಧಿಗಳಿಗೆ ದಾನವಾಗಿ ಕೊಡುವಂತೆ ತಮ್ಮ ಮೃತ ಪತ್ರದಲ್ಲಿ ಬರೆದಿಡುತ್ತಾರೆ ಇವರ ಆದರ್ಶವನ್ನನುಸರಿಸಿ ಇತರ ಜನರೂ ದೃಷ್ಟಿಯನ್ನು ಕಳೆದುಕೊಂಡು ಯಾತನೆಯನ್ನು ಅನುಭವಿಸುತ್ತಿರುವ ತಮ್ಮ ಸಹೋದರರಿಗೆ ಈ ಮೂಲಕ ಉಪಕಾರವನ್ನು ಮಾಡಬಹುದು.

ಹೊಗೆಬಂಡಿ ನಿರ್ಮಿಸುವ ಭಾರತೀಯ ಕಾರ್ಖಾನೆ

೩ನೇ ಪುಟದಿಂದ ಮುಂದುವರಿದುದು

ಇಷ್ಟರ ವರೆಗೆ ಪ್ರಮುಖ ಕೆಲಸಗಾರರಿಗೂ ಅಧಿಕಾರೀ ವರ್ಗಕ್ಕೂ ಅಲ್ಲದೆ ೫೦% ಸಾಧಾರಣ ವರ್ಗದ ಕೆಲಸಗಾರರಿಗೂ ವಸತಿ ಸೌಕರ್ಯವನ್ನು ಒದಗಿಸಿಕೊಡಲಾಗಿದೆ ಸರ್ವಪ್ರಥಮವಾಗಿ ೫೦೦೦ ಜನರು ನೆಲೆಗೊಳ್ಳುವಂತೆ ನೋಡಲಾಗಿದೆ. ಪ್ರತಿಯೊಂದು ಕಾಲನಿಗೆ ತನ್ನದೇ ಆದ ಆಟದ ಸ್ಥಳ, ಉದ್ಯಾನವನ, ಆಸ್ಪತ್ರೆ ಮುಂತಾದುವಿವೆ. ಪ್ರತಿಯೊಂದು ಮನೆಗೂ ವಿದ್ಯುಚ್ಛಕ್ತಿ, ನಳ್ಳಿಯ ನೀರು, ಒಚ್ಚಲು ಮನೆ-ಪಾಯಿಖಾನೆ, ಅಡಿಗೆಮನೆ ಮುಂತಾದವುಗಳಿವೆ. ಸದ್ಯಕ್ಕೆ ಐದು ಆಸ್ಪತ್ರೆಗಳೂ, ನಾಲ್ಕು ಆರೋಗ್ಯ ಹಾಗೂ ಹೆರಿಗೆ ಕೇಂದ್ರಗಳೂ, ಎರಡು ಹೈಸ್ಕೂಲುಗಳೂ ಏಳು ಪ್ರಾಥಮಿಕ ಶಾಲೆಗಳೂ ಆರು ವಿಹಾರೋದ್ಯಾನಗಳೂ ಇವೆ.

ರಾಷ್ಟ್ರೀಯ ಆಶೆ ಆಕಾಂಕ್ಷೆಯನ್ನು ಪೂರೈಸುವಲ್ಲಿ ಚಿತ್ತರಂಜನದ ಕಾರ್ಖಾನೆಗೆ ತುಂಬ ಮಹತ್ವದ ಸ್ಥಾನವಿದೆ. ಅದರ ಸಹಕಾರವೂ ಅಸದೃಶವಾಗಿದೆ ೧೫ ಕೋಟಿ ರೂಪಾಯಿಯನ್ನು ನಗರ ನಿರ್ಮಾಣದ್ದಾಗಿಯೇ ವೆಚ್ಚ ಮಾಡಲಾಗುವುದು ಗೃಹನಿರ್ಮಾಣ, ಮಾರ್ಗಗಳ ರಚನೆ, ಮತ್ತಿತರ ಸೌಕರ್ಯಗಳು ಮಹತ್ವದ್ದೆನಿಸಿವೆ. ಓದುಮನೆ, ಪುಸ್ತಕಾಲಯ, ಸಿನೆಮಾ ಪ್ರದರ್ಶನ ಮುಂತಾದ ಅನುಕೂಲತೆಗಳಲ್ಲದೆ, ಸಾಂಸ್ಕೃತಿಕ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಹೀಗೆ ಚಿತ್ತರಂಜನದಲ್ಲಿ ಒದಗಿಸಿದ ಅನುಕೂಲತೆಗಳಿಂದ ಕೆಲಸಗಾರರ ಜೀವನ ಸುಗಮವಾಗುವಂತೆ ನೋಡಿಕೊಳ್ಳುವುದಲ್ಲದೆ ಅವರನ್ನು ಗೌರವದಿಂದ ಕಾಣುತ್ತಾರೆ. ಉಪಾಧ್ಯಾಯರು, ಕಾರಕೂನರು ಮುಂತಾದವರೊಡನೆ ಸೌಹಾರ್ದ ಸಂಬಂಧ ಬೆಳಸಿಕೊಂಡು ಶಾಂತಿಯಿಂದ ಜೀವನ ಯಾಪನೆ ಮಾಡಲು ಅವಕಾಶವಿದೆ.

ಜಾನುವಾರು ಜಾತ್ರೆ!

ಈ ಜಿಲ್ಲೆಯ ರೈತರ ಅನುಕೂಲತೆಯ ಬಗ್ಗೆ ಹೆಬ್ರಿ ಸೀತಾನದಿ ಮಂಗಳೂರು ರಸ್ತೆಯು ಆಗುಂಬೆ ರಸ್ತೆಗೆ ಕೂಡುವಲ್ಲಿ ಅಂದರೆ ಸೋಮೇಶ್ವರ ಘಾಟಿಯ ಬುಡದಿಂದ 3 ಮೈಲು ಕೆಳಗೆ ಸೀತಾನದಿ ಎಂಬಲ್ಲಿ ಜಾನುವಾರು ಜಾತ್ರೆಯು ವರ್ಷಂಪ್ರತಿ ಜರಗುವಂತೆ ಈ ವರುಷ ತಾರೀಕು 21 11-52ರಿಂದ 8-12-52ರ ವರೇಗೆ ಜರಗುವುದು

ಜಾತ್ರೆಗೆ ಬರುವವರೆಲ್ಲರಿಗೂ ಯೋಗ್ಯ ಅನುಕೂಲತೆಗಳು ದೊರೆಯುವಂತೆ ಎಲ್ಲಾ ಏರ್ಪಾಡುಗಳನ್ನು ಕ್ರಮದಂತೆ ಮಾಡಲಾಗುವುದು ಜಾತ್ರೆಯ ಸ್ಥಳವು ಸೀತಾನದಿ ಹೊಳೆಯಿಂದ 2 ಫರ್ಲಾಂಗುಗಳೊಳಗಿದ್ದು ಪಕ್ಕದಲ್ಲಿರುವ ರಿಜರ್ವ್ ಕಾಡಿನಲ್ಲಿ ತುಂಬಾ ಹುಲ್ಲುಗಾವಲು ಇದೆ, ಜಾತ್ರೆಗೆಬರುವ ಜಾನುವಾರುಗಳ ಬಗ್ಗೆ ಇನಾಮುಗಳನ್ನು ಕೊಡುವ ಏರ್ಪಾಡೂ ಮಾಡಲಾಗಿದೆ,

ಮೈಸೂರು, ದಕ್ಷಿಣಕನ್ನಡ ವ ಇತರ ಜಿಲ್ಲಾ ಪ್ರಾಂತ್ಯಗಳಿಂದಲೂ ಸರ್ವರೂ ಈ ಜಾತ್ರೆಗೆ ಬಂದು ಪ್ರೋತ್ಸಾಹಿಸಬೇಕಾಗಿ ನಮ್ಮ ಅಪೇಕ್ಷೆಯಾಗಿರುತ್ತದೆ

ಬಿ. ಕೃಷ್ಣ,
ರೆವೆನ್ಯೂ ಡಿವಿಜನಲ್ ಆಫೀಸರ್
ಕುಂದಾಪುರ, ತಾ. 24 10 52

ಮಾನವ ವಿಜಯದ ಹೆದ್ದಾರಿ!

ಆರ್ಥಿಕ ಮತ್ತು ಸಾಂಪತ್ತಿಕ ಅನುಕೂಲತೆಯು ಇಂದಿನ ಮಾನವ ಜೀವನದ ವಿಜಯದ ಹೆದ್ದಾರಿ

ಜನತೆಗೆ ಈ ಅನುಕೂಲತೆಗಳನ್ನೊದಗಿಸಿ ಸಾಂಪತ್ತಿಕ ಅಭಿವೃದ್ಧಿ ಸಾಧಿಸುವುದೇ ಬೇಂಕುಗಳ ಹೆಗ್ಗುರಿ

ದಿನೇ ದಿನೇ ಜನ ವಿಶ್ವಾಸಗಳಿಸಿ ಪ್ರಗತಿ ಹೊಂದುತ್ತಿರುವ

ದಿ ವಿಜಯ ಬೇಂಕ್, ಲಿಮಿಟೆಡ್.

ಇದರೊಡನೆ ನಿಮ್ಮ ವ್ಯವಹಾರ ಬೆಳಸಿ ಅನುಕೂಲತೆ ಪಡೆದು ಜೀವನದಲ್ಲಿ ವಿಜಯ ಸಾಧಿಸಿರಿ

ಗಿರಾಕಿಗಳ ಹಿತಸಾಧನೆ ಮತ್ತು ವಿಶ್ವಾಸ ಸಂಪಾದನೆಯು ವಿಜಯ ಬೇಂಕಿನ ಅಮೂಲ್ಯ ಸೊತ್ತು

The Vijaya Bank Ltd.,
Head Office MANGALORE-3.

Branches at
Udipi, Kaup, Coondapur, Byndoor, Karkal, Brahmavar, City-Mangalore, Kasargod, Puttur, Kanhangad, Bombay & Mercara

For Protection and Provision Consult
The New Guardian of India Life Insurance Co., Ltd.
Estd] Head office MADRAS [1934

NEW BUSINESS	Exceeds ..	66½	Lakhs-
PREMIUM INCOME	,,	15	,,
LIFE FUND	,,	54¾	,,
ASSETS	,,	60¾	,,
BUSINESS IN FORCE	Nearly	3	Crores-

A Policy in this Progressive Life Office is good investment, its Agency is valuable business connection

Applications for Representation are invited from energetic influential persons, with good connection. *Please apply to:*

G. R. Wallia, *Branch Manager,*
Diamond Building, Hampankatta, MANGALORE, S. K.

ತೃಪ್ತಿಕರವಾದ ವಸತಿ— ಹಿತಕರವಾ ಊಟ— ರುಚಿಕರವಾದ ಉಪಾಹಾರ ಇವುಗಳಿಗೆ

ಆದರ್ಶ ನಿಲಯವೆಂದರೆ
ವುಡ್ ಲೇಂಡ್ಸ್
ಉಡುಪಿ.
ಯಾತ್ರಿಕರಿಗೂ ಪ್ರಯಾಣಿಕರಿಗೂ
ಸರ್ವ ಅನುಕೂಲವಾಗುವಂತ
ನಗರದ ಕೇಂದ್ರಭಾಗದಲ್ಲಿದೆ

ದಿ
ನ್ಯೂ ಕರ್ನಾಟಕ
ಪ್ರೊವಿಡೆಂಟ್ ಇನ್ಶೂರೆನ್
ಕಂಪೆನಿ, ಲಿಮಿಟೆಡ್.
ಉಡುಪಿ, ದ. ಕನ್ನಡ

ಒಂದು ಸಾವಿರ ರೂಪಾಯಿ ವರೆಗೆ ವಿ
ಮಾಡಲಿಕ್ಕೂ, ಏಜನ್ಸಿ ಯಾ ಸ್ಪೆಶ
ಏಜನ್ಸಿ ಪಡೆದು ದುಡಿತಕ್ಕೆ ತಕ್ಕ ಪ್ರ
ಫಲ ಪಡೆಯಲಿಕ್ಕೂ ಯೋಗ್ಯವಾದ ಪ್ರ
ವಿಡೆಂಟ್ ವಿಮಾ ಕಂಪೆನಿ. ನಿಯಮುಗ
ಬರೆಯಿರಿ

THE NEW KARNATAKA PROVIDE
INSURANCE CO., LTD, UDIPI

ದಯಮಾಡಿ ನಿಮ್ಮ
ಚಂದಾ ಹಣ ಕಳಿಸಿ

ಕೃತಕ ಗರ್ಭಪ್ರೇರಣೆ

ಅದರ ಸಾಧಕ ಬಾಧಕಗಳು

ಲೇಖಕರು:- ಡಾ॥ ಬಿ. ಎಸ್. ಜಗನ್ನಾಥ್, ಹಾಸನ

ತಂದೆ ತಾಯಿಯರಾಗುವ ಭಾಗ್ಯದಿಂದ ವಂಚಿಸಲ್ಪಟ್ಟ ಬಂಜೆ-ದಂಪತಿಗಳ ಬವಣೆ ತಪ್ಪಿಸುವ ಸಲುವಾಗಿ ಪಾಶ್ಚಿಮಾತ್ಯ ದೇಶಗಳಲ್ಲಿ ಒಂದು ಮಾನವೀಯತೆಯ ದೃಷ್ಟಿಯಿಂದ ವೈಜ್ಞಾನಿಕರು 'ಕೃತಕ ಗರ್ಭಪ್ರೇರಣೆ'ಯನ್ನು ಆಚರಣೆಗೆ ತಂದಿದ್ದಾರೆ. 'ಕೃತಕ ಗರ್ಭಪ್ರೇರಣೆ' ಎಂದರೆ ಸ್ತ್ರೀ-ಪುರುಷರ ಸಂಯೋಗವಿಲ್ಲದೆಯೇ, ಸುಲಭೋಪಕರಣಗಳಿಂದ ಪುರುಷನ ವೀರ್ಯಾಣುಗಳನ್ನು ಸ್ತ್ರೀಯ ಗರ್ಭಾಶಯಕ್ಕೆ ಸಾಗಿಸುವುದು.

'ಕೃತಕ ಗರ್ಭಪ್ರೇರಣೆ'ಯು ಹದಿನಾಲ್ಕನೇ ಶತಮಾನದ ಆದಿಯಲ್ಲಿ ಅರಬ್ಬರಿಗೆ ತಿಳಿದಿತ್ತು. ಓರ್ವ ಅರಬ್ ದಳಪತಿಯು ಶತ್ರುವಿನ ಬಳಿಯಿದ್ದ ಅಶ್ವ ಸಂಪತ್ತನ್ನು ನೋಡಿ ಅಸೂಯೆಗೊಂಡು, ಕೀಳು ದರ್ಜೆಯ ಕುದುರೆಗಳ ವೀರ್ಯಾಣುಗಳಿಂದ ಶತ್ರುವಿನ ಹೆಣ್ಣು ಕುದುರೆಗಳಿಗೆ ಗರ್ಭ ಪ್ರೇರಣೆಯನ್ನುಂಟುಮಾಡಿದನು. ೧೭೮೦ರಲ್ಲಿ ಓರ್ವ ಇಟಲಿ ದೇಶದ ವಿಜ್ಞಾನಿಯು ಒಳ್ಳೆ ತಳಿಗಳ ಉತ್ಪತ್ತಿಗಾಗಿ ಈ ಕ್ರಮವನ್ನನುಸರಿಸಿರುವುದು ಕಂಡುಬರುತ್ತದೆ. ಇಪ್ಪತ್ತನೇ ಶತಮಾನದ ಆದಿಯಿಂದಲೂ ಪ್ರಾಣಿಗಳ ಮೇಲೆ ಈ ಪ್ರಯೋಗವು ಪಾಶ್ಚಿಮಾತ್ಯ ದೇಶಗಳಲ್ಲಿಯೂ, ಈಚೆಗೆ ಭಾರತದಲ್ಲೂ ವಿಶೇಷವಾಗಿ ಆಚರಣೆಗೆ ಬಂದಿದೆ.

ಮನುಷ್ಯನಲ್ಲಿ ಈ ಪ್ರಯೋಗ ಮೊದಲಾದದ್ದು ೧೭೯೯ರಲ್ಲಿ ಜಾನ್ ಹಂಟರ ಎಂಬವನ ಸಲಹೆ ಮೇರೆಗೆ ಓರ್ವ ಜವಳೀ ವ್ಯಾಪಾರಿಯ ಹೆಂಡತಿಯು, ಒಂದು ಪಿಚಕಾರಿಯ ಮೂಲಕ ಗಂಡನ ವೀರ್ಯವನ್ನು ಸಾಗಿಸಿಕೊಂಡಳು. ಮೊದಲನೆ ಯುದ್ಧಾನಂತರ ಈ ಕ್ರಮವು ಪಾಶ್ಚಿಮಾತ್ಯ ದೇಶಗಳಲ್ಲಿ ಆಚರಣೆಗೆ ಬಂದಿತು. ೧೯೪೧ರಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನದ ೧೦,೦೦೦ ಮಹಿಳೆಯರಿಗೆ 'ದಾನಿ'ಗಳ ಮೂಲಕ ಗರ್ಭ ಪ್ರೇರಣೆಯಾಯಿತು. ಕಳೆದ ಮಹಾ ಯುದ್ಧದಲ್ಲಿ ದೂರದೇಶಗಳಲ್ಲಿದ್ದ ಸಿಪಾಯಿಗಳಿಂದ ವೀರ್ಯವನ್ನು ವಿಮಾನಗಳ ಮೂಲಕ ತರಿಸಿ ಅವರವರ ಪತ್ನಿಯರಿಗೆ "ಗರ್ಭಪ್ರೇರಣೆ ಮಾಡಿದ್ದು ಎಲ್ಲರಿಗೂ ತಿಳಿದಿದೆ.

ಕ್ರಮದ ಅನುಸರಣೆ

ಸಂಭೋಗದ ಮೂಲಕ ಗರ್ಭ ಪ್ರೇರಣೆ ಅಸಾಧ್ಯವಾದಾಗ ಈ ಕ್ರಮವನ್ನು ಅನುಸರಿಸಬೇಕಾಗುತ್ತದೆ. ಸಂತಾನ ಪ್ರಾಪ್ತಿಯೇ ಮದುವೆಯ ಮುಖ್ಯ ಗುರಿ. ಮದುವೆಯಾದ ಹತ್ತಕ್ಕೆ ಒಂದರಂತೆ ಬರಡಾಗಿರುವುದು ಕಾಣಬರುತ್ತದೆ. ಇದರಲ್ಲಿ ಶೇಕಡಾ ಐವತ್ತರಷ್ಟು 'ಬರಡು' ಪುರುಷನಲ್ಲಿ ಕಾಣಬರುತ್ತದೆ. ಇದಕ್ಕೆ ಅನೇಕ ಕಾರಣಗಳುಂಟು. ಇಂತಹ ಸಂದರ್ಭಗಳಲ್ಲಿ ಪುರುಷನ ವೀರ್ಯಾಣುಗಳನ್ನು ಸುಲಭೋಪಕರಣಗಳಿಂದ ಅವನ ಸ್ತ್ರೀ[illegible] ಸಾಗಿಸಬೇಕಾಗುತ್ತದೆ. ಇದಕ್ಕೆ A. I. H. Artificial Insemination by the Husband) ಎಂದು ಹೆಸರು. ಇದರಲ್ಲಿ ಸಾಮಾಜಿಕ ಮತ್ತು ಕಾನೂನಿನ ಯಾವ ತೊಡಕುಗಳೂ ಉದ್ಭವಿಸುವುದಿಲ್ಲ. ಹೀಗೆಯೇ ವೀರ್ಯವನ್ನು ಪುರುಷನಿಂದ "ದಾನಿ"ಯಿಂದ ಪಡೆದು ಪ್ರಯೋಗ ಮಾಡಿದರೆ ಅದಕ್ಕೆ A. I. D. (Artificial Insemination by the Donor) ಎಂದು ಹೆಸರು. ಇದರಲ್ಲಿ ಅನೇಕ ವಿವಾದಾಸ್ಪದವಾದ ಸಾಮಾಜಿಕ ಮತ್ತು ಕಾನೂನಿನ ಪ್ರಶ್ನೆಗಳು ಉದ್ಭವಿಸುತ್ತವೆ.

'ದಾನಿ' ಹೇಗಿರಬೇಕು?

'ದಾನಿ' ಯಾವ ತರದ ಹುಟ್ಟು ರೋಗಗಳಾಗಲಿ, ಅಂಟುಜಾಡ್ಯಗಳಾಗಲಿ ಇರಬಾರದು. ಅವನ ವಂಶ, ಮತ, ಅಂಗಸೌಷ್ಠವ ಬಣ್ಣ, ನಡತೆ ಮತ್ತು ಜ್ಞಾನದ ಮಟ್ಟ ಇವೆಲ್ಲಾ ಹೆಂಗಸಿನ ಗಂಡನನ್ನೇ ಹೋಲಬೇಕು. ಆದರೆ ಮಗುವು ಯಾರನ್ನು ಹೋಲುತ್ತದೆಂಬುದನ್ನು ವೈದ್ಯರು ಹೇಳಲಾಗುವುದಿಲ್ಲ. "ದಾನಿ"ಯ ವಯಸ್ಸು ೩೦ ರಿಂದ ೪೦ರ ಪರಿಮಿತಿಯಲ್ಲಿರಬೇಕೆಂದು ಕೆಲವರೂ, ಮದುವೆಯಾಗದ ಹರೆಯದ ದೃಢಮನಸ್ಸಿನ ಯುವಕರಾದರೆ ಸರಿಯೆಂದು ಕೆಲವರೂ ಅಭಿಪ್ರಾಯಪಡುತ್ತಾರೆ. ಅಮೇರಿಕಾದಲ್ಲಿ ಎಷ್ಟೋವೇಳೆ ವೈದ್ಯರನ್ನೇ 'ದಾನಿ'ಗಳನ್ನಾಗಿ ಆರಿಸಿಕೊಳ್ಳುತ್ತಾರೆ. ಅಲ್ಲಿ ಪ್ರತಿ "ದಾನ"ಕ್ಕೂ ಐದು ಡಾಲರುಗಳನ್ನು ಕೊಡುತ್ತಾರೆ. "ದಾನಿ"ಗೆ ವೀರ್ಯವನ್ನು ತೆಗೆದುಕೊಂಡ ಹೆಂಗಸಿನ ಭೇಟಿಯಾಗದ ಹಾಗೆ, ಹುಟ್ಟಿದ ಮಗುವನ್ನು ಗುರುತಿಸದ ಹಾಗೆ ಬಹಳ ಎಚ್ಚರಿಕೆ ತೆಗೆದುಕೊಳ್ಳುತ್ತದೆ. 'ದಾನಿ'ಯು ಮುಂದೆ ಮಗುವಿನ ಮೇಲೆ ತನ್ನ ಹಕ್ಕನ್ನು ಸಾಧಿಸಬಹುದಾದ್ದರಿಂದ ಎಲ್ಲವನ್ನು ಬಹಳ ರಹಸ್ಯವಾಗಿ ನಡೆಸಲಾಗುತ್ತದೆ. "ದಾನಿ"ಯಿಂದ "ಗರ್ಭ ಪ್ರೇರಣೆ" ಮಾಡುತ್ತಾ ಮೊದಲು ದಂಪತಿಗಳಿಂದ ಒಂದು ಲಿಖಿತ ಒಪ್ಪಿಗೆಯನ್ನು ವೈದ್ಯರ ಸಮ್ಮುಖದಲ್ಲಿ ತೆಗೆದುಕೊಳ್ಳಲಾಗುತ್ತದೆ.

ಮದುವೆಯಾದ ಹೆಂಗಸಿಗೆ ತಾಯ್ತನದ ಹಂಬಲ ಬಹಳ, ಆದರೆ ಗಂಡ ಬರಡು ಇಲ್ಲವೆ ಮೇಹರೋಗಗಳಿಂದ ಅವನು ವೀರ್ಯಹೀನನಾಗಿದ್ದರೆ, ಆಗ ಅವಳು ಬಹಳ ಹತಾಶಳಾಗುತ್ತಾಳೆ; ದತ್ತು ಸ್ವೀಕಾರಕ್ಕೆ ಸರಿಯಾದ ಮಕ್ಕಳು ಸಿಕ್ಕುವುದಿಲ್ಲ. ಅಲ್ಲದೆ ತನ್ನದೇ ಮಗುವನ್ನು ಪಡೆಯಬೇಕೆಂಬ ಅತೀವ ಆಕಾಂಕ್ಷೆ. ಗಂಡಸಿಗೂ ತನ್ನ ಪ್ರೇಯಸಿಯ ರೂಪರೇಖೆಗಳನ್ನು ಹುಟ್ಟುವ ಮಗುವಿನಲ್ಲಿ ಕಾಣಬೇಕೆಂಬಾಸೆ. ಇವುಗಳೆಲ್ಲಾ ಈ ಕ್ರಮದಿಂದ ಪೂರ್ತಿಗೊಳ್ಳುವುವು. ಗಂಡನು ಹೊಸ ಶಿಶುವಿನ ನಿಜವಾದ ತಂದೆಯಂತೆಯೇ ಅದರ ಸುಖ ದುಃಖಗಳಲ್ಲಿ ಭಾಗಿಯಾಗಿರುತ್ತಾನೆ. ಈ ಪ್ರಯೋಗವು ಕೆಲವು ಹೆಂಗಸರು ನೀತಿಬಾಹಿರವಾದ ಮಾರ್ಗವನ್ನನುಸರಿಸುವುದನ್ನು ತಪ್ಪಿಸಿ, ಫಲದಾಯಕ ದಾಂಪತ್ಯವನ್ನುಂಟುಮಾಡಿ ಅತ್ಯಂತ ಮಾನವೀಯತೆಯಿಂದ ಕೂಡಿರುವುದೆಂಬುದರಲ್ಲಿ ಸಂಶಯವಿಲ್ಲ.

ಬಾಧಕಗಳು

ಇದರಿಂದ ಪ್ರತಿಕೂಲಗಳೂ ಉಂಟು. ಈ ವಿಷಯಗಳು ಅನೇಕ ವೇಳೆ ರಹಸ್ಯವಾಗಿರುವುದಿಲ್ಲ. ಮಗುವಿನಲ್ಲಿ ತಾಯಿಯ ಹೋಲಿಕೆ ಮಾತ್ರ ಇರುವುದರಿಂದ ಗಂಡನಿಗೆ ಅಸಹನೀಯವಾಗಬಹುದು. ಮಗುವಿಗೆ ಮುಂದೆ ತನ್ನ ಜನನದ ವಿಚಾರ ತಿಳಿದರೆ, ಘೋರ ಮಾನಸಿಕ ಪರಿಣಾಮಗಳುಂಟಾಗಬಹುದು, ಗಂಡನು "ದಾನಿ" ಯಾರೆಂಬುದನ್ನು ಎಷ್ಟೋವೇಳೆ ಊಹಿಸಬಹುದು. ಇವುಗಳಿಂದ ಸಮಾಜದಲ್ಲಿ ಒಂದು ತರಹ ಅವಿಶ್ವಾಸ ಹರಡಿ ನಾಡಿನ ಉನ್ನತಿಗೆ ಅಡ್ಡಿಯಾಗಬಹುದು. ವಿನಾ ಕಾರಣ ಗರ್ಭಪಾತ ಮಾಡುವುದು ಹೇಗೆ ಕಾನೂನು ವಿರುದ್ಧವೋ ಹಾಗೆಯೇ "ಗರ್ಭಪ್ರೇರಣೆ" ಕೂಡಾ. ಮದುವೆಯಾಗದ ಹೆಣ್ಣುಮಕ್ಕಳೂ ಕೂಡ ಈ ಪ್ರಯತ್ನಗಳನ್ನು ಮಾಡಬಹುದು. ಆದರೆ ಹುಟ್ಟಿದ ಮಗು 'ಜಾರಜ' ಎಂಬುದನ್ನು ಉದಾಸೀನಮಾಡಲಾಗುವುದಿಲ್ಲ.

ಸಂಭೋಗವಿಲ್ಲದಿದ್ದರೂ ಕೂಡ, ಹೀಗೆ ಹುಟ್ಟಿದ ಮಕ್ಕಳನ್ನು ಸಮಾಜವು 'ಜಾರಜ' ಎಂದೇ ಪರಿಗಣಿಸುತ್ತದೆ ಆದ್ದರಿಂದ ಅನೇಕ ವೇಳೆ ದಂಪತಿಗಳು ಈ ಮಕ್ಕಳನ್ನು ಸಹಜ ವಾರಸನ್ನಾಗಿ ಮಾಡಲು ನ್ಯಾಯಸ್ಥಾನಕ್ಕೆ ಅಹವಾಲು ಮಾಡಿಕೊಂಡಿದ್ದಾರೆ. ಆದರೆ ನ್ಯಾಯಮೂರ್ತಿಗಳು ಆ ಮಕ್ಕಳನ್ನು "ಜಾರಜ" ಎಂದೇ ಪರಿಗಣಿಸಿ, ಉತ್ತರಾಧಿಕಾರತ್ವವೂ ಇಲ್ಲದ ಹಾಗೆ ತೀರ್ಪಿತ್ತಿದ್ದಾರೆ. ಆದ್ದರಿಂದ ದಂಪತಿಗಳ ಅನುಮತಿಯನ್ನು ಪಡೆದು ಮಕ್ಕಳ ಹಕ್ಕುಬಾಧ್ಯತೆಗಳಿಗೆ ಧಕ್ಕೆ ಬರದಂತೆ ಶಾಸನಗಳು ಪುನರ್ರಚಿತವಾಗುವುದು ಒಂದು ಮಾನವೀಯತೆಯ ದೃಷ್ಟಿಯಿಂದ ಅಗತ್ಯ. [ಚೀ]

The Catholic Bank Ltd, Shirva Branch.

ದಿ ಕಥೋಲಿಕ್ ಬ್ಯಾಂಕ್ ಲಿಮಿಟೆಡ್, ಶಿರ್ವಾ ಬ್ರ್ಯಾಂಚ್

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲದ ಮೊಬಲಗನ್ನಾಗಲೀ, ಯಾ ಅದಕ್ಕಾಗುವ ಈ ತನಕದ ಬಡ್ಡಿಯನ್ನಾಗಲೀ ಕೊಡದೆ ಇರುವುದರಿಂದಲೂ ಅಲ್ಲದೆ ಕ್ರಮವಾದ ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಕೆಲವರು ಪಡಕೊಂಡು, ಕೆಲವರು ಊರಿನಲ್ಲಿ ಇಲ್ಲವೆಂತ ವಾಪಾಸು ಬಂದಿರುವುದರಿಂದಲೂ, ನಗಗಳನ್ನು ಅವರವರು ಬಿಡಿಸಿಕೊಂಡು ಹೋಗದಿರುವುದರಿಂದಲೂ, ಸದ್ರಿಯವರಿಗೆ ಯಾ ಸದರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ ಸದ್ರಿಯವರು ಈಡಿಟ್ಟ ನಗಗಳನ್ನು 1952ನೇ ಇಸವಿ ನವಂಬರ್ ತಿಂಗಳ ತಾ. 12ನೇ ಬುಧವಾರ ದಿವಸ ಅಪರಾಹ್ನ ಗಂಟೆ 4ಕ್ಕೆ ಯಾ ಬ್ಯಾಂಕಿಗೆ ಯುಕ್ತಕಂಡ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಸದ್ರಿ ಬ್ಯಾಂಕಿನ ವರಾಂಡದಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು

ಸಾಲದ ನಂಬ್ರ	ಈಡಿಟ್ಟ ತಾ	ಹೆಸರು ಮತ್ತು ವಿಳಾಸ	ಮೊಬ್ಲಗು	ಬಾಕಿ
26/ 580	8-4-1950	ಫೆಲಿಕ್ಸ್ ಮೊಂಡೋಸ್, S/o ಪೇದ್ರು ಮೊಂಡೋಸ್, ಕೊರಜ್ಜಿ, ಕೂಡ	ರೂಪಾಯಿ 40/-	
26/ 859	29- 5-50	ಲೂಸಿ ಲುವೀಸ್, W/o ಬಾದ್ದು ಪಿಂಟೊ, ಮಲಬೊರು ಮಾತನ್ ಪಾದೂರು	25/-	50/-
26/1040	26- 6-50	ತುಂಡೆ W/o ಕೆ. ಅಂಗರ, ಶಿರ್ವಾ ಪಡೆಪ್, ಶಿರ್ವಾ	28/-	
26/1400	11- 8-50	ಸಿಪ್ರಿಯಾನ್ ಕೊಡ್ದ, S/o ಪೇದ್ರು ಕೊಡ್ದ, ಕಲತ್ತೂರು ಮಡಬೆಟ್ಟು, ಪಾದೂರು	70/-	
26/17,9	28- 9-50	ಸುತನ್ ನಜ್ರೇತ್ S/o ದುಮಿಂಗ್ ನಜ್ರೇತ್ ಕೋಡು ಹಿತ್ಲು, ಶಿರ್ವಾ	80/-	
27/ 997	1- 6-51	ಜುವಾಂವ್ ಡಿ'ಸೋಜ S/o ಸಾಲು ಡಿ'ಸೋಜ ಪಟ್ಟಬಾಡಿ, ಕೂಡ	30 -	
27/1078	19- 6-51	ಕಾಡ್ಸ ಸೇರಿಗಾರ N/o ಕೂಸ್ರ ಸೇರಿಗಾರ, ಬೂತಲೆಟ್ಟು ಹೊಸಮನೆ ಶಿರ್ವಾ	37/-	
27/1538	18- 8-51	ವಿನ್ಸೆಂಟ್ ಮಾರ್ಟಿಸ್ S/o ಅಂತೋನಿ ಮಾರ್ಟಿಸ್, ಪಾಂಗಾಳ ಗುಡ್ಡೆ, ಪಾಂಗಾಳ	119 -	
27/1809	28- 9-51	ಲುವೀಸ್ ಫುರ್ತಾದೊ S/o ಕಾಸ್ಮಿರ್ ಫುರ್ತಾದೊ, ಕೊಲ್ಲಬೆಟ್ಟು, ಪಂಜಿಮಾರು	35 -	
27/1873	15-10-51	ಕಾನ್ಸ ಸೆಟ್ಟಿ, N/o ಬಾಸು ಸೆಟ್ಟಿ, ಮೂಡು ಮನೆ, ಬೆಳ್ಳೆ	[illegible]5 -	
28/ 170	30- 1-5	ಮೊಣ್ಣು ಮುಕಾರ್ತಿ N/o ತುಕ್ರ ಮುಕಾರ್ತಿ ಮುಂದರಂಗಡಿ, ಪಿಲಾರು	50	
28/ 179	31- 1-52	ಸಲ್ವದೋರ್ ಡಿ'ಸೋಜ, S/o ಲೋಕ್ರೆಸ್ ಡಿ'ಸೋಜ, ಕೊರಜ್ಜಿ ಕೂಡ	40 -	
28/ 338	26- 2-52	ರಾಜು ಸೆಟ್ಟಿ, N/o ಅಪ್ಪಣ್ಣ ಸೆಟ್ಟಿ ಕಾಪುಮೂಡು	[illegible]5/-	
27/2014	7-11-51	ಗುಡ್ಡು ಪೂಜಾರಿ, N/o [illegible] ಪೂಜಾರಿ, ಪಡುಬೆಳ್ಳೆ, ಮೂಡುಬೆಳ್ಳೆ P.O.	55, -	
27/ 307	16- 2-51	ನಾರಾಯಣ ಸೆಟ್ಟಿ N/o [illegible] ಸೆಟ್ಟಿ ಅಟ್ಟಿಂಜ ಶಿರ್ವಾ	[illegible]	
27/1357	30- 7-51	—Do—	120 -	

Shirva
Dated 28—10—52

C D SOUZA.
ಏಜಂಟ್.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳಿನ ಮುಂತಾದವು, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

SOVEREIGN REMEDY
AMRUTANJAN
Best Indian Pain Balm
Amrutanjan Depot
BOMBAY MADRAS

REGD
ಹುಳುಕಡ್ಡಿ
ಮಾತ್ರ
ತಪ್ಪಲ್ಲಿ
ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್,
ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ

ಉಡುಪಿ ದಿ ಮು ಕೋರ್ಟಿನಲ್ಲಿ

O. S No. 55/1952
R. E. P No. 458/1952

ಕಲ್ಯಾಣಪುರ ಮೊಹಬ್ರಾಯ ಪೈ ಎಂಡ್ ಸನ್ಸ್ ಈ ಫರ್ಮಿನ ಮೆನೆಜರ್ ಕೆ. ಕಮಲಾಕ್ಷ ಪೈ —ಅರ್ಜಿದಾರ.

ಮತ್ತು

1. ಜಗನ್ನಾಥ ದ್ಯಾಮಭಾಗ, 2. ಉಪಾನಾಥ ದ್ಯಾಮಭಾಗ, 1ನೆ ಎದ್ರಿ ಮಗ, ಆಲಿಪೂರು ಗ್ರಾಮದ ಗುಡ್ಡೆ ಅಂಗಡಿಯಲ್ಲಿರುವವರು —ಎದ್ರಿಲು.

ಸದ್ರಿ ಅಮಲ್‌ಜ್ಯಾರಿ ಅರ್ಜಿಯು 2ನೆ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ-

ವಾದಿಯು ಪ್ರತಿವಾದಿರ ಮೇಲೆ ಪಡೆದ ಡಿಕ್ರಿ ಅಮಲ್‌ಜ್ಯಾರಿಯಲ್ಲಿ 2ನೆ ಎದ್ರಿ ಮೈನರ್ ಬಬ್ಬು ಸ್ಥಿರಾಸ್ತಿ ಜಪ್ತಿ ಮಾಡಿರುತ್ತದೆ ಮತ್ತು ಸದ್ರಿ ಅಮಲ್‌ಜ್ಯಾರಿ ಅರ್ಜಿಯು 2ನೆ ಎದ್ರಿಗೆ ಅಪ್ಪಿರಿ ನೋಟೀಸಿನ ಬಗ್ಗೆ 19 11 52ಕ್ಕೆ ಇಡೋಣಾಗಿಯದೆ ಆ ಕಾರಣ 2ನೆ ಎದ್ರಿಯ ಆಕ್ಷೇಪಣೆ ಇದ್ದರೆ ಸದ್ರಿ ತಾರೀಖು ದಿವಸ ಹಗಲು ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ವ್ಯಾಜ್ಯ ಎಬ್ಬಿಸಿಕೊಳ್ಳತಕ್ಕದ್ದು. ತಪ್ಪಿದರೆ 2ನೆ ಎದ್ರಿಯ ಗೈರುಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು.

(By order of the Court)

K. [illegible],
Advocate for Petitioner.

ಉಡುಪಿ, ತಾ. 30 10-1952

ವಾರದ ಒಳಿತು ಕೆಡುಕುಗಳು

6-11-52ರಿಂದ ತಾ. 12-11-52ರ ವರೆಗೆ

ಮೇಷ—ನಿಮ್ಮ ಜೀವನದಲ್ಲಿ ಆದಾವ ವ್ಯತ್ಯಾಸವೂ ಈ ವಾರದಲ್ಲಿ ಕಾಣಿಸದು. ನಿತ್ಯ ಖರ್ಚಿಗೆ ತಕ್ಕಷ್ಟು ಆದಾಯವಿರುವುದು. ಭೃತ್ಯ ವರ್ಗದವರಿಗೂ ನೌಕರ ಜನರಿಗೂ ವಣಿಗ್ವೃಂದಕ್ಕೂ ಈ ವಾರವು ಸಾಕಷ್ಟು ಪ್ರಶಸ್ತವಿದೆಯೆನ್ನಲಡ್ಡಿಯಿಲ್ಲವು. ಕೆಲವೊಮ್ಮೆ ವಿರೋಧಿಗಳಿಂದ ಪರಾಭವವುಂಟಾದೀತು. ದೇಹದಲ್ಲಿ ನಿರುತ್ಸಾಹವು ಹೆಚ್ಚೀತು. ವಾರಾದಿಯ 2 ದಿನಗಳು ಸುಖಪ್ರದಗಳಿವೆ.

ವೃಷಭ—ಎತ್ತಲಿಂದ ಬಂದರೂ ಕುತ್ತಿಗೆಗೆ ಕೈಹಾಕುವರೆಂಬ ಗಾದೆಯಂತಾಗಿದೆ, ನಿಮ್ಮ ಪರಿಸ್ಥಿತಿ. ಸಕಲರಿಗೂ ತಲೆಬಾಗಿ ನಡೆನಡೆಯಬೇಕಾಗಿದೆ. ಆತ್ಮೀಯರೆಂಬವರು ಕೂಡ ಇಂದು ನಿಮ್ಮಿಂದ ದೂರವಾಗುತಲಿರುವರು. ಶತ್ರುಜನರ ಕೈವಾಡದಿಂದಾಗಿ ನಿಮ್ಮ ಕೆಲಸಗಳು ಅರ್ಧಮಾರ್ಗದಲ್ಲೇ ನಿಂತು ಹೋಗಲಿವೆ. ಸಾಂಸಾರಿಕ ತಾಪತ್ರಯಗಳು ಅಸಹನೀಯವಾಗುವವು. ಆದರೂ ತಾ. 8, 9 ಹೆಚ್ಚಿನ ದುಃಖದಾಯಿಯಾಗದು.

ಮಿಥುನ— ಸುರಗುರುಗಳ ಅನುಗ್ರಹವು ನಿಮಗೆ ಬಲವಾಗಿರುವಕಾರಣ ಇತರ ಯಾವ ಕಷ್ಟನಷ್ಟಗಳೊದಗಿದರೂ ಉಪಾಯದಿಂದ ಪಾರುಗಾಣಲು ಶಕ್ತರಾಗುವಿರಿ. ಗೃಹಚ್ಛಿದ್ರದ ದೆಸೆಯಿಂದಾಗಿ ಸೋದರರೊಳು ಸತಿಪತಿಗಳಲ್ಲೂ ಕಲಹವಾದೀತು. ಗಾಳಿಗೆದುರಾಗಿಟ್ಟ ದೀಪದಂತೆ ಮನಸ್ಸು ಅತೀವ ಚಂಚಲವಾಗಲಿದೆ. ಆರೋಗ್ಯಕ್ಕೆ ವಾತ ಕಫ ದೋಷದಿಂದ ಹಾನಿ ತಟ್ಟೀತು. ತಾ 8, 9ರಲ್ಲಿ ಅತಿವ್ಯಯ ಮಾನಹಾನಿಗೆಡೆಯಿದೆ.

ಕರ್ಕಟಿ—ಹಿರಿಯರ ಹಂಗು ದಾಕ್ಷಿಣ್ಯಗಳಿಗೊಳಗಾಗದೆ ಸ್ವಯಂ ಮನದೋಲಿದಂತೆ ವರ್ತಿಸತಕ್ಕ ನಿಮಗೆ ಹೆಚ್ಚಿನ ಕಾರ್ಯಗಳಲ್ಲಿ ಶ್ರೇಯಸ್ಸೂ ಪ್ರಗತಿಯೂ ಕಾಣಸಲಿದೆ. ನಿಮ್ಮ ಕಾರ್ಯಧುರಂಧರತೆಯನ್ನು ಕಂಡು ಶತ್ರುವರ್ಗದವರೂ ಬೆಚ್ಚುಕಚ್ಚಲಿರುವರು. ಮನೆಯಲ್ಲಿನ ಅವ್ಯವಸ್ಥೆಯಿಂದಾಗಿ ನಿಮ್ಮ ಮನಸ್ಸಿಗೆ ಸದಾ ದುಃಖವಂಟಿಕೊಳ್ಳಲಿದೆ. ತಾ 8, 9 ಈ ದಿನಗಳಲ್ಲಿ ಹೆಚ್ಚಿನ ಸುಖಭೋಗಗಳನ್ನು ಪಡೆವಿರಿ.

ಸಿಂಹ—ಬಂದದ್ದೆಲ್ಲಾ ಬರಲಿ ಗೋವಿಂದನ ದಯೆವೊಂದಿರಲಿ ಎಂಬ ಮಾತನ್ನು ಮುಖ್ಯವಾಗಿಟ್ಟುಕೊಂಡು ಕಾರ್ಯರಂಗದಲ್ಲಿ ಧುಮುಕಿರಿ ನಿಮ್ಮ ನಿರೀಕ್ಷಣೆಯು ಈಸಲವೂ ವಿಫಲವಾಗದು. ವಿದ್ಯೋಪಜೀವೀ ನೌಕರ ಜನತೆಗೂ ವ್ಯಾಪಾರೀ ವೈದ್ಯವರ್ಗಕ್ಕೂ ಈ ಕಾಲವು ಅತ್ಯುತ್ಕೃಷ್ಟವಾಗಿದೆ. ಮಕ್ಕಳ ಆರೋಗ್ಯ ವಿಚಾರದಲ್ಲಿ ಕೊಂಚ ಜಾಗ್ರತೆವಹಿಸಿರಿ. ತಾ 6, 7, 10, 11, 12 ಈ ದಿನಗಳು ಅತೀವ ಪ್ರಶಸ್ತಗಳಿವೆ.

ಕನ್ಯಾ—ಕೆಲಸ ಇಲ್ಲದ ನರ ಕಲ್ಲಿಗೆ ಸಮನೆಂಬ ಗಾದೆಯು ನಿಮಗೀಕಾಲದಲ್ಲಿ ಆಗಾಗ ನೆನಪಿಗೆ ಬರಲಿದೆ ಕಾರಣ ಯಾವಕಾರ್ಯಕ್ಕೇ ಕೈಹಚ್ಚಲಿ ನಷ್ಟವೇ ಅಧಿಕವಾಗಿ ಪರಿಣಮಿಸುವುದರಿಂದ ಜನತೆಯು ದುಡ್ಡಿದ್ದವನೇ ದೊಡ್ಡಪ್ಪನೆಂಬ ಮಾತಿನಂತೆ ನಿಮ್ಮನ್ನು ದೂರೀಕರಿಸುವದು. ಸಂಸರ್ಗ ದೋಷದಿಂದಾಗಿ ಕಷ್ಟನಷ್ಟಗಳು ಸಂಭವಿಸಲಿವೆ. ಈ ಕಾಲದಲ್ಲಿ ವಾರಾದಿಯ 4 ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು.

ತುಲಾ—ದೈವವು ನಿಮ್ಮಮೇಲೆ ಕೃಪಾದೃಷ್ಟಿಯನ್ನು ಬೀರಿರುವುದು. ಇಂಥ ಸುಸಂದರ್ಭದಲ್ಲಿ ನೀವು ವ್ಯರ್ಥಕಾಲ ಹರಣ ಮಾಡಬೇಡಿರಿ. ಉದ್ಯೋಗ ಪ್ರವೃತ್ತರಾಗಿ ವಾಂಛಿತಾರ್ಥವನ್ನು ಪಡೆಯಿರಿ. ನಿಮ್ಮ ಸಂಕಲ್ಪಗಳು ಏನೊಂದೂ ಅಡತಡೆಗಳಿಲ್ಲದೆ ನೆರವೇರುವದು, ಕೆಲವೊಮ್ಮೆ ಅನಿರೀಕ್ಷಿತ
ರ್ಯಟನವು ಪ್ರಾಪ್ತವಾದರೂ ಹಾನಿಯು
ಟಾಗದು, ವಾರಾಂತ್ಯದ 5 ದಿನಗಳು ನಿಷ
ಬಯಕೆಯನ್ನು ಪೂರೈಸಲು ಶಕ್ತಗಳಾಗಿವ

ವೃಶ್ಚಿಕ—ಇಂದಿನ ನಿಮ್ಮ ಗ್ರಹವ
ನವು ಏನೂ ಚೆನ್ನಾಗಿಲ್ಲವು ಆದಕಾರಣ ಯ
ವ ಕಾರ್ಯವನ್ನು ನಡೆಸಲು ಉತ್ಸಾಹ
ನಿಮ್ಮಲ್ಲಿ ಕಾಣದು. ಮಿತ್ರಬಂಧುಗಳಿ
ಯಾವತರದ ಸಹಾಯವೂ ಲಭಿಸದು. ನ
ಜನರಿಂದ ಕೊಂಚ ಧನಪ್ರಾಪ್ತಿಯಾಗಲಿ
ರಾಜಕೀಯದಲ್ಲಾಗಲಿ ಸಾಮಾಜಿಕ ಕಾ
ಗಳಲ್ಲಾಗಲಿ ವಿಜಯವು ದುರ್ಲಭವೇ
ಅದೃಷ್ಟವು ಚೆನ್ನಾಗಿಲ್ಲವೆಂದು ಉದಾಸೀನ
ಗದೆ ತಾ 10, 11, 12ರಲ್ಲಿ ಮಾಡಿದ ಕಾ
ವು ಯಶಸ್ವಿಯಾದೀತು.

ಧನು— ಇಂದಿನ ನಿಮ್ಮ ವ್ಯಾಪ
ವ್ಯವಹಾರಗಳಲ್ಲಿ ಒಳ್ಳೆಯ ಫಲಪ್ರಾಪ್ತಿ
ಸಮಾಜದಲ್ಲಿ ಗಣ್ಯಸ್ಥಾನವನ್ನೂ ಕೀರ್ತಿ
ನ್ನೂ ಸಂಪಾದಿಸುವಿರಿ, ಚಂಚಲವಾದ ನಿ
ಮನಸ್ಸು ಈ ಮಾರ್ಗದತ್ತ ನಿಮ್ಮನ್ನು
ಯಲಿದೆ, ಅದನ್ನು ಬಿಗಿಹಿಡಿದು ಸನ್ಮಾರ್ಗ
ಪ್ರವರ್ತಿಸುವದಾದರೆ ಯಾವತರದ ವಿ
ಗಳೂ ಪ್ರಾಪ್ತವಾಗವು. ದೇಹದಲ್ಲಿ ಕಜ್ಜ
ತ್ತಿ ವಗೈರೆ ಚರ್ಮರೋಗವು ಕಾಣಿಸ
ವಾರಾದಿಯ 2 ದಿನಗಳು ಇಷ್ಟಪ್ರದಗ

ಮಕರ— ನಿಮ್ಮ ಪ್ರಯತ್ನಕ್ಕೆ
ಫಲಪ್ರಾಪ್ತಿಯಾದೆಯಾದರೂ ಇಲ್ಲ ಸಲ್ಲ
ರ್ಚುಗಳು ಹಲವಾರು ಪ್ರಾಪ್ತವಾಗುವು
ದ ನಿಮ್ಮ ಕೈ ಯಾವಾಗಲೂ ಬರಿದಾಗಿ
ದು. ಬಂಧುಜನತೆಯ ಅಪಚಾರಕ್ಕೀಡಾ
ಮಗೆ ಮನೋರೋಗವು ಪ್ರಬಲವಾಗಿ
ಲಿದೆ, ಆರೋಗ್ಯಕ್ಕೆ ಹಾನಿಯಿದೆ, ಅನಿರೀ
ಪ್ರವಾಸವು ಗಂಟುಬೀಳುವದು. ವಾರಾ
4 ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾ
ರವು.

ಕುಂಭ— ದಿನೇ ದಿನೇ ಸ್ವಲ್ಪ
ಪರಿವರ್ತಮಾನವಾಗುತ್ತಿರುವದು ನಿಮ
ವವು, ಸನ್ಮಿತ್ರರ ಬೆಂಬಲದಿಂದಾಗಿ ಹಲ
ಕಾರ್ಯಗಳು ನಿಮ್ಮಂತೆಯೇ ಕೊನೆಕ
ಲಿವೆ. ಆರ್ಥಿಕ ಸಮಸ್ಯೆಯಿಂದ ಮುಕ್ತ
ವಿರಿ. ವಾತ ಪ್ರಕೋಪದಿಂದ ಅವಯವ
ನೋವು ಕಾಣಿಸುವದು. ಸ್ಥಾನ ಚ್ಯು
ಸಂಭವವಿದೆ. ಆತ್ಮೀಯರ ವಿರಹದಿಂದ
ತಪ್ತರಾದ ನಿಮಗೆ ವಾರಾಂತ್ಯದ 5 ದಿನ
ಸುಖ ಸಂತಸವನ್ನೀಯುವವು.

ಮೀನ—ನಿಮ್ಮ ಅದೃಷ್ಟವಿಂದು
ಕಷ್ಟು ಉತ್ತಮವಿಲ್ಲವಾದರೂ ನಿಮ್ಮ
ಮವು ವಿಫಲವಾಗದು. ಖರ್ಚಿಗೆ ಸಾ
ಹಣವನ್ನು ಸಂಪಾದಿಸುವಿರಿ. ಗೃಹಕೃತ್ಯ
ವ್ಯವಸ್ಥೆಯಿಂದಾಗಿ ಮನೆಯ ಜನ
ಪರಸ್ಪರ ಭಿನ್ನಮತವುಂಟಾಗುವದು. ಶ
ಳಿಂದ ಕೆಲವೊಂದು ವಿಘ್ನಗಳು ದುಸ್ಸಾ
ಬಹುದು, ಆದರೂ ಸುರಗುರುಗಳ ಆ
ದಿಂದಾಗಿ ತಾ. 10, 11, 12 ಈ ದಿನ
ವಿಜಯಲಾಭಗಳನ್ನು ಪಡೆವಿರಿ.

ಲೋಕ ನಿಂದೆ

[೧ನೇ ಪುಟದಿಂದ ಮುಂದುವರಿದುದು]

ಯೋಗಿಸಿದಾಗ, ಅಹಿಂಸಾತ್ಮಕ ಚಳುವಳಿಯಿಂದ ಭಾರತಕ್ಕೆ ಸ್ವಾತಂತ್ರ್ಯ ತಂದು ಕೊಡುವೆನೆಂದು ಅವರು ಹೇಳಿದಾಗ-ಇಡೀ ಲೋಕ ನಕ್ಕುಬಿಟ್ಟಿತ್ತು! ಆದರೆ ಗಾಂಧೀಜಿಯ ಆತ್ಮವಿಶ್ವಾಸ ಪರ್ವತದಂತೆ ಅಚಲವಾಗಿತ್ತು. ಮೂವತ್ತು ವರ್ಷಗಳಲ್ಲಿ ಅವರ ಮಾತಿನ ಸತ್ಯ ನಿಜಾನುಭವಕ್ಕೆ ಬಂತು. ಹಾಗೆಯೇ ಇಟಲಿಯಲ್ಲಿ ಗೆಲಿಲಿಯೋ ಎಂಬೋರ್ವನಿದ್ದ. ಭೂಮಿಯು ತನ್ನ ಅಕ್ಷದಲ್ಲಿ ತಿರುಗುತ್ತಿದೆ ಎಂದವನು ಸಾರಿದ. ಜನ ಅವನ ಮಾತು ಕೇಳಿ ನಕ್ಕರು. ಕ್ರೈಸ್ತಧರ್ಮ ಶಾಸ್ತ್ರಕ್ಕನುಸಾರ ಭೂಮಿ ಸ್ಥಿರವಾಗಿದೆ: ಗೆಲಿಲಿಯೋನ ಮಾತು ಶಾಸ್ತ್ರದ ಹೇಳಿಕೆಗೆ ವಿರುದ್ಧವಾಗಿರುವುದರಿಂದ ಎಲ್ಲರೂ ಅವನನ್ನು ನಿಂದಿಸಿದರು. ಇದುಇಲ್ಲಿಗೇ ನಿಲ್ಲದೆ, ಕೊನೆಗೆ ಗೆಲಿಲಿಯೋ ಫಾಶಿಕಂಭವನ್ನು ಏರಬೇಕಾಯಿತು. ಆಗ ಗೆಲಿಲಿಯೋ ಹೇಳಿದ—"ನನಗೀಗ ಫಾಶಿಕೊಡುತ್ತೀರಿ, ಸರಿಯೇ. ಆದರೆ, ಇಷ್ಟು ಮಾಡಿದಷ್ಟಕ್ಕೆ, ಭೂಮಿ ತಿರುಗುವುದನ್ನೇನು ನೀವು ನಿಲ್ಲಿಸುವಂತಿಲ್ಲ!"

ಇಂದೇ ಗೆಲಿಲಿಯೋನ ಮಾತು ಸತ್ಯವೆಂದು ಎಲ್ಲಾ ವಿಜ್ಞಾನಿಗಳೂ, ಜನರೂ ನಂಬಿದ್ದಾರೆ. ಯಾವ ಸಿದ್ಧಾಂತವನ್ನು ಲೋಕ ನಗೆಗೀಡು ಮಾಡಿತ್ತೋ ಆ ವ್ಯಕ್ತಿ ಪ್ರಶಂಸಾ ಪಾತ್ರನಾಗಿದ್ದಾನೆ. ಕಾರಣ ಜನರ ನಗುವಿನ ಭಯಬೇಡ. ಲೋಕ ನಿಂದೆಯ ಹೆದರಿಕೆ ಬೇಡ. ನಮ್ಮ ಕೆಲಸ ನ್ಯಾಯವಾದದ್ದು ನಾವಿಟ್ಟ ಹೆಜ್ಜೆ ಸರಿಯಾದದ್ದು, ನಮ್ಮ ಧ್ಯೇಯ ಲೋಕಕಲ್ಯಾಣಕ್ಕೆ ಪೋಷಕವಾದದ್ದು ಎಂಬ ದೃಢವಿಶ್ವಾಸವೇ ಮುಖ್ಯ- ಕೊಂಕು ಹರಿವರ ಮನಸ್ಸಿನಲ್ಲಿ ಬರಬಹುದಾದ ವಿಚಾರಗಳ ಬಗ್ಗೆ ಯೋಚಿಸಿ, ತನ್ನ ಮನಸ್ಸಿನ ಸಮತೋಲ ಕೆಡಿಸಿ ಕೊಂಡ., ಚಿಂತೆಗೀಡಾಗುವುದು ಯಾರಿಗೂ ಭೂಷಣವಲ್ಲ.!

—ಓಂ ತತ್ಸತ್॥

ಸ್ತ್ರೀ ಪುರುಷ ಶಿಶುಗಳು ರೋಗದಿಂದ ನರಳಬೇಕಾಗಿಲ್ಲ!
ಲಕ್ಷಾಂತರ ಜನರು ಗುಣಹೊಂದಿದ್ದಾರೆ!
ಸರ್ ಜೀವನ್ ಶಿಲಾಜಿತ್ ಲೇಹ್ಯ
ಶಿಲಾಜಿತ್ ಹಿಮಾಲಯದಲ್ಲಿ ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ. ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.
೪೪ದಿನದ ಲೇಹ್ಯ ರೂ ೫/೪, ೨೨ ದಿನದ ಲೇಹ್ಯ ರೂ ೩೪
(ಪೋಸ್ಟೇಜು ಮಾಫಿ)
ನೀಲಗಿರಿ ಡಿಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಉಡುಪಿಗೆ ಹೋಗಬೇಕೇ! ಆದರೆ ಉ
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಟೈಕರ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ



ಹೆಚ್ಚಿನ ಮಾಹಿತಿಗೆ—ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ ಎಂ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಚಿಕಿತ್ಸಕರು:— ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು

ಮೂಲ್ಕಿ ಬೇಂಕ್
ಲಿಮಿಟೆಡ್, ಮೂಲ್ಕಿ.
1929ರಲ್ಲಿ ಸ್ಥಾಪಿತವಾಗಿ
ವರುಷಗಳಿಂದ ಊರ ಜನರ
ಕ್ಕಾಗಿ ಡಿಪೋಸಿಟ್ ಹಣಕ್ಕೆ
ಯವಾದ ಬಡ್ಡಿಯಿಂದಲೂ, ಸಾ
ದ ಹಣಕ್ಕೆ ಅತೀ ಕಡಿಮೆ ದ
ಬಡ್ಡಿಯಿಂದಲೂ ಜನ ಹಿತಸಾ
ಯನ್ನು ಮಾಡುತ್ತಿರುವುದು
The Moolky Bank Lt
Moolky, S. K.

Edited, Printed & Published By K. H. Shetty at the Navayuga Press, Udipi, S. India.

1, No 5618 | LICENCE No. 31
Licensed to Post without Prepayment

13-11-195

Estd 1921 ಸ್ಥಾಪಿತ
32ನೆಯ ವರ್ಷ

Founder: Sri A. B. Shetty,
Minister for Medical & Public Health

ನವಯುಗ
ಆರೋಗ್ಯ ಮಂತ್ರಿ
ಎ. ಬಿ. ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ

ಚಂದಾ 5-12-0
[illegible]ಗಳಿಗೆ 3-0-0
ಪ್ರತಿಗೆ 0-2-0

ನವಯುಗ

of 32
lo 11

NAVAYUGA WEEKLY POST BOX NO 22 UDIPI

ವರ್ಷ
ವಾರ

ಉಡುಪಿ
ಅಂತರಂಗ
ಪುಸ್ತಕ ಪತ್ರಿಕೆ
ಉಪಯುಕ್ತವಾದ
86 ಚಿತ್ರಗಳು
ರೂ. 24ಕ್ಕೆ ಸಿಗುತ್ತೆ
ವಿವರಕ್ಕೆ ಬರೆಯಿರಿ
ಮ್ಯಾನೇಜರ್,
ಅಂತರಂಗ, ಉಡುಪಿ

ಸರಕಾರ ಮತ್ತು ಜನತೆಯ ನಡುವೆ ಇರುವ ಸೌಹಾರ್ದ ಸಂಬಂಧ ಪ್ರಜಾಪ್ರಭುತ್ವದ ನೆಲಗಟ್ಟು ಭದ್ರವಿದೆ ಎಂಬುದಕ್ಕೆ ನಿದರ್ಶನವಾಗಿದೆ. ಪರಿಸ್ಥಿತಿ ತದ್ವಿರುದ್ಧವಾದರೆ, ಅಂದರೆ, ಸರಕಾರ ಜನತೆಯ ಮೇಲೆ ಆರೋಪವನ್ನೂ ಜನತೆ ಸರಕಾರದ ಮೇಲೆ ಪ್ರತ್ಯಾರೋಪವನ್ನೂ ಹೊರಿಸಿ ಹೊಣೆಗಾರಿಕೆಯನ್ನು ಜಾರಿಸಿಕೊಳ್ಳುವಂತಿದ್ದರೆ ಅದು ಪ್ರಜಾಪ್ರಭುತ್ವ ಪದ್ಧತಿಯ ದುರ್ದೈವ. ನಮ್ಮ ದೇಶ ಈಚೆಗೆ ಸಾರ್ವತ್ರಿಕ ಚುನಾವಣೆಯನ್ನು ಜಯಪ್ರದವಾಗಿ ನಡೆಸಿ ಪ್ರಜಾಪ್ರಭುತ್ವ ಪದ್ಧತಿಯ ಪ್ರಥಮಾಹ್ವಾನವನ್ನು ಸಮರ್ಪಕವಾಗಿ ಉತ್ತರಿಸಿದೆ. ಆದರೆ ಆ ಬಳಿಕ ಜನತೆ ಮತ್ತು ಸರಕಾರದೊಡನಿರಬೇಕಾದ ಅನ್ಯೋನ್ಯತೆಯೇನೂ ಸುಧಾರಿಸಿದಂತೆ ಕಂಡು ಬರುವುದಿಲ್ಲ.

ಈ ಪರಿಸ್ಥಿತಿ ಚುನಾವಣೆಗೆ ಮೊದಲೂ ಇತ್ತು. ಆದರೆ ನಿಶ್ಚಯವಾಗಿಯೂ ಸರಕಾರವನ್ನು ಪ್ರತಿಯೊಂದೂ ವಿಷಯಕ್ಕೆ ಆಗ್ರಹ ಪಡಿಸುವ ಬುದ್ಧಿ ಬೆಳೆದುದು ಸ್ವಾತಂತ್ರ್ಯ ಪ್ರಾಪ್ತಿಯಿಂದೀಚೆಗೆ ಮಾತ್ರ. ಅದಕ್ಕೂ ಮುಂಚೆ ಜನರು ಸರಕಾರವನ್ನು ತಮ್ಮ ಆವಶ್ಯಕತೆಯನ್ನು ಪೂರೈಸಿಕೊಡಲೆಂದು ಸಾಮಾನ್ಯವಾಗಿ ಒತ್ತಾಯಿಸುವುದಕ್ಕೆ ಅನುಕೂಲ ವಾತಾವರಣವಿರಲಿಲ್ಲ. ವಿದೇಶೀ ಅಧಿಕಾರದಿಂದ ಮುಕ್ತಿ ದೊರೆಯಬೇಕೆಂಬ ಪ್ರಮುಖ ಉದ್ದೇಶ ಮಾತ್ರ ಸ್ಪಷ್ಟವಾಗಿದ್ದುದು— ಈಗಿನಂತೆ ಜನತಾ ಕಲ್ಯಾಣವೇ ಸರಕಾರದ ಧೋರಣೆಯಾಗಬೇಕೆಂಬ ಸತ್ಸಂಪ್ರದಾಯದ ಕಟ್ಟುನಿಟ್ಟನ್ನು ಯಾರೊಬ್ಬರೂ ಸರಕಾರದ ಮೇಲೆ ಹೊರಿಸಿ ನಿಂತಿರಲಿಲ್ಲ.

ರಾಜಗೋಪಾಲಾಚಾರ್ಯರು ಒಮ್ಮೆ ಹೇಳಿದಂತೆ, ನಮ್ಮೆಲ್ಲ "ಬೇಕು"ಗಳು ಹುಟ್ಟಿಕೊಂಡದ್ದು ಸ್ವರಾಜ್ಯ ದೊರೆತ ಮೇಲೆಯೇ. ಅತ್ಯುತ್ಸಾಹದಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಜನತೆಗೆ ಆಗೋಸ್ತು ೧೫, ೧೯೪೭ರ ಬಳಿಕ ಪೂರ್ಣ ವಿರಾಮದ ಹಗಸ್ವಪ್ನವೇ ಕಂಡಿರಬೇಕು. ಅದರಿಂದ ಪ್ರತಿಯೊಂದೂ ಸಂಗತಿಗೆ ಸರಕಾರದ ಮುಖ ನೋಡುತ್ತಾ ನಿಶ್ಚಿಂತರಾಗಿ ಉಳಿಯುವ ಪ್ರವೃತ್ತಿಗೆ ಜನ ಒಲಿದರು. ಪರಿಶ್ರಮ ವಹಿಸಿ ದುಡಿಯುವುದಾಗಲೀ ಬುದ್ಧಿ ಮಾರ್ಗದಲ್ಲಿ ನಡೆಯುವುದಾಗಲೀ ಯಾರೊಬ್ಬರಿಗೂ ಬೇಕಾಗಿಲ್ಲ. ಆರಾಂಭಾವವಿದೆಯೆಂದು ನಿಯಮ

[illegible]

[illegible] ಅವರ [illegible]

ನ್ಯಾಯಾಧೀಶರ [illegible] ರಾಜ್ಯದ [illegible] ಜನರ [illegible] ರಾಜ್ಯದ [illegible] ಅವರು [illegible]

ಕೊನೆಗೆ [illegible] ನ್ಯಾಯಾಧೀಶರ [illegible]

ಆದರೆ ಈ ಕಲ್ಪನೆ [illegible] ನ್ಯಾಯಾಧೀಶರನ್ನು [illegible] ವಿಚಾರಣೆ [illegible] ನಡೆದ [illegible]

ನಮ್ಮ [illegible] ನ್ಯಾಯಾಧೀಶರ [illegible] ಅವರ [illegible]

ಅದಕ್ಕೆ ನ್ಯಾಯಾಧೀಶ [illegible] ರಾಜ್ಯದ [illegible] ನ್ಯಾಯಾಲಯದಲ್ಲಿ [illegible] ಸಹಕರಿಸಿದ [illegible]

ಸಹಕಾರ ಭಾವ

[illegible] ಪದ್ಧತಿಯನ್ನು [illegible], ಅದಕ್ಕೆ ಹೊಂದಿಕೊಳ್ಳುವ [illegible] ಜನತೆ [illegible] ಕಾಯಿದೆ ಕಾನೂನುಗಳನ್ನು [illegible] ಗೌರವಿಸುವ [illegible]

[illegible] ನಮ್ಮ ಸರಕಾರವು [illegible] ಕಾನೂನುಗಳು ನಮ್ಮಿಂದಲೇ [illegible] ಪ್ರಸಂಗಗಳ ನಿತ್ಯ ಜೀವನದಲ್ಲಿ ನ್ಯಾಯವನ್ನು [illegible]

[illegible]

ಕ್ಷೇತ್ರ ಮುಂತಾದ ಮಾನವ[illegible] ಗಳ [illegible] ನ್ಯಾಯಕ್ಕೂ ಧರ್ಮಕ್ಕೂ ನೆಲೆ ಇಲ್ಲದ [illegible] ಇನ್ನೂ ಜನತೆಯೇ ತನ್ನ [illegible] ಮೇಲೆ [illegible] ಕೊಂಡಿತು. ಸರಕಾರದ [illegible] ಗಳ ಮೇಲೆ ಜನತೆಗೆ ವಿಶ್ವಾಸವಿಲ್ಲ, ಅವರ ಪ್ರಾಮಾಣಿಕತೆಯನ್ನು ಪರೀಕ್ಷಿಸುವ ಚಾಪಲ್ಯ ಬೇರೆ. ಅವರ ದಕ್ಷತೆಯ ಬಗ್ಗೆ ಸಂಶಯ ಬೇರೆ. [illegible] ದರಿಂದ ಮತ್ತು ಸರಕಾರದ ಹೆಚ್ಚಿನ [illegible] ಯಂತ್ರದ [illegible] ಕಾರ್ಯಕ್ಷಮತೆ ಕುಸಿದು [illegible] ತೋರಿತು.

ಇಂದವರಲ್ಲಿ ಸರಕಾರ ಏನು ಹೇಳು [illegible] ಕಡೆಯಿಂದ [illegible] ದ ತಪ್ಪುಗಳನ್ನು ಜನತೆಯು [illegible] ಪ್ರವೃತ್ತಿ ಸರಕಾರದಲ್ಲಿದೆ [illegible] ಕಾರ್ಯಾಂಗದ [illegible] ಸ್ಥಾಪಿಸಲು ಯೋಗ್ಯ [illegible] ಜನತೆಯು [illegible] ಸಂಸ್ಥೆ [illegible] ಸರಕಾರದ ಕಾರ್ಯಾಂಗವೂ [illegible] ಸರಕಾರ [illegible]

[illegible] ಜನತೆಯೂ ಸರಕಾರವೂ [illegible] ಕಾಯಿದೆಯನ್ನು ಗೌರವಿಸುವ [illegible] ಜನತೆ [illegible] ಸರಕಾರ [illegible] ವೃದ್ಧಿಗೆ ಅತ್ಯಂತ ಆವಶ್ಯಕವೆಂಬ ಪ್ರತಿ [illegible]

— [illegible]

All Secondary Schools may subscribe to 'Navayuga Weekly' since it has been approved by the Director of Public Instruction, Madras

ಸಮಯ ತೋರಿಸುವ ಗಡಿಯಾರ

ಅದರ ಇಂದಿನ ಅಚ್ಚುಕಟ್ಟಿಗೆ ಕಾರಣವಾದ ಇತಿಹಾಸ

ಸಮಯ ನೋಡಲು ನಾವೆಲ್ಲರೂ ಇಂದು ಉಪಯೋಗಿಸುವ ಗಡಿಯಾರಕ್ಕೆ ಅತ್ಯಂತ ರೋಮಾಂಚಕಾರಿಯಾದ ಇತಿಹಾಸವಿದೆ. ಪೇಟೆಯಲ್ಲಿ ತುಂಬ ಜನಪ್ರಿಯವಾಗಿರುವ ಸ್ವಿಸ್ ವಾಚುಗಳ ಈಗಿನ ಉತ್ಪತ್ತಿಗೆ ಕಳೆದ ನಾಲ್ಕು ಶತಕಗಳಲ್ಲಿ ನಡೆದ ಪ್ರಯೋಗ-ಪರೀಕ್ಷೆಗಳು, ಸಂಶೋಧನೆ-ಅನುಸಂಧಾನಗಳು ಹೊಣೆಯಾಗಿವೆ. ಗಡಿಯಾರ ತಯಾರಿಕೆಯ ಉದ್ಯಮ ಜೂರಾ ಕಣಿವೆ ಹಾಗೂ ಜಿನೀವಾ ಸುತ್ತುಮುತ್ತಲು ನೆಲಸಿದ್ದ ನಿರಾಶ್ರಿತರು ಕೈಕೊಂಡ ಗುಡಿಕೈಗಾರಿಕೆಯಾಗಿ ಇಂದು ಉಳಿದಿಲ್ಲ. ಬದಲಿಗೆ ಇಂದದು ಜಿನೀವಾದಿಂದ ಜರ್ಮನಿಯ ಗಡಿಯಲ್ಲಿರುವ ಶಾಫೌಸ್‌ವರೆಗೆ ವ್ಯಾಪಕವಾಗಿ ಹಬ್ಬಿಕೊಂಡ ಒಂದು ಮಹೋದ್ಯಮವಾಗಿ ಬೆಳೆದಿದೆ. ದೊಡ್ಡ ದೊಡ್ಡ ಕಾರ್ಖಾನೆಗಳು ಗಡಿಯಾರ ತಯಾರಿಕೆಯಲ್ಲಿ ತೊಡಗಿವೆ.

ಗಡಿಯಾರವನ್ನು ಒಬ್ಬ ವ್ಯಕ್ತಿ ಆವಿಷ್ಕರಿಸಿದನೆಂದೇನೂ ಹೇಳುವಂತಿಲ್ಲ. ಅಸಂಖ್ಯ ಸಣ್ಣಪುಟ್ಟ ಅಭಿವೃದ್ಧಿಗಳ ಪರಿಣಾಮವಾಗಿ, ಹಾಗೂ ಲೋಕದ ಹಲವು ಕಡೆ ಶತಮಾನು ಶತಕಗಳಿಂದ ನಡೆಸಿದ ಪ್ರಯೋಗಗಳ ಫಲವಾಗಿಯೇ ಗಡಿಯಾರಕ್ಕೆ ಒಂದು ನಿರ್ದಿಷ್ಟ ಸ್ವರೂಪ ಬಂತು.

ಹಳೆಯ ಸಾಧನಗಳು

ಒಂದು ದಿನವನ್ನು ಹಗಲು ಹನ್ನೆರಡು ತಾಸು ಮತ್ತು ರಾತ್ರಿ ಹನ್ನೆರಡು ತಾಸು ಎಂಬುದಾಗಿ ವಿಂಗಡಿಸಿದವರು ಬೆಬಿಲೋನಿಯಾದ ನಾಗರಿಕರು. ಸುಮಾರು ನಾಲ್ಕು ಸಾವಿರ ವರ್ಷಕ್ಕೆ ಹಿಂದೆ ಈ ನಿರ್ಧಾರಣೆ ನಡೆಯಿತು. ಮರಗಳ, ಬಂಡೆಗಳ, ಅಥವಾ ಪರ್ವತಗಳ ನೆರಳನ್ನು ಆಧರಿಸಿ ಅವರು ಸಮಯ ನಿರ್ಣಯ ಮಾಡಿಕೊಳ್ಳುತ್ತಿದ್ದರು. ಕ್ರಿಸ್ತ ಪೂರ್ವ ಎರಡು ಸಾವಿರ ವರ್ಷಗಳ ಸುಮಾರಿಗೆ ನೆಲದ ಮೇಲೊಂದು ವರ್ತುಲವನ್ನು ಇಟ್ಟು, ಅದರ ಮೇಲೆ ನೆರಳು ಹಾಯುವಂತೆ ಒಂದು ಕೋಲನ್ನು ಉಪಯೋಗಿಸುತ್ತಿದ್ದರು. ಸಮಯ ತೋರಿಸುವ ಅತ್ಯಂತ ಜನಪ್ರಿಯವಾದ ಸಾಧನವಾಗಿ ಈ ಕ್ರಮವು ಇತ್ತೀಚಿನ ವರೆಗೆ ಎಂದರೆ ಎರಡು ಶತಕಗಳ ಹಿಂದಿನ ವರೆಗೆ ರೂಢಿಯಲ್ಲಿತ್ತು. ಅರ್ಥಾತ್, ನಾವಿಂದು ಉಪಯೋಗಿಸುವ ಗಡಿಯಾರದ ಕಲ್ಪನೆ ಮನುಷ್ಯನ ಮನಸ್ಸಿನಲ್ಲಿ ಮೂಡಲಿಕ್ಕೆ ಮೂವರೆ ಸಾವಿರ ವರ್ಷಗಳು ಸಂದುವೆನ್ನಬಹುದು!

ಇಷ್ಟು ದೀರ್ಘಾವಧಿಯಲ್ಲಿ ಇನ್ನಿತರ ಬಗೆಯ ಸಲಕರಣೆಗಳನ್ನೂ ಸಮಯ ನೋಡಲು ಉಪಯೋಗಿಸುತ್ತಿದ್ದರು. ಮೋಡ ಮುಸುಕಿದ ಹಗಲಲ್ಲಿ ವೇಳೆ ತೋರಿಸುವ ಸಾಧನ ವ್ಯರ್ಥವಾಗುತ್ತಿತ್ತು (ರಾತ್ರಿಯ ನಟ್ಟಿಗೆ ನಕ್ಷತ್ರಗಳ ಚಲನವಲನವನ್ನು ಪರೀಕ್ಷಿಸಿ ಸಮಯ ಹೇಳುವುದು ಸಾಧ್ಯವಿತ್ತು) ಅಂಥವರಲ್ಲಿ [illegible] ಗಂಟುಗಳಿಂದ ಕೂಡಿದ ಹಗ್ಗವನ್ನೂ, ಮೋಂಬತ್ತಿಯನ್ನೂ, ಧೂಪದ ಕಡ್ಡಿಯನ್ನೂ ಉರಿಸಿ, ಅದರ ಮೇಲಿಂದ ಸಮಯವನ್ನು ಗೊತ್ತುಹಚ್ಚಲು ತೊಡಗಿದರು. ಭಾರತೀಯ ಹಾಗೂ ಚೀನೀ ನಾಗರಿಕರು ಜಲಯಂತ್ರವನ್ನು ಬಳಕೆಗೆ ತಂದರು. ತಳದಲ್ಲಿ ಒಂದು ಸಣ್ಣ ರಂಧ್ರವಿರುವ ಒಂದು ದೊಡ್ಡ ಹೂಜಿ ಅಥವಾ ಪಾತ್ರೆಯಲ್ಲಿ ನೀರು ತುಂಬಿಸಿಟ್ಟು, ಅದರಲ್ಲಿ ಕಡಿಮೆಯಾಗುತ್ತಾ ಬರುತ್ತಿರುವ ನೀರಿನ ಮಟ್ಟದ ಮೇಲಿಂದ ಸಮಯವನ್ನು ಗೊತ್ತುಹಚ್ಚುವುದು ಈ ಪದ್ಧತಿ

ಪ್ರಾರಂಭದ ತಯಾರಿಕೆ

ಆದರೆ ೧೩೬೦ನೇ ಇಸವಿಯಲ್ಲಿ ಈ ಎಲ್ಲ ಅಸಂದಿಗ್ಧ ಪರಿಸ್ಥಿತಿಯು ಕೊನೆಗೊಂಡು, ನಿಜಕ್ಕೂ ಸುಯೋಗವಾದ ಗಡಿಯಾರವೊಂದು ನಿರ್ಮಾಣಗೊಂಡಿತು. ಫ್ರಾನ್ಸಿನ ಐದನೇ ಚಾರ್ಲ್ಸ್ ದೊರೆಯು ವುರ್ಟೆಂಬರ್ಗಿನ ಹೆನ್ರಿ ಡಿವಿಕ್ ಎಂಬವನನ್ನು ನಿಜಕ್ಕೂ ಸಮರ್ಪಕವಾದ ರೀತಿಯಲ್ಲಿ ಸಮಯ ತೋರಿಸಬಲ್ಲ ಗಡಿಯಾರ ನಿರ್ಮಿಸಲು ಕೇಳಿಕೊಂಡನು. ಎಂಟು ವರ್ಷಗಳ ಪರಿಶ್ರಮದ ಫಲವಾಗಿ ವಿಕ್ಕನು ತಯಾರಿಸಿದ ಗಡಿಯಾರ ನಿಜಕ್ಕೂ ಸಂಪೂರ್ಣ ಕೃತಿಯಾಗಿತ್ತು. ಐನೂರು ವರ್ಷಗಳ ವರೆಗೆ ಎಂದರೆ ೧೮೫೭ರಲ್ಲಿ ಕೂಡ, ಈ ಗಡಿಯಾರ ಚೆಲುವಾಗಿ ಕೆಲಸ ಮಾಡುತ್ತಿತ್ತು! ಆದರೆ ಈ ಗಡಿಯಾರವನ್ನು ತಯಾರಿಸುವುದಕ್ಕೆ ಅಸಂಖ್ಯ ಸಲಕರಣೆಗಳ ಅಗತ್ಯವಿದ್ದುದರಿಂದ ಅದು ಜನಪ್ರಿಯವಾಗಲಿಲ್ಲ. ಮುಂದೆ ಒಂದೂವರೆ ಶತಕಗಳ ತನಕ ಬೇರೆ ಪ್ರಗತಿಯೂ ಕಂಡು ಬರಲಿಲ್ಲ.

ಈ ನಡುವೆ ಸ್ವಿಸ್ ಜನರೂ (ಈಗ ಇವರನ್ನು ಗಡಿಯಾರ ತಯಾರಿಕೆಯ ಮಟ್ಟಿಗೆ ಮೀರಿಸುವವರಿಲ್ಲ) ಸಮಯವನ್ನು ಅಳೆಯಲು ಉಪಯುಕ್ತವಾದ ಯಾಂತ್ರಿಕ ಸಲಕರಣೆಯೊಂದನ್ನು ಸಿದ್ಧಪಡಿಸುವ ಹುಮ್ಮಸ್ಸಿನಲ್ಲಿದ್ದರು. ೧೩೫೨ರಲ್ಲಿ ಬಾಸ್ಲೇಯ ಹೆನ್ರಿಚ್ ಹಾಲ್ಡರನೆಂಬವನು ನಿರ್ಮಿಸಿದ ಗಡಿಯಾರವನ್ನು ಈಗಲೂ ಸ್ಟ್ರಾಸ್‌ಬರ್ಗ ಕ್ರೈಸ್ತ ದೇವಾಲಯದಲ್ಲಿ ಕಾಣಬಹುದು. ೧೪೭೨ರಲ್ಲಿ ಜೇಕ್ಸ್ ಮಾರ್ಕ ಎಂಬವನೂ ೧೫೩೦ರಲ್ಲಿ ಲಾರೆಂಟ್ ಲೀಚಿ ಎಂಬವನೂ ಹೊಸತಾಗಿ ಗಡಿಯಾರವನ್ನು ನಿರ್ಮಿಸಿದರು

ನೂತನ ಸಂಶೋಧನೆಗಳು

೧೫ ಮತ್ತು ೧೬ನೇ ಶತಮಾನದಲ್ಲಿ ಗಡಿಯಾರ ರಚನೆಯಲ್ಲಯೇ ಅತ್ಯಂತ ಮಹತ್ವದ ಎರಡು ಸಂಶೋಧನೆಗಳಾದುವು: ಅರಬೀ ನಾಗರಿಕರಿಗೆ ಮಾತ್ರ ತಿಳಿದಿದ್ದ (ಆ ಬಳಿಕ ಗೆಲಿಲಿಯೋ ಪುನಃ ಕಂಡುಹಿಡಿದ) ಪೆಂಡುಲಂ ಗಡಿಯಾರವನ್ನು ತಯಾರಿಸುವದಕ್ಕೆ ತುಂಬ ಉಪಯುಕ್ತವೆಂದು ಸಿದ್ಧವಾಯಿತು. ಇದಕ್ಕೂ ಹೆಚ್ಚಿನ ಮನ್ನಣೆಯು ಪೀಟರ್ ಹೆನ್‌ಲೀನನೆಂಬವನು ೧೫೦೦ರಲ್ಲಿ ಮೈನ್‌ಸ್ಪ್ರಿಂಗಿನ ಆವಿಷ್ಕಾರ ಮಾಡಿದಾಗ ದೊರೆಯಿತು. ಇಂದಿನ ಕೈಗೆ ಕಟ್ಟಿಕೊಳ್ಳುವ ಪುಟ್ಟಗಡಿಯಾರದ ರಚನೆ ಸಾಧ್ಯವಾದದ್ದೇ ಮೈನ್ ಸ್ಪ್ರಿಂಗಿನ ಕೃಪೆಯಿಂದ! ಅಮೂಲ್ಯ ಹರಳುಗಳನ್ನು ಇಡಲು ಕಲಿತುದು ಸ್ವಿಸ್ ಜನರು ಗಡಿಯಾರ ರಚನೆಯಲ್ಲಿ ನಡೆಸಿದ ಇನ್ನೊಂದು ಸಂಶೋಧನೆ. ಬಾಸ್ಲೆಯಲ್ಲಿ ಜನಿಸಿದ ಜಿನೀವಾದಲ್ಲಿ ವಿದ್ಯಾಭ್ಯಾಸ ಪಡೆದ ನಿಕೊಲಸ್ ಫ್ಯಾಟಿಯೋ ಎಂಬವನು ೧೭೦೪ರಲ್ಲಿ ಈ ಉಪಾಯ ಕಂಡುಹಿಡಿದನು. ಇವನು ಲಂಡನಿನಲ್ಲಿ ಗಡಿಯಾರ ರಚನೆಯನ್ನು ಕೈಕೊಂಡಿದ್ದುದರಿಂದ ಕೆಲವರ್ಷಗಳ ವರೆಗೆ ಉಳಿದವರಾರಿಗೂ ಈ ಸಂಶೋಧನೆಯ ಸುಳಿವು ಹತ್ತಲಿಲ್ಲ.

ಈ ಅವಧಿಯಲ್ಲಿಯೇ ಸ್ವಿಜರ್‌ಲೆಂಡಿನಲ್ಲಿ ಈಗಿನ ಗಡಿಯಾರ ತಯಾರಿಕೆಯ ಉದ್ಯಮದ ಅಡಿಗಲ್ಲನ್ನು ಸ್ಥಾಪಿಸಲಾಯಿತು. ಫ್ರಾನ್ಸಿನಿಂದ ಓಡಿಬಂದ ನಿರಾಶ್ರಿತ ಜನರು ಜಿನೀವಾದ ಬಳಿ ಪುನರ್ನಿವೇಶಕ್ಕಾಗಿ ಬಂದು ನೆಲೆಗೊಂಡಾಗ ಗಡಿಯಾರ ರಚನೆಗೆ ಅನುಕೂಲವಾದ ತಳಹದಿ ಏರ್ಪಟ್ಟಿತು. ಈ ವಿದ್ಯೆಯಲ್ಲಿ ಫ್ರಾನ್ಸಿನಿಂದ ಬಂದ ನಿರಾಶ್ರಿತರು ಪಳಗಿದ್ದರು; ಮತ್ತು ಚನಿವಾರದ ಊರೆಂದು ಹೆಸರಾದ ಜಿನೀವಾದ ನಾಗರಿಕರ ಕೌಶಲ್ಯದ ಬೆರಕೆಯಿಂದ ಸ್ವಿಸ್ ಜನರ ವೈಭವೋಪೇತವಾದ ಕೈಗಾರಿಕೆಯಾಗಿ ಗಡಿಯಾರ ರಚನೆ ಬೆಳೆಯಿತು.

ಸ್ವಿಸ್ ಜನರ ಕೌಶಲ್ಯ

ಜಿನೀವಾದಲ್ಲಿರುವ ತೀರಾ ಹಳೆಯ ಗಡಿಯಾರವನ್ನು ಧಾರ್ಮಿಕ ಸುಧಾರಣೆಯ ಸಮಯ (೧೫೩೩) ಓಡಿ ಹೋದ ಕ್ರೈಸ್ತ ಬಿಶಪನು ಬಿಟ್ಟು ಹೋಗಿದ್ದನೆಂದು ಹೇಳುತ್ತಾರೆ. ಇದು ಸ್ವಿಸ್ ತಯಾರಿಕೆಯೋ ಎಂಬ ಬಗ್ಗೆ ಸಂದೇಹವಿದೆ. ಏನೇ ಇರಲಿ ಪ್ರಾರಂಭದ ಈ ಗಡಿಯಾರಗಳು ಒಂದು ಟೀ ಕಪ್ಪಿನಷ್ಟು ಗಾತ್ರವಾಗಿದ್ದು ಮೊಟ್ಟೆಯಾಕಾರದಲ್ಲಿರುತ್ತಿದ್ದವು. ಆಲ್ಫ್ರೆಡ್ ಚಾಪಿಯುಸ್ ಹೇಳುವಂತೆ, ಗಡಿಯಾರಗಳು ಸ್ವಲ್ಪಕಿರುಕಳ ಕೊಡುತ್ತಿದ್ದರೂ ತುಂಬಾ ಜಾಗ್ರತೆ ಹಾಗೂ ವ್ಯವಸ್ಥೆಯಿಂದ, ಕಲಾತ್ಮಕರೀತಿಯಲ್ಲಿ ನಿರ್ಮಾಣಗೊಳ್ಳುತ್ತಿದ್ದವು. ಜಿನೀವಾದಿಂದ ನಿಧಾನವಾಗಿ ಈ ಉದ್ಯಮವು ಜೂರಾ ಕಣಿವೆ ಪ್ರದೇಶಕ್ಕೆ ಹಬ್ಬಿತು. ಇಂದು ಜಗತ್ತಿನಲ್ಲಿಯೇ ಈ ಕೇಂದ್ರ ಖ್ಯಾತನಾಮವಾಗಿದೆ. ಒಂದು ಕತೆಯಂತೆ, ಜೂರಾ ನಿವಾಸಿಯಾದ ಡೇನಿಯಲ್ ಡೀನ್ ರಿಚಾರ್ಡ್ ಎಂಬ ಕಮ್ಮಾರನಿದ್ದಲ್ಲಿಗೆ ಒಬ್ಬ ಇಂಗ್ಲಿಷ್ ಕುದುರೆ ವ್ಯಾಪಾರಿ ಬಂದು ತನ್ನ ಕೆಟ್ಟುಹೋದ ಗಡಿಯಾರವನ್ನು ಸರಿಪಡಿಸಬೇಕೆಂದು ಹೇಳಿದ. ಕಮ್ಮಾರನಿಗೆ ಗಡಿಯಾರದ ತಿಲಾಂಶ ಜ್ಞಾನವಿಲ್ಲದಿದ್ದರೂ ಕುತೂಹಲವಶನಾಗಿ ಯಂತ್ರವನ್ನು ಬಿಚ್ಚಿ ಸರಿಪಡಿಸಲು ನೋಡಿದ. ಈ ಪ್ರಯತ್ನದಲ್ಲಿ ಅವನು ಯಶಸ್ಸುಹೊಂದಲು ಗಡಿಯಾರ ತಯಾರಿಕೆಯನ್ನವನು ತನ್ನ ವೃತ್ತಿಯನ್ನಾಗಿ ಮಾಡಿಕೊಂಡ. ಇವನ ಮೇಲ್ಪಂಕ್ತಿಯನ್ನು ಇತರರೂ ಅನುಸರಿಸಿದರು.

ಮುಂದೆ ಈ ಕೈಗಾರಿಕೆ ಸ್ವಿಜರ್‌ಲೆಂಡಿನ ಸುಂದರ ಕಣಿವೆ ಪ್ರದೇಶಗಳಲ್ಲಿ

ರಾಮತೀರ್ಥ
ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧| [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ನಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಆಗ--?

ತಾರುಣ್ಯವು ತೊರೆವಾಗ, ಶಕ್ತಿಯು ಕುಗ್ಗಿದಾಗ, ದುಡಿಯುವುದು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆವರೆ ಮುಗ್ಗರಿಸುವಾಗ, ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿ ಇರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕಂಡೊಡನೆ ನಿಮ್ಮದೇ ಆಗುವ, ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ, ನಿಮ್ಮ ನಾಡಿನ

ಈ ಕಂಪೆನಿಯಲ್ಲಿಯೇ ವಿಮೆ ಇಳಿಸಿರಿ

ದಿ ಕೆನರ ಮ್ಯೂಚುವಲ್ ಎಶ್ಶೂರೆನ್ಸ ಕಂಪೆನಿ ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ ಭಾರತ. ಸ್ಥಾಪನೆ: ೧೯೩೫
The Canara Mutual Assurance Co. Ltd.
Head Office: UDIPI, S India. Estd: 1935

ರೈತರ ಹಕ್ಕುಗಳ ಸಂರಕ್ಷಣೆ

ನಮ್ಮ ಒಕ್ಕಲುಗಳ ಪರಿಸ್ಥಿತಿ ಸುಧಾರಿಸಲು ಕಾಯಿದೆಬದ್ಧ ಕ್ರಮ

ಂಜಾವೂರಿನ ರೈತರ ಹಕ್ಕುಬಾಧ್ಯತೆ ಸಂರಕ್ಷಣೆಗಾಗಿ ಮದ್ರಾಸು ಸರಕಾ ಅವಸರದಿಂದ ಹೊರಡಿಸಿದ ಸುಗ್ರೀ ಯಲ್ಲಿ ಲೋಪದೋಷಗಳು ಎಷ್ಟಿ -ಅದಕ್ಕೆ ದೊರೆತ ಸಾರ್ವಜನಿಕ ತವು ಗಮನಾರ್ಹವಾಗಿದೆ. ಮೊನ್ನೆ ನ ಸಭೆಯಲ್ಲಿ ಈ ಸುಗ್ರೀವಾಜ್ಞೆಗೆ ದೆ ರೂಪವನ್ನು ಕೊಡಬೇಕೆಂದು ಮಾಣಿಕ್ಯ ವೇಲುನಾಯಿಕ್ಕರರು ನಾಗ-ಸುಗ್ರೀವಾಜ್ಞೆಯ ಉದ್ದೇಶ ಪ್ರತಿಯೊಂದೂ ಪಕ್ಷದ ಸದಸ್ಯರು ಸಿದರು. ಕೇವಲ ಕಾಯಿದೆ ತೊಡಕು ವಾರಣೆಯಾಗಬೇಕೆಂದು ಬಯಸಿ, ಲಕ ಸಮಿತಿಗೆ ಈ ವಿಷಯವನ್ನು ಕೊಡಬೇಕೆಂದು ನಿರ್ಧರಿಸಲಾಯಿ ಾಂಗ್ರೆಸು ಕಾರ್ಯಕಾರೀ ಸಮಿತಿ ಆದಿತ್ಯವಾರದಿನ ಸಭೆ ಸೇರಿದಾಗ ಲ್ಲಿ ಭೂಸಂಬಂಧದ ಪ್ರಶ್ನೆಗೆ ಪ್ರಾಶ ದೊರೆಯಿತೆಂದು ತಿಳಿದುಬರುತ್ತದೆ. ಗಲೇ ಹಲವು ರಾಜ್ಯ ಸರಕಾರಗಳು ಂಡ ಸುಧಾರಣೆಗಳ ಮೇಲಿಂದ ಹೇ ನಾದರೆ, ಕಾಂಗ್ರೆಸು ರೈತರ ಗೆ ಕೊಟ್ಟದ್ದ ಆಶ್ವಾಸನೆಯನ್ನು ರೂಪಕ್ಕೆ ಇಳಿಸಲು ಬದ್ಧಕಂಕಣ ೆ ಎನ್ನಬೇಕು-

ಶಾಂತರೀತಿಯ ಪರಿಹಾರ

ಭೂಮಿಯು ಈಗ ಸಾಮಾಜಿಕ ಸೊತ್ತು ಎಂಬ ಭಾವನೆಯು ಬಲಿಯುತ್ತಾ ಬರುತ್ತಿದೆ. ಸೋವಿಯೆಟ ರಶಿಯಾದ ಮಾದರಿಯಲ್ಲಿ ಎಲ್ಲ ಒಡೆತನವನ್ನೂ ಕೇಂದ್ರೀಯ ಸರಕಾರಕ್ಕೆ ಒಪ್ಪಿಸಿಬಿಡುವಂಥ ಉಗ್ರ ಕ್ರಮ ನಮ್ಮಲ್ಲಿಯ ಪರಂಪರಾಗತ ರೂಢಿ ಸಂಪ್ರದಾಯಗಳಿಗೆ, ಒಗ್ಗಲಿಕ್ಕಿಲ್ಲ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯವೆಂದರೆ ವ್ಯಕ್ತಿನಿಷ್ಠ ಸಮಾಜವೆನ್ನಬೇಕು. ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಒಲವು ನಿಲುವುಗಳಿಗನುಸಾರ ಜೀವನವನ್ನು ರೂಪಿಸುವ ಸ್ವಾತಂತ್ರ್ಯವನ್ನು ನಮ್ಮ ಸಂಸ್ಕೃತಿ ಕೊಟ್ಟಿದೆ. ಆದುದರಿಂದ ಭೂ ಸುಧಾರಣೆಯ ಮಾತು ಬಂದಾಗಲೆಲ್ಲ ರಶಿಯಾ ಚೀನಾದ ಮಾದರಿಯನ್ನು ಭಾರತ ಎಷ್ಟರಮಟ್ಟಿಗೆ ಅನುಸರಿಸಬಹುದೆಂಬ ಬಗ್ಗೆ ಸಂಶಯಾತ್ಮಕವಾದ ಸಮಸ್ಯೆ ಎದ್ದೇ ತೀರುತ್ತದ ಆದರೂ ಸಾಮಾನ್ಯವಾದೊಂದು ತತ್ವವನ್ನು ನಿಶ್ಚಯಿಸಿಕೊಂಡು, ಭೂ ಸುಧಾರಣೆಯ ಹೆಜ್ಜೆಯನ್ನು ಮುಂದಿಡುವುದು ಈ ದಿನ ಮಾನಗಳಿಗ ಅನುಕೂಲವೂ ಅಪೇಕ್ಷಿತವೂ ಆದ ವಿಧಾನವಾಗಿದೆ. ಸರ್ವಮಾನ್ಯವಾದೊಂದು ತಳಹದಿಯ ಮೇಲಿಂದ ಭೂಸಮಸ್ಯೆಯನ್ನು ಶಾಂತ ರೀತಿಯಿಂದ ಪರಿಹರಿಸಲು ನೋಡುವುದು ಸಾರ್ವಜನಿಕ ಜಿಜ್ಞಾಸೆಯ ದೃಷ್ಟಿಯಿಂದವಷ್ಟೇ ಅಲ್ಲ-ನಮ್ಮ ಕೋಟ್ಯಂತರ ರೈತ ಬಾಂಧವರ ಉತ್ಕರ್ಷದ ವಿಚಾರದಿಂದಲೂ ಅವಶ್ಯಕ.

ರೈತರಲ್ಲಿ ಮಮತ್ವ ಹುಟ್ಟಲಿ.

ವ್ಯವಸಾಯದಲ್ಲಿ ನಿರತರಾದ ರೈತರ ಹಕ್ಕು ಬಾಧ್ಯತೆಗಳೇನೆಂಬುದನ್ನು ನಿರ್ಧರಿಸಿ, ಅವಕ್ಕೆ ತಕ್ಕ ರಕ್ಷಣೆಯನ್ನು ಕೊಡುವುದು ಸರಕಾರದ ಕರ್ತವ್ಯ. ಉತ್ತರ ಪ್ರದೇಶ, ಬಿಹಾರದಂಥ ರಾಜ್ಯಗಳು ಜಮೀನ್‌ದಾರಿ ಪದ್ಧತಿಯನ್ನು ನಿರ್ಮೂಲನ ಮಾಡಿ, ಹಿಂದಿನ ಪಾಳೆಯಗಾರಿ ಪರಂಪರೆಗೊಂದು ಕೊನೆಯನ್ನು ತಂದಿವೆ ಮುಂಬಯಿ ಹೈದರಾಬಾದುಗಳಲ್ಲಿ ಒಕ್ಕಲಿಗರ ಹಿತಸಂರಕ್ಷಣೋದ್ದೇಶದಿಂದ ಈಗಾಗಲೇ ಕಾಯಿದೆಗಳು ಬಂದಿವೆ. ಜಮೀನು ಸಾಗುವಳಿಯಲ್ಲಿ ನಿರತನಾದ ರೈತನಿಗೆ ತನ್ನ ದುಡಿಮೆಯ ಕ್ಷೇತ್ರದಲ್ಲಿ ಮಮತೆ ಹುಟ್ಟಬೇಕಾದುದು ವೈಯಕ್ತಿಕ ಶ್ರೇಯಸ್ಸಿಗಾಗಿಯೂ ಸಾಮಾಜಿಕ ಉನ್ನತಿಗಾಗಿಯೂ ಅಗತ್ಯ. ಈ ಮಮತ್ವವನ್ನು ರೈತ ಬಾಂಧವರಲ್ಲಿ ಅಂಕುರಿಸಲು ನೋಡುವುದು ಭೂಸುಧಾರಣೆಯ ಮುಖ್ಯೋದ್ದೇಶಗಳಲ್ಲಿ ಒಂದು. ಭೂಮಿಯ ಒಡೆಯರಿಗೆ ಹಿತಮಿತವಾದ ಗೇಣಿ ಸಂದಾಯ ಮಾಡಿದರೆ ಸಾಕು-ತಾನು ಸಾಗುವಳಿ ಮಾಡುವ ಭೂಮಿಯ ಮೇಲೆ ರೈತನ ಒಡೆತನವು ನೆಲೆಗೊಳ್ಳುವುದು. ನಮ್ಮಲ್ಲಿ ಮೊದಲಿಂದಲೂ ಈ ರೀತಿಯ ಪದ್ಧತಿ ಆಚರಣೆಯಲ್ಲಿತ್ತು. ಆದರೆ ಈಚೆಗೆ ಧನಿ ಒಕ್ಕಲುಗಳೊಳಗಿನ ಮನಸ್ತಾಪ ಹಾಗೂ ವೈಷಮ್ಯಗಳು ವಾತಾವರಣವನ್ನು ಕದಡಿಸಿ, ಕ್ಷೋಭೆಮಾಡಿ, ಕೆಡಿಸಿಬಿಟ್ಟಿವೆ.

ಎಲ್ಲರೂ ಮನ್ನಿಸುವ ತತ್ವ

ಸರಕಾರವು ತರಬೇಕೆಂದಿರುವ ಶಾಸನಾತ್ಮಕ ಕಾಯಿದೆಯಾದರೂ ಮೇಲೆ ಸೂಚಿಸಿದ ತತ್ವವನ್ನು ಮಾನ್ಯಮಾಡುವಂತಿದ್ದರೆ ಅದರಿಂದ ಯಾರಿಗೂ ಕೆಡುಕಿಲ್ಲ. ಭೂಮಾಲಿಕರು ಒಕ್ಕಲಿಗರನ್ನು ಅನ್ಯಾಯವಾಗಿ ಹಿಂಸಿಸುತ್ತಿರುವರೆಂದೂ ಗೇಣಿ ಹೆಚ್ಚಿಸಿಗಬೇಕೆಂಬ ಲೋಭದಿಂದ ಒಕ್ಕಲೆಬ್ಬಿಸುತ್ತಿರುವರೆಂದೂ ನಮ್ಮ ಜಿಲ್ಲೆಯಲ್ಲಿ ಮಾತ್ರವಲ್ಲ-ರಾಜ್ಯದಾದ್ಯಂತ ದೂರು ಕೇಳಿಬರುತ್ತಿವೆ. ನಿಜ ಹೇಳಬೇಕೆಂದರೆ, ತಂಜಾವೂರಿನ ರೈತರಿಗೆ ಈಗ ನೀಡಿರುವ ಸಂರಕ್ಷಣಾ ಕ್ರಮವನ್ನು ಈ ಉಪಟಳ ಮಿತಿಮೀರಿದುದಕ್ಕಾಗಿಯೇ ರಾಜಗೋಪಾಲಾಚಾರಿ ಕೈಕೊಂ[illegible] ಇದರ ಸ[illegible] ತಾನು ಸಾಗುವಳಿಮಾಡುವ ಭೂಮಿಯ ಮೇಲೆ ರೈತನ ಒಡೆತನವು ಐದು ವರ್ಷಗಳ ಕಾಲ ಸ್ಥಿರವಾಗುತ್ತದೆ. ರೈತನು ನ್ಯಾಯವಾದ ಗೇಣಿಯನ್ನು ತಿರುತ್ತಾ ಬರಬೇಕೆಂದು ಬೇರೆಯಾಗಿ ಹೇಳುವುದಗತ್ಯ. ಐದುವರ್ಷಗಳ ವರೆಗೆ ಮಾತ್ರ ರೈತರಿಗೆ ಸಂರಕ್ಷಣೆ ನೀಡುವುದು ಪ್ರಯೋಗಿಕ ಕ್ರಮವಾಗಬಹುದೇ ಹೊರತು-ಅದರಿಂದ ವಾಂಛಿತ ಪರಿಣಾಮ ಕಂಡು ಬರದು. ಕಾಲಮಿತಿಯನ್ನು ಹಾಕುವ ಬದಲಿಗೆ ಕಾಯಂ ರೂಪದಲ್ಲಿಯೇ ಈ ಶಾಸನವನ್ನು ತರಬೇಕೆಂದು ಹೇಳುವುದು ನ್ಯಾಯ. ಹಾಗೆಯೇ ಒತ್ತಾಯದ ಸೇವೆ, ಬಿಟ್ಟಿಬೇಗಾರಿ ಮುಂತಾದವುಗಳನ್ನು ನಿಲ್ಲಿಸಿ ಬಿಡುವುದೂ ನಾಗರಿಕ ಹಕ್ಕು ಬಾಧ್ಯತೆಗಳ ಜ್ಞಾನವು ಹೆಚ್ಚಿರುವ ಈ ಸಮಯದಲ್ಲಿ ಸಮಂಜಸವಾಗಿದೆ.

ರೈತರ ಹಕ್ಕುಗಳಿಗೆ ಸಂರಕ್ಷಣೆಯನ್ನೊದಗಿಸುವ ಶಾಸನವು ನಮ್ಮ ಇಡೀ ರಾಜ್ಯಕ್ಕೆ ಅಗತ್ಯವಿದೆ ಎಂಬ ಸಂಗತಿಯು ಮೊನ್ನೆ ಶಾಸನ ಸಭೆಯಲ್ಲಿ ನಡೆದ ಚರ್ಚೆಯಿಂದಲೇ ಗೊತ್ತಾಗುತ್ತದೆ. ವಿರೋಧೀ ಪಕ್ಷದವರ ಸಹಕಾರವು ಇಂಥದೊಂದು ಕ್ರಮಕ್ಕೆ ದೊರೆತೇ ತೀರುವುದೆಂದೂ ಈ ಚರ್ಚೆಯಿಂದ ಸ್ಥಿರಗೊಂಡಿದೆ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಚಾಲಗೇಣಿ ಒಕ್ಕಲುಗಳ ಪರಿಸ್ಥಿತಿಯನ್ನು ಊರ್ಜಿತಗೊಳಿಸುವುದಕ್ಕಾಗಿ, ತಂಜಾವೂರಿಗೆ ಅನ್ವಯಿಸುವ ಕಾಯಿದೆಯನ್ನೆ ಅವಶ್ಯಕ ತಿದ್ದುಪಡಿಯೊಂದಿಗೆ ಇಲ್ಲಿಗೂ ಜ್ಯಾರಿ ಮಾಡಬೇಕು. ಭೂಮಾಲಿಕರ ಅನ್ಯಾಯ ವರ್ತನೆಯನ್ನು ನಿಲ್ಲಿಸುವಂತೆ, ರೈತರ ಅಲಕ್ಷ್ಯಕ್ಕೂ ಜಾಡ್ಯಕ್ಕೂ ರಾಮಬಾಣವಾಗಿ ಈ ಕಾಯಿದೆ ಕೆಲಸ ಮಾಡಬೇಕು ಆ ದಿನ ಕಾಣಲು ಇನ್ನೂ ವಿಳಂಬವಾಗದೆಂದು ಆಶಿಸಬಹುದೆ?

— ಕಾರ್ತಿಕೇಯ.

[ಪುಟದಿಂದ ಮುಂದುವರಿದುದು]

ಗೊಳ್ಳುತ್ತಾ ನಡೆಯಿತು ನೆಪೋಲಿ ನು ಇಂಗ್ಲಿಷ ಸರಕುಗಳ ಮೇಲೆ ಪ್ರ ನೆ ಹಾಕಲು, ಸ್ವಿಸ್ ವಾಚುಗಳಿಗೆ ಹೆಚ್ಚಿತು; ಪ್ರಸಿದ್ಧಿಯೂ ಬಂತು. ಶತಮಾನದಲ್ಲಿ ಔದ್ಯಮಿಕ ವಿಪ್ಲ ವಾಗಲೂ ಈ ಗೃಹೋದ್ಯಮವು ಲ್ಲಿಯೇ ಬದಲಾದ ವಾತಾವರಣ ಂದಿಕೊಂಡು ಬದುಕಿತು. ಇಂದು ದಲ್ಲಿಯೇ ಸ್ವಿಸ್ ಗಡಿಯಾರಗಳು ತ ಜನಪ್ರಿಯವೂ ಪರಿಪೂರ್ಣ ಕ್ಕ ಆಗಿದ್ದರೆ, ಅವಕ್ಕೆ ನಿರಂತರವಾದ ಧನೆ, ಕಾರ್ಮಿಕರ ಕೌಶಲ್ಯ ಹಾ ದ್ಧಿವಂತಿಕೆಯೇ ಕಾರಣ. ಹಾಗೆ ಈ ಉದ್ಯಮದ ಇನ್ನೊಂದು ವೈಶಿ ಕೇಂದ್ರೀಕರಣ. ಯಂತ್ರಯುಗವೆ ಈ ದಿನಮಾನದಲ್ಲಿಯೂ ಸ್ವಿಸ್ ರ ಕೆಯಲ್ಲಿ ವ್ಯಕ್ತಿಯ ಕೌಶಲ್ಯಕ್ಕೆ ಮ ಸ್ಥಾನ ಕೊಟ್ಟಿರುವುದು ವ್ಯಕ್ತ ತ್ತದೆ.

ಪ್ರಕಟಣೆ

ಉಡ್ಪಿ ತಾಲೂಕು ಬೆಳಪ್ಪಾದಬೆಟ್ಟು ಗ್ರಾಮದ ಪಡುಭಾಗ ಬೀಡು ಅಕ್ಕಮ್ಮ ಹೆಗ್ಗಡ್ತಿ ದ ಮಗಳು ಸರ್ಸಿ ಹೆಗ್ಗಡ್ತಿಯು ಕೊಡುವ ಪ್ರಕಟಣೆ-

ತಾರೀಕು 6-11-1952ನೇ ಉಡುಪಿ ನವಯುಗ ಪತ್ರಿಕೆಯಲ್ಲಿ ನನ್ನ ಮಗಳು ಹೇರೂರು ರುಕ್ಮಿಣಿ ಹೆಗ್ಗಡ್ತಿಯು ನನ್ನ ವಿಷಯದಲ್ಲಿ ಒಂದು ಪ್ರಕಟಣೆ ಕೊಟ್ಟಿದ್ದಾಗಿ ತಿಳಿದು ಬರುತ್ತದೆ. ಸದ್ರಿ ಪ್ರಕಟಣೆಯಲ್ಲಿ ಹೇಳಿದ ಯಾವತ್ತೂ ಸಂಗತಿಗಳು ಸುಳ್ಳು--ನಾನು ಇತ್ತಲಾಗಿ ಐದು ವರ್ಷಗಳಿಂದ [illegible] ಬುದ್ಧಿ [illegible] ಸ್ವತಂತ್ರಳಿಲ್ಲದವಳಾಗಿ ಇದ್ದದ್ದಿಲ್ಲ. ನಾನು ಸಂಪೂರ್ಣ ಬುದ್ಧಿಯುಕ್ತಳಾಗಿ ಸ್ವತಂತ್ರೀಕಳಾಗಿರುತ್ತೇನೆ ನಾನು ಬೇರೆಯವರ ಉಪದೇಶಕ್ಕೆ ಒಳಪಟ್ಟಿಲ್ಲ-ಹಾಗೆ ಒಳಪಡುವರೆ ಕಾರಣವೂ ಇಲ್ಲ-ನನಗೆ ಸ್ವಂತ ಇಚ್ಛಾನುಸಾರದ ಹಕ್ಕಿನ ಸ್ಥಿರಾಸ್ತಿಗಳು ಇರುತ್ತವೆ-ಸದ್ರಿ ಆಸ್ತಿಗಳನ್ನು ನನ್ನ ಇಚ್ಛಾನುಸಾರವಾಗಿ ಯಾವ ತರದ ಪರಾಧೀನಗಳನ್ನು ಮಾಡಲಿಕ್ಕೂ ನಾನು ಹಕ್ಕುದಾರಳಾಗಿರುತ್ತೇನೆ-ನನ್ನ ಹಕ್ಕಿಗೆ ವಿರೋಧವಾಗಿ ಹೇಳಿದ ಸದ್ರಿ ಪ್ರಕಟಣೆಯ ಯಾವತ್ತೂ ಹೇಳಿಕೆಗಳು ಸುಳ್ಳು-ಸದ್ರಿ ಪ್ರಕಟಣೆಯನ್ನು ನನ್ನ ಮಗಳ ಹೆಸರಲ್ಲಿ ನನ್ನ ಮಗಳ ಗಂಡನು [illegible] ಬಿಟ್ಟ [illegible] ಮಾಡಿಸಿದ್ದೇಕು-

ಈ ಎಡ ಹೆಬ್ಬೆಟ್ಟಿನ ಗುರುತು ಸರ್ಸಿ ಹೆಗ್ಗಡ್ತಿಯು ಆಗಿರುತ್ತದೆ

ಮೂಲ್ಕಿ ಬ್ಯಾಂಕ್.
ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 23 ಷಗಳಿಂದ ಊರ ಜನರ ಹಿತ ಗಿ ಡಿಪೋಸಿಟ್ ಹಣಕ್ಕೆ ನ್ಯಾ ವಾದ ಬಡ್ಡಿಯಿಂದಲೂ, ಸಾಲ ಹಣಕ್ಕೆ ಅತೀ ಕಡಿಮೆ ದರದ ಯಿಂದಲೂ ಜನ ಹಿತಸಾಧನೆ ನ್ನು ಮಾಡುತ್ತಿರುವುದು

e Moolky Bank Ltd.,
Moolky. S. K

ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ಏತಕ್ಕಾಗಿ
ತೆರೆಯಬೇಕು?

ವ್ಯಾಪಾರ ಮತ್ತು ಕೈಗಾರಿಕೆಗೆ ಹಣವೇ ಜೀವಾಳ. ಆದರ ಒಟ್ಟಿಟ್ಟ ಹಣ, ಉಪಯೋಗಿಸದ ಹಣ ಯಾವ ಪುರುಷಾರ್ಥವನ್ನೂ ಪಡೆಯಲಾರದು. ನಿಮ್ಮಂತಹ ಸಹಸ್ರಾರು ಡಿಪೊಸಿಟುದಾರರ ಹಣವು ನಿಮ್ಮ ಬ್ಯಾಂಕಿನಲ್ಲೇ ಕೇಂದ್ರೀಕರಿಸಲ್ಪಟ್ಟಾಗ ಆ ಹಣವು ದೇಶದ ಕೈಗಾರಿಕೆ ಉದ್ಯಮಗಳ ಉಪಯೋಗಕ್ಕೆ ನೆರವಾಗಿ ದೇಶದ ಸಂಪದಭಿವೃದ್ಧಿಯನ್ನು ಸಾಧಿಸುವುದು. ಆದುದರಿಂದ ನಿಮ್ಮ ಉಳಿತಾಯ ಹಣವನ್ನು ನಿಮ್ಮ ಬ್ಯಾಂಕ್ ಖಾತೆಯಲ್ಲಿಟ್ಟು ನಿಮ್ಮ ದೇಶದ ಅಭ್ಯುದಯಕ್ಕೇನೇ ಸಹಾಯ ನೀಡಿರಿ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ

The Canara Industrial &
Banking Syndicate Limited.

Estd: 1925 H. O: UDIPI

ನೇಕಾರರ ಸಲುವಾಗಿ

ಒಕ್ಕಲು ಹಿತ ಮಸೂದೆ ಜ್ಯಾರಿಗೆ ಬರುವ ನಿರೀಕ್ಷೆ

ವಿರೋಧಿಗಳ ಸಹಕಾರ

ಮುಖ್ಯಮಂತ್ರಿ ಶ್ರೀ ರಾಜಗೋಪಾಲಾಚಾರಿಯವರು ಕೈಮಗ್ಗದ ಉದ್ದಿಮೆಗೆ ಬಂದಿರುವ ಜೀವನ ಮರಣ ಪ್ರಶ್ನೆಯನ್ನು ಬಿಡಿಸುವುದಕ್ಕೆ ಏಕಮೇವ ಉಪಾಯವೆಂದು ಮಾಡಿದ ಸೂಚನೆಗಳು ಗಮನಾರ್ಹವಾಗಿದ್ದುವು. ಬಣ್ಣದ ಸೀರೆ ಹಾಗೂ ಅಂಚಿನ ಧೋತರಗಳನ್ನು ನೇಯುವ ಗುತ್ತಿಗೆಯನ್ನು ಕೈಮಗ್ಗಗಳಿಗೆ ಕೊಟ್ಟುಬಿಡಬೇಕೆಂಬುದೇ ಅವರ ಸೂಚನೆಯ ಆಶಯವಾಗಿದೆ. ನೇಕಾರ ಹಿತಸಂಬಂಧಿ ವರ್ಗಗಳು ಈ ಸೂಚನೆಯನ್ನು ಸ್ವಾಗತಿಸಿ ಅನುಮೋದಿಸಿದುದಲ್ಲದೆ, ರಾಜಗೋಪಾಲಾಚಾರಿಯವರಂಥ ಪ್ರಭಾವೀಜನರು ಮುಂದಿಟ್ಟ ಸೂಚನೆಯೆಂಬುದರಿಂದ ಕೇಂದ್ರ ಸರಕಾರದ ಮೇಲೆ ಇದರ ವರ್ಚಸ್ಸು ಬಿದ್ದೇ ತೀರುವುದೆಂದು ಆಶಿಸಿದ್ದರು. ರಾಜಗೋಪಾಲಾಚಾರಿಯವರು ಜನರ ಸ್ವಾಭಾವಿಕವಾದ ಹಾಗೂ ಪ್ರಾಮಾಣಿಕ ಸ್ವರೂಪದ ಈ ಆಕಾಂಕ್ಷೆಯನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡಿರುವರೆಂಬುದಕ್ಕೆ ಮದ್ರಾಸದಲ್ಲಿ ಈ ಬಾರಿ ಶಾಸನ ಸಭೆ ಸೇರಿದಾಗ, ಸರ್ವ ಪ್ರಥಮವಾಗಿ ಕೈಮಗ್ಗಗಳ ಸಮಸ್ಯಾ ಪರಿಹಾರಕ್ಕೆ ತನ್ನ ಸೂಚನೆಯೇ ಅತ್ಯಂತ ವ್ಯವಹಾರ್ಯವಾದುದೆಂಬುದನ್ನು ಅಂಗೀಕರಿಸುವ ಗೊತ್ತುವಳಿ ಮಂಡಿಸಿದ್ದು ನಿದರ್ಶನವಾಗಿದೆ. ಶಾಸನ ಸಭಾಧಿವೇಶನದ ಪ್ರಾರಂಭದಲ್ಲಿಯೇ ಈ ರೀತಿಯ ಮಹತ್ವದ ಗೊತ್ತುವಳಿಯನ್ನು ಮಂಡಿಸಿದುದು ರಾಜಗೋಪಾಲಾಚಾರಿಯವರ ಮುತ್ಸದ್ದಿತನದ ದ್ಯೋತಕವಾಗಿದೆ. ಈ ಸೂಚನೆಯು ಅವಿರೋಧವಾಗಿ ಮಂಜೂರಾದುದನ್ನು ವೀಕ್ಷಿಸಿದರೆ, ಸರಕಾರವು ಜನಹಿತ ಯೋಜನೆಯನ್ನು ಕೈಕೊಂಡದ್ದೇ ಆದರೆ, ಅದರಲ್ಲಿ ಎಲ್ಲ ಪಕ್ಷ ಪಂಗಡಗಳ ಸಹಕಾರ ದೊರೆಯುವುದು ಸ್ವತಃಸಿದ್ಧವೆಂಬುದಕ್ಕೆ ಉದಾಹರಣೆ ದೊರಕುವುದು.

ಮಹತ್ವದ ಉದ್ಯೋಗ

ಕೈಮಗ್ಗದ ಸಮಸ್ಯೆಯು ತಳೆದಿರುವ ಬಿಕ್ಕಟ್ಟಿನ ಸ್ವರೂಪದಿಂದ ದೇಶದ ಒಂದೂವರೆ ಕೋಟಿ ಜನ ನೇಕಾರರಿಗೆ ಜೀವನ ನಿರ್ವಾಹ ಅತ್ಯಂತ ಕಠಿಣ ಪ್ರಶ್ನೆಯಾಗಿ ಪರಿಣಮಿಸಿದೆ ಎಂದು ರಾಜಗೋಪಾಲಾಚಾರಿಯವರು ವಿವರಿಸಿದರು. ಅವರು ಭಾರತದಲ್ಲಿ ೬೦ ಲಕ್ಷ ನೇಕಾರ ಕುಟುಂಬಗಳು ತುಂಬ ದಕ್ಷತೆಯಿಂದ ಬಟ್ಟೆಗಳನ್ನು ನೇಯುತ್ತವೆ ಎಂದು ತಿಳಿಸಿದರು. ಇಷ್ಟು ವ್ಯಾಪಕವಾದ ಕ್ಷೇತ್ರವನ್ನು ಕೈಮಗ್ಗಗಳ ಉದ್ದಿಮೆ ಆವರಿಸಿರುವುದರಿಂದ ಕೈಮಗ್ಗದಲ್ಲಿ ತೊಡಗಿರುವ ಜನರನ್ನು ಬೇರೆ ಉದ್ಯೋಗಗಳಿಗೆ ಹಚ್ಚುವುದು ಅಸಾಧ್ಯವೆಂಬ ಅಭಿಪ್ರಾಯ ಯಾರಿಗೂ ಬರುತ್ತದೆ. ಭಾರತದಲ್ಲಿ ಮುಖ್ಯ ಉದ್ಯೋಗವಾಗಿರುವ ಕೃಷಿಯನ್ನು ಬಿಟ್ಟರೆ ಕೈಮಗ್ಗಗಳನ್ನು ಅವಲಂಬಿಸಿದಷ್ಟು ಹೆಚ್ಚು ಜನರು ಬೇರಾವ ಉದ್ಯೋಗದಲ್ಲಿಯೂ ಇಲ್ಲ. ಸೀರೆ ಧೋತರಗಳನ್ನು ಕೈಮಗ್ಗಗಳಿಗೆ ಮೀಸಲಿರಿಸಿದರೆ ಜನರಿಗೆ ಬಟ್ಟೆ ದೊರೆಯದ ದುರ್ಧರ ಪ್ರಸಂಗ ಬಂದೀತೆಂಬುದಕ್ಕೆ ಕೈಗಾರಿಕಾ ಮಂತ್ರಿ ಡಾ|| ಯು ಕೃಷ್ಣರಾಯರು ಸಮರ್ಪಕವಾಗಿ ಮಾರ್ನುಡಿದಿರುವರು. ನೂಲಿನ ಪೂರೈಕೆಯಲ್ಲಿ ವ್ಯತ್ಯಯ ಬಾರದಂತೆ ನೋಡಿಕೊಂಡರೆ ನಮ್ಮ ನೇಕಾರರ ಸಾಮರ್ಥ್ಯ ತಿಳಿದೀತೆಂದವರು ಹೇಳಿದರು. ಈ ಮಾತು ನಿಜ. ಹಾಗೆಯೇ ವಿದೇಶೀ ನೂಲಿನ ಬದಲು ಭಾರತದಲ್ಲಿ ತಯಾರಾದ ಅಗ್ಗದರದ ನೂಲನ್ನೇ ಒದಗಿಸಿ ಕೊಡುವುದರಿಂದ, ಕೈಮಗ್ಗದ ಬಟ್ಟೆಗಳ ಬೆಲೆಯು ಇಳಿಯುವುದಕ್ಕೆ ಅನುಕೂಲವೆನಿಸುತ್ತದೆ.

ನಿಮ್ಮ-ನಮ್ಮ ಕರ್ತವ್ಯ

ಭಾರತ ಸರಕಾರ ಈಗಾಗಲೇ ಕೈಮಗ್ಗದ ಸಂಬಂಧದಲ್ಲಿ ವಿಚಾರಣೆ ನಡೆಸಿ ವರದಿ ಮಾಡಲು ಒಂದು ಸಮಿತಿಯನ್ನು ನೇಮಿಸಿದೆ. ಅಲ್ಲದೆ ಲೋಕ ಸಭೆಯು ಈ ಅಧಿವೇಶನದಲ್ಲಿ ಗಿರಣಿ ಬಟ್ಟೆಯ ಮೇಲೆ ಗಜಕ್ಕೆ ಮೂರು ಪೈಯಂತೆ ಅಬಕಾರಿ ಸುಂಕವನ್ನು ಹೇರಲು ಅಧಿಕಾರ ಕೊಡುವ ಮಸೂದೆಯನ್ನೂ ತಂದಿದೆ. ಈ ಹೊಸ ಸುಂಕದಿಂದ ಬರುವ ಆರೂ ಕಾಲು ಕೋಟಿ ರೂಪಾಯಿಯ ಬಲದಿಂದ ಒಂದು ನಿಧಿಯನ್ನೇರ್ಪಡಿಸಿ ಕೈಮಗ್ಗದ ಬಟ್ಟೆಗಳ ಸಮಸ್ಯೆ ಪರಿಹಾರಕ್ಕೆ ನೆರವಾಗುವ ಕ್ರಮಗಳನ್ನು ಕೈಗೊಳ್ಳುವುದು ಸರಕಾರದ ನಿಲುಮೆಯಾಗಿದೆ. ಆದರೆ ರಾಜಗೋಪಾಲಾಚಾರಿ ಹೇಳುವಂತೆ, ಕೈಮಗ್ಗಗಳಿಗೆ ನಿರ್ದಿಷ್ಟವಾದ ಪೇಟೆಯಿಲ್ಲದಿದ್ದರೆ, ಈ ಮಹತ್ವದ ಗುಡಿಕೈಗಾರಿಕೆ ಕುಸಿದು ಬೀಳುವುದು ನಿಶ್ಚಯ. ಮುಂಬಯಿಯ ಗಿರಣಿಯೊಡೆಯರ ಸಂಘ ಕೂಡ ಕೈಮಗ್ಗ ಗುಡಿ ಕೈಗಾರಿಕೆಗಳಲ್ಲೆಲ್ಲ ಪ್ರಾಮುಖ್ಯವಾದುದೆಂದು ಹೇಳಿ ಅದು ಬದುಕಿ ಬಾಳಬೇಕೆಂದು ಆಶಿಸಿದೆ. ಹೀಗಾಗಬೇಕಿದ್ದಲ್ಲಿ, ಸಂಶೋಧನೆ, ನಯ ನಾಜೂಕುಗಳಿಂದ ಜನಪ್ರಿಯತೆಯನ್ನು ಕೈಮಗ್ಗಗಳ ಬಟ್ಟೆಗಳು ಪಡೆಯಲೆತ್ನಿಸುವುದು ಅವಶ್ಯವಿದ್ದಂತೆ, ಉತ್ಪಾದಿತವಾದ ಸರಕಿಗೆ ಸುಲಭ ಪೇಟೆ ದೊರೆಯುವಂತಾಗುವುದೂ ಅಗತ್ಯ. ಜನರಾದರೂ ಕೈಮಗ್ಗದ ಬಟ್ಟೆಗಳಿಗೆ ಕೊಡಬೇಕಾಗಿ ಬರುವ ಸುಮಾರು 20% ಹೆಚ್ಚಿಗೆ ಬೆಲೆಯನ್ನು ಆ ಬಟ್ಟೆಯ ತಾಳಿಕೆ ಬಾಳಿಕೆ ಹಾಗೂ ರಾಷ್ಟ್ರೀಯ ಉದ್ಯೋಗವೆಂಬ ದೃಷ್ಟಿಯಿಂದ ಕಾಣುವುದು ಶ್ರೇಯಸ್ಕರ. ಇದರಿಂದ ನಮಗೆ ಅಲ್ಪ ನಷ್ಟವೆನಿಸಿದರೂ, ಲಕ್ಷಾಂತರ ಜನರಿಗೆ ನೆರವಾಗುತ್ತದೆ.

ರೈತರ ಹಕ್ಕುಗಳು

ಈ ಬಾರಿಯ ಅಧಿವೇಶನದಲ್ಲಿ ರಾಜಗೋಪಾಲಾಚಾರಿಯವರ ನಿಲುಮೆಗೆ ಬಲದೊರೆತ ಇನ್ನೊಂದು ಪ್ರಸಂಗ ರೈತರ ಹಕ್ಕುಬಾಧ್ಯತೆಗಳಿಗೆ ಸಂಬಂಧಪಟ್ಟ ಸುಗ್ರೀವಾಜ್ಞೆಯಾಗಿದೆ. ತಂಜಾವೂರಿನಲ್ಲಿ ಧನಿ-ಒಕ್ಕಲುಗಳ ನಡುವೆ ಹಾಗೂ ವ್ಯವಸಾಯದ ಕೂಲಿಗಳ ನಡುವೆ ಉಂಟಾದ ಮನಸ್ತಾಪ ಹಾಗೂ ವಿವಾದವನ್ನು ಮುಕ್ತಾಯಗೊಳಿಸಲು ಗವರ್ನರರು ಹೊರಡಿಸಿದ ಸುಗ್ರೀವಾಜ್ಞೆಗೆ ಕಾಯಿದೆ ಸ್ವರೂಪ ನೀಡುವ ಮಸೂದೆಯೊಂದು ಶಾಸನಸಭೆಯಲ್ಲಿ ಚರ್ಚೆಗೆ ಬಂತು. ಭಾರತದ ಸಮಸ್ಯೆಗಳಲ್ಲಿ ಅತ್ಯಂತ ಮಹತ್ವದ ಆದರೆ ಅಷ್ಟೇ ಜಟಿಲವಾದ ಭೂಮಿಯೊಡೆತನದ ಪ್ರಶ್ನೆಯನ್ನು ಸ್ಪರ್ಶಿಸುವ ಈ ಮಸೂದೆಗೆ ತತ್ವತಃ ಎಲ್ಲ ಸದಸ್ಯರ ಬೆಂಬಲ ದೊರೆಯಿತು. ಆದರೆ ಸುಗ್ರೀವಾಜ್ಞೆಯಲ್ಲಿ ಇರಬಹುದಾದ ಕೆಲವು ಲೋಪದೋಷಗಳನ್ನು ಪರಿಶೀಲಿಸಲಿಕ್ಕೂ ಮುಖ್ಯವಾಗಿ ಭಾಷೆಯನ್ನು ಸುಧಾರಿಸಿ ಕಾನೂನು ಸರಳವೂ ಸಮಗ್ರವೂ ಆಗುವಂತೆ ಮಾಡಲಿಕ್ಕೂ ಅವಕಾಶ ಮಾಡಿಕೊಡುವುದು ಸೂಕ್ತವೆಂದು ವಿರೋಧೀ ಪಕ್ಷದ ನಾಯಕ ಶ್ರೀ ಟಿ ವಿಶ್ವನಾಥನರು ಸೂಚಿಸಿದರು. ಗವರ್ನರರ ಸುಗ್ರೀವಾಜ್ಞೆಯಲ್ಲಿ ಕಂಡು ಬಂದ ಕೊರತೆಗಳನ್ನು ನಿವಾರಿಸುವುದಕ್ಕಾಗಿಯೋ ಮತ್ತೆ ಎರಡುಸಲ ಆವಶ್ಯಕ ತಿದ್ದುಪಡಿಗಳನ್ನು ಮಾಡಬೇಕಾಯಿತೆಂಬುದರಿಂದ ಈ ಕಾಯಿದೆಯನ್ನು ಹಸಿಬಿಸಿಯಾಗಿ ಪಾಸು ಮಾಡದೆ, ನಿಧಾನವಾಗಿ ಪರ್ಯಾಲೋಚಿಸಿ, ದೋಷ ನಿವಾರಿಸಿ ಅದನ್ನು ಸ್ವೀಕರಿಸಬೇಕೆಂದು ಹೇಳಿದ್ದು ಯಥೋಚಿತವೆನ್ನಲಡ್ಡಿಯಿಲ್ಲ. ಈ ಸೂಚನೆಯನ್ನು ಮಾನ್ಯ ಮಾಡಿ ವಿಧಾನ ಸಭೆಯ ಎರಡೂ ಮನೆಗಳ ಒಟ್ಟು ೨೦ ಮಂದಿ ಸದಸ್ಯರಿರುವ ಪರಿಶೀಲಕ ಸಮಿತಿಯು ಈ ಕಾಯಿದೆಯನ್ನು ಪುನರ್ವಿಮರ್ಶಿಸಬೇಕೆಂದು ಕೊನೆಗೆ ನಿರ್ಣಯವಾಯಿತು. ಮೇಲ್ಮನೆಯು ಈ ತಿಂಗಳ ೧೮ನೇ ದಿನಾಂಕ ಸೇರಲಿದ್ದು, ಅಲ್ಲಿಯೂ ಈ ಗೊತ್ತುವಳಿ ಸ್ವೀಕೃತವಾಗಬೇಕು. ಆ ಮೇಲೆ ಎರಡು ಮೂರು ದಿನಗಳು ಮಸೂದೆಯ ಪರಿಶೀಲನೆಗೆ ಅಗತ್ಯ. ಆದುದರಿಂದ ನವಂಬರ ೨೪ನೇ ತಾರೀಕಿಗೆ ಶಾಸನ ಸಭಾಧಿವೇಶನವನ್ನು ಮುಂದೂಡಲಾಗಿದೆ.

ಒಕ್ಕಲುಗಳಿಗೆ ಸಂರಕ್ಷಣೆ

ತಂಜಾವೂರಿನ ರೈತರಿಗೆ ಸಂರಕ್ಷಣೆಯನ್ನು ಕೊಡುವ ಉದ್ದೇಶದಿಂದ ಕೂಡಿದ ಈ ಮಸೂದೆಯನ್ನು ಚರ್ಚಿಸುವಾಗ ಸರಕಾರದ ಸದುದ್ದೇಶವು ಎಲ್ಲರ ಒಪ್ಪಿಗೆಯನ್ನು ಪಡೆಯಿತು. ಕಮ್ಯೂನಿಸ್ಟ್ ಸದಸ್ಯರು ಸಾಗು ಭೂಮಿಯ ಮೇಲೆ ರೈತರ ಒಡೆತನ ಕಾಯಂ ಇರಬೇಕೆಂದು ಅಭಿಪ್ರಾಯಪಟ್ಟರು. ಕೆಲವು ಸದಸ್ಯರು ನ್ಯಾಯವಾದ ಗೇಣಿಯನ್ನು ನಿಗದಿ ಮಾಡುವುದವಶ್ಯವೆಂದು ಸಲಹೆ ಇತ್ತರು. ಸಾಮಾನ್ಯವಾಗಿ ವರ್ಷ ವರ್ಷವೂ ಬದಲು ಗೇಣಿಯೊಪ್ಪಿಸುತ್ತಾ ಬಂದರೂ, ಒಕ್ಕಲೆಬ್ಬಿಸುವುದಕ್ಕೆ ಎಂದಿಗೂ ಅವಕಾಶವಿರಕೂಡದೆಂದು ಎಲ್ಲ ಸದಸ್ಯರೂ ಸೂಚಿಸಿದರು. ಚರ್ಚೆಯ ಕಾಲದಲ್ಲಿ ಇತರ ಜಿಲ್ಲೆಗಳಲ್ಲಿ ಕೂಡ ರೈತರ ಹಕ್ಕುಬಾಧ್ಯತೆಗಳಿಗೆ ಯೋಗ್ಯ ಸಂರಕ್ಷಣೆ ಕೊಡುವುದವಶ್ಯವೆಂದು ಹೆಚ್ಚಿನ ಸದಸ್ಯರು ಪ್ರತಿಪಾದಿಸಿದರು. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಚಾಲಗೇಣಿ ಒಕ್ಕಲುಗಳಿಗೆ ಭೂಮಿಯ ಒಡೆತನವಂತೂ ಇರಲಿ ಒಂದು ವರ್ಷ ಮುಗಿಯುವುದರೊಳಗಾಗಿ ಒಕ್ಕಲೆದ್ದು ಹೋಗಬೇಕಾಗಿ ಬರುವುದೆಂದು ಮಂಗಳೂರಿನ ಪ್ರತಿನಿಧಿ ಶ್ರೀ ಸ ಯಸರು ಪರಿಸ್ಥಿತಿಯನ್ನು ಸ್ಪಷ್ಟರೀತಿಯಲ್ಲಿ ವರ್ಣಿಸಿದರು. ಕುಂದಾಪುರದ ಶ್ರೀ ಮಂಜಯ್ಯ ಶೆಟ್ಟರು ತಂಜಾವೂರು ಮಸೂದೆಯ ಕೆಲ ಕಲಮುಗಳು ಅಲ್ಲಿಯ ವಿಶಿಷ್ಟ ಪರಿಸ್ಥಿತಿಗೆ ಮಾತ್ರ ಅನ್ವಯಿಸುವುದರಿಂದ ಅದಕ್ಕೆ ತಕ್ಕ ತಿದ್ದುಪಡಿ ಮಾಡಿ ಉಳಿದೆಲ್ಲ ಜಿಲ್ಲೆಗಳಿಗೂ ಲಗಾವಾಗುವ

ಋತುಸ್ರಾವ ನಿಂತರೆ

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ [illegible] ಋತುಸ್ರಾವವಾಗುವುದು, ಹೊಟ್ಟೆಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣವೊಂದುವುದು. ಯಾವ ಬಾಧಕವೂ ಇಲ್ಲ. [illegible] ಖಾತ್ರಿ ಗುಣವಾಗದಿದ್ದರೆ; ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8- [illegible] ಹನ್ನೆರಡಾಣೆ ಪ್ರತ್ಯೇಕ]

Mis D. DEVEE, F. Ds. (N. Y.)
Tollygunge CALCUTTA
ಸ್ಟಾಕಿಸ್ಟರು: [illegible] ಕಂಪೆನಿ, ಮಂಗಳೂರು

ZANDU KESARI JIVAN
ಝಾಂಡೂ ಕೇಸರಿ ಜೀವನ

ಕೆಮ್ಮು, ನೆಗಡಿ ರಾಜಯಕ್ಷ್ಮ, ಮಿದುಳು ನಿತ್ರಾಣ, ಅಕಾಲಿಕ ವೃದ್ಧಾಪ್ಯ, ಸರ್ವಸಾಮಾನ್ಯ ಬಲಹೀನತೆಗಳಿಗೆಲ್ಲಾ ಕೇಸರಿ ಜೀವನವು ಹೆಸರುವಾಸಿಯಾದದ್ದು ಅಲ್ಲದೆ ದೇಹಾರೋಗ್ಯವನ್ನು ಸಮತೂಕದಲ್ಲಿರಿಸಲು ಆದರ್ಶ ಟೊನಿಕ್ ಆಹಾರವಾಗಿದೆ 1 ರಾತ್ಲ. ರೂ. 6-8-0 ¼ ರಾತ್ಲ: ರೂ 1-14-0

ದೊರೆಯುವ ಸ್ಥಳಗಳು:
1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ ಎಂಡ್ ಡ್ರಗ್ಗಿಸ್ಟ್ಸ ಉಡುಪಿ
2 ಶ್ರೀ ವಿ ವಿ ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್ ಎನ್. ಶರ್ಮ, ಹಜೂರು ರಸ್ತೆ ಮಂಗಳೂರು.
ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರಿ ಶರತ್ತು ವಗೈರೆಗಳಿಗೆ ಬರೆಯಿರಿ

DAMODAR & CO.,
Nainiappa Naicken Street, Park Town-MADRAS. 3

More & More
PEOPLE BUY
PLATO
REGD
PLATO [illegible] No. 66
The pen of the day
M P P I. LTD. BOMBAY 4

ರಾಜಾಜಿಯ ರಾಜ್ಯಭಾರ

ಶ್ರೀಮಂತರ ಆಸ್ತಿ ಕರಗಿಸುವ ಕರಭಾರ ಪದ್ಧತಿ

ತೆ ಈ ಮಸೂದೆಯ ರಕ್ಷೆಯನ್ನು ವಿಸ್ತರಿಸಬೇಕೆಂದು ಸೂಚಿಸಿದರು. ಪ್ರಶ್ನೋತ್ತರ ಕಾಲದಲ್ಲಿ ಕಂದಾಯ ಮಂತ್ರಿ ಶ್ರೀ ಮಾಣಿಕ್ಯವೇಲು ನಾಯಕರರು ಕೊಟ್ಟ ಆಶ್ವಾಸನೆಯ ಮೇಲಿಂದ ಹೇಳುವುದಾದರೆ, ಸದ್ಯದಲ್ಲಿಯೇ ಇಡೀ ರಾಜ್ಯಕ್ಕೆ ಅನ್ವಯಿಸುವ ಒಕ್ಕಲುಹಿತ ಮಸೂದೆಯು ಸ್ವೀಕಾರಗೊಳ್ಳಲಿದೆ.

ದೀರ್ಘಸೂತ್ರದ ಕೆಡುಕು

ಖಾಸಗಿ ಮಸೂದೆಗಳ ಗೊತ್ತುವಳಿಗ ್ನು ಮಂಡಿಸುವ ದಿನ ಮಾತ್ರ ಸರಕಾ ಮೇಲೆ ಆಕ್ರಮಣವನ್ನೇ ನಡೆಸಲಾ ತೆಂಬಂತೆ ತೋರಿತು. ಸರಕಾರದೊಡ ಸಹಕರಿಸುವ ಮನೋಭಾವವನ್ನು ವಿ ಧಿ ಸದಸ್ಯರು ಬಿಟ್ಟುಗೊಟ್ಟರೆಂದು ಷ್ಟ ಕಾಣುತಿತ್ತು. ಸರಕಾರದ ಕಾ ರ್ಯಾಂಗದಲ್ಲಿ, ಎಂದರೆ, ಆಡಳಿತ ಯಂ ದಲ್ಲಿ ಶುದ್ಧೀಕರಣ ಹಾಗೂ ಪುನರ್ವ ಯನ್ನು ನಿರ್ದೇಶಿಸುವ ಗೊತ್ತುವಳಿ ಒಂದು ಮಂಡಿಸಲ್ಪಟ್ಟು, ಅದರ ಮೇಲೆ ರಸ್ಯವಾದ ಚರ್ಚೆ ನಡೆಯಿತು. ಸರ ರದ ಅಧಿಕಾರಿಗಳು ಕಾರ್ಯಕ್ಷಮ ತೆಯಿಂದ ವರ್ತಿಸುವುದಿಲ್ಲವೆಂದೂ ಅ ವಶ್ಯಕವಾದ ಸಿಬಂಧಿಗಳ ನೇಮಕದಿಂ ಖರ್ಚು ಹೆಚ್ಚಿದೆ ಎಂದೂ ಆರೋಪಿಸಿ ು. ಇದನ್ನು ನಿಮ್ಮ ನಮ್ಮಂಥ ಸಾಮಾ ಜನರು ಅಲ್ಲಗಳೆಯುವಂತಿಲ್ಲ. ಒಂದು ರ್ಜಿಹಾಕಿ ಹದಿನೈದು ದಿನ ಕಳೆದರೂ ತ್ತರ ಸಿಗುವುದಿಲ್ಲ. ಕೈ ಬೆಚ್ಚಗೆ ಮಾ ದೆ ಒಂದೂ ಕೆಲಸವಾಗುವಂತಿಲ್ಲ. ಮೇ ಧಿಕಾರಿಗಳ ಹುಕುಮನ್ನೇ ಪ್ರತಿಕ್ಷಣವೂ ಪೇಕ್ಷಿಸುತ್ತಿರಬೇಕಾದ ಅಸಂದಿಗ್ಧ ಪರಿ ತಿ ಇರುವುದರಿಂದ ಕಾರ್ಯಕ್ಷಮತೆಯೆ ಗ್ಗಿಹೋಗಿದೆ. ಒಬ್ಬ ಸದಸ್ಯರು ಹೇಳಿ ತ ೧೧ ಸಾವಿರ ರುಪಾಯಿಯನ್ನು ಒಂ ಸಾರ್ವಜನಿಕ ಉಪಯೋಗದ ಕೆಲ ಕ್ಕೆ ವಿನಿಯೋಗಿಸಲು ಮಂಜೂರು ಡಿದರೆ, ಅಷ್ಟೇ ಮೊಬಲಗು ಆ ಕೆಲ ದ ಮೇಲ್ವಿಚಾರಣೆ ನಡೆಸುವ ಸಿಬಂಧಿಗೆ ಬಳರೂಪದಲ್ಲಿ ಸಲ್ಲುತ್ತದೆ. ಹಣಕಾಸಿ ಪರಿಸ್ಥಿತಿಯು ತುಂಬ ನಾಜೂಕಾಗಿರು ಗ ಮಾತ್ರವಲ್ಲ-ಯಾವ ಕಾಲಕ್ಕೂ ರ್ವಜನಿಕ ಹಣದ ದುರುಪಯೋಗವಾ ತ್ತಿರುವುದು ಸರ್ವಥಾ ಸರಿಯಲ್ಲ. ವಿ ರೋಧೀ ಗುಂಪಿನವರು ಕಟು ವಚನದಿಂ ದೇ ಆದರೂ ಈ ಎಲ್ಲ ನ್ಯೂನತೆಗಳನ್ನು ತ್ತಿ ತೋರಿಸಿದ್ದು ಸಾರ್ವಜನಿಕ ಹಿತದೃ ಯಿಂದ ಅತ್ಯಂತ ಉಪಯೋಗಿ ಎಂದು ಷ್ಟಗೊಂಡಿತು

ಹೊಣೆಗಾರಿಕೆ

ಈ ಆರೋಪಗಳನ್ನು ರಾಜಗೋಪಾ ಚಾರ್ಯರು ಕೂಡ ಸುಲಭದಲ್ಲಿ ನಿರಾಕರಿ ವಂತಿರಲಿಲ್ಲ. ಸರಕಾರದ ಆಡಳಿತ ಯಂ ದಲ್ಲಿ ಮೂಲಭೂತ ಪರಿವರ್ತನೆಯಾಗ ಕೆಂಬ ಅಸಾಧಾರಣ ಬೇಡಿಕೆಯನ್ನವ ಒಪ್ಪದಿದ್ದರೂ ಕಾರ್ಯಕ್ಷಮತೆ ಹಾ ಮಿತವ್ಯಯವನ್ನು ಸಾಧಿಸುವುದಕೆ ಪೂರ ಶ್ರಮಿಸುವೆನೆಂದು ಆಶ್ವಾಸನ ನ್ನು ಮಾತ್ರ ಅವರು ಕೊಟ್ಟಿರುವರು ಳಹದ ವಿಕೇಂದ್ರೀಕರಣ ತತ್ವವನ್ನು ಅನುಷ್ಠಾನಕ್ಕೆ ತರುವ ಮನಸ್ಸು ಅವರದು ಎಂದು ವ್ಯಕ್ತಗೊಳ್ಳುತಿತ್ತು. ರಾಜಗೋಪಾಲಾಚಾರ್ಯರು ಕಾಂಗ್ರೆಸು ಪಕ್ಷದ ಧುರೀಣರೆಂದು ಆಯ್ಕೆಗೊಂಡಾಗ ಜನತೆಗೆ ಉತ್ತಮ ಆಡಳಿತ ಬೇಕೆಂದೂ ಇದನ್ನು ಒದಗಿಸಿಕೊಡಲು ತಾನು ಪ್ರಯತ್ನಿಸುವುದಾಗಿಯೂ ಭರವಸೆ ಇತ್ತಿದ್ದರು. ರಾಜಗೋಪಾಲಾಚಾರಿಯವರು ಕೇವಲ ಸಮಯಾವಕಾಶವನ್ನು ಕೇಳುತ್ತಿರುವರು ಸರಕಾರೀ ಅಧಿಕಾರಿಗಳಿಗೆ ಅವಿಶ್ವಾಸವನ್ನು ತೋರಿಸುವಲ್ಲಿ ಜನತೆಯೇ ಮುಂದಾಗುತ್ತಿದೆಂದೂ ಜನರಲ್ಲಿ ಸಂಶಯ ಹಾಗೂ ಅವಿಶ್ವಾಸಗಳಿರುವಷ್ಟು ಕಾಲ ಮೇಲ್ತನಿಖಿಯ ಕೆಲಸವನ್ನು ಒತ್ತಟ್ಟಿಗಿಡಲು ಬರುವುದಿಲ್ಲೆಂದೂ ಅವರು ತಿಳಿಸಿದರು. ಮುಖ್ಯ ಮಂತ್ರಿಗಳ ಈ ಕಾರಣವನ್ನು ಎಲ್ಲರೂ ಮೆಚ್ಚಬೇಕು. ಜನರ ನೈತಿಕ ಮಟ್ಟವು ಉನ್ನತಗೊಳ್ಳದಿದ್ದರೆ, ಅದೇ ಜನರ ಅಂಗವಾಗಿರುವ ಸರಕಾರೀ ಅಧಿಕಾರಿಗಳ ನೀತಿಮತ್ತೆಯನ್ನು ಪ್ರಶ್ನಿಸುವುದು ವ್ಯರ್ಥ. ವಾಮ ಮಾರ್ಗದಿಂದ ಪರಾವೃತ್ತರಾಗಿ ಋಜು ಮಾರ್ಗವನ್ನು ಅನುಸರಿಸುವುದರಿಂದ ಕೆಲವು ವೇಳೆ ಅಲ್ಪ ಉಪದ್ರವಗಳೂ ಅಲಕ್ಷಿಸಬಹುದಾದ ಕಿರುಕುಳಗಳೂ ಸಂಭವಿಸಬಹುದು. ಆದರೆ ಅಷ್ಟಕ್ಕೇ ಸಹನೆ ಕಳೆದು ಕೊಂಡು ಪ್ರಲೋಭನ ತೋರುವ ಅನುಚಿತ ಪ್ರಯತ್ನಕ್ಕೆ ಕೈಯಿಕ್ಕುವುದೂ, ಅದೇ ಸಮಯ ಸರಕಾರದ ಪ್ರಾಮಾಣಿಕತೆಯನ್ನು ಪ್ರಶ್ನಿಸುವುದೂ ಅಸಂಗತ ವಿಚಾರಗಳು

ಕಳವಳಕ್ಕೆ ಸಮಾಧಾನ

ಲೋಕ ಸಭೆಯಲ್ಲಿ ಅಧಿವೇಶನವು ಶ್ರೀ ಜಿ ವಿ ಮಾಳವಣಕರರ ಅಧ್ಯಕ್ಷತೆಯಲ್ಲಿ ದಿನಾಂಕ ೫ರಂದು ಕೂಡಿತು. ಎಲ್ಲ ಸದಸ್ಯರ ಯೋಗ ಕ್ಷೇಮವನ್ನು ವಿಚಾರಿಸುತ್ತ ನೆಹರೂ ಸಂತಸಿದ್ದರೆಂದು ವರದಿ ಮಾಡುವಾಗ, ಪತ್ರಿಕಾಪ್ರತಿನಿಧಿಗಳಿಗೆ ನೆಹರೂರ ಅಸದೃಶ ಹಾಗೂ ಮಹೋನ್ನತವಾದ ವ್ಯಕ್ತಿತ್ವ ತುಂಬ ಆಕರ್ಷಕವಾಗಿ ಕಂಡಿರಬೇಕು. ಮತಭೇದಗಳು ಸಾವಿರವಿದ್ದರೂ ನಾವು ಸ್ನೇಹಿತರಂತೆ ಅನ್ಯೋನ್ಯವಾಗಿರಬಹುದೆಂದೂ ಒಂದು ಉನ್ನತ ಧ್ಯೇಯದ ಸಾಧನೆಯಲ್ಲಿ ಪರಸ್ಪರ ಸಹಕರಿಸಿ ದುಡಿಯುವುದು ಸಾಧ್ಯನೆಂದೂ ನೆಹರೂ ತಮ್ಮ ನಡವಳಿಕೆಯಿಂದ ತೋರಿಸಿ ಕೊಡುತ್ತಾರೆ. ಪಾರ್ಲಿಮೆಂಟಿನಲ್ಲಿ ವಿರೋಧೀ ಸದಸ್ಯರ ಮನದಾಶಯವನ್ನು ಸಹಜವಾಗಿ ತಿಳಿದುಕೊಳ್ಳಬಲ್ಲ ಸಾಮರ್ಥ್ಯ ನೆಹರೂರಿಗಿದೆ. ಹಿಂದಿನ ಅಧಿವೇಶನದಲ್ಲಿ ಪ್ರತಿಬಂಧಕ ಸ್ಥಾನಬದ್ಧತೆಯ ಪ್ರಶ್ನೆಯಲ್ಲಿ ವಿರೋಧೀ ಗುಂಪಿನ ಮನವೊಲವು ಸಂಪಾದಿಸುವ ಬುದ್ಧಿವಂತಿಕೆ ನೆಹರೂರಿಗಿಲ್ಲದಿರುತ್ತಿದ್ದರೆ, ಗೃಹಸಚಿವ ಡಾ| ಕಟಜೂರ ನಡವಳಿಕೆಯಿಂದ ಎಲ್ಲರೂ ಬೇಸತ್ತು, ಮನಸ್ಸು ಕೆಡಿಸಿಕೊಳ್ಳುತಿದ್ದರು. ಈ ಸಲದ ಅಧಿವೇಶನದಲ್ಲಿ ಕೂಡ ಆಹಾರವಿಷಯದಲ್ಲಿ ಕಿದ್ವಾಯಿಯವರು ಹೊಸ ಧೋರಣೆಯನ್ನು ಕೆಲಸಮಯದಿಂದೀಚೆಗೆ ಪ್ರತಿಪಾದಿಸುತ್ತ ಬಂದುದರಿಂದ, ಸದಸ್ಯರಲ್ಲಿ ಹೆಚ್ಚಿನವರು ಈ ವಿಷಯ ಕುತೂಹಲದಿಂದಿದ್ದರು. ಆಹಾರಧಾನ್ಯಗಳ ಪರಿಸ್ಥಿತಿ ಚೆನ್ನಾಗಿದೆ ಎಂಬುದನ್ನು ಸ್ಪಷ್ಟೀಕರಿಸುವಂತಿದ್ದರೂ ವಿನಿಯಂತ್ರಣದಂಥ ಗಂಭೀರ ಹೆಜ್ಜೆಯನ್ನು ಸರಕಾರ ಏಕಾಏಕಿಯಾಗಿ ಮುಂದಿಡುವುದೇ ಎಂಬ ಭೀತಿ ಅಥವಾ ಕಳವಳ ಸದಸ್ಯರಲ್ಲಿದ್ದದ್ದು ಕಂಡು ಬಂತು. ಡಾ| ಶ್ಯಾಮ ಪ್ರಸಾದ ಮುಖರ್ಜಿಯವರು. ಇದನ್ನು ಬಿಚ್ಚು ಮಾತಿನಲ್ಲಿ ವ್ಯಕ್ತಗೊಳಿಸಿದರು. ಆಹಾರ ಸಂಬಂಧದ ಧೋರಣೆಯಲ್ಲಿ ಬದಲಾವಣೆ ಅಪೇಕ್ಷಿತವಿದ್ದರೆ, ಸರಕಾರ ಈ ಸಂಬಂಧದಲ್ಲಿ ಒಂದು ನಿರ್ಣಯಕ್ಕೆ ಬರುವ ಮೊದಲು ಪಾರ್ಲಿಮೆಂಟಿನ ಅಭಿಪ್ರಾಯ ಕೇಳುವುದಿಲ್ಲವೇ ಎಂದವರು ಪ್ರಶ್ನಿಸಿದರು. ನೆಹರೂ ಒಡನೆಯೇ ಎದ್ದು [illegible] ಡಾ| ಮುಖರ್ಜಿಯವರ ಸೂಚನೆಯನ್ನು ಅನುಮೋದಿಸಿದರು. ಮುಂದಿನ ವಾರ ಈ ಸಂಬಂಧ ಚರ್ಚೆ ನಡೆಯಬೇಕೆಂದು ಗೊತ್ತಾಗಿದೆ.

'ಸಾವಿನ ಸುಂಕ'

ಈ ಅಧಿವೇಶನದಲ್ಲಿ ಅತ್ಯಂತ ಮಹತ್ವವನ್ನು ಪಡೆದ ವಿಷಯ 'ಸಾವಿನ ಸುಂಕ'ವೆಂದು ಯಥಾರ್ಥವಾಗಿ ಕರೆಯಬಹುದಾದ ಆಸ್ತಿಕರವೆಂಬ ಸೌಮ್ಯ ಹೆಸರಿನ ಮಸೂದೆ. ಅರ್ಥಸಚಿವ ಶ್ರೀ ಚಿಂತಾಮಣ ದೇಶಮುಖರು ಈ ಮಸೂದೆಯನ್ನು ಮುಂದಿಟ್ಟು ಸಂಪತ್ತಿನ ವಿತರಣೆಯಲ್ಲಿರುವ ಅಸಮಾನತೆಯನ್ನು ದೂರೀಕರಿಸುವ ಹೆಜ್ಜೆ ಇದೆಂಬುದಕ್ಕಾಗಿ ಸಾಮಾಜಿಕ ಮಹತ್ವವೂ ಅಭಿವೃದ್ಧಿ ಯೋಜನೆಗಳಿಗೆ ಅಗತ್ಯವಿರುವ ಹಣವನ್ನು ಒದಗಿಸಿಕೊಡುವುದೆಂಬುದಕ್ಕಾಗಿ ಆರ್ಥಿಕ ಮಹತ್ವವೂ ಈ ಮಸೂದೆಗೆ ಇದೆ ಎಂಬುದನ್ನು ಚೆನ್ನಾಗಿ ವಿವರಿಸಿದರು. ಈ ಮಸೂದೆಯು ಕಾಶ್ಮೀರವನ್ನು ಹೊರತಾಗಿ ಸಮಗ್ರ ಭಾರತಕ್ಕೆ ಅನ್ವಯಿಸುತ್ತದೆ. ಒಬ್ಬ

[೮ನೇ ಪುಟ ನೋಡಿ]



ಆದರೆ .. ಸ್ವಚ್ಛವಾಗಿ ಪೊಟ್ಟಣ ಕಟ್ಟಲ್ಪಟ್ಟ ಉತ್ತಮ ತಯಾರಿಕೆಯ ತಾಜಾ ಚಹವು — ಅದು ಬ್ರೂಕ್ ಬಾಂಡ್ ಚಹವೇ ಆಗಿದ್ದರೆ — ಮಿತವ್ಯಯಕರವೂ ಆಗಿರುವದೆಂದು ಲಕ್ಷ್ಮಿಯು ಒಬ್ಬ ಹೇಳಿದಳು. ನನ್ನ ಮಹದಾಶ್ಚರ್ಯಕ್ಕೆ ಅಂದಿನ ದಿನವೇ ಮೊದಲನೆ ಸಾರಿಗೆ ನಾನು ಕೊಂಡ ಬ್ರೂಕ್ ಬಾಂಡ್ ಪೊಟ್ಟಣದ ಚಹವು ಇಂದಿನವರೆವಿಗೂ ಉಪಯೋಗಿಸುತ್ತಿದ್ದ ಬಿಡಿದಾ ಚಹಾಗಿಂತ ಗುಣದಲ್ಲಿ ಅತಿ ಶ್ರೇಷ್ಠವಾಗಿದ್ದುದೂ ಅಲ್ಲದೆ, ಮೊದಲಿನಷ್ಟೇ ಬಟ್ಟಲುಗಳಷ್ಟು ಚಹಾ ಮಾಡಲು ಮೊದಲಿಗಿಂತ ಕಮ್ಮಿ ಚಹಾ ಪುಡಿ ಸಾಕಾಯಿತು. ಅಂದಿನಿಂದ ಮನೆಗೆ ತಂದ ಪ್ರತಿಯೊಂದು ಬ್ರೂಕ್ ಬಾಂಡ್ ಪೊಟ್ಟಣವೂ ಲಕ್ಷ್ಮಿಯು ಹೇಳಿದ್ದು ಎಷ್ಟು ನಿಜವೆಂಬುದನ್ನು ಸಮರ್ಥಿಸಿದೆ

ಭಾರತದ ಅತ್ಯುತ್ತಮ ಪೊಟ್ಟಣಗಳಲ್ಲಿ ಭಾರತದ ಅತ್ಯುತ್ತಮ ಚಹಾ.

ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ

ವಾರ್ಷಿಕ ನಿಧಿ ಏರಿಸುವಿಕೆಯು ಮತ್ತು ಸದಸ್ಯತನದ ಚಳುವಳಿ, 1952

ಮಂಗಳೂರಿನ ಹಂಪನಕಟ್ಟೆಯಲ್ಲಿರುವ ದ. ಕ. ಜಿಲ್ಲಾ ರೆಡ್ ಕ್ರಾಸ್ ಶಾಖೆ ಅಥವಾ ಇನ್ನಿತರ ಜಿಲ್ಲೆಗಳಲ್ಲಿನ ಶಾಖೆಗಳಿಗೆ ಬರೆದು ಪ್ರತಿಯೊಬ್ಬರೂ ಇಂದೇ ರೆಡ್ ಕ್ರಾಸ್ ಸೊಸೈಟಿಯ ಸದಸ್ಯರಾಗಿರಿ.

ಈ ಜಾಹೀರಾತಿನ ಸ್ಥಳದಾನ ಮಾಡಿದವರು:

ದಿ ಕೆನರಾ ಬ್ಯಾಂಕಿಂಗ್ ಕೋಪೋರೇಶನ್ ಲಿಮಿಟೆಡ್.

ಉಡುಪಿ.

ನವಯುಗ

ಉಡುಪಿ, ಗುರುವಾರ ೧೩-೧೧-'೫೨

ಸಂರಕ್ಷಣಾ ಸಾಮರ್ಥ್ಯ

ಪ್ರಾದೇಶಿಕ ಸೈನ್ಯ ಸಪ್ತಾಹವನ್ನು ಆಚರಿಸುವ ಸಂದರ್ಭದಲ್ಲಿ ರಾಷ್ಟ್ರಾಧ್ಯಕ್ಷ ಪ್ರಸಾದರೇ ಮೊದಲಾಗಿ ಕೆಲವು ಧುರೀಣರು ಜನತೆಗೆ ಕೊಟ್ಟ ಕರೆಯು ತುಂಬ ಅರ್ಥಗರ್ಭಿತವಿದೆ. ನಮ್ಮ ಸೈನ್ಯ ಪಡೆಗೆ ಬೆಂಬಲವಾಗಿ ನಿಲ್ಲಬಲ್ಲ ಕಾದಿಟ್ಟ ದಳವಾಗಿ ಈ ಪ್ರಾದೇಶಿಕ ಸೈನ್ಯವು ಕೆಲಸ ಮಾಡುವುದೆಂದನ್ನು ಈ ಮಹನೀಯರು ನಿರೂಪಿಸಿದರು. ಯುದ್ಧರಂಗದಲ್ಲಿ ಪ್ರತ್ಯಕ್ಷ ಹೋರಾಟಕ್ಕೆ ಅನುವಾಗುವ ರೀತಿಯಲ್ಲಿ ಯೋಗ್ಯ ತರಬೇತಿಯನ್ನು ಸೈನಿಕರಿಗೆ ಕೊಡುವುದನ್ನು ನಾವೆಲ್ಲರೂ ಬಲ್ಲೆವು. ಸಂರಕ್ಷಣಾ ಕಾರ್ಯದಲ್ಲಿ ಒಂದು ರಾಷ್ಟ್ರಕ್ಕೆ ಅದರ ಸುಸಜ್ಜಿತವಾದ ಸೈನ್ಯಬಲವೇ ಅತ್ಯಂತ ಪ್ರಾಮುಖ್ಯವೆಂಬುದು ಯಾರೂ ಅಲ್ಲಗಳೆಯುವಂತಿಲ್ಲ. ಭಾರತವು ಸ್ವತಂತ್ರ ರಾಷ್ಟ್ರವೆಂದು ಸಾರ್ವಭೌಮಾಧಿಕಾರ ಪಡೆದಂದಿನಿಂದ ನಮ್ಮ ಸಂರಕ್ಷಣೆಯ ಹೊಣೆಗಾರಿಕೆಯು ನಮ್ಮ ಸರಕಾರದ ಮೇಲೆ, ಅರ್ಥಾತ್, ಅದರ ಅಧೀನವಿರುವ ನಮ್ಮ ಸೈನ್ಯದ ಮೇಲೆಯೇ ಬಿದ್ದಿದೆ. ಆಯಕಟ್ಟಿನ ಸ್ಥಾನದಲ್ಲಿ ಭಾರತವು ಇರುವುದರಿಂದ ಭಾರತದ ಸೈನ್ಯ ಯಾವಾಗಲೂ ಸತರ್ಕವಾಗಿದ್ದುಕೊಂಡು ದಕ್ಷತೆಯಿಂದ ಕರ್ತವ್ಯ ನಿರ್ವಹಿಸುವುದು ಅವಶ್ಯ. ಈ ಎಲ್ಲ ಕಾರಣಗಳಿಂದ ನಮ್ಮ ಸೈನ್ಯ ಪಡೆಯನ್ನು ಸರ್ವರೀತಿಯಿಂದಲೂ ಬಲಗೊಳಿಸುವುದು ಅಪೇಕ್ಷಣೀಯ. ಇದನ್ನು ಕೇಳಿದ ಹಲವರು ಆಕ್ಷೇಪವೆತ್ತಬಹುದು ಅಥವಾ ಆಶ್ಚರ್ಯಚಕಿತರಾಗಲೂ ಬಹುದು. ಭಾರತವು ಅಹಿಂಸೆಯನ್ನು ಪ್ರತಿಪಾದಿಸುತ್ತದೆ; ಶಾಂತಿ ಪ್ರವಚನ ಮಾಡುತ್ತದೆ. ಹೀಗಿರುತ್ತಾ ಸೈನ್ಯಬಲವನ್ನು ಹೆಚ್ಚಿಸಿರಿ ಎಂಬ ಉಪದೇಶ ಅಸಂಗತವಲ್ಲವೇ? ಎಂದು ನಮ್ಮಲ್ಲಿ ಹಲವರಿಗೆ ಸಂದೇಹ ಬರಬಹುದು. ಒಂದು ಪ್ರಶ್ನೆಯ ಕೂಲಂಕಷ ಪರಿಜ್ಞಾನವಿಲ್ಲದಿರುವಾಗ ಒಂದು ದೇಶದ ಸದಾಶಯ ಹಾಗೂ ಪ್ರಾಮಾಣಿಕತೆಯ ಬಗ್ಗೆ ಪ್ರಶ್ನೆ ಏಳುವಾಗ ಈ ರೀತಿ ಸಂದೇಹ ಬರುವುದು ಸಾಮಾನ್ಯ ಸಂಗತಿ. ಆದರೆ ನಮ್ಮ ಸಂರಕ್ಷಣೆಯ ಹೊಣೆಯನ್ನು ನಾವು ಬೇರೆ ರಾಷ್ಟ್ರಗಳ ಔದಾರ್ಯಕ್ಕೆ ಬಿಟ್ಟುಕೊಡುವಂತಿಲ್ಲವೆಂಬುದನ್ನೂ ನಮ್ಮ ಅಹಿಂಸೆ ಹಾಗೂ ಶಾಂತಿಯ ಧೋರಣೆಯು ಗತ್ಯಾತ್ಮಕವಾದುದೆಂಬುದನ್ನೂ ಇಲ್ಲಿ ಅವಶ್ಯ ಸ್ಮರಿಸಿಕೊಳ್ಳಬೇಕು. ಅಹಿಂಸೆ ಎಂದು ನಾವು ನಮ್ಮನ್ನು ಕೆಣಕಲೆತ್ನಿಸುವವರಿಗೆ ಕ್ಷಮೆ ನೀಡಲಾರೆವು. ಹಾಗೆಯೇ ಸ್ವಾತಂತ್ರ್ಯದ ಅಡಿಗಲ್ಲನ್ನೇ ನಡುಗಿಸುವ ಆಕ್ರಮಣಕಾರಿ ಯುದ್ಧವನ್ನು ಶಾಂತಿಯ ನೆವದಿಂದ ಪ್ರತಿಭಟಿಸದೆ ಇರಲಾರೆವು. ಆತ್ಮರಕ್ಷಣೆಯನ್ನು ಮಾಡಿಕೊಳ್ಳಲಾರದ ವ್ಯಕ್ತಿಯಾಗಲೀ ರಾಷ್ಟ್ರವಾಗಲೀ ಅಭ್ಯುದಯವನ್ನು ಹೊಂದುವುದು ಕಷ್ಟಸಾಧ್ಯ. ಆದ ನಮ್ಮ ಸೇನಾಧಿಪತಿ ಕಾರ್ಯಪ್ಪನವರು ಹೇಳುವಂತೆ ಮತ್ತು ಪ್ರಧಾನಿ ನೆಹರೂ ಸಾರಿದಂತೆ--ಎಂದಿಗೂ ವಿದೇಶಗಳ ಮೇಲೆ ಆಕ್ರಮಣ ನಡಸುವುದು ನಮ್ಮ ಇಚ್ಛೆಯಲ್ಲ. ಹೀಗೆ ಬಾರಿಬಾರಿಗೂ ಹೇಳಿರುವುದರಿಂದ ಸೈನ್ಯವನ್ನು ಬಲಗೊಳಿಸಿರೆಂದು ಧುರೀಣರು ಹೇಳಿದ ಮಾತಿನಿಂದ ವಿದೇಶೀ ಜನತೆ ಚಕಿತಗೊಳ್ಳುವುದು ಬೇಡ. ಆದರೆ ನಮ್ಮವರು ಧುರೀಣರ ಕರೆಯನ್ನು ಮನ್ನಿಸುವಲ್ಲಿ ಹಿಂದಾಗಬಾರದು. ಸೈನ್ಯ ಶಿಕ್ಷಣವನ್ನು ಪ್ರತಿಯೊಬ್ಬ ನಾಗರಿಕನೂ ಕೆಲಮಟ್ಟಿಗೆ ಪಡೆಯುವಂಥ ಸೌಲಭ್ಯ ದೊರೆತಲ್ಲಿ, ಅದರಿಂದ ರಾಷ್ಟ್ರಕ್ಕೆ ಪ್ರಯೋಜನವುಂಟು. ಇದನ್ನು ದೃಷ್ಟಿಯಲ್ಲಿಟ್ಟುಕೊಂಡೇ ಕೆಲವೊಮ್ಮೆ ನಮ್ಮ ಶಾಲಾಕಾಲೇಜುಗಳಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸೈನಿಕ ಶಿಕ್ಷಣ ನೀಡಬೇಕೆಂಬ ಸೂಚನೆ ಬಂದದ್ದುಂಟು. ಇದರ ಸಾಧ್ಯಾಸಾಧ್ಯತೆಯು ಆರ್ಥಿಕ ಅನುಕೂಲತೆಯನ್ನು ಮುಖ್ಯವಾಗಿ ಅವಲಂಬಿಸಿರುವುದರಿಂದ, ಈ ಸೂಚನೆಗೆ ಸಾಕಷ್ಟು ಪ್ರೋತ್ಸಾಹ ದೊರೆತಿಲ್ಲ. ಆದರೆ ಮಾನಸಿಕವಾಗಿ ಈ ಪದ್ಧತಿಗೆ ಯೋಗ್ಯ ಹಿನ್ನೆಲೆಯನ್ನು ನಾವು ಈಗಿಂದೀಗಲೇ ಕಲ್ಪಿಸಿ ಕೊಳ್ಳಲು ಬರುತ್ತದೆ. ಸೈನಿಕ ಶಿಕ್ಷಣದಿಂದ ನಮ್ಮ ದೇಹದಾರ್ಢ್ಯ ವೃದ್ಧಿಗೊಳ್ಳುವುದಲ್ಲದೆ ಶಿಸ್ತು, ಸಂಯಮ, ಸಾಮರ್ಥ್ಯ, ಧೈರ್ಯ ಸಾಹಸ, ದೃಢಬುದ್ಧಿ, ರಾಷ್ಟ್ರಾಭಿಜ್ಞತೆ, ಸ್ವಾರ್ಥತ್ಯಾಗ, ಸಮಷ್ಟಿಹಿತ ಮುಂತಾದ ಉತ್ತಮ ಗುಣಗಳ ಬೆಳವಣಿಗೆಗೂ ಆಸ್ಪದ ದೊರೆಯುತ್ತದೆ. ಕರ್ತವ್ಯಜ್ಞಾನವು ಪರಿಮಾರ್ಜಿತಗೊಳ್ಳಲಿಕ್ಕೆ ಸೈನಿಕ ಶಿಕ್ಷಣದಲ್ಲಿ ತುಂಬ ಅನುಕೂಲತೆ ಇದೆ. ಹಾಗೆಂದು ಪ್ರತ್ಯಕ್ಷ ಸೈನ್ಯದಲ್ಲಿ ನಾವೆಲ್ಲರೂ ಭರ್ತಿಯಾಗಿ ಕೆಲಸ ಮಾಡಲಾರೆವು. ಆದುದರಿಂದ ಪ್ರಾಯೋಗಿಕ ರೂಪದಲ್ಲಿ ತರಬೇತಿ ನೀಡುವ ಪ್ರಾದೇಶಿಕ ಸೈನ್ಯ ಶಿಕ್ಷಣ ಕೇಂದ್ರಗಳಿಗೆ ಭರ್ತಿಯಾಗಿ ನಾವು ಬಿಡುವಿನ ಸಮಯದ ಸದುಪಯೋಗ ಮಾಡಿಕೊಳ್ಳಬಹುದು. ರಾಜಾಜಿ ಹೇಳಿದಂತೆ ಯಾಂತ್ರಿಕ ಸಲಕರಣೆಗಳ ಪರಿಚಯ ಹಾಗೂ ತಾಂತ್ರಿಕ ತರಬೇತಿಯು ಪುಕ್ಕಟೆಯಾಗಿ ಅದೂ ನಮ್ಮ ಬಿಡುವಿನ ಸಮಯದಲ್ಲಿ ಸಿಗುವ ಈ ಯೋಜನೆಯನ್ನು ಯಾರೊಬ್ಬರೂ ಉದಾಸೀನದಿಂದ ನೋಡಲಾಗದು. ಸರಕಾರದವರಾದರೂ ಹೆಚ್ಚು ಹೆಚ್ಚು ಜನರು ಈ ಯೋಜನೆಯಲ್ಲಿ ಭಾಗವಹಿಸಲಾಗುವಂತೆ ಅದನ್ನು ವ್ಯಾಪಕಗೊಳಿಸಲು ಪ್ರಯತ್ನಿಸಬೇಕು. ನಾಗರಿಕರು ತಮ್ಮ ತರಬೇತಿ ದಿನಗಳಲ್ಲಿ ಹಣರೂಪದ ಪ್ರತಿಫಲವನ್ನೂ ಪಡೆಯುವುದರಿಂದ ಇದು ಔತಣದೂಟವುಂಡು ವರದಕ್ಷಿಣೆಯನ್ನೂ ಗಿಟ್ಟಿಸುವ ಲಾಭದಾಯಕ ಸಂದರ್ಭವೆಂಬುದನ್ನು ಮರೆಯದೆ ಸಹಕರಿಸಬೇಕು.

ಐಸೆನ್‌ಹಾವರರ ಜಯಭೇರಿ

ಅಮೇರಿಕದ ಧೋರಣೆ ಮಾರ್ಪಡುವ ಸಂದೇಹ

ತುಂಬ ಕುತೂಹಲದಿಂದ ನಿರೀಕ್ಷಿಸುತ್ತಿದ್ದ ಅಮೇರಿಕದ ಅಧ್ಯಕ್ಷ ಚುನಾವಣೆಯ ಫಲಿತಾಂಶವು ಕಳೆದವಾರ ಪ್ರಕಟಗೊಂಡಿತು. ಬ್ರಿಟನಿನಲ್ಲಿ ಚರ್ಚಿಲರ ಕನ್ಸರ್ವೇಟಿವ್ ಹಾಗೂ ಅಟ್ಲೀಯವರ ಲೇಬರ್ ಪಕ್ಷವಿದ್ದಂತೆ ಅಮೇರಿಕೆಯಲ್ಲಿ ಅಧ್ಯಕ್ಷ ಟ್ರೂಮನರು ಬೆಂಬಲಿಸುವ ಡೆಮೊಕ್ರಾಟಿಕ್ ಪಕ್ಷವೂ ಅಧ್ಯಕ್ಷಪದ ಸ್ಪರ್ಧೆಯಲ್ಲಿ ಈಗತಾನೆ ಗೆದ್ದು ಬಂದ ಐಸೆನ್ ಹಾವರರ ರಿಪಬ್ಲಿಕನ್ ಪಕ್ಷವೂ ಹೆಚ್ಚು ಜನಪ್ರಿಯವಾಗಿವೆ. ಪ್ರಜಾಪ್ರಭುತ್ವ ಪದ್ಧತಿಗೆ ತವರೂರು ಬ್ರಿಟನು ಎಂಬುದಕ್ಕೆ ಸಂದೇಹವಿಲ್ಲ. ಹಾಗೆಯೇ ಅದರ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಿದ ಕೀರ್ತಿ ಅಮೇರಿಕಕ್ಕೆ. ಇದೆ ಈ ಸಲದ ಚುನಾವಣೆಯಲ್ಲಿ ಜನರು ಅತ್ಯುತ್ಸಾಹದಿಂದ ಮತದಾನ ಮಾಡಿದರೆಂದೂ ೭೫°/ₒ ರಷ್ಟು ಈ ಪ್ರಮಾಣವಿತ್ತೆಂದೂ ತಿಳಿದು ಬಂದಿದೆ. ಇದಕ್ಕೂ ಸ್ವಾರಸ್ಯವಾದ--ಮತ್ತು ಲೋಕದ ಜನರ ಮನಸ್ಸನ್ನು ಸೆರೆಹಿಡಿದಿರುವ ವಿಷಯ ರಿಪಬ್ಲಿಕನರ ಪ್ರಚಂಡ ವಿಜಯವೇ ಆಗಿದೆ. ಕಳೆದ ಇಪ್ಪತ್ತು ವರ್ಷಗಳಿಂದ ಸತತ ಅಧಿಕಾರಾರೂಢವಾಗಿದ್ದ ಡೆಮೊಕ್ರಾಟ್ ಪಕ್ಷವು ಇದೀಗ ರಿಪಬ್ಲಿಕನರ ತೀವ್ರ ಸ್ಪರ್ಧೆಯ ಮುಂದೆ ಸೋಲಿತು. ಅಧ್ಯಕ್ಷ ಟ್ರೂಮನರು ತಮ್ಮ ಪಕ್ಷದ ಹುರಿಯಾಳಾದ ಗವರ್ನರ ಅಡ್ಲಾಯ್ ಸ್ಟೀವನ್‌ಸನ್ನರ ಬಗ್ಗೆ ಅಪೂರ್ವ ಪ್ರಚಾರ ಕಾರ್ಯವನ್ನು ತೊಡಗಿದರೂ ನಿಷ್ಪ್ರಯೋಜನವಾಯಿತು

ಐಕರ ಆಕರ್ಷಕ ಗುಣ

ಆದರೆ ಅಮೇರಿಕದ ಜನರ ಮರ್ಜಿ ತುಂಬ ಮೋಜಿನದು; ಮತ್ತು ಒಂದು ರೀತಿಯಲ್ಲಿ ಅನುಕರಣೀಯ ಕೂಡ. ಐಸನ್ ಹಾವರರಿಗೆ ಜಯವಾಗುವ ನಿಶ್ಚಿತ ಚಿಹ್ನೆ ತೋರಿಕೊಂಡೊಡನೆಯೇ ಸ್ಟೀವನ್‌ಸನ್ನರು ತಮ್ಮ ಸೋಲನ್ನು ಸ್ವಯಂ ಒಪ್ಪಿಕೊಂಡುದಲ್ಲದೆ, ಅಮೇರಿಕದ ಜನರು ಹೊಸ ಅಧ್ಯಕ್ಷರಿಗೆ ಸರ್ವ ಬೆಂಬಲವನ್ನೂ ಸಹಕಾರವನ್ನೂ ಕೊಟ್ಟು ದೇಶದ ಪ್ರಗತಿಗೆ ನೆರವಾಗಬೇಕೆಂದರು. ಪಕ್ಷ-ಪ್ರತಿಪಕ್ಷಗಳ ಭೇದ ಭಾವವನ್ನು ಈ ಚುನಾವಣೆಯೊಂದಿಗೇ ಕೊನೆಗೊಳಿಸಿ ಐಕ್ಯದಿಂದ ಶ್ರಮಿಸಬೇಕೆಂಬ ಈ ಮಹನೀಯರ ಸಂದೇಶ ಅಮೇರಿಕಾ ಜನರ ಮನಃಸ್ಥಿತಿಯನ್ನು ನಿರ್ದೇಶಿಸುತ್ತದೆ. ಅಮೇರಿಕಾದ ಜನರಿಗೆ "ಹೊಸತು" ಬೇಕಾಗಿತ್ತೆಂದು ಈ ಚುನಾವಣೆ ತೋರಿಸಿಕೊಟ್ಟಿತು. ಡೆಮೊಕ್ರಾಟಿಕ್ ಪಕ್ಷದವರು ನಡೆಸಿದ ಎರಡು ದಶಕಗಳ ಆಡಳಿತದಿಂದ ಜನರ ಮನಸ್ಸು ಬೇಜಾರಗೊಂಡಿದ್ದಿತು. ಇದಕ್ಕೆ ಸರಿಯಾಗಿ ಐಸನ್‌ಹಾವರರಂಥ ಪ್ರಭಾವೀ ಮನುಷ್ಯನ ವ್ಯಕ್ತಿತ್ವ ಅಮೇರಿಕನ್ನರ ಹೃದಯವನ್ನು ಆಕರ್ಷಿಸುವಲ್ಲಿ, ಮನಮೋಹಿಸುವಲ್ಲಿ ಜಾದೂ ಕೆಲಸ ಮಾಡಿತು. ಈ ಶಕ್ತಿ ಐಸನಹಾವರರಲ್ಲಿರುವುದನ್ನು ಅರಿತೇ ಟ್ರೂಮನರು ಡೆಮೊಕ್ರಾಟಿಕ್ ಪಕ್ಷದಿಂದ ಅಧ್ಯಕ್ಷಪದಕ್ಕೆ ಸ್ಪರ್ಧಿಸಲು ಪ್ರಾರಂಭದಲ್ಲಿಯೇ ಈ ಸೇನಾಪತಿಯನ್ನು ಪ್ರಾರ್ಥಿಸಿದ್ದರು! ಶಾಂತಿ-ಸಮರಗಳೆರಡರಲ್ಲಿಯೂ ಧೀರೋದಾತ್ತ ಗುಣಗಳಿಂದ ಸುಶೋಭಿತರಾಗಿ ರಾಷ್ಟ್ರಾಭಿವೃದ್ಧಿ ಕಾರ್ಯದಲ್ಲಿ ಸಹಕರಿಸಿದ ಮಹಾನುಭಾವರೆಂಬುದರಿಂದ ಐಸನ ಹಾವರರ ವಿಜಯವನ್ನು ಎಲ್ಲರೂ ಸ್ವಾಗತಿಸಿದ್ದಾರೆ.

ನೀತಿ ಬದಲಾವಣೆ

ಕೊರಿಯಾ ಯುದ್ಧ ಪ್ರಸಂಗವೇ ಐಸನ ಹಾವರರ ಪ್ರಚಂಡ ವಿಜಯಕ್ಕೆ ಅನುವು ಮಾಡಿಕೊಟ್ಟಿತೆಂದು ಅಮೇರಿಕದ ಗೃಹ ವಾತಾವರಣವನ್ನು ನಿರೀಕ್ಷಿಸಿದವರ ಅಭಿಪ್ರಾಯವಾಗಿದೆ. ಕಮ್ಯೂನಿಸ್ಟರನ್ನು ಬಗ್ಗು ಬಡೆಯುವ ನೆಪದಲ್ಲಿ ಅಮೇರಿಕದ ಪ್ರಜಾಜನರನ್ನೂ ಕೊರಿಯದ ಯುದ್ಧಭೂಮಿಯಲ್ಲಿ ಆಹುತಿ ಕೊಡುವುದಕ್ಕೆ ಸಾಮಾನ್ಯ ಅಮೇರಿಕನರು ಸಿದ್ಧರಿಲ್ಲ. ಹಾಗೆಯೇ ಕಷ್ಟಪಟ್ಟು ತಾವು ದುಡಿದು ಬೆಳೆಸಿದುದನ್ನು ಹಿಂದುಳಿದ ರಾಷ್ಟ್ರಗಳಿಗೆ ದಾನವೆಂದು ಕೊಡುವುದಕೆ, ಅವರಾರಿಗೂ ಮನಸ್ಸಿಲ್ಲ. ಅಮೇರಿಕದ ಪ್ರಕೃತ ವಿದೇಶ ಧೋರಣೆಯಿಂದ ಅಲ್ಲಿಯ ಜನಕ್ಕೆ ಹೆಚ್ಚು ತೆರಿಗೆ ಕೊಡಬೇಕಾಗಿದೆ. ಯುದ್ಧ ಭಯದಿಂದ ಸದಾ ತತ್ತರಿಸುತ್ತಿರಬೇಕಾಗಿದೆ. ಇಂಥದರಲ್ಲಿ ಚುನಾವಣೆ ಪ್ರಚಾರದ ಕೊನೆಯ ಗಳಿಗೆಗೆ ಐಸನ್ ಹಾವರರು ಕೊರಿಯಾ ಕದನಕ್ಷೇತ್ರಕ್ಕೆ ಒಡನೆಯೇ ಭೇಟಿ ಇತ್ತು ಯುದ್ಧವನ್ನು ನಿಲ್ಲಿಸುವ ಬಗೆಯನ್ನು ಯೋಚಿಸುವುದಾಗಿ ಸಾರಿದುದು ಅಮೇರಿಕನರ ಮೇಲೆ ಬೀಸಿದ ಸಮ್ಮೋಹನಾಸ್ತ್ರವಾಯಿತು. ರಿಪಬ್ಲಿಕನರು ಡೆಮೊಕ್ರಾಟಿಕರಂತೆ ಮನೆಮಾರಿ ಪರರಿಗೆ ಉಪಕಾರ ಮಾಡುವ ಜನ ಸರ್ವಥಾ ಅಲ್ಲವಾದುದರಿಂದ ಸಹಾಯ ಹಾಗೂ ಸಾಲದ ನೆಪದಲ್ಲಿ ಅಮೇರಿಕದ ಹಣದ ಹೊನಲು ಆಗ್ನೇಯ ಏಶಿಯಾ ಹಾಗೂ ಪಶ್ಚಿಮ ಯುರೋಪು ರಾಷ್ಟ್ರಗಳಿಗೆ ಹರಿಯುವುದು ನಿಂತೀತು. ಅಮೇರಿಕದ ರಾಜಕಾರಣದ ಸದ್ಯದ ನಾಜೂಕು ಸ್ಥಿತಿಯಲ್ಲಿ ರಿಪಬ್ಲಿಕನರ "ನಮ್ಮಷ್ಟಕ್ಕೆ ನಾವು" ಎಂಬ ಸಾಹಜಿಕ ಧೋರಣೆ ತುಂಬ ಕೆಲಸ ಮಾಡಿತು

ಹಿಂದೆ—ಮುಂದೆ

ಮೊದಲಿಂದಲೂ ಅಮೇರಿಕ ಉಳಿದ ಜಗತ್ತಿನೊಡನೆ [illegible] ನಿಂತು ಮುನ್ನಡೆಯುವ ಆಸಕ್ತಿಯನ್ನು ತೋರಿಸಿದ ರಾಷ್ಟ್ರವಲ್ಲ— ಆ ಕೀರ್ತಿ ಎಲ್ಲ ಬ್ರಿಟನಿನ ಸಾಹಸಿಗರಿಗೇ ಸೇರಿದ್ದು. ತಮ್ಮ ಸೀಮಿತ ಕ್ಷೇತ್ರದಲ್ಲಿ ಉತ್ಕರ್ಷಹೊಂದುವ ಮನೋಭಾವ ಅಮೇರಿಕನ್ನರದು ಹೊರತು--ಉಳಿದವರ ಸುಖ ದುಃಖದಲ್ಲಿ ಪಾಲುಗೊಳ್ಳುವ ಔದಾರ್ಯ ಈಚಿನವರೆಗೆ ಅವರಲ್ಲಿದ್ದಿರಲಿಲ್ಲ. ಮೊದಲನೆ ಮಹಾ

ದ್ಧದ ತರುವಾಯ, ಅದರಲ್ಲೂ ಡೆಮೊಕ್ರೆಟಿಕ್ ಪಕ್ಷದ ರೂಜವೆಲ್ಟರು ಅಧ್ಯಕ್ಷಗಿಗೆ ಏರಿದ ಮೇಲೆ, ಜಾಗತಿಕ ಗದಲ್ಲಿ ಅಮೇರಿಕದ ಹೆಸರು ಕೇಳಿ ಬರೊಡಗಿತು. ಅಮೇರಿಕವನ್ನು ಎರ ನೇ ಮಹಾ ಯುದ್ಧಕ್ಕೆ ಎಳೆದ ಮ ನುಭಾವ ಕೂಡ ರೂಜವೆಲ್ಟರೇ. ಮ್ಯೂನಿಸ್ಟ"ರೊಡನೆ ಹಗೆತನ ಸಾಧಿ ಬೀಜ ರೋಹಿಸಿದವರೂ ಅವರೇ ಗೆ ಪ್ರಶಾಂತ ಚಿತ್ತದಿಂದ ಸುಖ ವನ ನಡೆಸುತಿದ್ದ ಅಮೇರಿಕಾದ ಜನ ಒತ್ತಾಯದಿಂದ ಲೋಕದೆದುರು ನಾ ಬಿಟ್ಟು ಕುಣಿಯಬೇಕಾಯಿತು ಎರ ದಶಕಗಳ ಈ ಪರಿಸ್ಥಿತಿ ಐಸನಹಾವ ವಿಜಯದಿಂದ ದಿನ ಬೆಳಗಾಗುವುದ ಳಗಾಗಿ ಮಾರ್ಪಡದೆಂಬುದೂ ನಿಜ ರಲ್ಲೂ ಐಸನಹಾವರು ಕಮ್ಯೂನಿ ವಿರೋಧಿಗಳೆಂಬುದನ್ನೂ ಚರ್ಚಿಲರಂ ಸಾಹಸಿಯಾದ ಯೋಧರೆಂಬುದನ್ನೂ ಗಿಸಿದರೆ, ಈ ಮಾತು ಸತ್ಯವೆನಿಸುತ್ತದೆ, ಗೆಯೇ ಅವರು ಮನೆಯ ಶಾಂತಿಯ ಕೂಡ ಅಪೇಕ್ಷಿಸುತ್ತಾರೆ. ಜನತೆಯ ನದೊಲವು ಹೇಗಿದೆ ಎಂಬುದನ್ನು ತಿಳಿ ಕೊಳ್ಳುವ ಸೂಕ್ಷ್ಮದೃಷ್ಟಿಯನ್ನು ಅವ ದರ್ಶಿಸಿದ್ದಾರೆ. ಆದಕಾರಣ-ಅಮೇರಿ ಆಂತರಿಕ ಆಡಳಿತದಲ್ಲಿ ಸಾಕಷ್ಟು ಧಾರಣೆ ನಡೆದು ಜನರ ಸ್ಥಿತಿಗತಿ ಊ ತ್ತಗೊಳ್ಳಬಹುದು ಇದಕ್ಕೆ ಪೋಷಕ ಗುವಂತೆ, ವಿದೇಶಾಂಗ ನೀತಿಯಲ್ಲಿ ತ ಬದಲಾವಣೆ ನಡೆದೀತು ಐಸನ ಹಾ ವರೇ ಹೇಳುವಂತೆ ಕೊರಿಯಾದಲ್ಲಿ ಅ ಮೇರಿಕನ್ನರು ಪ್ರಾಣಕೊಡುವ ಬದಲು, ರಿಯಾದ ಜನತೆಯೇ ಯುದ್ಧ ತರ ಬೇತಿ ಪಡೆದು ಹೋರಾಡುವಂತಾಗಬಹು ಭಾರತ ಆದಿಯಾಗಿ ಉಳಿದ ರಾ ಗಳೂ ಸಂರಕ್ಷಣಾ ಕಾರ್ಯದಲ್ಲಿ ಸಂ ಗ್ನವಾಗಿರುವ ಪಶ್ಚಿಮ ಯುರೋಪು ಷ್ಟ್ರಗಳೂ ಡಾಲರು ಸಹಾಯಕ್ಕಾಗಿ ಮೇರಿಕದ ಮುಖನೋಡುವ ಅಭ್ಯಾಸ ನ್ನು ಬಹಳಮಟ್ಟಿಗೆ ಕಡಿಮೆ ಮಾಡ ಬೇಕಾದೀತು.

ಕೊರಿಯದ ಬಗ್ಗೆ ವೈರಾಗ್ಯ

ಮುಂದಿನ ಜನವರಿಯ ೨೦ನೇ ದಿ ವಸ ಚುನಾಯಿತ ಅಧ್ಯಕ್ಷ ಐಸನಹಾ ವರು ಅಧಿಕಾರ ಸ್ವೀಕಾರ ಮಾಡುವರು ಮೇರಿಕನ್ ಕಾಂಗ್ರೆಸಿನ ಎರಡೂ ಸಭೆ ಗಳಲ್ಲಿ ರಿಪಬ್ಲಿಕನರಿಗೇ ಬಹುಮತ ದೊರೆ ತಿದೆ ಆದರೆ ಇದು ಗಣನೀಯ ಪ್ರಮಾಣ ದಲ್ಲಿಲ್ಲವಾದುದರಿಂದ ಐಸನಹಾವರರು ಲಕ್ಷಣವೂ ಡೆಮೊಕ್ರಾಟರ ನೆರವು ಯಾಚಿಸುತ್ತಾ ಅವರ ಪ್ರೀತಿ ಸಂಪಾದಿ ಸುತ್ತಾ ಮುನ್ನಡೆಯಬೇಕಾದೀತು. ಇದು ಹೀಗೇ ಇರಲಿ- ಕೊರಿಯಾಕದನ ಸಂಬಂ ಧದಲ್ಲಿ ನಡೆಯುತ್ತಿರುವ ಈಗಿನ ಮಾತುಕ ತೆಗಳಲ್ಲಿ ಚರ್ಚೆ ನಡೆಸುವ ಮುಮ್ಮಸ ಲೆಯಲ್ಲಿ ಪ್ರಕೃತ ಅಮೇರಿಕ ಕಳೆದುಕೊಂ ಡ. ಸಂಯುಕ್ತ ರಾಷ್ಟ್ರಸಂಘದ ವೃತ್ತ ಗಳಲ್ಲಿ ಈಬಗ್ಗೆ ನಡೆಯುತ್ತಿರುವ ಲವು ಪ್ರಯತ್ನಗಳಲ್ಲಿ ಅಮೇರಿಕೆಯ ಈಗಿನ ಸರಕಾರದ ಲಕ್ಷ್ಯ ಆಸಕ್ತಿ ತೋರಿ ಸುವುದಿಲ್ಲ ಸನ್ಯದಲ್ಲಿಯೇ ಐಸನ ಹಾವ ರು ಕೊರಿಯಾಕ್ಕೆ ಹೋಗಲಿರುವುದ ರಿಂದ ಅವರ ಪ್ರತಿಕ್ರಿಯೆ ತಿಳಿದುಬಾರದ ಕಾರಣ ಈಗಿನ ಡೆಮೊಕ್ರಾಟ ಸರಕಾರ ಏನೊಂದೂ ಮಹತ್ವದ ಸೂಚನೆ ಮಾಡುವಂತಿಲ್ಲ-!! ಈ ಕಾರಣಕ್ಕಾಗಿಯೇ ಈ ವೈರಾಗ್ಯ

ಭಾರತದ ಪ್ರಯುಕ್ತ

ಆದರೆ ಭಾರತವೇ ಮುಂತಾಗಿ ಉಳಿದ ತಟಸ್ಥ ರಾಷ್ಟ್ರಗಳು ಯುದ್ಧ ನಿಲ್ಲಿಸುವ ಕ್ರಮಗಳನ್ನು ಕೈಕೊಳ್ಳುವುದಕ್ಕೆ ಆತುರ ತೋರಿಸಿವೆ ಸೋಮವಾರದಿನ ರಶಿಯಾದ ವಿಶಿನ್ಸ್ಕಿಯವರು ಯುದ್ಧ ವಿರಾಮವನ್ನು ಸಾಧಿಸಲು ಒಂದು ಸಮಿತಿಯನ್ನು ನೇಮಿಸಬೇಕೆಂದೂ ಪಂಚ ಮಹಾ ರಾಷ್ಟ್ರಗಳಲ್ಲದೆ ಚೀನಾ, ಕೊರಿಯಾ, ಭಾರತ, ಇಂಡೋನೇಶಿಯಾ ಜೆಕೊಸ್ಲೊವಾಕಿಯಾ ಮುಂತಾದ ರಾಷ್ಟ್ರಗಳು ಇದರಲ್ಲಿರಬೇಕೆಂದೂ ತಮ್ಮ ಈ ಹಿಂದಿನ ಶಾಂತಿ ಸೂಚನೆಗೆ ಪರಿಷ್ಕೃತ ರೂಪು ಕೊಟ್ಟರು. ಭಾರತವು ತನ್ನದೊಂದು ಸೂಚನೆಯನ್ನು ತಯಾರಿಸಿದ್ದು, ಅದನ್ನು ಮಂಡಿಸುವ ಪರೀಕ್ಷೆ ಇದೆ ಎಂದು ಪತ್ರಿಕಾ ವರದಿಗಳು ತಿಳಿಸುತ್ತವೆ ಈಚೆಗೆ ತಿಳಿದು ಬಂದಂತೆ ಭಾರತದ ಸೂಚನೆ ವಿಶಿನ್ಸ್ಕಿಯವರ ಸೂಚನೆಗೆ ತಿದ್ದುಪಡಿಯ ರೂಪ ತಳೆದೀತು ಸಂಬಂಧಪಟ್ಟ ರಾಷ್ಟ್ರಗಳಿಗೆ, ಮುಖ್ಯವಾಗಿ ಚೀನಾದ ಪ್ರಜಾರಾಜ್ಯ ಹಾಗೂ ಬ್ರಿಟನು ಗಳಿಗೆ ಭಾರತ ತನ್ನ ಸೂಚನೆಯ ಕರಡನ್ನು ಅವಗಾಹನೆ ಹಾಗೂ ಅಭಿಪ್ರಾಯದ ಬಗ್ಗೆ ಕಳಿಸಿದೆ ಎಂದು ಸುದ್ದಿ. ಇದರಂತೆ ಭಾರತದ ಪ್ರಧಾನಿ ನೆಹರೂ ಚೀನಾದ ಪ್ರಧಾನಿಗಳೊಡನೆ ಈ ಸಂಬಂಧ ಪ್ರಾಸ್ತಾವಿಕ ಮಾತುಕತೆಗಳನ್ನು ತೊಡಗಿರುವರೆಂದೂ ಹೇಳಿಕೆ ಇದೆ ಏನಿದ್ದರೂ ಭಾರತವೇ ಕೊರಿಯಾ ಯುದ್ಧ ವಿರಾಮ ಸಾಧಿಸಬಲ್ಲುದೆಂದು ಅವರ ಬೆನ್ನುತಟ್ಟುವ ಪ್ರಯಾಸ ಸಂಯುಕ್ತ ರಾಷ್ಟ್ರಸಂಘದ ವೃತ್ತಗಳಲ್ಲಿದೆ ಎಂಬುದು ನಿಸ್ಸಂಶಯ

ಕಾಶ್ಮೀರ ವಿಷಯದ ಗೊತ್ತುವಳಿ

ಕೊರಿಯಾಕ್ಕೆ ಮಾರ್ಗದರ್ಶನ ಮಾಡುವ ನಾವು ಕಾಶ್ಮೀರ ಸಂಬಂಧದಲ್ಲಿ ಬಾರಿ ಬಾರಿಗೂ ಮುಖಭಂಗಮಾಡಿಸಿಕೊಳ್ಳಬೇಕಾಗಿದೆಯಲ್ಲ ಎಂದು ದುಃಖವಾಗುತ್ತದೆ ಭದ್ರತಾ ಮಂಡಳದಲ್ಲಿ ಆಂಗ್ಲೋ ಅಮೇರಿಕನ್ ಗೊತ್ತುವಳಿಯೊಂದು ಮಂಡಿಸಲ್ಪಟ್ಟು ಯುದ್ಧ ವಿರಾಮ ರೇಖೆಯ ಇಕ್ಕಡೆಗಳಲ್ಲಿರಬೇಕಾದ ಸೈನ್ಯಪ್ರಮಾಣವನ್ನು ಅದರಲ್ಲಿ ಸೂಚಿಸಲಾಗಿದೆ ಈ ಸೈನ್ಯದ ಸ್ವರೂಪ ಒಂದೇಯಾಗಿರಬೇಕೆಂದೂ ಗೊತ್ತುವಳಿ ನಿರ್ದೇಶಿಸುತ್ತದೆ. ಪಾಕಿಸ್ತಾನಕ್ಕೆ ಇದರಿಂದ ಅನುಕೂಲವಿದೆ ಆದಕಾರಣ ಅದು ಗೊತ್ತುವಳಿಗೆ ಒಪ್ಪಿದೆಯಂತೆ. ಆದರೆ ಭಾರತ ಮಾತ್ರ ತನ್ನ ನಿಲುವಿನಿಂದ ಕದಲುವಂತಿಲ್ಲ ಸಂಯುಕ್ತ ರಾಷ್ಟ್ರಸಂಘವು ಈ ಸಂಬಂಧದಲ್ಲಿ ಇದಕ್ಕೆ ಮೊದಲು ಸ್ವೀಕರಿಸಿದ ಗೊತ್ತುವಳಿಗಳಿಗೆ ತೀರಾ ವಿಸಂಗತವಾದ ರೀತಿಯಲ್ಲಿ ಇದನ್ನು ಮಂಡಿಸಲಾಗಿದೆಯೆಂದು ಭಾರತದ ಅಭಿಪ್ರಾಯ. ಪಾಕಿಸ್ತಾನವು ಆಕ್ರಮಕ ರಾಷ್ಟ್ರವೆಂದು ಸಂಯುಕ್ತ ರಾಷ್ಟ್ರ ಸಂಘ ಈ ಮೊದಲೇ ಒಪ್ಪಿರುವುದನ್ನು ಯಾವಾಗಲೂ ಗಮನದಲ್ಲಿಟ್ಟುಕೊಳ್ಳಬೇಕು.

ಆದುದರಿಂದ ಈಗಿನ ಗೊತ್ತುವಳಿಯನ್ನು ಭಾರತ ಸಂಪೂರ್ಣ ತಿರಸ್ಕರಿಸುವುದು ಮತ್ತು ಐದುವರ್ಷಗಳ ಹಿಂದೆ ಸಂಯುಕ್ತ ರಾಷ್ಟ್ರ ಸಂಘಕ್ಕೆ ಕೊಂಡುಹೋದ ದೂರಿನ ಮೇಲೆ ವಿಚಾರಣೆಯಾಗಬೇಕೆಂದೂ, ಆ ಮೂಲ ಪ್ರತಿಯಿಂದ ದೂರಹಾಯುವ ಪ್ರಯತ್ನಗಳಿಗೆ ಅವಕಾಶವಿರಕೂಡದೆಂದೂ ಪ್ರತಿಪಾದಿಸುವುದು ಈ ನಡುವೆ ಕಾಶ್ಮೀರ ಘಟನೆಗೆ ಕೆಲವು ತಿದ್ದುಪಡಿಗಳನು ಮಾಡಲಿದ್ದ ಚುನಾಯಿತ ಪರಿಷತ್ತಿನ ಅಧಿಕಾರ ಸ್ವೀಕಾರ ಸಮಾರಂಭವು ದಿನಾಂಕ ೧೭ರಂದು ನಡೆಯಲಿದೆ

ವಿಚಾರ ಪ್ರಚೋದಕವಾದ ಪ್ರತಿಯೊಬ್ಬರೂ ಓದಲೇಬೇಕಾದ ನವನವೀನ ಪುಸ್ತಕಗಳು!

ಗೀತಾ ರಹಸ್ಯವನ್ನು ತಿಳಿಯ ಬಯಸದವರಾರು?

ಡಾ. ಹೊಸಕೆರೆ [illegible] ಗೀತೆಯ ಕೈಗನ್ನಡಿ [illegible]

ಪುಟಗಳು 428 ಬೆಲೆ 0 12-0

100 ಪ್ರತಿಗಳಿಗೆ ರೂ. 60, 200ಕ್ಕೆ ರೂ 110; 500ಕ್ಕೆ ರೂ 250

ಗೀತೆ, ಕಾದಂಬರಿ, ನಾಟಕ, ಚಿತ್ರ, ಪ್ರಬಂಧ, ಪದ್ಯ ಸಂಕಲನ, [illegible]
[illegible] 30 [illegible] 86 [illegible]
[illegible] 24ಕ್ಕೆ ಕೊಡಲಾಗುವುದು

[illegible] ರೂ.	1	8	ಸಂಸಾರ ರೂ.	2	8	[illegible] ರೂ.	2	0
[illegible]	1	12	[illegible]	3	0	[illegible]	1	8
[illegible]	1	12	[illegible]	2	0	ಪ್ರೇಮ ವಿಜಯ	1	4
ಕವಿಯ ಕಾಮಿನಿ	2	0	ರಾಜಾದೇಶ	1	[illegible]	ರಂಗಭೂಮಿ	0	10
[illegible]	2	0	[illegible]	1	8	[illegible]	1	0
[illegible]	1	4	ದೇಶಭಕ್ತ	1	[illegible]	[illegible]	1	4
ಸುಲಭದಲ್ಲಿ ಇಂಗ್ಲಿಷ್	2	0	[illegible]	2	8	[illegible]	1	4
ನೀತಿವಿನೋದ ಕತೆಗಳು	1	12	[illegible]	0	12	[illegible]	1	4
ಜೀವನ ಸಂಗ್ರಾಮ	1	8	[illegible]	0	[illegible]	[illegible]	0	8

ಇನ್ನೂ ಹಲವಾರು ಬಗೆಯ ಉಪಯುಕ್ತ ಪುಸ್ತಕಗಳ ಪಟ್ಟಿಗಾಗಿ ಬರೆಯಿರಿ ವ್ಯಾಪಾರಿಗಳಿಗೂ, ಪುಸ್ತಕಭಂಡಾರಗಳಿಗೂ ವಿಶೇಷ ಸವಲತ್ತುಗಳಿವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

[illegible] 12-11-52 ರಿಂದ

ಕನ್ನಡ [illegible] ಕನ್ನಡ

([illegible])

ನಟವರ್ಗ— [illegible] ಎಸ್, ಎನ್, ಜೇಸಿ, ಸುಬ್ಬಣ್ಣ ಮುಂತಾದವರು

ನೃತ್ಯಗಳು ಮತ್ತು ನೃತ್ಯ ನಿರ್ದೇಶನ [illegible] ರಾಜಗೋಪಾಲ್, [illegible] (ಮಾಲಿಕರು — ನೃತ್ಯಕಲಾ [illegible]) ಇವರ ನೃತ್ಯ ನಿರ್ದೇಶನ ಬರುವ ಚಿತ್ರಗಳು— '[illegible]' '[illegible]' ಇತ್ಯಾದಿ,

ಉಡುಪಿ

ಉಪಹಾರ ಕೂಟ—ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಸ್ವಾಮಿಗಳವರು ಕಾರ್ತಿಕದೀಪೋತ್ಸವ ಸಂಬಂಧ ತಾ 9ನೇ ಸಂಜೆ [illegible] ಮಠದಲ್ಲಿ ಲೌಕಿಕ ವೃಂದಕ್ಕೆ ಉಪಹಾರ [illegible] ಮಧ್ಯಾಹ್ನ ವಿಶೇಷ ಸಂತರ್ಪಣೆ ಕೂಡ ಇತ್ತು

ಕಾಂಗ್ರೆಸಿಗೆ ವಿಜಯ—ತಾ 10ರಂದು ನಡೆದ ನಗರ ಸಭೆಯ ಸೆಂಟ್ರಲ್ ವಾರ್ಡಿನ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದ್ವಾರ ವಕೀಲ್ ಶ್ರೀ ಪಿ ವಿ ಆಚಾರ್ಯರಿಗೆ 225; ಸ್ವತಂತ್ರ ಹುರಿಯಾಳು ಶ್ರೀ. ಎ. ನಾರಾಯಣ ನಾಯ್ಕರಿಗೆ 182 ಮತಗಳು ದೊರೆತು ಕಾಂಗ್ರೆಸ್ ಉಮೇದ್ವಾರರು ಜಯಶೀಲರಾಗಿರುವರು.

ಈ ಸಂಬಂಧ [illegible] ಏರ್ಪಡಿಸಿದ [illegible] ಶ್ರೀ. ಪಿ ವಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಪ್ರಚಂಡ ಸಾರ್ವಜನಿಕ ಸಭೆಯೊಂದು ಜರಗಿತು. ಶ್ರೀ. ಟಿ. ಎ. ಪೈ, ಎಂ ಎಲ್. ಎ. ರವರು ಕಾಂಗ್ರೆಸ್ ಸರಕಾರದ ಧ್ಯೇಯ ಧೋರಣೆಗಳನ್ನು ವಿವರಿಸಿ, ತೆರಿಗೆ, ಹತೋಟಿಗಳಿಗಾಗಿ ಸರಕಾರವನ್ನು ಟೀಕಿಸುವುದು ಸರಿಯಲ್ಲವೆಂದೂ [illegible] ನ್ಯಾಯ ದೃಷ್ಟಿಯಿಂದ ದೇಶದ ಸ್ಥಿತಿಯನ್ನು ಪರ್ಯಾಲೋಚಿಸಿ ಸರಕಾರಕ್ಕೆ ಬೆಂಬಲ ಕೊಡಬೇಕೆಂದೂ ಭಾಷಣವಿತ್ತರು.

ಅಧ್ಯಕ್ಷರು, ನಾವು ನಗರಸಭೆಯಲ್ಲಿ ಅಲ್ಪಸಂಖ್ಯಾತರಿದ್ದರೂ ನಗರದ ಹಿತದೃಷ್ಟಿಯಿಂದ ಸಾಧ್ಯವಾದುದನ್ನು ಸಾಧಿಸಲಿರುವೆವೆಂದೂ ಬೇರೆ ಬೇರೆ ವಾರ್ಡಿನವರು ತಮ್ಮ ಅವಶ್ಯಕತೆಗಳನ್ನು ನಮಗೆ ತಿಳಿಸಿ ನಮ್ಮಿಂದ [illegible] ಕೆಲಸ ಮಾಡಿಸಿಕೊಳ್ಳಬೇಕೆಂದೂ ನಗರ ಹಿತವೇ ಕಾಂಗ್ರೆಸ್ ಪಕ್ಷದ ಧ್ಯೇಯವೆಂದೂ ಹೇಳಿದರು, ಶ್ರೀ. ಆರ್. ಆರ್. [illegible] ಧನ್ಯವಾದಗಳನ್ನರ್ಪಿಸಿದರು.

ಭಾಷಣ—ಎಂ ಆರ್. ಟಿ. ವಾಚನಾಲಯ ಮತ್ತು ಪುಸ್ತಕಾಲಯದಲ್ಲಿ [illegible]

ಆಫಿಸರ್ಸ್ ಕ್ಲಬ್ — [illegible] ಇದೇ ತಾ 14ನೇ ಸಂಜೆ 5 ಘಂಟೆಗೆ [illegible] ಜರಗಲಿದೆ.

ಶ್ರೀ ಕೆ ಸಂಜೀವಕಾಮತರ ನಿಧನ

ಉಡುಪಿ - [illegible] ಶ್ರೀ. ಕೆ ಸಂಜೀವ ಕಾಮತರು ತಮ್ಮ 58 ನೇ ವರ್ಷ ಪ್ರಾಯದಲ್ಲಿ ಇದೇ ತಾ 7ರಂದು ರಾತ್ರಿ ದೈವಾಧೀನರಾದರು. [illegible]

ನಮ್ಮ ಮುಂಬಯಿ ಚಂದಾದಾರರಲ್ಲಿ ವಿನಂತಿ

[illegible]

ಮೆನೇಜರ್, ನವಯುಗ, ಉಡುಪಿ

[೫ನೇ ಪುಟದಿಂದ ಮುಂದುವರಿದುದು]

ವ್ಯಕ್ತಿಯ ಮರಣಾನಂತರ ಅವನ ವಾರೀಸುದಾರರಿಗೆ ಮೃತವ್ಯಕ್ತಿಯ ಸ್ಥಾವರ-ಜಂಗಮ ಸೊತ್ತು ಒಡವೆ ಹಾಗೂ ದ್ರವ್ಯಗಳು ಸಿಗಬೇಕಿದ್ದರೆ, ಆದಕ್ಕಾಗಿ ಸರಕಾರಕ್ಕೆ ಕೊಡಬೇಕಿರುವ ಶುಲ್ಕವನ್ನೇ ಸಾವಿನ ಸುಂಕವೆಂದು ವರ್ಣಿಸಬಹುದು ನಮ್ಮ ಸಂಸ್ಕೃತಿ ಹಾಗೂ ಪರಂಪರೆಗೆ ಈ ಹೆಸರು ಒಗ್ಗಲಿಕ್ಕಿಲ್ಲವೆಂಬುದರಿಂದಲೋ ಏನೋ ಆಸ್ತಿಕರವೆಂಬ ಗೌರವದ ಹೆಸರನ್ನು ಇದಕ್ಕೆ ಕೊಟ್ಟಿರುವರು.

ಸಮತೆಯ ಸಾಧನೆ

ಪಾಶ್ಚಾತ್ಯ ದೇಶಗಳಲ್ಲಿ ಈ 'ಆಸ್ತಿಕರ' ಮಾಡಿದ ಪರಿಣಾಮವು ತುಂಬ ಪ್ರಭಾವಿಯಾಗಿದೆ ರಾಜ್ಯದ ಆದಾಯ ಸ್ರೋತಗಳಲ್ಲಿ ಪ್ರಾಮುಖ್ಯ ಅಂಗವೆಂದು ಇವಕ್ಕೆ ಮನ್ನಣೆದೊರೆತರೆ, ನಿಧಾನವಾಗಿ ಧನಿಕರನ್ನು ಮಧ್ಯಮವರ್ಗಕ್ಕೆ ಪರಿವರ್ತಿಸುವ ಅದ್ಭುತ ಸಾಮರ್ಥ್ಯ ಈ ಕರಕ್ಕೆ ಇದೆ ಬ್ರಿಟನಿನಲ್ಲಿ ಒಂದೆರಡು ಶತಕಗಳ ಹಿಂದೆ ಲಾರ್ಡ್ಸ ಬಿರುದಾಂಕಿತರಾದ ಶ್ರೀಮಂತ ವರ್ಗದಲ್ಲಿ ಹಲವು ಇಂದು ನಾಮಮಾತ್ರ ಲಾರ್ಡ್ಸರೇ ಹೊರತು, ವಾಸ್ತವದಲ್ಲಿ ಕಚೇರಿಯ ಕೆಲಸಗಾರರಾಗಿ ಜೀವನ ನಿರ್ವಹಿಸುತ್ತಾರೆ ಈ ಜಾದೂಗಾರಿಕೆಯನ್ನು ಇಂದು ಸುಮಾರು ೪೦ ರಾಷ್ಟ್ರಗಳು ಮೆಚ್ಚಿವೆ ಕಮ್ಯೂನಿಸ್ಟರು ಹೇಳುವಂಥ ಧನಿಕರ ಬೇಂಕು ಡಿಪಾಜಿಟುಗಳನ್ನು ಬಡವರಿಗೆ ಹಂಚಿಕೊಟ್ಟು ಮಾರಾಮಾರಿಗೂ ಅರಾಜಕತೆಗೂ ಎಡೆಗೊಡುವ ಪ್ರಸಂಗವನ್ನು ತಪ್ಪಿಸಿಕೊಂಡೇ, ನಾಗರಿಕ ಸರಕಾರದ ನೆರಳಲ್ಲಿ ಈ ಆಸ್ತಿಕರ ತನ್ನ ಕೌಶಲ ತೋರಿಸಬಲ್ಲುದು. ಆದುದರಿಂದ ಲೋಕಸಭೆಯ ಎಲ್ಲ ವರ್ಗಗಳೂ ಈ ಮಸೂದೆಯನ್ನು ಸ್ವಾಗತಿಸಿವೆ ಹಿಂದೂ ಅವಿಭಕ್ತ ಕುಟುಂಬಗಳಿಗೆ ಇದರಿಂದ ಅನ್ಯಾಯವಾಗುವುದೆಂಬ ಕಾರಣಕ್ಕಾಗಿ ಹಿಂದೂ ಮಹಾಸಭೆ ಮತ್ತು ರಾಮರಾಜ್ಯ ಪರಿಷತ್ತಿನ ಸದಸ್ಯರೂ, ಪಾನಪ್ರತಿಬಂಧವನ್ನು ಕಿತ್ತೊಗೆಯುವುದು, ಉಪ್ಪಿನಮೇಲೆ ಸುಂಕ ಹೊರಿಸುವುದು ಮುಂತಾದ ಆದಾಯ ಹೆಚ್ಚಿಸುವ ಉಪಾಯಗಳು ಇನ್ನೂ ತೆರೆದಿರುವಾಗ ಆಸ್ತಿಕರದ ಯೋಜನೆ ಅಕಾಲಿಕವೆಂದು ಇನ್ನು ಕೆಲವರೂ ಎತ್ತಿದ ಆಕ್ಷೇಪ ಮೂಲೆಗೆ ಸರಿದುನಿಂತಿದೆ

ಆದಾಯ ಪ್ರಮಾಣ

ಮಸೂದೆಯನ್ನೀಗ ಪರಿಶೀಲಕ ಮಂಡಳಿಗೆ ಒಪ್ಪಿಸಲಾಗಿದೆ ಉಳಿತಾಯದ ವ್ಯಕ್ತಿಗೂ ಬಂಡವಾಳದ ಕೂಡುವಿಕೆಗೂ ಈ ಕರದಿಂದ ಆಘಾತವಾಗದೆಂದು ಅಭಿಪ್ರಾಯ ವ್ಯಕ್ತಪಡಿಸಲಾಗಿದೆ. ಹಾಗೆಯೇ ಮಧ್ಯಮವರ್ಗದ ಮೇಲೆ ಅನಾವಶ್ಯಕವಾದ ಭಾರ ಬೀಳಲಾಗದೆಂದು ಈ ಕರದಿಂದ ವಿನಾಯತಿ ಪಡೆಯಲು ಅರ್ಹವಾದ ಸೊತ್ತಿನ ಪರಿಷ್ಕೃತ ಪ್ರಮಾಣವನ್ನು ಗೊತ್ತುಪಡಿಸಲು ನೋಡಬೇಕೆಂದಿದೆ ಪ್ರತಿ ವರ್ಷ ಬಜೆಟ್ಟು ಅಧಿವೇಶನದಲ್ಲಿ ಕರಭಾರದ ದರವನ್ನು ನಿರ್ಧರಿಸುವ ಸಂಪ್ರದಾಯ ಸ್ಥಾಪಿಸಲ್ಪಡುವುದು ಹಾಗೆಯೇ ಅಲ್ಪಾವಧಿಯೊಳಗೆ ಘಟಿಸಬಹುದಾದ ಮರಣಗಳ ಬಗ್ಗೆ ರಿಯಾಯತಿ ತೋರಿಸಲೂ ಒಂದು ಕಲಮಿದೆ ಆದಾಯ ಎಷ್ಟು ಬರಬಹುದೆಂದು ಹೇಳುವುದು ಶ್ರೀಮಂತರ ಸಾವಿನ ಮೇಲೆ ಹೊಂದಿಕೊಂಡಿದೆಯಾಗಿ ದೇಶಮುಖರು ವಿನೋದವಾಡಿದರೂ–ಹಿಂದಿನ ಅಂದಾಜಿನಂತೆ ಅದು 5 ಕೋಟಿ ರುಪಾಗೆ ಕಡಿಮೆಯಾಗದು

ಪ್ರಾದೇಶಿಕ ಕಾಂಗ್ರೆಸ್ ಕಮಿಟಿ ಚುನಾವಣೆ— ಈ ಕೆಳಗೆ ಕಾಣಿಸಿರುವ ಹುರಿಯಾಳುಗಳು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರತಿನಿಧಿ ಚುನಾವಣೆಗೆ ಸ್ಪರ್ಧಾರಹಿತರಾಗಿ ಆರಿಸಲ್ಪಟ್ಟಿರುವರು.

ಕುಂದಾಪುರ ಉತ್ತರ– 1. ಶ್ರೀ ಎಂ. ಎಂ ಹೆಗ್ಡೆ, ಕುಂದಾಪುರ ದಕ್ಷಿಣ– 1. ಕೊಳ್ಕೆಬೈಲು ಸಣ್ಣಪ್ಪ ಶೆಟ್ಟಿ. ಬ್ರಹ್ಮಾವರ– 1. ಶ್ರೀ ಕೆ. ಸದಾನಂದ ಹೆಗ್ಡೆ. ಉಡುಪಿ– 1. ಶ್ರೀ ಅನಂತ ಪೈ. ಬಂಟ್ವಾಳ– 1. ಶ್ರೀ ಯು. ಶ್ರೀನಿವಾಸ ಮಲ್ಯ. ಉಪ್ಪಿನಂಗಡಿ–1. ಶ್ರೀ ವೇಣುಗೋಪಾಲ ನಾಯಕ್. ಮಂಜೇಶ್ವರ– 1. ಶ್ರೀ ಬಿ. ದೇವಪ್ಪ ಆಳ್ವ. ಕಾಸರಗೋಡು– 1. ಶ್ರೀ ಕೆ. ಟಿ. ಗಂಗಾಧರ ರೈ. ಪುತ್ತೂರು– 1 ಶ್ರೀ ಸಂಜೀವ ಶೆಟ್ಟಿ.

ಈ ಕೆಳಗೆ ಕಾಣಿಸಿರುವ ಉಮೇದ್ವಾರಗಳು ಕೆಳಗೆ ಕಾಣಿಸಿದ ಸರ್ಕಲಿನಲ್ಲಿ ಸ್ಪರ್ಧಿಸಲಿರುವರು.

ಕಟಪಾಡಿ– 1. ಮಹಾಬಲ ರೈ, ಎ. ಎಸ್. 2. ಮುದ್ದು ಸುವರ್ಣ.

ಮುಲ್ಕಿ– 1. ಎಂ. ಆರ್. ಹರೀಂದ್ರ ಪೂಂಜ, 2. ರಾಕ್ಕಯ್ಯ ಪೂಜಾರಿ, 3 ಎಚ್. ಕೆ. ತಿಂಗಳಾಯ

ಕಾರ್ಕಳ– 1. ಡಾ. ಯು. ಕೃಷ್ಣ, 2. ಬಿ. ಕೇಶವ ಕಿಣಿ.

ಮೂಡುಬಿದ್ರೆ– 1 ಬಿ. ರಾಮಪ್ಪ ಕರ್ಕೇರ, 2. ರಾಘವ ಶೆಟ್ಟಿ.

ಮಂಗಳೂರು ಉತ್ತರ– 1. ಭೋಜರಾವ್ ಬೋಳಾರ್, 2. ಮಹಾಬಲ ರೈ ಎ. ಎಸ್.

ಮಂಗಳೂರು ದಕ್ಷಿಣ– 1. ಕೆ. ಮಂದರಾಜ ಪ್ರಭು 2. ಎಫ್. ಎಕ್ಸ್. ಡಿ. ಪಿಂಟೊ.

ಹೊಸದುರ್ಗ– 1. ಎಚ್. ಎಸ್. ಜಗನ್ನಿವಾಸ್, 2. ಪದ್ಮನಾಭ ಶೆಟ್ಟಿ, 3. ಬಿ. ದೇವರಾಯ.

ಪಾಣೆ ಮಂಗಳೂರು– 1. ಎನ್. ಎಸ್. ಕಿಲ್ಲೆ, 2. ಎಚ್. ಕೆ. ತಿಂಗಳಾಯ.

ದ. ಕ. ಜಿಲ್ಲೆಯಲ್ಲಿ ಮದ್ರಾಸು ಗವರ್ನರರ ಸಂಚಾರ ಕಾರ್ಯಕ್ರಮ— ಮದ್ರಾಸು ಸಂಸ್ಥಾನದ ಮಾನ್ಯ ಗವರ್ನರ್ ಶ್ರೀ. ಶ್ರೀ. ಪ್ರಕಾಶರು ಇದೇ ತಾ. 26ರಲ್ಲಿ ಕಣ್ಣನೂರಿನಿಂದ ಮಂಗಳೂರಿಗೆ ರಾತ್ರಿ 11-ಗಂಟೆಗೆ ಬರುವರು. ಮರುದಿನ ತಾ. 27ರಲ್ಲು ಪೂರ್ವಾಹ್ನ ಮಿಂಚಕರ ಬಂಗ್ಲೆ, ರಾಮಕೃಷ್ಣ ಮಿಶನ್, ಭಗಿನಿ ಸಮಾಜ, ಸೈಂಟ್ ಅಂತೋಣಿ ಧರ್ಮಸಂಸ್ಥೆ, ಸೈಂಟ್ ಎಲೋಸಿಯಸ್ ಕಾಲೇಜು, ಕನರಾ ಹೈಸ್ಕೂಲುಗಳನ್ನು ಸಂದರ್ಶಿಸುವರು. ಸಂಜೆ ಕೇಂದ್ರ ಮೈದಾನಿನಲ್ಲಿ ಮಂಗಳೂರು ಮುನಿಸಿಪಲ್ ಕೌನ್ಸಿಲು ಮತ್ತು ಜಿಲ್ಲಾ ಬೋರ್ಡಿನ ಮಾನಪತ್ರ ಸ್ವೀಕರಿಸಿ ರಾತ್ರಿ ಕೆನರಾ ಕ್ಲಬ್ಬಿನಲ್ಲಿ ಭೋಜನ ಸತ್ಕಾರದಲ್ಲಿ ಭಾಗವಹಿಸುವರು ತಾ 28ರಲ್ಲು ಕೊಯ್ಲ ಜಾನುವಾರು ಕ್ಷೇತ್ರ, ಧರ್ಮಸ್ಥಳ ಕ್ಷೇತ್ರ ದರ್ಶನ ಹಾಗೂ ಪ್ರಸಾದ ಸ್ವೀಕಾರಮಾಡಿ ಸಂಜೆ ಮಂಗಳೂರಿಗೆ ಹಿಂತಿರುಗಿ ಸೈಂಟ್ ಎಗ್ನಿಸ್ ಕಾಲೇಜು ಸಂದರ್ಶನಮಾಡಿ ರಾತ್ರಿ ರೋಟರಿ ಕ್ಲಬ್ಬಿನ ಭೋಜನ ಸತ್ಕಾರದಲ್ಲಿ ಭಾಗವಹಿಸುವರು. ತಾ 29ರಲ್ಲು ಮಂಗಳೂರು ಬಂದರ ದರ್ಶನ, ಜೆಪ್ಪು ಕೊಮನ್‌ವೆಲ್ತ್ ಹಂಚು ಕಾರ್ಖಾನೆ, ಗೇರುಬೀಜ ಕಾರ್ಖಾನೆ, ಕಂಕನಾಡಿ ಫಾದರ್ ಮುಲ್ಲರ್ಸ್ ಆಸ್ಪತ್ರೆಗೆ ಭೇಟ್ಟಿ ಕೊಡುವರು. ಸಂಜೆ ನಾಗರಿಕರ ಮಂಡಳಿಯ ಉಪಾಹಾರ ಸ್ವೀಕಾರ.

ತಾ 30ರಲ್ಲು ಬೆಳಗ್ಗೆ ಉಡುಪಿಗೆ ಹೊರಟು ದಾರಿಯಲ್ಲಿ ಮೂಡಬಿದಿರೆ ಬಸದಿ ಮತ್ತು ಕಾರ್ಕಳದಲ್ಲಿ ಗೋಮಟೇಶ್ವರ ವಿಗ್ರಹ ಸಂದರ್ಶನವಾಗಿ 10½ ಗಂಟೆಗೆ ಉಡುಪಿಗೆ ತಲಪಿ ಪ್ರಯಾಣಿಕರ ಬಂಗ್ಲೆಗೆ ತೆರಳುವರು. 10¾ ಗಂಟೆಗೆ ಸಂಸ್ಕೃತ ಕಾಲೇಜು ಸಂದರ್ಶನ ವಿದ್ಯಾರ್ಥಿಗಳಿಗೆ ಭಾಷಣ, 11-10 ಘಂಟೆಗೆ ಶ್ರೀ. ಕೃಷ್ಣ ಮಠ ಸಂದರ್ಶನ ಮಧ್ಯಾಹ್ನ 12ರಿಂದ 3ರ ವರೇಗೆ ಪ್ರಯಾಣಿಕರ ಬಂಗ್ಲೆಯಲ್ಲಿ ಭೋಜನ ನಂತರ ವಿಶ್ರಾಂತಿ, 3½ ಘಂಟೆಗೆ ಮಲ್ಪೆಗೆ ಪ್ರಯಾಣ, ಮೀನು ಹಿಡಿಯುವುದನ್ನು ನೋಡಿ 4 ಗಂಟೆಗೆ ಹೊರಟು 4½ಗಂಟೆಗೆ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿಗೆ ಆಗಮಿಸಿ ಉಡುಪಿ ಮುನಿಸಿಪಾಲಿಟಿಯ ಮಾನ ಪತ್ರ ಸ್ವೀಕರಿಸಿ 5½ಗಂಟೆಗೆ ಉಡುಪಿಯಿಂದ ಹೊರಟು, ರಾತ್ರಿ 7-45ಕ್ಕೆ ಮಂಗಳೂರಿಗೆ ತಲ್ಪಿ ರಾತ್ರಿ 8½ಗಂಟೆಗೆ ಜಿಲ್ಲಾ ಕಲೆಕ್ಟರರ ಬಂಗ್ಲೆಯಲ್ಲಿ ಭೋಜನ ಮಾಡುವರು. ಮರುದಿವಸ ಬೆಳಗ್ಗೆ ಮಂಗಳೂರು-ಮದ್ರಾಸ್ ಎಕ್ಸ್‌ಪ್ರೆಸ್ ಬಂಡಿಯಲ್ಲಿ ಮದ್ರಾಸಿಗೆ ಹೊರಡುವರು.

ಕಂಡ್ಲೂರು— ಇಲ್ಲಿಯ ಡಾ| ಆರ್. ಎಸ್. ಉಪ್ಪೂರ್, ಅವರು ತನ್ನ ಡಿಸ್ಪೆನ್ಸರಿಯನ್ನು ಮೈಸೂರು ಸ್ಟೇಟಿನ ಕೊಡೂರು ಎಂಬಲ್ಲಿಗೆ ಸ್ಥಳಾಂತರಿಸುವುದರಿಂದ ಸದ್ರಿಯವರನ್ನು ಬೀಳ್ಕೊಡುವ ಸಮಾರಂಭವು ಇದೇ ತಾ 7ರಲ್ಲು ಶ್ರೀ ಸಾಕೂರು ಅಂತಯ್ಯ ಸೆಟ್ಟಿ, ಪಟೇಲ್, ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಕಾಸರಗೋಡು— ದ. ಕ. ಜಿಲ್ಲಾ ದೇವಾಂಗ ಸಮಾಜದ ವಾರ್ಷಿಕೋತ್ಸವವು ಈಚೆಗೆ ತೆರುವತ್ತು ಶ್ರೀ ಭಗವತೀ ಕ್ಷೇತ್ರ ಮಂದಿರದಲ್ಲಿ ಎಡ್ವಕೇಟ್ ಶ್ರೀ ಮಹಾಬಲ ಭಂಡಾರಿಗಳ ಅಧ್ಯಕ್ಷತೆಯಲ್ಲಿ ಜರಗಿತು. ಕೈಮಗ್ಗದವರಿಗೆ ಕೆಲವು ಸವಲತ್ತುಗಳನ್ನು ಒದಗಿಸುವಂತೆ ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವಾಯಿತು. ಸಂಘವು ಸಮಾಜದ ಮಕ್ಕಳ ಶಿಕ್ಷಣದ ಕಡೆಗೆ ಹೆಚ್ಚಿನ ಗಮನವೀಯುವಂತೆ ಅಧ್ಯಕ್ಷರು ಭಾಷಣದಲ್ಲಿ ತಿಳಿಸಿದರು.

ಕಟಪಾಡಿ— ಈ ಕೇಂದ್ರದ ಮಕ್ಕಳಿಗೆ ಟೈಪ್‌ರೈಟಿಂಗ್ ಮೊದಲಾದುವನ್ನು ಕಲಿಯಲು ಅನುಕೂಲವಾಗುವಂತೆ ಉಡುಪಿಯ ಮೋಡರ್ನ್ ಸ್ಕೂಲ್ ಒಫ್ ಕೊಮರ್ಸ್, ಇದರ ಶಾಖೆಯೊಂದು ಇದೇ ತಾ 4ರಲ್ಲು ಇಲ್ಲಿ ತೆರೆಯಲ್ಪಟ್ಟಿದೆ.

ಕಾರ್ಕಳ— ಇಲ್ಲಿಯ ಎಸ್. ವಿ. ಟಿ ಹುಡುಗಿಯರ ಹೈಸ್ಕೂಲಿನ ಸಹಾಯ ನಿಧಿಗೆ ಉದಾರ ಧನ ಸಹಾಯ ಮಾಡಿ ಅದರ ಪೋಷಕರಲ್ಲಿ ಒಬ್ಬರಾಗಿರುವ ಬೊಂಬಾಯಿಯ ಶ್ರೀ ಎಮ್. ವಾಮನ ನಾಯಕರನ್ನು ಸ್ವಾಗತಿಸಿ ಸತ್ಕರಿಸುವ ಸಮಾರಂಭವೊಂದು ಇದೇ ತಾ 5ರಲ್ಲು ಗಂಜಿ ಶಾಲಾ ಮಂದಿರದಲ್ಲಿ ಜರಗಿತು.

ಪುತ್ತೂರು— ಇದೇ ತಾ 2ರಲ್ಲು ಸಂಜೆ ಸೇರಿದ ಕರ್ನಾಟಕ ಸಂಘದ ಸಾಪ್ತಾಹಿಕ ಕೂಟದಲ್ಲಿ ಶ್ರೀ ಶಿವರಾಮ ಕಾರಂತರ 'ಕುಡಿಯರ ಕೂಸು' ಎಂಬ ಕಾದಂಬರಿಯ ವಿಮರ್ಶೆ ನಡೆಯಿತು. ಶ್ರೀಗಳಾದ ಬಿ. ಎಮ್. ಶರ್ಮ, ಮುಳಿಯ ಕೃಷ್ಣ ಮೊದಲಾದವರ್ ಕಾದಂಬರಿಯ ವಿಮರ್ಶೆ ಮಾಡುತ್ತ ತಮ್ಮ ಅಭಿಪ್ರಾಯ ಹಾಗೂ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಮಾಯಿಪಾಡಿ— ಸ್ಥಳೀಯ ಬುನಾದಿ ಶಿಕ್ಷಣಕೇಂದ್ರ ಶಾಲೆಯ ಹೆಡ್ ಮಾಸ್ತರ್ ಶ್ರೀ. ಕೆ. ರಾಮಕೃಷ್ಣ ಸೆಟ್ಟರು ವಾರ್ಧಾ ಪರಿಷತ್ತಿಗೆ ಹೋಗಿ ಮರಳಿ ಬಂದಿರುವರು ಅಲ್ಲದೆ ಈ ಶಾಲೆಯ ತರಬೇತಿ ಅಧ್ಯಾಪಕರು ಮೈಸೂರು, ಬೆಂಗಳೂರು, ತಿರುಪತಿ ಮದ್ರಾಸು, ಮೊದಲಾದ ಕಡೆಗಳಿಗೆ ವಿದ್ಯಾ ಪ್ರವಾಸ ಕೈಕೊಂಡಿರುವರೆಂದು ತಿಳಿದು ಬರುತ್ತದೆ.



ವೆಲ್ಕಿನ್ಸ್ ಟೂತ್ ಪೇಸ್ಟ್
ಮಿಂಚುವ ನಗುವಿಗೆ, ಮತ್ತು
ಒಸಡಿನ ಆರೋಗ್ಯಕ್ಕೆ!
ಯು. ಎಸ್ ಎ. ರಾಜ್ಯದ
ಪ್ರಸಿದ್ಧ ಡಾಕ್ಟರರೊಬ್ಬರ ತಯಾರಿಕೆ.
Welkin Laboratory (N)
Calcutta 33.
ಉದಾರ ಶರ್ತಗಳ ಮೇಲೆ ಸ್ಟಾಕಿಸ್ಟರು ಬೇಕಾಗಿದ್ದಾರೆ

The East & West
ESTD:] Insurance Co., Ltd., [1913
East & West Building, BOMBAY, 1.
ದಿ ಈಸ್ಟ್ ಎಂಡ್ ವೆಸ್ಟ್
ಸ್ಥಾಪನೆ:] ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ. [1913
ಒಟ್ಟು ನಿಧಿ ರೂಪಾಯಿ 1 ಕೋಟಿ 5 ಲಕ್ಷ ಮಿಕ್ಕಿ ಇದೆ.
1951ನೇ ಇಸವಿಯಲ್ಲಿ ಮರಣದಿಂದ ಮತ್ತು ವ್ಯಾದಿಯಾಗಿ ಕೊಟ್ಟ
ಕ್ಲೈಮುಗಳು ರುಪಾಯಿ 5 ಲಕ್ಷ 91 ಸಾವಿರಕ್ಕೆ ಮಿಕ್ಕಿರುತ್ತವೆ.
ಜೀವವಿಮೆಯ ಪೂರ್ಣ ಪ್ರಯೋಜನವನ್ನು ಜನರಿಗೆ ಒದಗಿಸಿಕೊಟ್ಟು
ಕಾಲಕಾಲಕ್ಕೆ ಸಲಹೆಯನ್ನಿತ್ತು ಸಹಕರಿಸುವುದೇ ನಮ್ಮ ಧ್ಯೇಯ.
ದಕ್ಷಿಣ ಕನ್ನಡ ಜಿಲ್ಲೆಯ ಉತ್ತರಕ್ಕೆ ಒಬ್ಬ ಮತ್ತು ದಕ್ಷಿಣಕ್ಕೊಬ್ಬರಂತೆ ಎರಡು ಜನ ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ. ಉತ್ತರ ಕನ್ನಡ ಮತ್ತು ಮೈಸೂರು ಪ್ರಾಂತ್ಯದ ಪ್ರತೀ ಜಿಲ್ಲೆಗೂ ಜಿಲ್ಲೆಗೊಬ್ಬರಂತೆ ಇನ್ಸ್‌ಪೆಕ್ಟರರೂ ಸ್ಪೆಶ್ಯಲ್ ಏಜಂಟರೂ ಬೇಕಾಗಿದ್ದಾರೆ.
ನಮ್ಮ ಆಫೀಸುಗಳು ಶಿರ್ಸಿ ಮತ್ತು ಪಡುಬಿದ್ರಿ.
ಮೆಸ್ಸರ್ಸ್ ಹೆಗ್ಡೆ ಎಂಡ ರಾವು
ಚೀಫ್ ಏಜಂಟರು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಮತ್ತು ಮೈಸೂರು ಸ್ಟೇಟ್
ಪೋಸ್ಟ್, ಶಿರ್ಸಿ ದ. ಕ.

ತೃಪ್ತಿಕರವಾದ ವಸತಿ— ಹಿತಕರವಾದ
ಊಟ— ರುಚಿಕರವಾದ ಉಪಾಹಾರ
ಇವುಗಳಿಗೆ
ಆದರ್ಶ ನಿಲಯವೆಂದರೆ
ವುಡ್ ಲೇಂಡ್ಸ್
ಉಡುಪಿ.
ಯಾತ್ರಿಕರಿಗೂ ಪ್ರಯಾಣಿಕರಿಗೂ
ಸರ್ವ ಅನುಕೂಲವಾಗುವಂತೆ
ನಗರದ ಕೇಂದ್ರಭಾಗದಲ್ಲಿದೆ

ಮಂಗಳೂರು

ಶಾಸನಸಭಾ ಚುನಾವಣೆ ಅರ್ಜಿ [illegible]- ಮಂಗಳೂರಿನ ಜಿಲ್ಲಾ ಜಡ್ಜ ಶ್ರೀ ಪಿ. ಟಿ. ರಾಮನ್ ನಾಯರ್, ಅವರು, ವೃತ್ತ ಜಿಲ್ಲಾ ಜಡ್ಜ ರಾ| ಬ| ಎಮ್. [illegible] ಜಂಡರ್ ಮತ್ತು ಕಸ್ಟೋಡಿಯನ್ ಎವೆಕ್ಯೂ [illegible] ದಿ| ಬ| ಕೆ. ವಿ. ಸೂರ್ಯನಾರಾಯಣ ಅಯ್ಯರ್ ಇವರಿಂದ ಕೂಡಿದ ಚುನಾವಣಾ ವಿಚಾರಣೆಯ ಮಂಡಲದ ಮುಂದೆ ಪುತ್ತೂರು ಮತದಾರರ ಕ್ಷೇತ್ರದ ಎಸೆಂಬ್ಲಿ ಚುನಾವಣೆಯಲ್ಲಿ ಗೆದ್ದ ಶ್ರೀಗಳಾದ ಕೆ. ವೆಂಕಟರಮಣ ಗೌಡ ಮತ್ತು ಕೆ. ಈಶ್ವರ ಇವರ ಚುನಾವಣೆಯನ್ನು ರದ್ದುಪಡಿಸಬೇಕೆಂತ ಅಲ್ಲಿ ಅಪಜಯ ಹೊಂದಿದ ಉಮೇದ್ವಾರರಾದ ಶ್ರೀ ಕೆ ಶಿವರಾಮ ಕಾರಂತರು ಮಾಡಿಕೊಂಡ ಅರ್ಜಿ ಕಳೆದ ತಾ 27ರಿಂದ ತನಿಖೆಗೆ ಆರಂಭವಾಗಿದೆ. ಅರ್ಜಿದಾರರು ಬೆಲೆಟ್ ಪೆಟ್ಟಿಗೆಗಳಲ್ಲಿ ಕೈವಾಡ ಆಗಿದೆ ಎಂದರೆ ಒಂದು ಪೋಲಿಂಗ್ ಸ್ಟೇಶನಿನಲ್ಲಿ ಕೊಟ್ಟ ಬೆಲೆಟ್ ಪತ್ರಗಳು ಇನ್ನೊಂದು ಪೋಲಿಂಗ್ ಸ್ಟೇಶನಿನ ಬೆಲೆಟ್ ಪೆಟ್ಟಿಗೆಯಲ್ಲಿ ಕಂಡುಬಂದಿವೆ; ಬೆಲೆಟ್ ಪೆಟ್ಟಿಗೆಗಳಲ್ಲಿ ಉಪಯೋಗಿಸದ ಬೆಲೆಟ್ ಪತ್ರಗಳು ಕಂಡುಬಂದಿವೆ, ಕೆಲವು ಪೆಟ್ಟಿಗೆಗಳ ಸೀಲುಗಳು ನಷ್ಟವಾಗಿ ಆ ಪೆಟ್ಟಿಗೆಗಳನ್ನು ತೆರೆಯುವ ಸಾಧ್ಯತೆ ಇದೆ ಎಂದು ಅರ್ಜಿಯಲ್ಲಿ ಆರೋಪಿಸಿರುವುದಲ್ಲದೆ ಶ್ರೀ ಗೌಡರು ಹಿಂದೂ ಧಾರ್ಮಿಕ ಉಂಬಳಿ ಸಮಿತಿಯು ಸರಕಾರ ರಚಿಸಿದ [illegible] ಕ್ಷೇತ್ರ ಸಮಿತಿಯ ಒಬ್ಬ ಮೆಂಬರರಾಗಿರುವುದರಿಂದ ಅವರು ಲಾಭದ ಹುದ್ದೆಯಲ್ಲಿದ್ದರೆ. ಆಹಾರ ಸಾಧನಗಳ ಸಂಗ್ರಹಕ್ಕಾಗಿ ಸರಕಾರಿ ಏಜನ್ಸಿಯಾದ ಜಿಲ್ಲಾ ಕೇಂದ್ರ ಸಹಕಾರಿ ಹೋಲ್ಸೇಲ್ ಸ್ಟೋರ್ಸ್, ಲಿಮಿಟೆಡ್, ಇದರ ಅಧ್ಯಕ್ಷರಾದ ಶ್ರೀ ಮೊಳಹಳ್ಳಿ ಶಿವರಾಯರು ಕಾಂಗ್ರೆಸ್ ಉಮೇದ್ವಾರ ಶ್ರೀ ಗೌಡರ ಪರವಾಗಿ ಕೆಲಸಮಾಡಿದ್ದಾರೆ ಎಂದೂ ಆಕ್ಷೇಪಿಸಿದ್ದಾರೆ. ಶ್ರೀ ಶಿವರಾಮ ಕಾರಂತರ ಕಡೆಯಿಂದ ಶ್ರೀಗಳಾದ ಕೆ. ಸದಾಶಿವ ರಾವ್ ಮತ್ತು ಬಿ. ಕೆ. ಗೋವಿಂದ ಭಟ್ಟರು, ಮೊದಲನೆ ಮತ್ತು ಎರಡನೆ ಪ್ರತಿವಾದಿಗಳ ಪರ ವಕೀಲರು ಶ್ರೀಗಳಾದ ಕೆ. ಸದಾನಂದ ಹೆಗ್ಡೆ ಮತ್ತು ಎನ್. ಎಸ್. ಸುವರ್ಣ.

ಬ್ರಹ್ಮಾವರ ಮತದಾರ ಕ್ಷೇತ್ರದಿಂದ ಎಸೆಂಬ್ಲಿ ಚುನಾವಣೆಯಲ್ಲಿ ಗೆದ್ದ ಶ್ರೀ ಎಸ್. ಎಸ್. ಕೊಳ್ಕೆಬೈಲು ಅವರ ಚುನಾವಣೆ ರದ್ದಾಗುವಂತೆ ಅಲ್ಲಿ ಸೋತ ಶ್ರೀ ಬಿ. ಜಗಜ್ಜೀವನದಾಸ ಶೆಟ್ಟರು ಮಾಡಿಕೊಂಡ ಆಕ್ಷೇಪಣೆ ಅರ್ಜಿ ಕಳೆದ ತಿಂಗಳ ಆದಿಯಲ್ಲಿ ಇದೇ ಟ್ರಿಬ್ಯೂನಲಿನ ಮುಂದೆ ತನಿಖೆಗೆ ಆರಂಭಿಸಿ ಈ ವರೆಗೆ 35 ಸಾಕ್ಷಿಗಳ ವಿಚಾರಣೆಯಾಗಿ ಇದೇ ತಿಂಗಳ ತಾ 2ರ ವರೆಗೆ ಮುಂದೂಡಿಸಿದೆ. ಅನಾರೋಗ್ಯದಲ್ಲಿರುವ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ಹೇಳಿಕೆ ಪಡೆಯಲು ಶ್ರೀ ಪಿ ವಾಸುದೇವ ರಾವ್, ಎಡ್ವೋಕೇಟ್ ಅವರು ನಿಯೋಜಿಸಲ್ಪಟ್ಟಿದ್ದಾರೆ. ಶ್ರೀ ಧರ್ಮಸ್ಥಳ ದೇವಸ್ಥಾನದ ಪ್ರಸಾದ ಹಂಚಿ ಮೂಲಕ ಜನರ ಧಾರ್ಮಿಕ ಭಾವನೆ ಮೇಲೆ ವರ್ಜನ್ನು ಬೀರುವಂತೆ ಮಾಡಲಾಗಿದ್ದು ಹೀಗೆ ನ್ಯಾಯವಾದ ಚುನಾವಣೆ ನಡೆಯಲು ಅಡ್ಡಿ ಬಂದಿದೆ ಎಂಬುದು ಅರ್ಜಿದಾರರ ಹೋಲ. ಶ್ರೀ ಕೆ. ಸದಾನಂದ ಹೆಗ್ಡೆ ಅವರು ಅರ್ಜಿದಾರರ ಮತ್ತು ಶ್ರೀ ಕೆ. ಎಸ್. ಎನ್. ಅಡಿಗರು ಪ್ರತಿವಾದಿ ಪರ ವಕೀಲರು.


CROWN RUBBER STAMP CO.

ಮದ್ರಾಸ ಗವರ್ನರರ ಆಗಮನ
ಶ್ರೀ ಶ್ರೀಪ್ರಕಾಶರು ಇದೇ 26ರಂದು ರಾತ್ರಿ ಮಂಗಳೂರಿಗೆ ಬಂದು ಮೂರು ದಿವಸಗಳಲ್ಲಿ ಜಿಲ್ಲೆಯ ಪ್ರವಾಸ ಕೈಕೊಳ್ಳಲಿರುವರು. ಅವರು ಮಂಗಳೂರು, ಉಡುಪಿ, ಕಾರ್ಕಳ, ಧರ್ಮಸ್ಥಳ ಮೊದಲಾದ ಸ್ಥಳಗಳನ್ನು ಸಂದರ್ಶಿಸಲಿರುವರು.

ಸಮಾಜಸೇವೆ- ಎಲೋಸಿಯಸ್ ಕಾಲೇಜಿನ ಸಮಾಜಸೇವಾ ಸಂಘದ 25 ಮಂದಿ ಸ್ವಯಂಸೇವಕರು ಕಳೆದ ತಾ 29 ಮತ್ತು 30ರಲ್ಲು ಗುರುಪುರದಲ್ಲಿ ಶಿಬಿರ ಹೂಡಿದರು. ಅವರು ಅಲ್ಲಿಯ ಮುಖ್ಯರಸ್ತೆಗಳನ್ನು ಶುಚಿ ಮಾಡಿ, ಆ ಕೊಳಕನ್ನೆಲ್ಲ ಕೆಲವು ಗೊಬ್ಬರದ ಹೊಂಡಗಳಲ್ಲಿ ತುಂಬಿಸಿದರು. ಇದಲ್ಲದೆ ಗುರುಪುರದಿಂದ ಪೊಳಲಿಗೆ ಹೋಗುವ ರಸ್ತೆಯನ್ನು ಮುಕ್ಕಾಲು ಮೈಲು ದುರಸ್ತಿ ಮಾಡಿದರು. ಸಮಾಜ ವಿಕಾಸ ಯೋಜನೆಯ ಶ್ರೀ ಸೂರ್ಯನಾರಾಯಣ ರಾಯರು ಈ ಶಿಬಿರದಲ್ಲಿದ್ದರು, ಕಾಲೇಜು ಲೆಕ್ಚರರು ಇದ್ದರು. ಇದರಂತೆ ಕಾವೂರಿನಲ್ಲೂ ಒಂದು ಶಿಬಿರ ಜರಗುತ್ತದೆ.

ಕ್ರಾಂತಿ ದಿನಾಚರಣೆಯು- ತಾ 7ರಲ್ಲು ಸಂಜೆ ಕೇಂದ್ರಮೈದಾನಿನಲ್ಲಿ ಶ್ರೀ ಸಿಂಪ್ಸನ್ ಸೋನ್ಸ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎ. ಶಾಂತಾರಾಮ ಪೈ, ಎ. ಕೃಷ್ಣ ಶೆಟ್ಟಿ, ಮತ್ತು ಕೆ ಮೋನಪ್ಪ ಮುಂತಾದವರು ಮಾತನಾಡುತ್ತ ರಷ್ಯದ ಕ್ರಾಂತಿಯಿಂದಾದ ಫಲ, ಮಜೂರ ರೈತರೈಕ್ಯವಾಗಬೇಕಾದ ಕಾರಣ, ಕಾಂಗ್ರೆಸ್ ಆಳಿಕೆಯ ದೋಷಗಳೇ ಮುಂತಾದುವುಗಳನ್ನು ವಿವರಿಸಿ ಎಲ್ಲರೂ ಕಮ್ಯುನಿಸ್ಟ್ ಪಕ್ಷಕ್ಕೆ ಬೆಂಬಲವೀಯಬೇಕೆಂದು ಕೇಳಿಕೊಂಡರು.

ತೈಲಚಿತ್ರ ಅನಾವರಣ- ದಿ| ಸಾಹುಕಾರ್ ಸಾಂತಪ್ಪ ಲಕ್ಷ್ಮಣ ನಾಯಕರ ತೈಲಚಿತ್ರ ಅನಾವರಣವು ಇದೇ ತಾ 1ರಲ್ಲು ಸಂಜೆ ಬೊಂಗರಕೇರಿ ಶ್ರೀ ವೆಂಕಟ್ರಮಣ ದೇವಸ್ಥಾನದ ಕಡೆಯಿಂದ ದೇವಸ್ಥಾನದ ಕಟ್ಟಡದಲ್ಲಿ ಡಾ| ಕೆ. ಆರ್. ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಟ್ರಸ್ಟಿಗಳಲ್ಲೊಬ್ಬರಾದ ಸಾಹುಕಾರ್ ನಾರಾಯಣ ನಾಯ್ಕಯವರು ದಿವಂಗತರ ಸೇವಾ ಕಾರ್ಯಗಳನ್ನೆತ್ತಿ ಮಾತನಾಡಿದರು.

ಮಜೂರರ ಸಭೆ. ಮಂಗಳೂರಿನ ಸಿನೇಮಾ ಕೆಲಸಗಾರರ ಮತ್ತು ಮೋಟಾರ್ ಕೆಲಸಗಾರರ ಸಂಯುಕ್ತ ಸಭೆಯು ತಾ 2ರಲ್ಲು ಕೇಂದ್ರ ಮೈದಾನಿನಲ್ಲಿ ಶ್ರೀ ಬಿ. [illegible] ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಡಿ'ಮೆಲ್ಲೋರವರ ಬಿಡುಗಡೆಯಾಗಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ನಿರ್ಣಯ ಮಾಡಿತು.

ಕೊಡಗರ ಸಂಘದ ಸಭೆ—ದ. ಕ. ಜಿಲ್ಲೆಯಲ್ಲಿರುವ ಕೊಡಗರ ಸಂಘದ ಸಭೆಯು ಶ್ರೀ ಬಿ. ವಿ. [illegible] ಅಧ್ಯಕ್ಷತೆಯಲ್ಲಿ ಇದೇ ತಾ 6ರಲ್ಲು ಜರಗಿತು. ಇಂಟರ್ ಕಾಲೇಜ್ ಹೋಕಿ ಪಂದ್ಯಾಟಕ್ಕೆ ಬಂದಿದ್ದ ಕೊಡಗು ಕಾಲೇಜಿನ ಟೀಮಿನವರನ್ನು ಸ್ವಾಗತಿಸಿ, ಹೋಕಿ ಆಟದಲ್ಲಿ ಭಾಗವಹಿಸಿದ ಯುವಕರನ್ನು ಪ್ರಶಂಸಿಸಿ, ಕೊಡಗಿನ ಕೀರ್ತಿಯನ್ನು ಪ್ರಕಟಪಡಿಸಿದ ವಿಷಯವನ್ನೆತ್ತಿ ಅಧ್ಯಕ್ಷರು ಮಾತನಾಡಿದರು. ಶ್ರೀ ಜಿ. ಟಿ ನಾರಾಯಣ ರಾಯರು ಹೋಕಿ ಟೀಮಿನವರ ಕಾರ್ಯಕುಶಲತೆಯನ್ನು ಪ್ರಶಂಸಿಸಿದರು. ಟೀಮಿನ ಕೆಪ್ಟನ್ ಶ್ರೀ ಸಿ. ಎ. ಪೂವಯ್ಯನವರು ಟೀಮಿನ ಪರವಾಗಿ ಉಪಕಾರ ಸ್ಮರಿಸಿದರು. ಶ್ರೀ ಮಾಚಯ್ಯ ಅವರು ವಂದನೆಗಳನ್ನರ್ಪಿಸಿದರು. ಲಘು ಫಲಹಾರದಿಂದ ಸಭಾಂತ್ಯವಾಯಿತು

ದ. ಕ. ಜಿಲ್ಲಾ ಬೋರ್ಡಿನ ಸಭೆಯು- ಇದೇ ತಾ 15ರಲ್ಲು ಪೂರ್ವಾಹ್ನ 11 ಗಂಟೆಗೆ ಹೊಸದುರ್ಗ ಬೋರ್ಡು ಹಾ| ಎ| ಶಾಲಾ ಕಟ್ಟಡದಲ್ಲಿ ಜರಗುವುದಾಗಿ ಬೋರ್ಡಿನ ಅಧ್ಯಕ್ಷರು ತಿಳಿಸುತ್ತಾರೆ.

ಕ್ಷಯರೋಗ ಮುದ್ರೆಗಳ ಮಾರಾಟ- 'ಭಾರತ ಕ್ಷಯರೋಗ ನಿವಾರಣಾ ಸಂಘ'ದಿಂದ ನಡೆಸಲ್ಪಡುತ್ತಿರುವ ಕ್ಷಯರೋಗ ಮುದ್ರೆಗಳ ಮಾರಾಟದ ಪ್ರಥಮ ವರ್ಷದಲ್ಲಿ ಸಿಕ್ಕಿದ ಮೊಬಲಗಿನಿಂದ ನಮ್ಮ ಜಿಲ್ಲೆಗೆ ರೂಪಾಯಿ 2138-3-10 ಸಿಕ್ಕಿರುತ್ತದೆ. ಈ ಹಣವು ಮಂಗಳೂರಿನ ಸಮೀಪದ ಮೂಡುಶೆಡ್ಡೆಯಲ್ಲಿ ಈಗ ಕಟ್ಟಲ್ಪಡುತ್ತಿರುವ ಕ್ಷಯರೋಗ ನಿವಾರಣಾ ಆಸ್ಪತ್ರೆಗಾಗಿ ಉಪಯೋಗಿಸಲ್ಪಡುವದು.

'ಈಗ ಕ್ಷಯರೋಗ ಮುದ್ರೆಗಳ ಮೂರನೇ ವರ್ಷದ ಮಾರಾಟವು ಪ್ರಾರಂಭವಾಗಿರುತ್ತದೆ. ಕೇವಲ ಒಂದಾಣೆ ಬೆಲೆಯ ಈ ಮುದ್ರೆಗಳನ್ನು ಜಿಲ್ಲೆಯ ಸಾರ್ವಜನಿಕರು ಹೆಚ್ಚು ಹೆಚ್ಚಾಗಿ ಕೊಂಡು ಕೊಂಡು ಕ್ಷಯರೋಗ ನಿವಾರಣಾ ಕಾರ್ಯದಲ್ಲಿ ನೆರವಾಗಬೇಕಾಗಿ' ಜಿಲ್ಲಾ ಸಂಘದ ಕಾರ್ಯದರ್ಶಿಯವರು ವಿನಂತಿಸುತ್ತಾರೆ.

ಅಕ್ಕಿ ಮಿಲ್ಲುಗಳಿಗೆ ಲೈಸನ್ಸು ಅಗತ್ಯ— ಸರಕಾರದ ಈಗಿನ ಹೊಸ ಘೋಷಣೆಯಂತೆ ಅಕ್ಕಿ ತಯಾರಿಕೆಯ ಮಿಲ್ ನ ಮಾಲಿಕರು ತಮ್ಮ ಮಿಲ್ಲುಗಳನ್ನು ಚಾಲು ಮಾಡುವರೆ ಸರಕಾರದ ಲೈಸನ್ಸು ಪಡೆಯಬೇಕಾಗಿದೆ.

ಜಾತಿ ಚಿನ್ನದ ನೆಕ್‌ಲೇಸ್, ತರಹವಾರು ಬೈಸುಗಳು, ಬೆಂಡೋಲೆ,
ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳೂ
ಯಾವಾಗಲೂ ಸಿದ್ಧವಿವೆ.
ದೂರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.
ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.
ಫೋನು ನಂಬ್ರ 66

THE VIJAYA BANK. LTD, BRAHMAVAR

ದಿ ವಿಜಯಾ ಬೇಂಕ್ ಲಿಮಿಟೆಡ್, ಬ್ರಹ್ಮಾವರ

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮನುಷ್ಯರು ನಗನಗಳ ಆಧಾರದ ಮೇಲೆ ಸಾಲಪಡೆದುಕೊಂಡು ಕ್ಲುಪ್ತ ಮುದತಿಗೆ ಅಸಲು ಬಡ್ಡಿ ವಸ್ಸೈದೆ ಕೊಡದೆ ಬಾಕಿಮಾಡಿಕೊಂಡಿರುವುದರಿಂದ ಸದ್ರಿ ಸಾಲವನ್ನು ಚುಕ್ತಾಮಾಡಿಕೊಳ್ಳುವರೆ ರಜಿಸ್ಟ್ರೀ ನೋಟೀಸು ಕಳುಹಿಸಲ್ಪಟ್ಟಿದ್ದರೂ, ಸದ್ರಿ ನೋಟೀಸುಗಳನ್ನು ಬಿಡಿಸಿಕೊಂಡು ಹೋಗದಿದ್ದುದರಿಂದ ಸದ್ರಿಯವರು ಅಡವಿಟ್ಟ ನಗನಗಳನ್ನು ಇದೇ ತಾ 22-11 52ರಲ್ಲು ಅಪರಾಹ್ನ ಗಂಟೆ 2ಕ್ಕೆ ಸರಿಯಾಗಿ, ಯಾ ಬ್ಯಾಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ

ಸಾಲದನಂಬ್ರ	ಹೆಸರು ಮತ್ತು ವಿಳಾಸ	ಅಸ್ಲು ಮೊಬ್ಲಗು	
		ರೂ.	ಆ
[illegible]/50	ಸದಾನಂದ ಶೆಟ್ಟಿ, ಮಂಜಪ್ಪ ಶೆಟ್ಟಿ ಅಳಿಯ, ಹಂದಾಡಿ ಹಲ್ಲುಮನೆ P. O. ಬ್ರಹ್ಮಾವರ	55	0
301/50	ಬಿ. ರಾಘವ ಶೆಟ್ಟಿ, ಅಂತಯ್ಯ ಶೆಟ್ಟಿಯ [illegible] ಹಲ್ಲುಮನೆ P. O. ಬ್ರಹ್ಮಾವರ.	200	0
1112/50	— Do —	40	0
1151/50	— Do —	35	0
1[illegible]86/50	— Do —	25	0
1312/50	— Do —	140	0
22[illegible]/50	ಬಚ್ಚ ಶೆಟ್ಟಿ, ಕೂಸಣ್ಣ ಶೆಟ್ಟಿ ಅಳಿಯ, ಹಂದಾಡಿ ಗ್ರಾಮ P. O ಬ್ರಹ್ಮಾವರ.	15	0
557/50	ಸುಬ್ಬಣ್ಣ ಶೆಟ್ಟಿ, ನಾಗಪ್ಪ ಶೆಟ್ಟರ ಮಗ, [illegible] ಗ್ರಾಮ, P. O. ಸಾಯ್ಬರಕಟ್ಟೆ.	75	0
1141/50	ನಾರಾಯಣ ಹೆಗ್ಡೆ, ಸೋಮಪ್ಪ ಹೆಗ್ಡೆಯ ಮಗ, ಕರ್ಜೆಬೆಟ್ಟು ಗ್ರಾಮ, [illegible] P. O. [illegible]	75	0
1211/50	[illegible] ಗ್ರಾಮ, P. O. ಬ್ರಹ್ಮಾವರ.	100	0
4[illegible]8/50	ಪಿ. ಸದಾನಂದ ಶೆಟ್ಟಿ, ರಾಮಣ್ಣ ಶೆಟ್ಟಿ ಮಗ, ಕರ್ಜೆಬೆಟ್ಟು ಗ್ರಾಮ, P. O. [illegible]	105	0
1419/50	ಚಿಕ್ಕ ಪೂಜಾರಿ, ಎಂಕ್ಟನ ಮಗ, ಹಂದಾಡಿ ಗ್ರಾಮ, P. O ಬ್ರಹ್ಮಾವರ.	25	0
[illegible]03/51	ಎಸ್. ಸದಾಶಿವ ಶೆಟ್ಟಿ, [illegible] ಶೆಟ್ಟಿ ಅಳಿಯ ಶಿರೂರ್ ಗ್ರಾಮ P. O ಕೊಕ್ಕರ್ಣೆ.	140	0

ಆಫೀಸು- ಬ್ರಹ್ಮಾವರ,
ತಾರೀಕು, 8-11 1952

R. Bhujanga Hegde
Agent

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ [illegible], ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ [illegible] ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ
ಕೆಳ್ಳಂಜೆ ವ್ಯಾಸರಾಯ [illegible]
ರಥಬೀದಿ, ಉಡುಪಿ.

ಸುಬ್ರಹ್ಮಣ್ಯ ಭಾರತೀ

"ಯಟ್ಟಯಾಪುರವು ಯಾವ ಪುಣ್ಯ ಹಾಗೂ ಶುಭಕರ್ಮವನ್ನು ಮಾಡಿತ್ತು? ಇದನ್ನು ನಾವು ಅರಿಯುವುದಿಲ್ಲ; ಸುಬ್ಬಯ್ಯನ ಜನ್ಮವು ಇಲ್ಲಿ ಆಯಿತು; ನಿಜವಾಗಿಯೂ ಒಂದುದಿನ ಇವನು ದೊಡ್ಡ ಕವಿಯಾಗುವನು. ತಿನ್ನವೆಲ್ಲಿ ಜಿಲ್ಲೆಯ ಯಟ್ಟಯಾಪುರಮ್ ರಾಜ್ಯದ ನರೇಶನು. ತನ್ನ ತಮಿಳು ಪಂಡಿತ ಶ್ರೀ ಚಿನ್ನಸ್ವಾಮಿಯೊಡನೆ ಇದನ್ನು ಹೇಳಿದನು ಚಿನ್ನಸ್ವಾಮಿಯು ತನ್ನ ಮಗ ಸುಬ್ರಹ್ಮಣ್ಯನನ್ನು ಮುದ್ದಿನಿಂದ ಸುಬ್ಬಯ್ಯನೆಂದು ಕರೆಯುತ್ತಿದ್ದನು: ಇವನು, ಎಂದಾದರೂ ರಾಜನ ಸಮ್ಮುಖ ಬಂದು, ಅಸಂಬದ್ಧ ಮಾತುಗಳನ್ನು ಆಡಿರಬಹುದೆಂದು ಚಿನ್ನಸ್ವಾಮಿಯು ಭಾವಿಸಿ, ರಾಜನೊಡನೆ ಹೀಗಂದನು: "ನನ್ನನ್ನು ಕ್ಷಮಿಸಿರಿ; ಮನೆ ಸೇರಿದೊಡನೆ ಇದನ್ನು ವಿಚಾರಿಸಿ, ತಿಳಿಯುವೆನು."

ಇದನ್ನು ಕೇಳಿ, ರಾಜನು ನಕ್ಕನು; ಮತ್ತು ವಸ್ತುತಃ ಚಿನ್ನಸ್ವಾಮಿಯ ಮಗನು ಒಬ್ಬ ಶ್ರೇಷ್ಠ ಕವಿಯಾಗುವನೆಂದು ಅವನಿಗೆ ರಾಜನು ದೃಢೀಕರಿಸಿದನು. ಆ ಸಮಯದಲ್ಲಿ ಸುಬ್ಬಯ್ಯನ ವಯಸ್ಸು ಏಳು ಎಂಟು ವರ್ಷವಾಗಿತ್ತು

ಸನ್ 1882ರಲ್ಲಿ ಯಟ್ಟಯಾಪುರದ ರಾಜದರಬಾರದ ತಮಿಳು ಪಂಡಿತ ಶ್ರೀ ಚಿನ್ನಸ್ವಾಮಿಯ ಮನೆಯಲ್ಲಿ ಒಬ್ಬ ಬಾಲಕನು ಜನಿಸಿದನು; ಇವನಿಗೆ ಸುಬ್ರಹ್ಮಣ್ಯನೆಂದು ನಾಮಕರಣ ಮಾಡಿದರು ಐದು ವರ್ಷ ಪ್ರಾಯದಲ್ಲಿ, ಬಾಲಕನ ಮಾತೆಯು ಇವನನ್ನು ಬಿಟ್ಟು ಬಿಟ್ಟು, ಸ್ವರ್ಗಸ್ಥಳಾದಳು. ಬಾಲಕನಲ್ಲಿ ಬಾಲ್ಯದಲ್ಲಿಯೇ ಕವಿಯ ಪ್ರತಿಭೆಯು ಥಳಥಳಿಸಿ ಕಾಣಿಸುತ್ತಿತ್ತು. ಬಾಲ್ಯದಿಂದಲೇ, ತಾಲೂಕು ವಿದ್ವನ್ಮಂಡಲಿಯಲ್ಲಿ ಭಾಗವಹಿಸಿ, ಈಶ್ವರ, ಬ್ರಹ್ಮ ಹಾಗೂ ಆತ್ಮ ಮುಂತಾದ ವಿಷಯದಲ್ಲಿ ಸಂಭಾಷಣ ನಡಿಸುತ್ತಿದ್ದನು. ಪಾಠಶಾಲೆಯ ವಿಷಯ, ಮನೆಯಿಂದ ಬೆಳಿಗ್ಗೆ ಹೊರಟು, ಹತ್ತಿರವಿರುವ ಕಾವೇರೀ ನದಿಯ ತಟ ಸೇರಿ, ಕೂತುಕೊಳ್ಳುವುದು; ಅಥವಾ ಪಶುಪಕ್ಷಿಗಳನ್ನು ನೋಡಿ, ಕವಿತೆಗಳನ್ನು ರಚಿಸುವುದು;–ಇದೇ ಇವನ ಕಾರ್ಯವಾಗಿತ್ತು.

ಸುಬ್ಬಯ್ಯನ ವಿವಾಹವು 14ನೇ ವಯಸ್ಸಿನಲ್ಲಿಯೇ ನಡೆಯಿತು; ಆಗ ಇವನ ಪತ್ನಿ ಚೆಲ್ಲಮ್ಮಳ ವಯಸ್ಸು ಏಳುವರ್ಷವಾಗಿತ್ತು. ಮರುವರ್ಷವೇ ಪಿತನು ಮರಣಪಟ್ಟನು. ಅವಸಾನ ಕಾಲದಲ್ಲಿ ಪಿತನು ಲೋಭಿಯಾದನು ಧನ ಲೋಭದಿಂದ ಜೂಜಾಡಲು, ಪ್ರಾರಂಭಿಸಿದನು; ಮತ್ತು ಅತ್ಯಾಸೆಯಿಂದಲೇ ಸರ್ವಸ್ವವನ್ನು ಕಳಕೊಂಡನು ಸುಬ್ಬಯ್ಯನು ಸರ್ವಥಾ ಅಸಹಾಯ ಹಾಗೂ ನಿರ್ಧನನಾದನು; ಆದುದರಿಂದ, ಇವನು ತನ್ನ ಸೋದರತ್ತೆ ಮತ್ತು ಅವಳ ಗಂಡನೊಡನೆ, ಕಾಶಿಗೆ ಹೋದನು- ಇವನ ಸೋದರತ್ತೆಯ ಗಂಡನು ಕಾಶಿಯ ಒಂದು ದೊಡ್ಡ ಮಠದ ಸ್ವಾಮಿಯಾಗಿದ್ದನು ಸುಬ್ರಹ್ಮಣ್ಯನು ಇಲ್ಲಿಯೇ ತನ್ನ ಶಿಕ್ಷಣವನ್ನು ಹೊಂದಿದನು. ಹಿಂದೀ, ಸಂಸ್ಕೃತ ಹಾಗೂ ಆಂಗ್ಲ ಭಾಷೆಯ ಅಧ್ಯಯನ ಕೂಡ ಇಲ್ಲಿಯೇ ಮಾಡಿದನು. ಬ್ರಾಹ್ಮಣ ಕುಲದಲ್ಲಿ ಜನಿಸಿದ್ದರೂ, ಇವನು [illegible], ಪ್ರತ್ಯೇಕ ಸಮಯದಲ್ಲಿ ಕೋಟ್ ಪೇಂಟಲೂನ್ ಉಟ್ಟು, ಅಡ್ಡಾಡುತ್ತಿದ್ದನು; ಇದನ್ನು ಕಂಡು, ಇವನ ಸೋದರತ್ತೆಯ ಗಂಡನು ಅತ್ಯಂತ ರೇಗುತ್ತಿದ್ದನು ಹಿಂದೀ ಮತ್ತು ಸಂಸ್ಕೃತದ ಜ್ಞಾನಹೊಂದಿದ ನಂತರ, ಪುನಃ ದಕ್ಷಿಣಕ್ಕೆ ಹೊರಟು ಬಂದನು.

ದಕ್ಷಿಣಕ್ಕೆ ಬಂದನಂತರ ಇವನು ಸ್ವಲ್ಪ ಕಾಲ ಮದುರಾಕಾಲೇಜಿನಲ್ಲಿ ತಮಿಳುಪಂಡಿತನಾಗಿ ಕೆಲಸಮಾಡಿದನು; ಆದರೆ ಸ್ವಲ್ಪಕಾಲದಲ್ಲಿಯೇ ಇವನು ಮದ್ರಾಸ್ ಪಟ್ಟಣ ಸೇರಿ, ಅಲ್ಲಿ 'ಸ್ವದೇಶಿ ಮಿತ್ರನ್' ದೈನಿಕ ಪತ್ರಿಕೆಯಲ್ಲಿ ಸಹಸಂಪಾದಕನಾಗಿ ಕಾರ್ಯವಹಿಸಿದನು. ಇವನ ಲೇಖನಿಯು ಬೆಂಕಿಕಾರಲು ಪ್ರಾರಂಭಿಸಿತು. ಆದರೆ, ಸಹಸಂಪಾದಕನಾಗಿ, ಇವನಿಗೆ ಕಾರ್ಯಮಾಡಲು ಸಾಧ್ಯವಲ್ಲವಿತ್ತು. ಕವಿ ಹಾಗೂ ದೇಶಭಕ್ತನ ಸ್ವತಂತ್ರ ಲೇಖನಿಯು ಪ್ರಧಾನ ಸಂಪಾದಕನ ವಿಚಾರಗಳ ಅವಲಂಬನಮಾಡಲು, ಸಿದ್ಧವಾಗಿರಲಿಲ್ಲ; ಆದುದರಿಂದ 190[illegible]ರಲ್ಲಿ ಕೊಂಗ್ರೆಸ್ ಸಂಸ್ಥೆಯ ಕಾಶೀ ಅಧಿವೇಶನವಾಗಿ ಹೊರಟು ಬಂದೊಡನೆ, ಇವನು ತನ್ನದೇ ಪತ್ರಿಕೆಯನ್ನು ನಡಿಸಿದನು ಇವನು ಉಗ್ರಪಂಥವನ್ನು ಅನುಸರಿಸಿದನು, ಸೂರತ್ ಕೊಂಗ್ರೆಸ್ಸ್ ಅಧಿವೇಶನದ ಸಮಯದಲ್ಲಿ ಇವನು ಮದ್ರಾಸೀ ಸ್ವಯಂಸೇವಕದಳದ ನಾಯಕನಾಗಿ ಅಲ್ಲಿ ಮುಟ್ಟಿದನು. ಸೂರತ್ ಅಧಿವೇಶನವು ಗಲಾಟೆಗಳಿಗಳಿಂದ ಪ್ರಸಿದ್ಧವಾಗಿದೆ, ಲೋಕಮಾನ್ಯತಿಲಕರು ಮಾತಾಡಲು ನಿಂತೊಡನೆ, ಕುರ್ಚಿಮೇಜುಗಳ ಜಡಿಮಳೆಯು ಪ್ರಾರಂಭಿಸಿತು. ಇಂತಹ ಸಮಯದಲ್ಲಿ ಸುಬ್ರಹ್ಮಣ್ಯ ಭಾರತೀಯು (ಬಾಲ್ಯದಲ್ಲಿಯೇ ಇವನನ್ನು ಗ್ರಾಮ ನಿವಾಸಿಕರು ಭಾರತಿಯೆಂದು ಕರೆಯುತ್ತಿದ್ದರು) ತನ್ನ ಸ್ವಯಂ ಸೇವಕರ ಸಹಿತ, ಲೋಕಮಾನ್ಯ ತಿಲಕರ ರಕ್ಷಣಾರ್ಥ ಅವರ ನಾಲ್ಕು ಕಡೆಗಳಲ್ಲಿಯೂ ಸುತ್ತುಕಟ್ಟಿಸಿದನು; ಇದರಿಂದ, ಇವನಿಗೆ, ಪೆಟ್ಟುತಿಂದು ಘಾಯಗಳಾದವು.

ಅಲ್ಲಿಂದ ಹಿಂತಿರುಗಿ, ಇವನು ಮದ್ರಾಸು ಜನಸಂಘದ ಸ್ಥಾಪನೆ ಮಾಡಿದನು. ಮತ್ತು ದೈನಿಕ 'ಇಂಡಿಯಾ' ಪತ್ರಿಕೆಯನ್ನು ನಡಿಸಿದನು; ಆದರೆ; ಇವೆರಡೂ ಹೆಚ್ಚು ಕಾಲ ನಡಿಯಲಿಲ್ಲ. ಅದೇ ಸಮಯದಲ್ಲಿ ಲಾಲಾ ಲಜಪತ ರಾಯರನ್ನು ನಿರ್ವಾಸಿತ ಮಾಡಿದರು; ಅಂದಿನಿಂದ, ಮದ್ರಾಸಿನ ಸಮುದ್ರತಟದ ಮೇಲೆ ಭಾರತಿಯು ದಿನಾಲೂ ಭಾಷಣಮಾಡಲು ಪ್ರಾರಂಭಿಸಿದನು ಇವನ ನಾಲಿಗೆ ಮತ್ತು ಲೇಖನಿಯು ಜನರ ಹೃದಯಗಳಲ್ಲಿ ಸರಕಾರದ ವಿರುದ್ಧ, ಕ್ರೋಧವನ್ನುಂಟುಮಾಡಿತು ಬ್ರಿಟಿಷ್ ಸರಕಾರವು ಇಂತಹ ಭಯಂಕರ ವ್ಯಕ್ತಿಯನ್ನು ಹೇಗೆ ಸ್ವತಂತ್ರವಾಗಿ ವರ್ತಿಸಲು ಬಿಡಬಲ್ಲುದು? ಕೂಡಲೇ ಭಾರತಿಯ ಮೇಲೆ ವಾರಂಟು ಜಾರಿ ಮಾಡಿದರು; ಆದರೆ ಭಾರತಿಯು ಮೃದುಹೃದಯನಾಗಿರಲಿಲ್ಲ ; ಜೈಲ ಸೇರುವುದೇ ದೇಶಭಕ್ತಿಯ ಲಕ್ಷಣವೆಂದು ಇವನು ಭಾವಿಸಿರಲಿಲ್ಲ; ಆದುದರಿಂದ ಇವನು ಮೌನದಿಂದ ಪೊಂಡಿಚೇರಿ ಸೇರಿ ನೆಲಸಿದನು. ಆ ದಿನಗಳಲ್ಲಿ ಭಾರತಿಯು ಏನನ್ನು ಆಡಿದನು? ಹೇಗೆ ಆಡಿದನು? ಎಂಬುದನ್ನು ಸಮುದ್ರತಟದ ಹೊಯಿಗೆಯ ಕಣಗಳು ಮಾತಾಡುವುದಾದರೆ, ತೋರಿಸಬಲ್ಲುವೆಂದು ಭಾರತಿಯ ಧರ್ಮಪತ್ನಿಯು ತನ್ನ ಜೀವನ ಕಥೆಯಲ್ಲಿ ಹೇಳಿರುವಳು

ಪೊಂಡಿಚೇರಿಯಲ್ಲಿ ಭಾರತಿಗೆ ವಿ ಸಾವರಕರರ ಸಾಥಿಯಾದ ಶ್ರೀ ವಿ. ಎಸ್ ಅಯ್ಯರ್ ಹಾಗೂ ಶ್ರೀ ಅರ ದ ಘೋಷರು ಸಿಕ್ಕಿದರು; ಆದರೆ, ಯೂ ಇವನಿಗೆ ನೆಮ್ಮದಿಯಿಂದಿರಲು ಧ್ಯವಾಗಲಿಲ್ಲ; ಯಾಕಂದರೆ, ಬ್ರಿಟಿಷ್ ರಕಾರದ ಪ್ರಾರ್ಥನೆಯ ಮೇರೆಗೆ ಫ್ರೆಂ ಸರಕಾರವು ಇವನ ಎಲ್ಲಾ ಮನಿಯಾ ರುಗಳನ್ನು ತಡೆದಿಡಲು ಪ್ರಾರಂಭಿಸಿ ಇವನ ಪತ್ರಗಳನ್ನು ಕೂಡ ಸೆನ್ಸರ ಡುತಿತ್ತು. ಈ ದಿನಗಳಲ್ಲಿ ಇವನು ದು ಹಾಗೂ ದೈನ್ಯವನ್ನು ಅನುಭವಿಸಿದ ಇವನ ಸಂಕಷ್ಟಗಳೆಲ್ಲಾ ಇವನ ಮಿತ್ರ ಗೆ ಮಾತ್ರ ತಿಳಿದಿವೆ. ತನ್ಮಧ್ಯದಲ್ಲಿ ಇ ಊರಿನಲ್ಲಿ ಇವನ ಬಂಧುಗಳು ಕೂಡ ದುಮಾಡಲ್ಪಟ್ಟರು 1919ರಲ್ಲಿ ಇವ ಪುನಃ ಭಾರತಕ್ಕೆ ಹೊರಟು ಬಂದ ಮತ್ತು ಬಂದೊಡನೆ, ಕಡ್ಡೂರಿನಲ್ಲಿ ಧಿಸಲ್ಪಟ್ಟನು ಜೈಲಿನಲ್ಲಿ ಇವನ ಸ್ವಾ ವು ಕೆಟ್ಟದಾಗುತ್ತ ಬಂತು. ಜೈಲಿನಿ ಹೊರಟುಬಂದನಂತರ 1921ನೆ ಸ ಬರ 11ರಲ್ಲಿ ಇವನು ಸ್ವರ್ಗಸ್ಥನಾದ

ಭಾರತಿಯು ಒಬ್ಬ ಮಹಾನ್ ಸು ರಕನಾಗಿದ್ದನು: ಇವನು ಸ್ತ್ರೀಯರ ತ್ಥಾನದ ವಿಷಯದಲ್ಲಿ ವಿಶೇಷ ಚಿಂ ನಾಗಿದ್ದನು, ಇವನು ತನ್ನ ಕವಿತೆಯ ಸ್ತ್ರೀಯರ ಅವಸ್ಥೆಯ ಉಲ್ಲೇಖಮಾ ಸಕಲ ರೂಢಿಗಳನ್ನು ಉಲ್ಲಂಘಿಸಿ, ಸ ಜದಲ್ಲಿ ಮುಂದೆಸಾಗಿ, ಪ್ರಗತಿಪರನ ಕಾರ್ಯಮಾಡಿ ಸಾಧಿಸಲು ಹೇಳಿ ನು; ಇದು ಮಾತ್ರವಲ್ಲ, ದೇಶದ ಜ ಯ ಹೇಡಿತನವನ್ನು ಕೂಡ ದುಃಖಿತ ಗಿ ಪ್ರಕಟಿಸಿರುವನು. ಇವನು ಸ್ಪೃ ಅಸ್ಪೃಶ್ಯತೆ ಮುಂತಾದವುಗಳ ವಿಷ ಲ್ಲಿಯೂ ಕವಿತೆಗಳನ್ನು ಮಾಡಿರುವನು.

ಭಾರತಿಯು ಕವಿಯು ಮಾತ್ರವ ಒಬ್ಬ ಮಹಾನ್ ದೇಶಭಕ್ತನೂ ಆಗಿರ ನು. ಇವನು ಗುರುಗೋವಿಂದ ಸಿಂ ಮಹಾ ರಾಣಾಪ್ರತಾಪ ಮತ್ತು ಶಿವಾ ಯವರ ಓಜಸ್ವೀ ಗಾಥೆಗಳನ್ನು ಬರೆ ದನು; ಮತ್ತು ದೇಶದ ನಿರ್ಧನ ಜನತೆ ದಾರುಣಾವಸ್ಥೆಯನ್ನು ವರ್ಣಿಸಿರುವ ಇದಲ್ಲದೆ, ಇವನು ಸ್ವತಂತ್ರ ಭಾರ ರೂಪರೇಖೆಯನ್ನು ಕೂಡ ಬರೆದನು; ದರೆ, ದುರ್ಭಾಗ್ಯವಶರಾಗಿ, ಈ ಮಹಾ ತಪಸ್ವಿಯ ಸ್ವಪ್ನಗಳ ಭಾರತವು ಇ ಗೂ ನಿರ್ಮಾಣವಾಗಲಿಲ್ಲ ದೇಶವು ಜನೆಹೊಂದಿತು; ಇವನು ಬಯಸಿದ ತಂತ್ರತೆಯ ಸ್ವರೂಪವು ಇನ್ನೂ ದೇ ಲ್ಲಿ ಸ್ಥಾಪಿತವಾಗಲಿಲ್ಲ

ಇಂದು ತಮಿಳ ನಾಡಿನಲ್ಲಿ ಸ ಗಾಯಕರು ಭಾರತಿಯ ಗೀತಗಳ ಹಾಡಿಯೇ ಗಾಯಕರೆನ್ನಲ್ಪಡುತ್ತಾ ಇವನು ನಿಶ್ಚಿತವಾಗಿ ಒಬ್ಬ ಯುಗಪ್ರ ವನು; ಇವನು ಒಬ್ಬ ಜನ್ಮಜಾತ ಕ ಉಗ್ರ ಉತ್ಕಟ ದೇಶಭಕ್ತ ಮತ್ತು ಓ ಸುಧಾರಕನು ತಮಿಳ ನಾಡು, ಮಾ ವಲ್ಲ, ಇಂದು ಇಡೀ ಭಾರತ ವರ್ಷ ಸುಬ್ರಹ್ಮಣ್ಯ ಭಾರತಿಯ ವಿಷಯ, ಮಾನಪಟ್ಟು ಶ್ರದ್ಧಾಂಜಲಿಯನ್ನು ಸ ರ್ಪಿಸುತ್ತದೆ.

[ಶ್ರೀ ಎ. ವಿಶ್ವನಾಥನವರ ಲೇಖ
ಆಧಾರದಿಂ

—ವೈದ್ಯಗುರು ಎಂ. ಆರ್. ಭ

ಮಾನವ ವಿಜಯದ ಹೆದ್ದಾರಿ!
ಆರ್ಥಿಕ ಮತ್ತು ಸಾಂಪತ್ತಿಕ ಅನುಕೂಲತೆಯು ಇಂದಿನ ಮಾನವ ಜೀವನದ ವಿಜಯದ ಹೆದ್ದಾರಿ.
ಜನತೆಗೆ ಈ ಅನುಕೂಲತೆಗಳನ್ನೊದಗಿಸಿ ಸಾಂಪತ್ತಿಕ ಅಭಿವೃದ್ಧಿ ಸಾಧಿಸುವುದೇ ಬೇಂಕುಗಳ ಹೆಗ್ಗುರಿ.
ದಿನೇ ದಿನೇ ಜನ ವಿಶ್ವಾಸಗಳಿಸಿ ಪ್ರಗತಿ ಹೊಂದುತ್ತಿರುವ
ದಿ ವಿಜಯ ಬೇಂಕ್, ಲಿಮಿಟೆಡ್.
ಇದರೊಡನೆ ನಿಮ್ಮ ವ್ಯವಹಾರ ಬೆಳೆಸಿ ಅನುಕೂಲತೆ ಪಡೆದು ಜೀವನದಲ್ಲಿ ವಿಜಯ ಸಾಧಿಸಿರಿ
ಗಿರಾಕಿಗಳ ಹಿತಸಾಧನೆ ಮತ್ತು ವಿಶ್ವಾಸ ಸಂಪಾದನೆಯು ವಿಜಯ ಬೇಂಕಿನ ಅಮೂಲ್ಯ ಸೊತ್ತು
The Vijaya Bank Ltd.,
Head Office: **MANGALORE-3**
Branches at:
Udipi, Kaup, Coondapur, Byndoor, Karkal, Brahmavar, City-Mangalore, Kasaragod, Puttur, Kanhangad, Bombay & Mercara.

ರಕ್ಷಣೆಗೂ ಉಳಿತಾಯ ವ್ಯವಸ್ಥೆಗೂ
ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶ್ಯೂರೆನ್ಸ್ ಕೊ. ಲಿಮಿಟೆಡ್.
ಸ್ಥಾಪನೆ: 1934. ಪ್ರಧಾನ ಕಚೇರಿ: ಮದ್ರಾಸು.
66½ ಲಕ್ಷಕ್ಕಿಂತ ಮಿಕ್ಕಿದ ಹೊಸ ವ್ಯವಹಾರ, **15** ಲಕ್ಷಕ್ಕೂ ಮಿಕ್ಕಿದ ಪ್ರೀಮಿಯಮ್ ಉತ್ಪತ್ತಿ, **45¼** ಲಕ್ಷಕ್ಕೂ ಮಿಕ್ಕಿದ ಜೀವವಿಮಾ ನಿಧಿ. **60¾** ಲಕ್ಷಕ್ಕೂ ಮಿಕ್ಕಿದ ಮೂಲಧನಗಳು. ಸಾಧಾರಣ **3** ಕೋಟಿಯಷ್ಟು ಊರ್ಜಿತದಲ್ಲಿರುವ ವಹಿವಾಟು.
ಪ್ರಗತಿಪರವಾದ ಈ ಕಂಪೆನಿಯಲ್ಲಿ ಒಂದು ಪೋಲಿಸಿ ಇರುವುದು ಉತ್ತಮ ಸೇವನಾ. ಅಂತೆಯೇ ಇದರ ಏಜನ್ಸಿ ಇರುವುದು ಚಲೋ ವ್ಯವಹಾರ ಸಾಧನ.
ಉತ್ಸಾಹಿ, ಜನಾನುರಣೀಯ, ಸಮರ್ಥ ಸ್ತ್ರೀ ಪುರುಷರಿಂದ ಕಂಪೆನಿ ಪ್ರಾತಿನಿಧ್ಯದ ಬಗ್ಗೆ ಅರ್ಜಿಗಳು ಸ್ವಾಗತಾರ್ಹವು. ದಯಮಾಡಿ ಬರೆಯಿರಿ:—
ಜಿ. ಆರ್. ನಾಯ್ಕ, ಬ್ರಾಂಚ್ ಮೆನೇಜರ್,
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು [ದ. ಕ.]

ವ್ಯವಹಾರ ಶಕಟದ ನಾಲ್ಕು ಚಕ್ರಗಳಾದ ಷಿ, ವಾಣಿಜ್ಯ, ಕೈಗಾರಿಕೆ ಮತ್ತು ವಿಜ್ಞಾನ ಕೇವಲ ಲೇಖಕನ ಲೇಖನಿಯು ಉತ್ಕರ್ಷವನ್ನು ಹೊಂದಿಕೊಂಡು ಮುನಿಯೊ ಅಥವಾ ನೇರಾಗಿಯೊ ಸಾಗುವುದು. ಹೆಚ್ಚೇಕೆ? ಉತ್ತಮ ಲೇಖಕನೊಬ್ಬನು ಇಚ್ಛಿಸಿದರೆ ಅದನ್ನ ನರಕದ ಕುಂಡವನ್ನಾಗಿ ಪರಿವರ್ತಿಸಬಲ್ಲನು. ಅವನು ಲೌಕಿಕ ಸೌಖ್ಯವನ್ನು ರೂಪಿಸುವುದರಲ್ಲಿ ನೆರವಾದರೆ, ಮುದುಡಿರುವ ಜನಜೀವನವನ್ನೂ ದೇವಮಾನವತೆಗೇರಿಸಬಲ್ಲನು. ಇಂದು ಜಾಗೃತ ಸುಸಂಸ್ಕೃತ ರಾಷ್ಟ್ರಗಳು ತಮ್ಮ ನಾಡಿನ [illegible] ಬೇಕಾಗಿ ಅಂಥಾ ಉತ್ಕೃಷ್ಟ ಸಂಘಟನೆ ಸುಸಂಸ್ಕೃತವನ್ನು ನೆಲೆನಿಲ್ಲಿಸಲು, ಅಲ್ಲಿನ ಲೇಖಕರು ಎಷ್ಟೋ ರಾತ್ರಿ ನಿದ್ದೆಗೆಟ್ಟಿರಬಹುದು. ತಮ್ಮ ಭಾವನೆಯು ಸುಂದರ ರೂಪವ ಬರಹದಲ್ಲಿ ಮೂಡಿಸುವುದಕ್ಕಾಗಿ ಎಷ್ಟೋ ಹಾಳೆಗಳನ್ನು ಹರಿದುಹಾಕಿ ನಿಟ್ಟುಸಿರು ಬಿಟ್ಟಿರಬಹುದು. ಕೊನೆಗೆ ತಮ್ಮ ಹೃದಯದ ಅಗಾಧ ಸಂಕಟಗಳು ಚಿಲುಮೆ ಚಿಲುಮೆಯಾಗಿ ಕಾಗದದ ಮೇಲೆ ನಿಂತಾಗ ಅವರು ಆನಂದದಿಂದ ಕೇಕೆ ಹಾಕಿರಬಹುದು. ಆ ಬರಹವನ್ನೇ ತಾವು ಹಲವುಸಾರಿ ಹಾಡಿರಬಹುದು. ತಮ್ಮ ಮುದ್ದು ಮಗುವನ್ನು ಮುದ್ದಿಸುವಂತೆ. ಬರಹಗಾರನು ಹೃದಯವನ್ನೇ ಕಾಗದದ ಮೇಲೆ ಚೆಲ್ಲಿದಾದರೆ ಅವನು ತನ್ನ ದೇಹದ ಎಲ್ಲ ರಕ್ತಕಣಗಳನ್ನ [illegible] ಆಗ ಅವನ [illegible] ದಿಂದ ಕೆಲಸವಹಿಸುತ್ತಿ ಬೇ ಆ ಸುಂದರ ಸನ್ನಿವೇಶದಲ್ಲಿ ಅವನಿಗೆ ಮುಖ್ಯ ಸಾಮಾನ್ಯವಾದ ಆಹಾರ ನಿದ್ರೆ ಭಯ ದ ಸಾಧನವು ಆಗ ಅವನೊಂದು ನಿಕ್ಷಶೀಲನಾಗುತ್ತಾನೆ! ತನ್ನ ಬರಹಕ್ಕೆ ತನ್ನಿಂದ ಬರುವ ದಿವ್ಯಾನಂದದಲ್ಲೇ ಅವನು ತನ್ನ ಮಾಗಿರುತ್ತಾನೆ ಅವನಿಗೆ ಆಗೊಂದು ಅನು ಸಮಾಧಿ ವಸ್ತುವು ಪ್ರತ್ಯಕ್ಷವಾಗಿರುತ್ತೆ. ಅಲ್ಲವೇ ಬಲ್ಲವನು ಬಲ್ಲದ ಸವಿಯು, ಅಂತಹ ಮಹಾಶಯರಾದ ಲೇಖಕರನ್ನು ಸರಿಯಾಗಿ ಆರಿಸಿಕೊಳ್ಳಬೇಕಾದರೆ ಆ ನಾಡಿಗೆ ಅರಿಗೆ. ಅನರ್ಘ ಸುಕೋಮಲವಾದ ಹೃದಯಳ, ಉತ್ತಮ ಸಂಸ್ಕೃತಿಯಿಂದ ಪರಿಷ್ಕಾರ ಹೊಂದಿದ ಜನರಮಧ್ಯದಲ್ಲಿ ಉತ್ತಮ ಲೇಖಕ ಜನ್ಮವಾದರೆ ಆ ಲೇಖಕನಿಗೆ ಅದಕ್ಕೆ ದಾರುಣವೇನನೆ ಇನ್ನಾವುದ ?

ಎಲ್ಲಾ ನಾಡಿನಲ್ಲೂ ಲೇಖನ ವ್ಯವಸಾಯವನ್ನು ಕ್ರಮವಾಗಿ ನಡೆಸುವ ಕೆಲವು ಮಹನೀಯರುಂಟು. ಇವರೆಲ್ಲಾ ನಾಡಿನ ಹಿತದೃಷ್ಟಿಯಿಂದ ಪ್ರಾಶಸ್ತ್ಯ [illegible] ಅವರೆಲ್ಲಾ ಒಂದೇ ವರ್ಗಕ್ಕೆ ಸೇರಿಸಲಾಗುವುದಿ ಕೆಲವರು ಆ ದೇವರ ಪುಣ್ಯದಿಂದ ಗೀತೋಪದೇಶದಂತೆ ಕರ್ತವ್ಯಕ್ಕಾಗಿ ಕರ್ತವ್ಯ ಮಾಡುವವರು. ಇವರು, ಜನರು ತಮ್ಮನ್ನು ಹೊಗಳಿ ಎಂದರೂ ಹಿಗ್ಗುವುದಿಲ್ಲ 'ಛೀ ಛೀ, ಕೆಟ್ಟವನು!' ಎಂದರೆ ಕುಗ್ಗುವುದೂ ಇಲ್ಲ ಹೊಗಳಿಕೆಗೆ ಆಸೆ ಕುಂದಿಲ್ಲ, ಮೂದಲಿಕೆಗೆ ಹೆದರಿ ಇವರು ನಿಸ್ವಾರ್ಥರು. ಭಾಷಾಸೇವೆಗಾಗಿ ತೊಟ್ಟವರು. ಇವರಿಗೆ ಲಾಭಾ ಲಾಭಾದಿ ಅಪೇಕ್ಷೆಗಳು ಬೇಕಾಗಿಲ್ಲ. ಒಂದು ರವ ಕೀಳ ಮಟ್ಟದಿಂದ ಮೇಲಕ್ಕೆತ್ತಲ್ಪಡಬೇಕಾದರೆ ಈ ವರ್ಗದ ಲೇಖಕರ ಸಂಖ್ಯೆ ಹೆಚ್ಚ ಬೇಕು (ಎಲ್ಲಾ ಲೇಖಕರನ್ನೂ ಸಂಪಾದಕರು ಈ ವರ್ಗಕ್ಕೇ ಸೇರಿಸಿಕೊಳ್ಳಬಾರದು) ಇಂಥಾ ಸಾಹಿತಿಗಳ ಚಿರಪರಿಶ್ರಮದ ನಾಡಿನ ಮುಂಬೆಳಕು ಅವರಿಗೆ ಒಲಿದಿದ್ದರೂ, ಅವರ ಬರವಣಿಗೆಯವನ್ನು ಓದುವ ಜನರ ಉತ್ಸಾಹ ಧ್ವನಿಯು ವ್ಯರ್ಥವಾಗುವಂತಿಲ್ಲ; ಅವರ ಅವಿಶ್ರಾಂತ ಪ್ರಯತ್ನವು ಮುಳ್ಳು ಹಾಸಿಗೆ. ಮರು ಅವು ದಿಗ್ ದಿಗಂತಗಳಲ್ಲಿ ಅನುರಣಿಸುತ್ತಿದ್ದು ಇನ್ನೊಬ್ಬ ಸಾಹಿತಿ ಜನರ ಹೃದಯವನ್ನ ಸೆರೆಯಲ್ಲಿಟ್ಟು ಎಬ್ಬಿಸಿ ಅವರ ಕಾರ್ಯವನು ಮುನ್ನಡೆಸುವುದು.

ಲೇಖನ ವ್ಯವಸಾಯ-ಕನ್ನಡದಲ್ಲಿ?

ಶ್ರೀ ಯು. ಪಾ. ಉಡುಪ, ವಿದ್ವಾನ್, ಬರೋಡ.

ಭಾರತದ ಸುಸ್ವಪ್ನ ಭಾವೀ ಲೇಖಕರೆಲ್ಲಾ ಈ ರೀತಿಯಲ್ಲಿ ಕೆಲಸಮಾಡಿ- ಈ ಕನ್ನಡದಲ್ಲಿ ವಿಶ್ವಾಸವಿಟ್ಟು—ತಮ್ಮ ಉದ್ದೇಶವನ್ನು ಸಾರ್ಥಕಪಡಿಸಿಕೊಂಡರು.

ಇನ್ನೊಂದು ಶ್ರೇಣಿಯ ಲೇಖಕವರ್ಗವು ತನ್ನ ಶರೀರದ ರಕ್ತಕಣಗಳನ್ನು ಅಸಿ ಮಸಿ ಇಲ್ಲದೆ ಲೇಖನ ವ್ಯವಸಾಯಕ್ಕೆ ಮೀಸಲು ಮಾಡುತ್ತಿದೆ. ಈ ವರ್ಗಕ್ಕೆ ತಾವು ಮಾಡುವ ಕಾರ್ಯದಲ್ಲಿ ಫಲಾಪೇಕ್ಷೆಯಿದೆ. ಕೃಷಿಕನೂ, ವಣಿಜನೂ, ಕೈಗಾರಿಕೆಯ ಸಂಚಾಲಕನೂ, ವಿಜ್ಞಾನಿಯೂ ಯಾವುದಕ್ಕಾಗಿ ಕೆಲಸಮಾಡುತ್ತಾರೆಂದು ಈ ವರ್ಗವು ಕೇಳುತ್ತಿದೆ. ಈ ವರ್ಗದವರು ಜನತೆಯ ಸಹಕಾರದೊಂದಿಗೆ ತಮ್ಮ ಜೀವನವೂ ತುಂಬಬೇಕೆಂಬ ಆಸೆಯುಳ್ಳವರು. ಆದಕ್ಕಾಗಿ ಇವರು ಪರಸ್ಪರ ಕಚ್ಚಾಡಿಕೊಳ್ಳಲು ಬೇಸರಪಡುವುದಿಲ್ಲ. ಒಬ್ಬ ಲೇಖಕನು ನಾಲ್ಕು ಮಂದಿಯ ಮುಂದೆ ಸಾಗಿದನೆಂದಾದರೆ ಅವನ ಬರಹಗಳನ್ನು ಬಾಯಿಯಿಂದಲೋ ಬರಹದಿಂದಲೋ ತೆಗಳಲು ತೊಡಗುವರು; ಅವನ ಲೇಖನ ಪ್ರಣಾಲಿಯನ್ನು ಖಂಡಿಸುವರು. ಇದು ಸ್ವಾರ್ಥದ ದೃಷ್ಟಿಯಿಂದಾದರೂ ಇದರಿಂದ ಆ ಟೀಕೆಗೆ ಒಳಗಾದ ಬರಹಗಾರನು ಇನ್ನೂ ಶಾಂತಿಯುತನೇ ಆಗುತ್ತಾನೆ. ಅವನಲ್ಲೂ ಶಾಯಿ ಲೇಖನಿ [illegible] ಅವನೂ ಸಂದರ್ಭನೋಡಿ ಲೇಖನರಂಗದಲ್ಲಿ ಮಲ್ಲಕಾಳಗಕ್ಕೆ ಇತರ ಬರಹಗಾರರನ್ನು ಆಹ್ವಾನಿಸುವನು, ತನ್ನ ಸಂಶೋಧನೆಯಲ್ಲಿ ಹುರುಳಿಲ್ಲವೆನ್ನುವನು. ಈ ಕವಿತೆ ನೀರಸವೆನ್ನುವನು. ಈ ಲೇಖಕನು ಹೀಗೆ ತನ್ನನ್ನು ತಿದ್ದಿಕೊಂಡರೆ ಮುಂದೊಬ್ಬ ಬರಹಗಾರನಾದಾನು—ಎನ್ನುವನು. ಇವೆಲ್ಲಾ ಲೇಖಕರ ಸಮರಾಂಗಣದ ಕದನಗಳು. ಈ ಕದನದಲ್ಲಿ ಬೆವರು ಬೊಗೊಳುವ ಹೇಡಿಯು—ಈ ತಂಟೆಯೇ ತನಗೆ ಬೇಡವೆಂದು ಮುಂದೆ ಮೌನವಾಗಿ ಕುಳಿತುಬಿಡುವನು. ಧೀರನು 'ಪರರ ಯತ್ನದ ಫಲವು' ಎಂಬ ಲೋಕೋಕ್ತಿಯನ್ನ ನೆನಪುಮಾಡಿಕೊಂಡವನು ತನ್ನ ಲೇಖನ ಪ್ರಪಂಚದ ಪ್ರದೇಶಗಳನ್ನೆಲ್ಲಾ ಕ್ರಮೇಣ ಪರಿಪರಿಶೀಲಿಸುತ್ತಾ ಹೋಗುವನು. ಆ ಸಾಧಕನಿಗೆ ಆಗ ಸಿಂಹದ ಲೇಖನದ ಚಿತ್ರ! ಮಲಗಿದರೆ ಬರಹದ ಕನಸು! ತಿರುಗುವಾಗ ತನ್ನ ಉದ್ದೇಶದ ಕನಸು! ಇಂಥವನಿಗೆ ಭಾಷಾಸೇವಕರ ಸಾಲಿನಲ್ಲಿ ಒಂದು ಸ್ಥಾನವು ದೊರೆಯದೇ ಹೋಗುವುದು. ಆಗ ವಾಗ್ದೇವಿಯು ಮುಗುಳ್ನಗುತ್ತಾ ಅವನನ್ನು [illegible]. ಆಮೇಲಿನ ಅವನ ಲೇಖನ ವ್ಯವಸಾಯದಲ್ಲಿ ಬೇಕಿದ್ದ ಫಲವನ್ನು ಪಡೆಯಲಾರಂಭಿಸುವನು. ಪಾಶ್ಚಾತ್ಯದಲ್ಲಿ ವಾಲ್ಟರ್ ಸ್ಕಾಟನಂಥವರು ಲೇಖನ ವ್ಯವಸಾಯದಲ್ಲಿ ಫಲಾಪೇಕ್ಷಿಗಳು, ನಮ್ಮಲ್ಲಿಯೂ ಇದ್ದ ,ಲೇಖನಿಯ ಬಲದಿಂದಲೇ ಜೀವಿಸುವ ಕಾರಂತರಂಥ ಧೀರರಿಲ್ಲ ಈ ವರ್ಗದವರು, ಈ ಗುಂಪಿನವರ ಸಾಹಸವು ಸ್ತುತ್ಯ!

ಕನ್ನಡ ನಾಡಿನಲ್ಲಿ ಈ ಎರಡು ವರ್ಗದ ಲೇಖಕರ ತಂಡವೂ ಇದೆ, ಆದರೆ ಇತರ ಸಂಖ್ಯೆ ಕಡಿಮೆ ಇರಬಹುದು. ಇವರು ಹಲವು ಕೊಟ್ಟ ಕವನ, ಕವಿತೆ, ಪ್ರಬಂಧ, ಹರಟೆ, ಸಣ್ಣಕಥೆ, ನಾಟಕ, ಕಾದಂಬರಿಗಳ ಮೂಲಕ ಸಮಗ್ರ ಕರ್ನಾಟಕದ ಎರಡು ಕೋಟಿ ಜನರನ್ನು ತನ್ನೆಡೆಗೆ ಎಳೆದುಕೊಳ್ಳಲು ಹವಣಿಸುತ್ತಿದ್ದಾರೆ ಆದರೆ ಅವರ ಕಾರ್ಯಗಳು ಸಫಲವಾಗದಿರಲು ಎರಡು ಪ್ರಬಲ ಕಾರಣಗಳಿವೆ.

೧. ನಮ್ಮ ಜನತೆಗಿನ್ನೂ ಸಾಕಷ್ಟು ವಿದ್ಯಾಭ್ಯಾಸವಿಲ್ಲ.

೨ ಗುಲಾಮತನದ ಅಭಿರುಚಿ ನಮಗಿನ್ನೂ ಅಳಿದಿಲ್ಲ.

ಸರಕಾರವು ಲೋವರ್ ಸೆಕೆಂಡರಿಯವರೆಗಿನ ಜ್ಞಾನವಾದರೂ ಪ್ರತಿಯೊಬ್ಬ ಮನುಷ್ಯನ ಮನಸ್ಸು ಬಾಲಕನಾಗಿರಬೇಕೆಂದು ಕಡ್ಡಾಯ ಮಾಡಿದಾಗ ಜನತೆಯು ಓದುವ ಅಭಿರುಚಿ ಬೆಳೆಯಬಹುದು ಅದಲ್ಲದೆ ಕನ್ನಡದ ಪ್ರಾಧಾನ್ಯತೆ ಇನ್ನೂ ಹೆಚ್ಚಬೇಕು. ಇಂದಿನ ಶಾಲೆಗಳಲ್ಲಿರುವಂತೆ ಪ್ರಥಮ ಭಾಷೆ ಕನ್ನಡ- ಅದಕ್ಕೆ ನಾಲ್ಕೈದು ತಾಸುಗಳು ಮಾತ್ರ- ಇಂಗ್ಲಿಷಿಗೆ ಪ್ರಥಮಾಂಕವಿಲ್ಲ—ಆದರೆ ಅದಕ್ಕೆ ಏಳೊ, ಎಂಟೊ, ಕಡೆಗೆ ವಾರಕ್ಕೆ ಹತ್ತೋ ತಾಸು! ಹೇಗಿದೆ ಕನ್ನಡದ ಸ್ಥಾನಮಾನ? ಹೀಗೆಲ್ಲಾ ವಿದ್ಯಾಧಿಕಾರಿಗಳು ಅಪಾರ ಭೂತಿಯ ವೇಷವನ್ನು ಬಿಟ್ಟರೆ, ಕನ್ನಡಕ್ಕೆ ಜನರಿಗೆ ತಕ್ಕಂತೆ ಸ್ಥಾನಮಾನವನ್ನು ಕೊಟ್ಟರೆ ನಮ್ಮ ಲೇಖಕರು ಏನು ಹೇಳುತ್ತಾರೆಂದು ಜನತೆಗೆ ತಿಳಿಯುವುದು. ಎರಡನೆಯ ವರ್ಗದವರಿಗೆ ಸಾಧ್ಯವಿದ್ದರೆ ಇಂಗ್ಲಿಷರಾಗುವ ಕುರಬಿದೆ, ಇದೊಂದು ವಿಚಿತ್ರ ವರ್ಗ! ಇವರಿಗೆ ಇಂಗ್ಲಿಷರು ಭಾರತವನ್ನು ಬಿಡಬಾರದು; ಅವರ ಭಾಷೆಯು ಇಲ್ಲಿಂದ ತೊಲಗಬಾರದು; ನಮ್ಮ ಮಾತೃಭಾಷೆ ಕನ್ನಡ ಕಾಡು ಕುರುಬರ ಅಸಂಸ್ಕೃತಿಯ ನುಡಿ! ಈ ಮಾನವಿಲ್ಲದ ಸಂಕುಚಿತ ಹೃದಯಗಳಿಂದ ನಾಡ ನುಡಿಗೆ ತುಂಬಾ ಧಕ್ಕೆ ತಟ್ಟುತ್ತಿದೆ. ಇದರಿಂದ ಶಿಕ್ಷಣ ಹೊಂದುವ ಬಾಲರ ಎಳೆ ಮನಸ್ಸಿನಲ್ಲಿ ಇವರ ಆವಾಚ್ಯ [illegible] ಅವರು ಕನ್ನಡ ಪತ್ರಿಕೆಗಳನ್ನು ತೆರೆದು [illegible] ಹಿಂದು ಮುಂದು ನೋಡುತ್ತಾರೆ! ಇದನ್ನು ಕನ್ನಡ ಲೇಖಕರು ಮರೆಯುವ ವಿಚಾರ. ಈ ಸಂಘದವರಿಗೆ ಕನ್ನಡದಲ್ಲೇನಿದೆ? ಕನ್ನಡವು ಯಾವ ಭಾಷೆಗಿಂತ ಕಡಿಮೆಯಾಗಿದೆ? ಈ ಸಾಹಿತ್ಯದಲ್ಲೇ ಹುಟ್ಟಿದ ವಿಚಾರಕ್ಕೇ ಏನಾದರೂ ದೋಷಗಳಿದ್ದರೆ ಅದು ವಿರಿಂಚಿಯದ್ದು—ಎಂದು ಅದರನ್ನು ಪ್ರಶ್ನಿಸಬೇಕು ಆದರೂ ಈ ಜನಾಂಗದವರ ಅಭ್ಯಾಸ ಮನಸ್ಥಿತಿಯನ್ನು ತಿದ್ದುವುದು ಸುಲಭವಲ್ಲ. ಅಲ್ಲಿ ಮರಳಲ್ಲಿ ಹೂ, ಬೀಳಾಗೆ, ಕೀರಿ ನಲ್ಲಿ ಹುಟ್ಟುವಾದ ಕಾಮಾವಂತ ಇದೂ ಅಸಾಧ್ಯ. ಆದರೂ ಪ್ರಯತ್ನದಿಂದ ಅದರ ಮುಂದಿನ ಜನಾಂಗವನ್ನಾದರೂ ತಿದ್ದಲು ಸಾಧ್ಯವಿದೆ. ಸರಕಾರವು ಸಹಜವಾಗಿ ನಾಡ ನುಡಿಗೆ ಪ್ರಾಶಸ್ತ್ಯ ಕೊಟ್ಟರೆ ಕನ್ನಡ ಪತ್ರಿಕೆಗಳ ಸಂಪಾದಕರ ಕಷ್ಟಗಳೂ ತೊಲಗುವುವು; ಲೇಖಕ ವೃಂದದ ಸಾಹಸವೂ ಸುಲಭದಲ್ಲೇ ಫಲಕಾರಿಯಾಗುವುದು.

ಈಗ ಎರಡುಕೋಟಿ ಜನಸಂಖ್ಯೆಗೆ ಮಿತ್ತಿದ ನಮ್ಮ ನಾಡಿನಲ್ಲಿ ಎಷ್ಟು ಪತ್ರಿಕೆಗಳಿಗೆ ಹತ್ತಿಪ್ಪತ್ತು ಸಾವಿರ ಮಂದಿ ಚಂದಾದಾರರಿರಬಹುದು? ಹೆಚ್ಚೆನಬಕ್ಕೆ ಒಂದೆರಡು ಸಾವಿರದ ಒಳ ಹೊಗಿರಬಹುದು. ಇಂಥಾ ಬಡ ಪತ್ರಿಕೆಗಳು ಭಾಷಾ ಸೇವೆಯನ್ನು ಎಷ್ಟು ಮಾರ್ಗದಿಂದ ಮಾಡಲು ಸಾಧ್ಯವಿದೆ? ಇವು ಹಾಗೋ ಬಾಳಿ ಲೇಖಕ ವರ್ಗಕ್ಕೆ ಪಿತಾ. ಸಹಾಯ ಮಾಡಿಯಾವು? ಜಗತ್ತೇ ಬೆಲೆಗೊಂಡು ಮುತ್ತಿನ ಬೆಲೆ ಕೇಳುವಾಗ ಲೇಖನ ವ್ಯವಸಾಯವು ಬಿಟ್ಟೀ ಬಿಡಯ್ಯದ ಕೆಲಸವಾದರೆ ಲೇಖಕ ವರ್ಗಕ್ಕೆ ಯಾರು ಎಲ್ಲಿ ಉಳಿದೀತು? ಅವನು ವಿಶ್ರಾಂತಿಯ ಸಮಯದೊಳಗೆ ಮೆಂದು ಒಂದು ಪ್ರಬಂಧವನ್ನೋ, ಒಂದು ಚುಟುಕು ಪದ್ಯವನ್ನೋ ಬರೆದು ಕಳುಹಿಸಿ-'ಏನಿದ್ದೀ ಯಥೇಷ್ಟವಾಯಿತು' ಎಂದು ಕೊಳ್ಳುವನು. ಇದರಲ್ಲಿ ಯಾರನ್ನು ದೂರಲು ಸಾಧ್ಯವಿದೆ?

ಆದರೆ ಎಲ್ಲಾ ಪತ್ರಿಕಾ ಸಂಪಾದಕರು ಲೇಖಕ ವರ್ಗಕ್ಕೆ ಹಣದ ಸಹಾಯವನ್ನು ಮಾಡಲು ಸಾಧ್ಯವಿಲ್ಲದಿದ್ದರೂ, ಅವರು ಕಳುಹಿಸಿದ ಲೇಖನಕ್ಕೆ ಒಂದೇ ಸಂಚಿಕೆಯನ್ನು ಕಳುಹಿಸಿ—ಕೆಲವರು ಅದೂ ಇಲ್ಲ—ಸುಮ್ಮನೆ ಎತ್ತವಲ್ಲ, ಪ್ರಕಟನೆಗೆ ಅರ್ಹವಾದ ಲೇಖನವಾಗಿದ್ದರೆ ಅದೂ ಶ್ರಮಪಟ್ಟು ಬರೆದುದು ಎಂದು ತಿಳಿಯಬೇಕು. ಒಂದು ಲೇಖಕ್ಕೆ ಈ ಬಡನಾಡಿನಲ್ಲಿ ಒಂದೆರಡು ರೂಪಾಯಿಯಾದರೂ ಬೆಲೆ ಬಾಳದೆ? ಹಣಕೊಡಲಾರದ ಸಂಪಾದಕರು ಲೇಖಕರ ಶ್ರಮಕ್ಕೆಂದು ಎರಡು ಮೂರು ತಿಂಗಳ ಸಂಚಿಕೆಯನ್ನಾದರೂ ಮುಫತ್ತಾಗಿ ಕಳುಹಿಸಿದರೆ, ಪಾಪ್ಪಯ ಭಕ್ತರು ನಾಡಿನ ಸದ್ಯದ ಸ್ಥಿತಿಯನ್ನು ನೆನೆದು ಸಂಪಾದಕರು ತಮ್ಮನ್ನು ಗೌರವಿಸಿದ ಮೇಲಂಗಿ ಮೆಚ್ಚಿ, ತಮ್ಮ ಪ್ರಯತ್ನಕ್ಕೆ ಎಷ್ಟೋ ಬಹುಮಾನ ಸಿಕ್ಕಿತೆಂದು ಭಾವಿಸುತ್ತಾರೆ. ಆದರೆ ಬದಲಿಗೆ ಒಂದೂವರೆ ಅಣೆ ಎ ಡಾಕ್‌ಯ ಒಂದು ಸಂಚಿಕೆ ಕಳುಹಿಸಿದರೆ ಅವರ ಬರಹಕ್ಕೆ ಆರು ಮೂರು ಕಾಸಿನ ಬೆಲೆಕಟ್ಟಿ ಅಪಮಾನಿಸಿದಂತಾಯಿತಲ್ಲದೆ ಬೇರೆಯಲ್ಲ. ಸಂಪಾದಕರಿಗೆ ತಮ್ಮ ಪತ್ರಿಕೆಯು ಅಮೂಲ್ಯವಾಗಿ ತಂದರೆ, ಲೇಖಕರು ತಮ್ಮ ಬರಹವನ್ನು ಬೆಲೆಬಾಳುವ ವಸ್ತುವೆಂದು ಭಾವಿಸಿದರೆ ಭಾಷಾ ಸೇವೆ ನಡೆಯುವುದೆಂತು? ನಾಡಿನ ಕಿರಿಯ ಜನಾಂಗವನ್ನು ಕೈಹಿಡಿದು ಮೇಲೆತ್ತುವುದೆಂತು? ಸಾರಾಂಶ—ಸಂಪಾದಕರೂ ವಿಶಾಲ ಮನಸ್ಸು ಮಾಡಬೇಕು; ಲೇಖಕರೂ ನಾಡಿನ ಪರಿಸ್ಥಿತಿಯ ಮೇಗೆ ದೃಷ್ಟಿಯಿಟ್ಟು ಕಿಂಚಿತ್ ಮರ್ಯಾದೆಯಿಂದಲೇ ತೃಪ್ತಿಪಟ್ಟುಕೊಳ್ಳಬೇಕು, ಆದರೆ ಕರ್ತವ್ಯಕ್ಕಾಗಿ ಕರ್ತವ್ಯ ಮಾಡುವವರಿಗೆ ಇದು ಸಂಬಂಧಿಸಿಲ್ಲ. ಅವರೂ ಈ ಉಚ್ಚ ವರ್ಗದವರನ್ನು ಇನ್ನೂ ಹೆಚ್ಚಾಗಿ ಗೌರವಿಸಲೇ ಬೇಕು. ಇದರಿಂದ ಸುಲಭದಲ್ಲೇ ಎಷ್ಟೋ ಅಮೂಲ್ಯ ಲೇಖನಗಳು ಹೊಂದಿರುವುವು. ಸಂಪಾದಕರ ಮ

೨೨ ನೇ ಪುಟ ನೋಡಿರಿ

ಅಸಾಧಾರಣ ವಾಗ್ಮಿಗಳೂ ಗ್ರಂಥಕರ್ತರೂ ಆದ
ಶ್ರೀ. ಎಸ್. ಪಂಚಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್., ಬಾರ್. ಎಟ್. ಲಾ,
ಎಫ್. ಎಸ್. ಎಲ್. ಅವರು ಬರೆದ Tales of Ind ಎಂಬ ಕಥಾವಳಿಯ ಅನುವಾದ

ಭಾರತೀಯ ಕತೆಗಳು

ಅನುವಾದಕರು—ಶ್ರೀ. ಕೊರಡ್ಕಲ್ ಶ್ರೀನಿವಾಸ ರಾವ್.

ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಬೇಕೆಂಬ ಹಿರಿಯಾಸೆ ಇದ್ದೇ ಇದೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸಂದರ್ಭೋಚಿತವಾದ ಉಪಮೆ, ಗಾದೆ, ಕಥೆ ದೃಷ್ಟಾಂತ ಇತ್ಯಾದಿಗಳು ಬರಬೇಕು. ಅಂತಹ ಅನೂಲ್ಯ ಭಂಡಾಗಾರವೇ ಈ ಭಾರತೀಯ ಕತೆಗಳು :

ಎಲ್ಲರೂ ಅವಶ್ಯವಾಗಿ ಓದತಕ್ಕ ಅಪೂರ್ವ ಗ್ರಂಥ
151 ಕತೆಗಳು ಬೆಲೆ ರೂ. 1-12-0
ನವಭಾರತ ಪುಸ್ತಕ ಭಂಡಾರ, ಉಡುಪಿ.

ವಾರದ ಒಳಿತು ಕೆಡುಕುಗಳು

13-11-52ರಿಂದ ತಾ. 19-11-52ರ ವರೆಗೆ

ಮೇಷ—ನಿಮ್ಮ ಆರ್ಥಿಕ ಪರಿಸ್ಥಿತಿಯು ಸುಧಾರಿಸುವದು ಶತ್ರುಜನರ ಪೀಡೆಯಿಂದ ಮುಕ್ತರಾಗುವಿರಿ ಪ್ರಯತ್ನಕ್ಕೆ ತಕ್ಕುದಾದ ಫಲ ಪ್ರಾಪ್ತಿಯಾಗುವದು. ಹಿಂದುಮುಂದಿನ ಯೋಚನೆಯಿಲ್ಲದೇ ಕೆಲವೊಮ್ಮೆ ದುಡುಕಿ ವ್ಯರ್ಥ ನಷ್ಟ ಅಪವಾದಗಳಿಗೆ ಗುರಿಯಾದೀರಿ. ವಾತ ಪ್ರಕೋಪದಿಂದ ಆರೋಗ್ಯಕ್ಕೆ ಧಕ್ಕೆಯಿದೆ. ಗೃಹತಾಪತ್ರಯಗಳು ಕೊಂಚ ಹೆಚ್ಚಲಿವೆ. ವಾರಾದಿಯ 4 ದಿನಗಳಲ್ಲಿ ನಿಮ್ಮ ಬಯಕೆಯು ನಿರ್ವಿಘ್ನದಿಂದ ನೆರವೇರೀತು.

ವೃಷಭ—ವಿನ ಯಾತನೆಯು. ಬಹಳ ದುಃಖವಾದೀತು ಶುಕ್ರನೊಬ್ಬನನ್ನುಳಿದು ಇತರ ಎಲ್ಲಾ ಗ್ರಹರೂ ಸದ್ಯ ನಿಮ್ಮ ಭಾಗಕ್ಕೆ ಪ್ರತಿಕೂಲರಿರುವರು. ಶ್ರಮಜೀವಿಗಳಿಗೆ ಕಷ್ಟ ನಷ್ಟಗಳು ಮೇಲಿಂದ ಮೇಲೆ ಬರಲಿವೆ. ವಿದ್ಯೋಪಜೀವಿಗಳಾದ ನೌಕರಿ ವರ್ಗಕ್ಕೂ ಸರ್ವತ್ರ ಪ್ರತಿಕೂಲವೇ ಹೆಚ್ಚಲಿದೆ ಶತ್ರುಜನರ ಪೀಡೆಯಿಂದಾಗಿ ಧನಮಾನಗಳಿಗೆ ಹಾನಿ ಸಂಭವಿಸುವದು ಅದರೂ ವಾರಾಂತ್ಯದ 5 ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಕಾಣಲಾರವು.

ಮಿಥುನ—ಇಂದಿನ ನಿಮ್ಮ ಉದ್ಯಮಗಳು ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲವು. ಪ್ರಬಲರಾದ ಶತ್ರುಗಳ ಪೀಡೆಯು ಮೇಲಿಂದ ಮೇಲೆ ಬರಲಿದೆ. ಉದ್ಯೋಗದಲ್ಲಿ ಪ್ರಗತಿ ಮತ್ತು ನೌಕರಿ ಮೊದಲಾದ ವೃತ್ತಿಗಳಲ್ಲಿ ಉನ್ನತಿಯೂ ಕಾಣಲಿದೆ. ಸ್ತ್ರೀಯರಿಂದಾಗಿ ಅನಿಷ್ಟ ಅಪವಾದಗಳು ಸಂಭವಿಸುವವು ಚಂಚಲವಾದ ನಿಮ್ಮ ಮನಸ್ಸನ್ನು ಬಿಗಿಹಿಡಿದು ಕಾರ್ಯರಂಗದಲ್ಲಿ ಮುನ್ನಡೆಯಿರಿ ವಾರಾಂತ್ಯದ 3 ದಿನಗಳು ಬರುವಮಟ್ಟಿಗೆ ನಿಮ್ಮ ಬಯಕೆಗಳನ್ನು ನೆರವೇರಿಸುವವು.

ಕರ್ಕಟ—ಕಾಲವು ಅತೀವ ಪ್ರತಿಕೂಲ ಪರಿಸ್ಥಿತಿಗೆ ಬಂದಿರುವದೆಂದರೆ ತಪ್ಪಾಗದು. ನಿಮ್ಮ ಧನಲಾಭಾಭಿಲಾಷೆಗಳು ವಿಶೇಷ ಕೆಟ್ಟಿರುವುದರಿಂದ ಆರ್ಥಿಕ ಬಿಕ್ಕಟ್ಟು ಹೆಚ್ಚಾಗಿ ಪೀಡಿಸಲಿದೆ, ಗೃಹಕೃತ್ಯದಲ್ಲಿ ಒಡಕುಂಟಾಗಿ ಸೋದರರೊಳಗೂ ಗಂಡ ಹೆಂಡಿರೊಳಗೂ ತಂದೆ ಮಕ್ಕಳೊಳಗೂ ಮನಸ್ತಾಪ ಉದ್ಭವಿಸುವದು. ನೇತ್ರಪೀಡೆ ಉದರಶೂಲೆ ಇತ್ಯಾದಿಗಳೂ ಕಾಣಲಿವೆ, ವ್ಯಾಪಾರ ವ್ಯವಹಾರಗಳಲ್ಲಿ ಸರ್ವತ್ರ ನಷ್ಟವಧಿಕವಾದೀತು. ವಾರಾದಿಯ 2 ದಿನಗಳಲ್ಲಿ ಅಷ್ಟೊಂದು ಅನಿಷ್ಟಗಳು ಕಾಣಿಸವು.

ಸಿಂಹ—ಸದ್ಯ ನೀವೇ ಸುದೈವಿಗಳೆನ್ನಬೇಕು. ವಿಕ್ರಮಕಾರಕನೂ ಸುಖಭಾಗ್ಯಪತಿಯೂ ಆದ ಅಂಗಾರಕನಿಂದು ಉಚ್ಚಸ್ಥಾನಗತನಾಗಿ ನಿಮ್ಮ ಸಕಲ ಬಯಕೆಗಳನ್ನೂ ಈಡೇರಿಸಲು ಸಮರ್ಥನಾಗಿ ನಿಂತಿರುವನು. ಭಾಗ್ಯದಲ್ಲಿಂತೂ ಸುರಗುರುಗಳಿದ್ದಮೇಲೆ ಕೇಳಬೇಕೇ. ನಿಮ್ಮ ಸಕಲ ಆರ್ಥಿಕ ತಾಪತ್ರಯಗಳೂ ದೂರವಾಗಿ ನಿಶ್ಚಿಂತೆಯಿಂದ ಕಾಲಕಳೆವಿರಿ. ಜನತೆಯ ಬೆಂಬಲವೂ ಬಂಧುಗಳ ನೆರವೂ ವಿಶೇಷವಾಗಿ ಲಭಿಸಲಿದೆ. ತಾ. 15, 16, 17 ಈ ದಿನಗಳಲ್ಲಿ ಹೆಚ್ಚಿನ ಸುಖ ಸಂತೋಷ ಭಾಗಿಗಳಾಗುವಿರಿ.

ಕನ್ಯಾ—ಆಯಕ್ಕಿಂತ ದ್ವಿಗುಣವಾಗಿ ವ್ಯಯವುಂಟಾಗುವದು. ಹೆಂಡಿರುಮಕ್ಕಳ ಅನಾರೋಗ್ಯದಿಂದಾಗಿ ಹೆಚ್ಚಿನ ಹಣವು ವೈದ್ಯರ ಕೈಸೇರುವದು. ಮಾತ್ರವಲ್ಲ ಆಕಸ್ಮಿಕ ಪ್ರವಾಸ ದೇಹಾಲಸ್ಯಗಳಿಂದಾಗಿ ಕಷ್ಟ ನಷ್ಟಗಳನ್ನನುಭವಿಸಲಿರುವಿರಿ. ನೌಕರಿವರ್ಗದವರಿಗೆ ಅಧಿಕಾರಿ ವರ್ಗದವರ ಪೀಡೆಯುಂಟಾಗುವದು. ಶತ್ರುವರ್ಗದವರಿಂದ ನಿಮ್ಮ ಆರ್ಥಿಕ ಭಾಗಕ್ಕೆ ವಿಶೇಷ ಧಕ್ಕೆಯುಂಟಾಗುವದು. ತಾ. 13, 14, 18, 19 ಈ ದಿನಗಳಲ್ಲಿ ಶ್ರಮಕ್ಕೆತಕ್ಕ ಫಲ ಲಭಿಸೀತು.

ತುಲಾ—ನಿಸರ್ಗತಃ ಶುಭಂದ ಬುಧ ಗುರು ಶುಕ್ರರು ಅನುಕೂಲ ಸ್ಥಾನಗತರಿರುವುದರಿಂದ ಸತ್ಕಾರ್ಯಗಳಲ್ಲಿ ಸದುದ್ಯಮಗಳಲ್ಲೂ ವಿಶೇಷತಃ ಫಲಲಾಭವಿದೆ. ಗೃಹತಾಪತ್ರಯಗಳು ಬಹುತೇಕ ಕಡಿಮೆಯಾಗುವವು. ಆದರೆ ದುರ್ಜನರ ಸಹವಾಸದಿಂದಾಗಿ ಕಷ್ಟ ನಷ್ಟಗಳೊದಗಬಹುದು. ಅನ್ಯ ಜನತೆಯೊಳು ಅವಿಶ್ವಾಸ ನೊಳೆದೀತು ಆದರೂ ತಾ. 15, 16, 17 ಈ ದಿನಗಳಲ್ಲಿ ಗುರ್ವನುಗ್ರಹದಿಂದಾಗಿ ಸುಖ ಭೋಗ ಲಾಭಗಳು ಲಭಿಸಲಿವೆ.

ವೃಶ್ಚಿಕ—ದೈವವು ಸಾಕಷ್ಟು ಅನುಕೂಲವಿಲ್ಲದಿದ್ದರೂ ಆತ್ಮಶಕ್ತಿಯುತರಾದ ನೀವು ಈ ವಾರದಲ್ಲಿ ಹಲವಾರು ಮಹತ್ಕಾರ್ಯಗಳನ್ನು ಸಾಧಿಸಲಿರುವಿರಿ. ನೀಚ ಜನರಿಂದಲೂ ಕಾರ್ಮಿಕ ವರ್ಗದವರಿಂದಲೂ ಹೆಚ್ಚಿನ ಲಾಭವಿದೆ. ವ್ಯಾಪಾರ ವ್ಯವಹಾರಗಳಲ್ಲಿ ಯಥೋ ಲಾಭವಿದೆ. ವಿದ್ಯೋಪಜೀವಿಗಳಿಗೀಕಾಲವು ಅಷ್ಟೊಂದು ಅನುಕೂಲವಿಲ್ಲವು. ಅನಾರೋಗ್ಯ, ಶತ್ರುಪೀಡೆಗಳಿಗೆ
ಯಾಗುವ ಸಂಭವವಿದೆ. ತಾ. 13, 14,
19 ಈ ದಿನಗಳು ಇಷ್ಟಪ್ರದಗಳಿವೆ.

ಧನು—ಇಂದಿನ ದಿನಗಳ ಹಿಂ
ತಿರಲಾರವು. ಮೊದಿನೊಗಿಂತ ಅಧಿಕ
ವಾದೀತು. ಸರಕಾರಿ ಜನರ ಪೀಡೆಗೆ
ಲಿರುವಿರಿ. ಪಿತ್ತ ಉಷ್ಣ ಪ್ರಕೋಪದ
ಯಿಂದಾಗಿ, ಆರೋಗ್ಯಕ್ಕೂ ಹಾನಿಯಿ
ನಸಿಯ ಬೆಂಬಲವು ಸಾಕಷ್ಟಿದ್ದ ಕಾರಣ
ದ ಕಾರ್ಯವನ್ನು ಕೊನೆಗೊಂದಿಸಲ
ಲಾರಿರಿ. ನಿಮ್ಮ ಸ್ವಂತ ಉಪಭೋಗಕ್ಕ
ಕಾದ ಅನುಕೂಲತೆಗಳು ಅನಾಯಾಸ
ಲಭಿಸುವವು. ವಾರಾದಿಯ 4 ದಿನಗ
ತೀವ ಪ್ರಶಸ್ತವಿವೆ.

ಮಕರ—ನಿಮ್ಮ ಪ್ರಯತ್ನಕ್ಕಿ
ಅಧಿಕವಾದ ಫಲಲಾಭವಿದೆ. ಆದರೆ ಸ
ಕಡಿದಾ ಆದೇ ಕ್ರಮದಲ್ಲಿ ಏರಿರುವುದ
ದಿನಾಂತ್ಯದಲ್ಲಿ ನಿಮ್ಮ ಕೈ ಬರಿದಾಗಿಯೆ
ಳವದು. ಪ್ರಯಾಣದಲ್ಲಿ ಆಕಸ್ಮಿಕ ಅಪ
ಗಳೊದಗಬಹುದು. ವ್ಯಾಪಾರ ವ್ಯವಹ
ಳಲ್ಲಿ ಫಲಪ್ರಾಪ್ತಿಯು ಚೆನ್ನಾಗಿದ್ದರೂ
ಜೀವಿಗಳಿಗೀಕಾಲವು ಪ್ರತಿಕೂಲವಿದೆ,
ಹಿರಿಯರ ಅನುಗ್ರಹಕ್ಕೂ ಅನ್ಯ ಜನರ
ದರಕ್ಕೂ ಪಾತ್ರರಾಗಲಿರುವಿರಿ ವಾ
5 ದಿನ ಅಲ್ಪ ಹೆಚ್ಚು ಇಷ್ಟಾರ್ಥಗಳು
ಸಲಿವೆ.

ಕುಂಭ—ನಿಮ್ಮ ವಿಶ್ವಾಸ ಕಮ
ಯಾದ ಜನನು ವ್ಯಯದಲ್ಲಿ ಉಚ್ಚನಾ
ತಿರುವ ಕಾರಣ ಹೆಚ್ಚಿನ ನಿಮ್ಮ ಸಂಪ
ವ್ಯರ್ಥವಾಗುವದು. ಅನಾವಶ್ಯಕಗಳಾ
ರ್ಚುವೆಚ್ಚಗಳು ಹೆಚ್ಚಲಿವೆ. ಆದರೂ ಸ
ರ ಬೆಂಬಲ ಯಥೇಷ್ಟವಾಗಿದ್ದ ನಿಮಗೆ
ಅಭಾವವುಂಟಾಗದು. ವ್ಯವಹಾರದಲ್ಲಿ
ಯವಿದೆ. ಆಕಸ್ಮಿಕ ಪ್ರವಾಸಗಳೊದಗ
ದು. ಪಿತ್ತ ದೋಷದಿಂದಾಗಿ ದುಃಸ್ವಪ್ನ
ಭಾವಾದಿಗಳು ಕಾಣಿಸುವವು. ವಾರಾ
2 ದಿನಗಳು ಸಾಕಷ್ಟು ಉತ್ತಮವಿವೆ.

ಮೀನ—ಕಷ್ಟದ ದಿನಗಳು
ವಾದವು, ನಿಮ್ಮ ಧನ ಭಾಗ್ಯಪತಿಯ
ಉಚ್ಚನಾಗಿ ಲಾಭದಲ್ಲಿರುವುದರಿಂದ
ಸಾಲ ಕಡಗಳಿಂದ ಮುಕ್ತರಾಗಿ ಕೈ
ಸಾಕಷ್ಟು ಧನ ಸಂಗ್ರಹಿಸುವಿರಿ. ಜನ
ಗೌರವಾದರಗಳನ್ನು ಪಡೆವಿರಿ. ಪ್ರತಿ
ದು ಉದ್ಯಮದಲ್ಲೂ ನಿರೀಕ್ಷಿಸಿದುದ
ಅಧಿಕವಾದ ಫಲ ಲಾಭವಿದೆ, ಆದರೆ
ಹವು ಅನಿವಾರ್ಯವಾದೀತು ಲೇವಾ
ನಿಮಿತ್ತ ಕೋರ್ಟಿಗೆ ಹೋಗುವ ಪ್ರಸಂ
ಬರಲಿವೆ. ತಾ. 13, 14 ಅತ್ಯುತ್ತಮ-

(೧೧ನೇ ಪುಟದಿಂದ ಮುಂದುವರಿದುದು)

ತ್ತ ಲೇಖಕರ ಒಮ್ಮನಸ್ಸು ಮತ್ತು ಹಿತದ ನಡೆನುಡಿಯು ಪತ್ರಿಕೆಗೆ ದೀರ್ಘಾಯುಷ್ಯವನ್ನು ಕೊಡುವುದರೊಂದಿಗೆ ಹೊಸ ಹೊಸ ಲೇಖಕರ ನಿರ್ಮಾಣವೂ ಸುಲಭದಲ್ಲಾಗುವುದು.

ಕನ್ನಡ ನಾಡು ಇಂದು ಉತ್ತಮ ಲೇಖಕರ ಸೊತ್ತಾಗಿದೆ. ಅವರು ತಮ್ಮ ಪ್ರತಿಬರಹದಲ್ಲೂ-ಕಾದಂಬರಿ ಇರಲಿ, ನಾಟಕವಾಗಲಿ, ಕೊನೆಗೆ ಒಂದು ಚುಟುಕು ಹರಟೆಯನ್ನೇ ಬರೆಯಲಿ—ಅದರಲ್ಲಿ ಕನ್ನಡಿಗರ ಸಂಘಟನೆ, ಸಹಕಾರ ಬುದ್ಧಿಯ ಅವಿಚಲತೆಯು ಬೆಳೆಯುವ ಪ್ರಯತ್ನಗಳೆ ಮಾಡಬೇಕು, ಅವರ ದೈನ್ಯಜೀವನದ ಚಿತ್ರವಿರಬೇಕು; ಅವರ ನಿರ್ಭಾಗ್ಯತೆಯು ಸಹಜತೆಯಿರಬೇಕು, ಅವರ ವಾಕ್ಯಗಳಲ್ಲಿ ಅಧಿಕ ಕಟ್ಟೊಂದವಿರದೆ, ಹೆಚ್ಚು ಮಾಧುರ್ಯವಿದ್ದೂ ಇರದೆ ಸಹ್ಯತೆಯಲ್ಲಿ ಚುಚ್ಚಿದರೂ ಹಿತಕರವಾದ ಪಥ್ಯವಾಗಿರಬೇಕು. ಕನ್ನಡ ನಾಡಿನಲ್ಲಿ ಹರಡಿದ್ದ ಲೇಖಕವರ್ಗವೆಲ್ಲಾ ಈ ಒಂದು ಸಮುದ್ದೇಶವಿಟ್ಟುಕೊಂಡು ಕಾರ್ಯಗತಿಯಲ್ಲಾದರೂ ನಾಡಿನ ಜನತೆಯ ಹೃದಯವನ್ನು ಮುಟ್ಟಿ ಮೆಲ್ಲನೆ ಸೆಳೆಯುತ್ತಾ ಬಂದರೆ ನಾಡಗುಡಿಯು ಉಜ್ವಲದೀಪದಿಂದ ಒಂದುದಿನ ಬೆಳಗುವುದು. ಆಗ ನಾವೆಲ್ಲಾ ಅಕ್ಕಕೂಡಿ ಸ್ವರ್ಗ ಕ್ಷೇಮ ಸಮಾಚಾರಗಳೊಂದಿಗೆ ಒಂದು ತಾಂಬೂಲ ಸೇವೆಯನ್ನೂ ನಡೆಸಿಬಿಡುವ! ಇಂದು ನಮ್ಮ ಹೊಸತು ಹಬ್ಬವಲ್ಲವೆ?

ಸ್ತ್ರೀ ಪುರುಷ ಶಿಶುಗಳು ರೋಗದಿಂದ ನರಳಬೇಕಾಗಿಲ್ಲ!
ಲಕ್ಷಾಂತರ ಜನರು ಗುಣಹೊಂದಿದ್ದಾರೆ!
ಸರ್ ಜೀವನ್ ಶಿಲಾಜಿತ್ ಲೇಹ್ಯ
ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗಗಳನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.
೪೮ದಿನದ ಲೇಹ್ಯ ರೂ ೫/೪, ೨೨ ದಿನದ ಲೇಹ್ಯ ರೂ ೩೪
(ಪೋಸ್ಟೇಜು ಮಾಫಿ)

KING OF TONIC
VILANTHIRAYAM

ನೀಲಗಿರಿ ಡಿಪ್ಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪ್ಪೋವಿನಲ್ಲಿ ಕೇಳಿರಿ.

ಉಡುಪಿಗೆ ಹೋಗಬೇಕು! ಆದರೆ ಉಳಿದು ಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿ ರುಚಿ ಹೇಳಬೇಕೆ
ಪ್ರೊಪ್ರೈಟರ್:— ಕೆ. ವೆಂಕಟರಮಣಭಟ್ಟ

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ಷಡಜೀವಾತು
ಎಂಬ
ಬಾಣಂತಿಯರ ಬಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

ಹೆಚ್ಚಿನ ಮಾಹಿತಿಗೆ—ಡಾ| ಯಂ ಶಿ. ಶಾಸ್ತ್ರೀ, ಯಲ್. ಐ ಎಂ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಥಾಪಿಕರು:—ಡಾ| ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು

ಅಮೃತಾಂಜನ
ತಲೆವೇದನೆ, ಶಿರೋವೇದನೆ, ಉಳು
ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ,
ನೋವು, ಗಾಯಗಳು, ಬಾತುಕೊಳ್ಳು
ಚೇಳುವಿಷ ಮುಂತಾದವು, ಪಕ್ಷವಾತ, ನ
ಮೊದಲಾದ ಎಲ್ಲಾ ರೋಗಗಳಿಗೂ ಶಿವ

Best Indian Pain Balm
Amrutanjan Depot
BOMBAY MADRAS

LC
ಹುಳು
ಪುಹ
ನಮ್ಮ
ಸಿದ್ಧ

ಅಮೃತಾಂಜನ ಲಿಮಿಟೆ
ಮದರಾಸು, ಬೊಂಬಾಯಿ ಮತ್ತು ಕ

Edited, Printed & Published by K. H. Shetty at the Navayuga Press, Udipi, S. India.

ಕ್ಷೆ. No. 5618 | LICENCE No. 31
Licensed to Post without Prepayment

20-11-1952

Estd 1921 ಸ್ಥಾಪನೆ
32ನೆಯ ವರ್ಷ

Founder: **Sri A. B. Shetty,**
Minister for Medical & Public Health

ನವಯುಗ
ಆರೋಗ್ಯ ಮಂತ್ರಿ
ಶ್ರೀ. ಎ. ಬಿ. ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ.

ಚಂದಾ 5-12-0
ತಿಂಗಳಿಗೆ 3-0-0
ಡಿ ಪ್ರತಿಗೆ 0-2-0

ನವಯುಗ

Vol 32
No 12

NAVAYUGA WEEKLY . POST BOX NO 22 . UDIPI

ವರ್ಷ ೩೨
ವಾರ ೧೨

ಅಂತರಂಗ
ಪುಸ್ತಕ ಪತ್ರಿಕೆಯು
ಉಪಯುಕ್ತವಾದ
86 ಪುಸ್ತಕಗಳು
ರೂ. 24ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ

ಮಧುಪರ್ಕ

ಚೀನಾದ ಒಂದು ಭಾಗದಲ್ಲಿ ಸೈನ್ಯವಿದೆ ಸಾಗುತ್ತಿತ್ತು. ರಾತ್ರಿಯಾಗಲು ಸೈನಿಕರು ಒಂದು ನದಿಯ ತಟದಲ್ಲಿ ಬೀಡು ಬಿಟ್ಟರು. ನದಿ ನೀರಿಲ್ಲದೆ ಬತ್ತಿ ಹೋಗಿತ್ತು. ಮಲಗುವ ಸಿದ್ಧತೆಯಲ್ಲಿದ್ದಾಗ ಸೈನಿಕರಿಗೆ ಅಶರೀರ ವಾಣಿ ಕೇಳಿಸಿತು—"ಈ ನದಿಯ ತಳದಲ್ಲಿರುವ ಕಲ್ಲುಗಳಲ್ಲಿ ಒಂದು ಮುಷ್ಟಿ ತೆಗೆದುಕೊಳ್ಳಿರಿ. ಇದರಿಂದ ನಿಮಗೆ ಸುಖವಾಗುತ್ತದೆ. ಜೊತೆಗೇ ದುಃಖದ ಅನುಭವವೂ ಆಗದಿರದು"

ಕುತೂಹಲವಶರಾಗಿ ಸೈನಿಕರು ಹಾಗೆ ಮಾಡಿದರು. ಮುಂಜಾನೆ ಅರುಣೋದಯಕ್ಕೆ ಎದ್ದು ಮುನ್ನಡೆದರು. ಮಧ್ಯಾಹ್ನ ಭೋಜನಾನಂತರ ಸೈನಿಕರಿಗೆ ಹಿಂದಿನ ರಾತ್ರಿಯ ಅಶರೀರ ವಾಣಿಯ ನೆನಪಾಗಿ, ಕಿಸೆಯಿಂದ ಆ ಕಲ್ಲು ಹರಳುಗಳನ್ನು ತೆಗೆದು ನೋಡಿದರು

ಓ– ಅವು ಮಾಣಿಕ್ಯದ ಕಲ್ಲುಗಳು! ಸೂರ್ಯನ ಬಿಸಿಲಿಗೆ ಥಳಥಳಿಸುತ್ತಿದ್ದವು. ಎಲ್ಲ ಸೈನಿಕರೂ ಹರ್ಷಾತಿರೇಕದಿಂದ ಕುಣಿದರು. ಆದರೆ ಒಡನೆಯೇ ಅವರ ಮುಖ ಮ್ಲಾನಗೊಂಡಿತು, ಆ ನದಿಯಲ್ಲಿ ಬೇಕಾದಷ್ಟಿದ್ದರೂ, ಒಂದು ಮುಷ್ಟಿಯಷ್ಟೇ ತೆಗೆದು ಕೊಂಡೆವಲ್ಲ ಎಂದವರು ಚಿಂತಿಸುತ್ತಿದ್ದರು!

ಗೆಳೆತನದ ಆಶೆ

ನಮ್ಮ ಜೀವನವು ಸುಖ ಹಾಗೂ ದುಃಖಗಳಿಂದ ಓತಪ್ರೋತವಾಗಿದೆ. ಅನೇಕ ಹರ್ಷದಾಯಕ ಘಟನೆಗಳು ಜರುಗಿದಾಗ ನಮ್ಮ ಸಂತೋಷಾತಿರೇಕದಲ್ಲಿ ಪಾಲುಗೊಳ್ಳಲು ಒಬ್ಬ ಸ್ನೇಹಿತನಿರಬೇಕೆನ್ನಿಸುತ್ತದೆ. ಹಾಗೆಯೇ ದುಃಖದಿಂದ ಮನಸ್ಸು ಮುದುಡಿದ ಗಳಿಗೆಗೆ ಹೃದಯದ ಅಳಲನ್ನು ತೋಡಿಕೊಳ್ಳಲು ಸಹಾನುಭೂತಿ ಪರನಾದ ಗೆಳೆಯನಿದ್ದರೆ ಆಗುತಿತ್ತು ಎಂದೂ ತೋರುತ್ತದೆ. ಪೌರೋಹಿತ್ಯವನ್ನು ನಡೆಸುವ ಭಟ್ಟರು, ಶುಭ ಹಾಗೂ ಅಶುಭ ಕರ್ಮಗಳೆರಡಕ್ಕೂ ಹೇಗೆ ಅತ್ಯಾವಶ್ಯಕವೋ– ನಮ್ಮ ಸನ್ಮಿತ್ರನ ಉಪಸ್ಥಿತಿಯೂ ಹಾಗೆಯೇ ಅಗತ್ಯ. ಆದರೆ ನಮ್ಮಲ್ಲೆಷ್ಟೋ ಮಂದಿಗೆ ಯೋಗ್ಯರಾದ ಮಿತ್ರರು ಇಲ್ಲವಲ್ಲ ಎಂಬ ಚಿಂತೆ ಇರಬೇಕು. ನಮ್ಮ ಶಾಲಾ ಕಾಲೇಜುಗಳಲ್ಲಿ ಕಲಿಯುವ ವಿದ್ಯಾರ್ಥಿಗಳಲ್ಲಿಯೇ ಹಲವರಿಗೆ ಆತ್ಮೀಯರಾದ ಗೆಳೆಯರು ದೊರೆತಿರುವುದಿಲ್ಲ. ಇದು ಆಶ್ಚರ್ಯದ ಮಾತು ನಿಜ, ಆದರೆ ಇದು ಪೂರ್ಣ ಸತ್ಯವೆಂದು ಅನುಭವದಿಂದ ತಿಳಿಯುತ್ತದೆ

ಮಿತ್ರರನ್ನು ಮಾಡಿಕೊಳ್ಳುವುದು ನಮಗೆ ದೊಡ್ಡ ಕೆಲಸವೇನಲ್ಲ. ಬಾಲ್ಯಾವಸ್ಥೆಯಿಂದ ತಾರುಣ್ಯದ ವರೆಗಿನ ದೀರ್ಘಾವಧಿಯಲ್ಲಿ ನಮ್ಮ ಸಂಪರ್ಕಕ್ಕೆ ಬರುವ ಕೆಲವಾರು ಜನರಲ್ಲಿ ನಮ್ಮ ಅಭಿರುಚಿಗೊಪ್ಪುವ ಸ್ನೇಹಿತರನ್ನು ಆರಿಸಿಕೊಳ್ಳಬಲ್ಲೆವು. ಆದರೆ ಅಂಥ ಅಸಂಖ್ಯಾತ ಸಂದರ್ಭಗಳು ನಿರುಪಯೋಗಿಯಾಗಿ ಹೋಗುವುದೇ ಹೆಚ್ಚು. ಸ್ನೇಹಿತರನ್ನು ಮಾಡಿಕೊಳ್ಳುವ ರೀತಿ ನೀತಿ ನಮಗೆ ತಿಳಿಯದಿರುವುದೂ, ನಮ್ಮ ಸ್ವಭಾವಜನ್ಯ ಉಪೇಕ್ಷೆ ಹಾಗೂ ಔದಾಸೀನ್ಯವೂ, ಅಥವಾ ಮಿತ್ರರನ್ನು ಮಾಡಿಕೊಳ್ಳಬೇಕೆಂಬ ಸಮುಚಿತ ಅವಸರವೂ ನಮ್ಮ ಕೈಗೆ ಬಂದ ಸಂದರ್ಭಗಳು ಜಾರಿಹೋಗುವುದಕ್ಕೆ ಕಾರಣವಾಗುತ್ತವೆ. ವಿದ್ಯಾರ್ಥಿಗಳು ಶಾಲಾ ದಿನಗಳಲ್ಲಿ ನೂರಕ್ಕೆ ತೊಂಭತ್ತರಷ್ಟು ಕಲಿಯುವುದನ್ನು ಬಿಟ್ಟು ಬೇರೆ ಹವ್ಯಾಸಗಳಲ್ಲಿ–ಕಾದಂಬರಿ ಓದುವುದರಲ್ಲಿ, ಸಿನೆಮಾ ನೋಡುವುದರಲ್ಲಿ, ಹಸ್ತ ಪತ್ರಿಕೆಗೆ ಬರೆಯುವುದರಲ್ಲಿ, ನಾಟಕ ಅಭಿನಯಿಸುವುದರಲ್ಲಿ, ಕ್ರಿಕೆಟ್ ಪಂದ್ಯಾಟದಲ್ಲಿ, ಸಮ್ಮೇಳನ--ಸಂಚಾರಗಳಲ್ಲಿ–ತೊಡಗುವುದೇ ಹೆಚ್ಚು. ಇಂಥವರು ಪರೀಕ್ಷೆಗೆ ಮೂರು ದಿನ ಮೊದಲು ಪಠ್ಯ ಪುಸ್ತಕ ಓದಿ ಪಾಸು ಮಾರ್ಕು ಪಡೆಯುತ್ತಾರೆ. ಆಗ ಅವರಿಗೆ ನಾನು ಪಾಸಾದೆನಲ್ಲ ಎಂಬ ಸುಖಾನುಭವವುಂಟಾಗುತ್ತದೆ. ಆದರೆ ಅದರ ಜೊತೆಗೇ ನಾನು ಇನ್ನೂ ಚೆನ್ನಾಗಿ ಕಲಿಯಲು ಅವಕಾಶವಿತ್ತು; ಅದನ್ನು ಸುಮ್ಮನೆ ಕಳೆದುಕೊಂಡೆನೆಂಬ ದುಃಖದ ವಿಚಾರವೂ ಬರುತ್ತದೆ. ಮೈತ್ರಿಯ ಮಟ್ಟಿಗೂ ಇದು ಚೆನ್ನಾಗಿ ಅನ್ವಯಿಸುತ್ತದೆ

ಸ್ನೇಹಿತರನ್ನು ಮಾಡಿಕೊಳ್ಳುವುದಕ್ಕೆ ಬಾಲ್ಯಾವಸ್ಥೆ ಮತ್ತು ತಾರುಣ್ಯ ಕೇಳಿಸಿದ ಕಾಲ. ಮುಪ್ಪಿನಲ್ಲಿ ಸ್ನೇಹಿತರನ್ನು ಹುಡುಕಲು ಚಡಪಡಿಸುವ ಪೆನ್ಶನ್‌ದಾರರನ್ನು ನಾವು ನೋಡುತ್ತೇವೆ. ಅವರ ಪ್ರಯತ್ನ ಹಲವು ವೇಳೆ ಸಫಲವಾಗುತ್ತದೆ. ಆದರೆ ಅದರಲ್ಲಿ ಅಪಯಶವಾಗುವ ಸಂಭವವೂ ಇಲ್ಲದಿಲ್ಲ. ಆದರೆ ಬಾಲ್ಯ ಹಾಗೂ ತಾರುಣ್ಯದ ಸಂಗತಿ ಹೀಗಿಲ್ಲ-ಒಂದು ಸಂದರ್ಭ ಕಳೆದು ಹೋದರೂ ಅದಕ್ಕೂ ಚೆಲುವಾದ, ಮಿಗಿಲಾದ ಹಲವು ಸಂದರ್ಭವನ್ನು ನಾವು ಸಾವಧಾನದಿಂದ ನಿರೀಕ್ಷಿಸಬಲ್ಲೆವು. ಮಿತ್ರರನ್ನು ಮಾಡಿಕೊಳ್ಳುವುದನ್ನು ತೀವ್ರವನ್ನಾದರೂ ಸ್ನೇಹಿತರ ಗುಂಪು ದೊಡ್ಡದಾಯಿತಲ್ಲ ಎಂದು ಆಗುವುದಿಲ್ಲ. ಗೆಳೆಯರ ಸಂಖ್ಯೆ ಹೆಚ್ಚಿದಷ್ಟು ಒಳ್ಳೆ [illegible]

ಹಿಂದೀಯ ಪ್ರಸಿದ್ಧ ಸಂಪಾದಕರಾದ ಶ್ರೀ ಜಗದೀಶ ಪ್ರಸಾದರಿಗೆ ಅಸಂಖ್ಯ ಸ್ನೇಹಿತರಿದ್ದಾರೆ. ಒಮ್ಮೆ ಅವರೊಡನೆ ಈ ಸಂಗತಿಯನ್ನೆತ್ತಿದಾಗ ಅವರು ಚಿಂತೆಯಿಂದ ತಂಬಿ ಹೇಳಿದರು—"ಸರಿಯೇ, ಆದರೆ ಎಷ್ಟೋ ಉತ್ತಮ ವ್ಯಕ್ತಿಗಳನ್ನು ನಾನು ನನ್ನ ಮಿತ್ರರನ್ನಾಗಿ ಮಾಡಿಕೊಳ್ಳಲು ಸಾಧ್ಯವಿದ್ದಾಗಲೂ, ಸುಮ್ಮನಿದ್ದುಬಿಟ್ಟೆ. ಇದು ಒಳ್ಳೆಯದಾಗಲಿಲ್ಲ. ನನ್ನ ಮಿತ್ರ ವೃಂದ ಇನ್ನಷ್ಟು ದೊಡ್ಡದಿರುತ್ತಿದ್ದರೆ, ನನ್ನ ಮುಪ್ಪಿನ ದಿನಗಳಲ್ಲಿ ಹೆಚ್ಚು ಮಾಧುರ್ಯ ಹಾಗೂ ರಸಿಕತೆಗೆ ಅವಕಾಶವಿರುತ್ತಿತ್ತು"

ಇದೇ ರೀತಿಯ ಉದ್ವಿಗ್ನತೆಯನ್ನು ಅಮೇರಿಕಾದ ಫೋರ್ಡ ಮೋಟಾರು ಕಂಪೆನಿಯ ಮಾಲಿಕ ಹೆನ್ರಿ ಫೋರ್ಡನು ವ್ಯಕ್ತಪಡಿಸಿದ್ದ "ನನಗೆ ಧನ ಹಾಗೂ ಯಶಸ್ಸು ದೊರೆತಷ್ಟು ಬೇರಾರಿಗೂ ಆ ಭಾಗ್ಯ ಹಣೆಯಲ್ಲಿ ಬರೆದಿರಲಿಲ್ಲ ಎಂಬುದು ನಿಜ. ಆದರೆ ಒಂದು ಅತ್ಯಮೂಲ್ಯವಾದ ವಸ್ತು ನನಗೆ ಸಿಗಲೇ ಇಲ್ಲ–ಸ್ನೇಹಿತರ ಸಂಗವಿಲ್ಲದ ನನ್ನ ಬದುಕು ಬರಡಾಗಿದೆ. ಇನ್ನೊಮ್ಮೆ ಜೀವನವನ್ನು ಮೊದಲಿನಂತೆ ಆರಂಭಿಸಲಾಗುತ್ತಿದ್ದರೆ ನಾನು ಯಶಸ್ಸನ್ನು ಐಶ್ವರ್ಯವನ್ನು ತ್ಯಜಿಸಿ, ಮಿತ್ರಾನ್ವೇಷಣದಲ್ಲಿ ತೊಡಗುವ ಸಂಕಲ್ಪ ಮಾಡಿದ್ದೇನೆ" ಫೋರ್ಡನ ಅಭಿಪ್ರಾಯದಂತೆ ದುಡ್ಡಿನಿಂದ ಸ್ನೇಹಿತರನ್ನು ಮಾಡಿಕೊಳ್ಳಲಾರೆವು. ನಮ್ಮನ್ನು–ನಮ್ಮ ಸುಖದುಃಖ, ಸೌಜನ್ಯ ಪ್ರೀತಿ, ವಿಶ್ವಾಸ ಇವುಗಳನ್ನು ನೀಡಿದರೆ ಮಾತ್ರ ನಮಗೆ ನಿಜವಾದ ಮಿತ್ರರು ದೊರಕಬಲ್ಲರು. ನಿಜವಾದ ಗೆಳೆಯರ ಬಳಿ ನಾವು ನಮ್ಮ ವ್ಯಕ್ತಿಗತ ಆಶೆ ಆಕಾಂಕ್ಷೆಗಳ ಸಂಬಂಧದಲ್ಲಿ ನಿರ್ವಂಚನೆಯಿಂದ ಸಲಹೆ ಕೇಳಬಲ್ಲೆವು, ನಿತ್ಯದ ಸಮಸ್ಯೆಗಳಿಗೆ ಪರಿಹಾರವನ್ನು ಪರಾಮರ್ಶಿಸಬಲ್ಲೆವು. ಸಾಹಿತ್ಯ, ಸಂಸ್ಕೃತಿ, ಸಮಾಜ, ರಾಜನೀತಿಗಳ ಕುರಿತು ವಿಚಾರ ವಿಮರ್ಶೆ ನಡೆಸಬಲ್ಲೆವು, ಇನ್ನೂ ಹತ್ತು ಹಲವು ಸಾಮಾನ್ಯ ಸಂಗತಿಯ ವಿಷಯವನ್ನು ತೆಗೆದುಕೊಂಡೇ ನಮ್ಮ ಜೀವನದ ಪ್ರತಿಕ್ಷಣವೂ ರಸನಿಮಿಷವಾಗುವಂತೆ ಮಾಡಬಲ್ಲೆವು. ನಮ್ಮ ಆತ್ಮೀಯರಾದ ಸ್ನೇಹಿತರಲ್ಲಿ ಸಮಯದ ಅಭಾವವಾಗಲೀ, ಅನಾನುಕೂಲತೆಯಾಗಲೀ ಇರುವುದಿಲ್ಲ. ಅವರ ಪ್ರೀತಿ-ವಿಶ್ವಾಸಗಳಿಗೆ ಇತಿಮಿತಿ ಇರುವುದಿಲ್ಲ

ಇಂಥ ಒಳ್ಳೆಯ ಪ್ರತಿಫಲವನ್ನು ನಾವು ಮಿತ್ರರಿಂದ ಹಾರ್ದಿಕವಾಗಿ ಅಪೇಕ್ಷಿಸುವುದು ನ್ಯಾಯ. ಹಾಗೆಯೇ ನಮ್ಮ ಸ್ನೇಹಿತ

[೧೦ನೇ ಪುಟ ನೋಡಿರಿ]

FOR QUALITY TIMEPIECES

PREFER

Favre Leuba 'JAJ' Rs 33/-
Swiss made 'HELO' Rs 28/

For particulars write to:

MUBARAK & CO.,
Watch & Clock Specialits, MADRAS 3.



ನಮ್ಮ ರಾಷ್ಟ್ರೀಯ ಸಮಸ್ಯೆಗಳ ಸ್ವರೂಪ

ಲೇಖಾಂಕ ೧: ದಯನೀಯವಾದ ಬಡತನ

ಹಸಿವು ಎಲ್ಲ ರಾಜಕೀಯ ಧುರೀಣರನ್ನೂ ಮೀರಿಸುವುದು. ಆಹಾರಭಾವದಿಂದ ಕಂಗೆಟ್ಟಿರುವ ಮತ್ತು ಜೀವನಾವಶ್ಯಕವಾದ ಇತರ ಸಾಮಾನ್ಯಾನುಕೂಲತೆಗಳಿಂದ ವಂಚಿತರಾಗಿರುವ ಜನ, ಇದಕ್ಕೆ ಹೊಣೆಗಾರವಾದ ಆರ್ಥಿಕ ಘೋರ್ಘಣೆಯನ್ನಾಗಲೀ ಸರಕಾರವನ್ನಾಗಲೀ ಕಿತ್ತೊಗೆಯುವುದು ನಿಶ್ಚಯ."—ಒಬ್ಬ ವಿದ್ವಾಂಸರ ಈ ಮಾತನ್ನು ನೆನೆದುಕೊಂಡು ನಾವು ನಮ್ಮ ರಾಷ್ಟ್ರೀಯ ಸಮಸ್ಯೆಗಳ ಸ್ವರೂಪವನ್ನು ಚರ್ಚಿಸಿ, ಆಚರಣೀಯವಾದ ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳಲೆತ್ನಿಸುವುದು ಒಳ್ಳೆಯದು. ಇಂದು ನಮ್ಮ ಮುಂದೆ ಅನೇಕ ಪ್ರಶ್ನಾರ್ಥಕ ಚಿಹ್ನೆಗಳಿವೆ: ನಮ್ಮ ದಾರಿದ್ರ್ಯ, ಮತ್ತು ಅದನ್ನು ಎತ್ತಿ ತೋರಿಸುವ ಆಹಾರಾಭಾವ, ದಿನದಿಂದ ದಿನಕ್ಕೆ ಏರುತ್ತಿರುವ ಜನಸಂಖ್ಯೆ, ಆದರೆ ಅದೇ ಕಾಲದಲ್ಲಿ ತಗ್ಗುತ್ತಾ ನಡೆದಿರುವ ಉತ್ಪಾದನೆ—ಇವು ನಮ್ಮ ರಾಜಕೀಯ ಧುರಂಧರರನ್ನೂ ಅರ್ಥಶಾಸ್ತ್ರಜ್ಞರನ್ನೂ ದಂಗು ಬಡಿಸಿವೆ, ದಿಕ್ಕುಗೆಡಿಸಿವೆ. ಪರಿಣಾಮವಾಗಿ ಪರಿಸ್ಥಿತಿ ಇದೇ ರೀತಿ ಮುಂದುವರಿದರೆ, ನಮ್ಮ ಜನರ ಒಲವು ಅಡ್ಡ ಮಾರ್ಗವನ್ನು ಹಿಡಿದೀತು. ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಆಕರ್ಷಕವೊದು ತೋರುವ ಕಮ್ಯೂನಿಸಂ ಭೂತಕ್ಕೆ ಆರಾಧನೆಯನ್ನು ಸಲ್ಲಿಸಿಕೊಂಡೀತು ಎಂದು ಎಲ್ಲ ವಿವೇಕಿಗಳಲ್ಲೂ ಕಳವಳ ಮೂಡಿದೆ. ಹಸಿವು, ಜನರ ನಿತ್ಯಗೋಳು, ಸಾಂಕ್ರಾಮಿಕವಾದ ರೋಗಗಳು, ನೀಚವಸತಿ, [illegible], ನಿರುದ್ಯೋಗ, ಪೌಷ್ಟಿಕ ಆಹಾರದ ಕೊರತೆ, ಏರುತ್ತಿರುವ ಬೆಲೆಗಳು, ಆದರೆ ಆ ಮಟ್ಟಕ್ಕೆ ಬಾರದ ಕೂಲಿ, ಧನಿಕವರ್ಗದ ವಿಲಾಸ ಮತ್ತು ಬಡವರ ದೈನ್ಯ ಇವೆಲ್ಲ ಭಾರತದ ಚಿತ್ರವನ್ನು ರುದ್ರಭೀಕರವಾಗಿ ಮಾಡಿವೆ

ಸ್ವಾತಂತ್ರ್ಯದ ಸ್ವರೂಪ

ನಾವು ಸ್ವತಂತ್ರ ರಾಷ್ಟ್ರವೆಂದು ಹೆಮ್ಮೆಪಟ್ಟುಕೊಳ್ಳಲು ಯಾರದೂ ಅಡ್ಡಿಯಿಲ್ಲ. ಆದರೆ, ಹಸಿವಿನಿಂದ ಬಳಲಿದವನಿಗೆ ಅನ್ನದ ರೂಪದಲ್ಲಿ ಸ್ವಾತಂತ್ರ್ಯದ ಸವಿ ದೊರೆಯಬೇಕು ಎಂಬ ಮೂಲತತ್ವವನ್ನು ಎಲ್ಲರೂ ಒಪ್ಪಬೇಕು. ನಮ್ಮ ಆವಶ್ಯಕತೆಗಳನ್ನು ಪೂರೈಸುವ ಸಾಮರ್ಥ್ಯ ನಮ್ಮಲ್ಲಿ ಉಂಟಾಗದ ಹೊರತು, ರಾಜಕೀಯ ಸ್ವಾತಂತ್ರ್ಯದಿಂದ ಪೂರ್ಣ ಪ್ರಯೋಜನವು ದೊರೆಯಲಿಕ್ಕಿಲ್ಲ. ನಮ್ಮ ಜನಕ್ಕೆ ಕೈತುಂಬ ಕೆಲಸ ದೊರೆಯಲಿ, ಹೊಟ್ಟೆತುಂಬ ಅನ್ನ ದೊರೆಯಲಿ, ಸುಖದಿಂದಿರಲು ಅಚ್ಚುಕಟ್ಟಾದ ಮನೆ ದೊರೆಯಲಿ. ನಾವು ಬದುಕಿ ಬಾಳಬೇಕೆಂಬ ಆಶೆಯನ್ನು ಪ್ರತಿಕ್ಷಣವೂ ಹುಟ್ಟಿಸುವಂಥ ಶಾಂತ-ಗಂಭೀರ-ರಸಿಕ ವಾತಾವರಣವುಂಟಾಗಲಿ—ಆಗ ರಾಮರಾಜ್ಯದ ಸವಿ ಕಲ್ಪನೆ, ಸ್ವಲ್ಪಮಟ್ಟಿಗಾದರೂ ಅನುಭವ ವೇದ್ಯವಾದೀತು. ನಮ್ಮ ಜನಕ್ಕೆ ಉತ್ತಮ ಶಿಕ್ಷಣದ ಅನುಕೂಲತೆ ದೊರೆತು ನಾಗರಿಕ ಹೊಣೆಗಾರಿಕೆಯ ತಿಳಿವಳಿಕೆಯಾಗಿ, ನಾಡು ಬೆಳೆಯುವಂತೆ ನೋಡಿಕೊಳ್ಳಬೇಕು. ನಮ್ಮ ಆರ್ಥಿಕ ಪರಿಸ್ಥಿತಿ ತೀವ್ರ ಬದಲಾವಣೆಯನ್ನು ಹೊಂದಿ ದಾರಿದ್ರ್ಯ ದೂರಾಗಬೇಕು. ಒಟ್ಟಾರೆ ಉತ್ಪಾದನೆಯು ಒಂದೇ ಸವನೆ ಹೆಚ್ಚುತ್ತಾ ಬಂದು ದೇಶ ಧನಧಾನ್ಯದಿಂದ ಸಮೃದ್ಧಗೊಳ್ಳಬೇಕು. ರಾಷ್ಟ್ರೀಯ ಮನೋವೃತ್ತಿಯುಳ್ಳ ಜನರು ಭಾರತದ ಭವಿತವ್ಯ ಹೀಗೆ ಉಜ್ವಲವಾಗಬೇಕೆಂದು ಹಾರೈಸುತ್ತಾರೆ. ಈ ಹಾರೈಕೆಯು ಅತ್ಯಂತ ಸಾಧುವಾದುದು; ಅಪೇಕ್ಷಿತವಾದುದು.

ಎದ್ದು ತೋರುವ ದಾರಿದ್ರ್ಯ

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ಪದ್ಧತಿಯು ಹೆಚ್ಚುಹೆಚ್ಚು ಜನಪ್ರಿಯವಾಗುತ್ತಾ ಬರುವಾಗ ಪೌರ್ವಾತ್ಯ ದೇಶಗಳಲ್ಲಿ ಒಂದೊಂದೇ ರಶಿಯಾದ ಕಮ್ಯೂನಿಸಂ ತತ್ವವನ್ನು ಅಪ್ಪಿಕೊಳ್ಳುವ ಹವಣಿಕೆಯಲ್ಲಿರುವುದು ಕಂಡು ಬರುತ್ತದೆ. ಇಂಥ ವಿಷಮ ವಾತಾವರಣದಲ್ಲಿ ಆಗ್ನೇಯ ಏಶಿಯಾದಲ್ಲಿರುವ ಭಾರತವು ಪ್ರಜಾಪ್ರಭುತ್ವದ ಭದ್ರ ಕೋಟೆಯಾಗಿ ಉಳಿದರೆ ಮಾತ್ರ ನಾಗರಿಕ ಸ್ವಾತಂತ್ರ್ಯದ ರಕ್ಷಣೆಯೊಂದಿಗೆ ರಾಷ್ಟ್ರೀಯ ಉತ್ಕರ್ಷಕ್ಕೂ ಅವಕಾಶ ದೊರೆಯುವುದೆಂದು ಎಷ್ಟೋ ಜನ ನಂಬುತ್ತಾರೆ. ಆದುದರಿಂದ ಭಾರತವನ್ನು ಆಶಾದೃಷ್ಟಿಯಿಂದ ಸ್ವಾತಂತ್ರ್ಯಪ್ರಿಯ ರಾಷ್ಟ್ರಗಳು ನೋಡುತ್ತಿವೆ. ಜಗತ್ತಿನ ಜನಸಂಖ್ಯೆಯಲ್ಲಿ ಅರ್ಧದಷ್ಟು ಏಶಿಯಾದಲ್ಲಿದೆ. ಆದರೆ ಜಗತ್ತಿನ ರಾಷ್ಟ್ರೀಯ ಆದಾಯದಲ್ಲಿ ಏಶಿಯಾದ ಪಾಲು ೧೦% ಮಾತ್ರ. ಜಗತ್ತಿನ ಜನಸಂಖ್ಯೆಯ ಹತ್ತರಲ್ಲಿ ಒಂದು ಪಾಲು ಮಾತ್ರವಿರುವ ಉತ್ತರ ಅಮೇರಿಕಾದ ಆದಾಯ ೪೫%ದಷ್ಟಿದೆ! ಭಾರತೀಯನೊಬ್ಬನಗಳಿಕೆಯ ಇಪ್ಪತ್ತು ಪಟ್ಟು ಅಮೇರಿಕನೊಬ್ಬ ಸಂಪಾದಿಸುತ್ತಾನೆ. ಸಂಯುಕ್ತ ರಾಷ್ಟ್ರಸಂಘದ ವರದಿಗಳಗನುಸಾರವಾಗಿ ಉತ್ತರ ಅಮೇರಿಕದಲ್ಲಿ ಒಬ್ಬನ ವಾರ್ಷಿಕ ಸಂಪಾದನೆ ೧೦೦೦ ಡಾಲರಾಗಿದ್ದರೆ, ಆಸ್ಟ್ರೇಲಿಯಾದಲ್ಲಿ ೫೬೦ ಡಾಲರು, ಯುರೋಪಿನಲ್ಲಿ ೩೮೦ ಡಾಲರು, ರಶಿಯಾದಲ್ಲಿ ೩೧೦ ಡಾಲರು, ದಕ್ಷಿಣ ಅಮೇರಿಕದಲ್ಲಿ ೧೭೦ ಡಾಲರು, ಆಫ್ರಿಕಾದಲ್ಲಿ ೭೫ ಡಾಲರು ಮತ್ತು ಏಶಿಯಾದಲ್ಲಿ ೫೦ ಡಾಲರು (೧ ಡಾಲರು ನಾಲ್ಕೂವರೆ ರುಪಾಯಿಗೆ ಸಮ). ಇಷ್ಟರವರೆಗೆ ಆಫ್ರಿಕವೇ ಅತ್ಯಂತ ಹಿಂದುಳಿದ ಭೂಖಂಡ ಎಂಬ ಭಾವನೆ ಇತ್ತು. ಆದರೆ ಆರ್ಥಿಕ ಕ್ಷೇತ್ರದ ಮಟ್ಟಿಗೆ ಆಫ್ರಿಕೆಗಿಂತಲೂ ಏಶಿಯಾವೇ ಹಿಂದೆಬಿದ್ದಿದೆ.

ಕೊಳೆ ನಿವಾರಣೆ

ಹೀಗಿರುವುದರಿಂದ ಏಶಿಯಾ ಕಮ್ಯೂನಿಸಂ ಬಲೆಗೆ ನಿಧಾನವಾಗಿಯೇ ಆದರೂ ಬೀಳಲೆಳಸಿದರೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ. ರಾಜಗೋಪಾಲಾಚಾರಿಯಂಥ ಭಾರತೀಯ ಧುರೀಣರು ಕಮ್ಯೂನಿಸಂ ಉಚ್ಚಾಟಣೆಗೆ ಜನರ ಸ್ಥಿತಿಗತಿಯನ್ನು ಸುಧಾರಿಸಲು ಪ್ರಯತ್ನಿಸುವುದೇ ತರಣೋಪಾಯವೆಂದು ಹೇಳಿದ್ದಾರೆ.
ಕೊಳಕು, ಕೊಟ್ಟಿಗೆಗಳಿವೆಯೋ ಅಲ್ಲಿ
ಕ್ರಾಮಿಕ ಕೀಟಾಣುಗಳು ನೆಲೆ
ವಂತೆ—ದಾರಿದ್ರ್ಯ, ಹಸಿವು, ನಿರು
ಮುಂತಾದ ಮನುಷ್ಯನ ಬದುಕಿನ
ತ್ಯವನ್ನೇ ಪ್ರಶ್ನಿಸುವ ಸಮಸ್ಯೆಗಳ ನೆ
ಕಮ್ಯೂನಿಸಂ ಹಾಯಾಗಿರುವುದು
ಯ. ಆದುದರಿಂದ ಪ್ರಜಾಪ್ರಭು
ಅಸೀಮ ಶ್ರದ್ಧಾಭಕ್ತಿಯುಳ್ಳ ಜನರ
ತೆಯೊಡನೆ ಬೆರೆತು, ದುಡಿದು,
ಮಟ್ಟ ಏರುವಂತೆ, ಬದುಕುವುದರ
ನಂದ ಮೊಳೆಯುವಂತೆ ವಾತಾವ
ನ್ನುಂಟುಮಾಡಬೇಕು. ನಮ್ಮ ಸಂ
ನೆ ಹೆಚ್ಚಬೇಕು. ಇದಕ್ಕೆ ಉತ್ಪಾದ
ನ್ನು ಹೆಚ್ಚಿಸುವುದೊಂದೇ ತೆರೆ
ವಮಾರ್ಗ.

ರಾಷ್ಟ್ರೀಯ ಅಂಕೆ ಸಂಖ್ಯೆ

ನಮ್ಮ ಸಂಪಾದನೆ ಯಾವ ಪ್ರ
ದಲ್ಲಿತ್ತು ಎಂಬುದನ್ನು ನಿರ್ದೋ
ಹೇಳುವ ಪ್ರಯತ್ನಗಳು ನಡೆದಿಲ್ಲ
ರೂ ಕೆಲವು ಅರ್ಥಶಾಸ್ತ್ರಜ್ಞರು
ಸ್ವಂತ ಸ್ಫೂರ್ತಿ ಹಾಗೂ ಪ್ರ
ಳಿಂದ ಅಂಕೆ ಸಂಖ್ಯೆಗಳನ್ನು ಕಲೆ
ಭಾರತೀಯನ ಸರಾಸರಿ ವಾ
ಆದಾಯವೆಷ್ಟಿದ್ದೀತು ಎ
ದನ್ನು ಕಂಡು ಹಿಡಿಯಲೆತ್ನಿಸಿರ
೧೮೭೦ರಷ್ಟು ಪೂರ್ವದಲ್ಲಿಯೇ
ಭಾಯಿ ನವರೋಜಿಯವರು
ಪ್ರಯತ್ನದ ಫಲವಾಗಿ ಭಾರತೀಯ
ರ್ಷಿಕ ಆದಾಯ ಇಪ್ಪತ್ತು ರೂ
ಎಂದು ತಿಳಿಯಿತು ೧೯೩೧ರಲ್ಲಿ
ಮತ್ತು ಬಾಂಬಟ್ಟ ಅವರು ಕಂಡು
ದಂತೆ ಈ ಆದಾಯದ ಪ್ರಮಾಣ
ರುಪಾಯಿಯಾದರೆ ಅದೇ ವರ್ಷ
ನ ವರದಿಯಂತೆ ೧೭೬ ರುಪಾಯಿ
ದು ನಿರ್ಣಯಿಸಲ್ಪಟ್ಟಿತು. ೧೯
ಡಾ. ವಿ. ಕೆ. ಆರ್. ವಿ. ರಾಯ
ಸಿದ ಪ್ರಯತ್ನದ ಫಲವಾಗಿ ನವ
ರ್ಷಿಕ ಆದಾಯದ ಪ್ರಮಾಣವು
೬೨ ಎಂದು ಸಿದ್ಧಗೊಂಡಿತು. ಮ
ದಿನ ಪ್ರಮಾಣವು ೨೫೫ ರುಪಾಯಿ
ದಾದರೂ, ೧೯೩೧ರ ಜೀವನ ವೆ
ನಾಲ್ಮಡಿಯಷ್ಟು, ಈಗಿನ ವೆಚ್ಚದ
ಈ ಹೆಚ್ಚಿದೆ ಎಂಬುದನ್ನು ಲಕ್ಷ್ಯಿ
ನಮ್ಮ ಆದಾಯ ಇಳಿದಿದೆ ಎ
ಗೋಚರಿಸುವುದು. ಅರ್ಥಶಾಸ್ತ್ರಿಗ
ಕ ಸಂಖ್ಯೆಯಲ್ಲಿ ವ್ಯತ್ಯಾಸ ಕಂ

(೧೧ನೇ ಪುಟ ನೋಡಿರಿ)

ಆಗ--?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿಯುವುದು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ಹೆಜ್ಜೆಯಿಟ್ಟರೆ ಮುಗ್ಗರಿಸುವಾಗ, ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ಸ್ಫುರಿಸಬಲ್ಲ ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿ ಇರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕಂಡೊಡನೆ ನಿಮ್ಮದೇ ಆಗುವ, ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ, ನಿಮ್ಮ ನಾಡಿನ

ಈ ಕಂಪೆನಿಯಲ್ಲಿಯೇ ವಿಮೆ ಇಳಿಸಿರಿ

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ ಭಾರತ. ಸ್ಥಾಪನೆ: ೧೯೩೫
The Canara Mutual Assurance Co. Ltd.
Head Office: UDIPI, S. India. Estd. 1935

ರಾಮತೀರ್ಥ
ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ಮಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

[illegible] ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಮೂಲ್ಕಿ ಬೇಂಕ
ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ
ವರುಷಗಳಿಂದ ಊರ ಜನರ
ಕ್ಕಾಗಿ ಡಿಪೋಸಿಟ್ ಹಣಕ್ಕೆ
ಯವಾದ ಬಡ್ಡಿಯಿಂದಲೂ,
ದ ಹಣಕ್ಕೆ ಅತೀ ಕಡಿಮೆ
ಬಡ್ಡಿಯಿಂದಲೂ ಜನ ಹಿತಸಾ
ಯನ್ನು ಮಾಡುತ್ತಿರುವುದು

The Moolky Bank L
Moolky, S. K

ಭೂಮಿಯ ಮೇಲಿನ ಒಡೆತನ

ವ್ಯವಸಾಯ ನಿರತನಾದ ರೈತನಿಗೆ ಸೇರುವುದೇ ನ್ಯಾಯ

„ಕೃಷಿಯು ಭಾರತದ ಪ್ರಧಾನ ವಿಷ ಃ ಈಗಿರುವ ಎಲ್ಲ ಪಾಳೆಯಗಾರಿ ಪ ತಿಯನ್ನು ನಿರ್ಮೂಲಿಸದ ಹೊರತು ಷಿ ಸಮಸ್ಯೆಯನ್ನು ಬಗೆಹರಿಸುವಂತಿ . ಜೊತೆಗೆ ಆಧುನಿಕ ಉತ್ಪಾದನಾ ನಗಳನ್ನೂ ಸಹಕಾರಿ ಪದ್ಧತಿಯ ನ್ನು ಅನುಸರಿಸಬೇಕಾಗಿದೆ"-ಎಂಬುದಾ ಭಾರತದ ಪ್ರಧಾನಿ ನೆಹರೂ ಪದೇ ದೇ ಹೇಳುತ್ತಾರೆ. ಹಿಂದುಳಿದ ರಾಷ್ಟ್ರ ಳ ಪರಿಸ್ಥಿತಿಯು ತುಂಬ ಶೋಚನೀಯ ಾಗಿರುವುದಕ್ಕೆ ಅವು ಕೃಷಿ ಪ್ರಧಾನ ಾಗಿರುವುದೂ, ಜನಸಂಖ್ಯೆ ಹೆಚ್ಚಿರು ದೂ, ಕಾರಣವಾಗಿದೆ. ಹೆಚ್ಚುತ್ತಿರುವ ನತೆಗೆ ತಿನ್ನಲು ಸಾಕಷ್ಟು ಅನ್ನದ ಉತ್ಪಾದನೆಯಾಗುತ್ತಿಲ್ಲ; ಆದ ಉತ್ಪತ್ತಿಯ ಕೂಡ ಅರ್ಧಾಂಶದಷ್ಟು ಭೂಮಿಯ ಡೆಯರಿಗೆ ಸೇರಿ ಹೋಗುವುದೇ ಹೊರ ರೈತನ ಕುಟುಂಬಗಳ ಉಪಯೋಗ ಅದು ದೊರಕುವುದಿಲ್ಲ. ಗೇಣಿ ಸಂ ಾಯ ಮಾಡಿದ ಬಳಿಕ ರೈತನ ಪಾಲಿಗೆ ಳಿಯುವ ಅಂಶವು ಅವನ ಕುಟುಂಬ ೋಷಣೆಗೆ ಸಾಲುವುದಿಲ್ಲವಾದರೆ, ಒಂ ೋ ಅರೆ ಹೊಟ್ಟೆಯಿಂದಿದ್ದು ಬದುಕ ೇಕು ಇಲ್ಲವೆ ಹೆಚ್ಚು ಹಣಕೊಟ್ಟು ಅ ನ್ನು ಮರಳಿ ಪಡೆಯಲು ಪ್ರಯತ್ನಿಸಬೇ . ಇದು ಎಷ್ಟರ ಮಟ್ಟಿಗೆ ಸಾಧ್ಯ?

ಒಗ್ಗುವ ಹೆಜ್ಜೆ

ಈ ಪರಿಸ್ಥಿತಿಯೇ ನಮ್ಮ ರೈತರಲ್ಲಿ ಲಸ್ಯವನ್ನೂ ಬೇಸಾಯದಲ್ಲಿ ಉಪೇಕ್ಷೆ ಯನ್ನೂ ಹುಟ್ಟಿಸಿದೆ. ಭಾರತದಲ್ಲಿ ರೈತ ಮುದಾಯವು ಸೋಮಾರಿಯಾಗಿ ಉ ಯದಿದ್ದರೂ ಅಲಕ್ಷ್ಯದಿಂದ ಸಾಗುವ ಗಿ ತೊಡಗಿದರೆ-ಅದರ ಪರಿಣಾಮವು ಂಟ ಕಟುತರವೆನಿಸುವುದು ನಿಶ್ಚಯ. ಕಡಾ ಹತ್ತಕ್ಕೂ ಕಡಿಮೆ ಇರುವ ನ ್ಕ ಆಹಾರಾಭಾವವನ್ನು ನಮ್ಮ ರೈತ ಮನಸ್ಸುಮಾಡಿದರೆ ಒಂದೇ ಒಂದು ರ್ಷದೊಳಗೆ ನೀಗಿಸಿಬಿಡಬಲ್ಲರು. ಆದರೆ ಾದು ಅವರಲ್ಲಿ ಸಾಕಷ್ಟು ಹುಮ್ಮಸ್ಸಿಲ್ಲ. ುಮ್ಮಸ್ಸು ಹುಟ್ಟಿಸುವಂಥ ಉತ್ತೇಜನ ಾಯಗಳನ್ನೂ ಸರಕಾರ ಕೈಕೊಂಡಿರು ದಿಲ್ಲ. ಅಮೇರಿಕದ ಅಚ್ಚಿನಲ್ಲಿ ತಯಾ ಾಗಿ ಬಂದಿರುವ ಜನಪದ ಅಭಿವೃದ್ಧಿ ೋಜನೆ ಮುಂತಾದವುಗಳಿಗೆ ಕೋಟಿ ಟ್ಟಳೆ ರುಪಾಯಿ ವೆಚ್ಚವಾಗುತ್ತಿದೆ. ಈ ಾದರಿಯ ಸುಧಾರಣೆಯೇನೋ ಸ್ವಾಗ ರ್ಹವೇ. ಆದರೆ ಪ್ರಾಥಮಿಕವಾದ ಂಶಗಳನ್ನು ಸರಕಾರವು ಮನನಮಾಡಿ ಂಡು ರೈತರ ಹಕ್ಕು ಬಾಧ್ಯತೆಗಳನ್ನು ನ್ನಿಸುವ ಕಾಯಿದೆ ಕ್ರಮಗಳನ್ನು ಕೈ ಳ್ಳದಿದ್ದರೆ—ಹಳ್ಳಿಯ ರೈತರಲ್ಲಿ ಇಂದು ತ್ಸಾಹ ಹುಟ್ಟಿಸಲು ಸಾಧ್ಯವಾಗದು. ಮಗೆ ಅಮೇರಿಕೆಯ ಸುಧಾರ ಗೂ ಮಿಗಿಲಾಗಿ—ಇಲ್ಲಿಯ ಪರಿ ತಿಗೆ ಒಗ್ಗುವ ಹೆಜ್ಜೆಗಳ ಅಗತ್ಯವಿದೆ. ಂಧನಗಳಲ್ಲಿ ರೈತನ ಪರಿಸ್ಥಿತಿಯನ್ನು ರ್ಜಿತಗೊಳಿಸುವುದು ಅತ್ಯಂತ ಪ್ರಾಮುಖ್ಯವಾದದು,

ವ್ಯಕ್ತಿ ವೈಶಿಷ್ಟ್ಯ

ಕಮ್ಯೂನಿಸಂ ಪ್ರಾಬಲ್ಯಕ್ಕೆ ಬಂದಿರುವ ಷ್ಟ್ರಗಳಲ್ಲಿ ಜನಾಕರ್ಷಕವಾದ ಒಂದೇ ಯೋಜನೆಯೆಂದರೆ ಉಳುವವನಿಗೆ ಹೊಲದೊಡೆತನವನ್ನು ವಹಿಸಿ ಕೊಡುವುದು. ತನ್ನ ದುಡಿಮೆಯ ಕ್ಷೇತ್ರದಲ್ಲಿ ತನ್ನ ಅಧಿಕಾರ ವ್ಯಾಪ್ತಿ ಇರಬೇಕೆಂದು ಬಯಸುವುದು ಮಾನವನಿಗೆ ತೀರ ಸಹಜವಾಗಿದೆ. ಈ ಮೂಲಭೂತ ಅಂಶವನ್ನು ಮನ್ನಿಸುವುದು ಎಲ್ಲರ ಕರ್ತವ್ಯವೆನಿಸುತ್ತದೆ. ಅದನ್ನು ಧಿಕ್ಕರಿಸಿ ನಡೆದಾಗಲೇ ಸಾಮಾಜಿಕ ಅಸಮತೆ ಮತ್ತು ಆರ್ಥಿಕ ದಾಸ್ಯ ಮುಂತಾದ ಅನಪೇಕ್ಷಿತ ಸಮಸ್ಯೆಗಳು ತಲೆ ಎತ್ತುತ್ತವೆ. ಈ ದಿನ ನಮ್ಮ ಮುಂದೆ ಇರುವ ಪರಿಸ್ಥಿತಿಯು ಇದಕ್ಕಿಂತ ಭಿನ್ನವಾಗಿಲ್ಲ. ಆದುದರಿಂದ ಮನುಷ್ಯನ ವ್ಯಕ್ತಿತ್ವವನ್ನು ಗಣನೆಗೆ ತಂದುಕೊಂಡು, ಅವನ ಸರ್ವಶಕ್ತಿಯೂ ಸದುಪಯೋಗವಾಗುವಂತೆ ನೋಡಿಕೊಳ್ಳಲು ಅನುಕೂಲವಾಗುವರೀತಿಯಲ್ಲಿ ಹಾಗೂ ಸಾಮಾಜಿಕವಾದ ನ್ಯಾಯವನ್ನು ಪ್ರಸ್ಥಾಪಿಸಿ ಆರ್ಥಿಕ ವೈಷಮ್ಯವನ್ನು ದೂರೀಕರಿಸುವ ರೀತಿಯಲ್ಲಿ-ಸರಕಾರ ಕಾಯಿದೆ ಕಾನೂನುಗಳನ್ನು ಕೈಗೊಳ್ಳಬೇಕು. ವ್ಯಕ್ತಿತ್ವದ ವೈಶಿಷ್ಟ್ಯವನ್ನು ಉಳಿಸುವುದು ಪ್ರಜಾಪ್ರಭುತ್ವದ ಯಶಸ್ಸಿಗೆ ಅತ್ಯಂತ ಪ್ರಾಮುಖ್ಯವೆಂಬುದನ್ನು ನಾವು ಚೆನ್ನಾಗಿ ಮನಗಂಡಿದ್ದೇವೆ. ನಮ್ಮ ರಾಜ್ಯ ಘಟನೆಯಲ್ಲಿ ಆಶ್ವಾಸಿಸಲಾಗಿರುವ ಮೂಲಭೂತ ಹಕ್ಕುಗಳ ಸಂರಕ್ಷಣೆಯ ಕಲಮು ಇದನ್ನು ಪುಷ್ಟೀಕರಿಸುತ್ತಿದೆ. ನಾವು ಯಾಂತ್ರಿಕವಾದ ಬದುಕು ನೀಗಬೇಕೆಂಬುದು ಇಷ್ಟವಲ್ಲವೆಂದೂ ವ್ಯಕ್ತಿಗತ ಸಾಮರ್ಥ್ಯವನ್ನು ಸಮಾಜ ಹಿತಕರವಾದ ರೀತಿ ವಿಕಾಸಗೊಳಿಸುವುದು ಶ್ರೇಯಸ್ಕರವೆಂದೂ ನಾವು ತಿಳಿದುಕೊಂಡಿದ್ದೇವೆ. ರಾಜ್ಯ ಘಟನೆಯ ಪ್ರಸ್ತಾವನೆಯಲ್ಲಿ ವ್ಯಕ್ತಿ ಗೌರವವನ್ನೂ ರಾಷ್ಟ್ರದ ಐಕ್ಯವನ್ನೂ ಸಾಧಿಸುವ ರೀತಿಯಲ್ಲಿ ಭ್ರಾತೃತ್ವ ಸ್ಥಾಪಿಸುವುದು ನಮ್ಮ ಉದ್ದೇಶವೆಂದು ಹೇಳಿದೆ.

ಆದ್ಯ ಕರ್ತವ್ಯ

ಆದುದರಿಂದ ಕಮ್ಯೂನಿಸಂ ರಾಜ್ಯಗಳಲ್ಲಿರುವ ಉಕ್ಕಿನ ಮುಷ್ಟಿಯೇ ಹಿಡಿಸಲಿರುವ ಸೂತ್ರದ ಬೊಂಬೆಗಳಾಗಿ ನಮ್ಮ ರೈತರು ಇರಬೇಕೆನ್ನುವುದು ಸರ್ವಥಾ ಇಷ್ಟವಲ್ಲ. ಹಾಗೆಂದು ಈಗಿರುವ ಪರಿಸ್ಥಿತಿಯನ್ನು ಮುಂದುವರಿಯಗೊಡುವುದೂ ಅಪಾಯಕರ. ಭೂಸುಧಾರಣೆಯ ಹೆಜ್ಜೆಯನ್ನು ತ್ವರಿತಗತಿಯಿಂದ ಮುನ್ನಿಡದಿದ್ದರೆ, ನಮ್ಮ ಜನರಲ್ಲಿ ಮೊಳೆತಿರುವ ಅಸಹನೆ ಮತ್ತು ಅಶಾಂತಿ ಪ್ರಾಬಲ್ಯಗೊಂಡೀತು; ಶಾಂತಮಯ ವಾತಾವರಣವನ್ನು ಕೆಡಿಸಿ. ನಮ್ಮ ಜನ ಯೋಧರಾಗಿ ದಂಗೆ ಎದ್ದಾರೆಂದೂಹಿಸುವುದು ಹುಚ್ಚುತನವಾದರೂ ಉದಾಸೀನರಾಗಿ, ನಿಷ್ಕ್ರಿಯರಾಗಿ ಉಳಿದು ನಮ್ಮ ಪತನವನ್ನು ನಾವೇ ತಂದುಕೊಳ್ಳುವ ಸ್ಮಶಾನ ವೈರಾಗ್ಯ ಮಾತ್ರ ನಿಶ್ಚಯಕ್ಕೂ ಉಂಟಾದೀತು. ಹೀಗಾಗುವುದಾದಲ್ಲಿ-ಅದಕ್ಕಿಂತ ಸೈನ್ಯ ಕ್ರಾಂತಿಯೇ ಸಾವಿರ ಪಾಲು ಮೇಲು. ಸಂಸ್ಕೃತದ ಗಾದೆಯೊಂದಿದೆಯಲ್ಲ-ಬೆಂಕಿ ಸತ್ತವನನ್ನು ಸುಡುತ್ತದೆ, ಆದರೆ ಚಿಂತೆ ಜೀವವಿದ್ದವನನ್ನೇ ಆಹುತಿ ತೆಗೆದುಕೊಳ್ಳುತ್ತದೆ. ನಮ್ಮ ಜನರ ಚಿಂತೆ ನಮಗೇನೆ ಮುಳುವಾದೀತೆಂಬ ಭಯ ಕಂಡುಬರುತ್ತದೆ. ಈಜಿಪ್ಟದಲ್ಲಿ ಭೂಮಿಯ ಹಸಿವಿಗಾಗಿ ಮೊನ್ನೆ ತಾನೆ ಸೈನ್ಯ ಕ್ರಾಂತಿ ನಡೆಯಿತು. ಕೆನಿಯಾದಲ್ಲಿ ಭೂಮಿಯ ಒಡೆತನಕ್ಕಾಗಿ ಆಫ್ರಿಕನ ಮೂಲ ನಿವಾಸಿಗಳು ಬ್ರಿಟಿಷರ ವಿರುದ್ಧ ಹೋರಾಡುತ್ತಾರೆ. ನೆರೆಯ ಕಾಶ್ಮೀರದಲ್ಲಿ ಉಳುವವನಿಗೆ ಹೊಲದೊಡೆತನವನ್ನು ನೀಡಲು ಕಡ್ಡಾಯವಾದ ಉಗ್ರ ಕಾಯಿದೆಯ ಆವಶ್ಯಕತೆ ಬಿತ್ತು. ಭಾರತವನ್ನು ಜನಶಕ್ತಿಯಲ್ಲಿ ಹಾಗೂ ವಿಸ್ತಾರದಲ್ಲಿ ಮೀರಿಸುವ ಚೈನಾದಲ್ಲಿ ಭೂಸ್ವಾಮಿತ್ವಕ್ಕಾಗಿ ನಡೆದ ಹೋರಾಟವೇ ಕಮ್ಯೂನಿಸಂಗೆ ಆಹ್ವಾನ ಕೊಟ್ಟಿತು. ಇದನ್ನೆಲ್ಲ ನೆನೆದು ನಾವು, ನಮ್ಮ ಸರಕಾರ ಕರ್ತವ್ಯವಿಮುಖರಾಗಿ ಉಳಿಯುವುದು ಎಂತು ಸಾಧ್ಯ?

ಸಾಮಾಜಿಕ ಹಿತ

ರಾಷ್ಟ್ರೀಯ ಅಭಿವೃದ್ಧಿ ಮಂಡಳದ ಸಭೆಯು ದಿಲ್ಲಿಯಲ್ಲಿ ಸೇರಿ ಪಂಚವಾರ್ಷಿಕ ಯೋಜನೆಯ ಕರಡನ್ನು ಸ್ವೀಕರಿಸಿ, ಅದನ್ನು ರಾಷ್ಟ್ರೀಯ ಯೋಜನೆಯೆಂದು ಮೊನ್ನೆ ತಾನೆ ಪುರಸ್ಕರಿಸಿತು. ಅದೇ ಸಮಯ ಭೂಮಿಯ ಒಡೆತನ, ಸಾಗುವಳಿ ಮುಂತಾದವುಗಳ ಸಂಬಂಧದಲ್ಲಿ ಕೂಡ ಮಹತ್ವದ ಶಿಫಾರಸುಗಳು ಮಾಡಲಾಗಿವೆಂದು ತಿಳಿದಿದೆ. ಮುಖ್ಯವಾಗಿ ಪಾಳೆಯಗಾರಿ ಪದ್ಧತಿಯನ್ನು ಅಳಿಸಿಬಿಟ್ಟು, ರೈತರ ಹಕ್ಕು ಬಾಧ್ಯತೆಗಳಿಗೆ ಸಂರಕ್ಷಣೆ ಕೊಡುವುದಕ್ಕೆ ಕಾಯಿದೆಗಳನ್ನು ಮಾಡಬೇಕೆಂದು ಹೇಳಿದ್ದಾರೆ. ಜೊತೆಗೆ ಭೂಮಿಯ ಹಿಡುವಳಿಯ ಕನಿಷ್ಠ ಮಿತಿಯನ್ನು ನಿರ್ಧರಿಸಿ, ಭೂ ಸಾರವನ್ನು ವೃದ್ಧಿಗೊಳಿಸಲು ಶ್ರಮಿಸಬೇಕೆಂದೂ ಹೇಳಲಾಗಿದೆ. ಈ ಕಾರಣಗಳಿಗಾಗಿ ಘಟನೆಗೆ ತಿದ್ದುಪಡಿಮಾಡುವ ಪ್ರಸಂಗ ಬಂದರೂ ಕೂಡ, ಅದಕ್ಕೆ ಹಿಂಜರಿಯತಕ್ಕದ್ದಲ್ಲವೆಂದು ಕೆಲವು ರಾಜ್ಯ ಸರಕಾರಗಳ ಮುಖ್ಯಮಂತ್ರಿಗಳ ಸಲಹೆ ಇದೆ. ನಮ್ಮ ಘಟನೆಯು ವ್ಯಕ್ತಿ ಸ್ವಾಮಿತ್ವವನ್ನು ಪುರಸ್ಕರಿಸುವುದಾದರೂ ಸಾಮಾಜಿಕ ಹಿತದ ಸಲುವಾಗಿ ಬೇಕೆನಿಸಿದ ಕಾಯಿದೆ ಮಾಡಲು ಅದಕ್ಕೆ ಅಧಿಕಾರವಿದೆ ಎಂಬುದನ್ನಿಲ್ಲಿ ಸ್ಮರಿಸಬೇಕು. ಈ ಕಾರಣದಿಂದ ರೈತರ ಹಕ್ಕುಗಳನ್ನು ಸಂರಕ್ಷಿಸುವುದು ಭೂಮಾಲಿಕರ ಮೇಲೆ ನಡೆಸುವ ಅನ್ಯಾಯ ಅಥವಾ ಅತ್ಯಾಚಾರವೆನಿಸುವುದಿಲ್ಲ. ಸಮಷ್ಟಿಯ ಹಿತಕ್ಕಾಗಿ ಕೈಗೊಂಡ ಸ್ತುತ್ಯ ಉಪಕ್ರಮವೆಂದು ಅದು ಪ್ರಶಂಸೆಗೆಪಾತ್ರವಾಗುತ್ತದೆ. ಆದುದರಿಂದ ಭೂಮಿಯಒಡೆತನದ ಸಂಗತಿಯಲ್ಲಿ ನಿರ್ದಿಷ್ಟ [illegible]ಯನ್ನು ಸರಕಾರವು ಈಗಿಂದೀಗಲೇ ತಳೆಯಬೇಕು ಮತ್ತು ರೈತಪಕ್ಷಪಾತಿಯಾದ ಸುಧಾರಣಾ ಕ್ರಮಗಳು ಜಾರಿಗೆಬಂದು ಪ್ರಜಾಪ್ರಭುತ್ವಕ್ಕೆ ಭದ್ರವಾದ ಅಡಿಗಲ್ಲನ್ನು ಹಾಕುವಂತಾಗಬೇಕು.

—ಕಾರ್ತಿಕೇಯ

ಸೇವಿಂಗ್ಸ್ ಬೇಂಕ್ ಖಾತೆಯನ್ನು ಏತಕ್ಕಾಗಿ ತೆರೆಯಬೇಕು?

ವ್ಯಾಪಾರ ಮತ್ತು ಕೈಗಾರಿಕೆಗೆ ಹಣವೇ ಜೀವಾಳ. ಆದರೆ ಬಚ್ಚಿಟ್ಟ ಹಣ, ಉಪಯೋಗಿಸದ ಹಣ ಯಾವ ಪುರುಷಾರ್ಥವನ್ನೂ ಪಡೆಯಲಾರದು. ನಿಮ್ಮಂತಹ ಸಹಸ್ರಾರು ಡಿಪೊಜಿಟುದಾರರ ಹಣವು ನಿಮ್ಮ ಬೇಂಕಿನಲ್ಲೇ ಕೇಂದ್ರೀಕರಿಸಲ್ಪಟ್ಟಾಗ ಆ ಹಣವು ದೇಶದ ಕೈಗಾರಿಕೆ ಉದ್ಯಮಗಳ ಉಪಯೋಗಕ್ಕೆ ನೆರವಾಗಿ ದೇಶದ ಸಂಪದಭಿವೃದ್ಧಿಯನ್ನು ಸಾಧಿಸುವುದು. ಆದುದರಿಂದ ನಿಮ್ಮ ಉಳಿತಾಯ ಹಣವನ್ನು ನಿಮ್ಮ ಬೇಂಕ್ ಖಾತೆಯಲ್ಲಿಟ್ಟು ನಿಮ್ಮ ದೇಶದ ಅಭ್ಯುದಯಕ್ಕೇನೇ ಸಹಾಯ ನೀಡಿರಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.
ಸ್ಥಾಪನೆ 1925 ಹೆಡ್ ಆಫೀಸ್.. ಉಡುಪಿ

The Canara Industrial &
Banking Syndicate Limited.
Estd. 1925 H O. UDIPI

ಕುಂದಾಪುರ ಡಿ ಮು ಕೋರ್ಟಿನಲ್ಲಿ

S C. 534/52

ವಾದಿ— [illegible]

ಪ್ರತಿವಾದಿ—ಶೀನಪ್ಪ ಶೆಟ್ಟಿ, ಅಂಗಡಿ ಮಾದಪ್ಪ ಶೆಟ್ಟಿಯ ಮಗ ನಾವುಂದ ಗ್ರಾಮದ ಅರೆಹೊಳೆಯಲ್ಲಿರುವವನು.

ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ಪ್ರತಿವಾದಿಯು ವಾದಿಗೆ ತಾ 30 8-19 ರಲ್ಲಿ ರೂಪಾಯಿ 100-0 0ಕ್ಕೆ ಬರೆಕೊಟ್ಟ ಪ್ರಾಮಿಸರಿ ನೋಟಿನ ಬಾಬ್ತು ಬರಬೇಕಾದ ಬಾಕಿ ಹಣಗಳನ್ನು ವಸೂಲುಮಾಡಿಕೊಳ್ಳುವ ಬಗ್ಗೆ ಹಾಕಿದ ಮೇಲಿನ ದಾವೆಯನ್ನು ತಾ. 29 11 52ಕ್ಕೆ ಇಟ್ಟಿರುತ್ತದೆ. ಆ ದಿವಸ ನಿಮ್ಮದೇನಾದರೂ ಉಜ್ರು ಇದ್ದಲ್ಲಿ ಆ ದಿವಸ ನೀವು ಸ್ವತಃ ಯಾ ವಕೀಲರ ಮುಖಾಂತರ ಹಾಜರಾಗಿ ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಕಡ್ಡಿ ನಂಬ್ರವನ್ನು ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲ್ಪಡುತ್ತದೆಂಬ ಬಗ್ಗೆ ಈ ಮೂಲಕ ತಿಳಿಯಪಡಿಸಿಯದೆ.

By order of the Court

A. N. Rao
Advocate for Plaintiff.
Coondapoor, 11-11-52.

ದಯಮಾಡಿ ನಿಮ್ಮ
ಚಂದಾ ಹಣ ಕಳಿಸಿರಿ.

ನಿಯಂತ್ರಣ ಬೇಕೆಂದು

ಜನನಾಯಕನ ಜನ್ಮದಿನೋತ್ಸವಕ್ಕೆ ಅತ್ಯಪೂರ್ವ ಉಡುಗೊ



ನೆಹರೂ ಜನ್ಮದಿನ

ಇದೇ ನವೆಂಬರ ೧೪ಕ್ಕೆ ಜನನಾಯಕ ನೆಹರೂಗೆ ೬೪ ವಯಸ್ಸು ತುಂಬಿತು. ಈ ಸಂದರ್ಭದಲ್ಲಿ ರಾಷ್ಟ್ರವು ಅವರಿಗೆ ದೀರ್ಘಾಯುರಾರೋಗ್ಯಗಳನ್ನು ಬಯಸಿ ಶುಭ ಸಂದೇಶವನ್ನೂ ಅಭಿನಂದನೆಗಳನ್ನೂ ಅರ್ಪಿಸಿತು. ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಸಂಚಾರದಲ್ಲಿದ್ದ ಕಾರಣ ತಮ್ಮ ಸಹಾಯಕ ಮಿಲಿಟರಿ ಕಾರ್ಯದರ್ಶಿಯ ಮೂಲಕ ಶ್ರೀ ನೆಹರೂರವರಿಗೆ ಪುಷ್ಪಗುಚ್ಛವನ್ನು ಕಳುಹಿಸಿದರು. ಲೋಕಸಭೆಯಲ್ಲಿ ಕಮ್ಯೂನಿಸ್ಟ ಸದಸ್ಯರನ್ನುಳಿದು ಇತರೆಲ್ಲರೂ ನೆಹರೂರವರನ್ನು ಜೈಕಾರದೊಂದಿಗೆ ಅಭಿನಂದಿಸಿದರು. ದೇಶಗಳಿಂದಲೂ ಅನೇಕ ಶುಭ ಸಂದೇಶಗಳು ಬಂದಿದ್ದುವು. ಭಾರತದ ಅಪ್ರತಿಮ ವ್ಯಕ್ತಿ ಎಂದಷ್ಟೇ ಅಲ್ಲ—ವಿಶ್ವ ವಿಖ್ಯಾತ ಪುರುಷನೆಂಬುದಕ್ಕಾಗಿಯೇ ಇರಬೇಕು ರಶಿಯಾದ ಪ್ರಧಾನಿ ಮಾರ್ಷಲ್ ಸ್ಟಾಲಿನ್ನರು ಕೂಡ ನೆಹರೂ ಜನ್ಮದಿನದಂದು ಶುಭೇಚ್ಛೆಗಳನ್ನು ವ್ಯಕ್ತಪಡಿಸಿದರು. ಆ ದಿನ ನೆಹರೂ ಎರಡು ತಾಸಿನಷ್ಟು ಸಮಯವನ್ನು ಮಕ್ಕಳೊಂದಿಗೆ ಕಳೆದರು. ಅವರ ಮನೆಯ ಆವಾರದಲ್ಲಿ ಗುಂಪುಗೂಡಿದ್ದ ಈ ಮಕ್ಕಳಿಗೆ ಮಿಠಾಯಿ ಹಂಚಿ, ಬಾಯಿ ಸಿಹಿಯನ್ನಾಗಿ ಮಾಡಿದರು. ಜೊತೆಗೇ ಈ ಪುಟ್ಟ ಮಕ್ಕಳೊಡನೆ ನಕ್ಕು ನಲಿಯುವುದಕ್ಕೂ ನೆಹರೂ ಹಿಂದುಳಿಯಲಿಲ್ಲ.

ಅಚ್ಚುಮೆಚ್ಚಾದ ಮಕ್ಕಳು

ಮಕ್ಕಳೆಂದರೆ ನೆಹರೂಗೆ ತುಂಬ ಅಚ್ಚುಮೆಚ್ಚಾದ ಜೀವಗಳು. ಅವುಗಳ ಯೋಗಕ್ಷೇಮದ ಬಗ್ಗೆ ನೆಹರೂ ಸದಾ ಜಾಗರೂಕರಿರುತ್ತಾರೆ. ಇಂದಿನ ಮಕ್ಕಳ ಭವಿಷ್ಯ ಉಜ್ವಲವಾಗಬೇಕೆಂದೂ, ಮುಂದಿನ ಜನಾಂಗವನ್ನು ಸುಯೋಗ್ಯವಾಗಿ ಕಟ್ಟಿ ನಿರ್ಮಿಸುವಲ್ಲಿ ನಾವು ಎಷ್ಟು ಮಾತ್ರಕ್ಕೂ ಲೋಪದೋಷಗಳಿಗೆ ಎಡೆಕೊಡಲಾಗದೆಂದೂ ನೆಹರೂರ ಸ್ಪಷ್ಟ ಅಭಿಪ್ರಾಯ. ಮಕ್ಕಳೆಂದರೆ ನೆಹರೂರ ಜೀವ ಮಿಡಿಯುತ್ತದೆ; ಅಂತಃಕರಣ ಉಕ್ಕಿಬರುತ್ತದೆ. ರಾಯಲಸೀಮೆಯ ಸಂಚಾರವನ್ನು ಅವರು ಈಚೆಗೆ ಕೈಗೊಂಡಿದ್ದಾಗ—ಮಕ್ಕಳ ಮೇಲಿನ ತನ್ನ ಮಮತೆಯನ್ನವರು ಬಿಚ್ಚುಮನಸ್ಸಿನಿಂದ ವ್ಯಕ್ತಪಡಿಸಿದ್ದರು. ಒಂದೆಡೆ ಓರ್ವ ತಂದೆಯು ತನ್ನ ಮಗುವಿಗೆ ಒಂದು 'ಪುಗ್ಗ"ವನ್ನು ಕೊಂಡುಕೊಂಡು ಕೊಟ್ಟುದನ್ನೂ, ಆ ವ್ಯಾಪಾರಿಯ ಸುತ್ತಲೂ ಇನ್ನೂ ಅನೇಕ ಮಕ್ಕಳು ಕೈಯಲ್ಲಿ ಕಾಸಿಲ್ಲದಿದ್ದರೂ ಪುಗ್ಗವನ್ನು ಆಶಾದೃಷ್ಟಿಯಿಂದ ನೋಡುತ್ತಿದ್ದುದನ್ನೂ ಕಂಡ ನೆಹರೂ—ಒಡನೆಯೇ ಅವನ ಎಲ್ಲ ಪುಗ್ಗಗಳನ್ನೂ ಮಕ್ಕಳಿಗೆ ಹಂಚಿಕೊಡಲು ಹೇಳಿದರು. ನಿಜವಾಗಿ ಮೂರು ರೂಪಾಯಿಯ ಪುಗ್ಗಗಳಿದ್ದರೂ, ವ್ಯಾಪಾರಿಯು ಐದು ರೂಪಾಯಿ ತೆಗೆದುಕೊಂಡನೆಂಬ ಸಂಗತಿ ಬೇರೆ. ಆದರೆ ನೆಹರೂ ಮಕ್ಕಳ ದೈನ್ಯಾವಸ್ಥೆ ನೋಡಿದರೆ ನಾವು— ವಿಷಾದದ ರೇಖೆ ಅವರ ಮುಖದಲ್ಲಿ ಮೂಡುತ್ತದೆ. ಮದ್ರಾಸಿನ ಕಾರ್ಪೊರೇಶನಿನಲ್ಲಿ ಅವರು ಮಾತನಾಡಿದಾಗ, ಮಕ್ಕಳ ಸೌಖ್ಯವನ್ನು ಬೆಳೆಸಲಿಕ್ಕೆ, ಅವುಗಳಿಗೆ ಉತ್ತಮ ಆಹಾರವನ್ನೂ ಯೋಗ್ಯ ಶಿಕ್ಷಣವನ್ನೂ ಕೊಡಲಿಕ್ಕೆ ಶಕ್ತಿಮೀರಿ ದುಡಿಯಬೇಕೆಂದರು. ರಾಯಲಸೀಮೆಯಲ್ಲಿ ಮಕ್ಕಳಿಗೆ ಕಡಿಮೆ ಪ್ರಮಾಣದಲ್ಲಿ ಗಂಜಿ ನೀಡುತ್ತಿರುವುದನ್ನು ನೋಡಿ, ಬೆಳೆಯುವ ಮಕ್ಕಳಿಗೆನೇ ಹೆಚ್ಚು ಆಹಾರ ಬೇಕು ಎಂದರು.

ಅಪೂರ್ವ ಕಾಣಿಕೆ

ಇವೆಲ್ಲದರ ಮೇಲಿಂದ ನೆಹರೂರ ಅಂತಃಕರಣದಲ್ಲಿರುವ "ತಂದೆ ತನ"ವನ್ನು ಗುರುತಿಸಬಹುದು. ದಿಲ್ಲಿಯಲ್ಲಿ ಮಕ್ಕಳ ಸಮಾರಂಭವೊಂದರಲ್ಲಿ ಅದೇ ದಿನ ನೆಹರೂ ಭಾಗವಹಿಸಿದರು. ಬಾಲಕ ಬಾಲಿಕೆಯರು ಡ್ರಿಲ್, ಹಾಡುವುದು, ಕೂಡು ಮಾಡುವುದು, ನೃತ್ಯಗೈಯುವುದು ಮೊದಲಾದುವನ್ನು ಕಂಡು ನೆಹರೂ ಹಲವು ಸಲ ಕರತಾಡನ ಮಾಡಿ ಮೆಚ್ಚಿಕೆ ತೋರಿಸಿದರು. ಎರಡೇ ನಿಮಿಷದ ಭಾಷಣ ಮಾಡಿ, ಮಕ್ಕಳು ಆಟದಲ್ಲಿ ನಿಸ್ಸೀಮರಾದಂತೆ, ಕೆಲಸ ನಿರ್ವಹಿಸುವುದರಲ್ಲಿಯೂ ಜಾಣರಾಗಬೇಕು ಎಂದು ಉಪದೇಶಿಸಿದರು. ಕೆಲಸಮಾಡುವುದೆಂದರೆ ಆಟದಷ್ಟೇ ಹುಮ್ಮಸ್ಸು ಇರಬೇಕೆಂಬ ನೆಹರೂರ ಮಾತು ನಮ್ಮ ರಾಷ್ಟ್ರಕ್ಕೆ ಚೆನ್ನಾಗಿ ಅನ್ವಯಿಸುತ್ತದೆ. ಕೆಲಸದಲ್ಲಿ ಉದಾಸೀನತೆಯನ್ನು ತೋರಿಸುತ್ತಾ ಸಂಪತ್ತು-ಸೌಕರ್ಯ ಹೆಚ್ಚಬೇಕೆಂದರೆ ಸಾಧ್ಯವಿಲ್ಲ. ಇದನ್ನು ಮನಗಾಣಿಸಿಕೊಡುವುದಕ್ಕೆ ನೆಹರೂ ತುಂಬ ಪ್ರಯತ್ನಿಸಿದ್ದಾರೆ. ಸ್ವತಃ ಹದಿನಾರು ತಾಸು ದುಡಿಯುತ್ತಾರೆ. ಉಳಿದವರೂ ತಮ್ಮ ಮೇಲ್ಪಂಕ್ತಿಯನ್ನನುಸರಿಸಬೇಕೆಂದು ಹೇಳುತ್ತಾ ಬಂದಿದ್ದಾರೆ. ಅವರ ಹಿತನುಡಿಯು ನಿಧಾನವಾಗಿಯೇ ಆದರೂ ಜನರ ಮನಸ್ಸಿಗೆ ಬಂದಿದೆ ಎಂಬುದೀಗ ವ್ಯಕ್ತವಾಗುತ್ತಿದೆ. ನೆಹರೂ ಜನ್ಮದಿನದಂದು ಜನಪದ ಅಭಿವೃದ್ಧಿ ಯೋಜನೆಯ ಕೇಂದ್ರ ಅಧಿಕಾರಿ ಶ್ರೀ ಎಸ್. ಕೆ. ಡೇ ಅವರು ಅರ್ಪಿಸಿದ ಕಾಣಿಕೆಯಲ್ಲಿ ದೇಶದ ವಿವಿಧ ಭಾಗಗಳಿಂದ ಚಿಕ್ಕಮಕ್ಕಳಿಗಾಗಿ ಶಾಲೆಗಳನ್ನು ನಿರ್ಮಿಸುವ ಸುಮಾರು ೩೧೬ ಆಶ್ವಾಸನೆಗಳಿದ್ದುವು. ಈ ಶಾಲೆಗಳನ್ನು ಹಳ್ಳಿಯ ಜನರೇ ಕಟ್ಟಿಸಿಕೊಡುತ್ತಾರೆ. ಅದಕ್ಕೆ ಬೇಕಾದ ಧನವನ್ನೂ ಶ್ರಮವನ್ನೂ ಆ ಜನರೇ ಪೂರೈಸುತ್ತಾರೆ. ಸರಕಾರ ಶಾಲೆಗೆ ಬೇಕಾದ ಅಧ್ಯಾಪಕ ವೃಂದವನ್ನು ಪೂರೈಸುವುದಲ್ಲದೆ, ಯೋಗ್ಯ ಉಪಕರಣಗಳನ್ನು ಪೂರೈಸುವುದು. ಶಾಲಾ ಸ್ಥಳವನ್ನು ದಾನವಾಗಿ ಅಲ್ಲಿಯ ಜನರು ಬಿಟ್ಟುಕೊಡುವರು. ಹೀಗೆ ಹಳ್ಳಿಗರು ಶಾಲೆಗಳಿಗಾಗಿ ನೀಡುವ ಸಹಾಯವನ್ನು ಹಣರೂಪದಲ್ಲಿ ಅಳೆದರೆ ಅದು ೧೫ ಲಕ್ಷರೂಪಾಯಿ ಆಗುತ್ತದೆ. ಜನಪದ ಅಭಿವೃದ್ಧಿ ಯೋಜನೆಗಳಲ್ಲಿ ಈಗಿರುವ ಪ್ರಾಥಮಿಕ ಶಾಲೆಗಳನ್ನು ನೋಡಿದರೆ ನೆಹರೂ ಕಾಣಿಕೆಯೆಂದು ಕಟ್ಟುವ ೩೧೬ ಶಾಲೆಗಳಿಂದಾಗಿ ಇವುಗಳ ಪ್ರಮಾಣ ೭% ದಷ್ಟು ಹೆಚ್ಚುತ್ತದೆ.

ಆಹಾರ ಧೋರಣ

ಹೀಗೆ ಜನರಲ್ಲಿ ಸ್ವಾವಲಂಬನ ಪ್ರವೃತ್ತಿಯನ್ನೂ ಪರಿಶ್ರಮದ ಕೆಲಸಗಳ ಬಗ್ಗೆ ಆಸಕ್ತಿಯನ್ನೂ ಹುಟ್ಟಿಸುವಲ್ಲಿ ನೆಹರೂ ಕೆಲ ಮಟ್ಟಿಗೆ ಸಮರ್ಥರಾಗಿದ್ದಾರೆ. ಆದರೆ ಸದಾ ಕಾಲ ಇಂಥ ರಚನಾತ್ಮಕ ಕ್ಷೇತ್ರದಲ್ಲಿ ದುಡಿಯಲು ಅವರಿಗೆ ಅವಕಾಶವಿಲ್ಲ ಎಂಬುದೂ ನಿಜ. ಭಾರತದಂಥ ವಿಶಾಲ ದೇಶದ ಪ್ರಧಾನ ಮಂತ್ರಿ ಸ್ಥಾನದ ಹೊಣೆಗಾರಿಕೆಯು ಅವರನ್ನು ಸದಾ ಕ್ರಿಯಾಶೀಲರನ್ನಾಗಿ ಮಾಡಿರುತ್ತದೆ. ಹಲವಾರು ಸಮಸ್ಯೆಗಳ ಪರಿಹಾರ ಮಾರ್ಗವನ್ನು ಹುಡುಕಿ ಅದನ್ನು ಕಾರ್ಯಾಚರಣೆಗೆ ತರುವಲ್ಲಿ ಅವರ ಸಮಯವೆಲ್ಲ ಕಳೆಯುತ್ತದೆ. ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸ್ವರೂಪದ ಜಟಿಲವಾದ ತೊಡಕುಗಳನ್ನು ಕೌಶಲದಿಂದ ಬಿಡಿಸಿ ಬಗೆಹರಿಸುವುದೆಂದರೆ ಸುಲಭದ ಮಾತೇನಲ್ಲ. ಈಚೆಗೆ ಕೆಲಸಮಯದಿಂದ ತೂಗುಯ್ಯಾಲೆಯಲ್ಲಿದ್ದ ಆಹಾರ ವಿನಿಯಂತ್ರಣದ ಪ್ರಶ್ನೆಯನ್ನೂ ಇದೇ ಸಾಲಿಗೆ ಸೇರಿಸಬಹುದಾಗಿದೆ. ಕೇಂದ್ರ ಆಹಾರ ಮಂತ್ರಿ ಕಿದ್ವಾಯಿಯವರು ಮುಂಬಾಯಿಯಲ್ಲಿ ವಿವಿಧ ರಾಜ್ಯ ಸರಕಾರಗಳ ಮಂತ್ರಿಗಳೊಡನೆ ವಿನಿಯಂತ್ರಣವನ್ನು ಜ್ಯಾರಿಗೆ ತರುವ ಸಾಧ್ಯಾಸಾಧ್ಯತೆಯನ್ನು ಕುರಿತು ಸುದೀರ್ಘ ಸಮಾಲೋಚನೆ ನಡೆಸಿದ್ದರಷ್ಟೆ! ಅಂದಿನಿಂದ ಸರಕಾರದ ನಿಲುವು ಏನೋ ಹೇಗಿದೆಯೋ ಎಂಬ ಬಗ್ಗೆ ಎಲ್ಲರಲ್ಲಿ ಕಳವಳ ಹಾಗೂ ಅಸ್ಥಿರತೆ ಮೂಡಿದ್ದು ಸ್ವಾಭಾವಿಕವೇ. ಲೋಕಸಭೆಯಲ್ಲಿ ಮೊನ್ನೆ ತಾನೆ ನೆಹರೂ ಕೊಟ್ಟ ಹೇಳಿಕೆಯು ಈ ಗೊಂದಲ ಪರಿಸ್ಥಿತಿಯನ್ನು ದೂರೀಕರಿಸಿದೆ. ಆಹಾರ ಧೋರಣೆಯಲ್ಲಿ ಉಲ್ಲೇಖನೀಯವಾದ ಯಾವ ಬದಲಾವಣೆಯನ್ನೂ ಮಾಡುವುದಿಲ್ಲವೆಂದು ನೆಹರೂ ಸ್ಪಷ್ಟವಾಗಿ ಹೇಳಿದರು.

ಸಂಭಾವ್ಯ ದುಷ್ಪರಿಣಾಮ

ಆಹಾರ ಸಂಬಂಧದಲ್ಲಿ ಒಂದು ನಿರ್ದಿಷ್ಟ ಧೋರಣೆಯನ್ನು ಅನುಸರಿಸಬೇಕೆಂದು, ಎಲ್ಲ ರಾಜ್ಯ ಸರಕಾರಗಳ ಆಹಾರ ಮಂತ್ರಿಗಳ ಪರಿಷತ್ತೊಂದನ್ನು ದಿಲ್ಲಿಯಲ್ಲಿ ಇದೇ ೧೭ನೇ ದಿನಾಂಕ ನಡೆಸಬೇಕೆಂದು ಗೊತ್ತಾಗಿತ್ತು. ಆದರೆ ಅದನ್ನೀಗ ಮುಂದಾಕಲಾಗಿದೆ. ಈ ಪರಿಷತ್ತಿನಲ್ಲಿ ಭಾಗವಹಿಸಲು ಮದ್ರಾಸಿನಿಂದ ಆಹಾರ ಸಚಿವ ಸುಬ್ರಹ್ಮಣ್ಯಮರ ಜೊತೆಗೆ ವಿನಿಯಂತ್ರಣದ ಅಧ್ವರ್ಯು ಎಂದು ಹೇಳಬಹುದಾದ ರಾಜಾಜಿ ಹೋಗುವರೆಂದೂ ನಿಶ್ಚಯವಾಗಿತ್ತು. ಆದರೆ ಈ ನಡುವೆ ಕೇಂದ್ರ ಸರಕಾರ ಪರಿಷತ್ತನ್ನೆ ಮುಂದೆ ಹಾಕಿದುದರಿಂದ ಮಂತ್ರಿಗಳ ಕಾರ್ಯಕ್ರಮ ರದ್ದುಗೊಂಡಿದೆ. ನೆಹರೂರ ಅಭಿಪ್ರಾಯ ವಿನಿಯಂತ್ರಣವನ್ನು ಜ್ಯಾರಿಗೆ ತರುವುದ

PLACE YOUR LIFE ASSURANCE WITH A COMPANY OF YOUR OWN - - - -

Established in 1929, the POPULAR is progressing on sound lines It has built up for itself a record of efficient service sound investment and a personal touch with its Policyholders and Representatives At whatever stage we welcome your association with the POPULAR

The Popular Insurance Co. Ltd

'Popular Buildings", MANGALORE-1

ZANDU KESARI JIVAN

ಝಂಡೂ ಕೇಸರಿ ಜೀವನ

ಕೆಮ್ಮು, ನೆಗಡಿ, ರಾಜಯಕ್ಷ್ಮ, ಮಿದುಳು ನಿತ್ರಾಣ, ಅಕಾಲಿಕ ವೃದ್ಧಾಪ್ಯ, ಸರ್ವಸಾಮಾನ್ಯ ಬಲಹೀನತೆಗಳಿಗೆಲ್ಲಾ ಕೇಸರಿ ಜೀವನವು ಹೆಸರುವಾಸಿಯಾದದ್ದು ಕ್ಷೀಣವಾದ ದೇಹಾರೋಗ್ಯವನ್ನು ಸಮತೂಕದಲ್ಲಿರಿಸಲು ಆದರ್ಶ ಟಾನಿಕ್ ಆಹಾರವಾಗಿದೆ 1 ರಾತ್ಲ. ರೂ. 6-8-0] ರಾತ್ಲ ರೂ 1-14-0

ದೊರೆಯುವ ಸ್ಥಳಗಳು

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ
2 ಶ್ರೀ ಪಿ ವಿ ಶೆಣೈ, ಕೆಮಿಸ್ಟ್, ಕಾರ್ಕಳ
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು
4 ಎಲ್ ಎಸ್ ಶರ್ಮ, ಹಜೂರು ರಸ್ತೆ ಮಂಗಳೂರು

ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರಿ ಶರ್ತು ವಗೈರೆಗಳಿಗೆ ಬರೆಯಿರಿ

DAMODAR & CO.,

Nainiappa Naicken Street, Park Town-MADRAS 3.

ಹರೂರ ಆಗ್ರಹ

ಶ್ಮೀರದಲ್ಲಿ ಡೋಗ್ರಾ ಅರಸೊತ್ತಿಗೆಗೆ ಅರ್ಧ ಚಂದ್ರಪ್ರಯೋಗ

ದ್ಧವಿದೆ ಈ ಮಾತು ಕಿದ್ವಾಯಿ. ಯವ ಕುಂಬಾಯಿ ಮಾತುಕತೆಗಳನ್ನು ಮು ಬಿನ್ನಿಗೇ ಗೊತ್ತಾಗಿತ್ತು ದೇಶದ ವೆ ಪಂಚವಾರ್ಷಿಕ ಯೋಜನೆಯಿ ದರಿಂದ ಆದರ ಕಾರ್ಯಾಚರಣೆಗೆ ವುದೇ ರೀತಿಯಲ್ಲಿ ತೊಂದರೆಕೊಡ ಒದ ಹೆಜ್ಜೆಯನ್ನಿಡಲು ನೆಹರೂ ಹಾ ಅವರ ಕಲವು ಸಹೋದ್ಯೋಗಿಗಳು ಯತ್ತಾರೆ ನಿಯಂತ್ರಣಗಳ ತಳಹದಿ ಮೇಲೆಯೇ ಪಂಚವಾರ್ಷಿಕ ಯೋ ನು ಆರ್ಥಿಕ ವ್ಯವಸ್ಥೆ ನಿಂತಿದೆ ಎಂ ವಿನಿಯಂತ್ರಣದಿಂದ ಬೆಲೆಯ ಸ್ಥಿ ಪ್ರಮಾಯವಾಗಿ, ಈ ವ್ಯವಸ್ಥೆಯೇ ವೇಲಾದೀತೆಂದೂ ಅರ್ಥಶಾಸ್ತ್ರಜ್ಞ ಹೆದರಿಸುತ್ತಾರೆ ತನ್ನಲ್ಲಿ ಆದಾಯ ತವನ್ನು ಹಿತಮಿತವಾಗಿ ಬಳಸಿ ದು, ಸದುಪಯೋಗಗೊಳಿಸಬೇಕಿರು ರಕಾರ ವಿನಿಯಂತ್ರಣದ ಸಂಭಾವ್ಯ ಪರಿಣಾಮದ ಹೊಣೆಗಾರಿಕೆಯನ್ನು ಸಿಕೊಳ್ಳಲು ಸಿದ್ಧವಿಲ್ಲ

ವಿನಿಯಂತ್ರಣವಿಲ್ಲ

ಹರೂರ ಈ ನಿಲುವು ಅಸಂಗ ವೇನೂ ನಾವು ಹೇಳುವಂತಿಲ್ಲ ದಕ್ಷ ಆಡಳಿತವಿಲ್ಲದಿರುವಲ್ಲಿ ನಿಯಂತ್ರ ವಿನಿಯಂತ್ರಣಗಳಿಂದೂ ಕೆಟ್ಟ ಪರಿ ಕುವನ್ನುಂಟುಮಾಡಬಲ್ಲವು ನಿಯಂ ತ್ರಿತವಾಗ ಸರಕಾರ ಈ ಕೆಟ್ಟ ಪರಿ ನದ ಮೇಲೆ ಸತರ್ಕದೃಷ್ಟಿಯನ್ನಿಡ ದು. ಆದರ ವಿನಿಯಂತ್ರಣ ಪರಿಸ್ಥಿ ಲ್ಲಿ ಹೀಗೆ ಕಣ್ಣಿಡುವುದು ಸ್ವಲ್ಪ ಕಷ್ಟ ರೂ ನಿಯಂತ್ರಣ ಬೇಕೆನ್ನು ರ ಅರ್ಥ ಸರಕಾರ ಯಾವುದೇ ಮಹ ಕ್ರಮವನ್ನು ಪ್ರಾಯೋಗಿಕ ರೂಪ ಸ್ವೀಕರಿಸುವಂತಿಲ್ಲ ಎಂಬುದೇ ಅಗಿ ರಾಜಾಜಿಗೆ ಆತ್ಮವಿಶ್ವಾಸ ಹಾಗೂ ಕ ಧೈರ್ಯವಿದ್ದುದರಿಂದ, ಕೇಂದ್ರ ಅದ ಮನವೊಲಿಸಿ, ಸ್ವಂತ ಯ ಮೇಲಿಂದ, ಆಹಾರ ಧಾನ್ಯ ಮೇಲಿನ ನಿಯಂತ್ರಣವನ್ನು ತೆಗೆ ದರು ರೈತರಿಗೂ ವ್ಯಾಪಾರಿಗಳ ಹಿತ ನುಡಿದಂತೆ, ಗ್ರಾಹಕರಿಗೂ ಯ ಮಾತು ಹೇಳಿದರು ಇಂದು ಜಿಯ ಘೋಷಣೆಯಿಂದ ಎಷ್ಟು ಕಾರವಾಯಿತೆಂಬುದನ್ನು ಮಾತ್ರ ಜನತೆಯೇ ಬಲ್ಲುದು ಈ ಒಗೆಯ ಸ ಹಾಗೂ ಧೈರ್ಯವಿಲ್ಲದ ಕೇಂ ಸರಕಾರ, ನಿಯಂತ್ರಣಗಳನ್ನು ತೆಗೆ ಹಾಕಲು ಒಡಂಬಡದಿರುವುದೇ ಒಳ್ಳೇ ಮನುಷ್ಯನಿಗೆ ತನ್ನ ಕೆಲಸ ಸಮಂ ಸಾದದ್ದು, ಯೋಗ್ಯವಾದದ್ದು ಎಂಬ ಕೆ ಇಲ್ಲದಿದ್ದರೆ, ಯಶಸ್ಸು ದೊರೆ ವಂತಿಲ್ಲವೆಂಬ ಸುವಿಚಾರವನ್ನಿಲ್ಲಿ ನೆ ಬಹುದು

ಗಂಭೀರ "ಎಚ್ಚರಿಕೆ"

ಲೋಕ ಸಭೆಯ ಮುಂದೆ ಸೋಮ ದಿನ ಆಹಾರ ಮಂತ್ರಿ [illegible] ನು ಸರಕಾರದ ಆಹಾರ ಧೋರಣೆ ಈಗಿನ ಸ್ವರೂಪವನ್ನು ವರ್ಣಿಸಿ ಅಕ್ಕಿ ಹಾಗೂ ಗೋಧಿಯ ಲಿನ ನಿಯಂತ್ರಣವನ್ನು ತೆಗೆದು ಹಾಕುವ ಪ್ರಶ್ನೆಯೇ ಇಲ್ಲ ಜೋಳ, ನವಣೆ ಇತ್ಯಾದಿಗಳ ಮೇಲಿದ್ದ ನಿರ್ಬಂಧವನ್ನು ಮಾತ್ರ ಕೆಲವು ಟ್ಟಿಗೆ ಸಡಿಲಿಸುವ ವಿಚಾರವಿಷ್ಟೆ ರಾಜ್ಯದೊಳಗೆ ಈ ಧಾನ್ಯಗಳ ಸಾಗಾಟಕ್ಕೆ ಆಸ್ಪದವನ್ನು ಕೊಡುವುದು ಈ ರೀತಿಯಾಗಿದೆ ಹಾಗೆಂದು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಧಾನ್ಯಗಳನ್ನು ಸಾಗಿಸುವುದಕ್ಕೆ ಕೇಂದ್ರ ಸರಕಾರದ ಅನುಮತಿ ಬೇಕಾಗಿದೆ. ನೆಹರೂ ಈ ಸಮಯದಲ್ಲಿ ಮಾಡಿದ ಭಾಷಣದಲ್ಲಿ ಸರಕಾರದ ಮೂಲ ಭೂತ ಧೋರಣೆಯಲ್ಲಿ ಪರಿವರ್ತನೆ ಇಲ್ಲವೆಂದೂ ಅಲ್ಲಲ್ಲಿ ತೇಪೆ ಹಚ್ಚುವ ಕೆಲಸ ಮಾತ್ರ ನಡೆಯುವುದೆಂದೂ ಹೇಳಿದರು, ಅರ್ಥಮಂತ್ರಿ ದೇಶಮುಖರು ಆಹಾರ ಧಾನ್ಯಗಳ ಬೆಲೆಯ ಕನಿಷ್ಠ ಮಿತಿಯನ್ನು ಕಾಯ್ದುಕೊಳ್ಳುವುದು ಅತ್ಯವಶ್ಯವೆಂದರು ಲೋಕಸಭೆಯ ಹೆಚ್ಚಿನ ಸದಸ್ಯರು ನಿಯಂತ್ರಣವಿರುವುದೇ ಒಳ್ಳೆಯದೆಂಬ ಅಭಿಪ್ರಾಯವುಳ್ಳವರು ನಿಯಂತ್ರಣ ಸಡಿಲಿಸುವಾಗ ತುಂಬ ವಿಚಾರ ಮಾಡಬೇಕೆಂದೂ ಈ ವಿಷಯದಲ್ಲಿ ಮ [illegible] ಸ್ಥಿತಿಯೊಂದೂ ಜೆಜ್ಜೆಯು ಸತರ್ಕವಿರಬೇಕೆಂದು ಗಂಭೀರ ಎಚ್ಚರಿಕೆ ನೀಡಲು ಸದಸ್ಯರು ಹಿಂದುಳಿಯಲಿಲ್ಲ. ಹೀಗೆ ಗಂಭೀರಾಲೋಚನೆಯಲ್ಲಿ ಮಗ್ನರಾದ ಅರ್ಥಶಾಸ್ತ್ರಜ್ಞರ "ಎಚ್ಚರಿಕೆ"ಯ ಮಾತುಗಳಿಂದಾಗಿ–ವಿನಿಯಂತ್ರಣದ ಪ್ರಶ್ನೆ ಮೂಲೆಗೆ ಸರಿದು ನಿಂತಿದೆ ಅರ್ಥಶಾಸ್ತ್ರಜ್ಞರ ಪೊಳ್ಳು ಮಾತುಗಳನ್ನು ಧಿಕ್ಕರಿಸಿ, ಸಾಮಾನ್ಯ ಮನುಷ್ಯನ ಮಾರ್ಗ ತುಳಿಯುವ ಕೆಚ್ಚು ಯಾರಿಗೂ ಇಲ್ಲ

ಕಾಶ್ಮೀರ ಪ್ರಶ್ನೆ

ಧೈರ್ಯ ಮತ್ತು ಸಾಹಸದ ಮಾತು ಬಂದಾಗ ನಾವು ಕಾಶ್ಮೀರಿಗಳನ್ನು ನೆನೆಯಬೇಕು ಅನೇಕಬಗೆಯ ತೊಡಕುಗಳಿದ್ದರೂ ಕಾಶ್ಮೀರದ ಜನತೆ ತಮ್ಮ ಮನೋಭಿಪ್ರಾಯವನ್ನು ಸ್ಪಷ್ಟವಾಗಿ ತೋರ್ಪಡಿಸಿ, ಇಂದು ತಮ್ಮ ಆಕಾಂಕ್ಷೆ ಪೂರ್ತಿಗೊಂಡುದನ್ನು ನೋಡಿದರು. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಜೊತೆಯಲ್ಲಿಯೇ ಕಾಶ್ಮೀರದಲ್ಲೂ ರಾಜ ಮನೆತನದ ಆಳಿಕೆಯ ವಿರುದ್ಧ ಚಳುವಳಿ ಮೊದಲಾಯಿತು ಭಾರತದೊಡನೆ ಗಡಿಗಳಲ್ಲಿ ಕ್ರಮಬದ್ಧವಾದ ಸೇರ್ಪಡೆ ನಡೆದಬಳಿಕವೂ ಕಾಶ್ಮೀರಿಗಳು ಭಾರತದೊಡನೆ ಪ್ರತಿಯೊಂದೂ ವಿಷಯದಲ್ಲಿ ಸಮರಸರಾಗಲು ಬಯಸಿದ್ದು, ತಮ್ಮದೇ ಆದ ವಿಶಿಷ್ಟ ಬೇಡಿಕೆಗಳನ್ನು ಮುಂದಿಟ್ಟರು ಶೇಖ್ ಅಬ್ದುಲ್ಲಾರ ನೇತೃತ್ವದಲ್ಲಿ ಈ ಜನರು ತಮ್ಮದೇ ಆದ ರಾಜ್ಯಾಂಗ ಘಟನೆಯನ್ನು ರೂಪಿಸುವ ಸಮಿತಿಯನ್ನು ಕಟ್ಟಿಕೊಂಡರು ಭಾರತ ಗಣರಾಜ್ಯದ ಘಟನೆಗೆ ಇದು ವಿಸಂಗತವೆಂದು ಭಾರತದಲ್ಲೇನೋ ಹುಯಿಲೆದ್ದಿತು ಆದರ ಆದಕ್ಕೆ ಸೊಪ್ಪುಹಾಕುವ ಬುದ್ಧಿಯನ್ನು ಶೇಖ್ ಅಬ್ದುಲ್ಲಾ ತೋರಿಸಲಿಲ್ಲ ಪರಿಹಾರವೇನನ್ನು ಕೊಡದೆ ಸಾಗುವಳಿ ಭೂಮಿಯನ್ನು ರೈತರಿಗೆ ಬಿಟ್ಟುಕೊಡುವ ಕ್ರಮವನ್ನು ಅಬ್ದುಲ್ಲಾ ಕೈಗೆದುಕೊಂಡರು ಇದೂ ನಮ್ಮ ಘಟನೆಗೆ ಅನುಗುಣವಾಗಿಲ್ಲ ಕಾಶ್ಮೀರ ಸರಕಾರಕ್ಕೆ ಪರಿಹಾರ ಕೊಡುವ ಸಾಮರ್ಥ್ಯವಿಲ್ಲೆಂದು ಇದಕ್ಕೆ ಸಮಾಧಾನ ಹೇಳಲಾಯಿತು ಕಾಶ್ಮೀರಿಗಳಿಗೆ ತಮ್ಮದೇ ಆದೊಂದು ಧ್ವಜ ಬೇಕೆಂದು ಆ ಬಳಿಕದ ಬೇಡಿಕೆಗೆ ಬಂತು ಅದಕ್ಕೂ ಭಾರತದ ಒಪ್ಪಿಗೆ ಮತ್ತೀಗ ಚುನಾಯಿತ ಆಡಳಿತಾಧಿಕಾರಿ ಇರಬೇಕೆಂಬ ಒತ್ತಾಯ ಕೆಯೂ ಮನ್ನಿಸಲ್ಪಟ್ಟಿದೆ

ಚುನಾಯಿತ [illegible]

ಈ ಎಲ್ಲ ಕ್ರಮಗಳು ಸರಿಯಲ್ಲವೆಂದು ಭಾರತೀಯರು ಹೇಳುತ್ತಿದ್ದಂತೆಯೇ ಕಾಶ್ಮೀರದ ಪ್ರಶ್ನೆಯು 'ವಿಶಿಷ್ಟ' ಸ್ವರೂಪವನ್ನು ಮುಂದೂ ಮಾಡಿಕೊಂಡು, ಭಾರತ ಸರಕಾರ ಶೇಖ್ ಅಬ್ದುಲ್ಲರ ಬೇಡಿಕೆಗಳಿಗೆ ಸಮ್ಮತಿಸುತ್ತಾ ಬಂದಿದೆ ಬ್ರಿಟಿಷರ ಕಾಲದಲ್ಲಿ ದೇಶೀಯ ಸಂಸ್ಥಾನವಾಗಿದ್ದ ಜಮ್ಮು ಕಾಶ್ಮೀರವು ಉಳಿದ ದೇಶೀಯ ಸಂಸ್ಥಾನಗಳಂತೆ ಕ್ರಮಬದ್ಧವಾಗಿ ಭಾರತದೊಡನೆ ಸೇರ್ಪಡೆಯ ಪತ್ರಕ್ಕೆ ಅಂಕಿತ ಹಾಕಿರುವುದರಿಂದ ಅದಕ್ಕೆ "ವಿಶಿಷ್ಟ"ಸ್ಥಾನಮಾನ ಹೇಗೆ ಪ್ರಾಪ್ತವಾಗಿರುವುದೋ ಎಂಬುದನ್ನು ಸಾಮಾನ್ಯಜನ ತಿಳಿಯಲಾರರು [illegible] ತಜ್ಞರೇ ಇದನ್ನು ನಿರ್ಣಯಿಸಬೇಕು ಅದಕ್ಕೆಂದೇ ಲೋಕ ಸಭೆಯಲ್ಲಿ ಒಂದು ನಿಲುವಳಿ ಸೂಚನೆಯನ್ನು ಮಂಡಿಸಿದಾಗ ಅಧ್ಯಕ್ಷ ಮಾವಳಣಕರರು ಈ ಪ್ರಶ್ನೆಯಲ್ಲಿ ಶ್ರೇಷ್ಠ ನ್ಯಾಯಾಲಯವೇ ನಿರ್ಣಯ ಕೊಡಬೇಕೆಂದು ಹೇಳಿ, ಅದನ್ನು ತಳ್ಳಿಹಾಕಿದರು. ಆದರೆ ಶ್ರೇಷ್ಠ ನ್ಯಾಯಾಲಯಕ್ಕೆ ದೂರು ತೆಗೆದು ಕೊಂಡು ಹೋಗುವ ಹಮ್ಮನ್ನು ಯಾರಿಗೂ ಇಲ್ಲವೆಂಬುದು ನಿಶ್ಚಯ ಅಂತೂ ಯುವರಾಜ ಕರಣಸಿಂಗರನ್ನು ರಾಜ್ಯದ ಅಧಿಪತಿ ಎಂದು ಚುನಾಯಿಸಲಾಗಿದೆ ಮತ್ತು [illegible] ದಿನಾಂತ ಇವರು ಅಧಿಕಾರಸ್ವೀಕಾರವನ್ನು ಮಾಡಿದರು ನಮ್ಮ ರಾಷ್ಟ್ರಪತಿಗಳು ಕರಣಸಿಂಗರ ಅಧಿಪತ್ಯಕ್ಕೆ ಸಮ್ಮತಿಯನ್ನು ಕೊಟ್ಟಿರುವರು

ಅಲ್ಪಸಂಖ್ಯಾಕರ

ಪಶ್ಚಿಮ ಬಂಗಾಳಕ್ಕೆ [illegible] ನಿರಾಶ್ರಿತರು ಹಾಗೂ ಪೂರ್ವಬಂಗಾಲದಲ್ಲಿ

[ಆರನೇ ಪುಟ ನೋಡಿರಿ]



"ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್"
ಇವರಲ್ಲಿ ಒಂದು ಸೇವಿಂಗ್ಸ್ ಖಾತೆಯನ್ನು ತೆರೆದು ಅದನ್ನು ಕ್ರಮವಾದ
ಉಳಿತಾಯಗಳಿಂದ ವೃದ್ಧಿಗೊಳಿಸುವುದೇ
ಜೀವನದಲ್ಲಿ ನಿಮ್ಮ ಉನ್ನತಿಗೆ ಹೆದ್ದಾರಿ !
ಸ್ಥಾಪನೆ: 1906
THE CANARA BANKING CORPORATION LIMITED.
ಪ್ರಧಾನ ಕಾರ್ಯಾಲಯ, ಉಡುಪಿ. (ದ ಭಾರತ)

ನವಯುಗ
ಉಡುಪಿ, ಗುರುವಾರ ೩೦-೧೧-'೫೨

ಏಕೆ ಈ ಮೋಹ?

ಮದ್ರಾಸು ಸರಕಾರದ ವಿದ್ಯಾ ಮಂತ್ರಿಗಳಾದ ಡಾ। ಎಂ ವಿ ಕೃಷ್ಣರಾಯರು ಪತ್ರಿಕಾ ಪ್ರತಿನಿಧಿಗಳೊಡನೆ ಮೊನ್ನೆ ಮಾತನಾಡುವಾಗ, ಎಸ್. ಎಸ್. ಎಲ್. ಸಿ. ವಿದ್ಯಾರ್ಥಿಗಳಿಗೆ ಸಿಲೆಕ್ಷನ್ ಪರೀಕ್ಷೆಯನ್ನು ಈ ವರ್ಷದಿಂದ ಮರಳಿ ಪ್ರಾರಂಭಿಸಬೇಕೆಂದು ಸರಕಾರ ಯೋಚಿಸಿದೆ ಎಂಬ ಸಂಗತಿಯನ್ನು ವ್ಯಕ್ತಗೊಳಿಸಿದರು. ಇದರ ಜೊತೆಗೇ ಅವರು ಇನ್ನೂ ಕೆಲವು ಸಂಗತಿಗಳನ್ನು ಹೇಳಿದರು. ಸಿಲೆಕ್ಷನ್ ಪರೀಕ್ಷೆಯು ಕಠಿಣವಿರಕೂಡದು ಹೆಚ್ಚು ವಿದ್ಯಾರ್ಥಿಗಳು ತೇರ್ಗಡೆ ಹೊಂದುವಂತೆ ಅದು ಇರಬೇಕು. ಒಂದು ವೇಳೆ ವಿದ್ಯಾರ್ಥಿಯು ಲೇಖೀ ಪರೀಕ್ಷೆಯಲ್ಲಿ ಅನುತ್ತೀರ್ಣನಾದರೂ ಪ್ರತ್ಯೇಕವಾಗಿ ಮೌಖಿಕ ಪರೀಕ್ಷೆಯನ್ನೇರ್ಪಡಿಸಿ, ವಿದ್ಯಾರ್ಥಿಯ ಯೋಗ್ಯತೆಯನ್ನು ನಿರ್ಣಯಿಸಬೇಕು. ಶಾಲೆಯ ಮುಖ್ಯೋಪಾಧ್ಯಾಯರು ಮೌಖಿಕ ಪರೀಕ್ಷೆಯನ್ನು ನಡೆಸಬಲ್ಲರು ಎಂದು ಮುಂತಾಗಿ ಮಾನ್ಯ ಮಂತ್ರಿಗಳು ಹೇಳಿದ ಮಾತುಗಳು ಯಾರನ್ನೂ ಚಕಿತಗೊಳಿಸಬಹುದು ಈ ಸೂಚನೆಗಳ ಮೂಲ ಉದ್ದೇಶ ಮತ್ತು ಅದರ ವಿವರಗಳು ಇನ್ನೂ ಸ್ಪಷ್ಟವಾಗಿ ತಿಳಿದು ಬಂದಿಲ್ಲವಾದುದರಿಂದ ಇದರ ಯೋಗ್ಯತೆಯನ್ನು ನಿರ್ಣಯಿಸುವಲ್ಲಿ ನಾವು ಸ್ವಲ್ಪ ಸಮಯ ಕಾದು ನೋಡಬೇಕಾದೀತು. ಆದರೂ ತಿಳಿದು ಬಂದಷ್ಟು ಸಂಗತಿಯ ಮೇಲಿಂದ ಹೇಳುವುದಾದರೆ--ಈ ಸೂಚನೆಯನ್ನು ಗ್ರಾಹ್ಯವೆಂದು ಪರಿಗಣಿಸುವುದು ಸಾಧ್ಯವಿಲ್ಲ. ಎಸ್ ಎಸ್. ಎಲ್. ಸಿ ವಿದ್ಯಾರ್ಥಿಗಳಿಗೆ ಸಿಲೆಕ್ಷನ್ ಪರೀಕ್ಷೆಯು ಇರಬೇಕೆಂದು ಸರಕಾರ ಮಾಡಿದ ಸೂಚನೆಯು ಹಿಂದಿನ ಸರಕಾರ ಮಾಡಿದ ತಪ್ಪಿನ ತಿದ್ದುಪಡಿಯಾಗಿದೆ ಆದರೆ ಆ ರೀತಿ ತಪ್ಪನ್ನು ಸರಿಪಡಿಸುವಾಗ–ಮರಳಿ ತಪ್ಪು ಹೆಜ್ಜೆಯನ್ನಿಡುವುದು ಮಾತ್ರ ಶೋಭೆ ತರುವಂತಿಲ್ಲ. ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ಉತ್ತೀರ್ಣ ಹೊಂದುವಂತೆ ಪರೀಕ್ಷೆಗಳನ್ನು ಸುಲಭ ಮಾಡಬೇಕೆನ್ನುವುದು ನಿಜಕ್ಕೂ ಮೋಜಿನ ಸಂಗತಿ- ಶಿಕ್ಷಣದ ಉದ್ದೇಶವೇ ಇಲ್ಲಿ ಬುಡ ಮೇಲಾಗುತ್ತದೆ. ನೌಕರಿ ಪಡೆಯುವ ಏಕಮೇವ ಉದ್ದೇಶವಿಟ್ಟುಕೊಂಡು ವಿದ್ಯಾರ್ಥಿಗಳು ಶಾಲೆಗಳಲ್ಲಿ ಕಲಿಯುತ್ತಾರೆ ಎಂದು ತೀರಾ ಕೆಳಮಟ್ಟದ ಸಮಾಧಾನವನ್ನು ಇಟ್ಟುಕೊಂಡರೂ ಈ ಉದ್ದೇಶ ಪೂರ್ತಿಗೆ ಸುಲಭ ಪರೀಕ್ಷೆಗಳು ನೆರವು ನೀಡಲಾರವು. ನೌಕರಿ ದೊರೆಯ ಬೇಕಾದಲ್ಲಿ ಹಾಗೆ ಕೆಲಸಕೊಡುವವರು ಕಾರ್ಯಾರ್ಥಿಯ ಯೋಗ್ಯತೆಯನ್ನು ಪರೀಕ್ಷಿಸಿಯೇ ತೀರುವರು ಸುಲಭ ಪರೀಕ್ಷೆಯ ಜಾದೂವಿನಿಂದ, ಸಾಮಾನ್ಯ ಯೋಗ್ಯತೆಯ ವಿದ್ಯಾರ್ಥಿಗಳೂ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬಹುದು. ಆದರೆ-ಕಾರ್ಯಾರ್ಥಿಯಾಗಿ ತೆರಳಿದಾಗ ಅವರಿಗೆ ನಿರಾಶೆಯುಂಟಾಗುವ ಸಂಭವ ತಪ್ಪದು: ವಿಶ್ವವಿದ್ಯಾಲಯಗಳನ್ನು ಸೇರಬಯಸುವ ವಿದ್ಯಾರ್ಥಿಗಳ ಮಟ್ಟಿಗೂ ಸುಲಭ ಪರೀಕ್ಷೆಗಳೇನು ಸಹಾಯಮಾಡುವಂತಿಲ್ಲ. ವಿಶ್ವವಿದ್ಯಾಲಯದವರು ಶಿಕ್ಷಣದ ಮಟ್ಟವನ್ನು ಕಾಯ್ದುಕೊಳ್ಳುವಲ್ಲಿ ಸದಾ ಸತರ್ಕರಿರುವುದು ಕಂಡುಬರುತ್ತದೆ. ಅಂಥದರಲ್ಲಿ ಯೋಗ್ಯತೆ ಸಾಲದ ವಿದ್ಯಾರ್ಥಿಗಳು ಕಾಲೇಜುಗಳಲ್ಲಿ ತುಂಬಿದರೆ–ಆಗ ಪರಿಸ್ಥಿತಿ ಎಷ್ಟುಮಾತ್ರಕ್ಕೂ ಪ್ರೋತ್ಸಾಹಕರವಾಗಿ ನಿಲ್ಲದು. ಹೀಗೆ ಸಾಮಾನ್ಯ ಉದ್ದೇಶಗಳೂ ಪೂರೈಸುವುದಿಲ್ಲವೆಂದ ಮೇಲೆ- ಶಿಕ್ಷಣದ ಘನವಾದ ಆದರ್ಶ ಸಾಧನೆಯಾಗುವುದು ಕನಸಿನ ಮಾತು. ಶಿಕ್ಷಣ ಪದ್ಧತಿಯಲ್ಲಿ ಬಿಗುವಿರಬೇಕೆಂದೇನು ಇದರ ಅಭಿಪ್ರಾಯವಲ್ಲ. ಆದರೆ ಸುಲಭತರವಾದ ಪರೀಕ್ಷೆಗಳನ್ನು ನಡೆಸಬೇಕೆಂಬುದರಿಂದ ವಿದ್ಯಾರ್ಥಿಗಳ ಕಾರ್ಯಕ್ಷಮತೆ ಕುಗ್ಗುತ್ತದೆ: ಆಲಸ್ಯ ಹೆಚ್ಚುತ್ತದೆ ಬುದ್ಧಿ ಸೂಕ್ಷ್ಮತೆ ತಗ್ಗುವುದರ ಜೊತೆಗೆ ಸೋಮಾರಿತನಬೆಳೆಯುತ್ತದೆ ನಾಳಿನ ಜನಾಂಗ ಕಾರ್ಯ ಪಟುತ್ವವನ್ನು ಕಳೆದುಕೊಂಡು ಬದುಕಬೇಕೇದು ನಮ್ಮ ಉದ್ದೇಶವಿರುವುದು ಸರ್ವಥಾ ಸಾಧ್ಯವಿಲ್ಲ ಎಂದ ಮೇಲೆ ಸುಲಭ ಪರೀಕ್ಷೆಯ ಜಾದೂವಿನಿಂದ ಎಸ್ಸೆಸ್ಸೆಲ್ಸಿ ಪಾಸು ಮಾಡಿಸುವ ಮೋಹ ನಮಗೇಕೆ? ವಿದ್ಯಾರ್ಥಿಗಳು ಚೆನ್ನಾಗಿ ಶ್ರಮ ವಹಿಸಿ ದುಡಿಯಲಿ- ತಮ್ಮ ಬುದ್ಧಿಯನ್ನು ಜ್ಞಾನಾರ್ಜನೆಗಾಗಿ ವಿನಿಯೋಗಿಸಲಿ. ಅಷ್ಟು ಯೋಗ್ಯತೆಯಿಲ್ಲದ ಜನಕ್ಕೆ ಪರೀಕ್ಷೆ ಪಾಸಾದರೂ ಲಾಭ ದೊರೆಯಲಾರದು. ಹೆಚ್ಚು ಜನ ವಿದ್ಯಾವಂತರಾಗಬೇಕು ಎಂದು ಹೇಳಿದಷ್ಟಕ್ಕೆ, ಅವರು ಎಸ್ಸೆಸ್ಸೆಲ್ಸಿ ಪಾಸು ಮಾಡಿಯೇ ತೀರಬೇಕೆಂದು ಹೇಳಿದಂತಾಗಲಿಲ್ಲ. ಹಿಂದಿನ ಎಂಟನೇ ತರಗತಿಯ ಯೋಗ್ಯತೆ ಇಂದಿನ ಎಸ್ಸೆಸ್ಸೆಲ್ಸಿಗೆ ಉಳಿದಿಲ್ಲವೆಂಬುದು ಜನ ಜನಿತವಾದ ಸಂಗತಿ ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಇಂಗ್ಲೀಷನ್ನು ಕಡೆಗಣಿಸುತ್ತಾ ಬಂದ ಕ್ಷಣದಿಂದ--ನಮ್ಮ ಅನಿಶ್ಚಿತ ಧೋರಣೆ ಮೊದಲ್ಗೊಂಡಿತು. ಅಂದಿನಿಂದ ಇಂದಿನವರೆಗೂ ಶಿಕ್ಷಣ ಪದ್ಧತಿಯಲ್ಲಿ ಒಂದು ಸಮಂಜಸವಾದ ನಿಲುಮೆ ಕಂಡು ಬರುವುದಿಲ್ಲ ಸುಲಭ ಪರೀಕ್ಷೆಯ ಸಲಹೆಯಾದರೂ-ಈ ತೂಗುಯ್ಯಾಲೆಯ ಪರಿಸ್ಥಿತಿಯನ್ನೇ ನಿರ್ದೇಶಿಸುತ್ತದೆ. ಇನ್ನು ಮುಖ್ಯೋಪಾಧ್ಯಾಯರು ಮೌಖಿಕ ಪರೀಕ್ಷೆಯನ್ನು ಏರ್ಪಡಿಸಿ. ಹಿಂದುಳಿದ ವಿದ್ಯಾರ್ಥಿಗಳ ಯೋಗ್ಯತೆ ಪರೀಕ್ಷಿಸ ಬೇಕೆನ್ನುವ ವಾದವೂ ಹುರುಳಿಲ್ಲದುದು ಮುಖ್ಯೋಪಾಧ್ಯಾಯರ ಪರೀಕ್ಷೆಯೇ ಸಾಲುವುದಾದರೆ, ಅದರಲ್ಲೂ ಮೌಖಿಕ ಪರೀಕ್ಷೆಯೇ ಪ್ರಮಾಣವಾಗಬಲ್ಲುದಾದರೆ– ಈಗಿರುವ ಹತ್ತು ಹಲವು ಸರಕಾರೀ ಪರೀಕ್ಷೆಗಳೇಕೆ ಬೇಕು? ಸರಕಾರದ ಆದಾಯಕ್ಕೆ ಇದರಿಂದ ಕೆಲಮಟ್ಟಿಗೆ ನೆರವು ದೊರೆತೀತು ಎಂದಷ್ಟೆ ಸಮಾಧಾನ ದೊರೆಯಬಹುದಲ್ಲದೆ ಹೆಚ್ಚಾಗಿ ಇಲ್ಲ ಒಂದು ರೀತಿಯಲ್ಲಿ ನೋಡಿದರೆ, ಮುಖ್ಯೋಪಾಧ್ಯಾಯರು ಹಾಗೂ ಅವರ ಸಹೋದ್ಯೋಗಿಗಳಿಗೆನೇ ವಿದ್ಯಾರ್ಥಿಯ ಯೋಗ್ಯತೆಯು ತಿಳಿದು ಬರುತ್ತದೆ. ಅದನ್ನು ಮನ್ನಿಸುವುದಕ್ಕೆ ಇರುವ ಒಂದೇ ಅಡ್ಡಿಯೆಂದರೆ- ಅವರು ಹಂಗಿಗೆ ದಾಕ್ಷಿಣ್ಯಕ್ಕೆ ಬಿದ್ದು ಯೋಗ್ಯತೆ ಇಲ್ಲದವರನ್ನು ತೇರ್ಗಡೆ ಮಾಡಿಯಾರು ಎಂಬ ಭಯ ಮಾತ್ರ ಹೀಗೆಲ್ಲ ಪರಿಸ್ಥಿತಿ ಅತ್ತಿಂದಿತ್ತ ಇತ್ತಿಂದತ್ತ ಜೊಯ್ಯಾಡುತ್ತಿದೆ ಕೇಂದ್ರ ಸರಕಾರ ನೇಮಿಸಿರುವ ಮಾಧ್ಯಮಿಕ ಶಿಕ್ಷಣದ ಆಯೋಗ ಈ ವಿಷಯದಲ್ಲಿ ಯೋಗ್ಯ ಮಾರ್ಗದರ್ಶನ ಮಾಡಬೇಕೆಂದು ನಮ್ಮ ಆಶೆ

ಕೊರಿಯಾ ಶಾಂತಿ ದೂರದ ಮಾತ

ವರ್ಣದ್ವೇಷದಿಂದ ಕ್ಷೇಮವಿಲ್ಲ

ಕೊರಿಯಾ ಯುದ್ಧ ಸಂಬಂಧದಲ್ಲಿ ಭಾರತವು ನಡೆಸುತ್ತಿರುವ ಪ್ರಯತ್ನಗಳನ್ನು ವಿಶ್ವದ ರಾಷ್ಟ್ರಗಳೆಲ್ಲ ಆಸ್ಥೆಯಿಂದ ನಿರೀಕ್ಷಿಸುತಿದ್ದುವು ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯಾಧಿವೇಶನದಲ್ಲಿ ಕೊರಿಯಾದ ಕದನದ ಬಗ್ಗೆ ಪ್ರಾಶಸ್ತ್ಯವನ್ನು ಕೊಡಲಾಗಿದ್ದು ಈಗಾಗಲೇ ಯುದ್ಧ ವಿರಾಮವನ್ನು ಸಾಧಿಸುವ ಬಗ್ಗೆ ಅನೇಕ ಸಲಹೆಗಳೂ, ಸೂಚನೆಗಳೂ ಸದಸ್ಯ ರಾಷ್ಟ್ರಗಳಿಂದ ಮಂಡಿಸಲ್ಪಟ್ಟಿವೆ. ಮುಖ್ಯವಾಗಿ ಅಮೇರಿಕೆಯು ತನ್ನ ಬೆಂಬಲಿಗ ರಾಷ್ಟ್ರಗಳೊಡನೆ ಮಂಡಿಸಿದ ಸೂಚನೆಯೊಂದಿದೆ, ಸೋವಿಯೆಟ ಪ್ರತಿನಿಧಿ ಮಂಡಲದಿಂದ ಬೇರೆಯೇ ಇನ್ನೊಂದು ಸೂಚನೆ ಬಂದಿದೆ. ಇದರ ಜೊತೆಗೆ ಇಂಡೋನೇಶಿಯಾವು ಕೂಡ ಕದನವನ್ನು ನಿಲ್ಲಿಸುವುದಕ್ಕಾಗಿ ಒಂದು ಯೋಜನೆ ಸಿದ್ಧಪಡಿಸಿದೆ. ಮೊನ್ನೆತಾನೆ ಇಸ್ರೇಲವು ಹತ್ತು ಅಂಶಗಳ ಒಂದು ಯೋಜನೆಯನ್ನು ಮಂಡಿಸಿದೆ. ಹೀಗೆ ಯುದ್ಧ ನಿಲ್ಲಿಸಬೇಕೆಂಬ ಆತುರವನ್ನು ಇವೆಲ್ಲ ರಾಷ್ಟ್ರಗಳೂ ತೋರಿಸುತ್ತಿವೆ ಆದರೆ ಮುಖ್ಯವಾದ ಸಮಸ್ಯೆ--ಯುದ್ಧ ನಿಲ್ಲಿಸುವ ಕೆಲಸಕ್ಕಿಂತಲೂ ಮಿಗಿಲಾದುದೆಂದರೆ, ಮಹಾರಾಷ್ಟ್ರಗಳ ಅಂತರ್ಯವೇನೆಂಬುದೇ ಆಗಿದೆ. ಅಮೇರಿಕ ಹಾಗೂ ರಶಿಯಾಗಳು ಪರಸ್ಪರ ವಿರುದ್ಧವಾದ ದಿಕ್ಕಿನಲ್ಲಿ ಹೆಜ್ಜೆಯಿಡುತ್ತಿರುವಷ್ಟು ಕಾಲ–ಯಾವ ಶಾಂತಿ, ಸಂಧಾನದ ಮಾತೂ ಪ್ರಯೋಜನಕ್ಕೆ ಬರುವಂತಿಲ್ಲ

ಪೂರ್ವ—ಪಶ್ಚಿಮ

ಮಹತ್ವದ ಪ್ರಶ್ನೆಗಳಲ್ಲಿ ಈ ಎರಡು ರಾಷ್ಟ್ರಗಳೊಡನೆ ಮತಭೇದ ಏಳುತ್ತಲೇ ಇದೆ: ಮಾತ್ರವಲ್ಲ ವಾತಾವರಣವು ಗಂಭೀರ ಆರೋಪ ಪ್ರತ್ಯಾರೋಪಗಳಿಂದ ಕಲುಷಿತಗೊಂಡು, ಸೌಮ್ಯ ಸ್ವರೂ
ಮಾತು ಕತೆಗಳು ನಡೆಯು
ದುಸ್ತರವಾಗುತ್ತದೆ. ಕಮ್ಯೂನಿ
ವಿರುದ್ಧ ಪ್ರಜಾಪ್ರಭುತ್ವವ
ರಕ್ಷಿಸುವುದು ತನ್ನ ಆದ್ಯ ಕ
ಕರ್ತವ್ಯವೆಂದು ಬಗೆಯುತ್ತಾ ಅ
ಕಾ ಪ್ರತಿಯೊಂದೂ ಕ್ಷೇತ್ರದಲ್ಲಿ ರ
ದ ಮುಖವನ್ನು ಗುದ್ದಿ ಮಣಿಸ
ದಿದೆ. ರಶಿಯಾವಂತೂ ಅಮೇರಿಕ
ಹೀನಾಯ ಶಬ್ದಗಳಲ್ಲಿ ಬೈದು ಭ
ವುದರಲ್ಲಿ ಯಾವ ಸಂಕೋಚವ
ತೋರಿಸಿಲ್ಲ. ಹೀಗೆ ವಿಶ್ವಶಾಂತಿಯ
ಸ್ಥಾಪನೆಯಾಗಬೇಕೆಂದು ತಾವೆ
ರ್ಮಾಣ ಮಾಡಿದ ಸಂಯುಕ್ತ
ಸಂಘವನ್ನು ಮಾತಿನ ಮಲ್ಲರ ರಂ
ಮಿಯಾಗಿ ಪರಿವರ್ತಿಸಿದ ಅಪಕೀರ್ತಿ
ರಡೂ ರಾಷ್ಟ್ರಗಳಿಗೆ ತಟ್ಟುತ್ತದೆ.
ಯಾ ಕದನದ ಸಂಗತಿಯಲ್ಲಾದರು
ಲಹರಣ ಮತ್ತು ಒಬ್ಬರು ಇನ್ನೊ
ನ್ನು ಹೊಂಚು ಹಾಕಿ ಬಲೆ ಬೀಸಬೇ
ಪ್ರವೃತ್ತಿಯೇ ಎದ್ದು ಕಾಣುತ್ತಿದೆ.
ರತು, ನಿಜವಾಗಿಯೂ ಕೊರಿಯ
ಯುದ್ಧ ನಿಂತು ಲೋಕ ಕ್ಷೇಮ
ಎಂದು ಇವು ಎಣಿಸುವುದಿಲ್ಲ,

ವಿಳಂಬ ಧೋರಣೆ

ಅಮೇರಿಕದ ಮಟ್ಟಿಗೆ ಹೇಳು
ದರೆ, ಅಧ್ಯಕ್ಷ ಚುನಾವಣೆಯಲ್ಲಿ
ಕನರು ವಿಜಯ ಹೊಂದಿರುವುದರಿಂ
ಗಿನ ಸರಕಾರದ ಮರ್ಜಿಯಲ್ಲಿ ವ್ಯ
ಮೂಡಿದೆ. ಇನ್ನುಳಿದಿರುವ ಎರಡು
ಳ ಕಾಲಾವಧಿಯಲ್ಲಿ ಯಾವ ಮಹ
ರ್ಣಯಕ್ಕೂ ತಮ್ಮ ಸರಕಾರ ಬರ
ಡೆಮೊಕ್ರಾಟರಿಗೆ ಇಷ್ಟವಿಲ್ಲ. ಬೆ
ಯೋ ಬೇಡಾಗಿಯೋ ಸುಮ್ಮನೆ ಗ
ತರವನ್ನು ಮೈಮೇಲೆ ತಂದುಕೊ
ಅವರು ಸಿದ್ಧರಿಲ್ಲ. ಕೊರಿಯಾದಂ
ಕ್ಷೆಯಲ್ಲಂತೂ ಐಸೆನ್ ಹಾವರ
ವು ಸ್ವತಃ ಯುದ್ಧ ಕ್ಷೇತ್ರವನ್ನು
ರ್ಶಿಸಿ, ಕದನ ನಿಲ್ಲಿಸಲು ಶ್ರಮಿಸುವೆ
ವಚನಕೊಟ್ಟು, ಚುನಾವಣೆಗೆದ್ದು
ಡೆಮೊಕ್ರಾಟ ಸರಕಾರವು ಈ
ಸಾಧ್ಯವಿದ್ದಷ್ಟೂ ವಿಳಂಬಧೋ
ನ್ನು ಅನುಸರಿಸುವುದೇ ಬುದ್ಧಿವಂತ
ದು ತಿಳಿದಿದೆ. ಒಂದೊಮ್ಮೆಗೆ ಕೊ
ಕದನ ನಿಂತಿತೆಂದರೆ (ಅದು ಇನ್ನೂ
ಟ ದೂರ ಭವಿಷ್ಯದ ಮಾತು) ಆ
ಲೇ ಚೀನಾ ಪ್ರಾತಿನಿಧ್ಯದ ಪ್ರಶ್ನೆ, ಮ
ತಾದ ಇನ್ನೂ ತೊಡಕಿನ ಸಮಸ್ಯೆಗಳ
ರಿಹಾರಕ್ಕೆ ಮನಸ್ಸುಗೊಡಬೇಕಾದೀ
ಆದುದರಿಂದ ಕೊರಿಯಾ ಕದನವ
ಮುಂದುವರಿಸುವುದೇ ಈಗಿನ ಮಟ್ಟಿ
ಕ್ಷೇಮಕಾರಿ ಎಂದು ಅನೇ
ಯೋಚಿಸಿದೆ.

ಆತಂಕವೇನು?

ಪಾಕಿಸ್ತಾನದ ಪ್ರತಿನಿಧಿ ಜಾಫರು
ಖಾನರು ಏನೊಂದೂ ಶರ್ತವಿಲ್ಲದೆ ಯ
ದ್ಧ ಮುಕ್ತಾಯಗೊಳಿಸಬೇಕೆಂದೂ
ಬಳಿಕ ಈಗಿನ ತೊಡಕಾಗಿರುವ ಯು
ಕೈದಿಗಳ ಪ್ರಶ್ನೆಯ ಪರಿಹಾರಕ್ಕೆ ಪ
ಸ್ಸುಕೊಡಬೇಕೆಂದೂ ಮಾಡಿದ ಸೂಚ
ಯನ್ನು ಅಮೇರಿಕ ನೇರಾಗಿ ತಿರಸ್ಕ
ದ್ದು ಇದಕ್ಕೆ ಸಾಕ್ಷಿ. ಸಾಮಾನ್ಯ ಮನು
ನ ಮಟ್ಟಿಗೆ, ಪಾಕಿಸ್ತಾನದ ಈ ಸೂಚ

ಮಾನ್ಯವೆನ್ನಬಹುದು. ಕಮ್ಯೂನಿಸ್ಟರು ಹಾಗೂ ಸಂಯುಕ್ತ ರಾಷ್ಟ್ರಸಂಘದ ಪ್ರತಿನಿಧಿಗಳ ನಡುವೆ ಯುದ್ಧ ಕೈದಿಗಳ ವಿನಿಮಯದ ಪ್ರಶ್ನೆಯೊಂದನ್ನುಳಿದು ಉಳಿದೆಲ್ಲ ಸಂಗತಿಗಳ ಬಗ್ಗೆ ಒಪ್ಪಂದ ಸಾಧಿಸಲ್ಪಟ್ಟಿದೆ ಎಂದು ಪ್ರಕಟಗೊಂಡಿರುವಾಗ-ಯುದ್ಧವಿರಾಮವನ್ನು ಜ್ಯಾರಿಗೆ ಒಡನೆಯೇ ತಂದರೇನು ಹಾನಿ? ಇನ್ನುಮುಂದೆಯಾದರೂ ಯುದ್ಧದ ಹಾವಳಿ ನಡೆಯುವುದು ನಿಂತೀತಲ್ಲವೆ? ಎಂದರೆ-ಅಮೇರಿಕದ ನಿಲುವೆ ಬೇರೆಯೇ ಆಗಿದೆ. ಸದಸ್ಯ ರಾಷ್ಟ್ರಗಳೆಲ್ಲ ಶಾಂತಿಯ ಬಗ್ಗೆ ಕಳವಳವನ್ನು ತೋರಿಸುತ್ತಿವೆ. ಆದರೆ ಹುಲಿಯನ್ನೂ ಗೋವನ್ನೂ ಹೇಗೆ ಜೊತೆಗೂಡಿಸಲು ಬರುವುದೆಂದು ಯಾರೂ ತಿಳಿಯರು ನಮ್ಮ ಪುರಾಣದ ಪುಣ್ಯಕಥೆಗಳಲ್ಲಿ ಹೇಳಿದಂತೆ-ತಪಸ್ವಿಯೊಬ್ಬನ ತಪಃ ಪ್ರಭಾವದಿಂದ ಈ ಕಾರ್ಯ ಸಾಧಿಸಬೇಕೋ ಏನೋ ಎಂತಲೇ ಭಾರತವನ್ನು ಋಷಿ ಮುನಿಗಳ ಸಾಲಿಗೆ ಸೇರಿಸಿ, ಅದರ ಸೂಚನೆಯಾದರೂ ಇಕ್ಕಡೆಯವರ ವೈಮನಸ್ಯವನ್ನು ದೂರೀಕರಿಸಿ, ಸಂಧಾನಕ್ಕೆ ನೆರವು ನೀಡೀತೇ ಎಂದು ಎಲ್ಲರೂ ನಿರೀಕ್ಷಿಸುತ್ತಿದ್ದರು

ಸೂಕ್ಷ್ಮ ಬುದ್ಧಿ

ಯುದ್ಧ ನಿಲ್ಲಿಸುವ ಪ್ರಶ್ನೆಯಲ್ಲಿ ಇನ್ನೊಂದು ಅಂಶವೂ ಇದೆ: ಒಂದು ವೇಳೆ ಅಮೇರಿಕಾ-ರಶಿಯಾಗಳ ಮತಭೇದ ಪರಿಹಾರಗೊಂಡು ಸರ್ವಸಮ್ಮತವಾದ ಸೂಚನೆ ಸ್ವೀಕಾರಗೊಂಡಿತೆನ್ನೋಣ ಆದರೆ ಅದನ್ನು ಕೊರಿಯಾದಲ್ಲಿ ಜ್ಯಾರಿಗೆ ತರುವುದಕ್ಕೆ ಕಮ್ಯೂನಿಸ್ಟರು ಒಪ್ಪುವರೆಂದೇನು ಭರವಸೆ ಇದೆ? ತಮ್ಮ ರಾಷ್ಟ್ರದ ಪ್ರತಿನಿಧಿಗಳಿಗೆ ಸ್ಥಾನವಿಲ್ಲದ ಸಂಯುಕ್ತ ರಾಷ್ಟ್ರ ಸಂಘ ಏನು ನಿರ್ಣಯಕೈಗೊಂಡರೂ ಅದಕ್ಕೆ ಬದ್ಧವಿರಲು ಸಾಧ್ಯವಿಲ್ಲ ಎಂಬುದಾಗಿ ಈಗಾಗಲೇ ಕಮ್ಯೂನಿಸ್ಟರು ಎಚ್ಚರಿಕೆ ಕೊಟ್ಟಿದ್ದಾರೆ ಮಹತ್ವದ ಕಮ್ಯೂನಿಸ್ಟ ರಾಷ್ಟ್ರ ಚೀನಾಕ್ಕೆ ಪ್ರಾತಿನಿಧ್ಯವಿಲ್ಲದಿರುವುದರಿಂದ, ಮತ್ತು ಉತ್ತರ ಕೊರಿಯಾದ ನಿಲುಮೆಯನ್ನು ಅರಿತುಕೊಳ್ಳಲು ಸಂಯುಕ್ತ ರಾಷ್ಟ್ರ ಸಂಘ ಪ್ರಯತ್ನಿಸಿಲ್ಲವಾದುದರಿಂದ—ಅವುಗಳಷ್ಟಕ್ಕೆ ಈ ರಾಷ್ಟ್ರಗಳನ್ನು ಬಿಟ್ಟು ಸ್ವತಂತ್ರವಾಗಿ ಮಾಡಿದ ನಿರ್ಣಯವು ಫಲಕಾರಿಯಾಗುವುದು ಸಂಶಯ. ಅಮೇರಿಕೆಯೇ ಮುಂತಾದ ರಾಷ್ಟ್ರಗಳು ಪ್ರಾಯಶಃ ರಶಿಯಾ ಸಂಯುಕ್ತರಾಷ್ಟ್ರ ಸಂಘದಲ್ಲಿವೆ ಎಂದ ಮೇಲೆ ಪ್ರತ್ಯೇಕವಾಗಿ ಚೀನಾ ಮುಂತಾದವುಗಳಿಗೆ ಪ್ರಾತಿನಿಧ್ಯ ಕೊಡುವುದನವಶ್ಯ: ರಶಿಯಾದ ಅಭಿಪ್ರಾಯವೇ ಚೈನಾದ ಮನಸ್ಸೂ ಎಂದು ಎಣಿಸಿದ್ದವು ಆದರೆ ಈ ಮಟ್ಟಿಗೆ ಭಾರತ ಸೂಕ್ಷ್ಮ ಬುದ್ಧಿಯನ್ನು ತೋರಿಸಿದೆ: ಚೈನಾದ ಸರಕಾರವು ರಶಿಯಾದ ಕೈಗೊಂಬೆಯಾಗಿರದೆ, ತನ್ನ ಧೋರಣೆಯನ್ನು ಸ್ವತಂತ್ರವಾಗಿ ರೂಪಿಸುತ್ತಿದೆ ಎಂದು ಭಾರತ ತಿಳಿದುಕೊಂಡಿದೆ

ತಿರಸ್ಕಾರ ಯೋಗ್ಯವೇ?

ಆದುದರಿಂದ ತನ್ನ ಶಾಂತಿ ಸಂಧಾನದ ಪ್ರಯತ್ನಗಳನ್ನು ಬಹಿರಂಗ ಗೊಳಿಸುವುದಕ್ಕೆ ಮುಂಚೆ, ಭಾರತ ಪೇಕಿಂಗ ಸರಕಾರದ ಅಭಿಪ್ರಾಯ ಕೇಳಿ ತಿಳಿದುಕೊಂಡಿದೆ ಎಂದು ಎಲ್ಲ ರಾಷ್ಟ್ರಗಳೂ ನಂಬಿವೆ ಈ ಮುಂಜಾಗ್ರತೆಯನ್ನು ಭಾರತ ತೆಗೆದುಕೊಂಡಿರುವುದು .ಪ್ರಶಂಸನೀಯವಾದರೂ ಆದರ ಪ್ರಯತ್ನ ಮಾತ್ರ ಯಶಸ್ಸು ಹೊಂದುವ ನಿರೀಕ್ಷೆಯಿಲ್ಲ ಈಗ ತಾನೆ ಪ್ರಕಟಗೊಳಿಸಿರುವ ಭಾರತದ ಸೂಚನೆಯನ್ನು ಬ್ರಿಟನು ಸ್ವಾಗತಿಸಿದರೂ ಅಮೇರಿಕ "ಈಗಿನ ಸ್ವರೂಪದಲ್ಲಿ" ಈ ಸೂಚನೆಯನ್ನು ಒಪ್ಪಲು ಸಿದ್ಧವಿಲ್ಲ ಎಂದು ಸಾರಿದೆ. ಎಂದಮೇಲೆ ಭಾರತದ ಪ್ರಯತ್ನ ನೀರ ಮೇಲಿನ ಹೋಮ, ಎಂದೇ ಹೇಳಬಹುದು ರಶಿಯಾ ಹಾಗೂ ಅಮೇರಿಕಾ ಎರಡೂ ರಾಷ್ಟ್ರಗಳ ಸೂಚನೆಯ ಉತ್ತಮಾಂಶಗಳನ್ನೊಳಗೊಂಡಿರುವ ಭಾರತದ ಸೂಚನೆಯು ಇಕ್ಕಡೆಯವರಿಂದಲೂ ತಿರಸ್ಕರಿಸಲ್ಪಡುವುದು ನಿಶ್ಚಯ ತಮ್ಮ ಸ್ವಾರ್ಥಸಾಧನೆಗಾಗಿ ಉತ್ತಮಾದರ್ಶದ ಕವಚದಲ್ಲಿ ದುಷ್ಟ ಬೀಜಗಳನ್ನು ಮುಚ್ಚಿದ ಸೂಚನೆಗಳನ್ನು ಈ ರಾಷ್ಟ್ರಗಳು ಮಾಡುತ್ತವೆ ಮತ್ತು ಆ ದುಷ್ಟ ಬೀಜಕ್ಕೆ ಸ್ಥಾನವಿಲ್ಲದ ಯಾವ ಸಲಹೆ-ಸೂಚನೆಯನ್ನು ಮಾನ್ಯ ಮಾಡಲೂ ಅವು ಸಿದ್ಧವಿಲ್ಲ

ಭಾರತದ ಸೂಚನೆ

ಭಾರತದ ಸೂಚನೆಯನ್ನು ಪೃಥಕ್ಕರಿಸಿದರೆ, ಬಲಾತ್ಕಾರದಿಂದ ಯುದ್ಧ ಕೈದಿಗಳನ್ನು ವಿನಿಮಯಮಾಡುವುದು ಸರಿಯಲ್ಲವೆಂದು ವ್ಯಕ್ತವಾಗುತ್ತದೆ. ತಮ್ಮ ಸ್ವಂತ ರಾಷ್ಟ್ರಕ್ಕೆ ಹಿಂದಿರುಗಬಯಸುವ ಕೈದಿಗಳು ಹಾಗೆ ಮಾಡಬೇಕು ಹಾಗೆ ಮರಳಲು ಇಷ್ಟವಿಲ್ಲದವರ ಮೇಲೆ ಬಲಪ್ರಯೋಗ ಮಾಡಬಾರದು ಒಂದು ನಿಷ್ಪಕ್ಷಪಾತವಾದ ಸಮಿತಿಯನ್ನು ಸಂಯುಕ್ತ ರಾಷ್ಟ್ರಸಂಘ ನೇಮಿಸಿ, ಅದರ ಅಧಿಕಾರಕ್ಕೆ ಈ ಯುದ್ಧ ಕೈದಿಗಳ ವಿನಿಮಯ ಕಾರ್ಯ ಸುಗಮವಾಗುವ ಉಪಾಯ ಕಂಡುಹಿಡಿಯುವುದನ್ನು ಬಿಟ್ಟುಗೊಡಬೇಕು ಈ ಸೂಚನೆಯು ! ಇನ್ನೂ ಹಿನ್ನೆಲೆಯಲ್ಲಿರುವ-ಆದರೆ ಪ್ರಧಾನವಾದ ಚೈತನ್ಯಪೂರ್ಣ ರಾಷ್ಟ್ರ ಚೀನಾಕ್ಕೆ-ಎಷ್ಟರಮಟ್ಟಿಗೆ ಒಪ್ಪಿಗೆಯಾದೀತೆಂಬುದೂ ತಿಳಿದುಬಂದಿಲ್ಲ ಏನೇ ಇರಲಿ ಕೊರಿಯಾದ ಯುದ್ಧ ಮುಕ್ತಾಯದ ಮಾತು ಇನ್ನು ಕೆಲವು ತಿಂಗಳುಗಳ ಮಟ್ಟಿಗಾದರೂ ಹಿಂದೆ ಸರಿದಿದೆ ಎಂಬುದು ನಿಶ್ಚಿತ ದ್ವಿತೀಯ ಮಹಾ ಯುದ್ಧವನ್ನು ನಿಲ್ಲಿಸಲು ಅಣುಬಾಂಬು ಪ್ರಯೋಗದ ಅಗತ್ಯ ಬಿದ್ದಂತೆ, ಕೊರಿಯಾ ಕದನ ನಿಲ್ಲಿಸಲು ಅಮೇರಿಕ ಹೈಡ್ರೋಜನ್ ಬಾಂಬನ್ನು ಉಪಯೋಗಿಸುವಂತಾಗಬಹುದೋ ಯಾರಿಗೆ ಗೊತ್ತು? ಶಾಂತ ಸಾಗರದ ಒಂದು ದ್ವೀಪದಲ್ಲಿ ಅತ್ಯಂತ ಗೌಪ್ಯವಾಗಿ ಈ ಬಗ್ಗೆ ಪ್ರಯೋಗಗಳನ್ನು ನಡೆಸಲಾಯಿತೆಂದೂ, ಅವು ಯಶಸ್ವಿಯಾಗಿವೆಯಾಗಿಯೂ ಬಂದ ಸುದ್ದಿಯಿಂದ ಹೀಗೆ ವಾದಿಸಲೇಕಾಗಿದೆ

ಭಾರತೀಯರ ಪ್ರಶ್ನೆ

ದಕ್ಷಿಣ ಆಫ್ರಿಕೆಯಲ್ಲಿ ಭಾರತೀಯರ ಸ್ಥಿತಿಗತಿಗಳನ್ನು ಪರಿಶೀಲಿಸಲು ಒಂದು ಸಮಿತಿಯನ್ನು ನೇಮಿಸಬೇಕೆಂಬ ಗೊತ್ತುವಳಿಯು ಬಹುಮತದಿಂದ ಸ್ವೀಕಾರಗೊಂಡಿದೆ ಈ ಸದ್ಭಾವ ಸಮಿತಿಯು ಭಾರತ, ಪಾಕಿಸ್ತಾನ ಹಾಗೂ ದಕ್ಷಿಣ ಆಫ್ರಿಕೆಗಳ ನಡುವೆ ನಡೆಯುತ್ತಿರುವ ಮಾತುಕತೆಗಳು ಹೇಗೆ ಯಶಸ್ಸು ಹೊಂದಬಹುದೆಂಬ ಬಗ್ಗೆ ಸಲಹೆ ನೀಡಿ ನೆರವಾಗುವುದು. ದಕ್ಷಿಣ ಆಫ್ರಿಕೆಯ ಪ್ರತಿನಿಧಿ ಇದನ್ನು ವಿರೋಧಿಸಿದ್ದು ಅನಿರೀಕ್ಷಿತವಲ್ಲ. ಹಾಗೆಯೇ ವರ್ಣಭೇದ ನೀತಿಯನ್ನು ದಕ್ಷಿಣ ಆಫ್ರಿಕೆಯು ಅನುಸರಿಸುತ್ತಿರುವುದು ಸಂಯುಕ್ತ ರಾಷ್ಟ್ರ ಸಂಘದ ತಾಮ್ರ ಪಟಕ್ಕೆ ವಿರುದ್ಧವೆಂದೂ, ಇದರಿಂದ ಶಾಂತಿಗೆ ಗಂಡಾಂತರವಿದೆಯೆಂದೂ ಇನ್ನೊಂದು ಸೂಚನೆಯನ್ನು ಭಾರತಾದಿಯಾಗಿ ೧೨ ರಾಷ್ಟ್ರಗಳು ಮಂಡಿಸಿವೆ. ದಕ್ಷಿಣ ಆಫ್ರಿಕೆಯ ಒಳಾಡಳಿತಕ್ಕೆ ಸೇರಿದ ಈ ಪ್ರಶ್ನೆಯನ್ನು ವಿಚಾರಿಸಲಿಕ್ಕೇ ಅಧಿಕಾರವಿಲ್ಲೆಂಬುದಾಗಿ ಆ ರಾಷ್ಟ್ರದ ಪ್ರತಿನಿಧಿ ಇನ್ನೊಂದು ಗೊತ್ತುವಳಿಯನ್ನು ಮಂಡಿಸಿದ್ದಾನೆ ವರ್ಣಭೇದ ನೀತಿ ಈ ಎರಡೂ ಸೂಚನೆಗಳ ಮೇಲೆ ಚರ್ಚೆ ನಡೆಯುತ್ತಿದೆ. ದಕ್ಷಿಣ ಆಫ್ರಿಕೆಯ ವಾದವನ್ನು ಒಪ್ಪುವ ರಾಷ್ಟ್ರಗಳು ಕೆಲವೇ ಇವೆ, ಭಾರತದ ವಾದವನ್ನು ಒಪ್ಪುವ ರಾಷ್ಟ್ರಗಳು ಅನೇಕವಿವೆ. ಆದರೂ ದಕ್ಷಿಣ ಆಫ್ರಿಕೆಯ ವರ್ಣಭೇದ ನೀತಿ ಅನುಸರಿಸುವುದು ತಪ್ಪು ಎಂದು ಈ ಗೊತ್ತುವಳಿ ಧ್ವನಿಸುತ್ತಿರುವುದು ಅಪಾರ್ಥಕ್ಕೆ ಎಡೆಕೊಡಬಹುದೆಂಬುದರಿಂದ, ಸ್ಕ್ಯಾಂಡಿನೇವಿಯಾ ರಾಷ್ಟ್ರಗಳು ಒಂದು ತಿದ್ದುಪಡಿ ಸೂಚಿಸಿವೆ ಯಾವ ರಾಷ್ಟ್ರವೂ ವರ್ಣಭೇದ ನೀತಿ ಅನುಸರಿಸುವುದು ತಪ್ಪು ಎಂದು ಈ ತಿದ್ದುಪಡಿ ಹೇಳುತ್ತದೆ ನ್ಯಾಯದೃಷ್ಟಿಯಿಂದ ಇದನ್ನು ಒಪ್ಪಿಕೊಳ್ಳಲಡ್ಡಿಯಿಲ್ಲ. ಆದರೆ ಸದ್ಯಕ್ಕೆ ದಕ್ಷಿಣ ಆಫ್ರಿಕ ಮಾತ್ರ ಈ ರೀತಿಯ ಅನರ್ಥಕಾರಿ ನೀತಿಯನ್ನು ಅನುಸರಿಸುತ್ತಿದೆ ಮತ್ತು ನ್ಯಾಯಾಲಯದ ಅಧಿಕಾರವನ್ನು ಮೀರಿ ಸರಕಾರ[illegible] ಬಯಸಿ, ತನ್ನದೇ ಆದ ಕಾಯಿದೆ ಜಾರಿಗೆ [illegible]ತ್ತಿದೆ ಇಂಥದೊಂದು ಪ್ರಯತ್ನವಾದ ಪಾರ್ಲಿಮೆಂಟ ಹೈಕೋರ್ಟಿನ ಸ್ಥಾಪನೆಯು ವಿರುದ್ಧವಾದುದೆಂಬುದಾಗಿ ಅಪೀಲಕೋರ್ಟ ಸಹ ಮೊನ್ನೆ ತೀರ್ಪು ನೀಡಿತು. ಈಗ ಮಲಾನರು ನಿರುಪಾಯರಾಗಿ, ಬರುವ ಎಪ್ರಿಲಿನಲ್ಲಿ ಚುನಾವಣೆ ನಡೆಸಿ, ಅವರಲ್ಲಿ ಮೂರರಲ್ಲಿ ಎರಡಾಂಶದಷ್ಟು ಬಹುಮತ ಪಡೆದು ತನ್ನ ಮನವಿಚ್ಛೆಯಂತೆ ಸರಕಾರ ನಡೆಸುವ ಹವಣಿಕೆಯಲ್ಲಿರುವರು.

ನೌಕರರ ಸಂಬಳದಲ್ಲಿ ಕಡಿತ

ತಿಂಗಳಿಗೆ ರೂ 300ಕ್ಕಿಂತ ಹೆಚ್ಚಿಗೆ ಸಂಬಳ ಪಡೆಯುವ ತಮ್ಮ ಆಡಳಿತಕ್ಕೆ ಒಳಪಟ್ಟಿರುವ ಎಲ್ಲಾ ನೌಕರರ ಸಂಬಳದಲ್ಲಿ ನೇಕಡಾ 10ರಷ್ಟು ಕಡಿತ ಮಾಡುವುದಾಗಿ ಮದರಾಸು ಸರ್ಕಾರ ಪ್ರಕಟಿಸಿದೆ- ಇದು ಇದೇ ದಶಂಬರದಿಂದ 12 ತಿಂಗಳುಗಳ ವರೆಗೆ ಜಾರಿಯಲ್ಲಿರುವುದು.

ಉಡುಪಿ

ಹಿಂದೀ ಪರೀಕ್ಷಾ ಫಲಿತಾಂಶ— ಸ್ಥಳೀಯ ರಾಷ್ಟ್ರ ಭಾಷಾ ಶಿಕ್ಷಣ ಶಿಬಿರದಿಂದ ಪ್ರಥಮಾ, ಮಧ್ಯಮಾ ಮತ್ತು ರಾಷ್ಟ್ರ ಭಾಷಾ ಪರೀಕ್ಷೆಗಳಿಗೆ ಕುಳಿತ 14ಮಂದಿ ಪರೀಕ್ಷಾರ್ಥಿಗಳೂ ಪಾಸಾಗಿರುವರು. ಅಪೈಕಿ 7ಮಂದಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರುವರು.

ಆಫೀಸರ್ಸ್ ಕ್ಲಬ್ ಉದ್ಘಾಟನೆ- ಇತ್ತೀಚಿಗೆ ಉಡುಪಿಯಲ್ಲಿ ಸ್ಥಾಪಿಸಲ್ಪಟ್ಟ, ಉಡುಪಿ ಆಫೀಸರ್ಸ್ ಕ್ಲಬ್ಬಿನ ಉದ್ಘಾಟನೆಯನ್ನು ತಾ 16ರಂದು ಸಂಜೆ ಜಿಲ್ಲಾ ಜಡ್ಜರಾದ ಶ್ರೀ. ಓ. ಟಿ. ರಾಮನ್ ನಾಯರ್ ರವರು ನೆರವೇರಿಸಿದರು. ಸಭಾರಂಭದಲ್ಲಿ [illegible] ಸರ್ಕಲ್ ಕ್ಲಬ್ಬಿನ ಅಧ್ಯಕ್ಷ ಹಾಗೂ ಡಿ. ಮುನ್ಸಿಫ್ ಅಬ್ದುರ್ ರಹೀಂ ಅಹಮದ್ ಅವರು ಅಧಿಕಾರಿಗೆ ಪ್ರತ್ಯೇಕ ಕ್ಲಬ್ಬಿನ ಅವಶ್ಯಕತೆ ಆ ಬಗ್ಗೆ ಸಂಗ್ರಹಿಸಲಾದ ಹಣದ ವಿಚಾರವನ್ನೂ ಪ್ರಸ್ತಾಪಿಸಿ ಸ್ವಾಗತ ಭಾಷಣ ಮಾಡಿದರು. ಅಧ್ಯಕ್ಷರು ತನ್ನ ವಿಚಾರಪೂರಿತ ಭಾಷಣದಲ್ಲಿ ಯೋಗ್ಯ ಸಲಹೆ ಸೂಚನೆಗಳನ್ನಿತ್ತು ಕ್ಲಬ್ಬಿಗೆ ಯಶಸ್ಸನ್ನು ಕೋರಿ ಉದ್ಘಾಟಿಸಿದರು. ಕೊನೆಗೆ ಜತೆಕಾರ್ಯದರ್ಶಿ ಹಾಗೂ ಅಸಿಸ್ಟಂಟ್ ಪಬ್ಲಿಕ್ ಪ್ರೊಸಿಕ್ಯೂಟರ್ ಶ್ರೀ ವಿ. ಕೆ. ಸೆಟ್ಟರು ಧನ್ಯವಾದಗಳನ್ನಿತ್ತರು.

ವಯಸ್ಕರ ಶಿಕ್ಷಣ ಸಪ್ತಾಹದಲ್ಲಿ- ಉಡುಪಿಯ ಗುಂಡಿಬೈಲಿನಲ್ಲಿ ವಯಸ್ಕರ ಶಿಕ್ಷಣ ತರಗತಿಯೊಂದು ತಾ. 11ರಲ್ಲು ಸಂಸ್ಕೃತ ಕಾಲೇಜು ಪ್ರಿನ್ಸಿಪಾಲ್ ಶ್ರೀ ಕೌಲಗಿ ಶೇಷಾಚಾರ್ಯರಿಂದಲೂ ಇನ್ನೊಂದು ಕೇಂದ್ರವು ಕಿನ್ನಿಮೂಲ್ಕಿಯಲ್ಲಿ ಶಾಲಾ ಡಿಪ್ಯುಟಿ ಇನ್ಸಪೆಕ್ಟರ್ ಶ್ರೀ ವೆಂಕಟಪ್ಪಯ್ಯ ಗಡಿಯಾರರ ನೇತೃತ್ವದಲ್ಲೂ ತೆರೆಯಲ್ಪಟ್ಟಿತು. ತಾ.12ರಲ್ಲು ಬೋರ್ಡ್ ಹೈಸ್ಕೂಲ್ ಹಾಲಿನಲ್ಲಿ ವಿದ್ಯಾ ವಸ್ತುಪ್ರದರ್ಶನವೊಂದನ್ನು ಶ್ರೀ ಟಿ. ಎ ಪೈ, ಎಮ್, ಎಲ್, ಎ, ಅವರು ಉದ್ಘಾಟಿಸಿದರು. ಒಂದು ಸಾರ್ವಜನಿಕ ಸಭೆಯೊಂದು ಸ್ಥಳೀಯ ಡಿ. ಮುನ್ಸಿಫ್ ಶ್ರೀ ಅಬ್ದುರ್ ರಹೀಂ ಅಹಮ್ಮದ್ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ನೆಹರೂ ಜಯಂತಿಯು— ಉಡುಪಿಯಲ್ಲಿ ತಾ. 14ರಲ್ಲು ಆಚರಿಸಲ್ಪಟ್ಟಿತು. ಅಂದು ಸಂಜೆ ನೆಹರೂರವರ ಭಾವಚಿತ್ರ ಮೆರವಣಿಗೆಯಾಗಿ ಸಾರ್ವಜನಿಕ ಸಭೆಯು ರಥಬೀದಿಯಲ್ಲಿ ಜರಗಿತು ಪರ್ಯಾಯ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಸ್ವಾಮಿಗಳವರು ನೆಹರೂ ಸರಕಾರದ ಪ್ರಯೋಜನಗಳನ್ನು ಮುಖ್ಯವಾಗಿ ಪ್ರಜಾಪ್ರಭುತ್ವದ ಕಾರ್ಯಾಚರಣೆ, ಜಾತ್ಯತೀತ ಧೋರಣೆ, ವಿದೇಶ ಧೋರಣೆಗಳನ್ನು ಎತ್ತಿ ತೋರಿಸಿ ನೆಹರೂರವರು ಭಾರತದಲ್ಲಿ ಮಾತ್ರವಲ್ಲ-ಅಂತರಾಷ್ಟ್ರೀಯ ಮಹಾ ಪುರುಷನೆಂದೂ ಹೇಳಿ ಅವರಿಗೆ ಚಿರಾಯುರಾರೋಗ್ಯವನ್ನು ಕೋರಿ ಆಶೀರ್ವದಿಸಿದರು. ಅನಂತರ ಶ್ರೀ ಟಿ ಎ ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಶ್ರೀಗಳಾದ ಶ್ರೀಪತಿ ಆಚಾರ್ಯ, [illegible] ಮಾಧವಾಚಾರ್ಯ ಮತ್ತು ಎಲ್. ಕೆ. ಶ್ರೀಪತಿ ಆಚಾರ್ಯರು ನೆಹರು ಸರಕಾರದ ಕುರಿತು ಮಾತನಾಡಿದರು. ಅಧ್ಯಕ್ಷ ಭಾಷಣದೊಂದಿಗೆ ಸಭಾಂತ್ಯ.

ಪ್ರಾಂತಿಕ ಕಾಂಗ್ರೆಸ್ ಕಮಿಟಿ

ಚುನಾವಣೆಯಲ್ಲಿ ಕಟಪಾಡಿ ಸರ್ಕಲಿನಿಂದ ಶ್ರೀ ಕೆ. ಮುದ್ದು ಸುವರ್ಣ, ಪಾಣೆಮಂಗಳೂರು ಸರ್ಕಲಿನಿಂದ ಶ್ರೀ ಎನ್ ಎಸ್. ಕಿಲ್ಲೆ; ಮಂಗಳೂರಿನಿಂದ ಶ್ರೀ ಬೋಳಾರ ಭೋಜರಾವ್, ಮೂಲ್ಕಿಯಿಂದ ಶ್ರೀ ಎಂ ಆರ್ ಹರೀಂದ್ರ ಪೂಂಜ; ಮಂಗಳೂರು ದಕ್ಷಿಣ-ಶ್ರೀ ಕೆ ವರದರಾಯ ಪ್ರಭು ಇವರು ಚುನಾಯಿಸಲ್ಪಟ್ಟಿರುವರು.

"ಆವಾರಕ್ಕೆ ಸರಿಯಾದ ಚಿತ್ರವು ಆವಾರ ಮಾತ್ರವಲ್ಲದೆ ಬೇರೊಂದಿಲ್ಲ"
ಇದು ಅಖಿಲ ಭಾರತದಲ್ಲಿಯೂ ಜನರ ಬಾಯಿಯಿಂದ ಬರುವ ಮಾತು.
ತಾ 22—11—52ರಿಂದ
ಆವಾರಾ
ರಾಜಕಪೂರ್, ನರ್ಗಿಸ್, ಕೆ ಎಸ್ ಸಿಂಗ್, ಕುಕ್ಕು ಮೊದಲಾದವರು
ನಿರೀಕ್ಷಿಸಿರಿ — ವರ್ಣರಂಜಿತ ಚಿತ್ರ ಆನ್
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಮಿಜಾರು— ಎಡಪದವು ಬೋರ್ಡ್ ಶಾಲಾ ವಠಾರದಲ್ಲಿ ತಾ 8ರಿಂದ 12ರ ತನಕ ವಯಸ್ಕರ ಶಿಕ್ಷಣ ಸಪ್ತಾಹವು ಜರಗಿತು. ತಾ 11ರಲ್ಲು ಪುರಮೆರವಣಿಗೆಯಾಯಿತು, ತಾ. 12ರಲ್ಲು ಶ್ರೀ ಸುಬ್ಬಯ್ಯ ಸೆಟ್ಟರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ವಯಸ್ಕರ ಶಿಕ್ಷಣದ ಅವಶ್ಯಕತೆಯ ವಿಷಯದಲ್ಲಿ ಭಾಷಣಗಳಾದುವು.

ಚೊಕ್ಕಾಡಿ—ತಾ. 12ರಲ್ಲು ಬೆಳಗ್ಗೆ ಡಿಸ್ಟ್ರಿಕ್ಟ ಡೈರೆಕ್ಟರ್ ಒಫ್ ರೂರಲ್ ವೆಲ್ ಫೇರ್ ಅಫೀಸರರು ಆನಂದ ಮುಡೂರಿಗೆ ಬಂದು ಅಲ್ಲಿಯ ಬೋರ್ಡ್ ಶಾಲೆಯ ಆಟದ ಸ್ಥಳದ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿದರು.

ಕಾಸರಗೋಡು— ಸುಳ್ಯಪ್ಪಾಡಿ ಖಾಸಗಿ ಹಾ। ಎ। ಶಾಲೆಯಲ್ಲಿ ತಾ 12ರಲ್ಲು ವಯಸ್ಕರ ಶಿಕ್ಷಣ ತರಬೇತಿ ಶಾಲೆಗಳನ್ನು ಪುತ್ತೂರು ಡಿವಿಜನಲ್ ಅಫೀಸರ್ ಶ್ರೀ ಪರಶುರಾಮ ನಾಯ್ಕರು ತೆರೆದರು. ಶ್ರೀ ಎ. ಅಣ್ಣಪ್ಪ ಗೌಡರು ಧನ್ಯವಾದಗಳನ್ನರ್ಪಿಸಿದರು.

ಕುಂದಾಪುರ— ತಾ 9ರಲ್ಲು ಪ್ರಜಾ ಸೋಶಲಿಸ್ಟ್ ಪಾರ್ಟಿಯ ಪ್ರಚಾರಸಭೆಯು ಶ್ರೀ ವಿ. ರಾಮಣ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಗಳಾದ ಕೆ. ಆರ್. ಕಾರಂತ, ವಿ ಶ್ರೀನಿವಾಸ ಸೆಟ್ಟಿ ಮತ್ತು ನಾಗಪ್ಪ ಆಳ್ವರು ಪಾರ್ಟಿಯ ಧ್ಯೇಯಧೋರಣೆಗಳನ್ನು ವಿವರಿಸಿದರು.

ಶಿರ್ವ—ಸ್ಥಳೀಯ ಹಿಂದೂ ಹೈಸ್ಕೂಲಿನಲ್ಲಿ ತಾ 14ರಲ್ಲು ನೆಹರೂ ಜಯಂತಿ ಆಚರಿಸಲ್ಪಟ್ಟಿತು. ಆ ದಿನ ಬೆಳಿಗ್ಗೆ ಡಾ। ಕೆ. ಸದಾನಂದ ಸೆಟ್ಟರು ಧ್ವಜಾರೋಹಣ ಮಾಡಿ ಸಂದರ್ಭೋಚಿತ ಮಾತುಗಳನ್ನಾಡುತ್ತಾ ಪಂಡಿತ ನೆಹರೂರವರಿಗೆ ಭಗವಂತನು ಚಿರಾಯುರಾರೋಗ್ಯವನ್ನೀಯಲೆಂದು ಪ್ರಾರ್ಥಿಸಿದರು

ಸ್ಥಳೀಯ ಪಂಚಾಯತ ಬೋರ್ಡಿನ ಸಾಮಾನ್ಯ ಸಭೆಯು ಈಚೆಗೆ ಶ್ರೀ ಎಸ್. ಅಣ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಿರ್ವ ಕೇಂದ್ರದಲ್ಲಿ ಒಂದು ಮೆಟರ್ನಿಟಿ ಮತ್ತು ಚೈಲ್ಡ್ ವೆಲ್ ಫೇರ್ ಸೆಂಟರನ್ನು ತೆರೆಯುವಂತೆ ದ. ಕ. ಜಿಲ್ಲಾ ಬೋರ್ಡನ್ನು ಕೇಳಿಕೊಳ್ಳುವ ಮತ್ತು ಆ ಬಗ್ಗೆ ರೂಪಾಯಿ 300/ ಸಹಾಯ ಸಹಾಯ ಧನ ನೀಯುವ ನಿರ್ಣಯವಾಯಿತು. ಶಿರ್ವ ಮಂಚಕಲ್ಲಿಗೆ ಇಲೆಕ್ಟ್ರಿಸಿಟಿಯನ್ನು ಒದಗಿಸುವಂತೆ ಸಂಬಂಧಪಟ್ಟವರೊಡನೆ ಪತ್ರವ್ಯವಹಾರ ನಡೆಸುವರೆ ಬೋರ್ಡ್ ಅಧ್ಯಕ್ಷರಿಗೆ ಅಧಿಕಾರವೀಯಲಾಯಿತು. ಶಿರ್ವ ಲೋಕಲ್ ಫಂಡ್ ಆಸ್ಪತ್ರೆ ಎದುರು ಒಂದು ದೀಪ

೫ನೇ ಪುಟದಿಂದ ಮುಂದುವರಿದುದು

ಅಲ್ಪಸಂಖ್ಯಾಕರಿಗೆ ಒದಗುತ್ತಿರುವ ತೊಂದರೆಗಳ ಬಗ್ಗೆ ಲೋಕಸಭೆಯು ಐದು ತಾಸಿಗೂ ಮಿಕ್ಕಿ ಬಿಸಿ ಬಿಸಿಯಾದ ಚರ್ಚೆ ನಡೆಸಿತು ಡಾ। ಶ್ಯಾಮ ಪ್ರಸಾದ ಮುಕರ್ಜಿಯವರು ಈ ಸಂದರ್ಭದಲ್ಲಿ ಮಾಡಿದ ಭಾಷಣ ಪ್ರಭಾವಿಯಾಗಿತ್ತು. ಅಲ್ಪಸಂಖ್ಯಾಕರ ಹಿತರಕ್ಷಣೆಯನ್ನು ಮಾಡುವ ಹೊಣೆಗಾರಿಕೆಯನ್ನು ಸರಕಾರ ಒಪ್ಪುವುದೇ ಇಲ್ಲವೇ ಎಂದವರು ಆಹ್ವಾನವನ್ನೆ ಕೊಟ್ಟರು. ಶಾಂತಿಯಿಂದ ಪ್ರಶ್ನೆ ಬಗೆಹರಿಯುವುದಾದರೆ ಅದು ತುಂಬ ಸಂತೋಷ ಹೀಗಾಗದೆ ಪ್ರಯತ್ನ ನಿಷ್ಫಲವಾಗುವುದಾದರೆ ಹಿಂಸಾ ಪ್ರಯೋಗದಿಂದಲ್ಲಾದರೂ ಪಾಕಿಸ್ತಾನವನ್ನು ಮಣಿಸಬೇಕು ಎಂದರವರು ಇದಕ್ಕೆ ಗಾಂಧೀಜಿಯ ಬೆಂಬಲವಿದೆಯೆಂದೂ ಎತ್ತಿ ತೋರಿಸಿದರು ಆದರೆ ನೆಹರೂ ಭಾವೋದ್ರೇಕಕ್ಕೆ ಎಡೆಕೊಡದೆ ಶಾಂತಚಿತ್ತದಿಂದ ಪ್ರಶ್ನೆಯನ್ನು ವಿಚಾರಿಸಬೇಕೆಂದು ಸಮಾಧಾನ ಹೇಳಿದರು.

ಸ್ತಂಭವನ್ನು ಹಾಕಿಸುವರೆ ಮತ್ತು ಸಂತೆ ಮಾರ್ಕೆಟಿನ ಒಳಗಡೆ ಹೊಸ ಮಾದರಿಯ ಸಾರ್ವಜನಿಕ ಆರೋಗ್ಯಕರ ಸಂಡಾಸನ್ನು ನಿರ್ಮಿಸುವರೆ ಹಣ ಮಂಜೂರು ಮಾಡಲಾಯಿತು

ಬೆಳ್ಳೂರು— ಕಾಸರಗೋಡು ತಾಲೂಕು ಬೆಳ್ಳೂರು ಬೋರ್ಡ್ ಹಾ। ಎ। ಶಾಲೆಯಲ್ಲಿ ಇದೇ ತಾ 10ರಲ್ಲು ವಯಸ್ಕರ ಶಿಕ್ಷಣ ಸಪ್ತಾಹವನ್ನು ಆಚರಿಸಲಾಯಿತು, ಬೆಳಿಗ್ಗೆ ಪ್ರಭಾತಫೇರಿ, ಸಂಜೆ ಸಾರ್ವಜನಿಕ ಸಭೆ, ಶ್ರೀಗಳಾದ ಎಮ್. ವಾಸುದೇವ ಪ್ರಭು, ಪದ್ಮನಾಭ ಶರ್ಮ, ಕುಂಞಣ್ಣ ಸೆಟ್ಟಿ ಮೊದಲಾದವರ ಭಾಷಣಗಳಾದುವು, ಶ್ರೀ ಕೆ. ಲೋಕಪ್ಪ ಪೂಜಾರಿಯವರು ಧನ್ಯವಾದಗಳನ್ನರ್ಪಿಸಿದರು.

ಕಿನ್ನಿಕಂಬಳ— ಸ್ಥಳೀಯ ಶಾಲೆಯಲ್ಲಿ ವಯಸ್ಕರ ಶಿಕ್ಷಣ ಸಪ್ತಾಹವು ತಾ 8ರಿಂದ 12ರ ತನಕ ಆಚರಿಸಲ್ಪಟ್ಟಿತು. ತಾ 10ರಲ್ಲು ಕಿನ್ನಿಕಂಬಳ ಮತ್ತು ಗುರುಕಂಬಳ ಶಾಲಾ ಮಕ್ಕಳ ಮೆರವಣಿಗೆಯೂ ತಾ 12ರಲ್ಲು ಗುರುಪುರದ ಸಂತೆ ಮೈದಾನದಲ್ಲಿ ಭಾಷಣಗಳೇ ಮೊದಲಾದ ಕಾರ್ಯಕ್ರಮಗಳಾದುವು.

ಕುಂಬಳೆ— ಮದ್ರಾಸು ವಿದ್ಯಾ ಇಲಾಖೆಯ ಡೈರೆಕ್ಟರ್ ಶ್ರೀ ಗೋವಿಂದ ರಾಜಲು ನಾಯುಡು, ಅವರ ಡಿವಿಜನಲ್ ಇನ್ಸ್ಪೆಕ್ಟರ್ ಶ್ರೀ ಕೆ. ಪಿ ಬಿ ಮೆನನ್ ಮತ್ತು ಜಿಲ್ಲಾ ವಿದ್ಯಾಧಿಕಾರಿ ಶ್ರೀ ಟಿ. ರಾಘವನ್ ನಾಯರರೊಂದಿಗೆ ತಾ 10ರಲ್ಲು ಮಾಯಿಪಾಡಿ ಬುನಾದಿ ಶಿಕ್ಷಣ ತರಬೇತು ಶಾಲೆಯನ್ನು ಸಂದರ್ಶಿಸಿದರು.

ಯೆಳಜಿತ್— ಇಲ್ಲಿ ತಾ 8ರಲ್ಲು ಯೆಳಜಿತ್ ಮತ್ತು ಗೋಳಿಹೊಳೆ ಗ್ರಾಮಗಳ ಸೌಕರ್ಯಕ್ಕಾಗಿ ಹೊಸ ಬ್ರಾಂಚ್ ಪೋಸ್ಟಾಫೀಸನ್ನು ಉಡುಪಿ ಸಬ್ ಡಿವಿಜನ್ ಇನ್ಸ್ಪೆಕ್ಟರರು ತೆರೆದರು.

ಪಂಜಿನಡ್ಕ— ಕೊಲೆಕಾಡಿ ವಿದ್ಯಾ ಪ್ರಚಾರಿಣೀ ಪಾಠಶಾಲೆಯ ಮೇಲ್ತರಗತಿಯ ವಿದ್ಯಾರ್ಥಿಗಳು ತಾ 13ರಲ್ಲು ಫಲಿಮಾರು ಅಡಕಟ್ಟು, ಸಂತೆ, ಕಾರ್ಖಾನೆ ಮೊದಲಾದವುಗಳನ್ನು ವಿದ್ಯಾ ಪ್ರವಾಸ ದೃಷ್ಟಿಯಿಂದ ಸಂದರ್ಶಿಸಿದರು.

ಕೋಟೆ—"ದ್ರಾವಿಡ ಭಾಷೆಯಲ್ಲಿ ಆಧುನಿಕ ವಿಷಯಗಳ ಪ್ರಕಟಣೆಗೆ ಪ್ರೋತ್ಸಾಹ ಕೊಡುವ ಮದ್ರಾಸು ವಿಶ್ವವಿದ್ಯಾಲಯದ ಸಿಂಡಿಕೇಟಿನವರು 1951—'52ರ ಬಹುಮಾನವನ್ನು ಶ್ರೀ. ಕೆ. ಎಲ್. ಕಾರಂತ ಕೋಟ ಇವರ ವಿಶ್ವ ವೈಚಿತ್ರ್ಯ ಅಥವಾ ಜನತಾ ಭೂಗೋಳ ಶಾಸ್ತ್ರವೆಂಬ ಕೊಟ್ಟಿರುವರು. ಅನೇಕರಿಂದ ಪ್ರಶಸ್ತಿಕಕ್ಕೆ ಪ್ರಖ್ಯಾತಿ ಹೊಂದಿದ ವೀಕ್ಷಣಾಲಯಗಳಲ್ಲಿ ತೆಗೆದ ಹಲವು ಛಾಯಾ ಚಿತ್ರಗಳನ್ನೊಳಗೊಂಡ ಸಾಮಾನ್ಯರಿಗೂ ಅರ್ಥವಾಗುವ ಈ ಪುಸ್ತಕವು ಶೀಘ್ರದಲ್ಲಿಯೇ ಪ್ರಕಟವಾಗಲಿರುವದು"

ಕೊಡೂರು (ಹೊಸನಗರ)- ಡಾ। ಆರ್. ಎಸ್. ಉಪ್ಪೂರ್, ಇವರ 'ಕೊಡೂರು ಕ್ಲಿನಿಕ್' ಎಂಬ ಚಿಕಿತ್ಸಾಲಯವನ್ನು ಸ್ಥಳೀಯ ಹಾಗೂ ನೆರೆ ಗ್ರಾಮಗಳ ಜನತೆಯ ಪ್ರೋತ್ಸಾಹದಿಂದ ಇದೇ ತಾ 12ರಲ್ಲು ತೆರೆಯಲಾಗಿದೆ. ಅಧ್ಯಗೃಹಸ್ಥರನೇಕರು ಈ ಸಮಾರಂಭಕ್ಕೆ ಚಿತ್ತೈಸಿದ್ದು ಈ ಚಿಕಿತ್ಸಾಲಯಕ್ಕೆ ಶುಭವನ್ನು ಕೋರಿದರು, ನಂತರ ಸಭಾಪೂಜೆ ನಡೆಯಿತು.

ಮಾಯಿಪಾಡಿ—ಸರಕಾರಿ, ಬುನಾದಿ ಶಿಕ್ಷಣ ತರಬೇತಿ ವಿದ್ಯಾನಿಲಯದ 67 ಮಂದಿ ವಿದ್ಯಾರ್ಥಿ ಅಧ್ಯಾಪಕರು ಶ್ರೀಯುತ ಚಂದ್ರಶೇಖರ ಐತಾಳ B. A. B. T. ಇವರ ನೇತೃತ್ವದಲ್ಲಿ ಪ್ರವಾಸವನ್ನು ಕೈಗೊಂಡು 16ನೇ ತಾರೀಕಿನ ಸಾಯಂಕಾಲಕ್ಕೆ ಹಿಂದಿರುಗಿರುವರು ಅವರು ಬೆಂಗಳೂರು ಮೈಸೂರು, ತಿರುಪತಿ ಮತ್ತು ಮದ್ರಾಸುಗಳನ್ನು ನೋಡಿರುವರು ಈ ವಿದ್ಯಾ ಪ್ರವಾಸವು ಬರೇ ಪ್ರವಾಸವಾಗಿರದೆ ಒಂದು ವಿದ್ಯಾಭ್ಯಾಸಯೋಜನೆಯಾಗಿ ಏರ್ಪಡಿಸಲಾಗಿದೆಯೆಂದು ತಿಳಿದು ಬರುತ್ತದೆ.

ಅತ್ಯಪೂರ್ವ ಪುಸ್ತಕ

ಶಿಲ್ಪಿ

ದಿ। ಹುಲಿಮನೆ ಕಾಳೆ ಶಿವಪ್ಪ, ಅವರಿಂದ ರಚಿತವಾದ
ಐತಿಹಾಸಿಕ ನಾಟಕ

- ಕನ್ನಡ ನಾಡಿನಲ್ಲಿ ಅನೇಕ ವಿಷಯಗಳ ಮೇಲೆ ಕಥೆ, ಕಾದಂಬರಿ, ನಾಟಕ, ಕವಿತೆ ಮುಂತಾದುವು ರಚಿತವಾಗಿವೆ ಆದರ ಐತಿಹಾಸಿಕದ ಮೇಲೆ ಅದರಲ್ಲೂ ಶಿಲ್ಪಕಲಾ ನಿಪುಣ ಜಕಣಾಚಾರಿಯ ಮೇಲೆ ನಾಟಕ ರಚಿತವಾಗಿರುವುದು ಬಹಳ ವಿರಳ
- ಇದೀಗ ಪ್ರಕಟವಾಗಿರುವ 'ಶಿಲ್ಪಿ'ಯು ಜಕಣಾಚಾರಿಯ ಜೀವನ ಚಿತ್ರವನ್ನು ಚಿತ್ರಿಸುವ ನವೀನ ನಾಟಕ.
- ಪಂಡಿತ ಪಾಮರರೆಲ್ಲರೂ ಮೆಚ್ಚುವ ಕಥಾ ಸಂವಿಧಾನ.

ಬೆಲೆ ರೂ 1 8 0

ಬರೆಯಿರಿ. ನವಭಾರತ ಪುಸ್ತಕ ಭಂಡಾರ, ಉಡುಪಿ.

ರಾಷ್ಟ್ರಕವಿ ಎಮ್. ಗೋವಿಂದ ಪೈಗಳವರಿಂದ ಉದ್ಘಾಟಿಸಲ್ಪಟ್ಟ
ಕೊರಡ್ಕಲ್ ಸ್ಮಾರಕ ಸಮಿತಿಯವರಿಂದ
(ದಿವಂಗತ ಕೊರಡ್ಕಲ್ ಶ್ರೀನಿವಾಸ ರಾಯರ ನೆನಪಿಗಾಗಿ)
ಪ್ರಕಟಿಸಲ್ಪಟ್ಟ ❀ನೆನಪಿಗಾಗಿ❀ ನಾವೀನ್ಯಪೂರ್ಣ ಪುಸ್ತಕ
ಕರ್ನಾಟಕದ ಹೆಸರಾಂತ ಲೇಖಕರನೇಕರ ವಿವಿಧ ಬರಹಗಳಿಂದ ಕೂಡಿದೆ-
ಬೆಲೆ ರೂ- 2—0—0 ಮಾತ್ರ ರೂ 2—6—0 ಕಳುಹಿಸಿದರೆ
ಒಂದು ಪ್ರತಿಯನ್ನು ಟಪ್ಪಾಲು ದ್ವಾರಾ ಕಳುಹಿಸಬಹುದು-
ಕೊರಡ್ಕಲ್ಲರ ಶಿಷ್ಯ ವೃಂದವೂ ಮಿತ್ರಮಂಡಳಿಯೂ ಈ ಗ್ರಂಥವನ್ನು
ಕೊಂಡುಕೊಂಡು ಸ್ಮಾರಕ ಸಮಿತಿಗೆ ನೆರವು ನೀಡಬೇಕಾಗಿ
ವಿಶೇಷತಃ ಕೋರಲಾಗಿದೆ-

ಪ್ರತಿಗಳು ಸಿಗುವ ಸ್ಥಳಗಳು:-

1) ಕೊರಡ್ಕಲ್ ಸ್ಮಾರಕ ಸಮಿತಿ. ಉಡುಪಿ 2) ನವಯುಗ ಪ್ರೆಸ್, ಉಡುಪಿ

ಕಾಡುಹೊಳೆ— 14-11-1952ರಲ್ಲು ಕಾಡುಹೊಳೆ ವಯಸ್ಕರ ಕೂಟದ ಶ್ರೀ ಬಿ. ಶ್ರೀನಿವಾಸರಾಯರ ಪ್ರೋತ್ಸಾಹದಿಂದ ಅಜೆಕಾರ್ ಕಂಟ್ರಾಕ್ಟ್ ಬೋರ್ಡ್ ಪ್ರೆಸಿಡೆಂಟ್ ಶ್ರೀ ಕೆ. ನಾರಾಯಣ ಅಧಿಕಾರಿಗಳವರ ಅಧ್ಯಕ್ಷತೆಯಲ್ಲಿ ಈ ಕೇಂದ್ರದ ವಯಸ್ಕರ ಶಿಕ್ಷಣ ಜರಗಿ ಅಧ್ಯಾಪಕ ಶ್ರೀ ಬಿ ನರಸಿಂಹ ಸ್ವಾಗತ ವಸ್ತುಪ್ರದರ್ಶನ ಮತ್ತು ಪ್ರಚಾರಗೀತೆ, ಶ್ರೀಗಳಾದ ಸಣ್ಣಯ್ಯ ಕಲ್ಯಾಣ್ ಸುಂದರ ಸೆಟ್ಟಿ, ಎ. ಪಾಂಡುರಂಗ ಶೆಣೈಯವರ ಸಂದರ್ಭೋಚಿತ ಭಾಷಣವಾದಮೇಲೆ ಅಧ್ಯಕ್ಷರು ನಿರಕ್ಷರಸ್ಥರ ಕರ್ತವ್ಯದ ಕುರಿತು ಭಾಷಣವಿತ್ತ ಬಳಿಕ ಮಂಗಲಗೀತೆ, ಉಪಹಾರದೊಂದಿಗೆ ಸಭೆಯು ಮುಕ್ತಾಯವಾಯಿತು.

ಬೆಳ್ಳಾರೆ—ಇದೇ ತಾ 12ರಲ್ಲು ಬೆಳಗ್ಗೆ 9-30ಕ್ಕೆ ಮದ್ರಾಸು ಸರಕಾರದ ಗ್ರಾಮಾಭಿವೃದ್ಧಿ ಶಾಖೆಯ ಡಿಸ್ಟ್ರಿಕ್ಟ ಡೈರೆಕ್ಟರ್ ಶ್ರೀ ಲಕ್ಷ್ಮೀ ರತನ್ ಭಾರತೀಯವರ್ ಬೆಳ್ಳಾರೆಗೆ ಸಂದರ್ಶನವಿತ್ತರು, ಆಗ ಶ್ರೀ ಎನ್. ವೆಂಕಟ ಸುಬ್ರಾಯರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಶ್ರೀ ಬಿ. ಎಸ್. ಕೇಶವರು ಸ್ಥಳೀಯ ಅವಶ್ಯಕತೆಗಳನ್ನು ವಿವರಿಸಿದರು ಶ್ರೀ ಕೆ. ಶಂಕರ ರಾಯರು ಊರವರ ಕಡೆಯಿಂದ ಮಾನಪತ್ರವೊಂದನ್ನು ಒಪ್ಪಿಸಿದರು. ಮಾನ್ಯ ಡಿಸ್ಟ್ರಿಕ್ಟ ಡೈರೆಕ್ಟರರು ಗ್ರಾಮಾಭಿವೃದ್ಧಿ ಯೋಜನೆಗೂ ಭಾರತ ಗ್ರಾಮ ಕಲ್ಯಾಣ ಯೋಜನೆಗೂ ಇರತಕ್ಕ ವ್ಯತ್ಯಾಸಗಳನ್ನು ತಿಳಿಸಿ, ಗ್ರಾಮಗಳ ಸುಧಾರಣೆಯನ್ನು ಜನರೇ ಮಾಡಿಕೊಳ್ಳಬೇಕೆಂದು ಆ ಬಗ್ಗೆ ಸರಕಾರದವರು ಸಾಧ್ಯವಿರುವ ಸಹಾಯ ನೀಡುವರೆಂದೂ ಹೇಳಿದರು. ಅಧ್ಯಕ್ಷರ ಭಾಷಣ, ವಂದನೋಕ್ತಿಗಳಿಂದ ಸಭೆಯು ಮುಕ್ತಾಯವಾಯಿತು.

ವಯಸ್ಕರ ಶಿಕ್ಷಣ ಸಪ್ತಾಹ ಸಭೆ

ಇದೇ ತಾ 3ರಂದು ಸಂಜೆ ವಿದ್ಯಾಬೋಧಿನಿ ಶಾಲೆಯಲ್ಲಿ ಶ್ರೀ ಎಮ್. ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು, ವಯಸ್ಕ ಶಿಕ್ಷಣದ ಅವಶ್ಯಕತೆಯ ಕುರಿತು ಭಾಷಣಗಳಾದುವು.

ಉಚ್ಚಿ—ತಾ. 14ರಲ್ಲು ಸ್ಥಳೀಯ ಸರಕಾರಿ ಮೂಲ ಶಿಕ್ಷಣ ತರಬೇತಿ ಶಾಲೆಯ ನೆಹರು ಜನ್ಮದಿನಾಚರಣೆಯು ಕರ್ನಾಟಕ ವಿದ್ಯಾಲಯ ಹೈಸ್ಕೂಲಿನ ಅಧ್ಯಾಪಕ ಶ್ರೀ ನಾರಾಯಣ ಪದಕಣ್ಣಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಮೂಡಬಿದ್ರೆ— ಕಾರ್ಕಳ ರೇಂಜಿನ ಡಿಸ್ಟ್ರಿಕ್ಟ ಇನ್ಸ್ಪೆಕ್ಟರ್ ಶ್ರೀ ಹಸನಬ್ಬ, ಅವರು ಕುಂದಾಪುರಕ್ಕೆ ವರ್ಗಾಯಿಸಲ್ಪಟ್ಟುದರಿಂದ ಅವರನ್ನು ಗೌರವಿಸಿ ಬೀಳ್ಕೊಡುವ ಸಮಾರಂಭವನ್ನು ತಾ 1ರಲ್ಲು ಮೂಡಬಿದ್ರೆ ಕೇಂದ್ರದ ಉಪಾಧ್ಯಾಯ-ಉಪಾಧ್ಯಾಯನಿಯರು ಹಾಗೂ ಖಾಸಗಿ ಶಾಲಾ ಮೆನೇಜರು ಶ್ರೀ ಎ ಸೋಮಪ್ಪ ರೈ ಬಿ. ಎ ಬಿ. ಟಿ. ಇವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ಕಾರ್ಕಳ— ಕಳೆದ ನಾಲ್ಕು ತಿಂಗಳುಗಳಿಂದ ದಿನಾಲೂ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಶ್ರೀ ಹಂದೆಗುರು ವೇದವ್ಯಾಸಾಚಾರ್ಯರಿಂದ ಜರಗುತ್ತಲಿದ್ದ ಸಂಪೂರ್ಣ ರಾಮಾಯಣ ಹರಿಕಥಾ ಕಾಲಕ್ಷೇಪದ ಮಂಗಲೋತ್ಸವವು ಕಳೆದ ತಾ 27 ಮತ್ತು 28ರಲ್ಲು ಕಾಶೀಮಠಾಧೀಶ ಶ್ರೀ ಸುಧೀಂದ್ರ ತೀರ್ಥ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರುಗಿತು. ಪರಿಪಾಸರಿಗೆ ಪಾರಿತೋಷ, ಭಕ್ತವೃಂದಕ್ಕೆ ಮಂತ್ರಾಕ್ಷತೆ ವಿತರಣೆಗಳಿಂದ ಕಾರ್ಯಕ್ರಮವು ಮುಕ್ತಾಯವಾಯಿತು.

All Secondary Schools may Subscribe to "Navayuga" weekly Since it has been approved by the Director of Public Instruction, Madras.

ಮಂಗಳೂರು

ಜಿಲ್ಲಾ ಶಿಕ್ಷಕರ ವಿದ್ಯಾ ಸಮ್ಮೇಳನ—ದ. ಕ ಜಿಲ್ಲಾ ಟೀಚರ್ಸ್ ಗಿಲ್ಡಿನ ಪ್ರಯತ್ನದಲ್ಲಿ ತಾ. ೯ರಲ್ಲಿ ಸ್ಥಳೀಯ ಮಿಶ ಹ್ಯಾಸ್ಕೂಲಿನಲ್ಲಿ ಜಿಲ್ಲಾ ಶಿಕ್ಷಕರ ವಿದ್ಯಾ ಸಮ್ಮೇಳನವು ಸ್ಥಳೀಯ ಸರಕಾರಿ ಟ್ರೈನಿಂ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಬಿ. ರಾಘ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ೀ ಎಸ್. ಮುಕುಂದ ರಾಯರು ವಿದ್ಯಾ ಗಳಿಗಾಗಿರುವ ಕನ್ನಡದಲ್ಲಿನ ಯೋಗ್ಯ ಪ ಕಗಳ ಅಭಾವದ ಕುರಿತು ಉಪನ್ಯಾಸ ಓದಿ ರು ಸೆಕೆಂಡರಿ ಶಾಲೆಗಳಲ್ಲಿ ವ್ಯಾಕರಣದ ಪ್ಪು ಕಲಿಸಲಾಗುತ್ತಿರುವ ಕುರಿತು ಶ್ರೀ ು. ಬಿ ತೆಣ್ಣೆಯವರು ಉಪನ್ಯಾಸ ಓದಿ ಅದರ ಕಾರಣಗಳನ್ನೂ ನಿವೃತ್ತಿ ಮಾರ್ಗವನ್ನು ಸೂಚಿಸುವ ಜತೆಗೆ ಆ ಚರ್ಚೆಯ ಂಭಿಸಿದರು. ಶ್ರೀ ಎಮ್. ಎಸ್ ಪ ಂಬರ ರಾಯರು ಈ ಕುರಿತು ಮಾತನಾಡಿದ ಬಳಿಕ ಅಧ್ಯಕ್ಷರು ತಮ್ಮ ಭಾಷಣದಲ್ಲಿ, ದಿನ ಇಂಗ್ಲಿಷ್ ಯುಗ ಇಂದಿನ ದೇಶ ಷೆಗಳ ಯುಗವನ್ನು ಪೋಲಿಸಿ ಹಲವು ಣಗಳಿಂದ ಕನ್ನಡದ ಹೆಚ್ಚಿ ನಿಧಾನ ಗಿದೆ. ಕನ್ನಡದಲ್ಲಿ ಉತ್ತಮ ಪತ್ರಿಕೆಗಳು ಜವಾಗಿಯೂ ಬೇಕಾಗಿವೆ ಎಂದರು. ವ್ಯಾ ಂಗದ ಮಟ್ಟದ ವಿಚಾರದಲ್ಲಿ ಅಭಿಪ್ರಾಯ ು ಗೊಂದಲದಲ್ಲಿ ಬಿದ್ದಿವೆ ಎನ್ನುತ್ತ ವ್ಯಾ ಂಗದ ಮುಖ್ಯೋದ್ದೇಶ ಜ್ಞಾನಾಭಿವೃದ್ಧಿ ಾನ ಸಂಗ್ರಹವಲ್ಲದೆ ಕೇವಲ ಪರೀಕ್ಷೆಗಳೇ ಲ್ಲ, ಅವು ಕೆಡುಕು ಎಂದರು. ಪ್ರಾಚೀನ ಷಿಗಳು ಬೋಧಿಸುತ್ತಿದ್ದ ಆ ಕಾಲದ ಮಾ ತ್ರ ಕಾಲ ಬದಲಾದ ಈ ಈಗಲೂ ಆ ಂದು ವೃದ್ಧಿಯ ಶಿಕ್ಷಣವೇ ಅಗತ್ಯ. ವಿ ರ್ಥಿಗಳ ಆಶಾಶಾಂಕ್ಷೆಗಳ ಮಟ್ಟ ಇಳಿ ಖವಾಗಿರಬಹುದಾದರೂ ಅಗತ್ಯವಿರುವ ಕ್ಷಣದ ವೃದ್ಧಿ ಉಪಾಧ್ಯಾಯರಲ್ಲಿದೆಯೇ? ಲ್ಲ, ಅದರಿಂದ ಉಪಾಧ್ಯಾಯರು ತಮ್ಮ ತ್ತಿಯಲ್ಲಿ ತ್ಯಾಗಪೂರ್ವಕವಾದ ಭಕ್ತಿ ಇರಿ ಹಾಗೆ ವರ್ತಿಸಬೇಕು ಎಂದರು. ಪ್ರತಿಯೊ ಉಪಾಧ್ಯಾಯನು ತನ್ನ ಕರ್ತವ್ಯ ಕ ವನ್ನು ಸರಿಯಾಗಿ ನೆರವೇರಿಸುವಂತೆ ವಿ ತಿಸಿದರು ಬಳಿಕ ಹಲವು ನಿರ್ಣಯಗಳಾ ವು

ಅಂದೇ ಬೆಳಿಗ್ಗೆ ಡೆಲಿಗೇಟರ ಅಧಿವೇಶನ ಗಿಲ್ಡಿನ ಅಧ್ಯಕ್ಷರಾದ ಸೈಂಟ್ ಎಲೋಯಸ್ ಕಾಲೇಜು ಹ್ಯಾಸ್ಕೂಲಿನ ರೆ. ಫಾ. ಬ್ಲ್ಯು. ಎಫ್. ಸಿಕ್ವೇರ, ಅವರ ಅಧ್ಯಕ್ಷತೆಯಲ್ಲಿ ಜರುಗಿದಾಗ 'ಪ್ರಾಯಸ್ಥ ಮಗುವಿಗೆ ಮಾರ್ಗದರ್ಶನ'ದ ಕುರಿತು ಶ್ರೀ ಕೆ. ವಾಸುದೇವ ಶಿವರಾಯರೂ 'ಸಾಮಾಜಿಕ ಅಧ್ಯಯನದ ಪಾಠಪಟ್ಟಿಯ ಪುನರ್ ವ್ಯವಸ್ಥೆ'ಯ ಕುರಿತು ಶ್ರೀ ಕೆ. ರಾಮರಾಯರೂ ಉಪನ್ಯಾಸಗಳನ್ನೋದಿದರು ಈ ಸಮ್ಮೇಳನಕ್ಕೆ ಮದ್ರಾಸು ಸರಕಾರದ ಇಂಗ್ಲಿಷ್ ಶಿಕ್ಷಣದ ಎಡ್ವೈಜರರಾದ ಮಿ॥ ಎಫ್. ಎಲ್. ಬಿಲ್ಲೋಸ್ ಅವರು ಬಂದಿದ್ದರು.

ಗೋರಕ್ಷಣಾ ಸಮಿತಿ ಇದೇ ತಾ. ೯ರಂದು ರಾಷ್ಟ್ರೀಯ ಗೋಸಪ್ತಾಹದ ಸ್ವಾಗತ ಸಮಿತಿಯ ಸಭೆಯು ಶ್ರೀ ಎಮ್. ಕೆ. ದೇವರಾಜ ಅಧ್ಯಕ್ಷತೆಯಲ್ಲಿ ಜರಗಿತು ಈ ಸಭೆಯಲ್ಲಿ ಅಕ್ಟೋಬರ್ ತಾ 26ರಿಂದ ನವಂಬರ ತಾ 1 ತನಕ ಮಂಗಳೂರು ನಗರದಲ್ಲಿ ಜರಗಿದ ರಾಷ್ಟ್ರೀಯ ಗೋಸಪ್ತಾಹದ ವರದಿಯನ್ನು ಕಾರ್ಯದರ್ಶಿ ಡಾ। ಎಮ್. ಎಸ್ ಎ. ಶರ್ಮರು ಓದಿದ ಬಳಿಕ ಅದು ಮಂಜೂರಾಯಿತು ಮಂಗಳೂರಿನ ಆಸುಪಾಸಿನಲ್ಲಿ ಗೋಶಾಲೆ ಮತ್ತು ಗೋಚರ ಭೂಮಿ ದೇರೆಬೈಲ್, ಕೊಂಬಾಡಿ ಇಲ್ಲವೆ ಇನ್ನಿತರ ಸ್ಥಳಗಳಲ್ಲಿ ಏರ್ಪಡಿಸುವ ಬಗ್ಗೆ ಯೋಜನೆಗಳನ್ನೂ ಸ್ಥಳಗಳನ್ನೂ ನಿರ್ಣಯಿಸುವರೆ ನಾಲ್ಕು ಜನರಿರುವ ಉಪಸಮಿತಿಯೊಂದು ರಚಿಸಲಾಯಿತು. ಅಲ್ಲದೆ ಪ್ರಯೋಜನವಿಲ್ಲದ ಮುದಿ ಸಣ್ಣ ಕರುಗಳ ಸಂರಕ್ಷಣೆಗೆ ಒಂದು ಗೋಶಾಲೆಯನ್ನು ನಿರ್ಮಿಸುವರೆ ಧರ್ಮಸ್ಥಳ ಅಥವಾ ಇನ್ನಿತರ ಸ್ಥಳಗಳನ್ನು ನೋಡುವ ಬಗ್ಗೆ ನಾಲ್ಕು ಜನರಿಂದ ಕೂಡಿದ ಇನ್ನೊಂದು ಉಪಸಮಿತಿ ನೇಮಕವಾಯಿತು. ಮಂಗಳೂರಲ್ಲಿ ಸದ್ಯವೇ ಜಾನುವಾರು ಪ್ರದರ್ಶನವೊಂದನ್ನು ಏರ್ಪಡಿಸುವರೆ ಮಗದೊಂದು ಕಮಿಟಿ ರಚಿಸಲಾಯಿತು. ಮೇಲಿನ ನಿರ್ಣಯಗಳನ್ನು ಸಂಬಂಧಪಟ್ಟವರಿಗೆ ಕಳುಹಿಸಿಕೊಡಲು ಕಾರ್ಯದರ್ಶಿಯವರಿಗೆ ಅಧಿಕಾರವೀಯಲಾಯಿತು.

ಕೌನ್ಸಿಲು ಸದಸ್ಯರಿಗೆ ಸತ್ಕಾರ— ಮಂಗಳೂರು ಮುನಿಸಿಪಾಲಿಟಿಗೆ ಆರಿಸಲ್ಪಟ್ಟ ಕಾಂಗ್ರೆಸ್ಸೇತರ ಮೆಂಬರರನ್ನು ತಾ ೯ರಲ್ಲಿ ಮಂಗಳೂರಿನ, ಬೋಳಾರ-ಪೂರ್ವ, ಬೋಳಾರ-ಪಶ್ಚಿಮ, ಜೆಪ್ಪು-ದಕ್ಷಿಣ, ಮಂಗಳಾದೇವಿ ಮತ್ತು ಹೊಯ್ಗೆ-ಈ ವಾರ್ಡುಗಳ ನಾಗರಿಕರ ಪರವಾಗಿ, ಶ್ರೀ ಕೃಷ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಸತ್ಕರಿಸಲಾಯಿತು. ಶ್ರೀ ಚೆನ್ನಯ್ಯನವರ ಸ್ವಾಗತ ಮಾತುಗಳಾದ ಬಳಿಕ ಶ್ರೀ ಕರುಣಾಕರನವರು ಒಂದು ಬಿನ್ನವತ್ತಳೆಯನ್ನರ್ಪಿಸಿದರು. ಜನಜೀವನವನ್ನು ಸುಖಮಯ ಮಾಡುವ ಕಾರ್ಯಗಳ ಮೂಲಕ ಮತದಾರರಿಗೆ ನೂತನ ಸದಸ್ಯರು ತಮ್ಮ ಕರ್ತವ್ಯವಾದ ಸೇವೆಯನ್ನು ಸಲ್ಲಿಸಬೇಕೆಂದು ಕೇಳಿಕೊಂಡರು ಬಳಿಕ ಕೌನ್ಸಿಲರುಗಳ ಪರವಾಗಿ ಶ್ರೀಗಳಾದ ಬಿ. ಎಸ್. ಭಾಸ್ಕರ ರೈ, ಗಜಾನನ ರಾವ್ ಪಂಡಿತ್, ಜೆ. ಬಿ. ಡಿ. ಸೋಜ, ಬಿ ಕೂರಗಪ್ಪ ರೈ, ಎಮ್. ಟಿ. ನಾರಾಯಣ ಮೂರ್ತಿ, ಕೆ. ಸೂರ್ಯನಾರಾಯಣ ಅಡಿಗ ಮೊದಲಾದವರು ಮಾತನಾಡುತ್ತ ನಾಗರಿಕರು ಆಗಾಗ ನಗರ ಸಭಾ ಸದಸ್ಯರನ್ನು ಕಂಡು ತಮಗೇನಾಗಬೇಕೆಂಬುದನ್ನೂ ಆವಶ್ಯತೆಯ ಲೋಪದೋಷಗಳನ್ನೂ ತಿಳಿಸಬೇಕೆಂದೂ ಮುಂತಾಗಿ ಮಾತನಾಡಿದರು

ಸೈಂಟ್ ಎಲೋಸಿಯಸ್ ಕಾಲೇಜಿನ ಸೋಶಲ್ ಸರ್ವಿಸ್ ಲೀಗಿನವರು ಪ್ರಧಾನಿ ನೆಹರೂರವರ ಜನ್ಮದಿನವಾದ ಇದೇ ತಾ. 14ರಂದು, ಹರಿಜನ ಬಾಲಕಿಯರಿಗೆ ಗಂಜಿ ಹಂಚಿದರು

ಕದ್ರಿ ವಿದ್ಯಾಬೋಧಿನಿ ಶಾಲೆಯಲ್ಲಿ ಶಿಕ್ಷಣ ಸಪ್ತಾಹದ ಅಂಗವಾಗಿ ಜರಗಿದ ಸಭೆಯಲ್ಲಿ ಶ್ರೀ ಬಿ. ವಿ. ಕೆದಿಲ್ಲಾಯರು ಅಧ್ಯಕ್ಷತೆ ವಹಿಸಿದ್ದು, ವಿದ್ಯಾ ಪ್ರಸಾರದಲ್ಲಿ ವಿದ್ಯಾವಂತರ ಕರ್ತವ್ಯವನ್ನು ತಿಳಿಸಿದರು.

ಸರಕಾರೀ ಬುನಾದಿ ಶಿಕ್ಷಣ ತರಬೇತಿ ಶಾಲೆಯಲ್ಲಿ- ಶಿಕ್ಷಣ ಸಪ್ತಾಹವು ಆಚರಿಸಲ್ಪಟ್ಟಿತು. ಶಿಕ್ಷಣಕ್ಕೆ ಸಂಬಂಧಪಟ್ಟ ವಸ್ತುಪ್ರದರ್ಶನವೊಂದನ್ನು ತೆರೆಯಲಾಗಿತ್ತು. ತಾ 11 ರಲ್ಲಿ ಗವರ್ನಮೆಂಟ್ ಕಾಲೇಜಿನ ಅಧ್ಯಾಪಕರಾದ ಶ್ರೀ ಆನಂದರಾಯರ ಅಧ್ಯಕ್ಷತೆಯಲ್ಲಿ ವಿವಿಧ ವಿನೋದಾವಳಿಗಳು ನಡೆದವು

ರಸ್ತೆಯ ಉದ್ಘಾಟನೆ- ಜೆರ್ವತ್ರೂರು-ಜೆಪ್ಪು-ಕಣ್ಣಂಗಾರು ರಸ್ತೆ ಮತ್ತೂ ಜೆಪ್ಪು-ಪಟ್ಣನೂರು ರಸ್ತೆ ಇವುಗಳ ಉದ್ಘಾಟನೆಯನ್ನು ತಾ 15ರಲ್ಲಿ ಸಂಜೆ ಜಿಲ್ಲಾ ಕಲೆಕ್ಟರ್ ಶ್ರೀ ಸಿ. ಎ. ರಾಮಕೃಷ್ಣನ್ ಅವರು ನೆರವೇರಿಸಿದರು.

ವಿದ್ಯಾ ಪ್ರವಾಸ — ಮಂಗಳೂರು ಸರಕಾರೀ ಬುನಾದಿ ಶಿಕ್ಷಣ ತರಬೇತಿ ಶಾಲೆಯ ಎರಡನೆ ವರ್ಷದ ತರಬೇತಿ ಅಧ್ಯಾಪಕರು ಈ ತಿಂಗಳ ಪ್ರಥಮ ವಾರದ ಶಾಲಾ ಸಹಾಯಕ ಅಧ್ಯಾಪಕರಾದ ಶ್ರೀ ವಿಶ್ವನಾಥ, ಅವರ ನೇತೃತ್ವದಲ್ಲಿ ಮಡಿಕೇರಿ, ಮೈಸೂರು ಮತ್ತು ಬೆಂಗಳೂರು ನಗರದಲ್ಲಿ ವಿದ್ಯಾ ಪ್ರವಾಸವನ್ನು ಯಶಸ್ವಿಯಾಗಿ ತೀರಿಸಿಕೊಂಡು ಬಂದರು. ಮೈಸೂರಲ್ಲಿ ಶ್ರೀ ಕೆ. ಎಮ್ ಬೋಪಯ್ಯನವರು ವಿದ್ಯಾ ಪ್ರವಾಸಿಗಳಿಗೆ ಔತಣವನ್ನಿತ್ತರು.

ಅಕ್ಕಿ ಮಿಲ್ಲುಗಳು— ಖಾಸಗಿ ಅಥವಾ ಸರಕಾರದ ಭತ್ತವನ್ನು ಕುಟ್ಟಿ ಅಕ್ಕಿ ತಯಾರಿಸುವ ಮಿಲ್ಲುಗಳ ಒಡೆಯರು ಈ ಬಗ್ಗೆ ವರ್ಷಕ್ಕೆ ರೂಪಾಯಿ 24 ಕಟ್ಟಿ ಮುಂದೆಯೇ ಲ್ಯಾಸೆನ್ಸು ಪಡಕೊಳ್ಳತಕ್ಕದ್ದು-ಎಂದು ಮದ್ರಾಸು ಸರಕಾರ ಪ್ರಕಟಿಸಿದೆ.

ಬೊಂಬಾಯಿ ಸ್ಟೇಟ್ ಫಾರ್ಮಸಿ ರಿಜಿಸ್ಟರ್ - 1948ನೆ ಇಸವಿಯ ಇಂಡಿಯನ್ ಫಾರ್ಮಸಿ ಅಕ್ಟಿನ 30ನೆ ಸೆಕ್ಷನಿನ 4ನೆ ಉಪಸೆಕ್ಷನಿನಂತೆಯೂ ಹಾಗೂ ಬೊಂಬಾಯಿ ಸರಕಾರದ ತಾ. 21-10-52ರಲ್ಲಿನ 6147/33ನೆ ನಿರ್ಣಯದಂತೆಯೂ ಬೊಂಬಾಯಿ ಸ್ಟೇಟ್ ಫಾರ್ಮಸಿ ರಿಜಿಸ್ಟ್ರಿಯು ಬೊಂಬಾಯಿ ಗಜೇಟಿನಲ್ಲಿ ತಾ 6 11 52 ರಲ್ಲಿ ಪ್ರಸಿದ್ಧಿಗೊಳಿಸಲ್ಪಟ್ಟಿದೆ. ರಜಿಸ್ಟ್ರೇಶನ್ ಟ್ರಿಬ್ಯುನಲ್‌ರವರ ತೀರ್ಮಾನದಿಂದ ಬಾಧಕ ಹೊಂದಿದವರು ಗಜೇಟಿನಲ್ಲಿ ಪ್ರಸಿದ್ಧಿಸಿದ ತಾರೀಕಿನಿಂದ ಅರವತ್ತು ದಿವಸಗಳೊಳಗಾಗಿ ಅಪೆಲೆಟ್ ಅಥೋರಿಟಿ C/o ದಿ ರಿಜಿಸ್ಟ್ರಾರ್, ಫಾರ್ಮಸಿ ರಜಿಸ್ಟ್ರೇಶನ್ ಟ್ರಿಬ್ಯುನಲ್ 381, ಹಾರ್ನಬಿ ರೋಡ್, ಬೊಂಬಾಯಿ.-ಅವರಿಗೆ ಅಪೀಲು ಮಾಡಿಕೊಳ್ಳಬಹುದು ಎಂದು ರಿಜಿಸ್ಟ್ರಾರರು ತಿಳಿಸುತ್ತಾರೆ

ಉಡುಪಿ ಡಿ ಮು. ಕೋರ್ಟಿನಲ್ಲಿ

S E. P. No. 418/1952
(S. C. No 286/1952)

ದೇವದಾಸ ನಾಯಕ್ ಅರ್ಜಿದಾರ —ವಾದಿ
ಮತ್ತು
ಕೆ. ರಾಘವೇಂದ್ರ ನಾಯಕ್ ಎದುರು-ಪ್ರತಿವಾದಿ

ಎದುರು- ಉಡುಪಿ ತಾಲೂಕು ಮೂಡುಬೆಟ್ಟು ಗ್ರಾಮದ ಕಲ್ಪಾಡಿಯಲ್ಲಿರುವ ರಾಮಚಂದ್ರ ನಾಯ್ಕರ ಮಗ ಕೆ. ರಾಘವೇಂದ್ರ ನಾಯ್ಕರಿಗೆ ಈ ಮೂಲಕ ತಿಳುಹಿಸುವದೇನೆಂದರೆ-

ಮೇಲ್ಕಂಡ ಅಮಲುಜಾರಿಯಲ್ಲಿ ಕೇಳಿದ ಡ್ಯಾಮೇಜನ್ನು ನೀವು ವಸೂಲುಕೊಡದಿದ್ದಲ್ಲಿ ಯಾಕೆ ನಿಮ್ಮನ್ನು ಸಿವಿಲ್ ಜೈಲಿಗೆ ರವಾನಿಸಬಾರದೆಂಬುದಕ್ಕೆ ತಕ್ಕ ಸಬಬು ಇದ್ದರೆ ಅದನ್ನು ತಾರೀಕು 9—12—1952ರಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ಪೂರ್ವಾಹ್ನ 10ಗಂಟೆಗೆ ನೀವು ಸ್ವತಹಾ ಯಾ ವಕೀಲರ ಮುಖಾಂತ್ರ ಹ್ಯಾಜರಾಗಿ ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಅರ್ಜಿದಾರನ ಅಪೇಕ್ಷೆ ಮೇರೆಗೆ ಏಕಪಕ್ಷವಾಗಿ ತೀರ್ಮಾನಿಸಲಾದೀತು.

[ಕೋರ್ಟಿನ ಹುಕುಂ ಮೇರೆಗೆ]
ಯಮ್ ಬಿ ಕೃಷ್ಣರಾವ್
ಅರ್ಜಿದಾರನ ಕಡೆ ಎಡ್ವೊಕೇಟ್
ಉಡುಪಿ, ತಾ: 17-11-1952

ನಿಮಗೆ
ಇಂಗ್ಲಿಷ್ ಕಲಿಯಬೇಕೇ?
ಹಾಗಿದ್ದರೆ

ಕೊರಡ್ಕಲ್
ಶ್ರೀನಿವಾಸ
ರಾವ್
ವಿರಚಿತ

ಸುಲಭದಲ್ಲಿ
ಇಂಗ್ಲಿಷ್
English Made Easy
ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ
ಅತ್ಯುಪಯುಕ್ತವಾದುದು.
ಬೆಲೆ ರೂ. 2-0-0.
ವಿ. ಪಿ. ದ್ವಾರ ರೂ. 2-4-0.
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

THE BOMBAY LIFE ASSURANCE COMPANY, LTD.
ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೋ. ಲಿಮಿಟೆಡ್.
(ಸ್ಥಾಪನೆ: 1903)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು
ಪ್ರಧಾನ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ
ಇತರ ಶಾಖಾ ಕಚೇರಿಗಳು:-
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.
ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ
ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು
ಸಲ್ಲಿಸಿರುತ್ತೇವೆಂಬುದೇ ನಮ್ಮ [illegible] ವಾಗಿ
ವಿ[illegible] ಗಳಿಗೆ, ಪ್ರಾತಿನಿಧ್ಯ ಕೊಡಲಿಚ್ಛಿ[illegible]
ದಯ ಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ವೆಲ್ಕಿನ್ಸ್ ಟೂತ್ ಪೇಸ್ಟ
ಮಿಂಚುವ ನಗುವಿಗೆ, ಮತ್ತು
ಒಸಡಿನ ಆರೋಗ್ಯಕ್ಕೆ!
ಯು ಎಸ್ ಎ ರಾಜ್ಯದ
ಪ್ರಸಿದ್ಧ ಡಾಕ್ಟರರೊಬ್ಬರ ತಯಾರಿಕೆ.
Welkin Laboratory (N)
Calcutta 33.
[illegible] ಕಡೆಗಳ ನೆಲೆ ಸ್ಟಾಕಿಸ್ಟರು ಬೇಕಾಗಿದ್ದಾರೆ

ಪ್ಲಾಟಿನ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ,
ಸರಗಳು, ಲೋಕೆಟ್ಟುಗಳು, ನಮೂನೆವಾರು ಉಂಗುರಗಳು
ರೆಡಿಯಾಗಲೂ ಸಿದ್ಧವಿವೆ.
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.
ಯ. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.
ಫೋನು ನಂಬ್ರ 60

ಗೆಳೆತನದ ಆಶೆ

(೧ನೇ ಪುಟದಿಂದ ಮುಂದುವರಿದುದು)

ರಿಗೂ ನಮ್ಮಿಂದ ಅದನ್ನು ನಿರೀಕ್ಷಿಸುವ ಅಧಿಕಾರವಿದೆ. ಅರ್ಥಾತ್ ನಾವು ಸ್ನೇಹಿತರನ್ನು ಮಾಡಿಕೊಳ್ಳುವಲ್ಲಿ ಅನೇಕ ಸತ್ಸಂಪ್ರದಾಯಗಳನ್ನು ಪಾಲಿಸುವುದವಶ್ಯ. ನಮ್ಮ ಸ್ನೇಹಿತರ ಬಗ್ಗೆಯೂ ನಮ್ಮಲ್ಲಿ ಹೆಚ್ಚಿನ ಆಸಕ್ತಿ ತುಂಬಿರಬೇಕು ಅವರ ಸುಖ ದುಃಖವೆಂದರೆ ನಮ್ಮದೂ ಎಂಬ ಭಾವನೆ ಇರಬೇಕು- ಆದರೆ ಅವರನ್ನು ತೊಂದರೆಯಿಂದ ಉದ್ಧರಿಸುವೆನೆಂದು ಜಂಭ ತೋರುವ ಬುದ್ಧಿ ಮಾತ್ರ ನಮ್ಮಲ್ಲಿ ಎದ್ದು ಕಾಣಬಾರದು. ಅವರಿಂದ ನಾವು ದೊಡ್ಡವರು, ಶ್ರೇಷ್ಠರು ಎಂಬ ಭಾವನೆಗೆ ಎಷ್ಟು ಮಾತ್ರಕ್ಕೂ ಸ್ಥಾನ ಕೊಡಬಾರದು. ಸಂಸ್ಕೃತ ಶ್ಲೋಕವೊಂದು ಸಮಾನವಾದ ಗುಣ ಅಭಿರುಚಿಗಳು ಇದ್ದಲ್ಲಿ ಸಖ್ಯ ಸ್ಥಾಪನೆಯಾಗುವುದೆಂದು ಹೇಳುತ್ತದೆ. ಸಮಾನ ಸ್ಕಂದರಲ್ಲಿಯೇ ಯಾವಾಗಲೂ ಮೈತ್ರಿ ಮೂಡಿ, ಚಿರಕಾಲವುಳಿಯುತ್ತದೆ. ಆದುದರಿಂದ ಆಚಾರ ವಿಚಾರದಲ್ಲಿ ನಮ್ಮ ಸ್ನೇಹಿತರೊಡನೆ ಸಮನಾದ ವರ್ತನೆಯಿಂದಿರುವುದವಶ್ಯ. ನಮ್ಮ ಸ್ನೇಹಿತರನ್ನು ನಮಗಿಂತ ದೈನ್ಯಾವಸ್ಥೆಗೀಡು ಮಾಡುವ ಯಾವ ಸಂದರ್ಭವನ್ನು ತಂದುಕೊಳ್ಳ ಕೂಡದು. ಇದಕ್ಕೆ ವ್ಯತಿರಿಕ್ತವಾಗಿ ನಡೆದರೆ ಸ್ನೇಹ ಮುರಿಯುವುದು ನಿಶ್ಚಯ ಸ್ನೇಹಿತರನ್ನು ಸ್ನೇಹದಿಂದ ಕಂಡು. ಹಿತ ಮಿತವಾದ ನುಡಿಗಳಿಂದ ಸ್ಫೂರ್ತಿಯನ್ನು ಉತ್ಸಾಹವನ್ನು ಅವರಲ್ಲಿ ಸದಾ ತುಂಬಿಸುತ್ತಿರುವುದೊಳ್ಳೆದು. ಸ್ನೇಹಿತನ ನಡವಳಿಕೆಯ ಬಗ್ಗೆ ಸಹಾನುಭೂತಿ ಪರವಾದ ದೃಷ್ಟಿಯಿಂದ ನೋಡಬೇಕೇ ಹೊರತು, ಕಟು ವಿಮರ್ಶೆ ಪ್ರಯೋಜನಕ್ಕೆ ಬಾರದು. ನಮ್ಮ ಸ್ನೇಹಿತನು ತಪ್ಪಿತಸ್ಥನೇ ಇದ್ದರೂ-ಅದನ್ನು ಪರೋಕ್ಷ ರೀತಿಯಿಂದ ತಿಳಿಸಲು ನೋಡಬೇಕಲ್ಲದೆ—ಇದಿರಿದಿರಾಗಿ ಹೇಳಿ, ಮುಖಭಂಗವನ್ನೂ ತೇಜೋವಧೆಯನ್ನೂ ಮಾಡುವುದು ಸಮನಲ್ಲ. ಇಬ್ಬರ ಅಭಿರುಚಿಯೂ ಒಂದು ಸಾಮಾನ್ಯ ಮಾಧ್ಯಮವನ್ನು ಹೊಂದಿಕೊಂಡು ಬೆಳೆಯುವಂತೆ ನೋಡಿಕೊಂಡರೆ-ಆ ಸ್ನೇಹ ಚಿರಕಾಲವಾಗಿ ಉಳಿಯಲು ನೆರವಾಗುತ್ತದೆ. ನಮ್ಮ ಸ್ನೇಹಿತನ ಮನೋಭಾವನೆಯನ್ನರಿತು, ಅದನ್ನು ತಿಳಿದು ನಡೆಯುವ ಜಾಣಾಕ್ಷತೆ ನಮ್ಮಲ್ಲಿದ್ದರೆ, ಅದರಿಂದ ತುಂಬ ಲಾಭವಿದೆ ಸ್ನೇಹಿತನ ಸುಖದ ಗಳಿಗೆ ನಮಗೂ ಸಂತೋಷ ತರಬೇಕು: ಅವನ ನೋವು ಬೇನೆ ನಮ್ಮಲ್ಲೂ ದುಃಖವುಂಟುಮಾಡಬೇಕು. ವ್ಯಕ್ತಿಗತವಾದ ಭೇದವೆಷ್ಟೇ ಇದ್ದರೂ ಮನಸ್ಸು ಸಹನೆಯಿಂದಲೂ ಸಹಾನುಭೂತಿಯಿಂದಲೂ ಕೂಡಿರಬೇಕು. ಇಂಥ ಉತ್ತಮ ಗುಣಗಳನ್ನು ಬೆಳೆಸಿಕೊಂಡರೆ, ನಾವು ಯೋಗ್ಯವಾದ ಸ್ನೇಹಿತರನ್ನು ತ್ವರ್ಯದಲ್ಲಿಯೇ ಮಾಡಿಕೊಳ್ಳಬಲ್ಲೆವು: ಮತ್ತು ಆ ಸ್ನೇಹ ಚಿರಸ್ಥಾಯಿಯಾಗುವುದೂ ಸಾಧ್ಯ.

ರಾಜಕೀಯವಾಗಿ ಮತಭೇದವಿರುವ ನಮ್ಮ ಹಲವು ಪಕ್ಷಪಂಗಡಗಳು ಜನಹಿತವೆಂಬ ಸಾಮಾನ್ಯ ಮಾಧ್ಯಮದ ಮೂಲಕ ಏಕೋದ್ದೇಶ ಸಾಧನೆಗಾಗಿ ಶ್ರಮಿಸಲು ಸಾಧ್ಯವಿದೆ. ಪಂಚವಾರ್ಷಿಕ ಯೋಜನೆಯಂಥ ರಾಷ್ಟ್ರೀಯ ಕಾರ್ಯವನ್ನು ಯಶಸ್ವಿಯಾಗಿಸುವಲ್ಲಿ ಎಲ್ಲ ಪಕ್ಷಪಂಗಡಗಳು ಸ್ನೇಹಿತರಂತೆ ಕೂಡಿಕೊಂಡು ಸಹಕರಿಸಬಲ್ಲುವು ಋಷಿ ಮುನಿಗಳ ತಪಃಪ್ರಭಾವದಿಂದ ಹುಲಿ-ಹರಿಣಗಳು ಜೊತೆಗೂಡಿ ಬಾಳುವಂತೆ- ರಾಷ್ಟ್ರೀಯ ಜಾಗ್ರತಿ ನಮ್ಮೆಲ್ಲರನ್ನೂ ಒಂದುಗೂಡಿಸಲಿ!

ಓಂ ತತ್ಸತ್"

ಸ್ವೀಕಾರ ವಿಮರ್ಶೆ

ಶ್ರೀ ಕೃಷ್ಣಪಂಚಾಂಗ

೧೯೫೩-೫೪ನೇ ವಿಜಯ ನಾಮ ಸಂವತ್ಸರದ ಈ ಪಂಚಾಂಗವನ್ನು ಶ್ರೀ ಲಕ್ಷ್ಮೀನಾರಾಯಣ ಅಡಿಗರು ಗುಣಿಸಿ ಪರಿಶೋಧಿಸಿದ್ದಾರೆ. ನಿತ್ಯ ಪಂಚಾಂಗವನ್ನು ಆರ್ಯಭಟ ವ್ಯಾಕರಣ ರೀತಿಯಲ್ಲಿಯೂ ಗ್ರಹಣ ಗ್ರಹಸ್ಫುಟಾದಿಗಳನ್ನು ನವೀನ ದೃಕ್ಸಿದ್ಧಾಂತ ರೀತಿಯಲ್ಲಿಯೂ ಮಾಡಿರುವರು. ಉಪಯುಕ್ತವಾದ ಹಲವಾರು ವಿಷಯಗಳನ್ನೊಳಗೊಂಡಿರುವುದಲ್ಲದೆ ಮೇಷಾದಿ ದ್ವಾದಶ ರಾಶಿಯವರ ವರ್ಷ ಭವಿಷ್ಯವನ್ನು ಇದರಲ್ಲಿ ಸೇರಿಸಲಾಗಿದೆ. ಉಡುಪಿಯ ಮೆಜೆಸ್ಟಿಕ್ ಪ್ರೆಸ್ಸಿನವರು ಪ್ರಕಟಿಸಿರುವ ಈ ಪಂಚಾಂಗದ ಪ್ರತಿಯೊಂದಕ್ಕೆ ಐದಾಣೆ ಇಟ್ಟಿದ್ದಾರೆ.

ಭಾನುಮತಿ ಕಲ್ಯಾಣ

(ಯಕ್ಷಗಾನ ಪ್ರಬಂಧ)

ಗ್ರಂಥಕರ್ತರು: ಕೆ ಎನ್. ಈಶ್ವರ ಭಟ್ಟ, ಆನೆಕಲ್ಲು ಕರೋಪಾಡಿ ಗ್ರಾಮ ಮಿತ್ತನಡ್ಕ ಪುತ್ತೂರು ತಾಲೂಕು. ದ. ಕ. ಬೆಲೆ ಎಂಟಾಣೆ.

ಕೌರವ ರಾಜ ಸುಯೋಧನನ ಪತ್ನಿ ಭಾನುಮತಿ ಎಂದು ಎಲ್ಲರಿಗೂ ಗೊತ್ತಾದರೂ ದ್ರೌಪದಿ ಸ್ವಯಂವರದಷ್ಟು ಖ್ಯಾತಿಯು ಇವಳ ಕಲ್ಯಾಣಕ್ಕೆ ದೊರಕಿಲ್ಲ. ಮಹಾಭಾರತದಲ್ಲಿಯಾಗಲೀ ಬೇರೆಕಡೆಯಾಗಲೀ ಈ ಸಂಗತಿಗೆ ಮಹತ್ವವನ್ನೇ ಕೊಟ್ಟಿಲ್ಲ. ಸುಯೋಧನನು ಅವಳನ್ನು ಮದುವೆಯಾಗಲು ನೋಡಿದ ಬಗೆಯನ್ನು [ಈ ಪ್ರಸಂಗದಲ್ಲಿ ಬಣ್ಣಿಸಿದಂತೆ] ನೋಡುವಾಗ, ಅದೇನೂ ಉಲ್ಲೇಖನೀಯವೆನಿಸುವುದಿಲ್ಲ. ಆದರೂ ಹಲವು ಕಲ್ಯಾಣಗಳಲ್ಲಿ ಭಾನುಮತೀ ಕಲ್ಯಾಣಕ್ಕೆ ಸ್ಥಾನ ದೊರೆತಿಲ್ಲದಿರುವುದನ್ನು "ಕೊರತೆ" ಎಂದು ಭಾವಿಸಿ, ಪ್ರಕೃತದ ಗ್ರಂಥಕರ್ತರು ಈ ಪ್ರಬಂಧ ರಚನೆಯನ್ನು ಮಾಡಿದ್ದಾರೆ. ಪ್ರಸಂಗವನ್ನು ಅವರು ಬರೆದ ರೀತಿ ಚೆಲುವಾಗಿದೆ, ಭಾಷಾಶುದ್ಧತೆಯು ಎತ್ತಿ ತೋರುವಂತಿದೆ. ಆದರೆ ಕಥಾವಸ್ತುವಿಗೆ ನೇ ಅಮುಖ್ಯ ಹಾಗೂ ಮಹತ್ವವಿಲ್ಲದಿರುವಾಗ, ಈ ಪ್ರಬಂಧ ಜನಪ್ರಿಯವಾಗುವ ಬಗ್ಗೆ ಸಂದೇಹವಿರುವುದು ಸಹಜ.

ಮಾತೃಶ್ರೀ (ಕಾದಂಬರಿ) —

ಬರೆದವರು: ಶ್ರೀ ಸಿ ಎಂ ವಿ. ಶಮ ಬಿ. ಎ. ಪ್ರಕಾಶಕರು: ಸರ್ವೋದಯ ಸಾಹಿತ್ಯಮಾಲೆ, ಹುಬ್ಬಳ್ಳಿ ಬೆಲೆ: ರೂ ೧-೪-೦

ಇದೊಂದು ಸಾಮಾನ್ಯ ಮಟ್ಟದ ಕಾದ ಬರಿ. ತಂದೆತಾಯಿಗಳ ಮಾತನ್ನು ಮೀರಿ, ಅವರ ಇಚ್ಛೆಗೆ ವಿರುದ್ಧವಾಗಿ ಮಂಟಯು ಶ್ರೀಮಂತ ಹುಡುಗಿಯೊಬ್ಬಳನ್ನು ಮದು ಯಾಗಿ, ಕೊನೆಗೆ ಅವಳಿಂದ ತಿರಸ್ಕೃತನಾದ ಬ್ಬ ತರುಣನ ವಿಷಾದಪೂರ್ಣ ಚಿತ್ರವಿಲ್ಲಿ ತಾಯಿತಂದೆಗಳ ಕಡೆಯಿಂದಲೂ ಕೈ ಹಿಡಿ ವಳ ಕಡೆಯಿಂದಲೂ ತುಚ್ಛೀಕಾರವನ್ನು ಹೊಂದ ಬೇಕಾಗಿ ಬಂದ ಈ ತರುಣನ ಬಗ್ಗೆ ದುಗರಲ್ಲಿ ಕನಿಕರ ಮೂಡುವುದು. ಆದರೆ ತಾಯಿ ತಂದೆಯರ ಮೇಲೆ ಈ ದೋಷವನ್ನು ಯಾರೂ ಹೇರಲಾರರು. ಬದಲಿಗೆ ತರುಣ ಮೇಲೆಯೇ ತಾಯಿ ತಂದೆಯರನ್ನು ಕಡೆಗಣಿಸಿದ ತಪ್ಪನ್ನು ಹೊರಿಸಲು ನಾವು ಮುಂದಾದೇವು. ಕೊನೆಯಲ್ಲಿ ತಾಯಿಯ ಕ್ಷಮಾಯಾಚನ ಮಾಡಿ ತರುಣನು ಹೃದಯ ಹಗು ಮಾಡಿಕೊಳ್ಳುತ್ತಾನೆ. ಕಥಾ ವಸ್ತುವಿನಲ್ಲಿ ನಾವೀನ್ಯವಿಲ್ಲದಿದ್ದರೂ. ಕಥಾನಿರೂಪಣೆಯೂ ಬೇಸರ ತರುವಂತಿಲ್ಲ. ಇನ್ನೂ ಬೆಳೆ ಬಾಲದ ಲೇಖಕರಲ್ಲಿ ಶರ್ಮ ಅವರೂ ಒ ರು. ಅವರಲ್ಲಿ ಬರೆಯುವ ಹುಮ್ಮಸ್ಸೂ ಇದ ಮತ್ತವರ ಲೇಖನಿಗೆ ಆ ಸಾಮರ್ಥ್ಯವೂ ಇ ಎಂಬುದನ್ನು ಈ ಕಾದಂಬರಿ ತೋರಿಸಿ ಕ ಡುತ್ತದೆ.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S C 444/195

ಬಿ, ರಾಘವೇಂದ್ರ ರಾವ್— ವಾದಿ

ಮತ್ತು

ಕೊರಗಪಳು ಸೆಟ್ಟಿ ದುರ್ಗ ಸೆಟ್ಟಿ ಮಂಗಳೂ ಡ್ಪಿ ತಾಲೂಕು ಕಡೆಕಾರು ಗ್ರಾಮ—ಪ್ರತಿವಾ

ವಾದಿಯು ಪೂರ್ವಾಧಿಕಾರಿಗೆ ಪ್ರತಿವಾದಿ ಪೂರ್ವಾಧಿಕಾರಿಯು ತಾರೀಕು 5-1-187 ರಲ್ಲಿ ರಿಜಿಸ್ಟ್ರನಿಸಿ ಬರಕೊಟ್ಟ ಮೂಲಗೇ ಯೊದ್ರಾನುಡಿ ಪ್ರಕಾರ ವಾದೀಗೆ ಪ್ರತಿವಾ ಳಿಂದ ವಿಕೃತಿ ಮತ್ತು ಖಗ ಸಂದ ಬಂಬೇಕಾದ ಬಾಕಿ ಗೇಣಿ ಬದ್ದಿ ಕೂ ರೂಪಾಯಿ 18-1-9ಕ್ಕೆ ವಾದಿಯು ಪ್ರ ವಾದಿಳ ಮೇಲೆ ಮಾಡಿದ ಸದರಿ ವ್ಯಾ ವು ಪ್ರತಿವಾದಿಳ ಉದಾಹರಣೆಯು ಬ ತಾರೀಕು 5 12-1952ಕ್ಕೆ ದಟ್ಟಿರುತ್ತದೆ ತಿವಾದಿಳಿಗೆ ಆಕ್ಷೇಪಣೆಯುಂವದಾದಲ್ಲಿ ದರಿ ತಾರೀಕಿಗೆ ಬೆಳಗ್ಗೆ 10 ಗಂಟೆಗೆ ಕೋರ್ಟಿ ಮುಂದೆ ಹರದಾಗ್ಗೆ ಹಾಜರಾಗಿ ಜ್ಯಾಹೀ ಮಾಡಿಕೊಳ್ಳತಕ್ಕದ್ದು ಯೆಂಬ ಸಂಗ್ತಿ ಮೂಲಕ ತಿಳಿಸಿಯದೆ

K Laxminarayana Aitha

Vakil for Plaintiff

UDIPI ತಾ 11—11—1952

ಅಮೃತಾಂಜನ
ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಜಾತುಕೊಳ್ಳುವುದು, ಚೇಳುವಿಷ ಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

SOVEREIGN REMEDY
AMRUTANJAN
Best Indian Pain Balm
Amrutanjan Depot
BOMBAY MADRAS

REGD
ಹುಳುಕಡ್ಡಿ
ಮದ್ದು
ನಮ್ಮಲ್ಲಿ
ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ

ತೃಪ್ತಿಕರವಾದ ವಸತಿ— ಹಿತಕರವಾದ ಊಟ— ರುಚಿಕರವಾದ ಉಪಾಹಾರ ಇವುಗಳಿಗೆ
ಆದರ್ಶ ನಿಲಯವೆಂದರೆ
ಫುಡ್ ಲೇಂಡ್ಸ್
ಉಡುಪಿ-
ಯಾತ್ರಿಕರಿಗೂ ಪ್ರಯಾಣಿಕರಿಗೂ
ಸರ್ವ ಅನುಕೂಲವಾಗುವಂತೆ
ನಗರದ ಕೇಂದ್ರಭಾಗದಲ್ಲಿದೆ

ಮಾನವ ವಿಜಯದ ಹೆದ್ದಾರಿ!
ಆರ್ಥಿಕ ಮತ್ತು ಸಾಂಪತ್ತಿಕ ಅನುಕೂಲತೆಯು ಇಂದಿನ ಮಾನವ ಜೀವನದ ವಿಜಯದ ಹೆದ್ದಾರಿ.
ಜನತೆಗೆ ಈ ಅನುಕೂಲತೆಗಳನ್ನೊದಗಿಸಿ ಸಾಂಪತ್ತಿಕ ಅಭಿವೃದ್ಧಿ ಸಾಧಿಸುವುದೇ ಬೇಂಕುಗಳ ಹೆಗ್ಗುರಿ.
ದಿನೇ ದಿನೇ ಜನ ವಿಶ್ವಾಸಗಳಿಸಿ ಪ್ರಗತಿ ಹೊಂದುತ್ತಿರುವ
ದಿ ವಿಜಯ ಬೇಂಕ್, ಲಿಮಿಟೆಡ್.
ಇದರೊಡನೆ ನಿಮ್ಮ ವ್ಯವಹಾರ ಬೆಳೆಸಿ ಅನುಕೂಲತೆ ಪಡೆದು ಜೀವನದಲ್ಲಿ ವಿಜಯ ಸಾಧಿಸಿರಿ.
ಗಿರಾಕಿಗಳ ಹಿತಸಾಧನೆ ಮತ್ತು ವಿಶ್ವಾಸ ಸಂಪಾದನೆಯು ವಿಜಯ ಬೇಂಕಿನ ಅಮೂಲ್ಯ ಸೊತ್ತು.
The Vijaya Bank Ltd.,
Head Office: **MANGALORE-3**
Branches at:
Udipi, Kaup, Coondapur, Byndoor, Karkal, Brahmavar, City-Mangalore' Kasaragod, Puttur, Kanhangad, Bombay & Mercara.

For Protection and Provision Consult
The New Guardian of India Life Insurance Co., Ltd.
Estd] Head office: **MADRAS** [1934

NEW BUSINESS	Exceeds	...	66½	Lakhs.
PREMIUM INCOME	,,	...	15	,,
LIFE FUND	,,	...	54¾	,,
ASSETS	,,	...	60¼	,,
BUSINESS IN FORCE	Nearly		3	Crores.

A Policy in this Progressive Life Office is good investment; its Agency is valuable business connection.
Applications for Representation are invited from energetic influential persons, with good connection. *Please apply to:*
G. Wallia, *Branch Manager.*
Diamond Building, Hampankatta, MANGALORE, S. K.


Applauded as the BEST Rubber Stamp Makers all over India
CROWN RUBBER STAMP CO.
Mangalore
Estd. 1926

ಇಂದಿನ ಸಮಾಜ ಹಾಗೂ ಒಳ್ಳೆಯತನ

ಹಿಂದಿನ ಕಾಲದಲ್ಲಿ ಜನಗಳು ಅದೃಶ್ಯವಾದ ಒಂದು ಮಹಾಶಕ್ತಿಯಲ್ಲಿ ಶ್ರದ್ಧೆಯುಳ್ಳವರಾಗಿದ್ದು, ಒಳ್ಳೆಯವರಾಗಿ ಬಾಳಲು ಪ್ರಯತ್ನಿಸುತ್ತಿದ್ದರು. ಒಳ್ಳೆಯತನವೆಂದರೆ ಸತ್ಯವಂತರಾಗಿರುವುದು, ಮೋಸಮಾಡದಿರುವುದು, ದಯಾವಂತರಾಗಿರುವುದು ಹಾಗೂ ನಿಸ್ವಾರ್ಥಿಗಳಾಗಿರುವುದು. ಈ ರೀತಿಯ ಒಳ್ಳೆಯತನದಿಂದ ಬಾಳುವುದೇ ಸದಾಚಾರವೆಂದು ಅವರು ನಂಬಿದ್ದರು. ಈ ಪರೀಕ್ಷೆಯಲ್ಲಿ ಅವರಿಗೆ ಗೆಲುವಾಗಲಿ ಇಲ್ಲವೇ ಸೋಲಾಗಲಿ ಅದು ಅವರಿಗೆ ಮುಖ್ಯವೆನಿಸುತ್ತಿದ್ದಿಲ್ಲ. ಎಲ್ಲರೂ ಒಳ್ಳೆಯವರಾಗಿ ಬದುಕುವಂತ ಸಮಾಜವು ತಕ್ಕ ಸನ್ನಿವೇಶವನ್ನುಂಟುಮಾಡಿಕೊಡುತ್ತಿದ್ದಿತು. ಒಳ್ಳೆಯವರಾಗಿ ಬಾಳಿ ಎಂಬುದೇ ದೇವರ ಆಜ್ಞೆಯಾಗಿದ್ದಿತು, ಅದೇ ಧರ್ಮದ ಬೋಧೆಯಾಗಿದ್ದಿತು ಒಳ್ಳೆಯ ಬಾಳಿಲ್ಲದೆ, ವ್ಯಕ್ತಿಯು ಪೂರ್ಣ ವಿಕಾಸ ಹೊಂದಲಾರದು ಹಾಗೂ ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳಲಾರದು. ಒಳ್ಳೆಯ ಬಾಳಿನಿಂದ ಮನಶ್ಶಾಂತಿಯೂ ಪರಮ ಸುಖವೂ ದೊರೆತು, ವ್ಯಕ್ತಿಯು ಜನನ ಮರಣಗಳಿಂದ ಬಿಡುಗಡೆ ಹೊಂದುವುದು.

ಧರ್ಮದೃಷ್ಟಿ ತಪ್ಪಿದೆ!

ಸದ್ಯದ ಸಮಾಜದಲ್ಲಿ ಧರ್ಮದ ಹಿಡಿತವು ತಪ್ಪಿಹೋಗಿದೆ; ದೇವರಲ್ಲಿ ನಂಬಿಕೆಯೂ ತಪ್ಪಿಹೋಗಿದೆ; ನೈತಿಕವಾದ ಸಾತ್ವಿಕ ಗುಣಗಳಿಗೆ ಬೆಲೆ ಕೊಡುವುದೆಂದರೆ ಒಂದು ಬಗೆಯ ಗೊಡ್ಡು ಹಳೆಯ ಆಚಾರವೆಂದು ಬಗೆಯಲಾಗುತ್ತಿದೆ, ಹಾಗೂ ಸಾತ್ವಿಕ ಜೀವನವು ಭಾರವಾದ ಒಂದು ಹೊರೆ ಎಂದು ಭಾವಿಸಲ್ಪಡುತ್ತದೆ. ಅಂತೂ ಇಂದಿನ ದೃಷ್ಟಿಯಲ್ಲಿ ಜನರ ಹೃದಯದಲ್ಲಿ ಭೌತಿಕವೇ ಅತಿಸಾಪೇಕ್ಷವಾಗಿರುವುದರಿಂದ ಒಳ್ಳೆಯವರಾಗಲೂ ಒಳ್ಳೆಯತನಕ್ಕೂ ಉತ್ಸಾಹವೇ ಇಲ್ಲದಂತಾಗಿದೆ. ಈ ಭೀಕರ ಪರಿಸ್ಥಿತಿಯನ್ನು ಉದ್ಧರಿಸುವುದಕ್ಕಾಗಲೂ ಹೆಚ್ಚಿನ ಸಹಾಯ ಸಿಕ್ಕುವುದಿಲ್ಲವೆಂದು ನಾನು ದೃಢವಾಗಿ ನಂಬಿದ್ದೇನೆ.

ಇಂದಿನ ಸಮಾಜದ ಈ ಅತಿಭೌತಿಕ ವಾತಾವರಣದಲ್ಲಿಯೂ, ಎಲ್ಲಿಯೋ ಕೆಲವರು ತಮತಮಗೆ ಸಾಕೆಂಬಂತೆ ಈ ಭೂಲೋಕಕ್ಕೆ ಸ್ವರ್ಗವನ್ನೇ ತಂದು ಕೊಡುವಂತಹ ಕಾರ್ಯಗಳಲ್ಲಿ ಮಗ್ನರಾಗಿದ್ದಾರೆ. ಜನತೆಯ ಹೃದಯವನ್ನು ನಿರ್ಮಿಸುವ ಬಗ್ಗೆ ಅಂತಹರು ಉತ್ಸುಕತೆ ತೋರಿಸುತ್ತಿದ್ದಾರೆ. ಈ ಪ್ರಯತ್ನಗಳಲ್ಲಿ ಅತ್ಯಂತ ಉದಾತ್ತವಾದವುಗಳು ಕೂಡಾ ಮಾನವೀ ನೀಚತೆ ಯೆಂಬ ಬಂಡೆಗೆ ತಾಗಿ ಪುಡಿ ಪುಡಿ ಯಾಗುತ್ತಿವೆ. ವ್ಯಕ್ತಿಗಳ ಸುಧಾರಣೆ ಅದ ಹೊರತು ಸಾಮಾಜಿಕ ಸುಧಾರಣೆ ಅಗಲಾರದೆಂಬುದೂ ದಿನೇ ದಿನೇ ಹೆಚ್ಚೆಚ್ಚು ಸ್ಪಷ್ಟವಾಗತೊಡಗಿವೆ. ಅದರಲ್ಲಿಯೂ ಸಮಾಜದ ಮುಖ್ಯರು ಹಾಗೂ ಪ್ರತಿಷ್ಠಿತರು ಎಂಬವರು ಒಳ್ಳೆಯವರಾಗದ ಹೊರತು ಸಮಾಜವು ಒಳ್ಳೆಯದಾಗಲಾರದು.

ಇವೆಲ್ಲವೂ. ಈ ಸಮಸ್ಯೆಯ ತಿರುಳಿದೆ. ಆದರ್ಶ ಸಮಾಜವನ್ನು ನಿರ್ಮಿಸುವುದು ಅಶಕ್ಯವಾದರೂ ಒಳ್ಳೆಯ ಸಮಾಜವನ್ನಾದರೂ ಕಟ್ಟಲೂ ನಾವು ಕೆಲವರು ಆತುರರಾಗಿರುವೆವು. ಆಧುನಿಕ ವಿಜ್ಞಾನವು, ಸಲಕರಣೆಗಳೂ ಈ ಕೆಲಸವನ್ನು ಹಗುರಗೊಳಿಸುವವು. ಆದರೆ ಅಂತಹ ಸಂಪತ್ತು ಮತ್ತು ಸಲಕರಣೆಗಳು ಈ ಸದಾಶಯದವರ ಕೈಯಲ್ಲಿದೆ.?

ಕೆಲವರಂತೂ ಆ ಧ್ಯೇಯಗಳನ್ನೆಲ್ಲಾ ಮರೆತು ಬಿಟ್ಟು, ಅಧಿಕಾರ, ಸಂಪತ್ತು, ಸ್ಥಾನಮಾನಗಳಿಗಾಗಿ ಬಡಿದಾಡುತ್ತ, ಹೊಸತಾಗಿ ನಿರ್ಮಿಸಬೇಕೆಂದಿರುವ ಸಮಾಜ ಮಂದಿರದ ಅಡಿಗಲ್ಲನ್ನೇ ಕುಸಿದು ಬೀಳುವಂತೆ ಮಾಡಿದ್ದಾರೆ.

ಚಾರ್ವಾಕ ಮತ

ಆದ್ದರಿಂದ, ಮನುಷ್ಯನ ಒಳ್ಳೆಯತನವನ್ನುಳಿಸಿ ಕೊಳ್ಳುವುದೇ ಇಂದು ಅತ್ಯಂತ ಮಹತ್ವದ ಹಾಗೂ ಮೂಲಭೂತ ಸಮಸ್ಯೆಯಾಗಿ ಬಿಟ್ಟಿದೆ. ಒಳ್ಳೆಯತನದಿಂದ ಬದುಕು ಸಾಗಿಸುವ ಅಗತ್ಯವೇನಿದೆ.? ಎಂದು ಪ್ರತಿ ವ್ಯಕ್ತಿಯೂ ಇಂದು ಕೇಳತೊಡಗಿದೆ! ದೇವರಿಲ್ಲ, ಆತ್ಮ ಇಲ್ಲ, ನೀತಿಯಿಲ್ಲ ಪುನರ್ಜನ್ಮ ಇಲ್ಲ ಜನನ ಮರಣಗಳ ತೊಳಲಾಟವೇ ಇಲ್ಲ ಎಂಬಂತೆ ಜನತೆಯು ನಡೆದುಕೊಳ್ಳ ತೊಡಗಿದೆ. "ಪಂಚ ಭೌತಿಕ ವಸ್ತುಗಳಿಂದ ಮಾಡಿದ ಒಂದು ಒಡವೆ ನಾನು; ಹಾಗೂ ಕೆಲವು ಕಾಲ ತಿಂದು ತೇಗಿ, ಮಕ್ಕಳನ್ನು ಪಡೆದು ಪುನಃ ಪಂಚ ಭೌತಿಕದ ಮಹಾಸಾಗರದಲ್ಲಿ ಕರಗಿ ಹೋಗುವೆನು." ಎಂಬ ಚಾರ್ವಾಕಮತವೇ ಇಂದಿನ ಜನತೆಯ ಹಾಗೂ ಸಾಮಾಜಿಕ ಪ್ರಮುಖರ ಅಂತರಂಗದ ಭಾವನೆಯಾಗಿದೆ! ಸುತ್ತು ಮುತ್ತಲೆಲ್ಲ ಮೋಸ, ಕ್ರೂರತನ ಅಧಿಕಾರಲಾಲಸೆ, ಹಿಂಸೆ ಲೋಭ ಬಡಕತನ, ಅತಿ ಭೋಗ ಮತ್ತು ಅಸತ್ಯಗಳೇ ಗೆಲ್ಲುತ್ತಿರುವುದು ಕಂಡು ಬರುತ್ತದೆ, ಅಂದ ಮೇಲೆ, ತಾನೇಕೆ ಒಳ್ಳೆಯತನದ ಬಾಳನ್ನು ಬದುಕಬೇಕು? ಎಂದು ವ್ಯಕ್ತಿಯು ಪ್ರಶ್ನಿಸುತ್ತಿದೆ ಸಮಾಜವೂ ಕೂಡಾ, ಒಳ್ಳೆಯತನದ ಬಾಳಿನ ಅಗತ್ಯವಿಲ್ಲವೆಂಬ ಉತ್ತರವನ್ನೇ ಕೊಡುತ್ತಿದೆ. ಹೆಚ್ಚು ಬುದ್ಧಿವಂತರಾದಂತೆಲ್ಲ ಹೆಚ್ಚು ಧೈರ್ಯದಿಂದ ಹಾಗೂ ಹೆಚ್ಚು ಯುಕ್ತಿಯಿಂದ ಈ ಪ್ರಶ್ನೆಗೆ ಉತ್ತರ ಕೊಡುತ್ತ ಎಲ್ಲವನ್ನು ಭೌತಿಕದ ಅತಿರೇಕದಿಂದ ನೋಡಲು ಬಿಡಲಾಗುತ್ತಿದೆ

ಹಲವುವರ್ಷ ನಾನು ಒಂದು ಬಗೆಯ ನೈತಿಕತೆಯ ಭೌತವನ್ನು ಪ್ರತಿಪಾದಿಸುತ್ತ ಬಂದಿದ್ದೆನು ಭೌತವು ಈ ಜೀವಧಾರಣೆಗೆ ಬೇಕಾದರೂ, ಆದರ ಅತ್ಯಾಕಾಂಕ್ಷೆಯು ಮನುಷ್ಯನ ಆತ್ಮವನ್ನು ನಾಶಗೊಳಿಸಿ ಒಳ್ಳೆಯತನವನ್ನು ಹಾಳು ಮಾಡುವುದೆಂಬ ಬಗ್ಗೆ ನನಗೆ ಯಾವ ಸಂದೇಹವೂ ಇರುವುದಿಲ್ಲ. ಭೌತಿಕಾತಿರೇಕದ ನಾಗರಿಕತೆಯಲ್ಲಿ ಒಳ್ಳೆಯ ಜೀವನಕ್ಕೆ ಯಾವ ಪ್ರೋತ್ಸಾಹವೂ ದೊರೆಯದು, ಭಯದಿಂದ ಪ್ರತಿಷ್ಠಿತರೂ ಕುಗ್ಗಿ, ಭೌತಿಕದ ಸೇವಕರಾಗುತ್ತಾರೆ, ಅದು ಒಂದು 'ಪಿಶಾಚ'ದ ಸ್ವರೂಪವನ್ನು ಧರಿಸಿ, ಅದೇ ಆವನ ಸಾರ್ವಜನಿಕ ಹಾಗೂ ಸಾಮಾಜಿಕ ಜೀವನದ ದೇವರಾಗಿ ಬಿಡುತ್ತದೆ. ಆ ದೇವರೇ ಕೆಟ್ಟದ್ದಾಗುತ್ತಲೇ ಅದರ ಭಕ್ತರೂ ಕೂಡಾ ಕೆಟ್ಟವರಾಗಬೇಕಾಗುವುದು.

ಭೌತದೃಷ್ಟಿಯ ಯೋಜನೆ

ಆದ್ದರಿಂದ ಮನುಷ್ಯರು ಭೌತವನ್ನು ದಾಟಿ ಮುಂದೆ ಹೋಗಬೇಕು. ಹಾಗೆಹೋಗದಿದ್ದಲ್ಲಿ ಒಳ್ಳೆಯತನದ ಬದುಕನ್ನು ಸಾಗಿಸುವುದು ಅಶಕ್ಯವಾಗುವುದು, ಆದ್ದರಿಂದ ಭೌತಿಕ ರೂಪದ ಯೋಜನೆಗಳ ಮೂಲಕವಾಗಿ ಒಳ್ಳೆಯತನದ ಸುಧಾರಿತ ಸಮಾಜವನ್ನುಂಟು ಮಾಡಲಿಕ್ಕೆ ಶಕ್ಯವೇ ಇಲ್ಲವೆಂದು ನಾನು ನಿರ್ಧರಿಸಿ ಕೊಂಡಿದ್ದೇನೆ.

ಕೆಲವರು ಹೀಗೆ ಪ್ರಶ್ನಿಸಬಹುದು. ಮನುಷ್ಯರು ಒಳ್ಳೆಯತನ ಉಳ್ಳವರಾಗಬೇಕಾದರೆ, ಅದಕ್ಕೆ ಅನುಗುಣವಾದ ಸಾಮಾಜಿಕ ಹಿನ್ನಲೆಯು ಅಗತ್ಯವೇ? ಮನುಷ್ಯನಲ್ಲಿ ಮೂಲತಃ ಒಳ್ಳೆಯತನ ವಿಲ್ಲವೇ? ಪ್ರತಿಯೊಂದು ಸಮಾಜದಲ್ಲಿಯೂ ಹೆಚ್ಚಿನ ಜನರು ಯೋಗ್ಯರಾಗಿಲ್ಲವೆ? ಈ ಪ್ರಶ್ನೆಗಳಿಗೆ ನನ್ನ ಉತ್ತರ ಹೌದು ಹಾಗೂ ಅಲ್ಲ.

ಮನುಷ್ಯನು ಸಮಾಜ ಜೀವಿ; ಆತನು ಭಾಗಶಃ ನಿಸರ್ಗದಿಂದಲೂ ಭಾಗಶಃ ಸಾಮಾಜಿಕ ವಾತಾವರಣದಿಂದಲೂ ರೂಪುಗೊಳ್ಳುತ್ತಾನೆ. ಮನುಷ್ಯನು ನಿಸರ್ಗದಿಂದ ಎಷ್ಟರ ಮಟ್ಟಿಗೆ ರೂಪಿತನಾಗುತ್ತಾನೆಂಬುದನ್ನು ಸ್ಪಷ್ಟವಾಗಿ ಹೇಳಲು ಬರುವುದಿಲ್ಲ. ಒಳ್ಳೆಯತನ ಕೆಟ್ಟತನ ಎಂಬುದರ ಮೂಲಕಲ್ಪನೆಯು ನಿಸರ್ಗ ನಿಯಮಕ್ಕೂ ಮೀರಿತ್ತವೆ, ನಿಸರ್ಗದಲ್ಲಿ ಒಳ್ಳೆಯದು, ಕೆಟ್ಟದ್ದು ಎಂಬ ಭಿನ್ನತೆಯೇ ಇರುವುದಿಲ್ಲ. ಮನುಷ್ಯ ಸ್ವಭಾವವು ತನ್ನ ವೈಯಕ್ತಿಕ ಪೂರ್ವವಾಸನೆ ಹಾಗೂ ಕುಲಾಗತ ಕ್ರಮಾನುಸಾರವಾದ ರೂಪವನ್ನು ತಳೆಯುವುದಾದರೂ, ಬಹುಮಟ್ಟಿಗೆ ಅದು ಪ್ರಾರಂಭದಲ್ಲಿ ಯಾವುದೇ ಸಾಮಾಜಿಕ ಹಾಗೂ ಧಾರ್ಮಿಕ ರೀತಿ ರೂಢಿಗಳ ಪ್ರಭಾವಕ್ಕೆ ಒಳಗಾಗದೇ ಪರಿಶುದ್ಧ ಸ್ಥಿತಿಯಲ್ಲಿರುವುದು. ಮುಂದೆ ಅದು ಆಯಾಯ ಸಮಾಜದ ರೀತಿ ರೂಢಿಗಳ ವಾತಾವರಣಕ್ಕನುಗುಣವಾದ ನೈತಿಕ ರೂಪವನ್ನು ಧಾರಣೆ ಮಾಡುವುದು.

ಪ್ರತಿಯೊಂದು ಸಮಾಜದಲ್ಲಿಯೂ ಹೆಚ್ಚಿನ ಮಂದಿ ಸಭ್ಯರಾಗಿಯೂ ಒಳ್ಳೆಯವರಾಗಿಯೂ ಇರುವರೆಂಬುದು ನಿಜ. ಈ ಜನರು ಯಾವುದೇ ಬಗೆಯ ಮಹತ್ವದ ನೈತಿಕವಿಚಾರದಲ್ಲಿ ತಮ್ಮ ತೀರ್ಮಾನವನ್ನು ಹೇಳುವ ಪರಿಸ್ಥಿತಿಯಲ್ಲಿರುವುದಿಲ್ಲ. ಯಾಕೆಂದರೆ, ಅವರ ದೈನಂದಿನ ಜೀವನವು ತಮ್ಮ ಸಂಕುಚಿತ ಜಾತಿಮತಗಳ ಗುಂಪಿನೊಳಗೇ ಸಾಗುತ್ತಿರುವುದರಿಂದ ಯಾವುದು ಒಳ್ಳೆಯದು ಯಾವುದು ಕೆಟ್ಟದು ಎಂಬುದನ್ನು ಅವರು ಆಯಾ ಜಾತಿಮತ ರೀತಿ ರೂಢಿಗಳ ಮೇಲಿಂದಲೇ ನಿರ್ಧರಿಸಿಕೊಳ್ಳುವರು.

ಭೌತಿಕ ಸಂಪದ್ವಿಲಾಸಗಳು ಮುಖ್ಯ ಧ್ಯೇಯವಲ್ಲವೆಂದು ಯಾರು ಅಂತಃಕರಣಪೂರ್ವಕವಾಗಿ ಭಾವಿಸುತ್ತಾರೋ ಅವರು ಆಗಿಂದಾಗಲೇ ಬಾಹ್ಯಲೋಕದ ಮೋಹಗಳನ್ನು ಮರೆತು ಮೇಲ್ಪಟ್ಟಿದ್ದರಿಂದ, ಪೂರ್ಣವಿಕಾಸ ಹೊಂದಿದ ವ್ಯಕ್ತಿಗಳಾಗುವರು. ಆದ್ದರಿಂದ ಅಂತಹರು ಸದಾ ಒಳ್ಳೆಯತನ ಹಾಗೂ ನಿರ್ವಂಚನೆಯ ಬಾಳನ್ನೇ ಬಾಳುತ್ತಾರೆ. ಇದರಿಂದ ಮನುಷ್ಯನು ಜೀವನ ಸಂಪದ್ವಿಲಾಸಗಳ ಆಕಾಂಕ್ಷೆಯನ್ನು ತ್ಯಜಿಸಿದಾಗಲೇ ಒಳ್ಳೆಯತನ ಉಳ್ಳವನಾಗುವನೆಂದು ಹೇಳಬಹುದು.

—ಶ್ರೀ ಜಯಪ್ರಕಾಶ ನಾರಾಯಣ

ಜ. ಕ.

[೭ನೇ ಪುಟದಿಂದ ಮುಂದುವರಿದುದು]

ನಮ್ಮ ರಾಷ್ಟ್ರೀಯ ಸಮಸ್ಯೆಗಳ ಸ್ವರೂಪ

ಕೈ-ನಿರ್ದಿಷ್ಟವಾದ ದಾಖಲೆಗಳು ಸಿಗದಿರುವುದೇ ಮುಖ್ಯ ಕಾರಣವೆನ್ನಬಹುದು. ಹಾಗೆಯೇ ವಸ್ತುವಿನ ಬೆಲೆಯಲ್ಲಿ ಏರಿಳಿಕೆಯಾದಂತೆ ಆದಾಯ ಪ್ರಮಾಣದ ಮೇಲೂ ಅದರ ಪ್ರಭಾವವುಂಟಾಗುತ್ತಿದೆಂಬುದನ್ನು ಮರೆಯಲಾಗದು. ಹೀಗಿದ್ದರೂ ಕೂಡ ಸಾಮಾನ್ಯ ಭಾರತೀಯನು ಕಡು ಬಡವನಿದ್ದಾನೆಂಬ ನಗ್ನ ಸತ್ಯವನ್ನು ಈ ದೋಷಪೂರ್ಣ ಸಂಶೋಧನೆಗಳೂ ಎತ್ತಿತೋರಿಸುತ್ತವೆ. ೧೯೩೧ರಲ್ಲಿ ಭಾರತೀಯನ ಆದಾಯ ೬೫ ರುಪಾಯಿ ಇದ್ದಾಗ, ಜಪಾನೀಯನದ್ದು ೨೧೯ ರುಪಾಯಿ, ಜರ್ಮನಿ ೬೩೪ ರುಪಾಯಿ, ಫ್ರಾನ್ಸು ೬೩೬, ಬ್ರಿಟನು ೧೦೯೨, ಕೆನಡಾ ೧೩೮೮ ಮತ್ತು ಸಂಯುಕ್ತ ರಾಜ್ಯ ಅಮೇರಿಕಾ ೨೦೫೦ ಇತ್ತು. ಇಷ್ಟು ದೈನ್ಯಾವಸ್ಥೆಯಲ್ಲಿ ನಾವು ಬದುಕು ನಿರ್ವಹಿಸುತ್ತಿರುವುದು ನಿಜವಾಗಿಯೂ ಒಂದು ಚಮತ್ಕಾರ ಮತ್ತು ಜೋಡದ ಸಂಗತಿಯೇ ಸೈ. ನಮ್ಮ ಜನ [illegible]ಚಿತ್ತದಿಂದ ದೇವರ ಮೇಲೆ ಭಾರಹಾಕಿ ಅದೃಷ್ಟವನ್ನು ಹಳಿಯುತ್ತಾ ತಪ್ಪು ಚಿಂತನೆಯಲ್ಲಿ ತೊಡಗಿರುವರಲ್ಲಾ ಎಂದು ಕನಿಕರ ಪಟ್ಟುಕೊಳ್ಳಬೇಕು

ಸ್ವರ್ಗೀಯ ಪ್ರೇಮಚಂದ್ರರ ಧರ್ಮಪತ್ನಿ
ಶ್ರೀಮತಿ ಶಿವರಾಣಿ ದೇವಿಯರ
ಕಥಾಮಾಲಿಕೆಯ ಅನುವಾದ

ನಾರೀಹೃದಯವನ್ನು ಚಿತ್ರಿಸುವ
ಅತ್ಯುತ್ತಮ ಕತೆಗಳ ಸಂಗ್ರಹ

ಸ್ತ್ರೀಯರಲ್ಲಿಯೂ ಸಾಹಸ, ಸ್ನೇಹ, ವೀರ ಭಕ್ತಿ, ತ್ಯಾಗ, ಬಲಿದಾನಾದಿ ಅಮೂಲ್ಯ ಗುಣಗಳೂ ಇದ್ದೇ ಇವೆ ಎಂಬುದನ್ನು ಚೆನ್ನಾಗಿ ವಿವರಿಸಿರುವ ನವೀನ ಕತೆಗಳು.

ಬೆಲೆ: ರೂ 1-8 0
ನವಭಾರತಪುಸ್ತಕಭಂಡಾರ, ಉಡುಪಿ

More & More
PEOPLE BUY
PLATO
REGD.
PLATO FOUNTAIN PEN No. 66
The pen of the day
M. P. P. I. LTD. BOMBAY 4

ವಾರದ ಒಳಿತು ಕೆಡುಕುಗಳು

20-11-52ರಿಂದ ತಾ 26-11-52ರ ವರೆಗೆ

ಮೇಷ—ದಿನದಿಂದ ದಿನಕ್ಕೆ ನಿಮ್ಮ ಭಾಗ್ಯವು ಪ್ರಕಾಶವಾಗುತ್ತದೆ. ಕರ್ಮಲಾಭಗಳೊಡೆಯನಾಗಿ ಉಪಜಯವನ್ನು ಹೊಂದಿದ್ದ ಶನೈಶ್ಚರನು ಈಗಾಗಲೇ ವಕ್ರದೃಷ್ಟಿಯನ್ನಿಟ್ಟಿಹನು ಆದಕಾರಣ ನಿಮ್ಮ ಉದ್ಯಮಗಳಿಗೆ ಹೆಚ್ಚಿನ ಆಘಾತವುಂಟಾಗಲಿದೆ. ಸಂಸಾರಿಕ ತಾಪತ್ರಯಗಳು ಸದಾ ಪೀಡಿಸಲಿದೆ. ರಾಜಕೀಯ ಸಾಮಾಜಿಕ ಕ್ಷೇತ್ರಗಳಲ್ಲಿ ಪರಾಜಯವುಂಟಾದೀತು. ಆದರೂ ಭಾಗ್ಯದಲ್ಲಿದ್ದ ಶುಕ್ರನು ಬಹುಮಟ್ಟಿಗೆ ನಿಮ್ಮನ್ನು ಎತ್ತಿಹಿಡಿಯಲಿರುವನು ತಾ. 22, 23 24 25, ಈ ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು

ವೃಷಭ—ನಿಮ್ಮ ದೇಹಾರೋಗ್ಯದ ವಿಚಾರದಲ್ಲಿ ಹೆಚ್ಚಿನ ಗಮನವನ್ನಿಡಿರಿ. ಕಫಪ್ರಕೋಪದಿಂದಾಗಿ ಶ್ವಾಸರೋಗಗಳು ಕಾಣಿಸುವವು ದೇಹದಲ್ಲಿ ನಿಶ್ಶಕ್ತಿ ಹೆಚ್ಚಲಿದೆ. ಮಾತ್ರವಲ್ಲ ಮನಸ್ಸಿಗೂ ಶಾಂತಿಯಿರದು. ಅನಿರೀಕ್ಷಿತ ಪರ್ಯಟನದಿಂದಾಗಿ ನಾನಾ ದುಃಖ ಕಷ್ಟನಷ್ಟಗಳುಂಟಾಗುವವು, ವಿಜಾತಿಯರೊಡನೆ ವ್ಯರ್ಥ ಕಲಹಗಳು ಪ್ರಾಪ್ತವಾದಾವು, ವಾರಾಂತ್ಯದ 3 ದಿನಗಳಲ್ಲಿ ಇಷ್ಟಸಿದ್ಧಿ ಲಾಭಸಂತೋಷಗಳು ಪ್ರಾಪ್ತವಾಗಲಿವೆ

ಮಿಥುನ—ಕೈಕೆಸರಾದರೆ ಬಾಯಿ ಮೊಸರಾದೀತೆಂಬ ಲೋಕೋಕ್ತಿಯಂತೆ ನೀವು ಶ್ರಮವಹಿಸಿದುದಿರಿ. ತತ್ಫಲವಾಗಿ ನಿಮ್ಮ ಬಯಕೆಯು ಪೂರ್ಣವಾಗಲಿದೆ ವಿದ್ಯೋಪಯೋಗಿ ಜನತೆಯು ದಿನೇ ದಿನೇ ಪ್ರಗತಿಯನ್ನೈದುವುದು. ಸಾಮಾಜಿಕ ಕ್ಷೇತ್ರಗಳಲ್ಲಿ ಒಳ್ಳೆ ಕೀರ್ತಿ ಸಂಪಾದಿಸುವಿರಿ, ಆದರೆ ಶತ್ರುಗಳು ಪ್ರತೀಕಾರಾಸಕ್ತರಿರುವರು. ಹಲವಾರು ತರದಿಂದ ನಿಮ್ಮ ಅವನತಿಯನ್ನು ಸಾಧಿಸಲು ಹವಣಿಸುತ್ತಿರುವರು ತಾ. 20, 21, 26 ಈ ದಿನಗಳಲ್ಲಿ ನಿಮ್ಮ ಪರಿಶ್ರಮವು ಅಧಿಕ ಫಲ ನೀಯಲಿದೆ,

ಕರ್ಕಟ—ಪ್ರಬಲವಾದ ದೈವವು ನಿಮ್ಮನ್ನಿಂದು ಕಾಡುತ್ತಿರುವುದು, ಯಾವ ಕಾರ್ಯಕ್ಕೆ ಕೈ ಹಚ್ಚಲೀ ಕಷ್ಟ ನಷ್ಟಗಳೇ ಅಧಿಕವಾಗುವವು. ಅನ್ಯರೊಡನೆಯು ವಿರೋಧವುಂಟಾದೀತು. ಹೆಚ್ಚೇಕೆ ಕೈಹಿಡಿದಾಕೆಯೂ ಕಲಹಪ್ರಿಯಳಾಗುವಳು. ನೌಕರಿ ಜನರಿಗೂ ವ್ಯಾಪಾರವರ್ಗದವರಿಗೂ ಭೃತ್ಯ ಜನತೆಗೂ ದಿನಯಾತನೆಯು ಕಷ್ಟವಾಗಲಿದೆ. ಆದರೂ ವಾರಾದಿಯ 4 ದಿನಗಳಲ್ಲಿ ಸೇವಕ ಜನರಿಂದ ಲಾಭಯಾನವಾಹನಾದಿಗಳು ಲಭಿಸುವವು.

ಸಿಂಹ—ಯಾವ ಭಾಗದಲ್ಲಿ ನೋಡಿದರೂ ನಿಮಗೆ ಶುಭ. ಕೊರತೆಗಳು ಕಾಣಿಸವು. ಶಕ್ತಿಯುಕ್ತಿ ಸಾಧ್ಯಗಳಿಂದ ಪ್ರತಿಯೊಂದು ಕಾರ್ಯಗಳಲ್ಲೂ ನಿಮ್ಮ ಬಯಕೆಯು ಅನಾಯಾಸದಿಂದ ಅಚಿರದಲ್ಲಿ ನೆರವೇರಲಿದೆ. ಜನತೆಯು ಗೌರವವಾದರಕ್ಕೆ ಪಾತ್ರರಾಗುವಿರಿ. ರಾಜಕಾರ್ಯರಂಗದಲ್ಲಿ ನಿಮ್ಮ ಪಂಥವೇ ಮೇಲಾದೀತು. ಹೆಚ್ಚೇಕೆ ನಿಶ್ಚಿಂತೆಯಿಂದ ಕಾಲ ಕಳೆಯುವಿರಿ. ತಾ. 20ರಿಂದ 25ರ ವರೇಗಿನ ದಿನಗಳು ಅತೀವ ಪ್ರಶಸ್ತವಿದೆ.

ಕನ್ಯೆ—ನಿರೀಕ್ಷಿಸಿದ ಫಲವು ಲಭಿಸದೆ ಹೋದರೂ ನಿಮ್ಮ ಶ್ರಮವು ವಿಫಲವಾಗದು. ಕೆಲವುಟ್ಟಿಗೆ ಆರ್ಥಿಕ ತೊಂದರೆಗಳು ಕಾಣಬಂದರೂ ವಾರಾಂತ್ಯದಲ್ಲಿ ನಿವಾರಿತವಾಗುವವು. ಅನ್ಯಜನರ ವಿರೋಧ ದುಃಖಕ್ಕೆ ಸಿಲುಕುವಿರಿ ಹೆಂಡತಿಮಕ್ಕಳ ಆರೋಗ್ಯವು ಚೆನ್ನಾಗಿರದು. ಗುರು ಹಿರಿಯರೊಡನೆ. ಮನಸ್ತಾಪ ಹೆಚ್ಚುವದು ಮಾತ್ರವಲ್ಲ ಪ್ರವಾಸದಲ್ಲಿ ಕಷ್ಟನಷ್ಟಗಳೂ ಪ್ರಾಪ್ತವಾಗಲಿವೆ ವಾರಾಂತ್ಯದ 3 ದಿನಗಳಲ್ಲಿ ಕೆಲವೊಂದು ನಿಮ್ಮ ಬಯಕೆಯು ಈಡೇರಲಿವೆ.

ತುಲಾ—ನಿಮ್ಮ ಭಾಗ್ಯಪತಿಯಾದ ಬುಧನೂ ಲಾಭಪತಿಯಾದ ರವಿಯೂ ಇಂದು ಧನಸ್ಥಾನವನ್ನಾಶ್ರೈಸಿದ ಕಾರಣ ನಿಮ್ಮ ಸಂಪದ್ಭಾಗ್ಯವು ವಿಶೇಷ ವೃದ್ಧಿ ಹೊಂದಲಿದೆ. ಶುಕ್ರ ಭೃತ್ಯಾದಿಗಳಿಂದೊಡಗೂಡಿದ ಗೃಹಕೃತ್ಯದಲ್ಲಿ ಯಾವ ನ್ಯೂನತೆಗಳು ಕಾಣಲಿಕ್ಕಿಲ್ಲವು. ವಾಕ್ಚಾತುರ್ಯದಿಂದಾಗಿ ಶತ್ರುಗಳನ್ನು ಮಿತ್ರರಾಗಿ ಪರಿವರ್ತಿಸತಕ್ಕ ನಿಮಗೆ ಸಾಮಾಜಿಕ ಕ್ಷೇತ್ರದಲ್ಲಿ ಉಜ್ವಲ ಭವಿಷ್ಯವಿದೆ. ತಾ. 20. 21. 26. ಈ ದಿನಗಳಲ್ಲಿ ನಿಮ್ಮ ಮನೋರಥವು ಪೂರ್ಣವಾಗಲಿದೆ.

ವೃಶ್ಚಿಕ—ಎಂತಹ ಕಷ್ಟಸಾಧ್ಯ ಕಾರ್ಯವನ್ನೂ ಕೂಡ ನೀವೀ ಕಾಲದಲ್ಲಿ ಅನಾಯಾಸದಿಂದ ಸಾಧಿಸಲಿರುವಿರಿ, ಅಂತೆಯೇ ಫಲವನ್ನೂ ಭೋಗಿಸುವಿರಿ. ದಾಸಭೃತ್ಯಾದಿ ಜನವೃಂದಕ್ಕೀ ಕಾಲವು ಅತೀವ ಅನುಕೂಲನಾಗಿರುವುದು, ನೆನೆದ ಕಾರ್ಯ ಸಾಧಿಸಲಿದೆ, ಆದರೆ ವಿದ್ಯೋಪಜೀವಿಗಳಿಗೂ ವಿದ್ಯಾರ್ಥಿಗಳಿಗೂ ಪರಿಶ್ರಮ ವಧಿಕವಾದೀತು, ಪರಸ್ತ್ರೀ ಧನಲಭಿಸುವ ಯೋಗವಿದೆ. ತಾ. 22 23 ಈ ದಿನಗಳಲ್ಲಿ ಲಾಭ ಸುಖ ವಿಜಯಗಳನ್ನು ಪಡೆವಿರಿ.

ಧನು—ಹಲವಾರು ತಾಪತ್ರಯಗಳು ನಿಮಗೆ ಪ್ರಾಪ್ತವಾಗಬಹುದು, ಆದರೆ ನಿಮ್ಮ ದೇಹ ಸುಖಪತಿಯಾದ ಸುರಗುಗಳು ಪೂರ್ಣ ದೃಷ್ಟಿಯಿಂದ ನಿಮ್ಮನ್ನು ನೋಡುತ್ತಿರುವ ಕಾರಣ ನಿಮ್ಮ ಸ್ವಂತಕ್ಕೆ ಯಾ ಅಡ್ಡಿ ಆತಂಕಗಳೂ ಬರಲಾರವು. ಭೋಗಗಳಿಗೂ ಕೊರತೆಯಿರದು. ಆದರೆ ಸ್ವಲ್ಪ ಮಟ್ಟಿಗೆ ಕಾಣಿಸಿ ಸಂಸಾರಿ ಜನರಿಂದ ಪೀಡೆಗಳೊದಗಲಿವೆ ಜಾಗ್ರತೆ ತಾ. 20 21. 24. 25 ಈ ಗಳು ಇತರ ದಿನಗಳಿಗಿಂತ ಉತ್ತಮ.

ಮಕರ - ನಾನಾ ಕಾರಣ ಬಂ ಜನರೊಳಗೆ ಕಲಹ ಉಂಟಾದೀತು. ವಾ ನಾದಿಗಳ ಪ್ರಯಾಣದಲ್ಲಿ ಅಪಾಯಸ್ಯ ಪವಿದೆ. ಧರ್ಮ ಕರ್ಮಗಳಲ್ಲಿ ಅನಾದ ಗುರುಹಿರಿಯರಲ್ಲಿ ತಿರಸ್ಕಾರ ಭಾವನೆಯ ಬರಲಿದೆ. ಆದರೆ ಉದ್ಯೋಗದಲ್ಲಿ ಪ್ರ ಯತ್ನಕ್ಕೆ ತಕ್ಕ ಫಲ ಲಭಿಸಲಿದೆ. ಮಿತ್ರ ಜ ಬೆಂಬಲದಿಂದಾಗಿ ತಾ. 22 23. 26. ದಿನಗಳಲ್ಲಿ ಭೋಗ ಲಾಭ ವಿಜಯಗಳ ಹೊಂದುವಿರಿ.

ಕುಂಭ - ನೀಚ ಭ್ರಾತ್ರಾದಿ ವರ್ಗದ ರೊಡನೆ ವಿನಾ ಕಾರಣ ಕಲಹವಾಗಲಿದೆ. ವಾ ಪ್ರಕೋಪದಿಂದಾಗಿ ಅಂಗಾಂಗಗಳಲ್ಲಿ ನೋ ಕಾಣಿಸೀತು, ಸ್ಥಾನ ಚಲನೆ ಆರ್ಥಿಕ ಬಿಕ್ಕ ಶತ್ರುಗಳ ಪೀಡೆ ಇವುಗಳಿಂದಾಗಿ ಮನಸ್ಸಿನ ನೆಮ್ಮದಿಯಿರದು, ಬಹುಮಟ್ಟಿಗೆ ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾಗುವಿರಿ. ಆ ಜನರ ವಿಯೋಗವುಂಟಾಗಲಿದೆ. ತಾ. 21. 24. 25. ಈ ದಿನಗಳಲ್ಲಿ ವ್ಯಾಪಾರ ವ್ಯವಹಾರ ನೌಕರಿ ಬಾಗಗಳಲ್ಲಿ ಒಳ್ಳೆ ಫಲಪ್ರಾ

ಮೀನ—ಆಪತ್ಕಾಲದಲ್ಲಿ ಅತಿ ಧೈರ್ಯವೆಂಬಂತೆ ನೀವು ಧೈರ್ಯದಿಂದ ಕಾರ್ಯರಂಗದಲ್ಲಿ ಮುನ್ನುಗ್ಗಿರಿ. ಅದೃಷ್ಟವು ಸ್ವಲ್ಪ ಬಲಶಾಲಿಯಾಗಿಲ್ಲವಾದರೂ ಅದ್ವಿತೀಯವಾದ ಪೌರುಷವುಳ್ಳ ನೀವು ಹಿಡಿದ ಕಾರ್ಯವನ್ನು ಕೊನೆಗಾಣಿಸದೆ ಬಿಡಲಾರಿರಿ. ನಿಮ್ಮ ಪ್ರಯತ್ನವೊಂದೂ ವಿಫಲವಾಗದು ರಾಜಕೀಯ ರಂಗದಲ್ಲಿ ಸಾಹಸ ಕಾರ್ಯಗಳಲ್ಲೂ ನೀವು ವಿಜಯಿಗಳಾಗುವಿರಿ. ತಾ. 24. 25. ಹೊರತಾಗಿ ಉಳಿದ ದಿನಗ ಅನುಕೂಲಸಿವೆ

ನೋಟೀಸು

ಕುಂದಾಪುರ ಪಂಚಾಯ್ತ ಬೋರ್ಡು ಕೋರ್ಟಿನಲ್ಲಿ

C S 102/52

ವಾದಿ— ದಿ ಕೆನರಾ ಬೆನಿಫಿಟ್ ಫಂಡು ರಿಪ್ರೆಜೆಂಟ್ ಕೆ. ಶಿವರಾಮ ಹವಾಲ್ದಾರ. ಪ್ರತಿವಾದಿ— 1) ಕೆ. ವೆಂಕಟರಮಣ ಶೇರುಗಾರ ಸುಬ್ರಾಯ ಶೇರುಗಾರರ ಮಗ ಕುಂದಾಪುರ ಕಸಬ 2) ಕೆ ಮುತ್ತ ಪೂಜಾರಿ 1ನೇ ಪ್ರತಿವಾದಿಯು ವಾದಿಯ ಬಿಟ್ ಫಂಡಿನಲ್ಲಿ ನಡೆಸಿದ ಲೇವಾದೇವಿ ಬಾಬ್ತು ಬಾಕಿ ಮಾಡಿಕೊಂಡು ರೂಪಾಯಿ 57—6—0ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ದಾವಾ ದಾಖಲು ಮಾಡಿರುತ್ತಾನೆ ಸದ್ರಿ ದಾವೆಯು ತಾ 26—11—52ಕ್ಕೆ ತನ್ಖಿಗೆ ಇಟ್ಟಿದೆ ಎಂಬ ಸಂಗತಿ ಈ ಮೂಲಕ ಪ್ರತಿವಾದಿಗೆ ತಿಳಿಸೋಣವಾಗಿದೆ

K. Shivarama Havaldar

KING OF TONIC

ಸ್ತ್ರೀ ಪುರುಷ ಶಿಶುಗಳು ರೋಗದಿಂದ ನರಳಬೇಕಾಗಿಲ್ಲ!
ಲಕ್ಷಾಂತರ ಜನರು ಗುಣಹೊಂದಿದ್ದಾರೆ!
ಸರ್ ಜೀವನ್ ಶಿಲಾಜಿತ್ ಲೇಹ್ಯ
ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯವಂತ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.
೪೪ ದಿನದ ಲೇಹ್ಯ ರೂ ೫/೪, ೨೨ ದಿನದ ಲೇಹ್ಯ ರೂ ೩೪
(ಪೋಸ್ಟೇಜು ಮಾಫ್)
ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಉಡುಪಿಗೆ ಹೋಗಬೇಕು! ಆದರೆ ಉಳಿದು ಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ಶಿಮ್ಲಾ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ಬಗೆಗೆ ಬೇರೆ ಬೇಕೆ
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

"ಗೋಪಾಲ ಭೇಷಜಾಶ್ರಮ" ಮಂಗಳೂರು-
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿಶ್ಚೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.
ಹೆಚ್ಚಿನ ಮಾಹಿತಿಗೆ—ಡಾ। ಯಂ ಸಿ. ಶಾಸ್ತ್ರೀ, ಯಲ್. ಐ. ಎಂ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:— ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು

ಶ್ವೇತಸ್ರಾವ ನಿಂತಿತು
'ಲೂಕಸಾರ' ಪಿಲ್ಲುಗಳನ್ನು ಉಪಯೋಗಿಸಿದರೆ ಪಡಕಪ್ಪು ಶುಭ್ರಸ್ರಾವವಾಗು ದು, ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದುವುದು. ಯಾವ ಬಾಧಕವೂ ಇಲ್ಲ. ಸಾ ರಾಗ ಮುಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3-; ಸ್ಪೆಶಲ್ ರೂ. 5. ಅಧಿಕಾಧಿಕ ಸ್ಪೆಶಲ್ ರೂ. 5-] ಗಸ್ಸ ಪ್ರತ್ಯೇಕ]
Mrs D. DEVEE, F DS (N. J.
Tollygunge CALCUTTA
ಸ್ಟಾಕಿಸ್ಟರು: ಕಲ್ಯಾಣಕಂಪೆನಿ, ಮಂಗಳೂ

ವಿವಿಧ ಪಾತ್ರೆಗಳು
ಯಾವತ್ತೂ ವಿ ದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವು ಳ ವಿವಿಧ ಪಾ ಗಳೂ ಸಾಮಾ ಳೂ ರಖಂ ಅ ಯೂ ಚಿಲ್ಲರೆಯಾಗಿಯೂ ಮಾರಲ್ಪಡುತ್ತ
ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

618 | Licensed to Post without Prepayment

Estd 1921 ಸ್ಥಾಪನೆ
32ನೆಯ ವರ್ಷ

Founder Sri A B Shetty,
Minister for Medical & Public Health

27-11-1952

ನವಯುಗ
ಆರೋಗ್ಯ ಮಂತ್ರಿ
ಎ. ಬಿ. ಶೆಟ್ಟರಿಂದ
ತವಾದ ವಾರಪತ್ರಿಕೆ,
ಡುಪಿ, ದ ಕನ್ನಡ

ಚಂದಾ 5-12 0
ಂಗಳಿಗೆ 3-0-0
ಪ್ರತಿಗೆ 0-2 0

ನವಯುಗ

ol 32
lo 13

NAVAYUGA WEEKLY POST BOX NO. 22. UDIPI

ವರ್ಷ ೩೨
ಸಂ ೧೩

ಅಂತರಂಗ
ಪತ್ರಿಕೆಯ [illegible]
ಉಪಯುಕ್ತವಾದ
86 ಪುಟಗಳ
ರೂ 24 ಸಿಗಲು
ವಿವರಕ್ಕೆ ಬರೆಯಿರಿ
ಮ್ಯಾನೇಜರ್,
ಅಂತರಂಗ, ಉಡುಪಿ.

ಮಧುಪರ್ಕ

ಒಮ್ಮೆ ಅಮೇರಿಕನ್ ಮಹಿಳೆಯೊಬ್ಬಳು ಗಾಂಧೀಜಿಯೊಡನೆ "ಬಾಪೂಜಿ, ನಿಮಗೆ ಸಿಟ್ಟು ಬರುವುದೇ ಇಲ್ಲವೇ?" ಎಂದು ಕೇಳಿದಳು. ಅದಕ್ಕೆ ಬಾಪೂ ನಗುತ್ತಾ "ಬಾಳೊಡನೆ ಕೇಳು" ಎಂದರು.

ಕಸ್ತೂರಿ ಬಾಗೆ ಗಾಂಧೀಜಿಯ ಕ್ರೋಧ ಪರಿಚಯ ಆದ ಘಟನೆ ತುಂಬ ಸ್ವಾರಸ್ಯವಿದೆ. ಒಂದು ಸಲ ಗಾಂಧೀ ಭವನಕ್ಕೆ ಹೋಗಿದ್ದರು. ಬಾ ಕೂಡ ಅವರೊಡನಿದ್ದರು. ಸಂಭ್ರಮದ ಸ್ವಾಗತ ನಡೆಯಿತು. ಆದರೆ ಈ ಸಡಗರದ ನಡುವೆ ಬಾ ಎಲ್ಲಿಯೋ ಕಣ್ಮರೆಯಾದರು.

ಪಂಡಿತ ನೇ ಕಿ ರಾಮ ಶರ್ಮ ಬಾ ಅವರನ್ನು ಹುಡುಕಲು ಹೊರಟರು. ಒಂದು ಮೂಲೆಯಲ್ಲಿ ಅವನತ ಮುಖದಿಂದ ಬಾ ಕುಳಿತಿದ್ದರು. ಅವರಿಗೆ ಪಂಡಿತ ಹೋಗಿ "ಏಕೆ, ಇಲ್ಲಿದ್ದೀರಿ?" ಎಂದರು.

"ಬಾಪೂ ಅವರ ಪಾದುಕೆಗಳು ಕಾಣೆಯಾಗಿವೆ"

"ಅವಿಲ್ಲದಿದ್ದರೇನಂತೆ -ಬೇರೆ ಹೊಸವನ್ನು ತರಿಸಿ. ಪಾದುಕೆಗಳೇನು ಇಷ್ಟು ಬೇಕಷ್ಟಿವೆ"

"ಇಲ್ಲ- ಅವರಿಗೆ ತಮ್ಮದರ ಗರಜು ಹತ್ತುತ್ತದೆ"

ಬಾಪೂ ಸ್ನಾನಮಾಡುತ್ತಿರುವಾಗ ಅವರ ಮುಂದೆ ಪಾದುಕೆಗಳಿದ್ದುವು. ಅದನ್ನು ನೋಡಿದವರೇ ಒಯ್ದು "ಇದು ನನ್ನದಿಷ್ಟು" ಎಂದರು.

"ಆದರೆ, ನಿಮ್ಮದು ರೈಲಿನಲ್ಲಿ ಕಳೆದು ಹೋಗಿವೆ" ಎಂದರು ಬಾ.

ಬಾಪೂ ಕುಪಿತಗೊಂಡು "ಹುಂ ನಿನ್ನೊಡನೆ ನಾನು ಕ್ರೋಧವನ್ನು ಜಯಿಸಲು ಬಲ್ಲೆನಾದರೆ, ಇಡೀ ವಿಶ್ವವನ್ನು ಗೆಲ್ಲಲು ಸಾಧ್ಯವುಂಟು" ಎಂದು ಹೇಳಿ, ಬಾ ದುಕೆಗಳಿಲ್ಲದನೇ ಹೊರಟು ಹೋದರು.

ಸಂಸಾರ ಸುಖ

ನಮ್ಮಲ್ಲಿರುವ ಕುಂದುಕೊರತೆಗಳು, ಇತರರ ನಡವಳಿಕೆಯಲ್ಲಿ ಕಂಡುಬರುವ ಲೋಪದೋಷಗಳು ಹಲವುವೇಳೆ ನಮ್ಮನ್ನು ಅಸಹಾಯರಂತೆ ಮಾಡಿ, ಕುಪಿತಗೊಳಿಸುವುದುಂಟು. ನಮ್ಮ [illegible] ಪರ್ವತಪ್ರಾಯವಾಗಿ ಮಾಡಿಕೊಂಡು ನಾವು ದಿನನಿತ್ಯವೂ ಮುಖ ಸಣ್ಣದು ಮಾಡಿಕೊಂಡು ಕುಳಿತಿರಬಹುದು. ಹಾಗೆ ದಿನದ ದುಡಿತದ ಬಳಿಕ ಮನೆಗೆ ಮರಳಿ ಬಂದಾಗ, ಪತ್ನಿಯು ತಕ್ಕ ರೀತಿಯ ಸ್ವಾಗತ ನೀಡಲಿಲ್ಲವೆಂದು ಬೇಸರ ಕೂಡ ಬಂದೀತು. ನಮ್ಮಲ್ಲಿ ಪ್ರತಿಯೊಬ್ಬರಿಗೂ ಒಂದಲ್ಲಒಂದು ರೀತಿಯ ಕಷ್ಟವಿದ್ದೇ ಇದೆ. ತನ್ನ ಆಶೋತ್ತರಗಳನ್ನು ಚೆನ್ನಾಗಿ ತಿಳಿದುಕೊಳ್ಳಬಾರದ ತಂದೆಯಿಂದಾಗಿ ವಿದ್ಯಾಭ್ಯಾಸ ನಿಂತುಹೋಯಿತಲ್ಲಾ ಎಂದು ಮಗನಿಗೆ ದುಃಖ, ಅಧಿಕಾರಿಯ ಮುಂದೆ ಹೋಗುವಾಗ ತನ್ನಿಂದ ತಾನೇ ಕೈ ನಡುಗುತ್ತುವುದಲ್ಲಾ ಎಂಬ ನೋವು, ಅಥವಾ ತನ್ನದು ಸುಂದರವಲ್ಲದ ರೂಪು ನನ್ನದಾಯಿತಲ್ಲಾ ಎಂಬ ಬೇಸರ-ಇಂಥ ನೂರಾರು ಬಗೆಯ ಲೋಪದೋಷಗಳಿಂದ ನಾವೆಲ್ಲರೂ ವ್ಯಾಕುಲಗೊಳ್ಳುವುದುಂಟು. ಈ ವ್ಯಾಕುಲಭಾವವು ಎಷ್ಟು ಗಹನವಾಗಿರುವುದೆಂದರೆ 'ಈ ಕಷ್ಟವೊಂದಿಲ್ಲದಿದ್ದರೆ" ನಾವು ಸ್ವರ್ಗಸುಖವನ್ನೇ ಹೊಂದಬಹುದಿತ್ತು. ಇದೊಂದು ಅಭಿಶಾಪವಾಗಿ ಪರಿಣಮಿಸಿದೆ ಎಂದು ನಮ್ಮ ಅದೃಷ್ಟವನ್ನು ಹಳಿಯುತ್ತೇವೆ.

ನಿಜಕ್ಕೂ ನಮ್ಮ ಅದೃಷ್ಟವೇ ಕೆಲವು ಒಟ್ಟಿಗೆ ಕಡಕಿದ್ದೀತು. ಸುಂದರವಾದ ದೇಹ ಸೌಷ್ಠವನನ್ನೂ ಮುಖಕಮಲವನ್ನೂ ಭಗವಂತ ನೀಡಿರದಿರುವುದು ನಮ್ಮ ದುರದೃಷ್ಟವೇ ಸೈ. ಹಾಗೆಯೇ ಕಾರಖಾನೆಯಲ್ಲಿ ಚೆನ್ನಾಗಿ ದುಡಿದ ದುಡಿಯುತ್ತಿದ್ದ ಕೂಲಿಯೊಬ್ಬನ ಕೈ ಯಂತ್ರಾಘಾತಕ್ಕೆ ಸಿಲುಕಿ, ಕೆಲಸಕ್ಕೆ ಬಾರದಂತಾಗುವುದೂ ಅವನ ಪೂರ್ವಾರ್ಜಿತ ಕರ್ಮಫಲವಿದ್ದೀತು. ಈ ನ್ಯೂನತೆಗಳಿಲ್ಲದಿರುತ್ತಿದ್ದರೆ ಚಿನ್ನವನ್ನೇ ಉಂಡು ಸುಖಿಸಬಹುದಿತ್ತು. ಮನಸ್ಸು ಆನಂದದಿಂದ ಕೂಡಿರುತ್ತಿದ್ದಲ್ಲಿ ನಸುನಗುತ್ತ ಕಾಣಿಸಬಹುದಿತ್ತು. ಆದರೆ ಒಂದು ಸಂಗತಿಯನ್ನು ನಾವು ಇಲ್ಲಿ ಮರೆಯುವಂತಿಲ್ಲ- ನಾವು [illegible] ಈ ನ್ಯೂನತೆಯನ್ನು ಹೋಗಲಾಡಿಸಬಲ್ಲೆವೆ/ ಇಲ್ಲವೆಂದಾದರೆ, ಅದಕ್ಕಾಗಿ ಪರಿತಪಿಸುವುದರಿಂದ ಸಮಯ ವ್ಯರ್ಥ ಕಳೆದುಹೋಗಿ, ಚಿಂತೆ ಮಾತ್ರ ಹೆಚ್ಚಿಕೊಂಡೀತಲ್ಲದೆ, ಇದಕ್ಕೂ ಲಾಭದಾಯಕವಾದ ಯಾವ ಪರಿಣಾಮವೂ ಉಂಟಾಗದು. ಆದದರಿಂದ ನಮ್ಮ ಈ ದುಃಸ್ಥಿತಿಯನ್ನೇ ಸತ್ಯದ ಅವಿಭಾಜ್ಯ ಅಂಗವೆಂದು ಸ್ವೀಕರಿಸಿ ಅದಕ್ಕೆ ತಕ್ಕಂತೆ ಹೊಂದಿಕೊಂಡು ಬದುಕುವ ಜಾಣ್ಮೆ ತೋರಿಸುವುದರಲ್ಲಿ ಔಚಿತ್ಯವಿದೆ.

ಇದೇ ಮಾತನ್ನು ಉಳಿದ ಕಾರಣಗಳಿಗೂ ಕೆಲಮಟ್ಟಿಗೆ ಅನ್ವಯಿಸಬಲ್ಲೆವು. ನಮ್ಮನ್ನು [illegible] ದುಃಖವಾಗುವುದೇ ನಿಶ್ಚಯವಿದ್ದರೆ, ಈ ನ್ಯೂನತೆಗೆ ಕಾರಣಗಳನ್ನು ಹುಡುಕುವುದು ಪ್ರಥಮ ಕರ್ತವ್ಯ. ಮನುಷ್ಯ ತಾನಾಗಿ ಮಾಡಿಕೊಂಡುದೇನಿದ್ದರೂ ಅದನ್ನು ಅಪರಿಹಾರ್ಯವೆಂದು ಹೇಳಲು ಬರುವಂತಿಲ್ಲವಾದುದರಿಂದ ಒಂದಲ್ಲ ಒಂದು ರೀತಿಯ ಉಪಶಮನ ಮಾರ್ಗ ತೆರೆದೇ ಇರುತ್ತದೆ. ಅದನ್ನು ಕಂಡುಕೊಂಡು, ನಡೆದರೆ ಅದರಿಂದ ಒಳ್ಳೆದೆ. ಆದರೆ ಈ ಮೊದಲೇ ಸೂಚಿಸಿದಂತೆ ನಾವು ದೈವಗೇಡಿಗಳಾಗಿದ್ದರೆ ಮಾತ್ರ ಆ ಸಂಗತಿ ಬೇರೆ. ಕಷ್ಟಗಳು [illegible] ಅಂಜಿ ಓಡಿಹೋಗುವವರು ಎಂದೂ ಜೀವನ ಸುಖವನ್ನು ಅದರ ಪೂರ್ಣರೂಪದಲ್ಲಿ ಸವಿಯುವುದು ಅಸಾಧ್ಯ. ಬದುಕಿನ ಸುಖದುಃಖಗಳ ಸಮ್ಮಿಶ್ರ ಅನುಭವವು ನಮ್ಮ ಮನಸ್ಸನ್ನು ವಿಕಸಿತಗೊಳಿಸುತ್ತ ಸಮಸ್ಯೆಗಳ ಇದಿರೆಂದಷ್ಟಕ್ಕೆ [illegible] ಗಡದ ಮುನ್ನಡೆಯುವುದೇ ಜೀವನ ರಹಸ್ಯವೆಂಬುದನ್ನು [illegible] ಹೇಡಿಗಳು ಎಂದಿಗೂ [illegible] ಈ ಮೂಲಭೂತ ಸಿದ್ಧಾಂತವನ್ನು ಸುಖಾಕಾಂಕ್ಷಿಗಳಾದ ನಮ್ಮ ಹಲವು ತರುಣ ತರುಣಿಯರು ಅನುಭವದಲ್ಲಿ [illegible] ತ್ತಾರೆ. ಅಂಥವರಿಗೆ ಕಷ್ಟ ಹಾಗೂ ವಿಪತ್ಪ್ರಸಂಗಗಳು ನಡೆದ ಇದ್ದರೂ ಯಶಸ್ವಿಯಾಗಿ ಅವುಗಳನ್ನು ದಾಟಿ ಬಂದ ಜೀವನವೇ ಆದರ್ಶವಾಗಬೇಕು.

ಸಾಮಾನ್ಯನೊಬ್ಬನ ದೃಷ್ಟಿಯಿಂದ ಇಷ್ಟು ಹೇಳಿದ ಮೇಲೆ, ಮನೋವಿಜ್ಞಾನಿಗಳ ಅಭಿಮತವನ್ನು ಇಲ್ಲಿ ಕೊಡುವುದು ಒಳಿತು. ನಮ್ಮ [illegible] ಕೊರತೆಗಳ, ನ್ಯೂನತೆಗಳು ಮನಸ್ಸಿನ ಮೇಲೆ [illegible] ಕ್ಕೆ ವಿಶೇಷ [illegible] ಮಾಡಿಕೊಡುವುದರಿಂದ ಮನೋವಿಜ್ಞಾನದ ರೀತಿಯ [illegible] ಅರಿಯುವುದರಿಂದ ಪ್ರಯೋಜನವಿದೆ. ನಮ್ಮ ಕಷ್ಟಗಳು ನಿಜಕ್ಕೂ ಅತ್ಯಂತ ಗಂಭೀರವಾದವುಗಳೇ? ಎಂದು ನಾವು ಪ್ರಶಮತಃ ವಿಚಾರಿಸಿಕೊಳ್ಳಬೇಕು. ಹಲವು ಪ್ರಸಂಗಗಳಲ್ಲಿ ನಾವು ನಮ್ಮ ಹೊಣೆಗಾರಿಕೆಯನ್ನು ಜಾರಿಸಿಕೊಳ್ಳುವುದಕ್ಕೆ ನಮ್ಮ ನ್ಯೂನತೆಗಳನ್ನು ಅತಿರೇಕವಾಗಿ [illegible] ದ ಎಂದುಮಾತ್ರ [illegible] ಬಹುಶಃ ನಮ್ಮಲ್ಲಿ ನೋವ ಬೇಸರಗಳು ಜನ್ಮವೆತ್ತುವುದೇ ಹೀಗೆ. [illegible] ತಮ್ಮ [illegible] ನ್ನು [illegible] ಸೀಮಿತವಾಗಿಸುವುದಕ್ಕೆ [illegible] ವ್ಯಕ್ತಿ ವಿಕಾರವನ್ನು [illegible] ನಮ್ಮ [illegible] ಸ್ವಯಂ [illegible]

[illegible]

ನಾಜೂಕಾದ
ಟಾಯಂಪೀಸುಗಳು
ಬೇಕಾಗಿದ್ದರೆ
[illegible] ರೂ 33/
ಸ್ವಿಸ್ ಮೇಡ್ ಹೀರೋ' ರೂ 28
[illegible]
[illegible] ಬರೆಯಿರಿ
ಮುಬಾರಕ್ ಅಂಡ್ ಕೋ
ವಾಚ್ ಎಂಡ್ ಕ್ಲಾಕ್ ಸ್ಪೆಶಲಿಸ್ಟ್ಸ
ಮದ್ರಾಸು ೩.
Mubarak & Co,
Watch & Clock Specialists
MADRAS-3



ನಮ್ಮ ರಾಷ್ಟ್ರೀಯ ಸಮಸ್ಯೆಗಳ ಸ್ವರೂಪ

ಲೇಖಾಂಕ ೨:— ಕೃಷಿ ಕೈಗಾರಿಕೆಗಳ ಸಮನ್ವಯ

ನಮ್ಮ ಯೋಜನೆಗಳು ಏನೇ ಇದ್ದರೂ ನಮ್ಮ ಒಟ್ಟು ಉತ್ಪಾದನೆಯನ್ನು ಹೆಚ್ಚಿಸುವುದರ ಮೂಲಕ ಆದಾಯವನ್ನು ವರ್ಧಿಸುವುದು ಮುಖ್ಯೋದ್ದೇಶವಾಗಿರುವುದು ಅವಶ್ಯ. ಒಂದು ರಾಷ್ಟ್ರದ ಸಾಮಾನ್ಯ ಪ್ರಜೆಯ ಸರಾಸರಿ ಆದಾಯವನ್ನು ಕಂಡುಕೊಂಡು, ಆ ದೇಶದ ಆರ್ಥಿಕ ಸ್ಥಿತಿಗತಿಯನ್ನು ಅಂದಾಜು ಮಾಡುವುದು ವಾಡಿಕೆಯಾಗಿದೆ ಇದರಿಂದ ಇತರ ದೇಶಗಳೊಡನೆ ತುಲನಾತ್ಮಕ ದೃಷ್ಟಿಯಿಂದ ನೋಡಿ, ನಾವು ಯಾವುದರಲ್ಲಿ ಹಿಂದುಳಿದಿರುವೆವೆಂದು, ಅಥವಾ ಆ ಮಾತಿಗೆ ಮುಂಬರಿದಿರುವೆವೆಂದು, ಕಂಡುಕೊಳ್ಳಲು ತುಂಬ ಅನುಕೂಲವಿದೆ. ಅದರಲ್ಲೂ ಬೇರೆ ಬೇರೆ ಉದ್ಯೋಗಾನುವರ್ತಿಗಳ ಪ್ರತ್ಯೇಕವಾದ ಸರಾಸರಿ ಆದಾಯವನ್ನು ಕಂಡು ಹಿಡಿದರೆ, ಅಭಿವೃದ್ಧಿಯು ಯಾವ ದಿಕ್ಕಿನಲ್ಲಿ ನಡೆಯಬೇಕಿದೆ ಎಂಬುದರ ಸ್ಪಷ್ಟ ಕಲ್ಪನೆಯುಂಟಾಗುತ್ತದೆ ರಾಷ್ಟ್ರದಲ್ಲಿ ತೊಡಗಿದ ಬಂಡವಾಳಕ್ಕಿಂತ ರಾಷ್ಟ್ರೀಯ ಆದಾಯವು ತೀರ ಭಿನ್ನವಾಗಿದೆ ಎಂಬುದನ್ನಿಲ್ಲಿ ಸ್ಮರಿಸಬೇಕು. ಉತ್ಪಾದನೆ, ಅದರ ಹಂಚುವಿಕೆ ಹಾಗೂ ಬಳಕೆಗಳ ಆಧಾರದ ಮೇಲೆ ರಾಷ್ಟ್ರೀಯ ಆದಾಯ ನಿಂತಿದೆ ಎನ್ನಬಹುದು. ದೇಶದ ಪುನಸ್ಸಂಘಟನೆಯಾಗಬೇಕೆಂದು ಬಯಸುವ ಜನರು ಸ್ವಾಭಾವಿಕವಾಗಿ ರಾಷ್ಟ್ರೀಯ ಆದಾಯವನ್ನು ಕಂಡು ಹಿಡಿಯುವ ಕಾರ್ಯವನ್ನು ಸರ್ವಪ್ರಥಮವಾಗಿ ಕೈಗೊಳ್ಳುತ್ತಾರೆ ಭಾರತದಲ್ಲಿ ಕೂಡ ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ಸರಕಾರವು ಪ್ರೊಫೆಸರ್ ಪಿ. ಸಿ ಮಹಾಲನೋಬಿಸ್ ಅವರ ಅಧ್ಯಕ್ಷತೆ ಹಾಗೂ ಪ್ರೊಫೆಸರ್ ಡಿ. ಜಿ. ಗಾಡ್ಗೀಳ ಮತ್ತು ಡಾ| ವಿ. ಕೆ ಆರ್. ವಿ ರಾಯರ ಸದಸ್ಯತ್ವದಲ್ಲಿ ರಾಷ್ಟ್ರೀಯ ಆದಾಯ ಸಮಿತಿಯನ್ನು ನೇಮಿಸಿತು

ದಾರಿದ್ರ್ಯದ ನಗ್ನ ಚಿತ್ರ

ಭಾರತದ ರಾಷ್ಟ್ರೀಯ ಆದಾಯವನ್ನು ಕಂಡು ಹಿಡಿಯುವುದೂ ಈ ಕೆಲಸವನ್ನು ಸುಗಮರೀತಿಯಿಂದ ಕೈಗೊಳ್ಳಲಾಗುವಂತೆ ಏನು ಉಪಾಯವನ್ನು ಮಾಡಬಹುದೆಂದು ಸೂಚಿಸುವುದೂ ಸಮಿತಿಯ ಕರ್ತವ್ಯವಾಗಿತ್ತು. ವಿದೇಶಗಳಿಂದ ಬಂದ ತಜ್ಞರು—ಡಾ ಜೆ. ಆರ್. ಎನ್ ಸ್ಟೋನ, ಡಾ| ಡೆರ್‌ಸನ್, ಪ್ರೊ. ಸೈಮನ್ ಕುಜುನೆಟ್ ಮುಂತಾದವರು ಈ ಕೆಲಸದಲ್ಲಿ ಸಲಹೆ ಸಹಕಾರಗಳನ್ನಿತ್ತು ನೆರವಾದರು ಈ ಸಮಿತಿಯು ಮಾಡಿದ ವರದಿಯನ್ನು ಕಳೆದ ವರ್ಷ ಮೇ ತಿಂಗಳಿನಲ್ಲಿ ಪಾರ್ಲಿಮೆಂಟಿನೆದುರು ಮಂಡಿಸಲಾಯಿತು ಮತ್ತು ಅದಕ್ಕೆ ಅನುಗುಣವಾಗಿ ೧೯೫೦ ೫೧ರಲ್ಲಿ ಭಾರತದಲ್ಲಿದ್ದ ಅಂದಾಜು ೩೬ ಕೋಟಿ ಜನರ ಆದಾಯವು ೮೭೧೦ ಕೋಟಿ ರುಪಾಯಿಯೆಂದು ನಿರ್ಧಾರವಾಯಿತು. ಎಂದರೆ ಪ್ರತಿಯೊಬ್ಬನ ಸರಾಸರಿ ವಾರ್ಷಿಕ ಆದಾಯ ೨೫೫ ರುಪಾಯಿಗಳು. ಇದರ ಮೇಲಿಂದ ನಮ್ಮ ಆದಾಯ ಕಳೆದೆರಡು ವರ್ಷಗಳಲ್ಲಿ ಎಷ್ಟು ಮಾತ್ರಕ್ಕೂ ಹೆಚ್ಚಿಕೊಳ್ಳಲಿಲ್ಲ ಎಂಬುದು ಸ್ವಯಂ ವ್ಯಕ್ತವಾಗುತ್ತದೆ. ಅದರಲ್ಲೂ ನಮ್ಮ ಆಹಾರವೊಂದಕ್ಕಾಗಿಯೇ ಆದಾಯದ ಬಹ್ವಂಶವನ್ನು (೫೩%) ವೆಚ್ಚ ಮಾಡುತ್ತೇವೆಂಬುದರಿಂದ, ನಮ್ಮ ದಾರಿದ್ರ್ಯದ ನಗ್ನ ಚಿತ್ರ ಕಣ್ಣಮುಂದೆ ಕುಣಿಯ ಹತ್ತುತ್ತದೆ ಈ ಪರಿಸ್ಥಿತಿಯಲ್ಲಿ ಬದುಕಿಕೊಂಡಿರುವುದಕ್ಕೆ ನಾವು ಬೆನ್ನು ಚಪ್ಪರಿಸಿಕೊಳ್ಳಬೇಕೆ? ಅಥವಾ ಮುಂದಾದರೂ ಚೆಲುವಾದ ದಿನಗಳನ್ನು ನೋಡುವ ಆಶೆ ಇಟ್ಟುಕೊಳ್ಳಬೇಕೆ?

ಏಕನೋವ ಪಾಡು

ಸಾಮಾನ್ಯವಾಗಿ ಹೇಳುವುದಾದಲ್ಲಿ ಭಾರತೀಯನ ಸರಾಸರಿ ವಾರ್ಷಿಕ ಆದಾಯದ ಇಮ್ಮಡಿ ಜಪಾನೀಯನದ್ದು ರಶಿಯನದ್ದು ಆರುಮಡಿ, ಇಂಗ್ಲೀಷರವನದ್ದು ಹನ್ನೆರಡು ಮಡಿ, ಮತ್ತೊಬ್ಬ ಅಮೇರಿಕನನದ್ದು ಇಪ್ಪತ್ತೈದು ಮಡಿ ಎಂದು ಲೆಕ್ಕ ಹಾಕಿದ್ದಾರೆ ನಮ್ಮಲ್ಲಿ ಎಲ್ಲರೂ ಕೆಲಸದಲ್ಲಿ ಮಗ್ನರಾಗಿಲ್ಲವೆಂದೂ ಒಬ್ಬನ ಆದಾಯದ ಮೇಲೆ ಅವಲಂಬಿಸಿರುವ ಕೆಲವು ಬೇರೆಯೇ ಜೀವಗಳೂ ಇವೆಯೆಂದೂ ನಾವು ಪುನಃ ನೆನಪು ಮಾಡಿಕೊಳ್ಳಬೇಕು ಅಂಕೆಸಂಖ್ಯೆಗಳಿಗನುಸಾರವಾಗಿ ೧೩ ಕೋಟಿ ೨೭ ಲಕ್ಷ ಜನರು ಮಾತ್ರ ಈಗ ಒಂದಲ್ಲ ಒಂದು ಉದ್ಯೋಗವನ್ನು ಹಿಡಿದುಕೊಂಡಿದ್ದಾರೆ ಅವರ ಸರಾಸರಿ ಆದಾಯ ೬೬೦ ರುಪಾಯಿಗಳು ಅತ್ಯಧಿಕ ಆದಾಯವನ್ನು ಹೊಂದುತ್ತಿರುವವರು (ಎಂದರೆ ರೂ. ೧೭೦೦) ಗಣಿಯ ಕೆಲಸಗಾರರು ಅಬಳಿಕ ಬರುವವರು ಕಾರ್ಖಾನೆ, ಸಾರಿಗೆ ಸಂಪರ್ಕಗಳಲ್ಲಿ ದುಡಿಯುವವರು (ರೂ. ೧,೬೦೦) ಸರಕಾರಿ ನೌಕರರು ವರ್ಷಕ್ಕೆ ರೂ. ೧೫೦೦ ಸಂಪಾದಿಸಿದರೆ, ವ್ಯಾಪಾರೋದ್ಯಮವನ್ನು ಅನುಸರಿಸಿದವರು ರೂ ೬೦೦ ಗಳಿಸುತ್ತಾರೆ. ಕೃಷಿ ಹಾಗೂ ಪಶುಸಂಗೋಪನೆಯಿಂದ ವರ್ಷಕ್ಕೆ ರೂ ೫೦೦ ಮಾತ್ರ ಸಿಗುತ್ತದೆ. ಇನ್ನು ಮನೆಗೆಲಸದ ಆಳಾಗಿ ದುಡಿಯುವವರ ಆದಾಯ ಅತ್ಯಂತ ಕಡಿಮೆ, ಎಂದರೆ ೪೦೦ ರುಪಾಯಿಯಷ್ಟೇ ಇದೆ ಆದ್ದರಿಂದ ನಮ್ಮ ಜೀವನ ಮಟ್ಟ ಏರಲಿಕ್ಕೆ ತೆರೆದಿರುವ ಒಂದೇ ಉಪಾಯವೆಂದರೆ ಕಡಿಮೆ ಕೂಲಿ ದೊರೆಯುವ ಜನರಲ್ಲಿ ಶಕ್ಯವಿದ್ದಷ್ಟು ಹೆಚ್ಚು ಮಂದಿಯನ್ನು ಅಧಿಕ ಕೂಲಿ ದೊರೆಯುವ ಕ್ಷೇತ್ರಕ್ಕೆ ಒಯ್ಯುವುದೇ ಆಗಿದೆ

ಅತ್ಯಲ್ಪ ಯೋಗ್ಯತೆ

ನಮ್ಮ ಒಟ್ಟು ಆದಾಯವಾದ ೮೭೧೦ ಕೋಟಿ ರೂಪಾಯಿಯಲ್ಲಿ ೪೪೫೦ ಕೋಟಿಯಷ್ಟು ಎಂದರೆ ೪೭.೬% ಕೃಷಿಯಿಂದಲೇ ಬರುತ್ತದೆ. ವಾಣಿಜ್ಯ ಸಾರಿಗೆ ಸಂಪರ್ಕಗಳಿಂದ ೧೯.೫% ಹಾಗೂ ಗಾರಿಕೆ ಮತ್ತು ಕೈಗಾರಿಕೆಗಳಿ ೧೭.೨% ಬರುತ್ತವೆ ಗಣಿಗಾರಿಕೆ, ವಾ ಜ್ಯ ಇತ್ಯಾದಿ ಕ್ಷೇತ್ರಗಳು ನಮಗೆ ಹೆ ವರಮಾನವನ್ನು ತರುತ್ತವಾದರೂ, ನ ಆದಾಯದ ಅರ್ಧಾಂಶದಷ್ಟನ್ನು ಕ ಯೊಂದರಿಂದಲೇ ಬರುವುದಕ್ಕೆ ಬಿದ ನಮ್ಮ ಮೂರ್ಖತನಕ್ಕೆ ಜೋಡಿಸಿ ಕ್ಕಿಲ್ಲ! ಅಧಿಕ ವರಮಾನದ ಉದ್ಯೋ ಲ್ಲಿ ಜನರು ವಿರಳವಾಗಿ ಕಂಡುಬಂದ ಕಡಿಮೆ ವರಮಾನದ ಉದ್ಯೋಗ ತೊಡಗಿರುವ ಜನರು ಸಾಂದ್ರವಿದ್ದಾ ಇದರ ಮೇಲಿಂದ ಹೆಚ್ಚು ವರಮಾ ಉದ್ಯೋಗಕ್ಕೆ ಅರ್ಹತೆಯನ್ನು ಪಡೆ ವಷ್ಟು ಮಟ್ಟಿನ ಶಿಕ್ಷಣ, ತರಬೇತಿಗ ಇನ್ನೂ ನಮ್ಮ ಜನಕ್ಕೆ ದೊರೆತಿಲ್ಲವೆ ಹುದು ಕೆಲಮಟ್ಟಿಗೆ ಅವರಿಗೆ ಸಾಕ ಅವಕಾಶ ಸಿಗದಿರಲೂ ಬಹುದು. ನ ಜನಕ್ಕೆ ಉದ್ಯೋಗವನ್ನು ಒದಗಿಸಿಕೊ ವ ಹೊಣೆಗಾರಿಕೆಯು ತುಂಬ ಮಹ ಪೂರ್ಣವಾಗಿದೆ ಎಂದು ಇದರಿಂದ ಯಂ ವ್ಯಕ್ತವಾಗುತ್ತದೆ

ಅಂತರ ಕಡಿಮೆಯಾಗಲಿ

ಶೈಕ್ಷಣಿಕ ಕ್ಷೇತ್ರದಲ್ಲಿ ನ ಪ್ರಗತಿ ಎಷ್ಟು ಮಾತ್ರಕ್ಕೂ ಲದು ಎಂಬ ಸಂಗತಿಯನ್ನು ಚೆ ವಾಗಿ ಪ್ರತಿಪಾದಿಸಬಹುದಾಗಿದೆ ಮ್ಮ ಒಟ್ಟು ಜನಸಂಖ್ಯೆಯಲ್ಲಿ ಕೇ ೩.೭% ಜನರು ಮಾತ್ರ ಬುದ್ಧಿಶಕ್ತಿ ಗತ್ಯವಿರುವ ವೃತ್ತಿಗಳಲ್ಲಿ ಮಗ್ನರಾಗಿ ರೆ. ಸಾಂಸ್ಕೃತಿಕ ಪುನರುತ್ಥಾನ ದಾ ರಾಷ್ಟ್ರೀಯ ಅಭ್ಯುದಯವನ್ನು ಸಾಧಿ ಲ್ಲಿ ಗುರುತರ ಹೊಣೆಯು ಇಷ್ಟು ಸಂಖ್ಯಾಕರ ಮೇಲಿದೆ. ಅರ್ಥಾತ್, ನ ನ ಜನಾಂಗ ಸಮರ್ಥ ರೀತಿಯಲ್ಲಿ ವ ದಕ್ಕೆ ಬರುವಂತೆ ನೋಡಿಕೊಳ್ಳುವ ಸ ಅತ್ಯಲ್ಪ ಪ್ರಾಶಸ್ತ್ಯವನ್ನು ಪಡೆದಿದೆ ನರ ತಿಳಿವಳಿಕೆಯನ್ನು ಅಭಿವೃದ್ಧಿಗೆ ಸ.ವ, ಅವರ ಜ್ಞಾನ ಸಂವರ್ಧನೆಗೆ ರೀಯುವ ಯಾವ ಕಾರ್ಯಕ್ರಮ ಕಂಡುಬರುವುದಿಲ್ಲ. ಹೊಟ್ಟೆ ತುಂಬಿಸ ದೊಂದೇ ನಮ್ಮ ಮುಖ್ಯ ಪ್ರಶ್ನೆಯ ದ್ದು ಉಳಿದೆಲ್ಲ ಸಂಗತಿಗಳೂ ಅದರ ತಾಪಕ್ಕೆ ಮೂಲೆಸರಿದು ನಿಂತಿವೆ.

ಇಂಥ ನಮ್ಮ ಪರಿಸ್ಥಿತಿಯಲ್ಲಿ ಉ ರಮಾರ್ಗವೆಂದು ಹೇಳಬಹುದಾದ ದೇ ಒಂದು ಉಪಾಯ: ಕೃಷಿ ಮತ್ತು ಗಾರಿಕೆಗಳ ನಡುವಿನ ಅಂತರವನ್ನು ಮೆಮಾಡುವುದು ಅವುಗಳೊಳಗೆ ಸ ನ್ವಯವನ್ನುಂಟುಮಾಡುವುದು. ಕೃಷಿ ಮೇಲೆ ಬಿದ್ದಿರುವ ಭಾರವನ್ನು ಹಗ ಮಾಡಿ, ಉತ್ಪಾದನೆಯನ್ನು ಹೆಚ್ಚಿಸಿಕೆ ಡು, ಕಾರ್ಖಾನೆಗಳು ಬೆಳೆಯುವ ಯೂ, ಅಲ್ಲಿ ಉಳಿದವರಿಗೆ ಕೆಲಸ ದೆ ಯುವಂತೆಯೂ ನೋಡಿಕೊಳ್ಳುವ ಅಗತ್ಯ

All Secondary Schools n
Subscribe to "Navayuga" wee
Since it has been approved
the Director of Public Instr
tion, Madras.

ಆಗ--?

ಕಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿಯುವುದು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ, ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ ಜೀವನದ ಜೋಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿ ಇರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕಂಡೊಡನೆ ನಿಮ್ಮದೇ ಆಗುವ, ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ, ನಿಮ್ಮ ನಾಡಿನ

ಈ ಕಂಪೆನಿಯಲ್ಲಿಯೇ ವಿಮೆ ಇಳಿಸಿರಿ

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ ಭಾರತ. ಸ್ಥಾಪನೆ ೧೯೩೫
The Canara Mutual Assurance Co. Ltd.
Head Office: UDIPI, S India. Estd: 1935

ರಾಮತೀರ್ಥ
ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ವಶಪಡಿಸಿದ ಭೂಮಿಗೆ ಕೊಡುವ ಪರಿಹಾರ

ಮದ್ರಾಸು ಸರಕಾರದವರು ತಂದಿರು ತಂಜಾವೂರು ಒಕ್ಕಲುಹಿತ ಮಸೂದೆ ಯೋಗ್ಯ ಹೆಜ್ಜೆ ಹೌದಾದರೂ ಅ ಸಾಕಷ್ಟು ಪ್ರಗತಿಪರವಾಗಿಲ್ಲವೆಂಬು ಸ್ಪಷ್ಟವಿದೆ. ವ್ಯವಸಾಯಾಭಿವೃದ್ಧಿಯ ೀಗ್ಯ ಕ್ರಮಗಳನ್ನು ಕೈಗೊಳ್ಳುವುದ ವಲ್ಲೇ ರಾಷ್ಟ್ರದ ಏಳಿಗೆ ಸಾಧ್ಯವೆಂಬು ಗ ಎಲ್ಲರೂ ಘಂಟಾಘೋಷವಾಗಿ ಸಾ ರುವುದರಿಂದ, ಮತ್ತೀ ಘೋಷಣೆ ಮೂಲಭೂತವಾದ ಒಂದು ಸಮ ಅನ್ವಯಿಸುತ್ತಿರುವುದರಿಂದ-ಭೂ ಸುಧಾರಣೆಗೆ ಹೆಚ್ಚಿನ ಮಹತ್ವವೂ ಶಸ್ತ್ಯವೂ ದೊರೆಯುತ್ತದೆ. ಕೇವಲ ರತದಲ್ಲಿಯಷ್ಟೇ ಭೂ ಸುಧಾರಣಾ ಪ್ರ ಶದೆ-ಹಿಂದುಳಿದ ದೇಶಗಳಲ್ಲಿ ಪ್ರತಿ ಂದರಲ್ಲಿ ಈ ಸಮಸ್ಯೆ ತಲೆ ಎತ್ತಿದೆ. ಆ ಕ ಅಭಿವೃದ್ಧಿಯನ್ನು ಸಾಧಿಸುವುದು ಆಕಾಂಕ್ಷೆಯಾಗಿದ್ದರೆ ಭೂಮಿ ಸು ರಣಾ ಪ್ರಶ್ನೆಯನ್ನು ಎಲ್ಲಕ್ಕೂ ಮೊದ ಕೈಗೆತ್ತಿಕೊಳ್ಳಬೇಕೆಂದು ಹೇಳುವುದ ಸಂಯುಕ್ತ ರಾಷ್ಟ್ರಸಂಘ ಕೂಡ ಹಿಂ ವಿಲ್ಲ. ರೈತರ ಹಾಗೂ ಬೇಸಾಯಗಾರ ಸ್ಥಿತಿ ಊರ್ಜಿತಗೊಂಡು ಬಲವಾದ ತ್ರವಾಗಿ ಹಿಂದುಳಿದ ದೇಶ ಮೆರೆಯ ಕೆಂಬ ಇರಾದೆಯಿಂದ ಅದು ಈಗಾಗ ಈ ಕುರಿತು ಆದೇಶ ಕೊಟ್ಟಿರುತ್ತದೆ

ಉಗ್ರ ಅಭಿಪ್ರಾಯ

ಹಲವು ಸಲ ಹೇಳಿರುವಂತೆ, ಭೂಮಿ ರಣೆಯು ರೈತರ ಹಿತವನ್ನು ಅನು ಸುತ್ತನೆಯೇ ಹೊರತು- ಈಗಿನ ಮಾಲಿಕರ ಭಂಡಾರ ಹೆಚ್ಚಿಸುವುದು ಥಾ ಅದರ ಉದ್ದೇಶವಲ್ಲ. ಸೌಮ್ಯ ದ ಭೂಮಿ ಸುಧಾರಣಾ ಕ್ರಮದಲ್ಲಿ ಯವಾದ ಗೇಣಿ, ಒಕ್ಕಲಿಗೆ ಭದ್ರತೆ ೂ ಅವನ ಉತ್ಪಾದನೆಯ ಮೇಲೆ ರ್ಗ ಸ್ವಾತಂತ್ರ್ಯ ಅಧಿಕವಾಗಿದೆ ಆ ಭೂಮಾಲಿಕರ ಲೆ ಇಷ್ಟರ ಮ ದಜ-ದಾಕ್ಷಿಣ್ಯವನ್ನು ತೋರಿಸು ೂ ಕೂಡ ಅನಾವಶ್ಯಕವೆಂಬುದಾಗಿ ಗ ಜನರು ಹೇಳತೊಡಗಿರುವರು. ಯವಾದ ಗೇಣಿ" ಎಂಬುದಕ್ಕೆ ಕೂ ಕ್ಷೇಪವೆತ್ತುವ ಜನ ಹಲವರಿದ್ದಾರೆ. ಮಿ ಉಳುವವನಿಗೆ ಸೇರಬೇಕು ಎಂ ಪ್ರತಿಪಾದಿಸುವವರು ಭೂಮಿಯನ್ನು ಕೆಗೆ ವಹಿಸಿಕೊಟ್ಟ ಧನಿಗೆ ಏನು ಪರಿ ರವೂ ದೊರೆಯುವುದು ಬೇಡವೆಂದು ಪ್ರಾಯಪಡುತ್ತಾರೆ ಇದು ತೀರ ಉ ಪ್ರತಿಪಾದನೆಯೆಂದು ಸ್ಪಷ್ಟವಾಗಿ ಡು ಬರುತ್ತದೆ ಸಾಮಾನ್ಯ ವದ ಮನೋಭಾವನೆ ಇ ರ ಮಟ್ಟಿಗೆ ಕೆರಳಿರುವಾಗ ವಾ ಜಾಗೃತಗೊಂಡಿರುವಾಗ-ಸಾವಿ ಹಳೆಯ ಪಾಳೆಯಗಾರೀ ಪದ್ಧತಿಯ ನೆಚ್ಚಿಕೊಂಡು ಆದರಿಸುವುದು ಎಷ್ಟ ಟ್ಟಿಗೆ ಸಮವೆಂದು ಕಾಲವೇ ನಿರ್ಣ ಸಬೇಕು ವಿನೇ ಇದಲ್ಲ-ಒಂದು ಮಿತಿ ಹೆಚ್ಚು ಭೂಮಿಯನ್ನು ಇಟ್ಟುಕೊಂ ಉಪಭೋಗಿಸುವವರು ಸಮಯ ಪರಿ ನೆಗೊಂಡಿರುವುದನ್ನು ಕಂಡು ಇನ್ನಾ ಎಚ್ಚರಗೊಳ್ಳಬೇಕೆಂಬುದು ನಿ ಪ.

ಆರ್ಥಿಕ ಅನಾನುಕೂಲತೆ ಭೂಸುಧಾರಣೆಗೆ ಅತಂಕವಾಗಬಾರದು

ಭೂಮಿಗೆ ಪರಿಹಾರ

ನಮ್ಮ ರಾಜ್ಯಘಟನೆಯಲ್ಲಿ ಭೂಮಿಯುನ್ನೊಳಗೊಂಡು ಯಾವುದೇ ಸೊತ್ತನ್ನು ಒಬ್ಬನಿಂದ ರಾಷ್ಟ್ರೀಯ ಪ್ರಯೋಜನದ ಸಾಧನೆಗಾಗಿ ವಶಪಡಿಸಿಕೊಳ್ಳುವಾಗ, ಅದಕ್ಕೆ ಯೋಗ್ಯ ಪರಿಹಾರವನ್ನು ಕೊಡಬೇಕೆಂದು ಹೇಳಿದೆ ಈ ಪರಿಹಾರವನ್ನು ಆಸ್ತಿ ಮುಂತಾದವುಗಳನ್ನು ಸರಕಾರ ತನ್ನ ವಶಪಡಿಸಿಕೊಂಡ ಕೂಡಲೇ ಕೊಡಬೇಕೆಂದೇನು? ಅದು ನಿರ್ಬಂಧಿಸಿರದಿರುವುದು ಗಮನಾರ್ಹನಾಗಿದೆ. ಪರಿಹಾರವನ್ನು ಯಾವ ರೀತಿಯಲ್ಲಿ ಕೊಡಲಾಗುವುದೆಂದು ಅಂಥಕಾಯಿದೆ ಸ್ಪಷ್ಟವಾಗಿ ಉಲ್ಲೇಖಿಸುವ ಅಗತ್ಯವನ್ನಷ್ಟೆ ರಾಜ್ಯಘಟನೆಯಲ್ಲಿ ಬಿಂಬಿಸಲಾಗಿದೆ, ಹೊರತು ಅದಕ್ಕೂ ಹೆಚ್ಚಿಲ್ಲ ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾದರೆ ಭೂಮಿ ಸುಧಾರಣೆಯಂಥ ಬಹುಜನ ಹಿತಕಾರಿಯಾದ ಕ್ರಮವನ್ನು ಕೈಗೊಳ್ಳುವಲ್ಲಿ ನಾವು ಯಾವ ಕಾರಣಕ್ಕಾಗಿಯೂ (ಮುಖ್ಯವಾಗಿ ಆರ್ಥಿಕ ಅನಾನುಕೂಲತೆಗಾಗಿ) ಕಾಲಯಾಪನೆ ಮಾಡುವುದು ಅನಗತ್ಯ. ನಮ್ಮದು ಬಡ ದೇಶವೆಂದು ಎಲ್ಲರೂ ಬಲ್ಲರು ಜಮೀನನ್ನು ರೈತರಿಗೆ ಹಂಚಿ ಕೊಡುವುದಕ್ಕೆಂದು ಸರಕಾರ ಭೂಮಾಲಿಕರಿಂದ ಅದನ್ನು ವಶಪಡಿಸಿಕೊಳ್ಳುವಾಗಲೇ ಯೋಗ್ಯ ಪರಿಹಾರ ನೀಡಬೇಕೆಂದಿರುತ್ತಿದ್ದರೆ--ಆಗ ನಾವು ಹೇಳಿದಲ್ಲಿ ಸಿಕ್ಕಿಬೀಳುತ್ತಿದ್ದೆವು ನಮ್ಮಿಂದ ಎಂದಿಗೂ ಅಷ್ಟು ಹಣವನ್ನು ಕೂಡಿಸುವುದು ಸಾಧ್ಯವಿರಲಿಲ್ಲ ಆದರೆ ಈಗಿರುವಂತೆ, ಪರಿಹಾರದ ಯೋಜನೆಯನ್ನು ಕಾಯಿದೆ ಒಳಗೊಂಡಿದ್ದಾರೆ ಸಾಕು ಎನ್ನುವುದರಿಂದ-ಪರಿಹಾರ ನೀಡಲು ಸರಕಾರದ ಬದ್ಧವಿದೆಯೆಂದೂ, ಆದರೆ ಅದನ್ನು ಅನುಕೂಲ ಬಂದಾಗ (ಹತ್ತು--ಹನ್ನೆರಡು ವರ್ಷಗಳ ಅವಧಿಯಲ್ಲಿ ಎಂದೆನ್ನೋಣ) ಕೊಡಬಹುದೆಂದೂ ಆಶಿಸಲು ಎಡೆ ಇದೆ

ಭೂಮಿಯ ಮಾರಾಟ

ಇದನ್ನು ಏಕೆ ಹೇಳಿದೆ ಎಂದರೆ--ಆರ್ಥಿಕ ಕಾರಣಗಳನ್ನು ಮುಂದೊಡ್ಡಿ ಜನತೆಗೆ ಅಗತ್ಯ ಬೇಕಿರುವ ಕೆಲಸಗಳನ್ನು ಹಿಂದಕ್ಕೆ ದೂಡುವುದು ಇಂದಿನ ಪದ್ಧತಿಯಾಗಿದೆ. ಭೂಮಿ ಸುಧಾರಣೆಯಂಥ ಪ್ರಶ್ನೆಗೆ ಪ್ರಾಶಸ್ತ್ಯವನ್ನು ಕೊಟ್ಟರೂ ಆ ದಿಸೆಯಲ್ಲಿ ಮುನ್ನಡೆಯುವುದಕ್ಕೆ ಹಿಂಜರಿಯಲು ಆರ್ಥಿಕ ಅನಾನುಕೂಲತೆಯೂ ಒಂದು ನೆಪವಾಗಬಾರದು ಹಾಗೆ ಆಗದೆ, ರೈತರ ನ್ಯಾಯಬದ್ಧ ಬೇಡಿಕೆಗಳು ತೀವ್ರವೇ ಮನ್ನಿಸಲ್ಪಡುವುದಗತ್ಯವೆಂದು ಬಿಂಬಿಸುವುದೇ ಇಲ್ಲಿ ನನ್ನ ಉದ್ದೇಶ. ಹೈದರಾಬಾದಿನಂಥ ರಾಜ್ಯಗಳು ಈಗಾಗಲೇ ಜಾರಿಗೆ ತಂದಿರುವ ಭೂ ಸುಧಾರಣಾ ಕಾಯಿದೆಗಳಿಗನುಸಾರವಾಗಿ ರೈತನು ಆರು ವರ್ಷಗಳ ಕಾಲ ಒಂದು ಭೂಮಿಯನ್ನು ನಿರಂತರ ಸಾಗುವಳಿ ಮಾಡುತ್ತಿದ್ದರೆ, ಅದನ್ನು ಭೂಮಾಲಿಕನು ತನಗೆ (ಎಂದರೆ ರೈತನಿಗೆ) ಮಾರಬೇಕೆಂದು ಒತ್ತಾಯಿಸಲು ಸಾಧ್ಯವಿದೆ ಅಂಥ ಸಂದರ್ಭದಲ್ಲಿ ಆ ಭೂಮಿಯ ವಾರ್ಷಿಕ ಉತ್ಪನ್ನದ ನಾಲ್ಕು ಪಾಲಿನಷ್ಟು ಹಣವನ್ನು ಅದರ ಬೆಲೆಯಾಗಿ ಸಂದಾಯ ಮಾಡಿದರೆ ಸಾಕು ಸ್ವಲ್ಪ ಅಧಿಕ ಪರಿಶ್ರಮ ಹಾಗೂ ಮನಃಪೂರ್ವಕವಾದ ದುಡಿಮೆಯಿಂದ ಸಾಮಾನ್ಯ ರೈತನು ಹೀಗೆ ಭೂಮಿಯನ್ನು ಸ್ವಯಕ್ಕೆ ಪಡೆದುಕೊಳ್ಳಲು ಆಸ್ಪದವಿದೆ. ಆದರೆ ಇಂದಿನ ಪರಿಸ್ಥಿತಿಯನ್ನು ಅವಲೋಕಿಸಿದರೆ, ರೈತರ ಕೊಂಡುಕೊಳ್ಳುವ ಶಕ್ತಿಯು ಕುಗ್ಗಿದೆಯಾದುದರಿಂದ, ಸ್ವತಃ ಭೂಮಿಯನ್ನು ಪಡೆದುಕೊಳ್ಳುವ ಸಾಮರ್ಥ್ಯ ಬಹಳ ಕಡಿಮೆ ಜನರಲ್ಲಿ ಮಾತ್ರ ಕಂಡು ಬಂದೀತು

ಭೂ ಸುಧಾರಣೆಯಲ್ಲಿ ಇನ್ನೂ ಒಂದೆರಡು ಮಹತ್ವದ ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು: ಒಂದನೆಯದಾಗಿ ರೈತನ ಹಕ್ಕು ಬಾಧ್ಯತೆಗಳಿಗೆ ಅನುವಂಶಿಕ ಸ್ವರೂಪದ ಸಂರಕ್ಷಣೆ ಇರುವುದಗತ್ಯ ತಂದೆಯ ಒಕ್ಕಲುತನದ ಭೂಮಿಯ ಮೇಲೆ, ಮಗನಿಗೆ ಅಧಿಕಾರವುಳಿಯಬೇಕು. ಹಾಗೆಯೇ ಕುಟುಂಬದ ಸದಸ್ಯರ ಸಂಖ್ಯೆಯನ್ನು ಅನುಸರಿಸಿ ಪ್ರತಿಯೊಬ್ಬನೂ ಸಾಕಷ್ಟು ವಿಶಾಲವಾದ ಭೂಮಿಯನ್ನು ಸಾಗುವಳಿ ಮಾಡುವಂತೆ ಅನುವು ಕಲ್ಪಿಸಿಕೊಡಬೇಕು ಭೂಮಿಯನ್ನು ಹಂಚಿಕೊಡುವಾಗಲೂ ಕನಿಷ್ಠ ಮಿತಿಯ ನಿರ್ಬಂಧವಿರುವುದು ಅಗತ್ಯ.

ನಮ್ಮ ರೈತರೆಲ್ಲ ಸಂಭಾವಿತರೆಂದೂ ಭೂಮಾಲಿಕರು ದೋಷಿಗಳೆಂದೂ ಪ್ರತಿಪಾದಿಸುವುದು ಈ ಲೇಖಮಾಲೆಯ ಉದ್ದೇಶವಲ್ಲ-ಪರಿಸ್ಥಿತಿಯನ್ನು ವ್ಯವಹಾರಿಕ ದೃಷ್ಟಿಯಿಂದ ನೋಡಬೇಕೆನ್ನುವುದೇ ಇದರ ಧ್ಯೇಯವಿದೆ ಭಾರತದಲ್ಲಿ ಭೂಮಿಯು "ರಾಷ್ಟ್ರೀಯ ಸೊತ್ತು" ಎಂಬುದಾಗಿ ಪೂಜ್ಯ ಮಹಾತ್ಮಾ ಗಾಂಧೀ ಸಾರಿದ್ದರು. ಒಕ್ಕಲ ತನವನ್ನು ಭದ್ರವಾದ ನೆಲಗಟ್ಟಿನಲ್ಲಿ ನಿಲ್ಲಿಸದಿದ್ದರೆ, ಭಾರತದ ಭವಿಷ್ಯ ಮಣ್ಣುಗೂಡುವುದೆಂದು ಅಂಜಿದ್ದರು ಈ ಅಂಜಿಕೆ ತೀರಾ ಸಹಜವಾದುದು; ಮತ್ತು ನಮ್ಮ ಕಣ್ಣಮುಂದೆಯೇ ಹಲವು ಉದಾಹರಣೆಗಳು ಈಚೆಗೆ ನಡೆದು ಹೋದುವು. ಆದುದರಿಂದ ಪೂರ್ವಗ್ರಹ ದೂಷಿತ ಮನೋಭಾವನೆಯನ್ನು ಇಟ್ಟುಕೊಳ್ಳದೆ, ನ್ಯಾಯ-ದೃಷ್ಟಿಯಿಂದ, ಮಾನವೀಯ ಭಾವದಿಂದ ಇದನ್ನು ನೋಡಬೇಕು.

— ಕಾರ್ತಿಕೇಯ

ಸೇವಿಂಗ್ಸ್ ಬೇಂಕ್ ಖಾತೆಯನ್ನು ಏತಕ್ಕಾಗಿ ತೆರೆಯಬೇಕು?

ವ್ಯಾಪಾರ ಮತ್ತು ಕೈಗಾರಿಕೆಗೆ ಹಣವೇ ಜೀವಾಳ. ಆದರೆ ಬಚ್ಚಿಟ್ಟ ಹಣ, ಉಪಯೋಗಿಸದ ಹಣ ಯಾವ ಪುರುಷಾರ್ಥವನ್ನೂ ಪಡೆಯಲಾರದು. ನಿಮ್ಮಂತಹ ಸಹಸ್ರಾರು ಡಿಪೊಜಿಟುದಾರರ ಹಣವು ನಿಮ್ಮ ಬೇಂಕಿನಲ್ಲೇ ಕೇಂದ್ರೀಕರಿಸಲ್ಪಟ್ಟಾಗ ಆ ಹಣವು ದೇಶದ ಕೈಗಾರಿಕೆ ಉದ್ಯಮಗಳ ಉಪಯೋಗಕ್ಕೆ ನೇರವಾಗಿ ದೇಶದ ಸಂಪದಭಿವೃದ್ಧಿಯನ್ನು ಸಾಧಿಸಿ. ... ಆದುದರಿಂದ ನಿಮ್ಮ ಉಳಿತಾಯ ಹಣವನ್ನು ನಿಮ್ಮ ಬೇಂಕ್ ಖಾತೆಯಲ್ಲಿಟ್ಟು ನಿಮ್ಮ ದೇಶದ ಅಭ್ಯುದಯಕ್ಕೇನೇ ಸಹಾಯ ನೀಡಿರಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್
ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ.

The Canara Industrial &
Banking Syndicate Limited.
Estd: 1925 H. O: UDIPI

ಖಾತ್ರಿ ಚಿನ್ನದ ನೆಕ್‌ಲೇಸ್, ಕರಹವಾರು ಚೈನುಗಳು, ಬೆಂಡೋಲೆ,
ಸರಗಳು, ಲೋಲಾಕ್ಕುಗಳು, ನವನಮೂನೆವಾರು ಉಂಗುರಗಳು
ಯಾವಾಗಲೂ ಸಿದ್ಧವಿವೆ.
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.
ಎಮ್. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.
ಫೋನ್:


More & More
PEOPLE BUY
PLATO
REGD.
PLATO [illegible] No. 66
The pen of the day
M. P. P. I. LTD. BOMBAY

ವಿದೇಶದ ಬಂಡವಾಳ

ವಿಶ್ವ ರಾಷ್ಟ್ರಗಳು ಶಾಂತಿ ಸ್ಥಾಪನೆಗೆ ಪ್ರಯತ್ನಿಸಲಿ

ಶಾಂತಿ ದೂತ ಭಾರತ

ಕಳೆದ ವಾರದ ವಿಶೇಷವಾಗಿದ್ದ ಸರಕಾರದ ಆಹಾರ ಧೋರಣೆ ಈ ವಾರ ಕುತೂಹಲದ ವಿಷಯವಾಗದೆ- ನಮ್ಮ ದೃಷ್ಟಿಯು ಅದಕ್ಕೂ ಮಹತ್ವದ ಸಂಗತಿಯ ಕಡೆಗೆ ಹರಿದಿದೆ. ಕೊರಿಯಾ ಶಾಂತಿ ಸಂಧಾನಕ್ಕೆ ನೆರವಾಗಬಲ್ಲ ಹದಿನೇಳು ಅಂಶಗಳನ್ನೊಳಗೊಂಡಿರುವ ಒಂದು ಗೊತ್ತುವಳಿಯನ್ನು ಭಾರತವು ಮಂಡಿಸಿರುವುದರಿಂದ ಮತ್ತು ಭಾರತದ ಪ್ರಧಾನಿ ನೆಹರೂ ಮಹಾ ಮುತ್ಸದ್ದಿ ಎಂದು ವಿಶ್ವದಲ್ಲಿಯೇ ಖ್ಯಾತನಾಮರಾಗಿರುವುದರಿಂದ-ಎಲ್ಲರ ಲಕ್ಷ್ಯವೂ ಆ ಕಡೆಗೆ ವೇಧಿಸಲ್ಪಟ್ಟಿದೆ. ಆದುದರಿಂದ ಲೋಕ ಸಭೆಯ ಅಧಿವೇಶನ ನಡೆಯುತಿದ್ದಾಗ ಕೂಡ ಪ್ರಧಾನಿ ನೆಹರೂ ಈ ವಿಷಯವನ್ನು ಪ್ರಸ್ತಾಪಿಸಿ ನಾಲ್ಕು ಮಾತು ಹೇಳುವುದು ಅನಿವಾರ್ಯವಾಯಿತು. ಅವರು ಬಿಚ್ಚು ಮನಸ್ಸಿನಿಂದ ವಿಶ್ವ ರಾಷ್ಟ್ರಗಳು ಭಾರತದ ಗೊತ್ತುವಳಿಯನ್ನು ಪುರಸ್ಕರಿಸಬೇಕೆಂದು ಬಿನ್ನಹ ಮಾಡಿದರು. ಭಾರತದ ಗೊತ್ತುವಳಿಯು ಲೋಪದೋಷಗಳಿಂದ ಮುಕ್ತವಾಗಿಲ್ಲವೆಂಬುದನ್ನು ಅವರು ಒಪ್ಪಿಕೊಂಡರು. ಹಾಗೆಂದು ಈ ಕೊರತೆಗಳನ್ನೆ ಮಹತ್ವದ್ದನ್ನಾಗಿ ಮಾಡಿ, ಅತ್ಯಂತ ಪ್ರಾಮುಖ್ಯ ಪ್ರಶ್ನೆಯಾದ ಶಾಂತಿ ಸ್ಥಾಪನೆಯನ್ನು ಅಲಕ್ಷ್ಯದಿಂದ ನೋಡುವುದು ಎಷ್ಟು ಮಾತ್ರಕ್ಕೂ ಸಲ್ಲದು ಎಂದು ನೆಹರೂ ಅಭಿಪ್ರಾಯ ಪಟ್ಟರು. ಈ ಗೊತ್ತುವಳಿಯನ್ನು ಭಾರತವು ತುಂಬ ವಿಚಾರವಿನಿಮಯದ ಬಳಿಕ ತಯಾರಿಸಿದೆ ಎಂದೂ ಎರಡೂ ಪಕ್ಷಗಳು ಗೌರವಯುತವಾದ ಒಡಂಬಡಿಕೆಗೆ ಬರುವುದಕ್ಕೆ ಸಾಧ್ಯವಾಗುವಂತೆ ಇದನ್ನು ಯೋಜಿಸಲಾಗಿದೆ ಎಂದೂ ನೆಹರೂ ಹೇಳಿದರು. "ಈಗಿನ ಗಂಭೀರ ಪರಿಸ್ಥಿತಿಯಲ್ಲಿ ಯುದ್ಧದ ಉಚ್ಚಾಟನೆ ಮಾಡಿ ಶಾಂತಿಯ ಪ್ರಸ್ಥಾಪನೆಗೆ ಮುಂದೆ ಬರುವುದು ಅವಶ್ಯವಿದೆ. ಕೊರಿಯಾ ಸಮಸ್ಯೆ ಬಿಡಿಸಲು ಭಾರತವು ತನ್ನ ಗೊತ್ತುವಳಿಯಿಂದ ಮಾರ್ಗದರ್ಶನ ಮಾಡಿರುತ್ತದೆ. ಅದಕ್ಕೆ ಬೆಂಬಲ ನೀಡುವುದರಿಂದ ಶಾಂತಿ ಸ್ಥಾಪನೆಗೆ ನೆರವಾದಂತಾಗುವುದು" ಎಂಬುದಾಗಿ ನೆಹರೂ ಹೇಳಿದ ಮಾತು ಸಮಯೋಚಿತವಾಗಿದೆ

ಅತ್ಯಂತ ಮಹತ್ವದ ಕ್ಷಣ

ಲೋಕಸಭೆಯಲ್ಲಿ ನಡುವೆ-ಎದ್ದು ನೆಹರೂ ಈ ಮಾತುಗಳನ್ನಾಡುವಾಗ ಅವರು ಭಾವಾವೇಶವನ್ನು ತೋರುತಿದ್ದರು; ಅವರ ಧ್ವನಿಯು ಪ್ರಶಾಂತವಾಗಿದ್ದರೂ ಮನಸ್ಸಿನಲ್ಲಿ ಏನು ನಡೆಯುತ್ತಿದೆ ಎಂಬುದನ್ನದು ಎದ್ದು ತೋರಿಸುವಂತಿತ್ತು. ನೆಹರೂ ಹೇಳಿದಂತೆ-"ಒಂದು ರಾಷ್ಟ್ರದ ಜೀವನದಲ್ಲಿ, ಒಮ್ಮೊಮ್ಮೆ ಇಡೀ ವಿಶ್ವದ ಜೀವನದಲ್ಲಿ ಒಂದು ಕ್ಷಣ ಅತ್ಯಂತ ಮಹತ್ವವುಳ್ಳದಾಗಿ ಪರಿಣಮಿಸುತ್ತದೆ; ಆಗ ಕೈಗೊಂಡ ನಿರ್ಣಯವನ್ನೇ ಭವಿಷ್ಯದ ಸುಖದುಃಖ ಅವಲಂಬಿಸುವ ಪ್ರಸಂಗ ಬರುತ್ತದೆ. ಮತ್ತು ಇದೀಗ ಅಂಥದೊಂದು ಗಳಿಗೆ ಪ್ರಾಪ್ತವಾಗಿದೆ. ಸಂಯುಕ್ತ ರಾಷ್ಟ್ರ ಸಂಘದ ಮೇಲೆ ಈ ಕ್ಷಣವನ್ನು ಅತ್ಯಂತ ಧೈರ್ಯ ಹಾಗೂ ದೃಢತೆಯಿಂದ ಎದುರಿಸಿ, ತನ್ಮೂಲಕ ತನ್ನ ಮಹೋದ್ದೇಶವನ್ನು ಪೂರೈಸುವ ಹೊಣೆಗಾರಿಕೆಯು ಬಿದ್ದಿದೆ." ಈ ಮಾತಿನ ಹಿಂದೆ ಇರುವ ಉದ್ವೇಗ ಹಾಗೂ ಕಳಕಳಿಯನ್ನು ಲೋಕಸಭೆಯಲ್ಲಿ ಕೂಡಿದ ಸದಸ್ಯರೆಲ್ಲರೂ ಚೆನ್ನಾಗಿ ಮನವರಿಕೆ ಮಾಡಿಕೊಂಡರು. ಪಕ್ಷ-ಪ್ರತಿಪಕ್ಷವೆಂಬ ಭೇದಭಾವನೆಯನ್ನು ತೊರೆದು ಎಲ್ಲ ವರ್ತುಲಗಳೂ ನೆಹರೂರ ಈ ಹೇಳಿಕೆಗೆ ಸ್ವಾಗತಕೊಟ್ಟವು. ಸದಸ್ಯರ ಹರ್ಷೋದ್ಗಾರದಿಂದ ನೆಹರೂ ವಿನಂತಿಗೆ ಬಲ ಬಂದಿತು.

ಅಲ್ಪ ಸಂಖ್ಯಾಕರ ಪ್ರಶ್ನೆ

ಇದೇ ಸಮಯ ಭಾರತದೊಳಗೆ ನಡೆಯುವ ಚಟುವಟಿಕೆಗಳನ್ನೂ ನೆಹರೂ ನಿರೀಕ್ಷಿಸದೆ ಬಿಡಲಿಲ್ಲ. ಕೊರಿಯಾದ ವಿಧ್ವಂಸಕ ಚಟುವಟಿಕೆಗಳು ಅಂತ್ಯಗೊಂಡು ಶಾಂತಿಯನ್ನು ಕಾಯಬೇಕೆನ್ನುವವರು ಮನೆಯೊಳಗಿನ ಅಶಾಂತಿಯನ್ನು ಸರ್ವಪ್ರಥಮವಾಗಿ ನಿವಾರಿಸದಿದ್ದರೆ ನಾಚಿಕೆಯಲ್ಲವೆ? ಪೂರ್ವ ಬಂಗಾಳದಲ್ಲಿ (ಪಾಕಿಸ್ತಾನ) ಅಲ್ಪಸಂಖ್ಯಾಕರಾದ ಹಿಂದೂಗಳನ್ನು ಆ ಸರಕಾರ ಒಳ್ಳೆಯ ರೀತಿಯಲ್ಲಿ ನಡೆಸಿಕೊಳ್ಳುತ್ತಿಲ್ಲವೆಂದೂ ಪಾಕಿಸ್ತಾನಕ್ಕೆ ಬುದ್ಧಿಗಲಿಸಲು ದೇಶದಲ್ಲಿ ಜನಜಾಗೃತಿಯನ್ನು ಹುಟ್ಟಿಸಬೇಕೆಂದೂ ಆರ್ಥಿಕ ದಿಗ್ಬಂಧನವನ್ನು ಹೇರಬೇಕೆಂದೂ ಜನಸಂಘವೇ ಆದಿಯಾಗಿ ತುಂಬ ಪ್ರಯತ್ನ ನಡೆಸುತ್ತಿವೆ. ಹಿಂದೆ ನೆಹರೂ ಮಂತ್ರಿಮಂಡಲದಲ್ಲಿದ್ದ ಡಾ| ಶ್ಯಾಮಪ್ರಸಾದ ಮುಖರ್ಜಿಯವರು ಸ್ವತಃ ಬಂಗಾಳಿಗರಿರುವುದರಿಂದ ಅವರು ಈ ಆಂದೋಲನದ ಅಧ್ವರ್ಯುಗಳಾಗಿ ಪರಿಣಮಿಸಿದ್ದಾರೆ ಅವರು ಲೋಕಸಭೆಯಲ್ಲಿ ಮಾಡಿದ ಭಾಷಣಗಳು ತುಂಬ ಪ್ರಭಾವಿಯಾಗಿದ್ದುವು ಇದೀಗ ಕಮ್ಯೂನಿಸ್ಟರನ್ನುಳಿದು ಇತರ ಎಲ್ಲ ಪ್ರತಿಪಕ್ಷಗಳ ಸಹಕಾರವನ್ನು ಪಡೆದು ಅವರು ಪಾಕಿಸ್ತಾನದ ವಿರುದ್ಧ ಉಗ್ರ ಕ್ರಮಗಳನ್ನು ಭಾರತವು ಕೈಗೊಳ್ಳುವುದು ಅತ್ಯಗತ್ಯವೆಂದು ಪ್ರತಿಪಾದಿಸುತಿದ್ದಾರೆ ನವೆಂಬರ ೨೦ರಲ್ಲಿ ಡಿಲ್ಲಿ, ಕಲ್ಕತ್ತಾ, ಮುಂತಾದ ಕಡೆಗಳಲ್ಲಿ ಪೂರ್ವ ಬಂಗಾಳ ದಿನಾಚರಣೆಯನ್ನು ಆಚರಿಸಿ, ಗೊತ್ತುವಳಿಗಳನ್ನು ಸ್ವೀಕರಿಸಿ, ಭಾರತವು ಈ ಸಮಸ್ಯೆಯನ್ನು ಹಗುರ ದೃಷ್ಟಿಯಿಂದ ನೋಡದೆ ಗಂಭೀರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ

ಹೊಣೆ ಯಾರದು?

ಭಾರತದ ವಿಭಜನೆಯನ್ನು ಒಪ್ಪುವಾಗ ಇಕ್ಕಡೆಯವರೂ ತಮ್ಮ ಪ್ರದೇಶದಲ್ಲಿರುವ ಅಲ್ಪ ಸಂಖ್ಯಾಕರನ್ನು ಯೋಗ್ಯ ರೀತಿಯಲ್ಲಿ ನಡೆಸಿಕೊಂಡು ಅವರನ್ನು ಸಂರಕ್ಷಿಸುವ ಜವಾಬ್ದಾರಿಯನ್ನು ನಿಃಸಂದಿಗ್ಧ ರೀತಿಯಲ್ಲಿ ಸ್ವೀಕರಿಸಿದ್ದರು ಆದರೆ ಜಾತೀಯತೆಯ ವಿಷ ಬೀಜದಿಂದ ಹುಟ್ಟಿದ ಪಾಕಿಸ್ತಾನೀ ರಾಷ್ಟ್ರವು ತನ್ನ ದೃಷ್ಟಿಯನ್ನೆಂದಿಗೂ ಭಾರತದಷ್ಟು ಉನ್ನತವಾಗಿ ಹಾಗೂ ವಿಶಾಲವಾಗಿ ಇಟ್ಟುಕೊಳ್ಳದೆ ಹೋಯಿತು. ಇದರಿಂದ ಒಂದೇ ಸಂಸ್ಕೃತಿಯ, ಒಂದೇ ಜನಾಂಗದ ಸಹೋದರರೊಳಗೆ ವೈಮನಸ್ಯಕ್ಕೂ ವೈರತ್ವಕ್ಕೂ ಆಸ್ಪದ ದೊರೆಯಿತು ನೆಹರೂ ಹೇಳುವಂತೆ ಈ ದ್ವೇಷಭಾವನೆಯನ್ನು ಹಬ್ಬಗೊಡದಿರುವುದರಲ್ಲಿಯೇ ವಿವೇಕವಿದ್ದರೂ ಕೂಡ ಪಾಕಿಸ್ತಾನದ ಮೇಲಿನ ಮಮತೆಯಿಂದ ಭಾರತವನ್ನು ಬಿಟ್ಟು ಅಲ್ಲಿಗೆ ನಿರಾಶ್ರಿತರಾಗಿ ತೆರಳಿದ ಮುಸಲ್ಮಾನರೇ ನಿಜವಾಗಿ ಅಲ್ಲಿಯ ಪರಿಸ್ಥಿತಿಯನ್ನು ಹದಗೆಡಿಸುತ್ತಿರಬೇಕು ಇಲ್ಲವಾದರೆ ನಿನ್ನೆ ಮೊನ್ನೆಯವರೆಗೆ ಪೂರ್ವ ಹಾಗೂ ಪಶ್ಚಿಮ ಬಂಗಾಳದ ಜನರು ಒಬ್ಬರಿನ್ನೊಬ್ಬರನ್ನು ಸಂಧಿಸಿದಾಗ ಪ್ರೇಮದಿಂದ ಕಂಡು ಸೌಹಾರ್ದದಿಂದ ನಡೆದುಕೊಳ್ಳುತಿದ್ದವರು, ಇಂದೇಕೆ ವಿಷವನ್ನು ಕಾರತೊಡಗಿದ್ದಾರೆ?

ಮಕ್ಕಳಾಟಿಕೆಯಲ್ಲ

ಆದರೆ ಈ ಸಮಸ್ಯೆಯನ್ನು ಡಾ| ಶ್ಯಾಮಪ್ರಸಾದ ಮುಕರ್ಜಿ, ಶ್ರೀಮತಿ ಸುಚೇತಾ ಕೃಪಲಾನಿ, ಜಯಪ್ರಕಾಶ ನಾರಾಯಣ, ಅಶೋಕ ಮೆಹತಾ ಮುಂತಾದವರು ಹೇಳುವಂತೆ ಆರ್ಥಿಕ ದಿಗ್ಬಂಧನದ ಮಾತನ್ನಾಡುವುದರಿಂದ ಬಿಡಿಸಲು ಸಾಧ್ಯವುಂಟೆ ಎಂಬುದನ್ನು ಶಾಂತಚಿತ್ತದಿಂದ ಪರ್ಯಾಲೋಚಿಸುವುದೊಳಿತು ದ್ವೇಷ ಸಾಧನೆಯನ್ನು ಪ್ರೀತಿಪ್ರದರ್ಶನದಿಂದ ಗೆಲ್ಲಬೇಕೆಂಬುದು ಕೃತಯುಗಕ್ಕೊಪ್ಪಿದ ಸುಭಾಷಿತವೆಂದು ನಾವು ಉಪೇಕ್ಷಿಸುವುದು ಸಮನಲ್ಲ. ಜಗತ್ತಿನ ಎಲ್ಲ ಧರ್ಮಗಳ ಮರ್ಮವನ್ನು ಅರಿತುಕೊಳ್ಳಲು ವಿದ್ಯಾರ್ಥಿಗಳು ಪರಿಶ್ರಮಿಸಬೇಕೆಂದೂ ಆಧ್ಯಾತ್ಮಿಕ ಚೈತನ್ಯದ ಆವಶ್ಯಕತೆ ಇಂದು ಹಿಂದೆಂದೂ ಇರದಷ್ಟು ಪ್ರಬಲಗೊಂಡಿದೆಯೆಂದೂ ಉಪರಾಷ್ಟ್ರಾಧ್ಯಕ್ಷ ರಾಧಾಕೃಷ್ಣನ್ನರು ಪೇರಿಸಿನಲ್ಲಿ ಹೇಳಿದಾಗ ಅವರು ಸತ್ಯವನ್ನೆ ನುಡಿದರು; ಮಾತ್ರವಲ್ಲ ಭಾರತದ ಅಂತಃ ಸ್ವರೂಪವನ್ನೂ ಬಯಲುವಾಗಿ ಮುಂದಿಟ್ಟರು. ಇಂಥ ನಾವು ಅಲ್ಪ ಸಂಖ್ಯಾಕರಿಗೆ ನ್ಯಾಯ ಸಿಗಬೇಕೆಂದು ನೆರೆಯ ರಾಷ್ಟ್ರದೊಡನೆ ಕಾದಾಟಕ್ಕೆ ಇಳಿದರೆ-ಅದು ನಮಗೆ ಶೋಭೆ ತರುವುದಿಲ್ಲ ಮಾತ್ರವಲ್ಲ ವಿಶ್ವದ ಹಾಸ್ಯಕ್ಕೆ ಗುರಿಯಾಗಿ ಮಾನಗೇಡಿಗಳಾಗಿ ನಾವು ಸಾಯಬೇಕಾದೀತು.

ದುಡುಕು ಹೆಜ್ಜೆಯಿಂದ ಕೆಡುಕು

ಸಂಗತಿ ಹೀಗಿರುವುದರಿಂದ ನೆಹರೂ ಈ ಸಮಸ್ಯೆಯನ್ನು ಸಿಟ್ಟಿಗೆದ್ದ ಹುಡುಗರಂತೆ ನೋಡದೆ ಅನುಭವಿಕರಾದ ಗೃಹಸ್ಥರ ಬುದ್ಧಿವಂತಿಕೆಯಿಂದ ಬಿಡಿಸಬೇಕೆಂದು ಹೇಳಿರುವರು ಪಾಕಿಸ್ತಾನಿ ಸರಕಾರವು ತನ್ನ ಅಲ್ಪ ಸಂಖ್ಯಾಕರನ್ನು ನೋಡಿಕೊಳ್ಳುತ್ತಿರುವ ರೀತಿಯು ಬ ತಮಗೆ ಸ್ವಲ್ಪವೂ ಸಮಾಧಾನವಿಲ್ಲೆಂದು ಅವರು ಒಪ್ಪುವರು. ಆದರೆ ಇದನ್ನು ಬಿಡಸಲು ಇರುವ ಎರಡೇ ಮಾರ್ಗಗಳು ಮೊದಲನೆಯದಾದ ಯುದ್ಧಕ್ಕೆ ನೆಹರೂ ಹಿಂಜರಿಯುವುದು ಸ್ವಾಭಾವಿಕವೂ ಉಚಿತವೂ ಆಗಿದೆ. ಎರಡನೆಯ ಮಾರ್ಗವೆನಿಸಿದ ರಾಜಕೀಯ ಮುಷ್ಟಿಯ ಒತ್ತಾಯ ಪದ್ಧತಿಯನ್ನೆ ಈಗ ಸರಕಾರ ಅನುಸರಿಸುತ್ತಿದ ಆರ್ಥಿಕ ದಿಗ್ಬಂಧನ ಮುಂತಾದ ಕ್ರಮಗಳು ಯುದ್ಧಕ್ಕೆ ಪ್ರಚೋದನೆ ಕೊ

ಅಮೃತಾಂಜನ
ತಲೆವೇದನೆ, ಶಿರೋವೇದನೆ, ಉಳುಕು
ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ
ನೋವು,ಗಾಯಗಳು, ಬಾತುಕೊಳ್ಳುವುದು,
ಚೇಳಿನ ಮುಂತಾದವು, ಪಕ್ಷವಾತ, ಮೊದಲಾದ
ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ



FEGO
[illegible]
ಮತ್ತು
ನಮ್ಮಲ್ಲಿ
ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು, ಬೊಂಬಾಯಿ ಮತ್ತು ಕಲ್ಕತ

ZANDU KESARI JIVAN
ಝಂಡೂ ಕೇಸರಿ ಜೀವನ
ಕೆಮ್ಮು, ನೆಗಡಿ, ರಾಜಯಕ್ಷ್ಮ, ಮಿದುಳು ನಿತ್ರಾಣ, ಅಕಾಲಿಕ ವೃದ್ಧಾಪ್ಯ, ಸರ್ವಸಾಮಾನ್ಯ ಬಲಹೀನತೆಗಳಿಗೆಲ್ಲಾ ಕೇಸರಿ ಜೀವನವು ಹಸರುವಾಸಿಯಾದದ್ದು ಅಲ್ಲದೆ ದೇಹಾರೋಗ್ಯವನ್ನು ಸಮತೂಕದಲ್ಲಿರಿಸಲು ಆದರ್ಶ ಟೊನಿಕ್ ಆಹಾರವಾಗಿದೆ. 1 ರಾತ್ಲ: ರೂ. 6-8-0 ¼ ರಾತ್ಲ: ರೂ 1-14-0
ದೊರೆಯುವ ಸ್ಥಳಗಳು:
1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ
2 ಶ್ರೀ ವಿ ವಿ ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್. ಎಸ್. ಶರ್ಮ, ಹಜೂರು ರಸ್ತೆ ಮಂಗಳೂರು.
ಮತ್ತಿತರ ಸೇಲ್ ಏಜಂಟರಲ್ಲಿ.
ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರಿ ಶರತ್ತು ವಗೈರೆಗಳಿಗೆ ಬರೆಯಿರಿ.
DAMODAR & CO.,
Nainiappa Naicken Street, Park Town-MADRAS. 3.

[illegible] ನಿಂತಿತು
'ಕುಮಾರಿ' ಗುಳಿಗೆಗಳನ್ನು ಉಪಯೋಗಿಸಿದರೆ [illegible]
[illegible]
ರೂ. 3-; ಸ್ಪೆಶಲ್ ರೂ. 5-
ಅಧಿಕಾಧಿಕ ಸ್ಪೆಶಲ್ ರೂ. 8-] [illegible]
Mrs D DEVLE, 1-05 (N. 3.)
Tollygunge CALCUTTA.
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂ

ಹಾಯ ತರುವುದೆ?

ಸಂಖ್ಯಾಕರ ಬಗ್ಗೆ ಆರ್ಭಟೆ ಪ್ರಯೋಜನವಿಲ್ಲ

ಂಧವುಗಳಾದುದರಿಂದ ಪ್ರತಿಪಕ್ಷದ ಷ್ಟ ಬೇಡಿಕೆಗೆ ಹೊಣೆಗಾರಸ್ಥಾನದಲ್ಲಿ ಕಾಂಗ್ರೆಸು ಸರಕಾರ ಒಡಂಬಡದೆ ಕರಿಸುತ್ತಿದೆ ಇದರ ಔಚಿತ್ಯವನ್ನು ಸುವ ಪ್ರಸಂಗವಿರದೆ. ಪ್ರತಿಪಕ್ಷದ ನಡನಳಿಕೆಯನ್ನೆ ವಿಮರ್ಶಿಸುವ ಗಳಿ ಂದಿದೆ ಏಕೆಂದರೆ ಪೂರ್ವ ಬಂಗಾಳ ಂಚರಣೆಯಂಥ ಕ್ರಮಗಳಿಂದ ಉ ಕ್ಕೂ ಕಳವಳಕ್ಕೂ ಪ್ರೋತ್ಸಾಹ ತಿಸು ಪರಿಸ್ಥಿತಿ ಪ್ರಶ್ನಬದ್ಧಗೊಳ್ಳು

ವಿದೇಶದ ನೆರವು

ಜಾತೀಯತೆ, ಹಗೆತನ ಮುಂತಾದ ಾತಕ ಪ್ರವೃತ್ತಿಯ ನೆರಳಲ್ಲಿ ಒಂದು ್ರವನ್ನು ಕಟ್ಟಿ, ಅದನ್ನು ಬೆಳೆ ಸುವುದು ಸಾಧ್ಯವಿಲ್ಲ. ನಮ್ಮದೀಗ ರಾಜ್ಯವಾಗಿದೆಯಾದುದರಿಂದ— ಕೀಯ ಪಕ್ಷಗಳ ಮೂಲ ್ರಂತ ಜಾತೀಯ ತಳಹದಿಯನ್ನು ಬಿಟ್ಟು ನಿಂತಿರಬೇಕಾದುದೇ ಸಮು ಕಾಂಗ್ರೆಸು, ಸಮಾಜವಾದಿ, ಸಾ ವಾದಿ ಮುಂತಾದ ಪಕ್ಷಗಳು ನಿಜ ಈ ದಿಸೆಯಲ್ಲಿ ಮುಂದೋಗಾಮಿ ಹಂ ನ್ನು ತತ್ವದಲ್ಲಿ ಅನುಸರಿಸಿವೆ ಧರ್ಮಾ ವಾದ ಗಣರಾಜ್ಯವು ಭಾರತವೆಂದು ನೆಯಲ್ಲಿ ಹೇಳಿ, ಸರ್ವಧರ್ಮಗಳ ಜ ಪ್ರೇಮ ಹಾಗೂ ಸೌಹಾರ್ದದಿಂದ ಮಕೊಳ್ಳಲು ಎಡೆಮಾಡಿಕೊಡಲಾಗಿ ಪಾಕಿಸ್ತಾನ ಹಾಗೂ ಭಾರತಗಳ ನ ವಿಭಜನೆಯ ಪರಿಣಾಮವಾಗಿ ಉಂ ಘರ್ಷಣೆಗಳು ಜಾತೀಯವಾದಿಗಳ ಲವುಟ್ಟಿಗೆ ಪ್ರೋತ್ಸಾಹಕೊಟ್ಟರ ಆದರೆ ನಮ್ಮ ಈಗಿನ ಪರಿಸ್ಥಿತಿ ಜಾತೀಯವಾದಿಗಳಿಗೆ ಬೆಂಬಲ ಯುವುದೇ ಇಲ್ಲ. ಬದಲು ಆರ್ಥಿಕ ರಚನೆಯ ಕಡೆಗೆ ಜನರು ಹೆಚ್ಚು ಒಲಿಯುತ್ತಾರೆ. ಧರ್ಮವನ್ನು ಆ ಸಿರದಿದ್ದರೂ ಆರ್ಥಿಕ ಅಭಿವೃದ್ಧಿ ಗತ್ಯವೆಂಬ ಸಂಗತಿಯನ್ನು ಎಲ್ಲರೂ ಕ್ಷಾರೆ, ಕಾಂಗ್ರೆಸಾಗಲೀ, ಕಮ್ಯೂ ಆಗಲೀ--ಆರ್ಥಿಕ ಪುನಾರಚನೆ ಮುಖ್ಯೋದ್ದೇಶವುಳ್ಳ ರಾಜಕೀ ಪಕ್ಷಗಳು. ರಾಜಕೀಯ ಜಾಗೃತಿ ರುವ ಈ ದಿನಗಳಲ್ಲಿ, ಅಧಿಕಾರಾ ವಾದ ಕಾಂಗ್ರೆಸಿನ ಆರ್ಥಿಕ ಚಟು ಕೆಗಳು ನಮಗೆ ಬಂಧನಕಾರಿ ಗಿವೆ ಎಂದು ಪ್ರತಿಪಕ್ಷಗ ಟೀಕಿಸಿ, ತಮ್ಮ ಬಲವನ್ನು ಸಿಕೊಳ್ಳಲು ನೋಡುತ್ತಿವೆ ಮುಖ್ಯ ಪಂಚವಾರ್ಷಿಕ ಯೋಜನೆಯನ್ನು ರ್ಯಕಾರಿಯಾಗಿಸುವುದಕ್ಕೆ ನಮಗೆ ಶಗಳ (ಕಮ್ಯೂನಿಸ್ಟರ ಮಾತಿನಲ್ಲಿ ರಿಕದ) ನೆರವು ಮತ್ತು ಬಂಡವಾಳ ಎಂದು ದೂರಲಾಗುತ್ತಿದೆ.

ಸಂಭಾವ್ಯ ದುಷ್ಪರಿಣಾಮ

ಭೀತಿ ತೀರಾ ನಿರಾಧಾರವಾದುದೆಂ ಹತ್ತು ಹಲವು ಸಲ ಸ್ಪಷ್ಟ ಮಾತು ಹೇಳಿದ್ದುಂಟು. ಮೊನ್ನೆ ಲಕ್ನೋ ಈ ಸಂಗತಿಯನ್ನು ಎತ್ತಿಕೊಂಡು ರೂ ಮೇಳಿ ಭಾರತ ಸರಕಾರದ ನಿಲುವೆಯನ್ನು ವಿವರಿಸಿದರು. ಪಂಚವಾರ್ಷಿಕ ಯೋಜನೆಯನ್ನು ವಿದೇಶೀ ನೆರವಿನ ಬಲದಿಂದ ಕಾರ್ಯಗತ ಮಾಡಿಕೊಳ್ಳಲು ಹವಣಿಸಿರದೆ-ನಮ್ಮ ಸ್ವಂತ ಬಂಡವಾಳದಿಂದಲೇ ಅದನ್ನು ಯಶಸ್ವಿಯಾಗಿಸಲು ನೋಡಿವೆ. ಕೆಲಮಟ್ಟಿಗೆ ಬಂಡವಾಳವು ಕಡಿಮೆಯಾಗಲೂ ಸಾಕೆಂಬುಧರಿಂದ, ವಿದೇಶಗಳಿಂದ ಕರಾರುಗಳಿಲ್ಲದೆ ಅದು ಸಿಕ್ಕುವಂತಿದ್ದರೆ, ಅದನ್ನು ಸ್ವೀಕರಿಸಬೇಕೆಂದು ಸರಕಾರ ನಿರ್ಣಯಿಸಿದೆ. "ಆದರೆ ಯಾವುದೇ ತರದ ಬಂಧನಕಾರಿ ಕರಾರಿಗೆ ಒಪ್ಪಿಕೊಂಡು ಸರಕಾರವು ವಿದೇಶೀ ಬಂಡವಾಳವನ್ನು ಸ್ವಾಗತಿಸುವಂತಿದ್ದರೆ, ನಾನಾಗ ಸರಕಾರದ ಧುರೀಣನಾಗಿ ಉಳಿಯಲಾರೆ" ಎಂದರು ನೆಹರೂ ನಮಗೆ ವಿದೇಶೀ ನೆರವು ಅನಿರ್ಬಂಧಿತವಾಗಿ ದೊರೆಕೀತೆಂದು ಭಾವಿಸಿ, ಮೂಲ ಯೋಜನೆಯನ್ನು ಕೆಲಮಟ್ಟಿಗೆ ವ್ಯಾಪಕಗೊಳಿಸಿದ್ದೇ ಹೊರತು ದಾಸ್ಯ ಸ್ವೀಕರಿಸಲು ಸಿದ್ಧವಾಗಿಯಿಲ್ಲ ಎಂಬುದನ್ನು ಗಮನಿಸಿದರೆ, ನಮಗೆ ಯಾವ ಭಯವೂ ಬೇಕಿಲ್ಲ. ಹಾಗೆ ಬಂಡವಾಳ ದೊರೆಯದೆ ಹೋದರೆ ಕೆಲವು ಯೋಜನೆಗಳು ನಿಧಾನವಾಗಿ ಸಾಗಿಯಾವು. ಬಹಳವಾದರೆ, ಕೆಲವೊಂದು ಯೋಜನೆಗಳನ್ನು ಬಿಟ್ಟುಬಿಡಬೇಕಾಗಿ ಬಂದೀತು. ಅಷ್ಟೇ ಹಾನಿ—ಎಂಬ ನೆಹರೂ ನಿರ್ವಂಚನೆಯಿಂದ ಹೇಳಿದುದು ತುಂಬ ಸಮಾಧಾನಕ್ಕೆ ಕಾರಣವಾಗಿದೆ

"ಔದಾರ್ಯದ ಉರುಳು"

ರಾಷ್ಟ್ರೀಯ ಮನೋವೃತ್ತಿಯಿಂದ ಪ್ರೇರಿತರಾದ ಅರ್ಥಶಾಸ್ತ್ರಜ್ಞರು ಕೆಲವರು ಭಾರತ ವಿದೇಶೀ ನೆರವನ್ನು ಸ್ವಾಗತಿಸುವ ರೀತಿಯನ್ನು ಕಟು ವಚನಗಳಲ್ಲಿ ಟೀಕಿಸಿದ್ದುಂಟು. ಗಾಂಧೀ ಅರ್ಥಶಾಸ್ತ್ರಜ್ಞರೆಂದು ಪ್ರಖ್ಯಾತರಾದ ಡಾ| ಜೆ. ಸಿ. ಕುಮಾರಪ್ಪನವರು ಕೂಡ ಅಮೇರಿಕಾದ ಬಂಡವಾಳ ಔದಾರ್ಯದ ಉರುಳು ಎಂದು ಪ್ರತಿಪಾದಿಸುವುದಕ್ಕೆ ಹಿಂಜರಿದಿಲ್ಲ. ವಿದೇಶೀ ಬಂಡವಾಳವನ್ನು ಸ್ವೀಕರಿಸುವಲ್ಲಿ ಇರುವ ತೊಡಕುಗಳು, ಭಾರತ ಸರಕಾರದ ನಿರೀಕ್ಷೆಯಂತೆ, ಎರಡೇ ಇವೆ. ಒಂದನೆಯದಾಗಿ ಅದು ಸ್ವಾವಲಂಬನ ಪ್ರವೃತ್ತಿಗೆ ಪ್ರೋತ್ಸಾಹವನ್ನು ಕೊಡದೆ, ನಮ್ಮ ಎಲ್ಲ ಅವಶ್ಯಕತೆಗಳ ಪೂರ್ತಿಕೆಗಾಗಿ ವಿದೇಶದ ಮುಖ ನೋಡುತ್ತಿರುವುದಕ್ಕೆ ಪ್ರೋತ್ಸಾಹ ಕೊಡುತ್ತದೆ. ರಾಷ್ಟ್ರಾಭಿವೃದ್ಧಿಗೆ ಈ ರೀತಿಯ ಪರಾವಲಂಬನ ಪ್ರವೃತ್ತಿಯು ಪೋಷಕವೆನಿಸದೆ. ಘಾತಕವಾಗಿ ಪರಿಣಮಿಸೀತು ಎರಡನೆಯದು: ಕಾರಣಾಂತರಗಳಿಂದ ವಿದೇಶೀ ಸಹಾಯ ಒಮ್ಮೆಲೇ ನಿಂತುಹೋದ ಪರಿಸ್ಥಿತಿಯಲ್ಲಿ ನಾವು ಪಡೆಯುತ್ತಿರುವ ದೇರ ಫಜೀತಿಗೊಳಗಾಗುತ್ತದೆ ಆದರೆ ಈ ಎಲ್ಲ ಗಂಡಾಂತರವನ್ನೂ ಮೊದಲೇ ಊಹಿಸಿದ್ದು--ಸಾಧ್ಯವಿದ್ದಷ್ಟೂ ಹೆಚ್ಚು ಪ್ರಮಾಣದಲ್ಲಿ ನಮ್ಮ ಸ್ವಂತಕಾಲ ಮೇಲೆ ನಿಲ್ಲಲು--ದೇಶದೊಳಗೆ ಅಧಿಕ ಬಂಡವಾಳವನ್ನು ಕೂಡಿಸಲು ಪ್ರಯತ್ನ ನಡೆದಿದೆ

ನಿಯಂತ್ರಣ ಏಕೆ ಬೇಕು ?

ನಿಯಂತ್ರಣಗಳು ಬೇಕೆಂದು ಕೇಂದ್ರ ಸರಕಾರವು ಬಲವಾಗಿ ಪ್ರತಿಪಾದಿಸಿದಾಗ- ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಮಾಡುವುದೇ ಅದರ ಮುಖ್ಯ ಧ್ಯೇಯವೆಂಬುದು ಸ್ಪಷ್ಟವಾಗಿತ್ತು. ಸುಮಾರು ೩೦೦ ಕೋಟಿ ರೂಪಾಯಿಗಳ ಕೊರತೆಯ ಬಂಡವಾಳದ ಮೇಲೆ ಪಂಚವಾರ್ಷಿಕ ಯೋಜನೆ ನಿಂತಿರುವುದರಿಂದ, ನಿಯಂತ್ರಣಗಳು ಅತ್ಯಗತ್ಯವಾದುವೆಂದು ಅರ್ಥಶಾಸ್ತ್ರಜ್ಞರ ಅಭಿಪ್ರಾಯ ಡಾ| ವಿ. ಕೆ. ಆರ್. ವಿ ರಾಯರು ಹೊಸದಿಲ್ಲಿಯಲ್ಲಿ ಮೊನ್ನೆಯದಿನ ಮಾತನಾಡುವಾಗ ಕೊರತೆ ಧನವಿನಿಯೋಗ ಪದ್ಧತಿ ಅತ್ಯಾವಶ್ಯಕವಾಗಿರುವುದರಿಂದ ನಿಯಂತ್ರಣಗಳು ಉಳಿಯಲೇ ಬೇಕಾಗಿ ಬಂದಿರುವುದರ ಅಗತ್ಯವನ್ನು ಚೆನ್ನಾಗಿ ವಿವರಿಸಿದರು ಕೊರತೆ ವಿನಿಯೋಗ ಪದ್ಧತಿಯಿಂದ ಚಲಾವಣೆಯಲ್ಲಿರುವ ಹಣವು ಹೆಚ್ಚುತ್ತದೆ ಪರಿಣಾಮವಾಗಿ ಬಳಕೆ ವಸ್ತುಗಳ (ಮುಖ್ಯವಾಗಿ ಆಹಾರ ಧಾನ್ಯಗಳ) ಬೇಡಿಕೆ ಹೆಚ್ಚಾಗುತ್ತದೆ ಅಭಾವವೂ ಹುಟ್ಟಿಕೊಳ್ಳುತ್ತದೆ. ಹೀಗೆ ಅತಿ ಪ್ರಸರಣವನ್ನು ಅಮುಂತ್ರಿಸುವುದರಿಂದ ಉಂಟಾಗುವ ದುಷ್ಪರಿಣಾಮವನ್ನು ತಪ್ಪಿಸಲಿಕ್ಕೆ ನಿಯಂತ್ರಣಗಳು ಸಹಕಾರಿಯಾಗುತ್ತವೆ: ಹಕೋಟೆಯನ್ನು ತಗದೋಗೆಯುವುದೆಂದರೆ ಪರಿಸ್ಥಿತಿ ಹದಗೆಡಲು ಬಿಡುವುದಾದೀತು ಅರ್ಥ ಎಂದು ಮುಂತಾಗಿ ರಾಯರು ಹೇಳಿದರು ಕೊರತೆ ಧನವಿನಿಯೋಗ ಪದ್ಧತಿ ಬೇಕಿದ್ದಲ್ಲಿ ನಿಯಂತ್ರಣಗಳಿಗೆ ಶರಣನ್ನವೆ ನಿರ್ವಾಹವಿಲ್ಲ ಎಂದವರ ವಾದ. ನಾಳಿನ ಸುಖದ ಆಸೆಯಿಂದ ಇಂದು ಕಷ್ಟ ಸಹಿಸುತ್ತಾ ಕುಳಿತಿರುವುದು ಪೌರುಷ ಹೌದಾದರೂ ಅದು ನಿರ್ದೋಷ ಮಾರ್ಗ ಮಾತ್ರ ಅಲ್ಲ. ನಿಯಂತ್ರಣ ಕೂಡ ತನ್ನೊಂದಿಗೆ ಸಂಸ್ಥವಾದ ಕೆಡುಕುಗಳನ್ನು ಒಂದೇ ತೀರುತ್ತದೆ ಈ ಮಾತು ನಿಶ್ಚಯ..

ನವಯುಗ ಪ್ರೆಸ್, ಉಡುಪಿ.

BBG 52/LOT 4

ನನ್ನ ಪತಿಗೆ ಉತ್ತಮ ಚಹಾ ಕಂಡರೆ ಇಷ್ಟ!

ಆದರೆ ನಾನು ಮಿತವ್ಯಯ ಮಾಡಬೇಕೆಂಬುದೂ ಅವರ ಇಷ್ಟ! ಬ್ರೂಕ್ ಬಾಂಡ್ ವಿಚಾರವನ್ನು ನನ್ನ ತಾಯಿಯು ನನಗೆ ಹೇಳದೇ ಹೋಗಿದ್ದಲ್ಲಿ, ಅವರನ್ನು ಸಂತೋಷಗೊಳಿಸುವುದು ಕಷ್ಟವಾಗುತ್ತಿತ್ತು. ಈಗ ನಾನವರಿಗೆ ಯಥಾರ್ಥವಾಗಿಯೂ ಉತ್ತಮವಾದ ಚಹಾ ಕೊಡುವುದಲ್ಲದೆ ಒಡನೆಯೇ ಹಣವನ್ನು ಉಳಿಸಬಲ್ಲೆ, ಏಕೆಂದರೆ ಕೇವಲ ಎರಡು ಔನ್ಸಿನ ಒಂದು ಬ್ರೂಕ್ ಬಾಂಡ್ ಪ್ಯಾಕೆಟ್ಟು 30 ಬಟ್ಟಲುಗಳ ಚಹಕ್ಕೆ ಸಾಕಾಗುತ್ತದೆ. ಚೆನ್ನಾಗಿ ಪರಿಚಿತವಾದ ಬ್ರೂಕ್ ಬಾಂಡ್ ಪ್ಯಾಕೆಟ್ಟು ನಮ್ಮ ಮನೆಯಲ್ಲಿ ಸದಾ ಕಾಲದಲ್ಲಿಯೂ ಇರುತ್ತದೆ

ಬ್ರೂಕ್ ಬಾಂಡ್ ಚಹಾ

ಭಾರತದ ಅತ್ಯುತ್ಕೃಷ್ಟವಾದುದು



"ದಿ ಕೆನರಾ ಬ್ಯಾಂಕಿಂಗ್ ಕಾರ್ಪೋರೇಶನ್ ಲಿಮಿಟೆಡ್"
ಇವರಲ್ಲಿ ಒಂದು ಸೇವಿಂಗ್ಸ್ ಖಾತೆಯನ್ನು ತೆರೆದು ಅದನ್ನು ಕ್ರಮವಾದ
ಉಳಿತಾಯಗಳಿಂದ ವೃದ್ಧಿಗೊಳಿಸುವುದೇ
ಜೀವನದಲ್ಲಿ ನಿಮ್ಮ ಉನ್ನತಿಗೆ ಹೆದ್ದಾರಿ !
ಸ್ಥಾಪನೆ: 1906
THE CANARA BANKING CORPORATION LIMITED.
ಪ್ರಧಾನ ಕಾರ್ಯಾಲಯ, ಉಡುಪಿ. (ದ ಭಾರತ)

ನವಯುಗ
ಉಡುಪಿ, ಗುರುವಾರ ೨೭-೧೧-'೫೨

ಶಾಂತಿಯ ಸೋಗು

ಒಂದೂವರೆ ವರ್ಷದಿಂದ ತೂಗುಯ್ಯಾಲೆಯ ಮೇಲೆ ಹೊಯ್ದಾಡುತ್ತಿರುವ ಕೊರಿಯಾದ ಶಾಂತಿ ಸಂಧಾನ ಕಾರ್ಯವು ಭಾರತದ ಗೊತ್ತುವಳಿಯ ಪರಿಣಾಮದಿಂದಲಾದರೂ ನೆರವೇರಿಸಲ್ಪಡಬಹುದೆಂದು ಸಾಮಾನ್ಯ ಜನರು ಕಟ್ಟಿಕೊಂಡ ಆಶೆಗೆ ಪುಷ್ಟಿ ದೊರಕುವುದಿಲ್ಲವೆಂದು ವಿಷಾದಿಸಬೇಕು. ಯುದ್ಧದಿಂದ ಅಪಾರ ಹಾನಿಯುಂಟೆಂದು ಇಕ್ಕಡೆಯವರು ಒಪ್ಪಿಕೊಂಡಿರುವಂತೆಯೇ ಸಮಾಧಾನಕರವಾದ ಯಾವ ಕರಾರಿಗೂ ಒಡಂಬಡದೆ ಕಾದಾಟವನ್ನು ಮುಂದುವರಿಸುವ ಚಾಪಲ್ಯವನ್ನೂ ತೋರಿಸುವುದು ಚೋದ್ಯದ ಸಂಗತಿ. ಬ್ರಿಟಿಷ್ ವಿದೇಶಾಂಗ ಸಚಿವ ಆಂಥೋನಿ ಈಡನರು ಕೊರಿಯಾದಲ್ಲಿ ನಡೆದ ಶಾಂತಿ ಸಂಧಾನದ ಮಾತುಕತೆಗಳಲ್ಲಿ ಕರಾರಿನ ೬೩ ಕಲಮುಗಳಲ್ಲಿ ೬೨ಕ್ಕೆ ಈಗಾಗಲೇ ಎರಡೂ ಪಕ್ಷದವರು ಒಪ್ಪಿರುವರೆಂದು ಹೇಳಿದ್ದಾರೆ. ಏನೊಂದೂ ಇತ್ಯರ್ಥಕ್ಕೆ ಬಾರದ ವಿಷಯವೆಂದರೆ ಯುದ್ಧ ಕೈದಿಗಳ ವಿನಿಮಯದ ಪ್ರಶ್ನೆ ಮಾತ್ರ. ಇದೊಂದನ್ನು ನೆಪವಾಗಿ ಹಿಡಿದುಕೊಂಡು ಬಡಿದಾಟವನ್ನು ಅನೂಚಾನವಾಗಿ ಮುಂದರಿಸುವುದು ಶಾಂತಿಪ್ರಿಯರೆನಿಸಿದ ಯಾರಿಗೂ ಇಷ್ಟವಲ್ಲ: ಅದರಲ್ಲೂ ಭಾರತದಂಥ ರಾಷ್ಟ್ರವು ನಿಷ್ಪಕ್ಷಪಾತ ಬುದ್ಧಿಯಿಂದಲೂ ನಿಸ್ಪೃಹತೆಯಿಂದಲೂ ಬಹಳ ಪರಿಶ್ರಮದಿಂದ ತಯಾರಿಸಿದ ಗೊತ್ತುವಳಿಯನ್ನು ತಿರಸ್ಕರಿಸುವುದೆಂದರೆ ಅದು ಸಲ್ಲದ ಧಾರ್ಷ್ಟ್ಯವೆಂದೇ ಹೇಳಬೇಕು. ಸಂಯುಕ್ತ ರಾಷ್ಟ್ರ ಸಂಘವು ಒಂದು ಪಕ್ಷವಾಗಿಯೂ, ಈ ಸಂಘದಲ್ಲಿ ಸ್ಥಾನವನ್ನು ಪಡೆದಿಲ್ಲದ ಉತ್ತರ ಕೊರಿಯಾ ಹಾಗೂ ಚೀನೀ ಪ್ರಜಾ ರಾಜ್ಯಗಳು ಇನ್ನೊಂದು ಪಕ್ಷವಾಗಿಯೂ ಇರುವ ಕೊರಿಯಾದ ಪ್ರಶ್ನೆಯಲ್ಲಿ ಭಾರತವೊಂದೇ ಯಾವ ಆಮಿಷಕ್ಕೂ ಹಂಗಿಗೂ ಒಳಗಾಗದೆ ಸರ್ವಸಮ್ಮತವಾದ ಮಧ್ಯ ಮಾರ್ಗವೊಂದನ್ನು ತೋರಿಸಿಕೊಟ್ಟು, ಯುದ್ಧ ವಿರಾಮವನ್ನು ಸಾಧಿಸಲು ಸಮರ್ಥವಾಗಿದೆ. ಇದನ್ನು ಭಾರತೀಯರಾದ ನಾವು ಹೇಳುವುದು ಆತ್ಮ ಪ್ರಶಂಸೆಯೆಂದೆನಿಸಿಕೊಂಡರೂ ಕೂಡ-ಭಾರತದ ಗೊತ್ತುವಳಿ ಮಂಡಿಸಲ್ಪಡುವುದಕ್ಕೆ ಮುಂಚೆ ಸಂಯುಕ್ತ ರಾಷ್ಟ್ರ ಸಂಘದ ವಲಯಗಳಲ್ಲಿ ಪ್ರಾಮುಖ್ಯವಾಗಿಯೂ ವಿಶ್ವದೆಲ್ಲ ಕಡೆಗಳಲ್ಲಿ ಸಾಮಾನ್ಯವಾಗಿಯೂ ಹಬ್ಬಿದ್ದ ದಟ್ಟ ವದಂತಿಯು ಹಾಗೂ ನಿರೀಕ್ಷೆಯ ಮೇಲಿಂದಲೇ ನಮ್ಮ ಹೇಳಿಕೆ ಆಡಂಬರವಲ್ಲವೆಂದು ಸಿದ್ಧವಾಗುತ್ತದೆ. ಸಂಯುಕ್ತ ರಾಷ್ಟ್ರ ಸಂಘದಲ್ಲಿ ಮಾತ್ರವಲ್ಲ —ತನ್ನ ನಿತ್ಯ ವ್ಯವಹಾರಗಳಲ್ಲಿ ಕೂಡ ಕೆಲವೊಂದು ವಿಶಿಷ್ಟ ತತ್ವಗಳನ್ನು ಅನುಸರಿಸಿಕೊಂಡು ಬಂದಿರುವ ಮತ್ತು ಆ ಸಾಮಾನ್ಯ ತತ್ವಗಳನ್ನು ಇತರರ ಸಂತೋಷ ಹಾಗೂ ದಾಕ್ಷಿಣ್ಯಕ್ಕಾಗಿ ಬಿಟ್ಟುಕೊಡದಿರುವ ನೀತಿಯನ್ನು ಭಾರತ ತೋರಿಸುತ್ತಾ ಬಂದಿದೆ. ಈ ನೈತಿಕ ಅಧಿಕಾರ ಬಲದಿಂದಲೇ ಕೊರಿಯಾ ಯುದ್ಧದ ವಿಘಾತಕ ಪರಿಣಾಮಗಳಿಗೊಂದು ತಡೆಯೊಡ್ಡಿ, ಸಂಧಾನ ಯಶಸ್ವಿಯಾಗುವಂತೆ ಭಾರತ ಪ್ರಯತ್ನಿಸುವಂತಾಗಿದೆ. ಆದರೆ ಈ ಪ್ರಯತ್ನಕ್ಕೆ ಸಂಯುಕ್ತ ರಾಜ್ಯ ಅಮೇರಿಕೆ ಏನೊಂದೂ ವಿಚಾರಮಾಡದೆ ಆರಂಭದಲ್ಲಿಯೇ ತೋರಿಸಿದ ಅಸಮ್ಮತಿ ಮತ್ತು ಈಗ ರಾಜಕೀಯ ಸಮಿತಿಯಲ್ಲಿ ರಶಿಯಾದ ಪ್ರತಿನಿಧಿ ವಿಶಿನ್ಸ್ಕಿಯವರು ತೋರಿಸಿದ ತಿರಸ್ಕಾರ ಇವೆರಡೂ ಮಹಾರಾಷ್ಟ್ರಗಳ ಮನೋಗತ ನಿಜಸ್ವರೂಪವನ್ನು ಬಯಲುಮಾಡುತ್ತವೆಯೇ ಹೊರತು, ಭಾರತದ ಅಂತಸ್ತನ್ನು ಕಡಿಮೆಮಾಡುವುದಿಲ್ಲೆಂದು ನಮ್ಮ ಅಭಿಪ್ರಾಯ. ಪಂಚಮಹಾರಾಷ್ಟ್ರಗಳಲ್ಲಿ ಸೇರಿದ ಬ್ರಿಟನು ಭಾರತದ ಗೊತ್ತುವಳಿಯನ್ನು ಬಲವಾಗಿ ಸಮರ್ಥಿಸಿದುದರಿಂದ ಅಮೇರಿಕೆಯ ನಿಲುವಿನಲ್ಲಿ ಬದಲಾವಣೆ ಕಂಡು ಬಂದೀತೆಂದು ಮೊದಲು ಆಶಾದಾಯಕ ವಾತಾವರಣ ತೋರಿ ಬಂದರೂ ರಾಜಕೀಯ ಸಮಿತಿಯಲ್ಲಿ ಡೀನ ಅಚೆಸನರು ಈ ಕುರಿತು ಮಾತನಾಡಿದ ಮೇಲೆ, ಆ ಆಶೆ ಕುಸಿದು ಹೋಯಿತೆಂದೇ ಹೇಳಬೇಕು. ಅಚೆಸನರು ಭಾರತದ ಗೊತ್ತುವಳಿಯಲ್ಲಿ ಪರಿವರ್ತನೆಯನ್ನು ಅಪೇಕ್ಷಿಸುತ್ತಿದ್ದರೆ, ವಿಶಿನ್ಸ್ಕಿಯವರು ಇದು ಅಂತರರಾಷ್ಟ್ರೀಯ ಒಪ್ಪಂದಗಳಿಗೇ ವಿರುದ್ಧವಾಗಿದೆ ಎಂದು ಘೋಷಿಸುತ್ತಾರೆ. ಬ್ರಿಟನಿನ ಈಡನರು ಸೂಚಿಸಿದಂತೆ ಎರಡು ಸಣ್ಣ ಪುಟ್ಟ ತಿದ್ದುಪಡಿಗಳಿಂದ ಭಾರತ ತನ್ನ ಗೊತ್ತುವಳಿಯನ್ನು ಪರಿಷ್ಕರಿಸಿದ ಮೇಲೂ ಈ ಅಭಿಪ್ರಾಯವೆಂಬುದನ್ನು ನೋಡುವಾಗ-ಕೊರಿಯಾದ ಶಾಂತಿ ಇನ್ನೂ ದೂರದ ಮಾತು ಎಂದು ಎಂದಿನಿಂದ ಹೇಳುತ್ತಾ ಬಂದುದನ್ನೆ ಇಂದೂ ಮನದಟ್ಟುಪಡಿಸುವುದು ಅನಿವಾರ್ಯವಾಗಿದೆ. ರಶಿಯಾದ "ಟಾಸ್" ವಾರ್ತಾ ಸಂಸ್ಥೆಯು ಭಾರತದ ಗೊತ್ತುವಳಿಯಲ್ಲಿರುವ ಶಬ್ದಾಡಂಬರದ ತೆರೆ ಕಳಚಿದರೆ ಅದು ಅಮೇರಿಕೆಯ ಸೂಚನೆಯ ಪ್ರತಿ ಎಂದು ಸಿದ್ಧವಾಗುವುದೆಂದು ಟೀಕಿಸಿಯೂ ಅಮೇರಿಕೆಗೆ ಅದು ಒಪ್ಪಿಗೆಯಾಗಲಿಲ್ಲ! ಅತ್ತ [illegible] ವರದಿಗಳಿಂದ ತಿಳಿಯುವಂತೆ ಚೀನೀ ಪ್ರಜಾರಾಜ್ಯವು ಭಾರತದ ಪ್ರಯತ್ನವನ್ನು ಸ್ವಾಗತಿಸುವಷ್ಟು ಸಹಾನುಭೂತಿ ತೋರಿದರೂ-ಉತ್ತರ ಕೊರಿಯಾ ಅದನ್ನು ತಿರಸ್ಕರಿಸಲು ದುಡುಕಿದೆ. ಎಂದಮೇಲೆ ಶಾಂತಿ-ಸಂಧಾನ ಎಂಬಲ್ಲಿ ಸ್ವಾರ್ಥಲಂಪಟಗಳು ನಮಗೇಕೆ ಬೇಕು? ಯಾರು ಯುದ್ಧದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸುತ್ತಿರುವರೋ ಆ ೨೧ ರಾಷ್ಟ್ರಗಳ ಪ್ರತಿ ಸಭೆಯಲ್ಲಿಯೂ ಭಾರತದ ಗೊತ್ತುವಳಿಗೆ ಬೆಂಬಲವೇನೋ ದೊರೆಯಿತು. ಏಶಿಯಾದ ಮಹಾ ರಾಷ್ಟ್ರಗಳಲ್ಲಿ ಭಾರತ ಪ್ರಾಬಲ್ಯದವುದ ಮತ್ತು ಕಮ್ಯೂನಿಸ್ಟ ಚೈನಾದೊಡನೆ ಸ್ನೇಹದಿಂದಿರುವ ರಾಷ್ಟ್ರವಾದುದರಿಂದ ಭಾರತದ ಗೊತ್ತುವಳಿಯನ್ನು ಸ್ವೀಕರಿಸುವುದು ಒಳಿತೆಂದು ಹೆಚ್ಚಿನವರ ಅಭಿಪ್ರಾಯ. ಹೀಗಿದ್ದೂ ಈ ರೀತಿಯ ಪ್ರತಿಕ್ರಿಯೆ! ಒಂದು ಪಕ್ಷವು ಇನ್ನೊಂದು ಪಕ್ಷವನ್ನು ಬಡಿದು ಮಣಿಸಬೇಕೆಂದು ಹೊಂಚು ಹಾಕಿ ಕುಳಿತಿದೆಯೇ ಹೊರತು ನಿಜವಾದ ಶಾಂತಿಯ ಅಪೇಕ್ಷೆಯೇನೂ ಇರುವಂತೆ ಕಾಣುವುದಿಲ್ಲ. ಮನೋಪರಿವರ್ತನೆಯಾಗದ ಹೊರತು ಯುದ್ಧದಂಥ ವಿಘಾತಕ ಘಟನೆಗಳು ನಿಂತು ಹೋಗುವುದೂ ಇಲ್ಲ. ಹೀಗೆ ಲೋಕವೇ ಆತ್ಮನಾಶದ ದಾರಿ ತುಳಿಯುತ್ತಿರುವಾಗ, ಪ್ರಾಮಾಣಿಕವಾಗಿ ಶಾಂತಿಯನ್ನು ಬಯಸುವ ರಾಷ್ಟ್ರಗಳು ತಟಸ್ಥವುಳಿಯುವುದೆಂತೋ? ತತ್ವನಿಷ್ಠೆಗೆ ತಿಲಾಂಜಲಿ ಕೊಡದಿರುವುದೆಂತೋ ಹೇಳಲು ಬರುವುದಿಲ್ಲ

ಇನ್ನೊಂದು ಮುಸ್ಲಿಂ ರಾಷ್ಟ್ರದಲ್ಲಿ ಕ್ಷೋಭೆ

ಯುದ್ಧ ಕೈದಿಗಳ ಪ್ರಶ್ನೆ ಇತ್ಯರ್ಥವಾಗುವಂತಿಲ್ಲ

ಈಜಿಪ್ಟದಲ್ಲಿ ಜನರಲ್ ನಗೀಬರ ನೇತೃತ್ವದಲ್ಲಿ ಸೈನ್ಯಕ್ರಾಂತಿ ನಡೆದು-ಅರಸ ಫರೂಕರು ಸಿಂಹಾಸನ ತ್ಯಾಗ ಮಾಡಬೇಕಾಗಿ ಬಂದ ಗಳಿಗೆಯಲ್ಲಿ ಮುಸ್ಲಿಂ ರಾಷ್ಟ್ರಗಳ ಭವಿತವ್ಯದ ಬಗ್ಗೆ ಎಲ್ಲರಲ್ಲಿಯೂ ಹಿಂದೆಂದೂ ಇರದ ಸಂದೇಹ ತಲೆದೋರಿತು. ಇಲ್ಲಿಯ 'ಶಂಕರ್ಸ್ ವೀಕ್ಲೀ" ಎಂಬ ಪತ್ರಿಕೆಯು "ಕಳಿತ ಹಣ್ಣುಗಳು" ಎಂಬುದೊಂದು ವ್ಯಂಗ್ಯ ಚಿತ್ರವನ್ನು ಪ್ರಕಟಿಸಿ ಮುಸ್ಲಿಂ ರಾಜ್ಯಗಳಲ್ಲಿ ಅರಸೊತ್ತಿಗೆ ಹೆಚ್ಚು ಸಮಯವುಳಿಯುವಂತಿಲ್ಲವೆಂಬುದನ್ನು ಸೂಚ್ಯವಾಗಿ ಹೇಳಿತು. ಬಹುಶಃ ಈ ಭವಿಷ್ಯ ಕಲವಟ್ಟಿಗೆ ನಿಜವಾಗುವಂತೆ ಕಾಣುತ್ತದೆ. ಇರಾಣದಲ್ಲಿ ಶಹಾರಾಗಿರುವ ಎಲ್ಲ ಅಧಿಕಾರವೂ ಪ್ರಧಾನಿ ಮುಸಾದಿಕರ ಕೈವಶ ಬಂದಿದೆ. ಈಜಿಪ್ಟದಲ್ಲಂತೂ ನಗೀಬರದೇ ಸರ್ವಾಧಿಕಾರ. ಮತ್ತೀಗ ಇರಾಕಿನಲ್ಲಿ ತೀವ್ರ ಕ್ಷೋಭೆ ಹಬ್ಬಿಕೊಂಡ ಅನಿರೀಕ್ಷಿತ ವರದಿ ಕೈಸೇರಿದೆ. ಇರಾಣನ್ನು ಬಿಟ್ಟರೆ ಇರಾಕು ಎಣ್ಣೆ ಗನಿಗಳಿಗೆ ತುಂಬ ಪ್ರಸಿದ್ಧವಾಗಿದೆ ಎಂಬುದನ್ನು ಲಕ್ಷ್ಯಿಸಿದರೆ, ಇದರ ಪರಿಣಾಮ ಒಳ್ಳೆಯದಾಗಲಿಕ್ಕಿಲ್ಲವೆಂದು ಸಂದೇಹ. ಮತ್ತೀಗ ಕುತೂಹಲದ ವಿಷಯವೆಂದರೆ ಇರಾಕದಲ್ಲಿ ಇನ್ನೂ ಪ್ರಾಪ್ತವಯಸ್ಕರಾಗದ ೧೭ ವರ್ಷದ ಎರಡನೇ ಫೈಸಲರ ಹೆಸರಿನಲ್ಲಿ ಅರಸೊತ್ತಿಗೆಯು ನಡೆಯುತ್ತಿದೆ. ಮತ್ತೀಗ ಬಹುಶಃ ಇದು ಉರುಳುವ ಪೂರ್ವ ಭಾವೀ ಘಟನೆಗಳು ಹೌದೋ ಏನೋ.

ಮಿಲಿಟರಿ ಆಡಳಿತ

ಹಿಂದಿನ ಚುನಾವಣಾ ಕಾಯಿದೆಗಳನುಸಾರ ಎರಡು ಹಂತಗಳಲ್ಲಿ ಚುನಾವಣೆಗಳು ನಡೆಯಬೇಕೆಂದು ಸರಕಾರ ನಿರ್ಧರಿಸಿದುದನ್ನು ಇರಾಕಿನ ಐದು ರಾಜಕೀಯ ಪಕ್ಷಗಳಲ್ಲಿ ನಾಲ್ಕು ತಿರಸ್ಕರಿಸುವುವು ಮತ್ತು ತಮ್ಮ ಅಸಹಕಾರವನ್ನೂ ತೋರಿಸಿದುವು. ವಿದ್ಯಾರ್ಥಿ ಮತ ಪ್ರದರ್ಶಕರು ಗಲಭೆಯಲ್ಲಿ ತೊಡಗಿರುವುದರಿಂದ ಪೋಲೀಸರು ಗೋಳೀಬಾರು ಮಾಡಿದ್ದಲ್ಲದೆ, ಕೊನೆಗೆ ಸೈನ್ಯವನ್ನು ಕೂಡ ಆಹ್ವಾನಿಸಬೇಕಾಯಿತು. ಚುನಾವಣಾ ಕಾಯಿದೆಗಳಲ್ಲಿ ತಿದ್ದುಪಡಿಯನ್ನು ಮಾಡುವ ಕೆಲಸ ಪಾರ್ಲಿಮೆಂಟಿಗೆ ಸೇರಿದೆ ಎಂದು ಸರಕಾರ ತನ್ನ ನಿಲುಮೆಯನ್ನು ಸಮರ್ಥಿಸಿದ್ದರಿಂದ ಮತ್ತು ಪಾರ್ಲಿಮೆಂಟನ್ನು ಅಕ್ಟೋಬರ ೨೭ರಂದು ವಿಸರ್ಜಿಸಲಾಗಿರುವುದರಿಂದ ಮತಪ್ರದರ್ಶನದ ಮೂಲಕ ತಮ್ಮ ಅಸಮಾಧಾನವನ್ನು ತೋರಿಸಿದರೆಂದು ವರದಿ. ಗಲಭೆ ಆರಂಭವಾದೊಡನೆ ಅಧಿಕಾರದಲ್ಲಿದ್ದ ಕಾನ್‌ಸ್ಟಿಟ್ಯೂಶನಲ್ ಪಕ್ಷದ ಉಮಾರಿ ಮಂತ್ರಿಮಂಡಳವು ರಾಜೀನಾಮೆ ಕೊಟ್ಟುದರಿಂದ ಪರಿಸ್ಥಿತಿ ಇನ್ನಷ್ಟು ಪ್ರಕ್ಷುಬ್ಧಗೊಂಡಿತು. ರೀಜಂಟರು ಅವಸರದ ಸಭೆ ಸೇರಿಸಿ, ಕೊನೆಗೆ ಸೇನಾಧಿಪತಿಯಾಗಿರುವ ಜನರಲ್ ನೂರುದ್ದೀನ ಮಹಮ್ಮದರನ್ನು ಮಂತ್ರಿಮಂಡಳ ರಚಿಸಲು ಒಡಂಬಡಿಸಿದರು. ಜನರಲ್ ಅಬ್ದುಲ್ ಮುತಾಲಿಬ್ ಅವರು ಮಿಲಿಟರಿ ಗವರ್ನರರಾಗಿ ಅಧಿಕಾರವನ್ನು ವಹಿಸಿಕೊಂಡಿದ್ದು, ಮಿಲಿಟರಿ ಕಾಯಿದೆಯನ್ನು ಜ್ಯಾರಿಗೆ ತಂದಿರುವರು. ಎಲ್ಲ ರಾಜಕೀಯ ಪಕ್ಷಗಳೂ ವಿಸರ್ಜನೆ ಹೊಂದಬೇಕೆಂದು ಆಜ್ಞಾಪಿಸಿರುವರು

ಜನಮತ

ಮತ ಪ್ರದರ್ಶಕರ ಕಣ್ಣು ಆಂಗ್ಲೋ-ಅಮೇರಿಕನ್ ಬಣದ ಮೇಲೆ ಇತ್ತೆಂಬುದನ್ನೂ ಈಜಿಪ್ತದ ಘಟನೆಗಳಿಂದಲೇ ಇವರು ಪ್ರಚೋದನೆ ಹೊಂದಿದ್ದಾರೆಂಬುದನ್ನೂ ಸೂಕ್ಷ್ಮವಾಗಿ ಇಲ್ಲಿಯ ಘಟನೆಗಳನ್ನು ವೀಕ್ಷಿಸಿದಾಗ ತಿಳಿದುಬರುತ್ತದೆ. ೨೦ ಸಾವಿರ ಮತಪ್ರದರ್ಶಕರು ಚೂರಿ, ಪಿಸ್ತೂಲುಗಳನ್ನು ಹಿಡಿದುಕೊಂಡು ಬ್ರಿಟಿಷ್ ಹಾಗೂ ಅಮೇರಿಕನ್ ಕಾರ್ಯಾಲಯಗಳಿಗೆ ಬೆಂಕಿಕೊಟ್ಟು, ಸುಟ್ಟರು. ಇಂಗ್ಲೀಷ ದಿನಪತ್ರಿಕೆಯಾದ ಇರಾಕಿ ಟೈಮ್ಸಿನ ಕಚೇರಿ ಹಾಗೂ ಅಮೇರಿಕನ್ ರಾಯಭಾರಿ ಕಚೇರಿಗಳು ಬಗದಾದ ನಗರವನ್ನು ಸೈನ್ಯ ಪ್ರವೇಶಿಸುವ ಕಾಲಕ್ಕೆ ಅರ್ಧ ಸುಟ್ಟುಹೋಗಿದ್ದುವು. ಈಗ ಪರಿಸ್ಥಿತಿಯನ್ನು ಹಿಡಿತದಲ್ಲಿ ತಂದುಕೊಳ್ಳಲು ಪ್ರಯತ್ನಗಳು ನಡೆದಿವೆಯೆಂದೂ ಸೈನಿಕರು ಕಾವಲು ಮಾಡುತ್ತಿರುವರೆಂದೂ ವರದಿಯಾಗಿದೆ. ಏನೇ ಇದ್ದರೂ ಈ ದಿನಮಾನಗಳಲ್ಲಿ ಜನಾಭಿಪ್ರಾಯವನ್ನು ವಿರೋಧಿಸಿ ಅಧಿಕಾರದಲ್ಲಿ ಉಳಿಯುವ ಎದೆಗಾರಿಕೆಯನ್ನು ಯಾವ ಮಂತ್ರಿಮಂಡಳವೂ ತೋರಿಸಲಾರದೆಂದೂ-ಅರಸೊತ್ತಿಗೆ ಮುಂತಾದ ಮಧ್ಯಯುಗದ ಶಾಸನ ಪದ್ಧತಿ ಮುಕ್ತಾಯ ಹೊಂದುವುದೇ ಶ್ರೇಯಸ್ಕರವೆಂದೂ ಈ ಗಲಭೆಗಳು ಸೂಚಿಸುತ್ತವೆ.

ದಕ್ಷಿಣ ಆಫ್ರಿಕೆಯ ಆಕ್ರೋಶ

ವರ್ಣಭೇದ ನೀತಿಯನ್ನು ಅನುಸರಿಸುತ್ತಿರುವ ದಕ್ಷಿಣ ಆಫ್ರಿಕೆಯು ಲೋಕವೇ ತನ್ನ ಇದಿರು ಅಭಿಪ್ರಾಯ ಸಂಘಟಿಸಿ ತೋರಿಸುವುದನ್ನು ಕಂಡು ಸಿಟ್ಟಿಗೆದ್ದು ಕಂಪಿತವಾಗಿದೆ. ಸಂಯುಕ್ತ ರಾಷ್ಟ್ರಸಂಘದ ರಾಜಕೀಯ ಸಮಿತಿಯು ದಕ್ಷಿಣ ಆಫ್ರಿಕೆಯಲ್ಲಿ ಅನುಸರಿಸಲ್ಪಡುವ ವರ್ಣಭೇದ ಧೋರಣದ ತಥ್ಯಾಂಶಗಳನ್ನು ತಿಳಿದುಕೊಂಡು ವರದಿಮಾಡಲು ಮೂವರ ಒಂದು ಸಮಿತಿಯನ್ನು ನೇಮಿಸುವ ನಿರ್ಧಾರವನ್ನು ಮಾಡಿದುದರಿಂದ ದಕ್ಷಿಣ ಆಫ್ರಿಕಾದ ಮಲಾನ ಸರಕಾರದ ಕಣ್ಣು ಕೆಂಪಾದಂತಾಗಿದೆ. ಸಂಯುಕ್ತ ರಾಷ್ಟ್ರಸಂಘಕ್ಕೆ ದಕ್ಷಿಣ ಆಫ್ರಿಕಾದ ಒಳಾಡಳಿತಕ್ಕೆ ಸಂಬಂಧಿಸಿದ ವರ್ಣಭೇದ ನೀತಿಯನ್ನು ವಿಚಾರಿಸುವ ಅಧಿಕಾರವಿಲ್ಲವೆಂಬುದಾಗಿ ಮಾಡಿದ ಪ್ರತಿಪಾದನೆಯನ್ನು „ ವಿರುದ್ಧ ೬ ಮತಗಳಿಂದ ಸಂಪೂರ್ಣ ತಿರಸ್ಕರಿಸಲಾಯಿತು. ಮಾನವೀಯ ಹಕ್ಕು ಬಾಧ್ಯತೆಗಳಿಗೆ ಪುರಸ್ಕಾರವನ್ನು ನೀಡದ, ಅಸಹನೀಯವಾದ ನೀತಿಯನ್ನು ಅವಲಂಬಿಸಿರುವ ಮಲಾನ ಸರಕಾರವು ಈಗ ತನ್ನಲ್ಲಿಗೆ ಬರಲಿರುವ ಸಮಿತಿಯನ್ನು ಬಹಿಷ್ಕರಿಸುವುದಾಗಿ ಬೆದರಿಕೆ ಹಾಕಿದೆ. ರಾಜಕೀಯ ಸಮಿತಿಯು ಇದೀಗ ಸ್ವೀಕಾರ ಮಾಡಿದ ನಿರ್ಣಯವನ್ನು ಸಮಾನ್ಯಾಧಿವೇಶನವೂ ಒಪ್ಪಿಕೊಂಡರೆ, ಆಗ ದಕ್ಷಿಣ ಆಫ್ರಿಕವು ನಿರ್ಣಯವನ್ನು ಉಪೇಕ್ಷಿಸುವುದೆಂದು ಒಳಾಡಳಿತದ ಮಂತ್ರಿ ಡಾ ಡೋಂಗೆಸ್ ಹೇಳಿದರು. ಈ ರೀತಿಯ ನಿರ್ಣಯವು ತನ್ನ ಉದ್ದೇಶವನ್ನು ಎಷ್ಟು ಮಾತ್ರಕ್ಕೂ ಸಾಧಿಸದೆ--ಸಂಯುಕ್ತ ರಾಷ್ಟ್ರ ಸಂಘವು ತನ್ನ ಗೋರಿಯನ್ನು ತಾನೇ ಕಟ್ಟಿಕೊಂಡಂತಾಗುವುದೆಂದು ಇವರ ಹೇಳಿಕೆ.

ಕೊನೆಗೇಡಿ ಹೇಳಿಕೆ

ಕೊನೆಗಾರರ ಸ್ಥಾನದಲ್ಲಿರುವ ಈ ಮಂತ್ರಿಗಳು ಪ್ರಧಾನಿ ನೆಹರೂರ ಮೇಲೆ ಬಹಳ ಉರಿ ಕಾರಿದ್ದಾರೆ. ಭಾರತೀಯ ಮುಖಂಡರು ದಕ್ಷಿಣ ಆಫ್ರಿಕೆಯ ವ್ಯವಹಾರದಲ್ಲಿ ನೇರವಾಗಿ ಹಸ್ತಕ್ಷೇಪ ಮಾಡುತ್ತಿರುವರೆಂದೂ, ಎರಡು ವರ್ಗಗಳ ಪ್ರಜೆದಲ್ಲಿ ಇನ್ನೊಂದು ರಾಷ್ಟ್ರದೊಳಗೆ ಗಲಭೆಯೆಬ್ಬಿಸುವಂಥ ಯಾವ ಕೃತ್ಯವನ್ನೂ ಮಾಡಲಾಗದೆಂದು ಸಂಯುಕ್ತ ರಾಷ್ಟ್ರಸಂಘ ಕೊಟ್ಟಿರುವ ಆದೇಶವನ್ನು ಮೀರಿದವರೆಂದೂ ಗಂಭೀರ ಪ್ರತಿಪಾದನೆಯನ್ನು ಮಾಡಿರುವರು. ರಶಿಯಾದ ಕುಪ್ರಸಿದ್ಧ ರೀತಿಯಾದ ಗಲಭೆಯ ಬೀಜವನ್ನು ಬಿತ್ತುವುದರಲ್ಲಿ ಭಾರತವೂ ಉದ್ಯುಕ್ತವಾಗಿದೆ ಎಂದು ಇವರು ಮಾಡಿದ ಆರೋಪವು ಅತ್ಯಂತವನ್ನು ಮುಚ್ಚಿಡಲು ಮಾಡಿದ ಆಕ್ರೋಶ ಮಾತ್ರ ಎಂಬುದನ್ನು ಎಲ್ಲರೂ ಬಲ್ಲರು. ಪಾರ್ಲಿಮೆಂಟಿನಲ್ಲಿ ಪ್ರತಿಪಕ್ಷದ ನಾಯಕರಾದ ಸ್ಟ್ರಾಸರು ಇನ್ನೊಂದು ಕಡೆ ಮಾತನಾಡುವಾಗ ಭಾರತೀಯರಿಗೆ ದಕ್ಷಿಣ ಆಫ್ರಿಕೆಯಲ್ಲಿ ಸ್ಥಾನವೇ ಇಲ್ಲೆಂದು ಹೇಳುವಷ್ಟರ ಮಟ್ಟಿಗೆ ಮುಂದರಿದಿದ್ದರು.

ಅವಿವೇಕದ ವಿಚಾರ

ಈ ಮಹಾಶಯರ ವಾದದಂತೆ, ದಕ್ಷಿಣ ಆಫ್ರಿಕದಲ್ಲಿರುವ ಹಿಂದೀಯರೆಲ್ಲ ಭಾರತ (ಅಥವಾ ಪಾಕಿಸ್ತಾನ)ಕ್ಕೆ ಮರಳಿ ಹೋಗಬೇಕು. ಮುಂದಿನ ಎಪ್ರಿಲಿನಲ್ಲಿ ನಡೆಯಲಿರುವ ಚುನಾವಣೆಯಲ್ಲಿ ತನ್ನ ಪಕ್ಷಕ್ಕೆ ಅಧಿಕ ಮತ ದೊರೆಯಬೇಕೆಂಬ ಉದ್ದೇಶವಿಟ್ಟುಕೊಂಡು ಯುರೋಪ್ಯದ ಪ್ರೀತಿ ಸಂಪಾದನೆಗಾಗಿ ಆಡಿದ ಬಣ್ಣದ ಮಾತುಗಳು ಇವೆಂಬುದನ್ನು ದಕ್ಷಿಣ ಆಫ್ರಿಕೆಯ ಭಾರತೀಯ ಕಾಂಗ್ರೆಸು ಬಹಿರಂಗಗೊಳಿಸಿದೆ. ಹೀಗೆ ಭಾರತೀಯರನ್ನು ವಿನಿಮಯ ಮಾಡುವ ವಿಚಾರವು ತುಂಬ ಹೇಯವಾಗಿದೆ. ಕೇಪ ಪ್ರಾಂತದಲ್ಲಿ ೧೫ ಸಾವಿರ, ಟ್ರಾನ್ಸವಾಲದಲ್ಲಿ ೩೫ ಸಾವಿರ ಮತ್ತು ಉಳಿದ ೨೫೦ ಸಾವಿರ ಭಾರತೀಯರು ನಾಟಾಳದಲ್ಲಿ ನೆಲಸಿರುವರು. ಇವರು ಕಳೆದ ಶತಮಾನಗಳಲ್ಲಿ ಅಲ್ಲಿ ನೆಲಸಿದ್ದ ಬ್ರಿಟನರ ಆಹ್ವಾನದ ಮೇಲೆ ಆಫ್ರಿಕೆಯಲ್ಲಿ ಭೂಮಿಯನ್ನು ಸಂಪತ್ಸಮೃದ್ಧವಾಗಿ ಮಾಡಲು ಹೋದವರು. ಈಗ ತಮ್ಮ ಬೆವರಿಂದ ಚಿನ್ನವಾಗಿ ಪರಿಣಮಿಸಿದ ಭೂಮಿಯಮೇಲೆ ಅಧಿಕಾರ ಕಳೆದುಕೊಳ್ಳುವಂತಾಗಿದೆ ಯೆಂದರೆ, ಇನ್ನು ದಾರುಣವಾದ ಸಂಗತಿ ಬೇರೇನಿದೆ? ವರ್ಣಭೇದ ನೀತಿಗನುಸಾರವಾಗಿ ಭಾರತೀಯ ಮೂಲದ ಜನರು ಮನೆಮಾರುಗಳಿಗೆ ಹಾಗೂ ಆಸ್ತಿ ಸಂಪತ್ತುಗಳಿಗೆ ಎರವಾಗಿರುವರು. ಶಾಲೆಗಳು, ದೇವಾಲಯಗಳು, ಮಸೀದಿಗಳು, ಆಸ್ಪತ್ರೆಗಳು ಮುಂತಾದುವನ್ನು ಸರಕಾರವು ನಿರ್ದಾಕ್ಷಿಣ್ಯವಾಗಿ ತನ್ನ ವಶಪಡಿಸಿಕೊಳ್ಳುತ್ತಿದೆ. ಭಾರತೀಯರು ಹಣವನ್ನು ಕೂಡಿಸಿ ಸ್ವತಃ ಒದಗಿಸಿಕೊಂಡ ಈ ಸೌಕರ್ಯಗಳನ್ನು ಅಪಹರಿಸುವ ಸರಕಾರದ ನೀತಿ ಸರಿಯೆಂದು ವಿವೇಕಿಗಳಾರೂ ಹೇಳುವಂತಿಲ್ಲ. ಯಾವ ತರದ ಗೌರವ ಪದವಿಯೂ ಭಾರತೀಯರಿಗೆ ದೊರೆತಿಲ್ಲ. ವ್ಯಾಪಾರಿಗಳಾಗಿಯೋ ಕೂಲಿಗಳಾಗಿಯೋ ದುಡಿಯುವ ಭಾಗ್ಯ ಮಾತ್ರ ಅವರ ಹಣೆಯಲ್ಲಿದೆ. ಇಂಥ ಪರಿಸ್ಥಿತಿಯು ಜಾಗತಿಕ ಶಾಂತಿಗೆ ಗಂಡಾಂತರ ಪ್ರಾಯವೆಂಬುದಾಗಿ ನೆಹರೂ ಸಾರುವುದು ಸಮಯೋಚಿತವಾಗಿದೆ. ಆಫ್ರಿಕವು ತನ್ನಲ್ಲಿ ನಿವಾಸಿಗಳನ್ನು ಚೆಲೋದಾಗಿ ನಡಿಸಿಕೊಂಡರೆ ಮಾತ್ರ ಅವರ ಕ್ಷೇಮವುಂಟೆಂಬ ನೆಹರೂರ ಸಲಹೆ ತಿರಸ್ಕರಣೀಯವಲ್ಲ.

ಉಡುಪಿ

ದ. ಕ. ಜಿಲ್ಲೆಯಲ್ಲಿ ಅಕ್ಕಿ ಸಂಗ್ರಹ ಮತ್ತು ವಿತರಣೆಯ ಹೊಸ ಯೋಜನೆ

ಪತ್ರಿಕೋದ್ಯಮಿಗಳ ಸಭೆಯಲ್ಲಿ ಶ್ರೀ ಎಂ. ಶಿವರಾಯರ ವಿವರಣೆ

ಅಕ್ಕಿ ಭತ್ತಗಳ ಮೇಲೆ ನಿಯಂತ್ರಣ ಹೋಗಿದೆ. ಸರಕಾರದವರು ಈ ಮೊದಲೇ ತೆರೆದ ನ್ಯಾಯ ಬೆಲೆಯ ಅಂಗಡಿಗಳನ್ನು ಸದ್ಯದಲ್ಲಿ ನಿಲ್ಲಿಸುವವರಿದ್ದಾರೆ. ಹೊಸ ಬೆಳೆಯ ಅಕ್ಕಿಯ ಬೆಲೆಯು ಈಗಾಗಲೇ ಸೇರಿಗೆ ಎಂಟಾಣೆಯಿರುವಾಗ ಮುಂದಕ್ಕೆ ಅದು ಹೇಗೆ ನಿಂತೀತು ಎಂದು ಹೇಳಲು ಸಾಧ್ಯವಿಲ್ಲ. ಆದುದರಿಂದ ಬತ್ತ ಬೆಳೆಸುವವರಿಗೂ ಲಾಭದಾಯಕವಾದ ಬೆಲೆ ಸಿಗುವಂತೆಯೂ, ಅಕ್ಕಿಯನ್ನು ಕೊಂಡುಕೊಂಡು ಜೀವಿಸುವವರಿಗೆ ನ್ಯಾಯವಾದ ಬೆಲೆಗೆ ಸಿಗುವಂತೆಯೂ ಅನುಕೂಲವಾಗುವಂತಹ ಒಂದು ಯೋಜನೆಯನ್ನು ದ. ಕ. ಜಿಲ್ಲಾ ಹೋಲ್‌ಸೇಲ್ ಸ್ಟೋರ್‍ಸ್ ಅಧ್ಯಕ್ಷ ಶ್ರೀ ಎಮ್. ಶಿವರಾಯರು ತಯಾರಿಸಿರುವರು. ಈ ಯೋಜನೆಯ ಧ್ಯೇಯಗಳನ್ನು ಅವರು ತಾ 24ರಲ್ಲು ಸಂಜೆ ಉಡುಪಿಯ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ವಿವರಿಸಿದರು. ಸಾಹುಕಾರರ ಕೈಗೆ ಅಕ್ಕಿ ಭತ್ತ ಸಿಕ್ಕಿ ಅದು ಹೊರಗೆ ಹೋಗದಂತೆ ಮಾಡುವುದೇ ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಈ ಯೋಜನೆಯಂತೆ ಪರಸ್ಪರ ಸಹಾಯ ತತ್ವದ ಮೇಲೆ ಕೆಲವು ಕ್ರಮಗಳನ್ನಿಟ್ಟುಕೊಂಡು ಸಹಕಾರಿ ಸಂಸ್ಥೆಗಳ ಮೂಲಕವೇ ಅಕ್ಕಿ ಸಂಗ್ರಹ ಮತ್ತು ಚಿಲ್ಲರೆಯಾಗಿ ವಿತರಣೆಮಾಡುವುದಾಗಿದೆ. ಅಕ್ಕಿ ಭತ್ತ ಉತ್ಪಾದಕರ ಮತ್ತು ಕೊಂಡುಕೊಳ್ಳುವವರ ಹಿತರಕ್ಷಣೆಯು ಈ ಯೋಜನೆಯಲ್ಲಿದೆ. ಉತ್ಪಾದಕರು ತಮ್ಮ ಮಾಲಿಗೆ ಇಂತಿಷ್ಟು ಬೆಲೆ ಬರಬೇಕೆಂದು ನಿರ್ಧರಿಸಿ ಮಾರಾಟಕ್ಕಿರುವ ಸ್ಟಾಕನ್ನು ಸಹಕಾರಿ ಸಂಸ್ಥೆಗಳಿಗೆ ಒಪ್ಪಿಸುವುದು. ಹಣದ ಅಗತ್ಯ ಇರುವವರಿಗೆ ಮುಂದೆ ಬರುವ ಹಣ [illegible] ರೂಪಾಯಿಗಳಂತೆ ಅಡ್ವಾನ್ಸ್ ಕೊಡಲಾಗುವುದು. ಈ ತೆರನಾದ ವ್ಯಾಪಾರವು ಕಮಿಶನ್ ತತ್ವದ ಮೇಲೆ ನಡೆಯುವುದು.

ಅಕ್ಕಿ ನೇರವಾಗಿ ಕೊಂಡುಕೊಳ್ಳುವುದು ಸೆಂಟ್ರಲ್ ಸ್ಟೋರ್ಸಿನ ಜಿಲ್ಲೆಯ ಎಲ್ಲಾ ಶಾಖೆಗಳಲ್ಲಿನ ಡಿಪೋಗಳ ಮೂಲಕ. ಈಗ ಸಾಧಾರಣ 16 ಡಿಪೋಗಳಿವೆ. ಈ ಸಂಖ್ಯೆಯನ್ನು 50ಕ್ಕೇರಿಸುವ ಸಂಭವವೂ ಇದೆ. ಸಂಗ್ರಹವಾದ ಅಕ್ಕಿಯು ಊಟದವರ ಕೈಗೆ ಸಿಗಬೇಕಾದರೆ ರಖಂ ವ ಚಿಲ್ಲರೆ ಏಜನ್ಸಿ ಇರಲೇಬೇಕು. ಸೆಂಟ್ರಲ್ ಸ್ಟೋರ್ಸ್ ಆ ಪೈಕಿ ರಖಂ ದಾರಿ ಸಂಸ್ಥೆ. ಸ್ಥಳೀಯ ಸ್ಟೋರುಗಳ ಯಾ ಇನ್ನಿತರ ಸಂಘಗಳ ಮೂಲಕ ಚಿಲ್ಲರೆ ಮಾರಾಟಮಾಡಲಾಗುವುದು. ಕೊಂಡುಕೊಂಡ ಕ್ರಯಕ್ಕೆ ಸೇಲ್ಸ್ ಟೇಕ್ಸ್, ಸಾಗುಮಜೂರಿ, ಬಡ್ಡಿ, ಬಾಡಿಗೆ ಇತ್ಯಾದಿಯ ಬಗ್ಗೆ ಸೆಂಟ್ರಲ್ ಸ್ಟೋರಿಗೆ ಮುಡಿ 1ರ ರೂಪಾಯಿ 1 4 0 ರಿಟೈಲರಿಗೆ ಇದೇ ರೀತಿ 0-8-0 ಹೀಗೆ ರೂಪಾಯಿ 1-12-0 ಕೂಡಿಸಿ ಅದಷ್ಟು ಕಡಿಮೆ ಬೆಲೆಗೆ ಸಾರ್ವಜನಿಕರಿಗೆ ಮುಖ್ಯವಾಗಿ ಬಡ ಜನರಿಗೆ ಸಿಗಬೇಕೆಂಬುದೇ ಈ ಯೋಜನೆಯ ಉದ್ದೇಶವಿದೆ.

ಅಕ್ಕಿ ರೈತರಿಗೆ ಲಾಭದಾಯಕ ಬೆಲೆಗೆ ಮಾರಾಟವಾಗುವಂತೆ ಕೆಲಸಮಾಡುವ ಸಂಸ್ಥೆ ಕೃಷಿಕರ ಸಹಕಾರಿ ಮಾರಾಟ ಸಂಘ. ಇದು ಕೃಷಿಕರದ್ದೇ ಸಂಘ. ಅವರಿಗೆ ಇಷ್ಟವಿರುವ ಬೆಲೆ ಬರುವವರೆಗೆ ಇಟ್ಟು ಮಾರಾಟಮಾಡಿ ಆ ಬಗ್ಗೆ ಕಮಿಶನ್ ಮಾತ್ರ ಸಂಘವು ಇಟ್ಟುಕೊಳ್ಳುತ್ತದೆ. [illegible] ದರ ವಿಕ್ರಿತದ ರೂಪಾಯಿ ಒಂದರ ನಾಲ್ಕು ಪೈ ಮಾತ್ರ. ಇದರಿಂದ ಆರ್ಥಿಕ ಏಜಂಟರಿಗೆ ಕೊಡಲಾಗುವುದು. ಇಂತಹ ಸಾರ್ವಜನೋಪಯೋಗೀ ಯೋಜನೆಗೆ [illegible] ಸಹಕಾರವನ್ನು ನೀಡುವುದು ಅವಶ್ಯವಿದೆ ಎಂದು ಶ್ರೀ ರಾಯರು ಹೇಳಿದರು.

ನಗರಸಭಾಧ್ಯಕ್ಷರ ಚುನಾವಣೆಯು ಇದೇ ತಾ, 21ರಲ್ಲಿ ಪೂರ್ವಾಹ್ನ 11 ಘಂಟೆಗೆ ಸಬ್ ಕಲೆಕ್ಟರ ಶ್ರೀ, ವಿ, ಕೃಷ್ಣನವರ ಅಧ್ಯಕ್ಷತೆಯಲ್ಲಿ ಜರಗಿತು. ನೂತನ ಸದಸ್ಯರೆಲ್ಲರು ಪ್ರತಿಜ್ಞಾವಿಧಿಯನ್ನು ನೆರವೇರಿಸಿದನಂತರ ಮುನಿಸಿಪಲ್ ಕಾಂಗ್ರೆಸ್ ಪಾರ್ಟಿಯ ನಾಯಕರಾದ ಶ್ರೀ ಎಮ್. ಶಿವರಾಯರು ಒಂದು ನೋಟೀಸಿನಲ್ಲಿ ಅಧ್ಯಕ್ಷ [illegible] ಅವಿರೋಧವಾಗಿ ಆರಿಸಲ್ಪಟ್ಟ ದ್ದರಿಂದ ಅವರೂ ಇತರ [illegible] ಮಂದಿ ಕಾಂಗ್ರೆಸ್ ಸದಸ್ಯರೂ ಈ ಸ್ಥಳ ತ್ಯಾಗಮಾಡಿದರು. ನಂತರ ಅಧ್ಯಕ್ಷಸ್ಥಾನಕ್ಕೆ ಡಾ। ವ್ಯಾಕರಾಯರಿಂದ ಸೂಚಿಸಲ್ಪಟ್ಟು ಶ್ರೀ [illegible] ಅನುಮೋದಿಸಲ್ಪಟ್ಟು ಶ್ರೀ ಯು ಎಲ್. ನಾಯ್ಡು ರು ಆರಿಸಲ್ಪಟ್ಟರು.

ಸಂಜೆ ಈ ಸಂಬಂಧ ವಿಶೇಷ ಗದ್ದಲದ [illegible] ವಾಗಿ ರಥಬೀದಿಯಲ್ಲಿ ಶ್ರೀ ಕೆ. ರಮಾನಂದ [illegible] ಶೆಣೈ ಸಭೆಯಲ್ಲಿ ಶ್ರೀ ನಾಯ್ಡುರವರನ್ನು ಅಭಿನಂದಿಸಲಾಯಿತು. ಶ್ರೀ ಗೋಪಾಲ ಕೃಷ್ಣ [illegible] ಶ್ರೀ, ಯು., ರಂಗಪ್ಪ [illegible] ಶ್ರೀ. ವಿ. [illegible] (ಫಾರೂಖ್), ಡಾ। ವ್ಯಾಕರಾವ್, ಡಾ॥ ನೇರಿಗಾರ [illegible] ಹಾರ ಅರ್ಪಿಸಿ ಮಾತನಾಡಿದರು. ಶ್ರೀ ನಾಯ್ಡು ರು ಸರ್ವರನ್ನು ಅಭಿನಂದಿಸುತ್ತ, ನಗರಾಡಳಿತ ಕಾರ್ಯದಲ್ಲಿ ಮುನಿಸಿಪಲ್ ಕಾಂಗ್ರೆಸ್ ಪಾರ್ಟಿಯು ಸಹಕಾರ ನೀಯ ಬೇಕೆಂದು ವಿನಂತಿಸಿದರು. ಅಧ್ಯಕ್ಷರ ಭಾಷಣವಾಗಿ ಧನ್ಯವಾದದೊಂದಿಗೆ ಸಭೆ ಮುಕ್ತಾಯವಾಯಿತು.

ಸ್ವಚ್ಛ ಭಾರತ ಆಂದೋಲನ— ಕಳೆದ ಅಗೋಸ್ತು ತಿಂಗಳಲ್ಲಿ ಕಾಶಿಯಲ್ಲಿ ಪ್ರಾರಂಭಿಸಲ್ಪಟ್ಟ ಸ್ವಚ್ಛ ಭಾರತ ಆಂದೋಲನ ಕಾರ್ಯಕ್ರಮವನ್ನು ಉಡುಪಿಯಲ್ಲೂ ಜರಗಿಸುವ ವ್ಯವಸ್ಥೆ ನಡೆದಿದೆ, ಎಂದೂ ಈ ಪವಿತ್ರ ಕಾರ್ಯದಲ್ಲಿ ಸಹಕರಿಸಲಿಚ್ಛಿಸುವ ಸ್ವಯಂಸೇವಕರು ಶ್ರೀ ಕೆ ಶ್ರೀನಿವಾಸ ಪೈ ಕಾರ್ಯದರ್ಶಿ ಕಲಾ ಮಂಡಲ, ಉಡುಪಿ ಅವರೊಡನೆ ಹೆಚ್ಚಿನ ಮಾಹಿತಿಗಾಗಿ ಪತ್ರ ಬರೆಯಬೇಕೆಂದೂ ಅವರು ತಿಳಿಸುತ್ತಾರೆ.

ರಾಷ್ಟ್ರಭಾಷಾ ಸೇವಾ ಸಮಿತಿ ಸಭೆಯು— ತಾ 23ರಲ್ಲಿ ಶ್ರೀ. ಶ್ರೀಪತಿ ರಾವ್ ಫಳಿಮಾರ್‌ಕಾರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕುಮಾರಿ ಪ್ರಫುಲ್ಲಾ ಬಾಯಿ ಭಟ್, ಅವರ ಗಾಯನವೂ ಶ್ರೀ. ಯು. ಲಕ್ಷ್ಮೀನಾರಾಯಣ ಕಿಣಿಯವರ ಹಿಂದೀ ನಾಟಕ ವಾಚನವೂ ಶ್ರೀ. ಕೆ. ಬಿ ದತ್ತ ಮೊದಲಾದವರ ಭಾಷಣ ನಡೆಯಿತು.

ಆಫೀಸು ಬದಲಾವಣೆ— ಈ ವರೆಗೆ ಪವರ್ ಹೌಸಿನ ಕಂಪೌಂಡಿನಲ್ಲಿದ್ದ ಸಬ್ ಸರ್ಕ್ಯೂಟ್ ಎಲೆಕ್ಟ್ರಿಕಲ್ ಇಂಜಿನೀಯರರ ಆಫೀಸು ತಾ 4 12-52ರಿಂದ ಕೋರ್ಟು ಗಸ್ತಿಯಲ್ಲಿಯ ಮುನ್ಸಿಫ್ ಕೋರ್ಟಿನ ಎದುರಿನ ಹೊಸ ಕಟ್ಟೋಣಕ್ಕೆ ಒಯ್ಯಲ್ಪಡುವುದೆಂದೂ ಗ್ರಾಹಕರು ಇದನ್ನು ಗಮನಿಸ ಬೇಕೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ.

ಸಮ್ಮೇಳನ—4-1-53ರಿಂದ ಹದಿನಗಳ ತನಕ ಇಲ್ಲಿ ಪೂರ್ಣ ತತ್ವಜ್ಞಾನ ಸಮ್ಮೇಳನವು ರಾವ್ ಬಹದೂರ್ ಮಂಗೇಶ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಲಿರುವುದೆಂದೂ ಮೈಸೂರು ರಾಜಪ್ರಮುಖರು ಅದನ್ನು ಉದ್ಘಾಟಿಸಲಿರುವರೆಂದೂ ವರದಿ.

ಕೊಡವೂರು— ಬೋರ್ಡ್ ಹಾ। ಎ। ಶಾಲೆಗೆ ವಿಸ್ತರಿಸಿದ ಹೊಸ ಕಟ್ಟಡದ ಉದ್ಘಾಟನೆಯು ತಾ 22ರಲ್ಲಿ ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ. ಬಿ. ಸಂಜಯ್ಯ ಹೆಗ್ಡೆ ಅವರ ಅಧ್ಯಕ್ಷತೆಯಲ್ಲಿ ಉಡುಪಿ ಡಿ। ಮುನ್ಸಿಫ್ ಜನಾಬ್ ಅಬ್ದುಲ್ ರಹೀಂ ಅಹಮ್ಮದ್ ಅವರಿಂದ ನೆರವೇರಿತು.

ಕಂಡ್ಲೂರು— ಇದೇ ತಾ 14ರಲ್ಲಿ ಸ್ಥಳೀಯ ಬೋರ್ಡ್ ಎಲಿಮೆಂಟರಿ ಶಾಲೆಯ [illegible] ಕೂಟವು ಶಾಲಾ ಡಿಸ್ಟ್ರಿಕ್ಟ್ ಇನ್ಸ್ಪೆಕ್ಟರ್ ಶ್ರೀ ಬೆಂಜಮಿನ್ ಪಿಂಟೋ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಬಾಲಬಾಲಕಿಯರ ವಿನೋದಾವಳಿಗಳಾಗಿ 'ಪಶ್ಚಾತ್ತಾಪ' ವೆಂಬ ನಾಟಕಾಭಿನಯ ಮುಂತಾದ ಕಾರ್ಯಕ್ರಮಗಳ ನಡೆದುವು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O-S 19./1951 R E P 888/1951

ಅರ್ಜಿದಾರ— C. ಲಕ್ಷ್ಮೀನಾರಾಯಣ ನಾಯ್ಕ

ಎದ್ರಿ— K. V. ಪರಮೇಶ್ವರಯ್ಯ

ಮೈಸೂರು ಸ್ಟೇಟ್ ಮೈಸೂರಲ್ಲಿ ಇದೆ ವಿನ್ ರೋಡಿನಲ್ಲಿ ನಂಬ್ರ 29-20ನೇ ಡಿವಿಜನಲ್ಲಿ [illegible] ಮನೆಯಲ್ಲಿರುವ ಕಾರ್ಕಳ ಸಣ್ಣಯ್ಯ ಯಾನೆ ವೆಂಕಟ್ರಮಣ ಭಟ್ರಾಳರ ಮಗ K. V ಪರಮೇಶ್ವರಯ್ಯನವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಸದ್ರಿ ಅಮಲ್ಜಾರಿಯಲ್ಲಿ ಎದ್ರಿಯ ಹಕ್ಕಿನ ಸ್ಥಿರಾಸ್ತಿಯನ್ನು ಲೀಲಾಂ ಮಾಡುವ ಬಗ್ಗೆ ದಾಖಲು ಮಾಡಿದ ಲೀಲಾಂ ಇಸ್ತಿಹಾರ ಶರ್ತುಗಳನ್ನು ನಿರ್ಣಯಿಸುವ ಕುರಿತು ತಾ, 6—12--52ಕ್ಕೆ ಮೇಲಿನ ಕೋರ್ಟಿನಲ್ಲಿ ಹಿಯರಿಂಗಿಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ನೇಮಿಸಿದ ಕೋರ್ಟ ಮುಂದೆ ಹಗಲು 11ಗಂಟೆಗೆ ದಾಖಲಾಗಿ ಹಾಜರು ಮಾಡಿಕೊಳ್ಳತಕ್ಕದ್ದು ಎಂಬ ಸಂಗತಿ ಈ ಮೂಲಕ ತಿಳಿಯಪಡಿಸಲಾಗಿದೆ

N. S Parameshwariah
Advocate for Petr.
Coondapoor Date 23 11 52

ಮಂಗಳೂರು

ಭೂಗರ್ಭ ಸಂಶೋಧನೆ– ಭಾರತದ ಭೂಗರ್ಭ ಶಾಖೆಯ ಉಪಸಂಶೋಧಕರಾದ ಶ್ರೀ ಬಿ. ಆರ್. ಸಿ. ಅಯ್ಯಂಗಾರರು ತಾ 21ರಂದು ಈ ಜಿಲ್ಲೆಗೆ ಆಗಮಿಸಿ ಉಪ್ಪಿನಂಗಡಿ, ಬೆಳ್ತಂಗಡಿ ಮತ್ತು ಚಾರ್ಮಾಡಿ ಪ್ರದೇಶಗಳನ್ನು ಸಂಶೋಧನೆ ನಡೆಸುತ್ತಾರೆ. ಆ ಪ್ರದೇಶಗಳ ಸಾರ್ವಜನಿಕರು ಅವರಿಗೆ ತಕ್ಕ ಅನುಕೂಲತೆಯನ್ನೊದಗಿಸಿ ಸಂಶೋಧನಾ ಕಾರ್ಯವು ಯಶಸ್ವಿಯಾಗುವಂತೆ ಮಾಡಬೇಕೆಂದೂ ಮಂಗಳೂರು ವಣಿಜ ಸಂಘದ ಇಚ್ಛೆಯಿದೆ.

[illegible] ಗುಮಾಸ್ತರ ಸಂಘ — ಮಹಾಸಭೆಯು ಇದೇ ತಾ. 8ರಲ್ಲಿ ಜರಗಿತು. [illegible] ಶ್ರೀಗಳಾದ ಕೆ. ಪಾಂಡುರಂಗ [illegible], ಎಸ್. ನಾರಾಯಣ ಭಟ್ ಮತ್ತು ಬಿ. ವೆಂಕಟಪ್ಪಯ್ಯರು ಅನುಕ್ರಮವಾಗಿ ಪ್ರಸಿಡೆಂಟ್, ಸೆಕ್ರಟರಿ ಮತ್ತು ಕೋಶಾಧಿಕಾರಿಗಳಾಗಿ ಆರಿಸಲ್ಪಟ್ಟರು.

ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯು ತಾ 15ರಲ್ಲಿ [illegible] ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ. ಬಿ. ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಪೂರ್ವಾಹ್ನ ಜರಗಿತು. ಬಳಿಕ ಉಪಸಮಿತಿಗಳ ಸಭೆಯಾಯಿತು.

ಶಾಲಾ ಸ್ಥಾಪಕರ ದಿನಾಚರಣೆ— ಕೆನರಾ ಹೈಸ್ಕೂಲಿನ ಸ್ಥಾಪಕರಾದ ದಿ| ಅಮ್ಮೆಂಬಳ ಸುಬ್ಬರಾಯ ಪೈಗಳವರ ನೂರನೇ ಜನ್ಮದಿನೋತ್ಸವವು ತಾ 19ರಂದು ಸಂಜೆ ಸಭೆ, ಭಾಷಣ, ಸಂಗೀತ ಮತ್ತು ಭೋಜನ ಮುಂತಾದ ಕಾರ್ಯಕ್ರಮಗಳಿಂದ ಶಾಲೆಯಲ್ಲಿ ನೆರವೇರಿತು.

ತೋಟಗಾರಿಕೆ ಸ್ಪರ್ಧೆ— ದಕ್ಷಿಣ ಕನ್ನಡ ಜಿಲ್ಲಾ ಎಡ್ವಾನ್ಸ್‌ಮೆಂಟ್ ಎಸೋಸಿಯೇಷನ್ ನೇತೃತ್ವದಲ್ಲಿ ತಾ. 20ರಲ್ಲಿ ತೋಟಗಾರಿಕೆ ಸ್ಪರ್ಧೆ ನಡೆಯಿತು. ಸಂಘದ ಅಧ್ಯಕ್ಷರೂ, ಜಿಲ್ಲಾ ಕಲೆಕ್ಟರರೂ ಆದ ಶ್ರೀ ಸಿ. ಎ. ರಾಮಕೃಷ್ಣನ್ ಅವರು ಅಧ್ಯಕ್ಷತೆ ವಹಿಸಿದರು. ಸ್ಥಳೀಯ ರಾಮಭವನದಲ್ಲಿ ಸ್ಪರ್ಧೆಯಲ್ಲಿ ಗೆದ್ದವರಿಗೆ ಅಧ್ಯಕ್ಷರು ಬಹುಮಾನಗಳನ್ನು ಹಂಚಿದರು. ಸಂಘದ ಕಾರ್ಯದರ್ಶಿಗಳಾದ ಶ್ರೀ ಪಿ. ಆರ್. ರಂಗನಾಥ ಪೂಂಜರು ವರದಿಯನ್ನೋದಿ ಧನ್ಯವಾದಗಳನ್ನು ಸಲ್ಲಿಸಿದರು.

WANTED
for the HINDU HIGH SCHOOL, SHIRVA, S K

1. One Mathematics and one Science B T. or L. T.
2. One Higher grade Drawing Teacher,
3. One fully qualified Kannada and one Hindi Pandit.

Applicants should send a copy of their applications to the District Educational Officer, S K., Mangalore while applying.

Correspondent.

NOTICE

Notice having been given of the loss of Policy No 14888-granted by the **Tropical Insurance Co. Ltd., New Delhi,** on the life of Mrs. M. J [illegible] Kshi, a Duplicate thereof will be issued, if no objection with relative proof is filed with undersigned within one month from date hereof.

(Sd) S. Vaidyanath Aiyal
Administrator

ತಂತಿ ಸೌಕರ್ಯ– ಕೆನರಾ ಚೇಂಬರ್ ಒಫ್ ಕಾಮರ್ಸಿನವರು ಮದ್ರಾಸಿನ ಪೋಸ್ಟ್ ಮಾಸ್ಟರ್ ಜನರಲ್‌ರವರೊಡನೆ ಕೇಳಿಕೊಂಡ ಮೇರೆಗೆ, ಅವರು ಪಂಪನ ಕಟ್ಟೆಯ ಸಬ್ ಪೋಸ್ಟಾಫೀಸಿನಲ್ಲಿ ತಂತಿ ಏರ್ಪಾಡು ಮಾಡಲು ತಿರುಚಿನಾಪಳ್ಳಿಯ ಡಿವಿಜನಲ್ ಇಂಜಿನಿಯರಿಗೆ ಆಜ್ಞೆಯನ್ನು ಕೊಟ್ಟಿರುವರು. ಇದರ ಕೆಲಸವು ಮುಗಿದ ನಂತರ ಪಂಪನ ಕಟ್ಟೆಯಲ್ಲಿ ತಂತೀ ಸೌಕರ್ಯವನ್ನು ಮಾಡಲಾಗುವುದು.

ಮುನಿಸಿಪಲ್ ಚೇರ್‌ಮೇನರ ಚುನಾವಣೆ— ಮಂಗಳೂರು ಮುನಿಸಿಪಲ್ ಕೌನ್ಸಿಲಿನ ಚೆಯರ್ ಮೆನ್ ಚುನಾವಣೆಯು ಇದೇ ತಾ 19ರಲ್ಲಿ ಅಪರಾಹ್ನ 3 ಘಂಟೆಗೆ ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ ಬಾಲಾಜಿರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸದಸ್ಯರೆಲ್ಲರೂ ಪ್ರತಿಜ್ಞಾ ವಚನವನ್ನು ಸ್ವೀಕರಿಸಿದನಂತರ ಡಾ| ಯು. ಪಿ. ಮಲ್ಯ ಮತ್ತು ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಹೆಸರುಗಳನ್ನು ಅಧ್ಯಕ್ಷಸ್ಥಾನಕ್ಕೆ ಜನಾಬ್ ಹಸನ್ ಹಾಜಿ ಮತ್ತು ಶ್ರೀ ಜೆ. ಬಿ. ನಚಾದೊರವರು ಅನುಕ್ರಮವಾಗಿ ಸೂಚಿಸಿದರು. ಗುಪ್ತ ಮತದಾನ ಪದ್ಧತಿಯಂತೆ ವೋಟುತೆಗೆಯಲಾಗಿ ಶ್ರೀ ಸೂರ್ಯನಾರಾಯಣ ಅಡಿಗರಿಗೆ 22 ಮತಗಳೂ ಡಾ| ಯು ಪಿ ಮಲ್ಯರಿಗೆ 11 ಮತಗಳೂ ದೊರೆತು ಶ್ರೀ ಅಡಿಗರು ಅಧಿಕ ಮತದಿಂದ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಡಾ| ಮಲ್ಯ ಮೊದಲಾದವರು ಶ್ರೀ ಅಡಿಗರನ್ನು ಅಭಿನಂದಿಸಿ ಮಾತನಾಡಿದರು. ಎಲ್ಲರೂ ತಮಗೆ ಸಹಕಾರ ನೀಡಬೇಕೆಂದು ಶ್ರೀ ಅಡಿಗರು ಕೇಳಿಕೊಂಡರು. ಲಘು ಉಪಾಹಾರದೊಂದಿಗೆ ಸಭೆಯು ಮುಕ್ತಾಯವಾಯಿತು.

ಗವರ್ನರರ ಕಾರ್ಯಕ್ರಮ ರದ್ಧತಿ– ವೈದ್ಯಕೀಯ. ಸಲಹೆಯ ಮೇರೆಗೆ ಮದ್ರಾಸು ಗವರ್ನರರಾದ ಶ್ರೀ ಶ್ರೀ ಪ್ರಕಾಶರು ಮಲಬಾರ್ ಮತ್ತು ದಕ್ಷಿಣ ಕನ್ನಡಕ್ಕೆ ಭೇಟಿಕೊಡುವ ಕಾರ್ಯಕ್ರಮವನ್ನು ರದ್ದುಗೊಳಿಸಿದ್ದಾರೆ ಎಂದು ಜಿಲ್ಲಾ ಕಲೆಕ್ಟರರು ತಿಳಿಸುತ್ತಾರೆ.

ಫಲಿಮಾರು— ಇದೇ ತಾ. 18ರಲ್ಲಿ ಸಂಜೆ ಫಲಿಮಾರು ಬೋರ್ಡ್ ಹಾ| ಎ| ಶಾಲೆಯಲ್ಲಿ ಕೀರ್ತಿಶೇಷ ಫಲಿಮಾರು ಮಠದ ಶ್ರೀ ರಘುಮಾನ್ಯ ತೀರ್ಥ ಸ್ವಾಮಿಗಳವರ ಭಾವಚಿತ್ರವನ್ನು ದ್ವಂದ್ವ ಮಠಾಧಿಪತಿಗಳಾದ ಅದಮಾರು ಮಠದ ಶ್ರೀ ವಿಬುಧೇಶ ತೀರ್ಥ ಶ್ರೀ ಪಾದಂಗಳವರು ಅನಾವರಣ ಮಾಡಿದರು ಫಲಿಮಾರು ಮಠದಿಂದ ಶ್ರೀಗಳವರು ಮಠಾಧೀಶ ಶ್ರೀ ರಘುವಲ್ಲಭ ತೀರ್ಥ ಸ್ವಾಮಿಗಳವರೊಂದಿಗೆ ಶಾಲೆಗೆ ಮೆರವಣಿಗೆಯಿಂದ ಚಿತ್ತೈಸಿದರು ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ. ವೆಂಕಟಪ್ಪಯ್ಯ ಪೈಗಳು ಸ್ವಾಗತ ಭಾಷಣಮಾಡುತ್ತಾ ಕೀರ್ತಿಶೇಷ ಸ್ವಾಮಿಗಳವರು ಶಾಲೆಗೆ ಸಲ್ಲಿಸಿದ ಸೇವೆ ಮುಂತಾದುವನ್ನೊಳಗೊಂಡ ವರದಿಯನ್ನೋದಿದರು, ಭಾವಚಿತ್ರ ಅನಾವರಣ ಮಾಡುತ್ತಾ ಅದಮಾರು ಸ್ವಾಮಿಗಳವರು ಕೀರ್ತಿಶೇಷರ ಹಿರಿಮೆಯನ್ನೆತ್ತಿ ತೋರಿಸಿ ಭಾಷಣಮಾಡಿದರು.

ಧರ್ಮಸ್ಥಳದಲ್ಲಿ ಸರ್ವಧರ್ಮ ಸಮ್ಮೇಳನ

ಕಳೆದ ಇಪ್ಪತ್ತು ವರ್ಷಗಳಿಂದ ನಡೆದು ಬರುವ ಶ್ರೀ ಧರ್ಮಸ್ಥಳ ಸರ್ವಧರ್ಮ ಸಮ್ಮೇಳನವು ಈ ಬಾರಿ ತಾ. 16 ಮತ್ತು 17ರಲ್ಲಿ ಶ್ರೀ. ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ನಾಯಕತ್ವದಲ್ಲಿ ಸಾಂಗವಾಗಿ ಜರಗಿತು.

ಪ್ರಾರಂಭದಿವಸ "ಆಧುನಿಕ ವಿದ್ಯಾಭ್ಯಾಸ ಮತ್ತು ಜನಜೀವನ" ವೆಂಬ ವಿಷಯದಲ್ಲಿ ಬೆಂಗಳೂರಿನ ಶ್ರೀ. ಆರ್. ಎಲ್. ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಉಪನ್ಯಾಸಗಳಾದುವು. ಶ್ರೀ. ಡಿ. ಮಂಜಯ್ಯ ಹೆಗ್ಗಡೆಯವರು ಸ್ವಾಗತ ಭಾಷಣ ಮಾಡುತ್ತ ಇಂದು ಜನಜೀವನದಲ್ಲಿ ಸತ್ಯನಿಷ್ಠೆಗಳಿಲ್ಲ; ಸುಖಶಾಂತಿಗಳಿಲ್ಲ; ಶಾಲೆಯ ವಿದ್ಯಾರ್ಥಿಗಳಲ್ಲಿ ಭಕ್ತಿ ವಿಶ್ವಾಸಗಳಿಲ್ಲ; ಯಾವುದನ್ನು ಪುರಸ್ಕರಿಸಬೇಕು; ಯಾವುದನ್ನು ತಿರಸ್ಕರಿಸಬೇಕು ಎಂಬುದನ್ನರಿಯದೆ ಒಂದುರೀತಿಯ ಅಸಹಾಯತೆಯು ಕಂಡು ಬರುತ್ತದೆ, ಇದರ ನಿವಾರಣೆಗಾಗಿ ಶಿಕ್ಷಣದ ಸುಧಾರಣೆ ಯಾಗಬೇಕೆಂದರು.

ಬಳಿಕ ಶ್ರೀ. ಕೆ. ಎಲ್. ಧರಣೇಂದ್ರಯ್ಯನವರು ಭಾರತೀಯರಿಗೆ ತಕ್ಕುದಾದ ಶಿಕ್ಷಣವು, ಸ್ವಾತಂತ್ರ್ಯ ಪ್ರೇಮವನ್ನು ಬೆಳೆಸಿ, ಕಲಿತಾದಮೇಲೆ ಅರ್ಜಿ ಹಿಡಿದು ತಿರುಗುವ ಮನೋಭಾವ ತೊಲಗುವಂತಹ ಸ್ವಾವಲಂಬನದ ದಿಟ್ಟತನವುಂಟಾಗುವಂತಹ ಶಿಕ್ಷಣ ಬೇಕೆಂದರು

ನಂತರ ಶ್ರೀ. ಕೆ ಶಿವರಾಮ ಕಾರಂತರು ಮಾತನಾಡುತ್ತಾ ನಮ್ಮ ದೇಶದ ಇಂದಿನ ಪರಿಸ್ಥಿತಿಯನ್ನು ಪರದೇಶದೊಡನೆ ಹೋಲಿಸುತ್ತ ಇಂದು ಅಧಿಕಾರದಲ್ಲಿರುವವರಲ್ಲಿ ಶಿಕ್ಷಣದ ಸ್ಪಷ್ಟವಾದ ಗುರಿಯಿಲ್ಲವೆಂದರು, ಜೀವನವನ್ನು ಸುಗಮವನ್ನಾಗಿ ಮಾಡಿಸುವುದಕ್ಕಾಗಿ ಮತ್ತು ಜ್ಞಾನ ಸಂಪಾದನೆಗಾಗಿ ವಿದ್ಯಾಭ್ಯಾಸವಾಗಬೇಕೆಂದರು. ಇವೆರಡೂ ನಮ್ಮಲ್ಲಿಲ್ಲ. ಪರದೇಶಗಳಲ್ಲಿ ವಿದ್ಯೆಗಾಗಿ ವಿದ್ಯೆಯೆಂಬ ತತ್ವವೂ ಇದೆ. ಜೀವನಕ್ಕಾಗಿ ವಿದ್ಯೆಯೆಂಬ ತತ್ವವೂ ಇದೆ ಅದಕ್ಕಾಗಿ ನಿರ್ದಿಷ್ಟವಾದ ರೀತಿಯಿಂದ ಕೆಲಸವಾಗುತ್ತಿದೆ ಎಂದರು. ಬಳಿಕ ಮಾತನಾಡಿದ ಜನಾಬ್ ಅಬ್ದುಲ್ ಜಬ್ಬಾರ್ ಖಲೀಲ್‌ರವರು ಇಂದಿನ ಶಿಕ್ಷಣದಲ್ಲಿ ಸುಧಾರಣೆ ಅಗತ್ಯವೆಂದೂ ಅದರೆ ಅಧಿಕಾರದಲ್ಲಿರುವವರು ಈ ಶಿಕ್ಷಣ ಸುಧಾರಣೆಯನ್ನು ಅವಸರದಿಂದ ಮಾಡದೆ ತಜ್ಞರಿಂದ ಸರಿಯಾದ ಸಲಹೆ ಪಡೆದೇ ಮಾಡಬೇಕೆಂದೂ ತಿಳಿಸಿದರು ಶ್ರೀ ತಿಪ್ಪೆರುದ್ರಪ್ಪನವರೂ ಮಾತನಾಡುತ್ತಾ, ಹೊಟ್ಟೆಬಟ್ಟೆಯನ್ನೊದಗಿಸುವ ಕೆಲಸವನ್ನು ಎಲ್ಲರೂ ಪರಿಶ್ರಮದಿಂದ ಮಾಡುವಂತಹ ಶಿಕ್ಷಣ ಬೇಕೆಂದೂ ಅದಕ್ಕೆ ತಕ್ಕಂತೆ ಸಮಾಜದ ಆರ್ಥಿಕ ವ್ಯವಸ್ಥೆಯ ಸುಧಾರಣೆಯೂ ಆಗಬೇಕೆಂದರು ಶ್ರೀ ಅ. ನ. ಕೃಷ್ಣರಾಯರು ಮಾತನಾಡುತ್ತಾ, ನಮ್ಮಲ್ಲಿ ಪರಂಪರೆಯಿಂದ ಬೆಳೆದು ಬಂದ ಸಂಸ್ಕೃತಿಗೆ ತಕ್ಕಂತಹ ಶಿಕ್ಷಣ ಕೊಡಬೇಕು. ಮೊದಲು ನಮ್ಮ ಬೆಳಕು ಆ ಮೇಲೆ ಅಮೇರಿಕದಿಂದಲೋ ರಸ್ಯದಿಂದಲೋ ಸ್ಫೂರ್ತಿ ಪಡೆಯುವಾ ಎಂದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಇಂದಿನ ಸಮಾಜದಲ್ಲಿ ಸ್ಥಿತಿಯಲ್ಲಿ ಆರ್ಥಿಕ ವಿಷಮತೆಯು ಹೆಚ್ಚಾದುದರಿಂದಲೇ; ಜನರ ಮನಸ್ಸು ಸಂಸ್ಕಾರಶುದ್ಧಿಯ ಕಡೆಗೋಲಿಯುತ್ತದೆಂದರು ನಿಪುಣರಿಗೆ ಸರಿಸಮಾನವಾದ ಮನ್ನಣೆ ಸಿಗುವವರೆಗೆ ಈ ಪರಿಸ್ಥಿತಿಯಿರುವುದೆಂಬುದನ್ನೂ ಇತರದೇಶದಲ್ಲಿ ಕನಿಷ್ಠ ಮತ್ತು ಗರಿಷ್ಠ ಸಂಬಳದ ಮಾನವನ್ನೂ ಅಂತರವನ್ನೂ ತಿಳಿಸಿದರು. ಶ್ರೀ. ಬಿ. ಶಂಕರ ಭಟ್ಟರು ಧನ್ಯವಾದಗಳನ್ನರ್ಪಿಸಿದರು. ಭಾಷಣಗಳ ಮಧ್ಯದಲ್ಲಿ ಸಂಗೀತ ಕಾವ್ಯವಾಚನಗಳೂ ಜರುಗಿದವು

ಸಾಹಿತ್ಯ ವಿಚಾರ ಭಾಷಣ – ಎರಡನೇ ದಿನದ ಸಭಾಧಿವೇಶನದ ಅಧ್ಯಕ್ಷತೆಯನ್ನು ಶ್ರೀ ಕೆ. ಶಿವರಾಮ ಕಾರಂತರು ವಹಿಸಿದ್ದರು. ಕೆ. ಎಸ್. ಧರಣೇಂದ್ರಯ್ಯನವರು "ಜೈನ ಸಾಹಿತ್ಯದಲ್ಲಿ ಪೌರುಷ" ಮಿರ್ಜಿ ಅಣ್ಣಾರಾಯರು 'ಆಧುನಿಕ ಕನ್ನಡ ಸಾಹಿತ್ಯದಲ್ಲಿ ದೇಶ ಭಕ್ತಿ' ಎಸ್. ಎಸ್. ಶಿಲ್ಲೆಯವರು 'ಕನ್ನಡ ಸಾಹಿತ್ಯದಲ್ಲಿ ಭಕ್ತಿ' ಮೌಲ್ವಿ ಸಯ್ಯದ್ ಇಸ್ಮಾಯಿಲ್ 'ಸಾಹಿತ್ಯದಲ್ಲಿ ಪೌರುಷ ತ್ಯಾಗ ಭಕ್ತಿ' ಸೇಡಿಯಾಪು ಕೃಷ್ಣ ಭಟ್ಟರು 'ಸಾಹಿತ್ಯದಲ್ಲಿ ತ್ಯಾಗ' ಮುಳಿಯ ಭೀಮರಾಯರು, 'ದಾಸ ಸಾಹಿತ್ಯ' ತಿಪ್ಪೆ ರುದ್ರಯ್ಯನವರ 'ಅಂಗಾಂಗ ಸಾಮರಸ್ಯ' ಅ. ನ. ಕೃಷ್ಣರಾಯರು 'ಸಾಹಿತ್ಯದಲ್ಲಿ ವೈಜ್ಞಾನಿಕ ಭಾವ' ಆರ್ ಎಲ್. ನರಸಿಂಹಯ್ಯನವರು 'ದೂರದರ್ಶನದ ಪ್ರಯೋಗಗಳು" ಎಂಬಿತ್ಯಾದಿ ವಿಚಾರಗಳಲ್ಲಿ ಭಾಷಣವಿತ್ತರು. ಅಧ್ಯಕ್ಷ ಭಾಷಣವಾಗಿ ಶ್ರೀ ಮಂಜಯ್ಯ ಹೆಗ್ಗಡೆಯವರ ಧನ್ಯವಾದ ಪೂರ್ವಕವಾಗಿ ಸರ್ವಧರ್ಮ ಸಮ್ಮೇಳನವು [illegible] ಕೊನೆಗೊಂಡಿತು.

ಕಡೆಕಾರು— ಇಲ್ಲಿಯ ಪೋಸ್ಟಾಫೀಸಿಗೆ ತಾ. 20—11—1952ರಂದು ಟಪ್ಪಾಲು ಒಟ್ಟುಗೆ E. D. D. A ಯು ನೇಮಕವಾಗಿ [illegible] ಊರಿಗೂ [illegible] ಜನರಿಗೂ [illegible] ಲವಾಗಿದೆ.

ಕಾರ್ಕಳ ಡಿ ಮು. ಕೋರ್ಟಿನಲ್ಲಿ

O S No 316/195

[illegible] 5 ಜನ ವಾದಿಗಳು [illegible] 6 ಜನ ಪ್ರತಿವಾದಿಗಳು.

3 [illegible], ಮಂಗಳೂರು [illegible] ಗುತ್ತಿ [illegible].

4 ಪ್ರೇಮಾವತಿ [illegible], ಉಡುಪಿ [illegible], ಕುಂದಾಪುರ ತಾಲ್ಲೂಕು [illegible].

ಸದ್ರಿ 3-4ನೇ ಪ್ರತಿವಾದಿಗೆ ತಿಳಿಸುವುದೇನಂದರೆ 1ನೇ ಪ್ರತಿವಾದಿಯು [illegible] ತಾ 23-8-193[illegible]ರಲ್ಲಿ ರಜಿಸ್ಟ್ರಿ ಆದ ರೂಪಾಯಿ 2000-0-0ಕ್ಕೆ ಬರೆದುಕೊಟ್ಟ ಸ್ಥಿರಾಸ್ತಿ ಆಧಾರ ದಸ್ತಾವೇಜು ಪ್ರಕಾರ [illegible] ರೂ 3000 0 0ಕ್ಕೆ ವಾದಿಯು ದಾಖಲು ಮಾಡಿದ ಮೇಲಿನ ದಾವೆಯಲ್ಲಿ ನಿಮಗೆ [illegible] ಪ್ರಕಾರ ನೋಟೀಸಿನ ಬಗ್ಗೆ ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 6-12 1952ಕ್ಕೆ ಇಟ್ಟಿದೆ. ಆ ಬಗ್ಗೆ ಆಕ್ಷೇಪವಿದ್ದರೆ ಸದ್ರಿ ತಾ 6 12-1952ನೇ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ನೀವು [illegible] ಕೊಡದಿದ್ದಲ್ಲಿ ಎಂತ ಕೋರ್ಟು [illegible] ತಿಳಿಸಿಯದೆ.

I. S Rao,
Advocate for Plaintif
ಕಾರ್ಕಳ, ತಾ 4 11 52.

"ಆವಾರಕ್ಕೆ ಸರಿಯಾದ ಚಿತ್ರವು ಆವಾರ ಮಾತ್ರವಲ್ಲದೆ ಬೇರೊಂದಿಲ್ಲ"
ಇದು ಅಖಿಲ ಭಾರತದಲ್ಲಿಯೂ ಜನರ ಬಾಯಿಯಿಂದ ಬರುವ ಮಾತು,
ನಡೆಯುವ ಚಿತ್ರ

ಆವಾರಾ

ರಾಜ್‌ಕಪೂರ್, ನರ್ಗಿಸ್, ಕೆ ಎನ್ ಸಿಂಗ್, ಕುಕ್ಕು ಮೊದಲಾದವರು

ನಿರೀಕ್ಷಿಸಿರಿ— ವರ್ಣರಂಜಿತ ಚಿತ್ರ ಆನ್

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.



ೊಸ ರಸ್ತೆಗಳ ಉದ್ಘಾಟನೆ

ಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಬಿ. ಂಜಯ್ಯ ಹೆಗ್ಡೆಯವರ ಭಾಷಣ

ಚೆರ್ವತ್ತೂರು–ಚೆಮಿನಿ ಕುಂಜಾಂಗ್ಯಾ ಮತ್ತು ಚೆಮಿನಿ ಪಯನ್ನೂರು ಗಳ ಉದ್ಘಾಟನಾ ಸಮಾರಂಭ ಕಳೆದ ತಾ 15ರಲ್ಲಿ ಜಿಲ್ಲಾ ಕಲೆಕ್ಟರ್ . ಸಿ. ಎ. ರಾಮಕೃಷ್ಣನ್ ಅವರಿಂದ ನೆರ ಸಲ್ಪಟ್ಟಿತು, ಈ ಸಂದರ್ಭದಲ್ಲಿ ಜಿಲ್ಲಾ ರ್ಡ್ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಯವರು ಮಾಡಿದ ಭಾಷಣ ಸಾರಾಂಶ ಗಿದೆ.

ನಮ್ಮ ಜಿಲ್ಲೆಯ ಮಾರ್ಗಗಳಲ್ಲಿ ಕೆಲವು ವೇಸ್, ಇನ್ನೂ ಕೆಲವು ಪಂಚಾಯತ ರ್ಡ್ ಮತ್ತು ಜಿಲ್ಲಾ ಬೋರ್ಡಿನವಾಗಿ ದೇಶದ ಅಭಿವೃದ್ಧಿಗೆ ಮಾರ್ಗಗಳ ಸೌಕರ್ಯ ಅವಶ್ಯವಾಗಿದೆ. ನಮ್ಮ ಪ್ರಾಂತದಲ್ಲಿ ಕಾರ್ಯಕ್ಕೆ ಹೆಚ್ಚಿನ ಗಮನಕೊಡಲಿಲ್ಲ. ರಿಂದಾಗಿ ವಿದ್ಯೆಗೆ, ವೈದ್ಯಕೀಯ ಸಹಾಯಕ್ಕೆ, ಅಧಿಕ ಆಹಾರ ಬೆಳೆಸುವ ಚಳವಳ ದಲಾದುವುಗಳಿಗೆ ಮಾರ್ಗಗಳ ಅವಶ್ಯಕತ್ಯವಿದೆ ಎಂಬುದು ಅಧಿಕಾರಿಗಳಿಗೆ ತಿಳಿದಿಲ್ಲವೆಂದು ತೋರುತ್ತದೆ. ಇದನ್ನು ತಿಳಿಕೊಂಡು ಪ್ರಾಂತೀಯ ಸರಕಾರವು ಮಾಗಳ ರಚನೆಗೆ ತುಂಬಾ ಗಮನಕೊಡಬೇದೆ.

ಯುದ್ಧಾನಂತರ ಮಾರ್ಗ ಅಭಿವೃದ್ಧಿ ಯೋಜನೆಯಿಂದ ಈ ವರ್ಷ ಜಿಲ್ಲಾ ಬೋರ್ಡಿಗೆ ರೂಪಾಯಿ 77,400/- ದೊರಕಿರು. ಇದರಿಂದ ನಮ್ಮ ಜಿಲ್ಲೆಯಲ್ಲಿ ಬೇಕಾದ ರ್ಗ ಮಾಡಿಸಲು ಅಸಾಧ್ಯವಾಗಿದೆ. ಜಿಲ್ಲಾ ರ್ಡಿನವರು ಈ ತನಕ 13 ಮಾರ್ಗಗಳ ಸವನ್ನು ಕೈಕೊಂಡಿರುವರು. ಇದಕ್ಕೆ ಸಾಣ ರೂ 2,22,000/- ಬೇಕೆಂದು ಅಂಜು ಮಾಡಲಾಗಿದೆ. ನಮ್ಮ ಜಿಲ್ಲೆಯ ದಕ್ಷಿ ಭಾಗದಲ್ಲಿ ಕೆಲವೇ ಮಾರ್ಗಗಳಿರುವುದರಿಂಲ್ಲಿ ಜನಸಂಖ್ಯೆಯು ಸ್ವಲ್ಪವಾಗಿದೆ. ಆದರಾವಳಿ ತೀರದಲ್ಲಿ ಸ್ವಲ್ಪ ಜನರು ವಾಸಿತ್ತಿರುವರು. ಯುದ್ಧಾನಂತರ ಮಾರ್ಗ ಅದ್ಧಿ ಯೋಜನೆಯ ಕೆಲಸವು ಎರಡು ರು ವರುಷಗಳಿಂದ ಕೆಲವು ಕಾರಣಗಳಿಂ ಗಿ ಫಲಕಾರಿಯಾಗಲಿಲ್ಲ. ಇದಕ್ಕೆ ಜನತಾ ಕಾರಿವು ಸಹಾಯ ಮಾಡಿದರೆ ಉತ್ತಮ ಗಬಹುದು.

ನಮ್ಮ ಜಿಲ್ಲೆಯ ಜನರು ಎರಡು ಮೂರು ವರುಷಗಳಿಂದ ಶಾಲೆಯನ್ನು ತೆರೆಯುವುದರಲ್ಲಿ ಹೈಸ್ಕೂಲು ಮತ್ತು ವಿದ್ಯಾಸಂಸ್ಥೆಗಳನ್ನು ತೆರೆಯುವುದರಲ್ಲಿ ತುಂಬಾ ಸಹಾಯ ಮಾಡಿರುವರು. ಆದರೆ ಮಾರ್ಗಗಳನ್ನು ತೆರೆಯಲು ಸಹಾಯ ಮಾಡಲಿಲ್ಲ. ಈ ಕಾರ್ಯಕ್ಕೆ ಅವರು ಸಹಾಯ ಮಾಡದಿದ್ದರೆ ಜಿಲ್ಲೆಯ ಅಭಿವೃದ್ಧಿ ಹೊಂದಲಾರದು. ಆದಕಾರಣ ಜಿಲ್ಲೆಯ ವಿವಿಧ ಭಾಗಗಳಲ್ಲಿ ಜನರು ಕೃಷಿ, ವ್ಯಾಪಾರ ಮತ್ತು ನಮ್ಮ ಊರಿನ ಸಂಪತ್ತಿಗಾಗಿ ಮಾರ್ಗಗಳನ್ನು ತೆರೆಯಲು ಸಹಾಯ ನೀಡಬೇಕು. ಈಗ ನಾವು ತೆರೆಯುತ್ತಿರುವ ಮಾರ್ಗವನ್ನು ಶ್ರೀ ಕೆ. ಜಿ. ಸಾಮುವೆಲ್‌ರವರು ತುಂಬಾ ಪರಿಶ್ರಮದಿಂದ ಮಾಡಿರುವರು.’

ಹೊಲಿಗೆ ಕಲೆಯೂ—ರಾಷ್ಟ್ರಪೋಷಕವಲ್ಲವೇ?

ಹೊಲಿಗೆ ಕಲೆಯು ಪುರಾತನದಲ್ಲಿ ಶಿಲ್ಪಕಲೆಯ ಒಂದು ಭಾಗವೇ ಆದ "ಸೂಜೀ ಶಿಲ್ಪ" ವೆಂಬ ಹೆಸರಿನಲ್ಲಿದ್ದು ಆಗ ಈ ಕಲಾಕಾರರಿಗೆ "ಶಿಲ್ಪಿ" ಎಂದು ಕರೆಯುತ್ತಿದ್ದುದರ ಬರುತ್ತಾ "ಶಿಂಪಿ" ಎಂದು ಕರೆಯುವದು ಇಂದಿಗೂ ರೂಢಿಯಲ್ಲಿದೆ. ಆದ್ದರಿಂದಾ ಅನಾದಿ ಕಾಲದ ಇಂತಹ ಮಹತ್ವ ಪೂರ್ಣ ಈ ಕಲೆಯು ನಮ್ಮ ದೇಶದ ಆರ್ಥಿಕ ಸ್ವಾವಲಂಬನೆಗೆ ಅದೆಷ್ಟು ಪೋಷಕವೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಹೀಗಿರುವಾಗ–ಸರಕಾರವು ಈ ಸೂಜೀ ಶಿಲ್ಪಕಲೆಯನ್ನು ಶಾಸ್ತ್ರೀಯ ತರಬೇತಿಯೊಂದಿಗೆ ನಮ್ಮ ದೇಶದ ಬಹುಸಂಖ್ಯಾತ ಬಡಹಳ್ಳಿಗರಿಗೆ ಯೋಗ್ಯ ರೀತಿಯಿಂದ ಈ ಕಲಾಶಿಕ್ಷಣ ದೊರಕುವಂತೆ–ಅನುವುಮಾಡಿ ಕೊಡುವುದಾದರೆ–ಹಳ್ಳಿಯ ಪ್ರತಿಯೊಬ್ಬ ಕುಟುಂಬಿಯು ಸ್ವಾವಲಂಬನೆಯಾಗುವಲ್ಲಿ ಸಂದೇಹವಿಲ್ಲ–ಅಂದರೆ ನಮ್ಮ ಸರಕಾರವು ಈಗ ಹತ್ತಿಯಿಂದಾದಿಯಾಗಿ ಹಿಂಜುವದು, ನೂಲುವದು, ನೇಯುವದು, ಈ ಶಿಕ್ಷಣವನ್ನು ಬುನಾದಿ ಶಿಕ್ಷಣದ ಸ್ವಾವಲಂಬನೆಯಲ್ಲಿ ಸೇರಿಸಿದ್ದರಷ್ಟೆ! ಅಂತ ಮೇಲೆ ನೇಯ್ದು ಬಟ್ಟೆಯನ್ನು ಹೊಲಿಯುವದು ಬೇಡವೇ! ಹೊಲಿಯುವದನ್ನೂ ಅದರಲ್ಲಿಯೇ ಸಮಾವೇಶಿಸಿದರೆ ವಸ್ತ್ರ ಸ್ವಾವಲಂಬನೆಯು ಪೂರ್ಣತ್ವವಾಗುವದಿಲ್ಲವೇ! ಆದರೆ ಈಗಲೀಗ ಸರಕಾರದವರು—ಪ್ರಾಥಮಿಕ ಶಾಲೆಗಳಲ್ಲಿ ಐಚ್ಛಿಕವಾಗಿ ಈ ಶಿಕ್ಷಣ ನಡೆಸಲು ಅನುಮತಿತ್ತಿದ್ದಾರೂ–ಅದರಿಂದ ಜನತೆಗೆ ಸಿಗಬೇಕಾದ ಶ್ರಮದಲ್ಲಿ–ಲಾಭ–ಸಿಗದಂತಾಗಿದೆ, ಯಾಕಂದರೆ, ಸಾಮೂಹಿಕವಾಗಿ, ಕಡ್ಡಾಯವಾಗಿ, ಶಾಸ್ತ್ರೀಯವಾಗಿ, ಪೂರ್ಣತ್ವ ಹೊಂದುವವರೆಗಿನ ಶಿಕ್ಷಣವೇ ಸ್ವಾವಲಂಬನೆಯ ಗುರಿಯನ್ನು ಸಾಧಿಸಿ ಆರ್ಥಿಕ ಭದ್ರತೆ ಮಾಡಿಕೊಳ್ಳಲು ಸಾಧ್ಯವೇ! ಹೊರತು ಕೇವಲ ಭೂಷಣಕ್ಕಾಗಿ ದೊರೆಯುತ್ತಿರುವ ಈಗಿನ–ಅಶಾಸ್ತ್ರೀಯ, ಅಪೂರ್ಣ ಶಿಕ್ಷಣದಿಂದ ತನ್ನ ಗುರಿ ಸಾಧಿಸಲು ಅಸಾಧ್ಯ–ಮಾತ್ರವಲ್ಲ–ಕಲೆಯ ಅಪಮಾನವೂ, ಕಲೆಯ ಕೊಲೆಯೂ, ಆದಂತೇ! ಎಂಬುವನ್ನು ಮರೆಯಬಾರದು ಆದ್ದರಿಂದ ಸರಕಾರದವರು ರಾಷ್ಟ್ರೋನ್ನತಿಯ ಕಾರ್ಯದಲ್ಲಿ–ಈ ಹೊಲಿಗೆ ಕಲೆಗೂ ಮಹತ್ವದ ಸ್ಥಾನವಿತ್ತು ಶಾಸ್ತ್ರೀಯ ರೀತಿಯ ಶಿಕ್ಷಣವಿತ್ತು ಕಡ್ಡಾಯವಾಗಿ–ಪ್ರಾಥಮಿಕ–ಮಾಧ್ಯಮಿಕ ಶಾಲೆಗಳಲ್ಲಿ– ಮುಂದಿನ ಜನಾಂಗವಾದ ಇಂದಿನ ವಿದ್ಯಾರ್ಥಿ–ವಿದ್ಯಾರ್ಥಿನಿಯರನ್ನು ಸಂಪೂರ್ಣ ವಸ್ತ್ರ ಸ್ವಾವಲಂಬಿಗಳನ್ನಾಗಿ ಮಾಡಿದರೆ, ರಾಷ್ಟ್ರದ ಹದಗೆಟ್ಟ ಆರ್ಥಿಕ ಪರಿಸ್ಥಿತಿಯನ್ನು ಹತೋಟಿಗೆ ತಂದು ನಮ್ಮ ರಾಷ್ಟ್ರ ನಾಯಕರು ನೆನೆಸಿದಂತೆ ಕ್ಷಿಪ್ರದಲ್ಲಿಯೇ ದೇಶವು ಅಭೇದ್ಯ, ಕೋಟೆಯಾಗುವದರಲ್ಲಿ ಸಂಶಯವಿಲ್ಲವೆಂಬುದನ್ನು ಧಾರಾಳವಾಗಿ ಹೇಳಬಹುದು.

ಬಿ ಜಿ ಸೆಟ್ಟಿ, ಸಾಂತೂರು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

ಕ್ರಮ ಸಂಖ್ಯೆ 309/1952

R. E. P. No. 21[illegible]/1952

ಮೊನಪ್ಪ ಸೆಟ್ಟಿ - ಅರ್ಜಿದಾರರು

ಮತ್ತು

ಗೋಪಾಲ ಕೃಷ್ಣ ಸೆಟ್ಟಿ ವಗೈರೆಯು ಉದ್ಯಾವರ ಪಡೆಹೊಳೆಗೆ 4ನೇ ಮುದ್ದೆ ಜುಟ್ಟಿ ಕಲ್ಯಾಣಿರ ಮಗ ಉಡ್ಪಿ ತಾಲೂಕು ಫಲ್ಲಾರು ಮನೆಯಲ್ಲಿ ಅವರಿಲು ಕಂಕಣ ಗುತ್ತಿನಲ್ಲಿ ವಾಸವಾಗಿರುವವರಿಗೆ —

ಮೇಲ್ಕಂಡ ಅಮಲ್ಜಾರಿಯಲ್ಲಿ ಡಿಕ್ರಿಯ ಮೊಕ್ಕ ಮಾರಾಟಕ್ಕೆ ವಿಧಿಯಾಗಿರುವ ಸ್ಥಿರಾಸ್ತಿ ಯೇಲಮುಗಳ ಅರ್ಜಿದಾರರು ಕೊಡುತ್ತಿರುವ ಯೇಲಮು ಯಾಸ್ತಿಹಾರಿನ ಶರ್ತನ್ನು ಮಂಜೂರು ಮಾಡುವ ಬಗ್ಗೆ ಸದ್ರಿ ಜಪ್ತಿಯಾಯು ಮತ್ತು ಸದರಿ ಆಸ್ತಿ ಯೇಲಮಿನ ದರ್ಖಾಸ್ತಿಗೆ ನಿಲ್ಲುವ ಭಾರಿಕೆ ಅನುಮತಿ ಕೊಡಬೇಕಾಗಿಯೂ, ಏಲಂ ನಿಂತಲ್ಲಿ ಯೇಲಂ ಹಣದಲ್ಲಿ ಡಿಕ್ರಿಯ ಹಣ ಜಮಾ ಮಾಡುವಂತೆ ಹುಕುಮು ಕೊಡಬೇಕಾಗಿಯೂ, ಅರ್ಜಿದಾರರು ಕೊಟ್ಟ ಅರ್ಜಿಯು ಕೋರ್ಟಿನ ತಾ **12-12-1952** ಬೆಳಿಗ್ಗೆ 10 ಗಂಟೆಯ ಸಮಯಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನಿಖೆಗೆ ತೆಗೆಯುವುದರಿಂದ, ಸದರಿ ವಿಷಯಗಳಲ್ಲಿ ನಿಮ್ಮ ಆಕ್ಷೇಪಣೆಯು ಇರುವಲ್ಲಿ ನೀವು ಸ್ವತಃ ಅಥವಾ ವಕೀಲರ ಮುಖಾಂತರವಾಗಲೀ ಹಾಜರಾಗಿ ಹೇಳಿ ಮಾಡಿಕೊಳ್ಳಬಹುದಾಗಿಯೂ, ತಪ್ಪಿದರೆ ಸದರಿ ಅಮಲ್ಜಾರಿಯ ವಿಚಾರ ಅರ್ಜಿಯು ನಿಮ್ಮ ಗೈರು ಹಾಜರಿಯಲ್ಲಿ ವಿಲೇವಾರಿಸಲ್ಪಡುತ್ತದೆಂಬುದಾಗಿಯೂ ಈ ಮೂಲಕ ನಿಮಗೆ ತಿಳಿಸಲಾಗಿದೆ.

A. N. S. Achar.

Advocate for Petitioner.

ಳ ತಾ. 22—11—1952.

In the High Court of Judicature at Madras

Ordinary Original Civil Jurisdiction

O. P. No. 95 of 1952

In the matter of the Indian Companies Act, 1913 and in the matter of the Homes & Estates Limited

Homes and Estates Limited ... ... Petitioners

Notice is hereby given that a petition has been presented to the High Court of Judicature at Madras for confirming a resolution of the above company for reducing its capital from Rupees 100,000/- (one lakh) to Rupees 50,000/- (fifty thousand). A list of persons admitted to have been creditors of the Company on the 28th day of April 1952 may be inspected at the offices fo the Compony at Udipi or at the office of the Advocates for petitioners at the National Insurance Buildings, Esplanade, Madras at any time during the usual business hours on payment of the charge of Rupee one.

Any person who claims to have been on the last mentioned day and still to be a creditor of the Company and who is not entered on the said list and claims to be so entered, must on or before the 1st day of December 1952 send in his name and address, and the [illegible] claim and the name and address of his Advocate (if any) to the undersigned at the National Insurance Buildings, Esplanade Madras, or in default thereof he will be precluded from objecting to the proposed reduction of capital.

Dated at Madras this 17th day of November 1952.

Sd. **Chetty & Shetty**

Advocates for the said Company

THE KARNATAKA BANK LTD., UDIPI

ದಿ ಕರ್ನಾಟಕ ಬೇಂಕ್, ಲಿಮಿಟೆಡ್ ಉಡುಪಿ.

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬ್ಯಾಂಕಿನಿಂದ ಚಿನ್ನಾಭರಣದ ಆಧಾರದ ಮೇಲೆ ಪಡಕೊಂಡ ಸಾಲದ ಬಡ್ಡಿ ಮತ್ತು ಅಸಲು ಏವೇಜುಗಳ ಬಗ್ಗೆ ಕೊಟ್ಟ ರಿಜಿಸ್ಟ್ರಿ ನೋಟೀಸು ಸದ್ರಿಯವರ ಪತ್ತೆ ಗೊತ್ತಿಲ್ಲವೆಂಬುದಾಗಿ ವಾಪಾಸು ಬಂದ ಪ್ರಯುಕ್ತ ಸದ್ರಿ ಸಾಲದ ಭದ್ರತೆಗೆ ಇಟ್ಟ ಚಿನ್ನಾಭರಣವನ್ನು ತಾ 6-12 52ನೇ ಶನಿವಾರ ಅಪರಾಹ್ನ ಗಂಟೆ 1ಕ್ಕೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಬ್ಯಾಂಕಿಗೆ ಯುಕ್ತ ಕಂಡಲ್ಲಿ ಪುನಃ ನೋಟೀಸು ಕೊಡದೇನೇ ಏಲಂ ಮುಂದುವರಿಸುವ ಹಕ್ಕು ಇರುವುದು. ತಿಳಿದಿರುವುದು.

ಲೋನು ನಂಬ್ರ	ಹೆಸರು ಮತ್ತು ವಿಳಾಸ	[illegible]
174/50	ದುಗ್ಗಣ್ಣ ಸೆಟ್ಟಿ, ನಂದು ಶೆಟ್ಟಿ ಅಳಿಯ, ಮೂಡು ಬೆಳ್ಳೆ ಗ್ರಾಮ, ಮೂಡು ಬೆಳ್ಳೆ- ಪೋಸ್ಟು, ದ. ಕ.	25/-

ಬ್ಯಾಂಕಿನ ಆಫೀಸು, ವೆಂಕಟಪೇಟೆ
ಉಡುಪಿ, ದ ಕ.
ತಾ. 20-11-52

(Sd) **P Madhava Rao.**
Agent.

ಶ್ರೀ ರಾಮಕೃಷ್ಣ ಶುಕ್ಲಿಲ್ಲಾಯರ ನಿಧನ– ತಿರುವಾಂಕೂರು ಸಂಸ್ಥಾನದ ವಿದ್ಯಾಖಾತೆಯ ಡೈರೆಕ್ಟರರಾಗಿ ನಿವೃತ್ತರಾಗಿದ್ದ ಶ್ರೀ ರಾಮಕೃಷ್ಣ ಶುಕ್ಲಿಲ್ಲಾಯರು ತಾ 21ರಂದು ತಿರುವಾಂಕೂರಿನ ತಮ್ಮ ಸ್ವಗೃಹದಲ್ಲಿ ನಿಧನಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಶ್ರೀಯುತರು ಉಡುಪಿ ತಾಲೂಕಿನ ಉಪ್ಪೂರಿನ ಪ್ರಸಿದ್ಧ ಬ್ರಾಹ್ಮಣ ಸಮಾಜದವರಿದ್ದು, ಚಿಕ್ಕಂದಿನಲ್ಲಿ ತಿರುವಾಂಕೂರಿಗೆ ಹೋಗಿ ಅಲ್ಲಿ ವಿದ್ಯಾಖಾತೆಯಲ್ಲಿ ದುಡಿದು ಸಂಸ್ಥಾನದ ಗೌರವಾದರಗಳಿಗೆ ಪಾತ್ರರಾಗಿ ಕೊನೆಗೆ ಸಂಸ್ಥಾನದ ವಿದ್ಯಾಖಾತೆಯ ಡೈರೆಕ್ಟರರಾಗಿ ತಮ್ಮ ಸೇವೆ ಸಲ್ಲಿಸಿದರು.

ಸಿದ್ದಾಪುರ—ಇಲ್ಲಿಯ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಇದೇ ತಾ. 20ರಲ್ಲು ರಾತ್ರಿ ಶ್ರೀ ಎಸ್. ಸುಬ್ರಹ್ಮಣ್ಯ ಶಾಸ್ತ್ರಿಗಳವರಿಂದ ‘ಪುಂಡರೀಕ ಚರಿತ್ರೆ’ ಎಂಬ ಕಥಾಭಾಗದ ಹರಿಕೀರ್ತನೆ ನಡೆಯಿತು.

ರಿಪವರ್ಗಳು ಮಾಮೂಲು ಮೋರೆಗೆ ನಡೆಯುವ ಯೆಮರ್ಗಳು ಹೀರೆಯ ಕಂಬಳವು ತಾ. 7-12-52ರಲ್ಲು ನಡೆಯಲಿರುವುದು.

ಮುಂಬಯಿ—ಶ್ರೀ ಭಗವತೀ ನೃತ್ಯ ಕಲಾ ಮಂದಿರದ ವಿದ್ಯಾರ್ಥಿ ವಿದ್ಯಾರ್ಥಿನಿಯರ ನರ್ತನ ಪ್ರದರ್ಶನವು ಗೋವೆ ಸು ಜಂಜಿನರ್‌ನಲ್ಲಿರುವ ಸೆಂಟ್ರಲ್ ಥಿಯೇಟರಿನಲ್ಲಿ ತಾ. 25-11-52ರಿಂದ ಒಂದು ತಿಂಗಳವರೆಗೆ ನಡೆಯಲಿದೆ.

ಕುಂದಾಪುರ ಡಿ ಮು ಕೋರ್ಟಿನಲ್ಲಿ

O. P. No 58/1952.

ಅರ್ಜಿದಾರಳು—ಲಕ್ಷ್ಮಿ ಅಮ್ಮ.

ಎದ್ರಿ— ಯಿಲ್ಲಾ.

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದ್ರೆ–

ಅರ್ಜಿದಾರಳ ಗಂಡ ಮೃತ ಮರಿ ಅಡಿಗರ ಮಗನಾದ ಪದ್ಮನಾಭ ಅಡಿಗನಿಗೆ ಅರ್ಜಿಯಲ್ಲಿ ಕಾಣಿಸಿದಂತೆ ಬರತಕ್ಕ ಹಣವನ್ನು ವಸೂಲು ಮಾಡುವ ಕುರಿತು ಅರ್ಜಿದಾರಳ ಹೆಸರಿಗೆ ವಾರಿಸು ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರಳು ದಾಖಲು ಮಾಡಿದ ಮೇಲಿನ ಅರ್ಜಿ ತನಿಖೆಯನ್ನು ತಾ 4-12-1952ಕ್ಕೆ ನಿಶ್ಚಿಗೆ ಇಟ್ಟಿದೆ. ಆ ಕುರಿತು ಯಾರದ್ದಾದರೂ ಆಕ್ಷೇಪಯಿದ್ದರೆ ಆ ದಿನ ಹಗಲು 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಹ್ಯಾಜೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿಯನ್ನು ತಿಳಿಸಿಯದೆ.

By order of the Court

Y. Tejappa Shetty

Advocate for pltf,

Coondapoor, 22-11-1952

ಅಂದು ಇಂದಿನ ಹಳ್ಳಿ—ಮುಂದೇನು?

ನಾನು ಇಲ್ಲಿ ಫಾಹಿಯಾನ್, ಇತ್ಸಿಂಗ್ ಮೊದಲಾದ ಪ್ರಾಚೀನ ಪ್ರವಾಸಿಗರ ಕಾಲದ ಹಳ್ಳಿಯ ಚಿತ್ರವನ್ನು ಹೇಳ ಹೊರಟಿಲ್ಲ. ಕೇವಲ ಅರ್ಧ ಶತಮಾನದ ಸ್ವಲ್ಪ ಒಳ ಹೊರಗಿನ ಅವಧಿಯ—ನಮ್ಮಲ್ಲನೇಕರು ಕಂಡು ಮರೆಯದಿದ್ದ ಹಳ್ಳಿಗಳ ವಿಚಾರವನ್ನು ತುಸು ಮೆಲುಕು ಹಾಕುತ್ತಿದ್ದೇನಷ್ಟೆ. ಭಾರತವು ಹಳ್ಳಿಗಳ ದೇಶ; ಹಳ್ಳಿಯ ನಿವಾಸಿಗಳೇ ಭಾರತದ ಜೀವಾಳವೆಂಬುದನ್ನು ನೆನಪಿಗೆ ತಂದರೆ ಭಾರತದ ಪ್ರಮುಖ ಪತ್ರಿಕೆಗಳು ದಿನಾ ಹಳ್ಳಿಗರ ವಿವಿಧ ಮುಖ ಜೀವನದ ಮುಗ್ಗಟ್ಟಿನ ಸಚಿತ್ರ ಸಂಚಿಕೆಗಳನ್ನು ಯಾಕೆ ಹೊರಡಿಸಬಾರದೆಂದು ತೋರುತ್ತದೆ. ಪಟ್ಟಣಿಗರು ಈ ಸಂಪುಟವನ್ನೋದಿ ಏನು ಮಾಡುವಂತಿಲ್ಲವಾದರೂ ಭಾರತವು ಇನ್ನೂ ಎಂತಹ ಕಂಗಾಲು ಸ್ಥಿತಿಯಲ್ಲಿದೆ ಎಂದಾದರೂ ಅವರಿಗೆ ಅರ್ಥವಾದೀತು. ಈ ಸಂಪುಟಕ್ಕೆ ಲೇಖಗಳನ್ನು ಕೃಷಿ ಇಲಾಖೆಯ ಅಧಿಕಾರಿಗಳು ಬರೆಯುವುದಲ್ಲ. ಹಳ್ಳಿಯಲ್ಲಿದ್ದ ಹಳೆಯ ಅನುಭವಿಕ ಜನರಿಂದ ಬರೆಸಬೇಕು; ಅವರ ಅಭಿಪ್ರಾಯ ಸಂಪ್ರದಾಯಗಳನ್ನು ಸಂಗ್ರಹಿಸಬೇಕು. ಅವರದ್ದೆಲ್ಲಾ ಪುಸ್ತಕ ಜ್ಞಾನವಲ್ಲ. ಸರ್ಟಿಫಿಕೇಟುಗಳಿಂದ ಬಂದ ಯೋಗ್ಯತೆಯಲ್ಲ. ಪಂಚಭೂತಗಳೊಡನೆ ಹಲವು ವರ್ಷಗಳಿಂದ ಹೋರಾಡಿ ದಣಿದೋ ಮಣಿದೋ ಪಡೆದ ಅನುಭವ ಅವರದ್ದು. ಅವರು ನೇಗಿಲಯೋಗಿಗಳಾಗಿ ಹಲವು ವರ್ಷಗಳಿಂದ ಭೂಮಾತೆಯ ಸೇವೆ ಮಾಡುತ್ತಿದ್ದರು. ಇನ್ನು ಅವರ ತೊಡಕು ತೊಂದರೆಗಳೆಲ್ಲಾ ಅವರ ಬಾಯಿಯಿಂದ ಬಂದಂತೆಯೇ ಪ್ರಕಟಿಸಬೇಕು. ಆಗ ಅವರು ಏನು ಹೇಳುತ್ತಾರೆಂದು ಸ್ಪಷ್ಟವಾಗುವುದು. ಪಟ್ಟಣಿಗರು ಕುತೂಹಲವನ್ನು ತಣಿಸಿದುದರ ಫಲವೆಯು ಒಂದಂಶವಾದರೂ ಅವರ ಪಾಲಿಗೆ ಲಭ್ಯವಾದರೆ ಅವರಿಗೆ ಎಷ್ಟೋ ಎಷ್ಟೋ ಸೌಲಭ್ಯ ದೊರಕಿದಂತಾದೀತು. ಆದರೆ ಈ ಕುರಿತು ಹೇಳಿ ಕೇಳುವ ಉತ್ಸಾಹವು ಎಷ್ಟು ಮಂದಿಯಲ್ಲಿದೆ?

ಮಂಗಳೂರು ಅಥವಾ ಅವಕ್ಕೂ ಮಿಗಿಲಾದ ಪಟ್ಟಣಗಳಲ್ಲಿ ಸುಳಿದಾಡಿ ಅವರ ಮಗ್ಗುಲಿನ ಒಂದು ಹಳ್ಳಿಯಲ್ಲಿ ಸುತ್ತಾಡಿ ಬಂದರೆ ಇಷ್ಟು ಹತ್ತಿರದಲ್ಲೇ ಜನಜೀವನದಲ್ಲಿದ್ದ ಅಧಿಕ ಏರುತಗ್ಗು, ಮಾನವತೆಯ ತಿದ್ದುಪಡಿಗಾಗಿ ಇರಬೇಕಾದ ಏರ್ಪಾಡುಗಳಲ್ಲಿರುವ ಊಹಾತೀತವಾದ ವ್ಯತ್ಯಾಸಗಳು ಕಾಣಸಿಗುವಾಗ ಪಟ್ಟಣಗಳಿಂದ ಎಷ್ಟೋ ಎಷ್ಟೋ ಮೈಲು ದೂರದಲ್ಲಿರುವ ಮಲೆನಾಡಿನ ಹಳ್ಳಿಗಳ ಸಂಸ್ಕೃತಿ ಹೇಗಿರಬೇಕೆನ್ನಿಸುವುದು. ಅವರೆಲ್ಲಾ ಅಕ್ಷರವಲ್ಲದವರಾದರೂ ಸಂಸ್ಕೃತಿಯಲ್ಲಿ ದಾರ್ಶನಿಕ ಮೂಲಮಾನವರಾಗಿಯೇ ಇದ್ದಾರೆ. ಅಂದರೆ ಅವರ ಜ್ಞಾನಾಭಿವೃದ್ಧಿಗೆ ಮತ್ತು ಕೃಷಿಕೈಗಾರಿಕೆಗಳ ಅಭಿವೃದ್ಧಿಗೆ ಸಾಕಷ್ಟು ಅನುಕೂಲತೆಗಳಿಲ್ಲ. ಅವರಲ್ಲಿ ಪ್ರಾಚೀನ ಭಾರತದ ಸಂಸ್ಕೃತಿಯು ಅಳಿಸಿ ಹೋಗಿದೆ; ಇಂದಿನ ಸಂಸ್ಕೃತಿಯು ಅವರಲ್ಲಿ ಸುಳಿದಿಲ್ಲ. ಪಟ್ಟಣವಾಸಿಗಳು ವಿದ್ಯೆಯಿಂದ ಕಂಠವನ್ನು ಬಲಪಡಿಸಿಕೊಂಡು, ಲೇಖನಿಗಳನ್ನು ಬಿಗಿಹಿಡಿದು ತಮ್ಮ ಉತ್ಕರ್ಷಕ್ಕೆ ಬೇಕಾದ ವಾಚನಾಲಯವೋ ಮತ್ತೊಂದೋ, ಒಂದರ ಹಿಂದೆ ಒಂದು ಪಡೆಯುತ್ತಿದ್ದಾರೆ. ಹಳ್ಳಿಗಳಲ್ಲಿ ಓದು ತಿಳಿಯುವವರಿಗೆ ವಾಚನಾಲಯ ಕೊಟ್ಟಾದರೂ ಆಗುವ ಪುರುಷಾರ್ಥವೇನು? ಅಲ್ಲಿ ವಿದ್ಯಾಗಂಧ ಕೆಲವರಿಗೆ ಸ್ವಲ್ಪ ಹಲವರಿಗೆ ಏನೂ ಇಲ್ಲದಿರುವಾಗ ತನ್ನ ಸೌಕರ್ಯ ಮತ್ತು ಜ್ಞಾನಾಭಿವೃದ್ಧಿಗಾಗಿ ಏನು ಹೇಳಬೇಕು? ಅವರಿಗೆ ಪಟ್ಟಣದ ಜನತೆಯ ಮಾಯಾವಿ ಜೀವನದಲ್ಲಿ ಮಾತ್ರ ಈಗೀಗ ಆಸೆ ಹುಟ್ಟಿ ಅದಕ್ಕಾಗಿ ಹಣ ಸಂಗ್ರಹಿಸಬೇಕೆಂಬ ಇರಾದೆಯಿಂದ ತನ್ನ ದೇಶ, ಕನ್ನಡ ಎಂಬ ಅಭಿಮಾನವನ್ನಿಡದೆ ಭೂತಾವೇಶ ಹಿಡಿದವರಂತಾಗಿದ್ದಾರೆ. ಇದು ಪಟ್ಟಣಿಗರ ಜೀವನವನ್ನು ಕಂಡು ಹಳ್ಳಿಗರಲ್ಲಾದ ಪರಿವರ್ತನೆ!

ಹಳ್ಳಿಗರ ಜೀವನ ಮತ್ತು ಸೌಕರ್ಯಗಳಿಗೂ, ನಾಗರಿಕರ ಜೀವನ ಮತ್ತು ಅನುಕೂಲತೆಗಳಿಗೂ ಕೆಲವು ವ್ಯತ್ಯಾಸಗಳಿದ್ದರೂ, ನೈರ್ಮಲ್ಯ, ಪರಿಜ್ಞಾನ, ಆರೋಗ್ಯ ರಕ್ಷಣೆಯಲ್ಲಿ ತತ್ಪರತೆ, ಒಡಂಬಡಿಕೆಗಳ ಪರಿಷ್ಕಾರ ಜ್ಞಾನ, ದೇಶಾಭಿಮಾನ ಮೊದಲಾದ ಸಾರ್ವಜನಿಕ ಮೂಲ ಸೂತ್ರಗಳು ಉಭಯತರಿಗೂ ಒಂದೆ ಅವಶ್ಯಾಗಿ ಬೇಕು. ಮೊದಲು ಹಳ್ಳಿಗರಿಗೆ ಆರೋಗ್ಯದ ಸಹಜ ಪರಿಜ್ಞಾನವನ್ನುಂಟುಮಾಡಿ ಅವರ ಶಕ್ತಿಯನ್ನು ಹೆಚ್ಚಿಸಬೇಕು. ಅವರ ಇಂದಿನ ಸಂಕೋಚ ಭಾವ, ವಿವಿಧ ದೌರ್ಬಲ್ಯ, ಒಕ್ಕಂಟತನ, ಹಣದ ಬಾಯಾರಿಕೆ, ಒಕ್ಕಲುತನದಲ್ಲೇ ಪರಮ ಕೃಷಿ, ಮೇಲ್ಮೆಯ ಕಾರ್ಯಕ್ಕೆ ಅಸಹಕಾರ— ಇವನ್ನೆಲ್ಲಾ ಯುಕ್ತಿ ಪ್ರಯುಕ್ತಿಗಳಿಂದ ನಿಲ್ಲಿಸಬೇಕು. ಇದು ಒಂದು ಸಮಸ್ಯೆಯ ವಿಚಾರ, ಅತ್ಯಂತ ಕಠಿಣವಾದ ಕಾರ್ಯ. ಒಂದೇ, ಹಳ್ಳಿಗರು ಆಶಿಸುವ ವಸ್ತುಗಳನ್ನೆಲ್ಲಾ ಸಕಾಲದಲ್ಲಿ ಅವರಿಗೆ ಒದಗಿಸಬೇಕು. ಇಲ್ಲದಿದ್ದರೆ ಆ ವಸ್ತುಗಳ ದೋಷಗಳನ್ನು ಮುಂದಿಟ್ಟು ಮಾಡಿ, ತ್ಯಾಗಿಯಾಗಿ ಬಾಳದೆ ಭೋಗಿಯಾಗು—ಎನ್ನಬೇಕು. ಒಮ್ಮೆ ಅವರಲ್ಲಿ ಸಂಘಪ್ರೀತಿ, ಸಹಕಾರ ಬುದ್ಧಿ, ಸ್ವಾಭಿಮಾನವು ಮೊಳೆಯಿತೆಂದರೆ ಸ್ವರ್ಗದಂತೆ ಶಾಂತ ಜೀವನ, ಈಗಿನ ಪದ್ಧತಿಯಲ್ಲಿ ಅಧಿಕ ಉತ್ಪಾದನೆಯನ್ನುಂಟುಮಾಡುತ್ತಾರೆ. ಹಳ್ಳಿಗರೆಲ್ಲಾ ನೇಗಿಲ ಯೋಗಿಗಳಾಗದೆ ನೇಗಿಲ ಭೋಗಿಗಳಾದುದೇ ದೇಶದ ಈ ಕಳವಳದ ಮೂಲ ಕಾರಣ.

ನಾನು ಹಳ್ಳಿಯ ಒಂದು ಕೃಷಿಕ ಮನೆತನದವ, ಹಳ್ಳಿಗರೊಡನೆಯೇ ಹತ್ತಿಪತ್ತು ವರ್ಷ ವಾಸಮಾಡಿಕೊಂಡಿದ್ದೆ. ಈಗಲೂ ಹಳ್ಳಿಗಳ ಪ್ರಕೃತಿ ಸೌಂದರ್ಯದಿಂದ ಆನಂದಗೊಳ್ಳುತ್ತಿದ್ದೇವೆ. ಆ ಹಳ್ಳಿಗಳ ನಿಸರ್ಗವಾದ ವಿಶಾಲ ಜಲಾಶಯ; ಅವುಗಳ ತಟದಲ್ಲಿ ಕಂಡೂ ಕಂಡೂ ಕಣಿಯದ ಹಸುರು ಹೊಲಗಳ ಸಾಲೇ; ಅಲ್ಲಲ್ಲಿ ಮಾವು, ಹಲಸು, ಹುಣಸೆ, ಹೊನ್ನೆ, ತೆಂಗು|ಮರಗಳ ತೋಪು; ಅವುಗಳ ನಡು ನಡುವೆ ತಗ್ಗಾದರೂ ಅಳ್ಳಿಕೆ ಇರದ ಶಿಂತ ಧೀರ ಕವುಂಗು; ಹಳ್ಳಿಯ ಬಾಲೆಯರೇ ಮಾವಿನ ಪಕ್ಕದಲ್ಲಿ ತಮ್ಮ ಹಸ್ತದಿಂದಲೇ ನೆಟ್ಟು, ಅದಕ್ಕೆ ಬಾಲಸೂರ್ಯನ ಎಳೆ ಕಿರಣದಲ್ಲಿ ನೀರನ್ನು ಹೊಯ್ದು ಬೆಳೆಸಿದ ಮಲ್ಲಿಗೆಯ ಬಳ್ಳಿ-ಮಾವು ಮಲ್ಲಿಗೆಯ ಒಕ್ಕೂಟ ಒಮ್ಮೆಯಸ್ಸನ್ನು ಕಂಡು ಎಂಥಾ ಎರಕದ ಗಂಡ ಹೆಂಡಿರೂ ನಾಚಬೇಕು. ಅವುಗಳ ಕಂಪಿನಲ್ಲಿ ಒಂದೋ ಎರಡೋ ಗುಡಿಸಲುಗಳು. ಈಚೇಗೆ ಹಲವರು ಶಾಖ ಹೋಟೆಲಿನ ಹಣದಿಂದ ಹಲವು ಅರಮನೆಗಳನ್ನು ಆ ಗುಡಿಸಲುಗಳ ನಡುವೆ ಎಬ್ಬಿಸಿ ಅಭಾಸ ಮಾಡಿದ್ದಾರೆ; ಉಳಿದವರೂ ಆ ಮಾರ್ಗವನ್ನೇ ಹಿಡಿದು ಹಳ್ಳಿಗಳ ಸೌಂದರ್ಯವನ್ನು ಕೆಡಿಸಲು ಯತ್ನಿಸುತ್ತಿದ್ದಾರೆ. ಇಲ್ಲಿಯ ಮರಗಳ ತೋಪಿನಿಂದಲೇ ಹೊರಟು ಹಸುರು ಬಯಲಿನಲ್ಲಿ ಸುತ್ತಾಡಿ ಸುಳಿದಾಡಿ ಪುನಃ ತೋಪನ್ನೇ ಸೇರುವ ಎಳಗಾಳಿಯ ಹುಡುಗಾಟ—ಇವೆಲ್ಲಾ ಅಂದಿನ ಹಳ್ಳಿಗಳ ಸುಂದರ ದೃಶ್ಯಗಳು. ಒಮ್ಮೊಮ್ಮೆ ಶರತ್ಕಾಲದ ಚಂದ್ರನು ಹಳ್ಳಿಗಳಲ್ಲಿ ಪ್ರಸನ್ನನಾಗುವುದುಂಟು. ಆಗ ಅಚ್ಚಬೆಳ್ದಿಂಗಳಲ್ಲಿ ಕಮಲತೆಗಳು ಮಿಂದು ಶುಭ್ರಜ್ಯೋತ್ಸ್ನೆಯನ್ನುಟ್ಟು ಕಿಲಕಿಲನೆ ನಗುತ್ತಿರುವವು. ತಿಂಗಳಿಗೆ ಆಗ ಬಾಗಾಡುವ ವೇಳೆ. ಅದು ಆಗ ಪ್ರತಿಯೊಂದು ಗಿಡಬಳ್ಳಿಯನ್ನೂ ಕ್ರೀಡಾರಂಗಕ್ಕೆ ಆಹ್ವಾನ ಮಾಡುವ ಬೆಡಗು ಇಂದೂ ಆ ಹಳ್ಳಿಗಳಿಗೆ ಮಾತ್ರ ಮೀಸಲಾದುದು. ಇಂಥಾ ಸುಂದರ ಹಳ್ಳಿಗಳ ಸೊಬಗಿನ ನಡುವೆಯೂ ಸಂಯಮಿಗಳಾಗಿ ಬಾಳ ಹೊಳೆಯಲ್ಲಿ ಈಜುವ ನಮ್ಮ ಹಳ್ಳಿಗರೆಲ್ಲಾ ಇಂದು ಏಕೆ ಹೀನಗಿದ್ದಾರೆ?

ಅಂದಿನ ಹಳ್ಳಿಗಳ ಜೀವಾಳವೆಂದರೆ ಗೋಸಂರಕ್ಷಣೆ, ಕೃಷಿಯಲ್ಲಿ ಸತ್ಯಯುತ ಪಕ್ಕ ವಿಶ್ವಪರಿವರ್ತನೆ, ಗುಡಿಕೈಗಾರಿಕೆಗಳಲ್ಲಿ ಆಸಕ್ತಿ, ಸಂತೋಷ ಕೂಟಗಳ ರಸಾಸ್ವಾದನೆ. ಹಳ್ಳಿಗರು ಇವನ್ನೆಲ್ಲಾ ಧರ್ಮಾಧಿಕಾರಿಗಳಿಂದ ಪೋಷಿಸುತ್ತಾ, ತುಸು ವಿದ್ಯೆಯಿಂದಾದರೂ ಸಾಹಿತ್ಯದ ಸವಿಯನ್ನು ಸವಿಯಲು ಸಮರ್ಥರಾಗಿದ್ದರು. ಇವುಗಳಲ್ಲಿ ಗೋಸಂರಕ್ಷಣೆಗೆ ನಮ್ಮ ಹಳ್ಳಿಗಳಲ್ಲಿ ತುಂಬಾ ಕಟ್ಟಳೆಗಳು ಇಂದಿವೆ. ಗೋವುಗಳಿಗೆ ವರ್ಷದಲ್ಲಿ ಜನವರಿ ೧೫ರಿಂದ ಮೇ ೧೫ರ ವರೆಗೆ ನಾಲ್ಕು ತಿಂಗಳು ಸ್ವಾತಂತ್ರ್ಯ ಕೊಡುವ ಪದ್ಧತಿ ಆ ದಿನದವರದ್ದಾಗಿತ್ತು. ಆಗಲೂ ಈ ತಿಂಗಳಲ್ಲಿ ಕೃಷಿ ನಡೆಯುತ್ತಿದ್ದರೂ, ಪಶುಗಳ ಹಿತಕರಕ್ಕೆ ದೃಷ್ಟಿಯಿಟ್ಟು ತಮ್ಮ ಹೊಲಗಳಿಗೆ ಬಿದಿರು ಮುಳ್ಳಿನಿಂದ ದರೆ ಅಥವಾ ಬೇಲಿ ಎಬ್ಬಿಸುತ್ತಿದ್ದರು. ಈಗ ಕೆಲವು ವರ್ಷಗಳಿಂದ ಅವುಗಳ ಸ್ವಾತಂತ್ರ್ಯ ರದ್ದಾಗಿದೆ. ಅವು ಸ್ವಾತಂತ್ರ್ಯವಿದ್ದ ಕಾಲದಲ್ಲಿ ತಮ್ಮ ಗೆಳೆಯ ಗೆಳತಿಯರೊಂದಿಗೆ ಸ್ವತಂತ್ರವಾಗಿ ವಿಹರಿಸುತ್ತಿದ್ದವು, ಇದರಿಂದ ಜಗಬಂದೆ, ಗೊಡ್ಡು, ಬಡುಕಟ್ಟಗಳೇ ಅವುಗಳ ಪಾಲಿಗಿರಲಿಲ್ಲ. ಅದಕ್ಕೆ ಸ್ವಾತಂತ್ರ್ಯವೇ ಸ್ವರ್ಗಸುಖವಾಗಿ ಈಗಿನಂತೆ ಆವು ಸಿದ್ದ. ಸೊಲ್ಲಿಗೆ ಮಹಾಲಕ್ಷ್ಮಿಗಳಾಗಿದ್ದ ಪುಷ್ಕಲ ಹಾಲು ಕರೆಯುವ ಹಸುಗಳಾಗಿದ್ದವು. ಈಗ ಕೊಟ್ಟಿಗೆಯಲ್ಲಿ ಕಟ್ಟಿ ಹೊಟ್ಟೆ ಹೊರೆಯಲು ಎಲ್ಲರೂ ಸಮರ್ಥರಿಲ್ಲ; ಬೆಲೆ ಕೊಟ್ಟು ತಂದ ಆಹಾರ ವಸ್ತುಗಳಿಂದ ಅವುಗಳನ್ನು ಸಾಕುವುದು ಅಸಾಧ್ಯವಾಗಿದೆ. ಈ ನಿರ್ಬಂಧದಿಂದ ಅವುಗಳ ಪೀಳಿಗೆಯೂ ಕ್ಷೀಣಿಸುತ್ತ ಬರುತ್ತಿದೆ. ಮಳೆಗಾಲದಲ್ಲಿ ಅವುಗಳ ಮೇವಿಗಾಗಿ ಪ್ರತ್ಯೇಕಿಸಿಟ್ಟ ಮೈದಾನಗಳಿರುತ್ತಿದ್ದವು. ಇವನ್ನೇ ಗೋಚರಾವು ಭೂಮಿಯೆನ್ನುತ್ತಾರೆ. ಈಗ ಗೋಚರಾವು ಭೂಮಿಯಲ್ಲಿ ವಿಶೇಷ ಕೃಷಿ ಇಲ್ಲದಿದ್ದರೂ ಅಲ್ಲಲ್ಲಿಯ ಶ್ರೀಮಂತರು ಅವನ್ನೆಲ್ಲಾ ಸ್ವಾಧೀನಪಡಿಸಿಕೊಂಡು, ಅವಕ್ಕೆ ಸುತ್ತಲೂ ದರೆ ಎತ್ತಿ ಒಳಗೆ ನಾಲ್ಕಾರು ಗಾಳಿ ಸಸಿ, ಒಂದೆರಡು ಬಾಳೆ ಗಿಡ ಹಾಕಿ ಸುಮ್ಮನಿದ್ದಾರೆ. ಕೇಳಿದರೆ ಹೊಸತಾದ ಕೃಷಿ ಯೋಜನೆಯನ್ನು ಸರಕಾರದ ಮುಂದಿಡುತ್ತಾರೆ. ಈ ಜನರ ಕಾಗದ ಲೆಕ್ಕಗಳಿಂದ ಅಧಿಕಾರಿ ವರ್ಗವು ಬೆಳೆ ಬೆಳೆಯುವ ಭೂಮಿ ಹೆಚ್ಚಿದೆ ಎಂದು ಘೋಷಿಸುತ್ತಿದೆ. ಕೃಷಿ ಕಾರ್ಯಕ್ಕಿಂತಲೂ ಹಳ್ಳಿಗಳಲ್ಲಿ ಗೋಸಂರಕ್ಷಣೆಯು ಕಡಿಮೆ ಯೋಗ್ಯತೆಯದೆ?

ಅಂದು ಎಷ್ಟೋ ಮನೆಗಳ ಮುತ್ತೈದೆಯರು ಗೋಪೂಜೆಯನ್ನು ಮುಖ್ಯ ವ್ರತವಾಗಿಟ್ಟುಕೊಂಡು ಅವುಗಳ ಹೊಟ್ಟೆ ತುಂಬುವ ವಿನಹ ಊಟ ಮಾಡುತ್ತಿರಲಿಲ್ಲ. ಅದನ್ನು ಇಂದಿನ ಸ್ತ್ರೀಯರು ಅಂಧಶ್ರದ್ಧೆಯೆಂದು ವ್ಯಾಖ್ಯಾನ ಮಾಡುತ್ತಾರೆ. ಆಗ ಈಗಿನಂತೆ ಗುಡಿಗುಡಿಗೂ ಎಮ್ಮೆಗಳ ಬಳಗ ಬಂದಿರಲಿಲ್ಲ. ಆ ಜನರಿಗೆ ಗೋಮಾತೆಯೇ ಪ್ರಧಾನ ದೇವತೆಯೆನಿಸಿತ್ತು. ಇದರಿಂದ ಆಗ ನಿತ್ಯದ ಊಟಕ್ಕೆ ಬೇಕಾದ ಹಾಲು ಕಾಸ್ಪಗಳಿಗೆ ಮನೆ ಮನೆಗೆ ಓಡುವ ಪ್ರಸಂಗವಿರಲಿಲ್ಲ. ಆಗ ಹಾಲು ಉಂಡುಟ್ಟು ಹೆಟ್ಟನ ಪಂಚೆಗೆಯನ್ನು ಅರೆ ಪಟ್ಟೆಗಳಲ್ಲಿಟ್ಟುಕೊಂಡು ಬಿಸಿಲಿನಿಂದ ಪ

ರಕ್ಷಣೆಗೂ ಉಳಿತಾಯ ವ್ಯವಸ್ಥೆಗೂ
ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್
ಇನ್ಶೂರೆನ್ಸ್ ಕೊ. ಲಿಮಿಟೆಡ್.
ಸ್ಥಾಪನೆ: 1934. ಪ್ರಧಾನ ಕಚೇರಿ: ಮದ್ರಾಸು.

66½ ಲಕ್ಷಕ್ಕೂ ಮಿಕ್ಕಿದ ಹೊಸ ವ್ಯವಹಾರ, **15** ಲಕ್ಷಕ್ಕೂ ಮಿಕ್ಕಿದ ಪ್ರೀಮಿಯಮ್ ಉತ್ಪತ್ತಿ, **45½** ಲಕ್ಷಕ್ಕೂ ಮಿಕ್ಕಿದ ಜೀವವಿಮಾ ನಿಧಿ, **60½** ಲಕ್ಷಕ್ಕೂ ಮಿಕ್ಕಿದ ಮೂಲಗಳು. ಸಾಧಾರಣ **3** ಕೋಟಿಯಷ್ಟು ಊರ್ಜಿತದಲ್ಲಿರುವ ವಹಿವಾಟು.

ಪ್ರಗತಿಪರವಾದ ಈ ಕಂಪೆನಿಯಲ್ಲಿ ಒಂದು ಪೊಲಿಸಿ ಇರುವುದು ಉತ್ತಮ ರೀತಿಯ ರಕ್ಷಣೆಯೋ ಇದರ ಏಜನ್ಸಿ ಇರುವುದು ಚಲೋ ವ್ಯವಹಾರ ಸಾಧನ.

ಉತ್ಸಾಹಿ, ಜನಾದರಣೀಯ, ಸಮರ್ಥ ಸ್ತ್ರೀ ಪುರುಷರಿಂದ ಕಂಪೆನಿ ಪ್ರಾತಿನಿಧ್ಯದ ಬಗ್ಗೆ ಅರ್ಜಿಗಳು ಸ್ವಾಗತಾರ್ಹವು. ದಯಮಾಡಿ ಬರೆಯಿರಿ.—

ಜಿ. ಆರ್ ಮಾಲ್ಯ, ಬ್ರಾಂಚ್ ಮೆನೇಜರ್,
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು [ದ. ಕ.]

ವೆಲ್ಕಿನ್ಸ್ ಟೂತ್ ಪೇಸ್ಟ
ಮಿಂಚುವ ನಗುವಿಗೆ, ಮತ್ತು
ಒಸಡಿನ ಆರೋಗ್ಯಕ್ಕೆ!
ಯು ಎಸ್ ಎ ರಾಜ್ಯದ
ಪ್ರಸಿದ್ಧ ಡಾಕ್ಟರರೊಬ್ಬರ ತಯಾರಿಕೆ.
Welkin Laboratory (N)
Calcutta 33.
ಉದಾರ ಶರ್ತಗಳ ಮೇಲೆ ಸ್ಟಾಕಿಸ್ಟರು ಬೇಕಾಗಿದ್ದಾರೆ

ಪ್ರಕಟಣೆ

ಪಡುಬಿದ್ರಿ ಕಂಬಳ

ವರ್ಷಂಪ್ರತಿ ಜರಗುತ್ತಿದ್ದ ಉಡುಪಿ ತಾಲೂಕು ಪಡುಬಿದ್ರಿ ಕಂಬಳವನ್ನು ಈ ವರುಷ ಇದೇ ಬರುವ ತಾರೀಕು 5-12-1952ನೇ ಶುಕ್ರವಾರ ದಿವಸ ಜರಗಿಸಬೇಕಾಗಿಯೂ ಹೆಚ್ಚಿನ ಜತೆ ಓಟದ ಕೋಣಗಳನ್ನು ಬರಮಾಡಿಸಬೇಕಾಗಿಯೂ ನಿಶ್ಚೈಸಿದ್ದೇವೆ. ಮಹಾಜನರ ಉತ್ತೇಜನದ ಸಲುವಾಗಿ ಏಳುಕೋಲು ನಿಶಾನಿಗೆ ನೀರುಹಾರಿಸಿ ಹಲಗೆಯಲ್ಲಿ ಪ್ರಥಮ ಬಂದ ಕೋಣಗಳಿಗೂ, ಹಗ್ಗದಲ್ಲಿ ಪ್ರಥಮ ಬಂದು ಜಯಶೀಲವಾದ ಕೋಣಗಳಿಗೂ ಎರಡು ಸುವರ್ಣ ಪದಕಗಳನ್ನು ಬಹುಮಾನ ಕೊಡುವುದಾಗಿಯೂ ಆಲೋಚಿಸಿದ್ದೇವೆ. ಆದ ಪ್ರಯುಕ್ತ ಮಹಾಶಯರೆಲ್ಲರೂ ತಮ್ಮ ಯಾ ಬಂಧುಮಿತ್ರರ ಓಟದ ಕೋಣಗಳ ಸಮೇತ ದಯಮಾಡಿ ಬಂದು ನಮ್ಮ ಕಂಬಳವನ್ನು ಯಶಸ್ವಿಗೊಳಿಸಬೇಕಾಗಿ ಅಪೇಕ್ಷಿಸುವ,

ಪಡುಬಿದ್ರೆ, 20-11—52. } ತಮ್ಮ ಆಗಮನಾಭಿಲಾಷಿ,
ಬೋಳ ಮಂಜಯ್ಯ ಶೆಟ್ಟಿ.

ಜನ ಪ್ರಾಂತ್ಯಗಳಿಗೆ ಕುಡಿಯಲು ಕೊಡುತ್ತಿದ್ದರು. ವಿಶೇಷದ ದಿನಗಳಲ್ಲಿ ಹಾಲು ತುಪ್ಪದ ಹರಿಯು ಒಬ್ಬರಿಂದೊಬ್ಬರಿಗೆ ಕಳುಹಿಸಲ್ಪಡುತಿತ್ತು. ಆಗ ಹಾಲಿಗೆ ನೀರನ್ನು ಬೆರೆಸುವವರೇ ಇಲ್ಲವೆನ್ನಲಾಗುವುದಿಲ್ಲ. ಆದರೆ ಈಗಿನಂತೆ ನೀರಿಗೆ ಹಾಲನ್ನು ಸಂಮಿಶ್ರವಾಗಿ ಸುರಿಯುತ್ತಿರಲಿಲ್ಲ. ಇಂದು ನಮ್ಮಲ್ಲಿ ಗೋವಿನ ಹನಿಯಷ್ಟೂ ಸಿಕ್ಕದ ಹಳ್ಳಿಗಳು ಎಷ್ಟು ಬೇಕು?

ಕೃಷಿಕಾರ್ಯದಲ್ಲಿ ಆಗಿನಂತೆ ಸರ್ವಜನರೂ ಶ್ರಮವಹಿಸಿ ಕೆಲಸ ಮಾಡಲಾರರು. ಅಕ್ಕಿಯ ಧಾರಣೆ ಏರಿದ ಮೇಲೆ ಕೆಲವರಲ್ಲಿ ಅಧಿಕ ಬೆಳೆ ಬೆಳೆಯುವ ಆತುರವಿದ್ದಿದೆ. ಎಲ್ಲಾ ಧಾನ್ಯಗಳ ಧಾರಣೆಯು ಮಿತಿಗೆ ಬಂದ ಮೇಲೂ ಈ ಉತ್ಸಾಹವು ಕಾರ್ಯರೂಪಕ್ಕೆ ಬಂದರೆ ದೇಶಕ್ಕೆ ಎಷ್ಟೋ ಸುಭಿಕ್ಷವಾಗುವುದು.

ಅಂದು ಈಗಿನಂತೆ ಶಾಲೆಗಳು ಹಳ್ಳಿಗಳಲ್ಲಿ ಅಲ್ಲ, ಗ್ರಾಮಗಳಿಗೊಂದು ಶಾಲೆ ಇತ್ತು. ಅಲ್ಲಿದ್ದ ಎಲ್ಲಾ ವಿದ್ಯಾರ್ಥಿಗಳೂ ಕಲಿಯುವುದಕ್ಕಾಗಿಯೇ ಬಂದವರು. ಈಗಿನಂತೆ ತಂದೆತಾಯಿಗಳ ಒತ್ತಾಯದಿಂದ ಶಾಲೆಗೆ ಬಂದವರಲ್ಲ. ಅಂದಿನ ಶಾಲೆಗಳಲ್ಲಿ ಶಿಸ್ತು ಇತ್ತು ಮತ್ತು ಶಿಕ್ಷೆಯೂ ಸಾಕಷ್ಟು ಇತ್ತು. ಶಿಕ್ಷೆಯೊಂದು ಅಂದಿನ ಉಪಾಧ್ಯಾಯರ [illegible] ಒಂದು ದೌರ್ಬಲ್ಯ. ಈಗ ಶಿಸ್ತು ಇಲ್ಲ; ಶಿಕ್ಷೆಯೂ ಇಲ್ಲ. ವಿದ್ಯಾರ್ಥಿಗಳಿಗೆಲ್ಲ ಅಂದು ಉಪಾಧ್ಯಾಯರಲ್ಲಿ ತುಂಬಾ ಗೌರವ ಇತ್ತು, ಭಕ್ತಿಯಿತ್ತು. ಇದರಿಂದಲೇ ಅವರಿಂದ ಅಭ್ಯಾಸ ಮಾಡಿದ ವಿದ್ಯೆಗಳೆಲ್ಲಾ ಅವರಿಗೆ ಸಫಲವಾದವು. ಆಗಿನ ಉಪಾಧ್ಯಾಯರಿಗೆ ಮುತ್ತಿನ ಫಲದಂತಹ ಬರಹವಿತ್ತು; ವಿದ್ಯಾರ್ಥಿಗಳೂ ಉಪಾಧ್ಯಾಯರಂತೆಯೇ ಬರೆಯುತ್ತಿದ್ದರು. ನೀತಿಗಾಗಿ ಅಂದು ಪ್ರತ್ಯೇಕ ಅವಧಿಯಿಲ್ಲ. ಗುರುವನ್ನು ನೋಡಿ ವಿದ್ಯಾರ್ಥಿ ತನ್ನ ನಡತೆ ತಿದ್ದಿಕೊಳ್ಳುತ್ತಿದ್ದನು. ಈ ಶಾಲೆಗಳಲ್ಲಾ ನೀತಿ ಪಾಠವಿದೆ; ಆದರೆ ಅದನ್ನು ಕಲಿಸುವ ಉತ್ಸಾಹ, ಧೈರ್ಯ ಹಲವರಿಗಿಲ್ಲ. ಅಂದಿನ ನಾಲ್ಕೈದು ವರ್ಷಗಳ ಶಾಲಾಭ್ಯಾಸವು ಈಗ ಹತ್ತು ವರ್ಷ ಕಳೆದರೂ ಆಗುವುದಿಲ್ಲವೆಂದು ಜನರು ಗೊಣಗುತ್ತಾರೆ. ಆಗಿನ ಅಲ್ಪ ಸಾಹಿತ್ಯ ಜ್ಞಾನದಿಂದ ಪ್ರಾಚೀನ ಸಾಹಿತ್ಯಗಳಲ್ಲಿ ಸುಲಭವಾಗಿ ಅಂದಿನವರು ಸಂಚರಿಸಿದಂತೆ ಈಗ ಹೈಸ್ಕೂಲು ವಿದ್ಯಾಭ್ಯಾಸ ಮುಗಿಸಿದ ತರುಣನೂ ಸುಲಭ ಸಾಹಿತ್ಯ ಗ್ರಂಥಗಳಲ್ಲೂ ಸುಖದಿಂದ ಸಂಚರಿಸಲಾರ.

ಅಂದಿನವರ ಸಂಪತ್ತು ಸಂಪೂರ್ಣ ಸ್ವಾರ್ಥಕ್ಕಾಗಿರಲಿಲ್ಲ ಎಷ್ಟೋ ಶ್ರೀಮಂತರು ಸಮುದಾಯಗಳನ್ನು ನಿರ್ಮಿಸುವುದು, ಕೆರೆ ಬಾವಿಗಳನ್ನು ತೋಡಿಸುವುದು, ಛತ್ರ ಅರವಟ್ಟಿಗೆಗಳನ್ನು ನಿರ್ಮಿಸುವುದು — ಇವುಗಳಲ್ಲಿ ತಮ್ಮ ಸಂಪತ್ತನ್ನು ವಿನಿಯೋಗಿಸುತ್ತಿದ್ದರು. ಇವೆಲ್ಲಾ ಅವರ ವಿಶಾಲ ಹೃದಯಕ್ಕೆ ದೃಷ್ಟಾಂತ!

ಸಹಕಾರ ಪರೋಪಕಾರಗಳು ಅಂದಿನ ಹಳ್ಳಿಗರಲ್ಲಿದ್ದ ಒಂದು ಸಾಮಾನ್ಯ ಗುಣ. ಆಗ ಹಳ್ಳಿಗೊಬ್ಬ ಗುರಿಕಾರನಿರುತ್ತಿದ್ದ. ಅವನು ತನ್ನ ಊರಿನವರೆಲ್ಲಾ ಗುರು ಮದುವೆ ಮನೆಗಳಿಗೆ ತಾನೇ ಮುಂದಾಗಿ ನಿಂತು ಜಪ್ಪಿ ಕಾರ್ಯಗಳನ್ನು ಊರವರ ಸಹಕಾರದಿಂದ ನಿಷ್ಕಟಿಯಾಗಿ ನೆರವೇರಿಸುತ್ತಿದ್ದ. ಆ ಕಾಲದ ಭೋಜನ ಸಮಾರಂಭದಲ್ಲಿ ಎಷ್ಟೋ ಮಂದಿ ಉತ್ಸಾಹಿಗಳು ಸ್ವಯಂ ಸೇವಕರಾಗಿ ನಿಂತು ಬಡಿಸುವುದು ಮೊದಲಾದ ಕೆಲಸಗಳನ್ನು ತಾವೇ ಸಂತೋಷದಿಂದ ವಹಿಸುತ್ತಿದ್ದರು. ಮದುವೆ ದಿನಗಳಲ್ಲಿ ವಾರ್ತೆ ಹರಡಿದೊಡನೆ ಆಮಂತ್ರಣ ವಿಲ್ಲದೆ ಊರ ಮುದುಕರು ಅಲ್ಲಿಗೆ ಬಂದು ಮುಂದಿನ ಕೆಲಸಗಳನ್ನೆಲ್ಲಾ ಲೀಲಾಜಾಲವಾಗಿ ನೆರವೇರಿಸುತ್ತಿದ್ದರು. ಆಗ ನ್ಯಾಯದ ಗುರಿಕಾರನಿಂದಲೇ ಕಲಹಗಳೆಲ್ಲಾ ತೀರ್ಮಾನವಾಗುತ್ತಿದ್ದವು ಈಗ ಅಮುಗ [illegible]. ಒಂದು [illegible] ಕೋರ್ಟಿಂದ ಆಚೆಗೆ ತೀರಿಸಬೇಕಾದರೆ ಈಗ [illegible] ತೆರಬೇಕು. ಹಳ್ಳಿಗಳಲ್ಲಿ ಮಾಸೆ [illegible] ಇರುವವರೆಲ್ಲಾ ಗುರಿಕಾರರೇ. ಯಾರ ಮಾತನ್ನು ಯಾರೂ ಕೇಳುವಂತಿಲ್ಲ. ಕಲಹಗಳೆಲ್ಲಾ ಕೋರ್ಟಿನಲ್ಲೇ ತೀರ್ಮಾನವಾಗಬೇಕು. ಮದುವೆ ಮಾಡಿದವನೇ ಬಲ್ಲ ಮನೆ ಕಟ್ಟಿದವನೇ ಬಲ್ಲ ಎಂಬುದು ಈಗ ಅಕ್ಷರಶಃ ಸತ್ಯವಾಗಿದೆ. ಆಗ ವರದಕ್ಷಿಣೆಯೆಂಬುದು ಇರಲಿಲ್ಲ. ವರನ ಕಡೆಯವರೇ ವಧುವಿಗಾಗಿ ಅಲೆದಾಡುತ್ತಿದ್ದರು. ಈಗ ನಾಲ್ಕು ಹೆಣ್ಣು ಮಕ್ಕಳ ತಂದೆಯ ಗೋಳು ಹೇಳತೀರದು. ಕನ್ಯೆಯರೆಲ್ಲಾ ಮುಂದೆ ವಿವಾಹವಾಗುವುದಿಲ್ಲವೆಂದು ಪ್ರತಿಜ್ಞೆ ಮಾಡಿದರೆ ಮುಂದು [illegible] ಸ್ವಲ್ಪ ಬುದ್ಧಿ ಬಂದೀತು. ಎಲ್ಲವರೂ ಎಲ್ಲ ವಿಧದಿಂದಲೂ ಬಡವನ ಮೇಲೆ ಮುಂದು ಬಿದ್ದಿದ್ದಾರೆ.

ಅಂದಿನ ಹಳ್ಳಿಗರ ವೆಚ್ಚವೆಲ್ಲಾ ಮಿತವಾಗಿತ್ತು. ಆಗಿನ ವಿಶೇಷದ ವಸ್ತ್ರವೆಂದರೆ ಹತ್ತು ಮೊಳದ; ಈಗ ಐದು ರೂಪಾಯಿಯಿಂದ ಹತ್ತು ರೂಪಾಯಿಯ ವರೆಗಿದೆ. ಆಗ ಹಾಲಿನ ಸಿದ್ದೆಗೆ ಒಂದೆ ದುಡ್ಡು; ತುಪ್ಪದ ಸಿದ್ದೆಗೆ ನಾಲ್ಕೈದಾಣೆ; (ಈಗ ಹಾಲಿಗೆ ಎರಡು ಆಣೆ, ತುಪ್ಪದ ಸಿದ್ದೆಗೆ ಒಂದೂವರೆ ರೂ. ಏರಿದೆ) ಅಕ್ಕಿ ಮುಡಿಗೆ ಮೂರು ರೂಪಾಯಿ (ಈಗ ರೂಪಾಯಿ ೩೦—೩೫ರ ವರೆಗೆ ಬಂದಿದೆ) ಇದ್ದಿತ್ತು. ಇದ್ದವನು ಆಗ ಎಂಥಾ ಸಂಸಾರವನ್ನೂ ದಿನಾಗ ನಿಭಾಯಿಸುತ್ತಿದ್ದನು. ಈಗ ಸಾವಿರ ರೂಪಾಯಿ ಇದ್ದರೂ ಸಾಧಾರಣ ಜೀವನವಾಗದು! ಹೀಗಿರುವಾಗ ನಮ್ಮ ರೂಪಾಯಿಗಳ [illegible] ಸಂಬಳದ ದೇಶದ ಉದ್ಯೋಗಸ್ಥರು ಉಪಾಧ್ಯಾಯರು ಬದುಕಿ ಎಷ್ಟೇ ಕಷ್ಟವಾಗಿ ತೋರುವುದು. ಆದರೂ ಬದುಕಿರುವ ಶಿಕ್ಷಕರಲ್ಲಿದ್ದ ಅವರ ಉತ್ಸಾಹಗಳೆಲ್ಲಾ ಎಂದೋ ಮಣ್ಣುಗೂಡಿ ಹೋಗಿದೆ.

ಆಗಿನ ಜನರು ಸಾಮಾನ್ಯ ವೈಲುಗಳ ಸ್ವಾದದ ಸುಲಭದಲ್ಲೇ ನಡೆಯುತ್ತಿದ್ದರು, ವಿಶದದ ಬೆಳೆದ ಪ್ರಕಗಳನ್ನಾ ಬಳಸಿಯೂ ಮಾಥೆ ವೃದ್ಧರಾಗಿದ್ದರು ಗೃಹಿಣಿಯರ ಗೃಹಕೃತ್ಯ ಕನ್ನೆಲ್ಲಾ ಸುಖವಾಗಿ ತಾವೇ ನಿರ್ವಹಿಸಿ ಸಾಗುತ್ತಿದ್ದರು. ಈ ಕುರಿತು ಇಂದಿನ ವಿಷಯಗಳನ್ನು ಹೇಳಬೇಕಾಗಿಲ್ಲ ಆಗ ಸ್ನಾನ ಕ್ಕೆ ಅದು ಆನ್ನ ಧರ್ಮವಾಗಿತ್ತು. ಈಗ ಜನರಿಗೆ ಏನಿದ್ದರೂ ಸಾಲದು; ಎಷ್ಟು ಬಂದರೂ ಸಾಲದು; ಎಲ್ಲರೂ ಬಾಯಾರಿ ಉಪ್ಪು ನೀರು ಕುಡಿದ ಪರೇ!

ಅಂದಿನವರಿಗೆ ಊರಿಬ್ಬಾನದ ಒಟ್ಟಿಗೆ ಕಾಣುತ್ತಿದ್ದವು. ಅದರ ಪಟ್ಟಣದ [illegible] ಬರಿಕೆ ನಗುತ್ತಿದ್ದರು. ಆಗ ಹಳ್ಳಿಗರಿಗೆ ಬೇಕಾದ ಎಲ್ಲಾ ವಸ್ತುಗಳನ್ನು ಹಳ್ಳಿಯಲ್ಲೇ ತಯಾರಿಸಿಕೊಳ್ಳಲು ಹವಣಿಸಿ ಅದರಲ್ಲಿ ಕೃತಾರ್ಥರಾಗುತ್ತಿದ್ದರು. ಆಗ ಹಳ್ಳಿಗರ ಊರಿನ ಉತ್ಸವಗಳು ಬೇರೆ. ಅಂದಿನ ವಿನೋದಕೂಟಗಳೆಂದರೆ ಯಕ್ಷಗಾನ, ತಾಳಮದ್ದಳೆ, ಹರಿಕಥೆ, ಪುರಾಣವಾಚನ ಇವು ಇಂದಿ [illegible] ಕೇಳಿದರೂ ಜಾಣ ಮತ್ತು ಸಂಭ್ರಮವಿತ್ತು. ಅಂದು ಪುರಾ ಣ ಮುಣ್ಣ ಮುಗಿದರೇ ಹಳ್ಳಿಗರ ಮಾರ್ಗದರ್ಶಕರಾಗಿದ್ದರು; ಈಗಿನ ತರುಣರಿಗೆ ಬೀದಿಯ ನ್ನು ಕಟ್ಟೆ ಪುರಾಣವನೇ ಹೊಗಳುವ ಪಟ್ಟಣದ ಬಡಕಲು ಚಿಂಗಿ ತರುಣನು ಆದರ್ಶನಾಗಿದ್ದಾನೆ!

ಇಂದಿನ ಹಳ್ಳಿಗರ ಕುರಿತು ಎಲ್ಲೆಲ್ಲೂ ಸಂಕ್ಷೇಪವಾಗಿ ಹೇಳಿದಂತಾಗಿದೆ. ಈಗಿನವರು ತಮ್ಮ ನಾಗರಿಕತೆಯನ್ನು ಯಾರಾದರೂ ಕೊಂಡುಕೊಳ್ಳಲು ಸಿದ್ಧರಿದ್ದರೆ ಕೊಡಿಸಿ ಇಡುತ್ತಾರೆ. ಹೊಟೆಲು ಯಂತ್ರ ಕೊಡಲಿವಾದ ಗೋಪುಗಳಿಗೆ ಸಿಬ್ಬಂದಿ ಪೆಟ್ಟು ಬಿದ್ದಾಗುತ್ತವೆ, ಇದನ್ನು ಕಟುಕರು ಸದುಪಯೋಗಪಡಿಸಿಕೊಳ್ಳಲು ಹಳ್ಳಿಗಳಲ್ಲಿ ಅಲ್ಲಲ್ಲಿ ಗುಪ್ತವಾಗಿ ಕಟಿಪ್ರತಿ ಪಶುಗಳ ಹತ್ಯಾಕಾರ್ಯವನ್ನು ಕಾಣಬಾಗಿ ನಡೆಸುತ್ತಿದ್ದಾರೆ! ಇವರಿಗೆ ಹಾಡದ ಹಾ. ಪಟ್ಟು ಹಿಡಿದ ಹಿಂದುಗಳೇ ಪಾಲುದಾರರು! ಎಷ್ಟೋ ಮಂದಿ ವೃದ್ಧ ಸಂನ್ಯಾಸಿ ಹಳ್ಳಿಗರೂ ಪಟ್ಟಣದ ನಾಗರಿಕತೆಯ ಜನರಿಂದಲ್ಲಿ ನಿಸ್ತೇಜರಾಗಿ ಅಸ್ತಿಪಂಜರವಾಗುತ್ತಿದ್ದಾರೆ. ಹಂಬಲಪುಗಳಿಗೊಡಿದಿಗೆ ಪಟ್ಟಿಕಾರ ಮಾಡಿದ ಅಂದಿನ ರೈತರ ಸಂಚಲನ ಕಾರ್ಯಕ್ಷೇತ್ರಕ್ಕೆ ಬದಲು ಈಗ ಪಟ್ಟಣವನ್ನು ಸೇರುತ್ತಿದ್ದಾರೆ.

ಹೀಗೆಯೇ ಹಳ್ಳಿಗಳು ಮುಂದುವರಿಯುತ್ತಾ ಇಡಿದರೆ ಭಾರತದ ದುರ್ದಶೆಯೂ ಮುಂದೆ ಸಾಗುವುದು. ಜನರೆಲ್ಲಾ ನೀಚಹಸ್ತ ಧನದ ಹಿಂದೆ ಸಾಗುತ್ತಾರೆ ಕೃಷಿಕಾರ್ಯ ಸಾಕಷ್ಟು ಮುಂದುವರಿಯಲಾರದು. ಮನೆಮನೆಗಳಲ್ಲಿ ಹಾಲಿನ ಹಬ್ಬಗಳನ್ನು ಮಾಡಿಕೊಳ್ಳಬೇಕಾಗುವುದು. ಉಪಾಧ್ಯಾಯರ ನಿರುತ್ಸಾಹದಿಂದ ಅಕ್ಷರವಿದ್ಯೆಯು ಪ್ರಸಾರವೂ ಭಾರದಿಂದ ಸಾಗದು ಆದಕ್ಕಾಗಿ ಇಂದಿನ ಸರಕಾರವು ನಮಗೆ ಅಲೋಕನ ಕೈಬಿಡದ ಪಾವು ಬಿಟ್ಟು ನಾವು ಮತ್ತು ಜೀವನಕ್ರಮವನ್ನು ಅಭಿಮಾನದ ಕಣ್ಣಿನಿಂದ ಹಳ್ಳಿಗರ ದೃಶ್ಯದಲ್ಲಿ ಹರಿಯುಲೆಂದು ಆಶಿಸಿದ ಆ ಆಶೆಯು ನಮ್ಮ ಹಳ್ಳಿಗರಲ್ಲಿ ಪ್ರೋಕ್ತ ಯಾಗುತ್ತದೆಯೇ ದೆನೆ?

ಯು ನಾ. ಉಡುಪ, ವಿದ್ವಾನ್, ಐಕಳಾ

ಸಂಸಾರ ಸುಖ

[ಕಳೆದ ಸಂಚಿಕೆಯಿಂದ ಮುಂದುವರಿದುದು]

ಕೊಂಡವನೇ ಇರುವನು. ಉಳಿದವರ ಮಟ್ಟಿಗೂ ಈ ಮಾತು ಅಷ್ಟೇ ಸತ್ಯವೆಂದು ಸಿದ್ಧವಾಗುತ್ತದೆ. "ನಾನು ಮಾಡಲಿ, ಈ ಕಷ್ಟ ಪ್ರಯಾಸ ವಿರುತ್ತಿದ್ದರೆ" ಎಂದು ಹೇಳಿ ನ್ಯಾಯವಾಗಿಯೇ ನಮ್ಮ ಹೆಗಲೇರಿ ನಿಂತ ಕರ್ತವ್ಯಗಳನ್ನು ಮೆಟ್ಟಿನೆ ಇಳಿಸಿ ಬಿಡಲು ಎದೆಗಾರಿಕೆಯ ಅಂತಃಕರಣವನ್ನು ಗಟ್ಟಿಗೊಳಿಸಲು ಹವಣಿಸುತ್ತೇವೆ. ಈ ಜವಾಬ್ದಾರಿ ಹೊರಲು ತಯಾರಿಗೇ ಈ ಪ್ರಶ್ನೆ [illegible] ವಿವೇಕ [illegible], ಈಗ ನನ್ನಿಂದಾಗದೆಂದು ಇಂದಿನ ಈ ಕೆಲಸವನ್ನು ಮಾಡಿದರೆ ಆಗು ಹುದೆಂಬ ಪ್ರಾಮಾಣಿಕ ಆಶೆ ನನ್ನಲ್ಲಿ ಇದೆಯೋ, ಹೇಗೆ? "ಸ್ವಂತವಾದ ಆಶೆ ಇರುವುದೇ ಹೌದಾದರೆ - ಆದು ನಿಶ್ಚಯವಾಗಿಯೂ ಕಷ್ಟ ಸುಖಗಳನ್ನು ಲೆಕ್ಕಿಸುವುದಿಲ್ಲ ನಮ್ಮಲ್ಲಿ ಆಶೆ ಇಲ್ಲವೆಂದಾದರೆ, ಅದನ್ನು ಉಂಟು ಮಾಡಿಸಲು ಪ್ರಯತ್ನ ನಡೆಯಲಿ ಸುಧಾರಣೆಯ ಈ ಪ್ರಯತ್ನಗಳಿಗೆ ಪ್ರಬಲ ಪ್ರತಿಭಟನೆಯೊದಗಿ ಬರುವುದು ಖಂಡಿತ. ನ್ಯೂನತೆಗಳು ತಾವು ಅಪರಿಹಾರ್ಯವೆಂದೂ ಇದ್ದೇ ತೀರಬೇಕೆಂದೂ ನಮ್ಮ ಮನಸ್ಸು ಮರಳಿ ಮರಳಿ ಒಪ್ಪಿಕೊಳ್ಳುವ ರೀತಿಯಲ್ಲಿ ನೋಗು ಹಾಕಿಕೊಂಡು, ಮರಳುಗೊಳಿಸಿಯಾವು ಆದರೆ ನಮ್ಮ ಪ್ರಯತ್ನ ದೃಢವಿದ್ದರೆ, ಮನಸ್ಸು ಸ್ಥಿರವಿದ್ದರೆ— ಈ ನ್ಯೂನತೆಗಳು ತನ್ನಿಂದ ತಾನೆ ಅಡಗಿಕೊಂಡು ನಿಶ್ಶೇಷವಾದುದನ್ನು ಕಂಡು, ಹರ್ಷಪಡುವಿರಿ.

ಕೆಲಸದಿಂದ ಮನೆಗೆ ಮರಳುವ ಮಧ್ಯಮ ವರ್ಗದ ಗಂಡಸರಲ್ಲಿ ಮನೆಯಲ್ಲಿರುವ ತನ್ನ ಹೆಂಡತಿ ಮಕ್ಕಳ ವರ್ತನೆಯ ಬಗೆ ವಿಶಿಷ್ಟವಾದ ಬರಬೇಕೆಂಬ ಕಲ್ಪನೆ ಇರುತ್ತದೆ "ದಿನವಿಡೀ ದುಡಿದ. ಬಂದ ಮೇಲೆ" ಒಂದಿಷ್ಟು ವಿಶ್ರಾಂತಿ ಬೇಕೆಂದು ಅವನು ಮನೆಯನ್ನು ಆಶ್ರಯಿಸುತ್ತಾನೆ ಕೆಲಸದಿಂದ ಬಸಿಗೊಂಡ ತಲೆಯು ಸ್ವಲ್ಪ ತಣ್ಣಗಾಗುವಂತೆ ನೋಡುವುದೇ ಅವನ ಮನೋಬಯಕೆ ಇಂಥವರಲ್ಲಿ ಮನೆಯವರಿಗೆ ಅಲ್ಪಸ್ವಲ್ಪ ತಪ್ಪಿದರೂ ಸಾಕು—ಅವನು ಸಿಡುಕುತ್ತಾನೆ ಆಫೀಸು ಬಿಟ್ಟು ಮನೆಗೆ ಬಂದವನಿಗೆ ಕಾಫಿ ಸಿಗುವುದು ಸ್ವಲ್ಪ ತಡವಾದರೂ— "ನನ್ನನ್ನು ಕೇಳುವವರೇ ಇಲ್ಲವೇ?" ಎಂದು ದೂರಿಡುತ್ತಾನೆ ಬೇಗ ಕಾಫಿ ತಂದಿಟ್ಟರೆ "ತಣಿದ ಕಾಫಿ ನನ್ನ ಅದೃಷ್ಟದಲ್ಲಿದೆಯೋ, ಏನೊ" ಎಂದು ಬೇಸರ ತೋರುತ್ತಾನೆ ಮಕ್ಕಳು ಸುತ್ತಮುತ್ತ ಕೂಡಿ ನಿಂತರೆ— "ಛೆ! ಇವರ ಗಲಾಟೆಗೊಂದು ಕೊನೆಯಿಲ್ಲವೆ?" ಎನ್ನುತ್ತಾನೆ. ಮಕ್ಕಳು ಹೆದರಿಕೆಯಿಂದ ದೂರ ನಿಂತರೆ "ನಾನು ಭೂತವೆಂದೇ ಇವುಗಳ ಎಣಿಕೆ ಇದ್ದೀತು" ಎಂದು ಅಸಂತುಷ್ಟನಾಗುತ್ತಾನೆ. ಒಟ್ಟಾರೆ, ಇದ್ದ ಸ್ಥಿತಿಯನ್ನು ಸ್ವೀಕರಿಸಿ ಅದಕ್ಕೆ ಒಗ್ಗಿಕೊಂಡು ನಡೆಯುವ ಬುದ್ಧಿಯನ್ನು ತೋರಿಸದೆ—ನ್ಯೂನತೆಗಳಿಗನೇ ಮಹತ್ವವನ್ನು ಕೊಟ್ಟು ವ್ಯರ್ಥಕ್ರೋಧವನ್ನು ತೋರ್ಪಡಿಸುತ್ತಾನೆ

ತಾತ್ವಿಕ ದೃಷ್ಟಿಯಿಂದ ನೋಡುವುದಾದರೆ, ನಮ್ಮ ದೃಷ್ಟಿಯನ್ನು ತೀರಾ ಸಂಕುಚಿತವಾಗಿಟ್ಟುಕೊಳ್ಳುವುದರ ಪರಿಣಾಮವೇ ಇದೆನ್ನಬಹುದು. ನಮ್ಮ ಮನಸ್ಸಿನ ಕೊರತೆಯ ಕುರಿತು ಆಲೋಚಿಸುತ್ತಾ, ಸುಖದ ಗಳಿಗೆಯನ್ನು ವ್ಯರ್ಥ ಕಳೆಯುತ್ತೇವೆ ಎಂದರೆ ಬದುಕುವ ಕಲೆ ನಮಗಿನ್ನೂ ಕರಗತವಾಗಿಲ್ಲ ಎಂದರ್ಥ. ಈ ನ್ಯೂನತೆಗಳ ನಡುವೆಯೇ— ಆನಂದಮಯವಾಗಬಲ್ಲ ಇತರ ಹತ್ತು-ಹಲವು ಮಾರ್ಗಗಳು ನಮಗಾಗಿ ತೆರೆದಿವೆ ಎಂಬುದನ್ನು ನಾವು ಮರೆಯಕೂಡದು. ಈ ಸುಖಪ್ರದ ಸಂಗತಿಗಳ ಸತ್ಯಾಂಶವನ್ನು ಹರಿಯಗೊಟ್ಟು, ನ್ಯೂನತೆಗಳಿಗೆ ಕೊಟ್ಟ ಮಹತ್ವವನ್ನು ಹಿಂಪಡೆದುಕೊಂಡರೆ ಆದರಿಂದ ಪುರುಷಾರ್ಥ ಸಾಧಿಸಿದಂತಾಯಿತು "ಈ ಕಷ್ಟವೊಂದಿಲ್ಲದಿರುತ್ತಿದ್ದರೆ" ಎಂದು ಯೋಚಿಸುವುದನ್ನು ಇನ್ನಾದರೂ ಬಿಟ್ಟುಕೊಟ್ಟು "ಈ ಕಷ್ಟವಿದ್ದರೂ ಕೂಡ..." ಎಂದು ಧೈರ್ಯದಿಂದ ಮುಂದಿನ ಹೆಜ್ಜೆ ಇಡೋಣ. ನಮ್ಮೆಲ್ಲರ ಬದುಕನ್ನು ಧನ್ಯವಾದ ರೀತಿಯಲ್ಲಿ ಮುನ್ನಡೆಸೋಣ.

— ಹಿಂತಕ್ಕಲ್ ||

ಮಾನವ ವಿಜಯದ ಹೆದ್ದಾರಿ!

ಆರ್ಥಿಕ ಮತ್ತು ಸಾಂಸ್ಕೃತಿಕ ಅನುಕೂಲತೆಯೇ ಇಂದಿನ ಮಾನವ ಜೀವನದ ವಿಜಯದ ಹೆದ್ದಾರಿ

ಜನತೆಗೆ ಈ ಅನುಕೂಲತೆಗಳನ್ನೊದಗಿಸಿ ಸಾಂಪತ್ತಿಕ ಅಭಿವೃದ್ಧಿ ಸಾಧಿಸುವುದೇ ಬ್ಯಾಂಕುಗಳ ಹೆಗ್ಗುರಿ

ದಿನೇ ದಿನೇ ಜನ ವಿಶ್ವಾಸಗಳಿಸಿ ಪ್ರಗತಿ ಹೊಂದುತ್ತಿರುವ

ದಿ ವಿಜಯ ಬ್ಯಾಂಕ್, ಲಿಮಿಟೆಡ್.

ಇದರೊಡನೆ ನಿಮ್ಮ ವ್ಯವಹಾರ ಬೆಳೆಸಿ ಅನುಕೂಲತೆ ಪಡೆದು ಜೀವನದಲ್ಲಿ ವಿಜಯ ಸಾಧಿಸಿ

ಗಿರಾಕಿಗಳ ಹಿತಸಾಧನೆ ಮತ್ತು ವಿಶ್ವಾಸ ಸಂಪಾದನೆಯು ವಿಜಯಾ ಬ್ಯಾಂಕಿನ ಅಮೂಲ್ಯ ಸೊತ್ತು

The Vijaya Bank Ltd,

Head Office: MANGALORE-3

Branches at:

Udipi, Kaup, Coondapur, Byndoor, Karkal, Brahmavar, City-Mangalore Kasaragod, Puttur, Kanhangad, Bombay & Mercara.

ವಾರದ ಒಳಿತು ಕೆಡುಕುಗಳು

27–11–52ರಿಂದ ತಾ. 4–12–52ರ ವರೆಗೆ

ಮೇಷ— ಈ ವರೆಗೂ ನಿಮಗನುಕೂಲನಾಗಿದ್ದ ಕರ್ಮಲಾಭಪತಿಯಾದ ಶನೈಶ್ಚರನಿಂದು ಪ್ರತಿಕೂಲನಾಗುವನು ಆದಕಾರಣ ನಿಮ್ಮ ಹೆಚ್ಚಿನ ಉದ್ಯಮಗಳು ಸಫಲಗಳಾಗಲಾರವು. ಧನಜನಬಲಹೀನರಾದ ನಿಮ್ಮ ಧೈರ್ಯ ಸಾಹಸಗಳೂ ಕುಗ್ಗಲಿವೆ. ಗೃಹಕೃತ್ಯದಲ್ಲಿ ಅನಾರೋಗ್ಯವು ಹೆಚ್ಚದು. ತಂದೆಮಕ್ಕಳಲ್ಲಿ ಐಕಮತ್ಯ ವಿರಲಾರದು. ಬಂಧು ಜನರು ದೂರಸರಿಸುವರು, ಗುರು ಹಿರಿಯರ ಆಗ್ರಹಕ್ಕೆ ಗುರಿಯಾದೀರಿ ಅದರೂ ತಾ. 28, 29, 3 ಈ ದಿನಗಳಲ್ಲಿ ಆಕಸ್ಮಿಕ ಧನಾಪ್ತಿ ಗೃಹಸುಖ ಭೋಗಗಳು ಲಭಿಸಲಿವೆ.

ವೃಷಭ—ಭಾಗ್ಯಪತಿಯ ಅನುಗ್ರಹಕ್ಕೆ ನೀವಿಂದು ಪಾತ್ರರಾಗಿರುವಿರಿ. ಆದ ಕಾರಣ ನಿಮ್ಮ ಆರ್ಥಿಕ ಬಿಕ್ಕಟ್ಟು ತಾನಾಗಿ ದೂರವಾಗಲಿದೆ. ಹಲವಾರು ವಿಧಾನಗಳಿಂದ ಹಣ ನಿಮ್ಮ ಕೈ ಸೇರಲಿದೆ. ಶತ್ರು ಜನರು ಪರಾಭವ ಹೊಂದುವರು. ಸತ್ಕರ್ಮಗಳ ಸಲುವಾಗಿ ಹೆಚ್ಚಿನ ಹಣವನ್ನು ವ್ಯಯಿಸುವಿರಿ. ವಾತ ಪಿತ್ಥ ದೋಷದಿಂದ ಆಗಾಗ ಆರೋಗ್ಯವು ಕೆಡಲಿದೆ, ಆಕಸ್ಮಿಕ ಪ್ರವಾಸಗಳು ಸಂಭವಿಸ್ಯತನ್ನಿಮಿತ್ತ ಧನ ನಾಶ ಕ್ಲೇಶಾದಿಗಳುಂಟಾಗುವವು ತಾ. 27, 30, 1, 2, ಈ ದಿನಗಳಲ್ಲಿ ಮಿತ್ರ ಸಮಾಗಮ ಸುಖ ಧನ ಭೋಗಗಳು ಲಭಿಸುವವು.

ಮಿಥುನ—ಯಾವ ಉದ್ಯಮಕ್ಕೆ ಕೈ ಹಚ್ಚಿದರೂ ನಿಮ್ಮ ನಿರೀಕ್ಷೆಗಿಂತ ಅಧಿಕ ಫಲ ಲಭಿಸೀತು. ಉದ್ಯೋಗದಲ್ಲಿ ಪ್ರಗತಿ ನೌಕರಿ ಮೊದಲಾದವುಗಳಲ್ಲಿ ಉನ್ನತ ಸ್ಥಾನ ಪ್ರಾಪ್ತಿ ಸಾಮಾಜಿಕ ಕಾರ್ಯಗಳಲ್ಲಿ ಯಶಸ್ಸುಕೂಡಾ ಪ್ರಾಪ್ತವಾಗಲಿದೆ. ದಾಸ ಭೃತ್ಯ ಜನತೆಯೊಡನೆ ಕ್ಷುದ್ರ ಕಾರಣಗಳಿಂದಾಗಿ ಕಲಹವಾದೀತು, ಶತ್ರುಗಳು ಹೆಚ್ಚಾಗಿ ಪೀಡಿಸುವರು ಕಜ್ಜಿ ಹುಣ್ಣು ಮೊದಲಾದ ಚರ್ಮರೋಗಗಳು ಕಾಣಸಲಿವೆ. ವ್ಯಾಪಾರದಲ್ಲಿ ಕೊಂಚ ಅನಿಷ್ಟಕ್ಕವಕಾಶವಿದೆ ತಾ. 27, 28 29, 3, ಈ ದಿನಗಳು ಅತ್ಯುತ್ತಮವಿವೆ.

ಕರ್ಕಟ— ಪ್ರತಿಯೊಬ್ಬ ಗ್ರಹನೂ ನಿಮಗಿಂದು ಪ್ರತಿಕೂಲನಾಗಿರುವನೆಂದರೆ ಬೇರೆ ಕೇಳಬೇಕೇ? ಕನಸುಮನಸ್ಸಿನಲ್ಲೂ ನೆನಸದ ರೋಗ ಅನಿಷ್ಟಾದಿಗಳು ಪ್ರಾಪ್ತವಾಗುವವು. ವಿಶೇಷತಃ ಹಣದ ಬಿಕ್ಕಟ್ಟು ಜನತೆಯ ವಿರೋಧಗೃಹ ಕೃತ್ಯದಲ್ಲಿ ಪರಸ್ಪರ ಕಲಹಗಳುದ್ಭವಿಸುವವು. ಗಾಳಿಗೆದುರಿಗಿಟ್ಟ ದೀಪದಂತೆ ಮನಸ್ಸು ಅತೀವ ಚಂಚಲವಾಗುವದು, ಹೆಚ್ಚೇಕೆ ಮರ್ಯಾದೆಯಿಂದ ದಿನಗಳೆಯಲು ಅಸಾಧ್ಯವೆನಿಸುವದು ಆದರೂ ವಾರದ ಅದ್ಯಂತದಿನಗಳನ್ನುಳಿದು ಇತರ ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗಿ ಕಾಣಿಸವು

ಸಿಂಹ— ನಿಮ್ಮ ಜನ್ಮಪತಿಯಾದ ರವಿಯೊಬ್ಬನನ್ನುಳಿದು ಇತರ ಎಲ್ಲಾ ಗ್ರಹರು ಕೂಡಾ ನಿಮ್ಮ ಶ್ರೇಯ ಸಾಧನೆಯಲ್ಲಿ ನಿರತರಾಗಿರುವರು. ದೈವವು ಅತ್ಯುತ್ತಮವಿದೆಯೆಂದು ಕೈಕಟ್ಟಿ ಕುಳಿತರೆ ಕಾರ್ಯಸಾಧಕದು. ನೀವಿಂದು ಕಾರ್ಯರಂಗದಲ್ಲಿ ಪ್ರವಿಷ್ಟರಾಗಿ ನಿಮ್ಮ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಿರಿ. ಯಾವೊಂದು ತರದ ವಿಘ್ನ ವಿಪತ್ತುಗಳು ನಿಮಗೆ ಬರಲಾರವು. ಅಲ್ಪಯತ್ನದಿಂದ ಅಧಿಕದಲ್ಲಿ ಮಹತ್ಫಲವನ್ನು ಪಡೆಯುವ ಸುಯೋಗವನ್ನು ಕಳಕೊಳ್ಳದಿರಿ. ವಾರಾಂತ್ಯದ 4 ದಿನಗಳು ಶುಭೇಷ್ಟ ಪ್ರದಗಳಾಗಿವೆ.

ಕನ್ಯಾ—ಇಷ್ಟಕ್ಕಿಂತ ದ್ವಿಗುಣ ಅನಿಷ್ಟಗಳು ಕಾಡಿಸುವವು. ಶುಭಗ್ರಹಗಳ ಅಷ್ಟಮ ಸ್ಥಾನಗತರಾಗಿರುವುದರಿಂದ ನಿಮ್ಮ ಪ್ರಯತ್ನಗಳೆಲ್ಲವೂ ನೀರಿನಲ್ಲಿ ಹಾಕಿದ ಹೋಮದಂತೆ ವಿಫಲಗಳಾಗಲಿವೆ, ಜನ್ಮದಲ್ಲಿದ್ದ ಶನೈಶ್ಚರನು ಅರ್ಥಸ್ಥಾನಕ್ಕೆ ಬಂದಿರುವ ಕಾರಣ ಆರ್ಥಿಕ ಮುಗ್ಗಟ್ಟು ಮತ್ತಷ್ಟು ಹೆಚ್ಚಲಿದೆ ಸಾಂಸಾರಿಕ ತಾಪತ್ರಯಗಳು ಹೆಚ್ಚಲಿವೆ ಕಫದೋಷದಿಂದಾಗಿ ವಿಶೇಷವಾಗಿ ಆರೋಗ್ಯ ಕೈ ಕೊಡಲೀತು. ವಿದ್ಯೋಪಜೀವಿಗಳಿಗೀ ದಿನಯಾಪನೆಯು ಅತೀವ ದುಸ್ತರವಾಗಲಿದೆ. ತಾ. 27, 3, ಅಷ್ಟೊಂದು ಅನಿಷ್ಟದ್ದಾಗದು.

ತುಲಾ— ಸುಖದುಃಖಗಳು ಸಮಬಲಗಳಾಗಿವೆ. ನಿಮ್ಮ ಉದ್ಯಮಕ್ಕೆ ಹೆಚ್ಚಾಗಿ ಶತ್ರುವರ್ಗಗಳಿಂದ ಬಾಧೆಯು ಸಂಭವಿಸಿದರೂ ಉದ್ಯೋಗದಲ್ಲಿ ನಷ್ಟವುಂಟಾಗದು, ವ್ಯಾಪಾರಾದಿಗಳಲ್ಲಿ ಉತ್ತಮ ಫಲಾಪ್ತಿಯಿದೆ, ನೌಕರಿ ಜನರೂ ಲೇಖಕ ವರ್ಗದವರೂ ನಟನಟಿ ಗಾಯಕಾದಿಗಳೂ ಕೂಡ ಪರಿಶ್ರಮಕ್ಕಿಂತ ಅಧಿಕ ಫಲವನ್ನು ಪಡೆವರು. ಕೆಲವೊಮ್ಮೆ ದುರ್ಜನರ ಮಾಯಾಜಾಲಕ್ಕೆ ಸಿಲುಕಿ ಅರ್ಥಮಾನಗಳ ಹಾನಿಗೆ ಗುರಿಯಾದೀರಿ. ಹೆಚ್ಚಿನ ಸಮಯವನ್ನು ಪರ್ಯಟನದಲ್ಲಿ ಕಳೆವಿರಿ. ವಾರಾದಿಯ 3 ದಿನಗಳು ಇದ್ದುದರಲ್ಲಿ ಉತ್ತಮವಿವೆ.

ವೃಶ್ಚಿಕ—ಜನ್ಮಪತಿಯೂ ವಿಕ್ರಮಕಾರಕನೂ ಆದ ಅಂಗಾರಕನಿಂದು ಉಪಚಯ ಸ್ಥಾನದಲ್ಲಿ ಉಚ್ಚನಾಗಿ ಕುಳಿತ ಕಾರಣ ನಿಮಗಾರಿಗೂ ಬೆದರಬೇಕಾಗಿಲ್ಲ. ಎಂತಹ ಪ್ರಬಲ ಎದುರಾಳಿಯನ್ನು ಕೂಡ ಕ್ಷಣಾರ್ಧದಲ್ಲಿ ಪರಾಭವಗೊಳಿಸುವಿರಿ. ಪರರ ಹಂಗು ದಾಕ್ಷಿಣ್ಯಗಳಿಗೆ ಸಿಲುಕದೆ ಕೇವಲ ಆತ್ಮ ಶಕ್ತಿಯಿಂದಲೇ ಎಂತಹ ಕಾರ್ಯವನ್ನೂ ಸಾಧಿಸಲು ಶಕ್ತರಿರುವಿರಿ. ಆದರೆ ಆಕಸ್ಮಿಕವಾಗಿ ಪ್ರಾಪ್ತವಾಗತಕ್ಕ ಶೋಕಾನರ್ಥಗಳು ಕೆಲವೊಮ್ಮೆ ನಿಮ್ಮನ್ನು ದಿಙ್ಮೂಢರನ್ನಾಗಿ ಮಾಡಲಿದೆ. ತಾ. 28ರಿಂದ 2ರ ವರೆಗಿನ ದಿನಗಳು ಇಷ್ಟಸಿದ್ಧಿಕರಗಳಿವೆ,

ಧನು—ನಿಮ್ಮ ಬಯಕೆಯಂತೆ ಪ್ರತಿಯೊಂದು ಕಾರ್ಯಗಳೂ ನೆರವೇರುವವು. ಬಂಧುಗಳು ಮಿತ್ರರೂ ಎಲ್ಲ ನಿಮಗೆ ನೆರವಾಗಲಿರುವರು ನಿಮ್ಮ ಸಂಪದ್ಭಾಗವು ದಿನೇ ದಿನೇ ವೃದ್ಧಿಹೊಂದಲಿದೆ. ಸ್ವಂತ ಉಪಭೋಗಕ್ಕೆ ಯಾವತರದ ನ್ಯೂನತೆಗಳೂ ಬರಲಾರವು. ಪಶುದಾನ ಭೃತ್ಯರಿಂದ ಕೂಡಿದ ಗೃಹಕೃತ್ಯದಲ್ಲಿ ನಿತ್ಯ ಸುಖದಿಂದಿರುವಿರಿ, ಅಧಿಕಾರಿಜನರ ಪೀಡೆ ಮತ್ತು ಪಿತ್ತದೋಷ ಸಂಬಂಧವಾದ ಕಾಹಿಲೆಗಳಿಗವಕಾಶವಿದೆಯಾದ್ದರಿಂದ ವಾರಾದಿಯ 3 ದಿನಗಳಲ್ಲಿ ಜಾಗರೂಕರಾಗಿರಿ,

ಮಕರ—ನಿಮ್ಮ ಮನಸ್ಸು ಯಾವಾಗಲೂ ವಿಪರೀತ ಕಲ್ಪನೆಯಲ್ಲೇ ಕಲ್ಪಿತವಾಗುವದು. ಇದರಿಂದಾಗಿ ಬಂಧು ಜನರೂ ಆಪ್ತೇಷ್ಟರೂ ಕೂಡ ನಿಮ್ಮ ಕಡೆ ತಿರಸ್ಕಾರ ದೃಷ್ಟಿಯನ್ನಿಡುವರು. ಜನರಿಂದ ಅಪವಾದ ಸಂಭವಿಸುವಂತಿದೆ. ವಿದ್ಯಾಕೀರ್ತಿಗಳಿಗೆ ಕಳಂಕ ಕೂಡ ಪ್ರಾಪ್ತವಾದೀತು. ಉದ್ಯೋಗದಲ್ಲಿ ಪ್ರಗತಿಯೂ ಆರ್ಥಿಕ ಭಾಗದಲ್ಲಿ ಉನ್ನತಿಯೂ ಕಾಣಿಸುವದು. ವಿಶೇಷ: ವೈದ್ಯ ವ್ಯಾಪಾರ ನೌಕರಿ ಭಾಗಗಳಲ್ಲಿ ಉತ್ತಮ ಫಲಾಪ್ತಿಯಿದೆ. ತಾ 27, 3ದಿನಗಳಲ್ಲಿ ಲಾಭ ವಿಜಯ ಗೃಹಸುಖಗಳು ಲಭಿಸುವುದು.

ಕುಂಭ—ಪ್ರಯತ್ನಕ್ಕೆ ತಕ್ಕ ಫಲವು ಕಟ್ಟಿಟ್ಟಗಂಟೆನಂತಿರುವದು. ಆದರೆ ಆಕಸ್ಮಿಕ ಪ್ರಾಪ್ತವಾಗತಕ್ಕ ಅನರ್ಥಗಳು ನಿಮ್ಮ ಕೈಯನ್ನು ಹಿಂದು ಮಾಡಲಿವೆ, ಪಿತ್ಥದೋಷದಿಂದ ಆರೋಗ್ಯ ಕೆಡಲಿದೆ. ನಿಂತಲ್ಲಿ ನಿಲ್ಲಲು ಮನ ಒಡಂಬಡದು. ಧರ್ಮಕರ್ಮಗಳಲ್ಲಿ ಅನಾದರ ಬಂಧುವರ್ಗದವರೊಡನೆ ವೈರ ಇತ್ಯಾದಿಗಳು ಹೆಚ್ಚುವವು. ವಾರದಲ್ಲಿ ಹೆಚ್ಚಿನ ಸಮಯವನ್ನು ಪ್ರವಾಸದಲ್ಲಿ ಕಳೆಯಲಿರುವಿರಿ. ತಾ. 28 29 ಈ ದಿನಗಳಲ್ಲಿ ಕೊಂಚಮಾನಸಿಕ ಸುಖ ಧನಲಾಭಗಳಿವೆ.

ಮೀನ ಧನಭಾಗ್ಯಪತಿಯು ಲಾಭದಲ್ಲಿ ಉಚ್ಚನಾಗಿರುವುದರಿಂದಲೂ ನಿಮ್ಮ ಜನ್ಮಪತಿಯು ಧನ ಸ್ಥಾನಗತನಿರುವುದರಿಂದಲೂ ನೀವೀಕಾಲದಲ್ಲಿ ಕೇವಲ ಆತ್ಮ ಶಕ್ತಿಯಿಂದಲೇ ಸಾಕಷ್ಟು ಧನವನ್ನು ದುಡಿಯುವಿರಿ. ಮಾತ್ರವಲ್ಲ ಹಿಂದಿನ ಸಾಲಾದಿಗಳಿಂದಲೂ ಮುಕ್ತರಾಗುವಿರಿ. ಹೆಚ್ಚೇಕೆ ಹಣದ ವಿಷಯವಾದ ಚಿಂತೆಯೇ ನಿಮ್ಮಿಂದ ದೂರವಾಗುವದು, ವಾಕ್ಕಲಹವೇ ಮೊದಲಾದ ನಿಮಿತ್ತ ಜಗಳ ಶತ್ರುಪೀಡೆ ಸ್ತ್ರೀಪುತ್ರರ ವಿಷಯ ಶೋಕಗಳಿಂದ ದಗ್ಧರಾದ ನಿಮಗೆ ತಾ. 27. 30. 1. 2. ಈ ದಿನಗಳು ಸ್ವಲ್ಪ ಸಂಕಟವೀಯಲಿವೆ.

ಸ್ತ್ರೀ ಪುರುಷ ಶಿಶುಗಳು ರೋಗದಿಂದ ನರಳಬೇಕಾಗಿಲ್ಲ!
ಲಕ್ಷಾಂತರ ಜನರು ಗುಣಹೊಂದಿದ್ದಾರೆ!
ಸರ್ ಜೀವನ್ ಶಿಲಾಜಿತ್ ಲೇಹ
ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮುಪ್ಪು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮುಟ್ಟು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರಸ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.
೪೪ದಿನದ ಲೇಹ್ಯ ರೂ ೫/೪, ೨೨ ದಿನದ ಲೇಹ್ಯ ರೂ ೩೪
(ಪೋಸ್ಟೇಜು ಬೇರೆ)
ನೀಲಗಿರಿ ಡಿಪ್ಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

KING OF TONIC
SILAJITH LATHAM

ಉಡುಪಿಗೆ ಹೋಗಬೇಕು! ಆದರೆ ಉಳಿಯ ಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಟ್ಯಕಳ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿ [illegible] ಹೇಳಬೇಕೆ
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.
ಹೆಚ್ಚಿನ ಮಾಹಿತಿಗೆ—ಡಾ। ಯಂ ಸಿ. ಶಾಸ್ತ್ರೀ, ಯಲ್. ಐ ಎಂ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಥಾನಿಕರು:— ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ
1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು
The Moolky Bank Ltd.,
Moolky, S. K

ವಿವಿಧ ಪಾತ್ರೆಗಳು
ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ
ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.



Edited, Printed & Published by K. H. Shetty at the Navayuga Press, Udipi, S India.

LICENC No. 31
Licenced to Post without Prepayment

Estd 1921 ಸ್ಥಾಪಿತ
32ನೆಯ ವರ್ಷ

ನವಯುಗ

NAVAYUGA WEEKLY POST BOX NO 22 UDIPI

ಮಧುಪರ್ಕ

ಬ್ರಾಹ್ಮಣನೊಬ್ಬ ತನ್ನ ಮಗನೊಡನೆ ಎಲ್ಲಿಯೋ ಭೋಜನಕ್ಕೆ ಹೋಗುತ್ತಿದ್ದ. ದಾರಿಯಲ್ಲಿ ಮಗನಿಗೆ ತುಂಬಾ ಬಾಯಾರಿಕೆಯಾಯಿತು. ಬ್ರಾಹ್ಮಣನೊಡನೆ ನೀರಿಗಾಗಿ ಅರ್ಥಿಸಿದನು. ಒಂದು ಲೋಟ ಶರಬತ್ತು ಕುಡಿಸಲಿಕ್ಕೂ ಅವನು ಸಾಲದು. ಇನ್ನು ನೀರು ಕುಡಿಯುವುದಾದರೂ, ಅದಕ್ಕೆ ಬೆಲ್ಲ ಬೇಕಲ್ಲವೇ ಎಂದು ಹೇಳಿ ಅಂಗಡಿಕಾರನೊಡನೆ ಸ್ವಲ್ಪ ಬೆಲ್ಲ ಕೇಳಿದ.

“ಉದಾರತೆಗೂ ಕಡಿಮೆ ಬೆಲ್ಲವಿಲ್ಲವಲ್ಲ” ಎಂದವನು ಹೇಳಿದುದನ್ನು ಕೇಳಿ ಬ್ರಾಹ್ಮಣ ಮಗನಿಗೆ ಬರೀ ನೀರನ್ನು ಕುಡಿಸಿದ.

ಭೋಜನ ಮುಗಿಸಿ ಮನೆಗೆ ಹಿಂತಿರುಗುವಾಗ ದುಡುಗ ಮರಳಿ ಬಾಯಾರಿಕೆಯಾಗಿದೆಯೆಂದು ಹೇಳಿದ. ಬ್ರಾಹ್ಮಣ ಆ ಕೂಡಲೇ ಸರಾಗದ ಬಳಿಯ ಹಾಲೀಯಾದ ಅಂಗಡಿಗೆ ಹೋಗಿ, ಮಗನಿಗೆ ಶರಬತ್ತು ಕುಡಿಸಿ ಆನಂದದಿಂದ ನೋಡಿದ.

ಮಗನು ಆಶ್ಚರ್ಯದಿಂದ “ಇದೇನಪ್ಪಾ, ಬೆಳಿಗ್ಗೆ ಒಂದಿಷ್ಟು ಬೆಲ್ಲವನ್ನೂ ಕೊಡಿಸಲಿಲ್ಲ, ಈಗ ಇಷ್ಟು ಖರ್ಚು ಮಾಡುತ್ತಿಯಲ್ಲಾ” ಎಂದು ಕೇಳಿದ. ಅದಕ್ಕೆ ತಂದೆ “ನಿಜ ಮಗೂ ಆಗ ನನ್ನೊಡನೆ ಇದ್ದುದೇ ಅರ್ಧಾಣೆ. ಈಗಲಾದರೆ ದಕ್ಷಿಣೆ ಸಿಕ್ಕಿದ ಎಂಟಾಣೆಯಿದೆ” ಎಂದುತ್ತರಿಸಿದ.

ತುಸು ಬಿಗಿಯಿರಲಿ!

ಹಣವು ನಮಗೆ ಉಪಕಾರಿಯೂ ಹೌದು, ಹಾಗೆಯೇ ಅಪಕಾರಿಯೆಂಬುದೂ ನಿಜ. ಧನಲಕ್ಷ್ಮಿ ಎಂದದನ್ನು ಪೂಜಿಸಬಹುದು, ಋಣಬಾಧೆ ಎಂದದನ್ನು ತುಚ್ಛೀಕರಿಸಬಹುದು. ಧನದಿಂದ ರೋಗ, ಅಶಾಂತಿ ಹಾಗೂ ಭಯಗಳುಂಟಾಗಬಲ್ಲವು. ಅದರಂತೆ ಧನವೆಂದರೇನೆ ಸ್ವಾಸ್ಥ್ಯ, ಶಾಂತಿ ಹಾಗೂ ಅಭಯವಾಗಬಲ್ಲುದು. ಇಲ್ಲವೆಂಬ ದುಃಖ, ಇದೆಯೆಂಬ ಸಂತೋಷ ಎರಡಕ್ಕೂ ಧನವೊಂದೇ ಹೇತು! ಹಣವೇ ಕೆಲವೊಮ್ಮೆ ಅವಗುಣಕ್ಕೆ ಕಾರಣವಾದರೆ, ಇನ್ನು ಕೆಲ ಸಮಯ ಹಣ ಸದ್ಗುಣದ ದ್ಯೋತಕವೆನಿಸುತ್ತದೆ. ಹಣ ನಮ್ಮ ಶಕ್ತಿಯನ್ನು ಕುಂದಿಸಲೂಬಹುದು, ಹಣವೆಂದರೇನೆ ಶಕ್ತಿ ಎಂದೆನಿಸುವ ದಿನವೂ ಬಂದೀತು. ಕಾಗದದ ಮೇಲೆ ಏನಾದರೊಂದು ಅಂಕೆ ಬರೆದು, ಅದನ್ನು ಹಣದ ನೋಟು ಎಂದು ಕರೆಯಬಹುದು; ಅದನ್ನೇ ಲೆಕ್ಕ ಪುಸ್ತಕದಲ್ಲಿ ಬರೆಯುವಾಗ ಮೇಲೆ ನಮ್ಮ ಹೆಸರನ್ನು ಕಾಣಿಸುವುದಕ್ಕೆ, ನಾವು ಹಣಕ್ಕೆ ಕೊಡುವ ಮನ್ನಣೆಯೇ ಕಾರಣ!

ಹಣವೆಂಬುದು ನಮ್ಮ ಬದುಕಿನಲ್ಲಿ ಅತ್ಯಂತ ಮಹತ್ವದ ಒಂದು ವಸ್ತುವಾಗಿದೆ. ಇದನ್ನು ಆದರಿಸಬೇಕು ಹಾಗೆಂದು ಅಧಿಕವ್ಯಾಮೋಹ ಮಾತ್ರ ಸಲ್ಲದು. ನಾವು ಬಡವರಾದರೂ ನಡೆಯದು ಹಾಗೆಂದು ದರ್ಬಾರು ನಡೆಸಿದರೂ ಹಾನಿಯಿದೆ. ದರ್ಬಾರು ಮಾಡದೆ ಜಿಪುಣತೆಗೆ ಲೋಭಿ ಎನಿಸದೆ--ಜೀವನ ಸುಖವನ್ನು ಸವಿಯುವುದು ಕಷ್ಟವೆಂಬುದೇ ನಮ್ಮನ್ನು ಇಕ್ಕಳದ ನಡುವೆ ಸಿಕ್ಕಿಸುವ ತೊಂದರೆ!

ನಮ್ಮ ಕೈಗೆ ಬಂದ ಹಣವನ್ನು ಬದುಕಿನ ಆವಶ್ಯಕತೆಗಳ ಪೂರೈಕೆಗಾಗಿ ಜಾಣ್ಮೆಯಿಂದ ವಿನಿಯೋಗಿಸಬೇಕೆಂದು ಯಾರಿಗೂ ಯಾರೊಬ್ಬರೂ ಹೇಳಿಕೊಡಬೇಕಿಲ್ಲ. ಸಂಪಾದನೆ ಮಾಡಲು ತಿಳಿದವರಿಗೆ, ಖರ್ಚಿನ ಮಾರ್ಗವನ್ನು ಹೇಳಿಕೊಡಬೇಕೆಂದರೆ, ಯಾರಿಗೂ ಮನಸ್ಸು ಒಪ್ಪಲಿಕ್ಕಿಲ್ಲ. ನಮ್ಮ ಅಗತ್ಯಗಳು ಭಿನ್ನ ಪ್ರಕಾರದವುಗಳು. ಕೆಲವರಿಗೆ ಚೆನ್ನಾಗಿ ತಿಂದುಣ್ಣುವುದೆಂದರೆ ಇಷ್ಟ. ಇನ್ನು ಕೆಲವರಿಗೆ ಆಡಂಬರದ ವಸ್ತ್ರಾಭರಣಗಳೆಂದರೆ ಮೆಚ್ಚು. ಮತ್ತೂ ಕೆಲವರಿಗೆ ವಿಲಾಸಿ ಭೋಗಕ್ಕೆಂದು ವೆಚ್ಚಮಾಡುವುದರಲ್ಲಿ ಸಂತೃಪ್ತಿ, ಇನ್ನು ಕೆಲವರಿಗೆ ದಾನಧರ್ಮದಲ್ಲಿಯೇ ಆಸಕ್ತಿ! ಇಂಥ ಆಶೆ ಆಕಾಂಕ್ಷೆಗಳು ಅನುಚಿತವೆಂದೇನೂ ಹೇಳುವಂತಿಲ್ಲ. ಸಹಜವಾದ ಅಗತ್ಯಗಳಲ್ಲಿ ಯಾವುದೇ ಆಶೆಯನ್ನೂ ಕೆಟ್ಟದೆಂದು ಪರಿಗಣಿಸಲು ಬಾರದು. ಆದರೆ ನಮ್ಮ ಮುಂದಿನ ದಿನದ ಪ್ರಶ್ನೆಯೆಂದೇ--ನಾವು ನಿರ್ಲಕ್ಷ್ಯ ಮಾಡುತ್ತೇವೇನೋ! ನಿಜ ಆದರೆ ಇಂದಿನದನ್ನು ನೋಡಿಕೊಂಡರೆ ಸಾಕೆ? ಉಳಿದ ಆವಶ್ಯಕತೆಯನ್ನು ಪೂರೈಸುವುದೊಂದೆ ನಮ್ಮ ಕರ್ತವ್ಯವೇ? ಹಣದ ವಿನಿಯೋಗದ ಉಚಿತಾನುಚಿತ ಪ್ರಶ್ನೆ ಎಸೆಯುವ ಗೃಹಿಣಿಯರನ್ನೂ ದೇಶದ ಅರ್ಥಸಚಿವರನ್ನು ಒಂದೇ ಸಮನೆ ಕೀಳಿಸುತ್ತಿರುವ ನಮ್ಮ ಆವಶ್ಯಕತೆ ಹಾಗೂ ಆಕಾಂಕ್ಷೆಯನ್ನು ಸಮಷ್ಟಿಯ ದೃಷ್ಟಿಯಿಂದ ನೋಡಿ, ಸಂಪಾದನೆಯ ಇತಿಮಿತಿಯನ್ನು ಅನುಲಕ್ಷಿಸಿ, ಜಾಗರೂಕತೆಯಿಂದ ಮುನ್ನಡೆದಲ್ಲಿ ಸುಖದ ಸ್ವರ್ಗ ಪ್ರಾಪ್ತಿಯಾದೀತು. ಅನ್ಯಥಾ ಗಹನವಾದ ಕಂದರದಲ್ಲಿ ಬಿದ್ದು ಆತ್ಮಘಾತ ಮಾಡಿಕೊಳ್ಳುವ ಪ್ರಸಂಗ ಬಾರದಿರದು.

ನಮ್ಮ ಆವಶ್ಯಕತೆಗಳನ್ನು ಪೂರೈಸುವುದಕ್ಕೆ ಕೆಲವು ವಸ್ತು ವಿಶೇಷಗಳು ಬೇಕು. ಅವುಗಳನ್ನು ಪಡೆಯಲು ಹಣ ಬೇಕು. ಹಣವನ್ನು ಸಂಪಾದಿಸಲು ದುಡಿಯಬೇಕು ಎಂಬುದು ಸಾಮಾನ್ಯವಾದ ನಿಯಮ. ಒಂದು ಜೊತೆ ಜೋಡು ನಮಗೆ ಬೇಕಾದರೆ ಅದಕ್ಕೆ ಆರು ರುಪಾಯಿ ಸಂಪಾದಿಸಬೇಕೆಂಬುದೂ ಸ್ಪಷ್ಟವಿದೆ. ತಿಂಗಳಿಗೆ ಐವತ್ತು ರುಪಾಯಿ ಸಂಬಳದವನೊಬ್ಬ ಜೋಡಿನ ಜತೆ ಬೇಕೆಂದು ಬಯಸಿದರೆ, ಅದಕ್ಕಾಗಿ ನಾಲ್ಕು ದಿನದ ದುಡಿಮೆ ಬೇಕು ಎಂದರೆ ನಮ್ಮ ಉಳಿದ ಆವಶ್ಯಕತೆಗಳು, ಎಂದರೆ ಸಿನೆಮಾ ನೋಡುವುದೂ ಕಾಫಿ ಕುಡಿಯುವುದೂ, ಅಷ್ಟು ಮಟ್ಟಿಗೆ ಕಡಿಮೆಯಾಗಬೇಕು. ಇನ್ನು ಒಂದು ಕೋಟು ನಮಗೆ ಬೇಕೆಂದು ಕಾಣೋಣ. ಈ ಬೆಲೆಗಾಲದಲ್ಲಿ ಹದಿನೈದು ರುಪಾಯಿಗೆ ಒಂದು ಕೋಟನ್ನು ಪಡೆಯುವುದೂ ಸಾಧ್ಯವಿದೆ. ಹಾಗೆಯೇ ಮೂವತ್ತು ರುಪಾಯಿ ವೆಚ್ಚ ಬೇಡುವ ಕೋಟುಗಳೂ ಇಲ್ಲದಿಲ್ಲ. ನಮ್ಮ ಮಟ್ಟಿಗೆ ಯಾವುದನ್ನು ಆರಿಸಬೇಕೆಂಬುದರಲ್ಲಿಯೇ ಹಣದೊಡನೆ ಆಡುವ ಜಾಣ್ಮೆ ಹುದುಗಿದೆ.

ತಾತ್ಪರ್ಯ ಇಷ್ಟೇ. ನಮ್ಮ ಸಂಪಾದನೆಯೊಡನೆ ತೂಗಿ ನೋಡಿ ಆವಶ್ಯಕತೆಗಳನ್ನು ಕಟ್ಟಿಕೊಳ್ಳುವುದರಲ್ಲಿ ಬುದ್ಧಿವಂತಿಕೆ ಇದೆ. ಹೆಚ್ಚು ಅಗತ್ಯದ್ದು ಯಾವುದು ಅಷ್ಟು ಅಗತ್ಯವಿಲ್ಲದುದು ಯಾವುದು ಎಂಬುದನ್ನು ತೂಗಿ ನೋಡಿ ನಿರ್ಣಯಿಸುವ ಬುದ್ಧಿ ನಮ್ಮಲ್ಲಿರಬೇಕು. ಅಗತ್ಯ ಬಿದ್ದ ಹೆಚ್ಚು ದುಡಿಯುವುದಕ್ಕೆ ಮಾರ್ಗ ಕಲ್ಪಿಸಿಕೊಂಡಿರಬೇಕು. ಆದರೆ ನಿರುದ್ಯೋಗ ಬೆಳೆದಿರುವ ನಮ್ಮ ದರಿದ್ರ ಭೂಮಿಯ ಇದಕ್ಕೆ ಇರುವ ಅವಕಾಶ ಬಹಳ ಕಡಿಮೆ. ಆದುದರಿಂದ ನಮ್ಮ ಮಿತವಾದ ಸಂಪಾದನೆಯಲ್ಲಿಯೇ ಸ್ವಲ್ಪಾಂಶವನ್ನು ಆಪತ್ತಿಗೆಂದು ಕೂಡಿಡುವುದು ಒಳ್ಳೆಯದು. ನಮ್ಮ ಆಯವ್ಯಯಾಂಕ ಪಟ್ಟಿಯು ತೋರಿಸುತ್ತಿರುವ ಪರಿಸ್ಥಿತಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು. ನಮ್ಮ ಮುಂಗಡ ಪತ್ರವು ಘೋಷಣೆಯಲ್ಲಿರುವ ತಿಂಗಳು. ಸಂಬಳದ ದಿನದಿಂದ ತೊಡಗಿ, ಬರುವ ಮೂವತ್ತು ದಿನಗಳಲ್ಲಿ ನಮ್ಮ ಅಗತ್ಯಗಳ ಸ್ವರೂಪ ಹೇಗಿರಬಹುದೆಂಬುದನ್ನ, ಧನಾದಾಯ ಹೇಗಿರಬೇಕೆಂಬುದನ್ನು ಮುಂಚಾಗಿ ಯೋಚಿಸಿಕೊಂಡು, ಅದಕ್ಕೆ ಅನುಗುಣವಾಗಿ ಹಣವನ್ನು ಹೊಂದಿಸಿಕೊಳ್ಳಲು ಕಲಿಯಬೇಕು. ಅಕ್ಕಿಗಾಗಿ ತೆಗೆದಿಟ್ಟ ಹಣವನ್ನು ಬಟ್ಟೆಗೂ ಬಟ್ಟೆಗಾಗಿ ತೆಗೆದಿಟ್ಟುದನ್ನು ಕಟ್ಟಿಗೆಗೂ, ಕಟ್ಟಿಗೆಗೆಂದು ಬಿಟ್ಟುದನ್ನು ತರಕಾರಿಗೂ ಉಪಯೋಗಿ

(೨ನೇ ಪುಟ ನೋಡಿರಿ)

ಲಂಡನಿನ ಇಂಡಿಯಾದ ಹಾಯಿಕಮಿಷನರ ಶ್ರೀ ಬಿ ಜಿ ಖೇರರು ಬಿ ಬಿ ಸಿ ಯಲ್ಲಿ ದಿನಾಚರಣೆಯ ಹಿಂದಿನ ರಾತ್ರೆ ಮಾಡುವ ಭಾಷಣವನ್ನು ಬಿತ್ತರಿಸುವುದಕ್ಕಾಗಿ ಧ್ವನಿ ಮುದ್ರಿಸುತ್ತಿರುವ ದೃಶ್ಯ

ಈ ಶತಮಾನದ ನಾದಲೀಲೆ

ನಿಃಶಬ್ದ ಸ್ವರತರಂಗಗಳ ಅದ್ಭುತಕಾರ್ಯ ಸಾಮರ್ಥ್ಯ

ನಮ್ಮ ಸುತ್ತಣ ವಾತಾವರಣದಲ್ಲಿ ನಮ್ಮ ಕಿವಿಯಿಂದ ಗ್ರಹಿಸಲಿಕ್ಕೆ ಅಸಾಧ್ಯವಾದಷ್ಟು ಸೂಕ್ಷ್ಮತಮ ಧ್ವನಿ ಸಂಚರಿಸುತ್ತಿರುತ್ತದೆ. ಆಧುನಿಕ ವಿಜ್ಞಾನಿಗಳು ಈ ಅಸಂಖ್ಯ ಧ್ವನಿಗಳ ಬಲದಿಂದ ಮಾನವ ಜೀವನವನ್ನು ಸುಖಮಯವಾಗಿಸುವ ಸಾಹಸವನ್ನು ಕೈಗೊಂಡಿರುವರು ಧ್ವನಿಯ ಮಹತ್ವವನ್ನು ವಿಜ್ಞಾನಿಗಳಿಗೂ ಹಿಂದೆ, ನಮ್ಮ ದಾರ್ಶನಿಕರು ಕಂಡುಕೊಂಡಿದ್ದರು "ಶಿವ ಸ್ವರೋದಯ"ದಲ್ಲಿ-ಶಿವನನ್ನು ಸ್ವರದ ಮೂಲಸ್ಥಾನವೆಂದೂ ಸ್ವರದಿಂದಲೇ ವಿಶ್ವದ ಸೃಷ್ಟಿಯಾಯಿತೆಂದೂ ಹೇಳಲಾಗಿದೆ. ಮಹಾಕವಿ ಭವಭೂತಿಯು ತನ್ನ ಸುಪ್ರಸಿದ್ಧ ನಾಟಕ "ಉತ್ತರ ರಾಮಚರಿತೆ"ಯಲ್ಲಿ ಸ್ವರವನ್ನು ಬ್ರಹ್ಮಸ್ವರೂಪವೆಂದು ಹೇಳಿ, ಅದರ ಮಹಾ ಶಕ್ತಿಯ ಉಲ್ಲೇಖಮಾಡಿ ವಂದಿಸಿರುವನು. ಶೇಕ್ಸ್‌ಪಿಯರನು ಜೀವನವನ್ನು ಭಿನ್ನ ಭಿನ್ನ ಸ್ವರಗಳ ಸಮಷ್ಟಿ ಎಂದು ಕರೆದಿರುವನು. ತಾತ್ಪರ್ಯವೆಂದರೆ — ಸ್ವರದ ಅಪರಿಮಿತ ಶಕ್ತಿಯ ಪರಿಚಯ ಮಾನವ ಜಾತಿಗೆ ಬಹಳ ಪ್ರಾಚೀನಕಾಲದಿಂದಲೂ ಇತ್ತು.

ಕೋಮಲವಾದ, ತೀವ್ರ ಏರಿಳಿಕೆಯಿಂದ ಕೂಡಿದ ಸ್ವರವು ನಮ್ಮ ಹಾಗೂ ಇತರ ಪ್ರಾಣಿಗಳ ಕಂಠಸ್ಥಳದಿಂದ ಉತ್ಪತ್ತಿಯಾಗುವುದಾದರೆ, ವಸ್ತುಗಳ ಪರಸ್ಪರಾಘಾತದ ಪರಿಣಾಮವಾಗಿಯೂ ಇದೇ ಬಗೆಯ ಸ್ವರ ಜನಿಸುವುದು ಸಾಧ್ಯವುಂಟು. ಈ ಸ್ವರಗಳಲ್ಲಿ ಒಂದು ಸಾಮಾನ್ಯಾಂಶವಿದೆ. ನಮ್ಮ ಕಿವಿಗಳ ಮೂಲಕ ನಾವು ಧ್ವನಿಯನ್ನು ಆಲಿಸಬಲ್ಲೆವು ಆದರೆ ಈಚೆಗೆ ವಿಜ್ಞಾನಿಗಳೂ ಪ್ರಾಚೀನ ಕಾಲದ ದಾರ್ಶನಿಕರೂ ಕಂಡುಕೊಂಡಂತೆ ಮೂಕ ಸ್ವರಗಳೂ ಇವೆ! ಇವುಗಳನ್ನು ನಾವು ಕೇಳುವಂತಿಲ್ಲ. ಹಾಗೆಂದು ಅವುಗಳ ಅದ್ಭುತ ಕಾರ್ಯಶಕ್ತಿಯನ್ನು ನೋಡಬಲ್ಲೆವು! ವಿಜ್ಞಾನಿಗಳ ಅಭಿಪ್ರಾಯದಂತೆ, ಇನ್ನು ಸ್ವಲ್ಪವೇ ಕಾಲಾವಧಿಯಲ್ಲಿ ನಮ್ಮ ಮನೆಯ ಕೆಲಸ ಜೊಗಸೆಗಳನ್ನೆಲ್ಲ ಮೂಕಸ್ವರದ ಅದ್ಭುತಕಾರ್ಯ ಸಾಮರ್ಥ್ಯಕ್ಕೆ ಒಪ್ಪಿಸಿಕೊಟ್ಟು, ನಾವು ಸುಖದಿಂದ ಜೀವಿಸಬಹುದು

ನಿಃಶಬ್ದ ಸ್ವರ

ಮೂಕಸ್ವರಗಳು ಮೇಘಗರ್ಜನೆಯ ಧ್ವನಿಗಿಂತಲೂ ಸಾವಿರಾರು ಪಾಲು ಅಧಿಕ ತೀವ್ರವಾಗಿರುತ್ತವೆ. ಹೀಗಿದ್ದೂ ನಾವು ಇವುಗಳನ್ನು ಕೇಳುವಂತಿಲ್ಲವೆಂದರೆ ಆಶ್ಚರ್ಯವೇ ಸೈ! ಇವುಗಳಲ್ಲಿ ಹಲವು ಎಷ್ಟು ಸೂಕ್ಷ್ಮವಿರುವುವೆಂದರೆ ಯಾಂತ್ರಿಕ ಉಪಕರಣಗಳಿಂದ ಕೂಡ ನಾವು ಕೇಳುವಂತಿಲ್ಲ. ಆದರೆ ಈ ಅದ್ಭುತ ಶಕ್ತಿಯನ್ನು ಈಗ ನಮ್ಮ ಉಪಯೋಗಕ್ಕೆ ಚೆನ್ನಾಗಿ ಬಳಸಿಕೊಂಡಿರುವರು. ಮೊಟ್ಟೆಯನ್ನು ಬೇಯಿಸುವುದರಿಂದ ತೊಡಗಿ, ಮೂವತ್ತು ಅಡಿಯಷ್ಟು ಉಕ್ಕನ್ನು ಎತ್ತಿಕೊಳ್ಳುವುದಕ್ಕೆ ಧ್ವನಿಶಕ್ತಿಯನ್ನು ಬಳಸುವರು. ವೈಜ್ಞಾನಿಕ ಪರಿಭಾಷೆಯಲ್ಲಿ ಈ ಮೂಕ ಸ್ವರಗಳನ್ನು "ಅಲ್ಟ್ರಾ-ಸೋನಿಕ್ಸ್" ಎಂದರೆ, ನಿಃಶಬ್ದ ಸ್ವರ ಎಂಬುದಾಗಿ ಕರೆಯುತ್ತಾರೆ. ಮನುಷ್ಯನ ಶ್ರವಣ ಶಕ್ತಿ ಇವನ್ನು ಗ್ರಹಿಸಲಾರದಾದರೂ ನಾಯಿ, ಬೆಕ್ಕು, ಕರಡಿ ಮುಂತಾದ ಅನೇಕ ಪ್ರಾಣಿಗಳು ಸುಲಭದಲ್ಲಿ ಈ ಧ್ವನಿಯನ್ನು ಕೇಳಿ ಗ್ರಹಿಸಬಲ್ಲುವು! ಅಮೇರಿಕದಲ್ಲಿ ಒಂದು ಬಗೆಯ ಪೀಪಿಯನ್ನು ತಯಾರಿಸಿದ್ದು ಅದನ್ನು ಊದಿ, ನಾಯಿಗಳನ್ನು ಕರೆದು, ಅವುಗಳಿಂದ ಅಪೇಕ್ಷಿತ ಕಾರ್ಯವನ್ನು ಮಾಡಿಸುವುದು ಸಾಧ್ಯವಿದೆ- ಈ ಸ್ವರವನ್ನು ಕೇವಲ ನಾಯಿಗಳಷ್ಟೇ ಕೇಳಬಲ್ಲುವಲ್ಲದೆ ಮನುಷ್ಯ ಲಕ್ಷ ಪ್ರಯತ್ನ ಮಾಡಿದರೂ, ಅವನಿಗೆ ಸಾಫಲ್ಯ ದೊರೆಯದು.

ನ್ಯೂಯಾರ್ಕಿನ ಶೆನೆಕ್ಟಾಡಿ ಹೆಸರಿನ ಕವಲಿನಲ್ಲಿ ಜನರಲ್ ಇಂಜೀನಿಯರಿಂಗ್ ಲೆಬೊರೇಟರಿ ಎಂಬುದಿದೆ. ಅದರಲ್ಲಿರುವ ಸ್ವರವಿಜ್ಞಾನದ ವಿಶೇಷಜ್ಞರು ಪರಿಶ್ರಮಪೂರ್ವಕ ಒಂದು ನಿಃಶಬ್ದ ಸ್ವರ ನಿರ್ಮಾಣ ಯಂತ್ರವನ್ನು ರಚಿಸಿರುವರು. ಒಂದು ಬಹಳ ಸಣ್ಣ ರೇಡಿಯೋ ಆಕಾರದಲ್ಲಿ ಈ ಯಂತ್ರವಿದೆ. ಇದರ ಎದುರು ಭಾಗದಲ್ಲಿ ಎರಡು ಹಾಳೆಗಳನ್ನು ಇಟ್ಟಿದ್ದು ಶಿರೋಭಾಗದಲ್ಲಿ ಪಾರದರ್ಶಿಯಾದ ನೀರಿನ ತೊಟ್ಟಿಯೊಂದನ್ನು ತೂಗಿಸಿರುವರು ಈ ಪಾರದರ್ಶಿಯಲ್ಲಿ ಎಣ್ಣೆಯಂಥ ಜಿನುಗು ರಾಸಾಯನಿಕ ದ್ರವವನ್ನು ಇಟ್ಟಿರುವರು. ಇದರಲ್ಲಿ ಒಂದು ಸಣ್ಣ ಸ್ಫಟಿಕದ ಹರಳೂ ಇದೆ ಈ ಸ್ಫಟಿಕದ ಮೇಲೆ ವಿದ್ಯುಚ್ಛಕ್ತಿಯ ಸ್ಪರ್ಶ ವುಂಟುಮಾಡಿದಾಗ, ಅದರಲ್ಲಿ ಕಂಪನ ವುಂಟಾಗುತ್ತದೆ. ಈ ನಡುಕವೇ ಸ್ವರ ನಿರ್ಮಾಣ ಕಾರ್ಯ ಜರುಗುತ್ತಿದೆ ಎಂಬುದರ ಚಿಹ್ನೆಯಾಗಿದೆ. ಟೆಲೆಫೋನ್ ರಿಸೀವರಿನಲ್ಲಿರುವ ಸೂಕ್ಷ್ಮವಾದ ಲೋಹದ ಹಾಳೆಯಂತೆ ಈ ನೀರಿನ ತೊಟ್ಟಿ ಇದೆ ಇದರಿಂದಾಗಿ ಪ್ರತಿಯೊಂದೂ ಸ್ವರವು ಒಂದು ಸೆಕೆಂಡಿಗೆ ಐದುಲಕ್ಷ ಸ್ವರತರಂಗ ವೃತ್ತವನ್ನು ಈ ನೀರಿನ ತೊಟ್ಟಿಯಲ್ಲಿ ಮಾಡುತ್ತದೆ ಸಾಮಾನ್ಯ ಮಹಾಘೋಷಕಗಳಿಗಿಂತ ಅಧಿಕ ವಿಸ್ತೃತವಾದ ತರಂಗವೃತ್ತಗಳಿವೆಂದು ವಿಜ್ಞಾನಿಗಳು ಒಪ್ಪುತ್ತಾರೆ ನಮ್ಮ ಕಿವಿಯಿಂದ ಹೆಚ್ಚೆಂದರೆ ಪ್ರತಿ ಸೆಕೆಂಡಿಗೆ ೧೬೦೦೦ ಸ್ವರತರಂಗ ವೃತ್ತದ ಧ್ವನಿಯನ್ನಷ್ಟೆ ಕೇಳಬಲ್ಲೆವು ಅತ್ಯಂತ ಏಕಾಂತದಲ್ಲಿ ಬೇರಾವ ಸ್ವರ ಮಿಶ್ರಣವೂ ಇಲ್ಲವೆಂದಾದರೆ ೩೦,೦೦೦ ಸ್ವರತರಂಗ ವೃತ್ತದ ಧ್ವನಿಯನ್ನ ನಮ್ಮ ಕಿವಿ ಗ್ರಹಿಸಬಹುದು, ಅಷ್ಟೇ ಈ ನಿಃಶಬ್ದ ಸ್ವರತರಂಗಗಳನ್ನು ನಾವು ಮುಟ್ಟಿನೋಡಿ, ತಿಳಿಯಬಹುದು ಆದರೆ ಇದರ ತೀವ್ರತೆ ಮಾತ್ರ ಅಸಹನೀಯವಿರುತ್ತದೆ ಕೈಗೆ ಹರಿತವಾದ ಚೂರಿಯನ್ನು ಮುಟ್ಟಿಸಿದಂತೆ ಇದರ ಆಘಾತವಿದೆ. ಈಗಿರುವ ನಿಃಶಬ್ದ ಸ್ವರನಿರ್ಮಾಣ ಯಂತ್ರದ ಮೇಲೆ ನೀರಿನಿಂದ ತುಂಬಿದ ಪಾತ್ರೆಯನ್ನಿಟ್ಟರೆ ಒಂದೇ ಕ್ಷಣದಲ್ಲಿ ನೀರು ಸ್ವರತರಂಗಗಳ ಆಘಾತದಿಂದ ಕುದಿಯತೊಡಗುತ್ತದೆ. ಇದರ ಮೂಲಕ ಪಾದರಸದಂಥ ಅಮಿಶ್ರ ಧಾತುವನ್ನು ಕೂಡ ನೀರಿನೊಡನೆ ಹಾಲು ಬೆರಸಿದಂತೆ ಸೇರಿಸಬಲ್ಲೆವು ಅಡುಗೆಯ ಬಗ್ಗೆ ಈ ಯಂತ್ರವನ್ನು ಚೆನ್ನಾಗಿ ಉಪಯೋಗಿಸಬಹುದೆಂದು ಸಿದ್ಧವಾಗಿದೆ. ಈಗಿನ ಯಂತ್ರ ಸ್ವಲ್ಪ ತುಟ್ಟಿಯಾಗಿದೆ' ನಾಲ್ಕು ಸಾವಿರ ರುಪಾಯಿ ಬೆಲೆ ಬೀಳುತ್ತದೆ. ಆದರೆ ಇನ್ನು ಕೆಲವೇ ದಿನಗಳಲ್ಲಿ ಮನೆ ಮನೆಗೂ ಒಂದು ನಿ:ಶಬ್ದ ಸ್ವರನಿರ್ಮಾಣ ಯಂತ್ರವನ್ನು ಅಗ್ಗದರದಲ್ಲಿ ಪೂರೈಸುವ ಪ್ರಯತ್ನಗಳು ನಡೆದಿವೆ. ಇದರಿಂದ ಅತಿಥಿಗಳು ಬಂದ ಒಂದು ನಿಮಿಷದೊಳಗಾಗಿ, ಬಿಸಿಬಿಸಿ ಕೇಕನ್ನು ಬಡಿಸಲು ಸಾಧ್ಯವುಂಟು

ಚಮತ್ಕಾರದ ವರ್ಣನೆ

ಈ ಯಂತ್ರವನ್ನು ಬಿಟ್ಟರೆ, ಒಂದು ವಿಶೇಷ ರೀತಿಯ ಮುಖವಾದ್ಯದಿಂದಲೂ ಈ ನಿಃಶಬ್ದ ಸ್ವರತರಂಗಗಳನ್ನುಂಟುಮಾಡಬಲ್ಲೆವು. ನಮ್ಮ ಕಿವಿ ಈ ಧ್ವನಿಯನ್ನು ಕೇಳುವಂತಿಲ್ಲ ಹಾಗೆಂದು ಸಮತಲ ಭೂಮಿಯ ಮೇಲಿರುವ ಹಗುರವಾದ ಚೆಂಡು, ಮುಂತಾದ ಸಣ್ಣ ಪದಾರ್ಥಗಳು ಈ ತರಂಗ ಮಾರ್ಗದಲ್ಲಿದ್ದರೆ ಒಡನೆಯೇ ಥಕಥಕ ಥೈಯೆಂದು ಕುಣಿಯ ಹತ್ತುತ್ತವೆ!

ಇನ್ನೊಬ್ಬ ವಿಜ್ಞಾನಿ ತಯಾರಿಸಿದ ಕಹಳೆ ಹಗುರಾದ ಬಿರಡೆಬಿಡೆ ಅತ್ಯಂತ ಭಾರವಾದ ಕಲ್ಲಿನ ದೊಡ್ಡ ದೊಡ್ಡ ತುಂಡುಗಳನ್ನೂ ಗಾಳಿಯಲ್ಲಿ ತೇಲಿಸಿಬಿಡುತ್ತದೆ ಇದರಿಂದ ಮೊಟ್ಟೆಬೇಯಿಸಲಿಕ್ಕೂ ಸೊಳ್ಳೆ, ನುಸಿ ಮುಂತಾದುವುಗಳನ್ನು ಕೊಂದು ಹಾಕಲಿಕ್ಕೂ ಬೇಕಾದಷ್ಟು ಉಷ್ಣವನ್ನೂ ತಯಾರಿಸಲಾಗುತ್ತಿದೆ. ಈ ಕಹಳೆಯ ವೈಚಿತ್ರ್ಯವಷ್ಟು ಹೊರತು-ಸ್ವರ ಕೇಳುವಂತಿಲ್ಲ. ಈ ಕಹಳೆಯ ನಿರ್ಮಾಣಕನು ಒಂದು ಸಣ್ಣ ರೇಡಿಯೋ ಸ್ಟೇಶನನ್ನು ನಡೆಸಲಾಗುವಂತೆ ೧೦೦೦೦ ವಾಟ್ ವಿದ್ಯುಚ್ಛಕ್ತಿಯನ್ನೂ ಇದರಿಂದ ಪಡೆಯಬಹುದೆಂದು ಹೇಳುತ್ತಾನೆ.

ಇನ್ನೊಬ್ಬ ಮೂಕಸ್ವರ ವಿಶೇಷಜ್ಞನು ಮೋಟಾರು ಗಾರೇಜಿನ ಬಾಗಿಲನ್ನು ತೆರೆಯಬಲ್ಲ ಹಾಗೆಯೇ ವಿದ್ಯುದ್ದೀಪಗಳನ್ನು ಉರಿಸಬಲ್ಲ ಒಂದು ಪೀಪಿಯನ್ನು ಸಿದ್ಧಗೊಳಿಸಿರುವನು. ಬಾಗಿಲಿಗೆ ಹಾಕಿದ ಬೀಗವನ್ನು ತೆರೆಯಲಿಕ್ಕೂ, ಹಾಕಲಿಕ್ಕೂ, ವಿದ್ಯುದ್ದೀಪ ಉರಿಸಲಿಕ್ಕೂ ನೊಂದಿಸಲಿಕ್ಕೂ, ನಾಯಿಯನ್ನು ಕರೆಯಲಿಕ್ಕೂ, ಒಲೆಯನ್ನು ಉರಿಸಲಿಕ್ಕೂ ಅಡುಗೆ ಮಾಡಲಿಕ್ಕೂ ಹೀಗೆ ಒಂದೊಂದು ಕೆಲಸಕ್ಕೆ ಒಂದೊಂದು ಪೀಪಿ ಮಾಡಬೇಕೆಂಬ ಹವಣಿಕೆ ಇವನದು. ಅಗತ್ಯ ಬಿದ್ದಂತೆಲ್ಲ ಕಿಸೆಯಿಂದ ಒಂದು ಪೀಪಿಯನ್ನು ತೆಗೆದು ಊದಿದರೆ ಸರಿ ಕೆಲಸ ಮುಗಿಯಿತು

ವಿದ್ಯುಚ್ಛಕ್ತಿಯ ಬಲದಿಂದ ಕೆಲಸಮಾಡುವ ಕ್ಷೌರಕತ್ತಿಯ ನಿರ್ಮಾಣಕನೊಬ್ಬ ವಸ್ತ್ರಗಳನ್ನು ಇನ್ನೂ ಮಡಿಯಾಗಿ ಒಗೆಯಲು ಬರುವಂತೆ ಒಂದು ಯಂತ್ರ ಸೃಷ್ಟಿಸುವ ಹವಣಿಕೆಯಲ್ಲಿರುವನು ಈ ಯಂತ್ರದಲ್ಲಿ ಸ್ವರತರಂಗಗಳಿಂದ ವಸ್ತ್ರವು ತನ್ನಿಂದ ತಾನೆ ಮಡಿಯಾಗುತ್ತದೆ.

[೧೦ನೇ ಪುಟ ನೋಡಿರಿ]

ಆಗ--?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ಮಡಿಯುವುದು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ, ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿ ಇರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕಂಡೊಡನೆ ನಿಮ್ಮದೇ ಆಗುವ, ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ, ನಿಮ್ಮ ನಾಡಿನ

ಈ ಕಂಪೆನಿಯಲ್ಲಿಯೇ ವಿಮೆ ಇಳಿಸಿರಿ

ದಿ ಕೆನರಾ ಮ್ಯೂಚುವಲ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ ಭಾರತ. ಸ್ಥಾಪನೆ: ೧೯೩೫

The Canara Mutual Assurance Co.' Ltd.

Head Office: UDIPI, S NDIA. Estd: 1935

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತಿದೆ, ಬಕ್ಕ ಮಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಸ್ಪೆಶಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ನಮ್ಮ ರಾಷ್ಟ್ರೀಯ ಸಮಸ್ಯೆಗಳ ಸ್ವರೂಪ

ಲೇಖನಾಂಕ ೩:— ಸಾಮಾನ್ಯ ಕುಟುಂಬದ ಆರ್ಥಿಕ ಹಿನ್ನೆಲೆ

ಸುಪ್ರಸಿದ್ಧ ಅರ್ಥಶಾಸ್ತ್ರಜ್ಞ ಕಾಲಿನ್ ಕ್ಲಾರ್ಕ ಹೇಳುವಂತೆ "ಸಾಧಾರಣ ವರ್ಗದ ಕೈಗಾರಿಕೆಗಳಲ್ಲಿ ನಿರತರಾದ ಜನರ ಸರಾಸರಿಯು ಹೆಚ್ಚಿದಲ್ಲಿ ಪ್ರತಿಯೊಬ್ಬನ ಸಂಪಾದನೆಯ ಮಟ್ಟ ಕೂಡ ಏರುತ್ತದೆ" ಎನ್ನಬಹುದು. ಪ್ರಗತಿಶೀಲವಾದ ರಾಷ್ಟ್ರದ ಪರೀಕ್ಷೆಯೇ ಇದೆಂದು ಅವನ ಅಭಿಮತ.

ನಮ್ಮ ಮಟ್ಟಿಗೆ ಕೃಷಿ ಅರಣ್ಯ ಹಾಗೂ ಮತ್ಸ್ಯ ವ್ಯವಸಾಯವೆಂದರೆ ಪ್ರಧಾನ ಕೈಗಾರಿಕೆ. ವಿವಿಧ ಯಂತ್ರೋಪಕರಣಗಳ ತಯಾರಿ, ಗಣಿಗಾರಿಕೆ ಮತ್ತಿತರ ಉದ್ಯಮಗಳು ಮಧ್ಯಮ ವರ್ಗಕ್ಕೆ ಸೇರಿವೆ. ಸಾಧಾರಣ ವರ್ಗಕ್ಕೆ ಸೇರಿದ ಕೈಗಾರಿಕೆಗಳೆಂದರೆ, ವಾಣಿಜ್ಯ, ಸಾರಿಗೆ, ಸಂಬಳ ಪಡೆದು ಸಲ್ಲಿಸುವ ಸೇವೆ ಎನ್ನಬಹುದು. ಭಾರತದ ಕುರಿತು ಹೇಳುವಾಗ ೧೯೩೧ರಲ್ಲಿ ಒಂದಲ್ಲ ಒಂದು ಕೆಲಸವನ್ನು ಅವಲಂಬಿಸಿದ್ದವರು ಒಟ್ಟು ಜನಸಂಖ್ಯೆಯ ೪೩.೭% ಮಾತ್ರ. ಇಷ್ಟು ಕಡಿಮೆ ಜನರಲ್ಲಿಯೂ ಹೆಚ್ಚಿನವರು ಕೃಷಿಯೇ ಮುಂತಾದ ಪ್ರಧಾನ ಕೈಗಾರಿಕೆಯನ್ನು ಅವಲಂಬಿಸಿದ್ದರು (೭೫.೯%). ಮಧ್ಯಮ ವರ್ಗದಲ್ಲಿ ೧೦.೩% ಜನರೂ ಸಾಧಾರಣ ವರ್ಗದ ಕೈಗಾರಿಕೆಗಳಲ್ಲಿ ೧೩.೮% ಜನರೂ ನಿರತರಾಗಿದ್ದರು. ಇಂಡೋನೇಶಿಯಾ, ಮಲಯಾ, ಸಯಾಮ್, ಮುಂತಾದ ಉಳಿದ ಏಶಿಯಾ ರಾಷ್ಟ್ರಗಳ ಪರಿಸ್ಥಿತಿಯಾದರೂ ಇದಕ್ಕಿಂತ ಹೆಚ್ಚು ಭಿನ್ನವಾಗಿಲ್ಲ. ಹಾಗೆಂದು ಅಮೇರಿಕ, ಕೆನಡಾ, ಬ್ರಿಟನ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್‌ಗಳಂತ ರಾಷ್ಟ್ರಗಳಲ್ಲಿ ಕೆಲಸ ನಿರತರಾಗಿರುವ ಜನರ ಪ್ರಮಾಣವಂತೂ ಹೆಚ್ಚು. ಜೊತೆಗೆ ಸಾಧಾರಣವರ್ಗದ ಕೈಗಾರಿಕೆಗಳಲ್ಲಿಯೇ ಹಾಗೆ ಕೆಲಸ ನಿರತರಾದವರಲ್ಲಿ ಅರ್ಧಕ್ಕಿಂತ ಹೆಚ್ಚು ಮಂದಿ ತುಂಬಿರುವುದೊಂದು ವೈಶಿಷ್ಟ್ಯ. ಕೃಷಿ ಪ್ರಧಾನವಾದ ದೇಶಗಳೆಂದು ಹೆಸರುಗೊಂಡ ಆಸ್ಟ್ರೇಲಿಯಾ, ಅರ್ಜೆಂಟೀನ ಮತ್ತು ನ್ಯೂಜಿಲೇಂಡುಗಳಲ್ಲಿ ಕೂಡಾ ಪ್ರಧಾನ ಕೈಗಾರಿಕೆಯಲ್ಲಿ ನಿರತರಾದವರ ಪ್ರಮಾಣ ೨೫% ಮಾತ್ರ. ಹಾಗೆಂದು ನಮ್ಮಲ್ಲಿ ಈ ಮೊದಲೇ ಹೇಳಿದಂತೆ ಇದು ೩% ಮತ್ತು ಸಾಧಾರಣ ವರ್ಗದ ಕೈಗಾರಿಕೆಯಲ್ಲಿ ಇರುವವರು ೨೦.೧%

ಸಂಪ್ರದಾಯ ಶರಣರು

ಇಷ್ಟು ವಿಷಮ ಪರಿಸ್ಥಿತಿ ಇರುವಾಗ ಇದರ ಭೀಕರತೆಯನ್ನು ಇನ್ನೊಂದು ಸಂಗತಿ ಮತ್ತಷ್ಟು ಹೆಚ್ಚಿಸುತ್ತದೆ. ೧೯೩೧ರ ಜನಸಂಖ್ಯೆಗಳಿಗನುಸಾರವಾಗಿ ನಮ್ಮ ಜನಸಂಖ್ಯೆಯಲ್ಲಿ ೦-೧೫ ವರ್ಷ ವಯಸ್ಸಿನವರು ೪೧.೬% ೧೫-೪೦ ವರ್ಷ ವಯಸ್ಸಿನವರು ೪೧.೩% ಮತ್ತು ೪೦ ವರ್ಷ ವಯಸ್ಸಿಗಿಂತಲೂ ಮಿಕ್ಕಿದವರು ೧೭%. ಒಂದು ರಾಷ್ಟ್ರವು ಉದ್ಧಾರ ಹೊಂದಬೇಕಿದ್ದರೆ ಮೈಮುರಿದು ದುಡಿಯಬಲ್ಲ ನಡುವಯಸ್ಸಿನ ಜನರ ಪ್ರಮಾಣ ತುಂಬ ಹೆಚ್ಚಿರಬೇಕು. ರಾಷ್ಟ್ರವನ್ನು ಕಟ್ಟುವ ಶಿಲ್ಪಿಗಳೆಂದರೇನೆ ತರುಣ-ತರುಣಿಯರ ವರ್ಗ. ನಮ್ಮಲ್ಲಿ ನಡುವಯಸ್ಸಿನವರು ೧೩%-ರಷ್ಟು ಹೆಚ್ಚು ಸಂಖ್ಯೆಯಲ್ಲಿದ್ದಾರೆ (ಬೇರೆ ದೇಶಗಳ ಸ್ಥಿತಿಗತಿಯ ಮೇಲಿಂದ ಈ ಸಂಖ್ಯೆಯೂ ತೃಪ್ತಿಕರವಿಲ್ಲವೆಂಬ ಮಾತು ಬೇರೆ) ಹಾಗಾದರೂ—ಇವರೆಲ್ಲರೂ ದುಡಿಮೆಯಲ್ಲಿ ನಿರತರಾಗಿರುವರೆಂದೇನು ನಿಯಮವಿಲ್ಲ. ನಮ್ಮ ಸಮಾಜದ ಕಟ್ಟುನಿಟ್ಟುಗಳು, ಜಾತಿಮತಗಳ ರೀತಿ ರಿವಾಜುಗಳು, ಮಧ್ಯಮವರ್ಗದ ಸ್ತ್ರೀ ಪುರುಷರನ್ನು ಮುಖ್ಯವಾಗಿಯೂ ಉಳಿದವರನ್ನು ಸಾಮಾನ್ಯವಾಗಿಯೂ ಕೆಲಸಗೇಡಿಗಳಾಗಿ ಪರಿವರ್ತಿಸಿವೆ. ಹೀಗೆ ಅವಕಾಶವಿದ್ದರೂ ಸಂಪ್ರದಾಯ ಶರಣರಾಗಿ ಕೆಲಸಗೇಡಿಗಳಾಗಿ ಕುಳಿತಿರುವವರು ಏನಿಲ್ಲೆಂದರೂ ೧೦% ದಷ್ಟು ಇರಬಹುದು. ಹೀಗೆ ನಡುವಯಸ್ಸಿನಲ್ಲಿ ನಿಜವಾಗಿ ದುಡಿದುಣ್ಣುವವರು ೩೧.೩%ದಷ್ಟು ಕಡಿಮೆ ಇದ್ದು ಉಳಿದ ೬೮.೭% ಜನರು ಇವರನ್ನು ಅವಲಂಬಿಸಿ ಕುಳಿತಿರುವರು. ದೇಶದ ಒಟ್ಟು ಜನಸಂಖ್ಯೆಯಲ್ಲಿ ನಿಜವಾಗಿಯೂ ಕೆಲಸ ನಿರತರಾದವರ ಸರಾಸರಿಯನ್ನು ಹೀಗೆ ಸೂಚಿಸಬಹುದು:- ಬ್ರಿಟನ್ ೬೫%, ಫ್ರಾನ್ಸ್ ೬೧%, ಸ್ವೀಡನ್ ೬೬%, ಕೆನಡಾ ೬೩%, ಇಟಲಿ ೫೯%, ಅಮೆರಿಕಾ ೬೫% ಮತ್ತು ಭಾರತ ೩೧%. ನಮ್ಮಲ್ಲಿ ಕೆಲಸವಿಲ್ಲದ ನಿರುದ್ಯೋಗಿಗಳಿಂದಾಗಿಯೇ ಉದ್ಧಾರದ ಮಾರ್ಗ ತಡೆದು ನಿಂತಿದೆ. ಈ ನಿರುದ್ಯೋಗಿಗಳ ಸಂಖ್ಯೆಯನ್ನು ಹೆಚ್ಚಿಸುವಲ್ಲಿ ಕೆಲಮಟ್ಟಿಗೆ ನಮ್ಮ ಸಂಪ್ರದಾಯಗಳೂ ಸಹಕಾರ ನೀಡಿವೆ.

ಹೆಚ್ಚುತ್ತಿರುವ ಜನಸಂಖ್ಯೆ

ಆರ್ಥಿಕ ಸ್ಥಿತಿಯನ್ನು ಬುಡಮೇಲು ಮಾಡುವ ಇನ್ನೊಂದು ಸಂಗತಿ ಹೆಚ್ಚುತ್ತಿರುವ ಜನಸಂಖ್ಯೆ: ೧೯೪೧ನೇ ಇಸವಿಯಿಂದ ೧೯೫೧ರ ಅವಧಿಯಲ್ಲಿ ಜನಸಂಖ್ಯೆಯು ೧೩.೫%ದಷ್ಟು ಬೆಳೆದುಕೊಂಡಿತು. ಈ ಸಂಗತಿಯು ನಮ್ಮ ಆಹಾರದ ಅಭಾವವನ್ನು, ಮನೆಗಳ ಅಭಾವವನ್ನು, ಉದ್ಯೋಗ ಹಾಗೂ ಶೈಕ್ಷಣಿಕ ಸೌಕರ್ಯದ ಪ್ರಶ್ನೆಯನ್ನು ಗಡಗಡನೆ ನಡುಗಿಸುತ್ತದೆ! ಹುಟ್ಟುವ ಮಕ್ಕಳ ಆರೈಕೆ, ಪೋಷಣೆ, ಶಿಕ್ಷಣ ಹಾಗೂ ಉದ್ಯೋಗಗಳನ್ನು ಒದಗಿಸಿ ಕೊಡುವಷ್ಟರ ಮಟ್ಟಿಗೆ ನಾವು ಸ್ವಾವಲಂಬಿಗಳಾಗಿದ್ದೇವೆಯೆ? ಇಲ್ಲವೆಂಬುದೇ ಬರುವ ಉತ್ತರವಾದುದರಿಂದ ಪರಿಸ್ಥಿತಿ ಚೆನ್ನಾಗುವ ಲಕ್ಷಣವೇ ಇಲ್ಲವೆಂದು ನಿರಾಶೆಯಿಂದ ಒಡನುಡಿಯಬೇಕು.

ಒಟ್ಟು ೩೬ಕೋಟಿ ಜನರಲ್ಲಿ ೨೫ಕೋಟಿ ಜನರು ಕೃಷಿಯನ್ನು ಜೀವಿತೋಪಾರ್ಜನದ ಸಾಧನವೆಂಬುದಾಗಿ ಅವಲಂಬಿಸಿಕೊಂಡಿದ್ದರೂ ೫ಕೋಟಿ ಜನರು ಭೂಮಿ ಇಲ್ಲದವರು. ಕೃಷಿಯಲ್ಲಿ ನಿರತರಾದ ಕೂಲಿಗಳಿಗೆ ದೊರೆಯುವ ಸಂಬಳವು ಅತ್ಯಲ್ಪವಿರುತ್ತದೆ. ಭಾರತದಲ್ಲಿ ನಾಲ್ಕು ರಾಜ್ಯ ಸರಕಾರಗಳು ಮಾತ್ರ ಈ ವರೆಗೆ ಕೃಷಿ ಮಜೂರಿಯ ಕನಿಷ್ಠ ಮಿತಿಯನ್ನು ಕಾಯಿದೆ ಮೂಲಕ ನಿರ್ಧರಿಸಿವೆ. ಜಮೀನುದಾರಿ ಪದ್ಧತಿಯೇ ಮುಂತಾದ ಮಧ್ಯ ಯುಗದ ರೀತಿ ನೀತಿಗಳಿಂದಾಗಿ ನಮ್ಮ ರೈತರ ಪರಿಸ್ಥಿತಿಯು ಶೋಚನೀಯ ಮಟ್ಟಕ್ಕೆ ಇಳಿದಿದೆ. ಇದನ್ನು ಹೆಚ್ಚಿಸಲಿಕ್ಕೇ ಎಂಬಂತೆ ನಮ್ಮ ಸರಾಸರಿ ಹಿಡುವಳಿಯ ವಿಸ್ತಾರವೂ ಇದೆ. ಕೃಷಿಯೋಗ್ಯ ಹಾಗೂ ಅಯೋಗ್ಯವಾದ ಭೂಮಿ ಎರಡೂ ಸೇರಿದರೂ ನಮ್ಮ ಸರಾಸರಿ ಹಿಡುವಳಿಯು ೫ ಎಕ್ರೆಯನ್ನು ಮೀರಿರುವುದಿಲ್ಲ. ಬ್ರಿಟನಿನಲ್ಲಿ ೨೦ ಎಕ್ರೆ, ಅಮೇರಿಕಾದಲ್ಲಿ ೧೪೫ ಎಕ್ರೆ ಈ ಪ್ರಮಾಣವಿದೆ ಎಂಬುವನ್ನು ಲಕ್ಷಿಸಿದರೆ ನಾವು ಮೂಗಿನ ಮೇಲೆ ಬೆರಳಿಡಬೇಕು! ನಮ್ಮಲ್ಲಿ ೪೪% ಹಿಡುವಳಿಯು ಎರಡೆಕ್ರೆಗೂ ಕಡಿಮೆ ವಿಸ್ತಾರವಾಗಿದೆ. ೨೭% ಎರಡರಿಂದ ಐದೆಕರೆಯಷ್ಟು, ೧೫% ೫ರಿಂದ ೧೦ ಎಕ್ರೆಯಷ್ಟು, ೧೪% ೧೦ ಎಕ್ರೆಗೂ ಹೆಚ್ಚು ಇದೆ ಎಂದು ಅಂಕೆ ಸಂಖ್ಯೆಗಳು ತಿಳಿಸುತ್ತವೆ.

ಅವಲಂಬಿತರೇ ಅಧಿಕ

ನಮ್ಮ ಜೀವನ ಯಾಪನೆಯು ಆರ್ಥಿಕ ಉಬ್ಬಣಾವಸ್ಥೆಯು ಈ ದಿನಮಾನಗಳಲ್ಲಿ ಅನರ್ಥಕಾರಿಯಾದ ರೀತಿ ವಿಷಮಿಸಿದೆ. ಹಣದ ಉಬ್ಬರವನ್ನು ನಿಯಂತ್ರಿಸುವಲ್ಲಿ ಬ್ರಿಟನು ಅಮೇರಿಕೆಗಳಿಗಿಂತ ಭಾರತ ಬಹಳ ಹಿಂದುಳಿದಿದೆ ಎಂಬುದಕ್ಕೆ ನಮ್ಮ ಜೀವನ ವೆಚ್ಚದ ಸೂಚಿಯು ತೋರಿಸುವ ಪರಮಾವಧಿ ಸಂಖ್ಯೆಯು ನಿದರ್ಶನವಾಗಿದೆ. ಇದರ ಜೊತೆಗೆ ನಮ್ಮ ರೈತರಿಗೆಲ್ಲ ಒಟ್ಟಿಗೆ ೯೦೦ ಕೋಟಿ ರುಪಾಯಿ ಸಾಲವಿದೆ ಎಂಬ ಸಂಗತಿ ತಿಳಿದರೆ ಎದೆಯೊಡೆದೇ ಹೋದೀತು. ಗ್ರಾಮಾಂತರಗಳಲ್ಲಿ ಒಬ್ಬನ ಆದಾಯವು ವರ್ಷಕ್ಕೆ ೪೪ ರುಪಾಯಿಯೆಂದೂ ಅದೇ ಸಮಯ ವೆಚ್ಚ ಮಾತ್ರ ೬೧ ರುಪಾಯಿಯೆಂದೂ ಗೊತ್ತಾಗಿದೆ. ಒಂದು ಸಾಮಾನ್ಯ ಕುಟುಂಬವು ತನ್ನ ಆದಾಯದ ೮೫% ದಷ್ಟನ್ನು ಕೇವಲ ಅನ್ನಕ್ಕಾಗಿ ವ್ಯಯಿಸುತ್ತಿದೆ. ಪ್ರತಿ ೧೬ ಕೃಷಿ ಮಜೂರರ ೧೩ ಮಂದಿಗೆ ಸಾಲವಿದೆ. ಪ್ರತಿಯೊಂದು ಕುಟುಂಬದ ಸರಾಸರಿ ಸಾಲ ೨೫೦ ರುಪಾಯಿ. ಕೇಂದ್ರದ ಕೂಲಿಕಾರ ಖಾತೆಯು ಪ್ರಸಿದ್ಧಗೊಳಿಸಿದಂತೆ, ಭಾರತದ ಸಾಮಾನ್ಯ ಕುಟುಂಬವೊಂದರಲ್ಲಿ ೫.೬ ಜನರು ಇದ್ದಾರೆ. ಇವರಲ್ಲಿ ಸಂಪಾದನೆ ಮಾಡುವವರು ೧.೫ ಜನ ೦.೫ ಸಹಾಯಕರು, ಮತ್ತುಳಿದ ೩.೬ ಮಂದಿ ಅವರನ್ನು ಅವಲಂಬಿಸಿದವರು ಇರುವರು. ಹಾಗೆಂದು ಕೈಗಾರಿಕೆಯಲ್ಲಿ ನಿರತರಾದ ಕುಟುಂಬದಲ್ಲಿ ಇರುವ ಜನ ೪.೮ ಮಾತ್ರ. ಅದರಲ್ಲೂ ೨.೧ ಸಂಪಾದಿಸುವವರು, ೦.೬ ಸಹಾಯಕರು, ಮತ್ತು ೨.೧ ಜನ ಮಾತ್ರ ಅವಲಂಬಿತರು. ಹೀಗೆ ನಮ್ಮ ಸಾಮಾನ್ಯ ಕುಟುಂಬದ ಆರ್ಥಿಕ ಚಿತ್ರವಿರುವುದರಿಂದ ಇದನ್ನು ಸುಧಾರಿಸುವ ಕಾರ್ಯ ಎಷ್ಟು ಜಿಗುಟಾದ ಸಂಗತಿ ಎಂಬುದಾಗಿ ಸುಧಾರಿಸಲಾರದಷ್ಟು ಪರಿಸ್ಥಿತಿ ವಿಷಮಿಸಿದೆಯೆಂದೂ ಪ್ರತ್ಯೇಕ ಹೇಳಬೇಕಿಲ್ಲ. ಇವಕ್ಕೆಲ್ಲ ಕಾರಣವೆಂಬಂತೆ ನಮ್ಮ ಸರಕಾರದ ಒಟ್ಟು ಆದಾಯದಲ್ಲಿ ಅರೆವಾಸಿಗೂ ಹೆಚ್ಚು ಸಂರಕ್ಷಣೆ ಹಾಗೂ ಅನ್ನದ ಆಯಾತಕ್ಕಾಗಿ ಮೀಸಲಿದೆ. ಸಾಮಾಜಿಕ ಸುಧಾರಣೆಗಾಗಿ, (ಶಿಕ್ಷಣ, ಆರೋಗ್ಯ, ವೈದ್ಯಕೀಯ ಸೌಲಭ್ಯ ಇತ್ಯಾದಿಗಳಿಗೆ) ದೊರಕುವ ಆದಾಯ ಏನೂ ಮಹತ್ವ ಪಡೆದಿಲ್ಲ.

ನೀವು ಒಂದು ಸೇವಿಂಗ್ಸ್ ಬೆಂಕ ಖಾತೆಯನ್ನೇಕೆ
ತೆರೆಯಬೇಕು?

ನೀವು ಒಂದು ಸೇವಿಂಗ್ಸ್ ಬೇಂಕ್ ಖಾತೆಯನ್ನು ತೆರೆಯುವಾಗ ನೀವು ಒಂದು ಪ್ರಾಮುಖ್ಯ ಹೆಜ್ಜೆಯನ್ನು ಮುಂದಿಡುತ್ತೀರಿ. ಈ ಹೆಜ್ಜೆಯು ನಿಮ್ಮ ಹಣದ ಭದ್ರತೆ, ಜಯ ಹಾಗೂ ಭಾವೀ ಸುಖಕ್ಕೆ ನೆರವಾಗುವುದು. ಜೀವಮಾನ ಕಾಲದಲ್ಲಿ ಅನೇಕ ಸಂದರ್ಭಗಳು ಇದಿರಾದರೂ, ನಿಮ್ಮದೇ ಆದ ಕಿಂಚಿತ್ ಉಳಿತಾಯವಿಲ್ಲದೆ ಅವುಗಳು ಸಾರ್ಥಕವಾಗಲಾರವು. ಆದುದರಿಂದ ಒಂದು ಸೇವಿಂಗ್ಸ್ ಬೇಂಕ್ ಖಾತೆಯಲ್ಲಿಟ್ಟ ಎಷ್ಟು ಸ್ವಲ್ಪ ಹಣವಾದರೂ ಬೇಗನೇ ಅದು ದೊಡ್ಡ ಪ್ರಮಾಣದಲ್ಲಿ ಶೇಖರಿಸಲ್ಪಟ್ಟು ನಿಮ್ಮ ಜೀವನದ ನಿಧಿಯಾಗಿ ಪರಿಣಮಿಸುವುದು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.
ಸ್ಥಾಪನೆ: 1925 ಹೆಡ್ ಆಫೀಸ: ಉಡುಪಿ
The Canara Industrial &
Banking Syndicate Limited.
Estd: 1925 H O: UDIPI

ತೃಪ್ತಿಕರವಾದ ನಡತೆ— ಹಿತಕರವಾದ
ಊಟ— ರುಚಿಕರವಾದ ಉಪಾಹಾರ
ಇವುಗಳಿಗೆ
ಆದರ್ಶ ನಿಲಯವೆಂದರೆ
ವುಡ್ ಲೇಂಡ್ಸ್
ಉಡುಪಿ.
ಯಾತ್ರಿಕರಿಗೂ ಪ್ರವಾಸಿಕರಿಗೂ
ಸರ್ವ ಅನುಕೂಲವಾಗುವಂತೆ
ನಗರದ ಕೇಂದ್ರಸ್ಥಾನದಲ್ಲಿದೆ

ಪಾರ್ಲಿಮೆಂಟಿನ

ತಂಜಾವೂರು ರೈತ ವಿಧೇಯಕದ ಕುರಿತು ಚರ್ಚೆ

ಒಕ್ಕಲುಹಿತ ಮಸೂದೆ

ತಂಜಾವೂರಿನಲ್ಲಿ ಒಕ್ಕಲು ಹಾಗೂ ಭೂಮಾಲಿಕರ ನಡುವೆ ಎದ್ದ ಕಲಹವನ್ನು ಶಾಂತ ಮಾಡುವುದಕ್ಕಾಗಿ ಗವರ್ನರರು ಹೊರಡಿಸಿದ ವಿಧೇಯಕಕ್ಕೆ ಕಾನೂನಿನ ರೂಪವನ್ನು ಕೊಡುವ ಕೆಲಸವೀಗ ಮದ್ರಾಸು ಶಾಸನ ಸಭೆಯ ಮುಂದಿದೆ. ಒಟ್ಟು ೧೭ ಕಲಮುಗಳಿರುವ ಈ ಮಸೂದೆಯಲ್ಲಿ ಮೊದಲಿನ್ನೈದನ್ನು ಶಾಸನಸಭೆಯು ಇಷ್ಟರಲ್ಲಿಯೇ ಸ್ವೀಕರಿಸಿದೆ. ಸ್ವೀಕೃತವಾದ ಕಲಮಿನಲ್ಲಿ ೧೯೫೨ನೇ ದಶಂಬರ ೧ನೇ ತಾರೀಕಿಗೆ ಬೇಸಾಯವನ್ನು ಮಾಡುತಿದ್ದ ಎಲ್ಲ ಒಕ್ಕಲುಗಳಿಗೂ ಅಂದಿನಿಂದ ಐದು ವರ್ಷಗಳವರೆಗೆ ತನ್ನ ವ್ಯವಸಾಯ ಕ್ಷೇತ್ರದ ಮೇಲೆ ಅಧಿಕಾರವನ್ನು ಕೊಡುವುದು ಪ್ರಾಮುಖ್ಯವಾದುದೆನ್ನಬಹುದು. ಆ ತಾರೀಕಿಗೆ ಬೇಸಾಯದಲ್ಲಿ ತೊಡಗಿದ್ದು ಈಗ ಒಕ್ಕಲೆಬ್ಬಿಸಲ್ಪಟ್ಟಿರುವವರನ್ನು ಪುನಃ ಪ್ರತಿಕ್ಷೇಪಿಸುವುದಕ್ಕೂ ಈ ಕಲಮು ಅವಕಾಶಕೊಡುತ್ತದೆ. ಇದರ ಮೇಲೆ ಚರ್ಚೆನಡೆದಾಗ ಹಲವು ಉಪಸೂಚನೆಗಳೂ ತಿದ್ದುಪಡಿಗಳೂ ಮಂಡಿಸಲ್ಪಟ್ಟವು. ಕೆಲವರು ಇನ್ನೂ ಐದುವರ್ಷಗಳ ಹಿಂದಿನ ತಾರೀಕಿಗೆ ಈ ಕಲಮನ್ನು ವ್ಯಾಪಕಗೊಳಿಸಬೇಕೆಂದರೆ ಇನ್ನು ಕೆಲವರು ೧೯೪೮ರಷ್ಟು ಹಿಂದೆ ಬೇಸಾಯ ಮಾಡುತಿದ್ದವರಿಗೂ ಈಗ ತಮ್ಮ ವ್ಯವಸಾಯ ಕ್ಷೇತ್ರದ ಮೇಲೆ ಅಧಿಕಾರ ಕೊಡಬೇಕೆಂದು ಹೇಳಿದರು. ಆದರೆ ಮಾನ್ಯ ಮಂತ್ರಿ ಮಾಣಿಕ್ಯವೇಲು ನಾಯಕ್ಕರರೂ ಮುಖ್ಯಮಂತ್ರಿ ರಾಜಗೋಪಾಲಾಚಾರ್ಯರೂ ಇದಕ್ಕೆ ತಕ್ಕ ಸಮಾಧಾನವನ್ನು ಕೊಟ್ಟರು. ಸುಬ್ರಹ್ಮಣ್ಯಂ ಸಮಿತಿಯ ವರದಿಯು ಕಳೆದ ವರ್ಷ ತಾನೆ ಪ್ರಕಟಗೊಂಡುದರಿಂದ ಮತ್ತು ಈಗ ನಿರ್ಣಯಿಸಿದ ದಿನವು ವ್ಯವಹಾರಿಕವಾಗಿ ನ್ಯಾಯವೆಂದೆನಿಸುವುದರಿಂದ ಇದನ್ನು ಇದ್ದಂತೆಯೇ ಅಂಗೀಕರಿಸಬೇಕೆಂದು ಅವರು ಕೇಳಿಕೊಂಡರು. ಸಭೆಯು ಅದನ್ನು ಬಹುಮತದಿಂದ ಮಾನ್ಯ ಮಾಡಿತು. ರೈತನ ಅಧಿಕಾರವನ್ನು ಕಾಯಂ ಮಾಡುವ, ಮಸೂದೆಯನ್ನು ಉಳಿದ ಜಿಲ್ಲೆಗಳಿಗೂ ವಿಸ್ತರಿಸುವ, ಹಾಗೂ ರೈತನ ಪಾಲನ್ನು ಒಟ್ಟು ಉತ್ಪಾದನೆಯ ೫೫ ಅಥವಾ ೬೦ ಶೇಕಡಾಕ್ಕೆ ಏರಿಸುವ ಸೂಚನೆಗಳು ಬಿದ್ದು ಹೋದವು.

ನಿಲುವಳಿ ಸೂಚನೆಗಳು

ಈ ಅಧಿವೇಶನದಲ್ಲಿ ಒಂದು ಮೋಜಿನ ಸಂಗತಿ ನಡೆಯಿತು. ಸಭೆಯ ಮುಂದಿರುವ ಕಾರ್ಯಕಲಾಪಗಳನ್ನು ಬದಿಗಿರಿಸಿ, ಮಹತ್ವದ ಹಾಗೂ ಅಗತ್ಯದ ಉಳಿದ ಸಂಗತಿಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂಬುದಾಗಿ ಅನೇಕ ನಿಲುವಳಿ ಸೂಚನೆಗಳು ಮಂಡಿಸಲ್ಪಟ್ಟವು. ಸಭಾಧ್ಯಕ್ಷರಾದ ಶ್ರೀ ಶಿವ ಷಣ್ಮುಖಂ ಪಿಳ್ಳೆಯವರು ಇವೆಲ್ಲವನ್ನೂ ತಿರಸ್ಕರಿಸಿದರು; ಮಾತ್ರವಲ್ಲ ಸದಸ್ಯರು ನಿಲುವಳಿ ಸೂಚನೆಯನ್ನು ಯಾವಾಗ ತರಬಹುದೆಂದೂ ಅದರ ಸ್ವರೂಪ ಹೇಗಿರಬೇಕೆಂದೂ ಚುಟುಕಿನಲ್ಲಿ ವಿವರಿಸಿದರು. ಸದಸ್ಯರ ಮಾಹಿತಿಯ ಬಗ್ಗೆ ಈ ರೀತಿ ನಿಯಮಗಳನ್ನು ಬರೆಹ ರೂಪದಲ್ಲಿ ಸಂಗ್ರಹಿಸಿ ಪ್ರತಿಯೊಂದೂ ಭಾಷೆಯಲ್ಲಿ ಅನುವಾದ ಮಾಡಿ, ಸದಸ್ಯರಿಗೆ ಒದಗಿಸಲಾಗುವುದೆಂದೂ ಹೇಳಿದರು. ನಿಲುವಳಿ ಸೂಚನೆಗಳ ಸ್ವರೂಪವನ್ನು ನೋಡಿದಲ್ಲಿ, ನಮ್ಮ ಅನೇಕ ಸದಸ್ಯರಿಗೆ ಶಾಸನ ಸಭಾ ಕಾರ್ಯಕಲಾಪಗಳ ಪ್ರಾಥಮಿಕ ಮಾಹಿತಿ ಕೂಡ ಇಲ್ಲವೆಂದು ವ್ಯಕ್ತವಾಗುತ್ತದೆ. ಮಂಗಳವಾರ ದಿನ (ತಾ ೨೪) ಮಂಡಿಸಲ್ಪಟ್ಟ ಎರಡು ನಿಲುವಳಿ ಸೂಚನೆಗಳು ಶ್ರೀ ಪೋತಿ ಶ್ರೀ ರಾಮುಲು ಎಂಬವರು ಆಂಧ್ರ ಪ್ರಾಂತ ರಚನಾ ಸಂಬಂಧದಲ್ಲಿ ಕೈಗೊಂಡ ೫೮ ದಿನಗಳ ಉಪವಾಸದ ಪರಿಣಾಮವನ್ನೂ, ಮಲಬಾರಿನಲ್ಲಿ ಒಂದು ನೇಯಿಗೆ ಕಾರ್ಖಾನೆಯಲ್ಲಿ ೬೯ ಮಂದಿ ಕೆಲಸಗಾರರನ್ನು ತೆಗೆದುಹಾಕಿರುವುದರಿಂದ ಉಂಟಾದ ಗಂಭೀರ ದುಸ್ಥಿತಿಯನ್ನೂ ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಿರ್ದೇಶಿಸುತಿದ್ದವು. ಆಂಧ್ರ ಪ್ರಾಂತರಚನೆಯು ಕೇಂದ್ರ ಸರಕಾರಕ್ಕೆ ಸಂಬಂಧಿಸಿದ ವಿಷಯವೆಂದೂ ವ್ಯಕ್ತಿಗಳು ಸ್ವೇಚ್ಛೆಯಿಂದ ಕೈಕೊಳ್ಳುವ ಉಪವಾಸಕ್ಕೆ ಸರಕಾರ ಹೊಣೆಯಾಗಲಾರದೆಂದೂ ಸಭಾಧ್ಯಕ್ಷರು ನಿರ್ಣಯವಿತ್ತರು

ಸಭಾಧ್ಯಕ್ಷರ ನಿರ್ಣಯ

ಗುರುವಾರದಿನ (ತಾ. ೨೬) ಇನ್ನು ೧೩ ನಿಲುವಳಿ ಸೂಚನೆಗಳು ಮಂಡಿಸಲ್ಪಟ್ಟವು ಎಲ್ಲವನ್ನೂ ಸಭಾಧ್ಯಕ್ಷರು ತಳ್ಳಿಹಾಕಿದ್ದಲ್ಲದೆ, ಸದಸ್ಯರ ತಿಳುವಳಿಕೆಗಾಗಿ ಹಲವು ಮಾತುಗಳನ್ನು ಹೇಳಿದರು. ಹಿಂದೆ ಶಾಸನಸಭೆಯ ಸದಸ್ಯರಾಗಿದ್ದ ಕರವಟಿ ನಗರದ ರಾಜರ ಮೃತ್ಯುವಿನಂಥ ಕಾರಣದಿಂದ ಹಿಡಿದು ಆಂಧ್ರದೇಶದಲ್ಲಿ ವ್ಯಾಪಕವಾಗಿ ಹಬ್ಬಿಕೊಂಡಿರುವ ಬರಗಾಲ ಪರಿಸ್ಥಿತಿಯ ವಿಚಾರಣೆ ನಡೆಸಬೇಕೆನ್ನುವ ವರೆಗೆ ಈ ಸೂಚನೆಗಳು ಇದ್ದುವು. ಎಸ್ ಎಸ್. ಎಲ್ ಸಿ ಪರೀಕ್ಷೆಗೆ ಮೊದಲು ಸಿಲೆಕ್ಷನ್ ಪರೀಕ್ಷೆಯನ್ನು ನಡೆಸಬೇಕೆಂದು ಸರಕಾರ ನಿರ್ಣಯಿಸಿದುದರ ವಿರುದ್ಧವಾಗಿ ಆಂಧ್ರದ ವಿದ್ಯಾರ್ಥಿಗಳು ಕೈಗೊಂಡಿರುವ ಮುಷ್ಕರ ಕೂಡ ಒಂದು ನಿಲುವಳಿ ಸೂಚನೆಯನ್ನು ಮಂಡಿಸಲಿಕ್ಕೆ ಆಸ್ಪದ ಕೊಟ್ಟಿತು. ದಶಂಬರದಲ್ಲಿಯೇ ಈ ಸಿಲೆಕ್ಷನ್ ಪರೀಕ್ಷೆಗಳು ನಡೆಯಲಿಕ್ಕಿವೆಯಾದುದರಿಂದ, ಇದನ್ನು ಅಗತ್ಯವಾಗಿ ವಿಚಾರಣೆಗೆ ತೆಗೆದುಕೊಳ್ಳಬೇಕೆಂದು ವಿರೋಧೀ ಗುಂಪಿನ ಧುರೀಣ ವಿಶ್ವನಾಥನ್ನರು ಆಗ್ರಹಮಾಡಿದರು. ಆದರೆ ಮುಷ್ಕರಗಳಿಗೆ ಸರಕಾರವು ಹೊಣೆ ಇಲ್ಲವೆಂದೂ ಮತ್ತಿತರ ಕಾರಣಗಳಿಗಾಗಿಯೂ ಸಭಾಧ್ಯಕ್ಷರು ಇದನ್ನು ತಿರಸ್ಕರಿಸಿದರು. ಬರಗಾಲ ಪರಿಸ್ಥಿತಿಯನ್ನು ಅದು ಅತ್ಯಂತ ಮಹತ್ವ ಹಾಗೂ ಅಗತ್ಯದ ಸ್ವರೂಪದ್ದಲ್ಲವೆಂಬುದಕ್ಕಾಗಿ ತಿರಸ್ಕರಿಸಿದರೆ, ಕಾನಿಗಿರಿ ತಾಲೂಕಿನಲ್ಲಿ ಮೇಯುವ ಹೊಲಗಳ ಮೇಲೆ ಬಲಾತ್ಕಾರದಿಂದ ಗೇಣಿ ವಸೂಲು ಮಾಡಿದೆಯೆಂಬ ನಿಲುವಳಿ ಸೂಚನೆಯು ಸರಕಾರದ ನಿತ್ಯ ವ್ಯವಹಾರಕ್ಕೆ ಸಂಬಂಧಿಸಿದೆಯೇ ಹೊರತು ಶಾಸನಸಭೆಯ ಕಾರ್ಯಕಲಾಪಕ್ಕೆ ವ್ಯತ್ಯಯ ತರುವಂಥದ್ದಲ್ಲ ಎಂದು ತಿರಸ್ಕೃತವಾಯಿತು. ಹಾಗೆಯೇ ಮುಂಗಡ ಪತ್ರದ ಅಧಿವೇಶನ ಕಾಲಕ್ಕೆ ಚರ್ಚಿಸಲ್ಪಡಬೇಕಾದ ವಿಷಯವೊಂದು ನಿಲುವಳಿ ಸೂಚನೆಗೆ ಕಾರಣವಾಗದೆಂದೂ ಹೇಳಿ, ಸಭಾಧ್ಯಕ್ಷರು ಶೈಕ್ಷಣಿಕ ಅನುಕೂಲತೆಯನ್ನು ಒದಗಿಸಲಾಗಿಲ್ಲ ಎಂದು ಹೇಳಿದ ಇನ್ನೊಂದು ನಿ ವಳಿ ಸೂಚನೆಯನ್ನು ತಳ್ಳಿಹಾಕಿದ

ಅರ್ಥಿಕ ಸಮಿತಿಯ ಚಟುವಟಿ

ನಮ್ಮ ಶಾಸನ ಸಭೆಯ ಕಾರ್ಯ ಲಾಪಗಳು ಹೀಗೆ ಸಾಗಿದರೆ–ಕೇಂದ್ರ ಲೋಕಸಭೆಯಲ್ಲಿ ಅತ್ಯಂತ ಮಹತ್ವ ಹಾಗೂ ಸ್ವಾರಸ್ಯದ ಚರ್ಚೆಗಳು ನಡೆ ವು ಮುಖ್ಯವಾಗಿ ಔದ್ಯಮಿಕ ಆರ್ಥಿ ಸಮಿತಿಯು ಯಾವ ಯಾವ ಕಂಪೆನಿ ಳಿಗೆ ಎಷ್ಟೆಷ್ಟು ಸಾಲವನ್ನು ಒದಗಿಸಿಕೊಟ್ಟಿದೆ ಎಂಬ ಕುರಿತು ಸದಸ್ಯರಿಗೆ ಸಂ ರ್ಣ ಮಾಹಿತಿಯನ್ನು ಕೊಡಬೇಕೆಂಬ ಸಂಗತಿಯಲ್ಲಿ ಸರಕಾರ ಹಾಗೂ ಸದಸ್ಯರೊಳಗೆ ತೀವ್ರ ವಾಗ್ಯುದ್ಧವಾಯಿತು. ಆ ಸಮಿತಿಯು ಹಣಕಾಸಿನ ವ್ಯವಹಾರಕ್ಕೆ ಸರಕಾರವು ಭದ್ರತೆಯನ್ನು ಕೊಟ್ಟಿರುವುದರಿಂದ, ಪಾರ್ಲಿಮೆಂಟ ಸದಸ್ಯರಿಗೆ ವಿವರಗಳನ್ನು ಕೇಳಿ ತಿಳಿದುಕೊಳ್ಳುವ ಅಧಿಕಾರವಿದೆ ಎಂಬ ಮಹತ್ವದ ಸಂಗತಿಯನ್ನು ಸದಸ್ಯರು ನಿವೇದಿಸಿಕೊಂಡರು. ಸರಕಾರದ ಕಡೆಯಿಂ ಹಾಗೆ ಮಾಡಲು ಬರುವುದಿಲ್ಲವೆಂದೂ, ಒಂದು ಬ್ಯಾಂಕಿಂಗ್ ಕಂಪೆನಿಯು ತನ್ನ ಗಿರಾಕಿಗಳ ಸಂಬಂಧದಲ್ಲಿ ಅನುಸರಿಸು ಗೋಪ್ಯ ಪದ್ಧತಿಯು ಇಲ್ಲಿಗೂ ಅನ್ವಯಿಸುವುದೆಂದೂ ಸಮಾಧಾನ ಹೇಳಲ್ಪಟ್ಟರೂ, ಸದಸ್ಯರ ಆಗ್ರಹವೇನು ಕಡಿಮೆಯಾಗಲಿಲ್ಲ. ಸಾಲಪಡೆಕೊಂಡವರ ಹೆಸರುಗಳು ಅಗತ್ಯ ಬೇಕಾಗಿವೆ ಎಂದೂ, ಇದರಲ್ಲಿ ಮುಚ್ಚಿಡುವಂಥದೇನೂ ಇಲ್ಲವೆಂದೂ ಸ ಸ್ಯರು ಪ್ರತಿಪಾದಿಸಿದರು. ಸಾಲಪಡೆದುಕೊಂಡ ಪಾಲು ಬಂಡವಾಳದ ಸಂಸ್ಥೆಗಳ ತಮ್ಮ ಸಾಲ ಮೂಲಗಳ ಪತ್ರದಲ್ಲಿ ಈ ಸಂಗತಿಯನ್ನು ಕಾಣಿಸಲೇ ಬೇಕಾಗಿಯಾದುದರಿಂದ ಸರಕಾರ ಗೋಪ್ಯವಾಗಿಟ್ಟುಕೊಳ್ಳುವ ಪ್ರಶ್ನೆಯೇ ಇಲ್ಲವೆಂದೂ ದಸ್ಯರು ಸ್ಪಷ್ಟೀಕರಿಸಿದರು. ಅಲ್ಲದೆ ಸಮಿತಿಯು ಮಂಜೂರುಮಾಡಿದ ಹಣವು ದುರ್ವಿನಿಯೋಗಗೊಂಡಿರುವುದೇ ಹೇಗೆಂಬುದನ್ನು ನೋಡಲಿಕ್ಕೆ ಕೂಡ, ಸಾಲಪಡೆದುಕೊಂಡವರ ಹೆಸರು ಅತ್ಯಗತ್ಯವೆಂದು ನ್ನು ಕೆಲವರು ನುಡಿದರು. ಸಭಾಧ್ಯಕ್ಷಸ್ಥಾನದಲ್ಲಿದ್ದ ಉಪಾಧ್ಯಕ್ಷ ಶ್ರೀ ಅನಂ ಶಯನ ಅಯ್ಯಂಗಾರರು ಸರಕಾರ ಇದ ಲ್ಲಿ ಮುಚ್ಚಿಡುವಂಥದೇನೂ ಇಲ್ಲೆಂಬ ಸ ಸ್ಯರ ಹೇಳಿಕೆಯನ್ನು ಎತ್ತಿಹಿಡಿದರು. ಕೊನೆಗೆ ಪ್ರಧಾನಿ ನೆಹರೂರೇ ಈ ಬಗ್ಗೆ ಸ್ವಲ್ಪು ಸಮಾಧಾನದ ಮಾತು ಹೇಳಬೇಕಾಗಿ ಬಂತು. ಸಾಲ ಪಡೆದ ಸಂಸ್ಥೆಗಳ ಹೆಸರನ್ನು ಬಹಿರಂಗಪಡಿಸುವುದಿಲ್ಲೆಂದು ಸರಕಾರ ವಚನಕೊಟ್ಟಿದೆಯಾದುದರಿಂದ ಸಂಬಂಧಿಸಿದ ಸಂಸ್ಥೆಗಳ ಒಪ್ಪಿಗೆಯ ಹೊರತು ವಚನಭಂಗ ಮಾಡಲು ಬಾರದು ಎ ವರು ಹೇಳಿದರು. ಅಲ್ಲದೆ ಅರ್ಥಸಚಿ ರು ಈಗ ಲಂಡನಿನಲ್ಲಿರುವುದರಿಂದ, ಅ ರು ಮರಳಿಬಂದ ಮೇಲೆ ಈ ಸಂಗತಿಯನ್ನು ಪುನರಾಲೋಚಿಸಲಾಗುವುದೆಂ ಹೇಳಿದರು. ಹಣದ ದುರುಪಯೋಗ ನ ದಿದೆ ಎಂದು ಮಾಡಿದ ಆರೋಪಕ್ಕೆ ನಿರ್ದಿಷ್ಟ ಉದಾಹರಣೆಗಳನ್ನು ಸರಕಾರದ ಗಮ

PLACE YOUR LIFE ASSURANCE WITH A COMPANY OF YOUR OWN - - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policyholders and Representatives. At whatever stage we welcome your association with the POPULAR.

The Popular Insurance Co. Ltd.

"Popular Buildings", MANGALORE—1.

ZANDU KESARI JIVAN

ಝಂಡೂ ಕೇಸರಿ ಜೀವನ

ಕೆಮ್ಮು, ನೆಗಡಿ, ರಾಜಯಕ್ಷ್ಮ, ಮಿದುಳು ನಿತ್ರಾಣ, ಅಕಾಲಿಕ ವೃದ್ಧಾಪ್ಯ, ಸರ್ವಸಾಮಾನ್ಯ ಬಲಹೀನತೆಗಳಿಗೆಲ್ಲಾ ಕೇಸರಿ ಜೀವನವು ಹೆಸರುವಾಸಿಯಾದದ್ದು ಅಲ್ಲದೆ ದೇಹಾರೋಗ್ಯವನ್ನು ಸಮತೂಕದಲ್ಲಿರಿಸಲು ಆದರ್ಶ ಟೋನಿಕ್ ಆಹಾರವಾಗಿದೆ. 1 ರಾತ್ಲು: ರೂ. 6-8-0 ¼ ರಾತ್ಲು: ರೂ 1-14-0

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಲಿಮಿಟೆಡ್,
ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ
2 ಶ್ರೀ ವಿ ವಿ ಶೆಣೈ, ಕೆಮಿಸ್ಟ್, ಕಾರ್ಕಳ
3 ರಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್ ಎಸ್ ಶರ್ಮ, ಹಜೂರು ರಸ್ತೆ ಮಂಗಳೂರು
ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಪ್ರತಿನಿಧಿಗಳು ಬೇಕಾಗಿದ್ದಾರೆ. ವ್ಯಾಪಾರಿ ಶರತ್ತುಗಳಿಗಾಗಿ ಬರೆಯಿರಿ.

DAMODAR & CO.,
Nainiappa Naicken Street, Park Town–**MADRAS 3.**

ಕಾರ್ಯ ಕಲಾಪ

ಅಂತರರಾಷ್ಟ್ರೀಯ ಬೌದ್ಧ ಸಾಂಸ್ಕೃತಿಕ ಸಮ್ಮೇಳನ

ನಕ್ಕೆ ತಂದುಕೊಟ್ಟಲ್ಲಿ ಅದನ್ನು ವಿಚಾರಿಸಲಾಗುವುದೆಂದು ನೆಹರೂ ಆಶ್ವಾಸನೆ ಕೊಟ್ಟರು

ಜೀವಚ್ಛವವಾದ ಒಡಂಬಡಿಕೆ

ಪಶ್ಚಿಮ ಬಂಗಾಳನಿರಾಶ್ರಿತರ ಆಸ್ತಿಯ ತಿದ್ದುಪಡಿ ಮಸೂದೆಯ ಚರ್ಚೆಯ ಸಂದರ್ಭದಲ್ಲಿ ಕೂಡ ಇಂಥದೇ ಚಕಮಕಿಗೆ ಆಸ್ಪದ ದೊರೆಯಿತು. ೧೯೫೦ರಲ್ಲಿ ಆದ ನೆಹರೂ— ಲಿಯಾಕತ್ ಒಡಂಬಡಿಕೆಯನ್ವಯ ಈ ತಿದ್ದುಪಡಿಯನ್ನು ಮಂತ್ರಿಗಳು ಮಂಡಿಸಿದ್ದು ವಾಗ್ಯುದ್ಧಕ್ಕೆ ನೆಪವಾಯಿತು. ನೆಹರೂ ಲಿಯಾಕತ್ ಒಡಂಬಡಿಕೆಯು ಸಮಾಧಿಯಾಗಿಲ್ಲವೆ? ಎಂದು ಸದಸ್ಯರು ನೇರಾಗಿ ಪ್ರಶ್ನಿಸಿದರು. ಈ ಒಡಂಬಡಿಕೆಗೆ ಜೀವವೇ ಇಲ್ಲವೆಂದೂ ಅದು ಸತ್ತು ಮಣ್ಣುಗೂಡಿದೆಯೆಂದೂ ಸದಸ್ಯರು ದುಃಖದಿಂದ ನುಡಿದರು. ಹಿಂದೂಮಹಾಸಭೆಯ ಎನ್. ಬಿ. ಖರೆಯವರು ಸರಕಾರದ ನೀತಿಯು ಪತಿವ್ರತೆಯಾದ ಹೆಂಗಸಿನಂತಿದೆ ಎಂದು ವರ್ಣಿಸಿದರು. ತನ್ನನ್ನು ಹೊಡೆದು ಬಡಿದು ದುಃಖಕ್ಕೆ ಈಡುಮಾಡುತಿದ್ದರೂ ಹಿಂದೂ ಸ್ತ್ರೀಯು ಗಂಡನನ್ನು ದೇವತೆಯೆಂದೇ ತಿಳಿದು ಪೂಜಿಸುತ್ತಿರುವಂತೆ, ಮತ್ತವನ ಸಂತೋಷಕ್ಕಾಗಿ ದುಡಿಯುವಂತೆ ಭಾರತ ಸರಕಾರವು ಪಾಕಿಸ್ತಾನದ ಮನವೊಲಿಸುತ್ತಾ ನಡೆದಿದೆ ಎಂದು ಖರೆಯವರ ಅಭಿಪ್ರಾಯ. ಗೃಹಸಚಿವರಾದ ಡಾ. ಕೈಲಾಸನಾಥ ಕಟಜೂ ಅವರು ಮಸೂದೆಯ ತಿದ್ದುಪಡಿಯ ಬಗ್ಗೆ ಈ ರೀತಿ ಭಾವೋದ್ವೇಗವನ್ನು ತೋರಿಸುತ್ತಿರುವುದು ಶೋಚನೀಯವೆಂದು ನುಡಿದರಲ್ಲದೆ — ತಿದ್ದುಪಡಿಗಳು ಮಹತ್ವದ್ದೇನಿಲ್ಲ ಎಂಬುದನ್ನೂ ಸ್ಪಷ್ಟಪಡಿಸಿದರು. ಅದೇ ದಿನ ಚರ್ಚೆಗೆ ಬಂದ ಪಾಕಿಸ್ತಾನದಿಂದ ಭಾರತಕ್ಕೆ ಓಡಿಬರುವ ಜನರ ನಿಯಂತ್ರಣ ಕಾಯಿದೆಯ ಕುರಿತು ಮಾತನಾಡುವಾಗ ಪಾಸ್ ಪೋರ್ಟು ಹಾಗೂ ವೀಸಾ ಪದ್ಧತಿ ಅನಿಷ್ಟಕರವಾದುದೆಂದು ಹಲವು ಸದಸ್ಯರು ಆಕ್ಷೇಪಿಸಿದರು. ಪಶ್ಚಿಮ ಬಂಗಾಳದ ಶ್ರೀ ಅರುಣಚಂದ್ರ ಗುಹಾರವರು ಭಾವೋದ್ದೀಪಿತರಾಗಿ ಮಾತನಾಡುತ್ತಾ, ತಾನು ರಾಜಕೀಯ ಜೀವನವನ್ನು ವಂಗ ಭಂಗದ ಚಳವಳಿಯ ದಿನಗಳಲ್ಲಿ ತೊಡಗಿದೆನೆಂದೂ, ಈಗ ಕೂಡ ಪೂರ್ವ ಹಾಗೂ ಪಶ್ಚಿಮ ಬಂಗಾಳಗಳೊಗೆ ಪ್ರತ್ಯೇಕತಾ ಭಾವನೆಯುಳಿಯಲು ಗೊಡುವುದಿಲ್ಲವಾಗಿಯೂ ಹೇಳಿದರು. ಎರಡೂ ಬಂಗಾಳಗಳು ಒಂದೇಯೆಂದು ಪರಿಗಣಿತವಾಗಿ, ಎಲ್ಲವೂ ಸುಸೂತ್ರವಾಗಿ ನಡೆಯುತ್ತಿದೆಯೆಂದುಕೊಂಡಿರುವಾಗಲೇ ಪಾಸಪೋರ್ಟಿನಂಥ ಅನಿಷ್ಟ ಪದ್ಧತಿಯು ಜಾರಿಗೆ ಬಂದು, ಜನರಿಗೆ ಕಿರುಕುಳ ಕೊಡಲು ತೊಡಗಿತೆಂದವರು ದೂರಿದರು. ಪ್ರಧಾನಿ ನೆಹರೂ ಈ ಸಂಬಂಧದಲ್ಲಿ ಆಸ್ಥೆವಹಿಸಿ, ಪಾಸಪೋರ್ಟ ಪದ್ಧತಿ ರದ್ದಾಗುವಂತೆ ನೋಡಿಕೊಳ್ಳಲು ಅವರು ಬಿನ್ನವಿಸಿದರು.

ಲಂಚಗುಳಿ ಅಧಿಕಾರಿಗಳು

ಸರದಾರ ಹುಕುಮ ಸಿಂಗರು ಲೋಕಸಭೆಯಲ್ಲಿ ಆಡಳಿತ ಯಂತ್ರದಲ್ಲಿರುವ ಲಂಚಗುಳಿತನವನ್ನು ನಿರ್ಮೂಲಿಸುವ ಉದ್ದೇಶದಿಂದ ಒಂದು ಖಾಸಗಿ ಗೊತ್ತುವಳಿಯನ್ನು ತಂದು, ಸರಕಾರವು ತನ್ನ ಸೂಚನೆಯ ತತ್ವವನ್ನು ಗ್ರಹಿಸಬೇಕೆಂದು ವಿನಂತಿ ಮಾಡಿದರು. ಸಮಗ್ರ ಭಾರತದಲ್ಲಿ ಸರಕಾರೀ ಅಧಿಕಾರಿಗಳ ಸಂಪತ್ತು ಹಾಗೂ ಸೊತ್ತುಗಳ ಕುರಿತು ವಿಚಾರಣೆಯನ್ನು ಕೈಗೊಳ್ಳುವುದಕ್ಕಾಗಿ ಒಂದು ಸಮಿತಿಯನ್ನು ನೇಮಿಸಬೇಕೆಂದು ಅವರ ಗೊತ್ತುವಳಿಯು ಹೇಳುತ್ತದೆ. ಆಡಳಿತದ ಹೊಣೆ ಹೊತ್ತಿರುವ ಅಧಿಕಾರಿಗಳು ಸೇವಾ ಜೀವನದಿಂದ ಪರಾವೃತ್ತರಾಗಿ, ಲಂಚಗುಳಿತನಕ್ಕೆ ಬದ್ಧರುವರೆಂದೂ ಈ ಪ್ರವೃತ್ತಿಯು ಈಗ ವಿರಾಟ್ ಸ್ವರೂಪವನ್ನು ತಳೆದಿದೆಯೆಂದೂ ಹುಕುಮಸಿಂಗರು ವಿವರಿಸಿದರು. ಹಲವು ಸದಸ್ಯರು ಈ ಗೊತ್ತುವಳಿಯ ಮೇಲೆ ವಿಚಾರ ಪರಿಪ್ಲುತವಾದ ಭಾಷಣ ಮಾಡಿದರು. ಆಡಳಿತ ಯಂತ್ರದಲ್ಲಿರುವ ಕೊಳೆಯನ್ನು ನಿರ್ಮೂಲಿಸಿ, ಶುದ್ಧೀಕರಣ ಮಾಡುವ ಅಗತ್ಯವನ್ನು ಅವರೆಲ್ಲರೂ ಸಮರ್ಥಿಸಿದರು. ಹಾಗೆಂದು ಸರದಾರ ಹುಕುಮಸಿಂಗರ ಗೊತ್ತುವಳಿಯನ್ನು ಯೋಗ್ಯ ಮಾರ್ಗದರ್ಶಕವಾಗಿ ಸ್ವೀಕರಿಸಲು ಅವರು ಸಿದ್ಧರಿರಲಿಲ್ಲ. ಹಿಂದೆ ಕೇಂದ್ರ ಸರಕಾರದಲ್ಲಿ ಲೋಕೋಪಯೋಗಿ ಶಾಖೆಯ ಮಂತ್ರಿಗಳಾಗಿದ್ದ ಶ್ರೀ ಎನ್. ವಿ. ಗಾಡ್ಗೀಳರು ಲಂಚಗುಳಿತನದ ಉಚ್ಚಾಟನೆಯಾಗಲೇ ಬೇಕೆಂದು ಜೋರು ಕೊಟ್ಟದ್ದಲ್ಲದೆ, ಉಗ್ರಕ್ರಮಗಳನ್ನು ಕೈಗೊಳ್ಳುವ ಅಗತ್ಯವನ್ನು ಬಿಂಬಿಸಿದರು. ಲಂಚಗುಳಿಗಳಾದ ಅಧಿಕಾರಿಗಳ ಆಸ್ತಿಯನ್ನೂ ನಾಗರಿಕ ಹಕ್ಕುಗಳನ್ನು ಕಸಿದುಕೊಳ್ಳಬೇಕು, ಚಾವಟಿ ಏಟಿನ ಶಿಕ್ಷೆಯನ್ನು ಅಥವಾ ಗಂಭೀರ ಅಪಾದನೆಗಳ ಮೇಲೆ ಮರಣ ದಂಡನೆಯನ್ನು ಕೂಡ ವಿಧಿಸಬೇಕು ಎಂದವರ ವಾದವಾಗಿತ್ತು. ಗಾಡ್ಗೀಳರು ಒಂದೆರಡು ಸಾಮಾನ್ಯ ಆದರೆ ಮಹತ್ವದ ಸೂಚನೆಗಳನ್ನೂ ಮಾಡಿದರು. ಸರಕಾರದವರು ಟೆಂಡರು ಕೊಡುವಾಗ, ಬಂದ ಅರ್ಜಿಗಳ ವಿಚಾರಣೆಗಾಗಿ ಬೇರೆಯೇ ಒಂದು ಸಮಿತಿಯನ್ನು ನೇಮಿಸುವುದೊಳಿತೆಂದೂ, ಅಧಿಕಾರಿಗಳ ನಿರ್ಣಯಕ್ಕೆ ಬಿಡಬಾರದೆಂದೂ ಅವರು ಸೂಚಿಸಿದರು. ಉಳಿದ ಕೆಲವು ಸದಸ್ಯರು ಲಂಚಗುಳಿತನದ ಆರೋಪವು ಮಂತ್ರಿಗಳ ಮೇಲೆ ಬಂದರೂ—ಅದರ ಸಮರ್ಪಕ ವಿಚಾರಣೆ ನಡೆಯಬೇಕೆಂದು ಅಭಿಪ್ರಾಯ ಪಟ್ಟರು.

ಕಮ್ಯೂನಿಸ್ಟರೊಡನೆ ವ್ಯಾಪಾರ

ಅದರ ಪ್ರಜಾ ಸೋಶಲಿಸ್ಟ ಪಕ್ಷದ ಉಪಧುರೀಣರಾದ ಶ್ರೀ ಸಾರಂಗಧರ ದಾಸರು ಒಂದೆರಡು ನಿರ್ದಿಷ್ಟ ಉದಾಹರಣೆಗಳನ್ನು ಉಲ್ಲೇಖಿಸಿ, ಮಂತ್ರಿಗಳು ತಪ್ಪು ಮಾಡಿದ ಅಧಿಕಾರಿಗಳ ಪಕ್ಷ ವಹಿಸಿ, ಸಂರಕ್ಷಣೆ ನೀಡಲು ಯತ್ನಿಸುವುದಾಗಿ ಆರೋಪಿಸಿದರು. ಕೇಂದ್ರ ಸರಕಾರದ ವಾಣಿಜ್ಯ ಶಾಖೆಯ ಹಿಂದಿನ ಕಾರ್ಯದರ್ಶಿಯೊಬ್ಬರ ಸಂಬಂಧದಲ್ಲಿ ಕೇಳಿದ ಪ್ರಶ್ನೆಗಳಿಗೆ ಮಂತ್ರಿಗಳು ಕೊಟ್ಟ ಉತ್ತರವು ಸಮರ್ಪಕವಾಗಿರದಿದ್ದುದು, ಸಂಕ್ಷೋಭೆಯನ್ನು ಹುಟ್ಟಿಸಿತ್ತು. ಈ ಅಧಿಕಾರಿಯ ಮೇಲೆ ಲಂಚಗುಳಿತನದ ಅಪಾದನೆ ಇತ್ತು. ಸದಸ್ಯರು ಕೇಳಿದ ಪೂರಕ ಪ್ರಶ್ನೆಗಳಿಗೆ ಸಮಂಜಸವಾದ ರೀತಿ ಉತ್ತರಿಸುವುದು ಇನ್ನೂ ಹೊಸಬರಾದ ಮಂತ್ರಿ ದಾತಾರರಿಗೆ ಸಾಧ್ಯವಾಗಲಿಲ್ಲ. ಉಪಾಧ್ಯಕ್ಷರು ಮಂತ್ರಿಗಳು ಸಂಭಾವ್ಯವಾದೆಲ್ಲ ಪೂರಕ ಪ್ರಶ್ನೆಗಳಿಗೆ ಸಿದ್ಧರಾಗಿ ಬರಬೇಕೆಂದು ಉಪದೇಶಿಸಿದ್ದಲ್ಲದೆ, ಪ್ರಶ್ನೆಯು ಮಿತಿಮೀರಿದಲ್ಲಿ ಅದನ್ನು ತೆಗೆದು ಹಾಕಲು ತಾವಿದ್ದೇವಿರುವೆವೆಂದೂ ಸೂಚಿಸಿದರು. ಆದರೆ ರಾಜ್ಯ ಪರಿಷತ್ತಿನಲ್ಲಿ ವಾಣಿಜ್ಯ ಶಾಖೆಯ ಉಪ ಸಚಿವರಾದ ಶ್ರೀ ಕರಮರಕರರು ಕಮ್ಯೂನಿಸ್ಟ ಸದಸ್ಯ ಶ್ರೀ ಪಿ. ಸುಂದರಯ್ಯನವರ ಗೊತ್ತುವಳಿಗೆ ಕೊಟ್ಟ ಉತ್ತರವು ಬಹಳ ಸ್ವಾರಸ್ಯವಾಗಿತ್ತು. ಭಾರತವು ಬ್ರಿಟನು ಅಮೇರಿಕೆಗಳೊಡನೆಯೇ ಈಗ ಹೆಚ್ಚಾಗಿ ವ್ಯಾಪಾರವನ್ನು ಕೈಗೊಂಡಿದೆಯೆಂದೂ, ಇ[illegible] ಪೂರ್ವ ಯುರೋಪ ಹಾಗೂ ರಶಿಯಾ-ಚೀನಾಗಳೊಡನೆ ವ್ಯಾಪಾರ ಒಪ್ಪಂದಗಳನ್ನು ಕೈಗೊಳ್ಳಬೇಕೆಂದೂ ಶ್ರೀ ಸುಂದರಯ್ಯನವರು ತಮ್ಮ ಗೊತ್ತುವಳಿಯನ್ನು ಮಂಡಿಸುತ್ತಾ ಹೇಳಿದರು. ಕರಮರಕರರು ಇದನ್ನು ವಿರೋಧಿಸಿ [illegible] ಹಾಗ್ಗ, ಭಾರತ ಸರಕಾರವು ಸುಕರ ಹಾಗೂ ದುಷ್ಕರ ನಾಣ್ಯ ವಿನಿಮಯ ಪ್ರದೇಶಗಳೆಂದು ಮಾಡಿದ ನಿರ್ಬಂಧವಿಲ್ಲದೆ ವ್ಯಾಪಾರವನ್ನು ಕೈಗೊಳ್ಳಲು ಬೇರೇನು ಅಡ್ಡಿಯೂ ಇಲ್ಲವೆಂದೂ ಮಾತ್ರವಲ್ಲ ವ್ಯಾಪಾರೀ ಒಪ್ಪಂದಗಳಿಲ್ಲದೆಯೇ ದೀರ್ಘ ಸಮಯದಿಂದ ವಾಣಿಜ್ಯ ಬೆಳೆದುಬಂದಿದೆ ಎಂಬುದನ್ನು ಉಲ್ಲೇಖಿಸಿದರು. ರಶಿಯಾ ಚೀನಾಗಳೊಡನೆ ವ್ಯಾಪಾರ ಮಾಡಬಾರದೆಂಬ ನಿರ್ಬಂಧವಿಲ್ಲವೇ ಇಲ್ಲ. ಹೀಗಿದ್ದರೂ ಆ ದೇಶಗಳ ಸರಕುಗಳಿಗೆ ನಮ್ಮಲ್ಲಿ ಪೇಟೆ ದೊರೆಯುವುದಿಲ್ಲವಾದರೆ ಅದು ಆ ದೇಶಗಳ ತಪ್ಪು, ಹೊರತು ನಮ್ಮದಲ್ಲ ಎಂದು ಕರಮರಕರರು ಹೇಳಿದ ಮಾತು ನಿಜ. ಸದಸ್ಯರೊಬ್ಬರು

(೭ನೆ ಪುಟ ನೋಡಿರಿ.)



ಹೌದು, ಅದು ಬ್ರೂಕ್ ಬಾಂಡ್ ಪ್ಯಾಕೆಟ್ಟಾಗಿದ್ದಲ್ಲಿ ಪ್ಯಾಕೆಟ್ಟಿನ ಚಹವನ್ನು ಕೊಳ್ಳುವುದು ಯಥಾರ್ಥವಾಗಿಯೂ ಅಗ್ಗ! ಬ್ರೂಕ್ ಬಾಂಡ್ ಚಹವು [illegible] ಮನೋರಂಜನೀಯ ಸುವಾಸನೆಯುಳ್ಳದ್ದು [illegible] ಈ ವಿಶ್ವಾಸದ [illegible] ನಿಮ್ಮ ಹಣದ ಸಂಪೂರ್ಣ [illegible] ಉತ್ತಮ ಚಹಾ ನಿಮಗೆ ದೊರೆಯುವುದೆಂಬುದಕ್ಕೆ [illegible] ಈ ಹೆಸರುವಾಸಿಯಾದ ಪ್ಯಾಕೆಟ್ಟಿನ ಹೆಸರುವಾಸಿಯಾದ ಚಹವನ್ನು ಕೊಂಡು, ನೀವೂ ಕೂಡ ಹಣವನ್ನುಳಿಸಬಹುದು

The Canara Banking Corporation Limited.
ಸುಲಭ ಶರ್ತಗಳಿದ್ದು, ಸಾಲಿಯಾನ್ ಸೇಕಡಾ ೪ರಂತೆ ಬಡ್ಡಿ ಗಳಿಸುವ ನಮ್ಮ
"ಪಂಚವಾರ್ಷಿಕ ಸುವರ್ಣ ಠೇವಣಾತಿಗಳು"
ಈಗಾಗಲೇ ಎಲ್ಲಾ ಕಡೆಗಳಲ್ಲಿಯೂ ಜನಾದರಣೀಯವಾಗಿವೆ. ನೀವೂ ಕೂಡಾ ನಿಮ್ಮ ಹಣವನ್ನು ಈ ಠೇವಣಾತಿಗಳಲ್ಲಿ ಏಕೆ ವಿನಿಯೋಗಿಸಬಾರದು?
ವಿಶೇಷ ಮಾಹಿತಿಗೆ,
ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.
ದಿ ಕೆನರಾ ಬ್ಯಾಂಕಿಂಗ್ ಕೊಪ್ರೊರೇಶನ್ ಲಿಮಿಟೆಡ್.
ಸ್ಥಾಪನೆ: 1906]   [ಪ್ರಧಾನ ಕಾರ್ಯಾಲಯ, ಉಡುಪಿ. (ದ ಭಾರತ)

ನವಯುಗ
ಉಡುಪಿ, ಗುರುವಾರ ೪-೧೨-'೫೩

ಅಮರ ಸಂದೇಶ

ಅಂತಾರಾಷ್ಟ್ರೀಯ ಬೌದ್ಧ ಸಾಂಸ್ಕೃತಿಕ ಸಮ್ಮೇಳನವು ಸಾಂಚಿಯಲ್ಲಿ ನಡೆದುದು ಆಕಸ್ಮಿಕ ಘಟನೆ ಎಂದು ಗಣಿಸಲು ಬರುವಂತಿಲ್ಲವೆಂಬುದನ್ನು ನಿಜವೆಂದೇ ಹೇಳಬೇಕು. ಜಗತ್ತಿನ ವ್ಯಾಪಾರಗಳನ್ನು ಸೂಕ್ಷ್ಮದೃಷ್ಟಿಯಿಂದ ಅವಲೋಕಿಸುವ ಪ್ರಾಜ್ಞರಿಗೆ ವಿಶ್ವಬಾಂಧವ್ಯದಂಥ ಉತ್ತಮ ಆದರ್ಶದ ನೆಲಗಟ್ಟನ್ನೇ ನಡುಗಿಸುವ ಘಟನೆಗಳು ತೋರಿಬರುತ್ತಿವೆ. ಈ ಶತಮಾನದ ಪೂರ್ವಾರ್ಧ ಮುಗಿಯುವುದರೊಳಗಾಗಿಯೇ ಎರಡೆರಡು ಮಹಾ ಯುದ್ಧಗಳು ತಮ್ಮ ಆಟೋಪವನ್ನು ತೋರಿಸಿ, ಭೀಕರ ಪರಿಣಾಮವನ್ನು ಉಂಟು ಮಾಡಿದ್ದಲ್ಲದೆ, ಕೊರಿಯಾದ ಪರ್ಯಾಯ ದ್ವೀಪದಲ್ಲಿ ಮೂರನೆ ಮಹಾಯುದ್ಧದ ಬೀಜಾರೋಪಣ ಕಾರ್ಯವೂ ನೆರವೇರಿದೆ. ಯುದ್ಧಗಳು ಯಾವ ಸಮಸ್ಯೆಯನ್ನು ಬಗೆಹರಿಸಲು ಸಮರ್ಥವಾಗದೆ-ಅದರ ಬದಲು ಹೊಸ ಹೊಸ ಸಮಸ್ಯೆಗಳನ್ನೆ ಹುಟ್ಟಿಸುತ್ತಿದ್ದರೂ-ಇಂದು ಜಗತ್ತಿನ ಪ್ರಬಲ ರಾಷ್ಟ್ರಗಳು ಯುದ್ಧದ ಮಾತನ್ನೆ ಜೋರುಕೊಟ್ಟು ಆಡುವುದು ಶೋಚನೀಯ. ಅದರಲ್ಲೂ ರಶಿಯಾ ಅಮೇರಿಕೆಗಳಂಥವು "ಲೋಕಶಾಂತಿ"ಯ ಹೆಸರಿನಲ್ಲಿ, ಪ್ರಚ್ಛನ್ನ ಯುದ್ಧದಲ್ಲಿ ಧುಮುಕಿರುವುದು ಒಂದು ವಿಡಂಬನೆಯೇ ನಿಜ. ಕೇವಲ ಯುದ್ಧ ಕೈದಿಗಳ ವಿನಿಮಯ ಪ್ರಶ್ನೆಯೊಂದನ್ನು ಬಗೆಹರಿಸದೆ-ಅದಕ್ಕಾಗಿ ಕಚ್ಚಾಡಿಕೊಂಡು ಕಾಲ ಕಳೆಯುವ ಮಂಗ ಬುದ್ಧಿಯನ್ನು ಈ ಎರಡೂ ಘನವಾದ ರಾಷ್ಟ್ರಗಳು ತೋರಿಸುತ್ತಿವೆ. ತನ್ಮೂಲಕ ಪರಸ್ಪರ ವಿಸಂಗತವಾದ ಮಾರ್ಗಗಳನ್ನು ಅನುಸರಿಸಿ, ತಮ್ಮ ಪರ್ಷಿಸ್ನಿನ ಬಲದಿಂದಲೂ ಸ್ಥಾನಮಾನದ ಹೆಮ್ಮೆಯಿಂದಲೂ ಲೋಕವನ್ನು ನರಕ ಸದೃಶವಾಗಿ ಪರಿವರ್ತಿಸುತ್ತಿದೆ, ಭಾರತದಂಥ ರಾಷ್ಟ್ರವು ಮಾಡುವ ಪ್ರಾಮಾಣಿಕ ಪ್ರಯತ್ನವನ್ನು ಕೂಡ ಸಹಾನುಭೂತಿಯಿಂದ ವಿಚಾರಿಸುವ ಬುದ್ಧಿ ಮಹಾರಾಷ್ಟ್ರಗಳಿಗೆ ಇಲ್ಲ. ಹೀಗೆ ಜಗತ್ತು ಸಂಕ್ಷೋಭೆಗೊಂಡು ಉನ್ಮಾದಾವಸ್ಥೆಯಲ್ಲಿ ಕುಣಿಯುತ್ತಿರುವಾಗ, ಜನರು ಮಾತ್ರ ಸುಖದಿಂದ ಬದುಕಿ ಬಾಳುವ ಮಾರ್ಗ ಯಾವುದು ಇದೆ ಎಂದು ಅರಸುತ್ತಿರುವರು. ರಾಜಕೀಯದ ದುಷ್ಪರಿಣಾಮಗಳಿಂದ ರಕ್ಷಣೆ ಪಡೆಯಲು, ಅದಕ್ಕೂ ಮಿಗಿಲಾದ ಶಕ್ತಿಯೊಂದಿದೆಯೆ ಎಂದು ಹುಡುಕುತ್ತಿರುವರು. ಖಡ್ಗದ ವಿಜಯವು ಶಾಶ್ವತವಲ್ಲವೆಂಬುದನ್ನು ಅಣುಬಾಂಬಿನಂಥ ಭೀಕರ ಅಸ್ತ್ರಗಳ ಪ್ರಯೋಗ ತೋರಿಸಿಕೊಟ್ಟಿದೆ. ಆದುದರಿಂದ ರಾಜಕೀಯವಾದ ಎಲ್ಲ ತೊಡಕು ತೊಂದರೆಗಳಿಂದ ದೂರವಿದ್ದು, ಮಾನವೀಯವಾದ ವಿಶ್ವಬಂಧುತ್ವ ಭಾವದಿಂದ ಬದುಕುವ ರೀತಿಯೊಂದು ನಮಗೆಲ್ಲ ಮಾರ್ಗದರ್ಶನಮಾಡಿದರಾಗಬಹುದೆಂದು ಎಣಿಸುವ ಕಾಲವೀಗ ಸನ್ನಿಹಿತವಾಗಿದೆ. ಜಗತ್ತು ವೈಯಕ್ತಿಕ ಹಾಗೂ ಜಾಗತಿಕ ಸಮಸ್ಯೆಗಳ ಪರಿಹಾರಕ್ಕೆ ರಾಜಕೀಯವಾದ ಬಲಾತ್ಕಾರ, ಒತ್ತಾಯ ಹಾಗೂ ಯುದ್ಧಗಳ ಮಾರ್ಗವನ್ನು ಅನುಸರಿಸಿ, ಅಯಶಸ್ಸನ್ನೆ ಹೊಂದಿದೆ. ಆದುದರಿಂದ ಉನ್ನತಾದರ್ಶವೊಂದರ ನೆರಳಿನಲ್ಲಿ, ಆಧ್ಯಾತ್ಮಿಕ ತತ್ತ್ವಾನುಷ್ಠಾನವನ್ನು ಆಶ್ರಯಿಸಿ- ಉದ್ಧಾರ ಹೊಂದಬಹುದೇ ಹೇಗೆಂಬುದನ್ನು ಇನ್ನೊಮ್ಮೆ ಪರೀಕ್ಷಿಸುವುದು ಒಳ್ಳೆಯದು. ಪ್ರಧಾನಿ ನೆಹರೂ ಹೇಳಿದಂತೆ, ಬುದ್ಧನು ಬೋಧಿಸಿದ ಪ್ರೀತಿ, ಸಹನೆ, ದಯೆ ಈ ತತ್ವಗಳನ್ನು ನಮ್ಮೆಲ್ಲರ ನಿತ್ಯ ವ್ಯವಹಾರದಲ್ಲೂ ಜೀವನದಲ್ಲೂ ಅನುಸರಿಸಲು ಯತ್ನಿಸಿದರೆ ಅದರಿಂದ ನಮ್ಮ ಕ್ಷೋಭೆ ಕಡಿಮೆಯಾದೀತು. ಭಾರತದ ಪುರಾತನ ಇತಿಹಾಸವೇ ಇದಕ್ಕೆ ಸಾಕ್ಷಿಯಾಗಿದೆ. ಅಶೋಕನಂಥ ಮಹಾ ಸಮ್ರಾಟನು ಆಸೇತು ಹಿಮಾಚಲ ಪರ್ಯಂತವಾದ ಭಾರತದ ಮೇಲೆ ಪ್ರಭುತ್ವ ಸ್ಥಾಪಿಸಿ ಶಾಂತಿ ದೂತನೆಂದು ಹೆಸರುಗೊಂಡನು. ಹಿಂಗದ ಯುದ್ಧತೃಷ್ಣೆಯುದ್ದ ಇವನನ್ನು ಕಳಿಂಗ ಯುದ್ಧದ ಘಟನೆಯು ಪ್ರಿಯದರ್ಶಿಯಾಗಿ ಪರಿವರ್ತಿಸಿತು. ಪ್ರಗತಿ ಹಾಗೂ ಉತ್ಕರ್ಷಕ್ಕೆ ಬುದ್ಧನಂಥ ಮಹಾನುಭಾವರು ಉಪದೇಶಿಸಿದ ತತ್ವಗಳೇ ತಳಹದಿ ಎಂದು ಅಶೋಕನು ತಿಳಿದನು. ಭಾರತದಲ್ಲಿಯಷ್ಟೇ ಅಲ್ಲ- ಲೋಕದ ಇತರೆಡೆಗಳಲ್ಲಿಯೂ ಈ ಪವಿತ್ರ ಸಂದೇಶ ಹರಡಬೇಕೆಂದು ಅವನು ಪ್ರಯತ್ನಿಸಿದನು. ಸದ್ಯ ಭಾರತ ಮಾಡುತ್ತಿರುವುದಾದರೂ ಈ ಕಾರ್ಯವನ್ನೇ. ನಾವು ಯುದ್ಧಾಸಕ್ತರಲ್ಲ; ಕಲಹ ಕೋಲಾಹಲಗಳಿಂದ ದೂರವುಳಿದು, ಶಾಂತಿ ಹಾಗೂ ಸಂತೋಷದ ಬದುಕನ್ನು ಬಾಳಬೇಕೆಂಬುದೇ ನಮ್ಮ ಹಿರಿಯಾಸೆ. ಯುದ್ಧದ ಕುರಿತು ಹುಚ್ಚೆದ್ದಿರುವ ಉಳಿದ ದೇಶಗಳೂ ಶಾಂತಿಯ ಈ ಮಾರ್ಗವನ್ನು ಅನುಸರಿಸಬೇಕೆಂದು ಭಾರತ ಬಯಸುತ್ತದೆ. ಧರ್ಮವು ಮಾನವನನ್ನು ದೇವತೆಯಾಗಿ ಪರಿವರ್ತಿಸಬಲ್ಲ ಒಂದು ಅಪೂರ್ವ ಸಾಧನವೆಂಬುದನ್ನು ಮರೆಯುವಂತಿಲ್ಲ. ಸದ್ಗುಣ ಹಾಗೂ ಸತ್ಸಂಪ್ರದಾಯಗಳು ಮನುಷ್ಯನ ಮನಸ್ಸನ್ನು ನಿರ್ಮಲವಾಗಿಯೂ ಪವಿತ್ರವಾಗಿಯೂ ಉಳಿಯಗೊಡುತ್ತವೆ. ನಮ್ಮೆಲ್ಲ ಕಾರ್ಯಕ್ರಮಗಳೂ ಚಟುವಟಿಕೆಗಳೂ ನಿರ್ದೇಶವಾಗಿದ್ದು ಬಹು ಜನಹಿತ ಹಾಗೂ ಲೋಕ ಕಲ್ಯಾಣಕ್ಕೆ ಪೋಷಕವಾಗುವಂತೆ ನೋಡಿಕೊಳ್ಳುವುದರಲ್ಲಿ ಶ್ರೇಯಸ್ಸಿದೆ. ನಿತ್ಯ ಜೀವನಕ್ಕೊಂದು ತಾತ್ವಿಕ ತಳಹದಿಯನ್ನೂ ಆಧ್ಯಾತ್ಮಿಕ ಆದರ್ಶವನ್ನೂ ಇಟ್ಟುಕೊಂಡು ಪ್ರಾಮಾಣಿಕರಾಗಿಯೂ, ಸತ್ಯನಿಷ್ಠರಾಗಿಯೂ, ಕರ್ಮಠರಾಗಿಯೂ ನಾವು ಬಾಳೋಣ.

ಭಾರತದ ಸೂಚನೆಗೆ ಬಹುಮತದ ಬೆಂಬಲ

ಕಮ್ಯೂನಿಸ್ಟರಿಂದ ಗೊತ್ತುವಳಿಯ ತಿರಸ್ಕಾರ

ಕೊರಿಯಾದಲ್ಲಿ ಶಾಂತಿಯನ್ನು ಪ್ರಸ್ಥಾಪಿಸುವ ಉದ್ದೇಶದಿಂದ ಭಾರತವು ತಯಾರಿಸಿದ ೧೭ ಅಂಶಗಳ ಗೊತ್ತುವಳಿಯೊಂದನ್ನು ಸಂಯುಕ್ತ ರಾಷ್ಟ್ರಸಂಘದ ರಾಜಕೀಯ ಸಮಿತಿಯು ಬಹುಮತದಿಂದ ಸ್ವೀಕರಿಸಿದೆ. ಸೋಮವಾರ (ತಾ ೧)ರ ವರೆಗೆ ಈ ಗೊತ್ತುವಳಿಯ ಬಗ್ಗೆ ಮತ ತೆಗೆಯುವುದನ್ನು ಮುಂದುವರಿಸಬೇಕೆಂದು ಭಾರತದ ಸೂಚನೆಯ ಕರ್ತೃವಾದ ಶ್ರೀ ವಿ. ಕೆ ಕೃಷ್ಣಮೆನನ್ನರು ಮಾಡಿದ ಪ್ರಾರ್ಥನೆಯನ್ನು ಅಂಗೀಕರಿಸಿದ ಬಳಿಕ, ಈ ಮತದಾನ ನಡೆಯುತ್ತಿನ್ನುವಾಗ-ಭಾರತವು ಮಹತ್ವದ ವಿಷಯಗಳಲ್ಲಿ ದುಡುಕದೆ ಸಾವಧಾನದಿಂದ ಮುನ್ನಡೆಯಲು ಬಯಸುತ್ತಿದೆ ಎಂದು ಸಿದ್ಧವಾಗುತ್ತದೆ. ದಿನಾಂಕ ೧ರಲ್ಲು ನಡೆದ ಮತದಾನದಲ್ಲಿ ಗೊತ್ತುವಳಿಯ ಪರವಾಗಿ ೫೩ ಮತಗಳೂ ವಿರುದ್ಧವಾಗಿ ೫ ಮತಗಳೂ ಬಿದ್ದು, ಗೊತ್ತುವಳಿಯು ಪ್ರಚಂಡ ಬಹುಮತದಿಂದ ಸ್ವೀಕೃತಗೊಂಡಿತು. ಭಾರತದ ಸೂಚನೆಯನ್ನು ವಿರೋಧಿಸಿದವರು ರಶಿಯಾ ಮತ್ತು ಆ ಗುಂಪಿಗೆ ಸೇರಿದ ಇತರ ೪ ರಾಷ್ಟ್ರಗಳು ಮಾತ್ರ. ಗೊಂಬೆ ಸರಕಾರವೆಂದು ಬಣ್ಣಿಸಬಹುದಾದ ರಾಷ್ಟ್ರೀಯ ಚೀನಾದ ಪ್ರತಿನಿಧಿಯು ಮತದಾನದಲ್ಲಿ ಭಾಗವಹಿಸಲಿಲ್ಲ. ಭಾರತದ ಗೊತ್ತುವಳಿಗೆ ಡೇನಿಶ್ ತಿದ್ದುಪಡಿಯೊಂದನ್ನು ಮಾಡಲಾಗಿದೆ. ಇದರನ್ವಯ ಕದನ ವಿರಾಮ ಒಪ್ಪಂದವು ಜ್ಯಾರಿಗೆ ಬಂದನಂತರ ೧೨೦ ದಿನಗಳೊಳಗೆ ಸ್ವದೇಶಗಳಿಗೆ ಮರಳದ ಯುದ್ಧ ಕೈದಿಗಳ ಬಗ್ಗೆ ಏನೊಂದೂ ನಿರ್ಣಯ ಮಾಡುವುದಾಗದಿದ್ದಲ್ಲಿ, ಅಂಥ ಕೈದಿಗಳ ಯೋಗಕ್ಷೇಮ ಸಂಯುಕ್ತ ರಾಷ್ಟ್ರಸಂಘದ ಕೈಗೆ ಬರುತ್ತದೆ ಮತ್ತದು ಪ್ರಚಲಿತ ಅಂತಾರಾಷ್ಟ್ರೀಯ ನಿಯಮಗಳಿಗನುಸಾರವಾಗಿ, ಯುದ್ಧ ಕೈದಿಗಳನ್ನು ನಡೆಸಿಕೊಳ್ಳತಕ್ಕದ್ದು.

ಅನಿಶ್ಚಿತ ಭವಿಷ್ಯ

ಭಾರತದ ಮೂಲ ಸೂಚನೆಯನ್ನು ಪಾಶ್ಚಾತ್ಯ ರಾಷ್ಟ್ರಗಳ ಆಕ್ಷೇಪಗಳನ್ನು ಹೋಗಲಾಡಿಸುವ ರೀತಿ ಕೃಷ್ಣಮೆನನ್ನರು ತಿದ್ದುಪಡಿ ಮಾಡಿದ್ದರು. ಡೇನಿಶ್ ತಿದ್ದುಪಡಿಯು ಭಾರತದ ಗೊತ್ತುವಳಿಯಲ್ಲಿ ಹೇಳಿದ್ದ ೧೫೦ ದಿನಗಳ ಅವಧಿಯನ್ನು ೧೨೦ ದಿನಗಳಿಗೆ ಇಳಿಸುವಷ್ಟಕ್ಕೆ ಮಾತ್ರ ಸೀಮಿತವಿದೆ. ಈ ತಿದ್ದುಪಡಿಯನ್ನು ಅಮೇರಿಕವು ಆದರದಿಂದ ಸ್ವಾಗತಿಸಿದೆ. ತತ್ಪರಿಣಾಮವಾಗಿ ಯುದ್ಧಕೈದಿಗಳು ಅನಿಶ್ಚಿತ ಅವಧಿಯವರೆಗೆ ತ್ರಿಶಂಕು ಲೋಕದಲ್ಲಿ ಹೊಯ್ದಾಡುತ್ತಿರುವುದು ತಪ್ಪುತ್ತದೆ. ರಾಜಕೀಯ ಸಮಿತಿಯು ಇಷ್ಟು ಬಹುಮತದಿಂದ ಭಾರತದ ಗೊತ್ತುವಳಿಯನ್ನು ಸ್ವೀಕರಿಸಿದುದರಿಂದ, ಸಾಮಾನ್ಯಾಧಿವೇಶನದಲ್ಲಿ ಇದು ಸ್ವೀಕೃತಗೊಂಡಂತೆಯೇ ಎಂದೂಹಿಸಲಡ್ಡಿಯಿಲ್ಲ. ಆ ಬಳಿಕ ಗೊತ್ತುವಳಿಯನ್ನು ಚೀನಾ ಹಾಗೂ ಉತ್ತರ ಕೊರಿಯಾಗಳಿಗೆ ಕಳುಹಿಸಿಕೊಟ್ಟು ಅವುಗಳ ಸಮ್ಮತಿ (ಅಥವಾ ಅಸಮ್ಮತಿ)ಯನ್ನು ಬೇಗನೇ ತಿಳಿಸಬೇಕೆಂದು ಬಿನ್ನವಿಸಲಾಗುವುದು. ಆದರೆ ಚೀನಾವಾಗಲಿ, ಉತ್ತರ ಕೋರಿಯವಾಗಲೀ ಭಾರತದ ಗೊತ್ತುವಳಿಯನ್ನು ಸ್ವೀಕರಿಸುವ ಸಂಭವ ರುಪಾಯಿಯಲ್ಲಿ ಒಂದಾಣೆಯಷ್ಟು ಇಲ್ಲವೆಂಬುದು ರಶಿಯಾದ ವಿಶಿಂಸ್ಕಿಯವರ ಹೇಳಿಕೆಯಿಂದ ವ್ಯಕ್ತವಾಗುತ್ತದೆ.

ಕಣ್ಣು ಮುಚ್ಚಾಲೆ

ರಾಜಕೀಯ ಸಮಿತಿಯು ಭಾರತದ ಗೊತ್ತುವಳಿಗೆ ಪ್ರಾಶಸ್ತ್ಯವನ್ನು ಕೊ ಬೇಕೆಂದು ನಿರ್ಣಯಿಸಿದಾಗ ವಿಶಿಂಸಿ ರಶಿಯಾದ ಠರಾವನ್ನೆ ಮೊದಲು ಚಚ ಗೆ ತೆಗೆದುಕೊಳ್ಳಬೇಕೆಂದು ಹಠ ಹಿಡಿ ರು. ಯುದ್ಧವನ್ನು ಒಡನೆಯೇ ನಿಲ್ಲಿಸು ಬಗ್ಗೆ ಏನೊಂದೂ ಶರ್ತಗಳಿಲ್ಲದೆ-ಕೇವ ಯುದ್ಧಕೈದಿಗಳ ಪ್ರಶ್ನೆಯ ಸುತ್ತಿನಲ್ಲೇ ರುಗುವ ಭಾರತದ ಗೊತ್ತುವಳಿ ವ್ಯಥ ವಾಪುದೆಂದವರು ಸಾರಿದರು ಮಾತ್ರ ಲ್ಲ ಅಂತಾರಾಷ್ಟ್ರೀಯ ಕಾನೂನಿಗೆ ಕೂ ಭಾರತದ ಗೊತ್ತುವಳಿ ಹೊಂದಿಕೊಳ್ಳು ದಿಲ್ಲವೆಂದೂ ಘೋಷಿಸಿದರು. ಹೀಗೆ ರ ಯಾದ ಸಿಂಹ ಘರ್ಜನೆಯಾದುದನ್ನು ಕೆ ಳಿದ ಅಮೇರಿಕಾ ಭಾರತದ ಗೊತ್ತುವ ಗೆ ಅನುಕೂಲ ಮತಕೊಡುವುದರಿಂದ 'ಚ್ಛನ್ನ ಯುದ್ಧ"ದ ತಂತ್ರಕ್ಕೆ ವ್ಯತ್ಯ ಬಾರದೆಂದು ಎಣಿಸಿತು. ಡೀನ ಅಚಿಸ ರು ಮಾಡಿದ ಭಾಷಣದಲ್ಲಿ ಕೆಲವೊಂದ ತಿದ್ದುಪಡಿಗಳಿಗೊಳಪಟ್ಟು ಅಮೇರಿಕ ಭಾರತದ ಗೊತ್ತುವಳಿಯನ್ನು ಬೆಂಬ ಸುವ ಧ್ವನಿ ಹುದುಗಿದ್ದಿತು. ರಶಿಯಾ ಭಾರತದ ಸೂಚನೆಯನ್ನು ಒಮ್ಮೆಂದೆ ಮ್ಮೆಗೆ ಆಮೂಲಾಗ್ರವಾಗಿ ವಿರೋ ಸಿದ್ದು ಕಂಡ ಮೇಲೆ ಅಮೇರಿಕನರು ಭಾವಿಕವಾಗಿ ಅದರ ವಿರುದ್ಧ ಪಕ್ಷವನ ಸೇರಿದರು. ಬ್ರಿಟನ್ನು, ಕೆನಡಾ ಆಸ್ಟ್ರೇ ಯಾ ಮುಂತಾದ ಪಾಶ್ಚಾತ್ಯ ರಾಷ್ಟ್ರ ಳ ಒತ್ತಾಯ ಕೂಡಾ ಅಮೇರಿಕದ ಮೇಲೆ ಸಾಕಷ್ಟು ಪ್ರಭಾವ ಬೀರಿತು.

ಚೀನಾ ವಿನಂತಿ

ಭಾರತದ ಠರಾವನ್ನು ತಿರಸ್ಕರಿಸುವಾಗ ವಿಶಿಂಸ್ಕಿಯವರು ಚೀನಾ ಸರಕಾರ ಅಭಿಪ್ರಾಯವು ತಮಗೆ ಈಗಾಗಲೇ ತಿದು ಬಂದಿದೆಯಾಗಿಯೂ ಅದು ಭಾರತ ಸೂಚನೆಯಂತೆ ನಡೆಯಲು ಸಿದ್ಧವಿಲ್ಲವೆದೂ ಹೇಳಿದರು. ಇದು ಪ್ರಕಟವಾ ಅಲ್ಪಾವಧಿಯಲ್ಲಿಯೇ ಪೇಕಿಂಗ ರೇಯೋ ಪ್ರಧಾನಿ ಚೌ. ಎನ್-ಲಾಯ ರ ಹೇಳಿಕೆಯನ್ನು ಬಿತ್ತರಿಸಿತು. ಸಂಯುಕ್ತ ರಾಷ್ಟ್ರಸಂಘದಲ್ಲಿ ರಶಿಯ ಮಂಡಿಸಿದ. ಗೊತ್ತುವಳಿಯನ್ನೆ ಚೀನಾ ಸಮರ್ಥಿಸುವುದೆಂದು ಅದು ಸಾರಿತು. ಹೇಳಿಕೆಯ ಪೂರ್ಣ ಪಾಠವೊಂದನ ಸಂಯುಕ್ತ ರಾಷ್ಟ್ರಸಂಘಕ್ಕೆ ಕಳಿಸಿಕೊ ಲಾಗಿದೆ. ಭಾರತದ ಗೊತ್ತುವಳಿಯ ಬಗ್ಗ ಉಲ್ಲೇಖವನ್ನೆ ಚೀನೀ ಪ್ರಧಾನಿ ಮಾ ಲ್ಲದಿರುವುದರಿಂದ ಭಾರತ ಸರಕಾರಕ್ಕೆ ಲವುಟ್ಟಿಗೆ ಆಶೆ ಉಳಿದಿವೆ. ಚೀನೀಯರ ಎತ್ತುವ ಆಕ್ಷೇಪಗಳು ಯಾವುವೆಂದ ಭಾರತಕ್ಕೆ ತಿಳಿದಿದೆ ಮತ್ತದು ಸರಿಯಾ

ದ ತಿಳುವಳಿಕೆಯಿಲ್ಲದೆ ಉದ್ಭೂತವಾದ ತೊಡಕು ಮಾತ್ರವಾದದರಿಂದ, ತಕ್ಕ ಸ್ಪಷ್ಟೀಕರಣವನ್ನು ಕೊಟ್ಟು, ಸಂದಿಗ್ಧ ಪರಿಸ್ಥಿತಿಯನ್ನು ನಿವಾರಿಸಬಹುದೆಂದು ಎಲ್ಲರ ಆಶೆ. ನೆಹರೂರವರು ಚಾ-ಎನ್-ಲಾಯರಿಗೆ ಸುದೀರ್ಘವಾದ ಪತ್ರಬರೆದು, ಭಾರತದ ಗೊತ್ತುವಳಿಯ ಆಶಯವನ್ನು ಸ್ಪಷ್ಟವಾಗಿ ಮನಗಾಣಿಸಲು ಪ್ರಯತ್ನಿಸಿರುವರೆಂದು ಹೇಳುತ್ತಾರೆ. ಈ ನಡುವೆ ರಶಿಯಾ ಹಾಗೂ ಚೀನಾಗಳ ಆಕ್ಷೇಪದಿಂದ ಬೇಸತ್ತು (ಅಥವಾ ಒತ್ತಾಯಕ್ಕೆ ಕಟ್ಟುಬಿದ್ದು) ಭಾರತವು ತನ್ನ ಗೊತ್ತುವಳಿಯನ್ನೇ ಹಿಂದೆಗೆದುಕೊಳ್ಳುವುದೆಂದು ಒಂದು ಸುದ್ದಿ ಹಬ್ಬಿತ್ತು. ಕೆನಡಾದ ಪಿಯರ್ಸನ್ನರೂ ಬ್ರಿಟನ್ನಿನ ಈಡನ್ನರೂ ಹಾಗೆ ಮಾಡಬಾರದಾಗಿ ಕೃಷ್ಣಮೆನನರನ್ನು ಕೇಳಿಕೊಂಡರೆಂದು ಈ ವದಂತಿ ಹೇಳುತಿತ್ತು.

ಏಶಿಯಾದ ಆಶೆ

ಅಂಪಾಯರನೊಬ್ಬನನ್ನು ನೇಮಿಸುವುದಕ್ಕೆ ಭಾರತದ ಠರಾವು ಅವಕಾಶ ಕೊಡುತ್ತದೆ. ಇಂತಹ ಈ ಸ್ಥಾನಕ್ಕೆ ಭಾರತವನ್ನೆ ಸೂಚಿಸಿತು. ಆದರೆ ಇದು ಒಳ್ಳೆಯ ಸಂಪ್ರದಾಯವಾಗಲಾರದೆಂದು ಕೃಷ್ಣ ಮೆನನ್ನರು ಅದಕ್ಕೆ ಒಪ್ಪದೆ, ವಿರೋಧಿಸಿದರು. ಅವರು ಏಶಿಯನ್ನರನ್ನು ಉದ್ದೇಶಿಸಿ ಮಾತನಾಡುತ್ತಾ ವಿಶ್ವವೇ ಯುದ್ಧದಿಂದ ಕಂಗೆಟ್ಟು ದಿಗ್ಭ್ರಮೆಗೊಳಗಾಗಿರುವಾಗ-ಶಾಂತಿ ಸಂಧಾನದ ಮಾತುಕತೆಗಳನ್ನು ಬೆಂಬಲಿಸದೆ ಇರುವುದು ಕರ್ತವ್ಯಚ್ಯುತಿಯೆಂದೆನಿಸುವುದಾಗಿಯೂ ಏಶಿಯಾ ಜನರ ಆಶೆ ಆಕಾಂಕ್ಷೆಗಳನ್ನು ಮನವರಿಕೆ ಮಾಡಿಕೊಂಡೂ ಮಾನವೀಯತೆಯ ದೃಷ್ಟಿಯಿಂದಲೂ ಭಾರತದ ಗೊತ್ತುವಳಿಯನ್ನು ಪುರಸ್ಕರಿಸಬೇಕಾಗಿಯೂ ಕೇಳಿಕೊಂಡರು. ಆದರೆ ರಶಿಯಾದ ಮಾರ್ನುಡಿಯು ದುಷ್ಟವಾಗಿದ್ದಂತೆ, ವ್ಯಂಗ್ಯ ಪೂರ್ಣವೂ ಆಗಿತ್ತು. ಕೃಷ್ಣ ಮೆನನ್ನರು ಭಾವ ಪೂರ್ಣವಾಗಿ" ಮಾತನಾಡುವುದನ್ನು ತಿಳಿದುಕೊಳ್ಳಬಹುದೆಂದೂ ಆದರೆ ಸಮಗ್ರ ಏಶಿಯಾದ ಪರವಾಗಿ ಒಂದು ರಾಷ್ಟ್ರ ಮಾತ್ರ ಮಾತನಾಡುವಂತಿಲ್ಲವೆಂದೂ ವಿಶಿನ್ಸ್ಕಿ ಹೇಳಿದರು.

[೫ನೇ ಪುಟದಿಂದ ಮುಂದುವರಿದುದು]

ಹೇಳಿದಂತೆ ರಶಿಯಾದ ಅರ್ಥನೀತಿಯಿಂದ ಹೊರಗಿನ ಯಾವ ದೇಶಗಳೂ ಅವರೊಡನೆ ವ್ಯಾಪಾರ ಕೈಗೊಳ್ಳುವಂತಿಲ್ಲ. ಒಂದು ಜೊತೆ ಬೂಟಿಗೆ ೩೫೦ ರೂಪಾಯಿ ಕೊಡಬೇಕಾಗಿ ಬರುವುದಾದರೆ ಭಾರತ ಎಂದಿಗೂ ಅವರೊಡನೆ ವ್ಯಾಪಾರ ಮಾಡುವಂತಿಲ್ಲ. ಅದರಂತೆ ರಶಿಯಾವಾದರೂ ವಿದೇಶಗಳಿಗೆ ಸರಕುಗಳನ್ನು ಪೂರೈಸುವಷ್ಟರ ಮಟ್ಟಿಗೆ ಸಮೃದ್ಧವಾಗಿಲ್ಲವೆಂಬುದನ್ನು ಲಕ್ಷಿಸಬೇಕು. ಮೋಸ್ಕೋದಲ್ಲಿ ಪರಿಷತ್ತು ಸೇರಿದಾಗ ರಶಿಯಾದೊಡನೆ ವ್ಯಾಪಾರ ಸಂಬಂಧವನ್ನು ಬೆಳೆಸಬೇಕೆಂದು ಮಾಡಿದೆಲ್ಲ ಪ್ರಯತ್ನಗಳು ಅನೇಕ ಕಾರಣಗಳಿಂದ ನಿಷ್ಫಲಗೊಂಡುವೆಂದು ಇನ್ನೊಬ್ಬ ಸದಸ್ಯರು ಬಣ್ಣಿಸಿದರು.

ಸ್ತುತ್ಯ ಉಪಕ್ರಮ

ಕೇಂದ್ರ ಸರಕಾರವು ಎರಡು ಒಳ್ಳೇಯ ಕೆಲಸಗಳನ್ನು ಮಾಡಿದೆ. ಒಂದು ಕೈಮಗ್ಗಗಳಿಗೆ ಸ್ವಲ್ಪ ವ್ಯಾಪಕವಾದ ಪೇಟೆ ಸಿಗುವಂತೆ, ಗಿರಣಿಗಳು ತಯಾರಿಸುವ ಧೋತರ ಮಿತಿಯನ್ನು ನಿರ್ಧರಿಸಿದ್ದೂ ಹಾಗೂ ಬಣ್ಣದ ಸೀರೆಗಳ ಉತ್ಪಾದನೆಯನ್ನು ಕೈಮಗ್ಗಗಳಿಗೆ ಮೀಸಲಿರಿಸಿದ್ದೂ. ಸರಕಾರವು ಶ್ರೀ ನಿತ್ಯಾನಂದ ಕಾನಂಗೋರ ಅಧ್ಯಕ್ಷತೆಯಲ್ಲಿ ಇಡೀ ಜವುಳಿ ಉದ್ದಿಮೆಯನ್ನು ಪರಿಶೀಲಿಸಿ ವರದಿ ಮಾಡಲು ಹತ್ತು ಜನರ ಒಂದು ಸಮಿತಿ ನೇಮಿಸಿದೆ. ಇನ್ನೊಂದು ಕನ್ನಡನಾಡಿಗೆ ಸೇರಿದ ಕೊಡಗಿನ ಮೇಲೆ ಮೈಸೂರು ಹೈಕೋರ್ಟಿನ ಅಧಿಕಾರವನ್ನು ಹೇರಿದ್ದು. ಇಷ್ಟರವರೆಗೆ ಕೊಡಗು ಮದ್ರಾಸ ಹೈಕೋರ್ಟಿನ ಅಧಿಕಾರ ಕಕ್ಷೆಯಲ್ಲಿತ್ತು. ಈಗ ಮೈಸೂರು ಹೈಕೋರ್ಟಿನ ಅಧಿಕಾರ ಕ್ಷೇತ್ರವನ್ನು ಕೊಡಗಿನ ಮೇಲೆ ವ್ಯಾಪಕಗೊಳಿಸಿದ್ದರಿಂದ, ಏಕೀಕರಣ ವಾದಿಗಳಿಗೆ ನೂರರಲ್ಲಿ ಒಂದಂಶ ಸಮಾಧಾನವಾದೀತು. ಮೈಸೂರು ಹೈಕೋರ್ಟಿಗೆ ಕೊಡಗನ್ನು ಒಪ್ಪಿಸಬಾರದೆಂದು ಸದಸ್ಯರು ಮಾಡಿದ ದೂರುಗಳಿಗೆ ಉತ್ತರಿಸುವಾಗ ಗೃಹಸಚಿವ ಕಟಜೂ ಕೊಡಗು ಮತ್ತು ಮೈಸೂರುಗಳ ಜನರು ಆಡುವ ಭಾಷೆಯೊಂದೇ ಎಂದು ಹೇಳಿ ತಮ್ಮ ಸೂಚನೆಯನ್ನು ಸಮರ್ಥಿಸಿಕೊಂಡುದು ಗಮನಾರ್ಹವಿದೆ. ಮೈಸೂರು ಹೈಕೋರ್ಟು ಇತರ ಯಾವುದೇ ನ್ಯಾಯಸ್ಥಾನಕ್ಕಿಂತ ಯೋಗ್ಯತೆಯಲ್ಲಿ ಕಡಿಮೆ ಇಲ್ಲವೆಂದು ಗೃಹ ಮಂತ್ರಿಗಳು ಒಡನುಡಿದಿರುವುದೂ, ಎಲ್ಲ (ಬಿ) ರಾಜ್ಯಗಳ ಹೈಕೋರ್ಟುಗಳ ನ್ಯಾಯಾಧೀಶರ ಸ್ಥಾನವನ್ನು ಆ ರಾಜ್ಯಗಳ ಮಟ್ಟಕ್ಕೇರಿಸುವ ಎತ್ತುಗಡೆ ನಡೆದಿದೆ ಎಂದಿರುವುದೂ ಸ್ತುತ್ಯ.

ಬುದ್ಧನ ಶಿಷ್ಯದ್ವಯರು

ಇತಿಹಾಸ ಪ್ರಸಿದ್ಧವಾದ ಸಾಂಚಿಯಲ್ಲಿ ಮಹತ್ವದ ಕಾರ್ಯಕ್ರಮಗಳು ೨೯, ೩೦ ದಿನಾಂಕಗಳಲ್ಲಿ ನಡೆದುವು. ಗೌತಮ ಬುದ್ಧನ ಪ್ರಮುಖ ಶಿಷ್ಯದ್ವಯರಾದ ಸಾರಿ ಪುತ್ರ ಹಾಗೂ ಮೊಗ್ಗಲನರ ಪವಿತ್ರಾವಶೇಷಗಳನ್ನು ಪ್ರತಿಷ್ಠಾಪಿಸುವ ಸಮಾರಂಭವು ವಿಜೃಂಭಣೆಯಿಂದ ನೆರವೇರಿತು. ಸಾಂಚಿಯಲ್ಲಿರುವ ೩ನೇ ಸ್ತೂಪದಲ್ಲಿ ಇಂದಿಗೆ ೧೦೧ ವರ್ಷಗಳ ಹಿಂದೆ ಬ್ರಿಟಿಷ್ ಸಂಶೋಧಕರು ಈ ಅವಶೇಷಗಳನ್ನು ಕಂಡುಹಿಡಿದರು. ಸ್ವಾತಂತ್ರ್ಯ ಪ್ರಾಪ್ತಿಯವರೆಗೆ, ಬ್ರಿಟಿಷ್ ಮ್ಯೂಸಿಯಂನಲ್ಲಿ ಇವನ್ನು ಇಟ್ಟಿದ್ದು ಆ ಬಳಿಕ ಭಾರತಕ್ಕೆ ಇವನ್ನು ಒಪ್ಪಿಸಿ ಕೊಡಲಾಯಿತು. ಬೌದ್ಧ ಧರ್ಮಾನುಯಾಯಿಗಳಾದ ಬೇರೆ ಬೇರೆ ದೇಶಗಳ ನಿವಾಸಿಕರಿಗೆ ಇವುಗಳ ದರ್ಶನವನ್ನು ಮಾಡಿಸಿ ಕೊಟ್ಟು, ಇದೀಗ ಸಾಂಚಿಯಲ್ಲಿ ಹೊಸದಾಗಿ ನಿರ್ಮಿಸಿದ ವಿಹಾರದಲ್ಲಿ ಶಾಶ್ವತವಾಗಿ ಪ್ರತಿಷ್ಠಾಪನೆಯು ನಡೆಯಿತು. ಭಾರತದ ಮಹಾಬೋಧಿ ಸಂಘದವರು ಸಾಂಚಿಯಲ್ಲಿ ಹೊಸತಾದ ವಿಹಾರವನ್ನು ಈ ಉದ್ದೇಶಕ್ಕಾಗಿ ಕಟ್ಟಿಸಿ ಕೊಟ್ಟರು. ಕಲ್ಕತ್ತೆಯಿಂದ ಚಿನ್ನದ ಕಲಶದಲ್ಲಿ ಈ ಅವಶೇಷಗಳನ್ನು ತಂದರು. ಬರ್ಮಾ, ಸಿಂಹಳ, ಸಿಕ್ಕಿಮ, ನೇಪಾಳ ಮುಂತಾದೆಲ್ಲ ಬೌದ್ಧದೇಶಗಳಿಂದ ಅಸಂಖ್ಯ ಬೌದ್ಧ ಭಿಕ್ಷುಗಳೂ ಭಿಕ್ಷುಣಿಯರೂ ಈ ಸಮಾರಂಭದಲ್ಲಿ ಭಾಗವಹಿಸಲು ಬಂದಿದ್ದರು. ಬರ್ಮಾದ ಪ್ರಧಾನ ಮಂತ್ರಿ ಮುನೂ ಹಾಗೂ ಸಿಂಹಳದ ಗೃಹ ಮಂತ್ರಿ ಶ್ರೀ ರತ್ನ ನಾಯಕೆ ಅತಿಥಿಗಳಲ್ಲಿ ಮುಖ್ಯರು. ಬುದ್ಧನಿಗೆ ಜ್ಞಾನೋದಯವಾದ ಪವಿತ್ರ ಬೋಧಿ ವೃಕ್ಷದ ಸಸಿಯೊಂದನ್ನು ಶ್ರೀ ರತ್ನ ನಾಯಕೆ ಸಿಂಹಳದ ಕಾಣಿಕೆಯೆಂದು ಅರ್ಪಿಸಿದರು. ಅದನ್ನು ಬರ್ಮಾದ ಮುನೂ ಅಮೃತ ಹಸ್ತದಿಂದ ನಡಿಸಲಾಯಿತು. ಈ ಸಂದರ್ಭದಲ್ಲಿ ಅಂತಾರಾಷ್ಟ್ರೀಯ ಬೌದ್ಧ ಸಾಂಸ್ಕೃತಿಕ ಸಮ್ಮೇಳನವೂ ಜರಗಿತು. ಭಾರತದ ಪ್ರಧಾನಿ ನೆಹರೂ ಪವಿತ್ರಾವಶೇಷಗಳನ್ನು ಪ್ರತಿಷ್ಠಿಸುವ ಸಮಾರಂಭದಲ್ಲಿ ಭಾಗವಹಿಸಿದ್ದಲ್ಲದೆ ಈ ಸಮ್ಮೇಳನದಲ್ಲಿ ಭಾಷಣ ಮಾಡಿದರು. ಇವರೂ ಸಮ್ಮೇಳನದ ಅಧ್ಯಕ್ಷತೆ ವಹಿಸಿದ ಡಾ| ರಾಧಾಕೃಷ್ಣನ್ನರೂ ಬುದ್ಧನ ಸಂದೇಶವು ಜಗತ್ತಿನ ಕ್ಷೋಭೆಯನ್ನು ಕಡಿಮೆ ಮಾಡಲು ತರಣೋಪಾಯವೆಂದು ಹೇಳಿದರು.

ಉಡುಪಿ.

ಉದಾರ ಸಹಾಯ—ಜನವರಿ ತಾ 4ಲ್ಲಿ ಉಡುಪಿಯಲ್ಲಿ ಜರಗಲಿರುವ ಅಖಿಲಭಾರತದ ಮಾಧ್ವ ಮಹಾಸಮ್ಮೇಳನದ ಸಹಾಯಾರ್ಥವಾಗಿ ನಗರದ ಹೊಟೇಲ್ ಒಡೆಯರಾದ ಶ್ರೀ ಶಿವ ಅನಂತ ಭಟ್ಟರು ಒಂದು ಸಾವಿರ ರೂಪಾಯಿಗಳನ್ನು ಕೊಟ್ಟಿರುವರೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ವಿವಾಹ ಸಮಾರಂಭ— ಉಡುಪಿಯ ನೇಶನಲ್ ಪ್ರಿಂಟರ್ಸ್ ಎಂಡ್ ಪಬ್ಲಿಷರ್ಸ್ ಸಂಸ್ಥೆಯ ಮೆನೇಜಿಂಗ್ ಡೈರೆಕ್ಟರ್ ಶ್ರೀ ಕೆ. ಮಂಜುನಾಥ ಪೈಗಳವರು ಇದೇ ತಾ 1ರಲ್ಲಿ ಬ್ರಹ್ಮಗಿರಿಯಲ್ಲಿ ತಮ್ಮ ಪುತ್ರಿ ಕುಮಾರಿ ಶಾಂತಾದೇವಿಯನ್ನು ಶ್ರೀ ಕೆ. ಅನಂತ ಗೌಡರವರ ಪುತ್ರ ಶ್ರೀ ವೆಂಕಟೇಶ ಕಾಮತರಿಗೆ ಪಾಣಿಗ್ರಹಣ ಮಾಡಿಕೊಟ್ಟು ವಿವಾಹ ಸಮಾರಂಭವನ್ನು ನೆರವೇರಿಸಿದರು.

ಮುನಿಸಿಪಲ್ ವೈಸ್ ಚೇರ್‌ಮೆನರ ಚುನಾವಣೆಯು ಕಳೆದ ತಾ ೨ರಲ್ಲಿ ನಗರ ಸಭಾಧ್ಯಕ್ಷ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಡಾ| ಪಿ. ವ್ಯಾಸರಾಯರ ಹೆಸರನ್ನು ಶ್ರೀ ಕೆ. ಸೀತಾರಾಮ ಕಾಮತರು ಸೂಚಿಸಿದರು. ಇದನ್ನು ಶ್ರೀ ಐ. ರಘುರಾಮ ಸೆಟ್ಟರು ಅನುಮೋದಿಸಿದರು. ಉಪಾಧ್ಯಕ್ಷ ಚುನಾವಣೆಯಲ್ಲಿ ತಮ್ಮ ಪಕ್ಷವು ಭಾಗವಹಿಸುವುದಿಲ್ಲವಾಗಿ ಮುನಿಸಿಪಲ್ ಕಾಂಗ್ರೆಸ್ ಪಾರ್ಟಿಯ ಲೀಡರ್ ಶ್ರೀ ಎಮ್. ವಿಠಲ್ ಕಾಮತರು ಸಭೆಯಲ್ಲಿ ಹೇಳಿಕೆ ಮಾಡಿದರು. ಬೇರೆ ಯಾರ ಹೆಸರೂ ಸಭೆಯ ಮುಂದೆ ಬಾರದಿದ್ದುದರಿಂದ ಡಾ| ವ್ಯಾಸರಾಯರು ಏಕಮತದಿಂದ ಮುನಿಸಿಪಲ್ ವೈಸ್ ಚೇರ್‌ಮೆನರಾಗಿ ಆರಿಸಲ್ಪಟ್ಟರು. ಸಂಜೆ ಡಾ| ವ್ಯಾಸರಾಯರನ್ನು ಅಭಿನಂದಿಸುವ ಸಭೆಯು ರಥಬೀದಿಯಲ್ಲಿ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಡಾ| ಪಿ. ಜಿ. ಆಚಾರ್ ಮೊದಲಾದವರ ಭಾಷಣಗಳಾದುವು.

ಸತ್ಕಾರ—ದಿ. ಮಹಾರಾಷ್ಟ್ರ ಎಪೆಕ್ಸ್ ಬ್ಯಾಂಕಿನ ಸಿಬ್ಬಂದಿಯವರು ತಾ 26-11-52ರಲ್ಲಿ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರರಾದ ಶ್ರೀ. ಉಪೇಂದ್ರ ಪೈಗಳ ಜನ್ಮದಿನೋತ್ಸವದ ಬಗ್ಗೆ ಒಂದು ಸತ್ಕಾರ ಸಮಾರಂಭವನ್ನೇರ್ಪಡಿಸಿ ಅವರಿಗೆ ಶುಭವನ್ನು ಹಾರೈಸಿದರು.

ಒಟೋರಿಕ್ಷಾಗಳಿಗೆ ಲೈಸನ್ಸು—ಉಡುಪಿ ನಗರದಲ್ಲಿ ಮೂರು ಒಟೋರಿಕ್ಷಾಗಳಿಗೆ ಲೈಸನ್ಸ್ ಕೊಡಲಾಗುವುದು. ಲೈಸೆನ್ಸ್‌ಗೆ ಬರೆಕೊಳ್ಳುವವರು, ದ. ಕ. ಜಿಲ್ಲಾ ರೀಜನಲ್ ಟ್ರಾನ್ಸ್‌ಪೋರ್ಟ್ ಅಧಿಕಾರಿಗಳಿಗೆ ಈ ತಿಂಗಳ ತಾ 16ರೊಳಗೆ ತಲುಪುವಂತೆ ರೂಪಾಯಿ 12/-ರ ಚಲನ್ ರಶೀದಿಯೊಂದಿಗೆ ಬರೆದುಕೊಳ್ಳತಕ್ಕದ್ದು.

ಅಭಿನಂದನೆ—ಉಡುಪಿ ಲೋಕಲ್ ಕೋಓಪರೇಟಿವ್ ಯೂನಿಯನ್ನಿನ ಡೈರೆಕ್ಟರರ ಸಭೆಯು ತಾ 30ರಲ್ಲಿ ವಕೀಲ್ ಶ್ರೀ ಕೆ. ಜೆ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿದಾಗ ಈ ಯೂನಿಯನ್ ಕಾರ್ಯದರ್ಶಿ ವಕೀಲ್ ಶ್ರೀ ಪಿ. ಪಿ. ಆಚಾರ್ಯರು ಉಡುಪಿ ನಗರಸಭೆಗೆ ಬಹುಮತದಿಂದ ಆರಿಸಲ್ಪಟ್ಟ ಬಗ್ಗೆ ಅವರನ್ನು ಅಭಿನಂದಿಸುವ ನಿರ್ಣಯವಾಯಿತು.

ಪ್ರಜಾ—ಸೋಸಿಯಲಿಸ್ಟ್ ಪಾರ್ಟಿ—ಸಭೆಯು ತಾ. 1ರಲ್ಲಿ ಶ್ರೀ. ಕೆ. ನರಸಿಂಗ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಉಡುಪಿ ಸೆಂಟರಿಗೊಂದು ಪ್ರಜಾ-ಸೋಶಲಿಸ್ಟ್ ಪಾರ್ಟಿ ಸ್ಥಾಪಿಸಲ್ಪಟ್ಟು ಶ್ರೀಗಳಾದ ಯು. ಎಸ್. ನಾಯಕ್ (ಅಧ್ಯಕ್ಷ) ಕೆ. ವಸಂತರಾಯ ಪೈ ಮತ್ತು ಗಣೇಶ್ (ಉಪಾಧ್ಯಕ್ಷರು) ಬಿ. ವಾಸುದೇವರಾವ್, ಮತ್ತು ರೈಮಂಡ್ ಮಾರ್ಟಿಸ್ (ಜತೆ ಕಾರ್ಯದರ್ಶಿಗಳು) ಬಿ. ಶ್ರೀನಿವಾಸ ಆಚಾರ್ಯ [ಖಜಾಂಚಿ]ರು ಆರಿಸಲ್ಪಟ್ಟರಲ್ಲದೆ ಕಾರ್ಯಕಾರಿ ಮಂಡಳಿಗೆ ಶ್ರೀಗಳಾದ ಎಮ್. ಎನ್. ಪನ್ನಾ ಸಾಹೇಬ್, ಕೆ. ಎಸ್. ಐತಾಳ್ ಎಮ್. ನರಸಿಂಹ ವಿಠಲ ಕಾಮತ್ ಮೊದಲಾದವರು ಚುನಾಯಿಸಲ್ಪಟ್ಟರು.

ಸಂಜೆ ತೇರು ಬೀದಿಯಲ್ಲಿ ಸಾರ್ವಜನಿಕ ಸಭೆಯು ಶ್ರೀ ಕೆ. ರಮಾನಾಥ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಜಾ ಸೋಶಿಯಲಿಸ್ಟ್ ಪಕ್ಷದ ಧ್ಯೇಯ ಮೊದಲಾದ ಹಲವಾರು ವಿಷಯಗಳನ್ನೆತ್ತಿ ಶ್ರೀಗಳಾದ ಬಿ. ಮೋಹನ ರಾವ್, ಬಿ. ಶ್ರೀನಿವಾಸ ಸೆಟ್ಟಿ, ಡಾ| ನಾಗಪ್ಪ ಆಳ್ವ, ಡಾ| ಸಂಜೀವನಾಥ, ಅನಾಥ ಮಂಡ್ಸ ಕಟ್ಟೆ, ಕೆ. ಆರ್. ಕಾರಂತರು ಮಾತನಾಡಿದರು. ಶ್ರೀ ಬಿ. ವಾಸುದೇವರಾಯರು ಧನ್ಯವಾದ ಅರ್ಪಿಸಿದರು.

ಕಸ್ತೂರಿಬಾ ಮೆಡಿಕಲ್ ಕಾಲೇಜಿನ—ಪ್ರಥಮ ಬ್ಲಾಕಿನ ಶಂಕುಸ್ಥಾಪನೆ ಸಮಾರಂಭವು ಮಣಿಪಾಲದಲ್ಲಿ ತಾ. 10-12-52ನೇ ಬುಧವಾರ ಬೆಳಿಗ್ಗೆ 9 ಗಂಟೆಗೆ ಸೋದೆ ಮಠದ ಶ್ರೀ ಶ್ರೀ ವಿಶ್ವೋತ್ತಮ ತೀರ್ಥ ಶ್ರೀಪಾದಂಗಳವರ ಹಸ್ತದಿಂದ ನೆರವೇರಲಿರುವುದು. ಸರ್ವರಿಗೂ ಸ್ವಾಗತವಿದೆಯೆಂದು ಎಕಡೆಮಿ ಆಫ್ ಜನರಲ್ ಎಜ್ಯುಕೇಶನ್ನಿನ ರಿಜಿ[illegible] ಪೈಗಳು ತಿಳಿಸುತ್ತಾರೆ.

ನಾವು ವರ್ಷಕ್ಕೊಮ್ಮೆ ರಜೆ ಪಡೆವ ವಾಡಿಕೆಯಂತೆ ಬರುವ ವಾರದ (ತಾ 11-12-52ರ) ಸಂಚಿಕೆಯನ್ನು ನಿಲ್ಲಿಸಲಾಗಿದೆ.

ಸಂ. ಪ

More & More
PEOPLE BUY
PLATO
REGD.
PLATO FOUNTAIN PEN No. 66
The pen of the day
M. P. P. I. LTD. BOMBAY 4

— ತಾರೀಕು 4 - 12 - 1952 ರಿಂದ —
ಅನೋಖಿ ದಾಸ್ತಾನ್
ಸ್ವರ್ಣಲತಾ ಮುಖ್ಯ ಭೂಮಿಕೆಯಲ್ಲಿ
ಅನಂತರ.— ಕಾಮಿನಿ ಕೌಶಲ್ ಮತ್ತು ಅಶೋಕ್ ಕುಮಾರ್ ನಟಿಸಿರುವ
"ಪೂನಮ್"
ನಿರೀಕ್ಷಿಸಿರಿ [illegible] ಫೀಚರ್ಸ್, ಆನ್, ನೌಜವಾನ ಇತ್ಯಾದಿ
ಶ್ರೀ ರಾಮಕೃಷ್ಣ ಥಿಯೆಟರ್ ಲಿಮಿಟೆಡ್, ಉಡುಪಿ

ಮಂಗಳೂರು

ಫೆಕ್ಟರಿ ಇನ್ಸ್‌ಪೆಕ್ಟರರ ವಿರುದ್ಧ ತೀರ್ಪು—ಮಂಗಳೂರಿನ ಭಿಕ್ಕಾಭಾಯಿ ಪ್ರಭುದಾಸ್ ಪರೇಕ್ ಎಂಡ್ ಕೊ., ಎಂಬ ಅಡಿಕೆ ವ್ಯಾಪಾರಿಗಳ ನಿವಾಸದ ಮನೆಯನ್ನು ಒಳಗೊಂಡ ಕಟ್ಟಡವನ್ನು 'ಫೆಕ್ಟರಿ' ಎಂದು ಸಾರಿ ಕಾರ್ಖಾನೆಯ ಶಾಸನಗಳಿಗೊಳಪಡಿಸಿದ ಸ್ಥಳೀಯ ಫೆಕ್ಟರಿ ಇನ್ಸ್‌ಪೆಕ್ಟರರ ಆಜ್ಞೆಯ ವಿರೋಧವಾಗಿ ಮದ್ರಾಸಿನ ಚೀಫ್ ಇನ್ಸ್‌ಪೆಕ್ಟರರಲ್ಲಿ ಮಾಡಿಕೊಂಡ ದೂರು ತಳ್ಳಿಹಾಕಲ್ಪಟ್ಟ ಬಳಿಕ ಸ್ಥಳೀಯ ಸಬ್ ಕೋರ್ಟಿನಲ್ಲಿ ವ್ಯವಹಾರ ಮಾಡಲಾಯಿತು. ನಿವಾಸಿಯ ಅರ್ಜಿಯಿಲ್ಲದೆ ಫೆಕ್ಟರಿ ಎಂದು ಇನ್ಸ್‌ಪೆಕ್ಟರರು ರಿಜಿಸ್ಟರ್ ಮಾಡುವಂತಿಲ್ಲ ಎಂಬ ಮುಖ್ಯವಾದ ಅರ್ಜಿದಾರರ ವಾದವನ್ನು ಸಬ್ ಜಡ್ಜ್ ಶ್ರೀ ಜೆ. ಎಮ್. ಸಿಕೇರರು ಎತ್ತಿಹಿಡಿದು ಇನ್ಸ್‌ಪೆಕ್ಟರರ ಆಜ್ಞೆಯು ನ್ಯಾಯವಿರುದ್ಧವಾದುದೆಂದು ತೀರ್ಪು ಕೊಟ್ಟರು. ಶ್ರೀ ಜಿ. ಕೆ. ಗೋವಿಂದ ಭಟ್ಟರು ಅರ್ಜಿದಾರರ ಪರವಾಗಿಯೂ ಶ್ರೀ ಗಂಗಾಧರವಾಸರು ಸರಕಾರದ ಪರವಾಗಿಯೂ ವಾದಿಸಿದರು.

ಗೋವಧ ನಿರೋಧ ಆಂದೋಲನವನ್ನು—ಸಮರ್ಥಿಸುವವರ ಸಹಿಯನ್ನು ಸಂಗ್ರಹಿಸುವ ಕಾರ್ಯವನ್ನು ಆರ್. ಎಸ್. ಎಸ್ ನವರು ಕೈಕೊಂಡಿದ್ದು ನವಂಬರ ತಿಂಗಳಲ್ಲಿ ಜಿಲ್ಲೆಯಲ್ಲಿ 93,046 ಸಹಿಗಳನ್ನು ಸಂಗ್ರಹಿಸಲಾಗಿದೆ.

ಗೋವೆಯ ಯಾತ್ರಿಕರಿಗೆ ಎಚ್ಚರಿಕೆ—ದಶಂಬರ್ ತಿಂಗಳಲ್ಲಿ ಗೋವೆಯಲ್ಲಿ ಸೈಂಟ್ ಫ್ರಾನ್ಸಿಸ್ ಕ್ಷೇವಿಯರರ ದೇಹ ದರ್ಶನಕ್ಕೆ ತೆರಳುವವರು ಕಾಲರಾ ಮತ್ತು ಸಿಡುಬಿನ ದಾಳು ಹಾಕಿಸಿಕೊಂಡೇ ತೆರಳತಕ್ಕದ್ದೆಂದೂ ಜಿಲ್ಲಾ ಮತ್ತು ಮುನಿಸಿಪಾಲ್ ಹೆಲ್ತ್ ಆಫೀಸುಗಳಲ್ಲಿ ಧರ್ಮಾರ್ಥವಾಗಿ ದಾಳು ಹಾಕಿಸಿ ಸರ್ಟಿಫಿಕೇಟು ಕೊಡಲಾಗುವುದೆಂದೂ ಪ್ರಕಟಿಸಲಾಗಿದೆ.

ಭೂಗರ್ಭ ಶಾಸ್ತ್ರಜ್ಞ—ರಾದ ಶ್ರೀ ಬಿ. ಆರ್. ಸಿ. ಅಯ್ಯಂಗಾರರು ದ. ಕ. ಜಿಲ್ಲೆಗೆ ಬಂದಿದ್ದು ಮಲೆನಾಡು ಪ್ರದೇಶಗಳಾದ ಉಪ್ಪಿನಂಗಡಿ, ಬೆಳ್ತಂಗಡಿ ಮತ್ತು ಚಾರ್ಮಾಡಿಗಳಲ್ಲಿ ಆರು ತಿಂಗಳುಗಳ ಕಾಲ ಸಂಶೋಧನೆಯನ್ನು ನಡೆಸಲಿರುವರು.

ಪ್ರಜಾ ಸೋಶಲಿಸ್ಟ್ ಪಾರ್ಟಿಯ ಮಂಗಳೂರು ಶಾಖೆಯ—ತಾತ್ಕಾಲಿಕ ಕಮಿಟಿಯನ್ನು ರಚಿಸಲು ಕಳೆದ ತಾ. 23ರಲ್ಲಿ ಎಲ್ಲ ಸದಸ್ಯರ ಸಭೆಯೊಂದು ಫೆಲಿಕ್ಸ್ ಪೈ ಬಜಾರಿನಲ್ಲಿ ಜರಗಿತು, ಸಭೆಯ ಕನ್ವೀನರ್ ಡಾ। ನಾಗಪ್ಪ ಆಳ್ವರು, ಡಿ. ಮೋಹನ ರಾಯರನ್ನು ಅಂದಿನ ಅಧ್ಯಕ್ಷಸ್ಥಾನಕ್ಕೆ ಸೂಚಿಸಿದರು. ಡಾ। ಸಂಜೀವನಾಥ, ಶ್ರೀ ಕೆ. ಆರ್ ಕಾರಂತ, ಡಾ। ಟಿ. ಪಿ. ಭಟ್ಟರು ಸಂಘಟನೆಯ ಬಗ್ಗೆ ವಿವರವಾಗಿ ಮಾತಾಡಿದ ಬಳಿಕ ಸಮಿತಿಯ ರಚನೆಯಾಯಿತು. ಡಾ। ಕೆ ನಾಗಪ್ಪ ಆಳ್ವರು ಈ ಕಮಿಟಿಯ ಅಧ್ಯಕ್ಷರು.

ಮುನಿಸಿಪಾಲ್ ವರ್ಕರ್ಸ್ ಯೂನಿಯನ್ನಿನ—ಕಾರ್ಯಕಾರೀ ಕಮಿಟಿಯ ಸಭೆಯು ಕಳೆದ ತಾ 23ರಲ್ಲಿ ಶ್ರೀ ಎ. ಶಾಂತಾರಾಂ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಇದೇ ತಿಂಗಳ ತಾ 14ನ್ನು ಮುನಿಸಿಪಾಲ್ ಮಜೂರರ ಕೇಳಿಕೆ ದಿನವಾಗಿ ಆಚರಿಸಬೇಕೆಂದು ನಿರ್ಣಯಿಸಲಾಯಿತು.

ದಕ್ಷಿಣ ರೈಲು ಪ್ರಾದೇಶಿಕ ಕಮಿಟಿ ಸಭೆಯು—ಕಳೆದ ತಾ. 28ರಲ್ಲಿ ಪೂರ್ವಾಹ್ನ ವಣಿಜ ಸಂಘದ ಕಚೇರಿಯಲ್ಲಿ ಮದ್ರಾಸಿನ ದಕ್ಷಿಣ ರೈಲ್ವೆಯ ಒಪರೇಟಿಂಗ್ ಸುಪರಿಂಟೆಂಡೆಂಟರಾದ ಶ್ರೀ ಎಸ್. ಆರ್. ಕರ್ಗ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮಂಗಳೂರಿನಿಂದ ಹೊರಡುವ ಮತ್ತು ತಲ್ಪುವ ಗಾಡಿಗಳಲ್ಲಿ ಕೆಲವು ಬದಲಾವಣೆಯನ್ನು, ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಸಮಯವನ್ನು ಬದಲಾಯಿಸುವ, ಮಂಗಳೂರಲ್ಲಿ ಹೆಂಗಸರಿಗೆ ಪ್ರತ್ಯೇಕ ಟಿಕೇಟು ಕೊಡುವ ವ್ಯವಸ್ಥೆಯೇ ಮೊದಲಾದ ಕೆಲವು ನಿರ್ಣಯಗಳು ಆದುವು.

ವರ್ಗಾವರ್ಗಿ—ಮಂಗಳೂರು ಡಿಪ್ಯುಟಿ ಕಲೆಕ್ಟರ್ ಶ್ರೀ ಎಸ್. ಬಾಲಾಜಿ ರಾಯರು ಕೃಷ್ಣ ಜಿಲ್ಲೆಯ ಜಿಲ್ಲಾ ಸರಬರಾಯಿ ಆಫೀಸರರಾಗಿಯೂ, ಶ್ರೀ ಎಮ್. ಕಾರಿಯಪ್ಪನವರು ಮಂಗಳೂರು ಡಿಪ್ಯುಟಿ ಕಲೆಕ್ಟರ್‌ರಾಗಿಯೂ ವರ್ಗಾಯಿಸಲ್ಪಟ್ಟಿದ್ದಾರೆ.

ಮಂಗಳೂರು ತಾಲೂಕು ಬೋರ್ಡ್ ಶಾಲಾ ಉಪಾಧ್ಯಾಯರ—ಯೂನಿಯನ್ನಿನ ಮಹಾಸಭೆಯು ಇದೇ ತಾ 7ನೇ ಆದಿತ್ಯವಾರ ಪೂರ್ವಾಹ್ನ 11 ಗಂಟೆಗೆ ಮೂಲ್ಕಿ ಬೋರ್ಡ್ ಹಾಯರ್ ಎಲಿಮೆಂಟ್ರಿ ಶಾಲೆಯಲ್ಲಿ ಜರಗುವುದಾಗಿಯೂ, ಉಪಾಧ್ಯಾಯ ಉಪಾಧ್ಯಾಯಿನಿಯರು ಅಗತ್ಯ ಬರಬೇಕಾಗಿಯೂ ಕಾರ್ಯದರ್ಶಿ ಶ್ರೀ ಡಿ. ಭೋಜರಾಯರು ತಿಳಿಸುತ್ತಾರೆ

ಮೆಡಿಕಲ್ ಎಸೋಸಿಯೇಶನಿನ ಸಭೆ—ಭಾರತದ ವೈದ್ಯಕೀಯ ಸಂಘದ ದ. ಕ. ಜಿಲ್ಲಾ ವಿಭಾಗದ ಏಳನೆ ವಾರ್ಷಿಕ ಮಹಾಸಭೆಯು ತಾ 29ರಲ್ಲಿ ಡಾ। ಎ. ಎಫ್ ಕೊಯಿಲೊರವರ ಅಧ್ಯಕ್ಷತೆಯಲ್ಲಿ ಜರಗಿ ಹೊಸ ವರುಷದ ಕಾರ್ಯಕಾರಿ ಮಂಡಳಿಯ ರಚನೆಯೂ ಆಯಿತು. ಲಂಡನಿನಿಂದ ರಜೆಯಲ್ಲಿ ಬಂದಿದ್ದ ಮನಶ್ಶಾಸ್ತ್ರಜ್ಞರಾದ ಡಾ। ಎಮ್. ಎಸ್. ಪೈಯವರು ಮದ್ದಿನ ಉದ್ರೇಕದ ವಿಚಾರದಲ್ಲಿ ಭಾಷಣ ಮಾಡಿದರೆಂದು ತಿಳಿದು ಬರುತ್ತದೆ.

ಪೇರಿಸ್ ಮತ್ತಿಬ್ಬರಿಗೆ ಫಾಶಿ ಶಿಕ್ಷೆ—ಈಗ ಕೆಲವು ವಾರಗಳಿಂದ ಸ್ಥಳೀಯ ಸೆಶ್ಶನ್ಸ್ ಕೋರ್ಟಿನಲ್ಲಿ ನಡೆಯುತ್ತಿದ್ದ ಪೆರ್ಮುದೆ ಕೊಲೆ ಮೊಕದ್ದಮೆಯ ತೀರ್ಪನ್ನು ತಾ 29ರಲ್ಲಿ ಸೆಶ್ಶನ್ಸ್ ಜಡ್ಜರಾದ ಶ್ರೀ ಸಿ. ಟಿ. ರಾಮನ್ ನಾಯರರು ಕೊಟ್ಟು ಆಲ್ಫ್ರೆಡ್ ಜೇಮ್ಸ್ ಪೇರಿಸ್, ಪಡುಕೋಡಿಯ ಅಗೋಸ್ತಿನ್ ಡಿ ಸೋಜ, ಕುತ್ತೆತ್ತೂರಿನ ಡೇವಿಡ್ ಡಿ'ಸೋಜ ಎಂಬೀ ಮೂವರು ಅಪರಾಧಿಗಳು ತಪ್ಪಿತಸ್ಥರೆಂದು ನಿರ್ಧರಿಸಿ ಆ ಮೂವರು ಅಪರಾಧಿಗಳಿಗೂ ಮರಣ ದಂಡನೆಯನ್ನು ವಿಧಿಸಿದರು. ಅಂತರಾಷ್ಟ್ರೀಯ ಚೋರನೆನಿಸಿದ ಪೇರಿಸನು ಎರಡು ವರ್ಷಗಳ ಹಿಂದೆ ಪೆರ್ಮುದೆ ಎಂಬಲ್ಲಿ ಜೋರ್ಜ್ ಎಂಬವನ ಕೊಲೆ ಮಾಡಿದ ಆಪಾದನೆಯಲ್ಲಿ ದಸ್ತಗಿರಿ ಮಾಡಲ್ಪಟ್ಟು ಜೈಲಿನಿಂದ ತಪ್ಪಿಸಿ ಓಡಿ, ಅನೇಕ ತಿಂಗಳುಗಳ ನಂತರ ಪತ್ತೆ ಹಚ್ಚಲ್ಪಟ್ಟು ಮಂಗಳೂರಿಗೆ ಕರೆತರಲ್ಪಟ್ಟಿದ್ದನು.

ಸಕಲ ಪುಸ್ತಕ ಭಂಡಾರಗಳಿಗೆ ಬೇಕಾಗುವ ಸರ್ವವಿಧದ ಪುಸ್ತಕಗಳು!

ಕಥೆ, ಕಾದಂಬರಿ, ನಾಟಕ, ಕವಿತೆ, ಚಿತ್ರ, ಪ್ರಬಂಧ ಮೊದಲಾದ ನಾನಾಬಗೆಯ ಅಮೂಲ್ಯಕೃತಿಗಳು

ಅಂತರಂಗದ ಪ್ರಕಟಣೆಗಳು

ಬಿಂದಾವಳಿ	ಎಂ. ವಿ. ಹೆಗ್ಡೆ	೦	೩
ಆ ಸುದ್ದಿ	,,	೦	೪
ಹೈದರಾಬಾದು ವಿಜಯ	,,	೦	೪
ಸೆರೆಯಾಳು	ಬಿಂದು ಮಾಧವ	೦	೬
ಗಾದೆಯ ಗಾಂಧಿ	ಎಂ. ವಿ. ಹೆಗ್ಡೆ	೦	೩
ಶಾಂತಿಯ ಮಡಿಲಲ್ಲಿ	ಪ. ಸಾ. ಭಟ್ಟ	೦	೩
ಬಲಿಪೀಠದಲ್ಲಿ	ಆರ್. ಕಲ್ಯಾಣಮ್ಮ	೦	೫
ಅಗಲಿದ ಅಕ್ಕ ಸರೋಜಿನಿ	ಹೆಗ್ಡೆ	೦	೩
ನನ್ನ ಸಂಗತಿ	ಎಂ. ನಾ ಹೆಗ್ಡೆ	೦	೩
ಪುಣ್ಯಫಲ	ಗಿರಿಬಾಲೆ	೦	೪
ಸುಖದ ದಾರಿ	ದೇವದಾಸ	೦	೩
ಸುಕಾಂತ	ಹಿತ್ತಲಮನಿ	೦	೩
ಪಂಚಮುಖಿ	ಶ್ರೀಧರ	೦	೫
ಜಾತಿ ಭೂತಕ್ಕೆ ಬಲಿ	ದೇವಕಿ	೦	೩
ಜನಸೇವೆಯ ಸೋಗಿನಲ್ಲಿ	ಕೆ. ಶಿ. ಶೆಟ್ಟಿ	೦	೩
ನಾಳಂದ ಅವಳು	ವೆಂ. ಅಡಿಗ	೦	೩
ತ್ರಿವೇಣಿ	ಅಜ್ಜಿ	೦	೩
ನಿಲುವಂಗಿ	ಸುಬ್ಬರಾಮಯ್ಯ	೦	೪
ಬಾಡಿಗೆ ಮನೆ	ಮಯಿಲ ಗೋಳ	೦	೩
ವರ್ತಮಾನಕಾಲದ ನಾಲ್ವರು ಮಹಾನುಭಾವರು	ಕು. ಶಿ.	೦	೪
ದೇವರ ನಾಮ ಮತ್ತು ಸಾಧನೆ	ಬಾಪು	೦	೩
ಎರಡು ಕಥೆಗಳು	ಸಂಕಲನ	೦	೪
ಸರಸ ವಿರಸ	ಲಿ. ಗೌ. ಕಿನ್ನಿಗೋಳಿ	೦	೩
ಹೃದಯೇಶ್ವರಿ	ಪ್ರೇಮಚಂದ್ರ	೦	೪
ವಿವಿಧ ವಿಷಯ ಕೋಶ ಭಾ. ೧, ೨		೦	೬
ನುಡಿಮುತ್ತುಗಳು ಭಾ. ೧, ೨, ೩		೦	೧೨
ಕಾಲವಿಲ್ಲದ ಹೆಣ್ಣು	ವೆಂಕೋಬಾಚಾರ್ಯ	೨	೦
ಕವನವನದಿಂದ	ಶಾರದಾ ದೇವಿ	೦	೪
ಭಾಗ್ಯ ಲಕ್ಷ್ಮಿ	ಲಕ್ಷ್ಮಣ ರಾವು	೧	೪
ಯುಗವಾಣಿ	ಕು. ಶಿ.	೦	೮
ಸ್ತ್ರೀ ಹೃದಯ	ಪ। ವಸಂತಿಬಾಯಿ	೦	೪
ದ್ವೇಷ	ಶ್ರೀ ಮೂರ್ತಿ	೦	೩
2 ಏಕಾಂಕ ನಾಟಕಗಳು	ವೆಂಕಟ್ರಾಜ	೦	೪
ಪ್ರಜಾಪ್ರಭುತ್ವವನ್ನು ಕುರಿತು	ಕಾರಂತ	೦	೮
ಕಲಾವಿದನ ದಿನಚರಿ	ಎಸ್ಸೆಲ್	೦	೩
ಆಧುನಿಕ ಭಾರತ	ಜುರಾಳಿ	೦	೪
ಕಾಲವೇ ಬದಲಾಗಿದೆ	ಕು. ಶಿ.	೦	೪
ಭಾರತದ ಸಾಹಿತ್ಯ ಕಲೆಗಳು	ವಿ ಸ.	೦	೪
ಸ್ತ್ರೀ ಸ್ವಾತಂತ್ರ್ಯ ಬೇಕೆ	ಬಾಪಟ್	೦	೪
ಹಂಬಲ	ಕೆ. ಕೃ. ಮೂರ್ತಿ	೦	೪

ಭಾರತ ಚಿತ್ರದ ಅಂಚೆ ಚೀಟುಗಳು		೦	೩
ತ್ರಿಶೂಲ	ವಸುದೇವ ಭೂಪಾಲಂ	೦	೫
ಪುಸ್ತಕ ಪುರಾಣ	ಕು. ಶಿ.	೦	೪
ಹಳ್ಳಿಯಲ್ಲಿ ನಡೆದ ನಾಟಕ	ದೇವದಾಸ	೦	೩
ನೆರೆಯ ಗಾಂಧಾರ	ಸು. ಕೃ. ಹೆಗ್ಡೆ	೦	೩
ಮಾತಿನ ಯುಗದ ಮಹಾಪ್ರಭಾವ		೦	೩
ವಿಜ್ಞಾನದ ಬೆಳವಣಿಗೆ	ಚಂ. ಶೆಟ್ಟಿ	೦	೪
ಡಾ। ಹರ್ಡೀಕರ್	ನಾ.ರಾ.ದೇಸಾಯಿ	೦	೫
ತೆಂಗಿನ ತವರು	ಯು. ನಾ. ಭಟ್ಟ	೦	೬
ಪ್ರಾಯಶ್ಚಿತ್ತ	ಎಮ್.ಗೋ ರಾವು	೦	೩
ಪ್ರಭಾ	ಕು। ಪದ್ಮಾ	೦	೩
ಕವನಗಳ ಸಾಗಾಟ	ಸು. ಕೃ. ಹೆಗಡೆ	೦	೧೨
ಸ್ವಪ್ನಲೋಕ	ಕಾರ್ತಿಕೇಯ	೦	೫
ಮಹಾಜೀವಿಗಳು	ಕು. ಶಿ.	೦	೫
ಘಂಟಿಮಾರಾ (5 ಭಾಗಗಳು)	ಕು.ಶಿ.	೨	೦
ಮಹಾಪಾರ್ಟಿ	ಡಾ। ಯು. ಕೃಷ್ಣ	೦	೫
ಭಾರತದ ರಾಷ್ಟ್ರಗೀತೆ	ಚಂ ಶೆಟ್ಟಿ	೦	೩
ನಮ್ಮ ಬಹು ದೊಡ್ಡ ಶತ್ರು	ಕೆ.ಶಿ. ಶೆಟ್ಟಿ	೦	೪
ಕೈಲಾಸ	ಚಂದ್ರರಾಜ ಶೆಟ್ಟಿ	೦	೩
ಚೌತಿ	ಸಂಗ್ರಹ	೦	೪
ಕತ್ತು ಕೊಯ್ದವರಾರು?	ರಾ. ಮೂರ್ತಿ	೦	೬
ಸಮಾಜದ ಅಗ್ನಿಕುಂಡ	ವಸಂತಿಬಾಯಿ	೦	೪
ಬೆಳ್ಳಿ ಹಬ್ಬ		೦	೪
ಉಷಾ	ಕು. ಪದ್ಮಾ	೦	೪
ವಿಧಿ ಲೀಲೆ	ಮೈಲಾರರಾವು	೦	೪
ಪರಮಾಣು ಪ್ರಪಂಚ	ಉಡುಪ	೦	೪
ನೀತಿ ವಿನೋದ ಕಥೆಗಳು	ವೀ. ಯಾಗಟಿ	೦	೧೨
ಸಾಹಸ ಭೀಮ ವಿಜಯ	ವೆಂ. ಶೆಟ್ಟಿ	೧	೮
ಭಾರತದ ಗುರುಕುಲ	,,	೦	೬
ಲತ್ತಪಗಡೆ	,,	೦	೬
ಸೇವಾಪಥ	ಸುಬ್ರಹ್ಮಣ್ಯಂ	೧	೮
ಭರತೇಶ ದಿಗ್ವಿಜಯ	ವೆಂಕಪ್ಪ ಶೆಟ್ಟಿ	೦	೮
ಮನೋಪದೇಶ	ಬಾಪಟ	೦	೮
ಜೀವನ ಕಲೆ	ಗ. ನಾ. ಪಂಡಿತ	೦	೧೦
ಪ್ರತಿಜ್ಞಾ ಪೂರ್ತಿ	ಸು. ಕೃ ಹೆಗಡೆ	೦	೧೨
ಮಿತ ಸಂತತಿ		೦	೬
ಗುಪ್ತರೋಗ ನಿವಾರಣೆ		೦	೮
ಸೌಂದರ್ಯ	ರಾಮತಂತ್ರಿ	೦	೫
ಸುಧಾ	ಕು. ಪದ್ಮ	೦	೮
ವಸಂತ ಕಾಲ	ಉಡುಪ	೦	೬
ನವೀನ ನಾಟಕಗಳು	ಸಂಕಲನ	೧	೭
ಪರ್ಲ್ ಎಸ್. ಬಕ್	ಯು.ನಾ.ಭಟ್ಟ	೧	೭

ಕಿರಿಯರ ಪ್ರಪಂಚದ ಪ್ರಕಟಣೆಗಳು

ಸ್ವತಂತ್ರ ಜೀವನೋಪಾಯ	ಭಕ್ತ	೦	೩
ಸಂಶಯ ಪಿಶಾಚಿ	ಕೆ. ಕೆ. ಶೆಟ್ಟಿ	೦	೧೦
ನಾಡ ಕಥೆಗಳು	ಸಂಕಲನ	೦	೪
ಕುಶಲವ	ಕೆ. ಕೆ. ಶೆಟ್ಟಿ	೦	೮
ಕಾವ್ಯ ಸಾಮ್ರಾಜ್ಯ	ಕವನಸಂಗ್ರಹ	೧	೮
ಮಧುವನ	ಕಥಾ ಸಂಕಲನ	೩	೦
ಮುಂದಿನ ದೇವರು	ಕೆ. ಕೆ. ಶೆಟ್ಟಿ	೦	೪
ವ್ಯಭಿಚಾರಿಣಿ. ಯಾರು?	,,	೧	೪
ಹೆಂಡ್ತಿ ಗಂಡನಾದರೆ	,,	೦	೪
ಪುರುಷವಧು	,,	೦	೭
ಸನ್ಯಾಸಿಯ ಸೋಗಿನಲ್ಲಿ	,,	೦	೧೨
ನಂದಾದೀಪ	ಕೊರಡ್ಕಲ್	೧	೦
ದೇಶಭಕ್ತ	ಕೆ. ಕೆ. ಶೆಟ್ಟಿ	೧	೪
ಪ್ರೇಮ ವಿಜಯ	,,	೧	೦
ರಂಗಭೂಮಿ	ಎಸ್. ವೆಂಕಟರಾಜ	೦	೧೦
ನಾರೀಹೃದಯ	ಸುಬ್ರಹ್ಮಣ್ಯಂ	೧	೮
ಭಾರತೀಯ ಕಥೆಗಳು	ಕೊರಡ್ಕಲ್	೧	೧೨
ಪ್ರಕಾಶ	ರಾಜಪಾಡೆ	೨	೮
ಮೂರು ಪ್ರಹಸನಗಳು	ಕೊರಡ್ಕಲ್	೧	೦
ಅನ್ನದೇವರು ಮತ್ತಿತರ ಕಥೆಗಳು		೧	೦
ಭಾರತದಲ್ಲಿ ಜಾತಿಬೇಧ	ಸುಬ್ರಹ್ಮಣ್ಯಂ	೧	೦
ವಿಷ್ಣುವಿನ ದಶಾವತಾರಗಳು	ಹೆಗ್ಡೆ	೦	೧೨
ಆಕಾಶ ಗಂಗೆ	ವೆಂಕಟರಾಜ	೨	೪
ಸ್ವಾತಂತ್ರ್ಯವೀರ ಸಾವರಕರರು		೧	೪
ಜೀವನ ಸಂಗ್ರಾಮ	ಪಿ. ಶೀನ ಶೆಟ್ಟಿ	೧	೮
ಕದಂಬ	ರಾಜವಾಡೆ	೧	೪
ಕವಿತಾ ಕಾಮಿನಿ	ವೆಂಕಟರಾಜ	೨	೦
ಸ್ವರಾಜ್ಯ ವಿಜಯ	ಎಂ. ವಿ. ಹೆಗ್ಡೆ	೦	೮
ಸಪ್ತಸಾಗರ	ವೆಂಕಟರಾಜ	೦	೧೨
ಜಮೀನ್ದಾರ	ಗುಡ್ಡಪ್ಪ	೧	೦

ಇತರ ಪುಸ್ತಕಗಳು

ಮನೆ ಮದ್ದು	ಡಾ। ಕೊರಡ್ಕಲ್	೨	೮
ನೆನಪಿಗಾಗಿ	ಸಂಕಲನ	೨	೨
ಗೀತೆಯ ಕೈಗನ್ನಡಿ	ಚಿದಂಬರಯ್ಯ	೦	೧೦
ಸುಲಭದಲ್ಲಿ ಇಂಗ್ಲಿಷ್	ಕೊರಡ್ಕಲ್	೩	೦
ಸರಸ್ವತಿ	ಮಾಧವ ಆಚಾರ್ಯ	೦	೧೨
ಪ್ರತೀಕಾರ	ರಂಗನಾಥ	೦	೮
ಪ್ರೇಮ ಪ್ರವಾಹ	ಸಂಕಲನ	೦	೮
ಶಂಭೂಕ ವಧೆ	ಎನ್ ಎಸ್. ಜೈನಿ	೦	೩
ವೈಯಕ್ತಿಕ ಆರೋಗ್ಯ	ಬಾಪಟ್	೦	೨

ನವಭಾರತ ಪುಸ್ತಕ ಭಂಡಾರ
ಉಡುಪಿ.

ನೋಟೀಸು

ಉಡುಪಿ ಡಿ. ಮು ಕೋರ್ಟಿನಲ್ಲಿ.
ಕ್ರಮ ನಂಬ್ರ 410/52.
ಸಾಧು ಸೆಟ್ಟಿ —ವಾದಿಯು.
ಮತ್ತು
ಸಂಕಯ್ಯ ಸೆಟ್ಟಿ ಕೂಡ —ಪ್ರತಿವಾದಿಗಳು.
ಇವರೊಳಗೆ.

4ನೆ ಪ್ರತಿವಾದಿ-ಲಕ್ಷ್ಮಣ ಸೆಟ್ಟಿ-ನಾಗಪ್ಪ ಸೆಟ್ಟರ ಮಗ-ಶ್ರೀ. ಕೃಷ್ಣ ಜೋಳಿ ಮಾರ್ಟ್, ಮಂಡಿ ಪೇಟೆ—ದಾವಣಗೆರೆ ಪೋಸ್ಟು.

37ನೇ ಪ್ರತಿವಾದಿ-ಕುಶಲ ಸೆಟ್ಟಿ-ಸರ್ಪ ಶೆಟ್ಟರ ಮಗ-ಸುವರ್ಣ ಮಂದಿರ-ದುರ್ಗದ ಬೈಲು-ಹುಬ್ಬಳ್ಳಿ ಪೋಸ್ಟು.

ಮೇಲ್ಕಂಡ 4 ಮತ್ತು 37ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಮೇಲ್ಕಂಡ ವಾದಿಯು ಹಿಸೆ ಕೇಳಿ ದಾಖಲು ಮಾಡಿದ ಮೇಲ್ಕಂಡ ದಾವೆಯನ್ನು ತಾ. 12-12-52ಕ್ಕೆ 4 ಮತ್ತು 37ನೇ ಪ್ರತಿವಾದಿಯ ನೋಟೀಸು ಬಗ್ಗೆ ಮುಂದೋಡಾಗಿಯದೆ. ಸದ್ರಿ ಪ್ರತಿವಾದಿಗಳು ತಮ್ಮ ಉದಾಹರಣೆಯ ಸ್ಥರೆ ಸದ್ರಿ ದಿನ್ನ ಬೆಳಿಗ್ಗೆ ಗಂಟೆ 11ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು—ತಪ್ಪಿದರೆ ಅವರನ್ನು ಎಕ್ಸ್ ಪಾರ್ಟಿ ಮಾಡಿ ಸದ್ರಿ ದಾವೆಯು ತೀರ್ಮಾನಿಸಲ್ಪಡುವುದು.

By Order of the Court.

K. J. Ballal,
Pleader for Plaintiff
Dated, 1-12-52- Camp Udipi.

ಪತ್ರವ್ಯವಹಾರ:—

ಉಪಕಾರವೋ? ಉಪದ್ರವೋ?

ಪಾವಂಜೆ ಹೊಳೆ ಕಡವಿನ ಬಳಿ ರೈತರ ಉಪಯೋಗಕ್ಕಾಗಿ ಸರಕಾರದವರು ಉಪ್ಪು ನೀರು ಗದ್ದೆಗಳಿಗೆ ಬಾರದಂತೆ ಒಂದು ಅಣೆಕಟ್ಟು ಮಾಡಿರುತ್ತಾರೆ. ಈ ಅಣೆಕಟ್ಟು ಕಟ್ಟಿದ್ದರಿಂದ ಈ ವರ್ಷ ಕಂಡೇವು ಸುರತ್ಕಲ್ ಗ್ರಾಮಗಳಲ್ಲಿ ಗದ್ದೆಗಳಿಗೆ ನೀರು ಜಾಸ್ತಿಯಾಗಿ ನಟ್ಟಿ ಬೆಳೆಯು ಕೊಳೆಯಲಿಕ್ಕೆ ಆರಂಭವಾದ್ದರಿಂದ ಕಲೆಕ್ಟರರಿಗೆ ಅರ್ಜಿ ಕೊಟ್ಟು ಇಂಜಿನಿಯರ ಬಳಿಗೆ ಕಲೆಕ್ಟರ ಹುಕುಂ ಹಿಡಕೊಂಡು ಹೋಗಿ ಹೇಳಿಕೊಳ್ಳುವಾಗ ಆ [illegible] ಅಸಿಸ್ಟೆಂಟ್ ಇಂಜಿನಿಯರ ಹತ್ತಿರ ಉಂಟೆಂದು ಹೇಳಿದ್ದರಿಂದ ಅವರು ಫಲಿಮಾರು ಅಣೆಕಟ್ಟಿನ ತನಿಖೆಗೆ ಹೋದವರನ್ನು ಬರುವವರೆಗೆ ಕಾಯುವೆ ಕೂಡಲೇ ಫಲಿಮಾರಿಗೆ ಹೋಗಿ ಹುಕುಂಗಳನ್ನು ಕೊಡಲಿಕ್ಕೆ ಅಲ್ಲಿಂದ ಅವರು ಕಾರ್ಕಳಕ್ಕೆ ಹೋಗಿ [illegible] ಬರುವಾಗ ಬೆಳೆ ನೀರಿನಲ್ಲಿ ಮುಳುಗಿ ಏಳು ದಿನವಾಯಿತು. ಆ ಮೇಲೆ ಕಲೆಕ್ಟರರು ಇಲ್ಲಿಗೆ ಬಂದವರ ಕೂಡ ಹೇಳಿದಾಗ್ಯೂ ಕಲೆಕ್ಟರರು ಸ್ವತಃ ನೀರು ಬಿಟ್ಟದ್ದನ್ನು ಬಿಡಬೇಕೆಂತ [illegible] ಹೇಳಿದಾಗ್ಯೂ ಕೆಲಸದವರು ಹುಕುಂ ಇಲ್ಲದೆ ನೀರು ಎಷ್ಟು ಬಿಡಬೇಕೆಂದು ನಮಗೆ ಗೊತ್ತಿಲ್ಲವೆಂತ ಹೇಳಿದ್ದರಿಂದ ಮತ್ತೆ ಇಂಜಿನೀಯರ ಬಳಿಗೆ ಹೋಗಿ ಅವರನ್ನು ಕರೆತಂದು ಬರುವಾಗ ಈ ವರ್ಷದ ಮುಟ್ಟಿಗೆ ಸುಮಾರು ೩00 ಎಕ್ರೆ ಸಾಗುವಳಿ ಗದ್ದೆಗಳಲ್ಲಿ ಕಡಿಮೆ ಪಕ್ಷ 800 ಮುಡಿ ಅಕ್ಕಿ ನಷ್ಟವಾಗಬಹುದೆಂದು ಹೇಳಿದ್ದರಿಂದ, ಕೂಡಲೇ ನೀರು ಕಡಿಮೆ ಮಾಡುವಂತೆ ಹೇಳಿ ಹೋದರು. ನೀರು ಬಿಡುವವರು ರಾತ್ರಿ ನೀರು ಬಿಟ್ಟು ಬೆಳಗ್ಗೆ ನೀರು ಬಂದು ಮಾಡಿದ್ದರಿಂದ ತೋಡಿನ ನೀರು ಅರೆ ಗದ್ದೆ ನೀರು ತೋಡಿಗೆ ಇಳಿಯುವಾಗ ಹೊಡಲಿದ್ದ ನೀರಿನಷ್ಟೆ ನೀರು ಮತ್ತೆ ಏರಿ ಗದ್ದೆಗಳು ಮುಳುಗಿದವು. ಈ ವಿಚಾರವನ್ನು ಇಂಜಿನಿಯರಿಗೆ ಹೇಳಿ ರೈತರ ಗದ್ದೆಗಳಿಗೆ ಬೇಕಾದಷ್ಟೆ ನೀರು ಇಡಬೇಕೆಂದು ಹುಕುಂ ಆಗುವಾಗ ದಿನ 15 ಕಳೆಯಿತು. ಬೆಳೆಗಳೆಲ್ಲಾ ಕೊಳೆತು ಹೋಯಿತು. ಆಗುವುದಲ್ಲದೆ ಆಯುಷ್ಯ ಹೋಗುವುದಿಲ್ಲ. ಹೋಯಿತು. ಇನ್ನಾದರೂ ಈ ಕಟ್ಟಿನ ನೀರು ಬಿಡುವ ಅಧಿಕಾರವನ್ನು ಆ ಗ್ರಾಮದ ಪಟೇಲರುಗಳಿಗೇ ಅಥವಾ ಪಂಚಾಯತ ಬೋರ್ಡುಗಳಿಗೆ ಬಿಟ್ಟುಕೊಟ್ಟರೆ ಉಪದ್ರವು ಕಡಿಮೆಯಾಗಿ ಉಪಕಾರವಾದೀತು. ಸಂಬಂಧಪಟ್ಟವರೇ ಇಟ್ಟುಕೊಂಡರೆ ಆಗುವ ಪರಿಣಾಮಕ್ಕೆ ಮೇಲಿನ ನಿದರ್ಶನವೇ ಸಾಕು.

ಈ ಅಣೆಕಟ್ಟಿನ ಮೇಲೆ ಜನರು ಹೊಳೆ ದಾಟಿ ಹೋಗಲಿಕ್ಕೆ ಸರಿಯಾದ [illegible] ಇರುವಾಗ ಈ ಅಣೆಕಟ್ಟಿಗೆ ಅಡ್ಡ ಬೇಲಿ ಮಾಡಿ ಕಂಡೇವು ಬಳ್ಕುರು ಮುದ್ದ ಎಗ್ಗತ ಗ್ರಾಮದ ಜನರು ಹೋಗದಂತೆ ತಡೆದು ದೋಣಿ ಮೂಲಕವೇ ಹೋಗಬೇಕೆಂದು ಹೇಳುವ ಅರ್ಥವೇನೋ? ತಿಳಿಯದು. ಈ ವಿಚಾರವನ್ನು ಸರಕಾರವಾಗಲೀ ಪಂಚಾಯತವಾಗಲೀ ದಯವಿಟ್ಟು ಸಾರ್ವಜನಿಕರಿಗೆ ತಿಳಿಸಿದರೆ ಉಪಕಾರವಾದೀತು.

ಹೆಗ್ಡೆ “ವ್ಯೋಳಲಿ”



S. S. L. C. ಕನ್ನಡ ಉಪಪಠ್ಯದಲ್ಲಿ ವ್ಯತ್ಯಾಸ

ಈ ವರ್ಷ S. S. L. C. ಕ್ಲಾಸಿಗೆ ಕನ್ನಡ ಉಪಪಠ್ಯವಾಗಿ ಆರಿಸಲ್ಪಟ್ಟ 'ರಘುವಂಶ'ವು ಮಹಾಕವಿ ಕಾಳಿದಾಸನಿಂದ ಬರೆಯಲ್ಪಟ್ಟ ಸಂಸ್ಕೃತ 'ರಘುವಂಶ'ದ ಅನುವಾದವಾಗಿದೆಯಷ್ಟೆ? ಆದರೆ ಪ್ರಸ್ತುತ ಪುಸ್ತಕದಲ್ಲಿರುವ ಕೆಲವು ವಿಷಯಗಳು ಮೂಲಗ್ರಂಥಕ್ಕಿಂತ ವ್ಯತ್ಯಾಸವಾಗಿವೆ, ಉದಾ:-

ಪುಟ 70 ಲವಣ ಪುತ್ರರಾದ ಸುಬಾಹು ಬಹುಶ್ರುತರನ್ನು... ..

73 ಅದೇಶದ ರಾಜಕುಮಾರರಾದ ತಕ್ಷ ಮತ್ತು ಪುಷ್ಕಲರನ್ನು ..

ಮೇಲಿನ ವಾಕ್ಯಗಳಿಂದ ಸುಬಾಹು ಬಹುಶ್ರುತರು ಶತ್ರುಘ್ನನಿಂದ ಕೊಲ್ಲಲ್ಪಟ್ಟ ಲವಣಾಸುರನ ಮಕ್ಕಳೆಂದೂ, ತಕ್ಷ ಪುಷ್ಕಲರು ಅದೇಶದ ರಾಜಕುಮಾರರೆಂದೂ ಅರ್ಥವಾಗುತ್ತದೆ. ಈ ವಿಷಯವು ಮೂಲಗ್ರಂಥವಿರುದ್ಧವಾಗಿದೆ.

ಕಾಳಿದಾಸನ ರಘುವಂಶದಲ್ಲಿ ರಾಮ, ಲಕ್ಷ್ಮಣ, ಭರತ, ಶತ್ರುಘ್ನರಿಗೆ ಪ್ರತಿಯೊಬ್ಬರಿಗೂ ಎರಡೆರಡು ಮಂದಿ ಮಕ್ಕಳಿದ್ದರೆಂದೂ ಅವರೆಲ್ಲ ತಮ್ಮ ತಂದೆಯಂದಿರಿಂದಲೇ ರಾಜ್ಯಾಧಿಕಾರದಲ್ಲಿ ನಿಯುಕ್ತರಾದರೆಂದೂ ಹೇಳಿದೆ. ಅದು ಈ ರೀತಿ:-

	ಮಕ್ಕಳು	ರಾಜಧಾನಿ	(ಕಾಳಿದಾಸನ ರಘುವಂಶ)
1 ರಾಮ	ಕುಶ ಲವ	ಕುಶಾವತಿ ಶರಾವತಿ	ಸರ್ಗ 15 ಶ್ಲೋಕ 97
2 ಲಕ್ಷ್ಮಣ	ಅಂಗದ ಚಂದ್ರಕೇತು	ಕಾರಾಪಥ	,, ,, ,, 90
3 ಭರತ	ತಕ್ಷ ಪುಷ್ಕಲ	ತಕ್ಷಶಿಲಾ ಪುಷ್ಕಲಾವತಿ	,, ,, ,, 89
4 ಶತ್ರುಘ್ನ	ಸುಬಾಹು ಬಹುಶ್ರುತ	ಮಧುರಾ ವಿದಿಶಾ	,, ,, ,, 36

ಮಾತ್ರವಲ್ಲದೆ ಈ ವಿಷಯವು ಈ ಕೆಳಗಿನ ಶ್ಲೋಕಗಳಿಂದಲೂ ಸ್ಪಷ್ಟವಾಗುವುದು.

ಸರ್ಗ 15 ಶ್ಲೋಕ 35 'ಇತರೇಪಿ ಘೋರ್ವಂಶ್ಯಾ ... ,ಅಸನ್ ದ್ವಿಷಾಸನಃ ॥'
,, ,, ,, 91 'ಇತ್ಯಾರೋಪಿತ ಪುತ್ರಾಸ್ತೇ . '
ಸರ್ಗ 16 ಶ್ಲೋಕ 1 'ಅಥೇತರೇ ಸಪ್ತ ರಘುಪ್ರವೀರಾ.. .'

ಹಾಗೂ ಪ್ರಸ್ತುತ ರಘುವಂಶ ಪುಸ್ತಕದ 82ನೇ ಪುಟದಲ್ಲಿ ಹೇಳಿದ ವಂಶ ಪಂಕ್ತಿಯಲ್ಲೂ ಕೆಲವು ವ್ಯತ್ಯಾಸಗಳಿವೆ.

ಮೂಲಗ್ರಂಥದಲ್ಲಿ 'ನಭ'ನ ಮಗ 'ಪುಂಡರೀಕ' ಅವನ ಮಗ "ಕ್ಷೇಮಧನ್ವ" ಅವನ ಮಗ "ದೇವಾನೀಕ" ಎಂಬುದಾಗಿಯೂ, ಕ್ಷೇಮಧನ್ವನು ಯಾಗಗಳನ್ನು ಮಾಡಿ ದೇವಲೋಕವನ್ನೈದಿದನೆಂಬುದಾಗಿಯೂ ಇದೆ. (ಸರ್ಗ 18 ಶ್ಲೋಕ 8ರಿಂದ 12)

ಮತ್ತು "ಉನ್ನಾಭ" ನ ಮಗ "ವಜ್ರಣಾಭ" ಅವನ ಮಗ "ಶಂಖಣ" ಎಂಬುದಾಗಿ ಹೇಳಿದೆ (ಸರ್ಗ 18 ಶ್ಲೋಕ 21)

ಆದರೆ ಪ್ರಸ್ತುತ ರಘುವಂಶದಲ್ಲಿ "ಪುಂಡರೀಕ" ಮತ್ತು "ವಜ್ರಣಾಭ"ರ ಹೆಸರೇ ಕಾಣುವುದಿಲ್ಲ. ಮಾತ್ರವಲ್ಲದೆ ಕ್ಷೇಮಧನ್ವನು ಯಾರ ಮಗನೆಂಬುದು ಹೇಳಿಲ್ಲ. ಅನೇಕ ಯಜ್ಞಗಳನ್ನು.. ...ಸಂಪಾದಿಸಿದನು? ಈ ವಾಕ್ಯವು ಯಾರನ್ನು ನಿರ್ದೇಶಿಸುವುದೆಂಬುದೂ ತಿಳಿಯುವುದಿಲ್ಲ.

ಹೀಗಿರುತ್ತ, ಪರೀಕ್ಷೆಯಲ್ಲಿ ಪ್ರಶ್ನೆ ಬಂದಲ್ಲಿ ವಿದ್ಯಾರ್ಥಿಗಳು ಪ್ರಸ್ತುತ ಪುಸ್ತಕದಂತೆ (ಶತ್ರುಘ್ನನ ಮಕ್ಕಳನ್ನು ಅವನ ವೈರಿಯಾದ ಲವಣಾಸುರನ ಮಕ್ಕಳೆಂದೂ, ಇದೇ ರೀತಿ ಇತರರನ್ನೂ) ಒಬ್ಬನ ಮಕ್ಕಳನ್ನು ಇನ್ನೊಬ್ಬನ ಮಕ್ಕಳೆಂದು ಬರೆಯುವ ಸಾಹಸಕ್ಕೆ ಗುರಿಯಾಗಬೇಕೇ? ಅಥವಾ ಮೂಲದಲ್ಲಿದ್ದಂತೆ ಬರೆದು ಮಾರ್ಕು ಕಳೆದುಕೊಳ್ಳಬೇಕೇ?

ಈ ವಿಚಾರದಲ್ಲಿ ವಿದ್ಯಾರ್ಥಿಗಳೂ, ಅಧ್ಯಾಪಕರೂ, ಹಾಗೂ ಪರೀಕ್ಷಕರೂ ನಿರ್ಧಾರವನ್ನು ಮಾಡಿಕೊಳ್ಳುವುದು ಅವಶ್ಯವಲ್ಲವೇ?

ಎಚ್. ಎ. ಪದ್ಮನಾಭ ಭಟ್ಟ.
ಅಧ್ಯಾಪಕ, ವಿವೇಕ ಹೈಸ್ಕೂಲ್, ಕೋಟ.

THE BOMBAY LIFE ASSURANCE COMPANY, LTD.
ದಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂ., ಲಿಮಿಟೆಡ್.
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು
ಪ್ರಧಾನ ಏಜಂಟರು:
ಹೊಟ್ಟಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ
[illegible]
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೇಂಡ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.
[illegible]

[illegible] ನೆಕ್ಲೇಸ್, ತರಹವಾರು ಬೈಸುಗಳು, ಬೆಂಡೋಲೆ,
ಇತರ ಲೋಲಾಕ್ಕುಗಳು, ನಮೂನೆವಾರು ಉಂಗುರಗಳು
ಯಾವಾಗಲೂ ಸಿದ್ಧವಿವೆ
[illegible] ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.
ಯು. ರಾಘವೇಂದ್ರ ಕೃಷ್ಣ ಭಟ್ಟ್,
ಜ್ಯುವೆಲರ್, [illegible], ಉಡುಪಿ, ದ. ಭಾರತ.
ಫೋನು ನಂಬ್ರ [illegible]

ನಾರಾವಿ—ಸ್ಥಳೀಯ ಬೋರ್ಡ್ ಎಲಿಮೆಂಟರಿ ಶಾಲೆಯು ಸರಕಾರದ ಹುಕ್ಕುಂ ಮೇರೆಗೆ ಈಗ ಹಾಯರ್ ಎಲಿಮೆಂಟರಿ ಶಾಲೆಯಾಗಿ ಪರಿವರ್ತಿಸಲಾಗಿದ್ದು ಊರವರಿಂದಲೇ ಸುಮಾರು ರೂಪಾಯಿ 5000ಕ್ಕೂ ಮಿಕ್ಕಿದ ಖರ್ಚಿನಿಂದ ಹೊಸತಾಗಿ ಕಟ್ಟಿಸಿರುವ ಶಾಲಾ ಕಟ್ಟಡದಲ್ಲಿ ಕಳೆದ ತಾ. 18ರಂದು ಆರನೇ ತರಗತಿಯನ್ನು ಶಾಲಾ ಕಮಿಟಿ ಅಧ್ಯಕ್ಷ ಶ್ರೀ ಕೆ. ಕೃಷ್ಣಭಟ್ಟರು ಉದ್ಘಾಟನೆ ಮಾಡಿದರು.

ನೀರ್ಚಾಲು—ಪೆರಡಾಲ ಬಂದನೇ ಗ್ರಾಮದ ನೀರ್ಚಾಲು ಎಂಬಲ್ಲಿ ಹೊಸತಾಗಿ ಒಂದು ಬ್ರಾಂಚ್ ಪೋಸ್ಟಾಫೀಸನ್ನು ಕಳೆದ ತಾ. 24ರಲ್ಲಿ ತೆರೆಯಲಾಗಿದೆ.

ಕುಂಬಡಾಜೆ—ಬೋರ್ಡ್ ಬುನಾದಿ ಪ್ರಾಥಮಿಕ ಶಾಲೆಯಲ್ಲಿ ನಡೆಯುತ್ತಿರುವ ವಯಸ್ಕರ ಶಿಕ್ಷಣ ತರಗತಿಯನ್ನು ಕಳೆದ ತಾ 21ರಲ್ಲಿ ಕಾಸರಗೋಡು [illegible] ಡಿವಿಜನಲ್ ಆಫೀಸರ್ ಶ್ರೀ [illegible] ದರ್ಶಿಸಿದರು.

ಕಲ್ಲಡ್ಕ—ಕಳೆದ ತಾ. 2ರ ರಾತ್ರಿ [illegible]

ಕೋಟೆಕಾರ್— ತಾ. 27ರಂದು [illegible]

ಕಾಸರಗೋಡು— ಈ ತಾಲೂಕಿನ [illegible]

[illegible]
[illegible] ರೂ. 3; [illegible] ರೂ. 5-
[illegible]
MRS D. DEVEE, F DS (N...)
Telegrams CALCUTTA.
ಪ್ರತಿನಿಧಿ: [illegible], ಮಂಗಳೂರು

ಈ ಶತಮಾನದ ನಾದಲೀಲೆ

[೨ನೇ ಪುಟದಿಂದ ಮುಂದುವರಿದುದು]

ಉತ್ಪಾದನೆ ಹೆಚ್ಚಿಸಬಹುದು

ಕಾನೆಕ್ಟಿಕಟ್ ವಿಶ್ವವಿದ್ಯಾಲಯದ ವನಸ್ಪತಿ ಶಾಸ್ತ್ರದ ಪ್ರಾಧ್ಯಾಪಕ ಡಾ॥ ರಿಮೆಂಡ್ ಎಸ್ ವಾಲೀಸರ ಹೇಳಿಕೆಯಂತೆ, ನಿಃಶಬ್ದ ಸ್ವರತರಂಗಗಳನ್ನು ಆಹಾರ ಧಾನ್ಯದ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಮತ್ತು ಅಲ್ಪಾವಧಿಯಲ್ಲಿಯೇ ಬೀಜ ಮೊಳಕೆಯೊಡೆದು ಫಲನೀಡುವಂತೆ ಉಪಯೋಗಿಸಬಲ್ಲೆವು ರಶಿಯಾದ ವಿಜ್ಞಾನಿಯೊಬ್ಬರು ಬಟಾಣಿಬೀಜವು ಮೊಳೆಯುವುದಕ್ಕೆ ಬೇಕಿರುವ ಅರ್ಧ ಅವಧಿಯಲ್ಲಿ ಈ ನಿಃಶಬ್ದ ಸ್ವರತರಂಗಗಳ ನೆರವಿನಿಂದ ಮೊಳೆಯುವಿಕೆಯನ್ನು ನೆರವೇರಿಸಬಹುದೆಂದೂ, ಹೀಗೆ ಮೊಳೆತ ಸಸಿಗಳು ಇಮ್ಮಡಿ ಪುಷ್ಟವಿವೆಯೆಂದೂ ತೋರಿಸಿರುವರು. ಬಟಾಣಿಯ ಉತ್ಪಾದನೆಯನ್ನು ಕೂಡ ಇದೇ ರೀತಿ ಹೆಚ್ಚುಮಾಡಬಹುದೆಂದು ಈ ವಿಜ್ಞಾನಿ ಹೇಳುತ್ತಿದ್ದರು ಅವರ ಹೇಳಿಕೆಯಂತೆ ಬೀಜವನ್ನು ಬಿತ್ತುವುದಕ್ಕೆ ಮುಂಚಿತವಾಗಿಯೇ, ಸ್ವರತರಂಗ ಸ್ಪರ್ಶವನ್ನು ಬೀಜಗಳಿಗೆ ಮಾಡಿಸಿ, ಒಳಗಿನ ಅಂಕುರವು ಸ್ಫುರಿತಗೊಳ್ಳುವಂತೆ ನೋಡಬೇಕು ಎಂದರೆ ಭೂಮಿಯಲ್ಲಿ ಬಿತ್ತಲ್ಪಟ್ಟೊಡನೆಯೇ ಅವು ಮೊಳೆತು ಬೆಳೆಯ ಹತ್ತುವುವು.

ವಾಲೇಸ ಮಹಾಶಯರು ಸೋಯಾಬೀನ, ಮೂಲಂಗಿ, ಮುಂತಾದ ಭಿನ್ನ ಭಿನ್ನ ಜಾತಿಯ ವನಸ್ಪತಿಗಳ ಮೇಲೆ ನಿಃಶಬ್ದ ಸ್ವರತರಂಗಗಳ ಪ್ರಯೋಗ ಮಾಡಿರುವರು. ಈ ಪ್ರಯೋಗಗಳು ಕೆಲಮಟ್ಟಿಗೆ ಸಾಫಲ್ಯವನ್ನು ತಂದಿದ್ದರೂ ಇನ್ನೂ ಪ್ರಗತಿಗೆ ಎಡೆಯಿದೆ. ವಿಜ್ಞಾನಿಗಳು ತಮ್ಮ ಪ್ರಯತ್ನವನ್ನು ಮುಂದರಿಸಿ ಜಯಶೀಲರೆನಿಸಿದರೆ, ಅನ್ನಸಂಕಟಕ್ಕೊಂದು ಕೊನೆ ಬಂದೀತೆಂದು ಊಹಿಸಬಹುದು.

ಉತ್ಪಾದನೆಯನ್ನು ಹೆಚ್ಚಿಸುವುದಷ್ಟೇ ಅಲ್ಲ; ವನಸ್ಪತಿಗಳ ಜಾತಿಯನ್ನೇ ಬದಲಾಯಿಸಬಲ್ಲ ಅದ್ಭುತವನ್ನು ಕೈಗೂಡಿಸುವುದು ನಿಃಶಬ್ದ ಸ್ವರತರಂಗಗಳಿಂದ ಸಾಧ್ಯವೆನಿಸಿದೆ. ವನಸ್ಪತಿಗಳ ಬಣ್ಣವನ್ನು ಬದಲಾಯಿಸಿಬಿಡುವ ಚಮತ್ಕಾರವನ್ನು ವಾಲೇಸರು ತೋರಿಸಿಕೊಟ್ಟಿರುವರು

ಇನ್ನೊಂದು ಮೋಜಿನ ಸಂಗತಿ ಎಂದರೆ-ಪಶುಪಕ್ಷಿಗಳ ಭಾಷೆಯನ್ನು ತಿಳಿದುಕೊಳ್ಳಲು ನಿಃಶಬ್ದ ಸ್ವರತರಂಗಗಳನ್ನು ಉಪಯೋಗಿಸುತ್ತಿರುವುದು. ಕೀಟಾಣುಗಳು, ಬಾವಲಿಗಳು, ಇಲಿಗಳು ಮುಂತಾದುವುಗಳ ಸ್ವರವನ್ನು ನಾವು ನಿತ್ಯ ಕೇಳುತ್ತೇವೆ. ಆದರೆ ಅದರ ಅರ್ಥವೇ ನಮಗಾಗಲೊಲ್ಲದು. ಅವುಗಳ ಸ್ವರದ ಅರ್ಥಗ್ರಹಣವು ಸಾಧ್ಯವಾದರೆ, ಉಪದ್ರವ ಮಾಡಬಾರದೆಂದು ಅವುಗಳಿಗೆ ತಿಳಿಸಿ ಹೇಳಬಹುದು. ಅಥವಾ ಅವುಗಳ ಹೊಂಚನ್ನು ಮುಂಚಿತವಾಗಿಯೇ ತಿಳಿದುಕೊಂಡು ಜಾಗರೂಕತೆಯಿಂದಿರಬಹುದು ೧೫ ವರ್ಷಗಳ ಹಿಂದೆ ವಿಜ್ಞಾನಿಗಳು ಬಾವಲಿಗಳ ಕಿವಿಯ ಸನಿಹ ನಿಃಶಬ್ದ ಸ್ವರತರಂಗವನ್ನು ಮುಟ್ಟಿಸಿ, ಅವುಗಳ ಉತ್ಪಾತವನ್ನು ನಿಲ್ಲಿಸಲು ಪ್ರಯತ್ನಿಸಿದ್ದರು ಈಗ ಸೊಳ್ಳೆ ಹಾಗೂ ಸಸಿಗಳ ಮೇಲೆ ಈ ಪ್ರಯೋಗ ನಡೆಯುತ್ತಿದೆ.

ರೋಗ ನಿವಾರಣೆಗಾಗಿ

ಅಮೆರಿಕಾದ ನೌಕಾ ಸೇನೆಯ ವೈದ್ಯರು ನಿಃಶಬ್ದ ಸ್ವರತರಂಗದ ಪರಿಣಾಮ ಮನುಷ್ಯನ ಮೇಲೆ ಏನಾದೀತೆಂದೂ ಪ್ರಯೋಗಿಸಿ ನೋಡಿದರು ಅವರ ಹೇಳಿಕೆಯಂತೆ, ಕ್ಷ ಕಿರಣದ ಮೂಲಕ ಕೂಡ ನಾವು ಏನನ್ನು ಕಾಣಲಾಗದಿಲ್ಲವೋ, ಅವೆಲ್ಲವನ್ನೂ ನಿಃಶಬ್ದ ಸ್ವರತರಂಗಗಳ ಚಮತ್ಕಾರದಿಂದ ನೋಡಬಹುದು ಮತ್ತು ರೋಗಗಳನ್ನು ಸುಲಭದಲ್ಲಿ ನಿವಾರಿಸಲಿಕ್ಕೂ ಇದು ತುಂಬ ಸಹಾಯನೀಡುತ್ತದೆ.

ಈ ಸಂಬಂಧದಲ್ಲಿ ಒಂದು ಅದ್ಭುತ ಕಥೆ ಇದೆ. ಹಾರ್ಟಫೋರ್ಡಿನಲ್ಲಿರುವ ಅಧಿಶಕ್ತಿಯ ಯಂತ್ರ ನಿರ್ಮಾಣ ಶಾಲೆಯ ಮಾಲಿಕರಾದ ಎಸ್ ಐ. ಪಾರ್ಡ ಎಂಬವರು ಒಂದು ದಿನ ತಮ್ಮಲ್ಲಿಯ ಕೆಲಸಗಾರನೊಬ್ಬ ಒಂದು ನಿಃಶಬ್ದ ಸ್ವರತರಂಗ ನಿರ್ಮಾಣ ಯಂತ್ರದ ತಲೆಯ ಮೇಲೆ ತನ್ನ ಕೈಯನ್ನು ಪ್ರೇಮದಿಂದ ಇಟ್ಟಿರುವುದನ್ನು ಕಂಡರು. ಕಾರಣ ವಿಚಾರಿಸಿದಾಗ ಕೆಲಸದವನು ಹೀಗೆ ಮಾಡಿದುದರಿಂದ ತನ್ನ ಕೈಯಲ್ಲಿದ್ದ ನೋವು ಮಾಯವಾಯಿತೆಂದು ವಿವರಿಸಿದನು ಪಾರ್ಡಮಹಾಶಯರು ಒಡನೆಯೇ ವೈದ್ಯರಿಗೆ ಈ ವಿಶೇಷ ವರ್ತಮಾನವನ್ನು ಮುಟ್ಟಿಸಿದರು ಪರೀಕ್ಷೆ ಮಾಡಿ ನೋಡಿದಲ್ಲಿ ಕೆಲಸದವನ ಹೇಳಿಕೆಯೇ ನಿಜವೆಂದು ತಿಳಿಯಿತು ಈಗಲಂತೂ ಕೊಲಂಬಿಯಾ ವಿಶ್ವವಿದ್ಯಾನಿಲಯದ ಹಲವು ವೈದ್ಯರು ಮನೋರೋಗಗಳ ಉಪಶಮನಕ್ಕಾಗಿಯೂ ನಿಃಶಬ್ದ ತರಂಗವನ್ನು ಉಪಯೋಗಿಸಹತ್ತಿದ್ದಾರೆ ಮೇರೀಲ್ಯಾಂಡದ ಒಬ್ಬ ವಿಶೇಷಜ್ಞರ ಅಭಿಪ್ರಾಯದಂತೆ ಅರ್ಬುದ ರೋಗ ಬೆಳೆಯುವುದನ್ನು ನಿಲ್ಲಿಸಲಿಕ್ಕೆ ನಿಃಶಬ್ದ ಸ್ವರತರಂಗಗಳು ತುಂಬ ಸಹಕಾರಿಯಾಗಿವೆ ದಂತ ಚಿಕಿತ್ಸೆ ಹಾಗೂ ಮೂಳೆಯ ರೋಗಗಳ ಉಪಶಮನಾರ್ಥವಾಗಿಯೂ ನಿಃಶಬ್ದ ಸ್ವರತರಂಗಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಬಹುದೆಂದು ಹೇಳುವರು

ಫ್ರಾನ್ಸಿನ ಒಬ್ಬ ವೈದ್ಯರು ಚರ್ಮರೋಗ ಹಾಗೂ ಮೂಳೆಗೆ ಸಂಬಂಧಿಸಿದ ರೋಗಗಳ ನಿವಾರಣೆಯನ್ನು ಈ ರೀತಿಯಿಂದ ಮಾಡಬಹುದೆಂದು ಉಲ್ಲೇಖಿಸಿರುವರು. ಒಬ್ಬ ನರ್ತಕಿಯು ಕುಣಿಯುತಿದ್ದಾಗ ಒಮ್ಮಿಂದೊಮ್ಮೆಗೆ ತಿರುಗಿಹೋದ ಮೊಣಗಂಟನ್ನು ಸ್ವರತರಂಗಗಳ ನೆರವಿನಿಂದ ಈ ಡಾಕ್ಟರರು ಮೊದಲಿದ್ದಂತೆ ಸರಿಪಡಿಸಿದರು

ಫ್ರಾನ್ಸಿನ ಇನ್ನೊಬ್ಬ ಸ್ವರ ವಿಜ್ಞಾನ ವಿಶಾರದರು ಹಾಲನ್ನು ಹೊಸದಾಗಿ ಮಾಡಿ, ಮತ್ತದನ್ನು ಕೆನೆಯರೂಪದಲ್ಲಿ ಪರಿವರ್ತಿಸಬಲ್ಲ ಕೀಟಾಣುಗಳು ಅಲ್ಪಕಾಲದಲ್ಲಿಯೇ ನಷ್ಟಗೊಳುವುದಕ್ಕೆ ಸ್ವರತರಂಗಗಳನ್ನು ಉಪಯೋಗಿಸುವ ಪದ್ಧತಿಯೊಂದನ್ನು ಹುಡುಕಿರುವರು.

ಕಳೆದ ಪ್ರಥಮ ಮಹಾಯುದ್ಧದ ಕಾಲದಲ್ಲಿ ಸ್ವರತರಂಗಗಳಿಂದ ತುಂಬ ಕೆಲಸವನ್ನು ಮಾಡಿಸಲಾಯಿತು ಒಮ್ಮೆಯಂತೂ ಬ್ರಿಟಿಷ ಕಾಲುವೆಯಲ್ಲಿ ಮುಳುಗುತಿದ್ದ ಒಂದು ಜಲಾಂತರ್ಗಾಮಿಯನ್ನು ಉಳಿಸುವುದೂ ಸಾಧ್ಯವಾಯಿತು. ಇದರೊಳಗೆ ಸ್ವರತರಂಗಗಳ ಬಲದಿಂದ ನಡೆಯುವ ಟೆಲೀಫೋನ ಇದ್ದುದೇ ಇದಕ್ಕೆ ಕಾರಣ. ಮುಳುಗುತ್ತಿರುವಾಗ ಈ ಟೆಲೀಫೋನಿನಿಂದ ಉಳಿದ ಹಡಗುಗಳಿಗೆ ಕರೆಕೊಟ್ಟು, ಸಂರಕ್ಷಣೆಯನ್ನು ಪಡೆದುಕೊಂಡರು.

ಭಾರತದ ವಿಜ್ಞಾನಾಚಾರ್ಯರಾದ ಸ್ವರ್ಗೀಯ ಜಗದೀಶ ಚಂದ್ರ ಬಸುಗಳು ನಮ್ಮ ವಾಣಿಗಿಂತಲೂ— ಸುತ್ತಮುತ್ತಲಿರುವ ವನಸ್ಪತಿಗಳ ಮತ್ತು ಪಶು ಪಕ್ಷಿಗಳ ಮೂಕ ಭಾಷೆಯಲ್ಲಿ ಅಧಿಕ ಸಂವೇದನೆ ಇದೆ ಎಂಬುದಾಗಿ ಹೇಳಿದ್ದರು ಬಸು ವಿಜ್ಞಾನ ಮಂದಿರದಲ್ಲಿ ಸ್ಥಾಪಿಸಲ್ಪಟ್ಟಿರುವ ಈ ವಿಷಯದ ಯಂತ್ರವನ್ನೇ ಇದಕ್ಕೆ ಸಾಕ್ಷಿಯಾಗಿ ತೋರಿಸಬಹುದು ಈಗಲಂತೂ ಶಬ್ದಾಡಂಬರವನ್ನು ತೋರಿ ವರ್ಣಿಸುವುದಕ್ಕೂ ಅಸಾಧ್ಯವಾದ ರೀತಿಯಲ್ಲಿ ನಿಃಶಬ್ದ ಸ್ವರತರಂಗಗಳು ತಮ್ಮ ಚಮತ್ಕಾರವನ್ನು ಪ್ರದರ್ಶಿಸುವ ದಿನ ದೂರವೇನಿಲ್ಲ ಎಂದು ತಿಳಿದಿದೆ.

ಪ್ರಕಟನೆ

ಉಡುಪಿ ತಾಲ್ಲೂಕು ಹೆಗ್ಗುಂಜೆ ಗ್ರಾಮದ ಮಂದಾರ್ತಿ ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಭಂಡಾರದ ಪರಂಪರಾಗತ ಮೇಳವನ್ನು ಇದೇ 1952-53ನೇ ಇಸವಿ ಬೇಸಿಗೆ ಹಿಡಿಯುವ ಸಂಕ್ರಮಣದ ವರೆಗೆ ನಡಿಸತಕ್ಕ ಹಕ್ಕನ್ನು ಭಂಡಾರದ ಕಡೆಯಿಂದ ಏಲಂ ಮಾಡುವದಾಗಿ ಟ್ರಸ್ಟಿಗಳು ನಿರ್ಣಯಿಸಿರುವುದರಿಂದ ಸದ್ರಿ ಏಲಂ ಟ್ರಸ್ಟಿಗಳ ಆಫೀಸಿನಲ್ಲಿ ಇದೇ ತಾ. 8—12—1952ನೇ ದಿವಸ ಅಪರಾಹ್ನ ಗಂಟೆ 3ಕ್ಕೆ ಸದ್ರಿ ದೇವಸ್ಥಾನದ ಟ್ರಸ್ಟಿಗಳಿಂದ ಏಲಂ ಮಾಡೋಣಾಗುತ್ತದೆ. ಕಾಯುವವರು ಸದ್ರಿ ತಾರೀಕಿಗೆ ಹಾಜರಾಗಿ ಏಲಂನಿಂದ ಮೇಳ ಪಡಕೊಳ್ಳಬಹುದು. ಏಲಂ ಶರ್ತ ಆಫೀಸಿಗೆ ಹಾಜರಾಗಿ ಏಲಂ ಮುಂಚೆ ತಿಳಿದುಕೊಳ್ಳತಕ್ಕದು ಎಂಬದಾಗಿ ಸರ್ವರಿಗೂ ಈ ಮೂಲಕ ತಿಳಿಸಲಾಗಿದೆ.

ಮಂದಾರ್ತಿ ತಾ. 1—12—1952

ಶೇಷ ಹೆಗ್ಡೆ
ಮೆನೇಜಿಂಗ್ ಟ್ರಸ್ಟಿ.

ವೆಲ್ಕಿನ್ಸ್ ಟೂತ್ ಪೇಸ್ಟ
ಮಿಂಚುವ ನಗುವಿಗೆ, ಮತ್ತು
ಒಸಡಿನ ಆರೊಗ್ಯಕ್ಕೆ!
ಯು ಎಸ್ ಎ. ರಾಜ್ಯದ
ಪ್ರಸಿದ್ಧ ಡಾಕ್ಟರರೊಬ್ಬರ ತಯಾರಿಕೆ.
Welkin Laboratory (N)
Calcutta 33.
ಉದಾರ ಶರ್ತಗಳ ಮೇಲೆ ಸ್ಟಾಕಿಸ್ಟರು ಬೇಕಾಗಿದ್ದಾರೆ

For Protection and Provision Consult
The New Guardian of India Life Insurance Co., Ltd.
Estd] Head office: MADRAS [1934
NEW BUSINESS Exceeds ... 66½ Lakhs.
PREMIUM INCOME „ ... 15 „
LIFE FUND „ ... 54¾ „
ASSETS „ ... 60¾ „
BUSINESS IN FORCE Nearly 3 Crores.
A Policy in this Progressive Life Office is good investment; its Agency is valuable business connection.
Applications for Representation are invited from energetic influential persons, with good connection. *Please apply to:*
G. Wallia, *Branch Manager*,
Diamond Building, Hampankatta, MANGALORE, S. K.

ಅತ್ಯಪೂರ್ವ ಪುಸ್ತಕ
ಶಿಲ್ಪಿ
ದಿ। ಪುಲಿಮನೆ ಕಾಳಿ ತಿಮ್ಮಪ್ಪ, ಅವರಿಂದ ರಚಿತವಾದ
ಐತಿಹಾಸಿಕ ನಾಟಕ
❖ ಕನ್ನಡ ನಾಡಿನಲ್ಲಿ ಅನೇಕ ವಿಷಯಗಳ ಮೇಲೆ ಕಥೆ, ಕಾದಂಬರಿ, ನಾಟಕ, ಕವಿತೆ ಮುಂತಾದುವು ರಚಿತವಾಗಿವೆ ಆದರ ಐತಿಹಾಸಿಕದ ಮೇಲೆ ಅದರಲ್ಲೂ ಶಿಲ್ಪಕಲಾ ನಿಪುಣ ಜಕಣಾಚಾರಿಯ ಮೇಲೆ ನಾಟಕ ರಚಿತವಾಗಿರುವುದು ಬಹಳ ವಿರಳ
❖ ಇದೀಗ ಪ್ರಕಟವಾಗಿರುವ 'ಶಿಲ್ಪಿ'ಯು ಜಕಣಾಚಾರಿಯ ಜೀವನ ಚಿತ್ರವನ್ನು ಚಿತ್ರಿಸುವ ನವೀನ ನಾಟಕ.
❖ ಪಂಡಿತ ಪಾಮರರೆಲ್ಲರೂ ಮೆಚ್ಚುವ ಕಥಾ ಸಂವಿಧಾನ.
ಬೆಲೆ ರೂ. 1 8 0
ಬರೆಯಿರಿ: ನವಭಾರತ ಪುಸ್ತಕ ಭಂಡಾರ, ಉಡುಪಿ.

In the Court of the Subordinate Judge of S Kanara

O S No. 163/52

Chandrabhagi & Others
Plaintiffs.

Vs

Birmu Shetty & Others
Defendants

To Defendents (9) Suprabha d/o Yamuna Shedthi, residing in Bilepuni village of Mangalore Taluq. (6) Subbiya Hegde son of Kamakke, residing in Nyarma House, Shirva village of Udipi Taluq. Take notice that the Plaintiffs have filed the above suit for partition of the family properties and the same is posted to 8—1—1953 for your appearance. If you fail to appear on that day either in person or through a duly authorised Lawyer the suit will be decided in your absence.

By Order of the Court
(Sd) S. Venkat Rao
Vakil for Plaintiffs.

Mangalore 28—11—1952

ಜಿಲ್ಲೆಯ ವಿಧಾಯಕ ಕಾರ್ಯಕರ್ತರಿಗೆ

ಬಂಟ್ವಾಳದಲ್ಲಿ ನಡೆದ ಜಿಲ್ಲಾ ಸಮ್ಮೇಳನವಾಗಿ ಈಗ ಹಲವು ತಿಂಗಳುಗಳಾದವು. ಮುಂದಿನ ಸಮ್ಮೇಳನವನ್ನು ಉಡುಪಿಯಲ್ಲಿ ನವರಿ ತಿಂಗಳಲ್ಲಿ ಜರಗಿಸೋಣವೆಂಬ ಒಂದು ಸೂಚನೆ ನನ್ನ ಕೈಸೇರಿರುತ್ತದೆ. ಇದು ಉತ್ತಮ ಸೂಚನೆ. ಈ ಸೂಚನೆಯನ್ನು ಕಾರ್ಯರೂಪಕ್ಕೆ ತರಲು ತಕ್ಕ ವ್ಯವಸ್ಥೆ ಮಾಡಿ ಸಮ್ಮೇಳನದ ಸವಿಸ್ತಾರ ಕಾರ್ಯಕ್ರಮವನ್ನು ನಿಮಗೆಲ್ಲರಿಗೂ ಸಕಾಲದಲ್ಲಿ ತಿಳಿಸಲಾಗುತ್ತದೆ.

ಕಳೆದ ಸಮ್ಮೇಳನದ ಬಳಿಕ ನಮ್ಮ ಪ್ರಗತಿ ಎಷ್ಟು ಎಂಬ ಸಹಜ ಪ್ರಶ್ನೆಗೆ ಅತ್ಯಲ್ಪ ಅಥವಾ ಏನೂ ಇಲ್ಲವೆಂದು ನಾನು ಒಪ್ಪಲೇ ಬೇಕು. ಈ ಸಮ್ಮೇಳನದ ಬಳಿಕ ನಮ್ಮಲ್ಲಿ ಕೆಲ ಕಾರ್ಯ ಮಂಡಲಗಳನ್ನು ಮಾಡಿ ಅವು ಸರಿಯಾಗಿ ನಡೆಯುವಂತೆ ಅಥವಾ ಅವುಗಳ ಸಂಘಟಿಸುವ ಉದ್ದೇಶಕ್ಕಾಗಿ ಅಲ್ಪ ಸ್ವಲ್ಪ ಯತ್ನ ನಡೆದಿದೆ. ನಮ್ಮ ಕಾರ್ಯಕರ್ತರ ಸಾಧನೆಗಾಗಿ ದ. ಕ. ಲೋಕ ಸೇವಾ ಸಂಘದ ಘಟನೆ ತಿದ್ದಿ ಸ್ವೀಕರಿಸಿ ಎಲ್ಲರೂ ಅದಕ್ಕೆ ಸೇರಬೇಕಾಗಿ ನಾವು ನಿರ್ಣಯ ಮಾಡಿ ಕೊಂಡಿದ್ದೂ ಒಂಬತ್ತೇ ಸಂಖ್ಯೆಯ ಕೆಲಸಗಾರರನ್ನು ಬಿಟ್ಟು ಉಳಿದವರು ಇನ್ನೂ ಸದಸ್ಯರಾಗಿಲ್ಲ ಎಂಬುದು ಆಶ್ಚರ್ಯಕರ. ಅಂತೂ ಈ ಘಟನೆ ಯ ಮುದ್ರಣ ಇತ್ಯಾದಿ ಸನ್ನಾಹಗಳು ಈ ಗ ಆಗಿವೆ ಯೆಂಬುದು ಇದ್ದುದರಲ್ಲಿ ಸಮಾಧಾನದ ಸಂಗತಿ. ನಾನೇ ಕೆಲವು ಮಂದಿ ಯಾದ ಊ ನಮ್ಮ ಮಟ್ಟಿಗೆಂತೆ ಈ ವಿಧಾಯಕ ಕಾರ್ಯಕ್ರಮವನ್ನು ಜೀವಂತ ಇಟ್ಟು ಕೊಂಡಿದ್ದೇವೆಂಬುದೇ ಪ್ರಾಯಶಃ ಎಲ್ಲರೂ ಸಮ್ಮತಿಸುವ ವಿಚಾರವೆಂದು ನನಗನ್ನಿಸುತ್ತದೆ.

ಏಕೆಂದರೆ ಈ ಕಾರ್ಯಕ್ರಮದಲ್ಲಿ ಸ್ವಯಂಸ್ಫೂರ್ತಿಯೊಂದುಂಟೆಂಬುದು ನಾವು ಕಂಡ ಸತ್ಯ. ಸಾರ್ವಜನಿಕ ಜೀವನದ ಪ್ರವಾಹವು ಈ ಕಾರ್ಯಕ್ರಮದತ್ತ ಧಾವಿಸಿ ಬರಲೇ ಬೇಕಾಗುತ್ತದೆಂಬ ಬಗ್ಗೆ ಸಂಶಯ ಬೇಡ. ಅದನ್ನು ಬೇಗನೇ ಬರುವಂತೆ ಮಾಡುವುದು ನಮ್ಮ ಕೈಯಲ್ಲಿಯೇ ಇದೆಯೆಂದು ತಿಳಿದು ನಮ್ಮ ಕಾರ್ಯಕ್ರಮವನ್ನು ಪ್ರಬಲವಾದ ರೀತಿಯಲ್ಲಿ ಮುಂದೊತ್ತುವ ಕಾರ್ಯಕ್ಕೆ ನಾವು ಸಜ್ಜು ಬೇಕಾಗಿದ.

ಮುಂದೆ ಬರಲಿರುವ ನಮ್ಮ ಸಮ್ಮೇಳನ ಕೇವಲ ಒಂದು ಪ್ರಚಾರದ ಉದ್ದೇಶ ಪ್ರದರ್ಶನ ಮಾತ್ರವಾದರೆ ಸಾಲದು. ನಮ್ಮ ಕಾರ್ಯಸಾಧನೆಯ ಮಟ್ಟವನ್ನು ನಿರ್ಧರಿಸಿ ಅದನ್ನು ಪ್ರತ್ಯಕ್ಷ ಕಾರ್ಯರೂಪದಲ್ಲಿ ಮುನ್ನಡೆಯಲು ಇದರಿಂದ ಸಾಧ್ಯವಾಗುವಂತಾಗಬೇಕು.

ಒಂದು ಮಾತನ್ನು ಮಾತ್ರ ಸಧ್ಯಕ್ಕೆ ಸ್ಪಷ್ಟಪಡಿಸ ಬೇಕಾಗಿದೆ. ನಮ್ಮ ಕಾರ್ಯ ಕ್ರಮದ ಉಪಯುಕ್ತತೆ ಇತರರಲ್ಲೂ ಒಪ್ಪುವಂತಾಗ ಬೇಕಾದರೆ ಇದರ ಉಪಯುಕ್ತತೆಯನ್ನು ನಾವು ಪ್ರತ್ಯಕ್ಷ ಕಾರ್ಯರೂಪದಲ್ಲಿ ಸಾಧಿಸಿ ರುಜುಪಡಿಸಿ ಕೊಡುವುದು ನಮ್ಮ ಪಾಲಿನ ಕೆಲಸವೆಂಬುದನ್ನು ಮರೆಯಲಾಗದು. ಇಡೀ ಜಿಲ್ಲೆಯಲ್ಲಿ ಒಂದೇ ಒಂದು ಗ್ರಾಮವನ್ನಾದರೂ ಆರಿಸಿ ನಮ್ಮ ಕಾರ್ಯಕ್ರಮವನ್ನು ಅಲ್ಲಿ ಬಲದಿಂದ ಯಾಂತ್ರಿಕವಾಗಿ ಪರಿಣಾಮವನ್ನು ನಾವು ತೋರಿಸಬಹುದೆಂದು ಈ ಒಂದು ಚಿಕ್ಕ ಸೂಚನೆ ನಿಮ್ಮೆಲ್ಲರ ಮುಂದಿಡ ಬಯಸುತ್ತೇನೆ.

ನಮ್ಮ ವಿಧಾಯಕ ಕಾರ್ಯಕರ್ತರ ಬಳಗ ಈಗ ಬಹಳ ದೊಡ್ಡದಿಲ್ಲ ಇರುವ ಕೆಲಸಗಾರರೆಲ್ಲರೂ ಸಂಘಟಿತರಾಗಿ ನಮ್ಮ ಕಾರ್ಯ ಮುಂದುವರಿಸುವುದು ಮುಖ್ಯ. ಹೀಗೆ ಹೇಳುವ ಅಗತ್ಯವಿಲ್ಲ. ಆದುದರಿಂದ ಕಳೆದ ಸಮ್ಮೇಳನದ ನಿರ್ಧಾರದಂತೆ ನೀವೆಲ್ಲರೂ ದ. ಕ. ಲೋಕ ಸೇವಾಸಂಘದ ಸದಸ್ಯರಾಗಿ ಸೇರುವಂತೆಯೂ ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ

ಸಮ್ಮೇಳನದ ಕುರಿತು ಸಲಹೆಗಳಿದ್ದರೆ ಮುಂಬರಿಗಿ ತಿಳಿಹಿಸಿದರೆ ಇನ್ನೂ ಅನುಕೂಲ. ಇತಿ.

ಹಿ. ರಾಮರಾಯ ಮುಲ್ಕಿ
ವ್ಯವಸ್ಥಾಪಕ, ದ. ಕ. ಲೋಕ ಸೇವಾಸಂಘ

ಸ್ವೀಕಾರ ವಿಮರ್ಶೆ

ಸೇಬಿನ ಗಿಡ (ಸಾಮಾಜಿಕ ಕಾದಂಬರಿ) ಬರೆದವರು: ಕುಮಾರಿ ರಾಜಲಕ್ಷ್ಮಿ ನಾಗರಾಜರಾವ ಪ್ರಕಾಶಕರು: ಸಂಜೀವಿನಿ ಪ್ರಕಾಶನ, ಹುಬ್ಬಳ್ಳಿ. ಬೆಲೆ: ರೂ. ೧–೮–೦.

ಗಾಲ್ಸ್‌ವರ್ದಿಯು ಬರೆದ "ಏಪಲ್ ಟ್ರೀ" ಎಂಬುದರ ಭಾವಾನುವಾದ ಈ ಕಾದಂಬರಿಯಾದರೂ, ನಮ್ಮ ಜನ-ನಾಡಿನ ನಡೆನುಡಿಯನ್ನು ಕೌಶಲದಿಂದ ಲೇಖಿಕೆಯು ಬಳಸಿಕೊಂಡಿರುವುದು ಈ ಕಾದಂಬರಿಯ ಓದುಗರಿಗೆ ತುಂಬ ಮೆಚ್ಚಿಕೆಯಾಗುತ್ತದೆ. ಇನ್ನೂ ಎಳೆಯ ವಯಸ್ಸಿನ (ಹದಿನೆಂಟು ತುಂಬದ ಬಾಲೆ) ಲೇಖಿಕೆಯನ್ನು ಈ ರೀತಿಯ ಸ್ವತಂತ್ರ ಕಾದಂಬರಿಗೆ ಅವರ ಮಾತಾಮಹರಾದ ಶ್ರೀ ಬಿ. ಎಂ. ಶ್ರೀಕಂಠಯ್ಯನವರ ಆಶೀರ್ವಾದ ಪ್ರೋತ್ಸಾಹವೇ ಕಾರಣವೆಂದು ಸಂಪಾದಕರ ಮಾತು ಹೇಳುತ್ತದೆ. ನಮ್ಮಲ್ಲಿ ಸ್ತ್ರೀ ಬರಹಗಾರರ ಸಂಖ್ಯೆ ಅತ್ಯಲ್ಪವಿರುವುದನ್ನು ಕೊರತೆ ಎಂದು ಎಲ್ಲರೂ ಒಪ್ಪಿಕೊಳ್ಳುತ್ತಿರುವಾಗ, ಸ್ವತಂತ್ರ ಕೃತಿಗಳನ್ನು ನಿರ್ಮಿಸಿಯಾಗಲೀ ಅಥವಾ ಈ ಬಗೆಯ ಅನುವಾದ ಸಾಹಿತ್ಯವನ್ನು ಒದಗಿಸಿಯಾಗಲೀ ಹೆಚ್ಚು ಹೆಚ್ಚು ಹೆಂಗಸರು ಸಾಹಿತ್ಯಸೇವೆಗೆ ಮುಂದಡಿಯಿಟ್ಟರೆ ಅದನ್ನು ಸ್ವಾಗತಾರ್ಹವೆನ್ನಬೇಕು.

ಇನ್ನು ಕಾದಂಬರಿಯ ಮಟ್ಟಿಗೆ ಹೇಳುವುದಾದರೆ ಇದೊಂದು ಪ್ರೇಮಕತೆ: ಈಗಿನ ಸಿನೆಮಾ ಕತೆಗಳಿಗಿಂತ ಹೆಚ್ಚಿನ ಆದರ್ಶವನ್ನೇನೂ ಈ ಕಾದಂಬರಿ ಇಟ್ಟುಕೊಂಡಿಲ್ಲ. ಅಥವಾ ನಿತ್ಯಜೀವನದ ಕಷ್ಟಸುಖಗಳನ್ನು ಚಿತ್ರಿಸುವುದೂ ಇದರ ಉದ್ದೇಶವಿಲ್ಲ. ನಾಲ್ಕು ದಿನದ ಮಟ್ಟಿಗೆ ಒಂದು ಹಳ್ಳಿಯ ಹುಡುಗಿಯ ಮನೆಯಲ್ಲಿದ್ದು ಕೊಂಡು ಅವಳೊಡನೆ ಪ್ರೇಮಬೆಳೆಸಿಕೊಂಡ ತರುಣ, ಕೊನೆಗೆ ಪೇಟೆಗೆ ಬಂದಲ್ಲಿ ಅಲ್ಲಿ ದೊರೆತ ಇನ್ನೊಬ್ಬ ಸಂಗಿನಿಯೊಂದಿಗೆ ಬಾಳ್ವೆ ಮಾಡುವುದರಿಂದಲೇ ಸುಖವಿದೆ ಎಂದೂ ಹಳ್ಳಿಯ ಹುಡುಗಿಯೊಡನೆ ಅನುರೂಪ ದಾಂಪತ್ಯ ಕೈಗೂಡದೆಂದೂ ತಿಳಿಯುತ್ತಾನೆ, ಹಳ್ಳಿಯ ಹುಡುಗಿ ಇವನ ಬರವನ್ನು ಕಾದು ಬೇಸತ್ತು ಆತ್ಮಹತ್ಯೆ ಗೈಯುತ್ತಾಳೆ. ೨೫ ವರ್ಷಗಳ ಕಾಲ ಸೇವಿಸಿ ಹುಡುಗಿಯೊಡನೆ ದಾಂಪತ್ಯ ನಡೆಸಿದ ಬಳಿಕ ಆ ಪ್ರಸಂಗದ ನೆನಪು ಆಗುತ್ತದೆ. [illegible] ಭಾವನೆಯ [illegible] ದೇಶದಿಂದ [illegible] ಯಾಗಿ [illegible] ಆದರೆ ನಮ್ಮ ಸಾಹಿತ್ಯದಲ್ಲಿ ಅಶ್ಲೀಲವೆನ್ನ [illegible] ಆಲಿಂಗನಗಳ ಘಟನೆಗಳ ಚಿತ್ರಣವು ಇಲ್ಲಿ ಹೆಚ್ಚಿಕೊಂಡಿದೆ. ಹುಡುಗಿಯ ಪ್ರೇಮದ [illegible] ಸ್ವರೂಪವನ್ನೂ ತಾತ್ವಿಕವೆಂದೂ ತೋರಿಸಿಕೊಡುವ [illegible] ಉದ್ದೇಶವಿದ್ದಿರ [illegible]

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:- ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ.

ಬಾಣಂತಿಯರ ಹಲವಾಗಿಯೂ ದೇಹ ಮತ್ತು ಪ್ರಕೃತದ ಬೇಹಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರಪ್ರಾಶ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ ಭಾಗ್ಯಶಾಲಿಗಳಿಗೂ ಲಭವಾಗಿರುವುದು.

ಇವರ
ನವಜೀವಾತು
ಎಂಬ
[illegible]

ಹೆಚ್ಚಿನ ಮಾಹಿತಿಗೆ—ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಥಾನಿಕರು:—ಡಾ| ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು

ಉಡುಪಿಗೆ ಹೋಗಬೇಕೇ! ಆದರೆ ಉಳಿದುಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ವೈಕಳ್, ಶಯನ ಇವಕ್ಕೆಲ್ಲ ತಕ್ಕ ವ್ಯವಸ್ಥೆ
ಕರೆದರೆ ಸಿಗುವ ಸೌಕರ್ಯ ಸ್ವರ್ಗ!
[illegible]
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

ಮಾನವ ವಿಜಯದ ಹೆದ್ದಾರಿ!
ಆರ್ಥಿಕ ಮತ್ತು ಸಾಂಪತ್ತಿಕ ಅನುಕೂಲತೆಯು ಇಂದಿನ ಮಾನವ ಜೀವನದ ವಿಜಯದ ಹೆದ್ದಾರಿ
ಜನತೆಗೆ ಈ ಅನುಕೂಲತೆಗಳನ್ನೊದಗಿಸಿ ಸಾಂಪತ್ತಿಕ ಅಭಿವೃದ್ಧಿ ಸಾಧಿಸುವುದೇ ಬೇಂಕುಗಳ ಹೆಗ್ಗುರಿ
ದಿನೇ ದಿನೇ ಜನ ವಿಶ್ವಾಸಗಳಿಸಿ ಪ್ರಗತಿ ಹೊಂದುತ್ತಿರುವ
ದಿ ವಿಜಯ ಬೇಂಕ, ಲಿಮಿಟೆಡ್.
ಇ ಕೂಡಲೆ ನಿಮ್ಮ ವ್ಯವಹಾರ ಬೆಳೆಸಿ ಅನುಕೂಲತೆ ಪಡೆದು ಜೀವನದಲ್ಲಿ ವಿಜಯ ಸಾಧಿಸಿ
ಗಿರಾಕಿಗಳ ಹಿತಸಾಧನೆ ಮತ್ತು ವಿಶ್ವಾಸ ಸಂಪಾದನೆಯು ವಿಜಯ ಬೇಂಕಿನ ಅಮೂಲ್ಯ ಸೊತ್ತು
The Vijaya Bank Ltd.,
Head Office MANGALORE-3
Branches at:
Udipi, Kaup, Coondapur, Byndoor, Karkal, Brahmavar, City-Mangalore, Kasaragod, Puttur, Kanhangad, Bombay & Mercara.

SOVEREIGN REMEDY
AMRUTANJAN
Best Indian Pain Balm
Amrutanjan Depots
BOMBAY, MADRAS

ಅಮೃತಾಂಜನ
ತಲೆವೇದನೆ, ಶಿರೋವೇದನೆ, ಉಳುಕು ಪತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಘಾಯಗಳು, ಬಾತುಕೊಳ್ಳುವುದು, ಕಡಿತ ಮುಂತಾದವು, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ
REGD
ಹುಳಕಟ್ಟ
ಮಾತ್ರ
ನಮ್ಮಲ್ಲಿ
ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು, ಬೊಂಬಾಯಿ ಮತ್ತು ಕಲಕ

ದಿ
ನ್ಯೂ ಕರ್ನಾಟಕ
ಪ್ರೊವಿಡೆಂಟ್ ಇನ್ಸೂರೆನ್ಸ್
ಕಂಪೆನಿ, ಲಿಮಿಟೆಡ್
ಉಡುಪಿ, ದ. ಕನ್ನಡ
ಒಂದು ಸಾವಿರ ರೂಪಾಯಿ ವರೆಗೆ ವಿಮೆ ಮಾಡಲಿಕ್ಕೂ, ಏಜನ್ಸಿ ಯಾ ಸ್ಪೆಶಲ್ ಏಜನ್ಸಿ ಪಡೆದು ದುಡಿತಕ್ಕೆ ತಕ್ಕ ಪ್ರತಿಫಲ ಪಡೆಯಲಿಕ್ಕೂ ಯೋಗ್ಯವಾದ ಪ್ರಾವಿಡೆಂಟ್ ವಿಮಾ ಕಂಪೆನಿ.
ನಿಯಮಗಳಿಗೆ ಬರೆಯಿರಿ
THE NEW KARNATAKA PROVIDENT INSURANCE CO., LTD., UDIPI

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ
1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯನ್ನೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು
The Moolky Bank Ltd.,
Moolky, S. K

(೧ನೆ ಪುಟದಿಂದ)

ವಪ್ಪರಮಟ್ಟಿಗೆ ಚಾಂಚಲ್ಯ ತೋರಿದರೆ, ನಮಗೆ ದುಃಖಕಟ್ಟಿಟ್ಟದ್ದು. ಹೀಗೆ ಸಂಚಿ ಇಟ್ಟುದನ್ನು ಉಪಯೋಗಿಸುವಲ್ಲಿ ಮಾತ್ರವಲ್ಲ-ಪಾಲುಮಾಡಿ ಬೇರೆ ಬೇರೆ ಇಡುವುದರಲ್ಲಿಯೂ ನಾವು ಸತರ್ಕರಿರಬೇಕೆಂಬುದು ನಿಜ. ಜಿಕ್ಕಿಗೆ ಎರಡು ರೂಪಾಯಿಯನ್ನು ಸಾಬೂನಿಗೆ ಹನ್ನೆರಡು ರೂಪಾಯಿಯನ್ನೂ ನಾವು ಕರ್ಚುಮಾಡುವಂತಿದೆಯೋ?

ಹೀಗೆ ರೂಪಾಯಿಯನ್ನು ವಿನಿಯೋಗಿಸುವಾಗ ಇಲ್ಲದ ರಗಳೆ ಉಂಟಾಗುವುದೆಂದು ಅಂಜಿ, ರೂಪಾಯಿಯನ್ನು ಜೋಕೆಯಿಂದ ಗಂಟುಕಟ್ಟಿ, ಇಟ್ಟುಕೊಂಡರೂ ಉಪಯೋಗವಿಲ್ಲ. ನಿಮ್ಮ ಹೊಟ್ಟೆ ಬಟ್ಟೆಯನ್ನು ದುರ್ಲಕ್ಷಿಸಿ, ಹಣದ ಖಜಾನೆಯನ್ನು ತುಂಬಿಸುವುದರ ಅದನ್ನು ಕಾಯುವ ಅನಾವಶ್ಯಕವಾದ ಹೊರೆಯೆಂದು ನಿಮ್ಮ ಹೆಗಲೇರಬಹುದಲ್ಲದೆ—ತಿಲಾಂಶ ಸುಖವೂ ದೊರೆಯುವಂತಿಲ್ಲ. ಹಣದ ಉಪಯೋಗ ನಿಮಗಿಲ್ಲವೆಂದಾದರೆ, ಅದನ್ನು ಸಂಪಾದಿಸುವ ಮೋಹ ಅಥವಾ ವ್ಯರ್ಥ ಶ್ರಮವುಂಟೇನು ಪ್ರಯೋಜನ?

ಆದುದರಿಂದ ನಮ್ಮ ಆವಶ್ಯಕತೆಗಳನ್ನು ಸಂಪಾದನೆಯ ಪ್ರಮಾಣದಿಂದ ಅಳೆದು ನೋಡಿಕೊಂಡು, ಜೊತೆಗೇ ಭವಿಷ್ಯದ ಅನಿರೀಕ್ಷಿತ ಅಗತ್ಯವನ್ನು ನೆನೆದುಕೊಂಡು, ಸಮರ್ಪಕವಾದ ರೀತಿಯಲ್ಲಿ ಹಣವನ್ನು ವಿನಿಯೋಗಿಸಬೇಕೆಂದು ನಾವು ಹೇಳಬಹುದು. ಭವಿಷ್ಯದ ಗರ್ಭದಲ್ಲಿ ಏನಿದೆಯೆಂದು ಮಾನವ ಮಾತ್ರದವನಿಗೆ ನಿಶ್ಚಿತವಾಗಿ ತಿಳಿದಿಲ್ಲವಿರುವುದರಿಂದ ಈ ರೀತಿಯ ಮುಂಜಾಗರೂಕತೆ ಅತ್ಯಂತ ಅಗತ್ಯದ್ದಾಗಿದೆ. ನಮ್ಮ ಒಟ್ಟು ಸಂಪತ್ತಿಯನ್ನು ಈ ಉದ್ದೇಶಕ್ಕಾಗಿ ಉಪಯೋಗಿಸುವಲ್ಲಿ ಒಂದು ಪರೀಕ್ಷಾ ಮಾರ್ಗವಿದೆ- ಮುಂದಿನ ಒಂದು ಅಗತ್ಯವನ್ನು ನೆನೆದುಕೊಂಡು, ಈಗಿನ ಇಚ್ಛೆಯೊಂದಕ್ಕೆ ತಿಲಾಂಜಲಿ ಕೊಡುವುದು ಸಾಧ್ಯವೆ? ಈ ಪ್ರಶ್ನೆಗೆ ಉತ್ತರಿಸುವಲ್ಲಿ ನಾವು ಹಿಂಜರಿಯಲಾಗದು. ಭವಿಷ್ಯದ ಹೆಚ್ಚು ಅಗತ್ಯದ ಉದ್ದೇಶಕ್ಕಾಗಿ ವರ್ತಮಾನದ ಕಡಿಮೆ ಅಗತ್ಯದ ಇಚ್ಛೆಯನ್ನು ಬಲಿಕೊಡುವುದು ಎಂದಿಗೂ ಅಪರಾಧವೆನಿಸಲಾರದು.

ಮಿತವ್ಯಯವನ್ನು ನಿತ್ಯಸ್ವಭಾವದಲ್ಲಿ ಜ್ಯಾರಿಗೆ ತರಬೇಕೆಂದು ಅಭಿಪ್ರಾಯ ಸೂಚಿಸಿದ ಮೆಂಡರ್ಸನ್ ಒಬ್ಬನನ್ನು ಒರಜಾಗಿಸಿ ಮುಂದಿನ ಕತೆಯಿಂದ ಸಿಕಿರು ಹಿಡಿದು ಏಕೆಂದು ಕೇಳುವಂತಾಗಲಿಲ್ಲ. ಹಾಗೆಯೇ ಮಿತವ್ಯಯವೆಂದರೆ ಲೋಭ ಅಲ್ಲ. ಧನ ಸಂಚಯ ಮಾಡಬೇಕೆಂದರೆ ಅದು ನಿರ್ದಿಷ್ಟ ಉದ್ದೇಶದ ಸಲುವಾಗಿ ವಿನಿಯೋಗಿಸಲಿಕ್ಕಾಗಿಯೇ ಹೊರತು ಅನಾವಶ್ಯಕವಾದ ಕಾಲ್ಪನಿಕ ಭಯದಿಂದ ತತ್ತರಿಸಿ ಇರುವ ಉಪಾಯವಾಗಿ ಅಲ್ಲ. ಹಣ ಶೇಖರಿಸಬೇಕೆಂದು ಹಿರಿಯರು ಹೇಳುವುದಿಲ್ಲ. ಹಾಗೆಂದೇ ಅನುಕೂಲತೆ ಇರುವಾಗ ಮನಸ್ಸಿನ ಬಯಕೆಗಳನ್ನು ಒತ್ತಾಯದಿಂದ ದಮನಿಸಲು ಪ್ರಯತ್ನಿಸಬೇಕಾದುದೂ ಇಲ್ಲ. ಮಿತವ್ಯಯಕ್ಕೆ ಒಪ್ಪುವುದಿಲ್ಲ. ಇಚ್ಛೆಯನ್ನು ತ್ಯಾಗಬಲದಿಂದ ಗ್ಲಾನಿಗೊಳಿಸುವ ನಾವು ಮೂರ್ಖತನ ಮಾಡುತ್ತೇವೆ. ಕೂಡಿಡುವುದಕ್ಕಾಗಿಯೇ ಹಣ ಸಂಪಾದನೆಯಾದರೆ, ಅದು ನಮ್ಮ ಆತ್ಮದ ಸಂಕೋಚ ಸ್ಥಿತಿಯನ್ನು ನಿರ್ಮಿಸುತ್ತದೆ. ನಮ್ಮ ಜೀವನದ ವಿಕಾಸವಾಗಬೇಕೆಂದು ಬಯಸಿ, ಬದುಕು ಸುಖಮಯವಾಗಬೇಕೆಂಬ ಅಭಿಲಾಷೆ ಇಟ್ಟುಕೊಂಡು, ಧನ ಸಂಪಾದನೆಯನ್ನು ಅದಕ್ಕೆ ಹೊಂದಿಕೊಂಡಿರುವ ವಿನಿಯೋಗವನ್ನು ಕ್ರಮಬದ್ಧಗೊಳಿಸಿದಾಗ- ಮಿತವ್ಯಯಕ್ಕೆ ಕೂಡ ಒಂದು ಮಹತ್ವದ ಸ್ಥಾನ ಲಭ್ಯವಾಗುತ್ತದೆ- ಧನವೆಂದರೆ ಉಪಭೋಗದ ಒಂದು ಸಾಧನ ಮಾತ್ರವಾದುದರಿಂದ, ಅದು ನಮ್ಮ ಸುಖಕ್ಕೆ ನೆರವಾಗುವಂತೆ ನೋಡಿಕೊಳ್ಳಬೇಕು.

ನಾಳೆ ಎಂಬುದು ನಿನ್ನೆಯಲ್ಲಿ ಪರಿವರ್ತನಗೊಂಡಾಗ, ನಮಗೆ ಧನದ ವಿನಿಯೋಗದ ಗುಣಾವಗುಣಗಳ ಸ್ಪಷ್ಟ ಕಲ್ಪನೆಯುಂಟಾಗುತ್ತದೆ. ನಾಳೆಗೆಂದು ಏನನ್ನೂ ಕೂಡಿಸಿಡದೆ ಇದ್ದುದರಿಂದ, ಆ ನಾಳೆ ನಿನ್ನೆಯಾದಾಗ ಎಷ್ಟು ಕಷ್ಟಗಳನ್ನು ಎದುರಿಸಬೇಕಾಯಿತೆಂದೂ ಇಂದು ಅದರ ಪರಿಣಾಮ ಎಷ್ಟು ಭೀಕರವಿದೆಯೆಂದೂ ನಮ್ಮ ಅನುಭವಕ್ಕೆ ಬರುತ್ತದೆ. ಅದರಂತೆಯೇ ಮಿತವ್ಯಯದಿಂದ ನಡೆದುಕೊಂಡಿದ್ದರೆ, ನಮ್ಮ ಜಾಣ್ಮೆಯ ಕುರಿತು ಅಭಿಮಾನವೂ, ಹರ್ಷವೂ ಉಂಟಾಗುತ್ತದೆ. ಅದರ ಬದಲು ಜಿಪುಣರಾಗಿದ್ದರೆ- ಹಣದ ಚೀಲ ಬಿರಿದು ಚೆಲ್ಲಲಿಕ್ಕಾಗಿದೆಯಲ್ಲ ಎಂದು ನಾವು ಚಡಪಡಿಸುವ ಪ್ರಸಂಗ ಬಂದೀತು. ಆದುದರಿಂದ ಜೀವನ ಪಥದಲ್ಲಿ ಮುನ್ನಡಿ ಇಡುತ್ತಿದ್ದಂತೆ, ಧನ ಸಂಚಯದ ಮಟ್ಟಿಗೂ ಸತರ್ಕರಾಗಿರುವುದು ಕರ್ತವ್ಯ. ಈ ಹೊಣೆಗಾರಿಕೆಯನ್ನು ಬುದ್ಧಿವಂತಿಕೆಯಿಂದ ನಾವೆಲ್ಲ ನೆರವೇರಿಸೋಣ.

— ಓಂ ತತ್ಸತ್॥

ವಾರದ ಒಳಿತು ಕೆಡುಕುಗಳು

4-12-52ರಿಂದ ತಾ. 10-12-52ರ ವರೆಗೆ

ಮೇಷ—ನಿಮ್ಮ ಅದೃಷ್ಟವಿಂದು ತೀರಾ ಕೆಟ್ಟಿರುವುದು. ಶತ್ರುಜನರ ಪೀಡೆಯಿಂದಾಗಿ ಯಾವ ಕಾರ್ಯವನ್ನೂ ಕೊನೆಗಾಣಿಸಲಾರಿರಿ. ನೀವೆಷ್ಟೇ ಪ್ರಯತ್ನಗಳಾಗಿದ್ದರೂ ವಾಕ್ಕಲಹವು ಬೇರೆ ತಪ್ಪಲೊಲ್ಲದು. ಸಂಸಾರಿಕ ತಾಪತ್ರಯಗಳು ದಿನೇ ದಿನೇ ಹೆಚ್ಚುವುವು. ದೇಹಾರೋಗ್ಯವೂ ಆರ್ಥಿಕ ಸಂಪತ್ತು ತೃಪ್ತಿಕರವಿರದು. ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಕಷ್ಟ ನಿಷ್ಠುರಗಳೇ ಹೆಚ್ಚಲಿವೆ. ವಾರದ ಅದ್ಯಂತ ದಿನಗಳಲ್ಲಿ ಕೆಲವೊಂದು ನಿಮ್ಮ ಬಯಕೆಯು ಈಡೇರೀತು.

ವೃಷಭ—ಲಾಭಪತಿಯಾದ ಗುರುವು ವ್ಯಯಗತನಾದರೂ ಧನ ಭಾಗ್ಯಾಧಿಪರು ಪರಸ್ಪರ ಸ್ಥಾನವಿನಿಮಯ ಹೊಂದಿ ಅನುಕೂಲರಾಗಿ ನಿಂತಿರುವ ಕಾರಣ ನಿಮ್ಮ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿಯೇ ಇರುವುದು. ಶ್ರಮಜೀವಿಗಳಿಗೂ ವ್ಯಾಪಾರೀ ಜನತೆಗೂ ಪರಿಶ್ರಮಕ್ಕಿಂತ ಅಧಿಕವಾದ ಫಲಲಾಭವಿದೆ. ಪಿತ್ತಪ್ರಕೋಪದಿಂದಾಗಿ ಆರೋಗ್ಯ ನೆಟ್ಟಗಿರದು. ಗುರುಹಿರಿಯರು ಬಂಧು ಜನರು ಇವರ ಅಗ್ರಹಕ್ಕೆ ಪಾತ್ರರಾದೀರಿ. ತಾ 5, 6, 7, ಇತರ ದಿನಗಳಿಗಿಂತ ಉತ್ತಮವಿವೆ

ಮಿಥುನ - ಸಂದು ಹೋದ ದಿನಗಳಿಂತಲೂ ಇಂದಿನ ಸಮಯವು ಉತ್ತಮವಿರುವದು. ಶನ್ಯಂಗಾರಕರನ್ನುಳಿದು ಮಿಕ್ಕೆಲ್ಲಾ ಗ್ರಹರೂ ಸುಮುಖರಿರುವುದರಿಂದ ನೀವೀ ವಾರದಲ್ಲಿ ಹೆಚ್ಚಿನ ಯಶೋಲಾಭಗಳನ್ನು ಪಡೆಯಲಿರುವಿರಿ. ಶತ್ರುಜನರ ಕೀಟಲೆ ಉಪದ್ರವಗಳು ಮೇಲಿಂದ ಮೇಲೆ ಬರಬಹುದಾದರೂ ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿಯೂ ಸಮಾಜದಲ್ಲಿ ಮಾನಮನ್ನಣೆಗಳೂ ಲಭಿಸಲಿವೆ. ತಾ. 4, 8, 9, ಈ ದಿನಗಳಲ್ಲಿ ಸುಖ ಭೋಗ ವಸನ ವಿಷಯಗಳ ಲಾಭವಿದೆ.

ಕರ್ಕಟ—ಕಾಲವು ಅತೀವಪ್ರತಿಕೂಲ ಪರಿಸ್ಥಿತಿಗೆ ಬಂದಿರುವ ಕಾರಣ ನಿಮ್ಮ ಆಶಾಕಾಂಕ್ಷೆಗಳಿಂದು ಗಗನ ಕುಸುಮದಂತಾಗುವವು. ತಾನೊಂದು ಬಗೆದರೆ ದೈವವೊಂದೆಣಿಸಿತೆಂಬಂತೆ ಪ್ರತಿಯೊಂದು ಕಾರ್ಯದಲ್ಲೂ ವಿಪರೀತ ಫಲಪ್ರಾಪ್ತಿಯಾದೀತು. ಶತ್ರುಜನರ ಪೀಡೆ ಆರ್ಥಿಕ ಮುಗ್ಗಟ್ಟು ಆಪ್ತಜನರ ವಿರಹ ಸಾಂಸಾರಿಕ ತಾಪತ್ರಯ ಇತ್ಯಾದಿಗಳಿಂದಾಗಿ ನಿಮ್ಮ ಧನಮಾನಗಳಿಗೆ ಈ ಸಪ್ತಾಹ ಸುಖಶಾಂತಿ ಲಭಿಸಲೊಲ್ಲದು. ತಾ. 5, 6, 7, 10, ಈ ದಿನಗಳು ಉಳಿದ ದಿನಗಳಿಂತ ವಾಸಿಯೆನ್ನಬಹುದು.

ಸಿಂಹ—ನಿಮ್ಮ ಭಾಗ್ಯವಿಂದು ಉತ್ತಮವಿರುವುದು. ಸಂಗುರುಗಳೂ ಶನೈಶ್ಚರನೂ ಕೂಡ ಉಚ್ಚಸ್ಥಳದಲ್ಲಿ ನಿಂತಿರುವುದರಿಂದ ನಿಮ್ಮ ಪ್ರತಿಯೊಂದು ಕಾರ್ಯಗಳೂ ಯಶಸ್ವಿಯಾಗಿ ಕೊನೆಗೊಂಡುವುದರಲ್ಲಿ ಸಂಶಯವಿಲ್ಲ. ನಿಮ್ಮ ಕಾರ್ಯಕೌಶಲತೆಯನ್ನು ಕಂಡು ಪ್ರಬಲ ಶತ್ರುಗಳೂ ಕೂಡಾ ದೂರದೂರ ಸರಿದಾರು. ಆರ್ಥಿಕ ಮತ್ತು ಆರೋಗ್ಯ ಭಾಗಗಳು ಎಂದಿಗಿಂತಲೂ ಉತ್ತಮ ಸ್ಥಿತಿಗ ಬರಲಿವೆ. ಆವರೆ ವ್ಯಾಪಾರಿಗಳಿಗೂ ವೃದ್ಧ ಹಕೀಮರಿಗೂ ಈ ಕಾಲವು ಅಷ್ಟೊಂದು ಚನ್ನಾಗಿರದು, ತಾ. 4, 6, 9 ಉತ್ತಮವಿದೆ

ಕನ್ಯಾ—ನಿಮ್ಮ ಕಾರ್ಯೋತ್ಸಾಹಗಳು ಇಂದು ಕುಂಠಿತವಾಗುವುವು. ಪ್ರಯತ್ನದಿಂದ ಗಳಿಸಿದ್ದವು ಕೂಡ ವ್ಯರ್ಥವಾಗಿ ವ್ಯಯವಾಗುವದು, ಮನಸ್ಸಿಗೆ ನೆಮ್ಮದಿಯಿರದು. ಕಫ ವಾತದೋಷವಾಗಿ ದೇಹಕ್ಕೆ ಸ್ವಾಸ್ಥ್ಯವಿರದು. ವಿರೋಧಿವರ್ಗವು ಪ್ರಬಲಶಾಲಿಗಳಾಗ ರಾಜಕೀಯ ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷಿತ ಫಲ ಲಭಿಸದು. ಜನತೆಯ ತಿರಸ್ಕಾರ ನಿಂದೆಗಳಿಗೆ ಗುರಿಯಾದೀರಿ. ತತ್ರಾಪಿ ತಾ. 6, 9- ವಿಶೇಷ ಧನವ್ಯಯಕಾರಿಯಾಗಲಿದೆ

ತುಲಾ—ಇಷ್ಟಾನಿಷ್ಟ ಗ್ರಹರ ಬಲ ಸಾಮ್ಯವಿರುವುದರಿಂದ ಈ ವಾರದಲ್ಲಿ ಲಾಭ ನಷ್ಟ ಸುಖ ದುಃಖಗಳು ಸಮಕಾಲದಲ್ಲಿ ಪ್ರಾಪ್ತವಾಗಲಿವೆ. ಆಪ್ತೇಷ್ಟರು ಬಂಧು ಜನರು ಇವರ ನೆರವು ಚೆನ್ನಾಗಿರುವುದರಿಂದ ಹಿಡಿದ ಉದ್ಯಮಗಳಲ್ಲಿ ಫಲವು ತೃಪ್ತಿಕರವಿದ್ದೀತು. ಸಂಸಾರಿಕ ತಾಪತ್ರಯಗಳು ಬಹುತೇಕ ಕಡಿಮೆಯಾಗಲಿವೆ, ಹೆಚ್ಚಿನ ಮನೋರಥಗಳು ಈಡೇರುವವು. ವಿಷಾಗ್ನಿಗಳ ಭಯಕ್ಕವಕಾಶವಿದೆ, ಕೃತ್ರಿಮ ಮಿತ್ರರ ಮೋಸಕ್ಕೆ ಬಲಿಯಾಗದಿರಿ. ವಾರದ ಅದ್ಯಂತದಿನಗಳು ಒಳಿತಿಲ್ಲವು.

ವೃಶ್ಚಿಕ — ಮಹತ್ಕಾರ್ಯಗಳನ್ನೂ ಕೂಡಾ ಕೇವಲ ಪೌರುಷದಿಂದಲೇ ಸಾಧಿಸುವಿರಿ. ಮಿತ್ರವರ್ಗದವರ ಬೆಂಬಲವೂ ನಿಮಗೆ ಸಾಕಷ್ಟು ಲಭಿಸೀತು. ವಿಶೇಷತ [illegible] ಜನವೃಂದಕ್ಕೀ ಕಾಲವು ಉತ್ತಮವಿದೆಯೆಂದರೆ ತಪ್ಪಾಗದು. ಕಫಪಿತ್ತದೋಷವು ಸ್ವಲ್ಪ ಕಾಡಿಸೀತು. ಕೆಲವೊಮ್ಮೆ ಅನಿರೀಕ್ಷಿತ ಶೋಕ ಅನರ್ಥಗಳೂ ಪ್ರಾಪ್ತವಾಗಲಿದೆ. ನಷ್ಟವಾದ ವಸ್ತುವಡವೆಗಳೂ ನಿಮಗಿಂದು ಲಭಿಸುವ ಯೋಗವಿದೆ. ವಾರಾಂತ್ಯದ 3 ದಿನಗಳು ಅನುಕೂಲವಿವೆ

ಧನು—ನಿಮ್ಮ ಧನ ವಿಕ್ರಮ ಪತಿಯಾದ ಶನೈಶ್ಚರನಿಂದು ಲಾಭದಲ್ಲಿ ಉಚ್ಚನಾಗಿ ನಿಂತಿರುವ ಕಾರಣ ನೀವಿಂದು ಒಳ್ಳೆ ಸಾಹಸದಿಂದ ಕಾರ್ಯವನ್ನು ಸಾಧಿಸುವಿರಿ. ಇತರರ ಸಹಾಯವನ್ನು ಬಯಸಲಾರಿರಿ. ನಿಮ್ಮ ನಿರೀಕ್ಷೆಗಿಂತಲೂ ಹೆಚ್ಚಿನ ಫಲಲಾಭವಾಗಲಿದೆ. ಪಿತ್ತೋದ್ರೇಕದೋಷದಿಂದ ಆರೋಗ್ಯಕ್ಕೆ ಕೊಂಚ ಹಾನಿಪ್ರಾಪ್ತವಾದೀತು. ಅಧಿಕಾರಿವರ್ಗದವರ ಭಯಕ್ಕೆಡೆಯಿದೆ. ವಾರಾಂತ್ಯದ ದಿನಗಳು ನಿಮ್ಮ ಬಯಕೆಗಳನ್ನು ಈಡೇರಿಸಲು ಸಮರ್ಥವಿವೆ.

ಮಕರ—ವಿರೋಧಿ ವರ್ಗದವರ ಉಪಟಳದಿಂದಾಗಿ ನೀವು ಕೈಕೊಂಡ ಕಾರ್ಯಗಳು ನಿರಾಯಾಸದಿಂದ ಕೊನೆಗೊಳ್ಳಲಾರವು. ಖರ್ಚುಗಳ ಭಾಗಗಳಧಿಕವಿದ್ದರೂ ನಿಮ್ಮ ಆದಾಯವಿಂದು ಸಾಕಷ್ಟು ತೃಪ್ತಿಕರವಿರುವುದರಿಂದ ಹಣದ ಅಡಚಣೆಗೆ ಸಿಲುಕಲಾರಿರಿ. ವಾಹನಾದಿಗಳಲ್ಲಿನ ಯಾನವನ್ನಿಂದು ನಿಷೇಧಿಸಿರಿ. ಆಕಸ್ಮಿಕ ಅಪಘಾತಗಳುಂಟಾಗುವ ಯೋಗವಿದೆ. ಚಂಚಲವಾದ ಮನಸ್ಸಿನ ಬಿಗಿಹಿಡಿಯಿರಿ. ವಾರಾದಿಯ 4 ದಿನಗಳು ಭೋಗವಿಷಯ ಲಾಭಗಳಿವೆ.

ಕುಂಭ—ನೀಚ ಜನರ ದೆಸೆಯಿಂದಾಗಿ ಹೆಚ್ಚಿನ ಫಲಲಾಭವಾಗಲಿದೆ, ವ್ಯಾಪಾರದಲ್ಲೂ ನೌಕರಿ ಭಾಗದಲ್ಲೂ ಶ್ರಮಾಧಿಕ ಫಲ ಲಭಿಸುವದು. ನಿಮ್ಮಲ್ಲಿನ ಉತ್ಸಾಹ ಕ್ರಿಯೆ ಕುಂಠಿತವಾಗಿರುವುದರಿಂದ ಕರ್ತವ್ಯ ಶಕ್ತಿಯು ನಿಮ್ಮಲ್ಲಿ ಕಡಿಮೆಯಾದೀತು. ಪಿತ್ತದೋಷದಿಂದಾಗಿ ದುಃಸ್ವಪ್ನದ ಭಾಸವುಂಟಾಗಲಿವೆ. ಸ್ತ್ರೀಜನರ ಆಗ್ರಹಕ್ಕೆ ಗುರಿಯಾದೀರಿ. ವಾರದ ಅಂತ್ಯದಿನಗಳನ್ನು ಬಿಟ್ಟು ಉಳಿದ ದಿನಗಳು ಸಾಕಷ್ಟು ಉತ್ತಮವಿರುವವು

ಮೀನ - ಇಂದಿನ ನಿಮ್ಮ ಗ್ರಹವಶವು ಅತ್ಯುತ್ತಮವಿರುವದು. ನಿಮ್ಮ ಎಣಿಕೆಗೆ ಮೀರಿ ಅಧಿಕವಾಗಿ ಹಣವು ನಿಮ್ಮ ಕೈ ಸೇರಲಿದೆ. [illegible] ಕೂಡಿದ ಮಾತಿನ ಸಾಲಗಳಿಂದ ಮುಕ್ತರಾಗಿ ನಿಶ್ಚಿಂತೆಯಿಂದ ನಗಲಿರಿ. ಸಮಾಜದಲ್ಲಿ ಮಾನಮನ್ನಣೆಗಳು ಲಭಿಸುವವು. ಸಾಮಾಜಿಕರಾಜಕೀಯ ಕ್ಷೇತ್ರಗಳಲ್ಲೂ ಕೀರ್ತಿ ಲಾಭಗಳು ದಕ್ಕಿ[illegible]. ವಾರಾಂತ್ಯದ 3 ದಿನಗಳ ನಿಮ್ಮ ಆಶಾಕಾಂಕ್ಷೆಗಳೂ ನಿರಾಯಾಸದಿಂದ ಫಲಿಸಲಿವೆ.

ಸ್ತ್ರೀ ಪುರುಷ ಶಿಶುಗಳು ರೋಗದಿಂದ ನರಳಬೇಕಾಗಿಲ್ಲ!
ಲಕ್ಷಾಂತರ ಜನರು ಗುಣಹೊಂದಿದ್ದಾರೆ!
ಸರ್ ಜೀವನ ಶಿಲಾಜಿತ್ ಲೇಹ
ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ, ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ. ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯವಾದ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.
೪೪ ದಿನದ ಲೇಹ್ಯ ರೂ ೫/೪, ೨೨ ದಿನದ ಲೇಹ್ಯ ರೂ ೩೪
(ಪೋಸ್ಟೇಜು ಮಾಫ)
ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

KING OF TON
SILAJITH LAYHAM

Edited, Printed & Published by K. H. Shetty at the Navayuga Press, Udipi, S. India.

d. No.
3618

LICENC No. 31
Licensed to Post without Prepaymen

18-12-1952

Estd 1921 ಸ್ಥಾಪನೆ
32ನೆಯ ವರ್ಷ

Founder: **Sri A B Shetty,**
Minister for Medical & Public Health

ನವಯುಗ
ಆರೋಗ್ಯ ಮಂತ್ರಿ
ಎ. ಬಿ. ಶೆಟ್ಟರಿಂದ
ಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ

ಚಂದಾ 5-12-0
ತಿಂಗಳಿಗೆ 3-0-0
ಪ್ರತಿಗೆ 0-2-0

ನವಯುಗ

Vol 32
No 16

NAVAYUGA WEEKLY POST BOX NO 22 UDIPI

ವರ್ಷ
ವಾರ

ಅಂತರಂಗ
ಪ್ರಸ್ತುತ ಪತ್ರಿಕೆಯ
ಉದಯೋತ್ಸವದ
86 ಪುಸ್ತಕಗಳು
24 ಸಿಗುತ್ತವೆ
ವಿವರಕ್ಕೆ ಬರೆಯಿರಿ.
ಮೆನೇಜರ್,
ಅಂತರಂಗ, ಉಡುಪಿ

ಮನುಷ್ಯನ ಸಾಮರ್ಥ್ಯದ ಕುರಿತು ಯಾರಿಗೂ ಸಂದೇಹವಿರಬಾರದು. ದೈಹಿಕ ಬಲಕ್ಕೂ ಹೆಚ್ಚು ಬೌದ್ಧಿಕ ಬಲವೇ ಮಾನವನ ಶ್ರೇಯಸ್ಸಿಗೆ ಕಾರಣವೆನಿಸಿದೆ. ಹಾಗಿದ್ದರೂ ನಾವು ಶರೀರ ಸಾಮರ್ಥ್ಯವನ್ನು ಕಡೆಗಣಿಸುವುದು ಸಮವಲ್ಲ. ನಮ್ಮಲ್ಲಿ ಶಕ್ತಿಯ ಸ್ರೋತಗಳನ್ನು ಒಂದುಗೂಡಿಸಿ, ಅವೆಲ್ಲವುಗಳನ್ನೂ ನಮ್ಮ [illegible]ದಯಕ್ಕೆ ಉಪಯೋಗಿಸಿಕೊಳ್ಳುವ ಹಂಬಲ ನಮ್ಮಲ್ಲಿರಬೇಕಾದುದು ಅಪೇಕ್ಷಣೀಯ. ಸಾಮಾನ್ಯವಾಗಿ ನಮಗೆ [illegible] ಕಠೋರತರವೂ, ಅತ್ಯುತ್ತಮವಾದುದು ಸಿಗದೆ ಹೋದರೆ ಮನಸ್ಸಿಗೆ ತೃಪ್ತಿ ಇರುವುದಿಲ್ಲ. ಅದರಂತೆಯೇ ನಾವೇನೇ ಮಾಡಿದರೂ ನಮ್ಮ ಪರಮಾವಧಿ ಪ್ರಯತ್ನ ಹಾಗೂ ಬುದ್ಧಿ ಮತ್ತೆಯ ಪ್ರದರ್ಶನವಾಗಿ, ಕೌಶಲ್ಯದ ತುತ್ತತುದಿಗೆ ನಾವೇರಿರುವೆವೆಂಬುದಕ್ಕೆ ಯೋಗ್ಯ ಸಾಕ್ಷಿಯನ್ನು ಸೃಷ್ಟಿಸದಿದ್ದರೆ-ನಮಗೆ ಸಮಾಧಾನವಾಗಲಾರದು. ಮಹತ್ವಾಕಾಂಕ್ಷೆ ಮನುಷ್ಯನಲ್ಲಿ ಇರಬೇಕಾದುದು ತುಂಬ ಅಗತ್ಯವಿದೆ: ಸಣ್ಣ ಮಕ್ಕಳ "ಚಂದಮಾಮ"ದಂಥ ಪತ್ರಿಕೆಗಳಲ್ಲಾಗಲೀ ಅಜ್ಜಿಯರು ಮೊಮ್ಮಗನಿಗೆ ಹೇಳುವ ಕತೆಗಳಲ್ಲಾಗಲೀ ಮನುಷ್ಯನ ಮಹತ್ವಾಕಾಂಕ್ಷೆ ತಾನೇ ತಾನಾಗಿ ಮೆರೆಯುತ್ತಿರುವುದನ್ನು ನೋಡಬಹುದು. ಸಾವಿರ ಸಂಕಟಗಳು ಒಂದರ [illegible] ಅವನ್ನು ಕೆಚ್ಚೆದೆಯಿಂದಲೂ ಜಾಣ್ಮೆಯಿಂದಲೂ ಎದುರಿಸಿ, ಜಯಶೀಲನಾಗುವೆನು ಎಂಬ ಮನೋಭೂಮಿಕೆಯನ್ನು ಮಕ್ಕಳಲ್ಲಿ ಉಂಟುಮಾಡುವುದು ಇವುಗಳ ಉದ್ದೇಶವಿದ್ದೀತು.

ಆದುದರಿಂದ ನಮ್ಮಲ್ಲಿ ಶಕ್ತಿಸಾಮರ್ಥ್ಯಗಳನ್ನು ಸದ್ವಿನಿಯೋಗಪಡಿಸಿಕೊಂಡು ಸುಖಸಂಪದಭಿವೃದ್ಧಿಯ ಸಾಧನೆಯಲ್ಲಿ ತೊಡಗಬೇಕೆನ್ನುವುದು ನಮ್ಮ ಆದ್ಯ ಕರ್ತವ್ಯವೆಂದು ಸ್ಪಷ್ಟವಾಗಿ ವ್ಯಕ್ತವಾಗುವುದು. ನಾವು ಇಂದು ಬಡವರಾಗಿದ್ದರೆ ಅದಕ್ಕೆ ಅಮೇರಿಕದ [illegible]ರನ್ನು ದೂರಿ ಪ್ರಯೋಜನವಿಲ್ಲ. ನಾವು ಹೇಡಿಗಳೂ ನಿರ್ವೀರ್ಯರೂ ಆಗಿರುವುದಕ್ಕೆ [illegible] ಹೊಣೆಯಾಗಲಾರರು. [illegible] ಸೋಮಾರಿಗಳೂ ಆಲಸಿಗರೂ ಆಗಿರುವುದಕ್ಕೆ ಜಪಾನೀಯರ ಚಟುವಟಿಕೆ ಕಾರಣವಲ್ಲ- ನಮ್ಮ ಹೆಡ್ಡು ಮನಸ್ಸು ಹಾಗೂ ಒಡ್ಡು ಬುದ್ಧಿಯೇ ಈ ದೋಷಗಳ ಮೂಲಕ್ಕಿದೆ ಹೊರತು — ಇತರರನ್ನು ನಿಂದಿಸುವುದು ವ್ಯರ್ಥದ ಕೆಲಸ. ನಾವು

[illegible]

[illegible] ಇತ್ತು!

ಚಟುವಟಿಕೆ ತುಂಬಲಿ!

ಭಾರತೀಯರು ಮೂವತ್ತೈದು ಕೋಟಿ ಜನ ಈಗಿಂದೀಗ ಒಗ್ಗಟ್ಟಾಗಿ ನಮ್ಮ ಉದ್ಧಾರದ ಮಾರ್ಗವನ್ನು ಕಂಡುಕೊಂಡು ಚಟುವಟಿಕೆಯಿಂದ ದುಡಿದರೆ— ನಮ್ಮೆದುರು ಜಗತ್ತಿನ ಯಾವ ಸಂಪತ್ತು ಸಂಪನ್ನವಾದ ರಾಷ್ಟ್ರವೂ ನಿಲ್ಲಲಾರದು. [illegible] ನೈಸರ್ಗಿಕ ಸಂಪತ್ತು, ನಮ್ಮಲ್ಲಿರುವ ಪ್ರಕೃತಿಶಕ್ತಿಯ ಸ್ರೋತಗಳು, ನಮ್ಮ ಪರ್ವತ, ಕಣಿವೆ, ನದಿ, ಅರಣ್ಯಗಳು, —ನಮ್ಮ ಚಟುವಟಿಕೆಯಿಂದ [illegible] ಮನಸ್ಸನ್ನು ತಣಿಸಬಲ್ಲವು [illegible]

ಭಾರತ ಸರಕಾರ [illegible] ಪಂಚವಾರ್ಷಿಕ ಯೋಜನೆಯು [illegible] ಪ್ರಕಟಿಸಿದೆ [illegible] ಭಾರತ [illegible] ಆಹಾರ [illegible] ದರಿಂದ, [illegible] ಯೋಜನೆಯ [illegible] ಉನ್ನತಸ್ಥಿತಿಗೇರಲು [illegible] ಕಾಣುವುದಿಲ್ಲ. ಈ ಯೋಜನೆ ಕಾರ್ಯಗತವಾದರೆ, ನಮ್ಮ [illegible] ಯೋಜನೆಗಳ [illegible] ನಮ್ಮ [illegible]

[illegible]

[illegible] ಚಟುವಟಿಕೆ [illegible] ನಮ್ಮ ಶಕ್ತಿ [illegible]

ನಮ್ಮ [illegible] ನಾವು ನಿತ್ಯವೂ [illegible]

([illegible] ಪುಟ ನೋಡಿರಿ)

ಡ್ಯೂಕ್ ಆಫ್ ಎಡಿನ್‌ಬರ್ಗ ದಂಪತಿಗಳು

[illegible]

ತಿಪ್ಪೆಯ ಪೂಜೆಯಿಂದ ಲಕ್ಷ್ಮೀ ಕಟಾಕ್ಷ!

ಕಸಕಡ್ಡಿಗಳನ್ನು ಉಪೇಕ್ಷಿಸುವುದು ಸಲ್ಲದೆಂದು ವಿಜ್ಞಾನದ ಎಚ್ಚರಿಕೆ

ಪುರಾತನ ಕವಿಯೊಬ್ಬನು "ಎಲ್ಲ ವಸ್ತುಗಳನ್ನೂ ಸಂಗ್ರಹಿಸು; ಒಂದು ದಿನ ಅವು ಉಪಯೋಗಕ್ಕೆ ಬರುವುವು" ಎಂದಿದ್ದನು. ಈ ಮಾತನ್ನು ಸತ್ಯಗೊಳಿಸಿದ ಕೀರ್ತಿಯು ವಿಜ್ಞಾನಕ್ಕೆ ಸಲ್ಲಬೇಕು. ಹೊಲಸೆಂದು, ನಿರುಪಯೋಗಿಯೆಂದು ನಾವೆಣಿಸಿ ಬಿಸಾಡುವ ಅಸಂಖ್ಯ ತ್ಯಾಜ್ಯ ವಸ್ತುಗಳು ತುಂಬ ಪ್ರಯೋಜನವುಳ್ಳವುಗಳೆಂದು ವಿಜ್ಞಾನವು ಈಗ ಮನಗಾಣಿಸಿದೆ; ಈ ಪಾಠ ಕಲಿಸಿ, ನಮ್ಮ ಸಂಪದಭಿವೃದ್ಧಿಗೆ ನೆರವಾಗುವ ಬಗೆಯನ್ನದು ತೋರಿಸಿದೆ. ನಾವಿಂದು ಕಸಕಡ್ಡಿಗಳನ್ನು ಎಲ್ಲಾದರೊಂದು ಮೂಲೆಗೆ ಎಸೆಯುತ್ತೇವೆ; ಇಲ್ಲವೆ ಮಾರ್ಗದ ಮೇಲೆ ಬಿಸಾಡುತ್ತೇವೆ; ಸಣ್ಣ ನಾಲೆಗಳಲ್ಲಿ ತೋಡುಗಳಲ್ಲಿ ಹರಿಯಗೊಡುತ್ತೇವೆ. ಅಥವಾ ನಮ್ಮ ಮನೆಯಿಂದ ಹೊತ್ತುತಂದು ನೆರೆಮನೆಯವನ ಬಾಗಿಲ ಮುಂದೆ ಮೌನದಿಂದ ಸುರುವಿಬಿಟ್ಟು ಧನ್ಯರೆಂದುಕೊಳ್ಳುತ್ತೇವೆ! ಆದರೆ ನಿಜ ಹೇಳಬೇಕೆಂದರೆ ಈ ತಿಪ್ಪೆಯೇ ಪರಮೈಶ್ವರ್ಯದ ಬೀಜ ದೇವಿಯನ್ನು, ಸಂಪತ್ಸಮೃದ್ಧವಾಗಿಸುವ ಸಸ್ಯಶ್ಯಾಮಲವಾಗಿಸುವ ಮಾಯೆಯುಳ್ಳ ಪುರುಷಮಣಿ! ನಮ್ಮ ಹಾಗೂ ವಿದೇಶಗಳಲ್ಲಿ ತಿಪ್ಪೆಯ ರೀತಿಯನ್ನು ಯಾವ ದೃಷ್ಟಿಯಿಂದ ನೋಡಲಾಗುತ್ತಿದೆ ಎಂಬುದಕ್ಕೆ ಕೆಳಗಿನ ಉದಾಹರಣೆಯೇ ಸಾಕು— ಇತರದೇಶಗಳಲ್ಲಿ ಎಕ್ರೆಗೆ ೨೦೦ರಿಂದ ೩೦೦ ಮಣ ಗೊಬ್ಬರ ಹಾಕಿದರೆ, ನಮ್ಮಲ್ಲಿ ಬಹಳ ಕಷ್ಟದಿಂದ ೫೦-೬೦ ಸೇರು ಗೊಬ್ಬರ ನೆಲಕ್ಕೆ ಹಾಕುತ್ತೇವೆ. ತಿಪ್ಪೆಯಲ್ಲಿಯೇ ಎಲ್ಲ ಪೋಷಕದ್ರವ್ಯಗಳು ಸಮಾವಿಷ್ಟವಾಗಿವೆಯೆಂದೂ, ಕಸ ಕಡ್ಡಿಗಳು ಕಾಂಚನ ಸದೃಶವಾಗಿವೆಯೆಂದೂ ನಾವಿನ್ನೂ ಅರಿತಿಲ್ಲ. ಗೊಬ್ಬರದ ಅಭಾವದಿಂದಲೇ ಭಾರತ ಭೂಮಿಯು ಫಲವತ್ತತೆಯನ್ನು ಕಳೆದುಕೊಂಡು ನಿತ್ರಾಣವಾಗಿದೆ, ಜನಸಂಖ್ಯೆಯ ಭಾರವನ್ನು ಹೊರದೆ ಕಂಗೆಡುವ ಭೂದೇವಿ ಹಸಿವಿನಿಂದಲೂ ಪೀಡಿತಳು!

ತಿಪ್ಪೆಯಿಂದ ಗೊಬ್ಬರ

ಜರ್ಮನಿಯಲ್ಲಿ ಜನಿಸಿ ಹಾಲೆಂಡಿನ ಪ್ರವಾಸಮಾಡಿ, ಯುದ್ಧದ ದಿನಗಳಲ್ಲಿ ಅಮೇರಿಕಾಕ್ಕೆ ಓಡಿಬಂದ ಡಾ. ಹರ್ನ್ ಫ್ರಾಯಿಡ್ ಫೀಫರ್ ಎಂಬವರು ಕ್ಷಯರೋಗದಿಂದ ಪೀಡಿತರಾಗಿ, ವರ್ಷವಿಡೀ ಆಸ್ಪತ್ರೆಯ ಹಾಸಿಗೆಯಲ್ಲಿ ಬಿದ್ದುಕೊಂಡಾಗ, ತಿಪ್ಪೆಯನ್ನು ಲಕ್ಷ್ಮೀ ಸದೃಶವಾಗಿ ಪರಿವರ್ತಿಸುವ ಬಗೆ ಏನೆಂದು ಚಿಂತಿಸುತ್ತಿದ್ದರು. ಕಸಕಡ್ಡಿಗಳನ್ನು ತ್ವರಿತವಾಗಿ ಕೊಳೆಯಿಸಬಲ್ಲೆವಾದರೆ ಅದೊಂದು ಅತ್ಯುತ್ತಮವಾದ ಗೊಬ್ಬರವಾಗುವುದೆಂದವರಿಗೆನಿಸಿತು. ಆಸ್ಪತ್ರೆಯ ಪ್ರಯೋಗಶಾಲೆಯಲ್ಲಿ ಅವರು ತಮ್ಮ ಪ್ರಯತ್ನಗಳನ್ನು ಕೈಗೊಂಡರು

ಇಂದು ಕೆಲಿಫೋರ್ನಿಯಾದ ಓಕ್ಲಂಡದಲ್ಲಿ ತಿಪ್ಪೆಯಿಂದ ಗೊಬ್ಬರ ತಯಾರಿಸುವ ಒಂದು ಮಹಾ ಕಾರಖಾನೆಯೇ ತೆರೆಯಲ್ಪಟ್ಟಿದೆ. ಇಡೀ ನಗರದ ಹತ್ತುಸಾವಿರ ಮಣ ಕಸಕಡ್ಡಿ ಇಲ್ಲಿ ದಿನಾಲು ಬಂದು ಬೀಳುತ್ತದೆ. ಅದನ್ನು ಕುಟ್ಟಿ, ಪುಡಿಮಾಡಿ ನೀರನ್ನು ಚಿಮುಕಿಸುವುದರ ಜೊತೆಗೆ ಸ್ವಲ್ಪ ಕೀಟಾಣುಗಳನ್ನೂ ಸೇರಿಸುವರು. ಈ ಕೀಟಾಣುಗಳನ್ನು ಕಂಡುಹಿಡಿದ ಕೀರ್ತಿ ಡಾ. ಫೀಫರ್‌ಗೆ ಸೇರಿದೆ. ಈ ಕೀಟಾಣುಗಳು ಕಸಕಡ್ಡಿಗಳನ್ನು ಕೊಳೆಯಿಸುವುದರಿಂದ, ಸಸ್ಯಗಳ ಆಹಾರಕ್ಕೆ ಉಪಯುಕ್ತವಾದಂಥ ಪದಾರ್ಥಗಳನ್ನು ಉಂಟುಮಾಡುತ್ತವೆ. ಸಾಮಾನ್ಯವಾಗಿ ಈ ಆಹಾರವು ಮಣ್ಣಿನಲ್ಲಿ ಸಹಜವಿದೆ. ಆದರೆ ಈ ಕೀಟಾಣುಗಳಲ್ಲಿ ಹಲವು ನೂರುಗಳಷ್ಟು ಅಧಿಕವಾಗಿರುವುದರಿಂದ, ಇದು ಸುಲಭಗ ರೀತಿ ಎನಿಸಿದೆ. ತಿಪ್ಪೆಯಿಂದ ಗೊಬ್ಬರವು ಒಂದು ವಾರದ ಅವಧಿಯಲ್ಲಿ ಸಿದ್ಧಗೊಳ್ಳುತ್ತದೆ. ಇದನ್ನು ಉಪಯೋಗಿಸಿ ಕೃಷಿ ಮಾಡಿದಲ್ಲಿ, ತುಂಬ ಆಶಾದಾಯಕವಾದ ಫಲ ಪ್ರಾಪ್ತಿಯಾಗಿದೆ.

ಇದರಂತೆ ಮನುಷ್ಯನ ಮಲ ಮೂತ್ರಗಳೂ ಅತ್ಯುತ್ತಮ ಗೊಬ್ಬರಗಳಾಗಬಲ್ಲವು. ನಾವು ಜೀರ್ಣಿಸಿಕೊಳ್ಳಲಾರದ ಎಷ್ಟೋ ಪೋಷಕಾಂಶಗಳು ವಿಸರ್ಜಿಸಲ್ಪಟ್ಟು ವ್ಯರ್ಥವಾಗುವುದನ್ನು ವಿಜ್ಞಾನವು ಎಷ್ಟು ಸಹಿಸಿಕೊಂಡೀತು? ಇದೀಗ ಪಾಶ್ಚಾತ್ಯ ದೇಶಗಳಲ್ಲಿ ಮಲದಿಂದ ಗೊಬ್ಬರ ತಯಾರಿಸುವ ಹತ್ತು ಹಲವು ಕಾರ್ಖಾನೆಗಳು ತಲೆಎತ್ತಿವೆ.

ಖಾದ್ಯ ವಸ್ತುಗಳು

ನಮ್ಮ ದೇಶದ ರಾಸಾಯನಿಕ ಪ್ರಯೋಗ ಶಾಲೆಗಳು ಕೂಡಾ ಈ ಮಾರ್ಗದಲ್ಲಿ ಮುನ್ನಡೆಯುತ್ತಿವೆ. ಸಕ್ಕರೆ ತಯಾರಿಯ ಕಾರ್ಖಾನೆಗಳಲ್ಲಿ ಕಬ್ಬಿನ ರಸದ ಕೊಳೆಯಿಂದ ಗೊಬ್ಬರ ತಯಾರಿಸುವುದು ನಡೆದಿದೆ. ಮಾತ್ರವಲ್ಲ ಅದರಿಂದ ಮೇಣವನ್ನು ಸಿದ್ಧಗೊಳಿಸುವ ವಿಚಾರವನ್ನು ಮಾಡಿರುವರು. ಸಾಧಾರಣವಾಗಿ ಕಬ್ಬಿನ ಚೊಗಟನ್ನು ಒಲೆ ಉರಿಸುವುದಕ್ಕೆ ಉಪಯೋಗಿಸುವುದು ವಾಡಿಕೆ. ಆದರೆ ಫೀಫರನ ಕ್ರಮದಂತೆ ಅದನ್ನೂ ಗೊಬ್ಬರಕ್ಕಾಗಿ ವಿನಿಯೋಗಿಸಿದರೆ, ಅನ್ನಕ್ಷಾಮದ ಈ ದಿನಗಳಲ್ಲಿ ಎಷ್ಟು ಪ್ರಯೋಜನವಾಗಲಿಕ್ಕಿಲ್ಲ? ಹಾಗೆಯೇ ಉರಿದು ಹಾಳಾಗುವ ಸೆಗಣಿಯನ್ನು ಗದ್ದೆಗೊಯ್ದು, ಭೂಸಾರವನ್ನು ಹೆಚ್ಚಿಸಿದರೆ ಎಷ್ಟು ಲಾಭವಿದೆ!— ತಿಪ್ಪೆ ಯಾವ ಜಾತಿಯದ್ದೇ ಇರಲಿ, ಅತ್ಯಂತ ತುಚ್ಛವಾದುದೆಂದದನ್ನು ಕಡೆಗಣಿಸದೆ, ಲಕ್ಷ್ಮೀ ಕಟಾಕ್ಷಕ್ಕೆ ನಮ್ಮನ್ನು ಅರ್ಹರಾಗಿಸುವ ಸಾಧನವೆಂದು ಆದರಿಸಬೇಕಾಗಿ ಇಂದಿನ ವಿಜ್ಞಾನ ನಮಗೆನ್ನುತ್ತದೆ.

ಬೀಜಗಳನ್ನೂ ಸಿಪ್ಪೆಯನ್ನೂ ಉ
ಳುವ ಅಥವಾ ಎಸೆದುಬಿಡುವ ಸಮ
ನಾವು ಇವುಗಳಲ್ಲಿ ಬೆಲೆಯುಳ್ಳುದೇ
ಇಲ್ಲವೆಂದೇ ಭಾವಿಸುತ್ತೇವೆ. ಆದರೆ ವಿ
ನದ ಶೋಧದ ಫಲವಾಗಿ, ನಾವು ಉ
ಕ್ಷಿಸುವ ಅನೇಕಾನೇಕ ವಸ್ತುಗಳಲ್ಲಿ
ಯುಕ್ತಾಂಶಗಳು ಹಲವು ಇವೆಯೆ
ಸಿದ್ಧವಾಗಿದೆ. ಅಂಜೂರವನ್ನು ಪಾ
ದೇಶಗಳಲ್ಲಿ ತುಂಬ ತಿನ್ನುತ್ತಾರೆ.
ಬೀಜವನ್ನು ಉಗುಳುತ್ತಾರೆ. ಬೀಜ
ನಾವು ತಿಂದು ಸುಖಪಡುವಂಥದೇ
ಇಲ್ಲದಿರಬಹುದು: ಹಾಗೆಂದು ಈಗ
ರಿಂದ ಎಣ್ಣೆ ತೆಗೆಯಲು ಬರುತ್ತದೆಂ
ಗೊತ್ತಾಗಿದೆ. ಈ ಎಣ್ಣೆಯ ಸಂಯೋ
ದಿಂದ ಬಣ್ಣ ಶಾಶ್ವತವಾಗಿ ಉಳಿಯ
ನೆರವು ದೊರೆತಿದೆ. ಈ ಎಣ್ಣೆ ಮಿಶ್ರಿತ
ದ ಬಣ್ಣದ ಸೀರೆ ಇದ್ದರೆ, ಆದರ ಬೆ
ಎಂದಿಗೂ ಕುಂದಲಾರದೆಂದು ತಿಳಿ
ಅಂಜೂರವಷ್ಟೆ ಅಲ್ಲ, ಇನ್ನೂ ಹ
ಹಣ್ಣುಗಳ ಬೀಜದಿಂದ ಎಣ್ಣೆ ತೆಗೆಯ
ಸಾಧ್ಯ.

ನಮ್ಮಲ್ಲಿಯೇ ಬೆಳೆಯುವ ಮಾ
ಹಣ್ಣನ್ನು ತಗೆದುಕೊಳ್ಳೋಣ: ಮಾ
ಹಣ್ಣಿನಷ್ಟು ಸ್ವಾದಿಷ್ಟವಾದ ಫಲ
ರೊಂದಿಲ್ಲ. ಆದರೆ ಅದರ ಗೊರಟ
ನಾವು ಎಸೆದು ಬಿಡುತ್ತೇವೆ. ಹಾಗೆ
ನೆಲಗಡಲೆಯಿಂದ ಎಣ್ಣೆ ತೆಗೆದರೂ,
ರ ಸಿಪ್ಪೆಯನ್ನು ಬಿಸಾಡುತ್ತೇವೆ. ಈಗ
ಸಿನ ಪ್ರಯೋಗಗಳಿಂದ ಮಾವಿನ ಗೆ
ಟು, ನೆಲಗಡಲೆ ಸಿಪ್ಪೆಗಳಿಂದ ಖಾ
ವಸ್ತುಗಳನ್ನು ತಯಾರಿಸಬಹುದೆಂ
ಗೊತ್ತಾಗಿದೆ. ಹುಣಸೆ ಹಣ್ಣಿನ ಬೀಜ
ದ ತಯಾರಿಸಿದ ಹಿಟ್ಟಿನಿಂದ ಮಿಲ್ಲುಗ

(೧೦ನೇ ಪುಟ ನೋಡಿರಿ)

ಆಗ--?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿಯುವುದು ಮಸ್ವಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ, ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ ಜೀವನದ ಗೆಳೆಯ ನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿ ಇರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕಂಡೊಡನೆ ನಿಮ್ಮದೇ ಆಗುವ, ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ, ನಿಮ್ಮ ನಾಡಿನ

ಈ ಕಂಪೆನಿಯಲ್ಲಿಯೇ ವಿಮೆ ಇಳಿಸಿರಿ

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ ಭಾರತ ಸ್ಥಾಪನೆ: ೧೯೩೫
The Canara Mutual Assurance Co. Ltd.
Head Office: UDIPI, S INDIA. ESTD. 1935

ರಾಮತೀರ್ಥ
ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ನಾಶಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಪೆಶಲ್ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಉಡುಪಿ, ಡಿ. ಮು. ಕೋರ್ಟಿನಲ್ಲಿ
S C 502/195

ತೇಜಪ್ಪ ಶೆಟ್ಟಿ — ವಾದಿ
ಮತ್ತು

ಬಸವ ಪೂಜಾರಿ. ಕೂಡ ಪೂಜಾರಿಯ
ಉಡುಪಿ ತಾಲೂಕು ಸಾಲ್ಯಾರು ಗ್ರಾ
ವಡೇರಾಳಿ ಹಳೆಮಕ್ಕಿಯಲ್ಲಿರುವವ. –
ಪ್ರತಿವಾದಿ - ಇವರೊಳಗೆ—

ಸದ್ರಿ ಪ್ರತಿವಾದಿಗೆ ಈ ಮೂಲಕ ತಿ
ಳಿಸುವುದೇನೆಂದ್ರೆ,

ವಾದಿಗೆ ಪ್ರತಿವಾದಿಯು ತಾ.
22 9-1949 ಕ್ಕೆ ರೂ. 115-0-0ಕ್ಕೆ
ಕೊಟ್ಟ ಡಿಮಾಂಡ್ ನೋಟಿನ ಅಸಲು
ಬಡ್ಡಿ ರೂ. 134-4-0ನ್ನು ಬರ
ಕೊಳ್ಳುವರೇ ವಾದಿಯು ಮೇಲ್ಕಂಡ ದಾ
ವೆಯನ್ನು ಹಾಕಿ ಮಾಡಿ ಅದು ಪ್ರತಿವಾದಿ
ಮೇಲೆ ನೋಟೀಸಿನ ಬಗ್ಗೆ ತಾ. 24 12
ಕ್ಕೆ ತನ್ನಿಗೆ ಮುಂದೊಡಾಗಿಯದೆ. ಪ್ರತಿ
ವಾದಿಯು ಸದ್ರಿ ದಾವೆಯಲ್ಲಿ ಉದಾಹ [illegible]
ವ್ಯವಹರಿಸಬೇಕೆಂದು [illegible]
[illegible] ಕೋರ್ಟಿನ ಮುಂದೆ
10 ಗಂಟೆಗೆ ಹಾಜರಾಗಿ [illegible]
ಕೊಳ್ಳತಕ್ಕದ್ದು. ತಪ್ಪಿದ್ರೆ ಏಕಪಕ್ಷ
ತೀರ್ಮಾನ ಮಾಡಲಾಗುವುದೆಂಬ
ದಾಗಿ ಈ ಮೂಲಕ ತಿಳಿಸಲಾಗುತ್ತದೆ

P N- Krishnamoorthy Rao
Advocate for Plaint
Udipi Dated 5-12-53

ಭಾರತದ ಪಂಚವಾರ್ಷಿಕ ಯೋಜನೆ

ಜನತೆಯ ಜೀವನಮಟ್ಟ ಎತ್ತರಿಸುವ ಪ್ರಾಮಾಣಿಕ ಪ್ರಯತ್ನ.

ರಾಷ್ಟ್ರದ ನೈಸರ್ಗಿಕ, ಆರ್ಥಿಕ ಹಾಗೂ ಮಾನವೀಯ ಸಂಪತ್ತನ್ನು ಪರಮಾವಧಿ ಮಟ್ಟದಲ್ಲಿ ಸಂಯೋಜಿಸಿಕೊಂಡು ನಾನಾರಂಗಗಳ ಅಭಿವೃದ್ಧಿಯನ್ನೂ ಉನ್ನತ ಜೀವನ ಮಟ್ಟವನ್ನೂ ಸಾಧಿಸುವ ಯೋಜನೆಗಳನ್ನು 'ಪಂಚವಾರ್ಷಿಕ ಯೋಜನೆ' ಒಳಗೊಂಡಿದೆ. ಎರಡು ವರ್ಷಗಳ ಪರಿಶ್ರಮದ ಮೇಲೆ ಈ ಕೊನೆಯ ವರದಿಯನ್ನು ಸಿದ್ಧಪಡಿಸಿದ್ದು, ಪಾರ್ಲಿಮೆಂಟಿಗೆ ಶ್ರೀ ಜವಾಹರಲಾಲ ನೆಹರೂ ಅವರು ಇದನ್ನು ದಿನಾಂಕ ೯ರಂದು ಸಾದರಪಡಿಸಿದರು. ಈ ವರದಿಯನ್ವಯ ಆಹಾರ ಉತ್ಪಾದನೆಯನ್ನು ಹೆಚ್ಚಿಸುವ ಉದ್ಯಮಗಳಿಗೆ ಪ್ರಾಶಸ್ತ್ಯ ದೊರೆತಿದೆ. ವಿದೇಶದ ಸಹಾಯವನ್ನು ಸ್ವಾಗತಿಸಿರುವರಷ್ಟೇ ಅಲ್ಲ ಅಂಥ ಒಂದವಕಾಶಕ್ಕೆ ಸುಯೋಗ್ಯ ಭದ್ರತೆಯನ್ನೂ ಆಶ್ವಾಸಿಸಿರುವರು. ಔದ್ಯಮಿಕ ಕ್ಷೇತ್ರದಲ್ಲಿ ೮೦ ಕೋಟಿ ರೂ.ವೆಚ್ಚ ತಗಲುವ ಕಬ್ಬಿಣ ಹಾಗೂ ಉಕ್ಕಿನ ಕಾರ್ಖಾನೆಯು ಉಲ್ಲೇಖನೀಯವಿದೆ. ನಿಯಂತ್ರಣಗಳು ಕೆಲವೊಂದು ನೀತಿ ನಿಯಮಗಳಿಗನುಸಾರವಾಗಿ ಇನ್ನೂ ಮುಂದರಿಯುವವು; ಆಯಾತ ವ್ಯಾಪಾರಕ್ಕೂ ಹೆಚ್ಚು ನಿರ್ಯಾತ ವ್ಯಾಪಾರಕ್ಕೆ ಪ್ರೋತ್ಸಾಹ ದೊರಕುವದು. ಯೋಜನೆಯಲ್ಲಿ ಭೂಸುಧಾರಣೆಯ ಕುರಿತೂ ವಿವರವಾದ ಸಿಫಾರಸು ಇದೆ. ಗ್ರಾಮೋದ್ಯೋಗಗಳ ಅಭಿವೃದ್ಧಿಯ ಕುರಿತೂ ಯೋಜನಾ ಆಯೋಗವು ಮಾರ್ಗದರ್ಶನವನ್ನು ಮಾಡಿರುವುದು. ಸುಮಾರು ೨೦೬೯ ಕೋಟಿ ರೂಪಾಯಿ ವೆಚ್ಚ ತಗಲುವ ಈ ಬೃಹತ್ ಯೋಜನೆಯನ್ನು ಕಾರ್ಯರೂಪಕ್ಕೆ ಇಳಿಸುವಲ್ಲಿ ಜನತಾ ಸಹಕಾರವಂತೂ ಅಗತ್ಯವಿದೆ. ಜೊತೆಗೆ ನಿಷ್ಕಲಂಕವಾದ ಆಡಳಿತವೂ ಬೇಕೆಂಬುದರಿಂದ, ಯೋಜನಾ ಆಯೋಗವು ಅಮೂಲ್ಯ ಸಲಹೆಗಳನ್ನು ನೀಡಿದೆ.

ಖರ್ಚಿನ ವಿವರಗಳು

ಯೋಜನೆಯು ಬಹಳ ದೊಡ್ಡದಿದೆ. ಸದ್ಯಕ್ಕೆ ಅದರ ಮುದ್ರಿತ ಪ್ರತಿ ಲಭ್ಯವಿಲ್ಲ. ಇಷ್ಟು ದೊಡ್ಡದಾದ ಯೋಜನೆಯು ಮುಖ್ಯವಾಗಿ ನಾಲ್ಕು ಭಾಗಗಳಲ್ಲಿ ವಿಂಗಡಿಸಲ್ಪಟ್ಟಿದೆ: (೧) ಸಮಸ್ಯೆಗಳ ರೂಪರೇಷೆ ಹಾಗೂ ಪರಿಹಾರೋಪಾಯ (೨) ಆಂತರಿಕ ಸಾಧನ ಸಂಪತ್ತುಗಳ ಅಂದಾಜು (೩) ಕೃಷಿ, ಕೈಗಾರಿಕೆ ಹಾಗೂ ನೀರಾವರಿ ಕ್ಷೇತ್ರಗಳಲ್ಲಿ ಕೈಗೊಳ್ಳತಕ್ಕ ಕಾರ್ಯಕ್ರಮಗಳು; ಮತ್ತು (೪) ಔದ್ಯಮಿಕ ಅಭಿವೃದ್ಧಿಯಲ್ಲಿ ಖಾಸಗಿ ಜನರ ಸ್ಥಾನ.

೧೯೫೧ರಿಂದ ೧೯೫೬ರ ವರೆಗಿನ ಐದು ವರ್ಷಗಳ ಅಭಿವೃದ್ಧಿಯ ವಿವರದಿಂದ ಈ ವರದಿ ಕೂಡಿರುವದು. ಎಂದರೆ, ಯೋಜನೆಯು ಜ್ಯಾರಿಗೆ ಬಂದು ಈಗಾಗಲೇ ಒಂದೂವರೆ ವರ್ಷಗಳು ಸಂದಿವೆ. ವೆಚ್ಚಗಳ ಪ್ರಮಾಣವನ್ನು ಈ ರೀತಿ ವಿವಿಧ ಕೆಲಸಗಳಿಗಾಗಿ ನಿರ್ಧರಿಸುವರು:–

(೧) ಕೃಷಿ ಹಾಗೂ ಜನಪದ ಅಭಿವೃದ್ಧಿ ಯೋಜನೆಗಳಿಗೆ ೩೬೧ ಕೋಟಿ ರೂಪಾಯಿ (೧೭.೫%)

(೨) ನೀರಾವರಿಗೆ ೧೬೮ ಕೋಟಿ ರೂಪಾಯಿ (೮.೧%

(೩) ವಿವಿಧೋದ್ದೇಶದ ನೀರಾವರಿ ಮತ್ತು ವಿದ್ಯುಚ್ಛಕ್ತಿಯ ಯೋಜನೆಗಳಿಗೆ ೨೬೬ ಕೋಟಿ ರೂಪಾಯಿ (೧೨.೯%)

(೪) ವಿದ್ಯುಚ್ಛಕ್ತಿಗೆ ೧೨೭ ಕೋಟಿ ರೂಪಾಯಿ (೬.೧)

(೫) ಸಾರಿಗೆ ಮತ್ತು ಸಂಪರ್ಕಸಾಧನಗಳಿಗಾಗಿ ೪೯೭ ಕೋಟಿ ರೂಪಾಯಿ (೨೪%)

(೬) ಉದ್ಯೋಗ ಕ್ಷೇತ್ರಕ್ಕೆ ೧೭೩ ಕೋಟಿ ರೂಪಾಯಿ (೮.೪%.

(೭) ಸಾಮಾಜಿಕ ಕಲ್ಯಾಣ ಕಾರ್ಯಗಳಿಗೆ ೩೪೦ ಕೋಟಿ ರೂಪಾಯಿ (೧೬.೪%.)

(೮) ನಿರಾಶ್ರಿತರ ಪುನರ್ನಿವೇಶನ ಕಾರ್ಯಕ್ಕಾಗಿ ೮೫ ಕೋಟಿ ರೂಪಾಯಿ (೪.೧%.)

(೯) ಇತರ ಕೆಲಸಗಳಿಗೆ ೫೨ ಕೋಟಿ ರೂಪಾಯಿ (೨.೫%

ಖಂಡವಣಿ ಸಾಲವು

ಯೋಜನೆಗೆ ತಗಲುವ ೨೦೬೯ ಕೋಟಿ ರೂಪಾಯಿಗಳ ಒಟ್ಟು ವೆಚ್ಚದಲ್ಲಿ ಕೇಂದ್ರ ಸರಕಾರವು ೧೨೪೧ ಕೋಟಿ ರೂಪಾಯಿಗಳನ್ನೂ, ಅ ವರ್ಗದ ರಾಜ್ಯ ಸರಕಾರಗಳು ೬೧೦ ಕೋಟಿ ರೂಪಾಯಿಯನ್ನೂ ಬ ವರ್ಗದವು ೧೭೩ ಕೋಟಿ ರೂಪಾಯಿಯನ್ನೂ ಕ ವರ್ಗದವು ೩೧ ಕೋಟಿ ರೂಪಾಯಿಯನ್ನೂ ಜಮ್ಮು ಹಾಗೂ ಕಾಶ್ಮೀರ ರಾಜ್ಯವು ೧೩ ಕೋಟಿ ರೂಪಾಯಿಯನ್ನೂ ವಹಿಸುವವು.

ಹಣದ ಪೂರೈಕೆಯ ಸಂಬಂಧದಲ್ಲಿ ಯೋಜನಾ ಆಯೋಗದ ಅಭಿಪ್ರಾಯ ಹೀಗಿದೆ—ಯೋಜನೆಯು ಜ್ಯಾರಿಯಲ್ಲಿರುವ ಐದು ವರ್ಷಗಳ ಅವಧಿಯಲ್ಲಿ ಸರಕಾರಗಳ ಆದಾಯದಲ್ಲಿ ೭೩೮ ಕೋಟಿ ರೂಪಾಯಿಗಳ ಉಳಿತಾಯವಾದೀತು. ಸಾಲ, ಚಿಕ್ಕ ಉಳಿತಾಯ, ಡಿಪಾಜಿಟುಗಳು ಮುಂತಾದ ರೀತಿಯ ಉಳಿದ ಸಾಧನಗಳಿಂದ ಜನತೆ ೫೨೦ ಕೋಟಿ ರೂಪಾಯಿಯನ್ನು ಉಳಿಸೀತು. ಇವೆರಡೂ ಮಾರ್ಗದಿಂದ ಒಟ್ಟು ೧೨೫೮ ಕೋಟಿ ರೂಪಾಯಿ ಲಭ್ಯವಾಗುವದೆನ್ನಬಹುದು. ಆದರೂ ೮೧೧ ಕೋಟಿ ರೂಪಾಯಿಗಳ ಕೊರತೆ ಬೀಳುತ್ತದೆ. ಈಗಾಗಲೇ ಕೊಲಂಬೋ ಯೋಜನೆ ಅಮೇರಿಕದ ದಾನ, ವಿಶ್ವಬ್ಯಾಂಕಿನ ಸಾಲ ಮುಂತಾದವುಗಳಿಂದ ದೊರೆತಿರುವ ೧೫೬ ಕೋಟಿ ರೂಪಾಯಿಗಳನ್ನು ಕಳೆದ ಮೇಲೂ ೬೫೫ ಕೋಟಿ ರೂಪಾಯಿಗಳ ಅಂತರ ಕಂಡುಬರುತ್ತದೆ.

ಇಷ್ಟು ಅಂತರವನ್ನು ಪೂರೈಸುವುದೆಂತು ಎಂಬುದರ ಬಗ್ಗೆ ವಿವಂಚನೆಯುಂಟಾಗುವದು ಸ್ವಾಭಾವಿಕ. ಯೋಜನಾ ಆಯೋಗಕ್ಕೂ ಇದು ತಲೆಸಿಡಿತವನ್ನುಂಟು ಮಾಡಿದೆ. ವಿದೇಶೀ ನೆರವು ಇಷ್ಟು ದೊಡ್ಡ ಪ್ರಮಾಣದಲ್ಲಿ ದೊರೆತೀತೆನ್ನಲು ಬರುವುದಿಲ್ಲ. ಯೋಜನಾ ಆಯೋಗವು ಕೊರತೆ ಧನ ವಿನಿಯೋಗ ಪದ್ಧತಿ ಅನಿವಾರ್ಯನೆಂದೂಹಿಸಿದಂತಿದೆ. ಆದರೂ ನಮ್ಮ ಸ್ಟರ್ಲಿಂಗ ಶಿಲ್ಕನ್ನು ಮೀರಿ ಹೋಗುವಷ್ಟು ಈ ಉಪಾಯವನ್ನು ಅನುಸರಿಸಲಾಗದೆಂಬುದರಿಂದ, ಕೇವಲ ೨೯೦ ಕೋಟಿ ರೂಪಾಯಿಗಳನ್ನು ಕಾಗದದ ನಾಣ್ಯ ಸೃಷ್ಟಿಯಿಂದ ಒದಗಿಸಬಹುದು. ಇನ್ನೂ ಕೊರತೆ ಇದ್ದೇ ಇದೆ. ಇದಕ್ಕೆ ಸರಿಯಾದ ಸಮಾಧಾನ ದೊರೆತಿಲ್ಲ. ಹೀಗಿದ್ದರೂ ಪ್ರಾರಂಭದಲ್ಲಿ ವಿದೇಶೀ ಸಹಾಯ ಸಿಗದಿದ್ದರೆ ಅಲ್ಲಿ ಇಲ್ಲಿ ಸರಿಹೊಂದಿಸಿಕೊಂಡು ಮುನ್ನಡೆಯಬಹುದೆಂದೂ ಒಟ್ಟಿನಲ್ಲಿ ೨೦೬೯ ಕೋಟಿ ರೂಪಾಯಿಗಳ ಯೋಜನೆಯು ಕಳೆಯದೆಯೇ ಇರಬೇಕೆಂದೂ ಆಯೋಗ ಪಟ್ಟು ಹಿಡಿದಿದೆ.

ಉತ್ಪಾದನೆಯ ಗುರಿ

ಯೋಜನೆಯ ಪರಿಣಾಮವಾಗಿ ಈಗಿನ ಪ್ರಮಾಣಕ್ಕಿಂತ ಆಹಾರ ಧಾನ್ಯಗಳು ೭೬ ಲಕ್ಷ ಟನ್ನು (=೧೪% ಹೆಚ್ಚು), ಹತ್ತಿ ೧೨೬೦೦೦೦ ಗಂಟು (=೪೨% ಹೆಚ್ಚು). ಸಣಬು ೨೦೯೦೦೦೦ ಗಂಟು (=೬೩% ಹೆಚ್ಚು) ಕಬ್ಬು ೭ ಲಕ್ಷ ಟನ್ನು (=೧೨% ಹೆಚ್ಚು). ಎಣ್ಣೆ ಬೀಜಗಳು ೪ ಲಕ್ಷ ಟನ್ನು (=೮% ಹೆಚ್ಚು) ಅಧಿಕ ಉತ್ಪನ್ನ ಲಭ್ಯವಾಗುವ ನಿರೀಕ್ಷೆ ಇದೆ. ಇದರಂತೆ ತರಕಾರಿ, ಮೀನು, ಹಾಲು ಮತ್ತಿತರ ಬಗೆಯ ಆಹಾರೋತ್ಪಾದನೆಯೂ ಹೆಚ್ಚುವ ಬಗ್ಗೆ ಸಾಮಾನ್ಯ ಸೂಚನೆಗಳು ವರದಿಯಲ್ಲಿವೆ.

ಜನಪದ ಅಭಿವೃದ್ಧಿ ಯೋಜನೆಯು ಅತ್ಯಂತ ಮಹತ್ವದ ಕಾರ್ಯಕ್ರಮವೆಂದು ಪರಿಗಣಿಸಲ್ಪಟ್ಟಿದೆಯಲ್ಲದೆ ರಾಜ್ಯ ಹಾಗೂ ಕೇಂದ್ರ ಸರಕಾರಗಳ ಸಂಯುಕ್ತ ಹೊಣೆಗೆ ಇದು ಸೇರಿದೆ. ಸಹಕಾರೀ ಪದ್ಧತಿಯು ಈಗಿನ ಕೆಟ್ಟ ಪರಿಸ್ಥಿತಿಗೆಲ್ಲ ತರಣೋಪಾಯವೆಂದು ಆಯೋಗವು ಭಾವಿಸಿದಂತಿದೆ. ಗ್ರಾಮಾಂತರ ಜೀವನವನ್ನು ಸಹಕಾರದಿಂದ ಹಸನಾಗಿಸಬಹುದೆಂದೂ ಅಧಿಕ ಆಹಾರ ಬೆಳೆಯುವ ಚಳವಳಿಯ ವಿಚಾರಣಾ ಸಮಿತಿ ಸೂಚಿಸಿದುದನ್ನು ಆಯೋಗ ಒಪ್ಪಿಕೊಂಡಿದೆ. ವ್ಯಾಪಕವಾದ ಚಟುವಟಿಕೆಯ ಕಾರ್ಯಕ್ರಮಗಳ ಮೂಲಕ ೧ ಲಕ್ಷ ೨೦ ಸಾವಿರ ಹಳ್ಳಿಗಳನ್ನು ಪುನರ್ಘಟಿಸಿ ಒಕ್ಕಲಿಗರಲ್ಲಿ ಕಾರ್ಯೋತ್ಸಾಹವನ್ನು ತುಂಬುವ ಹವಣಿಕೆ ಇದೆ.

ಔದ್ಯಮಿಕ ಕ್ಷೇತ್ರದಲ್ಲಿ ಕಬ್ಬಿಣದ ಉತ್ಪಾದನೆಯನ್ನು ಮೂರೂವರೆ ಲಕ್ಷದಿಂದ ಆರುಲಕ್ಷ ಟನ್ನಿಗೂ ಉಕ್ಕನ್ನು ೯.೮ ಲಕ್ಷ ಟನ್ನಿನಿಂದ ೧೩.೭ ಲಕ್ಷ ಟನ್ನಿಗೂ ಸಿಮೆಂಟನ್ನು ೨೬.೯ ಲಕ್ಷ ಟನ್ನಿನಿಂದ ೪೮ ಲಕ್ಷ ಟನ್ನಿಗೂ ಹೆಚ್ಚಿಸಬೇಕೆಂಬ ಗುರಿಯಿದೆ. ಜವಳಿಯ ಉತ್ಪಾದನೆಯನ್ನು ೧೬೪೦ ಲಕ್ಷ ಪೌಂಡು ನೂಲಿಗೆ, ೪೭೦೦೦ ಲಕ್ಷ ಗಜ ಗಿರಣಿ ಬಟ್ಟೆಗೆ ಹಾಗೂ ೧೭೦೦೦ ಲಕ್ಷ ಗಜ ಕೈಮಗ್ಗದ ಬಟ್ಟೆಗೆ ವಿಸ್ತರಿಸಬೇಕೆಂದೂ ಆಯೋಗ ಯೋಚಿಸಿದೆ. ಇದಲ್ಲದೆ ಸಣಬು ಕೃಷಿ ಸಲಕರಣೆಗಳು, ಹಡಗ ನಿರ್ಮಾಣೋದ್ಯೋಗ, ಸೈಕಲು ಸಾರಿಗೆ

(೯ ಪುಟ ನೋಡಿರಿ)

ನೀವು ಒಂದು ಸೇವಿಂಗ್ಸ್ ಬೇಂಕ್ ಖಾತೆಯನ್ನೇಕೆ ತೆರೆಯಬೇಕು?

ನೀವು ಒಂದು ಸೇವಿಂಗ್ಸ್ ಬೇಂಕ್ ಖಾತೆಯನ್ನು ತೆರೆಯುವಾಗ ನೀವು ಒಂದು ಪ್ರಾಮುಖ್ಯ ಹೆಜ್ಜೆಯನ್ನು ಮುಂದಿಡುತ್ತೀರಿ. ಈ ಹೆಜ್ಜೆಯು ನಿಮ್ಮ ಹಣದ ಭದ್ರತೆ, ಆಯ ಹಾಗೂ ಭಾವೀ ಸುಖಕ್ಕೆ ನೆರವಾಗುವುದು. ಜೀವಮಾನ ಕಾಲದಲ್ಲಿ ಅನೇಕ ಸಂದರ್ಭಗಳು ಇದಿರಾದರೂ, ನಿಮ್ಮಲ್ಲೇ ಅದು ಕಿಂಚಿತ್ ಹಣವಿಲ್ಲವಾದರೆ ಅವುಗಳು ಸಾರ್ಥಕವಾಗಲಾರವು. ಆದುದರಿಂದ ಒಂದು ಸೇವಿಂಗ್ಸ್ ಬೇಂಕ್ ಖಾತೆಯಲ್ಲಿರುವ ಅಲ್ಪ ಸ್ವಲ್ಪ ಹಣವಾದರೂ ಬೇಗನೇ ಅದು ದೊಡ್ಡ ಪ್ರಮಾಣದಲ್ಲಿ ಶೇಖರಿಸಲ್ಪಟ್ಟು ನಿಮ್ಮ ಜೀವನದ ನಿಧಿಯಾಗಿ ಪರಿಣಮಿಸುವದು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್
ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ.
The Canara Industrial &
Banking Syndicate Limited.
Estd: 1925 H. O: **UDIPI**



ಹಿತ ದರದಲ್ಲಿ
ಚಲೋ ಗಡಿಯಾರಗಳೂ
ಟೈಂಪೀಸುಗಳೂ
ದೊರೆಯುವವು.
ಇವುಗಳಿಗೆ ಬರೆಯಿರಿ:
MUBARAK & CO
Watch & Clock
Specialists,
MADRAS 3
ಮುಬಾರಕ್ ಎಂಡ್ ಕೋ
ವಾಚ್ ಎಂಡ್ ಕ್ಲಾಕ್
ಸ್ಪೆಷಲಿಸ್ಟ್ಸ್,
ಮದ್ರಾಸು ೩.

ಒಡೆದು ದುರ್ಬಲ

ಆಂಧ್ರ ಪ್ರಾಂತ ನಿರ್ಮಾಣದ ಬಗ್ಗೆ ಸ್ಪಷ್ಟೀಕರಣ

ಒಂದು ಮಹಾ ಯೋಜನೆ

ಬಹಳ ಸಮಯದಿಂದ ನಿರೀಕ್ಷಿಸುತ್ತಿದ್ದ ಪಂಚವಾರ್ಷಿಕ ಯೋಜನೆಯ ಅಂತಿಮ ವರದಿಯನ್ನು ಇದೀಗ ಪ್ರಕಟಗೊಳಿಸಿರುವುದರಿಂದ, ರಾಷ್ಟ್ರದ ಲಕ್ಷ್ಯವೆಲ್ಲ ಅತ್ತ ವೇದಿಸಲ್ಪಟ್ಟಿದೆ ಎಂದರೆ ಸಲ್ಲುವುದು. ಭಾರತದಂಥ ಉಪಖಂಡವು ಸರ್ವಾಂಗೀಣ ಏಳಿಗೆಯನ್ನು ಹೊಂದಬೇಕೆಂದು ಬಯಸಿ ಈ ಯೋಜನೆಯನ್ನು ತಯಾರಿಸಿರುವುದರಿಂದ, ಸ್ವಾಭಾವಿಕವಾಗಿ ಅದರ ಮಹತ್ವ ಹಿರಿದಿದ್ದಂತೆ ಗಾತ್ರವೂ ದೊಡ್ಡದೆನಿಸಿದೆ. ಜವಾಹರಲಾಲ ನೆಹರೂ ಯೋಜನಾ ಆಯೋಗದ ಅಧ್ಯಕ್ಷರೆಂದು ಇದಕ್ಕೆ ಸಹಿ ಹಾಕಿದ ಬೆನ್ನಲ್ಲಿಯೇ ಸೈಕ್ಲೋಸ್ಟಾಯಿಲ ಪ್ರತಿಗಳನ್ನು ಸಿದ್ಧಪಡಿಸಿ, ಅವುಗಳನ್ನು ಲೋಕಸಭೆಯಲ್ಲಿಯೂ ರಾಜ್ಯ ಪರಿಷತ್ತಿನಲ್ಲಿಯೂ ಏಕ ಕಾಲಕ್ಕೆ ಸಾದರಪಡಿಸಿದರು. ಕಳೆದ ವರ್ಷ ಪ್ರಕಟವಾದ ಯೋಜನೆಯ ಕರಡಿಗಿಂತ ಈಗಿನ ಯೋಜನೆಯು ತೋರಿಸುವ ವೆಚ್ಚವು ಹೆಚ್ಚಿರುವಂತೆ, ಕೆಲವೊಂದು ಹೊಸ ಯೋಜನೆಗಳು ಸೇರಿಸಲ್ಪಟ್ಟಿವೆಯೆಂಬುದೂ ಗಮನಾರ್ಹವಿದೆ. ಯೋಜನೆಯಲ್ಲಿ ರೂಪಿತವಾದ ಅಂಶಗಳು ಅಚ್ಚಳಿಯದ ಶಿಲಾಶಾಸನವಾಗಲಾರವೆಂದೂ, ಪರಿಸ್ಥಿತಿಯನ್ನು ಹೊಂದಿಕೊಂಡು ಆಗಿಂದಾಗ್ಗೆ ಅವುಗಳನ್ನು ಪುನರ್ಘಟಿಸುವುದು ಅನಿವಾರ್ಯವೆಂದೂ ನಾವು ಸಾಮಾನ್ಯವಾಗಿ ಊಹಿಸಬಹುದಾಗಿದೆ. ಇಷ್ಟರವರೆಗೆ ಇಂಥ ಮಹಾ ಪ್ರಯೋಗವನ್ನು ಎಂದಿಗೂ ಭಾರತವು ಕೈಗೊಂಡಿರಲಿಲ್ಲ. ಅದುದರಿಂದ ಪ್ರಥಮಾನುಭವದ ಕಾಲಕ್ಕೆ ಅದಕ್ಕೆ ತುಂಬ ತೊಡಕುಗಳನ್ನು ಇದಿರಿಸಬೇಕಾಗಿ ಬಂದೀತು. ಅಂಥ ಸಮಯದಲ್ಲೆಲ್ಲ ಕೈಕಾಲು ಕಳೆದುಕೊಂಡು ಕಂಗಾಲಾಗುವ ಬದಲು, ಪರಿಸ್ಥಿತಿಯ ಬೇಡಿಕೆಯನ್ನು ಮನ್ನಿಸಿ ಮುನ್ನಡೆಯುವುದು ಇಷ್ಟವಿದೆ. ಪ್ರಧಾನಿ ನೆಹರೂ ಕೂಡ ಇದೇ ಅಂಶವನ್ನು ಒತ್ತಿ ಹೇಳಿರುವರು. ಜಗತ್ತಿನಲ್ಲಿ ಯಾವುದೇ ವಸ್ತುವು ಪರಿಪೂರ್ಣವೆಂದೆನಿಸಿಕೊಳ್ಳುವಂತಿಲ್ಲ ಈ ದೃಷ್ಟಿಯಿಂದ ಪ್ರಕೃತದ ವರದಿ ಕೂಡ ಬದಲಾಗುವುದು ಅನಿವಾರ್ಯ.

ಕಾರ್ಯೋತ್ಸಾಹದ ಅಗತ್ಯ

ಲೋಕಸಭೆಯು ಸೋಮವಾರದಿಂದ ಮೂರು ದಿನಗಳವರೆಗೆ ಮತ್ತು ರಾಜ್ಯ ಪರಿಷತ್ತು ಮಂಗಳವಾರದಿಂದ ಎರಡು ದಿನಗಳವರೆಗೆ ಪಂಚವಾರ್ಷಿಕ ಯೋಜನೆಯ ಬಗ್ಗೆ ಚರ್ಚೆ ನಡೆಸಬೇಕೆಂದು ಗೊತ್ತಾಗಿತ್ತು. ಸಾಮಾನ್ಯವಾಗಿ ಸದಸ್ಯರು ಇದಕ್ಕೆ ತೋರಿಸಿದ ಪ್ರತಿಕ್ರಿಯೆಯು ಸ್ವಾಗತಾರ್ಹವಿತ್ತೆಂದು ಹೇಳಬಹುದು. ಕೆಲವೊಂದು ವಿಶಿಷ್ಟ ಸಮಸ್ಯೆಗಳನ್ನು, ಯೋಜನಾ ಆಯೋಗ ಪರಿಶೀಲಿಸಲಿಲ್ಲವೆಂದು ದೂರಿದವರಿದ್ದರೂ ಅವರ ಸ್ವರಕ್ಕೆ ಭಾರ ಬರಲಿಲ್ಲ. ನಿರುದ್ಯೋಗವನ್ನು ನಿರ್ಮೂಲವಾಡುವ ಕುರಿತು ಯೋಜನೆಯು ಆಶಾದಾಯಕ ವಾತಾವರಣವನ್ನು ಉಂಟುಮಾಡಿಲ್ಲವೆಂದು ಒಂದು ಆಕ್ಷೇಪ. ಹಾಗೆಯೇ ವಿದೇಶೀ ನೆರವನ್ನು ಅಪೇಕ್ಷಿಸಿದರೂ ಅದು ತೀರ ಅನಿಶ್ಚಿತ ಪರಿಸ್ಥಿತಿಯನ್ನು ನಿರ್ಮಿಸಿದೆ ಎಂದು ಇನ್ನೊಂದು ಆಕ್ಷೇಪ. ಇವುಗಳನ್ನೆಲ್ಲ ಮೀರಿ ನಿಲ್ಲುವಂಥ ಕಾರ್ಯೋತ್ಸಾಹ ಪಂಚವಾರ್ಷಿಕ ಯೋಜನೆಯಿಂದ ಉಂಟಾಗಿದೆ ಎಂಬಲ್ಲಿ ಪ್ರತಿಮಾತಿಲ್ಲ. ರಾಷ್ಟ್ರಾಭ್ಯುದಯವೆಂಬ ಏಕೋದ್ದೇಶದಿಂದ ಸಿದ್ಧಪಡಿಸಿ ಈ ಮಹಾಯೋಜನೆಯನ್ನು ಕಾರ್ಯರೂಪಕ್ಕೆ ಇಳಿಸಲಿಕ್ಕೆ ನಾವು ಮುನ್ನಡೆಯಬೇಕೆಂಬುದು ನಿರ್ವಿವಾದ. ಸಾಮಾನ್ಯ ಜನರ . ಈ ಕುರಿತು ಸರಿಯಾದ ತಿಳಿವಳಿಕೆ ಹಾಗೂ ಕುತೂಹಲ ಉಂಟಾಗುವಂತೆ ಸುಶಿಕ್ಷಿತ ಜನರು ಪ್ರಯತ್ನಿಸಬೇಕು. ಸರಕಾರದವರೂ ಕೆಲವು ಹಸ್ತಪ್ರತಿಗಳನ್ನು ಪ್ರಕಟಿಸುವ ವಿಚಾರದಲ್ಲಿರುವರೆಂದು ತಿಳಿದು ಬಂದಿದೆ. ಭರದಿಂದ ಪ್ರಚಾರಕಾರ್ಯ ನಡೆದಂತೆ ಕಾರ್ಯೋತ್ಸಾಹವೂ ಉಂಟಾಗಲಿ ಎಂದು ನಾವು ಹಾರೈಸಬಹುದು.

ಆಂಧ್ರದ ಪ್ರಶ್ನೆ

ಇದಕ್ಕೆ ಮುಂಚೆ ಪಾರ್ಲಿಮೆಂಟಿನ ಎರಡೂ ಸಭೆಗಳಲ್ಲಿ ಆಂಧ್ರ ಪ್ರಾಂತರಚನೆಯ ಬಗ್ಗೆ ನಿಲುವಳಿ ಸೂಚನೆಗಳು ಮಂಡಿಸಲ್ಪಟ್ಟಿದ್ದವು. ಆಂಧ್ರದ ಜಿಲ್ಲೆಗಳು ಸಮಾವೇಶಗೊಂಡಿರುವ ಮದ್ರಾಸದಲ್ಲಿ ಕೂಡ, ಶಾಸನ ಸಭೆಯಲ್ಲಿ ನಿಲುವಳಿ ಸೂಚನೆಗಳನ್ನು ವಿರೋಧೀ ಗುಂಪಿನ ಸದಸ್ಯರು ಮಂಡಿಸಿದರು. ಪಾರ್ಲಿಮೆಂಟಿನಲ್ಲಿ ಪ್ರಧಾನಿ ನೆಹರೂರವರು ಸರಕಾರದ ಧೋರಣೆ ಏನೆಂಬುದನ್ನು ವಿವರಿಸಿ ಹೇಳಿದರು. ಅದರ ಮೇಲಿಂದ ಆಂಧ್ರ ಪ್ರಾಂತ ರಚನಾ ಸಂಬಂಧದ ಸರಕಾರೀ ನಿಲುಮೆಯಲ್ಲಿ ವ್ಯತ್ಯಾಸವೇನೂ ಉಂಟಾಗಿಲ್ಲವೆಂದೂ ಹೇಳಬಹುದು. ಮದ್ರಾಸು ನಗರದ ಮೇಲೆ ಆಂಧ್ರರು ತಮ್ಮ ಹಕ್ಕು ಸ್ಥಾಪನೆ ಮಾಡುವುದನ್ನು ಬಿಟ್ಟುಗೊಟ್ಟರೆ ಮತ್ತು ಉಳಿದ ವಿಷಯಗಳ ಮಟ್ಟಿಗೂ ಸಾಮಾನ್ಯ ಒಡಂಬಡಿಕೆಗೆ ಬಂದರೆ ಆಗ ಆಂಧ್ರಪ್ರಾಂತ ರಚನೆ ಮಾಡಲು ಅನುಕೂಲ ವಾತಾವರಣವೇರ್ಪಟ್ಟಂತೆ ಎಂದು ತಿಳಿಯಬೇಕು. ಆದರೆ ಈಗಿರುವಂತೆ, ಆಂಧ್ರರು ಮದ್ರಾಸು ನಗರವು ಆಂಧ್ರ ಪ್ರಾಂತಕ್ಕೆ ಸೇರುವುದೇ ನ್ಯಾಯವೆಂದು ಪ್ರತಿಪಾದಿಸುತ್ತಿರುವರಲ್ಲದೆ, ಮದ್ರಾಸನ್ನು ಆಂಧ್ರ ದೇಶದ ರಾಜಧಾನಿಯನ್ನಾಗಿ ಮಾಡುವುದೂ ಅವರ ಮನೀಷೆ ಇದೆ. ಇದಕ್ಕೂ ಮಹತ್ವದ ಸಂಗತಿಯೆಂದರೆ, ಆಂಧ್ರ ಧುರೀಣರಲ್ಲಿಯೇ ಈ ಬಗ್ಗೆ ಮತಭೇದವಿದೆ. ಆಂಧ್ರ ಪ್ರಾಂತ ರಚನಾ ಪ್ರಶ್ನೆಯನ್ನು ವಿಚಾರಿಸಲು ಕೂಡಿದ್ದ ಒಂದು ಪರಿಷತ್ತು ಗೊಂದಲದಲ್ಲಿ ಕೊನೆಗೊಂಡದ್ದನ್ನು ನೋಡಿ ಹೀಗೆ ಹೇಳಬೇಕಾಗಿದೆ. ಆಂಧ್ರ ಕೇಸರಿ ಎನಿಸಿದ ಪ್ರಕಾಶಮರು ಮದ್ರಾಸವು ದಿಲ್ಲಿಯಂತೆ ಚೀಫ ಕಮಿಶನರ ಅಧಿಕಾರಕ್ಕೆ ಸೇರಿದ ಕವರ್ನದ ರಾಜ್ಯವಾಗಿ ಉಳಿಯಲಿ ಎಂದು ಹೇಳುತ್ತಾರೆ. ಆದರೆ ರಾಜಾಜಿಯಂಥವರು ತಮಿಳು ಬಹುಸಂಖ್ಯಾಕರಿರುವ ಮದ್ರಾಸ ನಗರದ ಸುದ್ದಿಯೇ ಆಂಧ್ರರಿಗೆ ಬೇಡ ಎನ್ನುತ್ತಾರೆ.

ಸಲ್ಲದ ಒತ್ತಾಯ

ಮದ್ರಾಸು ನಗರವನ್ನು ಆಂಧ್ರಪ್ರಾಂತದ ರಾಜಧಾನಿಯಾಗಿ ಮಾಡಿ ಆಂಧ್ರ ಪ್ರಾಂತ ರಚನೆ ಮಾಡಬೇಕೆಂದು ಆಮರಣ ಉಪವಾಸ ನಿರತರಾದ ಶ್ರೀ ರಾಮುಲು ಅವರ ಬಗ್ಗೆ ವಿಸಂಚನೆಯನ್ನು ವ್ಯಕ್ತಮಾಡುತ್ತ ನಿಲುವಳಿ ಸೂಚನೆಯನ್ನು ತರಲಾಗಿತ್ತು. ನೆಹರೂರವರು ಶ್ರೀಮೂರ್ತಿಗಳ ವರದಿಯನ್ನು ಒಪ್ಪಿಕೊಂಡು ಹೋದರೆ ಮಾತ್ರ ಆಂಧ್ರಪ್ರಾಂತರಚನೆ ಸುಲಭವೆಂದು ಹೇಳಿದ್ದಲ್ಲದೆ, ರಾಜಕೀಯ ಉದ್ದೇಶ ಸಾಧನೆಗಾಗಿ ವ್ಯಕ್ತಿಯು ಉಪವಾಸವನ್ನು ತೊಡಗಿ ಒತ್ತಾಯವನ್ನು ಹೇರುವುದು ಪ್ರಜಾಪ್ರಭುತ್ವ ತತ್ವಕ್ಕೆ ಅಸಂಗತವಾದುದೆಂಬ ಸಂಗತಿಯನ್ನು ಸೂಚಿಸಿದರು. ತಾನು ಮಹತ್ವದ್ದೆಂದು ಪ್ರಾಮಾಣಿಕವಾಗಿ ನಂಬಿದ ಉದ್ದೇಶಸಾಧನೆಗೆ ಲಭ್ಯವಿದ್ದ ಎಲ್ಲ ಉಪಾಯಗಳನ್ನೂ ಕೈಗೊಳ್ಳುವುದು ವ್ಯಕ್ತಿಯ ನಿಷ್ಠೆಗೆ ಅನುಗುಣವಾಗಿದೆ ಎಂದು ಇಟ್ಟುಕೊಂಡರೂ ಕೂಡ--ರಾಜಕೀಯ ಸ್ವರೂಪದ ಬದಲಾವಣೆಯನ್ನು ತರಲು ಒತ್ತಾಯಿಸುವ ರೀತಿಯಲ್ಲಿ ಉಪವಾಸಾದಿಗಳನ್ನು ಮೊರೆಹೊಕ್ಕರೆ ಅದು ಪ್ರಜಾಸತ್ತಾತ್ಮಕವಾದ ರಾಜ್ಯ ಪದ್ಧತಿಗೆ ಗಂಡಾಂತರವನ್ನು ತಂದೊಡ್ಡುವುದು ನಿಶ್ಚಯ. ಒಬ್ಬ ವ್ಯಕ್ತಿಯ ಜೀವಕ್ಕೆ ಬೆಲೆ ಇಲ್ಲವೆಂಬ ಪ್ರಶ್ನೆಗಿಂತಲೂ ಪ್ರಜಾಪ್ರಭುತ್ವ ಪದ್ಧತಿಯನ್ನು ಬುಡ ಮೇಲುಮಾಡಲೆಳಸುವುದು ಸಮವೆ ಎಂಬ ಸಮಸ್ಯೆ ಮಹತ್ವ ಪಡೆಯುತ್ತದೆ. ಮದ್ರಾಸು ಶಾಸನ ಸಭೆಯಲ್ಲಿ ರಾಜಗೋಪಾಲಾಚಾರಿಯವರು ನಿಲುವಳಿ ಸೂಚನೆಯನ್ನು ಬಹಳ ಸರಳ—ಸುಲಭವಾದ ರೀತಿಯಲ್ಲಿ ವಿರೋಧಿಸಿದರು. ಸದಸ್ಯರ ಭಾವನೆಗಳೆಲ್ಲವನ್ನೂ ಹೃದಯಂಗಮ ಮಾಡಿಕೊಂಡಿರುವ ರಾಜಾಜಿ ಬಾರಿಬಾರಿಗೂ ಆಂಧ್ರ ಪ್ರಾಂತ ರಚನೆಯ ಬಗ್ಗೆ ಸ್ಪಷ್ಟೀಕರಣವನ್ನು ಕೊಟ್ಟು ನೋಡಿರಬೇಕು. ಇದಕ್ಕೆ ಅವರು ಆಂಧ್ರ ಪ್ರಾಂತ ರಚನಾ ಪ್ರಶ್ನೆ ಅವಸರದ್ದಲ್ಲವೆಂದೂ, ವ್ಯಕ್ತಿಯು ಸ್ವೇಚ್ಛೆಯಿಂದ ಉಪವಾಸ ಮಾಡಿದರೆ ಅದಕ್ಕಾಗಿ ಸರಕಾರ ಹೊಣೆಯಲ್ಲವೆಂದೂ ನಿರ್ವಿಕಾರ ಚಿತ್ತದಿಂದ ನುಡಿದರು.

ಗಂಭೀರ ಸೂಚನೆ

ನಿಲುವಳಿ ಸೂಚನೆಯನ್ನು ಮಂಡಿಸುವಲ್ಲಿ ವಿರೋಧಿ ಗುಂಪಿನ ಸದಸ್ಯರು ಬಹಳ ಕಾತರರಾಗಿ ಕೆಲಸ ಮಾಡುತ್ತಾರೆಂದು ಹೇಳಬಹುದೇನೋ! ಕ್ಷುಲ್ಲಕ ಕಾರಣಗಳಿಗಾಗಿ ಕೂಡ, ನಿಲುವಳಿ ಸೂಚನೆ ಮಂಡಿಸುವುದೇ ತರಣೋಪಾಯವೆಂದವರು ಭಾವಿಸಿದಂತಿದೆ. ಮದ್ರಾಸು ಶಾಸನ ಸಭೆಯಲ್ಲಿ ಸಭಾಧ್ಯಕ್ಷರು ಈ ಕುರಿತು ಕೆಲವು ಹಿತೋಪದೇಶಗಳನ್ನು ಹೇಳಿದ್ದರಷ್ಟೆ! ಮೊನ್ನೆ ಲೋಕಸಭೆಯಲ್ಲಿ ಉಪಾಧ್ಯಕ್ಷ ಅನಂತಶಯನಂ ಅಯ್ಯಂಗಾರರ ಬಾಯಿಂದಲೂ ನಿಲುವಳಿ ಸೂಚನೆಗಳು ಅತ್ಯಂತ ಗಂಭೀರವಾದುವುಗಳೆಂದೂ ಲಘು ವಿಷಯವೆಂದದನ್ನು ಪರಿಗಣಿಸಕೂಡದೆಂದೂ ವಿರೋಧೀ ಗುಂಪಿಗೆ ತಿಳಿಸಿ ಹೇಳುವ ಮಾತುಗಳು ಬಂದುವು. ಒಂದು ಜರ್ಮನ್ ಪತ್ರಿಕೆಯು ಬರುವ ವರ್ಷ ಪ್ರಧಾನಿ ನೆಹರೂರವರು ಇಂಗ್ಲೆಂಡಿಗೆ ಎಲಿಜಬೆಥ ರಾಣಿಯ ಪಟ್ಟಾಭಿಷೇಕ ಸಮಾರಂಭಕ್ಕೆ ಹೋದಲ್ಲಿ ರಾಣಿಗೆ ನಿಷ್ಠೆಯನ್ನು ವ್ಯಕ್ತಮಾಡುವ ಪ್ರತಿಜ್ಞೆ ಸ್ವೀಕರಿಸಲಿರುವರು

PLACE YOUR LIFE ASSURANCE WITH A COMPANY OF YOUR OWN - - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policyholders and Representatives. At whatever stage we welcome your association with the POPULAR.

The Popular Insurance Co. Ltd.

"Popular Buildings", MANGALORE—1.

ZANDU KESARI JIVAN

ಝಂಡೂ ಕೇಸರಿ ಜೀವನ

ಕೆಮ್ಮು, ನೆಗಡಿ, ರಾಜಯಕ್ಷ್ಮ, ಮಿದುಳು ನಿತ್ರಾಣ, ಅಕಾಲಿಕ ವೃದ್ಧಾಪ್ಯ, ಸರ್ವಸಾಮಾನ್ಯ ಬಲಹೀನತೆಗಳಿಗೆಲ್ಲಾ **ಕೇಸರಿ ಜೀವನವು** ಹೆಸರುವಾಸಿಯಾದದ್ದು ಅಲ್ಲದೆ ದೇಹಾರೋಗ್ಯವನ್ನು ಸಮತೂಕದಲ್ಲಿರಿಸಲು ಆದರ್ಶ ಟೊನಿಕ್ ಆಹಾರವಾಗಿದೆ 1 ರಾತ್ಲ: ರೂ. 6-8-0 ¼ ರಾತ್ಲ: ರೂ 1-14-0

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ ಎಂಡ್ ಡ್ರಗ್ಗಿಸ್ಟ್ಸ, ಉಡುಪಿ
2 ಶ್ರೀ ವಿ ವಿ ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್ ಎಸ್ ಶರ್ಮ, ಪಜೂರು ರಸ್ತೆ ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರ ಶರತ್ತುಗಳಿಗೆ ಬರೆಯಿರಿ.

DAMODAR & CO.,

Nainiappa Naicken Street, Park Town-MADRAS 3.

ಹೊಂದುವ ವಿರೋಧ

ಕಂಡ ಹೋರಾಟದಿಂದ ಉಂಟಾದ ಅಮಿತ ಅನಾಹುತ

ಂದು ಪ್ರಕಟವಾದ ಸುದ್ದಿಯ ಆಧಾರ ಮೇಲೆ ವಿರೋಧೀ ಗುಂಪು ನಿಲುವಳಿ ಸೂಚನೆಯನ್ನು ತಂದಿತು. ಸಭಾಧುರೀಣ ೂ ಪ್ರಧಾನ ಮಂತ್ರಿಗಳೂ ಆದ ನೆಹ ೂ ತಮ್ಮೊಡನೆ ಒಂದು ಮಾತನ್ನು ಕೂ ಾ ಕೇಳದೆ, ಈ ರೀತಿ ನಿಲುವಳಿ ಸೂಚ ತಂದುದು ವಿರೋಧಿ ಗುಂಪಿನವರ ೋಣೆಗೇಡಿ ವರ್ತನೆ ಎಂದು ಭರ್ತ್ಸನೆ ಮಾಡಿದರು. ಉಪಾಧ್ಯಕ್ಷರು ಹಿವ ನುಡಿ ಯುತ್ತಾ ಪತ್ರಿಕೆಗಳಲ್ಲಿ ಬಂದ ಸುದ್ದಿಯ ತ್ಯಾಸತ್ಯತೆಯನ್ನು ತಿಳಿದುಕೊಳ್ಳದೆ ನಿ ುವಳಿ ಸೂಚನೆಯಂಥ ಗಂಭೀರ ವಿಷ ಯಕ್ಕೆ ಮನಸ್ಸು ಕೊಡುವುದು ಸರಿಯಲ್ಲ ಂದರು.

ಐಕ್ಯರಂಗದಲ್ಲಿ ಸ್ಥೈರ್ಯ

ಮದ್ರಾಸಿನಲ್ಲಿ ವಿರೋಧಿ ಗುಂಪುಗಳು ನೈತಿಕ ರೀತಿಯಲ್ಲಿ ಸಂಘಟನೆಗೆ ತೊಡ ದ್ದಾಗಲೇ, ಅವುಗಳ ಭವಿಷ್ಯವೇನಾದೀ ತೆಂದು ಸಾಮಾನ್ಯವಾಗಿ ಎಲ್ಲರೂ ಊಹಿಸಿದ್ದರು. ಪ್ರತ್ಯಪ್ರತ್ಯೇಕವಾದ ತತ್ವಹಾಗೂ ಚಾರ ಪ್ರಣಾಳಿಯನ್ನಿಟ್ಟುಕೊಂಡ ಹಲವು ಪಕ್ಷಗಳೂ ಕೆಲವು ಸ್ವತಂತ್ರ ಸದಸ್ಯರೂ ಕೂಡಿ ರಚಿಸಿದ ಸಂಯುಕ್ತ ಪ್ರಜಾಸತ್ತಾತ್ಮಕ ರಂಗ ಒಂದಲ್ಲ ಒಂದು ದಿನ ಮುರಿದು ಬೀಳುವುದೇ ನಿಶ್ಚಯವೆಂದು ಆಗಲೇ ಊಹಿಸಿದ್ದೆವು. ಈಗ ನಡೆದ ಘಟನೆಗಳು ಈ ಮಾತಿಗೆ ಪುಷ್ಟಿಕೊಡುತ್ತವೆ. ಪ್ರಜಾ-ಸೋಶಲಿಸ್ಟ ಪಕ್ಷ ನಿರ್ಮಾಣದ ಬೆನ್ನಲ್ಲಿಯೇ ತೊಡಗಿದ ಬಿಕ್ಕಟ್ಟು, ಪ್ರಜಾಸತ್ತಾತ್ಮಕ ರಂಗದ ಬಲವನ್ನು ಕ್ಷೀಣಿಸಿದೆ. ಕಮ್ಯೂನಿಸ್ಟರೊಡನೆ ಸೇರಿ ಬೆರೆಯಲು ಸಿದ್ಧರಿಲ್ಲದ ಸೋಶಲಿಸ್ಟರೊಡನೆ, ಕಮ್ಯೂನಿಸ್ಟರೊಡನೆ ಅನೈತಿಕ ಸ್ನೇಹವನ್ನು ಬೆಳೆಸಿಕೊಂಡ ಪ್ರಜಾಪಕ್ಷವು ಐಕ್ಯಗೊಂಡ ಕಾರಣ- ಕಮ್ಯೂನಿಸ್ಟರಿಗೆ ಕಹಿ ಎನಿಸಿತ್ತು. ಈ ಕಹಿ ಹೆಚ್ಚುವುದಕ್ಕೆ ಪ್ರಕಾಶಮರು ಕಮ್ಯೂನಿಸ್ಟ ಧುರೀಣ ಅರಿತ್ಯನ್ನರನ್ನು ಹೊರದಬ್ಬಬೇಕೆಂದು ಕೇಳಿದ್ದು ಆಜ್ಯಾಹುತಿಯ ಕೆಲಸ ಮಾಡಿತು. ಕಮ್ಯೂನಿಸ್ಟ ಸದಸ್ಯರು ಪ್ರಕಾಶಮರ ಕೇಳಿಕೆಗೆ ಒಪ್ಪದಿರಲು ಪ್ರಕಾಶಮರು ಸಂಯುಕ್ತ ಪ್ರಜಾ ಸತ್ತಾತ್ಮಕ ರಂಗದಿಂದ ಹೊರಬಿದ್ದರು. ಹೀಗೆ ಬಲಹೀನವಾದ ವಿರೋಧಿ ಗುಂಪಿನಿಂದ ತಮಿಳು ನಾಡು ಕ್ರಮಿಕ ಪಕ್ಷವೂ ಸಿಡಿದುಬಂದಿದೆ. ಪ್ರಕಾಶಮರ ಕೃಪಾಪೋಷಿತವಾದ ಪ್ರಜಾ ಸೋಶಲಿಸ್ಟ ಪಕ್ಷ ಮತ್ತಿತರ ಕೆಲವು ಗುಂಪುಗಳು ಈಗ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟವೆಂಬ ಹೊಸ ಐಕ್ಯರಂಗವನ್ನು ನಿರ್ಮಿಸಿರುವರು. ಹೀಗೆ ವಿರೋಧಿ ಗುಂಪು ತನ್ನ ಐಕ್ಯವನ್ನು ಶಾಸನ ಸಭೆಯ ಮೇಲಿನ ವರ್ಚಸ್ಸನ್ನೂ ಕಳೆದುಕೊಂಡರೂ ಸಹ ಕಾಂಗ್ರೆಸಿಗರು ಸಂತೋಷ ಪಡುವಂತಿಲ್ಲ ಎಂದು ರಾಜಾಜಿ ಹೇಳಿರುವುದು ಮಾರ್ಮಿಕವಾಗಿದೆ. ಕಾಂಗ್ರೆಸು ನಿಶ್ಚಿಂತೆಯಿಂದ ಕಳಿತರೆ, ಕೆಲಸವಾಗದೆಂದೂ ಜನತೆಯ ಪ್ರೀತಿ ವಿಶ್ವಾಸಗಳು ಅದಕ್ಕೆ ಹಿಂದೆಲ್ಲಕ್ಕಿಂತಲೂ ಇಂದು ಹೆಚ್ಚಬೇಕೆಂದೂ ಸೂಚಿಸುವುದು ರಾಜಾಜಿಯ ಉದ್ದೇಶ.

ಕೊಳೆ ನಿರ್ಮೂಲ ಹೊಂದಲಿ

ಈ ಮಾತನ್ನು ಕಾಂಗ್ರೆಸಾಧ್ಯಕ್ಷರಾದ ನೆಹರೂ ಹತ್ತು ಕೆಲವು ಬಾರಿ ಒತ್ತಿಯೊತ್ತಿ ಹೇಳಿರುವರು. ಕಾಂಗ್ರೆಸಿನಲ್ಲಿ ಸತ್ವ ತುಂಬ ಬೇಕು: ಶಕ್ತಿಯುತವಾದ ಸಂಸ್ಥೆಯಾಗಿ ಕಾಂಗ್ರೆಸು ಜನತೆಯ ಹೃದಯದಲ್ಲಿ ಸ್ಥಾನಾಪನ್ನವಾಗಬೇಕು ಎಂದು ನೆಹರೂರ ಆಂತರಿಕ ಅಭಿಲಾಷೆ. ಆದರೆ ಈಚೆಗೆ ಅವರ ಕಡೆಗೆ ಕಾಂಗ್ರೆಸು ಜನರ ಅಸಭ್ಯ ವರ್ತನೆಯ ಕುರಿತು ಅಸಂಖ್ಯ ದೂರುಗಳು ಬಂದಿರುತ್ತವೆ. ಮುಂಬರುವ ಹೈದರಾಬಾದು ಕಾಂಗ್ರೆಸು ಅಧಿವೇಶನಕ್ಕೆ ಪ್ರತಿನಿಧಿಗಳನ್ನು ಆರಿಸುವಲ್ಲಿ ಸುಳ್ಳು ಸುಳ್ಳೇ ಸದಸ್ಯರನ್ನು ನೊಂದಾಯಿಸಲಾಗಿದೆ ಎಂದು ಬಿಹಾರದಿಂದ ಬಂದ ದೂರಿನಿಂದ ನೆಹರೂ ವಿವಂಚನೆಗೆ ಒಳಗಾಗಿರುವರು. ಮೋಸ ವಂಚನೆಗಳನ್ನು ತಾನು ಸಹಿಸುವಂತಿಲ್ಲವೆಂದೂ ಕಾಂಗ್ರೆಸಿನ ಧವಳ ಕೀರ್ತಿಗೆ ಕಲಂಕ ಪ್ರಾಯವಾದ ಯಾವುದೇ ವಾಮಾಚಾರವನ್ನು ನಿರ್ದಾಕ್ಷಿಣ್ಯವಾಗಿ ಸದೆಬಡೆಯಲಾಗುವುದೆಂದೂ ಅವರು ಗುಡುಗುತ್ತಾರೆ. ಆದರೆ ಈ ಗುಡುಗು ಮಿಂಚುಗಳಿಂದ ಮಳೆಯಾದೀತೆಂದು ಯಾರೂ ಆಶೆಪಟ್ಟುಕೊಳ್ಳುವಂತಿಲ್ಲ. ಕಾಂಗ್ರೆಸಿನಲ್ಲಿ ಒಳಗಿಂದೊಳಗೇ ಎಷ್ಟರ ಮಟ್ಟಿಗೆ ಕೊಳೆ ಹುಟ್ಟಿಕೊಂಡಿದೆ ಎಂದರೆ, ಕಾಂಗ್ರೆಸಿಗರಲ್ಲಿ ಪ್ರತಿಯೊಬ್ಬರೂ ತಾವು ಕೈಗೊಂಡ ಪ್ರತಿಜ್ಞೆಯೊಡನೆ ಆತ್ಮ ಸಾಕ್ಷಿಯನ್ನು ತೂಗಿ ನೋಡುವ ಪರಿಸ್ಥಿತಿ ಇದೆ. ಬಿಹಾರ ಒಂದೇ ಈ ರೀತಿಯ ಅಕ್ರಮ ವರ್ತನೆ ಪ್ರಚಲಿತವಿರುವ ಪ್ರದೇಶವೆಂದೂಹಿಸುವಂತಿಲ್ಲ. ಹಾಗೆಯೇ ನೆಹರೂ ಬಾಯಿ ಮಾತಿನಿಂದ ಬಿರುನುಡಿಗಳನ್ನು ಆಡಿದಷ್ಟಕ್ಕೆ ವಿಷಕ್ತವಾದ ಕಾಂಗ್ರೆಸಿನ ಶರೀರ ಪರಿಶುದ್ಧಗೊಂಡು ಪುನೀತವಾಗದು. ನೆಹರೂರಂಥ ಮಹಾ ಮಾನವರ ಆದರ್ಶವನ್ನು ಮೆಚ್ಚುವಂತೆ ಜನ ಅವರ ಮಾತಿಗೆ ಬೆಲೆಯನ್ನೂ ಕೊಡಬೇಕು. ನೆಹರೂ ಮರಳಿ ಆರನೆಯ ಸಲ ಕಾಂಗ್ರೆಸಾಧ್ಯಕ್ಷರಾಗಿ ಆಯ್ಕೆ ಹೊಂದಿರುವರು. ಇಂದಿನ ವಿಷಮ ವಾತಾವರಣದಲ್ಲಿ ಅವರಿಂದ ಯೋಗ್ಯ ಮಾರ್ಗದರ್ಶನ ಸಿಗಲೆಂದು ಹಾರೈಸುವುದರ ಜೊತೆಗೆ ಕಾಂಗ್ರೆಸಿಗರು ಹೃದಯ ಪರೀಕ್ಷೆ ಮಾಡಿಕೊಂಡು ಸನ್ಮಾರ್ಗವಲಂಬಿಗಳಾಗಲಿ ಎಂದು ಅಪೇಕ್ಷಿಸುವುದೂ ನ್ಯಾಯ.

ನಿ [illegible]

ಸಿಗರದ ಕೇಳಿಕೆ (ದೇವರ ಮುನಿಸೆಂದರೂ ಸರಿಯೆ) ಒಲಿಸೇಕವ ದುರ್ಧರ ಪ್ರಸಂಗ ಒಂದಾಗಲೆಲ್ಲ ಮನುಷ್ಯ ಹತ [illegible] ಗುತ್ತಾನೆ. ಮಳೆಯಿಲ್ಲವೆಂದು ಜನರ ಬೊಬ್ಬಿಡುತ್ತಿದ್ದರು. ಪೈರು ಒಣಗಿಹೋಯಿತು. ಅನಾವೃಷ್ಟಿಯಿಂದ [illegible] ಕಂಗೆಟ್ಟರು. ಅಂಥ ಸಮಯದಲ್ಲಿ ಬಂಗಾಳಕೊಲ್ಲಿಯಿಂದ ಬೀಸಿದ ಮಾರುತ [illegible] ತಂಜಾವೂರು ಹಾಗೂ ತಿರುಚಿನಾಪಳ್ಳಿ ಜಿಲ್ಲೆಗಳಿಗೆ ಅಪಾರ ಹಾನಿಯುಂಟುಮಾಡಿದೆ. ಚಂಡಮಾರುತವು ಮಳೆಯನ್ನೂ ತಂದುದರಿಂದ ಐದಾರು ವರ್ಷಗಳಿಂದ ಬತ್ತಿ ಹೋಗಿದ್ದ ಕೆರೆ ಕುಂಟೆಗಳು ನೀರಿನಿಂದ ತುಂಬಿದವೆಂಬುದು ಸಂತೋಷ. ರಾಜಾಜಿ ಇದನ್ನು ನೆನೆದೇ ನಮ್ಮೆಲ್ಲರ ಕಲ್ಪನೆಗೆ ವಿಹಾರಿದ ರೀತಿಯಲ್ಲಿ ಕೆಲಸ ಮಾಡುವ [illegible]ಯನ್ನು ಭಕ್ತಿಯಿಂದ ಪೂಜಿಸಿರಿ ಎಂದು ಪ್ರಾರ್ಥಿಸಿದರು. ಹೀಗೆ ದೇವಪೂಜೆಯನ್ನು ಮಾಡಬೇಕೆಂಬುದು ಭಾರತೀಯ ಪರಂಪರೆಗೆ ಒಪ್ಪಿಗೆಯಾದದ್ದೇ ಸೈ. ದೇವರ ಮುನಿಸನ್ನು ಶಮನ ಮಾಡಲು ಹಿಂದಿನ ಕಾಲದಲ್ಲಿ ಯಜ್ಞಯಾಗಾದಿಗಳನ್ನೂ ದಾನ ಧರ್ಮಗಳನ್ನೂ ಮಾಡುತ್ತಿದ್ದರು. ಇಂದು ಭೌತಿಕ ಸುಖಾಕಾಂಕ್ಷೆಯ ಬಗ್ಗೆ ಜಿಜ್ಞಾಸೆ ಹೆಚ್ಚಿದೆ. ಅವರ ಆಧ್ಯಾತ್ಮಿಕ ದೃಷ್ಟಿಯು ತೇಜಸ್ಸನ್ನು ಕಳೆದುಕೊಂಡಿದೆ. ಹೀಗೆ ಕಣ್ಣು ಮಾಂದ್ಯಗೊಂಡವರೆಲ್ಲ ಅದನ್ನು [illegible] ಹೊಂದುತ್ತಾರೆ. ತಂಜಾವೂರು ಹಾಗೂ ತಿರುಚಿನಾಪಳ್ಳಿ [illegible] ನಾಶಗೊಂಡಿದೆ. [illegible] ಸಮುದ್ರ ಮೇರೆ ಮೀರಿ ಉಕ್ಕೇರುತ್ತ ಬಂದಿತು. ಸಾರಿಗೆ ಸಂಪರ್ಕದ ಮಾರ್ಗಗಳೆಲ್ಲ ತುಂಡಾದುವು. ಈಗ ಈ ಸಂಕಷ್ಟರನ್ನು ಸಂತೈಸುವ [illegible] ಜವಾಬ್ದಾರಿಕೆ ಸರಕಾರದ ಮೇಲೂ ಜನತೆಯ ಮೇಲೂ ಸಮವಾಗಿ ಬಿದ್ದಿದೆ. ಪರಿಹಾರನಿಧಿಯೊಂದನ್ನು ತೆರೆದು [illegible] ಉದಾರತ್ವವನ್ನು ಜನತೆಯನ್ನು ಕರೆದಿರುವರು.

BBA/TT/L07/K


ನಂಬಲಿಕ್ಕೆ ನನಗೆ ಸುಲಭ ಸಾಧ್ಯವಾಗಲಿಲ್ಲ!

ಆದರೆ...

ಸ್ವಲ್ಪವಾಗಿ ಹೊಟ್ಟೆ ಕಟ್ಟಿಸಿಟ [illegible] ತಯಾರಿಕೆಯ [illegible] ಚಹವು – ಅದು ಬ್ರೂಕ್ ಬಾಂಡ್ [illegible] [illegible] ದಳು. [illegible]

ಇಂದಿನ ದಿನವೇ [illegible] ಬಾಂಡ್ [illegible] ಅಂದಿನವರೆಗೆ [illegible]

[illegible] ಬ್ರೂಕ್ ಬಾಂಡ್ [illegible] ಹೇಳಿದ್ದು ಎಷ್ಟು ನಿಜವೆಂಬುದನ್ನು ಸಮರ್ಥಿಸಿತೆ

ಬ್ರೂಕ್ ಬಾಂಡ್ ಚಹಾ

ಭಾರತದ ಅತ್ಯುತ್ತಮ ತೋಟಗಳಲ್ಲಿ [illegible] ಅತ್ಯುತ್ತಮ ಚಹಾ

SR
Which will give you
Entire Satisfaction

The Canara Banking Corporation Limited.
ಸುಲಭ ಶರ್ತಗಳಿದ್ದು, ಸಾಲಿಯಾನ್ ಸೇಕಡಾ 4ರಂತೆ ಬಡ್ಡಿಗಳಿಸುವ ನಮ್ಮ
"ಪಂಚವಾರ್ಷಿಕ ಸುವರ್ಣ ಠೇವಣಾತಿಗಳು"
ಈಗಾಗಲೇ ಎಲ್ಲಾ ಕಡೆಗಳಲ್ಲಿಯೂ ಜನಾದರಣೀಯವಾಗಿವೆ. ನೀವೂ ಕೂಡಾ ನಿಮ್ಮ ಹಣವನ್ನು ಈ ಠೇವಣಾತಿಗಳಲ್ಲಿ ಏಕೆ ವಿನಿಯೋಗಿಸಬಾರದು?
ವಿಶೇಷ ಮಾಹಿತಿಗೆ,
ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ, ಉಡುಪಿ. (ದ ಭಾರತ)

ನವಯುಗ

ಉಡುಪಿ, ಗುರುವಾರ ೧೮-೧೨-'೫೨

ಈ ದುರಂತ

ಈಗ ತಾನೆ ಒಂದಿರುವ ಶ್ರೀ ರಾಮುಲು ಅವರ ಮರಣವಾರ್ತೆಯು ನಮ್ಮೆಲ್ಲರನ್ನು ಚಕಿತಗೊಳಿಸಿದಂತೆ ಚಿಂತಿತರನ್ನಾಗಿಯೂ ಮಾಡುವುದು ನಿಶ್ಚಯ. ಆಂಧ್ರ ಪ್ರಾಂತ ರಚನೆಯ ಪ್ರಶ್ನೆಯನ್ನು ಮುಂದುಮಾಡಿ, ಶ್ರೀ ರಾಮುಲು ಆಮರಣ ಪರ್ಯಂತರವಾದ ಉಪವಾಸ ವ್ರತವನ್ನು ಅಪ್ಪಿಕೊಂಡದ್ದಲ್ಲದೆ, ತಮ್ಮ ಪ್ರಾಣವನ್ನೂ ನೀಗಿ ಧನ್ಯರಾದರು. ಯಾರೇ ಆಗಲಿ ತಮ್ಮ ಪ್ರಾಣದ ಬೆಲೆಯನ್ನೂ ಲೆಕ್ಕಿಸದ, ಅದನ್ನು ಪಣವಾಗಿಟ್ಟುಕೊಂಡು ಉದ್ದೇಶ ಸಾಧನೆಗೆ ತೊಡಗುವುದೆಂದರೆ—ಅದನ್ನು ಮಹಾ ಸಾಹಸದ ಕಾರ್ಯವೆಂದೇ ಹೇಳಬೇಕು. ಶ್ರೀ ರಾಮುಲು ಉಪವಾಸವನ್ನು ಸದುದ್ದೇಶದಿಂದ ಕೈಗೊಂಡಿದ್ದಾರೆಂಬಲ್ಲಿ ಸಂದೇಹಕ್ಕೆ ಎಡೆ ಇಲ್ಲ. ಪ್ರಧಾನಿ ನೆಹರೂ ಹೇಳುವಂತೆ, ತಮ್ಮ ದೃಢ ನಿರ್ಧಾರಕ್ಕೆ ಕೊನೆಯುಸಿರು ಇರುವವರೆಗೂ ಅಂಟಿಕೊಂಡು, ಶ್ರೀ ರಾಮುಲು ಹೊಸ ದಾಖಲೆಯನ್ನು ಸ್ಥಾಪಿಸಿದ್ದಷ್ಟೆ ಅಲ್ಲ— ಸಹೃದಯರ ಮನಸ್ಸನ್ನೆ ಸೂರೆಗೈದರು. ಆದರೆ ಪ್ರಶ್ನೆಯನ್ನು ಈಯೊಂದೇ ಮುಖದಿಂದ ನೋಡಿದರೆ ಮುಗಿಯಲಿಲ್ಲ--ಎಷ್ಟೇ ಒಳ್ಳೆಯ ಉದ್ದೇಶವನ್ನು ಇಟ್ಟುಕೊಂಡದ್ದಾದರೂ— ರಾಷ್ಟ್ರ ಕಲ್ಯಾಣವನ್ನು ಧಿಕ್ಕರಿಸುವ ದಾರ್ಷ್ಟ್ಯಕ್ಕೆ ಮನಗೊಟ್ಟಲ್ಲಿ ಸ್ವಾಭಾವಿಕವಾಗಿ ಮತಭೇದವೂ ಸಂಘರ್ಷವೂ ಉಂಟಾಗುತ್ತದೆ. ಆಂಧ್ರ ಪ್ರಾಂತ ರಚನೆಯ ಸಂಬಂಧದಲ್ಲಿ ನಡೆದುದಾದರೂ ಇದೇನೇ: ಮದ್ರಾಸು ನಗರದ ಬಗ್ಗೆ ಪಟ್ಟು ಹಿಡಿದು ಕೂತದ್ದು, ಮತ್ತಿತರ ಒಳ ಜಗಳದಿಂದಲೂ ಆಂಧ್ರ ಧುರೀಣರು ವಾತಾವರಣವನ್ನು ಅನುಕೂಲಕ್ಕೆ ತಿರುಗಿಸಿಕೊಳ್ಳುವ ಬದಲು ವಿಷಮವಾಗಿ ಪರಿವರ್ತಿಸಿದರು. ಸ್ವಾಮಿ ಸೀತಾರಾಮರ ಸತ್ಯಾಗ್ರಹ ಹಾಗೂ ಶ್ರೀ ರಾಮುಲು ಕೈಗೊಂಡ ಉಪವಾಸ ಮತ್ತು ಅದರ ದುರಂತ ಪರಿಣಾಮಗಳು, ರಾಜಕೀಯ ಸ್ವರೂಪದ ಪ್ರಶ್ನೆಯನ್ನು ವ್ಯಕ್ತಿಗತ ವರ್ಚಸ್ಸಿಗೆ ತಲೆಬಗ್ಗಿಸುವಂತೆ ಬಲಾತ್ಕರಿಸುವ ಉಪಕ್ರಮಗಳಾದುವೆಂಬುದು ಸ್ಪಷ್ಟವಿದೆ. ಪ್ರಜಾ ಪ್ರಭುತ್ವ ಪದ್ಧತಿಯಲ್ಲಿ ನಿಷ್ಠೆ ತೋರುವ ಜನತೆ, ಈ ರೀತಿಯ ಒತ್ತಾಯದ ನಿರ್ಬಂಧಕ್ಕೆ ಸರಕಾರ ಕೈಗುಡುವುದನ್ನು ಸಹಿಸುವಂತಿಲ್ಲ. ಹೀಗೆಂದ ಮಾತ್ರಕ್ಕೆ ಭಾಷಾನುಗುಣ ಪ್ರಾಂತರಚನೆಯಂಥ ಅತ್ಯಂತ ಉಪಯುಕ್ತವಾದ ಹೆಜ್ಜೆಗೆ ನಮ್ಮ ವಿರೋಧ ಇದೆಯೆಂದು ಯಾರೂ ತಿಳಿದುಕೊಳ್ಳಲಾಗದು. ಪ್ರಜಾಪ್ರಭುತ್ವ ಪದ್ಧತಿಯಂತೆ, ಜನತೆಯ ನ್ಯಾಯವಾದ ಕೋರಿಕೆಗಳನ್ನು ಸರಕಾರ ಮನ್ನಿಸಲೇ ಬೇಕು; ಮತ್ತು ಭಾಷಾನುಗುಣ ಪ್ರಾಂತ ನಿರ್ಮಾಣವು ಪ್ರಕೃತ ಅಧಿಕಾರಾರೂಢವಾದ ಕಾಂಗ್ರೆಸು ಪಕ್ಷವು ಎಂದೋ ಒಪ್ಪಿಕೊಂಡ ಸಿದ್ಧಾಂತವಾಗಿದೆ. ಭಾಷಾನುಗುಣ ಪ್ರಾಂತರಚನೆಯ ಆಂದೋಲನದ ಕುರಿತು ಕನ್ನಡಿಗರು ಸದಾ ತವಕಪಡುತ್ತಿರುವರು: ಮತ್ತು ಶಾಂತಿಯಿಂದ ಹಾಗೂ ಶೀಘ್ರದಲ್ಲಿ ಈ ಪ್ರಶ್ನೆಯು ಬಗೆಹರಿದರೆ ಸಂತೋಷವೆಂದು ಕನ್ನಡಿಗರು ಅಪೇಕ್ಷಿಸುವರು. ಹಾಗೆಂದು ಜನರ ಭಾವನೆಗಳನ್ನು ಅನಪೇಕ್ಷಿತ ರೀತಿಯಲ್ಲಿ ಉದ್ರೇಕಗೊಳಿಸಿ, ಕಲುಷಿತ ವಾತಾವರಣವುಂಟುಮಾಡುವ ನಾಮಾಚಾರಕ್ಕೆ ಸಹೃದಯರು ಪುರಸ್ಕಾರವನ್ನು ಕೊಡುವಂತಿಲ್ಲ. ಋಜುಮಾರ್ಗದಿಂದ ನಡೆದುಕೊಂಡು ಸ್ವಂತಹಾಗೂ ಸಮಷ್ಟಿಯ ಹಿತ ಸಾಧಿಸುವುದು ಭೂಷಣಪ್ರಾಯವಾಗಿದೆ. ಈ ದೃಷ್ಟಿಯಿಂದ ನೋಡಿದರೆ ಮದ್ರಾಸು ನಗರದ ಕೋರಿಕೆಯೊಂದಲ್ಲದಿರುತ್ತಿದ್ದರೆ ಮದ್ರಾಸುರಾಜ್ಯದ ತೆಲುಗು ಭಾಷೆಯಾಡುವ ನಿರ್ವಿವಾದ ಗ್ರಸ್ತಪ್ರದೇಶಗಳ ಮಟ್ಟಿಗೆ ಸೀಮಿತವಾದ ಆಂಧ್ರಪ್ರಾಂತ ಎಂದೋ ಆಗಿಹೋಗುತ್ತಿತ್ತು. ನಮ್ಮ ರಾಜ್ಯಘಟನೆಯು ಜ್ಯಾರಿಗೆ ಬರುವುದಕ್ಕೆ ಕೆಲವು ದಿನಗಳ ಮುಂಚೆಯಂತೂ ಆಂಧ್ರಪ್ರಾಂತ ನಿರ್ಮಾಣ ಆಗಿ ಹೋಯಿತೆಂಬಷ್ಟು ನಾಜೂಕು ಪರಿಸ್ಥಿತಿ ಇತ್ತು. ಆದರೆ, ಅಂದು ಏನು ಅಡ್ಡಿ ಉಪಸ್ಥಿತವಾಯಿತೋ-ಅದು ಇಂದಿನ ವರೆಗೂ ದೂರಾಗಿಲ್ಲ. ಈಗ ಕೂಡ ಸರಕಾರದ ನಿಲುವು ಹಿಂದಿನಂತೆಯೇ ಇದೆ; ಮತ್ತು ಆಂಧ್ರ ಧುರೀಣರೂ ಮೊದಲಿನಂತೆಯೇ ಕಚ್ಚಾಡುತ್ತಾರೆ. ಇಷ್ಟಿದ್ದರೂ ಕೂಡ ಕೇಂದ್ರ ಸರಕಾರವು ಈ ವಿಷಯವನ್ನು ಉಪೇಕ್ಷೆಯಿಂದ ಕಾಣುವುದು ಸಲ್ಲದೆಂದೂ ಭಾಷಾನುಗುಣ ಪ್ರಾಂತರಚನೆಯ ಪ್ರಶ್ನೆಯನ್ನು ನೆನೆಗುದಿಗೆ ಹಾಕುತ್ತಾ ನಡೆಯುವುದು ಜನತೆಯ ಸಾಮಾನ್ಯ ಆಕಾಂಕ್ಷೆಯ ಬಗ್ಗೆ ತೋರುವ ತಿರಸ್ಕಾರದಂತೆ ಎಂದೂ ಇಲ್ಲಿ ಸೂಚಿಸಬಯಸುತ್ತೇವೆ. ಮದ್ರಾಸು ಶಾಸನಸಭೆಯಲ್ಲಿ ಭಿನ್ನ ಭಿನ್ನ ಭಾಷೆಯಲ್ಲಿ ಸದಸ್ಯರು ಮಾತನಾಡುವ ಮೋಜಿನ ಪ್ರಸಂಗದ ವಾರ್ತೆ ಕೇಳಿದಂದಿನಿಂದ-ರಾಜಕೀಯ ಶ್ರೇಯಸ್ಸಿನ ದೃಷ್ಟಿಯಿಂದ ಕೂಡ ಭಾಷಾನುಗುಣ ಪ್ರಾಂತರಚನೆ ಅಗತ್ಯವೆಂದು ಸ್ವಯಂ ವ್ಯಕ್ತವಾಗುತ್ತದೆ.

ಕೊರಿಯಾದ ಕುರಿತು ಕೊನೆಗೂ ನಿರಾ

ವರ್ಣೀಯರ ಸತ್ಯಾಗ್ರಹಕ್ಕೆ ಐರೋಪ್ಯದ ಬೆಂಬಲ

ಕೊರಿಯಾ ಯುದ್ಧ ನಿಲುಗಡೆಯ ಸಂಬಂಧದಲ್ಲಿ ಇದ್ದ ತಂತ್ರಮಾತ್ರದ ಆಶೆ ಈಗ ಬಯಲಾಗಿದೆ: ಭಾರತದ ಗೌರವಾರ್ಹವಾದ ಒಡಂಬಡಿಕೆಯ ಠರಾವು ಚೀನಾದ ದೃಷ್ಟಿಗೆ ಅಮೇರಿಕೆಯ ಸೂಚನೆಯ ತತ್ಪ್ರತಿಯಂತೆ ಕಂಡಿದೆ. ಸಂಯುಕ್ತ ರಾಷ್ಟ್ರಸಂಘಕ್ಕೆ ಅದು ಒಂದು ತಂತಿ ಕಳುಹಿಸಿ, ತಾನು ಭಾರತದ ಸೂಚನೆಯನು ತಿರಸ್ಕರಿಸಿರುವುದಾಗಿ ತಿಳಿಸಿದೆ. ಯುದ್ಧ ಕೈದಿಗಳನ್ನು ಬಲಾತ್ಕಾರದಿಂದ ಬಂಧನದಲ್ಲಿಡುವುದಕ್ಕೆ ಭಾರತದ ಸೂಚನೆಯಲ್ಲಿ ಅವಕಾಶವಿದೆ ಎಂದದ. ಆರೋಪಿಸಿದೆಯಲ್ಲದೆ—ಉತ್ತರ ಕೊರಿಯಾ ಹಾಗೂ ಚೀನೀ ಸರಕಾರಗಳಿಗೆ ಪ್ರಾತಿನಿಧ್ಯವಿಲ್ಲದ ಸಭೆಯ ಯಾವ ನಿರ್ಣಯವೂ ಸಿಂಧುವಲ್ಲವೆಂದು ಸ್ಪಷ್ಟೀಕರಿಸಿದೆ.

ಐಸನ್ ಸಂದರ್ಶನ

ಚುನಾವಣೆಯ ಸಮಯ ಜನತೆಗಿತ್ತ ಆಶ್ವಾಸನದಂತೆ ಅಮೇರಿಕದ ನೂತನಾಧ್ಯಕ್ಷ ಐಸನ ಹಾವರರು ಗೌಪ್ಯ ರೀತಿಯಲ್ಲಿ ಕೊರಿಯಾ ರಣರಂಗವನ್ನು ಸಂದರ್ಶಿಸಿ ಇದೀಗ ಮರಳಿರುವರು. ಐಸನಹಾವರರ ಆಗಮನ ಹಾಗೂ ಸಂದರ್ಶನಗಳ ವ
ಮಾನವು ತಿಲಾಂಶಕೂಡ ಹತ್ತದ
ಮುಂಜಾಗರೂಕತೆ ವಹಿಸಿದ್ದರೂ ಕೂ
—ಹೇಗೋ ರಹಸ್ಯ ಸ್ಫೋಟಗೊ
ತ್ತು: ಕಮ್ಯೂನಿಸ್ಟರೆಂದು ಸಂದೇ
ಬಂದವರನ್ನೆಲ್ಲ ಬಂಧಿಸಲಾಗಿ
ಲ್ಲದೆ, ಚುನಾಯಿತ ಅಧ್ಯಕ್ಷರ ಪ್ರಾ
ರಕ್ಷಣೆಗಾಗಿ ಸೈನ್ಯವು ಹಿಂದೆಂದೂ ಇಲ್ಲ
ಷ್ಟು ಮುಂಜಾಗರೂಕತೆಯ ಕ್ರಮ
ನ್ನು ಕೈಗೊಂಡಿತ್ತು. ಐಸನಹಾವರರು
ಮ್ಮ ಸಂಚಾರದ ಪ್ರತಿಕ್ರಿಯೆಯನ್ನೇ
ಹೇಳಿಲ್ಲವಾದರೂ, ಕೊರಿಯಾ ಯುದ್ಧ
ಲ್ಲಿಸುವ ಬಗ್ಗೆಯಂತೂ ಅವರಿಗೆ ಆಸ್ಥೆ
ಳಿದಿಲ್ಲ. ಈ ಹಿಂದೆ ಪೌರ್ವಾತ್ಯ ಸೈನ್ಯ
ನಾಯಕರಾಗಿದ್ದ ಜನರಲ್ ಮೇಕಾ
ರರ ಕೂಡೆ ಇವರು ಮಾತುಕತೆ ನಡೆಸ
ರುವರೆಂದು ಸುದ್ದಿ.

ಟ್ಯುನೀಸಿಯಾ--ಮೊರೊಕ್ಕೊ

ಏಷಿಯಾ ಅರಬ ರಾಷ್ಟ್ರಗಳು ಟ್ಯು
ಸಿಯಾ ಮತ್ತು ಮೊರೊಕ್ಕೊಗಳಲ್ಲಿ ಫ್ರೆ
ಚ ಸಾಮ್ರಾಜ್ಯಶಾಹಿಯ ಆಟೋಪ ನಿ
ಬೇಕೆಂದು ಮಂಡಿಸಿದ ಠರಾವುಗಳನ
ಸಂಯುಕ್ತರಾಷ್ಟ್ರ ಸಂಘ ಮನ್ನಿಸಲಿಲ್ಲ.
ವಿಷಯದಲ್ಲಿ ನಡೆದ ಚರ್ಚೆಯಲ್ಲಿ ಫ
ನ್ಸ ಭಾಗವಹಿಸಲಿಲ್ಲ. ಸಂಯುಕ್ತ
ಷ್ಟ್ರ ಸಂಘವು ಈ ವಿಷಯದಲ್ಲಿ ಕೈಹಾ
ತಕ್ಕದ್ದಲ್ಲವೆಂದೂ, ಸಂಬಂಧಿಸಿದ ಜನ
ಪರಸ್ಪರ ವಿಚಾರ ವಿನಿಮಯದಿಂದ
ದು ಸ್ನೇಹ ನಿರ್ಧಾರಕ್ಕೆ ಬರುವುದು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

R. E. P. No 568/1952

ಮಂಗಳೂರು ಸಬ್ ಕೋರ್ಟು

S. C. S. No. 94/1952.

ಅಗ್ರಹಾರ ವಾಸುದೇವ ಪ್ರಭು—ವಾದಿ—ಅರ್ಜಿದಾರ.

ಮತ್ತು

B. ಗೋಪಾಲಕೃಷ್ಣ ಕಾಮತ್, ಟೋಳ ವೆಂಕಟ್ರಾಯ ಕಮ್ತಿರ ಮಗ. ಬಜ್ಪೆ ಕ್ ಬೊಂಬಾಯಿ ಟೀಯಾ ಟೇಫ್ ಸೇಲ್ಸ ಮೆನ್ ಆಗಿರುತ್ತಿದ್ದ, ಈಗ ಕಾರ್ಕಳ ತಾಲೂಕು ಬೋಳ ಗ್ರಾಮದಲ್ಲಿರುವವ—ಪ್ರತಿವಾದಿ—ಎದ್ರಿ.

ಸದ್ರಿ ಎದ್ರಿಗೆ B. ಗೋಪಾಲಕೃಷ್ಣ ಕಾಮತ್ ರವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ,

ಅರ್ಜಿದಾರನು ನಿಮ್ಮ ಮೇಲೆ ದಾಖಲು ಮಾಡಿದ ಮೇಲ್ಕಂಡ ಅಮಲ್ಜಾರಿಯಲ್ಲಿ ಕಾರ್ಕಳ ಡಿ. ಮು. ಕೋರ್ಟ ಕ್ರಮ ನಂಬ್ರ 479/1952ನೇ ಭೋಗ್ಯದ ರಿಡೆಂಶನ್ ದಾವೆಯ ಡಿಕ್ರಿ ವಿಧಿ ಪ್ರಕಾರ ನಿಮಗೆ ಸಲ್ಲತಕ್ಕದ್ದಾದ ಈಗ ಕೋರ್ಟ ಡಿಪೊಸಿಟ್ನಲ್ಲಿರುವ ರೂಪಾ. 200/-ನ್ನು ಜಪ್ತಿ ಅಪೇಕ್ಷಿಸಿ ಸದ್ರಿ ಅಮಲ್ಜಾರಿ ತಂದಿರುತ್ತಾನೆ, ನಿಮಗೇನಾದರೂ ಆಕ್ಷೇಪ ಇದ್ದರೆ ಇದೇ ತಾರೀಖು 23-12-1952ರಲ್ಲು ಹಗಲು ಘಂಟೆ 10ಕ್ಕೆ ಮೇಲ್ಕಂಡ ಕೋರ್ಟಿನಕ್ಕೆ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದ್ರೆ ಯೋಗ್ಯವಾಗಿ ತೀರ್ಮಾನಿಸಲ್ಪಡುವದು ಎಂಬ ಸಂಗತಿಯನ್ನು ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ತಿಳಿಸಲಾಗಿರುವದೆ.

K. V. Kamath
Advocate for Plaintiff.

Karkala, 16—12—1952.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು
ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ,
ನೋವು. ಗಾಯಗಳು, ಬಾತುಕೊಳ್ಳುವ
ಚೇಳವಿಷ ಮುಂತಾದವು, ಪಕ್ಷವಾತ, ನೋ
ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌ

Best Indian Pain Balm
Amrutanjan Depot
BOMBAY MADRAS

REGD
ದುಕಾನ
ಮತ್ತು
ನಮ್ಮಲ್ಲಿ
ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್
ಮದರಾಸು, ಬೊಂಬಾಯಿ ಮತ್ತು ಕಲ್

ರಕ್ಷಣೆಗೂ ಉಳಿತಾಯ ವ್ಯವಸ್ಥೆಗೂ
ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್.
ಸ್ಥಾಪನೆ: 1934. ಪ್ರಧಾನ ಕಚೇರಿ: ಮದ್ರಾಸು
66½ ಲಕ್ಷಕ್ಕೂ ಮಿಕ್ಕಿದ ಹೊಸ ವ್ಯವಹಾರ, **15** ಲಕ್ಷಕ್ಕೂ ಮಿಕ್ಕಿದ ಪ್ರೀಮಿಯಮ್ ಉತ್ಪತ್ತಿ, **45½** ಲಕ್ಷಕ್ಕೂ ಮಿಕ್ಕಿದ ಜೀವವಿಮಾ ನಿಧಿ, **60½** ಲಕ್ಷಕ್ಕೂ ಮಿಕ್ಕಿ ಮೂಲಧನಗಳು. ಸಾಧಾರಣ **3** ಕೋಟಿಯಷ್ಟು ಊರ್ಜಿತದಲ್ಲಿರುವ ವಹಿವಾಟು.
ಪ್ರಗತಿಪರವಾದ ಈ ಕಂಪೆನಿಯಲ್ಲಿ ಒಂದು ಪೊಲಿಸಿ ಇರುವುದು ಉತ್ತಮ ಠೇ ದಾತ ಅಂತೆಯೇ ಇದರ ಏಜನ್ಸಿ ಇರುವುದು ಚಲೋ ವ್ಯವಹಾರ ಸಾಧನ.
ಉತ್ಸಾಹಿ, ಜನಾದರಣೀಯ, ಸಮರ್ಥ ಸ್ತ್ರೀ ಪುರುಷರಿಂದ ಕಂಪೆನಿ ಪ್ರಾತಿನಿಧ್ಯ ಬಗ್ಗೆ ಅರ್ಜಿಗಳು ಸ್ವಾಗತಾರ್ಹವು. ದಯಮಾಡಿ ಬರೆಯಿರಿ:-
ಜಿ. ಆರ್ ವಾಲ್ಕೆ, ಬ್ರಾಂಚ್ ಮೆನೇಜರ್,
ದಾಯಿವಮಾರ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು [ದ. ಕ.]

ಕಸ್ತೂರಿ ಬಾ ಮೆಡಿಕಲ್ ಕಾಲೇಜ್, ಮಣಿಪಾಲ, ದ. ಕ.

ಶಂಕುಸ್ಥಾಪನೆಯ ಪ್ರಾರ್ಥನೆ

ಅಭ್ಯುದಯ ಹೊಂದಲಿ ನಮ್ಮ 'ಬಾ'ರ ಕಲಾಶಾಲೆಯಿದು ‖ ಪಲ್ಲ ‖
ದೇಶದ ರುಜಿನರೋಗ ನೀಗಿ ಬೆಳಗುತ ಜಗದಿ ‖ ಅ. ಪ. ‖

ಸಾಸಿರದೊಂಭೈನೂರ ಐವತ್ತ ಎರಡನೆಯ ।
ದಶಂಬರದ ದಿನಮದಿನ ಸೌಮ್ಯವಾರದಲೀ ‖
ಎಸಗದೀ ಶಿಲಾನ್ಯಾಸ ಶಶಿಸೂರ್ಯರಿರುವನ್ನ ।
ಮಸಗಿ ಬೆಳಗುತಲೋಕಕತಿ ಹಿತವನೆಸಗುತ್ತ ‖ ೧ ‖

ಮಾನವನ ಪರಮ ಶ್ರೇಯಾಕಾಂಕ್ಷಿ ಮಾಧವನ ।
ಅನವರತದುದ್ಯೋಗದಸಮುಫಲ ಮುಂದೇ ‖
ಉನ್ನತೋನ್ನತಿ ಹೊಂದಿ ದೇಶದಲಿ ಮೆರೆವಂತೆ ।
ಸನ್ನುತನೆ ಕರುಣಿಪುದು ಸತತ ಪ್ರಾರ್ಥಿಪೆವೂ ‖ ೨ ‖

ವರವಾದಿರಾಜ-ಮಠೀಯ ಯತಿ ಪುಂಗವರ ।
ಕರಮಲದಿಂದ ಆರಂಭ ಶಿಲೆಯಾಂತೂ ‖
ಕಸ್ತೂರ ಬಾರವರ ಸುನಾಮ ಹೊಂದಿದಿದು ।
ಶಾರೇಂದು ಅರ್ಕರಿರುವನ್ನ ಮೆರೆಯುತ ನಿರುತ ‖ ೩ ‖

ದೇಶದತಿಜಾಡ್ಯವನು ನೀಗುವರ ನಿರ್ಮಿಸುತ ।
ದೇಶೀಯ ಜನರ ಸ್ವಾಸ್ಥ್ಯವ ವರ್ಧಿಸುತ್ತಾ ‖
ದೇಶದೀ ದಾರಿದ್ರ್ಯ ನಿರುದ್ಯೋಗ ತೊಲಗಿಸುತ ।
ದೇಶೋನ್ನತಿಯ ಸತತವೆಸಗುತ ನಿರಂತರಂ ‖ ೪ ‖

ಜಗದೀಶ, ನಿನ್ನ ಸುಪ್ರೇರಣೆಯೊಳೆಸಗಿದೀ ।
ಜಗದ ಹಿತಕಾರ್ಯವನು ಪೂರ್ಣಗೊಳಿಸುತ್ತಾ ‖
ಜಗದೊಳಗೆ ಮೆರೆಯಿಸುತ, ವಿಘ್ನಗಳ ತೊಲಗಿಸುತ ।
ಜಗದೊಡೆಯ, ಅಮಲಕರುಣಾನಿಧಿಯೆ, ಪೊರೆಯಿದನು ‖ ೫ ‖

ಮಣಿಪಾಲದಲ್ಲಿ ಶಂಕುಸ್ಥಾಪನೆಯ ಸಂಭ್ರಮದ ಸಮಾರಂಭ!

ಎಕೆಡಮಿ ಒಫ್ ಜನರಲ್ ಎಜ್ಯುಕೇಶನ್, ಮಣಿಪಾಲ, ಇವರು ತೆರೆಯಲಿರುವ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಮೊದಲ ಕಟ್ಟಡದ ಶಂಕುಸ್ಥಾಪನೆಯನ್ನು ಶ್ರೀ ಸೋದೆ ವಾದಿರಾಜ ಮಠದ ಶ್ರೀ ವಿಶ್ವೋತ್ತಮ ತೀರ್ಥ ಸ್ವಾಮಿಗಳವರು ಮಣಿಪಾಲದಲ್ಲಿ ಇದೇ ತಾ. 10ರಲ್ಲು ಬೆಳಗ್ಗೆ ಒಂಭತ್ತು ಕಾಸಿಗೆ ತಮ್ಮ ದಿವ್ಯ ಹಸ್ತದಿಂದ ನೆರವೇರಿಸಿದರು. ಈ ಸಮಾರಂಭವನ್ನು ನೋಡಲು ಊರ ಹಾಗೂ ಆಸುಪಾಸಿನವರೆಲ್ಲ ಬಹುತೇಕವಾಗಿ ಬಂದಿದ್ದರು.

ಎಕೆಡೆಮಿ ರಿಜಿಸ್ಟ್ರಾರ್ ಡಾ| ಟಿ. ಮಾಧವ ಪೈಗಳು ಸ್ವಾಮಿಗಳವರಿಗೆ ಪುಷ್ಪಹಾರವನ್ನರ್ಪಿಸಿ ಶುಭಸಂದೇಶಗಳನ್ನು ಓದಿದರು. ನಂತರ ಸ್ವಾಗತ ಭಾಷಣ ಓದುತ್ತಾ ಎಕೆಡೆಮಿಯು ಈ ತನಕ ಸ್ಥಾಪಿಸಿದ ಕಾರ್ಯಗಳ ವೃತ್ತಾಂತವನ್ನು ತಿಳಿಸಿ ಕಸ್ತೂರ್ಬಾ ಮೆಡಿಕಲ್ ಕಾಲೇಜು ಯೋಜನೆಯ ಧ್ಯೇಯಗಳನ್ನು ಸೂಚಿಸಿದರು. ಈ ಯೋಜನೆಯಂತೆ ಈ ಕಾಲೇಜಿಗೆ ಸೇರಲಿರುವ ವಿದ್ಯಾರ್ಥಿಗಳು IIನೆ ಗ್ರೂಪ್ ತೆಗೆದುಕೊಂಡು ಇಂಟರ್‌ಮೀಡಿಯಟ್ ಪರೀಕ್ಷೆಯಲ್ಲಿ ಪಾಸಾಗಿರುವುದಲ್ಲದೆ, ಒಮ್ಮೆ ರೂ. 3000 ಧನ ಸಹಾಯ (ಮೊದಲಿನ 10 ವರ್ಷಗಳಲ್ಲಿ ಮಾತ್ರ) ವನ್ನೂ, ರೂ 30 ಎಕೆಡೆಮಿಯ ಸದಸ್ಯತನದ ಹಣವನ್ನೂ ರೂ. 8 ದಾಖಲೆ ಹಾಸಲನ್ನೂ, ರೂ. 750 ವರ್ಷಾವಧಿ ಶಿಕ್ಷಣದ ಸಂಬಳವನ್ನೂ ಕೊಡಬೇಕಾಗುವುದು. ಯಾವ ವಿದ್ಯಾರ್ಥಿಯಾಗಲಿ ಯಾ ಅವರ ಹೆತ್ತವರಾಗಲಿ ರಕ್ಷಕರಾಗಲಿ ಇಷ್ಟು ಹಣವನ್ನು ಕೊಟ್ಟು ಯಾವ ವರ್ಷದ ಸಲುವಾಗಿಯೂ ಸ್ಥಳವನ್ನು ಕಾದಿರಿಸಬಹುದಲ್ಲದೆ ವಿದ್ಯಾರ್ಥಿಗೆ ಸೂಚಿಸಿದ ವರ್ಷ ಸೇರಲು ಅನುಕೂಲವಿಲ್ಲದಿದ್ದರೆ ವರ್ಷವನ್ನು ದಲಾಯಿಸಬಹುದು ಅಥವಾ ಕಾದಿರಿಸಿದ ಸ್ಥಳವನ್ನು ಎಕೆಡೆಮಿಯ ಒಪ್ಪಿಗೆಯಿಂದ ಮತ್ತೊಬ್ಬ ವಿದ್ಯಾರ್ಥಿಗೆ ವರ್ಗಾಯಿಸಬಹುದು. ಈಗ 72 ಮಂದಿ ವಿದ್ಯಾರ್ಥಿಗಳು ಜುಲೈ 1953ಕ್ಕೆ ಆರಂಭವಾಗುವ ಮೊದಲ ವರ್ಷದ ಶಿಕ್ಷಣಕ್ಕೆ ತಮ್ಮ ಹೆಸರುಗಳನ್ನು ದಾಖಲು ಮಾಡಿಸಿಕೊಂಡಿದ್ದಾರೆ. ಕರ್ನಾಟಕ ವಿಶ್ವವಿದ್ಯಾನಿಲಯದವರು ಮನ್ನಣೆ ಕೊಡಲು ಒಪ್ಪಿರುತ್ತಾರೆ. ಅಲ್ಲದೆ ಮದ್ರಾಸು ಸರಕಾರವು ಕಾಲೇಜಿನ ಆಸ್ಪತ್ರೆಯು ನಿರ್ಮಾಣವಾಗುವ ವರೆಗೆ ಮಂಗಳೂರಿನ ಸರಕಾರಿ ಆಸ್ಪತ್ರೆಗಳಲ್ಲಿ ಕಾಲೇಜಿನ ವಿದ್ಯಾರ್ಥಿಗಳಿಗೆ ರೋಗ ಪರೀಕ್ಷೆಯನ್ನು ಮಾಡಿಸುವುದಕ್ಕೆ ಆಸ್ಪದ ಕೊಡಲು ಒಪ್ಪಿ ಸಹಾಯ ನೀಡಿರುವರು ಅಲ್ಲದೆ ಕಾಲೇಜಿನ ಆಸ್ಪತ್ರೆಯ ನಿರ್ಮಾಣದ ಬಗ್ಗೆ ಎಕೆಡೆಮಿಯವರು ನಿರ್ದಿಷ್ಟ ಯೋಜನೆಯನ್ನು ಸರಕಾರಕ್ಕೆ ಒಪ್ಪಿಸಿದಲ್ಲಿ ಉಡುಪಿಯಲ್ಲಿರುವ ಸರಕಾರಿ ಪರಂಬೋಕು ಸ್ಥಳವನ್ನು ಕೊಡಲು ಔದಾರ್ಯದಿಂದ ಒಪ್ಪಿರುತ್ತಾರೆ' ಎಂದು ಮುಂತಾಗಿ ತಿಳಿಸಿದರು.

ಸಭಿಕರಲ್ಲಿ ಶ್ರೀಗಳಾದ ಎಮ್. ಎಸ್ ಮಾಧವ ರಾವ್, ಜನಾಬ್ ಎಚ್. ಎಸ್. ಹುಸೈನ್, ಪ್ರಿನ್ಸಿಪಾಲ್ ಎಚ್ ಸುಂದರ ರಾವ್, ಶ್ರೀನಿವಾಸ ಮಿತ್ತಂತಾಯ, ಜನಾಬ ರಫಿಯುದ್ದಿನ್, ಶ್ರೀಮತಿ ಕೆ ಕುಞಾ ಕಣ್ಣನ್, ಇವರು ಎಕೆಡೆಮಿಯ ಪ್ರಯತ್ನವನ್ನೂ, ಮೆಡಿಕಲ್ ಕಾಲೇಜನ್ನು ಸ್ಥಾಪಿಸುವ ಯೋಜನೆಯಲ್ಲಿ ಒದ್ದಕಂಕಣರಾದ ಎಕೆಡೆಮಿ ರಿಜಿಸ್ಟ್ರಾರ್ ಡಾ| ಟಿ. ಮಾಧವ ಪೈಗಳ ಕಾರ್ಯದಕ್ಷತೆಯನ್ನು ಪ್ರಶಂಸಿಸಿ ಮಾತನಾಡಿದರಲ್ಲದೆ ಕಾಲೇಜಿಗೆ ಇತ್ಯೋಪತಿ ಪಯ ಅಭಿವೃದ್ಧಿಯನ್ನು ಬಯಸಿದ

ಶ್ರೀ ಸ್ವಾಮಿಗಳವರು ಶಂಕುಸ್ಥಾಪನ ಸಮಾರಂಭದ ಸಲುವಾಗಿ ಶುಭಾಶೀರ್ವಾದಗಳನ್ನೀಯುತ್ತಾ, ಡಾ| ಮಾಧವ ಪ ಗಳ 'ಕರ್ಮಯೋಗಿ' ಯೋಗ್ಯತೆಯನ್ನು ಕುರಿತು ತಮ್ಮ ಸಂತೃಪ್ತಿಯನ್ನು ಸೂಚಿಸಿದರು. ಮುಂದುವರಿಯುತ್ತಾ ಈ ಸ್ತೂರಿ ಬಾ ಮೆಡಿಕಲ್ ಕಾಲೇಜ್ ಆದಿ ಕಟ್ಟಡದ ಶಂಕುಸ್ಥಾಪನೆ ಮಾಡಲು ನಮಗೆ ಅತ್ಯಂತ ಆನಂದವಾಗುವುದು. ಈ ಕಾಲೇಜಿಗೆ ಉಜ್ವಲ ಭವಿಷ್ಯವಿದೆ. ಮಾ ವ ಕೋಟಿಯ ಸಂತೋಷಕ್ಕಾಗಿ ಸೇವೆ ಲ್ಲಿಸಲು ತನ್ನ ಜೀವಮಾನವನ್ನು ಮೀ ಲಾಗಿಟ್ಟ ಮಹಾ ಸಾಧ್ವಿಯೊಬ್ಬಳ ಹೆ ರನ್ನು ಈ ಕಾಲೇಜಿಗೆ ಕೊಡಲಾಗಿದೆ. ಈ ಕಾಲೇಜಿನ ವಿದ್ಯಾರ್ಥಿಗಳಿಗೂ, ಅಧ್ಯಾಪಕರಿಗೂ ಇವರ ಆದರ್ಶವೇ ನಿರಂತರ ಪ್ರೇರಣೆಯಾಗಲಿ. ಈ ಪಂಚಾಂಗದ ಕಲ್ಲು ವ ಎಂದಿನ ಭವಿಷ್ಯದ ಸಂಕೇತವಾಗಲಿ. ಇದೊಂದು ಚಿಕ್ಕ ಬೀಜ–ಇದರಿಂದ ಹುಟ್ಟುವ ಮರಮಹತ್ವದ್ದಾಗಿ ಬೆಳೆದು ವರ್ಷ ವರ್ಷ ಸಾವಿ[illegible] ಯ ಮತ್ತು ಸಂತೃಪ್ತಿಯನ್ನು [illegible]ಡಲಿರುವುದು. ಈ ಮಾನವ ಹಿತಸಾಧನೆಯ ಮಹತ್ವದ ಕೆಲಸವನ್ನು ಭಗವಾನ್ ಶ್ರೀ ಕೃಷ್ಣನು ಆಶೀರ್ವದಿಸಲಿ ಎಂದು ನಾವು ಪ್ರಾರ್ಥಿಸುವೆವೆಂದರು. ಶಂಕುಸ್ಥಾಪನಾಚಾರ್ಯ ಸ್ವಾಮಿಗಳವರು ಕಾಲೇಜು ಕಟ್ಟಡದ ಸಹಾಯಾರ್ಥವಾಗಿ ರೂ. 1091 ನು ಶ್ರೀ ಹಯವದನ ಸ್ವಾಮಿ ಪ್ರಸಾದ ರೂಪದಲ್ಲ ಕೊಟ್ಟು ಅನುಗ್ರಹಿಸಿದರು.

ಸಾಹಸಿ ಡಾ| ಪೈಗಳ ವಿಸ್ಮಯಕರ ಕಾರ್ಯಾರಂಭ!

ಆರಂಭದಲ್ಲಿ ವೈದ್ಯಕೀಯ ವೃತ್ತಿಯನ್ನಾರಂಭಿಸಿ ಯಶಸ್ವೀ ಡಾಕ್ಟರರಾದ, ಬೇಂಕಿಂಗ್ ಮತ್ತು ಇನ್ಶೂರೆನ್ಸ್ ಕ್ಷೇತ್ರಗಳಲ್ಲಿ ಭಾರತದಲ್ಲಿಯೇ ಸ್ಥಾನವನ್ನು ಗಳಿಸಿಕೊಂಡ, ಮಣಿಪಾಲ ಗುಡ್ಡೆಯನ್ನು ನೆವ ನಗರವಾಗಿ ಮಾರ್ಪಡಿಸಿದ, ಎಮ್. ಜಿ. ಎಮ್. ಕಾಲೇಜನ್ನು ಸ್ಥಾಪಿಸಿದ ಸಮರ್ಥ ಸಾಹಸಿ ಡಾ| ಟಿ. ಮಾಧವ ಪೈಗಳು ಪ್ರಾರಂಭಿಸಿದ ಈ ಮೆಡಿಕಲ್ ಕಾಲೇಜಿನ ಯತ್ನವು ಎದೆಗಾರಿಕೆಯಿಂದ ಕಂಡರೂ ಕಾಲಕ್ರಮೇಣದಲ್ಲಿ ಜಯಪ್ರದವಾಗದಿರಲಾರದೆಂದು ನಿರೀಕ್ಷಿಸಲಾಗಿದೆ.

ದ. ಕ. ಕೃಷಿಕರ ಸಹಕಾರಿ ಮಾರಾಟ ಸಂಘ, ಲಿ., ಮಂಗಳೂರು.

ನೋಟೀಸ

ಈ ಸಂಘದ ಬರುವ ಮಹಾ ಸಭೆಯ ನ್ನು ತಾರೀಖು 28–12–1952 ರಲ್ಲು ರವಿವಾರ ಅಪರಾಹ್ನ 2½ ಘಂಟೆಗೆ ಪುತ್ತೂರು ಸಹಕಾರಿ ಟೌನ್ ಬೇಂಕಿನ ಮಹಡಿಯಲ್ಲಿ ಜರಗಿಸುವುದಾಗಿ ನಿರ್ಣಯಿಸಿದೆ. ಎಲ್ಲಾ ಮೆಂಬರರು ಹಾಜರಾಗಬೇಕಾಗಿ ವಿನಂತಿ. ಕಾರ್ಯಕ್ರಮವನ್ನು ಕೆಳಗಡೆ ಕಾಣಿಸಲಾಗಿದೆ.

ವಿ. ಸೂ:—ಸಂಘದ ಪ್ರತಿನಿಧಿಗಳು ಆಯಾಯ ಸಂಘದ ಮಹಾ ಸಭೆ, ಡೈರೆಕ್ಟರರ ಅಥವಾ ಪಂಚಾಯತ ಸಭೆಯ ನಿರ್ಣಯದ ಮಂಜೂರು ನಕಲನ್ನು ಮುಂದಾಗಿ ಕಳುಹಿಸಿಕೊಡಬೇಕು. ಅಥವಾ ಬರುವಾಗ್ಗೆ ಅವರೊಡನೆ ತಂದು ಹಾಜರುಪಡಿಸಬೇಕಾಗಿ ಅಪೇಕ್ಷ.

(ಅಪ್ಪಣೆ ಪ್ರಕಾರ)

ಮಂಗಳೂರು,
13–12–52.

(Sd.) ಪಿ. ಲಕ್ಷ್ಮಿನಾರಾಯಣ ರಾವ್.
ಕಾರ್ಯದರ್ಶಿ.

ಕಾರ್ಯಕ್ರಮ

1. 1951—52ನೇ ವರುಷದ ಬಾಬ್ತು ಡಿ ರಿಜಿಸ್ಟ್ರಾರರವರ ಆಡಿಟು ಸರ್ಟಿಫಿಕೇಟು ಮತ್ತು ಆಡಳಿತ ಮಂಡಳಿಯವರ ವರದಿ.
2. 1952—53ನೇ ವರುಷದ ಬಾಬ್ತು ಮಂಜೂರು ಪಡಿಸಿದ ಆಯವ್ಯಯದ ಪಟ್ಟಿ ಮತ್ತು 1953—54ನೇ ವರುಷದ ಬಾಬ್ತು ಅಂದಾಜು ಆಯವ್ಯಯದ ಪಟ್ಟಿ.
3. 1951—52ರಲ್ಲು ರೂಪಾಯಿ 3761—0—0ರಷ್ಟು ಬಜೆಟಿಗಿಂತ ಮಿಕ್ಕಿ ಆದ ಖರ್ಚನ್ನು ಮಂಜೂರು ಮಾಡುವುದು.
4. ಸಂಘದ ಬಗ್ಗೆ ರಿಜಿಸ್ಟ್ರಾರರು ಸೂಚಿಸಿದ ಮಾದರಿ ಉಪನಿಬಂಧನೆಗಳ ಆಧಾರದ ಮೇಲೆ ತಯಾರಿಸಿದ ಹೊಸ ನಿಬಂಧನೆಗಳನ್ನು ಮಂಜೂರು ಮಾಡುವುದು.
5. ಮೆಂಬರರಿಗೆ ಕೊಟ್ಟಿದ್ದಲ್ಲಿರುವ, ಬೆಳೆ ಮೇಲೆ ಸಾಲ ಕೊಡುವ ಬಗ್ಗೆ ಅನುಕೂಲವಾಗುವಂತೆ ಗ್ರಾಮ ಸಂಘಗಳ 4 & 71ನೇ ಉಪನಿಬಂಧನೆಯ ಮಾದರಿಯಲ್ಲಿ ಹೊಸ ಉಪ ನಿಬಂಧನೆಯನ್ನು 43–Aನೇ ಉಪ ನಿಬಂಧನೆಯಾಗಿ ಸೇರಿಸುವುದು.

ವೆಂದೂ ಸಂಯುಕ್ತರಾಷ್ಟ್ರ ಸಂಘ ನಿರ್ಧರಿಸಿದೆ.

ದಕ್ಷಿಣ ಆಫ್ರಿಕದಲ್ಲಿ

ಈ ನಡುವೆ ಅಲ್ಲಿ ವಿಧ್ವಂಸಕ ಕೃತ್ಯಗಳು ನಡೆಯುತ್ತಿವೆ. ಉತ್ತರದಂತೆ ದಕ್ಷಿಣ ಆಫ್ರಿಕದಲ್ಲಿ ಕೂಡ ಏರೋಪ್ಯರ ದಬ್ಬಾಳಿಕೆ ಹೆಚ್ಚುತ್ತಿದೆ. ಮಲಾನರು ಸತ್ಯಾಗ್ರಹಿಗಳ ಕಟ್ಟನ್ನು ಮುರಿಯಲು ಹೊಸ ಅಧಿಕಾರ ಕೇಳುವ ಎತ್ತುಗಡೆಯಲ್ಲಿದ್ದಾರೆ—ಕೆನಿಯಾದಲ್ಲಿ ಆಫ್ರಿಕನ ಧುರೀಣರ ಬಂಧನ ಸತ್ರವೂ ವಿಚಾರಣೆಯೂ ನಡೆಯುತ್ತಿದೆ. ಜೊಮೋಕೆನ್ಯಾಟರಂಥ ವರ್ಚಸ್ವೀ ಜನರನ್ನು ಸರಕಾರ ವಿಚಾರಣೆಗೆ ಗುರಿಪಡಿಸಿದೆ. ಸರಕಾರದ ನೀತಿಯನ್ನು ನೋಡಿದರೆ, ಯೋಗ್ಯ ನ್ಯಾಯದಾನ ಸಿಗಲಾರದೆಂದು ಕೆನ್ಯಾಟರ ಬ್ರಿಟಿಷ ವಕೀಲರು ಹೇಳಿದ್ದು, ಇದು ನ್ಯಾಯಸ್ಥಾನದ ಅಪಮಾನವಲ್ಲವೆ? ಎಂಬ ಪ್ರಶ್ನೆ ಉದ್ಭವಿಸಿದೆ. ವರ್ಣೀಯರ ಹೋರಾಟದಲ್ಲಿ ಏರೋಪ್ಯರೂ ಸಹಾನುಭೂತಿ ತೋರಿಸತೊಡಗಿರುವದಲ್ಲದೆ—ಸತ್ಯಾಗ್ರಹಕ್ಕೆ ಧುಮುಕಿರುವುದು ಹೊಸ ಸ್ಫೂರ್ತಿ ಕೊಟ್ಟಿದೆ.

೦೦ ೦೦ ೦೦

ಇಜಿಪ್ತದಲ್ಲಿ ನಗೀಬರು ರಾಜ್ಯದ ಘಟನೆಯನ್ನು ಕಿತ್ತೊಗೆದಿದ್ದು ಹೊಸ ಘಟನೆಯನ್ನು ರಚಿಸುವ ಪ್ರಯತ್ನ ನಡೆಯುತ್ತಿದೆ.

ಲಂಡನಿನಲ್ಲಿ ಸೇರಿದ ರಾಷ್ಟ್ರ ಕೂಟದ ಮುಖ್ಯ ಮಂತ್ರಿಗಳ ಪರಿಷತ್ತಿನಲ್ಲಿ ಎಲ್ಲರ ಹಿತಕ್ಕೂ ಸಂಬಂಧಿಸಿದ ಮಾತುಕತೆಗಳಾದುವೆಂದೂ ಚಿನ್ನದ ಬೆಲೆಯನ್ನು ಏರಿಸುವ ಹಾಗೂ ರಾಷ್ಟ್ರಕೂಟದ ಸದಸ್ಯ ರಾಷ್ಟ್ರಗಳ ಅಭಿವೃದ್ಧಿ ಯೋಜನೆಗಳಿಗೆ ನೆರವಾಗುವ ಸಂಬಂಧದಲ್ಲಿ ಬ್ರಿಟಿಷ ಪ್ರಧಾನರು ಅಮೆರಿಕೆಯನ್ನು ಸಂದರ್ಶಿಸಲಿರುವರೆಂದೂ ತಿಳಿದಿದೆ.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನು ಕ್ರಯಕ್ಕೂ ಆಗಿ ಯೋಚಿಲ್ಲದೆಯಾಗಿಯೂ ದೊರೆಯುತ್ತವೆ
ಕಲ್ಯಾಂಜಿ ವ್ಯಾಸಾಬಾಯಿ,
ರಥಬೀದಿ, ಉಡುಪಿ.

ಯೌವನಪ್ರಾಪ್ತಿ ನಿಶ್ಚಿತ.
'ಕುಮಾರಿ' ಟಿಕ್ಕಿಗಳನ್ನು ಉಪಯೋಗಿಸಿದರೆ ಹದಿಹರೆಯ ಯುವಕನಾಗ ವ ಮು, ಹಳೋಟಿಗೆ ಬರುವುದು, [illegible] ಸೇವನೆಯಿಂದ ಶೀಘ್ರ ಗುಣವಾಗುವುದು. ಯಾವ ಬಂಧನವೂ ಇಲ್ಲ. [illegible] ರಾರು ಮುಂದಿಗೆ ಶಾಶ್ವತ ಗುಣವಾಗಿದೆ. ಬೆಲೆ: ರೂ. 3-1 ಸ್ಪೆಶಲ್ ರೂ 5- ಅಧಿಕಾಧಿಕ ಸ್ಪೆಶಲ್ ರೂ, 8- [ವಿ ಪಿ ಹಚ್ಚೆ ರಹಾಣಿ ಪ್ರತ್ಯೇಕ]
Mrs D. DEVEE, B. Ds. (N. J.)
Tollygunge CALCUTTA
ಸ್ಟಾಕಿಸ್ಟರು, ಕಯಾಕಂಪೆನಿ, ಮಂಗಳೂರು

ಮಂಗಳೂರು

ವಿಮಾನ ಸರ್ವಿಸು—ಇಲ್ಲಿಂದ ತಾ. 1—1—53ರಿಂದ ಪ್ರಾರಂಭವಾಗುವುದು.

ಕಾನೂನು ಮಂತ್ರಿ—ಶ್ರೀ ಕೆ. ಪಿ ಕುಟ್ಟಿ ಕೃಷ್ಣನ್ ನಾಯರರು ನಿನ್ನೆ ಇಲ್ಲಿಗೆ ಬಂದಿದ್ದು ಈ ದಿನ ಕಾರ್ಕಳ, ಮಣಿಪಾಲ, ಉಡುಪಿ, ಮಲ್ಪೆ, ಉದ್ಯಾವರಕ್ಕೆ ಹೋಗುವರು, ತಾ. 19ರಂದು ಉಡುಪಿಯಿಂದ ಮಂಗಳೂರಿಗೆ ಬಂದು ಪುತ್ತೂರು, ಬಂಟವಾಳ, ತಾ. 20ಕ್ಕೆ ಕಾಸರಗೋಡು ಸಂದರ್ಶಿಸುವರು

ನಗರ ಸಭೆಯು—ತಾ. 6ರಂದು ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿದಾಗ ಮಂಗಳೂರು ಹಾಸನ ರೈಲ್ವೆಯು ಈ ಜಿಲ್ಲೆಯ ಅಭಿವೃದ್ಧಿಗೆ ಅತಿ ಅಗತ್ಯವಾಗಿರುವುದರಿಂದ ಕೇಂದ್ರ ಸರಕಾರವು ಆ ಕೆಲಸವನ್ನು ಮಂಜೂರು ಮಾಡಿ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಬೇಕೆಂದು ಕೇಳಿಕೊಳ್ಳುವ ನಿರ್ಣಯ ಪಾಸಾಯಿತು.

ಭಾರತದ ಪ್ರಧಾನ ದಂಡನಾಯಕ ಜ| ಕಾರ್ಯಪ್ಪನವರು ಜನವರಿ ತಾ. 4ರಲ್ಲಿ ಮಂಗಳೂರಿಗೆ ಆಗಮಿಸುವರು.

ನಗರ ಸಭೆಯ ಉಪಾಧ್ಯಕ್ಷರ ಆಯ್ಕೆ—ಮಂಗಳೂರು ನಗರ ಸಭೆಯ ಉಪಾಧ್ಯಕ್ಷರಾಗಿ ತಾ. 6ರಲ್ಲಿ ಶ್ರೀ. ಬಿ. ಎಸ್. ಭಾಸ್ಕರ್ ರೈಗಳು ಅವಿರೋಧವಾಗಿ ಆರಿಸಲ್ಪಟ್ಟಿರುವರು.

ಕವಿ ಜಯಂತಿ—ಮಂಗಳೂರಿನ ಸರಕಾರಿ ಕಾಲೇಜಿನಲ್ಲಿ ತಾ 7 ರಂದು ಬೆಳಿಗ್ಗೆ ಲಕ್ಷ್ಮೀಶ ಕವಿಜಯಂತಿಯೂ ಶ್ರೀ ಶ್ರೀಕಂಠಶಾಸ್ತ್ರಿಯವರ ಅಧ್ಯಕ್ಷತೆಯಲ್ಲೂ ಸಂಜೆ ವಾಲ್ಮೀಕಿ ಕವಿ ಜಯಂತಿಯು ಶ್ರೀ ಎಮ್. ವಿ. ಹಮ್ಮೀಯವರ ಅಧ್ಯಕ್ಷತೆಯಲ್ಲೂ ಜರಗಿತು. ಈ ಸಂದರ್ಭದಲ್ಲಿ ಬೆಂಗಳೂರಿನ ಹಿರಿಯ ಕವಿಗಳಲ್ಲಿ ಒಬ್ಬರಾದ ಶ್ರೀ ವಿ. ಸೀತಾರಾಮಯ್ಯ (ವಿ ಸೀ.) ಅವರು ಪ್ರಮುಖ ಭಾಷಣಗಾರರಾಗಿ ಬೆಳಿಗ್ಗೆ ಕನ್ನಡದಲ್ಲೂ, ಸಂಜೆ ಇಂಗ್ಲೀಷಿನಲ್ಲೂ ಮಾತನಾಡಿದರು

ಉಡುಪಿ

ವಿವಾಹ ಸಮಾರಂಭ—ಡಾ| ಎಸ್. ಆರ್. ಪೈಗಳ ಸಹೋದರ ಶ್ರೀ ಯು ವಾಸುದೇವ ಪೈಗಳವರು ಇದೇ ತಾ. 11ರಲ್ಲಿ ತನ್ನ ಪುತ್ರಿ ಕುಮಾರಿ ರಮಣಿಯನ್ನು ಮಂಗಳೂರಿನ ಶ್ರೀ ಯು ಗೋಪಾಲಕೃಷ್ಣ ನಾಯ್ಕರ ಪುತ್ರ ಶ್ರೀ ರಾಮ ಚಂದ್ರ ನಾಯ್ಕರಿಗೆ ಕೊಟ್ಟು ವಿವಾಹ ಮಹೋತ್ಸವವನ್ನು ಬಹು ವಿಜೃಂಭಣೆಯಿಂದ ನೆರವೇರಿಸಿದರು ತಾ. 15ನೇ ಸಂಜೆ ಈ ಸಂಬಂಧ ಸಾವಿರಾರು ಜನರಿಗೆ ಉಪಹಾರ ಸಮಾರಂಭವನ್ನು ಏರ್ಪಡಿಸಲಾಗಿತ್ತು.

Kasturba Medical College, Manipal, S. K.
will be opened in June 1953.
Seats can be reserved for any year.
Almost all seats for the first year have been reserved
For terms of reservation and other particulars apply to:
Dr T. M A. Pai, M. B. B. S.,
Registrar,
Academy of General Education,
Manipal, S. Kanara

ಭಾಷಣ ಮತ್ತು ನಾಟಕ—ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನ ಕಲಾ ಸಂಘದ ಆಶ್ರಯದಲ್ಲಿ ಬೆಂಗಳೂರಿನ ಶ್ರೀ ವಿ ಸೀತಾರಾಮಯ್ಯನವರು ಇದೇ ತಾ. 8ರಲ್ಲಿ ಭಾರತದ ಸಾಧ್ವೀಮಣಿಯರ ಉದಾತ್ತ ಧ್ಯೇಯಗಳನ್ನು ವಿವರಿಸಿ ಭಾಷಣ ಮಾಡಿದರು. ಸಂಘದ ಉಪಾಧ್ಯಕ್ಷ ಶ್ರೀ ಕು. ಶಿ. ಹರಿದಾಸ ಭಟ್ಟರು ಉಪನ್ಯಾಸಕರ ಪರಿಚಯ ಮಾಡಿಕೊಟ್ಟರು ಪ್ರಿನ್ಸಿಪಾಲ್ ಎಚ್ ಸುಂದರರಾಯರು ಅಧ್ಯಕ್ಷತೆ ವಹಿಸಿದ್ದರು ಸಂಘದ ಕಾರ್ಯದರ್ಶಿ ಭಾಸ್ಕರ ಶೆಟ್ಟಿಯು ಧನ್ಯವಾದಗಳನ್ನರ್ಪಿಸಿದರು. ತಾ 5ರಂದು ರಾತ್ರೆ ಕಾಲೇಜು ವಿದ್ಯಾರ್ಥಿಗಳು 'ಮಂಡೋವರ್' ಎಂಬ ಕನ್ನಡ ನಾಟಕವನ್ನು ಮತ್ತು ಹಿಂದೀ ಪ್ರಹಸನವೊಂದನ್ನು ಅಭಿನಯಿಸಿದರು.

ಕ್ರಿಕೆಟ್ ಪಂದ್ಯಾಟ—ಮುನಿಸಿಪಲ್ ಕಪ್ ಕ್ರಿಕೆಟ್ ಪಂದ್ಯಾಟವು ಅಜ್ಜರಕಾಡು ಮೈದಾನಿನಲ್ಲಿ ಕುಂದಾಪುರ ಕ್ಲಬ್ ಟೀಮು ಮತ್ತು ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜು ಟೀಮುಗಳೊಳಗೆ ನಡೆದು ಕಾಲೇಜ್ ಟೀಮಿನವರು ವಿಜಯಿಗಳಾದರು.

ಮುನಿಸಿಪಲ್ ಕೌನ್ಸಿಲಿನ ಸಭೆಯು ತಾ. 13ರಂದು ಚೇರ್ಮನ್ ಶ್ರೀ ಯು ಎಸ್ ನಾಯ್ಕರ ಅಧ್ಯಕ್ಷತೆಯಲ್ಲಿ ಜರುಗಿತು ಹಲವಾರು ಸರಕಾರಿ ಆರ್ಡರುಗಳು ವಿಚಾರ ಮಾಡಲಾದುವು ಬೇರೆ ಬೇರೆ ಕಮಿಟಿಗಳು ರಚಿಸಲ್ಪಟ್ಟು ಇತರ ವಿಷಯಗಳು ತೀರ್ಮಾನಿಸಲ್ಪಟ್ಟ ಬಳಿಕ ಸಂಜೆ 5 ಗಂಟೆಗೆ ಪ್ರಾರಂಭವಾದ ಕೌನ್ಸಿಲ್ ಸಭೆಯು 10½ ಗಂಟೆಗೆ ಮುಗಿಯಿತು.

ಮದ್ರಾಸು ಸರಕಾರದ ಕಾನೂನು ಮಂತ್ರಿ ಶ್ರೀ ನಾಯರರು ಈ ದಿನ ಉಡುಪಿಗೆ ಆಗಮಿಸಲಿರುವರು.

ಅಮರದೇಹಿ ಸಂತ ಫ್ರಾನ್ಸಿಸ್ ಕ್ಸೇವಿಯರ್—ಎಂಬ ಈ ಸಂಚಿಕೆಯ 11ನೇ ಪುಟದಲ್ಲಿ ಪ್ರಕಟವಾಗಿರುವ ಲೇಖನವನ್ನು ಬರೆದವರು ದಾಂತಿಯವರು

ಮೂಲ್ಕಿ— ಈ ಫಿರ್ಕದಲ್ಲಿ ಕಳೆಯಂಗಡಿಯಿಂದ ಪಕ್ಷಿಕೆರೆಯಾಗಿ ಕಿನ್ನಿಗೋಳಿ ಮಾರ್ಗವಾಗಿ ಕೂಡುವ ಸುಮಾರು 3-4 ಮೈಲು ದೂರದ ರಸ್ತೆಯನ್ನು ಹಳೆಯಂಗಡಿ, ಪಂಜ, ಕೆಮ್ರಾಲ್, ಅತ್ತೂರು, ಕೊಯ್ಕುಡೆ ಗ್ರಾಮಸ್ಥರು ಕಳೆದ ತಾ 23ರಲ್ಲಿ ಕೂಡಿ ಕಮ್ಯೂನಿಟಿ ಪ್ರೊಜೆಕ್ಟಿನ ಸಹಾಯ ಪಡೆದು ಮಾಡುವಂತೆ ನಿಶ್ಚಯಿಸಿದ ಪ್ರಕಾರ ಇದೇ ತಾ 1ರಲ್ಲಿ ಮಾರ್ಗದ ಕೆಲಸದ ಉದ್ಘಾಟನೆಯನ್ನು ಡಾ| ಯಂ ಅರ್ ಶೆಟ್ಟಿಯವರು ನೆರವೇರಿಸಿದರು. ಮಾರ್ಗದ ಕೆಲಸವು ಬೇಗನೆ ಪೂರ್ಣವಾಗಲಿದ್ದು ಕಮ್ಯೂನಿಟಿ ಪ್ರೊಜೆಕ್ಟಿನ ಎಡ್ಮಿನಿಸ್ಟ್ರೇಟರ್ ಡಾ| ಶೇ [illegible] ರವರಿಂದಲೂ ತಿಳಿಸಲಾಗಿದೆ.

ಫರಂಗಿಪೇಟೆ— ಡಾ| ಪಿ. ಎ. ಸೋ [illegible] ಸಾರ್ವಜನಿಕ ಆರೋಗ್ಯ ಮಂದಿರದ ನೂತನ ಚಿಕಿತ್ಸಾಲಯದ ಉದ್ಘಾಟನಾ ಸಮಾರಂಭವು ಇದೇ ತಾ 4ರಲ್ಲಿ ಡಾ| ಕೆ. ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರುಗಿತು



ನವಯುಗ ಪ್ರೆಸ್, ಉಡುಪಿ

ತೃಪ್ತಿಕರವಾದ ವಸತಿ— ಹಿತಕರವಾದ ಊಟ— ರುಚಿಕರವಾದ ಉಪಾಹಾರ ಇವುಗಳಿಗೆ
ಆದರ್ಶ ನಿಲಯವೆಂದರೆ
ವುಡ್ ಲೇಂಡ್ಸ್
ಉಡುಪಿ.
ಯಾತ್ರಿಕರಿಗೂ ಪ್ರಯಾಣಿಕರಿಗೂ ಸರ್ವ ಅನುಕೂಲವಾಗುವಂತೆ ನಗರದ ಕೇಂದ್ರಭಾಗದಲ್ಲಿದೆ

ಮೂಲ್ಕಿ ಬೇಂಕ್
ಲಿಮಿಟೆಡ್, ಮೂಲ್ಕಿ
192[illegible]ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು
The Moolky Bank Ltd.,
Moolky, S K



ವೆಲ್ಕಿನ್ಸ್ ಟೂತ್ ಪೇಸ್ಟ್
ಮಿಂಚುವ ನಗುವಿಗೆ, ಮತ್ತು
ಒಸಡಿನ ಆರೋಗ್ಯಕ್ಕೆ
ಯು. ಎಸ್ ಎ ರಾಜ್ಯದ
ಪ್ರಸಿದ್ಧ ಡಾಕ್ಟರರೊಬ್ಬರ ತಯಾರಿಕೆ.
Welkin Laboratory (N)
Calcutta 3
ಉದಾರ ಶರ್ತಗಳ ಮೇಲೆ ಸ್ಟಾಕಿಸ್ಟರು ಬೇಕಾಗಿದ್ದಾರೆ

ನಡೆಯುವ ಚಿತ್ರ — 'ರಾಜಕಮಲ್'ರವರ
— ಪರ್‌ಛೈನ್ —
ಜಯಶ್ರೀ, ಸಂಧ್ಯಾ, ಶಾಂತರಾಮ್
ಬರುವ ಚಿತ್ರ— 'ರಾಕಿ'
ಕಾಮಿನಿಕೌಶಲ್, ಕರಣ್ ದಿವಾನ್, ಉಲ್ಲಾಸ್
ಬರುತ್ತದೆ. ರಾಗ್‌ರಂಗ್, ನೌಬಹಾರ್, ಸಾದು ಘರ್.
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಮುಂಡ್ಕೂರು— ಮುಂಡ್ಕೂರು ಮತ್ತು ಸುತ್ತುಮುತ್ತಲಿನ ಗ್ರಾಮಗಳ ಕೇಂದ್ರಕ್ಕೆ ಒಳರೋಗಿಗಳನ್ನು ನಿಲ್ಲಿಸುವ ಒಂದು ಆಸ್ಪತ್ರೆ ಅತೀ ಅಗತ್ಯವಿದೆಯೆಂದೂ, ಪ್ರಾಥಮಿಕ ಆರೋಗ್ಯ ಕೇಂದ್ರದ ಆಸ್ಪತ್ರೆಯನ್ನು ಇಲ್ಲಿ ಸ್ಥಾಪಿಸುವುದು ಉಚಿತವೆಂದೂ ಈ ಕುರಿತು ಸಮಾಜ ವಿಕಾಸಯೋಜನಾ ಅಧಿಕಾರಿಗಳು ತೀವ್ರ ಗಮನ ಕೊಡಬೇಕಾಗಿದೆ ಎಂದು ಗ್ರಾಮನಿವಾಸಿಗಳೊಬ್ಬರು ಬರೆಯುತ್ತಾರೆ.

ಶಿರ್ವ— ಇದೇ ತಾ. 11ರಲ್ಲಿ ಶಿರ್ವದಲ್ಲಿ 'ಹಿಂದ್ ಕುಷ್ಠ ನಿವಾರಣಾ ಸಮಿತಿ'ಯ ದ. ಕ. ಜಿಲ್ಲಾ ಕೇಂದ್ರ ಶಾಖೆಯಿಂದ ಕುಷ್ಠನಿವಾರಣೆಯ ಕುರಿತ ಸಾರ್ವಜನಿಕ ಸಭೆಯು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ಶಿರ್ವ ಮಿಷನ ಅಧ್ಯಕ್ಷ ರೆ. ಫಾ. ಗೊನ್ಸಾಲ್ವಿಸ್ ಶ್ರೀ ಮುದ್ದು ಶೆಟ್ಟಿ ಮತ್ತು ಮಂಗಳೂರಿನ ಇತರ ಪ್ರಮುಖರು ಕುಷ್ಠರೋಗ ನಿವಾರಣೆಯ ಕುರಿತು ಮಾತನಾಡಿದರು. ಡಾ। ಕೊಯಿಲೊ, ಅವರು ಶಿರ್ವದಲ್ಲಿ ಕುಷ್ಠಪೀಡಿತ ಜನರಿಗೆ ಔಷಧಿ ಕೊಡಲು ಸದ್ಯದಲ್ಲಿಯೇ ಸಂಪೂರ್ಣ ತರಬೇತಿ ಹೊಂದಿದ ಒಬ್ಬ ಡಾಕ್ಟರನ್ನು 'ಗಾಂಧಿನಿಧಿ'ಯವರು ನೇಮಿಸಲಿರುವರೆಂದು ಸೂಚಿಸಿದರು. ಉಡುಪಿ ತಾಲೂಕಿನವರು ಬಹಳ ಕೆಲಸಗಾರರು ಮತ್ತು ಪ್ರಯತ್ನ ಮಾಡುವವರು ಆಗಿರುತ್ತಾರೆ. ಅವರು ಉಡುಪಿಯಲ್ಲಿ ಈಗಾಗಲೇ ಒಂದು ಕಾಲೇಜನ್ನು ಸ್ಥಾಪಿಸಿರುವರಲ್ಲದೆ, ಒಂದು ಮೆಡಿಕಲ್ ಕಾಲೇಜಿನ ಶಂಕು ಸ್ಥಾಪನೆ ಮಾಡಿರುವರು. ಎಂದು ಹೇಳಿ ಕುಷ್ಠರೋಗನಿವಾರಣೆಯ ಕೆಲಸದಲ್ಲಿ ತನ್ನ ಸಹಾನುಭೂತಿಯು ಸಂಪೂರ್ಣವಾಗಿ ಇರುವುದಾಗಿ ಅಧ್ಯಕ್ಷರು ತಿಳಿಸಿದರು. ಶ್ರೀ ಎಸ್. ಎಸ್. ಕುತ್ಯಾರು ಧನ್ಯವಾದಗಳನ್ನು ಸಮರ್ಪಿಸಿದರು.

ಮಿಜಾರು— ಗರುಪುರದಿಂದ ಮೂಡಬಿದ್ರೆಯವರೆಗೆ ರಾಜರಸ್ತೆಗೆ ಸಮೀಪ ಯಾವುದೊಂದು ಹಾಯರ್ ಎಲಿಮೆಂಟರಿ ಶಾಲೆಯು ಇಲ್ಲದಿರುವುದರಿಂದ ಬಡ ಮಕ್ಕಳಿಗೆ ವಿದ್ಯೆ ಕಲಿಯಲು ತುಂಬಾ ತೊಂದರೆಯಾಗಿದೆ ಎಂದೂ ಈ ವಲಯದ ಕೇಂದ್ರದಲ್ಲೊಂದು ಹಾ। ಎ। ಶಾಲೆ ಬೇಗನೆ ತೆರೆಯುವಂತಾದರೆ ಮಹದುಪಕಾರವಾದೀತೆಂದೂ ಈ ಕುರಿತು ಸಂಬಂಧಪಟ್ಟ ವಿದ್ಯಾಧಿಕಾರಿಗಳು ಗಮನ ಕೊಡಬೇಕೆಂದೂ ಬಡ ಗ್ರಾಮಸ್ಥರ ವಿನಂತಿಯಿದೆ.

ಆದಿಉಡುಪಿ— ಉಡುಪಿ ಸರಕಾರಿ ಆಸ್ಪತ್ರೆಯ ಒಸರಿ ಸರ್ಜನರಾದ ಡಾ। ಪಿ. ರಾಘವೇಂದ್ರ ನಾಯ್ಕರು ಇದೇ ತಾ ೧೦ರಲ್ಲಿ ಮಧ್ಯಾಹ್ನ ಆದಿಉಡುಪಿ ಹಾ। ಪ್ರಾ। ಶಾಲೆಯ ನೂತನ ಮಂದಿರದ ಶಂಕುಸ್ಥಾಪನಾ ಕಾರ್ಯವನ್ನು ನೆರವೇರಿಸಿದರು. ಶಾಲಾ ಮೆನೇಜರ್ ಶ್ರೀ ಟಿ. ಸೀತಾರಾಮಯ್ಯನವರು ಸ್ವಾಗತ ಭಾಷಣಗಳನ್ನಾಡಿದರು. ಮುಖ್ಯೋಪಾಧ್ಯಾಯರು ಧನ್ಯವಾದಗಳನ್ನರ್ಪಿಸಿದರು.

ಹೊಸದುರ್ಗ— ಇದೇ ತಾ 7ರಲ್ಲು ಹೊಸದುರ್ಗ ಸರ್ಕಲಿನ ಪ್ರತಿನಿಧಿ ಚುನಾವಣೆಯು ಮತದಾನವು ನಡೆದು ಶ್ರೀ ಕೆ. ಪದ್ಮನಾಭ ಶೆಣೈಯವರು ಬಹುಮತದಿಂದ ಚುನಾಯಿಸಲ್ಪಟ್ಟಿರುವರು.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ,
ಸರಗಳು, ಬೋಲಕ್ಕುಗಳು, ನಮೂನೆವಾರು ಉಂಗುರಗಳು
ಯಾವಾಗಲೂ ಸಿದ್ಧವಿವೆ.
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.
ಫೋನು ನಂಬ್ರ ೬೦

The Vijaya Bank, Ltd., Brahmavar.

ದಿ ವಿಜಯಾ ಬೇಂಕ್ ಲಿಮಿಟೆಡ್, ಬ್ರಹ್ಮಾವರ

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಋಣಿಗಳು ನಗಗಳ ಆಧಾರದ ಮೇಲೆ ಸಾಲ ಪಡೆದುಕೊಂಡು ಕ್ಲಿಪ್ತ ಅವಧಿಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದ ಸದ್ರಿ ಸಾಲವನ್ನು ಬರ ಮಾಡಿಕೊಳ್ಳುವರೆ ರಿಜಿಸ್ಟ್ರೀ ನೋಟೀಸು ಕೊಟ್ಟಲ್ಲಿಯೂ, ಸದ್ರಿ ನಗಗಳನ್ನು ಬಿಡಿಸಿಕೊಂಡು ಹೋಗದಿರುವುದರಿಂದ ಸದ್ರಿಯವರು ಇಟ್ಟ ನಗಗಳನ್ನು ಇದೇ ತಾ. 26 12 52ನೇ ರಲ್ಲಿ ಅಪರಾಹ್ನ ಘಂಟೆ 4-30ಕ್ಕೆ ಸರಿಯಾಗಿ, ಬ್ಯಾಂಕಿಗೆ ಸಂಬಂಧ ಪಡದ ಇತರ ದಿನಗಳಲ್ಲಿ ಪುನಹ ನೋಟೀಸು ಕೊಡದೇನೇ ಬೇಂಕಿನ ಆಫೀಸಿನ ಬಹಿರಂಗವಾಗಿ ಏಲಂ ಮಾಡಲಾಗುವದೆಂದು ಈ ಮೂಲಕ ತಿಳಿಸಲಾಗಿದೆ. ಏಲಂ ಮೂಲಕ ಬಂದ ಹಣವು ನಮ್ಮ ಸಾಲದ ಮೊಬಲಗಿಗೆ ಕಮ್ಮಿಯಾದಲ್ಲಿ, ಸದ್ರಿಯವರ ದೇಹ ಜವಾಬ್ದಾರಿಯ ಮೇಲೆ ಹೋಗಲಾದೀತೆಂಬುದು ಸಹ ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು	
		ರೂ.	ಆ
715/60	ನಾರಾಯಣ ಶೆಟ್ಟಿ ಬಾಬಮ್ಮ ಶೆಟ್ರ ಅಳಿಯ. ಯಡ್ತಾಡಿ ಗ್ರಾಮ, ಪೋಸ್ಟು ಸಾಯಿಬರಕಟ್ಟೆ, ದ ಕ.	94	12
737/-	ಬಿ. ನಾರಾಯಣ ಶೆಟ್ಟಿ ಕೊಲ್ಲಮ್ಮ ಸೆಡ್ತೀರ ಮಗ. ಕಚ್ಚೂರ್ ಗ್ರಾಮ ಬಾಳ್ಕರ್ ಮನೆ, ಪೋಸ್ಟು ಹೆಬ್ರಿ ದ.ಕ.	100	0
1221/-	ಶೀನಪ್ಪ ಶೆಟ್ಟಿ. ಸುಬ್ಬಯ್ಯ ಶೆಟ್ರ ಮಗ. ಹನೆಹಳ್ಳಿ ಗ್ರಾಮ, ಪೋಸ್ಟು ಕೂರಾಡಿ,	194	5
759/-	ಕೊರಗಯ್ಯ ಶೆಟ್ಟಿ, ರಾಮಣ್ಣ ಶೆಟ್ರ ಮಗ, ಕಲ್ಲಟ್ಟೆ ಬೋಳಗಪ್ಪ ಶೆಟ್ರ ಮನೆ, ಶಿರಿಯಾರ ಗ್ರಾಮ ಪೋಸ್ಟು ಸಾಹೇಬರಕಟ್ಟೆ, ದ. ಕ.	16	0
47/51	ಗೋವಿಂದ ಶೆಟ್ಟಿ, ಚಂದಯ್ಯ ಶೆಟ್ರ ಅಳಿಯ, ಹಂದಾಡಿ ಮುಟ್ಟ ಪೋಸ್ಟು ಬ್ರಹ್ಮಾವರ ದ ಕ	90	0
77/-	ಸಾಕಿ ಹೆಂಗಸು ಪೆನ್ನ ಹೆಂಗಸಿನ ಮಗಳು, ಪಡುಕೆರ್ ಡಿ, ಹಂದಾಡಿ ಗ್ರಾಮ, ಪೋಸ್ಟು ಸಾಲಿಕೇರಿ ದ ಕ.	25	0
105/-	ನಾರಾಯಣ ಶೆಟ್ಟಿ, ಕೃಷ್ಣಯ್ಯ ಶೆಟ್ರ ಅಳಿಯ, ಕಾಡೂರ್ ಗ್ರಾಮ, ಪೋಸ್ಟು ಕೊಕ್ಕರ್ಣೆ. ದ. ಕ.	15	0
360/-	ಹಿರಿಯಣ್ಣ ಶೆಟ್ಟಿ ಅಂತಯ್ಯ ಶೆಟ್ರ ಅಳಿಯ, ಕಾಡೂರ್ ಗ್ರಾಮ ಪೋಸ್ಟು ಕೊಕ್ಕರ್ಣೆ. ದ. ಕ.	275	0
526/-	ಸಾಬೀರ ಡಿ ಸೋಜ, ಜಾಕೋಬ್ ಡಿ ಸೋಜರ ಮಗ, ಹಂದಾಡಿ ಗ್ರಾಮ, ಪೋಸ್ಟು ಬ್ರಹ್ಮಾವರ, ದ ಕ.	275	0
580/51	ನಾರಾಯಣ ಶೆಟ್ಟಿ, ಸಂಕಯ್ಯ ಶೆಟ್ರ ಮಗ, ಹೊಸಾಳ ಗ್ರಾಮ, ಪೋಸ್ಟು ಬಾರ್ಕೂರು, ದ. ಕ.	175	0
519/-	ಅಬ್ದುಲ್ ರಹಿಮಾನ್ ಸಾಹೇಬ್ ಇಸ್ಮಾಯಿಲ್ ಸಾಹೇಬರ ಮಗ ಬಕಪಟ್ಣ ಪೋಸ್ಟು ಸಾಲಿಕೇರಿ ದ ಕ	55	0
610/-	ಶೀನಪ್ಪ ಹೆಗ್ಡೆ ಚಿಕ್ಕಮ್ಮ ಹೆಗ್ಗಡ್ತಿ ಮಗ ಹೇರೂರು ಗ್ರಾಮದ ಹೆಂಚಿ ಪೋಸ್ಟು ಕುಂಭಾಶಿ ದ. ಕ.	180	0
707/-	ಸಂಜು ಭಂಡಾರಿ ಕೊರಗ ಭಂಡಾರಿಯ ಅಳಿಯ ಕಚ್ಚೂರ್ ಗ್ರಾಮ ಪೋಸ್ಟು ಬಾರ್ಕೂರ್ ದ. ಕ.	80	0
817/-	ಜಗನ್ನಾಥ ಶೆಟ್ಟಿ ಅಣ್ಣಯ್ಯ ಶೆಟ್ರ ಮಗ ಬೈಕಾಡಿ ಗ್ರಾಮ ಪೋಸ್ಟು ಬ್ರಹ್ಮಾವರ	140	0
854/-	ಸಿಲ್ವೆಸ್ಟರ್ ಸುವಾರಿಸ್ ಜೇವಿಯರ್ ಮಾರ್ಟಿನ್ ಸೋಜರ ಮಗ ಉಪ್ಪಿನಕೋಟೆ ಗ್ರಾಮ ಕಚ್ಚೂರ್ ಪೋ ಬಾರಕೂರ ದ.ಕ.	160	0

Office; Brahmavar }
Date 15-12-1952. }

K Bhujanga Hegde
Agent

ದ. ಕ. ಸಬೊರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

O. S. 182/1952.

ಸಾಂತಮ್ಮ ಕೂಡಾ — ವಾದಿರು
ಸೀಲಮ್ಮ ಕೂಡಾ — ಪ್ರತಿವಾದಿಗಳು.
ಮೇಲಿನ ವ್ಯಾಜ್ಯದ

31ನೇ ಪ್ರತಿವಾದಿ - ವಿಶ್ವನಾಥರೈ - ಮುಂಡಮ್ಮ ಹೆಂಗ್ಸಿನ ಮಗ.
32ನೇ — ಡಿ — ಪುಷ್ಪಾವತಿ - ಪೌತಿ ಚಿನ್ನಮ್ಮ ಯಾನೆ ಪದ್ಮಾವತಿ ಮಗಳು ವ ಅಣ್ಣಪ್ಪ ರೈನವರ ಹೆಂಡ್ತಿ.
34ನೇ — ಡಿ — ರಾಮಮೋಹನ ರೈ }
35ನೇ — ಡಿ — ಯಶೋಧವತಿ } ಪೌತಿಚಿನ್ನಮ್ಮ ಯಾನೆ ಪದ್ಮಾವತಿ ಮಕ್ಕಳು.
37ನೇ — ಡಿ — ವೇದಾವತಿ }
38ನೇ — ಡಿ — ರತ್ನಪ್ರಭಾವತಿ - ಮೈನರ್ — ಡಿ — ಗಾರ್ಡಿಯನ್ ಅಕ್ಕ 32ನೇ ಪ್ರತಿವಾದಿ ಪುಷ್ಪಾವತಿ.
99ನೇ — ಡಿ — ರುಕ್ಮಿಣಿ - ಸೀಲಮ್ಮಳ ಮಗಳು
100ನೇ — ಡಿ — ರವೀಂದ್ರನಾಥ ರೈ }
101ನೇ — ಡಿ — ಶಾರದಾ } 99ನೇ ಪ್ರತಿವಾದಿ ರುಕ್ಮಿಣಿ ಮಕ್ಕಳು.
102ನೇ — ಡಿ — ವಸಂತಕ್ಕೆ }
103ನೇ — ಡಿ — ಪ್ರೇಮಚಂದ್ರ - ಮೈನರ್ - ಗಾರ್ಡಿಯನ್ ತಾಯಿ 99ನೇ ಪ್ರತಿವಾದಿ ರುಕ್ಮಿಣಿ.
115ನೇ — ಡಿ — ಜಯರಾಮ — ರಾಮಕ್ಕೆ ಮಗ.

31, 31, 35, 37ನೇ ಪ್ರತಿವಾದಿಗಳು ಪುತ್ತೂರು ತಾಲ್ಲೂಕು ಪುತ್ತೂರು ಕಸಬಾದಲ್ಲಿರುವವರು. 32, 38ನೇ ಪ್ರತಿವಾದಿಯರು ಮಂಗಳೂರು ಟೌನ್ ಬೋಳಾರದಲ್ಲಿರುವವರು. 99ರಿಂದ 103ನೇ ಪ್ರತಿವಾದಿಯರು, ಮಡಿಕೇರಿಯ ಗ್ಲೆನ್‌ಮೋರ್ ಎಸ್ಟೇಟಿನಲ್ಲಿರುವವರು. 115ನೇ ಪ್ರತಿವಾದಿ ಕಾರ್ಕಳ ತಾಲ್ಲೂಕು ಸಂಗಬೆಟ್ಟು ಗ್ರಾಮದ ಎಳಿಯ ಎಂಬಲ್ಲಿರುವವರು,

ಮೇಲಿನ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ -

ವಾದಿಯು ನೀವು ಕೂಡಾ ಉತ್ತರ ಮೇಲೆ ದಾಖಲು ಮಾಡಿದ್ದ ಕೈಫೇತಿನಲ್ಲಿ ಕೇಳಿದ ನಿವೃತ್ತಿಗಳಿಗೋಸ್ಕರ ಮಾಡಿದ್ದ ಮೇಲಿನ ಹಿತೆ ವ್ಯಾಜ್ಯವು ತಾ। 23-12-1952ಕ್ಕೆ ಘಂಟೆ 11ಕ್ಕೆ ಸರಿಯಾಗಿ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಯಿಟ್ಟಿರುವದರಿಂದ, ನೀವು ಸದ್ರಿ ದಿನ ಖುದ್ದಾಗಲೀ ಯಾ ವಕೀಲರ ಮುಖಾಂತ್ರ ಆಗ್ಲಿ ಹಾಜರಾಗಿ ನಿಮ್ಮ ಆಕ್ಷೇಪಗಳೇನಾದ್ರು ಇದ್ದಲ್ಲಿ ತಿಳಿಸತಕ್ಕದ್ದು ಹಾಗೆ ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ನಂಬ್ರವನ್ನು ತನಿಖೆ ನಡಿಸಲಾದೀತು.

(ಕೋರ್ಟಿನ ಹುಕುಂ ಪ್ರಕಾರ)

ಮಂಗಳೂರು
6-12-1952

ಕೆಲ್. ವಿ. ವ್ಯಾಸರಾವ್
ವಾದಿರ ಕಡೆ ಎಡ್ವಕೇಟ್

“ಗೋಪಾಲ ಭೇಷಜಾಶ್ರಮ” ಮಂಗಳೂರು
(ಸ್ಥಾಪನೆ 1910)
ಸ್ಥಾಪಕರು:- ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ, ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ ಭಾಗ್ಯಶಾಲಿಗಳಿಗೂ ಲಭ್ಯವಾಗಿರುವುದು.

ಇವರ
ವನಜೀವಾತು
ಎಂಬ
[illegible] ರಸಾಯನ

ಹೆಚ್ಚಿನ ಮಾಹಿತಿಗೆ—ಡಾ। ಯಂ ಸಿ. ಶಾಸ್ತ್ರೀ. ಯಲ್. ಐ ಎಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಥಾನಿಕರು:— ಡಾ। ಎ. ಕೆ. ಶಿವರಾಮರಾವ್, ಕುಂಜಿಬೆಟ್ಟು

ಭಾರತದ ಪಂಚವಾರ್ಷಿಕ ಯೋಜನೆ

(೪ನೇ ಪುಟದಿಂದ)

…ಂತಾದುವುಗಳ ಅಭಿವೃದ್ಧಿಯು ಯೋ… ಗುರಿಯನ್ನು ಇಟ್ಟುಕೊಂಡಿರುವದು …ಕ್ಷಣಿಕ ಹಾಗೂ ಆರೋಗ್ಯ ಕಾರ್ಯ…ಮಗಳ ಕುರಿತೂ ವಿಶೇಷ ಆಸ್ಥೆಯನ್ನು …ರಿಸಲಾಗಿದೆ.

…ಯ ಕ್ಷೇತ್ರಭಾಗಗಳು ಉಳಿಸುವುವು ಆಂತರಿಕ ಉತ್ಪಾದನೆಯನ್ನು ಹೆಚ್ಚಿ…ವುದು ಯೋಜನೆಯ ಗುರಿಯಾಗಿವೆ. …ಧಿಕ ಉತ್ಪಾದನೆಗೊಂಡ ಎಲ್ಲ ಸರಕುಗ… ಪೇಟೆಗೆ ಬರುವಂತೆ ವಾತಾವರಣವು …ಾಗಬೇಕು ಆಹಾರಧಾನ್ಯಗಳ ಆಯಾ…ವು ಕೆಲವೊಂದು ಪಟ್ಟಿಗಳಲ್ಲಿ ಸಂಪೂ…ರ್ ನಿಲ್ಲಬೇಕು. ಆಹಾರದ ನಿಯಂತ್ರ…ವನ್ನು ಭದ್ರರೀತಿಯಲ್ಲಿ ಮುಂದರಿಸು…ದು ಆವಶ್ಯಕವೆಂದು ಯೋಜನೆಯು …ನಿರೂಪಿಸಲಾಗಿದೆ. ಅಖಿಲ ಭಾರತದ …ೋಜನೆಯುಂಡೇ ನಿಯಂತ್ರಣ…ನ್ನು ಮನ್ನಿಸುವುದು ಆವಶ್ಯ…

ಇದಕ್ಕೆ ಸಮರ್ಥವಾದ ಆಡಳಿತ ಯಂ…ವು ಬೇಕೆಂಬಲ್ಲಿ ವಿಭಿನ್ನಾಭಿಪ್ರಾಯ…ದ. ಎಂತಲೇ ಸದ್ಯದ ಆಡಳಿತ ಪದ್ಧ…ಯಲ್ಲಿ ಸುಧಾರಣೆಯಾಗಬೇಕೆಂದು …ೋಜನಾ ಆಯೋಗ ಬಯಸಿದೆ. ಆಡ…ತವು ಮುಖ್ಯವಾಗಿ ಪ್ರಾಮಾಣಿಕತೆ, …ಾರ್ಯದಕ್ಷತೆ, ಮಿತವ್ಯಯ ಹಾಗೂ …ಾರ್ವಜನಿಕ ಸಹಕಾರಗಳನ್ನು ಸಂಪಾ…ಸಬೇಕು. ಇವುಗಳು ಒಂದಕ್ಕೊಂದು …ಕಟವಾಗಿ ಸಂಬಂಧಿಸಿದವಾದುದರಿಂದ …ಂದನ್ನು ಸಾಧಿಸಿದರೆ, ಆದರಿಂದ ಉಳಿದ …ೋಗ್ಯತೆಗಳೂ ಕೈಗೂಡಿ ಬರುವುವು.

ಅಕ್ಕಿಯ ಕೊರತೆಯು ಹೇಳಿ ತೀರದ…ರುವುದರಿಂದ, ಮತ್ತು ನಮಗೆ ಅದು …ೇಕೇ ಬೇಕಾದರೆ ವಿಶೇಷವಾಗಿ ಹಣ …ಟ್ಟು ಅದನ್ನು ತರಿಸಬೇಕಾಗಿರು…ದರಿಂದ, ಜನರು ತಮ್ಮ ಆಹಾರಾ…ಸಗಳ ಬದಲಾವಣೆ ತಂದುಕೊಳ್ಳಬೇಕೆಂದು ಯೋಜನಾ ಆಯೋಗ ಸೂಚಿಸುತ್ತದೆ. ಗೋಧಿ ಮತ್ತಿತರ ಧಾನ್ಯಗಳ ಸೇವನೆಯಿಂದ ಅಕ್ಕಿಯ ಕೊರತೆಯನ್ನು ತುಂಬಲು ಕಲಿಯಬೇಕೆಂದು ಅದು ವಿನಂತಿಸುತ್ತದೆ

ಭೂಸುಧಾರಣೆಯ ಕುರಿತು

ರಾಷ್ಟ್ರದ ಮೂಲಭೂತ ಸಮಸ್ಯೆಯಾಗಿ ಭೂಸುಧಾರಣೆ ಇರುವುದರಿಂದ ಅದನ್ನು ಯೋಗ್ಯ ರೀತಿಯಲ್ಲಿ ಬಗೆಹರಿಸುವ ಬಗ್ಗೆ ಯೋಜನೆಯಲ್ಲಿ ಶಿಫಾರಸುಗಳಿವೆ ರಾಷ್ಟ್ರದ ಭಾವೀ ಆರ್ಥಿಕ, ಸಾಮಾಜಿಕ ಸಂಘಟನೆಯ ಸ್ವರೂಪವು ಈ ಪ್ರಶ್ನೆಯನ್ನೇ ಹೊಂದಿಕೊಂಡಿದೆ ಎಂದವರ ಅಭಿಪ್ರಾಯ ಯೋಜನೆಯಲ್ಲಿ ಉತ್ಪಾದನೆಯನ್ನು ಹೆಚ್ಚಿಸುವುದೊಂದು ಮುಖ್ಯ ಅಂಗವಾದ್ದರೆ, ಜೊತೆಗೆ ಆದಾಯ ಮತ್ತು ಸಂಪತ್ತಿನ ಸ್ಥಿತಿಯಲ್ಲಿರುವ ಅಸಮಾನತೆಯನ್ನು ನೀಗಿಸುವುದೂ ಆರ್ಥಿಕ ಶೋಷಣೆಯನ್ನು ಕಡಿಮೆ ಮಾಡುವುದೂ ಇನ್ನೊಂದು ಅಂಗವಾಗಿದೆ ರೈತರ ಹಕ್ಕು ಬಾಧ್ಯತೆಗಳಿಗೆ ಸಂರಕ್ಷಣೆಯನ್ನು ಕೊಡುವುದೂ ಗ್ರಾಮಾಂತರ ಪ್ರದೇಶಗಳ ಜನರಿಗೆ ಸಮಾನ ಅವಕಾಶ ಹಾಗೂ ಸ್ಥಾನವನ್ನು ನೀಡುವುದೂ ಯೋಜನೆಯ ಧ್ಯೇಯ. ಭೂಮಿಯಲ್ಲಿ ಹಿತಸಂಬಂಧವಿರುವ ಮಧ್ಯಸ್ಥರು ದೊಡ್ಡ ಭೂಮಾಲಿಕರು, ಸಾಮಾನ್ಯ ಹಾಗೂ ಚಿಕ್ಕ ರೈತರು, ಇತರರ ಒಡೆತನದ ಭೂಮಿಯನ್ನು ಗೇಣಿಗೆ ಪಡೆದ ರೈತರು, ಕೃಷಿನಿರತರಾದ ಕೂಲಿಗಳು ಇವರೆಲ್ಲರ ಬಗ್ಗೆ ಯೋಜನೆಯಲ್ಲಿ ಉಚಿತವಾದ ಸೂಚನೆಗಳು ಮಾಡಲ್ಪಟ್ಟಿವೆ

ವ್ಯಕ್ತಿಯು ಒಡೆತನದಲ್ಲಿರುವ ಭೂಮಿಯ ಗರಿಷ್ಠ ಪ್ರಮಾಣವನ್ನು ನಿರ್ಧರಿಸುವುದು ಸ್ವಂತ ಸಾಗುವಳಿ ಮಾಡುವ ದೊಡ್ಡ ದೊಡ್ಡ ಭೂಮಾಲಿಕರಿಗೆ ಕೊಡಬೇಕಾದ ರಿಯಾಯತಿ, ಕೃಷಿ ಉತ್ಪಾದನೆಯ ಹೆಚ್ಚಳಿಗೆ ಘಾತಕವಾಗದ ರೀತಿ ಭೂಸಾಗುವಳಿ ಪದ್ಧತಿಯ ಬಗ್ಗೆ ಕಾಯಿದೆ ಮಾಡುವುದು, ಸಣ್ಣ ಹಾಗೂ ಸಾಮಾನ್ಯ ರೈತರು ಸಹಕಾರಿ ಸಂಘಗಳಿಗೆ ಸೇರಿ ಸಾಮೂಹಿಕ ಕೃಷಿಯನ್ನು ಮಾಡುವಂತೆ ಪ್ರೋತ್ಸಾಹಿಸುವುದು ಮುಂತಾದವುಗಳ ಬಗ್ಗೆ ಯೋಜನೆಯಲ್ಲಿ ಯೋಗ್ಯ ಸೂಚನೆಗಳಿವೆ.

ಹಿಡುವಳಿಗಳು ತೀರ ಚಿಕ್ಕವಾಗದಂತೆ ನಿರ್ಬಂಧಿಸುವ ಕಾಯಿದೆಗಳನ್ನು ರಾಜ್ಯ ಸರಕಾರಗಳು ಮಾಡಬೇಕೆಂದಿದೆ. ಹಾಗೆಯೇ ಭೂಮಿಯೊಡೆಯರು ಗೇಣಿಗೆ ಕೊಟ್ಟ ಭೂಮಿಯನ್ನು ಐದು ಅಥವಾ ಹತ್ತು ವರ್ಷಗಳೊಳಗೆ ಸ್ವಂತ ಸಾಗುವಳಿ ಮಾಡುವುದಕ್ಕಾಗಿ ಮರಳಿ ಪಡೆಯದಿದ್ದರೆ ಆ ಭೂಮಿಯ ಮೇಲೆ ರೈತನ ಒಡೆತನವೇ ಸ್ಥಿರವಾಗಬೇಕೆನ್ನುವ ಮಹತ್ವದ ಸೂಚನೆ ಇದೆ. ಗೇಣಿಯ ಅವಧಿ ಸಾಮಾನ್ಯವಾಗಿ ಐದು ವರ್ಷ ಇರಬೇಕೆಂದೂ ಗೇಣಿಯನ್ನು ಬೆಳೆಯ ಮೂರರಲ್ಲಿ ಒಂದಂಶ ಅಥವಾ ನಾಲ್ಕರಲ್ಲಿ ಒಂದಂಶ ನಿರ್ಧರಿಸಬೇಕೆಂದು ಹೇಳುವುದುಂಟಾದರೂ, ಬೇರೆ ಸಾಮಾನ್ಯ ಪರಿಸ್ಥಿತಿಯನ್ನು ಲಕ್ಷಿಸಿದರೆ ಐದರಲ್ಲಿ ಒಂದಂಶ ಗೇಣಿಯೇ ನ್ಯಾಯವೆಂದೂ ಯೋಜನೆ ಹೇಳಿದೆ

All Secondary Schools may subscribe to "Navayuga" weekly Since it has been approved by the Director of Public Instruction Madras

---

The Canara Industrial & Banking Syndicate Ltd Byndoor.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಬೈಂದೂರು.

ಜಾಹೀರು ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಲ್ಲಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದುದರಿಂದಲೂ, ಅವರಿಗೆ ಕಳುಹಿಸಿದ ರಜಿಸ್ಟ್ರಿ ನೋಟೀಸು [illegible] ಬಂದಿರುವದರಿಂದಲೂ, ಈ [illegible] ಅಡವಿಟ್ಟ ನಗಗಳನ್ನು ಇದೇ ತಿಂಗಳ ತಾ 20- 2 1952ನೇ [illegible] ಗಂಟೆ 2ಕ್ಕೆ [illegible] ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು [illegible]

ಲೋನ ನಂಬ	ಹೆಸರು ಮತ್ತು ವಿಳಾಸ	[illegible]
2 -/51	ಕರ್ನಮನೆ ಚಿಕ್ಕ, ವೆಂಕ್ಟನ ಅಳಿಯ, ರೈತ, ಕಂಗೋಲ್ ಗ್ರಾಮ, ಕುಂಭಾಶಿ ಕಟ್ಟೆ	40
412/51	ಹಸನ್ ಸಾಹೇಬ, ಕಾಧಿರ ಒಪ್ಪಾ ಸಾಹೇಬರ ಮಗ, ಶಿರೂರು	5
4 9/51	ಕೋಣೂರು ಮಂಜಯ್ಯ ಶೆಟ್ಟಿ ಮಂಜಯ್ಯ ಶೆಟ್ಟಿ ಅಳಿಯ ಕಸ್ಬ ಕಾಲ್ತೋಡು.	55
648/51	ಕೊರಗಪ್ಪ S/o ಉಕ್ಕಿರಪ್ಪ, ಅವಲಕ್ಕಿ ವ್ಯಾಪಾರ ಮಾಡುವವನು, ಬೈಂದೂರು	39

Office. Byndoor
Date 9-12-52.

B Narasimhayya.
Agent

UDIPI MUNICIPALITY

TENDER NOTICE.

Sealed tenders will be received by the Commissioner, Udipi Municipality at his office upto to 4 P. M. on 15—1—1953 for the following works

Name of Work	Estimate	Earnest Money Deposit
1) Providing bitumen premix carpet 1¼" thick along Mosque Road ...	Rs 31 000/-	Rs 670/-
2) Providing bitumen premix carpet 1½" thick along Maruthi Veethika Road ...	Rs 22,800/	Rs 355

Tenders must be submitted in sealed covers separately for each of the above works and the tenders will be opened at 4-30 P. M. on the same day

Particulars of tender, schedule of quantities and detailed specifications etc can be obtained on application on payment of Rs 2—0—0 each. Each tenderer must pay into the Municipal Treasury the earnest money specified against each of the above works and enclose the receipt along with the tender

Further particulars can be obtained from the Municipal Office during Office hours on working days

Municipal Office, Udipi,
Dated 3-12-1952

K. Gopala Menon.
Commissioner,
Udipi Municipality

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾರ್ಕಳ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಲ್ಲಿ [illegible] ರಜಿಸ್ಟ್ರಿ ನೋಟೀಸು [illegible] ನಗಗಳನ್ನು ಬಿಡಿಸಿಕೊಂಡು ಹೋಗುವರೆ [illegible] ಇದೇ ತಾ. 24-12 52ನೇ ಬುಧವಾರ ಮಧ್ಯಾಹ್ನ ಗಂಟೆ 3ಕ್ಕೆ [illegible] ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುತ್ತದೆ. [illegible]

ಲೋನ ನಂಬ್ರ	ಸಾಲಗಾರನ ಹೆಸರು ಮತ್ತು ವಿಳಾಸ	ಅಸಲು ಐವೇಜು
[illegible]	[illegible]	100
[illegible]	[illegible]	200
[illegible]	[illegible]	40
[illegible]	[illegible]	25

[illegible]
10 12 1952

K Gopalkrishna Shetty
Agent

ಜಠರವಟಿಕೆ ತುಂಬಲಿ!

(೧ನೇ ಪುಟದಿಂದ)

ಹುದು ಉಳಿದೆಲ್ಲ ಶಕ್ತಿಯೂ ವ್ಯರ್ಥವಾಗುತ್ತದೆ ಇದು ಸರಿಯೆ? ೫೦ ಅಶ್ವಶಕ್ತಿಯ ಒಂದು ವಿದ್ಯುತ್ ಮೋಟಾರು ೨೦ ಅಶ್ವಶಕ್ತಿಯಷ್ಟೆ ನೀಡುವುದಾದಲ್ಲಿ ನಮಗೆ ತೃಪ್ತಿಯುಂಟಾಗುತ್ತದೆಯೆ ಇಲ್ಲ ಒಡನೆಯೇ ಅದನ್ನು ರಿಪೇರಿ ಮಾಡಿಸಿ, ಪೂರ್ಣ ಶಕ್ತಿಯನ್ನದು ನೀಡುವಂತೆ ನೋಡಿಕೊಳ್ಳುತ್ತೇವೆ ಒಂದು ಕಾರಖಾನೆಯಲ್ಲಿರುವ ಯಂತ್ರವು ಸೋಮಾರಿಯಾಗಿ ಬಿದ್ದಿರುವುದೆಂದರೆ ಅದರ ಒಡೆಯನು ದಿವಾಳಿಎದ್ದು ಹೋಗಲು ಸಿದ್ಧನಿದ್ದಾನೆಂಬುದರ ಮುನ್ಸೂಚನೆ ಇಂಥದರಲ್ಲೆಲ್ಲ ನಾವು ಸತರ್ಕರಾಗಿದ್ದುಕೊಂಡು ಕಾರ್ಯ ನಿರ್ವಹಿಸುತ್ತೇವೆ ಆಲಸ್ಯ ಸೋಮಾರಿತನದ ಜಾಡ್ಯಕ್ಕೆ ಎಡೆ ದೊರೆಯದಂತೆ ಜಾಗರೂಕತೆ ವಹಿಸುತ್ತೇವೆ

ಇವನ್ನೇ ಒಂದು ರಾಷ್ಟ್ರದ ಕಲ್ಯಾಣ ಕಾರ್ಯಕ್ಕೆ ಜೀವವಾಗಿ ಉಪಯೋಗಿಸಬಹುದು 'ನಾವು ಶತಮಾನಗಳಿಂದ ಜಠರದಲ್ಲಿ [illegible] ಆಗಿರುವೆವಲ್ಲಾ"— ಎಂಬ [illegible] ಮಾತಿಗೆ 'ನಿಮ್ಮ ಮನೆಗೆ ಬೆಂಕಿ ಬಿದ್ದಾಗ ಕೂಡ ಹಾಸಿಗೆಯಲ್ಲಿ ಹೊರಳಾಡುತ್ತಿರುವವರೇನು?' ಎಂದ ಮಾರ್ಗದರ್ಶಿಯ ಹೇಳಿಕೆಯು ಒಂದು ಕೋಲಾಹಲದೊಡನೆ ಶಕ್ತಿಯುಳ್ಳ ಸಂದೇಶವಾಗ ನಾವು ನಿಶ್ಚಿಂತೆಯ ನಿದ್ದೆಯಲ್ಲಿ [illegible] ಪಂಕ್ತಿ ಬಡತನ ಹಸಿವು ರೋಗದ ಜಿಸಗ ೨, ಇನ್ನೂ ಮುಂತಾದ ಸಮಾಜ ವಿನಾಶಕ ಶಕ್ತಿಗಳು ನೀಡುವ ರಣಾಹ್ವಾನವನ್ನು ಸ್ವೀಕರಿಸಿ ಯೋಗ್ಯ ಪ್ರತ್ಯುತ್ತರವನ್ನು ನಮ್ಮ ಭುಜಬಲದಿಂದ ನೀಡಬೇಕಾದುದೇ ನಮ್ಮ ಇಂದಿನ ಕರ್ತವ್ಯ ಪಂಡಿತ ನೆಹರೂ ನಮ್ಮನ್ನು ನಂಬಿ ೧೯೫೧ರೊಳಗಾಗಿ ದೇಶವು ಅನ್ನದ ಮಟ್ಟಿಗೆ ಸ್ವಾವಲಂಬಿಯಾಗುವುದೆಂದು ಘೋಷಿಸಿದರು ಮೂರು ವರ್ಷಗಳ ಅವಧಿ ಸಮೀಪಿಸಿತು ೧೦°/ ಮಾತ್ರ ಅನ್ನದ ಕೊರತೆ ಇತ್ತು ನಾವೇ ಮನಸ್ಸು ಮಾಡಿದ್ದರೆ, ಬೇಗ [illegible] ನೆಹರೂರ ಮಾತನ್ನು ನಡೆಸಿಕೊಡಬಹುದಿತ್ತು ಆದರೆ ಅವರ ಸ್ವಾರ್ಥರಹಿತ ತುಂಬಿದ ಕಳಕಳಿಯನ್ನು ನಾವು ಮನದಟ್ಟು ಮಾಡಿಕೊಳ್ಳದ ಕಾರಣ ಇನ್ನೂ ಪರಿಸ್ಥಿತಿ ಹಾಗೆಯೇ ಇದೆ

ಪಂಚವಾರ್ಷಿಕ ಯೋಜನೆಯು ಗತಿ ಹಾಕಿದೆ. ಸರಕಾರ ೨೦೦೦ ಕೋಟಿ ರೂಪಾಯಿಗೂ ಹೆಚ್ಚು ಬಂಡವಾಳವನ್ನು ಇದಕ್ಕೆ ವಿನಿಯೋಗಿಸುವರು ಯೋಜನೆ ಎಲ್ಲಾದರೂ ಕುಸಿಯಿತೆಂದರೆ ನಾವು ಅಷ್ಟು ಹಣವನ್ನು ವ್ಯರ್ಥ ಕಳೆದುಕೊಂಡು ಬಿಡುವುದಾಗುತ್ತದೆ. ಆದುದರಿಂದ, ಇದು ಸರಕಾರದ ಕೆಲಸವೆಂದೂ ವಿಪತ್ತಸಂಗವೆಂದೂ ತಿಳಿದುಕೊಂಡು, ಭವಿಷ್ಯದ ಉನ್ನತಿಗಾಗಿ, ವರ್ತಮಾನದ ಕಷ್ಟಕಾರ್ಪಣ್ಯಗಳನ್ನು ಲೆಕ್ಕಿಸದೆ, ಕಾರ್ಯರಂಗಕ್ಕೆ ಇಳಿಯೋಣ!

— ಓಂತತ್ಸತ್||

(ನೇ ಪುಟದಿಂದ)

ಉಪಯೋಗಕ್ಕೆ ಬೀಳುವ ಗಂಜಿಯನ್ನು ಯುದ್ಧ ಕಾಲದಲ್ಲಿ ಆಪತ್ಕಾಲವೆಂದು ಬಳಸಿದರೂ, ಈ ಪದ್ಧತಿ ಈಗೀಗ ತುಂಬ ಜನಪ್ರಿಯವೆನಿಸಿದೆ

ವಿದ್ಯುಚ್ಛಕ್ತಿಯ ಉತ್ಪಾದನೆ

ಬ್ರಿಟನಿನ ಒಂದು ಕಂಪೆನಿಯು ಕಸಕಡ್ಡಿಗಳನ್ನು ಉರಿಸಿ, ಅದರಿಂದ ವಿದ್ಯುತ್ ಉತ್ಪಾದಿಸುವ ಯಂತ್ರವನ್ನು ಕಂಡುಹಿಡಿದಿದೆ ಇದರಿಂದ ಉರುವಲಿನ ಸಮಸ್ಯೆ ಕೆಲ ಮಟ್ಟಿಗೆ ಕಡಿಮೆಯಾಗಬಹುದು ಜೊತೆಗೆ ಈ ಕಂಪೆನಿಯ ಸಾಹಸವೆಂಬಂತೆ– ೫೦೦೦ ಕಿಲೋವಾಟು ಶಕ್ತಿಯ ಎರಡು ಟರ್ಬೋ ಆಲ್ಟರನೇಟು ಮೆಶೀನುಗಳೂ ನಡೆಸಲ್ಪಡುತ್ತವೆ

ಇಷ್ಟರಿಂದಲೇ ಈ ಕಂಪೆನಿಗೆ ತೃಪ್ತಿಯಾಗಿಲ್ಲ. ತಿಪ್ಪೆ ಕಸಕಡ್ಡಿಗಳ ೬೦°/೦ ಭಾಗ ಮಾತ್ರ ದಹನಕ್ಕೆ ಯೋಗ್ಯವಾಗಿರುವುದರಿಂದ ಉಳಿದ ೪೦°/೦ ವ್ಯರ್ಥ ಹಾಳಾಗುತ್ತದಲ್ಲ ಎಂದು ಇದಕ್ಕೆ ವ್ಯಸನ ಈಗ ನಡೆಸಿದ ಪ್ರಯೋಗಗಳ ಪರಿಣಾಮವಾಗಿ ಒಂದು ಹೊಸ ದಹನ ಯಂತ್ರವು ನಿರ್ಮಾಣಗೊಂಡಿದೆ ಕಸಕಡ್ಡಿಗಳು ಹೊತ್ತಿ ಉರಿಯುವುದಕ್ಕೆ ಮುಂಚಿತವಾಗಿ ಒಂದು ನಳಿಕೆಯನ್ನು ಹಾದು ಹೋಗುವಂತೆ ಇದರಲ್ಲಿ ವ್ಯವಸ್ಥೆ ಇದೆ ಆಗ ಕಸಕಡ್ಡಿಗಳಲ್ಲಿರುವ ಎಲ್ಲ ಧಾತುಗಳನ್ನು ಆಕರ್ಷಿಸಿಕೊಂಡು ಬೇರ್ಪಡಿಸುವ ಕಾರ್ಯವು ನಡೆಯುತ್ತದೆ ಈ ಧಾತುಗಳನ್ನು ಕರಗಿಸಿ, ಬೇಕಾದ ಕೆಲಸಕ್ಕೆ ಹಚ್ಚಬಹುದು.

ಕಸಕಡ್ಡಿಗಳೆಂದು ಎಸೆದು ಬಿಡುವ ವಸ್ತುಗಳಲ್ಲಿ ಚಿಂದಿಬಟ್ಟೆ, ಕಾಗದ, ಗೋಣಿಯ ತುಂಡುಗಳು ಮುಂತಾದೆಷ್ಟೊ ಉಪಯುಕ್ತ ವಸ್ತುಗಳು ಇವೆ ಇವುಗಳ ಉಪಯೋಗ ಎಲ್ಲರಿಗೂ ತಿಳಿದಿದೆ

ಕಾಗದ ಗೋಡೆ

ಕಬ್ಬಿನ ಸಿಪ್ಪೆ ಇರಲಿ, ಎಲೆಯ ಮರದ ಚಕ್ಕೆ ಅಥವಾ ಹುಡಿಯಿರಲಿ – ಇಂದು ಅವೆಲ್ಲಕ್ಕೂ ಯೋಗ್ಯತೆ ಇದೆ. ಯಾರಿಗೂ ಹೆಚ್ಚು ಮಾಹಿತಿ ಇರಲಿಕ್ಕಿಲ್ಲ— ಮರದ ವಸ್ತುವೊಂದನ್ನು ನಿರ್ಮಿಸುವಾಗ ಅದನ್ನು ಕೆತ್ತಲಿಕ್ಕೆ, ಕೀಸುಳಿಯಾಗಿ ಸಮ ಮಾಡಲಿಕ್ಕೆ ಎಂದು, ಮುಂತಾಗಿ ಮೂರರಲ್ಲಿ ಎರಡಂಶ ನಷ್ಟವಾಗಿಯೇ ಹೋಗುತ್ತದೆ! ವಿಜ್ಞಾನ ಈ ನಷ್ಟವನ್ನು ಲಾಭದಲ್ಲಿ ಪರಿವರ್ತಿಸುವ ಜಾದೂಗಾರಿಕೆಯನ್ನು ತೋರಿಸಿದೆ. ಮರದ ಚಕ್ಕೆ ಹಾಗೂ ಹುಡಿಯಿಂದ ಆಲ್ಕೋಹಾಲನ್ನು ತಯಾರಿಸಬಹುದು. ಅಮೇರಿಕದ ಒಂದು ಕಂಪೆನಿಯಂತೂ ಈ ಚಕ್ಕೆ ಹುಡಿಗಳಿಂದ ಒಂದು ತೆರನಾದ ತಗಡು ತಯಾರಿಸಿದ್ದು, ಮನೆಯ ಗೋಡೆಗನ್ನಾಗಿ ಅದನ್ನು ಉಪಯೋಗಿಸಬಲ್ಲೆವು ಅಮೇರಿಕದ ಅನೇಕ ಗೃಹಗಳು ಮರದ ತಗಡಿನಿಂದಲೇ ನಿರ್ಮಿತವಾಗಿವೆ ಇಟ್ಟಿಗೆಯ ಆವಶ್ಯಕತೆಯೇ ಉಳಿದಿಲ್ಲ ಸಕ್ಕರೆ ಕಾರ್ಖಾನೆಯಲ್ಲಿ ವ್ಯರ್ಥ ಹಾಳಾಗುವ ಸಿಪ್ಪೆ, ಹಾಗೂ ಜೋಳದ ದಂಟುಗಳಿಂದ ಈ ಬಗೆಯ ತಗಡು ಗೋಡೆಗಳನ್ನು ಸಿದ್ಧಪಡಿಸಬಲ್ಲೆವು ಒಂದೆರಡು ನಮೂನೆಯಲ್ಲ–ಈಗಾಗಲೇ ೧೫೦ ಬಗೆಯ ತಗಡು ಗೋಡೆಗಳು ಪೇಟೆಗೆ ಬಂದಿವೆ.

ದಕ್ಷಿಣ ಫ್ಲೋರಿಡಾದಲ್ಲಿ ಕಿತ್ತಳೆ ಹಾಗೂ ಅಂಜೂರ ಬೆಳೆಸುತ್ತಾರೆ ಈಗ ಅವುಗಳ ತ್ಯಾಜ್ಯವೆಂದು ಗಣಿಸುವ ವಸ್ತುಗಳನ್ನು ಪಶುಗಳ ಪೋಷಣೆಗೆ ಉಪಯುಕ್ತವಾದ ಪೌಷ್ಟಿಕ ದ್ರವ್ಯಗಳ ತಯಾರಿಗೆ ಉಪಯೋಗಿಸುತ್ತಾರೆ.

ಧಾನ್ಯಗಳ ಹೊಟ್ಟಿನಿಂದಲೂ ವಿಜ್ಞಾನವು ಉಪಯುಕ್ತ ಕೆಲಸ ಮಾಡಿಸಿಕೊಂಡಿದೆ ಸಿಮೆಂಟ ಬ್ಲಾಕನ್ನು ನಿರ್ಮಿಸುವಲ್ಲಿ ಇದು ಕೆಲಸಕ್ಕೆ ಬರುತ್ತದೆ ಮಾತ್ರವಲ್ಲ ರಸಗಳನ್ನು ಶುದ್ಧಗೊಳಿಸಬಲ್ಲ ಒಂದು ವಿಶೇಷ ಬಗೆಯ ಅಂಗಾರವನ್ನು ತಯಾರಿಸಬಹುದೆಂದೂ ಕಂಡುಹಿಡಿದಿದು ಹು ಕಬ್ಬಿನ ರಸವನ್ನು ಈ ಅಂಗಾ ಉಪಯೋಗದಿಂದ ಹಸನಾಗಿಸಬಹು ಇದರಿಂದ ಮಾಡಿದ ಬೆಲ್ಲವನ್ನು ನಿ ನೋಡಿದರೆ, "ಅರೆ, ಇದು ಸಕ್ಕರೆ ಲ್ಲವೆ!" ಎಂದು ಉದ್ಗರಿಸುವುದು ನಿಶ್ಚ ಹೊಗೆಸೊಪ್ಪಿನ ದಂಟು ಮುಂತಾದು ಳಿಂದ ಕ್ರಿಮಿನಾಶಕ ದ್ರವ್ಯಗಳನ್ನು ಗೊಳಿಸಬಹುದೆಂದೂ ವಿಜ್ಞಾನ ಹೇ ತ್ತದೆ.

ದಿ ವಿಜಯಾ ಬೇಂಕ್ ಲಿಮಿಟೆಡ್ ಬೈಂದೂರು (ದ ಕ)

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣ ಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರ ನೋಟೀ ಮೂಲಕ ಕೇಳಿಕೊಂಡಾಗ್ಯೂ ಅಸಲು–ಮ ಬಡ್ಡಿ, ಯಾವುದನ್ನೂ ಈವರೆಗೂ ಕೊ ಬಾಕಿ ಮಾಡಿಕೊಂಡಿರುವುದರಿಂದ, ಸದ್ರಿಯವರು ಈಡಿಟ್ಟ ನಗವನ್ನು ಇದೇ ತಾ 26 1 1952ನೇ ಶುಕ್ರವಾರ ಅಪರಾಹ್ನ ಗಂಟೆ 2ಕ್ಕೆ–ಸದ್ರಿ–ಬೇಂಕಿಗೆ ಯುಕ್ತ ಕಂಡ ಇತರ ಗಳಿಗೆ ಪುನಃ ನೋಟೀಸು ಕೊಡದೇನೇ, ಬೇಂಕಿನ ಮಹಡಿಯಲ್ಲಿ ಬಹಿರಂಗವಾಗಿ ಹರಾ ಮಾಡಲಾಗುವುದೆಂದು ತಿಳಿದಿರಲಿ.

ಸಾಲದ ಜಂಜಾ ನಂಬ	ಹೆಸರು ಮತ್ತು ವಿಳಾಸ	ಮೊಬಲಗ ರೂ.	ಆ
868/51	ಜ ಮಂಜೆ ಅಲಿ ಸಾಹೇಬ್. ಅಬ್ದುಲ್ ಖಾದೀರ್ ಸಾಹೇಬರ ಮಗ ಶಿರೂ. ಬೈಂದೂರು.	26	8
1280/51	— Do —	5	4
19 52	— Do	48	6
253 52	— Do —	34	9
1390/51	ಶ್ರೀ ಕೊಲ್ಲೂರ ಹರಿ ಸೇಟ್ ತಿಮ್ಮಪ್ಪ ಸೇಟರ ಮಗ ಬೈಂದೂರು	32	6
312/52	— Do —	20	13
1393/51	ತುಂಬೆ ಗದ್ದೆ ಮಂಜುನಾಥ ಸೇರುಗಾರ ನಾಗಪ್ಪ ಸೇರುಗಾರ ಮಗ ಬಾಡ ಬೈಂದೂರು	17	2
214/19	S ಅ ಖಾದರ್ ಸಾಹೇಬ್. ಸೋಮು ಕಾಪು ಮಹಮ್ಮದ್ ಸಾಹೇಬರ ಮಗ ಬೈಂದೂರು	34	0
167 50	ಕುಕ್ಕಿದಾ ಮಹಮ್ಮದ ಸಾಹೇಬ್ ಮಹಮ್ಮದ್ ಗಾಸ್ ಸಾಹೇಬ ಮಗ ಮರಿಕಲ್ಲು ಉಪ್ಪುಂದ.	143	2
116/50	ಶ್ರೀ ಅಲ್ಲಾಡಿ ವೇಕಟೇಶ ಬುದ್ಧಿವಂತ ಸೆಟ್ಟಿ ಅಳಿಯ ಕಾಲ್ತೋಡ ಗ್ರಾಮ ಕಾಲ್ತೋಡು	441	15
896/50	— Do -	64	1
1051 50	ಗೋವಿಂದ ಸೆಟ್ಟಿ ಕೃಷ್ಣ ಸೆಟ್ಟರ ಅಳಿಯ ಕೃಷ್ಣ ಸೆಟ್ಟರ ಮನೆ ತಗ್ಗರ್ಸೆ ಗ್ರಾಮ ಮಯ್ಯಾಡಿ.	50	8
900/50	ಮಗಬಾರಿ ಕೃಷ್ಣಯ್ಯ ಸೇರುಗಾರ ತಿಮ್ಮಪ್ಪ ಸೇರುಗಾರ ಮಗ ಪಡುವರಿ	27	5
917/50	ಜ ಸೇಖ್ ಉಸ್ಮಾನ ಸಾಹೇಬ್ ಅಹ್ಮದ್ ಸಾಹೇಬರ ಮಗ [illegible] ಶಿರೂರು.	8	8
1049 50	Do	2	9
935/50	ಶ್ರೀ ವೆಂಕಟರಮಣ ಅಳಿಯ ಕಾಮಾಮನೆ ಬೀಯಾರ್ ಬೈಂದೂರು.	16	8
1117 50	ಜ ಗುಲಾಮ್ ಹುಸೇನ್ ಸಾಹೇಬ್ ಇಮಾಮ್ ಸಾಹೇಬರ ಮಗ ಹಾಲಿ ಗೋಳಿಗೇರಿ ತಗ್ಗರ್ಸೆ ಬೆಟ್ಟನಲ್ಲಿರುವ ಕಂಬದ ಕೋಣೆ	8	7
521/51	ಶ್ರೀ ಹೆಗ್ಗಡಮನೆ ಮಂಜುನಾಥ ಸೇರುಗಾರ ಅಜ್ಜಪ್ಪ ಸೇರುಗಾರರ ಮಗ ಪಡುವರಿ	12	6
537/51	ಮಾರ್ಕರ್ ಶೇಟ್ ಮಂಜುನಾಥ ಸೇಟರ ಮಗ ಕನ್ನಾಡಿ ಉಪ್ಪುಂದ	72	15
553/51	ಸಂಕದ ಗೋಳಿ ನಾರಾಯಣಯ್ಯ ಭಟ್ಟ ಭೂಶಾಲಿ ಬೈಂದೂರು.	28	15
711 51	ಜ ಬಸ್ರೂರು ಖಾದೀರ್ ಸಾಹೇಬ್ ಮಹಮ್ಮದ್ ಸಾಹೇಬರ ಮಗ ಗೋಳಿಹೊಳೆ ಗ್ರಾಮ ಯಳಜಿತ್	30	12
740/51	ಜ ಗೋಳಿ ಹೊಳೆ ಮಿರಾನ್ ಸಾಹೇಬ್ ಹೈದ್ರುಸ್ ಸಾಹೇಬರ ಮಗ ಗೋಳಿಹೊಳೆ ಗ್ರಾಮ ಯಳಜಿತ್	313	4
930/51	— Do —	86	13
791/51	ಶ್ರೀ ಪಿ ಮಂಜ ಮೊಗೇರ ಚಂದ್ರಶೇಖರ ಹಿತ್ತಲು ಮರ್ಲಿ ಮಗ ಪಡುವರಿ.	8	6
1055 51	— Do —	16	6
13/52	ಶ್ರೀ D K ರಾಮಯ್ಯ ನಾಯ್ಕ್ ನಾಗಪ್ಪ ನಾಯ್ಕರ ಮಗ ಪಡಗರಿ.	64	8
161/52	ಮಂಜ ಉಪ್ಪಾರ ಮನೆ ಗೋವಿಂದನ ಅಳಿಯ ಯಡ್ತರೆ ಗ್ರಾಮ ಬೈಂದೂರು	10	3
336 52	ಮಡ್ಡೋಡಿ ಸುಬ್ರಾಯ ಸೇರುಗಾರ ಹನುಮಂತ ಸೇರುಗಾರ ಮಗ ಮಯ್ಯಾಡಿ	39	0
1012/51	ಸೋಮ ಮಂಜ ಸೋಮ ಮಗ ಮದಿಕಲ್ಲು ಉಪ್ಪುಂದ.	249	5
1121/51	— Do —	255	6

ಬೈಂದೂರು,
12-12-'52

ಎಚ್ ರಾಜೀವ ಸೆಟ್ಟಿ
ಏಜಂಟ್

ಅಮರದೇಹಿ ಸಂತ ಫ್ರಾನ್ಸಿಸ್ ಕ್ಷೇವಿಯರ್



[ನಾಲ್ಕು ಶತಮಾನಗಳಿಂದಲೇ ಅಚ್ಚಳಿಯದೆ ಉಳಿದ ಸಂತ ಫ್ರಾನ್ಸಿಸನ ಕಳೇಬರವು ಲೌಕಿಕ ವೈದ್ಯರಿಗೆ, ವಿಜ್ಞಾನಿಗಳಿಗೆ ಆಧ್ಯಾತ್ಮಿಕ ಶಕ್ತಿಯು ಅಸ್ತಿತ್ವವಾದದ ಕುರಿತು ಕೊಟ್ಟ ಆಹ್ವಾನವೂ ಪ್ರಪಂಚದ ಮಹಾದ್ಭುತವೂ ಆಗಿದೆ.]

ಇಡೀ ಪ್ರಪಂಚದ ಲಕ್ಷ್ಯವನ್ನು ತನ್ನೆಡೆಗೆ ಸೆಳೆಯುತ್ತಿರುವ ಭಾರತದ ಚಾರಿತ್ರಿಕ ಗೋವಾ ನಗರದಲ್ಲಿ ನಾಲ್ಕು ನೂರು ವರುಷಗಳ ಹಿಂದೆ ಹುಟ್ಟಿ ಸತ್ತ ಮಹಾ ಸಂತ ಫ್ರಾನ್ಸಿಸ ಕ್ಷೇವಿಯರನ ಪವಿತ್ರ ಕಳೇಬರವು ಅಜರಾಮರವಾಗಿ ಚಿರಸ್ಥಾಯಿಯಾಗಿದೆ, ಈಗ ಪ್ರದರ್ಶನಕ್ಕಿಡಲ್ಪಟ್ಟಿದೆ ಸನಾತನ, ಜೈನ, ಬೌದ್ಧ ಧರ್ಮಗಳಿಗೆ ಜನ್ಮವಿತ್ತ, ಮಹಮ್ಮದೀಯ ಧರ್ಮದ ವೈಭವಕ್ಕೆ ಅತ್ಯುಛ್ಚತವಾದ ಸನ್ನಿಧಿ ಕಾಯದ್ದಾದು, ಈ ಭಾರತವು ಕ್ರೈಸ್ತಮತದ ಅತುಲ್ಯವಾದ ಅಮೂಲ್ಯವಾದ ಈ ಅನ್ನುತಕ್ಕೆ ನೆಲವೀಡಾಗಿ ಅಮರವಾದ ಕೀರ್ತಿಯನ್ನು ಗಳಿಸಿದ ಮಹಾಯೋಗಿಯರು ಮಹಾತ್ಮರಲ್ಲಿ ಅಮರ ಕೀರ್ತಿಯನ್ನು ಪಡೆದ ಮಹಾತ್ಮರು ಸಹಾ ತನ್ನುದರದಲ್ಲಿ ಅಡಗಿಸಿಕೊಂಡಿದ್ದಾರೆ—ಎಂಬ ಈ ಸ್ವಾಭಿಮಾನ ಈ ಮಣ್ಣು ಜಗತ್ತಿನಲ್ಲಿ ತನಗೆ ಮಾತ್ರ ದೊರೆತು ಅನ್ಯರಿಗಿಲ್ಲವೆಂದು—ಇಂದೀ ಪುಣ್ಯಭೂಮಿಯು ಆನಂದದಿಂದ ಪುಳಕಿತವಾಗಿದೆ

ಕ್ರಿ. ಪೂ. ಎರಡನೇ ಶತಮಾನದಲ್ಲಿ ಕನಿಷ್ಕನ ಅರಸೊತ್ತಿಗೆಯಲ್ಲಿ ತಕ್ಷಶಿಲೆ ವಿಶ್ವವಿದ್ಯಾಲಯವು ಜಗತ್ತಿನ ಜ್ಞಾನಕ್ಷೇತ್ರವನ್ನು ತಣಿಸುವ ವಿದ್ಯಾಲಯವಾಗಿದ್ದಂತೆ ಕ್ರಿ. ಶ. ಹದಿನೈದನೇ ಶತಮಾನದಲ್ಲಿ ಪ್ಯಾರಿಸ್ ಯೂನಿವರ್ಸಿಟಿಯು ಯುರೋಪಿನ ಕ್ರಿಸ್ತೀಯ ಕಲಾ ಶಾಲೆಗಳಲ್ಲಿ ಏಕಮೇವಾದ್ವಿತೀಯವಾಗಿತ್ತು. ಇಂತಹ ಮಹಾವಿದ್ಯಾಲಯದಲ್ಲಿ ಸಂತ ಫ್ರಾನ್ಸಿಸ್ ಕ್ಷೇವಿಯರನು ಓದಿ, ತತ್ವಶಾಸ್ತ್ರವೇತ್ತನಾಗಿ ಪದವಿ ಪಡೆದು ಅಲ್ಲಿಯೇ ಮಹೋಪಾಧ್ಯಾಯನಾಗಿ, ತಾನೇ ತಾನಾಗಿ ಮಹಾಜ್ಞಾನಿಯಾಗಿ ಮೆರೆಯುತ್ತಿದ್ದನು. 1506ನೇ ಇಸವಿ ಎಪ್ರಿಲ್ ತಾ. 7ರಂದು ಸ್ಪೈಯಿನ್ ದೇಶದಲ್ಲಿ ಪ್ರಸಿದ್ಧವಾದ ಪಿರೆನ್ನೀಸ್ ಪರ್ವತದ ಬಳಿಯಲ್ಲಿ ಸಾವೇರ್ ಎಂಬ ದುರ್ಗದ ಸುಭೇದಾರನೂ, ಸ್ಪೈಯಿನಿನ ಚಕ್ರವರ್ತಿಯ ಆಸ್ಥಾನದಲ್ಲಿ ದೊಡ್ಡ ಅಧಿಕಾರಿಯೂ ಆಗಿದ್ದ ದೊನ್ ಜೋನ್ ದೆ ಜಾಸ್ಸೊ ಎಂಬ ವೀರ ಪುರುಷನು ಫ್ರಾನ್ಸಿಸನ ತಂದೆಯು. ರಾಜಮನೆತನದ ಸ್ತ್ರೀ ಮೇರಿ ಅಜ್ಪಿಲ್ ಕುವೆತಾ ಎಂಬ ಸಾಧ್ವಿಯು ತಾಯಿ. ಫ್ರಾನ್ಸಿಸನ ಅಣ್ಣಂದಿರಿಗೆ ಯುದ್ಧ ವೃತ್ತಿಯಲ್ಲಿ ಅಭಿರುಚಿಯಿದ್ದು ಸೈನ್ಯಕ್ಕೆ ಸೇರಿ ದೊಡ್ಡ ದೊಡ್ಡ ಅಧಿಕಾರವನ್ನು ಗಳಿಸಲು ಯತ್ನಿಸುತ್ತಿದ್ದಾಗ ನಮ್ಮ ಸಂತನು ಖಡ್ಗಕ್ಕೆ ಬದಲಾಗಿ ಲೇಖನಿಯನ್ನು ಗುರಾಣಿಗೆ ಪ್ರತಿಯಾಗಿ ಪುಸ್ತಕವನ್ನು ಮೆಚ್ಚಿದನು. ಕುವರನ ಪ್ರವೃತ್ತಿಯನ್ನು ಕಂಡೇ ತಂದೆ ಜೋನನು ಅತನನ್ನು ಉತ್ತಮ ಶಿಕ್ಷಣಕ್ಕಾಗಿ ಪ್ಯಾರಿಸಿಗೆ ಕಳುಹಿಸಿದ್ದನು. ಫ್ರಾನ್ಸಿಸನ ಬಯಕೆಯೊಂದೇ, ಕಲಿಯ ಬೇಕು. ತಿಳಿಯಬೇಕು, ಮಹಾ ವಿದ್ವಾಂಸನಾಗಿ ಮೆರೆಯ ಬೇಕು.

ಒಂದು ದಿನ ವಿದ್ಯಾಲಯದ ಉದ್ಯಾನವನದಲ್ಲಿ ಫ್ರಾನ್ಸಿಸನು ಇಗ್ನೇಸಿಯುಸ್ ಲಾಯಲನೆ ಮಾತನೊಡನೆ [illegible] ಈ ಇಗ್ನೇಸಿಯುಸ್ ಲಾಯಲನು ಸ್ಪೈಯಿನಿನ ಶ್ರೀಮಂತ ಕುಟುಂಬದವನಾಗಿದ್ದು ಮೂವತ್ತು ವರುಷಗಳವರೆಗೆ ಯುದ್ಧವಿದ್ಯೆಯಲ್ಲಿ ಪಳಗಿದ್ದರೂ ಅಶೋಕನಂತೆ ಎಚ್ಚತ್ತು "ಧನಿಗಾಗಿ ಕಾದಲಾರೆ; ಸ್ವಾಮಿಗಾಗಿ ಶ್ರಮಿಸುವೆ" ಎಂಬ ಅಪೇಕ್ಷೆಯಿಂದ ಸೇನಾವೃತ್ತಿಗೆ ತಿಲಾಂಜಲಿಯಿತ್ತು ಸನ್ಯಾಸ ದೀಕ್ಷೆಯನ್ನು ಪಡೆಯಲು, ತತ್ವಶಾಸ್ತ್ರಧ್ಯಯನ ಮಾಡಲು ಅದೇ ಯೂನಿವರ್ಸಿಟಿಗೆ ಬಂದಿದ್ದನು. ಫ್ರಾನ್ಸಿಸನು ತನ್ನ ಜೊತೆಯವನಾದರೆ ಭೂವಲಯದ ಅರ್ಧಭಾಗ ನೆಲವನ್ನೇ ತಾವು ಗೆಲ್ಲುವೆವು ಎಂದು ಅವನ ಮೇಲೆ ಕಣ್ಣಿಟ್ಟಿದ್ದನು ಇಗ್ನೇಸಿಯಸನ ಧ್ಯಾನ ಸ್ವಾಮಿಯ ಕಡೆಗೆ ಫ್ರಾನ್ಸಿಸನ ಧ್ಯಾನ ಕೀರ್ತಿ ಕಾಮಿನಿಯ ಎಡೆಗೆ. ಉತ್ತರ ದಕ್ಷಿಣ ಧ್ರುವಗಳೊಂದಾಗುವುದೆಂತು? ಅದ್ಭುತವಿತ್ತೆ ಫ್ರಾನ್ಸಿಸನು ಹೇಳ ತತ್ವಗಳು, [illegible] ಇಗ್ನೇಸಿಯಸನ [illegible] ಪ್ರದರ್ಶನ ಕೀರ್ತಿಯ [illegible] ಮಾಡುತ್ತಿದ್ದಂತೆ ಇಗ್ನೇಸಿಯುಸನು ತನ್ನ ಪಕ್ಕ ಫ್ರಾನ್ಸಿಸನಿಗೆ ಹೇಳುವಂತೆ, "ವಿಶ್ವವಂ ಗೆಲ್ದು ಆತ್ಮಭ್ರಷ್ಟನಾದೊಡೇನು ಫಲ?" ಎಂದು ಮೆಲುದನಿಯಲ್ಲಿ ನುಡಿದನು. ಇದೇ ವಾಕ್ಯವನ್ನು ಒಂದಲ್ಲ ಹತ್ತಲ್ಲ ನೂರುಬಾರಿ ಫ್ರಾನ್ಸಿಸನು ಕೇಳಿದ್ದನು. ಗೋಡೆಗಳಲ್ಲಿ ಮೊಳೆ ಹೊಡೆದಂತಾಗಿದ್ದ ಅದೇ ಮಾತು ಇಂದು ಮುತ್ತಿನ ಮೊಳದ ಚಿಪ್ಪಿನೊಳಗೆ ಪ್ರವೇಶಿಸಿದ ಸ್ವಚ್ಛ ಮಳೆಯ ಹನಿಯಂತೆ ಹೊಕ್ಕು ಮುತ್ತಾಗಿ ಹಾಗೆ ಹೊಳೆಯಿತು. ಫ್ರಾನ್ಸಿಸನ ಅಂತರಾತ್ಮವನ್ನು ಸೇರಿ ಹೃದಯ ಮಾಣಿಕ್ಯ ಕಾಂತಿಯನ್ನು ಬೀರತೊಡಗಿತು ಮಹಾತ್ಮನಾದ ಇಗ್ನೇಸಿಯಸನಿಗೆ ಇದು ತಿಳಿಯದಿರಲಿಲ್ಲ. ಸಮುದ್ರ ಮಂಥನದಲ್ಲಿ ಅಲ್ಲೋಲಕಲ್ಲೋಲವಾಗಿ ತೆರೆತೆರೆಯಾಗಿ ಸುಳಿಸುಳಿಯುವ ಜಲತರಂಗಗಳಂತೆ ಫ್ರಾನ್ಸಿಸನ ಮನಸ್ಸಾಗರದಲ್ಲಿ ವಿಚಾರ ಲಹರಿಗಳು ಹೆರಿಗಳೇಳತೊಡಗಿದುವು ವಿಚಾರ ಕಿಡಿಯನ್ನು ಹೊತ್ತಿಸಿದ ಇಗ್ನೇಸಿಯಸನೇ ಫ್ರಾನ್ಸಿಸನನ್ನು ಸಮಜಾಯಿಸಿ ಕ್ರೈಸ್ತ ಸೇವಕನಾದ ದೀನ ದಲಿತರ ಸಾವು ನೋವುಗಳಿಗಾಗಿ ದುಡಿ ಎಂಬ ಅಮೂಲ್ಯ ಧಾರೆಯನ್ನೆರೆದು ಶಿಷ್ಯನಾಗಿ ಫ್ರಾನ್ಸಿಸನ ಮನಸ್ಸನ್ನು ಸ್ಥಿಮಿತಗೊಳಿಸಬೇಕಾಗಿ ಬಂತು.

ಆಗೋಸ್ತು 15. ಭಾರತೀಯರ, ನಮ್ಮೆಲ್ಲರ ಪಾಲಿಗೆ ಭಾರತೀಯ ಕ್ರೈಸ್ತರ ಪಾಲಿಗಿದು ಪ್ರಖ್ಯಾತಿ. ಆಗೋಸ್ತು 15ರಂದು ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತು. ಆಗೋಸ್ತು ಹದಿನೈದರಂದೇ ಕ್ರೈಸ್ತ ಮಾತೆಯು ಸ್ವರ್ಗಾರೋಹಣ. ಅಂದೇ ಇಗ್ನೇಸಿಯುಸ್ ಲಾಯೊಲನು (1534ನೇ ಆಗೋಸ್ತು 15ರಂದು) ಫ್ರಾನ್ಸಿಸ್ ಕ್ಷೇವಿಯರ್ ಮತ್ತೈದು ಜನ ಒಟ್ಟು ಏಳುಮಂದಿ ಸೇರಿ ಕ್ರೈಸ್ತ ಸೇವಕ ಸಮಾಜವನ್ನು ಸ್ಥಾಪಿಸಿ ಹರಿಕೆಯೊತ್ತ ಮಹಾದಿನ ಅಚಲನಾದ ಧ್ರುವ ನಕ್ಷತ್ರದ ಪ್ರದಕ್ಷಿಣಾ ಸೇವೆಯನ್ನು ಕೈಕೊಂಡ ಸಪ್ತರ್ಷಿ ಮಂಡಲದಂತೆ ಕ್ರಿಸ್ತದೇವನ ಸೇವೆಗಾಗಿ ನಿರಂತರ ಶ್ರಮಿಸುವೆವೆಂದು ಅಂದಾ ಏಳುಮಂದಿ ದೀಕ್ಷೆಗೊಂಡರು. ವಿದ್ವತ್ತಿನಿಂದ ಜಗತ್ತನ್ನೇ ಗೆಲ್ಲುವೆನೆಂದು ಹೊರಟ 'ಅಮರ ಪುತ್ರ' ಫ್ರಾನ್ಸಿಸನೆಲ್ಲಿ? ದೀನದಲಿತರ ಸೇವೆಗಾಗಿ ಕಂಕಣಬದ್ಧನಾದ ಸನ್ಯಾಸಿ ಫ್ರಾನ್ಸಿಸನೆಲ್ಲಿ?

ಆ ಸಮಯದಲ್ಲಿ ಪೋರ್ಚುಗಲ್ ರಾಜ್ಯಕ್ಕೆ 3ನೇ ಜೋನನು ಸಾಮ್ರಾಟನಾಗಿದ್ದನು. ಕ್ರೈಸ್ತ ಮತಾಭಿಮಾನಿಯಾದೀ ದೊರೆಯು ಅನೇಕ ಶತಮಾನಕ್ಕೆ ಧರ್ಮಾಭಿಮಾನಿಯಾ ಹಿಂದೂದೇಶದಲ್ಲಿ ತನ್ನ ಧರ್ಮ ಪ್ರಚಾರಕ್ಕಾಗಿ ಬೋಧಕರನ್ನು ಕಳುಹಿಸಬೇಕೆಂಬ ಸದುದ್ದೇಶದಿಂದ ಇಗ್ನೇಸಿಯುಸ್ ಲಾಯಲನೊಡನೆ ತನ್ನ ಅಪೇಕ್ಷೆಯನ್ನು ತೋಡಿಕೊಂಡನು. ಲಾಯಲನು ಸೈಮನ್ ರೊಡ್ರಿಗ್ಸ್ ಮತ್ತು ನಿಕೊಲಸ್ ಬೊಬದಿಲ್ಲರನ್ನು ಹಿಂದೂದೇಶಕ್ಕೆ ಕಳುಹಿಕೊಡಲಿಚ್ಛಿಸಿದರೂ ದೈವೇಚ್ಛೆ ಬೇರೆಯೇ ಇತ್ತು. 3ನೇ ಜೋನ್ ಚಕ್ರವರ್ತಿಯ ಆದೇಶದಂತೆ 3ನೇ ಪಾಲ್ ಪೋಪ್ ಸ್ವಾಮಿಯ ಅಪ್ಪಣೆಯಂತೆ ಲಾಯಲನ ನಿರ್ದೇಶನದಂತೆ ಹರಕು ನಿಲುವಂಗಿಗೆ ಪತ್ತಿ ಹಾಕಿ ಪ್ರಾರ್ಥನಾ ಪುಸ್ತಕವೊಂದನ್ನು ಹಿಡಿದುಕೊಂಡು ಲಿಸ್ಬನ್ ಬಂದರದಲ್ಲಿ ಹಡಗು ಹತ್ತಲು ಫ್ರಾನ್ಸಿಸನು ಹೊರಟನು. "ತಾಯಿಯನ್ನಾದರೂ ಕಂಡುಹೋಗು" ಎಂದು ಸ್ನೇಹಿತರು ಒತ್ತಾಯಿಸಲು "ದೇವರೇ ನನ್ನ ತಾಯಿ" ಎಂದು ಪ್ರತ್ಯುತ್ತರ ಕೊಟ್ಟು ತ್ಯಾಗದ ಪರಮಾವಧಿ ಪ್ರದರ್ಶನವನ್ನು ಮಾಡಿದನು. 1541ನೇ ಎಪ್ರಿಲ್ 7ರಂದ ಲಿಸ್ಬನ್ ಬಂದರದಲ್ಲಿ ಹಡಗು ಹತ್ತಿ 1542ನೇ ಮೇ 6ರಂದು ಗೋವಾನಗರಕ್ಕೆ ಬಂದು ಸೇರಿದನು.

ಪ್ಯಾರಿಸಿನ ವಿಶ್ವವಿದ್ಯಾಲಯದ ಪದವೀಧರನೂ ರಾಜವಂಶದ ಮಹಾಂತನೂ ತನ್ನ ಆಳಿತಕೆಯುಳ್ಳ ಗೋವಾ ನಗರಕ್ಕೆ ಬಂದಿರುವನೆಂಬ ವಾರ್ತೆಯನ್ನು ಕೇಳಿ ಗವರ್ನರನು ಫ್ರಾನ್ಸಿಸನನ್ನು ತನ್ನ ಮನೆಗೆ ಆಮಂತ್ರಿಸಿದನು. ದೀನ ದಲಿತರ ಸೇವೆಗಾಗಿ ದೀಕ್ಷಾಬದ್ಧನಾದ ಫ್ರಾನ್ಸಿಸನಿಗೆ ಅರಮನೆಯ [illegible] ರ ದೇಹವನ್ನಾದರೂ ಅವರ ಮಾಂಸಾಸ್ಥಿ [illegible] ಹುಳುಗಳು ಉಳಿಸಿ ಕೊಡಲಿಲ್ಲ. [illegible] ಗಳು ಬೊಕ್ಕೆಗಳಿಂದ ಕೀವನ್ನು ಹಿಂಡಿದ, ಮೂಲದ ಹುಣ್ಣುಗಳನ್ನು ತೊಳೆದ ಸಂತ ಫ್ರಾನ್ಸಿಸನ ಪವಿತ್ರ ಕೈ ಕಾಯಗಳು ನಾಲ್ಕು ಶತಮಾನಗಳವರೆಗೂ ನಶಿಸಿ ಹೋಗಲಿಲ್ಲ ([illegible]ನೇ ಪುಟ ನೋಡಿರಿ)

(ಪಡಿಯಚ್ಚು ಶ್ರೀ ಬಿ. ಎಸ್. ಲೂವಿಸರ ಕೃಪೆಯಿಂದ)

ಕಾಸರಗೋಡು ಡಿ. ಮು.
ಕೋರ್ಟಿನಲ್ಲಿ

O. S. No 36, 1952

ಖದೀಜಬಿ — ವಾದಿಳು

ವಿ

ಮಂಜುನಾಥ ಬ್ಯಾರಿ ವಗೈರಾ — ಪ್ರತಿವಾದಿಗಳು

4ನೇ ಪ್ರತಿವಾದಿ ಕುಂಞಪ್ಪ ಯಾನೆ ಕುಂಞಾಯಿ, ತಂದೆ ಕುಂಞಾಲಿ ಬ್ಯಾರಿ, ಕಾರ್ನ, ತಲಪಾಡಿ ಗ್ರಾಮದ ಮತ್ತು ಅದಳೆ, ನಾರ ಕಾಸರಗೋಡು ತಾಲೂಕು ತೆಕ್ಕಿಲ್ ಗ್ರಾಮದಲ್ಲಿರುವವರು ಇತ್ಯಾದಿ ತಿಳಿಸುವುದೇನೆಂದರೆ.

ವಾದಿಳು ದಾವಾ ಪಸ್ತಿಗೆಯನ್ನು ಗೆಲಿಸಿ [illegible] ವ್ಯಾಜ್ಯವು ತಾರೀಖು 23-12-1952ಕ್ಕೆ ಇಟ್ಟಿರುವ ಸಂಗತಿ ನಿಮಗೆ ತಿಳಿಸಲಾಗಿಯದೆ.

Sd P Ahmad
Advocate for Plaintiff
Kasaragod D, 8-12—52

ಕಾಸರಗೋಡು ಡಿ. ಮು.
ಕೋರ್ಟಿ[illegible]
ಸ್ಮಾಲ್ ನಂಬ್ರ 114

[illegible] ಬ್ಯಾರಿ — ವಾದಿ

ಮುಹಮ್ಮದ ಬ್ಯಾರಿ, ಅಬ್ದುಲ್ಲ ಬ್ಯಾರಿ, ಮಂಗ [illegible] ಕಾಸರಗೋಡು ತಾಲೂಕು ಕೂಡ್ಲು ಗ್ರಾಮದ ಬಳ್ಳಿರೆಗಲ್ಲು [illegible]—ಪ್ರತಿವಾದಿ

ನೀವು ಪ್ರತಿವಾದಿಯ ಮೇಲೆ ವಿಸಾರ ದ [illegible] ನ್ಯಾಯದ ಮನೆಗೆ ದಾಖಲು ಮಾಡಿದ [illegible] ವ್ಯಾಜ್ಯವು ತಾ. 23 12 52ಕ್ಕೆ ತನ್ನಿಗೆ ಇಟ್ಟಿರುವ ಸಂಗ್ತಿ ತಿಳಿಸಲಾಗಿಯದೆ.

Sd P Ahmad
Advocate for Plaintiff
ಕಾಸರಗೋಡು, 29-11 52.

ಮಾನವ ವಿಜಯದ ಹೆದ್ದಾರಿ!

ಆರ್ಥಿಕ ಮತ್ತು ಸಾಂಪತ್ತಿಕ ಅನುಕೂಲತೆಯೇ ಮಾನವ ಜೀವನದ ವಿಜಯದ ಹೆದ್ದಾರಿ

ಜನತೆಗೆ ಈ ಅನುಕೂಲತೆಗಳನ್ನೊದಗಿಸಿ ಸಾಂಪತ್ತಿಕ ಅಭಿವೃದ್ಧಿ ಸಾಧಿಸುವವೇ ಬೇಂಕುಗಳ ಹೊಣೆ

ದಿನೇ ದಿನೇ ಜನ ವಿಶ್ವಾಸಗಳಿಸಿ ಪ್ರಗತಿ ಹೊಂದುತ್ತಿರುವ

ದಿ ವಿಜಯ ಬೇಂಕ್, ಲಿಮಿಟೆಡ್.

ಇದರೊಡನೆ ನಿಮ್ಮ ವ್ಯವಹಾರ [illegible] ಜೀವನದಲ್ಲಿ ವಿಜಯ [illegible]

ಗಿರಾಕಿಗಳ ಹಿತಸಾಧನೆ ಮತ್ತು [illegible] ವಿಜಯ ಬೇಂಕಿನ ಉದ್ದೇಶ.

The Vijaya Bank Ltd,
Head Office MANGALORE-3

Branches at

Udipi, Kaup, Coondapur, Byndoor, Karkal, Brahmavar, City-Mangalore, Kasaragod, Puttur, Kanhangad, Bombay & Mercara

No Finer
RUBBER STAMP
LINE-HALFTONE BLOCK
made anywhere than at
(GOVT. APPROVED)
CROWN
RUBBER STAMP CO.
PHONE 203

೧೧ನೇ ಪುಟದಿಂದ

ಅನಂತರದ ಫ್ರಾನ್ಸಿಸನ ಸೇವೆಯನ್ನು ಸಂಕ್ಷೇಪವಾಗಿ ವಿವರಿಸಿದರೆ, ಅವನು ಮಾಡಿದ ಅದ್ಭುತ ಕಾರ್ಯಗಳನ್ನು ಸ್ಥೂಲವಾಗಿ ಹೇಳಿದರೆ, ಅವನ ಯಾನ ಪ್ರಯಾಣಗಳನ್ನು ಸಂಕ್ಷೇಪವಾಗಿ ಬರೆದರೆ ಅದೊಂದು ಬೃಹದ್ಗ್ರಂಥವಾಗುವುದು. ಗೋವೆಯಿಂದ ನಾಲ್ಕು ಸಾವಿರ ಮೈಲುಗಳಾಚೆಗೆ ಇರುವ ಜಪಾನಿನ ತನಕ ಪ್ರಯಾಣ ಮಾಡಿದ ಅತನ ನೌಕಾಯಾನ ಪ್ರಪಂಚದ ಸಾಹಸಿಕ ಸಂಚಾರಗಳಲ್ಲೊಂದಾಗುವುದು. ಸತ್ತವರನ್ನು ಬದುಕಿಸುತ್ತಾ, ಬದುಕಿದ್ದ ಅಂಗ ಹೀನರಿಗೆ ಅಂಗಾಂಗಗಳನ್ನೂ ನೀಡುತ್ತಾ ಆತನು ಮಾಡಿದ ಚಾರಿತ್ರಿಕ ದಾಖಲೆಗಳುಳ್ಳ ಅದ್ಭುತ ಕಾರ್ಯಗಳು ಕ್ರೈಸ್ತಸ್ವಾಮಿ ಯೇಸುವಿನಿಂದ ಹೊರತು ಅನ್ಯರಿಂದಾದುದಿಲ್ಲ. ಇಂಡಿಯಾ, ಈಸ್ಟ್ ಇಂಡೀಸ್ ಜಪಾನುಗಳನ್ನು ಸಂದರ್ಶಿಸಿ ಅಲ್ಲಿ ಕ್ರೈಸ್ತ ಧರ್ಮವನ್ನು ಪ್ರಚಾರ ಮಾಡಿದ ಮೇಲೆ ಚೈನಾಕ್ಕೆ ಹೊರಟಿದ್ದ ಕ್ಷೇವಿಯರನು ಜ್ವರಕ್ಕೆ ತುತ್ತಾದನು. ಅಂಟೊನಿಯೋಗಿಯನ್ನು ಹಡಗದಲ್ಲಿದ್ದ ಹೆದರಿದ ನಾವಿಕರು ಕ್ಷೇವಿಯರನನ್ನು ಸಮೀಪದ ದ್ವೀಪವೊಂದರಲ್ಲಿಳಿಸಿದರು. ಅಲ್ಲಿ ಆ ಮಂದಿಯ ಗುಡಿಸಲಿನಲ್ಲಿ, ಪ್ಯಾರಿಸಿನ ಪದವೀಧರ, ಲೋಕೈಕ ವಿದ್ವಾಂಸ, ಸತ್ತವರನ್ನು ಬದುಕಿಸಿದ ಮಹಾತ್ಮನಾದ ಕ್ಷೇವಿಯರನ ಕಣ್ಣುಗಳಲ್ಲಿ ಶಾಂತಿ ಮಾಡಿದ ಸೇವೆ ಸತ್ಕಾರ್ಯಗಳ ದರ್ಶನಗಳು ತುಂಬಿದ್ದುವು, ಕೈಯಲ್ಲಿ ಶಿಲುಬೆಗೇರಿಸಲ್ಪಟ್ಟ ಕ್ರೈಸ್ತ ಸ್ವಾಮಿಯ ಪ್ರತಿಮೆ ಇತ್ತು. ದೃಷ್ಟಿಯು ಮಂಕಾಗುವ ವರೆಗೂ ಸ್ವಾಮಿಯನ್ನು ಈಕ್ಷಿಸುತ್ತಿದ್ದು, 1552ನೇ ಇಸವಿ ಡಿಸಂಬರ 2ನೇ ಶುಕ್ರವಾರ ಅಪರಾಹ್ನ ಗಂಟೆ 2ಕ್ಕೆ ತನ್ನ ಕೊನೆಯುಸಿರನ್ನೆಳೆದನು. ಆ ಮಹಾತ್ಮವು ಪರಮಾತ್ಮನ ಬಳಿಗೈದಿತು.

ಅದೇ ದ್ವೀಪದಲ್ಲಿ, ಜಾರ್ಜ್ ಅಲ್ವಾರಿಸ್ ಎಂಬಾತನು ಮಾಡಿಸಿದ ಪೆಟ್ಟಿಗೆಯಲ್ಲಿ ಅತನ ಮೃತ ದೇಹವನ್ನಿಟ್ಟು ಧಫನಮಾಡಿದರು. ಪೆಬ್ರವರಿ 7ರಂದು ಅತನ ಸಮಾಧಿಯನ್ನು ಅಗೆದು ಪೆಟ್ಟಿಗೆಯನ್ನು ತೆರೆದು ನೋಡಲು ಅತನ ದೇಹವು ಒಂದಿಷ್ಟೂ ಕಂದದೆ ಕುಂದದೆ ನಾಶವಾಗದೆ ಹಾಗೆಯೇ ಇದ್ದುದು ಮಾತ್ರವಲ್ಲ ಆ ಮಹಾತ್ಮನ ಪವಿತ್ರ ಉಡುಗೆ ತೊಡುಗೆಯನ್ನು ಸಹಾ ಭೂಮಿ ತಾಯಿಯು ಮಸುಕಾಗಲೀ ಮಲಿನವಾಗಲೀ ಮಾಡಿರಲಿಲ್ಲ. ಮೊಣಕಾಲ ಬಳಿ ಮಾಡಿದ ಕಿರು ಗಾಯವುಂಟಾದುದರಿಂದ ರಕ್ತವು ಬಸಿಯುತ್ತಿದ್ದಾಗಿ ಆಶ್ಚರ್ಯವು ಮೂಡಿಬಂದಿತು. ನಾಲ್ಕು ಶತಮಾನಗಳ ಹಿಂದೆ ಅಸ್ತಂಗತನಾದ ತಂದೆ ಗೋವೆಯಲ್ಲಿಡಲ್ಪಟ್ಟಿದ್ದ ಆ ಪವಿತ್ರ ದೇಹವು ಈಗ ಮಹಾದ್ಭುತಗಳಲ್ಲೊಂದೆಂದು ಪ್ರದರ್ಶನಕ್ಕಿಡಲ್ಪಟ್ಟಿದೆ.

ಸತ್ತ ಮೂರನೆ ದಿನದಲ್ಲಿ ಮತ್ತೆ ಹುಟ್ಟಿದ ಸರ್ವ ರಕ್ಷಕನಾದ ಕ್ರಿಸ್ತ ದೇವನು ತನ್ನನ್ನು ಹಿಂಬಾಲಿಸಿದ ಭಕ್ತ ಆದರ್ಶವನ್ನನುಸರಿಸಿ ಹೆಜ್ಜೆಯಲ್ಲೇ ನಡೆದು ತನ್ನಂತೆಯೇ ದೀನ ದುಃಖಿತರ ಸೇವೆಯನ್ನು ಮಾಡಿದ ಸಂತ ಫ್ರಾನ್ಸಿಸ ಕ್ಷೇವಿಯರನಿಗೆ ಅನ್ಯಜೀವಿಗಾರೂ ಕೊಡದ ಮಹಾ ಅದ್ಭುತವಾದ ವರವನ್ನಿತ್ತು ಆತನ ದೇಹವನ್ನು ಅಚಂಚಲವಾಗಿ ಮಾಡಿ ಸರ್ವ ಶಕ್ತಿಯನ್ನು ತೋರುವ ಮಹಾ ಶಕ್ತಿ, ದೈವ ಶಕ್ತಿಯೊಂದಿದೆ, ದೇವರೊಬ್ಬನಿದ್ದಾನೆಯೆಂಬ ದಿವ್ಯಜ್ಞಾನದ ಪ್ರಕಾಶವನ್ನು ಈ ಕಲಿಯುಗದಲ್ಲಿ, ವಿಜ್ಞಾನಯುಗದಲ್ಲಿ ಕೂಡಾ ಗೋವಾನಗರದಿಂದ, ಭಾರತದಿಂದ ಬೆಳಗಿಸುತ್ತಿದ್ದಾನೆ. ಆಸ್ತಿಕ್ಯವನ್ನು ಜಗತ್ತಿಗೆ ಸಾರುತ್ತಿದ್ದಾನೆ

ವಾರದ ಒಳಿತು ಕೆಡುಕುಗಳು

18-12 52ರಿಂದ ತಾ 24-12-52ರ ವರೆಗೆ

ಮೇಷ— ಪರಿಸ್ಥಿತಿಯು ಮುಂಚಿನಿಂತ ಎಷ್ಟೋ ಸುಧಾರಿಸಲಿದೆ. ಖರ್ಚಿಗೆ ತಕ್ಕ ಉತ್ಪತ್ತಿಯು ಸ್ವಯಂ ಲಭಿಸುವದು. ನಿಮ್ಮ ಬಯಕೆಗಳು ಆಶಾತೀತ ಸಫಲಗಳಾಗಲಿವೆ. ಜನತೆಯ ಗೌರವಾದರಗಳಿಗೆ ಪಾತ್ರರಾಗುವಿರಿ. ನಿಮ್ಮ ಮತ್ತು ಪತ್ನಿಯರ ಆರೋಗ್ಯಕ್ಕೆ ಸ್ವಲ್ಪ ಹಾನಿಯಿದೆ. ಮಿತಭಾಷಿಯಾಗಿದ್ದರೂ ವಾಕ್ಕಲಹವು ತಪ್ಪಲಾರದು. ಕೋರ್ಟು ಕಚೇರಿಗಳಿಗೆ ಹೋಗುವ ಪ್ರಸಂಗವು ಕೆಲವೊಮ್ಮೆ ಬರಲಿದೆ. ತಾ. 19ರಿಂದ 22ರ ವರೆಗಿನ ದಿನಗಳು ಇತರ ದಿನಗಳಿಗಿಂತ ಉತ್ತಮವಿವೆ.

ವೃಷಭ— ಕೈ ಕೆಸರಾದರೆ ಬಾಯಿ ಮೊಸರಾದೀತೆಂಬ ಗಾದೆಯಂತೆ ನಿಮ್ಮ ಶ್ರಮಕ್ಕೆ ತಕ್ಕುದಾದ ಫಲಪ್ರಾಪ್ತಿಯನ್ನು ಕಾಣುವಿರಿ. ಸತ್ಕಾರ್ಯದ ಸಲುವಾಗಿ ಹೆಚ್ಚು ವೆಚ್ಚವಾಗುವದು. ವ್ಯಾಪಾರ ವ್ಯವಹಾರಗಳಲ್ಲಿ ಪರೀಕ್ಷೆಯಂತೆ ಫಲಲಭಿಸದಿದ್ದರೂ ನಷ್ಟವುಂಟಾಗದು. ಉದ್ಯೋಗಸ್ಥ ಜೀವಿಗಳಿಗೂ ವೈದ್ಯ ವರ್ಗದವರಿಗೂ ಕೊಂಚ ಹಣದ ಬಿಕ್ಕಟ್ಟು ಕಾಣಿಸಲಿದೆ. ಗೃಹಕಲಹವು ಹೆಚ್ಚಾಗಿದೆ ತಂದೆ ಮಕ್ಕಳೊಳಗೆ ಗಂಡ ಹೆಂಡಿರೊಳಗೆ ಐಕ್ಯಮತ್ಯವಿರದು. ವಾರಾಂತ್ಯದ ನಾಲ್ಕು ದಿನಗಳು ಸುಖ ಇಷ್ಟ ಪ್ರಾಪ್ತಿ ಮಿತ್ರ ಸಮಾಗಮಗಳಾಗುವವು

ಮಿಥುನ - ಈ ವಾರದಲ್ಲಿ ನಿಮ್ಮ ಪರಿಸ್ಥಿತಿಯು ಕೊಂಚ ಕೆಳಮಟ್ಟಕ್ಕಿಳಿಯಲು ಸುಖಮಯ ಲಾಂಛನಗಳು ಸಮತೂಕದಲ್ಲಿ ನಿಲ್ಲಲಿವೆ. ಭೃತ್ಯದಾಸ ಜನತೆಯಿಂದ ಕಲಹ ನಷ್ಟಗಳು ಕಾಣಿಸಬಹುದು. ಅರಣ್ಯ ಪರ್ಯಟನ ವಿರೋಧಿಗಳಿಂದ ಪರಾಭವ, ರಾಜಕೀಯದಲ್ಲಿ ಕಷ್ಟ ನಷ್ಟಗಳು ಕಾಣಿಸುವವು. ಮಹಾಜನರ ಬೆಂಬಲವನ್ನು ಪಡೆದ ನಿಮಗೆ ಉದ್ಯೋಗದಲ್ಲಿ ಉನ್ನತಿಯು ಸಮಾಜದಲ್ಲಿ ಕೀರ್ತಿಯೂ ಪ್ರಾಪ್ತವಾದೀತು. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಈ ಕಾಲವು ಅನುಕೂಲವಿದೆ. ತಾ 18, 23, 24ರಲ್ಲಿ ಸುಖಸಂಪ್ರಾಪ್ತಿಗಳಾಗಲಿವೆ

ಕರ್ಕಟ—ಕೆಲವು ವಾರಗಳಿಂದ ಸುಖಲೇಶವನ್ನೇ ಕಾಣದ ನಿಮಗಿಂದು ಕೊಂಚ ಮನಸ್ಸಿಗೆ ನೆಮ್ಮದಿ ದೊರೆವ ಸಂಭವವಿದೆ. ನಿಮ್ಮ ಆರೋಗ್ಯವೂ ಸ್ವಲ್ಪ ಸುಧಾರಿಸ ಬಹುದು. ಮನೋರೋಗವುಳ್ಳವರಾಗುವುವು ಸಂಬಂಧಿಕ ಮಿತ್ರರುಗಳು ದಿನೇ ದಿನೇ ಹೆಚ್ಚಲಿವೆ ಸ್ತ್ರೀವರ್ಗದಿಂದ ಅನಿಷ್ಟಗಳು ಬರುವವು. ಶತ್ರುಜನರ ಪ್ರತೀಕಾರ ಸತ್ಕಾರಗಳು ಹಲವು ತನ್ನಿಮಿತ್ತ ಧನಮಾನಗಳಿಗೆ ತೊಂದರೆಯುಂಟಾದೀತು, ವಾರಾಂತ್ಯದ ೩ದಿನಗಳನ್ನು ಬಹಳ ಜಾಗರೂಕತೆಯಿಂದ ಕಳೆಯಿರಿ.

ಸಿಂಹ – ಇಂದಿನ ನಿಮ್ಮ ವಿದ್ಯಮಾನವು ಮುಂಚಿನಂತಿಲ್ಲವಾದರೂ ಉಚ್ಚ ರವಿಯು ಭಾಗ್ಯದ ಬೃಹಸ್ಪತಿಯು ನಿಮ್ಮ ಮನೋರಥಗಳನ್ನು ನೆರವೇರಿಸಲಿರುವರು. ಯಾವ ಕಾರ್ಯವೇ ಇರಲಿ ನಿಮಗದು ಕ್ಷಣಿಕವೆನಿಸಲಿದೆ. ಸೂರ್ಯನನ್ನು ಕಂಡ ಗೂಬೆಯಂತೆ ಶತ್ರುಜನರು ಮಾಯವಾಗಲಿರುವರು. ಬಂಧು ಮಿತ್ರರ ನೆರವು ಸಾಕಷ್ಟು ಉತ್ತಮವಿದೆ ವ್ಯಾಪಾರದಲ್ಲಿ ಅನಿರೀಕ್ಷಿತ ನಷ್ಟ ಕಾಣಿಸೀತು, ತಾ. 19ರಿಂದ 22ರ ವರೆಗಿನ ದಿನಗಳನ್ನು ಸುಖದಿಂದ ಕಳೆವಿರಿ.

ಕನ್ಯಾ— ಸಂತತ ಪ್ರವಾಸದಿಂದಾಗಿ ನಿಮ್ಮ ಆರೋಗ್ಯ ಕೆಡಲಿದೆ. ಉದ್ಯೋಗದಲ್ಲಿ ಅಧಿಕಾರಿಗಳ ಪೀಡೆಯು ಅಸಹನೀಯವೆನಿಸುವದು. ಎಷ್ಟೇ ದುಡಿದರೂ ದಿನಾಂತ್ಯದಲ್ಲಿ ಕೈ ಬರಿದಾದೀತು. ಗುರುಹಿರಿಯರ ಆಗ್ರಹಕ್ಕೆ ಗುರಿಯಾಗುವಿರಿ. ಕೈಗೊಂಡ ಕಾರ್ಯಗಳನ್ನು ಬೇರೆ ಸಹಾಯವಿಲ್ಲದೆ ಕೊನೆಗೊಳಿಸುವ ಅಸದೃಶ ಶಕ್ತಿಯು ನಿಮಗೀವಾರದಲ್ಲಿ ಲಭಿಸುವದು. ಶತ್ರುಭಯದಿಂದ ಮುಕ್ತರಾಗುವಿರಿ. ವಾರಾಂತ್ಯದ 4ದಿನಗಳು ಅನುಕೂಲ.

ತುಲಾ— ದೈವಬಲವು ಸಾಕಷ್ಟು ಉತ್ತಮವಿದೆ. ನಿಮ್ಮ ಆಕಾಂಕ್ಷೆಗಳು ಈಡೇರುವುದರಲ್ಲಿ ಸಂಶಯವಿಲ್ಲ. ಜನಸ್ತೋಮವನ್ನು ತನ್ನೆಡೆಗೆ ಸೆಳೆಯುವ ಮಹತ್ವಾಕಾಂಕ್ಷೆಯು ನಿಮ್ಮಲ್ಲಿರುವುದರಿಂದ ನಿಮಗಿಂದಿನ ಕಾರ್ಯಪೂರ್ತಿ ಕಷ್ಟಸಾಧ್ಯವೆನಿಸದು. ನಿರುದ್ಯೋಗಿಯೂ ಕೂಡ ಸದುದ್ದೇಶದಲ್ಲಿ ಕಾಲಯಾಪನೆ ಮಾಡುವನು. ಮಹಾಜನರ ಮೈತ್ರಿಯನ್ನು ಸಂಪಾದಿಸುವಿರಿ. ವಿಶೇಷತಃ ವಿದ್ಯೋಪಜೀವಿಗಳಿಗೀ ಕಾಲವು ಸಹಾಯಕಾರಿಯಾಗಿದೆ ತಾ. 18, 23, 24, ಈ ದಿನಗಳು ಅತೀವ ಪ್ರಶಸ್ತವಾಗಿದೆ.

ವೃಶ್ಚಿಕ— ಶುಕ್ರಾಚಾರ್ಯರನ್ನುಳಿದು ಮಿಕ್ಕೆಲ್ಲಾ ಗ್ರಹರೂ ವಿಪರೀತ ಸ್ಥಾನದಲ್ಲಿರುವುದರಿಂದ ಈ ವಾರವನ್ನು ಬಹು ಕಷ್ಟದಿಂದ ಕಳೆಯಬೇಕಾಗುವದು. ಇಷ್ಟಸ್ನೇಹ ಆರೋಪ ಆಕ್ಷೇಪಗಳು ಪ್ರಾಪ್ತವಾಗುವವು. ಮನಸ್ಸು ಅತೀವ ಚಂಚಲವಾಗಲಿದೆ. ಆಪ್ತವರ್ಗದವರೆಲ್ಲರೂ ಅಪ್ರಿಯವುಂಟಾದೀತು. ಕಟ್ಟುನಿಟ್ಟುಗಳಿಂದಾಗಿ ಹಲವರೊಡನೆ ಕಲಹವಾದೀತು. ದುರ್ಜನರು ಈ ಕಾಲದಲ್ಲಿ ನಿಮ್ಮ ವ್ಯಕ್ತಿತ್ವವನ್ನು ಸಂಪಾದಿಸಿಕೊಂಡು ತಮ್ಮ ಬೇಳೆ ಬೇಯಿಸಿಕೊಳ್ಳುವರು. ಆದ್ದರಿಂದ ತಾ. 18, 21, 22, 23, 24ರಲ್ಲಿ ಅತೀವ ಜಾಗ್ರತೆಯಿಂದ ವ್ಯವಹಾರ ಮಾಡಿರಿ.

ಧನು — ಕಾಲವು ಅನುಕೂಲಸ್ಥಿತಿಗೆ ಬರುತ್ತಿದೆ. ನಿಮ್ಮ ಸಕಲ ಮನೋರಥಗಳೂ ಅನಾಯಾಸದಿಂದ ಅಲ್ಪಾವಕಾಶದಲ್ಲಿ ಸಿದ್ಧಿಸುವವು. ಯಾವ ಭಾಗದಲ್ಲಿ ನೋಡಿದರೂ ಕಾಣದು ಕೊರತೆಗಳು. ಕಾಣಿರಿ ಸಾಮಾಜಿಕ ರಾಜಕೀಯ ರಂಗಗಳಲ್ಲಿ ನೀವು ಪರಾಭವವನ್ನು ಕಾಣಲಾರಿರಿ. ನಷ್ಟವಾದ ವಸ್ತುಗಳು ನಿಮಗಿಂದು ಲಭಿಸಲಿವೆ. ಆಕಸ್ಮಿಕ ಪ್ರಯಾಣಗಳು ಗಂಟೆ ಬೀಳಬಹುದು, ತಾ. 18, 21, 22 ಅತ್ಯುತ್ತಮ ದಿನಗಳು.

ಮಕರ— ಆಯಕ್ಕಿಂತ ವ್ಯಯವು ಕೊಂಚ ಅಧಿಕವಾಗಲಿದೆ. ಶ್ರಮಪಟ್ಟು ದುಡಿದರೂ ದುಡಿಮೆಗುಚಿತವಾದ ಫಲ ಲಭಿಸದು. ಪಿತ್ತೋಷ್ಣ ಪ್ರಕೋಪದಿಂದ ಆರೋಗ್ಯ ಕೆಡುವುದು. ಚಂಚಲವಾದ ಮನಸ್ಸು ಯಾವ ಕಾರ್ಯವನ್ನೂ ಕೊನೆಮುಟ್ಟಿಸಲು ಬಿಡುವಂತಿಲ್ಲ. ಬಂಧು ಕಲಹ ಮಿತ್ರವಿರಹದಿಂದ ಸಂತಪ್ತರಾದ ನಿಮಗೆ ತಾ. 19, 20, 23, 24 ಈ ದಿನಗಳಲ್ಲಿ ಕೊಂಚ ಮನಶ್ಶಾಂತಿ ಲಭಿಸೀತು.

ಕುಂಭ— ದೈವಾನುಗ್ರಹಹೀನರಾದ ನಿಮಗೆ ವಿಶೇಷತಃ ಹಿಡಿದ ಕಾರ್ಯಗಳಿಗೆ ಹೆಚ್ಚಿನ ವಿಘ್ನಗಳು ಬರಲಿವೆ. ವಾತಪ್ರಕೋಪದಿಂದ ಸಂದುಗೊಂದುಗಳಲ್ಲಿ ನೋವು ಕಾಣಿಸೀತು. ಶತ್ರು ಪೀಡೆ ಹೆಚ್ಚುವದಲ್ಲದೆ ಆಕಸ್ಮಿಕ ಅಪಘಾತಗಳೂ ಉಂಟಾಗುವವು. ಆದರೂ ನಿಮ್ಮ ಖರ್ಚಿನ ಸಲುವಾಗಿ ಹಣವನ್ನು ಸ್ವೀಕರಿಸಬೇಕಾಗಿಲ್ಲ. ನೌಕರ ಜನರಿಗೂ ವೈದ್ಯ ವ್ಯಾಪಾರೀ ವರ್ಗದವರಿಗೂ ಹೆಚ್ಚಿನ ಫಲಪ್ರಾಪ್ತಿಯಿದೆ. ಗೃಹತಾಪತ್ರಯಗಳು ಮುಂಚಿನಿಂತ ಕಡಿಮೆಯಾಗುವವು. ತಾ. 18, 21, 22 ಉತ್ತಮ.

ಮೀನ—ಜನ್ಮಕರ್ಮಪತಿಯು ಧನಸ್ಥಾನದಲ್ಲಿರುವುದು ನಿಮ್ಮದೊಂದು ದೊಡ್ಡ ಭಾಗ್ಯವೆನ್ನಬೇಕು. ಆದ್ದರಿಂದ ಅದೆಷ್ಟೋ ಅನಿಷ್ಟಗಳು ಒಂದರೂ ಹೆಚ್ಚಿನವು ಶಾಂತವಾಗಲಿರುವುದೇ ಬೃಹಸ್ಪತ್ಯಾಚಾರ್ಯರಿಂದಾಗಿ. ಪತ್ನೀಪುತ್ರ ವಿರಹತಾಪವು ನಿಮ್ಮನ್ನಾವರಿಸೀತು ವ್ಯರ್ಥ ಖರ್ಚುಗಳು ಮೇಲಿಂದ ಮೇಲೆ ಬರಲಿವೆ. ಪಿತ್ತ ದೋಷದಿಂದ ಆರೋಗ್ಯಕ್ಕೆ ಧಕ್ಕೆ ತಗಲೀತು. ಆದರೂ ತಾ. 18, 19, 20, 23, 24 ಈ ದಿನಗಳು ನಿಮ್ಮ ಬಯಕೆಯನ್ನು ಈಡೇರಿಸಲು ಶಕ್ತವಾಗುವವು.

ಲಕ್ಷಾಂತರ ಜನರು ಗುಣಹೊಂದಿದ್ದಾರೆ!

ಸರ್ ಜೀವನ್ ಶಿಲಾಜಿತ್ ಲೇಹ

ಶಿಲಾಜಿತ್ ಹಿಮಾಲಯದ ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅಜೀರ್ಣ, [illegible] ವಿಕೆ, ಕೆಮ್ಮು ದಮ್ಮು, ಮಧುಮೂತ್ರ ಮತ್ತು ಮೂತ್ರ[illegible] ಮುಂತಾದ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ [illegible] ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೧೪ದಿನದ ಲೇಹ್ಯ ರೂ ೫/೮, ೩೦ ದಿನದ ಲೇಹ್ಯ ರೂ [illegible]

(ಪೋಸ್ಟೇಜು ಮಾಫಿ)

ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಪುತ್ತೂರು ಡಿ ಮು ಕೋರ್ಟಿನಲ್ಲಿ

O P No 40|52

ದುಗ್ಗಮ್ಮ ಹೆಗ್ಗಡ್ತಿ — ಅರ್ಜಿದಾರರು
ಸಂಜೀವ ಗೌಡ — ಯೆದುರಿ

ಅರ್ಜಿ ವಾದಿ ಪೈಕಿ 1ನೇ ಅರ್ಜಿದಾರಳ ಹೆಸರಿಗೆ ಮೃತ ಪೋಸ್ಟ್ ಮೆನ್ ಬಿ [illegible] ಗೌಡನ ಬಾಬ್ತು ಸರಕಾರದಿಂದ ಸಿಕ್ಕತಕ್ಕ ಗ್ರಾಚ್ಯುಟಿ (Compassionate-gratuity) ಅನ್ವೇಜು ಪಡೆಯುವರೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕೆಂತ ವಗೈರೆ ಅರ್ಜಿ ದಾರರು ಮಾಡಿದ ಮೊಕದ್ದಮೆಯ ವಿಚಾರಣೆಯು ತಾ. 22-12 52 ನೇ ಹಗಲು ಘಂಟೆ 11ಕ್ಕೆ ಈ ಕೋರ್ಟಿನಲ್ಲಿ ತನಿಖೆಗೆ ಬರುವುದರಿಂದ ಆಕ್ಷೇಪವಿದ್ದವರು ಈ ಕೋರ್ಟಿನ ಮುಂದೆ ಹಾಜರಾಗಿ ಉದಾಹರಿಸದಿದ್ದರೆ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

By order of the Court
Sripathi Rao B.
Advocate for Petitioners
ಪುತ್ತೂರು, 23-11-52

ಅಪಸ್ಮಾರ ಭೂತೋನ್ಮಾದಗುಣಕಾರಿ

ಈ ಅತ್ಯಾಶ್ಚರ್ಯಕರವಾದ ಗಿಡಮೂಲಿಕೆಯನ್ನು ಅಪಸ್ಮಾರ ಭೂತೋನ್ಮಾದ ಸೋಂಕಿದ ಕಾಲದಲ್ಲಿ ಘ್ರಾಣಿಸಿದ್ದೇ ಆದರೆ ಒಂದು ಕಾಲು ಘಂಟೆ ಉದ್ದದ ನಿಶ್ಶಕ್ತಿಯ ಜೊತೆ ಶೀಸೆಯೊಂದಿಗೆ ಮೂಗಿನಿಂದ ಹೊರಗೆ ಬರುವುದು ಅದರ ಈ ಸೋಂಕನೆಯ ಭಾವನೆಯೇ ಇದು ಇಂಗ್ಲಿಷಿನಲ್ಲೇ ಪತ್ರ ವ್ಯವಹಾರ ನಡೆಸಿರಿ —
Shri KS Mahatma Sidh Baba
p o Churkot, (U. P)

Edited, Printed & Published by K. L. Shetty at the NavayugaPress, Udipi, S India.

Regd No. M. 3618
LICENC No. 31
Licensed to Post without Prepayment

25-12-1952

Estd 1921 ಸ್ಥಾಪನೆ
32ನೆಯ ವರ್ಷ

Founder. **Sri A. B Shetty,**
Minister for Medical & Public Health

ನವಯುಗ
ಆರೋಗ್ಯ ಮಂತ್ರಿ
ಶ್ರೀ. ಎ. ಬಿ. ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ

ಚಂದಾ	5-12-0
ತಿಂಗಳಿಗೆ	3-0-0
ಪ್ರತಿಗೆ	0-2-0

ನವಯುಗ

Vol 32
No 17

NAVAYUGA WEEKLY POST BOX NO 22 UDIPI

ವರ್ಷ ೩೨
ವಾರ ೧೭

ಅಂತರಂಗ
ಭಕ್ತರ ಪತ್ರಿಕೆಯು
ಉದಯೋನ್ಮುಖವಾದ
86 ಪುಸ್ತಕಗಳು
ರೂ 24ಕ್ಕೆ ಸಿಗುತ್ತವೆ
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ

[illegible]

ಶ್ರೀ [illegible] ಒಬ್ಬ ಪ್ರಾಧ್ಯಾಪಕರು [illegible] ಭಾಷಣ ಮಾಡಿದರು [illegible] "ಸರಿಯಾದ ಮಾರ್ಗ [illegible]

ಆ ಬಳಿಕ [illegible] ನಗೆಯನ್ನು ಹತ್ತಿಕ್ಕು[illegible] ಅವರು

"ನನ್ನ ಈ [illegible] ಶಿಕ್ಷಕನ ಕತೆ ನನಗೆ ನೆನಪಿಗೆ ಬರುತ್ತದೆ [illegible] ಈ ಶಿಕ್ಷಕನು [illegible]

ಅವ್ಯರಲ್ಲ ಇಲ್ಲಿಗೆ ಅವನ ಅತ್ಯಂತ ಪ್ರಿಯ ಶಿಷ್ಯನು [illegible] ಅವಸ್ಥೆಯನ್ನು ನೋಡಿದವನಿಗೆ [illegible] ಸಮಾಧಾನವನ್ನು [illegible] ಬಾಳಿಕೆ [illegible] ಅವನಿಂದ [illegible]

ಕಾಲ ಹರಣ

ಭಗವಾನ್ ಶ್ರೀಕೃಷ್ಣ ಗೀತೆಯಲ್ಲಿ ಪ್ರವೃತ್ತಿ ಮತ್ತು ನಿವೃತ್ತಿ ಎಂಬೆರಡು ಬಗೆಯಾಗಿ ಕಾರ್ಯಗಳ ಲಕ್ಷಣ ಹೇಳಿರುವನು. ಯಾವ ಕೆಲಸವು ಮಾಡಬೇಕಾದುದೋ ಮತ್ತಾವುದರಿಂದ ಹಿತವಿದೆಯೋ ಅದನ್ನು ಒಬ್ಬನು ಮಾಡಲಿಕ್ಕೇ ಬೇಕು ಅದರಲ್ಲಿ ಪ್ರವೃತ್ತನಾಗತಕ್ಕದ್ದು ಅವನ ಧರ್ಮ. ಯಾವುದು ಅನುಚಿತವೋ ಮತ್ತು ಅಹಿತಕ್ಕೆ ಕಾರಣವಾಗುವುದೋ ಅದರಿಂದ ದೂರವಿರಬೇಕು ಮನಸ್ಸನ್ನು ಆ ಆಲೋಚನೆಯಿಂದ ಮುಕ್ತಗೊಳಿಸಬೇಕು. ಇದು ನಿವೃತ್ತಿ ಮಾರ್ಗ. ಹೀಗೆ ಉಚಿತಾನುಚಿತ ಕಾರ್ಯಗಳನು ತಾರತಮ್ಯ ದೃಷ್ಟಿಯಿಂದ ನೋಡಿ ಪ್ರತಿಯೊಂದೂ ಹೆಜ್ಜೆಯನ್ನಿಡುವುದು ಬುದ್ಧಿವಂತರ ಲಕ್ಷಣ ಯಾವುದು ಅಗತ್ಯವೋ ಅದನ್ನು ಕೈಗೊಂಡು ನೆರವೇರಿಸುವುದೂ ಅನಗತ್ಯವಾದುದನ್ನು ತಲೆಗೆ ಹಚ್ಚಿಕೊಳ್ಳದೆ ಇರುವುದೂ ಪ್ರಗತಿಗೆ ನೆರವಾಗುವ ಅಂಶಗಳು.

ಭಾಷಾನುಗುಣ ಪ್ರಾಂತರಚನೆಯ ಕುರಿತು ಹೇಳುವಾಗ ನಮಗೆ ಈ ಉದ್ಧರಣೆಯಿಂದ ಸುಯೋಗ್ಯ ಮಾರ್ಗದರ್ಶನ ದೊರೆಕೀತು. ದಕ್ಷಿಣ ಭಾರತದ ಜನರಲ್ಲಿ ಬಹಳ ದಿನಗಳಿಂದ ಹಾರೈಸಿಕೊಂಡಿದ್ದ ಭಾಷಾನುಗುಣ ಪ್ರಾಂತ ನಿರ್ಮಾಣ ಕಾರ್ಯವು ಇನ್ನೂ ನೆರವೇರಿಲ್ಲ. ಈಗಿರುವಂತೆ ಮದ್ರಾಸು, ಮುಂಬಯಿ, ಹೈದರಾಬಾದು, ಕೊಡಗು, ಮೈಸೂರುಗಳೆಂಬ ರಾಜ್ಯಘಟಕಗಳಲ್ಲಿ ಮಹಾರಾಷ್ಟ್ರ, ಕನ್ನಡ, ಮಲೆಯಾಳಿ ತಮಿಳು ಮತ್ತು ತೆಲುಗು ಎಂಬ ಭಾಷೆಯನ್ನಾಡುವ ಜನವು ಹಂಚಿಹೋಗಿರುವರು ಎಲ್ಲಕ್ಕೂ ಶೋಚನೀಯವಾದ ಸ್ಥಿತಿ ಕನ್ನಡಿಗರದು ಎಂಬುದು ಸ್ಪಷ್ಟವಿದೆ. ಮೇಲೆ ಹೇಳಿದ ಐದೂ ರಾಜ್ಯಗಳಲ್ಲಿ ಕನ್ನಡಿಗರು ಹರಿದು ಹಂಚಿ ಹೋಗಿರುವರು. ಕೊಡಗು ಮೈಸೂರುಗಳನ್ನುಳಿದರೆ ಇತರ ಮೂರು ರಾಜ್ಯಗಳಲ್ಲಿ ಕನ್ನಡಿಗರ ಮಾತಿಗೆ ಬೆಲೆ ಬರುವುದಿಲ್ಲ ಅವರ ನ್ಯಾಯವಾದ ಬೇಡಿಕೆಗಳಿಗೂ ಮಾನ್ಯತೆ ದೊರಕುವುದಿಲ್ಲ ಅಭಿವೃದ್ಧಿ ಯೋಜನೆಗಳಲ್ಲಿ ಕರ್ನಾಟಕವನ್ನು ದುರ್ಲಕ್ಷಿಸಲಾಗುತ್ತಿದೆ ಧಾರಾಳವಾದ ನೈಸರ್ಗಿಕ ಸಂಪತ್ತು ಮತ್ತು ಅನುಕೂಲತೆ ಇದ್ದರೂ ಸರಕಾರದ ಗಮನ ಈ ಕಡೆಗೆ ಹರಿದಂತಿಲ್ಲ. ಮೊನ್ನೆ ಪಾರ್ಲಿಮೆಂಟಿನಲ್ಲಿ ಮಹಾರಾಷ್ಟ್ರದ ಸದಸ್ಯರೊಬ್ಬರು ಕರ್ನಾಟಕವನ್ನು ದುರ್ಲಕ್ಷಿಸಿದ್ದೇಕೆಂದು ಪ್ರಶ್ನೆ ಕೇಳಿದರು. ಸಾಂಸ್ಕೃತಿ ಹಿನ್ನಲೆಯನ್ನು ಬಿಟ್ಟುಗೊಟ್ಟರೂ ರಾಜಕೀಯ ಹಾಗೂ ಆರ್ಥಿಕ ದೃಷ್ಟಿಯಿಂದ ನೋಡಿದರೂ, ಕರ್ನಾಟಕ ಏಕೀಕರಣವಾಗಿ ಕನ್ನಡ ಮಾತನ್ನಾಡುವ ಜನರದು ಒಂದು ಪ್ರತ್ಯೇಕ ಪ್ರಾಂತ ನಿರ್ಮಾಣದ ಬೇಡಿಕೆ [illegible] ನ್ಯಾಯ ಇದೇ ಸಾತತ್ಯ [illegible] ಸೆಯು ಜನರು ಹಾರೈಸುವರೆಂಬುದು ಸಂದೇಹವಿಲ್ಲ.

ಈ ಚಳುವಳಿ ಬಹಳ ಹಿಂದಿನದೇ. ಸ್ವಾತಂತ್ರ್ಯ ಬರುತ್ತಲೇ ಜನರಲ್ಲಿ ಭಾಷಾನುಗುಣ ಪ್ರಾಂತ ರಚನೆಯ [illegible]

ಆಸ್ಟ್ರೇಲಿಯನ್ [illegible] ರಾಗಿರುವ [illegible]

ಭಾಷಾನುಗುಣ ಪ್ರದೇಶವಾಗಿ ಕಾಂಗ್ರೆಸಿನ ಕಾರ್ಯಕ್ಷೇತ್ರ ವಿಂಗಡಿಸಲ್ಪಟ್ಟಿದೆ ಇದೇ ಮೇಲ್ಪಂಕ್ತಿಯನ್ನು ರಾಜಕೀಯ ಘಟಕ ನಿರ್ಮಾಣಕ್ಕೆ ಯಾಕೆ ಅನುಸರಿಸಬಾರದು ಎಂಬ ಪ್ರಶ್ನೆಗೆ ತಕ್ಕ ಸಮಾಧಾನ ದೊರೆಯುವುದಿಲ್ಲ. ಕೇಂದ್ರ ಸರಕಾರದ ಹೊಣೆ ಈ ಸಂಗತಿಯಲ್ಲಿ ಹೆಚ್ಚಿದೆ ಎಂಬುದು ನಿಶ್ಚಯ. ಅದು ವಿಳಂಬ ಧೋರಣೆಯನ್ನು ಅನುಸರಿಸಿದೆ. ಈಗ ತಾನೆ ಹಿಂದೂ ಪಾಕಿಸ್ತಾನವೆಂದು ಇಬ್ಭಾಗವಾಗಿರುವ ದೇಶವನ್ನು ಭಾಷೆ ಮತ್ತು ಸಂಸ್ಕೃತಿಯ ಮೋಹದಿಂದ ತುಂಡರಿಸಿದರೆ ಅದು ದೇಶದ ಐಕ್ಯಕ್ಕೆ ಮಾರಕವೆನಿಸೀತೆಂಬ ಭಯ ಹೊಂದಿದ್ದರಾದರೆ ಈ ವಿಷಯವೇ ಜರೂರಾದುದಲ್ಲವೆಂದು ಮತ್ತು ಅದಕ್ಕೂ ಅಗತ್ಯದ ಇತರ ಕಾರ್ಯಗಳೂ ಕೈಗಾರಿಕೆಯೂ [illegible] ಇನ್ನೊಂದೆಡೆಯಿಂದ ಕೇಳುತ್ತಿದೆ. ಚೆನ್ನಲ್ಲಿ ಆಂಧ್ರಪ್ರಾಂತ ರಚನೆಯ ಸಂಬಂಧದಲ್ಲಿ ಉಗ್ರ ಚಳುವಳಿಗಳು ನಡೆದ ಮತ್ತು ನಡೆಯುತ್ತಿರುವ ವರದಿ ಬಂದಿದೆ ಮಾತ್ರವಲ್ಲ ನೆಹರೂರವರು ಈಚೆಗೆ ಕೊಟ್ಟ ಹೇಳಿಕೆಯಿಂದ ಆಂಧ್ರಪ್ರಾಂತ ನಿರ್ಮಾಣಕಾರ್ಯದಲ್ಲಿ ಸರಕಾರ ಈಗಾಗಲೇ ವ್ಯಾವಹಾರಿಕ ಹೆಜ್ಜೆಯನ್ನು ಮುನ್ನಿಟ್ಟಾಗಿದೆ ಎಂದು ತಿಳಿದಿದೆ.

[illegible] ಒಂದ [illegible] ಗಿಂಬೇಕ [illegible] ಪ್ರಾಂತ ರಚನೆ [illegible] ಅತ್ಯಂತ ಅವಶ್ಯಕವೆಂಬುದನ್ನು ಕಾಂಗ್ರೆಸ್ [illegible] ಜನತೆಗೆ ತಾನು ನೀಡಿದ ಭರವಸೆಗೆ [illegible] ಇಂದಿನ ಸರಕಾರ ಮಾತ್ರ [illegible] ದುರ್ಲಕ್ಷಿಸುತ್ತಿದೆ [illegible] ಸಂಗತಿಯನ್ನು [illegible] ಒಂದು [illegible] ಎಂದಾದರೂ [illegible] ಸಮುದ್ರದ ತೆರೆಗಳು ಶಾಂತವಾದ ಮೇಲೆ [illegible] ಒಂದು [illegible]

11 ನೇ ಪುಟ ನೋಡಿರಿ,

ಮನೋರಂಜನೆಯ ಆಟಗಳು

ಪಶು ಕೀಟಗಳಿಗೆ ಕೊಡುವ ಕೀಟಲೆಯಿಂದ ಮಾನವನ ವಿನೋದ

ಮನುಷ್ಯ ಮನೋರಂಜನೆಯನ್ನು ಬಯಸುವುದು ತೀರಾ ಸ್ವಾಭಾವಿಕ. ಆದರೆ ಮನೋರಂಜನೆಯ ಹೆಸರಿನಲ್ಲಿ ನಡೆದು ಬಂದ ಹಾಗೂ ನಡೆಯುತ್ತಿರುವ ವಿನೋದ ಪ್ರಸಂಗಗಳು ಭೀಭತ್ಸ ಮಾತ್ರವಲ್ಲ ಭಯಾನಕವಾಗಿಯೂ ಇವೆ. ಪುರಾತನ ಕಾಲದಲ್ಲಿ ಮನುಷ್ಯನ ಶರೀರ ದಾರ್ಢ್ಯವೇ ಸರ್ವಸ್ವವಾಗಿದ್ದಾಗ—ಸಿಂಹಗಳೊಡನೆ ಸೆಣಸಾಡುವುದೇ ವರೆನೇ ಪುರುಷ ಸಿಂಹನಿಗೆ ಹೆಮ್ಮೆಯಾಗಿತ್ತು! ಆದರೆ ಜನಜಟ್ಟಿಗಳು ಕಡಿಮೆಯಾದಂತೆ, ಈ ವಿನೋದವನ್ನು ಒದಗಿಸಿಕೊಡುವ ದುರ್ದೃಷ್ಟ ನಿರುಪಾಯರಾದ ಅಪರಾಧಿ ಮನುಷ್ಯರ ಪಾಲಿಗೆ ಬಂತು. ರಾಜನ ಕೋಪಕ್ಕೆ ಗುರಿಯಾದವರನ್ನು ಹಸಿದ ಸಿಂಹದ ಬಾಯಿಗೊಪ್ಪಿಸಿ, ಆಗ ನಡೆಯುವ ಆಕ್ರೋಶದ ಘಟನೆಗಳನ್ನು ಕಂಡು, ಅಟ್ಟಹಾಸದಿಂದ ನಕ್ಕುನಲಿಯುವ ಕ್ರೌರ್ಯಕ್ಕೆ ವಿನೋದವೆಂದು ಹೇಳುತ್ತಿದ್ದರು. ಆಂಡ್ರೋಕ್ಲೆ ಮತ್ತು ಸಿಂಹದ ಕತೆಯನ್ನು ಬಾಲಕ ತರಗತಿಯಲ್ಲಿ ನಾವೆಲ್ಲ ಕೇಳಿದ್ದೆವು. ಕೂದಲು ನಿಗುರಿಸುವ ರೋಮಾಂಚಕ ಕತೆ ಅದು. ಈ ಪರಂಪರೆ ನಾಗರಿಕ ಸಂಸ್ಕೃತಿಯ ಇಂದಿನ ಉಚ್ಛ್ರಾಯ ಸ್ಥಿತಿಯಲ್ಲೂ ಅಳಿವು ಗಾಣದೆ— ತಲೆಮರೆಸಿಯಾದರೂ ಉಳಿದಿದೆ ಕೆಲ ಮಟ್ಟಿಗೆ ಕ್ರೌರ್ಯ ಸ್ವರೂಪವು ಸಾಮ್ಯಾವಸ್ಥೆಯನ್ನು ಮುಟ್ಟಿದ್ದರೂ— ಮನೋರಂಜನೆಯ ಬೆಲೆ ಅಂದಿನಷ್ಟೇ ಇಂದೂ ಇದೆ.

ಹಂದಿ ಓಡಿಸುವ ಸುಂದರಿಯರು

ಮಧ್ಯ ಯುಗದ ನವಾಬರು ತಿತ್ತಿರಿ ಹಕ್ಕಿ ಅಥವಾ ಲಾವಕ್ಕಿಗಳ ಕಾದಾಟವನ್ನು ನೋಡಿ ಆನಂದಿಸುವ ಪರಿಪಾಠವಿತ್ತು. ಮುಸ್ಲಿಂ ರಾಜರು ಬಲಶಾಲಿಯಾದ ಆನೆಗಳು ಪರಸ್ಪರ ಸೆಣಸಾಡುವುದನ್ನು ಕಂಡು ಸಂತೋಷಭರಿತರಾಗುತ್ತಿದ್ದರು. ನಮ್ಮ ತುಳುನಾಡಿನಲ್ಲಿ ಕೋಳಿಅಂಕವೆಂಬುದು ಹಳ್ಳಿಯ ಜನರ ಮನೋರಂಜನೆಗೆ ಅತ್ಯಂತ ಹೆಸರಾಗಿದೆ. ನಿರ್ದುಷ್ಟವಾದ ಕಂಬಳದ ಕೋಣನ ಓಟ ಈಗೀಗ ತನ್ನ ವೈಭವವನ್ನು ಕಳೆದುಕೊಳ್ಳುತ್ತ ಬರುತಿದ್ದರೂ—ಕೋಳಿ ಅಂಕದ ಪ್ರಾಶಸ್ತ್ಯಕ್ಕೆ ಧಕ್ಕೆ ಬಂದಂತಿಲ್ಲ. ಬದಲಿಗೆ ಅದು ಜೂಜಿನ ಸ್ವರೂಪಕ್ಕೆ ಪರಿವರ್ತಿತವಾಗಿದೆ! ನಮ್ಮ ಕಂಬಳದ ಕೋಣನ ಓಟಕ್ಕೆ ಹೋಲಿಸಬಹುದಾದ ಆಧುನಿಕ ಕ್ರೀಡೆ ಎಂದರೆ ಕುದುರೆಯ ನಾಗಾಲೋಟ. ಮುಂಬಯಿಯಂಥ ಶಹರುಗಳು ಭಾರತದಲ್ಲಿ ಇದಕ್ಕೆ ಹೆಸರಾಗಿವೆ. ಡರ್ಬಿ ಪಂದ್ಯಾಟ ವಿಶ್ವವಿಖ್ಯಾತವಾಗಿದೆ. ಈಗೀಗ ಕುದುರೆಯ ಬದಲು ಪಾಶ್ಚಾತ್ಯರು ನಾಯಿಗಳನ್ನೂ, ಹಂದಿಗಳನ್ನೂ, ಆಮೆಯನ್ನು ಸಹ ಓಟ ಓಡಿಸಲು ಉಪಯೋಗಿಸುವರೆಂದರೆ ಆಶ್ಚರ್ಯವಲ್ಲವೆ! ಇವುಗಳ ಓಟವನ್ನು ಕಾಣುವ ಇಚ್ಛೆಯಿಂದ ಲಕ್ಷಾಂತರ ಜನ ಸೇರುವರೆಂದರೆ ಇನ್ನಷ್ಟು ಆಶ್ಚರ್ಯವೇ ಸರಿ. ಕೆಲಿಫೋರ್ನಿಯಾದ ಪೇನಿಸ ನಗರದಲ್ಲಿ ವರ್ಷಂಪ್ರತಿ ಹಂದಿಗಳ ಓಟ ಜರಗುತ್ತದೆ. ನಗರದ ಸುಂದರಿಯರು ಈ ಹಂದಿಗಳನ್ನು ಓಡಿಸುವರು. ಮಿಯಾಮಿ ಎಂಬಲ್ಲಿ ದೊಡ್ಡ ದೊಡ್ಡ ಆಮೆಗಳ ಬೆನ್ನ ಮೇಲೆ ಇಬ್ಬಿಬ್ಬರು ನಿಂತು ಅದನ್ನು ಓಡಿಸುತ್ತಾರೆ! ಆಮೆಯ ಹಾಗೂ ಮೊಲದ ಕತೆ ಕೇಳಿರುವ ನಾವು, ಕೂರ್ಮದ "ನಾಗಾಲೋಟ"ದ ಈ ಪ್ರಸಂಗ ಕೇಳಿ, ಮೂಗಿನ ಮೇಲೆ ಬೆರಳೇರಿಸಬೇಕು.

ತಕ್ಕಿಗೆ ಒಪ್ಪದ ಬೆಕ್ಕು.

ಕೆಲವು ಪಾಶ್ಚಾತ್ಯರು ಇಜಿಪ್ತದಲ್ಲಿದ್ದು ಒಂದು ಹೊಸ ಆಲೋಚನೆಯನ್ನು ಮಾಡಿದರು. ದೊಡ್ಡ ದೊಡ್ಡ ಡುಬ್ಬನಿರುವ ಒಂಟೆಗಳನ್ನು ಓಡಿಸುವ ಸಾಹಸ ಅವರದು. ಮೊದಲೇ ಬುದ್ಧಿಯಲ್ಲಿ ಒಂಟೆ ಮೂಢವು. ಅದರ ನಡಿಗೆಯೂ ಬಹಳ ನಿಧಾನ. ಅಂಥವನ್ನು ಓಟದ ಮಾರ್ಗದಲ್ಲಿ ಆತಂಕಗಳನ್ನು ಒಡ್ಡಿ, ಅವುಗಳನ್ನು ನೆಗೆದು ಹಾರುವಂತೆ ಒಂಟೆಗಳಿಗೆ ತರಬೇತಿ ಕೊಡುವುದೆಂದರೆ, ಅದೆಂಥ ಮೋಡಿ ನೀವೇ ಯೋಚಿಸುವುದೊಳಿತು!

ನಮ್ಮ ದೇಶದಲ್ಲಿಯೇ ಹಿಮಾಲಯದ ತಪ್ಪಲಿನಲ್ಲಿರುವ ಡಾರ್ಜಲಿಂಗದಲ್ಲಿ ಸಣ್ಣ ಜಾತಿಯ ಕುದುರೆಗಳ ಓಟ ತುಂಬ ಜನಪ್ರಿಯವಾದ ಆಟ. ನೆರೆಯ ಟಿಬೇಟಿನ ಜನರು ಇದನ್ನು ಕಂಡು, ತಮ್ಮ ಜನಪ್ರಿಯ ವಾಹನವಾದ ಯಾಕಕೋಣವನ್ನು ಓಡಿಸುವ ಆಟಕ್ಕೆ ಮನಸ್ಸುಗೊಟ್ಟರು. ಲ್ಹಾಸಾ ನಗರದಲ್ಲ ವರ್ಷವರ್ಷವೂ ಈ ಆಟ ಜರಗುತ್ತದೆ. ಆದರೆ ಯಾಕದಂಥ ಕಾಡುಕೋಣಕ್ಕೆ ಬುದ್ಧಿ ಕಲಿಸಿ ಒಲಿಸಿದವರಾರು?—ಒಂದುಸಲ ಸ್ಫೂರ್ತಿ ಬಂದು ಅದು ಓಡತೊಡಗಿದರೆ, ಎಲ್ಲಿ ಹೋಗಿ ನಿಂತೀತೆಂಬ ನಿಯಮವಿಲ್ಲ.

ಆದರೆ ಬೆಕ್ಕುಗಳನ್ನು ಓಟಕ್ಕೆ ಹಚ್ಚುವಷ್ಟು ಕಷ್ಟವು ಯಾವುದರಲ್ಲಿಯೂ ಮಜಾ ಇರಲಾರದು. ಇಂಗ್ಲೆಂಡಿನ ಪೋರ್ಟ್ಸಮ ನಗರದಲ್ಲಿ ಒಮ್ಮೆ ಬೆಕ್ಕುಗಳ ಓಟವನ್ನು ಏರ್ಪಡಿಸಲಾಯಿತು. ಆದರೆ ಇದು ಸಾಫಲ್ಯ ಪಡೆಯದೆ ಹೋಯಿತು. ಇಲಿಯ ಚರ್ಮದ ಹೊದಿಕೆಯಲ್ಲಿ ಭೂಸವನ್ನು ತುಂಬಿ ಅದಕ್ಕೆ ಬೆಕ್ಕು ಬಾಯಿಂದ ನೀರು ಸುರಿಸುವಂತೆ ಮಾಡಿಸುವ ಉಪಾಯ ಕೈಗೊಂಡದ್ದು ವ್ಯರ್ಥವೇ ಆಯಿತು. ಈ ಕೃತ್ರಿಮ ಇಲಿಯನ್ನು ಬೆನ್ನಟ್ಟಿ ಹೋಗುವ ಹುಚ್ಚು ಬೆಕ್ಕುಗಳಿಗೆ ಹಿಡಿಯಲಿಲ್ಲ!

ಚೀನೀಯರ ಅಭಿರುಚಿ

ನೆರೆಯ ದೇಶ ಚೀನಾದವರ ಅಭಿರುಚಿಯೇ ಒಂದು ಬಗೆ: ಅವರಿಗೆ "ಅಕ್ಕಳಿ" ತಿನ್ನುವುದೆಂದರೆ ಬಹಳ ಇಷ್ಟ. ನಮ್ಮವರಿಗೆ ಕೋಳಿ ಎಂದರೆ ಹೇಗೋ ಹಾಗೆ. ಈ ಕಾರಣದಿಂದಲೇ ಇರಬೇಕು, ನಾವು ಕೋಳಿ ಅಂಕದಲ್ಲಿ ಮನಸ್ಸು ಹಾಕುವಂತೆ ಚೀನೀಯರು ಜಿರಳೆಯ ಜೀವಕ್ಕೆ ಅಪಾಯವೊಡ್ಡಿ ವಿನೋದ ಅನುಭವಿಸುತ್ತಾರೆ. ಒಂದು ಟಿನ್ನಿನ ದೊಡ್ಡ ಡಬ್ಬಿಯಲ್ಲಿ ಜಿರಳೆಗಳನ್ನು ತುಂಬಿ, ಅದರ ನಡುವೆ ಮೇಣದ ಬತ್ತಿಯನ್ನು ಉರಿಸಿಡುತ್ತಾರೆ. ಅದರ ಪ್ರಕಾಶವನ್ನು ಕಂಡೊಡನೆ ಜಿರಳೆಗಳು ಗಲಿಬಿಲಿಯಿಂದ ಓಡುವುದಕ್ಕೆ ತೊಡಗುತ್ತವೆ. ಸರ್ವಪ್ರಥಮವಾಗಿ ಯಾವ ಜಿರಳೆ ಡಬ್ಬಿಯಿಂದ ಹೊರಗೆ ಹಾರಿಬಂತೋ ಅದು ಜಯಶೀಲವೆಂದು ಪರಿಗಣಿಸಲ್ಪಡುತ್ತದೆ.

ಮಿಡಿತೆಗಳ ಹೋರಾಟವನ್ನು ಏರ್ಪಡಿಸುವುದು ಚೀನೀಯರ ಇನ್ನೊಂದು ವಿನೋದ. ಕೆಲವು ದಿನಗಳ ವರೆಗೆ ಮಿಡಿತೆಗಳಿಗೆ ಹೊಟ್ಟೆ ತುಂಬ ತಿನ್ನಿಸಿ ಸಾಕಿ ಸಲಹುತ್ತಾರೆ. ಯುದ್ಧವಿದ್ಯೆಯನ್ನು ಅಭ್ಯಾಸಮಾಡಿಸುತ್ತಾರೆ. ಚೆನ್ನಾಗಿ ಬಲಿತ ಮೇಲೆ ಅವುಗಳನ್ನು ಒಂದು ನಿರ್ದಿಷ್ಟ ಜಾಗದಲ್ಲಿ ಬಿಟ್ಟಾಗ ಅವು ಒಂದನ್ನೊಂದು ತಿನ್ನಲು ಧಾವಿಸುತ್ತವೆ. ಆಗ ತೊಡಗಿದ ಕಾದಾಟ, ಅವುಗಳಲ್ಲಿ ಒಂದು ಸತ್ತು ಸ್ವರ್ಗ ಸೇರುವುದಕ್ಕೆ ಮುಂಚೆ ನಿಲ್ಲುವುದಿಲ್ಲ.

ಸ್ಪೈನು ದೇಶದಲ್ಲಿ ಗೂಳಿಗಳ ಕಾದಾಟವು ರಾಷ್ಟ್ರೀಯ ಉತ್ಸವವೆಂದು ಮನ್ನಿಸಲ್ಪಟ್ಟಿದೆ. ನ್ಯೂ ಮೆಕ್ಸಿಕೋದ ಜನರು ಹಾವುಗಳನ್ನು ಓಡಿಸುವ ಒಂದು ಚಮತ್ಕಾರದ ಆಟ ಕಂಡುಹಿಡಿದಿರುವರು. ಹಾವುಗಳನ್ನು ಒಂದೆಡೆ ಇಟ್ಟು, ಅವುಗಳ ಬಾಲದ ತುದಿಗೆ ಮುಟ್ಟುವಂತೆ ಒಂದು ಲೋಹದ ಬಿಲ್ಲೆಯನ್ನು ತಗಲಿಸುವರು. ಈ ಬಿಲ್ಲೆಯಲ್ಲಿ ವಿದ್ಯುಚ್ಛಕ್ತಿಯನ್ನು ಹರಿಯಗೊಟ್ಟಾಗ, ಹಾವಿನ ಬಾಲಕ್ಕೆ "ಶಾಕ್" ಹತ್ತಿ, ಹಾವು ತತ್ತರಿಸುತ್ತಾ ಚಲ್ಲಾಪಿಲ್ಲಿಯಾಗಿ ಓಡ ಹತ್ತುವುದು. ಸುತ್ತ ಎಳೆದಿರುವ ವೃತ್ತ ಮೀರಿ ಮೊದಲಾಗಿ ಹೊರಬಂದ ಹಾವಿನ ಪಾಲಿಗೆ ಗೆದ್ದುಬಂದ ಹೆಮ್ಮೆ.

ನಿರ್ದುಷ್ಟ ಕ್ರೀಡೆ

ಆದರೆ ನಿರ್ದುಷ್ಟವಾದ ವಿನೋದಗಳನ್ನೂ ಪಾಶ್ಚಾತ್ಯರು ಮರೆತಿಲ್ಲ: ಡೆನ್ಮಾರ್ಕಿನ ರಾಜಧಾನಿ ಕೋಪನ್‌ಹೇಗನಿನಲ್ಲಿ ನಾವು ಕೇವಲ ಹುಡುಗಾಟಿಕೆಯೆಂದು ಕರೆಯುವ ಆಟದಲ್ಲಿ ಮುದುಕರು ಸಹಭಾಗವಹಿಸುವುದನ್ನು ಕಾಣಬಹುದು. ಆಟವೇನು ರೋಮಾಂಚಕವಲ್ಲ – ಅಥವಾ ವಿಚಿತ್ರವೂ ಅಲ್ಲ. ಸಾಮಾನ್ಯವಾಗಿ ಕೆರೆನೀರಿಗೆ, ಅಥವಾ ಹರಿಯುವ ನದಿಗೆ ಪುಟ್ಟ ಕಲ್ಲನ್ನು ಎಸೆಯುವ ಅಭ್ಯಾಸ ನಮಗಿದ್ದೇ ಇದೆ ತಾನೆ! ಕೆಲವೊಮ್ಮೆ ಕಲ್ಲನ್ನು ರೊಯ್ಯೆಂದು ಬೀಸುವ ಬಗೆಯಿಂದ ನೀರಿನಲ್ಲಿ ಎರಡು ಮೂರು ಬಾರಿ ಅದು ಬಿದ್ದೆದ್ದು ನೆಗೆಯುವಂತೆ ಮಾಡುವುದೂ ಉಂಟಲ್ಲವೆ– ಇದೇ ಒಂದು ಮೋಜಿನ ಆಟ. ಸ್ತ್ರೀ ಪುರುಷರು ಸಿದ್ಧಹಸ್ತರಾದ ಆಟಗಾರರಿಂದ ನೀರಿನ ಮೇಲೆ ಕಲ್ಲನ್ನು ಈಸಗೊಡುವ ಈ ಜಾದೂ ವಿದ್ಯೆಯನ್ನು ಕಲಿತು ಸ್ಪರ್ಧೆಯಲ್ಲಿ ಭಾಗವಹಿಸುತ್ತಾರೆ. ಕಳೆದ ವರ್ಷ ಜಯಶೀಲನಾದವನು ಕಲ್ಲನ್ನೆಸೆದು ೨೧ ವೃತ್ತಗಳನ್ನೆಬ್ಬಿಸಲು ಸಮರ್ಥನಾದ. ಈ ದಾಖಲೆಯನ್ನು ಇನ್ನು ಮುರಿಯಬೇಕಷ್ಟೆ.

ಎರಡು ವರ್ಷಗಳಿಗೆ ಮುಂಚೆ ಕೆಲಿಫೋರ್ನಿಯಾದ ಎಂಗಿಲ್ಸ್ ಕೇಂಪ್ ಎಂಬಲ್ಲಿ ಕಪ್ಪೆಯು ಕುಪ್ಪಳಿಸುವುದನ್ನು ಅನುಕರಿಸುವ ವಿನೋದ ಕ್ರೀಡೆ ನಡೆಯಿತು. ಈ ಬಗೆಯ ಸ್ಪರ್ಧೆ ನಡೆದುದು ಇದು ೨೨ನೆಯ ಸಲ! ಹತ್ತು ಸಾವಿರ ಪ್ರೇಕ್ಷಕರು ಸಮ್ಮಿಳಿತಗೊಂಡು ಈ ಅಪೂರ್ವ ಆಟವನ್ನು ನೋಡಿದರು. ಕಳೆದ ವರ್ಷ ಅಮೇರಿಕನ್ ಕಪ್ಪೆಯೊಂದು ೧೪ ಅಡಿ ೯ ಅಂಗುಲದಷ್ಟು ದೂರವನ್ನು ಮೂರೇ ನೆಗೆತದಲ್ಲಿ ಆಕ್ರಮಿಸಿತು. ಆದರೂ ೧೯೪೯ರ ದಾಖಲೆಯನ್ನು (ಎಂದರೆ– ೧೫ ಅಡಿ ದೂರ) ಮುರಿಯುವುದು ಇನ್ನೂ ಬಾಕಿ ಇದೆ. ನೀವೊಮ್ಮೆ ಕುಪ್ಪಳಿಸಿ ನೋಡಿ, ಗೆಲ್ಲಲು ಪ್ರಯತ್ನಿಸುತ್ತೀರಾ?

The Canara Mutual Assurance Co Ltd.
Head Office: UDIPI, S. INDIA. Estd: 1935.

ಶುಭಾಶಯಗಳು!

ನಾವು ನಮ್ಮೆಲ್ಲ ವಿಮಾದಾರರನ್ನೂ ಪ್ರೋತ್ಸಾಹಕರನ್ನೂ ಅವರ ನಿರಂತರವಾದ ಬೆಂಬಲಕ್ಕಾಗಿ ಅಭಿನಂದಿಸುತ್ತೇವೆ. ಅಲ್ಲದೆ ಅವರ ಪ್ರೋತ್ಸಾಹಕ್ಕೆ ಪ್ರತಿಯೊಂದೂ ರೀತಿಯಲ್ಲಿ ಅರ್ಹರೆನಿಸುವಂತೆ ಮುಂದಕ್ಕೂ ಪ್ರಯತ್ನಿಸುವೆವೆಂದು ಭರವಸೆಯನ್ನು ನೀಡುತ್ತೇವೆ ನೂತನ ವರ್ಷವು ಸಕಲರಿಗೂ ಸುಖ ಸಂತೋಷ ಹಾಗೂ ಸಮೃದ್ಧಿಯನ್ನು ತರಲೆಂಬುದೇ ನಮ್ಮ ಹಾರೈಕೆ!

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ. ಸ್ಥಾಪನೆ: ೧೯೩೫



ರಾಮತೀರ್ಥ
ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧, [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಪೆಶಲ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಭಾರತೀಯರ ಆಕಾಶಯಾನ

ವಿಮಾನಗಳ ಬಗೆಗೆ ಈಚೆ ದೊರೆತ ಮಾಹಿತಿ

ಕೆಲವೇ ದಿನಗಳ ಹಿಂದೆ ಅಂತಾರಾಷ್ಟ್ರೀಯ ಸಂಶೋಧನ ಮಂಡಳಕ್ಕೆ ಮೈಸೂರಿನಲ್ಲಿ ಮಹರ್ಷಿ ಭಾರದ್ವಾಜರಿಂದ ಬರೆಯಲ್ಪಟ್ಟ ವೈಮಾನಿಕ ಶಾಸ್ತ್ರ ವಿಷಯದ ಒಂದು ಮಹಾಗ್ರಂಥ ದೊರೆಯಿತು. ಅದು ದೇವನಾಗರೀ ಲಿಪಿಯಲ್ಲಿದೆ. ವಿಮಾನ ನಿರ್ಮಾಣದ ಬಗೆಯನ್ನಷ್ಟೆ ಅಲ್ಲ— ವಿಮಾನೋಡ್ಡಾಣ ಹಾಗೂ ಸಂಸಂಚಾಲನದ ಬಗ್ಗೆಯೂ ಅದರಲ್ಲಿ ವಿವೇಚನೆ ಮಾಡಲ್ಪಟ್ಟಿದೆ.

ಮಹರ್ಷಿ ಭಾರದ್ವಾಜರು ಉಲ್ಲೇಖಿಸಿದ ಕೆಲವು ವಿಮಾನಗಳು ಇಂದಿನ ಜಾಗೃತ ಯುಗದಲ್ಲಿ ಕೂಡ ಆಶ್ಚರ್ಯದ ವಸ್ತುಗಳಾಗಿವೆ. ಇಂದಿನ ಉನ್ನತೋನ್ನತ ವಿಜ್ಞಾನಿಗಳಿಂದಲೂ ಅದರಲ್ಲಿ ವಿವರಿಸಲಾದ ಕೆಲ ನಮೂನೆಯ ವಿಮಾನಗಳನ್ನು ಕಟ್ಟುವುದಾಗಿಲ್ಲ: ಭಾರದ್ವಾಜರ ಗ್ರಂಥದಲ್ಲಿ ಶಾಕುನ, ಸುಂದರ ಮತ್ತು ರುಕ್ಮ ವಿಮಾನವೆಂಬ ಮೂರು ಪ್ರಮುಖ ನಮೂನೆಗಳಿವೆ. ಇದರ ಹೊರತು ಕಡಿದರೂ ತುಂಡಾಗದ ಅಗ್ನಿಯಿಂದ ಭಸ್ಮ ಹೊಂದದ ವಿಮಾನದ ವರ್ಣನೆಯೂ ಇದೆ. ಕೆಲವೆಡೆಯಂತೂ ಪ್ರಯಾಣಿಸುವ ನಮ್ಮ ಶರೀರವು ಸ್ವಲ್ಪವೂ ಅಲ್ಲಾಡದಂಥ, ಅಥವಾ ತನ್ನಿಂದ ತಾನೆ ಅದೃಶ್ಯವಾಗಿ ಹೋಗಬಲ್ಲಂಥ, ಅಥವಾ ಶತ್ರು ವಿಮಾನದ ಎಲ್ಲ ಮಾತುಕತೆಯನ್ನು ಕುಳಿತಲ್ಲಿಂದಲೇ ಕೇಳುವಂಥ, ಅಥವಾ ವೈರಿ ವಿಮಾನದಲ್ಲಿ ಇರುವ ವ್ಯಕ್ತಿಗಳ ಚಿತ್ರವನ್ನು ತೆಗೆದ ಕೊಳ್ಳಬಲ್ಲಂಥ ಅಥವಾ ಶತ್ರು ವಿಮಾನವು ಎಲ್ಲಿ ಎಷ್ಟು ಹೊತ್ತಿಗೆ ಬರುವುದೆಂಬುವನ್ನು ತಿಳಿದುಕೊಳ್ಳಲಾಗುವಂಥ—ಅದ್ಭುತ ವಿಮಾನಗಳ ಉಲ್ಲೇಖವಿದೆ. ಒಂದು ಅಧ್ಯಾಯದಲ್ಲಿ ಶತ್ರು ವಿಮಾನದ ಒಳಗಿರುವ ಜನರು ಮೂರ್ಛಿತರಾಗುವಂತೆ, ಅಥವಾ ಶತ್ರು ವಿಮಾನ ನಷ್ಟ ಹೊಂದುವಂತೆ ಏನು ಮಾಡಬಹುದೆಂದು ವಿವರಿಸಲ್ಪಟ್ಟಿದೆ.

ಭಾರದ್ವಾಜರ ಉದ್ಗ್ರಂಥಗಳು

ಆ ಸಮಯ ವೈಮಾನಿಕ ಶಾಸ್ತ್ರವು ಎಷ್ಟು ಪೂರ್ಣತ್ವವನ್ನು ಪಡೆದಿತ್ತೆಂಬುದನ್ನು ಈ ಕೆಳಗಿನ ಲೇಖಕೆಯಿಂದ ತಿಳಿಯಬಹುದು—"ನಮ್ಮ ಶರೀರವು ಪೂರ್ಣತ್ವವನ್ನು ಹೊಂದಿರುವಂತೆ ಹೊಸ ಹೊಸ ಯಂತ್ರಗಳಿಂದ ಸುಸಜ್ಜಿತಗೊಳಿಸಿ, ನಮ್ಮ ವಿಮಾನಗಳನ್ನು ಪರಿಪೂರ್ಣಗೊಳಿಸಬೇಕು." ವಿಮಾನದ ೩೧ ಬಿಡಿ ಭಾಗಗಳ ಹೆಸರು ಭಾರದ್ವಾಜರ ಗ್ರಂಥದಲ್ಲಿದೆ. ವೈಮಾನಿಕನು ಪ್ರತಿಯೊಂದೂ ಋತುವಿಗೆ ಹೊಂದಿಕೆಯಾಗುವ ಉಡುಪನ್ನು ಧರಿಸಬೇಕೆಂದು ಈ ಪುಸ್ತಕ ಹೇಳುತ್ತದೆ. ಈ ಸಂಬಂಧದಲ್ಲಿ ಅಗ್ನಿಮಿತ್ರನೆಂಬ ವಸ್ತ್ರ ವಿಶೇಷಜ್ಞನ ಅಭಿಪ್ರಾಯವನ್ನು ಭಾರದ್ವಾಜರು ಎತ್ತಿ ಹಿಡಿದದ್ದು ಕಂಡುಬರುತ್ತದೆ. ವೈಮಾನಿಕನು ತೆಗೆದುಕೊಳ್ಳಬಹುದಾದ ಆಹಾರಗಳನ್ನೂ ಮೂರು ತೆರನಾಗಿ ವಿಂಗಡಿಸಿರುವರು. ಎತ್ತರ ಎತ್ತರಕ್ಕೆ ವಿಮಾನದಲ್ಲಿ ಹಾರುತ್ತಾ ಹೋದಂತೆ ವೈಮಾನಿಕರ ಮೇಲೆ ೧೫ನೇ ಪ್ರಕಾರದ ವಿಷಗಳ ಪರಿಣಾಮವಾಗುತ್ತದೆಂದು ಹೇಳಿದ್ದು, ಅವುಗಳಿಂದ ಸ್ವಾಭಾವಿಕ ರೀತಿಯಲ್ಲಿ ವಿಮುಕ್ತರಾಗಲು ಉಚಿತವಾದ ಆಹಾರ ಸೇವನೆ ಅಗತ್ಯವೆಂದಿದೆ. ವಿಮಾನ ನಿರ್ಮಾಣಕ್ಕೆ ಉಪಯೋಗಿಸಬೇಕಾದ ಧಾತು ಹಗುರಾಗಿಯೂ ತಾಪಮಾನದ ಪ್ರಭಾವಕ್ಕೆ ಬಗ್ಗದುದೂ ಆಗಬೇಕೆಂದು ಗ್ರಂಥ ಹೇಳುತ್ತದೆ. ಸೇವಕನೆಂಬ ವಿಶೇಷಜ್ಞನ ಅಭಿಪ್ರಾಯವನ್ನು ಈ ಸಂಬಂಧದಲ್ಲಿ ಉಲ್ಲೇಖಿಸಿರುವರು.

ಸಂಶೋಧನ ಮಂಡಳಕ್ಕೆ ದೊರೆತ ಇನ್ನೊಂದು ಗ್ರಂಥದಲ್ಲಿ ವಿದ್ಯುಚ್ಛಕ್ತಿ, ಬೆಂಕಿ, ಗಾಳಿ, ನೀರು ಅಥವಾ ಸಿಡಿಮದ್ದಿನಿಂದ ನಷ್ಟಗೊಳಿಸಲಿಕ್ಕಾಗದ ಯಂತ್ರನಿರ್ಮಾಣದ ಬಗೆ ವರ್ಣಿಸಲ್ಪಟ್ಟಿದೆ. ಸಿಂಹಕ್ಕೆ ಸಮಾನವಾದ ಒಂದು ಯಂತ್ರದಲ್ಲಿ ಕುಳಿತು, ಆಕಾಶಮಾರ್ಗದಲ್ಲಿ ಸಂಚರಿಸಬಹುದೆಂದು ಈ ಗ್ರಂಥದಿಂದ ತಿಳಿಯುತ್ತದೆ. ಈ ಸಿಂಹಕೆ ರೆಕ್ಕೆಗಳಿದ್ದು, ಅವು ವಿದ್ಯುಚ್ಛಕ್ತಿಯಿಂದ ತೆರೆಯುತ್ತವೆ; ಮತ್ತು ಜಲ ಶಕ್ತಿಯಿಂದ ಮುಚ್ಚಿಕೊಳ್ಳುತ್ತವೆ.

ಇದೇ ಪುಸ್ತಕದಲ್ಲಿ ಹೇಳಿದ ಇನ್ನೊಂದು ಯಂತ್ರ ವ್ಯಾರಜೀಯಂತ್ರವಾಗಿದೆ. ಇದನ್ನು ಅಭ್ರಕದಿಂದ ಮಾಡಲ್ಪಟ್ಟಿದ್ದು ೧೬ ಬಾಗಿಲುಗಳಿಂದ ಕೂಡಿದೆ. ದೂರದಿಂದ ನೋಡುವಾಗ ಇದು ಪ್ರಕಾಶ ಪುಂಜದಂತೆ ತೋರುತ್ತಿದೆ. ಯಾರಾದರೂ ಕುತೂಹಲವಶದಿಂದ ಈ ಯಂತ್ರವನ್ನು ನೋಡಬಯಸಿ ಹತ್ತಿರ ಬಂದರೆ ನಾಕುಬಳಗಿನೊಂದ ವಿಶಿಷ್ಟ ಯಂತ್ರದ ಚಾಲನೆಯಿಂದ ಉತ್ಪನ್ನಗೊಂಡ ಜ್ಯೋತಿಯೊಂದು ಬಂದ ವ್ಯಕ್ತಿಯನ್ನು ಭೂಗತವನ್ನಾಗಿಸುವದು! ಭೂಮಿಯ ಮೇಲೂ ಜಲದ ಮೇಲೂ ಈ ಯಂತ್ರ ಓಡಾಡಬಲ್ಲುದು. ತಾಸಿಗೆ ೨೪ ಮೈಲಿನ ವೇಗ ಇದಕ್ಕಿದ್ದು ರಣರಂಗದಲ್ಲಿ ಉಪಯೋಗಕ್ಕೆ ಬರುತ್ತಿತ್ತು.

ಸುರಂಬಕ ಯಂತ್ರವೆಂಬ ಇನ್ನೊಂದು ಯಂತ್ರ ವಿಶೇಷವು ಮೂರು ಅಟ್ಟಗಳಿಂದ ಕೂಡಿದ್ದು ೪೦೦ ಪ್ರಯಾಣಿಕರು ಗುಪ್ತ ರೂಪದಿಂದ ಅದರ; ಕುಳಿತು ಕೊಳ್ಳಬಹುದು. ವಿದ್ಯುಚ್ಛಕ್ತಿಯ ಬಲದಿಂದ ಈ ಯಂತ್ರವು ತಾಸಿಗೆ ೬೮ ಮೈಲು ವೇಗದಲ್ಲಿ ಚಲಿಸುವುದು.

ತಳಪದೆಯವರ ಸಾಹಸ

ಭಾರತೀಯ ವಿಜ್ಞಾನ ಕ್ಷೇತ್ರಕ್ಕೇ ಅಲ್ಲ ವಿಶ್ವವೈಮಾನಿಕ ಶಾಸ್ತ್ರಕ್ಕೆನೇ ಈ ಗ್ರಂಥಗಳಿಂದ ಮಹತ್ವದ ಸೇವೆಸಲ್ಲಲಿದೆ. ನಮ್ಮ ಇತಿಹಾಸ- ಪುರಾಣಗಳಲ್ಲಿ ವಿಮಾನಗಳ ವಿಪುಲ ಉಲ್ಲೇಖವಿದ್ದರೂ, ಅದರ ಮೇಲೆ ವಿಶ್ವಾಸವಿಡುವ ಬುದ್ಧಿ ನಮಗಿರಲಿಲ್ಲ. ಈಗ ದೊರೆತಿರುವ ಮಹಾಗ್ರಂಥಗಳು ನಮ್ಮ ಪೂರ್ವಜರ ವೈಜ್ಞಾನಿಕ ಸಂಪತ್ತಿನ ದ್ಯೋತಕವಿದ್ದಂತೆ, ನಮ್ಮ ಅಭಿಮಾನಕ್ಕೆ ಪಾತ್ರವೂ ಆಗಿವೆ.

ಈ ಅಭಿಮಾನ ಅನುಚಿತವಾದುದೇನೂ ಅಲ್ಲ. ಆಧುನಿಕ ವಿಮಾನಗಳಿಗೆ ರೈಟ್ ಸಹೋದರರ ಸಾಹಸವೇ ಮೂಲವೆನ್ನುವರು. ಆದರೆ ೧೯ನೇ ಶತಮಾನದಾಂತ್ಯದಲ್ಲಿ ಮುಂಬಯಿ ಕಲಾಶಾಲೆಯಲ್ಲಿದ್ದ ಶಿವಕರ ಬಾಪೂಜಿ ತಳಪದೆ ಎಂಬವರ ಅನ್ವೇಷಣದ ಬಗ್ಗೆ ಈಗ್ಗೆ ಪ್ರಕಟವಾದ ಸಂಗತಿಗಳು— ಭಾರತೀಯರ ಕಣ್ಣಿಗೆ ಅಂಜನ ಹಾಕುವಂತಿವೆ ಎಂದರೂ ಸಲ್ಲುವುದು. ನಮ್ಮ ಗ್ರಂಥಗಳಲ್ಲಿ ವಿಮಾನಗಳ ಬಗ್ಗೆ ಬಂದ ಸಂಗತಿಗಳನ್ನೆಲ್ಲ ಓದಿ, ತಳಪದೆಯವರ ಅಭಿರುಚಿ ಜಾಗೃತಗೊಂಡಿತು. ತಮ್ಮ ಪತ್ನಿಯ ಸಹಾಯದಿಂದ ಅವರು ವಿಮಾನದ ಮಾದರಿಯೊಂದನ್ನು ತಯಾರಿಸಿದರು. ಬಳಿಕ ಋಗ್ವೇದದ ೧೦ನೇ ಅಧ್ಯಾಯದಲ್ಲಿ ಬರುವ ಮರುತಸಖಾ ಹಾಗೂ ಪುಷ್ಪಕ ವಿಮಾನಗಳ ವರ್ಣನೆಯ ಆಧಾರದ ಮೇಲಿಂದ ಒಂದು ವಿಮಾನವನ್ನು ಕಟ್ಟಿಯೂ ಕಟ್ಟಿದರು. ಮರುತಸಖಾ ವಿಮಾನವನ್ನು ನಡೆಸಲು ಯಾರ ಅಗತ್ಯವೂ ಇರಲಿಲ್ಲ. ತಳಪದೆಯವರು ೧೮೯೫ರಲ್ಲಿ ಮುಂಬಯಿಯ ಚೌಪಾಟಿಯಲ್ಲಿ ಅದರ ಉಡ್ಡಾಣವನ್ನು ಪ್ರದರ್ಶಿಸಿದರು. ಇದನ್ನು ನೋಡಬಂದವರಲ್ಲಿ ಬಡೋದೆಯ ಸಯ್ಯಾಜೀರಾವ ಗಾಯಕವಾಡರೂ ಒಬ್ಬರು. ವಿಮಾನವು ೧೫೦೦ ಅಡಿ ಎತ್ತರ ಹೋಗಿ, ಕೆಳಗೆ ಇಳಿಯಿತು. ಈ ವಿಮಾನದಲ್ಲಿದ್ದ ಒಂದು ಯಂತ್ರದ ಸಹಾಯದಿಂ, ವಿಮಾನವು ನಿರ್ದಿಷ್ಟ ಎತ್ತರವನ್ನು ಮುಟ್ಟಿದ ಬಳಿಕ ಸ್ವಯಂ ಕೆಳಗೆ ಇಳಿಯುತಿತ್ತೆಂದು ಹೇಳುವರು. ಈ ವಿಮಾನವನ್ನು ವಿಖ್ಯಾತ ದೇಶಭಕ್ತರಾದ ಗೋವಿಂದರಾನಡೆಯವರಿಗೆ ತೋರಿಸಿದಾಗ— ಯುರೋಪ್ಪ ವಿಶೇಷಜ್ಞರಿಂದ ಪರಾಮರ್ಶೆ ಪಡೆದರೆ ಈ ವಿಮಾನದ ಅಭಿವೃದ್ಧಿಯು ನೆರವು ದೊರೆತೀತೆಂಬ ಸಲಹೆ ಬಂತು. ದುರ್ದೈವದಿಂದ ತಳಪದೆಯವರು ಇದನ್ನು ಅಪಮಾನಕರವೆಂದು ಭಾವಿಸಿದರು. ಇದೇ ಸಮಯದಲ್ಲಿ ಅವರ ಪತ್ನಿಯೂ ಮೃತಿ ಹೊಂದಿದರು. ಹೀಗಾಗಿ ತಳಪದೆಯವರ ಪ್ರಯತ್ನ ಅಲ್ಲಿಗೇ ನಿಂತು ಹೋಯಿತು. ೧೯ನೇ [illegible] ರಂದು ತಳಪದೆಯವರೂ ಮೃತ್ಯುವಶರಾಗಲು—ಅವರ ಸಂಬಂಧಿಕರು ವಿಮಾನದ ಮಾದರಿ ಹಾಗೂ ಸಂಬಂಧಿಸಿದೆಲ್ಲ ಸಾಮಗ್ರಿಯನ್ನು ರೇಲೀ ಸಹೋದರರೆಂಬ ಬ್ರಿಟಿಷ್ ಫರ್ಮಿಗೆ ಅತ್ಯಲ್ಪ ಪ್ರತಿಫಲಕ್ಕೆ ಮಾರಿದರು.

ಯಂತ್ರ ಚಾಲಕ ಶಕ್ತಿ

ಭೋಜನು ಬರೆದಿರುವ ಸಮರಾಂಗಣ ಸೂತ್ರಧಾರವೆಂಬ ಪುಸ್ತಕದಲ್ಲಿಯೂ ವಿಮಾನ ಹಾಗೂ ಯಂತ್ರಗಳ ಉಲ್ಲೇಖವಿದೆ. ಅವುಗಳ ನಿರ್ಮಾಣ ಹಾಗೂ ಸಂಚಾಲನ ಸಂಬಂಧವಾದ ವಿಸ್ತಾರ ಚರ್ಚೆಯೂ ಅದರಲ್ಲಿದೆ. ಯಂತ್ರವಿಧಾನವೆಂಬ ಒಂದು ಅಧ್ಯಾಯವಿದ್ದು ಅದರಲ್ಲಿ ೨೩೪ ಶ್ಲೋಕಗಳಿಂದ ಯಂತ್ರ ನಿರ್ಮಾಣ ಕಲೆಯನ್ನು ವರ್ಣಿಸಿರುವರು. ವಿಲಾಸೋಪಭೋಗಕ್ಕೆ ಉಪಯುಕ್ತವಾದ ಯಂತ್ರಗಳ ಸಂಗತಿ [illegible] ಬಹುದು. ಈ ಎಲ್ಲ ಯಂತ್ರಗಳನ್ನು ನಡೆಸುವುದಕ್ಕೆ ಉಪಯೋಗಿಸುವ ಶಕ್ತಿಯ ಸಂಬಂಧದಲ್ಲಿಯೂ ಭೋಜನು ವಿವೇಚನೆ ಮಾಡಿರು

(೧೦ನೇ ಪುಟ ನೋಡಿ.)

ನೀವು ಒಂದು ಸೇವಿಂಗ್ಸ್ ಬೇಂಕ್ ಖಾತೆಯನ್ನೇಕೆ ತೆರೆಯಬೇಕು?

ನೀವು ಒಂದು ಸೇವಿಂಗ್ಸ್ ಬೇಂಕ್ ಖಾತೆಯನ್ನು ತೆರೆಯುವಾಗ ನೀವು ಒಂದು ಪ್ರಾಮುಖ್ಯ ಹೆಜ್ಜೆಯನ್ನು ಮುಂದಿಡುತ್ತೀರಿ. ಈ ಹೆಜ್ಜೆಯು ನಿಮ್ಮ ಹಣದ ಭದ್ರತೆ, ಜಯ ಹಾಗೂ ಭಾವೀ ಸುಖಕ್ಕೆ ನೆರವಾಗುವುದು. ಜೀವಮಾನ ಕಾಲದಲ್ಲಿ ಅನೇಕ ಸಂದರ್ಭಗಳು ಇವೆಯಾದರೂ, ನಿಮ್ಮದೇ ಆದ ಕಿಂಚಿತ್ ಹಣವಿಲ್ಲದೆ ಅವುಗಳು ಸಾರ್ಥಕವಾಗಲಾರವು. ಆದುದರಿಂದ ಒಂದು ಸೇವಿಂಗ್ಸ್ ಬೇಂಕ್ ಖಾತೆಯಲ್ಲಿ ಹಾಕಲ್ಪಟ್ಟ ಸ್ವಲ್ಪ ಹಣವಾದರೂ ಬೇಗನೇ ಬಹು ದೊಡ್ಡ ಪ್ರಮಾಣದಲ್ಲಿ ಬೆಳೆದು ನಿಮ್ಮ ಜೀವನದ ನಿಧಿಯಾಗಿ ಪರಿಣಮಿಸುವುದು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.
ಸ್ಥಾಪನೆ: 1925 ಹೆಡ್ ಆಫೀಸ: ಉಡುಪಿ.
The Canara Industrial &
Banking Syndicate Limited.
Estd: 1925 H. O: UDIPI



ಮಿತ ದರದಲ್ಲಿ
[illegible] ಗಡಿಯಾರಗಳೂ
ಟೈಂಪೀಸುಗಳೂ
ದೊರೆಯುತ್ತವೆ.
ವಿವರಗಳಿಗೆ ಬರೆಯಿರಿ:

MUBARAK & CO
Watch & Clock
Specialists,
MADRAS 3

ಮುಬಾರಕ್ ಎಂಡ್ ಕೋ
ವಾಚ್ ಎಂಡ್ ಕ್ಲಾಕ್
ಸ್ಪೆಷಲಿಸ್ಟ್ಸ್
ಮದ್ರಾಸು 3.

ತೆಲುಗರ ಚಳುವಳಿ

ಆಂಧ್ರಪ್ರಾಂತ ನಿರ್ಮಾಣದ ಬಗ್ಗೆ ನೆಹರೂರ ಘೋಷಣೆ

ಬಿರುಗಾಳಿಯ ಪರಿಣಾಮ

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಸಂಚಾರವನ್ನು ಕೈಗೊಳ್ಳಲಿದ್ದ ಮದ್ರಾಸು ಮುಖ್ಯಮಂತ್ರಿ ರಾಜಾಜಿಯವರು ತಮ್ಮ ಕಾರ್ಯಕ್ರಮವನ್ನು ರದ್ದುಗೊಳಿಸಿ, ಬಿರುಗಾಳಿಯ ಅನಾಹುತಕ್ಕೆ ಈಡಾದ ತಂಜಾವೂರು, ತಿರುಚಿನಾಪಳ್ಳಿ ಮುಂತಾದ ಕಡೆಯನ್ನು ಸಂದರ್ಶಿಸಿದರು. ನಾಲ್ಕು ದಿನಗಳ ಸಂಚಾರ ಕಾರ್ಯದಲ್ಲಿ ಅವರು ಸುಮಾರು ೪೦೦ ಮೈಲು ಸುತ್ತಾಡಿ ಪರಿಸ್ಥಿತಿಯನ್ನು ಕಣ್ಣಾರೆ ಕಂಡುಕೊಂಡರು. ಹೋದೆಡೆಯಲ್ಲೆಲ್ಲಾ ದುರ್ಭಾಗ್ಯ ವಶರಾದ ದೀನ ಜನರು ರಾಜಾಜಿಯ ಸುತ್ತಮುತ್ತಲೂ ನೆರೆದು ತಮ್ಮ ನಿರುಪಾಯ ಸ್ಥಿತಿಯನ್ನು ಬಣ್ಣಿಸಿದ್ದಲ್ಲದೆ–ಪುನಃ ಜೀವನವನ್ನು ಮೊದಲಿನಂತೆ ತೊಡಗಲು ನೆರವು ನೀಡಬೇಕೆಂದು ಪ್ರಾರ್ಥಿಸಿಕೊಂಡರು. ಪರಿಹಾರ ಕಾರ್ಯವು ಬಹಳ ತ್ವರಿತ ಗತಿಯಿಂದ ನೆರವೇರುತಿದ್ದರೂ, ಅಷ್ಟು ಸಾಲದೆಂಬುದು ಸ್ಪಷ್ಟವಿದೆ. ಒಂದು ಲಕ್ಷಕ್ಕೂ ಮಿಕ್ಕಿ ಮನೆಮಾರುಗಳು ನಷ್ಟ ಹೊಂದಿವೆ. ಅವುಗಳನ್ನು ಮರಳಿ ಕಟ್ಟುವುದೊಂದು ಮಹಾ ಪ್ರಯಾಸದ ಕೆಲಸ. ಸುಮಾರು ೩೫ ಸಾವಿರ ಕುಟುಂಬಗಳನ್ನು ಪುನರ್ನಿವೇಶನಗೊಳಿಸಬೇಕಾಗಿದೆ. ಇದು ತುಂಬ ಹೊಣೆಗಾರಿಕೆಯ ಕೆಲಸವೆಂದು ಬೇರೆ ಹೇಳುವುದಗತ್ಯವಿಲ್ಲ. ರಾಜಾಜಿ ಸಂಚಾರ ಕಾರ್ಯವನ್ನು ಮುಗಿಸಿಬಂದವರು ಪತ್ರಿಕಾ ಪ್ರತಿನಿಧಿಗಳಿಗೆ ಈ ಎಲ್ಲ ಸಂಗತಿಯನ್ನು ತಿಳಿಸಿದರು. ಅಸಂಖ್ಯ ನಿವೇದನೆಗಳಿಗೆ ರಾಜಾಜಿ ಕಿವಿಗೊಡಬೇಕಾಯಿತು. ದುಃಖ ಹಾಗೂ ದೈನ್ಯದಿಂದ ಕಂಗೆಟ್ಟ ಜನರನ್ನು ಸಂತೈಸುವುದು ರಾಜಾಜಿಯ ಪಾಲಿಗೆ ಬಂತು. ಹೀಗಿದ್ದರೂ ಎದೆಗೆಡ ಸಂತ್ರಸ್ತರ ಸಹಾಯಕ್ಕೆ ಸರಕಾರ ಸಿದ್ಧತೆ ನಡೆಸಿದೆ. ಬಿರುಗಾಳಿಯು ಭತ್ತದ ಬೆಳೆಗೆ ಅಷ್ಟೊಂದು ಹಾನಿಯನ್ನು ಉಂಟುಮಾಡಲಿಲ್ಲವೆಂಬುದು ಮತ್ತು ತನ್ನೊಡನೆ ಮಳೆಯನ್ನು ತಂದು ನೆರೆಕರೆಯ ಜಿಲ್ಲೆಗಳ ಶುಷ್ಕ ಪ್ರದೇಶಕ್ಕೆ ನೀರುಣಿಸಿದೆಯೆಂಬುದು—ಈ ದುಃಖದಲ್ಲೂ ಸಮಾಧಾನದ ಸಂಗತಿ.

ವಿಧ್ವಂಸಕ ಕೃತ್ಯ

ರಾಜಾಜಿ ಇನ್ನೂ ಸಂಚಾರದಲ್ಲಿದ್ದಾಗಲೇ—ಶ್ರೀ ರಾಮುಲು ಅವರ ಮೃತ್ಯು ಘಟಿಸಿತು. ಆಂಧ್ರಪ್ರಾಂತ ನಿರ್ಮಾಣವನ್ನು ಉದ್ದೇಶವಾಗಿಟ್ಟುಕೊಂಡು ಆಮರಣ ಉಪವಾಸವನ್ನು ಕೈಗೊಂಡ ಈ ಧೀರ ಯೋಧರ ಮರಣದ ಬೆನ್ನಿಗೆ ಆಂಧ್ರದಲ್ಲೆಲ್ಲ ಗೊಂದಲ ಉದ್ಭವಿಸಿತು. ಜನರು ಉದ್ರೇಕಗೊಂಡು ದೊಂಬಿಯನ್ನೂ ಲೂಟಿಯನ್ನೂ ನಡೆಸಿದರು ವಿಜಯವಾಡಾದಲ್ಲಿ ಉಗ್ರ ಸ್ವರೂಪದ ವಿಧ್ವಂಸಕ ಚಟುವಟಿಕೆಗಳು ನಡೆದುವು. ವಿದ್ಯಾರ್ಥಿಗಳೂ ಜನತೆಯೂ ಕೂಡಿಯೇ ವಿಘಾತುಕ ಕಾರ್ಯಗಳಲ್ಲಿ ಕೈಹಾಕಿದರು. ಪ್ರಯಾಣಿಸುವ ರೈಲನ್ನು ತಡೆದು ನಿಲ್ಲಿಸುವುದು, ರೈಲು ಪಟ್ಟಿಯನ್ನು ತಪ್ಪಿಸುವುದು, ಗೋದಾಮುಗಳಿಗೆ ಬೆಂಕಿ ಹಚ್ಚುವುದು, ಲೂಟಿ ಮಾಡುವುದು ಮುಂತಾದ ಕೃತ್ಯಗಳು ಆಂಧ್ರಪ್ರದೇಶದಲ್ಲೆಲ್ಲ ನಡೆದುವು. ಸರಕಾರೀ ಕಾರ್ಯಾಲಯಗಳಿಗೆ ಹೋಗಿ, ಅಲ್ಲಿ ಕೀಟಲೆ ಕೊಡುವುದೂ ಅಧಿಕಾರಿಗಳ ಮೇಲೆ ಬಲಪ್ರಯೋಗಿಸುವುದೂ ನಡೆದುವು. ಒಂದೆಡೆಯಂತೂ ಜಿಲ್ಲಾಧಿಕಾರಿಗಳನ್ನೂ ಜಿಲ್ಲಾ ಪೋಲೀಸು ಸುಪರಿಂಟೆಂಡೆಂಟರನ್ನೂ ಕೂಡಿಯೇ ಕೋಣೆಯೊಳಗೆ ಬಂಧಿಸಿದ್ದುದರಿಂದ ತಾಸೆರಡು ತಾಸು ಅರಾಜಕತ್ವವೇ ತಲೆದೋರಿತು. ಸರಕಾರವು ಇಂಥ ಅನಪೇಕ್ಷಿತ ಉಪಟಳವನ್ನು ಹತ್ತಿಕ್ಕಲು ಸಶಸ್ತ್ರ ಪೋಲೀಸು ಪಡೆಯನ್ನು ಗಲಭೆ ಪ್ರದೇಶಗಳಿಗೆ ಒಡನೆಯೇ ಕಳಿಸಿಕೊಟ್ಟು ಪರಿಸ್ಥಿತಿಯನ್ನು ಹಿಡಿತದಲ್ಲಿಡಲು ಪ್ರಯತ್ನಿಸಿತು. ಅಶ್ರುವಾಯು ಪ್ರಯೋಗದಿಂದಲೂ ಗುಂಪು ಚದರಿಸುವುದಾಗದಿರಲು, ಗುಂಡು ಹಾರಿಸುವಂಥ ದುರ್ಧರ ಪ್ರಸಂಗ ಉಂಟಾಯಿತು. ಇದರ ಪರಿಣಾಮವಾಗಿ ಕೆಲವೊಂದು ಜನರು ಮೃತಪಟ್ಟರಲ್ಲದೆ ಹಲವರು ಘಾಸಿಹೊಂದಿದರು ಜನರು ಕೂಡ ಪೋಲೀಸರ ಮೇಲೆ ಕಲ್ಲೆಸೆಯುವುದೇ ಮುಂತಾದ ರೀತಿ ಕುಹಕವನ್ನಾಡಲು ಹಿಂಜರಿಯಲಿಲ್ಲ. ಒಬ್ಬ ರೇಲ್ವೆ ನೌಕರನ ಸಂಬಂಧಿಯೊಬ್ಬಳಿಗೆ ಗುಂಡು ತಗಲಿದುದರ ನಿಷೇಧಾರ್ಥವಾಗಿ, ಅಲ್ಲಿಯ ರೇಲ್ವೆ ನೌಕರರೆಲ್ಲ ಸತ್ಯಾಗ್ರಹದ ನೆವ ಹೇಳಿ ಕೆಲಸಕ್ಕೆ ಬರಲಿಲ್ಲ. ಆದರೆ ಒಡನೆಯೇ ಸಂಧಾನ ನಡೆಸಿ, ಅವರನ್ನು ಒಲಿಸಿಕೊಳ್ಳಲಾಯಿತು. ಕಲ್ಕತ್ತಾ ಮದ್ರಾಸುಗಳ ನಡುವೆ ಓಡಾಡುವ ಬಂಡಿಗಳನ್ನು ತಡೆದು ನಿಲ್ಲಿಸಿದ್ದಲ್ಲದೆ– ಗಲಭೆ ಶಾಂತವಾಯಿತೆಂದು ಕಂಡು ಬಂದ ಮೇಲೆಯೂ ಸಶಸ್ತ್ರ ಕಾವಲನ್ನಿಡುವ ಮುಂಜಾಗ್ರತೆ ವಹಿಸಿದರು. ಟೆಲಿಫೋನು,ತಂತಿ ಮುಂತಾದ ಸಂಪರ್ಕಸಾಧನಗಳು ಕಡಿಯಲ್ಪಟ್ಟುವು ಈಗ ವಾತಾವರಣವು ಕೆಲಮಟ್ಟಿಗೆ ತಿಳಿಹೊಂದಿದೆ.

ನೆಹರೂ ಹೇಳಿಕೆ

ಒಮ್ಮೆಂದೊಮ್ಮೆಗೆ ವಿಧ್ವಂಸಕ ಚಟುವಟಿಕೆಗಳು ಪ್ರಾಬಲ್ಯಗೊಂಡುದು ಸರಕಾರದ ಸಾಮರ್ಥ್ಯವನ್ನೇ ಪ್ರಶ್ನಿಸುವಂತಿತ್ತೆಂದರೆ ತಪ್ಪಾಗದು. ಮದ್ರಾಸು ಸರಕಾರ ಈ ಸಂಗತಿಯಲ್ಲಿ ತೋರಿಸಿದ ಜಾಣಾಕ್ಷತೆ ಮೆಚ್ಚುಗೆಯನ್ನು ಸೂಚಿಸತಕ್ಕಂತಿದೆ. ಬಳ್ಳಾರಿ ಜಿಲ್ಲೆಯಲ್ಲಿ ಸಂಚಾರ ಕೈಗೊಂಡಿದ್ದ ರಾಜ್ಯದ ಪೋಲಿಸು ಶಾಖೆಯ ವರಿಷ್ಠರನ್ನು ಕೂಡಲೆ ಮದ್ರಾಸಿಗೆ ಕರೆಸಿ, ಪ್ರಕ್ಷುಬ್ಧ ಪರಿಸ್ಥಿತಿಯನ್ನು ಉಪಶಮನಗೊಳಿಸುವ ಕಾಯಿದೆ ಕ್ರಮವನ್ನು ಕೈಗೊಂಡರೆ ಕುಂಭಕೋಣಮಿನಲ್ಲಿದ್ದ ರಾಜಾಜಿಯವರು, ಜನತೆಯು ಶಾಂತವಾಗಬೇಕೆಂದು ವಿನಂತಿಸಿಕೊಂಡರು. ಆಂಧ್ರ ಧುರೀಣರು ತಮ್ಮ ವರ್ಚಸ್ಸನ್ನು ಉಪಯೋಗಿಸಿ, ಜನತೆಯು ವಾಮಾಚಾರದಿಂದ ನಿವೃತ್ತರಾಗುವಂತೆ ನೋಡಿಕೊಂಡರೆ ಅದರಿಂದ ಹಿತವಿದೆ ಎಂದವರು ನಿವೇದಿಸಿದರು. ಆಂಧ್ರದ ಈ ಗಲಭೆಗಳ ಝಳವು ದಿಲ್ಲಿಗೆ ಮುಟ್ಟಲಿಕ್ಕೆ ಏನೇನೂ ಹೊತ್ತು ಹಿಡಿಯಲಿಲ್ಲ. ಪಾರ್ಲಿಮೆಂಟಿನಲ್ಲಿ ಶ್ರೀ ರಾಮುಲು ಅವರ ನಿಧನ ವಾರ್ತೆಯು ದೊರೆತೊಡನೆಯೇ ದುಃಖವನ್ನು ಸೂಚಿಸುವ ಮಾತು ಬಂದೇ ಬಂತು. ಪ್ರಧಾನಿ ನೆಹರೂ ಕೆಲವು ದಿನಗಳ ಹಿಂದೆ ತಾವುಕೊಟ್ಟ ಹೇಳಿಕೆಯನ್ನು ಇಲ್ಲಿ ಪುನರುಚ್ಚರಿಸಿದ್ದಲ್ಲದೆ, ಆಂಧ್ರಪ್ರಾಂತ ರಚನೆಯನ್ನು ಶೀಘ್ರದಲ್ಲಿಯೇ ಕೈಗೊಳ್ಳುತ್ತೇವೆಂಬ ಹೊಸ ಮಾತನ್ನು ನುಡಿದರು ಮದ್ರಾಸು ರಾಜ್ಯದ ವಾದಾತೀತ ತೆಲುಗು ಪ್ರದೇಶಗಳನ್ನೊಳಗೊಂಡ ಆಂಧ್ರಪ್ರಾಂತ ರಚನೆಯನ್ನು ಕೈಗೊಳ್ಳುವ ಉದ್ದೇಶದಿಂದ ಕೇಂದ್ರ ಸರಕಾರವು ರಾಜ್ಯ ಸರಕಾರದೊಡನೆ ವಿಚಾರ ವಿನಿಮಯ ಮಾಡುತ್ತದೆ ಎಂಬ ಸಂಗತಿಯೂ ಆಗ ವ್ಯಕ್ತಗೊಂಡಿತು.

ಹೊಸ ಪ್ರಾಂತದ ಘೋಷಣೆ

ಇದರ ಬೆನ್ನಲ್ಲೇ ನೆಹರೂರವರು ಲೋಕಸಭೆಯಲ್ಲಿ ಒಂದು ಘೋಷಣೆಮಾಡಿ, ಆಂಧ್ರಪ್ರಾಂತ ರಚನೆಯ ಸಂಬಂಧದಲ್ಲಿ ಪರಿಣಾಮಕಾರಿ ಹೆಜ್ಜೆಯನ್ನು ಕೇಂದ್ರ ಸರಕಾರ ಕೈಗೊಂಡಿರುವ ಸಂಗತಿಯನ್ನು ಪ್ರಕಟಗೊಳಿಸಿದರು. ರಾಜಸ್ಥಾನ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಶ್ರೀ ಕೆ. ಎನ್. ವಾಂಛೂರವರನ್ನು ಆಂಧ್ರಪ್ರಾಂತ ರಚನೆಯ ಸಬಂಧದಲ್ಲಿ ಉದ್ಭವಿಸುವ ಹಣಕಾಸಿನ ಮತ್ತು ತತ್ಸಂಬಂಧಿ ವಿಷಯಗಳ ಕೂಲಂಕುಷ ಪರಿಶೀಲನೆ ನಡೆಸಿ ವರದಿ ಮಾಡುವಂತೆ ನೇಮಿಸಲಾಗಿದೆ ಎಂದು ನೆಹರೂ ಹೇಳಿದರು. ನ್ಯಾಯಮೂರ್ತಿ ವಾಂಛೂರವರು ೧೯೫೩ನೇ ಜನವರಿ ಮಾಸಾಂತ್ಯದೊಳಗೆ ತಮ್ಮ ವರದಿಯನ್ನು ಒಪ್ಪಿಸಬೇಕಿದ್ದು, ಅವರ ವರದಿಯು ಸರಕಾರದ ಕೈಸೇರಿದ ಮೇಲೆ ಏನೊಂದೂ ವಿಳಂಬವಿಲ್ಲದೆ, ಹೊಸ ಪ್ರಾಂತರಚನೆಯ ಬಗ್ಗೆ ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು. ರಾಜ್ಯ ಪರಿಷತ್ತಿನಲ್ಲಿ ಗೃಹಸಚಿವ ಕೈಲಾಸ ನಾಥ ಕಟಜೂ ಅವರು ಇದೇ ರೀತಿಯ ಘೋಷಣೆಯನ್ನು ಮಾಡಿದರಲ್ಲದೆ, ಕೆಲವೊಂದು ಸಂಗತಿಗಳನ್ನೂ ಸ್ಪಷ್ಟೀಕರಿಸಿದರು ಮುಖ್ಯವಾಗಿ ಗವರ್ನರರ ನೇಮಕ, ಹೈಕೋರ್ಟು ಮತ್ತು ಇತರ ಕಾರ್ಯಾಲಯಗಳ ಸ್ಥಾಪನೆ, ಆಸ್ಪತ್ರೆ, ವಿಶ್ವವಿದ್ಯಾಲಯ, ಮತ್ತಿತರ ಸಾರ್ವಜನಿಕ ಸಂಸ್ಥೆಗಳ ಸಮಸ್ಯೆಗಳನ್ನು ನ್ಯಾಯಮೂರ್ತಿ ವಾಂಛೂರವರು ವಿಚಾರಿಸಬೇಕಾಗವುದು. ಈ ಎಲ್ಲ ಕಾರ್ಯಗಳನ್ನು ಪರಿಶೀಲಿಸುವುದಕ್ಕಾಗಿ ವಾಂಛೂರವರು ಜನವರಿ ಮೊದಲ ವಾರದಲ್ಲಿ ಪ್ರಯಾಣಿಸುವ ನಿರೀಕ್ಷೆ ಇದೆ. ಮಾತ್ರವಲ್ಲ ಅವರ ವರದಿಯು ಕೈಸೇರಿದೊಡನೆಯೇ ಸರಕಾರ ಯೋಗ್ಯ ಹೆಜ್ಜೆಯನ್ನು ಮುಂದಿಡುವುದೆಂಬುದರಿಂದ, ಮುಂಬರುವ ಬಜೆಟ ಅಧಿವೇಶನದ ಕಾಲದಲ್ಲಿ ಆಂಧ್ರ ಪ್ರಾಂತರಚನೆಯ ಬಗ್ಗೆ ಮಸೂದೆ ಮಂಡಿಸಲ್ಪಡುವ ನಿರೀಕ್ಷೆ ಇದೆ. ಈ ಸಂಗತಿಯು ಉಪರಾಷ್ಟ್ರಾಧ್ಯಕ್ಷ ಡಾ| ರಾಧಾಕೃಷ್ಣನ್ ಮತ್ತು ಗೃಹಸಚಿವ ಡಾ| ಕಟಜೂರವರ ಮಾತುಗಳಿಂದ ತಿಳಿಯುತ್ತದೆ.

ಆದರೂ ಅಸಮಾಧಾನ

ಹೀಗೆ ಆಂಧ್ರಪ್ರಾಂತ ನಿರ್ಮಾಣದ ಸಂಗತಿಯಲ್ಲಿ ಕೇಂದ್ರ ಸರಕಾರವು ಶೀಘ್ರಾತಿಶೀಘ್ರ ಕ್ರಮಗಳಿಗೆ ಮನಸ್ಸು ಮಾಡಿದುದರಿಂದ ಸಾಮಾನ್ಯವಾಗಿ ಆಂಧ್ರರಿಗೆ ಸಮಾಧಾನವುಂಟಾಗಿದೆ. ಆಂಧ್ರಪ್ರಾಂತ ರಚನೆಯ ಸಂಬಂಧದಲ್ಲಿ ಪ್ರಧಾನ ನೆಹರೂ ಕೊಟ್ಟ ಹೇಳಿಕೆಯನ್ನು ಕಾರ್ಯರೂಪಕ್ಕೆ ಇಳಿಸಲು ನೆರವಾಗುವುದೇ ಮದ್ರಾಸು ಸರಕಾರದ ಇಚ್ಛೆಯೆಂದು ರಾಜಾಜಿ ನುಡಿದಿರುವರು. ಆಂಧ್ರಪ್ರದೇಶ ಕಾಂಗ್ರೆಸ ಸಮಿತಿಯ ಅಧ್ಯಕ್ಷ ಸಂಜೀವ ರೆಡ್ಡಿಯವರು ಆಂಧ್ರಪ್ರಾಂತರಚನೆಯ ಘೋಷಣೆಯನ್ನು ಸ್ವಾಗತಿಸಿರುವರು. ಪ್ರಧಾನ ಮಂತ್ರಿಗಳು ತಮ್ಮ ಘೋಷಣೆಯು ತ್ರಿಮೂರ್ತಿಗಳ ವರದಿಯನ್ನೇ ಆಧರಿಸಿದೆ ಎಂಬಂತೆ ತೋರಿಸಿ ಕೊಟ್ಟರೂ, ವಸ್ತುತ: ಹಾಗಿರಲಿಕ್ಕಿಲ್ಲೆಂದು ತೋರುತ್ತದೆ. ಆಂಧ್ರದ ಗಲಭೆಗಳು ಭೀಷಣ ಸ್ವರೂಪವನ್ನು ತಾಳಿದಂತೆ. ಸರಕಾರದ ಎದೆ ನಡುಗಿರಬೇಕೆಂದೂ, ಆಂಧ್ರರು ಉಗ್ರ ಪ್ರತಿಭಟನೆಯನ್ನು ಮುಂದು ಮಾಡಿ ಅರಾಜಕತೆಯನ್ನುಂಟುಮಾಡಲಾಗದೆಂಬ ಇರಾದೆಯಿಂದಲೇ ಈ ರೀತಿ ಶೀಘ್ರ ಘೋಷಣೆಯನ್ನು ನೆಹರೂ ಮಾಡಿರಬಹುದೆಂದೂ ತರ್ಕಿಸಲು ಎಡೆ ದೊರೆತಿದೆ. ಕೆಲವೇ ದಿನಗಳ ಮೊದಲು (ಎಂದರೆ ದಿನಾಂಕ ೯) ಕೊಟ್ಟ ಹೇಳಿಕೆ ಮತ್ತು

ZANDU KESARI JIVAN

ಝಂಡೂ ಕೇಸರಿ ಜೀವನ

ಕೆಮ್ಮು, ನೆಗಡಿ, ರಾಜಯಕ್ಷ್ಮ, ಮಿದುಳು ನಿತ್ರಾಣ, ಅಕಾಲಿಕ ವೃದ್ಧಾಪ್ಯ, ಸರ್ವಸಾಮಾನ್ಯ ಬಲಹೀನತೆಗಳಿಗೆಲ್ಲಾ ಕೇಸರಿ ಜೀವನವು ಹೆಸರುವಾಸಿಯಾದದ್ದು ಅಲ್ಲದೆ ದೇಹಾರೋಗ್ಯವನ್ನು ಸಮತೂಕದಲ್ಲಿರಿಸಲು ಆದರ್ಶ ಟೋನಿಕ್ ಆಹಾರವಾಗಿದೆ. 1 ರಾತ್ಲ: ರೂ. 6-8-0 ½ ರಾತ್ಲ: ರೂ 1-14-0

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ ಎಂಡ್ ಡ್ರಗ್ಗಿಸ್ಟ್ಸ, ಉಡುಪಿ
2 ಶ್ರೀ ವಿ ವಿ ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು
4 ಎಲ್ ಎನ್ ಶರ್ಮ, ಹಜೂರು ರಸ್ತೆ ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರಿ ಶರತ್ತು ವಗೈರೆಗಳಿಗೆ ಬರೆಯಿರಿ.

DAMODAR & CO.,
Nainiappa Naicken Street, Park Town-MADRAS 3.

ಫಲಿಸುವ ಸೂಚನೆ

ಪಂಚವಾರ್ಷಿಕ ಯೋಜನೆಗೆ ಪಾರ್ಲಿಮೆಂಟಿನ ಸಮ್ಮತಿ

ಶ್ರೀ ರಾಮುಲು ಅವರ ನಿಧನದ ಬಳಿಕ ಕೊಟ್ಟ ಹೇಳಿಕೆಗಳು ಸರಕಾರದ ನಿಲುವಿನಲ್ಲಿ ಮಹತ್ವದ ಪರಿವರ್ತನೆಯುಂಟಾಗಿರುವುದನ್ನು ಸೂಕ್ಷ್ಮವಾಗಿ ಬಿಂಬಿಸುತ್ತವೆ. ಶ್ರೀಗಳಾದ ಎನ್. ಜಿ. ರಂಗಾ, ಲಂಕಾಸುಂದರಂ, ಸಂಜೀವ ರೆಡ್ಡಿ, ರಾಘವಯ್ಯ ಮುಂತಾದ ಆಂಧ್ರ ಧುರೀಣರನ್ನು ವಿಚಾರಿಸಿಯೇ ನೆಹರೂ ಘೋಷಣೆ ಹೊರಡಿಸಿದ್ದರೂ, ಪ್ರಕಾಶಮರಿಗೆ ಏನೇನೂ ಸಮಾಧಾನವುಂಟಾಗಿಲ್ಲ. ಅವರೂ ಮತ್ತಿತರ ೨೦ ಜನ ಆಂಧ್ರರೂ ಒಂದು ಹೇಳಿಕೆ ಹೊರಡಿಸಿ, ಮದ್ರಾಸು ನಗರದ ಭವಿಷ್ಯದ ಬಗ್ಗೆ ಏನೊಂದೂ ನಿರ್ಧಾರವಿಲ್ಲದೆ, ಆಂಧ್ರಪ್ರಾಂತ ರಚನೆಯನ್ನು ಕೈಗೊಳ್ಳುವುದು ಬರೇ ಕಣ್ಣುಕಟ್ಟು ಎಂದಿರುವರು.

ಸಾಮಾನ್ಯ ಪ್ರತಿಕ್ರಿಯೆ

ಆಂಧ್ರರ ಸಂಶಯ ನೆಹರೂ ಘೋಷಣೆಯಿಂದ ಏನೂ ಕಡಿಮೆಯಾದಂತಿಲ್ಲ ಎಂಬುದಕ್ಕೆ ಇದು ಪುಷ್ಟಿ ಕೊಡುತ್ತದೆ. ಪ್ರಕಾಶಮರು ಶ್ರೀ ರಾಮುಲುರ ನಿಧನದ ಪರಿಣಾಮವನ್ನು ನೆಹರೂರಿಗೆ ನಿವೇದಿಸಲು ಡಿಲ್ಲಿಗೆ ಹೋಗುವ ಕಾರ್ಯಕ್ರಮ ಇಟ್ಟುಕೊಂಡಿದ್ದರು. ಆದರೆ ಪ್ರಾಯಶಃ ನೆಹರೂ ಆಂಧ್ರದ ಉಳಿದ ಧುರೀಣರನ್ನು ಈ ಸಂಬಂಧದಲ್ಲಿ ವಿಚಾರಿಸುತ್ತಿರುವ ಸಂಗತಿಯ ಸುಳಿವು ಅವರಿಗೆ ಹತ್ತಿರಬೇಕು. ಹೇಗೂ ತನ್ನ ಒತ್ತಾಯಕ್ಕೆ ಬೆಲೆ ಬಾರದೆಂಬುದನ್ನು ಮೊದಲೇ ಊಹಿಸಿಕೊಂಡ ಪ್ರಕಾಶಮರು ಆಂಧ್ರಪ್ರಾಂತ ರಚನೆಯ ಈಗಿನ ಕ್ರಮದಲ್ಲಿ ತನ್ನದೇನೂ ಕೈವಾಡ ಇಲ್ಲೆಂದು ಸಿದ್ಧಗೊಳಿಸುವುದಕ್ಕೆ ಡಿಲ್ಲಿಗೆ ಹೋಗುವ ಕಾರ್ಯಕ್ರಮವನ್ನೇ ರದ್ದುಗೊಳಿಸಿದರು. ಡಿಲ್ಲಿಯ ಆಂಧ್ರ ಸದಸ್ಯರಿಗೂ ಹೊಸ ಪ್ರಾಂತವು ಇನ್ನೂ ವರದಿಯ ಘಟ್ಟದಲ್ಲಿದೆ ಎಂಬ ಅಸಮಾಧಾನವಿದೆ. ಮದ್ರಾಸಿನ ನಿರ್ವಿವಾದ ತೆಲುಗು ಪ್ರದೇಶಗಳನ್ನೀವಾಗ ಬಳ್ಳಾರಿ ಜಿಲ್ಲೆಯ ಪೂರ್ವ ತಾಲೂಕುಗಳ (ಆಲೂರು, ಆದವಾನಿ ಮತ್ತು ರಾಯದುರ್ಗ) ಪ್ರಶ್ನೆಯೂ ಬರುತ್ತದೆ. ಕನ್ನಡಿಗರು ಇದು ಕರ್ನಾಟಕಕ್ಕೆ ಸೇರಿದ್ದೆನ್ನುವರು. ಮದ್ರಾಸು ನಗರದ ಸಂಬಂಧದಲ್ಲಿ ಒಮ್ಮತಕ್ಕೆ ಬರುವುದೂ ಕಷ್ಟವೆಂದು ಆಂಧ್ರರ ಪ್ರಾಮಾಣಿಕ ಭಾವನೆ ಇದೆ. ಹೀಗಿದ್ದರೂ ಸರಕಾರದ ಈಗಿನ ಕ್ರಮವನ್ನು ಸಾಮಾನ್ಯವಾಗಿ ಎಲ್ಲರೂ ಸ್ವಾಗತಿಸಿರುವರು. ಕರ್ನಾಟಕ ಪ್ರಾಂತರಚನೆಯನ್ನು ಎಂದು ಕೈಗೊಳ್ಳಲಾಗುವುದೆಂದು ರಾಜ್ಯಪರಿಷತ್ತಿನಲ್ಲಿ ನಮ್ಮ ಜಿಲ್ಲೆಯ ಶ್ರೀ ಕಕ್ಕಿಲ್ಲಾಯರು ಇನ್ನು ಕೇರಳದ ರಚನೆಯ ಕುರಿತು ಲೋಕಸಭೆಯಲ್ಲಿ ಅನಂದನ್ ನಂಬಿಯಾರರೂ ಪ್ರಶ್ನೆ ಕೇಳಿದ್ದರ ಮೇಲಿಂದ ಉಳಿದ ಭಾಷಾನುಗುಣ ಪ್ರಾಂತರಚನೆಗಳ ಬೇಡಿಕೆ ಬಲವಾಗಲಿಕ್ಕೆ ಆಂಧ್ರಪ್ರಾಂತ ರಚನೆಯ ಪ್ರಾಥಮಿಕ ಕಾರ್ಯಕ್ರಮ ನೆರವಾದೀತು. ನಿಜಲಿಂಗಪ್ಪನವರು ಕರ್ನಾಟಕ ಏಕೀಕರಣದ ಪ್ರಶ್ನೆಯನ್ನು ಈಗ ಸರಕಾರ ಎತ್ತಿಕೊಳ್ಳುವುದು ಯೋಗ್ಯವೆಂದಿದ್ದರೆ, ಶ್ರೀ ಗಾಡಗೀಳರು ಆಂಧ್ರದ ಬೆನ್ನಲ್ಲೇ ಕನ್ನಡಭಾಷೆಯಾಡುವ ಜನರಿಗಾಗಿ ಹೊಸ ಪ್ರಾಂತ್ಯ ನಿರ್ಮಾಣವಾಗಬೇಕೆಂದೂ, ಹೈದರಾಬಾದು ರಾಜ್ಯವನ್ನು ಒಡೆದು ವಿಂಗಡಿಸುವುದೇ ಶ್ರೀಯುಕ್ತವೆಂದೂ ಹೇಳಿರುವರು. ಕಾಶ್ಮೀರ ಪ್ರಕರಣದ ಸಂಬಂಧದಲ್ಲಿ ಕೇಂದ್ರ ತೋರಿಸಿದ ಆತುರವನ್ನು ಆಂಧ್ರದ ಗೊಂದಲವು ಪಡೆದಿರುವುದು ಶುಭಾರಂಭವೆಂದು ಹೇಳಲು ಬಾರದು.

ಸಂದೇಹ ನಿವಾರಣೆ

ಲೋಕಸಭೆ ಹಾಗೂ ರಾಜ್ಯಪರಿಷತ್ತಿನ ಪ್ರಕೃತದ ಅಧಿವೇಶನಗಳು ಮುಕ್ತಾಯ ಹೊಂದಿ ಅನಿರ್ದಿಷ್ಟ ಅವಧಿಯವರೆಗೆ ಮುಂದುವರಿದಿವೆ. ಎರಡೂ ಸಭೆಗಳು ಪ್ರಚಂಡ ಬಹುಮತದಿಂದ ಪಂಚವಾರ್ಷಿಕ ಯೋಜನೆಯ ಸಾಮಾನ್ಯ ತತ್ವಕ್ಕೆ ತಮ್ಮ ಒಪ್ಪಿಗೆಯನ್ನು ಸೂಚಿಸಿದುವು. ಮತದಾರ ಕ್ಷೇತ್ರವನ್ನು ವಿಸ್ತರಿಸುವ ಪ್ರಶ್ನೆಯನ್ನು ಒಂದು ಸಮಿತಿಗೊಪ್ಪಿಸಲು ಮಾಡಿದ ಮಸೂದೆಯನ್ನು ಪಾರ್ಲಿಮೆಂಟಿನ ಈ ಎರಡೂ ಮನೆಗಳು ಸ್ವೀಕರಿಸಿದ್ದರಿಂದ, ಇನ್ನದನ್ನು ರಾಷ್ಟ್ರಾಧ್ಯಕ್ಷರ ಸಮ್ಮತಿಗೆ ಕಳುಹಿಸುವರು. ಈಚೆಗೆ ಲೋಕಸಭೆಯಲ್ಲಿ ಅರ್ಥಸಚಿವ ಶ್ರೀ ಚಿಂತಾಮಣಿ ದೇಶಮುಖರು ಒಂದು ಹೇಳಿಕೆ ಕೊಟ್ಟು, ಔದ್ಯಮಿಕ ಆರ್ಥಿಕ ಸಮಿತಿಯ ಕಾರ್ಯಕಲಾಪಗಳ ಬಗ್ಗೆ (ತಾನು ಲಂಡನಿನಲ್ಲಿರುವಾಗ) ಸದಸ್ಯರು ತೋರಿಸಿದ ಕುತೂಹಲ ಹಾಗೂ ಸಂದೇಹಗಳನ್ನು ದೂರಗೊಳಿಸುವುದಕ್ಕಾಗಿ, ಬೇರೆ ಬೇರೆ ಉದ್ಯಮಗಳಿಗೆ ನೀಡಿದ ಸಾಲದ ತಪಶೀಲನ್ನು ಸಭೆಯ ಮುಂದೆ ಇಟ್ಟಿರುವುದಾಗಿ ತಿಳಿಸಿದರು. ಎಲ್ಲ ವ್ಯವಹಾರವೂ ಸುಸೂತ್ರವಾಗಿ ನಡೆಯುವಾಗ, ಸಾಲ ಪಡೆದವರ ಹೆಸರನ್ನು ಬಹಿರಂಗಗೊಳಿಸುವುದು ಸತ್ಸಂಪ್ರದಾಯವಾಗಲಾರದೆಂಬುದರಿಂದ. ಸರಕಾರ ಅಂಥ ಸಾಲ ಪಡೆದ ಸಂಸ್ಥೆಗಳ ಹೆಸರನ್ನು ಹೇಳಲಿಲ್ಲ. ಆದರೆ ಸದಸ್ಯರು ಔದ್ಯಮಿಕ ಆರ್ಥಿಕ ಸಮಿತಿಯ ಕಾರ್ಯಕಲಾಪಗಳ ಪ್ರಾಮಾಣಿಕತೆಯನ್ನೆ ಪ್ರಶ್ನಿಸಿರುವುದರಿಂದ ಮುಚ್ಚುಮರೆಯಲ್ಲಿಡುವುದು ಇಷ್ಟವೆನಿಸದು ಎಂಬ ನಿರ್ಧಾರಕ್ಕೆ ತಾನು ಬಂದಿರುವುದಾಗಿ ದೇಶಮುಖರು ಹೇಳಿದರು. ಮಾತ್ರವಲ್ಲ ಸದಸ್ಯರು ಕೆಲವು ನಿರ್ದಿಷ್ಟ ಉದಾಹರಣೆಗಳನ್ನು ಕೊಟ್ಟು ಹಣದ ದುರುಪಯೋಗ ನಡೆದಿದೆ ಎಂದಿರುವುದರಿಂದ ಮತ್ತು ಸಮಿತಿಯ ನಿರ್ದೇಶಕರು ತಮ್ಮ ಹಿತಸಂಬಂಧಿಗಳಿಗೇನೇ ಸಾಲ ಮಂಜೂರು ಮಾಡುವರೆಂಬ ಆರೋಪವಿರುವುದರಿಂದ ಪಾರ್ಲಿಮೆಂಟಿನ ಎರಡೂ ಸಭೆಗಳ ಸದಸ್ಯರ ಒಂದು ಸಮಿತಿಯನ್ನು ನೇಮಿಸಿ, ಅದು ಈ ಸಂಬಂಧದಲ್ಲಿ ತಕ್ಕ ವಿಚಾರಣೆ ನಡೆಸಬೇಕೆಂದು ಸರಕಾರ ನಿಶ್ಚಯಿಸಿದೆ ಎಂದೂ ದೇಶಮುಖರು ನುಡಿದರು.



BBT/52/1081

ತಾಜಾಗಿರುವ
ಸುವಾಸನೆಯ
ಮಿಶ್ರಣಗಳು

ಇವು ಕೇವಲ ಕಾಗದದ ಚೂರುಗಳಷ್ಟೇ ಅಲ್ಲ— ಹೊಲಸು, ಧೂಳು ಮತ್ತು ಕ್ರಿಮಿಕೀಟಗಳ ಅಪಾಯಗಳಿಂದ ನಿಮ್ಮ ಚಹಾ ಸುರಕ್ಷಿಸಲ್ಪಟ್ಟಿದೆಯೆಂಬುದಕ್ಕೆ ಖಾತ್ರಿಯಾಗಿವೆ. ಪ್ಯಾಕೆಟ್ಟು ಕಟ್ಟಲ್ಪಟ್ಟ ಚಹಾವನ್ನು ಕೊಂಡು ನಿಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದೇ ಅಲ್ಲದೆ ಬ್ರೂಕ್ ಬಾಂಡ್ ಪ್ಯಾಕೆಟ್ಟನ್ನೇ ಕೊಂಡು ಯಥಾರ್ಥವಾಗಿಯೂ ತಾಜಾವಾದ ಮತ್ತು ಉತ್ತಮ ತರವಾರಿಕೆಯ ಚಹಾವನ್ನು ಸೇವಿಸುವ ಹರ್ಷವನ್ನೂ ಪಡೆಯಿರಿ.

ಭಾರತದ ಅತ್ಯುತ್ತಮ ಪ್ಯಾಕೆಟ್ಟಿನಲ್ಲಿ ಭಾರತದ ಅತ್ಯುತ್ತಮ ಚಹಾ.





ನವಯುಗ ಪ್ರೆಸ್, ಉಡುಪಿ.

ಶ್ರೀ ಯಕ್ಷೇಶ್ವರಿ ಪ್ರಸನ್ನ

[illegible] ಶೆಟ್ಟಿ

ಮಹಾಶಯರೆ,

ಇದೇ ಬರುವ ಜನವರಿ ತಾ 21-1-1953ನೇ ಬುಧವಾರ ಶ್ರೀ ಯಕ್ಷೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ [illegible]

[illegible] MORE
PEOPLE BUY
PLATO
PLATO FOUNTAIN PEN No. 66
The pen of the day
N. P. P. I. LTD. BOMBAY 4

The Canara Banking Corporation Limited.
ಸುಲಭ ಶರ್ತಗಳಿದ್ದು, ಸಾಲಿಯಾನಾ ನೇಕಡಾ ೪ರಂತೆ ಬಡ್ಡಿ ಗಳಿಸುವ ನಮ್ಮ
"ಪಂಚವಾರ್ಷಿಕ ಸುವರ್ಣ ಠೇವಣಾತಿಗಳು"
ಈಗಾಗಲೇ ಎಲ್ಲಾ ಕಡೆಗಳಲ್ಲಿಯೂ ಜನಾದರಣೀಯವಾಗಿವೆ. ನೀವೂ
ಕೂಡಾ ನಿಮ್ಮ ಹಣವನ್ನು ಈ ಠೇವಣಾತಿಗಳಲ್ಲಿ ಏಕೆ ವಿನಿಯೋಗಿಸಬಾರದು?
ವಿಶೇಷ ಮಾಹಿತಿಗೆ,
ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.
ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್,
ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ, ಉಡುಪಿ. (ದ ಭಾರತ)

ನವಯುಗ
ಉಡುಪಿ, ಗುರುವಾರ ೨೫-೧೨-'೫೨

ಆಂಧ್ರಪ್ರಾಂತ

ಪ್ರಧಾನಿ ನೆಹರೂ ಆಂಧ್ರಪ್ರಾಂತ ನಿರ್ಮಾಣದ ಕುರಿತು ಮಾಡಿದ ಘೋಷಣೆಗೆ ಸಾಮಾನ್ಯವಾಗಿ ಆಂಧ್ರರ ಸ್ವಾಗತ ದೊರೆತಿದೆ ಎಂದಷ್ಟಕ್ಕೆ--ಆಂಧ್ರರು ಇದನ್ನು ಕೇಳಿ ಪೂರ್ಣ ಸಂತೃಪ್ತಿಪಡೆದಿರುವರೆನ್ನುವಂತಿಲ್ಲ. ಉದಾಹರಣೆಗೆ ಆಂಧ್ರಕೇಸರಿ ಎಂಬ ಬಿರುದಾಂಕಿತರಾದ ಪ್ರಕಾಶಮರು ಸಂತುಷ್ಟರಾಗುವ ಬದಲು ಸಂತಪ್ತರಾದಂತೆಯೇ ಕಂಡುಬರುತ್ತದೆ. ಇನ್ನು ಕೆಲವು ಲೋಕಸಭೆಯ ಸದಸ್ಯರಲ್ಲೂ ಈಗ ವಿಸಂಚನೆ ಮನೆಮಾಡಿಕೊಂಡುದು ವ್ಯಕ್ತವಾಗುತ್ತದೆ. ಮೊನ್ನೆ ಮೊನ್ನೆಯ ವರೆಗೆ ಕೇಂದ್ರ ಸರಕಾರವು ಆಂಧ್ರಪ್ರಾಂತ ನಿರ್ಮಾಣದ ಘೋಷಣೆಯನ್ನು ಹೊರಡಿಸಿದರೆ— ತನ್ನಿಂದ ತಾನೆ ಎಲ್ಲ ಸಂದೇಹ ಆತಂಕಗಳೂ ದೂರಾಗುವುವೆಂಬ ಅಭಿಪ್ರಾಯವನ್ನು ಬಿಂಬಿಸಿದವರು, ಇಂದು ಪರಿಸ್ಥಿತಿ ಹಾಗೆ ಇಲ್ಲವಲ್ಲ ಎಂದು ಕಳವಳಪಡುವಂತಾಗಿದೆ. ಆಂಧ್ರ ಧುರೀಣರ ಮತಭೇದವು ಕೇಂದ್ರ ಸರಕಾರದ ಘೋಷಣೆ ಮಾತ್ರದಿಂದ ನಿವಾರಣೆ ಹೊಂದತಕ್ಕುದಲ್ಲವೆಂಬುದು ಈಗ ಹೆಚ್ಚು ಸ್ಪಷ್ಟವಾಗುತ್ತಿದೆ. ಇದರ ಜೊತೆಗೇ ಏಳುವ ಇನ್ನೊಂದು ಅಭಿಪ್ರಾಯವೆಂದರೆ- ಕೇಂದ್ರಸರಕಾರ ಅವಸರ ಪಟ್ಟಿತೇ ಎಂಬುದು ಆಂಧ್ರ ಪ್ರದೇಶದಲ್ಲಿ ಉತ್ಕಟ ಪರಿಸ್ಥಿತಿ ಸೃಷ್ಟಿಗೊಂಡುದನ್ನು ಕಂಡು ಅಂಜಿಕೊಂಡು, ಸರಕಾರ ತನ್ನ ನಿಲುವೆಯನ್ನು ಕೆಲ ಮಟ್ಟಿಗೆ ಪರಿವರ್ತನೆಗೊಳಿಸಿ, ಆಂಧ್ರರ ಬಲಾತ್ಕಾರಕ್ಕೆ ಸೈಗುಟ್ಟಿತೋ ಎಂಬ ಪ್ರಶ್ನೆ ಇಲ್ಲಿ ಮುಖ್ಯವಾಗಿದೆ. ಕೇಂದ್ರಸರಕಾರದ ಚಾಂಚಲ್ಯ ಹಾಗೂ ದೌರ್ಬಲ್ಯವನ್ನು ಎತ್ತಿತೋರಿಸುವಂಥ ಘಟನೆ ಇದಾಗಿರುವುದರಿಂದ- ಕರ್ನಾಟಕ ಆದಿಯಾಗಿ ಉಳಿದ ಭಾಷಾನುಗುಣ ಪ್ರಾಂತರಚನೆಯ ಬೇಡಿಕೆಗೆ ಹೊಸ ಅವಕಾಶ ಹಾಗೂ ವಾತಾವರಣ ದೊರೆತಿದೆ. ಭಾಷಾನುಗುಣ ಪ್ರಾಂತರಚನೆಯೆಂಬುದು ಕಾಂಗ್ರೆಸು ಒಪ್ಪಿಕೊಂಡ ಸಾಮಾನ್ಯ ತತ್ವವಾಗಿರುವುದರಿಂದ, ಆಂಧ್ರ ಒಂದು ಹೆಚ್ಚು, ಕರ್ನಾಟಕವೊಂದು ಕಡಿಮೆ ಎಂಬುದಾಗಿ ಪ್ರಾಶಸ್ತ್ಯ ನೀಡುವಲ್ಲಿ ಭೇದಬಗೆವಂತಿಲ್ಲ. ಹೀಗಿರುವುದರಿಂದ ಆಂಧ್ರ ಪ್ರಾಂತ ರಚನೆಯನ್ನೆ ಕೇಂದ್ರ ಸರಕಾರ ಮಹತ್ವದ ವಿಷಯವಾಗಿಟ್ಟುಕೊಂಡು, ಮುನ್ನಡಿಯಿಟ್ಟುದು ಎಷ್ಟರ ಮಟ್ಟಿಗೆ ಸಮಂಜಸವೆಂದು ಹೇಳುವಂತಿಲ್ಲ. ನ್ಯಾಯಮೂರ್ತಿ ವಾಂಛೂರವರನ್ನು ಆಂಧ್ರಪ್ರಾಂತ ರಚನೆಯ ಆರ್ಥಿಕ ಹಾಗೂ ತತ್ಸಂಬಂಧಿ ಪ್ರಶ್ನೆಗಳನ್ನು ಪರಿಶೀಲಿಸಿ ವರದಿಯೊಪ್ಪಿಸುವಂತೆ ನೇಮಕಗೊಳಿಸಿರುವರೇ ಹೊರತು—ಆಂಧ್ರಪ್ರಾಂತ ರಚನೆಯ ಬೇಡಿಕೆ ಯೋಗ್ಯವೇ ಅಯೋಗ್ಯವೇ ಎಂಬ ಪ್ರಶ್ನೆ ಇಲ್ಲಿಲ್ಲ. ಆಂಧ್ರರು ನ್ಯಾಯಮೂರ್ತಿಗಳ ಕೆಲಸದಲ್ಲಿ ಸಹಕಾರ ನೀಡಿ, ಒಮ್ಮತಕ್ಕೆ ಬಂದಲ್ಲಿ – ಅವರ ಕೆಲಸ ಸುಗಮವಾದೀತು. ಆದರೆ ಈ ಕುರಿತು ನಮಗೆ ಅಂಜಿಕೆ ಇದೆ. ಆಂಧ್ರ ಧುರೀಣರ ಮತಭೇದ, ರಾಯಲ ಸೀಮೆಯವರ ವಿರೋಧ, ಮದ್ರಾಸು ನಗರದ ಭವಿಷ್ಯ ಮುಂತಾದ ಸಂಗತಿಗಳು ಸಮರ್ಪಕವಾಗಿ ಬಿಡಿಸಲ್ಪಡಬೇಕಾದರೆ ಅತ್ಯಂತ ಚಾಣಾಕ್ಷತೆಯೂ ಅಮಿತವಾದ ಸಹನೆಯೂ ಬೇಕು. ಎಲ್ಲ ಬಿಟ್ಟು ನಾಳೆ ನಿರ್ಮಾಣವಾಗಲಿರುವ ಆಂಧ್ರಪ್ರಾಂತದ ಕಾರ್ಯಕಲಾಪಗಳ ಬಗ್ಗೆಯೂ ಈಗಿಂದಲೇ ಚಿಂತೆಯುಂಟಾಗಿದೆ. ಮೊದಲನೆಯದಾಗಿ ಅದು ಏಳು ಕೋಟಿ ರೂಪಾಯಿಯ ಕೊರತೆಯ ರಾಜ್ಯವಾಗುವುದು. ಪಂಚವಾರ್ಷಿಕ ಯೋಜನೆಯು ಕಾರ್ಯರೂಪಕ್ಕೆ ಬರಬೇಕಿರುವ ಈ ದಿನಮಾನದಲ್ಲಿ ಆದಾಯ ಸ್ರೋತವನ್ನು ಹೆಚ್ಚಿಸುವುದೇ ಒಂದು ಸಮಸ್ಯೆ. ಹೀಗಿರುವಲ್ಲಿ ಕೊರತೆಯ ರಾಜ್ಯವಾಗಿದ್ದುಕೊಂಡು, ಆಂಧ್ರಪ್ರಾಂತ ಪುರುಷಾರ್ಥ ಸಾಧಿಸುವುದು ಕಷ್ಟಸಾಧ್ಯ. ದೇಶದ ಐಕ್ಯದ ದೃಷ್ಟಿಯಿಂದ ನೋಡಿದರೆ ಕೇವಲ ೪೦ಮಂದಿ ಕಾಂಗ್ರೆಸು ಸದಸ್ಯರು ಇದ್ದು, ಉಳಿದ ಸದಸ್ಯರ ಸಂಖ್ಯೆಯು ೧೦೦ ಇದೆ. ಅಲ್ಲದೆ ಕಮ್ಯೂನಿಸ್ಟರ ಪ್ರಾಬಲ್ಯಕ್ಕೂ ಆಂಧ್ರ ಪ್ರದೇಶದಲ್ಲಿ ಹೆಚ್ಚು ಅವಕಾಶವಿದೆ. ಈ ಪರಿಸ್ಥಿತಿ ಎಷ್ಟರ ಮಟ್ಟಿಗೆ ಚೆಲುವಾದ ವಾತಾವರಣವನ್ನು ನಿರ್ಮಿಸೀತೆಂಬುದು ಸಂಶಯಾಸ್ಪದ. ಇದಕ್ಕೆಲ್ಲ ಕಳಶವಿಡುವಂತೆ ಗವರ್ನರರ ನೇಮಕ, ಹೈಕೋರ್ಟು, ಆಸ್ಪತ್ರೆ ಮುಂತಾದ ಪ್ರಶ್ನೆಗಳು ಬಿಡಿಸಲ್ಪಡಬೇಕು. ಆಂಧ್ರರ ಒಮ್ಮನಸ್ಸನ್ನು ಪರೀಕ್ಷಿಸುವ ಸಂಕ್ರಮಣ ಕಾಲವನ್ನೆ ನೆಹರೂರ ಘೋಷಣೆ ನಿರ್ಮಿಸಿದೆ ಎಂಬುದು ಈ ಎಲ್ಲ ಸಂಗತಿಗಳಿಂದ ಮನವರಿಕೆಯಾಗುತ್ತದೆ. ಆಂಧ್ರ ಧುರೀಣರು ಎಣ್ಣೆ ಬರುವಾಗ ಗಾಣ ಮುರಿಯಿತೆಂಬ ಗಾದೆಯಂತೆ ಕೈಗೆ ಬಂದುದನ್ನು ವ್ಯರ್ಥಹೋಗಗೊಡದೆ ಮೇಧಾವಿತನದಿಂದ ವರ್ತಿಸುವುದವಶ್ಯ.

ತಾರೀಕು. ೨೩ 12 52ರಿಂದ
ಪ್ರಕಾಶಿಸ್ತಿ—
'ರಾಖಿ'
ಕಾಮಿನಿ ಕೌಶಲ್, ಕರನ್ ದಿವಾನ್
ಮೊದಲಾದವರು
ಬರುವಚಿತ್ರ— ಭಾನುಮತಿ ಪಿಕ್ಚರ್ಸ್
ರವರ —'ಲವ ಕುಶ'—
ನಿರುಪರಾಯ್, ಪ್ರೇಮ ಅದಿಬ್
ಶ್ರೀ ರಾಮಕೃಷ್ಣ ಥಿಯೇಟರ್
ಲಿಮಿಟೆಡ್ ಉಡುಪಿ.

ಐರೋಪ್ಯ ರಾಷ್ಟ್ರಗಳ ಯುದ್ಧ ಸನ್ನಾಹ

ಕಾಶ್ಮೀರ ಪ್ರಶ್ನೆಯಲ್ಲಿ ಭಾರತದ ನಿಲುವೆಗೆ ಪಾಕಿಸ್ತಾನದ ಭಾಷ್ಯ

ವಿಶ್ವಶಾಂತಿಯೆಂಬುದು ಮರೀಚಿಕೆಯೆಂಬಂತಿದೆ. ಭಾರತವು ಶಾಂತಿ ಸ್ಥಾಪನೆಯ ಸಮಸ್ತ ಹೊಣೆಗಾರಿಕೆ ಕೇವಲ ತನ್ನ ಹೆಗಲ ಮೇಲೆ ಕುಳಿತಿದೆಯೋನೋ ಎಂಬಂತೆ ಕಳವಳವನ್ನೂ ತವಕವನ್ನೂ ವ್ಯಕ್ತಪಡಿಸುತ್ತದೆ. ಕೊರಿಯಾ ಕದನದ ಸಂಬಂಧದಲ್ಲಿ ಭಾರತವು ಮುಂಡಿಸಿದ ಠರಾವಿಗೆ ಸಂಯುಕ್ತರಾಷ್ಟ್ರ ಸಂಘದಲ್ಲಿ ದೊರೆತ ಅನುಮೋದನೆ ಪ್ರಚಂಡವಾಗಿತ್ತು: ಹಿಂದೆ ಬೇರೆ ಯಾವುದೇ ಸೂಚನೆಗೆ ಅಷ್ಟು ಹೆಚ್ಚಿನ ಮತಗಳು ಲಭ್ಯವಿರಲಿಲ್ಲ. ಹೀಗಿದ್ದರೂ ರಶಿಯಾದ ತಿರಸ್ಕಾರ ಮತ್ತದರ ಬೆನ್ನಲ್ಲೇ ಈಗ ವ್ಯಕ್ತವಾಗಿರುವ ಚೀನೀ ಮತ್ತು ಉತ್ತರ ಕೋರಿಯನ್ನರ ನಿರಾಕರಣೆ ಕೊರಿಯಾದ ಕದನ ರಂಗದ ಕಾವು ಆರುವಂತಿಲ್ಲವೆಂಬುದನ್ನು ಎತ್ತಿತೋರಿಸಿದುವು. ಈಚೆಗೆ ಅಮೇರಿಕದ ನಿಯೋಜಿತಾಧ್ಯಕ್ಷ ಐಸೆನ್ ಹೋವರರು ಕೊರಿಯಾ ಕದನ ರಂಗಕ್ಕೆ ಭೇಟಿಕೊಟ್ಟು ಬಂದದ್ದಲ್ಲದೆ--ಕೊರಿಯಾ ಕದನವನ್ನು ನಿಲ್ಲಿಸಲು ಸಾಧ್ಯವಿದೆಯೆಂಬಂತೆ ಅವರು ಮಾತನಾಡಿದರು. ಈ ಹಿಂದೆ ಪೂರ್ವದಲ್ಲಿ ಸರ್ವಶ್ರೇಷ್ಠ ಸೇನಾನಿಯಾಗಿದ್ದ ಮೆಕಾರ್ಥರರೊಡನೆಯೂ ಅವರು ಪ್ರಾಸ್ತವಿಕ ಮಾತುಕತೆಗಳನ್ನು ನಡೆಸಿದರು. ಐಸೆನ ಹೋವರರು ಕೊರಿಯಾ ಸಂದರ್ಶನದ ಬಳಿಕ ಹೇಳಿದೊಂದು ಮಾತಿನ ಮರ್ಮವೇನೆಂಬುದನ್ನು ಎಲ್ಲರೂ ಕುತೂಹಲದಿಂದ ಈಗ ಇದಿರು ನೋಡುತ್ತಿರುವರು. "ನಮ್ಮ ಶತ್ರುಗಳನ್ನು ಶಬ್ದಗಳಿಂದ ಒಲಿಸಿಕೊಳ್ಳುವಂತಿಲ್ಲ ನಾವೇ ಆರಿಸಿದ ಪರಿಣಾಮಕಾರೀ ಕಾರ್ಯಕ್ರಮಗಳಿಂದಲೇ ಅವರನ್ನು ಬಗ್ಗುಬಡೆಯುವುದು ಸಾಧ್ಯ" ಎಂಬ ಐಕರ ಮಾತು ಅವರು ಅಧ್ಯಕ್ಷಗದ್ದುಗೆಯನ್ನೇರುವವರೆಗೆ ಪೂರ್ಣ ಸ್ಪಷ್ಟ ಹೊಂದಲಿಕ್ಕಿಲ್ಲ. ಬಹುಶಃ ಮುಂದಿನ ಬೇಸಗೆಯಲ್ಲಿ ಸಂಯುಕ್ತ ರಾಷ್ಟ್ರಸಂಘದ ಸೇನೆಗಳನ್ನು ಬಲಗೊಳಿಸಿ ಒಂದೇ ಸಮನೆ ಕಮ್ಯೂನಿಸ್ಟರನ್ನು ಹಿಮ್ಮೆಟ್ಟಿಸುವ ಪ್ರಯತ್ನ ನಡೆದೀತು.

ಯುದ್ಧ ಕೈದಿಗಳ ಕಗ್ಗೊಲೆ

ಕೊರಿಯಾದ ಸಂಬಂಧದಲ್ಲಿ ರಶಿಯಾ ಸಂಯುಕ್ತ ರಾಷ್ಟ್ರಸಂಘದಲ್ಲಿ ಕೈದಿಗಳನ್ನು ಅಮಾನುಷ ರೀತಿಯಿಂದ ನಡೆಸಿಕೊಳ್ಳುತ್ತಿರುವರೆಂಬ ಆಪಾದನೆಯನ್ನು ಅಮೇರಿಕದ ಮೇಲೆ ಮಾಡಿತು. ಪೊಂಗಾಮ್ ಯುದ್ಧ ಕೈದಿಗಳ ಶಿಬಿರದಲ್ಲಿ ಇತ್ತೀಚೆ ನಡೆದ ಗುಂಡಿನ ಪ್ರಯೋಗದಿಂದ ೮೦ಕ್ಕೂ ಹೆಚ್ಚು ಜನರು ಮಡಿದುದು ಮತ್ತು ಅನೇಕರಿಗೆ ಗಾಯವಾದುದು ಇದಕ್ಕೆ ಒಂದು ನೆಪ. ರಶಿಯಾದ ಪ್ರತಿನಿಧಿಯು ಅಮೇರಿಕವು ತನ್ನ ಅಣುಬಾಂಬಿನ ಪ್ರಯೋಗಗಳಿಗಾಗಿ ಸಾವಿರ ಸಂಖ್ಯೆಯಲ್ಲಿ ಯುದ್ಧ ಕೈದಿಗಳನ್ನು ಬಲಿಗೊಡುತ್ತಿರುವುದೆಂಬ ಗಂಭೀರ ಆರೋಪವನ್ನು ಮಾಡಲಿಕ್ಕೆ ಹಿಂಜರಿಯಲಿಲ್ಲ. ಯುದ್ಧ ಕೈದಿಗಳು ಕೋಜೆ ಶಿಬಿರದಲ್ಲಿ ದಂಗೆ ನಡೆಸಿದ ಗಳಿಗೆಯಿಂದ ಸಾಮಾನ್ಯವಾಗಿ ಅಲ್ಲಿ ಗಲಭೆಗೊಂದಲಗಳು ನಡೆಯುತ್ತಲೇ ಇವೆ. ಈ ಗೊಂದಲಮಯ ಪರಿಸ್ಥಿತಿಯನ್ನು ಕೊನೆಗಾಣಿಸಲು ಸಾಧ್ಯವಿಲ್ಲವೇ ಎಂಬುದನ್ನು ವಿಚಾರಿಸುವ ಪ್ರಸಂಗ ಈಗ ಬಂದಿರುವುದು. ಯುದ್ಧಕೈದಿಗಳ ಶಿಬಿರದಲ್ಲಿ ಈ ಬಗೆಯ ಅನಾಹುತಗಳಾಗುತಿದ್ದರೂ ಸಂಯುಕ್ತರಾಜ್ಯ ಅಮೇರಿಕೆಯ ಹೊರತು ಉಳಿದಾರಿಗೂ ಈ ಸಂಗತಿಯ ಪೂರ್ಣ ಮಾಹಿತಿ ಇರುವುದಿಲ್ಲ. ಅತ್ಯಂತ ಆಪ್ತವೆಂದು ಹೇಳಬಹುದಾದ ಬ್ರಿಟನಿಗೆ ಕೂಡ ಯುದ್ಧಕೈದಿಗಳ ಗಲಭೆಯ ಮೂಲದಲ್ಲಿ ಏನಿದೆ ಎಂಬ ಬಗ್ಗೆ ಎಲ್ಲ ಸಂಗತಿ ತಿಳಿದಿರುವುದಿಲ್ಲ. ಮೊನ್ನೆ ಕಾಮನ್ಸ್ ಸಭೆಯಲ್ಲಿ ಈ ಕುರಿತು ಕೇಳಲಾದ ಪ್ರಶ್ನೆಯನ್ನು ಉತ್ತರಿಸುತ್ತಾ ವಿದೇಶ ಶಾಖೆಯ ಉಪ ಸಚಿವ ನಟ್ಟಿಂಗರು ಅಮೇರಿಕೆಯನ್ನು ಈ ಸಂಬಂಧದಲ್ಲಿ ಹತ್ತು ಹಲವುಸಲ ವಿನಂತಿಸಿಕೊಂಡರೂ ಪ್ರಯೋಜನಕ್ಕೆ ಬರಲಿಲ್ಲವೆಂದರು. ಅದೇ ಕಾಲಕ್ಕೆ ಗುಂಡು ಹಾರಿಸುವಂಥ ಪ್ರಸಂಗ ಅನಿವಾರ್ಯವಾಗಿ ಬಂದಿರಬಹುದೆಂದು ಊಹಿಸಬಹುದೆಂದವರು ಸಮಾಧಾನವನ್ನು ಹೇಳಿದರು. ಏನೇ ಇರಲಿ ಸಂಯುಕ್ತ ರಾಷ್ಟ್ರ ಸಂಘದಲ್ಲಿ ರಶಿಯಾ ಆಕ್ರೋಶವನ್ನಷ್ಟೇ ಮಾಡೀತು ಹೊರತು, ಅದಕ್ಕೆ ಬಹುಮತ ದೊರೆವುದಿಲ್ಲ, ದೊರೆತಿಲ್ಲ. ಎಂಬುದನ್ನಿಲ್ಲಿ ಸ್ಮರಿಸಬಹುದು. ಆದುದರಿಂದ ಬ್ರಿಟನು ಅಮೇರಿಕೆಗಳ ಅಭಿಪ್ರಾಯವೇ ಸಂಯುಕ್ತ ರಾಷ್ಟ್ರಸಂಘದ ಸಾಮಾನ್ಯ ಧೋರಣೆ ಎಂದರೂ ಅತಿಶಯೋಕ್ತಿಯಾಗದು.

ನೆಹರೂರ ಶಾಂತಿಪಾಠ

ಯುದ್ಧದಿಂದ ಜಗತ್ತಿನ ರಾಷ್ಟ್ರಗಳಿಗೆ ಯಾವುದೇ ಸಮಸ್ಯೆಯನ್ನು ಪರಿಹರಿಸುವುದು ಆಗಲಿಕ್ಕಿಲ್ಲ: ಯುದ್ಧದಲ್ಲಿ ಒಂದು ಪಕ್ಷವು ಪೂರ್ಣ ಜಯವನ್ನು ಸಂಪಾದಿಸಿಕೊಂಡಾಗ್ಯೂ ಅದು ತನ್ನ ಧ್ಯೇಯಸಾಧನೆಯನ್ನು ಮಾಡಿಕೊಳ್ಳುವಂತಿಲ್ಲ ಎಂದು ನೆಹರೂ ಈಚೆಗೆ ನುಡಿದರು. ನೈತಿಕ ಅಥವಾ ಮಾನವೀಯ ದೃಷ್ಟಿಯಿಂದಷ್ಟೇ ಅಲ್ಲ ವ್ಯವಹಾರಿಕ ದೃಷ್ಟಿಯಿಂದಲೂ ಯುದ್ಧವೆಂಬುದು ವ್ಯರ್ಥ. ನಾವು ಶತ್ರುಗಳನ್ನು ಮಣಿಸಬೇಕೆಂದು ಅಣುಬಾಂಬನ್ನು ಪ್ರಯೋಗಿಸಬಹುದು. ಆದರೆ ಈ ಬಾಂಬುಗಳ ಅಧಿಕ ಪ್ರಯೋಗದಿಂದ ಹುಟ್ಟಿದ ರೇಡಿಯೋ ಆಕ್ಟಿವ್ ಕಿರಣಗಳ ಪ್ರಕೋಪದಿಂದ ಅದನ್ನು ಪ್ರಯೋಗಿಸಿದವರೂ ತಪ್ಪಿಸಿಕೊಳ್ಳಲಾರರು! ಇದೇ ರೀತಿ ಕಳೆದೆರಡು ಮಹಾಯುದ್ಧಗಳು ಧ್ಯೇಯಸಿದ್ಧಿಯನ್ನೇನೂ ಪಡೆಯದೆ ಮಹತ್ವದ ಹೊಸ ಸಮಸ್ಯೆಗಳಿಗೆ ಕಾರಣವಾದುವು. ರಾಷ್ಟ್ರಗಳು ಪರಸ್ಪರ ಸಹಕಾರ ಮತ್ತು ಮತ್ತು ಸೌಹಾರ್ದ ಭಾವವನ್ನು ತೋರಿ ಪ್ರೇಮದಿಂದ ನಡೆದುಕೊಳ್ಳಬೇಕು ಎಂದು ಮುಂತಾಗಿ ನೆಹರೂ ಹೇಳುವ ಉಪದೇಶದ ಮಾತುಗಳು ಬೋರ್ಗಲ್ಲಮೇಲೆ ಮಳೆ ಸುರಿದಂತೆಯೇ ಸೈ. ಒಂದು ರೀತಿಯಿಂದ ನೋಡಿದರೆ ಸೈನ್ಯ ಶಕ್ತಿಯಲ್ಲಿ ದುರ್ಬಲವಾದ ಭಾರತವು ಸಂಭಾವ್ಯ ಆಕ್ರಮಣವನ್ನು ಯಶಸ್ವಿಯಾಗಿ ಇದಿರಿಸಲಾರದೆಂಬುದರಿಂದ ಈ ರೀತಿ ಶಾಂತಿ ಪಾಠವನ್ನು ಉಪದೇಶಿಸುತ್ತಿದೆ ಎಂದೇ ತೋರುವುದು.

ಕ್ಷದ ಯಾವವೇ ಜನತೆ ಶಾಂತಿಯ ಗೆ ಓ ಗೊಡದೆ, ಪ್ರತ್ಯಕ್ಷ ಯುದ್ಧ ಕ್ರಿಯೆಯಲ್ಲಿ ತೊಡಗಿದೆ ಎಂಬ ಸಂಗತಿ ಂದಲೇ ಇದು ಸ್ವಯಂ ವೇದ್ಯವಾ ತ್ತದೆ.

ಐರೋಪ್ಯರ ಹೊಸ ಠಾಣ್ಯ

ಉದಾಹರಣೆಗಾಗಿ ಉತ್ತರ ಅಟ್ಲಾಂ ರಾಷ್ಟ್ರಗಳು ಈಗ ನಡೆಸುವ ಕಾರು ರನ್ನು ತೋರಿಸಬಹುದು: ಪಶ್ಚಿಮ ಯುರೋಪಿನ ಸಂರಕ್ಷಣೆಯ ಧ್ಯೇಯವ ಟ್ಟುಕೊಂಡು ಅಮೇರಿಕೆಯ ಹಿರಿತನ ಹದಿನಾಲ್ಕು ಐರೋಪ್ಯ ರಾಷ್ಟ್ರಗಳು ರಂಗವನ್ನು ರಚಿಸಿಕೊಂಡುವು. ರೆ ಮೊನ್ನೆ ತಾನೆ ಪೇರಿಸಿನಲ್ಲಿ ಸೇರಿದ ಮ್ಮೇಳನ ಇವುಗಳ ಕಾರ್ಯಕ್ಷೇತ್ರ ನ್ನು ಪಶ್ಚಿಮ ಯುರೋಪು- ಆ ಮಾ ಬೇಕಾದರೆ ಯುರೋಪು—ಎಂ ಸೀಮಿತವಾಗಿಡದೆ, ಆ ರಾಷ್ಟ್ರ ಹಿತಸಂಬಂಧವಿರುವ ಕಡೆಗೆಲ್ಲಾ- ಮುಖ್ಯವಾಗಿ ಏಶಿಯಾದ ವಸಾಹತು ಷ್ಟ್ರಗಳ ವರೆಗೂ—ವ್ಯಾಪಕಗೊಳಿಸ ಹವಣಿಸಿರುವುದು. ಫ್ರಾನ್ಸಿನ ವಸಾಹ ಇಂಡೋಚೀನಾದಲ್ಲಿ ಕಳೆದ ಆರು ವ ಗಳಿಂದ ನಡೆಯುವ ಯುದ್ಧದಲ್ಲಿ ಸಕ್ರಿ ಸಹಾಯವನ್ನು ನೀಡಲು ಅವಕಾಶ ಡುವುದು ಈ ಹೊಸ ನಿಲುವಿಗೆ ಕಾರ ವಾಗಿದೆ. ಅಮೇರಿಕಾದೊಡನೆ ಬಹಳ ಣವಿದೆ. ಮತ್ತು ಅವಶ್ಯಕತೆಗಿಂತ ಹೆ ಟ್ಟ ಉತ್ಪಾದನೆಯಿದೆ. ಅದನ್ನು ಕರ್ಚು ಮಾಡುವುದು ಹೇಗೆಂದು ಅದಕ್ಕೆ ತಿಳಿದಿಲ್ಲ. ಈ ಯುದ್ಧ ಶಾಂತಿಗಳ ದ್ವಂದ್ವದಲ್ಲಿ ತನ್ನನ್ನು ಬಲಿಗೊಡಲು ಮತ್ತು ತನ್ನೊಡನೆ ಇತರರನ್ನು ಬಲಿತೆಗೆದುಕೊಳ್ಳಲು ಅದು ಆತುರಗೊಂಡಿದೆ. ವೀತನಾವಿನಾಯಕರೀಣ ಹೋ ಚಿ ಮಿನರಿಗೆ ಕಮ್ಯೂನಿಸ್ಟರ ಬೆಂಬಲ ದೊರೆತಿದೆ ಎಂಬ ನೆಪದಿಂದ-ಇಂಡೋ ಚೀನಾದಲ್ಲಿ ನಡೆಯುವ ಸಮರದಲ್ಲಿ ಫ್ರಾನ್ಸಿನ ಕೈವಾರಿಯಾಗಿ ನಿಂತು ಮದ್ದುಗುಂಡುಗಳನ್ನು ಅಮೇರಿಕ ಪೂರೈಸುತ್ತಾ ಬಂದಿದೆ. ಯುದ್ಧದ ವೆಚ್ಚದಲ್ಲ ಮೂರರಲ್ಲಿ ಒಂದಂಶ ಅಮೇರಿಕದ ಹೆಗಲೇರಿದೆ. ಬ್ರಿಟನು ಕೂಡ ಸಿಡಿಮದ್ದುಗಳನ್ನು ಫ್ರೆಂಚ ಸೈನ್ಯಕ್ಕೆ ಕಳುಹಿಸಿಕೊಟ್ಟಿದೆ. ಹೀಗೆ ವಸಾಹತುಗಳಲ್ಲಿ ಸ್ವಾಭಾವಿಕವಾಗಿ ಕಂಡುಬರುವ ಜಾಗೃತ ಮನೋವೃತ್ತಿಯನ್ನು ದಮನಿಸಲು ನೆರವು ನೀಡುವುದಕ್ಕೆ ಉತ್ತರ ಅಟ್ಲಾಂಟಿಕ ರಾಷ್ಟ್ರಗಳು ಪ್ರಯತ್ನಿಸಿದರೆ, ಅದರಿಂದ ಭಾರತಕ್ಕೂ ಪ್ರಾಯಶಃ ಕೇಡುಂಟಾಗದಿರದು. ನಮ್ಮಲ್ಲಿ ಫ್ರೆಂಚ ಹಾಗೂ ಪೋರ್ಚುಗೀಜ ವಸಾಹತುಗಳಿವೆ. ಮತ್ತು ಇವು ಪೂರ್ವದಲ್ಲಿ ವಿದೇಶೀ ಸೈನ್ಯಗಳ ರಾಣ್ಯವಾಗುವ ಸಂಭವ ಈಗ ಬಹಳ ಹೆಚ್ಚಿಕೊಂಡಿದೆ.

ಜಾಫರುಲ್ಲಾ ಖಾನರ ಭಾಷ್ಯ

ಎಂತಲೇ ಭಾರತ ಸರಕಾರ ಸತರ್ಕವಿರುವುದು ಅಪೇಕ್ಷಣೀಯ: ಹಿಂದೆ ಉತ್ತರ ಅಟ್ಲಾಂಟಿಕ ರಾಷ್ಟ್ರಗಳು ಐಕ್ಯರಂಗವನ್ನು ರಚಿಸಿಕೊಂಡಾಗಲೇ ಅವುಗಳ ಕಾರ್ಯಕ್ಷೇತ್ರ ವ್ಯಾಪಕಗೊಳ್ಳಲಾಗದು ಎಂಬ ಎಚ್ಚರಿಕೆಯನ್ನು ನೆಹರೂ ಕೊಡಬೇಕು ಎಂಬುದಾಗಿ ಗೋವೆಯ ರಾಷ್ಟ್ರೀಯರು ಬಿನ್ನವಿಸಿದ್ದರು. ಅಂದು ನೆಹರೂ ಈ ಸಾಹಸಕ್ಕೆ ಕೈಹಚ್ಚಲಿಲ್ಲ. ಹಾಗೆಂದು ಗೋವೆಯ ರಾಷ್ಟ್ರೀಯರು ಊಹಿಸಿದಂತೆ ಘಟನೆಗಳು ಪರಿವರ್ತನೆಗೊಂಡ ಲಕ್ಷಣ ಈಗ ಸುಸ್ಪಷ್ಟವಿದೆ. ಇಂಥದರಲ್ಲಿ ಭಾರತ ಖಂಡಿತ ಮುಖಭಂಗ ಹೊಂದುವ ಪರಿಸ್ಥಿತಿಯುಂಟಾಗದಿರದು. ಕಾಶ್ಮೀರ ಪ್ರಶ್ನೆಯಲ್ಲಿ ಅದು ಈಗಾಗಲೇ ಸಾಕಷ್ಟು ಘಾಸಿಹೊಂದಿದೆ. ಆಂಗ್ಲೊ ಅಮೇರಿಕನ್ ಗೊತ್ತುವಳಿಯು ಮೂಲಭೂತ ಪ್ರಶ್ನೆಯನ್ನು ದುರ್ಲಕ್ಷಿಸಿರುವುದರಿಂದ ಅದನ್ನು ಭಾರತ ತಿರಸ್ಕರಿಸಿದೆ ಆದರೆ ಪಾಕಿಸ್ತಾನ ಅದನ್ನು ಒಪ್ಪಿ, ಭಾರತವೇ ಒಂದು ಗೌರವಯುತವಾದ ಒಡಂಬಡಿಕೆಗೆ ಬರುವಲ್ಲಿ ಬಾಧೆಯೊಡ್ಡುತ್ತಿದೆ ಎಂಬುದನ್ನು ತೋರಿಸಿಕೊಡುತ್ತದೆ. ಭದ್ರತಾ ಮಂಡಳದಲ್ಲಿ ಭಾರತದ ಪ್ರತಿನಿಧಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಮಾಡಿದ ಭಾಷಣಕ್ಕೆ ಅಪಾರ್ಥಕಲ್ಪಿಸಿಕೊಂಡು, ಪಾಕಿಸ್ತಾನದ ಪ್ರತಿನಿಧಿ ಜಾಫರುಲ್ಲಾಖಾನರು ಭಾರತವನ್ನು ದೋಷಿಯಾಗಿ ರಣಾಯಿಸುವ ದಾರ್ಷ್ಟ್ಯಕ್ಕೆ ಮನಗೊಟ್ಟಿರುವರು. ಕಾಶ್ಮೀರದ ರಕ್ಷಣೆಗೆ ೨೮೦೦೦ ಸೈನಿಕರ ಪಡೆಯಿರುವುದು ಅಗತ್ಯ ಹೌದಾದರೂ ಯುದ್ಧ ವಿರಾಮ ರೇಖೆಯ ಪಾಕಿಸ್ತಾನೀ ಭಾಗದಲ್ಲಿರುವ ಆಜಾದ ಸೈನ್ಯಪಡೆಯನ್ನು ವಿಸರ್ಜಿಸಿದರೆ, ಭಾರತ ತನ್ನ ಸೈನ್ಯವನ್ನು ೨೧೦೦೦ಕ್ಕೆ ಇಳಿಸಲು ಸಿದ್ಧವಿದೆ ಎಂದು ವಿಜಯಲಕ್ಷ್ಮಿಯವರು ಹೇಳಿದ್ದಕ್ಕೆ ಜಾಫರುಲ್ಲಾ ಖಾನರು ಸ್ವಂತ ಭಾಷ್ಯವನ್ನು ಬರೆದಿರುವರು. ಆಜಾದ ಕಾಶ್ಮೀರ ಸೈನ್ಯಕ್ಕೆ ಅಸ್ತಿತ್ವವೇ ಇರಬಾರದೆಂಬ ಭಾರತದ ಮೂಲಭೂತ ನಿಲುವಿಗೆ ವಿಸಂಗತವಾದ ಅನುಮೋದನೆಯನ್ನು ಪಾಕಿಸ್ತಾನದ ಪ್ರತಿನಿಧಿ ಮಾಡಿರುವರು: ಭಾರತ ೨೮೦೦೦ ಸೈನಿಕರ ಪಡೆಯನ್ನೇ ಇಟ್ಟುಕೊಳ್ಳಲಿ; ಮತ್ತು ಆಜಾದ ಕಾಶ್ಮೀರದ ಸೈನ್ಯಪಡೆಯೂ ಇರಲಿ. ಎಂದರೆ, ಭಾರತದ ಹೇಳಿಕೆಯಂತೆ ನಡೆದ ಹಾಗಾಯಿತು ಎಂದಿದ್ದಾರೆ ಅವರು!

ಕ್ಷಯರೋಗದ ವಿರೋಧವಾಗಿ ನೀವೇಕೆ ಹೋರಾಡಬೇಕು?

ಏಕೆಂದರೆ—

- ❖ ಅದು ಮಾರಣಾಂತಿಕ ರೋಗವಾಗಿದೆ
- ❖❖ ಅದು ರಾಷ್ಟ್ರದ ಶಕ್ತಿಯನ್ನೇ ಹೀರುತ್ತದೆ
- ❖ ❖ ಅದು ವಿನಾಶದೆಡೆಗೆ ಸಾಗಿಸುವ ವಿಘಾತುಕ ಸ್ವಭಾವದ್ದಾಗಿದೆ
- ❖❖❖❖ ಅದು ಮೇಲು ಕೀಳೆಂಬ ಭೇದವಿಲ್ಲದೆ ಎಲ್ಲರನ್ನೂ ಪೀಡಿಸುತ್ತದೆ
- ❖❖❖❖❖ ಅದು ಒಮ್ಮೆ ಬಲಿಬಿದ್ದವರಿಗೆ ವಿಮೋಚನೆಗೆ ಆಸ್ಪದ ಕೊಡುವುದಿಲ್ಲ

ನೆನಪಿರಲಿ! ಕ್ಷಯರೋಗ ವಿರೋಧ ಸಮರದಲ್ಲಿ ನಿಮ್ಮ ವಂತಿಗೆಯು ಒಂದು ಪ್ರತ್ಯಕ್ಷ ಸಹಾಯವಾಗುವುದು.

ಕ್ಷಯರೋಗ ಮುದ್ರೆಗಳನ್ನು ಅತ್ಯಧಿಕ ಸಂಖ್ಯೆಯಲ್ಲಿ ಕೊಂಡುಕೊಳ್ಳಿರಿ!

ಒಂದು ಮುದ್ರೆಯ ಬೆಲೆ ಕೇವಲ ಒಂದಾಣೆ!

ಮುದ್ರೆಗಳು ಇವರಲ್ಲಿ ದೊರೆಯುವುವು: ಶ್ರೀ. ಡಿ. ಮೋಹನ ರಾವ್, ಬಿ. ಎ., ಬಿ. ಎಲ್., ಕಾರ್ಯದರ್ಶಿ, ದ. ಕ. ಜಿಲ್ಲಾ ಕ್ಷಯರೋಗ ಮುದ್ರೆ ಮಾರಾಟದ ಸಮಿತಿ, ಜಿ. ಕೆ. ದೇವಸ್ಥಾನದ ರಸ್ತೆ, ಮಂಗಳೂರು-1. ಗಾ॥ ಕಾರ್ಯದರ್ಶಿ, ಮದ್ರಾಸು ಸಂಸ್ಥಾನದ ಕ್ಷಯನಿರೋಧ ಸಂಘ, ರಿಪನ್ ಬಿಲ್ಡಿಂಗ್, ಮದ್ರಾಸು-3. ಮತ್ತು ಸಂಸ್ಥಾನದ ಇತರ ಏಜನ್ಸಿಗಳಲ್ಲಿ.

ಕ್ಷಯರೋಗ ನಿರೋಧ ಮುದ್ರೆ ಮಾರಾಟದ ಮೂರನೆಯ ಆಂದೋಲನ

(ಭಾರತದ ಕ್ಷಯರೋಗ ನಿರೋಧ ಸಂಸ್ಥೆಯಿಂದ ಪ್ರಚುರಿಸಲ್ಪಟ್ಟುದು)

ಈ ಸ್ಥಳವನ್ನು ದಾನ ಮಾಡಿದವರು:

ಮೆಸರ್ಸ್ ರಾಣಿ (ಮದರಾಸು) ಲಿಮಿಟೆಡ್, ಮದರಾಸು.

ನಗರ ಕಾಂಗ್ರೆಸ್ ಕಮಿಟಿ ಸಭೆಯು—ತಾ. ೨೧ರಲ್ಲು ಸಂಜೆ ಶ್ರೀ ಬಾಳೆಬೈಲು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಆಂಧ್ರಪ್ರಾಂತ ರಚನೆಯ ಕಾಲದಲ್ಲಿ ಕರ್ನಾಟಕ ಪ್ರಾಂತರಚನೆಯ ಕೆಲಸವೂ ಆಗ ಬೇಕೆಂದು ನಿರ್ಣಯವಾಗಿ ಅದನ್ನು ಸಂಬಂಧ ಪಟ್ಟ ಮೇಲಾಧಿಕಾರಿಗಳಿಗೆ ಕಳುಹಿಸಬೇಕೆಂದಾಯಿತು. ಎಸೆಂಬ್ಲಿ, ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ, ಉಡುಪಿ ಮುನಿಸಿಪಲ್ ಕಾಂಗ್ರೆಸ್ ಪಾರ್ಟಿ ಸದಸ್ಯರೆಲ್ಲ ಪದಾಧಿಕಾರಿಗಳಾಗಿ ಕಾಂಗ್ರೆಸಿನ ಶಕ್ತಿಯನ್ನು ಪಾಲಿಸಬೇಕೆಂದು ಕಮಿಟಿಯ ಅಭಿಪ್ರಾಯವಾಯಿತು.

ಸಾರ್ವಜನಿಕ ಸಭೆ:—ಸಂಜೆ ರಥಬೀದಿಯಲ್ಲಿ ಸಾರ್ವಜನಿಕ ಸಭೆಯು ಶ್ರೀ ಎನ್. ಎಸ್. ಕಿಲ್ಲೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎ. ಬಿ. ಅಳ್ವೆಯವರು ಪ್ರಾರಂಭಿಕ ಮಾತುಗನ್ನಾಡಿ, ಸ್ಥಳೀಯ ವಿದ್ಯಮಾನಗಳನ್ನು ವಿವರಿಸಿದರು. ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಮುಂಬಾ ಚುನಾವಣೆಯ ಬಳಿಕ ಸರಕಾರವು ನಡೆಸಿದ ಕಾರ್ಯಕಲಾಪಗಳೇನೆಂಬುದನ್ನು ವಿವರಿಸಿದರಲ್ಲದೆ ಇತರ ಪಕ್ಷಗಳು ಕಾಂಗ್ರೆಸ್ ಮತ್ತು ತನಗೆ ವ್ಯಕ್ತಿಕವಾಗಿ ಟೀಕಿಸಿದುದಕ್ಕೆ ಪ್ರತ್ಯುತ್ತರಗಳನ್ನಿತ್ತರು. ಸಭಾಧ್ಯಕ್ಷರು ಕಾಂಗ್ರೆಸನ್ನು ಬಲಗೊಳಿಸಬೇಕೆಂದು ಕೇಳಿಕೊಂಡರು. ಡಾ॥ ಕೆ. ಎಲ್. ಐತಾಳರು ದನ್ಯವಾದಗಳನ್ನರ್ಪಿಸುತ್ತಾ ಉಡುಪಿ ನಗರ ಸಭೆಯು ಗೆಲ್ಲಿಗೆ ಎಡ್ಯುಕೇಶನ್ ಟ್ಯಾಕ್ಸ್ ಮಸೂಲು [illegible]. ಅದನ್ನು ಹಿಂದೆ ಪಡೆಯಲು ಬೇಕಾಗುವ ಸೌಕರ್ಯಗಳನ್ನು ಕಾಂಗ್ರೆಸ್ ಅಧೀನದಿಂದ ಪಡೆಯಬಹುದೆಂದು ಸೂಚಿಸಿದರು.

ಮಾಧ್ವ ತತ್ವಜ್ಞಾನ ಸಮ್ಮೇಳನಕ್ಕೆ ಸಹಾಯ—ಜನವರಿ ತಾ 4ರಲ್ಲಿ ಪ್ರಾರಂಭವಾಗಲಿರುವ ಮಾಧ್ವ ತತ್ವಜ್ಞಾನ ಸಮ್ಮೇಳನದ ಸಹಾಯಾರ್ಥವಾಗಿ ಶ್ರೀಗಳವರ ಕಲ್ಯಾಂಟೆ ವ್ಯಾಸಾಚಾರ್ಯರು ರೂ 305/- ಎಮ್. ನಾರಾಯಣಾಚಾರ್ಯ ರೂ 101/- ಮತ್ತು ಟಿ. ರಘುನಾಥ ಪೈ ರೂ. 100/- ಕೊಟ್ಟಿರುವರೆಂದು ಸ್ವಾಗತ ಸಮಿತಿ ಅಧ್ಯಕ್ಷರು ತಿಳಿಸುತ್ತಾರೆ.

ಮಂತ್ರಿಗಳ ಆಗಮನ ರದ್ದು—ತಾ. 18ರಿಂದ 20ರವರೆಗೆ ದಕ್ಷಿಣ ಕನ್ನಡ ಜಿಲ್ಲಾ ಪ್ರವಾಸವನ್ನು ಕೈಕೊಳ್ಳಲಿದ್ದ ಮದ್ರಾಸು ಸರಕಾರದ ನ್ಯಾಯ ಇಲಾಖೆ ಮಂತ್ರಿ ಸಿ. ಕೆ. ಕುಟ್ಟಿ ಕೃಷ್ಣನ್ ಅವರು ಆಂಧ್ರ ಗಲಭೆಗಳ ನಿಮಿತ್ತ ತಮ್ಮ ಪ್ರವಾಸ ಕಾರ್ಯಕ್ರಮವನ್ನು ರದ್ದುಗೊಳಿಸಿರುವರು.

ಜಿಲ್ಲಾ ಬೋರ್ಡ್ ಸಭೆಯು—ತಾ. 3-1-53ನೇ ಶನಿವಾರ ಬೆಳಗ್ಗೆ 11 ಗಂಟೆಗೆ ಜಿ. ಬೋ. ಆಫೀಸಿನಲ್ಲಿ ಜರಗಲಿದೆ.

ಕಾಲ ಹರಣ

(೧ನೇ ಪುಟದಿಂದ)

ಕ್ಷಣ ತಡೆಯುಲಿ ಎಂದು ಕಾಯುತ್ತಿರುವುದರಲ್ಲಿ ಪುರುಷಾರ್ಥವಿಲ್ಲ. ಸರಕಾರದ ಸಂಕಟಗಳು ಎಂದಿಗೂ ಪೂರ್ಣ ನಿವಾರಣೆ ಹೊಂದತಕ್ಕವಲ್ಲ. ಮುಳ್ಳಿನ ಕಿರೀಟವೆಂದು ಸರಕಾರದ ಹೊಣೆಗಾರಿಕೆಗೆ ಉಪಮೆ ಕೊಡುವುದೇಕೆ? ರಾಜನಿಗೆ ವಿರಾಮವಿಲ್ಲ; ನಿದ್ರೆಯಿಲ್ಲ. ಆ ಜನರಿಂದ ಆಯಾಸ ಪರಿಹಾರಕ್ಕೆಂದು ಮೂಲೆ ಸೇರಲಾರದು.

ಆದುದರಿಂದ ನಿಕಂಬ ಘೋಷಣೆಯನ್ನು ಭಾಷಾನುಗುಣ ಪ್ರಾಂತರಚನೆಯಂಥ ಕಾರ್ಯಕ್ಕಾಗಿ ಅನುಸರಿಸುವುದೆಂದರೆ ಸರಕಾರಕ್ಕೆ ತನ್ನ ಅಂತಃ ಸಾಮರ್ಥ್ಯದ ಮೇಲೆ ನಂಬುಗೆ ಇಲ್ಲವೆನ್ನಬೇಕು. ಹೆದರಿ ಹೆದರಿ ಸಾಯುವ ಮನೋವೃತ್ತಿ ಭಾರತ ಸರಕಾರದ್ದೆಂಬುದು ಅನೇಕ ಸಂಗತಿಗಳಲ್ಲಿ ವ್ಯಕ್ತವಾಗಿದೆ. ಭಾಷಾನುಗುಣ ಪ್ರಾಂತನಿರ್ಮಾಣದ ಸಂಗತಿಯಲ್ಲಿ ಕೂಡ ಈ ಬೆದರುಭಾವ ಪ್ರಕಟಗೊಂಡಿದೆ. ಶ್ರೀ ರಾಮುಲುರ ಮರಣದ ಬಳಿಕ ಸರಕಾರದ ನಿಲುಮೆಯು ಆಂಧ್ರಪ್ರಾಂತ ರಚನೆಯ ಬೇಡಿಕೆಯನ್ನು ಒಡನೆಯೇ ಕೈಗೂಡಿಸುವಷ್ಟು ಪರಿವರ್ತನೆಯಾಯಿತೆಂಬಂತೆ ನೆಹರೂ ವರ್ತಿಸಿರುವರು. ಅಳದಹೊರತು ತಾಯಿ ಮೊಲೆಯುಣ್ಣಿಸುವುದಿಲ್ಲವೆಂಬ ಲೋಕೋಕ್ತಿಯನ್ನು ಬಳಸಿದ ಪ್ರಾಂತಾಭಿಲಾಷಿಗಳಿಗೆ ನೆನಪು ಹುಟ್ಟಿಸುವಂತಿದೆಯಲ್ಲವೆ, ಸರಕಾರದ ವರ್ತನೆ? ಇನ್ನು ಕಾಲಹರಣ ನಮಗೆ ಬೇಕೆ? ಬೇಕಾದರೆ ಏಕೆ? ಎಂಬ ಪ್ರಶ್ನೆಗೆ ಸಮಾಧಾನ ಇದ್ದರೆ ದೊರೆಯಲಿ!

ಅಂತಸ್ಸತ್||

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O P. No 62/1 52

ಅರ್ಜಿದಾರರು— 1 ಲಿಂಗಮ್ಮ ಶೆಟ್ತಿ, ಸೂರಮ್ಮ ಶೆಟ್ತಿ ಮಗಳು ಮೃತ ಹೊನ್ನಯ್ಯ ಶೆಟ್ರ ವಿಧವೆ,

2. ಮೈನರ್ ರಾಜ, 3, ಮೈನರ್ ಶಾಂತ 4, ಮೈನರ್ ಭುಜಂಗ 5. ಮೈನರ್ ನರಸಿಂಹ 6, ಮೈನರ್ ಅಂತಯ್ಯ 7, ಮೈನರ್ ಸದಾನಂದ — 1ನೇ ಅರ್ಜಿದಾರಳ ಮಕ್ಕಳು ಮೈನರರ ರಕ್ಷಕಳೂ ತಾಯಿಯೂ 1ನೇ ಅರ್ಜಿದಾರಳು ಲಿಂಗಮ್ಮ ಶೆಟ್ತಿ

ಕುಂದಾಪುರ ತಾಲೂಕು ನಂಬ್ರ 74ನೇ ಉಳ್ಳೂರು ಗ್ರಾಮದ ಬಂಟ ಕೋಡಿನಲ್ಲಿರುವ ರಾಯರಬೆಟ್ಟು Post Shankernaravana ಎದ್ರಿಯಲ್ಲ

ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ 1ನೇ ಅರ್ಜಿದಾರಳ ಗಂಡನ 2ರಿಂದ 7ನೇ ವರೆಗಿನ ಅರ್ಜಿದಾರರ ತಂದೆ ಮೃತ ಹೊನ್ನಯ್ಯ ಶೆಟ್ಟಿಯು ಬ್ಯಾಂಕಿನಲ್ಲಿ ನಗ ಅಡವಿಟ್ಟು ಪಡೆದ ಸಾಲವನ್ನು ಸಂದಾಯ ಮಾಡಿ ನಗನಗಳನ್ನು ಪಡಕೊಳ್ಳುವರೆ ಆ ಬ್ಯಾಂಕಿನವರು [illegible] ಸದ್ರಿ ಸಾಲವನ್ನು ಅರ್ಜಿದಾರರ ಕಡೆಯಿಂದ 1ನೇ ಅರ್ಜಿದಾರಳು ಸಂದಾಯ ಮಾಡಿ ಸದ್ರಿ ನಗಗಳನ್ನು ಪಡಕೊಳ್ಳುವರೆ ಅರ್ಜಿದಾರರ ಪರವಾಗಿ 1ನೇ ಅರ್ಜಿದಾರಳ ಹೆಸರಿಗೆ ಸಕ್ಸೆಸನ್ ಸರ್ಟಿಫಿಕೇಟು ಕೊಡಬೇಕಾಗಿಯೂ ಅರ್ಜಿದಾರರು ದಾಖಲು ಮಾಡಿದ ಮೇಲಿನ ಅರ್ಜಿಯು ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 12-1-1953ನೇ ಇಸ್ವಿಗೆ ವಿಚಾರಣೆಗಿರುತ್ತದೆ. ಆ ಕುರಿತು ಯಾರಾದರೂ ಆಕ್ಷೇಪವಿದ್ದರೆ ಸದರಿ ದಿವಸ ಪೂರ್ವಾಹ್ನ ಘಂಟೆ 12ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜಾಹೀರು ಮಾಡತಕ್ಕದ್ದೆಂತ ಈ ಮೂಲಕ ಸರ್ವಜನರಿಗೆ ತಿಳಿಸಲಾಗುತ್ತದೆ.

M. M. Hebbar
Advocate for pettioners
ಮೊಕ್ಕಾಂ ಕುಂದಾಪುರ ತಾ. 11-12-1952

ಭಾರತೀಯರ ಆಕಾಶಯಾನ

(೪ನೇ ಪುಟದಿಂದ)

ವನು. ಈ ಶಕ್ತಿಯನ್ನು ಬೀಜವೆಂಬ ಸಂಜ್ಞೆಯಿಂದ ಉಲ್ಲೇಖಿಸಿದ್ದು— ಭೂಮಿ, ನೀರು, ಬೆಂಕಿ ಹಾಗೂ ವಾಯುವೆಂಬ ನಾಲ್ಕು ಬೀಜಗಳ ವಿವರಣವಿದೆ. ಮುಂದೆ ಆಕಾಶ (ಎಂದರೆ ಈಗಿನ ಈಥರ್) ಶಕ್ತಿಯನ್ನು ಈ ಬೀಜಗಳ ಮಾಧ್ಯಮವೆಂದು ಹೇಳಿರುವನು. ಇದಲ್ಲದೆ ಪಾದರಸವು ಒಂದು ಅತ್ಯಾಶ್ಚರ್ಯಕರವಾದ ಬೀಜ ಅಥವಾ ಶಕ್ತಿ ಎಂಬುದಾಗಿ ಭೋಜನ ಅಭಿಪ್ರಾಯವಿದೆ. ವಾಯು ವೇಗವನ್ನು ಕೊಡುವುದಕ್ಕೆ ಪಾದರಸದಿಂದ ಸಾಧ್ಯವೆಂದವನ ಹೇಳಿಕೆ. ಸ್ವಯಂವಾಹಕ ಹಾಗೂ ಚಾಲಕ ಚಾಲಿತವೆಂಬೆರಡು ಬಗೆಯ ಯಂತ್ರಭೇದವಿದೆ. ವಿಮಾನ ನಿರ್ಮಾಣಕ್ಕೆ ಹಗುರಾದ ಕಟ್ಟಿಗೆಯನ್ನು ಉಪಯೋಗಿಸಿದರೆ ಒಳ್ಳಿತೆಂದೂ ವಿಶಾಲವಾದ ಹಕ್ಕಿಯ ಆಕಾರ ವಿಮಾನಕ್ಕಿರಬೇಕೆಂದೂ ಭೋಜನು ವಿವರಿಸುತ್ತಾನೆ.

ಡಾ| ರಾಧಾಕುಮುದ ಮುಖರ್ಜಿಯವರೊಂದು ಕಡೆ ಹೀಗೆ ಬರೆದಿರುವರು— '೧೯೧೭-೧೮ರಲ್ಲಿ ನಾನು ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಿದ್ದಾಗ ಬೆಂಗಳೂರಿನ ಸುಬ್ಬರಾವ್ ಶಾಸ್ತ್ರೀ ಎಂಬವರೊಡನೆ ಭೇಟಿಯಾಯಿತು. ಅವರೊಡನೆ ವೈಮಾನಿಕ ಶಾಸ್ತ್ರಕ್ಕೆ ಸಂಬಧಿಸಿದ ಗ್ರಂಥಗಳಿದ್ದುವು. ಅವುಗಳ ಪ್ರಕಾಶನ ಕಾರ್ಯ ನಡೆಯಬೇಕೆಂದಿರುವಾಗಲೇ ನಾನು ಮೈಸೂರು ಬಿಟ್ಟೆ. ಮುಂದೆ ಅವರ ಮೃತ್ಯುವಿನ ದುಃಖ ಸಮಾಚಾರ ದೊರೆಯಿತು."

ಪರಿಪೂರ್ಣ ಮಾಹಿತಿ

ಭಾರತೀಯ ಶಿಲ್ಪ ಶಾಸ್ತ್ರದ ಕುರಿತು ನಾಲ್ಕು ಮಂದಿ ಆಚಾರ್ಯರ ಗ್ರಂಥಗಳು ಉಪಲಬ್ಧವಿವೆ: ಭೃಗು, ಕಶ್ಯಪ, ಮಯ ಹಾಗೂ ವಿಶ್ವಕರ್ಮರೆಂದವರ ಹೆಸರು. ಭೃಗು, ಮಯ ಮುಂತಾದವರ ಸಂಹಿತೆಯಲ್ಲಿ ವಾಹನಗಳ ವರ್ಣನೆ ಕೇವಲ ಸ್ಮರಣ ರೂಪದಲ್ಲಿದೆ. ಅಗಸ್ತ್ಯನ ಅಗ್ನಿಯಾನವೆಂಬ ಗ್ರಂಥದಲ್ಲಿ ವಿಮಾನ ಸಂಬಂಧಿಯಾದ ಪ್ರಾಥಮಿಕ ಸಂಶೋಧನೆ ಮಾತ್ರ ಇದೆ. ಆದರೆ ಭಾರದ್ವಾಜರ ಗ್ರಂಥಗಳು ಪೂರ್ಣ ಸ್ಪಷ್ಟವಾದ ವಿಮಾನವರ್ಣನೆಯಿಂದ ಕೂಡಿವೆ. ಇವರ ಸೂತ್ರಗಳ ಮೇಲೆ ಅನೇಕ ಟೀಕಾ ಗ್ರಂಥಗಳೂ ಬರೆಯಲ್ಪಟ್ಟಿವೆ. ಸ್ವರ್ಗೀಯ ಬಪ್ಪುಯವರು ಈ ಕುರಿತು ಸಾಕಷ್ಟು ಪರಿಶ್ರಮವಹಿಸಿದ್ದರು. ಹಾಗೆಂದು ಅವರಿಗೆ ದೊರೆತ ಗ್ರಂಥಗಳು ಜೀರ್ಣಗೊಂಡಿದ್ದುವು. ಆದರೂ ಈ ಗ್ರಂಥಗಳ ಶೋಧದ ಪರಿಣಾಮವಾಗಿ ವಿಮಾನ ವಿದ್ಯೆಯೆಂಬ ಪ್ರಕರಣವನ್ನು ಅವರು ಬರೆದರು. ಅಮೇರಿಕಾದ ರಸಾಯನಿಕ ಸಂಘದ ಮುಂದೆ ಡಾ। ವಾಮನರಾವ ಕಾಟೇಕರ ಎಂಬವರು ಈ ಸಂಬಂಧದಲ್ಲಿ ಬಂದು ಲೇಖ ಓದಿದರು. ಇನ್ನೂ ಹಲವರ ಪ್ರಯತ್ನಗಳು ನಡೆದರೂ ಅವುಗಳಿಂದ ವಿಶೇಷ ಲಾಭವುಂಟಾಗಲಿಲ್ಲ. ಅವು ಕೇವಲ ವಿವರಣಾತ್ಮಕ ಗ್ರಂಥಗಳಾಗಿದ್ದುವೇ ಹೊರತು, ಪ್ರಯೋಗಾತ್ಮಕವಾದ ಸಂಗತಿಯನ್ನು ಒಳಗೊಂಡಿರಲಿಲ್ಲ.

ಅಗಸ್ತ್ಯನ ಅಗ್ನಿಯಾನದಲ್ಲಿ ಉದಾನ ವಾಯುವೆಂದು ಕರೆಯುವ (ಹೈಡ್ರೊಗ್ಯಾಸ್) ಶಕ್ತಿಯನ್ನುಪಯೋಗಿಸಿ ವಿಮಾನವನ್ನು ಓಡಿಸಬಹುದೆಂದಿದೆ. ಮನ ಒಂದಲ್ಲಿಗೆ ಈ ವಾಯುವಿನ ಗತಿಯನ್ನು ತಿರುಗಿಸಲಿಕ್ಕೆ ವಿದ್ಯುತ್ ಪ್ರಯೋಗವನ್ನು ಮಾಡಬಹುದೆಂದೂ ಅಗಸ್ತ್ಯನ ಹೇಳಿಕೆ ಇದೆ. ಮಿತ್ರಾವರುಣೀ ತೇಜವೆಂಬ ಹೆಸರಿನಿಂದ ವಿದ್ಯುಚ್ಛಕ್ತಿಯನ್ನು ಆಗ ಕರೆಯುತಿದ್ದರು. ಭಾರದ್ವಾಜರ ಸಮಯದಲ್ಲಿ ವಿದ್ಯುಚ್ಛಕ್ತಿಯ ಉಪಯೋಗದ ಬಗ್ಗೆ ಹೆಚ್ಚಿನ ತಿಳುವಳಿಕೆಯುಂಟಾಗಿರಬೇಕು. ಎಂತಲೇ ಯಂತ್ರಗಳ ನಿರ್ಮಾಣ ಕಲೆಯಲ್ಲಿಯೂ ವಿಕಾಸ ಸಾಧ್ಯವೆನಿಸಿತು.

For Protection and Provision Consult
The New Guardian of India Life Insurance Co., Ltd.
Es'd] Head office: MADRAS [1934
NEW BUSINESS Exceeds ... 66½ Lakhs.
PREMIUM INCOME " ... 1¾ "
LIFE FUND " ... 54¾ "
ASSETS " .. 60¾ "
BUSINESS IN FORCE Nearly 3 Crores.
A Policy in this Progressive Life Office is good investment; its Agency is valuable business connection.
Applications for Representation are invited from energetic influential persons, with good connection. *Please apply to:*
G. Wallia, *Branch Manager,*
Diamond Building, Hampankatta, MANGALORE, S. K.

ಶ್ರೀ ಕೆ. ಕೆ. ಶೆಟ್ಟಿ ನಿರ್ಭೀತ ಲೇಖನಿಯಿಂದ ಹೊರಹೊಮ್ಮಿದ
ನವೀನ ಸಾಮಾಜಿಕ ಕಾದಂಬರಿ.
ಸನ್ಯಾಸಿಯ ಸೋಗಿನಲ್ಲಿ!
ವೇಶ್ಯಾಪುತ್ರಿಯಾದರೂ ಶೀಲವಂತ ಜೀವನ ನಡೆಸುವ ಮನಸ್ಸುಳ್ಳವಳಾದರೆ ಸಮಾಜವು ಅದಕ್ಕೆ ಹೇಗೆ ಅಡ್ಡಿ ಮಾಡಿ ಅವಳ ಜೀವನವನ್ನು ಕೆಡಿಸಲು ಕಾರಣವಾಗುವುದೆಂಬುದನ್ನು ಹೃದ್ಯಾವಹವಾಗಿ ಚಿತ್ರಿಸುವ ಅತ್ಯಾಧುನಿಕ ಕಾದಂಬರಿ.
ಸನ್ಯಾಸದ ಮರೆಯಲ್ಲಿ ನಡೆಯುವ ವಿನ್ಯಾಸದ ಕೃತ್ಯತೆ.
ಬೆಲೆ 0—10—0 ಇತರ ಪುಸ್ತಕಗಳ ಕೆಟಲಾಗಿಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸ್ವೀಕಾರ—ವಿಮರ್ಶೆ.

೧ ಷೇಕ್ಸ್‌ಪಿಯರ್- ೨ ಜ
ಹರಲಾಲ ನೆಹರು.

ಲೇಖಕರ : ಶ್ರೀ ದಾಂತಿ.

ಪ್ರಕಾಶಕರು: ಸುಬೋಧಿನೀ ಪು
ಗಳು, ಆಲೆವೂರು, ಉಡುಪಿ.

ಬೆಲೆ: ಐದೈದ ಆಣೆ.

ಶಾಲೆಯ ಮಕ್ಕಳ ಪಠಾನ ಓದಿಗೋ ಬರೆಯಲಾದ ಈ ಎರಡು ಪುಸ್ತಕಗಳ ಬ್ಬರು ಮಹಾನುಭಾವರ ಚುಟುಕು ಜೀ ಚರಿತ್ರೆಗಳಿವೆ. ಷೇಕ್ಸ್‌ಪಿಯರನ ನೋ ಜೀವನ ಚಿತ್ರವು ಅತಿ ಚೊಕ್ಕದಾಗಿ ಮೂ ಬಳ್ಳಿ ಕೊಟ್ಟಿರುವ ನಾಲ್ಕು ಮಹಾ ಕಗಳ ಸಾರ ಸಂಗ್ರಹವೇ ಕಾವ್ಯ ಬೇಕು. 'ರೋಮಿಯೋ-ಜ್ಯೂ' ಎಂದು ಮುಖ್ಯ ಕೃತಿ ತಪ್ಪಾಗಿಯೂ, ಬೆಸ್ಸಾನಿಂ ಬೆಸೆನ್ನಿಯೋ ಎಂದು ಎರಡು ಪ ಕ್ಕೆ ಎರಡು ಹೆಸರಾಗಿಯೂ, ಬಿದ್ದಿರು ನಿವಾರ್ಯ ದೋಷಗಳಲ್ಲವೆ ಎಂದೂ ನ ತೋರುತ್ತದೆ. ನೆಹರೂ ಅವರ ಸಂಕ್ಷಿಪ್ತ ವನ ಚರಿತ್ರೆಯು ರೋಚಕವಾಗಿ ಬ ಲ್ಪಟ್ಟಿದೆ.

— ಕು

ಆಕೆ ಯಾರು? (ಕಥಾ ಸಂಕಲನ

ಬರೆದವರು: ಶ್ರೀ ಎಂ. ಎನ್.
ರ್ಶಿ ಪ್ರಕಾಶಕರು: ಸಂಜೀವಿನಿ ಪ್ರ
ಕಾಶನ, ಹುಬ್ಬಳ್ಳಿ. ಬೆಲೆ: ರೂ. ೧-೦-

ಇದು ಹನ್ನೊಂದು ಸಣ್ಣ ಕತೆಗಳ ಸಂ ಗಿದೆ. ಎರಡು-ಮೂರು ಕತೆಗಳ ಸಾ ಯನ್ನು ಲೇಖಕರು ಬೇರೆಡೆಯಿಂದ ಕೊಂಡಿದ್ದಾರೆಂದು ತಿಳಿಯುತ್ತದೆ. ಅವರ ಸ್ವತಂತ್ರ ಕತೆಗಳು ನಿತ್ಯಜೀವನ ಟನೆಗಳನ್ನೇ ಚಿತ್ರಿಸಲು ಪ್ರಯತ್ನಿಸಿವೆ. ಣ್ಣು ಹೃದಯ" "ತಪ್ಪು ದಾ" "ಯಾರು?" ಇವು ಹೆಣ್ಣು ಬಾಳ್ವೆಯ ದು ವನ್ನು ಕಲಾತ್ಮಕವಾದ ರೀತಿಯಲ್ಲಿ ತೋ ಕೊಡುವ ಕತೆಗಳು. ಬರವಣಿಗೆಯ ದೃ ವು ಆಕರ್ಷಕವಾದ "ಸನ್ಯಾಸಿನಿ" ಬ ಕತೆಯು "ತೊಂಡ ನಿಪ್ಪೊ [illegible] ದ" ಎಂದು ಪ್ರಸಿದ್ಧರಾದ ವಿಶ್ವನಾಂ ಣರ ಆಂಧ್ರ ಜೀವನದ ಮೇಲೆ ಹೆಣೆ ಟ್ಟಿದೆ. ಆದರೆ ಕತೆಯು ಕೊನೆಗೆ ಆ ಆಕರ್ಷಣೆಯನ್ನು ಕಳೆದುಕೊಳ್ಳುವುದು ದು ತೋರುತ್ತದೆ. "ಸಾಕಯ್ಯನ ಗೋರಿ" ಐತಿಹಾಸಿಕ ಸತ್ಯವಲ್ಲ ಒಂದು ಜೀವನದ ಕತೆ ಸಾತ್ವಿಕ ಜನರಿಗೆ ಸಿದ್ಧ ಸರು ತೋರುವ ದಯೆ-ಕನಿಕರಗಳ ನ್ನಿಲ್ಲಿ ನೋಡಬಹುದು. "ವಜ್ರದೋ "ನೊಂದ ಜೀವ", ದಂತದ ಬಾಚಣಿಗೆ ವು ಳಿಗೆ ಬಳಸಿದ ವಸ್ತು ತುಂಬ ಹಳೆಯ "ನೊಂದ ಜೀವ ತಣ್ಣಗಾಯಿತು" ಹಾ "ಆಕೆ ಯಾರು?" ಎಂಬ ಕತೆ ದಾಂಪತ್ಯ ಜೀವನದ ವಿರಸ ಹಾಗೂ ಚಿತ್ರಗಳನ್ನು ಕೊಡುತ್ತವೆ. ಒಟ್ಟಿನ ಲೇಖಕರು ಕತೆಗಳನ್ನು ಸರಳ ರೀತಿಯ ಬರೆಯಬಲ್ಲರು. ಮತ್ತು ಶೈಲಿಯಾ ಮೆಚ್ಚುವಂತಿದೆ ಎನ್ನಬಹುದು

ತೃಪ್ತಿಕರವಾದ ವಸತಿ— ಹಿತಕರ
ಊಟ— ರುಚಿಕರವಾದ ಉಪಾಹಾ
ಇವುಗಳಿಗೆ
ಆದರ್ಶ ನಿಲಯ-ಎಂದರೆ
ವುಡ್ ಲೇಂಡ್
ಉಡುಪಿ.
ಯಾತ್ರಿಕರಿಗೂ ಪ್ರವಾಸಿಕರಿಗು
ಸರ್ವ ಅನುಕೂಲವಾಗುವಂತೆ
ನಗರದ ಕೇಂದ್ರಭಾಗದಲ್ಲಿದ

ಸಾಹಿತ್ಯದ ಶಕ್ತಿ

ಮನೋ ವೈಜ್ಞಾನಿಕ ಸಂಶೋಧಕ ಬ್ರಹ್ಮರ್ಷಿ.

ಒಂದು ವಿಚಾರ ಶಕ್ತಿಯು ಅಣ್ವಿನ ಕಕ್ಷೆಯನ್ನು ಸೇರಿ ವಿಶ್ವದ ಸೂಕ್ಷ್ಮತ್ವವನ್ನು ಪ್ರವೇಶಿಸಿ ಜೀವನದ ಸಿದ್ಧಾಂತಗಳನ್ನು ಪರಿಶೋಧಿಸಲು ತೊಡಗುತ್ತದೆ. ಅಂಥಾ ಚಿಂತನಾ ಶಕ್ತಿಯುಳ್ಳದಿದ್ದರೆ, ಮಾನವ ಸಮಾಜವು ಕುಂಠಿತವಾಗುವುದು, ಅದರ ಪ್ರಗತಿಗೆ ತಡೆಯು ಬರುವುದು, ಭೌತಿಕ, ವೈಜ್ಞಾನಿಕ ಸಂಶೋಧನೆಗಳಿಗೆ ಏಕಾಂತ ಚಿಂತನೆಯು ಅಗತ್ಯವಿದೆ; ಅದೇ ರೀತಿಯಲ್ಲಿ ಮನೋ ವೈಜ್ಞಾನಿಕ ಸಂಶೋಧನೆಗಳಿಗೂ ಏಕಾಂತ ಸೇವನೆಯು ಬೇಕಾಗುತ್ತದೆ. ಅಂಥಾ ಏಕಾಂತದಲ್ಲಿರುವ ಬ್ರಹ್ಮರ್ಷಿಗಳು ಸಾಂಸಾರಿಕ ಜೀವನದ ತತ್ವಜ್ಞಾನದ ಚಿಂತನಾತ್ಮಕ ಸಾರವನ್ನು ಕೊಡುತ್ತಾರೆ; ಅದರಿಂದ ಜೀವನದ ಸಮಸ್ಯೆಗಳ ನಿವಾರಣೆಯಾಗುತ್ತದೆ.

ಸಮಾಜ ಸೇವಕ: ರಾಜರ್ಷಿ

ಇನ್ನೊಂದು ಶಕ್ತಿಯು ಸೇವೆಯದ್ದು. ಬ್ರಹ್ಮರ್ಷಿಗಳ ಮೂಲಕ ಪ್ರಾಪ್ತವಾದ ಚಿಂತನ ಶಕ್ತಿಯ ಆಧಾರದಿಂದ ಸಮಾಜ ಸೇವಕರು ಲೋಕಸೇವೆಯಲ್ಲಿ ನಿರತರಾಗುತ್ತಾರೆ; ಅವರನ್ನು ರಾಜರ್ಷಿಗಳೆನುತ್ತಾರೆ. ಅಂಥಾ ಸೇವೆಯನ್ನು ಮಾಡುವವರು ಇಲ್ಲದ ಸಮಾಜದ ಒಂದು ಅಂಗವೇ ಕ್ಷೀಣವಾಗುವುದು ಮಾತ್ರವಲ್ಲದೆ, ಆ ಸಮಾಜವೆಲ್ಲ ಶೀಘ್ರವಾಗಿ ನಿರ್ಬಲವಾಗುವುದು.

ಈ ರೀತಿಯಲ್ಲಿ ಸಮಾಜ ಸೇವೆಯನ್ನು ಮಾಡುವ ವಿಚಾರವಂತರು ಸಮಾಜದಲ್ಲಿ ತಮ್ಮ ವಾಣಿಯನ್ನು ಚೆನ್ನಾಗಿ ಕೇಳಿಸುತ್ತಾರೆ. ಚಳವಳದ ಅಗತ್ಯವಿದ್ದಲ್ಲಿ ಚಳವಳವನ್ನು ಮಾಡುತ್ತಾರೆ; ಸಂಘಟನೆಯು ಬೇಕಾದಲ್ಲಿ ಸಂಘಟನೆಯನ್ನು ಮಾಡುತ್ತಾರೆ, ಅಷ್ಟೇ ಅಲ್ಲ ಜನರ ಇಚ್ಛೆಗನುಸಾರವಾಗಿ ಎಂದಾವದೂ ಅಧಿಕಾರವನ್ನು ಗ್ರಹಿಸಬೇಕೆಂದಾದರೆ, ಅದಕ್ಕೂ ಸಿದ್ಧರಾಗುತ್ತಾರೆ. ಸತ್ತಾರೂಢರಾಗುವ ಅಂಥವರು ಕೇವಲ ಸೇವಾ ಪರರಾಗಿ ಇರುತ್ತಾರೆ. ಅವರು ತಮ್ಮ ಸ್ವಾರ್ಥವನ್ನೇನೂ ಬಯಸುವುದಿಲ್ಲ. ಒಂದು ಕಡೆಯಲ್ಲಿ ಬ್ರಹ್ಮರ್ಷಿಗಳಿಂದ ವಿಚಾರಗಳನ್ನು ಪಡೆದು ಅವನ್ನು ಇನ್ನೊಂದು ಕಡೆಯಲ್ಲಿ ಸಮಾಜಸೇವೆ ಕ್ಷೇತ್ರದಲ್ಲಿ ಪ್ರಯೋಗಗೊಳಿಸುತ್ತಾರೆ. ಚೀನ ಪರಿಭಾಷೆಯಲ್ಲಿ ಅವರನ್ನು ರಾಜ ಳೆನ್ನುತ್ತಿದ್ದರು. ಜ್ಞಾನಪೂರ್ವಕ ಲೋಕಕಲ್ಯಾಣವನ್ನು ಮಾಡುತ್ತ ಸಮಾಜ ಸೇವೆ ಯಲ್ಲಿ ತೊಡಗಿರುವ ಆ ರಾಜರ್ಷಿಗಳೂ ಜದ ಒಂದು ಮಹಾ ಶಕ್ತಿಯಾಗಿರು

ನಿರ್ವಿಕಾರ, ಕುಶಲ ಹಿತೈಕರತ ದೇವರ್ಷಿಗಳು

ಮೂರನೇ ಶಕ್ತಿಯೆಂದರೆ ಸಾಹಿತ್ಯದ್ದು. ಗಳಿಗೆ ಅನುಭವದಿಂದ ತಿಳಿದುಬಂದು ದ ಕಳದಲ್ಲಿ ಸಿದ್ಧಗೊಳ್ಳುವ ವಿಚಾರಗಳ ಲೋಕವಾಣಿಯಲ್ಲಿ ಜನರಿಗೆ ಗ್ರಹಿಸಲು ಸುಲಭವಾಗುವ ಯುಕ್ತವಾದ ಶಬ್ದಗಳ ಅವರು ಪ್ರಕಟಿಸಬಲ್ಲರು. ಅವರಲ್ಲಿ ವಿಚಾರಗಳನ್ನು ಸರಿಯಾಗಿ ಅರಿಯಬೇಕು; ಆ ಆ ವಿಚಾರಗಳಿಗೆ ವಾಣಿಯು ಕೊಡುವ ಫಲಸಬೇಕು ಇದ್ದಿದ್ದರೆ, ಉಚಿತ ಶಬ್ದಗಳಿಲ್ಲದಿದ್ದಲ್ಲಿ ಪ್ರಕಟವು ಕಂಡುಬರುವಲ್ಲಿ ಅಸ್ಪಷ್ಟತೆಯು ಉತ್ಪನ್ನವಾಗಬಹುದು. ವಿಚಾರಗಳಂತೂ ಆಂತರ್ಯದಲ್ಲಿ ಉತ್ಪನ್ನವಾಗುತ್ತವೆ. ಅವನ್ನು ಪ್ರಕಟಗೊಳಿಸುವುದಕ್ಕಾಗಿ ಯೋಗ್ಯ ಶಬ್ದಗಳ ಸಹಾಯವನ್ನು ಪಡೆಯಬೇಕಾಗುತ್ತದೆ. ಅಗ್ಗ ಸ್ವಲ್ಪ ನ್ಯೂನತೆಯೂ ಇರುವ ಸಂಭವವಿದೆ ಬೇರೆ ಶಬ್ದಗಳನ್ನು ಉಪಯೋಗಿಸಿದರೆ, ಅತಿರಿಕ್ತ ಭಾವನೆಗಳೂ ಪ್ರಕಟವಾಗಬಹುದು ಎಂದನ್ನು ಪ್ರಯೋಗಿಸಿದರೆ, ವಿಪರೀತ ಭಾವನೆಯೂ ಕಂಡುಬರಬಹುದು. ಎಂದಮೇಲೆ, ಪ್ರತಿಯೊಂದು ಶಬ್ದವನ್ನೂ ವಿವೇಕಪೂರ್ವಕವಾಗಿ ಉಪಯೋಗಿಸಬೇಕು; ಅನ್ಯಥಾ ನ್ಯೂನಭಾವನೆ, ಅತಿರಿಕ್ತ ಭಾವನೆ, ವಿಪರೀತ ಭಾವನೆಗಳ ಭಾಗವಾಗಬಹುದು. ಈ ತ್ರಿವಿಧ ದೋಷಗಳಿಂದ ದೂರವಾಗಿ ವಿಚಾರಗಳನ್ನು ಇದ್ದಂತೆ ಸರಿಯಾಗಿ ತಿಳಿಸಬೇಕಾಗುತ್ತದೆ. ಇದೇ ಮೂರನೇ ಶಕ್ತಿಯು. ಅದು ಸದ್ವಿಚಾರಗಳನ್ನು ಜನರ ಹೃದಯವನ್ನು ಸ್ಪರ್ಶಿಸುವಷ್ಟು ಕುಶಲತೆಯಿಂದ ವ್ಯಕ್ತವಾಗಿ ಬೇಕು. ಅಂಥಾ ದಿವ್ಯ ಶಕ್ತಿಯುಕ್ತರೇ ದೇವರ್ಷಿಗಳೆನಿಸಲ್ಪಡುತ್ತಾರೆ.

ಬ್ರಹ್ಮರ್ಷಿಗಳ ಉದಾಹರಣೆಗಾಗಿ ನಮಗೆ ವಶಿಷ್ಠ, ಯಾಜ್ಞವಲ್ಕ್ಯರ ಹೆಸರುಗಳು ಕಂಡುಬರುತ್ತವೆ. ದೇವರ್ಷಿಗಳಲ್ಲಿ ನಾರದರು ಪ್ರಸಿದ್ಧರಾಗಿದ್ದಾರೆ. ನಿರಂತರ ಜನಸೇವೆಯಲ್ಲಿ ಮಗ್ನರಾಗಿದ್ದ ಜನಕ ಮಹಾರಾಜರು ರಾಜರ್ಷಿಗಳಲ್ಲಿ ಸುಪ್ರಸಿದ್ಧರಾಗಿದ್ದಾರೆ. ಅವರೆಲ್ಲ ರಾಜರೇ ಆಗಿರಬೇಕೆಂಬ ಅಗತ್ಯವಿಲ್ಲ. ಅವರು ಲೋಕಸೇವೆಯಲ್ಲಿ! ತಲ್ಲೀನರಾಗಿದ್ದರೆ - ಸಾಕು

ಸಾಹಿತ್ಯಿಕರ ಸಾಧನೆಯ ಮಾರ್ಗ:

ಈ ರೀತಿಯಲ್ಲಿ ಸಾಹಿತ್ಯಕಾರರು ಲೋಕಹೃದಯದಲ್ಲಿ ಅನುಕೂಲ ಸಂಪೂರ್ಣ ಶಬ್ದಗಳನ್ನು ಪ್ರಕಟಿಸುವ ಕುಶಲತೆಯನ್ನು ಸಾಧಿಸತಕ್ಕದ್ದು. ಅಂದರೆ, ಸತ್ಯ, ಮಧುರ ಮತ್ತು ಕುಶಲವಾದ ವಾಣಿಯನ್ನಾಡಬೇಕು; ಆ ಮಾತಿನಲ್ಲಿ ನ್ಯೂನ, ಅತಿರಿಕ್ತ, ವಿಪರೀತ ಭಾವನೆಗಳಿರಕೂಡದು. ಅದೊಂದು ಮಹಾ ಸಾಧನೆಯು; ಅದು ತನ್ನ ಸ್ವಾರ್ಥದ ವಿಕಾರಗಳಿಂದ ರಹಿತನಾದವನಿಗೆ ಮಾತ್ರ ಪ್ರಾಪ್ತವಾಗುತ್ತದೆ. ಸ್ವಾರ್ಥದ ವಿಕಾರಗಳಿಂದ ಯುಕ್ತನಾದವನಿಗೆ ಆ ಸಮ್ಯಕ್ ವಾಣಿಯು ಪ್ರಾಪ್ತವಾಗುವುದಿಲ್ಲ. 'ಥರ್ಮಾಮೀಟರ್' ಉಷ್ಣಮಾಪಕ ಯಂತ್ರಕ್ಕೆ ಸ್ವತಃ ಜ್ವರ ಉಂಟಾಗುವುದಿಲ್ಲವಾದ ಕಾರಣವೇ ಅದು ಬೇರೆಯವರ ಜ್ವರದ ಮಿತಿಯನ್ನು ತೋರಿಸಬಹುದಾಗುತ್ತದೆ. ಸ್ವತಃ ಜ್ವರದಿಂದ ನರಳುವವನು ಬೇರೆಯವರ ಜ್ವರದ ಪರೀಕ್ಷೆ ಹೇಗೆ ಮಾಡಬಲ್ಲನು? ಅದೇ ಪ್ರಕಾರ ತನ್ನಲ್ಲಿ ಯಾವ ವಿಕಾರವಿಲ್ಲದವನೇ ಅನ್ಯರಿಗೆ ಸಮ್ಯಕ್ ಒಳ್ಳೆ ವಾಣಿಯನ್ನಾಡಬಲ್ಲನು. ತನ್ನಲ್ಲಿ ವಿಕಾರವಿದ್ದವನು ನಿರ್ವಿಕಾರ ವಿಚಾರಗಳನ್ನು ಪ್ರಕಟಿಸಲಾರನು

ಮೂರು ಋಷಿಗಳ ಮೂರು ಮುಖ

ಶಕ್ತಿಯ ಲಕ್ಷಣಗಳು

ನಾರದರು ಎಲ್ಲರೊಡನೆ ಸೇರುತ್ತಿದ್ದರು ದೇವ, ದಾನವ ಮಾನವರೆಂಬ ಸಕಲ ಜನರ ಮಧ್ಯದಲ್ಲೂ ಸಂಚರಿಸುತ್ತಿದ್ದರು. ವಾಕ್ಪ್ರಚಾರದ ಆ ದಿವ್ಯ ಶಕ್ತಿಯು ಉತ್ತಮ ಭಕ್ತಿಯುಕ್ತನಿಗೆ ಮಾತ್ರ ಪ್ರಾಪ್ತವಾಗುತ್ತದೆ. ಬ್ರಹ್ಮರ್ಷಿಗಳ ಲಕ್ಷಣವೆಂದರೆ ಚಿಂತನಾಶಕ್ತಿ. ರಾಜರ್ಷಿಗಳಿಗೆ ನಿರಹಂಕಾರ ಸೇವಾಭಾವನೆಯೇ ಅವರ ಗುಣವು. ಹಾಗೆಯೇ ಎಲ್ಲರೊಡನೆ ಪ್ರೇಮ ಭರಿತ ಹೃದಯದಿಂದ ವರ್ತಿಸುವುದೇ ದೇವರ್ಷಿಗಳ ಲಕ್ಷಣವು. ಎಲ್ಲರ ವಿಚಾರಗಳನ್ನೂ ಸರಿಯಾಗಿ ಪರೀಕ್ಷಿಸಿ ತಿಳಿಯಲು ಬುದ್ಧಿಯ ಕುಶಲತೆ ವಾಣಿಯ ನಿರ್ವಿಕಾರತೆ ಮತ್ತು ತನ್ನ ಮಟ್ಟಿಗೆ ನಿರಹಂಕಾರತೆಯು ಅಗತ್ಯವಿದೆ. ಸೂಕ್ಷ್ಮಬುದ್ಧಿಯಿಂದ ಮನನ ಮಾಡಿ ವಾಣಿಯನ್ನು ಉಪಯೋಗಿಸಿದಲ್ಲಿ ಸರ್ವ ವಿಧದ ಶೋಭೆ ಐಶ್ವರ್ಯ ವೈಭವ ಸೌಂದರ್ಯ ಮತ್ತು ಆನಂದ ವೃದ್ಧಿಯಾಗುತ್ತದೆ.

ಸಾಹಿತ್ಯ ಶಕ್ತಿಯ ಪ್ರಭಾವವು

ಆದರೆ ಜನರು ಅಸಮ್ಯಕ್ ವಾಣಿಯನ್ನು ಉಚ್ಚರಿಸಿ, ಲೇಖಕ ಸಂಪಾದಕರಾಗ ಬೇಕೆಂಬ ಆತುರತೆಯಿಂದ ಮನಸ್ಸಿಗೆ ಕಂಡುಬಂದ ಯಾವ ತರದ್ದಾದರೂ ಪ್ರಕಾಶನಮಾಡಬೇಕೆಂದು ಬರೆಯುವವರು ತಮ್ಮ ಪ್ರಗತಿಯನ್ನೇ ತಡೆಗಟ್ಟುತ್ತಾರೆ. ಅಂಥವರಿಗೆ ಯಾವ ರೀತಿಯಿಂದಾದರೂ ಈ 'ಕಾಲಮ್' ಪೂರ್ಣವಾಗಿ ಮಾಡುವುದೊಂದೇ ಯೋಜನೆಯು. ಅವರು ಸ್ಥಾನ, ಕಾಲಗಳ ಮಿತಿಯನ್ನೇ ಪಾಲಿಸುವುದಿಲ್ಲ. ವಾಣಿಯು ಇಂಥಾ ದುರುಪಯೋಗವಾಗುವ ದೇಶದಲ್ಲಿ ಲಕ್ಷ್ಮೀ ಸರಸ್ವತಿಯರು ಸ್ವಚ್ಛಂದರಾಗುವುದು. ವಿಚಾರ ಮಾಡಲು ಸಮಯವಿರದಿದ್ದರೆ, ಒಂದು ಕೋಲಮ್ ಖಾಲಿ ಬಿಡ ಬಾರದೇ? ಇದನ್ನು ಸಹಜವಾಗಿ ಹೇಳುವೆನು ಹಿಂದುಸ್ಥಾನದ ಪತ್ರಿಕಾಕಾರರು ಸಾಕಷ್ಟು ವಿವೇಕಪೂರ್ಣರಾಗಿದ್ದಾರೆ ಹಿಂದುಸ್ಥಾನದ ಶಿಕ್ಷಣದ ದೃಷ್ಟಿಯಿಂದ ಹೇಳುವುದಾದರೆ ನಮ್ಮ ಪತ್ರಿಕಾಕಾರರು ಒಳ್ಳೆ ಸಂಪಾದಕರೆಂದು ಹೇಳಬೇಕು. ಸಂಯಮವು ನಮ್ಮ ಸಂಸ್ಕೃತಿಯ ಪ್ರತೀಕವಾಗಿದೆ ಸತ್ಯಯುಕ್ತ, ಮನನಯುಕ್ತ ಮಾತುಗಳು ನಿತ್ಯ ಕುಶಲ, ಲೋಕ ಸಂಬಂಧ ಲೋಕ ಗ್ರಾಹಿಯಾಗಿದ್ದರೆ ಅವರ ಮೂಲಕ ಮಹಾಶಕ್ತಿಯು ಪ್ರಕಟವಾಗುತ್ತದೆ.

ನಮ್ಮಲ್ಲಿಯ ಸಾಹಿತ್ಯದಲ್ಲಿ ಸದ್ವಿಚಾರಗಳು ಪ್ರಕಟವಾಗಿರುವಂತೆ ಇತರ ದೇಶಗಳಲ್ಲಿಲ್ಲವೆನ್ನಬಹುದು. ಈ ದೇಶದಲ್ಲಿ ಬ್ರಹ್ಮವಿಚಾರದ ಮನನವಾಗಿ ಎತ್ತಿದೆ. ಈ ದೇಶದಲ್ಲಿ ಜನಕ ಅಶೋಕರಂಥಾ ಮಹಾ ಲೋಕ ಸೇವಕರು ಇದ್ದರು ವ್ಯಾಸ ವಾಲ್ಮೀಕಿ ರಂಥ ಕವಿಗಳೂ ವಿಚಾರಕರು ಉತ್ಪನ್ನರಾದರು; ಅವರ ಪರಂಪರೆಯೇ ಇಂದಿನ ವರೆಗೆ ನಡೆಯುತ್ತಿದೆ. ಅವರ ಸಂದೇಶಗಳು ಅನೇಕ ಭಾಷೆಗಳಲ್ಲಿ ಪ್ರಕಟವಾಗಿವೆ. ಅವು ನಮ್ಮನ್ನು ಇಂದು ಮಹತ್ವದ ಅರಿವನ್ನಿಟ್ಟಿರುತ್ತಾರೆ

ನಮ್ಮ ಸನ್ನಿಧಿಯಲ್ಲಿಂದು ಇರುವ ಸಮಸ್ಯೆಗಳ ಚಕ್ರವ್ಯೂಹದಲ್ಲಿ ನಮ್ಮ ದೇಶಕ್ಕೆ ಈ ಗಡಿದಾಟಲು ಸಂದರ್ಭವು ಇಲ್ಲವಲ್ಲ, ನಮ್ಮ ದೇಶವು ಒಂದು ವಿಶಿಷ್ಟ ರೀತಿಯಲ್ಲಿ ಸ್ವಾತಂತ್ರ್ಯವನ್ನು ಪ್ರಾಪ್ತಿಸಿಕೊಂಡಿದೆ ಆ

ರನೇ ಪುಟ ನೋಡಿರಿ

ಮಾನವನ ವಿಜಯದ ಹೆದ್ದಾರಿ!

ಆರ್ಥಿಕ ಮತ್ತು ಸಾಂಪತ್ತಿಕ ಅನುಕೂಲತೆಯು ಇಂದಿನ ಮಾನವ ಜೀವನದ ವಿಜಯದ ಹೆದ್ದಾರಿ.

ಜನತೆಗೆ ಈ ಅನುಕೂಲತೆಗಳನ್ನೊದಗಿಸಿ ಸಾಂಪತ್ತಿಕ ಅಭಿವೃದ್ಧಿ ಸಾಧಿಸುವುದೇ ಬೇಂಕುಗಳ ಹೆಗ್ಗುರಿ

ದಿನೇ ದಿನೇ ಜನ ವಿಶ್ವಾಸಗಳಿಸಿ ಪ್ರಗತಿ ಹೊಂದುತ್ತಿರುವ

ದಿ ವಿಜಯ ಬೇಂಕ್, ಲಿಮಿಟೆಡ್.

ಇವರೊಡನೆ ನಿಮ್ಮ ವ್ಯವಹಾರ ಬೆಳೆಸಿ ಅನುಕೂಲತೆ ಪಡೆದು ಜೀವನದಲ್ಲಿ ವಿಜಯ ಸಾಧಿಸಿರಿ

ಗಿರಾಕಿಗಳ ಹಿತಸಾಧನೆ ಮತ್ತು ವಿಶ್ವಾಸ ಸಂಪಾದನೆಯು ವಿಜಯ ಬೇಂಕಿನ ಅಮೂಲ್ಯ ಸೊತ್ತು

The Vijaya Bank Ltd.,
Head Office: MANGALORE-3

Branches at:
Udipi, Kaup, Coondapur, Pyndoor, Karkal, Brahmavar, City-Mangalore, Kasaragod, Puttur, Kanhangad, Bombay & Mercara

“ಗೋಪಾಲ ಭೇಷಜಾಶ್ರಮ” ಮಂಗಳೂರು
(ಸ್ಥಾಪನೆ 1910)
ಸ್ಥಾಪಕರು:- ಆಯುರ್ವೇದ ಭೂಷಣ ಎಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ಶ್ರೇಷ್ಠ ಪ್ರಕೃತದ ರೀತಿಯನ್ನು ನಿರ್ಮಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರವಾದ ರಸಾಯನ ಅಲ್ಪ ಮೂಲ್ಯದಿಂದ ಬಡವರಿಗೂ ಭಾಗ್ಯಶಾಲಿಗಳಿಗೂ ಲಭವಾಗಿರುತ್ತದು

ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ— ಡಾ। ಎಂ. ಪಿ. ಶಾಸ್ತ್ರೀ, ಎಲ್. ಐ. ಎಂ.
ಕೊಡಿಯಾಲಬೈಲ ಪೋಸ್ಟ್, (ಮಂಗಳೂರು)
ಪ್ರತಿನಿಧಿಗಳು:- ಡಾ। ಪ. ಕೆ. ಶಿವರಾಮರಾವ್, ಕುಂಜಿಬೆಟ್ಟು

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 23 ರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲ ಹಣಕ್ಕೆ ಅತೀ ಕಡಿಮೆ ದರದ ಡ್ಡಿಯಿಂದಲೂ ಜನ ಹಿತಸಾಧನೆ ಯನ್ನು ಮಾಡುತ್ತಿರುವುದು

he Moolky Bank Ltd.,
Moolky, S. K.

No Finer
RUBBER STAMP
LINE-HALFTONE BLOCK
made anywhere than !
CROWN
RUBBER STAMP
203

ವಾರದ ಒಳಿತು ಕೆಡುಕುಗಳು

25-12-52ರಿಂದ ತಾ 31-12-52ರ ವರೆಗೆ

ಮೇಷ— ನಿಮ್ಮ ಹಲವಾರು ಬಯಕೆಗಳು ಈ ವಾರದಲ್ಲಿ ಸಿದ್ಧಿಸಲಿವೆ. ಹಿಡಿದ ಕಾರ್ಯಗಳು ಕೊನೆ ಮುಟ್ಟುವವು. ಶ್ರಮಕ್ಕಿಂತಲೂ ಅಧಿಕ ಫಲ ಲಭಿಸಲಿದೆ. ಮಾತ್ರವಲ್ಲ ಹಲವಾರು ತರದಿಂದ ಧನವು ನಿಮ್ಮ ಕೈಸೇರಿ ನಿಮ್ಮ ಆರ್ಥಿಕ ದುರವಸ್ಥೆಯನ್ನು ದೂರಮಾಡುವವು. ಆದರೆ ಜನತೆಯೊಳು ಕಲಹ ನಿಷ್ಠುರಗಳಿಗವಕಾಶ ಕೊಡುವಿರಿ. ದೇಹಾಲಸ್ಯ ಗೃಹಕಾಪತ್ತ್ಯಗಳು ಕಾಣಿಸಲಿವೆ. ಅನಿರೀಕ್ಷಿತ ಪ್ರವಾಸದ ಯೋಗವಿದೆ. ತಾ 26 27, 30, 31 ಈ ದಿನಗಳಲ್ಲಿ ಸುಖ ಭೋಗಗಳನ್ನು ಅನುಭವಿಸುವಿರಿ.

ವೃಷಭ—ಸಂದದಿನಗಳಂತೆಯೇ ಇಂದಿನ ದಿನಗಳೂ ಫಲಿಸಲಿವೆ ಎಂತಹ ಎಡರು ತೊಡರುಗಳು ಬಂದರೂ ಧೈರ್ಯದಿಂದ ಎದೆಯೊಡ್ಡಿ ಮುಂದೆ ನುಗ್ಗಿ ಕಾರ್ಯವನ್ನು ಕೊನೆ ಮುಟ್ಟಿಸುವಿರಿ ಶತ್ರುವರ್ಗವು ನಿಮ್ಮ ಸಹಾಸಕ್ಕೆ ಮೆಚ್ಚಲಿವೆ. ಪರ್ಯಟನದಲ್ಲಿ ಕಷ್ಟನಷ್ಟಾದಿಗಳು ಹೆಚ್ಚಲಿವೆ ವಿಜಾತಿಯವರೊಡನೆ ವಾಗ್ಕಲಹವಾಗುವುದು. ಮನೆಯಾಕೆಯೊಡನೆ ಜಗಳವಾಡುವಿರಿ. ವ್ಯಾಪಾರ ವ್ಯವಹಾರಗಳಲ್ಲಿ ಹೆಚ್ಚಿನ ಅನಿಷ್ಟ ಕಾಣದು ನೌಕರಿ ವರ್ಗದವರಿಗೆ ಕೊಂಚ ಬಿಕ್ಕಟ್ಟು ಹೆಚ್ಚುವದು ತಾ 25, 28, 29, ಈ ದಿನಗಳು ಸಂತಸದಾಯಿಗಳಿವೆ

ಮಿಥುನ— ಶುಭಗ್ರಹರ ಪೂರ್ಣ ಬೆಂಬಲವು ನಿಮಗೀವಾರದಲ್ಲಿ ಪ್ರಾಪ್ತವಾಗಿವೆ. ಯಾವೊಂದು ಸದುದ್ಯಮವನ್ನು ಕೈಕೊಂಡರೂ ಅದು ನಿರ್ವಿಘ್ನದಿಂದ ಕೊನೆಗಾಣುವದು. ಜನತೆಯ ಗೌರವಾದರಗಳಿಗೆ ಪಾತ್ರರಾಗುವಿರಿ. ವಿರೋಧಿಗಳ ಪೀಡೆಯು ಮುಂಚಿಗಿಂತ ಅಧಿಕವಾಗಲಿದೆ. ಚೂರಿ ಕತ್ತಿ ವಗೈರೆ ಶಸ್ತ್ರಾದಿಗಳಿಂದ ಗಾಯಗಳುಂಟಾಗ ಬಹುದು. ಖರ್ಚಿಗೆ ತಕ್ಕಷ್ಟು ಆದಾಯವಿರುವುದರಿಂದ ಹಣದ ಅಡಚಣೆ ಕಾಣಿಸದು. ತಾ 28 29, ಬಿಟ್ಟು ಉಳಿದ ದಿನಗಳು ಪ್ರಶಸ್ತವಿದೆ

ಕರ್ಕಟ— ಗ್ರಹರಾಜನಾದ ರವಿಯೊಬ್ಬನನ್ನುಳಿದು ಮಿಕ್ಕುಳಿದ ಗ್ರಹರು ಈ ವಾರದಲ್ಲಿ ನಿಮಗೆ ವಿಮುಖರಿರುವುದರಿಂದ ಹಿಂದಿನಂತಲ್ಲವಾದರೂ ಇಂದಿನ ದಿನಗಳು ಕೊಂಚ ಕಷ್ಟದಾಯಿಯಾಗಿ ಪರಿಣಮಿಸಲಿವೆ. ಹೆದರಿದ ಹುಲ್ಲೆಯಂತಿರುವ ನಿಮ್ಮ ಮನಸ್ಸು ಯಾವ ಉದ್ಯಮವನ್ನು ಕೈಗೊಳ್ಳಲಿಕ್ಕೂ ಮುಂದುವರಿಸಲಿಕ್ಕೂ ಸಮರ್ಥವಾಗದು ಸ್ವಜನ ವಿಯೋಗ ವಿರೋಧಿಗಳ ಕಾಟ ಸ್ತ್ರೀವರ್ಗದವರ ಅನಿಷ್ಟ ಇವುಗಳಿಂದ ಸತತ ಪೀಡಿತರಾದ ನಿಮಗೆ ತಾ. 26ರಿಂದ 29ರ ವರೆಗಿನ ದಿನಗಳು ಕಿಂಚಿದುತ್ತಮವೆನಿಸುವವು

ಸಿಂಹ- ಎಂತಹ ಮಹತ್ಕಾರ್ಯವನ್ನೂ ಕೂಡಾ ಧೈರ್ಯ ಸಾಹಸ ಯುಕ್ತಿಗಳಿಂದ ಆದರೂ ಕೊನೆಗಾಣಿಸುವ ಅಸದೃಶ ಶಕ್ತಿ ನಿಮ್ಮಲ್ಲಿರುವ ಕಾರಣ ಶತ್ರುವರ್ಗದವರು ಸದ್ಯ ನಿಮ್ಮ ಸಮೀಪ ಸುಳಿಯಲೊಲ್ಲರು ಗೃಹಪರಿವಾರಗಳಲ್ಲಿ ಯಾವೊಂದು ತರದ ನ್ಯೂನ್ಯತೆ ರೇಖೆಗಳು ಕಾಣಿಸವು. ವ್ಯಾಪಾರದಲ್ಲಿ ಕೊಂಚ ನಷ್ಟ ನಿಷ್ಠುರಗಳು ಹೆಚ್ಚಲಿವೆ. ಅರ್ಧಾಂಗಿಯೊಡನೆ ಕಲಹವಾದೀತು ಉದರಶೂಲೆ ನೇತ್ರ ಪೀಡೆಗಳೂ ಆಗಾಗ ಕಾಣಿಸಲಿವೆ, ವಾರಾಂತ್ಯದ 4 ದಿನಗಳು ಸಾಮಾನ್ಯ ಪ್ರಶಸ್ತವಿದೆ

ಕನ್ಯಾ— ನಿಮ್ಮ ಪರಿಶ್ರಮಕ್ಕಿಂತ ತಕ್ಕ ಫಲವಿದೆಯಾದರೂ ವ್ಯರ್ಥ ಖರ್ಚುಗಳು ಅತಿಯಾಗುವುದರಿಂದ ಈ ವಾರದಲ್ಲಿ ಹೆಚ್ಚಿನ ಆರ್ಥಿಕ ಬಿಕ್ಕಟ್ಟು ಕಾಣಿಸಲಿದೆ ಉದ್ಯೋಗಜೀವಿಗಳಿಗೂ ಸೇವಕ ಜನ ವೃಂದಕ್ಕೂ ಕಾಲಯಾಪನೆಯು ಕಷ್ಟಸಾಧ್ಯವಾಗಲಿದೆ. ಗುರುಹಿರಿಯರ ಮನಸ್ತಾಪದಿಂದಲೂ ಬಂಧುಜನ ವಿಯೋಗದಿಂದಲೂ ದುಃಖಕ್ಕೀಡಾದ ನಿಮಗೆ ಸನ್ಮಿತ್ರರ ಬೆಂಬಲ ದಿಂದಾಗಿ ಕೊಂಚ ಸುಖ ಲಭಿಸೀತು. ರಾಜಕೀಯದಲ್ಲಿ ಕಾಲವು ಅನುಕೂಲವಾಗಿ ಪರಿವರ್ತಿಸಲಿದೆ. ತಾ 25, 30, 31 ಈ ದಿನಗಳು ಇತರ ದಿನಗಳಿಗಿಂತ ಲೇಸು.

ತುಲಾ—ಸದ್ಯ ಭಾಗ್ಯಶಾಲಿಗಳೆಂದರೆ ನೀವೇ ಸರಿ. ಧನಪತಿಯು ಪ್ರತಿಕೂಲನಾಗಿದ್ದರೂ ಭಾಗ್ಯಲಾಭಾಧಿಪರು ಅನುಕೂಲರಾಗಿರುವುದರಿಂದ ನಿಮಗೆ ಹಣದ ಅಭಾವವೇ ಕಾಣಿಸದು ಮಾತ್ರವಲ್ಲ ಸಾಕಷ್ಟು ಧನವನ್ನು ಗಳಿಸುವಿರಿ ವಾತದೋಷದಿಂದ ಕೊಂಚ ದೇಹಾಲಸ್ಯವುಂಟಾದೀತು ಆತ್ಮೀಯರ ವಿರಹ ಸಾಂಸಾರಿಕ ತಾಪತ್ರಯಗಳಿಂದ ಕೊಂಚ ದುಃಖಕ್ಕೀಡಾದೀರಿ. ಸಮಾಜದಲ್ಲಿ ಸ್ಥಾನಮಾನಗಳು ಉತ್ತಮ ತೆರದಲ್ಲಿ ಲಭಿಸಲಿವೆ, ವಾರಾದಿಯ 3 ದಿನಗಳು ಅತೀವ ಪ್ರಶಸ್ತವಿವೆ

ವೃಶ್ಚಿಕ—ಸಮುದ್ರದಲೆಗಳಂತೆ ಕಷ್ಟಪರಂಪರೆಗಳು ಮೇಲಿಂದಮೇಲೆ ಬರಲಿವೆ. ಮನದಲ್ಲಿನ ಧೈರ್ಯವು ಎದೆಲ್ಲೋ ಮಾಯವಾಗುವುದರಿಂದ ಯಾವ ಕಾರ್ಯವನ್ನು ಕೂಡ ಮಾಡಲು ಅಸಮರ್ಥರಾದಿರಿ. ಆಪ್ತೇಷ್ಟರೂ ಬಂಧುಬಳಗದವರೂ ನಿಮ್ಮನ್ನು ಕಣ್ಣೆತ್ತಿ ನೋಡಲಾರರು. ಶತ್ರುಜನರು ತಮ್ಮ ಕಾರಸ್ಥಾನವನ್ನು ಪ್ರಯೋಗಿಸಲಿರುವರು. ಇವೆಲ್ಲವುಗಳಿಂದಾಗಿ ನಿಮ್ಮ ತನುಮನಗಳಿಗೆ ಈಷತ್ತೂ ಸುಖಶಾಂತಿಯು ಲಭಿಸದೆಂದರೆ ಅತಿಶಯೋಕ್ತಿಯಾಗದು, ತಾ 25, 30, 31 ಅತೀವ ಅನಿಷ್ಟಕಾರಿಗಳಿವೆ.

ಧನು—ನಿಮ್ಮ ಪ್ರತಿಯೊಂದು ಉದ್ಯಮಗಳೂ ಇಂದು ಉತ್ತಮ ಫಲವನ್ನೀಯಲಿವೆ. ಬೇರವರ ಸಹಾಯವನ್ನು ಯಾಚಿಸದೆ ಎಂತಹ ಕಾರ್ಯವನ್ನು ಕೂಡ ಸ್ವಯಂ ಪೂರ್ತಿಗೊಳಿಸಲು ಸಮರ್ಥರಾದ ನಿಮಗೆ ಜನತೆಯ ಬೆಂಬಲವೂ ಬಂಧುಮಿತ್ರರ ಸಹಾಯವೂ ಬೇಕಾದಂತೆ ಲಭಿಸದು. ನಿಮ್ಮ ಸಂಪದ್ಭಾಗವು ಅಭ್ಯುಕ್ತವಾಗೊಳ್ಳಲಿದೆ. ವಕೀಲಿ ಲೇಖಕ ವರ್ಗದವರಿಗೂ ತರುಣ ಜನವೃಂದಕ್ಕೂ ಈ ವಾರವು ಸುಖಪ್ರದವಿದೆ. ವಾರಾಂತ್ಯದ 4 ದಿನಗಳಲ್ಲಿ ನಿಮ್ಮ ಸಂಕಲ್ಪಗಳು ಸಿದ್ಧಿಸುವವು.

ಮಕರ—ದುಡಿಮೆಗಿಂತ ದ್ವಿಗುಣ ವ್ಯಯವಾಗುವುದರಿಂದ ಕಾಲಯಾಪನೆಯು ಕಷ್ಟಸಾಧ್ಯವಾದೀತು. ರಾಜಕೀಯ ಅಧಿಕಾರಿಗಳ ಪೀಡೆಯು ವಿಶೇಷವಾಗಿ ಬಾಧಿಸಲಿದೆ. ಪಿತ್ತದೋಷ ಪ್ರಕೋಪದಿಂದ ಆರೋಗ್ಯಕ್ಕೆ ಧಕ್ಕೆಯುಂಟಾದೀತು. ಬಂಧುಬಳಗದವರ ಕೂಡೆ ಕಲಹ ಮನಸ್ತಾಪಗಳುದ್ಭವಿಸುವವು. ವಿದ್ಯಾರ್ಥಿಗಳಿಗೆ ತುಂಬಾ ಹಾನಿಯುಂಟಾಗುವದು. ಆದರೂ ಸ್ವಕುಲಾಚಾರ ಧರ್ಮಕರ್ಮ ನಿರತರಾದ ಸಜ್ಜನ ವೃಂದಕ್ಕೀ ವಾರವು ವಿಶೇಷ ಅನಿಷ್ಟದಾಯಿಯಾಗಿ ಪರಿಣಮಿಸದು. ತಾ 25, 30, 31 ಉತ್ತಮ.

ಕುಂಭ - ಕರ್ಮ ಫಲವ್ಯಯಗಳು ಸಮನಾಗಿರುವುದರಿಂದ ನಿಮಗೀವಾರದಲ್ಲಿ ವಿಶೇಷ ತೊಂದರೆಗಳೇ ಕಾಣವು. ಪರ್ಯಟನಕ್ಕೀ ಕಾಲವು ಉಚಿತವಲ್ಲವು. ಧರ್ಮಕರ್ಮಗಳಲ್ಲಿ ಆನಂದವೂ ಜನತೆಯೊಡನೆ ಕಲಹಗಳೂ ಪ್ರಾಪ್ತವಾಗುವ ಯೋಗವಿದೆ. ಶ್ರಮಜೀವಿಗಳಿಗೀವಾರವು ಸುಖಪ್ರದವಾಗಲಾರದು. ಆರೋಗ್ಯಕ್ಕೂ ಕೂಡ ವಾತಪಿತ್ತಗಳಿಂದ ಬಾಧೆಯುಂಟಾದೀತು. ತಾ. 26, 27 ಮಾತ್ರ ನಿಮಗನುಕೂಲಗಳು.

ಮೀನ— ಧನಭಾಗ್ಯಪನು ವ್ಯಯದಲ್ಲೂ ಲಾಭಪತಿಯು ಅಷ್ಟಮದಲ್ಲೂ ನಿಂತಿರುವ ಕಾರಣ ನಿಮ್ಮ ದುಡಿಮೆಯು ಅತೀ ಉತ್ತಮವಿದ್ದರೂ ನೀವೀಕಾಲದಲ್ಲಿ ಒಂದು ಬಿಕ್ಕಾಸನ್ನೂ ಗಳಿಸಲಾರಿರಿ, ಮತ್ತೂ ಮತ್ತೂ ಸಾಲವನ್ನೇ ಮಾಡುವ ಪ್ರಸಂಗ ಬರಲಿದೆ ಆದರೂ ಸುರಗುರುಗಳ ಅನುಗ್ರಹದಿಂದಾಗಿ ಹೆಚ್ಚಿನ ಬಿಕ್ಕಟ್ಟು ಬಾರದು, ಪಿತ್ತದೋಷದಿಂದ ಅನಾರೋಗ್ಯ ನೇತ್ರಪೀಡೆ, ಪತ್ನೀಪುತ್ರರ ವಿರಹ ಜನಾಪವಾದಗಳು ತಪ್ಪಲಾರವು. ತಾ. 25, 28, 29 ಈ ದಿನಗಳು ಇತರ ದಿನಗಳಿಗಿಂತ ಉತ್ತಮವಾಗಿರುವವು.

ಸಾಹಿತ್ಯದ ಶಕ್ತಿ

(೧೧ನೇ ಪುಟದಿಂದ)

ದ ಕಾರಣ ಲೋಕವೆಲ್ಲ ಈ ದೇಶದಿಂದ ಒಂದು ವಿಶೇಷ ಆಶೆಯನ್ನಿಟ್ಟಿದೆ ಅದನ್ನು ಲಕ್ಷ್ಯದಲ್ಲಿಟ್ಟು ನಮ್ಮ ದೇಶದ ನಮ್ಮ ದೇಶದ ಸಾಹಿತ್ಯಕಾರರು ಚೆನ್ನಾಗಿ ಆಲೋಚಿಸಿದರೆ ಅವರು ಮಹಾಸೇವೆಯನ್ನು ಮಾಡಬಹುದು ವರ್ತಮಾನಯುಗದಲ್ಲಿ ಕೂಡ ನಮ್ಮದೇಶದಲ್ಲಿ ಅರವಿಂದ ಘೋಷರಂಥ ಬ್ರಹ್ಮರ್ಷಿ, ರವೀಂದ್ರನಾಥ ಠಾಕೂರರಂಥ ದೇವರ್ಷಿ ಮತ್ತು ಮಹಾತ್ಮ ಗಾಂಧೀಜಿಯವರಂಥಾ ರಾಜರ್ಷಿಗಳು ಜನ್ಮವೆತ್ತಿರುತ್ತಾರೆ. ಇದನ್ನೆಲ್ಲಾ ನೋಡಿಯೂ ನಮ್ಮದೇಶದ ಶೋಭೆಯೂ ಗೌರವವೂ ಹೆಚ್ಚುವಂತೆ ನಮ್ಮ ಸಾಹಿತ್ಯಕಾರರು ತಮ್ಮ ಅಮೋಘ ಸೇವೆಯನ್ನು ಸಲ್ಲಿಸುವರೆಂದು ನನಗೆ ಆಶೆಯಿದೆ. ಇದನ್ನು ಇನ್ನು ಹೆಚ್ಚಿಸಲಪೇಕ್ಷಿಸುವುದಿಲ್ಲ. ನಮ್ಮಲ್ಲಿ ಬಹಳ ಶಕ್ತಿಯಿದೆ ನಮ್ಮ ಕ್ಷೇತ್ರವೂ ಬಹಳ ವಿಶಾಲವಾಗಿದೆ ನಮ್ಮ ಅಂತರ್ಯದಲ್ಲಿ ಆತ್ಮನಿದ್ದಾನೆ. ನಮ್ಮ ಸುತ್ತು ಮುತ್ತು ಎಲ್ಲಾ ವಿಶ್ವರೂಪವಾಗಿದೆ, ಎರಡು ಕಡೆಗಳಿಗೆ ಹೋಗಲನುಕೂಲವಾಗುವಂಥಾ ಬಾಗಿಲ ರೂಪದಲ್ಲಿ ಮಾಣಿಯಿಟ್ಟ ನದಿಯ ಎರಡೂ ಕಡೆಗಳಿಗೆ ಹೋಗಲು ಅನುಕೂಲವಾಗುವ ಸೇತುವಿನಂತಿದೆ. ಆದಕಾರಣ ನಾವು ನಮ್ಮ ವಾಣಿಯನ್ನು ಸರಿಯಾಗಿ ಪ್ರಕಟಗೊಳಿಸಿದರೆ ಆ ವಾಣಿಯಿಂದ ಲೋಕವನ್ನೆಲ್ಲಾ ಸುಂದರಗೊಳಿಸ ಬಹುದು. ಜಗತ್ತನ್ನೇ ಪ್ರಕಾಶಿಸ ಬಹುದು ಅದರ ಸೇವೆ ಕೂಡ ಮಾಡಬಹುದು ಆದಕಾರಣ ನಾವು ಆ ಭಾಷಾಶಕ್ತಿಯನ್ನು ಸಂಗ್ರಹಿಸಲು ಯತ್ನಿಸ ಬೇಕು.

ಕಾಶೀ ವಿದ್ಯಾಪೀಠದಲ್ಲಿ ಪ್ರಾರ್ಥನಾ ಪ್ರವಚನದಲ್ಲಿ ಪೂಜ್ಯ ಆಚಾರ್ಯ ವಿನೋಬಾಜಿಯವರ ಭಾಷಣವನ್ನು ಹಿಂದೀ "ಸರ್ವೋದಯ" ಮಾಸಪತ್ರಿಕೆಯಿಂದ ಕನ್ನಡಕ್ಕೆ ಅನುವಾದಿಸಿದ್ದು—

ರಾಮಚಂದ್ರರಾವ್.

ವೆಲ್ಕಿನ್ಸ್ ಟೂತ್ ಪೇಸ್ಟ್
ಮಿಂಚುವ ನಗುವಿಗೆ, ಮತ್ತು
ಒಸಡಿನ ಆರೋಗ್ಯಕ್ಕೆ!
ಯು ಎಸ್ ಎ ರಾಜ್ಯದ
ಪ್ರಸಿದ್ಧ ಡಾಕ್ಟರರೊಬ್ಬರ ತಯಾರಿಕೆ.
Welkin Laboratory (N)
Calcutta 3.
ಉದಾರ ಶರ್ತಗಳ ಮೇಲೆ ಪ್ರತಿನಿಧಿ ಬೇಕಾಗಿದ್ದಾರೆ

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಟೈಲೆಟ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿ ಶುಚಿ ಹೇಳಬೇಕೆ
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ್

KING OF TONIC
SILAJITH LAYHAM

ಲಕ್ಷಾಂತರ ಜನರು ಗುಣಹೊಂದಿದ್ದಾರೆ!
ಸರ್ ಜೀವನ್ ಶಿಲಾಜಿತ್ ಲೇಹ
ಶಿಲಾಜಿತ್ ಹಿಮಾಲಯದ ಔಷಧಿಗಳ ರಾಜ, ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.
[illegible] ದಿನದ ಲೇಹ್ಯ ರೂ ೫/೪, [illegible] ದಿನದ ಲೇಹ್ಯ ರೂ ೩೪
(ಪೋಸ್ಟೇಜು ಮಾಫಿ)
ನೀಲಗಿರಿ ಡಿಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

SOVEREIGN-REMEDY
AMRUTANJAN
Best Indian Pain Balm
Amrutanjan Depot
BOMBAY MADRAS

ಅಮೃತಾಂಜನ
ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಬಾತುಕೊಳ್ಳುವುದು ಚೇಳುವಿಷ ಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ
EGD
[illegible]
ಮತ್ತು
ನಮ್ಮಲ್ಲಿ
ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು, ಬೊಂಬಾಯಿ ಮತ್ತು ಕಲ್ಕತ

Edited, Printed & Published By K. H. Shetty at the NavayugaPress, Udipi, S. India.